ಎರಡಾಣೆ

Regd. No. M. 3618

5-8-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4-8-0
೬ ತಿಂಗಳಿಗೆ ರೂ. 2-8-0
ಬಿಡಿ ಪ್ರತಿಗೆ ರೂ. 0-1-6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೪೮

NAVAYUGA WEEKLY, UDIPI.

FOUNDER: Hon'ble Mr. A. K. SHETTY, Health Minister, Govt. of Madras.

Vol. 28
No. 48

ದೂರದೃಷ್ಟಿಯಿದ್ದಲ್ಲಿ ದುಡ್ಡು ತಾನಾಗಿ ಕೂಡುತ್ತದೆ.
ಮುನ್ನೋಟ, ಮಿತವ್ಯಯ, ಇವು ಧನಸಂಗ್ರಹದ
ಸುಲಭೋಪಾಯ.

ದಿ
ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್,
ಉಡುಪಿ

ಇವರು ನಿಮ್ಮ ಆಪದ್ಧನದ ಸಮಸ್ಯೆಯನ್ನು
ಸುಲಭದಲ್ಲಿ ಬಿಡಿಸುತ್ತಾರೆ.

ರೂ. 900/-ರ ಒಳಗಿನ ಮೊತ್ತದಲ್ಲಿಯೆ ತಂತಮ್ಮ
ಅನುಕೂಲತೆಗನುಕೂಲವಾಗಿ ವಿಮೆ ಇಳಿಸುವ
ಸಾಕಾರ್ಯವಿರುವುದೇ ಈ ಸಂಸ್ಥೆಯ ವೈಶಿಷ್ಟ್ಯ.

ಆಕರ್ಷಕ ವರಪ್ರಿನ ಮೇಲೆ ಉತ್ಸಾಹೀಕಾರ್ಯಕರ್ತರು
ಬೇಕಾಗಿದ್ದಾರೆ!

ವಿವರಗಳಿಗೆ ಬರೆಯಿರಿ.
The New Karnataka Provident
Insurance Co., Ltd.
P. B. No. 22. UDIPI

ಪಾರ್ಲಿಮೆಂಟಿನಲ್ಲಿ ಹೈದರಾಬಾದ್ ಚರ್ಚೆ

ಭಾರತ ಮತ್ತು ಹೈದರಾಬಾದುಗಳೊಳಗಿನ ವಿವಾದದ ಕುರಿತು ಬ್ರಿಟಿಷ್ ಪಾರ್ಲಿಮೆಂಟಿನ 'ಕಾಮನ್ಸ್' ಸಭೆಯಲ್ಲಿ ಜುಲಾಯಿ ತಾ. 30ರಲ್ಲಿ ಎರಡು ತಾಸುಗಳ ಬಿಸಿಬಿಸಿ ಚರ್ಚೆ ನಡೆಯಿತು. ಈ ಚರ್ಚೆಯಲ್ಲಿ ಕೆಲವು ವೈಶಿಷ್ಟ್ಯಗಳಿದ್ದುವು.

ಮೊದಲನೆಯದಾಗಿ ಪ್ರಶ್ನೆಗಳ ಉಡಳ ತೆಯಿಳ್ಳ ಭಾರತದಂತಹ ವಸಾಹತು ಸರಕಾರವೊಂದರ ಅಧಿಕಾರಕ್ಷೇತ್ರದೊಳಗಿನ ವಿಷಯವೊಂದರ ಕುರಿತು ಮಿತಪ್ಪು ವಿಮರ್ಶಿಸುವ ಹಕ್ಕು ಬ್ರಿಟಿಷ್ ಸರಕಾರಕ್ಕಿಲ್ಲವೆಂಬುದೂ, ಹೈದರಾಬಾದು ಕಾಶ್ಮೀರದಂತಹ ಸಾಂಸ್ಥಾನಿಕ ಸಂಬಂಧಗಳು ಕೇವಲ ಭಾರತ ಸರಕಾರದ ಹಕ್ಕಿನವೆಂಬುದೂ ಸಿದ್ಧವಾಯಿತು.

ಎರಡನೆಯದಾಗಿ ಚರ್ಚೆಲ್ಲರಂತಹ ಪ್ರಾಗತಿಕ ಬ್ರಿಟಿಷ್ ಮುತ್ಸದ್ದಿಗಳಿಗೆ 'ಹಿಂದು'ಗಳು ಅಥವಾ ಭಾರತ ಸರಕಾರವು ಮಾಡಿದ್ದನ್ನೆಲ್ಲಾ ಖಂಡಿಸುವ ಒಂದೇ ಆಟಹಿಡಿದುಕೊಂಡಿದೆಯೆಂಬುದೂ, ಈ ದುರ್ಗಾದಿಂದ ಬ್ರಿಟಿಷ್-ಭಾರತ ಸಂಬಂಧಗಳಿಗೆ ಹಾನಿಯಿದೆಯೆಂಬ ನೋವು ಬ್ರಿಟಿಷ್ ಸರಕಾರದ ಹೃದಯಕ್ಕೆ ನಾಟಿದೆಯೆಂಬುದೂ ಖಚಿತವಾಯಿತು.

ಚರ್ಚೆಲ್ಲರಿಗೆ ಪಾಕಿಸ್ತಾನ್ ಮತ್ತು ಹೈದರಾಬಾದುಗಳಂತಹ ಭಾರತದ ಪ್ರತಿ ಜಾದಿಗಳು ಎಲ್ಲವನ್ನೂ ತಿಳಿಸಿ ತಿಳಿಯೂ ದುತ್ತಿರುವರೆಂಬುದು ಸ್ಪಷ್ಟವಾಯಿತು.

ಅಟ್ಲಿ ಮತ್ತು ಚರ್ಚೆಲ್ಲರೊಳಗೆ ಈ ವರೆಗೆಂದೂ ನಡೆಯದಿದ್ದಷ್ಟು ಕಠಿಣವಾದ ಹಾಗೂ ಕ್ಯೋಧಾವೇಗಪೂರ್ಣವಾದ ವಾಗ್ಯುದ್ಧ ಈ ಸಭೆಯಲ್ಲಿ ನಡೆಯಿತು.

ನಿಜಾಮರು ಬ್ರಿಟಿಷ್ ರಾಜರಿಗೆ ಪತ್ರ ಮೂಲಕ ದೂರಿಡುವುದಕ್ಕೂ ಮುಂಬರಿದಿರುವ ಈ ಕಾಲಪಲ್ಲ-ಡಾಗತಿಕ ಸಂಘದತ್ತ ತನ್ನವಾದವನ್ನು ಕೊಂಡೊಯ್ಯಲು ಹೈದರಾಬಾದು ತಯಾರಿರುವ ಈಸಂದರ್ಭದಲ್ಲಿ-ಹೈದರಾಬಾದಿನ ಪ್ರಶ್ನೆಗಳ ಕುರಿತು ಅಟ್ಲಿಸರಕಾರವು ಸಂಗತಿಯನ್ನು ಸರಿಯಾಗಿ ಮನನ ಮಾಡಿಕೊಂಡಿದೆ ಎಂಬುದು ಸಿದ್ಧವಾಯಿತು.

ಬ್ರಿಟಿಷಿನ ಘೋರನೆ ದಾವುದೆಂಬ ಹಡೆಗೆ ಸಾಕಷ್ಟು ಪ್ರಕಾರ ಚೆಲ್ಲಿರುವ ಪಾರ್ಲಿಮೆಂಟಿನ ವಾದ ವಿವಾದಗಳ ಸಾರಾಂಶವನ್ನು ಇಲ್ಲಿ ಕೊಡಲಾಗಿದೆ-

ರಸವತ್ತಾದ ಚರ್ಚೆ

ಸಭಾರಂಭದ ಮೊದಲೇ ಪ್ರಧಾನ ಮಂತ್ರಿ ಮಿ.'ಕ್ಲೆಮೆಂಟ್' ಅಟ್ಲಿಯವರು ಪಾರ್ಲಿಮೆಂಟಿನ ಅಧ್ಯಕ್ಷರಿಗೆ ಪತ್ರ ಬರೆದು 'ಬ್ರಿಟಿಷ್ ಸರಕಾರದ ವಾಗ್ದಾನಗಳ ಸಂಬಂಧವಾಗಿ ಹೊರತು ಹೈದರಾಬಾದು ಕಾಶ್ಮೀರಗಳ ಕುರಿತು ಮಾತು ಹರಿಸದಂತೆ ನಿರ್ಬಂಧ ಹೇರಬೇಕು' ಎಂದು ಕೇಳಿ ಕೊಂಡಿದ್ದರು. ಆರಂಭದಲ್ಲಿ ಈ ಕುರಿತು ಚರ್ಚೆಲ್ ಮತ್ತು ಅಟ್ಲಿಗಳೊಳಗೆ ವಾಗ್ವಾದ ನಡೆಯಿತು. ಬ್ರಿಟಿಷ್ ಪ್ರತಿಜ್ಞೆಗಳನ್ನು ಪ್ರಸ್ತಾಪಿಸುವಾಗ ಹೈದರಾಬಾದುಗಳಂತಹವುಗಳ ವಿಚಾರವೆತ್ತದಿರುವುದು ಅಸಾಧ್ಯವೆಂದೂ, ಅಂತಹ ವಿಮರ್ಶೆಯು ಪಾರ್ಲಿಮೆಂಟ್ ಸದಸ್ಯರ ಅಧಿಕಾರದೊಳಗಿನದೆಂದೂ ಚರ್ಚೆಲ್ಲರು ವಾದಿಸಿದರು. ಕೇವಲ ಭಾರತ ವಸಾಹತಿಗೆ ಸಂಬಂಧಿಸಿದ ಪ್ರಶ್ನೆಯಲ್ಲಿ ಕೈಹಾಕುವ ಹಕ್ಕು ಬ್ರಿಟಿಷ್ ಸರಕಾರಕ್ಕಿಲ್ಲವೆಂದೂ, ಕಾಶ್ಮೀರದ ಪ್ರಶ್ನೆಯನ್ನೆತ್ತಿಕೊಂಡಿರುವ ಭದ್ರತಾ ಕೌನ್ಸಿಲಿನ ಮುಂದೆ ಜಭಿಪ್ರಾಯವನ್ನಿಡುವುದಷ್ಟೇ ನಮ್ಮ ಸಾಲಿಗೆ ಸೇರಿದ್ದೆಂದೂ ಅಕ್ರಮ ನಡೆಯಬಾರದೆಂದಲ್ಲದೆ ಮಿತಿಯೊಳಗಿನ ಪರಾಮರ್ಶೆ ಪಡೆಯಬಾರದೆಂದು ತನ್ನ ವಾದವಿಲ್ಲವೆಂದೂ ಅಟ್ಲಿಯುತ್ತರಿಸಿದರು. 'ಕಾಮನ್'ವೆಲ್ತಿನ ಒಂದು ವಸಾಹತು ಸರಕಾರದ ಮನಸ್ಸನ್ನು ಯಾಕೊಬ್ಬನೂ ಅನಗತ್ಯವಾಗಿ ನೋಯಿಸಬಾರದೆಂಬ ಸಾಮಾನ್ಯ ನೀತಿ ಮತ್ತು ಘನತೆಯ ನಿರ್ಬಂಧಕ್ಕಿಂತ ಹೆಚ್ಚಿನ ಯಾವ ನಿರ್ಬಂಧವನ್ನೂ ಹಾಕಲು ಸಾಧ್ಯವಿಲ್ಲ'ಎಂದು ಅಧ್ಯಕ್ಷ ಕರ್ನಲ್ ಡೊಗ್ಲಾಸ್ ಕ್ಲೆಪ್ಪಟ್ ಬ್ರೌಕರು ವಿಧಿಸಿದರು.

ಅವ್ಯಾಗತಿಕರ ಹೊಡೆತ!

ಚರ್ಚೆಯನ್ನಾರಂಭಿಸಿದವರು ಮಿ. ಸೆಲ್ವಿನ್-ಲೈಡ್; ಸಂಕುಚಿತ ಬುದ್ಧಿಗೆ ಹೆಸರಾದ ಬ್ರಿಟಿಷ್ ಟೋರಿ ಪಕ್ಷದ ಓರ್ವ ಬುದ್ಧಿವಂತ. ಮಿ. ಲೈಡರು ತನ್ನ ವಾದ ಸರಣಿಯನ್ನು ಈ ಕಾಲುವೆಯಲ್ಲೊಯ್ದಿದ್ದರು :-'ಒಂದು ವರ್ಷಕ್ಕೆ ಮೊದಲು ಜಾರಿಗೆ ತಂದ 'ಸ್ವತಂತ್ರ ಶಾಸನ'ದಲ್ಲಿ ಹಿಂದೀ ಸಂಸ್ಥಾನಗಳಿಗೆ ಸ್ವೀಚ್ಛೆಯ ಸ್ಥಾನ ವಹಿಸುವ ಸ್ವಾತಂತ್ರ್ಯ ಕೊಡಲಾಗಿತ್ತು. ನಾವೇ ಕೊಟ್ಟ ಈ ಸ್ವಾತಂತ್ರ್ಯದ ಗೌರವ ರಕ್ಷಣೆಯ ಜವಾಬ್ದಾರಿಯು ಈ ಸಭೆಯು ನೀಲಿದೆ. ನಾವೀ ಪ್ರತಿಜ್ಞೆಯನ್ನು ಪಾಲಿಸುರುವೆವೆ? ಪ್ರಥಮತಃ ಹೈದರಾಬಾದನ್ನೇ ತೆಗೆದು ಕೊಳ್ಳೋಣ. ಸದ್ಯಕ್ಕದರ ಮೇಲೆ ಸಂಪೂರ್ಣ ದಿಗ್ಬಂಧನ ಬಿದ್ದಿದೆ. ರೈಲ್ವೇ ಸಾಮಾನುಗಳ ಮೇಲೆ-ಸ್ಯಯಾಣಿಕ

ವಿಮೆಮಾಡಲಿಕ್ಕೆ ಯಾ ಹ್ಯಾತಿವಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸು ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ಹೈದರಾಬಾದಿನ ಬಿಳಿನಾಲಿಗೆ ಚರ್ಚಿಲ್ಲರ ವಾಗ್ಬಾಣ!

ಹಾಗೂ ವ್ಯಾಪಾರೀ ಸರಂಜಾಮಗಳ ಮೇಲೆ-ಟನ್ನಾಲು ವಹಿವಾಟುಗಳ ಮೇಲೆ ಕಠಿಣ ತಡೆ ನಿರ್ಬಂಧಗಳು ಬಿದ್ದಿವೆ. ಹೈದರಾಬಾದು ಸಂಸ್ಥಾನದ ತೆತ್ತಿರುವ ಏನು ಮಿಲಿಯ ಸ್ಟರ್ಲಿಂಗ್ ಜೆಲಿಯ ಸಾಮಾನುಗಳನ್ನು ಜೊಂಬಾಯಿಯಿಂದ ಕೊಳ್ಳದಂತೆ ತಡೆದಿಡಲಾಗಿವೆ. ಯಾವುದೇ ವಿಶೇಷ ರಿಯಾಯಿತಿಯ ಅನುಕೂಲತೆಯನ್ನಾದರೂ ಹೈದರಾಬಾದಿಗೊದಗಿಸದಂತೆ ಭಾರತದ ರಾಜ್ಯ ಬೇಡಿಕೆಗೆ ತಡೆ ಜಾಕಲಾಗಿದೆ. ಹೈದರಾಬಾದಿನ ಸುತ್ತುವಲಯದ ಎಲ್ಲಾ ಆಯಕಟ್ಟಿನ ಸ್ಥಳಗಳಲ್ಲೂ ಏಂಟೀ ಸೇನೆಗಳನ್ನು ನಿಲ್ಲಿಸಲಾಗಿದ್ದು, 'ಸಮಯ ಬಂದರೆ ಸೇನಾ ಕಾರ್ಯಾ ಕೈಕೊಳ್ಳಲು ನಾವು ತಯಾರಾಗಿದ್ದೇವೆ' ಎಂಬ ಭಾರತದ ಪ್ರಧಾನ ಮಂತ್ರಿಯ ಉದ್ಗಾರ ಕೇಳಬಂದಿದೆ. ಹೀಗಾಗಿ ಈ ವರೆಗೂ ಜಾತೀಯ ಗಲಭೆಯಲ್ಲದಿದ್ದ, ಒಂದು ಕೋಟಿ ಎಪ್ಪತ್ತು ಲಕ್ಷ ಜನರ ಸಂಸ್ಥಾನವೊಂದರ ಮೇಲೆ ಈಗ ಕಠಿಣಜಾತೀಯ ಗಲಭೆ ಹೇರುವ ಬೆದರಿಕೆ ಬೀರಲಾಗಿದೆ. ಭಾರತವ ಏಕಚೇತಕರಿಗೆ-ಮುಖ್ಯವಾಗಿ ಭವಿಷ್ಯದ್ಭಾರತದಿಂದ ಬಹಳವನ್ನು ನಿರೀಕ್ಷಿಸಿದ್ದವರಿಗೆ-ಈ ಪರಿಸ್ಥಿತಿಯಿಂದ ವಿಶೇಷ ನೋವಾಗಿದೀತು. ಮಿಸ್ಟರ್ ಗಾಂಧಿಯವರ ತತ್ವಗಳಿಗೆ ಈ ಪರಿಸ್ಥಿತಿಯು ಹೊಂದಿಕೆಯಾಗುವಂತಹದೇ ಇದರಿಂದಾಗಿ ಹೈದರಾಬಾದಿಗೆ ಕೊಟ್ಟ ವಾಗ್ದಾನಗಳು ಸಂದಾಯಗೊಂಡವೆಂದು ಹೇಳಲು ಸಾಧ್ಯವೆ? ಕೆನಡಾ ವಸಾಹತು ಇದೇ ಮಾದರಿಯ ಆಚರಣೆಗಳನ್ನು ನ್ಯೂ ಫೌಂಡ್‌ಲೇಂಡಿನ ಮೇಲೆ ಕೈಕೊಂಡರೆ ಹೇಗಾದೀತೆಂಬುದರೊಡನೆ ಭಾರತವು ಹೈದರಾಬಾದಿನ ಮೇಲೆ ಕೈಕೊಂಡಿರುವ ಕಾರ್ಯಗಳನ್ನು ತುಲನೆ ಮಾಡಿ ಯೋಚಿಸಿರಿ. ಆಗ ನಿಜಕ್ಕೂ ಆಶ್ಚರ ಬೇನೆ ಬೇಸರಿಕೆಗಳೇಳುತಿದ್ದಪು ದುರ್ದೈವವಶಾತ್ ಹೈದರಾಬಾದಿನಲ್ಲಿ ಸಂಗ್ರಾಮವೇ ಆರಂಭಿಸಿಬಿಟ್ಟರೆ, ಈತನಕ ಜಾತೀಯ ತಾಗೊಂದಲರಹಿತವಾಗಿದ್ದ ದಕ್ಷಿಣ ಭಾರತವು ಕಠೋರ ಹಾಗೂ ಪ್ರಚಂಡ ರೀತಿಯ ಜಾತೀಯ ಕಲಹ ಕ್ಲೇಶವನ್ನಾದೀತು".

ಚರ್ಚಿಲ್ ನುಡಿಬೊಂಬು!

ಆ ಮೇಲೆ ಮಾತನಾಡಿದವರು ಚರ್ಚಿಲ್. 'ಬ್ರಿಟಿಷ್ ಸಾಮ್ರಾಜ್ಯ ಬಯಸಿದ್ದಾಗಲು ನಾನು ಬಿಡುವವನಲ್ಲ!' ಎಂಬತನ್ನ ಭಿಷ್ಮ ಪ್ರತಿಜ್ಞೆ ಹುಸಿಗೊಂಡ ವ್ಯಾಣ ಸಂಕಟಕ್ಕೊಳಗಾಗಿರುವ ಸಂತಪ್ತ ಜೀವಿ; ಯುದ್ಧ ಕಾಲದಲ್ಲಿ ಕಾಂಗ್ರೆಸ್ ಮಾಡಿದ್ದ ಅಸಹಕಾರದ ಪ್ರತೀಕಾರಾಗ್ನಿಯಿಂದ ಈಗಲೂ ದಹಿಸುತ್ತಿರುವ ಭಗ್ನ ಹೃದಯ! ಚರ್ಚಿಲ್ಲರಂದರು. "ಹೈದರಾಬಾದ್ ಮತ್ತು ಬ್ರಿಟಿಷ್ ಸಿಂಹಾಸನದ ಸಂಬಂಧವೆಂಬುದು ಕಾಲಕಾಲಕ್ಕೆ ಅಧಿಕೃತವಾಗಿ ಪುನರುಜ್ಜೀವನಗೊಳಿಸಲ್ಪಟ್ಟಿದ್ದ ಒಪ್ಪಂದ ಕರಾರುಗಳನ್ನು ಆಧರಿಸಿ ಇರುವಂತಹದು. ಈ ಕರಾರುಗಳು ಅಭೇದ್ಯವೆಂದು 1942-43ರಲ್ಲಿ ನಾ ರ ಲಾ ಗಿ ಕ್ಕು. 1942ರ ಸಮ್ಮಿಶ್ರ ಸರಕಾರದ ಪ್ರತಿನಿಧಿಯಾಗಿ ಹೋಗಿದ್ದ ಸರ್ ಸ್ಟಾಫೋರ್ಡ್ ಕ್ರಿಪ್ಸರು ಹೈದರಾಬಾದಿಗೆ ಈ ಕೆಳಗಿನ ವಾಗ್ದಾನ ಮಾಡಿದ್ದರು. "ನೀವು ನಿಮ್ಮ ಆಧಿಕಾರಗಳನ್ನು ವಹಿಸಿಕೊಂಡು ಪೂರ್ಣ ಸ್ವತಂತ್ರರಾಗಲಿಚ್ಛಿಸುವುದಾದರೆ ಹಾಗೆಯೇ ಹೇಳಿ; ನಾವದನ್ನು ಕೊಟ್ಟು ಬಿಡುತ್ತೇವೆ. ನಾವೆಯ್ಕೆ ಭಾಗವ ಸಂಸ್ಥಾನಗಳು ಒಂದು ಕೇಂದ್ರವಾಗಿ ರೂಪುಗೊಳ್ಳಬಹುದ; ನೀವೂ ಅದನ್ನು ಸೇರಿಕೊಳ್ಳಬಲ್ಲಿರಿ. ಯಾವ್ಕಿಕಾರಣದಿಂದಾದರೂ ನಾವೀ ಒಪ್ಪಂದವನ್ನು ಎಂದೂ ಭಂಗಿಸುವಂತಿಲ್ಲ" ಅಂದ ಮೇಲೆ ಸದ್ಯದ ಸರಕಾರವು ಮೂಲ ಭೂತ ತತ್ವಗಳ ಪಟ್ಟಿಗೇನೇ ತಂದಿರುವ ಮಹತ್ಕಾರ್ಯದ ಬದಲಾವಣೆಗಳ ಕಡೆಗೆ ಈ ಸಭೆಯು ವಿಶೇಷ ಲಕ್ಷಕೊಡಬೇಕಾದುದು ಅಗತ್ಯ. ಆಶ್ರಿತ ರಾಜರು ಮತ್ತು ದಳಿತ ವರ್ಗಗಳ ಕಡೆಗೆ ನಾವು ವಹಿಸಿರುವ ಹೊಣ್ಣುಬಾಧ್ಯತೆಗಳನ್ನು ಎಂದೆಂದಿಗೂ ಪಾಲಿಸಿ ಕೊಡುವೆವು, ಎಂದು ನಾವು ಸದಾ ಕಾಲವೂ ಹೇಳುತ್ತಾ ಬಂದಿದ್ದೇವೆ. ಆದರೆ ಸದ್ಯದ ಸರಕಾರದಿಂದ ಈ ಪ್ರತಿಜ್ಞೆಗಳು ಕಸದಂತೆ ಮೂಲೆಗೊತ್ತಲ್ಪಟ್ಟಿವೆ. ಸ್ವಾತಂತ್ರ್ಯದ ಕಳಹೆದಿಯ ಮೇಲೆಯೇ ತಾವು ಭಾರತದ ನಾಯಕರೊಡನೀಗ ಚರ್ಚೆ ನಡೆಸುತ್ತಿರುವುದರಿಂದ 1942ರಲ್ಲಿ ತಾನು ಸಂಸ್ಥಾನಗಳ ಸಂಬಂಧವಾಗಿ ಹೇಳಿದ್ದ ಮಾತಿಗೆ ಇನ್ನು ಸಿಂಧುತ್ವವಿಲ್ಲವೆಂದು 1946ರಲ್ಲಿ ಸರ್ ಸ್ಟಾಫೋರ್ಡ್ ಕ್ರಿಪ್ಸರು ಹೇಳಿದ್ದರು. ಆದರೆ ಸಂಸ್ಥಾನಗಳಿಗೆ ಪೂರ್ಣ ಸ್ವತಂತ್ರವಾಗಿರುವ ಹಕ್ಕಿದೆಯೆಂಬುದನ್ನೂ ಸಾರ್ವಭೌಮಾಧಿಕಾರದ ಮುಕ್ತಾಯವನ್ನೂ ಅವರು ವುನರನು ಮೋದನೆ ಮಾಡಿದ್ದರು. ಭಾರತ ಶಾಸನದ ಚರ್ಚೆ ನಡೆದಿದ್ದ ವೇಳೆಯಲ್ಲಿ ಪ್ರಧಾನ ಮಂತ್ರಿಗಳು ಕೂಡಾ ಈ ಕೆಳಗಿನಂತಾಡಿದ್ದರು. "ಒಪ್ಪಂದ' ಕರಾರುಗಳ ಮುಕ್ತಾಯದೊಂದಿಗೆ ಸಂಸ್ಥಾನಗಳು ತಮ್ಮ ಸ್ವಾತಂತ್ರ್ಯವನ್ನು ಮರು ಸಂಪಾದಿಸಿಕೊಳ್ಳುವವು. ಕಾಮನ್‌ವೆಲ್ತಿನ ಒಂದೆಲ್ಲೊಂದು ವಸಾಹತುವಿನೊಡನೆ ತಮಗೊಂದು ಯೋಗ್ಯ ಸ್ಥಾನವನ್ನು ಯೋಗ್ಯ ಕಾಲದಲ್ಲೇ ಸಂಸ್ಥಾನಗಳು ಸಂಪಾದಿಸಿಕೊಳ್ಳುವವೆಂದು ಬ್ರಿಟಿಷ್ ಸರಕಾರದ ಆಶೆ". ಲೋರ್ಡರ ಸಭೆಯಲ್ಲೂ ಆ ಮೇಲೂ ಇದೇ ಅಭಿಪ್ರಾಯದ ಮಾತಗಳು ಭಾರತ ಕಾರ್ಯದರ್ಶಿಯ ಬಾಯಿಯಿಂದ ಬಂದಿದ್ದುವು"ಎನ್ನುತ್ತಾ ಚರ್ಚಿಲ್ಲರು, ಬ್ರಿಟನು ತನ್ನ ಮೇಲಧಿಕಾರವನ್ನು ಬರ್ಖಾಸ್ತುಗೊಳಿಸಿಕೊಂಡ ಮೇಲೆ ಹೈದರಾಬಾದು ಸಹಜವಾಗಿ ತನ್ನ ಮೂಲ ಸ್ವಾತಂತ್ರ್ಯದ ಸ್ಥಾನ ಪಡೆದಿದೆಯೆಂದೂ, ಈಗ ಸ್ವತಂತ್ರ ಸಾರ್ವಭೌಮಾಧಿಕಾರೀ ಸಂಸ್ಥಾನವಾಗಿರುವ ಆದು ಜಾಗತಿಕ ಸಂಘಕ್ಕೆ ಅರ್ಜಿ ಮಾಡಲು ಮುಂದಾಗಿದ್ದು ಹಾಗೆ ಮಾಡುವ ಪೂರ್ಣಾಧಿಕಾರ ಅದಕ್ಕಿರುವುದೆಂದೂ, ಬ್ರಿಟಿಷ್ ಸರಕಾರವು ಅದನ್ನು ಸಮರ್ಥಿಸಲೇಬೇಕೆಂದೂ ಒತ್ತಿ ಹೇಳಿದರು.

ಹೈದರಾಬಾದಿನ ಯೋಗ್ಯತೆ

ಜಾಗತಿಕ ಸಂಘದ 50 ಸದಸ್ಯ ರಾಷ್ಟ್ರಗಳಲ್ಲಿ ಏಳಕ್ಕಿ 39 ಹೈದರಾಬಾದಿಗಿಂತ ಸಣ್ಣವು, 20 ಕ್ಷೇತ್ರ ವಿಸ್ತಾರದಲ್ಲಿ ಕಿರಿಯವು, 15 ಉತ್ಪತ್ತಿಯಲ್ಲಿ ಕಡಿಮೆಯಿರುವವುಗಳು—ಎಂದು ತೂಗಿ ತೋರಿಸುತ್ತಾ ಚರ್ಚಿಲ್ಲರೆಂದರು. "ಹೈದರಾಬಾದು ಭಾರತ ಕೇಂದ್ರದಿಂದ ಸುತ್ತುಗಟ್ಟಲ್ಪಟ್ಟಿದೆ; ಆದು ಭೂಬಂಧನದೊಳಗಿದೆ; ಅದಕ್ಕೆ ಸಮುದ್ರ ಸಂಬಂಧವಿಲ್ಲ, ಮುಂತಾದ ಮಾತುಗಳು ಕೇಳಿಬರುತ್ತಿವೆ. ಈ ಪರಿಸ್ಥಿತಿಗೂ ಸ್ವಾತಂತ್ರ್ಯಕ್ಕೂ ಸಂಬಂಧವಿಲ್ಲ. ಸ್ವಿಡರ್‌ಲೆಂಡು ಸಂಪೂರ್ಣವಾಗಿ ಸುತ್ತುಗಟ್ಟಲ್ಪಟ್ಟಿದ್ದು ರಥಿ ಸಂಬಂಧವೇ ಇಲ್ಲದ ರಾಷ್ಟ್ರ. ಅದರದು ನೂರಾರು ವರ್ಷಗಳಿಂದ ತನ್ನ ಸ್ವಾತಂತ್ರ್ಯವನ್ನು ಉಳಿಸಿಕೊಂಡಿದೆ. ಆಸ್ಟ್ರೇಲಿಯ ಮತ್ತು ಯೆಕೊಸ್ಲೊವೇಕಿಯಗಳೂ ಸಮುದ್ರ ಸಂಬಂಧವಿಲ್ಲದ ರಾಷ್ಟ್ರಗಳು; ಅದರೆ ಅಷ್ಟಕ್ಕಾಗಿ ಅವುಗಳ ಸ್ವಾತಂತ್ರ್ಯದಲ್ಲಿ ಲಗುತ್ಪವನ್ನು ಬ್ರಿಟಿಷ್ ಪಾರ್ಲಿಮೆಂಟ್ ಕಂಡಿದ್ದಿಲ್ಲ. ಹೈದರಾಬಾದಿಗೆ ಸ್ವತಂತ್ರವಾಗುವ ಯೋಗ್ಯತೆ ಪರಿಪೂರ್ಣವಿದ್ದು ಜಾಗತಿಕ ಸಂಘದ ಸದಸ್ಯತ್ವ ದೊರೆತರೆ ಅಸ್ಥಾನದಲ್ಲಿ ರಾಜಿಸುವ ಹಕ್ಕು ಅದಕ್ಕಿದ್ದೇ ಇದೆ; ಜಾಗತಿಕ ಸಂಘಕ್ಕೆ ದೂರು ಕೊಡುವ ಹಕ್ಕು—ಆದರಲ್ಲೂ ಶಾಂತಿಭಂಗದ ಅಪಾಯವಿದ್ದಿರುವ ಈ ಕಾಲದಲ್ಲಿ—ಅದಕ್ಕೆ ಇನ್ನಷ್ಟು ಹೆಚ್ಚಿಗಿದೆ. ಜಾಗತಿಕ ಸಂಘಕ್ಕೆ ದೂರು ಕೊಡುವ ಕುರಿತು ಬ್ರಿಟಿಷ್ ಸರಕಾರ ಹೈದರಾಬಾದಿಗೆ ಸಜಾಯ ಮಾಡುವುದೇ? ಮತ್ತು ಇಕ್ಕಡೆಯವರ ವಾದಗಳೂ ಸಂಪೂರ್ಣವಾಗಿ ನ್ಯಾಯಸ್ಥಾನದ ಅಲ್ಲಿ ಅಲಿಸಲ್ಪಡುವಂತೆ ಮತ್ತು ಚರ್ಚಿಸಲ್ಪಡುವಂತೆ ನೋಡಬೇಕೆಂದು ಲಲ್ಲೆಯತನ್ನ ಪ್ರತಿನಿಧಿಗಳಿಗೆ ನಿರ್ದೇಶಿಸುವರೇ? ಎಂದು ನಾನು ಪ್ರಧಾನ ಮಂತ್ರಿಗಳನ್ನು ಪ್ರಶ್ನಿಸುತ್ತೇನೆ." ಎಂದರು ಚರ್ಚಿಲ್. ಹೈದರಾಬಾದಿನ ಮೇಲಣ ಕಠಿಣ ದಿಗ್ಬಂಧನೆಗಳನ್ನು ವಿಶೇಷ ರೀತಿಯಿಂದ ಟೀಕಿಸಿ "ಇವೆಲ್ಲಾ ಈಗ 'ಥಂಡಾ ಯುದ್ಧ' ವಾಗಿರಬಹುದು; ಅದರೆ ಇವೇ ಪ್ರತ್ಯಕ್ಷ ಹಿಂಸೆಯ ಪೀಠಿಕೆಯಾಗಲೂ ಬಹುದು" ಎಂದರು.

ನೆಹರು ಭಾಷಣದ ಟೀಕೆ

ಪಂಡಿತ ನೆಹರುಗಳ ಮದ್ರಾಸ್ ಭಾಷಣವನ್ನೆತ್ತಿ ಕೊಂಡು ಚರ್ಚಿಲ್ಲರಂದರು. "ಅಗತ್ಯ ಬಿದ್ದರೆ ಮತ್ತು ಅಗತ್ಯ ತೋರಿದಾಗ ಹೈದರಾಬಾದಿನ ವಿರುದ್ಧ ಸೇನಾ ಕಾರ್ಯ ಕೈಕೊಳ್ಳುವೆವೆಂದು ನೆಹರುಗಳಾಡಿದ ವಾರ್ತೆ ಬಂದಿದೆ. ಅಂತೆಯೇ ಹೈದರಾಬಾದಿನ ಸದ್ಯದ ಸರಕಾರವು ಧರೋಡೆಗಾರ ಸರಕಾರವೆಂದೂ, ಹೈದರಾಬಾದು ಭಾರತದೊಂದಿಗೆ ಸೇರದಿದ್ದರೆ ಅದೊಂದು

ಎರಡು ಅಪೂರ್ವ ಪುಸ್ತಕಗಳು

ಕನ್ನಡದ ಪತ್ರಿಕೆಗಳೆಲ್ಲಾ ಮುಕ್ತ ಕಂಠದಿಂದ ಹೊಗಳಿದ ಲೋಕಪ್ರಿಯ ವ್ಯಾಕ್ತಿಸಿದಿಕ ಕಥಾಸಂಗ್ರಹ

ಹೂದೋಟ ಭಾಗ ೧

ಪುಟ ೨೫೦ ಬೆಲೆ: ಕ ಳ ಂ ಅಂ. ವೆ: ೦ ೬ ೦

ಕನ್ನಡದ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಕಡೆಂಗೋಡ್ಲು ಶಂಕರ ಭಟ್ಟರ ರಸಭರಿತ ಸುಂದರ – ಸ್ವತಂತ್ರ ಸಾಮಾಜಿಕ ಕಾದಂಬರಿ.

ಲೋಕದ ಕಣ್ಣು

ಪುಟ ೧೨೦ ಬೆಲೆ: ೨ ೬ ೦ ಅಂ. ವೆ. ೦ ೬ ೦

ನಮ್ಮ ಮುಂದಿನ ಪ್ರಕಟಣೆಗಳು

೧. ನಾನೇಕೆ ಹೀಗೆ (ಶ್ರೀ ಒಪ್ಪಂಜೆಯವರ ಲಘು ಕಾದಂಬರಿ)
೨. ಬಾಳ್ಮೊಟ್ಟೆಗಳು (ಶ್ರೀ ಒಪ್ಪಂಜೆಯವರ ಕಥಾಸಂಗ್ರಹ) ೩. ಹೂದೋಟ (ಭಾಗ ೨) ೪. ೧೯೪೭ (ಕಥಾಸಂಗ್ರಹ) ೫. ಹೂಬುಟ್ಟಿ (ಏಕಾಂಕ ಸಂಗ್ರಹ)

ನಿವರಗಳಿಗೆ ಬರೆಯಿರಿ

ಟಿ ತ್ರಿವಿಕ್ರಮ
'ಕೃಷ್ಣ ವಿಹಾರ' ಕದ್ರಿ ಟಿಂಪ್ಲ್ ರೋಡು,
ಬಿಜಯಿ, ನುಂಗೆಕೂರು.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟಿದ್ದು ಇಂಡಿಯಾ ಪಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು,ನಮ್ಮ ಶಾಖೆಗಳಿರುವಲ್ಲಿ ರಪಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಷಕರಿಂದಿರುವ ನಮ್ಮ ಶಾಖೆಗಳು ದಬ್ಬಣದ ಆರಳೆಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗಿನಗಳು, ವೈಸ್ಸಾಟಕೆಗಳಲ್ಲಿ-- ಮತ್ತು ಮುಂಬಾಯಿ ಹಾಗೂ ಆದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕರಾಗಿ ನಿರಾಕರಿಗಳ ಬಗ್ಗೆ ಕಲೆಕ್ಷನ್ ರಪಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸಲಹೆಸೂಚನೆಗಳು ಸುಲಭವಾಗಿ ನಿಮ್ಮವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಲ್ಪಬಹುತ್ತವೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಪಮುಗಳ ಕಡೆಗೆ ಯಾವಾಗಲೂ ಸಾಬಂಧಪಟ್ಟವರ ಕ್ಷಿಪ್ರ ಲಕ್ಷ್ಯ ಕೊಡುವುದು.

The Canara Bank Limited.

ESTD: 1906.

ಪ್ರಧಾನಿ ಆಟ್ಲಿಯ ಖಂಡತುಂಡ ಉತ್ತರ

ಸಂಸ್ಥಾನವಾಗಿ ಉಳಿಯುವ ಸ್ಥಾನಕೂಡಾ ಹಾರಿ ಹೋದೀತೆಂದೂ, ಹೈದರಾಬಾದಿನೊಡನೆ ಯುದ್ಧವೆನ್ನುವ ಬೆರುದು ಕೊಡುವದಕ್ಕೂ ತಾನು ತಯಾರಿಲ್ಲವೆಂದೂ ನೆಹರುಗಳರಿವಿದ್ದಾರೆಂದು ಸುದ್ದಿ. ಅಸ್ಪೃಶ್ಯತೆಯನ್ನು ಕಬಳಿಸುವ ಮೊದಲು ಹಿಟ್ಟರನು ಹೇಳಬಹುದಾಗಿದ್ದ ಮಾತಿದು ಎಂದು ನನಗೆ ತೋರುತ್ತದೆ. ಆದರೆ ಅತ ತನ್ನ ಮಾತನ್ನು ಹಾರಿಸುವದರಲ್ಲಿ ವಿಶೇಷ ಜಾಗರೂಕತೆ ವಹಿಸಿದ್ದ. ಝಕೊಸ್ಲೊವೇಕಿಯವನ್ನಾಕ್ರಮಿಸಿ ಕೊಳ್ಳುವ ಮೊದಲು ಇಂತಹ ಮಾತನ್ನು ನಿಜಕ್ಕೂ ಆಡಬಹುದಾಗಿತ್ತು. ಕೇವಲ ಭಾರತೀಯರೊಳಗಿನವೆಂಬುದರಿಂದ ಇವೆಲ್ಲಾ ಸಂಗತಿಗಳನ್ನು ಕಡೆಗಣಿಸಲಾಗುವದಿಲ್ಲ. ನೆಹರೂ ಸರಕಾರವು ಸ್ವತಂತ್ರ ಹೈದರಾಬಾದಿನ ಮೇಲೆ ಆಕ್ರಮಣ ಮಾಡಿದಲ್ಲಿ ಈಗ ಆಗುತ್ತಿರುವ ವ್ಯವಸ್ಥೆಗಳ ದೆಸೆಯಿಂದ ಬ್ರಿಟಿಷ್ ಸಿಂಹಾಸನ ಮತ್ತು ಸ್ವತಃ ಚಕ್ರವರ್ತಿಗಳು ಕೂಡಾ ಇದರಲ್ಲಿ ವ್ಯವೇತಿಸುವಂತಾಗಬಹುದು. ಹೈದರಾಬಾದ್ ಕಮಿಟಿಯೆಂದರೂ ಕಾಶ್ಮೀರದ ಎರಡು ಪಾಲಷ್ಟು ದೊಡ್ಡದಿದೆ ಈ ಪೈಕಿ ಒಂದಕ್ಕೆ ಜಾಗತಿಕ ಸಂಘದ 'ಸತ್ಯಾರ್ಯ ಆಚರಣೆ'ದೊರೆಯಬಲ್ಲುದಾದರೆ ಮತ್ತೊಂದಕ್ಕೆ ಏಕೆ ಕೊಡದು? ಭಾರತ ಸರಕಾರವು ಇವೆರಡು ಸಂಸ್ಥಾನಗಳ ಕಡೆಗೆ ವಹಿಸಿರುವ ಘೋರಣೆ ಅಥವಾ ಶತ್ರುಗಳ ಆರ್ಥವೇ ನನಗಾಗುವದಿಲ್ಲ. ಕಾಶ್ಮೀರದಲ್ಲಿ ೪/೫ರಷ್ಟು ಜನರು ಮುಸ್ಲಿಮರು-ರಾಜ ಹಿಂದು. ಅಲ್ಲಿಯ ಜನತೆಯ ಆತ್ಯಧಿಕ ಸಂಖ್ಯಾಕರಿಗೇನೂ ತಿಳಿಸದೆ ಭಾರತ ಕೇಂದ್ರದೊಳಗದನ್ನು ಸೇರಿಸಿಕೊಳ್ಳಲಾಗಿದೆ; ಹೈದರಾಬಾದಿನ ಪಂಚಂಧದ ಜಾತೀಯ ಸ್ಥಿತಿ ತದ್ವಿರುದ್ಧವಾದುದು-ರಾಜ ಮುಸ್ಲಿಮನಿದ್ದು, ಜನತೆಯು ದೊಡ್ಡಭಾಗ ಮುಸ್ಲಿಮೇತರರು. ಆದರೆ ನೆಹರೂ ಸರಕಾರವು ಒಂದು ಸಂಸ್ಥಾನದ ಮಟ್ಟಿಗೆ ಜನತಾಭಿಪ್ರಾಯದಂತೆ ಎನ್ನುವಾಗ ಮತ್ತೊಂದರ ಮಟ್ಟಿಗೆ ರಾಜನ ಅಭಿಪ್ರಾಯದಂತೆ ಎನ್ನುವ ಮರ್ಜಿ ವಹಿಸಿದ್ದು ಆ ಪರಾಧೀನತೆಗೋ ಅವರು ಲೆಸನ ಮಾಡುತ್ತಾ ಹೋಗುತಿದ್ದಾರೆ. ಕಾಶ್ಮೀರ ಮತ್ತು ಹೈದರಾಬಾದುಗಳೆರಡರ ಸಂಕಲ್ಪಗಳ ನಿವಾರಣೆಯು ಮಟ್ಟಿಗೂ ಒಂದೇ ತತ್ವ ಮತ್ತು ವಿಧಾನಗಳನ್ನು ಅನುಸರಿಸುವಂತೆ ಮಾಡಬೇಕೆಂದೂ, ಅರ್ಥಾತ್ ಎರಡರ ಸಂಬಂಧದ ನ್ಯಾಯ ತೀರ್ಮಾನವನ್ನೂ ಸಂಘಟಿಕ್ಕ ರಾಷ್ಟ್ರಸಂಘಕ್ಕೊಪ್ಪಿಸುವಂತೆ ಮಾಡಿ ಅದನ್ನು ಸಾಧಿಸಲು ನಾವು ನೆರವಾಗಬೇಕೆಂದೂ ನಾನು ನಮ್ಮ ಸರಕಾರಕ್ಕೆ ಸೂಚಿಸುತಿದ್ದೇನೆ. ಮತ್ತು ಸರಕಾರವು ಯಾಗೆಯೇ ಮಾಡುವುದೆಂದು ಬಯಸುತಿದ್ದೇನೆ" ಎನ್ನುತ್ತಾ, ಹೈದರಾಬಾದನ್ನು ಕಡೆಗಣಿಸಿದರೆ ಮುಂದಿನತಲತಲಾಂತರವೂ ಜ್ಞಾಪಿಸುವಂತಹ ಲಜ್ಜಾವಹ ಕರ್ತವ್ಯಚ್ಯುತಿಯನ್ನು ಪ್ರದರ್ಶಿಸಿದಂತಾಗುವದೆಂದು ಎಚ್ಚರಿಸಿದರು.

ಪ್ರಧಾನಿ ಆಟ್ಲಿಗಳ ಉತ್ತರ—

ಟೋರಿ ಪುಛ್ಛತಿಗಳಿಗೆ ಬ್ರಿಟಿಷ್ ಪ್ರಧಾನ ಆಟ್ಲಿಗಳು ತೂಕದ ಮಾತುಗಳಿಂದ ಸಮರ್ಪಕ ಉತ್ತರ ಕೊಟ್ಟರು. ಭಾರತ ಸಂಬಂಧದ ಚರ್ಚೆಗಳ ಪ್ರತಿಯೊಂದು ಸಂದರ್ಭದಲ್ಲೂ, ಭಾರತ ಸರಕಾರದ ಮೇಲೆ ವಿವಿಧ ಸಿಡಿಗುಂಡಿನಂತಾಗುವ ಚರ್ಚಿಲ್ಲರು ಆಟ್ಲಿ ಭಾಷಣದ ಮೇಲೆ ನಡೆಸುವಲೆ ಗೊಣಗುತ್ತಾ ಹೋದುದೂ ಚರ್ಚಿಲ್ಲರ ಈ ದುರ್ಬುದ್ಧಿಯ ಕುರಿತು ವಿಶೇಷ ರೇಗಿದ್ದ ಆಟ್ಲಿಗಳು ಅವರಿಗೆ ಕೆನ್ನೆ ತಾಡನದಂತೆ ಹೆ ಉತ್ತರಗಳನ್ನು ಕೊಡುತ್ತಾ ಬಂದುದೂ ಈ ಚರ್ಚೆಯ ಒಂದು ವೈಶಿಷ್ಟ್ಯ. ಆಟ್ಲಿಗಳು ಎಲ್ಲಾ ಆರೋಪಗಳನ್ನೂ ಸ್ಪಷ್ಟವಾಗಿ ಹಾಗೂ ಸರಿಯಾಗಿ ಉತ್ತರಿಸಿದರು. "ಕ್ರಿಪ್ಸ್ ರಾಯಭಾರದ ವೇಳೆ ಮುಂದಿಡಲ್ಪಟ್ಟಿದ್ದ ಸೂಚನೆಗಳಿಂದ ಏನೂ ಆಗದೆ ಅವು ಅಧಿಕೃತ ಭಾರತೀಯರಿಂದ ನಿರಾಕರಿಸಲ್ಪಟ್ಟುದುರಿಂದ ಅನಂತರ ಹೊಸಾಭ್ಯಾಯವೇ ಆರಂಭಿಸಿದ್ದಿತು. ಸಂಸ್ಥಾನಗಳ ಮೇಲಿನ ಬ್ರಿಟಿಷ್ ಸಾರ್ವಭೌಮಾಧಿಕಾರವೆಂಬುದು ವರ್ಗಾಯಿಸುವಂತಹ ವಿಷಯವಲ್ಲವಾದ್ದರಿಂದಲೇ ಯಾವುದೊಂದು ವಸಾಹತಿನ ಕೈಗೂ ಒಪ್ಪಿಸದೆ ಅದನ್ನು ಬರ್ಖಾಸ್ತು ಗೊಳಿಸಲಾಯಿತೆಂಬುದು ಎಲ್ಲರಿಗೂ ಸ್ಪಷ್ಟವಾಗಿರುವ ಸಂಗತಿ. ಈ ವಿಷಯವು 1946ರ ಮೇ 22ಂ ಹೇಳಿಕೆಯಲ್ಲಿ ಸ್ಪಷ್ಟೀಕರಿಸಲ್ಪಟ್ಟಿದೆ. ಪೂರ್ಣ ಸ್ವತಂತ್ರ ವಸಾಹತುಗಳ ಸ್ಥಾಪನೆಯಾದ ಮೇಲೆ ಸಾರ್ವಭೌಮಾಧಿಕಾರ ಸಂಬಂಧದ ಯಾವ ಹಕ್ಕುಬಾಧ್ಯತೈಕರಾದು ಸಂಬಂಧಗಳಿಗೂ ಸ್ಥಾನವಿಲ್ಲವೆಂಬುದು ಖಚಿತ ಮಾಡಲ್ಪಟ್ಟಿದೆ" ಎನ್ನುತ್ತಾ ಆಟ್ಲಿಗಳು ಭಾರತದ ಸ್ವಾತಂತ್ರ್ಯ ಶಾಸನದ ಒಕ್ಕಣೆಗಳ ಉದಾಹರಣೆ ಕೊಡುತಿದ್ದಾಗ, ಚರ್ಚಿಲ್ಲರು "ಆ ಶಾಸನವೇ ಹಿಂದೀರಾಜರಿಗಾದ ವಿಶ್ವಾಸದ್ರೋಹ"ವೆಂದು ತನ್ನೆಷ್ಟಕ್ಕೆ ಗುಣಗುಟ್ಟುದುದು ಕೇಳಿ ಬಂತು. ಕೂಡಲೇ ಆಟ್ಲಿಗಳು "ಈ ಸಭೆಯಲ್ಲಿ ಪೂರ್ಣ ಚರ್ಚಿಸಲ್ಪಟ್ಟು ಜಾರಿಗೆ ಬಂದಿರುವ ಒಂದು ಶಾಸನವನ್ನೇ ಹಿಂದೆಳೆದುಕೊಳ್ಳುವ ಪ್ರಯತ್ನದಲ್ಲೀಗ ಚರ್ಚಿಲ್ಲರಿದ್ದಾರೆ. ಹೈದರಾಬಾದಿನ ಸಂಬಂಧವಾಗಿ ನಾವು ಸಾರ್ವಭೌಮಾಧಿಕಾರವನ್ನು ಕಾದಿಟ್ಟುಕೊಳ್ಳಬೇಕೆಂಬ ಸೂಚನೆಯು ಆ ಶಾಲದಲ್ಲೇನೂ ಬಂದಿದ್ದಿಲ್ಲ" ಎಂದು ಮಾರ್ನುಡಿದು ಮುಂದುವರಿಸಿ "ಚರ್ಚಿಲ್ಲರೀಗ ಹಿಂದೀ ರಾಜರ ಹಕ್ಕು ರಕ್ಷಣೆಗಾಗಿ ನಡು ಬಿಗಿದಿರುವರೋ ಎಂಬುದನ್ನು ನಾನರಿಯೆ". ಎಂದ ಮಾತಿಗೆ 'ನಾನು ಜನತೆಯ ಹಕ್ಕು ರಕ್ಷಣೆಗಾಗಿ ಇರುವೆ' ಎಂದು ಚರ್ಚಿಲ್ಲರು ಉತ್ತರಿಸಿದಾಗ ಟೋರಿ ಪಕ್ಷೀಯರು ಗಟ್ಟಿಯಾಗಿ ಉತ್ಸಾಹೋದ್ಗಾರವೆಬ್ಬಿಸಿದರು. ನೀ. ಆಟ್ಲಿಗಳು ವ್ಯಂಗ್ಯವಾಗಿ 'ಭಾರತೀಯ ಜನತೆಯ ಸ್ವರಾಜ್ಯ ಹಕ್ಕನ್ನು ನೀಲಿಂದ ಮೇಲೆ ವಿರೋಧಿಸುತ್ತಾ ಬಂದಿದ್ದ ಚರ್ಚಿಲ್ಲರು ಇಷ್ಟು ಕಡವಾಗಿಯಾದರೂ ಇಂತಹ ಮತಾಂತರಗೊಂಡುದಕ್ಕಾಗಿ ನ್ಯಾಕಿಯೊಬ್ಬನ್ನೂ ಮುಖ್ಯಾನಿಧಾರಕೇಯರು ವಿಶೇಷಾನಂದಗೊಂಡಾರೆಂದು ನಾನು ಖಂಡಿತವಾಗಿ ಹೇಳಬಲ್ಲೆ' ಎನ್ನುತ್ತಾ ಸರಕಾರೀ ಕಡೆಯವಂ ಪುಚಂಡ ಉತ್ಸಾಹ ಧ್ವನಿ ಮತ್ತು ನಗೆಯುನ್ನೆಬ್ಬಿಸಿದರು.

ಚರ್ಚಿಲ್ಲರ ಹಿಂದೂ ದ್ವೇಷ!

"ಈಗ ಹೈದರಾಬಾದಿನ ಪ್ರಶ್ನೆ. ಇದು ಎಷ್ಟೋ ವರುಷಗಳಿಂದ ಜನತೆಗೆ ಅಧಿಕಾರವೇ ಇಲ್ಲದಿರುವ, ನಾವೇ ರಾಜರ ಸ್ವಾಧಿಕಾರವನ್ನು ಒಪ್ಪಬೇಕಾಗಿ ಬಂದಿದ್ದ ಒಂದು ಸಂಸ್ಥಾನವೆಂದರೆ ಚರ್ಚಿಲ್ಲರಿಗೆ ದುಃಖವಾಗಲೇ ಬೇಕು" ಎಂದು ಪ್ರಧಾನಿ ಆಟ್ಲಿಗಳು ವ್ಯಂಗ್ಯವಾಗಿ ಬಾಣವೆಸೆದಾಗ ಅವರ ಅನುಯಾಯಿಗಳ ಉತ್ಸಾಹವನ್ನೆದ್ದಿತು. 'ಭಾರತ ಮತ್ತು ಹೈದರಾಬಾದುಗಳೊಳಗೆ ಒಂದು ವರುಷ ಅವಧಿಯ ಒಪ್ಪಂದವಾಗಿದ್ದು ಅದಕ್ಕಿನ್ನೂ ಕೆಲವು ತಿಂಗಳುಗಳ ಅವಧಿಯಿದೆ ಯೆಂಬ ಮತ್ತು ಆ ಒಪ್ಪಂದ ಪ್ರಕಾರ ನಿಜಾಮರು ಹೈದರಾಬಾದಿನ ಹೊರ ಸಂಬಂಧಾಧಿಕಾರವನ್ನು ಸ್ಪಷ್ಟವಾಗಿ ಭಾರತಕೇಂದ್ರಕ್ಕೊಪ್ಪಿಸಿರುವ ರೆಂಬ ಒಂದು ಮುಖ್ಯ ವಿಷಯದ ಕಡೆಗೆ ಚರ್ಚಿಲ್ಲರ ಲಕ್ಷ್ಯವೇ ಹೋಗಿಲ್ಲ" ಎಂದು ಒತ್ತಿ ಹೇಳಿದರು ಆಟ್ಲಿ. "ಆ ಒಪ್ಪಂದಾರಭ್ಯದಿಂದ ಹೈದರಾಬಾದಿನ ಮೇಲೆ ದಿಗ್ಬಂಧನ ಬಿದ್ದಿದೆ' ಎಂದು ಚರ್ಚಿಲ್ಲರು ಮಾತು ಬಂತು. ಒಡನೆಯೇ ಸಿಟ್ಟುಗೊಂಡ ಆಟ್ಲಿ ಮಾರುನುಡಿದರು. 'ಇದೊಂದು ವಿಷಯದಲ್ಲಿ ಚರ್ಚಿಲ್ಲರು ತನ್ನ ಕಾರಣಗಳನ್ನು--ಅವರು ಕಾರಣಗಳೆಂದು ಹೇಳಿಕೊಳ್ಳುವಂಥವುಗಳನ್ನು-- ಯಾವಾಗಲೂ ಒಂದೇ ಕಡೆಯಿಂದಲೇ ಆರಿಸಿಕೊಳ್ಳುತ್ತಾರೆ. ಆದರೆ ನಾನು ಎರಡು ಕಡೆಯವರ ಸುದ್ದಿಗಳನ್ನೂ ಸಂಗ್ರಹಿಸಿಕೊಳ್ಳಜೇಕಾಗಿದೆ. ಹಿಂದುಗಳು ಮಾಡುವಂತಹದೆಲ್ಲವೂ ತಪ್ಪೇ ಎಂಬ ತನ್ನ ಕಟ್ಟುಪಟ್ಟ ಭಾವನೆಗನುಸಾರವಾಗಿಯೇ ಸರ್ವಸಾಧಾರಣವಾಗಿ ಚರ್ಚಿಲ್ಲರಾಡಿಬಿಡುತ್ತಾರೆ".

ಚರ್ಚಿಲ್-- "ಹೀಗೆ ಹೇಳುವ ಅಧಿಕಾರ ಇವರಿಗಿಲ್ಲ".

ಆಟ್ಲಿ-- 'ನಾನಿದನ್ನು ಪ್ರತಿ ಸಲವೂ ಕಂಡು ಹಿಡಿದಿದ್ದೇನೆ. ಮತ್ತು ಭಾರತದಲ್ಲಿ ಸರ್ವಸಾಮಾನ್ಯವಾಗಿರುವ ಅಭಿಪ್ರಾಯವಿದು".

ಚರ್ಚಿಲ್-- "ಹಿಂದುಗಳು ಮಾಡುವದೆಲ್ಲಾ ತಪ್ಪೆಂಬ ಹುಟ್ಟು ಬುದ್ಧಿಯನ್ನು ಕಟ್ಟಿಕೊಂಡೇ ನಾನು ತೊಡಗುವವನೆಂಬುದನ್ನು ಪ್ರತಿಭಟಿಸದೆ ನಾನು ಹಾಗೆಯೇ ಮುಂದೊತ್ತಲು ಬಿಡಲಾರೆ. ಇಂತಹ ಹೇಳಿಕೆ ಕೊಡುವದು ನೀಚಕೆಗೇಡುತನ. ಬೀಲಿಯಾವಧಿ ಜನರಲ್ಲಿ ವಿರುದ್ಧ ಭಾವನೆಯೆಬ್ಬಿಸಬೇಕೆಂದೇ ಅವರು ಹೀಗೆ ಅಡಿದ್ದಾರೆ". ಎಂದು ಚರ್ಚಿಲ್ಲರು ಘರ್ಜಿಸಿದಾಗ ಅವರ ಅನುಯಾಯಿಗಳೂ 'ಆಟ್ಲಿಗಳು ತನ್ನ ಆರೋಪವನ್ನು ಹಿಂದೆಗೆದುಕೊಳ್ಳಬೇಕು'ಎಂದು ದೊಡ್ಡ ಬೊಬ್ಬೆಯೆಬ್ಬಿಸಿದರು.

ಆಟ್ಲಿಗಳು ಅಚಲ ಸ್ಥೈರ್ಯ ವಹಿಸಿ, ಚರ್ಚಿಲ್ಲರು ವಿಕಸ್ಪಕಾರ ಒಂದೇ ಕಡೆಯ ಅಭಿಪ್ರಾಯಗಳನ್ನು ಹೇಗೆ, ಎತ್ತಿಕೊಳ್ಳುತ್ತಾ ಬರುತಿದ್ದಾರೆಂಬುದನ್ನೂ ಮಿಕ್ಕ ಟೋರಿ ನಾಯಕರು ಅವರಿಗಿಂತ ವಾಸಿಯೆಂಬುದನ್ನೂ ತೋರಿಸಿ ಕೊಡುವದೇ ತಪ್ಪಿಸಿಕೊಳ್ಳುತ್ತಾ ಇಳ್ಳಡೆಯವರ ವಾದ ಮತ್ತು ಆರೋಪ ಪ್ರತ್ಯಾರೋಪಗಳ ಸಾರವನ್ನು ನಮೂದಿಸಿ ಸಮತೋಲನ ಬುದ್ಧಿ ವಹಿಸಬೇಕೆಂದರು. ಚರ್ಚಿಲ್ಲರು ಮತ್ತೊಮ್ಮೂ 'ಹೈದರಾಬಾದಿನ ಮೇಲೆ ಬಹಿಷ್ಕಾರ ದಿಗ್ಬಂಧನವಿದೆ' ಎಂದು ಹೇಳುವಂತೆ ಬಂದಾಗ ಬ್ರಿಟಿಷ್ ಪ್ರಧಾನಿ ಕಾರಣಗಳನ್ನು ವಿವರಿಸಿ ಜಸಮತ ಸಂಗ್ರಹದ ಕುರಿತು ಚರ್ಚಿಲ್ಲರು ಹೇಳಿದ್ದನ್ನೇ ಭಾರತ ಸರಕಾರವೂ ಹೇಳಿದೆಯೆನ್ನುತ್ತಾ ಆ ಸಂಬಂಧದ ಭಾರತದ ಜಾಹೀರು ನಾಮೆಯೊಂದನ್ನು ಆಟ್ಲಿಗಳು ಓದಿ ಹೇಳಿ, ನೇರಾಗಿ ಚರ್ಚಿಲ್ಲರ ಕಡೆಗೆಬಾಗಿ "ಇದು ಅತ್ಯುತ್ತಮ; ಇದು ನೀವೇನನ್ನ ನವೇಕ್ಷಿಸಿದಿರೋ ಅದೇ; ಅಲ್ಲವೇನು?" ಎಂದು ಧಟ್ಟಿಸಿ ಕೇಳಿದರು.

"ಸದ್ಯದ ಪರಿಸ್ಥಿತಿಯಲ್ಲೂ ಅದು ಹಾಗಿದ್ದರೆ ಇನ್ನಷ್ಟು ಒಳ್ಳೆದು"-ಚರ್ಚಿಲ್.

"ಆದರೆ ಅದೇಕೆ ನಮ್ಮ ಲಕ್ಷ್ಯಕ್ಕೆ ಬರಲಿಲ್ಲವೋ ತಿಳಿಯದು. ಆದರ ಪ್ರಕಟಣೆಯನ್ನು ನೀವು ನೋಡಿರಬೇಕು. ಹಿಂದೀಯರು ಜನಮತ ಸಂಗ್ರಹಿಸಲಾರರೆಂದು ನೀವು ಕಟ್ಟಿಕೊಂಡಿರಿ;ಮಾಡಿದರೂ ದಳತ ವರ್ಗದವರನ್ನು ತೊಡೆದುಹಾಕಿಕೊಳ್ಳುತ್ತಾರೆಂದೇ ನೀವು ಕಟ್ಟಿಕೊಂಡಿರಿ. ಹೀಗೇ ದ್ವೇಷಾಸೂಯೆಯೂ ಹೊರತು ಈ ಭಾವನೆಗೆ ಬೇರಾವ ಆಧಾರವೂ ಇಲ್ಲ"-ಆಟ್ಲಿ.

ಈ ಮಾತಿನಿಂದ ಇನ್ನಷ್ಟು ಹುಚ್ಚಿನ ಗಲಭೆಯೆದ್ದಿತು. ನಡುವೆ ಓರ್ವ ಕೂಲಿಗಾರ ಸದಸ್ಯನು 'ಚರ್ಚಿಲ್ಲರನ್ನು 'ರಾಷ್ಟ್ರ ದ್ರೋಹಿ' ಎಂದು ಕೂಗಿದ. ಪ್ರಧಾನಿ ಆಟ್ಲಿಗಳು ತನ್ನ ಭಾಷಣವನ್ನು ಮುಂದುವರಿಸುತ್ತಾ ಎಲ್ಲಾ ಸಂದರ್ಭಗಳಲ್ಲೂ ಬ್ರಿಟಿಷು ಕೈಹಾಕಲಾಗುವದಿಲ್ಲವೆಂದೂ ಅಂತಹ ವುಗಳಲ್ಲಿ ಹೈದರಾಬಾದ್ ಸಮಸ್ಯೆಯೊಂದೆಂದೂ ಸ್ಪಷ್ಟಪಡಿಸಿದರು. ಹೈದರಾಬಾದಿನ ಮತದಾನಕ್ರಮ ನಿರ್ಣಯದ ಹಕ್ಕು ಭಾರತ ಸರಕಾರದ್ದೆಂದೂ ಪ್ರಚಲಿತ ಬೆಳ್ಳಂದವಿರುವತನಕ ಹೈದರಾಬಾದಿನ ಹೊರ ಸಂಬಂಧಾಧಿಕಾರವು ಭಾರತದ್ದೇ ಎಂದೂ ಖಚಿತ ಮಾಡಿದರು. 'ಈಗಿನ ಅತ್ಯಂತ ಕಷ್ಟಕಾಲದಲ್ಲಿ ಪ್ರತಿಯೊಬ್ಬನೂ ವಿಶೇಷ ಜಾಗರೂಕತೆಯಿಂದಲೇ ಮಾತಾಡಬೇಕು. ಸದ್ಯಸ್ಥಿತಿಯನ್ನು ಮನೆಕಿ ಗತಕಾಲದ ದ್ವೇಷಾಸೂಯೆಗಳನ್ನು ಕಟ್ಟಿಕೊಂಡು ತೀರ್ಮಾನಿಸಲು ಹೋಗಿಬಾರದು. ಇಂತಹ ಸಂದರ್ಭಗಳಲ್ಲಿ ಚರ್ಚಿಲ್ಲರಾಡುವ ಮಾತುಗಳು ಭಾರತದ ವಿರುದ್ಧ ಪಕ್ಷಗಳನ್ನು ಒಂದುಗೂಡಿಸುವದಕ್ಕಾಗಲೀ ಭಾರತ ಮತ್ತು ನಾಕಿ ಸ್ವಾನಗಳ ಸಾಗೂ ಇತರ ರಾಮಾರ್ವೆಲ್ತ್‌ಗಳ ಸುಸಂಬಂಧ ನಿರ್ವಾಣಕ್ಕಾಗಲೀ ಏನೂ ಸಹಕಾರಿಯಾಗದಿರುವುದು ದುರ್ದೈವ. ನನ್ನೀ ಅಭಿಪ್ರಾಯವೇ ಈ ಸಭೆಯ ಇಲ್ಲಿ ಕಳಿತಿರುವ ಜನರಲ್ಲಿ ಮಾತ್ರವಲ್ಲ- ಭಾರತದ ಜೀವಮಾನಾವಧಿ ಪರಿಚಯವುಳ್ಳ ಕನ್ಸರ್ವೇಟಿವ್ ವ್ಯಾಪಾರಿಗಳು, ಅಡಳಿತೆಗಾರರು ಮತ್ತಿತರರದು ಕೂಡಾ ಎಂಬುದನ್ನೂ ಇದೊಂದರ ಮಟ್ಟಿಗೆ ಅವರಲ್ಲಿ ಏಕ ಮತವಿದೆಯೆಂಬುದನ್ನೂ ನಾನು ನಿಜಕ್ಕೂ ಬಲ್ಲೆ. ಭಾರತದ ಸಮಸ್ಯೆಯಲ್ಲಿ ಚರ್ಚಿಲ್ಲರು ಬಾಯಿ ಹಾಕುವದನ್ನು ಅಪರು ನಿವೇದಿಸುತ್ತಾರೆ" ಎಂದು ಬುದ್ಧಿ ಹೇಳಿದರು. ಒಂದು ನಿಲುವಳಿ ಸಾಜನೆಯು ಮೇಲೆ ನಡೆದ ಎರಡು ತಾಸುಗಳ ಈ ಚರ್ಚೆ ಅಲ್ಲಿಗೇ ಮುಗಿಯಿತು.

ಲೋಕದ ಹಾಗೂ ಭಾರತದ ರಾಜಕೀಯ ರಂಗದಲ್ಲಿ, ವಿಶೇಷಾಸಕ್ತಿಯಿಂದ ನಿರೀಕ್ಷಿಸಬೇಕಾದ ಕೆಲವು ಹೊಸತನಗಳು ಕಂಡುಬಂದಿವೆ. ದೂರದರ್ಶಿಗಳು ನಿರೀಕ್ಷಿಸಿದಷ್ಟಂತಹುದಾವುದೂ ನಡೆದಿಲ್ಲವಾದರೂ, ಬೀಜರೂಪದಿಂದ ಮಣ್ಣಡಿಯೊಳಗಿದ್ದ ಕೆಲವು ಈಗ ಹೊಸ ಮೊಳಕೆಗಳಾಗಿ ತೋರಿಬಂದಿವೆ. ಬರ್ಲಿನ್ ನಿಶ್ಯಸ್ತ್ರಾಸ್ತ್ರ-ಹೈದರಾಬಾದ್ [ಫೆರ್ಹಣ್-ಇವುಗಳಲ್ಲಿ ಇಂತಹ ನವೀನತೆಯನ್ನು ಕಾಣಬಹುದು.

ಮಾನವ ಜನಾಂಗದ ಆಜೀವ್ಯೈಯಾಗಿರುವ ಶಾಂತಿ ಸಾಧನೆಯ ಭವಿಷ್ಯ ಮಾತ್ರ ಯಾವ ವಿಧದಿಂದಲೂ ಮೂಡುವದಿಲ್ಲ; ಅಗತ್ಯವಿಲ್ಲವಂತಹದು ಆಗುವ ಸಂಭವ ಇನ್ನೂ ಇಲ್ಲ!

ಬರ್ಲಿನ್ ವಿವಾದ

ಪ್ರಥಮತಃ ನೋಕದ ರಾಜಕೀಯದ ತ್ರಿವ್ಯವಸ್ಥಿಯೋಡಿಸಿದರೆ ಬ್ರಿಟನ್, ಅಮೇರಿಕ, ಫ್ರಾನ್ಸ್ ಮತ್ತು ಸೋವಿಯೆಟ್ ರಶ್ಯಗಳೊಳಗೆ ಜರ್ಮನಿಯ ರಾಜಧಾನಿ ಬರ್ಲಿನಿನಲ್ಲಿ ಕೆಲಕಾಲದಿಂದ ನಡೆಯುತ್ತಾ ಬಂದಿರುವ ಘರ್ಷಣೆಯೇ ಕಳದ ವಾರ ಸರ್ವಪ್ರಥಮ ಪ್ರಾಮುಖ್ಯತೆ ಪಡೆಯುವ ರೂಪಾಂತರಗೊಂಡಿದೆಯೆನ್ನಬಹುದು. ರಶ್ಯವು ಪಾಶ್ಚಾತ್ಯ ತ್ರಿರಾಷ್ಟ್ರಗಳ ಪಾಲಿನ ಪಶ್ಚಿಮ ಬರ್ಲಿನಿಗೆ ಹಾಕಿದೆ ಕಟ್ಟುಗ್ರ ಭೂದಿಗ್ಬಂಧನಕ್ಕೆ ಪ್ರತಿಯಾಗಿ ಪಾಶ್ಚಾತ್ಯ ರಾಷ್ಟ್ರಗಳು ಆಕಾಶ ಸರಬರಾಯಿ ಮೂಲಕ ತಮ್ಮ ಭಾಗದವರ ಜೀವನ ನಿರ್ವಹಣೆ ಮಾಡಿಸುತ್ತಿದ್ದುವಷ್ಟೆ? ಇದನ್ನಾದರೂ ನಿರಾಂತಕವಾಗಿ ನಿರ್ಘಾತಿಯಿಂದ ನಡೆಸಲು ರಶ್ಯವು ಬಿಟ್ಟಿರಲಿಲ್ಲ. ತಮ್ಮನ್ನು ಉಸಿರು ಕಟ್ಟಿಸಿ, ಎದೆಗೆಡಿಸಿ, ತನ್ನ ಪ್ರಭುತ್ವಕ್ಕೆ ಹೆಚ್ಚಿಸಿಕೊಳ್ಳಬೇಕೆಂದು ನೋಡುತ್ತಿರುವ ರಶ್ಯದ ಈ ಪಿಕಲಾಟದ ಗುರಿ ಸಿದ್ಧಿಸುವಂತಹ ಹೇಡಿತನವನ್ನು ತಾನೆಂದೂ ಪ್ರದರ್ಶಿಸುವಂತಿಲ್ಲವೆಂದು ಅಂಗ್ಲೋ-ಅಮೆರಿಕನ್ ನೌಯಕರು ಒತ್ತಿಒತ್ತಿ ಹೇಳುತ್ತಾ ಬಂದಿದ್ದರು. ಜುಲಾಯಿ ಅಂತ್ಯ ಭಾಗದಲ್ಲಿ ಬ್ರಿಟಿಷ್ ಪಾರ್ಲಿಮೆಂಟಿನ ಕಾಮನ್ಸ್ ಸಭೆಯಲ್ಲಿ ಈ ಕುರಿತು ಮಾತನಾಡುತ್ತಾ ವಿದೇಶ ಮಂತ್ರಿ ಮಿ. ಬೆವಿನರಂದಿದ್ದರು: "ಬರ್ಲಿನ್ ಬಿಕ್ಕಟ್ಟು ಬಲ ಪ್ರಯೋಗಕ್ಕವಕಾಶ ಕೊಡುವ ಸ್ಥಿತಿಗೆ ಬಂದಿದೆ. ಆದ್ದರಿಂದ ನಾವೆಲ್ಲವನ್ನೂ ಪುನರಾಲೋಚಿಸುತ್ತಿದ್ದೇವೆ. ಯುದ್ಧಾನಂತರ ನಮ್ಮ ಸೇನೆಗಳನ್ನು ವಿಸರ್ಜಿಸಿಕೊಳ್ಳುತ್ತಾ ಬಂದು, ಪೂರ್ಣ ಲಕ್ಷ್ಯವನ್ನು ರಾಷ್ಟ್ರದ ಆರ್ಥಿಕ ಹಾಗೂ ಜೀವನ ಸ್ಥಿತಿ ಸುಧಾರಣೆಯ ಕಡೆಗೆ ಹರಿಸಿದ್ದೇವೆಂಬುದು ಗೊತ್ತಿದ್ದದ್ದೇ. ಈಗಿನ ಬರ್ಲಿನ್ ವಿಷಮತೆಯಿಂದಾಗಿ ತಿಂಗಳಿಗೆ 20000ದಂತೆ ವಿಸರ್ಜಿಸುತ್ತಿರುವ ಸೈನಿಕರನ್ನು ಇಟ್ಟುಕೊಳ್ಳಬೇಕಾದೀತೇ, ಎಂಬ ಯೋಚನೆಯಲ್ಲಿದ್ದೇವೆ. ಯುದ್ಧ ಕಾಲದ ನಮ್ಮ ಮಿತ್ರ ರಾಷ್ಟ್ರದಿಂದ ಇಂತಹ ತೊಡಕನ್ನು ನಿಜಕ್ಕೂ ನಾವು ನಿರೀಕ್ಷಿಸಿರಲಿಲ್ಲ".

ಇಂತಹ ಪರಿಸ್ಥಿತಿಯಲ್ಲಿ ಸ್ವತಃ ಸ್ಥಾಲಿನ್‌ರೆಲ್ಲೇ ನಿವೇದಿಸಿಕೊಳ್ಳುವದಕ್ಕಾಗಿ ಬ್ರಿಟಿಷ್, ಅಮೇರಿಕ, ಫ್ರೆಂಚ್ ಸರಕಾರೀ ರಾಯಭಾರಿಗಳು ಮೋಸ್ಕೋವಿಗೆ ಹೋಗಿದ್ದರು. ಇವರ ಆಗಮನದ ವೇಳೆಯಲ್ಲಿ ರಶ್ಯನ ವಿದೇಶ ಮಂತ್ರಿ ಮೊಲಟವರು ನೋಸ್ಕೋ ಬಿಟ್ಟಿದ್ದರೂ ಪಾಶ್ಚಾತ್ಯ ತ್ರಿರಾಷ್ಟ್ರೀಯ ರಾಯಭಾರಿಗಳು ಮೊಲಟವರ ಡಿಪ್ಯುಟಿಯೊಡನೆ ಮಾತುಕತೆ ನಡಿಸಿ, ಕೊನೆಗೆ ಸ್ವತಃ ಮೊಲಟವರೇ ಬಂದುದರಿಂದ ಅನಂತರೊಡನೆ ಪರ್ಯಾಲೋಚಿಸಿದ್ದಾರೆ. ರಶ್ಯವು ಪಾಶ್ಚಾತ್ಯ ರಾಷ್ಟ್ರಗಳ ಈ ಪ್ರತಿನಿಧಿಗಳನ್ನೂ, ಅವರ ಸೂಚನೆಗಳನ್ನೂ ತೀರಾ ಲಘುವಾಗಿ ಗಣಿಸಿರುವ ಲಕ್ಷಣಗಳು ಕಂಡು ಬಂದಿವೆ.

ಇತ್ತ ಬರ್ಲಿನ್ ನಗರದಲ್ಲಿ ಸಂಪೂರ್ಣವಾಗಿ ರಶ್ಯದ ಆಡಳಿತೆಯನ್ನು ಸ್ಥಾಪಿಸಲು ಸೋವಿಯೆಟ್ ಸರಕಾರ ನಿರ್ಧರಿಸಿದಂತಿದೆ. ಬರ್ಲಿನಿನ ರಶ್ಯನ್ ಅಧಿಕಾರಿಗಳು ತಮ್ಮ ಗುಪ್ತಸಭೆಯಲ್ಲಿ ಕಾರ್ಲ್ ಮೆರೋನ್ ಮತ್ತು ಕಾರ್ಲ್ ಲಿಬ್ನೆಯವರನ್ನು ಬರ್ಲಿನಿನ ನಿಗರಶಾಖ ಮತ್ತು ಕಿರಿತಾತನಾಗಿ ನೇಮಿಸಿಕೊಂಡಿದ್ದಾರೆಂದೂ ಈ ಅನಿಕಾಂಕ್ಷ ಸ್ಥಾವನೆಯು ಮಿಂಚುವೇಗದಿಂದ ಯಾವ ಮಹೂರ್ತದಲ್ಲೂ ನಡೆಯಬಹುದೆಂದೂ ಊಹೆಯೆದ್ದಿದೆ. "ಬರ್ಲಿನಿನ ಮೇಲಿನ ಚತುರ್ರಾಷ್ಟ್ರಾಡಳಿತೆಯು ಎಲ್ಲಾ ಅಧಿಕಾರಗಳನ್ನೂ ಈಗ ಪಾಶ್ಚಾತ್ಯ ರಾಷ್ಟ್ರಗಳು ಕಳೆದುಕೊಂಡಿವೆಯೆಂಬುದು ಸ್ಪಷ್ಟ. ಆದ್ದರಿಂದ ಪಾಶ್ಚಾತ್ಯ ತ್ರಿರಾಷ್ಟ್ರಗಳ ಅಜ್ಞೆಯಂತೆ ಯಾರಾದರೂ ವರ್ತಿಸಿದರೆ ಅದರಿಂದ ಜಗತ್ಯುದ್ಧಾನಿಗೆ ಅವರೇ ಜವಾಬ್ದಾರರೆಂಬುದನ್ನು ತಿಳಿದಿರಬೇಕು" ಎಂದು ರಶ್ಯವು ಪಶ್ಚಿಮ ಬರ್ಲಿನಿನ ಜನತೆಗೆ ಎಚ್ಚರಿಕೆ ಕೊಟ್ಟಿದೆ.

ಬರ್ಲಿನಿನಲ್ಲಿ ಸಂಧಾನವೊ? ಸಂಗ್ರಾಮವೊ?

★

ರಶ್ಯನ್ ನೇಮಿತ ಬರ್ಲಿನ್ ಅಧಿಕಾರವನ್ನು ಅಮೇರಿಕಾದ್ಯಕ್ಷ ಫ್ರೆಂಚರು ಒಪ್ಪುವಂತಿಲ್ಲ; ಅಗ ಪ್ರತ್ಯಕ್ಷ್ಯ ಘರ್ಷಣೆಯೇಳುವ ಸಂಭವವಿದೆ; ಸ್ಥಿತಿಗತಿ ಹೇಗಾಗುವುದೋ ಎಂದು ಪ್ರಪಂಚವಿವು ಬರ್ಲಿನ್ ವಿದ್ಯಮಾನಗಳನ್ನು ಅತುರದಿಂದ ನಿರೀಕ್ಷಿಸುತ್ತಿದೆ.

ಪ್ರಾಪಂಚಿಕ ಘಟನೆಗಳು

ಪೆಲಸ್ತೈನಿನ ವಿವಾದದ ಶಾಶ್ವತ ಶಾಂತಿ ತೀರ್ಮಾನ ವಿನ್ನೂ ಆಗಿಲ್ಲ ಆಗಿಯೇ ತೀರುವದೆಂಬ ಆಶೆಯೂ ಇಲ್ಲ. ಆದರೆ ಸಂಯುಕ್ತ ರಾಷ್ಟ್ರ ಸಂಘದ ಬೆದರಿಕೆಯು ಟಿಳಿಬಾಳುವಂತಹದೆಂಬುದು ಪೆಲಸ್ತೈನಿನಲ್ಲಿ ಜಟಿಲವಾದುದರಿಂದ, ಕಿಡಿನಂದಿಸುವದಸಾಧ್ಯವಾದರೂ ದಾವಾಗ್ನಿ ಹೆಬ್ಬದಂತೆ ಮಾಡಲು ಅದು ಶಕ್ತವಾದೀತೆಂದು ಭರವಸೆಯಿಡಬಹುದು. ರಾತ್ರಿ ಶಾಂತಿಯ ನಿರೀಕ್ಷಣೆಗಾಗಿ ಅಮೇರಿಕದಂತಹ ರಾಷ್ಟ್ರಗಳ ನಿರೀಕ್ಷಕರು ಪೆಲಸ್ತೈನಿಗೆ ಬರುತಿದ್ದಾರೆ. ಅತ್ತ ಪೆಲಸ್ತೈನಿನ ಅರಬ್ ಮೇಲ್ಸಮಿತಿಯು ಪೆಲಸ್ತೈನಿನ ಸ್ವಾತಂತ್ರ್ಯ ಸಾಧನೆಗಾಗಿ "ಜೆಹಾದ್" ನ್ನು ಪುನಃ ಪ್ರಾರಂಭಿಸುವ ತನ್ನ ನಿರ್ಧಾರವನ್ನು ಜಾಹೀರು ಮಾಡಿದೆ. ಪೆಲಸ್ತೈನ್ ರಕ್ಷಣೆಯಲ್ಲಿ ಎಲ್ಲಾ ರಾಷ್ಟ್ರಗಳ ಅರಬರೂ ಭಾಗವಹಿಸುವಂತೆ ಮಾಡಲು ಅಗತ್ಯವುಳ್ಳ ಕಾರ್ಯಗಳನ್ನು ಕೈಕೊಳ್ಳುವ ನಿರ್ಣಯವನ್ನೂ ಈ ಸಮಿತಿ ಮಾಡಿದೆ.

ಮಲಯದ ದಂಗೆಯು ಯಥಾ ಪ್ರಕಾರ ನಡೆದಿದೆ. ಅರಣ್ಯ ಕಾಳಗಕ್ಕೆ ಹೇಳಿಸಿದ ಸ್ಪೆಶ್ಯಲ್ ಅಮೇರಿಕನ್ ದಳಗಳು ತಯಾರಾಗಿ ಸಲ್ಪಟ್ಟಿವೆ. ಕಮ್ಯೂನಿಸ್ಟರ ಈ ಗೊಂದಲಗಳ ಮೇಲಿಂದ 'ಕಮ್ಯೂನಿಸಮನ್ನೇ ಬೇರಾಯಿದೇಶೀರ'ಗೊಳಿಸಬೇಕೆಂದು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಬಂದಾಗ ಪ್ರಧಾನಿ ಅಟ್ಲಿಗಳು 'ಅಗುವದಿಲ್ಲ'ವೆಂದಿದ್ದಾರೆ.

ಜಪಾನಿನಲ್ಲಿಯೂ ರೈಲ್ವೇ ಕಂಬಿ ತಪ್ಪಿಸುವುದು– ಮುಷ್ಕರ–ಇತ್ಯಾದಿಗಳಾರಂಭಿಸಿವೆ. ಕಮ್ಯೂನಿಸ್ಟರ ಕೈವಾಡವಿದು ಎಂಬ ಭೀತಿಯೆದ್ದಿದೆ ಈಗ ಸರಕಾರೀ ಕೆಲಸಗಾರರ ಮುಷ್ಕರ ಮತ್ತು ಸಾಮೂಹಿಕ ಚರಣೆಗಳನ್ನು ಅಲ್ಲಿ ಬೇಕಾಯಿದೇಶೀರ ಗೊಳಿಸಲಾಗಿದೆ.

ಜರ್ಮನಿಯ ಉದ್ಯೋಗಾವೆನ್ ಎಂಬ ಉದ್ದಿಮೇ ನಗರದ 'ಕೆಮಿಕಲ್' ಕಾರ್ಖಾನೆಯೊಂದರಲ್ಲಿ ಭಯಂಕರ ಸ್ಫೋಟವಾಗಿ 600 ಜನರು ಮಡಿದು 1600 ಕ್ಕೂ ಮಿಕ್ಕಿ ಜಖಂಗೊಂಡುದು ಕಳದ ವಾರದ ಅತಿ ದೊಡ್ಡ ಸ್ಫೋಟವೆನ್ನಬಹುದು.

ಮಿಕ್ಕ ವ್ಯಾಪಂಚಿಕ ವಿದ್ಯಮಾನಗಳಲ್ಲಿ ಗಣ್ಯ ಬದಲಾವಣೆಗಳೇನೂ ಕಾಣುವದಿಲ್ಲ.

ಕಾಶ್ಮೀರದ ಕಾಳಗ

ಭಾರತದ ರಾಜಕೀಯದ ಸಮಸ್ಯೆಗಳಂತೂ ಹಿಂದಿನವೇ. ಕಾಶ್ಮೀರ ಸಮಿತಿಯು ನವಥಿಲ್ಲಿಯಲ್ಲಿದ್ದು ತನ್ನ ಪ್ರೇತ್ನಾವಳಿಗೆ ಭಾರತ ಸರಕಾರದಿಂದ ಉತ್ತರಗಳನ್ನು ಪಡೆದಿದೆ. ಆದರ ಮುಂಚೂಣಿ ಸಂಗಡವೊಂದು ಕಾಶ್ಮೀರಕ್ಕೆ ಹೋಗಿ ಅಲ್ಲಿಯ ಸ್ಥಿತಿಗತಿಗಳ ಪ್ರತ್ಯಕ್ಷ ಪರಿತೀಲನೆ ನಡೆಸುತ್ತಿದ್ದು ಗ್ರಾಮ ನಿವಾಸಿಗರ ವಾಗ್ಮೂಲಗಳನ್ನು ಪಡಕೊಳ್ಳುತ್ತಿದೆ. ಮೂಲ ಸಮಿತಿಯು ನವಥಿಲ್ಲಿಯಿಂದ ಕರಾಚಿಗೆ ಹೋಗಿದೆ. ಅಲ್ಲಿ ಸುಮಾರು ಹತ್ತು ದಿವಸಗಳ ವರೆಗಿದ್ದು ಪಾಕಿಸ್ತಾನ್ ಸರಕಾರದ ಹೇಳಿಕೆಗಳನ್ನು ಸಂಗ್ರಹಿಸಿಕೊಂಡಿದೆ.

ಅತ್ತ ಕಾಶ್ಮೀರದಲ್ಲಿ ಧಾಳಿಗಾರರ ಪ್ರಚಂಡ ಒತ್ತಡಗಳನ್ನು ಹಿಂದೀ ಸೈನಿಗಳು ಅಸಾಮಾನ್ಯ ಸಾಹಸದಿಂದ ಹಿಮ್ಮೆಟ್ಟಿಸಿವೆ. ಕಳದ ವಾರದ ಅವಧಿ ಭಾಗದಲ್ಲಿ ಉರಿ-ಚಕೋತಿ ರಣಾಂಗದ ಹಿಂದಿ

THE VIJAYA BANK LIMITED.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2½% per annum.
For 6 months at 3½% per annum.

For further particulars you may apply or call at any of our following Offices

Branches: Kadri-Road, Mangalore, City-Manga' Udupi, Kaup, Coondapur, Karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ನಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್., ಉಡುಪಿ

ಇವರ ಶಾಖಾ ಖರೀದಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮತ್ತೂರು, ತಿರುವನಂತಪುರಂ, ಕಲ್ಲಿಕೋಟೆ ಮತ್ತು ಮಂಗಳೂರು.

ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನತಾಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನವ್ಯ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಪಾಡಲಿಕ್ಕಾಗಲೀ, ಪ್ರೀತಿಸಿದ್ದ ಪಡೆಯಲಿಕ್ಕಾಗಲೀ ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ನಿಜಾಮರಿಗೆ ಸ್ವಾತಂತ್ರ್ಯವೊ? ಸರ್ವನಾಶವೊ?

★

ಸೇನಾಪ್ಯೂಹವನ್ನು ಭೇದಿಸಿ ಒಳನುಗ್ಗಿ ಬರಲು ಧಾಳಿಗಾರರು ಅತಿ ಪ್ರಬಲವಾದ ಸರ್ವಸಿದ್ಧತೆಗಳನ್ನು ನಡೆಸಿದ್ದರು. ಅವರಾ ಗುರಿ ಮುಟ್ಟುತ್ತಿದ್ದರೆ ಹಿಂದೀ ಸೇನೆಗೆ ಭಯಂಕರ ಅನಾಹುತವೊದಗುತ್ತಿತ್ತು, ಆದರೆ ಮೇಜರ್ ಜನರಲ್ ತಿಮ್ಮಯ್ಯನ ನೇತೃತ್ವದ ಸೇನೆಯೂ ಸಕಾಲದಲ್ಲಿ, ಅತ್ಯಂತ ಚಾತುರ್ಯ ಮತ್ತು ಅಸಾಮಾನ್ಯ ಸಾಹಸದಿಂದ ವಿರೋಧಿಗಳ ಧಾಳಿಯನ್ನು ಮೊಳಕೆಯಲ್ಲೇ ಮುರಿದು ಅವರಿಗೆ ಅತಿ ಹೆಚ್ಚಿನ ಪ್ರಾಣಹಾನಿಯೊಡ್ಡಿ ಜಯವು ನಿವಾಯ ನಿವಾಯಿಸಿದೆ.

ಹೈದರಾಬಾದ್ ಘರ್ಷಣೆ

ಭಾರತ ಮತ್ತು ಹೈದರಾಬಾದುಗಳೊಳಗಿನ ಘರ್ಷಣೆಗಳೇಗ ಕಾರ್ಯರಂಗ-ವಾದರಂಗ-ಭೂರಂಗ, ಇವು ಮೂರರಲ್ಲೂ ಪರಮಾವಧಿ ಉಗ್ರವಾಗಿವೆ. ಪುಂಡಾಟಿಕೆಗೆ ಖಂಡ ತನ್ನನ್ನು ಹಿಡಿದು ಕೊಳ್ಳುವರೆಂದು ತೋರಿದೊಡನೆ 'ರಕ್ಷಿಸಿರಿ! ರಕ್ಷಿಸಿರಿ!' ಎಂದು ಕೂಗು ಹಾಕುವ ಚತುರ ದರೋಡೆಗಾರನ ಮರ್ಜಿಯನ್ನೇ ಹೈದರಾಬಾದ್ ನಿಜಾಮರು ವಹಿಸಿದಂತಿದೆ. ನಿಜಾಮರ ಸಲಹೆಗಾರ ಸರ್. ಮೋಂಕ್ಟನ್‌ರ ಕಾರ್ಯದರ್ಶಿ ಬೀಮಾಂಟರು ಹೈದರಾಬಾದಿನಿಂದ ಲಂಡನ್ನಿಗೆ ಮರಳುವಾಗ ನಿಜಾಮರ ಮಾಜಿ ಯೊತ್ತಿದ ಶವರೊಂದರಲ್ಲಿ ಸರ್ ವಾಲ್ಟರಿಗೊಂದು ಪತ್ರವನ್ನೂ ಬ್ರಿಟಿಷ್ ರಾಜರಿಗೆ ಬರೆದಿದ್ದ ಪತ್ರದ ನಕಲನ್ನೂ ಒಯ್ಯುತಿದ್ದುದನ್ನು ಧಿಲ್ಲಿಯ ವಿಮಾನಕಟ್ಟೆಯವರು ಜಡ್ತಿಮಾಡಿ ನೋಡಿ ಮಾಳಿ ಕೊಟ್ಟ ಕಳುಹಿಸಿದ್ದರಷ್ಟೆ? ಬ್ರಿಟಿಷ್ ರಾಜರ ಪತ್ರವನ್ನೊಜೆರೆಂದು ಬ್ರಿಟನಿನಲ್ಲಿ ಕೋಲಾಹಲವೆಬ್ಬಿಲಿಚ್ಚಿಸಿದ ನಿಜಾಮ್ ಪ್ರಚಾರಕರ ಬೊಬ್ಬೆಗೇನೂ ಬೆಲೆಬರಲಿಲ್ಲ.ಲಂಡನಿನಲ್ಲಿರುವ ಭಾರತ ಹೈಕಮಿಶನರರೂ ಧಿಲ್ಲಿಯ ಬ್ರಿಟಿಷ್ ಹೈಕಮಿಶನರರೂ ಈ ಸಂಬಂಧದ ರಹಸ್ಯ ವಾರ್ತೆಯನ್ನು ಬ್ರಿಟಿಷ್ ಸರಕಾರಕ್ಕೆ ಮುಟ್ಟಿಸಿದ್ದಾರೆ. ಮಾತ್ರವಲ್ಲ; ಭಾರತ ಸರಕಾರದ ಮೇಲಿನ ತನ್ನ ದೂರನ್ನು ಸಂಯುಕ್ತ ರಾಷ್ಟ್ರ ಸಭೆಯ ಮುಂದೆ ಇಡಲು ತನಗೆ ಸಹಾಯ ಮಾಡಬೇಕೆಂದು ನಿಜಾಮರು ಬ್ರಿಟಿಷ್ ಸರಕಾರವನ್ನು ವಿನಂತಿಸಿಕೊಂಡುದಕ್ಕೆ ಸಾಧ್ಯವಿಲ್ಲವೆಂಬ ಉತ್ತರ ಮತ್ತೊತ್ತರ ಜತೆಯಲ್ಲೇ ಭಾರತದೊಡನೆ ಸಂಧಾನವಮಾಡಿಕೊಳ್ಳುವ ಬುದ್ಧಿವಾದ ಬಂದಿರುವುದೆಂದು ತಿಳಿದು ಬರುತ್ತದೆ. ಪರಸ್ಪರ ಸಂಬಂಧ ಶಾಸನಾನುಸಾರವಾಗಿ ಬ್ರಿಷ್ ಸರಕಾರವು ತನಗೆ ಬಂದಿದ್ದ ನಿಜಾಮರ ವಿಜ್ಞಾಪನಾ ಪತ್ರವನ್ನು ಭಾರತ ಸರಕಾರಕ್ಕೆ ಮುಟ್ಟಿಸಿದೆ. ಪ್ರಧಾನಿ ಅಟ್ಲಿಗೆ ನಿಜಾಮರಿಗೆ ಕೊಟ್ಟ ಉತ್ತರದಲ್ಲಿ 'ಹಿತವಾಗಿ ಹರಿದು ಹೋದ ಹಕ್ಕು ಬಾಧ್ಯತೆ, ಫಿನಸ್ಥಿಕೆಗಳ ಒಣಾವೇಶದ ಬದಲಿಗೆ ವ್ಯವಹಾರ್ಯ ವಿಧಾನಗಳನ್ನನುಸರಿಸಿರಿ. ಹೈದರಾಬಾದಿನ ಭವಿಷ್ಯವು ಭಾರತದೊಂದಿಗೆ ಅಭೇದ್ಯ ರೀತಿಯಿಂದ ಕೂಡಿ ಹೋಗಿರುವುದೆಂಬುದನ್ನು ಸರಿಯಾಗಿ ಜ್ಞಾಪಕದಲ್ಲಿಟ್ಟುಕೊಂಡು ಭಾರತದೊಂದಿಗೆ ಒಪ್ಪಂದಕ್ಕೆ ಬನ್ನಿರಿ" ಎಂದು ನಿಜಾಮರ ಕಣ್ಣಿಗೆ ಗುತ್ತಿಗೆ ಅಂಜನ ಹಚ್ಚಿದ್ದಾರೆ ಎಂದು ತಿಳಿಬಂದಿದೆ. ಹೈದರಾಬಾದಿನ ದೂರನ್ನು ಬ್ರಿಟಿಷ್ ಸರಕಾರವು ಜಾಗತಿಕ ಸಂಘದಲ್ಲಿ ಎತ್ತಿ ಹಿಡಿಯುವಂತೆಯೂ ಇಲ್ಲ; ಇನ್ನಾರಂದರೂ ಮುಂದೊಡ್ಡಿದರೆ ಅದನ್ನು ಸಮರ್ಥಿಸುವಂತೆಯೂ ಇಲ್ಲ, ಎಂದು ಅಟ್ಲಗಳು ನಿಜಾಮರಿಗಿನ್ನಾವದೇ ಆಶೆ ಅಥವಾ ಅನುಮಾನ ಉಳಿಯದಂತೆ ಸ್ಪಷ್ಟಪಡಿಸಿದ್ದಾರೆ. ಪಾರ್ಲಿಮೆಂಟ್ ಚರ್ಚೆಯಲ್ಲಿ ಬ್ರಿಟಿಷ್ ಪ್ರಧಾನಿಗಳ ಚರ್ಚಿಲ್ಲರಿಗೆ ಕೊಟ್ಟ ಉತ್ತರ ಮತ್ತು ನಿಜಾಮರಿಗಿತ್ತ ಉಪದೇಶದಿಂದ ಭಾರತ ಸರಕಾರವು ಪೂರ್ಣ ಸಮಾಧಾನಗೊಂಡಿದೆ. ಸರ್ ಮಿರ್ಜಾ ಇಸ್ಮಾಯೆಲರನ್ನು ಹುದ್ದೆಯಿಂದ ಬಿಸಿ ಸಂಧಾನಕ್ಕಾಗಿ ನಿಜಾಮರು ನವ ಧಿಲ್ಲಿಗೆ ಕಳುಹಿದ್ದರು; ಸರ್ ಮಿರ್ಜಾ ಭಾರತ ಪ್ರಧಾನಿಯೊಡನೆ ಸಮಾಲೋಚನೆ ಮಾತಾಡಿದ್ದರು. ಆದರೆ ವಲ್ಲಭಾಯಿಗಳ ಪಾಟಿಯಾಲಾ ಭಾಷಣದಲ್ಲಿ ಸ್ಪಷ್ಟೀಕರಿಸಲ್ಪಟ್ಟದ್ದು, ಪ್ರಧಾನಿ ನೆಹರುಗಳ ಮದ್ರಾಸ್ ಭಾಷಣದಲ್ಲಿ ಅನುಮೋದಿಸಲ್ಪಟ್ಟದ್ದಂತೆ, ಹೈದರಾಬಾದು ಮಿಕ್ಕ ಸಂಸ್ಥಾನಗಳಂತೆಯೇ ಭಾರತ ಕೇಂದ್ರದೊಂದಿಗೆ ಜೋಡಣೆಗೊಳ್ಳಬೇಕಲ್ಲದೆ ಬೇರಾವ ರಿಯಾಯಿತಿಯೂ ಇನ್ನಿಲ್ಲವೆಂದು ಭಾರತ ನಾಯಕರು ಸ್ಪಷ್ಟ ಪಡಿಸಿರುವರೆಂದು ತಿಳಿದು ಬರುತ್ತದೆ. ಹೈದರಾಬಾದಿನ ಇದುವರೆಗಿನ ವಂಚನೆಗಳು ಕರುಳಿಗಂಟಿ ಹೋಗಿರುವ ಹಿಂದೀ ನಾಯಕರು 'ಇನ್ನು ಯಾವ ಮಧ್ಯಗಾಮಿಯೊಡನೆಯೂ ಸಂಧಾನ ಮಾತುಕತೆಯಿಲ್ಲ-ಬೇಕಾದರೆ ನಿಜಾಮರೇ ನವಧಿಲ್ಲಿಗೆ ಜರಲಿ' ಎಂದು ಕಂಠೋಕ್ತವಾಗಿ ತಿಳಿಸಿರುವ ವಾರ್ತೆಯಿದೆ. ಆದ್ದರಿಂದಲೇ "ಪರಿಸ್ಥಿತಿಯು ಅತ್ಯಂತ ವಿಷಮಗೊಂಡಿರುವುದರಿಂದ ಪ್ರಧಾನಿ ಬಾಯಿಕ್ ಅಲಿಗಳು ನವಧಿಲ್ಲಿಗೆ ಬರಲಿ" ಎಂದು ಸರ್. ಮಿರ್ಜಾರ ತಂತಿ ಹೋಗಿತ್ತು.ಆದರೆ ತಮ್ಮಾಟವೀಟಾರಿ ನಡೆಯಲಾರದೆಂಬುದರಿಂದ ಮಿ. ಬಾಯಿಕ್ ಅಲಿ ಹೊರಡುವ ಸಂಭವವಿಲ್ಲ

ಅಹಂಕಾರ—ಅನಾಚಾರ

ಈ ನಡುವೆ ಪಂಡಿತ ನೆಹರುಗಳ ಮದ್ರಾಸ್ ಭಾಷಣವು ಅತ್ಯ ಚರ್ಚಿಲ್ಲರಂತೆ ಬ್ರಿಟಿಷ್ ಅಸ್ತ್ರಾಗತಿಕರ, ಇತ್ತ ಪಾಕಿಸ್ತಾನದ, ವಿಶೇಷತಃ ನಿಜಾಮ್ ಸರಕಾರದ ಮಂತ್ರಿಗಳ ತಲೆಯೊಳಗೆ ಸುತ್ತು ಕಿದೆ! ಕಾಮನ್ಸ್ ಸಭೆಯಲ್ಲಿ ಸೆಲ್ವಿನ್ ಲ್ಲಾಯ್ಡ್, ಚರ್ಚಿಲ್ಲರದನ್ನು ಎತ್ತಿಕೊಂಡು ಮಾತಾಡಿದ್ದರು; 'ಪಾಕಿಸ್ತಾನ್ ಸರಕಾರವು ಅಸತ್ಯೋಪಗಳನ್ನಾ ಧರಿಸಿರುವ ಅಲ್ಪ ಬುದ್ಧಿಯದು' ಎಂಬ ನೆಹರೂ ಮಾತನ್ನು ಖಂಡಿಸಿ ಪಾಕಿಸ್ತಾನ್ ಸರಕಾರದ ಪ್ರಕಟಣೆ ಹೊರಟಿದೆ;ನಿಜಾಮ್ ಮಂತ್ರಿಗಳಾಗುವ ಪಶು ಸ್ವಭಾವಾಂಶವನ್ನಂತೂ ನೆಹರೂ ಭಾಷಣವು ಕೆಣಕಿ ಎಬ್ಬಿಸಿ ಬಹಿರಂಗಪಡಿಸಿದೆ, ಎಂಬುದಕ್ಕೆ ನಿದರ್ಶನಗಳು ದೊರೆತಿವೆ. ಹೈದರಾಬಾದಿನ ಪ್ರಧಾನ ಮಂತ್ರಿ ಮಿ. ಲಾಯಿಕ್ ಅಲಿತ ನ್ನೊಂದು ಸಾರ್ವಜನಿಕ ಭಾಷಣದಲ್ಲಿ, ಹೈದರಾಬಾದ್ ಸರಕಾರವನ್ನು 'ದರೋಡೆಗಾರ ಸರಕಾರ'ವೆಂದೂ, ಅದರೊಡನೆ 'ಯುದ್ಧ'ವೆಂಬ ಬಿರುದು ಕೊಡುವದು ಕೂಡಾ ಹೆಚ್ಚು ಎಂದೂ ಹೀಯಾಳಿಸಿದ ನೆಹರೂ ಎಸಾತುಗಳನ್ನು ಕೃತಕ ಗಾಂಭೀರ್ಯದ ಹುಚ್ಚು ಆವೇಶದಿಂದ ಖಂಡಿಸಿದ್ದಾರೆ ಹೈದರಾಬಾದಿಗೆ ಇನ್ನಾದರೂ ಗೌರವಾರ್ಹ ಸಂಧಾನವೇ ಬೇಕಾಗಿದೆಯೆಂಬ ಮನನ್ಯಾಪ್ಸೆವಿರುದ್ಧ ಪಲ್ಲವಿಯನ್ನು ಮತ್ತೊಮ್ಮೆ ಹಾಡಿ "ಆದರೆ ಸರ್ವ ಹೋರಾಟವೇ ಹೈದರಾಬಾದಿನ ಮೇಲೆ ಹೇರಲ್ಪಟ್ಟಿದೆ. ಏನೇ ಬಂದರೂ ಇದಿರಿಸಲು ಹೈದರಾಬಾದು ತಯಾರಾಗಿದೆ. ಪಂಡಿತ ನೆಹರುಗಳು ಯುದ್ಧವೆನ್ನಲಿ, ತನಗೆ ಬೇಕಾದ ಯಾವುದೇ ಹೆಸರಿನಿಂದ ಕರೆಯಲಿ-ಅದನ್ನು ಹೈದರಾಬಾದು ತನ್ನ ಸರ್ವ ಶಕ್ತಿಯಿಂದ ಇದಿರಿಸುವುದೇ ಸರಿ; ನಮ್ಮ ಶಕ್ತಿ ಕ್ಷೀಣಿಸಿದ್ದಾರವೆಷ್ಟೇ ಮಿತವಾಗಿದ್ದರೂ ನಾವು ಜಲಾತ್ಕಾರಕ್ಕೆಂದೂ ಬಗ್ಗಲಾರೆವೆಂದು ಅವರು ಸ್ಪಷ್ಟವಾಗಿ ತಿಳಿದಿರಲಿ ಅಂತಹ ಹೋರಾಟವಾರಂಭಿಸಿದರೆ ಆದರ ಅಂತ್ಯವೆಲ್ಲಿ, ಮತ್ತದರಿಂದಾಗುವ ಅನಾಹುತಗಳೆಷ್ಟೆಂಬುದನ್ನು ಯಾರೂ ಹೇಳಲಾರರು. ಹೈದರಾಬಾದ್ ಜನತೆಯ ಅಗಾಧ ಭಾವನೆಯೊಂದಿಗೆ ಆಟವಾಡಲು ಬರಬೇಡಿ-ಬೆಂಕೆಯೊಡನಾಡಲು ಹೆಜ್ಜೆ ಮುಂದಿಡದೆ ಗಾಂಧಿಜೀ ತನ್ನ ಇಡೀ ಆಯುಷ್ಯದಲ್ಲಿ ಪ್ರಯತ್ನಿಸಿದ ಫಿನವಾದ ತತ್ವಗಳಂತೆ ವರ್ತಿಸಿರಿ-ಎಂದು ನಾನು ಭಾರತ ನಾಯಕರನ್ನು ಎಚ್ಚರಿಸುತ್ತೇನೆ" ಎಂದು ಘೋರ್ಜಿಸಿದ್ದಾರೆ. ಲಾಯಕ್‌ಅಲಿಯ ಈ ಮಾತುಗಳಿಗಿಂತಲೂ "ಅಮೂಲ್ಯ"ವಾದ 'ನುಡಿಮುತ್ತು'ಗಳು ಹೈದರಾಬಾದಿನ ಸ್ಥಳೀಯ ಖಾತೆಯ ಮಂತ್ರಿ ಯಾಮಿನ್ ಝುಬೇರಿಯ ಬಾಯಿಯಿಂದ ಉದುರಿವೆ! ನಿಜಾಮ್ ಒಂಟರೆಲ್ಲಾ ಸವಾಯಿ ಕಾಸಿಂ ರಜ್ವಿಗಳೇ ಎಂಬುದಕ್ಕೆ ಈ ಝುಬೇರಿಯಾನೆ ದುಬಾರಿರಜ್ವಿಯ ಹೊಂಕಾರವೇ ಫಿದರ್ಶನ. ಒಂದೆಡೆಯ ಸಾರ್ವಜನಿಕ ಭಾಷಣದಲ್ಲಿ ಝುಬೇರಿಯೆಂದಿದ್ದಾನೆ:'ಹಿಂದು ಕೇಂದ್ರಕ್ಕೆ ಹೈದರಾಬಾದಿನೊಡನೆ ಯುದ್ಧ ಮಾಡುವಮನಸ್ಸಾಗಿದೆ.'ಭಾರತವು ಆದಕ್ಕೆ ತಯಾರಾಗಲಿ. ಸ್ವಸಿಕರ ಅಥವಾ ಯುದ್ಧ ವಿಧಾನಗಳ ಕೊರತೆಯೇನೂ ಹೈದರಾಬಾದಿಗಿಲ್ಲ. ನಾವವರಿಗೆ ಒಂದು ಪಾರವನ್ನು ಕಲಿಸಿಯೇ ಬಿಡುತ್ತೇವೆ. ಒಳಗಿನ ದಗಾಖೋರರನ್ನಿನ್ನು ಕೊಂದು ಹಾಕಲು ನಾವು ಹಿಂದೆ ಮುಂದೆ ನೋಡುವಂತಿಲ್ಲ. ವೈರಿಗಳಿದಿರು ತಾವಿಸ್ಥಾನ ನಹಿಸಿ, ಅವರನ್ನು ಪ್ರತಿಭಟಿಸದಿರುವವರೆಗೆಲ್ಲಾ ದಗಾಖೋರರೆಂದು ಗಣಿಸಲಾಗುವದು. ಆಕ್ರಮಣಗಾರರು ಹಿಂದೂ ಕೇಂದ್ರದವರಾದ್ದರಿಂದ ತಾವವರ ವಿರುದ್ಧ ಏನನ್ನೂ ಮಾಡಬಾರದೆಂಬ ಭಾವನೆ ಇಲ್ಲಿಯ ಹಿಂದುಗಳಲ್ಲಿದ್ದರೆಷಿದು ಅವಿಧೇಯತೆಯಾಗುವದು. ಇಂತಹ ಅವಿಧೇಯರನ್ನೂ ಧಾಳಿಗಾರರನ್ನೂ ಸಮಾನತೆಯಿಂದ ನೋಡುವೆವು. ದಗಾಖೋರರನ್ನು ಕಂಡಕಂಡಲ್ಲಿ ಪೋಲೀಸರು ಗುಂಡಿಟ್ಟು ಕೊಂದು ಹಾಕಬೇಕು ತಾಲೂಕಿದಾರರ ಅಥವಾ ಸುಪರಿಂಟೆಂಡೆಂಟರ ಆಜ್ಞೆಗಾಗಿ ಕಾಯದೆ ಸ್ವೇಚ್ಛೆಯಿಂದ ಗುಂಡಿಡಬೇಕೆನ್ನುತ್ತೇನೆ. ನಾವು ತಾಕ್ಕೆ ವಹಿಸಿದುದು ಹೆಜ್ಜಾಯತು. ಇನ್ನು ಸಂಸ್ಥಾನದೊಳಗಿನವರಿಂದಲಿ, ಹೊರಗಿನವರಿಂದಲಿ, ವಂಚಕರನ್ನು ನೋಡಿದಲ್ಲೆಲ್ಲಾ ಗುಂಡಿಟ್ಟು ಕೊಲ್ಲಬೇಕು."-ಇಂತಹ ಪುಣ್ಯಾತ್ಮರುಳ್ಳ ಸರಕಾರ ನಿಜಾಮರದು ! ಅದು ಬಾಳಿದ್ದರೆ ನರಕಕ್ಕೇನು ಗತಿ?

ರಝಾಕಾರರ ಧಾಳಿಗೂ ಹಿಂದೀ ಸೇನೆಯ ಪ್ರತಿಭಟನೆಗೂ ದೊಡ್ಡ ದೊಡ್ಡ ಪರಿಮಾಣದಲ್ಲೇಗ ನಡೆಯ ಹತ್ತಿವೆ. ಹೈದರಾಬಾದಿನೊಳಗಡೆಯ ರಸ್ತೆ ನಾನಾಜಿನ್ನಹಳ್ಳಿ ಹೋಗುತ್ತಿದ್ದ ಹಿಂದೀ ಸೇನೆಯ ಮೇಲೆ ರಝಾಕಾರರು ಬಿದ್ದು ಈಗ ಭಾರತ ಸೇನೆ ಅಲ್ಲೇ ಹೇರಿ ಹೊದದಿದೆ. ಅಲ್ಲಿಗೆ ಸೇನೆ ಕಳುಹಿಸಬೇಕೆಂದು ನೊದಲು ನಿರ್ಧರಿಸಿದ್ದ ನಿಜಾಮರು ಆ ಮೇಲೆ ಯೋಚನೆ ಬಿಟ್ಟಿದ್ದಾರೆ. ಹೈದರಾಬಾದ್ ಭಾರತ ಗಡಿಗಳೆಲ್ಲವೂ ಈಗ ಸ್ಫೋಟಗೊಳ್ಳುತ್ತಿವೆ. ದಿನ ಸಮೀಪಿಸುತ್ತಿದೆ!

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್
ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ ೩/- ರೂಪಾಯಿ.

ಅತೀ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸು ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ ೨/- ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ.

The Agricultural & Industrial Bank, Limited.
Head Office: Coondapoor, S. K.

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

Capital Authorised	....	Rs. 25,00,000
Capital Issued & Subscribed	....	Rs. 20,00,000
Capital Paid up	....	.... Rs. 19,98,445
Reserves....	....	.... Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A., LL.B., General Manager.

ಗುರುವಾರ, ಉಡುಪಿ, ಜು-೮-'೪೮

ಹೈದರಾಬಾದ್

'ಹೈದರಾಬಾದಿನ ದಿನ ನಿರ್ಣಯಿಸಲು ಇನ್ನೇಕೆ ತಡ?' ಎಂಬ ಪ್ರಶ್ನೆಯನ್ನು ಕಾರಣಕೊಟ್ಟು ಉತ್ಪ್ರೇಕ್ಷಿಸಲಾಗದಷ್ಟು ನಿಜಾಮ್ ಸರಕಾರದ ಪಾಪದ ಕೊಡ ಈಗ ತುಂಬಿದೆ. ಹೈದರಾಬಾದ್ ದುರಂತಗಳು—ಅದರ ಗುಪ್ತ ಒಳಸಂಚುಗಳು-ನಿಜಾಮ್ ಮಂತ್ರಿಗಳ ಆರ್ಭಟ್ಟಗಳು-ಇವೆಲ್ಲವುಗಳ ಮೇಲಿಂದ ಇಪ್ಪತ್ತನೇ ಶತಮಾನದ ರಾಜಕೀಯದಲ್ಲೂ ಇಂತಹ ಪಾಶವಿಕ ಕ್ರೌರ್ಯ, ವಂಚನೆ, ದುರಹಂಕಾರಗಳನ್ನು ಕಾಣಲು ಸಾಧ್ಯವೇ ಎಂದು ಆಶ್ಚರ್ಯ ಪಡಬೇಕಲ್ಲದೆ ಅನ್ಯಥಾ ಅಸಾಧ್ಯ. ನಿಜಾಮರಿಂದು ಒಳಗೂ ಹೊರಗೂ ನಿರ್ಬಿಸಿಟ್ಟಿರುವ ವಿಚಿತ್ರ ಸ್ಥಿತಿಯಿಂದಾಗಿ, ನೈಜಕ್ಕೂ ಗವಿಯೊಳಗಿನ ಹುಲಿಯನ್ನು ಜೈಟಿಯಾಡುವಂತಹ ಪ್ರಯಾಸಕರ ಕಾರ್ಯವು ಭಾರತ ಸರಕಾರದ ಹೆಗಲ ಮೇಲೆ ಬಿದ್ದಿದೆ. ಇಂತಹ ಗಂಡಾಂತರವನ್ನು ಕಪ್ಪಿಸಲಾಗುವ ಸಂದರ್ಭವು ಈ ಮೊದಲೇ ಬಂದಿದ್ದು ಯಾವ ಪ್ರಮಾದದಿಂದಾದರೂ ಅದು ತಪ್ಪಿ ಹೋದುದಿದ್ದರೆ ಅವರೂ ರಝಾಕಾರರಿಗೆ ಸಮಾನವೆನ್ನಬಹುದು! ಆದರೆ ಭಾರತ ಸರಕಾರಕ್ಕೆ ಸಂಬಂಧಿಸಿದ ಯಾರಿಂದಲೂ ಇಂತಹ ಪ್ರಮಾದವಾದುದಿಲ್ಲ. ನಿಜಕ್ಕೂ ಇದೊಂದು ಅನಿವಾರ್ಯ ಅವತ್ತು. ಪಾಕಿಸ್ತಾನ್ ನಿರ್ಮಾಣದ ಮಬ್ಬಿಗೆ ಹಿಂದೀ ನಾಯಕರ ಧೋರಣೆಗಳನ್ನು ಟೀಕಿಸಲಾಗುವ ಆಂಶಿಕ ಭಾಗವಹುದು; ಆದರೆ ಹೈದರಾಬಾದಿನ ಸಂಬಂಧವಾಗಿ ಈಗಿನದಕ್ಕಿಂತ ಉತ್ತಮರೀತಿಯಲ್ಲಿ ವ್ಯವಹರಿಸುವ ವಿಧಾನವಾವುದೂ ಹಿಂದೀ ಸರಕಾರದ ಮುಂದೆ ಬಂದುದಿಲ್ಲ. ಅದ್ದರಿಂದ ಗತ ಕಾಲದ ವಿದ್ಯಮಾನಗಳ ಕುರಿತು ಭಾರತೀಯರು ಪಶ್ಚಾತ್ತಾಪಪಡಬೇಕಾಗಿಲ್ಲ; ಭವಿಷ್ಯದ ಮಟ್ಟಿಗಂತೂ ಸೂರ್ಣ ಭರವಸೆಯಿದೆ. ಈಗೇನು?

ಅನ್ಯಾಯದೊಡನೆ ಸಂಧಾನವಿಲ್ಲ-ಶಾಶ್ವತಿಕ ಅತ್ಯಾಚಾರಕ್ಕೆ ಪರಮಾವಧಿ ಶಿಕ್ಷೆ-ಎಂಬ ನೀತಿ ಮಾನ್ಯವಾದರೆ, ಹೈದರಾಬಾದಿನ ಮೇಲಣದ್ದನ್ನು ಜಾರಿ ಮಾಡುವ ಸಂದರ್ಭವು ಭಾರತ ಸರಕಾರಕ್ಕೇಗ ಒದಗಿದೆ. ಲವ ಮಾತ್ರ ದಯೆ ದಾಕ್ಷಿಣ್ಯ ಪ್ರದರ್ಶನ ಕೂಡಾ ಎಲ್ಲ ಅಸಂಗತಾಧನ್ನಿಸುವುದೋ ಅಂತಹ ಅಪಾರ ಅತ್ಯಾಚಾರ ನಿಪಾರಣಾ ಹೊಣೆಯು ಹಿಂದೀ ಸರಕಾರದ ಬೆಗಲ ಮೇಲೆ ಈಗ ಬಿದ್ದಿದೆ. ಹೈದರಾಬಾದಿನ ಸಾಪದ ಕೊಡ ಪೂರ್ಣ ತುಂಬಿರುವ ಕಾಲವಿದು.

ಸ್ಥಿತಿ ಚಿತ್ರವು ಸುಸ್ಪಷ್ಟವಿದೆ. ಸೇಕಡಾ 87ರಷ್ಟು ಹಿಂದೂ ಪ್ರಜೆಗಳ ಮೇಲೆ ಮುಸ್ಲಿಂ ರಾಜನ ನಿರಂಕುಶಾಧಿಕಾರ-ಇದರ ಬೆಂಬಲಕ್ಕಾಗಿ ಉಳಿದ ಶೇಕಡಾ 13 ಜನರನ್ನು ರಝಾಕಾರ್ ರಾಕ್ಷಸ ದಳವಾಗಿ ಮಾರ್ಪಡಿಸಿ ಬಹು ಸಂಖ್ಯಾಕರ ಮೇಲೆ ಅವಮಾನುಷ ಅತ್ಯಾಚಾರ-ಇಂತಹ ಕೊಳಕನ್ನಾದರೂ ಸಾವಧಾನವಾಗಿ ಮತ್ತು ಶಾಂತ ರೀತಿಯಿಂದ ತೊಳೆದುಕೊಳ್ಳೋಣವೆಂದು ಹಿಂದೀ ಸರಕಾರ ಮುಂದೆ ಬಂದರೆ ಬಾರಿ ಬಾರಿಗೂ ಆಶೆ ಹುಟ್ಟಿಸಿ, ಆ ಮೇಲೆ ಯಥಾ ಪ್ರಕಾರ ವಂಚನೆ-ಈ ನರಕವನ್ನೇ ಶಾಶ್ವತವಾಗಿ ಉಳಿಸಿಕೊಳ್ಳುವ ಉದ್ದೇಶದಿಂದ ಸಂಯುಕ್ತ ರಾಷ್ಟ್ರ ಸಂಘಕ್ಕೂ ಹೋಗುವ ಆಲೋಚನೆ; ಪದ ದೇಶಗಳೊಡನೆ ಗುಪ್ತ ವಹಿವಾಟು-ಇವೆಲ್ಲಾ ಅತಿರೇಕಗಳಿಂದ ಎಂದೋ ತಪ್ಪಬೇಕಾಗಿದ್ದ ಸಹನೆಯನ್ನು ಇಪ್ಪರವರೆಗೂ ಅಸಾಧಾರಣ ಆತ್ಮಸಂಯಮದಿಂದ ಉಳಿಸಿಕೊಂಡು ಬಂದ ಭಾರತ ನಾಯಕರು ಈಗ ತಾನೇ ಎಚ್ಚರಿಕೆ ಕೊಟ್ಟರೆ, "ವಂಚಕ ಹಿಂದುಗಳನ್ನು ಕಂಡೊಡನೆ ಗುಂಡಿಡಬೇಕು" ಎನ್ನುವ ಕ್ಕಾರನ —ಇದೀಗ ನಿಜಾಮ್ ಅಡಳಿತ!

ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ಬಡಿಸಿದ ಲಂ"ಸ್ವತಂತ್ರ ಹೈದರಾಬಾದಿ"ನ/ಚಿತ್ರವಾಗಲೀ, ಅದನ್ನ ಪ್ರತಿಯಾಗಿ ಬ್ರಿಟಿಷ್ ಪ್ರಧಾನಿ ಆಟ್ಲಿಗಳು ನಮೂದಿಸಿದ "ಒಂದು ವರುಷಾವಧಿಯ ಯಥಾಸ್ಥಿತಿ ಒಪ್ಪಂದ ಪ್ರಕಾರ ಹೊರ ಸಂಬಂಧಾಧಿಕಾರವನ್ನು ಭಾರತಕ್ಕೊಪ್ಪಿಸಿರುವ ಹೈದರಾಬಾದಿ"ನ ಚಿತ್ರವಾಗಲೀ ಇಲ್ಲಿ ಅಕರ್ಷಣೀಯವಲ್ಲ. ಹೈದರಾಬಾದಿನ ಪ್ರಧಾನ ಮಂತ್ರಿ ಮಿ. ಲಾಯಿಕ್ ಅಲಿಗಳು ತನ್ನ ಭಾಷಣದಲ್ಲಿ, ಮತ್ತು ರಝಾಕರ್ ಸಂಸ್ಥೆಯ ಪತ್ರಿಕೆ 'ಇತ್ತೆಹಾದ್'ನಲ್ಲಿ ಪ್ರಕಟವಾಗಿರುವಂತೆ ಹೈದರಾಬಾದಿನ ಸ್ಥಳೀಯ ಖಾತೆಗಳ ಮಂತ್ರಿ ಯಾಮಿನ್ ಯೆಂಚೇರಿಯವರು ತನ್ನ ಭಾಷಣದಲ್ಲಿ, ಚಿತ್ರಿಸಿರುವ ಆ ಭಾವೀ ಹೈದರಾಬಾದೇ ನೋಟವಾಸ್ತವದಿಂದ ಎಷ್ಟೊಂದು ದೂರವಿದೆ! ಲಾಯಿಕ್ ಅಲಿ ತನ್ನೀ ಮಾತಿನಲ್ಲಿ ವರ್ಣಿಸಿರುವದು ರಝಾಕಾರ್ ಸ್ವಭಾವವನ್ನೆಂಬುದೂ, 'ಹೈದರಾಬಾದಿನ ಜನತೆ'ಯೆಂದರೆ ರಝಾಕಾರರೆಂದೇ ಅವರು ನಿರ್ಧರಿಸಿರುವರೆಂಬುದೂ ಇದರಿಂದ ಸುಸ್ಪಷ್ಟ. "ಭಾರತವು ಯುದ್ಧಕ್ಕೆ ತಯಾರಾಗಲಿ. ನಾವು ಅವರಿಗೊಂದು ಪಾಠ ಕಲಿಸಿಬಿಡುತ್ತೇವೆ.ಅಕ್ಕಮಣಗಾರರು ಹಿಂದೂ ಕೇಂದ್ರದವರೆಂಬುದರಿಂದ ಹೈದರಾಬಾದ್ ಹಿಂದುಗಳು ಅವರ ವಿರುದ್ಧ ಕಾರ್ಯಾಚರಣೆ ಕೈಕೊಳ್ಳಲು ಹಿಂಜರಿದರೆ, ಅವರು ಸಂಸ್ಥಾನದ ದ್ರೋಹಿಗಳಾಗುವರು. ಅಂಥವರನ್ನು ಮೇಲಧಿಕಾರಿಗಳ ಅಪ್ಪಣೆಗಾಗಿ ಕಾಯದೆ ಕಂಡಕಂಡಲ್ಲಿ ಗುಂಡಿಟ್ಟು ಕೊಂದುಹಾಕುವ ಅಧಿಕಾರ ಪೋಲಿಸರಿಗಿದೆ" ಎಂದು ಮತ್ತೊಬ್ಬ ಮಂತ್ರಿ ಝುಬೇರಿಯಂದಿದ್ದಾನೆ.ತನ್ನಲ್ಲಿ ನಾಲ್ಕೂವರೆ ಕೋಟಿ ಮುಸ್ಲಿಮರನ್ನು ಸಮಾನತೆಯಿಂದ-ಅವರಿಗೆ 'ಪಾಕಿಸ್ತಾನಕ್ಕೆ ತಮ್ಮನ್ನು ವರ್ಗಾಯಿಸುವ' ಊಹೆ ಕೂಡಾ ಸಿಂಹಸ್ವಪ್ನದಂತೆ ಭಯಂಕರವಾಗಿ ಕಾಣುವಷ್ಟು ನೌಕರ್ಯಗಳನ್ನಿತ್ತು—ರಕ್ಷಿಸುತ್ತಿರುವ ಭಾರತವು ಎಂದಾದರೂ ಹೈದರಾಬಾದಿನತ್ತೇಲೆ ಬಿದ್ದರೆ,ಅದಕ್ಕೆ ಪ್ರತೀಕಾರವಾಗಿ ಒಳಗಿರುವ ಸುಮಾರು 1½ ಕೋಟಿ ನಿರಪರಾಧಿ ಹಿಂದುಗಳನ್ನು ರಝಾಕಾರರೂ ನಿಜಾಮ್ ಪೋಲೀಸರೂ ಹುಡುಕಿತೆಗೆದು ಗುಂಡಿಡುವರೆಂದೇ ಮೇಲಿನ ಮಾತುಗಳ ಅರ್ಥ! ಹೈದರಾಬಾದ್ ಹೇಗಿದೆ? ಯಾರಕೈಯಲ್ಲಿದೆ? ಅಲ್ಲಿ ಈ ವರೆಗಾದುದೆಲ್ಲವೂ ಅಣುಮಾತ್ರವೆನ್ನಲಾಗುವಂತಹ ಮಹತ್ತ್ವದ ದುಷ್ಕೃತ್ಯಗಳು ಇನ್ನೆಷ್ಟಾಗಲಿವೆ?-ಎಂಬುದನ್ನೆಲ್ಲಾ ಭಾರತ ಸರಕಾರ ಮಾತ್ರವಲ್ಲ; ಪ್ರತಿಯೊಬ್ಬ ಭಾರತೀಯನೂ ಸ್ಪಷ್ಟವಾಗಿ ತನ್ನ ದೃಷ್ಟಿ ಪಥದಲ್ಲಿಟ್ಟಿರಬೇಕು. ಕಂತಕ್ಕೆ ಕತ್ತಿ ಚಾಚಲ್ಪಟ್ಟಾಗ ಹಿಂದು ಮುಂದನ್ನು ಯೋಚಿಸುತ್ತಾ ನಿಂತು ಕೊಂಡಿರಾಗದು-ಇನ್ನು ಸಂಧಾನದ ಮಾತಲ್ಲ; ಸಹನೆಯ ಮಾತಿಲ್ಲ; ಅದಷ್ಟು ಕಡಿಮೆ ಅಪಾಯದಿಂದ, ಅದಷ್ಟು ಬೇಗನೇ ಹೈದರಾಬಾದನ್ನು ಬರ್ಬಾಸ್ಸುಗೊಳಿಸುವ ಮಿಂಚು ವೇಗದ ಕಾರ್ಯವೊಂದೇ ಆಗಬೇಕು. ಭಾರತೀಯರು, ಮುಖ್ಯವಾಗಿ ಹೈದರಾಬಾದಿನ ಗಡಿಯಲ್ಲಿರುವ ಮದ್ರಾಸ್, ಬೊಂಬಾಯಿ, ಮಧ್ಯಪ್ರಾಂತ್ಯಗಳವರೂ ಈ ಮಹತ್ಕಾರ್ಯಕ್ಕೆ-ಮಹಾ ಯಜ್ಞಕ್ಕೆ-ತಯಾರಿರಬೇಕು. ಕಾವದಕ್ಕೆ ಬೀಸಲಿರುವವರು ಎಂದೇ ಭಾವಿಸಿಕೊಳ್ಳಬೇಕು.

ಉಡುಪಿ

ಗ್ರಾಮಾಭಿವೃದ್ಧಿ ಶಿಕ್ಷಣ ಶಾಲೆಯು ಕಳೆದ ತಾ 31ರಲ್ಲು ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಶ್ರೀ ಸಿ. ಲಕ್ಷ್ಮಿನಾರಾಯಣ ನಾಯ್ಕರಿಂದ ತೆರೆಯಲ್ಪಟ್ಟಿತು. ಆಸಿಸ್ಟಾಂಟ್ ಡೆವಲಪ್‌ಮೆಂಟ್ ಆಫೀಸರ್ ಶ್ರೀ ಕೆ. ಕಾಳಪ್ಪ ಸೆಟ್ಟರು ಸ್ವಾಗತ ಭಾಷಣಮಾಡಿದರು. ನಿರ್ದ್ಯಾರ್ಥಿಗಳು ಈ ಶಾಲೆಯಲ್ಲಿ ಪಡೆಯುವ ಶಿಕ್ಷಣದ ಸದುಪಯೋಗವನ್ನು ಮಾಡಿಕೊಳ್ಳಬೇಕಾಗಿ ಶ್ರೀ ಕೆ. ಸಂಜೀವ ಭಟ್ಟರು ತನ್ನ ಭಾಷಣದಲ್ಲಿ ಸೂಚಿಸಿದರು.

ನಗರಸಭೆ ಉಡುಪಿ ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯು ಕಳೆದ ತಾ. 31ರಲ್ಲು ಚೆಯರ್‌ಮೆನ್ ಶ್ರೀ ಸಿ. ಉಪೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತ್ತು. ಸ್ವಾತಂತ್ರ್ಯ ದಿನಾಚರಣೆಯ ದಿವಸದ ಕಾರ್ಯಕ್ರಮಗಳ ಪಟ್ಟಿಯನ್ನು ತಯಾರಿಸುವರೆ ಒಂದು ಸಮಿತಿಯು ನೇಮಕವಾಯಿತು.

ಜಿಲ್ಲಾ ಕಲೆಕ್ಟರರ ಸೂಚನೆಯಮೇರೆಗೆ ಇದೇ ತಾ 22ರಿಂದ 28ರತನಕ ಮರಗಿಡಗಳನ್ನು ನೆಡುವ ವಾರವನ್ನು ಆಚರಿಸಬೇಕಾಗಿ ನಿಶ್ಚಯಿಸಲಾಯಿತು. ಮುನಿಸಿಪಲ್ ಮಾರ್ಕೆಟಿನಲ್ಲಿ ಶೆಡ್ಡುಗಳನ್ನು ಕಟ್ಟುವರೆಯೂ ಸಿಟಿಬಸ್ ಸ್ಟೇಂಡ್ ನಿರ್ಮಾಣದಬಗ್ಗೆಯೂ ಹಣ ಸೆಂಕ್ಷನ್ ಮಾಡಬಾಯಿತು.

ಮೋಟಾರ್ ಕಾರು ಮತ್ತು ಬಸ್ ಅವಘಡ ಇವೇ ತಾ 1ರಲ್ಲು ಸಂಜೆ ಸುಮಾರು ಆರೂವರೆ ಗಂಟೆಗೆ ಕೆಸ್ತಿಗೆ ಹೋಗುತ್ತಿದ್ದ ಶಂಕರವಿಠಲ ಮೋಟಾರ್ ಕಂಪೆನಿಯ ನಂಬ್ರ MDX1202ನೇ ಬಾಲಿಬಸ್ಸನ್ನು ಮಾರುತಿ ವೀಧಿಕಾ ರಸ್ತೆಯಿಂದ ಬರುತ್ತಿದ್ದ MSP 5059ನೆ ಕಾರು ರಾಯಲ್ ಮಹಾಲ್ ಎದುರುಗಡೆಯ ಜಂಗ್ಷನ್‌ನಲ್ಲಿ ಬಂದ ಕ್ಕೊಂದು ಢಿಕ್ಕಿಹೊಡೆದು ಅವಘಡ ಉಂಟಾಯಿತು. ಕಾರು ಆರಮನಗಟಬಿದ್ದು ಕನ್ನಡಿಗಳು ಪುಡಿಯಾದುವು. ಪುರುಷನ ಸಂಜೆಯವರೆಗೂ ಬಸ್ಸು ನುತ್ತು ಕಾರು ಅನಘಡದ ಸ್ಥಳದಲ್ಲಿ ಇದ್ದುದರಿಂದ ಬಹುಮಂದಿ ಬಂದು ನೋಡುತ್ತಿದ್ದರು.

ಕುಂದಾಪುರ-ತಾಲೂಕು ಆಯುರ್ವೇದ ವೈದ್ಯಸಮಾಜದ ಸಭೆಯು ತಾ. 1-8-48 ರಂದು ಬಿ. ಆರ್. ರಾವ್ಸ್ ಹಿಂದೂ ಶಾಲೆಯಲ್ಲಿ ಶ್ರೀ ಎಮ್. ಎಮ್. ಹೆಗ್ಡೆ, ಎಫ್ಲೋಚೇಟ್‌ಇನರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ಆಯುರ್ವೇದ ವೈದ್ಯರ ಸಂಘಟನೆ ಮತ್ತು ಆಯುರ್ವೇದ ಔಷಧ ನಿರ್ಮಾಣಗಳ ಕುರಿತು ಭಾಷಣ ಮಾಡಿದರು.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಜಂ ಆಗಿ ಯೂ ಜಿಲ್ಲೆಯಲ್ಲಿಯೂ ಡೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.



ಎಲ್ಲ ತರದ ದಂತ ರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಪುನಃ ಅರಿವೆ ನಿಯಂತ್ರಣ

ವಸ್ತ್ರ ವ್ಯಾಪಾರದ ನಿಯಂತ್ರಣಗಳನ್ನು ರದ್ದುಪಡಿಸಿದಂದಿನಿಂದ ಅರಿವೆಗಳ ಬೆಲೆಯೂ ಇಮ್ಮಡಿ, ಮುಮ್ಮಡಿ ಏರಿ ಮಿಲ್ಲುಗಳು, ಏಜೆಂಟರುಗಳು, ವ್ಯಾಪಾರಿಗಳೇ ಮೊದಲಾದವರು ನ್ಯಾಯಾನುಚಿತ ಅತ್ಯಾಶೆಯಿಂದ ಅತಿರೇಕ ಲಾಭದ ದೃಷ್ಟಿಯಿಟ್ಟುಕೊಂಡು ಸಾರ್ವಜನಿಕರಿಗೆ ವಿಶೇಷ ರೀತಿಯ ಕಷ್ಟ ನಷ್ಟಗಳುಂಟಾದ್ದರಿಂದ ಭಾರತ ಸರಕಾರವು ಪುನಃ ಅರಿವೇ ನಿಯಂತ್ರಣಗಳನ್ನು ಜ್ಯಾರಿಗೆ ತಂದಿದೆ. ಈ ಹೊಸ ನಿಯಂತ್ರಣದ ಮುಖ್ಯ ನಿಯಮಗಳು ಕೆಳಗಿನಂತಿವೆ:- ಗಿರಣಿಗಳ ದಾಸ್ತಾನುಗಳೆಲ್ಲವನ್ನೂ ಸರಕಾರವು ಪ್ರಾಧೀನಪಡಿಸಿಕೊಳ್ಳುವದು- ಇಂತಹ 400 ಮಿಲ್ಲುಗಳ ಸಂಗ್ರಹವನ್ನು ವಶಪಡಿಸಿಕೊಳ್ಳುವ ಆಜ್ಞೆಯು ಈ ಮೊದಲೇ ಹೋಗಿದೆ- ಅರಿವೆ ಮತ್ತು ನೂಲುಗಳ ಮೇಲೆಲ್ಲಾ ಅವುಗಳ ನಿಯಮಿತ ಧಾರಣೆಯ ಪಟ್ಟಿ ಹಚ್ಚಲಾಗುವುದು-ಈ ಧಾರಣೆಗಳು 'ಟೆರಿಫ್ ಬೋರ್ಡು' ಕಟ್ಟಿಕೊಡುವ ನ್ಯಾಯಬದ್ಧ ಬೆಲೆಯಂತಿರುವುದು--ಹಿಂದಿನ ನಿಯಂತ್ರಣ ಕಾಲದಂತೆಯೇ ವ್ಯಾಪಾರಿಗಳಿಗೆ ಲೈಸೆನ್ಸ್ ಕೊಡಲಾಗುವದು--ತಮ್ಮ ಉತ್ಪನ್ನಗಳನ್ನು ತಮಗಿಚ್ಛೆಬಂದಂತೆ ವಿತರಣೆಗೊಳಿಸುವ ಅಧಿಕಾರವನ್ನು ಈ ಬಾರಿ ಮಿಲ್ಲುಗಳಿಗೆ ಕೊಡಬೆ ಕೇಂದ್ರಸರಕಾರವು ತನ್ನ ಕೈಗೇನೇ ತೆಗೆದುಕೊಂಡಿದೆ- ಪ್ರಾಂತ್ಯಗಳಲ್ಲವನ್ನು ಯೋಗ್ಯವಾದ ಬೆಲೆಗೆ ಸರಿಯಾಗಿ ವಿತರಣೆಪಡಿಸುವ ಎಲ್ಲಾ ಅಧಿಕಾರಗಳನ್ನೂ ಪ್ರಾಂತಿಕ ಸರಕಾರಗಳಿಗೆ ಕೊಡಲಾಗಿದೆ-- ಪ್ರಾಂತಿಕ ಸರಕಾರಗಳು ತಮ್ಮ ಅಂಗಡಿಗಳನ್ನು ತೆರೆದು, ಅಥವಾ ಏಜನ್ಸಿಗಳಮೂಲಕ, ಇಲ್ಲಸೇ ವ್ಯಾಪಾರಿಗಳಿಗೆ ಲೈಸೆನ್ಸ್ ಕೊಟ್ಟು ಮಾರಾಟಮಾಡಿಸಬೇಕು--ದಾಸ್ತಾನುಗಳ ಕೆಲವಂಶವನ್ನು ತಮ್ಮ ಸ್ವಂತ ಅಂಗಡಿಗಳಿಗಾಗಿ ಇಂತಹ ಸರಕಾರಗಳು ಕಾದಿಟ್ಟುಕೊಂಡಿದ್ದು ಖಾಸಗೀ ವ್ಯಾಪಾರಿಗಳು ನ್ಯಾಯೋಚಿತವಾಗಿ ವರ್ತಿಸುವುದಿಲ್ಲವೆಂದು ಕಂಡುಬಂದಾಗಲೆಲ್ಲಾ, ತಮ್ಮ ಸ್ವಂತ ಅಂಗಡಿಗಳ ವ್ಯಾಪಾರವನ್ನೇ ಹೆಚ್ಚಿಸಿ ಲಾಭಖೋರರನ್ನು ಹಾದಿಗೆ ತರಬೇಕು- ಯಾವುದೇ ಪ್ರಾಂತಿಕ ಸರಕಾರವು ನಿಶ್ಚಿತಾವಧಿಯಲ್ಲಿ ತನ್ನ ಪಾಲನ್ನು ಪಡಕೊಳ್ಳದಿದ್ದರೆ, ಅದನ್ನು ಮಿಕ್ಕ ಪ್ರಾಂತ್ಯಗಳಿಗೆ ಕೊಡಲಾಗುವುದು-ವ್ಯಾಪಾರಿಗಳ ವಶದಲ್ಲಿ ಈಗ ಇರುವ ದಾಸ್ತಾನುಗಳು 4 ತಿಂಗಳುಗಳಿಗೆ ಸಾಕಾಗಬಹುದೆಂಬ ಅಂದಾಜಿರುವುದರಿಂದ ಒಕ್ಟೋಬರ್ ಅಂತ್ಯದೊಳಗೆ ಅವುಗಳನ್ನವರು ಮಾರಿ ಮುಗಿಸಬೇಕು; ಒಂದೊಮ್ಮೆಗೆ ಅವುಗಳಾದಷ್ಟು ಅತಿರೇಕ ಬೆಲೆಗೆ ಮಾರಾಟವಾಗುತ್ತಿವೆಯೆಂದು ಕಂಡುಬಂದರೆ ಆ ವುಗಳನ್ನು ಕೂಡಲೇ ಸಾಧೀನಪಡಿಸಿಕೊಂಡು ಯೋಗ್ಯ ಬೆಲೆಗೆ ಮಾರಾಟಮಾಡಿಸುವ ಅಧಿಕಾರ ಸರಕಾರಕ್ಕಿದೆ.

ಮೊದಲಿದ್ದ ನಿಯಂತ್ರಣವು ಕಳೆದ ಜನವರಿಯಲ್ಲಿ ರದ್ದಾದೊಡನೆಯೇ ಅರಿವೆಗಳ ಬೆಲೆಯೇರಿದುದಕ್ಕೆಂದು ಮಿತಿಯಿರಲಿಲ್ಲ. ಈ ಕುರಿತು 'ಟೆರಿಫ್ ಬೋರ್ಡು' ತನ್ನ ವರದಿಯಲ್ಲಿ ಸರಕಾರಕ್ಕೆ ಎಲ್ಲವನ್ನೂ ಸ್ಪಷ್ಟಗೊಳಿಸಿದೆ ಎಂದು ತಿಳಿದು ಬರುತ್ತದೆ. ಆ ವರದಿಯಂತೆ ಜನವರಿಯ ನಂತರ ಹತ್ತಿ ಮತ್ತು ಮಜೂರಿಯ ಮಟ್ಟ ಏರಿದುದು ದರಗು ವಸ್ತ್ರಗಳ ಮಟ್ಟಿಗೆ ನೇಕಡಾ ತಾ. ೨೦ರ ಒಳಗೆ, ಮತ್ತು ವಿವಿಧ ವರ್ಗದ ಅರಿವೆಗಳಿಗೆ ನೇಕಡಾ ೪೦ರ ಒಳಗೆ ಮಾತ್ರ. ಆದರೆ ಅವುಗಳ ಬೆಲೆ ಮಾತ್ರ ಶೇಕಡಾ ೨೦೦ರಿಂದ ೩೦೦ರ ವರೆಗೂ ಏರಿದೆ. ಕೃಷಿ ವ್ಯವಹಾರವಾಗಿ ಏಜನ್ ಮುನಾಫೆಯಲ್ಲದೆ ಪಾಲು ಪಡೆಯತಕ್ಕ ಹೆಲವು ಗಿರಣಿ ಏಜೆಂಟರುಗಳು ಉತ್ಪತ್ತಿಯ ಮೇಲೆ ಪ್ರತ್ಯೇಕ ಕಮಿಶನುಗಳನ್ನೂ ಹೊಡೆದು ದುರ್ಲಾಭ ಮಾಡಿಕೊಂಡಿದ್ದಾರೆಂದೂ 'ಟೇರಿಫ್ ಬೋರ್ಡು' ಟೀಕಿಸಿದೆ. ನಿದರ್ಶನಕ್ಕಾಗಿ, ಇಂತಹ ಓರ್ವ ಏಜೆಂಟ ತನ್ನ ಕಮಿಶನಾಗಿ 15ಲಕ್ಷ ರೂಪಾಯಿಗಳನ್ನು ಪಡೆದಿದ್ದನೆಂತೆ; ಆದರೆ ಅವನ ಕಂಪೆನಿಯ ಏಜನ್ ಮುನಾಫೆ ಕೇವಲ ರೂ. ೧ಲಕ್ಷಗಳಿಂತ ಹೆಚ್ಚಿರಲಿಲ್ಲವಂತೆ.

ಹೊಸ ನಿಯಂತ್ರಣಾನುಸಾರವಾಗಿ ನಿಶ್ಚಿತ ಬೆಲೆಪಟ್ಟಿಯಂಟಿಸಿದ ಅರಿವೆಗಳು ಈ ತಿಂಗಳ ಅಂತ್ಯಭಾಗದಲ್ಲೇ ಮಾರ್ಕೆಟಿಗೆ ಬರಲು ಸಾಧ್ಯ. ಅಂತೆಯೇ ಬರುವ ಒಕ್ಟೋಬರ್ 31ರ ವರೆಗೆ ತಮ್ಮಲ್ಲಿರುವ ದಾಸ್ತಾನುಗಳನ್ನು ಮಾರಾಟಮಾಡುವ ಹಕ್ಕು ವ್ಯಾಪಾರಿಗಳಿಗಿದೆ. ಆದರೆ ಈ ನಿಯಂತ್ರಣಾಜ್ಞೆ ಈಗಲೇ ಜಾರಿಯಲ್ಲಿರುವುದರಿಂದಲೂ, ವ್ಯಾಪಾರಾಧಿಕಾರವು ಸರಕಾರದ ಕೈಗೆ ಬಂದಿರುವುದರಿಂದಲೂ ಅತಿರೇಕ ಬೆಲೆಗೆ ಮಾರುವುದು ಸ್ಪಷ್ಟ ಪರಾಧವಾದ್ದರಿಂದ ಈಗಲೇ ಅರಿವೆಗಳ ಬೆಲೆಯಿಳಯಬೇಕಾದುದು ಸ್ವಾಭಾವಿಕ.

ಕಾಶ್ಮೀರದಲ್ಲಿ ಪಾಕಿಸ್ತಾನ್ ಸೇನೆ.

ಪಾಕಿಸ್ತಾನ್ ಒಪ್ಪಿಕೊಂಡಿತು!

ತನ್ನ ಸೇನೆಗಳು ಕಾಶ್ಮೀರದ ಬಡೋಡೆಗಾರರ 'ಆಜಾದ್ ಕಾಶ್ಮೀರ' ಸರಕಾರದ ಸೇನೆಗಳ ಜತೆಗೂಡಿ ಯುದ್ಧ ಮಾಡುತ್ತಿರುವುದು ಹೌದೆಂದು ಪಾಕಿಸ್ತಾನ್ ಸರಕಾರವು ಸಂಯುಕ್ತ ರಾಷ್ಟ್ರ ಸಂಘದ 'ಕಾಶ್ಮೀರ ಸಮಿತಿಯ ಮುಂದೆ ಒಪ್ಪಿಕೊಂಡಿದೆ, ಎಂದೀಗ ಪ್ರಕಟವಾಗಿದೆ. 'ಪಟ್ಟಿಮ ಪಾಕಿಸ್ತಾನದ ಎಲ್ಲಾ ಹೊಳೆಗಳು ಹುಟ್ಟುವದೂ ಕಾಶ್ಮೀರದಲ್ಲಿ--ಮೊಂಗ್ಲಾದಂತಹ ಪಾಕಿಸ್ತಾನದ ಪ್ರಾಮುಖ್ಯ ನೀರಾವರಿ ಕಾಮೇ ಸಂಗಳಿರುವದು ಕಾಶ್ಮೀರದಲ್ಲಿ-ಪಾಕಿಸ್ತಾನದ ಅಮೂಲ್ಯ ಸೇನಾಸಂಗ್ರಹ ಕ್ಷೇತ್ರವೇ ಕಾಶ್ಮೀರ. ಅಂತೆಯೇ ರಾಜಕೀಯ, ಆರ್ಥಿಕ, ಭೌಗೋಲಿಕ ಸಂಬಂಧದೃಷ್ಟಿಯಿಂದಲೂ ಕಾಶ್ಮೀರವನ್ನು ಬಿಡುವದಸಾಧ್ಯವಾದ್ದರಿಂದ ನಾವಾಯುದ್ಧಕ್ಕೆ ಸೇನೆಕಳುಹಿಸಿದ್ದೇವೆ', ಎಂದೆಡೆಯಿಂದ ಭಾರತ ಸೇನೆಯೂ ಮತ್ತೊಂದೆಡೆಯಿಂದ ಇಪಿಫಕೀರನೂ ಪಾಕಿಸ್ತಾನದಮೇಲೆ ಕತ್ತರಿಧಾಳಿ ನಡಿಸುವ ಬೇಸಿಗೇ ಯುದ್ಧಯೋಜನೆಯನ್ನು ಭಾರತ ಸರಕಾರ ಮಾಡಿದೆಯೆಂಬುದರ ಕಲವು ರಿಕಾರ್ಡುಗಳನ್ನೂ ಪಾಕಿಸ್ತಾನವು ಕಾಶ್ಮೀರ ಸಮಿತಿಯಮುಂದೆ ಹಾಜರುಪಡಿಸಿದೆಯಂತೆ!

ESTD. 1926
CROWN RUBBER STAMP CO.
MFRS OF
RUBBER STAMPS & ENGRAVERS
10
BALMATTA ROAD MANGALORE S.K.

Approved firm by the Govt. of Mysore Certified by the Agent of the Govt. of Cylone & Indian.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ನೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಖುತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿವಸ್ಸು ಖುತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಕೀವ್ರ ಗುಣಹೊಂದಬಹುದು, ಯಾವ ಬಾಧಕಳೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5/-; ಅಧಿಕಾಧಿಕ ಸ್ಪೆಶ್ಯಲ್ ರೂ.8/- [ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, P. DS. (N. J.)
Tollygunge CALCUTTA.
ಸ್ವಾಕಸ್ಸರು: ಶಕಾಕಂಪನಿ, ಮಂಗಳೂರು

Sri Ramakrishna Theatre Limited,
UDIPI.

NOTICE

In modification of Notice dated 31-7-48 published in the issue "Antaranga" dated 3-8-48, the Register of Members and Transfer Books of the Company will remain closed from Sunday the 15th August, '48 to Sunday the 29th August 48 instead of from 22nd August, '48 to 5th September, 48, both days inclusive,

S. R. Buildings
3-8-1948

A. Janardhana Alse.
Managing Director.

Notice

ಉಡುಪಾಪುರ ಡಿ. ಮು. ಕೋರ್ಟಿನಲ್ಲಿ
O. S. 275/47 R. E. P. 259/48
ವಾದಿ- ನಾರಾಯಣ ಉಳಾಯ.
ಪ್ರತಿವಾದಿ- ಕುರಲ ಸೆಟ್ಟಿ.

ಉಡ್ಡಿತಾಲ್ಲ ಪಡ್ಡರ್ಸೆ ಗ್ರಾಮದಲ್ಲಿರುವ ಕೊರಗಯ್ಯ ಹೆಗ್ಗೇರ ಅಳಿಯ ಶುಲಸೆಟ್ಟಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಸದ್ರಿ ವ್ಯವಹಾರಕ್ಕಾಗಿ ಪೋಲಿಸ ಡಿಕ್ಕಿಯ ಆಮಲ್ದಾರ ಬಗ್ಗೆ ಆರ್ಜಿವಾಜನು ಆರ್ಜಿವಾಜ್ಞು ಮಾಡಿರುವುದರಿಂದ ಸದ್ರಿ ಅನುಲ್ಲಾರಿಯಲ್ಲಿ ಪ್ರತಿವಾದಿಗೆ ವಾರಂಟು ಯಾಕೆ ನಡಿಸಕೂಡದೆಂ ಎಂಬಬಬು ತೋರಿಸಲಿಕ್ಕೆ ತಾ. 11-8-48ಕ್ಕೆ ಮೇಲಿನ ಕೋರ್ಟಿನಲ್ಲಿ ತಪ್ಪಿನೆ ಇಟ್ಟುರುತ್ತಿವೆ. ಆ ಕಾರಣ ಆಕ್ಷೇಪಣೆಗಳಿದ್ದರೆ ಸದ್ರಿದಿನ ಕೋರ್ಟುಗಾಮುಂದೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದುಎಂಬಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತೆ.

N. S. Parameshwariah
Advocate for Petr.

Coondapoor Date 1-8-48

ಏಲಂ ನೋಟೀಸು

ಉಪ್ಪೂರು ಗ್ರಾಮದ ಪಟ್ಟಾ ನಂ. 129 ಕ್ಕೆ ಪ್ಪಿದ, ಉಡುಪಿ ಶ್ರೀ ಅಧಮಾರುಮಠದ ಕಾಳೀಯ ಮರ್ದನ ಕೃಷ್ಣದೇವರ ಹೆಸರಿ ಪಟ್ಟಿಗೆ ಪ್ಪಿದ ಅಮ್ಮುಂಜೆ ಕನ್ನೆಮಾರು ಕಾಡು ಸ. ನಂ. 262/1 263/6 ಮತ್ತು 296/1ಕೂಡ ಅಂದಾಜು ವಿಸ್ತೀರ್ಣ 45 ಎಕ್ರೆ ಸ್ಥಳದಲ್ಲಿರುವ ಚಾರಿನಕಟ್ಟೆಗೆಯನ್ನು ಇದೇ ಆಗೋಸ್ತು ತಿಂಗಳ ತಾ 15ನೇ ಆದಿತ್ಯವಾರ ದಿನ ಮಧ್ಯಾಹ್ನ 3 ಗಂಟೆಗೆ ಏಲಂಮೂಲಕ ವಿಕ್ರಯಿಸೋಣಾಗುತ್ತದೆ. ಆದಿನ ಆ ಸಮಯಕ್ಕೆ ಉಮೇದ್ವಾರರೆಲ್ಲರೂ ಉಡುಪಿ ಶ್ರೀ ಅಧಮಾರುಮಠಕ್ಕೆ ಬರುವುದು.

P. Shripathi Rao
Agent,
Sri Admar Mutt, Udipi

ಬಂದರಗಳಿಗಾಗಿ "ಯುದ್ಧ"

ಪಶ್ಚಿಮ ಕರಾವಳಿಯ ಬಂದರಗಳಲ್ಲಿ ಅತ್ಯುತ್ತಮ ಸುವಾಸನೊಂದನ್ನು ಹಿಂಬಿದರೆ ವನ್ನಾಗಿ ಮಾಡುವ ಪ್ರಶ್ನೆ ಮುಂದಿ ಬಂದಂದಿನಿಂದ ಒಂದು ಚಿಕ್ಕ ಯುದ್ಧವೇ ನಡೆಯುತ್ತಲಿದೆ. ಇಲ್ಲಿ ನಮಗೆ ಸಂಬಂಧಪಟ್ಟ ಸ್ಥಳಗಳೆಂದರೆ, ಕಾರವಾರ, ಬೆಟ್ಕಳ, ಸುಲ್ತೆ ಮತ್ತು ಮಂಗಳೂರು. ಈ ಸ್ಥಳಗಳ ಕೆಲವು ಸುಮಾರು ಜನ ಮೇಲಾಸು, ಹಾರಾಟ, ಅತ್ಯುತ್ತ ಒಣಾಟ, ವೃತ್ತ ಪತ್ರಿಕೆಗಳಲ್ಲಿ ಕಾದಾಟ ನೋಡಿದರೆ ನಿಮಗನ್ನಿಸಿ ಹುಟ್ಟುತ್ತಿದೆ ನಮ್ಮ ಊರು, ನಮ್ಮ ಮಾತೆ ಎಂದಾಗ ನಮಗನ್ನಿಸಿಗೆ ಸಹಜವಾಗಿ ಅಭಿಮಾನ ಹುಟ್ಟುವುದೇಕು. ಆದರೆ ತೀರ ಎಂದಿನೀಯವಾದ ಸಂಕೋಚವನ್ನಿಸಿ ಹುಟ್ಟಿ ಬಾರದು.

ಸಮಾಯ ಬಂದರಗಳ ಬೆಳವಣಿಗೆಗಾಗಿ ಸ್ರಯತ್ನವಾಡಲು ನಿರ್ಮಿಸಿದ್ದ ಸ್ಥಳೀಯ ಸಮಿತಿಗಳು ತಮ್ಮಮಾಲಿನ ಕೆಲಸವನ್ನು ಶಕ್ತಿಮೀರಿ ಸ್ಮರ್ತಿಸಿ ಮಾಡುವುದು ವ್ಯಾಖ್ಯೆಯೇ ಸರಿ. ತಮ್ಮ ಬಂದರಕ್ಕೆ ಸಂಬಂಧಿಸಿದ ಎಲ್ಲ ವಿಷಯಗಳನ್ನು ಕೂಲಂಕುಷವಾಗಿ ತಿಳಿದು, ಗೊತ್ತಿಲ್ಲವುಗಳನ್ನು ಸಂಪಾದಿಸಿ, ಹಿಂ ಬಂದವಾಗಲು ಅಡ್ಡಿರುವ ಸೌಕರ್ಯಗಳನ್ನು, ಅನುಕೂಲತೆಗಳನ್ನು ಜನರಿಗೂ, ಸರಕಾರ

Tender Notice

Tenders are invited to reach the Assistant Director of Fisheries, (Coast), Calicut on or before 15-9-48 for transporting salt bags from sea going vessels or railway waggons and stacking them in the fish curing yards and gellahs on the west coast and for sundry other works for a period of one year from 1st December, 1948. Details and terms of contract can be had from the Office of The Assistant Director of Fisheries, (Coast), Calicut.

T. P. Baratan,
Asst. Director of Fisheries,
(Coast).

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 383/1948.

ವಾದಿ—ಮುಂಶಯ್ಯ ತೋಳಾರ.

ಪ್ರತಿವಾದಿ—ಬಚ್ಚು ಸ್ವಾಕ್ಷ ಮಂತಾ ಅ ಕೈಮ್ಮನ ಮಗ ಬೆಳ್ಳೆ ಗ್ರಾಮದ ಯಳಂತೂರು ಮನುಷ್ಯಬೈಲು ಅಡಿಯಲ್ಲಿರುವನ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದರೆ:—

ನೀವು ಕೂಡಾ ಜನರು ವಾದಿಗೆ ಬರಕೊಟ್ಟ ದಿವಸಾಂಡು ನೋಟಿನ ಆಸಲು ಬಡ್ಡಿ ಹಣ ರು ೩೯೫-೦-೦ಕ್ಕೆ ವಾದಿಯು ವಾಕಲು ಮಾಡಿದ ಮೇಲಿನ ದಾವೆಯು ತಾ. ೧೬-೮-೧೯೪೮ಳಲ್ಲಿ ಕೆನ್ನಿಗೆ ಜುಟ್ಟುರುತ್ತದೆ. ಆ ಕಾರಣ ನಿಮ್ಮದ್ದೇನಾದರೂ ಅಕ್ಷೇಪ ಯಿದ್ದರೆ ಆ ದಿನ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದೆಂಬ ಸಂಗ್ತಿ ಈ ಮೂಲಕ ತಿಳಿಸಿರುತ್ತದೆ.

By order of the court.
Y. Tejappa Shetty.
Advocate for plaintiff.
Coondapoor, 30-7-48.

ದವರಿಂದ ನೇಮಕಮಾಡಿಕೊಂಡಿದ ಸಮಿತಿಯವರಿಗೂ ಮುಂದಿಟ್ಟುಮಾಡಿಸಿ, ತಮ್ಮ ಬಂದರಕ್ಕೆ ಹಿರಿಮೆಯನ್ನು ತೋರಿಸಿಕೊಡಲೆತ್ನಿಸುವುದು ಸ್ಥಳೀಯ ಸಮಿತಿಗಳ ಮುಖ್ಯ ಕರ್ತವ್ಯ. ತಮ್ಮ ಪ್ರಾಮುಖ್ಯತೆಯನ್ನು ತೋರಿಸಿಕೊಡಲು ಯತ್ನಿಸುವಾಗ, ಮತ್ತೊಬ್ಬರ ಹುಳುಕನ್ನು ಎತ್ತಿತೋರಿಸಿ, ಇವರ ಉದ್ದೇಶಕ್ಕೆ ಧಕ್ಕೆ ತಗಲುವಂತೆ ಮಾತುಮಾಡುವುದು ಮಾತ್ರ ದೊಡ್ಡ ಅನ್ಯಾಯ. ಆದರೆ ದುರದೃಷ್ಟವಶಾತ್ ಕೆಲಸಯಂದಿಂದ ಇದೇ ಕೆಲಸ ಧಾರಾಳವಾಗಿ ನಡೆಯುತ್ತಿದೆ. ಸ್ವಾರ್ಥಪ್ರೇರಿತಯಿಂದ ಪ್ರೇರಿತರಾದ ಕೆಲವರು ಇಂಥ ಹೀಯಾಕೆಲಸ ಮಾಡುತ್ತಿರುವುದಲ್ಲದೆ, ಢಿಲ್ಲಿ, ಮುಂಬಯಿ, ಬೆಂಗಳೂರು, ಮದ್ರಾಸು ಮುಂತಾದ ಸ್ಥಳಗಳಿಗೆ ತಾವಾಗಿ ಹೋಗಿ ಅಥವಾ ತಮ್ಮ ಗುಪ್ತಚಾರರನ್ನು ಕಳುಹಿಸಿ, ದೊಡ್ಡ ದೊಡ್ಡ ಹುದ್ದೆಗಳಲ್ಲಿರುವ ತಮ್ಮ ಪರಿಚಯಸ್ಥರ ಸಹಾಯ ಪಡೆದು, ತಮ್ಮ ಉದ್ದೇಶವು ಈ ದೇರುವು ದಕ್ಕಾಗಿ ಶಕ್ತಿಪ್ರಯತ್ನ ಮಾಡುತ್ತಿರುವರೆಂಬ ವಿಶ್ವಸನೀಯ ವಾರ್ತೆ ಹರಡಿದೆ. ಇದು ನಿಜವಾಗಿಯೂ ನಾಚಿಕೆಗೇಡು! ಸರಕಾರದಿಂದ ನೇಮಿಸಲ್ಪಟ್ಟ ಸಮಿತಿಯ ಸದಸ್ಯರು ತಮ್ಮ ಕೆಲಸ ಆರಂಭಿಸುವಮೊದಲು ಜೇಳದ ಸ್ಪಷ್ಟ ಮಾತುಗಳನ್ನು ಲಕ್ಷ್ಯಕ್ಕಿಲ್ಲಿಟ್ಟನೆ, ಈ ಕೀಳ್ಮರದ ಪ್ರಯತ್ನಗಳೆಲ್ಲ ವ್ಯರ್ಥವೆಂದು ಮೂಢನಿಗೂ ತಿಳಿದೀತು. "ದೇಶದ ಹಿತದೃಷ್ಟಿಯಿಂದ ಯಾವ ಬಂದರವು ಅತ್ಯುತ್ತಮವೆಂದು ಕಂಡುಬರುವುದೋ ಅದನ್ನೇ ಆರಿಸಲಾಗುವುದು." ಇದನ್ನು ತಿಳಿದೂ ತಿಳಿದೂ ತಮ್ಮ ಕೈಚಳಕ ತೋರಿಸುವವರನ್ನು ದೇಶದ್ರೋಹಿಗಳೆಂದು ಯಾಕೆ ಕರೆಯಬಾರದು? ಚುನಾವಣೆಯ ಸಮಯದಲ್ಲಿ ನಡೆಯುವ 'ಬನಾವಣೆ'ಯಂತೆಯೆ ನಡೆಯುತ್ತಿದೆ ಇದೂಕೂಡ. ಇಷ್ಟೇಅಲ್ಲ. ಮೈಸೂರು ಸರಕಾರದವರು ಪರದೆಯಹಿಂದೆ ಭಟ್ಕಳದ ಅಯ್ಯೆಗಾಗಿ ಮಿತಿತಪ್ಪಿ ಒದ್ದಾಡುತ್ತಿರುವರೆಂಬ ವಿಷಯ ಬೆಳಕಿಗೆ ಬಂದಿದೆ. ಹೀಗೆಲ್ಲ ನಡೆದರೆ ಕೇಂದ್ರ ಸರಕಾರದವರು ನೇಮಿಸಿದ ಸಮಿತಿಯ ಉಪಯೋಗವೆಲ್ಲಿ ಉಳಿಯುವು? ಅನುಕೂಲತೆ, ಸೌಕರ್ಯಗಳತ್ತ ಗಮನಕೊಡದೆ, ಮೈಸೂರು ಸರಕಾರದ ಒತ್ತಡಕ್ಕೆ ಮಣಿದು, ಕೇಂದ್ರ ಸರಕಾರದವರು ಭಟ್ಕಳವನ್ನೆ ಆರಿಸಲು ನಿರ್ಧರಿಸಿದರೆಂದರೆ ಸರಕಾರದ ಹಿರಿಮೆಗೆ ಕೊಡಲಿಯೇಟು ಬಿದ್ದಂತೆಯೇ ಸರಿ. ಭಟ್ಕಳವು ನಿಜವಾಗಿಯೂ ಇತರ ಬಂದರಗಳಿಗಿಂತ ಉತ್ತಮವೆಂದು ಸಮಿತಿಯವರಿಗೆ ಖಚಿತವಾದರೆ, ಯಾರ ಒತ್ತಡದ ಅವಶ್ಯಕತೆಯೂ ಇಲ್ಲ. ಆದರ ಅಯ್ಕೆ ಆಗುವುದು. ಈ ರೀತಿ ಸ್ವಾರ್ಥ ಸಾಧನೆಗಾಗಿ ಪರಿಶ್ರಮಪಡುವುದು ಮೈಸೂರು ಸರಕಾರಕ್ಕೆ ಏನೇನೂ ಒಪ್ಪುವುದಿಲ್ಲ.

ಸಮಿತಿಯವರು ಯಾರ 'ಬನಾವಣೆ'ಗೂ ಸಿಕ್ಕದೆ, ಯಾರ ಒತ್ತಡಕ್ಕೂ ಬಗ್ಗದೆ, ನಿಷ್ಪಕ್ಷಪಾತಿಗಳಾಗಿ, ನಿರ್ಭೀತಿಯಿಂದ ತಮ್ಮ ಅಭಿಪ್ರಾಯ ವ್ಯಕ್ತಪಡಿಸುವರೆಂದು ಆಶಿಯಿದೆ. ಹೀಗಾದರೆ ಮಾತ್ರ ಅವರು ಕೃತಕೃತ್ಯರಾದಾರು. ಮತ್ತವರ ಗೌರವ ಉಳಿಯುವುದು. ಅಂತೆಯೇ ಕೇಂದ್ರ ಸರಕಾರವೂ ಕೂಡ ಬನ್ನಿದ ನುಡಿಗಳಿಗೆ ಮರುಳಾಗದೆ, ತಾವು ನೇಮಿಸಿದ ಸಮಿತಿಗೆ ಅಯ್ಕೆಯ ವಿಷಯದಲ್ಲಿ ಪೂರ್ಣಾಧಿಕಾರಕೊಟ್ಟು, ಅವರ ಸಲಹೆಯಂತೆ ನಡೆಯುವರೆಂಬ ಭರವಸೆಯೂಇದೆ. ದೇಶದ ಹಿತದೃಷ್ಟಿಯಿಂದ ಯಾವ ಬಂದರದ ಅಯ್ಕೆಯಾದರೂ, ಅದು ಜನರಿಗೆ ಹಿತಕಾರಿಯೇ ಸರಿ; ಆದರೆ ಸ್ವಾರ್ಥವ ತಳಹದಿಯ ಮೇಲೆ ನಿಂತ ಕಟ್ಟಿಡಗಳಿಗೆ ಉಳಿಗಾಲವಿಲ್ಲ.

ಕೆಲವೇ ದಿನಗಳಲ್ಲಿ ಸಮಿತಿಯವರ ವರದಿ ಪೂರೈಸಲಿದೆ. ಈ 'ಯುದ್ಧ' ಅ ನೇಲಾ ಪರೂ ಮುಕ್ತಾಯವಾದರೆ ದೃಷ್ಟಿ; ಬದರಿಗೆ ಮತ್ತಷ್ಟು ಧಂದಿಂದ ನಡೆಯಲು ಆರಂಭವಾದರೆ ನಮ್ಮ ದುರ್ದೈವವೇ ಸರಿ.

—ಕೆ. ಯಸ್. ನಡಂಬೂರು.

ಕನ್ನಡ ಪುಸ್ತಕಗಳಿಗೆ ಬಹುಮಾನ—

ಅತ್ಯುತ್ತಮ ಕನ್ನಡ ಪುಸ್ತಕಗಳಿಗೆ ಬಹುಮಾನಕೊಡುವಬಗ್ಗೆ ಪುಸ್ತಕಗಳನ್ನು ಆರಿಸಲು ಮದ್ರಾಸ್ ಸರಕಾರವು ಕರ್ನಾಟಕ ಸೇವಾಸಂಘಕ್ಕೆ ಅಧಿಕಾರಕೊಟ್ಟಿದೆ ಕಳೆದ ಕಾಣಿಸಿದ ವಿಷಯಗಳ ಪುಸ್ತಕಗಳಲ್ಲಿ ಯೋಗ್ಯವೆನಿಸಿದವುಗಳಿಗೆ ತಲಾ ಒಂದಕ್ಕೆ ೩೫೦ ರೂ ಬಹುಮಾನಕೊಡಲಾಗುವುದು. ಪುಸ್ತಕಗಳು:— (1) ಪದ್ಯ—ಕಾವ್ಯ (2) ಕಲೆ ಪ್ರಯಾಣ ಭೂಗೋಲ (3) ಕಿರುಗತೆ, ಕಾದಂಬರಿ ಹಾಗೂ ನಾಟಕ (4) ಇತಿಹಾಸ, ಪುರಾತನ ಸಾಹಿತ್ಯ, ಭಾಷಾಪರಿಶೋಧನೆ, (5) ಭೌತಿಕ ಶಾಸ್ತ್ರ ಹಾಗೂ ರಸಾಯನ ಶಾಸ್ತ್ರ (6) ಅರ್ಥ ಶಾಸ್ತ್ರ, ರಾಜನೀತಿ, ಸಮಾಜ ಶಾಸ್ತ್ರ (7) ಗಣಿತ ಹಾಗೂ ಇಂಜಿನಿಯರಿಂಗ್ [8] ವೈದ್ಯಕೀಯ, ಪ್ರಕೃತಿ ಶಾಸ್ತ್ರ [9] ಶಿಕ್ಷಣ ಸಾಹಿತ್ಯ, ಶಿಕ್ಷಣಕ್ರಮ [10] ವಾಸನಶಾಸ್ತ್ರ, ವೇದಾಂತ ವೈದ್ಯಕೀಯ ಇತ್ಯಾದಿ ಪುಸ್ತಕಗಳನ್ನು ಆರಿಸಿಕೊಳ್ಳಲಾಗುವುದು. 1943ರಲ್ಲಿ ಅಥವಾನಂತರ ಪ್ರಕಟವಾದ ಪುಸ್ತಕಗಳಿಗೆ ಮಾತ್ರ ಬಹುಮಾನ ಕೊಡಲಾಗುವುದು. ಸ್ಪರ್ಧೆಗಾಗಿ ಪುಸ್ತಕಗಳನ್ನು ಕಳುಹಿಸುವವರು 1948ನೇ ಆಗಸ್ಟ್ 20ನೇ ತಾರೀಖಿನೊಳಗೆ ಕ್ರತಿಯೊಂದು ಪುಸ್ತಕದ ಆರು ಪ್ರತಿಗಳನ್ನು ಕಾರ್ಯದರ್ಶಿ ಕರ್ನಾಟಕ ಸೇವಾಸಂಘ 16 ವೀರಸ್ವಾಮಿ ಪಿಳ್ಳೈ ಸ್ಟ್ರೀಟ್ ಎಗ್ಮೂರ್ ಮದ್ರಾಸ್ 8 ಇವರಿಗೆ ಕಳುಹಿಸಬೇಕು.

ಮಂಗಳೂರು

ಅ. ಕ. ವಿಕೇಂದ್ರೀಕರಣ ಸಂಘದ—

ಕಾರ್ಯಕಾರಿ ಸಮಿತಿಯ ಸಭೆಯೊಂದು ತಾ. 8-8-48ನೇ ಆದಿತ್ಯವಾರ ಅಪರಾಹ್ನ ಗಂಟೆ 3ಕ್ಕೆ ಸಂಘದ ಮಂಗಳೂರು ಕಾರ್ಯಲಯದಲ್ಲಿ (ಬೆಸೆಂಟ್ ಮಂದಿರ, ಕೊಡಿಯಾಲ ಬೈಲು) ರಾಷ್ಟ್ರ ರಚನಾಸಭೆಯು ಭಾಷಾವಾರು ಪ್ರಾಂತ್ಯ ರಚನಾಸಮಿತಿಗೆ ಕಳುಹಿಸಲಿರುವ ಮನವಿಯನ್ನು ಪರಿಶೀಲಿಸುವ ಬಗ್ಗೆ ಕೂಡಲಿದೆ ಎಂದು ಗೌ। ಕಾ। ಯರ್ಸ್. ನರಸಪ್ಪಯ್ಯನವರು ತಿಳಿಸುತ್ತಾರೆ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನೆರವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಸಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky aBnk Ltd.
Moolky, S. K.

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. I. A. No. 697/48
O. S. No. 149/44

ವಾದಿ. ವಾಸುದೇವ ಲಕ್ಷ್ಮಣಕಿಣ್ಣಿ. ಇವನ ಜನರಲ್ ಪವರ್ ಆಫ್ ಎಟರ್ನಿ ಹೋಲ್ಡರ ದೇವಣ್ಣ ಯಾನೆ ಸುಬ್ರಾಯ ಪೈ, ನರಸಿಂಹ ಪೈಗಳ ಮಗ ಕುಂದಾಪುರ ಕಸಬಾ.

2ನೆ ಪ್ರ. ವಾಮನ ಮೆಸ್ತ...ರಾಮ ಮೆಸ್ತ ರ ಮಗ.

5ನೆ ಪ್ರ. ವಾಮನರಾವ್, ನಗರ ಗೋವಿಂದಪ್ಪನವರ ಮಗ.

7ನೆ ಪ್ರ. ಭವಾನಿ ಯಾನೆ ಲಕ್ಷ್ಮಿಬಾಯಿ, ಪಟ್ಟಣ ಸೇರ್ ನರಸಿಂಹ ಶ್ಯಾನಭಾಗರ ಹೆಂಡತಿ ಕುಂದಾಪುರ ಕಸಬಾ ನಿವಾಸಿಕರು.

ಸದ್ರಿ ಪ್ರತಿವಾದಿಗಳಿಗೆ ತಿಳುಹಿಸುವದೇನಂದರೆ,

ಸದ್ರಿ ದಿಕ್ರಿಬಾಬ್ತು ಎಸ್ಟ್ರನ್ಯಾದರೂ ಹಣವು ವಸೂಲಾಗದಿರುವದರಿಂದ ಫೈನಲ್ ಡಿಕ್ರಿ ಕೊಡಿಸಬೇಕೆಂತ ವಾದಿಯು ಕೊಟ್ಟ ಮೇಲ್ಕಂಡ ಅರ್ಜಿಯನ್ನು ತಾ 13-8-1948ಕ್ಕೆ ತನಕಿಗೆ ಇಟ್ಟಿರುವದರಿಂದ ಆಕಡತಕ್ಕು ನಿಮ್ಮ ಆಕ್ಷೇಪ ವಿದ್ದರೆ ನೀವು ಸ್ವತಹಾ ಯಾ ವಕೀಲರ ಮುಕಾಂತರ ಕೋರ್ಟಿಗೆ ಜಾಪೀರುಮಾಡ ಬೇಕಾಗಿ ಈ ಮೂಲಕ ತಿಳುಹಿಸಿಯದೆ.

M. M. Ural
Advocate for Plff.
ತಾ 1—8—1948 Coondapoor

ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ, ಮೈಸೂರು.

ಪುಸ್ತಕ ಪ್ರಪಂಚ

ಮಾಸ ಪತ್ರಿಕೆ

ಕ್ರೌನ್ ಅಷ್ಟದಳ ೬೪ ಪುಟ.

ವಾರ್ಷಿಕ ಚಂದಾ ರೂ. ೪-೦-೦ ಬಿಡಿಪ್ರತಿ ೦-೬-೦

ಪ್ರತಿ ತಿಂಗಳೂ ಪುಸ್ತಕ ಪ್ರಪಂಚ ೬೪ ಪುಟದ ಸುಂದರ ಪುಸ್ತಕವಾಗಿ ಪ್ರಕಟವಾಗುತ್ತದೆ. ಸುರಿತ ಬರಹಗಾರರಿಂದ ಪ್ರಪಂಚದ ಅನೇಕ ಭಾಷೆಗಳಲ್ಲಿರುವ ಉತ್ತಮ ಗ್ರಂಥಗಳ ಮತ್ತು ಲೇಖನಗಳ ಸಾರವಷ್ಟಾದ ಭಾಗಗಳೂ, ಕನ್ನಡ ಗ್ರಂಥಗಳ ವಿಮರ್ಶೆಗಳೂ, ಉತ್ತಮ ದರ್ಜೆಯ ಲಲಿತ ಪ್ರಬಂಧ, ಪುಟ್ಟ ಕತೆ, ಏಕಾಂಕ ನಾಟಕ, ಕವನ ಮುಂತಾಶುವುಗಳೂ, ಸುಂದರ ಚಿತ್ರಗಳೊಡನೆ ಈ ಪತ್ರಿಕೆಯಲ್ಲಿ ಪ್ರಕಟವಾಗುವುವು. ಇದು ವಾಚನಾಲಯಗಳಿಗೆ, ಓದುಗರಿಗೆ, ಮತ್ತು ಪುಸ್ತಕ ಭಂಡಾರಗಳಿಗೆ ಕೈಪಿಡಿಯಂತಿದೆ. ವಾರ್ಷಿಕ ಚಂದಾ ಕೇವಲ ನಾಲ್ಕು ರೂಪಾಯಿ. ಚಂದಾದಾರರಾಗಲು ಇಚ್ಛವುಳ್ಳವರು ದಯವಿಟ್ಟು ತಮ್ಮ ಚಂದಾ ಮೊಬಲಗನ್ನು ಈ ಕೆಳಿನ ವಿಳಾಸಕ್ಕೆ ಕಳುಹಿಸಬೇಕಾಗಿ ಕೋರಿದೆ.

ವಿಳಾಸ:— ಚೀಫ್ ಎಕ್ಸೆಕ್ಯುಟಿವ್ ಆಫೀಸರ್,
ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ,
ಜಿಲ್ಲಾ ಬೋರ್ಡು ಕಟ್ಟಡ, ಮೈಸೂರು.

ಸಂಸ್ಥಾನದ ಎಲ್ಲ ಮಿಡ್ಲ್ ಮತ್ತು ಹೈಸ್ಕೂಲುಗಳ ಪುಸ್ತಕ ಭಂಡಾರ ಮತ್ತು ವಾಚನಾಲಯಗಳು 'ಪುಸ್ತಕ ಪ್ರಪಂಚ'ಕ್ಕೆ ಚಂದಾದಾರರಾಗಬೇಕೆಂದು ವಿದ್ಯಾ ಇಲಾಖೆಯ ರೈರೆಕ್ಟರವರ ನೋಟಿಫಿಕೇಷನ್ ನಂ. ೧೧೯೮-೩೫ (೧೯೪೭-೪೮) ತಾರೀಖು ೫-೯-೪೭ರ ಪ್ರಕಾರ ಆಜ್ಞೆಯಾಗಿದೆ. ಆದ್ದರಿಂದ ಆಯಾ ಸಂಸ್ಥೆಯ ಮುಖ್ಯಾಧಿಕಾರಿಗಳು ಬೇಗನೆ ಚಂದಾ ಹಣ ಕಳುಹಿಸಿ ಕೊಡಲು ಕೋರಿಕೆ.

ಗಾಂಧೀನಿಧನದಿಂದ ಇಂದಿಗೆ ಆರು ತಿಂಗಳು ಆಗುತ್ತವೆ. ಜಗತ್ತಿನ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಬಗೆಯ ಗಾಂಧೀ ಸ್ಮಾರಕಗಳು ಏರ್ಪಡಿಸಲ್ಪಡುತ್ತಿವೆ. ಈ ಸಂಭ್ರಮವೂ ಒಂದು ಚಿಕ್ಕ ಆವರೆ ಜೀವಂತ ಸ್ಮಾರಕವಾಗುವಂತಾಗಲೆಂಬ ಆತುರದಿಂದ ಮಹಾಜನರ ಆನಗಾಹನೆ ಮತ್ತು ಅಭಿವ್ಯಯಕ್ಕಾಗಿ ಈ ಕೆಳಗಿನ ಮಾದರಿ ಘಟನೆ ಮತ್ತು ನಿಬಂಧನೆಗಳನ್ನು ಸ್ವಕ ಟಿಸಲಾಗಿದೆ. ಈ ಕುರಿತು ಅಸಕ್ತಿ ಇರುವವರು ನನ್ನೊಡನೆ ಪತ್ರವ್ಯವಹಾರ ಇತ್ಯಾದಿ ಬೆಳೆಸಬಹುದು.

ತಾ.30-7-43, ಹಿ. ರಾಮರಾಯವಮ್ಲು
ಪುಕ್ಸಾರ ವ್ಯವಸ್ಥಾಪಕ.

1 ಉದ್ದೇಶ

ಸತ್ಯ ಮತ್ತು ಅಹಿಂಸಾ ತತ್ವಗಳ ತಳಹದಿಯ ಮೇಲೆ ಸಾರ್ವಜನಿಕ ಜೀವನದ ಪುನ್ ರೂಪಿಸುವುದಕ್ಕಾಗಿ ಮಹಾತ್ಮಾ ಗಾಂಧಿಯವರು ದೇಶದ ಮುಂದಿರಿಸಿದ ವಿಧಾಯಕ ಕಾರ್ಯಕ್ರಮವನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಅತುರವಹುವ ಕೆಲಸಗಾರರ ಸಂಘಟಿತ ಸಂಸ್ಥೆಯಾಗಿದುದಿದು ಸ್ವಜಾಸೇವೆ ಮಾಡುವುದು ಈ ಲೋಕ ಸೇವಾಸಂಘದ ಉದ್ದೇಶ.

2 ಕಾರ್ಯಕ್ಷೇತ್ರ

ಈ ಸಂಘದ ಕಾರ್ಯಕ್ಷೇತ್ರವು ಪ್ರಕೃತ ದಕ್ಷಿಣಕನ್ನಡ ಜಿಲ್ಲೆ. ಇದರ ಮುಖ್ಯ ಕಚೇರಿ ಮಂಗಳೂರು.

3 ಸದಸ್ಯತ್ವ

(೧) ಸಂಘದ ಉದ್ದೇಶ ಮತ್ತು ನಿಬಂಧನೆಗಳನ್ನು ಒಪ್ಪಿ ಕೆಲಸ ಮಾಡಲಿಚ್ಛಿಸುವ ಹಾಗೂ ಕೈಯಿಂದ ನೂಲುವುದು, ಸತತ ಖಾದೀಧಾರಣೆ ಅಸ್ಪೃಶ್ಯತಾ ನಿವಾರಣೆ ಜಾತಿಮತಗಳೊಳಗೆ ಸೌಹಾರ್ದ ಸಾಧನೆ, ಮಾದ್ಯಮಾದಕದ್ರವ್ಯತ್ಯಾಗ ಇತ್ಯಾದಿ ಕಾರ್ಯಕ್ರಮಗಳನ್ನು ಸ್ವಂತ ಜೀವನದಲ್ಲಿ ಆಚರಿಸುವ ಕೆಲಸಗಾರರು ಈ ಸಂಘದ ಸದಸ್ಯತನಕ್ಕೆ ಅರ್ಹರು. ನೂಲುವ ಹಾಗೂ ಸತತ ಖಾದೀಧಾರಣೆಯ ರೂಢಿ ಇಟ್ಟುಕೊಂಡಿರುವವರ ಸಂಖ್ಯೆ ಈಗ ಸಾಕಷ್ಟಿಲ್ಲವೆಂಬುದರಿಂದ ಸದಸ್ಯತನಕ್ಕೆ ಅರ್ಜಿ ಮಾಡಿದಂದಿನಿಂದ ಆರು ತಿಂಗಳಾಗುವುದರೊಳಗೆ ಈ ರೂಢಿಯನ್ನು ಇಟ್ಟುಕೊಳ್ಳುವುದಾಗಿ ವಾಗ್ದಾನಮಾಡುವವರನ್ನು ಸದಸ್ಯರನ್ನಾಗಿ ಸೇರಿಸಿಕೊಳ್ಳಲಾಗುವುದು. ಆ ವಧಿಯ ಅಂತ್ಯದೊಳಗೆ ಇದನ್ನು ಪಾಲಿಸದಿದ್ದರೆ ಇಂಥವರ ಸದಸ್ಯತನವು ತಾನಾಗಿ ರದ್ದಾಗುವುದು.

(೨) ಸಂಘದ ಸದಸ್ಯರು ವಿಧಾಯಕ ಕಾರ್ಯಕ್ರಮಕ್ಕೇನೆ ಪೂರ್ಣಬಿಡು ಸಮಯವನ್ನು ಕೊಡುವುದು ಅಗತ್ಯವೆಂಬುದರಿಂದ ಇವರು ಇನ್ನಾವ ರಾಜಕೀಯ ಅಥವ ಜಾತೀಯ ಸಂಸ್ಥೆಯ ಸದಸ್ಯರಾಗಕೂಡದು. ಕಾಂಗ್ರೆಸ್ ಸಂಸ್ಥೆಯ ಮೇಲಿನ ಆದರವನ್ನು ವ್ಯಕ್ತಪಡಿಸುವುದಕ್ಕಾಗಿ ಇದರ ಪ್ರಾಥಮಿಕ ಸದಸ್ಯರಾಗಿ ಸೇರಲು ಮಾತ್ರ ಅಡ್ಡಿ ಇಲ್ಲ. ಆದರೆ ಗ್ರಾಮ ಕಾಂಗ್ರೆಸ್ ಪಂಚಾಯತುಗಳ ಮೊದಲ್ಗೊಂಡು ಮೇಲಿನ ಯಾವ ಕಮಿಟಿಯ ಸದಸ್ಯತನದ ಜವಾಬ್ದಾರಿಯನ್ನೂ ಈ ಸಂಘದ ಸದಸ್ಯರು ವಹಿಸಿಕೊಳ್ಳಕೂಡದು. ಅಂತೆಯೇ ಕೇಂದ್ರ ಮತ್ತು ಪ್ರಾಂತಿಕ ಶಾಸನ ಸಭೆಗಳ, ಜಿಲ್ಲಾ ಬೋರ್ಡು ಮತ್ತು ಮುನಿಸಿಪಾಲಿಟಿಗಳ ಸದಸ್ಯರಾಗಲಿಕ್ಕೂ ಕೂಡದು.

(೩) ಮೇಲಿನ ಶರ್ತಗಳನ್ನು ಪಾಲಿಸಿ ಸದಸ್ಯರಾಗಲು ಬಯಸುವವರು ಖರೀದಿಸ್ವ ದಲ್ಲಿ ಕಾಣಿಸಿದ ಫಾರ್ಮಿನಲ್ಲಿ ಅರ್ಜಿಬರೆದು ವ್ಯವಸ್ಥಾಪಕರಿಗೆ ಕಳುಹಿಸತಕ್ಕದ್ದು. ಇವರನ್ನು ಸದಸ್ಯರಾಗಿ ಸೇರಿಸಿಕೊಂಡಲ್ಲಿ ಇದನ್ನು ತಿಳಿಸುವ ಸದಸ್ಯತನದ ಕಾರ್ಡನ್ನು ಕಳುಹಿಸಲಾಗುವುದು ಮತ್ತು ಇದೇ ಸದಸ್ಯತನದ ದಾಖಲೆಯಾಗತಕ್ಕದ್ದು.

4. ಸೇವಾಪಥಕ

ನಿರ್ದಿಷ್ಟ ಕಾರ್ಯಕ್ಷೇತ್ರದಲ್ಲಿ ಕೆಲಸ ಮಾಡುವ ಸದಸ್ಯರು ಐದು ಅಥವಾಹೆಚ್ಚಿಗೆ ಮಂದಿ ಕೂಡಿ ಒಂದು ಸೇವಾಪಥಕವನ್ನು ಏರ್ಪಡಿಸಿಕೊಳ್ಳಬಹುದು. ಇವುಗಳ ಕಾರ್ಯಕ್ಷೇತ್ರಗಳು ಈ ಕೆಳಗಿನಂತೆ ಇರತಕ್ಕದ್ದು. ಒಂದೇ ಕಾರ್ಯಕ್ಷೇತ್ರದಲ್ಲಿ ಒಂದಕ್ಕಿಂತ ಹೆಚ್ಚು ಪಥಕಗಳಿರಕೂಡದೆಂಬ ನಿಯಮವು ಈ ವಿಷಯಕ್ಕೆ ಅನ್ವಯಿಸುವುದಿಲ್ಲ. ಸ್ತ್ರೀಸದಸ್ಯರು ಸಾಮಾನ್ಯ ಪಥಕಗಳಲ್ಲಿ ಸೇರಲು ಅಡ್ಡಿ ಇಲ್ಲ.

(೬) ಪಥಕ ವಿಭಜನೆ. ವಿಧಾನಿಸಬಲ್ಲ ಕಾರ್ಯಕ್ಷೇತ್ರಗಳಲ್ಲಿ ಸಮೂಹಪಥಕಗಳನ್ನೇರ್ಪಡಿಸಿದಲ್ಲಿ ಮತ್ತೆ ಜೇಕಾದಾಗ ಅವನ್ನು ವಿಧಾನಿಸಲು ಅಪ್ಪೇಪವಿಲ್ಲ.

(೮) ಪಥಕ ನಾಯಕ. ಪ್ರತಿಯೊಂದು ಪಥಕದವರು ತಮ್ಮ ಸದಸ್ಯರ ಬಹುಮತದ ಅಭಿಪ್ರಾಯದಂತೆ ತಮ್ಮ ಸದಸ್ಯರೊಳಗಿಂದ ಒಬ್ಬ ಪಥಕನಾಯಕರನ್ನು ಆರಿಸಿಕೊಳ್ಳಬೇಕು. ಈ ಘಟನೆಯಲ್ಲಿ ಕಾಣಿಸಿದ ನಿರ್ದಿಷ್ಟ ಅವಧಿಯ ತನಕ ಈ ನಾಯಕರ ಆಜ್ಞೆಗೆ ವಿಧೇಯರಾಗಿ ಪ್ರತಿಯೊಬ್ಬ ಸದಸ್ಯನೂ ಕೆಲಸ ಮಾಡದಕ್ಕದ್ದು.

5 ನಾಯಕದಳ (ಪ್ರಾದೇಶಿಕ)

(೧) ಪ್ರತಿಯೊಂದು ರೆವೆನ್ಯೂ ಸರ್ಕಲ್ಲಿನಲ್ಲಿಯ ಅಥವಾ ಮುನಿಸಿಪಲ್ ನಗರದಲ್ಲಿಯ ಪಥಕ ನಾಯಕರು ಸೇರಿ ಒಂದೊಂದು ನಾಯಕ ದಳ ಏರ್ಪಡಿಸಿಕೊಳ್ಳಬಹುದು.

(೨) ದಳನಾಯಕ ಮತ್ತು ದಳಪತಿ. ಪ್ರತಿಯೊಂದು ನಾಯಕ ದಳಕ್ಕೆ ಒಬ್ಬ ದಳನಾಯಕ ಹಾಗೂ ಒಂದು ರೆವೆನ್ಯೂ ತಾಲೂಕಿನಲ್ಲಿಯ ಎಲ್ಲಾ ನಾಯಕ ದಳಗಳಿಗೆ ಒಬ್ಬ ದಳಪತಿ ಇರತಕ್ಕದ್ದು.

(೩) ದಳನಾಯಕ ಮತ್ತು ದಳಪತಿ ಇವರನ್ನು ಅವರವರ ಕಾರ್ಯಕ್ಷೇತ್ರದಲ್ಲಿಯ ಪಥಕ ನಾಯಕರು ಬಹುಮತದಿಂದ ಆಲ್ಲಿಯ ಸದಸ್ಯರೊಳಗಿಂದ ಆರಿಸತಕ್ಕದ್ದು.

6 ವಿಶಿಷ್ಟ ನಾಯಕದಳ

ವಿದ್ಯಾರ್ಥಿಗಳ, ಮಜೂರರ ಮತ್ತು ಸ್ತ್ರೀಯರ, ಪಥಕ ನಾಯಕರು ತಮ್ಮ ತ

ದ. ಕ. ಜಿಲ್ಲಾ ಲೋಕ ಸೇವಾ ಸಂಘ, ಮಂಗಳೂರು

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹಾರ್ಲಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ಪ್ರಸಿದ್ಧವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಕಾಸ್ಮೋಪ್ಲಿರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಂಪನಿಯಿಂದ ತಯಾರಿಸಲ್ಪಟ್ಟಿದೆ. ವಿಷಮಜ್ವರ, ಪಿತ್ತಜ್ವರ, ನಿರ್ಜೀವಿಸಿ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೆಯಿಲ್ಲ. ಮೂತ್ರಕೋಶ, ಬಸುಮೂತ್ರ-ನೀರಮೂತ್ರ, ಆನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್ಶಾಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೊರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮಾಯ್ಟೆಸ ಆತ್ಯವಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರ/ ನೀರದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ-ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ತಲ್ಲುನೋವು, ಮಳ್ಳಳಹೊಟ್ಟೆನೋವು, ಕಿವಿಗಳ ಉಸಬ್ಬವ ಬೆಂಗಸರ ಮುಟ್ಟಿನಗುವ ಕಾಲದ ಆಕ್ರಮಾಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗುವದು. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕನ್ನಡ್ತಾ— ಸೀಸೆ 1ಕ್ಕೆ ರೂ.3-8-0 ವಿ. ಪಿ. ಖರ್ಚು ಸಹಿತ ರೂ. 42-0-0. ಹೆಡ್ಡಪರ್ ಬಾಟ್ಲಿ ಸೀಸೆಗೆ ರೂ. 5-0-0 ವಿ. ಪಿ. ಖರ್ಚು ಡಜನ್ ಸೀಸೆಗಳಿಗೆ ರೂ. 60-0-0 ವಿ. ಪಿ. ಖರ್ಚು. ವಾನಿಂಗ್ ಟಿಲ್ಲಿ ಅಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18. ವಿ.ಪಿ.ಖರ್ಚು.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಚೀದಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ನಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

ವಿಳಾಸ—**ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ.**
ದಾಹನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I. Rly.

ಮ್ಮ ವರ್ಗದ ನಾಯಕತನಲ್ಲಿ ವಿಸರ್ಜಿಸಬಹುದು. ಇದರ ಕಾರ್ಯಕ್ಷೇತ್ರ ಇಡೀ ಜಿಲ್ಲೆ.

(೧) ಈ ನಾಯಕ ದಳಕ್ಕೆ ಒಬ್ಬ ದಳಪತಿ ಇರತಕ್ಕದ್ದು. ಇವರನ್ನು ಸಂಬಂಧಪಟ್ಟ ವರ್ಗದ ಪಥಕ ನಾಯಕರು ಬಹುಮತದಿಂದ ತಮ್ಮ ಪಥಗಳ ಸದಸ್ಯರಿಂದ ಆರಿಸತಕ್ಕದ್ದು.

(೨) ವಿಶಿಷ್ಟ ಪಥಗಳು ಮತ್ತು ಇತರ ಅಧಿಕಾರಿಗಳ ನ್ಯಾಯೇತರ ದಳಗಳ ವಿಷಯದಲ್ಲಿ ಹೀಗೇ ಆಗಬೇಕೆಂದು ನಿರ್ಬಂಧವಿಲ್ಲ.

7 ಲೋಕ ಸೇವಕ

ಈ ಲೋಕ ಸೇವಾ ಸಂಘದ ಜಿಲ್ಲೆಯ ಮುಖ್ಯ ಅಧಿಕಾರಿಯನ್ನು ಲೋಕ ಸೇವಕನೆಂದು ಕರೆಯಲಾಗುವುದು.

ಜಿಲ್ಲೆಯಲ್ಲಿಯ ಪ್ರಾದೇಶಿಕ ಹಾಗೂ ವಿಶಿಷ್ಟ ಎಲ್ಲಾ ಸೇವಾ ಪಥಕಗಳ ನಾಯಕರು ಬಹುಮತದಿಂದ ಈ ಸಂಘದ ಸದಸ್ಯರಿಗಳಿಂದ ಆರಿಸತಕ್ಕದ್ದು.

ಲೋಕ ಸೇವಾ ಸಂಘದ ಎಲ್ಲಾ ಸದಸ್ಯರೂ ಅಧಿಕಾರಿಗಳೂ ಇವರ ಆಜ್ಞೆಗಳನ್ನು ಪಾಲಿಸಲು ಬದ್ಧರು.

8 ಕಾರ್ಯಕಾರೀ ಮಂಡಲ

(೧) ಆರು ತಾಲೂಕುಗಳ ಪ್ರಾದೇಶಿಕ ದಳಪತಿಗಳು, ಮೂರು ವಿಶಿಷ್ಟ ವರ್ಗ ಪಥಕಗಳ ದಳಪತಿಗಳು ಮತ್ತು ಲೋಕ ಸೇವಕ ಹೀಗೆ ಹತ್ತು ಮಂದಿ ಈ ಸಂಘದ ಕಾರ್ಯಕಾರೀ ಮಂಡಲವಾಗುವದು.

(೨) ಲೋಕಸೇವಕರು ಈ ಕಾರ್ಯಕಾರೀ ಮಂಡಲದ ಅಧ್ಯಕ್ಷರು

(೩) ಯಾವುದೊಂದು ಪ್ರಶ್ನೆಯ ಕುರಿತು ಮಂಡಲದ ಬಹುಮತದ ಅಭಿಪ್ರಾಯವು ಲೋಕಸೇವಕನ ಅಭಿಪ್ರಾಯದಿಂದ ಭಿನ್ನವಿದ್ದಲ್ಲಿ ಲೋಕಸೇವಕನ ಅಭಿಪ್ರಾಯವೇ ಕೊನೆಯ ತೀರ್ಮಾನವಾಗಿ ಅದನ್ನೇ ಮಂಡಲವು ತನ್ನ ತೀರ್ಮಾನವೆಂದು ಸ್ವೀಕರಿಸತಕ್ಕದ್ದು.

9 ಸೇವಾಸಂಘದ ವರ್ಷ

ಒಂದು ವರ್ಷದ ಅಕ್ಟೋಬರ ತಾರೀಕು 2ರಿಂದ ಬರುವ ವರ್ಷದ ಅಕ್ಟೋಬರ ತಿಂಗಳು 1ರ ವರೆಗೆ ಈ ಸಂಘದ ಒಂದು ವರ್ಷವೆಂದು ತಿಳಿಯತಕ್ಕದ್ದು.

10 ಅಧಿಕಾರಿಗಳ ಅವಧಿ ಮತ್ತು ಚುನಾವಣೆಗಳು

ಪಥಕ ನಾಯಕರು, ದಳನಾಯಕರು, ದಳಪತಿಗಳು ಹಾಗೂ ಲೋಕಸೇವಕ. ಇವರ ಅಧಿಕಾರದ ಅವಧಿಯು ಒಂದು ವರ್ಷ. ಮುಂದಿನ ವರ್ಷದ ಬಗ್ಗೆ ನಡೆಸಲ್ಪಡುವ ಚುನಾವಣೆಗಳಲ್ಲಿ ಪುನಃ ಅದೇ ಸದಸ್ಯರನ್ನು ಆರಿಸಲು ಅಡ್ಡಿಯಿಲ್ಲ

ಪ್ರತಿ ವರ್ಷ ಸಪ್ಟಂಬರ ತಿಂಗಳಲ್ಲಿ ತಾ 15ರೊಳಗೆ ಚುನಾವಣೆಗಳನ್ನು ಮುಗಿಸತಕ್ಕದ್ದು.

ಕೇಸರಿಂದ ನಿವೃತ್ತರಾಗುವ ಕಾರ್ಯಕಾರೀ ಮಂಡಲವು ಈ ಚುನಾವಣೆಗಳ ಯೋಗ್ಯ ವಿಚಾರಣೆ ಮಾಡತಕ್ಕದ್ದು.

ಪ್ರತಿ ವರ್ಷ ಅಕ್ಟೋಬರ ತಾರೀಕು 2ನೇ ದಿನ ಹೊಸತಾಗಿ ಚುನಾಯಿತರಾದ ಅಧಿಕಾರಿಗಳು ಕೆಲಸ ವಹಿಸಿಕೊಳ್ಳತಕ್ಕದ್ದು. ಅಲ್ಲಿನ ತನಕ ಹಳೆಯ ಅಧಿಕಾರಿಗಳೇ ಕಾರ್ಯನಿರ್ವಹಿಸತಕ್ಕದ್ದು.

11 ವಾರ್ಷಿಕ ಹಾಗೂ ವಿಶಿಷ್ಟ ಅಧಿವೇಶನಗಳು

ಪ್ರತಿವರ್ಷ ಸಾಮಾನ್ಯವಾಗಿ ಸಪ್ಟಂಬರ ತಾ. 2ರಿಂದ ಅಕ್ಟೋಬರ ತಾ. 1ರ ಒಳಗಿನ ದಿನಗಳಲ್ಲಿ ಲೋಕ ಸೇವಾ ಸಂಘದ ಎಲ್ಲ ಸದಸ್ಯರ ವಾರ್ಷಿಕಅಧಿವೇಶನಗಳನ್ನು ಜರಗಿಸಬಹುದು.

ಆಗ ಮುಂದಿನ ವರ್ಷಕ್ಕೆ ಚುನಾವಣೆ ಹೊಂದಿದ ಲೋಕ ಸೇವಕರೇ ಅಧಿವೇಶನದ ಅಧ್ಯಕ್ಷತೆ ವಹಿಸತಕ್ಕದ್ದು.

ಜಿಲ್ಲಾ ವಿಶಿಷ್ಟ ಅಧಿವೇಶನ ಪ್ರಾದೇಶಿಕ ಅಧಿವೇಶನ ಉಪಘಾ ವಿಶಿಷ್ಟ ಪಥಕಗಳ ಸದಸ್ಯರ ಅಧಿವೇಶ ಇತ್ಯಾದಿಗಳನ್ನು ಬೇಕಾದಾಗ ಜರಗಿಸಬಹುದು.

ಇವೆಲ್ಲವುಗಳ ಬಗ್ಗೆ ಕಾರ್ಯಕಾರೀ ಮಂಡಲದವರು ಯೋಗ್ಯ ನಿಯಮಗಳನ್ನು ಮಾಡತಕ್ಕದ್ದು.

12 ಹಣ ಸಂಗ್ರಹ ಮತ್ತು ವಿನಿಯೋಗ

(೧) ಲೋಕ ಸೇವಾ ಸಂಘದ ಸದಸ್ಯರಿಂದ ಸದಸ್ಯತನದ ಬಗ್ಗೆ ಯಾವ ವಂತಿಗೆಯನ್ನೂ ವಸೂಲು ಮಾಡಲಾಗುವುದಿಲ್ಲ.

(೨) ಸಂಘದ ಕಾರ್ಯಕ್ಕೆ ವ್ಯಕ್ತಿಗಳಾಗಲಿ, ಸಂಸ್ಥೆಗಳಾಗಲಿ, ಸರಕಾರವಾಗಲಿ ಕೊಡಬಹುದಾದ ಸಹಾಯ ಧನವನ್ನು ಸ್ವೀಕರಿಸಲಾಗುತ್ತದೆ.

(೩) ಕಾರ್ಯಕಾರೀ ಮಂಡಲದವರು ಮಂಗಳೂರಲ್ಲಿರುವ ಸದಸ್ಯರೊಳಗಿಂದ ಒಬ್ಬರನ್ನು ಸಂಘದ ಖಜಾನ್ಚಿಯನ್ನಾಗಿ ನೇಮಿಸತಕ್ಕದ್ದು. ಸಂಘಕ್ಕೆ ಕೊಡುವ ಎಲ್ಲ ಹಣಗಳನ್ನು ಖಜಾನ್ಚಿಯವರೇ ಪಡೆದು ಖಾತೆ ಕೊಡತಕ್ಕದ್ದು.

(೪) ಕಾರ್ಯಕಾರೀ ಮಂಡಲವು ಮಂಜೂರು ಮಾಡುವ ವಿಧಾನದಲ್ಲಿ ಈ ಹಣದ ವಿನಿಯೋಗ ಮಾಡತಕ್ಕದ್ದು.

(೫) ಖಜಾನ್ಚಿಯವರು ಹಣ ಸಂಗ್ರಹ ಹಾಗೂ ವಿನಿಯೋಗದ ಲೆಕ್ಕವನ್ನಿಟ್ಟು ವರ್ಷಕ್ಕೊಮ್ಮೆ ಇಂಥ ಲೆಕ್ಕಗಳನ್ನು ಯೋಗ್ಯ ಆಡಿಟರರಿಂದ ಪರಿಶೋಧಿಸಿ ಪ್ರಕಟಿಸತಕ್ಕದ್ದು.

13 ತಾತ್ಕಾಲಿಕ ವಿಸರ್ಜನೆ

ಈ ಲೋಕ ಸೇವಾ ಸಂಘವನ್ನು ರಚಿಸಿ ಕಾರ್ಯಕ್ಕೆ ಹಚ್ಚುವುದಕ್ಕಾಗಿ ಪ್ರಥಮ ವರ್ಷದ ಬಗ್ಗೆ ಇಂದರೆ 1949ನೇ ಇಸ್ವಿ ಅಕ್ಟೋಬರ ತಾ. 2ರ ತನಕ ಈ ಕೆಳಗಿನ ವಿಸರ್ಜನೆ ಇರತಕ್ಕದ್ದು.

(೧) ಸಂಘದ ಲೋಕ ಸೇವಕರ ಕರ್ತವ್ಯಗಳನ್ನು ವ್ಯವಸ್ಥಾಪಕರೇ ವಹಿಸಿಕೊಂಡು ನಿರ್ವಹಿಸತಕ್ಕದ್ದು. ಇವರನ್ನು ವ್ಯವಸ್ಥಾಪಕರೆಂದೇ ಕರೆಯತಕ್ಕದ್ದು.

(೨) ಈ ವರ್ಷದ ಪ್ರಾದೇಶಿಕ ಹಾಗೂ ವಿಶಿಷ್ಟ ದಳಪತಿಗಳನ್ನು ವ್ಯವಸ್ಥಾಪಕರೇ ನೇಮಿಸತಕ್ಕದ್ದು.

(೩) ಹೀಗೆ ರಚಿಸಲ್ಪಡುವ ಸಂಘದ ಕಾರ್ಯಕಾರೀ ಮಂಡಲವು ಸೇವಾ ಪಥಕಗಳನ್ನು ಕಟ್ಟಿ ಅವುಗಳಿಗೆ ಯೋಗ್ಯ ನಾಯಕ ಹಾಗೂ ದಳನಾಯಕರನ್ನು ಆಯಾ ಸಭಾ ಸದಸ್ಯರೊಡನೆ ವಿಚಾರಿಸಿ ನೇಮಿಸತಕ್ಕದ್ದು.

14 ನಿಬಂಧನೆಗಳ ತಿದ್ದುಪಡಿ ಮತ್ತು ಇತರ ನಿಯಮಗಳು

ಈ ಘಟನೆಗಳಲ್ಲಿ ಕಾಣಿಸಿದ ನಿಬಂಧನೆಗಳನ್ನು ಇವುಗಳ ಧ್ಯೇಯ ಮತ್ತು ಭಾವನೆಗಳಿಗೆ ವಿರೋಧವಾಗದಂತೆ ತಿದ್ದುಪಡಿ ಮಾಡುವುದಕ್ಕೆ ಸಂಬಂಧಪಟ್ಟ ಕೆಲಸಗಳ ಬಗ್ಗೆ ನಿಯಮಗಳನ್ನು ಮಾಡಲಿಕ್ಕೂ ಸಂಘದ ಕಾರ್ಯಕಾರೀ ಮಂಡಲಕ್ಕೆ ಅಧಿಕಾರವಿರುತ್ತದೆ.

ಪರಿಶಿಷ್ಟ

ಸದಸ್ಯತನದ ಅರ್ಜಿ ಫಾರ್ಮು

1. ಹೆಸರು. 2. ತಂದೆ ಯಾ ರಕ್ಷಕನ ಹೆಸರು. 3. ವ್ಯವಸಾಯ. 4. ಕಾರ್ಯಕ್ಷೇತ್ರ 5. ವಿಳಾಸ. 6. ನೂಲುವ ಮತ್ತು ಸತತ ಖಾದಿ ಧಾರಣೆಯ ರೂಢಿ ಇದೆಯೊ ಅಥವಾ ಅರು ತಿಂಗಳೊಳಗೆ ಇದನ್ನು ಪಾಲಿಸುವ ವಾಗ್ದಾನವೊ. ಇಷ್ಟು ವಿವರಗಳ ಬಳಿಕ ಲೋಕ ಸೇವಾ ಸಂಘದ ಘಟನೆ ಮತ್ತು ನಿಬಂಧನೆಗಳನ್ನು ನಾನು ತಿಳಿದುಕೊಂಡಿದ್ದೇನೆ. ಅದರಂತೆ ವರ್ತಿಸಲು ಸಿದ್ಧನಿದ್ದೇನೆ. ಸಂಘದ ಸದಸ್ಯನನ್ನಾಗಿ ಸೇರಿಸಿಕೊಳ್ಳಬೇಕಾಗಿ ಕೇಳಿಕೊಳ್ಳುತ್ತೇನೆ ಎಂದು ಅರ್ಜಿದಾರರು ತಿಳಿಸಿ ಸಹಿ ಮಾಡತಕ್ಕದ್ದು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮತಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ!

ಸಿನ್ಮಾ ಸ್ನಾನ, ಊಟ, ಉಪಹಾರ, ವೈತಕ್ಕ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಆಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘ ವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಹುವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧಿಯ ತಯಾರಿಕೆಯ ಅಳತೆಯ ವಿವರಗಳಿಗೆ ಬರುವಷ್ಟು, ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿಯನ್ನ ಸಾಕಾಗುವಷ್ಟು ವಿಶೇಷ ಸಾಮಾನು ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ ಕೊಡಿಯಾಲ್‌ಬೈಲು, ದ.ಕ

ಸ್ಥಾಪಕರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೋಷದ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವಿಕೆ, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ಪರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾನಂತರವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಶ್ರೇಷ್ಠವಾದ ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಕಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಪ್ರಸೂನೆಯ ಔಷಧಿಗಳು ದೊರೆಯುತ್ತವೆ.

— ಎಂ- ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ಪ್ರಸೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾರಿ ಸಂಗ್ರಿ ಬರದಲ್ಲಿ ರೋಗಗಳ್ಳೆ ತಕ್ಕಂತಹ ಔಷಧಿ ರವಾನಿಸಲಾಗುವುದು. (1)ಉಡುಪಿ ವಿಜಯ ಬಿಲ್ಡಿಂಗ್ಸ್:—ನವಭಾರತ ಬುಕ್ ಡಿಪೊ, ಟೋಜಾಯ ವಿಜಯ ಬಿಲ್ಡಿಂಗ್ಸ್:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸಾರಿಜಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ಸ್ ಕೋಸ್ ಎದುರುಗಡೆ, ಪರೇಲ್. (3)ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಹಟುಂಗಾ.

ರೇಶನ್ ಕಾರ್ಡುಗಳು ದೊರೆಯುತ್ತವೆ

ನವಯುಗ ಪ್ರೆಸ್, ಉಡುಪಿ.

ಕೀರ್ತಿಶೇಷ ಕಾರ್ಕಳ ನಾರಾಯಣರಾಯರು

ಮದ್ರಾಸು ನ್ಯೂಗಾರ್ಡಿಯನ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸು ಕಂಪೆನಿಯ ಸೀನಿಯರ್ ಇನ್ಸ್‌ಪೆಕ್ಟರರೂ, ಆಯುರ್ವೇದಿಕ್ ಡಾಕ್ಟರರೂ ಆಗಿದ್ದ ಶ್ರೀ. ಕೆ. ನಾರಾಯಣ ರಾಯರು ಕೆಲವೇದಿನಗಳ ಹೃದಯಾಹಿಲೆಗೆ ತುತ್ತಾಗಿ ತಾ 25-7-48ನೇ ರವಿವಾರ ಅಪರಾಹ್ನ ಸುಮಾರು 6ಕ್ಕೆ ಮಂಗಳೂರಲ್ಲಿ ಪರಂಧಾಮವಾ ಗೈದರೆನ್ನಲು ತುಂಬಾ ವಿಷಾದವೆನಿಸುತ್ತದೆ. ಮೃತರ ಸ್ಮಶಾನ ಯಾತ್ರೆಯು ಅಂದು ರಾತ್ರಿ ಕಾರ್ಕಳದ ರಾಮಸಭೋವರದ ಬಳಿ ಜರಗಿತು.

ಶ್ರೀ. ನಾರಾಯಣರಾಯರು ತಾ 8-1-1899ರಲ್ಲಿ ಜನಿಸಿದ್ದು ಕೇವಲ 50 ವರ್ಷವರ್ಷ ಪ್ರಾಯದಲ್ಲೇ ಆಕಾಲಮರಣ ಪರಿಣಾಮರು. ಆ ನರ ಕಾರ್ಯದಕ್ಷತೆಯು ಉಚ್ಚಮಾನವನ್ನು ಪರಿಸೂಚಿಸಿ ಆಯುಶ್ಯದ ಬೆಲೆಯನ್ನು ಸಹೆದಿತ್ತು. ದಿವಂಗತರು ಆಯುರ್ವೇದ ವೈದ್ಯ ಭಾಗದಲ್ಲಿ ಪ್ರಸಿದ್ಧಿಯನ್ನು ಪಡೆದ ಡಾಕ್ಟರರಾಗಿ ಕಾರ್ಕಳದಲ್ಲಿ ಜನಸಾಮಾನ್ಯರ ಹೃದಯ ಮೂರ್ತಿಯಂತಿದ್ದರು. ಈ ಮಹನೀಯರ ಆಕಸ್ಮಿಕ ವಿಯೋಗವು ಅವರ ಕುಟುಂಬಕ್ಕೆ ಅಪಾರವಾದ ನಷ್ಟವನ್ನುಂಟು ಮಾಡಿದೆ. ಅವರ ಅಗಲಿಕೆಯಿಂದ ಉಂಟಾದ ವಿಷಾದವನ್ನು ಕೊಡುತ್ತಿದ್ದು, ಜಿಲ್ಲೆಯಲ್ಲಿ ಹೆಸರುವಾಸಿಯೂ ಆಗಿದ್ದ ಕುಕ್ಕುಂಸೂರು ಶ್ರೀ ದುರ್ಗಾ ಹಾಯರ್ ಎಲಿಮೆಂಟರಿ ಶಾಲೆ, ಹತ್ತು ಕಾರ್ಯಗಳಲ್ಲಿ ಹೊಸತಾಗಿ ಸ್ಥಾಪಿಸಲ್ಪಟ್ಟ ಬಂದು ಲೋವರ್ ಎಲಿಮೆಂಟರಿಶಾಲೆ ಹೀಗೆ ಎರಡು ಶಾಲೆಗಳು ನಡಿಯುತ್ತಿದ್ದುವು. ಕಳದನರ್ಜ ಸಾವಂಜೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನಕ್ಕೆ ಸಸುತ್ರಗಟ್ಟೆ ರೂಪ್ಯಾ ಪುರ್ವ ನಿಂದ ನವೀನ ರಥಬಂದನ್ನು ಕಟ್ಟಿಸಿ ಅತ ವಿಜೃಂಭಣೆಯಿಂದ ಆರಿಸಿದ್ದಲ್ಲದೆ ತಮ್ಮ ಆಸ್ತಿಯಿಂದ ಸಾರ್ವಜನಿಕ ಉಪಯೋಗವನ್ನು ಕೂಡಾ ಬಿಟ್ಟು ಧರ್ಮಶಾಲಾಯಜಮಾನರೆಂಬ ಕೀರ್ತಿಯನ್ನು ಗಳಿಸಿದ್ದರು. ತಮ್ಮ ಸಮೂಹದ ಜಿಲ್ಲಾ ಸಂಘವಲ್ಲಿಯೂ ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಗಣನೀಯ ಕಾರ್ಯಕರ್ತರಾಗಿದ್ದರು. ಸರಕಾರಿ ಅಧಿಕಾರಿಗಳಿಂದ ಹಿಡಿದು ಶ್ರೀಮಂತರು, ಬಡವರು, ವರ್ಗದವರೆ ಎಲ್ಲಾ ವಿಧದವರಿಗೂ, ಆಚ್ಚುಮೆಚ್ಚಿನ ಗೆಳೆಯರಾಗಿ ಸರ್ವಜನಪ್ರಿಯರಾಗಿದ್ದರು. ಧೈರ್ಯ, ಸಾಹಸ, ಕಾರ್ಯಚಾತುರ್ಯಗಳಿಂದ ಕೈಕೊಂಡ ಕೆಲಸದಲ್ಲಿ ಜಯಶೀಲರಾಗುತ್ತಿದ್ದರು. ಪೃಥ್ವಿ, ಮಧುರಸಂಬಂಧಿಗಳೂ, ಪ್ರಸನ್ನವದನವೂ, ರಾಯರ ಆಪಾಡ್ಯ ಸೊತ್ತುಗಳಾಗಿದ್ದವು. ರಾಯರಿಗೆ ಹೆಂಡ್ತಿ ನಿದ್ಯಾಭ್ಯಾಸವನ್ನು ಹಡೆದ ಮೂವರು ಗಂಡುಮಕ್ಕಳೂ, ಇಬ್ಬರು ಹೆಣ್ಣು ಮಕ್ಕಳೂ ಇರುವರು. ಶ್ರೀ ಭಗವಂತನು ಶೋಕಸಾಗರದಲ್ಲಿ ಮುಳುಗಿರುವ ದಿವಂಗತರ ವಿಧವೆ, ಮಕ್ಕಳು ಮತ್ತು ಬಂಧುವರ್ಗಕ್ಕೆ ಪುನಶ್ಚಾತಿಯನ್ನೂ, ಮೃತರ ಆತ್ಮಕ್ಕೆ ನಿತ್ಯ ಶಾಂತಿಯನ್ನೂ ಆನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ. ಎಂದು ಶ್ರೀ ಕುರ್ಕಾಲು ಗಣಪಯ್ಯ ಶೆಟ್ಟರು ಬರೆಯುತ್ತಾರೆ.

ದಕ್ಷಿಣ ಕನ್ನಡ

ಶಿರ್ವ—ತಾ 27-7-48ರಲ್ಲು ಪಂಚಾಯ್ತ್ ಬೋರ್ಡಿನವರು ಹೊಸತಾಗಿ ತೆರೆದಿರುವ ಲೈಬ್ರೆರಿಯ ಉದ್ಘಾಟನಾ ಸಮಾರಂಭವು ಪಂಚಾಯ್ತ್‌ಬೋರ್ಡು ಆಫೀಸಿನಲ್ಲಿ ಕೆಸ್ಸನ್. ವೈ. ಆರ್. ರಬ್ಬಿ M. B.B.S. ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪಂಚಾಯ್ತ್‌ಬೋರ್ಡ್ ಪ್ರಸಿಡೆಂಟ್ ಶ್ರೀ. ಯಸ್. ಆಣ್ಣಯ್ಯ ಹೆಗ್ಡೇರು ಬೋರ್ಡಿನಿಂದ ಈ ವರೆಗೆ ಆದ ಕಾರ್ಯವನ್ನು ವಿವರಿಸಿದನಂತರ ಸಭಾಧ್ಯಕ್ಷರು ಲೈಬ್ರೆರಿಯ ಅವಶ್ಯಕತೆಯ ಕುರಿತು ಭಾಷಣವಿತ್ತರು. ಉಪಾಹಾರಗಳೊಂದಿಗೆ ಸಭೆಯು ಮುಕ್ತಾಯವಾಯ್ತು.

ದೇವದಿಗ್ಗ ಸುಧಾರಕ ಸಂಘ ಮುಂಬಯಿ—ತಾ 21-7-48ರಲ್ಲು ಮಂಗಳೂರು ದೇವದಿಗ ಸುಧಾರಕ ಸಂಘದ ಅಧ್ಯಕ್ಷ ಶ್ರೀ ಮಣ್ಣಂಜೆ ರಾಮನೇಸ್ತಿಯವರ ಪರ್ಯವಾದ ಅತಿಥಿ ಸತ್ಕಾರ ಕೂಟವು ಸಂಘದ ವರಾರದಲ್ಲಿ ಜರಗಿತು. ಶ್ರೀ ನೇಸ್ತಿಯವರು ತನ್ನ ಭಾಷಣದಲ್ಲಿ ಈ ಸಂಘದ ಚಟುವಟಿಕೆಗಳನ್ನು ಕೊಂಡಾಡಿ ಅಧಿದಲ್ಲೇ ನಂತುಹೋದ ಮಂಗಳೂರು ಕಾರ್ಯಕಲಾಪಗಳನ್ನೂ ತೀಕ್ಷ್ಣದಲ್ಲೇ ಪ್ರಾರಂಭಿಸಲು ಸಭಾ ಘನದ ವಿಸ್ತರಣಾದಿಗಳನ್ನು ನೆರವೇರಿಸುವ ಯೋಜನೆಯನ್ನು ತಿಳಿಸಿದರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P 166/48 O. S. 55/47

ಅಂಡಾಸ್ಸು ಹೆಗ್ಡೆ—ವಾದಿ

ವೆಂಕಟ್ರಮಣ ಹೇರ್ಳೆ ಸಹಾ ಪ್ರತಿವಾದಿರು

2. ಚಂದ್ರಶೇಖರ ಹೇರ್ಳೆ—ಸುಜ್ಯಾಯ ಹೇರ್ಳೆರ ಮಗ ಮೂಡಹಡವು ಗ್ರಾಮ.

ವಾದಿಕಡೆಯಿಂದ ಈ ಮೂಲ್ಕ ತಿಳಿಸುವುದೇನೆಂದ್ರೆ ಸದ್ರಿ ಡಿಕ್ರಿಪ್ರಕಾರ ಬರತಕ್ಕ ಹಣಗಳಿಗೆ ವಾದಿಯು ನೆಪ್ಪಿಸಿ ಆಪ್ಪಜಾರಿಯು ತಾ 17-8-48ಕ್ಕೆ ಆಜ್ಞೆರೆ ತನ್ನಿಗೆ ದಾಖೋಗಾಗಿಯದೆ. ಆ ಕುರಿತು ನಮ್ಮವೇನಾದ್ರೂ ಆಕ್ಷೇಪವಿದ್ರೆ ಸದ್ರಿ ದಿವ್ಸ ಕೋರ್ಟುಮುಂದೆ ಹಗ್ಗ 11 ಗಂಟೆಗೆ ಸ್ವತಹಾ ಪ ವಕೀಲರ ದ್ವಾರಾ ಹಾಜ್ರಾಗಿ ಜಾಹೀರುಮಾಡಿಕೊಳ್ಳ ತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ವಿಕಪಕ್ಷವಾಗಿ ತೀರ್ಮಾನಿಸಲ್ಪಡುವದು ಎಂಬಸಂಗ್ತಿ ವಾದಿಕಡೆಯಿಂದ ಈ ಮೂಲ್ಕ ತಿಳಿಯಪಡಿಸಿದೆ.

G. Sanjiva Rao
Vakil for Petitioner
Kundapur Date 28—7—48

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R E P 214/48 O. S. 149/46

ಆರ್ಜದಾರಳು. ಸೂವಮ್ಮ ಸೆಡ್ತಿ

ಎದ್ರಿ Minin D' Sylva, Son of David alias Bastyam Sylva, Sulkudru of Pandeshwara Village, Udipi Taluk

ಸದ್ರಿ ಎದ್ರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದರೆ

ಡಿಕ್ರಿ ವಿಧಿಯಂತೆ ಡಿಕ್ರಿಯಿಂದ ಕಾಣುವ ಸ್ಥಳ ವನ್ನೆರೆ ಆರ್ಜದಾರಳ ಸ್ವಾಧೀನ ತೆಲಿನ ಕೊಡಿಸಬೇಕೆಂತ ಅರ್ಜಿಸಿ ದಾಕ್ಲುಮಾಡಿದ ಮೇಲಿನ ಆಪ್ಪಜಾರಿ ಮೇಲ್ಕಾಣುವ ಕೋರ್ಟಿನಲ್ಲಿ ತಾರೀಕು 12—8—1948ನೇ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಾಣುವ ಕೋರ್ಟಿನಲ್ಲಿ ತನ್ನಿಗೆ ಯಿಡೋಣಾಗಿದೆ ಎಂಬಸಂಗ್ತಿ ಈ ಮೂಲ್ಕ ತಿಳಿಸೋಣಾಗಿದೆ.

B. S Shetty B. A. B. L.
Vakil for Petitioner
Coondapoor Date 31-7-48

— ಮಕ್ಕಳನ್ನು ಹಡೆಯುವುದು ಸಾಕಾ —

ಅಶಕ್ತ ಸ್ತ್ರೀಯರಿಗೆ **ಬರ್ಧ ಕಂಟ್ರೋಲ್** ರೋಗ ಗೃಹಸ್ಥ ಮತ್ತು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿತೆರಗು, ಪ್ರದರರೋಗ್ಗ ಹೊಲಿಕ್ಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳ ಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸ್ವೇವಿಸಬೇಕು.

ಪಥ್ಯ:—ಹರವೀಜವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಸ್ಟೆ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಳಿ ಫಾರ್ಮಸಿ,—ಹುಬ್ಳಿ, ಗದಗ್ ಬಾಗಲಕೋಟೆ ಧಾರವಾಡ ವಿಜಾಪುರ—ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ್, ಹಾವೇರಿ. ಟ್ಯಾ ೧.

ಗೊನೋರಿಯೊ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯಡಿದ್ದರೆ, ಶರೀರದ ಸುತ್ತ ಕ್ಷಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಚ್ಚುಚ್ಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕಟ್ಟು ಗರ್ಭಾಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಧಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಬಾರ್, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:- ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್, ನಂಜುಡೇಶ್ವರ ಮೂರ್ತಿ ಡಾವಣಗೆರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ

ದೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ.

ಹೆರಿಗೆ ಆಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಆನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕೆಲವೀಳೆಯಲ್ಲಿ ಯಾ ಆದರ ಆಂತೆ ಉಳಿದು ಪ್ರಕೃತಿ ಬರುತ್ತವೆ, ನಂಬೇರುತ್ತವೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತವೆ. ಇದರಿಂದ ಪ್ರಲಾಪಸ್ಸು, ಮೂರ್ಛೆರೋಧ, ಸ್ಪಸನಗಳ ಬೇನೆಸ್ಸು, ನಿಪ್ರಾಣಾಪ್ತ ವಾರಂಕಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ ವೈದ್ಯ, ಡಾಕ್ಟರ, ಸೆರ್ಜನರಿಗೆ ವರಿಗೆ ಕರೆಸಿ ನೂರಾರು ರೂಪ್ಯಾ ಖರ್ಚುಮಾಡಬೇಕಾಗುತ್ತದೆ. ಆ ಮೇಲೂ ದೈವೇಚ್ಛೆ ಎಂದು ಆದೃಷ್ಟ ಬರಬೇಕ್ಲೆ!

ಆದರೆ ಭಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧ ವಾದ 'ಪ್ರಸೂತಾತ್ಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತಿ ಕಲ್ಯಾಣ ವಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸರಕಾರದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಆಯುರ್ವೇದೀಯ ಔಷಧಿಗಳ ಶಾಸ್ತ್ರೀಯ ಮತ್ತು ಆನುಭವಿಕ ಗುಣಧರ್ಮ, ರೋಗಾನುಪಾನ ಪ್ರಮಾಣ, ಕ್ರಯ, ಇತ್ಯಾದಿಯುಕ್ತ 96 ಪುಟಗಳ ಸೂಚೀಪತ್ರ 1ಕ್ಕೆ 0-8-0 9 ಆಣೆಯ ಸ್ಟೆಂಪ್ ಕಳುಹಿಸಿದಲ್ಲಿ 1 ಪ್ರತಿ ಕಳುಹಿಸುವದು

Swadeshi Oushadhi Bhandara, (REGD.)
Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ಸೆನಪಿರಲಿ 15 ನೇ ಅಗೋಸ್ತು

ಅಂದು ಸ್ವಾತಂತ್ರ್ಯ ಸಂಪಾದನೆಯ ಸಂಭ್ರಮ!
ಇಂದು ಪ್ರಥಮ ಸ್ವಾತಂತ್ರ್ಯ ದಿನಾಚರಣೆಯ ವೈಭವ!
ಇದರ ಸಂತೋಷ ಸೂಚನಾರ್ಥವಾಗಿ
ಜನಪ್ರಿಯವಾದ ಕರಿಯರ ಪ್ರಪಂಚದ ಪ್ರಕಟಣೆಗಳ

ಅಗ್ಗದ ಮಾರಾಟ

(ಅಗೋಸ್ತು ತಾ. 1 ರಿಂದ 31ರ ವರೆಗೆ ಮಾತ್ರ)

ಪ್ರತಿ ರೂಪಾಯಿಗೆ ಒಂದಾಣೆಯಂತೆ ಪ್ರತಿಯೊಬ್ಬರಿಗೂ ರಿಯಾಯಿತಿ.

10 ರೂಪಾಯಿಗೆ ಮೇಲ್ಪಟ್ಟು ಪುಸ್ತಕ ಕೊಳ್ಳುವವರಿಗೆ ರೂಪಾಯಿಗೆ 0-2-0 ಯಂತೆ! 25 ರೂಪಾಯಿಗೆ 0 3 0 ಯಂತೆ! 50 ರೂ-ಗೆ 0 4 0 ಯಂತೆ!

ಈ ವರೆಗೆ ಕೊರಿಸದ ಅಳಿಯರಿಗೆ ರಿಯಾಯಿತಿ!

ಪುಸ್ತಕ ಪ್ರಿಯರಿಗೋದು ಸುಸಂಧಿ!

ಸಿಗುವ ಪ್ರಕಟಿಸಿಗಳು

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ಶೆಟ್ಟಿ.	0	3	0
ಸಂವಯ ವಿಠಾಚಿ	(ನಾಟಕ)	ಕೆ. ಕೆ. ಶೆಟ್ಟಿ.	0	8	0
ಕುಕಲವ	(,,)	,,	0	6	0
ವೃಥಿಜಾರಿಣಿ ಯಾರು	(,,)	,,	1	0	0
ಹೆಂಡ್ತಿ ಕಂಡನಾದರೆ	(ಪ್ರಹಸನ)	,,	0	4	0
ಸನ್ಯಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಸಣ್ಣ ಕತೆಗಳು)	ಕೊರಡ್ಕಲ್	0	14	0
ಭಾರತೀಯ ಕತೆಗಳು	(,,)	,,	0	14	0
ಮೂರು ವ್ಯಹಸನೆಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್. ಎಲ್. ಸುಬ್ರಹ್ಮಣ್ಯಂ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜ.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾರಾಮಿನಿ	(ಕವಿತೆಗಳು)	,,	2	0	0
ಸವ್ಯಸಾಚಿ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	4	0
ನಗೆನೋಟಗಳು	(ವಿನೋದ ಕತೆಗಳು)	ಕೆ. ವಿಟ್ಠಲ ಶೆಣೈ	0	14	0
ಅನ್ನದೇವರು ಮತ್ತು ಇತರ ಕತೆಗಳು		ಕಯ್ಯಾರ ಕಿಞ್ಞಣ್ಣ ರೈ	1	0	0
ವಿಷ್ಣುವಿನ ಪರಾಪರಾಧಗಳು		ಆರ್ಥಾತ್ ದಶಾವತಾರಗಳು (ವಿಡಂಬನೆ) ಎಂ. ವಿ. ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯಕ್ಷಗಾನ ನಾಟಕ)	,,	0	12	0
ಸ್ವಾತಂತ್ರ್ಯವೀರ ಸಾವರಕರರು	(ಜೀವನ ಚರಿತ್ರೆ)	ಇಂದಿರಾಬಾಯಿ	1	4	0
ಜೀವನಸಂಗ್ರಾಮ	(ನಾಟಕ)	ಪಿ. ಶೀನಶೆಟ್ಟಿ	1	8	0

ಸಿಗುವ ಸ್ಥಳಗಳು:

(1) ಕರಿಯರ ಪ್ರಪಂಚ, ಉಡುಪಿ. (2) ನವಯುಗ ಪ್ರೆಸ್, ಉಡುಪಿ. (3) ನವಭಾರತ ಪುಸ್ತಕ ಭಂಡಾರ ಉಡುಪಿ (4) ಪಾಂಜೆಜಿ ಗುರುರಾಜ್, ಉಡುಪಿ

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. No 298/1948

ವಾದಿ- ಬ್ಲಾಸಿಸ್ ಫೆರ್ನಾಂಡಿಸ್

ಪ್ರತಿವಾದಿ ಅಲೆಕ್ಸ ನಿ. ಸೋಜ, ಲೋರೆನ್ಸ ನಿ. ಸೋಜರ ಮಗ ಪುತ್ತಿಗಾಲೂಕಳು ಆಲ್ಬರೋಡಿಗ್ರಾಮ

ವಾದಿಯು ಪ್ರತಿವಾದಿಯೊಳಿ ವಾದಿಗೆ ಪ್ರತಿವಾದಿಯು ತಾ. 10-7-1945ರಲ್ಲು ರೂ. 65-0-0ಕ್ಕೆ ಬ್ಬಿಸಿಕೊಟ್ಟ ನಿಮಿಂತ ನೋಟಿನ ಸಣಗರ ಬಗ್ಗೆ ಸದ್ರಿ ದಾವಾಮಾಡಿರುವದ್ರಿಂದ ಆ ಕುರಿತು ನಿಮ್ಮುದೇವಾದರೂ ವುದಾಹರ ಸಲ್ಲವ್ದಲ್ಲಿ ತಾ 18-8-1948ನೇ ದಿವ್ಸ ಹಗಲು 11 ಗಂಟೆಗೆ ಯೂ ಕೋರ್ಟುಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೀಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬಸಂಗ್ತಿ ಕೋರ್ಟು ಹ್ಕುಂ ಪ್ರಕಾರ ಯೂ ಮೂಲಕ ತಿಳಿಸೋಣಾಗುತ್ತದೆ

K. Raghunath Shenai
Pleader for Plaintiff

Coondapoor 29-7-1948

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S. C. 323/1948

ವಾದಿ- ವೆಂಕಟಾಚಲ ಹತ್ವಾರ

ಪ್ರತಿವಾದಿ- ಪದ್ಮನಾಭ ಹತ್ವಾರ, ಮಂಜುನಾಥ ಹತ್ವಾರ್ರ ಮಗ. ಕುಂಬಾಪುರ ತಾಲೂಕು ಕುಂಭಾಶಿ ಗ್ರಾಮದ ಕೊರವಡಿ.

ವಾದಿಯು ಪ್ರತಿವಾದಿಮೇಲೆ ವ್ಯಯ ನುತ್ತ ಸರ್ವಜನು ಸಂಚಾರಗಳ ಮೂಲಗೇಣಿ ಗೇಣಿಬಾಕಿ ಬಗ್ಗೆ ಸದ್ರಿ ದಾವಾಮಾಡಿರುವದ್ರಿಂದ ಆ ಕುರಿತು ನಿಮ್ಮುದೇನಾದ್ರು ಆಕ್ಷೇಪ ಇದ್ದಲ್ಲಿ ತಾ 18-8-1948ನೇ ದಿವ್ಸ ಹಗಲು 11 ಗಂಟೆಗೆ ಯೂ ಕೋರ್ಟುಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೀಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬಸಂಗ್ತಿ ಯೂ ಮೂಲಕ ನಿಮಗೆ ತಿಳಿಸೋಣಾಗುತ್ತದೆ

K. Raghunath Shenai
Pleader for Plaintiff

Coondapoor 29-7-48

ಉಡುಪಿ ಡಿ ಮು. ಕೋರ್ಟಿನಲ್ಲಿ

O. P. No. 27/1948

1 ಅಚ್ಯುತ ಭಟ್ಟ, ಕೃಷ್ಣ ಭಟ್ಟ ಮಗ. 2 ವಾಸುದೇವ ಭಟ್ಟ, ಆನಂತರಾವು ಭಟ್ಟ ಮಗ, ಶಿವಗ್ರಾಮ —ಅರ್ಜಿದಾರರು

1ನೆ ಅರ್ಜಿದಾರನ ತಂದೆ 2ನೆ ಅರ್ಜಿದಾರನ ಅಜ್ಜ ತಾರೀಕು 4-4-1948ರಲ್ಲಿ ಮೃತಪಟ್ಟ ಶಿವಗ ಕೃಷ್ಣ ಭಟ್ಟರಿಗೆ ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್ ಶಿವಗ್ರ ಬ್ರಾಂಚ್ ದಾಯಿಶ ರಶೀದಿ ನಂಬ್ರ 161/1946 (14-8-1946)ರ ಪ್ರಕಾರ ಫಿಕ್ಸೆಡ್ ಡಿಪೋಜಿಟಿನ ಬಾಬ್ತು ಬರತಕ್ಕ ಅಸಲು ರೂ 500 ಮೊದಲಾದ ಬಾಬ್ತು ಬಡ್ಡಿ ರೂ 15-0-0 ಮೊನುಮುಂದಿನ ಬಡ್ಡಿಕೂಡಾ ಮತ್ತು ಸೇವಿಂಗ್ಸ ಬೇಂಕ್ಸ ಎಕೌಂಟ್ ನಂ-451F ನಂ 199/6ರ ಪ್ರಕಾರ ಬರತಕ್ಕ ಅಸಲು ರೂ ಸಾಮಾ 192-8-0 ಬಡ್ಡಿ ರೂ 2-8-0ಇನ್ನು ಬಡ್ಡಿಸಹ ವಶೂಲುಮಾಹುವರೆ ತಾವು ಆನರ ಸಮೀಪ ವಾರಿಸುದಾರರಾಗಿದ್ದು, ಹಕ್ಕುದಾರರಾಗಿದ್ದಿರುವುದರಿಂದ ಆವುಗಳ ವಶಾಲಿಯ ಬಗ್ಗೆ ತಮಗೆ ವಾರಿಸು ಸರ್ಟಿಫಿಕೇಟ್ ಕೊಡಿಸಬೇಕಾಗಿ ವಗ್ಗರೆ ಆ ಬೇದಾರರು ವಾಕ್ಲು ಮಾಡಿರುವ ಮೇಲ್ಕಂಡ ಅರ್ಜಿಯು ತಾರೀಕು 11-8-1948ಕ್ಕೆ ತಪ್ಪಿಗೆ ಯಿಟ್ಟಿರುವುದರಿಂದ ಆ ಕ್ಷೇಪಣೆ ಯಿದ್ದವರು ಸದರಿ ತಾರೀಕಿನ ವೆಳಿಗ್ಗೆ 10 ಗಂಟೆಗೆ ಸದ್ರಿ ಕೋರ್ಟುಮುಂದೆ ಜಾಹೀರುಮಾಡಿಕೊಳ್ಳ ಬಹುದು.

K. L. Aithal
Vakil for Petitioner

ತಾರೀಕು 28-7-1948 ಉಡ್ಪಿ.

ಮಂಗಳೂರು

ಶಾಂತಾರಾಮ ಪೈಗಳ ಬಂಧನ

ಇತ್ತೀಚೆಗೆ ಮೈಸೂರು ಸೀಮೆಯಲ್ಲಿ ಬಂಧಿಸಲ್ಪಟ್ಟ ದ. ಕ. ಬಲ್ಲೆಯ ಕನ್ಯಾಸ್ಕೂಲ್ ರಾಷ್ಟ್ರೀಯ ಕಾರ್ಯದರ್ಶಿಯಾದ ಶ್ರೀ ಶಾಂತಾರಾಮ ಪೈಗಳನ್ನು ಳಿಲದ ತಾ 25ರಲ್ಲು ಮಂಗಳೂರಿಗೆ ತಂದು ತುರುದಿನ ವೆಳಿಗ್ಗೆ ವೆಲ್ಲೂರಿಗೆ ಕೊಂಡುಹೋಗಿರುವರು.

ಸಂತಾಪಸೂಚಕ ಸಭೆ- ಕೆನರಾ ಹ್ಯಾಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದ ನೇತೃತ್ವದಲ್ಲಿ ದಿವಂಗತ ಅಮ್ಮೆಂಬಳ ತ್ರಿವಿಕ್ರಮ ಪೈಗಳವರ ನಿಧನದ ಕುರಿತು ಇದೇ ತಾ |ರಲ್ಲು ಸಂತಾಪಸೂಚಕ ಸಭೆಯು ಕೆನರಾ ಹ್ಯಾಸ್ಕೂಲಿನಲ್ಲಿ ಜರಗಿತು.

ಹೊಟೇಲು ಮಾಲಿಕರ ಮೇಲೆ ಮೊಕದ್ದಮೆ- ಬಂಟ್ವಾಳದ ಪನ್ನೊಂದು ಮಂದಿ ಹೊಟೇಲು ಮಾಲಿಕರುಗಳು ಹರಿಜನ ಪ್ರವೇಶಕ್ಕೆ ತಡೆ ಮಾಡಿ ಕಾಫಿ ತಿಂಡಿ ಕೊಡಲು ನಿರಾಕರಿಸುತ್ತಿರುವರೆಂಬ ಕಾರಣದಿಂದಾಗಿ ಸದ್ರಿಯವರ ಮೇಲೆ ರಿಲೀಜಿಯಸ್ ಡಿಸೆಬಿಲಿಟೀಸ್ ಆಕ್ಟಿನನ್ವಯ ಪೋಲೀಸು ಅಧಿಕಾರಿಗಳು ನೋಕಡ್ಡಮೆ ಹೂಡಲಿರುವರಾಗಿ ತಿಳಿದುಬರುತ್ತದೆ.

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 321/1934. R-E-P-355/1947-R-E-A-279/1948-

ಅರ್ಜಿದಾರ —ಕೃಷ್ಣಯ್ಯಾಜಿ, ಎದ್ರಿರು —ಕಾವೇರಮ್ಮ ಕೊಡಾ.

೧ ಕಾವೇರಮ್ಮ, ಮಂಜುನಾಥ ಪರಮೇಶ್ವರ ಜೋಶರ ವಿಧವೆ, ಕುಂದಾಪುರ ತಾಲ್ಲೂ ನಂಬ್ರ ೧ನೇ ಶೀರೂರು ಗ್ರಾಮದ ಶ್ಯಾನುಭೋಗರಲ್ಲಿರುವವಳು.

೨. ಮಹಾಲಿಂಗ ಜೋಶಾ. ಪರಮೇಶ್ವರ ಜೋಶರ ಮಗ. ಕುಂದಾಪುರ ತಾಲ್ಲೂ ಎಡ್ತರೆ ಗ್ರಾಮ.

ಸದ್ರಿ ಅಮ್ಮಜಾರಿಯಲ್ಲಿ ಎದ್ರಿರ ಬಾಬ್ತು ಅಸ್ತಿ ಯೇಲಂಬಿಗೆ ಆಕ್ಷೇಪಿಸಿ ಇಸ್ತಿಹಾರು ಹಾಜ್ರುಪಡಿಸಿರುವದ್ರಿಂದ ಆ ಇಸ್ತಿಹಾರಿನ ವರ್ಕ ನಿರ್ಣಯ್ಸುವರೆ ತಾ ೧೩-೮-೧೯೪೮ಕ್ಕೆ ಇಟ್ಟಿದೆ. ಮತ್ತು ಯೇಲಂಬಿಗೆ ನಿಲ್ಲುವರೆ ಪರ್ಮಿಶನ್ ಕೊಡಿಸಬೇಕಾಗಿ ಅರ್ಜಿದಾರನು ಕೊಟ್ಟ ಸದ್ರಿ ಅರ್ಜಿಯು ಸಹಾ ತಾ. ೧೩-೮-೧೯೪೮ಕ್ಕೆ ಯಿಟ್ಟಿದೆ. ಯೂ ವಿಶ್ಯಾ ಕುರಿತು ನಿಮ್ಮುದೇನಾದ್ರು ಆಕ್ಷೇಪ ಇದ್ದಲ್ಲಿ ಸದ್ರಿ ತಾರೀಕಿನ ದಿವ್ಸ ಹಗಲು ೧೧ ಗಂಟೆಗೆ ಯೂ ಕೋರ್ಟು ಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹ್ಕುಂ ಪ್ರಕಾರ ಯೂ ಮೂಲಕ ತಿಳಿಸೋಣಾಗುತ್ತದೆ

K. Raghunath Shenai.
Pleader for Petitioner
Coondapoor 29-7-1948.

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. P. No, 36/1948

1 ಕಾವೇರಿ ಸೆಂಗಪ್ಪ, 2 ಜಾಕೆ ಹೆಂಗಪ್ಪ, 3 ದಾಮಯ ಶೆಟ್ಟಿ , [illegible] ಮೇಷು ಶೆಟ್ಟಿ ಮಳ್ಳಳು. ನೈಕೆ 1ನೇ ಅರ್ಜಿದಾರಳು ಪುತ್ತೂರು ಕೃಪಾ ಗ್ರಾಮದ ಹಂಗಳ್ಳಾ ನಂಬಲ್ಲಿ, 2ನೇ ಅರ್ಜಿದಾರಳು ಮುಂಡೂರು ಗ್ರಾಮ್ದ ಕಲ್ಲಮೆಯ ಎಂಬಲ್ಲಿ, 3ನೇ ಅರ್ಜಿದಾರನು ವಿನೆಕಲ್ಲು ಗ್ರಾಮ್ದವ್ವಲ್ಲಿ, ಮತ್ತು 4 ನೇ ಅರ್ಜಿದಾರಳು ಪುತ್ತೂರು ಕೃಪಾ ಗ್ರಾಮ್ದ ಕಲ್ಲಾರೆಯೆಂಬಲ್ಲಿ. —ಅರ್ಜಿದಾರರು.

ಡ್ರೈವರ್ ಮೃತ ತುಕ್ರಪ್ಪ ಶೆಟ್ಟಿಯು ಪಕ್ಕಿನ ಬಾಬ್ತು ಕೆನರಾ ಪಬ್ಲಿಕ್ ಕನ್ವೆಯೆನ್ಸ್ ಮೋಟರ್ ಕಂಪನಿಯಲ್ಲಿ ಪ್ರೊವಿಡೆಂಟ್ ಫಂಡಿನ ನ ಖಾಂಬಳ ವ ಸೆಕ್ಯೂರಿಟಿ ಡಿಪೊಸಿಟಿನ ಬಾಬ್ತು ಕೂಡಾ ಯಿರುವ ರೂ. 219-8-9 ನ್ನು ಪಡಕೊಳ್ಳುವದೆ ನಕ್ಕೆಶನ್ ಸರ್ಟಿಫಿಕೇಟು ಕೊಡಿಸಬೇಕೆಂತ ಮೇಲ್ಕಂಡ ಅರ್ಜಿದಾರರು ಅರ್ಜಿ ಮಾಡಿರುತ್ತಾರೆ. ಹಾಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡುವಲ್ಲಿ ಯಾರಿಗಾದರೂ ಏನಾದರೂ ಆಕ್ಷೇಪಣೆಯಿದ್ದರೆ ಮೇಲ್ಕಂಡ ಅರ್ಜಿಯ ಕ್ರಿ ವ್ಯಾಪ್ತಿಯಾಗಿ ತಾ 25-8-48 ನೇ ವೆಳಿಗ್ಗೆ ಗಂಟೆ 11ಕ್ಕೆ ಹೇಳ್ಬಂದ ಕೋರ್ಟಿನಲ್ಲಿ ಹಾಜ್ರಾಗಿ ಉದಪಂಸಿಕೊಳ್ಳತಕ್ಕ ದ್ದೆಂತ ಕೋರ್ಟು ಹ್ಕುಂ ಪ್ರಕಾರ ಈ ಮೂಲಕ ತಿಳಿಸೋಣಾಗ್ಗದೆ.

N. V. Kulathaya.
Vakil for Petitioners.

Puttur, 27-7-48.

PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

ವರ್ಷಾಗಿ

Regd. No. M. 3615

ಅಂತರಂಗ
ಉತ್ತರ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿಗೆ ರೂ 0-1-6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

12-8-1948

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೪೮

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras.

Vol. 28
No. 48

15 ಅಗೋಸ್ತು 1947–15 ಅಗೋಸ್ತು 1948

ಆಗೋಸ್ತು 15 ಪುನ: ಬಂತು. 1947ನೇ ಆಗೋಸ್ತು 15 ಹಿಡಿಯುವ ಮಧ್ಯ ರಾತ್ರಿಯಲ್ಲಿ ನಮಗೆ ಸ್ವಾತಂತ್ರ್ಯ ದೊರೆತಿದ್ದಿತು; 1948ನೇ ಆಗೋಸ್ತು 15ಕ್ಕೆ ಆ ಸ್ವಾತಂತ್ರ್ಯಕ್ಕೆ ಒಂದು ವರುಷವಾಗುವದು.

ತಾ 15-8-48ನೇ ಆದಿತ್ಯವಾರ ಸ್ವಾತಂತ್ರ್ಯದ ಪ್ರಥಮ ವಾರ್ಷಿಕ ವರ್ಧಂತಿ; ಭಾರತದ ಚರಿತ್ರೆಯಲ್ಲಿ ಅನನ್ಯವಾದ, ಅತಿ ಮಹತ್ವದ ದಿನ.

ಕಳದ ಆಗೋಸ್ತು 15ರಿಂದ ಈ ಆಗೋಸ್ತು 15ರ ವರೆಗಿನ ಒಂದು ವರುಷ ಸುವಾಗ ಜೈಕಾರ-ಹಾಹಾಕಾರಗಳೆರಡನ್ನೂ ಹಾಕಬೇಕಾಗುತ್ತದೆ; ಹೃದಯ ಶರಧಿಯಲ್ಲಿ ಆನಂದಾವೇಗವೆರಡರ ಅಲೆಗಳೂ ಮೇಲಿಂದ ಮೇಲೆ ಏಳುತ್ತಿವೆ.

ಮೂಲ ಮಹೋತ್ಸವದಿಂದಾರಂಭಿಸಿ ಭಾರತದ ಹಳ್ಳಿ ಮೂಲೆಗಳಲ್ಲೂ ಮಹಾ ಸಂಭ್ರಮದಿಂದ-ಅನನ್ಯ ಉತ್ಸಾಹ, ವಿಜಯೋನಂದ ಪ್ರದರ್ಶನಗಳಿಂದ-ಕಳದ ಆಗೋಸ್ತು 15ರ ವರೆಗಿನ ಒಂದು ವರುಷ ಕಾಲದಲ್ಲಿ, ನಮ್ಮ ಮಾತೃಭೂಮಿಯ ರೂಪ ಬೇರೆಯಾಗಿತ್ತು; ನಮ್ಮ ಅಧಿಕಾರ, ಸ್ಥಾನಮಾನಗಳು ಪ್ರತ್ಯೇಕವೇ ಆಗಿದ್ದುವು; ನಮಗೊಂದು ಬೇರೆ ಜೀವ ಬಂದಿತ್ತು. ಇವೆಲ್ಲಕ್ಕನುಗುಣವಾಗಿ ಹಿಂದೆಂದೂ ಅನುಭವಿಸಿರದಂತಹ ಸುಖ ದುಃಖಗಳನ್ನು ನಾವೀ ಅವಧಿಯಲ್ಲಿ ಅನುಭವಿಸಿದ್ದೆವು.

ಭಾರತೀಯರ ಜನಜೀವನದಲ್ಲೇ ಒಂದು ಹೊಸ ವಿಭಾಗವಾಗಿ ಪ್ರಾರಂಭವಾಗಿದ್ದ ಕಳದೊಂದು ವರುಷದ ಘಟನೆಗಳ ಕಡೆಗೆ ದೃಷ್ಟಿಯೋಡಿಸುವಾಗ ಜೈಕಾರ-ಹಾಹಾಕಾರಗಳೆರಡನ್ನೂ ಹಾಕಬೇಕಾಗುತ್ತದೆ; ಹೃದಯ ಶರಧಿಯಲ್ಲಿ ಆನಂದಾವೇಗವೆರಡರ ಅಲೆಗಳೂ ಮೇಲಿಂದ ಮೇಲೆ ಏಳುತ್ತಿವೆ.

1947ನೇ ಆಗೋಸ್ತು 15 ಹಿಡಿಯುವ ರಾತ್ರಿ 12 ತಾಸು ಕಳೆದು ಒಂದು ನಿಮಿಷವಾಗುವಾಗ ಅಖಂಡ ಭಾರತವು ಭಾರತ ಮತ್ತು ಪಾಕಿಸ್ತಾನವಾಗಿ ಎರಡು ಪಾಲಾಗಿ ವಿಂಗಡಿಸಲ್ಪಟ್ಟಿತು; ಎರಡರಲ್ಲೂ ತಮ್ಮಿಚ್ಛೆಯ ಸ್ವಾತಂತ್ರ್ಯ ನೆಲೆಸಿಕೊಳ್ಳುವ ಪೂರ್ಣಾಧಿಕಾರದೊಡನೆ ವಸಾಹತು ಸ್ವಾತಂತ್ರ್ಯ ಅವಾಹನೆಯಾಯಿತು.

ನವಢಿಲ್ಲಿಯ ಘಟನಾ ಸಮಿತಿ ಭವನದಲ್ಲಿ ನಡೆದ ಅಧಿಕಾರ ಸ್ಥಾಪನೆಯ ಸ್ತು 15ರಲ್ಲು ಸ್ವರಾಜ್ಯ ಸ್ಥಾಪನೋತ್ಸವ ನಡೆಯಿತು.

ಆದರೆ ನೆನಪಿಗೆ ಬರುತ್ತಿದೆ-ಆ ಸ್ವಾತಂತ್ರ್ಯದ ಹುಟ್ಟೋದಕ್ಕಿಂದರ ಮೂಲ ಶಿಲ್ಪಿ, ರಾಷ್ಟ್ರಜನಕ ಗಾಂಧಿಜೀ ಆದಿನದಲ್ಲೂ ಬಂಗಾಳದ ಹಳ್ಳಿಯೊಂದರಲ್ಲಿ ಜಾತೀಯ ಸೌಹಾರ್ದತಾ ಸ್ಥಾಪನೆಗಾಗಿ ತಲೆ ಬಟ್ಟು ತಿರುಗಾಡುತಿದ್ದರು. ಆ ದಿನವನ್ನು ತನ್ನ ಪಾಲಿನ ದುಃಖದ ದಿನ-ಅಪೂರ್ಣ ದಿನ-ಎಂದೇ ಭಾವಿಸಿ ಆದಿನ ಸಂತೋಷದಿಂದ ಅವರು ದೂರವಾಗಿದ್ದರು.

ಢಿಲ್ಲಿಯಲ್ಲಿ ಗವರ್ನರ್ ಜನರಲ್ ಮೌಂಟ್‌ಬೇಟನ್, ಪ್ರಧಾನ ಮಂತ್ರಿ ನೆಹರುಗಳಂದಾರಂಭಿಸಿ, ಹೆಳೆಯ ಪ್ರತಿಯೊಬ್ಬ ಉಪನ್ಯಾಸಕನ ಬಾಯಲ್ಲೂ ಆ ದಿನದ ಸಂಭ್ರಮದ ನಡುವೆ ಈ ಸಾಧನೆಯ ನಾನೋಚ್ಚಾರವಾಗಿತ್ತು.

ಆ ದಿನ ಬಹಿರಂಗವಾಗಿ ವೈರಾಗ್ಯ ಪ್ರದರ್ಶಿಸಿದ ಮಿಶ್ರವರೆಂದರೆ ಪಂಜಾಬು ಮತ್ತು ಬಂಗಾಳಾ ಪ್ರಾಂತ್ಯದವರು. ಎರಡು ಪ್ರಾಂತ್ಯಗಳೂ ವಿಭಾಗಿಸಲ್ಪಟ್ಟು, ಪಾಲಾದ ಇಕ್ಕಡೆಗಳವರಿಗೂ ಮನಸ್ಸು ಮಾಧಾನವಿರಲಿಲ್ಲವಾದ್ದರಿಂದ ಅವರೇ

To
The New Karnataka Provident Insurance Co., Ltd, Udipi.

.....I wish all success and prosperity to this Company.

(Sd.) K. Madhava Menon,
Minister for Agriculture & Prisons,
MADRAS.

ಈ ಕಂಪೆನಿಗೆ ಜಯವನ್ನೂ ಉತ್ತರೋತ್ತರ ಅಭಿವೃದ್ಧಿಯನ್ನೂ ಬಯಸುತ್ತೇನೆ.

ಕೆ. ಮಾಧವ ಮೆನನ್,
(ಮದ್ರಾಸಿನ ವ್ಯವಸಾಯ ಮಂತ್ರಿಗಳು)

ಪರಕೀಯರೊಡನೆ ಹೋರಾಡಿ
ಸ್ವಾತಂತ್ರ್ಯ ಗಳಿಸಿದೆವು.
ಮನೆದೊಡನೆ ಕಾದಾಡಿ
ಮಿತವ್ಯಯಿಗಳಾಗಲಾರೆವೆ?
ಮಿತವ್ಯಯವೊಂದೇ ಉಳಿತಾಯದ ಸಾಧನ.
ನಿಮ್ಮ ಆಪದ್ಧನದ ಸಮಸ್ಯೆಯನ್ನು ಸುಲಭವಾಗಿ ಬಿಡಿಸುವ ಜನತಾ ಸಂಸ್ಥೆ!

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ

ಪ್ರಥಮ ಸ್ವಾತಂತ್ರ್ಯ ದಿನಾಚರಣೆಯ ಸುಮುಹೂರ್ತದಲ್ಲಿ ಮಿತವ್ಯಯಕ್ಕಾಗಿ ಹೋರಾಡುವ ನಿರ್ಧಾರ ಮಾಡಿರಿ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್, ಉಡುಪಿ.
ಇವರಿಗೆ

...ನಿಮ್ಮ ಕಂಪೆನಿಯು ಸರ್ವತೋಮುಖ ಜಯವಾಗಲೆಂದು ಇಚ್ಛಿಸುತ್ತೇನೆ.

ಡಾಕ್ಟರ್ ಯು. ಕೃಷ್ಣ ರಾವ್,
(ಮದ್ರಾಸಿನ ಮೇಯರ್)

.....Permit me to wish your Company all success.

(Sd.) Dr. U. Krishna Rao,
(Mayor of Madras)

ಥಿಯೋ ಸಾಫಿಕಲ್ ಸೊಸೈಟಿಯ ಅಧ್ಯಕ್ಷೆ ಶ್ರೀಮತಿ ರುಕ್ಮಿಣಿದೇವಿ ಅರುಂಡೇಲ್ ಅವರು ಮಾತನಾಡಿದರು. ಅವರು ಹೇಳಿದರು: ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಹಿಂಸೆಯ ಪಾತ್ರವೇನು ಎಂಬುದನ್ನು ಕುರಿತು ಇಂದು ಬಹಳ ಚರ್ಚೆ ನಡೆಯುತ್ತಿದೆ. ಆದರೆ ಅಹಿಂಸೆಯ ಪಾತ್ರ ಬಹಳ ಮಹತ್ವದ್ದಾಗಿತ್ತು ಎಂಬುದು ನನ್ನ ಅಭಿಪ್ರಾಯ. ಅಹಿಂಸೆಯ ಮೂಲಕ ಭಾರತ ಸ್ವಾತಂತ್ರ್ಯ ಗಳಿಸಿದ್ದರಿಂದಲೇ ಅದು ಇಂದು ಜಗತ್ತಿನಲ್ಲಿ ಅಷ್ಟು ಗೌರವದ ಸ್ಥಾನ ಪಡೆದಿದೆ. ಅಹಿಂಸೆಯ ಮೂಲಕ ಸ್ವಾತಂತ್ರ್ಯ ಗಳಿಸಿದ್ದರಿಂದಲೇ ಭಾರತ ಇಂದು ಜಗತ್ತಿನ ಶಾಂತಿಯ ಕೇಂದ್ರವಾಗಿದೆ. ಅಹಿಂಸೆಯ ಮೂಲಕ ಸ್ವಾತಂತ್ರ್ಯ ಗಳಿಸಿದ್ದರಿಂದಲೇ ಭಾರತ ಇಂದು ಜಗತ್ತಿನ ಶಾಂತಿಯ ಕೇಂದ್ರವಾಗಿದೆ. ಅಹಿಂಸೆಯ ಮೂಲಕ ಸ್ವಾತಂತ್ರ್ಯ ಗಳಿಸಿದ್ದರಿಂದಲೇ ಭಾರತ ಇಂದು ಜಗತ್ತಿನ ಶಾಂತಿಯ ಕೇಂದ್ರವಾಗಿದೆ.

ವಿಮೆಮಾಡಲಿಕ್ಕೆ ಯಾ ಪ್ರತಿನಿಧಿ ನಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಸ್ಥಾಪನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ತಿಕತನ, ಪಲಾಯನಗಳನ್ನು ನಿರ್ಮಿಸಿತು. ಅಂತೆಯೇ ಗಡಿನಾಡು ಪ್ರಾಂತ್ಯ, ಬೊಂಬಾಯಿ, ಸಿಂಧ್, ಬಂಗಾಳ, ಸಂಯುಕ್ತ ಪ್ರಾಂತ್ಯ, ಮತ್ತು ಸರ್ವಸಾಧಾರಣವಾಗಿ ಅಲ್ಲಲ್ಲಿ ಎಲ್ಲಾ ಪ್ರಾಂತ್ಯಗಳಲ್ಲೂ ಜಾತೀಯ ಧ್ವಂಸಗಳು ನಡೆದು ರಕ್ತದ ಕೋಡಿ ಹರಿಯಿತು; ಶವಗಳ ರಾಶಿ ಬಿತ್ತು!

ತತ್ಪರಿಣಾಮವಾಗಿ ಮುಖ್ಯತಃ ಪಂಜಾಬಿನ್ ಅಂಕೆಯೇ ಗಡಿನಾಡು ಪ್ರಾಂತ್ಯ, ಸಿಂಧು, ನೊದಲಾದ ಪ್ರಾಂತ್ಯಗಳ ಲಕ್ಷಾವಧಿ ಜನರನ್ನು ಭಾರತ ಮತ್ತು ಪಾಕಿಸ್ತಾನ ಸರಕಾರಗಳು ಅದಲು ಬದಲು ಮಾಡಿಕೊಳ್ಳಬೇಕಾಯಿತು. ಬೀಗಿ ಪರಸ್ಪರ ವರ್ಗಾವರ್ಗಗೊಂಡ ಜನ ಸಮೂಹ ಹೊತ್ತದಲ್ಲಿ ೭೫ - ೮೦ ಲಕ್ಷಗಳಷ್ಟಾಗಬಹುದು.

ಇವ್ಯಜನರು, ತಮ್ಮವಂತವ ತಲೆಮಾರುಗಳಿಂದಿದ್ದ ಊರು,ಭೂಮಿ,ಸೊಕ್ಕುಗಳನ್ನೆಲ್ಲಾ ಬಿಟ್ಟು, ಕಳಕೊಂಡು ಓಡಿಬಂದಾಗ ಅವರಿಗೆ ಹೊಸತಾಗಿ ಜೀವನ ವ್ಯವಸ್ಥೆ ಮಾಡಿಕೊಡುವ ಅ ಜವಾಬ್ದಾರಿಯೆಷ್ಟು ದೊಡ್ಡದೆಂಬುದನ್ನು ಯೋಚಿಸಬೇಕು. ಆವರ ಕಜ್ಜೀರ ಕಥೆಗಳೆಲ್ಲವನ್ನೂ ಬರೆದಿಟ್ಟರೆ, ಅದರ ಇನ್ನೊಂದು ತಕ್ಕಡಿಗೆ ಲೋಕದ ಮಿಕ್ಕೆಲ್ಲಾ ದುರಂತ ಕಥೆ ಕಾದಂಬರಿ ನಾಟಕಗಳನ್ನು ಒಟ್ಟಿಗಿಟ್ಟು ತೂಗಿದರೂ ಸರಿಬಂದೀತೇ ಎಂಬುದನ್ನು ನೋಡಬೇಕು. ಇಷ್ಟು ದೊಡ್ಡ ವಲಸೆಯನ್ನು ಯುದ್ಧ ಕಾಲದ ಯಾವುದೇ ಒಂದು ಸರಕಾರವಾದರೂ-ಲೋಕದ ಚರಿತ್ರೆಯಲ್ಲಿ ಯಾವುದೊಂದು ರಾಷ್ಟ್ರವಾದರೂ-ನಡೆಸಿದ್ದುಂಟೇ ಎಂಬುದನ್ನೂ ವಿಚಾರಿಸಬೇಕು.

ಅದರಿಂದಿಗೆ, ಓರ್ವ 'ಗಾಂಧಿ'ಯಿಲ್ಲದಿರುತಿದ್ದರೆ, ಮತ್ತು ಸಾಯದಿರುತಿದ್ದರೆ ಈ ಪ್ರಳಯವು ಮತ್ತೂ ಯಾವ ರೂಪವಾಗಿ ಬೆಳೆದು ಹೋಗುತಿತ್ತು ಎಂಬುದನ್ನೂ ಊಹಿಸಬೇಕು. ಸ್ವರಾಜ್ಯ ಸಾಧನೆಯನ್ನು ಕಲಿಸಿದವರು ಮತ್ತೆದನ್ನು ಗಳಸಲು ಮುಖ್ಯತಃ ಕಾರಣರಾದವರು ಗಾಂಧಿಜೀ ಹೇಗೋ, ಹಾಗೆಯೇ ಅದನ್ನು ಉಳಿಸಿಕೊಟ್ಟವರೂ ಅವರೇ ಎಂಬುದು ಕಳದೊಂದು ವರುಷದ ಘಟನೆಗಳ ಕಡೆಗೆ ದೃಷ್ಟಿಯೆಡಿಸುತ್ತಾ ಹೋದಂತೆ ಮಂದಟ್ಟಾಗುತ್ತಾ ಹೋಗಿ 'ರಾಷ್ಟ್ರಪಿತಾಕೀ ಜೈ!' ಮಂತ್ರವು ಪ್ರತಿಯೊಬ್ಬನ ತುಟಿಯಿಂದಲೂ ಉದುಗುವಂತಹದೇ..

ಸ್ವರಾಜ್ಯ ಸ್ಥಾಪನಾಕಾಲದಲ್ಲಿ ಪಂಜಾಬಿನಂತೆಯೇ ಬಂಗಾಳವೂ ಕುದಿಯುತ್ತಿತ್ತು; ಆದರೆ ಪ್ರೇಮವರ್ಷಗರೆಯುತ್ತಾ ಮಹಾತ್ಮಾಜೀ ಪ್ರತ್ಯಕ್ಷ ಅಲ್ಲಿದ್ದುದರಿಂದ ಇದು ಅಲ್ಲೇ ತಂಪುಗಟ್ಟಿತು. ಅದೇ ಕಾಲದಲ್ಲಿ ಪಂಜಾಬಿನಲ್ಲಿ ಹಾಜರಿರಲು ಮತ್ತೊಬ್ಬ ಮಹಾತ್ಮ ನಮ್ಮಲ್ಲಿರುತ್ತಿದ್ದರೆ ಪಂಜಾಬಿನ ಪ್ರಳಯವೂ ನಡೆಯುತ್ತಿರಲಿಲ್ಲ.

ಹೊಗೆಯೆದ್ದಂತೆಲ್ಲಾ ಅದನ್ನು ನಂದಿಸುತ್ತಾ, ಕಲ್ಕತ್ತದಲ್ಲಿ ತನ್ನ ಹತೋಟಿಗೂ ಮೀರಿ ಅಗ್ನಿ ಜ್ವಲಿಸುತ್ತಿದೆಂದು ತೋರಿಮೊದಲೆ ತನ್ನ ಪ್ರಾಣವನ್ನೇ ಅದಕ್ಕರ್ಪಿಸಿ ನಂದಿಸಬೇಕೆಂದು ಉಪವಾಸ ಕುಳಿತು, ಬಂಗಾಳದ ಕೆಡಿಯನ್ನು ಸಕಾಲದಲ್ಲಿ ಪೂರ್ತಿ ನಂದಿಸಿಬಿಟ್ಟರು. ಭಾರತದ ಈ ಅಜೇಯ 'ಅಗ್ನಿಶಾಮಕ ದಳ'-ಗಾಂಧಿಜಿ. ಈ ಬೆಂಕಿ ನಿವಾರಣಾ ಸಾಧನ ವಿಲ್ಲದ ಕಡೆಗಳಲ್ಲಿ- ನವಖಿಲ್ಲಿ ಮತ್ತು ಪಂಜಾಬಿನಲ್ಲಿ-ಅಗ್ನಿ ವ್ಯಾಪಿಸಿಕೊಂಡಿತು.

ಅದನ್ನು ಕಂಡು, ಬಂಗಾಳದ ಕೆಲಸ ಮುಗಿಸಿಕೊಂಡು, ನವಖಿಲ್ಲಿಯ ಕೆಲಸಕ್ಕಾಗಿ ಕೂಡಲೇ ಹೊರಟರು ಗಾಂಧಿಜೀ. ಅಲ್ಲಿಯೂ ಬೆಂಕಿ ನಂದಿಸುತ್ತಾ ಹೋದರು; ಪೂರ್ಣ ಹತೋಟಿಗೆ ತರುವುದಕ್ಕಾಗಿ ಅನಂತರ ಕೈಕೊಂಡರು; ನವಖಿಲ್ಲಿ 'ಫಂಡಾ' ಆಯಿತು.

ಅದರೆ ಒಳಗಿಂದೊಳಗೆ ಸಿಡಿಮದ್ದಿನೊಳಗೆ ಸೇರಿಕೊಂಡ ಕಿಡಿ ಹಾರಿ ಈ ಶಾಂತಿ ದೂತನನ್ನೇ ಬಲಿಗೊಂಡಿತು; ಅ ಮೂಲಕ ಅವರ ಕಾರ್ಯವನ್ನು ಪೂರ್ಣಗೊಳಿಸಿತು.

ಸ್ವರಾಜ್ಯ ವರುಷ ಮುಖ್ಯ ಘಟನೆಗಳು

ಗಾಂಧಿಜೀ ಕಾರ್ಯಧಾರೆಯಾಗಿರುವ ವರೆಗೆ ತಾನು ಸ್ವತಃ ಅಲ್ಲಲ್ಲಿ ಹೋಗಿ, ಆಗಾಗ ಕಾರ್ಯವಿಸರ್ಜನೆಯ ಭಯ ಬೀರಿಯೇನಾ ತಾವರಣವನ್ನು ತಂಪುಗೊಳಿಸಬೇಕಾಗಿದ್ದಿತು. ಹೀಗೆ ಪ್ರತ್ಯ ಪ್ರತ್ಯೇಕವಾಗಿ ತಣಿಸುತ್ತಾ ಹೋಗುವದರಿಂದ ಸಾರ್ವತ್ರಿಕ ಸಮಾಧಾನಕರವಾದ ಕಾರ್ಯವೊಮ್ಮೆಗೇ ಆಗಲಾಗದೆಂಬುದರಿಂದ ತಾನೇ ಆಹುತಿಯಾಗಿ ಸರ್ವಂತರ್ಯಾಮಿಯಾದರು; ಒಂದೇ ಸಲ ಇಡೀ ರಾಷ್ಟ್ರವನ್ನು ತಂಪುಗೊಳಿಸಲು ಶಕ್ತರಾದರು; ಆ ಕಾರ್ಯದಲ್ಲಿ ಪೂರ್ತಿಗೆದ್ದರು.

ಗಾಂಧಿಜೀಯ ರಕ್ತ ಬಿದ್ದ ಮೇಲೆ ಮೊದಲಿನಂತೆ ಮತ್ತಾವ ಜಾತಿಯ ರಕ್ತವೂ ಚೆಲ್ಲಲಿಲ್ಲ. ಜಾತೀಯವಾದೀ ದುಃಶಕ್ತಿಗಳು, ಜಾತೀಯತಾ ದುಷ್ಕೃತ್ಯಗಳು ನೆಲಸಮವಾದುವು. ಗಾಂಧೀ ಹುತಾತ್ಮತ್ವ ಅ ಮೃತ ವರ್ಷದ ಆಕ್ಷಯ ಪಾತ್ರೆಯಾಗಿ ಎಲ್ಲಿಡೆಗೂ ಸುಸ್ಥೆ ಸುರಿಸಿ ಶಾಂತಿ ಸ್ಥಾಪಿಸಿತು!

ಅಖಂಡ ಭಾರತವೇ ಇಬ್ಭಾಗುವಂತೆ ಮಾಡಿದಂತಹ ಮುಸ್ಲಿಂ ಲೀಗ್ ನಿರ್ಮಿತ ಭಯಂಕರ ಜಾತೀಯತಾ ದ್ವೇಷ ಭಾವನೆಯ ದುಷ್ಪರಿಣಾಮಗಳನ್ನು ಪೋಲಿಸ್ ಆಥವಾ ಸೇನಾ ಸಹಾಯದಿಂದ ತಡೆಗಟ್ಟುವದು ಯಾವ ಸರಕಾರಕ್ಕೂ ಅಸಾಧ್ಯ-ಸ್ವತಃ ಯೆಬ್ಬ ಮನುಷ್ಯನಿಗೊಬ್ಬ ವಹರಿಗಾರನಂತೆ ಇತಬೇಕಾದೀತು ಅಂತಹ ಕಾವಲುಗಾರರನ್ನು ಪರದೇಶಗಳಿಂದಲೇ ತರಿಸಿಕೊಳ್ಳಬೇಕಾದೀತು; ಇಂತಹ ಅಸಾಧ್ಯ ಕೆಲಸವನ್ನು ಓರ್ವ ಮಹಾತ್ಮನ ಬಲಿದಾನವು ಮಾತ್ರ ಸಾಗ್ಯಗೊಳಿಸಿತು!

ಜಾತೀಯ ದ್ವೇಷದ ಅಜ್ಞಾನ, ಅನ್ಯಾಯ, ಅದನ್ನು ಕಟ್ಟಿ ಕೊಂಡು ದಕ್ಕಾಗಿ ಲಜ್ಜೆ, ಇತ್ಯಾದಿಗಳು ಪ್ರತಿಯೊಬ್ಬನಿಗೂ ಸ್ವತಃ ಮನವರಿಕೆಯಾಗದೆ ಅವು ಜಾತೀಯತಾ ವಹ್ನಿ ನಂದುವಂತಿರಲಿಲ್ಲ; ಮಹಾತ್ಮನ ಬಲಿದಾನ ವನಹಾ ಅಂತಹ ಸ್ವವಿಮರ್ಶೆಯ ಜ್ಞಾನ ಮೊಳೆಯುವುದು ಅಸಾಧ್ಯವಾಗಿತ್ತು. ಗಾಂಧಿಜೀಯು ಅನುಯಾಯಿಗಳ ಮಟ್ಟಿಗೆ ಹೀಗಾದರೆ, ಈ ಅಜಾತ ಶತ್ರುವಿನ ವಿರೋಧಿಗಳೆಂದು ಭಾವಿಸಿಕೊಂಡಿದ್ದವರಿಗೆ ಅಪಾಯದ ಬೆದರಿಕೆ ಹುಟ್ಟುವ ಆವಶ್ಯಕತೆಯಿತ್ತು; ಈ ಬೆದರಿಕೆ ಕೂಡಾ ಆ "ಶಾಂತಿ ದೂತ"ನಿರುವವರೆಗೆ ಮೊಳೆಯುವದಸಾಧ್ಯವಾಗಿತ್ತು. ಆದ್ದರಿಂದಲೇ ಗಾಂಧಿಜೀ ಆಶ್ಚಾರ್ಯಣೆ ಮಾಡಿ ಎಲ್ಲರಲ್ಲೂ ಸದ್ಬುದ್ಧಿಯಾಗಿ ಸೇರಿ ಕೊಂಡರು. ತಾನು ಸತ್ತು ರಾಷ್ಟ್ರವನ್ನು ಉಳಿಸಿದರು.

ಇತ್ತ ಭಾರತ ಸರಕಾರವು ತನ್ನ ಮಿಕ್ಕೆಲ್ಲಾ ಮುಖ್ಯ ಜನಾಬ್ದಾರಿಗಳನ್ನೆಲ್ಲಾ ಅ ಸಾಧಾರಣ ಧೈರ್ಯ, ಚಾತುರ್ಯ, ಸಾಹಸ, ದೂರದೃಷ್ಟಿ, ಸೂಕ್ಷ್ಮ ವಿವೇಚನೆಗಳಿಂದ, ಶಾಶ್ವತೀಯವಾಗಿ ನೆರವೇರಿಸಿಕೊಂಡು ಬಂತು. ಆ ಪೈಕಿ ಸಂಸ್ಥಾನಗಳನ್ನು ಭಾರತ ಕೇಂದ್ರಕ್ಕೆ ಜೋಡಿಸಿಕೊಂಡ ವಿಧಾನಗಳು ಅತ್ಯಂತ ಶ್ಲಾಘನೀಯ.

ಅತ್ಯಸಂತೋಷದಿಂದ ಸೇರಿದ ಕೊಬ್ಬಿಯ ಮಾದರಿಯು-- ಮುಷ್ಕರ ಹಿಡಿದ ತಿರುವಾಂಕೂರು ಹಂಗ್ತಿಯು-- ವಂಚಿಸಲಾಗುವದೋ ನೋಡಿದ ಭೋಪಾಲದ ಮರ್ಜಿಯು-- ಕೊನೆಯ ಘಮಷದ ವರೆಗೂ ಬೇರೆ ಸಂದರ್ಭವನ್ನೇ ನಿರೀಕ್ಷಿಸಿ ನಿಂತ ಕಾಶ್ಮೀರದ ರೀತಿಯು-- ಇ ನೂರಕ್ಕೂ ಮಿಕ್ಕಿದ ಅಶ್ರಿತ ರಾಜ್ಯಗಳೆಲ್ಲವನ್ನೂ ಅವುಗಳಿಗೆ ಬುದ್ಧಿ ಬರಿಸಬೇಕಾದ ವಿವಿಧೋಪಾಯಗಳಿಂದ ಕಲಿಸಿ, ಭಾರತ ಸರಕಾರವು ತನ್ನ ಭಕ್ಕದಡಿಯಲ್ಲಿ ಸೇರಿಸಿಕೊಂಡಿದೆ

ಆ ಪೈಕಿ ಹಲವು ಪುಟ್ಟ ಸಂಸ್ಥಾನಗಳು ಒಕ್ಕಿನ ಪ್ರಾಂತ್ಯದೊಂದಿಗೆ ಪೂರ್ಣ ತಾದಾತ್ಮ್ಯಗೊಂಡು ತಮ್ಮ ಅಸ್ತಿತ್ವವನ್ನೇ ಭಾರತಕ್ಕೆ ಧಾರೆಯೆರೆದುವು. ಉಳಿದ ಒಂದೊಂದೆಡೆಯ ಸಣ್ಣ ಸಂಸ್ಥಾನಗಳು ಅಲ್ಲಲ್ಲಿ ಗುಂಪು ಕೇಂದ್ರಗಳಾಗಿ ಒಂದುಗೂಡಿ, ವಿಶಾಲ ವ್ಯವಹಾರಕ್ಷನುಕೂಲವಾದುವು. ಹೀಗಾಗಿ ಭಾರತದೊಳಗಿದ್ದ ನೂರಾರು ಅಡ್ಡಬೇಲಿಗಳು ನೆಲಸಮವಾಗಿ ಅಗತ್ಯವುಳ್ಳ ಕ್ಷೇತ್ರ ವಿಭಾಗವಷ್ಟೇ ಉಳಿದಿದೆ.

ಕಾಶ್ಮೀರದಲ್ಲಿ ಈ ದಿನದವರೆಗೂ ಕಲಿಣ ಹೋರಾಟವೇನೋ ನಡೆದಿದೆಯಾದರೂ ಪಾಕಿಸ್ತಾನಕ್ಕೆ ತಾಗಿಕೊಂಡಿದ್ದು, ಅತ್ಯಧಿಕ ಮುಸ್ಲಿಂ ಬಹು ಸಂಖ್ಯಾತರುಳ್ಳ ಇಶಾಶ್ಮೀರದ ಜನತೆಯ ನಾಯಕ- ಶೇಕ್ ಅಬ್ದುಲ್ಲಾ-ಭಾರತ ಕೇಂದ್ರದೊಂದಿಗೆ ಸೇರಿ ಕೊಂಡು, ಭಾರತ ನಾಯಕರಪ್ಪೇ ದೃಢತೆ' ಧೈರ್ಯ ಸಾಹಸದಿಂದ ಪಾಕಿಸ್ತಾನದ ಹಾಗೂ ಗಡಿನಾಡು ಪುಂಡರ ಸೇನೆಗಳನ್ನು ಇದಿರಿಸುತ್ತಿರುವದು ಭಾರತದ ಯೋಗ್ಯತೆ ಮತ್ತು ಸಾಮರ್ಥ್ಯಕ್ಕೊಂದು ನಿದರ್ಶನ.

ಇದುವರೆಗೆ ವಂಡನೆಯಾಡುತ್ತಾ ಬಂದ ಪಾಕಿಸ್ತಾನವು ಈಗ ತನ್ನ ಸೇನೆಗಳು ಕಾಶ್ಮೀರದ ಧಾರಿಗಾರ ಪುಂಡರೊಂದಿಗೆ ಸೇರಿಕೊಂಡಿರುವುದು ಹೌದೆಂದು ಬಹಿರಂಗವಾಗಿ ಒಪ್ಪಿಕೊಂಡಿದೆ. ಇನ್ನು ದರ ಪರಿಣಾಮವನ್ನು ಪಾಕಿಸ್ತಾನಕ್ಕೆ ಉಣ್ಣಿಸುವ ಸಂದರ್ಭ ಭಾರತ ಸರಕಾರಕ್ಕೊದಗಿ ಬರಬಹುದು. ಈಗ ಬಂದಿರುವ ಸಂಯುಕ್ತ ರಾಷ್ಟ್ರ ಸಂಘದ ಕಾಶ್ಮೀರ ಸಮಿತಿಯ ಕಾರ್ಯಕಲಾಪ ಮತ್ತು ತೀರ್ಮಾನಗಳನ್ನು ನೋಡಿಕೊಳ್ಳುವ ಅಂಶವುಳಿದಿದೆ.

ಸದ್ಯ ಭಾರತ ಕೇಂದ್ರದೊಂದಿಗೆ ಸೇರದೆ, ದೊಡ್ಡ ಪರಿಮಾಣದ ತಂಟೆಯೆಬ್ಬಿಸುತ್ತಿರುವ ಏಕ ಮಾತ್ರ ಸಂಸ್ಥಾನವೆಂದರೆ

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಸಗನ್ನಡಕ್ಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ನಸೂಲಿ ಆಥವಾ ಸಂಗ್ರಹ] ಇಲಾಖೆಯು,ತನ್ನ ಶಾಖೆಗಳಿರುವಲ್ಲಿ ರವಿಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಸ್ಟಿಸಿದಂತಿರುವ ನಮ್ಮ ಶಾಖೆಗಳು ದಪ್ಪಣದ ಅರಳೆಯ ಕ್ಷೇತ್ರಿಗಳಲ್ಲಿ-ತಮಿಳುನಾಡಿನ ಆಕ್ಕ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಾಲಬಾರು ಜಿಲ್ಲೆಯ ತೆಂಗುಗಳ, ವೈಪ್ಲವಾಟಿಕೆಗಳಿರುವಲ್ಲಿ.. ನುತ್ತು ಮುಂಬಾಯಿ ಪಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರವಿಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯು ಸದಲತ್ಕಾಲು ಸುಲಭವಾಗಿ ನಮ್ಮವರಿಪ್ಪ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಅದರಿಂದ ನಮಗೆ ಸಮಯವೂ, ಹಣವೂ ಉಳಿವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರವಿಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಕ್ಷ್ಣ ಲಕ್ಷ್ಯ ದೊರೆವುದು.

The Canara Bank Limited.

ESTD: 1906.

ವಿವಿಧ ಪಾತ್ರೆಗಳು

ಯಾವತ್ತೂ ವಿಧ ದಬ್ಬಿ, ತಾಮ್ರ ಹಿತ್ತಾಳೆ, ಕಂಚ ಪೊಂದಲಾಪುವು ಳ ವಿವಿಧ ಪಾತ್ರೆಗಳೂ ಸಾಮಾನ್ಯ ಗಳೂ ರಮಂ ಅ

ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಂಕ ವ್ಯಾಪಾರಾರ್ಯರ್,

ರಥಬೀದಿ, ಉಡುಪಿ.

ೈದರಾಬಾದ್. ಹೈದರಾಬಾದನ್ನು ಹಾ
ಗೆ ತಗುವಾಗ (ತುರುವದಂತೂ ಖಂಡಿತ
ೇ) ಭಾರತದ ಘನತೆಯು ಇನ್ನೆಷ್ಟುವರೆ
ದೆ: ಕಷ್ಟ ನಷ್ಟಗಳು ಅದರಲ್ಲಿದುವ
ಂತೂ ಸ್ವಾಭಾವಿಕ. ಆದರೆ ಹೈದರಾ
ಬಾದಿನ ಹೆಚ್ಚನ್ನು ಬಿಡಿಸಿ ಬುದ್ಧಿ ಕಲಿಸಿ
ಕೊಡಿಸಿಟ್ಟುಕೊಳ್ಳುವ ಹಿಂದೀ ನಾಯಕ
ರ ಯೋಗ್ಯತೆಯನ್ನು ಕಂಡು ಲೋಕ
ಮೆಚ್ಚುವ-ಎಲ್ಲಾ ಸಂಸ್ಥಾನಗಳಿಗೂ ಹಿಂ
ದೀ ಕೇಂದ್ರದ ಮೇಲಿನ ವಿಶ್ವಾಸ ಗೌರವ
ಗಳು ಹೆಚ್ಚುವ-ಪಾಕಿಸ್ತಾನವು ಬೆಚ್ಚುವ-
ಆ ಶುಭ ದಿನ, ವಿಜಯೋತ್ಸವ ಕಣ್ಣ
ಮುಂದಿದೆ ಎಂದು ನಿರೀಕ್ಷಿಸಬಹುದು.
ಹೈದರಾಬಾದಿನ ಇತ್ತೀಚಿಗಿನ ಅಂದೋಲ
ನೆಗಳು- ನಿಜಾಮರ ತ್ರಿಶಂಕುಸ್ಥಾನ ಮ
ತ್ತು ಚಂಚಲ ಮನೋವೃತ್ತಿ-ಭಾರತ
ನಾಯಕರ ಸುದೃಢ ಮತ್ತು ಸುವ್ಯವಸ್ಥೆ
ಯ ಕಾರ್ಯಾಚರಣೆ, ಇವೆಲ್ಲವುಗಳಲ್ಲೂ
ಆ ಬೆಳಕೇ ಹೊಳೆಯುತ್ತಿದೆ.

ದುರಾಗ್ರಹವೇ ರೂಪುಗೊಂಡಂತಿರುವ
ಪಾಕಿಸ್ತಾನ ನಾಯಕರೊಡನೆ ದೇಶದ ವಿ
ಭಜನೆಯ ಪಾಲುಪಟ್ಟುಗಳ ಸಂಬಂಧದ ಎ
ಲ್ಲಾ ಲೆಕ್ಕಾಚಾರ,ಹಾಗೂ ವ್ಯವಸ್ಥೆಗಳನ್ನು
ಶುದ್ಧೀಕರಿಸಿಕೊಂಡು ಕೈತೊಳೆದುಕೊಳ್ಳ
ಲು ಭಾರತ ನಾಯಕರು ಸಮರ್ಥರಾಗಿ
ದ್ದಾರೆ.

ಮುಂದಿನ ಸರಕಾರವು ಕ್ರಮಬದ್ಧವಾಗಿ
ಜನಪ್ರತಿನಿಧಿ, ಜನತಾ ಸರಕಾರವಾಗು
ವಂತಹ ಶಾಶ್ವತ ರಾಜ್ಯಾಂಗ ರಚನೆಯು
ಘಟನಾ ಸಮಿತಿಯಿಂದಾಗುತ್ತಿದ್ದು, ಆದ
ಕ್ಕೀಗ ಕೊನೆಯ ಆಕಾರ ಕೊಡಲಾಗು
ತ್ತಿದೆ. ಭಾರತವು ಪೂರ್ಣ ಸ್ವತಂತ್ರವಾಗು
ವ ದಿನ ದೂರವಿಲ್ಲ.

ಕೇಂದ್ರಕ್ಕೆ ಸಂಬಂಧಿಸಿದ ವಿಷಯಗ
ಳಂತೆಯೇ, ಪ್ರಾಂತ್ಯಾಧಿಕಾರಗಳೆಲ್ಲವೂ
ಪ್ರತಿಯೊಂದು ಪ್ರಾಂತಿಕ ಸರಕಾರದಿಂ
ದ ಸಮರ್ಥ ರೀತಿಯಲ್ಲಿ ನಿರ್ವಹಿಸಲ್ಪ
ಟ್ಟವೆ.

ಕರ್ನಾಟಕದಂತಹ ಭಾಗಗಳಿಗೆ ಅತ್ಯಾ
ವಶ್ಯಕವಾಗಿರುವ 'ಭಾಷಾವಾರು ಪ್ರಾಂತ್ಯ
ರಚನೆ'ಯ ಸಂಬಂಧದ ಕಾರ್ಯಾರಂಭ
ವಾಗಿದ್ದು ಹೊಸ ರಾಜ್ಯ ಘಟನೆ ಜೊತೆಗೆ
ಬರುವಾಗಲೇ ಭಾಷಾವಾರು ಪ್ರಾಂತ್ಯಗ
ಳೂ ಮೂಡಿ ಬರೆಲಿವೆ.

ಆಹಾರ, ವಸ್ತ್ರದಂತಹ ಜೀವನಾವಶ್ಯ
ಸಾಮಾಗ್ರಿಗಳ ಕೊರತೆಯನ್ನು ಪ್ರಾಂತಿಕ
ಸರಕಾರಗಳೂ ಕೇಂದ್ರ ಸರಕಾರವೂ ಜ
ಯಶೀಲವಾಗಿ ನಿವಾರಿಸಿಕೊಂಡಿವೆ; ರಾ
ಷ್ಟ್ರದ ಔದ್ಯೋಗಿಕಾಭಿವೃದ್ಧಿಗೆ ಕೇಂದ್ರ ಸ
ರಕಾರವು ಯೋಜನೆಯೊಂದನ್ನು ತಯಾ
ರಿಸಿ ಕಾರ್ಯಪ್ರವೃತ್ತವಾಗಿದೆ.

ಅಂತೂ ತುಲನಾತ್ಮಕವಾಗಿ ನೋಡಿದ
ರೆ ಸ್ವಾಂತ್ಯದ ಪೃಥಮ ವರುಷದಲ್ಲಿ ನಾ
ವು ಸಾಧಿಸಿಕೊಂಡುದು, ದಕ್ಕಿಸಿಕೊಂಡು
ದು, ಪೂರ್ತಿ ಸಮಾಧಾನಕರ. ಇನ್ನೂ ನ
ವರುಷ ಗುಲಾಮಗಿರಿಯಲ್ಲಿದ್ದ ಅನಕ್ಷುಭ
ವಿಗಳ ಮಾತು ಹಾಗಿರಲಿ; ಅಧಿಕಾರದ ಡೀ
ಘ್ರಾನುಭವವಿದ್ದ ಪ್ರಪಂಚದ ಯಾವು
ದೇ ಸರಕಾರವನ್ನಾದರೂ ಅಡಿಮೇಲು
ಮಾಡಿ ಬಿಡಬಲ್ಲ ಅಸಹ್ಯ ಅಗಣಿತ ಹೊ
ಡೆತಗಳು ಆದಿ ಭಾಗದಲ್ಲೇ ಸಿಡಿಲಿನಂತೆ
ರಗಿದಾಗ, ಅದನ್ನು ದಿಟಿಸಿ ಗೆದ್ದ ಭಾರತ ಸ
ರಕಾರವನ್ನು ಕೊಂಡಾಡಲೇಬೇಕು. ಆದಿ
ಭಾಗದ ಅಗ್ನಿ ಪರೀಕ್ಷೆಯಲ್ಲಿ ನಾವು ನಿಜ
ಕ್ಕೂ ಗೆದ್ದಿದ್ದೇವೆ.

ಟೀಕಿಸುವವರಿರಬಹುದು; ಆದರೆ ಮೇ
ಲ್ಗಡೆ ನಮೂದಿಸಿರುವ ಭಾರತ ಸರಕಾರದ
ಯೋಗ್ಯತೆಗಳು ಕುರುಡರನ್ನಾದರೂ ಸ್ಪ
ರ್ಶಿಸಿ ಪರಿಚಯ ಕೊಡುವಂತಹವಾದ್ದರಿಂ
ದಲೇ ಟೀಕೆಗಳನ್ನು ಕೇಳುವವರಲ್ಲ.

'ಹಿಂದೂವಾದಿ'ಗಳನ್ನು ವಂತೆ ಮುಸ್ಲಿಂ
ದ್ವೇಷವನ್ನೇ ಆಸ್ತಿವಾರವಾಗಿಟ್ಟುಕೊಳ್ಳು
ತ್ತಿದ್ದರೆ ಹಿಂದೀ ಸರಕಾರದ ಆಪತ್ಕುಗಳು
ದೀಗಲೇ ಸಮಾನತಾ ಸ್ಥಾಪನೆಯ ಉಗ್ರ
ಕಾರ್ಯಕ್ರಮಗಳಿಗೆ ದುಡುಕುತಿದ್ದರೆ
ತಳಕಟ್ಟನ್ನು ಗಟ್ಟಿ ಮಾಡಿಕೊಳ್ಳದೇನೇ
ಉಪ್ಪರಿಗೆ ಏರಿಸಲು ಹೊರಟಂತಾಗಿ ಎಲ್ಲ
ವೂ ಕುಸಿದು ಬೀಳುತಿತ್ತು; ಜಾತೀಯ
ಗೊಂದಲ ಮತ್ತು ನಿರ್ಗತಿಕರ ಜೀವನ ವ್ಯ
ವಸ್ಥೆ-ಪಾಕಿಸ್ತಾನ್, ಕಾಶ್ಮೀರ, ಹೈದರಾ
ಬಾದುಗಳ ಕಂಟಕ-ಇವುಗಳನ್ನೆಲ್ಲಾ
ಮುಂದಾಗಿ ನಿವಾರಿಸಿಕೊಳ್ಳದೆ ಹೊಸ ವ್ಯ
ವಸ್ಥೆಯ ನಿರ್ಮಾಣಕ್ಕೆ ತೊಡಗುತಿದ್ದರೆ,
ಉಳುಕು ಬಿದ್ದ ಕಾಲನ್ನು ಗುಣಪಡಿಸಿ
ಕೊಳ್ಳದೇನೇ "ಮುಂಜಾಸು"ಖಿದು ಹೊ
ರಡುವ ಶೃಂಗಾರಕ್ಕೆ ಳಿದಂತಾಗುತಿತ್ತು.

ಕಮ್ಯೂನಿಸ್ಟರ ವಾದವೆಂತೂ ಪಾಕಿ
ಸ್ತಾನಿಗಳ ವಾದದಂತಹದೇ!

ಜನಜೀವನದ ಅಭಿವೃದ್ಧಿಯನ್ನೂ
ಜಾತೀಯತಾ ಭಾವನೆಯಂತಹ ದುರ್ಬು
ದ್ಧಿಗಳ ನಿವಾರಣೆಯನ್ನೂ ಏಕಪ್ರಕಾರವಾ
ಗಿಟ್ಟುಕೊಂಡು, ಕಾಲಡಿ ಮತ್ತು ಕಣ್ಣು
ಮುಂದಿರುವ ಅಪಾಯ ಮತ್ತು ಅನುಕೂ
ಲತೆಗಳನ್ನೆಲ್ಲಾ ತುಲನಾತ್ಮಕ ನೋಟದಿಂ
ದ ನೋಡಿಕೊಂಡು, ಭಾರತ ಸರಕಾರವು
ತೂಕತಪ್ಪದೆ,ಅಭಿವೃದ್ಧಿಯ ಕಡೆಗೆ ಸಾಗಿ
ದೆ. ನಿಜವಾದ 'ಜಾತೀ'ಗಳೇನೆನಿವೆಯೋ,ಅ
ವೆಲ್ಲಾ ದೃಷ್ಟಿಗಳಿಂದ ನೋಡುವ ಎಲ್ಲರೂ
ಭಾರತ ಸರಕಾರವು ಹಿಡಿದ ಹಾದಿ ಮ
ತ್ತು ವಹಿಸಿರುವ ಧೋರಣೆ ಸರಿ, ಎಂದು
ಒಪ್ಪಲೇ ಬೇಕು.

ಆದ್ದರಿಂದ ನಾವು ಕಳೆದೊಂದು ವರು
ಷವು ನಮ್ಮ ಅಭಿಮಾನದ, ಹೆಗ್ಗಳಿಕೆಯ
ಅವಧಿ. ಈ ಪ್ರಥಮ ಸ್ವರಾಜ್ಯ ವರ್ಧಂ
ತಿಯನ್ನು ಗಂಭೀರವಾಗಿ, ಗೌರವಪೂರ್ವ
ಕ, ತೃಪ್ತ ಮನಸ್ಸಿನಿಂದ ನಾವು ಆಚರಿಸ
ಬೇಕು. ಅಗೋಸ್ತು 15ನೇ ಆದಿತ್ಯ
ವಾರ ದಿನದಲ್ಲಿ, ಕಳದ ಒಂದು ವರುಷದ
ಸರ್ವಸಾರವನ್ನೂ ನಾವು ನಮ್ಮಲ್ಲಿ ಸಾ
ಕ್ಷಾತ್ಕರಿಸಿಕೊಂಡು, ಕಣ್ಣಮುಂದುಳಿ
ದಿರುವ ಕಂಟಕಗಳನ್ನು ಸಲಭದಲ್ಲಿ ಗೆಲ್ಲು
ವ ಸ್ವಾತಂತ್ರ್ಯ ಯೋಧರಾಗಬೇಕು.

ವರುಷದ ಅನುಭವ-
-ಕಲಿಯತಕ್ಕ ಪಾಠ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋ
ಗಿಸಿದರೆ ಹದಿವಯಸ್ಸು ಋತುಸ್ರಾವವಾಗುವು
ದು ಹತೋಟಿಗೆ ಬರುವುದು, ಈ ಔಷಧ
ಸೇವನೆಯಿಂದ ತೀವ್ರ ಗುಣಹೊಂದಬ
ಹುದು, ಯಾವ ಬಾಧಕವೂಯಿಲ್ಲ ಸಾವಿ
ರಾರು ಮಂದಿಗೆ ಪಾತ್ರಿ ಗುಣವಾಗಿದೆ.
ಬೆಲೆ, ರೂ. 3/-; ಸ್ಪೆಶ್ಯಲ್ ರೂ. 5-;
ಅಧಿಕಾಧಿಕ ಸ್ಪೆಶ್ಯಲ್ ರೂ.೭/-[ವಿ. ಪಿ.
ಹಣ್ಣೆರಡಾಣೆ ಪ್ರತ್ಯೇಕ]

Mrs P. DEVEE, F. DS. (N. J.)
Tollygunge CALCUTTA.
ಸ್ಥಾಪಕಿಯರು: ಶಹಾಕಂಪೆನಿ, ಮಂಗಳೂರು

THE VIJAYA BANK LIMITED.

Season deposits are now accepted at the Head Office and Branches of the Bank in sums of Rs. 1000/- and over, in multiples of Rs. 500/- at the following rates:-

For 3 months at 2½% per annum.
For 6 months at 3½% per annum.

For further particulars you may apply or call at any of our following Offices.

Branches: Kadri-Road, Mangalore, City-Mangalore, Udipi, Kaup, Coondapur, Karkala, Brahmavar, Kasaragod, Puttur, Byndoor, Bombay, Kanbangad & Mercara

Total Resources Exceed 36 lacs.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:-

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್., ಉಡುಪಿ

ಇವರ ಶಾಖಾ ಏಜೆಂಟರುಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನತಾಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು
ಸಲ್ಲಿಸಿಯತ್ನೆವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಚ್ಛಾಗಲೀ, ಪ್ರತಿನಿಧ್ಯ ಪಡೆಯಲಿಚ್ಛಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಎಲ್ಲಾ ತರದ ಶಾಸ್ತ್ರೀಯ
ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನೇ
ಉಪಯೋಗಿಸಿರಿ.

ಅಮ್ಮ ತಾಂಜನ
ಕಡಿಮೆಸ, ತಿರೆ
ವೇದನೆ, ಉಳುಕ
ಳಿತ್ತಿಗೆ, ಕ್ಷುಜ
ಹಲ್ಲು ವೇದನೆಗಳ
ಗೂ ಎದೆನೋವು,
ಭಾದುಗಳು ಬಾತು
ಕೊಳ್ಳುವುದು, ಜೇಲು
ಬಿಷ ಮುಂತಾದ ಜೇಗ
ಪಶ್ಚಾತ್ಕ ಮೊದಲೆ
ಸಿದಲ್ಲಿ ಎಲ್ಲಾ
REGD. ರೋಗಗಳಿಗೂ ಸಾಟಿ
ಆಫ, ಹುಳುಕಡ್ಡಿ ಮತ್ತು ಸಣ ನಮ್ಮಲ್ಲಿ ಸಿಕ್ಕುತ್ತದೆ

ಅಮ್ಮ ತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗ ಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿ ವಾಟುಗಳಿಂದ ಆವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky aBnk Ltd.
Moolky, S. K.

ಅಂತರ್‌ರಾಷ್ಟ್ರೀಯ ★ ಆಂದೋಲನಗಳು ★

ಲೋಕದ ಹಾಗೂ ಭಾರತದ ರಾಜಕೀಯ ರಂಗಗಳಲ್ಲಿ ಕಳೆದ ವಾರ ನವ ಚೇತನ-ಹೊಸ ಜೀವ-ಕಂಡು ಬಂದಿವೆಯಾದರೂ ಈ ಕ್ಷಣಕ್ಕೆ ಗಣ್ಯ ಹೊಸ ಮಾರ್ಪಾಟೇನೂ ಆಗಿಲ್ಲ. ದುಸ್ಥಿತಿಯಿಂದ ಬೀಸರಗೊಡು ಸುಸ್ಥಾನ ಸೇರಬೇಕೆಂದು ಒಮ್ಮೆ ಹೊರಡಲೇಳುವುದು-ಆದರೆ ನಡೆಯಲಾಗದ ಪುನಃ ಹಿಂದಿನ ಸ್ಥಾನಕ್ಕೇನೇ ಬಂದು ಬೀಳುವುದು-ಈ ಅವಸ್ಥೆಯು ಎಲ್ಲಾ ವಿದ್ಯಮಾನಗಳಲ್ಲೂ ಕಂಡು ಬಂದಿದೆ!

ಸಮೀಪ ಭವಿಷ್ಯದಲ್ಲೇ ಲೋಕಕ್ಕೆ ಶಾಂತಿ ಸುಬಿಸ್ಥೆಯ ಯೋಗವಿರುತಿದ್ದರೆ ಸ್ಥಿತಿಗತಿ ಹೀಗಾಗುತ್ತಿತ್ತೆ?

ಲೋಕ ವಿದ್ಯಮಾನಗಳು

ಅಮೇರಿಕ, ಬ್ರಿಟನ್, ಫ್ರಾನ್ಸುಗಳಿಗೂ ರಶ್ಯಕ್ಕೂ ಬರ್ಲಿನ್ ನಗರದಲ್ಲೆದ್ದಿರುವ ನೈಸರ್ಗಿಕ ಕಾರಿತು ಒಂದು ಕೇರ್ಮಾನ ಕಂಡು ಹಿಡಿಯಲು ಮೇಲಿನ ಚತುರ್‌ರಾಷ್ಟ್ರೀಯ ವಿದೇಶ ಮಂತ್ರಿಗಳ ಸಮ್ಮೇಲನವೊಂದು ಸದ್ಯದಲ್ಲೇ ಕೇರುವ ದೆಂದೆ. ತಿಳಿದು ಬರುತ್ತದೆ. ರಶ್ಯವು ಹಾಕಿದ ಬರ್ಲಿನ್ ದಿಗ್ಬಂಧನಗಳ ಕಾರಿತು ಪ್ರತ್ಯಕ್ಷ ಸ್ಟಾಲಿನರೊಡನೆಯೇ ಮಾತಾಡಲು ಮಾಸ್ಕೋಗೆ ಹೋಗಿದ್ದ ಪಾಶ್ಚಾತ್ಯ ತ್ರಿರಾಷ್ಟ್ರಗಳ ಪ್ರತಿನಿಧಿಗಳು ಕೈಮ್ಮಿನಿನಲ್ಲಿ ಸ್ಟಾಲಿನರೊಡನೆ ಸವಿವರ ಚರ್ಚೆ ನಡೆಸಿದ್ದರಲ್ಲದೆ ವಿದೇಶ ಮಂತ್ರಿ ಮೊಲಟವ ರೊಡನೆ ಇನ್ನಷ್ಟು ಸುದೀರ್ಘ ಪರ್ಯಾಲೋಚನೆ ನಡೆಸಿದ್ದರು. ಇವೆಲ್ಲವುಗಳ ಪರಿಣಾಮವಾಗಿ 'ಚತುರ್‌ರಾಷ್ಟ್ರಗಳು ಒಂದು ಸಂಧಾನಕ್ಕೆ ಸಮೀಪವರ್ತಿಗಳಾಗಿವೆ' ಎಂಬ ಆಶೆ ಮೊಳೆತಿದೆ. ಆದರೆ ಕೊನೆಗೆ ಹೇಗಾಗುವುದೆಂಬುದು ಆ ಸಂಬಂಧವಾಗಿ ಸದ್ಯದಲ್ಲಿ ಸೇರಲಿರುವ ಚತುರ್‌ರಾಷ್ಟ್ರೀಯ ವಿದೇಶ ಮಂತ್ರಿಗಳ ಸಮ್ಮೇಲನದ ತೀರ್ಮಾನವನ್ನವಲಂಬಿಸಿದೆ. ಬರ್ಲಿನ್‌ನಲ್ಲಿ ಅಂಗ್ಲೋ ಅಮೆರಿಕಾನ ವೈಮಾನಿಕರು ಕ್ರಮಭಂಗ ವರ್ತನೆ ಕೈಕೊಳ್ಳಿರುವರೆಂಬ ರಶ್ಯದ ಎಚ್ಚರಿಕೆ ಈಗಲೂ ಕೇಳಬರುತ್ತಿದ್ದು ಅಂಧಭವನ್ನು ಹೊಡೆದು ಕೆಡಹಲಾಗಿರುತ್ತೆಂಬ ಬೆದರಿಕೆಯ ಸೂಚನೆಗಳಿಗೂ ಕೊರತೆಯಿಲ್ಲ. ರಶ್ಯವು ಇದುವರೆಗೂ ಗೀಕರಿಸಿಕೊಂಡು ಬಂದ ಜರ್ಮನ್ ಧೋರಣೆಗನುಕೂಲವಲ್ಲದ ಯಾವ ತೀರ್ಮಾನಕ್ಕೂ ಮುಂದಿನ ಮಾತುಕತೆಗಳಲ್ಲಾದರೂ ರಶ್ಯವು ಒಪ್ಪುವಂತಿಲ್ಲ ನೆಂಬುದು ಖಂಡಿತ. ಜರ್ಮನಿಯಲ್ಲಿ 'ಹಿಡಿ ರಶ್ಯದ ಕೈಯಲ್ಲಿಇಲಗ, ಪಾಶ್ಚಾತ್ಯ ರಾಷ್ಟ್ರಗಳ ಕೈಯಲ್ಲಿ' ಎಂಬಂತಾಗಿದೆ.

ಸೆಲಸ್ಟೈನಿನ ವಿದ್ಯಮಾನವನ್ನು, ಫ್ರಕ್ಷಿತ ಕಾನ್ಸಿಲಿನ ಪ್ರತಿನಿಧಿ-ಖಂಡಿತರ್ತ-ಬರ್ನಾಡೊಟ್ಟೆಯವರು ಯಾವ ಗುರಿಗೆ ಮುಟ್ಟಿಸುವರೋ ಹೇಳಲಾಗುವದಿಲ್ಲ. ಆದರೆ ಪ್ರಮುಖ ರಾಷ್ಟ್ರಗಳಿಗೆ ಅಲ್ಲಿ ಇರುವ ಸ್ವಾರ್ಥಸಕ್ತಿಯು ವಾತಾವರಣವನ್ನು ಕಲುಷಮೇಘಾವರವಾಗಿ ಮಾರ್ಪಡಿಸಿದೆ, ತತ್ಪರಿಣಾಮವಾಗಿ ಒಮ್ಮೆ ಭುಗ್ಗೆಂದು ಹೋರಾಟವಹ್ನಿ ಹಬ್ಬಿದ್ದ ಪೆಲಸ್ಟೈನಿನಲ್ಲಿ, ಈಗ ಕೆಡಿ--ಬೂದಿಗಳ ಮಿಶ್ರರೂಪ ಕಂಡುಬರುತ್ತಿದೆ. ಯೆಹೂದಿಗಳ ಇಸ್ರಾಯೆಲ್ ಸರಕಾರವು ಸಂಧಾನ ಮಾತುಕತೆಗಾಗಿ ವಿರೋಧಿ ಅರಬರನ್ನೀಗ ಆಮಂತ್ರಿಸಿರುವುದು ವಿಶೇಷ ಹಾಗೂ ಆಶ್ಚರ್ಯಕರ ಘಟನೆ. ಪೆಲಸ್ಟೈನಿನಲ್ಲಿ ತಮ್ಮ ಶಕ್ತಿ ಮತ್ತು ಹಕ್ಕಿಗೆ ಮಿಕ್ಕಿ ಆಧಿಕಾರಾಕ್ರಮಿಸಿ ಕೊಂಡಿರುವ ಯೆಹೂದಿಗಳು ಮುಂದಿನ ಅಪಾಯ ನಿವಾರಣೆಗಾಗಿ ಅರಬರಿಂದಿರು ಬುದ್ಧಿವಂತಿಕೆ ಪ್ರದರ್ಶಿಸುತಿದ್ದಾರೆಂದೂ, ಸಂಯುಕ್ತ ರಾಷ್ಟ್ರ ಸಂಘದ ಆಶ್ರಯದಲ್ಲಿ ಇಂತಹ ಆಟಗಳಿಗೆ ಒಂದಲ್ಲೊಂದು ರೀತಿಯ ವಿಜಯ ದೊರಕಲಿದೆಯೆಂದೂ ಭಾವಿಸಬಹುದು.

ಮಲಯದಲ್ಲಿ ಕಮ್ಯೂನಿಸ್ಟ್ ನಿರ್ಮಿತ ಬಂಡಾಯ ಯಥಾ ಪ್ರಕಾರ ಸಾಗಿದೆ. ಅಲ್ಲಿ ಬ್ರಿಟಿಷ್ ಹತೋಟಿಯಾದಳತೆಯನ್ನೇ ಆಡಿ ಮೇಲು ಮಾಡಿ ಸೋವಿಯೆಟ್ ಆಡಿಯಾಳು ಸರಕಾರ ಸ್ಥಾಪಿಸುವ ಗುಪ್ತ ಯೋಜನೆಯನ್ನು ಅಸ್ತಿವಾರವಾಗಿ ಇಟ್ಟುಕೊಂಡು ಎಬ್ಬಿಸಿದ ಗೊಂದಲವಿದು ಎಂಬ ಗುಟ್ಟನ್ನು ಬ್ರಿಟನರು ಕಂಡುಹಿಡಿದಿದ್ದಾರೆ.

ಬ್ರಿಟಿಷ್ ಸಂಸ್ಥಾನವು ತನ್ನ ಅಗ್ನೇಯ ಆಶ್ಯಾ ಕಾಮನ್‌ವೆಲ್ತಿನ ರಕ್ಷಣಾ ಯೋಜನೆಗೆ ತೊಡಗಿದೆ. ಅದಕ್ಕಾಗಿ ಈ ಭಾಗಗಳ ಬ್ರಿಟಿಷ್ ಗವರ್ನರುಗಳು ಹಾಗೂ ಸೇನಾ ನಾಯಕರು ಇದೇ ತಾ 7ರಂದು ಸಿಂಗಾಪುರದಲ್ಲಿ ಗುಪ್ತ ಸಭೆ ಸೇರಿ ಪರ್ಯಾಲೋಚಿಸತೊಡಗಿದ್ದಾರೆ. ಮಲಯ, ಸಿಂಗಾಪುರ, ಹೋಂಗ್‌ಕೋಂಗ್, ಸರವಕ್ ಮತ್ತು ಉತ್ತರ ಬೋರ್ನಿಯೊ, ಮುಂತಾದ ಎಲ್ಲಾ ಬ್ರಿಟಿಷ್ ನೆಲೆಗಳಲ್ಲೂ ಈಗ ವಿರೋಧ, ಅಸಮಾಧಾನಗಳ ದೆಸೆಯಿಂದ ಕಂಟಕವೆದ್ದಿದೆ. ಇದರ ಪರಿಹಾರೋಪಾಯಗಳು ಸಿಂಗಾಪುರದಲ್ಲಿ ಆಲೋಚಿಸಲ್ಪಡುತ್ತಿವೆ.

ಅಮೆರಿಕದಲ್ಲಿ ಹಿಂದೀ ರಾಯಭಾರಿಯಾಗಿನೇಮಕಗೊಂಡ ಬೆನಗಲ್‌ರಾಮರಾಯರು ಅಮೆರಿಕಾಧ್ಯಕ್ಷ ಟ್ರುಮೇನರಿಗೆ ಕ್ರನು ಪ್ರಕಾರ ರಾಯಭಾರ ಪ್ರಥಮ ಪರಿಚಯ ಸಲ್ಲಿಸಿದಾಗ ಅಧ್ಯಕ್ಷ ಟ್ರುಮೇನರು 'ಗಾಂಧಾಂತರದ ಒಂದು ವರುಷವನ್ನು ಭಾರತವು ಶ್ರೇಯಸ್ಕರ ರೀತಿಯಿಂದಕಡೆ ಹಾಯ್ದು ದನ್ನು ಶ್ಲಾಘಿಸಿದರಲ್ಲದೆ, ಭಾರತಕ್ಕೆ ಅಮೇರಿಕದ ಸಹಕಾರ ಮತ್ತು ಅದರ ಆರ್ಥಿಕಾಭಿವೃದ್ಧಿ ಯೋಜನೆಗಳಿಗೆ ಸಹಾಯ ವಿದೆಯೆಂಬ ಆಶ್ವಾಸನೆಯಿತ್ತರು.

ಬರ್ಮದಲ್ಲಿ ಕಮ್ಯೂನಿಸ್ಟರ ಬಂಡಾಯ ಬಲಗೊಳ್ಳುತ್ತಾ ಬಂದಿದೆ. ಅಲ್ಲಲ್ಲಿ ಧ್ವಂಸ ಕಾರ್ಯಗಳು ನಡೆದಿವೆ. ಈ ಚಟುವಟಿಕೆಗಳ ನಿರ್ಮೂಲನಕ್ಕಾಗಿ ಸಾರ್ವತ್ರಿಕ ದಮನ ನೀತಿಯನ್ನು ಬರ್ಮದ ಸರಕಾರ ಕೈಕೊಳ್ಳಲಣಿಯಾಗಿದೆ. ಬರ್ಮದ ದೊಡ್ಡ ಬಂದರಗಳಲ್ಲೊಂದಾದ ಬಾಸ್ಸೀನ್‌ನಲ್ಲಿದ್ದ 50,000 ಟನ್ ಅಕ್ಕಿ ದಾಸ್ತಾನನ್ನು ಕಮ್ಯೂನಿಸ್ಟರು ನಾಶಮಾಡಿದುದರಿಂದ ಅಲ್ಲಿಂದ ವಿದೇಶಗಳಿಗೆ ರಫ್ತಾಗಲಿದ್ದ ಅಕ್ಕಿ ಸರಬರಾಯಿಗೆ ಧಕ್ಕೆ ಬಿದ್ದಿದೆ.

ಹಿಂದೀಯರು ಹಲವು ವಿಧದ ಕಷ್ಟ ನಷ್ಟಗಳಿಗೀಡಾಗಿರುವ ದಕ್ಷಿಣಾಫ್ರಿಕದಲ್ಲಿ, ಜನರಲ್ ಸ್ಮಟ್ಸ್ ಸರಕಾರದ ಬದಲಿಗೆ ಈಗ ಡಾ! ಮಲನರ ಸರಕಾರವಿದೆಯಷ್ಟೆ! ದಕ್ಷಿಣಾಫ್ರಿಕದ ಹಿಂದೀಯರ ಕುರಿತು ಹೊಸ ಸರಕಾರದ ಧೋರಣೆಯೇನೆಂಬುದನ್ನು ತಿಳಿಯಲು ಅಲ್ಲಿಯ ಹಿಂದೀ ನಾಯಕರು ಪ್ರಧಾನ ಮಂತ್ರಿ ಡಾ! ಮಲನರ ಭೇಟಿ ಯಾಚಿಸಿದಾಗ ಅವರೂ, ಅವರ ಗೃಹ ಮಂತ್ರಿಯೂ ಭೇಟಿಗೊಪ್ಪಲಿಲ್ಲ. ದಕ್ಷಿಣಾಫ್ರಿಕದಿಂದ ಹಿಂದೀಯರನ್ನು ಹೊರಗಟ್ಟುವ ಉಗ್ರ ಕಾರ್ಯಾಚರಣೆಗೆ ಡಾ! ಮಲನ್ ಸರಕಾರವಿಳಿಯಲಿದೆಯೆಂದೂ, ಜನರಲ್ ಸ್ಮಟ್ಸ್ ಕೃತ್ಯಗಳಿಗಿಂತ ಕಠೋರವಾದ ದಬ್ಬಾಳಿಕೆಗೆ ಹಿಂದೀಯರೀಡಾಗಲಿದ್ದಾರೆಂದೂ ಭೀತಿಯೆದ್ದಿದೆ.

ಹೈದರಾಬಾದ್ ಮಂಥನ

ಈಗ ಭಾರತದ ಸ್ಥಿತಿಗತಿಗಳ ಕಡೆಗೆ ನೋಡೋಣ-ದೀರ್ಘ ಕಾಲದಿಂದ ಸರ್ವ ಭಾರತೀಯರ ಲಕ್ಷ್ಯವನ್ನೆಳೆದಿರುವ, ಇನ್ನು ಸಾನೂಹಿಕ ಶಕ್ತಿಯನ್ನೂ ಆಹ್ವಾನಿಸಬಹುದೆಂಬ ಸ್ಪಷ್ಟ ಚಿಹ್ನೆ ಮೂಡಿರುವ ಪ್ರಶ್ನೆಗಳು ಎರಡೇ, ಹೈದರಾಬಾದ್ ಮತ್ತು ಕಾಶ್ಮೀರ.

ಹೈದರಾಬಾದ್ ರಾಜಕಾರಣದಲ್ಲಿ ಈಗ ನಡೆದು ಮುಗಿದ ಒಂದು ದುರಂತ ನಾಟಕದಲ್ಲಿ ವಿಶೇಷ ರೀತಿಯ ಜಿಗುಪ್ಸೆ, ಅಹಹಾಸ್ಯ, ರೋಷ, ಉದ್ವೇಗಗಳನ್ನೆಬ್ಬಿಸುವ ದೃಶ್ಯಗಳಿದ್ದುವು. ಆದರಲ್ಲಿ ನಿಜಾಮರ ಕುಹಕಿ, ಚಂಚಲಿ, ದುಷ್ಟಬುದ್ಧಿವು ಮುಖ್ಯವಾದುದು!

ಬೆಂಗಳೂರಿನಲ್ಲಿದ್ದ ಸರ್. ವಿಜ್ಞಾರು ಭಾರತ ಮತ್ತು ಹೈದರಾಬಾದುಗಳೊಳಗಿನ ವಿವಾದದಲ್ಲಿ ರಾಜೀ ಯತ್ನ ನಡಿಸುವುದಕ್ಕಾಗಿ ನವಢಿಲ್ಲಿಗೆ ಹಾರಿದ್ದರು. ಅಲ್ಲಿ ಭಾರತ ನಾಯಕರೊಡನೆ ಮುಖತಃ ಪರ್ಯಾಲೋಚಿಸಿ ಪರಿಸ್ಥಿತಿಯೆಷ್ಟು ಗಂಭೀರ ಹಾಗೂ ವಿಷಮವಾಗಿದೆ, ಎಂಬುದನ್ನು ನಿಜಾಮರಿಗೆ ಅಲ್ಲಿಂದಲೇ ವರದಿ ಮಾಡಿದ್ದರು. ನವಢಿಲ್ಲಿಯಲ್ಲಿ ನಿಜಾಮರ ಹ್ಯಾಕಮಿಶನರರಾಗಿದ್ದ ನವಾಬ್ ಝಯಿನ್ ಯಾರ್ ಜಂಗರು ಶಾಂತಿ ಪ್ರಯತ್ನ ಭಾಗಿಯಾಗಿ ನವಢಿಲ್ಲಿಯಿಂದ ಹೈದರಾಬಾದಿಗೆ ಎರಡರಡು ಸಲ ಓಡಾಡಿದ್ದರು. ಈ ಜೋಡಣಾಯತ್ನವು ಪ್ರಥಮದ ನಿಜಾಮರ ಬಯಕೆಗನುಸಾರನಾಗಿಯೇ ನಡೆದಿದ್ದರೂ, ಹೈದರಾಬಾದಿನ ಪ್ರಧಾನ ಮಂತ್ರಿ ಮಿ. ಲಾಯಕ್‌ಅಲಿ ಮತ್ತು ರಝಾಕಾರ ಸಂಸ್ಥೆಯ ಪ್ರತಿನಿಧಿ ಮಂತ್ರಿಗಳು ನಾಲ್ವರು ಈ ಶಾಂತಿ ಯತ್ನಕ್ಕೆ ಬದ್ಧ ವಿರೋಧವಿದ್ದು ರಾಜೀನಾಮೆ ಕೊಡುವ ಬೆದರಿಕೆ ಬೀರಿದ್ದರಿಂದಲೂ ರಝಾಕಾರರು ದಂಗೆ ಯೆದ್ದುದರಿಂದಲೂ, ಆದಿ ಭಾಗದ ನಿಜಾಮರಿಗೆ ಅಂತ್ಯಭಾಗದ ನಿಜಾಮರೇ ವೈರಿಯಾದರು; ರಝಾಕಾರರ ಬಗಲೊಳಗೆ ಸೇರಿಕೊಂಡು ಭಾರತದೊಂದಿಗೆ ಸೇರಿಕೊಳ್ಳುವ ಸೂಚನೆಯನ್ನು ತಿರಸ್ಕರಿಸಿದರು. ತತ್ಪರಿಣಾಮವಾಗಿ ಸರ್. ವಿಜ್ಞಾರ್ ಹೋದಂತೆ ಮರಳಬೇಕಾಯಿತು; ಝಯಿನ್ ಜಂಗರು ತನ್ನ ಸ್ಥಾಪಿತ ಬಡಬೇಕಾಯಿತು. ಭಾರತ ನುಚ್ಚು ಹೈದರಾಬಾದುಗಳ ವೈಷಮ್ಯವು ಪರಮಾವಧಿಗೆ ಮುಟ್ಟಿ ಅವೆರಡೂ ವೈರಿಗಳಾಗಿ ಮುಖಾಮುಖಿ ನಿಂತಲ್ಲಿಯೇ ಉಳಿದವು.

ನಿಜಾಮ್ ಸಮ್ಮುಖದಲ್ಲಿ--ಮತ್ತವರ ಹೈದಮ್ ಸ್ಲಾಮೆರ್ ಮಿಲಿಟರಿಯವರಲ್ಲಿ, ಏರು ತಗ್ಗು, ಹಿಂದು ಮುಂದು, ಅತ್ಯಂತ ಸ್ವಾರಸ್ಯದ್ವಿದ್ವೆಯಾದ್ದರಿಂದ ಆ ವಾರ್ತಾ ಸಾರ ಕೆಳಗಡೆಯಲ್ಲಿದೆ:--

ನಿಜಾಮರ 'ಮುಂಜಾನೆಯ ಬುದ್ಧಿ'!

ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಪ್ರಧಾನಿ ಆಟ್ಲೀಗಳು ಚರ್ಚಿಲ್‌ರಿಗಿಂತ ಶಾಂತವಾಗಿ ಆಡಿದ ಮಾತುಗಳಿಂದಲೂ ಜಾಗತಿಕ ಸಂಘದಲ್ಲಿ ತನ್ನ ಪರವಾಗಿ ವಿಜ್ಞಾಪನೆಯನ್ನು ಮುಟ್ಟಿಸಬೇಕೆಂದು ತಾನು ಕೇಳಿಕೊಂಡುದಕ್ಕೆ ಉತ್ತರವಾಗಿ 'ಹುಚ್ಚಾಟ ಬಿಟ್ಟು ಭಾರತದೊಂದಿಗೆ ಸೇರಿಕೊಳ್ಳಿ' ಎಂದು ಆಟ್ಲೀಗಳು ತನಗೆ ಕೊಟ್ಟ ಉಪದೇಶದಿಂದಲೂ ಹೈದರಾಬಾದ್ ನಿಜಾಮರ ಕಣ್ಣಾ ತೆರೆಯಿತು; ಹಿಂದೀ ಸೇನೆಗಳು ನಾನಪೇಕ್ಷಿತಂತೆ ಹತನ್ನ ಕ್ಷೇತ್ರದೊಳಗದಾಯ ತಂಟೆ ನಿವಾರಣೆಗೆಂದು ಬಂದು ಅಲ್ಲಿಯೇ ತಾತ್ಕಾಲಿಕವಾಗಿ ಡೇರೆ ಹೊಡೆದುದರಿಂದ ಆ ಕಣ್ಣು ಮತ್ತಷ್ಟು ಶುಭ್ರವಾಯಿತು; ಭಾರತ ಸರಕಾರವು ಹೇರಿದ ದಿಗ್ಬಂಧನದಿಂದಂತೂ ಕಣ್ಣಿನಂತೆಯೇ ನಿಜಾಮರ ಬಾಯಿಯೂ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್
ಬೇಂಕ್ ಲಿಮಿಟೆಡ್
ಹೆಡ್ ಆಫೀಸು: ಕುಂದಾಪುರ, ದ. ಕ.
ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.
ಒಂದು ವರ್ಷಕ್ಕೆ ಸೇಕಡಾ 3/- ರೂಪಾಯಿ,
ಅತೀ ಕಡಿಮೆ ಪೊಲಲಗಿನಲ್ಲಿ ಸೇವಿಂಗ್ಸ್ ಖಾತೆಗಳು ತೆರೆಯಲ್ಪಟ್ಟು ಡಿಮ್ಯಾಂಡ್ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು
ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.
ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಹತ್ತಿರ ಖಾತೆಗೆ ಬರೆಯಿರಿ ತಿಳಿಯಿರಿ,
The Agricultural & Industrial Bank, Limited.
Head Office: Coondapoor, S. K.

★ನಿಜಾಮ್ ಬುದ್ಧಿಯು ★ಉದಯಾಸ್ತಮಾನ!

ತೆರೆಯಿತು.- ಆದ್ದರಿಂದ ತನಗಿನ್ನು ಭಾರತದೊಂದಿಗೆ ಜೋಡಣೆಗೊಳ್ಳುವದೊಂದಿಗೆ ವಿನಹ ಬೇರೆ ಉದ್ಯಪ್ಪವುಳಿದಿಲ್ಲವೆಂದು ಮನಗಂಡ ನಿಜಾಮರು, ಲೊರ್ಡ್ ಮೌಂಟ್‌ಬ್ಯಾಟನರು ಕೊನೆಯ ಕಾಲದಲ್ಲಿ ಮುಂದಿಟ್ಟಿದ್ದ ಜೂನ್ ಶರ್ತಗಳನ್ನು ಅಂಗೀಕರಿಸಲು ತಾನು ತಯಾರೆಂದು ಸರ್. ಮಿರ್ಜಾರಿಗೆ ಸೂಚನೆ ಕೊಟ್ಟರು. ತನ್ನ ಸ್ವಭಾವವನ್ನು ಬಿಚಲಾಯಿಸದೆ, ಆ ಶರ್ತಗಳಲ್ಲೂ ತುಸು ತಿದ್ದುಪಡಿಯಾಗ ಬೇಕೆಂದೇನೋ ನಿಜಾಮರು ಅಪೇಕ್ಷಿಸಿದ್ದರಂತೆ. ಇತ್ತ ತನ್ನ ಹ್ಯಾಕಮಿಶನರ್ ಆಗಿ ನವಢಿಲ್ಲಿಯಲ್ಲಿರುವ ಫೆವಾಬ್ ಝಾಯಿನ್ ಯಾರ್‌ಜಂಗರಿಗೂ ಇದೇ ಮಾಹಿತಿಯ ಪ್ರೇರಣೆ ನಿಜಾಮರಿಂದ ಹೋಯಿತು. ಸರಿ. ಒಂದೆಡೆಯಿಂದ ಸರ್. ಮಿರ್ಜಾ, ಇನ್ನೊಂದೆಡೆಯಿಂದ ಜಾಯಿನ್ ಯಾರ್ ಜಂಗ್ ಇಬ್ಬರೂ ಸೇರಿ, ನಿಜಾಮರನ್ನು ಭಾರತ ಕೇಂದ್ರದೊಂದಿಗೆ ಸೇರಿಸುವ ಯೋಜನೆ ತಯಾರಿಗೆ ತೊಡಗಿದರು. ಈ ಪ್ರಯತ್ನಕ್ಕೆ ನಿಜಾಮರ ಆಶೆಯೇ ಆಧಾರ. ಇದನ್ನವಲಂಬಿಸಿ, ಹಿಂದೀ ಸರಕಾರದ ಸಂಸ್ಥಾನಿಕ ಶಾಖಾ ಕಾರ್ಯದರ್ಶಿ ಶ್ರೀ. ವಿ. ಪಿ. ಮೆನನರೊಡನೆ ಸರ್. ವಿ ರ್ಝಾ ಮತ್ತು ಜಾಯಿನ್‌ಯಾರ್ ಜಂಗರು ನಡೆಸಿದ ಕೊನೆಯ ಚರ್ಚೆಯಲ್ಲಿ ಎಲ್ಲವೂ ಸಿದ್ಧವಾಗಿ ನಿಜಾಮರ ಕಟ್ಟಕಡೆಯ ಅನುಮತಿಮಾತ್ರ ಸಹಿ ಪಡೆಯುವದೊಂದೇ ಬಾಕಿಯಿತ್ತು.

ನಿಜಾಮರ 'ಸಂಜೆಯ ಬುದ್ಧಿ!'

ಆದಕ್ಕಾಗಿ ನವಾಬ್ ಜಾಯಿನ್ ಯಾರ್ ಜಂಗರು ನವಢಿಲ್ಲಿಯಿಂದ ಹೈದರಾಬಾದಿಗೆ ಹೊರಟರು; ಅವರು ಅಲ್ಲಿ ಎಲ್ಲಾ ವ್ಯವಸ್ಥೆ ಮಾಡಿ ನವಢಿಲ್ಲಿಗೆ ಬಂದೊಡನೆಯೇ ಸರ್ ಮಿರ್ಜಾ ಮತ್ತು ಶ್ರೀ ವಿ. ಪಿ. ಮೆನನರು ಹೈದರಾಬಾದಿಗೆ ಹೋಗಿ ಜೋಡಣೇ ಕರಾರಿಗೆ ನಿಜಾಮರ ಸಹಿ ಪಡೆಯುವದೆಂದು ನಿಶ್ಚಯವಾಗಿತ್ತು. ನಿಜಾಮರಿಂದಲೇ ಅವರಬ್ಬರಿಗಾಮಂತ್ರಣ ಹೋಗಿತ್ತೆಂದೋ, ಹೋಗಲಿತ್ತೆಂದೋ ವಾರ್ತೆಯಿದೆ. ಆ ಮೊದಲು ನವಾಬ್ ಜಾಯಿನ್ ಯಾರ್ ಜಂಗರು ಹೈದರಾಬಾದಿಗೆ ಹೋಗಿ ನಿಜಾಮರೊಡನೆ, ಪ್ರಧಾನಿ ಮಿ. ಲಾಯಿಕ್‌ಅಲಿಗಳೊಡನೆ ಮತ್ತು ನಿಜಾಮ್ ಮಂತ್ರಿಮಂಡಲಿಯೊಡನೆ ಸಾಲದುದಬಕ್ಕೆ ಮಿ. ಲಾಯಿಕ್‌ಅಲಿ ಮತ್ತು ರಝಾಕಾರ್ ನಾಯಕ ಕಾಸಿಮ್ ರಜ್ವಿಯೊಡನೆ, ಗುಪ್ತ ಹಯರ್ಲೋಚನೆಗಳನ್ನು ನಡೆಸಿದ್ದೇ ತಡ; ಎಲ್ಲವೂ ಅಕಸ್ಮಾತ್ ಅಡಿಮೇಲಾಗಿ ಹೋದವು. ಹೈದರಾಬಾದ್ ನಗರದಲ್ಲಿ ರಝಾಕಾರರ ದೊಡ್ಡ ಒಂದಾಯವೆದ್ದು ಪರಿಸ್ಥಿತಿ ನಿಜಾಮರ ಹತೋಟಿ ಮೀರಿತು- ಪ್ರಧಾನಿ ಮಂತ್ರಿ ಮಿ. ಲಾಯಿಕ್‌ಅಲಿಗಳು ತನ್ನ ಸ್ಥಾನಕ್ಕೆ ರಾಜೀನಾಮೆಯೊಪ್ಪಿಸಿದರು. ಹೈದರಾಬಾದ್ ಸೇನೆಯ ಮುಖ್ಯ ಸೇನಾನಿ ಮೇಜರ್ ಜನರಲ್ ಎಲ್ ಎಡ್ರೂಸರು ರಝಾಕಾರ್ ಒತ್ತಡವನ್ನು ಸಹಿಸಲಾರದೆ ರಾಜಿಕೊಟ್ಟರು. ರಝಾಕಾರ್ ಸಂಸ್ಥೆಯಾದ ಮಜ್ಲೀಸಿನ ಪ್ರತಿನಿಧಿ ಮಂತ್ರಿಗಳಾದ ನಾಲ್ವರು.-ಯಾಮಿನ್ ಝುಬೇರಿ, ಅಬ್ದುಲ್ ರಹೀಮ್, ಮಹಮ್ಮದ್ ಇಕ್ರಾಮುಲ್ಲಾ, ಅಬ್ದುರ್ ರಹಿಮ್-ಆಂತೆಯೇ ಓರ್ವ ಹರಿಜನ ಮಂತ್ರಿ ಬಿ. ಯಸ್. ವೆಂಕಟರಾವ್ ನಿಜಾಮರಿಗೆ ನಿಷೇಧ ಪತ್ರ ಬರೆದು ಭಾರತದೊಂದಿಗೆ ವಿರಣ ಸಂಧಾನ ನಿಲ್ಲಿಸದಿದ್ದರೆ ರಾಜಿ ಕೊಡುವ ಬೆದರಿಕೆ ಹಾಕಿದರು; ಕೂಡಲೇ 'ರಾಜೀನಾಮೆ' ನಿಜಾಮರು ಅಂತರ್ಧಾನಗೊಂಡುಳಿದ ಸ್ಥಾನದಲ್ಲಿ 'ರಝಾಕಾರ್ ನಿಜಾಮ' ಮೂಡಿದರು; ಸಂಧಾನ ಯತ್ನವೆಲ್ಲವನ್ನೂ ಠಸ್ಸುಗೊಳಿಸಿದ್ದು ಅ ಸಂಬಂಧದ ಸೂಚಿಸೆಗಳನ್ನು ಹಿಡಿದುಕೊಂಡು ಬಂದಿದ್ದ ನವಾಬ್ ಜಾಯಿನ್ ಯಾರ್ ಜಂಗರನ್ನೇ ಹ್ಯಾಕಮಿಶನರ್ ಸ್ಥಾನದಿಂದ ನಿವೃತ್ತಿಗೊಳಿಸಿ, ಅವರ ಸ್ಥಾನಕ್ಕೆ ಮುಖ್ಯ ಕಾರ್ಯದರ್ಶಿಯಾಗಿದ್ದ ಯಸ್. ಎಮ್. ಎ. ರಜ್ವಿಯನ್ನು ನೇಮಿಸಿದ ನವಢಿಲ್ಲಿಯೊಂದಿಗೆ ವೈದರಾಬಾದನ್ನು ಗಂಟು ಹಾಕುವ ವ್ಯವಸ್ಥೆ ಮಾಡಲು ಹೋದ ನವಾಬ್‌ಯಾರ್‌ಜಂಗರು, ನವಢಿಲ್ಲಿಗೆ ಮರಳಿದುದು ತನ್ನ ಸ್ಥಾನವನ್ನೇ ರಜ್ವಿಗೊಪ್ಪಿಸುವ ವ್ಯವಸ್ಥೆಗಾಗಿ! ಹತ್ತು ದಿನ ನವಢಿಲ್ಲಿಯಲ್ಲಿ ಒದ್ದಾಡಿದ ಸರ್. ಮಿರ್ಜಾರು ನಿರಂತೆಯಿಂದ ಬೆಂಗಳೂರಿಗೆ ಹೊರಟರು. ತಾನು ರಾಜೀನಾಮೆ ಕೊಟ್ಟಿದ್ದೇನೆಂದು 'ಸುಳ್ಳು ಪ್ರಚಾರ' ಮಾಡಿಸಿದುದಕ್ಕಾಗಿ ಮಿ. ಲಾಯಿಕ್ ಅಲಿ ಹಿಂದೀ ಸರಕಾರಕ್ಕೆ ನಿಷೇಧ ಸೂಚನೆ ಕಳುಹಿಸಿದರು. ರಝಾಕಾರ್ ಹತೋಟೆಯೊಳಗಿನ ನಿಜಾಮ್ ಮಂತ್ರಿಮಂಡಲವು ನಾನಜ್‌ನಲ್ಲಿ ಠೇರೆ ಹೊಡೆದ ಹಿಂದೀ ಸೇನೆಯನ್ನು ಹೊಡೆದೋಡಿಸುವ ಅತ್ಯಪಾತುಕ ಆಜ್ಞೆ ಕೊಟ್ಟುದನ್ನು ಪ್ರತಿಭಟಿಸಿಯೂ, ರಝಾಕಾರ್ ಅಕ್ರಮಣಕಾರರನ್ನು ಬಹು ಸಂಖ್ಯೆಯಿಂದ ಸೇರಿಸಿಕೊಂಡಿರುವ ನಿಜಾಮ್ ಸೇನೆಯನ್ನು ಹತೋಟೆಯಲ್ಲಿಡುವುದು ಅಸಾಧ್ಯವೆಂದೂ ಸೇನಾಪತಿ ಎಲ್ ಎಡ್ರೂಸರು ರಾಜೀನಾಮೆಯೊಪ್ಪಿಸಿದ್ದಾರೆಂಬ ಸುದ್ದಿಯು ಸಂಪೂರ್ಣ ಸುಳ್ಳು" ಎಂದು ನಿಜಾಮ್ ಸರಕಾರದಿಂದ ನಿರಾಕರಣೆ ಬಂತು. ಅಂತೂ ನಿಜಾಮರು, ಅವರ ಸೇನೆ, ಅವರ ಮಂತ್ರಿಮಂಡಲ, ಮತ್ತು ಹೈದರಾಬಾದ್-ಎಲ್ಲವೂ ರಝಾಕಾರರ ಅಂಕೆಯುಳ್ಳಿರುವೆಂಬುದೊಂದೇ ನಿಜ ಜೊರತು ಮಿಕ್ಕೆಲ್ಲವೂ ಸುಳ್ಳೆಂದು ನಿಜಾಮ್ ಸರಕಾರದಿಂದ ಜಾಹೀರಾಯಿತು.

ಇದರ ಗುಟ್ಟೇನು?

ಸಂಗತಿಯಿಷ್ಟೆ: ನಿಜಾಮ್ ಕೆರೀಟವೀಗ ರಝಾಕಾರ್ ಬೆಯೊನೆಟಿನ ತುದಿಯಲ್ಲಿ ನಿಂತಿದೆ ಹೊರತು ನಿಜಾಮರ ತಲೆಯ ಮೇಲೆ ಕುಳಿತಿಲ್ಲ! ಭಾರತ ಸರಕಾರದೊಡನಿರುವ ಯಥಾಸ್ಥಿತಿ ಒಪ್ಪಂದಾನುಸಾರವಾಗಿ ಕ್ರಮಬದ್ಧ ಸೇನೆಗಳ ಸಂಖ್ಯೆ ಹೆಚ್ಚಿಸಲಾರದ ನಿಜಾಮರು ಭಾರತ ಸರಕಾರದ ವಿರುದ್ಧವಾಗಿ ತನ್ನಲ್ಲಿ ಬೆಳೆಸಿಕೊಂಡುದು ರಝಾಕಾರ್ ರಾಕ್ಷಸ ದಳವನ್ನೇ- ಅವರ ಸೇನೆ ಮತ್ತು ಪೋಲೀಸು ದಳಗಳ್ಲೂ ರಝಾಕಾರರೇ ಸೇರಿಕೊಂಡಿದ್ದಾಗಿ ಹೀಗಾಗಿ ರಝಾಕಾರರನ್ನು ಕಳೆದರೆ ಮತ್ತಲ್ಲಿ ಉಳಿಯುವವೆಂದರೆ ನಿಜಾಮ್ ಎಂಬ ದೊಡ್ಡ ಸೊನ್ನೆ! ಭಾರತದೊಂದಿಗೆ ಸೇರದೆ ತನಗೆ ಉಳಿಗಾಲವಿಲ್ಲವೆಂಬುದು ಖಚಿತವಾದೊಡನೆ ಸೇರಿಬಿಡೋಣವೆಂದು ನಿಜಕ್ಕೂ ನಿಜಾಮರೊಮ್ಮೆ ಮನಸ್ಸು ಮಾಡಿದ್ದರು. ಆದರೆ ಅದಕ್ಕೆ ವಿರೋಧವಾಗಿ ರಝಾಕಾರರ ಬಂಡಾಯ ಮತ್ತು ಮಂತ್ರಿಗಳ ರಾಜೀನಾಮೆ ಬಂದೊಡನೆಯೇ ಬುದ್ಧಿ ಬದಲಾಯಿಸಿ, ತಾನು ಸೋಲುವದಿಲ್ಲವೆಂದು ಪುಂಡರಿಲ್ಲರನ್ನೂ ಸಮಾಜಾಯಿಸಿ ಸರ್ ಮಿರ್ಜಾರಿಗೂ, ನವಾಬ್ ಯಾರ್ ಝುಂಗರಿಗೂ ದಿಗೆ ಕೊಟ್ಟರು! ಹಾಗೆ ಮಾಡದೆ ಮತ್ತೂ ಸಂಧಾನಕ್ಕೆ ವರು ಮುಂದುವರಿಯುತ್ತಿದ್ದರೆ, ಕಾಸಿಮ್ ರಜ್ವಿ ಸಿಂಹಾಸನದಿಂದಲೇ ಅವರನ್ನು ಎಳೆದು ಹಾಕಿ, ಬಂಧನದಲ್ಲಿಟ್ಟು ಅಧಿಕಾರದೆಂಡವನ್ನು ತಾನು ಕಿತ್ತುಕೊಳ್ಳುವುದಕ್ಕೂ ತಯಾರಿದ್ದ. ಕೂಡಲೇ ಹಿಂದೀ ಸರಕಾರದ ಸೇನಾ ಸಹಾಯ ಯಾಚಿಸುತ್ತಿದ್ದರೆ, ಈ ರಝಾಕಾರ ಪುಂಡರನ್ನು ನಿರ್ಮೂಲಿಸಿ ನಿಜಾಮರು ಉಳಿದುಕೊಳ್ಳಬಹುದಿತ್ತು. ನಿಜಾಮರು ಸೋರಲಿ-ಸೇರಿರಲಿ, ಅವರಿಂದ ಅಜ್ಞಾನ ಬರಲಿ-ಜ್ಞಾನದೇನೇ ಇರಲಿ, ರಝಾಕಾರರ ಅತ್ಯಾಚಾರಗಳಿಂದ ಮತ್ತೂ ಮುಂದುವರಿಯುತ್ತಿದ್ದರೆ ಪ್ರಜೆಗಳ ರಕ್ಷಣೆಗಾಗಿ ಭಾರತ ಸರಕಾರವು ಮತ್ತಾವುದನ್ನೂ ಗಣಿಸದೆ ಸೇನೆಯನ್ನು ಒಳಗೆ ಹೊಗಿಸಿಬಿಡುತಿತ್ತು. ಇದಕ್ಕವಕಾಶ ಕೊಟ್ಟರೂ ತನ್ನ ಸ್ಥಾನಮಾನಗಳು ಉಳಿಯಲಾರವೆಂಬ ಪೆದರಿಕೆ ನಿಜಾಮನಿಗಿತ್ತು. ಹೀಗಾಗಿ ತ್ರಿಶಂಕು ಅವಸ್ಥೆಯಲ್ಲಿ ಬಿದ್ದ ನಿಜಾಮರು, ತಾನಿದು ನರೆಗೆ ವಿರೋಧಿಯೆಂದು ಭಾವಿಸಿದ್ದ ಭಾರತ ಸರಕಾರವನ್ನ ಆಶ್ರಯಿಸಿ ಬದುಕುವುದಕ್ಕಿಂತ, ಆತ್ಮಹತ್ಯೆಯೆಂದು ಭಾವಿಸಿಕೊಂಡು ಈ ತನಕ ಅಶ್ರಯಿಸಿಕೊಂಡು ಬಂದಿದ್ದ ರಝಾಕಾರಗೇ ಶರಣಾಗತೊಡಿದ, ರಜ್ವಿಯ ಬಗಲನ್ನೇ ವಜ್ರಕವಚವಾಗಿ ಮಾಡಿಕೊಂಡರು. ಆದರಿದು ನೂರು ದಿನದ ಬಾಳುವೆ; ದಿನಾರೆ ಕಾಲದ ವಿಪರೀತ ಬುದ್ಧಿ- ಬದಲಿಗೆ ಭಾರತ ಕೇಂದ್ರದೊಂದಿಗೆ ಸೇರಿಕೊಳ್ಳುತಿದ್ದರೆ ನ್ಯಾಯಕ್ಕೂ ಚಿರಾಯುಸ್ಸಿಕ್ಕೂ ಆಧಾರವಾಗುತಿತ್ತೆಂಬುದನ್ನು ಅವರು ಮರೆತಿದ್ದಾರೆ. ನಿಜಾಮರು ಅನುಕೂಲ ಸಂದರ್ಭಬಂದಾಗ ಭಾರತಕ್ಕೆ ಶರಣು ಬರುವುದು ಖಂಡಿತ-ಬಾರದಿದ್ದಲ್ಲಿ ಅವರಿಗೆ ಬಂಧನ ಅಥವಾ ಪಲಾಯನದ ಅದೃಷ್ಟ ಕಾದಿದೆ ಎಂಬುದೆಂತೂ ನಿಜವೇ!

ಸರ್. ಮಿರ್ಜಾರ ಸ್ಪಷ್ಟೀಕರಣ

ನಿಜಾಮರ ಈ ಆಟದಿದಿರಲ್ಲಿ ಹಿಂದೀ ಸರಕಾರದ ಧೋರಣೆಯು ಯಾವ ರೀತಿ ಅಚಲವಿತ್ತು ಮತ್ತು ವಿಜಯ ಸಾಧಿಸಲ್ಪಡುವ ವರೆಗೂ ಅದಾವ ರೀತಿ ದೃಢವಾಗಿ ಮುಂದೊತ್ತಲಿದೆಯೆಂಬುದನ್ನೂ, ಹೈದರಾಬಾದಿನ ನಿಜಾಮರು ಇಂದು ಯಾರ

(ಜನೇ ಪುಟ ನೋಡಿರಿ)

ಹೊಸ ಪುಸ್ತಕ

ಜಪಾನ್ದಾರ

ಧನಾಢ್ಯರ ದುರಹಂಕಾರ, ದುರ್ವ್ಯಯ
ದುಸ್ಸಾಧನೆ ಮೊದಲಾದುವನ್ನು ಚಿತ್ರಿಸುವ

ಬಡವರ ಭೀಕರ ಪರಿಸ್ಥಿತಿಯ ಕಠಿಕರಾವಸ್ಥೆ
ಯನ್ನು ಹೃದ್ಯಾವಕವಾಗಿ ಪ್ರತಿಬಿಂಬಿಸುವ

ನವೀನ ಸಾಮಾಜಿಕ ಕಾದಂಬರಿ

ಜಪಾನ್ದಾರ

ಧನಿಕರೆನ್ನಲಿ, ಬಡವರೆನ್ನಲಿ ಪ್ರತಿಯೊಬ್ಬರೂ ಓದತಕ್ಕ ಜನಪ್ರಿಯ ಸಾಹಿತ್ಯ
161 ಪುಟಿಗಳು .... ಬೆಲೆ ರೂ. 1 8 0

ಪ್ರತಿಗಳು ಸಿಗುವ ಸ್ಥಳಗಳು--1 ನವಭಾರತ ಪುಸ್ತಕ ಭಂಡಾರ, ಉಡುಪಿ. 2. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 3. ಎಂ. ಎಸ್. ಮಯ್ಯ ಪ್ರಸ್ತ್ರೂರು. 1. ಕಿನಿಯರ್ ಪ್ರಪಂಚ, ಉಡುಪಿ.



Approved firm by the Govt. of Mysore
Certified by the Agent of the Govt. of Cylone & Indian.

The Canara Banking Corporation Limited.

Estd: 1906
(Incorporated in British India)
Head Office: **UDIPI**, S. India.

Capital Authorised	....	Rs. 25,00,000
Capital Issued & Subscribed	....	Rs 20,00,000
Capital Paid up	....	Rs. 19,98,445
Reserves....	....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.,
General Manager.

ಗುರುವಾರ, ಉಡುಪಿ, ೧೨-೮-'೪೮

ಪ್ರಥಮ ಸ್ವರಾಜ್ಯ ವರ್ಧಂತಿ.

ಬರುವ ಆದಿತ್ಯವಾರ-ತಾ. 15-8-48-ಸ್ವರಾಜ್ಯದ ಪ್ರಥಮ ವಾರ್ಷಿಕೋತ್ಸವ.

ಈ ಅವಧಿಯಲ್ಲೇ ರಾಷ್ಟ್ರಪಿತನನ್ನು ನಾವು ಕಳೆದುಕೊಳ್ಳಬಿರುತ್ತಿದ್ದರೆ, ಪ್ರಥಮ ವರ್ಧಂತ್ಯುತ್ಸವವನ್ನು ಸಾಧ್ಯವಿದ್ದಷ್ಟು ಹೆಚ್ಚಿನ ಸಂಭ್ರಮದಿಂದ ನಾವಾಚರಿಸಬಹುದಿತ್ತು-'ಅಧಿಕಪ್ರಸಂಗ' 'ಅತಿಲಾಲಸೆ' ಯೆಂಬಂತಹ ಆರೋಪಗಳಾವುವೂ ಆಗ ಬರುತ್ತಿದ್ದಿಲ್ಲ.

ಆದರೆ ರಾಷ್ಟ್ರವಿಂದು ಬಾಪೂಜಿ ವಿಯೋಗದ ಶೋಕದಲ್ಲಿದ್ದೆ; ಸ್ವರಾಜ್ಯೋತ್ಸವದ ಉತ್ಸಾಹವೇರದಂತೆ ಆದು ತಗ್ಗಿಸುತ್ತಿದೆ. ಆದ್ದರಿಂದಲೇ ವಿಶೇಷ ಸಂಭ್ರಮಾಡಂಬರಗಳಲ್ಲದೆ ಗಂಭೀರ ಹಾಗೂ ಸಾದಾತನದಿಂದ ಈ ಉತ್ಸವವನ್ನಾಚರಿಸಬೇಕೆಂದು ರಾಷ್ಟ್ರನಾಯಕರ ವಿಜ್ಞಾಪನೆಯಿದೆ.

ಕಳೆದೊಂದು ವರುಷದ ನಮ್ಮ 'ಆಯ-ವ್ಯಯ'ಗಳ ಲೆಕ್ಕ ನೋಡಿ, ಕೊರತೆಯ ಸ್ಥಿತಿ ನೀಗಿಸಿಕೊಂಡು, ಉಳಿತಾಯವನ್ನು ಹೆಚ್ಚಿಸಿಕೊಂಡು ಪ್ರಗತಿ ಯೋಜನೆ ತಯಾರಿಸಿಕೊಳ್ಳಬೇಕಾದ ಮುಹೂರ್ತವಿದು. ಸ್ವರಾಜ್ಯದ ಪ್ರಥಮ ವರುಷದ 'ಆಳ-ನಪ್ಪ'ಗಳ ಸ್ಥೂಲ ಸಂಚಯವು ಈ ಸಂಚಿಕೆಯಲ್ಲಿ ಬಂದಿದೆ.

ಯಾರೂ ನಿರ್ದೋಷಿಗಳಲ್ಲ; ಯಾರದೇ ಶಕ್ತಿ ಅಥವಾ ಬುದ್ಧಿಯು ಪೂರ್ಣ ಹತೋಟೆಯೊಳಗೂ ಸರಿಸ್ಥಿತಿಸಿಕ್ಕಿಕೊಳ್ಳುವಂತಿಲ್ಲ; ಆದರೆ ನಿರ್ವಿಕಾರ ಬುದ್ಧಿಯಿಂದ ತುಲನಾತ್ಮಕವಾಗಿ ಎಲ್ಲವನ್ನೂ ನೋಡಿದರೆ ಕಳೆದ ವರುಷದಲ್ಲಿ ನಾವು ಸೋತಿಲ್ಲ; ಈ ಅವಧಿಯಲ್ಲಿ ಸೋತು ಹೋಗದಿದ್ದುದೇ ನಾವು ಗಳಿಸಿಕೊಂಡ ಮಹತ್ಕಾರ್ಯವಿಜಯ. ಎಂತಹ ಸಮರ್ಥ ಸರಕಾರ ಮತ್ತು ಜನತೆಗಾದರೂ ದಿಗ್ಭ್ರಮೆ ಹಿಡಿಸುವಂತಹ ಸಮಸ್ಯೆಗಳು ಕಳೆದ ವರುಷವೊದಗಿದ್ದುವು; ಕಠಿಣ ಅಗ್ನಿ ಪರೀಕ್ಷೆಗೆ ರಾಷ್ಟ್ರವೊಳಗಾಗಿತ್ತು; ಇವುಗಳಿದಿರು ನೋಲದವರಿಗೆ ಇನ್ನು ಅಪಜಯದ ಭೀತಿಯಿಲ್ಲ.

ಪ್ರಮುಖರು ದೂರತೆರಿರುವ ಸಾಯಂಕಾಲದ ಮಟ್ಟಿಕ್ಕಾಗಿ ನಾವು ಹೆಗ್ಗಳಿಕೆ ಪಡಬಹುದಾದಷ್ಟು ನಮ್ಮ 'ಸಾರ್ವಜನಿಕ ಸಾಮಾನ್ಯ ಯೋಗ್ಯತೆ'ಗಾಗಿ ಅಭಿಮಾನಪಡಲಾಗುವದಿಲ್ಲವೆಂಬ ಕಠೋರ ಸತ್ಯವೊಂದು ಈ ಸಂದರ್ಭದಲ್ಲಿ ಹೊರಬೆಯುತ್ತಿದೆ. ಇದಕ್ಕಾಗಿ ಜನತೆಯನ್ನು ದೂರಲಾಗುವದಿಲ್ಲ; ಈ ವರೆಗಿನ ಅದರ ಸ್ಥಿತಿಗತಿಗಳೇ ಹಾಗಿದ್ದುವು.

ಆದರೊಂದು ಮಾತಿದೆ; 'ಮಿಂಚು ವೇಗ'ದ ಕಾಲವಿದು. ಹಿಂದಿನ ಶತಮಾನಗಳ ಅಚ್ಚರ್ಯಗಳನ್ನು ಈಗಿನ ದಿನ ಕ್ಷಣಗಳು ನಿರ್ಮಿಸುತ್ತಿವೆ; [ಜನ ಮನೋಗತಿಯೂ ಆವ್ಯೇ ಅವಸರದಿಂದ ಬೆರೆಯಬೇಕಾದುದು ಆಗತ್ಯ. ಭಾರತೀಯರು ತಮ್ಮ ಹೃದಯ ಮತ್ತು ಬುದ್ಧಿ, ಎರಡರ ವಿಕಾಸವನ್ನೂ ವೇಗವೇಗವೇ ಸಾಧಿಸಿಕೊಳ್ಳಬೇಕು.

ಇದಕ್ಕಾಗಿ ಸಾರ್ವಜನಿಕ ರಂಗದಲ್ಲಿ ಪ್ರಚಾರ ಮತ್ತು ಸಂಘಟನಾ ಕಾರ್ಯ ಹೆಚ್ಚಬೇಕು; ಅದರೆ ದುರ್ದೈವವಶಾತ್ ಹೆಚ್ಚಬೇಕಾಗಿದ್ದ ಕಾಲದಲ್ಲೇ ಆದು ಹಿಂದಿಗಿಂತಲೂ ಬಹಳ ಕಡಿಮೆಯಾಗಿದೆ-ಸ್ವರಾಜ್ಯ ಸ್ಥಾಪನೆಯೊಂದಿಗೆ ತಮ್ಮ ಕೆಲಸ ಮುಗಿಯಿತೆಂಬ ಭಾವನೆಯೇ ಕೆಲಸಗಾರರಲ್ಲಿ ಹಬ್ಬಿದೆ. ಆಗಬೇಕಾದ ಕೆಲಸಗಳು ಹೆಚ್ಚಾಗಿರುವಾಗಲೇ ಈ ವಿರಾಮ! ಇದು ಶೋಚನೀಯ.

'ಮಾತಾಡಬೇಕಾದುದೆಷ್ಟು-ಮಾಡಬೇಕಾದುದೆಷ್ಟು?'-ಎಂಬುದರಲ್ಲಿ ಜನತೆಯು ನಿಜಕ್ಕೂ ಅಂದಾಜು ತಪ್ಪಿದೆ. ಪ್ರತಿಯೊಬ್ಬನೂ ಅವನವನ ಕರ್ತವ್ಯವನ್ನರಿತುಕೊಳ್ಳುತ್ತಿದ್ದರೆ ಚಿತ್ರ ವೇರಾಗ್ಯತೆಜ್ಞ; ಈಗಿನಂತೆ ಜನತಾ ಬೆಂಬಲದ ಅಥವಾ ಜನತಾ ಸಮ್ಮತಿಯ ರಾಜ್ಯಭಾರನಿಯಾದ ಖದಲಿಗೆ ಪ್ರತ್ಯೇಕತೆ 'ಜನತಾ ರಾಜ್ಯಭಾರ'ವೇ ಇರುವಂತಾಗುತ್ತಿತ್ತು; ಇನೆರಡರೊಳಗೆ ವ್ಯತ್ಯಾಸವಿದೆಯೆಂಬುದನ್ನು ಮರೆಯಬಾರದು.

ಆದ್ದರಿಂದ ಈ ಆತ್ಮವಿಮರ್ಶೆಯ ಮಹೂರ್ತದಲ್ಲಿ ಪ್ರತಿಯೊಬ್ಬನೂ ತನ್ನನ್ನು ತಾನಂತುಕೊಳ್ಳಬೇಕು. "ದುಃಖಿಗಳು ದಳಿತರು ಇಲ್ಲದಂತಹ ಸರ್ವಸಮಾನ ಸುಖ ಸಮೃದ್ಧಿಯ ಸುವ್ಯವಸ್ಥೆಗಾಗಿಯೂ, ಆ ಮೂಲಕ ಮಾನವ ಜನಾಂಗದ ಅಭಿವೃದ್ಧಿಗಾಗಿಯೂ ನನ್ನನ್ನು ನಾನು ಈ ಮಹೂರ್ತ ಸಮರ್ಪಿಸಿಕೊಳ್ಳುತ್ತೇನೆ" ಎಂಬ ಸ್ವಾತಂತ್ರ್ಯ ಪ್ರತಿಜ್ಞೆಯನ್ನು ಉಚ್ಚರಿಸಿ ಮಾತ್ರ ವಲ್ಲ, ಆಚರಿಸಿ ತೋರಿಸಬೇಕು. ಸ್ವರಾಜ್ಯವನ್ನು ಸಂಪಾದಿಸಿಕೊಳ್ಳುವುದರಲ್ಲಿ ವ್ಯಯವಾಗಿದ್ದ ಹಿಂದಿನ ಆ ಶಕ್ತಿ, ಸಾಹಸಗಳು ಕಳೆದೊಂದು ವರುಷದ ಸ್ವರಾಜ್ಯಾನುಭವದ ಎಲ್ಲಾ ಸಾರಗಳು-ಈಗ ಪ್ರತಿಯೊಬ್ಬ ಹಿಂದೀಯನಲ್ಲಿ ಕಂಡುಬರಬೇಕು. ೩೦ ಕೋಟಿಗೂ ಮಿಕ್ಕಿರುವ ಭಾರತೀಯರು ಅಂತಹ ಸ್ವಾತಂತ್ರ್ಯಯೋಧರಾಗಿ ಮಾರ್ಪಟ್ಟಲ್ಲಿ, ಈ 'ಯೋಗ್ಯ'ರ ಕಣ್ಣಿದಿರಲ್ಲಿ

[ಸಂಜೆ ಪುಟದಿಂದ]

ಕೈಗೊಂಬೆಯಾಗಿದ್ದಾರೆಂಬುದನ್ನೂ ಸಂಧಾನ ವಿಫಲಗೊಂಡು ನವಢಿಲ್ಲಿಯಿಂದ ಹೊರಡುವ ಮೊದಲು ಸರ್. ಮಿರ್ಜಾ ಆಡಿದ ಮಾತುಗಳಿಂದ ಅರಿಯಬಹುದು: "ನಿಜಾಮರೀಗ ರಝಾಕಾರರ ಕೈಯೊಳಗೆ ಕೈದಿಯಾಗಿರುವಂತೆ ಕಾಣುತ್ತಿದೆ. ನಾನು ಸಂಧಾನದ ಪ್ರಸ್ತಾಪನೆತ್ತಿದೊಡನೆಯೇ ಸರ್ದಾರ್ ಪಟೇಲರು, "ನೀವು ಅವಿವೇಕಿಗಳ ಸ್ವಪ್ನ ಸಾಮ್ರಾಜ್ಯದಲ್ಲಿದ್ದೀರಿ; ಹೈದರಾಬಾದಿನಲ್ಲಿ ನೀವು ಎಂತಹ ಜಫರೊಡನೆ ವ್ಯವಹರಿಸಬೇಕಾಗಿದೆ ಎಂಬುದು ನಿಮಗೆ ಗೊತ್ತೇ ಇಲ್ಲ" ಎಂದು ನನಗೆಂದಿದ್ದರು. ಸರ್ದಾರ್ ಸಲೇಲರಾಡಿದುದು ಸತ್ಯ. ಈಗ ಹಿಂದೀ ಸರಕಾರವು ಸೇನಾ ಕಾರ್ಯಕ್ಕೆ ಕೈಹಾಕಬೇಕಾದುದು ಸಂಭವನೀಯವೇ. ಕೂಡಲೇ ಭಾರತ ಕೇಂದ್ರದೊಂದಿಗೆ ಜೋಡಣೆ ಹೊಂದಬೇಕೆಂದೂ ಆ ಜೋಡಣೆಯಾಗತಕ್ಕದ್ದೆಂಬುದೇ ಲೋಕಮತ ಕೂಡಾ ಎಂದೂ ನಾನು ನಿಜಾಮರಿಗೆ ಸುಸ್ಪಷ್ಟವಾಗಿ ಹೇಳಿದ್ದೆ-ಯಾಕಂದರೆ ನವಢಿಲ್ಲಿಯಲ್ಲಿರುವ ವಿದೇಶಗಳ ರಾಯಭಾರಿಗಳೊಡನೆ ಮಾತಾಡಿಯೂ ನಾನಿತ್ತಿಳಿದಿದ್ದೆ. ತಾನು ಭಾರತದೊಂದಿಗೆ ಜೋಡಣೆಗೊಳ್ಳಲಿಚ್ಛಿಸುತ್ತೇನೆ ಎಂದು ನಿಜಾಮರು ನನಗೆ ಬರೆದಿದ್ದರು. ಆದರೆ ಅವರನ್ನು ಸುತ್ತುಗಟ್ಟಿರುವವರ ಕೈಯ್ಯೇ ಮೇಲಾಗಿ ನಿಜಾಮರು ಸೇರಿಕೊಳ್ಳದಂತೆ ತಡೆದಿಡಲು ಅಂಥವರು ಶಕ್ತರಾದರೆಂಬಂತೆ ತೋರುತ್ತಿದೆ. ಭಾರತದ ಏಜೆಂಟ್ ಜನರಲ್‌ರಾದ ಶ್ರೀ. ಕೆ. ಎಮ್. ಮುನ್ಷಿಗಳನ್ನು ಕಾಣುವದಕ್ಕೆ ಕೂಡಾ ನಿಜಾಮರಿಂದ ಸಾಧ್ಯವಾಗಲಿಲ್ಲ-ಕಾರಣವೆಂದರೆ ಅವರ ಮಂತ್ರಿಗಳು ಆ ಸಂಭಾಷಣೆ ನಡೆಯದಂತೆ ಅತಂಕಿಸಿದ್ದರು. 'ಹೈದರಾಬಾದ್ ಸ್ವತಂತ್ರ' ಎಂಬರ್ಥದ ಈ ಮಾತುಗಳೆಲ್ಲವೂ ಅಂತರ್ರಾಷ್ಟ್ರೀಯ ಅಭಿಮತಾನುಸಾರ ಕೇವಲ ಪಾಂಡಿತ್ಯ ಪ್ರದರ್ಶನ; ಅರ್ಥಶೂನ್ಯ. ತನ್ನ ಸಂಚಾರ ವಹಿವಾಟು, ರಕ್ಷಣೆ ಮತ್ತು ವಿದೇಶ ಸಂಬಂಧ ಖಾತೆಗಳನ್ನು ಹೈದರಾಬಾದು ಇಷ್ಟರಲ್ಲೇ ಭಾರತ ಕೇಂದ್ರಕ್ಕೊಪ್ಪಿಸಿ ಕೊಟ್ಟಿರುವುದರಿಂದ ಈ 'ಸ್ವಾತಂತ್ರ್ಯ'ವೆಂಬುದು ಅದರ ಒಳಾಡಳಿತೆಯ ಮಟ್ಟಿಗಷ್ಟೇ ಹೊಂದಿಕೆಯಾಗಲು ಬರ್ಕವಿದೆ" ಎಂದು, ಸರ್. ಮಿರ್ಜಾರು ರಝಾಕಾರ್ ವರ್ಚಸ್ಸಿರುವ ಮಂತ್ರಿ ಸಮಿತಿಯ ದುರ್ಬೋಧನೆಗೊಳಗಾಗಿ ನಿಜಾಮರು ತನ್ನ ಉಪದೇಶವನ್ನು ಅಲಿಸದುದಕ್ಕಾಗಿ ತೀವ್ರ ಸಂತಾಪ ವ್ಯಕ್ತಪಡಿಸಿದರು.

ನಿಜಯಾವಾಡಾದ ಸಮೀಪದಲ್ಲಿ ರೈಲ್ವೆಯನ್ನು ತಡೆ ಹಿಡಿದು ರಝಾಕಾರರು ಅತ್ಯಾಚಾರ ಮಾಡಿದ್ದಾರೆ. ಸರಹದ್ದು ಪ್ರದೇಶಗಳಲ್ಲಿ ಭಾರತದ ಪೋಲೀಸ್ ಮತ್ತು ಸೈನಿಕರಿಗೂ ಹೈದರಾಬಾದಿನ ರಝಾಕಾರ್ ಮತ್ತು ಸೈನಿಕರಿಗೂ ದೊಡ್ಡ ಪರಿಮಾಣದ ಘರ್ಷಣೆಗಳು ನಡೆಯುತ್ತಿವೆ; ತಾನು ಹೊಕ್ಕ ಸ್ಥಳದಿಂದ ಹಿಂದೆಗೆಯದ ಧೋರಣೆಯನ್ನು ಹಿಂದೀ ಸೇನೆ ವಹಿಸಿದೆ.

ಕಾಶ್ಮೀರದ ಕಾಳಗ

ಕಾಶ್ಮೀರ ಕಮಿಶನರನಿಗಮುಂದೆ ಪಾಕಿಸ್ತಾನ್ ಸರಕಾರವು ಕೊಟ್ಟ ಗುಪ್ತವಾಗ್ಮೂಲ ಬಲ್ಲಿ ತನ್ನ ಸೇನೆಗಳು ಕಾಶ್ಮೀರದ ಬಂಡಾಯಗಾರರೊಂದಿಗೆ ಕೂಡಿಕೊಂಡು ಹೋರಾಡುತ್ತಿರುವುದು ಹಾದಿಂದು ಒಪ್ಪಿಕೊಂಡುದರಿಂದ ಸ್ಥಿತಿ ಬದಲಾಗಿದೆ; ಗುಹೆಯ ಒಳಗೇನೇ ಕೊರೆಯುತ್ತಿದ್ದುದರ ತಲೆಯೇನ ತೋರಬಂದಿದೆ. ಇದರ ಪರಿಣಾಮವೇನು ಎಂಬುದನ್ನು ಇನ್ನು ತಾನೇ ಕಾಣಬೇಕು. ಎರಡು ವಸಾಹತುಗಳು ಹೀಗೆ ಸೈನಿಕ ಘರ್ಷಣೆಗಿಳಿದುದರಿಂದ ಬ್ರಿಟಿಷ್ ಸರಕಾರವು ಮಹತ್ತಾದ ಚಿಂತನೆಗೆ ತೊಡಗಿದೆ. ಭಾರತ ಮತ್ತು ಪಾಕಿಸ್ತಾನವೆರಡರ ಸೇನೆಗಳಲ್ಲೂ ಕೆಲವು ಬ್ರಿಟಿಷ್ ಅಧಿಕಾರಿಗಳಿದ್ದಾರೆ. ಅವರು ಹೋರಾಟನಿರತ ಎರಡು ಪಕ್ಷಗಳಲ್ಲಿದ್ದುಕೊಂಡು ತಮಗೆ ತಾನೇ ವಿರುದ್ಧ ಹಂಚಿಕೆ, ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದು ಸರಿಯೇ ಎಂಬ ಪ್ರಶ್ನೆ ಬ್ರಿಟಿಷ್ ಸರಕಾರದಲ್ಲೆದ್ದಿದೆ. "ಇಕ್ಕಡೆಯ ಸೇನೆಗಳಿಂದಲೂ ಬ್ರಿಟಿಷ್ ಅಧಿಕಾರಿಗಳನ್ನು ಹಿಂದೆಗೆದುಕೊಳ್ಳಬೇಕು. ಸಂಯುಕ್ತ ರಾಷ್ಟ್ರ ಸಂಘದ ಕಾಶ್ಮೀರ ಸಮಿತಿಯಿಂದ ಎನೂ ಆಗದೆ ಹೋದರೆ ಭಾರತ ಮತ್ತು ಪಾಕಿಸ್ತಾನಗಳೊಳಗೆ ಯುದ್ಧವಾದರಿರುವುದು ಹೇಗೆಂಬುದೇ ಗೊತ್ತಾಗುವದಿಲ್ಲ. ಧಾಳಿಗಾರರಿಂದೆ ಆದಿಯಿಂದಲೂ ಬೆಂಬಲ ಕೊಡುತ್ತಾ ಬಂದಿದ್ದು ಈಗ ಪ್ರತ್ಯಕ್ಷ ಸೇನೆ ಕಳುಹಿರುವ ಪಾಕಿಸ್ತಾನವೇ ಇಲ್ಲಿ ಆಪರಾಧಿ ಪಕ್ಷ" ಎಂದು 'ನ್ಯೂ ಸ್ಟೇಟ್ಸ್‌ಮೇನ್' ಪತ್ರಿಕೆ ಬರೆದಿದೆ. ಭಾರತ ಮತ್ತು ಪಾಕಿಸ್ತಾನಗಳೊಳಗೆ ರಾಜಿ ಮಾಡಿಸಬೇಕು-ಅನೇಕರು ಕಡೆಗಳ ತಮ್ಮ ಜನರನ್ನೂ ಹಿಂದೆಗೆಯಬೇಕು, ಎಂದು ಮಿತ್ರಪಕ್ಷಗಳ ಪತ್ರಿಕೆಗಳೂ ಮುನ್ಸಂದ್ದಿಗಳೂ ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

ಇತ್ತ ಪ್ರತ್ಯಕ್ಷ ಯುದ್ಧರಂಗದಲ್ಲಿ ಭಾರತದ ಸೇನೆಗಳು ಪಾಕಿಸ್ತಾನ್ ಸೇನೆಗಳನ್ನು ಮುಖಾಮುಖಿ ಇದಿರಿಸಿ ಕಾಳಗವು ಜೋರಿನಿಂದ ನಡೆಯಹತ್ತಿದೆ. ಧಾಳಿಗಾರರ ಸರಬರಾಯಿ ಮಾರ್ಗಮಧ್ಯವಾಗಿ ಪಾಕಿಸ್ತಾನ್ ಪ್ರಭೇತ್ರದೊಳಗಡೆಯಲ್ಲೇ ಇದ್ದ ಸೇತುವೆ ಮತ್ತು ರಸ್ತೆಗಳ ಮೇಲೆ ಈಗ ಭಾರತದ ವಿಮಾನಗಳು ನಿಸ್ಸಂಕೋಚವಾಗಿ ಅಕಾಶ ಧಾಳಿ ನಡೆಸಿ ಧ್ವಂಸ ಮಾಡುತ್ತಿವೆ. ಕಾಶ್ಮೀರದ ಶೀರ್ಮಾನವಾಗದೆ ಹೋದರೆ, ತಾನಾಗಿ ಯುದ್ಧಕ್ಕೆ ಬಂದಿರುವ ಪಾಕಿಸ್ತಾನದ ಮೇಲೆ ಪ್ರತಿಕ್ರಿಯೆಯ ಹೋರಾಟ ಹೂಡುವ ಸಂದರ್ಭವು ಭಾರತ ಸರಕಾರಕ್ಕೊದಗಲಿದ್ದು, ಅದನ್ನು ಹೇಗೆ ಮತ್ತು ಯಾವಾಗ ಸದುಪಯೋಗಿಸಿಕೊಳ್ಳಬೇಕೆಂಬ ಯೋಚನೆಯಲ್ಲಿ ಹಿಂದೀ ಸರಕಾರವಿದೆ.

ಕಾಶ್ಮೀರದ ರಾಜಧಾನಿ ಶ್ರೀನಗರದಲ್ಲಿ 'ಇದ್' ಪ್ರಾರ್ಥನಾ ಭಾಷಣ ಮಾಡುತ್ತಾ ಶೇಕ್ ಅಬ್ದುಲ್ಲಾರು ಪಾಕಿಸ್ತಾನವು ತನ್ನನ್ನು ಹಿಡಿವಿಡಲು ನಡೆಸಿದ್ದ ಒಳಸಂಚು ಮಕ್ಕಾವ ಕಂಟಕವೂ ತೋರಿಬಂದಿದೆ. ಇಂದೂ ನಮ್ಮಿದಿರಲ್ಲಿ ಕೆಲವು ತೊಂದರೆಗಳುಳಿದಿವೆಯಾದರೆ, ನಾವು ಇರಬೇಕಾದಂತಿಲ್ಲದಿರುವುದೇ ಆ ತೊಂದರೆಗಳೆಂದು ತಿಳಿದುಕೊಳ್ಳಬೇಕು. ನಾವು ನಿಜವಾದ ಸ್ವಾತಂತ್ರ್ಯ ಯೋಧರಾಗಬೇಕು.

ಹಾಗಾಗಿಯೇ ತೀರುವೆವೆಂದು ಆಗೋಸ್ಟು 15ನೇ ಆದಿತ್ಯವಾರ ಶಪಥ ಹಾಕಿಕೊಳ್ಳುವ!

ಹಿಂದೀ ಪಾರ್ಲಿಮೆಂಟ್ ಅಧಿವೇಶನ

ಹಿಂದೀ ಪಾರ್ಲಿಮೆಂಟಿನ ಅಗೋಸ್ತು-ಸೆಪ್ಟೆಂಬರ್ ಅಧಿವೇಶನವು ಇದೇ ತಾ ೨೦ರಂದ ನವಡಿಲ್ಲಿಯ ಹಳೇ ಎಸೆಂಬ್ಲಿ ಭವನದಲ್ಲಿ ಆರಂಭಿಸಿ ಪ್ರಾಮುಖ್ಯಕಾರ್ಯ ಕ್ರಮಗಳ ಪರ್ಯಾಲೋಚನೆಗೆ ತೊಡಗಿ ದೆ. ಉಪಪ್ರಧಾನಿ ಹಾಗೂ ಗೃಹಮಂತ್ರಿ ಸರ್ದಾರ್ ಪಟೇಲರು ತನ್ನ ಅನಾರೋಗ್ಯ ದ ನಂತರ ಇದೀಗ ಮೊದಲಬಾರಿ ಪಾರ್ಲಿ ಮೆಂಟನ್ನು ಪ್ರವೇಶಿಸಿ ಪ್ರಧಾನಿ ನೆಹರುಗ ಳ ಒತ್ತಿನಾಸನವನ್ನು ಸ್ವೀಕರಿಸಲು ಹೋ ದಾಗ ಸಭೆಯು ಅತಿಹರ್ಷೋತ್ಸಾಹ ರ ವಗಳಂದ ಅವರನ್ನು ಸ್ವಾಗತಿಸಿತು. ಸ್ವ ತಿಜ್ಞಾಸ್ವೀಕಾರಮಾಡಿದ ಹೊಸ ಸದಸ್ಯರ ಲ್ಲಿ ಆಹಾರಮಂತ್ರಿ ಜೈರಾಮದಾಸ್ ದೌಲ ತ್‌ರಾಮರೊಬ್ಬರು.

ಪ್ರಾಮುಖ್ಯ ಪ್ರಶ್ನೋತ್ತರಗಳು.

ಹೈದರಾಬಾದಿಗೆ ಶಸ್ತ್ರಾಸ್ತ್ರಗಳ ರಫ ಸರಬರಾಯಿಯಾಗುತ್ತಿರುವ ಕುರಿತು ಕೇ ಲ್ಪಟ್ಟ ಪ್ರಶ್ನೆಗಳಿಗುತ್ತರವೀಯುತ್ತಾ ಂಡಿತ ನೆಹರುಗಳು, ಬ್ರಿಟಿಷ್ ಸರಕಾರ ಕ್ಕೆ ಪಾಕಿಸ್ತಾನ್ ಸರಕಾರಕ್ಕೂ ತಾವು ಳುಹಿಸಿವ್ವ ನಿಷೇಧ ಸೂಚನೆಗಳ ಕುರಿತು ವರಿಸಿ ಹೇಳಿದರು. ಅಂತೆಯೇ ಭಾರತ ಕ್ಕೆ ಹಾಕಿರುವ ಆಕಾಶ ಜಡ್ಡಿ ನಿಯಮಗ ಗನ್ನೂ, ಹೈದರಾಬಾದಿನ ಕಂಪೆನಿಯಾದ ಡೆಕ್ಕನ್ ಏರ್‌ವೇಸ್‌ನ ಲೈಸನ್ಸನ್ನು ರ ದ್ದುಪಡಿಸಿ ಹಿಂದೀ ವಿಮಾನ ಕಂಪೆನಿಗಳ ಕೈದರಾಬಾದ್ ಸಂಚಾರಕ್ಕೂ ಹಾಕಿರುವ ನಿರ್ಬಂಧಗಳನ್ನೂ ವಿವರಿಸಿದರು. ಸಿಡ್ನಿ ಕಾಟನ್‌ನ ಹಾರಾಟದ ಕುರಿತು ಹಿಂದೀ ಸ ರಕಾರವು ತಾಳಿರುವ ಕಠಿಣ ಧೋರಣೆಯ ನ್ನು ತಿಳಿಸಿದರು.

ಕಾಶ್ಮೀರದಲ್ಲಿ ಪಾಕಿಸ್ತಾನ್ ಸೇನೆಗಳು ಪ್ರತ್ಯಕ್ಷ ಭಾಗವಹಿಸುತ್ತಿರುವ ಸಂಬಂಧದ ಪ್ರಶ್ನೆಗಳಿಗೆ ಪ್ರಧಾನಿ ಪಂಡಿತ ನೆಹರುಗಳು ಉತ್ತರಕೊಟ್ಟರು ಪಾಕಿಸ್ತಾನ್ ದ ಳಗಳ ಸಮೇತ ಅಧಿಕ ಸಂಖ್ಯೆಯಲ್ಲಿ ಸಶ ಸ್ತ್ರ ಪಾಕಿಸ್ತಾನೀ ಪ್ರಜೆಗಳು ಜಮ್ಮು ಎ ತ್ತು ಕಾಶ್ಮೀರದಲ್ಲಿದ್ದಾ ಹೋರಾಡುತ್ತಿರುವ ರೆಂಬುದು ನಿಸ್ಸಂದೇಹವೆಂದೂ ಸರಿಯಾಕ ಅಂಕಿ ಸಂಖ್ಯೆಯನ್ನು ಜಾಹೀರುಮಾಡುವು ದು ಸಾರ್ವಜನಿಕ ಹಿತದೃಷ್ಟಿಯಿಂದ ಯೋಗ್ಯವಲ್ಲವೆಂದೂ ಪಂಡಿತ ನೆಹರುಗಳು ಶ್ರೀ ಆರ್. ಕೆ. ಸಿಧ್ವರ ಪ್ರಶ್ನೆಗುತ್ತರ ಕೊಟ್ಟರು. 'ನಮ್ಮ ರಾಷ್ಟ್ರಕ್ಕಾಗಮಿಸುವ ಅಂತರ್ರಾಷ್ಟ್ರೀಯ ಸಮಿತಿಯೊಂದಕ್ಕೆ ಸಹ ಜವಾಗಿ ಸಲ್ಲತಕ್ಕ ಆದರ ಮತ್ತ ಗೌರವಗ ಳನ್ನು ಕಾಶ್ಮೀರ ಸಮಿತಿಯೂ ಹಿಂದೀ ಸ ರಕಾರದಿಂದ ಪಡೆದಿದೆ'ಯೆಂದರು ನೆಹರು.

ಪ್ರಶ್ನೆ-ಉತ್ತರ

(೧) ಸಿಧ್ವ-ತಮ್ಮ ಸೇನೆಯೋಗ ಕಾ ಶ್ಮೀರದಲ್ಲಿ ಹೋರಾಡುತ್ತಿದೆ ಎಂದು ಪಾ ಕಿಸ್ತಾನವು ಜಾಗತಿಕ ಸಂಘದ ಕಾಶ್ಮೀರ ಸಮಿತಿಯ ಮುಂದೆ ಒಪ್ಪಿಕೊಂಡಿದೆಯೇ?

ನೆಹರು-ಈ ಗುಪ್ತ ಒಪ್ಪಿಗೆ ನಡೆಯು ವಾಗ ನಮ್ಮಪ್ರತಿನಿಧಿಗಳೇನೂ ಅಲ್ಲಿ ಹಾಜ ರಿದ್ದುದಿಲ್ಲ (ನಗು)

ಸೇಟ್ ಗೋವಿಂದದಾಸ್-ಕಾಶ್ಮೀರದ ಲ್ಲಿ ಪಾಕಿಸ್ತಾನ್ ಸೇನೆಹೋರಾಡುತ್ತಿರುವ ಸುದ್ದಿಯನ್ನು ಕುರಿತು ಹಿಂದುಸ್ತಾನ್ ಸಕ ರಾರವು ಪಾಕಿಸ್ತಾನ್ ಸರಕಾರಕ್ಕೇನನ್ನೂ ಬರೆಯಲಿಲ್ಲವೆ?

ನೆಹರೂ-ಪಾಕಿಸ್ತಾನದಲ್ಲಿರುವ ನಮ್ಮ ಹ್ಯಾಕಮಿಶನರರು, ನಮ್ಮ ಸೂಚನೆಯಂ ತೆ ಈ ಕುರಿತು ಉಗ್ರ ನಿರೋಧ ಸೂಚನೆ ಯನ್ನೂ, ವಿಚಾರಣೆಗಳನ್ನೂ ಪಾಕಿಸ್ತಾ ನ್ ಸರಕಾರದ ಮುಂದಿಟ್ಟಿದ್ದಾರೆ.

ಶ್ರೀ ಉರ್ವಿದ್‌ಲಾಲ್-ಪಾಕಿಸ್ತಾನ್ ಸೇನಾ ದಳಗಳು ಕಾಶ್ಮೀರದಲ್ಲಿ ಭಾಗ ವ ಹಿಸುತ್ತಿರುವುದರಿಂದಾಗಿ ವಾಲುಪಟ್ಟಿಸ್ತ ಕಾರ ಪಾಕಿಸ್ತಾನಕ್ಕೆ ಸಲ್ಲಬೇಕಾಗಿರುವ ಶಸ್ತ್ರಾಸ್ತ್ರ, ಮದ್ದುಗುಂಡು ಮತ್ತು ಮಿಲಿ ಟರಿ ಸಾಮಾಗ್ರಿ ದಾಸ್ತಾನುಗಳನ್ನು ಹಿಂ ದೀ ಸರಕಾರವು ನಿಲ್ಲಿಸುವುದೆ?

ನೆಹರು-ಇದೊಂದು ಬಿಡಿಪಿನ ಪ್ರಶ್ನೆ ಯಾಗಿರುವುದರಿಂದ ಪೂರಪಣಿ ಸ್ಪಷ್ಟಿಯಾ ಗಿ ಕಟ್ಟಕೊಂಡು ಅದನ್ನು ಉತ್ತರಿಸುವು ದು ನನಗೆ ಕಷ್ಟವೇ ಸರಿ. ಯಾಕಂದರೆ ಆ ವ್ಯವಸ್ಥೆಗಳು ಹಲವು ಪರಸ್ಪರ ವಹಿವಾ ಟುಗಳನ್ನೊಳಗೊಂಡ 'ಕೊಟ್ಟು ಪಡೆ ಯುವ' ಮಾದರಿಯಲ್ಲಿವೆ. ಆದರೆ ಮಾನ್ಯ ಸದಸ್ಯರ ಮನಸ್ಸಿನಲ್ಲಿರುವ ವಿಷಯ ಸಂಗ ತಿಯು ಸರಕಾರದ ಕಣ್ಣ ಮುಂಜಿ ಬಹಿಳ ವಾಗಿ ಇದ್ದೇ ಇದೆ

ಶ್ರೀ ಎಚ್. ವಿ. ಕಾಮತ್-ಪಾಕಿಸ್ತಾ ನವು ಗೊಂದಲ ನಿರ್ಮಾಪಕವಿದೆ ಎಂಬ ಸತ್ಯಸ್ಥಿತಿಯ ಮೇಲಿಂದ, ಭಾರತ ಸರಕಾ ರವು ರಾಷ್ಟ್ರದ ಕಾಲೋಚಿತ ಕ್ರಮ ಗಾರ ವಗಳಂತೆಯೂ, ಅಂತರ್ರಾಷ್ಟ್ರೀಯ ಕಾಯಿ ದೆ ಮತ್ತು ಪದ್ಧತಿಗಳಿಗನುಸಾರವಾಗಿ ಯೂ ಪಾಕಿಸ್ತಾನವನ್ನು ಆಕ್ರಮಣಗಾ ರನೆಂದು ಗಣಿಸಿ, ಅದಕ್ಕೆ ತಕ್ಕಂತಹ ಕಾ ರ್ಯಕ್ರಮ ಕೈಕೊಳ್ಳುವುದೆ?

ನೆಹರು- ಸತ್ಯಕ್ಕೂ ಕಾಲೋಚಿತ ಕ್ರ ಮನಿಯಮಾಚರಣೆಗಳನ್ನು ಸರಿಯಾದವು ಅನುಸರಿಸಲಿದೆ; ಆದರೆ ಅವುಗಳಲ್ಲಿ ಇತರ ಸಂಗತಿಗಳೂ ಸೇರಿಕೊಂಡಿರುವುದನ್ನೂ ಆ ಲೋಚಿಸಿಕೊಳ್ಳಲಿಕ್ಕಿದೆ. ನಿದರ್ಶನಕ್ಕಾಗಿ ಸಾ ಮಾನ್ಯಜಲನಾತ್ಮಕ ಬುದ್ಧಿಗೆಸಂಬಂಧಿಸಿದ ಸಂಗತಿಗಳನ್ನೂ ನೋಡಬೇಕು. (ನಗು)

ಶ್ರೀ. ಆರ್. ಆರ್. ದಿವಾಕರ-ಕಾಶ್ಮೀ ರ ಹೋರಾಟದಲ್ಲಿ ಪಾಕಿಸ್ತಾನವು ಮಿಶ್ರ ವಾಗಿರುವ ವಾರ್ತೆ ಪ್ರಕಟವಾಗುವ ಎರ ಡೇ ದಿನಗಳಿಗೆ ಮೊದಲು ಪಾಕಿಸ್ತಾನವು ಅದನ್ನು ನಿರಾಕರಿಸಿದ್ದುದರ ಕಡೆಗೆ ಸರ ಕಾರದ ಲಕ್ಷ್ಯವಿದೆಯೆ?

ನೆಹರು- ಆ ಪ್ರತ್ಯೇಕ ಹೇಳಿಕೆಯು ಸ ರಕಾರದ ಲಕ್ಷ್ಯಕ್ಕೆ ಬಂದಿದೆ ಆದರೆ ಆ ದೊಂದು ನಿರಾಕರಣೆಯಲ್ಲ. ವಸ್ತುತಃ ಸ ಮ್ಮತಿಗೆ ಅತಿ ಸಮೀಪವಿರುವ ಒಂದು ಸಂಗತಿ ಆದು.

ಕಾಶ್ಮೀರ ಮತ್ತು ಹೈದರಾಬಾದುಗಳ ಕುರಿತು ಚರ್ಚಿಸುವುದಕ್ಕಾಗಿಯೇ ಒಂ ದು ದಿನವನ್ನು ವೀಕ್ಷಲಿಡಬೇಕೆಂದು ಶ್ರೀ ಯುತ ವಿ. ಕಾಮತರು ಅಪೇಕ್ಷೆ ಸಿದಾಗ ಸಾವಧಾನಿಕವಾದ ಸಂಸ್ಥಾನೀ ಧೋರಣೆಯನ್ನು ಚರ್ಚಿಗಿಡಬಹುದೆಂಬ ಹೊರ ತು ಹಲವು ಸಂಗತಿಗಳನ್ನು ಪ್ರತ್ಯೇಕವಾ ಗಿ ಪರ್ಯಾಲೋಚಿಸಿ ಫಲವಿಲ್ಲವೆಂದರು ನೆಹರು.

ಸ್ವ...ಗ್ ನಿಲಗಳ ಸಂಬಂಧದ ದಾಖಲೆಗಳನ್ನು ಆರ್ಥಿಕ ಮಂತ್ರಿ ಶ್ರೀ ಷಣ್ಮುಗಂಚೆಟ್ಟಿಯಾರರು ಪಾರ್ಲಿಮೆಂಟಿ ನ ಮುಂದಿಟ್ಟರು. ಈ ಸಂಬಂಧದ ಚ ರ್ಚೆಗಳು ಇದೇ ತಾ ೧೩ರಲ್ಲಿ ನಡೆಯಲಿವೆ.

ತಾ ೧೦ರಲ್ಲಿ ಸಂಸ್ಥಾನ ಕಾರ್ಯದರ್ಶಿ ಸರ್ದಾರ್ ಪಟೇಲರು ಹೈದರಾಬಾದ್ ಮ ತ್ತು ಕಾಶ್ಮೀರ ಪರಿಸ್ಥಿತಿಯ ಕುರಿತು ಭಾರ ತ ಸರಕಾರವು ವಹಿಸಿದ್ದ ವರ್ತನೆ ಹಾಗೂ ಧೋರಣೆಗಳನ್ನು ವಿವರಿಸಿ ಪಾರ್ಲಿಮೆಂಟಿ ನ ಭಾವ ಶುದ್ಧಿಗೊಳಿಸಿದರೆಂದು ತಿಳಿದು ಬರುತ್ತದೆ.

ಜೊಂದನ್ನು ಬಹಿರಂಗಪಡಿಸಿದ್ದಾರೆ. ಕಾ ಶ್ಮೀರದ ಧಾಳಿಯಾರಂಭಿಸುವ ಮೊದಲು ಸಂಧಾನಕ್ಕಾಗಿ ಲಾಹೋರಿಗೆ ಬರಬೇಕೆಂ ದು ಪಾಕಿಸ್ತಾನ್ ಅಧಿಕಾರಿಗಳು ಶೇಖ್ ಅಬ್ದುಲ್ಲಾರನ್ನು ಆಮಂತ್ರಿಸಿದ್ದರು. ಆ ಹೋರಿಗೆ ಬಂದೊಡನೆಯೇ ಅವರನ್ನು ಬಂಧಿಸಿ ಕರಾಚಿಗೆ ಕೊಂಡೊಯ್ದು ಜೈಲಿ ನಲ್ಲಿಡಬೇಕೆಂದೂ, ಅಲ್ಲಿಂದ ಗುಡ್ಡಗಾಡು ಧಾಳಿಗಾರರನ್ನು ಸ್ವಾಗತಿಸುವಂತೆಯೂ ಪಾಕಿಸ್ತಾನಕ್ಕೆ ಸೇರುವಂತೆಯೂ ಶೇಖ್ ಅಬ್ದುಲ್ಲಾರ ಹೆಸರಿನಿಂದ ಕಾಶ್ಮೀರದ ಜ ನತೆಗೆ ಸಂದೇಶ ಹೊಗಡಿಸಬೇಕೆಂದೂ ಸಂ ಕಲ್ಪಿಸಿದ್ದರು. ಈ ಗುಟ್ಟನ್ನು ಹೊರಗೆಡಹಿ ರೇಕ್ ಅಬ್ದುಲ್ಲರಂದಿದ್ದಾರೆ: "ಆದರೆ ದೇ ವರ ಸಂಕಲ್ಪ ಬೇರೆ ಇತ್ತು. ಪಾಕಿಸ್ತಾನ ದ ಧೋರಣೆಯೇ ನಮ್ಮನ್ನು ಭಾರತದ ಸ ಹಾಯ ಯಾಚಿಸುವಂತೆಯೂ ಭಾರತದೊ ಡನೆ ತಾತ್ಕಾಲಿಕ ಜೋಡಣೆಗೊಳ್ಳುವಂತೆ ಯೂ ದೂಡಿತು. ಆ ಹೊಡತ ಕಾಶ್ಮೀರಕ್ಕೆ ಬೇರೆ ಗತಿಯಿರಲಿಲ್ಲ. ಕಾಶ್ಮೀ ರದಲ್ಲಿರುವ ಹಿಂದೀ ಸೇನೆಗಳ ಆಚರಣೆಗ ಳ ಕುರಿತು ಪಾಕಿಸ್ತಾನವು ಸುಳ್ಳು ಪ್ರಚಾ ರಗಳನ್ನು ಮಾಡುತ್ತಿದೆ. ಆದರೆ ಸತ್ಯವು ಜಯಿಸಲೇಬೇಕು. ನಾವು ಸ್ವತಂತ್ರ ಜನ ತೆಯಾಗಿದ್ದೇವೆ; ಸ್ವತಂತ್ರರಾಗಿಯೇ ಬಾ ಳುತ್ತೇವೆ. ಪರಕೀಯರ ಗುಲಾಮಗಿರಿಯ ಭಾವನೆ ಕೂಡಾ ನಮಗೆ ಅಸಹ್ಯ".

15 ನೇ ಆಗೋಸ್ತು 1948

ಈ ಚಿರಸ್ಮರಣೀಯವಾದ ದಿನದಲ್ಲಿ-ನಮ್ಮ ಸ್ವಾತಂತ್ರ್ಯ ದಿವಸದ ಸುಮುಹೂರ್ತದ ಲ್ಲಿ ರಾಷ್ಟ್ರಪಿತ ಪೂಜ್ಯ ಬಾಪೂಜಿ ಬಗ್ಗೂ ಸ್ವಾತಂತ್ರ್ಯ ಪ್ರಾಪ್ತಿಗಾಗಿ ತ್ಯಾಗಾರ್ಪಣಮಾ ಡಿದ ಆ ಯೋಧರಿಗೂ ನಮ್ಮ ವಿನೀತ ಪ್ರೇಮಭಕ್ತಿಯನ್ನು ಅರ್ಪಿಸುತ್ತೇವೆ. ಜನತಾ ಸರಕಾರದ ಸರ್ವಸಮರ್ಥ ಸಾರಥ್ಯವನ್ನು ನಹಿಸಿರುವ ರಾಷ್ಟ್ರ ಮಂತ್ರಿವರಿಗೆ ಸತ್ಸಹಕಾರದ ಭರವಸೆಯನ್ನೀಯುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ.

ಕಳೆದ ಮೂವತ್ತೆಂಟು ವರುಷಗಳಿಂದ ವಿನೂತ್ನೇತ್ರದಲ್ಲಿ ದುಡಿದು ಜೀರಶಃ ಹಾ ಗೂ ಜನಸಾಂಗದ ಆರ್ಥಿಕ ಉನ್ನತಿಗಾಗಿ ನಮ್ಮ ಸೇವೆಯನ್ನು ಸಲ್ಲಿಸಿದ್ದೇವೆಂದು ಹೇಳಲು ಅಭಿಮಾನಪಡುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್.
ಚೀಫ್ ಏಜೆಂಟ್ಸ್:
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ ಲಿಮಿಟೆಡ್
ಶಾಖಾ ಕಾರ್ಯಾಲಯಗಳು:
ಉಡುಪಿ, ಮಂಗಳೂರು, ಬಲ್ಲಿಕೋಟೆ, ಕೊಯಮುತ್ತೂರು, ಮಧುರಾ,
ತ್ರಿವೆಂಡ್ರಮ್, ಬೆಂಗಳೂರು, ಮದ್ರಾಸ್ ಮತ್ತು ಬೊಂಬಾಯಿ

ತಾ. 11-8-48 ರಿಂದ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ-

ಗಿರ್‌ವಾರ್ ಬಿಹಾರ್ ಪ್ರೊಡಕ್ಷನ್‌ನವರ

'ಮೊಹ್ಬತ್-ಕೀ-ಜೀತ್'

ನಾಡಿಯಾ, ನವೀನಚಂದ್ರ, ಎಸ್. ನಾಜೀರ್, ಆಗಾ.

ಬರುವ ಚಿತ್ರ: ಪ್ರಭಾತದವರ
'ಗೋಕುಲ್'

ಮುಂದಿನ ಚಿತ್ರ
"ಸುಮತಿ" ತಮಿಳು.

ನಾವಾನಿ-ಈ ಪ್ರಾಂತ್ಯದಿಂದ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ಹಣ ಸಂಗ್ರಹಿ ಸಲು ಈವರೆಲ್ಲ ಶ್ರೀಯುತ್, ಪದ್ಮನಾಭ ಮುರಾಯರನ್ನು ಅಧಿಕೃತ ಪ್ರತಿನಿಧಿಗಳ ನ್ನಾಗಿ ಪ. ಶ. ಜಿಲ್ಲಾ ಸಮಿತಿಯವರು ನೇ ಮಿಸಿರುವುದರಿಂದ ಅವರಕೂಪನ್ ಹಣ ಪಾವ ತಿಮಾಡಿ ರಶೀದಿ ಪಡಯಬಹುದೆಂ.

ಮಂಗಳೂರು

ಶಿಕ್ಷಣ ಸುಧಾರಣೆಗೆ ಸ್ವಾಗತ– ದಿನಾಂಕ 1ರಲ್ಲು ಮಂಗಳೂರು ಬೆಸೆಂಟ್ ಮಂದಿರದಲ್ಲಿ ಶ್ರೀ ಎಮ್. ಎಸ್. ಏಕಾಂಬರ ರಾಯರ ಅಧ್ಯಕ್ಷತೆಯಲ್ಲಿ ದ. ಕ. ಜಿಲ್ಲಾ ಆಧ್ಯಾಪಕ ಸಂಘದ ಕಾರ್ಯಕಾರೀ ಸಮಿತಿಯ ಸಭೆಯು ಜರಗಿ ಮದ್ರಾಸು ಸರಕಾರದ ಶಿಕ್ಷಣ ಸುಧಾರಣೆಯ ಕುರಿತು ದೀರ್ಘವಾದ ಚರ್ಚೆ ನಡಿಯಿತು ಬಳಿಕ ಈಗಿನಿನ ನಿರ್ಣಯಗಳು ಪಾಸಾದುವು. (1) ಮದ್ರಾಸು ಸರಕಾರದ ಸೆಕೆಂಡರಿ ಶಿಕ್ಷಣದ ಸುಧಾರಣೆಯನ್ನು ಈ ಸಭೆಯು ಸ್ವಾಗತಿಸುತ್ತವೆಯೆಂದೆ ಆಧ್ಯಾಪಕ ವರ್ಗವೂ ಇವರ ಸಂಸ್ಥೆಗಳೂ ಈ ಯೋಜನೆಯು ಯಶಸ್ವಿಯಾಗುವಂತೆ ಸಹಕರಿಸಬೇಕಾಗಿ ಕೇಳಿಕೊಳ್ಳುತ್ತದೆ (2) ಸರಕಾರವು ಪ್ರತಿಯೊಂದು ಜಿಲ್ಲೆಯಲ್ಲಿ ಅನುಕೂಲ ಕೇಂದ್ರಗಳಲ್ಲಿ ಬೋರ್ಡಿನ, ಸಾರ್ವಜನಿಕಾಭ್ಯಾಸ ಮುಂತಾದ ವಿಚಾರಗಳಲ್ಲಿ ತರಬೇತಿ ಶಿಬಿರಗಳನ್ನು ತೆರೆಯಬೇಕು (3) ಶಿಕ್ಷಣದ ಪ್ರಥಮ ಭಾಷೆಯು ಸಾಲ್ಕು ವರ್ಷಗಳಲ್ಲಿ ಉಪಪಠ್ಯ ಮತ್ತು ಪ್ರಬಂಧಗಳು ಮಾತೃಭಾಷೆಯಲ್ಲಿ ಆಗಬೇಕು. ಉಪಪಠ್ಯದಲ್ಲಿ ಆಧುನಿಕ ಗದ್ಯ ಪದ್ಯವಿಭಾಗವು, ಮತ್ತು ದ್ವಿತೀಯ ಭಾಷೆಯ ಪದ್ಯ ಗದ್ಯಗಳು ಡಿಟೇಲ್ಡ್ ಆಗಿರಬೇಕು. (4) ಶಿಕ್ಷಣದ ಪ್ರಥಮ ಭಾಷೆಯಾಗಿ ಕನ್ನಡ, ಇಂಗ್ಲಿಷ್, ಬಿ. ಎ. ತರಗತಿಗಳಲ್ಲಿ ದ್ವಿತೀಯ ಭಾಷೆಯಾಗಿ ಕಲಿತ ಎಲ್. ಟಿ. ಅಥವಾ ಬಿ. ಟಿ. ಯವರಿಗೆ ಹ್ಯಾಸ್ಕೂಲು ಗಳಲ್ಲಿ ಪ್ರಥಮ ಭಾಷೆಯನ್ನು ಕಲಿಸಲು ಒಪ್ಪಿಗೆ ಕೊಡಬೇಕು. (5) ತರಬೇತಾದ ಪಂಡಿತರಿಗೆ ಈಗಿರುವ ಸ್ಕೇಲಿನ ನಿಯಮದಲ್ಲಿ ಯೂಸಸ್ಥಾನವೂ ಬೆಲ್ಲಾಬ್ಬರಿಂದ ಅಧಿಸ್ಥಾನವೂ ನಿರ್ದೇಶಿಸಬೇಕು (6) ಮಂಗಳೂರಲ್ಲಿ ಈಗ ಇರುವುದಕ್ಕಿಂತ ಇನ್ನೂ ಕೆಲವು ಎಸ್. ಎಸ್. ಎಲ್. ಸಿ ಪರೀಕ್ಷಾ ಕೇಂದ್ರಗಳನ್ನು ತೆರೆಯಬೇಕೆಂದು.

ಸ್ವತಂತ್ರ ದಿನಾಚರಣೆಗಾಗಿ ಏರ್ಪಾಡು–ಇದೇ ತಾ|15ರಂದು ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮಗಳನ್ನು ಆಲೋಚಿಸಲು ತಾ 4ರಲ್ಲಿ ಜಿಲ್ಲಾ ಕಲೆಕ್ಟರರ ಕಚೇರಿಯಲ್ಲಿ ಜಿಲ್ಲಾ ಕಲೆಕ್ಟರ್ ● ಎಸ್. ಆರ್. ಕೈವಾರ್, ಐ. ಸಿ. ಎಸ್. ಅವರ ಅಧ್ಯಕ್ಷತೆಯಲ್ಲಿ ಕೆಲವು ನಾಗರಿಕ ಮುಖಂಡರ ಮತ್ತು ಜಿಲ್ಲಾಧಿಕಾರಿಗಳ ಸಭೆಯೊಂದು ಜರಗಿತು. ಆದಿನ ಮಧ್ಯಾಹ್ನ ನಾಲ್ಕು ಗಂಟೆಗೆ ಸೆಂಟ್ರಲ್ ಮೈದಾನಿನಲ್ಲಿ ಜಿಲ್ಲಾ ಕಲೆಕ್ಟರು ಯೂನಿಯನ್ ಧ್ವಜಾರೋಹಣ ಮಾಡುವುದು, ತದನಂತರ ಪೆರೇ ಸ್ಪರ್ಧೆಗಳು, ಕಲೆಕ್ಟರರ ಬಿಲ್ಲೆಗಳು, ಸಾರ್ವಜನಿಕ ಸಭೆ ಭಾಷಣಗಳಾಗುವವು

ಉಡುಪಿ

ಜಿಲ್ಲಾ ಭಾರತೀಯ ವೈದ್ಯ ಪರಿಷತ್ತಿನ–ಸ್ವಾಗತಸಮಿತಿ ಹಾಗೂ ಪರಿಷತ್ತಿನ ಸಲಹಾ ಸಮಿತಿಯ ಸಭೆಯು ತಾ 8ರಲ್ಲು ಬ್ರಹ್ಮಾವರದಲ್ಲಿ ಜರಗಿ ತೀರ್ಮಾನಗಳಾದವು. ಬಿ. ಗೋಪಾಲ ಶೆಟ್ಟಿ (ಅಧ್ಯಕ್ಷ) ಬಿ. ಪದ್ಮನಾಭ ಶೆಟ್ಟಿ (ಉಪಾಧ್ಯಕ್ಷ ಮತ್ತು ಕೋಶಾಧಿಕಾರಿ) ಸಿ ವೈ. ರಾಮನ್ ಗುರುಕಲ್ (ಕಾರ್ಯದರ್ಶಿ), ಕುಂಜಾಲು ರಘುನಾಥ ಪ್ರಭು ವೈದ್ಯ ಬಿ. ವಿ ಮಾಧವರಾವ್ (ಜತೆಕಾರ್ಯದರ್ಶಿಗಳು) ಇವರು ಸ್ವಾಗತ ಸಮಿತಿಯ ಅಧಿಕಾರಿಗಳಾಗಿ ಆಯ್ಕೆಯಾಗಿದ್ದಾರೆ. ಪರಿಷತ್ತು ಬರುವ ನವಂಬರ ತಾ 26, 27, 28ರಲ್ಲು ಬ್ರಹ್ಮಾವರದಲ್ಲಿ ಜರಗುವುದು. ಆ ಸಮಯ ಜಿಲ್ಲಾ ಆಯುರ್ವೇದಕ್ಕೆ ಸಂಬಂಧಪಟ್ಟ ಪುಸ್ತಕ, ಪತ್ರಿಕೆಗಳು, ಔಷಧ, ಕೈಗಾರಿಕೆಗಳ ವಸ್ತು ಪ್ರದರ್ಶನವೂ ಏರ್ಪಾಡುಮಾಡಲಾಗಿದೆ.

ಸಪ್ತಾಹ–ಉಡುಪಿ ತಾಲೂಕಿನಲ್ಲಿ ಇದೇ ತಾ 22ರಿಂದ 28ರ ತನಕ ಸಪ್ತಾಹವನ್ನು ಆಚರಿಸುವ ಕಾರ್ಯಕ್ರಮಗಳನ್ನು ಆಲೋಚಿಸುವಲೆ ಊರವರ ಹಾಗೂ ಹಳ್ಳಿ ರೈತ ಪ್ರತಿನಿಧಿಗಳ ಸಭೆಯೊಂದು ಇದೇ ತಾ 7ರಲ್ಲು ತಾಲೂಕು ಕಚೇರಿಯಲ್ಲಿ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಕೋಟೇಶ್ವರರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಸಪ್ತಾಹವನ್ನು ಯಶಸ್ವಿಗೊಳಿಸುವರೆ ಏರ್ಪಾ ಸಮಿತಿಗಳ ರಚನೆ ಆಯಿತು.

ಸ್ವಾತಂತ್ರ್ಯ ದಿನಾಚರಣೆಯು–ಉಡುಪಿಯಲ್ಲಿ ಇದೇ ತಾ 15ನೆ ಆದಿತ್ಯವಾರ ಈಕೆಳಗಿನ ಕಾರ್ಯಕ್ರಮಗಳಂದ ಆಚರಿಸಲ್ಪಡುವುದು. ಬೆಳಿಗ್ಗೆ 7ಗಂಟೆಗೆ ರಥಬೀದಿಯಿಂ ಪ್ರಭಾತಫೇರಿ ಹೊರಟು ಅಜ್ಜರಕಾಡು ಗಾಂಧಿ ಮೈದಾನಕ್ಕೆ ಬರುವುದು ನಂತರ ಜಿಲ್ಲಾ ಸೆಷನ್ಸ್ ಜಡ್ಜರಾದ ಶ್ರೀ ಸಿ. ಕೃಷ್ಣ ಮೂರ್ತಿ, ಬಿ. ಎ. ಸಿ. ಎಲ್ ಅವರು ಧ್ವಜಾರೋಹಣ ಮಾಡುವರು. ಅಲ್ಲಿಗೆ ಪೂರ್ವಾಹ್ನದ ಕಾರ್ಯಕ್ರಮ ಮುಗಿಯುವುದು. ಅಪರಾಹ್ನ 2½ಗಂಟೆಯಿಂದ 3½ಗಂಟೆಯತನಕ ಮುನಿಸಿಪಲ್ ಕ್ಷೇತ್ರದೊಳಗಿನ ಯಾವತ್ತೂ ಶಾಲೆಗಳ ಮಕ್ಕಳಿಗೆ ಸಿಹಿತಿಂಡಿ ಹಂಚಲಾಗುವುದು 4ತಾಸಿಗೆ ಬೋರ್ಡ್ ಹೈಸ್ಕೂಲಿನ ಜನತಾ ಬಾಲವಿಲಯಿಂದ ಸಾರ್ವಜನಿಕ ಮೆರವಣಿಗೆಯು ಹೊರಟು ಪ್ರಮುಖ ರಸ್ತೆಗಳಿಂದಾಗಿ ಅಜ್ಜರಕಾಡು ಗಾಂಧೀ ಮೈದಾನಕ್ಕೆ ಬಂದು ಸಂಜೆ ಏದು ಗಂಟೆಗೆ ಸಾರ್ವಜನಿಕ ಸಭೆಯು ಶ್ರೀ ಸಿ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿ ಭಾಷಣಗಳಾಗುವವು ಎಂದು ಸರ್ಕಲ್ ಕಾಂಗ್ರೆಸ್ ಕಮಿಟಿಯ ಪ್ರೆಸಿಡೆಂಟ್ ಶ್ರೀ ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆರು ತಿಳಿಸುತ್ತಾರೆ. ಇದೇ ಮೊದಲಿಯ ಕಾರ್ಯಕ್ರಮವನ್ನು ಸಕ್ಕಸಕ್ಕೆಗಳಲ್ಲಿ ಆಚರಿಸಬೇಕಾಗಿ ಅವರ ಆಗ್ರಹದ ವಿನಂತಿಯಿದೆ.

ಸ್ಥಳೀಯ ಬೋರ್ಡು ಹೈಸ್ಕೂಲಿನಲ್ಲಿ ಸ್ವಾತಂತ್ರ್ಯ ದಿನಾಚರಣೆಯು ತಾ 15ರಲ್ಲು ಬೆಳಿಗ್ಗೆ ಆಶಾಲೆಯ ಸಮೂಹ ಸೇವಾ ಸಮಿತಿಯ ಆಶ್ರಯದಲ್ಲಿ ವಿವಿಧ ಕಾರ್ಯಕ್ರಮಗಳಂಥ ಆಚರಿಸಲ್ಪಡುವುದು.

ಆಶ್ಲೇಷ– ಮಳೆ-ಕಳದ ನಾಲ್ಕಾರು ದಿವಸಗಳಿಂದ ಸತತ ಬರುತ್ತಲಿದೆ. ತಗ್ಗು ಕಣಿವೆಯ ನದಿಗಳಲ್ಲಿ ನೆರೆಯೇರುತ್ತದೆ. ಅಲ್ಲಲ್ಲಿ ಮನೆಗಳು ಬಿದ್ದಿರುವ ಸುದ್ದಿ ಕೇಳಿಬರುತ್ತವೆ. ಉಡುಪಿ ಟೌನಿನೊಳಗಿನ ಕಲ್ಸಂಕ ಸೇತುವೆಯಲ್ಲಿ ಪರುಳು ಬಿದ್ದುದರಿಂದ ಅದರ ಬೇಲಿಂದ ಹಾದುಹೋಗುವ ವಾಹನ ಸಂಚಾರ ನಿಲ್ಲಿಸಲಾಗಿದೆ.

ಶ್ರೀ ಕೆ. ಶಿವರಾಮ ಹೆಗ್ಡೆ-B. E, Hons, M. S. C, ಅವರು ಮದ್ರಾಸ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಟೆಲಿಕಮ್ಯೂನಿಕೇಶನ್ ಜೂನಿಯರ್ ಇನ್ಸ್ಟ್ರಕ್ಟರ್ ಆಗಿ ನೇಮಕ ಹೊಂದಿರುವರು.

ಶ್ರೀ ವಿ. ತಿಮ್ಮಪ್ಪ ಶೆಟ್ಟಿ-B. A. B. T. ಅವರು ಶಾಲಾ ಇನ್ಸ್ಪೆಕ್ಟರ್ ಇನ್ಸ್ಪೆಕ್ಟರ್ ಆಗಿ ನೇಮಕ ಹೊಂದಿರುವರು.

ಶ್ರೀ ಕೊರಡ್ಕಲ್ ಸ್ಮಾರಕ ಸಮಿತಿ
ಧನ ಸಹಾಯದ ವಿವರ

೧	ಹರ್ಯಾಯ ಶ್ರೀ ಸೋದೆ ಮಠದ ವಿಶ್ವೋತ್ತಮತೀರ್ಥ ಶ್ರೀಪಾದಂಗಳವರು	50	0 0
೨	ಅದಮಾರು ಮಠದ ಶ್ರೀ ವಿಭುಧೇಶತೀರ್ಥ ಶ್ರೀಪಾದಂಗಳವರು	50	0 0
೩	ಪುತ್ತಿಗೆ ಮಠದ ಶ್ರೀಸುಜ್ಞಾನೇಂದ್ರ ತೀರ್ಥ ಶ್ರೀಪಾದಂಗಳವರು	25	0 0
೪	ಶ್ರೀ. ಕೆ.ನೆಂಕಟರಮಣ ಭಟ್ಟ್, ಅಸರು ರೋಯಲ್ ಮಿಷಲ್	25	0 0
೫	ಶ್ರೀ ಕಲ್ಯಾಣಿ ವ್ಯಾಸಾಚಾರ್ಯರು, ಶಾತ್ರೆ ವ್ಯಾಸಾರಿಗಳು	25	0 0
೬	ಶ್ರೀ. ವೈಲೂರು ವಾಸುದೇವ ರಾವ್, ಬಿ. ಎ. ಬಿ. ಎಲ್. ವಕೀಲರ್	25	0 0
೭	ಶ್ರೀ. ಯು. ಕೇಶವ ಕಾಮತ್, ಮುನಿಸಿಪಲ್ ಕೌನ್ಸಿಲರು, ಕಲ್ಸಂಕ	25	0 0
	ಮೊತ್ತ	225	0 0

ನಮ್ಮೀ ಸ್ವರಾಜ್ಯದ ಪ್ರತಿದಿನವಲ್ಲೂ · ವಿಶೇಷವಾಗಿ
ಪ್ರಥಮ ಸ್ವರಾಜ್ಯ ವರ್ಧಂತಿ ತಾ 15-8-1948ರಲ್ಲಿ·
ಸ್ವರಾಜ್ಯದ ಸಾರ ಹಾಗೂ ಎಲ್ಲಾ ಮುನ್ಯ ಘಟ್ಟಗಳನ್ನೂ ಸ್ಮರಿಸಿ, ಹಾಡಿ ಕುಣಿಯುವಲು ಬೇಡವೆ?
ಬೇಕಾದರೆ ಇದೆ—

ಸ್ವರಾಜ್ಯ ತುಳು ಲಾವಣಿ

ಧಾಟಿ: —ನೂರಿಡ್ ಎಡ್ಡತ್ತೀಲ್ ಹಿಂದುಲು।
ಹೈದರಬಾದ್ ನಿಜಾಮನವೆ?। ನು-।
ಯೂರಿಡೆಡ್ ನೇಶನ್ಸ ದಿನ ಪೋವ!। ರಬ್ಬ-।
ಪಾಪನ ನಾಯಿಲು ನೇಗಾವೆ!॥
ಕಾದಿಗೊಯ್ಯಿ ಎಜಾವನ್ ಲಕ್ಕೆಲ್।
ಕೈದಿಪ್ಪಲೆ, ಸೊಂಟನೆ ಕಟ್ಟಿದ್ ॥ ೪೦ ।

ಬೆಲೆ:– 0 2 0
ಪ್ರತಿಗಳಿಗೆ—
ಎಂ. ವಿ. ಹೆಗ್ಡೆ, ನವಯುಗ ಪ್ರೆಸ್, ಉಡುಪಿ.

ಭಾರದ್ವಾಜರ
ಇಂಗ್ಲಿಷ್–ಇಂಗ್ಲಿಷ್–ಕನ್ನಡ
ಡಿಕ್ಷ್ನರಿ
ಉತ್ತಮ ಪ್ರತಿ ರೂ. 6–0–0
ಸಾಧಾರಣ ಪ್ರತಿ ರೂ. 4–8–0
ಅಂಚೆಖರ್ಚು ಪ್ರತ್ಯೇಕ
ನವಭಾರತ ಬುಕ್ ಡಿಪೊ,
: ಉಡುಪಿ :

ಮಗ್ಗಿ ಪುಸ್ತಕ
ತಯಾರಾಗಿದೆ.

ಪ್ರತಿ	1ಕ್ಕೆ	0 1	0
,,	50ಕ್ಕೆ	2 10	0
,,	100ಕ್ಕೆ	5 0	0

ನವಯುಗ ಪ್ರೆಸ್, ಉಡುಪಿ

ನಯಸ್ಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಇಂಗ್ಲಿಷ್ ಕಲಿಯಲು ಅತ್ಯನುಕೂಲವಾದ ಪುಸ್ತಕ
ವಿ. ಕೊರಡ್ಕಲ್ ಶ್ರೀನಿವಾಸರಾಯರಿಂದ
ಸುಲಭದಲ್ಲಿ ಇಂಗ್ಲಿಷ್
(English Made Easy)
(ಇಂಗ್ಲಿಷ್ ಸ್ವಯಂಬೋಧಿನಿ)
ಬೆಲೆ ರೂ. 1–8–0; ಕಿಪ್ಪಾಲು ಪ್ಯಾರ್ ರೂ. 1–13–0
ಪ್ರತಿಗಳು ಸಿಗುವ ಮುಖ್ಯ ಸ್ಥಳಗಳು:.
1. ಸ್ಕೂಲ್ ಬುಕ್ ಏಂಪೆಸಿ, ಮಂಗಳೂರು, 2. ನವಭಾರತ ಬುಕ್ ಡಿಪೊ, ಉಡುಪಿ 3 ಸ್ವತಂತ್ರ ಭಾರತ ಬುಕ್ ಕಂಪೆನಿ ಪೋರ್ಟ್, ಬೊಂಬಾಯಿ,
4. ಎಂ. ಎಸ್. ಮಯ್ಯ ಪುಸ್ತಾರು

1 ರೂಪಾಯಿಗೆ 8 ಪುಸ ಕಗಳು

ಗಾಂಧಿಜಿಯ ಜೀವನ ಕಾವ್ಯಗಳು	0-20
ವೈಯಕ್ತಿಕ ಆರೋಗ್ಯ	0-2-0
ಆರಬುಸ್ಥಾನ	0-2-0
ಆದರ್ಶ ಆರೋಗ್ಯ ಚಾರ್ತೆ	0-2-0
ವೀರಬೊಮ್ಮ	0-2 0
ಶಂಭುಕವಧೆ	0-2-0
ಧಂ ಧಂ ಜೋಲು	0-2 0
ಸಿನೆಮಾ ಪದ್ಯಾನಂ	0-4 0

ಒಂದು ಡಜನ್ ಮೇಲ್ಪಟ್ಟು ಕೊಳ್ಳುವವರಿಗೆ ಮೇಲಿನ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು ಅಂಚೆ ವೆಚ್ಚ ಪ್ರತ್ಯೇಕ.
ವಿಳಾಸ.
ನವಭಾರತಬುಕ್ ಡಿಪೊ, ಉಡುಪಿ

ಕಮ್ಯೂನಿಸ್ಟರ ಹಾವಳಿ

ಎಂತಹ ಮೂರ್ಖತನ! ವಿನಾಶಕ ಚಟುವಟಿಕೆ!!
ಅಜ್ಞಾನದಮೇಲೆ ಸುಲಿಗೆ !!!

"ಬೆಳೆಯಿರಿ ಇಲ್ಲವೆ ಆಳಿಯಿರಿ" ಎಂದು ದೇಶಭುರೀಣರು ಸಾರುತ್ತಿದ್ದರೆ 'ಬೆಳೆಸಿದ್ದನ್ನೆಲ್ಲಾ ಆಳಿಸಿರಿ' ಎಂದು ಕಮ್ಯೂನಿಸ್ಟರು ಸಾರುತ್ತಿದ್ದಾರೆ.

ತ್ರಲಿಜೇರಿಯಲ್ಲಿಏನಾಯಿತು? ಎಷ್ಟೋ ದಿನಗಳಿಂದ ಪೋತಿಸರು ಹುಡುಕುತ್ತಿದ್ದ ಕಮ್ಯುನಿಸ್ಟ್ ಪಕ್ಷಕ್ಕೆ ಸೇರಿ ಅಪಾಹುತ ಮಾಡುತ್ತಿದ್ದ ತನ್ನ ಮಗನನ್ನು ಒಬ್ಬ ಮುಹನೀಯ ತಾನೇ ಹಿಡಿದು ಪೋಲಿಸರಿಗೆ ಒಪ್ಪಿಸಿದ. ಜನರು ತಮ್ಮನ್ನು ತಾವೇ ರಕ್ಷಿಸಿಕೊಳ್ಳಬೇಕೆಂಬುದಕ್ಕೆ ಇದೇ ನಿದರ್ಶನ. ಕಮ್ಯುನಿಸ್ಟರ ವಿಧ್ವಂಸಕ ಕೃತ್ಯಗಳಿಂದ ಸಮಾಜವನ್ನು ಉಳಿಸಬೇಕೆಂಬ ಭಾವನೆ ಜನರಲ್ಲಿ ಹುಟ್ಟಿದೆಯೆಂಬುದಕ್ಕೆ ಇದೇ ಉದಾಹರಣೆ. ಇದೊಂದೇ ಘಟನೆಯಲ್ಲ. ಇಂತಹವು ಹಲವಾರು ದೊರೆಯುತ್ತಿವೆ. ಇಂದು ಹೇಳುವುದಿದ್ದರೆ ಕಮ್ಯುನಿಸ್ಟರನ್ನು ಬಂಧಿಸುವವರು ಪೋಲಿಸರಲ್ಲ. ಜನತೆಯೇ ಇವರನ್ನು ಹಿಡಿದು ಬಂಧಿಸುತ್ತಿದೆ ಎಂದರೆ ಹೆಚ್ಚಲ್ಲ.

೦೦ ೦೦

ನಾವಿಂದು ಅತಿ ಕಠಿಣವಾದ ಕಾಲವನ್ನು ಎದುರಿಸುತ್ತಿದ್ದೇವೆ. ಪ್ರತಿಯೊಬ್ಬ ಭಾರತೀಯನೂ ತನ್ನ ಕರ್ತವ್ಯವನ್ನು ಮಾಡಲೇಬೇಕಾಗಿದೆ. ಇಂತಹ ದುರಂತ ಸನ್ನಿವೇಶದಲ್ಲಿ ಭಾರತ ಮಾತೆಯ ರಕ್ಷಣೆ ಸೇನೆಗಳು ನಮ್ಮ ಪಾಲಿನವು, ಅತ್ಯಪುನರ್ವ್ಯವಸ್ಥೆ, ಪುನರ್ನಿರ್ಮಾಣಗಳ ಮಹಾ ಕಾರ್ಯಗಳಿಗೆ ಗಮನ ಕೊಡುವುದೂ ನಮ್ಮ ಕರ್ತವ್ಯ. ಇಂತಹ ಬಿಕ್ಕಟ್ಟಿನ ಕಾಲದಲ್ಲಿ ರಾಷ್ಟ್ರ ನಿರ್ಮಾಣದ ಮಹಾ ಕಾರ್ಯದಲ್ಲಿ ಜನತೆಯ ಸರ್ವಶಕ್ತಿಯೂ ಒಂದಾಗಿ ಸಾಗಬೇಕು. ಎದುರಿದುರಿಗೇ ವಿನಾಶಕ ಚಟುವಟಿಕೆಗಳಲ್ಲಿ ಕೈಹಾಕುವ ಯಾವ ವ್ಯಕ್ತಿಗಳಿಗೂ ಎಡೆಕೊಡಲಾಗದು, ನಾಗರಿಕರ ನೀತಿ ರೀತಿಗಳನ್ನು ಭೇದಿಸಿ, ಜನತಾ ಸರಕಾರದಿಂದ ಸಿದ್ಧವಾದ ಜನತಾರಂಗವನ್ನು ಮುರಿದು ಶಾಂತಿಗೆ ಭಂಗ ತರುವ ಯಾವ ಕೆಲಸಗಳಿಗೂ ಇಲ್ಲಿ ಎಳ್ಳಷ್ಟು ಎಡೆದೊರೆಯದು. ಇದನ್ನು ಚೆನ್ನಾಗಿ ಪರ್ಯಾಲೋಚಿಸಿ, ಜನತೆಯ ಸುಖ ಶಾಂತಿಗಳಿಗೆ, ಶಿಸ್ತು ನೀತಿಗಳಿಗೆ ಭಂಗತರುವ ಕಮ್ಯೂನಿಸ್ಟರ ಹಾವಳಿಯನ್ನು ಸದೆಬಡಿಯಲು ಸರಕಾರವು ತನ್ನ ಸರ್ವಶಕ್ತಿಯನ್ನೂ ಉಪಯೋಗಿಸುವುದು. ಅತಿ ಕಠಿಣವಾದ ಚರ್ಯೆ ತೆಕ್ಕೊಳ್ಳುವುದು.

೦೦ ೦೦

ಪ್ರತಿಯೊಬ್ಬನ ಕರ್ತವ್ಯ

ಆಹಾರದ ಪರಿಸ್ಥಿತಿಯನ್ನು ಹೋಗಲಾಡಿಸಲು ಸರಕಾರವು ಕೈಕೊಂಡ ಕಾರ್ಯಕ್ರಮಗಳು ಮೂರು-

1. ಉತ್ಪತ್ತಿಯನ್ನು ಹೆಚ್ಚಿಸುವುದು.
2. ಸಮಾನವಾಗಿ ಹಂಚುವುದು,
3. ಕ್ರಮಬದ್ಧವಾಗಿ ಉಪಯೋಗಿಸುವುದು,

ಇಂದಿನ ಪರಿಸ್ಥಿತಿಯಲ್ಲಿ ಆಹಾರದ ಕೊರತೆಯು ನಮ್ಮನ್ನು ಪೀಡಿಸುತ್ತಿದೆ. ಬರಗಾಲವು ನಮ್ಮನ್ನು ಹೆದರಿಸುತ್ತಿದೆ. ಸಮೃದ್ಧ ಹಿತದೃಷ್ಟಿಯುಳ್ಳ ಪ್ರತಿಯೊಬ್ಬ ನಾಗರಿಕನೂ ಭುಜಕ್ಕೆ ಭುಜಕೊಟ್ಟು ಬರಗಾಲ ಪಿಶಾಚಿಯೊಡನೆ ಹೋರಾಡಬೇಕು. ಉಪವಾಸದಿಂದ ತನ್ನ ಸಮಾಜವು ವಿಪತ್ತಿಗೆ ಗುರಿಯಾಗದಂತೆ ನೋಡಿಕೊಳ್ಳಲು ಸಿದ್ಧನಾಗಬೇಕು. ಇದು ಅವಶ್ಯಕ ಮಾತ್ರವಲ್ಲ; ಪ್ರತಿಯೊಬ್ಬನ ಕರ್ತವ್ಯವೂ ಆಗಿದೆ.

೦೦ ೦೦

ಎಂತಹ ಮೂರ್ಖತನ!

ತಂಜಾವೂರಿನ ವಾಲಿವಾಲಮಿನಲ್ಲಿ ಬೆಳೆ ಕಟಾವಿಗೆ, ಧಾನ್ಯರವಾನೆಗೆ ಪೋಲಿಸರ ಬಂದೋಬಸ್ತು ಬೇಕಾಯಿತು. 1,800 ಎಕರೆಗಿಂತಲೂ ಹೆಚ್ಚಿನ ಪ್ರದೇಶದಲ್ಲಿ ಬೆಳೆ ಕೊಯ್ಯುವದನ್ನೇ ನಿಲ್ಲಿಸಬೇಕಾಗಿತ್ತು. ಕಮ್ಯೂನಿಸ್ಟರ ಜಗಳವೇ ಇದಕ್ಕೆ ಕಾರಣವಾಗಿತ್ತು.

ರಾಮನಾಡಿನ ವಾಲಿಯಂಪಟ್ಟಿಯಲ್ಲಿ ಕಿಸಾನರು ಬೆಳದದ್ದನ್ನೆಲ್ಲಾ ಸಾಗಿಸಿದರು. ತಾವು ಬೇಸಾಯ ಮಾಡಿದ ಬೆಳೆಯ ಉತ್ಪತ್ತಿಯೆಲ್ಲಾ ತಮಗೆ ಮಾತ್ರ ಸೇರತಕ್ಕದ್ದೆಂಬುದೇ ಅವರ ವಾದ. ತಿರುಗಂಗಾ ಜಮೀನಿನಲ್ಲಿ ಕರಬಂದ ಚಳವಳಿವು ಪ್ರಾರಂಭವಾಗಿತ್ತು. ಕಿಸಾನರು ಗೇಣಿಯನ್ನಾಗಲಿ ಸರಕಾರ ಕಿಸ್ತನ್ನಾಗಲೀ ನಿರಾಕರಿಸಿದರು. ಬರಗಾಲವನ್ನು ಹೊಡೆದೋಡಿಸಬೇಕಾದ ಈ ಕಷ್ಟಕಾಲದಲ್ಲಿ ಕಮ್ಯೂನಿಸ್ಟರು ಜನತೆಗೆ ಮಾಡುವ ಮಹೋಪಕಾರಗಳೆಂದರೆ ಈ ಮೇಲಿನವು! ಜನರು ಅನ್ನ, ಅನ್ನ ಎಂದು ಹಸಿವಿನಿಂದ ಬಳಲುತ್ತಿದ್ದಾರೆ. ಉಸುವಾಸದ ಕನಸನ್ನು ಕಾಣುತ್ತಿದ್ದಾರೆ ಆದರೆ ಹಸಿವು - ಅಶನಗಳ ಮಧ್ಯೆ ಕಮ್ಯೂನಿಸ್ಟರ ವಿನಾಶಕ ಚಟುವಟಿಕೆಗಳು ಸಾಂಗವಾಗಿ ನಡೆಯುತ್ತಿವೆ.

ಅಜ್ಞಾನದ ಮೇಲೆ ಸುಲಿಗೆ

ಮಾಲಿಕ-ಮಜದೂರರ ತಿಕ್ಕಾಟವು ಕೊಯಂಬತ್ತೂರಿನಲ್ಲಿ ಪರಿಣಮಿಸುತ್ತಿದೆ. ಕಿಸಾನರ ಚಟುವಟಿಕೆಗಳಂತೆಯೇ ಇವರದೂ ಸಾಗುತ್ತಿದೆ. ಭಾರತ ಪ್ರಧಾನಮಂತ್ರಿ ಮಾನ್ಯ ಪಂಡಿತ ನೆಹರುಗಳು ಕೈಗಾರಿಕಾ ಸಂಧಾನವನ್ನು ಕೈಗೊಂಡು ಮಾಲಿಕರೂ ಮಜದೂರರೂ ಪರಸ್ಪರ ಸಹಕಾರದಿಂದ ವರ್ತಿಸ ಬೇಕೆಂದು ಒತ್ತಿ ಹೇಳಿದ್ದಾರೆ. ಸರಕಾರವು ಮಜದೂರ ಸುಧಾರಣೆಗಾಗಿ ಪ್ರತಿಜ್ಞೆಮಾಡಿದೆ. ಅವರ ಜೀವನದಲ್ಲಿ ಹೆಚ್ಚಿನ ಪ್ರಗತಿ ಸುಧಾರಣೆಗಳು ಅವಶ್ಯಕವೆಂದು ಮನಗಂಡಿದೆ. ನಮ್ಮ ದೇಶದ ಸಂಯುಕ್ತರೆಲ್ಲಾ ಮಜದೂರರು ತಮ್ಮ ದೇಶಕ್ಕೆ ತಲೆವಾಗಿ ಸ್ವಾಮಿನಿಷ್ಠೆಯುಳ್ಳವರಾಗಿರಬೇಕೆಂಬುದನ್ನು ತಿಳಿಕೊಳ್ಳಬೇಕೆಂದು ಬಿನ್ನಹವನ್ನಾದ್ದಾರೆ. ಮಜದೂರರು ಅಜ್ಞಾನದ ದಾಸರಾಗಿದ್ದಾರೆ. ಇವರ ಅಜ್ಞಾನದ ಬಲದಿಂದೆ ಸುಲಿಗೆ ಮಾಡುವವರು ಮಜದೂರರ ಹಿತಚಿಂತಕರೆಂದು ಹೇಗೆ ನಂಬಲಿ? ಜನಾಂಗದೇ ಇವರ ಮೇಲೆ ಹೊರಿಸಿದ ವಿಶ್ವಾಸಕ್ಕೆ ಭರವಸೆಗಳನ್ನು ಹೊರಗೆಡಹಲು ಪ್ರೋತ್ಸಾಹಿಸುವ ಈ ಮಜದೂರ ಮುಂದಾಳುಗಳು ನಿಜವಾದ ಉದಾರ್ಥರೇ? ಉಳ್ಳತ್ತಿ! ಪರಮಾವಧಿ ಉತ್ಪತ್ತಿ!! ಇನೇನವ್ಯ ದೇಶದಲ್ಲಿ ಸುಖಜೀವನದ ಸೋಪಾನಗಳು. ಉತ್ಪತ್ತಿಗೆ ಅಡ್ಡಿತರುವ ಯಾವ ಕಾರ್ಯವಾದರೂ ಅದು ಜನಜೀವನವನ್ನು ಹಾಳುಗೆಡವಲೆ ಇರಲಾರದು.

ಮುಷ್ಕರದ ನಿಧ್ವಂಸಕ ಧೋರಣೆ

ದೇಶವು ಆರ್ಥಿಕವೃದ್ಧಿಯಾಗಬೇಕು. ಜನತೆ ಸುಧಾರಿಸಬೇಕು. ಇಂತಹ ಕಾಲದಲ್ಲಿ ಮುಷ್ಕರ ಹೂಡುವುದೆಂದರೆ ದೇಶದ ಪ್ರಗತಿಯನ್ನೇ ಸಾಯಬಡಿದಂತೆ. ನಮ್ಮ ದೇಶದ ಕೋಟಿಗಟ್ಟಲೆ ಜನರ ಬೆನ್ನಿನ ಮೇಲೆ ಕತ್ತಿಯಿಂದ ತಿವಿದಂತೆ "ಬೆಳೆಯಿರಿ ಅಥವಾ ಆಳಿಯಿರಿ" ಇದೇ ನಮ್ಮ ದೇಶದ ಧೀಮಂತ ಉದ್ಧಾರಕರಾದರೆ ಕಮ್ಯುನಿಸ್ಟ್ ನಾಯಕರ ಧೋರಣೆಯು ಬೆಳೆಸುವುದಕ್ಕಿಂತಲೂ ಆಳಿಸುವುದೇ ಧರ್ಮವೆಂಬಂತೆ ಕಾಣುತ್ತಿದೆ. ತಮಿಳುನಾಡಿನ45,000 ಗಿರಣಿ ಕೂಲಿಗಳು ಮೂರು ತಿಂಗಳಿಗಿಂತ ಈ ಹೆಚ್ಚು ಕಾಲ ಮುಷ್ಕರ ಹೂಡಿದರು. ಜನತೆಗೆ ಪ್ರತಿ ತಿಂಗಳು ದೊರೆಯುತ್ತಿದ್ದ 16,000 ಬೇಲ್ ಅಥವಾ 64 ಲಕ್ಷ ಪೌಂಡ್ ನೂಲು ಇಲ್ಲದಾಯಿತು. ಈ ಬಟ್ಟೆ ನಮ್ಮ ದೇಶದ ಅರಿಬತ್ತಲೆಯ ಲಕ್ಷ ಗಟ್ಟಲೆ ಬಡಿದ್ರ ನಾರಾಯಣರಿಗೆ ದೊರೆಯುತ್ತಿತ್ತು. ಈ ವಿನಾಶಕ ಧೋರಣೆಯಿಂದ ಯಾರಿಗೆ ಪ್ರಯೋಜನ? ಯಾರಿಗೆ ಲಾಭ?

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನವ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಆವಶ್ಯಕವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ವಿಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ರುದ್ರ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ್ ದೇಶದಲ್ಲಿ ಪ್ರಮುಖ ಲಂಪೆನಿಯಿಂದ ತಯಾರಿಸಲ್ಪಡುತ್ತಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಸೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನ್ನಕೋಶ, ಕಲಿಬೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಣಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಸೂತ್ರಕೋಶದಲ್ಲಿನ ತೀಕ್ಷ್ಣವಾದ ವೇದನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಗಿರಲಿ ಬಲಹೀನತೆಯಿಂದಲೇ ಆಗಿರಲಿ ಈ ವಾನಿಂಗ್ ಟಿಲ್ಲಿ ತೈಲವಿದ ಪಾತ್ರಿಗುಣವಾಗುವದು. ಹಲ್ಲುನೋವು, ಮುಳ್ಳಳಿಹುಟ್ಟಿನೋವು, ಕಿವಿಗಳ ಉಪದ್ರವ ಹೆಂಗಸರ ನುಬ್ಬುಗುವ ಕಾಲದ ಆಕ್ರಮಣಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳ್ಕುಹುಣ್ಣು ಇನ್ನಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ಸೀಸೆ 1ಕ್ಕೆ ರೂ.3-8-0 ವಿ. ಪಿ. ಬೇರೆ. 1 ಡಜನ್ ಸೀಸೆಗಳಿಗೆ ವಿ. ಪಿ. ಪಾರ್ಸಲ್‌ಖರ್ಚಿತ್ತರೂ. 42.0.0. ಹೊಲ್ಸರ್ ಬಾಟ್ಲಿ ಸೀಸೆಗೆ ರೂ- 5-0-0 ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ರೂ. 60-0-0 ವಿ. ಪಿ. ಬೇರೆ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 15. ವಿ.ಪಿ.-ಖರ್ಚು.

ಪ್ರಕಂಪನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯೆಂದೆನಿಸಿದೆಯೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

--ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ವ.ದಂಸಿನಲ್ಲಿ 7,000 ತೋಟಿಗಳು ಮುಷ್ಕರ ಹೂಡಿದರು. ನಗರದ ಪ್ರಾಮುಖ್ಯ ಸೇನೆಯನ್ನು ನಿರಾಕರಿಸಿದರು. ತಮ್ಮ ಕರ್ತವ್ಯವನ್ನು ಬಿಟ್ಟರು. ಜನರ ಆರೋಗ್ಯಕ್ಕೆ ಅಪಾಯದ ಭೀತಿಯನ್ನು ತಂದೊಡ್ಡಿದರು. ಇದರಿಂದ ಸಮಾಜಕ್ಕಾಗಲೀ ಮಜೂರರಿಗಾಗಲೀ ದೊರೆತ ಲಾಭವೇನು? ಎಸ್.ಐ.ಆರ್ ರೈಲ್ವೇ ಕೆಲಸಗಾರರು ಮುಷ್ಕರ ಹೂಡಿದರು. ಏನಾಯಿತು? ಅವರಿಗೇನು ಲಾಭವಾಯಿತು? ಕೆಲಸಗಾರರು ಉಪಾಯವಿಲ್ಲದೆ ಕಷ್ಟನಷ್ಟಗಳಿಗೆ ತುತ್ತಾಗಿ ಮರಳಿ ಕೆಲಸಕ್ಕೆ ಬರಬೇಕಾಯಿತು. ಅವರಿಗೆ ಮೊದಲಿಗಿಂತ ಯಾವ ಹೆಚ್ಚಿನ ಸೌಕರ್ಯಗಳು ದೊರೆಯದಿದ್ದರೂ ಇಳಿ ಮೋರೆಯಿಂದಕೆಲಸಕ್ಕೆ ಸೇರಬೇಕಾಯಿತು. ಇವರು ತಮ್ಮ ಸಾಂಘಿಕ ಶಕ್ತಿಯನ್ನು ನಿರ್ಬಲಮಾಡಿಕೊಂಡುದು ಮಾತ್ರವಲ್ಲ ಸಾರ್ವಜನಿಕ ಸಹಾನುಭೂತಿ-ಬೆಂಬಲಗಳನ್ನು ಕಳಕೊಂಡರು. ಇಂದು ಸಾಮಾನ್ಯ ವ್ಯಕ್ತಿಯೊಬ್ಬನೂ ಇಂತಹ ನಿಷ್ಕಾರಣ ಮುಷ್ಕರಗಳನ್ನು ಮಾಡಲು ಮುಂದೆ ಬಂದು ಸಹಕರಿಸಲಿಚ್ಛಿಸಿದ್ದಾನೆ. ತೋಟಿಗಳು ಮಷ್ಕರ ಹೂಡಿದಾಗ ಅನೇಕಸ್ವಯಂಸೇವಕ ವಿದ್ಯಾರ್ಥಿಗಳು ಬೀದಿಗಳನ್ನು ಗುಡಿಸಿ ನಿರ್ಮಲ ಮಾಡಲು ಸಹಕರಿಸಿದ್ದರು. ಜನರೆ ಇವೆಲ್ಲಾ ಕೆಲಸಗಳನ್ನು ಮಾಡಿದ್ದರಿಂದ ಕೆಲಸಗಾರರು ಗಮನ ಕೊಡುವಂತಿಲ್ಲ. ಏಕೆಂದರೆ ಮುಷ್ಕರಗಳೆಂದರೆ ಅವರು ಸಿದ್ಧಗೊಳಿಸುತ್ತಿರುವ ಮುಂದಿನ ಕ್ರಾಂತಿ ನಾಟಕದ ಪೂರ್ವ ಸಿದ್ಧತೆಗಳು. ಹಸಿವೆ ಹಸಿವೆ ಎಂದು ಗೋಳಾಡುತ್ತಿರುವವರಿಗೆ ಆಹಾರವನ್ನೊದಗಿಸುವ ಹಾಗೂ ಆರೋಜ್ಯತೆಯಾಗಿತಿರುಗುವವರಿಗೆ ಬಟ್ಟೆಯೊದಗಿಸುವ ಸಮಸ್ಯೆಯು ಸರಕಾರಕ್ಕೆ ದಿನ ದಿನ ಹೆಚ್ಚುತ್ತಿದ್ದರೆ, ಅಜ್ಞಾನ-ಅಶಕ್ತಿಗಳಿಂದ ತುಂಬಿ ತುಳುಕಿದ ಮಜೂರ ವರ್ಗವನ್ನು ಸುಲಿದು ಹಿಂಸಾತ್ಮಕತ್ವಗಳ ಕಡೆಗೆ ಹಿಂದು ಮುಂದು ನೋಡದೆ ದೂಡಿ, ಸ್ವಾರ್ಥವನ್ನು ಸಾಧಿಸಿಕೊಳ್ಳುವುದೇ ಕಮ್ಯುನಿಸ್ಟರ ಉದ್ದೇಶವಾಗಿ ಕಾಣುತ್ತಿದೆ.

ಹೈದರಾಬಾದಿನ ಗಡಿಯಲ್ಲಿ— ವಿಷಮಯ ಪ್ರಯತ್ನಗಳು

ಕಮ್ಯುನಿಸ್ಟರು ಹೈದರಾಬಾದಿನ ಗಡಿಯಲ್ಲಿ ಹೆಚ್ಚಿನ ಲಾಭ ಹೊಂದುತ್ತಿದ್ದಾರೆ ಬೇಕೆಂದೆ ಅಕ್ರಮ ಗಲಾಟೆಗಳನ್ನು ಸೃಷ್ಟಿಸಿ ಈ ಸಂದರ್ಭವನ್ನು ತಮ್ಮ ಸ್ವಾರ್ಥ ಸಾಧನೆಗಾಗಿ ಉಪಯೋಗಿಸುತ್ತಿದ್ದಾರೆ ಮದ್ರಾಸು-ಹೈದರಾಬಾದು ಗಡಿಗಳಲ್ಲಿ ಇವರು ಜನ.ಸಾರಿಗೆಯ ಕಾರಿನ ಘೋರಣೆಯಿಂದ ಇವರ ಉದ್ವೇಗವೆಲ್ಲಾ ವ್ಯಕ್ತವಾಗುತ್ತಿದೆ. ಕೇಂದ್ರ ಹಾಗು ಪ್ರಾಂತೀಕ ಸರಕಾರಗಳು ಎಚ್ಚರದಿಂದ ನಿರ್ವಹಿಸಬೇಕಾದ ಈ ಕಠಿಣ ಸಮಸ್ಯೆಯನ್ನು ಬಗೆಹರಿಸಲು ಅಗತ್ಯವಿರುವ ಎಲ್ಲಾ ಚರ್ಯೆಗಳನ್ನು ತೆಕ್ಕೊಳ್ಳುತ್ತಿರುವಾಗ ಕಮ್ಯುನಿಸ್ಟರು ಕಾಯಿದೆ ಕಾನೂನುಗಳನ್ನು ಉಲ್ಲಂಘಿಸಿ, ಹೊಡೆದಾಟಕ್ಕೆ ಜನರನ್ನು ಹುರಿದುಂಬಿಸಿ ಹೈದರಾಬಾದಿನ ಸಮಸ್ಯೆಯನ್ನು ಇನ್ನಷ್ಟು ತೀವ್ರಗೊಳಿಸುತ್ತಾರೆ. ಸ್ವಾತಂತ್ರ್ಯ ಹೋರಾಟದ ಹೆಸರಿನಲ್ಲಿ ಹಿಂಸೆಯ ತಾಂಡವಕ್ಕೆ ಅವಕಾಶವಿತ್ತಿದ್ದಾರೆ. ಜಮೀನ್ದಾರಗಳನ್ನು ಹಂಚಿ ಕೊಟ್ಟಿದ್ದಾರೆ. ಕಾನೂನು ಕಾಯಿದೆಗಳನ್ನು ತಾವೇ ಮುರಿದಿದ್ದಾರೆ. ಇತ್ತೀಚೆಗೆ ಹೈದರಾಬಾದಿನ ಕಮ್ಯುನಿಸ್ಟರ ಪಕ್ಷವನ್ನು ನೈಜಾಮ ಸರಕಾರವು ನ್ಯಾಯಬದ್ಧವಾಗಿ ಮಾಡಿತು. ಇದರಿಂದ ಸಂಸ್ಥಾನದಲ್ಲಿ ಇವರು ನಡೆಸುತ್ತಿರುವ ಚಟುವಟಿಕೆ, ಇವರ ಉದ್ದೇಶ, ಇವುಗಳ ಸ್ಥಿತಿಯನ್ನು ಮತ್ತಷ್ಟು ಬಿಕ್ಕಟ್ಟಿಗೆ ತಂದಿವೆ. ಸಿಂದೀಯ ಒಕ್ಕೂಟದಲ್ಲಿರುವ ಕಮ್ಯುನಿಸ್ಟರು ಏಜಂಟರಂತಿದ್ದಾರೆ. ಹೈದರಾಬಾದಿನಲ್ಲಿರುವವರು ಉಪಟಳದಲ್ಲಿ ಪ್ರತ್ಯಕ್ಷ ಭಾಗ ವಹಿಸುತ್ತಿದ್ದಾರೆ. ಇದರಿಂದ ಇಡೀ ಹಿಂದುಸ್ಥಾನದ ಭದ್ರತೆಗೇ ಅಪಾಯ ತೋರುತ್ತಿದೆ. ಇತ್ತೀಚೆಗೆ ನೆಲಮೆರಿಯಲ್ಲಿ ಹೈದರಾಬಾದಿನ ಕಮ್ಯುನಿಸ್ಟರು ಹಿಂದೀಯ ಒಕ್ಕೂಟದ ಸಶಸ್ತ್ರ ರಿಸರ್ವ್ ಪೋಲಿಸರ ಮೇಲೆ ಸಂಸ್ಥಾನದ ಗಡಿಯೊಳಗಿಂದ ಗುಂಡೆಸೆದರು. ಇದೇ ಸಮಯದಲ್ಲಿ ಗತಿಯಾಡೆಯು ಇವರ ಗೆಳೆಯರು ಸಂಸ್ಥಾನದಿಂದ ಥಾಳಿ ಮಾಡುತ್ತಿರುವ ರಜಕಾರರ ಹಾಗು ಥಾಳಿಗಾರರೊಡನೆ ಹೋರಾಡಲು ಶಸ್ತ್ರಗಳನ್ನೊದಗಿಸಬೇಕೆಂದು ಕೇಳುತ್ತಿರುವರು.

ಈ ಅತ್ಯಾಚಾರಗಳನ್ನು ಅಡಗಿಸಿ ಮುಖ್ಯ ಸಂಗತಿಗಳನ್ನೆಲ್ಲಾ ಮರೆಮಾಡಲು ಕಮ್ಯುನಿಸ್ಟರುಗಳು ನೈಜಾಮನ ನಿರಂಕುಶ ಪ್ರಭುತ್ವವೂ, ಭಾರತ ರಾಷ್ಟ್ರದ ಪ್ರಜಾಪ್ರಭುತ್ವ ಸರಕಾರವೂ ಒಂದಾಗಿ ಸ್ನಾತಂತ್ರ್ಯಕ್ಕೆ ಕೈಯಿಕ್ಕಿರುವಂತೆ ಜನರನ್ನು ನಂಬಿಸುತ್ತಿದ್ದಾರೆಂದು ಪ್ರಚಾರ ಮಾಡುತ್ತಿದ್ದಾರೆ.

[ಮುಂದುವರಿಯುವುದು]

ರೇಶನ್ ಕಾರ್ಡುಗಳು
ದೊರೆಯುತ್ತವೆ
ನವಯುಗಪ್ರೆಸ್, ಉಡುಪಿ.

ನವಯುಗದ ಚಂದಾದಾರರಲ್ಲಿ ವಿನಂತಿ

'ನವಯುಗ'ದ 28ನೇ ವರ್ಷವು ಇದೇ ಆಗೋಸ್ತು ತಿಂಗಳ ಅಂತ್ಯಕ್ಕೆ ಮುಗಿದು ಸೆಪ್ಟೆಂಬರಿ ತಿಂಗಳಿಂದ 29ನೇ ಹೊಸ ವರ್ಷಾರಂಭವಾಗುವುದು. ಈ ಸಮಯಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ದಯವಮಾಡಿ ತಮ್ಮ ಚಂದಾಹಣವನ್ನ (ಹಿಂದಿನ ಬಾಕಿ ಇದ್ದರೆ ಅವನ್ನು ಸಮೇತ) ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ಅಪೇಕ್ಷಿಸೋಣಾಗುತ್ತದೆ. ಹಣವನ್ನು ಕಳುಹಿಸುವಾಗ ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಸರಿಯಾದ ವಿಳಾಸವನ್ನು ತಿಳಿಸುವಂತೆ ಕೋರುತ್ತೇವೆ.

ಮೆನೇಜರ್.

ಉಡುಪಿಗೆ ಹೋಗಬೇಕಾ! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ!

ನಿಮ್ಮ ಸ್ನಾನ, ಊಟ, ಉಪಹಾರ, ಚೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara

ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ವಿದೇಶದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಶ ಚಿನ್ನ ಎಬಟ್ಟಿಗಳು ಹೆಚ್ಚು ಕಡಿಮೆ ಅಳತೆಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವಷ್ಟು ವಿಶೇಷ ಮಾಡಿಸಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ಪಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

ಸ್ವಾತಿಸ್ವರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದಲ್ಲದೆ ರಕ್ತಧಾತುವನ್ನು ಅಭಿವೃದ್ಧಿಗಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಎದೆಹಾಲು ಹೆಚ್ಚಿಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಜೈವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧಜನ್ಯ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮಯದಿಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲೆ ಸಂಗ್ರಿ ಲರಡ್ಡಿ ರೋಗಕ್ಕೆ ತಕ್ಕ ಔಷಧ

ಔಷಧಿ ರವಾನಿಸಲಾಗುವುದು. (1) ಉಡುಪಿ ಏಜಾಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪ್ರೊಸ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಬಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಏದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.



ಎಲ್ಲ ತರದ ದಂತ ರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

— ಮುಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಂಗ **ಬರ್ಥ ಕಂಟ್ರೋಲ** ರೋಗ ಗೃಹಸ್ತ ಹೆಣ್ಣು ಮುಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಜಕ್ಕೆ:—ಹರಿವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಸ್ಟೆ ಚಾರ್ಜು ೧೫ ಆಣೆ.

ತಾಲಕರು:—ಹಾಲಪ್ಪ ಹಕೇರಪ್ಪ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಶಿಡಂದಿರು:—ಹುಬ್ಳಿ ಫಾರ್ಮಸಿ,—ಹುಬ್ಳಿ, ಗದಗ್ ಬಾಗಲಕೋಟೆ ಧಾರವಾಡ ವಿಜಾಪುರ—
ಜಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ
ಡಾವಣಗೆರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ್, ಹಾವೇರಿ, ಬ್ಯಾಡಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಥೈಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದ್ದಾರೆ, ಉಚ್ಚುಚ್ಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ಇದುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ಶೀವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ.

ಹೆಂಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸಬೀಳೆಡೆ ಯಾ ಆದರ ಅಂಶ ಉಳಿದು ಜ್ವರ ಬರುತ್ತವೆ, ನಂಜೇರುತ್ತದೆ. ಪಿಶರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತವೆ. ಇದರಿಂದ ಪ್ರಲಾಪಸ್ಸ್ಮಾರ, ಮೂಲವಿರೋಧ, ಪ್ಲವನಗಳ ಬೀಗ್ಗು, ನಿಷ್ಪ್ರಜಾತ್ವ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಸಲವು ವಿಕಾರಗಳು ತಲೆದೋರುತ್ತವೆ ಪೈಕಿ, ಡಾಕ್ಟರ, ಸರ್ಜನರ ಪರಿಗೆ ಕರೆಸಿ ನೂರಾರು ರೂಪ್ಯಾ ಖರ್ಚುಮಾಡಬೇಕಾಗುತ್ತದೆ. ಆ ಮೇಲೂ ದೈನೇಚ್ಛೆ ಎಂದು ಅದೃಷ್ಟಕ್ಕೆ ಹೊಣೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧ ವಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ಕನ್ನಿ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಆಯುರ್ವೇದೀಯ ಔಷಧಗಳ ಶಾಸ್ತ್ರೀಯ ಮತ್ತು ಅನುಭವಿಕ ಗುಣಧರ್ಮ, ರೋಗಾನುಸಾರ ಪ್ರಮಾಣ, ಕ್ರಮ, ಇತಾದಿ ಯುಕ್ತ 96 ಪುಟಗಳ ಸೂಚಿಪತ್ರ 1ಕ್ಕೆ 0-8-0 9 ಆಣೆಯ ಸ್ಟೆಂಪ್ ಕಳುಹಿಸಿದಲ್ಲಿ 1 ಪ್ರತಿ ಕಳುಹಿಸುವದು

Swadeshi Oushadhi Bhandara, (REGD.)
Kunjal P. O. Brahmavar, S. K.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya.

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.
os No 260/1948.
ವಾದಿ —ಶ್ರೀನಿವಾಸಭಟ್ಟ.
ಪ್ರತಿವಾದಿ —ಆನಂತಭಟ್ಟ.

ಉಡ್ಪಿ ತಾಲುಕು ಕಟಪಾಡಿಯಲ್ಲಿ ಹೈಸ್ಕೂಲ್ ಮಾಸ್ಟರರಾಗಿರುವ ಶಿದ್ಧಾಪುರ ದೇವಸ್ಥಾನದ ಶೇಶಗಿರಿ ಭಟ್ಟರ ಮಗ್ಗುಯೀ ದಾವೆಯು ಪ್ರತಿವಾದಿ—ಆನಂತಭಟ್ಟರಿಗೆ.

ನೀವು ವಾದಿ ಶ್ರೀನಿವಾಸ ಭಟ್ಟರಿಗೆ ತಾ. 30-9-1946ರಲ್ಲಿ ಬರಸಿಕೊಟ್ಟ ರೂಪ್ಯಾ 300-0-0ರ ದಿವಸಾಂಡ ನೋಟಿನ ಲ್ಯಾಲು ಬಡ್ಡಿ ಹಣ ಕೂಡಾ ರು. 337-9-0ನ್ನು ಬರ ಮಾಡಿಕೊಳ್ಳುವರೆ ಬೇಲ್ಮುಂಡ ಕೋರ್ಟಿನಲ್ಲಿ ದಾವಲು ಮಾಡಿದ ದಾವೆಯು ತಾರೀಕು 24-8-1948ಕ್ಕೆ ತಮ್ಮಗೆ ಯಿಟ್ಟಿರುವದರಿಂದ ಆ ಬಾಬಿನಲ್ಲಿ ನಿಮ್ಮ ಅಕ್ಷೇಪಗಳು ಯಿದ್ದಲ್ಲಿ ತಮ್ಮ ದಿವಸ 11 ಘಂಟೆಗೆ ಕೋರ್ಟಿನವರು ಕರಪಾಗ್ಗೆ ಹಾಜರಾಗಿ ಜ್ಞಾಪೀಸ್ಕಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಕರೆದು ನಿಮ್ಮ ಗೈರ ಹಾಜರಿಯಲ್ಲಿ ಕೇಳಿ ನ್ಯಾಯಲು ಮಾಡೋಣಾದೇತೆಂತ ನೀವು ತಳಿದಿರತಕ್ಕದ್ದು.

ಕೋರ್ಟ ಹುಕುಂಪ್ರಕಾರ.
K. Narayana Kamath.
ವಾದಿಯ ಕಡೆ ಎಜೆಂಟ್ರಕೇಟ.
ಕುಂದಾಪುರ ತಾ. 4-8-1948.

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.
S C. 711/1948- R. E, P- 394/1948.
ವಾದಿ —ಅನಂತಯ್ಯ ಬ್ಯಾನುಭಾಗ.
ಪ್ರತಿವಾದಿ—ರಾಮಾನಾಥ ಪ್ರಭು, ನರಸಿಂಹ ಪ್ರಭುರ ಮಗ. ಉಡ್ಪಿ ತಾಲೂಕು ಮಣೂರು ಗ್ರಾಮ.

ಸದ್ರಿ ದಿಕ್ಕಿನ ಮೇಲೆ ವಾದಿಯು ಅಮ್ಮಡಾರಿ ಮಾಡಿ ಪ್ರತಿವಾದಿ ಬಾವ್ತು ಬೈಠಸ್ಸಿಯನ್ನು ಜಪ್ತು ಮಾಡಿಸಿರುವದ್ರಿಂದ ಆ ಕುರಿತು ನಿಮ್ಮಗೆ ನಾವು ಅಕ್ಷೇಪ ಇದ್ದಲ್ಲಿ ತಾ 23-8-1948ನೇ ದಿವ್ಸ ಹಗಲು 11 ಗಂಟೆಗೆ ಯೂ ಕೋರ್ಟ ಮುಂದೆ ಹಾಜರಾಗಿ ಜಾಹೀರ್ಯಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಯೂ ಮುಲ್ಕ ತಿಳಿಸೋಣಾಗುತ್ತದೆ.

K. Raghunath Shenai.
Pleader for plaintiff.
Coondapoor, 7-8-1948.

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.
os 273/1948- R- I- A- 747/1948.
ವಾದಿ—ಡಿ. ಕೆನರಾ ಇಂಡಸ್ಟ್ರಿಯಲ್ ಎಂಡ ಬೆಂಕಿಂಗ ಸಿಂಡಿಕೇಟ್ ಲಿಮಿಟೆಡ್
ಪ್ರತಿವಾದಿರು—1 H. ರಘುರಾಮ ಸೆಟ್ಟಿ, ಕೃಷ್ಣಯ್ಯ ಸೆಟ್ಟಿ ಆಲಿಯ. Timber merchant, ಪಾತಾಡಿ ಗ್ರಾಮ. 2 H. ಕೃಷ್ಣಯ್ಯ ಸೆಟ್ಟಿ, ರಾಮಯ್ಯ ಸೆಟ್ಟಿ ಆಲಿಯ, ಪಟೇಲ. ಪಾತಾಡಿ ಗ್ರಾಮ. 3 ಕೊಳ್ಳೆತ ಸಂಜೀವ ಸೆಟ್ಟಿ, ಅಂತ್ಯ ಸೆಟ್ಟಿ ಆಲಿಯು, ಬಸ್ರೂರು ಗ್ರಾಮದ ಕೊಳ್ಳೆಕೆರೆ.

ಸಾದಿ ಬೇಂಕಿನವರು ಪ್ರತಿವಾದಿರ ಸೇಲೆ ಅವರು ಪಾದಿ ಬೇಂಕಿಗೆ ತಾ 19-9-1946ರಲ್ಲು ಬರಕೊಟ್ಟ ಮುಂಡಿ ಪ್ರಕಾರ ಪಡೆದ ಹಣಗಳನ್ನು ಬರಮಾಡಿಕೊಳ್ಳುವರೆ ಸದ್ರಿ ವಾವಾ ಮಾಡಿರುವದ್ರಿಂದ ಆ ಕುರಿತು ನಿಮ್ಮ ನೇನಾದ್ದು ವ್ಯವಹರಣೆ ಇದ್ದಲ್ಲಿ ಮತ್ತು 1ನೇ ಪ್ರತಿವಾದಿಯ ಬೇಂಕ ಕೇರ್ಸ ವಗೈರೆ ಜಪ್ತು ಮಾಡಬೇಕಾಗಿ ಕೊಟ್ಟ ಅರ್ಜಿಯಲ್ಲಿ ಆಕ್ಷೇಪ ಇದ್ದಲ್ಲಿ ಸಹಾ ತಾ 25-8-48ನೇ ದಿವ್ಸ ಹಗಲು 11 ಗಂಟೆಗೆ ಹಾಜರಾಗಿ ಜಾಹೀರ್ಯಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಯೂ ಮುಲ್ಕ ತಿಳಿಸೋಣಾಗುತ್ತದೆ.

K. Raghunath Shenai.
Pleader for plaintiff.
Coondapoor, 7-8-48.

ಮಂಗಳೂರು

ಮುನಿಸಿಪಲ್ ಕೌನ್ಸಿಲಿನ ಸಾಮಾನ್ಯ ಸಭೆಯು- ಕಳದ ತಾ31 ರಲ್ಲು ಶ್ರೀ ಎ ಲ್. ಸಿ. ಬಾಯಿಸರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಾಂತಕ್ಕೊಂದು ಮುನಿಸಿಪಲ್ ಚೀಂಬರ್ ಬೇಕೆಂದೂ, ಆ ಸಂಸ್ಥೆಯು ಪ್ರಾಂತಗಳಲ್ಲಿ ಲ್ಲಾ ನಗರ ಸಭಾ ಕಾರ್ಯ-ಆಡಳಿತ ಏಕ ಮುಖವಾಗಿ ನಡೆಯುವಂತೆ ಸಲಹೆ ಕೊಡ ಬೇಕೆಂದೂ, ಪ್ರಥಮ ಪರಿಷತ್ತು ಚಿತ್ತೂರಲ್ಲಿ ಸೇರಬೇಕೆಂದೂ ಹೇಳುವ ಚಿತ್ತೂರು ನಗರ ಸಭೆಯ ನಿರ್ಣಯದ ತತ್ವವನ್ನು ಒಪ್ಪುವ ಗೊತ್ತುವಳಿಯಾಯಿತು. ಮುನಿಸಿಪಾರ ಜೋಜನೆಗೆ ಹದಿಮೂರು ಸಾವಿರ ರೂಪಾಯಿ ಬೇಕಾದುದರಿಂದ ಪ್ರತ್ಯೇಕಸಿಟ್ಟ ಆರು ಸಾವಿರವಲ್ಲದೆ ಉಳಿದ ಏಳು ಸಾವಿರವನ್ನು ಹೊಸ ಬಜೆಟಿನಿಂದ ಕೊಡುವುದೆಂದು ತೀರ್ಮಾನಿಸಲಾಯಿತು.

ರೆವಿನ್ಯೂ ಕವಿಶನರರ ಜೆಲ್ಲಾ ಸಂಚಾರ-ಭೂಕಂದಾಯಅಬಕಾರಿ ಮತ್ತು ಪಾಸಿನರೋಧ ಕಮಿಶನರಾಗಿರುವ ಶ್ರೀ ವಿ. ಎಸ್. ಕುಡ್ಪರು ಇಥೇ ತಾ. 1ರಲ್ಲಿ ಮೂಡಬಿದ್ರೆಯ ಬೆಲ್ಲ ಕಯಾರಿ ತರಬೇತಿ ಶಾಲೆಗೆ ಭೇಟಿಯಿತ್ತರು. ಆಗ ಆ ಶಾಲೆಯ ಪ್ರಧಾನಾಧ್ಯಾಪಕರಾದ ಶ್ರೀ ಪಿ. ಎಸ್. ಕಾಮತರು ಮತ್ತು ಇತರರು ಅವರನ್ನು ಸ್ವಾಗತಿಸಿದರು. ಶ್ರೀ ಕುಡ್ಪರು ಅಲ್ಲಿಯ ಕೆಲಸಪದ್ಧತಿ ಬಗ್ಗೆ ವಿಚಾರ ವಿನಿಮಯಮಾಡಿದರು. ಅದೇ ರೀತಿಯಲ್ಲಿ ಅವರು ಕಾರ್ಕಳ, ಗುರುಪುರ, ಪರಂಗಿಪೇಟೆ, ಪಾಣೆಮಂಗಳೂರು, ಕಲ್ಲಡ್ಕ ಮುಂತಾದ ಸ್ಥಳಗಳಿಗೆಹೋಗಿ ಪಾನ ನಿರೋಧ ಕೇಂದ್ರಗಳ ಚಟುವಟಿಕೆಗಳನ್ನು ನೋಡಿದರು.

ಬಲತ್ಕಾರದಿಂದ ಆಕ್ಕೆಬಿಯ್ದ ಆರೋಪಕ್ಕೆ ಸಜೆ,—ಉಡುಪಿ ತಾಲೂಕು ಉಪ್ಪುಂಗಾರ್ಯಮಠ ಶ್ರೀ ಜನಾರ್ಧನ ಕಕ್ಕಲ್ಲಾಯ ಎಂಬವರಿಗೆ ನಾರಾಯಣ ಸೆಟ್ಟಿ ಎಂಬಾತನು ತನ್ನ ಗಾಡಿಯಲ್ಲಿ ಏಳು ಮುಡಿ ಅಕ್ಕಿ ಸಾಗಿಸುತಿದ್ದಾಗ ತಾ 28-3-48ರಲ್ಲು ಅಡಸ್ಟೆಲ್ಲಾ ಬಲಾತ್ಕಾರದಿಂದ ಸೆಳೆದುಕೊಂಡು ತಕಾಯತಿ ನಡೆಸಿದರೆಂಬ ಆರೋಪದಮೇಲೆ ಉಪ್ಪೂರುಗಾನುದ ಜನಾರ್ ಲೂಯಿಸ್, ಆಂಟೋನ್ ರುಡ್ರಿಗ್ಸ್, ಪೂವ ಪೂಜಾರಿ, ಶಿವ್ಮ ಪೂಜಾರಿ, ಕೊಗ್ಗ ಬೆಲ್ಲಾಡ, ಲಾಜ್ರುಸೋಜ, ಕೃಷ್ಣಪ್ಪ, ಆದಂ ಸೋಜ ಇವರಿಗೆ ಪ್ರತಿಯ್ಯೊರ್ವರಿಗೂ ನಾಲ್ಕು ನಾಲ್ಕು ತಿಂಗಳ ಕಠಿಣ ಸಜೆ ಎಂದು ಪ್ರಿನ್ಸಿಪಲ್ ಆಸಿ ಸೆಶನ್ಸ್ ಜಡ್ಜ್ ಶ್ರೀ ಎಸ್. ನರಸಿಂಹುಲು ಬಿ. ಎ. ಅವರು ತೀರ್ಪುಕೊಟ್ಟಿರುವರು. ಪ್ರಾಸಿಕ್ಯೂಶನ್ ಪರ ಶ್ರೀ ಜಿ. ಕೆ. ಗೋವಿಂದ ಭಟ್ಟರೂ, ಡಿಫೆನ್ಸ್‌ಪರ ಶ್ರೀಗಳಾ ಜಿ. ಸೋಮೇಶ್ವರರಾಯರೂ, ಎಸ್. ನಾರಾಯ್ಯಣಯ್ಯನವರೂ ಹಾಜರಿದ್ದರು.

Tender Notice

Tenders are invited to reach the Assistant Director of Fisheries, (Coast), Calicut on or before 15-9-48 for transporting salt bags from sea going vessels or railway waggons and stacking them in the fish curing yards and gellahs on the west coast and for sundry other works for a period of one year from 1st December, 1948. Details and terms of contract can be had from the Office of The Assistant Director of Fisheries, (Coast), Calicut.

T. P. Baratan,
Asst- Director of Fisheries, (Coast).

ದಿ ಬಾರ್ಡೂರು ಬಿಲ್ಲವರ ಚಾರಿಟಿ ಸಂಘ, ಮುಂಬಾಯಿ-ಇದರ 32ನೇ ಸಾಂವತ್ಸರಿಕೋತ್ಸವವು ತಾ 25.7.48ರಲ್ಲು ಸರ್ ಕಾವಾಸ್ಜಿ ಜಹಂಗೀರ್ ಹಾಲಿನಲ್ಲಿ ವರ್ತಕ ವಿಜೃಂಭಣ ಶ್ರೀಮಂತ ಬಿ. ಭೂಮುಂಡ್ಕಿಯವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಆತಿಥಿಗಳ ಸ್ವಾಗತ, ಶ್ರೀಮಾನ್ ಕೆ. ಯಸ್. ಗಾಯತೊಂಡೆ, ವೈ ವ್ಯರಾಜ್, ಜೆ. ಟಿ. ಸುವರ್ಜ, ಯಮ್. ಕೆ. ಅಮೀನ್, ಮತ್ತು ಯಸ್. ನಿಟ್ಟಲವಾಸ್ ಇವರು ಸುರಸ ಭಾಷಣ ನೂಡಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಸಂಘದ ಕಾರ್ಯಕಲಾಪಗಳನ್ನು ವ್ಯಾಪಿಸಿ, ಮುಂದೆ ನೂಡತಕ್ಕ ಕಾರ್ಯಗಳನ್ನು ಸೂಚಿಸಿ ರೂ 1001 ಸಹಾಯವನ್ನಿತ್ತರು. ನಾಟಕದ ತರುವಾಯ ಧನ್ಯವಾದಗಳೊಂದಿಗೆ ಸಭಾಂತ್ಯವಾಯ್ತು.

ಉತ್ತರ ಬೊಬಾಯಿ ಹೊಟೆಲು ಕೆಲಸಗಾರರ ಸಾಹಾಸಭೆಯು-ಕಳೆದ ತಾ 29ರಲ್ಲು ಪರೇಲಿನಲ್ಲಿರುವ ಬಾಮೋದರ ಹಕ್ಕಿಲ್ಲ ಹಾಲಿನಲ್ಲಿ ಶ್ರೀ ಮೂಥವನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿಗಳ ವರದಿಯನ್ನೊದಿದ ಬಳಿಕ ಶ್ರೀಗಳವಪ ಎನ್ ನಿರಂವಾಸ್, ಎಸ್. ಪಿ. ನಾಯಕ್, ಪಟೇಲ್ ತಿಮ್ಮಪ್ಪ ಶೆಟ್ಟಿ, ಭಾಸ್ಕರ್ ಮೊದಲಾದವರು ಕೆಲಸಗಾರರ ಸಂಘಟನೆಯ ಕುರಿತು ಭಾಷಣಗೈದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಪೂರ್ವ ಭಾಷಣಗಾರರ ಪ್ರಾಮಾಣ್ಯವನ್ನು ಪ್ರತ್ಯೇಕಿಸಿ ಕೆಲಸಗಾರರೆಲ್ಲರೂ ಒಗ್ಗಟ್ಟಾಗಿ ಯೂನಿಯನ್ನಿಗೆ ಸೇರಲು ಬೇಡಿಕೆ ಸೂಚಿಸಿದರು. ಕೆಲವು ಹೊಟೆಲ್ ಮಾಲಿಕರು ತನ್ನ ನೌಕರರಿಗೆ ಒಂದಲ್ಲಾದೊಂದು ರೀತಿಯಿಂದ ಉಪದ್ರವ ಕೊಡುವುದನ್ನು ಪ್ರತಿಭಟಿಸುವ ಯೋಜನೆಗಳನ್ನು ಆಲೋಚಿಸಿ ತತ್ಕಾರ್ಯಕ್ರಮ ಕೈಕೊಳ್ಳುವ ಅಭಿಪ್ರಾಯವಾಯಿತು.

'ಕೇಶ ಕಲಾ' ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿಸುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ನೆನಪಿರಲಿ 15 ನೇ ಆಗೋಸ್ತು

ಅಂದು ಸ್ವಾತಂತ್ರ್ಯ ಸಂಪಾದನೆಯ ಸಂಭ್ರಮ!
ಇಂದು ಪ್ರಥಮ ಸ್ವಾತಂತ್ರ್ಯ ದಿನಾಚರಣೆಯ ವೈಭವ!
ಇದರ ಸಂತೋಷ ಸೂಚನಾರ್ಥವಾಗಿ

ಜನಪ್ರಿಯವಾದ ಕರಿಯರ ಪ್ರಪಂಚದ ಪ್ರಕಟಣೆಗಳ

ಅಗ್ಗದ ಮಾರಾಟ

(ಆಗೋಸ್ತು ತಾ. 1 ರಿಂದ 31ರವರೆಗೆ ಮಾತ್ರ)

ಪ್ರತಿ ರೂಪಾಯಿಗೆ ಒಂದಾಣೆಯಂತೆ ಪ್ರತಿಯೊಬ್ಬರಿಗೂ ರಿಯಾಯಿತಿ.

10 ರೂಪಾಯಿಗೆ ಮೇಲ್ಪಟ್ಟು ಪುಸ್ತಕ ಕೊಳ್ಳುವವರಿಗೆ ರೂಪಾಯಿಗೆ 0-2-0ಯಂತೆ! 25 ರೂಪಾಯಿಗೆ 0 3 0 ಯಂತೆ! 50 ರೂ-ಗೆ 0 1 0 ಯಂತೆ!

ಈ ವರೆಗೆ ತೋರಿಸದ ಆಕರ್ಷಕ ರಿಯಾಯಿತಿ!

ಪುಸ್ತಕ ಪ್ರಿಯರಿಗೊಂದು ಸುವರ್ಣಾವಕಾಶ!

ಸಿಗುವ ಪ್ರಕಟಣೆಗಳು

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ಶೆಟ್ಟಿ.	0	3	0
ಶಂಕೆಯ ಪಿಶಾಚಿ	(ನಾಟಕ)	ಕ. ಕೆ. ಶೆಟ್ಟಿ.	0	8	0
ಕುಶಲವ	(,,)	,,	0	6	0
ವೈಭಚಾರಿಣಿ ಯಾರು	(,,)	,,	1	0	0
ಹೆಂಡ್ತಿ ಗಂಡನಾದರೆ	(ಪ್ರಹಸನ)	,,	0	4	0
ಸನ್ಯಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೀಕ್ಷಭಕ್ಷ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂಬಾದೀಪ	(ಸಣ್ಣ ಕತೆಗಳು)	ಕೊಡಪ್ಪಲ್	0	14	0
ಭಾರತೀಯ ಕತೆಗಳು	(,,)	,,	0	14	0
ಮೂರು ಪ್ರಹಸನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್. ಎಲ್. ಸುಬ್ರಹ್ಮಣ್ಯಂ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜ.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾಕಾಮಿನಿ	(ಕವಿತೆಗಳು)	,,	2	0	0
ಸಪ್ತಸಾಗರ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	4	0
ನಗೆನೋಟಗಳು	(ವಿನೋದ ಕತೆಗಳು)	ಕೆ. ವಿಟ್ಠಲ ಶೆಣೈ	0	14	0
ಅನ್ನದೇವರು ಮತ್ತು ಇತರ ಕತೆಗಳು		ಕಯ್ಯಾರ ಕಿಞಣ್ಣ ರೈ	1	0	0
ವಿಷ್ಣುವಿನ ದಶಾವತಾರಗಳು	(ವಿಡಂಬನೆ)	ಎಂ. ವಿ. ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯಕ್ಷಗಾನ ನಾಟಕ)	,,	0	12	0
ಸ್ವಾತಂತ್ರ್ಯವೀರ ಸಾವರಕರರು	(ಜೀವನ ಚರಿತ್ರೆ)	ಇಂದಿರಾಬಾಯಿ	1	4	0
ಜೀವಸಂಗ್ರಾಮ	(ನಾಟಕ)	ಪಿ. ಶೀನಶೆಟ್ಟಿ	1	8	0
ಜವಿನಿದ್ದಾರ	(ಕಾದಂಬರಿ)	ಹೊಸಮನೆ ಗುಡ್ಡಪ್ಪ	1	8	0

ಸಿಗುವ ಸ್ಥಳಗಳು:

(1) ಕರಿಯರ ಪ್ರಪಂಚ ಮಂಡಿಯಂ (2) ನವಯುಗ ಪ್ರೆಸ್, ಉಡುಪಿ (3) ನವಭಾರತ ಪುಸ್ತಕ ಭಂಡಾರ ಉಡುಪಿ (4) ಮಾವಂಜೆ ಗುರುರಾವ್, ಉಡುಪಿ.

ಹಂಗಾರಕಟ್ಟೆ- ಇಲ್ಲೇ ತಾ. 7ರಲ್ಲು ಹಂಗಾರಕಟ್ಟೆಯ ಹಿಂದೂ ಮುಸ್ಲಿಂ ಜನ ಪ್ರೀತರಾದ ಸಾಲ್ಮತ್ತು ವರುಷ ಸ್ವಾಮಿಜಿ ಜನಾಬ್ ಮತೀಜ್ ಅಬ್ದುಲ್ ರಹಿಮಾನ್ ಸಾಹೇಬರು ಸ್ಥಳೀಯ ಜುಮ್ಮಾ ಮಸೀದಿಗೆ ರವಜಾನ್ ಹಬ್ಬದ ಶಾಸ್ತ್ರಕ್ಕೆಂದು ಮನೆಯಿಂದ ಹೊರಟವರು ಆಲ್ಲಿ ಶಾಸ್ತ್ರಮುಗಿಸಿ ತನ್ನ ಸ್ಥಾನದಿಂದ ಕೆಳಗಿಳಿದವರೆ ಕಲಿಮಾ ಜೇಳುತ್ತಾ ಪರಲೋಕವಾಸಿಗಳಾದರು.

ಸ್ವಾತಂತ್ರ್ಯ ದಿನಾಚರಣೆ

1) ರಾಷ್ಟ್ರಪಿತ ಗಾಂಧಿಜೀಯ ಮರಣದ ಪುರಂತದ ಧ್ವಂಯೆಯಲ್ಲಿ, ಹಿಂದೀ ರಾಷ್ಟ್ರೀಯ ಸ್ವಾತಂತ್ರ್ಯ ದಿನಾಚರಣೆಯನ್ನು ಅತಿ ಸಜ್ಜಂಭಣೆಯಿಂದ ಆಚರಿಸುವ ಉಲ್ಲಾಸವು ಈಗ ಯಾರಿಗೂ ಇರಲಾರದು. ಆದರೂ ಸ್ವಾತಂತ್ರ್ಯದ ಪ್ರಥಮ ವಾರ್ಷಿಕೋತ್ಸವವನ್ನು ಗಂಭೀರ ಹಾಗೂ ಗೌರವದಿಂದ ಆಚರಿಸುವುದೂ ದರಿಂದೀ ಸ್ವಾತಂತ್ರ್ಯ ಪಿತನ ಆತ್ಮಕ್ಕೆ ಶಾಂತಿ ಹಾಗೂ ಮನಸ್ಸಿಗೆ ಆಹ್ಲಾದವೆಂದು ತಾವಾತ್ಮೈವು ಆವೆರಡರೊಳಗಿದೆ. ಆದುದರಿಂದ ಜಿಲ್ಲೆಯ ಮಹಾಜನರು, ವಿಶೇಷವಾಗಿ ಸರ್ವ್ ಕಾಂಗ್ರೆಸ್ ಕಮಿಟಿಯವರು, ಸರ್ವಜನರ ಸಹಕಾರದಿಂದ ಈ ಕೆಳಗಿನ ಕಾರ್ಯಕ್ರಮದಂತೆ ತಾ. 15ನೇ ಆಗೋಸ್ತನ್ನು ಆಚರಿಸಬೇಕಾಗಿ ನಮ್ರ ವಿನಂತಿ.

ಕಾರ್ಯಕ್ರಮ

1. ತಾ. 15-8-48ನೇ ಆದಿತ್ಯವಾರ ಬೆಳಿಗ್ಗೆ ಘಂಟೆ 7ರಿಂದ 8ರೊಳಗೆ ಹಿಂದೀ ರಾಷ್ಟ್ರೀಯ ಧ್ವಜಾರೋಹಣ.(ಅನುಕೂಲವಿದ್ದಲ್ಲಿ ಪ್ರಭಾತಫೇರಿಯನ್ನು ಘಂಟೆ 6 ರಿಂದ 7 ವರೆಗೆ ನಡೆಸಬಹುದು)

2. ಮಾದಿಯಲ್ಲಿ ತಯಾರಿಸಲ್ಪಟ್ಟ ಚಕ್ಕ ರಾಷ್ಟ್ರೀಯ ಧ್ವಜಗಳನ್ನು ತಾ. 15ನೇ ಬೆಳಿಗ್ಗೆ ಘಂಟೆ 8ರಿಂದ ಅಪರಾಹ್ನ ಘಂಟೆ 4ರ ವರೆಗೆ ವಿಕ್ರಯಿಸಿ ಪ್ರಚಾರ ಮಾಡುವುದು. ಧ್ವಜದ ಬೆಲೆ 0-1-0 ಇದ್ದು ಅಷ್ಟಕ್ಕೇನೇ ಆದನ್ನು ಮಾರತಕ್ಕದ್ದು. ಧ್ವಜಗಳನ್ನು ರಥಬೀದಿಯಲ್ಲಿ ಮಾದಿ ಭಂಡಾರದಿಂದ ಪಡೆಯಬಹುದು

3. ಈ ದಿನ ಎಲ್ಲಾ ಸರ್ವ್ ಕಾಂಗ್ರೆಸ್ ಕಮಿಟಿಗಳವರೂ, ಇತರರೂ ಶಕ್ತ್ಯಾನುಸಾರ ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿಗೆ ಹಣ ಸಂಗ್ರಹಿಸುವ ಮತ್ತು ಕೊಡುವ ರೂಪದಲ್ಲಿ ವಿಧಾಯಕ ಕಾರ್ಯಕ್ರಮವನ್ನು ಮಾಡಬೇಕು.

4. ಸಂಜೆ 4 ರಿಂದ 5 ಘಂಟೆಯ ವರೆಗೆ ಆಡಿಪ್ಪು ಹೆಜ್ಜು ಕಡಗಳಿಂದ ಶಾಂತವಾಗಿ ಶಿಸ್ತಿನಿಂದ ಮೆರವಣಿಗೆಗಳು ನಡೆದು, ಸಂಜೆ 5 ರಿಂದ 6-30ರ ವರೆಗೆ ಸಾರ್ವಜನಿಕ ಸಭೆ ನಡೆಯತಕ್ಕದ್ದು.

ಆಯಾ ಸರ್ವ್ ಕಾಂಗ್ರೆಸ್ ಕಮಿಟಿಗಳವರು ಸ್ಥಳೀಯ ಸರಕಾರಿ ನೌಕರರೊಂದಿಗೆ ಸಹಕರಿಸಿ, ಆಗತ್ಯಬಿದ್ದಲ್ಲಿ ಮೇಲಿನ ಕಾರ್ಯಕ್ರಮವಲ್ಲಿ ಸಂದರ್ಭಾನುಸಾರ ಕೆಲವನ್ನಿಟ್ಟು ಬದಲಾವಣೆಮಾಡಿಕೊಳ್ಳಬಹುದು.

ಕೆ. ಕೆ. ಶೆಟ್ಟಿ.
ಪ್ರಧಾನ ಕಾರ್ಯದರ್ಶಿ
ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ.
ಮಂಗಳೂರು, ತಾ. 3-8-48

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.
O. S. 155/48

ತಿಮ್ಮಪ್ಪ ತಂದೇಲ —ವಾದಿ.
ಅಂಣಪ್ಪಯ್ಯ — ಪ್ರತಿವಾದಿ

ಸದ್ರಿ ವಾದಿಯು ಈ ನೂಲ್ಕ ತಿಳಿಸುವುದೇನೆಂದೆ:

ಅಂಣಪ್ಪಯ್ಯ-ಮುಂಜಯ್ಯ ಶೇರೆಗಾರನ ಮಗ, ಪೋಲೀಸ್ ಕೊನ್ಸ್ಟೇಬರ್ ನಂಬ್ರ 73, ಹರಿಹರಪುರ ಸ್ಟೇಶನ್, ಕೊಪ್ಪಾ ತಾಲೂಕು, ಕಡೂರು ಡಿಸ್ಟ್ರಿಕ್ಟ್, ಮೈಸೂರು ಸ್ಟೇಟ್ ನಾದಿಗೆ ಪ್ರತಿವಾದಿಯಿಂದ ಬರತಕ್ಕ ಕುಮ ಧನ ಸಂಬಂಧ ಲಾಯ್ತು ಸರ್ವಜನ ಸಂವತ್ಸರದ ವರೇಗಿನ ಮೂಲಗೇಜಿಗೇಗಿನ ರೂ. 169-4-10 ಬರಮಾಡಿಕೊಳ್ಳುವರೆ ದಾಕ್ಲು ಮಾಡಿದ ದಾವೆಯು ತಾ 25-8-48 ಕ್ಕೆ ಆಬ್ಬೇರೆ ತನ್ನಗೆ ಯಿದ್ದೋಣಾಗಿಯುದೆ. ಆ ಕುರಿತು ನಿಮ್ಮದೇನಾದ್ದೂ ಉದಾಹರಣೆ ಇದ್ದೆ ಸದ್ರಿ ದಿವ್ಸ ಹೇಲ್ಕಂಡ್ ಕೋರ್ಟ ಮುಂದೆ ಹಗ್ಗು ಬಿ ಂಡಿ ಸ್ವತಹಾ ಪ ವಕೀಲರ ಮ್ಲಾರಾ ಹಾಜ್ಯಾಗಿ ಜಾಹೀರು ಸೂಡಿಕೊಳ್ಳಕ್ಕೆದ್ದು. ತಪ್ಪಿನ್ರೆ ನಿಮ್ಮ ಗೈರ ಹಾಜಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ನೂಲ್ಕ ತಿಳಿಯಪಡ್ಸಿದೆ.

G. Sanjiva Rao.
5.8.48. Pleader for Plaintiff.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

ಏರಡಾಣೆ

Regd. No. M. 3618

19-8-1948

ಅಂತರಂಗ
ಅಖಿಲ ಕರ್ನಾಟಕದ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ 4-8-0
೬ ತಿಂಗಳಿಗೆ ರೂ. 2-8-0
ಬಿಡಿ ಪ್ರತಿಗೆ ರೂ 0-1-6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೮
ವಾರ ೪೯

NAVAYUGA WEEKLY, UDIPI.

FOUNDER: Hon'ble Mr. A. B. SHETTY, Health Minister, Govt. of Madras

Vol. 28
No. 49

ವಿದೇಶೀ ದೃಷ್ಟಿಯಲ್ಲಿ ಆಗೋಸ್ತು 15ರ ಭಾರತ

ಕ್ರಾಂತಿವಿನಹ ಸ್ವಾತಂತ್ರ್ಯ

ಮಾನವೀಯ ಚೈತನ್ಯದ ವಿಜಯ

(ಭಾರತದ "ಫ್ರೆಂಚ್ ವಾರ್ತಾವಾಹಕ" ಸಂಸ್ಥೆಯ ನಾಯಕ ಮೇಜರ್ಸ್ ಜಿ. ಒಲಿವರ್, ಇವರಿಂದ)

'ಕೆಲವು ವರುಷ ನಾನು ಆಫ್ರಿಕೆಯಲ್ಲಿ ತಿರುಗುತಿದ್ದಾಗ, ಕೂಡಲೇ ಥಿಲ್ಲಿಗೆ ಹೋಗಬೇಕೆಂದು ಪೇರಿಸಿನಲ್ಲಿರುವ ನನ್ನ ಹೆಡ್ ಆಫೀಸಿನಿಂದ ನನಗೆ ತುರ್ತಿ ಬಂದೊಡನೆ ನಾನು ನಿಜಕ್ಕೂ ಅತ್ಯಾನಂದಗೊಂಡೆನೆಂದು ಈ ಸಂದರ್ಭದಲ್ಲಿ ಒಪ್ಪಿಕೊಳ್ಳಲೇಬೇಕು. ಮಾನವೀ ಶಕ್ತಿ ಸಮೂಹವಿದ್ದಲ್ಲಿಗೆ ಯಾತ್ರೆ ಮಾಡುವಂತಹ ಒಂದು ಸುಯೋಗವು ಮನುಷ್ಯ ಸಹಜ ದೃಷ್ಟಿಯಿಂದ ಮೋಹಕವಾಗಿದ್ದಂತೆಯೇ, ಪತ್ರಿಕೋದ್ಯಮಿಯೋರ್ವನ ಪಾಲಿಗೆ, ಚರಿತ್ರೆಯಲ್ಲೇ ಏಕಮಾತ್ರವಾದ (ರಕ್ತ ಕ್ರಾಂತಿ ರಹಿತ ಸ್ವಾತಂತ್ರ್ಯವನ್ನು ನೋಡಲಾಗುವ ಸುಸಂಧಿಯು ಸ್ಫೂರ್ತಿದಾಯಕವಾದುದು. ಅದ್ದರಿಂದ ನಾನು ತಡಮಾಡದೆ ವಿಮಾನ ಹತ್ತಿ ಪ್ರಥಮತಃ ಕರಾಚಿಗೆ, ಆಮೇಲೆ ಥಿಲ್ಲಿಗೆ ಮುಟ್ಟಿದೆ. ನಾನು ಭಾರತಕ್ಕೆ ಬಂದು ಮುಟ್ಟಿದುದು. ಭಾರತದ ಮುಖ ಮುದ್ರೆಯನ್ನೇ ಬದಲಾಯಿಸುವ ಭವಿಷ್ಯವನ್ನು ಗರ್ಭದಲ್ಲಿರಿಸಿದ್ದ ಆ ಚಿರಿತ್ರಾರ್ಹ ಜೂನ್ 3ರ ಯೋಜನೆಯು ಪ್ರಕಟಿಗೊಂಡ ಕೆಲವೇ ದಿನಗಳಲ್ಲಿ. ಭಾರತಕ್ಕೆ ಬರುವ ಮೊದಲೇ ನಾನು, ದಕ್ಷಿಣಾಫ್ರಿಕ, ಪೂರ್ವಾಫ್ರಿಕ, ಮಂಡಗಾಸ್ಕರ್ ಮೊದಲಿಡೆಗಳಲ್ಲಿ, ಮರಾಟೆಗರು, ಟಂಗಾಲಿಗಳು, ಮಲಬಾರಿಗಳು, ಗುಜರಾಥಿಗಳು, ಮದ್ರಾಸಿಗಳು ಮತ್ತು ಸಿಖ್ಖರು ಮುಂತಾದ ಹಲವು ಹಿಂದೀಯರನ್ನು ನೋಡಿದ್ದೆ. ಮತ್ತೀ ಉಪಭೂಖಂಡದ ಕುರಿತು ಹಲವನ್ನು ಓದಿಯೂ ತಿಳಿದಿದ್ದೆ. ಸರಳಸ್ವಭಾವದ ಸೋಂಕೆನಿಂದಾಗಿ, ನನ್ನ ಸ್ವಂತ "ಭಾರತ ಸಂಶೋಧನೆ" ಯು ಶೀಘ್ರದಲ್ಲಿ ಮತ್ತು ಸುಲಭದಲ್ಲಿ ಆಗುವದೆಂದು ಛಾನು ನೆನಸಿದ್ದೆ. ಕೆಲವು ದಿನಗಳು ಕಳೆದ ಮೇಲೆ "ನಾನೊಂದು ರಾಷ್ಟ್ರದಲ್ಲಿರುವುದಲ್ಲ. ಒಂದು ಲೋಕದಲ್ಲೇ ಇದ್ದೇನೆ" ಎಂಬ ಭಾವನೆ ನನ್ನಲ್ಲಿ ಮೂಡಿತು; ಮತ್ತೂ ಕೆಲವು ದಿವಸಗಳು ಸಂದ ಮೇಲೆ ಈ ಲೋಕವೆಂಬುದು ನಿಜಕ್ಕೂ ಒಂದು ದೇಶವೇ ಎಂಬ ಪ್ರತ್ಯಕ್ಷಾನುಭವವಾಯಿತು. (ಹೇಗೆಂದರೆ, ವಿಸ್ತಾರ ಭಾರತದಲ್ಲಿ ಸಂಪೂರ್ಣವಾಗಿ ಸಂಚರಿಸಿ ತಿಳಿದಿರುವ ನನಗೆ, "ಭಾರತ ಮಾತಾ" ನಾಮಾಂಕಿತ ಈ ಭೂಮಿಯು ಪೂರ್ವದಿಂದ ಪಶ್ಚಿಮ ಮತ್ತು ಉತ್ತರದಿಂದ ದಕ್ಷಿಣದ ಆ ಮೂಲೆಯಿಂದೀ ಮೂಲೆಯವರೆಗೂ ಎನ್ನೊಂದು ಸುದೃಢ ಜಲಶಾಲಿಯಿದೆ ಎಂಬುದು ಈಗ ತಿಳಿದಿದೆ.)

ಮಹಾತ್ಮಾಗಾಂಧಿ

ಪ್ರತಿಯೊಂದು ದಿನವೂ ಯಾವುದಾದರೊಂದು ಹೊಸತು ಇದ್ದೇ ಇದ್ದ, ಈ ಚರಿತ್ರೆ ರಚನೆಯ ಆದಿ ಭಾಗದಲ್ಲಿ ಕುಸುದಿಗಲು ಬಡದಂತಾದ ನಾನು ಆ ಮೂಲಕ ನನ್ನ ಮನಸ್ಸಿನೊಳಗೆ ಒಂದನ್ನೊಂದು ಪ್ರತಿಭಟಿಸುತ್ತಿದ್ದು ಗಲಿಬಿಲಿಗಳನ್ನು ನಿರ್ಮಿಸಿದ್ದ ಪ್ರತಿಬಿಂಬಗಳನ್ನು ಒಂದು ಪಂಗ್ತಿ ಒಡಿಸುವುದಕ್ಕಾಗಿ ನನ್ನನ್ನೇ ಸಂಘಟಿಸಿಕೊಳ್ಳಲು ಪ್ರಯತ್ನ ಮಾಡಿದೆ. ಅದಕ್ಕಾಗಿ ಭಂಗೀ ಕೊಲನಿಗೆ (ನವಢಿಲ್ಲಿಯ) ಹೋದಲ್ಲಿಯೇ ನಾನು ಬುದ್ಧಿವಂತನನ್ನು ಕಾಣುವಂತಾಯಿತು. ನನಗಲ್ಲಿ ನಿರಾಶೆಯಾಗಲಿಲ್ಲ. ಅಲ್ಲಿಯ ಸತ್ಯ ವೇದಾತ್ಮಕ ವಾತಾವರಣದಲ್ಲಿ ಹುಟ್ಟಿನಿಂದ ಹಾಗೂ ಯೋಚನೆಯಿಂದ ಸರ್ವ ಸಾಮಾನ್ಯರೂ ಸಂಪ್ರದಾಯವಾದಿಗಳೂ ಆದ ಜನರ ನಡುವೆ ಮಹಾತ್ಮರನ್ನು ನಾನು ಕಂಡೆ; ನನ್ನ ಊಹೆಯಂತೆಯೇ ಇದ್ದರವರು; ಸರ್ವ ಪ್ರಥಮವಾಗಿ ಮಾನವೀಯತೆ- ವ್ಯಾಪಂಚಿಕೋಪಕರಣಗಳ ಮೇಲೆ ಭಾವಸ್ಫೋರ್ತಿಯು ಗಳಿಸಿದ ವಿಜಯದ ಸಜೀವದ್ಯೋತಕ- ಅವರಾಗಿ ನನಗೆ ತೋರಿದರು; ಕಾರಣವೆಂದರೆ ಸೋಲಿಯಾತನ ವಿರುದ್ಧವಾಗಿ ದಾವಿದ್ ಹೂಡಿದ ಹೋರಾಟವನ್ನು- ಸಶಸ್ತ್ರ ಸಾಮ್ರಾಜ್ಯ ದೈತ್ಯನೊಡನೆ ಈ ಕೆರಮೂರ್ತಿ ಹಾಗೂ ಬತ್ತಲೆ ಪ್ರವಾದಿ ಮಾಡಿದ್ದ ಪ್ರಚಂಡ ಸಂಗ್ರಾಮವನ್ನು-ನಾನು. ಎಂದೆಂದಿಗೂ ಮೆಚ್ಚುವವನು.

ನನ್ನ ದೇಶದಲ್ಲಿ 'ಗಾಂಧಿ' ಆತ್ಯಂತ ಜನಪ್ರೀತರಿದ್ದರು. ಅವರಿಂತ ಮೊದಲು ಕೆಲವೇ ಮಂದಿ ವಿದ್ವಾಂಸರನ್ನು ಹೊರ

ಜನಸಾಮಾನ್ಯರ
ಆರ್ಥಿಕೋನ್ನತಿಗಾಗಿ
ಸ್ಥಾಪಿತವಾದ ಜನತಾ ಸಂಸ್ಥೆ!

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಉಡುಪಿ.

" I wish you all good luck and prosperity May your Company procure good business in the years to come and serve its constituents.

(Sd.) B Vaikunta Baliga,
Advocate, Mangalore.

...ನಿಮ್ಮ ಕಂಪೆನಿಗೆ ಸರ್ವ ಯಶಸ್ಸನ್ನು ಕೋರುತ್ತೇನೆ. ಮುಂದೆ ಬರುವ ವರ್ಷಗಳಲ್ಲಿ ಕಂಪೆನಿ ಪುಷ್ಕಳ ವಿಮಾ ವ್ಯವಹಾರ ದೊರೆತು ನಾಡಿನ ಸೇವೆ ಮಾಡುವಂತಾಗಲೆಂದು ಹಾರೈಸುತ್ತೇನೆ.

(ಸಹಿ) ಬಿ. ವೈಕುಂಠ ಬಾಳಿಗ,
ಎಡ್ವೋಕೇಟ್, ಮಂಗಳೂರು.

ಉತ್ಸಾಹೀ ಏಜಂಟರು ಎಲ್ಲೆಡೆಗಳಲ್ಲೂ ಬೇಕಾಗಿದ್ದಾರೆ!

The New Karnatak Provident
Insurance Co., Ltd. UDIPI.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ —
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:—ಧಾರವಾಡ,
THE UNITED KARNATAK INSURANCE COMPANY, LIMITED.

ತು ನಡಿಸಿದರೆ ಭಾರತವೆಂದರೆ ಜನಸಾಮಾನ್ಯರು, ಕಷ್ಟಕರರು ಮತ್ತು ಹಾನಾಡಿಗರು, ಹುಲಿಗಳು ಹಾಗೂ ತೋಳ ಸಾಕಿದ ಮಕ್ಕಳು. ಆನೆಗಳು ಮತ್ತು ಮಹಾರಾಜರು ಇರುವ ಭೂಮಿಯೆಂದಷ್ಟೇ ನನ್ನ ದೇಶಕ್ಕೆ ಗೊತ್ತು.

ಆಗೋಸ್ತು 15-ಭಾರತ ಮತ್ತು ಅವಳ ಜತೆಯಲ್ಲಿ ಅಖಿಲ ಪ್ರಜಾಸತ್ತಾತ್ಮಕ ಪ್ರಪಂಚವೇ ಉತ್ಸವಾಚರಣೆ ಮಾಡುತ್ತಿದ್ದ ದಿನವದು. ವಾರ್ಲಿಂಗ್ಟನ್ ಭವನದಲ್ಲಿ ನಡೆವ ಅಧಿಕಾರ ವರ್ಗಿಯ ಸಮಾರಂಭವನ್ನು ಆ ಮಧ್ಯೆ ರಾತ್ರಿಯಲ್ಲಿ ಕಾಣುವ ಸುಯೋಗವು ನನಗೊದಗಿದ್ದಿತು. ಮೇಲಂತಸ್ತಿನ ಗೆಲರಿಯಿಂದ ನೋಡುವವರಿಗೆ ಆ ದೃಶ್ಯವು ಅಸಾಮಾನ್ಯವಾಗಿತ್ತು. ಖದ್ದರ್ ಧೋತಿಗಳ, ಕುರ್ತಾಗಳ, ಗಾಂಧೀ ಟೋಪಿಗಳ ಶುದ್ಧ ಶ್ವೇತ ವರ್ಣದೊಡನೆ ಪಂಕಗಳ ರಕ್ಕೆಗಳ ಗಾಳಿ ಸೇರಿಕೊಂಡು, ಶುದ್ಧತೆ ನಿರ್ಮಲತೆಯ ಬಿಳಿಯನ್ನು ಸ್ವಾತಂತ್ರ್ಯದ ಗಾಳಿ ಪಸರಿಸುವಂತಿತ್ತು. ಸದಾಸ್ಮರಣೀಯವಾದ ಮತ್ತೊಂದು ದೃಶ್ಯವೆಂದರೆ ಆಗೋಸ್ತು 16ರಲ್ಲಿ ಕೆಂಪುಕೋಟೆಯ ಮೇಲೆ ನಡೆದ ಭಾರತದ ತ್ರಿವರ್ಣ ಧ್ವಜದ ಆರೋಹಣೋತ್ಸವ. ಅಧಿಕೃತ ನಿಲ್ವಾಣ ಪೀಠಿಕೆಗೆ ಸವೀಪದ ನೆಲೆಯಲ್ಲಿ ನಿಂತುಕೊಂಡು ನೋಡುತ್ತಿದ್ದ ನನಗೆ, ಶತ ಸಹಸ್ರ ಸಂಖ್ಯೆಯ ಬೂದುಕಣ್ಣುಗಳು ನೋಹಾವೇಗ ತಲ್ಲೀನತೆಯಿಂದ ಏಕ ಪ್ರಕಾರವಾಗಿ ಆ ಭವ್ಯ ಮೂರ್ತಿ ಪಂಡಿತ ನೆಹರುಗಳಿಂದೇರಿಸಲ್ಪಡುತ್ತಿದ್ದ ಹೆಸರು, ಬಿಳಿ, ಕೇಸರಿ ಬಣ್ಣಗಳ ಕಡೆಗೆ ಸಾಗಿದ್ದ ಆ ದೃಶ್ಯವನ್ನು ಕಂಡಾಗ ಈ ಧ್ವಜವೆನ್ನು ದೊಡ್ಡದೆಂಬುದು ಮನಮುಟ್ಟಿದ್ದಿತು.

ಸ್ವಾತಂತ್ರ್ಯ ನಂತರ

ಸ್ವಾತಂತ್ರ್ಯೋದ್ಭವದ ಬಳಿಕ ನಾನು ಭಾರತದ ಸಖ ಭಾಗಗಳಲ್ಲಿ ಭಾಗಿಯಾಗುತ್ತಾ ಬಂದಿದ್ದೇನೆ. ಪಂಜಾಬಿನ ರಸ್ತೆಗಳಲ್ಲಿ ನಿರಾಶ್ರಿತರ ಆತ್ಯುದ್ದದ ಸಾಲುಗಳನ್ನೂ, ಸಂಯುಕ್ತ ಭಾರತ ರಚನೆಯ ಅತಿ ಮಹತ್ತಾದ ಕಾರ್ಯಭಾರಗಳನ್ನೂ ನಾನು ಕಂಡಿದ್ದೇನೆ.

ಫಿಲ್ಲಿಯ ಅಂತರಿಳ ಗೊಂದಲದ ಭೀಕರತೆಗಳನ್ನೂ, ಗಾಂಧಿಜೀಯ ಅದ್ಭುತ ಧೈರ್ಯಕರ ಉಪವಾಸಗಳನ್ನೂ ನಾನು ನೋಡಿದ್ದೇನೆ.

ನಾನು ಭಾರತ ನಾಯಕರ ಮಹತ್ತಾ ಧನೆಗಳನ್ನೂ ಕಂಡೆ; ಲೋಕ ಪ್ರವಾದಿಗಳಲ್ಲೊಬ್ಬನ ಹೆಣವನ್ನೂ ಕಣ್ಣಾರೆ ನೋಡಿದೆ.

ಗೆದ್ದುಕೊಂಡ ವಿಜಯಕ್ಕಾಗಿ ಸರ್ವ ಜನರೂ ಸಂತೋಷಾವೇಗದಿಂದ ನೆಗೆದಾಡುತ್ತಿರುವದನ್ನು ನೋಡಿದೆ; ಸ್ವಾತಂತ್ರ್ಯಹುತಾತ್ಮನ ಚಿತೆಯ ಸುತ್ತಲೂ ಸೇರಿ ಎಲ್ಲಾ ಜನರೂ ದುಃಖಾವೇಗದಿಂದ ಕಣ್ಣೀರಿಡುತ್ತಿರುವುದನ್ನೂ ನೋಡಿದೆ.

ಹಿಂದುಸ್ಥಾನದ ಪ್ರಥಮ ಘಟನಾತ್ಮಕ ಅಗ್ರಗಣ್ಯಾಧಿಕಾರಿಯು ತನ್ನ ತೀರಾ ಸಾದಾ ರೀತಿಯ ಉಡುಗೆಯಿಂದ ಹಿಂದಿನ ವೈಸರಾಯಿಗಳೇರಿದ್ದ ಸಿಂಹಾಸನವೇರುವುದನ್ನೂ ನಾನು ನೋಡಿದೆ.

ಭಾರತ-ಫ್ರಾನ್ಸ್ ಸಂಬಂಧ

ಒಂದು ರಾಷ್ಟ್ರದ ಆತ್ಮವನ್ನು ಇಷ್ಟೂ ನೋಡಿಕೊಂಡವನು- ಅದರಲ್ಲೂ ದ್ರಾವಿಡೀಯ ಬ್ರಾಹ್ಮಣ, ಬುದ್ಧೀಯ ನಾಗರಿಕತೆಗಳು ಮಾನವೀಯ ಭಂಡಾರಕ್ಕೆ ಎಷ್ಟನ್ನೆಲ್ಲಾ ತುಂಬಿಸಿವೆಯೆಂಬುದನ್ನರಿತಿರುವವನು-ಆ ರಾಷ್ಟ್ರವನ್ನು ಮರೆಯುವ ದೆಂದರೆ ಹೇಗೆ?

ಮಧುರೆಯಿಂದ ಹಿಡಿದು ಆ ಗ್ರಾದ ವರೆಗೆ, ಅಶೋಕನಿಂದಾರಂಭಿಸಿ ಕಾಗೋರರ ವರೆಗೆ ಅಷ್ಟೆಂದು ಸಮೃದ್ಧವಾಗಿ ಕಲಾ ಪ್ರದರ್ಶನ ಮಾಡಿದ್ದ ಒಂದು ರಾಷ್ಟ್ರವನ್ನು ಮರೆಯುವುದಾದರೂ ಹೇಗೆ? ಕಿಪ್ಲಿಂಗನು ತನ್ನ 'ಪೂರ್ವವು ಪೂರ್ವವೇ' ಎಂಬುದರಲ್ಲೇನನ್ನೇ ಹೇಳಿದ್ದರೂ, ಗೋತಿಕ್ ದೇವಾಲಯ ಹಾಗೂ ವ್ಯಾಖ್ಯಾನಗೃಹಗಳುಳ್ಳ ರಾಷ್ಟ್ರದವನೊಬ್ಬನು 'ಹಿಂದುಸ್ಥಾನಕ್ಕೂ ಫ್ರಾನ್ಸಿಗೂ ಸಮಾನತೆಯು ಸಂಬಂಧಗಳಿವೆ' ಎಂಬ ಯೋಚನೆ ಮೂಡದಂತೆ ತನ್ನನ್ನು ತಾನೇ ತಡೆದು ಕೊಳ್ಳುವದಾದರೂ ಹೇಗೆ?

ಪೇರಿಸಿನ ಬಳಿಯ 'ರೋಯ ಮೌಂಟ್ ಅಬ್ಬೆ"ಯಲ್ಲಿ ಕಳೆದ ಜೂನಿನಲ್ಲಿ ಜರಗಿದ ಫ್ರಾನ್ಸ್-ಭಾರತ ವಾರಾಚರಣೆಯ ವ್ಯವಸ್ಥಾಪಕರಿಗೆ ಪಂಡಿತ ನೆಹರುಗಳು ಬರೆದಿದ್ದಂತೆ " ಫ್ರೆಂಚ್ ಪ್ರತಿಭೆಯು ನ್ಯಾಯ ತಾತ್ಸ್ಯ ಪ್ರೇಮದಲ್ಲಿ, ಸೃಷ್ಟಿಕ್ಕರಣ ನಿಷ್ಠೆಯಲ್ಲಿ ಮತ್ತು ಸಹನೆಯಲ್ಲಿ ಬಹಳ ಮಟ್ಟಿಗೆ ಹಿಂದೀ ಪ್ರತಿಭೆಯನ್ನೇ ಹೋಲುತ್ತಿದೆ. ಈ ಭಾವನಾತಾದಾತ್ಮ್ಯದ ದೆಸೆಯಿಂದಾಗಿಯೇ, ಫ್ರೆಂಚ್ ಸಾವಂತರುಗಳು ಭಾರತದ ಪುರಾತನ ಸಂಸ್ಕೃತಿ ಮತ್ತು ಪಾಂಗಂಕತೆಗಳನ್ನು ಪಾಶ್ಚಾತ್ಯರಿಗೆ ಭಾಷಾಂತರಿಸಿ ತೋರಿಸಲು ಮುಂದಾದರೆನ್ನಬೇಕು."

ಈಗ, ಸ್ವಾತಂತ್ರ್ಯವನ್ನು ಸಂಪಾದಿಸಿ ಒಂದು ವರುಷವಾಗಿರುವಾಗ ಭಾರತವು ಒಂದು ಅಧುನಿಕ ರಾಷ್ಟ್ರವಾಗಿ ಹೆಜ್ಜೆ ಚ್ಚಾಗಿ ಸಂಘಟನೆಗೊಳ್ಳುತ್ತಾ ಬರುತ್ತಿದೆ; ಈಗ ಭಾರತವು ದಿನದಿಂದದಿನಕ್ಕೆ ಯಾಂತ್ರಿಕ ಹಾಗೂ ಔದ್ಯೋಗಿಕ ರಾಷ್ಟ್ರವಾಗಿ ಬೆಳೆಯುತ್ತಾ ಇದೆ; ದುಃಖಕ್ಕಿದಗಳನ್ನು ಹಾಗೂ ದುರ್ಭಾವನೆಗಳನ್ನು ಜಯಶೀಲವಾಗಿ ಗೆದ್ದು ರಾಜಿಸುವ ಅವ ಕೊಡನೆ, ಅವಳು ತನ್ನ ವ್ಯಕ್ತಿತ್ವವನ್ನು ಬಿಡದಿರಲಿ-ಮೂಲ ಚೈತನ್ಯವನ್ನು ಹಾಳು ಮಾಡಿಕೊಳ್ಳದಿರಲಿ-ಎಂದೋರ್ವ ದೀನ ಪತ್ರಿಕೋದ್ಯಮಿಯು ಇಲ್ಲಿ ಕೇಳಿ ಕೊಳ್ಳಬಹುದು?

ಆಧುನಿಕ ಪ್ರಪಂಚದಲ್ಲಿ ಔದ್ಯೋಗಿಕ ತಜ್ಞರು ಹಾಗೂ ಇಂಜಿನೀಯರರಂತೆಯೇ ವಿಜ್ಞಾನಿಗಳು ಹಾಗೂ ತತ್ವವೇತ್ತರಿಗೂ ಸ್ಥಾನವಿರಬೇಕು.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿವೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಗಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky aBnk Ltd.

Moolky, S. K.

ಖುತುಸ್ರಾವ ನಿಂತಿತು

'ಆಮಾರ್' ಪಿಲ್ಲೆಗಳನ್ನು ಉಪಯೋಗಿಸಿದರೆ ಸಡತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ಕೀಸ್ತ್ರ ಗುಣಹೊಂದಬಹುದು, ಯೌವನ ಬಾಧಕಳವುಂಟಿಲ್ಲ ಸಾವಿರಾರು ಜನರಿಂದಿಗೆ ಖಾತ್ರಿ ಗುಣವಾಂಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.8/-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs P. DEVEE, F. DS. (N. J.)

Tollygunge CALCUTTA.

ಸ್ವಾತಿಕ್ಕರು: ಶಕಾಕಂಪನಿ, ಮಂಗಳೂರು

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತಃ ೧೯೦೬

[ಯೂರೋಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್) ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಆಥವಾ ಸಂಗ್ರಹ] ಇಲಾಖೆಯು,ನಮ್ಮ ಶಾಖೆಗಳಿರುವಲ್ಲಿ ರುಜುಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಯ್ಯುಣದ ಆರಳೆಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಆಕ್ಕ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ, ವ್ಯಕ್ಷವಾಟಿಕೆಗಳಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರುಜುಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ನಿಚ್ಚಣಿ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬಲ್ಲವು. ಆದರಿಂದ ನಿಮಗೆ ಸಮಯವೂ, ಹಣವೂ ಉಳಿದು.. ನಿಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರುಜುಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ಹೊರೆಯುದು.

The Canara Bank Limited.

ESTD: 1906

15 ನೇ ಆಗೋಸ್ತು 1948

ಈ ಚಿರಸ್ಮರಣೀಯನಾದ ದಿನದಲ್ಲಿ-ನಮ್ಮ ಸ್ವಾತಂತ್ರ್ಯ ದಿವಸದ ಸುಮುಹೂರ್ತದಲ್ಲಿ ರಾಷ್ಟ್ರಪಿತ ಪೂಜ್ಯ ಬಾಪೂಜಿ ಹಾಗೂ ಸ್ವಾತಂತ್ರ್ಯ ಪ್ರಾಪ್ತಿಗಾಗಿ ಪ್ರಾಣಾರ್ಪಣಮಾಡಿದ ಆ ಯೋಧರುಗಳ ನಮ್ಮು ವಿನೀತ ಪ್ರೇಮಭಕ್ತಿಯನ್ನು ಅರ್ಪಿಸುತ್ತೇವೆ. ಜನತಾ ಸರಕಾರದ ಸರ್ವಸಮರ್ಥ ಸಾರಥ್ಯವನ್ನು ವಹಿಸಿರುವ ರಾಷ್ಟ್ರ ಧುರೀಣರಿಗೆ ಸ್ವರಾಜ್ಯ ಸರಕಾರದ ಭಾರವಸೆಯನ್ನೀಯುವುದು ನಮ್ಮೆಲ್ಲರ ಆದಂತ್ಯ ಕರ್ತವ್ಯವಾಗಿದೆ.

ಕಳೆದ ಮೂವತ್ತೆಂಟು ವರುಷಗಳಿಂದ ವಿಮಾಕ್ಷೇತ್ರದಲ್ಲಿ ದುಡಿದು ದೇಶದ ಹಾಗೂ ಜನಾರ್ದನನ ಅಧಿಕ ಉನ್ನತಿಗಾಗಿ ನಮ್ಮ ಸೇವೆಯನ್ನು ಅರ್ಪಿಸಿದ್ದೇವೆಂದು ಹೇಳಲು ಅಭಿಮಾನಪಡುತ್ತೇವೆ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್.

ಚೀಫ್ ಎಜೆಂಟ್ಸ್:

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ ಲಿಮಿಟೆಡ್

ಶಾಖಾ ಕಾರ್ಯಾಲಯಗಳು:

ಉಡುಪಿ, ನುಂಗ್ಲೂರು, ಕಲ್ಲಿಕೋಟೆ, ಕೊಯಮುತ್ತೂರು, ಮಧುರಾ, ತ್ರಿವೆಂಡ್ರಮ್, ಬೆಂಗಳೂರು, ಮದ್ರಾಸ್ ಮತ್ತು ಬೊಂಬಾಯಿ

Tender Notice

Tenders are invited to reach the Assistant Director of Fisheries, (Coast), Calicut on or before 15-9-48 for transporting salt bags from sea going vessels or railway waggons and stacking them in the fish curing yards and gellahs on the west coast and for sundry other works [illegible]riod of one year from 1st December, 1948. Details and terms of contract can be had from the Office of The Assistant Director of Fisheries, (Coast), Calicut.

T. P. Baratan,

Asst. Director of Fisheries, (Coast).

Approved firm by the Govt. of Mysore Certified by the Agent of the Govt. of Cylone & Indian.

ವಿದೇಶೀ ದೃಷ್ಟಿಯಲ್ಲಿ ಅಗೋಸ್ತು 15ರ ಭಾರತ.

ಸ್ವಾತಂತ್ರ್ಯದ ಪ್ರಥಮ ವರುಷ

ಹಿಂದೀ ಸರಕಾರದ ಕಾರ್ಯಕಲಾಪಗಳು

(ಸರ್. ಸ್ಟೈಫರಿಕ್ ಜೇಮ್ಸ್, ಇವರಿಂದ)

"ಅಗೋಸ್ತು 14--1948ರ ಮಧ್ಯರಾತ್ರಿಯಲ್ಲಿ ಭಾರತವು ತನ್ನ ಸ್ವಾತಂತ್ರ್ಯದ ಎರಡನೇ ವರುಷದಲ್ಲಿ ಕಾಲಿರಿಸಿದೆ. ಪ್ರಥಮ ವರುಷವು ಎಷ್ಟೊಂದು ಉದ್ವೇಗದಾಯಿಯಾಗಿತ್ತು! ಸ್ವಾತಂತ್ರ್ಯ ಜನನದ ಸಂತೋಷ ಮತ್ತು ವೇದನೆ; ಜಾತೀಯತಾ ಕಾಗೊಂದಲಗಳ ಆವರ್ಣನೀಯ ಸಂಕಷ್ಟಗಳು; ಸ್ಥಾನಚ್ಯುತರಾದ ಹಾಗೂ ಮನೆಮಾರು ಕಳಕೊಂಡ ನಿರ್ಗತಿಕರ ದೊಡ್ಡದೊಡ್ಡ ನಾಲು ಪ್ರವಾಹಗಳು; ಅಹಿಂಸೆ, ಸತ್ಯಮತ್ತು ಪ್ರೇಮ ತತ್ವಕ್ಕಾಗಿ ಮಹಾತ್ಮ ಗಾಂಧಿಯವರ ವೀರೋಚಿತ ಮರಣ; ಕಾಶ್ಮೀರ ಮತ್ತು ಹೈದರಾಬಾದ್ ಘರ್ಷಣೆಗಳು ಮತ್ತು ಅಂತರ್ವಸಾಹತು ಯುದ್ಧದ ಭಾಯೆ; ಉತ್ಪತ್ತಿಗಳಲ್ಲಾದ ಅನಾಹುತಕಾರೀ ಇಳಿತ ಮತ್ತು ತತ್ಪರಿಣಾಮವಾದ ಆರ್ಥಿಕ ದುಸ್ಥಿತಿ; ಜಾತೀಯತೆಯ ಪ್ರಾದುರ್ಭಾವ; ವಿಶೇಷ ನಿಶ್ವಾಸಾರ್ಹ ಹಾಗೂ ಪ್ರೇಮಪಾತ್ರನಾದ- ತನ್ನ ಸಂಗ್ರಿಯಲ್ಲಿ ಕೊನೆಯವನಾದ- ಬ್ರಿಟಿಷ್ ಗವರ್ನರ್ ಜನರಲನ ನಿರ್ಗಮನ; ಹೊಸ ರಾಜ್ಯಾಂಗ ಶಾಸನಗಳ ತದೂರಿ; ಕ್ಷಿಪ್ರಗತಿಯಲ್ಲಿ ಹಿಂದೀ ಸಂಸ್ಥಾನಗಳ ವಿಲಸೀಕರಣ-ಇವೆಲ್ಲವುಗಳು ಮತ್ತಿತರ ಘಟನೆಗಳು ಕಳೆದ ಹನ್ನೆರಡು ತಿಂಗಳುಗಳಲ್ಲಿ ಗುಂಪಾಗಿ ಬಂದಿದ್ದವು.

ಹೇಗಿದ್ದರೂ, ಚರಿತ್ರೆಯು ಬರೆಯಲ್ಪಡುವಾಗ ಎರಡು ವಿಷಯಗಳಿಗಾಗಿ ಕಳದ ವರುಷವು ಸ್ಮರಣೀಯವಾಗಲಿದೆ. ಪ್ರಥಮದಲ್ಲಾಗಿ ಮಹಾತ್ಮಾ ಗಾಂಧಿಯವರ ಆತ್ಮಾರ್ಪಣೆ; ಎರಡನೆಯದಾಗಿ ಅನನ್ಯರೀತಿಯ ಸಮಸ್ಯೆಗಳ ಭೀಕರದಾಯಕ ಮಹಾ ಪತ್ತುಗಳ ಇದಿರಲ್ಲಿ ಹಿಂದೀ ಸರಕಾರವು ತೋರಿಸಿದ ಆಶ್ಚರ್ಯಕರ ಧೈರ್ಯ ಮತ್ತು ದೃಢತೆ.

ಗಾಂಧೀ ಸ್ಫೂರ್ತಿ

ಪ.ಹಾ ತತ್ವವೇತ್ತ, ಭಾರತೀಯ ಡಾಕ್ಟರ್ ರಾಧಾಕೃಷ್ಣನ್ ಒಮ್ಮೆ ಈ ರೀತಿ ಬರೆದಿದ್ದರು: "ದೇವರಿಗೆ ಮುಖಾಮುಖಿಯಾಗಿ ನಿಂತು, ದೈನೇಚ್ಛೆಯನ್ನು ವಿಶೇಷ ಸ್ಪಷ್ಟ ರೀತಿಯಿಂದ ಪ್ರತಿಪಾದಿಸುತ್ತಾ ದೈವಿಕ ಸಂದೇಶಗಳನ್ನು ಆತಿ ಹೆಚ್ಚಿನ ಧೈರ್ಯದಿಂದ ವ್ಯವಹಾರಕ್ಕೆಳಿಸಿಕೊಳ್ಳುವವನ ಅಪೂರ್ವ ಸ್ಫೂರ್ತಿಯೆಂಬುದು ಎಂದಾದರೊಮ್ಮೆ ಮಾತ್ರ ಆತ್ಯಪರೂಪವಾಗಿ ಗೋಚರಿಸುವುದು." ನಿಸ್ಸಂದೇಹವಾಗಿ ಯುಗಪುರುಷ ಮಹಾತ್ಮಾ ಗಾಂಧಿಯವರು ಇಂತಹ ಒಬ್ಬ ನಾಗಿದ್ದರು. ಫೀಲ್ಡ್ ಮಾರ್ಶಲ್ ಸ್ಮಟ್ಸ್ ರು 1934ರಲ್ಲಿ ಹೇಳಿದ್ದ ಈ ಕೆಳಗಿನ ಮಾತುಗಳು ನನಗೆ ಈಗಲೂ ಸರಿಯಾಗಿ ನೆನಪಿವೆ. "ನೀವು ಬ್ರಿಟಿಷರೊಂದು ವಿಚಿತ್ರ ಜನಾಂಗ. ಒಬ್ಬ ದೊಡ್ಡಮನುಷ್ಯನ ದೊಡ್ಡಸ್ತಿಕೆಯನ್ನು ಆತ ಸಾಯುವ ವರೆಗೆ ನೀವು ಒಪ್ಪಿಕೊಳ್ಳುವವರಲ್ಲ. ಗಾಂಧಿ ಲೋಕದ ಆತಿ ದೊಡ್ಡ ಮನುಷ್ಯರಲ್ಲೊಬ್ಬನಾದರೂ ಆತ ಹೋದ ಮೇಲೆಯೇ ಈ ಸಂಗತಿ ನಿಮಗೆ ಮಂದಟ್ಟಾಗಬೇಕು". ಅದುದೂ ಹೀಗೆಯೇ. ಅವರ ಕೊಲೆಯು ಬ್ರಿಟಿಷ್ ಜನತೆಯ ಪ್ರತಿಯೊಂದು ವಿಭಾಗದಿಂದಲೂ ಸರ್ವವ್ಯಾಪಿ ಹಾಗೂ ಹಾರ್ದಿಕ ಖಿನ್ನಭಾವನೆಗಳನ್ನೆಬ್ಬಿಸಿತು; ಇಡೀ ಲೋಕ ಕೊಂಡಾಡಿತು. ಫ್ರೋಪ್ ಗುರುಗಳ ಅಧಿಕೃತ ಪತ್ರಿಕೆಯು ಗಾಂಧಿಯವರ ಕುರಿತು ಬರೆಯಿತು: "ಅವರು ತನ್ನದೇ ಆದ ರೀತಿಯಿಂದ ಕ್ರೈಸ್ತರ ಅನುಕರಣೆ ಮಾಡಿದರು. "ಜಂತರಿರುವವರೇ ಉದ್ಧಾರ ಗೊಂಡವರು" ಎಂದವರು ಹೇಳಿದರು. ಮತ್ತು ಸ್ವತಃ ಅವರಾದರೋ, ಅದಕ್ಕಾಗಿ ಪ್ರಾಣವನ್ನೇ ಬೆಲೆ ಕೊಡಬೇಕಾಗಿ ಬಂದರೂ ಉದ್ಧರಿತರಾಗಿದ್ದರು". ದ್ವೇಷದ ನಟ್ಟನಡುವೆ ನಿಂತು ಅವರು ಪ್ರೇಮವನ್ನು ಸಾರಿದ್ದು, ಸಂದೇಹ ಜಗತ್ತಿನಲ್ಲಿ ಅವರು ವಿಶ್ವಾಸವನ್ನು ಉಪದೇಶಿಸಿದರು ನಮ್ಮ ಕರ್ತವ್ಯ ಹಾಗೂ ಅವ್ಯವಸ್ಥೆಯ ಕಾಲದಲ್ಲಿ ಅವರ ಜೀವವೊಂದು ಮಹತ್ತಾದ ಪ್ರಕಾಶವಾಗಿತ್ತು. ಅಕಾರಣ ಹಾಗೂ ಮತ ಭ್ರಾಂತಿಗೆ ಬಲಿಯಾಗಿ ಅವರ ಕಾಯವು ನಶಿಸಿ ಹೋದರೂ, ಅವರ ಪ್ರಕಾಶವು ಅವರ ದೇಶಕ್ಕೂ ಜಗತ್ತಿಗೂ "ಇನ್ನೊಂದು ಸಹಸ್ರ ವರುಷಗಳ ವರೆಗೆ" ಬೆಳಕುರಂಜನೆ ಮಾಡಲಿದೆ.

ಆ ಗೊಂದಲಗಳು

ಥೋಮಸ್ ಹಾರ್ಡಿಯೊಂದೆಡೆ ಬರೆದಿದ್ದ--"ಯಾವುದಾದರೊಂದು ಘಟನೆಯು ನಿರ್ಜೀವಾವಧಿಯೆಂದರೆ, ಅದು ವಾರ್ತಾರೂಪದಲ್ಲಿರುವುದು ಮುಗಿದು, ಚರಿತ್ರೆಯಾಗಿ ಮಾರ್ಪಡಲುಆರಂಭಿಸಿದಿರುವ ಮಧ್ಯಾವಧಿ". ರೈದರಾಬಾದ್ ಮತ್ತು ಕಾಶ್ಮೀರಗಳು ಜನತೆಯ ದೃಷ್ಟಿಯನ್ನು ಸಂಪೂರ್ಣವಾಗಿ ತಮ್ಮ ಕಡೆಗೆಳೆದುಕೊಂಡು ಯಥಾ ಪ್ರಕಾರ ಸಾಗಿವೆ. ಇದರಿ ಕಳದ ಹನ್ನೆರಡು ತಿಂಗಳುಗಳ ಭಾರತ ಸರಕಾರದ ಏಕಾಗ್ರತೆಯ ಹಾಗೂ ಪ್ರೋತ್ಸಾಹನೀಯ ಕಾರ್ಯದಾಖಲೆಗಳು ಈಗ ಕೇವಲ ವಾರ್ತೆಯಾಗಿಲ್ಲ; ಆದರೆ ಇನ್ನೂ ಅವು ಚರಿತ್ರೆಯಲ್ಲ. ಲೋಕದ ಬೇರಾವ ಸರಕಾರವನ್ನೂ ಇದಿರಿಸಿರದಂತಹ ಸಂಕಷ್ಟಗಳನ್ನು 1947ನೇ ಅಗೋಸ್ತು 15ರಿಂದ ಈ ಸರಕಾರವು ಇದಿರಿಸಿದ್ದಿತೆಂಬ ವಿಷಯ ಜ್ಞಾನವು ಬ್ರಿಟನಿನಲ್ಲಿ ಇನ್ನೂ ಸಾಕಷ್ಟಾಗಿಲ್ಲ. ಹೆಚ್ಚಿನ ಬ್ರಿಟಿಷರು ಬಿಟ್ಟು ಹೋದುದರಿಂದಲೂ, ಸೇನೆ, ನಾಪೆ, ಆಕಾಶ ಬಲಗಳಲ್ಲಿ ಅದ ಭಾರತ ಮತ್ತು ಪಾಕಿಸ್ತಾನಗಳೊಳಗಿನ ಸಾಲುಸಾಲ್ಪಟ್ಟಯುದ್ಧ ಸೆಯಿಂದಲೂ ಬಹಳವಾಗಿ ಕುಸಿದು ಹೋಗಿದ್ದ ಆಡಳಿತ ಯಂತ್ರವನ್ನು ಹಿಡಿದುಕೊಂಡು ಹಿಂದೀ ಸರಕಾರವು ಸುಸೆಂಘಟಿತ ಗೊಂದಲಗಳನ್ನೂ ದೊಡ್ಡ ಪರಿಮಾಣದ ಜನ ಸಮೂಹ ಬದಲಾವಣೆಯ ಕಷ್ಟವನ್ನೂ ಇದಿರಿಸಬೇಕಾಗಿದ್ದಿತು. ಆದರೀ ಸರಕಾರವು ಇವುಗಳನ್ನು ಗೆದ್ದು ನಿಂತುದ ಸ್ಪೇ ಅಲ್ಲ; ಅವನ್ನನುಸರಿಸಿ ಬಂದ ಮಹತ್ತಾದ ರಾಜಕೀಯ, ಆರ್ಥಿಕ, ಸಾಮಾಜಿಕ ಸಮಸ್ಯೆಗಳನ್ನು ಇತ್ಯರ್ಥಿಸಿಕೊಳ್ಳಲು ಗಣನೀಯ ರಕ್ತಿ, ಸಾಹಸ ಮತ್ತು ಸತ್ಪ್ರತಾಪಗಳನ್ನು ಪ್ರದರ್ಶಿಸುತ್ತಾ ಮುಂದೊಕ್ಕಿದೆ. ಈ ನಡುವೆ ಉದ್ದಿಮೆ ಹಾಗೂ ವೇಸಾಯ ರಂಗಗಳ ಘೋರಣಿ ನಿರೂಪಿಸುವ ದಕ್ಕೂ, ಆದಕ್ಕೊಂದು ಆಕಾರ ಕೊಡುವ ದಕ್ಕೂ ಅದು ಅವಕಾಶ ದೊರಕಿಸಿಕೊಂಡಿದೆ. ಮಾತ್ರವಲ್ಲ, ವಸ್ತುತಃ ಎಲ್ಲಾ ಹಿಂದೀ ಸಂಸ್ಥಾನಗಳನ್ನೂ ವಸಾಹತಿನ ಚೂಕಟ್ಟಿನೊಳಗೆ ತಂದು ರಾಜಕೀಯ ಜೋಡಣೆ ಹೊಂದಿಸಲು ಸಮರ್ಥವಾಯಿತು. ಸಂಗತಿ ಸಾಧಿಸಲ್ಯತಿಗಳ ಈ ಸಾದಾ ಹಾಗೂ ಸಾಕಿಂಗದ ಕಥಾ ವರಣೆಯು, ಭಾರತ ಸರಕಾರದ ಮಂತ್ರಿಗಳ ಸಾಮರ್ಥ್ಯ, ಗುಣ ನಿಶ್ಚತೆ, ಮತ್ತು ಧೈರ್ಯಗಳಿಗೆ ಸಂದ ಪ್ಲಾಫಿನೆ ಈ ಮಹತ್ತಾದ ಜವಾಬ್ದಾರಿಗಳಿಗೆ ಮುಂದೆ ತಲೆ ಕೊಡಬೇಕಾಗಿರುವ ಹಿಂದೀ ತರುಣ ಜನಾಂಗದಲ್ಲೂ ಮೇಲಿನ ಸದ್ಗುಣಗಳೇ ತೋರಿ ಬಂದಲ್ಲಿ, ಆಗ ನಿಜಕ್ಕೂ ಭಾರತಕ್ಕೆ ಉಜ್ವಲ ಭವಿಷ್ಯವಿದೆ.

ಬ್ರಿಟಿನಿನ ಆಸಕ್ತಿ

ನಾನೀಗ ಸುಮಾರು ಎರಡು ವರುಷಗಳಿಂದ ಬ್ರಿಟನಿನಲ್ಲೇ ವಾಸಿಸುತ್ತಿದ್ದೇನೆ. ಈ ಅವಧಿಯು ಮಧ್ಯದಲ್ಲೊಮ್ಮೆ ಅನಂದಕರವಾಗಿ ಭೇದಿಸಲ್ಪಟ್ಟು ಈ ವರುಷ ಫೆಬ್ರವರಿ ಮತ್ತು ಮಾರ್ಚಿಯಲ್ಲಿ ಭಾರತ ಮತ್ತು ಪಾಕಿಸ್ತಾನಗಳನ್ನು ಸಂದರ್ಶಿಸುವ ಸುಸಂದರ್ಭವೊಂದು ನನಗೆ ಒದಗಿದ್ದಿತು. ಹೀಗಾಗಿ ಪೂರ್ವದ ಈ ಹೊಸ ದೊಡ್ಡ ವಸಾಹತಿನ ಕಡೆಗೆ ನನ್ನ ಸ್ವದೇಶ ಬಂಧುಗಳ ಭಾವನೆ ಹೇಗಿದೆ ಎಂಬುದನ್ನು ಗೊತ್ತು ಹಚ್ಚುವ ಸಂದರ್ಭವು ನನಗೊದಗಿತು. ಕಳದ ಅಗೋಸ್ತು ರಲ್ಲಿ ಅವರು ಅದರ ಸ್ವಾತಂತ್ರ್ಯವನು ಭೋಗಕ್ಕಾಗಿ ಅನಂದ ಪ್ರದರ್ಶನ ಮಾಡಿದ್ದರು. ಕೆಲವರು ಮನಸ್ಸಿನಲ್ಲೇನೋ ಕಳ್ಪೆ ಕೊಂಡಿದ್ದರು; ಇನ್ನು ಕೆಲವರಲ್ಲಿ ತಸ್ಪಭಿಪ್ರಾಯಗಳೂ ಇದ್ದವು. ಆದರಲ್ಲಿ ಭಾರತದ ಕಡೆಗೆ ಸಾರ್ವತ್ರಿಕ ಹಾಗೂ ಯಥಾರ್ಥವಾದ ಸದಾಶಯವು ಆಗಲೂ ಇತ್ತು; ಮತ್ತೀಗಲೂ ಇದೆ. ಸಮಸ್ಯೆಯ ಮೇಲೆ ಸಮಸ್ಯೆಗಳು ಬಂದಂತೆ ಬ್ರಿಟಿಷರ ಈ ಆಸಕ್ತಿ ಅಧಿಕಾಧಿಕವಾಗಿ ಬೆಳೆಯುತ್ತಾ ಹೋಗಿದೆ. ಹಿಂದಿನ ಕಾಲಗಳಲ್ಲಿ ಭಾರತದ ಈ ಸಮಸ್ಯೆಗಳ ಹೊಣೆಗಾರಿಕೆಯು ಬ್ರಿಟಿಷರದೆಂಬ ಭಾವನೆಯಿತ್ತು; ಜಪತೋಟೆಗೆ ಬಾರದಂತಿದ್ದ ಅವುಗಳನ್ನು ಅದೊಂದು ವಿಶಿಷ್ಟ ಮರ್ಜಿಯಿಂದ ಮನಃಪೂರ್ವಕವಾಗಿ ಮುಂದುವರಿಸಿಟ್ಟು ಆಥವಾ ಕಡೆಗನೆಸಿ ಬಿಡಲಾಗಿತ್ತು! ಈಗ ಈ ಸಮಸ್ಯೆಗಳು ಪರಾಹತು ಸರಕಾರದ ಪಾಲಿನವಾಗಿವೆ; ಇನ್ನು ಬ್ರಿಟನಿನ ಜವಾಬ್ದಾರಿಯೇನೂ ಇಲ್ಲ. ಆದ್ದರಿಂದ ಬ್ರಿಟಿಷರಿಗೆ ಸುರಕ್ಷಿತವಾಗಿ ದೂರ ನಿಂತುಕೊಂಡು ಅವಗಳನ್ನು ಅಭ್ಯಾಸಿಸಬಲ್ಲರು; ಚರ್ಚಿಸಬಲ್ಲರು; ಇದರಿಂದ ಅವರ ಆಸಕ್ತಿ ಹೆಚ್ಚುತ್ತಿದೆ.

ಭಾರತದ ಜನತೆಯು ಬ್ರಿಟನಿನ ಕಡೆಗೆ ವಹಿಸಿರುವ ಸನ್ಮೈತ್ರಿ ವಾರ್ತೆಗಳನ್ನು ಪತ್ರಿಕೆ,ಭಾಷಣ, "ವಾರ್ತಾ ಚಿತ್ರ"ಗಳಂದ ತಿಳಿಯುತ್ತಿರುವ ಈ ರಾಷ್ಟ್ರವೂ ಅದಕ್ಕೆ ಯಥಾರ್ಥ ಸುಸ್ವಾಗತ ಸಲ್ಲಿಸುತ್ತಿದೆ. ಭಾರತವು ಕಾಮನ್‌ವೆಲ್ತಿನ ಪ್ರಿಯ ಸದಸ್ಯ; ಅದು ಈ ರಾಂತಿಪ್ರೇಮಿ ಕುಟುಂಬ ಜೊಳಗೇನೇ ಇದುವುದೋ ಹೊರಗೆ ಹೋಗುವುದೋ ಎಂಬುದನ್ನು ಅದು ನಿರ್ಣಯಿಸುವುದಿನ್ನೂ ಬಾಕಿಯಿದೆ ಎಂಬುದು ಗೊತ್ತು. ಆದರೊಂದು ಮಾತು; ಅದು ಯಾವನಿರ್ಧಾರವನ್ನೇ ಮಾಡಿದರೂ ಅದನ್ನು ಅಡ್ಡಿ ವಿನಹಾ ಅಂಗೀಕರಿಸಲಾಗುವದು.

ಕೆಲವು ಸಂಗತಿಗಳಲ್ಲಿ ಭಾರತ ಮತ್ತು ಪಾಕಿಸ್ತಾನಗಳೊಳಗಿರುವ ವಿರೋಧವೊಂದರಿಂದಾಗಿಯೇ ಕೆಲವೊಮ್ಮೆ ಒತ್ತಡಾವೇಗ ಮತ್ತು ಅಶಾಂತಿಯುಳಿದಿದೆ. ಒಂದೇ ಕಾಮನ್‌ವೆಲ್ತಿನ ಇಬ್ಬರು ಸದಸ್ಯರೊಳಗೆ ಪರಸ್ಪರ ಇನ್ನೂ ತೀಕ್ಷ್ಣ ವೈರವಿರುವದು ಪದ್ಧತಿಗೆ ವಿರೋಧ. ಪ್ರಚಾರಕರು ಮತ್ತು ತಂಟೆಪೋರರೇನೇ ಮಾಡಿದರೂ ಬ್ರಿಟನು ಈ ಮಟ್ಟಿಗೆ ತಾನು ಯಾವುದಾದರೊಂದು ಪಕ್ಷ ಪಡಿಯದಂತೆ ನೋಡುವದು. ಆದೇನೂ ಸುಲಭವಲ್ಲ. ಈ ತಾಟಕ್ಟ್ಯವೆಂದರೆ ಅಸಡ್ಡೆಯೆಂದರ್ಥವಲ್ಲ; ಬ್ರಿಟನಿನಲ್ಲಿ ವಿಶೇಷ ಸಾಸಕ್ತಿಯೆದ್ದಿದೆ. ತನ್ನ ಹಿತ ಸಾಧನೆಗಾಗಿ ಸುಭದ್ರ ಹಾಗೂ ಪ್ರಗತಿಪರ ಪತ್ತಿಮವು ಹೇಗೆ ಅವಶ್ಯವೋ ಹಾಗೆಯೇ ಸುಭದ್ರ ಹಾಗೂ ಪ್ರಗತಿಪರ ಪೂರ್ವವೂ ಅಗತ್ಯವೆಂದು ಬ್ರಿಟನಿಗೆ ಮನವರಿಕೆಯಾಗಿದೆ ಆದ್ದರಿಂದ ಬ್ರಿಟನು ಭಾರತಕ್ಕೆ ಹಿತ ಕೋರುತ್ತದಲ್ಲದ್ದೆ, ಅದಕ್ಕೂ ಅದರ ನೆರೆಯ ರಾಷ್ಟ್ರ ಪಾಕಿಸ್ತಾನಕ್ಕೂ ಸಹಕಾರ ಮತ್ತು ಸಂಸ್ಥೇಹದ ಹಾದಿ ತಿಳಿಯಲ್ಪಡಲೆಂದು ಹಾರ್ದಿಕವಾಗಿ ಆಶಿಸುತ್ತದೆ ಇದನ್ನಾಧರಿಸಿಕೊಂಡಿದೆ—ಕಾಮನ್‌ವೆಲ್ತಿನ ಮಾತ್ರವಲ್ಲ, ಇಡೀ ಜಗತ್ತಿನ ಶಾಂತಿ ಮತ್ತು ಅಭಿವೃದ್ಧಿಗೆ ಜತೆ ಮುಖ್ಯವೈಶ್ವವಾದ ಅಗ್ನೇಯ ಏಸ್ಯಾದ ಭವಿಷ್ಯ".

ನವಯುಗದ ಚಂದಾದಾರರಲ್ಲಿ ವಿನಂತಿ

'ನವಯುಗ'ನ ೭ನೇ ವರ್ಷವು ಇದೇ ಅಗೋಸ್ತು ತಿಂಗಳ ಅಂತ್ಯಕ್ಕೆ ಮುಗಿದು ಸೆಪ್ಟೆಂಬರ ತಿಂಗಳಿಂದ 29ನೇ ಹೊಸ ವರ್ಷಾರಂಭವಾಗುವುದು. ಈ ನವಯುಗಕ್ಕೆ ಚಂದಾ ಅವಧಿ ಮುಗಿಯುವ ಚಂದಾದಾರರೆಲ್ಲರೂ ದಯವಾಡಿ ತಮ್ಮ ಚಂದಾಹಣವನ್ನು (ಹಿಂದಿನ ಬಾಕಿ ಇದ್ದರೆ ಅದನ್ನು ಸಮೇತ) ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಿಕ ಅಪೇಕ್ಷಿಸೋಣಾಗುತ್ತದೆ ಹಣವನ್ನು ಕಳುಹಿಸುವಾಗ ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಸರಿಯಾದ ವಿಳಾಸವನ್ನು ತಿಳಿಸುವಂತೆ ಕೋರುತ್ತೇವೆ.

ಮೆನೇಜರ್.

15 ಆಗೋಸ್ತು 1948–

ಗವರ್ನರ್ ಜನರಲರ ಬೋಧನೆ



ಭಾರತವು ಕಳದ ತಾ 14ನೇ ಶನಿವಾರ ಕಳೆದು ತಾ 15ನೇ ಆದಿತ್ಯವಾರ ಬೆಳಿಯುವ ಮಧ್ಯ ರಾತ್ರಿಯಿಂದ ತನ್ನ ಸ್ವಾತಂತ್ರ್ಯದ ದ್ವಿತೀಯ ವರುಷದಲ್ಲಿದೆ.

ಹಿಂದೀ ಸರಕಾರದ ಮಾಜಿ ರಾಷ್ಟ್ರಪತಿಯು ಸೂಚನೆಯಂತೆ ಈ ಬಾರಿಯ ಸ್ವರಾಜ್ಯ ವರ್ಧಂತಿಯು ಗದ್ದಲಗಳಿಗೆ ಬದಲಾಗಿ ಗಂಭೀರತೆಯಿಂದ ಆಚರಿಸಲ್ಪಟ್ಟಿತು; ಆನಂದೋನ್ಮಾದ ಪ್ರದರ್ಶನಗಳ ಬದಲಿಗೆ ಕರ್ತವ್ಯ ಸ್ಮರಣೆಯೊಂದಿಗೆ ನಡೆದು ಹೋಯಿತು.

ರಾಷ್ಟ್ರದ ಮೂಲೆಮೂಲೆಗಳಲ್ಲೂ ಪ್ರಥಮ ಸ್ವರಾಜ್ಯ ವಾರ್ಷಿಕೋತ್ಸವವು ಆಚರಿಸಲ್ಪಟ್ಟಿದೆ. ಭಾರತದ ಪಾಲಿನ ಈ ಅತಿ ಮಹತ್ವದ ದಿನಾಚರಣೆಯು ಅದರ ಹಿಂದು ಮುಂದಿನ ವಿಶೇಷ ಘಟನೆಗಳ ನೆನಪು ಮತ್ತು ಮನವರಿಕೆಗಳನ್ನು ಅಖಿಲ ಭಾರತೀಯರಿಗೆ ಮಾಡಿಕೊಟ್ಟಿದೆ.

ಈ ಸಂದರ್ಭದಲ್ಲಿ ಹಿಂದೀ ಜನಸಾಮಾನ್ಯರ ಕರ್ತವ್ಯವೇನೆಂಬುದನ್ನು ಭಾರತದ ನಾಯಕರೂ, ಬಹುತೇಕವಾಗಿ ಎಲ್ಲ ರಾಜಕಾರಣಿಗಳೂ ಬೇರೆಬೇರೆಡೆ ಗಳಲ್ಲಿ ಒತ್ತಿ ಹೇಳಿದ್ದಾರೆ. ಇದುವರೆಗಿನ ಅನುಭವಗಳಿಂದ–ಅಗ್ನಿ ಪರೀಕ್ಷೆಗಳಿಂದ–ಕಲಿತ ಪಾಠವನ್ನು ನೆನಪಿನಲ್ಲಿಟ್ಟುಕೊಂಡು, ಇನ್ನೀ ರಾಷ್ಟ್ರವನ್ನು ಪ್ರಗತಿಯ ಕಡೆಗೆ–ಸಾಮಾನ್ಯ ಜನತೆಯ ಜೀವನಮಟ್ಟವನ್ನು ಏರಿಸಿ ಸಮಾನಾಭಿವೃದ್ಧಿಗೆ ತರುವ ಜನತಂತ್ರಾಂಜ್ಯಭಾರದ ಕಡೆಗೆ-ಗುರಿಮುಟ್ಟಿಸುವದಕ್ಕಾಗಿ ತಮ್ಮನ್ನು ತಾವೇ ಅರ್ಪಿಸಿಕೊಳ್ಳುವ ಶಪಥ ತೊಡಬೇಕು, ಎಂಬುದೇ ಎಲ್ಲವುಗಳ ತಿರುಳು.

ಭಾರತದ ಗವರ್ನರ್ ಜನರಲ್ ಶ್ರೀ. ಸಿ. ರಾಜಗೋಪಾಲಾಚಾರ್ಯರೂ ಭಾರತದ ಪ್ರಧಾನ ಮಂತ್ರಿ ಪಂಡಿತ ನೆಹರುಗಳೂ ಕೊಟ್ಟ ಸ್ವಾತಂತ್ರ್ಯ ದಿನದ ಸಂದೇಶದ ಪ್ರತಿಯೊಂದು ಮಾತನ್ನೂ ಪ್ರತಿಯೊಬ್ಬ ಭಾರತೀಯನೂ ಉಪದೇಶ ಮತ್ತು ಆಜ್ಞೆಯೆಂದು ಅಕ್ಷರಶಃ ಪಾಲಿಸಲು ಬದ್ಧನಾಗುವದರಿಂದ ಅವುಗಳ ಸಾರವನ್ನು ಇಲ್ಲಿ ಕೊಡಲಾಗಿದೆ.

ರಾಜಾಜಿ ಸಂದೇಶ

ಗವರ್ನರ್ ಜನರಲ್ ರಾಜಾಜಿಯವರು ತಾ|| 14ನೇ ರಾತ್ರಿ ಸ್ವಾತಂತ್ರ್ಯ ದಿನಕ್ಕಾಗಿ ಆಖಿಲ ರಾಷ್ಟ್ರಕ್ಕಿತ್ತ ಆಕಾಶವಾಣಿ ಭಾಷಣ-

"ಜೈ ಹಿಂದ್! ನನ್ನ ಮಾತನ್ನೀಗ ಕೇಳುತ್ತಿರುವ ಅಖಿಲ ಭಾರತದ ಪ್ರಿಯ ಬಂಧುಗಳೇ, ಭಗಿನಿಯರೇ, ಈ ರಾತ್ರಿ ತಮ್ಮೊಡನೆ ಮಾತನಾಡುವ ಸುಯೋಗವು ನನಗೆ ದೊರಕಿತಿದೆ. ನಾಳೆ–ಯಾಕೆ, ಈ ಮಧ್ಯ ರಾತ್ರಿಯಿಂದಲೇ—ನಾವು ಸ್ವತಂತ್ರ ಭಾರತದ ಎರಡನೇ ವರುಷವನ್ನು ಆರಂಭಿಸುತ್ತೇವೆ. ಸ್ವಾತಂತ್ರ್ಯವನ್ನು ತೆಗೆದುಕೊಂಡ ಮೇಲಿನ ನಮ್ಮ ತೊಂದರೆಗಳು ದೊಡ್ಡವಿದ್ದುವು. ಹುಚ್ಚಾಟದ ದಂಗೆಗಳು, ಪಾಶವಿಕ ಕೃತ್ಯಗಳು, ಮತ್ತು ತಮ್ಮ ಮನೆಮಾರುಗಳನ್ನು ಬಿಟ್ಟೋಡಿ ಬರುವ ಲೋಕತಪ್ಪುಗುಂಪು ಗುಂಪು ಜನತೆಯ ಜೀವನವಲನಗಳು– ಎಲ್ಲಾ ವ್ಯವಸ್ಥೆ ಮತ್ತು ಶಾಸನಗಳನ್ನೂ ಮುಕ್ತಾಯಗೊಳಿಸಿಬಿಡಲು ಮುಂದಾಗಿದ್ದುವು. ವಿಭಜನೆಯ ಫಲರೂಪೀ ಸಮಸ್ಯೆಗಳು, ಮತ್ತು ಕೇಂದ್ರಾಧಿಕಾರದೊಂದಿಗೆ ಹಿಂದೀ ಸಂಸ್ಥಾನಗಳಿಗಿದ್ದ ಸೊಗಸು ಆಕಸ್ಮಾತ್ತಾ ಕಳಚಿ ಹೋದುದರಿಂದಾಗಿ ಎದ್ದ ಸಮಸ್ಯೆಗಳು ಒಟ್ಟಾಗಿ, ಸಾಮಾಜಿಕ ವ್ಯವಸ್ಥೆ ಮತ್ತು ರಕ್ಷಣೆಗಾಗಿ ಎಲ್ಲೆಡೆಯ ಜನರೂ ಯಾರಿಡೆಗೆ ಕತ್ತು ನೀಡಿದರೋ, ಆ ನಮ್ಮ ನಾಯಕ ನಾಗರಿಕರ ಮೇಲೆ ಅತಿ ದೊಡ್ಡ ಭಾರವಾಗಿ ಬಿದ್ದು ದಿಗಿಲುಗೊಳಿಸಿದ್ದುವು.

ನಮ್ಮ ಸಾಧನೆಗಳು

ಸಂಗತಿ ನಡೆದು ಹೋದಮೇಲೆ ಬುದ್ಧಿವಂತರಾಗುವದೂ, ಜನತೆಯ ಮೇಲೆ ಬಂದು ಬಿದ್ದು ಆಕ್ರಮಿಸಿಕೊಂಡ ಈ ದುರ್ದೈವಗಳನ್ನೂ ಜಿಜುಪ್ಸುಗಳನ್ನೂ ಮೊದಲೇ ನಿರೀಕ್ಷಿಸಬೇಕಿತ್ತು-ತಯಾರು ಮಾಡಬೇಕಿತ್ತು-ಎಂದು ಉಪದೇಶಿಸುವುದೂ ಸುಲಭ. ಆದರೆ ಇಡೀ ಪ್ರಪಂಚದಲ್ಲಿ ಕಾರ್ಯಭಾರ ಹೊತ್ತು ಅನುಭವವಿದ್ದವರಾರೂ ಈ ಸಂಕಷ್ಟಗಳನ್ನೆಲ್ಲ ಮುಂದಾಗಿ ಊಹಿಸದಿದ್ದುದಕ್ಕಾಗಲೀ, ನಮ್ಮ ಸರಕಾರವು ಅವುಗಳನ್ನು ಇದಿರಿಸಿದ ರೀತಿ ನೀತಿಗಾಗಲೀ ನಮ್ಮನ್ನು ದೂರಿದ್ದಿಲ್ಲ. ಪರಿಸ್ಥಿತಿಯು ಸ್ಪಿದಿಸಿ ನಿರ್ವಹಿಸಿಕೊಂಡ ಆರೀತಿನೀತಿಗಳಿಗಾಗಿ- ನಮ್ಮನ್ನವರು ಶ್ಲಾಘಿಸಿದ್ದಾರೆ.ನಮಗೊಂದು ಮುಂಸ್ಥಿತಿಯಾಗಿ ಅವರೇ ಶ್ಲಾಘನೆ ಸಲ್ಲಿಸಿದುದಲ್ಲ. ಲೋಕದ ಇತರ ಕಡೆಗಳಲ್ಲಿ ನಡೆದ ಗೊಂದಲಗಳನ್ನು ಅವರು ಕಂಡವರಿದ್ದಾರೆ; ಮತ್ತು ಸಂಗತಿಯ ಗುಟ್ಟನ್ನರಿತು ಯೋಗ್ಯ ತೀರ್ಮಾನ ಕೊಡುವನ್ನು ಅನುಭವವನ್ನು ಹೊಂದಿದವರಾದ್ದಾರೆ.

ನೇಲಧಿಕಾರದ ಬರ್ಖಾಸ್ತು, ವಿಧಾನದಿಂದೆದ್ದ ಅರಾಜಕತೆಯ ಸ್ಥಾನದಲ್ಲೀಗ ನಾವು ಹೆಚ್ಚಿನ ಮಟ್ಟಿಗೆ ಸುವ್ಯವಸ್ಥೆಯನ್ನು ಸ್ಥಾಪಿಸಿಕೊಂಡಿದ್ದೇವೆ. ಗಲಭೆಗಳಿಗೆ ಬಲಿ ಬಿದ್ದು ಅಪಹರಿಸಲ್ಪಟ್ಟಿದ್ದ ಹತ್ತು ಸಾವಿರಕ್ಕೂ ಮಿಕ್ಕಿದ ಮಹಿಳೆಯರನ್ನು–ಹಿಂದೂ, ಮುಸ್ಲಿಂ, ಸಿಖ್ ಸ್ತ್ರೀಯರನ್ನು–ಧೀರ ಮಹಿಳಾ ಕೆಲಸಗಾರರು ಶೋಧಿಸಿ ತೆಗೆದು ಅವರವರ ಮನೆಗಳಿಗೆ ಮುಟ್ಟಿಸಿದ್ದಾರೆ. ಬರಗಾಲವನ್ನು ನಾವೀಗ ಯಶಸ್ವಿಯಾಗಿ ಎದುರಿಸಿಕೊಂಡಿದ್ದೇವೆ; ಕೂಲಿಗಾರರು ಮತ್ತು ಮ್ಯಾನುಫ್ಯಾಕ್ಚರಿಂಗ್ ಕೆಲಸಗಳಲ್ಲಿ ಮೇಲಿಂದಮೇಲೆ ಘರ್ಷಣೆಗಳಾಗುತ್ತಲೇ ಇದ್ದರೂ ನಮ್ಮ ಉದ್ದಿನೆಯನ್ನು ನಾವು ಸರಿಯಾಗಿ ಜಾಲಿನಲ್ಲಿಟ್ಟಿದ್ದೇವೆ.

ಆದರೆ ಆತ್ಮ ಪ್ರಶಂಸೆ ಅಥವಾ ಆತ್ಮ ಕನಿಕರ ಪ್ರದರ್ಶನ ಮಾಡಿಕೊಳ್ಳುವದು ಒಳ್ಳೆಯದಲ್ಲ. ನಮ್ಮ ಜನತೆಯ ಜೀವನಾಭಿವೃದ್ಧಿಯ ಪಥದಲ್ಲಿ ಅಡ್ಡವಾಗಿ ಈಗಲೂ ನಿಂತಿರುವ ಕಂಟಕಗಳನ್ನು ನಾವು ಕಿತ್ತು ಹಾಕಿಕೊಳ್ಳಲೇ ಬೇಕು. ಮೇಲ್ಪರ್ಜೆಯ ನಾಗರಿಕನಿಷ್ಠೆಯನ್ನು ಗಳಿಸುವದಕ್ಕಾಗಿಯೂ, ಉತ್ಪನ್ನಗಳ ಮಟ್ಟವನ್ನು ಮೇಲಕ್ಕೇರಿಸುವದಕ್ಕಾಗಿಯೂ ನಾವು ಕೆಲಸ ಮಾಡಲು ಉಳಿದಿದೆ. ಎಲ್ಲೆಲ್ಲೂ ಎಲ್ಲಾ ಗುಣ ನಡತೆಗಳೂ ಸುಧಾರಿಸಲ್ಪಡಬೇಕು; ಸಪ್ಪಲದಾಯಕ ಕೆಲಸಗಳು ಹೆಚ್ಚಬೇಕು. ಎಲ್ಲೆಲ್ಲೂ ವಿಶೇಷ ಯೋಗ್ಯತೆ, ಮತ್ತೆಲ್ಲೆಲ್ಲೂ ವಿಶೇಷ ಕೆಲಸವಿರಬೇಕೆಂಬ ಇವೆರಡು ಶರ್ತಗಳ ಪಾಲನೆಯೊಂದೇ ಪ್ರಗತಿಗಿರುವ ಏಕ ಮಾತ್ರ ಹಾದಿ.

ನಮ್ಮ ದೊಡ್ಡ ದುರ್ದೈವ!

ನಮ್ಮ ದುರ್ದೈವಗಳಲ್ಲಿ ಅತಿ ಘೋರವೆಂದರೆ ಗಾಂಧಿಜೀಯ ವಿಯೋಗ. ಅವರನ್ನಾರು ಕೊಂದುಹಾಕಿದರೋ ಅವರು ಈ ರಾಷ್ಟ್ರಕ್ಕೆಂತಹ ಜಪಂ ಮಾಡಿದರೆಂದರೆ ಅದು ದೇಶದ ಬೇರೆಯಾವುದೇ ವೈರಿಗಳಿಂದಲಾಗಿರುವುದಕ್ಕಿಂತ ಎಷ್ಟೋ ಹೆಚ್ಚಿನದು. ಗಾಂಧಿಯ ಅವಶ್ಯತೆನಮಗೆ ಅತ್ಯಂತ ಹೆಚ್ಚಿಗಿದ್ದ ಹೊತ್ತಿನಲ್ಲೇ ಅವರು ನಮ್ಮಿಂದ ಅಪಹರಿಸಲ್ಪಟ್ಟರು; ಅದರೇನು ಮಾಡೋಣ! ಕೆಲವರು ಇಷ್ಟೂ ಅವಿವೇಕಿಗಳಾಗಬೇಕು, ನಮ್ಮ ಜನತೆಗಿಂತಹ ಭಯಂಕರವಾದ ತಪ್ಪನ್ನು ಅವರು ಮಾಡಬೇಕು, ಎಂದೇ ದೇವರ ಸಂಕಲ್ಪವಿತ್ತು. ಈ ಕಠೋರ ಪರೀಕ್ಷೆಗಳ ಮೂಲಕವೇ ರಾಷ್ಟ್ರದ ತಳಹಟ್ಟು ಬಲಗೊಂಡಿದೆ. ನಾವೀಗ, ಗಾಂಧಿಜೀಯಿಲ್ಲದೇನೇ ಕೆಲಸ ಮಾಡಬೇಕಾಗಿದೆ; ಕಷ್ಟಪಡವೇರಿಸಿಕೊಳ್ಳಬೇಕಾಗಿದೆ. ಗಾಂಧೀ ಮೂರ್ತಿ ಶಿಲ್ಪಗಳನ್ನು ಕೊರೆಯುವ ಮೂಲಕ, ಚಿತ್ರಗಳನ್ನು ಎತ್ತಿ, ಸ್ಮಾರಕಗಳ ಮೇಲೆ ಮತ್ತು ನೋಟುಗಳ ಮೇಲೆ ಅವರ ಮುಖಮುದ್ರೆಯನ್ನೊತ್ತಿಸಿ, ಅವರು ಕೊಲೆಯಾದ ಮತ್ತು ಅವರನ್ನು ಸುಟ್ಟ ಸ್ಥಳಗಳಿಗೆಮಾಲೆ ಶಿಲುಗಳನ್ನೆರ್ಪಡಿಸಿ,ನಾವೀ ಉದ್ದೇಶವನ್ನು ಪೂರ್ಣಗೊಳಿಸಿಕೊಳ್ಳಬಹುದೆ?ನಾವಿವೆಲ್ಲವನ್ನೂ ಮಾಡುತ್ತೇವೆ;ಮತ್ತಿವೆಲ್ಲವನ್ನೂ ಮಾಡುವದೂ ನ್ಯಾಯವೇ ಆಗಬಹುದು. ಆದರೆ ನಮ್ಮದು ಬೊಳ್ಳು ಪೂಜೆಯನ್ನು ಸದಿಸಬೇಕಾವರೆ ನಾವು ಹೆಚ್ಚಿಸದನ್ನು ಮಾಡಲೇಬೇಕು. ಅಗತ್ಯವಿರುವದೆಲ್ಲವನ್ನೂ ನಾವು ಮಾಡಿ ಮುಗಿಸಿಕೊಂಡೆವೆಂಬ ಭಾವನೆಯು ಇಷ್ಟರಿಂದಲೇ ಹುಟ್ಟಬಿಟ್ಟಿರೆ, ಈ ಬೊಳ್ಳು ಪೂಜೆಯು ಅಪಾಯಕರ.

ಕಷ್ಟಕಾಲಗಳಲ್ಲಿ ಗಾಂಧೀ ಸ್ಮರಣೆ

ಯಾವುದೇ ಸಂದೇಹ ಅಥವಾ ಸಂಕಷ್ಟವೆದ್ದ ಕಾಲದಲ್ಲಿ ಗಾಂಧಿಜೀಯರು ತಿದ್ದರೆ ಹೇಗೆ ಮಾಡುತ್ತಿದ್ದರೋ ಹಾಗೆಯೇ ನಾವೂ ನಮ್ಮ ಶಕ್ತಿಗೆಮ್ಟು ಸಾಧ್ಯವೋ ಅಮ್ಟು ಮಾಡಬೇಕು. ಎಲ್ಲಾ [illegible] ಮನುಷ್ಯರು, ಅಧಿಕಾರಿಗಳು ಅಂತೆಯೇ ಸರಕಾರಗಳು, ಎಲ್ಲರೂ ತಮಗೆ ತಾವೇ ಈ ಕೆಳಗಿನ ಪ್ರಶ್ನೆಗಳನ್ನು ಕೇಳಿಕೊಳ್ಳಬೇಕು: "ಗಾಂಧಿಜೀ ಈಗ ಬದುಕಿದ್ದರೆ, ಮತ್ತವರ ಉಪದೇಶವನ್ನು ಪಡೆಯಲು ತಾನು ಹೋಗುತ್ತಿದ್ದರೆ ಅವರೇನನ್ನು ಉಪದೇಶಿಸುತಿದ್ದರು?" ಯಾವ ಸಂದರ್ಭದಲ್ಲಿ ಅವಂತವ ಬೋಧನೆ ಕೊಡುತಿದ್ದರೆಂಬುದನ್ನು ಪ್ರತಿಯೊಂದು ಸನ್ನಿವೇಶದಲ್ಲೂ ಊಹಿಸಿಕೊಳ್ಳುವುದು ನಮಗೇನೂ ಕಷ್ಟವಲ್ಲ. ನಾವು ಯಥಾರ್ಥತೆ ಹಾಗೂ ಭಕ್ತಿಪೂರ್ವಕವಾಗಿ ಅವರ ಸಂದೇಶದಂತೆ ವರ್ತಿಸೋಣ. ದೇವರು ನಮಗೆ ಸಹಾಯ ಮಾಡುವನು.

ನಾಗರಿಕರಿಗೆ ಪ್ರಶ್ನೆ

ಹಿಂದೀ ನಾಗರಿಕರು ತಮ್ಮನ್ನು ತಾವೇ ಈ ಕೆಳಗಿನಂತೆ ಒತ್ತಿ ಪ್ರಶ್ನಿಸಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ: "ನಾವು ನಮ್ಮ ರಾಷ್ಟ್ರೀಯ ಸರಕಾರಕ್ಕೆ ಕಾರ್ಯತಃ ಸಾಕಷ್ಟು ಸಹಾಯ ಕೊಟ್ಟಿರುವೆವೆ?" ಉತ್ತರವು ಸಂದೇಹಕರವಿದ್ದರೆ, ಆ ಅಭಾವವನ್ನು ನಿವಾರಿಸಿಕೊಳ್ಳಲು ನಾ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್
ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ 3/- ರೂಪಾಯಿ.

ಆಕೀ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸು ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಹತ್ತಿರದ ಶಾಖೆಗೆ ಬರೆದು ತಿಳಿಯಿರಿ,

The Agricultural & Industrial Bank, Limited.
Head Office: Coondapoor, S. K.

ಸ್ವರಾಜ್ಯ ವರ್ಧಂತಿ.

ಪ್ರಧಾನ ಮಂತ್ರಿಗಳ ಉಪದೇಶ

ವು ತ್ವರೆಮಾಡಬೇಕು ನಾವು ವಿಧಾಯಕ ಚಿಂತನೆ ಮಾಡುವಾ. ನಾವು ಸರಕೇಯಾಡಳಿತೆಲೊಳಗಿದ್ದ ಆ ಕಾಲಕ್ಕೆ ಸಹಜವೇ ಆಗಿದ್ದ, ಅಧಿಕಾರದ ಕಡೆಗಿನ ಆಸಹನೆ ಮತ್ತು ವಿರೋಧವೆಂಬ ಆ ಹಳೇ ಸ್ವಭಾವಕ್ಕೀಗ ಜ್ಞಾನವಿಲ್ಲ ಹಳೇ ಕಾಲದ ಸರಕಾರವು ತನ್ನ ಬಲ ಪ್ರದರ್ಶನ ಮತ್ತು ಬೆದರಿಕೆಗಳಿಂದ ಪಡೆಯುತ್ತಿದ್ದ ಅಧಿಕಾರಗೌರವ ಮತ್ತು ಮುನ್ನಡೆಯನ್ನು ನಾವೀಗ ನಮ್ಮ ಸ್ವಂತ ಸರಕಾರಕ್ಕೆ ಪ್ರೇಮಪೂರ್ವಕವಾಗಿಯೇ ಅರ್ಪಿಸೋಣ. ನಾವೀಗ ವಿಶೇಷ ದುಡಿಯಬೇಕು–ಪ್ರತಿಯೊಬ್ಬನೂ ತಂತಮ್ಮ ಕರ್ತವ್ಯದಲ್ಲಿ ಹಾಗಿರಬೇಕು. ಪ್ರತಿಯಬ್ಬ ನೇಕಾರ, ಪ್ರತಿಯೊಬ್ಬ ರೈತ, ಪ್ರತಿಯೊಬ್ಬ ವ್ಯಾಪಾರಿಯೂ ತನ್ನನ್ನು ಕಾರ್ಯಕ್ಷೇತ್ರದಲ್ಲಿ ವಂಚನೆಮಾಡದೆ, ಆಲಸ್ಯಕಟ್ಟಿಕೊಳ್ಳದೆ, ತನ್ನ ಶಕ್ತಿಯಿದ್ದಷ್ಟೂ ದುಡಿಯುತ್ತೇನೆಂದು ಸೃಷ್ಟ ನಿರ್ಣಯಮಾಡಿಕೊಳ್ಳಬೇಕು ಸಾರ್ವಜನಿಕ ಸಂಭವಗಳಿಂದರೆ, ಪುನರ್ಜೀವನದೊಂದು ಮೊತ್ತಗಳೇ ಹೊರತು ಬೇರಲ್ಲ. ಮಾತೃಭೂಮಿಯು ಆತಿ ಹೆಚ್ಚಾಗಿ ಕೆಲಸ ಮತ್ತು ಪರಸ್ಪರ ವಿಶ್ವಾಸಹಾಗೂ ಯಥಾರ್ಥತೆಯನ್ನು ನಮ್ಮಿಂದ ಅಪೇಕ್ಷಿಸುತ್ತಿದ್ದಾಳೆ.

ಪರಿಶುದ್ಧರಾಗೋಣ—

ದ್ವೇಷದಲ್ಲಿ ವೃಥಾಭಿಮಾನದ ಹೊರತು ಬೇರೇನೂ ಇಲ್ಲವೆಂಬುದನ್ನು ನಾವೆಲ್ಲರೂ ಅರಿತುಕೊಳ್ಳಲಾಗುವಂತೆ- ನಿಜಕ್ಕೂ ದ್ವೇಷದಲ್ಲಿ ದುರಭಿಮಾನವೊಂದಲ್ಲದೆ ಅನ್ಯಥಾ ಇಲ್ಲ-ಹಾಗೂ ಮತ್ಸರದಲ್ಲಿರುವ ವ್ಯಥಾಭಿಮಾನ ಮತ್ತು ಆಯೋಗ್ಯತೆಯಲ್ಲಿರುವ ಅನಾಪ್ರಯವನ್ನು ತಿಳಿದುಕೊಳ್ಳಲಾಗುವಂತೆ, ದೇವರು ನಮಗೆ ಸಹಾಯ ಮಾಡಲಿ; ಆ ಕಾಲವು ಬೇಗನೇ ಬರಲಿ ಕ್ಲಪ್ತದಲ್ಲೇ ಇಡೀ ಭಾರತದ ಕೆಲಸಗಳಲ್ಲಿ ನಾವೆಲ್ಲರೂ ಅತ್ಯಂತ ಸಹಕಾರಪೂರ್ವಕ ಕಾರ್ಯತಲ್ಲೀನರಾಗುವ ಕಾಲವು ಬರುವದೆಂದು ನಾವಾಸೋಣ 'ಭಾರತ'ವೆನ್ನುವ ನನ್ನ ಮಾತಿನಲ್ಲಿ ಭಾರತದ ಎರಡು ಭಾಗಗಳೂ ಸೇರಿವೆ. ಭಾರತದ ಈ ಎರಡು ಭಾಗಗಳಿಗೆ ಪರಸ್ಪರ ಘರ್ಷಣೆಯ ಆರ್ಥಿಕ ಹಿತಸಂಬಂಧಗಳೇನೂ ಇಲ್ಲ, ಬದಲಿಗೆ ಒಂದಕ್ಕೆನ್ನೊಂದು ಪುಷ್ಟಿ ಕೊಡುವ ಸಹಕಾರದ ಅವಶ್ಯಕತೆಯೇ ಪ್ರತಿಯೊಂದರಲ್ಲೂ ಇದೆ ನಮ್ಮ ತಾತ್ಕಾಲಿಕ ಆವೇಶಗಳೆಲ್ಲ ಥಂಡಾಗಟ್ಟೆದಲ್ಲಿ ನಾವೀ ಸತ್ಯಸ್ಥಿತಿಯನ್ನು ಸುಲಭದಲ್ಲಿ ಕಾಣುವಂತಾಗುವದು.

ನಾವು ಸ್ವತಂತ್ರರು; ಅದರ ಅರ್ಥವೆಂದರೆ ಬಂಧನಗಳನ್ನು ಕಳಚಿಕೊಂಡವರೆಂದಷ್ಟೇ ಅಲ್ಲ. ನಾವೆ, ನಾವೆಲ್ಲರೂ ಒಂದು ಘನ ಜಾಗತಿಕ ರಾಷ್ಟ್ರದ ನಾಗರಿಕರಾಗಿದ್ದೇವೆ ಎಂಬುದೇ ಅದರ ಅರ್ಥ. ನಾವೀ ಹೊಸ ಸ್ಥಾನಕ್ಕನುಗುಣವಾದ ಯೋಗ್ಯರಾಗುವಂತಹ ಮಾದರಿಯಲ್ಲೇ ನಮ್ಮ ಗುಣ ನಡತೆಗಳನ್ನು ರೂಪಿಸಿಕೊಳ್ಳೋಣ ಭಾರತಕ್ಕೊಂದು ನೀತಿ ಕಾರ್ಯಭಾರವಿದೆ ಆಸ್ಥಾದಲ್ಲಿ ನಮ್ಮದಾಗಿರುವ ಸ್ಥಾನ, ಪಾರ್ಶ್ವಾತ್ಯ ಸಂಸ್ಕೃತಿಗಳೊಡನೆ ನಮಗಿದ್ದ ದೀರ್ಘೋವಧಿಯ ಹಾಗೂ ಆತ್ಮೀಯ ಸಂಬಂಧ-ಕೊನೆಯದಾಗಿ ನಮ್ಮ ಘನವಾದ ಪಾರಂಪರ್ಯ, ನಮ್ಮ ಸ್ವಂತ ಪುರಾತನ ಸಂಸ್ಕೃತಿ-ಇವೆಲ್ಲವೂ, ಈಗ ಸ್ವತಂತ್ರರಾಗಿರುವ ನಮ್ಮ ನೇಲೆ, ಲೋಕದ ಪ್ರಗತಿ ಬಂಧನೆಯಲ್ಲಿ ಪರಿಣಾಮಕರ ರೀತಿಯಿಂದ ಭಾಗ ವಹಿಸುವ ಕರ್ತವ್ಯ ಭಾರವನ್ನು ಹೇರಿವೆ ದೇವರು ಈ ಕಾರ್ಯದಲ್ಲಿ ನಮ್ಮನ್ನು ಆಶೀರ್ವದಿಸಲಿ, ಇಡೀ ಜಗತ್ತು ಅವನದೇ. ವಂದೇ ಮಾತರಂ".

ನೆಹರೂ ಉಪದೇಶ

ಆಗೋಸ್ತು ೧೫ನೇ ಮುಂಜಾನೆ, ಎರಡು ಲಕ್ಷಕ್ಕೂ ಮಿಕ್ಕಿದ ಜನಸಂದಣಿಯ ಉತ್ಸಾಹದ ಚಪ್ಪಾಳೆಗಳಿಂದ, ನವಡಿಲ್ಲಿಯ ಚರಿತ್ರಾರ್ಹ ಕೆಂಪು ಕೋಟೆಯ ಮೇಲೆ ರಾಷ್ಟ್ರಧ್ವಜವನ್ನೇರಿಸಿ ಪಂಡಿತ ನೆಹರುಗಳು ರಾಷ್ಟ್ರಕ್ಕಿತ್ತ ಸಂದೇಶ-

"ಈ ಪವಿತ್ರ ದಿನದಲ್ಲಿ ಶಾಂತಿ ಹಾಗೂ ಸದಾಶಯದ ಸಂದೇಶವೀಯಲು ನಾನು ಮುಂದೆ ಬಂದಿದ್ದೇನೆ. ಸ್ವಾತಂತ್ರ್ಯದ ಸಂವಾದನೆಗಾಗಿ ಯಾರು ಹೋರಾಡಿದ್ದರೋ ಅವರು ಅದಂ ರಕ್ಷಣೆಗಾಗಿ ಪ್ರಾಣ ಕೊಡಲಿಕ್ಕೂ ತಯಾರಾಗಬೇಕು. ತನ್ನೀ ಕರ್ತವ್ಯ ಭಾಗವನ್ನು ಮರೆತು ಬಿಡುವ ಯಾವ ರಾಷ್ಟ್ರವಾದರೂ ಮೇಲಿಂದ ಮೇಲೆ ದುಃಖಕ್ಕೀಡಾಗಲು ಬದ್ಧವಿದೆ ಅದ್ದರಿಂದ ನಾವು ನಮ್ಮ ಸ್ವಾತಂತ್ರ್ಯವನ್ನು ರಕ್ಷಿಸಿಕೊಳ್ಳುವದಕ್ಕಾಗಿ ಪೂರ್ಣ ಸಿದ್ಧತೆಗಳನ್ನು ಮಾಡಿಕೊಂಡಿರಬೇಕು ಆದರೆ ನಾವು ಸಂಗ್ರಹಿಸುತ್ತಿರುವ ಸೇನೆಗಳು ಕೇವಲ ರಕ್ಷಣೆಗಾಗಿ ಹೊರತು ಅನ್ಯರ ವಿರುದ್ಧ ಆಕ್ರಮಣೋದ್ದೇಶದಿಂದ ಅಲ್ಲವೆಂಬುದನ್ನು ಸ್ಪಷ್ಟವಾಗಿ ತಿಳಿದಿರಬೇಕು.

ಭಾರತವು ದೀರ್ಘೋವಧಿ ಗುಲಾಮಗಿರಿಯಲ್ಲಿತ್ತು, ಸ್ವಾತಂತ್ರ್ಯವನ್ನು ಅಪಹರಿಸಿದರೆ ಹೇಗೆ ಎಂಬುದನ್ನದು ಬಲ್ಲುದು. ಅದ್ದರಿಂದ ಅದಕ್ಕೆ ಬೇರಾವುದೇ ಜನತೆಯ ಮೇಲೆ ಯಾವುದೇ ರೀತಿಯ ಆಕ್ರಮಣೇಚ್ಛೆಯಿಲ್ಲ ತನ್ನಿಂದ ಸಾಧ್ಯವಿದ್ದರೆ ಲೋಕದ ಇತರ ಗುಲಾಮ ರಾಷ್ಟ್ರಗಳಿಗೆ ಸ್ವಾತಂತ್ರ್ಯವೊದಗಿಸಿ ಕೊಡಲು ಅದು ನಿಜಕ್ಕೂ ಒದ್ದಾಡುವದು.

ಗಾಂಧಿಜೀ ನಾಯಕತ್ವ

ಮಹಾತ್ಮಾ ಗಾಂಧಿಯವರ ದೊಡ್ಡಸ್ತಿಕೆ ಹಾಗೂ ಅವರ ನಾಯಕತ್ವವು ಲೋಕದ ಜನತೆಯ ನಡುವೆ ಭಾರತಕ್ಕೊಂದು ಗೌರವಾರ್ಹ ಸ್ಥಾನ ಸಂಪಾದಿಸಿ ಕೊಟ್ಟಿತು. ಆದರೆ, ನಮ್ಮ ಹೃದಯದಲ್ಲಿರುವ ಪರಕೀಯರ ಕಡಗಿನ ದುರ್ಭಾವನೆ ಹಾಗೂ ಕರೋರತೆಗಳನ್ನು ತೊಳೆದುಕೊಂಡು ಶುದ್ಧೀಕರಿಸಿಕೊಳ್ಳಬಿದ್ದರೆ, ಅಕ್ರಮಣ ಹಾಗೂ ಧಾಳಿಯ ಚಿಂತನೆಗಳನ್ನು ಬಿಡಬಿದ್ದರೆ, ನಾವು ಆ ಸ್ಥಾನವನ್ನು ದೀರ್ಘ ಕಾಲ ಉಳಿಸಿಕೊಳ್ಳುವಂತಿಲ್ಲ ಕಳದ ವರುಷ ಆಗೋಸ್ತು 15ರ ಇದೇ ರಾತ್ರಿ ಧ್ವಜಾರೋಹಣ ಮುಹೂರ್ತದಲ್ಲಿ ನಾನು ಲಗು ಹೃದಯದಿಂದ ಮಾತಾಡಿದ್ದೆ; ನಮ್ಮನ್ನು ಹಾದಿಯಲ್ಲಿ ಯಾವುದೇ ಸಂಕಷ್ಟಗಳು ಮಕ್ಕು ಕಂಟಕಗಳು ಅಡ್ಡಗಟ್ಟಿದರೂ, ನಮ್ಮ ಪ್ರೀತಿಯ ನಾಯಕ ಮಹಾತ್ಮಾ ಗಾಂಧಿಯವರ ಸಹಾಯ ಒಲವಿಂದ ನಾವದನ್ನು ಗೆದ್ದು ಬಿಡುವೆವು ಎಂದು ನಿಮಗೆ ಆಶ್ವಾಸನೆ ಕೊಟ್ಟಿದ್ದೆ. ಈ ದಿನ ಆ ಆತಿ ಸಮರ್ಥ ಬೆಂಬಲ ಕಳೆದುಹೋಗಿದೆ; ಬೇರಾಕೊಬ್ಬರ ಸಹಾಯವೂ ಇಲ್ಲದೆ ನಾವು ನಾವೇ ಆಗಿ, ರಾಷ್ಟ್ರವನ್ನು ಸಂಕಷ್ಟಗಳಿಂದಪಾರು ಮಾಡಬೇಕಾಗಿದೆ

ಭಾರತವು ತನ್ನ ಸ್ವಾತಂತ್ರ್ಯ ಸಂಪಾದಿಸಿಕೊಂಡುದು ಗಾಂಧಿಜೀಯ ನಿರ್ದೇಶಕತ್ವದಿಂದಲೇ. ಆಂದಿನಿಂದ ಅದು ಅತಿ ಗಂಭೀರವಾದ ಹೊಸ ಸಂಕಷ್ಟಗಳಿಗೆ ಡಿಕೊಡಬೇಕಾಗಿ ಬಂತು. ಆದರೆ ನಾನು ಭರವಸೆಯಿಂದ ಹೇಳುತಿದ್ದೇನೆ-ಭಾರತವು ನಿಷ್ಠೆಯಿಂದ ಗಾಂಧಿಜೀ ಕತ್ವಗಳಿಗೆ ಕಟ್ಟು ಬೀಳುತಿದ್ದರೆ ಒಂದೋ ಈ ಸಂಕಷ್ಟಗಳೇ ಏಳುತ್ತಿರಲಿಲ್ಲ; ಇಲ್ಲವೇ ಹೆಚ್ಚಿನ ತೊಂದರೆಗಳಿಲ್ಲದೆ ನಿವಾರಣೆಯಾಗುತಿದ್ದುವು. ಗಾಂಧಿಜೀ ನಮಗೇನನ್ನು ಕಲಿಸಿದ್ದರು ಮತ್ತು ನಾವದನ್ನು ಸೇಗೆ ಆಚರಣೆಯಲ್ಲಿ ತರಬಹುದೆಂಬುದನ್ನು ನಾವೀ ದಿನ ನೆನ್ನೆಯೊಳಗೆ ಸ್ಮರಿಸಿಕೊಳ್ಳಲು ಪ್ರಯತ್ನಿಸುವಾ. ಭಾರತವೊಂದು ಘನರಾಷ್ಟ್ರವಾಗಬೇಕಾದರೆ, ಅದಕ್ಕೆರುವ ಹಾದಿ ಮಹಾತ್ಮಾಜೀಯ ಹೆಜ್ಜೆಯನ್ನನುಕರಿಸುವದೊಂದೇ ಎಂದು ವೈಕ್ತಿಕ ನನ್ನ ನಂಬಿಕೆ ಮಹಾತ್ಮಾ ಗಾಂಧಿಯವರ ಮರಣವು ಭಾರತ ಜನತೆಯ ನೆದುಳಿನ ನೋಲೆ ಆಗಾಧ ಪರಿಣಾಮವನ್ನು ಉಂಟುಮಾಡಿದ್ದಿತು. ಆದರೆ ಸಾರ್ವಜನಿಕರ ನೆನಪು ತಕ್ಕೆಯೆಂಬುದೇ ನಿಜಕ್ಕೂ ಅತ್ಯಂತ ಗಿಡ್ಡವಾದುದು.ಅನಪೇಕ್ಷಿತ ಮಂದಿಗಳು ಇಷ್ಟರಲ್ಲೇ ಪುನ: ತಮ್ಮ ಚಟುವಟಿಕೆಗಳಿಗಾರಂಭಿಸಿ ಜನತೆಯ ತಲೆಯೊಳಗೆ ಜಂತೀಯತಾ ವಿಷವನ್ನು ಹಬ್ಬಿಸಲಾರಂಭಿಸಿರುವುದನ್ನು ಕಾಣುವಾಗ ನನಗೆ ವೇದನೆಯಾಗುತ್ತಿದೆ.

ಭಾರತೀಯ ಜನತೆಯ ಮೂಲ ಭೂತ ಒಳ್ಳೇತನದ ಮೇಲೆ ಸದಾಕಾಲ ವಿಶೇಷ ವಿಶ್ವಾಸವಿಟ್ಟಿರುವನವನು ನಾನು, ಈ ವಿಶ್ವಾಸದ ಬಲದಿಂದಲೇ ಭಾರತಕ್ಕೆ ಭವ್ಯವಾದ ಭವಿಷ್ಯವಿದೆ ಎಂಬ ಭರವಸೆಯನ್ನೂ ನಾನಟ್ಟಿಕೊಳ್ಳುವಂತಾಗಿತ್ತು, ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಆ ಕಾಲದಲ್ಲಿ ನನಗೆ ಸ್ಫೂರ್ತಿದಾಯಕ ಶಕ್ತಿಯಾಗಿದ್ದುದು ಇದೇ, ಈವರೆಗೂ ಇದು ಹಾಗೆಯೇ ಮುಂದುವರಿದಿದೆ. ಆದರೀ ಒಳ್ಳೇತನವು ಜಾತೀಯತೆಯ ಹೊಡೆತದ ಮುಂದೆ ಉಳಿಯಲಾರದು ಆದ್ದರಿಂದ ನಮ್ಮ ಅತಿ ದೊಡ್ಡ ಅಪಾಯವು ಹೊರಗಿನದಲ್ಲ, ಒಳಗಿನದೇ.

ಸರಕಾರೀ ನೌಕರರು ಜನತೆಯ ಹಿತಕ್ಕಾಗಿ ದುಡಿಯಬೇಕು. ಮತ್ತವರ ವಿಶ್ವಾಸಗಳಿಸಬೇಕು. ಕೆಲವೆಡೆಗಳಲ್ಲಿ ಸರಕಾರದ ಹೆಸರು ಘಾಸಿಗಾಗಿದೆ. ಅದು ಕರೋರ ಟೀಕೆಗೊಳಗಾಗಿದೆ. ಸರಕಾರೀ ನೌಕರರು ಸಾರ್ವಜನಿಕರ ಯಥಾರ್ಥ ಟೀಕೆಗಳಿಗೆಂದಿಗೂ ಎಡೆಕೊಡಬಾರದು. ಆ ವರು ಯಥಾರ್ಥತೆಯಿಂದ, ಸಂಪೂರ್ಣವಾಗಿ ಸತ್ಯಕ್ಕೆ ಸರಿಯಾಗಿ, ನಿಷ್ಪಕ್ಷಪಾತತೆಯಿಂದ ತಮ್ಮ ಕರ್ತವ್ಯ ಮಾಡಬೇಕು. ಕಾರ್ಯದಕ್ಷತೆಯೇನೋ ಅಗತ್ಯ ಆದರೆ ಯಥಾರ್ಥತೆಯಿಲ್ಲದ ಶಕ್ತಿಯು ರಾಷ್ಟ್ರಕ್ಕೂ ಸರಕಾರಕ್ಕೂ ಹಿತಕ್ಕಿಂತ ಹೆಚ್ಚಾಗಿ ಆಪತ್ತನ್ನೇ ಮಾಡುವದು.

ಸ್ವಾತಂತ್ರ್ಯ ದೀವಿಗೆಯು ನಮ್ಮ ಪೂರ್ವಿಕರಿಂದ ನಮ್ಮ ಕೈಗೆ ಬಂದಿದೆ. ಅದು ಉರಿಯುತ್ತಾ ಇರುವಂತೆ ಮಾಡಬೇಕೆಂದು ನಾವು ಒದ್ದಾಡಿದೆವು. ಆದರೆ ನಮ್ಮ ಅವಧಿಯೀಗ ಮುಗಿಯುತ್ತಾ ಬರುತ್ತದೆ. ನೀವೆಲ್ಲರೂ ನಮ್ಮ ಕೈಯ ಆ ದೀವಿಗೆಯನ್ನು ತೆಗೆದುಕೊಂಡು ಮುಂದೆ ಸದಾಕಾಲವೂ ಅದು ಜಾಜ್ವಲ್ಯಮಾನವಾಗಿ ಉರಿಯುತ್ತಿರುವಂತೆ ಮಾಡಲು ಶಕ್ತರಾಗುವರೆಂದು ಹಾರೈಸುತ್ತೇನೆ"

THE VIJAYA BANK LIMITED.

Season deposits are now accepted at the Head Office and Branches of the Bank in sums of Rs 1000/ and over, in multiples of Rs 500/- at the following rates.-

For 3 months at 2½% per annum
For 6 months at 3½% per annum.

For further particulars you may apply or call at any of our following Offices

Branches: Kadri Road, Mangalore, City-Mangalore, Udipi Kaup, Coondapur, karkala, Brahmavar, Kasaragod, Puttur, Byndoor, Bombay, Kanhangad & Mercara

Total Resources Exceed 36 lacs

The Canara Banking Corporation Limited.

Estd: 1906.

((Incorporated in British India)

Head Office: **UDIPI**, S. India.

Capital Authorised	....	Rs. 25,00,000
Capital Issued & Subscribed	....	Rs. 20,00,000
Capital Paid up	....	Rs. 19,98,445
Reserves....	....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.,
General Manager.

ಗುರುವಾರ, ಉಡುಪಿ, ೧೯-೮-'೪೮

ಪುನಃ ಅಪಾಯ ಸೂಚನೆ!

ಸ್ವಾತಂತ್ರ್ಯ ದಿನದಲ್ಲಿ ಪಂಡಿತ ನೆಹರುಗಳ ಬಾಯಿಯಿಂದ ಬಂದ ಈ ಕೆಳಗಿನ ಮಾತುಗಳು ಸರ್ವ ಭಾರತೀಯರ ಕಣ್ಣನ್ನೂ ತೆರೆಯಿಸುವಂತಹವಿವೆ; ಎಲ್ಲರಿಗೂ ಸಕಾಲದಲ್ಲಿ . ಕರ್ತವ್ಯ ಜಾಗ್ರತಿಯನ್ನು ಕೊಡುವಂತಹವಿವೆ.

"ಮಹಾತ್ಮಾ ಗಾಂಧಿಯವರ ಮರಣವು ಹಿಂದೀ ಜನತೆಯ ಮನಸ್ಸಿನ ಮೇಲೆ ಅಗಾಧ ಪರಿಣಾಮವನ್ನುಂಟುಮಾಡಿದ್ದಿತು; ಅವರ ಸಾರ್ವಜನಿಕ ನೆನಪಿರುವುದು ಅತ್ಯಂತ ಸಮೀಪದಲ್ಲಿ ಮಾತ್ರ. ಹೀಗಾಗಿ ಅನಪೇಕ್ಷಿತ ವ್ಯಕ್ತಿಗಳು ಇಷ್ಟರಲ್ಲೇ ತಮ್ಮ ಚಟುವಟಿಕೆಗಳಿಗಾರಂಭಿಸಿ, ಜನತೆಯ ನಡುವೆ ಜಾತೀಯತಾ ವಿಷವನ್ನು ಹರಡಿಸಲು ತೊಡಗಿರುವುದನ್ನು ಕಾಣುವಾಗ ನನಗೆ ವೇದನೆಯಾಗುತ್ತಿದೆ."

"ಹಿಂದೀಜನತೆಯ ಮೂಲಭೂತ ಒಳ್ಳೇತನದಲ್ಲಿ ಅಚಲವಿಶ್ವಾಸ ನನಗಿದ್ದುದರಿಂದ ಇದೊಂದು ಘನ ರಾಷ್ಟ್ರವಾಗಿ ರಾಜಿಸುವ ಅದೃಷ್ಟವನ್ನು ಪಡೆದಿದೆ ಎಂಬ ವಿಶ್ವಾಸವನ್ನೂ ನಾನು ಕಟ್ಟಿಕೊಂಡಿದ್ದೆ. ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿದ್ದ ಕಾಲದಲ್ಲಿ ನನಗೆ ಪ್ರೇರಣೆಯಾಗಿದ್ದುದು ಈ ಭರವಸೆಯೇ. ಈ ದಿನದ ವರೆಗೂ ಅದೇ ನಂಬಿಕೆ ನನ್ನಲ್ಲಿ ಉಳಿದಿದೆ. ಆದರೆ ಜಾತೀಯತೆಯ ಧಾಳಿಯಿದಿರಲ್ಲಿ ಈ ಒಳ್ಳೆತನವು ಉಳಿಯುದು. ಆದ್ದರಿಂದ ನಮ್ಮ ಅತಿ ದೊಡ್ಡ ಅಪಾಯವು ಹೊರಗಿನದಲ್ಲ, ಒಳಗಿನದು".

"ನಮ್ಮ ಹಿರಿಯರು ಕೈವರ್ತಿಸಿಕೊಟ್ಟ ಸ್ವಾತಂತ್ರ್ಯ ದೀವಿಗೆಯನ್ನು ನಾವಿಡುವರೆಗೆ ಪ್ರಯತ್ನಪೂರ್ವಕ ಉರಿಸಿದೆವು; ಈಗ ನಮ್ಮ ಕಾಲ ಮುಕ್ತಾಯಗೊಳ್ಳುತ್ತಾ ಬರುತ್ತಿದೆ. ಇನ್ನಾ ದೀವಿಗೆಯನ್ನು ತೆಗೆದುಕೊಂಡು ಅದು ಸದಾಕಾಲ ಉರಿಯುವಂತೆಮಾಡುವ ಕರ್ತವ್ಯವಲ್ಲರದೂ".

ಸ್ವತಿದಾಯಕ ಬೋಧನೆಗೆ-ಎಂಕ ಸಂದರ್ಭದಲ್ಲೇ ಅದರೂ ಜನತೆಯಲ್ಲಿ ನವಚೇತನ ತುಂಬಿಸುವ ಹುರುಪಿನ ಮಾತುಗಳಿಗೆ-ಹೆಸರಾದ ಪಂಡಿತಜೀಗೀಗ, ಒಮ್ಮೆ ಅರಿವೇ ನಾಡಿ ಹಾಕಿದ್ದ ಜಾತೀಯತಾ ಕಾಳೋರಗವೊಂದು ಪುನಃ ನುಲ್ಲಗೆ ತಲೆಯೆತ್ತುತ್ತಿರುವ ದೃಶ್ಯವು ಕಾಣಿಸಹತ್ತಿದೆ; ಅವರದರಿಂದ ಚಿಂತೆಗೀಡಾಗಿದ್ದಾರೆ, ಎಂಬುದು ಮೇಲಿನ ಮಾತುಗಳಿಂದ ಸ್ಪಷ್ಟ. ನವಥಿಲ್ಲಿಯಲ್ಲಿ ಸ್ವಧಾನ ಮಂತ್ರಿಗಳು ಈ ಮಾತುಗಳನ್ನಾಡುತಿದ್ದಂತೆಯೇ ಬಹುಷ್ಯತ 'ಆರ್. ಯಸ್. ಯಸ್.' ಸಂಸ್ಥೆಯ ಚಟುವಟಿಕೆಗಳು ಪುನಃ ಆರಂಭಿಸುವ ಚಿಹ್ನೆಗಳುರಾಷ್ಟ್ರದಲ್ಲಿಗೋಚರಿಸಹತ್ತಿವೆ. ಈ ಮತಭ್ರಾಂತ ಸಂಸ್ಥೆಯ ಮುಖಂಡ ಹಾಗೂ ಹೆಚ್ಚಿನ ಕಾರ್ಯಕರ್ತರು ಇತ್ತೀಚೆಗೆ ಬಿಡುಗಡೆಹೊಂದಿದ್ದು, ಅವರೀಗ ತಮ್ಮ ಸ್ವಭಾವಾನುಗುಣವಾದ ಚಳವಳಕ್ಕಾಗಿ ಗುಪ್ತ ಯೋಜನೆಗೆ ತೊಡಗಿರುವರೆಂದು ಸಾಧಾರವಾಗಿ ಊಹಿಸಬಹುದು. ಕಾಶ್ಮೀರ, ಹೈದರಾಬಾದು ಘರ್ಷಣೆ ಮತ್ತು ಕಮ್ಯೂನಿಸ್ಟ್ ಕಂಟಕದ ಕಡೆಗೇನೇ ಕೇಂದ್ರಸರ್ಕಾರ ಎಲ್ಲಪ್ರಾಂತಿಕ ಸರಕಾರಗಳ ಹೆಚ್ಚಿನಲಕ್ಷ್ಯವೀಗಬದ್ದಿರುವುದರಿಂದ ಈ ಜಾತೀಯತಾ ವಿಷಪ್ರಸಾರಕರಿಗೆ ಸಂದರ್ಭವೂ ಅನುಕೂಲವಿದೆ; ಮಾತ್ರವಲ್ಲ, ಪಂಡಿತ ನೆಹರುಗಳಂಥ ಆ 'ಮರಿತು ಬಿಡುವ ಸ್ವಭಾವವು' ಕೇವಲ ಸಾರ್ವಜನಿಕರಲ್ಲೇ ಅಲ್ಲ, ಸರಕಾರದ ಸೂತ್ರಧಾರಿಗಳು ಕೆಲವರಲ್ಲೂ ಇದ್ದಿರಬೇಕು; ಈ ಮತಭ್ರಾಂತರು ಹುಚ್ಚಾಟದಿಂದ ಭಾರತಕ್ಕೂ ಇಡೀ ಪ್ರಪಂಚಕ್ಕೂ ಆಗಿದ್ದ ಮಹತ್ತಾದ ನಷ್ಟವನ್ನು ಕೇವಲ ಅರೂವರೆ ತಿಂಗಳಲ್ಲಿಯೇ ಮರೆತು,ಭಾರತದೊಳಗಿರಬಹುದಾದ ಹೈದರಾಬಾದಿನ ರಝಾಕಾರ ಭಾಯೆ, ದೇಶದ್ರೋಹಿಗಳ ಹಹಹರಿಗೆ ಉತ್ತೇಜನವನ್ನಿತ್ತರೇ ಎಂದು ಯೋಚಿಸುವವರಿರಬಹುದು. ಆದರೆ 'ಒಂದು ಸುಳ್ಳನ್ನು ಮರೆಮಾಚಲು ಮತ್ತೊಂದು ಸುಳ್ಳನ್ನು ಅಡುವ'ಪಂಚತಂತ್ರಯ ಯಾವ ರಾಷ್ಟ್ರಕ್ಕೂ, ಯಾವ ಜನಾಂಗಕ್ಕೂ ಶೋಭಿಸದು; ಭಾರತಕ್ಕಿದಿರಾಗಿ-ತನ್ನಲ್ಲಿರುವ ಬಹುಸಂಖ್ಯಾಕ ಹಿಂದುಗಳ ಅವಿಶ್ವಾಸದಿದಿರಲ್ಲಿ-ತನ್ನ ರಕ್ಷಣೆಗೆಂದು ಬೆಳೆಯಿಸಿದ ರಝಾಕಾರ್ ಸಂಸ್ಥೆಯ ಕೈಯಲ್ಲೀಗ ಕೈದಿಯಂತೆಇರಬೇಕಾಗಿ ಬಂದಿರುವ ನಿಜಾಮರ ಅವಸ್ಥೆಯನ್ನೇ ಇಲ್ಲಿಯ ಸರಕಾರಗಳೂ ಅಹ್ವಾನಿಸಬಾರದು. ಸರಕಾರಗಳೂ ಜನತೆಯೂ ಸಕಾಲದಲ್ಲಿ ಎಚ್ಚರಗೊಂಡು ಈ ಅಪಾಯವನ್ನು ಮೊಳಕೆಯಲ್ಲೇ ಮುರಿದುಹಾಕಬೇಕು. ನಾವು ನೆನಪಿನಲ್ಲಿಡತಕ್ಕದ್ದನ್ನೂ ಮರೆಯುವವರಿದ್ದೇವೆ; ಅಂತೆಯೇ ಅಪಾಯ ತಟ್ಟುವವರೆಗೂ ಎಚ್ಚರಹೊಂದದವರೂ ಆಗಿದ್ದೇವೆ. ಈ ದುಸ್ವಭಾವಗಳನ್ನು ತ್ಯಜಿಸಿ ಜಾತೀಯತಾ ವಿಷವನ್ನು ಆದಿಛಾಗದಲ್ಲೇ ನಿವಾರಿಸಿಕೊಳ್ಳಬೇಕು. ಗಾಂಧಿಜೀಯ ರಕ್ತವನ್ನೂ ಬಳಿದುಕೊಂಡ ಆ ಕೊಳಕುರೀತಿಯ 'ಹಿಂದೂವಾದ' ಭೂತವನ್ನು ಅತ್ಯಂತ ಜಿಗುಪ್ಸೆಯಿಂದ ಕಾಣುವ ಭಾರತೀಯರ ಸಂಖ್ಯೆಯೇ ಅತ್ಯಧಿಕ; ಗಾಂಧಿಜೀಗೆ ಎರಡನೆಯವಂದಾದ ಪಂಡಿತನೆಹರುಗಳು ಎಲ್ಲರಲ್ಲೂ ಅವರಿಗೆರಡನೆಯವರಾಗುವದು ಜನತೆಗೆ ಬೇಕಾಗಿಲ್ಲ. ನಮ್ಮೊಳಗಿರುವ ದ್ರೋಹಿಗಳ—ಪರರೀಯರ ಪಂಚಮದಳದವರ—ಮೇಲೆ ಕಣ್ಣಿಡಲು ಸರಕಾರವು ಇಂತಹ ಜನರನ್ನೇ ತಯಾರುಗೊಳಿಸಬಹುದು. ನಿನ್ನಿಲ್ಲವಾದರೂ 'ಜನತಾ ರಾಜ್ಯ'ವನ್ನು ಅಪೇಕ್ಷಿಸುವ ಜನರು ಅಪಾಯ ನಿವಾರಿಸಿಕೊಳ್ಳಲು ತಾವಾಗಿ ಮುಂದಾಗುವುದು ಅತ್ಯಗತ್ಯ. ರಾಷ್ಟ್ರದ ಹಾಗೂ ಜನತೆಯ ಹಿತಾಕಾಂಕ್ಷಿಗಳು, ಇನ್ನಾವ ರೀತಿಯಲ್ಲಾದರೂ ಯಾವ ವೇಷಿಯಲ್ಲಾದರೂ ಯಾವುದೇ ವಿಧದ ಜಾತೀಯತಾಭಾವನೆಯನ್ನು ಮೊಳೆಯದಂತೆ ಮಾಡಲು ಸಾರ್ವಜನಿಕರನ್ನು ಸಂಘಟಿಸಲಿ ಎಂದು ಕೇಳಿಕೊಳ್ಳುತ್ತೇವೆ.

ಮದ್ರಾಸಿನ ಹೊಸ ಗವರ್ನರ್

ಭಾವನಗರದ ಮಹಾರಾಜ

ಈಗಿನ ಜನಪ್ರೀತ ಮದ್ರಾಸ್ ಗವರ್ನರ್ ಲೆಫ್ಟನೆಂಟ್ ಜನರಲ್ ಸರ್. ಆರ್ಚಿಬಾಲ್ಡ್ ನೈ. ಜಿ.ಸಿ.ಯಸ್.ಯಲ್.,ಜಿ.ಸಿ.ಐ.ಇ.,ಕೆ.ಸಿ.ಬಿ.,ಕೆ.ಬಿ.ಇ. ಎಮ್.ಸಿ., ಇವರು ಬರುವ ತಿಂಗಳಲ್ಲಿ ನಿವೃತ್ತರಾಗುವದರಿಂದ ತನ್ನ ಸರಕಾರದ ಸಲಹೆಯಂತೆ ಭಾರತದ ಗವರ್ನರ್ ಜನರಲರು ಭಾವನಗರ ಸಂಸ್ಥಾನದ ಮಹಾರಾಜರಾದ ಕರ್ನಲ್ ಹಿಸ್ ಹೈನೆಸ್, ಮಹಾರಾಜಾ ಶ್ರೀ. ಕೃಷ್ಣ ಕುಮಾರ ಸಿಂಹಜೀ ಭಾವಸಿಂಹಜೀ, ಕೆ.ಸಿ.ಎಸ್.ಐ. ಇವರನ್ನು ಮದ್ರಾಸ್ ಗವರ್ನರರಾಗಿ ನೇಮಿಸಿದ್ದಾರೆ.

ನಿಯೋಜಿತ ಮದ್ರಾಸ್ ಗವರ್ನರರು ಈಗ 'ಸೌರಾಷ್ಟ್ರ'ವಾಗಿ ಸೂಡಿ ಕಟ್ಟುರುವ ಅಖಿಯಾವಾರ ಸಂಸ್ಥಾನಗಳಲ್ಲೊಂದಾದ ಭಾವನಗರದ ರಾಜ. ಸೌರಾಷ್ಟ್ರ ಸಂಸ್ಥಾನೀಕರಣದ ಉಪರಾಜಪ್ರಮುಖನಾಗಿ ಆರಿಸಲ್ಪಟ್ಟಿದ್ದರು; ಈಗ ಆದರ ತಾತ್ಕಾಲಿಕ ರಾಜಪ್ರಮುಖನಾಗಿದ್ದಾರೆ. ಇವರು ರಜಪೂತ; ಕೇವಲ 36 ವರುಷ ವಯಸ್ಸಿನವರು. ಹಾರ್ರೋ ಮತ್ತು ಇಂಗ್ಲೆಂಡುಗಳಲ್ಲಿ ಶಿಕ್ಷಣಪಡೆದವರು; ಸುಧಾರಕ ಮನೋವೃತ್ತಿಯವರು. ಇವರ ಪತ್ನಿ ನಿಜಯಶಾಸಾಹೇಬಾ, ಗೋಂಡಾಲ್ ಮಹಾರಾಜರ ಪುತ್ರಿ. ಇವರಿಗೆ ಇಬ್ಬರು ಗಂಡು, ಮೂವರು ಹೆಣ್ಣು ಮಕ್ಕಳಿದ್ದಾರೆ. 1919 ರಲ್ಲೇ ಭಾವನಗರದ ಸಿಂಹಾಸನವನ್ನೇರಿದ್ದರು; ನ್ಯಾಯ ಪ್ರಬುದ್ಧರಾಗಿ 1931 ರಿಂದ ಆದರಪೂರ್ಣಾಧಿಕಾರ ನಿರ್ವಹಿಸುತ್ತಿದ್ದರು. ಇವರ ಘನವಾದ ವಂಶಮೂಲವು ಎ. ಡಿ.1260ರಷ್ಟು ಹಿಂದಿದೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ.

O. P. No. 30 of 1948.

ಸಿಂಧಾ ಸೆಟ್ಟಿ-ಕಟಪಾಡಿ ಪೂಸಮನೆ ವೀರಯ್ಯ ಸೆಟ್ಟಿ ಮಗಳು. ಉಪ್ಪು ಕಾಲ್ಚು ಕೋಟೆ ಗ್ರಾಮದ ಕೋಟಿಬೀಡಿನಲ್ಲಿ ಯಿರುವವರು. —ಅರ್ಜಿದಾರಳು.

ಯಾ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ:—

ಸದ್ರಿ ಅರ್ಜಿದಾರಳ ಮಗ ತ್ತಾರಿಕು 1-7-1948ರಲ್ಲಿ ಸ್ವರ್ಗಸ್ಥನಾದ K. B. ಸದಾಶಿವ ಸೆಟ್ಟಿಗೆ-ಅರ್ಜಿಯಲ್ಲಿ ವಿವರಿಸಿದ ಮೇರೆಗೆ ಯಾ ನ್ಯೂರೆನ್ಸುಗಳ-ಡಿಕ್ರಿಗಳ-ಪ ನೋಟಿನ ಬಾಹಾ ಅಯಿವೇಜುಗಳನ್ನು ವಸೂಲು ಮಾಡುವರೇ ಕಂಟುಂಬದ ಯೆಜಮಾನಳಾದ ಅರ್ಜಿದಾರಳಿಗೆ Succession certificate ಕೊಡ್ತಿಬೇಕಾಗಿ ಅರ್ಜಿದಾರಳು ದಾಕಲು ಮಾಡಿದ ಮೇಲ್ಕಂಡ ಅರ್ಜಿಯು ತ್ತಾರಿಕು 31-8-1948ರಂದು ಯಿರ್ಧರಿಸಲಾಗಿಯಿದೆ. ಆಕ್ಷೇಪ ಬೇಳಕ್ಕಿಯಿರು ಸದ್ರಿ ದಿವ್ಸ ಮೇಲ್ಕಂಡ ಕೋರ್ಟು ಮುಂದೆ|| ಗಂಟೆಗೆ ಸ್ವತಹಾ ವ ಪ್ಲೀಡರ್ ಮೂಲಕ ಹಾಜರಾಗಿ ಜ್ಯಾಬೀರು ಮಾಡಿಕೊಳ್ಳಬೇಕೆಂತ ಯಿ ಮೂಲಕ ಪ್ರಕಟಿಸುವಣಾಗಿಯಿದೆ.

K. J. Ballal.
Vakil for Petitioner.

ಸ್ವಾತಂತ್ರ್ಯ

ಸ್ವಾತಂತ್ರ್ಯವೈಸಿರಿಯ ಪಡೆದ ಸುಭೆನಿನವಿಂದು
ಓ ಮಾತೆ! ತೋರಿಮಗೆ ತವ ದಿವ್ಯ ದರ್ಶನವ
ಭುವನ ಪಾವನೆ, ದೇವಿ! ತೋರು ನಿನ್ನತಿಶಯವ
'ಜಯಹಿಂದ'! ತವಪದಕೆ ನಮಿಸಿ ತೆರಬಾಗಿಹೆವು ||೧||

ಸ್ವಾತಂತ್ರ್ಯವೊದಗಿಹುದು, ಅಧಿಕಾರ ಬಂದಿಹುದು
ಅದರೇನಿನಿತು ನಮ್ಮದಿಯಿಲ್ಲ ನಾಡೊಳಗೆ
ಅನ್ನಬಟ್ಟೆ ವಸತಿಗಳೆಲ್ಲದರ ಕೊರತೆಯಿದೆ
ಸ್ಥಿತಿಗತಿಗಳುಪುದರು ನೆರೆಯಿಲ್ಲ; ಮುಂದೇನು? ||೨||

ಮುಂದೇನು ತಾನೆಂದು ಮಂದಿ ಹಂಬಲಿಸುತಿದೆ
ಸ್ವಾತಂತ್ರ್ಯ ದೊರೆತುದರ ತಪ್ಪಲ್ಲವಿದು ನೋಡೆ
ರಕ್ತದೋಕುಳಿಯೊಳ್ಮುಳುಗಿರುವೀ ದೇಶದೊಳು
ಮಂದಿ ಮಂದಿಯ ತಿಂದು ತೇಗುತಿದೆ ಭ್ರಾಂತಿಯೊಳು ||೩||

ಜಾತಿಮತಗಳ ಭೇದಗಳೆ ಮೂಲವಿದಕೆಲ್ಲ
ಧನದಾಸೆ ಕಾಳತಾಂಡವವಾಡುತಿದೆ ಬಹಳ
ವಿಶ್ರಾಂತ್ಯ-ಧಾಪೆಗೆಳಂಬ ಹೋರಾಟವೊಂದು ಕಡೆ
ಸಕ್ಷ ಪಕ್ಷಗಳ ಮೇಲಾಟವಿನ್ನೊಂದು ಕಡೆ ||೪||

ಉಭಯ ಬಾಹುಗಳ ಬಿಗಿದಿಹುದು ವಾಕೆಸ್ಥಾನ
ಚಿವಿಕ್ಕುತಿದೆ ಬಿಸಿ ರಕ್ತನೆನಸಲೊಡೆದು ಕಾಶ್ಮೀರ
ಸೀಳುತಿದೆ ನಿನ್ನುದರವಿದೊ ಹೈದರಾಬಾದ
ಓ ಜನನಿ! ಹೇಳು, ನಿನಗೆನುಮಗೆ ಸುಖವಿನ್ನೆತ್ತ? ||೫||

ಸ್ವಾತಂತ್ರ್ಯ ಸಂಪದದ ಸುಖವಿತ್ತ 'ಬಾಪು'ವನು
ಕಳೆದುಕೊಂಡಿಹೆವಂವು, ಮುಂದು ಫಲವೇನಿನ್ನು?
ಮುಂದೆ ನಮಗೊಂದೆ ಪಥ ಬೆಳಗಿರಲಿ ಗಾಂಧಿಮತ
ಒಮ್ಮತದಿ ಮುಂದೆ ಸಾಗುವೆವಿನ್ನು 'ಜಯಹಿಂದ' ||೬||

ಯಸ್. ಯಸ್. ಕೆಲ್ಲೆ.
ಜಪ್ಪು, ಮಂಗಳೂರು, ತಾ. ೧೫ ಒಳಿಲ

ಮುಖ್ಯ ವಾರ್ತೆಗಳು

ವಿದೇಶ—

ಬರ್ಲಿನ್ ವಿವಾದದ ಕುರಿತು ಪಾಶ್ಚಾತ್ಯ ಶ್ರೀರಾಷ್ಟ್ರಗಳ ಪ್ರತಿನಿಧಿಗಳು ಮೋಸ್ಕೋದಲ್ಲಿ ರಶ್ಯದೊಡನೆ ನಡೆಸುತ್ತಿದ್ದ ಮಾತುಕತೆಗಳು ಇನ್ನೂ ಬೆಳೆಯುವಂತೆ ಕಾಣುತ್ತಿದೆ. ರಾಜೀತೀರ್ಮಾನ ಹೊಂದುವದರಲ್ಲಿರುವ ಕಷ್ಟಗಳು ಒಂದೊಂದಾಗಿ ಮುಂದೆ ಬರಹತ್ತಿವೆ.

ಪೆಲಸ್ತೈನಿನ ಕುರಿತು ಸಂಧಾನ ಚರ್ಚೆಗಾಗಿ ಅಲ್ಲಿಯ ಯೆಹೂದೀ ಸರಕಾರವು ಕೊಟ್ಟ ಆಹ್ವಾನವನ್ನು ಅರಬರು ತಿರಸ್ಕರಿಸಿದ್ದಾರೆ. ಪೆಲಸ್ತೈನಿನ ಹಲವೆಡೆಗಳಲ್ಲಿ, ಶಾಂತಿಕರ್ತ ಬೇಲಿಗಳನ್ನು ಮುರಿದು ಯೆಹೂದಿಗಳೂ ಅರಬರೂ ಹೋರಾಡಿಕೊಳ್ಳಹತ್ತಿದ್ದಾರೆ.

ಅಮೇರಿಕದ ಅಂಕೆಯೊಳಗಿದ್ದ ದಪ್ಪೀಣ ಕೊರಿಯಕ್ಕೆ ಅಮೇರಿಕವು ರಿಪಬ್ಲಿಕ್ ಸ್ವತಂತ್ರಾಧಿಕಾರವನ್ನು ದಾನಮಾಡಿದೆ. ಉತ್ತರ ಕೊರಿಯಾವು ರಶ್ಯದ ಅಂಕೆಯೊಳಗಿದ್ದು, ಈ ವರೆಗೂ ಅಮೇರಿಕ ಮೊತ್ತ ರಶ್ಯಗಳೊಳಗೆ ಅಲ್ಲಿ ತೀವ್ರ ಭಿನ್ನಾಭಿಪ್ರಾಯಗಳಿದ್ದುವು. ಇನ್ನು ಉತ್ತರ ಕೊರಿಯದ ಸಂಬಂಧವಾಗಿ ರಶ್ಯವು ಹೇಗೆ ವರ್ತಿಸುವುದೆಂಬುದನ್ನು ನೋಡಲಿಕ್ಕಿದೆ.

ಬರ್ಮಾದಲ್ಲಿ ಕಮ್ಯೂನಿಸ್ಟ್ ಪ್ರತಾಪವು ಜೈನಾದ ಕಮ್ಯೂನಿಸ್ಟ್ ಧಾಳಿಗೆ ಸಮಾನವಾಗುವಷ್ಟು ಬೆಳೆದಂತಿದೆ. ರಾಜಧಾನಿಯ ಮೇಲೇನೇ ಧಾಳಿಯಿಡಲು ಬಗೆದಿದ್ದ ಕಮ್ಯೂನಿಸ್ಟ್ ಹೊಡೆತವನ್ನು ಬರ್ಮಾ ಸರಕಾರವೊಮ್ಮೆ ಹುಸಿಗೊಳಿಸಿದೆ; ಕಮ್ಯೂನಿಸ್ಟರ ಮೇಲೆ ಬೋಂಬುಗಳನ್ನೂ ಹಾಕಬೇಕಾಗಿ ಬಂದಿತ್ತು.

ಸ್ವದೇಶ

'ಹೈದರಾಬಾದಿಗೆ ಭಾರತದೊಂದಿಗೆ ಸೇರಿಕೊಳ್ಳುವ ಹೊರತು ಬೇರೆ ಯಾವುದೇ ಉಳಿದಿಲ್ಲ"ವೆಂಬುದನ್ನೂ, ಮಿಕ್ಕ ಸಂಸ್ಥಾನಗಳಿಗಿಂತ ಭಿನ್ನವಾದ ವಿಶಿಷ್ಟ ಸ್ಥಾನವಾವುದೂ ಹೈದರಾಬಾದಿನದಲ್ಲವೆಂಬುದನ್ನೂ ಸಾಧಾರವಾಗಿ ಸ್ಪಷ್ಟೀಕರಿಸುವ ಶ್ವೇತ ಪತ್ರವೊಂದನ್ನು ಸಂಸ್ಥಾನ ಮಂತ್ರಿ ಸರ್ದಾರ್ ಖತೇಲರು ಹಿಂದೀ ಪಾರ್ಲಿಮೆಂಟಿನ ಮುಂದಿಟ್ಟಿದ್ದಾರೆ. 'ವಿದೇಶ ಸಂಬಂಧ, ರಕ್ಷಣೆ, ಸಂಚಾರ ಮತ್ತು ಖಾತೆಗಳನ್ನು ಸಂಪೂರ್ಣವಾಗಿ ಭಾರತದ ವಶಪಡಿಸಿ, ಮಿಕ್ಕ ಅಂತರಿಕಾಧಿಕಾರಗಳನ್ನು ಸಂಸ್ಥಾನದ ಪ್ರಜಾಪ್ರತಿನಿಧಿ ಸರಕಾರವು ನಿರ್ವಹಿಸುವದೊಂದಲ್ಲದೆ ಬೇರೆ ಮಾತೇ ಇಲ್ಲ"ಎಂಬುದನ್ನು ಸರ್ದಾರ್ ಖತೇಲರೊತ್ತಿ ಹೇಳಿ ಹೈದರಾಬಾದ್ ಸಂಬಂಧದ ಲಕ್ಷ್ಯ, ಯೋಜನೆ, ಸಿದ್ಧತೆ ಇವುಗಳಲ್ಲಾವುದರ ಮಟ್ಟಿಗೂ ಭಾರತ ಸರಕಾರದಲ್ಲಾವ ಕೊರತೆಯೂ ಇಲ್ಲವಾದ್ದರಿಂದ ಧಾರಣೇಯರು ಪೂರ್ಣ ಭರವಸೆಯಿಂದಿರಬೇಕೆಂದು ಅಭಯವಿತ್ತಿದ್ದಾರೆ.'

'ಇಕ್ಕಡೆಯವರೂ ಗುಂಡು ಹಾರಾಟವನ್ನು ಕೂಡಲೇ ನಿಲ್ಲಿಸಬೇಕು; ಆ ಮೇಲೆ ಜನಮತ ಸಂಗ್ರಹದ ವ್ಯವಸ್ಥೆ ಹೇಗಾಗಬೇಕೆಂಬ ಕುರಿತು ತಮ್ಮೊಡನೆ ಪರ್ಯಾಲೋಚನೆಗೆ ಕುಳಿತುಕೊಳ್ಳಬೇಕು' ಎಂದು ಕಾಶ್ಮೀರ ಸಮಿತಿಯು ಭಾರತ ಮತ್ತು ಪಾಕಿಸ್ತಾನ್ ಸರಕಾರಗಳೆರಡಕ್ಕೂ ಏಕ ಕಾಲದಲ್ಲಿ ಸೂಚನೆಗಳನ್ನು ಕಳುಹಿದೆ ಎಂದು ತಿಳಿದು ಬರುತ್ತದೆ. ಭಾರತ ಸರಕಾರವು ಇಂತಹ ಸೂಚನೆಯನ್ನು ತಿರಸ್ಕರಿಸುವ ಸಂಭವವಿದೆ. ಪ್ರಚಂಡ ಆಧುನಿಕ ಯುದ್ಧೋಪಕರಣಗಳ ಸಮೇತ ಪಾಕಿಸ್ತಾನದ ಸೇನೆಗಳೀಗ ಅಧಿಕಾಧಿಕ ಸಂಖ್ಯೆಯಲ್ಲಿ ಕಾಶ್ಮೀರದೊಳಗೆ ನುಗ್ಗಿಬರಹತ್ತಿವೆ. ಅಲ್ಲಿಯ ಯುದ್ಧವು ಕಠೋರ ರೀತಿಯಿಂದ ಸಾಗಿದೆ.

ಹಿಂದೀ ಪಾರ್ಲಿಮೆಂಟಿನ ಅಧಿವೇಶನ ಸಾಗಿದೆ. 'ಸ್ಟರ್ಲಿಂಗ್ ಒಪ್ಪಂದ ಸ್ವೀಕಾರ' ದಂತಹ ಪ್ರಾಮುಖ್ಯ ನಿರ್ಣಯಗಳೂ ದೇಶದ ಮುಖ್ಯ ಸಮಸ್ಯೆಗಳ ಸಂಬಂಧವಾದ ಸ್ಪಷ್ಟೀಕರಣಗಳೂ ಆಗಿವೆ.

ಭಾರತದ ಪ್ರಥಮ ಸ್ವರಾಜ್ಯ ವರ್ಧಂತಿಯು ರಾಜಧಾನಿ ಢಿಲ್ಲಿಯಲ್ಲಿ ಅತಿ ಗಂಭೀರ ರೀತಿಯಿಂದ ನಡೆಯಿತು. ರಾಷ್ಟ್ರದ ಎಲ್ಲಾ ಮುಖ್ಯನಗರಗಳಲ್ಲೂ ಈ ಚರಿತ್ರಾರ್ಹ ದಿನದ ಮಹತ್ವಕ್ಕನುಗುಣವಾಗಿ ಅದು ಆಚರಿಸಲ್ಪಟ್ಟಿದೆಯಲ್ಲದೆ ಪ್ರತಿಯೊಂದು ಹಳ್ಳಿಪೇಟೆಗಳಲ್ಲೂ ಜರಗಿದೆ. ಲಂಡನ್ ಹಾಗೂ ಪ್ರಪಂಚದ ಇತರ ರಾಷ್ಟ್ರಗಳೆಲ್ಲಿಯೂ ಭಾರತ ಸ್ವಾತಂತ್ರ್ಯ ದಿನವು ವರ್ಣಾಮಕಾರಿಯಾಗಿ ಆಚರಿಸಲ್ಪಟ್ಟಿದೆ.

ಸ್ವಾತಂತ್ರ್ಯ ದಿನದ ಸಂದೇಶಗಳು—

"ನಮ್ಮ ಜನತೆಯಲ್ಲಿ ಬಹುಸಂಖ್ಯಾಕರ ಹಿತಸಂಬಂಧಗಳಿಗೆ ಮೊದಲಸ್ಥಾನ ವಿದ್ದು, ಮಿಕ್ಕೆಲ್ಲಾ ಹಿತಸಂಬಂಧಗಳೂ ಅದಕ್ಕಾಧೀನವಾಗಿರುವಂತಹ ಸ್ವತಂತ್ರ ಪ್ರಜಾಪ್ರಭುತ್ವದ ಭಾರತವನ್ನು ಕಟ್ಟಲು; ಗಾಂಧೀಜಿಯ ಸಂದೇಶಗಳನ್ನು ಶಿರಸಾವಹಿಸಿಕೊಳ್ಳಿರಿ".—ನೆಹರು.

"ಈ ದಿನ ರಾಷ್ಟ್ರವನ್ನಿದಿರಿಸಿರುವ ಸಮಸ್ಯೆಗಳು ಜನತೆಯ ಮತ್ತು ಸರಕಾರದ ಸಂಯುಕ್ತ ಪ್ರಯತ್ನಗಳಿಂದಲೇ ತೀರ್ಮಾನಗೊಳ್ಳಬೇಕು. ಆದ್ದರಿಂದ ಹೃತ್ಪೂರ್ವಕವಾಗಿ ಸರಕಾರದೊಡನೆ ಸಹಕರಿಸಿರಿ"—ವಲ್ಲಭಾಯಿ.

"ಹಿಂದೀ ಸೋಲ್ಜರರೇ, ನಿಮ್ಮ ಕುರಿತು ಭಾರತವು ಹೆಗ್ಗಳಿಕೆ ಪಡುತ್ತಿದೆ; ನೀವು ನಮ್ಮ ಅಗಾಧ ಪ್ರೇಮಕ್ಕರ್ಹರಿದ್ದೀರಿ. ನೀವು ಮಾತೃ ಭೂಮಿಯ ಭದ್ರತೆ ಕಾಪಾಡುವ ಪಹರೇನಾಯಿಗಳಾಗಿರುವುದಕ್ಕೆ ಅಭಿನಂದನೆಗಳು. ನಿಮ್ಮ ಶಿಸ್ತುಬದ್ಧ ಜೀವನದಿಂದ ರಾಷ್ಟ್ರದ ನೈತಿಕತೆ ಮತ್ತು ವಿಶ್ವಾಸವನ್ನೂ ಹೆಚ್ಚಿಸುವವರಿದ್ದೀರಿ"—ಬಲದೇವ ಸಿಂಗ್.

"ಭಾರತದ ಭವಿಷ್ಯವು ಆಶಾದಾಯಕವಿದೆ. ಆಭಿವೃದ್ಧಿ ಪಥದಲ್ಲಿ ನಿರ್ಭಿತಿಯಿಂದ ಮುನ್ನಡೆಯಬಹುದು ಭಾರತ ಮುಂದೊತ್ತಬಲ್ಲುದು. ನಾನು ಕಂಡಿದ್ದ ನಾಗರಿಕರಲ್ಲೇ ಅತಿ ದೊಡ್ಡವರಾದ ಪ್ರಧಾನಿ ನೆಹರು—ನಿರ್ಭೀತ, ಗೌರವಾರ್ಹ, ಪ್ರಗತಿ ಶೀಲ ನಾಯಕ ಮತ್ತು ಜನರಲ್ ಶ್ರೀ ರಾಜಗೋಪಾಲಾಚಾರಿ- ಮತ್ತಿತರ ಇಂದಿನ ಭಾರತ ನಾಯಕರು ಭಾರತವನ್ನು ದೊಡ್ಡಸ್ತಿಕೆಯತ್ತ ನಡೆಸುತ್ತಿದ್ದಾರೆ"—ಮೌಂಟ್ ಬೇಟನ್.

"ಲೋಕದ ಸ್ವತಂತ್ರರಾಷ್ಟ್ರಗಳ ಗುಂಪಿಗೆ ಭಾರತವು ಸೇರಿಕೊಂಡುದರ ಪ್ರಥಮ ವರ್ಧಂತಿಯ ಈ ಮುಹೂರ್ತದಲ್ಲಿ ನನ್ನ ಮತ್ತು ಅಮೇರಿಕದ ಜನತೆಯ ಅಭಿನಂದನೆ ಮತ್ತು ಸದಾಶಯಗಳಿವೆ"—ಟ್ರೂಮೇನ್.

ಕುಂದಾಪುರ:—ಸ್ವಾತಂತ್ರ್ಯ ದಿನಾಚರಣೆಯು ಶ್ರೀ ಜಿಪತಿ ಎಲಿಮೆಂಟರಿ ಶಾಲಾ ವಠಾರದಲ್ಲಿ ಧ್ವಜಾರೋಹಣ, ಧ್ವಜ ವಂದನೆಗಳಿಂದ ಪ್ರಾರಂಭವಾಗಿ ಮೆರವಣಿಗೆ ಹೊರಟು ಬಿಗ್ಡಿದ ಕಲ್ಲಿನಲ್ಲಿ ಗ್ರಾಮ ಪರೇಶ್ ಶ್ರೀ ಜಂದಯ್ಯ ಶೆಟ್ಟಿ ಅಧ್ಯಕ್ಷತೆಯಲ್ಲಿ ಸಭೆ ಜರಗಿತು. ಶ್ರೀ ಅನಂತಲಾಮ ಭಟ್ಟರ ಭಾಷಣವಾಗಿ ತಿಂಡಿ ವಿತರಣೆಯಾಯಿತು.

ಮಂಗಳೂರಲ್ಲಿ "ಸ್ವಾತಂತ್ರ್ಯ ದಿನಾಚರಣೆ"

ಕಳೆದ ತಾ. ೧೫ನೇ ಬೆಳಗ್ಗೆ ೧೦ ಗಂಟೆಗೆ ಯಥಾಕ್ರಮದಂತೆ, ಪೈದಾನಿಯಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಸ್ ಆರ್ ಕೈವಾರ್ ಐ. ಸಿ. ಎಸ್, ಅವರು ಭಾರತ ಮತ್ತು ವಿಶ್ವ ಜಾಂಧನ್ಯಗಳ ಆಭ್ಯುದಯಾಕಾಂಕ್ಷೆಯ ಸಮುಚಿತ ವಚನಗಳೊಡನೆ, ರಾಷ್ಟ್ರೀಯ ಧ್ವಜಾರೋಹಣ ಕಾರ್ಯವನ್ನು ನೆರೆದ ಅಧಿಕಾರಿ ವರ್ಗ ಮತ್ತು ಅಶೇಷ ಪ್ರಜಾನಿವರ್ಗದ ಮುಂಭಾಗದಲ್ಲಿ ನೆರವೇರಿಸುವುದರೊಡನೆ, ಪೋಲೀಸ್ ಫೋಜಿನ "ಬರೇಸ್" ಮತ್ತು ಬ್ಯಾಂಡ್ ಪಾರ್ಟ್ಯಗಳೂ ಜರುಗಿ ಕಲೆಕ್ಟರರು ಅವರ ವಂದನೆಗಳನ್ನು ಸ್ವೀಕರಿಸಿದರು.

ಅಂದು ಸಂಜೆ, ಇಲ್ಲಿಯ ಟೌನ್ ಕಾಂಗ್ರೆಸ್ ಸಮಿತಿಯ ಆಶ್ರಯದಲ್ಲಿ, ಕೇಂದ್ರ ಮೈದಾನಿಲ್ಲಿ, ಒಂದು ಸಾರ್ವಜನಿಕ ಸಭೆ ಜಿಲ್ಲಾ ಸಮಿತಿಯ ಅಧ್ಯಕ್ಷ ಶ್ರೀ ಪಿ. ಲಕ್ಷ್ಮೀನಾರಾಯಣ ನಾಕರ ಅಧ್ಯಕ್ಷತೆಯಲ್ಲಿ ಸೇರಿದಾಗ, ಶ್ರೀಗಳಿಂದ ಎಲ್. ಸಿ. ಪಾಯ್ಸ್, ಕೆ. ಕೆ. ಶೆಟ್ಟಿ, ಬಿ. ದಾಮೋದರ ಬಾಳಿಗ, ಎನ್. ಎಸ್. ಸುವರ್ಣ ಎಚ್. ಸುರೇಶ, ಎನ್. ಎಸ್. ಕಿಲ್ಲೆ, ಶ್ರೀಮತಿ ಸುಮತಿ ಇವರು ನಾನಾ ಭಾಷೆಗಳಲ್ಲಿ ಕಾಲೋಚಿತ ಭಾಷಣ ಮಾಡಿದರು.

ಸ್ಥಳಾಭಾವದಿಂದ ಕೂಡಲೆ ಸ್ವಾರಕ ಸಮಿತಿಯ ಧನಸಹಾಯದ ವಿಷಯ, ವಿಳಂಬವಾಗಿ ಬೇರೆಬೇರೆ ಕಡೆಗಳಿಂದ ಬಂದ ಸ್ವಾತಂತ್ರ್ಯೋತ್ಸವದ ವಂದಿ ಮುಂತಾದುವನ್ನು ಈ ವಾರ ಪ್ರಕಟಿಸಲಾಗಲಿಲ್ಲ.

ಸಂ. ನ.

ನಡೆಯುವ ಚಿತ್ರ

"ಪಿಕ್ ಪ್ರೊಕೆಟ್"

ಅನಂತರ ಆಂಧೇರಾ (ರಣಜಿತ ಚಿತ್ರ)

ಅರುಣ್, ಸಿತಾರಾ, ಕೇಸರಿ, ಕೆ. ಸಿ. ಡೇ ಮೊದಲಾದವರು.

ಗೋಕುಲದಲ್ಲಿ ಗೋಕುಲವಾಸಿ ಇದ್ದರೆ, ನಮ್ಮಲ್ಲಿ ಗೋಕುಲವೇ ಬರಲು ಯಾರೂ ವ್ಯಾಕುಲಪಡಬಾರದು—ಅದಕ್ಕಾಗಿ

ಗೋಕುಲ್ (ಪ್ರಭಾತ ಚಿತ್ರ)

ಬಂದಾಗಲೇ ಸಂದರ್ಶಿಸಿ ಶ್ರೀಕೃಷ್ಣ ದರ್ಶನದಿಂದ ಪಾವನರಾಗಿರಿ.

ತಾ. 27—8—48 ರಿಂದ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

The Canara Industrial & Banking Syndicate, Limited, Coondapoor.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಕುಂದಾಪುರ

ನೋಟೀಸು

ಈ ಕೆಳಗೆ ಕಾಣಿಸಿದ ಆಸಾಮಿಯವರಿಗೆ ಕೊಟ್ಟ ರಿಜಿಸ್ಟ್ರಿ ನೋಟೀಸು ಅವರು ಊರು ಬಿಟ್ಟು ಪರಾರಿಯಾಗಿದ್ದಾರೆಂದು ವಾಪ್ಸು ನಮಗೆ ಬಂದಿರುವುದರಿಂದ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾ॥ 14—9—48ನೇ ಮಂಗಳವಾರ ಅಪರಾಹ್ನ ಘಂಟೆ ಒಂದಕ್ಕೆ ಅಥವಾ ಬ್ಯಾಂಕಿಗೆ ಯುಕ್ತ ತೋರುವ ಇತರ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲ್ಪಡುವುದು; ತಿಳಿದಿರಲಿ!

ತಾರೀಕು ಮತ್ತು ಲೋನ್ ನಂಬ್ರ	ಸಾಲ ಪಡೆದವರ ಹೆಸರು ಮತ್ತು ವಿಳಾಸ	ಅಸಲು ರೂಪಾಯಿ
27-3-1947 71/47	ಟಿ. ವಿಶ್ವೇಶ್ವರ ಉಡುಪ, ಸುಬ್ರಾಯ ಉಡುಪರ ಮಗ, ಬಳ್ಕೂರು ಗ್ರಾಮ, ಪೋಸ್ಟ್ ಕುಂದಾಪುರ, ದ. ಕ.	60

ಕುಂದಾಪುರ,
ತಾ. 17-8-48

V. G Haradikar,
Agent Coondapoor.

1949ನೇ ವರ್ಷದ E. S. L. C.

ಕನ್ನಡ ಪಠ್ಯಪುಸ್ತಕದ ಟಿಪ್ಪಣಿ

ಯು ವಾರಾಟಕ್ಕೆ ಸಿದ್ಧವಿದೆ.

ಅಪೇಕ್ಷಕರು ಈ ಕೆಳಗಣ ವಿಳಾಸಕ್ಕೆ ಬರೆದುಕೊಳ್ಳುವುದು.

ಡಿ ವಿ. ಹೊಳ್ಳ, ವಿದ್ವಾನ್,
ಕುಂದಾಪುರ, ದ. ಕ.

ಉಡುಪಿ

ಸತ್ಕಾರಕೂಟ- ಯುನೈಟೆಡ್ ಕನ್ಸರ್ಟಿಕ ಇನ್ಸ್ಟ್ರುಮೆಂಟ್ಸ್ ಕಂಪೆನಿಯ ಸ್ಪೆನ್ಸ್‌ಪಲ್ ಮಜಬರಾದ ಇಂಟರ್‌ನೇಶನಲ್ ಕಮ್ಯೂನಿಯನ್ ಕೊರ್ಪರೇಶನಿನವರು ವಿಸರ್ಜಿಸಿ ಪ ವಿಮಾಸ್ಪರ್ಧೆಯಲ್ಲಿ ಗೆದ್ದ ತೀರ್ಥಪಳ್ಳಿಯ ಶ್ರೀ. ಟಿ. ವೆಂಕಟೆ ಕೃಷ್ಣಾಚಾರ್ಯರಿಗೆ ಬಂ ಗಾರದ ಪದಕವನ್ನೀಯುವ ಸತ್ಕಾರಕೂಟವು ತಾ. 16ರಲ್ಲಿ ಡಾ. ಪಿ ಆರ್ ನಾಯ್ಕರ ಅಧ್ಯ ಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ಎಂ. ಎ. ಕಣಿಯವರು ಶ್ರೀ. ಟಿ. ವೆಂಕಟಕೃಷ್ಣಾಚಾ ರ್ಯರ ಪರಿಚಯ ಭಾಷಣ ಮಾಡಿದರು. ಶ್ರೀ ಅಣ್ಣಾರ್ಯರು ಸಂದರ್ಭೋಚಿತವಾಗಿ ಸೂತನಾಡಿದಮೇಲೆ ಅಧ್ಯಕ್ಷರ ಹಿತಸೂಚಕ ಭಾಷಣವಾಗಿ ಶ್ರೀ ಕಣಿಯವರ ಧನ್ಯವಾದ ಗಳೊಂದಿಗೆ ಸಭಾಂತ್ಯವಾಯಿತು. ಆರಂಭದ ಲ್ಲಿ ಉಪಾಹಾರವಿತ್ತು.

ಮುನಿಸಿಪಲ್ ಕೌನ್ಸಿಲಿನ ಖಾಲಿ ಬಿದ್ದಿಂಗು ತಾ 14ರಲ್ಲಿ ಚಿಯರ್‌ಮೆನ್ ಶ್ರೀ ಎ ಉಪೇಂದ್ರನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಕೌನ್ಸಿಲಿನ ಗತವರುಷದ ಆದಳಿತ ವರದಿಯು ಒಮ್ಮತದಿಂದ ಸ್ವೀಕರಿಸಲಾಯಿ ತು. ಈ ಸಂದರ್ಭದಲ್ಲಿ ಚಿಯರ್‌ಮೆನರ ಹಾಗೂ ಕಮಿಶನರ ಕಾರ್ಯದಕ್ಷತೆಯ ನ್ನು ಪ್ರಶಂಸಿಸಲ್ಪಟ್ಟಿತು. ಇದ್ದಿಯ ಕಮೀಶ ನರ್ ಶ್ರೀ ಟಿ. ಪರಿಪ್ಪಡ್ರಾಯರನ್ನು ತಲ ಬೀಗೂರು ಅಡ್ಡಿಯ ಕಮಿಶನರ್ ಶ್ರೀ ಜಾಲ ಗಾರಾಜ್ ಮೆನೋನರನ್ನು ಇಲ್ಲಿಗೂ ವರ್ಗಾ ಯಿಸಿದ ಸರಕಾರ ಜಿ. ಓ. ವನ್ನು ವಿಕಾರ್ಡು ಮಾಡಲಾಯಿತು.

ಸ್ಥಳಕ್ಕೆ ನ್ಯೂನಗಳನ್ನು ಸ್ಪೋತ್ಪಾದಿಸುವು ದು ಈ ಕೌನ್ಸಿಲಿನ ಹೊಣೆಯಲ್ಲವೆಂಬ ಶ್ರೀ ಎ. ಮಂಜುನಾಥರಾಯರ ನಿರ್ಣಯವು ಪೋಟಿಗೆ ಹಾಕಲಾಗಿ ಬಹುಮತವಿಲ್ಲದಿದ್ದುದು ಹೋಯಿತು.

ಸ್ವಾತಂತ್ರ್ಯ ದಿನಾಚರಣೆ

ಉಡುಪಿಯಲ್ಲಿ ತಾ 15ರಲ್ಲಿ ಸಾಂಗವಾಗಿ ಆಚರಿಸಲ್ಪಟ್ಟಿರು. ಅಂದು ಬೆಳಿಗ್ಗೆ ೧೫ಜೀದಿ ಯಿಂದ ಪ್ರಭಾತಫೇರಿ ಹೊರಟು ಅಜ್ಜರಕಾ ಡಿನ ಗಾಂಧಿಮೈದಾನಕ್ಕೆ ಬಂದೊಡನೆ ಹೊಸ ಜಾಗಿ ಕಟ್ಟಿಲ್ಪಟ್ಟ ಭಾರತ ಸ್ವಾತಂತ್ರ್ಯ ಸ್ಮಾರ ಕದ್ವಜ ಸ್ತಂಭದ ಉದ್ಘಾಟನೆಯನ್ನು ಶ್ರೀ ಕೊಟ್ಟಿಕಾರ್ ಪದ್ಮನಾಭ ಪೈಗಳವರು ನೆರ ವೇರಿಸಿದರು. ಬಳಿಕ ಮುನಿಸಿಪಲ್ ಚಿಯರ್ ಮೆನ್ ಶ್ರೀ ಎ ಉಪೇಂದ್ರನಾಯ್ಕರು ಧ್ವಜಾ ರೋಹಣಮಾಡಿದರು.

ನಂಥಾಸ್ಥ ಮುನಿಸಿಪಾಲಿಟಿಯೊಳಗಿನ ಯಾವತ್ತೂ ಶಾರಾಮಕ್ಕಳಿಗೆ ಲಡ್ಡು ಹಂಚ ಲಾಯಿತು. ಇದಾದಬಳಿಕ ಧ್ವಜಗೀತೆ, ರಾಷ್ಟ್ರ ಗೀತ ಘೋಷಣೆಗಳ ಮೊದ್ದಸಾರ್ವಜನಿಕ ಮೆರ ವಣಿಗೆಯು ಬೋರ್ಡು ಹೈಸ್ಕೂಲಿನ ವಿಶಾ ಲ್ಸ್ ಹಾಲಿನಿಂದ ಹೊರಟು ನಗರದ ಪ್ರಮು ಬೀರಸ್ತೆಗಳಲ್ಲಿ ಸುತ್ತಾಡಿ ಗಾಂಧಿಮೈದಾನಕ್ಕೆ ಬಂತು. ವಕೀಲ್ ಶ್ರೀ ಎಮ್. ವಿಠ ಲಕಾಮತರ ಅಧ್ಯಕ್ಷತೆಯಲ್ಲಿ ಪ್ರಚಿಂದ ಸಾ ರ್ವಜನಿಕ ಸಭೆ ಜರಗಿತು. ಡಾ। ಎಸ್. ಆರ್. ಪೈಗಳವರು ಕಳದವರ.ಪದ ಸ್ವಾತಂತ್ರ್ಯೋತ್ಪ ತ್ತಿಯ ಕಾಲದಲ್ಲಿ ಜಮೆಯಾದ ಹಣ, ಆದರ ವಿನಿಯೋಗಗಳ ಸವಿವರ ವರದಿಯನ್ನೋದಿದ ರು. ನಂತರ ಹುತಾತ್ಮರ ಆತ್ಮಶಾಂತಿಗಾಗಿ ಎರಡು ನಿಮಿಷಗಳ ನೌನಪ್ರಾರ್ಥನೆಯಾ ಯಿತು. ಶ್ರೀಗಳಾದ ಕೆ. ಸಂಜೀವ ಭಟ್ಟ್, ಬಾಳ್ಳುಬೀಡು ಕೃಷ್ಣಯ್ಯಹೆಗ್ಡೆ, ಟಿ. ಆನಂ ತಪ್ಪೆ.ಬಿ. ವಾಸುದೇವರಾವ್, ಎಮ್. ವಿ. ಹೆಗ್ಡೆಯವರುನಂದರ್ಭೋಚಿತ ಭಾಷಣಮಾ ಡಿದರು. ಸ್ವರಾಜ್ಯ ತುಳುಲಾನಗೆ"ಯನ್ನು ಶ್ರೀ ಐರೋಡಿ ರಾಮಪಾಶಸ್ಪೈಗಳವರು ತಮ್ಮ ಸಹಪಾಟಿಗಳೊಂದಿಗೆಅಕರ್ಷಣೀಯ ವಾಗಿ ಹಾಡಿ ಜನಮೆಚ್ಚಿಗೆ ಪಡೆದರು. ಅಧ್ಯಕ್ಷ ರ ಭಾಷಣ, ರಾಷ್ಟ್ರಧ್ವಜಾವರೋಹಣಗಳಾಗಿ ರಾಷ್ಟ್ರಗೀತೆಯೊಂದಿಗೆ ಸಭಾಂತ್ಯವಾಯಿತು ಆಜ್ಜರಕಾಡಿನ ಸೌಂದರ್ಯಾಭಿವೃದ್ಧಿಗಾಗಿ ನೊಪಲಿಂದಲೂ ಉತ್ಸಾಹದಿಂದ ಕೆಲಸಮಾ ಡುತ್ತ ಬಂದಿರುವ ವಕೀಲ್ ಶ್ರೀ ಎಮ್. ವಿಠಲಕಾಮತರು ಸ್ವಾತಂತ್ರ್ಯ ಸ್ಮಾರಕ ಧ್ವಜ ಸ್ತಂಭ ನಿರ್ಮಾಣಕ್ಕೂ ತುಂಬಾ ದುಡಿದಿರು ವುದು ಅಭಿನಂದನೀಯ. ಪ್ರಚಿಂದ ನಗರ ಮೆರವಣಿಗೆಯಲ್ಲಿ ನಾಗರಿಕ ಮಹತ್ತೀಯ ಮಹಿಳೆಯರಲ್ಲದೆ ನಗರಭಾ ಕ್ಷೇತ್ರದೊಳಗಿನ ಎಲ್ಲಾ ಶಾಲಾಮಕ್ಕಳೂ ಪೋಲಿಸರೂ, ಕಾಂಗ್ರೆಸ್ ಸ್ವಯಂಸೇವಕ ಸೇವಿಕೆಯರೂ, ಕಿಡಿಯೂರು ಬಾಪೂಜೀ ರೋವರ್ಸ್ ಸ್ಕೌಟ್ಸ್' 'ಬೋರ್ಡು ಹೈಸ್ಕೂಲು ಸ್ಕೌಟ್ಸ್' ಮತ್ತಿತರ ಸಂಘಸಂಸ್ಥೆಗಳವರೂ ಭಾಗವಹಿಸಿದ್ದರು.

ಭಜನಾ ಸಪ್ತಾಹವು ಶ್ರೀಲಕ್ಷ್ಮೀ ವೆಂ ಕಟೇಶ ದೇವಸ್ಥಾನದಲ್ಲಿ ಎಂದಿನಂತೆ ಈ ಸಲವೂ ನಾಗರಪಂಚಮಿದಿನ ಪ್ರಾರಂಭವಾಗಿ ದ್ವಾದಶದಿನ ಮಂಗಲಜೊಂದಿಗೆ ಯಶಸ್ವಿ ಯಾಗಿ ಜರಗಿತು.

ಕಟಪಾಡಿ ಬ್ರಹ್ಮಶ್ರೀ ನಾರಾಯಣ ಗು ರುಸ್ವಾಮಿ ಸೇವಾ ಸಮಿತಿಯಲ್ಲಿ ಸ್ವಾತಂ ತ್ರ್ಯೋತ್ಸವವು ಕಾರ್ಯಾಚರಿಸಿಯವರ ಭಾಷ ಣ ಮುಂತಾದ ಕಾರ್ಯಕ್ರಮಗಳಿಂದಿಗೆ ಯಶಸ್ವಿಯಾಗಿ ಜರಗಿತು.

ಕಾರ್ಕಳ ಭಗೀರಥಿಂದ ಪುಸ್ತಕಾಲ ಯದ ಉದ್ಘಾಟನಾ ಸಮಾರಂಭವು ಸ್ಥಳೀಯ ಡಿ ಮುನ್ಸೀಫರ ಧರ್ಮಪತ್ನಿ ಶ್ರೀಮತಿ ವಿಲಾ ಸಿನಿ ಕಾಮತರ ಅಧ್ಯಕ್ಷತೆಯಲ್ಲಿ ತಾ 15-8-48ರಲ್ಲಿ ಯಶಸ್ವಿಯಾಗಿ ನೆರವೇರಿತು. ನ್ಯಾಯಾ ಧೀಶರ ಭಾಷಣ, ಗಾಯನ ಇತ್ಯಾದಿ ಗಳಿದ್ದು ಲಘು ಉಪಹಾರದೊಂದಿಗೆ ಸಭೆ ಯು ಮುಕ್ತಾಯವಾಯಿತು.

ಸ್ವಾಬರ ಕಟ್ಟೆ ಶ್ರೀ. ಕೊಳ್ಕೆಬೈಲು ಶಿವಾಯಿಂದ ಪ್ರಚಾರೋದ್ಘಾಟನೆ, ಬಾಲ ಕರಿಗೆ ಸಿಹಿತಿಂಡಿ ಹಂಚುವಿಕೆ, ಸಭೆ, ಭಾಷಣ ಗಳಿಂದ ಶ್ರೀ. ಕೊಳ್ಕೆಬೈಲು ರಾಮಣ್ಣ ಹೆಗ್ಡೇ ರ ನೇತೃತ್ವದಲ್ಲಿ ಸ್ವಾತಂತ್ರ್ಯೋತ್ಸವ ಜರಗಿತು.

ಅಜೆಕಾರು ಸಾರ್ವಜನಿಕರ ಮತ್ತು ಅ ಧಿಕಾರ ವರ್ಗದವರ ಉತ್ಸಾಹ ಪ್ರೋತ್ಪಾಪ ಗಳಿಂದ ಸ್ವತಂತ್ರ ದಿನಾಚರಣೆಯು ವಾಲಾ ಜಾರಂದಲ್ಲಿ ಶ್ರೀ. ಬಿ. ವಾಸುದೇವ ನಾವಡರ ವರ ಅಧ್ಯಕ್ಷತೆಯಲ್ಲಿ ಮೆರವಣಿಗೆ, ಧ್ವಜವಂ ದನೆ, ಭಾಷಣ, ಸಂದೇಶಗಳು, ನುತ್ತು ವಿ ರಾಯಿ ಹಂಚೋಣದೊಂದಿಗೆ ಜಯಶೀಲವಾ ಗಿ ನೆರವೇರಿತು.

ವಿಟ್ಲ ತಾ 15-8-48ರಂದು ಈ ಊರಿ ನವರು ಸ್ಥಳೀಯ ಸರಕಾರೀ ನೌಕರರ ಸಹ ಕಾರದೊಂದಿಗೆ, ಸ್ವಾತಂತ್ರ್ಯದ ಪ್ರಥಮ ವಾ ರ್ಷಿಕ ಸಂಭ್ರಮವನ್ನು ಯಶಸ್ವಿಯಾಗಿ ಜರ ಗಿಸಿದೆರು. ಮುಂಜಾನೆ ಶ್ರೀ. ಕೆ. ಸಂಜೀವ ರಾಯರ ಹಸ್ತದಿಂದ ಧ್ವಜಾರೋಹಣವಾಗಿ ಶ್ರೀ ಡಿ. ಭಟ್ಟರ ಬಾಷಣವಾದಮೇಲೆ, ಕಿಂಡಿ ಹಂಚುವ, ನೂಲು ತೆಗೆಯುವ ಇತ್ಯಾದಿ ಕಾ ರ್ಯಕ್ರಮಗಳಾದುವು. ಸಂಜೆ, ಶ್ರೀ. ಪ್ರಭಾ ಕರ ರಾವ್, ಯಂ ಎ. ಬಿ. ಬುಲ್, ಇವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ನೆರೆ, ಶ್ರೀ ವಿಶಲದಾಸ ಕಟ್ಟೆಯವರ ಪ್ರಾರಂಭ ಭಾಷಣವಾದಮೇಲೆ, ಶ್ರೀ ಶಿವರಂಮು ಕಾರಂ ತರು ಸಾಧಾರಣ ಒಂದುವರೆಗಂಟೆಯ ತನಕ ಸುರಸವಾದ ಭಾಷಣವಿತ್ತರು.

ಇನ್ನೊಂಜೆ:- ಹೈಸ್ಕೂಲಿನ ವಶಾರದಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಪ್ರಭಾತಫೇರಿ ಬೆರವಣಿಗೆ ಡಾ. ಯು.ವೇಸರಾಯರಿಂದ ಧ್ವ ಜಾರೋಹಣ, ಸಾಯಂಕಾಲ ಇನ್ನಂಜೆ ಗ್ರಾ ಮಪ ಪಕೇಲರ ಅಧ್ಯಕ್ಷತೆಯಲ್ಲಿ ಸಭೆ ಭಾಷ ಣಾದಿ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು. ಬಾಲಪೀರದಳದ ಅನೇಕ ಚಟು ವಟಿಕೆಗಳೂ ರಾತ್ರಿ ಸಾಂಗಾಗಿ ಬಾಲ್ಯವಿಲಾಸ ಸಂಘದವರಿಂದ ನಾಟಕಾಭಿನಯವೂ ಇತ್ತು.

ನೋಟೀಸು

ಉಡುಪಿ ಡಿ. ಮು. ಕೋರ್ಟ್‌ನಲ್ಲಿ.

ಕ್ರಮನಂಬ್ರ 211/1948.

ಸುಬ್ಬಾಣಿ ಭಟ್ಟ —ವಾದಿ.

ಸೀತಾರಾಮ ಥೋರಿಬಲ್ಲಾಳ, ಲಿಂಗಪ್ಪ ಥೋ ರಿ ಬಲ್ಲಾಳರ ಮೊಮಗ. ಉಡ್ಡಿ ತಾಲ್ಲು ಮೂಡುಬೆಟ್ಟು ಗ್ರಾಮದ ಕಟ್ಟುವಿ ನೀಡಿನ ಲ್ಲಿರುವವರು —ಪ್ರತಿವಾದಿ.

ಇವರೊಳಗೆ.

ಸಾದಿಗೆ ಪ್ರತಿವಾದಿಯು ತಾರೀಕು 13-12-1942ಲ್ಲಿ ರೂಪಾಯಿ 100/-ಕ್ಕೂ ತಾ 1-2-1943ರಲ್ಲಿ ರೂಪ್ಯಾ 200/ಕ್ಕೂ ಬರಕೊಟ್ಟ ಎರಡು ವಿಮಾಂಡು ನೋಟುಗಳ ಅಸ್ಲು ವ ಅವುಗಳ ಮೇಲಣ ಬಡ್ಡಿ ಅ್ಯವಜುಗಳ ಖೈಕ ಸದ್ದಿ ಎರಡು ವಿಮಾಂಡು ನೋಟುಗಳಲ್ಲಿ ಯೂ ಪ್ರತಿವಾದಿಯು ಬರದಿರುವ ಶರಾಗಳ ಮೇದೆಗೆ ಪ್ಪಲು ಕೊಟ್ಟಿ ಅ್ಯವಜುಗಳು ಕಳ ದು ವಿಳ್ಕುಳಿದ ಅಸ್ಲು ವ ಬಡ್ಡಿ ಕೂಡಾ ರೂಪ್ಯಾ 380-4-7ಕ್ಕೆ ವಾದಿಯು ಪ್ರತಿವಾದಿ ಯ ಮೇಲೆ ಮಾಡಿರುವ ಮೇಲ್ಕಂಡ ದಾನೆ ಯು ತಾರೀಕು 31-8-1948ಕ್ಕೆ ಪ್ರತಿವಾದಿಗೆ ನೋಟೀಸು ಬಗ್ಗೆ ಯಿಟ್ಟಿರುತ್ತಡೆ. ಪ್ರತಿವಾ ದಿಯು ಸದ್ರಿ ತಾ 31-8-1948ನೇ ದಿವಸ ಬೆ ಳಿಗ್ಗೆ ಹತ್ತು ಗಂಟೆಗೆ ಮೇಲ್ಕಂಡ ಕೋರ್ಟ್ ನಲ್ಲಿ ಸ್ವತಹಾ ವ ವಕೀಲರ ಮುಕಾಂತ್ರ ಹಾ ಜ್ರಾಗಿ ಉವಾಹರಜಿಯಿದ್ದರೆ ಜಾಹೀರು ಮಾ ಡಿಕೊಳ್ಳತಕ್ಕದ್ದು. ಯಿದಕ್ಕೆ ತಪ್ಪಿದ್ರೆ ಪ್ರತಿ ವಾದಿಯ ಗೈರು ಹಾಜ್ರಿಯಲ್ಲಿ ಈ ದಾವೆಯು ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲ್ಯ ತಿಳಿಸೋಣಾಗುತ್ತದೆ.

V. R. Kidiyur.
Advocate for Plaintiff.

ಉಡುಪಿ, ತಾರೀಕು 12-8-1948.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕೆಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ವೈದ್ಯರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನೆಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿ ಸುವ ವಿವಿಧ ವ್ಯಾಧಿಗಳ ಬಲ್ಲಿ ಪ್ರಕೃತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ರುಜ್ಜು ವಸ್ಥೆ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಪೂರ್ಣಾಂಡ ದೇವದಲ್ಲಿ ಪ್ರಮುಖ ಅಂಶವಿಯಿಂದ ತಯಾರಿಸಿದ್ದಾಗಿದೆ. ವಿಸರ್ಪಜ್ವರ, ಪೈತ್ತಜ್ವರ, ನಿರ್ಮೋನಿಯ, ಶೀತಜ್ವರ ನುತ್ತು ಮಲೇರಿಯ ಜ್ವರ ನಿರ್ನಾಡಿ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಯಮಮಾತ್ರ—ಸೀ ಮೂತ್ರ, ಅನ್ನಕೋಶ, ಕಳಿಬಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾಕ್ಷವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಸುವ್ಯಾಧಿ,ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲದಿಂದ ಸೇವಿಸುವದಂದಲೇ ಇಲು ಸುರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣ ನಾದ ಬೇನೆಯು ಕಸ್ತಚಿಕಿತ್ಸೆ ಇಲ್ಲದೇನೆ ನಿರ್ನಾಮವಾಗುವುದಕ್ಕೆ ನೂರಾರು ಶಿಫಾರಸುಪತ್ರಗಳು ಬಂ ದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ-ಬಿಂಡಿಯಿಲ್ಲಿ, ಈ ವಾನಿಂಗ್ ಟಿಲ್ಲಿ ತೈಲದಿಂದ ಪಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳಹೊಟ್ಟೆನೋವು,ಕಿವಿಗಳ ಉಷದ್ಭವ ಹೆಂಗಸರ ಮುಟ್ಟಿನಗುವ ಕಾಲದ ಆಕ್ರಮಗಳು, ಹೊಟ್ಟೆ ನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುದು. ಗಾಯ, ಸುಟ್ಟಗಾಯಗಳು,ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ಸೀಸೆ 1ಕ್ಕೆ ರೂ.3-8-0 ವಿ. ಪಿ. ಚೇರ್ಜ್. 1 ಡಜನ್ ಸೀಸೆಗಳಿಗೆ ವಿ. ಪಿ. ಖರ್ಚುಸಹಿತ ರೂ. 42-0-0. ಡ್ರೈಪರ್ ಬಾಟ್ಲಿ ಸೀಸೆಗೆ ರೂ. 5-0-0 ವಿ. ಪಿ. ಚೇರ್ಜ್ ಡಜನ್ ಸೀಸೆಗಳಿಗೆ ರೂ. 60-0-0 ವಿ. ಪಿ. ಚೇರ್ಜ್. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 12 ವಿ ಪಿ. ಮಾಫಿ.

ಪ್ರಶಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ೪೦ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಶರೀರ ರೋಗಗಳನ್ನೂ, ಗುಣವಾಗುವಾರದೆಂದು ವೈದ್ಯರು ನಿರ್ಣಯಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೀವನಲ್ಲಿಟ್ಟುಕೊಳ್ಳಬೇಕಾದ ಸಂಜೀವನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಾಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಸಿಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

24 ಮಾರ್ಚ್ 1948ರ 'ಪ್ರಜಾ ಕ್ತಿಯಲ್ಲಿ'.

"ಮದರಾಸು ಸರಕಾರವು ಕಾಂಗ್ರೆಸ್ ಮಂತ್ರಿ ಮಂಡಲದಿಂದ ಪಡೆಸಲ್ಪಡುವುದೊ ಅಥವಾ ನೈಜಾಮನ ಏಜಂಟರಿಂದ ಲೋ ಎಂದು ನಮಗೆ ತಿಳಿಯದಾಗಿದೆ" ಎಂದೂ 8 ಮಾರ್ಚ್ 1948ರ ಅದೇ ಪತ್ರಿಕೆಯಲ್ಲಿ 'ನೈಜಾಮ ಸರಕಾರದ ಏಜಂಟರಂತೆ ವರ್ತಿಸುತ್ತಿರುವ ಮದ್ರಾಸ್ ಸರಕಾರದವರ ಘೋರಣೆಯನ್ನು ಖಂಡಿಸಲು ನಾವು ಆಂಧ್ರ ಸೋದರರನ್ನೆಲ್ಲಾ ಕೇಳುತ್ತಿದ್ದೇವೆ' ಇತ್ಯಾದಿಯಾಗಿ ಪ್ರಕಟಿಸಿದೆ.

'ಪೀಪಿಲ್ಸ್‌ಏಜ್'(People's Age) ಎಂಬ ಆಂಗ್ಲ ಪತ್ರಿಕೆಯು ತನ್ನ ಸುದ್ದಿಗಾರನ ವರದಿಯನ್ನು ಹೀಗೆ ಪ್ರಕಟಿಸಿದೆ–

"ಮುಂಬಯಿಯು ನೈಜಾಮ ಸೈನ್ಯಗಳಿಗೂ ಮತಾಂಧರಾದ ರಜಕಾರರಿಗೂ ಆಯುಧ ಹಾಗು ಸೈನ್ಯ ಸಾಧನಗಳನ್ನು ಒದಗಿಸುವ ಪ್ರಮುಖ್ಯ ಕೇಂದ್ರವಾಗಿದೆಯೆಂದು ನಾನು ಖಂಡಿತ ತಿಳಿದಿದ್ದೇನೆ."

"……ಸುತ್ತಮುತ್ತಲಿನ ಕಾಂಗ್ರೆಸ್ ಸರಕಾರಗಳೂ ಈ ಬಗ್ಗೆ ನಿಗಾ ಕೊಡುವುದಿಲ್ಲ. ನಿಜವಾಗಿ ಹೇಳುವುದಿದ್ದರೆ ಅವುಗಳಲ್ಲಿ ಕೆಲವು ಪ್ರತ್ಯಕ್ಷವಾಗಿ ಇದಕ್ಕೆ ಒಪ್ಪುತ್ತಿವೆ, ಏಕೆಂದರೆ ಹೀಗೆ ಒದಗಿಸಲಾದ ಆಯುಧಗಳು ಕಮ್ಯುನಿಸ್ಟರ ಮೇಲೆಯೇ ಉಪಯೋಗಿಸಲ್ಪಡುವುದೆಂದು ಅವರಿಗೆ ಹೇಳಲಾಗಿದೆ."

ಆದರೆ ಕಮ್ಯುನಿಸ್ಟರ ಆಟವನ್ನು ಜನರೇ ಕಂಡುಕೊಂಡಿದ್ದಾರೆ. ಅವರ ಸುಳ್ಳೆಲ್ಲಾ ಬಯಲಾಗಿದೆ. ಮುನಗಾಲ ವರ್ಗಣದಲ್ಲಿ ಅನೇಕ ಹಳ್ಳಿಗಳ ಜನರು ಪೋಲಿಸು ಸ್ಟೇಶನಿಗೆ ನೂರುಗಟ್ಟಲೆಯಾಗಿ ರಾಷ್ಟ್ರ ಧ್ವಜವನ್ನು ಹಿಡಿದುಕೊಂಡು ತಾವು ಕಮ್ಯುನಿಸ್ಟ್ ಪಾರ್ಟಿಯ ಸಂಬಂಧವನ್ನು ಬಿಟ್ಟಿದ್ದೇವೆಯೆಂದು ಸಾರುತ್ತಾ ಸಾಗುತ್ತಿದ್ದಾರೆ. ಅಡಗಿಕೊಂಡಿದ್ದ ಕಮ್ಯುನಿಸ್ಟರನ್ನೂ ಅವರು ಲೂಟಮಾಡಿದ ವಸ್ತುಗಳನ್ನೂ ಪೋಲಿಸರಿಗೆ ಒಪ್ಪಿಸುತ್ತಿದ್ದಾರೆ. ಲಕ್ಷಗಟ್ಟಲೆ ಕ್ರಯಬಾಳುವ ವಸ್ತುಗಳನ್ನು ಕಮ್ಯುನಿಸ್ಟರು ತಮ್ಮ "ಸ್ವಾತಂತ್ರ್ಯಯುದ್ಧ" ಕಾಲದಲ್ಲಿ ಲೂಟಿಮಾಡಿದ್ದಾರೆ. ಅವನ್ನೆಲ್ಲಾ ಪಕ್ಕೆ ಹಚ್ಚಿ ಅದರ ದರ ನಿಜವಾದ ಮಾಲಿಕರಿಗೆ ಕೊಡಲಾಗುತ್ತಿದೆ.

ಕಮ್ಯುನಿಸ್ಟರ ಈ ಚಟುವಟಿಕೆಗಳಿಗೆಲ್ಲಾ ಅವರ ರಾಜಕೀಯ ಅದರ್ಶತೆಯೂ ಅಧಿಕಾರ ಲಾಲಸೆಯೂ ಕಾರಣಗಳಾಗಿವೆ. ಅವರು ಇಂದಿನ ಸಮಾಜ ರಚನೆಯನ್ನು ನಾಶಮಾಡಿ ಅದರ ಅವಶೇಷಗಳಿಂದ ಹೊಸ ಸಮಾಜವನ್ನು ಕಟ್ಟಲು ಹವಣಿಸುತ್ತಿದ್ದಾರೆ.

ಕೆಲವೇ ತಿಂಗಳುಗಳ ಹಿಂದೆ ಕಮ್ಯುನಿಸ್ಟ್ ಪಾರ್ಟಿಯವರು ರಾಷ್ಟ್ರೀಯ ಸರಕಾರಕ್ಕೆ ಸರ್ವರೂ ಬೆಂಬಲಕೊಡಬೇಕೆಂದು ಸಾರುತ್ತಿದ್ದರು. 1948ನೇ ಫೆಬ್ರವರಿ ತಿಂಗಳ ಕೊನೆಯಲ್ಲಿ ನಡೆದ ಕಮ್ಯುನಿಸ್ಟ್ ಪಕ್ಷದವರ ದ್ವಿತೀಯ ಮಹಾಧಿವೇಶನವು ಇವರ ಬಣ್ಣವನ್ನು ಬದಲಾಯಿಸಿತು. ಈ ಪಾರ್ಟಿಯು ರಾಷ್ಟ್ರೀಯ ಸರಕಾರಕ್ಕೆ ಬೆಂಬಲ ಕೊಡುವುದನ್ನು ಸಂಪೂರ್ಣ ಅಲ್ಲಗಳೆದು ಈ ಸಂಬಂಧದ ಸುಧಾರಣೆಯ ಯಾದಿಗೆ ಕಾರಿಟ್ಟಿತು. "ಸರಕಾರದ ಪ್ರತಿಕ್ರಿಯಾತ್ಮಕವಾದ ಘೋರಣೆಯೊಡನೆ ಸತತ ಹೋರಾಡಲು ನಿಶ್ಚಯಿಸಿತು"—"ಮೌಂಟ್‌ಬೇಟನ್‌ರ ಒಪ್ಪಂದವು ಜನತೆಯ ಉಚ್ಛ್ರಾಯ ಶಕ್ತಿಗಳ ಮೇಲೆ ಹೂಡಿದ ಬ್ರಿಟಿಷ್ ಸಾರ್ವಭೌಮತ್ವದ ಕುತಂತ್ರ ಪೂರ್ವಕವಾದ ಪ್ರತಿಧಾಳಿಯಾಗಿದೆ. ಅದನ್ನು ಒಪ್ಪಿಕೊಂಡುದರಿಂದ ಸಾಮಾನ್ಯ ಮನುಷ್ಯನ ಸ್ವಾತಂತ್ರ್ಯ ಹೋರಾಟವು ಅಡಗಿಸಲ್ಪಟ್ಟಿತು. ಅಲ್ಲದೆ ರಾಷ್ಟ್ರೀಯ ಧುರೀಣತ್ವವು ಉಪಖಂಡದಿಂದ ನರಳುತ್ತಿರುವ ಮಿಲಿಯಟ್ಟಲೆ ಜನರ ಮೇಲೆ ಭಯಂಕರ ಪರಿಣಾಮವನ್ನು ತಂದಿತು"ಎಂಬ ಈ ಘೋರಣೆಯನ್ನು ಪಾರ್ಟಿಯವರು ಒಪ್ಪಿಕೊಂಡರು.

ಕಮ್ಯುನಿಸ್ಟ್ ಪಕ್ಷದ ಹೊಸ ಕಾರ್ಯದರ್ಶಿಗಳಾದ ಶ್ರೀ. ರಾನಡಿವೆ ಇವರು ತಮ್ಮ ರಾಜಕೀಯದ ಕರಡು ಪತ್ರದಲ್ಲಿ–

"ನೆಹರು ಸಂಕಾರವು ಸಹಕಾರಕ್ಕೆ ಶರಣಾಹೋದ ಹಾಗೂ ಒಡಂಬಡಿಕೆಯ ಸರಕಾರವಾಗಿದೆ. ಪಕ್ಷದ ಹೊಸ ಅಭಿವ್ಯಾಯದಂತೆ ನೆಹರು ಸರಕಾರವು ಬ್ರಿಟಿಷ್ ಚಕ್ರಾಧಿಪತ್ಯ ಮತ್ತು ಹಿಂದುಸ್ಥಾನದ ಸ್ವಾರ್ಥಪರಾಯಣತೆಗಳ ಅಭಿವಿಶ್ರ ಸಂಪರ್ಕದಿಂದ ಹುಟ್ಟಿದ ಕಲಂಕಿತ ಶಿಶುವಿನಂತಿದೆ." ಈ ಅಭಿವ್ಯಾಯದಿಂದ ಕಮ್ಯುನಿಸ್ಟ್ ಪಕ್ಷವು ಜನಶಾ ಸರಕಾರದ ಮೇಲೆ ಅಪಪ್ರಚಾರಕ್ಕೆ ಕೈಹಾಕಿತು. ಈ ಪಕ್ಷದ ಪತ್ರಿಕೆಗಳಲ್ಲಿ ಸರಕಾರದ ಕಡೆಗೆ ಬಹಿರಂಗವಾಗಿ ತಿರಸ್ಕಾರ ತೋರಿಸಲ್ಪಟ್ಟಿತು. ಹಿಂಸಾತ್ಮಕ ಕಾರ್ಯಕಲಾಪಗಳಿಗೆ ಹುರಿದುಂಬಿಸುವ ಕರಪತ್ರಗಳೂ ಸರಕಾರವನ್ನು ಬಹಿರಂಗವಾಗಿ ಧಿಕ್ಕರಿಸಿದುವು.

ಧುರೀಣರು ಪ್ರಕಟಿಸಿದ ಹೋರಾಟ ಕ್ರಮ

1948ನೇ ಎಪ್ರಿಲ್ 3ನೇ ತಾರೀಕಿನ ಮಲೆಯಾಳ ದಿನಪತ್ರಿಕೆ "ದೇಶಾಭಿಮಾನಿ"ಯಲ್ಲಿ ಶ್ರೀ. ಇ. ಎಮ್ಸ್. ಶಂಕರ ನಂಬೂದ್ರಿಪಾದ್, ಕೇರಳದ ಸುಪ್ರಸಿದ್ಧ ಕಮ್ಯುನಿಸ್ಟ್ ನಾಯಕರು, ಹೀಗೆ ಬರೆದಿದ್ದಾರೆ:–

"ಕಮ್ಯುನಿಸ್ಟ್ ಪಕ್ಷವು ನ್ಯಾಯಸಮ್ಮತವಾದ ಪಕ್ಷವಲ್ಲವೆಂದೂ ಅದು ಹಿಂಸಾಕೃತ್ಯಗಳಲ್ಲೇ ನಂಬುಗೆಯುಳ್ಳದ್ದೆಂದೂ ಅಪವಾದ ಹೊರಿಸಲಾಗಿದೆ. ಇದು ನಿಜವಾಗಿದೆ. ಏಕೆಂದರೆ ನ್ಯಾಯವಿರುದ್ಧವಾದ ಎಲ್ಲಾ ಕಾನೂನುಗಳನ್ನು ಕಮ್ಯುನಿಸ್ಟ್ ಪಕ್ಷವು ಉಲ್ಲಂಘಿಸುವುದಲ್ಲದೆ ಬಹಿರಂಗವಾಗಿ ಕೆಲಸ ಮಾಡಲು ಅಸಾಧ್ಯವೆಂದು ಶೋರಿದಾಗ ಇವರೆಲ್ಲಾ ಅಡಗಿ ಕೆಲಸ ಮಾಡುವರು. ದಬ್ಬಾಳಿಕೆಯ ಕಾರ್ಯಕ್ರಮಗಳೆಂದ ಸರಕಾರವು ಅಳುಕುತ್ತಿರುವಾಗ ಕಮ್ಯುನಿಸ್ಟ್ ಪಕ್ಷವು ಉಗ್ರ ಪಕ್ಷವಾಗಿ ಕೆಲಸ ಮಾಡುವುದು"……"ನಮ್ಮ ಚಳವಳದ ಕೊನೆಯ ಹಾಗೂ ಸಂಪೂರ್ಣವಾದ[ಯಶಸ್ವಿತೆಯು ಸ್ವಾರ್ಧಿಗಳಿಂದ ತುಂಬಿದ ಇಂದಿನ ಸರಕಾರವನ್ನು ತೊಗಲಾಡಿಸಿ ಮಜೂರ ಹಾಗು ಕಿಸಾನರ ಪ್ರತಿನಿಧಿಗಳಿರುವ ಸರಕಾರವನ್ನು ಸ್ಥಾಪಿಸುವುದರ ಮೇಲೆಯೇ ಆಧರಿಸಿಕೊಂಡಿದೆ. ಆದುದರಿಂದ ಪ್ರತಿಯೊಬ್ಬನು ಉಳಿಯುವ ಅಥವಾ ಅಳಿಯುವ ಈ ಹೋರಾಟದಲ್ಲಿ ಭಾಗ ವಹಿಸಬೇಕು."

ಕಮ್ಯುನಿಸ್ಟರ ಸಾಲಿಗೆ ಸೇರದವರಿಗೆಲ್ಲಾ ಇವರ ದೃಷ್ಟಿಯಲ್ಲಿ ಜಮಿನ್ದಾರರ ಆಡಿಯಾಳುಗಳೆಂದೂ, ವಿಶ್ವಾಸಘಾತುಕರು ಹಾಗೂ ಸ್ವಪಕ್ಷದ್ರೋಹಿಗಳೆಂದೂ ಮುದ್ರೆಯೊತ್ತಿದ್ದಾರೆ. ಕಮ್ಯುನಿಸ್ಟರು ಇನರ ಮೇಲೆ ಅತ್ಯಾಚಾರ ನಡೆಸಿದ ಅನೇಕ ಸಂದರ್ಭಗಳೂ ಇವೆ. ಶ್ರೀಗಳಾದ ಎ. ವೇದರತ್ನಂ, ಎಂ.ಎಲ್.ಎ., ಟಿ. ಕೆ. ಶ್ರೀನಿವಾಸ ಐಯರ್ ಇವರ ಮೇಲೆ ತಂಜಾವೂರಿನಲ್ಲಿ ಇತ್ತೀಚೆಗೆ ನಡೆಸಿದ ಅತ್ಯಾಚಾರವೇ ಇದಕ್ಕೆ ನಿದರ್ಶನ. ಕಮ್ಯುನಿಸ್ಟರು ಕಾನೂನು ಕಾಯದೆಗಳನ್ನು ಉಲ್ಲಂಘಿಸುತ್ತಿದ್ದಾರೆಂಬುದಕ್ಕೆ ಆಂಧ್ರ ದೇಶ ಮತ್ತು ಮಲಬಾರುಗಳಿಂದ ಬರುತ್ತಿರುವ ಸುದ್ದಿಯೇ ಸಾಕ್ಷಿ. ಕಮ್ಯುನಿಸ್ಟರು ಪ್ರಜಾಕೋರ್ಟುಗಳನ್ನು ರಚಿಸಿ ತಮ್ಮ ವಿರೋಧ ಪಕ್ಷದವರ ವಿಚಾರಣೆ ನಡೆಸಿ ಅನಂತರ ಮರಣದಂಡನೆಯನ್ನು ವಿಧಿಸುತ್ತಿದ್ದಾರೆ. ಈ ಶಿಕ್ಷೆಯು ಕೆಲವು ತಪ್ಪುಕಲ್ಪನೆಗಳಲ್ಲಿ ಜಾರಿಗೂ ತರಲ್ಪಟ್ಟಿವೆಯೆಂದು ಕಾಣುತ್ತಿವೆ.

ಪ್ರಜೆಗಳೂ ಕಮ್ಯುನಿಸ್ಟರೂ

ಈ ಎಲ್ಲಾ ಕಾರ್ಯಗಳೂ ಪ್ರಜೆಗಳ ಹೆಸರಿನಲ್ಲೇ ಮಾಡಲ್ಪಡುತ್ತಿವೆ. ಪ್ರಜಾ ಸ್ವಾತಂತ್ರ್ಯದ ಈ ವೀರಪುರುಷರು ಪ್ರಜೆಗಳಿಗಾಗಿ ಮಾಡುತ್ತಿರುವುದಾದರೂ ಏನು?

…ಇವರು ಜಾತೀಯ ದ್ವೇಷವನ್ನು ಹೆಚ್ಚಿಸಿ ಹಿಂಸೆಯನ್ನು ಹುಟ್ಟಿಸಿದರು.

….ಇವರು ಪ್ರಜಾಪ್ರಭುತ್ವದ ವ್ಯಾಮುಖ್ಯ ತಳಹದಿಯನ್ನೇ ಪುಡಿಮಾಡುತ್ತಿರುವರಲ್ಲದೆ ಜನತಾ ಸರಕಾರದೊಡನೆ ಯುದ್ಧಹೂಡಿದರು.

….ಇವರು ತಮ್ಮ ರಾಜಕೀಯದ ಪಗಡೆಯಾಟದಲ್ಲಿ ಕಿಸಾನರನ್ನೂ ಮಜೂರರನ್ನೂ ಕಾಲಾಳುಗಳಂತೆ ಮುಂದೆ ತಳ್ಳಿದರು.

…ಭಾರತೀಯ ಆಗಸದಲ್ಲಿ ರಕ್ತತಾರೆಯನ್ನು ಕಾಣುವ ತಮ್ಮ ಮತಾಂಧತೆಯ ಉತ್ಸಾಹದಿಂದ ತಪ್ಪುದಾರಿಗೊಯ್ಯಲ್ಪಟ್ಟ ಅಜ್ಞಾನಿ ಮಜೂರರ ರಕ್ತದಿಂದ ಪವಿತ್ರವಾದ ಭಾರತಭೂಮಿಯನ್ನು ಕಲುಷಿತವಾಗಿ ಮಾಡಿದರೂ.

…ಸಾರ್ವಜನಿಕ ಜೀವನದ ಧರ್ಮನೀತಿಯನ್ನೇ ಇವರು ಧ್ವಂಸಮಾಡಿದರು. ರಾಜಕೀಯ ನೀತಿ ಶಿಕ್ಷೆಗಳನ್ನೆಲ್ಲಾ ಹಾಳುಗೆಡವಿದರು.

ಸಾರ್ವಜನಿಕರ ಅಭಿವ್ಯಾಯದ ಮುಂದೆ ಕಮ್ಯುನಿಸ್ಟರ ಮೇಲೆ ಜನತೆಯು ಹೊರಿಸುವ ಅಪರಾಧಗಳು ಇವೇ ಆಗಿವೆ.

ಪುಂಡಾಟಿಕೆಗೆ ಒಡನೆಯೇ ಅವಸಾನ

ಕ್ರಮಬದ್ಧವಾದ ವಿಷಯಗಳನ್ನು ಸುಧಾರಿಸುವ ವಿಷಯದಲ್ಲಿ ಹೊಡುವ ಜಳವಳವು ಕಾನೂನನ್ನು ಉಲ್ಲಂಘಿಸಬಾರದು. ಜನತೆಯಲ್ಲಿ ಯಾವ ಪಂಗಡದವರಾದರೂ ನ್ಯಾಯವಿರುದ್ಧವಾಗಿ ನಡೆದು ತಮ್ಮ ಉದ್ದೇಶಗಳನ್ನು ಸಾಧಿಸಿಕೊಳ್ಳಲು ಹಿಂಸಾತ್ಮಕ ಕಾರ್ಯಗಳನ್ನು ಕೈಕೊಂಡರೆ ಅಂತಹರು ಸಾನಾನ್ಯವಾದ ಕಾನೂನಿಗಿಂತ ಹೊರಗಾವವರೆಂದು ಬೇರೆ ಹೇಳಬೇಕಾಗಿಲ್ಲ. ನಮ್ಮ ವ್ಯಾಂತ್ಯದಲ್ಲಿ ಕಮ್ಯುನಿಸ್ಟರ ಚಳವಳ ಚಟುವಟಿಕೆಗಳು ವಿಶೇಷಾಧಿಕಾರಗಳ ಮೂಲಕ ಅಡಗಿಸಬೇಕಾದ ಪರಿಸ್ಥಿತಿಗೆ ಮುಟ್ಟಿವೆ. ಆದುದರಿಂದ ಸರಕಾರವು ತನ್ನ ಪ್ರಜೆಗಳಿಗೆ ಸಲ್ಲಿಸಬೇಕಾದ ಕರ್ತವ್ಯವನ್ನು ನೆರವೇರಿಸುವುದಕ್ಕಾಗಿ ಈಗ ಅಂತಹ ಆಧಿಕಾರವನ್ನು ಪಡೆದಿದೆ.

ಈ ಅಕ್ರಮಗಳನ್ನು ನಿಲ್ಲಿಸಲು ಸರಕಾರವು ಎಲ್ಲಾ ಬಗೆಯ ತೀವ್ರ ಕಾರ್ಯಕ್ರಮಗಳನ್ನು ಕೈಕೊಳ್ಳುವುದೆಂದು ಜನತೆಗೆ ಈ ಮೂಲಕ ಭರವಸೆ ಕೊಡುತ್ತಿದೆ. ಅಲ್ಲದೆ ವಿಚಾರಿಗಳೆಲ್ಲರೂ ಈ ವಿಷಯದಲ್ಲಿ ಸಂಪೂರ್ಣ ಬೆಂಬಲಕೊಡುವರೆಂದು ಸರಕಾರಕ್ಕೆ ವಿಶ್ವಾಸವಿದೆ. ಯಾರ ಮತವು ದೋಷಯುಕ್ತವೋ, ಯಾರ ವಂಧವು ಹಿಂಸಾಮಯವೋ ಯಾರ ಆಯುಧವು ವಿನಾಶಕಾರಿಯೋ ಯಾರ ಉದ್ದೇಶವು ಅರಾಜಕತ್ವವೋ ಅಂತಹರನ್ನು ಸರಕಾರ ಮಾತ್ರವಲ್ಲ, ಪ್ರಜೆಗಳೂ ಸಹಿಸಲಾರರೆಂಬುದು ಈಗ ಸ್ಪಷ್ಟವಾಗುತ್ತಿದೆ.

(ಮದ್ರಾಸು ಸರಕಾರದ ಸಮಾಚಾರ ಮತ್ತು ಪ್ರಚಾರ ಶಾಖೆಯ ಡೈರೆಕ್ಟರಿಂದ ಪ್ರಕಟಿಸಲ್ಪಟ್ಟದ್ದು.)

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಇಂಗ್ಲಿಷ್ ಕಲಿಯಲು ಅತ್ಯನುಕೂಲವಾದ ಪುಸ್ತಕ

ವಿ. ಕೊಡಡ್ಕಲ್ ಶ್ರೀನಿವಾಸರಾಯರ

ಸುಲಭದಲ್ಲಿ ಇಂಗ್ಲಿಷ್

(English Made Easy)

(ಇಂಗ್ಲಿಷ್ ಸ್ವಯಂಬೋಧಿನಿ)

ಬೆಲೆ ರೂ. 1–8–0; ಟಪ್ಪಾಲು ದ್ವಾರ ರೂ. 1–13–0

ಪ್ರತಿಗಳು ಸಿಗುವ ಮುಖ್ಯ ಸ್ಥಳಗಳು:.

1. ಸ್ಕೂಲ್ ಬುಕ್ ಏಂಪೆನಿ, ಮಂಗಳೂರು, 2. ನವಭಾರತ ಬುಕ್ ಡಿಪೊ, ಉಡುಪಿ. 3 ಸ್ವತಂತ್ರ ಭಾರತ ಬುಕ್ ಕಂಪೆನಿ ವೋರ್ಟ್, ಬೊಂಬಾಯಿ, 4. ಎಂ. ಎಸ್. ಮಯ್ಯ ಪುತ್ತೂರು

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳಲು ಎಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ!

ನಿನ್ನು ಸ್ನಾನ, ಊಟ, ಉಪಹಾರ, ವೈಕರ್, ರಯಿನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ನೀಲಾಗಿ ಉಡುಪಿ ಬ್ರಾಹ್ಮಣರ ಆಡಿಗೆ, ಕಿಂಡಿನಿನಸು, ಇವುಗಳ ರುಚಿರುಚಿ ಹೇಳಬೇಕೇ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಆಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಹುವಂಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೯ ದಿವಸಕ್ಕಾಷ್ಟಗಳು ಹೆಚ್ಚು ಕಡಿಮೆ ಉಪಯೋಗಕ್ಕೆ ಬರುವುದು. ಅಂದರೆ ಕೇವಲ ೯ ರೂಪಾಯಿಗಳು ಒಂದು ಬಾಣಂತಿಯವಳಿಗೆ ಸಾಕಾಗುವುದು ವಿಶೇಷ ವಿವರಕ್ಕಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಕಾಶ್ಯಿ, ಆಯುರ್ವೇದ ಭೂಷಣ, ನಂ.೬ ಕೊಡಿಯಾಲಬೈಲು, ದ.ಕ

ಸ್ಟಾಕಿಸ್ಟರು- ಡಾ| ಬಿ. ಕೆ. ಶಿವರಾಮ ರಾವ್, ಕಾಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರಸೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಜ್ಜುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಿಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ವ್ರಸವವಾಯಾಸವನ್ನು ಹೋಗಲಾಡಿಸಿ, ಉದರಮೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ಶುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಹೇರಾದಷ್ಟು ಹಾಲೆ ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಜೀವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಿದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮಾನಿಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರೆಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ಸಮಾನಿಯ ಔಷಧಿಗಳೂ ದೊರೆಯುತ್ತವೆ. ಕ್ಯಾಲೆ ಸಂಬಂಧ ಬರದಲ್ಲಿ ರೋಗಕ್ಕೆ ತಕ್ಕಷಾದ ಔಷಧಿ ರವಾನಿಸಲಾಗುವುದು. (1)ಉಡುಪಿ ವಿಜಯವಿಠಲ:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪ್ರೊಪ್ರೈಟರ್ ಸ್ಟೋರ್ಸ್, ಕೆನಿಸ್ಟ್ 183, ಝವೇರಿಬಜಾರ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್.(3)ಜನರಲ್ ಸ್ಟೋರ್ಸ್, ಕೆನಿಸ್ಟ್, ಜಿ. ಐ. ಪಿ. ಮಾಟುಂಗಾ.



ಎಲ್ಲ ತರದ ದಂತ ರೋಗಗಳನ್ನು, ಸೆಟ್ಟಿಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ದಕ್ಷಿಣ. ಕನ್ನಡ

ಬೈಲೂರು—ತಾ. 15ರಂದು ಸ್ವಾತಂತ್ರ್ಯ ದಿನಾಚರಣೆಯು ಬೇಗ್ಗೆ ಪ್ರಭಾತಫೇರಿ, ಧ್ವಜಾರೋಹಣ, ಸಂಜೆ ಕಾರ್ಕಳ ಬೋರ್ಡು ಹೈಸ್ಕೂಲಿನ ಪ್ರಥಾನಾಧ್ಯಾಪಕ ಶ್ರೀ. ಬಿ. ರಾಮರಾಯ ಶೆಟ್ರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭಾದಿ ಕಾರ್ಯಕ್ರಮಗಳಿಂದ ಯಶಸ್ವಿಯಾಗಿ ಜರಗಿತು. ಸೇವಾದಳದವರು ಸ್ವರಾಜ್ಯಮಳು ಲಾಪನೆ ಹಾಡಿದಮೇಲೆ ಶ್ರೀಗಳಾದ ಸಂಜೀವಶೆಟ್ಟಿ, ಅನಂತಪ್ಪಕಿಣಿಯವರ ಭಾಷಣಗಳಾಗಿ ಶ್ರೀ. ಡಿ. ಡಿ. ಅರ್ವಾಲರಿಂದ ಧನ್ಯವಾದಾರ್ಪಣೆಯಾಯಿತು.

ಕಲ್ಯಾಣಪುರ—ಪ್ರಭಾತಫೇರಿ, ಶ್ರೀ. ಟಿ. ಜಂದನ ನಂದಿಯಾರರಿಂದ ಧ್ವಜಾರೋಹಣ, ನೂಲುವ ಸ್ಪರ್ಧೆ, ಶಾಲಾವಿದ್ಯಾರ್ಥಿಗಳಿಗೆ ಸಿಹಿತಿಂಡಿ ವಿತರಣೆ, ಪುರಪೌರವಣಿಗೆ, ಶ್ರೀ. ವೆಂಕಟ್ರಪಟ್ಟರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ, ಭಾಷಣಾದಿ ಕಾರ್ಯಕ್ರಮಗಳಿಂದ ಸ್ವಾತಂತ್ರ್ಯ ವರ್ಧಂತಿಯು ಯಶಸ್ವಿಯಾಗಿ ನೆರವೇರಿತು.

ಹಿರಿಯಡ್ಕ—ಪಾಯರ್ ಎಲಿಮೆಂಟ್ರಿ ಶಾಲೆಯಲ್ಲಿ ಶ್ರೀ. ಬೊಮ್ಮರಬೆಟ್ಟು ಪತೇಲ್ ಸುಂದರ ಶೆಟ್ರಿಂದ ಧ್ವಜಾರೋಹಣ, ಮುಖ್ಯ ಉಪಾಧ್ಯಾಯರ ಭಾಷಣ, ಸಿಹಿತಿಂಡಿ ವಿತರಣೆ ಮೊದಲಾದ ಕಾರ್ಯಕ್ರಮಗಳಿಂದ ತಾ|15 ರಲ್ಲಿ ಸ್ವಾತಂತ್ರೋತ್ಸವವು ಜರಗಿತು, ಬೆಳಿಗ್ಗೆ ಮಕ್ಕಳು ಮತ್ತು ಊರ ಮಹನೀಯರ ಮೆರವಣಿಗೆ ಇತ್ತು.

ಪೆರ್ಡೂರು—ತಾ|15ರಲ್ಲಿ ಸ್ವಾತಂತ್ರ್ಯ ದಿನಾಚರಣೆಯು ಶ್ರೀ C. H. ಶೆಟ್ಟರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಾತಃಕಾಲ ಪಲ್ಲಿ ಪ್ರಭಾತಫೇರಿ, ಹಾಗೂ ಧ್ವಜಾರೋಹಣ ಬಾ. ಸಂಜ ನೆರವಣಿಗೆ ಮತ್ತು ಸಾರ್ವಜನಿಕ ಸಭೆಯು ನೆರವೇರಿದ್ದಿತು.!

ಹಂದೀಶ್ರೇಷ್ಠಿ ಮಂಡಲದಿಂದ ಸೂತ್ರಯಜ್ಞದ ಕಾರ್ಯಕ್ರಮವೂ ಇತ್ತು. ಶಾಲೆಗಳಲ್ಲಿ ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಲಾಯಿತು.

ಉದಿಯಾವರ—ಸ್ವಾತಂತ್ರ್ಯ ದಿನಾಚರಣೆ ಸಂಬಂಧ ಇಲ್ಲಿಯ ಉದಯಬಲ ಮೈದಾನವಲ್ಲಿ ತಾ 15ರಲ್ಲು ಬೆಳಿಗ್ಗೆ ಜನಾಬ್ ಯು. ಎಮ್. ಇಬ್ರಾಹಿಮ್ ಸಾಹೇಬರು ಧ್ವಜಾರೋಹಣ ಮಾಡಿದರು. ಮಧ್ಯಾಹ್ನ ಶಾಲಾಮಕ್ಕಳಿಗೆ ತಿಂಡಿ ಹಂಚೋಣದ ಕಾರ್ಯಕ್ರಮವು ಮುಗಿದಬಳಿಕ ಹುರಮೆರವಣಿಗೆ ಹೊರಟು ರಾಷ್ಟ್ರಧ್ವಜವಿದಿಯಲ್ಲಿ ಸುಸಾಜನ ಸಭೆಯು ರಿ ಫಾ| ಪಿ. ಡಿ. ಸೋಜರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಯು. ಭಾಸ್ಕರ ಶೆಟ್ಟ ಮೊದಲಾದವರ ಭಾಷಣಗಳಾದುವು.

ಕೊರಂಗ್ರಪಾಡಿ—ಶ್ರೀ ಕೆ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಬೆಳಿಗ್ಗೆ ಧ್ವಜಾರೋಹಣ ಮಧ್ಯಾಹ್ನ ಶಾಲಾಮಕ್ಕಳಿಗೆ ಸಿಹಿತಿಂಡಿ ಹಂಚೋಣ, ಸಂಜೆ ಸಾರ್ವಜನಿಕ ಸಭೆ ಜರಗಿತು.

ಕಿದಿಯೂರು—ಶ್ರೀ ಎನ್. ರಾಜಗೋಪಾಲ ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ, ಶಾಲಾಮಕ್ಕಳಿಗೆ ಸಿಹಿತಿಂಡಿ ಹಂಚೋಣ, ಗಾ.ಪಂ.ಸ್ಥಾರಿ ಮೆರವಣಿಗೆ, ಸಭೆ, ಭಾಷಣಗಳಾದುವು.

ರಾಮಕುಂಜ—ಕಳದ ತಾ. 9ರಂದು ಇಲ್ಲಿಯ ಎಜ್ಯುಕೇಶನ್ ಸೊಸೈಟಿಯ ಪ್ರೌಢಶಾಲೆಯಲ್ಲಿ ಶ್ರೀ. K. S. ರಾವು ಭಟ್ಟರ ಅಧ್ಯಕ್ಷತೆಯಲ್ಲಿ ಅರ್ಜನ್ ಯೇಂಬ ಹರಿಕಥೆಯು ಬಹಳ ವಿಜೃಂಭಣೆಯಿಂದ ಜರಗಿತು. ಇಲ್ಲೊಂದು ಬ್ರಾಂಚ್ ಪೋಸ್ಟಾಫೀಸ್ ತೆರೆಯುವಂತೆ ಊರ ಪ್ರಮುಖರು ಚಳವಳಿಸುತ್ತಿದ್ದಾರೆ.

ರೇಶನ್ ಕಾರ್ಡುಗಳು

ದೊರೆಯುತ್ತವೆ

ನವಯುಗಪ್ರೆಸ್, ಉಡುಪಿ.

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 303/1948.

ವಾದಿರು— R. F. X. ಫೆರ್ನಾಂಡಿಸ್ ಕೂಡಾ.

ಪ್ರತಿವಾದಿರು—ಪಿ. ನಂದ್ಯಪ್ಪ ಶೆಟ್ಟಿ, & co ಸಾಲಿಗ್ರಾಮ. ಇದ್ದ ಪಾರ್ಟನರ್ರು 1 ವಿ ನಂದ್ಯಪ್ಪ ಶೆಟ್ಟಿ, ವಡ್ಡರ್ಸೆ ಕೃಷ್ಣಪ್ಪ ಶೆಟ್ರ ಆಳಿಯ. 2 ವಿ. ರಾಮಂಜ ಶೆಟ್ಟಿ, 3 ವಿ. ಲಕ್ಷ್ಮಣ ಶೆಟ್ಟಿ, 1ನೇಯವನ ಆಳಿಯಂದಿರ್ರು.

ಅಂತರಾಷ್ಟ್ರೀಯ ರಂಗದಲ್ಲಿ ದೀರ್ಘಾವಧಿಯಿಂದ ನನೆಗುದಿಗೆ ಬಿದ್ದಿರುವ ಮತ್ತೊಂದು ಸಮಸ್ಯೆಯಾದ ಪೆಲಸ್ತೈನಿನ ಸ್ಥಿತಿಯೂ ಬಹುಮಟ್ಟಿಗೆ ಹಿಂದಿನದೇ. ಪವಿತ್ರ ನಗರ ಜೆರುಸಲೇಮಿನಲ್ಲಿ ರಾಂತಿ ಭಂಗಮಾಡಿ ದುಡುಕಿದವರು ಯೆಹೂದಿಗಳೆಂದು ಅರಬರು ಹಾಗೂ ಸಂಯುಕ್ತ ರಾಷ್ಟ್ರ ಸಂಘದಿಂದ ನೇಮಕಗೊಂಡಿರುವ ಮಧ್ಯಸ್ಥಗಾರರ ಹೇಳಿಕೆಗಳಿವೆ. ಪೆಲಸ್ತೈನಿಗೆ ಹೊರಗಿನಿಂದ ಬರುತ್ತಿರುವಯೆಹೂದಿಗಳ ಸಂಖ್ಯೆಯು ಮಧ್ಯಸ್ಥಗಾರ ಕೌಂಟ್ ಬೆರ್ನಾದೊಟ್ಟೆಗೂ ತಲೆನಿಡಿತವನ್ನು ಉಂಟುಮಾಡಿದೆ. ಇಂತಹ ಅಮದನ್ನು ನಿಲ್ಲಿಸುವ ಸೂಚನೆಯನ್ನು ಅವರು ಇಸ್ರಾಯೆಲ್ ಸರಕಾರಕ್ಕೆ ಕೊಟ್ಟಿರುವದಾದರೂ ಯೆಹೂದಿಗಳದಕ್ಕೆ ಕೈಗೊಡುವ ಲಕ್ಷಣಗಳಿಲ್ಲ. ಜಾಗತಿಕ ಸಂಘದಿಂದ ಪೆಲಸ್ತೈನ್ ಸ್ಥಿತಿಯ ಅವಲೋಕನೆಗಾಗಿ ನೇಮಿಸಲ್ಪಟ್ಟ ಮಧ್ಯಸ್ಥಗಾರರ ವಿಮಾನವೊಂದು ಗಾಳುಬಾದಲ್ಲಿ ಇಳಿಯುವಾಗ ಈಜಿಪ್ತಿನ ಕಡೆಯಿಂದ ಪ್ರಮಾದವಶಾತ್ ಗುಂಡಿಡಲ್ಪಟ್ಟು ಇಬ್ಬರು ಮಧ್ಯಸ್ಥಗಾರ ಅವಲೋಕಿಗಳು ಮಡಿದಿರುವರು. ಪೆಲಸ್ತೈನ್ ಮತ್ತು ನೆರೆಯ ರಾಷ್ಟ್ರಗಳ ನಿರಾಶ್ರಿತರ ಸಹಾಯಕ್ಕಾಗಿ, ಜಾಗತಿಕ ಸಂಘದ ಪೆಲಸ್ತೈನ್ ಮಧ್ಯಸ್ಥಗಾರ ಪ್ರಮುಖ ಕೌಂಟ್ ಬೆರ್ನಾದೊಟ್ಟೆಯವರು ನಿಧಿರಚಿಸಿ ಭಾರತ ಸರಕಾರದಿಂದಲೂ ಸಹಾಯಯಾಚಿಸಿದ್ದರು. ಪ್ರಧಾನಿ ನೆಹರುಗಳು ಈ ನಿಧಿಗೆ ಒಂದು ಲಕ್ಷ ರೂ. ದಾನ ಮಾಡಿದುದನ್ನು ಕೌಂಟ್ ಬೆರ್ನಾದೊಟ್ಟೆ ಕೃತಜ್ಞತಾಪೂರ್ವಕ ಸ್ವೀಕರಿಸಿದ್ದಾರೆ: "ನನ್ನ ವಿನಂತಿಯನ್ನು ಭಾರತ ಸರಕಾರವು ಅತ್ಯವಸರದಿಂದ ಹಾಗೂ ಅತ್ಯುದಾರತೆಯಿಂದ ಮನ್ನಿಸಿ ಸಹಾಯ ಸಲ್ಲಿಸಿದುದಕ್ಕಾಗಿ ಕೃತಜ್ಞನಾಗಿದ್ದೇನೆ. ತಮ್ಮ ಸರಕಾರವೂ ನಿರಾಶ್ರಿತರ ಸಮಸ್ಯೆಗೊಳಗಾಗಿರುವುದನ್ನು ತಿಳಿದಿರುವುದರಿಂದಂತೂ ನಾನು ತಮ್ಮ ದಾನವನ್ನು ಇನ್ನೂ ಹೆಚ್ಚು ಕೊಂಡಾಡಬೇಕಾಗಿದೆ" ಎಂದು ಬರೆದಿದ್ದಾರೆ ಬೆರ್ನಾದೊಟ್ಟೆ ಪಂಡಿತ ನೆಹರುಗಳಿಗೆ.

ಇನ್ನೊಂದು ಗಣ್ಯ ಘಟನೆಯೆಂದರೆ, ಸರಕಾರೀ ಬದಲಾವಣೆಯ ವಾಯುವೇಗಕ್ಕೆ ಹೆಸರಾದ ಫ್ರಾನ್ಸಿನಲ್ಲಿ ಮಂತ್ರಿಮಂಡಲ ಪುನಃ ಕನಿಷ ಬಿದ್ದುದು ಹಿಂಗಿನ ಮಂತ್ರಿಮಂಡಲವನ್ನು ಕಿತ್ತು ಪಾತಿಸಿ. ಜುಲಾಯಿ 26ರಲ್ಲಿ ಅಧಿಕಾರಕ್ಕೆ ಬಂದಿದ್ದ ಪ್ರಧಾನಿ ಆಂಬ್ರೆ ಮೇರಿಯ ಸರಕಾರವು ಆಗೋಸ್ತು 24ರಲ್ಲಿ ಪತನಗೊಂಡಿತು. ಜರ್ಮನ್ ಆಕ್ರಮಣದಿಂದ ಬಿಡುಗಡೆಗೊಂಡು ಫ್ರಾನ್ಸು ಸ್ವತಂತ್ರವಾದ ಬಳಿಕ ಕಳಚಿಬಿದ್ದ 10ನೇ ಮಂತ್ರಿಮಂಡಲವಿದು. ಫ್ರಾನ್ಸಿನ ಆರ್ಥಿಕ ಪುನರುತ್ಥಾನಕ್ಕಾಗಿ ಅರ್ಥಸಚಿವ ಪಾವುಲ್ ರೈನಾಡಿರು ಕಯಾಸಿದ ಯೋಜನೆಯ ಕುರಿತು ಮಂತ್ರಿಗಳೊಳಗೆ ಭಿನ್ನಾಭಿಪ್ರಾಯಗಳೆದ್ದುದರಿಂದ ಮಂಡಲಿಯೇ ರಾಜೀನಾಮೆಕೊಟ್ಟಿತು. ಫ್ರಾನ್ಸಿನ ಆಧ್ಯಕ್ಷರು ಹೊಸ ಸರಕಾರ ರಚಿಸಲು ವಿವಿಧ ಪಕ್ಷಗಳ ಪ್ರಮುಖರೊಡನೆ ಪರ್ಯಾಲೋಚನೆ ನಡಿಸಿದ್ದಾರೆ.

ಸ್ವತಂತ್ರ ಬರ್ಮದ ಸರಕಾರವು ಕಠಿಣ ಹೆಸ್ತದಿಂದ ಇದಿನಿಸಿದರೂ ಅಲ್ಲಿಯ ಕಮ್ಯೂನಿಸ್ಟ್ ಆಕ್ರಮಣಗಳನ್ನು ಸದೆಬಡಿಯಲು ಸಾಧ್ಯವಾಗದೆ ಬರ್ಮದ ಆಧ್ಯಪ್ಪವೇ ಆಪಾಯಕ್ಕೊಳಗಾದ ಚಿಹ್ನೆಗಳು ಕಾಣಿಸುತ್ತಿವೆ. ಬ್ರಟಿಷ್ ಸಹಾಯದ ಬಯಕೆ ಬರ್ಮಾ ಸರಕಾರಕ್ಕೆ ಮೂಡಿದಂತಿದೆ. ಸ್ವತಂತ್ರಗೊಂಡ ಕೆಲವೇ ತಿಂಗಳುಗಳೊಳಗೆ ಬರ್ಮದ ಸ್ಥಿತಿ ಮತಿ ಏಗಾದುದು ಶೋಚನೀಯ.

ಮಲಯದ ಗಲಭೆಯೂ ಪೂರ್ಣ ಹತೋಟಿಗೆ ಬಾರದೆ ಬ್ರಟಿಷ್ ಸರಕಾರವನ್ನು ವಿಶೇಷಾಲೋಚನೆಗೆ ಈಡು ಮಾಡಿದೆ.

ಕೊಟ್ಟಿಸಾಡಿಗಾಗಿ ಎಷ್ಟೋ ವರುಷಗಳ ಮೊದಲೇ ದಕ್ಷಿಣಾಫ್ರಿಕ ಮತ್ತು ಸಿಲೋನುಗಳಿಗೆ ಹೋಗಿ ನೆಲಸಿದ್ದ ಹಿಂದೀಯರನ್ನು ವಿಶೇಷ ರೀತಿಯ ದುರ್ಬೈವ ಪೀಡಿಸುತ್ತಿದೆ. ದಕ್ಷಿಣಾಫ್ರಿಕದಲ್ಲಿ ಹಿಂದಿನಿಂದಲೂ ಇದ್ದ ಹಿಂದೀ ವಿರೋಧ ರಾಸನ ಫಾಗೂ ಅತ್ಯಾಚಾರಗಳು ಈಗಿನ ಮಲಾನ್ ಸರಕಾರದ ಅಡಳಿತೆಯಲ್ಲಿ ಇನ್ನಷ್ಟು ಗೊಂಡಿವೆ. ದಕ್ಷಿಣಾಫ್ರಿಕ ರಾಸನ ಸಭೆಯಲ್ಲೇಗ ವಿರುದ್ಧ ಪಕ್ಷದ ನಾಯಕನಾಗಿರುವ ಜನರಲ್ ಸ್ಮಟ್ಸರು ಮಲಾನ್ ಸರಕಾರದ ಭೇಸಿಸಮ್ ಮತ್ತು ಜನಾಂಗ ದ್ವೇಶ ಕೃತ್ಯಗಳನ್ನು ಖಂಡಾಖಂಡಿ ಇದಿರಿಸಲು ಮುಂದೆ ಬರಬೇಕೆಂದು ಅಲ್ಲಿಯ ನಾತಾಲ್ ಕಾಂಗ್ರೆಸು ಸ್ಮಟ್ಸರನ್ನು ಆಹ್ವಾನಿಸಿದೆ ತನ್ನಲ್ಲಿರುವ ಭಾರತೀಯ ತೋಟ ಕೆಲಸಗಾರರ ಸಂಖ್ಯೆಯ ಹೆಚ್ಚಳವನ್ನು ಕಂಡು ಸಿಂಹಳದ ಸರಕಾರವೂ ಹೆದರಿ, ಭಾರತೀಯರಿಗೆ ಅಲ್ಲಿಯ ನಾಗರಿಕ ಹಕ್ಕನ್ನೇ ಅಲ್ಲಗಳೆಯುವ 'ಸಿಲೋನ್' ನಾಗರಿಕ ಮಸೂದೆಯನ್ನು ತಯಾರಿಸಿದೆ. ಈ ಕುರಿತು ಭಾರತದಲ್ಲಿ ವಿರೋಧ ವೆದ್ದಿದೆ.

ಹೈದರಾಬಾದ್ ತಂಟೆ

ಕಟ್ಟಕಡೆಯ ದಿನಗಳಲ್ಲಿ ಭಾರತ-ಹೈದರಾಬಾದುಗಳೊಳಗಿನ ವ್ಯವಹಾರಗಳಲ್ಲಿ ಇರಬೇಕಾದಷ್ಟು ಕಠೋರತೆ ಮತ್ತು ತೀವ್ರತೆ ಕಂಡುಬಂದಿಲ್ಲವಾದ್ದರಿಂದಲೇ ದೊಡ್ಡ ವಿಮಾಣದ ಘರ್ಷಣೆ ಸಮೀಪಿಸುತ್ತಿದೆ, ಎಂದು ಊಹಿಸಬಹುದು. ಈಗ ಈ ನಾಟಕವು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಹೈದರಾಬಾದಿನ ಪಾತ್ರ ಜರುಗಿಯ ಕೊಡವ ಅಂಕದಲ್ಲಿದೆ. ನಿಜಾಮರು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲಿನ ಅಧ್ಯಕ್ಷರಿಗೊಂದು ಹತ್ರ ಬರೆದು, ಭಾರತದ ಕೃತ್ಯಗಳಿಂದ ಹೈದರಾಬಾದಿನ ಅಸ್ತಿತ್ವಕ್ಕೇನೇ ಅಪಾಯವಿದೆ ಬೆದರಿಕೆ ಬಿದ್ದಿದೆಯೆಂದೂ, ಭದ್ರತಾ ಕೌನ್ಸಿಲು ಕೂಡಲೇ ಕೈ ಹಾಕಿ ಭಾರತ-ಹೈದರಾಬಾದುಗಳೊಳಗಿನ ವರುಷಾವಧಿ ವಿನಾದವನ್ನು ನಿಲ್ಲಿಸಬೇಕೆಂದೂ, ಮುಂದಿನ ತಿಂಗಳು ಪ್ಯಾರಿಸಿನಲ್ಲಿ ಸೇರಲಿರುವ ರಾಷ್ಟ್ರ ಸಂಘದ ಜಾಹೀರು ಅಧಿವೇಶನದಲ್ಲಿ ತನ್ನ ದೂರನ್ನು ಮುಂದಿಡುವ ಅಧಿಕಾರವೀಯಬೇಕೆಂದೂ ಕೇಳಿಕೊಂಡಿದ್ದಾರೆ. ಸಂಯುಕ್ತ ರಾಷ್ಟ್ರ ಸಂಘದ ಘಟನಾವಳಿಯ ೩೫(೭)ನೇ ನಿಬಂಧನೆಯಲ್ಲಿ ಸಂಘದ ಸದಸ್ಯನಲ್ಲದ ಯಾವುದೇ ರಾಷ್ಟ್ರಕ್ಕಾಗಲೂ ಸ[illegible]ನ್ನು ಪ್ರಸುವ ಹಕ್ಕಿದೆ ಎಂದು ಉಲ್ಲೇಖಿಸಲ್ಪಟ್ಟಿದೆ. ಜಾಗತಿಕ ಸಂಘದಲ್ಲಿ ಭಾರತದ ಕಾಯಂ ಪ್ರತಿನಿಧಿಯಾಗಿರುವ ಡಾ. ಪಿ. ಪಿ. ಪಿಳ್ಳೈಯವರು ಮೊದಲಿನಿಂದಲೂ ಸ್ವತಂತ್ರ ರಾಷ್ಟ್ರವಾಗಿರದ, ಈಗಲೂ ವಿದೇಶ ಸಂಬಂಧಾಧಿಕಾರವನ್ನು ಭಾರತಕ್ಕೆ ಒಪ್ಪಿಸಿಕೊಟ್ಟಿರುವ ಹೈದರಾಬಾದಿಗೆ ಸಂಯುಕ್ತರಾಷ್ಟ್ರ ಸಂಘದ ಮುಂದೆ ದೂರು ಕೊಡುವ ಸ್ಥಾನಾಧಿಕಾರವಿಲ್ಲವೆಂದು ಸ್ಪಷ್ಟ ಪಡಿಸಿದ್ದಾರೆ. ನಿಜಾಮರು ದೂರನ್ನು ಜಾಗತಿಕಸಂಘದ ಮುಂದಿಡುವ ಕರ್ತವ್ಯವನ್ನು ಅರಬ್ರಾಷ್ಟ್ರಗಳಲ್ಲೊಂದಾದ ಸಿರಿಯವು ವಹಿಸಿಕೊಂಡಿರುವದೆಂದು ತಿಳಿದು ಬರುತ್ತದೆ. ಸತ್ಯಕ್ಕೂ ಸಿರಿಯವು ಇಂತಹ ಅಧಿಕ ಪ್ರಸಂಗಕ್ಕೆ ಹೋದರೆ ಭಾರತವು ಸಿರಿಯದ ಸಂಬಂಧವನ್ನು ಕೆಡಿದುಕೊಳ್ಳುವದು ಬಹಳ ಮಟ್ಟಿಗೆ ಸಂಭವನೀಯ.

ಅತ್ತ ಈ ನೊದಲೇ ನಿಜಾಮರಿಂದ ಬ್ರಿಟನಿನ ರಾಜರಿಗೆ ಹೋಗಿದ್ದ ಪತ್ರಕ್ಕೆ ಭಾರತೆ ಸರಕಾರದ ವಿಮಾಪಾಂತರ ಉತ್ತರ ಬಂದ ವಾರ್ತೆಯಿದೆ. ಅದರಲ್ಲಿ ನಿಜಾಮರು ವ್ಯವಹಾರ್ಯ ವರ್ತನೆ ವಹಿಸಿ ಭಾರತ

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್
ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ ೫/- ರೂಪಾಯಿ.

ಅತೀ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸು ಖಾತೆಗಳು ಠೇವಿನ ಲ್ಲಟ್ಟು ಬಡ್ಡಿ ಸೇಕಡಾ ೨/- ರೂಪಾಯಿಗಳಂತೆ ಕೊಡಲಾಗುವದು

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಹತ್ತಿರದ ಕಾಪಿಗೆ ಬರಹ ತಿಳಿಯಿರಿ,

The Agricultural & Industrial Bank, Limited.
Head Office: Coondapoor, S. K.

ಹೈದರಾಬಾದ್, ಕಾಶ್ಮೀರ ವಿವಾದಗಳ ನವರೂಪ.

ಸರಕಾರದೊಂದಿಗೆ ರಾಜಿ ಮಾಡಿಕೊಳ್ಳ ಬೇಕೆಂದು ನಿಜಾಮರಿಗೆ ಬಂದಿರುವರೆಂದು ತಿಳಿದು ಬಂದಿದೆ. ಗವರ್ನರ್ ಜನರಲ್ ಶ್ರೀ ಸಿ. ರಾಜಗೋಪಾಲಾಚಾರ್ಯರು ಇದೇ ಕೊನೆಯ ಎಚ್ಚರಿಕೆಯೆಂಬಂತೆ "ತೀರಾ ಶಡವಾಗುವ ಮೊದಲೇ ಹಿಂದೀಕೇಂದ್ರದೊಂದಿಗೆ ಸೇರಿಕೊಳ್ಳಿ" ಎಂದು ನಿಜಾಮರಿಗೆ ತಿಳಿಸಿದ್ದಾರೆ. ಕಾವು ಜಾಗತಿಕ ಸಂಘಕ್ಕೆ ದೂರನ್ನೊಪ್ಪಿಸುವೆನೆಂದು ಹೈದರಾಬಾದಿನ ಪ್ರಧಾನಿ ಮಿ. ಲಾಯಕ್ ಅಲಿಗಳು ಭಾರತದ ಪ್ರಧಾನಿ ಪಂಡಿತ ನೆಹರೂಗಳಿಗೆ ತಿಳಿಸಿದ್ದರು;ಹಾಗೆ ದೂರು ಕೊಡುವ ಹಕ್ಕೇ ಹೈದರಾಬಾದಿಗಿಲ್ಲವೆಂಬ ಆರ್ಥದ ಭಾರತ ಸರಕಾರದ ಖಂಡತುಂಡ ಉತ್ತರ ಹೋಗಿದೆ. ಈ ಉತ್ತರವನ್ನು ಹಿಡಿದುಕೊಂಡು ಹೈದರಾಬಾದಿನ ವಿಜಂಟ್‌ಜನರಲರಾಗಿ ನವಘಟ್ಟಿಲ್ಲಿಯು ಮಿ. ಎಸ್. ಎಮ್. ಎ. ರಜ್ವೀಯು ಹೈದರಾಬಾದಿಗೆ ಬಂದಾಗ ನಿಜಾಮರು ತನ್ನ ಹಿಂದಿನ ವಿಜಂಟ್‌ಜನರಲ್ ನವಾಬ್ ಜಾಯನ್ ಯಾರ್‌ಜಂಗ್ ಬಹದ್ದೂರರನ್ನು ಕರೆಸಿಕೊಂಡು ಇಬ್ಬರೊಡನೆಯೂ ಪರ್ಯಾಲೋಚನೆ ನಡೆಸಿ ಇಬ್ಬರನ್ನೂ ಢಿಲ್ಲಿಗೆ ಬೀಳ್ಕೊಟ್ಟಿದ್ದಾರೆ ಗವರ್ನರ್ ಜನರಲರ ವಿಜ್ಞಾಪನೆಗುತ್ತರವಾಗಿ, ತನಗೆ ಭಾರತದೊಡನೊಂದು ಒಪ್ಪಂದ ಮಾಡಿಕೊಂಡು ಸನ್ಮೈತ್ರಿಯಸ್ಥಿರಬೇಕೆಂಬ ಆಶಾವಿದಿಯೆಂದು ನಿಜಾಮರು ಬರೆದಿರುವರೆಂದೂ, ಆದರೆ ತನ್ನ ಧೋರಣೆಯನ್ನೇನೂ ಅವರು ಬದಲಾಯಿಸಿದ್ದಿಲ್ಲವೆಂದೂ ಗೊತ್ತಾಗಿದೆ.

ಇತ್ತ ಭಾರತ ಮತ್ತು ಹೈದರಾಬಾದುಗಳ ನಡುವಿನ ಗಡಿ ಪಲಯಗಳಲ್ಲಿ ವಿಶೇಷ ರೀತಿಯ ಘರ್ಷಣೆಗಳು ನಡೆದಿವೆ. ಒಳಗಡೆ ನಿಜಾಮ್ಸ್ ಸೈನಿಕರ ಮತ್ತು ರಝಾಕಾರ್ ದಳಗಳ ಚಲನವಲನಗಳು ಆಯಕಟ್ಟಿನ ಸ್ಥಳಗಳಲ್ಲಿ ನಡೆಯುತ್ತಿವೆ. ನಿಜಾಮರು ಯುದ್ಧಕ್ಕಾಗಿ ತನ್ನಿಂದ ಸಾಧ್ಯವಿರುವ ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿರುವರೆಂಬುದಕ್ಕೆ ಸಾಕಷ್ಟು ನಿದರ್ಶನಗಳು ದೊರೆತಿವೆ. ಹೈದರಾಬಾದಿನೊಳಗಿನ ಊರೂರುಗಳ ಮೇಲೆ ರಝಾಕಾರರ ಸೈತಾನೀಧಾಳಿಗಳು ಮತ್ತು ಅತ್ಯಾಚಾರಗಳಂತೂ ಅಧಿಕ ಪರಿಮಾಣದಲ್ಲಿ ನಡೆಯುತ್ತಿವೆ. "ಪರಿಸ್ಥಿತಿಯ ಭೀಕರತೆಯನ್ನು ಸಾರಿ ಹೇಳುವ ಮೂಲಕ ಹೈದರಾಬಾದಿಗಳೆಲ್ಲರ ಕಣ್ಣನ್ನೂ ತೆರೆಯಿಸಿ, ಒಗ್ಗಟ್ಟು ಮತ್ತು ಶಕ್ತಿಯನ್ನು ನಿರ್ಮಿದ ಸರ್ದಾರ್ ಪಟೇಲ್ ಮತ್ತು ಪಂಡಿತ ನೆಹರುಗಳಿಗೆ ನಮ್ಮ ಧನ್ಯವಾದಗಳು ಸಲಬೇಕು" ಎಂದು ರಝಾಕಾರ್ ನಾಯಕ್ ಕಾಸಿಮ್ ರಜ್ವಿ ಬಹಿರಂಗ ಸಬೆಯೊಂದರಲ್ಲಿ ಹಂಗಿಸಿ ಮಾತಾಡಿದ್ದಾನೆ. ಹಿಂದುಗಳು ಹೈದರಬಾದಿನ ಭಕ್ತಿಯಿಂದಿದ್ದರೆ ರಝಾಕಾರರು ತಮ್ಮ ಪ್ರಾಣಕೊಟ್ಟಾದರೂ ಅವರನ್ನು ರಕ್ಷಿಸುವರೆಂದು ಪ್ರೇರೇಪಿಸಿದ್ದಾನೆ. ಇವೆಲ್ಲಾ ಕೋರುವಿಕೆಯ ಜಲನವಲನಗಳ ಹಿಂಗಡೆಯಲ್ಲಿ ಭಾರತ ಸರಕಾರವು ತನ್ನ ಮುಂದಿನ ಹೆಜ್ಜೆಗಾಗಿ ಸಿದ್ಧತೆ ನಡೆಸುತ್ತಿರುವ ಗಭೀರ ದೃಶ್ಯವು ನೃಷ್ಟಿಗೆ ಗೋಚರಿಸುತ್ತಿದೆ.

ಕಾಶ್ಮೀರದ ಕಾಳಗ

ಪಾಕಿಸ್ತಾನವು ವಿಶೇಷ ರಸ್ತ್ರೋಸಕರಣಗಳ ಸಮೇತ ಕಟ್ಟಿನ ಸೇನೆಗಳನ್ನು ಹೊಗಿಸಿ ಜಮ್ಮು ಮತ್ತು ಕಾಶ್ಮೀರಗಳಲ್ಲಿ ನಡೆಸಿದ ಪ್ರಚಂಡ ಧಾಳಿಯು ಬೆನ್ನೀಗ ಮುರಿದು ಹೋಗಿದೆ; ಯುದ್ಧವು ಹಿಂದಿನ ಸ್ಥಿತಿಗೇನೇ ತಗ್ಗಿ ದೆಯಲ್ಲದೆ ಅಲ್ಲಲ್ಲಿ ವೈರಿ ಸೇನೆಗಳು ಬೆನ್ನು ಕೊಡದೇ ಶಾಗಿ ಬಂದು ದೂ ಇದೆ ವಿಜಯ ಸಾಧನೆಗೆ ಒಮ್ಮೆ ಹೂಡಿದ್ದ ಈ ಪಾಕಿಸ್ತಾನ್ ಧಾಳಿಯ ಫಲಿತಾಂಶವಾಗಿ ಧಾಳಿಗಾರರು ಆದಿ ಭಾಗದಲ್ಲಿ-ಒಂಭತ್ತು ತಿಂಗಳ ಮೊದಲು-ಕಾಶ್ಮೀರದ ಎಲ್ಲೆಲ್ಲಿದ್ದರೋ ಅಲ್ಲಲ್ಲಿಯೇ ಉಳಿಯುವಂತಾಗಿದೆ ಹೊರತು ಹೆಜ್ಜೆ ಮುಂದಿಡಲಾಗಿಲ್ಲ. ಪ್ರಥಮತ: ಒಮ್ಮೆ ಹೊರಸುತ್ತಿನವರೆಗೂ ಬಂದಿದ್ದ ರಾಜಧಾನಿ ಶ್ರೀನಗರವು ಅವರಿಗೆ ದೂರದಲ್ಲೇ ಉಳಿದಿದೆ; ಹೈದಯಪ್ರದೇಶ ಕಾಶ್ಮೀರ ಕಂದರ ಕೂಡಾ ಕೈಗೆಟಕಿಲ್ಲ. ನವ ಧಾಳಿಯಾರಂಭದಿಂದ ಆಕ್ರಮಣ ಹೋರಾಟ ಕೊಡುತ್ತಿದ್ದ ಧಾಳಿಗಾರರು ಈಗ ಕೆಲವು ರಂಗಗಳಲ್ಲಿ ಸ್ವರಕ್ಷಣ ಸಮರ ಕೊಡುವ ಸ್ಥಿತಿಗೊಳಗಾಗಿದ್ದಾರೆ. ಧಾಳಿಗಾರರ ಮುಖ್ಯ ಸರಬರಾಯಿ ಕೇಂದ್ರವಾಗಿದ್ದು ಸುಭದ್ರ ವಿಮಾನ ನಿಲ್ದಾಣವೂ ಇರುವ ಗಿಲ್ಗಿಟ್ಟಿನ ಮೇಲೆ ಹಿಂದೀ ವಿಮಾನಗಳು ಅತಿ ಪ್ರಚಂಡ ಆಕಾಶ ಧಾಳಿಗಳನ್ನು ಮೇಲಿಂದ ಮೇಲೆ ನಡೆಸಿ ಎಲ್ಲವನ್ನೂ ಧ್ವಂಸಗೊಳಿಸಿವೆ; ವೈರಿಯ ಸರಬರಾಯಿ ಮೂಲಬುಗ್ಗೆಯನ್ನೇ ಒಣಗಿಸಿವೆ.

ರಾಷ್ಟ್ರ ಕೂಟದಿಂದ ನೇಮಿಸಲ್ಪಟ್ಟಿರುವ ಕಾಶ್ಮೀರ ಸಮಿತಿಯವರು ಸ್ಥಿತಿ ಪರಾಮರ್ಶೆಯಲ್ಲಿದ್ದಾರೆ. ಜೋರಾಟ ನಿಲ್ಲಿಸುವಾಗ ಶಾಂತಿ ಪಾಲನೆಯನ್ನು ನೋಡುವದಕ್ಕಾಗಿ ಕೆಲವು ಅವಲೋಕನಾ ಮಧ್ಯಸ್ಥಗಾರರನ್ನು ಕಳುಹುವಂತೆ ಸಂಯುಕ್ತ ರಾಷ್ಟ್ರ ಸಂಘಕ್ಕೆ ಬರಕೊಂಡಿದ್ದರೆಂದೂ ಕದನ ನಿರಾಂವಾಗಿ ಅವಲೋಕಿಸಿಕೊಂಡ ಬರಲಿದೆಯೆಂದೂ ತಿಳಿದು ಬರುತ್ತದೆ. ಕಾಶ್ಮೀರ ರಣರಂಗದಲ್ಲಿ ಹೋರಾಡುತ್ತಿದ್ದ ಪಾಕಿಸ್ತಾನೀ ಸೇನೆಗಳ ವಶ ಅನೇಕರಿದ ಶಸ್ತ್ರಾಸ್ತ್ರಗಳಿದ್ದುವಂತೆ: ಇವು ಟರ್ಕಿಯಾ ಮುಖಾಂತರ ಸರಬರಾಯಿಯಾಗಿರಬೇಕೆಂದು ನಂಬಲಾಗಿದೆ.

ಇತರ ಘಟನೆಗಳು

ಕೆಲಕಾಲದಿಂದ ತರ್ಕ ವಿತರ್ಕಗಳ ವಿಷಯವಾಗಿದ್ದ ಬರೋಡದ ಮಹಾರಾಜರ ಅಕ್ರಮ ವರ್ತನೆಗಳ ಕುರಿತು ಸರ್ದಾರ್ ಪಟೇಲ್ ಮತ್ತೀ ಮಹಾರಾಜರೊಳಗೆ ನಡೆದ ಮಾತುಕತೆಗಳ ಪರಿಣಾಮವಾಗಿ ಈಗ ಒಂದೂ ಸ್ಪಷ್ಟ ಒಪ್ಪಂದವಾಗಿದೆ. ಹಿಂದೀ ಸರಕಾರದ ಸಂಸ್ಥಾನ ಖಾತೆಯ ನಿರ್ದೇಶನಾನುಸಾರವಾಗಿ ಬರೋಡದ ಮಹಾರಾಜರು-ಯಾವ ಹಕ್ಕುಗಳನ್ನೂ ಕಾದಿರಿಸದೆ ಸಂಪೂರ್ಣ ಪ್ರಜಾ ಜವಾಬ್ದಾರೀ ಸರಕಾರಕ್ಕೆ ಸ್ಥಾಪನೆ-ತನ್ನ ಗೈರುಹಾಜರಿಯಲ್ಲಿ ರಾಜ್ಯಾಧಿಕಾರಗಳನ್ನು ನಿರ್ವಹಿಸುವದಕ್ಕಾಗಿ ಮಹಾರಾಣಿ ಶಾಂತಾದೇವಿ, ದಿವಾನ್ ಮತ್ತು ಕಾಯಿದೇ ಮಂತ್ರಿಗಳನ್ನೊಳಗೊಂಡ ಒಂದು ಕಾನ್ಸಿಲನ ರಚನೆ-ಸಂಸ್ಥಾನದ ಪ್ರಜಾನಿಯೆಂಬ ವಡಾವಡಿಸಿಕೊಂಡ ಮತ್ತು ಸಂಸ್ಥಾನೀ ನಿಧಿಯಿಂದ ತೆಗೆದ ಎಲ್ಲಾ ಹಣಗಳ ಮರುಪಾವತಿ-ಮುಂತಾದ ಶರ್ತಗಳಿಗೆ ಒಪ್ಪಿದ್ದಾರೆ.

ಅದೇ ರೀತಿ ಮಧ್ಯ ಪ್ರಾಂತ್ಯ ಮತ್ತು ಒರಿಸ್ಸಾದೊಂದಿಗೆ ಈ ಪೂರ್ವದಲೇ ಪೂರ್ಣ ಐಕ್ಯಗೊಂಡಿದ್ದ ಕೆಲವು ಸಣ್ಣ ಸಂಸ್ಥಾನಗಳು ತಾವು ತಮ್ಮೊಳಗೊಂದೊಂದು ಸಂಸ್ಥಾನೀಕೂಟಗಳನ್ನು ಕಟ್ಟಿಕೊಂಡು ಪ್ರಾಂತ್ಯಗಳಿಂದ ಪೃಥಕ್ಕೀಕರಣಗೊಳ್ಳಬೇಕೆಂದು ಒತ್ತೀ ಚಿಗಿನ ಕೆಲವು ತಿಂಗಳುಗಳಿಂದ ಚಳವಳಿಸಹಿಸುತ್ತಿದ್ದವು. ಸಂಸ್ಥಾನಗಳ ಮಂತ್ರಿ ಸರ್ದಾರ್ ಪಟೇಲರು ಇಂತಹ ಪೃಥಕ್ಕೀಕರಣಕ್ಕೆ ಇನ್ನು ಅವಕಾಶವಿಲ್ಲವೆಂದು ಸ್ಪಷ್ಟವಾಗಿ ತಿಳಿಸಿದುದರಿಂದ ಆ ಚಳವಳಗಳೀಗ ನಿಂತಿವೆ.

ಭಾರತ ಪಾರ್ಲಿಮೆಂಟಿನ ಅಧಿವೇಶನವು ನಡೆದಿದ್ದು, ಹಲವು ಪ್ರಾಮುಖ್ಯ ನಿರ್ಣಯಗಳೂ ಹೊಳಕೆಗಳೂ ಆಲ್ಲಿ ಆಗಿವೆ. ಆ ಪೈಕಿ 'ಕಾರ್ಖಾನೆಗಳ ಪುಸೂದೆ 'ಮಂಜೂರಾದುದು ಮುಖ್ಯವಾದುದು. ಈ ಮಸೂದೆಯಲ್ಲಿ-ಕೆಲಸಗಾರರ ಹಕ್ಕು ಬಾಧ್ಯತೆಗಳು ನಮೂದನೆ ಪಡೆದಿರುವುದಲ್ಲದೆ, ಕೂಲಿಗಾರ ಚಳವಳಗಳ ಡಾಯಕತ್ವವು ಇಂದಿನಂತೆ ವೃತ್ಯಕ್ಷ ಕೆಲಸಗಾರರಲ್ಲದವರ ಕೈಯಲ್ಲಿ ಇರದಂತೆ ಪ್ರತಿಬಂಧನೆಗಳು ಬಂದಿವೆ.

ಭಾರತ ಘಟನಾ ಸಮಿತಿ-ನಾಯಕರು-ದಕ್ಷಿಣ ಭಾರತದ ಜನತೆ- ಇವರೆಲ್ಲರ ಪಾಲಿಗೆ ಜಿಜ್ಞಾಸಿನದಾಗಿ ವಿಶೇಷ ರೀತಿಯಿಂದ ಮುಂದೆ ಬಂದಿರುವ ಪ್ರಶ್ನೆಯೆಂದರೆ ಭಾಷಾನ ಗುಣವಾಗಿ ಸ್ವಾಕೃಗಳ ಪುನರ್ರಚನಾ ಕಾರ್ಯ ಈ ಕಾರಿತು ಘಟನಾ ಸಮಿತಿ ಅಧ್ಯಕ್ಷರಿಂದ ನೇಮಿಸಲ್ಪಟ್ಟಿದ್ದ ಕಮಿಶನು ಪ್ರಶ್ನಾವಳಿಯನ್ನು ಮುಂದಿಟ್ಟಿದ್ದು, ಈಗ ಸಂಬಂಧ ಪಟ್ಟವರೆಲ್ಲರ ಉತ್ತರಗಳನ್ನು ಪಡೆದಿದೆ. ಈ ಸಂದರ್ಭದಲ್ಲಿ ಕೆಲವು ತೀವ್ರ ಭಿನ್ನಾಭಿಪ್ರಾಯಗಳು ಮುಂದೆ ಬಂದಿವೆ. ಬೊಂಬಾಯಿ ಮತ್ತು, ಮದ್ರಾಸ್ ನಗರಗಳು ಯಾವ ಭಾಷಾವಾರು ಭಾಗಕ್ಕೆ ಸೇರಬೇಕೆಂಬ ಕುರಿತು ಗುಜರಾತಿಗಳು-ಮಹಾರಾಷ್ಟ್ರೀಯರು ಮತ್ತು ತಮಿಳರ - ಆಂಧ್ರರೊಳಗೆ ತೀವ್ರ ವಿವಾದಗಳಿವೆ. ಅಂತೆಯೇ ಪ್ರಾಂತಿಕ ಸಶಹದ್ದುಗಳ ಕುರಿತೂ ಆಂಧ್ರರು, ತಮಿಳರು, ಕನ್ನಡಿಗರು, ಮರಾಟರು, ಮಲಯಾಳಿಗಳು, ಗುಜರಾತಿಗಳೊಳಗೆ ಎಲ್ಲೆಡೆಯಲ್ಲೂ ಭಿನ್ನಾಭಿಪ್ರಾಯಗಳಿವೆ. ಬೊಂಬಾಯಿ ನಗರಕ್ಕೆ ಸಂಬಂಧಪಟ್ಟ ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಪ್ರಚಲಿತ ರಾಷ್ಟ್ರಾಲದಲ್ಲಿ ಪ್ರಾಂತ್ಯಗಳ ಪುನರ್ರಚನೆಗೆ ಕೈಹಾಕುವದು ಅತ್ಯನಾಯಕರವೆಂದು ಬಿದರಿಸಿ, ಇನ್ನು ಹತ್ತು ವರುಷಗಳ ವರೆಗೆ ಈ ವಿಷಯವನ್ನು ಸಂಪೂರ್ಣವಾಗಿ ಕಡೆಗಣಿಸಿ ಬಿಡಬೇಕೆಂದು ರಣಯಿಸಿದೆ. ಈ ಸೂಚನೆಯನ್ನು ಕರ್ನಾಟಕ, ಆಂಧ್ರ, ಮೊದಲಾದ ಇತರ ಭಾಷಾವಾರು ಭಾಗಗಳ ಮುಂದಾಳುಗಳು ಕಠಿಣವಾಗಿ ಖಂಡಿಸಿದ್ದಾರೆ. ಘಟನಾ ಸಮಿತಿಯ ಭಾಷಾವಾರು ಪ್ರಾಂತಿಕ ಕಮಿಶನು ನವೆಂಬರ್ ಪ್ರಥಮ ವಾರದಿಂದ ದಕ್ಷಿಣ ಭಾರತದಲ್ಲಿ ಸ್ವತ: ಸಂಚರಿಸಿ ಪ್ರತ್ಯಕ್ಷಾನುಭವ ಮಾಡಿಕೊಳ್ಳುವದೆಂದು ಪ್ರಕಟವಾಗಿದೆ. ಈ ಸ್ವಾಸದಲ್ಲಿ ವಿಶಾಖ ಪಟ್ಟಣ, ಮದ್ರಾಸ್, ತ್ರಿವೇಂದ್ರಮ್, ಕೊಚ್ಚಿನ್, ಕಲ್ಲಿಕೋಟೆ, ಮಂಗಳೂರು, ಕೊಯಮತ್ತೂರ್, ಬೆಂಗಳೂರುಗಳನ್ನು ಕಮಿಶನು ಸಂದರ್ಶಿಸುವದು ಆ ಮೇಲೆ ಆಕ್ಟೋಬರಿನಲ್ಲಿ ಬೊಂಬಾಯಿ, ಸುಧ್ಯ ಪ್ರಾಂತ್ಯ ಬರೋದ ಗಳಲ್ಲಿ ಇದು ತಿರುಗಾಡಲಿದೆ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್., ಉಡುಪಿ

ಇವರ ಶಾಖಾ ಏಜೆನ್ಸಿಗಳು:

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು.

ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನಸಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನವ್ಯ ನವ್ಯ ಸೇವೆಯನ್ನು
ಸಲ್ಲಿಸುತ್ತೇವೆಂಬುದೇ ನಮ್ಮ ಸ್ಫೂರ್ತಿಯ ಚಿಲುಮೆ.

ವಿಮಾ ಮಾಡಲಿಕ್ಕಾಗಲೀ, ಪ್ರೀಮಿಯಮ್ಮ ಹಣವೆಯಲಿಕ್ಕಾಗಲೀ
ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

The Canara Banking Corporation Limited.

Estd 1906.
(Incorporated in British India)
Head Office: **UDIPI**, S India.

Capital Authorised	..	Rs 25,00,000
Capital Issued & Subscribed	..	Rs 20,00,000
Capital Paid up	...	Rs 19,98,445
Reserves....	...	Rs 8,66,715

BANKING BUSINESS OF EVERY DESCRIPTION TRANSACTED

V. R. Kamath, B A ,LL B.,
General Manager.

ನವಯುಗ

ಗುರುವಾರ, ಉಡುಪಿ, ೨-೯-'೫೪

ದ. ಭಾರತದ ಸರದಿ?

ಗೊಂದಲ ನರಂನರೆಗಳು ಬಿಸುಗಾಳಿಯ ಮಾದರಿಯಲ್ಲಿ ಒಂದು ಮೂಲೆಯಿಂದ ವ್ಯಾಪಿಸಿ ಮತ್ತೊಂದು ಮೂಲೆಯಂತರಿಗೂ-ಯಾವ ಸ್ಥಳವನ್ನೂ ಬಾಕಿ ಬಿಡದೆ ಕಾಲಾನುಕ್ರಮವಾಗಿ ಒಂದೊಂದೇ ಕಡೆಗೆ-ಬೀಸುತ್ತಾ ಹೋಗುವಂತಹವೆಂಬ ಅನುಭವವಾಗುತ್ತಿದೆ. ಟೋಕಿಯುದ್ಧದ ಸ್ಪತ್ಯಕ್ಷ ಹೊಡೆತಗಳಿಗೆ ಪಾರ್ಚ್ಚಾತ್ಯ ರಾಷ್ಟ್ರಗಳೀಡಾದಷ್ಟು ಪೌರ್ವಾತ್ಯ ರಾಷ್ಟ್ರಗಳು ಬಲಿ ಬಿದ್ದಿರಲಿಲ್ಲ; ಆದರೆ ಹೀಗೆ ಕಡಿಮೆ ಬಿದ್ದ ಅಂಶವನ್ನು ಯುದ್ಧೋತ್ತರ ಕಾಲದಲ್ಲಿ ಪೌರ್ವಾತ್ಯ ರಾಷ್ಟ್ರಗಳಲ್ಲಾದ ಆಂದೋಲನಗಳು, ಅಡಿವೇಲುಗಳು ಪೂರ್ಣಗೊಳಿಸಿದುವು. ಯುದ್ಧದ ಪ್ರತ್ಯಕ್ಷ ಅನಾಹುತಗಳನ್ನು ಅನುಭವಿಸಿರದ ಭಾರತವು, ಅವೆಲ್ಲವನ್ನೂ ಸ್ವಾತಂತ್ರ್ಯ ಸ್ಥಾಪನೆಯ ಆದಿ ಭಾಗದಲ್ಲಿ ಅನುಭವಿಸಿದ; ಯುದ್ಧನಿರತ ರಾಷ್ಟ್ರವೊಂದಕ್ಕೆದಿರಿದಂತೆ ಪರಿಮಾಣದಲ್ಲಿ ಕೊಲೆ ಸುಲಿಗೆ, ರಕ್ತಪಾತ, ಹೊಡೆತಬಡೆತ, ಜನ ಬದಲಾವಣೆಯ ಮೊದಲಾದ ಅಸಹ್ಯ ಅಪತ್ತುಗಳು ಭಾರತದ ಪಾಲಿಗೆ ಬಂದಿಲ್ಲವು. ಈ ಮಹಾಮಂಥನದಲ್ಲಿ ದಕ್ಷಿಣ ಭಾರತಕ್ಕೆ ಸಮ ಪಾಲು ದೊರೆತಿರಲಿಲ್ಲ; ಉತ್ತರ ಭಾರತವಿಡೀ ಕುದಿಯುತಿದ್ದಾಗಲೂ ತೆಂಕು ಭಾಗವು ಬಹು ಮಟ್ಟಿಗೆ ಶಾಂತವಾಗಿತ್ತು. ಆದರೆ ಕಷ್ಟವನ್ನನುಭವಿಸುವ ಹಕ್ಕು ಕಳೆದು ಹೋಗುವಂತಹದಲ್ಲವಾದ್ದರಿಂದ ಈಗ ದಕ್ಷಿಣ ಭಾರತದ ಸರದಿ ಬಂದಿರುವಂತೆ ಕಾಣುತ್ತಿದೆ. ಇಲ್ಲಿಗೆ ವಾದ ವಿವಾದಗಳ, ಮೇಲಾಟ ಒತ್ತಡಗಳ, ದ್ವೇಷಾಸೂಯೆಗಳ ತಾಂಡವವಾರಂಭಿಸಿದ್ದು ಅವೆಲ್ಲವೂ ಇನ್ನಷ್ಟು ಬೆಳೆಯುವ ಲಕ್ಷಣಗಳು ಕಾಣಿಸುತ್ತಿವೆ. ಉತ್ತರ ಭಾರತವು ತನ್ನ ಪಾಲಿನ ಪ್ರಳಯ ನೃತ್ಯವನ್ನಾಡಿ ಮುಗಿಸಲಿರುವಾಗಲೇ ದಕ್ಷಿಣ ಭಾರತವು ತನ್ನ ಸರದಿಯನ್ನು ಉಪಯೋಗಿಸಿಕೊಳ್ಳಲು ಮುಂದೊತ್ತುವಂತೆ ಕಾಣುತ್ತಿದೆ. ಕಮ್ಯೂನಿಸ್ಟರ ಪಾವಳಿಯು ಈ ಭಾಗದಲ್ಲೆ-ಆದರಲ್ಲೂ ಮದ್ರಾಸ್ ಪ್ರಾಂತ್ಯದ ಕೆಲವು ಜಲ್ಲೆಗಳಲ್ಲಿ-ವ್ಯಾಪಿಸಿಕೊಂಡಿರುವಷ್ಟು ರಾಷ್ಟ್ರದ ಬೇರಾವ ಕಡೆಯಲ್ಲೂ ಸದ್ಯ ಹಬ್ಬಿಕೊಂಡಿಲ್ಲ. ಅಂತೆಯೇ ಮಿಶ್ರ ಭಾಗದಲ್ಲಿರದ ಭಾಷಾವಾರು ಪ್ರಾಂತ್ಯ ರಚನೆಯ ಸಮಸ್ಯೆಗಳು-ತನ್ಮಂಬಂಧವಾದ ಸ್ಪರ್ಧೆ, ದ್ವೇಷ, ಘರ್ಷಣೆಗಳು-ದಕ್ಷಿಣ ಭಾರತದೊಳಗೀಗ ದಿನ ದಿನಕ್ಕೆ ಬೆಳೆಯುತ್ತಿವೆ. ಸಾಲದುದಕ್ಕೆ 'ದ್ರಾವಿಡ ಸ್ಥಾನ' ಚಳವಳಗಾರರ ಹುರುಳಿಲ್ಲದ ಆಟ, ಹುಡುಗಾಟಗಳು ಕಾಡುಬರುತ್ತಿವೆ. ನಮ್ಮ ಜನತೆಯ ನಡುವೆ ಅಲ್ಲಲ್ಲಿ ಅಜ್ಞಾನ, ಅಪ್ರಬುದ್ಧತೆ, ಅಲ್ಪ ಖಿಲಾಷೆಗಳು ಮಾತ್ರವಲ್ಲ; ಒಂದಲ್ಲೊಂದು ರೀತಿಯ ಅರೆ ಮರುಳುತನವೂ ವ್ಯಾಪಿಸಿಕೊಂಡಿದೆ ಎಂಬುದೊಂದರ ಸ್ಪಷ್ಟದರ್ಶನ ಮಾತ್ರ ಇವೆಲ್ಲವುಗಳಿಂದಾಗುತ್ತಿದೆ!

ಈ ಸಂಕುಚಿತ ಘೋರತೆ, ದ್ವೇಷ ಭಾವನೆಗಳನ್ನು ನೆವನಗಳಾಗಿ ತೋರಿಸಿ ಸ್ವಹಿತ ಸಾಧನೋದ್ದೇಶವೊಂದನ್ನೇ ನಿಜಕ್ಕೂ ಕಟ್ಟಿಕೊಂಡು ಬೊಂಬಾಯಿ ಕಾಂಗ್ರೆಸ್ ಸಮಿತಿಯಂಧವರು "ಇನ್ನು ಹತ್ತು ವರುಷಗಳ ವರೆಗಾದರೂ ಭಾಷಾವಾರು ಪ್ರಾಂತ್ಯ ರಚನಾ ಪ್ರಶ್ನೆಯನ್ನು ಮೂಲೆಗೆಸೆದುಬಿಡಬೇಕು" ಎಂದು ಒತ್ತಾಯಿಸಹತ್ತಿದ್ದಾರೆ ಸಾಮಾನ್ಯ ಶಾಂತ ಸ್ಥಿತಿ ಸ್ಥಾಪನೆಯಾಗುವ ವರೆಗೆ ಪ್ರಚಲಿತ ವ್ಯವಸ್ಥೆ ಮುಂದುವರಿಯುವುದೇ ಲೇಸು, ಎಂದು ಯೋಚಿಸುವವರ ಸಂಖ್ಯೆ ಹೆಚ್ಚುತ್ತಿದೆ. ಪ್ರಾಂತಿಕ ಪುನರ್ರಚನೆಯಂತಹ ದುರಸ್ತೀ ಕಾರ್ಯದ ಬದಲಿಗೆ ಅಸ್ತಿವಾರವನ್ನೇ ಬದಲಾಯಿಸಿ ಹೊಸ ನಮೂನೆಯ ಆಡಳಿತ ರಚ್ಚಿನೆಯೇ ರೂಪಿಸಿದರೇನೇ ಉಳಿಗಾಲವೆಂಬಂತಹ ಸೂಚನೆಗಳಿಗೂ ಕೊರತೆಯಿಲ್ಲ. ಅಂತೂ ಒಟ್ಟಿನಿಂದ ಸ್ವಾರ್ಥ, ಅಭಿವಾನಗಳು ನವೀನ ಘರ್ಷಣೆಗಳಿಗವಕಾಶ ಕೊಟ್ಟಿದ್ದರೆ, ಇನ್ನೊಂದೆಡೆ ಯೋಚನೆ, ಚಿಂತನೆಗಳು ಹೊಸ ಹೊಸ ಪರಿಹಾರೋಪಾಯಗಳನ್ನು ಮುಂದೊಡ್ಡ ಹತ್ತಿವೆ. ವಸ್ತು ಸ್ಥಿತಿಯ ಸರಿಯಾದ ಪರಿಚಯ-ತುಲನಾತ್ಮಕ ಬುದ್ಧಿ-ದೂರದೃಷ್ಟಿ-ನ್ಯಾಯ ನಿಷ್ಠುರತೆ-ಇವಿಲ್ಲದಿದ್ದರೆ, ಆ ಸ್ಪರ್ಧೆ, ದ್ವೇಷಾಸೂಯೆಗಳಂತೆಯೇ ಈ ತಮನೋಪಾಯಗಳು ಕೂಡಾ ಗೊಂದಲವನ್ನು ಹೆಚ್ಚಿಸಬಹುದೇ ಹೊರತು ನಿರ್ಮೂಲಿಸುವಂತಿಲ್ಲ.

ದಕ್ಷಿಣ ಭಾರತದ ಜನತೆಯ ಯೋಗ್ಯತೆಯೆಷ್ಟೆಂಬುದು ಪರೀಕ್ಷೆಗೊಡಲ್ಪಟ್ಟಿರುವ ಕಾಲವಿದು; ಮೇಲ್ಕಂಡೆ ನಮೂದಿಸಲ್ಪಟ್ಟಿರುವ ಸ್ವಾಂತ್ಯ ರಚನಾ ಸಮಸ್ಯೆಗಳ ಕಮ್ಯೂನಿಸ್ಟ್ ದ್ರಾವಿಡಸ್ಥಾನ್ ಗೊಂದಲಗಳು ಮಾತ್ರವಲ್ಲ,ಹೈದರಾಬಾದ್ ಜಗಳವು ಪ್ರತ್ಯೇಕವಿನಿ; ಇದು ವಿಶೇಷತಃ ದಕ್ಷಿಣ ಭಾರತ ರಂಗವನ್ನೇ ಬಿಸಿಯೇರಿಸುವಂತಹದೆಂಬುದನ್ನು ಮರೆಯಬಾರದು. ಇವೆಲ್ಲವೂ ಗೊಂಚಲುಗಟ್ಟಿ ಏಕಕಾಲದಲ್ಲಿ ಮುಂದೆ ಬಂದುದು ತನ್ಮ ಶಕ್ತಿಪರೀಕ್ಷೆ ಗಾಗಿಯೇ ಎಂಬುದನ್ನು ಈ ಭಾಗದ ಜನ ತಿಳಿದಿರಬೇಕು; ಈ ಅಗ್ನಿ ಪರೀಕ್ಷೆಯಲ್ಲಿ ಗೆದ್ದೇ ತೀರಬೇಕೆಂದು ಪ್ರತಿಯೊಬ್ಬನೂ ಶಪಥಗತೊಟ್ಟ ನಿಲ್ಲಬೇಕು. ಇದು ನವಯುಗ, ಎಲ್ಲವುಗಳಂತೆ ಈ ಭಾಗದಲ್ಲೂ ಅತಿ ಮುಖ್ಯವಾದ ಹಾಗೂ ದೀರ್ಘಾವಧಿಯಿಂದ ಹಾಳುಬಿದ್ದಿರುವ ಕೆಲವು ವಿಷಯಗಳ ಪುನರ್ನಿರ್ಮಾಣವಾಗಬೇಕಾದ ಅವಧಿ ಈಗ ಬಂದಿದೆ; ಅಂದೋಲನ ವಿನಹಾ ಆಗುವಂತಹ ಕಾರ್ಯಗಳು ಇವಲ್ಲವಾದ್ದರಿಂದ ಇಂದಿನ ಗೊಂದಲವು ಸಹಜವಾಗಿಯೇ ಆದರಿಲ್ಲಿ ದುರಭಿಮಾನ, ಅಲ್ಪ ಬುದ್ಧಿ ಅತಿಲಾಲಸೆಗಳು ಗೆಲ್ಲದಂತೆ ನೋಡಬೇಕಾದುದು ಅಗತ್ಯ; ಅಂತೆಯೇ ಇಂದಿನ ಗುಲ್ಲು ಮಾತ್ರಕ್ಕುಂಜಿ 'ಎಲ್ಲವೂ ಜಾಳು; ಕೂಡಲೇ ಹೊಸ ಜಗತ್ತನ್ನು ನಿರ್ಮಿಸಿ ಬಿಡಬೇಕು' ಎಂದು ದುಡುಕಿದರೂ ಪ್ರಮಾದವಾಗುವದು. ಪ್ರಗತಿಶೀಲ ದೃಢ ಘೋರಣೆಯಿಂದ-ನ್ಯಾಯೋಚಿತವಾಗಿ ಜನಹಿತ ಸಾಧಿಸಬೇಕೆಂಬ ಆಡಳಿತ ವಿಶ್ವಾಸದಿಂದ-ಇಂದಿನ ಇವೆಲ್ಲಾ ಸಮಸ್ಯೆಗಳನ್ನು ಬಿಡಿಸಲು ಕೈಯಿಕ್ಕಿದರೆ ಅಸಾಧ್ಯವಾಗುವಂತಹದಾವುದೂ ಇಲ್ಲ ಕಮ್ಯೂನಿಸ್ಟ್ ಕಂಟಕ, ದ್ರಾವಿಡಸ್ಥಾನ್ ತೀಟೆಲೆಗಳನ್ನು ಸುಲಭದಲ್ಲಿ ಗೆಲ್ಲಬಹುದು; ಭಾಷಾವಾರಾಗಿ ಪ್ರಾಂತ್ಯಗಳನ್ನು ಕಟ್ಟುವುದರಲ್ಲಿರುವ ತೊಡಕುಗಳ ಒಳಗಡೆಯಲ್ಲೇ ಅವುಗಳ ತೀವ್ರನೆಲೆಯೂ ತುಂಬಿರುವುದನ್ನು ಅರಿಯಬಹುದು; ಹೈದರಾಬಾದಿನ ಕುರಿತು ಕೊಡಬೇಕಾಗಿ ಬರಬಹುದಾದ ಶಕ್ತಿ ಪರೀಕ್ಷೆಗೂ ಇವು ಅನುಕೂಲವೇ ಹೊರತು, ಹೇಗಾದರೂ ನೂಡಿ ಹಿಂದೊತ್ತಬೇಕಾದ ಪ್ರತಿಕೂಲಗಳಲ್ಲವೆಂಬುದನ್ನೂ ತಿಳಿಯಬಹುದು. ಆದ್ದರಿಂದ ಈ ಭಾಗದ ಜನತೆ ಹಾಗೂ ನವ ವ್ಯವಸ್ಥಾಧಿಕಾರಿಗಳು ಏನೊಂದೂ ಗಲಿಬಿಲಿಗೊಳ್ಳದೆ ಆವೇಶವನರವಾವುದನ್ನೂ ಪ್ರದರ್ಶಿಸದೆ, ನಿಶ್ಚಿತ ಕಾರ್ಯಕ್ರಮಗಳಾದ ನವ ಪ್ರಾಂತ್ಯಗಳ ರಚನೆ-ಹೈದರಾಬಾದ್ ವಿಜಯ-ದುರಭಿಮಾನೀ ಚಳವಳಿಗಳ ನಿರ್ಮೂಲನ, ಇವಲ್ಲವನ್ನೂ ಸುವ್ಯವಸ್ಥಿತವಾಗಿ ಮುಂದೊತ್ತಬೇಕೆಂದು ಕೋರುತ್ತೇವೆ

ರೇಶನ್ ಕಾರ್ಡುಗಳೂ
ಕಾರ್ಡುಗಳಿಗೆಹಚ್ಚುವ ಸ್ಲಿಪ್ಪುಗಳೂ
ಬೊಲೆಯುತ್ತವೆ
ನವಯುಗ ಪ್ರೆಸ್, ಉಡುಪಿ.

ಗ್ರಾಮಾಭಿವೃದ್ಧಿ ಶಿಕ್ಷಣ ಶಾಲೆಯ ಮುಕ್ತಾಯ ಸಮಾರಂಭವು

ವಿವಿಧ ಕಾರ್ಯಕ್ರಮಗಳಿಂದ ತಾ 30ರಲ್ಲು ಸ್ಥಳೀಯ ಬೋರ್ಡು ಹೈಸ್ಕೂಲ್ ಪೀಪರ್ಸ್ ಹಾಲಿನಲ್ಲಿ ನಿವೃತ್ತ ಡಿಸ್ಟ್ರಿಕಲೆಕ್ಟರ್ ರಾವ್ ಸಾಹೇಬ್ ಕೆ. ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರಗಿತು ವಿದ್ಯಾರ್ಥಿಗಳ ವಿನೋದಾವಳಿಗಳ ಪ್ರದರ್ಶನಗಳಾದ ಬಳಿಕ ಶ್ರೀ ಕೆ. ಕಾಳಪ್ಪ ಸೆಟ್ಟಿ, ಬಿ. ಎ. ಆಸಿಸ್ಟಾಂಟ್ ಡೆವಲಪ್‌ಮೆಂಟ್ ಆಫೀಸರರು ಶಾಲೆಯ ವರದಿಯನ್ನೋದಿದರು. ಅಟಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ಹಂಚಿದ ಬಳಿಕ ಅಧ್ಯಕ್ಷರು ಹಿಂದೂದೇಶದ ಹಾಗೂ ಜನತೆಯ ಸ್ಥಿತಿಗಳನ್ನು ವಿವರಿಸಿದರು. ಈ ಶಾಲೆಯಲ್ಲಿ ತರಬೇತು ಹೊಂದಿದ ವಿದ್ಯಾರ್ಥಿಗಳು ತಮ್ಮೂರ ಗ್ರಾಮಗಳಲ್ಲಿ ತಾವು ಪಡೆದ ಅನುಭವವನ್ನು ಕಾರ್ಯತಃ ಮಾಡಿತೋರಿಸಿ ಗ್ರಾಮಾಭಿವೃದ್ಧಿ ಕಾರ್ಯದಲ್ಲಿ ಸಹಭಾಗಿಗಳಾಗಬೇಕೆಂದು ಆಶೇಕ್ಷಿಸಿದರು ಬೆಳಿಗ್ಗೆ ಜಿಲ್ಲಾ ಡವಲಪ್‌ಮೆಂಟ್ ಆಫೀಸರ್ ರಾವ್ ಸಾಹೇಬ್ ಸಪೋರ್ತ್ತಮ ರಾಯರು ವಿದ್ಯಾರ್ಥಿಗಳ ಪರೀಕ್ಷೆ ನಡಿಸಿದ್ದರು. ತರಬೇತಾದ ವಿದ್ಯಾರ್ಥಿಗಳಿಗೆ ಸರ್ಟಿಫಿಕೇಟುಗಳು ಜಿಲ್ಲಾ ಕಲೆಕ್ಟರರ ಸಹಿಯೊಂದಿಗೆ ಕೊಡಲ್ಪಡುವವು ದಿನವಹಿ ಕಾರ್ಯದಲ್ಲಿ ಡಿಸ್ಟ್ರಿಕ್ ಲೆಬ್ಬರ್ ಆಫೀಸರ್ ಶ್ರೀ ಕಾಂತಪ್ಪನವರೂ ಕುಂದಾಪುರ ಹಾಡುಗಾರ ಶ್ರೀ ಗೋಪಾಲಕೃಷ್ಣ ಮನೋಳಿತ್ತಾಯ ಅವರೂ ಸಹಕರಿಸಿದ್ದರು

ತಾ 29ರಲ್ಲು ರೈತಿಕೈಗಾರಿಕೆ ಪ್ರದರ್ಶನಗಳ ವ್ಯವಸ್ಥೆಯಾಗಿತ್ತು. ಇದರ ಉದ್ಘಾಟನಾ ಸಮಾರಂಭವನ್ನು ಶ್ರೀ ಟಿ. ಎ. ಪೈ ಅವರು ನೆರವೇರಿಸಿದರು

ತಿದ್ದು ಪಡಿ ಮುನ್ಸಿಪಲ್ ಕಮಿಶನರ್ ಶ್ರೀ ಓ ಹರಿಶ್ಚಂದ್ರ ರಾಯರಿಗೆ ತಾ 24 8 48ರಲ್ಲಿ ಉಪಾಹಾರ ಸತ್ಕಾರವನ್ನಿತ್ತವರು ನಗರಸಭಾಧ್ಯಕ್ಷರು ಹಾಗೂ ಉಪಾಧ್ಯಕ್ಷರು ಎಂದು ತಿಳಿದುಬಂದಿದೆ.

WANTED

Those desirous of selling the shares of The Navayuga Enterprise Ltd, may contact [illegible] noted address Even holders of one or two shares may also write if they desire to dispose of their shares

K N R
C/o Navayuga, Udupi S K

ನವಯುಗದ ಚಂದಾದಾರರಲ್ಲಿ ವಿನಂತಿ

'ನವಯುಗ'ದ 28ನೇ ವರ್ಷವು ಇದೇ ಆಗೋಸ್ತು ತಿಂಗಳ ಅಂತ್ಯಕ್ಕೆ ಮುಗಿದು ಸೆಪ್ಟೆಂಬರ್ ತಿಂಗಳಿಂದ 29ನೇ ಹೊಸ ವರ್ಷಾರಂಭವಾಗಿದೆ ಈ ಸಮಯಕ್ಕೆ ಚಂದಾ ಅವಧಿ ಮುಗಿದ. ಚಂದಾದಾರರೆಲ್ಲರೂ ದಯವಾಗಿ ತಮ್ಮ ಚಂದಾಹಣವನ್ನು (ಹಿಂದಿನ ಬಾಕಿ ಇದ್ದಲ್ಲಿ ಅದನ್ನೂ ಸಮೇತ) ಅದಷ್ಟು ಬೇಗನೆ ಕಳುಹಿಸಿಕೊಟ್ಟು ಸ್ಪೋತ್ಸಾಹಿಸುವಂತೆ ಈ ಮೂಲಕ ಅಪೇಕ್ಷಿಸೋಣಾಗುತ್ತದೆ ಹಣವನ್ನು ಕಳುಹಿಸುವಾಗ ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಸರಿಯಾದ ವಿಳಾಸವನ್ನು ತಿಳಿಸುವಂತೆ ಕೋರುತ್ತೇವೆ.

ಮೆನೇಜರ್

ಭಾರತದ ಆಹಾರ ಪರಿಸ್ಥಿತಿ

ಭಾರತ ಕೇಂದ್ರ ಸರಕಾರವು ನ್ಯಾಂತ್ಯ ಗಳಿಗೆ ಸರಬರಾಯಿ ಮಾಡತಕ್ಕ ಆಹಾರ ಧಾನ್ಯಗಳ ಅಂಶವನ್ನು ತಗ್ಗಿಸಬೇಕಾದ ಅ ಡಚಣೆಯೀಗ ಒದಗಿದೆ. ಬರ್ಮಾದಲ್ಲಿ ಎದ್ದಿ ರುವ ಕಮ್ಯೂನಿಸ್ಟ್ ಜಗಳ ಮತ್ತು ಆ ಹಾರ ಧಾನ್ಯಗಳ ನಾಶದ ದೆಸೆಯಿಂದ, ಪ್ರಕೃತ ಬರ್ಮದ ಅಕ್ಕಿ ಇಲ್ಲಿಗೇನೂ ಬಾರದಂತಾಗಿರುವುದೇ ಇದಕ್ಕೆ ಮುಖ್ಯ ಕಾರಣ ಸಂಯುಕ್ತ ಪ್ರಾಂತ್ಯ ಮತ್ತು ಪೂರ್ವ ಪಂಜಾಬುಗಳಲ್ಲಿ ಎಡೆಬಿಡದೆ ಮ ಳೆ ಬಂದುದರಿಂದ ಅಲ್ಲಿಯ ಖರೀಫ್ ಬೆಳೆ ಹಾಳಾಗಿರುವುದು ಎರಡನೇ ಕಾರಣ. ಹೀ ಗಿದ್ದರೂ ದೇಶದೊಳಗಿನ ಧಾನ್ಯ ಸರಬರಾ ಯಿಯು, ಈ ತನಕ ಸರಾಗವಾಗಿ ನಡೆದು ಬಂದಿದೆ; ಆದರೆ ವರುಷಾಂತ್ಯದಲ್ಲಿ ಕಾವಿ ಡಲು ಸರಕಾರಕ್ಕೆ ಧಾನ್ಯವುಳಿಯಲಾರ ದೆಂದು ನಂಬಲಾಗಿದೆ. 1947-48ರ ಧಾ ನ್ಯ ಸರಂಜಾಮವು ಹಿಂದಿನ ವರುಷಕ್ಕಿಂ ತ ಒಂದು ಮಿಲಿಯ ಟನ್ನು ಹೆಚ್ಚಿಗಿದ್ದರೂ, ಆಹಾರಾಭಾವದ ಕ್ಷೇತ್ರಗಳ ಬೇಡಿಕೆ ಗಳು ಮತ್ತೂ ಹೆಚ್ಚಿಗಿದ್ದುದರಿಂದಾಗಿ ಮೂಲತಃ ನಿರ್ಧರಿಸಿದ್ದ 2 ಮಿಲಿಯ ಟ ನ್ನು ಧಾನ್ಯಗಳನ್ನು ಅಮದುಮಾಡಿಸಿಕೊ ಳ್ಳುವ ಬದಲಿಗೆ 2.5 ಮಿಲಿಯ ಟನ್ನುಗ ಳನ್ನು ಸರಕಾರವು ತರಿಸಿದ್ದಿತು. ಆದರೂ ಬರ್ಮಾ ಬಿಕ್ಕಟ್ಟಿನಂತಹ ಅನಿರೀಕ್ಷಿತ ಆ ತಂಕಗಳ ದೆಸೆಯಿಂದಾಗಿ ಆಹಾರಾಭಾವದ ಅನಾತ್ಮನ್ನು ನಿವಾರಿಸುವದಸಾಧ್ಯವಾಗಿದೆ. ಈ ವರುಷಾಂತ್ಯದೊಳಗೆ 150,000 ಟನ್ ಗೋದಿಯನ್ನು ಭಾರತಕ್ಕೆ ಕ ಳಿಸಿಸುವ ಒಪ್ಪಂದವನ್ನು ಅರ್ಜೆಂ ಟೀನಾದೊಡನೆ ಮಾಡಿಕೊಳ್ಳಲಾಗಿದೆ. ಈ ವರುಷದ ಆದಿಯಿಂದ ಇದು ವರೆಗೆ ಭಾರತ ಸರಕಾರವು ಹೊರಗಿನಿಂದಾಮದು ಮಡಿಸಿಕೊಂಡ ಧಾನ್ಯಗಳೆಂದರೆ 690000 ಟನ್ ಅಕ್ಕಿ 6,84,000 ಟನ್ ಗೋಧಿ ಸಮೇತ ಒಟ್ಟಿಗೆ 20ಲಕ್ಷ ಟನ್ನುಗಳಷ್ಟು. 1947ರ ಜಮದು 13,50,000 ಟನ್ನು ಗಳೂ 1946ರ ಜಮದು 950,000 ಟನ್ನುಗಳೂ ಆಗಿದ್ದುವು.

ಅಕ್ಕಿಯ ಬೆಲೆ

ಆಹಾರ ಧಾನ್ಯಗಳ ನಿಯಂತ್ರಣ ರದ್ದ ತಿಯನಂತರ ಎಲ್ಲಾ ಪ್ರಾಂತ್ಯಗಳಲ್ಲೂ ಅ ಕ್ಕಿಯ ಬೆಲೆಯು ಅಧಿಕಾಧಿಕ ಏರಿದೆ ಮ ದ್ರಾಸ್ ಪ್ರಾಂತ್ಯದ ಕೆಲವು ಜಿಲ್ಲೆಗಳಲ್ಲಿ ಸರ್ವಸಾಮಾನ್ಯವಾಗಿ ನಿಯಂತ್ರಣಕಾಲ ದ ಧಾರಣೆಯ ಸೇಕಡಾ 60ರಿಂದ 150 ರ ವರೆಗೆ ಬೆಲೆ ಹೆಚ್ಚಿದೆ (ದಕ್ಷಿಣ ಕನ್ನಡದ ಅನುಭವವೆಂದರೆ ಸೇಕಡಾ 200ರಿಂದ 300ರಷ್ಟು ಬೆಲೆಯೇರಿದೆ). ಬೊಂಬಾಯಿ ಯಲ್ಲಿ ಅಕ್ಕೀ ಧಾರಣೆಯೇರಿದುದು ನಿ ಯಂತ್ರಿತ ಬೆಲೆಯ ಸೇ. 106ರಿಂದ 218ರಷ್ಟು ಹೆಚ್ಚಿಗೆಎಂದು ತಿಳಿದುಬರುತ್ತ ದೆ. ಅಕ್ಕಿಯ ಬೆಲೆಯೇರಿದಂತೆ ಮಾಡು ವದಕ್ಕಾಗಿಯೇ ಬೊಂಬಾಯಿ ಮತ್ತು ಮ ದ್ರಾಸ್ ಸರಕಾರಗಳು ತಮ್ಮ ಸ್ವಂತ ರ ಕ್ಷಣಾ ಅಂಗಡಿಗಳನ್ನು ತೆರೆದು ಅಕ್ಕಿ ವಿತ ರಣೆ ಮಾಡುತ್ತಿವೆ. ಇಂತಹ ಸರಕಾರೀ ಅಂಗಡಿಗಳು ಮದ್ರಾಸ್ ಪ್ರಾಂತ್ಯದಲ್ಲಿ 10000, ಬೊಂಬಾಯಿ ಪ್ರಾಂತ್ಯದಲ್ಲಿ 2600 ಇವೆ. ಆದರೂ ಇವುಗಳಿಂದ ಆಗ ತ್ಯವುಳ್ಳ ಎಲ್ಲರಿಗೂ ಅಕ್ಕೀ ಸರಬರಾಯಿ ಮಾಡುವಸಾಧ್ಯವಾಗಿರುವುದರಿಂದಲೇ ಅ ಕ್ಕೀ ಧಾರಣೆಯು ಈ ರೀತಿ ಏರಿದೆ. ವಿಕ್ರ ಯ ಪ್ರಾಂತ್ಯಗಳ ಸ್ಥಿತಿಯೂ ಸರ್ವಸಾಧಾರಣ ವಾಗಿ ಹೀಗೆಯೇ ಇದೆ. ಬಿಹಾರಿನಲ್ಲಿ ಅಕ್ಕಿಯ ಬೆಲೆ ನಿಶ್ಚಿತ ಧಾರಣೆಯ ಸೇ. 50ರಿಂದ 110ರ ವರೆಗೆ, ಅಸ್ಸಾಮಿನಲ್ಲಿ ಸೇ. 30ರಿಂದ 90ರ ವರೆಗೆ, ಪಶ್ಚಿಮ ಬಂ ಗಾಳದಲ್ಲಿ ಸೇ. 20ರಿಂದ 100ರ ವರೆಗೆ, ಮಧ್ಯ ಪ್ರಾಂತ್ಯ ಮತ್ತು ಬೆರಾರುಗಳಲ್ಲಿ ಸೇ. 20ರಿಂದ 50ರ ವರೆಗೆ ಏರಿದೆ. ಈ ವ ರುಷ ಆಹಾರ ಧಾನ್ಯಗಳ ವಿಶೇಷಾಭಾವ ವುಳ್ಳ ಪ್ರಾಂತ್ಯ ಮದ್ರಾಸ್; ಅಂತೆ ಸೇ. ಇಲ್ಲಿಯ ಸಮ್ಮಿಶ್ರಾಹಾರವೂ ಅಕ್ಕಿಯ ಧಾರಣೆಯು ಅತೀವೇಳೆ ಏರಿರುವುದೂ ಇಲ್ಲಿ ಯೇ ಎನ್ನಬಹುದು. ಇಂತಹ ಹೆಚ್ಚಳವ ನ್ನು ತಡೆಯುವದಕ್ಕಾಗಿ-ಕಡಿಮೆಯಿರುವ ಭಾಗಗಳಲ್ಲೆಲ್ಲಾ ಸರಕಾರೀ ಅಂಗಡಿಗಳ ನ್ನು ತೆರೆದು ಧಾನ್ಯವಿತರಣೆಗೊಳಿಸಬೇಕು; ವಿಶೇಷ ಸಂದರ್ಭಗಳೆನ್ನು ನೋಡಿ ಧಾನ್ಯ ದಾಸ್ತಾನುಗಳನ್ನು ವಶಪಡಿಸಿಕೊಳ್ಳಬೇ ಕು-ಮುಂತಾಗಿ ಕೇಂದ್ರ ಸರಕಾರವು ಪ್ರಾಂ ತಿಕ ಮತ್ತು ಸಂಸ್ಥಾನೀಕ ಸರಕಾರಗಳಿಗೆ ಸೂಚಿಸಿದೆ. ಆದರೆ ಈ ಕೆಲಸಗಳು ಈಗಿನ ದಕ್ಕಿಂತ ಜೆಟ್ಟಿಗೆ ನಡೆಯಬೇಕಿತ್ತೆಂಬುದು ಅಕ್ಕೀ ಬೆಲೆಯ ಆಧಿಕ್ಯಗಳಿಂದ ಸ್ಪಷ್ಟ ವಾಗುತ್ತಿದೆ.

ಭಾರತದ ಆರ್ಥಿಕಾಭಿವೃದ್ಧಿ ಸಾಧನೆ

ಭಾರತದ ಉದ್ದಿಮೆ ಹಾಗೂ ಹಣಕಾ ಸಿನ ಪರಿಸ್ಥಿತಿಗೆ ತಾವಿಕೊಂಡಿರುವ ದೋ ಷಗಳ್ದಿವನ್ನೂ ನಿರ್ಮೂಲಿಸಿ ಆರ್ಥಿಕಾಭಿವೃದ್ಧಿ ಸಾಧಿಸುವ ಕುರಿತು ಹಿಂದೀ ಸರಕಾರವೀಗ ಹೆಚ್ಚಿನ ಲಕ್ಷ್ಯ ಕೊಟ್ಟು ಕಾರ್ಯೋದ್ಯುಕ್ತವಾಗಿದೆ. ಇದಕ್ಕಾಗಿ ಪ್ರಥಮತಃ ಕೂ ಲಿಗಾರರ ಮತ್ತು ಆರ್ಥತಜ್ಞರ ಎಂಡು ಸಮ್ಮೇಲನಗಳನ್ನು ಕರೆದ ಹಿಂದೀ ಸರಕಾರ ವು ಅವುಗಳ ಶಿಫಾರಸುಗಳೇನೆಂದು ಕೇಳಿ ದ್ದಿತು. ಮೂರನೆಯದಾಗಿ ಅಗೋಸ್ತು ತಾ 29ರಲ್ಲಿ ಭಾರತದ ಪ್ರಮುಖ ಉದ್ಯ ಮವಾಲರ ಸಮ್ಮೇಲನವನ್ನು ಕರೆದು ಆ ರ್ಥಾಲೋಚನೆ ನಡೆಸಿದೆ ಈ ಸಮ್ಮೇಲ ನದಲ್ಲಿ ಜಿ. ಡಿ. ಬಿರ್ಲಾ, ಲಾಲ್ಜಿ ಮೆ ಹ್ರೋತ್ರಾ, ಕಸ್ತೂರಿಭಾಯ್ ಲಾಲ್‌ಭಾಯ್ ಸರ್. ಶ್ರೀ ರಾಮ್, ಸರ್. ಜೇಮ್ಸ್ ಡೋಕ್, ಸರ್. ವದಾಂತಶ್ ಸಿಂಘಾನಿ ಯಾ, ಎ. ಡಿ ಶ್ರಾಫ್, ಜೈನ್, ಚಿಂತಾ ಲ್, ಲಾಲ್‌ಚಂದ್ ಹೀರಾಚಂದ್, ಸರ್ ಎಮ್ ವಿಶ್ವೇಶ್ವರಯ್ಯ, ಯಸ್. ಪಿ. ಜೈನ್, ಯನ್. ಆರ್ ಸರ್ಕಾರ್, ಜೆ. ಯನ್ ಮುಕರ್ಜಿ, ಪಿ. ಶೇಷಶಾಯಿ ಯೇ ಧರಾಜ್, ಥಾಕೂರ್ ಮೊದಲಾದ ಪ್ರಸಿದ್ಧರು ಭಾಗವಹಿಸಿದ್ದರು. ಅತಿಪ್ರಸರಣವ ನ್ನು ತಡೆಗಟ್ಟುವದು, ವಿನಿಯೋಗ ಸ್ಥಿತಿ ಸ್ಥಾಪನೆ, ಸರಕಾರಕ್ಕೆ ಹೆಚ್ಚಿನ ಉತ್ಪ ನ್ನ, ಇತ್ಯಾದಿಗಳ ಕುರಿತು ಈ ಸಮ್ಮೇ ಲನದ ಸಲಹೆಯನ್ನು ಭಾರತ ಸರಕಾರವು ಕೇಳಿದೆ. ಈ ಉದ್ದಿಮೆವಾಲರು ಪ್ರತ್ಯೇಕ ಸಮಿತಿಗಳಾಗಿ ವಿವಿಧ ವಿಷಯಗಳ ಕುರಿ ತು ಪರ್ಯಾಲೋಚನೆ ನಡೆಸಿ ನಿರ್ಣಯಿ ಸುವರು. ಆ ಮೇಲೆ ತಮ್ಮ ಶಿಫಾರಸುಗಳ ನ್ನು ಸರಕಾರಕ್ಕೊಪ್ಪಿಸುವರು. ಅವುಗಳ ನ್ನೂ, ಆ ನೊಬಲಿನ ಕೂಲಿಗಾರ ಹಾ ಗೂ ಅರ್ಥತಜ್ಞ ಸಮ್ಮೇಲನಗಳ ಶಿಫಾರ ಸುಗಳನ್ನೂ ಒಳಗೊಂಡ ಒಂದು ಶ್ವೇತ ಪತ್ರವನ್ನು ಸರಕಾರವು ಹೊರಡಿಸುವದು. ಆ ಮೇಲೆ ಇವೆಲ್ಲಾ ಸಮ್ಮೇಲನಗಳ ಒ ಟ್ಟು ಪ್ರತಿನಿಧಿ ಸಮ್ಮೇಲನವೊಂದನ್ನು ಕರೆ ದು, ಸರಕಾರವು ಅದರ ಅಭಿಪ್ರಾಯವನ್ನು ಪಡೆದು ತನ್ನ ನಿರ್ಧಾರಗಳನ್ನು ತಳೆಯಲಿದೆ

ಮುಖ್ಯ ಘಟನೆಗಳು

ಕೃಷ್ಣಾಷ್ಟಮಿ ಮುಹೂರ್ತದಲ್ಲಿ ಕಾ ಶ್ಮೀರ ಪಂಡಿತರಿಗೆ ಭಾಷಣವೀಯು ತ್ತಾ ಕಾಶ್ಮೀರದ ಉಪ ಪ್ರಧಾನ ಮಂ ತ್ರಿ ಗುಲಾಮ್ ಮಹಮ್ಮದ್ ಭಕ್ಷರು ಕಾಶ್ಮೀರವೆಂದಿಗೂ ಪಾಕಿಸ್ತಾನದೊಂದಿಗೆ ಸೇರುವಂತಿಲ್ಲವೆಂದು ಭರವಸೆಯಿಂದಾಡಿ ದ್ದಾರೆ. "ಕಾಶ್ಮೀರವನ್ನು ಪಾಕಿಸ್ತಾನದ ನವಾಬರ ಗಳ ಜಾಗೀರಾಗಿ ಮಾರ್ಪಡಿಸಿ ಬಿಡಬೇಕೆಂದು ಧಂಗೆಗಾರರ ನಾಯಕನ ಒಯ್ಕೆಯಿದೆ. ಒಬ್ಬನೇ ಒಬ್ಬ ಕಾಶ್ಮೀರಿ ಯಿರುವ ವರೆಗೆ ಹೀಗಾಗಲು ಬಿಡುವಂ ತಿಲ್ಲ. ಜಿನ್ನರ ದ್ವಿರಾಷ್ಟ್ರ ತತ್ವವು ತನ್ನ ಪ ಲಿನ-ವಾಟರ್‌ಲೂನ್ನು ಕಾಶ್ಮೀರದಲ್ಲಿ ಕಂಡಿದೆ." ಎಂದು ಉದ್ಗರಿಸಿ ಎಲ್ಲರೂ ರಾ ಷ್ಟ್ರೀಯ ಸೇನೆಗೆ ಸೇರಿ ಮಾತೃಭೂಮಿಯ ರಕ್ಷಣೆಗೆ ಸಿದ್ಧರಾಗಬೇಕೆಂದೂ, ಕಾಶ್ಮೀರ ಯಾದ ಪ್ರತಿಯೊಬ್ಬನಿಗೂ ಕಾಶ್ಮೀರವು ಸಮಾನವೆಂದಲ್ಲದೆ. ಬಹುಸಂಖ್ಯಾಕ ಅ ಲ್ಪಸಂಖ್ಯಾಕ ಸಮಾಜ ಭಾವನೆಯೇ ಇರ ಕೂಡದೆಂದೂ ಗುಲಾಮ್ ಮಹಮ್ಮದ್ ಭಕ್ಷ್ಯ ಉಪದೇಶಿಸಿದ್ದಾರೆ.

ಪಾಕಿಸ್ತಾನ್ ಸರಕಾರವು ಗಡಿನಾಡಿನ ಮ ದ್ರಾಸ್‌ಜಿಲ್ಲೆಯಲ್ಲಿ ಹೆಬ್ಬಗೆ ನಿಲ್ಲಿಸಬೇಕಾ ಗಿ ಬಂದ ಪೋಲಿಸರ ವೆಚ್ಚಕ್ಕೆಂದು ಅಲ್ಲಿಯ ಕೆಲವು ಕೆಂಪಂಗಿಯವರ ಮೇಲೆ ರೂ. 50,000 ಸಾಮೂಹಿಕ ದಂಡ ಹಾಕಿದೆ. ಇದುವರೆಗೆ ಹೆಚ್ಚಾಗಿ ಪಶ್ಚಿಮ ಪಂಜಾಬಿ ನಲ್ಲೇ ಇರಿಸಿದ್ದ ತನ್ನ ಮುಸ್ಲಿಂ ನಿರಾಶ್ರಿತ ರಲ್ಲಿ 20,00,00 ಮಂದಿಯನ್ನು ಸಿಂಧಿಗೂ 10,00,00 ಮಂದಿಯನ್ನು ಗಡಿನಾಡು ಪ್ರಾಂತ್ಯಕ್ಕೂ 10,00,00 ವಂ.ಎಂಯ ನ್ನು ಬಲೂಚಿಸ್ತಾನಕ್ಕಾಗಿ ವರ್ಗಾಯಿಸಲು ನಿರ್ಧರಿಸಿದೆ. ಪಾಕಿಸ್ತಾನದ "ನಿರಾಶ್ರಿತ ಕಾನ್ಸಿಲಿ" ನಲೆಕ್ಕಸ್ಕಾರ ಭಾರತ ವಿಭಜ ನೆಯ ನಂತರ ಪಾಕಿಸ್ತಾನಕ್ಕೆ ಬಂದು ಸೇರಿದ ನಿರಾಶ್ರಿತ ಮುಸ್ಲಿಮರ ಸಂಖ್ಯೆ 6,500,000. ಈ ವೈಕೆ ಅರವಾಸಿಯ ವ್ಯ ವುದಯ ಪುನರ್ವ್ಯವಸ್ಥೆಯಾಗಿದೆ ಯಂತೆ. ಲಾಹೋರಿನ ಮೋಂಟೆಗೋ ಮೆರಿಯಲ್ಲಿದ್ದ ತಮ್ಮ ಮುಸ್ಲಿಂ ನಿರಾಶ್ರಿತರ ಮೇಲೇನೇ ಪಾಕಿಸ್ತಾನ್ ಸರಕಾರವು ಇತ್ತೀ ಚೆಗೆ ಗುಂಡು ಹಾರಿಸಿ 22 ಮಂದಿಯನ್ನು ಕೊಂದು, 150 ಮಂದಿಯನ್ನು ಜಖಂ ಪಡಿಸಿ, ಬೇರೆ 90 ಮಂದಿ ಕಾಣೆಯಾಗಿ ರುವ ವಿಶೇಷ ಸುದ್ದಿಯಿದೆ. ನಿರಾಶ್ರಿತ ರೊಂದಿಗಿದ್ದ ಅವರ ಸ್ತ್ರೀಕಿಯ ನಾಯಕಿ ರಾವ್ ಕುರ್ಶಿದ್ ಅಲೀಖಾನ್ ಸಮೇತ 10 ಮಂದಿಯನ್ನು ದಸ್ತಗಿರಿ ಮಾಡಿದಾಗ ನಿರಾಶ್ರಿತರು ದಂಗೆಯೆದ್ದರೆಂದು ಈ ರು ರಿತು ಪಾಕಿಸ್ತಾನ್ ಸರಕಾರದ ಹೇಳಿಕೆ ಯಿದೆ.

ಎಲ್ಲ ತರಹದ
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್,
ಉಡುಪಿ.

ಕೊರಡ್ಕಲ್ ಸ್ಮಾರಕ
ನಿಧಿಗೆ
ಉದಾರ ಸಹಾಯ ಮಾಡಿರಿ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ತಾರೀಕು 1-9-48ರಿಂದ
ಫುಲ್ ಸ್ಥಾನದವರ
ಸುವರ್ಣ ಕುಸುಮ
"ಶೆಹನಾಯ್"
ಶೆಹನಾ, ನಿಸಾರ್‌ಖಾನ್, ಮುಮತಾಜ್ ಅಲಿ,
ಎ ಎಚ್. ದೇಸಾಯಿ

ಶಾಲೋಪಯೋಗಿ ಪುಸ್ತಕ
ಶ್ರೀ ಕೆ. ಜೊನ್ನಯ್ಯ ಶೆಟ್ಟರ
ಮುಗುಳು
ಚಿಕ್ಕಮಕ್ಕಳ ಅಕ್ಕರೆಯ ಪದ್ಯಪುಸ್ತಕ
ಬೆಲೆ 0 4 0
ಪ್ರತಿಗಳು ಎಲ್ಲಾ ಪುಸ್ತಕ ವ್ಯಾಪಾರಿಗಳ ಲ್ಲೂ ಸಿಗುತ್ತವೆ.

ಜನಮತ

ಹೊಸ ಜವಳಿ ಧೋರಣೆಯಿಂದ ಲಾಭ ಯಾರಿಗೆ?

ಬರೆದವರು: **ಶ್ರೀ ಬಿ. ಗೋಪಾಲ ರಾವ್, ಜವಳಿ ವ್ಯಾಪಾರಿ, ಬಾರ್ಕೂರು.**

ನಮ್ಮ ಸರಕಾರವು ಈಗ ಪುನಃ ಜವಳಿ ಬೆಲೆಯನ್ನು ನಿಯಂತ್ರಿಸಲು ಭಾರತದ ಸುಮಾರು ಅಂದು ನಿರ್ಣಯಗಳ ಜವಳಿ ಸ್ಟಾಕನ್ನು ತನ್ನ ವಶ ತೆಗೆದುಕೊಂಡು, ಅಧಿಕೃತ ಸ್ಟೋರುಗಳಿಗೂ, ಮತ್ತು ಕೆಲವೇ ವ್ಯಾಪಾರಿಗಳಿಗೂ ಮಾರಲು ಕೊಡುತ್ತದಂತೆ. ವ್ಯಾಪಾರಿಗಳಿಗೆ ತಮ್ಮ ಜವಳಿ ಸ್ಟಾಕನ್ನು ಅಕ್ಕೋಬರಾನಂತ್ಯದೊಳಗೆ ಖಾಲಿ ಮಾಡುವಂತೆಯೂ ತಿಳಿಸಲಾಗಿದೆಯಂತೆ. ನಮ್ಮ ಜಿಲ್ಲೆಯಲ್ಲಿ ಹೋಲ್ ಸೇಲ್ ಡೀಲರ್ ಆಗಿ S K C. C. W. Storesಗೆ ಕೊಡುತ್ತಾರೆಂತಲೂ ಸುದ್ದಿ.

ಜವಳಿಯನ್ನು ಚಿಲ್ಲರೆ ಮಾರಲು ಕೇವಲ ಸ್ಟೋರುಗಳಿಗೂ, ಕೆಲವೇ ವ್ಯಾಪಾರಿಗಳಿಗೂ ಕೊಟ್ಟರೆ, ಆಫ್ಟೂ ಕಾಳಸಂತೆ ನಿಲ್ಲದೆ ಕೂಡ ದಂಬಿದೆಯೇ? ಜನರಂತೂ ಎಲ್ಲೇ ಆದರೂ ಪಡಿ ಕೊಟ್ಟೇ ಪಡಕೊಳ್ಳಬೇಕಾದ್ದರಿಂದ ಸ್ಟೋರುಗಳಿಗೇ ಕೊಟ್ಟರೆ ಲಾಭವೇನು? ಸ್ಟೋರುಗಳಲ್ಲಿ ರೇಶನ್ ಸಾಮಗ್ರಿಗಳ ಹತ್ತು ಹಲವು ವ್ಯಾಪಾರಗಳಿಗೆ ಜತೆ ಜವಳಿ ಕೊಡಲ್ಪಟ್ಟರೆ ಆದನ್ನು ಅವರು ಬಡವರಿಗೆ ತೊಂದರೆ ಆಗದ ರೀತಿ ಕಾಲಕಾಲಕ್ಕೆ ಹಂಚಲು ಸಾಧ್ಯವಾದೀತೆ? ಬಡವರು ಈಗಾಗಲೇ ರೇಶನ್ ಅಕ್ಕಿಗಾಗಿ ಗಂಟೆಗಟ್ಟಲೆ ಕಾದು ಸುಸ್ತಾಂತೆ ಬಟ್ಟೆಗಾಗಿಯೂ ಕಾಯಬೇಕೇ? ಸ್ಟೋರಿನವರು ಇದು ರವಿವಾರ, ಇಂದು ರಜಾ ದಿನ, ಈಗ ಸ್ಟಾಂಟಿ ಅಯ್ತು, ಈಗ ಮೆನೇಜರರಿಲ್ಲ. ಇಂದು ತಿಂಗಳ ಆಪ್ಶನ್ ದಿನ, ಈ ದಿನ 1ನೇ ತಾರೀಕು ಇತ್ಯಾದಿ ಹಲವು ನೆವನಗಳಿಂದ ಕೊಳ್ಳಲು ಬಂದ ಬಡವರನ್ನು ಸತಾಯಿಸಿ, ತಮ್ಮ ನೆಂಟರಿಷ್ಟರಿಗೋ ಸ್ನೇಹಿತರಿಗೋ, ಪಾಲುಗಾರರಿಗೋ ಒಳ್ಳೆಯ ಬಟ್ಟೆ ಮಿಷಾಲಿಟ್ಟು ಉಳಿದ ನಾಲಾಯಕ್ ಬಟ್ಟೆಗಾಗಿ ಅವರ ಸ್ಟಾಮಿಗೆ ಸರಿಯಾಗಿ ಬಂದು ಗಂಟೆಗಟ್ಟಲೆ ಕಾದು ಕೊಳ್ಳಜಕೇ? ಇನ್ನು ಕೆಲವು ಚುನಾಯಿತ ಸದಸ್ಯರು, ರೂ. 250 ಡಿಫಾಜಿಟು ಕಟ್ಟಿ 6 ತಿಂಗಳಿಗೆ 12–8=0 ಲೈಸನ್ಸು ಫೀಸ್ ಕಟ್ಟಿ, ಲೈಸನ್ಸು ಪಡೆದ ಸಂಭಾವಿತ (?) ವ್ಯಾಪಾರಿಗಳಿಗೂ ಕೊಡುತ್ತಾರಂತೆ ಇದು ತೀರಾ ವಿಚಿತ್ರವಾಗಿದೆ ಬಿಲ್ಲಾ ಕಲೆಕ್ಟರರು ಅರಿಸಿದವರಿಗೆ ಮಾತ್ರ ಡಿಪೋಜಿಟ್ ಕಟ್ಟಿ ಲೈಸನ್ಸು ಪಡೆಯಲು ಸಾಧ್ಯವಾಗುವುದು! ಈ ಅರಿಸುವಿಕೆಯು ಯಾವ ಧೋರಣೆಯಂತೆ ನಡೆಯುವುದೋ ಅದು ಮಾತ್ರ ತಿಳಿದಿಲ್ಲ! ಒಂದೊನ್ಮೆ ಕಲೆಕ್ಟರರು "ಸಂಭಾವಿತ" ಬಿಲ್ಲೆ ಹಚ್ಚಿ ಅರಿಸಿದರೆಂದೇ ತಿಳಿಯುವ ಆಗಲೂ 250/- ಡಿಪೋಜಿಟ್ ಮತ್ತು 6ತಿಂಗಳಿಗೆ 12 8 0 ಲೈಸನ್ಸ್ ಫೀ ಕಟ್ಟಬೇಕು' ಇಂತಹ ಡಿಪೋಜಿಟು ಸಾಮಾನ್ಯ ಬಡವ್ಯಾಪಾರಿಗಳಿಗೆ ಕಟ್ಟಲು ಸಾಧ್ಯವಾಗದುದರಿಂದ ಇಲ್ಲೂ "ಶ್ರೀಮಂತ" ಸಾಹುಕಾರರಿಗೆ ಚಾನ್ಸು! ಇರಲಿ, ಈಗ ಉದಾಪರಣೆಗಾಗಿ ನಮ್ಮ ಊರಿನಲ್ಲಿ ಒಟ್ಟಿಗೆ ಇದ್ದ 12 ಜನ ಜವಳಿ ವ್ಯಾಪಾರಿಗಳಲ್ಲಿ ಒಬ್ಬಿಬ್ಬ ಸಾಹುಕಾರರಿಗೆ ಮಿಲ್ಲ್ ಬಟ್ಟೆ ಕೊಟ್ಟರೆಂತ ತಿಳಿಯುವ. ಆಗ ಉಳಿದ 10ಮಂದಿ ವ್ಯಾಪಾರಿ ಕುಟುಂಬಗಳು ಉಪವಾಸ ಇರಬೇಕಂಬ ಆರ್ಥವೇ? "ರೇಶನ್" ಆರ್ಥವಾ "ಕೋಟಾ" ಎಂದರೆ "ಸರಿಸಮಾನತೆ" ಆರ್ಥವಾ 'ವಾಲು' ಎಂದರ್ಥವಾಗುತ್ತದೆ ಪಲ್ಲನೇ? ಈ ರೀತಿ 12ಜನರಲ್ಲಿ 2ಮಂದಿ ಉಂಡು ಉಳಿದ 10ಜನರು ಉಪವಾಸವಿರಬೇಕೇ? ಇನ್ನು ಇತರ 10ಮಂದಿಗಳಲ್ಲಿ ಮಿಲ್ಲ್ ಬಟ್ಟೆ ಇಲ್ಲದಿರುವಾಗ, ಈ 'ಚುನಾಯಿತ ಶ್ರೀಮಂತ ಸಂಭಾವಿತ' ವ್ಯಾಪಾರಿಗಳು, ಬಂದ ಬಟ್ಟೆಸ್ವಾಹಿನಹೆಚ್ಚಿನಂತೆನ್ನು ಕಾಳಸಂತೆಯಲ್ಲಿ ಮಾರಿದೆ ಬಿಟ್ಟಾರೇ? ಅಥವಾ ಉತ್ತಮ ಬಟ್ಟೆಗಳು ಬಂದಾಗ, ತಮ್ಮ ಬಾಳ ಹಿಡಿದು ಕುಣಿಯುವ ತಮ್ಮ ಆತ್ಮೀಯರಿಗೆ ತೆಗೆದಿಡಲು ಮರೆತಾರೇ? ಬಡಜನರು ಬಟ್ಟೆ ಬಂದಿದೆಯೆಂದು ಹಣಕೂಡಿಸಿಕೊಂಡು ಬರುವಾಗ "ಮುಗಿಯಿತು, ಇನ್ನೊಮ್ಮೆ ನೋಡೋಣ' ಎನ್ನುವ ಪರಿಸ್ಥಿತಿ ಬರಲಾರದೇ? ಮಾತ್ರವಲ್ಲ, ಸರಕಾರವು ಈ ಹೊಸ ಧೋರಣೆಯಿಂದ ಹೆಚ್ಚುವೆಚ್ಚ ಬರಕೂಡದೆಂದು, ಕೇವಲ ಚಿಲ್ಲರೆಯಿಂದ ಚಕ್ಕಿಂಗ್ ಆಫೀಸರರನ್ನು ನೇಮಿಸಲಿದೆಯಂತೆ! ಈ ಒಬ್ಬ ಇದೀ ಜಿಲ್ಲೆಯಲ್ಲಿ ಬದವರಿಗೆ ನ್ಯಾಯ ಮೊರೆಕಸಲು ಬಂದಿತೇ? ಇನ್ನು —ಈ ಬಾರಿ ಕಾರ್ಡಿನ ಲೆಬ್ಬದಲ್ಲಿ ಬಟ್ಟೆ ಪಂಚುವದಲ್ಲವಂತೆ, ನಿಯಮಿತ ಧಾರಣೆಯಲ್ಲಿ, ಕೇಳಿದವರಿಗೆ ಕೇಳಿದಷ್ಟು ಕೊಡಬಹುದಂತೆ! ಇದೂಂತೂ ಕಾಳಸಂತೆಗೆ ಹೆದ್ದಾರಿಯೇ ಸರಿ! ಇದರಿಂದ ಹಣವಂತರು ಬೊಕ್ಕಸ ಇನ್ನಷ್ಟು ತುಂಬಿಕೊಳ್ಳಬಹುದಲ್ಲದೆ ಇನ್ನೇನು?

ಇನ್ನು ಕೊನೆಯದಾಗಿ "ಲಾಭ"! ಕೇವಲ 6-4-0 ರೂಪ್ಯಾ 100ಕ್ಕೆ ಮುನಾಫೆ ಚಿಲ್ಲರೆ ವ್ಯಾಪಾರಿಗಳಿಗೆ! ರೂಪ್ಯಾಗೆ 0-0-3 ಸೇಲ್ ಟೇಕ್ಸ್ ಕಳೆದು ಉಳಿಯುವ 0-0-9ಯಲ್ಲಿ ಬಟ್ಟೆ ಕಂಸುವ ಖರ್ಚು, ಬಿಲ್ ಬರೆಯು, ಲೆಬ್ಬ ಇಡುವ ಮತ್ತು ಕಳುಹಿಸುವ ಖರ್ಚು, ಡೇಮೇಜ್, ಶೋರ್ಟೇಜ್, ನಾಲಾಯಕ್ ಬಟ್ಟೆ ಉಳಿಯುವುದರಿಂದ ಆಗುವ ನಷ್ಟ, 250 ಡಿಪೋಜಿಟಿನ ಬಡ್ಡಿ. 6 ತಿಂಗಳಿಗೆ ಹನ್ನೆರಡೂವರೆ ಲೈಸನ್ಸ್‌ಫೀ ಇತ್ಯಾದಿ ಇತ್ಯಾದಿ ಹುಟ್ಟುತೇ?

ಈ ರೀತಿ ಸರಕಾರವು ಕರಿಣ ನಿರ್ಣಯಗಳಿಂದ ಸ್ಟೋರುಗಳಿಗೂ, ಕೆಲವೇ ಶ್ರೀಮಂತ ವ್ಯಾಪಾರಿಗಳಿಗೂ ಬಟ್ಟೆಕೊಟ್ಟು, ಅವರ ಹೊಟ್ಟೆ ತುಂಬಿಸಿ, ಬಡವರ ಹೊಟ್ಟೆ ಉರಿಸುವುದಕ್ಕಿಂತ, ಕಳೆದ ಮಾರಿಯತೆ ಪೂರ್ಣ ಕಂಟ್ರೋಲ್ ಹೇರಿ, ಎಲ್ಲಾ ವ್ಯಾಪಾರಿಗಳಿಗೂ ಸರಿಸಮಾನ "ಕೋಟಾ" ಕೊಟ್ಟು, ಜನರಿಗೆ ಕಲಾ ಒಂದರ ಕನಿಷ್ಟ 12 ಮತ್ತು ಗರಿಷ್ಟಗಳಿಗೆ 6 ಗ ಜಗಳಂತೆಯೂ, (ಹಳ್ಳಿಯಲ್ಲಿ) ಬೊಂಬಾಯಿ ಮದ್ರಾಸ್ ನಗರಗಳಲ್ಲಿ ಹೆಚ್ಚೆಂದರೆ 24 ವ.ತ್ತು 12ಗಜಗಳಂತೆಯೂ ರೇಶನ್ ಕಾರ್ಡು ಸ್ವನೂಹ, ವಿತರಣ ಮಾಡುವಂತೆ ಸ್ಟೇಷನ್ ನಿರ್ಬಂಧಿಸಿ, ಆ ಬಗ್ಗೆ ಬಟ್ಟೆಯು ರೀಲ್‌ಧಾರಣೆಯಲ್ಲೇ ಕೊಡಲ್ಪಡುತ್ತದೋ ಎಂತ ತಿಳಿಯುವ ಬಗ್ಗೆ ಸಾಕಷ್ಟು ಸಿಬಂದಿ ಇಟ್ಟು, ಸಿಬಂದಿ ವೆಚ್ಚಕ್ಕಾಗಿ ಸಾವಿರಾರು ವ್ಯಾಪಾರಿಗಳಿಂದ (ಎಲ್ಲರಿಗೂ ಅನುಕೂಲವಾಗುವ) ಲೈಸನ್ಸು ಫೀಸಿನಿಂದ ತುಂಬಿಸಿಕೊಂಡರೆ, ಬಡವರಿಗೆ ನಿಯಮಿತ ಧಾರಣೆಯಲ್ಲಿ ತಮ್ಮ ಪಾಲಿನ ಬಟ್ಟೆ ಶ್ರಮವಿಲ್ಲದೆ ದೊರೆಯುವಂತಾಗುತ್ತದೆ. ವ್ಯಾಪಾರಿಗಳಿಗೂ ಸರಕಾರವು ನ್ಯಾಯವಾದ ನೂಡಿದಂತಾಗುತ್ತದೆ ಇನ್ನಾದರೂ ನಮ್ಮ ಸರಕಾರ ಈ ಕುರಿತು ಏನಾ ಕೊಡುವುದೇ? ನಮ್ಮ ಬೆಲ್ಲೆಯ ಮಟ್ಟಿಗಾದರೂ ನಮ್ಮ ಜಿಲ್ಲಾ ಕಲೆಕ್ಟರ್ ಧೋರಿಗಳವರು ಮೇಲ್ಕಂಡ ರೀತಿಯ ವ್ಯವಸ್ಥೆ ಪಡಿಸುವಂತ ವಿನಂತಿ.ಜೈ ಹಿಂದ್!

ಕೋವಿಗಳು ವಿಕ್ರಯಕ್ಕೆ ಇವೆ.

ಕುಂದಾಪುರ ತಾಲೂಕು ಕೊಲ್ಲೂರು ಶ್ರೀ ಮೂಕಾಂಬಿಕಾ ದೇವಸ್ಥಾನದ ಬಾಜು ಹಾಲಿ ಬೈಂದೂರು S. H. O. ಮಟ್ಟಾಂತರ ಸ್ಟೇಶನ್ ಸ್ಟೋರಿನಲ್ಲಿ ಈ ಮಾನಿಕು ಇರುವ C 64/3 D T, SK., 118/47 & 119/47 S, B. M. L. ಬಂದೂಕುಗಳನ್ನು ವಿಕ್ರಯಿಸಲಾಗುವುದು. ಖಾಯಂಸಿ ಉಳ್ಳವರು ಕೂಡಲೇ ಸದ್ರಿ ದೇವಸ್ಥಾನದ ಎಕ್ಸಿಕ್ಯೂಟಿವ್ ಆಫೀಸರರೊಡನೆ ಜೆಲೆ ನಿವೇದಿಸಿ ಪತ್ರವ್ಯವಹಾರ ನಡಿಸಬಹುದು.

ಕೊಲ್ಲೂರು,

(Sd.) **Executive Officer.**

'ಕೇಶ ಕಲಾ' ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವುದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು, ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ನೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

'ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

NOTIFICATION

Applications are invited for the following posts so as to reach the undersigned on or before 15-9-1948

Name of Post	Scale of pay
1. Secondary Grade Teachers	Rs 40-1½-55-2-75 plus usual D. A
2. Higher Ele. Grade Teacher-	Rs. 30-1-15 do
3. Part time prevocational Instructress	Rs. 10 per month

This appointment will be only up to 15-4-1949.

Municipal Office, Udipi,
Dated 31-8-1948.

V Balagangadharan,
Commissioner.

ಉಡುಪಿ

ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧಿಕಾರಿಗಳ ಚುನಾವಣೆಯು ಕಳೆದ ತಾ 25ರಲ್ಲು ಜಿಲ್ಲಾ ಕಾಂಗ್ರೆಸ್ ಪ್ರೆಸಿಡೆಂಟ್ ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕರ ನೇತೃತ್ವದಲ್ಲಿ ಜರಗಿತು. ಶ್ರೀಗಳಾದ ಬಾಳೆಬೈಟ್ಟು ಬೀಡು ಕೃಷ್ಣಯ್ಯ ಹೆಗ್ಡೆ, ಅಧ್ಯಕ್ಷ, ಯು. ರಾಮರಾವ್, ಉಸಾಧ್ಯಕ್ಷರು; ಕೆ. ಹೊನ್ನಯ್ಯ ಸೆಟ್ಟಿ, ಕೋಶಾಧಿಕಾರಿ; ಕೆ. ನರಹರಿ ಕಾಮತ್, ಪ್ರಧಾನ ಕಾರ್ಯದರ್ಶಿ; ಬಿ. ಆನಂದ ಹೆಗ್ಡೆ, ಜತೆ ಕಾರ್ಯದರ್ಶಿಯರಾಗಿ ಏಕಮತ್ಯದಿಂದ ಆರಿಸಲ್ಪಟ್ಟರು.

ಶ್ರೀಕೃಷ್ಣ ಜಯಂತಿ ಮತ್ತು ವಿಟ್ಲ ಪಿಂಡಿ ಹಬ್ಬವು ಉಡುಪಿಯಲ್ಲಿ ಕಳೆದ ತಾ 26, 27ರಲ್ಲು ಸಾಂಗವಾಗಿ ಜರಗಿತು.

ಭಾರದ್ವಾಜರ

ಇಂಗ್ಲಿಷ್–ಇಂಗ್ಲಿಷ್–ಕನ್ನಡ

ಡಿಕ್ಸ್‌ನೆರಿ

ಉತ್ತಮ ವೃತಿ ರೂ. 6—0—0

ಸಾಧಾರಣ ಪ್ರತಿ ರೂ. 4—8—0

ಅಂಚೆಖರ್ಚು ಪ್ರತ್ಯೇಕ

ಪ್ರಭಾನ್ ಬುಕ್ ಡಿಪೊ

: ಉಡುಪಿ :

---

1 ರೂಪಾಯಿಗೆ 8 ಪುಸ್ತಕಗಳು

ಗಾಂಧಿಜಿಯ ಜೀವನ ಕಾವ್ಯಗಳು	0-20
ಪೈಯಕ್ಕಿಕ ಆರೋಗ್ಯ	0-2-0
ಆರಬಸ್ಥಾನ	0-2 0
ಆದರ್ಶ ಆರೋಗ್ಯ ಜೀತ	0-2-0
ವೀರಭೂಮಿ	0-2-0
ಶಂಭುಕವಧೆ	0 2 0
ಥಂ ಥಂ ಹೋಲು	0-2 0
ಸಿನೆಮಾ ಪದ್ಯಾವಳಿ	0-4 0

ಒಂದು ರೂಪಾಯಿ ಕಳುಹಿಸಿದವರಿಗೆ ಮೇಲಿನ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು ಅಂಚೆ ನೆಚ್ಚ ನಮಾಫ.

ವಿಳಾಸ-

ನವಭಾರತ ಬುಕ್ ಡಿಪೊ, ಉಡುಪಿ

ಮಂಗಳೂರು

ಪ್ರಬಂಧ ಸ್ಪರ್ಧೆಯ ಫಲಿತಾಂಶ ಮಂಗಳೂರಿನ ಪ್ರಾನಿದಯಾ ಸಂಘದ ಆಶ್ರಯದಲ್ಲಿ 1947ನೆ ಇಸವಿಯಲ್ಲಿ ಜರಗಿದ ಪ್ರಬಂಧ ಸ್ಪರ್ಧೆಯಲ್ಲಿ ಶ್ರೀ ಪಿ. ಪರಮೇಶ್ವರ ಹಂದೆ, ಕೆನರಾ ಹೈಸ್ಕೂಲ್ ಮಂಗಳೂರು ಮತ್ತು ಉಜ್ರೆ ಕರ್ನಾಟಕ ವಿದ್ಯಾಭಿಯದ ಶ್ರೀಗಳಾದ ಕೆ. ಕೃಷ್ಣರಾವ್, ಎಸ್. ಚಂದ್ರರಾಜ ಸೆಟ್ಟಿ, ಕೆ. ಕೃಷ್ಣಸ್ವಾಮಿ ಇವರು ಪಾರಿತೋಷಕ ಪಡೆಯಲು ಅರ್ಹತೆ ಪಡೆದಿರುತ್ತಾರೆ

ಭಾಷಾವಾರು ಪ್ರಾಂತರಚನಾ ಸಮಿತಿಯ ಸದಸ್ಯರು ಇದೇ ಸಪ್ಟಂಬರ 3ನೆಗಳ ಮೊದಲನೆಯ ಅಥವಾ ಎರಡನೆ ವಾರದಲ್ಲಿ ಮಂಗಳೂರಿಗೆ ಸಂದರ್ಶನವೀಯಲಿರುವರು. ಈ ಸಂದರ್ಭದಲ್ಲಿ ಸಾಕ್ಷಿಹೇಳಲು ಶ್ರೀಗಳಾದ ಕೆ. ಬಿ. ಜಿನರಾಜ ಹೆಗ್ಡೆ, ಕೆ. ಆರ್. ಕಾರಂತ, ಧರ್ಮಸ್ಥಳ ಮಂಜಯ್ಯ ಹೆಗ್ಗಡೆ ಇವರಿಗೆ ಸಮಿತಿಯಿಂದ ಕರೆಬಂದಿದೆಯಾಗಿ ಗೊತ್ತಾಗಿದೆ.

ದಕ್ಷಿಣಕನ್ನಡ ವಾಣಿಜ್ಯ ಸಂಘ: ಸರಕಾರದ ಬಟ್ಟೆಯ ಧೋರಣೆಯನ್ನು ಖಂಡಿಸಿ ಸರಕಾರಕ್ಕೆ ಕಳುಹಿಸಿದ ತನ್ನ ವಿಜ್ಞಾಪನ ಪತ್ರದಲ್ಲಿ ದಕ್ಷಿಣಕನ್ನಡ ವಾಣಿಜ್ಯ ಸಂಘವು ಕೆಳಗಿನ ವಿಷಯಗಳನ್ನು ಸರಕಾರದ ಅವಗಾಹನೆಗೆ ತಂದಿದೆ. ಸಹಕಾರಿ ಸಂಘಗಳಿಗೆ ಹಸ್ತೊಂದು ಸಾವಿರ ಬೇಲ್ ಬಟ್ಟೆಯನ್ನು ವಿತರಣೆಗಾಗಿ ಕೊಟ್ಟದ್ದು ಸರಿಯಲ್ಲ. ಮುಂಬೈ ಸರಕಾರದ ಈ ಧೋರಣೆಯು ಕೇಂದ್ರ ಸರಕಾರದ ಧೋರಣೆಗೆ ವಿರೋಧವಾಗಿದೆ. ಹಿಂದೆ ಪ್ರತಿಯೊಂದು ಜಿಲ್ಲೆಗೆ ಒದಗಿಸಲು ರಸಿಯ ವ್ಯಾಪಾರಿಗಳನ್ನು ನೇಮಿಸಲಾಗಿತ್ತು ಆದೇರೀತಿಯಲ್ಲಿ ಈ ಬಟ್ಟೆಯ ವಿತರಣೆಯನ್ನು ಸಹಕಾರಿ ಸಂಸ್ಥೆಗಳಿಗೆಯಿತ್ತೆ ರಸಿಯ ಮತ್ತು ಚಿಲ್ಲರೆ ವ್ಯಾಪಾರಿಗಳಿಗೆ ಕೊಡಬೇಕು. ಇದನ್ನು ಮದ್ರಾಸಿನ ಪ್ರಾಂತಿಕ ಟೆಕ್ಸ್‌ಟೈಲ್ ಕಮಿಶನರರಿಗೆ ಕಳುಹಲಾಗಿದೆ.

ಮಂಗಳೂರು ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ತಾ. 26ರಲ್ಲಿ ಶ್ರೀ ಮಂಜೇಶ್ವರ ಗೋವಿಂದ ಪೈಗಳ ಅಧ್ಯಕ್ಷತೆಯಲ್ಲಿ ಸಾಹಿತ್ಯ ಸಭೆಯೊಂದು ಜರಗಿತು. ಶ್ರೀ ಕೆ. ನಾರಾಯಣ ಆಳ್ವರ ಕವಿತಾ ಪಾಠನವಾದ ಬಳಿಕ ಶ್ರೀಗಳಾದ ಎಮ್. ರಾಮಕೃಷ್ಣ ಶಾಸ್ತ್ರಿ, ಪೊಳಲಿ ರಂಕರ ನಾರಾಯಣ ಶಾಸ್ತ್ರಿ, ನಾರಾಯಣ ಕಿಲ್ಲೆ ಇವರು ಅನುಕ್ರಮವಾಗಿ ಭಾರತದಲ್ಲಿ ಕೌರವ, ಅರ್ಜುನ, ಕರ್ಣ ಇವರ ಸ್ಥಾನಮಾನಗಳ ವಿಷಯವಾಗಿ ಭಾಷಣಮಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಮಸ್ತ ಭಾರತದ ಸಂಪೂರ್ಣ ಸಾರವನ್ನು ಹೇಳಿದರು.

ಸಾಲಿಗ್ರಾಮ ಇಲ್ಲಿಯ ಪೇಟೆಯ ಹತ್ತು ಸಮಸ್ತರ ಕೂಡುವಿಕೆಯಿಂದ ಶ್ರೀ ದಾಸಪ್ಪ ವ್ಯಾಪಾರಿಗಳ ಮುಂದಾಳುತನದಲ್ಲಿ ಶ್ರೀ ಮುಖ್ಯಪ್ರಾಣ ದೇವಾಲಯದ ಪ್ರಾಂಗಣದಲ್ಲಿ ತಾ 22 8 48ರಿಂದ 7ದಿನಗಳವರೆಗೆ ಮಲ್ಪೆ ಶ್ರೀ ಶಂಕರನಾರಾಯಣ ಸಾಮಗರ ಹರಿಕಥಾಕಾಲ ಕ್ಷೇಪವು ಯಶಸ್ವಿಯಾಗಿ ಜರಗಿತು

ಬೇಳೂರು ತಾ 27 8-48ರಲ್ಲಿ ಸಸಿನಡುವ ದಿನಾಚರಣೆಯು ಇಲ್ಲಿಯ ಬೋರ್ಡು ಶಾಲಾ ಪರಿಸರದಲ್ಲಿ ಶ್ರೀ. ಎಸ್. ಎಸ್. ಬೇಳೂರ ಇವರ ಅಧ್ಯಕ್ಷತೆಯಿಂದ ನೆರವೇರಿ ಸಲ್ಪಟ್ಟಿತು ಶಾಲಾ ಬಾಲಕ ಬಾಲಕಿಯರಿಂದಲೂ, ಊರಿನ ಮಾನ್ಯ ಸದ್ಗೃಹಸ್ಥರಿಂದಲೂ, ಎಲ್ಲಾ ತರದ ಸಸಿಗಳು ಶಾಲಾಪರಿಸರದಲ್ಲಿ ನಡಲ್ಪಟ್ಟವು. ಕೊನೆಗೆ ಅಧ್ಯಕ್ಷರ ಭಾಷಣದಿಂದ ಸಂಎು ಮುಕ್ತಾಯವಾಯಿತು.

ಕನ್ನಡ ಸಂಗೀತ ನಾಟಕ ಸಭಾ, ಮುಂಬಯಿ ಇವರು ಕನ್ನಡ ಸಂಗೀತ ನಾಟಕ ಸಭೆಯ ಸ್ಥಾಪಕರಲ್ಲೊಬ್ಬರಾದ ದಿವಂಗತ ಶ್ರೀ ಬೋಳಾರ ಗೋಪಾಲ ನ್ಯಾಕರ ಸ್ಮರಣಾರ್ಥವಾಗಿ, ಶ್ರೀ. ಬೋಳಾರ ಸುಂದರ ನ್ಯಾಕ್ ಇವರಿಂದ ಬರೆಯಲ್ಪಟ್ಟ "ಸಂಸಾರ ಸಾಗರ" ಎಂಬ ಸಾಮಾಜಿಕ ಕನ್ನಡ ನಾಟಕವನ್ನು ಶ್ರೀ ಜೇಗರೆ ನಾರಾಯಣ ಪರಿವಾರ ಸಹಾಯಾರ್ಥವಾಗಿ ತಾ 12 9-48ನೇ ದಿಕ್ಕಿಗೆ ಘಂಟೆ 9ಕ್ಕೆ ಪರೇಲಿನಲ್ಲಿರುವ ದಾಮೋದರ್ ಥಾಕರ್ಸಿ ಹೋಲಿನಲ್ಲಿ ಆಭಿನಯಿಸುವರು.

ಉಡುಪಿ

ಸ್ವತಂತ್ರ ದಿನಾಚರಣೆಯ ಬಗ್ಗೆ ಉಡುಪಿ ಮುನ್ಸಿಪಾಲಿಟಿ ರೂ 45; ಸೋದೆ ಮಠ ರೂ 35/- ವಡಿಯರ್, ಸಾಸಲಾಲ್ ಲೇಟ್, ಕೊಚ್ಚಿನ್ ಬ್ರದರ್ಸ್ ಲಿಮಿಟೆಡ್, ಅದ್ಯಾಪ್ ಮಹಮ್ಮದ್ ಇವರು ರೂ 25 ರಂತೆ; ಡಾ. ಎಸ್, ಆರ್. ಸ್ವಾಮಿ, ಎಸ್. ನಾಯಕ್ ಇವರು ರೂ 15ರಂತೆ; ತೇಜಪ್ಪ ಶೆಟ್ಟಿ, ಎಂ. ಜೆ. ಆರ್. ರಾವ್, ಬಿ ಮೋಹನಪ್ಪ ಹೆಗ್ಡೆ, ಭೋಜರಾಜ ಹೆಗ್ಡೆ, ಟಿ. ಎ ಪೈ, ಕೆ. ವಿ. ಪೈ & ಸನ್ಸ್, ವೇಲ್ಕಿ ಕೇಟರ್, ಕೆ ಎ ಪೈ, ಡಾ. ಕೆ. ಎಲ್. ವತ್ಸಲ್, ಎ. ಎಸ್. ನಾಯಕ್, ಪೇಜಾವರ ಮಠ, ಎ. ಸೀತಾರಾಮ ರಾವ್ ಇವರು ರೂ 10ರಂತೆ; ಪ್ರಭಾಕರ ಪ್ರೆಸ್ ಲಿಮಿಟೆಡ್, ಟಿ. ರಮೇಶ ಪೈ ಇವರು ರೂ 5-4-0ಯಂತೆ; ಎಸ್. ಡಿ. ಭಟ್, ಬಿ. ಕೃಷ್ಣಯ್ಯ ಹೆಗ್ಡೆ, ತಾ ಸಿ. ಆರ್. ನಾಯಕ್, ಎ. ಬಿ. ಕೃಷ್ಣರಾಜ್, ಬಿ. ವಿ ರಾವ್, ಎಚ್. ಪಿ. ಶ್ಯಾನುಭಾಗ್, ಪಿ. ಗಣಪತಿ ನಾಯಕ್, ಕೆ. ವ್ಯಾಸರಾಜ್, ಪಿ. ವಿ. ನಾಯಕ್, ಕೆ ಎಸ್. ಹೆಗ್ಡೆ, ಡಿ. ಭೋಜರಾಜ ಹೆಗ್ಡೆ, ಎಂ. ನಿಟ್ಟಿಲ ಕಾಮತ್, ಕೆ. ಆನಂತ ಶೆಟ್ಟಿ, ಇವರು ರೂ 5 ರಂತೆ; ಜಿ. ಎ ಆಚಾರ್ಯ ರೂ 3/- ಕಾಯಂಯಮಾಡಿರುತ್ತಾರೆಂದೂ ಹೀಗೆ ಸಹಾಯ ಬಂದದ್ದು ರೂ 408-6-0 ಸಿಹಿ ತಿಂಡಿ ಮೂಲಾಬಿದಿರೆ ರೂ 26 0-9 ಅಂತು ಒಟ್ಟು ಜಮಾ ರೂ 434 8-9 ಆಗಿದ್ದು ಸಿಹಿ ತಿಂಡಿಗಾಗಿ ರೂ 417 4 9. ಮುದ್ರಣಕ್ಕೆ ರೂ 5-4-0, ಇತರ ಖರ್ಚಿಗೆ ರೂ 12-0 0 ಒಟ್ಟು ರೂ 434-8-9 ಖರ್ಚಾಗಿರುವುದೆಂದೂ ಸ್ವತಂತ್ರ ದಿನಾಚರಣೆ ಸಸಿನಿಧಿಯ ಕಾರ್ಯದರ್ಶಿ ಶ್ರೀ. ಕೆ ನರಸಿಂಹ ಕಾಮತರು ತಿಳಿಸುತ್ತಾರೆ.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. P 45/48

ಅರ್ಜದಾರರು: ಮೈನರ್ ಯಕ್ಕೋಧ. ಎದ್ರಿರು: ಕಾಯಮ್ಮ ಕೂಡಾ

ಅರ್ಜದಾರಳ ಗಂಡ ಮೂಲಿ ವೆಂಕಪ್ಪಯ್ಯನವರ ತಂತ್ರಿ ತಮ್ಮಯ್ಯ ಜ್ಞಾತಾರರು "ದಿ ಹಿಂದೂಸ್ತಾನ ಕೊಪರೇಟಿವ್ ಇನ್ಸುರೆನ್ಸ್ ಕಂಪನಿ ಲಿಮಿಟೆಡ್" ನಲ್ಲಿ ತೆಗೆದ ಲೈಫ್ ಪ್ರೊಪಿಸಿ ನಂಬ್ರ 3730782 ರ ಜಾಸ್ತಿ ಅರ್ಜದಾರಳಿಗೆ ಬಹಾ ಅಧಿಕಾರವನ್ನು ಪ್ಲೀಡರಾಗಿರುವಂತೆ ಅರ್ಜದಾರಳಿಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಮೇಲ್ಕಂಡ ಕೋರ್ಟಿನಲ್ಲಿ ಅರ್ಜದಾರಳು ದಾವೆಯನ್ನುಮಾಡಿದ್ದು ಅರ್ಜ ತಾ 7-9 48ಕ್ಕೆ ಸದ್ರಿ ಕೋರ್ಟಿನಲ್ಲಿ ತೆಗೆಕಟಕ್ಕೆ ಇಡಲ್ಪಟ್ಟಿದೆ. ಅಕ್ಷೇಪ ಉಳ್ಳವರು ಸದ್ರಿ ತಾರೀಕಿನ ಸಲ್ಲು ಕೋರ್ಟಿಗೆಯಂದೆ ತಮ್ಮ ಅಕ್ಷೇಪಣೆಯನ್ನು ಜಾಹೀರುಮಾಡತಕ್ಕದ್ದೆಂದು ಕೋರ್ಟಿನ ಹುಕ್ಕುಂ ನೋಟೆಗೆ ಸರ್ವರಿಗೂ ಈ ಮೂಲಕ ತಿಳಿಸೋಣಾಗಿದೆ.

A. N. Rao
Advocate for Petitioner
ಕುಂದಾಪುರ 26 8 48

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿಗ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನೆ ಸಾಧಿಸುತ್ತಿರುವುದು.

The Moolky aBnk Ltd.
Moolky, S. K.

ಖಚಿತಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿವಪ್ಪ ಮತ್ತು ಸ್ರಾವವಾಗುವುದು ಅತೀತವಾಗಿ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲಿ ಸಾವಿರಾರು ಮಂದಿಗೆ ಜಾತ್ರಿ ಗುಣವಾಗಿದೆ. ಬೆಲೆ: ರೂ 3.; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.8/ [ವಿ. ಪಿ ಸಸ್ನೆರಹಾಡಿ ಸ್ವತ್ಯೇಕ]

Mrs. P. DEVEE, P. O.S. (N. J.)
Tollygunge CALCUTTA.
ಸ್ವಾಕಿಸ್ಥರು: ಶಾಹಾಂಪಿಸಿ. ಮಂಗಳೂರು



Approved firm by the Govt. of Mysore Certified by the Agent of the Govt. of Cylone & Indian.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಸ್ ತೈಲವನ್ನು ಸ್ವತಃ ಮನೆಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ನೂಲವನ್ನೇ ಕಿತ್ತು ಬಿಡುವಂತೆ ಬಿಡದ ವನಸ್ಪತಿ ನಿಷ್ಣಾತರಿಂದಲೇ ಪರೀಕ್ಷಿಸಲ್ಪಟ್ಟಿದೆ. ವಿಷಮಜ್ವರ, ಪಿತ್ತಜ್ವರ, ಸನ್ನಿಪಾತ, ಶೀತಜ್ವರ ಮುಂತಾ ನುಲೆರಿಯ ಜ್ವರ ಸಮೂಹಗಳ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೆಯಿಲ್ಲ. ಮೂತ್ರಕೋಶ, ಬಸುರಮೂತ್ರ ಸೀಮೂತ್ರ, ಆಸ್ಥಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೊರಲಾಕ, ಮೇಘವೃದ್ಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ 'ಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವೆದಂದಲೇ ನೀರು ನೀರಾಗಿ ಮೂತ್ರಕೋಶನಲ್ಲಿನ ತೀಕ್ಷ್ಣವಾದ ಜೀನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವೆದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲವಿದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳಆಟ್ಟೆನೋವು, ಕಪಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಟಿಯೊಳಗೆ ಸುತ್ತಿದೆ. ಕಿಮ್ಮತ್ತು— ಸೀಸೆ 1ಕ್ಕೆ ರೂ.3-8-0 ವಿ. ಪಿ ಬೇರೆ 1 ಡಜನ್ ಸೀಸೆಗಳಿಗೆ ವಿ ಪಿ ಖರ್ಚುಸಹಿತ ರೂ. 42-0-0. ಹೊರ್ಸರ್ ಬಾಟ್ಟಿ ಸೀಸೆಗೆ ರೂ. 5-0-0 ವಿ. ಪಿ. ಬೇರೆ; ಡಜನ್ ಸೀಸೆಗಳಿಗೆ ರೂ. 60-0-0 ವಿ. ಪಿ. ಬೇರೆ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರು 1-8-0 ಡಜನ್ ಸೀಸೆಗಳಿಗೆ ರೂ. 18. ವಿ.ಪಿ-ಪಾಷಿ.

ಪ್ರಕಂಪನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ಎಷ್ಟೊಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣಮಾಗಲಾರದೆಂದು ವೈದ್ಯರು ಸಿಡಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೀವನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಯೆಂದು ರಾಮಾನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಾಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಬಾನು ರೋಡು, ಬಿ ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dabanu Road. B B. & C. I Rly.

— ಮಕ್ಕಳನ್ನು ಹಡೆಯುವುದು ಸಾಕು —

ಆರಕ್ಕೆ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮುಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೇಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು:—ಹೂಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ನಿಡಗುಂದಿ— ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ನಿಡಗುಂದಿ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:— ಡಾವಣಗೇರಿ ಪ್ರೆಸ್ಸ್ ಆರ್ ಎಲ್ ತಾವಲಾಗಿ, ಕೆಮಿಸ್ಟ್, ಹಾವೇರಿ ಬ್ಯಾಂಡಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಜಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಕಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಡುಂ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಆರ್ಥಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕುಟ್ಟು ಗರ್ಮಿಯಿಂದ ಗರ್ಭಾಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ಕುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ೮ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ೪ನಂದೆ ದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ. ಹೆಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೪ ಆಣೆ

ವಿಜೆಂಟರು.—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ.—ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ. ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ,

ಕೇವಣಸಿದ್ಧಪ್ಪ ಹೂಲಪ್ಪ ಡಾವಣಗೇರಿ.

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ ಜಿಲ್ಲ - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ.

ಹೆರಿಗೆ ಆದಮೇಲೆ ಪುನರ್ಜನ್ಮವೆಂದು ಸ್ತ್ರೀಯರನ್ನುವುದಿದೆ ಕಾರಣವಿಲ್ಲದೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ಸಂಭವಿಸಬಹುದಾದ ವಿಕಾರಗಳಿಂದಾಗುತ್ತವೆ. ಕಸಬೀಳದಿರಲಿ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ಇಂಜೀರುತ್ತದೆ ವಿಪರೀತ ಸೀಪ ಯಾ ಸ್ರಾವ ಎಲ್ಲೋಳ್ಳ ಉಂಟಾಗುತ್ತದೆ ಎಂದೆಷ್ಟೆಲ್ಲವನ್ನು ಹೇಳಿಹೋಗಿ, ಸ್ತನಗಳ ಬೀಗು, ಸಿಡ್ಡಾರ, ಸಾಂತಿ, ಆಳ್ಳನೂಮ್ಮೆ ಇತ್ಯಾದಿ ಯಾ ಹಲವು ವಿಕಾರಗಳು ತಲೆದೋರುತ್ತವೆ ಪ್ರತಿ ಡಾಕ್ಟರ್, ಸರ್ಜನರಿಗೆ ನರಿಗೆ ಕರೆಸಿ ನೂರಾರು ರೂಪಾಯಿ ವಿಸರ್ಜನೆಮಾಡಬೇಕಾಗುತ್ತದೆ ಆ ಮೇಲೂ ದೈನೇಚ್ಚ ಎಂದು ಆಪತ್ಪಿಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧ ವಾದ 'ಶ್ರೀಸೂತಾಮೃತ' ೧೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ಇವುಗಳನ್ನು ಮುಂದಾಗಿ ತಂದಿಟ್ಟು, ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯ ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ

ಕಮಸಾಲು ಕೇದಕಲಾಸ, ತಂಪು ಸೌದುಳು, ಪುಷ್ಪ ನೇತ್ರಗಳನ್ನು ಹೊಂದಲು ಬಹು ಗುಣಯುಕ್ತ ಆಮಲಕೀ ತೈಲ ಯಾ ಹಿನುಖಾಗರ

ತೈಲಗಳಲ್ಲೂ ಇದನ್ನು ಉಪಯೋಗಿಸಿರಿ.

Swadeshi Oushadhi Bhandara, (KLG)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

ತಂರಾನಾಥ ಆಯುರ್ವೇದ ವಿದ್ಯಾಪೀಠ, ಬಳ್ಳಾರಿ ಈ ವಿದ್ಯಾಪೀಠವನ್ನು ರಿಜಿಸ್ಟರ್ ಮಾಡುವುದಕ್ಕೋಸ್ಕರ ಸೆಂಟ್ರಲ್ ಬೋರ್ಡ್ ಆಫ್ ಇಂಡಿಯನ್ ಮೆಡಿಸಿನ್ ಪುದ್ದುಚೆರಿ ಅಧ್ಯಕ್ಷರು ಮತ್ತು B. I. M. ಕಾಲೇಜಿನ ಪ್ರಿನ್ಸಿಪಾಲರಾದ ಡಾ॥ಪರಾಂಕುಶಂ, ಸಿಲೋನ್ ಜಾತಿ ಆಯುರ್ವೇದ ಕಾಂಗ್ರೆಸಿನ ಅಧ್ಯಕ್ಷರಾದ ಡಾ॥ ಲಕ್ಷ್ಮಿಪತಿಯವರು ತಾ 23-8 48ಕ್ಕೆ ವಿದ್ಯಾಪೀಠಕ್ಕೆ ಬಂದರು ವಿದ್ಯಾಪೀಠದ ಆದ್ಯಯನ ಮತ್ತು ಅಧ್ಯಾಪನ ಕ್ರಮಗಳನ್ನೂ ಇಲ್ಲಿಯ ಫಾರ್ಮಸಿ, ಹಾಸ್ಪಿಟಲ್, ಡಿಸ್ಪೆನ್ಸರಿಗಳಲ್ಲಿ ನಡೆಯುತ್ತಿರುವ ಕಾರ್ಯಕಲಾಪಗಳನ್ನೂ ಸವಿವರವಾಗಿ ಪರೀಕ್ಷಿಸಿದರು.

ವಿದ್ಯಾಪೀಠದ ವ್ಯವಸ್ಥೆಯನ್ನು ನೋಡಿ ನಮ್ಮ ಅತಿಥಿಗಳು ತೃಪ್ತಿಯನ್ನು ವ್ಯಕ್ತ ಮಾಡುತ್ತಾ ಅಧ್ಯಾಪಕರಿಗೂ, ಗವರ್ನಿಂಗ್ ಬಾಡಿಯ ಮೆಂಬರರಿಗೂ ಯೋಗ್ಯ ಸಲಹೆ ಕೊಟ್ಟರು ಡಾ॥ ಪರಾಂಕುಶಂ ರವರು ವಿದ್ಯಾರ್ಥಿ ವೃಂದವನ್ನು ಕುರಿತು ಮಾತನಾಡುತ್ತಾ ಉಷ್ಣಪ್ರಧಾನವಾಯ ವೈಧ್ಯಕ್ಕಿ, ವೃತ್ತಿಯನ್ನು ಕೀಳುತರಗತಿಗಿಳಿಸಬಾರದೆಂದು ತಿಳಿಸುತ್ತಾ, ಇಂದಿಯಾಗಿ ಜೀವನವನ್ನೇ ಕಲಿಯಲಿಕ್ಕೆ ಮಿಂಸಲಾಗಿರಿಸಬೇಕೆಂದೂ, ಇನ್ನು ಮೇಲೆ ವಿಶೇಷ ಶಿಕ್ಷಣಕ್ಕಾಗಿ ಮದ್ರಾಸ್ ಕಾಲೇಜಿನಲ್ಲಿ ಸಹ ನಿಮಗೆ ಅವಕಾಶ ಕೊಡಲಾಗುವುದು ಎಂದೂ ಪ್ರೋತ್ಸಾಹಿಸಿದರು ಡಾ॥ ಲಕ್ಷ್ಮಿಪತಿಯವರು ತಾರಾನಾಥರ ಹೆಸರಿನಿಂದ ನಡೆದಿರುವ ಈ ವಿದ್ಯಾಪೀಠದಲ್ಲಿ ತಾರಾನಾಥರ ಶ್ರೇಯಸ್ಸನ್ನೋರ್ತಿಗಳನ್ನೂ ಸಹ ಸಚೇಕಾಗಿ ಕೇಳಿಕೊಂಡರು

ದಕ್ಷಿಣ ಕನ್ನಡ ಜಿಲ್ಲಾ ಕೃಷಿಕ ಸಂಘ ಮುಂಬಾಯಿ ತಾ 22-8-48ರಲ್ಲಿ ಮುಂಬಾಯಿ ಕೋಟೆಯೊಳಗಣ ಚರ್ಚ್ ಗೇಟ್ ರಸ್ತೆಯ ಇನ್ಸಾಲಿ ಕಟ್ಟಡದಲ್ಲಿ ಕನ್ನಡಿಗರ ಸಾರ್ವಜನಿಕ ಸಭೆಯು ಭಾರತ ವಿಭಾಗ ಶಾಂಪಾದಕರಾದ ಶ್ರೀ ಸ್ವಾಮಿ ಮುಖಾನಂದರ ಅಧ್ಯಕ್ಷತೆಯಲ್ಲಿ ಜರಗಿದ ಕ. ಜಿಲ್ಲಾಕೃಷಿಕಸಭೆಯ ಆವಶ್ಯಕತೆ ಅಭಿವೃದ್ಧಿಯ ಕುರಿತು ಶ್ರೀ ಬಿ. ಲಕ್ಷ್ಮಣ ದೇವ ವಿದ್ಯಾಧಿಧಿ, ಶ್ರೀ ಬಿ ದೇವಪ್ಪಾಳ್ವರು ಮತ್ತು ಶ್ರೀ ಎಂ. ಸುಬ್ಬಶೆಟ್ರಿ ರವರುಗಳು ಸಲಾನುಸುತಿ ಯಿಂದ ಸ್ವೀಕೃತವಾದವು.

[1] ದ ಕನ್ನಡ ಜಿಲ್ಲೆಯಲ್ಲಿ ವಕ್ಕಲು ಆತ ವಸೂಲಿಯನ್ನು ಕೂಡಲೇ ಜಾರಿಗೆ ತರಬೇಕು

[2] 1946ನೇ ಸಾಲಿಯಲ್ಲಾಗ್ಯಾ ಸೋಡುವೇಟೆ ನಗ್ಗೆರೆ ಮಾಡುಕೊಂಡು ಅಥವಾ ನಿಜವಾಗಿ ವಕ್ಕಲು ರದ್ದತಿಯಾದಿದ ರಗ್ಗ ವಾರರು ಅಂಥ ವಕ್ಕಲುಗಳಿಗೆ ಸದ್ರಿ ಸೋಡು ಚೀಟುಗಳನ್ನು ಅಥವಾ ವಕ್ಕಲುತನವನ್ನು ಪುನಃ ಮಂಜೂರುಕೊಡಿಸಬೇಕು

[3] ದ. ಕ. ಜಿಲ್ಲಾ ಕಾಂಗ್ರೆಸು ನಮ್ಮನ್ನು ಜಿಲ್ಲೆಯ ಕೃಷಿಕ ಬಾಂಧವರಬಗ್ಗೆ ಅಪೇಕ್ಷಿಸಿ ಹೆಚ್ಚುತ್ತ ಯತ್ನಕ್ಕಾಗಿ ಸಹಾಯವನ್ನು ನಮಾಡಬೇಕು

[4] ವಕ್ಕಲುಗಳಿಂದ ಕಂಟ್ರೋಲ್ ಧಾರ ಣಿಗಿಂತ ಅಕ್ಕಿ ಮುಡಿ ಒಂದಕ್ಕೆ 30, 40 ರೂ ಪಾಯಿಗಳವರೆಗೂ ಕ್ರಯ ತೆಗೆದುಕೊಳ್ಳುತ್ತಿರುವ ವರ್ಗವಾರು ವರ್ತನೆಯನ್ನು ಈ ಸಭೆಯು ಪೂರ್ಣ ನಿಷೇಧಿಸಿ ಇದರ ಬಗ್ಗೆ ಸರಕಾರವು ತಕ್ಕ ವಿಚಾರಣೆಯನ್ನು ನಡಿಸಬೇಕಾಗಿ ಸರಕಾರವನ್ನು ಕೇಳಿಕೊಳ್ಳುತ್ತದೆ.

(5) ದ ಕ ಜಿಲ್ಲೆಯ ಮೂರಿಗುಡಿಗಳಲ್ಲಿ ಜರಗುತ್ತಿರುವ ಪ್ರಾಣಬಲಿಯ ದುಸ್ಸಾ ಪ್ರತಿಯನ್ನು ಕಾನೂನುಮೂಲಕ ಕೂಡಲೇ ಸರಕಾರವು ನಿಲ್ಲಿಸಬೇಕು, ಕೋಳಿಗಳ ಒಟ್ಟು ಕೋಳಿಅಂಕ, ಇನ್ನಿತರ ಜಂಗಮ ಇಡನ್ನು ಕಾನೂನು ಮೂಲಕ ಸರಕಾರವು ತಡೆಗಟ್ಟಬೇಕು.

ಈ ರಿರಾವುಗಳನ್ನು ನಮ್ಮ ಮನ್ವಾಸು ಸರಕಾರಕ್ಕೂ ದ. ಕ. ಜಿಲ್ಲಾ ಕಾಂಗ್ರೆಸು ಕಮಿಟಿಗೂ ಕಳುಹಿಸಬೇಕೆಂದು ನಿರ್ಣಯಿಸಿ ಬಳಿಕ ದ. ಕ. ಜಿಲ್ಲೆಯ ಕೃಷಿಕ ಸಮಾಜ ಕಾಯಿಯನ್ನು ಸ್ಥಾಪಿಸಲಾಯಿತು

ಶ್ರೀ ಮುರುಘಾನಂದ ಸ್ವಾಮಿ ಗುಜರು ಅಧ್ಯಕ್ಷರಾಗಿ, ಶ್ರೀ ಎ ಎಸಗು ಕೆಟ್ಟರವರು, ಆರ್. ಕೆ. ಕೆಟ್ಟರು, ಗೌ॥ ಜೊತೆ ಕಾರ್ಯದರ್ಶಿಗಳಾಗಿ, ಡೂಜ ಕೆ. ಅಮಿನ್, ಮತ್ತು ಬೂದ ಸುವರ್ಣ, ಜೊತೆ ಕೋಶಾಧಿಕಾರಿಗಳಾಗಿ, ಶ್ರೀಗಳಾದ ಪಿ ಕೆ ಬಂಗೇರರು, ಚಂದು ಟಿ. ಪಂಡಿತರು ತೋಕೂರು ಶಿಪ್ಪೆಶೆಟ್ಟು, ಮೂಲ್ಕಿ ಗೋಪಾಲನವರು, ಕೆ. ಟಿ. ಕೋಟಿಯನರು ಸದಸ್ಯರಾಗಿ ಆರಿಸಲ್ಪಟ್ಟರು.

ಕುಂದಾಪುರ ಡಿ. ಮು. ಕೋರ್ಟ್‌ನಲ್ಲಿ

S C. 392/1948

ವಾದಿ ಮಾಡ್ತಿಸ್ ಸೋಜ.

ಪ್ರತಿವಾದಿರು 1. ಗಸ್ಟರ್ ಸೋಜ, 2 ಮೋತಿ ಸೋಜ

ಕುಂದಾಪುರ ತಾಲ್ಲೂ ಅನಗಳ್ಳಿ ಗ್ರಾಮದ ಕಳ್ಳಿಜಿಯಲ್ಲಿರುವ ಅಂತೋನ್ ಸೋಜರ ಮಗ 1ನೇ ಪ್ರತಿವಾದಿ ಗಸ್ಟರ್ ಸೋಜ, ಈತನ ಮಗ 2ನೇ ಪ್ರತಿವಾದಿ ಮೋತಿ ಸೋಜ 1, ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಪ್ರತಿವಾದಿರು ವಾದಿಗೆ ತಾ. 7-7 46ರಲ್ಲಿ ರೂ 65-0-0ಕ್ಕೆ ಬರಕೊಟ್ಟ ದಿವಾಂಡು ನೋಟಿನ ಹಣ ಬಡ್ಡಿ ಬರಮಾಡಿಕೊಳ್ಳುವರೆ ಪಾದಿಯು ಪ್ರತಿವಾದಿರಮೇಲೆ ದಾಖ್ಲು ಮಾಡಿದ ಮೇಲಿನ ದಾವೆಯು ತಾರೀಕು 8-9-48ಕ್ಕೆ ಮೇಲಿನ ಕೋರ್ಟ್‌ನಲ್ಲಿ ವಿಚಾರಣೆಗೆ ಇಟ್ಟಿರುತ್ತದೆ. ಆ ಕಾರಿತು ನಿಮಗಾದರೂ ಅಕ್ಷೇಪಣೆಗಳಿದ್ದರೆ ಸದ್ರಿ ದಿವಸ ಕೋರ್ಟ್‌ಮುಂದೆ ಹಾಜರಾಗಿ ಜ್ಞಾಪೀರಾಮಾಡಿಕೊಳ್ಳತಕ್ಕದ್ದು ಎಂಬಸಂಗತಿ ತಿಳಿಯಪಡಿಸಿರುತ್ತದೆ.

N S Parameshwariah
Advocate for Plff
Date 23—8—48 Coondapoor

ಕುಂದಾಪುರ ಡಿ. ಮು. ಕೋರ್ಟ್‌ನಲ್ಲಿ

O. P. No 427/1948

ಅರ್ಜಿದಾರರು ಸುಂದರಿ ಯಾನೆ ಆನಸೂಯಾ ಪ್ರಾ, ಬಿ ರಾನು ಶ್ರೀನಿವಾಸ ಕಂಪ್ತಿ ಎನ್ನವ, ಉಡ್ತಿ ತಾಲ್ಲೂ ಬೆಜ್ಜೂರು ಗ್ರಾಮನ ಪ್ಲೀರುವನಳ್ಳಿ,

ಯದ್ರಿರು 1 ಮೈನರ ಸದ್ಯಾವತಿ 2 ಮೈನರ ಮೂರ್ತಮ್ಮ, 3 ಮೈನರ ಜಯಲಕ್ಷ್ಮಿ, ಬಿ. ರಾಮಶ್ರೀನಿವಾಸ ಕಂಪ್ತಿ ಮಕ್ಕಳು.ಗಾರ್ಡಿಯನ್ ನೂಪ ಶೇಷಗಿರಿ ಮಲ್ಲ, ವಾಮನ ಮಲ್ಲರಿ ಮಗ,ಸದ್ರಿ ಸೆದುರರು ಗ್ರಾಮದಲ್ಲಿರುವವರು

ಮೇಲಿನ ಕ. ಮೂಲಕ ತಿಳಿಯಪಡಿಸುವುದೇನೆಂದರೆ,

ಆರ್ಜದಾರರಿಗೆ ಗಂಡ ಪ ಯದ್ರಿರ ತಂದೆ ಮೃತ ಬಿ. ರಾಮಶ್ರೀನಿವಾಸ ಕಂಪ್ತಿಗ ದಿ ಜೋಡ್ಸ ಲ್ಯಾಂಡ್ ಯನ್ಯೂನ್ಸ್ ಕಂಪೆನಿ ಲಿಮಿಟೆಡ್ ಯಿಂದ ನಂಬ್ರ 90335ನೇ ಪೊಲಿಸಿ ಪ್ರಕಾರ ಬಹು ಹಣ ರೂಪಾಯಿ 1045-0-0 ಮತ್ತು ಯಂಗಾರಕಟ್ಟೆಪೋಸ್ಟಾಫೀಸು ನಂಬ್ರ 779138, 533706ನೇ ನೇವಿಂಗ್ಸ್ ಸರ್ಟಿಫಿಕೇಟುಗಳ ಪ್ರಕಾರ ಬಹು ರೂಪಾಯಿ 20-0-0 ಬ್ರಾಹ್ಮಾವರ ಪೋಸ್ಟಾಫೀಸು ನಂಬ್ರ 830657ನೇ ನೇವಿಂಗ್ಸ್ ಸರ್ಟಿಫಿಕೇಟು ಪ್ರಕಾರ ಬಹು ರೂಪಾಯಿ 10 0-0 ದಿ. ಕೆನರಾ ಯಿಂಡಸ್ಟ್ರಿಯಲ್ ಬೇಕಿಂಗ್ ಸಿಂಡಿಕೇಟು ಬ್ರಾಹ್ಮಾವರ ಬ್ರೆಂಚ್ ಆಫೀಸು ನಂಬ್ರ 284ನೆ ಸೇವಿಂಗ್ಸು ಯಕೌಂಟ್ ಪ್ರಕಾರ ಬಹು ಆಲ್ಲಾ ರೂ 25 13-9ನ ಬಡ್ಡಿ ಸಹಾ ಬರತಕ್ಕ ದ್ದನ್ನು ವಸೂಲು ನಾಯುವರೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಗಾನು ಮಾಡಿದ ಅರ್ಜಿಯು ತಾ 10-9 48ಕ್ಕೆ ನೀಲಿನ ಕೋರ್ಟ್‌ನಲ್ಲಿ ತನ್ನಿಗೆ ಯಿಟ್ಟರುತ್ತವೆ ಆ ಕಾರಿತು ಆಕ್ಷೇಪವಿದ್ದಲ್ಲಿ ತನ್ನದಿವಸ ಸದ್ರಿ ಕೋರ್ಟ್‌ನಲ್ಲಿ ಜ್ಞಾಪೀರುಮಾಡಿಕೊಳ್ಳತಕ್ಕದ್ದು, ತಿಳಿದಿರಬೇಪಡಿ.

S. S. Kolkebail
Advocate for Petitioner
ಮೊಕ್ತಾರ ಕುಂದಾಪುರ ತಾ. 26-8-48

ದಕ್ಷಿಣ ಕನ್ನಡ

ಕಲ್ಯಾಣಪುರ ಸಸಿನೆಡುವ ಸಪ್ತಾಹ ಸಮಾರಂಭವು ತಾ 23ರಲ್ಲು ಕಲ್ಯಾಣಪುರ ಮಿಲಾಗ್ರಿಸ್ ಹ್ಯಾಸ್ಕೂಲಿನ ಜನತಾಮಂದಿರದ ವರಾಂಡದಲ್ಲಿ ಶಾಲಾ ಮುಖ್ಯೋಪಾಧ್ಯಾಯರಿಂದ ರಾಷ್ಟ್ರಧ್ವಜಾರೋಹಣ, ಶ್ರೀಗಳಾದ ಕೆ. ಕೌಡಸೆಟ್ಟಿ, ಪಿ. ಸಿ ಲಿಂಬೀಸರಭಾಷಣ, ಶ್ರೀಕೆ. ಮಧ್ವಸ್ಥರ ಧನ್ಯವಾದಾರ್ಪಣೆ ಕಾರ್ಯಕ್ರಮಗಳಿಂದ ಸಾಂಗವಾಗಿ ಜರಗಿತು.

ಕಟಪಾಡಿ ಇಲ್ಲಿಯ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾಸಮಿತಿಯ ನೇತೃತ್ವದಲ್ಲಿ ತಾ 16-9-48ನೆ ಗುರುವಾರ ಕನ್ಯಾಸಂಕ್ರಮಣ ದಿವಸ ವರ್ಷಪ್ರತಿ ನಡೆಯುವ 'ಬ್ರಹ್ಮಶ್ರೀ ನಾರಾಯಣ ಪರಮಹಂಸ'ರ ಜನ್ಮದಿನಾಚರಣೆಯು ಸಮಿತಿಯ ಕಟ್ಟಡದಲ್ಲಿ ವಿವಿಧ ಕಾರ್ಯಕ್ರಮಗಳಿಂದ ಜರಗಲಿರುವುದು. ಸರ್ವರೂ ಸಹಭಾಗಿಗಳಾಗಬೇಕಾಗಿ ಸಮಿತಿಯ ಸಂಚಾಲಕರ ವಿನಂತಿಯಿದೆ.

ತೆಕ್ಕಟ್ಟೆ ತೆಕ್ಕಟ್ಟೆ ಬಡ ವಿದ್ಯಾರ್ಥಿ ಫಂಡಿನ ಸ್ಥಾಪಕರಾಗಿದ್ದು ಅದರ ಸಲುವಾಗಿ ಶಕ್ತಿಮೀರಿ ದುಡಿದ ಶ್ರೀ ಟಿ. ಭಗವಂತ ರ್ಯಾನುಭಾಗರು ತಾ 8ರಲ್ಲು ಆಕಾಲ ವಿಧನ ಹೊಂದಿದಬಗ್ಗೆ ದುಃಖ ಹೃದರ್ಶಿಸುವರೆ ಊರವರ ಸಭೆಯು ಶಾಲಾ ವರಾಂಡದಲ್ಲಿ ತಾ 19ರಲ್ಲು ಶ್ರೀ ಕೆ. ನಾರಾಣಪ್ಪ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಜರಗಿತು. ವ್ಯತರ ಆತ್ಮಕ್ಕೆ ಚಿರಶಾಂತಿ ದೊರೆಯುವಂತೆ ಈಶ ಪ್ರಾರ್ಥನೆಯೊಂದಿಯಿತು. ಅಂದು ತೆಕ್ಕಟ್ಟೆ ಪೇಟೆಯವರು ಹರತಾಳ ಆಚರಿಸಿದ್ದರು.

ಅಜೆಕಾರು ಇಲ್ಲಿ ಸಸಿಗಿಡಗಳನ್ನು ನೆಡುವ ದಿವಾಚರಣೆಯು ತಾ 24ರಲ್ಲು ಪಂಚಾಯತ ಬೋರ್ಡು ಪ್ರೆಸಿಡೆಂಟ್ ಶ್ರೀ ಕೆ. ನಾರಾಯಣ ಅತಿಕಾರಿ, ಶ್ರೀ ಕೆ. ಗೋಪಾಲ ಶೆಟ್ಟಿ ಮೊದಲಾದವರ ವ್ಯವಸ್ಥಾಪಕತ್ವದಲ್ಲಿ ಜರಗಿತು. ಸ್ಥಳೀಯ ರವಿನ್ಯೂ ಇನ್ಸ್‌ಪೆಕ್ಟರರು ಸಾರ್ವಜನಿಕ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕಾರ್ಕಳ ರೇಂಜ್ ಶಾಲಾ ಡಿಸ್ಟ್ರಿಟ್ ಇನ್ಸ್‌ಪೆಕ್ಟರ್ ಶ್ರೀ ಯು. ದೇಜು ಅವರು ಕಾಲೋಚಿತ ಮಾತುಗಳನ್ನಾಡಿದರು.

ಕಾರ್ಕಳ ಗೋಡು ಸಸಿ ಸಪ್ತಾಹ ದಿನಾಚರಣೆಯು ತಾ 23ರಲ್ಲು ತಾಲೂಕು ಕಛೇರಿ ವರಾಂಡದಲ್ಲಿ ಶ್ರೀ ಡಿ. ನೊರೋನ್ಹಾ, ಡಿ. ಮುನ್ಸಿಫ್. ಅವರ ಅಧ್ಯಕ್ಷತೆಯಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಆಚರಿಸಲಾಯಿತು. ಅಧ್ಯಕ್ಷರು ಸಸಿಗಳನ್ನು ನೆಟ್ಟಬಳಿಕ ಶ್ರೀಗಳಾದ ಪೆಂಕಟನಾರಾಯಣ ರಾವ್, ಪಿ. ಲಕ್ಷ್ಮೀನಾರಾಯಣ ಪುಣಾಚಿತ್ತಾಯ, ಎಚ್. ಎಮ್. ನಾರಾಯಣ ಭಟ್, ಬಿ. ಎನ್. ಪದ್ಮನಾಭ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ತಹಶಿಲ್ದಾರ್ ಶ್ರೀ ಟಿ. ವೆಂಕಟರಾಯರು ಧನ್ಯವಾದಗಳನ್ನರ್ಪಿಸಿದರು.

ಕುರುಕಾಲು 25-8-48ನೇ ಅಪರಾಹ್ನ ವಿವಿಧ ಜಾತಿಯ ಸಸಿಗಳ ಸಮೇತ, ಸುಮಾರು 2000ಕ್ಕೆ ಮಿಕ್ಕಿದ ಜನರ ಮೆರವಣಿಗೆಯೊಂದಿಗೆ ಗ್ರಾಮದ ಪಶ್ಚಿಮ ಸರಹದ್ದಿನಲ್ಲಿರುವ ಕಂಕರಪುರ ರಸ್ತೆಯಲ್ಲಿ ಬೇಂಡು, ನಾಲಗ, ಜೋಲವೆಗ್ಗೆರೆ ಬಿರುದಾವಳಿಗಳಿಂದಲೂ, ಸಸಿನೆಡೋಣದ ಹಾಡು, ಜಯಕಾರಗಳಿಂದಲೂ, ಅತಿ ವಿಜೃಂಭಣೆಯಿಂದ ಗ್ರಾಮವನ್ನು ಸುತ್ಯಾಡಿ ಕುಂಜಾರು ಹಾಯರ್ ಎಲಿಮೆಂಟರಿ ಶಾಲಾ ವರಾಂಡಕ್ಕೆ ತಲಪಿ, ಡಾಕ್ಟರ್ ಕೆ. ಶ್ರೀನಿವಾಸ ಭಟ್ಟರ ಅಧ್ಯಕ್ಷತೆಯಲ್ಲಿ ದೇವರ ಸ್ತಾರ್ಥನೆ, ರಾಷ್ಟ್ರಗೀತೆ, ಸಸಿನಪ್ತಾಹದ ತಿಳಿ ಉದ್ದೇಶಗಳಿಂದ ಪ್ರಾರಂಭವಾದ ಪ್ರಚಂಡ ಸಭೆಯಲ್ಲಿ, ಗ್ರಾಮಾಭಿವೃದ್ಧಿಗೆ ಅತೀ ಅಗತ್ಯವಾದ ಗಿಡಮರಗಳನ್ನು ಕಡ್ಡಾಯವಾಗಿ ನೆಡುವಕರಾರು, ಶ್ರೀಗಳಾದ ಕುರುಕಾಲು ಗಣಪಯ್ಯ ಶೆಟ್ರು, ಕೆ ನಾರಾಯಣಾಚಾರ್ಯರು, ನ್ಯಾಯಸಾಯ ಇಲಾಖಾ ಆಫೀಸರರು, ಸೂನ್ಯ ಅಧ್ಯಕ್ಷರು, ವಗೈರೆ ರಿಂದ ಸಮಯೋಚಿತ ಭಾಷಣಗಳಾಗಿ, ಮಕ್ಕಳಿಗೆ ತಿಂಡಿ ಹಂಚಲ್ಪಟ್ಟು ಸಭಾ ವಿಸರ್ಜನೆಯಾಯ್ತು. ಕುರುಕಾಲು ಗ್ರಾಮಾಭಿವೃದ್ಧಿ ಸಂಘದವರು ಸಸಿಸಪ್ತಾಹದ ಕಾಲದಲ್ಲಿ ಕವ್ಮ ಗ್ರಾಮದಲ್ಲಿ ನೆಡಲ್ಪಟ್ಟ ಗಿಡಮರಗಳ ಸಂಖ್ಯೆ- ವ ಜಾತಿವಾರುಗಳ ಪಾನೇದಿನವಾರಿಯನ್ನು ಕಯಾರಿಸುತ್ತಿರುವರು

ಹಿರಿಯಡ್ಕ ಆರ್ಯಸಮಾಜದಲ್ಲಿ ಶ್ರೀ ಕೃಷ್ಣಜಯಂತಿಯಂದು ಡಾ. ಶ್ರೀ ಜಿ. ಚಂದಯ್ಯ ಹೆಸ್ಕೇರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ, ಶ್ರೀಗಳಾದ ಬ. ಎಲ್ ನೆಲ್ಲಿ, ಎಚ್. ಕೆ. ಅನಂತಯ್ಯ, ಲಕ್ಷ್ಮೀನಾರಾಯಣ ಆಳ್ವರು, ಶ್ರೀಕೃಷ್ಣ ಜಯಂತಿಯ ಮಹತ್ವ, ಕೃಷ್ಣನ ವ್ಯಕ್ತಿತ್ವ, ಚರಿತ್ರೆ ಮತ್ತು ಆದರ್ಶದ ಕುರಿತು ಭಾಷಣಪಿತ್ತರು. ಕೊನೆಗೆ ಅಧ್ಯಕ್ಷರು 'ಕೃಷ್ಣನ ಆದರ್ಶದಂತೆ ಎಲ್ಲರೂ ನಿಷ್ಕಾಮ ಕರ್ಮಿಗಳಾಗಿ ಜನತಾ ಜನಾರ್ದನನ ಸೇವೆ ಮಾಡಲು ಪ್ರತಿಜ್ಞಾ ಬದ್ಧರಾಗುವುದರಿಂದಲೇ ಜಯಂತಿಯ ಸಾರ್ಥಕ್ಯವಿದೆ' ಎಂಬುದನ್ನು ಒತ್ತಿಹೇಳಿದಬಳಿಕ ಧನ್ಯವಾದಾರ್ಪಣೆ, ಶಾಂತಿ ಪಾಠದೊಂದಿಗೆ ಸಭೆ ಬೆದರಿತು.

ಯೆಡ್ಡೇರು ಸಸಿಸಪ್ತಾಹ ದಿನಾಚರಣೆ ಯೆಡ್ಡೇರು ಶಾಲೆಯಲ್ಲಿ ತಾ 27-8-48ರಲ್ಲುಕಟ್ಟಿಂಗೇರಿ ಪರೀಕ್ಷಣ ಅಧ್ಯಕ್ಷತೆಯಲ್ಲಿ ಸಸಿಸಪ್ತಾಹ ದಿನಾಚರಣೆಯನ್ನು ಆಚರಿಸಲಾಯಿತು. ಶ್ರೀಗಳಾದ ಕೆ. ಮಹಾಬಲ ಶೆಟ್ಟಿ, ಎಸ್. ಟಿ ಶೆಟ್ಟಿ ಮೊದಲಾದವರು ಸಂದರ್ಭೋಚಿತ ಮಾತನಾಡಿದ ಬಳಿಕ ಅಧ್ಯಕ್ಷರು ಊರಿನ ಎಲ್ಲ ಕಸಿ ಮಾವಿಸಸಿಗಡ, ಚಿಕ್ಕು ಮತ್ತು ಇತರ ಸಸಿಗಳನ್ನು ಮುಟ್ಟಿ, ಸ್ವಸಹಸ್ತದಿಂದ ಶಾಲೆಯ ಎದುರಿನಲ್ಲಿ ಒಂದು ಸಸಿಯನ್ನು ನೆಟ್ಟು ಸಸಿಗಡಗಳೊಂದಿಗೆ ಮೆರವಣಿಗೆ ನಡೆಯಿತು

ಬನ್ನಾಡಿ ಬನ್ನಾಡಿ ಶ್ರೀ ಪರಮಹಂಸ ಪ್ರಾಥಮಿಕ ಶಾಲೆಯಲ್ಲಿ ತಾ 15-8-48ನೇ ಬೆಳಿಗ್ಗೆ ಪ್ರಭಾತಫೇರಿ, ಧ್ವಜಾರೋಹಣ, ಧ್ವಜವಂದನೆ, ಸಭೆ, ಭಾಷಣ ಮೊದಲಾದುವುಗಳಿಂದ ಆಂದಿನ ಸ್ವತಂತ್ರದಿನಾಚರಣೆಯು ಬಹು ಸಂಭ್ರಮಯುಕ್ತವಾಗಿ ನಡೆಯಿತು ಅಂತೆಯೇ ತಾ 27-8-48ರಲ್ಲಿ ಗಿಡಮರಗಳ ನೆಡೋಣದ ಸಪ್ತಾಹ ದಿನಾಚರಣೆಯೂ ಯಶಸ್ವಿಯಾಗಿ ನೆರವೇರಿಸಲ್ಪಟ್ಟಿತು.

ಕೃತಜ್ಞತಾರ್ಪಣೆ

ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಶೂರೆನ್ಸ್ ಕಂಪೆನಿಯ ಸೀನಿಯರ್ ಇನ್ಸ್‌ಪೆಕ್ಟರರಾಗಿದ್ದ ನನ್ನ ಪೂಜ್ಯ ತಂದೆ ಕೆ. ನಾರಾಯಣ ರಾಯರ ಅಕಾಲನಿಧನದ ವಾರ್ತೆಯನ್ನು ಕೇಳಿ ಅವರ ಗೆಳೆಯರೂ ಹಿತಚಿಂತಕರೂ ದುಃಖ ಸೂಚಕ ಪತ್ರಗಳನ್ನೂ ಕಂತಿಗಳನ್ನೂ ಕಳುಹಿಸಿರುತ್ತಾರೆ. ಅನ ದೆಲ್ಲರಿಗೂ ಪ್ರತ್ಯೇಕ ಪ್ರತ್ಯೇಕವಾಗಿ ಉತ್ತರಕೊಡುವುದು ಅಸಾಧ್ಯವಾದುದರಿಂದ ಆವರೆಲ್ಲರಿಗೂ ನಾನೀಮಖೇನ ನನ್ನ ಹಾರ್ದಿಕ ಕೃತಜ್ಞತೆಗಳನ್ನರ್ಪಿಸುತ್ತೇನೆ. ನಾರಾಯಣರಾಯರು ತೀರಿಹೋದರೂ ಅವರು ವಿಮಾ ಸ್ಕೀಮ ಹಾರವನ್ನು ಮಾಡುತ್ತಿದ್ದ 'ಕೆ. ಎನ್. ರಾವ್ ಎಂಡ್ ಸನ್ಸ್' ಎಂಬ ಸಂಸ್ಥೆಯು ಹಿಂದಿನಂತೆಯೇ ನಡೆಯುತ್ತಿರುವುದು ಮಹಾಜನರು ಈ ಸಂಸ್ಥೆಗೆ ಎಂದಿನಂತೆ ತನ್ನ ಸಹಕಾರ ಪ್ರೋತ್ಸಾಹಗಳನ್ನು ನೀಡಬೇಕಾಗಿಯೂ ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಕೆ ಸುಬ್ಬರಾವ್, ಬಿ. ಎ., ಬಿ. ಥಾಮ್ಸನ್
(ಬೊಂಬಾಯಿ)
ಸೀನಿಯರ್ ಇನ್ಸ್‌ಪೆಕ್ಟರ್
ಪೋ. ಬಾಕ್ಸ್ ನಂಬರ್ ೪, ಕಾರ್ಕಳ.

ಬಾಣಂತಿಯರು ಸಲುವಾಗಿಯೇ ದೇಶ ಮತ್ತು ಪ್ರಕೃತಿದತ್ತ ನೈಸರ್ಗಿಕ ಕಯಾಕಲ್ಪವೆನಿಸಲ್ಪಟ್ಟ ಅಮೋಘವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಧಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾಮೃತ ಎಂಬ ಸೂತಿಕಾ ರಸಾಯನ

ಕಷ್ಟಸಾಧ್ಯವಾಗಿಲ್ಲದೆ ಹಲವು ಕಡೆಯ ಆಯುರ್ವೇದ ಔಷಧಿಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿಕನಕ್ಕೆ ಸಾಕಾಗುವಷ್ಟು ವಿಶೇಷ ವಿವರಣೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ ಶೌಡಿಯಾ ಲೇಔಟ್, ಬ.ಕ

ಸ್ವಾಮಿಕರು- ಡಾ। ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರನೋಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ದೂರಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅವಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದಲ್ಲದೆ, ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಕಿಶುವಿಗೂ ಹೇರಳವಾದ ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಆತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ನೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮಾನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯೆನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಇತ್ತಲಿನವರಿಗೆ ಬರೆಯಲಿಕ್ಕೆ ಬಾರದಿದ್ದಲ್ಲಿ ರೋಗಕ್ಕೆ ತಕ್ಕಹಾಗೆ ಔಷಧಿ ರವಾನಿಸಬಹುದು. (1)ಉಡುಪಿ ವಿಜಯರು.—ನವಭಾರತ ಬುಕ್ ಡಿಪೊ, ಬೊಂಬಾಯಿ ವಿಜಯರು:—ಪ್ರೊಪ್ರೈಟರ್ ಸ್ಟೋರ್ಸ್, ಕೆಮಿಸ್ಟ್ಸ್ 183, ಸುವಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3)ಜನರಲ್ ಸ್ಟೋರ್ಸ್ ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.



ಎಲ್ಲ ತರದ ದಂತ ರೋಗಿಗಳನ್ನು, ನೆಟ್ಟಗೆ ಮೂಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಿಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಂದಿರಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ!

ನಿಮ್ಮ ಸ್ನಾನ, ಊಟ, ಉಪಹಾರ, ಚೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಸಿಂದಿತಿನಸು, ಇವುಗಳ ರುಚಿಬಯ ನೋಡಬೇಕು!

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಏಕೀಕರಣದ ಸಂಘದ ಪ್ರತಿನಿಧಿಯ ದಕ್ಷಿಣ ಕರ್ನಾಟಕ ಸಂಚಾರ

ಆ. ಕ. ಏಕೀಕರಣ ಸಂಘದ ಪ್ರತಿನಿಧಿಗಳಾಗಿ ಶ್ರೀ ಎಸ್. ಆರ್. ನಾರಾಯಣ ರಾಯರು ಇತ್ತೀಚೆಗೆ ಕೊಯಮುತ್ತೂರು ಜಿಲ್ಲೆಯ ಕೊಯಮುತ್ತೂರು, ಕೊಳ್ಳೆಗಾಲ, ಅವಿನಾಶಿ, ಗೋಪಿಚೆಟ್ಟಿ ಪಾಲಯಂ, ಭವಾನಿ ತಾಲೂಕುಗಳಲ್ಲಿ ಪ್ರವಾಸಿ ಕಾರ್ಯವನ್ನು ಕೈಕೊಂಡಿರುವರು. ಅವರು ಆನ್ವಯೇಶಗಳ, ಕನ್ನಡಿಗರ ಸಂಖ್ಯಾ ಸ್ಥಿತಿಯ ವಿಚಾರವಾಗಿ ಈ ರೀತಿಯಾಗಿ ವರದಿಮಾಡುತ್ತಾರೆ.

ಕೊಯಮುತ್ತೂರು ತಾಲೂಕು.

ಕೊಯಮುತ್ತೂರು ತಾಲೂಕಿನ 79 ಹಳ್ಳಿಗಳಲ್ಲಿ 7 ಹಳ್ಳಿಗಳು ಕನ್ನಡ ವು. ಕೊಯಮುತ್ತೂರು ನಗರದ ಜನಸಂಖ್ಯೆ ಸಾಧಾರಣ ೩೬ ಲಕ್ಷವಿದೆ. ನಗರದ ಜನಸಂಖ್ಯೆಯಲ್ಲಿ ಪ್ರತಿ ಎವರಿಗೊಬ್ಬ ಕನ್ನಡಿಗ ಅಥವಾ ಕನ್ನಡ ಬಲ್ಲವನಿದ್ದಾನೆ ಇಷ್ಟುಹೆಚ್ಚು ಪ್ರಮಾಣದಲ್ಲಿ ಕನ್ನಡಿಗರಿದ್ದರೂ ಒಂದೇ ಒಂದು ಸಾರ್ವಜನಿಕ ಕನ್ನಡ ಶಾಲೆಗಳಲ್ಲ. ಕೆಲವರು ಕನ್ನಡಿಗರು ತಮ್ಮ ಮನೆಗಳಲ್ಲಿಯೇ ಸ್ವತಂತ್ರವಾಗಿ ಕನ್ನಡವನ್ನು ಕಲಿಸುತಿದ್ದಾರೆ. ಈ ಜಿಲ್ಲೆಯ ಕನ್ನಡಿಗರು ಮುಖ್ಯವಾಗಿ 1 ಮಾಧ್ವಬ್ರಾಹ್ಮಣರು 2 ಒಕ್ಕಲಿಗರು ಅಥವಾ ಗೌಡಿಗಾರ ಸೌದರು 3 ಕುರುಂಬ ಗೌಡರು 4 ನಾಯ್ಕರು ಅಥವಾ ಸರಿವಾರದವರು 5 ಹರಿಜನರು; ಬೇಡಕುಲದವರು. ಈ ಜಾತಿಗಳಿಗೆ ಸೇರಿದವರು

ಇವರಲ್ಲಿ ನೊದಲನೆಯವರು ಅಲ್ಪ ಸಂಖ್ಯಾಕರು. ಕನ್ನಡ ಸಂಸ್ಕೃತಿಯನ್ನು ಕೆಲಮಟ್ಟಿಗೆ ಉಳಿಸಿಕೊಂಡಿದ್ದಾರೆ. ಕನ್ನಡ ಓದುಬರಹ ಬಲ್ಲವರೂ ಇವರಲ್ಲಿ ಅನೇಕರಿದ್ದಾರೆ. ಕರ್ನಾಟಕದೊಡನೆ ಮಿಳಿತವಾಗಬೇಕೆಂಬ ಆಪೇಕ್ಷೆ ಈ ವರ್ಗದವರಲ್ಲಿದೆ. ವಕೀಲರು, ಅಧ್ಯಾಪಕರು ಆಡಿಟರರು ಇತ್ಯಾದಿ ಬೌದ್ಧಿಕ ಕ್ಷೇತ್ರಗಳಲ್ಲಿ ದುಡಿವವರು ಇವರಲ್ಲಿ ಹೆಚ್ಚುಮಂದಿ ಇದ್ದಾರೆ. ಹಲಕೆಲವು ಮಂದಿ ಮಿರಾಸದಾರರೂ ಇರುವರು. ರಾಜಕೀಯದಲ್ಲಿ ಇವರಿಗೆ ವಿಶೇಷ ಪ್ರಾಮುಖ್ಯತೆ ಇಲ್ಲ.

2 ಮತ್ತು 3ನೆಯ ವರ್ಗಗಳ ಜನರು ವ್ಯವಸಾಯಗಾರರು. ಇವರಲ್ಲಿ ಮಿರಾಸದಾರರು ಅನೇಕಮಂದಿ ಇದ್ದಾರೆ. ವಕೀಲ, ಡಾಕ್ಟರ ನೊದಲಾದ ಉದ್ಯೋಗಗಳನ್ನು ಕೈಗೊಂಡವರಿಗೂ ಇವರಲ್ಲಿ ಕೊರತೆಯಿಲ್ಲ. ವ್ಯಾಪಾರ ಕೈಗಾರಿಕೆಗಳಲ್ಲಿ ಇವರ ಕೈವಾಡವಿದೆ. ಮನೆಮಾತು ಮಾತ್ರ ಕನ್ನಡವೆಂಬುವುದಲ್ಲದೆ ಬೇರಿನ್ನಾವರೀತಿಯ ಕನ್ನಡ ಸಂಸ್ಕೃತಿಯ ಸಂಪರ್ಕವೂ ಇವರಲ್ಲಿ ಉಳಿದಿಲ್ಲ. ಈವರ್ಗದ ಮೇಲ್ವರ್ಗತಿಯ ಜನರಮೇಲೆ ತಮಿಳರ ವರ್ಚಸ್ಸು ಸಂಪೂರ್ಣವಾಗಿ ಬಿದ್ದಿದೆ. ಕರ್ನಾಟಕ ಪ್ರಾಂತದಲ್ಲಿ ಸಮಾವೇಶವಾಗುವಲ್ಲಿ ಇವರಲ್ಲಿ ವಿಶೇಷ ಉತ್ಸಾಹತೆಯೇನೂ ಇಲ್ಲ. ಕೆಲವರು ಏಕೀಕರಣಕ್ಕೆ ಪ್ರತಿಕೂಲವಾಗಿಯೂ ಇರುವರು. ತಮಿಳರೊಡನೆ ಮಿಳಿತವಾಗುವುದೇ ತಮ್ಮ ಆರ್ಥಿಕ ಪ್ರಗತಿಗೆ ಹಾದಿಯೆಂದು ಅವರ ವಾದ. ಆದರೆ ಕೊಳ್ಳೆಗಾಲ, ಗೋಪಿಚೆಟ್ಟಿ ಪಾಳ್ಯದ ತಾಳವಾಡಿ ಫಿರ್ಕ-ಇವನ್ನು ಕರ್ನಾಟಕಕ್ಕೆ ಬಿಟ್ಟುಕೊಡಲು ಇವರ ಆಕ್ಷೇಪಣೆಯಿಲ್ಲ. ಅವನಾಶಿ, ಗೋವಿಂದ ಚೆಟ್ಟಿಪಾಳ್ಯ, ಕೊಯಮುತ್ತೂರು ಮತ್ತು ಪೊಳ್ಳಾಚಿಯ ಉತ್ತರಭಾಗಗಳಲ್ಲಿ ಕನ್ನಡ ಮನೆಮಾತಾಗಿರುವ ಹಳ್ಳಿಗಳು ಇವೆಯೆಂಬುದನ್ನು ಈವರ್ಗದವರು ಒಪ್ಪಿಕೊಳ್ಳುವರು. ಇವರಿಗೆ ರಾಜಕೀಯದಲ್ಲಿ ಪ್ರಾಮುಖ್ಯ ಸ್ಥಾನವಿದೆ.

ನಾಲ್ಕನೆಯ ವರ್ಗದವರು ಕಾಯಿಪಲ್ಯಗಳನ್ನು ಮತ್ತು ಹಣ್ಣು ಹಂಪಲುಗಳನ್ನು ಮಾರಿ ಜೀವಿಸುವರು. ಇವರ ಮನೆಮಾತು ಮಾತ್ರ ಕನ್ನಡವೆಂದಲ್ಲದೆ ಇತರ ಯಾವ ಬಗೆಯಿಂದಲೂ ಕನ್ನಡ ಸಂಸ್ಕೃತಿ ಇವರಲ್ಲಿ ಉಳಿದಿಲ್ಲ. ರಾಜಕೀಯ ಮತ್ತು ತೈಪ್ಪಲಿಕ ವಿಚಾರದಲ್ಲಿ ಇವರು ವಿಶೇಷವಾಗಿ ಮುಂದುವರಿದಿಲ್ಲ. ಇವರಾದರೂ ಏಕೀಕರಣ ವಿಚಾರಕ್ಕೆ ಅನುಕೂಲರಲ್ಲ.

ಕೊಯಮುತ್ತೂರಿನ ಪ್ರಮುಖ ಕನ್ನಡಿಗರಾದ ಶ್ರೀ ಕೆ. ನಂಜುಂಡಯ್ಯನವರ ಅಭಿಪ್ರಾಯದಂತೆ ಕೊಯಮುತ್ತೂರಿನಲ್ಲಿ ಕನ್ನಡದ ಗಡಿಯು ಪಾಲ್ಘಾಟು ಕಣಿವೆಯಿಂದ ಆರಂಭಿಸಿ, ಸರ್ಕಾರದ ತಪ್ಪಲನ್ನು ಆಶ್ರಯಿಸಿ, ಕೊಯಮುತ್ತೂರು ನಗರಕ್ಕೆ ನಾಲ್ಕುಮೈಲು ಅಂತರದಲ್ಲಿ ಹಾದು, ಅವನಾಶಿತಾಲೂಕನ್ನು ಪ್ರವೇಶಿಸುವುದು.

ಕೊಯಮುತ್ತೂರು ನಗರದಲ್ಲಿ ಮೈಸೂರು ಅಸೋಸಿಯೇಶನ್ ಮತ್ತು ಕರ್ನಾಟಕ ಅಸೋಸಿಯೇಶನ್ ಎಂಬ ಎರಡು ಕನ್ನಡ ಸಂಸ್ಥೆಗಳಿವೆ. ಮೈಸೂರು ಅಸೋಸಿಯೇಶನ್ ಮೈಸೂರಿನವರದು. ಇವರು ಯಾವ ಬಗೆಯ ರಾಜಕೀಯ ವಿಷಯಕ್ಕೂ ಕೈ ಹಾಕುವುದಿಲ್ಲ. ಕರ್ನಾಟಕ ಅಸೋಸಿಯೇಶನ್ ವರ್ಷಕ್ಕೊಮ್ಮೆ ಸಭೆ ಸೇರುವುದಲ್ಲದೆ ಬೇರಿನ್ನೇನೂ ಮಾಡುವುದಿಲ್ಲ. ಇವೆರಡು ಸಂಸ್ಥೆಗಳಲ್ಲದೆ ಎಗ್ರಿಕಲ್ಚರಲ್ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಕರ್ನಾಟಕ ಸಂಘವೊಂದಿದೆ.

ಮೈಸೂರು ಕರ್ನಾಟಕ ಪ್ರಾಂತ್ಯದಲ್ಲಿ ಸೇರದೆ ಹೋದರೆ ಈ ಪ್ರದೇಶಗಳು ಯಾವುದೂ ಕರ್ನಾಟಕದಲ್ಲಿರಲು ಇಷ್ಟಪಡವು.

ಅವನಾಶಿ ತಾಲೂಕು

ಈ ತಾಲೂಕಿನ 72 ಗ್ರಾಮದಳಲ್ಲಿ 35 ಗ್ರಾಮಗಳಲ್ಲಿ ಬಹು ಸಂಖ್ಯಾಕರಾದವರು ಕನ್ನಡಿಗರು. ಕನ್ನಡ ಭಾಷೆ ಮಾತಾಡುವ ವರ್ಗಗಳು ಕೊಯಮುತ್ತೂರು ತಾಲೂಕಿನಲ್ಲಿ ಇದ್ದಂತೆಯೇ ಆಗಿದೆ. ಇಲ್ಲಿಯಾದರೂ ಮನೆಮಾತು ಮಾತ್ರ ಕನ್ನಡವಾಗಿರುವುದಲ್ಲದೆ, ಬೇರಾವ ರೀತಿಯಲ್ಲಿಯೂ ಕನ್ನಡ ಸಂಸ್ಕೃತಿಯ ಸಂಪರ್ಕವಿಲ್ಲದಿರುವುದರಿಂದ ಜನರಲ್ಲಿ ಏಕೀಕರಣದ ಬಗ್ಗೆ ಹೆಚ್ಚಿನ ಉತ್ಸಾಹತೆ ತೋರುವುದಿಲ್ಲ. ಇಲ್ಲಿಯ ಕನ್ನಡಿಗರು ಮೈಸೂರು ಕರ್ನಾಟಕದಲ್ಲಿ ಸಮಾವೇಶವಾದರೆ ಕರ್ನಾಟಕದಲ್ಲಿ ಸೇರಲು ಇಷ್ಟಪಡುವರು.

ಗಡಿಯ ವಿಚಾರ, ಕೊಯಮುತ್ತೂರು ತಾಲೂಕಿನಿಂದ ಕಾರ್ಮಡೆ, ಮೇಟ್ಟುಪಾಲಯಂ ಮೊದಲಾದ ಊರುಗಳನ್ನು ಒಳಗೊಂಡು, ಅವನಾಶಿ ನಗರಕ್ಕೆ ಉತ್ತರದಲ್ಲಿ ಹಾದು ಭವಾನಿ ನದಿಯನ್ನು ಮುಟ್ಟುವುದು. ಭವಾನಿ ನದಿಯನ್ನೇ ಗಡಿಯನ್ನಾಗಿ ಇಟ್ಟುಕೊಂಡರೆ ಅವನಾಶಿ ತಾಲೂಕಿನ ಅನೇಕ ಕನ್ನಡ ಗ್ರಾಮಗಳು ಕೈಬಿಟ್ಟು ಹೋಗುವುವು.

ಗೋಪಿ ಚೆಟ್ಟಿ ಪಾಳ್ಯ

ಈ ತಾಲೂಕಿನಲ್ಲಿ 66 ಕನ್ನಡ ಹಳ್ಳಿಗಳವೆ. ಕೊಯಮುತ್ತೂರು ಅವನಾಶಿಗಳಿಗಿಂತಲೂ ಹೆಚ್ಚಾಗಿ ಇಲ್ಲಿನ ಕನ್ನಡಿಗರಿಗೆ ಕರ್ನಾಟಕದೊಡನೆ ಸೇರಬೇಕೆಂಬ ಆಪೇಕ್ಷೆಯಿದೆ. ಘಟ್ಟದ ಮೇಲಿರುವ ತಾಳವಾಡಿ ಫಿರ್ಕದಬಗ್ಗೆ ಯಾವ ವಿವಾದವೂ ಇಲ್ಲ. ಉಳಿದ ಕೊಳ್ಳೆಗಾಲದ ಒಂದು ಭಾಗವಾಗಿಯೇ ತಮಿಳರು ಪರಿಗಣಿಸಿರುವರು. ಇನ್ನು ಘಟ್ಟದ ಸತ್ಯಮಂಗಲ ಮೊದಲಾದುವು ನಿವಾದಗ್ರಸ್ತ ಪ್ರದೇಶಗಳಾಗಿವೆ. ತಾಲೂಕು ನಗರವಾದ ಗೋಪಿ ಕರ್ನಾಟಕದಲ್ಲಿ ಸೇರಲಾರದು. ಇಲ್ಲಿನ ಕನ್ನಡಿಗರು ಕೊಯಮುತ್ತೂರು ಮತ್ತು ಅವನಾಶಿಯ ಕನ್ನಡಿಗರಿಗಿಂತ ಸ್ವಚ್ಛವಾದ ಕನ್ನಡ ಭಾಷೆಯನ್ನು ಆಡುತ್ತಾರೆ. ತಾಳವಾಡಿ ಫಿರ್ಕದಲ್ಲಲ್ಲದೆ ಇತರ ಕಡೆಗಳಲ್ಲಿ ಕನ್ನಡ ಶಾಲೆಗಳಿಲ್ಲ. ಮೈಸೂರು ಕರ್ನಾಟಕದಲ್ಲಿ ಸೇರುವುದಾದರೆ ಮಾತ್ರ ಈ ಪ್ರದೇಶಗಳ ಜನರು ಕರ್ನಾಟಕ ಪ್ರಾಂತವನ್ನು ಸೇರಲು ಬಯಸುವರು.

ಭವಾನಿ ತಾಲೂಕು

ಬರಗೂರು ರೇಂಜು ಫಾರೆಸ್ಟನ್ನು ಬಿಟ್ಟರೆ ಈ ತಾಲೂಕಿನಲ್ಲಿರುವುದು ಕೇವಲ ಮೂರು ಕನ್ನಡ ಗ್ರಾಮಗಳು. ಇಲ್ಲಿಯ ಕನ್ನಡಿಗರ ಪರಿಸ್ಥಿತಿ ಈ ಮೊದಲಿನ ತಾಲೂಕುಗಳಂತೆಯೇ ಇದೆ. ಇಲ್ಲಿ ಪ್ರಮುಖ ಕನ್ನಡ ವ್ಯಕ್ತಿಗಳಾರೂ ಇಲ್ಲ.

ಕೊಳ್ಳೆಗಾಲ

ಈ ತಾಲೂಕಿನ ಎಲ್ಲಾ ಹಳ್ಳಿಗಳೂ ಕನ್ನಡದವುಗಳು. ತಮಿಳರು ಬಹು ಸಂಖ್ಯಾಕರಾಗಿರುವ ಒಂದೇ ಒಂದು ಹಳ್ಳಿಯಾದರೂ ಇಲ್ಲಿ ಇಲ್ಲ. ಮೈಸೂರು ಕರ್ನಾಟಕ ಪ್ರಾಂತ್ಯದಿಂದ ಬೇರೆ ಏನಿಂತರೂ ಕೊಳ್ಳೆಗಾಲ ತಮಿಳು ನಾಡಿನಲ್ಲಿ ಮಿಳಿತವಾಗುವಂತಿಲ್ಲ ಎಂದು ಇಲ್ಲಿನ ಪ್ರಮುಖ ಕನ್ನಡಿಗರ ಸ್ವಾಭ್ಯಾಕ್ತಿಯಾಗಿದೆ. ಇಲ್ಲಿಯ ಕನ್ನಡಿಗರು ಜಾಗ್ರತಿ ಹೊಂದಿರುವರು.

(ಆ. ಕ. ಏಕೀಕರಣ ಸಂಘದ ಪ್ರಚಾರ ಶಾಖೆಯಿಂದ)

ಹೊಸ ಪುಸ್ತಕ

ಜಲಮೊನ್ದಾರ

ಧನಾಢ್ಯರೆ ದುರಹಂಕಾರ, ದುರ್ವ್ಯಯ
ದುಸ್ಸಾಧನೆ ಮೊದಲಾದುವನ್ನು ಚಿತ್ರಿಸುವ

ಬಡವರ ಭೀಕರ ಪರಿಸ್ಥಿತಿಯ ಕನಿಕರಾವಸ್ಥೆಯನ್ನು ಹೃದ್ಯಾವಳನಾಗಿ ಪ್ರತಿಬಿಂಬಿಸುವ

ನವೀನ ಸಾಮಾಜಿಕ ಕಾದಂಬರಿ

ಜಲಮೊನ್ದಾರ

ಧನಿಕರಿನ್ನದೆ, ಬಡವರಿನ್ನದೆ ಸ್ಪೃತಿಯಾಬ್ಬರೂ ಓದಬೇಕ್ಕೆ ಜನತಾ ಸಾಹಿತ್ಯ

164 ಪುಟಗಳು .... ಬೆಲೆ ರೂ. 1 8 0

ಪ್ರತಿಗಳು ಸಿಗುವ ಸ್ಥಳಗಳು--1. ನವಭಾರತ ಪುಸ್ತಕ ಭಂಡಾರ, ಉಡುಪಿ. 2. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 3. ಎಂ. ಎಸ್. ಮಯ್ಯ ಪುತ್ತೂರು. 4. ಪಿಯರ ಪ್ರಪಂಚ, ಉಡುಪಿ.

1949ನೇ ವರ್ಷದ E. S. I. C. ಕನ್ನಡ ಪಠ್ಯ ಪುಸ್ತಕದ ಟಿಪ್ಪಣಿ

ಯು ಮೂರಾಟಕ್ಕೆ ಸಿದ್ಧವಿದೆ.

ಅಪೇಕ್ಷಕರು ಈ ಕೆಳಗಣ ವಿಳಾಸಕ್ಕೆ ಬರೆದುಕೊಳ್ಳುವುದು.

ಬಿ. ವಿ. ಹೊಳ್ಳ, ವಿದ್ವಾನ್
ಕುಂಬಾಪುರ, ದ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3618 ಎರಡಾನೆ 9-9-1948

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4-8-0
೬ ತಿಂಗಳಿಗೆ ರೂ. 2-8-0
ಬಿಡಿ ಪ್ರತಿಗೆ ರೂ 0-1-6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯ ವಾರ ೨

NAVAYUGA WEEKLY, UDIPI, S. K.

FOUNDER: Hon'ble Mr. A. B SHETTY, Health Minister, Govt. of Madras.

Vol. 29 No. 2

★ ಪಾರ್ಲಿಮೆಂಟ್ ಪ್ರಶ್ನೋತ್ತರ ★

ಪಂಡಿತ ನೆಹರು, ಸರ್ದಾರ್ ಪಟೇಲರಂತಹ ರಾಜಕೀಯ ಪ್ರಮುಖರು ಸುಮಾರು 1946ರ ಅಂತ್ಯದ ವರೆಗೂ ದೊಡ್ಡದೊಡ್ಡ ಸಾರ್ವಜನಿಕ ಸಭೆಗಳಲ್ಲಿ ಅನೇಕಯುಕ್ತವಾಗಿ ಗಟ್ಟಿ ಧ್ವನಿಯಲ್ಲಿ ಭಾಷಣವೀಯುವುದನ್ನು ನೋಡಿದ್ದವರಿಗೆ ಇಲ್ಲಿನೇ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಂತಹ ಸಭೆಗಳಲ್ಲಿ ನಿಧಾನವಾಗಿ ಮತ್ತು ಇಳಿ ಸ್ವರದಿಂದ ಚರ್ಚಿಸುವದನ್ನೆಷ್ಟೇ ಕಲಿತಿದ್ದವರು. ಆದರೆ ಪ್ರಥಮತ: ನಡುಗಾಲ ಸರಕಾರದ ಅಮೇಲೆ ಸ್ವತಂತ್ರ ಭಾರತದ ಕೇಂದ್ರ ಮಂತ್ರಿಗಳಾಗಿ ಆರಿಸಲ್ಪಟ್ಟ ಮೇಲೆ ಇವೆರಡಕ್ಕಿಂತಲೂ ಭಿನ್ನವಾದ-ಇವೆರಡರ ಮಧ್ಯೆ ಸ್ಥಾನದ – ಒಂದು ಹೊಸ ಅನುಭವವು ನೆಹರು, ವಲ್ಲಭಾಯಿಗಳಂಥವರಿಗಾಗಿದೆ. ಎಸೆಂಬ್ಲಿಯಲ್ಲಿ ಮತ್ತೀಗ ಪಾರ್ಲಿಮೆಂಟಿನಲ್ಲಿ ಸದಸ್ಯರ ಸವಾಲುಗಳಿಗೆ ಉತ್ತರಗಳನ್ನೀಯಬೇಕಾದ ಸ್ಥಿತಿಯೊದಗಿದೆ. ಇಂತಹ ಸವಾಲು, ಅಡ್ಡಸವಾಲುಗಳನ್ನೆದಿರಿಸುವದು ಎಷ್ಟೊಂದು ಪ್ರಯಾಸದ ಕಾರ್ಯವೆಂಬುದು ಒಮ್ಮೆಯಾದರೂ ನ್ಯಾಯಾಲಯದ 'ಬೋನು'ಹತ್ತಿದ ಅನುಭವವಿರುವವರಿಗೆ ಗೊತ್ತಿರುವ ಸಂಗತಿ. ಪ್ರಸಂಗಾವಧಾನತೆ-ಬುದ್ಧಿ ಸ್ಥಿರತೆ-ನಿಷ್ಪಂಪ-ಜಾತುರ್ಯ-ವಾಗ್ಚಾತುರ್ಯ-ಮೇಲಾಗಿ ಈ ಪರೀಕ್ಷೆಗೆ ಕುಳಿತ ಅನುಭವ--ಇದ್ದವನೇ ಸವಾಲುಗಳ ಜೊಡೆತದಿದಿರಲ್ಲಿ ಜಯಿಸಬಲ್ಲ. ನೆಹರು, ವಲ್ಲಭಾಯಿಗಳ ಹಿಂದಿನ ಅನುಭವವೆಂದರೆ ಜನತೆಗೆ ಬೋಧನೆಕೊಟ್ಟು, ಹುರಿದುಂಬಿಸುವದು; ಅಥವಾ ವಿಷಯವನ್ನು ಶಾಂತಚಿತ್ತದಿಂದ ಆಳವಾಗಿ ಪರ್ಯಾಲೋಚಿಸುವದಕ್ಕಾಗಿ ಮುಖಾಮುಖಿ ತರ್ಕಿಸುವದು; ಅಷ್ಟೆ! ಹೀಗಾಗಿ ಮಂತ್ರಿಗಳಾದ ಆದಿಭಾಗದಲ್ಲಿ ಇವರ ಉತ್ತರಗಳಲ್ಲಿ ಅಪೂರ್ಣತೆ, ಅಸ್ಪಷ್ಟತೆ ಒಡೆದು ಕಾಣುತಿದ್ದುದಂತೆ, ಅವರ ಸ್ವರವು ಇಡೀ ಸಭೆಗೆ ಕೇಳಿಸುತ್ತಿರಲಿಲ್ಲವೆಂದೂ ಆಗ ದೂರಿದ್ದುತು. ಅದರೀಗ ಪಂಡಿತ ಮತ್ತು ಸರ್ದಾರರಂಥ ಧುರವರು ಪ್ರಶ್ನೋತ್ತರಗಳ ಮಟ್ಟಿಗೂ ಅಬಿರುದಿಗರ್ಹರೆನ್ನಿಸಿದ್ದಾರೆ. ಕೇಂದ್ರ ಮಂತ್ರಿ ಮಂಡಲಿಯ ಇತರ ಸದಸ್ಯರೂ ಇವರೊಟ್ಟಿಗೆ ನಾನಿತಿದ್ದಾರೆ. ಶ್ರೀಗಳಾದ ಯಜ್ಞ.ವಿ. ಕಾವುತ್, ಕುಂಜ್ರು ನಟ್ಟಾಭಿಯವರಂತಹ ಸ್ಟಾರ್ ವನ್ನು ಆಗಿಂದಾಗಲೆ-ವಿಶೇಷ ರೀತಿಯ ಭಡಾಯಿಸುವವರಿದ್ದಾರೆ. ಕೆಲವು ವಿಷಯಗಳಲ್ಲಿ ನೋಟೀಸು ಕೊಟ್ಟು ಬರುವ ಸವಾಲುಗಳಿಗೆ "ಫೈಲು"ಗಳನ್ನು ಮಗುಚಿ, ಅಂಕೆ ಸಂಖ್ಯೆಗಳನ್ನು ಕೂಡಿಸಿ ಕಳೆದು, ತಯಾರು ಮಾಡಿಕೊಂಡು ಬಂದೇ ಉತ್ತರ ಕೊಡಬೇಕಾಗುತ್ತದೆ. ಇನ್ನು ಕೆಲವನ್ನು ಆಗಿಂದಾಗಲೆ-ವಿಶೇಷ ರೀತಿಯ ಯರಬೇಕಾದ ಸಂದರ್ಭ ಮೆಂದರೆ ಪ್ರಶ್ನೋತ್ತರಗಳ ಕಾಲವೆನ್ನಬಹುದು. ನೆಹರು, ವಲ್ಲಭಾಯಿ, ಮಿತ್ತಿತರ ಕೇಂದ್ರ ಮಂತ್ರಿಗಳು ತಮ್ಮ ಮೂಲಯೋಗ್ಯತೆ ಮತ್ತೀಗಿನ ಅನುಭವದ ಬಲದಿಂದ ಈಗೀಗ ಸ್ವಾರಸ್ಯವಾದ ಉತ್ತರಗಳನ್ನು ಕೊಡಲು ಕಲಿತಿದ್ದಾರೆ. ಮಾದರಿಗಾಗಿ ಈಗ ನಡೆಯುತ್ತಿರುವ ಭಾರತದ ಪಾರ್ಲಿಮೆಂಟ್ ಅಧಿವೇಶನದಲ್ಲಾದ ಕೆಲವು ಸ್ವಾರಸ್ಯದ ಪ್ರಶ್ನೋತ್ತರಗಳನ್ನು ಇಲ್ಲಿ ಕೊಡಲಾಗಿದೆ -

ದೂರದೃಷ್ಟಿಯಿದ್ದಲ್ಲಿ ದುಡ್ಡು ತಾನಾಗಿ ಕೂಡುತ್ತದೆ.
ಮುನ್ನೋಟ, ಮಿತವ್ಯಯ, ಇವು ಧನಸಂಗ್ರಹದ
ಸುಲಭೋಪಾಯ.

ದಿ
ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್,
ಉಡುಪಿ

ಇವರು ನಿಮ್ಮ ಆಪದ್ಧನದ ಸಮಸ್ಯೆಯನ್ನು
ಸುಲಭದಲ್ಲಿ ಬಿಡಿಸುತ್ತಾರೆ.

ರೂ 900/-ರ ಒಳಗಿನ ಮೊತ್ತದಲ್ಲಿಯೆ ತಂತಮ್ಮ
ಅನುಕೂಲತೆಗನುಕೂಲವಾಗಿ ವಿಮೆ ಇಳಿಸುವ
ಸಾಕಲ್ಯವಿರುವುದೇ ಈ ಸಂಸ್ಥೆಯ ವೈಶಿಷ್ಟ್ಯ.
ಆಕರ್ಷಕರವರತ್ತಿನಮೇಲೆ ಉತ್ಸಾಹೀಕಾರ್ಯಕರ್ತರು
ಬೇಕಾಗಿದಾರೆ!
ನಿವರಗಳಿಗೆ ಬರೆಯಿರಿ
The New Karnataka Provident
Incurance Co , Ltd.
P. B No. 22 UDIPI

ಪ್ರಶ್ನೆ—ಉತ್ತರ

ಹೈದರಾಬಾದಿನ ಕುರಿತು ಸಂದರ್ಭಾನುಸಾರವಾಗಿ ಸರ್ದಾರ್ ಪಟೇಲರು ಕೊಡುತ್ತಾ ಬಂದ ಉತ್ತರಗಳಲ್ಲಿ ತಿರುಳು ಮತ್ತು ವಿನೋದ ಎರಡೂ ಕಂಡು ಬಂದಿವೆ. ಹೈದರಾಬಾದ್ ಪ್ರಶ್ನೆಯನ್ನು ನಿರ್ಲಕ್ಷ್ಯದಿಂದ ತೀರ್ಮಾನಿಸಿ ಬಿಡುವೆವು ಮತ್ತಾ ಕಾರ್ಯವು ಸಕಾಲದಲ್ಲಾಗುವುದು ಎಂಬ ಆತ್ಮವಿಶ್ವಾಸವು ಸರ್ದಾರರಲ್ಲಿರುವದೆಂಬುದನ್ನು ಅವರ ಉತ್ತರಗಳ ಮಾರ್ಜಿಯ ಮೇಲಿಂದ ಅರಿಯಬಹುದು-

ಆರ್. ಕೆ ಸಿಧ್ವ-ಯ ಸೋಷಿಯಾಲಿಸ್ಟ್ ರಾಷ್ಟ್ರಗಳು ಕರಾಚಿಯ ಮುಖಾಂತರವಾಗಿ ವಿಮಾನ ಮುಖಲಕ ಹೈದರಾಬಾದಿಗೆ ಶಸ್ತ್ರಾಸ್ತ್ರಗಳನ್ನು ಸರಬರಾಯಿ ಮಾಡುತ್ತಿರುವವೆಂಬುದು ನಿಜವೇ

ಸರ್ದಾರ್ ಪಟೇಲ್-ಸ್ವತ: ಪರರಾಷ್ಟ್ರಗಳೇ ಈ ಕೆಲಸ ಮಾಡುತ್ತಿವೆ ಎಂಬುದು ಸರಕಾರದ ತಿಳುವಳಿಕೆಗೆ ಬಂದುದಿಲ್ಲ ಕೆಲವು ಪರರಾಷ್ಟ್ರೀಯರು ಈ ಕೆಲಸದಲ್ಲಿ ನಿರತರಾಗಿರಬೇಕು. ಆದರೆ ಅವರು ಯಾವ ರಾಷ್ಟ್ರದವರೆಂಬುದು ಸರಕಾರಕ್ಕೆ ಗೊತ್ತಾಗಿಲ್ಲ.

ಸಿಧ್ವ- ಸಿಡ್ನೆಹೋಟೆನ್ನನು ಮಾತ್ರವಲ್ಲ; ಇತರ ಏದೇಶೀಯರು ಕೂಡಾ ಹೈದ

(೨ನೇ ಪುಟ ನೋಡಿರಿ)

ಏನುಮಾಡಲಿಕ್ಕೆ ಯಾ ಕ್ಷಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.
ಪ್ರಧಾನ ಕಾರ್ಯಾಲಯಃ-ಧಾರವಾಡ,
THE UNITED KARNATAK INSURANCE COMPANY, LIMITED.

ಜನಮತ

ಹೊಸ ಪ್ರಾಂತ್ಯಗಳ ರಚನೆ

ಬರೆದವರು: ಶ್ರೀ. ಪಿ. ವಿ. ಉಪಾಧ್ಯಾಯ, ಕಾರ್ಕಳ

ಒಂದೇ ಪ್ರಾಂತ್ಯದಲ್ಲಿ ಮೂರು-ನಾಲ್ಕು ಭಾಷೆಯ ಪ್ರಜೆಗಳಿರುವುದಾದರೆ ಆಡಳಿತೆಗೆ ಅನಾನುಕೂಲವಿದೆ. ಒಂದು ಸರಕಾರದ ಆಡಳಿತೆಯ ಭಾಷೆಯೂ ಪ್ರಜೆಗಳ ವ್ಯವಹಾರದ ಭಾಷೆಯೂ ಒಂದೇ ಆಗಿದ್ದರೆ ಸರಕಾರದ ವಿಧಿನಿಬಂಧನೆಗಳು ಪ್ರಜೆಗಳಿಗೂ ಪ್ರಜೆಗಳ ಕಷ್ಟ ಸಂಕಷ್ಟಗಳು ಸರಕಾರಕ್ಕೂ ತಿಳಿಯಲು ಸುಲಭವಾಗುತ್ತದೆ, ಎಂಬುದು ಸಾಮಾನ್ಯರಿಗೂ ಅರ್ಥವಾಗುವ ವಿಷಯ. ಒಂದೇ ಕಡೆಯಲ್ಲಿ ವಾಸಿಸಿಕೊಂಡಿದ್ದ ಜನರು ಒಂದು ಭಾಷೆಯನ್ನು ಮಾತನಾಡುವವರಾಗಿದ್ದರೆ ಏಕಾಡಳಿತೆಯಲ್ಲಿರುವದು ಸಹಜ ಮತ್ತು ಹಿತಕರ. ಆದರೆ ಒಂದು ಪ್ರಾಂತ್ಯದಲ್ಲಿ ಮೂರು ನಾಲ್ಕು ಭಾಷೆಯ ಜನರು ಇರುವುದಾದರೆ ಆದು ಅಸ್ವಾಭಾವಿಕವಾಗುತ್ತದೆ. ರಾಜ್ಯವನ್ನು ಆಳುವವರು ಬೇಕೆಂತಲೇ ತಾತ್ಪಾಲಿ ಪ್ರಾಂತರಚನೆ ಮಾಡಿಕೊಂಡಿದ್ದೇ ವಿನೀಅದು ಸ್ವಾಭಾವಿಕವಾದ ವಿಭಾಗವಲ್ಲ. ಎಂಬುದು ಎಲ್ಲರಿಗೂ ಅರ್ಥವಾದೀತು ಇದನ್ನರಿತು ಸ್ವಾತಂತ್ರ್ಯಾನಂತರ ಎಲ್ಲಾ ಭಾಷಾನ್ಯಾಯ ಪ್ರಾಂತರಚನೆಯನ್ನು ವ್ಯವಸ್ಥೆ ಮಾಡಬೇಕೆಂದು ಕಾಂಗ್ರೆಸು ಆನೇಕ ವರ್ಷಗಳಿಂದ ಒತ್ತಾಯಿಸಿಕೊಂಡಿದೆ ಮಾತ್ರವಲ್ಲದೆ ಅದು ಅದೇ ತತ್ವಕ್ಕನುಸಾರವಾಗಿ ತನ್ನ ವ್ಯವಸ್ಥೆಗಳನ್ನೂ ಮಾಡಿಕೊಂಡಿದೆ ಆಂತೆಯೇ ಕನ್ನಡಭಾಷೆ ಮಾತಾಡುವವರೆಲ್ಲಾ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ, ಮಲಯಾಳ ಮಾತಾಡುವವರನ್ನು ಕೇರಳ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ, ತಮಿಳು ಮಾತಾಡುವವರನ್ನು ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ, ತೆಲುಗು ಮಾತಾಡುವವರನ್ನು ಆಂಧ್ರಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ಸೇರಿಸಿಕೊಂಡು ಅವುಗಳ ಮುಖಾಂತರ ತನ್ನ ಪಾಲಿನ ಆಡಳಿತೆಯನ್ನು ಸುಸೂತ್ರವಾಗಿ ನಡೆಸಿಕೊಂಡು ಬಂದಿದೆ. ಮೊದಲು ಒಂದು ರಾಜ್ಯೀಯಪಾರ್ಟಿ ಅಧಿಕಾರಕ್ಕೆ ಬಂದಾಗ ಅದು ತತ್ವವನ್ನು ಅನು ಅಧಿಕಾರಕ್ಕೆ ಬಂದಾಗ ಕಾರ್ಯರೂಪದಲ್ಲಿ ತರಬೇಕೆನ್ನುವ ಮಾತಿಗೆ ಅದು ಚಾರ್ಯರೂಪದಲ್ಲಿ ತರಲ್ಪಡುವ ಸಂದರ್ಭವೊದಗಿದಾಗ ಅದನ್ನು ವಿರೋಧಿಸುವವರು ಅಲ್ಲಲ್ಲಿ ತಲೆಯೆತ್ತಿರುವುದು ಅತ್ಯಂತ ಸಾಮಾನ್ಯವಾದ ಕರವಿರುವುದು.

ಭಾಷಾನುಸಾರಿ ಪ್ರಾಂತರಚನೆಯು ದೇಶಾಭಿಮಾನಕ್ಕೆ ಅಡ್ಡಿ ಬರುವುದಂತೆ. ದೇಶವು ಈಗ ಇತರ ಅನೇಕ ಮಯತ್ಕಾರ್ಯಗಳಲ್ಲಿ ಉಪಕ್ರಮಿಸುತ್ತಿರುವಾಗ ಪ್ರಾಂತರಚನೆಯು ಪ್ರತ್ಯೇಯು ದೇಶದ ಮುಖಂಡರ ಮನಸ್ಸನ್ನು ಪ್ರಾಮುಖ್ಯ ವಿಷಯಗಳಕಡೆಗೆ ಕೊಂಡು ಹೋಗಲು ಅಡ್ಡಿ ಮಾಡುತ್ತದೆಯಂತ. ದೇಶವು ಆಡಳಿತೆಯಮಟ್ಟಿಗೆ ವಿಭಜನೆಯಾಗಲೇ ಬೇಕಾದರೆ ಪೂರ್ವ, ಉತ್ತರ, ಪಶ್ಚಿಮ, ದಕ್ಷಿಣಭಾರತ ಎಂಬಂತೆ ಯಾವಭಾಷೆಯಜನರು ಇರುವರೆಂದು ಜೋಚಿಸದೆ ಕಣ್ಣು ಮುಚ್ಚಿ ವಿಭಾಗ ಮಾಡುವುದೇ ನ್ಯಾಯವಂತೆ. ಇಂತಹ ಅರ್ಥವಿಲ್ಲದ ಸೂಚನೆಗಳು ಬರತೊಡಗಿವೆ. ಭಾಷಾನುವಾರು ಪ್ರಾಂತ್ಯ ಮಾಡುವುದುದೇಶಾಭಿಮಾನಕ್ಕೆ ಹೇಗೆ ಆಧ್ಯಂತರ ತರುವುದೋ ನನಗರಿಯದು. ಹಾಗಿದ್ದರೆ ಕಾಂಗ್ರೆಸು ನೀತಿ ಹೇಳಿದಂತೆ ಕರ್ನಾಟಕ, ಕೇರಳ, ತಮಿಳು ನಾಡು, ಆಂಧ್ರ, ಮಹಾರಾಷ್ಟ್ರ ಇತ್ಯಾದಿ ಪ್ರಾಂತಿಕ ಕಾಂಗ್ರೆಸ್ ಸಂಸ್ಥೆಗಳನ್ನು ಏಕೆ ನುತ್ತು ಹೇಗೆ ಸಜೀವಿಸಿಕೊಂಡು ಬಂದಿತೊ? ಈ ವ್ಯವಸ್ಥೆಯಿಂದ ನನ್ಮಲ್ಲಿಯ ರಾಷ್ಟ್ರಭಿಮಾನಕ್ಕೆ ಹೇಗೆ ಕುಂದುಬಂದೀತೋ? ಅಲ್ಲದೆ ಒಂದೇ ಪ್ರಾಂತ್ಯದಲ್ಲಿ ನಾಲ್ಕಾರು ಭಾಷೆಯ ಜನರನ್ನು ಒಟ್ಟುಗೂಡಿಸಿ ಆಡಳಿತೆ ನಡೆಯಿಸಿದರೆ ಪ್ರಜೆಗಳಲ್ಲಿ ರಾಷ್ಟ್ರಭಿಮಾನವು ಹೇಗೆ ವೃದ್ಧಿಯಾಗುವುದೊ? ಈ ಪ್ರಶ್ನೆಗಳಿಗೆ ಉತ್ತರಕೊಡುವವರಾರು? ಪ್ರಾಂತ್ಯದ ಜನರು ಒಂದೇ ಭಾಷೆಯವರಾಗಿದ್ದರೆ ಮತ್ತು ಅದೇ ಭಾಷೆಯಲ್ಲಿ ರಾಜ್ಯಾಡಳಿತೆಯ ವ್ಯವಹಾರಗಳು ನಡೆದರೆ ಆಡಳಿತೆಯು ವಿಚಾರಗಳು ಪ್ರಜೆಗಳಿಗೆಲ್ಲಾ ತಿಳಿದು ಇದರಿಂದಾಗಿ ಅವರಲ್ಲಿರುವ ರಾಷ್ಟ್ರಾಭಿಮಾನಕ್ಕೆ ಕುಂದುಬರುವುದೋ? ಪ್ರಜೆಗಳಾರಿಗೂ ಅರ್ಥವಾಗದ ಒಂದು ಭಾಷೆಯಿಂದ ಆಡಳಿತೆ ವ್ಯವಹಾರಗಳು ನಡೆಯುವುದೇ ಒಳ್ಳೆಯದೆಂದು ಆದರೆ ಈಗಿನಂತೆ ಇಂಗ್ಲಿಷ್ ಭಾಷೆಯನ್ನೇ ಸರಕಾರದ ಭಾಷೆಯಾಗಿ ಮುಂದುಂಸಬಹುದಲ್ಲವೇ?

ಎರಡನೆಯದಾಗಿ ಈ ಪ್ರಶ್ನೆಯು ನಮ್ಮ ರಾಜಕೀಯ ಮುಖಂಡರ ಮನಸ್ಸನ್ನು ಬೇರೆ ಕಡೆಗೆ ಸೆಳೆಯುವುದಾದರೂ ಹೇಗೆ? ಇದು ನೇರವಲ್ಲಿ ಕ್ರಾಂತಿ ಎಬ್ಬಿಸಬಹುದಾದ ಪ್ರಶ್ನೆಯಲ್ಲ. ಈ ರೀತಿ ವ್ಯವಸ್ಥೆಯನ್ನು ನೂಡಬೇಕೆಂದು ದೇಶವು ಅರ್ಧ ಶತಮಾನದಿಂದ ಬ್ರಿಟಿಷ್ ಸರಕಾರದೊಡನೆ ಕೇಳಿಕೊಂಡಿತ್ತು. ಆವನ್ನೇ ದೇಶೀಯ ಸರಕಾರವು ಮಾಡಿದ್ದಾದರೆ ಆವರಿಂದಾಗಿ ಕ್ರಾಂತಿ ಉಂಟಾಗಲಾರದು. ಈ ಪ್ರಶ್ನೆಯು ಎಲ್ಲಾ ಮಂತ್ರಿಗಳನ್ನೂ ಒಂದೇಸಲ ಪೀಡಿಸುವಂತಹದಲ್ಲ. ಇದಕ್ಕಾಗಿ ಒಂದು ಪ್ರತ್ಯೇಕ ಇಲಾಖೆಯನ್ನು ವರ್ಕಡಿಸಿ ಕಾರ್ಯ ಪ್ರಾರಂಭಿಸಿಕೊಳ್ಳಬಹುದು. ಇದಕ್ಕಾಗಿಯೇ ಬೇಕಿದ್ದರೆ ರತ್ಯಾಲಕ್ಕೆ ಒಬ್ಬ ಮಂತ್ರಿಯನ್ನೂ ನೇಮಿಸಬಹುದು.

ಈ ಮಹತ್ವದ ಯೋಜನೆಗೆ ಅಡ್ಡಿ ಹೇಳುವವರಾರು? ಎಂದು ನೋಡಿದರೆ ಆವರ ಆ ತ್ಯಿಯಲ್ಲಿ ಏನು ಗುಪ್ತ ರಹಸ್ಯವೆನಿಸೆಯೆಂದು ತಿಳಿಯುತ್ತದೆ. ನಾಲ್ಕು ಭಾಷೆಗಳನ್ನಾಡುವ ಜನರನ್ನು ಕೂಡಿಸಿಕೊಂಡು ಮದ್ರಾಸ್ ಪ್ರಾಂತ್ಯ ವಿದೆ. ಆವರ ಆಡಳಿತೆಯು ಬಹುಮಟ್ಟಿಗೆ ತಮಿಳರ ಕೈಯಲ್ಲಿ ಸೇರಿದೆ. ಆದರಿಂದಾಗಿ ತಮಿಳುನಾಡುಪ್ರಾಂತ್ಯದ ಕೆಲವು ಮುಖಂಡರಿಗೆ ಈ ಹೊಸ ವ್ಯವಸ್ಥೆಯು ಬಗ್ಗುವುದಿಲ್ಲ. ಮಹಾರಾಷ್ಟ್ರ, ಕರ್ನಾಟಕ, ಗುಜರಾತ್ರು ಇವುಗಳಿಂದ ಸೇರಿರುವ ಮುಂಬೈ ಪ್ರಾಂತ್ಯದ ಆಡಳಿತವು ಈಗ ಮುಂಬೈಯವರ ಕೈಯಲ್ಲಿದೆ. ಇದರಿಂದಾಗಿ ಮುಂಬೈಯ ಕೆಲವು ಮುಖಂಡರಿಗೆ ಇದು ಒಪ್ಪಿಗೆ ಇಲ್ಲ. ಇನ್ನು ದೇಶವು ಈ ರೀತಿ ಅವ್ಯವಸ್ಥೆಯಲ್ಲಿರುವಾಗ ತಮಗೆ ಲಾಭಕರವೆಂದು ಎಣಿಸುವ ಕೆಲವು ವ್ಯಕ್ತಿಗಳಿಗೆ ಇದು ರುಚಿಸುವುದಿಲ್ಲ. ಏನಾ ನೇರವೆದ ಇತರರಿಲ್ಲಿಗೂ ಇದು ಸರ್ವಮಾನ್ಯವಾದ ಪ್ರತ್ಯೇಯಾಗಿದೆ. ಆದುದರಿಂದ ಎಲ್ಲರೂ ತಮ್ಮ ಸ್ವಂತ ಸ್ವಾರ್ಥವನ್ನು ಬಿಟ್ಟು ಒಂದೇ ಮನಸ್ಸಿನಿಂದ ಇದಕ್ಕೆ ಪ್ರಕೃತ ತಮ್ಮ ಪೂರ್ಣ ಸಮ್ಮತಿಯನ್ನು ಸೂಚಿಸುವುದು ಯೋಗ್ಯವಿದೆ.

WANTED

Applications are invited from H Elementary Trained teachers whose age should not be more than 50 years on 1-9-1948 for employment in Labour Schools under the Management of the Labour Department in South Kanara District. The scale of pay will be Rs. 30 1-50 with usual Dearness allowance. Preference will be given in the following order.

1. Harijans or the members of eligible communities who are ex-army men or women.

2. Harijans or the members of the eligible communities who are other than ex-army personel.

3. Other communities who are ex-army personels.

4. Other communities who are other than ex army personel.

2. The applications should reach the Dt. Labour Harijan welfare Officer. South Kanara, on or before 30-9-1948 together With (1) the Training Certificate and (2) discharge certificate in the case of ex-army personel.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರುಪಯಿಗಳ ವಸೂಲಿಯನ್ನು ತ್ವರಿತತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಿಸಿಬಂತಿರುವ ನಮ್ಮ ಶಾಖೆಗಳು ದಬ್ಬಣದ ಅರಳೆಯ ಕ್ಷೇತ್ರಗಳಲ್ಲಿ ತಮಿಳುನಾಡಿನ ಆಕ್ಕಿ ಮತ್ತು ನೆಲಗಡಲೆಯ ಪ್ರಸೇರಗಳಲ್ಲಿ- ಮಲಬಾರು ಜಿಲ್ಲೆಯ ತೆಂಗಿನಗಳ, ವೈಕ್ಷವಾಟಿಗೆಗಳಿರುವಲ್ಲಿ.. ನುತ್ತು ಮುಂಬಾಯಿ ಹಾಗೂ ಆದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ನೈಯಕ್ತಿಕವಾಗಿ ನಿರಾಕರಿಗಳ ಬಗ್ಗೆ ಕಲೆಕ್ಷನ್ ರುಪಯಿಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ವ್ಯಪ್ತ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮವಿಶಿಷ್ಟ ಅನತ್ಯಕತೆಗಳಿಗೆ ಹೊಂದಿಸಿಕೊಳ್ಳಬಲ್ಲವು. ಆದರಿಂದ ನಮಗೆ ಸಮಯಸ್ಫೂರ್ತಿ, ಹಣವ್ಯವಹಾರಿಯಿದು. ನೀವು ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರುಪಯಿಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ವೀಕ್ಷಣ ಲಕ್ಷ್ಯ ಹೊತೆಯದು.

The Canara Bank Limited.

ESTD: 1906.

ನಯಸ್ಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಇಂಗ್ಲಿಷ್ ಕಲಿಯಲು ಅತ್ಯನುಕೂಲವಾದ ಪುಸ್ತಕ

ದಿ ಕೊಡ್ಲಿ ಶ್ರೀನಿವಾಸರಾಯರ

ಸುಲಭದಲ್ಲಿ ಇಂಗ್ಲಿಷ್

(English Made Easy)

(ಇಂಗ್ಲಿಷ್ ಸ್ವಯಂಬೋಧಿನಿ)

ಬೆಲೆ ರೂ 1-8-0; ಟಪ್ಪಾಲು ದ್ವಾರಾ ರೂ 1-13-0

ಶ್ರೀ. ಯು. ಜೆ ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ

ಲೋಕನ್ಯವಹಾರ ಬೋಧಿನಿ-

ವ್ಯವಹಾರಜ್ಞಾನದರ್ಪಣ

ಅತ್ಯಂತ ಉಪಯೋಗೀ ಪುಸ್ತಕ

ಬೆಲೆ ರೂ. 1-8-0; ಟಪ್ಪಾಲು ದ್ವಾರ ರೂ 1-13-0

ಪ್ರತಿಗಳು ಸಿಗುವ ಮುಖ್ಯ ಸ್ಥಳಗಳು:-

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು, 2. ನವಭಾರತ ಬುಕ್ ಡಿಪೊ, ಉಡುಪಿ 3 ಸ್ವತಂತ್ರ ಭಾರತ ಬುಕ್ ಕಂಪೆನಿ ಪೋರ್ಟ್, ಬೊಂಬಾಯಿ, 4. ಎಂ. ಎಸ್. ಮಯ್ಯ ಪುತ್ತೂರು 4. ನವಯುಗ ಪ್ರೆಸ್, ಉಡುಪಿ

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದ್ದುವ ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಮದ್ರಾಸ್ ಪ್ರಾಂತ್ಯದ ನಗರ ಸಭಾಡಳಿತ.

ನಗರಾಧ್ಯಕ್ಷರ ಪ್ರಾಂತಿಕ ಸಮ್ಮೇಳನ

ಮದ್ರಾಸ್ ಸರಕಾರದ ಆಶ್ರಯದಲ್ಲಿ ಇಡೀ ಮದ್ರಾಸ್ ಪ್ರಾಂತ್ಯದ ನಗರ ಸಭಾಧ್ಯಕ್ಷರುಗಳ ಸಮ್ಮೇಳನವು ಇದೇ ತಿಂಗಳ ತಾ 1ರಿಂದ 3ರ ವರೆಗೆ ಮದ್ರಾಸಿನ 'ರಾಜಾಜೀ ಭವನ'ದಲ್ಲಿ ಜರಗಿತು. ಈ ಮಾದರಿಯ ಸಮ್ಮೇಳನವು ಇದೇ ಮೊದಲನೆಯದಿದ್ದು ಪ್ರಾಂತ್ಯದ ಹೆಚ್ಚಿನ ಮುನ್ಸಿಪಾಲಿಟಿಗಳ ಅಧ್ಯಕ್ಷರುಗಳು ಹಾಜರಿದ್ದರು. ನಗರ ಸಭೆಗಳ ಆಡಳಿತೆಯ ಸುಧಾರಣೆಯಕುರಿತಾದ ಮಂತ್ರಿಗಳ ಸೂಚನಾತ್ಮಕ ಭಾಷಣಗಳೂ ಸಮ್ಮೇಳನದ ನಿರ್ಣಯಗಳೂ ಪ್ರಾಮುಖ್ಯವಿದ್ದುವು.

ಪ್ರಧಾನಿ ಓಮಂದೂರರು

ಸಮ್ಮೇಳನವನ್ನು ಉದ್ಘಾಟಿಸುತ್ತಾ ಪ್ರಧಾನ ಮಂತ್ರಿ ಶ್ರೀ ಓಮಂದೂರು ರಾಮಸ್ವಾಮಿ ರೆಡ್ಡಿಯಾರರಂದರು. "ಸ್ಥಳೀಯ ಸ್ವಾಡಳಿತೆಯಂದರೆ ಸ್ವತಂತ್ರ ಹಾಗೂ ಪರಿಣಾಮಕಾರೀ ಪ್ರಭುತ್ವದ ತಂಬೇತೀ ಕ್ಷೇತ್ರ. ಎಲ್ಲೆಡೆಯ ಮುನ್ಸಿಪಲ್ ಸಂಸ್ಥೆಗಳೇ ಎಲ್ಲಾ ಪಾರ್ಲಿಮೆಂಟುಗಳ ತಾಯಿಯಾಗಿದ್ದುವು. ಸ್ಥಳೀಯ ಸಂಸ್ಥೆಗಳು ಜನತೆಯ ಸೇವೆಯ ಹಾಗೂ 'ರಚನಾತ್ಮಕ ಕಾರ್ಯಗಳ ಆವೂರ್ವ ಸಂದರ್ಭಗಳನ್ನು ನಮ್ಮಲ್ಲಿ ಹೆಚ್ಚಿನವರಿಗೊದಗಿಸಿಕೊಟ್ಟುವೆ. ಸಾರ್ವಜನಿಕ ಆರೋಗ್ಯ, ನೈರ್ಮಲ್ಯ, ಶಿಕ್ಷಿತ್ವ, ವಿದ್ಯೆ, ಅಗ್ನಿರಾಮಕ, ಬಡಜನೋದ್ಧಾರ, ಕಟ್ಟಡ ನಿರ್ಮಾಣ, ರಸ್ತೆ ಸೇತುವೆಗಳ ರಚನೆ ಮತ್ತು ನೀರ ವ್ಯವಸ್ಥೆ, ಸಾರ್ವಜನಿಕ ವಿಹಾರ ಸ್ಥಳ, ತೋಟ, ಈಜುವ ಕೊಳಗಳ ಅನುಕೂಲತೆ, ನೀರು ಮತ್ತು ವಿದ್ಯುತ್ ಸರಬರಾಯಿ, ನಗರ ಪ್ರಾಣಿ ಮತ್ತು ಆಸುವಾಸು ವಿಸ್ತರಣಾ ಯೋಜನೆ, ಆಹಾರೌಷಧಗಳ ಕೊರತೆಗಳಿಂದ ಜನರನ್ನು ಪಾರುಮಾಡುವುದೇ ಮೊದಲಾದ ಆತಿಹೆಚ್ಚಿನ ಹೊಣೆಗಾರಿಕೆಗಳು ನಗರಸಭೆಗಳ ಮೇಲಿವೆ ಇಂತಹ ಪ್ರಾಮುಖ್ಯ ಕಾರ್ಯ ನಿರ್ವಹಿಸಲು ಶಕ್ಯಂತೆ ಸ್ಥಳೀಯ ಸಂಸ್ಥೆಗಳ ಜಾಳಿಟ್ಟು ಮತ್ತು ಅಧಿಕಾರವಿಂಬೇಕೆಂಬುದು ನಿರ್ವಿವಾದ. ಆದರೆ ಆಧುನಿಕ ಜೀವನದ ಕಲಸು ಮೇಲೋಗರಗಳ ದೆಸೆಯಿಂದಾಗಿ ನಾಗರಿಕಾವಶ್ಯತೆಯೆಲ್ಲವನ್ನೂ ತಾವೇಕಾವಾಗಿ ನೆರವೇರಿಸಿಕೊಡುವದು ನಗರಸಭೆಗಳಿಗೆ ಅಸಾಧ್ಯ. ನಗರವಾಸಿಗಳು ನಾಗರಿಕ ಯೋಗ್ಯಗುಣ ನಡತೆಗಳಿಂದ, ಅನಾಸಕ್ತಿಯ ಸೇವಾಬುದ್ಧಿಯಿಂದ ನೆರವಾಗಬೇಕಾದುದು ಇಲ್ಲಿ ಮುಖ್ಯ. ಈ ನಿರಾಸಕ್ತ ಸೇವಾ ಸಂಸ್ಕೃತಿಯೇ ನಮ್ಮ ಇಂದಿನ ಹಲವಾರು ಪ್ರಜಾಧಿಕಾರೀ ಸಂಸ್ಥೆಗಳಲ್ಲಿ ಕಾಣೆಯಾಗಿರುವುದು ಶೋಚನೀಯ. ಹಳೇ ಕಾಲದ ಹರಕು ಬುದ್ಧಿಯವನೆಂಬ ಅಪವಾದ ನನಗೆ ಬರುವಂತಿದ್ದರೂ ಕೂಡಾ, ನಾನೀ ಸಂದರ್ಭದಲ್ಲಿ, ನಮ್ಮ ಹಳೇ ಪುಸ್ತಕದ ಪುಟ ಮಗುಚಿ ನೋಡಿರಿ-ನಮ್ಮ ಧರ್ಮ ಶಾಸ್ತ್ರಗಳಲ್ಲಿ ಬರೆದಿರುವ ನಡತೆ ಕ್ರಮನಿಯಮಗಳನ್ನು ಪುನಃ ಓದಿ ಕೊಂಡು ಒಂದು ಮಿನಿಟು ಯೋಚಿಸಿಕೊಳ್ಳಿರಿ-ಎನ್ನುತ್ತೇನೆ. ಆಗ ಜೀವನದ ಅಖಂಡ ಏಕಾಕಾರ ತಿಳಿದೀತು. ಅಲ್ಲಿ ಖಾಸಗೀ ಜೀವನ ಹಾಗೂ ಸಾರ್ವಜನಿಕ ಜೀವನದೊಳಗೆ, ಗೃಹ ಜೀವನ ಮತ್ತು ನಾಗರಿಕ ಜೀವನದೊಳಗೆ, ನೈತಿಕ ವರ್ತನೆ ನುತ್ತು ಸಾಮಾಜಿಕ ವರ್ತನೆಯೊಳಗೆ ವ್ಯತ್ಯಾಸವೆಂಬುದಿಲ್ಲ" ಎನ್ನುತ್ತಾ ಅಧುನಿಕ ಜೀವನ ವಿಧಾನಗಳಲ್ಲಿ ಈ ನೀತಿ ಸೂತ್ರವು ಮಾಯವಾಗಿರುವುದನ್ನು ಎತ್ತಿ ಹೇಳಿದರು. ನಗರಾಡಳಿತೆ ಮತ್ತು ನಾಗರಿಕತೆಯೊಳಗೆ ತಾದಾತ್ಮ್ಯತೆಯಿಲ್ಲದಿರುವ ದೋಷವನ್ನು ಖಂಡಿಸಿ, ನಿಸ್ವಾರ್ಥ, ನಿರ್ಲಿಪ್ತ ಸೇವಾ ಬುದ್ಧಿಯಿಂದ ಸ್ಥಳೀಯ ಸಂಸ್ಥೆಗಳ ಆಡಳಿತೆಯು ಅತ್ಯುಚ್ಚ ಮಟ್ಟದಲ್ಲಿ ಪರಿಶುದ್ಧವಾಗಿರಬೇಕೆಂದರು.

ಶ್ರೀ ಚಂದ್ರಮೌಳಿ

ಸ್ಥಳೀಯ ಸಂಸ್ಥೆಗಳ ಮಂತ್ರಿ ಶ್ರೀ ಕೆ. ಚಂದ್ರಮೌಳಿಯವರು ಭಾಷಣವೀಯುತ್ತಾ "ನಾಗರಿಕರ ಸರ್ವತೋಮುಖ ಅಭಿವೃದ್ಧಿ ಮತ್ತು ಹಿತಸಾಧನೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು ಸ್ಥಳೀಯ ಸಂಸ್ಥೆಗಳಿಗೆ ವಿಸ್ತಾರಾಧಿಕಾರಗಳನ್ನು ಕೊಡುವ ಮೂಲಕ ಪ್ರಜಾಪ್ರಭುತ್ವವನ್ನು ಸಾಧ್ಯವಿದ್ದಷ್ಟು ವಿಸ್ತರಿಸಬೇಕೆಂಬುದೇ ಇಂದಿನ ಸರಕಾರದ ಉದ್ದೇಶ. ತದನುಸಾರವಾಗಿ; ಮಿಕ್ಕ ವಿಷಯಗಳಂತೆಯೇ ಮುನ್ಸಿಪಲ್ ಹಿಯರಂಗೇನರಿಗೆ ಕೆಲವು ಆಡಳಿತಾಧಿಕಾರಗಳನ್ನಿತ್ತಿಯುವ ತಿದ್ದುಪಡಿಗಳನ್ನೂ ಮುನ್ಸಿಪಲ್ ಶಾಸನದಲ್ಲಿ ಮಾಡಬೇಕೆಂದು ಸರಕಾರವು ಸಂಕಲ್ಪಿಸಿದೆ. ಅದ್ದರಿಂದ ದೈನಂದಿನ ಆಡಳಿತೆಯಲ್ಲಿನೂ ಅಡ್ಡ ಬಾರದೆ ಎಕ್ಸಿಕ್ಯೂಟಿವ್ ಅಧಿಕಾರಿಗಳೊಂದಿಗೆ ಸಹಕರಿಸಿ ಕಾರ್ಯ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ" ಎಂದರು. ಸಂಬಳ ಹೆಚ್ಚಳದಿಂದ ನಗರ ಸಭೆಗಳ ಆರ್ಥಿಕ ಸ್ಥಿತಿಗೆ ಬಿದ್ದಿರುವ ಧಕ್ಕೆ-ಈ ಸಂಬಂಧದಲ್ಲೂ ಕೆಲವು ಸಂಘೆ ಸಂಸ್ಥೆಗಳಿಗೆ ಸಹಾಯ ಸಲ್ಲಿಸುವುದರಲ್ಲೂ ನಗರ ಸಭೆಗಳು ವಹಿಸುತ್ತಿರುವ ಅನಗತ್ಯ ಔದಾರ್ಯ-ಮೊದಲಾದುಗಳನ್ನು ಲಕ್ಷ್ಯಕ್ಕೆ ತಂದು, ತೆರಿಗೆ ಸದ್ಬಳಿತಿದುಲ್ಲಿರುವ ಲೆಲವು ದೋಷಗಳನ್ನೂ ತೋರಿಸಿ ಸುಧಾರಣೆಯ ಸೂಚನೆಗಳನ್ನು ಕೊಟ್ಟರು.

ಶ್ರೀ. ಎ ಬಿ ಸೆಟ್ಟಿ

ಸಾರ್ವಜನಿಕ ಆರೋಗ್ಯಖಾತೆಯ ಮಂತ್ರಿ ಶ್ರೀ. ಎ. ಬಿ. ಸೆಟ್ಟರು ನಗರ ಸಭಾಧ್ಯಕ್ಷರ ಪ್ರಾಂತಿಕ ಸಮ್ಮೇಳನಕ್ಕೆತ್ತ ಭಾಷಣದಲ್ಲಂದರು: "ನಾವು ಹೆಚ್ಚುಹೆಚ್ಚು ಪರಿಣಾಮಗಳಿಸಿ ಸಾಧಿಸಿ ಹೋಗಿದೆ. ಗೃಹ ನಿರ್ಮಾಣವೆಂಬುದು ಸರಕಾರವು ನಿರ್ವಹಿಸಬೇಕಾದ ಮುಖ್ಯ ಸಮಸ್ಯೆಗಳಲ್ಲೊಂದೆಂದೂ, ಸರಕಾರವು ತನ್ನಿಂದ ಸಾಧ್ಯವಿದ್ದ ಎಲ್ಲಾ ಶಕ್ತಿಗಳನ್ನೂ ಸಂಗ್ರಹಿಸಿ ಈ ಹೊಣೆ ನಿರ್ವಹಿಸಬೇಕೆಂದೂ ಭೋರ್ ಕಮಿತಿಯಿನ ಶಿಫಾರಸಿದೆ. ಈ ಸಂಬಂಧವಾಗಿ ಸ್ಥಳೀಯ ಅಧಿಕಾರಿಗಳು ಮತ್ತು ಹೆಚ್ಚಿನ ಕೆಲಸಗಾರರಿರುವವರು ನಿರ್ವಹಿಸಬೇಕಾದ ಜವಾಬ್ದಾರಿಯೊಂದಿದೆ. ಮದ್ರಾಸ್ ನೀರು ಸರಬರಾಯಿ ಮತ್ತು ಡ್ರೈನೇಜ್ ಸಮಿತಿ ಹಾಗೂ ಪ್ರಾಂತಿಕ ಮನ್ಸೆನಿ ನಿರ್ಮಾಣ ಸಮಿತಿಯಮೂಲಕ ಶಿಫಾರಸುಗಳನ್ನು ಮಾಡಿದ್ದಾರೆ. ಸಾಮಾನುಗಳ ಮತ್ತು ಕೂಲಿಯ ಅತಿ ಹೆಚ್ಚಿನ ಧಾರಣೆ ಹಾಗೂ ಮರ್ಮಜ್ವರ ಆಘಾತವು. ಈ ಹಾದಿಯಲ್ಲಿರುವ ಆತಂಕಗಳಲ್ಲಿ ಕೆಲವು" ಖಾಸಗೀ ಉದ್ಯೋಗ ಸಾಧನೆಯ ಕುರಿತು ಪ್ರಾಂತ್ಯದ ಸ್ಥಿತಿ ಹೇಗಿದೆ ಎಂಬುದನ್ನು ಆರೋಗ್ಯ ಮಂತ್ರಿಗಳು ಚಿತ್ರಿಸಿದರು. ಜನತೆಯ ಅನುಕೂಲತೆ ಮತ್ತು ಸಾಂಸ್ಕೃತಿಕಾಭಿವೃದ್ಧಿ ಸಾಧನೆಯೇ ನಗರ ಸಭೆಗಳ ಗುರಿಯಾಗಿರಬೇಕೆಂದು ಒತ್ತಿ ಹೇಳಿ, ಈ ಅಭಿವೃದ್ಧಿ ಯೋಜನೆಗಳಿಗೆ ಹೆಚ್ಚಿಗೆ ಬೇಕಾಗುವ ಹಣಕ್ಕಾಗಿ ನಗರ ಸಭೆಗಳೇ ಡೈರಿಫಾರ್ಮುಗಳನ್ನು ಬೇಕರಿಗಳನ್ನು, ರೆಸ್ಟೋರೆಂಟುಗಳನ್ನು, ಟೆಲಿಫೋನ್ ಸರ್ವಿಸುಗಳನ್ನು ಸಿನೆಮಾ ಇತ್ಯಾದಿಗಳನ್ನು ನಡೆಸಬಹುದೆಂದರು.

ಶ್ರೀ. ಭಕ್ತವತ್ಸಲಂ

ಸಾರ್ವಜನಿಕ ಖಾತೆಯ ಮಂತ್ರಿ ಶ್ರೀ ಎಮ್. ಭಕ್ತವತ್ಸಲಮರು ಭಾಷಣವೀಯುತ್ತಾ, ವಿದ್ಯುತ್ ಸರಬರಾಯಿ ಮತ್ತು ರಸ್ತೆಗಳ ಕುರಿತು ಸರಕಾರದ ಧೋರಣೆಯೇನೆಂಬುದನ್ನು ತಿಳಿಸಿದರು. ದಕ್ಷಿಣ ಕನ್ನಡಕ್ಕಾಗಿ 8000 ಕಿಲ್ಲೋವಾರ್ಟ್‌ಗಳಷ್ಟು ವಿದ್ಯುತ್ತನ್ನು ಜೋಗಿನಿಂದ ಪಡೆಕೊಳ್ಳುವ ಕುರಿತು ಮದ್ರಾಸ್ ಸರಕಾರವು ಮೈಸೂರು ಸರಕಾರದೊಂದಿಗೆ ವ್ಯವಹರಿಸುತ್ತಿರುವುದನ್ನು ಪ್ರಸ್ತಾಪಿಸಿದರು.

ಶ್ರೀ. ಅವಿನಾಶಲಿಂಗಂ

ವಿದ್ಯಾ ಮಂತ್ರಿ ಶ್ರೀ. ಟಿ. ಯಸ್. ಅವಿನಾಶಲಿಂಗಂ ಚೆಟ್ಟಿಯಾರರು ಪ್ರಾಂತ್ಯದ ಶಿಕ್ಷಣ ಸ್ಥಿತಿಯನ್ನು ವಿವರಿಸಿದರು. "ಪ್ರಾಥಮಿಕ ಮತ್ತು ಸೆಕೆಂಡರಿ ಶಿಕ್ಷಣ ವೆರಡರವಚ್ಚಿಗೂ ಸಹಾಯಕಸಂಸ್ಥೆಗಳು ಮಾತ್ರ ವಲ್ಲ, ಲೋಕಲ್ ಬೋರ್ಡ್‌ಗಳೂ ಮುನ್ಸಿಪಾಲಿಟಿಗಳೂ ಸರ್ಕಾರದ ಮುಖ್ಯವಿಜನ್ಸಿಗಳು. ಸರಕಾರವು ಕೈಕೊಂಡಿರುವ ಪ್ರಾಥಮಿಕ ನರ್ಸಂಘಟನಾ ಯೋಜನೆಗಳು ಉತ್ತಮವಿದ್ದರೂ ಸ್ಥಳೀಯ ಸಂಸ್ಥೆಗಳು ಅವನ್ನು ಪರಿಣಾಮಕಾರಿಯಾಗಿ ಕಾರ್ಯಕ್ಕೆ ಹೆಚ್ಚಿದಿದ್ದಲ್ಲಿ ಅವು ಜಯಿಸಲಾರವು" ಎಂದರು.

ಸಮ್ಮೇಳನದಲ್ಲಿ ಪ್ರಾಂತಿಕ ಮುನ್ಸಿಪಲ್ ಚೆಯರಮೇನರ 'ಚೇಂಬರ್' ಒಂದು ಸ್ಥಾಪಿಸಿಕೊಂಡು ಅದರ ಕಾರ್ಯಕಾರೀ ಸಮಿತಿ ರಚಿಸಲ್ಪಟ್ಟಿತು. ಡಿಸ್ಟ್ರಿಕ್ಟ್ ಮುನ್ಸಿವಾಲಿಟಿಗಳ ಶಾಸನದಲ್ಲಿ ಸರಕಾರವು ಈಗ ಸೂಚಿಸಿರುವ ತಿದ್ದುಪಡಿಗಳು ದೋಷ ಪೂರ್ಣವಾಗಿರುವುದರಿಂದ ಆವುಗಳನ್ನು ಆದ್ಯಂತವಾಗಿ ಸುಧಾರಿಸಬೇಕೆಂದು ಸರಕಾರವನ್ನು ಕೇಳಿಕೊಳ್ಳುವ ನಿರ್ಣಯದಾಗಿದೆ.

ಬರ್ಮದಲ್ಲಿ ಅಪಾಯಕರ ಅಂತರ್ಯುದ್ಧ.

ಈಚೆಯ ವಾರ ಪ್ರಾಪಂಚಿಕ ಸ್ಥಿತಿಗತಿಗಳು-ಅಂತರ್ರಾಷ್ಟ್ರೀಯ ವಹಿವಾಟುಹಾಗೂ ಒಳ ರಾಷ್ಟ್ರೀಯ ನಿದ್ಯಮಾನಗಳು-ಒಂದು ರೀತಿಯ ಸ್ತಬ್ಧತೆ ಪಡೆದಂತಿದ್ದುವು. ಇದನ್ನು ಬಿರುಗಾಳಿಯ ಮೊದಲ ಶಾಂತತೆಯೆಂದೂ ಹೇಳಬಹುದು; ಯಾವುದೇ ಒಂದು ಘಟನೆ ಅಥವಾ ಯಾವನೇ ಒಬ್ಬ ವ್ಯಕ್ತಿ ಸದ್ಯಾಕಾಲವೂ ಏಕಪ್ರಕಾರವಿರಲಾಗುವದಿಲ್ಲ .ಎಂಬುದರ ದ್ಯೋತಕವೆಂದೂ ಹೇಳಬಹುದು. ಅಂತೂ ಪರಿಸ್ಥಿತಿಯೊಂದು ರೀತಿಯ ಸಾವಧಾನತೆಗೆ ಬಂದಿದೆ.

ಕಳದ ವಾರ ಅಂತರ್ರಾಷ್ಟ್ರೀಯ ರಂಗದ ಅಚ್ಚರ್ಲ್ಲಿ ಕಮ್ಯೂನಿಸ್ಟರ ಕೈ ಮೇಲಾದುದು ಕಂಡುಬಂದಿದೆ; ಕಮ್ಯೂನಿಸ್ಟರ ಮಾರದ ಗ್ರಹಗತಿ ಕೆಟ್ಟದಿರಲಿಲ್ಲ. ಲೋಕ ಪರಿಚಿತರಾದ ಒಬ್ಬಬ್ಬರ ವಿಯೋಗಗಳ ಸುದ್ದಿಯ ಪ್ರಾಮುಖ್ಯತೆಯನ್ನು ಹಿಂದೆ ಹಾಕಬಲ್ಲ ದೊಡ್ಡ ಘಟನೆಗಳು ಸಂಪ ದಿನಗಳಲ್ಲಿ ಬೇರೆ ನಡೆದಿಲ್ಲವೆನ್ನಬಹುದು.ಒಟ್ಟಿನ ಮೇಲೆ ಕಳದ ಅವಧಿಯ ವೈಶಿಷ್ಟ್ಯಗಳೆಂಬಕೆ ಪ್ರಸಿದ್ಧರ ಮರಣ ಮತ್ತು ಕೆಲವು ಅಲ್ಪ ಬದಲಾವಣೆಗಳೇ

ಲೋಕ ಘಟನೆಗಳು

ಹಲವು ವಾರಗಳಿಂದ ಮೋಸ್ಕೋದ ಕೈಮ್ಲಿನಿನಲ್ಲಿ ಎಂಟೊಂಭತ್ತೆ ಬಾರಿ ಸೇರಿ ಬರ್ಲಿನ್ ಬಿಕ್ಕಟ್ಟು ನಿವಾರಣೆಗಾಗಿ ನಡೆದಿದ್ದ ರಶ್ಯಾ, ಅಮೇರಿಕ, ಇಂಗ್ಲಾಂಡು, ಫ್ರಾನ್ಸ್ ಪ್ರತಿನಿಧಿಗಳ ಸಮ್ಮೇಲನದ ಬೆಲೆಯು ತಾನಾಗಿ ತಗ್ಗುತ್ತಾ ಹೋಗಿ ಈಗ ಮಾಯವಾಗಿದೆ. ಯಾವುದೊಂದು ನಿರ್ಣಯವೂ ಆದಂತಿಲ್ಲ. ಬದಲಿಗೆ ಅಲ್ಲಿಗೆ ಬಿದ್ದಿದ್ದ ದೃಷ್ಟಿಯನ್ನು ಸ್ವತಃ ಬರ್ಲಿನ್ ನಗರವೀಗ ಆಕರ್ಷಿಸಿದೆ. ರಶ್ಯಾ ಮತ್ತು ಇತರ ಪಾಶ್ಚಾತ್ಯ ಕ್ರಿರಾಷ್ಟ್ರಗಳೊಳಗೆ ಬರ್ಲಿನಿನ ಸಂಬಂಧವಾಗಿ ಇರುವ ಎಲ್ಲಾ ಭಿನ್ನಾಭಿಪ್ರಾಯಗಳನ್ನೂ ನಿವಾರಿಸಿ ಬಿಕ್ಕಟ್ಟನ್ನು ಬಿಡಿಸುವ ವಿಧಾನಗಳನ್ನು ಶೋಧಿಸಿಕೊಳ್ಳಲು ಈ ಚತುರ್ರಾಷ್ಟ್ರಗಳ ಜರ್ಮನಿಯ ಮಿಲಿಟರಿ ಗವರ್ನರರುಗಳು ಒಟ್ಟಾಗಿ ಬರ್ಲಿನಿನಲ್ಲಿ ಪರ್ಯಾಲೋಚನೆಗಳನ್ನು ನಡಿಸಹತ್ತಿದ್ದಾರೆ.ಇಷ್ಟಲ್ಲಿಯ ಸಮ್ಮೇಲನವೂ ಅನುಕ್ರಮವಾಗಿ ನಡೆಯುತ್ತಾ ಹೋಗಿದೆಯಾದರೂ ಒಂದು ತೀರ್ಪು ಹೊಂದುವ ಅಥವಾ ಹೊಂದಿದಿರುವ ಆರಿನಾತೆಯಾವುದಕ್ಕೂ ಎಡೆಕೊಡದೆ ಮೋಸ್ಕೋ ಸಮ್ಮೇಲನಗಳ ಮಾದರಿಯಲ್ಲೇ ನಡೆದಿರುವುದನ್ನು ಕಾಣವಾಗ ವೀನೋದೆ ಹೇಳುತ್ತಿದೆ. ಅಮೇರಿಕ, ಬ್ರಿಟನು ಮತ್ತು ರಶ್ಯಗಳೊಳಗಿನ ವಿವಾದಗಳೂ ಪಂಚಾಯತಿಕೆಗಳೂ, ತದನುಸಾರವಾಗಿ ಪ್ರಪಂಚದ ಇಂದಿನ ಸ್ಥಿತಿಯೂ ದೀರ್ಘಾವಧಿಯ ವರೆಗೂ ತ್ರಿಶಂಕು ಅವಸ್ಥೆಯಲ್ಲೇ ಇರುವ ಅದೃಷ್ಟಶಾಲಿಗಳೇನೊ!

ಪೆಲಸ್ತೈನ್ ಯುದ್ಧವು ವ್ಯಾಯದೆ ಮುಟ್ಟಿಗೆ ಬರ್ಲಿನ್ ಬಿಕ್ಕಟ್ಟಿನ ಪರಿಯಣ್ಣ; ಆಂತೆಯೇ ಇವೆರಡರ ಜೀವನ ವಿಧಾನಗಳೂ ಒಂದೇ ತೆರನಾಗಿವೆ. ಪೆಲಸ್ತೈನಿನ ಶಾಂತಿ ಕಛೇರುಗಳಿಗೆ ವಿರೋಧವಾಗಿ ಅರಬರು ನುತ್ತು ಯೆಹೂದಿಗಳು ಗುಂಡು ಹಾರಿಸಿಕೊಳ್ಳುತ್ತಿರುವುದು ಮಾತ್ರವಲ್ಲ; ಒಂದೆರಡು ಸಂದರ್ಭಗಳಲ್ಲಿ ಶಾಂತಿ ಸ್ಥಿತಿಯು ಅವಲೋಕನೆಗಾಗಿ ಬಂದಿರುವಸಂಯುಕ್ತ ರಾಷ್ಟ್ರ ಸಂಘದ ಕಡೆಯ ಮಧ್ಯಸ್ಥಗಾರರ ನೇಲೂ ಗುಂಡು ಹಾರಿವೆ.

ನುಂತ್ರಿಮಂಡಲಗಳ ಪತನೋತ್ಥಾನಗಳಿಗೆ ಪ್ರಪಂಚದಲ್ಲೇ ಅಗ್ರಸ್ಥಾನ ಕೊಡಬಹುದಾದ ಫ್ರಾನ್ಸಿನಲ್ಲಿ ಇದೀಗ ಹೊಸ ತಾಗಿ ರೋಬರ್ಟ್ ಶ್ಯುಮಾನರ ಸರಕಾರ ರಚನೆಗೊಂಡಿದೆ. ಆಸ್ಟೋಸ್ಟು 28ರಲ್ಲಿ ಅಂದ್ರೇಮೇರಿಯ ಸರಕಾರ ರಾಜೀನಾಮೆ ಕೊಟ್ಟ ಮೇಲೆ ಫ್ರೆಂಚ್ ಅಧ್ಯಕ್ಷರು ಹೊಸ ಸರಕಾರ ರಚಿಸುವಂತೆ ಶ್ಯುಮೇನರನ್ನು ಕೇಳಿಕೊಂಡರು. ಇವರು ವಿವಿಧ ಪಕ್ಷಗಳವರೊಡನೆ ಪರ್ಯಾಲೋಚಿಸಿ ತಜ್ಞಿಂದ ಸರಕಾರ ಕಟ್ಟುವ ಕೆಲಸವಾಗದೆಂದು ಒಮ್ಮೆ ಹೇಳಿಬಿಟ್ಟರು. ಆದರೆ ಅಧ್ಯಕ್ಷರು "ಮರಳಿ ಯತ್ನವ ಮಾಡು" ನೀತಿಯನ್ನು ಬೋಧಿಸಿದಂತೆ ಶ್ಯುಮೇನರು ಮರಳಿ ಪ್ರಯತ್ನಿಸಿ ಸಮತಾವಾದಿಗಳು, ಜನ ಪ್ರಿಯ ರಾಜ್ಯವಾದಿಗಳು, ಉಗ್ರಗಾಮಿಗಳು ಮೊದಲಾದವರುಳ್ಳ ಸಮ್ಮಿಶ್ರ ಸರಕಾರವೊಂದನ್ನು ರಚಿಸಿದ್ದಾರೆ ಇನ್ನೀ ತೇಪ ಹೊಂದು ಹೋಗಿ ಸರಕಾರ ಬಿದ್ದು ಹೋಗುವ ಕಾಲವನ್ನು ನಿರೀಕ್ಷಿಸಿದರಾಯಿತು!

ವಿಶೇಷ ಘಟನೆಗಳು

ಬರ್ಮದಲ್ಲಿ ಕಮ್ಯೂನಿಸ್ಟ್ ನಿರ್ಮಿತ ಗೊಂದಲವೀಗ ವಿಶೇಷ ರೂಪಕ್ಕೇರಿದೆ. ರಂಗೂನಿಗೆ 200 ಮೈಲೂ ದೂರ ವಾಯವ್ಯ ದಿಕ್ಕಿನಲ್ಲಿ ಪ್ರೋಮೆಯನ್ನು ಕಮ್ಯೂನಿಸ್ಟ್ ಸೇನೆಗಳು ಹಿಡಿದುಕೊಂಡಿದ್ದು ಬರ್ಮಾ ಸರಕಾರದ ಸೇನೆಗಳು ಅಲ್ಲಿಗೀಗ ಧಾಳಿ ನಡೆಸಿವೆ ಇದಕ್ಕಿಂತ ಘನ್ನ ರೀತಿಯ ಅದರೆ ತುಸು ದೊಡ್ಡ ಪರಿಮಾಣದ ಹೊಸ ಕಾರ್ಯಭಾರವೀಗ ಬರ್ಮದ ಸೇನೆಗಳ ಪಾಲಿಗೊದಗಿದೆ. ಟಿನಾಸ್ಸರಿಮ್ ಪ್ರದೇಶದಲ್ಲಿ ಕಾರೆನ್‌ಜನರು ಬಂಡಾಯವೆದ್ದು ಮೌಲ್‌ಮೀನ್ ಮತ್ತು ಧಾಟೋನ್ ಎಂಬೆರಡು ಆಯಕಟ್ಟಿನ ನಗರಗಳನ್ನು ಹಿಡಿದುಕೊಂಡಿದ್ದಾರೆ. ಕರೆನರು ತಮಗೆ ಪ್ರತ್ಯೇಕ ಪ್ರಾಂತ್ಯವಾಗಿ ಬೇಕೆಂದು ಕೆಲಕಾಲದಿಂದ ಕಾಯುದೇತೀರವಾಗಿ ಚಳವಳಿಕುತ್ತಾ ಬಂದಿದ್ದರು. ಕಮ್ಯೂನಿಸ್ಟ್‌ನಿರ್ಮಿತ ಗೊಂದಲದ ಈ ಸಂದರ್ಭವನ್ನು ತಮ್ಮ ಉದ್ದೇಶ ಸಾಧನೆಗಾಗಿ ಅವರೀಗ ಉಪಯೋಗಿಸಿಕೊಂಡರು. ಬರ್ಮ ಸರಕಾರದ ಸೇನೆ, ವಿಮಾನ ಮತ್ತು ನಾವೆಗಳು ಕೂಡಾ ಆ ಭಾಗಕ್ಕೆ ಹೋಗಿವೆಯಾದರೂ ಕರೆನ್‌ಜನರ ವಿವಾದವನ್ನು ಸರಕಾರವು ಸಹಾನುಭೂತಿಯಿಂದ ಪರ್ಯಾಲೋಚಿಸಲು ಸಿದ್ಧವಿದೆಯೆಂದು ತಿಳಿದು ಬಂದಿದೆ.

ಮಲಯದ ಕಮ್ಯೂನಿಸ್ಟ್ ಹೋರಾಟ ಯಥಾ ಪ್ರಕಾರ-ಅಲ್ಲಲ್ಲಿ ತುಸು ಮೇಲ್ಗೈ ಯ್ಯಾಗಿ-ಸಾಗಿದೆ. ಗ್ರೀಸಿನಲ್ಲಿ ಅಂತರ್ಯುದ್ಧವು ನಡೆದಿದ್ದು, ಬಂಡಾಯಗಾರರಿಗೆ ಅಪರಿಚಿತ ವಿಮಾನಗಳು ಶಸ್ತ್ರಾಸ್ತ್ರಗಳನ್ನು ಇಳಿಸಿ ಹೋಗುತ್ತಿವೆ ಎಂದು ತಿಳಿದುಬಂದಿದೆ. ರಶ್ಯವ ಹತೋಟಯಲ್ಲಿರುವ ಗ್ರೀಸಿನ ನೆರೆಯ ರಾಷ್ಟ್ರ ಅಲ್ಬೇನಿಯವು ಮೂರು ಗ್ರೀಕ್ ಸೇನಾದಳಗಳು ತನ್ನ ಕ್ಷೇತ್ರದೊಳಗೆ ನುಗ್ಗಿ ಯುದ್ಧ ಕೊಟ್ಟುವೆಂದು ಸಂಯುಕ್ತರಾಷ್ಟ್ರ ಸಂಘಕ್ಕೆ ಬರಕೊಂಡಿದೆ.

ಕಳದ ವಾರ ಅಂತರ್ರಾಷ್ಟ್ರ ಪ್ರಸಿದ್ಧರಿಬ್ಬರು ನಿಧನಗೊಂಡರು. ಒಬ್ಬರು ರೆ ಕೊಸ್ಲೊವೇಕಿಯಾ ನಾಯಕ ಡಾ! ಬೆನೆಸ್; ಮತ್ತೊಬ್ಬರು ರಶ್ಯದ ಝ್ದಾನೋವ್. ಈ ನಾಯಕರಿಬ್ಬರೂ ಮಹಾ ಪ್ರಭಾವಶಾಲಿ ವ್ಯಕ್ತಿಗಳು-

ಡಾ! ಬೆನೆಸ್ 'ಝೆಕೊಸ್ಲೊವೇಕಿಯಾ ರಿಪಬ್ಲಿಕ್'ನ ಸ್ಥಾಪಕರು ಮತ್ತು ಕಳದ ಜೂನ್ ತಿಂಗಳ ವರೆಗೂ ಅದರ ಅಧ್ಯಕ್ಷರಾಗಿದ್ದವರು. 1915ರಿಂದಲೂ ತನ್ನ ಜೀವನವನ್ನು ಝೆಕೊಸ್ಲೊವೇಕಿಯಾ ರಾಷ್ಟ್ರಕ್ಕೆ ಧಾರೆಯೆರೆದಿದ್ದರಲ್ಲದೆ, ಅದರ ಸರ್ವ ಪ್ರಥಮ ನಾಯಕನಾಗಿದ್ದರು. ಹಿಟ್ಲರನ ನಾಜಿಹತ್ಯಾಕಾಂಡಕ್ಕೆ ಅಕ್ರಮಣದಿರು ಎಲ್ಲರೂ ಅಂಜುತಿದ್ದ ಪ್ರಥಮ ಶಾಲದಲ್ಲಿ ಚಿಕ್ಕ ರಾಷ್ಟ್ರವೊಂದರ ಅಧಿಪತಿ ಡಾ! ಬೆನೆಸ್ ಅದಕ್ಕೆ ಪ್ರತಿಭಟನೆ ಮುಂದೊಡ್ಡಿದ ಆ ಧೈರ್ಯ ಮತ್ತು ಸಾಹಸ ಚರಸ್ಮರಣೀಯವಿವೆ; ಕೊನೆಗೆ ಆ ಪ್ರಸಿದ್ಧ 'ಮ್ಯೂನಿಚ್' ಒಪ್ಪಂದದ ಮೂಲಕ ಹಿಟ್ಲರನಪೇಕ್ಷಿಸಿದ ಝೆಕೊಸ್ಲೊವೇಕಿಯಾ ಭಾಗವು ಅತನಿಗೆ ದೊರೆಯಿತು; ಬೆನ್ನಲ್ಲೇ ಇಡೀ ಝೆಕೊಸ್ಲೊವೇಕಿಯಾ ನಾಜಿಗಳಿಗಾಹುತಿಯಾಯಿತು. ಆ ನೆಲೆಬೋಳು ಯುದ್ಧಾರಂಭವಾದಾಗಲಾ ಬೆನೆಸ್ 'ಝೆಕ್ ರಾಷ್ಟ್ರೀಯ ಸಮಿತಿ' ನಾಯಕರಾಗಿ ಪೇರಿಸಿನಲ್ಲಿದ್ದು, ಫ್ರಾನ್ಸ್ ಪತನಾನಂತರ ಲಂಡನಿಗೆ ಹೋಗಿ ಅಲ್ಲಿ 'ತಾತ್ಕಾಲಿಕ ಝೆಕ್ ಸರಕಾರ' ಸ್ಥಾಪಿಸಿಕೊಂಡರು. ಆಲ್ಲಿಂದಲೇ ಝೆಕೊಸ್ಲೊವೇಕಿಯಾ ರಾಷ್ಟ್ರೀಯತೆಯ ಉದ್ದೀಪನಗೊಳಿಸುತ್ತಿದ್ದು ನಾಜೀ ವರ್ಚಸ್ವಯಾನಂತರ 1945ರಲ್ಲಿ ಪ್ರೇಗಿಗೆ ವಿಜಯಪ್ರವೇಶ ಮಾಡಿದರು. ಅದರ ಸರಕಾರೀ ಅಗ್ರಗಣ್ಯನಾಗಿದ್ದು ಕಾರ್ಯ ನಿರ್ವಹಿಸಿದರು. ಈ ವರುಷ ದಾದಿ ಭಾಗದಿಂದ ಆರಂಭವಾದ ಝೆಕೊಸ್ಲೊವೇಕಿಯಾ ರಾಷ್ಟ್ರ ಸಂಘದ ಕಡೆಯ ಮಧ್ಯಸ್ಥಗಾರರ ನೇಲೂ ಗುಂಡು ಹಾರಿವೆ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ. 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್., ಉಡುಪಿ

ಇವರ ಶಾಖಾ ಖರೀದಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪ್ರತಿನಿಧ್ಯ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್ ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ 3/- ರೂಪಾಯಿ.

ಅತೀ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ್ ಪ್ರಾಕ್ಟಿಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಪತ್ರಿನಿಧಿಗೆ ಬರೆಯಿರಿ ತಿಳಿಯಿರಿ,

The Agricultural & Industrial Bank, Limited.

Head Office: **Coondapoor, S. K.**

ಭಾರತದ ರಕ್ಷಣೆಗಾಗಿ ಸರ್ವಸನ್ನಾಹ.

ಸ್ಟೊವೇಕಿಯಾ ಬಿಕ್ಕಟ್ಟು ಬೆಳೆದು ಕಮ್ಯೂನಿಸ್ಟರು ಅಧಿಕಾರ ಕಸಿದುಕೊಂಡಾಗ ವ್ಯಕ್ತಿಶಃ ತನಗೆ ಈ ಮಾರ್ಗಾಟವು ಅಸಮ್ಮತವಿದ್ದರೂ ಆಂತರ್ಗಲಹವೇಳದಂತೆ ನೋಡುವ ಕ್ಯಾಗಿ ಅದನ್ನು ಮನ್ನಿಸಿ ಕಳದ ಜೂನ್ ತಿಂಗಳವರೆಗೂ ಅದರ ಅಧ್ಯಕ್ಷರಾಗಿದ್ದರು. ಕೊನೆಗೆ ತನ್ನ ಹಳ್ಳಿಯಲ್ಲಿ ಶಾಂತ ಜೀವನ ನಡೆಸುತಿದ್ದು ಇದೇ ತಾ ೨೦ರಲ್ಲಿ ತನ್ನ 64ನೇ ವಯಸ್ಸಿನಲ್ಲಿ ನಿಧನಗೊಂಡರು. ಸ್ವಾತಂತ್ರ್ಯ ಹಾಗೂ ಪ್ರಜಾಪ್ರಭುತ್ವದ ಧೀರ ಯೋಧ ಡಾ। ಬೆನೆಶ್ ವಿಯೋಗಕ್ಕಾಗಿ ಲೋಕ ವ್ಯಾಪೀ ಶೋಕ ಪ್ರದರ್ಶನಗಳಾಗಿವೆ; ಗವರ್ನರ್ ಜನರಲ್ ರಾಜಾಜಿ ಮತ್ತು ಪ್ರಧಾನಿ ನೆಹರುಗಳು ತಮ್ಮ ಸಂತಾಪ ಸಂದೇಶ ರವಾನಿಸಿದ್ದಾರೆ

ಇದೇ ತಾ ೧೮ರಲ್ಲಿ ತನ್ನ ೫೮ನೇ ವಯಸ್ಸಿನಲ್ಲಿ ಜೊಸ್ಯೋದಲ್ಲಿ ನಿಧನಗೊಂಡ, ರಷ್ಯದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಹಾಗೂ ಸೋವಿಯೆಟ್ ವಿದೇಶ ಭೋರಣೆಯ ನಿರ್ಮಾಪಕಾಧಿಪತಿ ಜನರಲ್ ಝ್ದಾನೋವರು, ಸ್ಟಾಲಿನರ ಉತ್ತರಾಧಿಕಾರಿಯೆಂದು ಎಲ್ಲರೂ ಊಹಿಸಿದ್ದ ಸಮರ್ಥ ನಾಯಕ. ಕಳದ ಜರ್ಮನ್ ಧಾಳಯಲ್ಲಿ ಲೆನಿನ್‌ಗ್ರಾಡಿನ ಮೇಲಾದ ನಾಜಿಗಳ ಪ್ರಚಂಡ ಮುತ್ತಿಗೆಯ ಇದಿರು ಸೇನಾನಿಯಾಗಿ ಹೋರಾಡಿದ ಚರಿತ್ರಾರ್ಹ ರಕ್ಷಣೆಸ್ ನಗರವನ್ನು ರಕ್ಷಿಸಿ ಕೊಟ್ಟ ಕಲಿ. ತೆನ್ನಾಯುಷ್ಯದ ೫೮ ವರುಷಗಳನ್ನು ಕಮ್ಯೂನಿಸಮಿನ ಪ್ರಭಾವ ವರ್ಧನೆಗಾಗಿಯೇ ವ್ಯಯಿಸಿದ್ದ ಝ್ದಾನೋವರು, ಎದಿಗಾರಿಕೆ ಮತ್ತು ಸೂಕ್ಷ್ಮ ಬುದ್ಧಿಎರಡರ ಮಟ್ಟಿಗೂ ಆಧುನಿಕ ರಶ್ಯನ್ ನಾಯಕರೆಲ್ಲರನ್ನೂ ಮಿಕ್ಕಿದವರೆನ್ನಬಹುದಾದ ಅತಿ ಪ್ರತಿಭಾವಂತ. ಅವರು ಜಾಹೀರು ಪ್ರದರ್ಶನಕ್ಕೆ ಬಿದ್ದದು ಅಧಿವಾ ಧಾರಣವಿತ್ತುದು ಅತ್ಯಪರೂಪ; ಅದರೆ ಲೋಕ ವ್ಯಾಪೀ ಕಮ್ಯೂನಿಸಮಿನ ಮೂಲ ಸೂತ್ರಚಾಲಕರು ಇವರಾಗಿದ್ದರೆಲ್ಲದೆ, ರಷ್ಯದ ವಿದೇಶ ಭೋರಣೆಯು ಹಿನ್ನೆಲೆಯ ಪ್ರಭಾವಶಾಲೀ ನಿರ್ದೇಶಕರೂ ಆಗಿದ್ದರು. ಜೀವನದ ಕೊನೆಯ ಭಾಗದಲ್ಲಿ ಸ್ಟಾಲಿನ್, ಮೊಲಟವ್ ಮುಂತಾದವರ ಉಗ್ರದೃಷ್ಟಿಗೀಡಾಗಿ ಅಸುವೀ ಅಜ್ಞಾತವಾಸವನುಭವಿಸಿದ್ದರೆಂದೂ, ಅವರ ವಿಶೇಷ ಕಾಹಿಲೆಯ ಸುದ್ದಿಯೇನೂ ಇಲ್ಲದಿದ್ದುದರಿಂದ, ಸ್ವಾಭಾವಿಕ ಮರಣಕ್ಕವರು ಈಡಾದುದಲ್ಲವೆಂದೂ ಕೆಲವರು ಸುದ್ದಿ ಹರಡಿಸಿದ್ದಾರೆ. ಆದರೆ ಇದಕ್ಕೆ ಆಧಾರವಿಲ್ಲ. ಈ ಧೀರ ನಾಯಕನ ಶವ ದರ್ಶನ ಮುಹೂರ್ತದಲ್ಲಿ 'ಸ್ಟಾಲಿನರ ಸರಮಾಸ್ಯ ಕಾಮ್ರೇಡ್' ಎಂದು ಮೊಲಟವ್ ಮುಂತಾದವರು ಕ್ಲಾಪಿಸಿದ್ದರೆಲ್ಲದೆ, ಸ್ವಾಲಿನರು ಸ್ವತಃ ಹಾಜರಿದ್ದು ಗೌರವ ವಂದನೆ ಸಲ್ಲಿಸಿದ್ದರು. ಝ್ದಾನೋವ್ ಪಾಶ್ಚಾತ್ಯ ರಾಷ್ಟ್ರಗಳ ಬದ್ಧ ವಿರೋಧಿಯಿದ್ದರು. ಮಾರ್ಷಲ್ ಟಿಟೋನ ಬಹಿಷ್ಕಾರಕ್ಕೆ ಇವರು ಉಗ್ರ ಧೋರಣೆಯೇ ಕಾರಣವಾಗಿತ್ತು. ಸೋವಿಯೆಟ್ ರಶ್ಯದ ಅತಿ ಸಮರ್ಥ ಕಾರ್ಯಕರ್ತನೊಬ್ಬನು ಕಾಣೆಯಾದರೂ ಇದರಿಂದಾಗಿ ರಶ್ಯದ ಧೋರಣೆ ಬದಲಾಗುವಂತಿಲ್ಲ.

ಕಳದ 50 ವರುಷಗಳಲ್ಲಿ ನೆದರ್‌ಲೇಂಡ್ಸ್ ಸಿಂಹಾಸನದಲ್ಲಿದ್ದ ಡಚ್ ರಾಣಿ ವಿಲ್‌ಹೆಲ್ಮಿನಾ ಇದೇ ತಾ ೦೮ರಲ್ಲಿ ಪಟ್ಟವನ್ನು ತನ್ನ ಮಗಳು ಜೂಲಿಯಾನಾಳಿಗೊಪ್ಪಿಸಿದ್ದಾರೆ. ಒಳಗಡೆ ತನ್ನ ಅಧಿಕಾರಕ್ಕೆ ಸಹ ಹಾಕಿ ರಾಣಿ ವಿಲ್‌ಹೆಲ್ಮಿನಾ ಮಗಳು ಜೂಲಿಯಾನ್ ಮತ್ತು ಅವಳ ಗಂಡ ಬೆರ್ನಾರ್ಡನೊಂದಿಗೆ ಅರಮನೆಯ ಮೇಲಂಶಸ್ಥಿಗೆ ಬಂದು 'ಈ ರಾಜ್ಯದ ಭವಿಷ್ಯವನ್ನು ನನ್ನ ಪ್ರೀತಿಯ ಮಗಳ ಕೈಗೆ ಒಪ್ಪಿಸಬಹುದೆಂದು ವಿಶ್ವಾಸಪೂರ್ವಕ ನಾನು ನಂಬುತ್ತೇನೆ ದೇವರು ನಿಮಗೂ ನಮ್ಮೀ ಹೊಸ ರಾಣಿಗೂ ಸೆರವಾಗಲಿ' ಎಂದಾಗ ಉತ್ಸಾಹೋಲ್ಲಾಸಲು ಏರಿದ ಪ್ರಚಂಡ ಜನಸಂದಣಿಯು ಆನಂದದಿಂದ ಕೂಡಿ ದಾಡಿ ರಾಷ್ಟ್ರಗೀತೆ ಹಾಡಿತು. ನವರಾಣಿಯು ತನ್ನ ತಾಯಿ ಮಾಜೀ ರಾಣಿಗೆ ಧನ್ಯವಾದಗಳನ್ನರ್ಪಿಸಿ "ನೆದರ್‌ಲೇಂಡ್ ಚಿರಾಯುವಾಗಲಿ" ಎಂದು ಜೈಕಾರ ಹಾಕಿದಾಗ ಪುನಃ ಪ್ರಚಂಡೋತ್ಸಾಹ ಮತ್ತು ರಾಷ್ಟ್ರಗೀತೆಗಳಾದುವು.

ಆರ್ಮ್‌ಸ್ಟರ್ಡಮಿನಲ್ಲಿ ನೇರಿದ ಇಗರ್ಜಿಗಳ ಲೋಕ ಸಮ್ಮೇಳನವು ಸಾಮೂಹಿಕ ಯುದ್ಧದ ಅಪಾಯ ಸೂಚನೆಗಳ ಕುರಿತು ದಿಗಿಲು ಪ್ರದರ್ಶಿಸಿ, ಇಂತಹ ಅನಾಹುತಕಾರಿ ಪಥ ಬಿಟ್ಟು ಕ್ರೈಸ್ತಾನುಯಾಯಿಗಳಾಗಬೇಕೆಂದು ರಾಷ್ಟ್ರಗಳಿಗೆ ಎಚ್ಚರಿಕೆ ಕೊಟ್ಟಿದೆ.

ಕಾಶ್ಮೀರದ ಕಾಳಗ

ಭಾರತದ ರಾಜಕೀಯ ವಿದ್ಯಮಾನಗಳ ಕಡೆಗೆ ಸೂಕ್ಷ್ಮದೃಷ್ಟಿ ಬೀರಿದರೆ, ಅತಿ ಮಹತ್ವದ ಭಾವೀ ಸಂಭವಗಳ ಸಿದ್ಧತೆ, ಮುಂಜಾಗ್ರತೆ ಮತ್ತು ಪೂರ್ವ ಭಾವೀ ನಿರೀಕ್ಷಣೆಗಳು ನಡೆದಿರುವಂತೆ ಕಂಡುಬರುತ್ತಿದೆ.

ಕಾಶ್ಮೀರದಲ್ಲಿ ತನ್ನ ಪ್ರಭಾವವನ್ನೊವ್ಯೆತೋರಿಸಿಬಿಡಬೇಕೆಂದು ಪಾಕಿಸ್ತಾನವು ನಡೆಸಿದ್ದ ಪ್ರಚಂಡಾಕ್ರಮಣ ಧಾಳಯ ಉದ್ದೇಶವನ್ನು ಭಾರತ ಸೇನೆಗಳು ಹಾತುರ್ಯ ಮತ್ತು ಸಾಹಸದಿಂದ ನಿಷ್ಫಲಗೊಳಿಸಿ, ಅದರ ಸರಬರಾಯಿ ಕೇಂದ್ರಗಳ ಮೇಲೆಯೇ ಆಕಾಶ ಧಾಳಯಿಟ್ಟು ಈಗ ಪ್ರತ್ಯಕ್ಷ ರಣರಂಗದ ಕೆಲವೆಡೆ ತಾನೇ ಹೆಜ್ಜೆ ಮುಂದಿಡಹತ್ತಿವೆ. ಒಂದೊಂದೇ ಗ್ರಾಮದ ಧಾಳಿಗಾರ ರಾಹುವನ್ನು ಬಿಡಿಸುತ್ತಾ ಬರುತ್ತಿವೆ ಪೂಂಛ್‌ಲ್ ಮೊದಲಾದ ಪ್ರಮುಖ ರಕ್ಷಣಾ ಕೇಂದ್ರಗಳ ಮೇಲೆ ಆಕಾಶ ಧಾಳಿಯಿಟ್ಟು ವಿಶೇಷ ಹಾನಿಗಳನ್ನೊತ್ತಿವೆ. ಜಮ್ಮು ವಿನ ಕೆಲವು ರಂಗಗಳಲ್ಲಿ ಹಿಂದೀ ಸೇನೆ ಆಕ್ರಮಿಕ ಧಾಳಿ ಹೂಡಿ ಶತ್ರುವಿನ್ನು ದಿಕ್ಕಾಪಾಲುಗೊಳಿಸಿದೆ. ರಾಜಧಾನಿ ಶ್ರೀನಗರಕ್ಕೆ ೬೦ ಮೈಲು ಈಶಾನ್ಯದ ಹಮಾವರಿತ ಕಣಿವೆ ಪ್ರದೇಶದಲ್ಲಿದ್ದ ಧಾಳಿಗಾರರು ಹಾತರ್ದ ತಾಣ್ಯಾದ ಮೇಲೂ ಬಲವಾದ ಆಕಾಶ ಧಾಳಿ ನಡೆದಿದೆ. ಅಂತೂ ಕಾಶ್ಮೀರ ಯುದ್ಧದ ಅಗಾಧ ಕಾರ್ಯವಿನ್ನೂ ಉಳಿದಿದೆಯಾದರೂ ಹಿಂದೀ ಸೇನೆಗೊಂದು ಬಾರಿ ಒಡಗಿದ್ದ ಅತುರದಾಯಿ ಅವಧಿಯು ದಾಟಿ ಧಾಳಿಗಾರರ ಸಂಕಟದ ಅಂಕ ವಾರಂಭಿಸಿತೆನ್ನಬಹುದು.

ಇತ್ತ ಸಂಯುಕ್ತ ರಾಷ್ಟ್ರ ಸಂಘದ ಕಾಶ್ಮೀರ ಸಮಿತಿಯ ಸದಸ್ಯರು ತಮ್ಮ ಸಾಲಿನ ಕೆಲಸವನ್ನೊಂದೆಡೆ ಮುಂದೊತ್ತುತ್ತಾ ಮೊಗದಿದ್ದಾರೆ. ನಿಧಾನೀ, ನಿರ್ದೋವೀ ಕಾರ್ಯಕಲಾಪಗಳ ಹೆಸರನ್ನಷ್ಟೇ ಗಳಿಸಿದ್ದ ಇಂತಹ ಇತರ ಸಮಿತಿಗಳ ಪಂಗಡಿಯಲ್ಲಿ ತೀರಾ ಥಂಡಾ ವರ್ತನೆಯ ಕೂಟವೆಂಬ ಲಗ್ಗಸ್ಥಾನ ಪಡೆಯಲಾಗಾವಮ್ಮ ನೀರವಸವಾಗಿ ಈ ಕಾಶ್ಮೀರ ಸಮಿತಿಯ ಇದುವರೆಗಿನ ಕಾರ್ಯವಿಧಾನಗಳಿವೆ. ಸಮಿತಿ ಸದಸ್ಯರು ಭಾರತ ಮತ್ತು ಪಾಕಿಸ್ತಾನ್ ಸರಕಾರಗಳ ಪ್ರತಿನಿಧಿಗಳೊಡನೆ ಮಾತ್ರವಲ್ಲ; ಕರಾಚಿಯಲ್ಲಿ 'ಆಜಾದ್ ಕಾಶ್ಮೀರ' ನಾಮಾಂಕಿತ ಬಂಡಾಯಗಾರ ಸರಕಾರದ ಮುಖ್ಯ ನಾಯಕ ಹಾಗೂ ಜಮ್ಮು ಮತ್ತು ಕಾಶ್ಮೀರದ ಮುಸ್ಲಿಂ ಸಮ್ಮೇಳನದ ಅಧ್ಯಕ್ಷ ಚೌಧರಿ ಗುಲಾಮ್ ಅಬ್ಬಾಸ್, 'ಆಜಾದ್ ಕಾಶ್ಮೀರ ಸರಕಾರ'ದ ಅಧ್ಯಕ್ಷ ಹಾಗೂ ಬಂಡಾಯಗಾರರ ಮೂಲ ನಾಯಕ ಸರ್ದಾರ್ ಮಹಮ್ಮದ್ ಇಬ್ರಾಹಿಮ್‌ಖಾನ್, ಇವರನ್ನೂ ಭೇಟಿಯಾಗಿ ಅಭಿಪ್ರಾಯಸಂಗ್ರಹಿಸಿದೆಯಿದ್ದಾರೆ. ಅವಧಿಯ ಕುರಿತು ಇಕ್ಕಡೆಗಳವರೊಳಗೆ ಭಿನ್ನಾಭಿಪ್ರಾಯಗಳಿದ್ದರೂ, ಕಾಶ್ಮೀರದ ಭವಿಷ್ಯವು ಒಂದಲ್ಲೊಂದು ದಿನ ಜನಮತದಂತೆಯೇ ನಿರ್ಣಯಿಸಲ್ಪಡತಕ್ಕದ್ದೆಂದು ಭಾರತ ಮತ್ತು ಶೇಕ್‌ಅಬ್ದುಲ್ಲಾ ಸರಕಾರಕ್ಕೂ ಪಾಕಿಸ್ತಾನ್ ಮತ್ತು ಬಂಡಾಯಗಾರರಿಗೂ ಖಚಿತನಾಗಿರುವುದರಿಂದ ಇಂದಿನ ಯುದ್ಧ ಕಾರ್ಯಗಳಂತೆಯೇ ಭಾವೀ ನಿರ್ಧಾರ ನಿರ್ಮಾಣಕ್ಕಾಗಿಯೂ ಎರಡೂ ಕಡೆಗಳಿಂದ ಕೆಲಸಗಳಾಗುತ್ತಿವೆ. ಕಾಶ್ಮೀರದ ಈಶಾನ್ಯ ಸರಹದ್ದಿನ ಅತಿ ವಿಸ್ತಾರ ಪ್ರದೇಶಗಳನ್ನು ಪಾಕಿಸ್ತಾನ್ ಸರಕಾರವು ಸರಾಸರಾನ್ನೂ ಇತರ ಪಾಕಿಸ್ತಾನ್ ಪ್ರಜೆಗಳನ್ನೂ ಅಧಿಕಾರಿಕ ಸಂಖ್ಯೆಯಲ್ಲಿ ತುಂಬಿಸಿ ಶಾಶ್ವತವಾಗಿ ವಾಸಿಸುವ ವ್ಯವಸ್ಥೆ ಮಾಡಿದೆ; ಇದು ತನ್ನ ಕಡೆಗೆ ಜನಮತ ಹೆಚ್ಚಿಸುವ ಪೂರ್ವ ಹುಚಿಕೆ. ಒಂತೂ ಕಾಶ್ಮೀರದ ಇರಿಸ್ಥಿತಿ ಮತ್ತು ಭವಿಷ್ಯ ತಕ್ಕಡಿಯಲ್ಲೇ ಇವೆ.

ಹೈದರಾಬಾದ್ ತಂಟೆ

ಹೈದರಾಬಾದ್ ತಂಟೆ ನಿವಾರಿಸುವ ಕರಿಣ ಕಲಿತನಕ್ಕೆ ನೆಗೆಯುವ ಮೊದಲು ತನ್ನ ನಡುಗಟ್ಟುಗಳನ್ನು ಸರಿಪಡಿಸಿಕೊಳ್ಳುವ ದದ್ದ ಅರಿಹತ ವ್ಯವಸ್ಥೆಯಲ್ಲಿ ಹಿಂದೀ ಸರಕಾರವಿದೆಯೆಂಬುದನ್ನು ಇಂದಿನ ಸ್ಥಿತಿ ಗಾಂಭೀರ್ಯವೂ ಪಾಲಿಸಿ ನಿನ್ನೆ ಹೊರ ಬಿದ್ದ ಅಭಿಪ್ರಾಯಗಳೂ ಸೂಚಿಸುತ್ತಿವೆ. ಸ್ವೈಚ್ಛಾಪೂರ್ವ ಜಪ್ತಿಲಾಮಿಯಿಂತಿದೆ ಸದ್ಯದ ವಾತಾವರಣ. ಅತ್ಯಾಚಾರಗಳ ಯಾವುದೇ ಅಂಕವನ್ನು ಬಾಕಿಯಿಟ್ಟಲ್ಲಿ ಅವನ್ನು ಸೂಚಿಸುವ ಅವಧಿ ಶಮನಿಲ್ಲವೆಂದೇನೋ - ರಯುಕಾರರು ಹೈದರಾಬಾದ್ ಸಂಸ್ಥಾನದೊಳಗಡೆಯಲ್ಲಿ ತಮ್ಮ ರಾಕ್ಷಸೀ ಕೃತ್ಯಗಳನ್ನು ಇನ್ನಷ್ಟು ಅಧಿಕ ಪರಿಮಾಣದಲ್ಲಿ ನಡೆಸಿರುವುದು ಕಂಡುಬಂದಿದೆ. ಭಾರತ ವಲಯದ ಸರಹದ್ದುಗಳೆಲ್ಲವೂ ಹಿಂದೀ ಸೇನೆ ಮತ್ತು ವಿಶೇಷ ಪೋಲಿಸರ ಯಾಗೂ ಸ್ಥಳೀಯ ಜನತಾ ಯೋಧರ ನೈರ್ಜ್ಯ ಸಾಹಸ, ಸುಸಂಘಟಿತ ಶಿಸ್ತಿಭಟನೆಗಳಿಂದ ಈಗೀಗ ಪುಂಡರ ಪಾಲಿಗೆ ಅಜೇಯ ಹಾಗೂ ಅತ್ಯಪಾಯಕರವಾಗಿರುವುದರಿಂದ ರಯುಕಾರ್ ಅತ್ಯಾಚಾರಗಳು ಸುಸ್ಥಾನದೊಳಗಡೆಯಲ್ಲೇ ವಿಶೇಷರೀತಿಯಿಂದಾಗಿವೆ. ಆಗೋಸ್ತು ೨೬ರಿಂದ ಮತ್ತು ೨೫ರಲ್ಲಿ ನಿಜಾಮ್ ಸೈನಿಕರು, ಪೋಲೀಸರು, ರಯುಕಾರರು ಒಟ್ಟಿಗೆ ಸುಮಾರು ೩೦೦ ಮಂದಿ ಹಿಲ್ಲಿಯ ಜನಗೋ

(ಮಿಕ್ಕದ್ದು ನೋಡಿರಿ)

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಣಿತ ಅನುಭವದ ಯೋಗ್ಯತೆಯಿದೆ.

ನಿರಮು ರೇವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ

ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ

ದಿ ವಿಜಯ ಬೇಂಕ್, ಲಿಮಿಟೆಡ್

ಹೆ. ಆ. ಮಂಗಳೂರು.

The Vijaya Bank Ltd.

H. O. MANGALORE. S. K.

The Canara Banking Corporation Limited.

Estd: 1906.
(Incorporated in British India)
Head Office: **UDIPI**, S. India.

Capital Authorised	....	Rs. 25,00,000
Capital Issued & Subscribed	....	Rs. 20,00,000
Capital Paid up	....	Rs. 19,98,445
Reserves....	....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.,
General Manager.

ಗುರುವಾರ, ಉಡುಪಿ, ೯-೯-'೪೮

ಪುನಃ ಕೇಳಪ್ಪನ್!

ಕೇರಳ ಪ್ರಾಂತಿಕ ಕಾಂಗ್ರೆಸ್ ಸಮಿತಿ ಮತ್ತು ಐಕ್ಯ ಕೇರಳ ಕ್ಲಾಸಿಲ್, ಇವೆರಡರ ಪರವಾಗಿ, ಇವೆರಡರ ಅಧ್ಯಕ್ಷರೂ ಆಗಿರುವ ಶ್ರೀ. ಕೆ. ಕೇಳಪ್ಪನ್, ಇವರು ಘಟನಾ ಸಮಿತಿಯ 'ಭಾಷಾವಾರು ಪ್ರಾಂತ್ಯಗಳ ಸಮಿತಿ'ಯ ಪ್ರಶ್ನಾವಳಿಗೆ ಕಳುಹಿಸುವ ಜತೆಯುತ್ತರದಲ್ಲಿ ಮತ್ತೊಮ್ಮೆ ದಕ್ಷಿಣ ಕನ್ನಡದ ಕಡೆಗೆ ನಾಲಿಗೆ ಜಾಚಿದ್ದಾರೆ. ಹಿಂದೊಮ್ಮೆ 'ಸಿಳ್ಳೆ ಕೇರಳ ಸಮ್ಮೇಳನ'ದ ಅಧ್ಯಕ್ಷತೆ ಸ್ಥಾನದಿಂದ ಇದೇ ಆಶೆಯನ್ನು ಅವರು ಪ್ರಕಟಿಸಿದಾಗ, ತನ್ನಿಂದ ನುಂಗಲಾಗುವ ಸ್ಥಳವಿದಲ್ಲವೆಂಬ ಬುದ್ಧಿಯನ್ನು ಅವರಲ್ಲಿ ಮೂಡಿಸಲು ನಾಕಾಗುವಷ್ಟು ಪ್ರತಿಭಟನೆ ದಕ್ಷಿಣಕನ್ನಡಿಗರಿಂದ ತೋರಿಬಂದಿದ್ದಿತು. ಆದರೆ ಮರ್ದೈವವೆನ್ನಬೇಕು! ಶ್ರೀ ಕೇಳಪ್ಪನವರ ಆಲೆಯೂ ಒಂದು ರೀತಿಯಿಂದ ರಝಾಕಾರ್ ಆಕಾಂಕ್ಷೆಗೆ ಸಮಾನವಿರುವುದರಿಂದ ಆ ಬುದ್ಧಿ ತಿದ್ದುವದೆಯಾಗಿಲ್ಲ "ಚಾರಿತ್ರಿಕ ಅವಘಡಕ್ಕೀಡಾಗಿ ಈಗ ಭಾಷೆ ಮತ್ತು ಸಂಸ್ಕಾರವಶರಲಲ್ಲಿ ಕರ್ನಾಟಕವಾಗಿ ಹೋಗಿರುವ ಉತ್ತರ ಕನ್ನಡಾ ಜಿಲ್ಲೆಯೊಂದನ್ನು ಬಿಟ್ಟು, ಅರಬಿ ಸಮುದ್ರ ಮತ್ತು ಪಶ್ಚಿಮ ಘಟ್ಟಗಳ ನಡುವಿನ ಉಳಿದೆಲ್ಲಾ ಕ್ಷೇತ್ರಗಳೂ ಕೇರಳ ಪ್ರಾಂತ್ಯವಾಗಿ ಪ್ರತ್ಯೇಕಗೊಳ್ಳಬೇಕು" ಎಂದವರು ಕೇಳಿಕೊಂಡಿದ್ದಾರೆ. ಅವರ ಬಯಕೆ ಪ್ರಕಾರ ಈ ಕ್ಷೇತ್ರದೊಳಗೆ ತಿರುವಾಂಕೂರು, ಕೊಚ್ಚಿ, ಮಲಬಾರ್, ಲಕ್ಕಾದಿವ ದ್ವೀಪಗಳು, ಅಮಾನ್ ದಿವ ದ್ವೀಪಗಳು, ಕಾಸರಗೋಡು ತಾಲೂಕು, ಗುಡಲೂರು ತಾಲೂಕು, ಮಾಹೆ, ತಂಕಾಸೆರಿ ನಮೇತ ಅಂಜೆಂಗೊ, ಕೂರ್ಗ್, ಉದಗ ಮಂಡಲ ತಾಲೂಕು, ಘಟ್ಟದ ಪಶ್ಚಿಮ ನೀರು ಭಾಗ, ದಕ್ಷಿಣ ಕನ್ನಡದ ತುಳುತಾಲೂಕುಗಳು ಸೇರುತ್ತವೆ. ದಕ್ಷಿಣ ಕನ್ನಡದ ಕುರಿತು ಶ್ರೀ ಕೇಳಪ್ಪನ್ ತನ್ನ ಬೇಡಿಕೆಗೆ ಕೊಟ್ಟಿರುವ ಕಾರಣಗಳಂತೂ ದಕ್ಷಿಣಕನ್ನಡಿಗರು ಕುಚೋದ್ಯಕ್ಕಾಗಿ ಬಳಸಲಾಗುವ ಮಾತುಗಳಾಗಿ ಮುಂಬೆ ಬಂದಿವೆ. "ದಕ್ಷಿಣ ಕನ್ನಡದ ತುಳು ತಾಲೂಕುಗಳು ಭಾಷಾವಾರಿಗಿ ಕರ್ನಾಟಕದೊಂದು ಭಾಗವಾಗಿ ಸೇರಿಕೊಳ್ಳಬಹುದಂತಿಲ್ಲ. ಇವುಗಳ ಪಾರಂಪರ್ಯ, ಚರಿತ್ರೆ, ಪದ್ಧತಿ, ಮುಕ್ಕು ಆರ್ಥಿಕ ರೀತಿ, ಇವೆಲ್ಲವೂ ಎಲ್ಲಾ ವಿಷಯಗಳಲ್ಲೂ ಮಲೆಯಾಳೀ ಭಾಷಾ ಕ್ಷೇತ್ರಗಳ ಸರ್ವಸಮಾನತೆಯಲ್ಲೇ ಇವೆ. ಕೆಲಕಾಲದಿಂದ ಕರ್ನಾಟಕವು ಇಲ್ಲಿಯ ಸರಕಾರೀ ಭಾಷೆಯಾಗಿ ಹೇರಲ್ಪಟ್ಟಿರುವ ಈ ಚಾರಿತ್ರಿಕ ಅವಘಡವೊಂದಕ್ಕಾಗಿಯೇ ಇವುಗಳನ್ನು ಕೇರಳದಿಂದ ಹರಿದು ತೆಗೆಯುವದಾದರೆ ಅದು ಸ್ವತಃ ಈ ಭಾಗಗಳವರಿಗೂ ಉಳಿದ ಕೇರಳಕ್ಕೂ ತಾಗುವ ದುರದೃಷ್ಟವೇ ಸರಿ". ಇಂತಹ ಅಸಂಬದ್ಧ ವಾದಗಳಿಂದ ದಕ್ಷಿಣ ಕನ್ನಡಿಗರ ಮನಸ್ಸಿನ ಮೇಲಾವ ಪರಿಣಾಮವಾಗಿದೆಯೆಂಬುದನ್ನು ತಿಳಿಯುವ ನ್ನು ಊಹಾಕಕ್ಕಿ ಶ್ರೀ ಕೇಳಪ್ಪನರಲ್ಲಿಯ ತಿದ್ದರೆ, ಅವರೀತರ್ಕಕ್ಕೆಳಿಯುವ ಮೊದಲು ನೂರುಬಾರಿ-ಯಾಕೆ, ತನ್ನ ಆಯುಷ್ಯವಿಡೀ-ಯೋಚಿಸುತಿದ್ದರು! ದಕ್ಷಿಣಕನ್ನಡದ ಸತ್ಯಸ್ಥಿತಿಯನ್ನರಿತಿದ್ದರೂ, ತನ್ನೀವಾದದ ಕುರಿತು ಈ ಭಾಗಗಳವರ ಅಭಿಮತವಾವುದೆಂಬ ಅನುಭವವು ಈ ಮೊದಲಾಗಿದ್ದರೂ ಶ್ರೀ ಕೇಳಪ್ಪನರು, ಉದ್ದೇಶ ಪೂರ್ವಕವಾಗಿ-ಅಡೂ ದುರುದ್ದೇಶ ಪೂರ್ವಕವಾಗಿ-ಮತ್ತೂ ಮತ್ತೂ ಅದನ್ನೇ ಹೇಳಿ ದಕ್ಷಿಣ ಕನ್ನಡಿಗರನ್ನು ಅಪಮಾನಿಸಲು ಹೊರಟಿರುವುದು ನಿಜಕ್ಕೂ ಅತ್ಯಂತ ಶೋಚನೀಯ. ಕೇರಳದ ಸರ್ವಾಧಿಕಾರಿಯಂತಿರುವ ಶ್ರೀ. ಕೇಳಪ್ಪನರು "ಎಲ್ಲಾ ರೀತಿಗಳಲ್ಲೂ ಮಲೆಯಾಳದ ಸಮಾನೇಕ ಸ್ಥಾನದಲ್ಲಿರುವ ದಕ್ಷಿಣ ಕನ್ನಡದ ತುಳು ಜಿಲ್ಲೆಗಳಲ್ಲೆ" ತನ್ನೀತತ್ವ ಪ್ರಚಾರಕ್ಕಾಗಿ ಸಂಚರಿಸಿ ಅನುಭವ ಸಂಪಾದಿಸಿಕೊಳ್ಳುವುದೇ ವಾಸಿಯೆನ್ನಬೇಕಲ್ಲದೆ ಈ ರುರಿತು ಅನ್ಯಥಾ ತರ್ಕಿಸಿ ಫಲವಿಲ್ಲ! ಇಲ್ಲಿ ಶ್ರೀ ಕೇಳಪ್ಪನರಿಗೆ ಹಿಡಿದಿರುವ ಒಂದು ಭ್ರಮೆಯನ್ನು ನಿವಾರಿಸುವ ಕೆಲಸವಿದೆ, ಹೊರತು ಅವರೊಡನೆ ವಾದಿಸುವ ಅಂಶವಿಲ್ಲ.ಅವರು ತನ್ನ ಒಂದು ಬಯಲಾಸೆಗಾಗಿ ವಸ್ತುಸ್ಥಿತಿಯನ್ನು ತಿರುಗಾ ಮುರುಗಾ ಮಾಡಿ ತೋರಿಸಲು-ಒಂದು ಭಾಗದ ಜನತೆಯ ಸಂಕಲ್ಪವನ್ನು ಕಡೆಗಣಿಸಿ ಮಾತ್ರವಲ್ಲ, ಅವರ ಮನಸ್ಸನ್ನೇ ತಿವಿದು, ಆ ಭಾಗವನ್ನು ಏಳೆದುಕೊಳ್ಳಬಹುದೆಂದು ಭ್ರಮಿಸಲು-ಹೊರಟಿದ್ದಾರೆ!

ಭಾಷಾವಾರು ಪ್ರಾಂತ್ಯಗಳ ರಚನೆಯ ಕುರಿತು ನಾವು ಮೇಲಿಂದ ಮೇಲೆ ಹೇಳುತ್ತಾ ಬಂದಿರುವಂತೆ ಯಾವ ಕಡೆಯವರೂ ದ್ವೇಷ, ವೈಷಮ್ಯ, ಅತ್ಯಾಶೆಗಳನ್ನು ಪ್ರದರ್ಶಿಸಕೂಡದಾದ-ಪ್ರದರ್ಶಿಸಿ ಫಲವೇನೂ ಇಲ್ಲವ-ಸಂದರ್ಭವಿದು. ಎಲ್ಲಾ ವಿವಾದಗಳನ್ನೂ ಕೂಲಂಕುಷವಾಗಿ ಪರ್ಯಾಲೋಚಿಸಿ ನ್ಯಾಯ ತೀರ್ಮಾನ ಮಾಡಬಲ್ಲವರು ಪ್ರತ್ಯೇಕವಿದ್ದಾರೆ. ಶ್ರೀ ಕೇಳಪ್ಪನರಿಂಗ ತನ್ನ ದುರ್ವಾಜ್ಯವನ್ನು ಮುಂದಿಟ್ಟರುವುದು ಅಂಥವರ ಸಮ್ಮುಖದಲ್ಲೆಂಬುದೇನೋ ನಿಜ. ಅತೀರೇಕವನ್ನು ಕೇಳಿನಿಟ್ಟರೆ,ಉದರ ಅರ್ಧಾಂಶ ಅಥವಾ ಆಲ್ಪಾಂಶವಾದರೂ ದೊರೆಯಬಹುದೆಂಬ ನಿರೀಕ್ಷೆಯಿಂದ-ಎಷ್ಟೇ ದೊರೆತರೂ ಅದೊಂದು ಹೊಸ ಲಾಭವೆಂಬುದರಿಂದ-ಕೇರಳದವರು ತಮ್ಮ ಮನಸ್ಸಾಕ್ಷಿಯನ್ನು ಬದಿಗಿಟ್ಟು ಇಂತಹ ಬೇಡಿಕೆ ಮುಂದೊಡ್ಡಿರಬಹುದು. ಕೇರಳೀಯರು ಕೇಳಿರುವ ದಕ್ಷಿಣಕನ್ನಡ, ಕೂರ್ಗು, ಮತ್ತಿತರ ಭಾಗಗಳನ್ನು ಸೇರಿಸಿಕೊಳ್ಳದಿದ್ದರೆ ಆಯ ಮತ್ತು ವಿಸ್ತಾರದಲ್ಲಿ ಕೂಡಾ ಒಂದು ಪ್ರತ್ಯೇಕ ಪ್ರಾಂತ್ಯವಾಗುವ ನುಟ್ಟಿಗೆ ಕೇರಳದ ಯೋಗ್ಯತೆಯುಸಂದೇಹಕ್ಕೀಡಾಗುವದೂ ಸಹಜವೇ. ಆದರೆ ಇದಾವ ಕಾರಣದ ಮೇಲಿಂದಾದರೂ ಶ್ರೀ ಕೇಳಪ್ಪನರ ವಾದವು ಕ್ಷಮಾರ್ಹವಾಗುವಂತಿಲ್ಲ. ಎಂದಿಗೂ ತನ್ನ ಹಕ್ಕಿನದಾಗದ ಒಂದು ಭಾಗಕ್ಕಾಗಿ ನ್ಯಾಯುಕರ್ತರ ಮುಂಗಡೆಯಲ್ಲಿ ಕುತರ್ಕ ಹೂಡುವದು ತನ್ನ ಯೋಗ್ಯತೆಯನ್ನೇ ಬಯಲಿಗಿಟ್ಟು--ಸಂಬಂಧಪಟ್ಟವರ ಮನಸ್ಸನ್ನು ನಿರರ್ಥಕವಾಗಿ ನೋಯಿಸಿದ--ಅಪರಾಧವೇ ಸರಿ. ಅಂತೆಯೇ ಅತೀರೇಕ ಯಾಚನೆ ಮಾಡಿದರೆ ಅಲ್ಪಾಂಶವನ್ನಾದರೂ ಹೊಡೆದುಬಿಡಬಹುದೆಂಬ ಪಾಕಿಸ್ತಾನೀ ಮಾದರಿಯ ಮನೋವೃತ್ತಿ, ಈ ಪ್ರಾಂತ್ಯರಚನೆಯ ವಿಚಾರಕ್ಕೆ ಫಲಿಸುವಂತಿಲ್ಲ. ಮೂಲ ನ್ಯಾಯದ ಮೇಲೆ ಎಂತಹ ಹೊರೆಗಳನ್ನು ಹೇರಿ, ಅದನ್ನಡಗಿಸಿಟ್ಟರೂ ಈ ಮಟ್ಟಿಗೆ ಶೋಧಿಸಿ ತೆಗೆಯುವಂತೆ ಮಾಡಬಲ್ಲ ಇದಿರುವಾದಿಗಳಿದ್ದಾರೆ. ತನ್ನ ಹಕ್ಕಿನವಾಗಿರದ ಭಾಗಗಳನ್ನು ಎಳೆಕೊಂಡಾದರೂ ಕೇರಳಕ್ಕೊಂದು ಪ್ರಾಂತಿಕ ಯೋಗ್ಯತೆ ದೊರಕಿಸಿಕೊಳ್ಳಬೇಕೆಂಬ ಮಹತ್ವಾಕಾಂಕ್ಷೆಯೆಂಬುದು ತೀರಾ ಕಳಪಟ್ಟದ ದುಸ್ವಾರ್ಥ. ನಿಜವಾದ ಕೇರಳದಲ್ಲಿ ಒಂದು ವಿಶಿಷ್ಟ ಪ್ರಾಂತ್ಯವಾಗುವ ಅರ್ಹತೆಯಲ್ಲದಿದ್ದರೆ, 'ಭಾಷಾವಾರು ಪ್ರಾಂತ್ಯಗಳ ಸಮಿತಿ'ಯ ಪ್ರಶ್ನಾವಳಿಯಲ್ಲಿಂದೆಡೆ ಕೇಳಿರುವಂತೆ ಯಾವುದಾದರೊಂದರ ಉಪ ವ್ಯಾಖ್ಯಾನವಿಗಿದುವುದರಲ್ಲೇ ಅದೃಷ್ಟವಿಡಬೇಕು ಹೊರತು, ಇನ್ನೊಬ್ಬರನ್ನು ನುಂಗಿಯಾದರೂ ತಾನು ಸಾಕಷ್ಟು ಪುಷ್ಟಿ ಹೊಂದಬೇಕೆಂದು ನೆನೆಸಕೂಡದು. ಯಾವ ದೃಷ್ಟಿಯಿಂದ ನೋಡಿದರೂ ಕೇರಳೀಯರ ಈ ಬಯಲಾಸೆಯು ವಿಚಾರಣೀಯವೆಂಬಂತಿಲ್ಲ; ಕ್ಷಮಾರ್ಹವೂ ಅಲ್ಲ. ದಕ್ಷಿಣ ಕನ್ನಡದ ಜನತೆ ತಮಾನಾದ ಅಪಮಾನವೆಂದೇ ಇದನ್ನು ಭಾವಿಸಿಕೊಳ್ಳಬೇಕಾಗಿದೆ. ಇದಕ್ಕೆಗತ್ಯವುಳ್ಳ ಪರಿಹಾರಗಳನ್ನು ದ. ಕನ್ನಡಿಗರು ಮತ್ತು ಅಖಿಲ ಕರ್ನಾಟಕದ ಜನತೆ ಕೂಡಲೇ ಕೈಗೊಳ್ಳಬೇಕು. ಇಂತಹ ಅಸಹ್ಯ ಆರೋಪಗಳಿಗವಕಾಶ ಕೊಡುವಂತಹ ಪರಿಸ್ಥಿತಿ ತಮ್ಮಲ್ಲೇನಿದೆ, ಎಂಬುದನ್ನು ನೋಡಿಕೊಂಡು, ಅವುಗಳನ್ನು ನಿವಾರಿಸಿಕೊಳ್ಳುವ ಶುಸಂಘಟಿತ ಕಾರ್ಯವಾಗಬೇಕಾದುದು ಅಗತ್ಯ.

ಸರ್. ಆರ್ಚಿಬಾಲ್ಡ್ ನೈ ಯವರು ಇದೇ ತಾ 7-9-48ರಲ್ಲಿ ಮದ್ರಾಸಿನ ಗವರ್ನರ್ ಹುದ್ದೆಯಿಂದ ನಿವೃತ್ತಿಹೊಂದಿ ಅಂದೇ ಪೂರ್ವಾಹ್ನ ಭಾವನಗರದ ಮಹಾರಾಜರು ಗವರ್ನರ್ ಗಾದಿಯೇರಿದ್ದಾರೆ.

ವೈದಿಕ ಧರ್ಮ ಪರಿಷತ್ತಿನ ಸರ್ವಾಧ್ಯಕ್ಷತ್ವವು ಇದೇ ತಾ 10ರಲ್ಲು ಶ್ರೀ ಮಧ್ವನಂತೇಶ್ವರ ಸ್ವಾಮಿ ಸನ್ನಿಧಿಯ ವಠಾರದಲ್ಲಿ ಶ್ರೀ ಕಾಣಿಯೂರುಮಠದ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಪರ್ಯಾಯ ಶ್ರೀ ಸೋದೆ, ಶ್ರೀ ಪುತ್ತಿಗೆಮಠದ ಸ್ವಾಮಿಗಳವರೂ ಹಾಜರಿದ್ದರು.

ಶ್ರೀಪುತ್ತಿಗೆಮಠದ ಉತ್ತರಾಧಿಕಾರಿ ಚಿಕ್ಕ ಸ್ವಾಮಿಗಳವರು ಪ್ರಾಸ್ತಾವಿಕ ಭಾಷಣವನ್ನಾಡಿದರು.ಬಳಿಕ ಮೈಸೂರು ಅಸ್ಥಾನವಿದ್ವಾನ್ ವೇದವ್ಯಾಸಾಚಾರ್ಯರೇ ಮೊದಲಾದವರು ಜೀವನದ ಗುರಿಯಾದ ಆತ್ಮೋನ್ನತಿಗಾಗಿ ಸತತ ದುಡಿಯಬೇಕಾದುದು ಪ್ರತಿಯೋರ್ವನ ಕರ್ತವ್ಯವೆಂದರು. ಈ ತತ್ವವನ್ನು ಪುಷ್ಟೀಕರಿಸಿ ಅಧ್ಯಕ್ಷರು ಮುಖ್ಯಾಂಶ ಭಾಷಣಗೊಂದಿಗೆ ಸಭಾಂತ್ಯವಾಯಿತು.

ವಾಸ್ತಿ ಪರಿಕಥಾ ನಿದ್ವಾನ್ ಶ್ರೀ. ಬೆಂಗಳೂರು ಗೋಪಾಲದಾಸರ 'ಶುಚೇಲೋಪಾಖ್ಯಾನ' ಪರಿಕಥಾ ಕಾಲಕ್ಷೇಪವಿತ್ತು.

The Mahajana Chemicals & Pharmaceuticals Ltd.

'ಮಹಾಜನ'

ಮಹಾ ಸಭೆಯ ನೋಟೀಸು

ಮಹಾಶಯರೇ,

ಕಂಪೆನಿಯ ಎರಡನೇ ವರ್ಷದ ಮಹಾ ಸಭೆಯು ಇದೇ ಬರುವ ಒಕ್ಟೋಬರ 24 ನೇ ರವಿವಾರ ಅಪರಾಹ್ನ ಗಂಟೆ ನಾಲ್ಕಕ್ಕೆ ನಿಶ್ಚಿತ ಕಾರ್ಯಕ್ರಮಗಳ ಬಗ್ಗೆ ಕಂಪೆನಿಯ ರಿಜಿಸ್ಟರ್ಡ್ ಆಫೀಸಿನಲ್ಲಿ ಜರಗಲಿರುವುದು. ನೆಂಬರರೆಲ್ಲರೂ ಬರಬೇಕಾಗಿ ಕೋರಿಕೆ.

N. B. :-Transfer books of the company will be closed from 12-10-48 to 15-11-48.

By order of the board of directors

(Sd) **P. S Iswara Bhat**
Secretary to the Managing Agents
Kasaragod 1 9-48

ನವಯುಗದ ಚಂದಾದಾರರಲ್ಲಿ ವಿನಂತಿ

'ನವಯುಗ'ದ 28ನೇ ವರ್ಷವು ಇದೇ ಆಗೋಸ್ತು ತಿಂಗಳ ಅಂತ್ಯಕ್ಕೆ ಮುಗಿದು ಸೆಪ್ಟಂಬರ ತಿಂಗಳಿಂದ 29ನೇ ಹೊಸ ವರ್ಷಾರಂಭವಾಗಿದೆ. ಈ ಸಮಯಕ್ಕೆ ಚಂದಾ ಅವಧಿ ಮುಗಿದ ಚಂದಾದಾರರೆಲ್ಲರೂ ದಯವಿಟ್ಟು ತಮ್ಮ ಚಂದಾಹಣವನ್ನು (ಹಿಂದಿನ ಬಾಕಿ ಇದ್ದರೆ ಅವನ್ನು ಸಮೇತ) ಅದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ಅಪೇಕ್ಷಿಸೋಣಾಗುತ್ತದೆ ಹಣವನ್ನು ಕಳುಹಿಸುವಾಗ ತಮ್ಮ ಚಂದಾ ನಂಬ್ರವನ್ನು ಸೂಚಿಸಿ ಸರಿಯಾದ ನಿಳಾಸವನ್ನು ತಿಳಿಸುವಂತೆ ಕೋರುತ್ತೇವೆ.

ಮೆನೇಜರ್.

ಭಾರತದ ಪಾಲಿನ ಪರೀಕ್ಷಾ ಕಾಲ!

[ಸನೇ ಪುಟದಿಂದ]

ನ್ ತಾಲೂಕಿನ ತಾಲೂಕುದಾರನ ನಾಯಕತ್ವದಲ್ಲಿ ಬೈರನಿಪಳ್ಳಿ, ಕುದಿಕಳ್ಳಿ, ಬಿಕ್ಯಾಂಕಿ, ಬುಗಿಮೆಟ್ಟ ಮೊದಲಾದ ಹಳ್ಳಿಗಳಿಗೆ ನುಗ್ಗಿ ಹೋಗಿ ಮುಸ್ಲಿಮೇತರರು ನೊಗಗಳೆಂಬಂತೆ ಹಿಂಡ. ಹಿಂದಸ್ಟೇ ಕೊಂದು ಹಾಕಿದ ಭೈದ್ಯಾವಕ ವಾರ್ತೆ ಬಂದಿದೆ. ಆ ಹಳ್ಳಿಗರನ್ನು ಒಂದು ಸ್ಥಳದಲ್ಲಿ ಗುಂಪಾಗಿ ನಿಲ್ಲಿಸಿ, ನಿಜಾಮ್ ಯುವ ಪಡೆಯವರು ಇಡೀ ಒಂದು ಘಂಟೆಯಾರಡು ಬ್ರೆನ್ ಗನ್ನುಗಳಿಂದ ಗುಂಡು ಹಾರಿಸಿ 500 ಮಂದಿಯನ್ನು ಅಲ್ಲಿಯೇ ಕೊಂದುಹಾಕಿದ್ದರು. ಭೈದರಾಬಾದ್ ಗಡಿಯೊಳಗೆ ಧಾಳಿ ಪ್ರತಿಭಟನೆಗಾಗಿ ಹೋಗಿ ಒಂದೆರಡು ಕಡೆಗಳಲ್ಲಿ ಸ್ವರಕ್ಷಣೆಗಾಗಿ ನಿಂತಿರುವ ಹಿಂದೀ ಸೇನೆಯವರ ಮತ್ತು ಸೈನಿಕರ ಮೇಲೂ ಬೀಳುವಸಿದ್ಧತೆಯನ್ನು ರಜಕಾರರೂ ನಿಜಾಮ್ ಸೈನಿಕರೂ ನಡೆಸುತ್ತಿರುವ ವಾರ್ತೆಯಿದೆ. ಕೊನೆಯ ವಾರ್ತೆಯಂತೆ ಒಂದೆಡೆಹಿಂದೀ ಸೈನಿಕರಿಗೂ ರಝಕಾರರಿಗೂ ಖಾಡಾಖಾಡಿ ಜೋರಾಟವಾಗಿ ೯೦ ಮಂದಿ ರಝಕಾರರು ಶರಣು ಬಂದಿದ್ದಾರೆಂದು ತಿಳಿದು ಬರುತ್ತದೆ.

ಇಲ್ಲಿ ಭಾರತದ ಪಾರ್ಲಿಮೆಂಟ್ ಅಧಿವೇಶನ ನಡೆದಿರುವಂತೆಯೇ ಅಲ್ಲಿ ಭೈದರಾಬಾದ್ ಲೆಜಿಸ್ಲೇಟಿವ್ ಎಸೆಂಬ್ಲಿ ಸಭೆ ಜರಗುತ್ತಿದೆ. ಆರಂಭದಲ್ಲಿ ಪ್ರಧಾನ ಮಂತ್ರಿ ಮಿ. ಲಾಯಕ್ ಅಲಿ ಭಾರತ ಸರಕಾರದ ಮೇಲಿನ ತಮ್ಮ ಹಿಂದಿನ ಆಪಾದನೆಗಳನ್ನೇ ಪುನರುಚ್ಚರಿಸಿದರು. ಸಂಯುಕ್ತ ರಾಷ್ಟ್ರ ಸಭೆಯ ಅಧಿನೇತನಲ್ಲಿ ಭೈದರಾಬಾದ್ ಪ್ರತಿನಿಧಿಗಳಾಗಿ ನವಾಬ್ ಮೊಯಿನ್ ನವಾಝ್ ಜಂಗ್ ಬಹದೂರರ ನಾಯಕತ್ವದಲ್ಲಿ ಶ್ರೀಪತ ರಾವ್, ಅಬ್ದುರ್ ರಹಿಮಾನ್, ಶ್ಯಾಮ ಸುಂದರ್, ನವಾಬ್ ಮೀರ್ ನವಾಜ್ ಜಂಗ್ ಬಹದೂರರ ಮಂಡಲಿ ಹೋಗಲಿದೆಯಂತೆ. ನಿಜಾಮ್ ಮಂತ್ರಿ ಮಂಡಲಕ್ಕೆ ರಾಜೀನಾಮೆಯಿತ್ತಿದ್ದ ಜೆ. ರಾಮೇಶ್ವರ್, ಮತ್ತು ಜಿ. ವಿ. ಜೋಶಿಯವರ ಸ್ಥಾನಗಳಿಗೆ ಶಂಕರ್‌ರಾವ್ ಪುಲ್ಲಿಕಾರ್, ಮತ್ತು ಗೋವಿಂದರಾಯರ ನೇಮಕಗಳಾಗಿವೆ ಖಾಲಿ ಬಿದ್ದ ಮತ್ತೊಂದು ಹಿಂದೂ ಮಂತ್ರಿ ಸ್ಥಾನದ ಹೊಸ ನೇಮಕ ಬಾಕಿಯಿದೆ

ವ್ಯಾಮುಮ್ಮಿ ಘಟನೆಗಳು

ರಾಷ್ಟ್ರದ ಆರ್ಥಿಕ ಪುಷ್ಟಿ ಮತ್ತು ಅಭಿವೃದ್ಧಿ ಪ್ರಸರಣವನ್ನು ತಡೆಗಟ್ಟುವ ಉಪಾಯಗಳ ಕುರಿತು ಭಾರತ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆದಿದೆ. ಅತಿ ಪ್ರಸರಣ ನಿರೋಧ ಸೂಚನೆಗಳಿಗಾಗಿ ಸರಕಾರವು ನೇಮಿಸಿದ್ದ ಅರ್ಥತಜ್ಞರು, ಉದ್ದಿಮೆವಾಲರ ಮತ್ತು ಕೂಲಿಗಾರ ಮುಖಂಡರ ಸಮ್ಮೇಲನಗಳ ವಿಷಯಾಸುಗಳು ಸರಕಾರಕ್ಕೆ ಬಂದಿದ್ದು ಅವುಗಳನ್ನು ಸರಿಯಾಗಿ ಪರ್ಯಾಲೋಚಿಸಿದ ಮೇಲೆ ಸರಕಾರವು ತನ್ನ ನಿರ್ಣಯಗಳನ್ನು ಜಾಹೀರು ಮಾಡುವದೆಂದು ಪ್ರಧಾನ ಮಂತ್ರಿಗಳು ನಿರೂಪಿಸಿದ್ದಾರೆ.

ಭಾರತದ "ರಿಜರ್ವ್ ಬೇಂಕ್"ನ್ನು ರಾಷ್ಟ್ರೀಕರಣಗೊಳಿಸುವ ಮಸೂದೆಯು ಪಾರ್ಲಿಮೆಂಟಿನ ಮುಂದೆ ಬಂದಿದ್ದು ಅದರ ಪ್ರಥಮ ವಾಚನವಾಗಿದೆ. ಪಾರ್ಲಿಮೆಂಟು ಈ ಮಸೂದೆಯನ್ನು ಸ್ವಾಗತಿಸಿದೆ. ಈ ಮಸೂದೆಯನ್ವಯ ರಿಜರ್ವ್ ಬೇಂಕಿನ ಪಾಲು ಭಂಡವಾಳವು ಸರಕಾರದ್ದಾಗಿ ಬೇಂಕು ಸರಕಾರೀ ಸೊತ್ತಾಗುವುದು; ಹೊಸಾಡಳಿತೆ ೧೯೪೯ನೇ ಜನವರಿ ೧ರಿಂದ ಜಾರಿಯಲ್ಲಿ ಬರುವದು. ಹಿಂದೀ ಸರಕಾರದ ಅರ್ಥ ಮಂತ್ರಿ ಶ್ರೀ ನಿಯೋಗಿಯವರು ಈ ಸಂಬಂಧದ ವಿಷಯ ನಿರೂಪಣೆ ಮಾಡುತ್ತಾ ಹೇಳಿದರು "ರಿಜರ್ವ್ ಬೇಂಕು ಭಾರತ ಮತ್ತು ಪಾಕಿಸ್ತಾನಗಳೆಂಬ ಎರಡು ಸಮಾನ ವಿಶ ಬೇಂಕಾಗಿರುವ ಜವಾಬ್ದಾರಿಯು ೧೯೪೯ನೇ ಸೆಪ್ಟೆಂಬರ್ ೩೦ಕ್ಕೆ ಮುಗಿಯುವುದರಿಂದ ಆ ಮೇಲೆಯೇ ಅದನ್ನು ರಾಷ್ಟ್ರೀಕರಣಗೊಳಿಸುವ ಕೆಲಸಕ್ಕೆ ತೊಡಗಿದರಾಯಿತೆಂದು ಮೊದಲ ಯೋಚನೆಯಿದ್ದಿತು. ಈಗಿನ ಪಾಕಿಸ್ತಾನವು ಜುಲಾಯಿ ತಾ.೧೫ರಿಂದಲೇ ತನ್ನ ಸ್ವಂತ ಸೆಂಟ್ರಲ್ ಬೇಂಕ್‌ನ್ನು ಸ್ಥಾಪಿಸಿಕೊಂಡಿದೆ. ಹೀಗಾಗಿ ನಿರೀಕ್ಷಿಸಿದ್ದುದಕ್ಕೆಂತ ಬೇಗನೇ ರಾಷ್ಟ್ರೀಕರಣದ ತನ್ನ ಪ್ರಾಗ್ದಾನವನ್ನು ಜಾರಿಗೆ ತರಲಾಗುವ ಅವಕಾಶವು ಭಾರತ ಸರಕಾರಕ್ಕೆದಗಿದೆ. ಭಾರತ ಸರಕಾರ, ಅದರಲ್ಲೂ ವಿಶೇಷವಾಗಿ ಆರ್ಥಿಕ ಮಂತ್ರಿ ಮತ್ತು ರಿಜರ್ವ್ ಬೇಂಕಿನ ಗವರ್ನರರೊಳಗೆ ಈವರೆಗೂ ಅತ್ಯಂತ ನಿಕಟ ಸಂಬಂಧ ವಿತ್ತು. ಈಗ ಸರಕಾರವು ಮಾಡಲು ಹೊರಟಿರುವುದೆಂದರೆ, ಇದುವರೆಗೂ ಭಾರತ ಸರಕಾರ ಮತ್ತು ರಿಜರ್ವ್ ಬೇಂಕ್ ಗವರ್ನರರೊಳಗಿದ್ದ ಹತ್ತಿರದ ಹಾಗೂ ನಂಬಿಕೆಯ ಸಂಬಂಧಗಳಿಗೆ ಕಾನೂನಿನ ಸ್ವರೂಪ ಕೊಡುವುದಷ್ಟೆ."

"ನೂರು ರೂಪಾಯಿ ನೋಟುಗಳನ್ನು ಅಮಂಧಗೊಳಿಸುವ, ಅಥವಾ ಯಾವುದೇ ಕರೆನ್ಸಿ ನೋಟಿನ ಮೌಲ್ಯದ ಒಂದಂಶ ಮಾತ್ರ ಕೊಡುವ ಯೋಚನೆಯೇನನ್ನೂ ಸರಕಾರ ಮಾಡಿಲ್ಲ. ಅಂತೆಯೇ ಬೇಂಕು ಡಿಪೋಸಿಟುಗಳ ಯಾವುದೇ ಅಂಶವನ್ನು ವಶಪಡಿಸಿಕೊಳ್ಳುವ ಯೋಚನೆಯೂ ಸರಕಾರಕ್ಕಿಲ್ಲ" ಎಂದು ಭಾರತದ ಪಾರ್ಲಿಮೆಂಟಿನಲ್ಲಿ ಪ್ರಧಾನ ಮಂತ್ರಿ ಪಂಡಿತ ನೆಹರುಗಳು ಜನತೆಗೆ ಸ್ಪಷ್ಟ ಆಶ್ವಾಸನೆಯಿತ್ತಿದ್ದಾರೆ. ಈ ಸಂಬಂಧದ ಹಲವಾರು ನಿರ್ಧಾರ ಸಿದ್ಧಿಗಳು ಹಬ್ಬಿ ಅಲ್ಲಲ್ಲಿ ದಿಗಿಲು ನಿರ್ಮಾಣವಾಗಿದ್ದುದರಿಂದಲೇ ಪಂಡಿತ ನೆಹರುಗಳು ಈ ಆಶ್ವಾಸನೆ ಕೊಡಬೇಕಾಯಿತು.

ಗಿರಣಿ ಬಟ್ಟೆಗಳ ಮೇಲಿನ ಸರಕಾರೀ ಹತೋಟಿ ಕ್ರಮಗಳ ಕುರಿತು ಉದ್ದಿಮೆ ಮತ್ತು ಸರಬರಾಯಿ ಮಂತ್ರಿ ಡಾ. ಶ್ಯಾಮಪ್ರಸಾದ ಮುಖರ್ಜಿಯವರು ಪಾರ್ಲಿಮೆಂಟಿನ ಮುಂದಿಟ್ಟ ಅಂಶಗಳು ವಿಚಾರಣೀಯವಿವೆ. 1948ನೇ ಜುಲಾಯಿ 30 ರಲ್ಲಿ ಗಿರಣಿಗಳಲ್ಲಿದ್ದ ಎಲ್ಲಾ ದಾಸ್ತಾನುಗಳನ್ನೂ ಸರಕಾರವು ವಶೀಕರಿಸಿಕೊಂಡಿದೆ; ಮತ್ತೀ ದಾಸ್ತಾನುಗಳ ಮುಂದಿನ ಪೂರ್ಣ ವಿವರಗಳನ್ನೆಲ್ಲಾ ತಿಳಿಸುತ್ತಿರಬೇಕೆಂದು ಆಜ್ಞಾಪಿಸಲಾಗಿದೆ. ಈ ರೀತಿ ಗಿರಣಿಗಳಿಂದ ದೊರೆತ ಸಂಗ್ರಹವೆಂದರೆ 4,17,300 ಬೇಲ್ ಬಟ್ಟೆಗಳು. ಈ ವಸ್ತುಗಳಿಗೊಡನಿರುವ ಅರಿವೆಗಳ ಸಂಗ್ರಹಾಧಿಕಾರವನ್ನು ಪ್ರಾಂತೀಕ ಸರಕಾರಗಳಿಗೆ ಬಿಡಲಾಗಿದೆ; ಆವು ಸಂಗ್ರಹಿಸಿದ ವಿವರ ತಿಳಿದುಬಂದಿಲ್ಲ. ಕೇಂದ್ರ ಸರಕಾರವು ವಶಪಡಿಸಿಕೊಂಡ ಅರಿವೆಗಳ ಪೈಕಿ 1,50700 ಬೇಲುಗಳ ವಿತರಣಾ ಸೂಚನೆಗಳು ಟೆಕ್ಸ್‌ಟೈಲ್ ಕಮಿಶನರರಿಂದ ಇಷ್ಟರಲ್ಲೇ ಹೋಗಿವೆ. ಈ ಪೈಕಿ 92,700 ಬೇಲುಗಳನ್ನು ಪ್ರಾಂತ್ಯಗಳ ಮತ್ತು ಸಂಸ್ಥಾನ ಸರಕಾರಗಳಿಗೆ ಸರಬರಾಯಿ ಮಾಡಿ, ಉಳಿದ ಅಂಶವನ್ನು ಕೊರತೆಯಿರುವ ಭಾಗಗಳನ್ನು ನೋಡಿ ವಿತರಣೆ ಮಾಡಲಾಗುವದು. ಬೆಲೆಯನ್ನು ಸರ್ವ ಸಾಮಾನ್ಯವಾಗಿ ದೊರಗು ಮತ್ತು ಮಧ್ಯಮ ವರ್ಗದ ಅರಿವೆಗಳ ಮಟ್ಟಿಗೆ ಸೇರಿಡಾ ೨೦ರಷ್ಟು, ನಾಜೂಕಿನ ಹಾಗೂ ಉತ್ತಮ ವರ್ಗದ ಅರಿವೆಗಳ ಮಟ್ಟಿಗೆ ಸೇ. ೪೦ರಷ್ಟು ತಗ್ಗಿಸಲಾಗಿದೆ. ಭಾರತದ ಮುಖ್ಯ ಗಿರಣಿ ಕೇಂದ್ರಗಳಾದ ಬೊಂಬಾಯಿ ಮತ್ತು ಅಹಮ್ಮದಾಬಾದುಗಳಲ್ಲಿ ೧೯೪೯ನೇ ಜೂನ್ ೩೦ಕ್ಕೆ ಮುಗಿಯುವ ವರ್ಷದಲ್ಲಿ ಅನುಕ್ರಮವಾಗಿ ೧೯,೩೦೦ ಬೇಲ್ ಮತ್ತು ೬೫,೦೦೦ ಬೇಲ್ ಅರಿವೆಗಳು ತಯಾರಾಗಿದ್ದುವೆಂದು ಸಂಬರಾಯಿ ಮಂತ್ರಿಗಳು ತಿಳಿಸಿದ್ದಾರೆ.

ಸಂಯುಕ್ತ ಪ್ರಾಂತ್ಯದ ಗಂಗಾ, ಯಮುನಾ, ರಾಮಗಂಗಾ, ಸರೂ ಮೊದಲಾದ ಹೊಳೆಗಳಲ್ಲಿ ಇತ್ತೀಚೆಗೆ ಅತಿ ದೊಡ್ಡ ನೆರೆ ಬಂದು ಗ್ರಾಮ ಗ್ರಾಮಗಳೇ ನೀರು ಪಾಲಾಗಿವೆ. ಪ್ರಾಣ ಹಾನಿಯ ವಾರ್ತೆಯಿಲ್ಲವಾದರೂ ಬೆಳೆ ಸೊತ್ತುಗಳಿಗೆ ಅತಿರೇಕ ಹಾನಿಯಾಗಿರುವುದು ತಿಳಿದು ಬಂದಿದೆ. ಕಾಶೀ ನಗರ ಮತ್ತು ಜಿಲ್ಲೆಯ ಮೇಲೆ ಗಂಗೆಯ ನೆರೆಯಿಂದಾದ ಹಾನಿಯು ಅತಿ ಹೆಚ್ಚಿನದು. ಕಾಶಿ ಜಿಲ್ಲೆಯ ನೂರಕ್ಕೂ ಮಿಕ್ಕಿದ ಗ್ರಾಮಗಳು ನೀರೊಳಗಾಗಿ ಪ್ರಚಲಿತ ಜೋಳದ ಬೆಳೆಯೆಲ್ಲಾ ಹಾಳಾಗಿರುವುದೆಂದು ತಿಳಿದು ಬರುತ್ತದೆ. ಭಾಗೀರಥೀ ನೆರೆ ನೀರು ತಿಳಿಸಿ ಅಡಿಯಷ್ಟೂ ಎತ್ತರಕ್ಕೆಯಿದ್ದಿತಲ್ಲದೆ ಮತ್ತೂ ಏರುವ ಭೀತಿದಾಯಕ ಲಕ್ಷಣಗಳಿದ್ದುವು. ಹಿಂಗೆ ಮತ್ತಧರ ಶಾಮ್‌ಗಢದ ವರುಣ ಮತ್ತು ಅಸ್ಸಿ ಹೊಳೆಗಳು ಅತ್ಯುಬ್ಬಿ ಎಲ್ಲಾ ಕಡೆಗಳಲ್ಲೂ ಕಾಶೀ ನಗರವನ್ನು ಆವರಿಸಿ ಸೇತುವೆ, ಕಟ್ಟಡ ನೀರು ರಸ್ತೆಗಳ ಮೇಲೆಲ್ಲಾ ನಾಲ್ಕೈದು ಅಡಿ ಎತ್ತರದ ನೀರು ನಿಲ್ಲಿಸಿದ್ದುವು. ಹಿಂದೂ ವಿಶ್ವವಿದ್ಯಾಲಯ ಕಟ್ಟಡದ ಕೆಲವು ಭಾಗಗಳು ನೀರೊಳಗಾಗಿವೆ. ಸುಮಾರು ೩೭ ವರುಷಗಳಿಗೆ ಮೊದಲೊಮ್ಮೆ ಬಂದಿದ್ದ ಭಾರೀ ನೆರೆಗಿಂತಲೂ ಈ ಬಾರಿಯ ನೆರೆ ದೊಡ್ಡದೆಂದು ತಿಳಿದುಬರುತ್ತದೆ. ಪ್ರಾಣ ಸೊತ್ತುಗಳ ರಕ್ಷಣಾ ವ್ಯವಸ್ಥೆಗಳು, ಅಸಲೇ ದೋಣಿಗಳ ಚಲನವಲನಗಳು ಭರದಿಂದ ನಡೆದಿವೆ ಮನೆ ಆಹಾರ ವ್ಯವಸ್ಥೆಗಳಾಗುತ್ತಿವೆ. ಅಬಡಾಬಾದ್ ನೊದಲಾದ ಕಡೆಗಳಲ್ಲೂ ಅತ್ಯಪೂರ್ವ ನೆರೆಯೇರಿದೆ ಆ ಪ್ರಾಂತ್ಯಕರ ಸ್ಥಳಗಳಿಂದ ಜನರನ್ನೆಲ್ಲಾ ಖಾಲಿ ಮಾಡಿಸಲಾಗುತ್ತಿದೆ

ಅಂತೂ, ಭಾರತವು ಮನುಷ್ಯ ನಿರ್ಮಿತ ಹಾಗೂ ಪ್ರಕೃತಿ ನಿರ್ಮಿತ ಅನ್ನೂ ಪರೀಕ್ಷೆಗಳಿಗೀಗ ಈಡಾಗಿದೆ. ಇವುಗಳನ್ನು ಜಯಶೀಲವಾಗಿ ಕಡೆ ಹಾಯಿಸುವುದನ್ನೇ ಆಧರಿಸಿ ನಿಂತಿದೆ ಭಾರತೀಯರ ಸ್ಥಾನಮಾನ!

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಡಿ.

ನೋಡಿದವರೇ ಪುನಃ ಪುನಃ ನೋಡುತ್ತಿರುವುದರಲ್ಲಿ ಏನಾದರೊಂದು ವಿಶೇಷತೆ ಇರಬೇಕು.

ಖುರ್ಶಿದಳ ಸಂಗೀತವಿರಲೂ ಬಹುದು—ಷೇಕ್ ಮುಖ್ತಾರನ ಸ್ಟೂಲಕಾಯವಾಗಲೂ ಬಹುದು-ಚಿತ್ರದ ಚಾರಿತ್ರಿಕ ಸನ್ನಿವೇಶ ನಿರಲೂ ಬಹುದು.

ಶಹನ್‌ಶಾ ಬಾಬರ್

(ರಣಜಿತ ಚಿತ್ರ)

ತಾರೀಕು 10-9-48ರಿಂದ

The Udipi Bank Limited, Kallianpur.

ದಿ ಉಡುಪಿ ಬ್ಯಾಂಕ್ ಲಿಮಿಟೆಡ್, ಕಲ್ಯಾಣಪುರ.

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮಹಾನುಭಾವರು ಬ್ಯಾಂಕಿನಿಂದ ಪಡೆದ ಈ ಕೆಳಗೆ ಕಾಣಿಸಿದ ಸಾಲಗಳನ್ನು ರಿಜಿಸ್ಟ್ರಿ ನೋಟೀಸು ಕೊಟ್ಟರೂ ಕ್ಲುಪ್ತ ವ್ಯಾದೆಗೆ ಬಡಿ ಅನಂತರ ಜಾರ್ಜುಗಳನ್ನು ಈ ಕೆಳಕಂಡಂತೆ ಕೊಡಬೇಕಾದ ಪ್ರತಿಭೂತಿ ಪತ್ರಗಳನ್ನು ತಾ. 16-9-48ನೇ ಗುರುವಾರ ಮಧ್ಯಾಹ್ನ 12 ಗಂಟೆಗೆ ಅಥವಾ ಬ್ಯಾಂಕಿಗೆ ಯಾಕ್ಕ ತೋರುವ ಇತರ ದಿವಸಗಳಲ್ಲಿ ಪುನಹ ನೋಟೀಸು ಕೊಡದೇನೆ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಸಲ್ಲಿ ಮಾಡಲಾಗುವುದು.

ಲೋನು ನಂಬ್ರ	ಆಸಾಮಿಯ ಹೆಸರು ಮತ್ತು ವಿಳಾಸ	ಅಸಲು ಬಾಕಿ
J. L. No. 114/15	ಕೆ. ಕೇಶವ ಆಚಾರ್ಯ ೧೦ ಬುಡ್ಡ ಆಚಾರ್ಯ, ಭಂಡಾರಿ ಬೀಡು, ಉಡುಪಿ.	ರೂ 20
J L.No 2/48	ಕೆ ರಾಮಯ್ಯ ಶೆಟ್ಟಿ, S/o ಕೆ. ಸುಬ್ಬಣ್ಣ ಶೆಟ್ಟಿ, ಕಲ್ಯಾಣಪುರ.	ರೂ 75 -
J. L. No 4 48	Do	ರೂ. 80/-

ಕಲ್ಯಾಣಪುರ, ತಾ. 7-9-1948

H. D. Malpe. Agent.

ಮಂಗಳೂರು

ಪ್ರಾಯಶ್ಚರ ಮತದಾನಪದ್ಧತಿ- ಮುಂಬರುವ ಚುನಾವಣೆಯ ಪೂರ್ವದಲ್ಲಿ ಪ್ರಾಯಶ್ಚರ ಮತದಾನಪದ್ಧತಿಗನುಸಾರವಾಗಿ ಯಾವುದಿಗಳನ್ನು ಕಯಾಮುಮಾಡಲು ಮದ್ರಾಸು ಸರಕಾರವು ನಿರ್ಧಾರಮಾಡಿದ್ದು, ಜಿಲ್ಲಾ ಕೇಂದ್ರಗಳಿಗೆಲ್ಲ ಸೂಚನೆಗಳುಹಿಸಿದೆ. ಇದಕ್ಕಾಗಿ ಯೋಸ ಶಿಬಂದಿಯು ನೇಮಕನಾಗುವುದು. ಪ್ರತಿಯೊಂದು ತಾಲೂಕಿಗೆ ಒಬ್ಬೊಬ್ಬ ಡಿಪ್ಯುಟ ತಹಶೀಲ್ದಾರರ ಗ್ರೇಡಿನ ಅಧಿಕಾರಿಗಳ ನೇಮಕವಾಗುವುದು. ಈ ಕುರಿತು ಕಾರ್ಯಕ್ರಮವು ಈ ತಿಂಗಳಲ್ಲೇ ಆರಂಭವಾಗುವುದಲ್ಲದೆ ದಿನಾಂಕ 15ರೊಳಗೆ ಪ್ರತಿಮನೆಗೂ ಹೊಸ ನಂಬ್ರ ಹಾಕಲಾಗುವುದು.

ಮುನಿಸಿಪಲ್ ಕೌನ್ಸಿಲು ಸಿಟಿಂಗು—ಕಳದ ತಾ 20ರಲ್ಲು ಸೇರಿದಾಗ ಆದ ನಿರ್ಣಯಗಳು ಹೀಗಿನವೆ. (1) ಸಪ್ಟೆಂಬರ ತಿಂಗಳಲ್ಲಿ ಭಾವಾನಾರಾಯ ಸ್ವಾಂತರಚನಾ ಸಮಿತಿಯು ಮಂಗಳೂರಿಗೆ ಬಂದಾಗ ಕರ್ನಾಟಕ ಪ್ರಾಂತೀಕರಣನೆಯ ವಿಷಯವಾಗಿ ಮನವಿಯೊಂದನ್ನರ್ಪಿಸುವುದು, ಅದಕ್ಕಾಗಿ ಶ್ರೀಗಳಾದ ಎಸ್. ನಿಜಲಿಂಗಪ್ಪ, ಕೆ ಸೂರ್ಯನಾರಾಯಣ ಅಡಿಗ, ಬಿ ರಾಮೋದರ ಬಾಳಿಗ ಮುಂತಾದವರಿರುವ ಒಂದು ಕಮಿಟಿ ರಚಿಸಲ್ಪಟ್ಟಿತು. (2) ಮನೆಬಾಡಿಗೆ ಬತ್ತೆಯು 1 1 1947ರಿಂದಲೇ ಸಿಗುವಕೆ೦ದು ಪ್ರಾಥಮಿಕ ಸಂಘದ ಅಧ್ಯಕ್ಷರ ಕೋರಿಕೆಯನ್ನು ಒಪ್ಪಲಾಯಿತು. (3) ಬಾವಟೆಗುಡ್ಡೆಯ ಪುಸ್ತಕಭಂಡಾರದ ಬದಿಯಲ್ಲಿ ಒಂದು 'ವಿಹಂಗವನ' ನಿರ್ಮಾಣ ಮಾಡಬೇಕೆಂದು ನಿರ್ಣಯಿಸಿ ಅಸ್ಥಿತ್ವಗೊಳಿಸಲ್ಪಟ್ಟರಿಗೆ ಬರೆಯಲು ನಿರ್ಧಾರವಾಯಿತು. (4) ಮಂಗಳೂರಿನ ಹದಿನೈದು ರಸ್ತೆಗಳಿಗೆ ತಾರುಹಾಕಬೇಕೆಂಬ ಪ್ರಯತ್ನವೊಂದು ಆರೋಗ್ಯಪರ್ಯವೇಕ್ಷಣೆಯಿಂದ ಆಗ್ರಹಿಸಲ್ಪಟ್ಟಿದ್ದು ಅದರ ಎಲ್ಲಾ ಅಂದಾಜು ಪಟ್ಟಿಗಳಾಗಿ ಕೊಯಮುತ್ತೂರಿನಿಂದ ಮಂಜೂರುಪಡಿಸಿದರೂ ಮದ್ರಾಸಿನ ಚೀಫ್ ಎಂಜಿನಿಯರರು ಒಂದು ಕಾನೂನು ವಿಧಿನಿಯಮಗಳಿಗೆ ಪೂರ್ಣ ಯೋಜನೆಯನ್ನೇ ಮನ್ನಾ ಮಾಡಿದುದೆಕ್ಕಾಗಿ ನಿಷೇಧ ಸೂಚಿಸುವ ರಚನಾಯಿತಲ್ಲದೆ ಆ ಕುರಿತು ನಗರಸಭಾಧ್ಯಕ್ಷರು ಚೀಫ್ ಎಂಜಿನಿಯರರನ್ನು ಕಂಡು ಮಾತಿನಚೇಕೆಂದೂ ತೀರ್ಮಾನ ಮಾಡಿತು.

ಮಂಗಳೂರು ನಗರದ ಪಂಪ್‌ವೆಲ್ ಕೇಟಿಯಲ್ಲಿ ಒಂದು ರೇಡಿಯೋ ಹೌಸ್, ಒಂದು ವಿಹಾರವನ ಇತ್ಯಾದಿಗಳ ನಿರ್ಮಾಣ ಕೈಂದು ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಎಮ್. ಎ. ಕೃಷ್ಣನಾಯರ್ ಎಂಡ್ ಸನ್ಸ್ ರವರು ಮುನಿಸಿಪಾಲಿಟಿಗೆ ರೂಪಾಯಿ 2000/- ದಾನಮಾಡಿದುದನ್ನು ಸ್ವೀಕರಿಸಿ ಅವರಿಗೆ ಕೃತಜ್ಞತೆ ಸಲ್ಲಿಸಲಾಯಿತು.

ದ. ಕ. ಪ್ರಚಾರ ಸಮಿತಿ ಪ್ರತಿಯೊಬ್ಬ ಸಾರ್ವಜನಿಕರೂ ನೂತಕೊಡುವ ಹಕ್ಕನ್ನು ಬಂದಿರುವುದರಿಂದ ಎಲ್ಲರೂ ಜಾಗರೂಕರಾಗಿ ತಮ್ಮ ತಮ್ಮ ಗ್ರಾಮದವರೆಲ್ಲರನ್ನು ಮತದಾರರ ಪಟ್ಟಿಯಲ್ಲಿ ಕೂಡಿಸುವಂತೆ ಪ್ರಯತ್ನಿಸಬೇಕಾಗಿ ಸಮಿತಿಯ ವಿನಂತಿಇದೆ.

ಅಳಿಯ ಸಂತಾನ ಮಸೂದೆ-ಯು ತಿದ್ದುಪಡಿಯೊಂದಿಗೆ ಜನಮತಕ್ಕಾಗಿ ತಿರುಗಿ ಪ್ರಕಟಿಸಲ್ಪಡುವುದೆಂದು ಸುದ್ದಿ ಇದ್ದರೂ ಈಗ ಹಾಗೆ ಪ್ರಕಟಿಸಲ್ಪಡದೆ ತಿದ್ದುಪಡಿ ಮಸೂದೆಯು ಬೇಗನೆ ಎಸೆಂಬ್ಲಿಯಲ್ಲೇ ಮಂಡಿಸಲ್ಪಡುವುದೆಂದು ತಿಳಿದುಬರುತ್ತದೆ.

ಉಡುಪಿ

ಕನ್ನಡ ಸಾಹಿತ್ಯ ಪರಿಷತ್ತಿನ ಕದಿಯಿಂದ ಜರಗುವ 'ಕಾವ ಮತ್ತು ಜಾಣ' ಪರೀಕ್ಷೆಗಳಿಗೆ ಕೂತುಕೊಳ್ಳಲೇಕ್ಕಿಸುವ ವಿದ್ಯಾರ್ಥಿಗಳ ಶಿಕ್ಷಣ ತರಗತಿಗಳು ಈ ಬಾರಿಯೂ ಸ್ಥಳೀಯ ಕಲಾಮಂದಿರ ಕಾರ್ಯಾಲಯದಲ್ಲಿ ನಡೆಯುವುವು ಆಸಕ್ತಿಯುಳ್ಳ ವಿದ್ಯಾರ್ಥಿಗಳು ಕೂಡಲೇ ಕಲಾಮಂದಿರ ಕಾರ್ಯದರ್ಶಿಯಂರಿಗೆ ಬರಕೊಳ್ಳುವುದು.

ಸ್ವಾತಂತ್ರ್ಯ ಸ್ಮಾರಕ ವಿದ್ಯಾರ್ಥಿ ವೇತನ ರೂಪಾ 30! ಈ ಬಾರಿ ಮುನಿಸಿಪಾಲಿಟಿಯೊಳಗಣ ಹೈಸ್ಕೂಲುಗಳ IV ಫಾರ್ಮ್ ಬಡ ವಿದ್ಯಾರ್ಥಿಗಳಿಗೆ ನೆರವು ಪರೀಕ್ಷೆಯಲ್ಲಿ ಅತ್ಯಧಿಕ ಮಾರ್ಕುಗಳನ್ನು ಪಡೆದ ಬೋರ್ಡು ಹೈಸ್ಕೂಲಿನ ಅಮೀರ್ ಉದ್ದೀನ್ ಎಂಬ ಬಡ ವಿದ್ಯಾರ್ಥಿಗೆ ದೊರಕಿಯುವುದು. ಇನ್ನೊಂದು ವರ್ಷವೂ ರೂಪಾಯಿ ಮೂವತ್ತರಂತೆ ಈತನಿಗೆ ಕೊಡಲಾಗುವುದು.

ಶ್ರೀ ಎ. ಎಸ್. ಪಿ. ಅಯ್ಯರರು ಮದ್ರಾಸು ಹೈಕೋರ್ಟಿನ ಜಡ್ಜರಾಗಿ ನೇಮಿಸಲ್ಪಟ್ಟಿದ್ದಕ್ಕೆ ಅವರನ್ನು ಅಭಿನಂದಿಸುವ ನಿರ್ಣಯವೊಂದು ಇಲ್ಲಿ ತಾ 4ರಲ್ಲು ಜರಗಿದ ಉಡುಪಿ ಬಾರ್ ಎಸೋಸಿಯೇಶನ ಸಭೆಯಲ್ಲಿ ಆಯಿತು. ನಿರ್ಣಯವನ್ನು ಶ್ರೀ ಅಯ್ಯರರಿಗೆ ಕಳುಹಿಸುವರೆ ಕಾರ್ಯದರ್ಶಿಯರಿಗೆ ಅಧಿಕಾರವೀಯಲಾಯಿತು.

ಹಿರಿಯಡ್ಕ ಸಹಿದಿನಾಚರಣೆಯು ಕಳದ ತಾ. 26ರಲ್ಲು ಶ್ರೀ. ಬಾಳ್ಕಟ್ಟಿಶೀಮು ಕೃಷ್ಣಯ್ಯ ಹೆಗ್ಡೆ ಜನರ ಅಧ್ಯಕ್ಷತೆಯಲ್ಲಿ ಆಸ್ಥಾಂಟ್ ಕಮರ್ಶಿಯಲ್ ಟೀಕ್ಸ್ ಆಫೀಸರ್ ಶ್ರೀ ಗಣಪತಿಯನರ ಮತ್ತು ಉಡುಪಿ ಫಿರ್ಕಾ ರೆವಿನ್ಯೂ ಇನ್ಸ್‌ಪೆಕ್ಟರ್ ಶ್ರೀ ತಾಕ್ರಿಗಳವರ ಸಹಕಾರದಿಂದ ಯಶಸ್ವಿಯಾಗಿ ಜರಗಿತು. ಶ್ರೀಗಳಾದ ಮಂಜಯ್ಯ ಸೆಟ್ಟಿ, ಮಹಾಬಲ ಸೆಟ್ಟಿ, ಲಕ್ಷ್ಮಿನಾರಾಯಣ ಆಳ್ವ ಮೊದಲಾದವರ ಕಾಲೋಚಿತ ಭಾಷಣಗಳಾಗಿ ಬಾಲಕಿ ಬಾಲಕರಿಗೆ ಬಹುಮಾನಗಳು ಲಭಿಸಿದವು.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಕೊರಡ್ಕಲ್ ಸ್ಮಾರಕ ಸಮಿತಿ

ಧನಸಹಾಯದ ವಿವರ:-

ಮೊದಲು ಪ್ರಕಟವಾದಂತೆ ಜಮಾ		ರೂ. 305 0 0
ಬೋರ್ಡು ಹೈಸ್ಕೂಲಿನ ಕೆಲವು ಸಹಾನುಭೂತಿಯುಳ್ಳ ಮಹನೀಯರಿಂದ		ರೂ. 21 8 0
ಶ್ರೀ. ಟಿ. ಎನ್., ಕೇಳುನಂ		
ಬಿಯೂರ		ರೂ. 6 0 0
ಡಾ। ಯು. ಕೃಷ್ಣ, ಮುನಿಯಾಲ್		ರೂ. 5 0 0
ಶ್ರೀ. ಬನ್ನಂಜೆ ರಾಮಾಚಾರ್ಯ, ಉಡುಪಿ		ರೂ 5 0 0
ಶ್ರೀ. ಬಿ. ಸುಬ್ಬಯ್ಯ ಹೆಗ್ಡೆ,		ರೂ. 5 0 0
ಶ್ರೀ. ಎಂ. ಎಸ್. ಸಿತಾರಾ, ಮೊಡರ್ನ್ ಸ್ಟುಡಿಯೊ		ರೂ. 5 0 0
ಶ್ರೀ. ಕೆ. ನರಹರಿ ಕಾಮತ್, ಪಡಿಯಲ್ ಸ್ಟುಡಿಯೊ		ರೂ. 5 0 0
ಶ್ರೀ. ಕೆ. ಆರ್. ಬಾಳಿಗ, ಜನರಲ್ ಸ್ಟೋರ್		ರೂ. 5 0 0
ಶ್ರೀ. ಸುದ್ದಮುನಿಂತಾಯ ಶಾನಭೋಜ್, ಉಡುಪಿ		ರೂ. 5 0 0
ಮೆ. ಕೇಟ್ ವೇಲ್ಡ್ ಕಲ್ಲಾಚ್ಚೆ & ಸನ್ಸ್		ರೂ. 5 0 0
ಶ್ರೀ. ದಯಾನಂದ ಶೆಣೈ, ಕಲ್ಲಂಕ		ರೂ. 5 0 0
ಮೆ। ಎಸ್. ಪದ್ಮನಾಭ ಕಾಮತ್ & ಸನ್ಸ್, ಸಿಂದೀಡು		ರೂ 5 0 0
ಶ್ರೀ. ಸಿ. ಪಿ ಕಾಮತ್, ಸಂತೆಕಟ್ಟೆ		ರೂ. 5 0 0
ಶ್ರೀ. ಎಸ್. ಎಸ್. ಕಿಲ್ಲೆ, ಮಂಗಳೂರು		ರೂ 5 0 0
ಶ್ರೀ. ಎ ಜೆ ಆಳ್ವ, ಉಡುಪಿ		ರೂ. 5 0 0
ಶ್ರೀ. ಜಿ. ಎಂ. ಎ. ಕಿಣಿ		ರೂ. 5 0 0
ಶ್ರೀ. ಕೆ. ನಾರಾಯಣ ಶೆಟ್ಟಿ ಸಿರಿಯೂರ		ರೂ. 5 0 0
ಜುಮ್ಲ		407 8 0

ಮುಂದುವರಿಯುವುದು]

ಎಲ್ಲರೂ ಉದಾರ ಸಹಾಯ ಮಾಡಬೇಕಾಗಿ ವಿನಂತಿ

ರೇಶನ್ ಕಾರ್ಡುಗಳೂ

ಕಾರ್ಡುಗಳಿಗೆಹಚ್ಚುವಸ್ಟಿಕ್ಕುಗಳೂ

ದೊರೆಯುತ್ತವೆ

ನವಯುಗ ಪ್ರೆಸ್, ಉಡುಪಿ.



Approved firm by the Govt. of Mysore
Certified by the Agent of the Govt. of Cylone & Indian.

ಅಮೃತಾಂಜನ ಕಲೆವೆದನೆ, ತಿರಿತ ಜೇದನೆ, ಉಂಕಾಳ ಕ್ಕಿಗೆ, ಭೂತ ಜಲ್ಲು ನೆದನೆಗಳಿಗೂ ಎದೆನೋವು, ಧಾಯಗಳು ಬಾಸಿ ಕೊಳ್ಳುತ್ತದು ಜೇಳಿ ವಿಷ ಮುಂತಾದ ಪೀಡೆ ಪಕ್ಷಿಗಳಿಗೂ ಪೆಡಿಸಿ ಪೊಡಲಾದ ಎಲ್ಲಾ ರೋಗಗಳಿಗೂ

RBGD.

ಕಫ, ತುಳಕಿಕ್ಕಿ ಮತ್ತು ಸಣ ನಮ್ಮಿ ನಿಳ್ಳುವ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ-

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ಶೆಟ್ಟಿ.	0	3	0
ಸಂಶಯ ಪಿಶಾಚಿ	(ನಾಟಕ)	ಕ. ಕ. ಶೆಟ್ಟಿ.	0	8	0
ಕುಶಲವ	(,,)	,,	0	6	0
ವೃಭಿಚಾರಿಣಿ ಯಾರು	(,,)	,,	1	0	0
ಹೆಂಡ್ತಿ ಗಂದನಾದರೆ	(ಪ್ರಹಸನ)	,,	0	4	0
ಸನ್ಯಾಸಿಯು ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	0	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಸಣ್ಣ ಕತೆಗಳು)	ಕೊರಡ್ಕಲ್	0	14	0
ಭಾರತೀಯ ಕತೆಗಳು	(,,)	,,	0	14	0
ಮೂರು ಪ್ರಹಸನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್. ಎಲ್. ಸುಬ್ರಹ್ಮಣ್ಯಂ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜ.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾರಾಮಿನಿ	(ಕವಿತೆಗಳು)	ಎಸ್. ವೆಂಕಟರಾಜ	2	0	0
ಸವ್ಯಸಾಗರ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	1	0
ನಗೆನೋಟುಗಳು	(ವಿನೋದ ಕತೆಗಳು)	ಕೆ. ಪಟ್ಟಲ ಶೆಣೈ	0	14	0
ಅನ್ನದೇವರು ಮತ್ತು ಇತರ ಕತೆಗಳು		ಶಯ್ಯಾರ ಕೆಷ್ಣಣ್ಣ ರೈ	1	0	0
ವಿಷ್ಣುವಿನ ದಶಾವತಾರಗಳು	ಅರ್ಥಾತ್ ದಶಾವತಾರಗಳು (ವಿಡಂಬನೆ)	ಎಂ. ವಿ. ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯೆಕ್ಷಗಾನ ನಾಟಕ)	,,	0	8	0
ಸ್ವಾತಂತ್ರ್ಯವೀರ ಸಾವರಕರರು	(ಜೀವನ ಚರಿತ್ರೆ)	ಇಂದಿರಾಬಾಯಿ	1	1	0
ಜೀವನಸಂಗ್ರಾಮ	(ನಾಟಕ)	ಪಿ. ತೀನ ಶೆಟ್ಟಿ	1	8	0
ಜಮೀನ್ದಾರ	(ಕಾದಂಬರಿ)	ಹೊಸಮನೆ ಗುಡ್ಡಪ್ಪ	1	8	0

ಪ್ರತಿಗಳಿಗೆ.—

ನವಭಾರತ ಪುಸ್ತಕ ಭಂಡಾರ, ಉಡುಪಿ ನ. ಕ.

ವಿಶೇಷಸೂಚನೆ

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಮತಿಸ್ರಾವವಾಗುವುದು ಮತ್ತು ಹೆಚ್ಚಾಗಿ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3!-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.8/-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE. P. DS. (N. J.)
Tollygunge CALCUTTA.

ಸ್ವಾಮಿಕಿಸ್ಯರು ಶಕಾಕಂನೆಪಿ, ಮಂಗಳೂರು

ಸಾದರ-ಸ್ವೀಕಾರ

ನವಚೇತನ ರಾ. ವೆ. ಗಾಳಗಳ್ಳಿ, ಇವರ ಸಂಪಾದಕತ್ವದಲ್ಲಿ ಉತ್ತರಕನ್ನಡ ಜಿಲ್ಲೆಯ ಶಿರ್ಶಿಯಿಂದ ಹೊರಡುವ ನವೀನ ವಾರ ಪತ್ರಿಕೆ. ವಾರ್ಷಿಕ ಚಂದಾ ರೂಪಾಯಿ 4-8-0 ಕ್ರೌನ್ ೪ ಸ್ಯಾಜಿನ ಎಂಟು ಪುಟಗಳು. ಉತ್ತಮ ಲೇಖನ, ಕಥೆ, ನಾರಛವಿಸ್ಮಗಳಿಂದ ಕೂಡಿದೆ. ಇದರ ಕೆಲವು ಸಂಚಿಕೆಗಳನ್ನು ನೋಡಿದ್ದೆವು. ಇದರ ಸಂಪಾದಕತ್ವವು ಸಮರ್ಥವಾಗಿ ನಿರ್ವಹಿಸಲ್ಪಡುತ್ತಿದೆ. ಇದರ ಭವಿಷ್ಯತ್ತು ಉಜ್ವಲವಾಗಿರಲೆಂದು ಹಾರೈಸುತ್ತೇವೆ.

ತಾಯಿನಾಡು ಸ್ವಾತಂತ್ರ್ಯೋತ್ಸವ ಸಂಚಿಕೆ-ಬೆಂಗಳೂರಿನಿಂದ ಶ್ರೀ ಸಿ. ರಾಮಯ್ಯನವರ ಸಂಪಾದಕತ್ವದಲ್ಲಿ ಹೊರಡುವ ತಾಯಿನಾಡು ಪತ್ರಿಕೆಯ ಸ್ವಾತಂತ್ರ್ಯೋತ್ಸವ ಸಂಚಿಕೆಯು ಸಂದರ್ಭೋಚಿತವಾದ ಹಲವು ಲೇಖನ ಚಿತ್ರಗಳಿಂದ ಕೂಡಿ ಹೊಂದಿದೆ

ಜನಜೀವನಾಳಿಳಗಾನಿನಿಂದ ಶ್ರೀ ಬ. ಎಳಂಕೋಟೆ ಬಿ. ಎ. ಇವರ ಸಂಪಾದಕತ್ವದಲ್ಲಿ ಪ್ರತಿ ಸೋಮವಾರವೂ ಹೊರಡುವ ಜನತೆಯ ಪಕ್ಷಾತೀತ ನವೀನ ವಾರಪತ್ರಿಕೆ.

ಕ್ರೌನ್ ೪ ಸೈಜಿನ ನಾಲ್ಕು ಪುಟಗಳು. ರಾಜಕೀಯ ಸ್ವಾತಂತ್ರ್ಯ, ಸಾಂಸ್ಕೃತಿಕ ಸೋದರಭಾವ, ಆರ್ಥಿಕ ಸಮಸಮಾನತೆ ಎಂಬ ಉತ್ಕೃಷ್ಟೋದ್ದೇಶವನ್ನಿಟ್ಟುಕೊಂಡ ಈ ಪತ್ರಿಕೆಯು ತನ್ನ ಉದ್ದೇಶಸಾಧನೆಗೆ ಹೊಂದಲೆಂದು ಹಾರೈಕೆ.

ಬೋಧಮತ ಶ್ರೀ ಬಿ. ಬಿ. ಪುರಾಣಿಕ ರ ಸಂಪಾದಕತ್ವದಲ್ಲಿ ಮುಬ್ಬಳ್ಳಿಯಿಂದ ಹದಿನೆಂಟುವರುಷಗಳಿಂದ ಪ್ರಕಟಿಸಲ್ಪಡುತ್ತಿರುವ ವಾರಪತ್ರಿಕೆ. ಅಧುನಿಕ ಆಭಿರುಚಿಗೊಸ್ಕರವಾಗಿ ವಿವಿಧ ವಿಷಯಗಳಿಂದ ಕೂಡಿದ್ದು ಪತ್ರಿಕೆಯು ಯಶಸ್ವಿಯಾಗಿ ನಡೆದುಕೊಂಡು ಬರುತ್ತಿದೆ.

ಸಾಧನೆ--ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಿಂದ ಶ್ರೀ ಗಣಪತಿ ಶಂಕರ ಭಟ್ಟ ಸರ್ವ ಕರ್ಜೀಸ್ಪರ ಇವರ ಸಂಪಾದಕತ್ವದಲ್ಲಿ ಸೂರ್ತನವಾಗಿ ಹೊರಡಲಾರಂಭಿಸಿದ ಪಕ್ಷಪತ್ರಿಕೆ. ಡೆಮ್ಮಿ ೪ ಆಕಾರದ 14 ಪುಟಗಳು. ವಾರ್ಷಿಕ ಚಂದಾ ರೂಪಾಯಿ 3-8-0. ಸರ್ವರೂ ಪ್ರೋತ್ಸಾಹಿಸತಕ್ಕದ್ದು.

ಸ್ವತಂತ್ರ ಕರ್ನಾಟಕ ವಿಶೇಷ ಸಂಚಿಕೆ ಉತ್ಥಾನ ವಿದ್ವಾನ್ ಶ್ರೀ ಬಿ. ಶಿವಮೂರ್ತಿ ಶಾಸ್ತ್ರಿಯವರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ನಡೆದುಕೊಂಡು ಬರುತ್ತಿರುವ ವಾರಪತ್ರಿಕೆಯು ಸ್ವಾತಂತ್ರ್ಯ ವಿಶೇಷ ಸಂಚಿಕೆಯನ್ನು ಅತ್ಯಾದರದಿಂದ ಸ್ವೀಕರಿಸಿದ್ದೇವೆ. ಕ್ರೌನ್ 1/4 ಸೈಜಿನ 40 ಪುಟಗಳ ಈ ಸಂಚಿಕೆಯ ಬೆಲೆ 0-6 0.

ನವೋದಯ ಚಿತ್ರದುರ್ಗದಿಂದ ಶ್ರೀ ಗಳಾದ ಮ. ಶ್ರೀಧರ ಮೂರ್ತಿ ಮತ್ತು ತಾ. ರಾ. ಸು. ಇವರ ಇದರ ಸಂಪಾದಕತ್ವದಲ್ಲಿ ಹೊರಡುತ್ತಿರುವ ವಿನ ಪತ್ರಿಕೆ.

ಕ್ರೌನ್ 1/2 ಸೈಜಿನ 2 ಪುಟಗಳು. ಬೆಲೆ ಅರು ಕಾಸು

ಜೀವನಾಧಾರ ಶ್ರೀ ಆಯುರ್ವೇದ ಶಿರ್ಥ ಜಿ ವಿ. ಸುರಾಣಿಕರ ಸಂಪಾದಕತ್ವದಲ್ಲಿ ಬಿಜಾಪುರದಿಂದ ಆಖಿಲ ಕರ್ನಾಟಕ ಆಯುರ್ವೇದ ಮಾನ್ಯ ವೈದ್ಯ ಸಂಘದ ಆಯುರ್ವೇದವೇ ಮೂಲ ಧ್ಯೇಯವುಳ್ಳ ಮಾಸಪತ್ರಿಕೆ. ಡೆಮ್ಮಿ 1/8 ಸೈಜಿನ 32 ಪುಟಗಳು. ವಾರ್ಷಿಕ ಚಂದಾ ರೂಪಾಯಿ 4 ಆಯುರ್ವೇದ ವೈದ್ಯರಿಗೆ ಅನುಕೂಲವಾದ ಪತ್ರಿಕೆ

ನವಭಾರತ ಶ್ರೀ ಟಿ. ಬಿ. ಕೇಶವ ರಾಯರ ಸಂಪಾದಕತ್ವದಲ್ಲಿ ಪನ್ನೆಂದು ವರುಷಗಳಿಂದ ನಡೆದುಕೊಂಡು ಬರುತ್ತಿರುವ ಬಳ್ಳಾರಿಯ ಉಜ್ವಲ ರಾಷ್ಟ್ರೀಯ ವಾರಪತ್ರಿಕೆಯ ಸ್ವತಂತ್ರ್ಯ ದಿನೋತ್ಸವ ವಿಶೇಷ ಸಂಚಿಕೆಯು ನಮ್ಮ ಹಸ್ತಗತವಾಗಿದೆ. ಸಂದರ್ಭೋಚಿತವಾದ ಲೇಖನಗಳಿಂದ್ದು ಸಂಚಿಕೆಯು ವಾಚನೀಯವಾಗಿದೆ

ಕರ್ನಾಟಕಜಂಗಮ ಮಂಗಳೂರಿನಿಂದ ಶ್ರೀಗಳಾದ ಬಿ. ಡಿ. ಜತ್ತಿ, ಬಿ. ಎ. ಎಲ್ ಎಲ್. ಬಿ. ಮತ್ತು ಪಿ. ಸಿ. ಜಪಳಿಗ ಇವರ ಸಂಪಾದಕತ್ವದಲ್ಲಿ ಹೊರಡುತ್ತಿರುವ ವಾರಪತ್ರಿಕೆ. ವಾರ್ಷಿಕ ಚಂದಾ ರೂ. 5 4-0

ವಾರ್ತಾ ಶ್ರೀ ಬಿ. ಕೆ ವೀರಣ್ಣ ಗೌಡರ ಸಂಪಾದಕತ್ವದಲ್ಲಿ ಬೆಂಗಳೂರಿನಿಂದ ಬಂಭತ್ತುವರ್ಷಗಳಿಂದ ನಡೆದುಕೊಂಡು ಬರುತ್ತಿರುವ ದಿನಪತ್ರಿಕೆ ಕ್ರೌನ್ ಸೈಜಿನ 4 ಪುಟಗಳು ಬೆಲೆ 0-1-0 ಜನಸ್ತೋಮವಾದ ರಾಷ್ಟ್ರೀಯ ದಿನಪತ್ರಿಕೆಯು ಸರ್ವಜನ ಪ್ರೋತ್ಸಾಹಕ್ಕೆ ಆರ್ಹವಾಗಿದೆ.

ಮದ್ರಾಸು ಸಮಾಚಾರದ ಸ್ವಾತಂತ್ರ್ಯ ವಿಶೇಷಾಂಕ ಮದ್ರಾಸು ಸರ್ಕಾರವು ಸುದ್ದಿ ಸಮಾಚಾರ ಪತ್ರಿಕೆಯಿಂದ ಸರ್ವಾನುಭವವನ್ನು ಪಡೆದಿರುವ ಪ್ರಕಟಿಸುತ್ತಿರುವ ಪಕ್ಷಪತ್ರಿಕೆಯು ಆಗೋಸ್ಟು 15ರಂದು ಸ್ವಾತಂತ್ರ್ಯ ವಿಶೇಷಾಂಕವನ್ನು ಹೊರತಂದಿರುವುದು ಸಂದರ್ಭೋಚಿತ. ಡೆಮ್ಮಿ 1 ಆಕಾರದ 48 ಪುಟಗಳು. ಬೆಲೆ 0-2-0 ಮದ್ರಾಸಿನ ಕೆಲವು ಮಂತ್ರಿಗಳ ಸಂದರ್ಭೋಚಿತ ಲೇಖನಗಳಿಂದಲೂ ಮುಂಬಯಿ ಸಂದೇಶಗಳಿಂದಲೂ ಹಲವು ಚಿತ್ರಗಳಿಂದಲೂ ಸಂಚಿಕೆಯು ಸರ್ವಾಂಗ ಸುಂದರವಾಗಿದೆಯು ಸ್ಮರಣಾರ್ಹವಾಗಿದೆಯು.

Indian Information--Independence Number 1948 ಇಂಡಿಯಾ ಸರ್ಕಾರದ ಪ್ರಚಾರ ಖಾತೆಯಿಂದ ಇಂಗ್ಲಿಷಿನಲ್ಲಿ ಪ್ರಕಟವಾಗುತ್ತಿರುವ 'Indian Information' ಇದರ ಸ್ವಾತಂತ್ರ್ಯ ವಿಶೇಷಾಂಕ. ಪಂಡಿತ ನೆಹರು, ಚಕ್ರವರ್ತಿ ರಾಜಗೋಪಾಲಾಚಾರ್ಯ, ಸರ್ದಾರ್ ಪಟೇಲ್ ಮೊದಲಾದವರ ಲೇಖನಗಳಿಂದಲೂ ಸಂದರ್ಭೋಚಿತವಾದ ಇತರ ಹಲವಾರು ಲೇಖನಗಳಿಂದಲೂ ಮುಂಬಾಡರ ಹಾಗೂ ಇತರ ಚಿತ್ರಗಳಿಂದಲೂ ಸಂಚಿಕೆಯು ಅಂತರಂಗ- ಬಹಿರಂಗಗಳೆರಡರಲ್ಲೂ ಸುಂದರವಾಗಿದೆ

Astrological Magazine ಬೆಂಗಳೂರಿನಿಂದ ಶ್ರೀ ಜಿ ವಿ. ರಾಮನ್, ಡಿ. ಎಸ್ಸಿ., ಎಫ್. ಆರ್. ಎ. ಎಸ್, ಎಮ್ ಆರ್ ಎ ಎಸ್ ಇವರ ಸಂಪಾದಕತ್ವದಲ್ಲಿ ಹೊರಡುವ ಜ್ಯೋತಿಷ್ಯ ಇಂಗ್ಲಿಷ್ ಮಾಸಪತ್ರಿಕೆ ಬೆಲೆ ರೂಪಾಯಿ ಒಂದು ಜ್ಯೋತಿಷ್ಯಕ್ಕೆ ಸಂಬಂಧಿಸಿದ ಲೇಖನಗಳು, ಪ್ರಶ್ನೋತ್ತರಗಳನ್ನೊಳಗೊಂಡ ಈ ಪತ್ರಿಕೆಯನ್ನು ಆಸಕ್ತಿಯುಳ್ಳವರಿಗೆ ತುಂಬಾ ಉಪಯುಕ್ತವಾಗಿರುತ್ತದೆಂದು.

ಶ್ರೀಕೃಷ್ಣಸೂಕ್ತಿ ಜಯಂತಿ ವಿಶೇಷಾಂಕ ಶ್ರೀ ಎಸ್. ರಾಜಗೋಪಾಲ ಕೃಷ್ಣರಾಯರ ಸಂಪಾದಕತ್ವದಲ್ಲಿ ಉಡುಪಿಯಿಂದ ಹೊರಡುವ ಶ್ರೀ ಕೃಷ್ಣಸೂಕ್ತಿಯ ಶ್ರೀಕೃಷ್ಣ ಜನ್ಮಾಷ್ಟಮಿ ಕಾಲದಲ್ಲಿ ಹೊರಡಿಸಿದ ಶ್ರೀ ಜಯಂತಿ ವಿಶೇಷಾಂಕ ಇದು ಡಾ. ಎಸ್. ಎಸ್ ಪಡೀಕರ್ ರಾ ಗಿ ಕಂಗಣರಿ, ಎಚ್ ಭೀಮರಾವ್, ಜಿ. ಎಚ್ ಶ್ರೀಧರ, ಕೈಯಾರ ಕಿಂಞಣ್ಣ ರೈ, ಎಮ್. ಗೋಪಾಲ ಕೃಷ್ಣರಾವ್, ಆರ್. ಕಲ್ಯಾಣಮ್ಮ ಮೊದಲಾದವರ ಲೇಖನ, ಕವನ, ಗದ್ಯ, ಕಥೆಗಳಿಂದ ಕೂಡಿರುವ ಸಂಗ್ರಹ್ಯ ಸಂಚಿಕೆ ಡೆಮ್ಮಿ ೪ ಆಕಾರದ ಸುಮಾರು 132 ಪುಟಗಳು. ಬೆಲೆ 0-12-0 ಮಾತ್ರ

ವಿವಿಧ ಪಾತ್ರೆಗಳು

ಯಾವತ್ತೂ ವಿಧವಿಧ ಬೆಳ್ಳಿ, ಕಾಸ್ಯು ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನ್ಯುಗಳೂ ರುಚಿಂ ಆಗಿಯೂ ಬೆಲ್ಲರಿಯಾಗಿಯೂ ದೊರೆಯುತ್ತವೆ

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಜನ ಜನವೂ ಓದತಕ್ಕ ಜನತಾ ಸಾಹಿತ್ಯ!
ಮನೆ ಮನೆಯೂ ಇರತಕ್ಕ ಮನೋರಂಜನ ಸಾಹಿತ್ಯ!

ಸ್ವರಾಜ್ಯ ವಿಜಯದ ಕತೆಯನ್ನು ಎಲ್ಲರಿಗೂ ತಿಳಿಯುವಂತೆ

ಶ್ರೀ ಎಂ ಪಿ ಹೆಗ್ಡೆಯವರು ಬರೆದ

ಸ್ವರಾಜ್ಯ ವಿಜಯ

ಆಟ್ಲೀ, ಕ್ರಿಪ್ಸ್, ಎಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜವಾಹರ್, ನೆಹರು, ಪಟೇಲ್, ಗಾಂಧಿ, ಜಿನ್ನಾ, ಕೃಪಲಾನಿ, ಜೈಪ್ರಕಾಶ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರವರ್ಗ

ಓದಬಲ್ಲವರಂತೂ ಓದಿ ತಿಳಿಯತಕ್ಕ ಕತೆ.
ಓದಲಾರದವರೂ ಓದಿಸಿ ಕೇಳತಕ್ಕ ಕತೆ.

ಬೆಲೆ ಬರೇ 0 8 0

ಹತ್ತಾಣೆ ಸ್ಟಾಂಪು ಕಳಿಸಿದರೆ 1 ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಲಾಗುವುದು.

ಪ್ರತಿಗಳು **ನವಭಾರತ ಪುಸ್ತಕ ಭಂಡಾರ** ಉಡುಪಿ, ಅಥವಾ **ನವಯುಗ ಪ್ರೆಸ್**, ಉಡುಪಿ.

ಇಲ್ಲಿ ದೊರೆಯುತ್ತವೆ.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ಏಕ ಕಾಲಕ್ಕೆ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧ ಎಂದು ಕರೆಯಲ್ಪಡುತ್ತಿದೆ. ನಾನಾ ರೀತಿಯ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಸುವಂತೆ ಪುಷ್ಪ ವನಸ್ಪತಿ ಗಿಡಮೂಲಿಕೆಗಳಿಂದಲೇ ವಾಸ್ತೋಕ್ತ ರೀತಿಯಿಂದ ಹೊಲ್ಲಾಂಡ್ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿರ್ಜೀವತೆ, ಶೀತಜ್ವರ ನುತ್ತು ಮಲೇರಿಯ ಜ್ವರ ನಿವಾರಣೆ ಬಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಕೆಮ್ಮು ಕೋರ, ಬಹುಮೂತ್ರ ಸೇವಿಸುವಿಕೆ, ಇನ್ಫ್ಲುಯೆಂಜ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕೃಮಿ, ನೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವುದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾಗುವುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ! ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ-ಚಂದೆಯಲ್ಲಿ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವುದು. ಹಲ್ಲುನೋವು, ಮಕ್ಕಳಹೊಟ್ಟೆನೋವು, ಕಿವಿಗಳ ಉಪಪ್ರವ ಹೆಂಗಸರ ಪುಟ್ಟುಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವುವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಲ್ಬಣರೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು—ಸೀಸೆ 1ಕ್ಕೆ ರೂ.3-8 0 ವಿ. ಪಿ ಬೇರೆ 1 ಡಜನ್ ಸೀಸೆಗಳಿಗೆ ವಿ. ಪಿ ವೆಚ್ಚಸಹಿತ ರೂ. 42.0.0 ನೆತ್ತರ್ ಬಾಟ್ಲ ಸೀಸೆಗೆ ರೂ. 5-0-0 ವಿ. ಪಿ. ಬೇರೆ ಡಜನ್ ಸೀಸೆಗಳಿಗೆ ರೂ. 60-0-0 ವಿ. ಪಿ. ಬೇರೆ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18. ವಿ.ಪಿ.ಮಾಳ.

ಪ್ರಕಂಪನ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯೆಂದೆಂದು ರಾಮಸಾಡಿಸ ಆಯುರ್ವೇದಿಕ್ ವೈದ್ಯರಾದ ಪಿ. ನೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I. Rly.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಲಕ್ಷಿಸಿ ತಯಾರಿಸಲ್ಪಟ್ಟ ಆಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಕಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೪ ಡಿಸ್ಪೆನ್ಸರಿಬಾಟ್ಲಿಗಳು ಹೆಚ್ಚು ಕಡಿಮೆ ೪ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳು ಒಂದು ಬಾಣಂತಿಗೆಸ್ಕ್ಕೆ ಸಾಕಾಗುವುವು ವಿಶೇಷ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ ತೊಡಿಯಾ ಶಬ್ಬೆಲು, ಪ.ಕ

ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ವ್ಯಸನಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪಾಶ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತನ್ಯೂನ್ಯತೆಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮಾನಿಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ಸಮಾನಿಯ ಔಷಧಗಳೂ ದೊರೆಯುತ್ತವೆ. ಕ್ಯಾರೆ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಹಾಗೆ ಔಷಧಿ ರವಾನಿಸಲಾಗುವುದು. (1) ಉಡುಪಿ ಪಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಭಾರಿಬಾಗ್ ರೋಡ್ ಜಿ. ಐ ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ!

ನಿಮ್ಮ ಸ್ನಾನ, ಊಟ, ಉಪಹಾರ, ವಿಶ್ರಾಂತಿ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಆಡಿಗೆ, ಕಂಡತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara



ಎಲ್ಲ ತರದ ದಂತ ರೋಗಗಳನ್ನು, ನೆಟ್ಟಗೆ ಮುಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ವಿತರಣೆ ಮಾಡುವ ಸಹಕಾರಿ ಸಂಘಗಳು ಮತ್ತು ಆಯಾಯ ಸಂಘಗಳು ನೂಲು ವಿತರಣೆ ಮಾಡತಕ್ಕ ವ್ಯವಹಾರ ಕ್ಷೇತ್ರಗಳು

1. ಉಡುಪಿ ವೀವರ್ಸ್ ಸಹಕಾರಿ ಸಂಘ ಉಡುಪಿ, [ಕುಂದಾಪುರ ತಾಲೂಕು, ಕುಂದಾಪುರದಲ್ಲಿ ಸಂಘದ ಒಂದು ಡಿಪೋವಿನ ಮೂಲಕ]

2. ಉಡುಪಿ ವೀವರ್ಸ್ ಸಹಕಾರಿ ಸಂಘ ಉಡುಪಿ, [ಕಲ್ಯಾಣಪುರ ಹೊಳೆಯ ದಕ್ಷಿಣ ಭಾಗದ ಇಡೀ ಉಡುಪಿ ತಾಲೂಕು]

3. ಬ್ರಹ್ಮಾವರ ವೀವರ್ಸ್ ಸಹಕಾರಿ ಸಂಘ ಸಾಲಿಕೇರಿ [ಕಲ್ಯಾಣಪುರ ಹೊಳೆಯ ಬಡಗು ಭಾಗದ ಉಡುಪಿ ತಾಲೂಕಿನಕ್ಷೇತ್ರ]

4. ಕಾರ್ಕಳ ವೀವರ್ಸ್ ಸಹಕಾರಿ ಸಂಘ, ಕಾರ್ಕಳ [ಕಾರ್ಕಳ ತಾಲೂಕಿನ ತೆಂಕಮಿಜಾರು ಮತ್ತು ಬಡಗ ಮಿಜಾರು ಏನಹ ಇಡೀ ತಾಲೂಕಿನ ಕ್ಷೇತ್ರ]

5. ಪಡುಪಣಂಬೂರು ವೀವರ್ಸ್ ಸಹಕಾರಿ ಸಂಘ, ಪಡುಪಣಂಬೂರು[ಮಂಗಳೂರು ತಾಲೂಕಿನ ಮೂಲ್ಕಿ ರೆವೆನ್ಯೂ ಫಿರ್ಕ]

6. ದಕ್ಷಿಣ ಕನ್ನಡ ನೇಕಾರರ ಸಹಕಾರ ಸಂಘ, ಮಂಗಳೂರು [ಮಂಗಳೂರು ತಾಲೂಕಿನ ಮೂಲ್ಕಿ ರೆವೆನ್ಯೂ ಫಿರ್ಕ, ಮಂಗಳೂರು ಮುನಿಸಿಪಾಲಿಟಿ ಮತ್ತು ಅದರ ಆಸುಪಾಸಿನ ಗ್ರಾಮಗಳ ವಿನಹ ಇಡೀ ತಾಲೂಕಿಗೆ ಮತ್ತು ಕಾರ್ಕಳ ತಾಲೂಕಿನ ಬಡಗ ಮಿಜಾರು ಮತ್ತು ತೆಂಕ ಮಿಜಾರು ಕೂಡಾ]

7. ಮಂಗಳೂರು ಸಹಕಾರ ಸೇಲ್ಸ್ ಎಂ ಪೋರಿಯಮ್ಸ್, ಮಂಗಳೂರು-[ಮಂಗಳೂರು ಮುನಿಸಿಪಾಲಿಟಿ ಮತ್ತು ಅಸುಪಾಸಿನ ಸರಹದ್ದಿಗೆ]

8 ಪೆರ್ಲ ವೀವರ್ಸ್ ಸಹಕಾರಿ ಸಂಘ ಪೆರ್ಲ [ಪುತ್ತೂರು ತಾಲೂಕಿಗೆ ಪುತ್ತೂರಲ್ಲಿ ಸಂಘದ ಒಂದು ಡಿಪೋವಿನ ಮೂಲಕ]

9. ಕಾಸರಗೋಡು ವೀವರ್ಸ್ ಸಹಕಾರಿ ಸಂಘ ಕಾಸರಗೋಡು-[ಕಾಸರಗೋಡು ತಾಲೂಕಿನ ಚಂದ್ರಗಿರಿ ಹೊಳೆಯ ಉತ್ತರ ಭಾಗದ ತಾಲೂಕಿನ ವ್ಯವಹಾರ ಕ್ಷೇತ್ರಕ್ಕೆ]

10 ನೀಲೇಶ್ವರ ವೀವರ್ಸ್ ಸಹಕಾರ ಸಂಘ ನೀಲೇಶ್ವರ [ಚಂದ್ರಗಿರಿ ಹೊಳೆಯ ದಕ್ಷಿಣ ಭಾಗದ ವ್ಯವಹಾರ ಕ್ಷೇತ್ರಕ್ಕೆ- [1] ಉದುಮ [2] ಕಾಂಞಾಗಾಡು [3] ನೀಲೇಶ್ವರ. ಈ ಮೂರು ಡಿಪೋಗಳ ಮೂಲಕ.]

(Sd) Sreenivasa Shanbaugue
ಡಿಪ್ಯುಟಿ ರಿಜಿಸ್ಟ್ರಾರ್.

ಮಂಗಳೂರು, ತಾ. 4-9-1948

ನೋಟೀಸ್

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R.E.P. 324/48. O.S 302/39

ದಿ ಕುಂದಾಪುರ ಬ್ಯಾಂಕ್ ಲಿಮಿಟೆಡ್, ಯಿದ್ರಲಿಕ್ವಿಡೇಟರು K. S ಕಾರಂತ —ಅರ್ಜಿದಾರ

P. ಸೀತಾರಾಮಯ್ಯ [ಪೌತಿ] ಸಹಾ ಎದ್ರಿರು

3 ಪರಮೇಶ್ವರಯ್ಯ 4 ವೆಂಕಟ ಕೃಷ್ಣ —ಸೀತಾರಾಮಯ್ಯನ ಮಕ್ಕಳು

ಉದ್ರಿ ತಾಲ್ಲು ಮಾಡಿಹದವು ಗ್ರಾವನ. ಅರ್ಜಿದಾರನ ಕಡೆಯಿಂದ ಈ ಮೂಲ್ಕ ತಿಳಿಸುವದೇನೆಂದ್ರೆ ಅರ್ಜಿದಾನು ಪಾದಿಯಾಗಿ ಎದ್ರಿರ ಮೇಲೆ ಪಡಿದ ನೋಲ್ಕಂಡ ದಿಕ್ಕಿಯ ಸಮಾಧಾನಾರ್ತವಾಗಿ ನಡಿಸಿದ ಅವ್ಜೂಜಂಯು ಅವ್ಯೆರ ತನ್ನ ಬಗ್ಗೆ ತಾ 23-9-48ಕ್ಕೆ ಇತೋಣಾಗಿಯುದೆ. ಆ ಕಾರಿತು ನಿಮ್ಮುದೇ ನಾದರೂ ಆಕ್ಷೇಪವಿದ್ರೆ ಸದ್ರಿ ದಿನಸಹಲ್ಲಿ 11 ಗಂಟೆಗೆ ಮೇಲ್ಕಂಡ ಕೋರ್ಟಿನ ಮುಂದೆ ಸ್ವತಹಾವ ವಕೀಲರ ದ್ವಾರಾ ಹಾಜರಾಗಿ ಜಾಹೀರು ಜಾಡಿಕೊಳ್ಳುತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರಹಾಜರಿಯಲ್ಲಿ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಅರ್ಜಿದಾರನ ಕಡೆಯಿಂದ ಈ ಮೂಲ್ಕ ತಿಳಿಯ ಪಡಿಸಿಯದೆ.

G. SANJIVA RAO
Pleader for Petetioner.
Kundadapur, Date 4-9-48

ಪ. ಕ. ಜಿಲ್ಲೆಯಲ್ಲಿ ನೆಲಗಡಲೆ ಹಿಂಡಿ ವಿತರಣೆಗಾಗಿ ಸಹಕಾರಿ ಕೇಂದ್ರಗಳು

ಪ. ಕ. ಜಿಲ್ಲೆಯಲ್ಲಿ ನೆಲಗಡಲೆ ಹಿಂಡಿ ವಿತರಣಮಾಡಲು ಮದ್ರಾಸು ಸರಕಾರವು ಪ. ಕ-ಜಿಲ್ಲಾಹೋಲ್‌ಸೇಲ್ಸ್‌ಸ್ಟೋರ್ಸ್‌ಗೆ ಅಧಿಕಾರವನ್ನಿತ್ತಿರುತ್ತದೆ- ಜಿಲ್ಲೆಯಲ್ಲಿ ಈ ಕೆಳಗೆ ಸೂಚಿಸಿದ ಕೇಂದ್ರಗಳಲ್ಲಿ ಹಿಂಡಿ ವಿತರಣೆಯ ಏರ್ಪಾಡು ಮಾಡಲಾಗಿದೆ. ಪ್ರಕೃತ ಕೂಪನುಗಳನ್ನು ತಾಜುರುಮಾಡಿದವರಿಗೆ ಮಾತ್ರ ಕೊಡಲಾಗುವುದು. 160 ಪೌಂಡುಗಳಿರುವ ಒಂದು ಗೋಣಿಯ ಕ್ರಯ ರೂಪ್ಯಾ 10-8-0

1 ಕುಂದಾಪುರ 2 ಉಡುಪಿ 3 ಬ್ರಹ್ಮಾವರ 4 ಕಾರ್ಕಳ 5 ಪೂಮಬಿಬೈ 6 ಆಚೆಕಾರು 7 ಮಂಗಳೂರು 8 ಮೂಲ್ಕಿ 9 ಗುರುಪುರ 10 ಕೋಪೆಕಾರ್ 11 ಫರಂಗಿಪೇಟೆ 12 ಬಂಟ್ವಾಳ 13 ಪುತ್ತೂರು 14 ಬೆಳ್ಳಂಗಡಿ 15 ವಿಟ್ಲ 16 ಸುಳ್ಯ 17 ಬೆಳ್ಳಾರೆ 18 ಉಪ್ಪಿನಂಗಡಿ 19 ಕಾಸರಗೋಡು 20 ಹೊಸದುರ್ಗ 21 ಕುಂಬಳೆ 22 ಮಂಜೇಶ್ವರ.

ಪ ಕ ಜಿಲ್ಲಾ ಆರೋಗ್ಯ ಪರಿಷತ್ತಿನ ಸಿದ್ಧತೆ (ಹೆಲ್ತ್ ಕಾನ್ಫರೆನ್ಸ್)-

ಕಾರ್ಕಳದಲ್ಲಿ ಇದೇ ತಾ 5 ರಲ್ಲು ಸ್ವಾಗತ ಸಮಿತಿಯ ಸಭೆಯು ಜನಾಬ್ ಎಚ್. ಎಸ್. ಹುಸ್ಸೇನ್ ಸಾಹೇಬ್, ಚೆಯರ್‌ಮೆನ್ ಅವರ ಗೈರಹಾಜರಿಯಲ್ಲಿ ಉಪಾಧ್ಯಕ್ಷ ಡಾ। ಟಿ. ಮಾಧವಸ್ಯೆಗಳ ಅಧ್ಯಕ್ಷತೆಯಲ್ಲಿ ಜರಗಿತು. ಆರೋಗ್ಯಪರಿಷತ್ತನ್ನು ನವೆಂಬರ ತಾ 20 ಮತ್ತು 21ರಲ್ಲು ಕರೆಯಬೇಕಾಗಿ ನಿಶ್ಚಯಿಸಲಾಯಿತು. ಪರಿಷತ್ತನ್ನು ತೆರೆಯಲು ಶ್ರೀ ಎ. ಬಿ. ಶೆಟ್ಟಿ, ಪಬ್ಲಿಕ್ ಹೆಲ್ತ್ ಮಂತ್ರಿ ಮದ್ರಾಸು ಅವರನ್ನೂ ಪರಿಷತ್ತಿನ ಅಧ್ಯಕ್ಷತೆ ವಹಿಸಲು ಮದ್ರಾಸಿನ ಮೇಯರ್ ಡಾ। ಕೃಷ್ಣರಾಯರನ್ನೂ, ವಸ್ತುಸ್ರದರ್ಶನ ತೆರೆಯಲು ಮದ್ರಾಸಿನ ಡೈರೆಕ್ಟರ್ ಜಿಲ್ಲಾ ಪಬ್ಲಿಕ್ ಹೆಲ್ತ್ ಆವರನ್ನೂ ಆಮಂತ್ರಿಸಬೇಕಾಗಿ ನಿರ್ಧಾರವಾಯಿತು. ಪರಿಷತ್ತಿನ ಪೂರ್ವಸಿದ್ಧತೆಗಳು ಈಗಾಗಲೇ ಪ್ರಾರಂಭವಾಗಿವೆ.

Notice

In the Court of District Munsif of Puttur.

O. S. No. 227 of 1948.

Ramakrishna Bhat, son of Kilangaru Hosamane Keshava Bhat, Sarpangala, Hosamane, Yenmakaje village, Kasargod [illegible] Plaintiff.

Vs.

Mailappa Gowda, son of Deranna Gowda, Samethadka, Puttur Kasba village, Puttur Taluk Defendant.

Notice is hereby given to the defendant that the suit filed by the plaintiff for recovery of arrears of rent, mesnt profits and possession of suit properties in respect of chalgeni lease executed by the defendant in favour of the plaintiff and dated 18-6-1947 stands posted to 23-9-1948 for your appearance. you are hereby informed that in case you have any contest you must file your written statement on the said date before the [illegible] at 11 A.M. Failing which the above suit will be decided in your absence and the suit will be decreed in your absence.

(By Order of Court)

Puttur 27-8-1948 } (Sd) P. Krishna Bhat
Vakil for plff.

ದಕ್ಷಿಣ ಕನ್ನಡ

ಹಂಗಾರಕಟ್ಟೆ ಸ್ಥಳೀಯ ಜೈಹಿಂದ್ ಪುಸ್ತಕ ಭಂಡಾರದ ದ್ವಿತೀಯ ವಾರ್ಷಿಕೋತ್ಸವವು ತಾ 30-8-48ರಲ್ಲಿ ಶ್ರೀ ಮಾಂಡೇಶ್ವರ ಅಣ್ಣಪ್ಪ ಹಡ್ಡರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ತೋನ್ಸೆ ಜನಾರ್ದನ ಕಿಣಿಯರು ಗತವರ್ಷದ ವರದಿಯನ್ನೊಳಗೊಂಡ ವರು. ಸಭಿಕರಲ್ಲಿ ಶ್ರೀಗಳಾದ ಮಂಜುನಾಥ ರಾವ್, ಬಿ. ರಾಮಣ್ಣ ಶೆಟ್ಟಿ, ಜಯರಾಮ ಪಡಿಯಾರರು ವಾಸಾಚಲಯದ ಶ್ರೇಯೋಭಿವೃದ್ಧಿಯಾಗುವಂತೆ ಮಾತನಾಡಿದರು. ನೂಲುವ ಪುತ್ತು, ಇತರ ಚಟುವಟಿಕೆಗಳ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನಕೊಟ್ಟನಂತರ ಕಾರ್ಯದರ್ಶಿಗಳು ಸಂಸ್ಥೆಯ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿ ಸಾಹಾಜನರ ಪ್ರೋತ್ಸಾಹನವನ್ನು ಕೋರಿದರು. ಅಧ್ಯಕ್ಷರು ಸ್ಥಳೀಯ ಪುಸ್ತಕಾಲಯಗಳ ಉಪಯೋಗವನ್ನು ವಿವರಿಸಿ ಭಾಷಣವಿತ್ತರು. ಧನ್ಯವಾದ ರಂಪ್ಪಗೌತ್ತಿ ಸಿಹಿ ತಿಂದಿ ವಿತರಣೆಯೊಂದಿಗೆ ಸಭಾರ್ಯವಾಯಿತು.

ಪಡುಪಣಂಬೂರು ತಾ. 1-9-1948ರಲ್ಲು ಪಡುಪಣಂಬೂರು ಟೋರ್ಡಾ ಹಾಯರ್ ಎಲಿಮೆಂಟರಿ ಶಾಲಾ ಹೊಸಕಟ್ಟಡವ ಶಂಕುಸ್ಥಾಪನಾ ಕಾರ್ಯವು ಶ್ರೀ. ಯಜ್. ಸೋಮಸುಂದರನವರಿಂದ ನೆರವೇರಿಸಲ್ಪಟ್ಟಿತು ಕಟ್ಟಡದ ಅಗತ್ಯದ ಕುರಿತು ಶ್ರೀಗಳಾದ ಚೆನ್ನಪ್ಪಾಯ ಸಾವಂತರು, ಯಂ. ಕೆ. ಯೆಲ್ಲಪ್ಪ, ಕೃಷಿಶಿರೋಮಣಿ ರಂಭಾಮಲ್ಲಯ್ಯರ ಭಾಷಣಗಳಾದ ಬಳಿಕ ಅಧ್ಯಕ್ಷರು ತನ್ನ ಭಾಷಣದಲ್ಲಿ ಕಟ್ಟಡದ ಅವಶ್ಯಕತೆಯಾಗಿ ತಾವೂ ಉತ್ತೇಜನಕೊಡುವುದು ಮಾತ್ರವಲ್ಲದೆ ಊರವರೂ ಸಹಕರಿಸಿ ಈ ಕಾರ್ಯಭಾಗವನ್ನು ಯಶಸ್ವಿಗೊಳಿಸಬೇಕಾಗಿಯೂ ಅದಕ್ಕಾಗಿ ತಾವಾ ಕಟ್ಟಡಕ್ಕೆ ತಾವು ಉಚಿತವಾಗಿ ಹಂಚನ್ನು ಕೊಡುವುದಾಗಿಯೂ ನಾಗ್ದಾನವಿತ್ತರು. ಬಳಿಕ ಶುಭಮುಹೂರ್ತದಲ್ಲಿ ಶಂಕುಸ್ಥಾಪನಾ ಕಾರ್ಯವು ಜರಗಿತು. ಸಭಾರ್ತ್ಯದಲ್ಲಿ ಅಧ್ಯಕ್ಷರಿಗೂ ಬೇರೆ ಮಹಾನುಭಾವರಿಗೂ ಶ್ರೀ. ಬಿ. ಆರ್. ನಾಯ್ಕರು ಧನ್ಯವಾದ ಅರ್ಪಣೆಗೈದರು.

ಗಾಣಿಗ ಯಾನೆ ಸಫಲಿಗ ಸಂಘ, ಮುಂಬಾಯಿ——ಸಂ 1948-49ನೇ ಇಸ್ವಿಗೆ ಚುನಾಯಿಸಲ್ಪಟ್ಟ ಅಧಿಕಾರಿಗಳು ಶ್ರೀ ಗಳಾದ ಕೆ. ವಿ. ಮಿಜಾರ [ಅಧ್ಯಕ್ಷರು] ಜಿ. ಬಿ. ಬಂಗೇರ [ಉಪ ಅಧ್ಯಕ್ಷರು] ಸುಲ್ಲು ನರಸಿಂಗರಾವ್ [ಪ್ರಧಾನ ಕಾರ್ಯದರ್ಶಿಯರು], ಡಿ. ಸಿ. ಬಂಗೇರ ನುತ್ತು, ಬಿ. ತಿಮ್ಮಪ್ಪ [ಜೊ. ಕಾರ್ಯದರ್ಶಿಯರು], ಆರ್. ಸಿ. ಪುತ್ರಣ್ಣ ಮತ್ತು ಪಿ. ಎಸ್. ಮೊದಲಾದ [ಜೊ. ಕೋಶಾಧಿಕಾರಿಯರು].

ಭಾರದ್ವಾಜರ

ಇಂಗ್ಲಿಷ್-ಇಂಗ್ಲಿಷ್-ಕನ್ನಡ

ಡಿಕ್ಷ್ನರಿ

ಉತ್ತಮ ವೃತಿ ರೂ. 6—0—0

ಸಾಧಾರಣ ಪ್ರತಿ ರೂ. 4—8—0

ಅಂಚೆಖರ್ಚು ಪ್ರತ್ಯೇಕ

ನವಭಾರತ ಬುಕ್ ಡಿಪೊ

: ಉಡುಪಿ :

ಬೆಳಗಾವಿ-ಬೆಳಗಾವಿಯ ಲಾ ಕಾಲೇಜಿನ ಕರ್ನಾಟಕ ಸಂಘದ ಉದ್ಘಾಟನಾ ಸಮಾರಂಭವು ಇತ್ತೀಚೆಗೆಬಹು ವಿಜೃಂಭಣೆಯಿಂದ ಜರಗಿತು. ಕನ್ನಡ ಹಿರಿಯಂತ ಸಾಹಿತಿಗಳೂ ಲೇಖಿಕರೂ ಆದ ಶ್ರೀ. ವಿ. ಆರ್. ಜೋಗಿದಾರ ಎಮ್. ಎ., (ಆಕ್ಸ್‌ಫರ್ಡ್) ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಕರ್ನಾಟಕ ಪ್ರಾಂತರಚನೆಯಲ್ಲಿ ಕನ್ನಡಿಗರ ಕರ್ತವ್ಯವೇನಿದೆ ಎಂದು ವಿವರಿಸಿದರು. ಕಾರ್ಯದರ್ಶಿಗಳಾದ ಶ್ರೀ ಮಹಾಬಲ ಭಂಡಾರಿ ಬಿ. ಎ., ಅವರು [ಧನ್ಯವಾದವಿತ್ತರು. ಕರ್ನಾಟಕ ಏಕೀಕರಣಕ್ಕಾಗಿ ಎಲ್ಲರೂ ಪಡಿಯಬೇಕೆಂದು ಕೇಳಿಕೊಂಡರು.

ನೋಟೀಸು

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 157 48

ಸಂತಾನ ಲಕ್ಷ್ಮಾಧಿ. ಗುಜಾರಿ ಲಕ್ಷ್ಮಿ ದೇವಮಗ, ಉಡುಪಿ ತಾಲ್ಲೂ ಪದುತೋನ್ಸೆ ಗ್ರಾಮದ ಪಡುಕುದ್ರೆಬೆಟ್ಟುವಾಸಿಯವರು—ವಾದಿ.

ಮತ್ತು

I. ಗಾಣಿಗ ಸಂಜ, ಗಾಣಿಗ ವೆಂಕ್ಯಯ್ಯ ಸಮಗ, ಉಡುಪಿ ತಾಲ್ಲೂ ಪದುತೋನ್ಸೆ ಗ್ರಾಮದವರು 2, ನ್ಯೆಗೋರಿ ಪೆರ್ನಾಂಡ್ಸಿ, ತೋರ್ಸೆ ಪೆರ್ನಾಂಡ್ಸಿರ ಮಗ, ಕುಂದಾಪುರ ತಾಲ್ಲೂ ಕೋಟೇಶ್ವರದವರಿಬ್ಬರವರು.

ಸದ್ರಿ 2ನೇ ಪ್ರತಿವಾದಿರಿಗೆ.

ಮೇಲ್ಕಂಡ 1ನೇ ಪ್ರತಿವಾದಿಯು ವಾದಿಯ ಪೂರ್ವಾಧಿಕಾರಿಯಾದ ಅಂಗಾಜಿ ರಾಯರಿಗೆ ತಾ 22-3-1929ರಲ್ಲು ಬ. ನಿಶಿ ಬರೆಕೊಟ್ಟ ಮೂಲಗೇಣಿ ಮುದ್ರುನುದಿಗ ಕಾರಣಾದ ನಾವಾ ಆಸ್ತಿಗಳನ್ನು ಕ್ರಯಕ್ಕೆ ಪಡದು ಮೂಲಗೇಣಿ ಹಕ್ಕಿನಿಂದ 2ನೇ ಪ್ರತಿವಾದಿಯು ಅನುಭವಿಸಿಬರುತ್ತಿದ್ದೂ, ಕಳದ ವೈಯ ನಾತ್ತು ಸರ್ವಜೀತು ಈ ಎರಡು ಸಂದರ್ಭಗಳ ಬಾಬ್ತು ಬರತಕ್ಕ ನೇಜಾಬಾಕಿಗಳನ್ನು ಬಡ್ತಿ ಖನೇತ ಆಗುವ ಪಮೇಜು ರೂ 68-1-0ನ್ನು ಮೂಲಗೇಣಿ ಎದ್ರುನುದಿ ಶರ್ತಕ್ಕನುಸಾರವಾಗಿ ಕೇಳಿಮಾಡಿದ ವಾವೆಯು ತಾ 30-9-48ಕ್ಕೆ ತಪ್ಪಿಗೆ ಇಟ್ಟಿರುವಕಾರಣ ಸದ್ರಿದಿವ್ಸ ಹಗಲು ಘಂಟೆ 11ಕ್ಕೆ ಸದ್ರಿ ಕೋರ್ಟಿಮುಂದೆ ಹಾಜರಾಗಬೇಕಾಗಿಯೂ, ತಪ್ಪಿದ್ರೆ ನಿಮ್ಮನ್ನು ಶಿಪ್ಸಾಮುಡಿ ಸದ್ರಿ ವಾವೆಯನ್ನು ಏಕ ಪಕ್ಷವಾಗಿ ತೀರ್ಮಾನವಾಡಲಾವೀತೆಂತ ಈ ಮೂಲಕ ತಿಳಿಸೋಣಾಗುತ್ತದೆ.

K. Vittal Nayak
Vakil for Plff.

Udipi 1—9—48

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 527/1946 ನೇ ಲ. ಪ್ರ. ಪ್ರ. 30/1948

ವಾದಿ ಕೆ. ವಾಸುನ ಶೆಣೈ ಆಜೀವರ ಪ್ರತಿವಾದಿರು ರಾಘವೇಂದ್ರ ಎಡ್ತಿರು 2 ಶ್ರೀ ವೇಂಕಟರಮಣ ಕಲ್ಲುಮ್ಮ ಆಡೂರು ಸುಬ್ಬಾಯರ ಹೆಂಡ್ತಿ, ಕಾಸರಗೋಡುತಾಲೂಕು ಆಡೂರುಗ್ರಾಮ.

5 ಪನ್ನಾವತಿ ಅನ್ನು, ರಾಮ ಶ್ಯಾನುಭೋಗರ ವಿಧವೆ. ಕುಂದಾಪುರ ತಾಲ್ಲೂ ಕೆರ್ಗಾಲ್ ಗ್ರಾಮ

ವಾದಿಯು ಸದ್ರಿ O. S. 527/46ನೇ ದಿಕ್ಕಿಮೇಲೆ ಸದ್ರಿ ಅಮ್ಲ ಜಾರಿನಡಿಸಿ ಎದ್ರಿದ ಬಾಬ್ತು ಸ್ವಾಧೀನವನ್ನು ಜಪ್ತು ನೂಡ್ತಿರುವ ದ್ರಿಂದ ಆ ಕುರಿತು ನಿಮ್ಮದೇನಾದ್ರು ಆಕ್ಷೇಪ ಇದ್ದಲ್ಲಿ ತಾ 20-9-1948ನೇ ದಿವ್ಸ ಹಗಲು 11 ಗಂಟೆಗೆ ಮೇಲ್ಕೋರ್ಟಿನಲ್ಲಿರುವ ಹಾಜರಾಗಿ ಜಾಹೀರಾಗಿತಿಳಿಕೊಳ್ಳತಕ್ಕದ್ದು ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾವೀತು ಎಂಬಸಂಗ್ತಿ ಯಿನ್ನೂಲ್ಲಿ ತಿಳಿಸೋಣಾಗುತ್ತದೆ.

K. Raghunath Shenai
Pleader for Petitioner

Coundapoor 4—9—48

— ಮಕ್ಕಳನ್ನು ಪಡೆಯುವುದು ಶಾಕು —

ಅರಕ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕ್ಕೆಗೂ, ಪ್ರದರರೋಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೇಲಾದು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿಸೀರಿನಲ್ಲಿ ಸೇವಿಸಬೇಕು.

ಟಿಪ್ಪಣಿ:—ಹರವಿಸಲ್ಲ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ್ ಚಾರ್ಜು ೧೫ ಆಣೆ.

ಮಾಲಕರು:—ಶಾಲಪ್ಪಾ ಭಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾಸಲ್ಸ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮೂರ್ತಿ ಡಾವಣಗೆರೆ ಡಾವಣಗೆರೆ:—ಡಾವಣಗೆರೆ ಪ್ರೆಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ್, ಹೊಸಪೇಟೆ. ಬ್ಯಾಡಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಳಿಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ. ಉಷ್ಣದಿಂದ ಜೀರು ಇಳಿದಿದ್ದರೆ, ಉಷ್ಣಚಿ ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅಪ್ತಾಂಗ ವಾಯು ನಿಡಂನೋಯು.ವದು ಸ್ತ್ರೀಯರ ಬಿಳಿಂಪ್ರ ಸೆರಗು ಹೋಗುತಿದ್ದರೆ. ಕೊಲಿಕುಟ್ಟು ಗರ್ಭಿಯಿಂದ ಗರ್ಭಕೋಶ ನಾರಹೊಂಪಿದ್ದರೆ, ಇದ್ದಕ್ಕಾಗಿ ಭೇದಿಯಾಗದಿದ್ದರೆ. ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ಸಮ್ಮು ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಎರಡನೆ ದಿವಸ ಮಾತ್ರ ೪ ಗುಂಜಿನೆ ಸಂಜೆ ಎರಡು ಸಾರಿ ತಕ್ಕೊಳ್ಳಬೇಕ. ೪ ಗುಂಜಿ ದರ ದಿವಸ ಬೆಳಿಗ್ಗೆ ಒಂಜಿ ಸಾರಿ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹೆಸರುಬ್ಬು, ಕುಂಬಳಕಾಯಿ, ಬಳ್ಳಿಣ್ಣಿ ಬಿಡಬೇಕು.

ಬಾಟ್ಲಿ ಒಕ್ಕೆ ರೂ. ಪೋಸ್ಟ ಚಾರ್ಜ ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹ.ಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ. ಧಾರವಾಡ:-ಧಾರವಾಡ ಫಾರ್ಮಸಿ. ಡಾವಣಗೇರಿ: ಡಾವಣಗೆರಿ ವೈಸ್. ನಂದುಬೇಶ್ವರ ವರ್ಕಿ ಡಾವಣಗೆರಿ.

ಪ್ರತ್ಯೇಕವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ.

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಲಿಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಪುಣ್ಣು ಹಾಲಾಗುತ್ತೆ.

ಹೆರಿಗೆ ಆದಮೇಲೆ ಹುಸಜಾನ್ಯನೇಗಳು ಸ್ತ್ರೀಯರಿಕ್ಕುವುದಿದೆ ಕಾರಣವಿಲ್ಲ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಅಕ್ಕಿಕ್ಕಿಕಾಯಿಲೆಗಳುಪ್ಪತ್ತಿಗೆ ಕಾರಣವಾಗಿ ಯಾ ಅದರ ಅಂತರ ಲೋಪ ಇತ್ತೆ ಬರುತ್ತವೆ. ಸಂತೋಷದಾಯಕ ಸಮಯದಲ್ಲಿ ಸಂಕಟ ಬಾಧೆಗಳು ಉಂಟಾಗುವುದು ಸ್ತ್ರೀಯರಿಗೆ ಬಹಳ ದುಃಖಕರವಾದ ವಿಷಯ. ಕೈಕಾಲುಗಳ ಬೀಗು, ಬಾಗಿ, ಆಯಾಸ, ಬಾಣಂತಿಯರಿಗೆ ಹೆರಿಗೆಯ ನಂತರ ಸಲವು ತಿಂಗಳುಗಳು ಹಾಸಿಗೆಯಲ್ಲಿಯೆ ಮಲಗಿರಬೇಕಾಗುತ್ತದೆ. ಆ ಸಮಯದಲ್ಲಿ ಸ್ತ್ರೀಯರು ಎಲ್ಲಾ ಆವಶ್ಯಕ ಪಥ್ಯಕ್ಕೆ ಆದರೆ ಬಾಣಂತಿತನದಲ್ಲಿ ಹಾನಿಕಾರಿ ಸ್ತ್ರೀಯರು ಪ್ರಾಣ ಉಳಿಸಿದ ಪ್ರಸಿದ್ಧ ವೈದ್ಯ ಪ್ರಸೂತಾಮೃತದ ಬಾಟ್ಲಿ ಮತ್ತು ೧ ಡಜನು ಪ್ರಸೂತ ಕಲ್ಯಾಣ ವಟಿ ಇವುಗಳನ್ನ ನಮಂದಿಗಾ ತಂದಿಟ್ಟು ಸರಿಯಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯ ಆಪತ್ತು-ವಿಪತ್ತುಗಳಿಗೆ ಒಂಜಿಬೇಕಾಗಿಲ್ಲ

ಕವಸೀಯ ಕೇಂದ್ರಕಲಾಪ, ತಂಪು ಸುವಾಸನೆಯುಳ್ಳ ಹೊಂದಲು ಬಣ್ಣ ಗುಣಯುಕ್ತ ಆಯುರ್ವೇದೀಕ ತೈಲ ಯೂ ಹಿನಸುಗಾರ

ತೈಲಗಳ್ಳಾಗಾರ್ಯ ಉತ್ಪಾದಕರು.

Swadeshi Oushadhi Bhandara, (ಆಯುರ್ವೇದ)

Kunjal P. O Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. H. Kelu Nambiar,
Vaidya.

(ನಿನ್ನೆ ಪುಟದಿಂದ)

ರಬಾದಿಗೆ ಶಸ್ತ್ರಾಸ್ತ್ರಗಳನ್ನು ಸಾಗಿಸುತ್ತಿರುವರೆಂಬುದು ಸರಕಾರಕ್ಕೆ ಗೊತ್ತೆ?

ಪಠೇಲ್–ಸರಕಾರಕ್ಕೆದು ಗೊತ್ತಾಗಿಲ್ಲ. ಸರಕಾರವೇ ಕುರಿತು ಸಾಧ್ಯವಿರುವ ಎಲ್ಲಾ ವಿಚಾರಣೆಗಳನ್ನೂ ರಾಯಭಾರಿಗಳಿಂದ ಮಾಡಿಸಿದೆ. ಯಾವುದೊಂದು ಸರಕಾರವೂ ಈ ಕೆಲಸವನ್ನು ಮಾಡುತ್ತಿಲ್ಲವೆಂಬ ಸುದ್ದಿ ಬಂದಿದೆ.

ಸಿದ್ಧ್ವ–ಸಿಡ್ನೆಕಾಟನನು ಹೈದರಾಬಾದಿನ ಭಂಡಾರಗಳನ್ನು ಕರಾಚಿಗೆ ಮತ್ತಲ್ಲಿಂದ ಬೇರೆಕಡೆಗೆ ಸಾಗಿಸಿದ್ದನೆಂಬುದು ಡಿಸ್ಪ್ಯುಟ ಪ್ರಧಾನಿಗಳಿಗೆ ಗೊತ್ತೆ?

ಪಠೇಲ್–ಸಿಡ್ನೆಕಾಟನನು ಹೈದರಾಬಾದಿನಿಂದ ಮರಳುವಾಗ ಏನನ್ನು ಸಾಗಿಸಿದ್ದನೆಂಬುದನ್ನು ತಿಳಿಯುವದು ನನಗೆ ಕಷ್ಟ. ಆದರೆ ಕಾಟನ್ ಹೈದರಾಬಾದಿಗೇನನ್ನು ಸಾಗಿಸಿದ್ದನೆಂಬುದು ನಮಗೆಲ್ಲರಿಗೂ ತಿಳಿದಿದೆ. ಅತ ಶಸ್ತ್ರಾಸ್ತ್ರಗಳನ್ನೂ ಮದ್ದು ಗುಂಡುಗಳನ್ನೂ ಅಲ್ಲಿಗೆ ಸಾಗಿಸಿದ್ದ.

ಸಿಧ್ವ–ಭಾರತ ಪಲಯದ ಮೇಲಿಂದ ವಿಮಾನಗಳು ಹೈದರಾಬಾದಿಗೆ ಯಾವಾಗ ಹಾರುತ್ತವೆ ಎಂಬುದನ್ನು ತಿಳಿಯಲಾಗುವ ವಿಧಾನವೇನಾದರೂ ಸರಕಾರದೊಡ ನಿದೆಯೊ?

ಪಠೇಲ್–ಆ ಗುಟ್ಟನ್ನು ಜಹಿರಂಗೆ ಪಡಿಸುವದು ಹಿತಕರವಲ್ಲ.

ಸಿಧ್ವ–ಹೈದರಾಬಾದಿಗೆ ಶಸ್ತ್ರಾಸ್ತ್ರ ಸರಬರಾಯಿ ಮಾಡುವ ವಿಮಾನಗಳ ಸಂಬಂಧವಾಗಿ ಸರಕಾರಕ್ಕೆ ಗೊತ್ತಿರುವಷ್ಟಾದರೂ ಎಷ್ಟು? ಸರಕಾರಕ್ಕೆ ದೊರೆತ ಸುದ್ದಿಯ ಪ್ರಕಾರ ಈ ಹಾರಾಟದ ಮೂಲ ಸ್ಥಳವು ಕರಾಚಿಯಾಗಿದೆಯೆ?

ಪಠೇಲ್–ನಿಜಕ್ಕೂ ಕರಾಚಿಯಿಂದಲೇ. ಯಾವ ದೇಶದಿಂದ ಮತ್ತು ಯಾರಿಂದ ಈ ಶಸ್ತ್ರಾಸ್ತ್ರಗಳು ಬರುತ್ತಿವೆ ಎಂಬುದು ಸರಕಾರಕ್ಕೆ ಗೊತ್ತಿಲ್ಲವಾದರೂ ಆವೆಲ್ಲವೂ ಕರಾಚಿಗೆ ಬರುತ್ತಿವೆ, ಎಂದು ಗೊತ್ತಿದೆ. ಕರಾಚಿಯಿಂದ ಅವು ಹೈದರಾಬಾದಿಗೆ ಹಾರುತ್ತಿವೆ ಎಂಬುದೂ ಸರಕಾರಕ್ಕೆ ಗೊತ್ತಿದೆ.

ಸಿಧ್ವ–ಈ ಕುರಿತು ಪಾಕಿಸ್ತಾನ್ ಸರಕಾರಕ್ಕೇನಾನ್ನಾದರೂ ತಿಳಿಸಲಾಗಿದೆಯೆ?

ಪಠೇಲ್–ಮಾನ್ಯ ಸದಸ್ಯರಿಗೆ ತಿಳಿದಿರುವಂತೆ ಪಾಕಿಸ್ತಾನ್ ಸರಕಾರಕ್ಕೆ ಹೀಗೆ ತಿಳಿಸುವುದರಿಂದ ಹೆಚ್ಚಿನ ಪ್ರಯೋಜನವೇನೂ ಆಗುವಂತಿಲ್ಲ.

ಸಿಧ್ವ–ಕರಾಚಿಯಿಂದ ಹೈದರಾಬಾದಿಗೆ ನಡೆಯುವ ಈ ಶಸ್ತ್ರಾಸ್ತ್ರ ಹಾರಾಟಗಳನ್ನು ತಡೆಗಟ್ಟುವದಕ್ಕಾಗಿ ಸರಕಾರವು ಯಾವ ಕಾರ್ಯ ಕೈಕೊಂಡಿದೆ?

ಪಠೇಲ್–ಅದನ್ನು ಜಹಿರಂಗಪಡಿಸಕೂಡದು.

ಯಜ್ಞ. ವಿ. ಕಾಮತ್–ಮಧ್ಯ ಪ್ರಾಂತ್ಯ ಮತ್ತು ಬರಾರ್ ಗಡಿವಲಯಗಳಲ್ಲಿ ನಡೆದ ಕಳ್ಳುಕಾರ್ ಧಾಳಿಗಳೆಷ್ಟು? ಮತ್ತೆವು ಗಳಂದಾಗಿರುವ ಹಾನಿಗಳೆಷ್ಟು?

ಪಠೇಲ್–ಕಳ್ಳುಕಾರ್ ಮತ್ತು ಇತರ ಕಿಲಾಡಿಗಳ 105 ಧಾಳಿಗಳಾಗಿದ್ದುವು. ತತ್ಪರಿಣಾಮವಾಗಿ 28 ಜನರು ಸತ್ತು 29 ಮಂದಿ ಜಖಂಗೊಂಡಿದ್ದರು. ಸುಮಾರು 1 ಲಕ್ಷ ರೂಪಾಯಿಗಳನ್ನು ಸೊತ್ತು ಹಾನಿಯಾಗಿರಬೇಕೆಂದು ಅಂದಾಜು ಕಟ್ಟಲಾಗಿದೆ.

ಕಾಮತ್–ಈ ಸಂಬಂಧವಾಗಿ ಎಷ್ಟು ಕಳ್ಳುಕಾರರನ್ನು ದಸ್ತಗಿರಿ ಮಾಡಲಾಗಿದೆ.

ಪಠೇಲ್–ನಾನು ನಿಮಗಿಲ್ಲಿ ಸಂಖ್ಯೆ ಹೇಳಲಾರೆ. ಆದರೆ ಅವರನ್ನು 'ಸ್ನೇಹಿತ'ರಂತೇನೂ ಸ್ವಾಗತಿಸಿಕೊಳ್ಳಲಿಲ್ಲವೆಂದು ಈ ಸಭೆಗೆ ತಿಳಿಸಬಲ್ಲೆ. ಹೆಚ್ಚು ಕಡಿಮೆ ಈ ಧಾಳಿಗಳು ನಡೆದ ಪ್ರತಿಯೊಂದು ಸಂದರ್ಭದಲ್ಲೂ ಕಳ್ಳುಕಾರರನ್ನು ಅವರ ಕ್ಷೇತ್ರದೊಳಗೆಡೆಗೆ ಅಟ್ಟಿಕೊಂಡು ಹೋಗಲಾಗಿತ್ತು.

ಮರ್ಮಾನೋಡಿ ಮಾತು

ಮಹಾ ವೀರತ್ಯಾಗಿ–ಈ ಕಳ್ಳುಕಾರರು ಹೈದರಾಬಾದ್ ಸರಕಾರದಿಂದಲೇ ಪ್ರೇರಣೆ ಹೊಡೆದವರೆಂಬುದು ನಿಜವಲ್ಲವೆ?

ಪಠೇಲ್–ಕಳ್ಳುಕಾರರಿಗೆ ಪ್ರೇರಣೆಯಾಗಿ ಹೈದರಾಬಾದ್ ಸರಕಾರವಿದೆಯೋ, ಹೈದರಾಬಾದ್ ಸರಕಾರಕ್ಕೆ ಪ್ರೇರಣೆಯೇ ಕಳ್ಳುಕಾರರೋ ಎಂಬುದನ್ನು ಹೇಳುವದು ಅತ್ಯಂತ ಕಷ್ಟ (ನಗು).

ಕಾಮತ್–ಈಗ ಮಳೆಗಾಲವಾದ್ದರಿಂದ ಹೈದರಾಬಾದ್ ಗಡಿಯಾ ಸೈನಿಕರಿಗೆ ದೊಡ್ಡ ಸೇನಾಮೋಟಾರುಗಳನ್ನೇ ಒದಗಿಸಬೇಕಲ್ಲದೆ ಸಣ್ಣ ಬಾಡಿಗೆಗಳಿಂದ ಪ್ರಯೋಜನವಿಲ್ಲವೆಂಬುದು ಸರಕಾರಕ್ಕೆ ಗೊತ್ತಿದೆಯೆ?

ಪಠೇಲ್–ಅವಂಗೀಗ ಕೊಟ್ಟಿರುವುದೂ ಇದನ್ನೇ. ನಾವವರಿಗೆ "ಟಾಂಗಾ"ಗಳನ್ನೇನೂ ಕಳುಹಿಸಿಲ್ಲ (ನಗು). ಸದಸ್ಯರ ಈ ನವ ಶೋಧನೆಯ ಕಡೆಗೆ ನಾನು ರಕ್ಷಣಾ ಖಾತೆಯ ಲಕ್ಷ್ಯವನ್ನೆಳೆಯುವವನಿದ್ದೇನೆ (ವಿಶೇಷ ನಗು).

ಫೇಕ್ನಗಿ ಮಸೂದೆಯು ಪಾರ್ಲಿಮೆಂಟಿನಲ್ಲಿ ಚರ್ಚಿಸಲ್ಪಡುತ್ತಿದ್ದಾಗ ಆ ಮಸೂದೆಯಲ್ಲಿದ್ದ "ಯಾವುದೇ ವಾರ" ಎಂಬುದರ ಬದಲಿಗೆ "ಯಾವುದಾದರೊಂದು ವಾರ"ಎಂದು ತಿದ್ದಿಬರೆಯಬೇಕೆಂದು ಶ್ರೀ ಎಚ್. ವಿ. ಕಾಮತರು ತನ್ನ ಭಾಷಣ ಪ್ರೌಢಿಮೆ ಪ್ರದರ್ಶನದ ಒಂದು ತಿದ್ದುಪಡಿ ತಂದು "ಈ ಸಭೆಯಲ್ಲಿರುವ ಭಾಷಾ ಪಂಡಿತರಾದರೂ ಹೀಗಲ್ಲವೆನ್ನುತ್ತಾರಾದರೆ ನಾನು ನನ್ನ ಕಿದ್ದುಪಡಿ ಸೂಚನೆಯನ್ನು ಹಿಂದೆಗೆದುಕೊಳ್ಳಲು ಸಿದ್ಧನಿದ್ದೇನೆ" ಎಂದರು. ಇದಕ್ಕುತ್ತರವಾಗಿ ಕೂಲಿಗಾರ ಮಂತ್ರಿ ಜಗಜ್ಜೀವನರಾಮ್–"ನನ್ನ ಇಂಗ್ಲಿಷ್ ಭಾಷಾಜ್ಞಾನವು ಶ್ರೀ ಕಾಮತರ ಜ್ಞಾನಕ್ಕಿಂತ ಕಡಿಮೆಯೆಂದು. (ನಗು) ಆದರೆ ಇಲ್ಲಿಯ ಮೂಲ ವಾಕ್ಯವೇ ಸರಿಯೆಂಬುದರ ಸಮರ್ಥನೆಗಾಗಿ ಶ್ರೀ ಕಾಮತರು 'ಟಿಕ್ಸ್‌ನೆರ್ಸ್ ಡಿಕ್ಷ್ನೆರಿ' ನೋಡಲಿ ಎನ್ನುತ್ತೇನೆ." ●

ಕಾಮತ್–ಟಿಕ್ಸ್‌ನೆರ್ಸ್ ಡಿಕ್ಷ್ನೆರಿಯ ಯೋಗ್ಯತೆಯನ್ನು ಪ್ರತ್ಯಕ್ಷಿಸುವ ಧೈರ್ಯ ನನಗಿಲ್ಲ. ಆದ್ದರಿಂದ ನಾನೆ. ಯಾವ ಕಿದ್ದುಪಡಿಯನ್ನೂ ಮುಂದೊಡ್ಡುವದಿಲ್ಲ (ವಿಶೇಷ ನಗು).

ಮತ್ತೊಮ್ಮೆ ರೈಲ್ವೇ ಹಿಡಾಟದಲ್ಲಿರುವ ಕೊರತೆಗಳ ಕುರಿತು ಪ್ರಶ್ನೋತ್ತರ ನಡೆಯುತಿತ್ತು; ಆಗ ಒಂದು ಚುಚ್ಚುನೆಗೆಯ ಸಂಭಾಷಣೆ ನಡೆಯಿತು.

ಪಂಡಿತ ಬಾಲಕೃಷ್ಣ ಶರ್ಮ–ಥಿಲ್ಲಿಯ ವಾರಪತ್ರಿಕೆಯೊಂದರಲ್ಲಿ ಪ್ರಕಟವಾಗಿದ್ದ ಪ್ರಣಯ ರೋಗಪೀಡಿತ ಮನುಷ್ಯನೊಬ್ಬನು, 'ಗ್ರೈಂಡ್ ಟ್ರಂಕ್ ಎಕ್ಸ್‌ಪ್ರೆಸ್'ನಡಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ರೈಲ್ವೇ ಕಂಬಿಯನ್ನೇಲೆ ಮಲಗಿದ್ದರೂ ಆ ಎಕ್ಸ್‌ಪ್ರೆಸ್ ಅವನ ಮೇಲಿಂದ ಹಾದುಹೋಗದೆ ಆತ ಉಪವಾಸಬಿದ್ದು ಸಾಯಬೇಕಾಯಿತು, ಎಂಬ ಸುದ್ದಿಯು ಮಂತ್ರಿಗಳ ಗಮನಕ್ಕೆ ಬಂದಿದೆಯೆ?(ನಗು)

ವಾಹನಮಂತ್ರಿ ಡಾ! ಮಥಾಯಿ:—ತಾನು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದು ಬಗೆದ ಆ ಮನುಷ್ಯ ತನ್ನ ಆ ಉದ್ದೇಶ ಸಾಧನೆಗಾಗಿ ತೀರಾ ಹಾಳು ಬಂದಿಯನ್ನೇ ಆರಿಸಿದ (ವಿಶೇಷ ನಗು).

ಆತುರ—ಆಗ್ರಹಗಳು

ಹೈದರಾಬಾದ್ ಸಂಬಂಧದ ಕುರಿತು ಆತುರದ ಪ್ರಶ್ನೆಗಳು ಮತ್ತು ಸಾಕಷ್ಟು ಸ್ಪಷ್ಟವಾದ ಉತ್ತರಗಳು ಆಗೋಸ್ತಿನ ಅಂತ್ಯದಿನ ಪಾರ್ಲಿಮೆಂಟಿನಲ್ಲಿ ಕೇಳಿಬಂದುವು.

ವಿಲ್ಸನ್–ಸಂಯುಕ್ತರಾಷ್ಟ್ರ ಸಂಘದ ಮುಂದೆ ಪೂರಸ್ಪೊಪ್ಪಿಸುವ ಸನ್ನ ಇಚ್ಛೆಯನ್ನು ನಿಜಾಮರು ಭಾರತಸರಕಾರಕ್ಕೆ ತಿಳಿಸಿರುವದು ನಿಜವೆ?

ಪಠೇಲ್–ಹೌದು.

ವಿಲ್ಸನ್–1947ನೇ ನವಂಬರ್‌ನಲ್ಲಿ ಭಾರತ ಮತ್ತು ಹೈದರಾಬಾದ್ ಸರಕಾರಗಳೊಳಗಾಗಿರುವ ಯಥಾಸ್ಥಿತಿ ಒಪ್ಪಂದದ ರ್ತಕಗಳಿಗೆ ಇದು ವಿರುದ್ಧವಾಗಿದೆಯೆ?

ಪಠೇಲ್–ಹೈದರಾಬಾದಿನ ಪ್ರಧಾನ ಮಂತ್ರಿಯ ಕಾಗದಕ್ಕೆ ಭಾರತ ಸರಕಾರವು ಕೊಟ್ಟದ್ದ–ಆಗೋಸ್ತು 29ರಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದ–ಉತ್ತರದ ಕಡೆಗೆ ಮಾನ್ಯ ಸದಸ್ಯರ ಲಕ್ಷ್ಯವನ್ನೆಳೆಯುತ್ತೇನೆ. ಯಥಾಸ್ಥಿತಿ ಒಪ್ಪಂದದಲ್ಲಾಗಿದ್ದಹ ಲವು ದ್ರೋಹಗಳಲ್ಲಿ ಇದೂ ಒಂದು ಎಂಬುದು ನಿಸ್ಸಂದೇಹ.

ಎನ್. ಜಿ. ರಂಗ–ಭಾರತ ಮತ್ತು ಹೈದರಾಬಾದಿನ ಸಂಬಂಧ ಸ್ಥಿತಿ ಮತ್ತು ಹೈದರಾಬಾದಿನ ದಬ್ಬಾಳಿಕೆಗಂಜಿ ಓಡಿಬರುತ್ತಿರುವ ಜನ ಪ್ರವಾಹದ ರಕ್ಷಣೆಗಾಗಿ ಸರಕಾರವು ಕೈಕೊಂಡಿರುವ ವ್ಯವಸ್ಥೆಗಳ ಕುರಿತು ಸರಕಾರವು ಲದನ್ನು ಬೇಗನೇ ಈ ಸಭೆಯ ಮುಂದೊಂದು ಹೇಳಿಕೆ ಕೊಡುವದೆ?

ಪಠೇಲ್–ಈ ವಿಷಯವು ಸರಕಾರದ ಗಾಢ ಲಕ್ಷ್ಯಕ್ಕೊಳಗಾಗಿದೆ.

ವಿಲ್ಸನ್–ಗವರ್ನರ್ ಜನರಲರು ನಿಜಾಮರಿಗೆ ಸಂಗತಿನಿರೂಪಣಾ ಪತ್ರವೊಂದನ್ನು ಬರೆದಿರುವಬೆಂಬುದು ಸತ್ಯವೆ? ಹಾಗಿದ್ದರೆ ಆ ಪತ್ರದಲ್ಲಡ್ಡುಬೇನು?

ಪಠೇಲ್–ಹಿಸ್ ಮೆಜೆಸ್ಟೀ ರಾಜರ ಪತ್ರದೊಂದಿಗೆ ಸನ್ನ ಮುನ್ನುಡಿ ಪತ್ರವೊಂದನ್ನಷ್ಟೇ ಗವರ್ನರ್ ಜನರಲ್ ಬರೆದಿದ್ದುದು. ಆದರೆ ಅದನ್ನೊಂದು ನಿರೂಪಣಾ ಪತ್ರವೆನ್ನಲಾಗುವದಿಲ್ಲ. ಬೇರಾವ ಪತ್ರವ್ಯವಹಾರವೂ ನಡೆದುದಿಲ್ಲ.

ಕೆ. ಹನುಮಂತಯ್ಯ–ಜಾಗತಿಕ ಸಂಘಕ್ಕೆ ಹೋಗುವ ಹೈದರಾಬಾದ್ ಪ್ರತಿನಿಧಿಗಳಿಗೆ ಭಾರತ ಸರಕಾರವು ಅನುಕೂಲತೆ ಗಳನ್ನೊದಗಿಸಿಕೊಡುವದೆ?

ಪಠೇಲ್—ನಾವಾ ಅನುಕೂಲತೆಗಳನ್ನು ಕೊಡುತ್ತೇವೆ. ಅಮೇರಿಕಕ್ಕೆ ಹೋಗಲಿಚ್ಛಿಸುವ ಜವಾಬ್ದಾರರುಗಳಿಗೆ ಕೊಡಾ ಅನುಕೂಲತೆಗಳನ್ನು ಒದಗಿಸಿಕೊಡುವುದಕ್ಕೆ ನಾವು ತಯಾರಾದ್ದೇವೆ (ನಗು).

ಡಾ! ಪಂಜಾಬ್‌ರಾವ್ ದೇಶಮುಖ್–ಕಳದ ಕೆಲವು ದಿನಗಳಲ್ಲಿ ಬಿರಾರಿನ ಮೇಲೂ ಕೆಲವು ವಿಮಾನಗಳು ಹಾರಾಡಿವೆ ಎಂಬ ಸುದ್ದಿಯೊಂದನ್ನು ಸರಕಾರವು ನೋಡಿರುವುದೆ?

ಪಠೇಲ್–ಹಾರುವ ವಿಮಾನಗಳಿಗೆ ತೀರಾ ಕಷ್ಟದ ಸ್ಥಳವೆಂದರೆ ಬಿರಾರು. ಆದಲ್ಲಿ ಯೋ ಹದ್ದು–ಹಾರಾಟವಾಗಿರಬೇಕು. (ನಗು)

ಮಹಾವೀರತ್ಯಾಗಿ–ಹೈದರಾಬಾದಿನಿಂದ ಸರ್ವಸಾಮಾನ್ಯವಾಗಿರುವ ಯಥಾಸ್ಥಿತಿ ಒಪ್ಪಂದದ ದ್ರೋಹಗಳಿಗಾಗಿ ಸರಕಾರ ವೇನಾದರೂ ಪ್ರತ್ಯಕ್ಷ ಕಾರ್ಯಾಚರಣೆ ಕೈಗೊಳ್ಳಲಿದೆಯೋ? ಇದ್ದರೆ ಏನದು?

ಪಠೇಲ್–ಒಂದೊಂದೇ ದ್ರೋಹಕ್ಕಾಗಿ ಪ್ರಾಯಶ್ಚಿತ್ತ ಮಾಡಲು ಹೋಗದೆ ಒಟ್ಟು ಎಲ್ಲಾ ದ್ರೋಹಗಳಿಗಾಗಿ ಕಾರ್ಯಾಚರಣೆಯನ್ನು ಸರಕಾರವು ಕೈಕೊಳ್ಳಲು ಬಗೆದಿದೆ.

ಪಟ್ಟಾಭಿ ಸೀತಾರಾಮಯ್ಯ–ಯಥಾಸ್ಥಿತಿ ಒಪ್ಪಂದವು ನವಂಬರ್ ತಾ 29ಕ್ಕೆ ಮುಗಿಯುವದೆಂದು ಎಲ್ಲರಿಗೂ ಗೊತ್ತಿರುವಾಗ ಇದುವರೆಗದರಲ್ಲಿ ನಡೆದಿರುವ ದ್ರೋಹಗಳ ಒಟ್ಟು ಮೊತ್ತವೆಂಬುದು ಇಡೀ ಒಪ್ಪಂದವನ್ನೇ ರದ್ದು ಪಡಿಸುವಷ್ಟು ಹೆಚ್ಚಿದೆಯೇ ಎಂಬುದನ್ನು ನಾನು ತಿಳಿಯಲಿಚ್ಛಿಸುತ್ತೇನೆ.

ಪಠೇಲ್–ದ್ರೋಹಗಳು ವಿಚಾರಣೀಯ ಪರಿಮಾಣದಲ್ಲಿ ನಡೆದಿವೆ. ಇವೆಲ್ಲಾ ದ್ರೋಹಗಳಿಗಾಗಿ ಕೈಕೊಳ್ಳಬೇಕಾದ ಕಾರ್ಯಾಚರಣೆಯು ಈಗ ಸರಕಾರದ ಪ್ರತ್ಯಕ್ಷ ಪರ್ಯಾಲೋಚನೆಯಲ್ಲಿದೆ.

ಪಂಡಿತ ಕುಂಜ್ರು–ಈ ಪ್ರತ್ಯಕ್ಷ ಪರ್ಯಾಲೋಚನೆಯನ್ನು ಸರಕಾರವು ಎಷ್ಟು ಸಮಯದ ವರೆಗೆ ನಡೆಸುತ್ತಾ ಹೋಗುವದು?

ಪಠೇಲ್–ಅಗತ್ಯವಿರುವ ವರೆಗೆ.

ಕುಂಜ್ರು—ಸರಕಾರವು ಈ ವಿಷಯದ ವಿಶೇಷ ಪ್ರತ್ಯಕ್ಷ ಪರ್ಯಾಲೋಚನೆಯನ್ನು ಎಷ್ಟುಕಾಲದಿಂದ ನಡೆಸುತ್ತಾ ಬಂದಿದೆ?

ಪಠೇಲ್–ಈ ಪರ್ಯಾಲೋಚನೆಯು ಕಾರ್ಯೋದ್ಯುಕ್ತತೆಯ ಕುರಿತೇ ಮಾನ್ಯ ಸದಸ್ಯರು ಪ್ರಶ್ನಿಸುವುದಾದರೆ ಆದು ಇತ್ತೀಚಿಗೆ.

ಕುಂಜ್ರು—ಈ ಪ್ರತ್ಯಕ್ಷಪರ್ಯಾಲೋಚನೆಯು ಕಾರ್ಯರೂಪಕ್ಕೆ ಬರುವುದು ಯಾವಾಗ?

ಪಠೇಲ್–ಮಾನ್ಯ ಸದಸ್ಯರಿಗೆ ಸಹನೆಯು ಬರುವಾಗುವ ಮೊದಲೇ (ನಗು)

ಯಜ್ಞ. ವಿ. ಕಾಮತ್–ಸಹನೆಯು ಇಷ್ಟರಲ್ಲೇ ಸಂಪೂರ್ಣ ಬರುವಾಗಿಹೋಗಿದೆ ಎಂಬುದು ನಿಮಗೆ ಗೊತ್ತೆ?

ಪಠೇಲ್–ಇಲ್ಲ ಸ್ವಾಮೀ.

ದೇಶಬಂಧು ಗುಪ್ತ–ಹೈದರಾಬಾದಿಗೆ ಪಾಕಿಸ್ತಾನ ಮತ್ತು ಇತರ ಪರದೇಶಗಳಿಂದ ಶಸ್ತ್ರಾಸ್ತ್ರ ಹಾಗೂ ಮದ್ದು ಗುಂಡುಗಳ ಸರಬರಾಯಿಯಾಗುವುದಿಲ್ಲವೆಂಬ ಕುರಿತು ಸರಕಾರವು ಸಮಾಧಾನಗೊಂಡಿದೆಯೆ?

ಪಠೇಲ್–ಹೈದರಾಬಾದ್ ಸರಕಾರವೇ ಇದನ್ನು ತಿಳಿದಿರಬೇಕು ಹೊರತು ನಾವಲ್ಲ. (ನಗು)

ಹೈದರಾಬಾದ್ ಮತ್ತು ಕಾಶ್ಮೀರದ ಪ್ರಶ್ನೆಗಳ ಸವಿವರ ಚರ್ಚೆಗಾಗಿ ಪಾರ್ಲಿಮೆಂಟ್ ಅವಕಾಶ ದೊರಕಿಸಬೇಕೆಂದು ಕುಂಜ್ರು, ಕಾಮತ್, ಹನುಮಂತಯ್ಯ ಮೊದಲಾದವರು ಅಧ್ಯಕ್ಷಪೀಠ ಸ್ಥಾಪಕ ಶ್ಯಾಮ್ ಮುಖರ್ಜಿಯವರನ್ನು ಮತ್ತು ಸಭೆ ಅಪೇಕ್ಷಿಸಿದಲ್ಲಿ ಪಾಗೆ ಮಾಡಬಹುದಾದರೂ ಪ್ರಕೃತ ಸರಕಾರವು ಜಹಿರಂಗಪಡಿಸಲಾದ ಕೆಲವು ವಿಷಯಗಳು ಅದರಲ್ಲಿವೆ ಎಂದು ಪ್ರಧಾನಿ ನೆಹರುಗಳು ತರ್ಕಿಸಿದರು.

EDITED, PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA.

Regd. No. M. 3615 ಎರಡಾಣೆ 16-9-1948

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 1-8-0
6 ತಿಂಗಳಿಗೆ ರೂ. 2-8-0
ಬಿಡಿ ಪ್ರತಿಗೆ ರೂ. 0-1-0
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-1-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯ | NAVAYUGA WEEKLY, UDIPI, S. K. | Vol 29
ವಾರ ೩ | FOUNDER: Hon'ble Mr. A. B SHETTY, Health Minister, Govt. of Madras | No. 3

ಹೈದರಾಬಾದ್ ಧಾಳಿ ಡಂಗುರ!

ಹೈದರಾಬಾದಿನ ಮೇಲೆ ಭಾರತದ ಸೇನಾ ಧಾಳಿ ಖಂಡಿತವೆಂಬುದು ಕೆಲಕಾಲದಿಂದ ನಿಸ್ಸಂಶಯವಾಗುತ್ತಾ ಬಂದಿದ್ದು, ಈಗ ಅದು ಸ್ಪಷ್ಟವಾಗಿ ಜಾಹೀರಾಗಿದೆ. ಅದೂ ಇಷ್ಟರೊಳಗೆ ಆಥವಾ ಇನ್ನು ಕೆಲವೇ ದಿನಗಳೊಳಗೆ ಆರಂಭವಾಗುವದು.

ತಾ. 7-9-48ರಲ್ಲಿ ಪಂಡಿತ ನೆಹರುಗಳು ಭಾರತದ ಪಾರ್ಲಿಮೆಂಟಿನಲ್ಲಿತ್ತ ಹೇಳಿಕೆಯ ನಂತರ ಹೈದರಾಬಾದಿನ 'ಪೊಡಾಪೊಡಿ ಕಾರ್ಯಾಚರಣೆ'ಯ ಕಾಲಾರಂಭವಾಗಿದೆ. ಈಗ ಇಕ್ಕಡೆಗಳಿಂದಲೂ ಕೇಳಿ ಬರುತ್ತಿರುವದು ಸಮರದುಂದುಭಿಯೇ.

ಇದೇ ಇಸವಿಯ ಫೆಬ್ರವರಿಯ ವರೆಗೂ ಇದ್ದ ಯಥಾಸ್ಥಿತಿ ಒಪ್ಪಂದದ ಶರ್ತಕ್ಕನುಸಾರವಾಗಿ ಹಿಂದೀ ಸರಕಾರವು ಹಿಂದೆಗೆದುಕೊಂಡಿದ್ದ ತನ್ನ ಸೇನೆಯನ್ನು ಪುನಃ ಹೈದರಾಬಾದಿನ ಸೆಕುಂದರಾಬಾದಿಗೆ ಹೊಗಿಸುವ ಮೂಲಕ ಈ ನಾಮೂಹಿಕ ಘರ್ಷಣೆಯಾರಂಭವಲಿದೆ; ನಿಜಾಮ್ ಸರಕಾರವು ಅದನ್ನು ಗಡಿಯಲ್ಲೇ ಪ್ರತಿಭಟಿಸುವದು ಖಂಡಿತವೆಂಬ ನಿರೀಕ್ಷೆಯಿರುವುದರಿಂದ ಭೀಕರ ಹೋರಾಟ, ರಕ್ತಪಾತ, ನಾಶ, ಆಂದೋಲನಗಳೇಳುವದು ಖಂಡಿತ.

ಈ ಸಂಬಂಧವಾದ ವಾದ-ಪ್ರತಿವಾದ ಮತ್ತು ನ್ಯಾಯಾನ್ಯಾಯಗಳ ತುಲನೆಯನ್ನು ಸಾರ್ವಜನಿಕರು ಮಾಡಿಕೊಳ್ಳುವಯಾಗೂ ತ್ರಿಕರಣಪೂರ್ವಕವಾಗಿ ಕಾರ್ಯಪ್ರವೃತ್ತರಾಗುವ ಅತ್ಯಾವಶ್ಯಕತೆಯಿರುವುದರಿಂದ ಮುಖ್ಯಾಂಶಗಳನ್ನು ಇಲ್ಲಿ ಕೊಡಲಾಗಿದೆ.

ಮೈಸೂರಿನಲ್ಲಿ ಬ್ರಿಟಿಷ್ ಆಡಳಿತೆಯಾರಭ್ಯ ಕೇಂದ್ರ ಸರಕಾರದ ಸೇನೆಗಳನ್ನು ನಿಲ್ಲಿಸುವ ಕ್ಷೇತ್ರವಾಗಿ ಬೆಂಗಳೂರು ಹೇಗಿತ್ತೋ ಹೈದರಾಬಾದಿನಲ್ಲಿ ಅದೇ ರೀತಿ ಸೆಕುಂದರಾಬಾದ್ ಇವೆ. ಬ್ರಿಟಿಷರಿರುವಾಗಲೂ ಆ ಮೇಲೆ ಕಳದ ಫೆಬ್ರವರಿಯವರೆಗೂ ಭಾರತ ಸರಕಾರದ ಸೇನೆಗಳು ಅಲ್ಲಿದ್ದುವು. ಸೆಕುಂದರಾಬಾದು ಸಂಸ್ಥಾನದ ಒಳಗಡೆಯಲ್ಲ, ರಾಜಧಾನಿ ಹೈದರಾಬಾದಿಗೆ ಕೆಲವೇ ಮೈಲುಗಳ ದೂರದಲ್ಲಿ, ಇರುವ ಆ ಸಂಸ್ಥಾನದ ದ್ವಿತೀಯ ಮುಖ್ಯ ನಗರ.

ಕಳದ ನವಂಬರಿನಲ್ಲಿ ಭಾರತ ಮತ್ತು ಹೈದರಾಬಾದುಗಳೊಳಗೆ ಒಂದು ವರುಷದವರೆಗೆ ಯಥಾಸ್ಥಿತಿ ಒಪ್ಪಂದವಾಗಿತ್ತು. ಆ ಒಪ್ಪಂದದಲ್ಲಿ ಸೆಕುಂದರಾಬಾದಿನಲ್ಲಿರುವ ಭಾರತ ಸೇನೆಯನ್ನು ಹಂತೆಗೆದುಕೊಳ್ಳಬೇಕೆಂಬ ಶರ್ತವಿದ್ದಿತು. ಪ್ರಸ್ತುತ ಒಪ್ಪಂದಕ್ಕೆ ಇನ್ನೊಂದು ಪೂರ್ವ ಸೇನಿಕೆಯಾಗಬಹುದಂಬ ಆತಂಕದಿಂದಲೂ ಯಥಾಸ್ಥಿತಿ ಒಪ್ಪಂದದ ಇತರ ಶರ್ತಗಳನ್ನು ನಿಜಾಮ್ ಸರಕಾರವು ನಿಷ್ಠೆಯಿಂದ ಪಾಲಿಸಿದರೆ, ಮತ್ತಲ್ಲಿ ತನ್ನ ಸೇನೆಯನ್ನಿಡುವ ಅಗತ್ಯವಿಲ್ಲವೆಂದರಿಂದಲೂ, ತನ್ನ ಸದ್ಭಾವನೆಯನ್ನು ಮುಂದಾಗಿ ಪ್ರದರ್ಶಿಸಿಯೂದರೂ ನಿಜಾಮ್ ಸರಕಾರದ ಹೃದಯ ಪರಿವರ್ತನೆಗೊಳಿಸಬೇಕೆಂಬ ಬಯಕೆಯಿಂದಲೂ ಆ ಶರ್ತ ಪ್ರಕಾರ ಭಾರತ ಸರಕಾರವು ತನ್ನ ಸೇನೆಗಳನ್ನು ಸೆಕುಂದರಾಬಾದಿನಿಂದ ಹಿಂದೆಗೆದುಕೊಳ್ಳಪತ್ತಿ ಕಳೆದ ಫೆಬ್ರವರಿಯಲ್ಲಿ ಸಂಪೂರ್ಣವಾಗಿ ಖಾಲಿ ಮಾಡಿತು. ಕೇಂದ್ರ ಸರಕಾರದ ಹಕ್ಕನ್ನದವಾಗಿದ್ದ ಬೆಂಗಳೂರಿನ ಸೆಕುಂದರಾಬಾದಿನಿಂದ ಸೇನೆ ಹಿಂದೆಗೆದುಕೊಂಡುದು ಪ್ರಮಾದವಾಗಿತು ಎಂದು ಭಾರತ ಸರಕಾರ ಕಡೆತ್ತಾಪ ಪಡುವಂತಾಯಿತು.

ಸೆಕುಂದರಾಬಾದಿನಲ್ಲಿ ಹಿಂದೀ ಸೇನೆ ಮಿಡುತಿದ್ದಲ್ಲಿ ಸಂಸ್ಥಾನದೊಳಗೆ ಅತ್ಯಾಚಾರಗಳು ನಡೆಯುತ್ತಾ ಹೋದಂತೆ ವಸ್ತು ನಿಜಾಮ್ ಸೇನಾ ಸಂಖ್ಯೆ ಬೆಳೆಯುತ್ತಾ ಬಂದಂತೆ, ಅಲ್ಲಿಯ ಹಿಂದೀ ಸೇನಾ ಸಂಖ್ಯೆಯನ್ನೂ ಬೆಳಸುತ್ತಾ ಹೋಗಬಹುದಿತ್ತು. ತತ್ಪರಿಣಾಮವಾಗಿ ಕಿತ್ಸಾಟವೇರ್ಪಟ್ಟಿದ್ದರೆ ಹೈದರಾಬಾದಿನೊಳಗಡೆಯಲ್ಲೇ ಆದು ಏಳುವಂತಾಗುತಿತ್ತು. ಸಂಸ್ಥಾನದ ಅಧಿಕ ಸಂಖ್ಯಾತ್ಮಕ ಪ್ರಜೆಗಳು ಇಂದಿನಂತೆ ನಿಸ್ಸಹಾಯಕರಾಗಿ, ಭಯಭೀತರಾಗಿ ಬಾಳುವುದು ತಪ್ಪಿ, ಅವರೂ ಧೈರ್ಯ ಸಾಹಸ ಪ್ರದರ್ಶಿಸುವ ಪ್ರೇರಣೆ ದೊರಕುತಿತ್ತು, ಆದರೆ ಈಗ ಹೈದರಾಬಾದ್ ಯುದ್ಧವನ್ನು ಗಡಿಯಿಂದ ಪ್ರಾರಂಭಿಸುತ್ತಾ ಒಳಗಡೆಗೆ ಒಯ್ಯಬೇಕಾಗಿದೆ; ಈ ನಡುವೆ ಒಳಭಾಗಗಳಲ್ಲಿ ಅನಾಹುತಗಳು ನಡೆಯದಂತೆ ಪ್ರತಿಬಂಧಿಸುವ ಸಶಕ್ತ ರಕ್ಷಣಾ ದಳಗಳಿಲ್ಲವಾಗಿದೆ

ಆದ್ದರಿಂದ ಸೆಕುಂದರಾಬಾದಿಗೆ ಸೇನೆ ಕೊಂಡೊಯ್ದು ನಿಲ್ಲಿಸುವದೆಂದರೆ ಹೈದರಾಬಾದಿನ ನಿಜಾಮ್ ಅತ್ಯಾಚಾರಾವತಾರಗಳನ್ನು ಮುಕ್ತಾಯಗೊಳಿಸುವದೆಂದೇ ಅರ್ಥ; ಹೈದರಾಬಾದನ್ನು ಆಕ್ರಮಿಸಿಕೊಳ್ಳುವದೆಂದೇ ತಾತ್ಪರ್ಯ.

ಮೊದಲಿದ್ದಂತೆ ಸೆಕುಂದರಾಬಾದಿನಲ್ಲಿ ರಾಜ್ಯ ಹೊದೆದು ಸ್ವಸ್ಥವಾಗಿ ನಿಂತುಬಿಡುವುದಕ್ಕಾಗಿ ಹಿಂದೀ ಸೇನೆ ಒರ.ವುದಾದಲ್ಲಿ-ಇದೊಂದು ಶರ್ತ ಪಾಲನೆಯಿಂದ ಮಿಕ್ಕ ಸ್ಥಿತಿಗತಿಗಳು ಯಥಾಪ್ರಕಾರ ಸಾಗುವ ಅನುಕೂಲತೆಯಿರುತಿದ್ದಲ್ಲಿ-ನಿಜಾಮರು, ಅದನ್ನು ಪ್ರತಿಭಟಿಸದಿರಬಹುದಿತ್ತು. ಆದರೆ ಹೈದರಾಬಾದಿನಲ್ಲಿ ಬಿಂಕ

ಬೇಕಾಗಿದ್ದಾರೆ

ಕನ್ನಡಿಗರಿಂದ ಸ್ಥಾಪಿತವಾಗಿ, ಕನ್ನಡಿಗರ್ಪೆರ ಪ್ರೋತ್ಸಾಹಕ್ಕೆ ಅರ್ಹವಾಗಿರುವ, ಜನಸೇವಾಸಕ್ತರೂ ಏನೇ ಮಾಡಲು ಅನುಕೂಲವಾದ ಸ್ಥಳ ವಿಪೆಂಟ್ ಸಂಸ್ಥೆ,

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್‌ಗೆ ಕೆಲವು ಉತ್ಸಾಹೀ ಸಜ್ಜನರು ಬೇಕಾಗಿದ್ದಾರೆ.

ತಿಂಗಳಿಗೆ ನೂರಾರು ರೂಪಾಯಿ ಸಂಪಾದಿಸಬಹುದು.

ವಿವರ ವಿವರಗಳಿಗೆ ಬರೆಯಿರಿ.

The New Karnataka Provident Insurance Co., Ltd Udipi, S.K

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ಸಾರ್ವಭೌತತೆ ಸ್ಥಾಪಿಸಲು ಈ ಸೇನೆ ಪ್ರವೇಶಿಸಲಿರುವುದರಿಂದಲೂ, ಸೆಕುಂದರಾಬಾದಿಗೆ ಬಂದಮೇಲೆ ಇಡೀ ಸಂಸ್ಥಾನದ ಆಡಳಿತವೊಳಗೆ ಆದು ಕೈಯ್ಯಾಡಿಸಲಿರುವುದರಿಂದಲೂ ನಿಜಾಮ್ ಸೇನೆಯು ಪ್ರವೇಶದ್ವಾರದಲ್ಲಿ ಅಥವಾ ತಮ್ಮ ಅಯಕಟ್ಟಿನ ಸ್ಥಳ ನೋಡಿ, ಪ್ರತಿಭಟಿಸುವದು ಬಹುಮಟ್ಟಿಗೆ ಖಂಡಿತ; ಹಾಗೆ ಪ್ರತಿಭಟಿಸದೆ ಬಿಡುತ್ತಾರಾದರೆ ನಿಜಾಮರು ಹೈದರಾಬಾದ್ ಮತ್ತೆದರ ಭವಿಷ್ಯವನ್ನು ಸಂಪೂರ್ಣವಾಗಿ ಹಿಂದೀ ಸರಕಾರದ ಕೈಗೆ ಒಪ್ಪಿಸಿಕೊಟ್ಟರೆಂದೇ ಅರ್ಥ.

ಆದೇ ರೀತಿ ತಾವು ಸೆಕುಂದರಾಬಾದಿಗೆ ನುಗ್ಗುವ ಮಟ್ಟಿಗೆ 'ಎಕಸಾಲು' ಶಿಸ್ತನ್ನು ಸಂಸರಿಸದಲ್ಲಿ ತಾವು ಗುರಿಮುಟ್ಟುವ ವರೆಗಿನ ಅವಧಿಯೊಳಗೆ ಸಂಸ್ಥಾನದೊಳಗಡೆಯಿಲ್ಲಿ ವಿಶೇಷ ರೀತಿಯ ಅಲ್ಲೋಲಕಲ್ಲೋಲ, ಅತ್ಯಾಚಾರಗಳು ನಡೆಯಬಹುದೆಂಬುದನ್ನು ಭಾರತ ಸರಕಾರವೂ ಸೂಚಿಸಿರುವುದರಿಂದ, ನಿಜಾಮ್ ಸೇನೆ ವಹಿಸ್ತು ರಝಾಕಾರ್ ಬಲವೆಲ್ಲವನ್ನೂ ತಮ್ಮ ಕಡೆಗೆಳೆದುಕೊಳ್ಳುವಂತಹ ಮಾದರಿಯ ಪ್ರಚಂಡ ಹಾಗೂ ಬಹುಮುಖೀ ಧಾಳಿಯನ್ನೇ ಹಿಂದೀ ಸೇನೆ ಹೂಡಬಹುದು. ಆದು ಸೇನಾತಜ್ಞರ ಪಾಲಿನ ಹಂಚಿಕೆಯಾಗಿರುವುದರಿಂದ ಅದರ ರೂಪರೇಖೆಯನ್ನು ಈಗ ಊಹಿಸುವುದು ಕಷ್ಟ.

ಅಂತೂ 'ಹೈದರಾಬಾದ್' ಹೋರಾಟ' ಅಥವಾ ಪಂಡಿತ ನೆಹರುಗಳ ಮಾತಿನಂತೆ 'ಹೈದರಾಬಾದಿನ ಮೇಲೆ ಸೇನಾ ಕಾರ್ಯಕ್ರಮ'ವು ಸೆಕುಂದರಾಬಾದ್ ಪ್ರವೇಶ ಮೂಲಕ ಇಷ್ಟರಲ್ಲೇ ಆರಂಭವಾಗಲಿರುವುದು ಖಂಡಿತ; ಈ ವಿಶಿಷ್ಟ ಕಾರ್ಯ ವಿಧಾನವು ನ್ಯಾಯೋಚಿತವೇ ಎಂಬ ಕುರಿತು ವಾದ ವಿವಾದಗಳು ನಡೆದಿವೆ.

"ಯಥಾಸ್ಥಿತಿ ಒಪ್ಪಂದ ಪ್ರಕಾರ ಸೆಕುಂದರಾಬಾದಿಗೆ ಸೇನೆ ಕಳುಹಿಸುವ ಹಕ್ಕು ಭಾರತ ಸರಕಾರಕ್ಕೆಲ್ಲವಾದ್ದರಿಂದ, ಯಾಗೆ ಮಾಡಿದರೆ, ಅದು ಆ ಒಪ್ಪಂದದ ಮುಖ್ಯ ಕರ್ತವನ್ನೇ ಭಂಗಿಸಿದಂತಾಗುವದು. ಹೈದರಾಬಾದಿನೊಳಗಡೆಯ ರಕ್ಷಣಾ ಜೋಡಣೆಯು ಸಂಪೂರ್ಣವಾಗಿ ನಿಜಾಂ ಸರಕಾರದ್ದಾದ್ದರಿಂದ, ಅಲ್ಲಿ ಗಲಭೆಗಳು ನಡೆದಿವೆಯೆಂದು ನೆವ ಹೇಳಿ ಸೇನೆ ನುಗ್ಗಿಸುವ ಅಧಿಕಾರ ಭಾರತಕ್ಕಿಲ್ಲ; ಮೇಲಾಗಿ ಹೈದರಾಬಾದಿನೊಳಗಡೆಯಲ್ಲಿ ಕಾನೂನು ಭಂಗದ ಕೃತ್ಯಗಳು ನಡೆದಿವೆಯಾದರೂ ಒಳಗಡೆ ಸಾಮಾನ್ಯ ಶಾಂತ ಸ್ಥಿತಿಯೇ ಇದೆ. ಗಡಿ ವಲಯಗಳಲ್ಲಿ ಗೊಂದಲ ನಡೆಯಲು ಭಾರತ ಕ್ಷೇತ್ರದೊಳಗಿನವರು ಅಕ್ರಮ ನುಗ್ಗಾಟಗಳನ್ನು ನಡೆಸುತ್ತಿರುವುದೇ ಕಾರಣ" ಎಂದು ನಿಜಾಮ್ ಸರಕಾರದ ವಾದ.

"ಯಥಾಸ್ಥಿತಿ ಒಪ್ಪಂದ ಪ್ರಕಾರವೂ ಹೈದರಾಬಾದಿನ ಇಂದಿನಂತಹ ಅರಾಜಕ ಸ್ಥಿತಿಯಲ್ಲಿ ಒಳಗೆ ಸೇನೆ ಹೊಗಿಸುವ ಹಕ್ಕು ಭಾರತಕ್ಕಿದೆ. ರಝಾಕಾರರೇ ಮೊದಲಾದವರಿಂದ ಒಳಗಡೆ ನಡೆದಿರುವ ಅತ್ಯಾಚಾರಗಳು ಅಸಹ್ಯವಿರುವುದರಿಂದ ಭಾರತದ ಇಂದಿನ ಸರಕಾರವೊಂದಲ್ಲದೆ, ಅದರ ಸ್ಥಾನದಲ್ಲಿ ಬೇರಾವ ಸರಕಾರವಿರುತ್ತಿದ್ದರೂ ಈ ವರೆಗೆ ಹೀಗೆ ಸಹಿಸುತ್ತಿದ್ದಿಲ್ಲ. ಹೈದರಾಬಾದು ಭಾರತದ ಒಳಗಡೆ, ಅದರ ಹೃದಯ ಪ್ರದೇಶದಲ್ಲೇ ಇರುವುದರಿಂದಲೂ, ಆಲ್ಲಿಯ ಅರಾಜಕತೆಯ ಪ್ರತಿಕ್ರಿಯೆಗಳು ಭಾರತದಲ್ಲಿ ಮೂಡುವ ಅಪಾಯನಿರುವುದರಿಂದಲೂ ಹೈದರಾಬಾದಿನ ಪ್ರಜೆಗಳು ಮತ್ತು ಭಾರತದ ಪ್ರಜೆಗಳೊಳಗೆ ಸ್ಥಾನ ವ್ಯತ್ಯಾಸವಾವುದೂ ಇಲ್ಲದಿರುವುದರಿಂದಲೂ ಹೈದರಾಬಾದಿನ ಶಾಂತಿ ಭದ್ರತೆಗಾಗಿ ತನ್ನ ಸೇನೆ ಹೊಗಿಸುವ ಹಕ್ಕು ಭಾರತ ಸರಕಾರಕ್ಕೆ ಎಲ್ಲಾ ದೃಷ್ಟಿಯಿಂದಲೂ ಇದೆ. ಯಥಾಸ್ಥಿತಿ ಒಪ್ಪಂದ ಬಂದರೆ ಮೂರನೇ ವ ಧ್ಯಸ್ಥಗಾರರ ತೀರ್ಮಾನ ಪಡೆಯಬಹುದು' ಎಂಬಿರುವ ಪ್ರಕಾರ ಹೊರ ದೇಶಾಧಿಕಾರಿಗಳ ಮತ್ತು ರಾಷ್ಟ್ರ ಸಂಘದ ಮಧ್ಯಸ್ಥಿಕೆ ಯಾಚಿಸುವ ಹಕ್ಕು ತನಗಿದೆ' ಎಂದು ಈ ಮಟ್ಟಿಗೂ ನಿಜಾಮರ ವಾದವಿದೆ. ಆದರೆ 'ಯಾವುದಾದರೊಂದು ಸಂಗತಿಯ ಅರ್ಥದ ಕುರಿತು ಇಕ್ಕಡೆಯ ಅಭಿಪ್ರಾಯ ಬೇರೆಯಾದ ಸಂದರ್ಭಗಳಲ್ಲಿ ಮೂರನೆಯವರ ಅಭಿಮತ ಪಡೆಯಬಹುದು' ಎಂಬುದೇ ಆ ಪ್ರಕರಣದ ಅರ್ಥ ಹೊರತು ಇಂಥ ಎದ್ದಿರುವ ಭಾರತ-ಹೈದರಾಬಾದುಗಳೊಳಗಿನ ಸಂಬಂಧದ ಪ್ರಶ್ನೆಗೂ ಆ ಕಲಮಿಗೂ ಸಂಬಂಧವಿಲ್ಲ. ಹೈದರಾಬಾದು ಭಾರತದೊಂದಿಗೆ ಜೋಡಣೆಗೊಂಡಿರತಕ್ಕದ್ದೆಂಬುದೂ, ಯಥಾಸ್ಥಿತಿ ಒಪ್ಪಂದ ಪ್ರಕಾರವೇ ಹೈದರಾಬಾದಿನ ವಿದೇಶ ಸಂಬಂಧ, ಸಂಚಾರ ವಹಿವಾಟು, ರಕ್ಷಣಾ ಖಾತೆಗಳು ಸಂಪೂರ್ಣ ಹಿಂದೀ ಸರಕಾರದ ಆಧೀನವಿವೆ ಎಂಬುದೂ ಸರ್ವ ಸಮ್ಮತಿ ಪಡೆದಿದೆ.

ಸಂಗತಿ ಹೀಗಿದ್ದರೂ, ಹಿಂದೀ ಸೇನೆಯ ಧಾಳಯನ್ನು ಪ್ರತಿಭಟಿಸಿ ಬಾಳುವದು ತಮಗಸಾಧ್ಯವೆಂದು ಗೊತ್ತಿದ್ದರೂ, ತನ್ನ ಸ್ಥಾನ ಮಾನಗಳ ಕುರಿತು ಪ್ರಾಣಾವಧಿ ಆಶೆ ಕಟ್ಟಿಕೊಂಡಿರುವ ನಿಜಾಮರಿಗೆ ಇಂತಹ ಅಪಾಯವನ್ನು ಸ್ವಾಗತಿಸುವ ಧೈರ್ಯ ಹೇಗೆ ಬಂತು, ಎಂಬುದು ವಿಚಾರಣೀಯವಾದುದು:—

ಮೊದಲನೆಯದಾಗಿ ಶಾಂತಿ ಪ್ರೇಮಿ ಹಿಂದೀ ಸರಕಾರವು ಹೈದರಾಬಾದಿನ ಮೇಲೆ ಪ್ರತ್ಯಕ್ಷ ಧಾಳಯನ್ನೆಂದೂ ಹೂಡಲಾರದೆಂಬ ಅಚೆ ನಿಜಾಮರಲ್ಲಿದ್ದಿತು; ಆದುದರಿಂದ ತಾನು ಕೊಸಹೊಸ ರೂಪದ ಸಂಘಟನೆ ಸೂಚನೆ ಕಳುಹಿಸಿದಮ್ಮ ಕಲವೂ ಭಾರತ ಸರಕಾರವು ಅದನ್ನು ಪರ್ಯಾಲೋಚಿಸುತ್ತಾ ಹೋಗುವದೆಂದೂ, ಒಂದರ ಬಳಿಕ ಇನ್ನೊಂದರಂತೆ ಸೂಚನೆಗಳನ್ನು ಕಳುಹಿಸುತ್ತಾ ಎಷ್ಟು ಕಾಲವನ್ನಾದರೂ ತೆಗೆಯಬಹುದೆಂದೂ ನಿಜಾಮರ ಆಲೋಚನೆಯಿತ್ತು.

ಎರಡನೆಯದಾಗಿ ತನ್ನ ಹಕ್ಕನ್ನುಳಿಸಲು ಪ್ರಾಣ ಕೊಡಲು ಸಿದ್ಧರಿರುವ ಲಕ್ಷಾವಧಿ ರಝಾಕಾರರು ತಾನು ಭಾರತದೊಂದಿಗೆ ಸೇರಿಕೊಳ್ಳುವ ಕುರಿತು ಬದ್ಧ ವಿರೋಧವಿರುವುದರಿಂದ ಹಾಗೆ ಸೇರಲು ಮುಂದಾದರೆ, ಯಾವ ಅಪಾಯಕ್ಕಿಂಜಿ ತಾನು ಸೇರಬೇಕೋ ಆ ಪದತ್ಯಾಗಾಪಾಯವು ಕೂಡಲೇ ರಝಾಕಾರರಿಂದ ತನಗೊದಗಬಹುದೆಂಬ ಭೀತಿ ನಿಜಾಮರಿಗಿದೆ. ಆ ನಂತರ ತನ್ನ ಸಹಾಯಕ್ಕಾಗಿ ಹಿಂದೀ ಸೇನೆ ಬಂದರೂ ಆದೂ ಕೂಡಾ ತನ್ನ ಹಿಂದಿನ ಅಧಿಕಾರವನ್ನು ಪುನಃ ಕೊಡಿಸಲು ಬರುವದಲ್ಲವಾದ್ದರಿಂದ ತನ್ನನ್ನು ಈಗಿನಂತೆಯೇ-ಸಾಧ್ಯವಾದರೆ ಇದಕ್ಕೂ ಹೆಚ್ಚಿನ ಕ್ಷೇತ್ರ ಸಂಸ್ಥಾನವಿಸಿ ಕೊಟ್ಟು-ಉಳಿಸಬೇಕೆಂದು ಪ್ರಾಣಾವಧಿ ಶಪಥ ತೊಟ್ಟಿರುವ ರಝಾಕಾರರ ವರ್ತನೋಯಿಸಲು ಆವರು ಹೆದರಿದ್ದಾರೆ.

ಮೂರನೆಯದಾಗಿ ತನ್ನ ಮೇಲೆ ಹಿಂದೀ ಸರಕಾರ ಬಿದ್ದರೆ, ಏನಿಲ್ಲೆಂದರೂ ಭಾರತದೊಳಗಡೆಯಲ್ಲಿರುವ ಮುಸಲ್ಮಾನರು ತನ್ನ ಪಕ್ಷ ವಹಿಸಿ ಒಳಗೆ ಅಸಾಧ್ಯಗೊಂದಲವೆಬ್ಬಿಸಿ ಹಿಂದೀ ಸರಕಾರವನ್ನು ಹಣ್ಣು ಮಾಡುವರೆಂಬ ಧೈರ್ಯ ನಿಜಾಮರಿಗಿದೆ. ಪಾಕಿಸ್ತಾನದೊಳಗಡೆಯಲ್ಲಂತೂ ಬಹುಸಂಖ್ಯಾಕ ನುಸ್ಲಿಮರು ಅಲ್ಲಿರುವ ಅಲ್ಪ ಸಂಖ್ಯಾಕ ಹಿಂದುಗಳ ಮೇಲೆ 'ಹೈದರಾಬಾದ್ ಪ್ರತೀಕಾರ'ವನ್ನು ಮಾಡಬಹುದೆಂದು

ಸೆಕುಂದರಾಬಾದಿಗೆ ಧಾಳಿಯಾತ್ರೆ

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಸಗನ್ನಡ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಂಘಟಿಕವಾಗಿದೆ]

ಸಂಗ್ರಹ (ಕಲೆಕ್ಷನ್)- ಸೇವೆ

ನಮ್ಮ ಕಲೆಕ್ಷನ್ [ಸಂಗ್ರಹ ಅಥವಾ ಸಂಗ್ರಹ] ಇಲಾಖೆಯು ನಮ್ಮ ಶಾಖೆಗಳುವಲ್ಲಿ ರವಾನುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಖಾತ್ರಿಗೊಳಿಸಲ್ಪಟ್ಟಿದೆ. ಪೋಡಸಿದಂತಿರುವ ನಮ್ಮ ಶಾಖೆಗಳು ಪಟ್ಟಣದ ಅರಳೆಯ ವ್ಯಾಪಾರಸ್ಥಲ್ಲಿ-ತಮಿಳು ನಾಡಿನ ಆಕ್ಕಿ ಮತ್ತು ಸೆಲಗದಬೆಯ ಪ್ರದೇಶಗಳಲ್ಲಿ-ನುಲಬಾರು ಜಿಲ್ಲೆಯ ತೆಂಗಿನಗಳ, ವೃಕ್ಷವಾಟಿಕೆಗಳಲ್ಲಿ... ಮತ್ತು ಮುಂಬಾಯಿ ಹಾಗೂ ಆದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ನುತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರವಾನುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ಸಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ನಿಶ್ಚಿತ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ನೂಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಸ್ಸಂಶಿಷ್ಟ ಅವಶ್ಯಕತೆಗಳನ್ನು ಹೊಂದಿಸಿಕೊಳ್ಳಲಾಗುತ್ತದೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿಯುವುದು. ಏಕೆಂದರೆ ನಾವು ಪಡಿಸಿಕೊಳ್ಳುವ ಕಲೆಕ್ಷನ್ ರವಾನುಗಳ ಕಡೆಗೆ ಯಾವಾಗಲೂ ಸ್ಥಾಲಂಧಪಟ್ಟವರ ಶೀಘ್ರ ಲಕ್ಷ್ಯ ದೊರೆಯುವುದು.

The Canara Bank Limited.

ESTD: 1906

WANTED

Applications are invited from H. Elementary Trained teachers whose age should not be more than 50 years on 1-9-1948 for employment in Labour Schools under the Management of the Labour Department in South Kanara District. The scale of pay will be Rs. 30-1-50 with usual Dearness allowance. Preference will be given in the following order.

1. Harijans or the members of eligible communities who are ex army men or women.

2. Harijans or the members of the eligible communities who are other than ex-army personel.

3. Other communities who are ex-army personels.

4. Other communities who are otherthan ex-army personel.

2. The applications should reach the Dy. Labour Harijan welfare Officer, South Kanara, on or before 30-9-1948 together With (1) the Training Certificate and (2) discharge certificate in the case of ex-army personel.

ದೂ ಇವೆಲ್ಲವನ್ನೂ ಸಹಿಸುವದು ಹಿಂದೀ ಸರಕಾರಕ್ಕೆ ಕಷ್ಟವೆಂದೇನೂ ನಿಜಾಮ್ ಸರಕಾರದ ನೀರೀಕ್ಷೆಯಿದೆ.

ನಾಲ್ಕನೆಯದಾಗಿ ತನ್ನೊಡನೆ ಪ್ರತ್ಯಕ್ಷ ಭೂಸಂಬಂಧವಿಲ್ಲದ ಪಾಕಿಸ್ತಾನವು ಕಾಶ್ಮೀರ ಯುದ್ಧದ ಬಿಗುಹು ಹೆಚ್ಚಿಸುವ ಮೂಲಕ ಮತ್ತು ಭಾರತದ ಇತರ ಗಡಿಗಳಲ್ಲಿ ಕನ್ನ ಸೇನೆ ಮತ್ತು ಜನರನ್ನು ನುಗ್ಗಿಸುವ ಮೂಲಕ ತನಗೆ ನೆರವಾಗುವದು ಖಂಡಿತವೆಂದೂ, ಹೀಗಾಗಿ ಹೈದರಾಬಾದ್ ಯುದ್ಧವು ಪಾಕಿಸ್ತಾನ್ ಯುದ್ಧವಾಗಿ ಮಾರ್ಪಡುವ ಅಪಾಯ ಭಾರತ ಕ್ಕೊದಗಬಹುದೆಂದೂ ಹೈದರಾಬಾದ್ ನಿಜಾಮರು ನಿರೀಕ್ಷಿಸುತಿದ್ದಾರೆ; ತದನುಕೃಮವಾಗಿ ಪಾಕಿಸ್ತಾನಕ್ಕೊತ್ತಿನಲ್ಲಿರುವ ಇತರ ಜಾಗತಿಕ ಮುಸ್ಲಿಂ ರಾಷ್ಟ್ರಗಳೆಲ್ಲವೂ ತನ್ನ ಪಕ್ಕಾ ಹಿಡಿಯಬಹುದೆಂದೂ ನಿಜಾಮರ ಆಶೆ

ಐದನೆಯದಾಗಿ ರಾಷ್ಟ್ರಸಂಘ, ಮತ್ತಿತರ ವಿದೇಶೀ ಅಧಿಕಾರಿಗಳು ಈ ಪ್ರಶ್ನೆಯಲ್ಲಿ ಕೈಹಾಕ್ಕುಂತೆ ಮಾಡಬಹುದು; ಅಥವಾ ರಶ್ಯಾ ಮತ್ತು ಇಂಗ್ಲಾಂಡು ಅನೇಕಾರಗಳ ಸ್ಪರ್ಧೆಯ ದೆಸೆಯಿಂದಾಗಿ ಇವರಲ್ಲೊಂದು ಕಡೆಯು ತನ್ನ ಪಕ್ಷ ಹಿಡಿಯುವಂತಾಗಿ, ತನ್ನ ವಿವಾದವು ಜಾಗತಿಕ ಪ್ರಶ್ನೆಯಾಗಿ ಮಾರ್ಪಡಬಹುದು ಎಂದೂ ನಿಜಾಮರ ದೂರದೃಷ್ಟಿಗೆ ಹೊಳೆಯತ್ತಿರಬಹುದು.

ಭಾರತ ಸರಕಾರವೂ, ಅದರ ಸೇನಾತಜ್ಞರೂ ಇವೆಲ್ಲಾ ಸಂಭವಗಳನ್ನೂ ಸರಿಯಾಗಿ ಯೋಚಿಸಿಕೊಂಡೇ ಇಂದಿನ ಸೆಕುಂದರಂಬಾದ್ ಪಯಣ ಸಿದ್ಧತೆ ನಡೆಸಿರುವುದರಿಂದ ನಿಜಾಮರ ಎಲ್ಲಾ ಆಶೆಗಳೂ ಗಾಳಿಗೋಪುರಗಳಂತೆ-ತಿರುಕನ ಸ್ವಪ್ನ ಜಂತೆ-ಮಾಯವಾಗಲಿವೆ

ಆಗ ರಝಾಕಾರ್ ದೈತ್ಯರು ನಿಜಕ್ಕೂ ಹೋರಾಡಿ ಪ್ರಾಣ ಕೊಡುವವರೇ; ಸಾಯುವ ಮೊದಲು ತಮ್ಮಿಂದ ಸಾಧ್ಯವಿದ್ದಷ್ಟು ಹಾನಿಯನ್ನು ಸಂಸ್ಥಾನದೊಳಗಡೆಯಲ್ಲಿ ಮಾಡಿ ತಮ್ಮ ಜನ್ಮವೆ 'ಜೆಹಾದ್' ಸಾಫಲ್ಯ ಹೊಂದಿತೆಂಬ ಸಮಾಧಾನದಿಂದ ರಝಾಕಾರರೆಲ್ಲಾ ನಾಶ ಹೊಂದುವಾಗಲೇ, ಕೇವಲ ತನ್ನ ಮಧ್ಯಕಾಲೀನ ಸ್ಥಾನಮಾನಗಳ ರಕ್ಷಣೆಗಾಗಿ ಜೀವಧಾರಣೆ ಮಾಡಿರುವ ನಿಜಾಮರು ಭಾರತ ಸರಕಾರಕ್ಕೆ ಶರಣು ಬರುವದು ಖಂಡಿತ. ಇಲ್ಲವಾದರೆ ಪಲಾಯನವೇ ಗತಿ; ನಹರುಗಳಂತೆ ನಿಜಾಮರ ಸ್ಥಾನ ನಿರ್ಣಯಾಧಿಕಾರವನ್ನು ಹೈದರಾಬಾದ್ ಪ್ರಜೆಗಳ ಅಭಿಮತಕ್ಕೆ ಬಿಟ್ಟರೂ ವ್ಯಕ್ತಿಶಃ ನಿಜಾಮರಿಗೆ ಹಾನಿಯಾಗಬೇಕೆಂದು ಅಲ್ಲಿಯ ಜನ ಬಯಸುವದೇ ಅಸಂಭವ.

ಇಲ್ಲಿ ತುಸು ಗಾಢವಾಗಿ ಆಲೋಚಿಸಬೇಕಾದ ಅಂಶವಿದೆ ಕೇವಲ ತನ್ನೊಬ್ಬನ ಇರಸ್ತಿಕೆ, ಸುರಕ್ಷತೆಗಳಿಗಾಗಿ ರಝಾಕಾರರನ್ನು ಬೆಳೆಯಿಸಿ, ಪೋಷಿಸಿ, ಇಷ್ಟೆಲ್ಲಾ ಅತ್ಯಾಚಾರಗಳನ್ನು ಮಾಡಿಸಿರುವ ನಿಜಾಮರು, ಅದೇ ದೃಷ್ಟಿಯಿಂದ ನಾಳೆ ಭಾರತಕ್ಕೆ ಶರಣಾಗಿ ಬಂದು ಇವೆಲ್ಲಾ ವಿಷಗಳಿಂದಲೂ ಮುಕ್ತರಾಗುವ ಸಂಭವವಿದೆ. ಹೀಗೆ ಇಂದು ಮುಂದೆ ಏನೇ ಸಂಭವಿಸಿದರೂ ತನ್ನ ಮತ್ತಿಗೆ ಅನಿವಾರ್ಯವಾದ ವಿಶೇಷಾಧಿಕಾರ ತ್ಯಾಗವೊಂದರ ವಿನಹ ಬೇರೆ ಅಪಾಯವಿಲ್ಲವೆಂಬ ಧೈರ್ಯದಿಂದಲೇ ನಿಜಾಮರು ತನ್ನ ಸಂಸ್ಥಾನದಲ್ಲಿ ಇಷ್ಟೆಲ್ಲಾ ಅಮಾನುಷ ಅತ್ಯಾಚಾರಗಳು ನಡೆಯುತಿದ್ದರೂ ಕಣ್ಣು ಮುಚ್ಚಿ ಕುಳಿತಿದ್ದು, ಭಾರತ ಸರಕಾರವು ಕಷ್ಟಪಟ್ಟು ನೋಡಿದ ಪ್ರತಿ ಸಂದರ್ಭದಲ್ಲೂ ತನ್ನಲ್ಲಿ ಏನೂ ನಡೆದಿಲ್ಲವೆಂದು ಘಂಟಾಘೋಷವಾಗಿ ಸಾರುತ್ತಾ ಬಂದಿದ್ದಾರೆ.

ನಿಜಾಮ್-ಸಂಸ್ಥಾನದ ಭವಿಷ್ಯವೇನು?

ಅಂದ ಮೇಲೆ ಹೈದರಾಬಾದಿನಲ್ಲಿ ಅತ್ಯಾಚಾರಗಳಾಗಿರುವುದು ಸತ್ಯವೋ ಸುಳ್ಳೋ ಎಂಬುದನ್ನು ಶೋಧನೆ ಮಾಡಿ ಅಗಿರುವುವಾದರೆ ಅವೆಲ್ಲಕ್ಕೂ ನಿಜಾಮರನ್ನು ಹೊಣೆ ಮಾಡಬೇಕಾದುದು ನ್ಯಾಯವಲ್ಲವೆ? ಜರ್ಮನಿಯ ಯುದ್ಧ ಕೃತ್ಯಗಳಿಗಾಗಿ ನಾಜೀ ನಾಯಕರನ್ನು ವ್ಯಕ್ತಿಶಃ ಹೊಣೆ ಮಾಡಿ ಯಾವ ರೀತಿ ಅವರಿಗೆ ಪ್ರಾಯಶ್ಚಿತ್ತ ಮಾಡಲಾಯಿತೋ ಅದೇ ರೀತಿ ಹೈದರಾಬಾದಿನಲ್ಲಾಗಿರುವ ಅತ್ಯಾಚಾರಗಳಿಗೆ-ತನ್ನ ರಿಪ್ರೆಸೆಂಟಿಯನ್ನಿಟ್ಟು ಸವಿವರವಾಗಿ ತಿಳಿಸಿ-ನ್ಯಾಯಾಲಯದ ಮುಂದೆ ತಾನು ಪತ್ತೆ ಮಾಡಿದ ಒಂದು ಕೊಲೆಯ ನೊಕದ್ದನೆಯನ್ನು ಸರಕಾರವು ಸಮರ್ಥಿಸಿ ತೋರಿಸುವ ಮಾದರಿಯಲ್ಲೇ ಇದನ್ನೂ ತೋರಿಸಿ ಭಾರತ ಸರಕಾರವು ತನಗನುಕೂಲವಾದ ತೀರ್ಮಾನ ಹೊಂದಲು ಪ್ರಯತ್ನಿಸುವದು ಅಗತ್ಯವಲ್ಲವೆ?

ಮತ್ತೊಂದು ವಿಚಾರವೆಂದರೆ ಕರ್ನಾಟಕ, ಆಂಧ್ರ, ಮರಾಠಾ ಮೊದಲಾದ ಭಾಷಾವಾರು ಭಾಗಗಳ ಕೆಲವು ಜ್ವರ ಮೇಲೆ ತಾನೇ ಅಮಾನುಷ ಹಿಂಸೆ ನಡೆಯಿಸಿದ ನರಮಾನವಾಧಮ-ನಿಜಾಮರನ್ನು ವ್ಯಕ್ತಿಶಃ ಹೊಣೆ ಮಾಡಿ ದಂಡಿಸಲಾಗುವದೆಂದು ಈಗಲೇ ಸಾರುವದು ನ್ಯಾಯೋಚಿತ ಮತ್ತು ಅಗತ್ಯವಲ್ಲವೆ?

ಹೈದರಾಬಾದಿನ ಭವಿಷ್ಯ ಸಂಬಂಧವಾದ ಎಲ್ಲಾ ನಿರ್ಣಯಗಳನ್ನೂ ಹೈದರಾಬಾದ್ ಪ್ರಜೆಗಳ ಅಭಿಮತಕ್ಕೇನೇ ಬಿಡಬೇಕಾದುದು ನ್ಯಾಯವಿದ್ದರೂ, ಅಲ್ಲಿಯ ಪ್ರಜೆಗಳ ತೀರ್ಮಾನಕ್ಕಾಗಿ ಈ ಪ್ರಶ್ನೆ

ಪಾಕಿಸ್ತಾನ್ ಮಿ. ಜಿನ್ನರ

ಕಾಯಿದೇ ಅಜಾಮ್ ಮಹಮ್ಮದಾಲಿ ಜಿನ್ನಾ, ಪಾಕಿಸ್ತಾನದ ಗವರ್ನರ್ ಜನರಲ್, ತಾ 11ನೇ ರಾತ್ರಿ ಘಂಟೆ 10-25 ಕ್ಕೆ ಕರಾಚಿಯಲ್ಲಿ ಹೃದಯಸ್ತಂಭನದಿಂದ ನಿಧನಗೊಂಡರು; ತನ್ನ ಮೇಧಾ ಬಲವನ್ನಷ್ಟೇ ಉಪಯೋಗಿಸಿ ಲೋಕದ ಅತಿ ದೊಡ್ಡ ಮುಸ್ಲಿಂ ರಾಜ್ಯವೊಂದನ್ನು ಹೊಸತಾಗಿ ಕಟ್ಟಿದ-ಎಂದೂ ಯಾರಿಗೂ ಮಣಿಯದ-ಒಂದು ತಲೆಯುರುಳಿತು! ಈ ಮಟ್ಟಿಗೆ ಪ್ರಪಂಚದಲ್ಲೇ ಅದ್ವಿತೀಯನಾದ ಮಹಾ ಪುರುಷ ಮಾಯವಾದ! ಆಧುನಿಕ ಮಾನವ ಜನಾಂಗದ ಓರ್ವ ಗಣ್ಯ ವ್ಯಕ್ತಿಯ ಅಂತರ್ಧಾನವಿಂದು! ಮಾಕಿಸ್ತಾನ್ ಜನಕ ಮುಸ್ಲಿಮ್ ಜನಾಂಗದ ಏಕಮೇವಾದ್ವಿತೀಯ ನಾಯಕ, ಕಾಯಿದೇ ಅಜಾಮ್ ಜಿನ್ನಾ ಇನ್ನಿಲ್ಲ!

ಮಿ ಜಿನ್ನರ ಜಾತೀಯತಾ ಧೋರಣೆ, ವರ್ತನೆಗಳ ದೆಸೆಯಿಂದ ಆಗಿಹೋದ ಅನಾಹುತಗಳನ್ನು ಎಂದೂ ಮರೆಯಲಾಗುವದಿಲ್ಲ, "ಜಿನ್ನೈಟ್"ದ ಸಾಕ್ಷಾತ್ ಸ್ವರೂಪವಾಗಿ ಅಖಂಡ ಭಾರತವು ಇಬ್ಭಾಗವಾಗಿದು-ಸಹಸ್ರಾವಧಿ ದುರ್ಮರಣಗಳು ಮತ್ತು ಲಕ್ಷಾವಧಿ ಮಂದಿ ನಿರಾಶ್ರಿತರಾದುದು-ಯಾವ ಕಾರಣಕ್ಕಾಗಿ ಯಾದರೂ ಮರೆಯಲಸಾಧ್ಯವಲ್ಲ. ಆದರೆ ಕಾಯಿದೇ ಅಝಾಮರ ವಿಯೋಗದೀ ಕಾಲದಲ್ಲಿ, ಭೂತಿತದ ಚರಿತ್ರೆಯಲ್ಲಿ ಶಾಶ್ವತ ಮಹಿಮೆಯಾಗಿ ಉಳಿದಿರುವ ಆ ಪ್ರಮಾದವನ್ನಾದರೂ ಕಣ್ಣೆತ್ತಿ ಪರಿಶೀಲಿಸುವ ಅಂಶವಿದೆ ಆಗ ಅದರಲ್ಲಿ ಜಿನ್ನಾ ಮತ್ತವರ ಅನುಯಾಯಿಗಳಷ್ಟೇ ಅವರ ಇದಿರುವಾದಿಗಳಿಗೂ ಪಾಲಿದ ಎಂಬುದು ತೋರಿಬಾರದಿರದು. ಮಿಕ್ಕೆಲ್ಲವನ್ನೂ ಬದಿಗಿಟ್ಟು ಕೊನೆಯ ದಾದ ಒಂದೇ ಒಂದು ಪ್ರಶ್ನೆಯನ್ನ ವಿಚಾರಿಸುವಃ-ಪಾಕಿಸ್ತಾನ್ ಸ್ಥಾಪಿಸಿದ್ದವೆಂಬ ಮಿ ಜಿನ್ನರ ಧ್ಯೇಯಕ್ಕೆ ಅಖಿಲ ಭಾರತದ ಮುಸ್ಲಿಮರು ಏಕಕಂಠದಿಂದ ಒಕ್ಕೊಟ್ಟಂತೆ, ಅಖಂಡ ಭಾರತವನ್ನು ಉಳಿಸಬೇಕೆಂದು ಸಂಸ್ಥಾಪಕ ವ್ಯಕ್ತಿಯಾದ ಇತರ ಧುರೀಣರಿಗೆ ಇತರರೆಲ್ಲರೂ ಒಮ್ಮತದಿಂದ ಬೆಂಬಲವಾಗುತಿದ್ದರೆ-ಆಗ ಪಾಕಿಸ್ತಾನಕ್ಕಾಗಿ ಮುಸ್ಲಿಂ ಜನಾಂಗವನ್ನು ಒಂದುಗೂಡಿಸಿ, ನವಚೇತನ ಮೂಡಿಸಲು ಮಿ ಜಿನ್ನರಿಗೆ ಸಾಧ್ಯವಾದಂತೆ ಅಖಂಡ ಭಾರತಕ್ಕಾಗಿ ಮಿಕ್ಕವರನ್ನು ಸಂಘಟಿಸಲು ಭಾರತ ಧುರೀಣರಿಂದಾಗುತ್ತಿದ್ದಿಲ್ಲವೇಕೆ? ಸಂಗತಿ ಮತ್ತು ಸ್ಥಿತಿಗತಿಗಳನ್ನು ತನಗನುಕೂಲ ಪಡಿಸಿಕೊಳ್ಳಲು ಕಾಯಿದೇ ಅಜಾಮರಿಂದಾಪ್ಪ, ಅವರ ಪ್ರತಿವಾದಿ ನಾಯಕರಿಂದಾಗುತಿದ್ದರೆ-ಪಾಕಿಸ್ತಾನವಾಗುತಿತ್ತೆ? ಅಂದಮೇಲೆ ತಪ್ಪಿಗೆ ಅವರೊಬ್ಬರೇ ಹೊಣೆ ಹೇಗೆ? 'ಅನ್ಯರಿಂದಾಗದುದು ಅವರಿಂದಾಗಿದೆ'-ಅದ್ದರಿಂದ ಅವರು ಅಸಾಮಾನ್ಯರೆಂಬುದೊಂದು ಸಿದ್ಧಾಂತವು ಜೀರಾವುದೂ ಏಚಿತವಾಗುವದಿಲ್ಲ. ಪ್ರಥಮದ್ದಾದ ನ್ಯಾಯಾರಾಧನೆಯಿಂದನ್ನು ಬಿಟ್ಟಲ್ಲಿ, ಎರಡನೆಯದಾದ ವ್ಯಕ್ತಿಯ ಆರಾಧನೆಯ ಮೂಲ ಮಂತ್ರ ಪಾಗಿದೆ ಈ ಮಾತು!

ಕಾಯಿದೇ ಅಜಾಮ್ ಜಿನ್ನರ ಜನ್ಮ ಸಾರ್ಥಕತೆ ಮತ್ತು ಜೀವನ ಸೈವೈಫಲ್ಯಗಳು ಒಂದು ರೀತಿಯಲ್ಲಿ ಮಾನವ ಜನಾಂಗದ ಚರಿತ್ರೆಯಲ್ಲೇ ಅಸಾಮಾನ್ಯವಾದುವುಗಳು ಮೊದಲನೆಯದಾಗಿ ತನ್ನ ಜೀವನದಲ್ಲಿ ಇಷ್ಟು ದೊಡ್ಡ ಗುರಿಯೊಂದನ್ನಿಟ್ಟುಕೊಂಡವನು ಅದನ್ನು ತನ್ನ ಜೀವಮಾನವಲ್ಲೇ- ಅದೂ ಇಪ್ಪೊಂದು ಅಲ್ಪಾವಧಿಯೊಳಗೆ ಇಷ್ಟೂ ಸುಲಭದಲ್ಲಿ- ಸಾಧಿಸಿಕೊಂಡುದು ಲೋಕದ ಚರಿತ್ರೆಯಲ್ಲಿ ಅನ್ಯಾದೃಶವಾದುದು; ಜಿನ್ನರ ಗುರಿಯಾಗಿದ್ದ ಅನಾಹುತವನ್ನು ತಪ್ಪಿಸಬೇಕೆಂದು ಇತರ ಭಾರತ ಪ್ರಮುಖರು ವ್ಯಕ್ತಿಶಃ ಒದ್ದಾಡಿದಷ್ಟು, ಯಾತನೆಯನ್ನನುಭವಿಸದಷ್ಟು, ಅದರ ಸಾಧನೆಯಲ್ಲಿ ಸ್ವತಃ ಮಿ ಜಿನ್ನರನುಭವಿಸಿದ್ದಿಲ್ಲವೆಂಬುದನ್ನು ನೆನಪಿಡಬೇಕು. ಇದು ಈ ಅಸಾಮಾನ್ಯ ಮನುಷ್ಯನ ಜೀವನ ಸೈವೈಫಲ್ಯವೆನ್ನಬೇಕಲ್ಲದೆ ಬೇರೆ ಹೇಳಲಿಕ್ಕಿಲ್ಲ. ಎರಡನೆಯದಾಗಿ, ಹೆಚ್ಚೆಂದರೆ ಇನ್ನು ಹತ್ತು ವರುಷ-ಯಾಕೆ, ಐದೇ ವರುಷ-ಮಿ ಜಿನ್ನರು ಬಾಳುತಿದ್ದರೆ, ತಾನು ಮಾಡಿಹಾಕಿದುದು ತನ್ನ ಕಣ್ಣೆದಿರೆಲ್ಲೇ ಹಾಳಾಗುವದನ್ನ ಕಾಣಲಿಕ್ಕಿದ್ದರು. ಆದರೆ ಈ ಕೃತಾರ್ಥಜೀವವು ಅಂತಹ ದುರ್ದೆಸೆಯನ್ನು ಪಡೆದಿಲ್ಲವಾದ್ದರಿಂದ ತನ್ನ ಪ್ರಭೆಮಾಸುವ ಮೊದಲೇ-ಸಂಧಿ ಕಾಲ ಸನ್ನಿಹಿತವಾಗುತ್ತದೆನ್ನುವಾಗಲೇ- ಹೊರಟುಹೋಯಿತು ತನ್ನ ಚಲ್ಲಾಣದ ಮಾತೇ ಗೆಯನ್ನು ಮಾಜಲು ಬಿಡದೇನೆ ಪಾಕಿಸ್ತಾನ ಸಂಪಾದಿಸಿಕೊಂಡ ಈಜೀವ ತನ್ನೀ ಪಾಕಿಸ್ತಾನವು ಅಲುಗಾಡುವದನ್ನು ಕಾಣುವ ಮೊದಲೇ ಹೊರಟು ಹೋಯಿತು! ಸುಖಜೀವಿ, ಯಃಕಶ್ಚಿರೀರಿ ಜಿನ್ನಾ!

ಇನ್ನು ತನ್ನ ಜೀವನದಲ್ಲಾದರೋ ಒಮ್ಮೆ ಗಟ್ಟಿ ಹಿಡಿದುದನ್ನು ಮತ್ತಾವ ಕಾರಣಕ್ಕಾಗಿಯಾದರೂ ಅವರು ಬಿಟ್ಟವರಲ್ಲ, ಅದರಿದರಿ ಬೇಡಿಕೆಗಳ, ಸಮಜಾಯಿಸುವಿಕೆಗಳ ಬೆದರಿಕೆಗಳ ಸುಳಿಗಾಳಿ ಸುಂಟರ ಗಾಳಿಗಳು ಬೀಸಿಬಡಿಸಿ, ಕೊನೆಗೆ ಅವೆಲ್ಲವೂ ಜಿನ್ನರ ಆ ಧೈರ್ಯಸ್ಥೈರ್ಯ ಮೇಲೆತ್ತಿಪ ತದೀ ಗಾಳಿಗಳಾಗಿ ವರ್ತಿಸಿಬಿಟ್ಟವು.

ತನ್ನ ವ್ಯಕ್ತಿ ಘನತೆಯನ್ನು ಎಲ್ಲಕ್ಕೂ ಮೇಲಿನ ಅಂತಸ್ತಿಗೇರಿಸಿ ಇಟ್ಟುಕೊಂಡಿದ್ದ ಜನ ಮಿ. ಜಿನ್ನ. ಅವರ ತಲೆಯಲ್ಲಿ ಮೊಳೆತ ಅಪೂರ್ವಾಯಗಳ ಕಡೆಗೇನೇ ಮಿಕ್ಕವರ ಯೋಚನೆಗಳು ಬಂದು ಸೇರಿಕೊಳ್ಳಬೇಕಿದ್ದಿತ್ತು-ಅವರ ಕಾಲಡಿಗೇನೇ ಮಿಕ್ಕವರು ಬರಬೇಕಿದ್ದಿತ್ತು! ಮಹಾತ್ಮಾಜೀ ಸಮೇತ ಎಲ್ಲರೂ ವಿಶೇಷ ಸಂದರ್ಭಗಳಲ್ಲಿ ಮಿ. ಜಿನ್ನರ ಭೇಟಿಗೆ ಹೋಗಬೇಕಿತ್ತೇ ಹೊರತು, ಜಿನ್ನರಾರೀತಿ ಹೊರಟ ನಿದರ್ಶನವಿಲ್ಲವೇ ಇಲ್ಲ. ಎಲ್ಲರಿಗಿಂತ ಮೇಲೆಂಬ ಮಟ್ಟ-ತನ್ನಿಂದ ಅನ್ಯರಿಗೆ ಹೊರತು ಅನ್ಯರಿಂದ ತನಗೇನೂ ಆಗಬೇಕಾಗಿಲ್ಲವೆಂಬ ಹರ-ಇವೆಂಡರ ಮಟ್ಟಿಗೆ ಜಿನ್ನಾ ಸದೃಶ ನಾಯಕ ಇಲ್ಲಿ ಬೇರಿಲ್ಲ ಅವರು ತನ್ನ ಅನುಯಾಯಿಗಳ ಹೃದಯವನ್ನು ಅಧಿಕಾರ ಪೂರ್ವಕ ಎಳೆದುಕೊಳ್ಳುತಿದ್ದರೇ ಹೊರತು, ಮೆಚ್ಚಿಸಿ ಆರ್ಜಿಸಿಕೊಳ್ಳುತಿದ್ದುದಲ್ಲ, ಅವರ ಘನತೆ, ಸ್ಥಿರತೆ, ಮತ್ತು ಅಧಿಕಾರ ಗಾಂಭೀರ್ಯಗಳಿದಿರು ಅನುಯಾಯಿಗಳು ಮರು ಮಾತಾಡದೆ ಅವರ ಹಿಂಗಡೆಯಿದ್ದರೆ, ಪ್ರತಿವಾದಿಗಳಾದರೂ ಮಾತಾಡುತ್ತಾ ಅವರ ಮುಂಗಡೆಗೆ ತಾವೇ ಬರುತಿದ್ದರು ಇದೀಗ ಜಿನ್ನಾ ವ್ಯಕ್ತಿವೈತಿಷ್ಟ್ಯ! ಕಗ್ಗುಮತ್ತು ಹಿಂಭಾಗದ ಸ್ವರ್ಗ ಸೋಂಕದಿದ್ದ ಜೀವನವೆಂದರೆ ಕಾಯಿದೇ ಆಝಾಮ್ ಜಿನ್ನರದೇ

ವೈರಿಗಳಿಗೂ ಸಂದೇಹಾತೀತವಾದ ಪರಿಶುದ್ಧ ವ್ಯಕ್ತಿಗತ ಗುಣನಡತೆ-ಅಸಾಮಾನ್ಯ, ನಾಡಬಲ-ಜನಬಲ ಇತ್ಯಾದಿ ಸಂದರ್ಭ ಪೂರಕ ಸ್ಥಿತಿಗತಿಗಳ ಮರ್ಮ ನೋಡಿ ಹುಡುಕಿ ಕೊಳ್ಳುವ ಬುದ್ಧಿಮತ್ತೆ -- ಯಥಾರ್ಥವೂ ಹಾಗೂ ಸ್ಪಷ್ಟ ವಕ್ತೃತ್ವ-ಇವು ಕಾಯಿದೇ ಅಝಾಮರಲ್ಲಿದ್ದ ಸರ್ವ ಮಾನ್ಯ ಯೋಗ್ಯತೆಗಳು, ಇವುಗಳ ಸಮಯುಕ್ತ ಸಹಕಾರವೇ ಜಿನ್ನಾ! ಅದ್ದರಿಂದಲೇ ಜಿನ್ನಾ ಜೀವನ ಇಂತಹ ವಿಜಯ!

ಈ ಹಾದಿಯೇ ಸರಿಯೆಂದು ತನ್ನ ಮಟ್ಟಿಗೆ - ತನ್ನೊಬ್ಬನ ಮಟ್ಟಿಗೆ - ಖಚಿತವಾದರೆ ಮಾತ್ರ ಮಿ. ಜಿನ್ನರದನ್ನು ಹಿಡಿಯುತ್ತಿದ್ದರು; ಆ ಮೇಲೆ ಅದರ ವಿರುದ್ಧ ಇಡೀ ಜಗತ್ತೇ ಎದ್ದರೂ ಅನ್ಯಾಯವೆದ್ದಿತೆಂದೇ ತ್ರಿಕರಣಪೂರ್ವಕ ಭಾವಿಸಿಕೊಳ್ಳುತಿದ್ದರು ಜಿನ್ನರ ಈ ಯಥಾರ್ಥತೆಯನ್ನು ಗಾಂಧಿಜೀ ತಿಳಿದಿದ್ದುದರಿಂದಲೇ ಅವರ ವಾದಗಳ ಮಟ್ಟಿಗೆ ಸ್ವತಃ ಅವರು ಮನವೊಲಿಸುವದೊಂದನ್ನಲ್ಲವ ಬೇರಾವ ವಿರುದ್ಧ ಪ್ರಯತ್ನವನ್ನೂ ಮಾಡಿರಲಿಲ್ಲ. ಮಿ. ಜಿನ್ನರಷ್ಟು ಪರಿಶುದ್ಧ ವ್ಯಕ್ತಿಗತ ಜೀವನ ನಡೆಸುವವರು ಮುಖಂಡರಲ್ಲಿ ಕೂಡಾ ಕೈಬೆಂಳೆಣಿಕೆಯಷ್ಟು ಮಾತ್ರವಿದ್ದಾರು ತೆ! "ಮಿ ಜಿನ್ನರು ಬ್ರಿಟಿಷರಿಂದ ಲಂಚ ಪಡದು ಈ ರಾಷ್ಟ್ರ ವಿಭಜನಾ ಹೋರಾಟ ನಡೆಸುತ್ತಿರುವದಲ್ಲವೇ" ಎಂದು ಪಾಕಿಸ್ತಾನ್ ಚಳವಳ ಕಾಲದ ಒಂದು ಸಂದರ್ಭದಲ್ಲಿ ಪತ್ರಿಕೋದ್ಯಮಿಯೊಬ್ಬನು ಶ್ರೀಮತಿ ಸರೋಜಿನಿ ದೇವಿಯನ್ನು ಕೃಷ್ಣಿಸಿದಾಗ, ಅವರು ರೇಗಿ ಬಿದ್ದು 'ಮುಚ್ಚು ಬಾಯಿ! ಇಂತಹ ಹೇಸು ಕೆಲಸಕ್ಕೆ ಕೈಯಿಕ್ಕುವುದರಲ್ಲಿ ಮಿ. ಜಿನ್ನರು ಎಲ್ಲರಿಗಿಂತ ಹಿಂದೆ ಎಂದು ತಿಳಿದುಕೊ!" ಎಂದು ಗದರಿಸಿದ್ದರು. ಪೋಷಾಕಿನ ನಾಜೂಕಿನ [illegible] ಅಗ್ರಗಣ್ಯರೆಂಬ ಕೀರ್ತಿ ಮಿ.ಜಿನ್ನರಿಗಿದ್ದರೂ ಅವರ ಜೀವನ ಕ್ರಮಗಳು ಅತ್ಯಂತ ಶುದ್ಧ ಪುಣ್ಯ ಸರಳವಿದ್ದವು ಅವರು ಮದುವೆಯಾಗಿದ್ದುದು ಓರ್ವ ಪಾರ್ಸಿಯನ್ನು; ತನ್ನ ಮಗಳನ್ನು ಮದುವೆ ಮಾಡಿ ಕೊಟ್ಟು ದೂರ ಮುರ್ಬಿಗೆ ಕೊನೆಯವರೆಗೂ ಪಾಶ್ಚಾತ್ಯ ಮರ್ಜಿಯಲ್ಲಿದ್ದರೇ ಹೊರತು, ಮುಸ್ಲಿಂ ಧಾರ್ಮಿಕ ನಿತ್ಯ ವಿಧಿಗಳಲ್ಲಿ ಇತ್ತ ಲಕ್ಷಿಸಿದವರೆಗೂ ನಿಷ್ಠಾವಂತರೆಂದಿಲ್ಲ, ನನ್ನ ವ್ಯಕ್ತಿಗತ ಸ್ನೇಹಿತ ವರ್ಗದಲ್ಲಿ ಹಿಂದುಗಳ ಸಂಖ್ಯೆಯೇ ಹೆಚ್ಚಿಗೆ" ಎಂದು ಮಿ ಜಿನ್ನರು ಸ್ವತಃ ಒಮ್ಮೆ ಹೇಳಿದುದಿದೆ

ಇನ್ನೆಲ್ಲದರಲ್ಲೂ, ಕೊನೆಯ ಪಾಕಿಸ್ತಾನ್ ನಿರ್ಮಾಪಕ ಜಿನ್ನರು ಓರ್ವ ಪ್ರತ್ಯೇಕವಾದ ನವ್ಯನೇ ಆಗದಿರುತ್ತಿದ್ದರೆ,ಅವರು ಅಖಂಡ ಭಾರತದ ಸರ್ವರ ಹೃದಯದಲ್ಲೂ ಗಾಂಧಿಜೀಗಿರಬಹುದೆಯ ಸ್ಥಾನಸಂಪಾದಿಸುತಿದ್ದರು ಅವರ ಆತ್ಮಕ್ಕೆ ಶಾಂತಿ ದೊರೆಯಬೇಕು ಅದರೆ ಅವರ ನಿರ್ಮಾಣ ಕಾರ್ಯದ ಪರಿಣಾಮವಾಗಿ ದುರ್ಮರಣಕ್ಕೀಡಾಗಿದ್ದ ಸಾವಿರಾರು ಆತ್ಮಗಳು ಈ ನವ ಹಾ ಆತ್ಮ ಮಹಿಮೆಯನ್ನು ಗಣಿಸುವುದರಲ್ಲಿ ತವ

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ. ಬೊಂಬಾಯಿ ಪಟ್ಟಣ ಮತ್ತು ಮಂಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಪಕ್ವ ಅನುಭವದ ಯೋಗ್ಯತೆಯಿದೆ.

ನಿರಖು ಠೇವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ ಎಲ್ಲಾ ತರದ ಆಧುನಿಕ ಬ್ಯಾಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬ್ಯಾಂಕ್, ಲಿಮಿಟೆಡ್

ಹೆ. ಆ. ಮಂಗಳೂರು.

The Vijaya Bank Ltd.

H. O. MANGALORE, S. K.

ಗವರ್ನರ ಜನರಲ್ ಅಕಸ್ಮಾತ್ ಮರಣ

ನ್ನು ತಾವೇ ವ.ರಿಯದಿದ್ದಲ್ಲಿ ಹೇಗಾಗು ವದೋ!

ಜಿನ್ನರ ಜೀವನ

ಮಹಮ್ಮದಾಲಿ ಜಿನ್ನಾರ ಜನನ ಕೋ ಜಾ ಮುಸ್ಲಿಂ ಕುಟುಂಬವೊಂದರಲ್ಲಿ 1876ನೇ ಇಸವಿಯಲ್ಲಿ ಕರಾಚಿಯಲ್ಲಿ. ಅ ವರ ತಂದೆ ವ್ಯಾಪಾರೀ ವರ್ಗಕ್ಕೆ ಸೇರಿದವ ರಿದ್ದು ಅತಿ ಶ್ರೀಮಂತ ವ್ಯಾಪಾರಿಯಾಗಿದ್ದರು. ವಾರ್ತಿಗಳ ಅಗ್ರಗಣ್ಯಶ್ರೀಮಂತರ ಪಂಗ್ತಿಯಲ್ಲೊಬ್ಬರಾಗಿದ್ದ ದಿನ್ಶಾ ಪೆಟಿಟರ ಏಕಮಾತ್ರ ಪುತ್ರಿ ಕುಮಾರಿ ರತನ್ ಬಾ ಜೆಟಿಟರನ್ನು ವಿವಾಹವಾದ ಮೇಲಂತೂ ಜಿನ್ನರ ಶ್ರೀಮಂತಿಕೆ ದೊಡ್ಡದಾಯಿತು.

ಜಿನ್ನಾ ಕರಾಚಿಯಲ್ಲಿ ಪ್ರಾಥಮಿಕ ಶಿಕ್ಷ ಣ ಮುಗಿಸಿ, ತನ್ನ 16ನೇ ವಯಸ್ಸಿನಲ್ಲೇ ಬ್ಯಾರಿಸ್ಟರ್ ಕ ಲಿ ಯ ಲು ಇಂಗ್ಲಾಂ ಡಿಗೆ ಹೋದರು. ಅಲ್ಲಿ ರಾಷ್ಟ್ರದ ಪಿತಾಮಹನೆನ್ನಿಸಿದ್ದ ದಾದಾಭಾಯಿ ನಾ ರೋಜಿಗಳ ಸಂಬಂಧ ಬೆಳೆದು ಜಿನ್ನರು ಅವರ ಖಾಸಗೀ ಕಾರ್ಯದರ್ಶಿಯಾಗಿ ಸೇರಿಕೊಂಡರು. ಆಗ ದಾದಾಭಾಯಿಗ ಳಿಂದ ಕಲಿತ ರಾಷ್ಟ್ರೀಯತೆಯೇ 1929 ನೇ ಇಸವಿಯ ಅಂತ್ಯದವರೆಗೂ ಜಿನ್ನರಲ್ಲಿ ಮೈಗೂಡಿದ್ದಿತು.1896ರಲ್ಲಿ ಬ್ಯಾರಿಸ್ಟರ್ ಆಗಿ 1897ರಲ್ಲಿ ಬೊಂಬಾಯಿ ಹೈಕೋ ರ್ಟ್ ವಕೀಲರಾಗಿ ನಿಂತ ಮೂರೇ ವರುಷ ಗಳೊಳಗೆ ಈ ಬ್ಯಾರಿಸ್ಟರನ ವರ್ಚಸ್ಸು ವಿಶೇಷ ಬೆಳೆಯಿತು. ಆ ಮೇಲೆ ಬೊಂ ಬಾಯಿ ಪ್ರಾಂತಿಕ ಸಂಘದ ಸದಸ್ಯರಾದರು. ಮಿಂಟೋ-ಮೋರ್ಲೆ ಸುಧಾರಣೆ ಗಳಲ್ಲಿ ಮುಸ್ಲಿಮರಿಗೆ ಪ್ರತ್ಯೇಕ ಪ್ರಾತಿ ನಿಧ್ಯಾಧಿಕಾರವನ್ನು ಸೇರಿಸುವ ಸೂಚನೆಗೆ ವಿರುದ್ಧವಾಗಿ ಮಿ. ಜಿನ್ನರು ಕಾಲದಲ್ಲಿ ಸ ಖಿ ಮಾಡಿದ್ದರು. 1906ರಲ್ಲಿ ದಾದಾ ಭಾಯಿಗಳ ಅ ಧ್ಯ ಕ್ಷ ತೆ ಯ ಲ್ಲಿ ಸೇ ರಿದ ಕಾಂಗ್ರೆಸಿನಲ್ಲಿ ಮಿ. ಜಿನ್ನರು ಭಾಗವಹಿಸಿದ್ದರಲ್ಲದೆ, ಹಿಂದೂ ಮುಸ್ಲಿಂ ಏಕ್ಯ ಸಾಧನೆಗಿಳಿದ 1911ರ ಕಾಂಗ್ರೆಸಿನಲ್ಲಿ ಮುಸ್ಲಿಮರೊಂದಿಗೆ ಸೇರಿ ದೆ ಅರ್ಜಿ ನಂಗ್ರಿ ಹಿಡಿದಿದ್ದರು ಇಂಗ್ಲಾಂ ಡಿನ ಭಾರತ ಕೌನ್ಸಿಲನ್ನು ಪುಧಾರಿಸುವ ಕುರಿತು ಇಲ್ಲಿಯ ಕಾಂಗ್ರೆಸಿನ ಪರವಾಗಿ ಇಂಗ್ಲಾಂಡಿಗ್ಗೆಹೋಗಿದ್ದ ಶಿಷ್ಟಮಂಡಲಿಯ ಲ್ಲಿ ಮಿ. ಜಿನ್ನರಿದ್ದರು. ಅವರು ಮುಸ್ಲಿಂ ಲೀಗಿನ ಪ್ರಾಥಮಿಕ ಸದಸ್ಯನಾಗಿ ಸೇರಿದು ದೇ 1913ರಲ್ಲಿ. ಆ ಮೇಲೆ ಹಿಂದೂ ಮು ಸ್ಲಿಂ ಒಕ್ಕಟ್ಟಿಗಾಗಿಯೇ ಪ್ರಯತ್ನಿಸಿ 1915ರಲ್ಲಿ ಕಾಂಗ್ರೆಸು ಮತ್ತು ಮುಸ್ಲಿಂ ಲೀಗುಗಳೊಳಗೊಂದು ರೀತಿಯ ಸಂಬಂಧ ಜೋಡಣೆಯನ್ನು ಮಾಡಿ ಹಾಕಿದರು. 1916ರಲ್ಲಿ ಪ್ರಥಮ ಬಾರಿ ಮುಸ್ಲಿಂ ಲೀಗಿ ನ ಅಧ್ಯಕ್ಷಸ್ಥಾನ ವಹಿಸಿದರು; ಆ ಮೇಲೆ 1920ರ ಲೀಗ್ ವಿಶೇಷಾಧಿವೇಶನದ ಅಧ್ಯ ಕ್ಷರಾದರು. 1917ರಿಂದ 'ಹೋಂರೂಲ್' ಚಳವಳಿಯ ಕಾರ್ಯಕರ್ತರಲ್ಲೊಬ್ಬರಾಗಿ ದ್ದರಲ್ಲದೆ ಹೋಂ ರೂಲ್ ಸಂಸ್ಥೆಯ ಬೊಂ ಬಾಯಿ ಶಾಖೆಯ ಅಧ್ಯಕ್ಷರಾಗಿಯೂ ಇ ದ್ದರು. 1920ರಿಂದ ಕಾಂಗ್ರೆಸಿನ ಅಸಹ ಕಾರ ಮತ್ತು ಖಿಲಾಫತ್ ಚಳವಳಿಗಳ ಲ್ಲೇನೊಂದೂ ಅಸಕ್ತಿ ತೋರಿಸದೆ ದೂರ ವಾಗಹತ್ತಿ 1928ರ ವರೆಗೂ ಪ್ರತ್ಯೇಕ ಉಳಿದರು.

1929 ಉಗ್ರಾವತಾರೀ ಜಿನ್ನರು ಉ ಗಮವಾದ ಇಸವಿ! ಅವರ 14 ಶರ್ತಗಳು ಮುಂದೆ ಬಂದುದು ಆಗಲೇ; ಕೇವಲ ಮುಸ್ಲಿಂ ಸಮಾಜದ ನಾಯಕನಾಗಿ ಅವರು ಮಾರ್ಪಟ್ಟಿದ್ದು ಅಂದಿನಿಂದಲೇ. ಪ್ರಥಮ ಹಾಗೂ ದ್ವಿತೀಯ ರೌಂಡ್ ಟೇಬಲ್ ಕೊನ್ಫರೆನ್ಸುಗಳಲ್ಲಿ ಮುಸ್ಲಿಂ ಪ್ರತಿನಿಧಿಯಾ ಗಿ ಭಾಗ ವಹಿಸಿದ್ದರಲ್ಲದೆ ವಾಸ್ತಿಂ ಸಮಾ ಜದ ಸರ್ವ ಪ್ರಥಮ ನಾಯಕನಾಗಿ ಬೆಳೆ ದರು. 1934ರಲ್ಲಿ ಮುಸ್ಲಿಂಲೀಗಿನ ಅಧ್ಯ ಕ್ಷರಾದವರು, ಆ ಮೇಲೆ 1947ರ ವರೆಗಿನ ಪ್ರತಿ ವರುಷವೂ ಅವರೇ ಅಧ್ಯ ಕ್ಷರಾಗಿ ಲೀಗಿನ ಅಧ್ಯಕ್ಷ ಗಾದಿಯನ್ನು ಮುಸ್ಲಿಂ ಸರ್ವಾಧಿಕಾರತ್ವವನ್ನೂ ಕಾಯಂ ಪಡಿಸಿಕೊಂಡಿದ್ದರು. 1935ರ ಶಾಶ್ವ ತ ಯ ರೌಂಡ್ ಟೇಬಲ್ ಸಮ್ಮೇಲನದಲ್ಲಿ ಭಾಗವಹಿಸದೆ, ಮುಸ್ಲಿಮರಿಗೊಪ್ಪಿಗೆಯಾ ಗದ ಯಾವ ಜವಾಬ್ದಾರೀ ಸರಕಾರವೂ ಬೇಡವೆಂದಾತಂಕಿಸಿತ್ತಾ ಬಂದರು. ಹ ಲವು ವರುಷ ಕೇಂದ್ರ ಎಸೆಂಬ್ಲಿಯಲ್ಲಿ ಲೀಗ್ ಪಕ್ಷದ ನಾಯಕನಾಗಿದ್ದರು.

1936ರ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಲೀಗುಗಳು ವಿಜಯಗೊಂಡು ಕಾಂಗ್ರೆಸು ತನ್ನ ಮಂತ್ರಿ ಮಂಡಲಗಳಲ್ಲಿ ಲೀಗ್ ಸದಸ್ಯರನ್ನು ಸೇರಿಸಿಕೊಳ್ಳದಿದ್ದುದ ಕ್ಕೆ 'ಕಾಂಗ್ರೆಸ್ ಸರ್ವಥಾ ಹಿಂದೂ ಸಂಸ್ಥೆ; ಹಿಂದೂ ರಾಜ್ಯ ಸ್ಥಾಪಕ ಮುಸ್ಲಿಂ ದ್ರೋಹಿ" ಎಂಬ ಚಳವಳಿ ಎಂಡನೇ ಯುದ್ಧಾರಂಭದಲ್ಲಿ ಕಾಂಗ್ರೆಸ್ ಸರಕಾರಗಳು ರಾಜೀನಾಮೆಟ್ಟಾಗ 'ಬಿಡುಗಡೆ ದಿನಾಚರಣೆ' ಮಾಡಿ ಸಂತೋಷ ಪ್ರದ ರ್ಶನ-ಚರ್ಚಿಲ್ ಅಮೆರಿ ಸರಕಾರಗಳ ಪಕ್ಷವಹಿಸಿ ಕಾಂಗ್ರೆಸಿನ ಸ್ವಾತಂತ್ರ್ಯ ಚಳವಳಿಗಳಿಗೆ ವಿರುದ್ಧಾಚರಣೆ-1942 ರಿಂದ 45ರ ವರೆಗೆ ಕಾಂಗ್ರೆಸು ಮತ್ತು ಮಹಾತ್ಮಾ ಗಾಂಧಿಯವರೆಲ್ಲೇ ಒದ್ದಾಡಿ ದರೂ ಸಂಧಾನಕ್ಕೊಪ್ಪದೆ ಪ. ತ್ಯೇ ಕ ರಾಷ್ಟ್ರಯಾಚನೆ - ಪ್ರತ್ಯಕ್ಷ ಕಾರ್ಯಾಂ ದೋಲನವೆಬ್ಬಿಸಿ ಅಮಾನುಷ ಮಾರಾ ಮಾರಿ, ಹತ್ಯಾಕಾಂಡ - 1947 ನೇ ಅಗೋಸ್ತು 15ರಲ್ಲಿ ಪಾಕಿಸ್ತಾನ್ ಸ್ಥಾಪ ನೆಯೊಂದಿಗೆ ಭಾರತ ಮತ್ತು ಪಾ ಕಿಸ್ತಾನ್ ಸ್ವಾತಂತ್ರ್ಯ- 1948 ನೇ ಆಗೋಸ್ತು 15ರ ಪಾಕಿಸ್ತಾನ್ ಪ್ರಥಮ ವರ್ಧಂತಿಗೇನೇ ಹಾಜರಾಗಲಾಗದ ಕರಿಣ ಕಾಹಿಲೆ-1948ನೇ ಸೆಪ್ಟೆಂಬರ್ ತಾ 11ನೇ ರಾತ್ರಿ ತನ್ನ 72 ನೇ ವಯಸ್ಸಿನಲ್ಲಿ ಹೃದಯಸ್ತಂಭನದಿಂದ ಮರಣ!

ತನ್ನ ಅಣ್ಣನೊಂದಿಗೆ ಸನಾತನ ಏಕ ಜೀವದಂತಿನ್ನ ಪ್ರೀತಿಯ ಸಹೋದರಿ ಮಿಸ್. ಫಾತಿಮಾ ಜಿನ್ನರೇ ಕಾಯಿದೇ ಆಝಮ್ ಜಿನ್ನರ ಪರಮಾಪ್ತ ಬಂಧು. ಹಲವು ವರುಷಗಳಿಂದ ವಿದುರರಾಗಿದ್ದ ಮಿ. ಜಿನ್ನರಿಗೆ ಶ್ರೀಮತಿ ನೆಸ್ವಾಡಿಯಾ ಒಬ್ಬಳೇ ಮಗಳು.

ಕೊನೆಯ ದಿನಗಳು

ಜನ್ಮತಃ ಬಡಕಲು ಪ್ರಕೃತಿಯವರಿದ್ದು ಕೊನೆಕೊನೆಗೆ ಕಾಹಿಲೇ ಪ್ರಕೃತಿಯವರಂ ತೆ ಕಾಣುತಿದ್ದ ಮಿ. ಜಿನ್ನರ ಕೈಟ್ಟಾಕ್ಟೆ ಬೋದಲ್ಲಿ ಚಿಂತಾಜನಕ ಸ್ಥಿತಿಯಲ್ಲಿದ್ದಾಗ ರೆಂಬ ವಾರ್ತೆ ಮೊದಲೇ ಬಂದಿತ್ತು. 'ಕೆ ನ್ಸರ್' ಪೀಡೆಯ ವಾರ್ತೆಯಿತ್ತು. ಆದರೆ ಪಾಕಿಸ್ತಾನ್ ಸರಕಾರವಿದನ್ನು ಹಿಂದು ಸ್ತಾನದವರ ಅಪಪ್ರಚಾರವೆಂದು ಅಲ್ಲಗಳೆ ದು ಅವರ ದೇಹಸ್ಥಿತಿ ಸಂಬಂಧದ ಸುದ್ದಿ ಗಳನ್ನು ಪೂರ್ತಿ ಒಟ್ಟಿಟ್ಟಿದ್ದಿತು. ಈಗ ಪಾಕಿಸ್ತಾನ್ ಸರಕಾರ ಕೊಟ್ಟರುವ ಸುದ್ದಿ ಹೀಗೆ:--ಎರಡು ತಿಂಗಳ ಮೊದಲು ಜ.ಲಾಯಿ 19ಲ್ಲಿ ಕೈಟ್ಟಾಕ್ಟೆ ಮತ್ತು ಜ, ಲಾಯಿ 6ರಲ್ಲಿ ಏಮ್ಬಯಾರತಿಗೆ ಹೋಗಿದ್ದ ಕಾಯಿದೇ ಆಝಾಮರಿಗೆ ಐದಾರು ದಿನ ಗಳ ನಂತರ 'ಇನ್ಫ್ಲುಯೆಂಝಾ' ಜ್ವರ ಕಾಣಿಸಿಕೊಂಡಿದ್ದು ಒಮ್ಮೆ ಗುಣವಾದರೂ ಅದು ಮರುಕಳಿಸುತಿತ್ತಲ್ಲದೆ ಶ್ವಾ ಸನಳಿಕೆಯ ಉರ್ಬಿಣ್ಣಿಗಳೂ ಕಾಣಿಸಿ ಕೊಂಡಿದ್ದುವು. ಹೀಗೆಯೇ ಹಲವು ಬಾರಿ ಕಾಹಿಲೆ ಮತ್ತು ಗುಣಮುಖವಾಗುತ್ತಿದ್ದು ಆಗೋಸ್ತು 13ರಲ್ಲಿ ಕೈಟ್ಟಕ್ಕೆ ಬಂದಿದ್ದರು.

ಅಂದಿನಿಂದ ಸೆಪ್ಟೆಂಬರ್ 11ರ ವರೆಗೂ ಹೀಗೆಯೇ ನಡೆದಿತ್ತು. ಆದರೂ ಅವರು ತನ್ನ ಅಧಿಸೂ ಕಾರ್ಯಗಳನ್ನು ನಿರ್ವಹಿ ಸಲು ಶಕ್ಯರಿದ್ದರು. ಸೆಪ್ಟೆಂಬರ್ ತಾ. 11ರಲ್ಲಿ ತನ್ನ ಸ್ವಂತ 'ವಿಕಿಂಗ್' ವಿಮಾ ನ ಹತ್ತಿ ಮಿಸ್ ಫಾತಿಮಾ ಜನ್ನಳೊಂದಿ ಗೆ ಅಪರಾಹ್ನ 10-30ಕ್ಕೆ ಕರಾಚಿಯಲ್ಲಿ ಳಿದು ತನ್ನ ಗವರ್ನರ್ ಜನರಲ್ ಬಂಗಲೆ ಸೇರಿದ್ದರು. ಅಲ್ಲಿ ಸೇರಿದುದೇ ತಡ: ಬಾ ಹಿಲೆ ಒಮ್ಮೆಗೇ ಪ್ರಬಲಿಸಿ ರಾತ್ರಿ ತಾಸು 10-25ಕ್ಕೆ ಹೃದಯಕ್ರಿಯೆ ಫಕ್ಕನೆ ನಿಂತು ಹೋಯಿತು. ಸಾ ಯು ವಾ ಗ ಮಿಸ್, ಫಾತಿಮಾ ಮತ್ತು ಮೂ ವರು ಡಾಕ್ಟರರೂ ಇತರ ನೌಕರರೂ ಅಲ್ಲಿಗೆಗಿದ್ದರು. ಕೂಡಲೇ ಅಧಿಕಾರಿ ದಂಪತಿಗಳು, ಮತ್ತು ಪ್ರಚಂಡ ಜನ ತಂಡ ನೆರೆದು ಕೊನೆಯ ಗೌರವ ಸಲ್ಲಿಸಿದರು. ತಾ. 12 ನೇ ಆಪರಾಹ್ನೆ ಪಾಕಿಸ್ತಾನ್ ತಿಲ್ಲಿ ಮತ್ತು ಜನಕ ಹಾಗೂ ಗವರ್ನರ್ ಜನರಲ್ ಮಿ. ಜಿನ್ನರ ಕವ ಮೆಂಟನೆಗೆ ರಾಜ ಯೋಗ್ಯ ಸಂಭ್ರಮದಿಂದ ನಡೆದು ಕರಾಚಿಯ "ಪ್ರದರ್ಶನಕ್ಷೇತ್ರ"ದ ಬಳಿಯ, ಜುಮ್ಮಾ ಮಸೀದಿ ಕಟ್ಟುವ ಸ್ಥಳದಲ್ಲಿ ಧರ್ಮವಿಧಿ ಪ್ರಕಾರ ಹೂಳಲಾಯಿತು. ಜಿನ್ನರ ದೇಹ ತ್ಯಾಗದ ನಂತರ ಸಮಾಧಿ ಗೊಳಿಸುವವರೆಗೆ ಪಾಕಿಸ್ತಾನ್ ಪ್ರಜೆಗಳು ತಮ್ಮ ರಾಷ್ಟ್ರ ಪಿತನಿಗೆ ಸಲ್ಲಿಸಿದ ಕೊನೆ ಯ ಗೌರವ ವೈಖ್ಯಗಳು ಅವರ್ಣನೀಯ ವಿನಿ ಸಿ. ಜನವರಿ 31ರಲ್ಲಿ ಬಾಪೂಜಿಯ ಶವ ಸಂಸ್ಕಾರದ ವೇಳೆ ಫಿಲ್ಲಿಗ್ಗುಲ್ಲಿ ನಡೆದಿದ್ದುದೇ ನೆಸ್ಟೆಂಬರ್ 12ರಲ್ಲಿ ಕರಾಚಿಯಲ್ಲಿ ನಡೆಯಿತು! ಅಂದಿನಿಂದಿದುವರೆಗೂ ಭಾರತ ಮತ್ತು ಪಾಕಿಸ್ತಾನಗಳೆಂಡೂ ಎಲ್ಲಾ ವಿಧದಲ್ಲೂ ಸಮಾನ ದುರದೃಷ್ಟ ಗಳಿಗೇನೇ ಈಡಾಗಿವೆ. ಕೊಲೆ, ನರ, ಒಳಗೊಂದಲ, ವಿಶ್ವ ವಿಯೋಗದ ಆಪತ್ಪಾಥ ಸ್ಥಿತಿ-ಇವೆಲ್ಲವೂ ಇನೆರಡಕ್ಕೂ ಒಂದೇ.

ಮಿ. ಜಿನ್ನರು ಮರಣಗೊಂಡ ರಾತ್ರಿ ಬೇಗಾಗವ್ವುದರೊಳಗೆ ಪಾ ಕಿ ಸ್ತಾ ನ್ ಮಂತ್ರಿ ಮಂಡಲದ ಅವಸರ ಸಭೆ ಸೇರಿ ಭಾವೀ ಕಾರ್ಯಕ್ರಮಗಳನ್ನು ನಿರ್ಧರಿ ಸಿದೆ ಪೂರ್ವ ಬಂಗಾಳದ ಪ್ರಧಾನ ಮಂತ್ರಿಯಾಗಿದ್ದ ಖ್ವಾಜಾ ನಾಜಿಮುದ್ದೀನರು ಪಾಕಿಸ್ತಾನದ ತಾತ್ಕಾಲಿಕ ಗವರ್ನರ್ ಜನರಲರಾಗಿ ನೇಮಕಗೊಂಡಿದ್ದಾರೆ. ಮಿ. ಜಿನ್ನರು ಹಾಕಿಟ್ಟರುವ ಪಾದಿಯಲ್ಲೇ ಪಾಕಿಸ್ತಾನವನ್ನು ನಡೆಸಿಕೊಂಡು ಹೋ ಗುವೆಂದು ಪ್ರಧಾನಿ ಮಿ. ಲಿಯಾಖತ್ ಅಲೀಖಾನರು ಘೋಷಿಸಿದ್ದಾರೆ. ಪಾಕಿ ಸ್ತಾನದಲ್ಲಿ 40 ದಿನಗಳವರೆಗೆ ದುಃಖಾಚ ರಣೆ ನಡೆಯುವುದು. ಪಾ ಕಿ ಸ್ತಾ ನ್ ಧ್ವಜವು ಅರ್ಧಕ್ಕೆಳಸಲ್ಪಟ್ಟಿದೆ.

ಭಾರತದ ಮುಖ್ಯ ನಗರಗಳಲ್ಲೂ ರಾ ಷ್ಟ್ರ ಧ್ವಜವನ್ನು ಅರ್ಧಕ್ಕೆಳಸಿ ದುಃಖ ಪ್ರದರ್ಶಿಸಲಾಯಿತಲ್ಲದೆ, ಗವರ್ನರ್ ಜನ ರಲ್ ರಾಜಾಜಿ, ಪ್ರಧಾನಿ ನೆಹರು ಮತ್ತಿ ತರ ಮಂತ್ರಿಗಳೂ, ಪಾಕಿಸ್ತಾನದಲ್ಲಿರುವ ಭಾರತದ ಹೈಕಮಿಶನರ್ ಶ್ರೀ ಶ್ರೀಪ್ರಕಾ ಶ್ರೆಲ್ಲಾ ಪ್ರಮು ಖರೂ ದುಃ ಸೂಚಿ ಸಿದ್ದಾರೆ. ಎಲ್ಲೆಲ್ಲೂ ದೆರಕಾಲ್, ದುಃಖ ಸೂಚಕ ಸಭೆಗಳಾಗಿವೆ. ಇಡೀ ಜಗತ್ತಿ ನ ಎಲ್ಲಾ ನಾಯಕರೂ ಈ ಜಗತ್ಪ್ರಸಿದ್ಧ ರಾಜಕಾರಣಿ ಪುರುಷನ ವಿಯೋಗಕ್ಕಾಗಿ ಶೋಕ ವ್ಯಕ್ತ ಮಾಡಿದ್ದಾರೆ.

ನವಯುಗದ ಚಂದಾದಾರರಲ್ಲಿ ವಿನಂತಿ

'ನವಯುಗ'ದ 28ನೇ ವರ್ಷ ವು ಇದೇ ಅಗೋಸ್ತು ತಿಂಗಳ ಅಂತ್ಯಕ್ಕೆ ಮುಗಿದು ಸೆಪ್ಟೆಂಬರ ತಿಂಗಳಿಂದ 29ನೇ ಹೊಸ ವರ್ಷಾರಂಭ ವಾಗಿದೆ. ಈ ಸಮಯಕ್ಕೆ ಚಂದಾ ಅವಧಿ ಮುಗಿದ ಚಂದಾದಾರರೆಲ್ಲರೂ ದಯವಿಟ್ಟು ತಮ್ಮ ಚಂದಾಹಣವನ್ನು (ಹಿಂದಿನ ಬಾಕಿ ಇದ್ದರೆ ಅದನ್ನು ಸಮೇತ) ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸುವಂತೆ ಈ ಮೂಲಕ ಅಪೇಕ್ಷಿಸೋಣಾ ಗುತ್ತದೆ ಹಣವನ್ನು ಕಳುಹಿಸುವಾಗ ತಮ್ಮ ಚಂದಾ ನಂಬ್ರ ವನ್ನು ಸೂಚಿಸಿ ಸರಿಯಾದ ವಿಳಾಸವನ್ನು ತಿಳಿಸುವಂತೆ ಕೋರುತ್ತೇವೆ.

ನೆನೇಜರ್.

The Canara Banking Corporation Limited.

Estd: 1906
(Incorporated in British India)
Head Office: **UDIPI**, S. India.

Capital Authorised	....	Rs. 25,00,000
Capital Issued & Subscribed	....	Rs. 20,00,000
Capital Paid up	....	Rs. 19,98,445
Reserves....	....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.,
General Manager.

ಗುರುವಾರ, ಉಡುಪಿ, ೧೬-೯-'೪೫

ಎಚ್ಚರಿಕೆ!

ಕಳೆದ ವಾರ ಎರಡು ಪ್ರಮುಖ್ಯ ಘಟನೆಗಳು ನಡೆದಿವೆ. ಹೈದರಾಬಾದಿನೊಳಗೆ ಸೇನಾ ಪ್ರವೇಶ ಮತ್ತು ಪಾಕಿಸ್ತಾನ್ ಗವರ್ನರ್ ಜನರಲರ ನಿಧನ. ಇವೆರಡೂ ಅನಿವಾರ್ಯವಾಗಿಯೇ ಸಂಭವಿಸಿವೆ. ಈ ವಿಶೇಷ ಸಂದರ್ಭದಲ್ಲಿ ಭಾರತೀಯರಿಗೆ-ಅದರಲ್ಲೂ ಭಾರತೀಯ ಮುಸ್ಲಿಮರಿಗೆ-ಹೊಣೆಗಾರಿಕೆ ಅತಿ ಹೆಚ್ಚಿನದೆಂಬುದನ್ನು ಮರೆಯಬಾರದು.

ಕೆಲಕಾಲದಿಂದ ಸರ್ವರಿಗೂ ನಿತ್ಯ ಪರಿಚಿತವಾಗಿರುವ ನಿಜಾಮ್ ಸರಕಾರದ ಗುಣ ನಡತೆಗಳನ್ನು ಇಲ್ಲಿ ಪುನರ್ಮೆಲ್ಲ ಚಿತ್ರಿಸುವ ಬೇಕೆಂದಿಲ್ಲ. ಭಾರತ ಸಂಕಾರವು ಇದೇ ತಾ. 15ರಿಂದ ಯಾವ ಸೇನಾಕ್ರಮ ಕೈಕೊಂಡಿದೆಯೋ, ಅದನ್ನು ತಪ್ಪಿಸಿಕೊಳ್ಳುವುದಕ್ಕಾಗಿ, ಅದು ತನ್ನ ಶಕ್ತಿ ಮೀರಿ ಸಹಿಸಿ, ಒಪ್ಪಿದ್ದಿ. ಸ್ವಯತ್ನಿಸಿದ್ದಿತು; ಆದರೆ ನಿಜಾಮ್ ಸರಕಾರದ ವಂಚನೆ, ದುರಭಿಲಾಷೆ, ರಾಕ್ಷಸೀ ಮನೋವೃತ್ತಿಯಿದಿರಲ್ಲಿ ಯಾವುದೂ ಬೆಲೆ ಬಾಳದೆ ಹೋಯಿತು! ನಿರರ್ಥಕವಾದ ಸೌಹಾರ್ದತೆಗಳ ಸಂಗ್ರಿಯಲ್ಲಿ ಹಿಂದೀ ಸರಕಾರವು ನಿಜಾಮ್ ಸರಕಾರದ ಕಡೆಗೆ ಮೊನ್ನೆಯವರೆಗೂ ತೋರಿಸುತ್ತಾ ಬಂದಿದ್ದ ಸದ್ಭಾವನೆಗಳಿಗೆ ಆಗ್ರಸ್ಥಾನ ಸಲ್ಲಬೇಕು! ಇಂದಿನ ಹಿಂದೀ ಸರಕಾರವೊಂದನ್ನು ಬಿಟ್ಟರೆ, ಮೊದಲಿನ ಬ್ರಿಟಿಷ್ ಸರಕಾರ ಇರ್ದಾಗ ಈ ಸ್ಥಾನದಲ್ಲಿ ಲೋಕದ ಬೇರಾವುದೇ ಸರಕಾರವಿರುತ್ತಿದ್ದರೂ ನಿಜಾಮರಿಗೆ-ಆ ರಝಾಕಾರ್ ಕೈಗೊಂಬೆಗೆ- ಇಂತಹ ಆಟಗಳನ್ನ ಇಷ್ಟೂ ದೀರ್ಘಾವಧಿ ಆಡಲಾಗುತ್ತಿರಲಿಲ್ಲ. ಈಗ ನಡೆದಿರುವ ಧ್ವಂಸಗಳನ್ನು ತಪ್ಪಿಸಬೇಕೆಂಬ ಒಂದೇ ಕಾರಣಕ್ಕಾಗಿ ಶಾಂತಿಪ್ರಿಯ ಹಿಂದೀ ಸರಕಾರವು, ನಿಜಾಮರ ಸಾಹಸ ಬಟ್ಟಲು ತುಂಬುವ ಪರಿಗಷ್ಟೇ ಅಲ್ಲ-ಕುಳಿತಿಲ್ಲಾಡುವವರೆಗೂ ಸಹಿಸಿ ನಿಂತಿತ್ತು. ಈ ಸಹನೆಯು ಎಷ್ಟು ಹೆಚ್ಚಾಗಿತ್ತೆಂದರೆ, ಭಾರತದಂತಹ ಸಶಕ್ತ ರಾಷ್ಟ್ರವೊಂದು ತನ್ನೊಳಗಿನ, ತನಗಿಂತ ದುರ್ಬಲ ಸಂಸ್ಥಾನವೊಂದರ ಅತಿರೇಕ ಅತ್ಯಾಚಾರಗಳ ದಿರಲ್ಲಿ ಪ್ರದರ್ಶಿಸಿದ ಈ ವಿನಯಕ್ಕೆ -ಮಿಕ್ಕ ಸ್ಥಿತಿಗತಿಗಳು ಹಾಗಿರಲಿ, ಕೇವಲ ಇದೊಂದಕ್ಕೆ-ಎನಾದರೂ ಬೆಲೆ ಕೊಡುವುದಾದರೂ, ಆ ಬೆಲೆಯೇ ಕಡಿಮೆಯೆಂದರೂ ಇಬ್ಬರು ನಿಜಾಮರ ಅಧಿಕಾರಕ್ಕಿಂತ ಹೆಚ್ಚಾದೀತು! ಆದರೆ ರಝಾಕಾರ್ ಗರ್ಭಾಂತರ್ಗತ ನಿಜಾಮರಿಂದ ಇದಾವುದನ್ನೂ ತಿಳಿಯಲಿಕ್ಕಾಗದೆ ಹೋದುದು ಅವರ ಕೆಡಕು ಗಾಲಕ್ಕೆ! ಇದು ವಿನಾಶ ಕಾಲದ ಬುದ್ಧಿ!

ಈಗ ಹಿಂದೀ ಸೇನೆಗಳು ದೊಡ್ಡ ಪಟ್ಟಣಗಳಲ್ಲಿ ಹೈದರಾಬಾದಿನೊಳಗಡೆಯಲ್ಲಿವೆ; ತಮ್ಮ ಹಕ್ಕಿನ ಹಾಗೆ ತುಳಿಯುತ್ತಾ ನೆಕುಂದರಾಬಾದಿನತ್ತ ಮುಂದೊತ್ತುತ್ತಿವೆ. ಕೆಲವು ಸ್ಥಳಗಳಲ್ಲಂತೂ ಗೊತ್ತಿದ್ದದ್ದೇ. ಭಾರತದ ಗುಣ ಪರೀಕ್ಷೆ ಮುಗಿದು, ಈಗ ಶಕ್ತಿ ಪರೀಕ್ಷೆ ನಡೆದಿದೆ. ಇದನ್ನು ಒಂದು ಉದ್ದೇಶ ಕಟ್ಟಿಕೊಂಡೇ ಪರೀಕ್ಷಿಸುತ್ತಿರುವವರು ಹಲವರು-- ಮೊದಲನೆಯದಾಗಿ ನೆರೆಯ ಪಾಕಿಸ್ತಾನ. ಆ ಮೇಲೆ ಲೋಕದ ಎಲ್ಲಾ ರಾಷ್ಟ್ರಗಳೂ. ಅಷ್ಟೆ ವಿನಹಾ ಹಿಂದೀ ಕೇಂದ್ರದೊಂದಿಗೆ ಸೇರಿಹೋಗಿದ್ದ ಆಶ್ರಿತರು, ಈ ಮೊದಲು ಹೈದರಾಬಾದಿನ ಅಕ್ಷೌಹಿಣಿಗಳಿಗೆ ಒಂದು ರೀತಿಯ ಬೆಲೆ ದೊರಕಿ ಪ್ರದ್ದುದನ್ನು ಕಂಡು "ತಾವು ಬಿವಸರ ಮಾಡಿದ್ವಾಗಿಲ್ಲಿ!" ಎಂದೆ. ಪಶ್ಚಾತ್ತಾಪ ಪಟ್ಟಿರಬೇಕು. ಹಿಂಥ ಪರಿಣಾಮ ಸಮೂಹಗಳಿಗೊಂದಿರಬಹುದು. "ಯಾಕೆ ಸುಮ್ಮನಿರುವಿರಿ" ಎಂದು ಹಿಂದೀ ಸರಕಾರವನ್ನು ಕೆಣಕಿ, ಹಂಗಿಸಿ, ಉಬ್ಬಿಸಿದ ಹಿಂದೀಜನತೆ ಶಾಂತಪೇಕ್ಷಿಸಿದುದಕ್ಕೆಗ ಪಡೆದಿದೆ. ರಝಾಕಾರಾಂತರ್ಗತ ನಿಜಾಮ್ ಸರಕಾರಕ್ಕೆ ಥ್ರವಾಗಬಲ್ಲ ಏಕ ಮಾತ್ರ ಭಾಷೆಯಲ್ಲೇ ಭಾರತ ಸರಕಾರ ವೀಗ ಮಾತಾಡುತ್ತಿದೆ.

ಈಗ ಬಂದಿರುವುದು ತಿರುಗಿ ಜನತೆಯನ್ನೇ ವ್ಯಸ್ತಿಸಬೇಕಾದ ಸಾದಿ. ಜನತೆಯ ಕರ್ತವ್ಯವೇನು? ಒಂದೇ ವಾಕ್ಯದಲ್ಲಿ ಹೇಳುವುದಾದರೆ ರಾಷ್ಟ್ರದ ಶಿಸ್ತಿಗೆ ಮತ್ತು ಇರಸ್ತಿಕೆಯನ್ನುಳಿಸಿಕೊಳ್ಳುವ ಇಂದಿನ ಮಹಾ ಕರ್ತವ್ಯ ನಿರ್ವಹಣದಲ್ಲಿ ಏನೇನನ್ನೆಲ್ಲಾ ಸರಕಾರವಪೇಕ್ಷಿಸುವುದೋ ಅವೆಲ್ಲವನ್ನೂ ಪೂರೈಸಿಕೊಡುವುದೇ ಜನತೆಯ ಪ್ರಾಣಿನ ಕರ್ತವ್ಯ.

ಇಲ್ಲಿ ಒಂದು ಕಡೆಗೆ ವಿಶೇಷ ಜಾಗರೂಕತೆಯ ಕಣ್ಣಿಡದೆ ನಿರ್ವಾಹವಿಲ್ಲ. ರಝಾಕಾರ್ ರಾಕ್ಷಸ ಶಕ್ತಿಯಂತೆಯೇ ಭಾರತದೊಳಗಿನ ಮುಸ್ಲಿಮಂ ಬೆಂಬಲವನ್ನೂ ನಿಜಾಮರು ಮತ್ತವರನ್ನತ್ತಿ ಹಿಡಿದಿರುವವರು ನಂಬಿ ಕೊಂಡಿದ್ದಾರೆ. ಭಾರತದೊಳಗಿನ ಮುಸ್ಲಿಮರು ತಮ್ಮ ಪ್ರಾಮಾಣಿಕತೆಯೆಬ್ಬಿಸಿ, ತಮ್ಮನ್ನು ರಕ್ಷಿಸಿ ಕೊಡುವ ದ್ವಿತೀಯ ರಂಗವನ್ನು ಭಾರತದೊಳಗೆ ನಿರ್ಮಿಸುವರೆಂಬ ಆ ವರ ನಿರೀಕ್ಷೆ ಮತ್ತು. ಆ ತ್ಕೇಜನವಿದೆ! ಆದರೆ ವಿಚಾರೀ ಮುಸ್ಲಿಮರಿಲ್ಲರ ಕಣ್ಣೂ ಇವ್ಹರಲ್ಲೇ ತೆರೆಮುಚ್ಚುವುದಕ್ಕಾಗಿ ಸಂತೋಷಿಸಬೇಕು. ಕೈದಂಬಾದಿನ ಅತ್ಯಾಚಾರಗಳನ್ನು ಖಂಡಿಸಿ, ಅದನ್ನು ಕೂಡಲೇ ಸದ್ದಾರಿಗೆ ತರಬೇಕೆಂದು ಭಾರತ ಸರಕಾರವನ್ನು ಪ್ರೇರೇಪಿಸಿಲು ಹಲವು ಹಿಂದೀ ಮುಸ್ಲಿಮರು ಮಿಕ್ಕವರಂತೆಯೇ ಮುಂದಾಗಿದ್ದರು. ಈಗ ಕೂಡಾ ವಿವೇಚಾರವಂತ ಮುಸ್ಲಿಮರು ತ್ರಿಕರಣಪೂರ್ವಕವಾಗಿ ನ್ಯಾಯಬಾಧಕರಂಗಿರುವುದು ಕಂಡುಬರುತ್ತಿದೆ

ಆದರೂ ಆನಿವೇಕಿ ಮುಸ್ಲಿಂ ಮತಾಂಧರು ರಝಾಕಾರರ ಬಲೆಯೊಳಗೆ ಬೀಳಲಾರರೆಂದು ನಂಬಲಾಗುವದಿಲ್ಲ. ಇಲ್ಲೀಗ ಯಾರಿಂದಲೂ, ಯಾವ ರೀತಿಯ ಅಪಾತುರ್ಯ ಆಥವಾ ಅನ್ಯಾಯವಾಗ ಕೂಡದು ಎಂಬುದು ಎಲ್ಲರ ಶಪಥವಾಗಿರಲಿ. ಆ ಶಪಥವು ಪ್ರಾಣಾವಧಿ ಇದ್ದಾಗಿರಲೀ ಯಾರು ಏನೆಂದರೂ, ಭಾರತದ ರಾಷ್ಟ್ರಪಿತ ಮತ್ತಿತರ ನಾಯಕರು ಕಲಿಸಿದ ಪಾಠದಬಲದಿಂದ ಇಲ್ಲಿಯ ಮುಸ್ಲಿಮರನ್ನು ಸಮಾನ ಸಹೋದರ ಭಾವದಿಂದ ಕಾಣುವದನ್ನು ಎಲ್ಲರೂ ಕಲಿತಿದ್ದಾರೆ; ಆದರೆ ಪಾಕಿಸ್ತಾನ್ ನಿರ್ಮಾಣ ಹೋರಾಟದ ಕಾಲದಿಂದಲೂ ಇಲ್ಲಿಯ ಹೆಚ್ಚಿನ ಮುಸ್ಲಿಮರು ಕಲಿಯುತ್ತಾ ಬಂದಿದ್ದು ಪಾಠವೇ ಬೇರೆ. ಪಾಕಿಸ್ತಾನ್ ಮತ್ತು ನಿಜಾಮ್ ಸರಕಾರಗಳ ಅಪೇಕ್ಷೆಯಂತೆ ಹಿಂದೀ ಮುಸ್ಲಿಮರು ಈಗಲಾ ಪಾಠವನ್ನೇ ಕಾರ್ಯಕ್ಕೆ ಹಚ್ಚಿ ಅವರು ಅಪೇಕ್ಷಿಸುತಿರುವ ಪರಿಣಾಮವನ್ನೇ ಉಂಟು ಮಾಡಿದಲ್ಲಿ ಗತಿಯೇನು, ಎಂದು ಹೆದರಬೇಕಾದುದು ಈಶ್ವರದ್ರೋಹಿಗಳೇ ಹೊರತು ಅನ್ಯರಲ್ಲವೆಂಬುದನ್ನು ಸ್ಪಷ್ಟ ತಿಳಿದಿರಬೇಕು. ಭಾರತೀಯ ಮುಸ್ಲಿಮರ ಸ್ಥಿತಿಮತಿಯ ಕುರಿತು ಕಪಿಕಪಿ ಪಡುವ ಅಂಶವಿದೆ ಹೊರತು ಭೀತಿಪಡುವ ಅವಶ್ಯತೆ ಇಲ್ಲ. ಪಾಕಿಸ್ತಾನಿಗಳು-- ಆ ಭಾಗದ ಮತಾಂತರ-- ಸ್ವಕಾರ್ಯ ಸಾಧನೆಗಾಗಿ ತಮ್ಮನ್ನೂ ಎಳೆದುಕೊಂಡು, ಕೆಲಸವಾ ದೊಡನೆಯೇ ತಾವು ಪೋಷಿಸಿದವರ ಸೆಳಗಗೇನೇ ತಮ್ಮ ಸ್ವೊಗೆದುಬಿಟ್ಟು ಅವರು ಆವರಣಕ್ಕೆ ಇದ್ದು ಬಡಲಿದ್ದಾರೆ, ಎಂಬುದನ್ನು ಭಾರತದ ಮುಸ್ಲಿಮರಲ್ಲಿ ವಿಜಾರಶಕ್ತಿಯಿರುತಿದ್ದರೆ ಪಾಕಿಸ್ತಾನ್ ಸ್ಥಾಪನಾಂದೋಲನದ ಕಾಲದಲ್ಲೇ ಗೂಢಿಸಿ ಹುದಿತ್ತು. ತಾವು ಸಂಪಾದಿಸಿಕೊಟ್ಟ ಪಾಕಿಸ್ತಾನದ ದೆಸೆಯಿಂದ, ಇಲ್ಲಿರುವ ತಮಗಾದುದೇನು, ಎಂಬುದನ್ನು ತಿಳಿದುಕೊಳ್ಳುವಷ್ಟು ಪ್ರಜ್ಞೆ ಈಗಲಾದರೂ ಇಲ್ಲಿಯ ಮುಸ್ಲಿಮರಲ್ಲಿ ಮೂಡಿದ್ದರೆ. ಕಾಪ್ಯ ಪಾಕಿಸ್ತಾನ್ ಮುಸ್ಲಿಮರಿಗೆ ಸ್ವತ್ಯೇಕ ರಾಜ್ಯ ಸಂಪಾದಿಸಿ ಕೊಡುವ ಹೊಣ್ಣಾಟದಿಂದ ಸ್ವತಃ ತಮಗೆ ಆ ವರೆಗಿದ್ದ ಪ್ರತ್ಯೇಕಾಧಿಕಾರಗಳೆಲ್ಲವನ್ನೂ ಕಳೆದುಕೊಂಡಿವೆಂದವರು ಪರ್ತಾತ್ತಾಪಪಡುತ್ತಿರಬಹುದು. ತಮ್ಮನ್ನೆ ವಂಚಿಸಿದ ಸ್ವಾರ್ಥಕ್ಕಾಗಿ ತಮ್ಮ ಪಾಲುಗಳೆಲ್ಲವನ್ನೂ ಬಲಿಗೊಂಡ ನೈಜವಾದ ವಿರೋಧಿಗಳು ಪಾಕಿಸ್ತಾನಿಗಳೇ ಹೊರತು ಮಿಕ್ಕವರಲ್ಲ ಎಂಬುದು ಇಲ್ಲಿಯ ಮುಸ್ಲಿಮರ ಮನಸ್ಸಿಗೆ ನಾಟಿರಬೇಕು. ಬಡಲಿಗೆ, ಅಂದು ಪಾಕಿಸ್ತಾನಿಗಳ ಬಲೆಯಲ್ಲಿ ಬಿದ್ದಂತೆ, ಇಂದು ಮತ್ತೊಮ್ಮೆ ನಿಜಾಮ್‌ವಾದಿಗಳ ಹೊರದಬ್ಬಲ್ಲಿ ಬೀಳುವದಕ್ಕೂ ಭಾರತದ ಮುಸ್ಲಿಮರಲ್ಲಿ ಯಾರೇ ಆದೂ ಸಿದ್ಧರೆಂದಾದರೆ, ಇದು ನಿಜಕ್ಕೂ "ಬಾಲಲು ಬಿಡದ ರೋಗ" ವೆಂದಲ್ಲದೆ ಬೇರೆ ಹೇಳಲಿಕ್ಕಿಲ್ಲ! ಇಂತಹ ಅವಿವೇಶವೆಲ್ಲಿಯೂ ನಡೆಯದಿರಲಿ-ನಡೆಯುವಂತಿದ್ದರೆ ಮಿಕ್ಕವರದನ್ನು ಯಾವ ಕಾರಣಕ್ಕಾಗಿಯಾದರೂ ಸಹಿಸದಿರಲಿ-- ಎಂದಲ್ಲಿ ಮತ್ತೊಮ್ಮೆ ಸ್ಪಷ್ಟವಾಗಿ ಹೇಳಬೇಕಾಗಿದೆ.

ಕಾಯ್ದೇ ಆಝಮ್ ದಿವಂಗತರಾದರು; ನಾವು ಯಾರನ್ನೂ ಬಿಟ್ಟಿಲ್ಲ. ಓರ್ವ ನಾಯಕನ ಮರಣದೊಂದಿಗೆ, ಅತನೊಂದಿಗಿದ್ದ ಭಿನ್ನಾಭಿಪ್ರಾಯಗಳೆಲ್ಲವನ್ನೂ ಮುಕ್ತಾಯಗೊಳಿಸಿ, ಆ ಉಭಾವದಿಂದ ನಿರ್ಮಾಣಗೊಂಡಿರುವ ಹೊಸ ವಿದ್ಯಮಾನ ವಷ್ಟನ್ನೇ ಗಣಿಸಬೇಕಾಗಿದೆ. ನ್ಯಾಯಕ್ಕೆಂತ ಹೆಚ್ಚಾಗಿ ವ್ಯಕ್ತಿಗೆ ಮಹತ್ವ ಕೊಡುವ ದೌರ್ಬಲ್ಯ ಮನೋವೃತ್ತಿಯನ್ನು ಪ್ರಮಿಸಬಹುದಾದರೆ, ಮಿ. ಜಿನ್ನರ ಮಾತುಗಳಿಗೆ ಹಿಂದೀ ಮುಸ್ಲಿಮರ ಹೃದಯ ಸೂರೆ ಹೋಗುವದನ್ನೂ ಅದೊಂದು ಮಿತಿಯ ವರೆಗೆ ಪ್ರಮಿಸಬೇಕಾಗಿ ಬರುತ್ತಿತ್ತು. ಆದರೆ ಅಂತಹ ಪ್ರಭಾವವಾಲಿ ಜಿನ್ನಾ ಇನ್ನಿಲ್ಲ. ಇಲ್ಲಿಯ ಮುಸ್ಲಿಮರು ಆ ಕಡೆಗೆ ಕತ್ತು ನೀಡಬೇಕಾದ ಆವಶ್ಯಕತೆ ಎಂದೂ ಇರಲಿಲ್ಲ; ಈಗಲಂತೂ ಅಲ್ಲಿದ್ದ ಒಂದು ಆಕರ್ಷಣೆ ಕೂಡಾ ತಪ್ಪಿ ಹೋಗಿದೆ. ಪಾಕಿಸ್ತಾನಸರಕಾರದ ಮೇಲಿರುವ ಸ್ವರಕ್ಷಣಾ, ಸ್ವರಚಿನಾ ಕಾರ್ಯಗಳ ಹೊಣೆಯು ಈಗ ಇಮ್ಮಡಿ ಬೆಳೆದಿದೆ; ಈಗಲೂ ಪಾಕಿಸ್ತಾನವು ಹಿಂದೀ ಮುಸ್ಲಿಮರ ಸಂಬಂಧ ವಿಟ್ಟುಕೊಳ್ಳಲಪೇಕ್ಷಿಸುತ್ತಾದಾದರೆ, ಅದು ತನ್ನ ಸ್ವೋದ್ಧಾರಕ್ಕಾಗಿ ಹೊರತು ಇಲ್ಲಿರುವವರ ಉಪಕಾರಕ್ಕಾಗಿ ಅಲ್ಲ. ಆದ್ದರಿಂದ ಹಿಂದೀ ಮುಸ್ಲಿಮರು ತಮ್ಮ ಎಲ್ಲಾ ಭ್ರಮೆಗಳನ್ನೂ ಸಂಪೂರ್ಣ ಬಿಟ್ಟು ಮಿಕ್ಕವರೊಡನೆ ಬಂಧುಭಾವದಿಂದ ಕಾದಾತ್ಮಕ್ಯ ಹೊಂದಲೇಬೇಕಾದ ಕಾಲವಿದು; ಈ ಶುದ್ಧೀಕರಣಕ್ಕೆ ಇನ್ನು ಅವಧಿ ದೊರೆಯದು. ಇಲ್ಲಿರುವ ಬಹುಸಂಖ್ಯಾಕ ಸಮಾಜಗಳವರು, ಸಮಾ[illegible] ಭಾವನೆಗಳನ್ನು, ಹಿಂದಿನ ಕಹಿ ನೆನಪುಗಳನ್ನು, ಯಾವ ರೀತಿಯಿಂದಲೂ ಪ್ರದರ್ಶಿಸದೆ, ಸರ್ವಸಮಾನ ರಾಷ್ಟ್ರೀಯತಾ ಭಾವನೆಯಿಂದಿರಬೇಕಾದುದು ಅಪ್ಪೇ ಅಗತ್ಯ ವೆಂಬುದನ್ನೂ ಮರೆಯಬಾರದು.

ಮಂಗಳೂರು

ಶ್ರೀಮಾನ್ ಕಸ್ತೂರಿ ನಾಗೇಶ ಕೈಗಳವರ ಶೋಚನೀಯ ನಿಧನ- ಗೌಡ ಸಾರಸ್ವತ ಬ್ರಾಹ್ಮಣ ಸಮಾಜದ ಕುಲೀನ ಕುಟುಂಬಸ್ಥರೂ, ಪ್ರಸಿದ್ಧ ವ್ಯಾಪಾರಸ್ಥ ವಹಿವಾಟು ಕುಶಲರೂ ಆದ ಶ್ರೀಮಾನ್ ಕಸ್ತೂರಿ ನಾಗೇಶ ಕೈಗಳವರು ಇದೇ ತಾ 10 ರಲ್ಲಿ ರಾತ್ರಿ ರಕ್ತಭೇದಿಯಿಂದ ತಮ್ಮ ನಿವಾಸದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಸತ್ಯವರ್ತನಸ್ಥಾವಂತರು, ದಾನಧರ್ಮ, ಸಮಾಜಸೇವೆಗಳಲ್ಲಿ ಪ್ರಥಮ ಪ್ರೇರಕರೆ ಸೇರಿದವರು. ಇವರು ಮಹಾಸೇಯರ ನಿಧನದಿಂದ ಸಾ ಸಮಾಜಕ್ಕೆ ಅಪಾರ ನಷ್ಟವುಂಟಾಯಿತು. ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಿ ಅವರ ದುಃಖಿತ ಕುಟುಂಬಕ್ಕೂ ಬಂಧು ಬಳಗ ಇಷ್ಟಮಿತ್ರರಿಗೂ ಸಾಂತ್ವನವನ್ನು ಪ್ರಾರ್ಥಿಸುವೆವು.

ಹೈದರಾಬಾದ್ ಧಾಳಿ ಪ್ರಾರಂಭ!

ಭಾರತೀಯರು-ನ್ಯಾಯಾಕಾಂಕ್ಷಿಗಳಿಲ್ಲರು-ಆಸಿವಾರ್ಯವಾಗಿ ಅಶಿಸಿದ್ದ ಮತ್ತು ನಿರೀಕ್ಷಿಸಿದ್ದ ಹೈದರಾಬಾದಿನೊಳಗೆ ಸೇನಾಧಾಳಿಯು ಸೆಪ್ಟೆಂಬರ್ ತಾ 13ನೇ ಪೂರ್ವಾಹ್ನ 4 ತಾಸಿಗೆ ಆರಂಭವಾಗಿದೆ; ರಝಾಕಾರ್ ಬಗಲೊಳಗಿನ ಹೈದರಾಬಾದ್ ನಿಜಾಮರು, ತಾನಾಗಿ ಎಳೆದುಕೊಂಡ ಅಪಾಯವಿಗ ಅವರ ಎದೆಗೆ ಬಡಿದಿದೆ!

ಇದು ತನ್ನೊಳಗಿನ, ಪರಿಕೈದರಾಬಾದ್‌ಸಂಸ್ಥಾನದ ತುಂಟತನವನ್ನು ನಿಲ್ಲಿಸಿ ಸುವ್ಯವಸ್ಥೆ ಸ್ಥಾಪಿಸುವದಕ್ಕಾಗಿ ಭಾರತ ಸರಕಾರವು ಕೈಕೊಂಡಿರುವ ಪೋಲೀಸ್ ಕಾರ್ಯಕ್ರಮವು; ಎಷ್ಟೇ ಬುದ್ಧಿವಾದಹೇಳಿದರೂ ಪೋಕ್ರಿತನ, ಕಳ್ಳತನಗಳನ್ನು ಬಿಡಲರಿಯದ ಮಗನಲ್ಲಿ ಸದ್ಬುದ್ಧಿ ಮೊಳೆಯಿಸುವುದಕ್ಕಾಗಿ ತಂದೆಯಾದವನು ಕೊಟ್ಟ ಕಲಿಸುವ ತಾಡನ!

ಬಾತಿದ ಪಕ್ಷಿಣಭಾಗದ ಸರ್ವ ಸೇನಾಪ(ಕಮಾಂಡರ್-ಇನ್-ಚೀಫ್)ಲೆಫ್ಟನೆಂಟ್ ಜನರಲ್ ಮಹಾರಾಜ್ ರಾಜೇಂದ್ರಸಿಂಹಜೀ, ಇವರು ತನ್ನ ಸೇನೆಯನ್ನು ತಾ 13ರಲ್ಲಿ ಧಾಳಿಗೆ ಹುರಿದುಂಬಿಸಿ ಬಿಡುವ 'ದಿನದಾಜ್ಞೆ' (Order of the day)ಕೊಡುತ್ತಾ ಹೀಗಂದಿದ್ದಾರೆ:-

ಸೈನ್ಯಕ್ಕೆ ಧಾಳಿ ಆಜ್ಞೆ

"ಎಚ್. ಇ. ಯಚ್. ನಿಜಾಮರಿಂದಾಳ್ವಲ್ಪಡುತ್ತಿರುವ ಹೈದರಾಬಾದ್ ಸಂಸ್ಥಾನವು ಅವ್ಯವಸ್ಥೆಯಲ್ಲಿದೆ. ಅವರ ಸರಕಾರ ವೆಂಬುದಕ್ಕ ಅಧಿಕಾರವಿಲ್ಲದಿರುವಂತೆ ಕಾಣುತ್ತಿದೆಯಲ್ಲದೆ, ಅಲ್ಲಿ ಈ ಮೊದಲೆಂದೂ ಇರದಿದ್ದಂತಹ ಅರಾಜಕತೆ ವ್ಯಾಪಿಸಿಕೊಂಡಿದೆ. ಸಂಸ್ಥಾನದ ಬಹುಸಂಖ್ಯಾಕ ಸಮಾಜವು, ತಾಯಿದೇಬದ್ಧ ಬೀಪನ ನಡೆಸುತ್ತಿರುವ ಎಲ್ಲಾ ಸಮಾಜಗಳ ಜನತೆಯು ಭಯಭರಿತ ಸ್ಥಿತಿಯಲ್ಲಿ, ನಿಸ್ಸಹಾಯಕ ಸ್ಥಿತಿಯಲ್ಲಿ ಬಾಳಿಕೊಂಡಿದ್ದಾರೆ. ತನ್ನ ಹೃದಯದಲ್ಲಿ ಹೈದರಾಬಾದಿನ ಅಥವಾ ಇದರ ಅರಸನ ಹಿತಸಂಬಂಧಗಳಾವುದೂ ಇರದ ಹೈದರಾಬಾದಿನನಜ್ಜನಾದ ಕಾಸಿಮ್ ರಜ್ಮಿಯು ಧರ್ಮಾಂಧ ಅನುಯಾಯಿಗಳಿಂದ ಈ ಗೊಂದಲ ನಡೆದಿದೆ. ಅವನ ಈ ಅನುಯಾಯಿಗಳು, ಸಂಸ್ಥಾನದ ಪೋಲೀಸರ ಬೆಂಬಲ ಪಡೆದುಕೊಂಡು, ಸುಲಿಗೆ, ದರೋಡೆ ಮತ್ತು ಮಹಿಳಾ ಮಾನಾಪಹಾರಗಳನ್ನು ತಮ್ಮ ಸ್ವಂತ ಕ್ಷೇತ್ರದೊಳಗೆ ನಡೆಸುವವರೆಂದಲೇ ಸರ್ವಾಧಾನಗೊಳ್ಳದೆ, ಭಾರತ ಯೂನಿಯನ್ ಗಡಿಗಳ ಈಚೆಗೂ ತಮ್ಮ ಕ್ರಿಯಾಕ್ಷೇತ್ರವನ್ನು ವಿಸ್ತರಿಸಿದ್ದಾರೆ. ಮಾನವೀಯ ತತ್ವಗಳನ್ನು ಹಾಗೂ ವಾಗ್ದಾನ ಮತ್ತು ಒಪ್ಪಂದಗಳನ್ನು ಈ ರೀತಿ ಸ್ವೈರ ವೃತ್ತಿಯಿಂದ ಅಸಡ್ಡೆ ಮಾಡುತ್ತಾ ಬರುವುದನ್ನು ಇನ್ನು ಸಹಿಸಿರಲಾಗುವುದಿಲ್ಲವೆಂಬುದನ್ನು ಹಿಸ್ ಎಕ್ಸಾಲ್ಟೆಡ್ ಹೈನೆಸ್ ಮತ್ತು ಅವರ ಸಲಹೆಗಾರರಿಗೆ ಮಂದಲ್ಟು ಮಾಡಲು ನಮ್ಮ ಪ್ರಜಾಧಿಕಾರೀ ಸರಕಾರವು ರಾಂತ ಹಾಗೂ ಸಮಜಾಯಿಸಿ ವಿಕೆಯ ಸರ್ವನಿಧಾನಗಳಿಂದಲೂ ಕಳದ ಆರು ತಿಂಗಳುಗಳಿಗೂ ಮಿಕ್ಕಿ ಪ್ರಯತ್ನಿಸುತ್ತಾ ಬಂತು. ಈ ರೀತಿಪೂರ್ಣ ಸೂಚನೆಗಳು ಕಿವುಡು ಕಿವಿಗಳೊಳಗೇನೇ ಬಿದ್ದುಹೋದುವು ನಮ್ಮೀ ನಿರ್ವಂಚನೆಯ, ಔದಾರ್ಯದ ಹಾಗೂ ಸಹನೆಯ ಪ್ರಯತ್ನಗಳು ದೌರ್ಬಲ್ಯಗಳೆಂದೇ ಗಣಿಸಲ್ಪಟ್ಟು ಮತ್ತಷ್ಟು ಅತ್ಯಾಚಾರಗಳಿಗೆ ಕೀಳುಬಿದ್ದವು. ಆದ್ದರಿಂದ ಹೈದರಾಬಾದಿನಲ್ಲಿ ಭದ್ರತೆ, ಕಾನೂನು ವಸ್ತು ವ್ಯವಸ್ಥೆಗಳ ಸಾಮಾನ್ಯ ಸ್ಥಿತಿಯನ್ನು ಮರುಸ್ಥಾಪನೆ ಮಾಡಬೇಕೆಂದು ನಮ್ಮ ಸರಕಾರ ನಿರ್ಧರಿಸಿದೆ. ಈ ಕಾರ್ಯವನ್ನು ನನ್ನ ಸೇನಾಪತ್ವದೊಳಗಿರುವ ಸೇನೆಗಳು ಮಾಡಬೇಕಾಗಿ ಬಂದಿದೆ. ಕಾನೂನು ಮತ್ತು ವ್ಯವಸ್ಥೆಗಳ ಪುನಸ್ಥಾಪನೆಯ ಮೊದಲ ಹಂಚಿಕೆಯಾಗಿಯೂ, ತನ್ನ ಕರ್ತವ್ಯ ನಿರ್ವಹಣವಾಗಿಯೂ, ಹೈದರಾಬಾದಿನ ಸುತ್ತಲಿರುವ ಸೆಕುಂದರಾಬಾದ್, ಕ್ರಿಮುವೆರಿ ಮತ್ತು ಜೋಲಾರಮಿನಲ್ಲಿರುವ ಭಾರತದ ಹಕ್ಕಿನ ಸೇನಾಪಾಳಯಗಳಲ್ಲಿ ನಮ್ಮಸೇನೆ ನಿಲ್ಲಿಸಬೇಕೆಂದು ನಮ್ಮ ಸರಕಾರವು ನಿರ್ಣಯಿಸಿದೆ.

ಆದ್ದರಿಂದ, ಸಂಸ್ಥಾನದ ಕಾನೂನು ಸುಭೆಯ ಜನತೆಗೆ ಶಾಂತಿ ಮತ್ತು ಅಭಿವೃದ್ಧಿಯನ್ನು ಮರು ಸಂಪಾದಿಸಿಕೊಡಲು ನೀವೀಗ ಹೈದರಾಬಾದ್ ಕ್ಷೇತ್ರದೊಳಗೆ ನುಗ್ಗಿ ಹೋಗಿರಿ; ನಿಮ್ಮನ್ನೆದುರಿಸುವ ಯಾವುದೇ ಪ್ರತಿಭಟನೆಯನ್ನಾದರೂ, ನಿಮ್ಮೊತ್ತಾಸಿರಿನ ಎಲ್ಲಾ ಆಯುಧಗಳ ಮೂಲಕ ಧ್ವಂಸ ಮಾಡಿರಿ. ನಮ್ಮ ಸರಕಾರದ ಸೂಚನೆಗಳಿಗೆ ವಿಧೇಯರಾಗಿ ಧರ್ಮ, ಜಾತಿ ಮತ ಸಾಮ್ಯವನ್ನೂ ನೋಡದೆ ಕಾಪು ದೇಬದ್ದ ವರ್ತನೆಯ ಎಲ್ಲಾ ಜನರನ್ನೂ ರಕ್ಷಿಸಿರಿ.

ಕೊನೆಯ ಮಾತಿಗಿ, ನೀವು ನಿಮ್ಮ ಧೈರ್ಯ ಮತ್ತು ಮಾನವೀಯ ವರ್ತನೆಗಳಿಂದ, ಹಿಂದೀ ಸೇನೆಯ ಅತ್ಯುತ್ತಮವಾದ ಸಂಪ್ರದಾಯಗಳನ್ನು ಮತ್ತು ಸತ್ಕೀರ್ತಿಯನ್ನು ಎತ್ತಿ ಹಿಡಿಯುವಿರೆಂದೂ ಅನುಮಾನಿಸಲು ನಿಮ್ಮ ಸರಕಾರದ ಘನತೆಯನ್ನು ಹೆಚ್ಚಿಸುವಿರೆಂದೂ ನನಗೆ ಪೂರ್ಣ ವಿಶ್ವಾಸವಿದೆ. ನೀವು ವಹಿಸಿರುವ ಈ ನ್ಯಾಯವಾದ ತತ್ವವನ್ನೆ ಭದ್ರವಸಿಯಿಟ್ಟು ಗೊಂದಲ ಮತ್ತು ಸಂಕಟಗಳನ್ನು ಬೇಗನೇ ಮಾಯಗೊಳಿಸಲು ಸಿದ್ಧಕಾರ್ಯದಲ್ಲಿ ಮುಂದೊತ್ತಿ ಹೋಗಿರಿ ದೇವರ ನಿಮ್ಮೆಲ್ಲರನ್ನೂ ಆಶೀರ್ವದಿಸಲಿ ಮತ್ತು ದೇವರು ನಿಮ್ಮೊಂದಿಗಿರಲಿ."

ಹೈದರಾಬಾದ್ ಜನತೆಗೆ ಅಭಯ!

ಸೇನೆಗೆ ಧಾಳಿಯಾಜ್ಞೆ ಕೊಟ್ಟ ಬೆನ್ನಲ್ಲೇ ಸರ್ವ ಸೇನಾಪತಿ ಜನರಲ್ ರಾಜೇಂದ್ರ ಸಿಂಹಜೀಯವರು ಹೈದರಾಬಾದ್ ಜನತೆಗಾಗಿ ಹೊರಡಿಸಿದ ಜಾಹೀರನಾಮೆಯ ಸಾರ ಹೀಗಿದೆ:-

"ತಲಪ್ಪಿ ತಂಗಳುಗಳಿಂದ ರಝಾಕಾರರು ಹೈದರಾಬಾದಿನೊಳಗಿನ ಎಲ್ಲ ರಾನಂನು ಪಿಡೀಯ ಪ್ರಜೆಗಳನ್ನೂ ಭಾರತ ಕೇಂದ್ರದ ಸ್ಯಾಂತಿಕ ಭಾಗಗಳವರನ್ನೂ ಭಯಂಕರವಾಗಿ ಮಾಡಿತ್ತಾ ಒಂದಿದ್ದಾರೆ. ರಝಾಕಾರರನ್ನು ಬರ್ಜಾಸ್ತು ಗೊಳಿಸಬೇಕೆಂದು ಮೇಲಿಂದ ಮೇಲೆ ಮಾಡಿಕೊಂಡ ನಿಜ್ಞಾಪನೆಗಳಿಗೆ ಮನ್ನಣೆ ದೊರೆಯಲಿಲ್ಲ. ಕೊಲೆ, ಮಹಿಳೆಯರ ಮೇಲಿನ ಅತ್ಯಾಚಾರ, ಸುಲಿಗೆ, ದರೋಡೆಗಳ ವರಿಮಾಣವು ಕ್ರಮಶಃ ಜೆಳೆಯುತ್ತಾ ಬಂದಿದ್ದು, ರಝಾಕಾರರ ಅಜೆಯ ಸೈನಾವಹಿನಿಯ ಸಂಸ್ಥಾನೀ ಪ್ರಜೆಗಳೆಲ್ಲರ ಮಾನ, ಪ್ರಾಣ, ಸೊತ್ತುಗಳ ಭದ್ರತೆ ತಪ್ಪಿದೆ. ಈ ಗಂಡಾಂತರದ ಭೀತಿಯು ಒತ್ತಿನ ಭಾರತ ಪ್ರಾಂತ್ಯಗಳಲ್ಲಿರುವ ರಾಷ್ಟ್ರೀಯರಿಗೂ ಒಡಿದಿದೆ. ಭಾರತಕೇಂದ್ರದ ಹೃದಯಸ್ಥಳದಲ್ಲಿರುವ ಒಂದು ಸಂಸ್ಥಾನವು ಅರಾಜಕತೆಯ ನಿಲಯ ವಾಗ್ತು ಕೇಂದ್ರವಾಗುವದನ್ನು ಇನ್ನು ಸಹಿಸಿಕೊಂಡಿರಲು ಭಾರತ ಸರಕಾರಕ್ಕೆ ಸಾಧ್ಯವಿಲ್ಲ. ಈ ಪರಿಸ್ಥಿತಿಯನ್ನು ಮುಂದಿ ಬಿಡಲ್ಕೆಡಕ್ಕಾಗಿಯೂ, ಸಂಸ್ಥಾನದೊಳಗೆ ಶಾಂತಿ ಸುರಕ್ಷತೆ ಒತ್ತಿನ ಹಿಂದೀ ಕ್ಷೇತ್ರಗಳಲ್ಲಿ ಭದ್ರತೆ ಭದವಸೆ ಸ್ಥಾಪಿಸುವದಕ್ಕಾಗಿಯೂ ನನ್ನ ಕೈಕೆಳಗಿನ ಸೇನೆಗಳು ಹೈದರಾಬಾದ್ ಸಂಸ್ಥಾನ ಪ್ರವೇಶಿಸಿವೆ. ಯಾರು ಶಾಸನಸಭೆಯವರಾಗಿರುವರೋ ಅಂಥವರು ನಮ್ಮ ರಕ್ಷಣೆಯ ಮಾತ್ರಿಭರವಸೆಯಿಂದಿರಬಲ್ಲರು. ಶಾಂತಿಯ ಕಾರ್ಯ ಸ್ಥಾನ ಮತ್ತ ಸ್ಥಾಪನೆಯ ನಮ್ಮೀ ಕಾರ್ಯಕ್ಕೆ ಸಹಕಾರ ಕೊಡುವವರು ನಮ್ಮ ಕಾರ್ಯರೂಪೀ ಒತ್ತಾಜ್ಞೆಯನ್ನು ನಿರ್ಬಂಧವಿಲ್ಲದೆ ಅವಲಂಬಿಸಿರಬಹುದು. ಹೈದರಾಬಾದಿನ ಶಾಸನಸಭೆಯ ಸದಸ್ಯರಿಂದಾಗಲೀ ಸಮಗೆ ಹೆದರಬೇಕಾದ ಅವಶ್ಯಕತೆಯಿಲ್ಲ. ಅಕ್ರಮಣದ್ರೋಹದ ಸ್ನೇಹಾಚಾರದ್ರೋಹವನ್ನು ಕಾರ್ಯವನ್ನು ಪೂರ್ತಿಸಿಕೊಳ್ಳುವದಿಲ್ಲ ನಾವು ಅತ್ಯಂತ ದೊಡ್ಡತನದಿಂದ ಒಡಿದು ಈ ಒಡವರಿಸಿನ ಹಿಂದೂ ಮತ್ತು ಮುಸ್ಲಿಮರೆಲ್ಲರ ಸಹಕಾರವನ್ನೂ ಬಯಸುತ್ತೇನೆ. ಆ ಗಳಿಗೆ ಜೂತಾ ಶಾಸನಕ್ಕೆ ಅವಿಧೇಯರಾಗುವರೋ ಅವರು ಶಾಸನದ ಪೂರ್ಣ ಕಠಿಣತೆಯನ್ನು ಅನುಭವಿಸಿಯೇ ತೀರುವರು. ಎಲ್ಲಾ ಜಾತಿಯ ಗೊಂದಲಗಳನ್ನೂ ಕಠೋರವಾಗಿ ದಮನಿಸಲಾಗುವದು.

ನಮ್ಮ ಕಾರ್ಯ ಪೂರೈಸಿದೊಡನೆ ತಮ್ಮ ಒಳಾಡಳಿತೆ ಹಾಗೂ ಭಾರತ ಸರಕಾರದ ಸಂಬಂಧದ ಕುರಿತಾದ ತಮ್ಮ ಭವಿಷ್ಯವನ್ನು ತಾವೇ ನಿರ್ಣಯಿಸುವ ಸಂದರ್ಭವಷ್ಟು ಹೈದರಾಬಾದ್ ಜನತೆಗೊದಗಿಸಿಕೊಡಲಾಗುವದು. ಪ್ರತಿಯೊಬ್ಬ ನಾಗರಿಕನೂ ನಿರ್ಭೀತಿಯಿಂದ ತನ್ನ ಕೆಲಸಕ್ಕೆ ಜೋಗುವಂತೆ ಮಾಡುವ ಮಕ್ಕು ಜನತೆಯ ಇಚ್ಛಾನುವರ್ತಿಯಾದ ಸಂಸನಬದ್ಧ ಸರಕಾರವೊಂದನ್ನು ಸ್ಥಾಪನೆಮಾಡುವ ನಮ್ಮ ಕೆಲಸಕ್ಕೆ ಆಗತ್ಯವೆಂದು ತೋರುವ ವರೆಗೆ ಮಾತ್ರ ನಾವಲ್ಲಿ ಇದ್ದೇವೆ ಹೊರತು ಅಮೇಲೆ ಇರತಕ್ಕವರಲ್ಲ. ಆ ವರೆಗೂ, ನನ್ನೊಂದಿಗೆ ಕಾರ್ಯನಿರ್ವಹಿಸಲು ಭಾರತಸರಕಾರವು ನೇಮಿಸಿರುವ ನಾಗರಿಕಾಧಿಕಾರಿಯೊಂದಿಗೆ ಕೂಡಿಕೊಂಡು ನನ್ನ ಕ್ಷೇತ್ರಸೇನಾನಿಯೇ ಆಡಳಿತೆ ನಡೆಸಲಿದ್ದಾನೆ. ಭಾರತದ ಸರಕಾರ ಮತ್ತು ಜನತೆ ನಿಮಗೆ ತಮ್ಮ ತದೇಕಚಿತ್ತದ ಶುಭಾಶಯ ಸಂದೇಶ ಕಳುಹಿದ್ದಾರೆ. ಭಯ ಮತ್ತು ಜುಲುಮೆಯಿಲ್ಲದೆ ನಿರ್ವಹಿಸಲ್ಪಡುವ ಪ್ರತಿಯೊಬ್ಬ ಶಾಂತ ಪ್ರಜೆಯೂ ತನ್ನ ನಿತ್ಯ ಕಾರ್ಯ ನಿರ್ವಹಿಸುವಂತಾಗಬೇಕೆಂಬುದೇ ನನ್ನ ಉದ್ಯಮವಾಗಿರುವಂತೆಯೇ ಅವರ ಬಯಕೆಯೂ ಆಗಿದೆ. ನಿಮ್ಮ ಅಭಿವೃದ್ಧಿ ಮತ್ತು ತೃಪ್ತಿಯೇ ಅವರದೂ ಕೂಡಾ. ಭೌಗೋಲಿಕವಾಗಿ ಮತ್ತು ಚಾರಿತ್ರಿಕವಾಗಿಯೂ ನಿಮ್ಮ ಹಿತಸಂಬಂಧಗಳೇ ಅವರ ಹಿತಸಂಬಂಧಗಳೂ. ಭಾರತೀಯ ಜಿಡುಗಡೆ ಸ್ವಾತಂತ್ರ್ಯಕ್ಕೆ ಮತ್ತು ಪ್ರಗತಿಯ ಸ್ವಾತಂತ್ರ್ಯ ಸವ್ಯದ ಲ್ಲೇ ನಿಮ್ಮದಾಗಲಿದೆ. ಜೈ ಹಿಂದ್!"

ನೂರುದಿಕ್ಕಿನಿಂದ ಸೇನೆಯ ಮುಂದೋಟ!

ತಾ. 13ನೇ ಮುಂಜಾನೆ 4ಕ್ಕೆ ಉತ್ತರ ದಿಕ್ಕಿನಲ್ಲಿ ಮಧ್ಯ ಪ್ರಾಂತ್ಯದ ಜಾಂದಾದಿಂದ, ಪಶ್ಚಿಮ ದಿಕ್ಕಿನಲ್ಲಿ ಬೊಂಬಾಯಿಯ ಶೋಲಾಪುರದಿಂದ, ಆಗ್ನೇಯ ದಿಕ್ಕಿನಲ್ಲಿ ಮದ್ರಾಸಿನ ವಿಜಯವಾಡಾದಿಂದ ಹೈದರಾಬಾದಿನೊಳಗೆ ಒಂದೇಬಾರಿ ಹಿಂದೀ ಸೇನೆ ನುಗ್ಗಿ ಹೋಗಿದೆ. ತೀರಾ ದಕ್ಷಿಣಕ್ಕಿನಲ್ಲೂ ಸೇನಾಧಾಳಿ ನಡೆದಿದೆ. ಮಿಂಚುಸೋದಿಂದ ಮುಂದೊತ್ತಿ ರಝಾಕಾರ್ ಮತ್ತು ನಿಜಾಮ್‌ಸೈನಿಕರ ಪ್ರತಿಭಟನೆಗಳನ್ನು ಮುರಿದು, ತುಂಗಭದ್ರಾ ಹೊಳೆಯ ಮೂರು ಮುಖ್ಯ ಸೇತುವೆಗಳನ್ನೂ ನಾಲ್ಕುಗಾ ರೈಲ್ವೆಸಿಲ್ವಾಣ ಮತ್ತು ಒಲ್ಡ್‌ಹರ್ ರೈಲ್ವೇ ನಗರ ಮತ್ತಿತ್ತಿಂದು ವಿಮಾನ ನಿಲ್ದಾಣವನ್ನೂ ಕೈವಶ ಪಡಿಸಿಕೊಂಡು ಹಿಂದಡಿಸೇನೆ ತಾ 14ರವರೆಗೆ 90 ಮೈಲು ಮುಂದೆ ಹೋಗಿದೆಯೆಂದು ತಿಳಿದುಬಂದಿದೆ.

ಕುಟುಕಾಲಿ-ಸಸಿಕಲ್ಲು ರವರ ಸಾರಥ್ಯದಲ್ಲಿ ಪ್ರತಿ ಮನೆಯವರು ಕಡ್ಡಾಯವಾಗಿ ನಿತ್ಯ ಸಸಿನೆಟ್ಟಿದ್ದನ್ನು ಕುರುಂಚಾಲ ಗ್ರಾಮಾಭಿವೃದ್ಧಿ ಸಂಘದವರು ಮಾನೇಜುಮಾಡಿ ತಕ್ಕ ಹೆಂಕ ತೆಗೆದು, ಕಂಗನ್ನು ಮಾಪ್ತ, ಪಲಸು ಮುಂತಾದ ಒಟ್ಟು 7042 ಸಸಿಗಳಾಗಿವೆ ಎಂದು ತಿಳಿದುಬರುತ್ತದೆ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ತಾ: ಕು 16-9-48ರಿಂದ

ಸಂಡನರು ಪಗಡೆ ಆಡಿದರೆಂದು ನಮ್ಮವರು ನೆಗಾಡಿದರು
ಆದರೆ ನಮ್ಮವರು ಮಾಡಿದುದೂ ಅದೇ.

ಶತ್ರಂಜೋ (ಆಟೋಮ್ಯ ಆರ್ಟ್ಸ್)

ಲೀಲಾ ಚಿಟ್ನಿಸ್, ಕೃಷ್ಣಕಾಂತ

ಬರುವ ಚಿತ್ರ .... ಪತ್ನಿ ... (ತೆಲುಗು)

ಪೈವಳಿಕೆ-ಈಗ ಸುಮಾರು ಎರಡು ಮೂರು ತಿಂಗಳಿಂದೀಚೆ ಕೆಲವು ಭೂತಸ್ಥಾನ, ದೇವಸ್ಥಾನ, ಮಸೀದಿ, ವಗೈರೆಗಳ ಕಳವು ನಡೆಯುತ್ತಾ ಇದ್ದು ಪತ್ತೆ ಹಚ್ಚಲು ಆಸಾಧ್ಯ ವಾಗಿತ್ತು. ಪೈವಳಿಕಾರ್ ಈ ಪುಣ್ಯ ಕಾರ್ಯ ದಲ್ಲಿ ಪೈವಳಿಕೆಯ ಪಠೇಲರಾದ ಶ್ರೀ. ಕೆ. ಅರ್. ಬಲ್ಲಾಳರು ಕೈ ಹಚ್ಚಿ, ಪೈವಳಿಕೆ ಮಂಗಲಪಾಡಿಯಲ್ಲಿ ಬಿಕಾರಿಯಾಗಿದ್ದ ಚಿನ್ನ ಬೆಳ್ಳಿ ಸೊತ್ತುಗಳು ಕಳವುಮಾಲೆಂದು ಅನುಮಾನ ದಿಂದ ಪಿಡಿದು ಮಂಜೇಶ್ವರ ಪೋಲೀಸ್ ಸ್ಟೇಶನಿಗೆ ತಿಳಿಸಿ ಬಿಳರಿ ಮಾಡಿದ ವ್ಯಕ್ತಿಗಳನ್ನು ಹಿಡಿಯಲುಕೂಡಾ ಸಹಾಯಮಾಡಿ ಸರಕಾರದ ಪ್ರೀತಿಗೆ ಪಾತ್ರರಾಗಿರುತ್ತಾರೆ. ಸ್ವೇತನಿನವರು ಕೂಡಾ ತುಂಬಾ ಮೆಹನತ್ತು ವಹಿಸಿ ಗುಮಾನಿಗಳಾದ ಮೂಂಜ ಕುಂಞಾಣಬಂಟ ಮತ್ತು ವೇಣ ತ್ಯಾಂಪಣ್ಣಬಂಟ ಎಂಬಿಬ್ಬರನ್ನು ಕೈದುಮಾಡಿ ಮುಂದಿನ ಪತ್ತೆ ನಡಿಸಿದ್ದಲ್ಲಿ ಕಳವಿನ ಹೆಚ್ಚಿನಸೊತ್ತು ಸಿಕ್ಕಿರುತ್ತದೆ. ಸದ್ರಿ ಚಿನ್ನ ಬೆಳ್ಳಿ ಮುಂತಾದುವು ಕಾಸರಗೋಡು ಕಸಬೆಯ ಕೊರಕ್ಕೆಯಿಡು ಮಾರಿಗುಡಿ ಆನ್ಯನವರ ಮತ್ತು ಕುಂಬಳೆ ಸಮೀಪದ ಪಿತ್ತಕ್ಕೆ ದೇವಸ್ಥಾನದ ಸೊತ್ತುಗಳೆಂದು ತಿಳುವಳಿಕೆಗೆ ಬಂದಿರುತ್ತದೆ. ಇನ್ನೂ ಪತ್ತೆ ಹಚ್ಚುವ ಕೆಲಸವು ಭರದಿಂದ ಸಾಗುತ್ತಿದೆ.

ಕಮ್ಯುನಿಸ್ಟರ ವಿಧ್ವಂಸಕ ಧೋರಣೆ

(1) ಕಮ್ಯುನಿಸ್ಟರು ತರಗತಿಗಳಿಳಗೆ ದ್ವೇಷವನ್ನು ಹೆಚ್ಚಿಸಿ ಹಿಂಸಯನ್ನು ಹಬ್ಬಿಸಿದರು. (2) ತನ್ಮ ವಿಧ್ವಂಸಕ ಧೋರಣೆಯಿಂದ ದೇಶದ ಉತ್ಪತ್ತಿ ಸಾಧನೆಗಳನ್ನೆಲ್ಲಾ ನಾಳುಗೆದ ಪಿದರು (3) ಅವರು ಪ್ರಜಾಪ್ರಭುತ್ವದ ತಳಹದಿಯನ್ನೇ ಪುಡಿಗೆಯ್ಯಲು ಯತ್ನಿಸಿದರಲ್ಲದೆ ಜನಪ್ರಿಯ ಸರಕಾರದೊಡನೆ ಯುದ್ಧವನ್ನೇ ಸಾರಿದರು. 4 ಅವರು ಕೃಷಿಕರನ್ನೂ ಮಜೂರರನ್ನೂ ತಮ್ಮ ರಾಜಕೀಯ ಪಗಡೆಯಾಟದಲ್ಲಿ ಕಾಲಾಳುಗಳಂತೆ ಉಪಯೋಗಿಸಿದರು. 5 ಅವರು ಸಾರ್ವಜನಿಕ ಜೀವನದ ರೀತಿನೀತಿಗಳನ್ನೇ ಹಾಳುಮಾಡಿದರಲ್ಲದೆ ರಾಜಕೀಯ ಧರ್ಮರಾಸ್ತ್ರಗಳ ನೀತಿಯನ್ನೇ ಧ್ವಂಸಮಾಡಿದರು. 6 ಅವರು ಜೈದರಾಬಾದು ಹಾಗೂ ಹಿಂದುಸ್ಥಾನಗಳೊಳಗೆ ನಡೆಯುತ್ತಿರುವ ವೈಪರೀತ್ಯದ ಈ ದುಸ್ಥಿತಿಯನ್ನು ತಮ್ಮ ಲಾಭಕ್ಕಾಗಿ ಉಪಯೋಗಿಸಿಕೊಂಡು ಹಿಂದೀಯ ಒಕ್ಕೂಟಕ್ಕೆ ಹೆಚ್ಚಿನ ತೊಂದರೆ ಕೊಡುತ್ತಿದ್ದಾರೆ. ಇಂತಹ ವಿಷಯಗಳನ್ನು ಕಣ್ಣಿಂದ ನೋಡಿ ಸುಮ್ಮನಿರಲು ಯಾವ ಜವಾಬ್ದಾರಿ ಅಥವಾ ಜನತಾ ಸರಕಾರವೂ ಸಿದ್ಧವಾಗಿರದು.

ಪ್ರಜೆಗಳಿಗೆ ಸ್ವಾತಂತ್ರ್ಯ ಬೇಕೆಂದು ಪ್ರಜೆಗಳ ಹಿತದೃಷ್ಟಿಯಿಂದ ಶಾಂತಿ ಹಾಗೂ ಭದ್ರತೆಯನ್ನುಳಿಸಲು ಸರಕಾರವು ಆತಿ ಕಠಿಣ ಕಾರ್ಯಗಳನ್ನು ತೆಕ್ಕೊಳ್ಳಿದೆ' ಎಂದೆಂದೂ ಉದಾಸೀನದಿಂದ ಮೌನವಾಗಿರಲು ಸಾಧ್ಯವಿಲ್ಲ. ಪ್ರಾಂತದ ಜನರ ಸುಖ-ಕಾಂತಿ- ಶಿಸ್ತುಗಳನ್ನು ಕಾಪಾಡುವುದೇ ಸರಕಾರದ ಧ್ಯೇಯವಾಗಿದೆ.

ಬಡತನನಿವಾರಣೆ

ಜನರು ಯಾವುದಾದರೂ ಒಂದು ಉದ್ಯೋಗದಲ್ಲಿರಬೇಕು. ಯಾವ ದೇಶದಲ್ಲೂ ಆ ದರ ಜನಸಂಖ್ಯೆಯಲ್ಲಿ ಬಹುಮಂದಿ ವರ್ಷದಲ್ಲಿ ಆರುತಿಂಗಳ ಕಾಲ ಕೆಲಸವಿಲ್ಲದೆ ಸುಮ್ಮನಿದ್ದರೆ ಪ್ರಗತಿ ಹೊಂದಲಾರದು. ಜನರು ಕೃಷಿಯಿಲ್ಲದ ಸಮಯದಲ್ಲಿ ಯಾವುದಾದರೂ ಒಂದು ಕೆಲಸ ಮಾಡುತ್ತಿರಬೇಕು. ಆ ಕೆಲಸದಿಂದ ದೊರೆಯುವ ಆದಾಯವು ಅತ್ಯಲ್ಪ ವಾದರೂ ಸರಿಯೆ, ಭಾರತದ ಬಡತನದ ಕಾರಣದ ರಹಸ್ಯವನ್ನು ತಿಳಿದೇ ನುಹಾತ್ಮಾಜೀಯವರು ನೂಲುವ ರಾಟೆಯನ್ನು ಉಪಯೋಗಿಸುವಂತೆ ವಿನಂತಿಸಿದುದಾಗಿದೆ. ಆದರಿಂದ ದಿನಕ್ಕೆ ಕೆಲವೇ ಆಣೆಗಳ ಸಂಪಾದನೆಯಾದರೂ ಸರಿಯೆ, ಅದು ಬಡತನದ ನಿವಾರಣೆಗೆ ಸಹಕಾರಿಯಾಗುವುದು.

ಉಡುಪಿ

ಕಲಾವೃಂದ ದಲ್ಲಿ ಕಾವ ಮತ್ತು ಜಾನಪದಗತಿಗಳ ಉದ್ಘಾಟನಾ ಸಮಾರಂಭವು ತಾ 12ನೇ ಆಪರಾಹ್ನ ಪಂಡಿತ ಶ್ರೀಪತಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿ ಶ್ರೀಗಳಾದ ಕೆ. ಯಲ್. ಯಸ್. ಉಪಾಧ್ಯಾಯ, ವೆಂಕ ಟಾಚಲ ಭಟ್, ಅನಂತಪದ್ಮನಾಭ ಭಟ್, ಶಂಕರನಾರಾಯಣ ಉಪಾಧ್ಯಾಯ, ಬನ್ನಂಜೆ ರಾಮಾಚಾರ್ ಮತ್ತು ಅಧ್ಯಕ್ಷರ ಭಾಷಣಗಳಾದುವು. 20ಕ್ಕೆ ಮಿಕ್ಕಿದ ವಿದ್ಯಾರ್ಥಿಗಳ ತರಗತಿಯಾರಂಭಗೊಂಡಿದೆ.

ವಿಚಿತ್ರ ಕರು ಉಡುಪಿ ಬಳಿಯ ಒಂದೆ ಬೆಟ್ಟು ಗ್ರಾಮದ ಒಬ್ಬರ ಮನೆಯ ದನವೊಂದು ತಾ 12ರಲ್ಲಿ ವಿಲಕ್ಷಣ ಕರು ಹಾಕಿದ್ದಿತು. ಆ ಕರುವಿಗೆ 2 ಮುಖ, 4 ಕಣ್ಣು, 4 ಕಿವಿಗಳಿದ್ದು ತೋಮಗಳು ಉದ್ದವಿದ್ದವು. 4 ದೊಡ್ಡ ಕೋರೆಹಲ್ಲುಗಳೂ ಇತರ ಹಲ್ಲುಗಳೂ ಇದ್ದುವು. ಬಾಲವಿರಲಿಲ್ಲ. ಕರು ಹುಟ್ಟಿದೊಡನೆ ಭಯಂಕರ ಕೂಗುಹಾಕಿ 10ನಿಮಿಷಗಳಲ್ಲಿ ಸತ್ತುಹೋಯಿತೆಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸುತ್ತಾರೆ

ಪರಮಹಂಸ ದಿನಾಚರಣೆಯು ಇದೇ ತಾ 15ರಲ್ಲು ಉಡುಪಿ ಬೋರ್ಡು ಹೈಸ್ಕೂಲಿನ ಸೋಶಿಯಲ್ ಸರ್ವಿಸ್ ಲೀಗಿನ ಆಶ್ರಯದಲ್ಲಿ ವಕೀಲ್ ಶ್ರೀ ಎಮ್. ವಿಠಲ ಕಾಮತರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯದರ್ಶಿ ಶ್ರೀಪತಿ ಉಪಾಧ್ಯಾಯರಿಂದ ವರದಿ ವಾಚನ, ಶ್ರೀಗಳಾದ ಪ್ರಭಾಕರ ರಾವ್, ಪಿ. ಕುಪ್ಪಣ್ಣಾಚಾರ್ಯರ ಭಾಷಣ, ಅಧ್ಯಕ್ಷ ರ ಸಮಯೋಚಿತ ಸಲಹೆ ಸೂಚನೆಗಳು, ಲೀಗಿನ ಅಧ್ಯಕ್ಷ ಶ್ರೀಕುದ್ರಾಲಪ್ಪ ಸೆಟ್ಟರಿಂದ ಧನ್ಯವಾದಾರ್ಪಣೆಗಳಿಂದ ಸಭೆಯು ಕೊನೆಗೊಂಡಿತು.

ಮುನಿಸಿಪಲ್ ಕೌನ್ಸಿಲು ವಿಂಟಿಂಗು ತಾ 11ರಲ್ಲು ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ' ಜರಗಿತು. ಕೌನ್ಸಿಲಿನ ಗತವರುಷದ ಆಡಳಿತ ವರದಿಯಕುರಿತು ಚರ್ಚೆಯಾಯಿತು. ಚೆಯರ್‌ಮೆನ್, ಕಮಿಷನರ್, ಜನತೆಯೊಳಗೆ ಪರಸ್ಪರ ಸೌಹಾರ್ದತೆಯನ್ನು; ನಗರಾಡಳಿತದಲ್ಲಿ ತೆರಿಗೆದಾರರಿಗೆ ವಿಶ್ವಾಸವಿತ್ತು ಇತ್ಯಾದಿ ಒಕ್ಕಡಗಳು ವರದಿಯಲ್ಲಿದ್ದುವು. ಮುನಿಸಿಪಾಲಿಟಿ ಮೇಲೆ ಆದರ ಒಕ್ಕಲುಉಂಡಿದ ಸಿವಿಲ್ ವ್ಯಾಜ್ಯದಲ್ಲಿ ಉದಾಸೀನ ಬೇಕೆಂದಾಯಿತು. ಕೆಲವು ಸರಕಾರಿ ಆರ್ಡರುಗಳು ರಿಕಾರ್ಡುಮಾಡಲಾದುವು. ಭಾಷಾವಾರು ಪ್ರಾಂತನಿರ್ಮಾಣ ಸಮಿತಿಗೆ ಉತ್ತರ ತಯಾರಿಸುವಲ್ಲಿ ಜಿಲ್ಲಾ ಕಮಿಟಿಯ ನೇಮಕವಾಯಿತು.

ಪೆಷ್ಕರ್ ದಾರರು ಸ್ಥಳೀಯ ಕೆಲವು ಮರಗಳಲ್ಲಿ ಪೆನ್ಶರ್ ಪಡೆಯುವ ಮಜಿಗಾರರನ್ನು ಕೆಲಸಕ್ಕೆ ನೇಮಿಸಿಕೊಳ್ಳಲಾಗಿದೆ. ಇದರಿಂದಾಗಿ ಕೆಲವರಲ್ಲಿ ಅತೃಪ್ತಿಯುಂಟಾಗಿದೆ. ಕರುಣ ಕೆಲಸಗಾರರ ಅಭಾವವೇನು?

ಕರಾಬು ಮಾಡಿದ ಆರೋಪ ಕೈ ಸಿಲುಕಿದ ಉದ್ಯಾವರ ಗ್ರಾಮದ ಲಚ್ಚಿ ಎಂಬ ಹೆಂಗಸಿಗೆ ಉಡುಪಿ ಸ್ಪೇಷನರಿ ಸ್ಟೋರ್ ಮೆಚ್ಚಿಸ್ಟರು ಒಂದು ನೂರಾರೂಪಾಯಿ ಜುಲ್ಮಾನೆ ಇಲ್ಲವೆ ಎರಡುತಿಂಗಳ ಶಿಕ್ಷೆ ವಿಧಿಸಿರುವರು.

ವಯಸ್ಕರ ಶಿಕ್ಷಣ ತರಬೇತಿ ತರಗತಿಯು-ಉಡುಪಿಯಲ್ಲಿ ಎರಡನೆಯಾರಿ ಪ್ರಾರಂಭವಾಗವುದು. ಹಾಯರ್ ಗ್ರೇಡ್ ಟ್ರೈನಿಂಗ್ ಆದವರು, IIIರಾರ್ಮ್ಯ ಯಾ ಎಂಟನೆತರಗತಿ ಪಾಸಾಗಿದವರು ಈ ತರಗತಿಗೆ ಸೇರಲು ಅರ್ಹತೆಯುಳ್ಳವರಾಗಿದ್ದಾರೆ ಉಮೇದ್ವಾರರು ತಮ್ಮ ಅರ್ಜಿಗಳನ್ನು ಇದೇ ತಾ 20 ರೊಳಗಾಗಿ ಸರಕಾರಿ ವಯಸ್ಕರ ಶಿಕ್ಷಣ ತರಬೇತಿ ಶಾಲಾ ಹೆಡ್ಮಾಸ್ಟರ್, ಉಡುಪಿ, ಅವರಿಕೆ ಕಳುಹಿಸತಕ್ಕದ್ದು.

ನಿಜಾಮನಿಗೆ

ಒಕ್ಕೂಟ ಭಾರತದೊಳು
ಸೇರಲೊಲ್ಲೆಯಾ!
ಹಕ್ಕಿ ತನ್ನದೆಂಬ ಮಾತ
ಮರೆಯಲಾರೆಯಾ!
ರಜವಿಯ ಕೈ-ಗೊಂಬೆ ನೀನು,
ಪ್ರಜೆಗಳ ಸಂಕಷ್ಟ ಕಾಣು,
ನಿಜವು! ನಿನ್ನ ರಾಜ್ಯವೆಲ್ಲ,
ರಜಕ ಮಯ-ಮಾಯೆತೆಲ್ಲ.
ಒಕ್ಕೂಟ ಭಾರತದೊಳು
ಸೇರಲೊಲ್ಲೆಯಾ!
ಭೇದ ಭಾವವನ್ನು ಬಿಟ್ಟು
ಬಾಳಲಾರೆಯಾ!
ಆದ ಅನಾಚಾರಗಳಿಗೆ
ನೊಂದು ಕೊಳವೆಯಾ!
ತರುಗಿ [illegible]
ಪರರ ಹಂಗು ನಿನಗೆ ಕೇಡು
ಕುರುಕ್ಷೇತ್ರವಾಗಿರುವದು
ಇರುವ ನಿನ್ನ ನೆಲೆಯ ಬೇಡು;
ಒಕ್ಕೂಟ ಭಾರತದೊಳು
ಸೇರಲೊಲ್ಲೆಯಾ!
ಮಿಕ್ಕ ಜನರ ಶಕ್ತಿಯನ್ನೆ-ಳಿರಿಯದಾ
ದೆಯೊ!

ಕೃಷ್ಣಪ್ಪ, ಮಲ್ಪೆ, ನಿಬ್ಬಾರ್ಥಿ

ಜನ ಜನವೂ ಓದತಕ್ಕ
ಜನತಾ ಸಾಹಿತ್ಯ!
ಮನೆ ಮನೆಯೂ ಇರತಕ್ಕ
ಮನೋರಂಜನ ಸಾಹಿತ್ಯ!
ಸ್ವರಾಜ್ಯ ವಿಜಯದ ಕತೆಯನ್ನು ಎಲ್ಲರಿಗೂ ತಿಳಿಯುವಂತೆ
ಶ್ರೀ ಎಂ. ಪಿ. ಪೆಗ್ಡೆಯವರು ಬರೆದ
ಸ್ವರಾಜ್ಯ ವಿಜಯ
ಆಟ್ಲಿ, ಕ್ರಿಪ್ಸ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜಿನ್ನಾ, ನೆಹರು, ಪಟೇಲ್, ಗಾಂಧಿ, ಅಜಾದ್, ಕೃಪಲಾನಿ, ಜೈಪ್ರಕಾಶ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರವರ್ಗ.
ಓದಬಲ್ಲವರಂತೂ ಓದಿ ತಿಳಿಯತಕ್ಕ ಕತೆ.
ಓದಲಾರದವರೂ ಓದಿಸಿ ಕೇಳತಕ್ಕ ಕತೆ.
ಬೆಲೆ ಬರೇ 0 8 0
ಕತ್ತಾಣೆ ಸ್ಟಾಂಪು ಕಳಿಸಿದರೆ 1 ಪ್ರತಿಯನ್ನು ಬುಕ್-ಪೋಸ್ಟ್ ಮಾಡಿ ಕಳಿಸಬಹುದು.
ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ, ಅಥವಾ ನವಯುಗ ಪ್ರೆಸ್, ಉಡುಪಿ.
ಇಲ್ಲಿ ದೊರೆಯುತ್ತವೆ.

ಶಾಲೋಪಯೋಗಿ ಪುಸ್ತಕ
ಶ್ರೀ ಕೆ. ಹೊನ್ನಯ್ಯ ಶೆಟ್ಟರ
ಮುಗುಳು
ಚಿಕ್ಕಮಕ್ಕಳ ಅಳುರೆಯ ಹದ್ಯಪುಸ್ತಕ
ಬೆಲೆ: 0 4 0
ಪ್ರತಿಗಳು ಎಲ್ಲಾ ಪುಸ್ತಕ ವಾಪಾರಿಗಳಲ್ಲೂ ಸಿಗುತ್ತವೆ.

ಹೊಸ ಪುಸ್ತಕ
ಜಮೀನ್ದಾರ
ಧನಾಢ್ಯರ ದುರಹಂಕಾರ, ದುರ್ವ್ಯಯ ದುಸ್ಸಾಧನೆ ಮೊದಲಾದುವನ್ನು ಚಿತ್ರಿಸುವ
ಬಡವರ ಭೀಕರ ಪರಿಸ್ಥಿತಿಯ ಕನಿಕರಾವಸ್ಥೆಯನ್ನು ಹೃದ್ಯವಾಗಿ ಪ್ರತಿಬಿಂಬಿಸುವ
ನವೀನ ಸಾಮಾಜಿಕ ಕಾದಂಬರಿ
ಜಮೀನ್ದಾರ
ಧನಿಕರೆನ್ನದೆ, ಬಡವರೆನ್ನದೆ ಪ್ರತಿಯೊಬ್ಬರೂ ಓದತಕ್ಕ ಜನತಾ ಸಾಹಿತ್ಯ
164 ಪುಟಗಳು .... ಬೆಲೆ ರೂ. 1 8 0
ಪ್ರತಿಗಳು ಸಿಗುವ ಸ್ಥಳಗಳು--1. ನವಭಾರತ ಪುಸ್ತಕ ಭಂಡಾರ, ಉಡುಪಿ. 2. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 3. ಎಂ. ಎಸ್. ಮಯ್ಯ ಪುತ್ತೂರು. 4. ಕಿರಿಯರ ಸೃಪಂಚ, ಉಡುಪಿ.

NOTIFICATION

Applications are invited up to 23-9-1948 for the post of a Surveyor on Rs. 50/- per month with the usual dearness allowance. The post is temporary for 6 months. The candidate selected for appointment should be prepared to join duty forthwith.

V. Balagangadharan,
Commissionor.

Municipal Office,
Udipi, 19-9-48

ಕುಂದಾಪುರ ಜಿಲ್ಲೆಯ ಒಬ್ಬ ಸರಕಾರಿ ನೌಕರನು ಸರಕಾರ ಆರ್. ಎಸ್. ಎಸ್. ಸಂಘವನ್ನು ನೀತಿಬಾಹಿರವೆಂದು ಸಾರಿದ್ದರೂ ಅದರ ಆಕ್ಷೇಪ ಚಟುವಟಿಕೆಗಳಲ್ಲಿ ತೊಡಗಿದ್ದು-ಆದನ್ನು ಸಹಿಸಿಕೊಂಡಿದ್ದಮೇಲೆ ಸುಟ್ಟಾಗಿ ಈಗ ಹುಚ್ಚುತನಗಳಿದೆ. ಒಂದುದಿನ ಹಗಲೂ ರಾತ್ರಿಯೂ ಬಾಯಿಗೆ ಬಂದಂತೆ ಒದರುತ್ತ-ಲಾತೀಹಿಡಿಯುತ್ತ ಕಿರುಚುತ್ತಿದ್ದ. ಈಗವನಿಗೆ ಚಿಕಿತ್ಸೆ ನಡೆಯಿಸುತ್ತಿದ್ದಾರೆ. ಆರ್. ಎಸ್. ಎಸ್. ದ ದುರ್ಯೋಧನನಿಂದ ಎಷ್ಟುಜನ ಹಾಳಾಗಬೇಕೋ!

ಕುಂದಾಪುರದಲ್ಲಿ ಈಗ ಆರ್. ಎಸ್. ಎಸ್. ಚಟುವಟಿಕೆ ವೇಗದಿಂದ ನಡೆಯುತ್ತಿದೆ ಒಬ್ಬ ಸಾಬೂನು ವಿಜೆಂಟನ ವೇಷದಿಂದ ಸಂಘಟನೆ ನಡೆಸುತ್ತಿದ್ದಾನೆ. ಅವರ ತಾಲೂಕು ರ್ಯಾಲಿ ಕಲ್ಲೂರು ಎಂಬಲ್ಲಿ ಎರಡುವಾರೆ ಕೂಡಿತು.

ಮೊನ್ನೆ ತಾ 15ರಂದು ಜೋ॥ ಪ್ಯಾಸ್ಕೂಲಿನಲ್ಲಿ ಧ್ವಜವಂದನೆ ನಡೆಯುವಾಗ ಕೆಲವು ಆರ್. ಎಸ್. ಎಸ್. ವಿದ್ಯಾರ್ಥಿಗಳು ನಮ್ಮ ಧ್ವಜಕ್ಕೆ ಗೌರವ ಸಲ್ಲಿಸಲಿಲ್ಲ; ಮುಖ್ಯೋಪಾಧ್ಯಾಯರ ಬೆದರಿಕೆಯೂ ಫಲಕಾರಿಯಾಗಿಲ್ಲ. ಎಂದು ಶ್ರೀ. ಮೂರ್ಡೇಶ್ವರ ಜಗನ್ನಾಥ ರವರು ಬರೆಯುತ್ತಾರೆ.

ಪೆಕ್ಕಟ್ಟಿ ತಾ. 12-9 1948ರಿಂದ ಮೋರ್ಸು ಪ್ರೌಢಶಾಲೆಯಲ್ಲಿ ಪೆಕ್ಕಟ್ಟಿ ಗ್ರಾಮಸೇವಾ ಸಂಘದ ಸಂಚಾಲಕ ನೇತೃತ್ವದಲ್ಲಿ ಪಕ್ಕಿಣಕನ್ನಡ ಬಲ್ಲ ಕಲೆಕ್ಟರ್, ಶ್ರೀ ಇಸ್. ಆರ್ ಕೈನಾರ್, ಎಮ್ ಎ ಪಿ.ಯಸ್ ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ, ಪಂಚಾಮೃತ ಗಾನಾಮುಹೂರ್ತ, ಯಕ್ಷಗಾನ, ಸಂಗೀತ ವರದಿವಾಚನ, ಭಾಷಣ ಇತ್ಯಾದಿ ಕಾರ್ಯಗಳು ಯಶಸ್ವಿಯಾಗಿ ನೆರವೇರಿದುವು. ಈ ಸಂದರ್ಭದಲ್ಲಿ ಕುಂದಾಪುರ ಡೆಪ್ಯೂಟಿ ಡಿಸ್ಟಿಜನಲ್ ಆಫೀಸರರೂ, ತಹಸಿಲ್ದಾರರೂ ಕುಂದಾಪುರ ರೆಜಿಸ್ಟ್ರಾರ್ ಆಫೀಸಿನ ಡಿಪ್ಯೂಟಿ ಇನಸ್ಪೆಕ್ಟರರೂ, ಕುಂದಾಪುರ ಡಿವಿಜನ್ ಅಸಿಸ್ಟಾಂಟ್ ಪೊಲೀಸ್‌ಮೆಂಟ್ ಆಫೀಸರರೂ, ರೂರಲ್ ವೆಲ್‌ಫೇರ್ ಆಫೀಸರರೂ, ಬೆಲಟ್ ಸಿಂಗರೂ ಹಾಜರಿದ್ದರು. ಗಂದಸರು, ಹೆಂಗಸರು, ಮಕ್ಕಳು ಒಟ್ಟಿಗೆ ಸುಮಾರು 1000 ಜನರು ನೆರೆದಿದ್ದರು. ಪೂರ್ವ ಡಿಪ್ಯೂಟಿ ಇನಸ್ಪೆಕ್ಟರರು ಸಂದರ್ಭಕ್ಕನುಗುಣವಾಗಿ ಉಪಯುಕ್ತ ಸಲಹೆಸೂಚನೆಗಳಿಂದ ಭಿನ್ನವಾದ ಭಾಷಣವನ್ನಿತ್ತರು. ಮಹಾಸಭೆಯ ಭಾಷಣದನಂತರ ಅಧ್ಯಕ್ಷರು ಕಾಲೋಚಿತ ಸಲಹೆಗಳ ಪ್ರತಿಯೊಬ್ಬರಿಗೂ ಉತ್ಸಾಹ ಹುಟ್ಟಿಸುವ ಸೂಚನೆಗಳನ್ನು ಕೊಟ್ಟು ಸಿಹಿ, ಕಲೆ, ಗ್ರಾಮದ ಏಳಿಗೆಕುರಿತು ಮತ್ತು ಗ್ರಾಮಸ್ವರಾಜ್ಯ ಪ್ರಯತ್ನಗಳಿಗೆದುಡಿಯಲ್ಕೆ ಕರೆಯೊತ್ತಿ ಸಭೆಯು ಮುಕ್ತಾಯಗೊಳಿಸಲಾಯಿತು ಕೊನೆಯಲ್ಲಿ ಅಧ್ಯಕ್ಷರು ಮಿಡಲ್‌ಸ್ಕೂಲಿಗೆ ಸಮೀಪ ಸಾಮಾನ್ಯಾಲಯವನ್ನು ಸಂದರ್ಶಿಸಿ ಸಾರ್ವಜನಿಕ ವಾಚನಾಲಯ ಮತ್ತು ಪುಸ್ತಕ ಭಂಡಾರದ ಉಪ್ಪಾಸಿನ ಸಮಾರಂಭವನ್ನು ನೆರವೇರಿಸಿದರು.

ಕುಂದಾಪುರ ತಾ 7ರಂದು ಶ್ರೀ ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್, ಡಿ. ಪಿ. ಸಿ. ಅಧ್ಯಕ್ಷ, ಇವರ ಅಧ್ಯಕ್ಷತೆಯಲ್ಲಿ ನೆರೆದ ಕುಂದಾಪುರ ಸರ್ಕಲ್ ಇಂಗ್ರೆಸ್ಸು ಕಮಿಟಿಯ ಸಭೆಯಲ್ಲಿ ಜಾಲ್ರಿ ಪರುಷಕ್ಕೆ ಈ ಕೆಳಗಿನವರು ಹುದ್ದೇದಾರರಾಗಿ ಸರ್ವಾನುಮತದಿಂದ ಆರಿಸಿ ಬಂದಿದ್ದಾರೆ | ಶ್ರೀ ಎ. ವಿ ಎನ್, ಹೆಬ್ಬಾರ, ಅಧ್ಯಕ್ಷ. 2. ಶ್ರೀ ಎಚ್, ಭಾಸ್ಕರ ಕಾವತ್, ಉಪಾಧ್ಯಕ್ಷ- 3 ಶ್ರೀ ಕ ಟೀಲ ಜಾಬುರಾಯ ಪೈ, ಕೋಶಾಧಿಕಾರಿ 4 ಶ್ರೀ ಎಮ್. ಎಮ್. ಜೆಡ್ಡಿ, ಮತ್ತು ಶ್ರೀ ಬಿ. ಜಿ, ಶೆಣೈ, ಕಾರ್ಯದರ್ಶಿಗಳು.

ಕೊರಡ್ಕಲ್ ಸ್ಮಾರಕ ನಿಧಿಗೆ

ಉದಾರ ಸಹಾಯ ಮಾಡಿರಿ.

Sale Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. S. P. 682/1947. S C, 30/46.

ಕೃಷ್ಣ ಮಂಜ —ಆರ್ಜಿದಾರ.

ವೆಂಕಟ್ರಾಯ ಶೇಷಗಿರಿಯಪ್ಪನ ಮಗ. ಕೋಟೇಶ್ವರ ಗ್ರಾಮ. -ಎದ್ರಿ

ಎದ್ರಿಗೆ ಕೊಡುವ ನೋಟೀಸು:—

ಆರ್ಜಿದಾರನು ಸ್ಪಿರ ಆಸ್ತಿ ಯೇಲಂಮಿಗೆ ಮನವಿ ಮಾಡಿರುವುದರಿಂದ ಇಸ್ಕ್ಯಾರು ರದ್ದ ನಿರ್ಣಯ ಮಾಡುವರೆ ತಾ 22-9-48ಕ್ಕೆ ಈ ಕೋರ್ಟಿನಲ್ಲಿ ಯಿಡುವಹಾಗಿಯಿದೆ.

Sd **A V. N. Hebbar.**

Pleader for plaintiff.

Kundapur, 16-9-48.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S 241/48. R. I. A. 680 48

ನಾದಿ —ವೈಮೂರ್ಡಿ ಸಜರತ್.

ಸ್ವತಃವಾದಿ —ಸಾರ್ವಜನಿಕ ಕೂಡಾ

ಉಡುಪಿ ತಾಲ್ಲೂ ಪಡುತೋನ್ಸೆ ಗ್ರಾಮದಲ್ಲಿರುವ ಸಾಂತಯ್ಯ ನ್ಯಾಕರ ಮಗ 4ನೇ ಪ್ರತಿವಾದಿ ಗೋಪಾಲ ಶೆಣೈಗಾರನಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಪಾವಾಸ್ತ್ರಳ ಸ್ವಾಧೀನತೆ ನ ಹುಟ್ಟುವಳ್ಳಿ ಬಗ್ಗೂನಾಮ್ಲು ಮಾಡಿದ ಮೇಲಿನ ದಾವೆ ಮತ್ತು 4ನೇ ಪ್ರತಿವಾದಿಯನ್ನು ಸಲ್ಲಮೇಲು ಪ್ರತಿವಾದಿಯನ್ನಾಗಿ ಸೇರ್ಪಡೆಗೊಳ್ಳಬೇಕೆಂತ ದಾವ್ಲು ನೂಡಿದ ಮೇಲಿನ ಅರ್ಜಿ ಕೂಡಾ ತಾ. 25-9 48ಕ್ಕೆ ತಪ್ಪಾಗೆ ಇಟ್ಟುರುತ್ತದೆ ಆ ಕುರಿತು ನಿಸಾದರೂ ಆಕ್ಷೇಪಣೆಗಳಿದ್ದರೆ ಸದ್ರಿ ತಾರೀಕಿಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಬೀದಿ ಮಾಡಿಕೊಳ್ಳಬಕ್ಕದ್ದು ಎಂದು ಸಂಗ್ತಿ ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah

Advocate for Plaintiff.

Date 11—9—48 Coondapoor

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಇಂಗ್ಲಿಷ್ ಕಲಿಯಲು ಅತ್ಯನುಕೂಲವಾದ ಪುಸ್ತಕ

ವಿ. ಕೊರಡ್ಕಲ್ ಶ್ರೀನಿವಾಸರಾಯರ

ಸುಲಭದಲ್ಲಿ ಇಂಗ್ಲಿಷ್

(English Made Easy)

(ಇಂಗ್ಲಿಷ್ ಸ್ವಯಂಬೋಧಿನಿ)

ಬೆಲೆ ರೂ 1-8-0; ವಿ.ಪ್ಪಾಲು ಪ್ಲಾರಾ ರೂ 1-13-0

ಶ್ರೀ. ಯು. ಜೆ ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ

ಲೋಕವ್ಯವಹಾರ ಬೋಧಿನಿ-

ವ್ಯವಹಾರಜ್ಞಾನದರ್ಪಣ

ಅತ್ಯಂತ ಜನೋಪಯೋಗೀ ಪುಸ್ತಕ

ಬೆಲೆ ರೂ. 1 8-0; ವಿ.ಪ್ಪಾಲು ದ್ವಾರಾ ರೂ. 1-13-0

ಪ್ರತಿಗಳು ಸಿಗುವ ಮುಖ್ಯ ಸ್ಥಳಗಳು:

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ನವಭಾರತ ಬುಕ್ ಡಿಪೋ, ಉಡುಪಿ 3 ಸ್ವತಂತ್ರ ಭಾರತ ಬುಕ್ ಕಂಪೆನಿ ಪೋರ್ಟ್, ಬೊಂಬಾಯಿ, 4. ಎಂ. ಎಸ್ ಮಯ್ಯ ಪುತ್ತೂರು 4. ನವಯುಗ ಪ್ರೆಸ್, ಉಡುಪಿ



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕೆಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವಸ್ತುವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ವೈದ್ಯರುಗಳಿಂದಲೂ ಜಗತ್ತಿನ ಪ್ರಮುಖವಿದಲ್ಲೂ ಉಪಯೋಗಿಸಲ್ಪಟ್ಟು ಜಗತ್ತಿದಲ್ಲೆಲ್ಲಾ ಸಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ ಔಷಧ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಸೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವೇಶಿಸಿ ಆವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಇದನ್ನೂ ತೈಲ ರೀತಿಯಿಂದ ಹೊಸ್ತಾಂಡ ಪದ್ಧತಿಯಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಲ್ಪಡುತ್ತಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮೆತ್ತು ಮುಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಜನುನೊತ್ತ, ಸೀಮಾನೊತ್ತ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿಮ್ಮಕ್ಕಿಂತ ಪ್ರಪಂಚದ ಪ್ರಸಿದ್ಧ ಔಷಧ ಮೂಲವಸ್ತುವೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತದೋಷ, ಪಕ್ಷವಾತ, ಗೂಡಲು ಕ್ಷಯ, ಮೇಹಪ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಸೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ವೇದನೆಯು ರಕ್ಷಣೆಯಿಲ್ಲದೆ ಇಷ್ಟಿನೇಸೆ ನಿಸಿ. ಮಜಾದುದಕ್ಕೆ ನೂರಾರು ಶಿಫಾರಸು-ಸರ್ಟಿಫಿಕೇಟುಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧ' ಎಂದು ಕರೆಯುವದರಲ್ಲಿ ಸಂದೇಹವೇನಿಲ್ಲ! ಕವಿನೋಪು ನೆನಡಿಯಿಂದಲೇ ಆಗಿಲಿ, ಜ್ವರದಿಂದಲೇ ಆಥವಾ ನೀರಿಗೆ ಬಲಿಯಾಗತೆಯಿಂದಲೇ ಆಗಿರಲಿ ಬಂತೆಯಿಲ್ಲಿ, ಈ ವಾನಿಂಗ್ ಟಿಲ್ಲಿ ತೈಲವಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳ ಉಬ್ಬುಹಿಲ್ಲಿನೋವು, ಕಿವಿಗಳ ಉರಿಯಿಂದ ಹೆಚ್ಚಾಗಿರ ಮುಟ್ಟಿನಾಗುವ ಕಾಲದ ಅಕ್ರಮಗಳು, ಹೊಸ್ತ ನೋವು, ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಇರುತ್ತದೆ. ಕಿಮ್ಮತ್ತು— ಸೀಸೆ 1ಕ್ಕೆ ರೂ. 3 8 0 ವಿ. ಪಿ. ಟಿ ಕೆ 1 ಡಜನ್ ಸೀಸೆಗಳಿಗೆ ವಿ ಪಿ ಖರ್ಚುಸಹಿತ ರೂ. 42-0-0. ಹೊರ್ಸರ್ ಬಾಟ್ಲಿ ಸೀಸೆಗೆ ರೂ. 5-0-0 ವಿ. ಪಿ. ಟೇನ್ಸ್ ಡಜನ್ ಸೀಸೆಗಳಿಗೆ ರೂ. 60-0-0 ವಿ. ಪಿ. ಟೇಲ್. ವಾನಿಂಗ್ ಟಿಲ್ಲಿ ಅಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18 ವಿ ಪಿ.ಯಾಗಿ.

ಪ್ರಶಂಸನಾ ಪತ್ರ—ನಾನು ನಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ಏಳು ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲಾ ವಿಧದ ಕವಿನೋವುಗಳಲ್ಲಿಯೂ, ಗುಣವಾಗಲಾರದೆಂಬ ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ವಾಸಿ ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೀವನದಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯೆಂದು ರಾಮನಾಡಿನ ಅಯುರ್ವೇದಿಕ್ ವೈದ್ಯರಾದ ಪಿ. ಕೆ ಕಟಿರವಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಬಿಡಿ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

— ದಿ ಎಕ್ಲೆಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹನು ರೋಡು, ಬಿ. ಎಂಪ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I Rly.

ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತದ ವೇಹಸ್ಥಿತಿಯ ನ್ನು ನಿರ್ಣೈಸಿ ತಯಾ ರಿಸಲ್ಪಟ್ಟ ಅಮೋಘ ವಾದ ಮಧುರದ್ರವ ರಸಾಯನ. ಅಲ್ಪ ಮೌ ಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸು ಲಭವಾಗಿರುವುದು.



ನವಜೀವಾತು ಎಂಬ
ಸೂತಿಕಾ ರಸಾಯನ

ಈ ದಿವ್ಯೌಷಧಿಯ ಪ್ರಯೋಜನಗಳು ಹೆಚ್ಚುಳಿದಿಮೆ ಅಭಿಪ್ರಾಯಗಳಿಗೆ ಬರುವವು. ಅಂಥರಿಗೆ ಕೇವಲ ೪ ರೂಪಾಯಿಗಳಿಗೆ ಒಂದು ಬಾಣಂತಿಯನಿಕ್ಕೆ ಸಾಕಾಗುವಷ್ಟು ವಿಶೇಷ ಮೌಷಧಿ ಬಲ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ ಕೊಡಿಯಾ ಲಬ್ಬೆಲು, ಪ. ಕ

ಸ್ವಾಮಿಸ್ವರು- ಡಾ| ವಿ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ಪಷ್ಟಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚು ವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹುಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಹೃಸವಾನಂತರ ಬಾಣಂತಿಯರು ಉಪಯೋಗಿಸತಕ್ಕು ಅಮೋಘವಾದ ಶಕ್ತಿವರ್ಧಕ. ಪ್ರಸವವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ಕುಂಬಿಸುವುದು ರಕ್ತದೂತುವು ಆಘಾತವಿ ಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲೆ ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಕ್ಷಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯಲ್ಪಡುವವು. ಕ್ಯಾಲೆಂಡರ್ ಬರದಲ್ಲಿ ರೋಗಕ್ಕೆ ತಕ್ಕಷಾದ ಔಷಧಿ ರಸಾಯನಲಭಿಸುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ಸ್ 183, ಸುವಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಷಾರಸ್ಥಳಗಳಿಗೆಲ್ಲ ಕೇಂದ!

ನಿಮ್ಮ ಸ್ನಾನ, ಊಟ, ಉಪಹಾರ, ವೈಕರ್, ರಾತ್ರಿ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಸ್ವಾತ್ಮಾರ ಆಡಿಗೆ, ಕಂಡಿತವಾಸು, ಇವುಗಳ ಯಾವುದು ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್ಟ.

For up-to-date Lodging & Boarding

ROYAL MAHAL,

UDIPI, S. Kanara

ಎಲ್ಲ ತರದ ದಂತ ರೋಗ ಗಳನ್ನು, ನೆ ಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ರುಚ್ಯ ಮಾ ಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಸ್ವೀಕಾರ-ವಿಮರ್ಶೆ

ಮೊಗವೀರ ಯುವಕ ಸಂಘ, ಮುಂಬಯಿ 13ನೇ ವಾರ್ಷಿಕ ವರದಿ (1947):—1934ರಲ್ಲಿ ಸ್ಥಾಪಿತವಾದ ಈ ಯುವಕ ಸಂಘವು ಸ್ವಜಾತಿಯ ಏಳಿಗೆಗಾಗಿ ಧರ್ಮಾರ್ಥ ಸ್ತ್ರೀ ಕೈಗಾರಿಕೆ ಶಾಲೆ, ವಾಚನಾಲಯ ಮುತ್ತು ಪುಸ್ತಕ ಭಂಡಾರ, ಸ್ವಯಂಸೇವಾದಳ, ಪತ್ರಿಕೆ, ಉದ್ಯೋಗ ಶಾಖೆ, ಮತ್ತೈಮ್ಯವಸಾಯೋಭವೃದ್ಧಿಯ ಯೋಜನೆ ಇತ್ಯಾದಿ ಕಾರ್ಯಕ್ರಮಗಳಿಂದ ದುಡಿಯುತ್ತಿದೆ. ಸಮಾಜ ಸುಧಾರಣೆ, ಯುವಕ ಜಾಗವಳಿ ಇವು ಸಂಘದ ಬಹುಮುಖ ಕಲಸಗಳನ್ನು ಸೂಚಿಸುತ್ತವೆ. ಪ. ಕನ್ನಡದ ಮೊಗವೀರರು ಮುಂಬಯಿಯಂಥ ದೊಡ್ಡ ನಗರದಲ್ಲಿ ತಮ್ಮ ಸಂಘವನ್ನು ಸ್ಥಾಪಿಸಿ ಅದನ್ನು ಅಪರಿಕ್ಷಿತಿಯಲ್ಲಿ ನಡೆಸಿಕೊಂಡು ಬರುತ್ತಿರುವುದು ಆನಂದದಾಯಕ.

ಮುಂಬಯಿ ಕನ್ನಡ ಸಂಘ, ಮೂತುಂಗ 11ನೇ ವಾರ್ಷಿಕ ವರದಿ(1946-47):—ಉಚಿತ ವಾಚನಾಲಯ ಮತ್ತು ಪುಸ್ತಕ ಭಂಡಾರ, ಕೈ ಬರಹದ ಪತ್ರಿಕೆ, ನಾಟಕ ಶಾಖೆ, ಸಾಹಿತ್ಯ ಉಪನ್ಯಾಸ, ಚರ್ಚೆ-ಕೂಟಗಳು ವಿವಿಧ ಕಾರ್ಯಕ್ರಮಗಳಿಂದ, ಜಾತಿ—ಸಾಂಪ್ರದಾಯ ಮಾನಸರಿಗೆ ಎಡೆಗೊಡದೆ ಅಖಿಲ ಕರ್ನಾಟಕದ ಸಕಲ ಕನ್ನಡಿಗರೆಲ್ಲರಿಗೆ ಸ್ವಾಗತಪೀಯುತ್ತ, ಕನ್ನಡಿಗರ ಸಂಘಟನೆಯಿಂದ ಕರ್ನಾಟಕದ ಸಮಗ್ರ ಕೇಳರಣ ಸಾಧಿಸುವ ಮಹತ್ಕಾಂಕ್ಷೆಯಿಂದ ಮಡಿಯುತ್ತ ಕನ್ನಡಕನವನ್ನು ಪೆಟ್ಟಿಸುತ್ತಿರುವ ಕನ್ನಡಿಗರ ಸಂಸ್ಥೆಯಿದು. ವಿದ್ಯಾರ್ಥಿ ಕನ್ನಡಿಗರೇ ಕಾರ್ಯಕಾರಿ ಮಂಡಳಿಯಲ್ಲಿಪ್ಪುದರಿಂದ ಅದರ ಪರಿಕ್ಷಿತಿಯಲ್ಲಿ ನಡೆದುಕೊಂಡು ಬರುತ್ತಿರುವುದು ಆತ್ಮಾನಂದದಾಯಕ.

ವಿದ್ಯಾದಾಯಿನಿ ಹೈಸ್ಕೂಲಿನ 1947-48ರ ವರದಿ (ಸುರತ್ಕಲ್) ಉತ್ತಮ ರೀತಿಯಲ್ಲಿ ನಡೆದುಕೊಂಡು ಬರುತ್ತಿರುವ ಜಿಲ್ಲೆಯ ಹೈಸ್ಕೂಲುಗಳಲ್ಲಿ ಒಂದಾದ ವಿದ್ಯಾದಾಯಿನಿ ಶಾಲೆಯು ವರ್ಧಂತಿಯಂದು ಪ್ರಕಟವಾದ ಸಂಕ್ಷಿಪ್ತ ವೃತ್ತಾಂತವಿದು. ವರದಿಯ ವರ್ಷದಲ್ಲಿ ನಡೆದ ಚಟುವಟಿಕೆಗಳು ಇದರಲ್ಲಿ ವಿವರಿಸಲ್ಪಟ್ಟಿವೆ. ಶಾಲಾಡಳಿತ ಮಂಡಳಿ ಹಾಗೂ ಉಪಾಧ್ಯಾಯ ವರ್ಗದ ಕಾರ್ಯಪ್ರವರ್ತನೀಯವಾಮನಿಸು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಫಾಸಬಾಗ (ಬೆಳಗಾಂ) ಕರ್ನಾಟಕದಲ್ಲಿ ಒಂದೇ ಒಂದಾದ ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ಶಿಕ್ಷಣವನ್ನು ಕೊಡುವ ಕರ್ನಾಟಕ ಆಯುರ್ವೇದ ವಿದ್ಯಾಪೀಠವು 1943ರಿಂದ ಯಶಸ್ವಿಯಾಗಿ ನಡೆಸಿಕೊಂಡು ಬರುತ್ತಿರುವ ಫಾರ್ಮಸಿಯು ತಜ್ಞರ ಸಲಹೆ ಸೂಚನೆಗಳಿಗೆ ಕರ್ಯಾಸುತ್ತಿರುವ ಔಷಧಗಳ ಸೂಚೀಪತ್ರ.

ಸ್ವದೇಶೀ ಔಷಧ ಭಂಡಾರ (ಕುಂಜಾಲು) ಶ್ರೀ ಆರ್. ಎಸ್. ಪ್ರಭುಗಳು ಸ್ವತಃ ಸೈದ್ಧಾಂತಿಕವಾಗಿದ್ದುಕೊಂಡು ನಡೆಸಿಕೊಂಡು ಬರುತ್ತಿರುವ ಈ ಔಷಧ ಭಂಡಾರದ ಔಷಧಗಳ ಸೂಚೀಪತ್ರ. ಇವರ ಕೆಲವು ಔಷಧಗಳಿಗೆ ಆಯುರ್ವೇದ ಸಮ್ಮೇಲನಗಳಲ್ಲಿ ಬಹುಮಾನಗಳು ದೊರೆತಿವೆ.

ಮಗ್ಗಿ ಪುಸ್ತಕ

ತಯಾರಾಗಿದೆ.

ಪ್ರತಿ 1ಕ್ಕೆ 0 1 0
,, 50ಕ್ಕೆ 2 10 0
,, 100ಕ್ಕೆ 5 0 0

ನವಯುಗ ಪ್ರೆಸ್, ಉಡುಪಿ

ಮನುಜ ಧರ್ಮ

'ಧರ್ಮ ಹೋಯ್ತು ನಾಶವಾಯ್ತು'
ಎನ್ನುತಿರುವ ಮನುಜನೇ!
'ಧರ್ಮದಾತ'ನನ್ನೆ ನುಂಗಿ,
ತೇಗುತಿದ್ದ ದನುಜನೇ
ಧರ್ಮದಲ್ಲಿ 'ಭೇದತೋರಿ'
ಎಂದು ಎಲ್ಲಿ ಬೋಧಿಸಿ?
ಅನ್ಯ ಧರ್ಮದಲ್ಲಿ ಬೀರಿ
ದ್ವೇಷ-ನೊಬ್ಬಸಿರುವನೇ?

ಮನುಜ ಮನುಜನನ್ನು ಸುಲಿಯ
ಲೆಲ್ಲಿ ಧರ್ಮ ಹೇಳಿದೆ?
ದನುಜನಂತೆ ಕ್ರೂರಕರ್ಮ
ಮಾಡಲೆಲ್ಲಿ ಬೋಧಿಸಿ?

ಧರ್ಮಕೆಂದು ಕರ್ಮವೆಸಗೆ ದೇವ
ಕೋಪಗೊಳುವನೇನೆ?
ಬದಲು ನಿನ್ನ ಹೊಗವ ಕಂಡು
'ಸಿದಿದು ಕಿಡ'ಯ ಕಾಣನೇ?

ಜಗದ ಕತೆಗೆ ನೋಡು ಅಲ್ಲಿ
'ಧರ್ಮದೇವ ವೈತಾಸ'
ಮನುಜ ಧರ್ಮ ದಂತೆ ನಡೆದ
ಅನ್ಯನಾತ ಖ್ಯಾತನಾ!

ಮನುಜ-ಧರ್ಮ ತಿಳಿದು ಬೀಕ
ಅನ್ಯ ಧರ್ಮ ನೋಡಿಕೋ'
ನೀನು ನೈದ ಪಾಪಕಾಗಿ
ದೇವನಲ್ಲ-ಬೇರೆಯಿಕೋ.

ಮನುಜ-ಧರ್ಮದಂತೆ ನಡೆದು
ಕೀರ್ತಿ ಧ್ವಜವ ಹಾರಿಸೋ!
ಜಗದ ಬಗೆಯ ಸೊಗವ ಕಂದು
'ಉದಯರಾಗ' ಹಾಡಿಸೂ!

ಅನ ನಿಜದು ನಗುತಲಿರುವ -
'ಅರುಣಾನುದಯವಾಗುವಾ
ಬಾಲ ರವಿಯು ಕಿರಿಯ ಕಿರಣ
ಸೂಸಿ ಹಿರಿಯವಾಗುವಾ

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವು ದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಜಿವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ನಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ದಕ್ಷಿಣ ಕನ್ನಡ

ಅದನಮಾರು ಶ್ರೀ. ಅದಮಾರು ಹಿಂದು ಎಲಿಮೆಂ. ಶಾಲೆಗೆ ಯೋಗ್ಯ ಕಟ್ಟಡವು ಇಲ್ಲದೆ ಇದ್ದುದರಿಂದ, ಹೊಸ ಕಟ್ಟೋಣವನ್ನು ಕಟ್ಟಿಸುವ ಕೆಲಸವು ಪ್ರಾರಂಭವಾಗಿ ತಾ 5-9-48ರಲ್ಲು ಶ್ರೀ. ಅದಮಾರು ಮಠಾಧಿಪತಿಗಳಾದ ಶ್ರೀ ವಿಭುಧೇಶ ತೀರ್ಥ ಶ್ರೀ ಪಾದಂಗಳವರು ತಮ್ಮ ದಿವ್ಯಹಸ್ತದಿಂದ ಬುನಾದಿಕಲ್ಲು ಹಾಕಿರುವರು.

ಪಳ್ಳಿ ಅಸುಪಾಸಿನವರ ಸಾಕಲ್ಯಕ್ಕಾಗಿ ತಾ 6-9-48ರಲ್ಲಿ ಇಲ್ಲೊಂದು ಬ್ರಾಂಚ್ ಪೋಸ್ಟ್ ಆಫೀಸು ತೆರೆಯಲ್ಪಟ್ಟಿರುವುದು.

ನಾರಾಯಿ-ಈದು ಕೊಪ್ಲಿಂಜೆ ಹೊಸ ಶಾಲೆಯ ಪ್ರಥಮ ಅಧ್ಯಾಪಕರಾಗಿದ್ದ ಕೊಳಕೆ ಕೃಷ್ಣರಾಯರು ಲೆಲವು ತಿಂಗಳಿಂದ ಸಾಮಾಜಿಕ ಪ್ರಕ್ರಿಯೆಯಲ್ಲಿ ಅಸ್ವಸ್ಥರಾಗಿದ್ದು ತಾ 7-9-48ರಲ್ಲು ವಿಧಿವಶರಾದುದನ್ನು ತಿಳಿದು ಗ್ರಾಮಸ್ಥರೂ ಶಾಲಾ ಮಕ್ಕಳೂ ತಾ 10-9-48ರಲ್ಲು ಶಾಲಾ ಮೆನೇಜರ್ ಶ್ರೀ ಯನ್. ಪಿ. ಮುರಾಯರ್ ಅಧ್ಯಕ್ಷತೆಯಲ್ಲಿ ಸಭೆಸೇರಿ ತಮ್ಮ ಸಂತಾಪವನ್ನು ಸೂಚಿಸಿ ಮೃತರ ಆತ್ಮನಿಗೆ ಶಾಂತಿಯನ್ನು ಕೋರಿದರು. ಎಂಬುದಾಗಿ ಸದ್ರಿ ತಾಲೆಯ ಅಧ್ಯಾಪಕ ಶ್ರೀ. ಯಸ್. ಜನಾರ್ದನ ಹೆಗಡೆಯರು ತಿಳಿಸುತ್ತಾರೆ.

ಚಿಕ್ಕಮಗಳೂರು ವೈದ್ಯಾಪಾದು ಮುಂಡರೂ, ರಾಯಚೂರ ಭೂರನ ಸ್ವಾಮಿಗಳೂ, ವಿದ್ಯಾಭೂಷಣ, ಸಾಹಿತ್ಯವಿಶಾರದ, ಕವ್ಯತೀರ್ಥ ಶ್ರೀ ಬಿರುದಾಂಕಿತ ಶ್ರೀ ಗುರುಲಿಂಗ ಶಿವಾಚಾರ್ಯ ಸ್ವಾಮಿಗಳವರು, ತಾ. 28 6-48ನೇ ದಿನ ಚಿಕ್ಕಮಗಳೂರು ದಿ ತಾರಾನಾಥ ರಸೌಷಧಿ ವರ್ಕ್ಸ್ ಲಿಮಿಟೆಡ್ ಔಷಧಿ ಕಾರ್ಖಾನೆಗೆ ಭೇಟ್ಟಿಯಿತ್ತು, ಔಷಧಿ ತಯಾರಿಕೆಯ ಎಲ್ಲ ವಿಭಾಗಗಳನ್ನೂ ನೋಡಿ ಪರೀಕ್ಷಿಸಿ ಅನಂದಪಟ್ಟು ಆಶೀರ್ವಾದ ಮಾಡಿದರು. ಈ ಸಂದರ್ಭದಲ್ಲಿ ವಿದ್ವಾನ್ ವೈದ್ಯರ ಮೇಲ್ವಿಚಾರಣೆಯಲ್ಲಿ ರಾಸಾಯನವೂ ಶುದ್ಧವೂ ಆದ ಔಷಧಗಳನ್ನು ಸಿದ್ಧ ಪಡಿಸುತ್ತಿರುವುದನ್ನು ನೋಡಿ ಆತ್ಮಂತ ಆನಂದಪಾಯಿತು. ಆಯುರ್ವೇದ ಹಾಗೂ ಜನಸೇವೆಗೋಸ್ಕರ ಸುತ್ತಮುತ್ತಲೂ ವನಸ್ಪತಿ ಸಮೃದ್ಧ ನುತ್ತು ಪ್ರಾಚೀನ ಕಾಲದಲ್ಲಿ ಸುಖ್ಯರ್ದಿಗಳ ವನಸ್ಪತಿವನಾದ ಈ ಪ್ರದೇಶದಲ್ಲಿ ಸ್ಥಾಪಿಸಲ್ಪಟ್ಟ ಈ ಸಂಸ್ಥೆಯು ಚಿರಕಾಲ ಬಾಳಲೆಂದು ಹಾರೈಸುತ್ತೇನೆ ಎಂದು ಸಂಸ್ಕೃತದಲ್ಲಿ ಅಭಿಪ್ರಾಯವನ್ನು ವ್ಯಕ್ತ ಮಾಡಿದರು.

ಮಂಗಳೂರು

ಭಾಷಾವಾರು ಪ್ರಾಂತರಚನಾ ಸಮಿತಿಯಮುಂದೆ ಶ್ರೀಕಾರಂತರ ಸಾಕ್ಷಿ

ಮದ್ರಾಸಿನ ಮಾಜಿ ಕೆದಾಯಸಮಂತ್ರಿಗಳಾದ ಶ್ರೀ ಕೆ. ಆರ್. ಕಾರಂತರು ಮದ್ರಾಸಿನಲ್ಲಿ ಭಾಷಾವಾರು ಪ್ರಾಂತರಚನಾ ಸಮಿತಿಯ ಮುಂದೆ ಸಾಕ್ಷ್ಯವನ್ನಿತ್ತರು. ಶ್ರೀ ಕಾರಂತರು ತಮ್ಮ ಸಾಕ್ಷಿಯಲ್ಲಿ ದಕ್ಷಿಣಕನ್ನಡ ಜಿಲ್ಲೆ [ಅತಿ ದಕ್ಷಿಣದಲ್ಲಿರುವ ಮಲೆಯಾಳಿ ಮಾತಾಡುವ ಪ್ರದೇಶಗಳನ್ನು ಬಿಟ್ಟು] ಕೊಡಗು, ನೀಲಗಿರಿ, ಕೊಯಮುತ್ತೂರು, ಸೇಲಮುಗಳ ಉತ್ತರಭಾಗಗಳು, ಆನಂತಪುರ ಜಿಲ್ಲೆಯ ಪಶ್ಚಿಮಭಾಗ, ಬಳ್ಳಾರಿ ಜಿಲ್ಲೆ, ಉತ್ತರಕನ್ನಡ, ಧಾರವಾಡ, ಬಿಜಾಪುರ ಜಿಲ್ಲೆಗಳು ಭಾವೀ ಕರ್ನಾಟಕ ರಾಷ್ಟ್ರತದಲ್ಲಿ ಸೇರಿಸಲ್ಪಡಬೇಕೆಂದು ಹೇಳಿರುವರು.

ಮಲೆಯಾಳಿ ಮಹಾ ಜನಸಭೆಯ ವಾರ್ಷಿಕೋತ್ಸವವು ಇದೇ ತಾ 5ರಲ್ಲು ಗಣಪತಿ ಶಾಲೆಯ ಚಾರವಾ ಸಭಾಗದಲ್ಲಿ ಬಲ್ಲಾ ಜಜ್ಜರಾದ ಶ್ರೀ ಸಿ. ಕೃಷ್ಣಮೂರ್ತಿಯವರ ಅಧ್ಯಕ್ಷತೆಯಲ್ಲಿ ಜರಗಿತು. ಮಲೆಯಾಳಿ ಹವ್ಯಕ ಸಭೆಯು ಶ್ರೀಮಠ ತುಂಗಾನ್ವಯವತಿ ಅಧ್ಯಕ್ಷತೆಯಲ್ಲಿ ಜರಗಿತು.

ಸ್ವೀಮರು ಜಲಾವನೆ ಇದೇ ತಾ 30 ರಿಂದ ಪ್ರಾರಂಭವಾಗುವುದು. ಪ್ರತಿ ಗುರುವಾರ ರಂದು ಸ್ಟೀಮರ್ ಸ್ಟೀಮರು ಬೊಂಬಾಯಿಯಿಂದ ಹೊರಟು ಮರ್ಮಗೋವಾ, ಕಾರವಾರ, ಕುಮಟಾ, ಭಟ್ಕಳ್, ಮಲ್ಪೆಗಾಗಿ ಮಂಗಳೂರಿಗೆ ಪ್ರತಿ ಶನಿವಾರ ಬೆಳಿಗ್ಗೆ 5 45 ಕ್ಕೆ ಬಂದು ತಲುಪುವುದು. ಅದೇದಿನ ಪೂರ್ವಾಹ್ನ 11-30ಕ್ಕೆ ಮಂಗಳೂರಿನಿಂದ ಹೊರಟು ನೋಮವಾರ ಬೆಳಿಗ್ಗೆ 9 ಗಂಟೆಗೆ ಬೊಂಬಾಯಿಗೆ ಬಂದು ತಲುಪುವುದು. ಈ ಸ್ಟೀಮರಿನಲ್ಲಿ ಸ್ಥಾನಸೌಕರ್ಯವನ್ನು ಮಾತ್ರ ಒಯ್ಯಲಾಗುವುದು. ಚಾರ್ಜು ಇತ್ಯಾದಿ ವಿವರಗಳನ್ನು ಆ ಆಯಾಯ ಬಂದರ ಆಫೀಸುಗಳ ಅಧಿಕಾರಿಗಳಿಂದ ಪಡೆಯಬಹುದು.

ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭೆ- ಈ ಕೆಳಗಿನ ವಿಷಯಗಳನ್ನು ಪರಿಶೀಲಿಸುವ ಬಿದ. ಕ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸಾಮಾನ್ಯ ಮಹಾಸಭೆಯು ತಾ. 19 9-48 ನೇ ಆದಿತ್ಯವಾರ ಅಪರಾಹ್ನ ಘಂಟೆ 3ಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ನಡೆಯಲಿರುವುದು. 1 ಕಳೆದ ವರ್ಷದ ವಾರ್ಷಿಕ ಮತ್ತು ಲೆಕ್ಕಪತ್ರ ಮಂಜೂರಾತಿ. 2 ಮುಂದಿನ ವರ್ಷದ ಬಜೆಟು. 3 ಕಾರ್ಯಕಾರೀ ಸಮಿತಿಯ ಪ್ರಾಂತರಚನೆಯ ಕುರಿತು ಭಾಷಾವಾರು ಪ್ರಾಂತರಚನಾ ಕಮಿಟಿಯ ಮುಂದಿಡಬೇಕಾದ ಅಭಿಪ್ರಾಯದ ನಿರ್ಧಾರ 4 ಸೇವಾದಳದ ಸಂಘಟನೆಯ ಪ್ರಶ್ನೆ 5 ಕೃಷಿಕ ಮತ್ತು ಮಜೂರ ಸಂಘಟನೆಯ ವಿಚಾರ. 6 ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆರ್ಥಿಕ ಪರಿಸ್ಥಿತಿಯ ಪರಿಶೀಲನೆ. / ಅಧ್ಯಕ್ಷರ ಅನುಮತಿಯಿಂದ ಇತರ ವಿಷಯಗಳು.

(ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಳೆದ ನಾಲ್ಕಾದ ನಂದಿಯ ಪರಿಶೋಧಿತ ಲೆಕ್ಕಪತ್ರವು ಸದಸ್ಯರ ಅವಗಾಹನೆಗಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಸೇವಾಜನ್ಲಿ ತಾ. 11-9 19-48ರಿಂದ ತಾ 18 9 1948ರ ವರೆಗೆ ಆ ಕಚೇರಿಯ ಘಂಟೆ 11ರಿಂದ 5ರ ವರೆಗೆ ಇರಿಸಲಾಗುವುದು)

ಕಾರ್ಯಕಾರೀ ಮಂಡಲಿಯ ಸಭೆ: ಮೇಲೆ ಕಾಣಿಸಿದ ಕೆಲವು ವಿಷಯಗಳನ್ನು ಪರಿಶೀಲಿಸುವರ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಯ ಸಭೆಯು ತಾ 19 9-48ನೇ ಆದಿತ್ಯವಾರ ಪೂರ್ವಾಹ್ನ ಘಂಟೆ 10ಕ್ಕೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿನಲ್ಲಿ ನಡೆಯಲಿರುವುದು

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಈ ಮಹಾಸಭೆ ಮತ್ತು ಕಾರ್ಯಕಾರೀ ಮಂಡಲಿಯ ಸಭೆಯ ಮುಂದೆ ಆತಿ ಪ್ರಾಮುಖ್ಯ ವಿಷಯಗಳು ಬರಲಿರುವುದರಿಂದ ಸದಸ್ಯರೆಲ್ಲರೂ ದಯಮಾಡಿಸಲ್ಪಡೆ ಬರಬೇಕಾಗಿಯೂ, ಸಾಹಸಭೆಯ ಸಾಮಾನ್ಯಸಿಬ್ಬಂದಿಯ ಸೂಚನೆ ಮತ್ತು ಅಭಿಪ್ರಾಯಗಳನ್ನು ತಾ 18 9-48ನೇ ದಿನವಾದ ಸಾಜೆ 6 ಘಂಟೆಯೊಳಗೆ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಫೀಸಿಗೆ ಬರುವಂತೆ ಕಳುಹಿಸಬೇಕಾಗಿಯೂ ವಿನಂತಿ.

(ಸಹಿ) ಕೆ ಕೆ ಶೆಟ್ಟಿ,
ಪ್ರಧಾನ ಕಾರ್ಯದರ್ಶಿ,
ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ

RHGD.

ಅಮೃತಾಂಜನ ಕಲೆಮಾಡಿನ, ತಿರಿಮಾಡಿನ, ಬಾಲಕ ಕಾಟ್ಟಿಗೆ, ಘಾಜ ಹುಣ್ಣು, ನೇದನೆಗಳಿಗೂ ಎದೆನೋವು, ಶ್ವಾಸಗಳು ಬಾತು ಕೆಳ್ಳುತ್ತಿದು, ತೇಳು ಪಿತ್ತ ಮುಂತಾದ ಭೀಕರ ಕಷ್ಟಕಾಲ, ಮೊದಿನ ಮೆದಿಲಾದ ಎಲ್ಲಾ ರೋಗಗಳಿಗೂ ಕೂಡ

ಸರ್ವ ಜಾಲಗಳಿಕ್ಕೆ ಮತ್ತು ಸರ್ವ ನಮ್ಮಕ್ಕೆ ಸಿಕ್ಕುತ್ತಿದೆ

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಆಲ್ಲದೆ ಸ್ತ್ರೀಯರ ಬಿಳಿಶರಿಗು, ಪ್ರದರದೋಷಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿನಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಕ್ಕೆ:—ಹರವಿಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಷ್ಟ ಚಾರ್ಜು ೧೫ ಆಣೆ.

ಮಾಲಕರು:—ಹಾಲಪ್ಪಾ ಭಕೀರಪ್ಪಾ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕೆಸುಣಾಸಿ, ಕೆಮಿಸ್ಟ್ ಹಾವೇರಿ. ಬ್ಯಾಂಕ್.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು, ಕಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಬ್ಬುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪ್ಪ ನೆರಗು ಹೋಗುಕ್ಕಿದ್ದರೆ, ಹೊಲಿಕಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗಂಜಿ ಪ್ರಮಾಣ ಔಷಧ ಅರ್ಧಸೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು:- ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರುಬೇಳಿ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಕರೂ. ಪೋಸ್ಟ ಚಾರ್ಜ ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹೆಬ್ಬಳ್ಳಿ:—ಹೆಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ.
ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ.

ಹೆರಿಗೆ ಅಂದರೆ ಹುನರ್ಜನ್ಮವೆಂದು ಸ್ತ್ರೀಯರೆಸ್ಸುವುದಿದೆ ಕಾರಣವಿಷ್ಟೆ. ಹಿಂಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಅಕಸ್ಮಿಕವಾಗಿ ಸಂಭವಿಸಬಹುದಾದಂಥ ವಿಕಾರಗಳುಬ್ಬಾಗುತ್ತವೆ. ಕಸಬರಿಂದೆ ಯಾ ಅವರ ಅಂಧ ಉಳಿದು ಜ್ವರ ಬರುತ್ತವೆ, ಸಂಜೀವಿತ್ವವೆ ವಿವರೀತ ಸ್ಥಿತಿಯಾ ಸ್ಥಾನ ಸಂಕೋಚ ಉಬ್ಬಾಗುತ್ತವೆ ಇದಲ್ಲದೆ ಪ್ರಲಾಪಸ್ಸು, ಮೂರ್ಛೆರೋಗ, ಸ್ವಪನಗಳು ನೀರಸ, ನಿವ್ರಶಕ್ತಿ, ಭ್ರಾಂತಿ, ಆಸ್ಥಿಮಾನ್ಯ ಇತ್ಯಾದಿ ಬಹುದೊಡ್ಡ ಯಾ ಹಲವು ವಿಕಾರಗಳು ತಲೆದೋರುತ್ತವೆ ನಿಜ. ಇವೆಲ್ಲಾ ಕರ್ಮಫಲ ಎಂದೆ ಸರಿಸಿ ಸುಮ್ಮನಾರುವ ರೂಢಿ ಬಹುಮಾನಾದುದೇಕಾಗುತ್ತೆಂದೆ ಆ ಬೇಸರ ನೈಸರ್ಗಿಕವೆಂದು ಅಭಿಪ್ರಾಯ ಪಡಬೇಕಾಗಿಲ್ಲ!

ಆದರೆ ಭ್ರೂಣಾಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ **ಪ್ರಸೂತಾಮೃತ**ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ' ವಟಿ ತಪ್ಪುಗಾರನ್ನ ಮುಂದಾಗಿ ತಂದಿಟ್ಟು ಪ್ರಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ

ಕರ್ಮಠರಿಗು ಕೇರಕಲಾಪ, ತಂಪು ಕುದುರು, ಬಾಧ್ಯ ನೇತ್ರಗಳನ್ನು ನೋಡಲು ಬಯಸುವವರಿಗೆ ಆಮಲಕೀ ತೈಲ ಯಾ ಹಿಮಮಾಗರ

ತೈಲಗಳಲ್ಲಿಂದವನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.)
Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ಮೈಸೂರು ಹೊರಗುಳಿದರೂ ಒಕ್ಕೂಟ ಕರ್ನಾಟಕ ಸ್ವತಂತ್ರ ಪ್ರಾಂತವಾಗಬೇಕು.

(ಪ್ರೊ. ಜಿ. ಎಸ್. ಹಾಲಪ್ಪ ಮೈಸೂರು ವಿಶ್ವವಿದ್ಯಾಲಯ.)

ಮೈಸೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿರುವ ಶ್ರೀ ಜಿ. ಎಸ್. ಹಾಲಪ್ಪನವರು ಭಾಷಾನಾರು ಪ್ರಾಂತರಚನಾ ಸಮಿತಿಯ ಪ್ರಶ್ನಾವಳಿಯಲ್ಲಿ ಸಂಸ್ಥಾನಗಳಿಗೆ ಸಂಬಂಧಿಸಿದ ಐದನೆಯ ಪ್ರಶ್ನೆಗೆ ಕೊಟ್ಟ ಉತ್ತರವು ಗಮನಾರ್ಹವಾಗಿದೆ.

ಬ್ರಿಟಿಷ್ ಸ್ವಭುತ್ವದಿಂದ ರಚಿಸಲ್ಪಟ್ಟ ಕೃತಕ ರಾಜಕೀಯ ಗಡಿಗಳಿಂದಾಗಿ ತಮ್ಮ ಭಾಷಾ ಸಹೋದರರಿಂದ ಪ್ರತ್ಯೇಕಿಸಲ್ಪಟ್ಟ ಎಲ್ಲಾ ಸಂಸ್ಥಾನ ಸಯೋದರರಿಗೆ ಈ ಪ್ರಶ್ನೆಯು ಅತಿ ಸಮಂಜಸ ಹಾಗು ವಿಚಾರಾರ್ಹವಾದುದಾಗಿದೆ. ಮೈಸೂರಿನವನಾದ ನಾನು ಮೈಸೂರು ಹಾಗು ಒಕ್ಕೂಟ ಕರ್ನಾಟಕದ ಭಾಗಗಳ ಸಂಯೋಜನೆಯ ವಿಷಯವಾಗಿ ಈ ರೀತಿಯಾಗಿ ನನ್ನ ಅಭಿಪ್ರಾಯ ಕೊಡಬಯಸುತ್ತೇನೆ.

ಚಾರಿತ್ರಿಕವಾಗಿ ಹೇಳುವುದಿದ್ದರೆ, ಗಲಭೆಯು ಇಸವಿಯ ನಿಜಜನೆಯಲ್ಲಿರುತಿದ್ದರೆ, ಇಂದು ಮೈಸೂರು ಸಂಸ್ಥಾನವು ಮುಂಬಯಿ ಅಥವಾ ಮದ್ರಾಸು ಪ್ರಾಂತದ ಒಂದು ಭಾಗವಾಗಿರುತಿತ್ತು. ಈ ವಿಭಜನೆಯಾಗಿದ್ದರೂ ಕೂಡ ಇಂದು ಎಲ್ಲ ಕನ್ನಡಿಗರಲ್ಲಿರುವ ಸಹೋದರ ಪ್ರೇಮವು ಅಳಿದು ಹೋಗಿಲ್ಲ. ಒಕ್ಕೂಟ ಕರ್ನಾಟಕ ಮತ್ತು ಮೈಸೂರಿನ ಕನ್ನಡಿಗರು ಒಂದೇ ಆಡಳಿತೆಯೊಳಗೆ ಬರುವ ತಮ್ಮ ಇಚ್ಛೆಯನ್ನು ಆನೇಕಸಲ ಪ್ರಜಾ ಪ್ರತಿನಿಧಿಸಿರುವರು. ಈಗ ಮೈಸೂರಿನಲ್ಲಿ ಪ್ರಜಾಪ್ರಭುತ್ವವು ಸ್ಥಾಪಿಸಲ್ಪಟ್ಟಿದ್ದರಿಂದ ಒಂದು ದೊಡ್ಡ ತೊಂದರೆಯು ನಿವಾರಿಸಲ್ಪಟ್ಟಿದ್ದು, ಮೈಸೂರು ಸಹಿತವಾದ ಅಖಂಡ ಕರ್ನಾಟಕ ಪ್ರಾಂತರಚನೆಯು ಈ ಮೊದಲಿಗಿಂತ ಸುಲಭಸಾಧ್ಯವಾದುದೂ, ಸಾಧ್ಯವಾದುದೂ ಆಗಿದೆ. ಎಲ್ಲ ಕನ್ನಡಿಗರು ಅಖಂಡ ಕರ್ನಾಟಕ ಪ್ರಾಂತ ನಿರ್ಮಾಣಕ್ಕಾಗಿ ಪ್ರಯತ್ನಿಸಬೇಕು ಒಕ್ಕೂಟ ಕರ್ನಾಟಕ ಮತ್ತು ಮೈಸೂರನ್ನು ಸಂಯೋಜಿಸುವ ಬಗ್ಗೆ ಎರಡು ವಾರಗಳಿವೆ ಹೊಸ ಕರ್ನಾಟಕ ಪ್ರಾಂತವು ಏಕೀಕೃತ. (Unitary Type) ಅಥವಾ ಆಂತರಿಕ ಸ್ವಾತಂತ್ರ್ಯ ರೀತಿ (Fedaral Type) ಇವುಗಳಲ್ಲಿ ಯಾವುದಾದರೂ ಒಂದನ್ನು ಅನುಸರಿಸಬಹುದು

೧. ಒಕ್ಕೂಟ ಕರ್ನಾಟಕದ ಜನತೆಯು ಮೈಸೂರಿನ ರಾಜರ ಘಟನಾತ್ಮಕ ಅರಸೊತ್ತಿಗೆಯನ್ನು ಒಪ್ಪಿಕೊಂಡರೆ, ಮತ್ತು ಹೆಚ್ಚಾಗಿ ಅಭಿವೃದ್ಧಿ ಹೊಂದಿದ ಮೈಸೂರು ಕಡಿಮೆ ಅಭಿವೃದ್ಧಿ ಹೊಂದಿದ ತನ್ನ ಸಹೋದರರೊಡನೆ ಸೇರಬಯಸಿದರೆ ಒಂದೇ ಘಟಕವನ್ನು, ಒಂದೇ ರೀತಿಯ ಆಡಳಿತೆಯ ಘಟಕವನ್ನು ರಚಿಸಬಹುದು.

೨. ಮೇಲಿನ ಯೋಜನೆಯು ಸಾಧ್ಯವಾಗದಿದ್ದಲ್ಲಿ, ಕರ್ನಾಟಕ ಪ್ರಾಂತದೊಳಗೆ ಮೈಸೂರನ್ನು ಆಂತರಿಕ ಸ್ವಾತಂತ್ರ್ಯಪ್ರಭು ಉಪ ಪ್ರಾಂತವನ್ನಾಗಿ ಮಾಡಬಹುದು ಆದರೆ ಹೀಗೆ ವ್ಯವಸ್ಥೆ ಮಾಡುವಾಗ ಆದನ್ನು ಬೇಕಾದಾಗ ಬದಲಾಯಿಸುವಂತಿರಬೇಕು. ಹೀಗೆ ಮಾಡಿದರೆ, ಕರ್ನಾಟಕವು ಹಿಂದೀ ಒಕ್ಕೂಟದ ಪ್ರಧಾನ ಆಂತರಿಕ ಸ್ವಾನಂತ್ರ್ಯ ಘಟಕವಾಗಿದ್ದು, ಮೈಸೂರು ಸಹಾಯಕ ಉಪ ಪ್ರಾಂತವಾಗಿದ್ದಂತಾಗುವುದು ಮೈಸೂರಿನ ಹೊರತಾದರೂ ಒಕ್ಕೂಟ ಕರ್ನಾಟಕಕ್ಕೆ ಪ್ರತ್ಯೇಕ ಪ್ರಾಂತವನ್ನು ರಚಿಸುವುದು ಸಾಧ್ಯವಿದೆ ಮತ್ತು ಆದನ್ನು ಪ್ರತಿಪಟಿಸುವುದು ಯಾವ ರೀತಿಯಿಂದಲೂ ಸಾಧ್ಯವಲ್ಲ. ಸಂಸ್ಥಾನಗಳನ್ನು ವಿಲೀನೀಕರಿಸಿ ಅವುಗಳನ್ನು ಪ್ರಧಾನ ಆಂತರಿಕ ಸ್ವಾತಂತ್ರ್ಯ ಘಟಕಗಳ ಸ್ಥಾನಿ ರಚಿಸುವುದೇ ಯೋಗ್ಯವಾಗಿದೆ. ಈಗಿನ ರಾಜಕೀಯ ಪರಿಸ್ಥಿತಿಯಂದಾಗಿ ಇದು ಅಸಾಧ್ಯವಾದಲ್ಲಿ ಎರಡನೆಯದಾದ ಪ್ರಧಾನ ಆಂತರಿಕ ಸ್ವಾತಂತ್ರ್ಯ ಘಟಕದಲ್ಲಿ ಉಪ ಪ್ರಾಂತಸ್ಥೋದನ್ನು ರಚಿಸುವ ಯೋಜನೆಯನ್ನು ಸ್ವೀಕರಿಸಬಹುದು.

[ಆ. ಕ. ಎ. ಸಂಘ]

ವಿವಿಧ ಪಾತ್ರೆಗಳು

ಯಾವಕ್ಕೂ ವಿಧವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಂ ಆಗಿ ಯೂಚಿಲ್ಲರೆಯಾಗಿಯೂದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿವೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ಶೆಟ್ಟಿ.	0	3	0
ಸಂಶಯ ಪಿಶಾಚಿ	(ನಾಟಕ)	ಕ. ಕೆ. ಕಟ್ಟಿ.	0	8	0
ಕುಶಲವ	(,,)	,,	0	6	0
ವೈಭಿಚಾರಿಣಿ ಯಾರು	(,,)	,,	1	0	0
ಹೆಂಡ್ತಿ ಗಂಡನಾದರೆ	(ಪ್ರಹಸನ)	,,	0	4	0
ಕನ್ಯಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಸಣ್ಣ ಕತೆಗಳು)	ಕೊರಡ್ಕಲ್	0	14	0
ಭಾರತೀಯ ಕತೆಗಳು	(,,)	,,	0	14	0
ಮೂರು ವ್ಯಹಸನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್ ಎಲ್. ಸುಬ್ರಹ್ಮಣ್ಯ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜ.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾಕಾಮಿನಿ	(ಕವಿತೆಗಳು)	ಎಸ್. ವೆಂಕಟರಾಜ	2	0	0
ಸವ್ಯಸಾಗರ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	1	0
ಕದಂಬ	(ಕತೆಗಳು)	,,	1	1	0
ನಗೆನೋಟಗಳು	(ವಿನೋದ ಕತೆಗಳು)	ಕೆ. ವಿಟ್ಠಲ ಶೆಣೈ	0	14	0
ಅನ್ನದೇವರು ಮತ್ತು ಇತರ ಕತೆಗಳು		ಕಯ್ಯಾರ ಕಿಞ್ಞಣ್ಣ ರೈ	1	0	0
ವಿಷ್ಣುವಿನ ದಶಾವತಾರಗಳು	(ಸಿಡಂಬನೆ)	ಅರ್ಥಾತ್ ದಶಾವತಾರಗಳು ಎಂ. ವಿ. ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯಕ್ಷಗಾನ ನಾಟಕ)	,,	0	8	0
ಸ್ವಾತಂತ್ರ್ಯವೀರ ಸಾವರಕರರು	(ಜೀವನ ಚರಿತ್ರೆ)	ಇಂದಿರಾಬಾಯಿ	1	1	0
ಜೀವನಸಂಗ್ರಾಮ	(ನಾಟಕ)	ಪಿ. ತೀನ ಶೆಟ್ಟಿ	1	8	0
ಜಮೀನ್ದಾರ	(ಕಾದಂಬರಿ)	ಹೊಸಮನೆ ಗುಡ್ಡಪ್ಪ	1	8	0

ಪ್ರತಿಗಳಿಗೆ:—
ನವಭಾರತ ಪುಸ್ತಕ ಭಂಡಾರ, ಉಡುಪಿ ಸ. ಕ.

ಭಾರದ್ವಾಜರ

ಇಂಗ್ಲೀಷ್-ಇಂಗ್ಲೀಷ್-ಕನ್ನಡ

ಡಿಕ್ಷನೆರಿ

ಉತ್ತಮ ನೈತ ರೂ. ೬—೦—೦

ಸಾಧಾರಣ ಪ್ರತಿ ರೂ. ೪—೮—೦

ಅಂಚೆಪಚ್ಚ ಪ್ರತ್ಯೇಕ

ನವಭಾರತ ಬುಕ್ ಡಿಪೊ

: ಉಡುಪಿ :

ಪ್ರಕಟಣೆ

ಉಡ್ಪಿ ಡಿ. ಮು. ಕೋರ್ಟ್‌ನಲ್ಲಿ
O. S 217/1945 R. I. A. 417/1948
K. P. ರಾಮಂಜ ಶೆಟ್ಟಿ—ಆರ್ಜಿದಾರ
ಮತ್ತು
M ಕಸೇಲೆಯೂ— .. .. ಎದ್ರಿಯವರೊಳಗೆ

ಉಡ್ಪಿ ತಾಲೂಕು ಮೂಡನ್ಸಿದಂಬೂರು ಗ್ರಾಮದ ಸಂಖ್ಯ X11ನೇ ಆಜ್ಞರಕಾಡು ಪಾಡಿಗೆ ಸೇರಿದ ಸ. ನಂ. 132/3- ನಂಜ-0-25 ರೂಪ್ಯಾ 2-13-0 ಕೀರ್ತಿಯ- ಈಗ ಅಸಿಸ್ಟಾಂಟ್ ಕಮ್ಮಿರ್ಶಿಯರ್ ಸೇಲ್ ಟೇಕ್ಸ್ ಆಫೀಸು ಯಿರುವ ಕಂಪೌಂಡು ಮೇಲ್ಕಂಡ ಫ್ಯಾನಲ್ ದಿಕ್ರಿ ವ್ಯವಹರಣೆಯಲ್ಲಿ ತಾರೀಕು 29 9-1948ನೇ ದಿವ್ಸ ಪೂವಾಹ್ನ 11 ಗಂಟೆಗೆ ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ ಬಹಿರಂಗವಾಗಿ ಯೇಲೀ ಮಾಡಲ್ಪಡುವುದು ಯೆಂದಸಂಗ್ತಿ ಸಮಸ್ತ ಜನರಿಗೆ ಈ ಮೂಲಕ ತಿಳಿಯಪಡಿಸಿಯಾದೆ.

K Ramakrishna Rao
Vakil for Petitioner
ಉಡ್ಪಿ ತಾ. 9-9-1948

ಕಾರ್ಕಳ ಡಿ. ಮು. ಕೋರ್ಟ್‌ನಲ್ಲಿ
O. P No. 20/1948

ವೇಣಮ್ಮ ಸೆಡ್ತಿ, ಶ್ರೀವರ್ಮ ಸೆಟ್ಟಿ ನಿವಾಸಿ ಕಾರ್ಕಳ ತಾಲ್ಲೂಕು ಪಣಪೀಲು ಗ್ರಾಮದ ಅರವನೆಯಲ್ಲಿರುವವಳು -ಆರ್ಜಿದಾರಳು

ಆರ್ಜಿದಾರಳ ಗಂಡ ಮೃತಪಟ್ಟ ಶ್ರೀನಿವಾಸ ಸೆಟ್ಟಿಗೆ ಮೇಲ್ಕಂಡ ಆರ್ಜಿಯಲ್ಲಿ ನಿವಾಸಿಸುವ ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳ ಪ್ರಕಾರ ಗವರ್ನಮೆಂಟ್ ಆಫ್ ಇಂಡಿಯಾ ಯಿವರಿಂದ ಬಹಾ ಅವಜಿಗಳನ್ನು ಸ್ವೀಕರಿಸುವಾರೆ ಸದರಿ ಶ್ರೀವರ್ಮ ಸೆಟ್ಟಿ ಬರಬಿಟ್ಟ ಏಲುನಾಮೆಯ ಪ್ರಕಾರವೂ ಜೈನ್ ಸ್ಟಕ್ಷನ್ ಆಕ್ಟ್ ಪ್ರಕಾರವೂ ಆತನ ವಬ್ಬೀ ನಾರೀಸುವಾರಳಾದ ಆರ್ಜಿದಾರಳು ಹಕ್ಕುದಾರಳಾಗಿದ್ದು ಆ ಕಾರಣ ತನ್ನ ಹೆಸರಲ್ಲಿ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಆರ್ಜಿದಾರಳು ಕೊಟ್ಟ ಆರ್ಜಿಯು ತಾರೀಕು 28 9-1948ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಬೆಳಿಗ್ಗೆ 11 ಗಂಟೆಯ ಸಮಯಕ್ಕೆ ತಪ್ಪಿಗೆ ಯಿಟ್ಟಿರುವದರಿಂದ ಆ ವಿಶಯದಲ್ಲಿ ಆಕ್ಷೇಪ ಉಳ್ಳವರು ಸದರಿ ತಾರೀಕಿನಲ್ಲಿ ಸದರಿ ಕೋರ್ಟುಮುಂದೆ ಹಾಜರುಆಗಿ ಅವರವರ ಆಕ್ಷೇಪಣೆಗಳನ್ನು ಜಾಹೀರುಮಾಡಿಕೊಳ್ಳ ಬಹುದಾಗಿ [illegible] ತಿಳಿಯಪಡಿಸೋಣಾಗುತ್ತದೆ.

A. N. S. Achar
Vakil for Petitioner
Karkala 10—9—48

ರೇಶನ್ ಕಾರ್ಡುಗಳೂ ಕಾರ್ಡುಗಳಿಗೆ ಹಚ್ಚುವ ಸ್ಟ್ಯಾಂಪುಗಳೂ ದೊರೆಯುತ್ತವೆ

ನವಯುಗ ಪ್ರೆಸ್, ಉಡುಪಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶಲ್ ರೂ. 5/-; ಅಧಿಕಾಧಿಕ ಸ್ಪೆಶಲ್ ರೂ. 8/- [ವಿ. ಪಿ ಹನ್ನೆರಡಾಣೆ ಪ್ರತ್ಯೇಕ]

Mrs. P. DEVEE, F. DS (N. J.)
Tollygunge CALCUTTA.
ಸ್ವಾತಿಸ್ವರೂಪ ಶಕಾಕಂಪನಿ, ಮಂಗಳೂರು

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

ಅಂತರಂಗ
ಜೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ನಾಧನೆ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

NAVAYUGA WEEKLY, UDIPI, S. K.
FOUNDER: Hon'ble Mr. A. B SHETTY, Health Minister, Govt. of Madras.

ನವಯುಗ
ಚಂದಾ ನಿಯಮ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯
ವಾರ ೪

Vol. 29
No. 4

ಐದೇ ದಿನಗಳೊಳಗ ನಿಜಾಮ್ ಶರಣುಬಂದರು!

ಹೈದರಾಬಾದ್ ನಿಜಾಮರು ಇದೇ ತಾ. 17ನೇ ಶುಕ್ರವಾರ ಭಾರತ ಸರಕಾರಕ್ಕೆ ಶರಣು ಬಂದರು; ಹಿಂದೀ ಸರಕಾರವು ತಾ. 13ನೇ ಪೂರ್ವಾಹ್ನ 4-30ಕ್ಕೆ ಕಲಿಸಲಾರಂಭಿಸಿದ ಪಾಠವನ್ನು ನಿಜಾಮರು ತಾ. 17ನೇ ಆನಂತಾಹ್ನ 4-30ರೊಳಗೆ ಕಲಿತು ಮುಗಿಸಿದರು. ಹಿಂದೀ ಸರಕಾರದ ಒಂದೂ ಕಾಲು ವರುಷದ ಸಮುದಾಯಿಸುವಿಕೆಯಿಂದಾಗದ ಕೆಲಸವು ಇದರ ಕೇವಲ ನಾಲ್ಕೂವರೆ ದಿನಗಳ 'ಪೋಲೀಸ್' ಕಾರ್ಯಾಚರಣೆಯಿಂದ ಆಯಿತು! ಹೈದರಾಬಾದ್ ಆಂಕಪೊಂದು ಅಕಸ್ಮಾತ್ ಮುಗಿಯಿತು.

ನಿಜಾಮ್ ಸರಕಾರ ಸ್ವಬುದ್ಧಿಯಿಂದ ಹಾದಿಗೆ ಬರುವಂತಹದಲ್ಲವೆಂಬುದು ವಿಚಾರಗಳೆಲ್ಲರಿಗೂ ಗೊತ್ತಿತ್ತು-ಆದಕ್ಕೆ ಶಿಕ್ಷಿಸಿ ಕಲಿಸುವುದು ಭಾರತಕ್ಕೆ ಸಾಧ್ಯ ಮತ್ತು ಸುಲಭವೆಂಬುದೂ ತಿಳಿದಿತ್ತು -ಆದರೆ ನಿಜಾಮರ, ಅವರ ಮಂತ್ರಿಗಳ, ಎಲ್ಲಕ್ಕಿಂತ ಹೆಚ್ಚಾಗಿ ಕಾಸಿಮ್ ರಜ್ವಿಯ, ಡಂಗುರಗಳನ್ನು ಕೇಳುತಿದ್ದ ಯಾರಾದರೂ ಅಲ್ಲಿಯ ಕೆಲಸ ಐದೇ ದಿನಗಳೊಳಗೆ ಮುಗಿದೀತೆಂದು ನಿರೀಕ್ಷಿಸಿರಲಿಲ್ಲ. ನಿರೀಕ್ಷಿಸುವುದಾದರೂ ಹೇಗೆ?

"ಒಳಗೆ ಕಾಲಿಟ್ಟು ನೋಡಿ-ಫಿಲ್ಲಿಯ ಕೆಂಪು ಕೋಟೆಯ ಮೇಲೆ ನಿಜಾಮ್ ಧ್ವಜವನ್ನು ಹಾರಿಸಿಬಿಡುವೆ; ಮಸಲಿಪಟಾಮಿನಲ್ಲಿ ರಾಣ್ಯ ಹೊಡೆಯುವೆ!"ಎಂದು ರಜ್ವಿ ತೊಡೆ ಚಪ್ಪರಿಸಿಕೊಂಡು ಕರೆಯುತಿದ್ದ; "ಭಾರತದ ಭೂಮಿಯುದೀ ರಕ್ತದಿಂದ ಕೆಸರಾಗಿ ಹೋದೀತು; ನೋಡಿಕೊಳ್ಳಿ" ಎಂದು ಪಾಕಿಸ್ತಾನದ ವಿದೇಶ ಮಂತ್ರಿ ಸರ್. ಝುಫರುಲ್ಲಾ ಘೆರ್ಜಿಸಿದ್ದರಲ್ಲದೆ, ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಅಲಿ ಖಂಡಿತ ನೆಹರುಗಳಿಗೂ ತಿಳಿಸಿದ್ದರು; ಹೈದರಾಬಾದಿನ ಪ್ರಧಾನ ಮಂತ್ರಿ ಮಿ. ಲಾಯಿಕ್ ಅಲಿ ಮುಂತಾದವರು ಅದನ್ನೇ ಇನ್ನಷ್ಟು ಬಿಗುವಾಗಿ ಪ್ರತಿಧ್ವನಿಸಿದ್ದರು. ನಿಜಾಮ್ ಸರಕಾರದ ದೊಡ್ಡ ಫಿರಂಗಿಗಳೆಂದರೆ ಇವು ಮಾತ್ರವೆಂದೂ, ಮಿಕ್ಕ ಯಾವುದೂ ಪ್ರಯೋಜನಕ್ಕೆ ಬಾರದೆ ನೋಡೀ ತಾವು ಗಳೊಳಗೆ ಮುಗಿಯುವಂತಹವೆಂದೂ ಯಾರಿಗೆ ಗೊತ್ತಿತ್ತು? 'ವಿಜಯಶ್ರೀ' ಎಂಬವಳರುವುದು ಹೌದಾದರೆ, ಹಿಂದೀ ಸೇನೆ ಹೊರಟ ಮುಹೂರ್ತದಲ್ಲೇ ಆಕೆ ಸಿಂಗರಿಸಿಕೊಳ್ಳಹತ್ತಿದ್ದ ಪಕ್ಷದಲ್ಲೂ, ಅವಳ ಆ ತಯಾರಿ ಮುಗಿಯುವ ಮೊದಲೇ ಹಿಂದೀ ಸೇನೆ ಗುರಿ ಮುಟ್ಟಿಬಿಟ್ಟಿತು! ಇದೀಗ ಆನಂದಾಶ್ಚರ್ಯಕರೆ ವಿಜಯ! ಭಾರತ ಸರಕಾರದ ಸೇನೆಯೊಂದಿಗೆ, ಸ್ವತಃ ನಿಜಾಮ್ ಸರಕಾರದ ಅನ್ಯಾಯಗಳೂ, ಅದರ ಮೇಲೆ ಒಮ್ಮೆಗೇ ಕುಸಿದು ಬಿದ್ದುದರಿಂದಲೇ ಅದು ಈ ರೀತಿ ಅಕಸ್ಮಾತ್ ಸೆಲ ಸಮವಾಗಿರಬೇಕು!

"ಕೇವಲ ತನ್ನೊಬ್ಬನ ಸ್ಥಾನಮಾನಗಳ ರಕ್ಷಣೆಗಾಗಿಯೇ ರಝಾಕಾರರನ್ನು ಬೆಳೆಯಿಸಿ, ಅತ್ಯಾಚಾರ ನಡೆಯಿಸಿದ ನಿಜಾಮರು ಈ ರಝಾಕಾರರ ಬೆನ್ನೆಲುಬು ಮುರಿದೊಡನೆ, ಅದೇ ಧ್ಯೇಯ ಸಾಧನೆಗಾಗಿ ಹಿಂದೀ ಸರಕಾರಕ್ಕೆ ಶರಣು ಬರುವುದು ಖಂಡಿತ. ಇಂಥವರನ್ನು ಅವರ ಪಾಲಿನ ಅತ್ಯಾಚಾರಗಳಿಗೆ ಹೊಣೆ ಮಾಡಿ ನ್ಯಾಯಸ್ಥಾನಕ್ಕೆಳೆಯುವುದು ಅಗತ್ಯವಲ್ಲವೆ?" ಎಂದು ಕಳೆದ ವಾರದಲ್ಲೇ-ಹಿಂದೀ ಪೋಲೀಸ್ ಕಾರ್ಯಾಚರಣೆ ಆರಂಭವಾಗುವುದನ್ನು ತಿಳಿಯುವ ಮೊದಲೇ-ನಾವು ಬರೆದಿದ್ದೆವು. ಹಿಂದಿನ ವಾರದಲ್ಲಿ ಭಾವೀ ಸರಭವವಾಗಿ ಸಾವಾನ ಕಡೆಗೆ ಕೈತೋರಿಸಿದ್ದೆವೋ ಅದೀ ವಾರದಲ್ಲೇ ವಸ್ತುಸ್ಥಿತಿಯಾಗಿ ಕಣ್ಣ ಮುಂದಿದೆ.

ಹಿಂದೀ ಸೇನೆ ನುಗ್ಗಿ ಬಂತು; ರಝಾಕಾರರು ಸಾಧ್ಯವಿದ್ದಲ್ಲೆಲ್ಲಾ ಮುನ್ನುಗ್ಗಿ ಅಧಿಕ ಸಂಖ್ಯೆಯಲ್ಲಿ ಪಡಿದು ಬಿದ್ದರು; ನಿಜಾಮರ ಕ್ರಮಬದ್ಧ ಸೇನೆಗಳು 'ಯಾರು ಈ ಅವಾಯವನ್ನು ಆಮಂತ್ರಿಸಿರೋ ಅವರೇ ಇದನ್ನು ಅನುಭವಿಸಿ' ಎಂಬಂತೆ ರಝಾಕಾರರನ್ನೇ ಮುಂದೂಡಿ ತಾವೀ ಅಸಾಧ್ಯ ಹೋರಾಟದಲ್ಲಿ ಅನಿವಾರ್ಯವಾದಷ್ಟೇ ಕಾದಾಡಿ ನೋಡುವು; ಈ ಸಂದರ್ಭ ನೋಡಿ 'ಅತ್ಯಾನಂದಪೂರ್ವಕ' ನಿಜಾಮರು ಭಾರತ ಸರಕಾರಕ್ಕೆ ಶರಣುಬಂದರು. "ಇಂದಿನ ನವೀನ ವಿಶ್ವಮಾನಗಳಿಗನುಸಾರವಾಗಿ ಭಾರತ ಸರಕಾರದೊಡನೆ ಹೊಸ ಸ್ನೇಹಾಚಾರ ಕಟ್ಟಿಕೊಳ್ಳುವ, ತನ್ನ ಅಸಭ್ಯಾಚಿತ ರಾಜಮನೆತನದ ಸಲ್ಲಂಕೃದಾಯಗಳನ್ನು ಸಾಲಿಸುವ" ಆಶೆ ಇನ್ನೂ ನಿಜಾಮರಲ್ಲಿದೆ.

ಇತ್ತ ಹಿಂದೀ ಸೇನೆ ಸೆಕುಂದರಾಬಾದ್, ಬೋಲಾರಮ್, ತ್ರಿಮಲ್ಗೆರಿಯಲ್ಲಿ-ರಾಜಧಾನಿ ಹೈದರಾಬಾದಿನ ಸುತ್ತುವಲಯದ ಸೇನಾ ಠಾಣ್ಯಗಳಲ್ಲಿ-ಸ್ಥಾಪನೆಯಾಗಿದೆ. ಹೈದರಾಬಾದನ್ನು ನುಗ್ಗಿದ ಒಂದು ಟಿಕ್ಕಿನ ಹಿಂದೀ ಸೇನೆಯ ನಾಯಕ ಮೇಜರ್ ಜನರಲ್ ಚೌಧರಿಯವರು 'ಮಿಲಿಟರಿ ಗವರ್ನರ್' ಆಗಿ ನೇಮಕಗೊಂಡು ಹೈದರಾಬಾದಿನಲ್ಲಿತತ್ಕಾಲಕ್ಕೆ ಸೇನಾಸರಕಾರ ರಚಿಸಿದ್ದಾರೆ.

ಈ ಸೇನಾ ಸರಕಾರವು ಇದಿರುವಾದಿಗಳೆಲ್ಲರನ್ನೂ ಇಷ್ಟರೆಲ್ಲೇ ನಿಶ್ಶಸ್ತ್ರಗೊಳಿಸಿ, ಉಡಗಿ ಕುಳಿತ ರಝಾಕಾರರನ್ನು ಶೋಧಿಸಿ ಹಿಡಿಯುವ ಕೆಲಸವನ್ನು ಸಂಸ್ಥಾನದ ಅದ್ಯಂತ ಭರದಿಂದ ನಡೆಸಿದೆ. ಲಾಯಿಕ್ ಅಲಿ ಮತ್ತಾ ಮಂಡಲಿಯ ಇತರ ಎಲ್ಲಾ ಮಂತ್ರಿಗಳು ತಂತಮ್ಮ ಮನೆಗಳಲ್ಲಿ ಬಂಧಿಗಳಾಗಿದ್ದಾರೆ.

ಹೈದರಾಬಾದ್ ಶರಣು ಬಂದ ತಾ 17 ನೇ ರಾತ್ರಿಯಲ್ಲೇ ಗಡ್ಡ ಬೋಳಿಸಿ ಲತ್ತೆ ಹತ್ತೆ ಮಾಡಿಕೊಳ್ಳಲು ಪ್ರಯತ್ನಿಸಿದ್ದ ರಝಾಕಾರ್ ನಾಯಕ ಕಾಸಿಮ್ ರಜ್ವಿ

ಬೇಕಾಗಿದ್ದಾರೆ

ಕನ್ನಡಿಗರಿಂದ ಸ್ಥಾಪಿತವಾಗಿ, ಕನ್ನಡಿಗರೆಲ್ಲರ ಪ್ರೋತ್ಸಾಹಕ್ಕೆ ಅರ್ಹವಾಗಿರುವ, ಜನಸಾಮಾನ್ಯರೂ ಏನೂ ಸಾಹಸಲು ಅನುಕೂಲವಾಗುವ ಪ್ರೊವಿಡೆಂಟ್ ಸಂಸ್ಥೆ-

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್‌ಗೆ ಕೆಲವು ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

ತಿಂಗಳಿಗೆ ನೂರಾರು ರೂಪಾಯಿ. ಸಂಪಾದಿಸಬಹುದು

ಏಜನ್ಸಿ ವಿವರಗಳಿಗೆ ಬರೆಯಿರಿ.

The New Karnataka Provident Insurance Co., Ltd. Udipi, S.K.

ವಿಮೆಮಾಡಲಿಕ್ಕೆ ಯಾ ಪ್ರತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ತಾ. ೧೯ರಲ್ಲಿ ಹಿಂದೀ ಸೈನಿಕರಿಗೆ ಸೆರೆ ಸಿಕ್ಕಿದ್ದಾನೆ.

ಹಿಡಿಯತಕ್ಕವರನ್ನು ಹಿಡಿದು, ನಿರ್ಮೂಲಿಸಬೇಕಾದವರನ್ನು ನಿರ್ಮೂಲಿಸಿ, ಹೈದರಾಬಾದಿನ ತುಂಟರೆಲ್ಲರ ಅವತಾರವನ್ನೂ ಸೂರ್ತಿ ಮುಗಿಸಿ ಕಾನೂನು ಮತ್ತು ವ್ಯವಸ್ಥೆಯು ಪುನಃ ಸ್ಥಾಪನೆಗೊಳ್ಳುವವರೆಗೆ ಹೈದರಾಬಾದಿನಲ್ಲಿ ಸೇನಾ ಸರಕಾರವೇ ಇರುವುದು. ಹಿಂದೀ ಸರಕಾರದಿಂದ ನೇಮಿಸಲ್ಪಡುವ ನಾಗರಿಕಾಧಿಕಾರಿಗಳು ಅಥವಾ ನಡುಗಾಲ ಮಂತ್ರಿಸಮಿತಿಯು ಈ ಸೇನಾ ಸರಕಾರಕ್ಕೆ ಸಲಹೆಗಾರರಾಗಿರುವರು. ಶಾಂತಿ ಸುವ್ಯವಸ್ಥೆವಾದೊಡನೆಯೇ ಹೈದರಾಬಾದ್ ಜನತೆಯ ಮತದಾನದಿಂದ ಹೈದರಾಬಾದ್ ಘಟನಾ ಸಮಿತಿಯಾರಿಸಲ್ಪಡುವದು. ಹೈದರಾಬಾದ್-ಭಾರತಗಳೊಳಗಿನ ಸಂಬಂಧವು ಈ ಮೂಲಕವೇ ನಿರ್ಣಯಿಸಲ್ಪಡುವುದಲ್ಲದೆ ಹೈದರಾಬಾದಿನ ಮುಂದಿನ ಅಡಳಿತೆಯನ್ನು ಆ ಘಟನಾ ಸಮಿತಿಯೇ ರೂಪಿಸಿಕೊಳ್ಳುವುದು. ನಿಜಾಮರ ಸಂಬಂಧದ ತೀರ್ಮಾನಾಧಿಕಾರವೂ ಅದರದೇ.

ಅತ್ತ ನಿಜಾಮರು 'ಯಾರು ಹೋದರೂ ಯಾರು ಬಂದರೂ ನಿಜಾಮನು ನಿಜಾಮನೇ' ಎಂಬ ನವೀನ ಗಾದೆಯನ್ನು ನಿರ್ಮಿಸಬಹುದೆಂಬ ಆತಂಕದಲ್ಲಿ ಇನ್ನೂ ಇರುವಂತೆ ಕಾಣುತ್ತದೆ. ರಝಾಕಾರರು ತನ್ನನ್ನು ಸುತ್ತುಗಟ್ಟಿದ್ದಾಗ: ಅವರಿಗೆ ಬೇಕಾದುದನ್ನು ಮಾಡಲು ಬಿಟ್ಟಂತೆಯೇ ಹಿಂದೀ ಸೇನೆ ತನ್ನನ್ನು ಅವರಿಂದ ನಿಂತಾಗ ಇವರಿಗೆ ಬೇಕಾದಂತೆ ವರ್ತಿಸಲು ಬಿಟ್ಟು, ತಾನೂ ತನ್ನ ಸ್ಥಾನಮಾನಗಳೂ ಉಳಿದುಬಿಡುವನೆಂಬ ಅಂತರ್ವಾಣಿಯೇ ಈ ನಿಜಾಮ್ ಹೈದಯದ ಒಂದು ವೈಶಿಷ್ಟ್ಯ!

ಸೂಕ್ಷ್ಮವಾಗಿ ನೋಡಿದರೆ ಅಂದಿನಿಂದೀವರೆಗೂ ನಿಜಾಮರು ಹೋರಾಡುತ್ತಾ ಬಂದಿರುವದೆಂದರೆ ರಾಜಮಹೇಶ್ವರಾಜರ, ನವಾಬ್ ನಿಜಾಮರ ಅಂತ್ಯಕ್ಕಾಗಿ ಅವತರಿಸಿರುವ ಕಾಲದೊಡನೆಯೇ! ಈ ನವಯುಗವನ್ನು ವಂಚಿಸಿ ಬದುಕಬೇಕು ಮತ್ತು ಬದುಕಬಹುದು, ಎಂಬುದೊಂದೇ ನಿಜಾಮರ ಆಶೆ!

ಈ ಆಶೆಯಂತೆ 1947ನೇ ಆಗೋಸ್ತು 15ಕ್ಕೆ ಮೊದಲಿನಿಂದಲೂ ಅವರು ನವಯುಗವನ್ನು ಮತ್ತದರ ಪುರಸ್ಕರ್ತ ಭಾರತ ಸರಕಾರವನ್ನು ನೊನ್ನೆಯವರೆಗೂ ವಂಚಿಸುತ್ತಾ ಬಂದರು. ತತ್ಫಲವಾಗಿ 1947ನೇ ಆಗೋಸ್ತು 15ರ ಬೆನ್ನಲ್ಲೇ ನಡೆಯಬೇಕಾಗಿದ್ದುದು ನಿನ್ನೆಯವರೆಗೂ ಹಿಂದೆ ಬಿತ್ತು. ಆ ಮೇಲೆ ರಝಾಕಾರ್ ಸಂಸ್ಥೆಯನ್ನು ಬಹಿಷ್ಕರಿಸಿ, ಹಿಂದೀ ಸೇನೆಯನ್ನು ಸೆಕುಂದರಾಬಾದಿಗೆ ಆಹ್ವಾನಿಸಿ ಸಂಸ್ಥಾನದ ಕಾನೂನು ಮತ್ತು ವ್ಯವಸ್ಥೆಯನ್ನು ಕಾಪಾಡಲು ಬಿಡಬೇಕು ಎಂದು ಇದೇ ಆಗೋಸ್ತು ಅಂತ್ಯದಲ್ಲಿ ಗವರ್ನರ್ ಜನರಲ್ ಕೊಟ್ಟ ಸೂಚನೆಯನ್ನು ಸೆಪ್ಟೆಂಬರ್ 17ರವರೆಗೂ ಹಿಂದೆ ಹಾಕಿ, ಇನ್ನು ಅಸಾಧ್ಯವೆಂದು ತೋರಿದೊಡನೆ ಕೂಡಲೇ ಆದರಂತೆ ವರ್ತಿಸಿದರು; ಇನ್ನು ಒಂದೇ ಒಂದು ದಿನ ತಡ ಮಾಡಿದರೆ ನಿಜಾಮುನಾಗಿ ನೂತಾಡುವ ಅನುಕೂಲತೆ ಕೂಡಾ ಕಳೆದುಹೋಗುತ್ತದೆಂದು ಸ್ವಪ್ನವಾದ್ದೊಡನೆ ಈ ನ್ಯಾಯಬದ್ಧ ಅದೃಷ್ಟವನ್ನು ಹಿಂದೆ ಹಾಕಬೇಕೆಂದೇ ತಾ 17ರ ವರ್ತನೆ ಕೂಡಾ! ಅಂತೂ ಈ ದಿನದ ವರೆಗೂ ನಿಜಾಮರು ಕಾಲವಂಚಕನೇ ಹೊರತು ಬೇರಲ್ಲ.

ತಾ. 17ರ ನಿಜಾಮರ ಹೃದಯದ ಚಿತ್ರ ಹೀಗೆ:- ಬ್ರಿಟಿಷ್ ಆಡಳಿತೆಯ ಕಾಲದಲ್ಲೂ ಇದ್ದಂತೆ ಹಿಂದೀ ಸೇನೆಯನ್ನು ಸೆಕುಂದರಾಬಾದಿನಲ್ಲಿ ಇರಗೊಡಿಸುವುದು (ಬರಬಾರದೆಂದರೂ ಅವರು ತುಳಿದುಕೊಂಡು ಬಂದು ಬಿಟ್ಟಿದ್ದಾರಾದ್ದರಿಂದ!): ಇನ್ನೂ ಕೆಲಕಾಲ ರಝಾಕಾರರೇ ಮೊದಲಾದ ಹಿಂದೀ ಸರಕಾರದ ದ್ವೇಷಿಗಳ ನಿರ್ನಾಮ ಕೆಲಸವನ್ನು ಮಾಡಲಿಕ್ಕೂ ಹಿಂದೀ ಸೇನೆಗೆ ಅವಕಾಶ ಕೊಡುವುದು; ಭಾರತ ಸರಕಾರವು ಆದಿಖಾಗದಲ್ಲಿ ಅಪೇಕ್ಷಿಸಿದ್ದುದನ್ನೆಲ್ಲಾ ಈಗ ಪೂರೈಸಿ ಕೊಡುವುದು-ಆರ್ಥರ್ತ್ ಎಲ್ಲವೂ ತನ್ನ ಕೈಕೆಳಗೆ ನಡೆಯುವುದು-ಎಂದೇ ನಿಜಾಮರ ಆಲೋಚನೆ! ಇನೀಗ ವಿಲಕ್ಷಣ ಬುದ್ಧಿ ಮತ್ತೆ! ರಾಜರ ಮತ್ತು ಪ್ರೇಮಂತರ ಹುಟ್ಟುಗುಣವೆಂದರೆ ಹೀಗೆ!

ಪೋಲೀಸ್ ಕಾರ್ಯಾರಂಭಿಸಿ ಎರಡು ದಿನ ಕಳೆದ ಮೇಲೆಯೂ "ಹೈದರಾಬಾದಿನ ಅಧಿಕ ಸಂಖ್ಯಾಕ ಸ್ತ್ರೀ ಪುರುಷರಿಗೆ, ಹೈದರಾಬಾದ್ ಸ್ವಾತಂತ್ರ್ಯ ಕಳಕೊಂಡು ಬದುಕುವದು ಬೇಡವನ್ನಿಸುತ್ತಿದೆ; ಈ ರಕ್ತಪಾತವನ್ನು ಕೂಡಲೇ ನಿಲ್ಲಿಸಿರಿ" ಎಂದು ನೆಹರುಗಳಿಗೆ ತಂತಿ ಬಿಟ್ಟದ್ದ ಮಿ. ಲಾಯಕ್ ಅಲಿ ರಾಜೀನಾಮೆ ಕೊಟ್ಟದ್ದು, ಕೈಲುಗದೆಂದು ಖಚಿತವಾದ ಕೂನೆಯ ನಿಮಿಷ-ತಾ 17ನೇ ಅಪರಾಹ್ನ 4 ಕ್ಕೆ, ನಿಜಾಮರ ಶರಣು ಸೂಚನೆಯೆಟ್ಟಿಗೆ-ಆ ಮೇಲೆ ನಿಜಾಮರು ನೇಮಿಸಿಕೊಂಡ ಮಂಡಲಿಯೆಂದರೆ ತನ್ನ ಪುತ್ರ ಬರಾರಿನ ರಾಜಕುವರ, ಸೇನಾನಿ ಮೇಜರ್ ಜನರಲ್ ಎಲ್‌ಎಂಡ್ರೂಸ್, ನವಾಬ್ ದಿರ್ ಜಂಗ್, ಮತ್ತು ತನ್ನ ವಿಶ್ವಾಸಪಾತ್ರ ದಿವಾನ್ ಬಹದೂರ್ ಅರವಾಮುದ ಅಯ್ಯಂಗಾರರನ್ನೂ ನಿಜಾಮರು ತಾವಾಗಿ ನೇಮಿಸಿಕೊಂಡಿದ್ದಾರೆ.

ಇದರ ಮರ್ಮವೇನು?

ನಿಜಾನುರು ಹೈದರಾಬಾದ್ ಕಾಂಗ್ರೆಸಿನ ಮೇಲಿನ ಬಹಿಷ್ಕಾರ ತೆಗೆದು ರಝಾಕಾರರ ಮೇಲೆ ಹಾಕಿದ್ದಾರೆ. ಕಾಂಗ್ರೆಸ್ ಅಧ್ಯಕ್ಷ ಸ್ವಾಮಿ ರಮಾನಂದ ತೀರ್ಥರು ಬಿಡುಗಡೆಗೊಂಡು ಕಾಸಿಮ್ ರಜ್ವಿ ದಸ್ತಗಿರಿಯಾಗಿದ್ದಾನೆ. ಭಾರತದ ಕುರಿತು ಗಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲಿಗೆ ಕೊಟ್ಟ ತನ್ನ ದೂರನ್ನು ನಿಜಾಮರು ಹಿಂದೆಗೆದು ಕೊಂಡಿದ್ದಾರೆ.

ಅಂತೂ ಸಾರಾಂಶ ಹೇಳುವದಾದರೆ ನಿಜಾಮರು ತನ್ನದೊಂದು ಆಶೆಯನ್ನು ಇನ್ನೂ ಕಟ್ಟಿಕೊಂಡೇ ತನ್ನ ಎಲ್ಲಾ ಲಕ್ಷೋಪಲಕ್ಷಗಳನ್ನೂ ಉಪಸಂಹಾರ ಮಾಡಿಕೊಂಡು ಹಿಂದೀ ಸರಕಾರಕ್ಕೆ ಬೊಗಸೆಯೊಡ್ಡಿದ್ದಾರೆ. ಈತನಕ ಭಾರತದ ಮುಂಭಾಗದಲ್ಲಿದ್ದವರೀಗ ಬೆನ್ನಹಿಂದೆ ಬಂದಿದ್ದಾರೆ. ಹೈದರಾಬಾದಿದಲ್ಲಿ ಹಿಂದೀ ಸೇನಾ ಸರಕಾರವು ಶಾಂತಿ, ಕಾನೂನು ಮತ್ತು ವ್ಯವಸ್ಥೆಯನ್ನು ಸ್ಥಾಪನೆ ಮಾಡುತ್ತಿದೆ.

ಇಲ್ಲಿ, ನಾವು ಕಳದವಾರವೇ ಹೇಳಿರುವಂತ-ಭಾರತದ ಮುಸ್ಲಿಮರು ತನ್ನ ಪರವಾಗಿ ದಂಗೆಯೆಬ್ಬಿಸುವರು; ಪಾಕಿಸ್ತಾನವು ಆ ಕಡೆಯಿಂದ ಒತ್ತಡ ಹಾಕುವದು; ಇಡೀ ಮುಸ್ಲಿಂ ಜಗತ್ತು ಉರಿದು ಬೀಳುವದು; ವಿದೇಶಗಳ ಮತ್ತು ಅಂತರ್ರಾಷ್ಟ್ರೀಯ ಸಹಾನುಭೂತಿ ದೊರೆಯುವದು-ಎಂಬೆಲ್ಲಾ ನಿಜಾಮರು ಕಾಣುತ್ತಿದ್ದ ತೀರಕನ ಸ್ವಪ್ನಗಳು ಪಂಚಮಹಾಭೂತಗಳಲ್ಲಿ ಹುಸಿಯಾಗಿ ಹೋದುವು; ಈ ಗಾಳಿಗೋಪುರಗಳನ್ನೆಲ್ಲಾ ಹಿಂದೀ ಸೇನಾ ಹೊಡೆತ ಹುಡಿಪಟವಾಗಿಬಿಟ್ಟಿತು.

ಹಿಂದೀ ಮುಸ್ಲಿಮರಲ್ಲಿ ವಿಚಾರಗಳು ತ್ರಿಕರಣಪೂರ್ವಕ ನ್ಯಾಯ ಪಕ್ಷಪಾತಿಗಳಾದರು; ಅವಿವೇಕಿಗಳು ಸ್ವಂತಾವಾಯಕ್ಕಂಜಿ ಕೆದರಿ ಹೋದರು; ಎಲ್ಲಿಯಾದರೂ ಕಿಡಿ ಧಗಿಸುತ್ತಿರಬಹುದಾದರೂ ಅದು ಇಲ್ಲಿ ಪ್ರಜ್ವಲಿಸುವದ್ದು ಅವಧಿಯನ್ನು ಅಲ್ಲಿ ಹಿಂದೀ ಸೇನೆ ಕೊಡಲಿಲ್ಲ.

ಪಾಕಿಸ್ತಾನಕ್ಕೆ ಸ್ಪರವ್ಯಣಾ ಹೊಣೆಯೇ ಹತ್ತು ಹೈದರಾಬಾದಿನಷ್ಟು ದೊಡ್ಡದಾಗಿರುವಾಗ, ಕೈಯಿಕ್ಕಿ ಆಗಿರುವ ಕಾಶ್ಮೀರದಿಂದ ಪಾರಾಗುವದು ಹೇಗೆಂಬ ಚಿಂತೆಗೀಡಾಗಿರುವ ಅದಕ್ಕೆ ಹೊಸ ಆಪತ್ತನ್ನು ಆಮಂತ್ರಿಸಿಕೊಳ್ಳುವ ಬಲ ಇಲ್ಲವೇ ಇಲ್ಲ. ಬೆದರಿಕೆಯಿಂದ ಕೆಲಸವಾಗುವಂತಿದ್ದರೆ ಆಗಲಿ, ಎಂದಷ್ಟೇ ಅದು ಹಿಂದೀ ಸರಕಾರಕ್ಕೆ ಮುಸ್ಲಿಂದಂಗೆಯ ಭಯಬೀರಿದುದು.

ಮೊದಲೇ ಅರೆ ಜೀವದಂತಿದ್ದು, ಪೆಲಸ್ತೈನ್ ಯುದ್ಧದಲ್ಲಿ ಈಗ ಬಿದ್ದು ಕೊಳೆಯುತ್ತಿರುವ, ಅರಬ್ ರಾಷ್ಟ್ರಗಳು ತಾವು ಹೈದರಾಬಾದಿನ ರಕ್ಷಕರು ಎಂದೇಳುತ್ತಿದ್ದರೆ ಭಾರತದೊಂದಿಗೆ ಜಗತ್ತೇ ಅಪಹಾಸ್ಯ ಮಾಡುತಿತ್ತು. ಭದ್ರತಾ ಕೌನ್ಸಿಲಿನಲ್ಲಿ 'ಹೈದರಾಬಾದ್ ದೂರಿನ ವಿಚಾರಣೆಯನ್ನೆಲ್ಲಿ-ಆ ದೂರನ್ನು ಕೇಳಬಹುದೋ ಕೂಡದೋ' ಎಂಬ ಪ್ರಶ್ನೆ ಚರ್ಚೆಗೆತ್ತಲ್ಪಟ್ಟಾಗಲೇ ಇಲ್ಲಿ ದೂರು ಕೊಟ್ಟ ನಿಜಾಮರೇ ತನ್ನ ದೂರಿಲ್ಲನೆಂದು ತೀರ್ಮಾನಿಸಿ ನ್ಯಾಯಾಧೀಶರಾಗಿ ಮಾರ್ಪಟ್ಟರು!

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊತೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರಬಿಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಣಸಿದಂತಿರುವ ನಮ್ಮ ಶಾಖೆಗಳು ದಖ್ಖಣದ ಅರಬೆಯ ಕ್ಷೇತ್ರಿಗಳಲ್ಲಿ-ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ಕೆಂಗುಗಳ, ವೃಕ್ಷವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ನಿಗಾಕಿಗಳ ಬಗ್ಗೆ ಕಲೆಕ್ಷನ್ ರಬಿಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಶಿಷ್ಟ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮನಿಶಿಸ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಆಯಾದಂದ ನಿಮಗೆ ಸಮಯವೂ, ಹಣವೂ ಉಳಿವುದು.. ಏಕೆಂದರೆ ನಾವು ಪಡಿಸಿಕೊಳ್ಳುವ ಕಲೆಕ್ಷನ್ ರಬಿಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ವಿಶೇಷ ಲಕ್ಷ್ಯ ದೊರೆಯುದು.

The Canara Bank Limited.

ESTD: 1906.

ಜನ ಜನವೂ ಓದತಕ್ಕ
ಜನತಾ ಸಾಹಿತ್ಯ!

ಮನೆ ಮನೆಯೂ ಇರತಕ್ಕ
ಕೋದಂಡಜನ ಸಾಹಿತ್ಯ!

ಸ್ವರಾಜ್ಯ ವಿಜಯದ ಕಥಯನ್ನು ಎಲ್ಲರಿಗೂ ತಿಳಿಯುವಂತೆ

ಶ್ರೀ ಎಂ. ವಿ. ಹೆಗ್ಡೆಯವರು ಬರೆದ

ಸ್ವರಾಜ್ಯ ವಿಜಯ

ಆಟ್ಲಿ, ಕ್ರಿಪ್ಸ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜಿನ್ನಾ, ನೆಹರು, ಪಟೇಲ್, ಗಾಂಧಿ, ಆಜಾದ್, ಭೂಪಲಾನಿ, ಜೈ ಪ್ರಕಾಶ್, ಮೌಂಟ್‌ಬ್ಯಾಟನ್ ಮೊದಲಾದವರೇ ಇದರ ಪಾತ್ರವರ್ಗ.

ಓದಬಲ್ಲವರಂತೂ ಓದಿ ತಿಳಿಯತಕ್ಕ ಕತೆ.

ಓದಲಾರದವರೂ ಓದಿಸಿ ಕೇಳತಕ್ಕ ಕತೆ.

ಬೆಲೆ ಬರೇ 0 ೫ 0

ಹತ್ತಾಣೆ ಸ್ಟ್ಯಾಂಪು ಕಳಿಸಿದರೆ 1 ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.

ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ, ಅಥವಾ ನವಯುಗ ಪ್ರೆಸ್, ಉಡುಪಿ.

ಇಲ್ಲಿ ದೊರೆಯುತ್ತವೆ.

ಈ ವಿಷಯ ನೆನಪಿರಲಿ!

ನಿಶ್ಶಸ್ತ್ರ ನಿಸ್ಸಹಾಯಕ ನಾಗರಿಕರನ್ನು ಸೆಬಡಿಯುವದೊಂದನ್ನಲ್ಲದೆ ಯುದ್ಧ ಕ್ರಮವಾನ್ವದನ್ನೂ ಆರಿಯದಿದ್ದ – ಕೂಲಿಗಾರರು ಮತ್ತು ದರೋಡೆಗಾರರೇ ಹೊರತು ಸೈನಿಕರನ್ನಿಲು ಪೂರ್ಣಪ್ರಿಯೋಗ್ಯರಿದ್ದ – ರಝಾಕಾರರು ಹಿಂದೀ ಸೈನಿಕರ ಗುಂಡುಗಳಿರಿದಲ್ಲಿ ಬಿದ್ದು ಪಟಪಟೆ ಸತ್ತು ಹೋದರು.

ಯುದ್ಧತಜ್ಞರಾದ ಬ್ರಿಟಿಷ್ ಅಧಿಕಾರಿಗಳು ರಾಜಕೀಯವೆ ಕೊಟ್ಟು ದರಿಂದ ನಿಜಾಮ್ ದಳಗಳಲ್ಲಿ ಸೇನಾ ಜಾಲಕ ಪ್ರವೀಣರಿಲ್ಲ ಹೇರಳ ದುಡ್ಡು ಕೊಟ್ಟು ನಿಜಾಮರು ವಿದೇಶಿಯರೊಂದಿಗೆ ಕಳ್ಳ ವ್ಯಾಪಾರ ಮಾಡಿ ತರಿಸಿದ್ದ ದೊಡ್ಡ ದೊಡ್ಡ ಗನ್ನುಗಳನ್ನು ಉಪಯೋಗಿಸುವ ವಿದ್ಯೆ ನಿಜಾಮ್ ಸೇನೆಗೆ ಗೊತ್ತಿರಲಿಲ್ಲ. ಅವೆಲ್ಲವೂ ಭಾರತೀಯ ಸೋಲ್ಜರರ ಕೈಗೆ ಸಿಕ್ಕಿದುದ್ದು ನಿಜಾಮರದು-ಉಪಯೋಗ ಹಿಂದೀ ಸೇನೆಗೆ" ಎಂದಾಯಿತು.

ತನ್ನ ಸ್ಥಾನಮಾನಗಳ ರಕ್ಷಣೆಗಾಗಿ ರಝಾಕಾರರು ಗೆಲ್ಲುವಂತಿದ್ದರಾಯಿತು- ಇಲ್ಲವಾದರವರು ಸಾಯಲೇಬೇಕು. ಎಂದೇ ನಿಜಾಮರ ಬಯಕೆಯದ್ದು ದರಿಂದ ಸಂಸ್ಥಾನದ ಸೇನೆ ಕರಿಣ ಕಾಳಗಗಳಲ್ಲಿ ರಝಾಕಾರರನ್ನೇ ಮುಂದೊಡ್ಡಿ ಕೊನೆಯಲ್ಲಿ ರಝಾಕಾರ್ ಮತ್ತು ನಿಜಾಮ್ ಸೇನೆಗಳೆಳಗೂ ಭಿನ್ನಾಭಿಪ್ರಾಯವುಂಟಾಗಿದ್ದಿತು. ಒಟ್ಟಿನ ಮೇಲೆ ನಿಜಾಮ್ ಸರಕಾರವು ಮಾಡಿದ್ದ ಪಾಪಗಳೆಲ್ಲವೂ ಅಂತ್ಯಾವಧಿಯಲ್ಲಿ ತಮ್ಮ ನಿರ್ಮಾಪಕನನ್ನೇ ಹಿಡಿದು ತಿಂದುವು! ಭಾರತದ ಸಹನೆ ಸಧ್ಭಾವನೆಗಳ ಬಲವೇ ಕಡೆಯಿಂದಲೂ, ನಿಜಾಮರ ತಂಚನೆ ದುರಭಿಲಾಷೆಗಳ ಫಲವಾಕಡೆಯಿಂದಲೂ ಈವರ್ಕ್ಷಾ ಕಾಲದಲ್ಲಿ ತೋರಿಬಂದು, ನಿಜಾಮ್ ಆಡಳಿತ ನಿರ್ನಾಮಿಸಿದ್ದುದಕ್ಕಿಂತ ಮೊದಲೇ ಕುಸಿದು ಬಿತ್ತು!

ಈಗ ಮುಂದಾಗಿ ಊಹಿಸಿಕೊಳ್ಳಬೇಕಾದ ಕೆಲವು ಪ್ರಮುಖ ಸಂಗತಿಗಳಿವೆ:- 'ಆದು ಭಾರತದ ಮನೇವಾರ್ತೆ' ಎಂದು ಹೈದರಾಬಾದಿನ ಕುರಿತು ಬ್ರಿಟಿಷ್ ಸರಕಾರವು ವಹಿಸಿದ್ದ ಧೋರಣೆಯು ಅಚಲವಿದ್ದರೂ "ಈ ಹೊಸ ವಸಾಹತಿನಲ್ಲಿ ಯುದ್ಧ ಸ್ಫೂರ್ತಿ ಬೆಳೆದು ಬರುತ್ತಿರುವುದನ್ನು ಕಾಣುವಾಗ ವಿಷಾದವಾಗುತ್ತದೆ" ಎಂದು ಬ್ರಿಟಿಷ್ ವಿದೇಶ ಮಂತ್ರಿ ಬೆವಿನ್ರು ಭಾರತದ ಕುರಿತಾಡಿರುವ ಮಾತಿನ ಗೂಢಾರ್ಥವನ್ನು ಲಕ್ಷ್ಯದಲ್ಲಿಟ್ಟು ಬ್ರಿಟಿಷ್ ರಾಜಕಾರಣಿಗಳಲ್ಲಿರುವ ನಂಜಿನ ಕುರಿತು ಜಾಗ್ರತೆ ವಹಿಸಬೇಕಾದುದು ಅಗತ್ಯ.

'ನಾವು ಯಾವುದೇ ಅನ್ಯಾಯ,ಅಥವಾ ಸಿದ್ಧತೆಯನ್ನೂ ನಡೆಸಿದೆ ಅತ್ಯಂತ ವಿನಯಶಾಲಿಗಳಾಗಿದ್ದೇವೆ; ನಮ್ಮನ್ನಾಕ್ರಮಿಸಿಕೊಳ್ಳುವದಕ್ಕಾಗಿ ಭಾರತವು ಹೇಳುವ ನೆವಗಳಿವು" ಎಂದು ನಿಜಾಮಾಬಾದ್ ಜೇಳುತ್ತಿದ್ದುದಕ್ಕನುಗುಣವಾಗಿ ಈಗ ಹೈದರಾಬಾದು ಯಾವ ಗಣ್ಯ ಶಕ್ತಿಯನ್ನೂ ಪ್ರದರ್ಶಿಸದೆ ಒಂದು ಕೈದೆರಳೆಣಿಕೆಯ ದಿನಗಳೊಳಗೆ ನೆಲ ಹಿಡಿದಿದೆ. ಅದ್ದರಿಂದ ಭಾರತ ಸರಕಾರವು ಆಕ್ರಮಣ ನಡೆಸಿತೆಂಬ ಭಾವನೆಯನ್ನು ದುರುದ್ದೇಶಿಗಳು ಅಂತರ್ರಾಷ್ಟ್ರೀಯ ರಂಗದಲ್ಲಿ ಹಬ್ಬಿಸದಂತೆ ನೋಡಬೇಕು.

ಹೈದರಾಬಾದಿನ ಅನ್ಯಾಯ ಮತ್ತು ಅತ್ಯಾಚಾರಗಳು ಹಾಗೂ ಆದರ ದೌರ್ಬಲ್ಯವು ಮಂದಟ್ಟಾಗಿದ್ದುದರಿಂದಲೂ ಹಿಂದೀ ಸರಕಾರವು ಅನ್ಯಭಾವನೆಗೆ ಎಳ್ಳಷ್ಟು ಅವಕಾಶ ಕೊಡದುದರಿಂದಲೂ ವಿಚಾರವಂತ ಮುಸ್ಲಿಮರೆಲ್ಲರೂ ಭಾರತ ಸರಕಾರದ ಈ ಕಾರ್ಯಾಚರಣೆಯನ್ನು ಸಮರ್ಥಿಸಿದ್ದರು; ಆದರೆ ಇದುವರೆಗೆ ಹೀಗಿದ್ದ ಹಿಂದೀ ಮುಸ್ಲಿಮರ ಸ್ವಮತಾನುರಕ್ತ ಹೃದಯವು ನಿಜಾಮರ ಇಂದಿನ ನಿಸ್ಸಹಾಯಕ ಸ್ಥಿತಿಗಾಗಿ ಕರಗುವದು ಖಂಡಿತ. "ಭಾರತದ ನಾಯಕರು ತಮ್ಮ ಸಂಪ್ರದಾಯ ಮತ್ತು ವಾಗ್ದಾನಗಳಿಗನುಸಾರವಾಗಿ, ನಿಜಾಮರೊಡನೆ ಅತ್ಯುದಾರ ರೀತಿಯಿಂದ ನಡೆದುಕೊಂಡು ಜಗತ್ತಿನ ಕೊಡಾಟಕ್ಕೆ ಪಾತ್ರರಾಗಲಿ. ನಿಜಾಮರು ಜಾಣ್ಮೆ ಮತ್ತು ಧೈರ್ಯದ ಕೆಲಸ ಮಾಡಿದರು" ಎಂದು ಸರ್. ವಿಲಿಯಂ, ಆಪಿಲ ಭಾರತದ ಜನರಾಯತ್ ಉಲ್ ಉಲೆಮಾದ ಕಾರ್ಯದರ್ಶಿ ಮೌಲಾನಾ ಹೆಫ್ಜುರ್ ರಹಿಮಾನ್ ಮುಂತಾದವರು ಇಸ್ಪರಲ್ಲೇ ಬೋಧೆಗಳಿದಿದ್ದಾರೆ. ಈ ಮಧುರವಾಣಿಗಳ ಅಮಲಿಗೊಳಗಾಗಿ ಭಾರತ ನಾಯಕರು ಚಾಂಚಲ್ಯಗೊಳ್ಳದೆ ನ್ಯಾಯ ನಿಷ್ಠುರರಾಗಿ ವರ್ತಿಸಬೇಕು. ನಿಜಾಮರ ಸ್ಥಾನದಲ್ಲಿ ಅಪರಾಧಿ ಬೇರೊಬ್ಬನಾಗಿದರೆ ಹೇಗೋ ಹಾಗೆಯೇ ಇವರ ಮೇಲೂ ಪ್ರಾಯಶ್ಚಿತ್ತ ವಿಧಿಯೂಗಲೇ ಬೇಕು.

ರಝಾಕಾರ್ ಮತ್ತು ನಿಜಾಮ್ ಸೇನೆಯ ಅಧಿಕ ಸಂಖ್ಯೆಯ ಸೈನಿಕರು, ಬಾಡಾಖೋಡಿ ಯುದ್ಧದಿಂದ ತಪ್ಪಿಸಿಕೊಂಡು ಕಳ್ಳಯುದ್ಧಕ್ಕಾಗಿ ಅಡಗಿದ್ದಾರಾದ್ದರಿಂದ ಆ ಕಂಟಕದ ಅಂಶ ಮಾತ್ರವನ್ನೂ ಉಳಿಸಕೂಡದು.

ಮೇಲಿನ ವಿಚಾರ ಮತ್ತು ಜಾಗರೂಕತೆಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಲ್ಲಿ ಹೈದರಾಬಾದು ಅಧ್ಯಾಯ ಸಮಾಪ್ತಿಗಾಗಿ ಭಾರತವು ನಿಜಕ್ಕೂ ಹಿಗ್ಗಬಹುದು.

ಮೊದಲನೆಯದಾಗಿ ಸಹಿಸಲು ಸಾಧ್ಯವಿದ್ದನ್ನೂ ಸಹಿಸಿ, ಅನಿವಾರ್ಯವಾದ ಮೇಲೆ ಮಾತ್ರವೆ ಕೇವಲ ನ್ಯಾಯ ಪಾಲನೆಗಾಗಿ ಹಿಂದೀ ಸರಕಾರವು ಪೋಲೀಸ್ ಕಾರ್ಯ ಪ್ರಯೋಗಿಸಿದ್ದರಿಂದ ಪಶ್ಚಾತ್ತಾಪ ಪಡುವ ಅಂಶವೇ ಇಲ್ಲ. ಈ ಮೊದಲು ರಝಾಕಾರ್ ಅತ್ಯಾಚಾರಕ್ಕೆ ಬಲಿಯಾಗಿದ್ದ ಅತ್ಯಗಳು ಕೂಡಾ, ಇಂದಿನ ಸುಭಿಕ್ಷೆ ನಿರ್ಮಾಣಯಜ್ಞಕ್ಕಾದ ಬಲಿಗಳನ್ನಿಸಿದುವಾದ್ದರಿಂದ ಅವುಗಳಿಗೂ ಶಾಂತಿ ದೊರೆಯುವಂತಾಯಿತು.

"ಹೈದರಾಬಾದಿಗೆ ಭಾರತವನ್ನು ಬಿಟ್ಟು ಬದುಕಲು ಯಾವ ವಿಧದಿಂದಲೂ ಸಾಧ್ಯವಿಲ್ಲ. ಇದು ನಮ್ಮ ಒಳಗಡೆಯ ಒಂದು ಭಾಗದಲ್ಲಿ ನಡೆದ ಆವ್ಯವಸ್ಥೆಯ ನಿವಾರಣೆಗಾಗಿ ನಾವು ಕೈಕೊಂಡಿರುವ ಪೋಲೀಸ್ ಕಾರ್ಯಾಚರಣೆ ಹೊರತು ಬೇರೇನೂ ಅಲ್ಲ" ಎಂದ ಭಾರತ ಸರಕಾರದ ಎರಡು ವಾತುಗಳೂ ಐನೇ ದಿನಗಳ ಕಾರ್ಯದಲ್ಲಿ ಸಂಪೂರ್ಣ ಸತ್ಯವನ್ನಿಸಿದೆ. ತಾನು ಸ್ವಾವಲಂಬಿ ಸ್ವತಂತ್ರ ರಾಜ್ಯವೆಂದ ಹೈದರಾಬಾದಿಗೆ.ತಾನಾಗಿ ಎದು ದಿನ ಬಾಳುವ ಯೋಗ್ಯತೆಯಿಲ್ಲ; ಒಂದೂರ ದರೋಡೆಗಾರರನ್ನು ದಮನಿಸಲು ಹಿಡಿಯಬಹಷ್ಟು ಕಾಲವನ್ನೂ ಕೂಡಾ ಹೈದರಾಬಾದ್ ಮೇಲಿನ ಪೋಲಿಸ್ ಕಾರ್ಯದಲ್ಲಿ ಹಿಂದೀ ಸರಕಾರ ಕಳೆಯುವ ಅಗತ್ಯಬೇಕಾಗಿಲ್ಲ!

ಭಾರತದ ಹೊಟ್ಟೆಯೊಳಗೊಂದು ಅಸಾಧ್ಯ ರೋಗವಾಗಿ ಹೈದರಾಬಾದಿದೆ ಎಂಬ ಧೈರ್ಯದಿಂದ ಕಾಶ್ಮೀರ ಘರ್ಷಣೆಯಿಂದಾರಂಭಿಸಿ ಪ್ರತಿಯೊಂದರಲ್ಲೂ ಭಾರತವನ್ನು ಕೆಣಕುತ್ತಾ ಬಂದಿರುವ ಪಾಕಿಸ್ತಾನವೀಗ ಬೆದರಿ ಕಣ್ಕೆರೆಯುವಂತಾಗಿದೆ.ಇನ್ನಾದು ತನ್ನನ್ನು ತಾನೇ ನೋಡಿಕೊಳ್ಳಲಾರಂಭಿಸುವದೂ, ಕಾಶ್ಮೀರದಲ್ಲಿ ಮಿತಮೀರಿದ ಜಾಗ್ರತೆಯಿಂದಲೇ ವರ್ತಿಸುವದೂ ಸಂಭವನೀಯ ಸಾಫೀ ತನಕ ಊಹಿಸಿಕೊಂಡಿದ್ದ ಭಾರತ ಸರಕಾರದ ದೌರ್ಬಲ್ಯವನ್ನು ಇನ್ನು ಆಧರಿಸದೆ, ನಿಜಕ್ಕೂ ಹಿಂದೀನಾಯಕರಲ್ಲರುವ ಔದಾರ್ಯವನ್ನು ಸದುಪಯೋಗಿಸಿಕೊಂಡು ಪಾಕಿಸ್ತಾನವು ಸದ್ಭಾರಿಗೆ ಬರಬಹುದು. ಬಾರದೆ ಹೋದರೆ, ಜಾಹೀರಾಗಿ ಕಾಶ್ಮೀರಕ್ಕೆ ಸೇನೆ ಕಳುಹಿರುವ ಪಾಕಿಸ್ತಾನದ ಒಳಕ್ಷೇತ್ರಗಳಲ್ಲೇ ಪ್ರಕೃತ 'ಅಲ್ಲಲ್ಲಿ ಇಷ್ಟಿಷ್ಟು' ಎಂಬಂತಾದರೂ ಭಾರತವು ಪ್ರತೀಕಾರ ಕೈಕೊಳ್ಳುವದು ಖಂಡಿತ.

ಆತ್ಮ ಉತ್ತರ ಮೂಲೆಯ ಕಾಶ್ಮೀರವೊಂದನ್ನು ಉಳಿದು ಇಡೀ ಭಾರತವೇ ಈಗ ಪೂರ್ಣವ್ಯವಸ್ಥೆಗೆ ಬಂದಂತಾಗಿರುವುದು ಮಾತ್ರವಲ್ಲ; ಇನ್ನು ಒಕ್ಕಟ್ಟಾಗಿ ನುಶ್ಚ ಒಕ್ಕೊತ್ತಾಗಿ ಆದು ಅತಿ ಬಲಶಾಲಿಯಾಗಲಿದೆ. ಭಾರತದ ಹಕ್ಕಿನ ಐನೂರಕ್ಕೂ ಮಿಕ್ಕಿದ ಸಂಸ್ಥಾನಗಳೆಲ್ಲವೂ ಈಗ ಹಿಂದೀ ಒಕ್ಕೂಟದೊಳಗೆ ಸೇರಿಹೋದುವು. ಒಂದು ಮಹಾಕೆಲಸ ಅಕ್ಷಯಂತೈಜಯ ಶೀಲವಾಗಿ ಮುಗಿಯಿತು.

ಕಾಶ್ಮೀರದಲ್ಲಾದರೋ ಕಾವಿನ್ನು ಸೇನೆ ಮತ್ತು ಶಕ್ತಿಯಿಂದ ಗೆಲ್ಲುವಂತಿಲ್ಲವೆಂಬ ಹೆದರಿಕೆ ಆಕ್ರಮಣಗಾರರಿಗೂ ಪಾಕಿಸ್ತಾನಕ್ಕೂ ಕರುಳಿಗಂಟಿ ಹೋಯಿತು; ಆವರ ಟ್ಟಿಗೆ ಒಳಗಂದೊಳಗೆ ಎಲ್ಲಾ ವಿಷಯಗಳ ಪುನರಾಲೋಚನೆ ನಡೆದಿರಬಹುದು.

ಹೈದರಾಬಾದನ್ನು ಭಾರತ ಗೆಲ್ಲುವದು ದೊಡ್ಡದಲ್ಲವಾದರೂ ಈ ಕ್ಷಿಪ್ರ ವಿಜಯ ನಿಜಕ್ಕೂ ವಿಶೇಷ ರೀತಿಯದು. ಭಾರತದ ಸೇನಾ ಬಲವನ್ನು ಇಡೀ ಲೋಕದ ಪ್ರತಿಯೊಂದು ರಾಷ್ಟ್ರವೂ ಗೌರವ ದೃಷ್ಟಿಯಿಂದ ಕಾಣುವಂತಾಯಿತು. ಮಾತ್ರವಲ್ಲ; ಇಂತಹ ಸಶಕ್ತ ರಾಷ್ಟ್ರವು ಇದುವರೆಗೆ ಸ್ಪಷ್ಟವಿಸಿದ ಸಹನೆ, ಶಾಂತಿ ಪ್ರೇಮ ಮತ್ತು ಔದಾರ್ಯಗಳನ್ನೂ ಕೊಂಡಾಡುವಂತಾಯಿತು.

ಅವಸರವಸರದಿಂದ ಮೊದಲೇ ಹಿಂದೀ ಒಕ್ಕೂಟದೊಡನೆ ಸೇರಿದ್ದ ಆಶ್ರಿತ ರಾಜ್ಯಗಳೆಲ್ಲವೂ ಈಗ ಪೂರ್ತಿ ಸಮಾಧಾನ ಪಡುವಂತಾಯಿತಲ್ಲದೆ, ಇನ್ನಿವ ದುರಾಲೋಚನೆಗಾದರೂ ಹೆದರುವಂತಾಯಿತು.

ಪಾಕಿಸ್ತಾನ್ ನಿರ್ಮಾಣ ಕಾಲದ ಗೊಂದಲಗಳಲ್ಲಿಗೂ ಪಾಕಿಸ್ತಾನ್ ನಿರ್ಮಾಣಕ್ಕೂ ಮೂರನೆಯವರು ಆಡಳಿತೆಗಾರರಾಗಿದ್ದು ನಿರ್ಮಿಸಿದ್ದ ಆಗಿನ ಸ್ಥಿತಿಗತಿಗಳೇ ಕಾರಣ ಹೊರತು, ಭಾರತೀಯರ ದೌರ್ಬಲ್ಯಗಳಲ್ಲವೆಂಬುದು ಮಂದಟ್ಟಾಗಿ, ಈ ವರೆಗೂ 'ಪಾಕಿಸ್ತಾನ್ ಪೌರುಷ' ಕಟ್ಟಿಕೊಂಡಿದ್ದ ಹಿಂದೀ ಮುಸ್ಲಿಮರು ತಮ್ಮ ಭ್ರಮೆ ಬಿಟ್ಟು ಸದ್ಭಾರಿಗೆ ಬರುವಂತಾಯಿತು. ಅಂತೆಯೇ ಆರ್. ಎಸ್. ಎಸ್. ನಂತಹ ಜಾತೀಯ ದಳ ಮತ್ತು ಸಂಸ್ಥೆಗಳ ಅವಶ್ಯಕತೆ ಮತ್ತು ಬೆಲೆ ಪೂರ್ತಿ ಕಳೆದು ಹೋಯಿತು. ಕಾಂಗ್ರೆಸ್ ನಾಯಕರ ಮತ್ತು ಸರಕಾರಗಳ ವರ್ಚಸ್ಸು ದಶಗುಣ ಏರಿದು ಇದರ ಸತ್ಪರಿಣಾಮವು ಹೊಸ ರಾಜ್ಯಗಳಾನುಸಾರವಾಗಿ ನಡೆಯಲಿರುವ ಚುನಾವಣೆಗಳಲ್ಲೂ ಕಂಡು ಬರಲಿದೆ.

ದೀರ್ಘಾವಧಿಯ ಗಂಡಿದ್ದ ಧಾರಕೇಯರ ಸಂಕಟ; ಹೈದರಾಬಾದ್ ಜನತೆಯ ಕರೋರ ಯಾತನೆಗಳೆಲ್ಲವೂ ಕಳೆದು ಹೋದುವು.

ಸ್ವತಂತ್ರ ಭಾರತಕ್ಕೆ ಕಾರ್ಯರೂಪೀ "ಖಂಡಾಬಾದ್" ದೊರೆಯಿತು.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ

ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ವಿಜ್ಞಾಪನ.

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್., ಉಡುಪಿ

ಇವರ ಶಾಖಾ ಏಜೆನ್ಸಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನರಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪತ್ರಿನಿರ್ದೇಶ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಹೈದರಾಬಾದ್ ಮಂಗಳ-

ಐದು ದಿನಗಳ ಕಾರ್ಯ ❖ ರಜ್ವೀಶಾಹಿ ಮುಕ್ತಾಯ ❖ ಹಿಂದೀ ಸೇನಾ ವಿಜಯ ❖

ಕಳದ ದಿನಗಳು ಲೋಕದ ಹಾಗೂ ಭಾರತದ ರಾಜಕೀಯದಲ್ಲಿ ತೀರ್ಮಾನ ರೂಪ ನಿರೀಕ್ಷೆ ವಿದ್ಯಮಾನಗಳನ್ನು ನಿರ್ಮಿಸಿವೆ. ಭಾರತವನ್ನು ದೀರ್ಘಾವಧಿಯಿಂದ ಉದರ ಶೂಲೆಯಂತೆ ಪೀಡಿಸುತ್ತಿದ್ದ ಹೈದರಾಬಾದ್ ಸಮಸ್ಯೆಯು ಕಳವ ವಾರ ಮುಗಿದು ಹೋದುದು ಅತ್ಯಾನಂದದ ಸಂಗತಿ; ಇಂತಹ ವಿಜಯವು-ಎಲ್ಲಿಯೂ ಯಾವ ವಿಧದ ಕಪ್ಪು ಸೋಂಕಿದ ಶುಭ್ರ ವಿಜಯವು--ಅತ್ಯಪೂರ್ವವೆನ್ನಬೇಕು. ಹೈದರಾಬಾದ್ ವಿಶೇಕರಣವೆಂಬುದು ಸ್ವತಂತ್ರ ಭಾರತದ ಚರಿತ್ರೆಯ ಒಂದು ಮುಖ್ಯ ಘಟನೆ; ಸಂತೋಷದ ಮತ್ತು ಹೆಗ್ಗಳಿಕೆಯ ಸಂಗತಿ. ಸ್ವತಂತ್ರ ಭಾರತವು ತನ್ನ ಪ್ರಗತಿಪಥದಲ್ಲಿದ್ದ ಒಂದು ದೊಡ್ಡ ಅಡ್ಡಬಂಡೆಯನ್ನು ಉರುಳಿಸಿ, ಮುಂದಿನ ಹಾದಿಯನ್ನು ಸುಗಮ ಮಾಡಿಕೊಂಡ ಸುದೈವೀ ರಾಷ್ಟ್ರವಾಗಿ ಈಗ ರಾಜಿಸುತ್ತಿದೆ. ಈಗ ಭಾರತೀಯರೊಂದು ಆನಂದಾಂಕಕ್ಕೆ ಬಂದಿದ್ದಾರೆ.

ಜಾಗತಿಕ ನಿಶೇಷಗಳು

ಪೆಲಸ್ತೈನಿನ ಅರಬ-ಯೆಹೂದೀ ಕಾಳಗದ ಶಾಂತ ತೀರ್ಮಾನಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದಿಂದ ನೇಮಿಸಲ್ಪಟ್ಟು ಕಳದ ಮೇ ತಾ 20ರಿಂದ ಅಲ್ಲಿ ಶಾಂತಿ ಸಾಧನೆಯ ಶತ ಪ್ರಯತ್ನ ನಡೆಸುತ್ತಿದ್ದ ಕೌಂಟ್ ಬೆರ್ನಾಡೊಟ್ಟೆ ಮತ್ತು ಅವರ ಸಹಾಯಕ ಕರ್ನಲ್ ಸೆರೋಟರು ಇದೇ ತಾ 17ರಲ್ಲಿ ಜೆರುಸಲೇಮಿನ ಯೆಹೂದೀ ಕ್ಷೇತ್ರದಲ್ಲಿ ಗುಂಡಿಷಲ್ಪಟ್ಟು ಸತ್ತರು. ಕಾರಿನಲ್ಲಿ ಬರುತ್ತಿದ್ದಾಗ, ಅವರ ಪಾದಿಯಲ್ಲಿ ಅಡ್ಡ ನಿಲ್ಲಿಸಿದ್ದ ಒಂದು ಸೇನಾ ಮೋಟಾರಿನಿಂದ ಇಳದ ನಾಲ್ವರು ಬೆರ್ನಾಡೊಟ್ಟೆಗೆ ಮುಖಾಮುಖಿ ನಿಂತು ಗುಂಡೆಸೆದು ಕೊಂದರೆಂದೂ ಕೊಲೆಗಡುಕರು ಯೆಹೂದೀ 'ಕಠೋರ ಪಂಗಡ'ಕ್ಕೆ ಸೇರಿದವರಾಗಿರಬೇಕೆಂದೂ ತಿಳದುಬಂದಿದೆ. ಈ ಸಂಬಂಧವಾಗಿ ಜೆರುಸಲೇಮಿನಲ್ಲಿ 200ಕ್ಕೂ ಮಿಕ್ಕಿದ ದಸ್ತಗಿರಿಗಳಾಗಿವೆ; ತೀವ್ರತನಿಖೆ ನಡೆದಿದೆ.

ಕಳದ ವಾರವು ಕೊಲೆಯ ಮತ್ತು ಕಮ್ಯೂನಿಸ್ಟ್ ಪ್ರಗತಿಯ ಯುಗವೆಂಬಂತೆ ಕಾಣುತ್ತದೆ. ಬರ್ಮದಲ್ಲಿ ಕಮ್ಯೂನಿಸ್ಟರು ಕಳದ ದಿನಗಳಲ್ಲಿ ತಮ್ಮ ಹಿಚ್ಚಿನ ಪ್ರಗತಿ ಪಡೆದಿದ್ದಾರೆ; ಸರಕಾರವನ್ನು ಸ್ವಾಧೀನವಡಿಸಿಕೊಳ್ಳುವದಕ್ಕಾಗಿ ಕೆಲವು ಆಯಕಟ್ಟಿನ ಸ್ಥಳಗಳನ್ನೂ ಹಿಡಿದಿದ್ದಾರೆ. ವಿಶೇಷ ಘಟನೆಯೆಂದರೆ ಕಳದ ನರುಷ ಆಗಿದ್ದ ಇಡೀ ಮಂತ್ರಿಮಂಡಲದ ಕೊಲೆಯ ಒಂದಂಶವು ಮೊನ್ನೆ ಪುನಃ ಬರ್ಮದಲ್ಲಿ ವಡೆದುಹೋದುದು; ಬರ್ಮದ ಪಾಜೀ ವಿದೇಶ ಮಂತ್ರಿಯು, ಟನ್.ಟಟ ರ ಕಾರಿಗೆ ಯಾರೋ ಅಪರಿಚಿತ ತಾ 18ರಲ್ಲಿ ರಂಗೂನಿನಲ್ಲಿ ಕೈಬೋಂಬನ್ನು ಒಗೆದು; ವಿಶೇಷ ಜಖಂಗೊಂಡ ಮಾಜೀ ಮಂತ್ರಿ ಮರುದಿನ ಮರಣ ಗೊಂಡರು.

ಆತ್ಯ ಕಮ್ಯೂನಿಸ್ಟ್ರ ವಿರುದ್ಧ ಗದೆಯೆತ್ತಿದ ಇಂಡೋನೆಶಿಯದ ರಿಪಬ್ಲಿಕನ್ ಸರಕಾರದಿಂದಿರು ಕಮ್ಯೂನಿಸ್ಟರು ದಂಗೆಯೆದ್ದು ಅವರ ಕೈಯ್ಯೇ ಮೇಲಾಗಿದೆ. ಸರಕಾರವನ್ನು ಕೈವಶವಡಿಸಿಕೊಳ್ಳುವದಕ್ಕಾಗಿ ಅಲ್ಲಿಯ ಉತ್ತರ ಸುಮಾತ್ರಾದಲ್ಲಿ ಪ್ರಚಂಡಾಂದೋಲನ ಹೂಡಿ, ರಿಪಬ್ಲಿಕನ್ ಜಾಲನಾಧಿಕಾರಿಗಳನ್ನು ದಸ್ತಗಿರಿ ಮಾಡಿ, ಓಡಿಸಿ, ಕಮ್ಯೂನಿಸ್ಟರು ಮುಂದೊತ್ತಿದ್ದಾರೆ.

ದಕ್ಷಿಣಾಫ್ರಿಕದ ಹಿಂದೀಯರ ವಿರುದ್ಧವಾಗಿ ಆಲ್ಲಿಯ ಈಗಿನ ಮಲಾನ್ ಸರಕಾರವು ವಹಿಸಿರುವ ವಿಧಾನಗಳು ಶಾಸನರೂಪ ಹೊಂದಲಣಿಯಾಗಿವೆ. ದ. ಆಫ್ರಿಕ ಯೂನಿಯನ್ ಎಸೆಂಬ್ಲಿಯಲ್ಲಿ ಹಿಂದೀಯರಿಗಿಟ್ಟಿರುವ ಪ್ರಾತಿನಿಧ್ಯಾನುಕೂಲತೆಯನ್ನು ರದ್ದುಪಡಿಸಬೇಕೆಂದು ಪ್ರಧಾನಿ ಮಲನರು ತನ್ನ ಪಾರ್ಲಿಮೆಂಟನ್ನು ಕೇಳಿಕೊಂಡಿದ್ದಾರೆ. ಈ ಸಂಬಂಧದ ಭಾರತ ಸರಕಾರದ ದೂರು ಮತ್ತಿತರ ಜಾಗತಿಕ ವಿವಾದಗಳು ಪ್ಯಾರಿಸಿನಲ್ಲೀಗ ಸೇರಿರುವ ಸಂಯುಕ್ತ ರಾಷ್ಟ್ರ ಸಂಘದ ಜಾಹೀರು ಅಧಿವೇಶನದ ಮುಂದೆ ಇವೆ.

ಬರ್ಲಿನ್ ವಿವಾದವು ತೀರ್ಮಾನ ಹೊಂದುವ ಮಾತು ಹಾಗಿರಲಿ- ಮತ್ತೆ ಸ್ವು ಹೊಸ ಸಮಸ್ಯೆಗಳನ್ನು ನಿರ್ಮಿಸುತ್ತಾ ಬೆಳೆದಿದೆ.

ಅಂತೂ ಲೋಕದ ರಾಜಕೀಯ ಕ್ಷುಬ್ಧ ಶರಧಿಯಂತಿದೆ; ಶಾಂತಿಯ ಆವ್ಯತವು ಹುಟ್ಟುವ ಮೊದಲು ಮತ್ತೊಮ್ಮೆ ಕಠೋರ ವಿಪ್ಲವುದ್ಭವಿಸಲಿದೆ ಎಂಬ ಸಂಕೇತಗಳಾಗುತ್ತಿವೆ.

ಹೈದರಾಬಾದ್ ಮಂಗಲ!

ಈಗ ಹೈದರಾಬಾದಿನ ನಿಜಾಮ್‌ಬಾದ್ ವುರಾಣದ ಮುಕ್ತಾಯಾಂಕದತ್ತ ನೋಡೋಣ. ಕಳದ ವಾರ ಪ್ರಕಟಿಸಿದ್ದಂತೆ ನಿಜಾಮರಿಗೆ ಸಾರಿಸಾರಿ ಹೇಳುವ ಕೊನೆಯ ಎಚ್ಚರಿಕೆಯನ್ನೂ ಕೊಟ್ಟ ಮೇಲೆ, ದಕ್ಷಿಣಗಡೆಯ ಸರ್ವ ಸೇನಾನಿ ಜನರಲ್ ಮಹಾರಾಜ್ ಶ್ರೀ ರಾಜೇಂದ್ರ ಸಿಂಹಜೀ ಇವರ ಶೈಕೆಳಗಿನ ಸೇನೆಯು ಮುಖ್ಯವಾಗಿ ಮೂರು ಪಂಗಡವಾಗಿ ಮೂರು ಕಡೆಗಳಿಂದ, ಮತ್ತಿತರ ಎರಡು ದಿಕ್ಕುಗಳಲ್ಲಿತಾ 13ನೇ ಪೂರ್ವಾಹ್ನ 4ಕ್ಕೆ ಹೈದರಾಬಾದಿನೊಳಗೆ ನುಗ್ಗಿ ಹೋಗಲಾರಂಭಿಸಿತು. ವಾಯುವೇಗದಿಂದ ಮುಂದೋಡಿ ರಝಾಕಾರರ ಮತ್ತು ನಿಜಾಮ್ ಸೇನೆಯ ಕತೋದಶ್ರತಿಘಟನೆಗಳನ್ನು ನುಚ್ಚುನೂರು ಮಾಡಿ, ವೈರಿ ಸೋಲ್ಜರಂನ್ನು ಕೊಲ್ಲುತ್ತಾ ಸೆರೆ ಹಿಡಿಯುತ್ತಾ ಮುಂದಾಗಿ ವಿವಾನ ಛಾಳ ಮೂಲಕ ಆಯಕಟ್ಟಿನ ಸ್ಥಳಗಳನ್ನು ಬಸಿಯೇರಿಸಿ ಹದಕ್ಕೆ ತಂದು ಕೊಂಜೇ ಈ ಸೇನೆಗಳು ಥಾಮಸುತಿದ್ದವು. ಆದಿಭಾಗದಲ್ಲಿ ವೈರೀ ಪಡೆಗಳಿಗೆ ತಮ್ಮ ಹೊಜೆತದ ರುಚಿಯನ್ನು-ಆಮೇಲೆ ಅದರ ಭೀತಿಯನ್ನು-ಕೊನೆಯಲ್ಲಿ ಪೂರ್ಣ ಸೋಲನ್ನು ಮುಟ್ಟಿಸಿದ ಹಿಂದೀ ಯೋಧರ ಧೈರ್ಯ, ಸಾಹಸ, ಗತಿ ಚಾತುರ್ಯಗಳು ಸಾರ್ವತ್ರಿಕ ಶ್ಲಾಘನೆ ಪಡೆದಿವೆ; ಥಾಂತೀಯರೆಲ್ಲರ ಹಾರ್ದಿಕ ಕೊಂಡಾಟಗಳಿವೆ.

ತಾಸು ತಾಸಿಗೂ ಮೂರೂ ದಿಕ್ಕುಗಳಲ್ಲಿ ಹೈದರಾಬಾದಿನ ನಗರಗಳು, ಸಂಕ ಸೇತುವೆ ರಸ್ತೆಗಳು, ರೈಲ್ವೇ ವಿಮಾನ ನಿಲ್ದಾಣಗಳು, ರಝಾಕಾರ್ ನಿಜಾಮ್ ಸೇನೆಗಳು, ಹಿಂದೀ ಸೈನಿಕರ ಕೈವಶವಾಗುತ್ತಾ ಹೋದುವು; ವೈರಿ ಪಡೆಗಳವರು ಅಲ್ಲಲ್ಲಿ-ಬಿದರ್‌ನಂತಹ ತಮ್ಮ ಮುಖ್ಯ ಕ್ಷೇತ್ರಗಳಲ್ಲಿ-ಅತಿ ಕಠೋರ ಕಾಳಗ ಕೊಟ್ಟು ತಮ್ಮ ಹಲವರು ಬಲಿಯಾದೊಡನೆಯೇ ಶರಣಾಯನ ಪತಿಸಿದರು. ಈ ಹೋರಾಟಗಳಿಂದ ಒಡೆದು ತೋರಿದ ಒಂದಂಶವೆಂದರೆ ರಝಾಕಾರರು ನಿಶ್ಶಸ್ತ್ರ ಜನರ ಕೊಲೆಸುಲಿಗೆಯ ವಿದ್ಯೆಯಲ್ಲಿ ಶರಬೇತಿ ಪಡೆದಿದ್ದರೇ ಹೊರತು ಯುದ್ಧ ಕಲೆಯನ್ನು ಅಭ್ಯಾಸಿಸಿರಲಿಲ್ಲ. ನಿಜಾಮರು ಬಂಡಾರ ಬರಿದು ಪೂಡಿ ಕಳ್ಳಾಟಿಕೆಯಿಂದ ತರಿಸಿದ್ದ ಸೊಡ್ಡಾಸೊಡ್ಡ ಯುದ್ಧೋಪಕರಣಗಳನ್ನು ಉಪಯೋಗಿಸುವ ವಿದ್ಯೆ ಗೊತ್ತಿದ್ದವರಿರಲಿಲ್ಲ. ಹಾಗೆ ಬಂದಿದ್ದ ಉಪಕರಣಗಳಲ್ಲಾದರೋ, ಕಳ್ಳ ಮಾಲುಗಳ ಸಹಜಾದೃಷ್ಟವೆಂಬಂತೆ ಒಂದು ಭಾಗವಿದ್ದರೆ ಮತ್ತೊಂದು ಭಾಗ ಕಾಣೆಯಾಗಿತ್ತು. ನಿಜಾಮ್ ಸರಕಾರದ ಪಾಪದ ಫಲ ಈ ರೀತಿಯಿಂದಲೂ ಮೂರ್ತೀಭವಿಸಿದ್ದಿತು. ಸೆಕುಂದರಾಬಾದ್ ಆಸುಪಾಸಿನ ರಸ್ತೆಗಳಲ್ಲೆಲ್ಲಾ ಮೈಲ್ ಹಾಕಿಡಲು ನಿಜಾಮ್ ಸೈನಿಕರಿಗೆ ತಿಳದಿದ್ದರೂ, ಕೊನೆಯುಕಾಲ ಬಂದಾಗ ಅದನ್ನು ಗುಡಿಸುವ ರೀತಿ ಗೊತ್ತಿರಲಿಲ್ಲ. ಆ ಕೆಲಸವನ್ನು ಹಿಂದೀ ದಳದ ಗುಡಿಸುವವರೇ ಮಾಡಬೇಕಾಗಿ ಬಂತು; ಅದಕ್ಕೆ ಐದು ತಾಸು ಹಿಡಿದುದರಿಂದ ನಿಜಾಮ್ ಸೈನಿಕರ ಕ್ರಮಬದ್ಧ ಶರಣು ಸಂಪ್ರದಾಯಾಚರಣೆಯು ನಿಶ್ಚಿತ ಸಮಯಕ್ಕಿಂತ ಇಷ್ಟು ಹೊತ್ತ ವಿಳಂಬವಾಗಿ ನಡೆಯಬೇಕಾಯಿತು.

ಕ್ರಿಯಾಚರಣೆಯ ಎರನೇ ದಿನ-ತಾ 17ನೇ ಪೂರ್ವಾಹ್ನ-ಹೈದರಾಬಾದ್ ಸಂಸ್ಥಾನದ ಭವಿಷ್ಯವು ದಾರದಲ್ಲಿ ನೇತಾಡುತಿತ್ತು. ಸೆಕುಂದರಾಬಾದ್ ಮತ್ತಿತರ ಎರಡು ಸೇನಾ ನಿಲ್ದಾಣ ಪ್ರವೇಶಿಸುವ -ನಿಜಾಮ್‌ರೇಂಕಾರ್ ಕತ್ತರಿಸುವ-ಕತ್ತರಿಯ ದಳಗಳಾಗಿ ಶೋಲಾಪುರದಾಕಡೆಯಿಂದ ಮೇಜರ್ ಜನರಲ್ ಚೌಧರಿಯವರ ನಾಯಕತ್ವದಲ್ಲಿ ಹೊರಟಿದ್ದ ಸೇನೆಯೂ, ಬೆಜವಾಡಾ ಕಡೆಯಿಂದ ಮೇಜರ್ ಜನರಲ್ ಎ. ಎ. ರುದ್ರ ನಾಯಕತ್ವದಲ್ಲಿ ಹೊರಟಿದ್ದ ಸೇನೆಯೂ, ಒಂದೇ ನಿಗೆತ ದೊಳಗೆ ಹೈದರಾಬಾದಿಗೆ ಹಾರುವ ಸ್ಥಳಗಳಿಗೆ ಬಂದಿದ್ದವು; ಉಳಿದ ದಳಗಳ ಗುರಿಯೇ ನಿಜಾಮ್ ಮತ್ತು ರಝಾಕಾರ್ ದಳಗಳನ್ನೆಳೆದುಕೊಂಡು ಸದೆ ಬಡಿಯುವದಾಗಿದ್ದುದರಿಂದ ಅವು ಆ ಕೆಲಸ ಮಾಡಿದ್ದುವು. ಹೀಗೆ ತನ್ನ [illegible] ಹೋದಾಗ ಸರ್ವ ಸೇನಾನಿ ಶ್ರೀ. ರಾಜೇಂದ್ರ ಸಿಂಹಜೀಯವರು ಹೈದರಾಬಾದಿನ ಸರ್ವಸೇನಾನಿ ಮೇಜರ್ ಜನರಲ್ ಎಲ್ ಎಂಡ್ರೂ ಇವರಿಗೆ ಕೊನೆಯ ಎಚ್ಚರಿಕೆಯಾಗಿ 'ಸೇನಾದ್ವಷ್ಟಿಯಿಂದ ನೀವಿನ್ನು ಹೋರಾಡುವದು ನಿರರ್ಥಕ. ಆದ್ದರಿಂದ ಅನವಶ್ಯವಾಗಿ ರಕ್ತಪಾತವಾಗುವದನ್ನು ತಪ್ಪಿಸಲು ಶಸ್ತ್ರ ಕೆಳಗಿಡಿ' ಎಂದು ಕರೆದು ಹೇಳಿದರು. ಈ ಪರಿಸ್ಥಿತಿ ಮಂದಟ್ಟಾದುದೇ ಕಡೆ-ಮೀರ್ ಲಾಯಕ್ ಅಲಿ ಮಂತ್ರಿ ಸಮಿತಿ ರಾಜೀನಾಮೆ ಕೊಟ್ಟಿತು; ನಿಜಾಮರು ಬೇರೆ ಮಂಡಲಿ ರಚಿಸಿಕೊಂಡರು; ಭಾರತದ ಏಜಂಟ್ ಜನರಲರಾಗಿದ್ದ ದಿವ್ಯಂಥನದಲ್ಲಿದ್ದ ಶ್ರೀ ಕೆ. ಎಮ್. ಮುನ್ಶಿಗಳ ಮೂಲಕ ಭಾರತ ಸರಕಾರಕ್ಕೆ ಶಸ್ತ್ರ ಕೆಳಗಿಡುವ ತನ್ನಿಚ್ಛೆಯನ್ನು ಮುಟ್ಟಿಸಿದರು. ಗವರ್ನರ್ ಜನರಲ್ ರಾಜಾಜಿಗೆ ತಂತಿ ಕೊಟ್ಟರು; ಆಗಲೇ ಹೈದರಾಬಾದಿನ ಭವಿಷ್ಯವು ಭಾರತ ಸರಕಾರದ ಕೈಗೆ ವರ್ಗಾಯಿಸಲ್ಪಟ್ಟಿತು. 'ತನ್ನತನ'ವನ್ನು ಉಳಸಿಕೊಳ್ಳಲು ಆಗಲೂ ಪ್ರಯತ್ನಿಸಿರುವ ನಿಜಾಮರ ಭಾವನೆಯನ್ನು ಒಕ್ಕೂಟಿಗೆ ಸರಿಯಿ

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ
ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಕಾಪೆಗಳಿವೆ.
೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಸಕ್ವ ಅನುಭವದ ಯೋಗ್ಯತೆಯಿದೆ.
ವಿರಳು ಠೇವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.
ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು
ದಕ್ಷತೆರುಯಿಂದ ನಿರ್ವಹಿಸಲ್ಪಡುತ್ತವೆ.
ದಿ ವಿಜಯ ಬೇಂಕ್, ಲಿಮಿಟೆಡ್
ಹೆ. ಆ. ಮಂಗಳೂರು.
The Vijaya Bank Ltd.
H. O. MANGALORE, S. K.

-ಅರಾಜಕತೆಯ ಅಂತ್ಯ.

- ಸೇನಾಧಿಕಾರ ಸ್ಥಾಪನೆ
- ಶಾಂತಿಭದ್ರತಾ ರಚನೆ
- ನಾಯಕರ ಆಶ್ವಾಸನೆ

ಸಿಟ್ಟು ಹಿಂದೀ ಸರಕಾರವು ತನ್ನ ಸೇನಾ ಜಾಲಕರ ಕೈಗೆ ಹೈದರಾಬಾದಿನ ವ್ಯವಸ್ಥಾಧಿಕಾರವನ್ನು ಒಪ್ಪಿಸಿತು.

ಮುಂದಾಗಿ ಸಮೀಪಿಸಿ, ನಿಜಾಮ್ ಸೇನೆಯ ಶರಣಾರ್ಥಿಯನ್ನು ಅಂಗೀಕರಿಸಿಕೊಂಡ ಮೇಜರ್ ಜನರಲ್ ರುದ್ರರು ಹೈದರಾಬಾದಿನ ಮಿಲಿಟರಿ ಗವರ್ನರ್ ಆಗಿ ಅಡಳಿತೆ ನಡಸಿಕೊಂಡರು.

ನಿಜಾಮರ ಎಲ್ಲಾ ವಿಧ ದ ಸೈನಿಕರನ್ನೂ ನಿಶ್ಶಸ್ತ್ರಗೊಳಿಸಿದ್ದಲ್ಲದೆ, ಹೈದರಾಬಾದಿನ ಶಸ್ತ್ರ ವಿರುವವರೆಲ್ಲರೂ ತಮಗೊಪ್ಪಿಸಬೇಕೆಂದು ಈ ಮಿಲಿಟರಿ ಗವರ್ನರರ ಆಜ್ಞೆ ಯಾಯಿತು.

ಅಂತರ್ಗತ ರಝಾಕಾರರನ್ನೂ ನಿಜಾಮ್ ಸೈನಿಕರನ್ನೂ ಹಿಡಿಯುವ ಕೆಲಸವೇಗ ಭರದಿಂದ ನಡೆದಿದೆ. ಪ್ರಥಮತಃ ಹೈದರಾಬಾದ್ ಮತ್ತು ಸೆಕುಂದರಾಬಾದು ಗಳಲ್ಲಿ-ಆ ಮೇಲೆ ಅಡಗಿ ಕುಳಿರ ರಝಾಕಾರರು, ಸಂಸ್ಥಾನದೊಳಗಡೆ ಆ ಲ್ಲಲ್ಲಿ ಗುಂಪಾಗಿ ತೊಂದರೆಗಾರಂಭಿಸುವ ಲಕ್ಷಣ ತೋರಿಬಂದೊಡನೆ ಇಡೀ ಹೈದರಾಬಾದಿ ನಲ್ಲಿ-ಕರ್ಫ್ಯೂ ಆಜ್ಞೆ ಜಾರಿಯಾಗಿದೆ.

ನಿಜಾಮರು, ಭಾರತ ಸರಕಾರದೊಡನೆ ಸಂಧಾನಕ್ಕೆ ಬಾರದಂತೆ ಅತಂಕಿಸಿದ್ದ ಲಾಯಕ್‌ಅಲಿ ಮಂತ್ರಿಮಂಡಲಿಯ ಎ ಲ್ಲಾ ಮಂತ್ರಿಗಳನ್ನೂ ಅವರ ಸ್ವಂತ ಮನೆ ಗಳಲ್ಲೇ ದಿಗ್ಬಂಧನದಲ್ಲಿಡಲಾಗಿದೆ.

ಜನರಲ್ ಚೌಧರಿಯ ಸೈನಿಕರು ಶಾಸಿಮ್ ರಜ್ವಿಯನ್ನು ಬಂಧಿಸಿದ್ದಾರೆ; ಪೂನೆಯ ಹಿಂದೀ ಸೇನಾನಿ ಕಚೇರಿಗೆ ತಂದಿರಬೇಕೆಂದು ಊಹಿಸಲಾಗಿದೆ.

ಗಣನೀಯ ಘಟನೆಗಳು

ಈ ಚರಿತ್ರಾರ್ಹ 'ಪೋಲೀಸ್ ಕಾರ್ಯಾಚರಣೆ'ಯಲ್ಲಿ ಜರಸ್ಮರಣೀಯ ಸಂ ಸಂಗತಿಗಳು ಕಂಡು ಬಂದುವು:-

ಭಾರತದ ದಕ್ಷಿಣ ಭಾಗದ ಸರ್ವ ಸೇ ನಾ ಲೆಫ್ಟನೆಂಟ್ ಜನರಲ್ ರಾಜೇಂದ್ರ ಸಿಂಹಜೀಯವರು ರಝಾಕಾರ್ ಗರ್ಭಾಂತ ರ್ಗತ ನಿಜಾಮ್ ಶಾಹಿಯ ಮಂಥನ ಕಾರ್ಯಾಚಾಲಕನಾಗಿದ್ದರು. ಈ ಕಾರ್ಯಾ ಚರಣೆಯ ಹಿಂಬೆಕೆ, ನಿರ್ದೇಶಕತ್ವವೆಮತ್ತು ಹೊಣೆಗಾರಿಕೆಯು ಅವರದಿದ್ದು ಅವರು ತನ್ನ ಮುಖ್ಯ ಕಚೇರಿಯನ್ನು ಪೂನೆಯಲ್ಲಿ ಸ್ಥಾಪಿಸಿಕೊಂಡು ಹೋ ರಾ ಟ ವ ನ್ನು ನಿರ್ದೇಶಿಸುತ್ತಿದ್ದರು. ಅವರ ಕೈಕೆಳಗೆ ಮೇ ಜರ್ ಜನರಲ್ ಜಿ. ಕೆ.ಅನ್, ಚೌಧರಿ ಮೇಜರ್ ಜನರಲ್ ಎ. ಎ. ರುದ್ರರು ಮತ್ತು ಮೇಜರ್ ಜನರಲ್ ಬ್ರಾರ್ ಕ್ಷೇತ್ರ ಸೇನಾನಿಗಳಾಗಿ ಸೇನೆಗಳನ್ನು ನಡೆ ಸುತ್ತಿದ್ದರು. ಈ ಪಂಚಧಾರೆಯಾಯಿ ದ ಸಿಡಿಯಾಗಿದ್ದ ಲೆಫ್ಟನೆಂಟ್ ಜನರಲ್ ಮಹಾರಾಜಾಸಿಂಹಜೀಯವರು ಅ ಗ ತ್ಯ ಕೋರಿದಾಗ ವಿಮಾನ ಹತ್ತಿ ಹೈದರಾ ಬಾದ್ ಕ್ಷೇತ್ರಗಳಿಗೂ ಹೋಗಿ ಬಂದುದಿದೆ.

ಸರ್ವ ಸೇನಾನಿ ಮಹಾರಾಜಾಸಿಂಹಜೀ ಕಳದ ಮಹಾಯುದ್ಧದಲ್ಲಿ ಹೋ ರಾಡಿದವರು; ಮರುಭೂಮಿ ಕಾಳಗ ತಜ್ಞರೆಂದು ಹೆಸರಾದವರು; ಡಿ. ಯಸ್. ಒ. ಬಹುಮಾನ ಪಡೆದವರು. ಹೈದರಾ ಬಾದ್ ಮುಂದೋಟ ಸ್ಪರ್ಧೆಯಲ್ಲಿ ಗೆದ್ದು, ಈಗ ಅಧಿಪತಿಯ ಸೇನಾ ಗವರ್ನರರಾಗಿರುವ ಮೇಜರ್ ಜನರಲ್ ಚೌಧರಿಯವರು, ಈ ಗಿನ ಹಿಂದೀ ಸೇನೆಯಲ್ಲಿರುವ ಜನರಲರ ಪೈಕಿ ಅತ್ಯಂತ ಎಳೇ ವಯಸ್ಸಿನವರು. ಕಳದ ಮಹಾಯುದ್ಧದಲ್ಲಿಯೂ ಸಾಹಸ ಪ್ರದರ್ಶಿಸಿದ್ದ ಕಲಿ. ಹೈದರಾಬಾದ್ ನಗ ರದೊಳಗೆ ವಿಜಯೀ ಪ್ರವೇಶ ಮಾಡುವ ಸುಯೋಗವು ನೋನ್ನೆದೊರೆತ ಈ ಚೌಧರಿ ಯವರ ಪಾಲಿನ ಇಂತಹ ಒಂದು ಭಾಗ್ಯ ವೊಮೈಸೂರಿನಲ್ಲಿ ಕೃಷ್ಣರಾವ್ ಕೈಬಿಟ್ಟದ್ದಿತು. ಬರ್ಮವನ್ನು ಆಕ್ರಮಿಸಿಕೊಂಡಿದ್ದ ಜಪಾನರನ್ನು ಹೊಡೆದಟ್ಟುವ ಹೋರಾಟದ ಕೊನೆಯ ಅಂಕ. ರಾಜಧಾನಿ ರಂಗೂನಿ ನ ಮೇಲೆ, ಆಗ ಕರ್ನಲ್ ಮಾತ್ರ ಆಗಿದ್ದ ಚೌಧರಿಯವರ ಟೀಂಕು ದಳ ನುಗ್ಗಿ ಬಂತು; ಮುಂದಾಗಿ ಪ್ರವೇಶ ಹೆಜ್ಜೆಯಿ ಡುವ ಭಾಗ್ಯಕ್ಕಾಗಿ ಇವರು ಧಾವಿಸುತ್ತಾ ರಂಗೂನಿಗೆ 30 ಮೈಲಿರುವಷ್ಟರಲ್ಲಿ ಬರು ವಾಗ ತಮ್ಮ ಹಿಂದೋಟಿಕ್ಕೆ ವಕಾಶ ದೊರ ಕಿಸಿ ಕೊಳ್ಳುವದಕ್ಕಾಗಿ, ಅಲ್ಲಿಯ 30 ಅಡಿ ಉದ್ದದ ಒಂದು ಸೇತುವೆಯನ್ನು ಜಪಾನ್ನರು ಕಡಿದು ಹಾಕಿ ಹೋಗಿದ್ದರು. ಆಗ ವಿಶೇಷ ಮಳೆ ಬರುತ್ತಿದ್ದುದರಿಂದ ಸಂಕ ರಚಿಸಿ ಮುಂದೊತ್ತಲು ಇವರ ಸೇನೆಗಲ್ಲಯೇ ಮೂರು ದಿನ ತಾಗಿತು. ಈ ನಡುವೆ ತನ್ನ ಸೇನಾ ಬಿಡಾರದಲ್ಲಿ ಕುಳಿ ತಿದ್ದಲ್ಲೇ ಚೌಧರಿಯವರು, ಸೇನೆಯಳಿ ಯ ರವದೊಂದಿಗೆ ಜಪಾನ್ನರು ಶರಣಾ ದ ಮತ್ತು ರಂಗೂನಿನೊಳಗೆ ಮಿತ್ರರ ಸಮುದ್ರ ಸೇನೆ ಪ್ರವೇಶಿಸಿದ ವಾರ್ತೆ ಯನ್ನೂ ವಯರ್‌ಲೆಸಿನಿಂದ ಕೇಳುವಂತಾ ಗಿತ್ತು. ಔರಂಗಾಬಾದ್ ನಗರ ಗೆದ್ದ ಮೇಜರ್ ಜನರಲ್ ಡಿ. ಯಸ್. ಬ್ರಾರ್ ಕೂಡಾ ನಿಪುಣ ಸೇನಾನಿ.

ಹೈದರಾಬಾದ್ ಕಾರ್ಯಾಚರಣೆಯ ಲ್ಲಿ ವಿಮಾನ ದಳದ ನಾಯಕನಾಗಿದ್ದ ಏರ್ ಮಾರ್ಶಲ್ ಮುಕರ್ಜಿಯವರೂ ಅಕಾಶ ಧಾಳಿ ನಿಪುಣನೆಂದು ಹೆಸರಾದ ವರು. ಇತರ ಸೇನಾಜಾಲಕರಿಂದಲೂ ಶ್ಲಾಘನಾರ್ಹ ಕೆಲಸಗಳಾಗಿವೆ

ತಾ. 13ನೇ ಬೆಳಗಾಗಿ ಹಕ್ಕಿ ಕೂಗುವು ದನ್ನು ಕೇಳುವ ನೊದಲೇ ಹಿಂದೀ ಸೇನೆಯ ಗುಂಡುಗಳ ಶಬ್ದವನ್ನು ನಿಜಾಮ್ ಪಡೆಗಳು ಕೇಳಿದುದು ಅತ್ಯಾಶ್ಚರ್ಯಕರವಾಗಿ. ಈ ಧಾಳಿಯ ದಿನ, ಸಮಯ ಮತ್ತು ವಿಧಾನಗಳು ಇಡೀ ಭಾರತದಲ್ಲಿ ಕೈಬೆ ರಳಿನೆಕೆಯ ಮಂದಿಗಲ್ಲದೆ ಇತರರಿಗೆ ತಿಳಿ ದಿರಲಿಲ್ಲ. ಭಾರತದ ಅತ್ಯಂತ ಗುಟ್ಟು'ಗಳ ಪೈಕಿ ಇದೊಂದಾಗಿ ಗಣನೆಗೆ ಸೇರಿದೆ. ಸರ್ವ ಸೇನಾನಿ ರಾಜೇಂದ್ರಸಿಂಹಜೀ ತನ್ನ ಸೈನಿಕರಿಗೆ ಅತ್ಯಂತ ಕಠೋರ ವಿಧಿ ನಿಯಮಗಳನ್ನು ಹಾಕಿಕೊಟ್ಟಿದ್ದರೆಂದೂ, ಇವು ಲಕ್ಷರಕ್ಷಣ ಮಾಲಿನಲ್ಲಿಟ್ಟು ನೆಂದೂ ತಿಳಿದುಬಂದಿದೆ.

ಹಿಂದೀ ಸೇನೆಯ ಪ್ರಚಂಡಶಕ್ತಿಯಂತೆ ಯೇ ಇದರ ಅಸಾಧಾರಣ ಬುದ್ಧಿವಂತಿಕೆ ಯೂ ನಿಜಾಮ್ ಕಡೆಯವರಿಗೆ ತಪರಾಜಿ ತವಿದ್ದುವು. ಅವರು ಅಯುಧ ಮತ್ತು ಹೃದಯದಂತೆಯೇ ಮೆದುಳುಶಕ್ತಿಯಲ್ಲಿ ಯೂ ಹಿಂದೀ ಸೇನೆಗಿಂತ ಎಷ್ಟೋ ಹಿಂ ದಿದ್ದರು. ಸಾಮಾನ್ಯ ಯೋಧರ ಮಟ್ಟಿಗೆಂತ ನಿಜಾಮ್ ಪಡೆ ಕಳಪಿದ್ದರೆ, ಹಿಂದೀ ಸೇನೆ ಆ ಅಂತಸ್ತಿಗಿಂತ ಮೇಲಿ ದ್ದಿತು. ಇದಕ್ಕೆ ನಿದರ್ಶನಗಳೆಷ್ಟೋ ಹೈ ದರಾಬಾದಿನ ಐದು ದಿನಗಳಲ್ಲಿ ಕಂಡು ಬಂದಿವೆ.

ಒಂದು ದೃಷ್ಟಾಂತವಾಗಿ, ಆಯಕಟ್ಟಿ ನ ಒಂದು ಮುಖ್ಯ ನಗರವಾದ ಔರಂಗಾ ಬಾದನ್ನು ಹಿಂದೀ ಸೇನೆ ವಶಪಡಿಸಿಕೊಂ ಡುದನ್ನು ಉಲ್ಲೇಖಿಸಬಹುದು. ನಗರವ ನ್ನು ಹಿಂದೀ ಸೇನೆ ನುಗ್ಗುವದೇ ದಿಕ್ಕಿ ನಿಂದ ಎಂದು ನಿಜಾಮ್ ಸೈನಿ ಕರು ನಿರ್ಧರಿಸಿಟ್ಟಿದ್ದ ಭಾಗದಲ್ಲಿ ಅತ್ಯಂತ ಪ್ರಬಲ ರಕ್ಷಣಾ ವ್ಯವಸ್ಥೆ ಮಾಡಿಕೊಂಡು ಅಧಿಕ ಸಂಖ್ಯೆಯಲ್ಲಿದ್ದರು. ಆದರೆ ಹಿಂ ದೀ ಸೇನೆಯ ಮೇಜರ್ ಜನರಲ್ ಡಿ. ಯಸ್. ಬ್ರಾರ್ ಇವರು, ತನ್ನ 'ವಂಚಕ ದಳ'ವನ್ನು ಆ ಕಡೆಗೆ ಕಳುಹಿಸಿ, ತನ್ನ ಮುಖ್ಯ ಸೇನೆಯನ್ನು ಬೇರೆಕಡೆಯಿಂದ ಲೇ ಮುಂದೊಯ್ದಾಗ ನಿಜಾಮ್ ಸೇನೆ ಯು ಆಶ್ಚರ್ಯಕ್ಕೆಡಾಗಿ ಅಯತಪ್ಪಿತು; ಆ ನಗರ ಅಸ್ತವ್ಯಸ್ತಹೋರಾಟ್ಟಾನಂತರ ಹಿಂದೀ ಸೇನೆಯ ಬಗಲಿಗೆ ಬಿತ್ತು.

ಯುದ್ಧರಂಗಗಳನ್ನು ಬಿಟ್ಟರೆ ಹೈದರಾ ಬಾದಿನೊಳಗಡೆಯಲ್ಲಾಗಲೀ, ಅಖಿಲ ಭಾರತದಲ್ಲಾಗಲೀ ಜಾತೀಯ ರೂಪದ ಒಂದೇ ಒಂದು ಗೊಂದಲ ನಡೆದುದಾಗ ಲೀ, ಕಠೋರತೆಯ ಏಕ ಮಾತ್ರ ಪ್ರದ ರ್ಶನವಾಗಲೀ ಇಲ್ಲವೇ ಇಲ್ಲವೆಂಬುದು ಎ ತ್ತಿ ಹೇಳತಕ್ಕ ವಿಷಯ.

ಹೈದರಾಬಾದಿನ ಜನತೆಯ ಮಟ್ಟಿಗೆ ಪ್ರಥಮದಲ್ಲಿ ದೀರ್ಘಾವಧಿಯಿಂದಲೂ ಕರಿಛಾಯೆ ಯಂತೆ ಆಂಟಿಕೊಂಡಿದ್ದ ರಝಾಕಾರ್ ಭೀತಿಯ ಗ್ರಹಣವು, ಹಿಂದೀ ಸೇನೆಯ ಪ್ರವೇಶದೊಡನೆಯೇ ಮಾಯವಾಗಿ ಜಾ ತಿಭೇದವಿಲ್ಲದೆ ಎಲ್ಲರ ವದನಗಳೂ ಅಂಳಿ ದುದನ್ನು ಪ್ರತ್ಯಕ್ಷದರ್ಶಿಗಳು ಬಣ್ಣಿಸಿದ್ದಾ ರೆ. ಆಲ್ಲೆಲ್ಲಾ ಪ್ರಥಮ ಭಾರಿ ಭಾರತ ರಾಷ್ಟ್ರಧ್ವಜದ ಮನೆ ಮನೆ ಹಾರಾಟ ಗಳೂ, 'ಪಂಡಿತ ನೆಹರು ಕೀ ಜೈ' 'ಲಂ ದುಸ್ತಾನ್ ಝಿಂದಾಬಾದ್' ಜಯಘೋಷ ಗಳೂ ಕಂಡುಬಂದುವು; ಕೇಳಿಬಂದು ವು. ಆ ದೃಶ್ಯ ಮತ್ತು ಸ್ವರಗಳಲ್ಲಿ ಅವ ರ್ಣನೀಯವಾದೊಂದು ಮೋಹಕತೆ ಯಿದ್ದಿತು.

ಈಗ ಹಿಂದೀ ಸೇನಾ ಕಚೇರಿಗೆ ಬರು ತ್ತಿರುವ ಅಭಿನಂದನಾ, ಶ್ಲಾಘನಾ ಸಂ ದೇಶಗಳು ಅಗಣಿತ. ಸರ್ವಸೇನಾನಿಗೆ ಬಂಗಾರದ ಪಿಡ್ಗಾ ಉಡುಗೊರೆ ಕೊಡಲು, ಹಿಂದೀ ಸೈನಿಕರಿಗೆಲ್ಲಾ ಪದಕ ವಿತರಣೆ ಗೊಳಿಸಲು-ಸಂಘ ಸಂಸ್ಥೆಗಳು ಮತ್ತು ಜ ನರು ಮುಂದಾಗಿದ್ದಾರೆ. ಅಖಿಲ ಭಾರತದ ಎಲ್ಲರ ಹೃದಯವೊಂದು ಭಾರ ವಿಳಿದಿದೆ.

ಭೋಪಟ್ಕರರಂತಹ ಹಿಂದೂವಾದಿಗ ಳು, ತಾರಾಸಿಂಗರಂತಹ ಸಿಖ್ ವಾದಿಗಳು, ಹಿಂದೀ ಮುಸ್ಲಿಂ ನಾಯಕರೆಲ್ಲರೂ ತಾವು ನೆಹರೂ ಸರಕಾರದ ಭಕ್ತರೆಂದು ಮುಕ್ತಕಂಠದಿಂದ ಘೋಷಿಸುವಂತಹ ವೈರಣಿಗೊಂಡರು. ಇದು ನಿಜಾಂ ಸರಕಾರದ ಮೇಲೆ ಹಿಂದೀ ಸರಕಾರ ವು ಸಾಧಿಸಿದ ವಿಜಯವಷ್ಟೇ ಅಲ್ಲ; ಜಾತೀ ಯತೆಯ ಮೇಲೆ ರಾಷ್ಟ್ರೀಯತೆಯು ಪಡೆ ದ ಅಮೂಲ್ಯ ವಿಜಯ.

ಒಂದೊಂದು ವರ್ಗ, ಜಾತಿ, ಮತ್ತ ಪಂಥ, ಪಂಗಡದವರು ಯಾವ ವಿಧದ "ಜೈ" ಅಥವಾ "ಝಿಂದಾಬಾದ್"ಗಳನ್ನು ಜಾಕಿದ್ದರೂ, ರಾಷ್ಟ್ರೀಯ ನೆಹರೂ ಸರ ಕಾರವು ಹಾಕಿದ 'ಜೈ'ಹಿಂದ್'! ಅಥವಾ "ಸ್ವತಂತ್ರ ಭಾರತ ಝಿಂದಾಬಾದ್"! ಎಂದರೆ ಇದೇ. "ಈಗಲಾದರೂ ಸಮಾ ಧಾನಗೊಂಡಿರಾ? ನಮ್ಮನ್ನೆ ತಿಳಿದು ಕೊಂಡಿರಾ?" ಎಂದು ಹಿಂದೀಯದನ್ನು ಪ್ರಶ್ನಿಸುವ ಅಧಿಕಾರವೀಗ ಭಾರತ ಸರ ಕಾರಕ್ಕಿದೆ.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್
ಬ್ಯಾಂಕ್ ಲಿಮಿಟೆಡ್

ಹೆಡ್ ಆಫೀಸು: ಕೂಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ವಿಸ್ತಿರ್ಣ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವೆ.

ಒಂದು ವರ್ಷಕ್ಕೆ ನೇಕಡಾ 3/- ರೂಪಾಯಿ.

ಅತೀ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸು ಖಾತೆಗಳು ತೆರೆಯ ಲ್ಪಟ್ಟು ಒಟ್ಟಿ ನೇಕಡಾ 2/- ರೂಪಾಯಿಗಳಂತೆ ಕೊಡಲಾಗುವದು

ನಲ್ಲಾ ತರದ ಬ್ಯಾಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಹತ್ತಿರದ ಶಾಖೆಗೆ ಬರೆಯಿರಿ ತಿಳಿಯಿರಿ,

The Agricultural & Industrial Bank, Limited.
Head Office- Coondapoor, S. K.

The Canara Banking Corporation Limited.

Estd: 1906.
(Incorporated in British India)
Head Office: **UDIPI**, S. India.

Capital Authorised	....	Rs. 25,00,000
Capital Issued & Subscribed	....	Rs. 20,00,000
Capital Paid up	....	Rs. 19,98,445
Reserves....	....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ನವಯುಗ
ಗುರುವಾರ, ಉಡುಪಿ, ೨೩-೯-'೪೮ಲ

ಈಗ—

ಬಹು ಕಾಲದ ಪೀಡೆಯಾಗಿದ್ದ ಹೈದರಾಬಾದ್ ರೋಗ ಗುಣವಾಯಿತು; ಈಗ "ಪಥ್ಯ" ನಡೆದಿದೆ. ಈ ಸಂತೋಷ ಸಣ್ಣದಲ್ಲ; ಆದರೆ ಭಾರತೀಯರು ಅನಂದದಿಂದ ಮೈಮರೆಯಲಾಗುವ ಸುಯೋಗವನ್ನು ಈ ವಿಜಯ ಕೂಡಾ ತಂದಿಲ್ಲ; ಬದಲಿಗೆ ಗಾಢ ವಿಚಾರ, ಶುದ್ಧ ಹೃದಯದಿಂದ ಸಂಘಟಿಸಿ ಕೊಂಡು ರಾಷ್ಟ್ರದ ಶಕ್ತಿ ವರ್ಧನೆ ಮಾಡುವ ಸುಯೋಗವೊದಗಿದೆ. ಹೈದರಾಬಾದ್ ವಿಲೀನದಿಂದಾದುದೆಂದರೆ ಭಾರತದ ಒಂದು ಉದರ ಶೂಲೆ ನಿವಾರಣೆಗೊಂಡಂತೆ ಆದರ ಸ್ಥಾನದಲ್ಲಿ ಒಂದು ಉತ್ಸಾಹ ಮೂಡಿ ಬಂದುದಷ್ಟೆ; ಈ ಅನುಕೂಲ ಮಾರ್ಗಾಟವನ್ನು ಸದುಪಯೋಗಿಸಿಕೊಳ್ಳದೆ ಬಿಟ್ಟರೆ ಭಾರತದ ಭವಿಷ್ಯದಲ್ಲಿ "ಹೈದರಾಬಾದ"ನ್ನೂ ಮಿಕ್ಕಿದ ಕಂಟಕಗಳು ಮೂಡುವ ಸಂಭವವಿದೆ.

ಸಂಪ್ರದಾಯಬದ್ಧ ಸ್ಥಾನಮಾನ ನಿಷ್ಠೆ ಮತ್ತು ಮತಾಂಧತೆಯು ಎಂತಹ ಅನಿವೇಕಿಗಳನ್ನು ನಿರ್ಮಿಸುತ್ತದೆ ಎಂಬುದಕ್ಕೂ ಅಂಥವರಿಗಾವ ಭವಿಷ್ಯವೆಂಬುದಕ್ಕೂ ಹೈದರಾಬಾದ್ ನಿಜಾಮ್ ಮತ್ತು ರಝಾಕಾರರನ್ನು ನೋಡಬಹುದು. ರಾಷ್ಟ್ರದ ಬಲನಿಷ್ಠರೂ ಅದನ್ನು ದೇವತೆಗಳಂತೆ ಉಪಯೋಗಿಸುವದೆಂದರೆ ಹೇಗೆ?" ಎಂಬುದಕ್ಕೆ ಭಾರತ ಸರಕಾರದ 'ಹೈದರಾಬಾದ್' ವ್ಯವಹಾರ"ವೊಂದು ಮೇಲ್ಪಂಕ್ತಿ. ಆಗಿ ಹೋದ ಈ ಘರ್ಷಣೆಯ ಇಡೀ ದೃಶ್ಯದಲ್ಲಿ ಮತಾಂಧತೆಯನ್ನು ರಾಷ್ಟ್ರೀಯತೆ ಹೊಡೆದು ಹಾಕಿದುದೊಂದೇ ಅತಿ ಮುಖ್ಯವಾಗಿ, ಅತ್ಯಮೂಲ್ಯ ವಿಜಯವಾಗಿ ಕಾಣಿಸುತ್ತಿದೆ. ಮುಸ್ಲಿಂ-ಮುಸ್ಲಿಮೇತರರೆಂಬ ಭೇದವಿಲ್ಲದೆ ಭಾರತದೊಳಗಿರುವ ಎಲ್ಲರೂ ಭಾರತೀಯರಾಗಿರುವುದು ಕಾಣಿಸುತ್ತಿದೆ. ಇದಕ್ಕಾಗಿ ಸಂತೋಷಿಸಬೇಕು. ಇದನ್ನೇ ಬೆಳೆಯಿಸಿ ಚಿರಸ್ಥಾಪನೆ ಮಾಡಿಕೊಳ್ಳುವದಕ್ಕಾಗಿ ಅಗತ್ಯ ನಿರುವುದಿಲ್ಲವನ್ನೂ ಮಾಡಬೇಕು.

ಹಿಂದೀ ಸೇನೆಗೆ ಹೈದರಾಬಾದ್ ನುಗ್ಗುನುಗ್ಗಾಗಿ ನಿಜಾಮ್ ಸರಕಾರ ಬಗ್ಗಿದುದೂ ಭಾರತದೊಳಗಿನ ಸರ್ವ ಜಾತಿ ಮತಗಳವರೂ ರಾಷ್ಟ್ರ ಭಕ್ತರಾದುದೂ ನಿರ್ವಾಹವಿಲ್ಲದೆ ಹೊರತು ಸ್ವೇಚ್ಛೆಯಿಂದಲ್ಲ, ಎನ್ನುವಂತಿಲ್ಲವು ಯಾವುದೂ ಇನ್ನು ತೋರಿಬರಕೂಡದು. ಹಳೇ ಸ್ಥಾನ ಮಾನ ಪ್ರತಿಷ್ಠೆಗಳಿಗಾಗಲೀ, ಜಾತೀಯತಾ ಭಾವನೆಗಾಗಲೀ ಇನ್ನು ಅಸ್ತಿತ್ವವೇ ಇಲ್ಲವೆಂದಾದರೆ ಮಾತ್ರ ಹೈದರಾಬಾದ್ ನಿಜಯ ಸಾರ್ಥಕ. ಗತ ಕಾಲದ ದುರಂತ ಮತ್ತು ದುರ್ಭಾವನೆಗಳನ್ನೂಶ್ಲಿ 'ವಾಸಇಲ್ಲಿ- ನಿಶ್ವಾಸ ಅಲ್ಲಿ' ಎನ್ನಲಾಗುವಂತಹ ವರ್ತನೆಗಳನ್ನೂ ಸಂಪೂರ್ಣ ಮರೆತುಬಿಟ್ಟು, ಜಾತಿಮತಗಳನ್ನು ಅಲ್ಲೌಕಿಸುವ, ಉಚ್ಚರಿಸುವ ಸಭೆ ವಾ ಸ್ಮರಿಸುವ ಸಂದರ್ಭ ಕೂಡ 'ಒದಗದಂತೆ ಸರ್ವರೂ ಶುದ್ಧ ರಾಷ್ಟ್ರೀಯರಾಗಬೇಕಾದುದೇ ಈಗ ಮುಖ್ಯ. ಭಾರತದ ಪಾಲಿನ ಕಂಟಕಗಳೆಲ್ಲವೂ ಎಂದೆಂದಿಗೂ ಕಳೆದುಹೋದುವೆಂದು ಭಾವಿಸಬಾರದು. ಕಾಶ್ಮೀರದ ಕಲಹವುಳಿದಿದೆ; ಪಾಕಿಸ್ತಾನದ ಹೃದಯ ಮಾರ್ಪಾಟಗೊಂಡ ಲಕ್ಷಣಗಳು ಕಾಣಿಸುತ್ತಿಲ್ಲ. ಅತ್ತ ನೆರೆಯ ಬರ್ಮದಲ್ಲಿ ಕೆಮ್ಯೂನಿಸ್ಟರ ಕೈ ಮೇಲಾಗುತ್ತಾ ಬರುತಿದ್ದು, ಭಾರತದ ಗಡಿಯಲ್ಲೇ ಅಪಾಯಕರ ವ್ಯೂಹರಚನೆಯಾಗಹತ್ತಿದೆ. ರಾಷ್ಟ್ರದ ಗೃಹ ಸಮಸ್ಯೆಗಳೂ ಬೇಕಾದಷ್ಟಿವೆ. ತಮ್ಮ ಹಂಗಿಲ್ಲದ ಸಶಕ್ತ ಭಾರತವನ್ನು ಶುದ್ಧ ಮನಸ್ಸಿನಿಂದ ಕಾಣುವಷ್ಟು ನಿರ್ವಾಸ್ತರಿಗಳು ಬ್ರಿಟಿಷ್ ರಾಜಕಾರಣಿಗಳಲ್ಲವೆಂಬುದಕ್ಕೂ ನಿದರ್ಶನಗಳು ದೊರೆಯಹತ್ತಿವೆ ಶಕ್ತಿಸಂಪನ್ನ ಭಾರತರಾಷ್ಟ್ರ ಭಾರತದ ಜನತೆ ಸುಸಂಘಟಿತರಾದಲ್ಲಿ-ರಾಷ್ಟ್ರದ ಎಲ್ಲಾ ಶಕ್ತಿ ಮತ್ತು ಅನುಕೂಲತೆಗಳನ್ನು ಸಂಘಟಿಸಿಕೊಳ್ಳಲು ಸರಕಾರಕ್ಕೆ ಸಾಧ್ಯವಾದರೆ-ಇದಾವುದಕ್ಕೂ ಹೆದರಬೇಕಾಗಿಲ್ಲ; ಒಳಗಡೆ ಅಸ್ತವ್ಯಸ್ತವಾಗಿದ್ದರೆ, ಅದು ಮಾತ್ರ ಭಾರತದ ಪಾಲಿಗೆ ಅಪಾಯಕರ. ಆದ್ದರಿಂದ ಜನತೆಯು ಹಾಗೂ ಸರಕಾರದ ಲಕ್ಷ್ಯವು ಈ ಸಂಘಟನೆಯಲ್ಲೇ ಕೇಂದ್ರೀಕರಿಸಲ್ಪಡಲಿ. ಈ ಕಾರ್ಯದಲ್ಲಿ ಎಲ್ಲರೂ ಸಹಭಾಗಿಗಳಾಗಲಿ.

ತಾ. 26-9-48ನೇ ಆದಿತ್ಯವಾರವನ್ನು-

ಹೈದರಾಬಾದ್ ವಿಜಯದ ಧನ್ಯವಾದಾರ್ಪಣಾ ದಿನವಾಗಿ ಎಜಂಸ, ಎಲ್ಲಾ ಮಸೀದಿ, ಇಗರ್ಜಿ, ದೇವಸ್ಥಾನಗಳಲ್ಲಿ ಪ್ರಾರ್ಥನೆ ನಡಿಸಬೇಕೆಂದು ಗವರ್ನರ್ ಜನರಲ್ ರಾಜಾಜಿ ರಾಷ್ಟ್ರವನ್ನು ಕೇಳಿಕೊಂಡಿದ್ದಾರೆ.

ನೆನಪಾಗುತ್ತಿರುವ ಮಾತುಗಳು.

"ಸಣ್ಣಾ ವಿರಲಿ, ದೊಡ್ಡವರಲಿ, ಸಂಸ್ಥಾನಗಳೆಲ್ಲವೂ ಒಂದಲ್ಲೊಂದು ಒಕ್ಕೂಟ ದೊಳಗೆ ಸೇರಿಕೊಳ್ಳಲೇ ಬೇಕಾಗುತ್ತದೆ ಹೊರತು, ಬೇರೆ ಭವಿಷ್ಯವಿಲ್ಲ. ಸಂಸ್ಥಾನವು ಹೊಡ್ಡನಿದ್ದಂತೆ ಸನುಯು ಹೋಗಬಹುದಲ್ಲದೆ, ಎಷ್ಟೇ ದೊಡ್ಡ ಅಶ್ರಿತ ರಾಜ್ಯವಾದರೂ ಒಂದಲ್ಲೊಂದು ದಿನ ಒಂದಲ್ಲೊಂದು ರೀತಿಯಿಂದ ಕೇಂದ್ರ ದೊಂದಿಗೆ ಜೋಡಣೆಗೊಳ್ಳದೆ ನಿರ್ವಾಹವಿಲ್ಲ."- ಭಾರತದ ಗವರ್ನರ್ ಜನರಲ್ ಹುದ್ದೆ ನಹಿಸಿದ ಅದಿಭಾಗದಲ್ಲಿ ಹೈದರಾಬಾದನ್ನು ಸ್ಥಾನಿಯೇ ಲೋರ್ಡ್ ಮೌಂಟ್ ಬ್ಯಾಟನ್

"ಈ ನಿಯಾಯತಿ ಶರ್ತಗಳನ್ನಾಧರಿಸಿ ಕೂಡಲೇ ಜೋಡಣೆಗೊಳ್ಳಿರಿ; ಇಂತಹ ಸಂದರ್ಭವು ನಿಮಗಿನ್ನೆಂದಿಗೂ ದೊರೆಕದು'- ಗವರ್ನರ್ ಜನರಲ್ ಹುದ್ದೆ ಬಿಡುವಾಗ ನಿಜಾಮರಿಗೆ ಕೊನೆಯ ಮೌಕಾಗಿ ವಿಂಟ್ ಬ್ಯಾಟನ್.

"ಶಾಂತ ರೀತಿಯಿಂದಲೇ ಒಸ್ಪಂದ ಸಾಧಿಸಬೇಕೆಂಬ ನಮ್ಮ ಧೋರಣೆಯನ್ನು ಮನ್ನಿಸುವ ವ್ಯವಹಾರಯೋಗ್ಯ ವರ್ತನೆಯನ್ನು ನಿಜಾಮರು ವಹಿಸಲು ತಿರಸ್ಕರಿಸುತ್ತಾರಾದರೆ ಜುನಾಗಡಿನ ನವಾಬರಿಗತಿಯೇ ಅವರಿಗೂ ಒದಗಲಿದೆ"-ಯಥಾಸ್ಥಿತಿ ಒಪ್ಪಂದವಾಗುವ ನೊದಲೇ ಸರ್ದಾರ್ ಪಟೇಲರು ಮಾತು.

"ನ್ಯಾಯವಾದ ಹಾದಿಗೆ ಬರಲೊಪ್ಪದೆ ಹೋದರೆ ಜುನಾಗಡಿನ ನವಾಬರ ಆದೃಷ್ಟವೇ ನಿಜಾಮರನ್ನು ಕಾಡಿದೆ, ಎಂಬ ನನ್ನ ಅಂದಿನ ಮಾತಿಗೆ ನಾನೀಗಲೂ ಕಟ್ಟು ಬಿದ್ದಿದ್ದೇನೆ. ಓಪರೇಶನ್ ಮಾಡತಕ್ಕ ಭಾಗವು ಸರಿಯಾಗಿ ಹದಕ್ಕೆ ಬಂದು ಕೊಳ್ಳಲೆಂದು-ಆದನ್ನು ಕಡಿಮೆ ಹಾನಿಯಿಂದ ಸಾಧ್ಯವಿದ್ದಷ್ಟು ಸುಲಭದಲ್ಲಿ ಕೆಲಸವಾಗುವಷ್ಟು ರಾಜಕೀಯ ಸ್ಥಿತಿಯು ಸಿದ್ಧವಾಗಲೆಂದು-ನಾವು ಕಾಯುತಿದ್ದೇವಲ್ಲದೆ ಅನ್ಯಥಾ ಇಲ್ಲ. ಪಂಡಿತನಾಗಿಯೂ ನಮ್ಮ ಕರ್ತವ್ಯವನ್ನು ನಾವು ಮಾಡಲಿದ್ದೇವೆಂಬ ಭರವಸೆಯಿಟ್ಟುಕೊಳ್ಳಿ" ಎಂಬ ತಿಂಗಳ ಮೊದಲು ಅನಾವಶ್ಯಕವಾಗಿ ಅಂದೆದ್ದೊಡನೆ ಸರ್ದಾರ್ ಪಟೇಲರಾಡಿದ ಮಾತು.

'ಭಾರತದೊಂದಿಗೆ ಸೇರಿ ಹೋಗುವ ಹೊರತು ಹೈದರಾಬಾದಿಗೆ ಬೇರೆ ಗತಿಯೇ ಇಲ್ಲ. ನಮ್ಮೊಳಗಿನ ಹೈದರಾಬಾದನ್ನು ಹಾದಿಗೆ ತರಲು ನಾವು ಕೈಕೊಳ್ಳುವ ಕಾರ್ಯವನ್ನು ಯುದ್ಧವೆಂದು ಕರೆಯುವದು ತಪ್ಪು; ಅದು ಕೇವಲ ಸೇನಾ ಕಾರ್ಯಾಚರಣೆ'-ಕಳದ ತಿಂಗಳಲ್ಲಿ ಪಂಡಿತನೆಹರು ಮಂದ್ರಾಸಿನಲ್ಲಿತ್ತ ಭಾಷಣದಲ್ಲಿ.

"ಧಿಲ್ಲಿಯ 'ಕೆಂಪು ಕೋಟೆಯ ಮೇಲೆ ನಿಜಾಮ್ ಧ್ವಜ ಹಾರಾಡುವಂತೆ-ಬಂಗಾಳಾ ಸಮುದ್ರದ ಅಲೆಗಳು ನಿಜಾಮರ ಪಾದ ತೊಳೆಯುವಂತೆ-ಮಾಡುವದೇ ನಮ್ಮ ಗುರಿ"- ಹೈದರಾಬಾದಿನ ರಝಾಕಾರ್ ರ್ಯಾಲಿಯೊಂದರಲ್ಲಿ ಕಾಸಿಮ್ ರಜ್ವಿಯಾಡಿದ್ದ ಮಾತು.

"ಸುಲಭದಲ್ಲಿ ಬೊಗಸೆಯೊಡ್ಡಿ 'ರಾಜಪ್ರಮುಖ'ರಾಗಿ ಪಾರ್ಪಟ್ಟ ರಾಜ ಮಹಾರಾಜರುಗಳಂತಲ್ಲ ನಮ್ಮ ನಿಜಾಮರೆಂಬುದನ್ನು ಭಾರತ ಸರಕಾರದ ನಾಯಕರು ಸ್ಪಷ್ಟವಾಗಿ ತಿಳಿದಿರಲಿ. ನಮ್ಮನ್ನು ಕಣಕುವ ಮನಸ್ಸು ಮಾಡಿದಾಗಲೇ ಅವರು ಕೆಟ್ಟರು"-ರಜ್ವಿ ಮತ್ತೊಂದು ಸಂದರ್ಭದಲ್ಲಿ.

"ಹೈದರಾಬಾದಿನ ಮೇಲೆ ಭಾರತ ಸರಕಾರ ಬಿದ್ದರೆ ಭಾರತದ ಆದ್ಯಂತವೂ ಕೊನೆಯ ಪಕ್ಷ ಐದು ವರುಷಗಳ ವರೆಗಾದರೂ ಭಯಂಕರ ಜಾತೀಯ ಗಲಭೆ ನಡೆದೀತು. ಹೈದರಾಬಾದಿಗಿಂತ ಭಾರತವು ಮೇಲ್ಮೈಯ್ಯಂದು ನಮಗೆ ಗೊತ್ತಿದ್ದರೂ ಶೇನರ ದಯೆಯಿಂದ ಕೊನೆಗೆ ನಾವು ಗೆಲ್ಲುವೆವೆಂದು ನಮಗೆ ವಿಶ್ವಾಸವಿದೆ'-ಹೈದರಾಬಾದಿನ ಪ್ರಧಾನಿ ಸ್ಥಾನದಿಂದ ಪೀಠ್ ಆಯಿಕ್ ಆಲಿ.

"ಸೆಕುಂದರಾಬಾದಿಗೆ ಸೇನೆ ಕಳಹಿಸುವ ಹಕ್ಕು ನಿಮಗಿಲ್ಲ. ಹಾಗೆ ಮಾಡಿದರೆ ಆದರ ದುಷ್ಪರಿಣಾಮಗಳಿಗೆ ನೀವೇ ತಲೆ ಕೊಡಬೇಕಾಗುವದು'- ಭಾರತ ಸರಕಾರ ಕ್ಕೆ ಹೈದರಾಬಾದಿನ ಉತ ರವಾಗಿ ಉಸ ಪ್ರಧಾನಿ ಸ್ಥಾನದಿಂದ ಸಿಂಗಳೆ ವೆಂಕಟ ರಾಮ ರೆಡ್ಡಿ.

"ಭಾರತದ ಪ್ರಧಾನ ಮುಸ್ಲಿಂ ಸಂಸ್ಥಾನವಾದ ಹೈದರಾಬಾದಿನ ಮೇಲೆ ಧಾಳಿ ನಡೆಸಿದರೆ ಇಡೀ ಮುಸ್ಲಿಂ ಜಗತ್ತೇ ಕೆರಳಿ ಬೀಳಲಿದೆಯಲ್ಲದೆ, ಕಳಚಿ ಬರುವದು ಜಾತೀಯ ಗಲಭೆಯು ಭಯಾನಾ ಮಾತ್ರವೆಂಬಂತಾಗುವ ಅತಿ ಭೀಕರ ಅನಾಹುತಗಳಾದಾವು"- ಭಾರತದ ಕಾರ್ಯಾ ನಿರ್ವಾಹಕ ಸಮಿತಿಯ ಜೊತೆಯಲ್ಲಿ ಪಂಡಿತ ನೆಹರುಗಳಿಗೆ ಸಾಕಷ್ಟಾನ್ ಪ್ರಧಾನಿ ಲಿಯಾಖತ್ ಆಲಿ ಖಾನರ ತಂತಿ.

"ಹೈದರಾಬಾದಿನಮೇಲೆ ಬಿದ್ದರೆ ಭಾರತವಿಡೀ ಅನರ್ಣನೀಯ ಆತಿ ಭಯಂಕರ ರಕ್ತ ಪಾತವಾದೀತು'-ಪಾಕಿಸ್ತಾನದ ವಿದೇಶ ಮಂತ್ರಿ ಸರ್ ಝಫರುಲ್ಲಾ.

"ಈ ಮೊದಲೇ ಹೀಗೆ ಮಾಡಲಾಗದು ದಕ್ಕಾಗಿ ನಾನು ವ್ಯಸನ ಪಡುತ್ತೇನೆ; ಇಂದಿನಿಗೊಂದಲ ನಿತು ಶಾಂತ ಸ್ಥಿತಿ ಮೂಡಿದ ಮೇಲೆ, ನನ್ನ ಜನತೆಯು ಸುಖ ಜೀವನಕ್ಕನುಕೂಲವಾಗುವ ಒಪ್ಪಂದವನ್ನು ಭಾರತ ಸರಕಾರದೊಡನೆ ಮಾಡಿಕೊಳ್ಳಲಿದ್ದೇನೆ"-ತಾ. 17ರಲ್ಲಿ ಹೊರಾಟ ನಿಲ್ಲಿಸಿ, ಭಾರತ ಸರಕಾರದ ಎಲ್ಲಾ ಸೂಚನೆಗಳನ್ನು ಶಿರಸಾವಹಿಸಿಕೊಳ್ಳುವಾಗ ನಿಜಾಮರು.

"ಯುದ್ಧಾನಂತರ ಸಂತೋಷಕರ. ಹೈದರಾಬಾದಿನಲ್ಲಿ ಸದ್ಯಕ್ಕೆ ನಮ್ಮ ಸೇನಾ ಶಿಬಿರಾವ ಸ್ಥಾಪಿಸಿ, ಹೈದರಾಬಾದ್ ಭವಿಷ್ಯ ರೂಪಿಸುವ ಜವಾಬ್ದಾರಿಯನ್ನು ಅಲ್ಲಿಯ ಜನಮತದಿಂದ ರಚಿಸಲ್ಪಡುವ ಘಟನಾ ಸಮಿತಿಗೆ ಬಿಡುತ್ತೇವೆ"-ತಾ. 18ರಲ್ಲಿ ರಾಷ್ಟ್ರಕ್ಕೆತ್ತ ವಿಜಯ ಸಂದೇಶದಲ್ಲಿ ಪಂಡಿತ ನೆಹರು.

ಹೈದರಾಬಾದ್ ವಿಜಯದ ಪಾರಮ್ಯವನ್ನು, ಅದರ ಅನುಭೋಗ ಹೇಗೆ, ಎಂಬ ಕುರಿತು ಪಂಡಿತ ನೆಹರುಗಳು; ತಾ 18ರಲ್ಲಿಕ್ಕ ಆಕಾಶವಾಣಿ ಸಂದೇಶವು ಹೈದರಾಬಾದ ನ್ನೊಳಗೊಂಡ ಅಖಿಲ ಭಾರತಕ್ಕಷ್ಟೇ ಅಲ್ಲ-ಪಾಕಿಸ್ತಾನ್ ಜನತೆಯ ಪಾಲಿಗೂ ಅಂಗೀಕಾರಾರ್ಹವಿದೆ.

"ನಮ್ಮ ಸಶಸ್ತ್ರ ಸೇನಾ ದಳಗಳ ಆಧಿಕಾರಿಗಳು ಮತ್ತು ಜನರು ಗೌರವ ನಿಯಮಗಳೆಲ್ಲವನ್ನೂ ನಿಷ್ಠೆಯಿಂದ ಪಾಲಿಸಿ, ಚಾತುರ್ಯ, ಕ್ಷಿಪ್ರಗತಿ ಮತ್ತು ಸಹನೆಯಿಂದ, ನಿಜವಾದ ಸಿಪಾಯಿಗಳಂತೆ ಈ ಕಾರ್ಯವನ್ನು ನಿರ್ವಹಿಸಿದ ಪ್ರಜೋಳ್ಳೆ ರೀತಿಗಾಗಿ ನಾವು ಪುಷ್ಕಳಾನಂದಪಡುತ್ತೇವೆ. ಕಳದ ಈ ಆರು ದಿನಗಳಲ್ಲಿ ನನ್ನನ್ನು ವಿಶೇಷಾನಂದಗೊಳಿಸಿದುದೆಂದರೆ, ನಮ್ಮ ಜನರು-ಮುಸ್ಲಿಮರು ಮತ್ತು ಮುಸ್ಲಿಮೇತರರು-ಸಹನೆ ಮತ್ತು ಶಿಸ್ತಿನ ಕರೆಗೆ ಓಗೊಟ್ಟು, ಒಕ್ಕಟ್ಟಿನ ಪರೀಕ್ಷೆ ಕೊಟ್ಟದ್ದು. ಈ ನುರಾರಾಷ್ಟ್ರದ ಆ ಮೂಲೆಯಿಂದೀ ಮೂಲೆಯ ವರೆಗೆ ಒಂದೇ ಒಂದು ಜಾತೀಯತಾ ಘಟನೆ ನಡೆದುದಿಲ್ಲವೆಂಬುದು ಗಣನೀಯವಾದ ಸಂಗತಿ; ಭಾರತದ ಭವಿಷ್ಯದ ಕುರಿತು ಇದೊಂದು ಪೂರ್ಣಾರೂಪದ ಶುಭಸೂಚನೆ. ಇದಕ್ಕಾಗಿ ನಾನು ಅತ್ಯಂತ ಕೃತಜ್ಞನಿಸಿದ್ದೇನೆ. ಈ ಪರೀಕ್ಷಾ ದಿನಗಳಲ್ಲಿ, ಶಾಂತರಾಗಿದ್ದು ನಮ್ಮ ಶಾಂತಿ ಸಾಧನೆಗೆ ನೆರವಾದ ಹೈದರಾಬಾದ್ ಜನತೆಗೂ ನನ್ನ ಅಭಿವಂದನೆಗಳು. ನಮಗೆ ಮುಖಾಮುಖಿಯಾಗಿದ್ದ ಅಪಾಯಗಳು ಮತ್ತು ಅನಾಹುತಗಳ ಕುರಿತೂ, ನಮ್ಮ ರಾಷ್ಟ್ರವನ್ನೇ ಅಡಿಮೇಲು ಮಾಡಿಬಿಡಬಹುದಾದ ಜಾತೀಯ ಗೊಂದಲದ ಕುರಿತೂ ಹಲವರು ನಮ್ಮನ್ನು ಬೆದರಿಸಿದ್ದರು. ಆದರೆ ನಮ್ಮ ಜನತೆ ಈ ಪ್ರವಾದಗಳನ್ನು ಹುಸಿಗೊಳಿಸಿದರು; ವಿಶ್ವಟ್ಟದರಿಸಿದಾಗ ತಾವು ಅಡಗ್ಗುವ ಧೈರ್ಯ, ಘನತೆ, ಮತ್ತು ಶಾಂತತೆಯಿಂದ ಇದಿರಿಸಬಲ್ಲೆ ನೆಂಬುದನ್ನು ಪ್ರದರ್ಶಿಸಿ ತೋರಿಸಿದರು." ಎನ್ನುತ್ತಾ ಪಂಡಿತ ನೆಹರುಗಳು, ನಮ್ಮಂತಹ ಮಹಾರಾಷ್ಟ್ರ ಮತ್ತು ಮಹಾಜನತೆಯು ಸಂಕಷ್ಟದಲ್ಲಿ ಹೇಗೋ ಸಂತೋಷದಲ್ಲೂ ಹಾಗೆಯೇ ತೂಕ ತಪ್ಪದಿರಬೇಕೆಂದು ಬುದ್ಧಿವಾದ ಹೇಳಿದರು. "ನಿನ್ನೆಯ ವರೆಗೂ ನಮ್ಮ ರಾಷ್ಟ್ರೀಯರಾಗಿದ್ದು, ಈಗಲೂಇಷ್ಟೇ ಸಮೀಪದವರಾಗಿರುವ ಪಾಕಿಸ್ತಾನ್ ಜನತೆಯನ್ನು ಈ ಮುಹೂರ್ತದಲ್ಲಿ ವಿನಂತಿಸಿಕೊಳ್ಳುತ್ತೇನೆ-ಅವರ್ತೆ ತಮ್ಮ ಭೂಮಿ ಮತ್ತು ಸಂದೇಹಗಳನ್ನು ಒತ್ತಟ್ಟಿಗೆ ಸರಿಯಿಸಿ,ನಮ್ಮ ಶಾಂತಿಕಾರ್ಯದಲ್ಲಿ ಸಹಹಕ್ಕಾಗಿಗಳಾಗಲಿ"ಎನ್ನುತ್ತಾ ಪಂಡಿತಜೀ "ತಾನು ದುಷ್ಕೃತ್ಯದನೆಗೆಳಗಾಗಿ ತಪ್ಪು ಮಾಡಿದೆನೆಂಬುದನ್ನು ತಿಳಿದು ಹಿಸ್ ಎಕ್ಸಾಲ್ಟೆಡ್ ಹೈನೆಸ್ ನಿಜಾಮರು, ಇಷ್ಟು ತಡವಾಗಿಯಾದರೂ ಆ ಹಾದಿಯಿಂದ ಹೆಜ್ಜೆ ಹಿಂದೆಗೆಯುವ ಜಾಣ್ಮೆ ಪ್ರದರ್ಶಿಸಿದುದಕ್ಕಾಗಿ ಅಭಿವಂದನಾರ್ಹರು" ಎಂದಿದ್ದಾರೆ. ಶಾಂತಿ ಸ್ಥಾಪನೆಯಾಗುವ ವರೆಗೆ ಸೇನಾಡಳಿತೆ-ಜೆನ್ಸ್ಲ್ಲೇ ಇತರ ವ್ಯವಸ್ಥೆ-ಕೊನೆಗೆ ಜನಮತದೀದಾರಿಸಲ್ಪಡುವ ಹೈದರಾಬಾದ್ ಘಟನಾ ಸಮಿತಿಯಿಂದಲೇ ಹೈದರಾಬಾದ್ ಭವಿಷ್ಯ ನಿರ್ಣಯ-ಎಂದು ಸ್ಪಷ್ಟವಾಗಿ ನೆಹರು ಸ್ಪಷ್ಟಪಡಿಸಿದ್ದಾರೆ.

ಹೈದರಾಬಾದ್ ಸೇನಾಡಳಿತೆ

ಸೇನಾಸಿ ರಾಜೇಂದ್ರ ಸಿಂಹಜೀ ಸೆಕಂದರಾಬಾದಿನಲ್ಲಿದ್ದು ಸಂಸ್ಥಾನದ ಆಡಳಿತ ವ್ಯವಸ್ಥೆಯ ಮೇಲ್ವಿಚಾರ ನೋಡಿ ಬಂದಿದ್ದಾರೆ. ನಿಜಾಮರೊಡನೆಯೂ, ಮುಸ್ಲಿಗ ಕೊಡನೆಯೂ ಅವರ ಭೇಟಿಯಾಗಿದೆಯಲ್ಲದೆ, ಸ್ವಾಮಿ ರಮಾನಂದ ತೀರ್ಥರಂತಹ ಕಾಂಗ್ರೆಸ್ ನಾಯಕರಿಗೆ "ಈಗ ಜನರಾರೂ ಪ್ರತೀಕಾರ ಭಾವನೆಯಿಂದ ಕಾನೂನು ಮುರಿಯದಂತೆ ಬೋಧಿಸುವುದು ನಮ್ಮ ಕರ್ತವ್ಯ" ಎಂದು ತಿಳಿಸಿದ್ದಾರೆ. ಪತ್ರಿಕಾ ಪ್ರತಿನಿಧಿಗಳಿಗೆ ಭೇಟಿಯಾಗಿ "ಹೈದರಾಬಾದ್ ಪುನರ್ವ್ಯವಸ್ಥೆಯ ಕ್ಷಿಪ್ರದಲ್ಲಾಗುವುದು. ಸಂಸ್ಥಾನೀ ಸೇನೆಯೆಲ್ಲವೂ ತರಬಾ ಒಂದಿದೆ ಗಡ್ಡವಲಯ ಮತ್ತು ಹೊಳೇಬದಿಗಳಲ್ಲಿ ರಯ್ಕಾರ್ ಗುಂಪುಗಳ ಚಟುವಟಿಕೆಗಳು ಕಾನೂನುಬಾಹಿರವೆಯಾದರೂ ಅವರು ಸದ್ಯದಲ್ಲೇ ಶಸ್ತ್ರಕ್ಕೆ ಕಟ್ಟಲಿದ್ದಾರೆ. ಪ್ರಥಮತಃ ನಾಲ್ವರ್ಗದಲ್ಲೂ ಆ ಮೇಲೆ ಇತರ ಕಡೆಗಳಲ್ಲೂ ನಮ್ಮನ್ನು ಕಡಿದಿಡಲು ರಯ್ಕಾರರು ಪ್ರಯತ್ನಿಸಿ ನಿಷ್ಫಲರಾದರು. ಅವರು ಶೋಲಾಪುರ, ಹೈದರಾಬಾದ್ ರಸ್ತೆಯಲ್ಲಿ ಸುಮಾರು 1200 ಮೈನ್‌ಗಳನ್ನು ಹಾಕಿಟ್ಟಿದ್ದರು. ಒಟ್ಟು ಸುಮಾರು 1500 ರಯ್ಕಾರರು ನಮ್ಮ 1000 ಮಂದಿ ಸೆನೆಸಿಕ್ಕಿದ್ದಾರೆ ರಯ್ಕಾರರೇನೂ ಕ್ರಮಬದ್ಧ ಸೈನಿಕರಲ್ಲವಾದ್ದರಿಂದ ಅವರನ್ನು ಸಾಮಾನ್ಯ ಕೈದಿಗಳಂತೆ ಹೊರತು ಯುದ್ಧ ಕೈದಿಗಳಂತೆ ನೋಡುವದಿಲ್ಲ. ನಿಜಾಮರ ಸ್ಥಾನ ನಿರ್ಣಯವು ಮೇಲ್ದರ್ಜೆಯ ರಾಜಕಾರಣದ ವಿಷಯವಿದ್ದು ಸೇನೆಗೆ ಸಂಬಧಿಸಿದುದಲ್ಲ. ಅವರೊಬ್ಬ ರಾಜ; ರಾಜ ಯೋಗ್ಯ ಗೌರವವನ್ನು ನಾವವರಿಗೆ ಕೊಡಲೇ ಬೇಕು" ಎಂದು ರಾಜೇಂದ್ರ ಸಿಂಹಜೀ ಹೇಳಿದ್ದಾರೆ. ಹೈದರಾಬಾದಿನ ಸೇನಾ ಗವರ್ನರ್ ಮೇ. ಜ. ಚೌಧರಿಯವರಿಗೆ ಎಲ್ಲಿಯ ವ್ಯವಸ್ಥೆಯ ಪೂರ್ಣಾಧಿಕಾರವಿದ್ದು, ಅ ಕೆಲಸ ರಭಸದಿಂದ ನಡೆದಿದೆ. ನಿಜಾವ್ ಭವಿಷ್ಯ ನಿರ್ಣಯಕ್ಕಾಗಿ ನೆಹರು, ಪಟೇಲ್, ಮುನ್ಸಿ, ರಾಜೇಂದ್ರ ಸಿಂಹಜೀಯರ ಸಮ್ಮೇಳನವೊಂದು ಇದೇ ತಾ 23ರಲ್ಲಿ ದಿಲ್ಲಿಯಲ್ಲಿ ನಡೆಯಲಿದೆ.

ಕಾಸಿಮ್‌ರ ರಜ್ಜ

ತಾ. 13ರವರೆಗೂ ಜೀವಂತೆ ಬೋಂಬೆಂದು ಭಾವಿಸಲ್ಪಟ್ಟಿದ್ದು, ಈಗ ಪಟಾಕಿಯೆಂದು ಸಿದ್ಧನಾಗಿರುವ ಸೈಯದ್ ಕಾಸಿಮ್ ರಜ್ವಿ-ಇನ್ನೆಲ್ಲಾ ಅನಾಹುತಗಳ ಮೂಲ ಪುರುಷ-ರಯ್ಕಾರ್ ನಾಯಕತ. 1946ರಲ್ಲಿ ತನ್ನ ಸಂಸ್ಥೆಯ ಮುಖ್ಯ ಕಚೇರಿ ಡಾರ್-ಉಸ್-ಸಲಾಮಿನಲ್ಲಿ ಜಾರಿಗೆ ಬಂದಿದ್ದ ಆಜ್ಞಾನುಸಾರವಾಗಿ ಹೈದರಾಬಾದ್ ಸೈನಿಕರಿಂದ ದಸ್ತಗಿರಿ ಮಾಡಲ್ಪಟ್ಟು ಹಿಂದೀ ಸೇನಾಧಿಕಾರಿಗಳಿಗೊಪ್ಪಿಸಲ್ಪಟ್ಟವನೆ. ಅವನ ಮಗ ಕಳದ ವಾರವೆ ಹೋರಂಟದಲ್ಲಿ ಮಾಡಿದಿದ್ದಾನೆಂದೂ, ಹೆಂಡತಿ ಮತ್ತು ಇತರ ಕುಟುಂಬಿಕರ ಕಾರ್ಯಕ್ಷೇತ್ರದಲ್ಲಿರುವ ಸಾರ್ವಜನಿಕ ಮುಂದಿರುವ ಹೊಟೆಲುಗಳಿಗೆ ಸರಬಜನ ಪ್ರವೇಶ ನಿಗುವಂತೆ ಪ್ರಯತ್ನಿಸಬೇಕೆನ್ನುವ, ಬಂದೂಕುಸ್ಟಾಂ ಪಕ್ಕೆನ ಪ್ರಚಾರ, ಸೂಲುವ ಸಭ್ಯತೆಗಳಿಗೆ ಕೇರ ಸದರ್ಶನೆ ಮೊದಲಾದ ವಿಧಾಯಕ ಕಾರ್ಯಕ್ರಮ ಕೈಗೊಳ್ಳಬೇಕೆನ್ನುವ, ಸಾಲ ನಿವಾರಣ ಮಸೂದೆಯ ಅನುಸಾರ ಸಾಲದ ರಯಾಯಿತಿಯು ನಮ್ಮ ಜಿಲ್ಲೆಗೂ ಲಗುವಾಗಬೇಕೆನ್ನುವ, ಕೋಲ್ ಸ್ಕೋರೇಜ್ ಪ್ಲೇಟಿನ್ನು ಸಂಗಡಿಸಿದ ಬೆಲೆಗೆ ಸಿಲ್ಕಿ ಯಲ್ಲಿ ಸ್ಥಾಪಿಸಬೇಕೆನ್ನುವ, ಭೂಸಾರಾ ಸಾಧ್ಯತ್ಪರಿಚಿತಿಯ ಪ್ರಕ್ಷೆಯನ್ನು ಸದ್ಯ ಮುಂದುವರಿಸಬೇಕೆನ್ನುವ, ಸರಕಾರಿಯ ಸಾರ್ವಜನಿಕ ಹಿತ ಸಂಬಂಧಿತ ಸಂಸ್ಥೆ ಮತ್ತು ಯೋಜನೆಗಳನ್ನು ತಯಾರಿಸುವಾಗ ಜಿಲ್ಲಾ ಕಾರ್ಯ ಅಭಿಮತ ಕೇಳಬೇಕೆನ್ನುವ ನಿರ್ಧಾರಗಳಾಗಬೇಕು.

ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯಕಾರಿ ಮಂಡಲಿಯ

ಸಭೆ—ಯು ತಾ 19-9 48ರಲ್ಲಿ ಶ್ರೀ ಪಿ. ಕೃಷ್ಣನಾರಾಯಣ ಸಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ಸರ್ಕಾರ್ ಕಾಂಗ್ರೆಸ್ ಕಮಿಟಿಯ ಆಧಿಕಾರಿಗಳ ಚುನಾವಣೆ ನಡೆಯದ್ದಲ್ಲಿ ಕೂಡಲೇ ನಡೆಸಬೇಕೆನ್ನುವ, ಸಭೆಗೆ ಬಾರದ ಕಮಿಟಿ ಸದಸ್ಯರ ಬದಲಿಗೆ ಬೇರೆ ಸದಸ್ಯರನ್ನು ನೇಮಿಸಬೇಕೆನ್ನುವ, ಈಗಿನ ಅನುಕೂಲದ ಪ್ರಜಾ ಕೇಂದ್ರ ಕಮಿಟಿಯ ಬದಲಿಗೆ ಬೇರೆ ಕೇಂದ್ರವನ್ನು ಆರಿಸಬಯಸಬೇಕೆನ್ನುವ, ಗಾಂಧೀ ಜಯಂತಿ ಸಂದರ್ಭದಲ್ಲಿ (ತಾ 25 9-48)ರಿಂದ 9 10.48ರ ತನಕ) ಗಾಂಧೀ ದಾಸ್ಯೋಯಸ್ಯಾರಕ ನಿಧಿಗೆ ಹಣ ಸಂಗ್ರಹಿಸಬೇಕೆನ್ನುವ, ಎಲ್ಲಾ ಕೇಂದ್ರ ಕಮಿಟಿಗಳು ಅವರವರ ಕಾರ್ಯಕ್ಷೇತ್ರದಲ್ಲಿರುವ ಸಾರ್ವಜನಿಕ ಮುಂದಿರುವ ಹೊಟೆಲುಗಳಿಗೆ ಸರಬಜನ ಪ್ರವೇಶ ನಿಗುವಂತೆ ಪ್ರಯತ್ನಿಸಬೇಕೆನ್ನುವ, ಬಂದೂಕುಸ್ಟಾಂ ಪಕ್ಕೆನ ಪ್ರಚಾರ, ಸೂಲುವ ಸಭ್ಯತೆಗಳಿಗೆ ಕೇರ ಸದರ್ಶನೆ ಮೊದಲಾದ ವಿಧಾಯಕ ಕಾರ್ಯಕ್ರಮ ಕೈಗೊಳ್ಳಬೇಕೆನ್ನುವ, ಸಾಲ ನಿವಾರಣ ಮಸೂದೆಯ ಅನುಸಾರ ಸಾಲದ ರಯಾಯಿತಿಯು ನಮ್ಮ ಜಿಲ್ಲೆಗೂ ಲಗುವಾಗಬೇಕೆನ್ನುವ, ಕೋಲ್ ಸ್ಕೋರೇಜ್ ಪ್ಲೇಟಿನ್ನು ಸಂಗಡಿಸಿದ ಬೆಲೆಗೆ ಸಿಲ್ಕಿ ಯಲ್ಲಿ ಸ್ಥಾಪಿಸಬೇಕೆನ್ನುವ, ಭೂಸಾರಾ ಸಾಧ್ಯತ್ಪರಿಚಿತಿಯ ಪ್ರಕ್ಷೆಯನ್ನು ಸದ್ಯ ಮುಂದುವರಿಸಬೇಕೆನ್ನುವ, ಸರಕಾರಿಯ ಸಾರ್ವಜನಿಕ ಹಿತ ಸಂಬಂಧಿತ ಸಂಸ್ಥೆ ಮತ್ತು ಯೋಜನೆಗಳನ್ನು ತಯಾರಿಸುವಾಗ ಜಿಲ್ಲಾ ಕಾರ್ಯ ಅಭಿಮತ ಕೇಳಬೇಕೆನ್ನುವ ನಿರ್ಧಾರಗಳಾಗಬೇಕು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ತಾರೀಕು 21-9-48ರಿಂದ

ನಡಿಯುವ ಚಿತ್ರ

ಸಾರಥಿಯವರ "ಪತ್ನಿ" (ತೆಲುಗು)

ಜೈಮಿನಿ, ಯುಪ್ಪೇಂದ್ರವಾಣಿ,

ಮಂದಿನ ಚಿತ್ರ : ಫಾಮಸ್ಸಿನವರ ಅಪ್ಪಟಿಯ ಕಲಾಕೃತಿ.

"ಮೇರಾ ಸೊಹಾಗ್"

ಅರುಣಾ, ಕಮಲಾ ಕೊಟ್ನೀಸ್, ಸುಲೋಚನಾ ಚಟರ್ಜಿ,

ESTD 1926

CROWN RUBBER STAMP Co.

HEAD OF RUBBER STAMPS ENGRAVERS

BALMATTA ROAD : MANGALORE S.K.

Approved firm by the Govt. of Mysore Certified by the Agent of the Govt. of Ceylone & India.

ಉಡ್ಪಿ ಡಿ ಮು. ಕೋರ್ಟಿನಲ್ಲಿ

O P No 32, 1948

ಕಮಲ ಶೆಟ್ಟಿ ಅರ್ಜಿದಾರಳು

ಮತ್ತು

1 ಸಂಕ್ರಿ ಶೆಟ್ಟಿ, ಮುತ್ತಕ್ಕ ಶೆಟ್ತಿ ಸುಗಳು, 2 ಮುತ್ತಕ್ಕ ಶೆಟ್ತಿ, 3 ದುಮ್ಮ ಶೆಟ್ಟಿ, 4 ಜಲಜ ಶೆಟ್ತಿ, ರಾಮು ಶೆಟ್ಟಿ ಮಕ್ಕಳು, 5 ಗಂಗಮನೆ ಶೆಟ್ತಿ,-ಕಮಲ ಶೆಟ್ತಿ ಮಗಳು, 6 ಕೃಷ್ಣ ಶೆಟ್ತಿ, ಮುಹಾಬಲ ಶೆಟ್ಟಿ ವಿಧವೆ ಎದ್ರಿರು

1ನೇ ಯಿದ್ರಿಳು ಶಿವಳ್ಳಿಗ್ರಾಮದ ಬುಡ್ಕರಲ್ಲಿಯೂ, 2ರಿಂದ 4ನೇ ದರೆಗಿನ ಯಿದ್ರಿರು ಕಾರ್ಕಳ ತಾಲ್ಲು ಕೆರೆಬೆಟ್ಟು ಗ್ರಾಮದಲ್ಲಿಯೂ, 5ನೇ ಯಿದ್ರಿಳು ಪೆರ್ಡೂರು ಗ್ರಾಮ-ಅಜ್ಜಾಡಿಯಲ್ಲಿಯೂ, 6ನೇ ಎದ್ರಿರು ಕಾರ್ಕಳ ತಾಲ್ಲು ನಿಂಜೂರು ಗ್ರಾಮದಲ್ಲಿಯೂ ಯಿರುತ್ತಾರೆ:

ಅರ್ಜಿದಾರಳ ಅಣ್ಣ ಹಾಲ್ ವ್ಯವಹಾರಿ ಮಹಾಬಲ ಶೆಟ್ಟಿಗೆ The Asiatic Government Security Life & General Assurance Co. Ltd. ನವರ್ದ್ದೂ ಮತ್ತು ಪೆರ್ಡೂರು ಕೋ-ಆಪರೇಟಿವ್ ಕ್ರೆಡಿಟ್ ಸೊಸ್ಯಾಟಿ, ಪ ಪೆರ್ಡೂರು ಕೋ-ಆಪರೇಟಿವ್ ಸ್ಟೋರಿನಿಂದ ಸಹಾ ಬರತಕ್ಕ ಹಣಗಳ ವ್ಯಸಿ ವಗ್ಗೆರೆಬಗ್ಗೆ ಪಾಲಿ ಸರ್ಟಿಫಿಕೇಟು ಕೊಡಹೇಳಿ ಅರ್ಜಿದಾರಳು ವಾಕಲ್ಕಾನಾದ ಮೇಲ್ಕಂಡ ಅರ್ಜಿಯು ತಾ 29-9 48ಕ್ಕೆ ತಪ್ಪಿಗೆ ಯಿಟ್ಟಿನೆ. ಆ ಕುರಿತು ಆಸ್ಪೇಸಬೆಳ್ಳವರು ಸದ್ರಿ ದಿವ್ಸ 11 ಗಂಟೆಗೆ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಬ್ತೀರುನಾಡಿಕೊಳ್ಳತಕ್ಕದ್ದು.

B S. Hegde

ಅರ್ಜಿದಾರಳ ಕಡೆ ವಕೀಲ್

ತಾ 20-9-48

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R I A 1066/1948

ಕ್ರಮನಂಬ್ರ 193/1948

ನಾನಿ ಕೊರಗಪ್ಪ ಯಾನೆ ವೆಂಕಪ್ಪ ಸೈ. ಕುಲಾಲಾಂಣ ಬ್ಯಗಳ ಆಳಿಯ. ಬೆಳ್ಳಿಪಾಡಿ ಕುಟುಂಬದ ಯಜಮಾನನ ಆಡಳ್ತೆದಾರ ಹುತ್ತುರು ತಾಲೊಕು, ಬೆಳ್ಳಿಪಾಡಿ ಗ್ರಾಮ.

ಪ್ರತಿವಾದಿರು 1 ರಾಮ ಶೆಟ್ಟಿ, ಪೂವಪ್ಪ ನ್ಯಾಕನ ಆಳಿಯ ವ ಕೂಡಾ ಶೆಟ್ಟಿ ಮಗ, 2 ದಾಸಪ್ಪ ಶೆಟ್ಟಿ, 1ನೆ ಪ್ರತಿವಾದಿಯ ತಮ್ಮ 3 ಕೊರಗ ಶೆಟ್ಟಿ, 1 2ನೆ ಪ್ರತಿವಾದಿರ ತಂದೆ ಯೆಲ್ಲರೂ ಸುತ್ತೂರು ತಾಲೊಕು ನೆಕ್ಕಿಲಾಡಿ ಗ್ರಾಮದ ದರ್ಬೆ ಎಂಬಲ್ಲಿವರ್ಸನರು.

ಸದ್ರಿ ವ್ಯಾಜ್ಯದ 1 ನ 3ನೆ ಪ್ರತಿವಾದಿರಿಗೆ. ಗೇಣಿಬಾಕಿ ಸಮೇತ ಜಾಲಗೇಣಿ ಹಿಡುವಳಿಯ ಸ್ವಾಧೀನತೆಗೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಮೇಲಿನ ವ್ಯಾಜ್ಯವು ಯಿದೇ ಬರುವ ತಾ 1-10 1948ಕ್ಕೆ ಯೂ ಕೋರ್ಟಿನಲ್ಲಿ ಸಿವಾದಾಜ್ಞೆಗಳು ನಿರ್ಧರಿಸುವದಕ್ಕೆ ಯಿಟ್ಟಿರುತ್ತದೆ. ಸದ್ರಿ ದಾವೆಯಲ್ಲಿ ವಂದನೇ ವ ಮೊನೇ ಪ್ರತಿವಾದಿರು ಎದುರಾಡಬಹುದಿದ್ದ ರೆ ಸದ್ರಿ ವ್ಯಾಡೆಯ ದಿವ್ಸ ಹಗ್ಗಲ ಘಂಟೆ 10 ಕ್ಕೆ ಯೂ ಕೋರ್ಟುಮುಂದೆ ಖುದ್ದು ಯಾ ವಕೀಲರ ಮುಖಾಂತ್ರ ಹಾಜರಾಗಿ ಉಡಪಡಿ ಸತಕ್ಕದ್ದು. ತಪ್ಪಿದ್ದಲ್ಲಿ ಯೇಕಪಕ್ಷ ವಿಚಾರ ಣೆಯಿಂದ ಸದ್ರಿ ದಾವೆಯು ತೀರ್ಮಾನಿಸಲ್ಪ ಡುವದು, ಯೆಂತ ಯೂ ಮೂಲ್ಯ ತಿಳಿಸಿದೆ.

By order of Court

H. Sanjeeva Shetty

Advocate for Plaintiff-

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O S 245/1948

ನಾರಾಯಣ ಕೂಡಾ ನಾವಿರು.

ಕುಂಞಾಂಬು ನಾಯರ್ ಸಹಾ.ಪ್ರತಿವಾದಿರು.

2ನೇ ಪ್ರತಿವಾದಿ- ಚಂದನನಾಯರ್, ಚಿರಿಯಮನ ನುಗ್ಗವ ಕೋಪೊತ್ತು ಕಂಡನ್ನಿಯರ ಆಳಿಯ,ಕಾಸರಗೋಡು ತಾಲ್ಲು ಕೂಳ್ತೂರು ಗ್ರಾಮ ಚಿರಿಕ್ಕಳ್ ಎಂಬಲ್ಲಿ.

ಇವರಿಗೆ-

ನುಂಕ್ಕಡ ಪದ್ಮನಾಭಯ್ಯ ನಂಮ ವಗೈ ನೆಯಿಂದೆ ಬರಕೊಟ್ಟೆ ಅರ್ಜಿದಾರ ಪಾಂಗಿತ್ತಿಸಿ ನಿವ 1ನೇ ಪ್ರತಿವಾದಿ ಕಡ್ಡಿ ಕೋರ್ಟು ಸೇ ಲೆ ರದ್ದಿನಂದ ಕೂಡಾ, ದಾವಾ ಅನ್ಯಯಲ್ಲಿ 2/3ನೇ ಆರೊಪ ಹಿರ ವಿಂಗಡ್ಡಿಕೊಡಿಸಬೇ ಕೆಂತ ಸದ್ರಿ ನಾವಿರು ಮೇಲ್ಕಂಡ ದಾವಾ ಮಾಡಿರುತ್ತಾರೆ ಸದ್ರಿ ನಾವೆಯು ನಂಮ ಹಾಜ್ರಾತ ಬಗ್ಗೆ ತಾ 7-10-1948ಕ್ಕೆ ವ್ಯಾಜ್ಯ ಯಾಗಿರುವುದರಿಂದ, ನಿಮಗೇನಾದರೂ ಆ ದಾಪರಿಸುನ ಆಗತ್ಯವಿದ್ದರೆ ಆ ದಿವ್ಸ ಬೆಳಿಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾ ಜ್ರಾಗಿ ಉದಾಹರಿಸಿಕೊಳ್ಳತಕ್ಕದ್ದೆಂತಲೂ, ತಪ್ಪಿದಲ್ಲಿ ನಿಮ್ಮನ್ನು ನಿವ್ಯಾಮಾಡಿ, ತೀರ್ಮಾನ ನಿಸಬಾಗುವುದೆಂತಲೂ ಕೋರ್ಟು ದ್ವಾರ ಸ್ರ ಕಾರ ನಿಮಗೆ ಈ ಮೂಲ್ಯ ತಿಳಿಸೋಣಾಗುತ್ತದೆ

N. V. Kolathaya.

Vakil for Plff-

Puttur, 17-9-1948

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ—ಶಾಲೆಗಳಿಗೆ—

ಬೇಕಾಗುವ ರಿಜಿಸ್ಟ್ರಿಗಳು, ರಸೀದಿ ಪುಸ್ತಕಗಳು, ಫಾರ್ಮುಗಳೂ, ಎ ಕೌಂಟ್ ಪುಸ್ತಕ, ಕುರಿಫಂಡು ಪು ಸ್ತಕಗಳೂ ದೊರೆಯುತ್ತವೆ.

ನವಯುಗಪ್ರೆಸ್, ಉಡುಪಿ.

ಉಡುಪಿ

ಆರ್. ಎಸ್. ಎಸ್. ಕೂಟದವರ ಚಟುವಟಿಕೆಗಳು ಈಗಲೂ ಆಟ ಕೂಟ ದ ನೆವದಿಂದ, ಎಂಜನ ರೂಪದಿಂದ ಆರ್. ಎಸ್. ಎಸ್. ಕೂಟದವರು ಒಂದಾಗಿ ಗುಪ್ತ ಚಟುವಟಿಕೆಗಳನ್ನು ನಡೆಸುತ್ತಿರುವರೆಂದು ತಿಳಿದುಬರುತ್ತದೆ. ಹೀಗೆಯೇ ಇತರ ಕಡೆಗಳ ಲ್ಲಿಯೂ ನಡೆಯುತ್ತಿರುವುದಾಗಿ ಸುದ್ದಿಗಳು ಬರುತ್ತಿವೆ.

ಹವಾಮಾನ ಈಚೆಗೆ ದಿವಸಗಟ್ಟಲೆ ಬಿಡದೆ ಮಳೆ ಬರುತ್ತಲೇ ಇದೆ ಹೈರು ಕಟಾವು ನೇಲೆಯಲ್ಲಿ ಮಳೆ ಬರುವುದರಿಂದ ಬಡ ರೈತರು ಕಂಗೆಟ್ಟಿದ್ದಾರೆ.

ಕೆದಿಯೂರು ಎಲ್ಲಿಯ ಬಾಪೂಜಿ ರೋ ವರ್ಸ್ ಪಳಪದವರು ತಾ 15ನ್ನು ಪೊಡರ್ಸ್ ಹಾಯರ್ ಎಲಿಮೆಂಟರಿ ಶಾಲೆಯನ್ನು ಸಂದ ರ್ಶಿಸಿ ಆತ್ಯೋತ್ಸಾಹ ದಳ್ಳೊಂದನ್ನು ಸ್ಥಾಪಿಸಿದರು. ಶ್ರೀಗಳಾದ ಕೆ. ಅನಂತ ಶೆಟ್ಟಿ, ಎ ಲಕ್ಷ್ಮೀನಾರಾಯಣಯ್ಯ ಮುಂತಾದ ಬಾಲವೀರ ದಳಗಳ ಗೊತ್ತು ಗುರಿಗಳನ್ನು ಎತ್ತಿ ಭಾಷ ಣವಿತ್ತರು. ಹೊಸತಾಗಿ ಸ್ಥಾಪಿಸಲ್ಪಟ್ಟ ದಳ ಕ್ಕೆ ಶ್ರೀ ಎಮ್ಮೆ ಯೋಗೀಂದ್ರನವರು ಅ ಧ್ಯಾಪಕರಾಗಿ ಸೇವಿಸಲ್ಪಟ್ಟಿರುವರು.

ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿಯ ಕಡೆಯಿಂದ ಶ್ರೀಗಳಾದ ಪಿ. ಉಪೇಂದ್ರ ನಾಯಕ್, ಬಾ ಸುಂದರರಾಮ ಶೆ ಮತ್ತು ಕೆ. ನರಹರಿ ಕಾಮತರು ತಾ. 15ರಲ್ಲು ಶಿರ್ವಕ್ಕೆ ಹೋಗಿ ಅಲ್ಲಿಯ ಪಂಚಾ ಯತ ಬೋರ್ಡು ಆಫೀಸು ವರಾಂಡದಲ್ಲಿ ಸಾ ರ್ವಜನಿಕ ಸಭೆಯನ್ನು ಜರಗಿಸಿದರು. ರಿ ಫಾ ಸಿ, ಗಾಂಧಿ ಸ್ಮಾರಕ ನಿಧಿಗೆ ಕೊಡಬೇಕಾಗಿ ಶ್ರೀ ನಾಯ್ಕರೂ, ಡಾ॥ ಪೈಗಳವರೂ ಭಾಷಣವಿ ತ್ತರು

ಕರ್ನಾಟಕ ಸಂಘ, ಉಡುಪಿ:— ಮುಂಬರುವ ದಸರಾ ಸಾಹಿತ್ಯೋತ್ಸವಕ್ಕೆ ಪೂರ್ವಭಾವಿಯಾಗಿ ಬರುವ ಒಕ್ಟೋಬರ ತಿಂಗಳ ತಾ. 4, 5 ಮತ್ತು 6ರಂದು ಪ್ರತಿದಿ ನ ಪೂರ್ವಾಹ್ನ 10 ಘಂಟೆಯಿಂದ ಅನುಕ್ರ ಮವಾಗಿ ಕವಿತಾವಾಚನ, ಲೇಖನ ಮತ್ತು ದಾ ಸರ ಪದಗಳು ಈ ವಿಷಯಗಳಲ್ಲಿ ಸ್ಪರ್ಧೆಗ ಳು ಜರಗುವವು. ಹ್ಯಾಸ್ಕೂಲು ಹಾಯರ್ ಎ ಲಿಮೆಂಟರಿ ಮತ್ತು ಸಂಸ್ಕೃತ ಪ್ರವೇಶಿಕಾ ತ ರಗತಿಗಳ ವಿದ್ಯಾರ್ಥಿಗಳು ಭಾಗವಹಿಸಬಹು ದು. ಹೀಗೆ ಭಾಗ ವಹಿಸಲಿಚ್ಚಿಸುವವರು ಅ ಕ್ಟೋಬರ ತಾ ಒಂದರೊಳಗೆ ಸಂಘದ ಕಾ ರ್ಯದರ್ಶಿಗಳಿಗೆ ಮುಟ್ಟುವಂತೆ ಅರ್ಜಿಪ್ರ ಪತ್ರಗಳನ್ನು ಕಳುಹಿಸತಕ್ಕದ್ದು

ನೋಟೀಸು

ಕುಂದಾಪುರ ಡಿ ಮು. ಕೋರ್ಟಿನಲ್ಲಿ.

S. C. 459/48

B. ವೆಂಕಟ್ರಮಣ ಕಾರಂತ ವಾದಿ

1 ತಿಮಪ್ಪ ಹೆಗಡೆ, ಅಂಪಾರು ಹಟೇಲ ಚಿಂನ್ಯಯ ರಟ್ರ ಆಳಿಯ ಅಂಪಾರುಗ್ರಾಮ.

2 ತಿಮಪ್ಪ ಶೆಟ್ಟಿ, ನಾರ್ಕಳ್ಳು ಹೆಬ್ಬಾಗಿಲು ಮನೆ ಸಂಬ್ಬಂಗ ಶೆಟ್ಟಿ ಆಳಿಯ, ಕಾವರಾಡಿ ಗ್ರಾಮದ-

ಪ್ರತಿವಾದಿರಿಗೆ ಕೊಡುವ ನೋಟ್ಸು:-

ಕುಂದಾಪುರ ಕ್ರಬಾ ಖಾ. ನಂ- 207ನೇ ಮನೆಯ ಬಾಬ್ತು ಬಾಡಿಗೆ ಅಲ್ಲಂ ವ ಬಡ್ಡಿ ಕೂಡಾ ರೂ 157.5.6ನ್ನೂ ಬದಮಾಡಿಕೊ ಳ್ಳುವ ಬಗ್ಗೆ ದಾಖಲ್ಲು ಮಾಡಿದ ಮೇಲಿನ ದಾ ವೆಯನ್ನು ತಾ 29 9-48ಕ್ಕೆ ಈ ಕೋರ್ಟಿನ ಲ್ಲಿ ಹಗ್ಗಲು 11 ಗಂಟೆಗೆ ತನಗೆ ಯಿದುವಈಗಾ ಗಿಯದೆ

A. V. N. Hebbar

Pleader for Plff

Kundapur 20 9-48

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O S 217 48.

ಯುನ್ಯಾಲಿ ಬ್ಯಾಂಕಿ —ವಾದಿ.

ಯಿದ್ದಿತುಂಗು ಬ್ಯಾಂಕಿ —ಪ್ರತಿವಾದಿ.

ಸದ್ರಿ ಯಿದ್ದಿತುಂಗು ಬ್ಯಾಂಕಿ ಹುಸ್ಸೆನ್ ಬ್ಯಾಂಕಿಗಳ! ಮಗ, ಮಂಗ್ಳೂರು ತಾಲ್ಲು ಮಂ ನ್ನೂರು ಗ್ರಾಮದ ನಂವಾಸರ. ಯಿವರಿಗೆ ಈ ಕೂಲಿಕ ತಿಳಿಯಪಡಿಸುವುದೇನಂದರೆ:-

ನಾದಿಯ ಬಾಬ್ತು ಅಂಗಡಿ ಕಟ್ಟಡವನ್ನು ಕಳದ 1945ನೇ ಯ್ವಿ ಸಪ್ಟಂಬ್ರ 30ಗಳ ಲಾಗಾತ್ತು ಬಾಡಿಗೆಗೆ ಅನುಜನ್ಸಿದ ಬಾಬ್ತು ಬಾಡಿಗೆ ಬಾಕಿ ರುಪ್ಯಾ 168-0-0ಕ್ಕೆ ಈ ದಾ ವೆ ಮಾಡಿದ್ದಾಗಿರುತ್ತದೆ ಸದ್ರಿ ದಾವೆಯು ತ ನ್ಸಿ ಬಗ್ಗೆ ತಾರೀಕು 7-10-48ಕ್ಕೆ ಯಿಟ್ಟಿರು ತ್ತದೆ, ಆ ದಿವಸ ನೀವು ಸ್ವತಹಾವಾಗಿಯಾಗ ಲೀ ಯಾ ವಕೀಲರ ಮುಖೇಂತರವಾಗಿಯಾ ಗಲೀ ಕೋರ್ಟು ಮುಂದೆ ಹಾಜ್ರಾಗದಿದ್ದಲ್ಲಿ ನಮ್ಮ ಗೈರುಹಾಜರಿಯಲ್ಲಿ ನಂಬ್ರುವು ವಿಳ ಪಕ್ಷವಾಗಿ ತೀರ್ಮಾನಿಸಲಾಗುತ್ತದೆ.

(Sd) **B. Chidananda Raui.**

Vakil for Plaintiff.

ಪುತ್ತೂರು ತಾ 15-9-48.

The Vijaya Bank Limited, Udipi.

ದಿ ವಿಜಯಾ ಬೇಂಕ್ ಲಿಮಿಟೆಡ್, ಉಡುಪಿ.

ನೋಟೀಸು

ಈ ಕೆಳಗ ಹೆಸರು ಕಾಣಿಸಿದವರು ಈ ಬೇಂಕಿನಿಂದ ಚಿನ್ನಾಭರಣಗಳ ಅಡವಿನ ಮೇಲೆ ಪಡ ಕೊಂಡ ಸಾಲವನ್ನು ನೋಟೀಸು ಕೊಟ್ಟಾಗ್ಯೂ ನಾವು ಪಾವತಿ ಮಾಡದೆ ಬಾಕಿ ಮಾಡಿ ಕೊಂಡಿರುವುದರಿಂದ ಈ ಮೂಲಕ ಬಾಪೀರು ಮಾಡಿಕೊಳ್ಳುವುದೇನೆಂದರೆ, ಸದ್ರಿ ನಗ ಗಳನ್ನು ತಾ 25-9-48ನೇ ರವಿವಾರ ಅಪರಾಹ್ನ ಘಂಟೆ 3ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುತ್ತದೆ. ಏಲಂ ಆದೇ ದಿವಸ ಸಂಪೂರ್ಣವಾ ಗದಿದ್ದರೆ ಬೇಂಕಿಗೆ ಯುಕ್ತ ಕಂಡ ದಿನಕ್ಕೆ ಮುಂದುವರಿಸಲಾಗುತ್ತದೆ. ತಿಳಿದಿರುಪುದು.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ನೊಬಲಗು
110/46 7	ಸಪ್ಪು ಪೂಪಾರಿ ದುಗ್ಗಣ ಪೂಜಾರಿ ಮಗ, ಕ ರೇಕಾಡು ಗ್ರಾಮ ಬೋಸ್ಟ್ ಕಡೇಕಾರು.	ರೂ 80 0 0
169/46.7	ಎಸ್ ಸೀತಾರಾಮ ಕಾಮತ್, C/o ಬಾ ಪಿ ಆರ್. ನಾಯಕ್, ಉಡುಪಿ.	ರೂ. 400 0 0
189 46 7	ತುಕ್ರ ಭಂಡಾರಿ, ಬಾಪು ಭಂಡಾರಿ ಮಗ ೫೭ ನೇ ಬಡಗಬೆಟ್ಟು ಗ್ರಾಮ ಪೋಸ್ಟು ಉಡುಪಿ	ರೂ 15-0 0

Office of the Bank, Udipi. 20-9-48.

K. Shesappa Rai

Agent, Udipi

ರೇಶನ್ ಕಾರ್ಡುಗಳಿಗೆಹಚ್ಚು ವಸ್ತಿಪ್ಪುಗಳೂ ದೊರೆಯುತ್ತವೆ

ನವಯುಗ ಪ್ರೆಸ್, ಉಡುಪಿ.

ಆವಗಂತೆಸಮಯದ ಪರೀಕ್ಷೆಯಲ್ಲಿ ನಿಂತಿದೆ

ಭಾರತವೂ ಕೂಡಾ

SERIES No 5

ಪ್ರಾಚೀನವಾದ ಮತ್ತು ಯೋಗ್ಯ ರೀತಿಯಲ್ಲಿ ಸ್ಥಾಪಿಸಿದ ಒಂದು ವಿಮಾ ಸಂಸ್ಥೆಯು ವ್ಯಾಪಾರದ ನೋಟದಿಂದ, ಸ್ವತಂತ್ರ ರೀತಿಯ ಮತ್ತು ಸಾಧಕರಾದ ಜೀವನವನ್ನು ರೂಪಿಸಲಿಚ್ಛಿಸುವ ಕಲಸಗಾರರಿಗೆ ಕಲಸ ಕೊಡಿದನ್ನು ಖಚ್ಚಿತ ನಿಂಬಂಧನ ಮತ್ತು ಪ್ರೋತ್ಸಾಹವನ್ನು ಕೊಡಲು ಯಾವಾಗಲೂ ಒಳಗೆ ಆತುರದಿಂದಿರುವುದು. ಸಮಯಾನತೆಯಿಲ್ಲದೆ ಕೃಷಿಕ್ಷೇತ್ರವೆಂಬ ನುತ್ತು ಕರ್ತವ್ಯದ ಮೇಲಿನ ರೈತ್ವವು ನಮ್ಮ ರೈತ್ವಿಕರ ಕ್ಷೇತ್ರ ಕಲಸಗಾರ, ಭಾರತವನ್ನು ಉದರ ಆರ್ಥಿಕ ಪ್ರವೃದ್ಧಿ ಸ್ಥಿತಿಗೆ ತಂದಿರುವುದು.

ಭಾರತ್ ಇನ್ಶೂರೆನ್ಸ್ ಕಂ. ಲಿಮಿಟೆಡ್

ಸ್ಥಾಪಕರು — ಗಾಂಧಿ

ಮುಖ್ಯ ಆಫೀಸು — ಸೆಂಬ್ಲಿ ಸ್ಟ್ರೀ ದಯಾ ಸಾಂಡ್, ದೆಹಲಿ

ಬಾಜಿಗಳು ಹುಡುಸ್ಥಾನ, ಪೂರ್ವ ಆಫ್ರಿಕ, ಸಿಲೋನ್ ಮತ್ತು ಸುಂಡಯದ ಎಲ್ಲಾ ಭಾಗಗಳಲ್ಲಿ

B 16 Kanara

ಮಂಗಳೂರು

ಕರ್ನಾಟಕ ಪ್ರಾಂತರಚನೆ ಮಂಗಳೂರಲ್ಲಿ ಭಾಷಾವಾರು ಪ್ರಾಂತರಚನಾ ಸಮಿತಿ-ರಾಷ್ಟ್ರರಚನಾ ಸಮಿತಿಯಿಂದ ನೇಮಿಸಲ್ಪಟ್ಟ ಭಾಷಾವಾರು ಪ್ರಾಂತರಚನಾ ಸಮಿತಿಯ ಸದಸ್ಯರು ಇವೇ ತಾ 16ರಲ್ಲಿ ಮಂಗಳೂರಿಗೆ ಆಗಮಿಸಿದರು ರೈಲ್ವೆ ನಿಲ್ದಾಣದಲ್ಲಿ ಆವರನ್ನು ಶ್ರೀಗಳಾದ ಕೆ. ಬಿ ಜೆನರಾಜ ಹೆಗ್ಡೆ, ಎಸ್ ಆರ್. ಕೈವಾರ್, ಜಿಲ್ಲಾ ಕಲೆಕ್ಟರ್ ಮೊದಲಾದವರು ಸ್ವಾಗತೀಕರಿಸಿದರು ಅಲ್ಲಿಯಾಬಾದು ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಎಸ್ ಕೆ. ಧಾರ್ ಇವರು ಸಮಿತಿಯ ಅಧ್ಯಕ್ಷರು ಮತ್ತು ಶ್ರೀ ಬಿ ಸಿ. ಬ್ಯಾನರ್ಜಿಯವರು ಸಮಿತಿಯ ಕಾರ್ಯದರ್ಶಿಗಳು. ಘಟನಾಸಮಿತಿಯ ಸದಸ್ಯರಾದ ಶ್ರೀ ಜಗತ್ ನಾರಾಯಣ ಲಾಲ್ ಮತ್ತು ಡಾ। ಪನ್ನಾಲಾಲ್ ಇವರು ಸಮಿತಿಯ ಇತರ ಸದಸ್ಯರು. ಶ್ರೀ ಟಿ ಸುಬ್ರಹ್ಮಣ್ಯಂ ಇವರು ಮದ್ರಾಸ್ ಕರ್ನಾಟಕ ಭಾಗದಿಂದ ಸಮಿತಿಯ ಸಹಾಯಕ ಸದಸ್ಯರಾಗಿರುವರು ಮುಂಬಾಸ್ ಸರಕಾರದ ಪ್ರತಿನಿಧಿಗಳಾಗಿ ಶ್ರೀ ಸ್ವಾಮಿನಾಥನ್ ಆವರು ಸಮಿತಿಯೊಡನಿರುವರು.

ತಾ 17ರಲ್ಲಿ ಬೆಳಿಗ್ಗೆ ಕೊಡಗಿನ ಪ್ರತಿನಿಧಿಗಳಿಂದ ಸಾಕ್ಷಿನಡೆಯಿತು ಕೊಡಗಿನ ಅಭಿವೃದ್ಧಿ ಖಾತೆಯ ಅಧಿಕಾರಿಗಳಾದ ಶ್ರೀ ಐ. ಬಿ. ಸುಬ್ಬಯ್ಯನವರು ತಮ್ಮ ಸಾಕ್ಷಿಯಲ್ಲಿ ಕೊಡಗಿಗೆ ಸ್ವತಂತ್ರ ಪ್ರಾಂತವಾಗಿ ಉಳಿಯಲು ಸಾಧ್ಯವಿಲ್ಲವೆಂದೂ, ಅದನ್ನು ಕರ್ನಾಟಕ ಪ್ರಾಂತದೊಡನೆ ವಿಲೀನಗೊಂಡಿಸುವುದೇ ಪ್ರಾಂಯೆಂದೂ ಹೇಳಿರುವರು. ತದನಂತರ ಕೊಡಗು ಪತ್ರಿಕೆಯ ಸಂಪಾದಕರಾದ ಶ್ರೀ ಸಿ ಏ ಬೆಳಿಯಪ್ಪ ಮೊದಲಾದವರು ಸಾಕ್ಷಿ ನುಡಿದರು ಕೇರಳಕ್ಕೆ ಸೇರುವುದಕ್ಕೆ ಕೊಡಗರ ತೀವ್ರ ವಿರೋಧವಿದೆಎಂಬುದನ್ನು ಸೂಚಿಸಿದರು.

ಮಧ್ಯಾಹ್ನ ಪೆಟ್ಟಿಣಕಸ್ತೂರಿಯವರ ಸಾಕ್ಷಿ. ಆಮೇಲೆ ಶ್ರೀಗಳಾದ ಧರ್ಮಸ್ಥಳ ಮಂಜಯ್ಯ ಹೆಗ್ಡೆ, ಕೆ ಬಿ ಜನರಾಜ ಹೆಗ್ಡೆ, ಎಲ್ ಸಿ ಪಾಯಿಸ್, ಕೆ ಆರ್ ಆಚಾರ್ಯ, ಯು ಪಿ ಮಲ್ಯ, ಟಿ ಎಸ್. ಕಕ್ಕಿಲ್ಲಾಯ, ಎಚ್ ಎಚ್. ಜಿಮ್ಮಾಡ್ ಮೊದಲಾದವರು ಪ್ರಮುಖ ಸಾಕ್ಷಿ ನುಡಿದವರು ಸಂಜೆ ನಗರಸಭೆಯ ಪರವಾಗಿ ಒಪ್ಪಿಸಲಾದ ಮನವಿಯಲ್ಲಿ ಕರ್ನಾಟಕ ಪ್ರಾಂತರಚನೆಯು ಜರೂರು ಆಗಬೇಕಾದುದೆಂದು ಜೋರಾಗಿತ್ತು. ಕಾಸರಗೋಡಿನ ಜನರ ಪರವಾಗಿ ಅರ್ಜಿಸಲ್ಲಿಸಿದ ಮನವಿಯಲ್ಲಿ ಕಾಸರಗೋಡಿನಲ್ಲಿ ಚಿತ್ರಾರಿ ಹೊಳೆಯ ಉತ್ತರಕ್ಕಿರುವ ಭಾಗವೆಲ್ಲಾ ಕರ್ನಾಟಕ ಪ್ರಾಂತದಲ್ಲಿ ಸೇರಬೇಕೆಂದು ಸೂಚಿಸಲಾಗಿತ್ತು ಸಮಿತಿಯವರಿಗೆ ವೆಸೆಂಟ್ ಹೈಸ್ಕೂಲಿನಲ್ಲಿ ಮಂಗಳೂರು ನಾಗರಿಕರ ಪರವಾಗಿ ಒಂದು ಸತ್ಕಾರಕೂಟ ನಡೆಯಿತು ವಿವಿಧ ನಗರದ ಮಹನೀಯರು ಈ ಕೂಟದಲ್ಲಿ ಭಾಗವಹಿಸಿದ್ದರು. ತಾ 18ರಲ್ಲು ಸಮಿತಿಯು ಕಲ್ಲಿಕೋಟೆಗೆ ತೆರಳಿತು

ನಗರ ಸಭೆಯು ಶ್ರೀ ಎಲ್, ಸಿ ಪಾಯಿಸ್, ಚೇಯರ್‌ಮೆನ್ ಅವರ ಅಧ್ಯಕ್ಷತೆಯಲ್ಲಿ ಜರಗಿ ಉಸಾದ್ಯಾಯರಿಗೆ 1 1-19 47ರಿಂದ ತಾ 31 3-48ರ ವರೆಗಿನ ಮನೆ ಬಾಡಿಗೆ ಕೊಡಲು ಮಂಜೂರುಮಾಡಿತ. ಮುನಿಸಿಪಲ್ ಕೌನ್ಸಿಲು ತನ್ನ ಕಾರ್ಯಾಲಯದ ಹೊಸ ಕಟ್ಟಡಕ್ಕಾಗಿ ಕೇಳಿದ್ದ ಜಿಲ್ಲಾ ಬೋರ್ಡು ಆಫೀಸು ಬಳಿಯ ಬಾವಿದ ವಿಷಯದಲ್ಲಿ ಪೋಲೀಸ್ ಇಲಾಖೆಯವರ ಅಕ್ಷೇಪವಿಲ್ಲವೆಂದು ತಿಳಿದುಬಂದದ್ದರಿಂದ ಮೇಲೆ ತಿರಿಗಿ ಅದೇ ಜಾಗಕ್ಕೆ ಶ್ರಯತ್ನಿಸಬೇಕೆಂದೂ ಆದು ಎಪ್ಪಕ್ಕೂ ಸಾಧ್ಯವಿಲ್ಲದಿರುವಲ್ಲಿ ಪೋಲೀಸರು ತಮ್ಮಿಷ್ಟದಂತೆ ಹೊಸ ಕಟ್ಟಡಕ್ಕಾಗಿ ಅಪೇಕ್ಷಿಸಿರುವ ಹೆಚ್ ಸೋಸ್ಟಾಫೀಸು ಬಳಿಯ ಖಾಲಿಸ್ಥಳವನ್ನು ತಾವು ಅವರಿಗೆ ಬಿಟ್ಟು ಕೊಡಲಾರೆವೆಂದೂ ಕೌನ್ಸಿಲು ನಿರ್ಧರಿಸಿತು

ಆಯುರ್ವೇದಿಕ್ ಡಾಕ್ಟರರ ಅನುಗಾಹನೆ ಬಗ್ಗೆ ಮಂಗಳೂರು ದಿಸ್ಟ್ರಿಕ್ಟ್ ಸ್ಯೂಪರಿಂಟೆಂಡೆಂಟ್ ಆಫ್ ಪೋಲೀಸರೊಡನೆ ವಿಚಾರಿಸಿದ್ದಲ್ಲಿ ಬರುವ 1948-49ನೆ ವರ್ಷದ ಹೊಸ ಆಯುರ್ವೇದಿಕ್ ಲ್ಯಾಸೆನ್ಸುಗಳಿಗಾಗಿ ಈ ವರ್ಷದ ಲ್ಯಾಸೆನ್ಸುದಾರರು ತಮ್ಮ (ಮದ್ರಾಸು) ರಿಜಿಸ್ಟ್ರಿ ನಂಬ್ರ ಮತ್ತು ಲ್ಯಾಸೆನ್ಸು ನಂಬ್ರ ಸಹಿತ ಕೂಡಲೇ ತಮ್ಮತಮ್ಮ ಸ್ಟೇಷನ್ ಹೌಸ್ ಆಫೀಸರರ ಮೂಲಕ ಕಲೆಕ್ಟರರಿಗೆ ಅರ್ಜಿಮಾಡತಕ್ಕದ್ದೆಂತಲೂ ಅಕ್ಟೋಬರದಲ್ಲಿ ಲ್ಯಾಸೆನ್ಸುಗಳಿಲ್ಲದವರು ತೊಂದರೆಗೆ ಗುರಿಯಾಗಬಹುದೆಂದೂ ತಿಳಿದುಬರುತ್ತದೆ ಸಂಬಂಧಪಟ್ಟವರು ನೀಗಾ ಕೊಡಬೇಕಾಗಿದೆ.

ಜವುಳಿ ವ್ಯಾಪಾರಿಗಳು ಜಿಲ್ಲೆಯ ಎಲ್ಲಾ ಚಿಲ್ಲರೆ ಗಿರಣಿ ಬಟ್ಟೆ ಜವುಳಿ ವ್ಯಾಪಾರಿಗಳು ಕಳೆದ ತಾ 1-4 1941ರಿಂದ ತಾ 31 3 1942 ವರೆಗೆ ಮತ್ತು 1-4-42ರಿಂದ 31 3-43ರ ತನಕ ಒಡು ಸರಕಾರ ವರು ಸಗಳಲ್ಲಿ ತಾವು ನಡೆಯಿಸಿ ಬರುತ್ತಿದ್ದ ವ್ಯಾಪಾರದ ಟರ್ನ್ ಓವರ್ (Turn over) ಮೊಬಲಗುಗಳನ್ನು ಆದಲ್ಲದೆ ಕಳದ ಕಂಟ್ರೋಲ್ ಸಮಯದ ತಮ್ಮ ವ್ಯಾಪಾರದ ಲಾಭಸೆನ್ನು ನಂಬ್ರ ಮತ್ತು ತಾರೀಕುಗಳನ್ನೂ ಅಡಪ್ಪು ತೀವ್ರ ಜಿಲ್ಲಾ ಕಲೆಕ್ಟರರಿಗೆ ತಿಳಿಸಬೇಕಾಗಿದೆ. ವ್ಯಾಪಾರಿಗಳು ಇತ್ತ ಗಮನಿಸಬೇಕಾಗಿದೆ.

ಮಂಗಳೂರು ಕಾಂಗ್ರೆಸ್ ಕಮಿಟಿಯ ಅಕ್ರಮದಲ್ಲಿ ತಾ 15ರಲ್ಲು ನಾಗರೀಕರ ಸಭೆಯೊಂದು ಶ್ರೀ ಕೆ ಎಸ್, ಅಳ್ವರ ನೇತೃತ್ವದಲ್ಲಿ ಜರಗಿತು ಡಾ. ಯು ಪಿ ಮಲ್ಯರು ಅಧ್ಯಕ್ಷತೆವಹಿಸಿದ್ದರು ಸಭೆಯಲ್ಲಿ ಅಧಿಕಾರಾಯತ್ತವರಲ್ಲಿ ಪೆಟ್ಟಿನವರು ಭಾಷಣ ಮಾಡಿ ಸ್ವರಾಜ್ಯಗಳಾಗಬೇಕೆಂದರು ಶ್ರೀಮತಿ ಮೇರಿ ಫ್ರಿಟೊ, ಶ್ರೀಗಳಾದ ಕೆ ಕೆ ಸಟ್ಟಿ, ಕೆ ಎಸ್ ಹೆಗ್ಡೆ, ಎಸ್ ಮುಕುಂದ ರಾವ್, ಎಸ್ ಎಸ್. ತಿಲ್ಲೆ, ಎಚ್. ನಾರಾಯಣ ರಾವ್, ಆರ್ ಬಿ. ಸಿ ದಿ. ಆಂದ್ರಾದೆ, ಎಮ್ ಸಿ ಆಹಮ್ಮದ್, ಎಚ್ ಜಿ ಸಾಲೆನ್ಸ್, ಎ ಶಂಕರ ಆಳ್ವ, ಎಸ್ ನಸರಪ್ಪಯ್ಯ, ಕೆ ಆರ್ ಆಚಾರ್ಯ, ಡಾ। ಎಚ್ ಪಿ ಅಡಪ ಮೊದಲಾದವರು ಸಭಾ ಚರ್ಚೆಯಲ್ಲಿ ಭಾಗವಹಿಸಿದ್ದರು

ಬೋಳೂರು ಮಾರಿಗುಡಿಯಲ್ಲಿ ಪ್ರಾಣಿಬಲಿ ನಿಷೇಧ-ಬೋಳೂರು ದೇವಸ್ಥಾನದಲ್ಲಿ ಮಾಮೂಲು ಪ್ರಕಾರ ಕೆರಿ ಕೋಳಿ ಕಡಿಯುವುದನ್ನು ಇದೇ ಬರುವ (ಆಶ್ವೀಜ ಶುದ್ಧ ಪಾಡ್ಯ) ನವರಾತ್ರಿಯಿಂದ ಸಂಪೂರ್ಣ ನಿಲ್ಲಿಸಬೇಕೆಂದು ತಾ ೬ ಳರ ಮಹಾಸಭೆಯಲ್ಲಿ ಸರ್ವಾನುಮತದಿಂದ ನಿರ್ಣಯವಾಗಿದೆ. ಆದಲ್ಲದೆ ಕುರಿಯ ಬದಲಿಗೆ ಭೂಪ್ಯಾಸನ್ನು ಮತ್ತು ಕೋಳಿಯ ಬದಲಿಗೆ ಅಕ್ಕಿ ಎಂಟನ್ನೂ ಕಾಣಿಕೆಯಾಗಿ ಹಾಕಬಹುದೆಂದೂ, ಹಾಗೆ ನೂರಿದ್ದಲ್ಲು ಮೊಕ್ತೇಸರರು ದೇವಿಗೆ ಪ್ರಾರ್ಥಿಸಿ ಪ್ರಸಾದವನ್ನು ಕೊಡುವರೆಂದೂ ನಿರ್ಣಯವಾಗಿದೆ ಎಂದು ಸರ್ವರಿಗೂ ಈ ಮೂಲಕ ಸದ್ದಿ ದೇವಸ್ಥಾನದ ಮೆನೆಜಿಂಗ್ ಟ್ರಸ್ಟಿ ಶ್ರೀ ಟಿ ಎ ಮಿತ್ರನ್ ಇವರು ತಿಳಿಸುತ್ತಾರೆ

ನೂತನ ರಂಗಮಂಟಪ:-ಸ್ಥಳೀಯ ಬಿ ಇ. ಎಮ್. ಪ್ರೌಸ್ಕೂಲಿನ ಹಳೇ ವಿದ್ಯಾರ್ಥಿ ಸಂಘದವರು, ತಾಲೆಗೆ ಒಂದು ಆಧುನಿಕ ಸೌಕರ್ಯಗಳಿಂದೊಡಗೂಡಿದ ನಾಟಕ ರಂಗಮಂಟಪವನ್ನು ರಚಿಸಿ ಕೊಡುವರೆ ಕಳೆದ ನೂರು ವರ್ಷಗಳಿಂದ ಪ್ರಯತ್ನಿಸುತ್ತಿದ್ದು, ಇದೀಗ ತಮ್ಮ ಯತ್ನವನ್ನು ಕಾರ್ಯರೂಪಕ್ಕೆ ತರಲು ತೊಡಗಿರುವರು ಎಲ್ಲೆಡೆಗಳಲ್ಲಿರುವ ಹಳೇ ವಿದ್ಯಾರ್ಥಿಗಳು ಹಾಗು ಮಂಗಳೂರಿನ ಉದಾರ ಮಹನೀಯರು, ಸಂಘದ ಈ ಯತ್ನಕ್ಕೆ ಕೊಡುಗೈಯ ಪ್ರೋತ್ಸಾಹ ನೀಡಿ, ಸಂಘವು ಕೈಕೊಂಡ ಕಾರ್ಯ ಸಾಂಗವಾಗುವಂತೆ ನೆರವಾಗಬೇಕೆಂದು ಹಾರೈಸಲಾಗಿದೆ. ವಿಸ್ಡಮ್ ಹೈಸ್ಕೂಲಿನ ಹಳೇ ವಿದ್ಯಾರ್ಥಿಗಳು ನಾಟಕ, ಸಂಗೀತ ಇತ್ಯಾದಿ ಲಲಿತಕಲೆಗಳಲ್ಲಿ ಜಿಲ್ಲೆಯಲ್ಲಿ ಅಗ್ರಸ್ಥಾನಗಳಿಸಿದ್ದು, ರಂಗಭೂಮಿಯ ಆವರ ಈ ಬಿಡಿತ ಸೇವೆಯ ಸಿದ್ಧಾರಥ್ಯ ಕಲಾಭಿಮಾನಿಗಳಲ್ಲಿ ಉದಾರ ಪ್ರೋತ್ಸಾಹ ಹೊರೆಯಬಹುದೆಂಬ ವಿಶ್ವಾಸವು ಈ ಸಂಘಕ್ಕಿದೆ

ಪಾಪ್ಯುಲರ್ ಇನ್ಶೂರೆನ್ಸ್ ಕೊ, ಲಿಮಿಟೆಡ್ ಮಂಗಳೂರು-ಶ್ರೀ ಜಿ. ಎಸ್. ಸಿ ಶೋಜ, ಎ ಸಿ ಸಿ ಲಂಡನ್, ಅವರು ಕಂಪೆನಿಯ ಕಾರ್ಯದರ್ಶಿಯಾಗಿ ಭಡ್ತಿ ಹೊಂದಿರುತ್ತಾರೆ

ಖೆಡ್ಡತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿವಪ್ಪ ಬಿಳುತುಸ್ರಾವವಾಗುವುದು ಹಠೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧೆಗಳುಯಿಲ್ಲ ಸಾವಿರಾರು ಮುಂದಿಗೆ ಖಾತ್ರಿ ಗುಣವಾಗಿದೆ ಬೆಲೆ; ರೂ 3/; ಸ್ಪೆಶಲ್ ರೂ 5, ಅಧಿಕಾರಿಕ ಸ್ಪೆಶ್ಯಲ್ ರೂ.೮/- [ವಿ. ಪಿ ಹೆಸ್ಸೆ ರಜಾಕ ಪ್ರತ್ಯೇಕ]

MIS D. DEVEE, F. DS (N. J.)
Tollygunge CALCUTTA.
ಸ್ವಾಕಿಸ್ಟರು. ಶಕ್ತಾಕಂಪೆನಿ ಮಂಗಳೂರು



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಸೂನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುವೋದಿತ ಔಷಧ

ನಮ್ಮ ವಾನಿಂಗ್ ಟಿಲ್ಲಿ ಹಾರ್ಮೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿದಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುವೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಸೀಡಿಸುವ ವಿವಿಧ ವ್ಯಾಧಿಗಳ ಕಿಲ್ಲಿ ಪ್ರವೇಶಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಒಮ್ಮೆ ಎನಸ್ಮತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ್ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಸಿತ್ತಜ್ವರ, ನಿರೋಷಿಯ, ಕಿತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ ಮೂತ್ರಕೋಶ, ಬಬುಮೂತ್ರ ನೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿಜ್ಞಾನಕ್ಕೆ ಅನುಕೂಲತೆ ಪ್ರಸಿದ್ಧ ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾಕ್ಷವಾಯು, ವಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಘವ್ಯಾಧಿ, ಅಜೀರ್ಣ, ನುಚ್ಚಿನ ಉಕ್ಕಳಿಕೆಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಸೀದಿಸಿವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಕ್ತಚಿಕಿತ್ಸೆ ಇಲ್ಲದೇನೆ ನಿರ್ನಾಮವಾವುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುವೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಗಲಿ ಅಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಟಿಕೆಯಲ್ಲಿ, ಈ ವಾನಿಂಗ್ ಟಿಲ್ಲಿ ತೈಲವಿದ ಖಾತ್ರಿಗುಣವಾಗುವದು ಹಲ್ಲುನೋವು. ಸಂಕ್ಷ ಳಿಯಿಟ್ಟಿನೋವು,ಕಿವಿಗಳ ಉಪಶಮನ ಹೊಟ್ಟಿಗುವ ಕಾಲದ ಅಕ್ಕಪಕ್ಕಗಳು, ಹೊಟ್ಟೆ ನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು,ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ ಉಪಯೋಗ ಶ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಇರುತ್ತದೆ. ಕಿಮತ್ತು— ಸೀಸೆ 1ಕ್ಕೆ ರೂ.3 8 0 ವಿ ಪಿ ಬೇರೆ 1 ಡಜನ್ ಸೀಸೆಗಳಿಗೆ ವಿ ಪಿ ಪೋರ್ಟಸಹಿತ ರೂ 42-0-0. ಡೆಪೊ ಪರ್ ಬಾಟ್ಲಿ ಸೀಸೆಗೆ ರೂ- 5-0-0 ವಿ. ಪಿ. ಬೇರೆ ಡಜನ್ ಸೀಸೆಗಳಿಗೆ ರೂ. 60-0 0 ವಿ. ಪಿ. ಬೇರೆ. ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8 0 ಡಜನ್ ಸೀಸೆಗಳಿಗೆ ರೂ. 18 ವಿ ಪಿ ಮಾಫ.

ಪ್ರೈಜಂಕನಾ ಪತ್ರ—ನಾನು ನಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನು ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೇಬಿನಲ್ಲಿಟ್ಟುಕೊಳ್ಳಬೇಕಾದ ಸಂಜೀವನಿಯಂಗಿದೆಯೆಂದು ರಾಮನಾಡಿನ ಆಯುರ್ವೇದಿಕ್ ಸೈಕ್ಯರಾವ ಸಿ ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

— ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I Rly.



ಬಾಣಂತಿಯರ ಸಲು ವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯ ನ್ನು ನಿರ್ಣೈಸಿ ತಯಾ ರಿಸಲ್ಪಟ್ಟ ಅಮೋಘ ವಾದ ಮಧುರದ್ರವ ರಸಾಯನ. ಅಲ್ಪ ಮೌ ಲ್ಯದಿಂದ ಬಡವರಿಗೂ, ಧಾರ್ಮಶಾಲಿಗಳಿಗೂ ಸು ಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೪ ಔನ್ಸಿನ ಶೀಷ್ಟಿಗಳು ಹೆಚ್ಚು ಕಡಿಮೆ ಆಯಿಷಸಗಳಿಗೆ ಬರುವವು. ಅಂದರೆ ಕೆಲವು ೪ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾ ಲಿಜ್ಜೆಲು, ಪ.ಕ

ಸ್ಥಾಪಕರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜೆಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರಜೊತೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚು ವುದು, ಮಲಬದ್ಧತೆ, ಒಳಜ್ವರ, ಇನ್ನುಗಳನ್ನೆಲ್ಲ ಹೋಗಲಾಡಿಸಿ ಹೊಸವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕು ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿ ಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶರೀರಕ್ಕೆ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಏಂ- ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಶ್ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಷ್ಟಾದ ಔಷಧಿ ರವಾನಿಸಬಹುದು. (1) ಉಡುಪಿ ವಿಜಯಬ್ಯಾಂಕು:—ನವಭಾರತ ಬುಕ್ ಡಿಪೊ, ಬೊಂಬಾಯಿ ವಿಜಯಬ್ಯಾಂಕು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುನಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾವಿಧವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ!

ನಿಮ್ಮ ಸ್ನಾನ, ಊಟ, ಉಪಹಾರ, ವೈಶಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಂಗಿ ಉಡುಪಿ ಬ್ರಾಹ್ಮಣರ ಅಡಿಗೆ, ಕಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಎಲ್ಲ ತರದ ದಂತ ರೋಗ ಗಳನ್ನು, ಹಲ್ಲು ಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ.

ಕರ್ನಾಟಕ ಪ್ರಾಂತ ರಚನೆಯನ್ನು ಮುಂದೂಡಬಾರದು

(ನ್ಯಾಯಮೂರ್ತಿ ಎನ್. ಎಸ್. ಲೋಕೂರರು, ಕೊಲ್ಲಾಪುರ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರು)

ಕೊಲ್ಲಾಪುರ ಹೈಕೋರ್ಟಿನ ಮುಖ್ಯ ನ್ಯಾಯಾಧೀಶರಾದ ಶ್ರೀ. ಎನ್. ಎಸ್. ಲೋಕೂರರು ಭಾಷಾವಾರು ಪ್ರಾಂತ ರಚನಾ ಸಮಿತಿಯ ಪ್ರಶ್ನಾವಳಿಗೆ ಕೊಟ್ಟ ಉತ್ತರವು ಗಮನಾರ್ಹವಾಗಿದೆ. ಅವುಗ ಳಲ್ಲಿ ಮುಖ್ಯವಾದ ಕೆಲವು ಭಾಗಗಳನ್ನು ಕೆಳಗೆ ಕೊಡಲಾಗಿದೆ.

ಮೊದಲನೆಯ ಪ್ರಶ್ನೆಗೆ ಅವರು ಈ ರೀತಿಯಾಗಿ ಉತ್ತರಿಸಿರುವರು-

ಕನ್ನಡ ಜನತೆಯು ಒಂದುಗೂಡಬೇ ಕೆಂದು ಇಂದು ನಿನ್ನೆ ಬಯಸಿದುದಲ್ಲ. ಅದಕ್ಕೆ ಉದ್ದವಾದ ಚಾರಿತ್ರಿಕ ಹಿನ್ನೆಲೆ ಯಿದೆ. ೧೯೫೦ ನಿರ್ಣಯವಾದ ಮೇಲೆ ಭಾಷಾವಾರು ಪ್ರಾಂತ ರಚನಾಪ್ರಶ್ನೆಯು ಸುಲಭವಾಗುವಂತೆ ಹಲವು ಘಟನಾತ್ಮಕ ಬದಲಾವಣೆಗಳಾಗಿವೆ. ಅನೇಕ ದೇಶಿ ಸಂಸ್ಥಾನಗಳು ಈಗ ಭಾರತದ ಒಕ್ಕೂಟದೊಡನೆ ಲೀನವಾಗಿವೆ. ಕಳೆದ ದಶಂಬರ ದಲ್ಲಿ ಕಾಸರಗೋಡಿನಲ್ಲಿ ಶ್ರೀ ದಿವಾಕರರ ಅಧ್ಯಕ್ಷತೆಯಲ್ಲಿ ಜರಗಿದ ಅಖಿಲ ಕರ್ನಾ ಟಕ ಏಕೀಕರಣ ಸಂಘದ 11ನೇ ಅಧಿ ವೇಶನದಲ್ಲಿ ಕರ್ನಾಟಕ ಏಕೀಕರಣ ವನ್ನು ಮುಂದೂಡುವ ವಿಷಯದಲ್ಲಿ ಒಂದೂ ನಿಷೇಧ ಗೊತ್ತುವಳಿಯು ಸ್ವೀಕರಿಸಲ್ಪಟ್ಟಿದೆ. ಇದೇ ರೀತಿ ಯಲ್ಲಿ ಆಂಧ್ರ, ಮಹಾರಾಷ್ಟ್ರ, ಕೇರಳಗಳ ಲ್ಲಿಯೂ ಭಾಷಾವಾರು ರಚನೆಯಾಗಿಬೇ ಕೆಂಬ ಅಭಿಲಾಷೆ ಹೆಚ್ಚಿದೆ. ಬಾ. ಮಹಾ ಸಭೆಯು ೧೯೨೧ರ ಮೊದಲೇ ಭಾಷಾವಾ ರು ಪ್ರಾಂತ ರಚನಾ ತತ್ವವನ್ನು ಒಪ್ಪಿದೆ. ೧೯೩೨ನೆಯ ಅಕ್ಟೋಬರಿಂದಲ್ಲ ವಿಶ್ವವಂ ದ್ಯ ಎಚಾತ್ಮರು ಕೂಡ ಕರ್ನಾಟಕ ಪ್ರಾಂತ ರಚನೆಗೆ ಬೆಂಬಲವಿತ್ತು ಮಾತ ನಾಡಿದ್ದಾರೆ.

ಮುಂಬಯಿಯಲ್ಲಿ ಜರಗಿದ ಅ. ಕ. ಏ ಕೀಕರಣ ಸಂಘದ ೧೦ನೆಯ ಅಧಿವೇಶನ ದಲ್ಲಿ ಮಾನ್ಯ ಸರದಾರ ಪಟೇಲರು ಮ ತ್ತು ಮಾನ್ಯ ಬಿ. ಜಿ. ಖೇರರು ಇದೇ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು. ಇತ್ತೀಚೆಗೆ ಹುಬ್ಬಳ್ಳಿಯಲ್ಲಿ ಜರಗಿದ ಕ ರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿ ಯ ಮತ್ತು ಕರ್ನಾಟಕದ ಶಾಸನ ಸಭಾ ಸದಸ್ಯರ ಒಂದು ಸಂಯುಕ್ತ ಸಭೆಯಲ್ಲಿ ಹೊಸ ಘಟನೆಯು ಅಮಲಿಗೆ ಬರುವುದ ರೊಳಗೇ ಕರ್ನಾಟಕ ಪ್ರಾಂತ ನಿರ್ಮಾಣ ವಾಗಬೇಕೆಂದೂ ಇದು ಆಗದಿದ್ದಲ್ಲಿ ಶಾ ಸನ ಸಭೆಗಳಿಗೆ ರಾಜಿನಾಮೆ ಕೊಡಲು ಕರ್ನಾಟಕದ ಶಾಸನಸಭಾ ಸದಸ್ಯರು ಅ. ಭಾ. ಕಾಂಗ್ರೆಸ್ ಸಮಿತಿಯ ಅಪ್ಪಣೆ ಯನ್ನು ಕೇಳಬೇಕಾಗುತ್ತದೆಂದೂ ಖಂಡ ತುಂಡವಾದ ಅಭಿಪ್ರಾಯವು ಸೂಚಿಸಲ್ಪ ಟ್ಟಿದೆ. ಕಳೆದ ಜನವರಿ ತಿಂಗಳಿಂದು ಕ. ಪ್ರಾಂ. ಕಾಂಗ್ರೆಸ್ ಸಮಿತಿಯ ಶಿಷ್ಟಮಂ ಡಲವೊಂದು ಅ. ಭಾ. ಕಾಂಗ್ರೆಸ್ ಕಾ ರ್ಯಕಾರಿ ಸಮಿತಿಯನ್ನು ಕಂಡು ಇದೇ ರೀತಿಯ ಅಭಿಪ್ರಾಯವನ್ನು ವ್ಯಕ್ತಪಡಿಸಿ ದೆ. ಪ್ರತ್ಯೇಕವಾದ ಪಂಗಡಕ್ಕೆ ಸ್ವಯಂ ನಿರ್ಣಯಾಧಿಕಾರವಿದೆಯೆಂಬ ಸರಕಾರ ವು ಒಪ್ಪಿದರೆ, ಕನ್ನಡಿಗರು ಖಂಡಿತವಾ ಗಿಯೂ ಕರ್ನಾಟಕ ಪ್ರಾಂತ ನಿರ್ಮಾಣ ವು ತಡವಿಲ್ಲದೆ ಆಗಬೇಕೆಂದು ಆಗ್ರಹೋ ಧವಾಗಿ ಹೇಳುವರೆಂಬುದರಲ್ಲಿ ಸಂಶಯ ವಿಲ್ಲ. ಭಾಷಾವಾರು ಪ್ರಾಂತಗಳನ್ನು ರ ಚಿಸುವಾಗ ಕೆಲವು ಕಷ್ಟಗಳು ಬಂದೊದ ಗಿದರೂ ಅವುಗಳನ್ನು ಸುಲಭವಾಗಿ ಪರಿ ಹರಿಸಬಹುದು. ಕರ್ನಾಟಕ ಪ್ರಾಂತ ರಚ ನೆಯನ್ನು ಮುಂದೂಡುವುದಕ್ಕೆ ನನ್ನ ಖಂಡಿತವಾದ ವಿರೋಧವಿದೆ. ಅಂತೆಯೇ ಇತರ ಭಾಷಾವಾರು ಪ್ರಾಂತಗಳನ್ನು ರಚಿ ಸಬೇಕೆಂಬುದೇ ನನ್ನ ಅಭಿಪ್ರಾಯವಾ ಗಿದೆ. ಎಲ್ಲಾ ಭಾಷಾವಾರು ಪ್ರಾಂತ ಗಳೂ ಏಕ ಕಾಲದಲ್ಲಿಯೇ ರೂಪಿತ ವಾಗಬೇಕು.

ಸಂಸ್ಥಾನಗಳಿಗೆ ಸಂಬಂಧಿಸಿದ 15ನೇ ಪ್ರಶ್ನೆಗೆ ಅವರು ಈ ರೀತಿಯಾಗಿ ಉತ್ತರಿಸಿದ್ದಾರೆ-

ಕರ್ನಾಟಕ ಪ್ರಾಂತದ ಭಾಗವಾಗ ಬಹುದಾದ ಹೆಚ್ಚಿನ ಸಂಸ್ಥಾನಗಳು ಈಗಾ ಗಲೇ ಹಿಂದೀ ಒಕ್ಕೂಟದ ಭಾಗಗಳೊಡ ನೆ ಲೀನವಾಗಿವೆ. ಈ ಸಂಸ್ಥಾನಗಳಲ್ಲಿ ಕನ್ನಡ ಮಾತನಾಡಲ್ಪಡುವ ಪ್ರದೇಶಗಳ ಜನರು ಕರ್ನಾಟಕ ಪ್ರಾಂತಕ್ಕೆ ಸೇರುವ ಅಭಿಪ್ರೇಯುಳ್ಳವರಾಗಿರುವರೆಂದು ನಾನು ನಂಬಿರುವೆ. ಸಂಸ್ಥಾನಗಳು ಪ್ರಾಂತ ವನ್ನು ಸೇರಲು ಬಯಸದಿದ್ದರೂ ಉಳಿದ ಭಾಗಗಳಿಂದಲೇ ಕರ್ನಾಟಕ ಪ್ರಾಂತವ ನ್ನು ರಚಿಸಬಹುದು. ಮೈಸೂರಿನ ಪ್ರಗತಿ ಈಗ ಅತಿ ಮುಖ್ಯವಾಗಿದೆ. 1946ನೆಯ ಇಸವಿ ಆಗೋಸ್ಟ್ 31ರಂದು ದಾವಣ ಗೆರೆಯಲ್ಲಿ ಸೇರಿದ ಕೊಟವೊಂದರಲ್ಲಿ ಈ ವಿಷಯವು ಚರ್ಚಿಸಲ್ಪಟ್ಟಿದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಮತ್ತು ಕರ್ನಾಟಕ ಏಕೀಕರಣ ಮಹಾ ಸಮಿತಿ ಯ ಕೆಲವರು - ಸ್ಸೂರು ಬೆ ಸೂ ರು ಕಾಂಗ್ರೆಸ್ ಕಾರ್ಯಕಾರಿ ಸ ಮಿತಿಯ ಸ್ಯರು ಮತ್ತು ಈಗಿನ ಮಂತ್ರಿಗಳೊಡನೆ ಮಾತುಕತೆ ನಡೆಸುತ್ತಿರುವರು. ಮಾತು ಕತೆಯ ಈಗಿನ ಪರಿಸ್ಥಿತಿಯು ಅನುಕೂಲ ವಾಗಿದೆ. ಈ ವಿಷಯದಲ್ಲಿ ಯೋಗ್ಯ ವಾದ ಒಪ್ಪಂದವಾಗಿ ಮೈಸೂರು ಕರ್ನಾ ಟಕ ಪ್ರಾಂತದೊಡನೆ ಸೇರಿದರೇ ಯೋಗ್ಯ ವಾಗಿದೆ.

ಹತ್ತೊಂಬತ್ತನೆಯ ಪ್ರಶ್ನೆಗೆ ಉತ್ತರಿ ಸುತ್ತ ಶ್ರೀ ಲೋಕೂರರು ಈ ರೀತಿಯಾಗಿ ಅಭಿಪ್ರಾಯಪಟ್ಟಿರುವರು - ಭಾಷಾವಾರು ಪ್ರಾಂತ ರಚನೆಯಿಂದಾಗಿ ಜನರನ್ನು ನರ್ಗಾಯಿಸಬೇಕಾದ ಸಂದರ್ಭವು ಖಂಡಿತವಾಗಿ ಬರಲಾರದು. ಅಥವಾ ಯಾವ ಅನಾಹುತಗಳೂ ಸಂಭವಿಸಲಾರವು. ಕರ್ನಾಟಕ ಪ್ರಾಂತಕ್ಕೆ ಸೇರಿಸಲ್ಪಡುವ ಭಾಗಗಳಲ್ಲಿ ಕನ್ನಡಿಗರಲ್ಲದವರ ಸಂಖ್ಯೆ ಅತಿ ಕಡಿಮೆಯಾಗಿದೆ. ಗಡಿ ಪ್ರದೇಶ ದಲ್ಲಿದ್ದ ಹಲವರಿಗೆ ಕನ್ನಡ ಭಾಷೆಯು ಸರಿಯಾಗಿ ಬರುತ್ತದೆ. ಕರ್ನಾಟಕ ಪ್ರಾಂತ ರಚನೆಯಾದಾಗ ಇವರು ಪ್ರಾಂತವನ್ನು ಬಿಟ್ಟು ಹೋಗುವ ಸಂಭವವಿಲ್ಲ.

ಮದರಾಸು ಮುಂಬಯಿ ನಗರಗಳ ಬಗ್ಗೆ ಶ್ರೀ ಲೋಕೂರರು ಯಾವ ನಿಶ್ಚಿತ ಅಭಿ ಪ್ರಾಯವನ್ನೂ ಸೂಚಿಸಿಲ್ಲ.

(ಅ. ಕ. ಸ. ಸಂಘ, ನಂಗಳೂರು)

ಗತ್ತಿಣ ಕನ್ನಡ ಜಿಲ್ಲಾ ಆಯುರ್ವೇದ ವೈದ್ಯ ಪರಿಷತ್ತು ಬ್ರಹ್ಮಾವರ, ದ ಕ.

ವಿನಂತಿ

ಮಲಬಾರು ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳು ಆಯುರ್ವೇದದ ಪ್ರಕೃತಿಜನ್ಮ ಉದ್ಭಾವನವೆಂದು ಹೇಳಿಸಿಕೊಳ್ಳುತ್ತವೆ. ಆದರೆ ಇಲ್ಲಿಯ ಜನತೆಯಲ್ಲಿ ಆಯುರ್ವೇದವು ನಮ್ಮ ದೆಂಬ ಹೆಮ್ಮೆಯನ್ನು ಹೊರಹೊಮ್ಮಿಸುವ ದಿವ್ಯಸಾಧನವಿಲ್ಲ. ಎರಡು ವರ್ಷಗಳ ಮುಂಚೆ ಮಣಿಪಾಲದಲ್ಲಿ ಜರಗಿದ ಅಖಿಲಭಾರತ ಆಯುರ್ವೇದ ಸಮ್ಮೇಳನ ಮತ್ತು ಮುಂಜೇಶ್ವರದಲ್ಲಿ ನಡೆದ ಅಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನಗಳನ್ನು ಬಿಟ್ಟರೆ ಮುಂಗೂರ್ಲಿಯೇ ಒಂದು ಜಿಲ್ಲಾ ಪರಿಷತ್ತು ನದೆದಿತ್ತೆಂದು ನಾವು ತಿಳಿದಿದ್ದೆವು.

ದಕ್ಷಿಣಕನ್ನಡ ಜಿಲ್ಲೆಯ ಎಲ್ಲಾ ಹಳ್ಳಿಗಳಲ್ಲೂ ನಮ್ಮ ಪುರಾತನ ಸಂಸ್ಕೃತಿಯಾದ, ಇಂದು ಬಹು ಕಾರಣಗಳಿಂದಬಿಲವಾಗಿರುವ ಆಯುರ್ವೇದದ ಪ್ರಚಾರವು ಪಾಯುರ್ವೇದದಲ್ಲಿ ಆಗಬೇಕೆಂಬುದೇ ನಮ್ಮ ಹೃತ್ಪೂರ್ವಕ ಹಂಬಲವಾಗಿರುತ್ತದೆ.

ಈ ಆಶಯವನ್ನು ಕಟ್ಟಕೊಂಡೇ ನಾವು ಜಿ. ಕ. ಜಿಲ್ಲಾ ಆಯುರ್ವೇದ ಪರಿಷತ್ತನ್ನು ಇದೇ ನವಂಬರ ತಾ 26ರಿಂದ 28ರ ವರೆಗೆ ಬ್ರಹ್ಮಾವರದಲ್ಲಿ ಜರಗಿಸಬೇಕೆಂದು ನಿಶ್ಚಯಿಸಿದ್ದೇವೆ.

ಬ್ರಹ್ಮಾವರವು ಉಡುಪಿಯಿಂದ 8 ಮೈಲು ಉತ್ತರಕ್ಕಿದ್ದು ಎಲ್ಲಾ ಕಡೆಗಳಿಂದ ಜನರು ಬರಲು ಅನುಕೂಲವಾದ ಬಸ್ಸುಸಾಧನೆ ಸಕೃಪಲ್ಲಿದ್ದು ಭಾರತದ ಯೆಲ್ಲಾ ಲಕ್ಷ ಹಳ್ಳಿಗಳ ಪೈಕಿ ಒಂದಾಗಿದೆ. ಈ ಚಿಕ್ಕ ಹಳ್ಳಿಗೆ ಅಖಿಲ ಭಾರತದ ಆಯುರ್ವೇದಾಭಿಮಾನಿಗಳು ಬಂದು ಈ ಉತ್ಸವವನ್ನು ಯಶಸ್ವಿಗೊಳಿಸಬೇಕಾಗಿಯೂ ನಮ್ಮ ಜಿಲ್ಲೆಯ ಆಯುರ್ವೇದಾಭಿಮಾನಿಗಳ ಸಹಾಯ ಸಲಹೆಗಳನ್ನು ಪಡೆಯಲು ಮತ್ತು ಧನಸಂಗ್ರಹಿಸುವದಕ್ಕಾಗಿಯೂ ನಮ್ಮಸ್ವಾಗತ ಸಮಿತಿಯ ಪರವಾಗಿ ಪ್ರಚಾರ ಕಾರ್ಯದರ್ಶಿ ಶ್ರೀ ಪಿ.ಲಕ್ಷ್ಮೀನಾರಾಯಣ ಮಂಜತ್ತಾಯರು ಜಿಲ್ಲಾ ಸಂಚಾರವನ್ನು ಕೈಕೊಳ್ಳಲಿರುವರು. ಅವರಿಗೆ ಎಲ್ಲಾ ರೀತಿಯ ಬೆಂಬಲವಿತ್ತು ಪ್ರತಿನಿಧಿಗಳಾಗಿ, ಸ್ವಾಗತ ಸಮಿತಿಯ ಸದಸ್ಯರಾಗಿ, ಸಹಾಯಕರಾಗಿ ಜಿಲ್ಲಾ ಪರಿಷತ್ತು ವಿಜಯಶಾಲಿಯಾಗುವಂತೆ ಹರಿಸುವಿರಾಗಿ ನಂಬುತ್ತೇವೆ.

(Sd) ಪಿ. ವೈ. ರಾಮಾನ್ ಗುರುಕ್ಕಳ್
ಪ್ರಧಾನ ಕಾರ್ಯದರ್ಶಿ
ಸ್ವಾಗತ ಸಮಿತಿ

ಎಮರ್ಜೆನ್ಸಿ:—ಸ್ಥಳೀಯ ಗ್ರಾಮಸ್ಥರ ದೊಂದು ಮಹಾಸಭೆಯು 16-9-48ರಲ್ಲು ಶ್ರೀ ನಾರ್ಣಪ್ಪಯ್ಯ ಗೋಪುರದಲ್ಲಿ ಶ್ರೀ. ಯಸ್. ಸುಂದರ ಶೆಟ್ಟಿ, ಅಧ್ಯಕ್ಷ ಪೂಜಾಯತ ಬೋರ್ಡು ಸಾಂತೂರು ಇವರ ಅಧ್ಯಕ್ಷತೆಯಿಂದ ಕೂಡಿತು. ಸಭೆಯ ಉದ್ದೇಶವನ್ನು ವಿವರಿಸುತ್ತಾ ವಿದ್ವಾನ್ ಶ್ರೀ. ವೈ. ಕಾಳಪ್ಪ ಶೆಟ್ಟಿ ಉಡುಪಿತಾಲ್ಲೂ ವೆಲ್‌ಫೇರ್ ಆಫೀಸರರಾದ ಶ್ರೀ. ಯಂ. ಶಾಂತಪ್ಪ ರವರನ್ನು ಹೊಸತಾಗಿ ತೆರೆಯಲ್ಪಡಲಿರುವ "ರಾಷ್ಟ್ರೀಯ ಸಾರ್ವಜನಿಕ ವಾಚನಾಲಯ"ದ ಪ್ರಾರಂಭೋತ್ಸವವನ್ನು ನೆರವೇರಿಸಲು ಕೇಳಿಕೊಂಡಂತೆ ಶ್ರೀಯುತರು ವಾಚನಾಲಯವನ್ನು ಉದ್ಘಾಟನೆಮಾಡುತ್ತಾ ಗ್ರಾಮಾಭಿವೃದ್ಧಿಯ ಸಲುವಾಗಿ ಸರಕಾರದ ಯೋಜನೆಯನ್ನು ವಿವರಿಸಿದರು. ತದುವಾಯ ಶ್ರೀಗಳಾದ ಪಾಡೆಬೆಟ್ಟು ರಾಮರಾಯರೂ ವಿಟ್ಲ ಪೆಂಡನರೂ ಸಂದರ್ಭೋಚಿತವಾಗಿ ಮಾತನಾಡಿ ಪಸೇಲೆ ಸಭಾಧ್ಯಕ್ಷರು ಗ್ರಾಮಸಂಘ ಸ್ಥಾಪನೆಯ ಆವಶ್ಯಕತೆಯನ್ನು ಕುರಿತು ಭಾಷಣ ವಿತ್ತಾಗ ಶ್ರೀಗಳಾದ ವೈ. ಶಾಂತಿರಾಜಯ್ಯನವರು ಅಧ್ಯಕ್ಷರಾಗಿಯೂ ವೈ. ಕಾಡಿಯ ಸೆಟ್ಟಿ ಉಪಾಧ್ಯಕ್ಷರಾಗಿಯೂ ವೈ. ಬಾಬು ಸೆಟ್ಟಿ ಮತ್ತು ನಾಸುಸೆಟ್ಟಿ ಜೋತಿಕಾರ್ಯದರ್ಶಿಗಳಾಗಿಯೂ ಶ್ರೀಗಳಾದ ಚಿನ್ನಯಸೆಟ್ಟಿ, ಸುಬ್ಬಯ ಸೆಟ್ಟಿ, ಹರಿರಾಮ ಪ್ರಭು, ಗುಡ್ಡ ಸುವರ್ಣ ಮತ್ತು ಯು. ಮಧ್ವರಾಯ ಕೂಡಾ ಒಳಗೊಂಡು ಜನ ಸದಸ್ಯರುಳ್ಳ ಸಂಘವೊಂದು ನಿರ್ಮಾಣವಾಗಿ ವಿದ್ವಾನ್ ಶ್ರೀ ವೈ. ಕೆ. ಸೆಟ್ಟಿ ಧನ್ಯವಾದಗಳನ್ನರ್ಪಿಸಿದಮೇಲೆ ಸಭೆಯ ಕಾರ್ಯಕ್ರಮಗಳು ಕೊನೆಗೊಂಡಾವು.

ಮೂಡುಬಿದಿರೆ:—ಇಲ್ಲಿಯ ಶ್ರೀ ಸರಸ್ವತಿ ಸೇವಾ ಸಂಘದವರು ಈ ವರ್ಷವೂ, ತಾ 9-10-48ರಿಂದ 13-10-48ರವರೆಗೆ ದಸರಾ ಸಾಂಸ್ಕೃತಿಕೋತ್ಸವವನ್ನು, ಕರ್ನಾಟಕದ ಸುಪ್ರಸಿದ್ಧ ಭಾಷಣ, ವಾಚನಕಾರರನ್ನು ಆಹ್ವಾನಿಸಿ, ಅತೀ ಸಂಭ್ರಮದಿಂದ ಜರಗಿಸುವುದೆಂದು ನಿರ್ಧರಿಸಿರುತ್ತದೆ. ಕಾರ್ಯಕ್ರಮವು ಪ್ರತೀದಿನ ಸಂಜೆ ಗಂಟೆ ೫½ ಕ್ಕೆ ಪ್ರಾರಂಭವಾಗುವುದು. ವಿವಿಧ ವಿನೋದಾವಳಿಗಳ ಪ್ರದರ್ಶನವೂ ಇದೆ.

ಪ್ರೇಮ ಮೆಡಿಕಲ್ ಹಾಲ್, ತೊಡೂರುಕಟ್ಟೆ:— ಡಾ। ಯು. ಶಿವರಾಮ ಶೆಟ್ಟರ ಈ ವೈದ್ಯಾಲಯದ ಉದ್ಘಾಟನ ಸಮಾರಂಭವು ತಾ 6-9-48ರಲ್ಲಿ ಶ್ರೀ ಬಿಪ್ಪಯ್ಯ ಗೌಡರ ಅಧ್ಯಕ್ಷತೆಯಲ್ಲಿ ಜರಗಿತು. ಅತಿಥಿಗಳಿಗೆ ಸತ್ಕಾರಕೂಟವಾಗಿ ಸಮಾರಂಭವು ಕೊನೆಗೊಂಡಿತು.

ಬ್ರಹ್ಮಾವರ:—ಜಿಲ್ಲಾ ಆಯುರ್ವೇದ ವೈದ್ಯ ಪರಿಷತ್ತಿನ ಸ್ವಾಗತ ಸಮಿತಿಯ ಸಭೆಯು ತಾ 16-9-48ರಲ್ಲಿ ಉಪಾಧ್ಯಕ್ಷ ಶ್ರೀ ಬಿ. ಪದ್ಮನಾಭ ಸೈಗಳ ಅಧ್ಯಕ್ಷತೆಯಲ್ಲಿ ಜರಗಿ ಈ ವರೆಗಿನ ಕಾರ್ಯಕಲಾಪಗಳನ್ನು ಪರಿಶೀಲಿಸಿ, ಮುಂದಿನ ಕಾರ್ಯಯೋಜನೆಯನ್ನು ಪರ್ಯಾಲೋಚಿಸಲಾಯಿತು.

ಮೂಲ್ಕಿ: ತಾ 16-9-48ರಲ್ಲಿ ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಸ್ವಾಮಿಯವರ ಜನ್ಮ ದಿನಾಚರಣೆಯು ಶ್ರೀ. ಕೆ. ಗೋವಿಂದನವರ ಅಧ್ಯಕ್ಷತೆಯಲ್ಲಿ ಜರಗಿತು. ಗುರು ಪ್ರತಿಮೆಯ ಮೆರವಣಿಗೆ, ಭಜನೆ, ಅದ ಮೇಲೆ ಜರಗಿದ ಸಭೆಯಲ್ಲಿ ಕಾರ್ಯದರ್ಶಿಗಳು, ಶ್ರೀಗಳಾದ ಕೆ. ವಿಟ್ಠಪ್ಪ, ಬಿ. ಪಿ. ಎಲ್. ಟಿ, ಯನ್. ಟಿ. ಸುವರ್ಣ, ಯಂ. ಸೋಮನಾಥ ಮೊದಲಾದವರು ಸಂದರ್ಭೋಚಿತ ಭಾಷಣ ಮಾಡಿದರು.

ಕನ್ನಡ ಸಂಗೀತ ನಾಟಕ ಸಭಾ, ಮುಂಬಯಿ:—

ಇವರು ಕನ್ನಡ ಸಂಗೀತ ಸಭೆಯ ಸ್ಥಾಪಕರಲ್ಲೊಬ್ಬರಾದ ದಿವಂಗತ ಶ್ರೀ. ಟೋಳಾರ ಗೋವಿಂದ ನ್ಯಾಕ್ಕರ ಸ್ಮರಣಾರ್ಥವಾಗಿ ಕಳೆದ ತಾ 12-9-1948ರಲ್ಲಿ ದಾಮೋದರ್ ಧಾರ್ಮಿಕ ಹೋಟಲಿನಲ್ಲಿ ಶ್ರೀ ಬೆಂಗರೆ ನಾರಾಯಣ ಹರಿದಾಸರ ಸಹಾಯಾರ್ಥವಾಗಿ ಶ್ರೀ ಟೋಳಾರ ಸುಂದರ ವ್ಯಾಕರಿಂದ ಬರೆಯಲ್ಪಟ್ಟಿ "ಸಂಸಾರ ಸಾಗರ" ಎಂಬ ಸಾಮಾಜಿಕ ಕನ್ನಡ ನಾಟಕವನ್ನು ವರ್ತಕ ವಿಭೂಷಣ ಶ್ರೀಮಂತ ಬಿ. ವಿ. ಭೂಮರೆಡ್ಡಿಯನವರ ಅಧ್ಯಕ್ಷ ಸ್ಥಾನದಲ್ಲಿ ಅಭಿನಯಿಸಿದರು ಅಧ್ಯಕ್ಷರಾದ ಶ್ರೀ. ಭೂಮರೆಡ್ಡಿಯವರು ನಾಟಕ ಕಲೆಯು ಕುರಿತು ಭಾಷಣ ಮಾಡಿ, ಸುಕೀಲೆ ಪಾತ್ರವಹಿಸಿದ ಮಿಸ್ ಲೀಲ ಅವರ್ನಿಕಾರ್, ಚಂಚಲೆ ಪಾತ್ರವಹಿಸಿದ ಶ್ರೀ. ಬಿ. ಯಸ್. ನ್ಯಾಕ್ (ಜೂನಿಯರ್) ಸಂಂದರ ಪಾತ್ರವಹಿಸಿದ ಶ್ರೀ. ಯಂ. ಕೆ. ರಾವ್, ಲಕ್ಷ್ಮಿಪಾತ್ರವಹಿಸಿದ ಶ್ರೀ ಟಿ. ಯಸ್ ಕೋಟಿಯನ್, ಮತ್ತು ಶಂಕರ ಪಾತ್ರವಹಿಸಿದ ಶ್ರೀ ಪಿ ಸುಕುಮಾರ್. ಇವರುಗಳಿಗೆ ರೂಪ್ಯಾ 10 -ರಂತೆ ಬಹುಮಾನವಾಗಿಯೂ, ಮತ್ತು ಕನ್ನಡ ಸಂಗೀತ ನಾಟಕ ಸಭೆಗೆ ರೂಪ್ಯಾ 501 -ನ್ನು ದಾನವಾಗಿಯೂ ಕೊಟ್ಟರು. ತದನಂತರ ಶ್ರೀ. ಬೆಂಗರೆ ನಾರಾಯಣ ಹರಿದಾಸರು ಈ ನಾಟಕಕ್ಕೆ ಸಹಾಯಮಾಡಿದ ಸರ್ವರಿಗೂ ಮತ್ತು ನಾಟಕ ಸಭೆಯವರಿಗೂ ಧನ್ಯವಾದಗಳನ್ನರ್ಪಿಸಿದರು.

— ಮಕ್ಕಳನ್ನು ಹಡೆಯುವುದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ತೆಜ್ಜು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಗ್ಗಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟುಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಕೆರಿಗು, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರಿವೀಲ್ಲೆ ಪಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಷ್ಟ ಚಾರ್ಜು ೧½ ಆಣೆ.

ತಯಾರಕರು:—**ಹಾಲಪ್ಪ ಫಕೀರಪ್ಪ ಡಾವಣಗೇರಿ**
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ವಿಜಂಟೆರು:—ಹುಬ್ಳಿ ಫಾರ್ಮಸಿ,—ಹುಬ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ್, ಹುಬ್ಬೇರಿ ಬ್ಯಾಂಕ್.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಮೋತರಕ್ಕೆ ಹಳದೀ ಡಾಗು ಕಟ್ಟುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಛಾಯವಾಗಿದ್ದರೆ,....ಜಿಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಜು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ಪಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸದಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಜೀನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗಂಜಿ ಪ್ರಮಾಣ ಔಷಧ ಅರ್ಧಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮೂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು- ಈ ಔಷಧವನ್ನು ಜೇನುಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾತಾ, ಕಾಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಹರೂ. ಪೋಸ್ಟ ಚಾರ್ಜ ೪ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್ಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡುವಕ್ಕೆ ಮೂಲಿಕರ ವಿಳಾಸ,

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮುಣ್ಣು ಪಾಲಾಗುತ್ತೆ.

ಹೆರಿಗೆ ಆಂದರೆ ಪುನರ್ಜನ್ಮವೆಂಬು ಸ್ತ್ರೀಯರಿಸ್ಸುಪ್ರದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಅಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕೆಸವೀಳೆದೆ ಯಾ ಅದರ ಅಂತ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇವರಿಂದ ಪ್ರಲಾಪಸ್ಸು, ಮೆಲವಿರೋಧ, ಸ್ಪೃನಗಳ ಚೀಗು, ನಿದ್ರಾನಾಶ, ವಾಂತಿ. ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ವರೆಗೆ ಕರೆಸಿ ನೂರಾರು ರೂಪ್ಯಾ ಖರ್ಚುಮಾಡಬೇಕಾಗುತ್ತದೆ ಆ ಮೇಲೂ ವೈನೇಚ್ಛೆ ಎಂದು ಅವೈಸ್ಥ ಪರಿಕ್ಷೆ!

ಆದರೆ ಭಾಣಂತಿತನದಲ್ಲಿ ಸಾವಿರಾರು ಸ್ತ್ರೀಯರಿ ಪ್ರಾಣ ಉಳಿಸಿದ ಪ್ರಸಿದ್ಧ ವೈದ್ಯ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ಇವ್ಯಗಳನ್ನ ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕಮಮನೀಯ ಕೇತಕಲಾಪ, ತಂಪು ಮೆದುಳು, ಬುಜ್ಜ ನೇತ್ರಗಳನ್ನು ಹೊಂದಲು ಬಹು ಗುಣಕಾರಿಯಾಕ್ತ ಆಮಲಕೀ ತೈಲ ಯಾ ಹಿಮಸಾಗರ ತೈಲಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.)
Kunjal P. O. Brahmavar, S. K.

Nambiar's
ARYA VAIDYA SALA
UDIPI
Ideal House for Ayurvedic Treatment.
K. N. Kelu Nambiar,
Vaidya.

ಕಾಲಚಕ್ರವು ಉರುಳುತ್ತಾ ಹೋದಂತೆ, ಜನರ ಆಹಾರ-ವ್ಯವಹಾರ, ಉಡಿಗೆ-ತೊಡಿಗೆ ಆಚಾರ-ವಿಚಾರ, ನೀತಿ-ನಡತೆಗಳಲ್ಲಿ ಪರಿವರ್ತನೆ ಹೊಂದುವುದು ಸ್ವಾಭಾವಿಕ. ಅದರಂತೆ ಈ ೨೦ನೇ ಶತಮಾನದಲ್ಲಿ, ಜನರು ನಾಗರಿಕರಾಗಬಯಸುವುದು ಅಕ್ಷಮ್ಯವೇನಲ್ಲ. ಆದರೆ ಆದಷ್ಟೇ ವರ್ಷಗಳಿಂದ ನಮ್ಮ ಜಿಲ್ಲೆಯ ಉಡುಪಿ, ಕುಂದಾಪುರ ತಾಲೋಕುಗಳಲ್ಲಿ ಹೆಜ್ಜಾಗಿರುವ ಗೋವೆ ಕುಡುಬಿ ಯರ ಜಾತಿಯು ಮಾತ್ರ ಇನ್ನೂ 18ನೇ ಶತಮಾನದ ಉಡುಗೆ-ತೊಡಿಗೆ, ಆಚಾರ-ವಿಚಾರಗಳನ್ನು ಬಿಟ್ಟು ಕದಲದಿರುವುದು ತುಂಬಾ ವ್ಯಸನಕರ. ನಮ್ಮ ಹರಿಜನ ಪಂಗಡದ ಅತೀ ಕನಿಷ್ಠರೆಂತ ತಿಳಿಯಲ್ಪಟ್ಟ, ಕೊರಗರ ಜಾತಿ ಕೂಡಾ ಈಗ ಸಾಕಷ್ಟು ಮುಂದೆ ಬಂದಿರುವುದು ನಮ್ಮ ಗಮನಕ್ಕೆ ಬಾರದಿಲ್ಲ. ಈ ಕೊರಗರ ಜಾತಿಯವರನ್ನು ಇವರ ಉಡಿಗೆ-ತೊಡಿಗೆಯಿಂದ ನಾವು ಈಗ ಗುರ್ತಿಸುವುದು ಕೂಡಾ ಕಷ್ಟವಾಗುತ್ತದೆ.

ಮುಖ್ಯವಾಗಿ ಮಾನವರಿಗೆ ಅಗತ್ಯಬೇಕಾದುದು ಅನ್ನ, ಬಟ್ಟೆ, ಒಂದು ಮೇಳೆ ಒಂದು ಹೊತ್ತು ಉಣ್ಣದಿರಬಹುದು; ಆದರೆ ಮೈ ಮೇಲೆ ಸಾಕಷ್ಟು ಬಟ್ಟೆಬರೆಗಳು ಬೇಕೇಬೇಕು. ಉಣ್ಣದಿದ್ದರೆ ಯಾರೂ ನೋಡಲಾರರು. ಉಡದಿದ್ದರೆ ಅಥವಾ ಗಲೀಜು ಮತ್ತು ವಿಕಾರ ರೀತಿ ಬಟ್ಟೆತೊಟ್ಟರೆ ಎಲ್ಲರ ದೃಷ್ಟಿಗೂ ಬೀಳುತ್ತಾರೆ ಅಂಥವರು. ಅದೇ ರೀತಿ ಈ ಕುಡುಬಿ ಜಾತಿಯವರು, ಅದರಲ್ಲೂ ಮುಖ್ಯವಾಗಿ ಇವರ ಹೆಂಗಸರು, ಪೂರ್ವಕಾಲ ಗಂಟೆವ ತನಕ ಅರಬತ್ತಲೆಯ ಕೇವಲ ೨ೀರೆ ತುಂಡೊಂದನ್ನು ಉಟ್ಟು, ಜಿಗಲ ಮೇಲೆ ಸೆರಗು ಕೂಡಾ ಹಾಕಿಕೊಳ್ಳದೆ ತಮ್ಮ ಶರೀರದ ಹೆಚ್ಚಿನ ಅಂಗಗಳನ್ನು ಪೂರ್ಣ ಮುಚ್ಚಿಕೊಳ್ಳದೆ, ಅನಾಗರಿಕ ಕಾಡುಜನರಂತೆ, ಕುತ್ತಿಗೆ ಮತ್ತು ಕೈಗೆ ವಿಕಾರ ತೋರುವ ಮಾಣಿಸರ, ಬಳೆತೊಟ್ಟು, ದ್ವಿಪಾದ ಪಕುಗ ಅಂತೆ ಜೀವಿಸುವುದು ತೀರಾ ಆಸಹ್ಯವೂ, ಸೋಚಿಗವೂ, ಮತ್ತು ವ್ಯಸನಕರವೂ ಆಗಿದೆ.

ಇವರಲ್ಲಿ ಅಕ್ಷರಸ್ಥರು ನೂರಕ್ಕೆ 2-3 ತೂಡಾ ಸಿಗುವುದು ಕಷ್ಟ! ಹೆಂಗಸರಲ್ಲಂತೂ ಅಕ್ಷರಸ್ಥರಿಲ್ಲವೆಂದೇ ಹೇಳಬಹುದು. ಇವರ ಜೀವನ ವಿಧಾನ, ಆಚಾರ-ವಿಚಾರಗಳು ಹಳೆಯ ಕಾಲದವುಗಳೇ. ಆದರೆ ಈಗ ಪ್ರಭವವಾಗಿ ಇವರಲ್ಲಿ ಸುಧಾರಿಸಬೇಕಾದುದು ಮುಖ್ಯವಾಗಿ ಇವರ ಹೆಂಗಸರ ಉಡುಗೆ-ತೊಡಿಗೆ.

ಈ ಕುಡುಬಿ ಜಾತಿಯು ಹಿಂದೂ ಜಾತಿಯ ಒಂದುಭಾಗ. ಇವರು ತೀರಾ ಹಿಂದ್ದರು, ಮತ್ತು ಹಿಂದುಳಿದ ಜಾತಿ. ಇವರಲ್ಲಿ ಶ್ರೀಮಂತರು, ವಿದ್ಯಾವಂತರು ಇಲ್ಲವೇ ಇಲ್ಲ. ಅಪರೆ ಬರೇ ಸ್ವಲ್ಪ ಜನರು ಮಾತ್ರ ಸಾಕಷ್ಟು ನೆಗ್ಗಿಹಣ, ಚಿನ್ನಾಭರಣ, ಸ್ವಲ್ಪಮಟ್ಟಿಗೆ ಮನೆ ಜಮೀನು ಇದ್ದವರೂ, ಸ್ವಲ್ಪಮಟ್ಟಿಗೆ ಹಿಡುಬರಹಬಲ್ಲವರೂ ಇದ್ದಾರೆ. ಈ ಜಾತಿಯ ಜನರು ಕಾಯಕಸ್ಥರಲ್ಲಿ ನಿಷ್ಣಾತರು. ಬೆಳ್ಳಿಯಂಥ ಸಂಜೆಯತನಕ ಬೆವರು ಸುರಿಸಿ ದುಡಿಯಬಲ್ಲರು. ಆದರೆ ಈತನಕ ಇವರ ಜಾತಿಯ ಸುಧಾರಣೆಯು ಆಗಬಹುದು ಇವರ ದುರ್ದೈವ! ಇವರ ಜಾತೀಯ ಅಲ್ಪತ್ವ ಮತ್ತು ಸುರಾಲು ಗ್ರಾಮಗಳ [ಉಡುಪಿ ತಾಲೋಕಿನ] 3-4 ಮಂದಿ ಓದುಬರಹಬಲ್ಲ ಸುಧಾರಿತರು ತಮ್ಮ ಜಾತಿಯ ಸುಧಾರಣೆ ಬಗ್ಗೆ, ಹೆಚ್ಚಿನ ಆಸಕ್ತಿಯಿಂದಿದ್ದು, ಆ ಬಗ್ಗೆ ಜಾತಿಯ ನಂಲ್ಲಿ ತುಂಬಾ ಪ್ರಚಾರ ಮತ್ತು ಜಾಗ್ರತಿ ಮಾಡಲು ಯತ್ನಿಸಿದರೂ, ಈ ಪೆಡ್ಡು ಮತ್ತು ಗೊಡ್ಡು ಆಚಾರಗಳ, ನಿರಕ್ಷರ ಕುಕ್ಷಿಗಳಾದ ಇವರ ಜಾತಿಯವರು ಒಪ್ಪದೇ ಇರುವುದು ನನ್ನ ಗಮನಕ್ಕೆ ಬಂದಿದೆ. ಈಗಲೂ ಈ 3-4 ಮಂದಿ ತಮ್ಮ ಜಾತಿಯವರ ಸುಧಾರಣೆ ಬಗ್ಗೆ ಆಶೆ ಮತ್ತು ಆತುರದಿಂದಲೇ ಇದ್ದಾರೆ. ಆದ್ದರಿಂದ ಇವರಿಗೆ ಸರ್ವವಿಧದಿಂದಲೂ ನೆರವಾಗುವುದು ಇತರ ಜಾತಿಯವರಾದ ನಮ್ಮೆಲ್ಲರ ಕರ್ತವ್ಯವಾಗಿದೆ. ಈ ಬಗ್ಗೆ ಈ ಜಾತಿಯವರು ಇರುವ ಎಲ್ಲಾ ಗ್ರಾಮದ ಪಕೇಲರುಗಳೂ, ಉಡುಪಿ ಮತ್ತು ಕುಂದಾಪುರ ತಾಲೋಕು ಕಾಂಗ್ರೆಸ್ ಕಮಿಟಿಗಳೂ, ಈ ಎರಡು ತಾಲೋಕುಗಳ ಕೇಂದ್ರ ಕಾಂಗ್ರೆಸ್ ಕಮಿಟಿಗಳೂ, ನಮ್ಮ ಜನತಾ ಸರಕಾರವೂ, ಆಗತ್ಯ ಮತ್ತು ಯೋಗ್ಯ ವ್ಯವಸ್ಥೆಯನ್ನು ಕೂಡಲೆ ಕೈಗೊಂಡು, ಈ ಬಡ ಹಿಂದುಳಿದ ಹಿಂದೂ ಬಾಂಧವರನ್ನು ಸುಧಾರಿಸುವುದು ಅತೀ ಅಗತ್ಯವಾಗಿದೆ. ದೇವರಮೇಲೆ ಅಚಲ ವಿಶ್ವಾಸವುಳ್ಳ, ಈ ಜಾತಿಯವರನ್ನು ಉಡುಪಿ, ಧರ್ಮಸ್ಥಳ, ಸುಬ್ರಮಣ್ಯ ದೇವಸ್ಥಾನಗಳಂತೆ "ಸೆರಗು ಹಾಕಿಕೊಳ್ಳದೆ ಹೆಂಗಸರು ದೇವಸ್ಥಾನ ಪ್ರವೇಶಿಸಕೂಡದು" ಎಂಬ ಕಟ್ಟುನಿಟ್ಟಿನ ವಿಧಿಸುವಂತೆ, ನಮ್ಮ ಜಿಲ್ಲೆಯ ಎಲ್ಲಾ ದೇವಸ್ಥಾನಗಳ ಮುಕ್ತೇಸರರುಗಳೂ ಯತ್ನಿಸಿದರೆ, ಆದರಿಂದ ಇವರ ಮೇಲೆ ತುಂಬಾ ಪರಿಣಾಮಕಾರಿಯಾಗಿ, ಮುಖ್ಯವಾಗಿ ಪ್ರಥಮ ಇವರ ಉಡುಗೆ ಸುಧಾರಿಸುವ ಜತೆಗೆ, ಇವರ ಇತರ ಸುಧಾರಣೆಯೂ ಸಹಾನವಾಗಿ ಆಗಿ, ಈ ಜಾತಿಯವರ ಏಳ್ಗೆ ಆಗುವುದರಲ್ಲಿ ಸಂದೇಹವಿಲ್ಲ. ಜೈ ಹಿಂದ್.

ಹೊಸ ಪುಸ್ತಕ

ಜಮೀನ್ದಾರ

ಧನಾಢ್ಯರ ದುರಹಂಕಾರ, ದುರ್ವ್ಯಯ
ದುಸ್ಸಾಧನೆ ಮೊದಲಾದುವನ್ನು ಚಿತ್ರಿಸುವ

ಬಡವರ ಭೀಕರ ಪರಿಸ್ಥಿತಿಯ ಕನಿಕರಾವಸ್ಥೆಯನ್ನು ಹೃದ್ಯಾವಕವಾಗಿ ಪ್ರತಿಬಿಂಬಿಸುವ

ನವೀನ ಸಾಮಾಜಿಕ ಕಾದಂಬರಿ

ಜಮೀನ್ದಾರ

ಧನಿಕರೆನ್ನದೆ, ಬಡವರೆನ್ನದೆ ಪ್ರತಿಯೊಬ್ಬರೂ ಓದತಕ್ಕ ಜನತಾ ಸಾಹಿತ್ಯ

164 ಪುಟಗಳು .... ಬೆಲೆ ರೂ. 1 8 0

ಪ್ರತಿಗಳು ಸಿಗುವ ಸ್ಥಳಗಳು:--1. ನವಭಾರತ ಪುಸ್ತಕ ಭಂಡಾರ, ಉಡುಪಿ. 2. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 3. ಎಂ. ಎಸ್. ಮಯ್ಯ ಪುತ್ತೂರು. 4. ಕಿರಿಯೂರ ಪ್ರಪಂಚ, ಉಡುಪಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಇಂಗ್ಲಿಷ್ ಕಲಿಯಲು ಅತ್ಯನುಕೂಲವಾದ ಪುಸ್ತಕ

ವಿ. ಕೊರಡ್ಕಲ್ ಶ್ರೀನಿವಾಸರಾಯರ

ಸುಲಭದಲ್ಲಿ ಇಂಗ್ಲಿಷ್

(English Made Easy)

(ಇಂಗ್ಲಿಷ್ ಸ್ವಯಂಬೋಧಿನಿ)

ಬೆಲೆ ರೂ. 1-8-0; ಟಪ್ಪಾಲು ಖರ್ಚಾರಿ ರೂ 1-13-0

ಶ್ರೀ. ಯು. ಜೆ. ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ

ಲೋಕವ್ಯವಹಾರ ಬೋಧಿನಿ-

ವ್ಯವಹಾರಜ್ಞಾನದರ್ಪಣ

ಅತ್ಯಂತ ಜನೋಪಯೋಗೀ ಪುಸ್ತಕ

ಬೆಲೆ ರೂ. 1-8-0; ಟಪ್ಪಾಲು ಖರ್ಚಾರಿ ರೂ. 1-13-0

ಪ್ರತಿಗಳು ಸಿಗುವ ಮುಖ್ಯ ಸ್ಥಳಗಳು:

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ನವಭಾರತ ಬುಕ್ ಡಿಪೊ, ಉಡುಪಿ. 3. ಸ್ವತಂತ್ರ ಭಾರತ ಬುಕ್ ಕಂಪೆನಿ ಪೋರ್ಟ್, ಬೊಂಬಾಯಿ, 4. ಎಂ. ಎಸ್. ಮಯ್ಯ ಪುತ್ತೂರು 4. ನವಯುಗ ಪ್ರೆಸ್, ಉಡುಪಿ.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ವಿವಿಧ ಪಾತ್ರೆಗಳು



ಸಾರ್ವತ್ರಿಕ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಟಾಯಿಲ್ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸರಾಜಾಚಾರ್ಯ,
ರಥಬೀದಿ, ಉಡುಪಿ.

ದಿ ಮೂಲ್ಕಿ ಬ್ಯಾಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಲ್ಲಿ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618 ಎರಡನೆಯ 30-9-1948

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ. 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯ ವಾರ ೫ **NAVAYUGA WEEKLY, UDIPI, S. K.** Vol. 29 No. 5

FOUNDER: Hon'ble Mr. A. B. SHETTY, Health Minister, Govt. of Madras

ದೊಡ್ಡವರ ಹೃದಯ ದುರಂತಕ್ಕೀಡಾದಾಗ-

ಸುಖ-ದುಃಖ, ಜಯಾಪಜಯ, ಭರತ-ಇಳಿತ, ಇವು ಸಾಮಾನ್ಯರಂತೆಯೇ ಜನ ನಾಯಕರಿಗೂ ಒದಗುತ್ತವೆ; ಎಲ್ಲರಂತೆ ಅವರೂ ಅಂತಹ ಸಂದರ್ಭಗಳಲ್ಲಿ ಹೃದಯ ಕಳಕೊಳ್ಳುತ್ತಾರೆ. ತಮಗಭ್ಯಾಸ ವಿಲ್ಲದ, ಹೊಸ ವಿದ್ಯಮಾನಗಳಿಗೆ ಅಕ ಸ್ಮಾತ್ ಈಡಾಗಿ, ಎಂತಹ ಹೃದಯವಾ ದರೂ ಆ ಮುಹೂರ್ತದಲ್ಲಿ ಅಡಿಮೇಲಾ ಗದಿರುವದಿಲ್ಲ. ಯೋಧ ಶಿಕ್ಷಣ, ಸೈನಿಕ ಪ್ರವೃತ್ತಿ ಮಾತ್ರ ಇದಕ್ಕಪವಾದ. ಅಂತೆ ಯೇ, ಕೋರ್ಟಿನಲ್ಲಿ ವಾದ ಹೂಡುತಿದ್ದಾ ಗ, ಪತ್ನಿಯ ಮರಣದ ಸುದ್ದೀ ತಂತಿ ಬಂದರದನ್ನೋದಿಕೊಂಡು, ಯಥಾ ಪ್ರಕಾ ರಮಾತು ಮುಂದುವರಿಸಬಲ್ಲ ಸರ್ದಾರ್ ಪಟೇಲರಂತಹ ಹುಟ್ಟುಗುಣ ಹಾಗೂ ಸಂ.ಸ್ಕಾರ ಬದ್ಧ ಕಲು ಹೃದಯಿ ಗಳೂ ಇದ್ದಾರೆ; ಆದರೆ ಸರ್ವಸಾಮಾ ನ್ಯವಾಗಿ ಮಾನವ ಹೃದಯವೆಂಬುದು ಚ ಲಿಸುವಂತಹದು; ಕರಗುವಂತಹದು. ಕಳೆದ ದಿನಗಳಲ್ಲಿ ಅಕಸ್ಮಿಕ ವಿಶೇಷ ಘಟನೆಗಳು ನಡೆದಿದ್ದುವು; ಅವುಗಳು ದೊಡ್ಡ ಹೃದಯಗಳಲ್ಲಿ ಹೇಗೆ ಪರಿ ಣಾಮಮಾಡಿದ್ದುವೆಂಬ ಕೆಲವು ದೃ ಷ್ಟಾಂತಗಳನ್ನು ಇಲ್ಲಿ ಕೊಡಲಾಗಿದೆ:-

ಜೆರ್ನಾಡೊಟ್ಟಿ ಮರಣದಿಂದ-

ಪಲಸ್ತೈನಿನಲ್ಲಿ, ಜಾಗತಿಕ ಸಂಘದ ಶಾಂ ತಿದೂತನಾಗಿದ್ದ ಕೌಂಟ್ ಬೆರ್ನಾಡೊಟ್ಟಿ ಯವರು ಗುಂಡಿಡಲ್ಪಟ್ಟು, ಕೊಲೆಯಾದ ರಷ್ಟೆ? ಅವರು ಕೊಲೆಯಾಗುವ ಮೊದಲೇ ಜೆರುಸಲೇಮಿನತ್ತ ಹೋಗುತಿದ್ದಾಗ, ಅವರ ಕಾರಿಗೆ ಗುಂಡು ಬಿದ್ದು ಕನ್ನಡಿಗ ಕೊಡೆದಿದ್ದುವು; ಅಷ್ಟರಿಂದ ಅವರು ತೀರಾ ಗಲಿಬಿಲಿಗೊಂಡುದು ಜೆರುಸಲೇಮಿನಲ್ಲಿ ಸ್ವಾಗತಕ್ಕಾಗಿ ನೆರೆದಿದ್ದವರಿಗೆ ತಿಳಿಯಿತು. ಕೆಳಗಿಳಿದು ತನ್ನ ಕಾರಿನ ಗುಂಡು ತೂತು ಗಳನ್ನು ಪರೀಕ್ಷಿಸಿ ನೋಡಿ 'ಶ್ರಮಬದ್ಧ ರಿರಲಿ, ಅಹ್ವಾಡಿಗಳಿರಲಿ, ಯಾರ ಗುಂಡಿ ಗಾದರೂ ಬಲಿಬಿದ್ದು ಸಾಯಲು ನಾನಿಚ್ಛೆ ಸುವದಿಲ್ಲ' ಎಂದವರು ಗಟ್ಟಿದ ಕಂಠದಿಂದ ಹೇಳಿದ್ದರು. ಹಾಗೆ ಹೇಳಿ ಹೊರ ಟವರ ಕಾರನ್ನೇ ಹಾದಿಯಲ್ಲಿ ಅಡ್ಡಗಟ್ಟಿ ನಿಲ್ಲಿಸಿ ಅತಿ ಸಮೀಪದಿಂದ ಗುಂಡಿಟ್ಟು ಕೊಂದು ಹಾಕಿ ಬಿಟ್ಟರು! ಕೌಂಟ್ ಬೆರ್ನಾಡೊಟ್ಟಿ ಸ್ವೀಡನಿನ ರಾಜ ದ್ವಾರಿ. ಗಡಿನಾಡು ಪ್ರಾಂತ್ಯದ ಗವರ್ನರ್ ಆಳಿಯ. ಈ ಮರಣ ದ ಸುದ್ದಿ ಬಂದಾಗ ರಾಜ ಗವ್ಹಾವ್ ದತ್ತಿ ಣ ಸ್ವೀಡನಿನ ಪ್ರಯಾಣಕ್ಕಾಗಿ ಆಣಿಯಾ ಗಿದ್ದರು. ತನ್ನ ಅಳಿಯನ ಮರಣ ವಾರ್ತೆ ಕೇಳಿದೊಡನೆ ರಾಜನ ಮುಖ ವಿವರ್ಣ ವಾಗಿ ಕಣ್ಣುಗಳಲ್ಲಿ ನೀರು ತುಂಬಿ ಬಂತು; ಒಂದು ರಾಷ್ಟ್ರದ ಹೊಣೆಹೊತ್ತ ರಾಜರು ಅಳುವುದೊಂದು ಅಶ್ಚರ್ಯಕರ ಘಟನೆ!

ಜಿನ್ನಾರ ನಿಧನದಿಂದ-

ಕಾಯಿದೇ ಅಝಮ್ ಜಿನ್ನರ ಶವ ದ ಸಮ್ಮುಖದಲ್ಲಿ ಪಾಕಿಸ್ತಾನದ ಮಂತ್ರಿ ಗಳೆಲ್ಲರ ಮುಖವೂ ರವವದನದಂತಾಗಿ ತ್ತು. ಎಂದು ಪ್ರತ್ಯಕ್ಷದರ್ಶಿಗಳು ಸಣ್ಣಿ ಸಿದ್ದಾರೆ. ಪಾಕಿಸ್ತಾನದ ಮಂತ್ರಿ ಮಂಡಲದ ಸಭೆಗಳಲ್ಲಿ ಅಬ್ದುಲ್‌ರಾಬ್ ನಿಸ್ತಾರ್‌ರನ್ನು ಮು ಸ್ಲಿಂ ನಾಯಕನಾಗಿ ಮಾರ್ಪ ಡಿಸಿದವರೇ ಕಾಯಿದೇ ಅಝಮ್ ಜಿನ್ನರು. ಪಾಕಿಸ್ತಾನ್ ಸ್ಥಾಪನೆಯ ಮೊದಲು ಅಬ್ದುಲ್‌ರಾಬ್ ನಿಸ್ತಾರರ ಫರ್ಜಾನೆಯೆಂ ಬುದು ಕಾಸಿಂ ರಜ್ವಿಯ ಹೂಂಕಾರಕ್ಕೆಂತ ಲೂ ದೊಡ್ಡದಿದ್ದಿತು. ಮಾನ್ ಸಕೋ ದರರ ಕಾಂಗ್ರೆಸ್ ವರ್ಚಸ್ಸಿನಿದಿರಲ್ಲಿ ಗಡಿ ನಾಡು ಎಸೆಂಬ್ಲಿಯ ಒಂದು ಸ್ಥಾನವನ್ನು ಕೂಡಾ ಜನಮತದಿಂದ ಪಡೆಯಲಾಗ ದಿದ್ದ ಸರ್ದಾರ್ ಅಬ್ದುಲ್‌ರಾಬ್ ನಿಸ್ತಾರರ ಕಲ್ಲೆದೆಯನ್ನು ಕಂಡೇ ಮಿ. ಜಿನ್ನರು ತನ್ನ ನಚ್ಚಿನ ಬಂಟನಾಗಿ ಕಟ್ಟಿಕೊಂಡಿದ್ದರು; ಪಾಕಿಸ್ತಾನ್ ಪೂರ್ವದ ಬ್ರಿಟಿಷ್ ಮಂತ್ರಿ ಸಮಿತಿ ಸಮ್ಮೇಲನದ ಕಾಲದಿಂದೀವರೆಗೂ ಪಾಕಿಸ್ತಾನದ ಅಗ್ರಗಣ್ಯ ಪ್ರಮುಖರ ಲ್ಲೊಬ್ಬನಾಗಿ ಅವರನ್ನು ಏರಿಸಿ ಕೊಂಡಿದ್ದರು. 'ದರಗು ಪಠಾಣ' ಎಂದು ಹೆಸರಾಗಿರುವ ನಿಸ್ತಾರರ ಮಾತುಕೃತಿಗಳಂತೆಯೇ ರೂಪವನ್ನು ನೋಡಿದವರು ಕೂಡಾ ಈ ಮನುಷ್ಯನ ಹೃದಯದಲ್ಲಿ ಕ್ರೂರ, ವೀರರಸದ ಹೊರ ತು ಮಿಕ್ಕಾವುದರ ಬಿಂದು ಕೂಡಾ ಇರ ಲಾರದೆಂದು ಭಾವಿಸಬೇಕು. ಆದರೆ ಕಾ ಯದೇ ಅಝಮ್ ಶವದ ಸಮ್ಮುಖದ ಲ್ಲಿ ಅಬ್ದುಲ್‌ರಾಬ್ ನಿಸ್ತಾರ್ ತಾಯಿಯ ನ್ನು ಕಳಕೊಂಡ ಮೊರೆಹಾಲ ಕಬ್ಬಲಿ ಮಗುವಿನಂತೆ ಬಿಕ್ಕಿಬಿಕ್ಕಿ ಅತ್ತಿದ್ದರು. ಜಿ ನ್ನರ ಮರಣ ಕಾಲದಿಂದ ಅವರ ಶವ ಸಂಸ್ಕಾರ ಮುಹೂರ್ತದ ವರೆಗೆ ಎಡೆಬಿಡ ದೆ ಅಳುತ್ತಿ ತನ್ನೆರಡು ಕಣ್ಣುಗಳೂ ಬಾತು ಕೆಂಪೇರುವಂತೆ ಮಾಡಿಕೊಂಡವ ರೆಂದರೆ, ಅಣ್ಣನಷ್ಟೇ ಸ್ಫೂರ್ತಿಯ ಮಿಸ್. ಫಾತಿಮಾ ಜಿನ್ನಾ. ಏಕ ಮಾತ್ರ ಪುತ್ರಿಯಾಗಿದ್ದ ತಾನು ತಂದೆಯ ನ್ನು ಕಳಕೊಂಡ ತನ್ನ ದುಃಖವನ್ನೂ ಸಹಿಸಿಕೊಂಡುದಲ್ಲದೆ, ಮಿಸ್ ಫಾತಿಮಾ ಳನ್ನು ಸಂತೈಸುವ ಕಲನವನ್ನು ಆ ಸಂ ದರ್ಭದಲ್ಲಿ ಮಾಡಿದುವೆಂದರೆ ಜಿನ್ನಾ ಕುವರಿ ಪ್ರೀಮತಿ ಫಾತಿಮಾ.

ಹೈದರಾಬಾದ್ ನಿಜಾಮ್

ದುರ್ಬುದ್ಧಿವಂತಿಕೆ ಮತ್ತು ರಾಜಕೀಯ ಪಗಡೆಯಾಟದಲ್ಲಿ ನಿಪುಣರೆಂಬುದು ಈ ಮೊದಲೇ ಗೋಚರಕ್ಕೆ ಬಂದಿದ್ದರೂ ಹೈ ದರಾಬಾದ್ ನಿಜಾಮರು ಲೋಕದಲ್ಲೇ ಅಗ್ರಗಣ್ಯ ಶ್ರೀಮಂತನಿದ್ದು, ಈವರೆಗೂ ತಲೆ ತಗ್ಗಿಸುವದನ್ನು ಅರಿತವರಲ್ಲವೆಂಬು ದು ಖಂಡಿತ. ಈಗ, ಏನೆಂದರೂ ಇವೇ ಸೆಪ್ಟಂಬರ್ ತಾ. 13ರಿಂದ 17ರ ವರಗೆ ನಡೆದ ದೆಲ್ಲವೂ ಅವರ ಹೃದಯವನ್ನು ಅಡಿಮೇಲು ಮಾಡುವ ಘಟನೆಗಳೇ;

ಬೇಕಾಗಿದ್ದಾರೆ

ಕನ್ನಡಿಗರಿಂದ ಸ್ಥಾಪಿತವಾಗಿ, ಕನ್ನಡಿಗರೆಲ್ಲರ ಪ್ರೋತ್ಸಾಹಕ್ಕೆ ಅರ್ಹವಾಗಿರುವ, ಜನಸಾಮಾನ್ಯರೂ ಏನೇ ಮಾಡಲು ಅನುಕೂಲವಾದ ಪ್ರೊವಿಡೆಂಟ್ ಸಂಸ್ಥೆ-

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್‌ಗೆ ಕೆಲವು ಉತ್ಸಾಹೀ ಏಜಂಟರು ಬೇಕಾಗಿದ್ದಾರೆ.

೫ಂಗಳಿಗೆ ನೂರಾರು ರೂಪಾಯಿ ಸಂಪಾದಿಸಬಹುದು.

ಏಜನ್ಸಿ ವಿವರಗಳಿಗೆ ಬರೆಯಿರಿ.

The New Karnataka Provident Insurance Co., Ltd. Udipi, S.K.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಸ್ಥಳಾನ ಕಾರ್ಯಾಲಯಗಳು:-ಧಾರವಾಡ,
THE UNITED KARNATAK INSURANCE COMPANY, LIMITED.

ಯಾರೂ ನಿರೀಕ್ಷಿಸಿರದಷ್ಟು-ನಿಜಾಮರಂತೂ ಎಂದಿಗೂ ಊಹಿಸಿರದಷ್ಟು-ಕ್ಷಿಪ್ರಗತಿಯಿಂದ ಆ ಐದುದಿನಗಳಲ್ಲಿ ನಡೆದ ಸ್ಥಿತಿ ಮಾರ್ಪಾಟವು ನಿಜಾಮರನ್ನು ಒಂದು ಪ್ರಪಂಚದಿಂದ ಮತ್ತೊಂದು ಲೋಕಕ್ಕೆ ಎತ್ತಿ ಒಗೆದಂತಾಗಿತ್ತು. ಈ ಸಂದರ್ಭದಲ್ಲಿ ಅವರ ಲಂಗಾಂಗಗಳು ನಡುಗುತ್ತಲೇ ಇದ್ದಿರಬೇಕೆಂದು ಊಹಿಸಲಡ್ಡಿಯಿಲ್ಲ. ತಾ. 17ರಲ್ಲಿ ತನ್ನ ಸೇನೆಯ ಶಸ್ತ್ರ ಕೆಳಗಿಡಿಸುವ ಶರಣಾಗೂಚನೆಯನ್ನು ಅವರು ಆಕಾತಪಾಣಿಯಲ್ಲಿ ಘೋಷಿಸಿದಾಗ ಅವರ ಸ್ವರಕ್ಕಿಂತಲೂ ಅದರ ನಡುಕವೇ ಕೇಳುವವರಿಗೆ ವಿಶೇಷಾರ್ಥ ಕೊಡುತಿತ್ತಂತೆ! ಆ ಮೇಲೆ, ಇದು ವರೆಗೆ ಹೈದರಾಬಾದಿನಲ್ಲಾದ ಎಲ್ಲಾ ಅಪರಾಧಗಳಿಗೂ ರಝಾಕಾರರನ್ನೂ ಲಾಯಕ್‌ಅಲಿ ಮಂತ್ರಿ ಮಂಡಲವನ್ನೂ ಹೊಣೆಮಾಡಿ, ಅವರ ಕೈಯಲ್ಲಿ ನಿಸ್ಸಹಾಯಕನಾಗಿ ಸಿಕ್ಕಿ ಬಿದ್ದಿದ್ದ ತನ್ನನ್ನು ಭಾರತ ಸರಕಾರವು ಬಂಧ ವಿಮೋಚನೆಗೊಳಿಸಿತೆಂದು ತಾ. 23ನೇ ರಾತ್ರಿ ನಿಜಾಮರು ತನ್ನ ಅಕೃತವಾಣಿ ಮೂಲಕ ಮತ್ತೊಮ್ಮೆ ಪ್ರಾತಾಡಿದರು. ಹೈದರಾಬಾದ್ ನಿಜಾಮರು ತನ್ನಾಯವ್ಯದಲ್ಲಿ ರೇಡಿಯೋ ಭಾಷಣ ಕೊಟ್ಟುದೆಂದರೆ ಇದೇ ತಾ. 17 ಮತ್ತು ತಾ. 23ರಲ್ಲಿ ಎರಡೇ ಸಲ. ಹಿಸ್ ಎಕ್ಸಾಲ್ಟೆಡ್ ಹೈನೆಸರಲ್ಲವೆ? "ಪರ್ಮಾನ್" ಮಾತ್ರ ಹೊಂದಿಸುತಿದ್ದರಲ್ಲದೆ 'ಗಾಳೀ ಮಾತಾ"ಡುವ ಲಗುತ್ಪಕ್ಕೆ ಹೋಗಿರಲಿಲ್ಲ. ಹೈದರಾಬಾದಿನ ಶಾಹೆಫ್‌ಜಾಯಿ ರಾಜಮನೆತನದವರ ದಾಖಲೆಯಲ್ಲೇ ಈ 'ಆಕಾಶವಾಣಿ' ಶ್ವಾಸಸ್ವಯ ಹೊಸತು.

ಮುನ್ಶಿಗಳ ಜ್ವರ

ಭಾರತ ಸರಕಾರದ ಏಜೆಂಟ್ ಜನರಲ್ ಆಗಿ ಹೈದರಾಬಾದಿನಲ್ಲಿದ್ದ ಶ್ರೀ ಕೆ. ಎಮ್. ಮುನ್ಶಿಗಳು ಆಪ್ಲಿಯ ಹೋರಾಟ ವಮುಗಿದ ದಿನದಿಂದಲೇ ಜ್ವರಕ್ಕೀಡಾಗಿ ಕೆಲವೊಮ್ಮೆ 105 ಡಿಗ್ರಿ ತಾಪವನ್ನೂ ಭರಿಸಿದ್ದರು; ಈಗ ಅವರನ್ನು ಬೊಂಬಾಯಿಗೆ ತಂದು ವಿಶೇಷ ಡಾಗರೂಕತೆಯಿಂದ ಚಿಕಿತ್ಸೆ ನಡಿಸಲಾಗುತ್ತಿದೆ. ಒಂದು ವರ್ಗದ ಸನ್ನಿಪಾತ ಜ್ವರವಾಗಿ ಅದು ಮಾರ್ಪಟ್ಟಿದೆ.ಶ್ರೀಮುನ್ಶಿಗಳ ಕಾಹಿಲೆಯ ಕಾರಣ ಹೇಳಬಲ್ಲ ಅಧಿಕಾರಿಗಳು ಅವರ ಶುರೂಷೆಯನ್ನೀಗ ನಡಿಸುತ್ತಿರುವ ತಜ್ಞ ಡಾಕ್ಟರುಗಳೇ ಹೊರತು ಇತರರಲ್ಲವೆಂಬುದೇನೋ ನಿಜ. ಅಕಸ್ಮಾತ್ ದಿಗಿಲುಗೊಂಡು ಜ್ವರದಲ್ಲಿ ಬೀಳುವ ನಿದರ್ಶನಗಳು ನಮ್ಮಲ್ಲಿ ಬೇಕಾದಷ್ಟಿವೆ. ಶ್ರೀ ಮುನ್ಶಿಗಳಿಗೂ ಹಾಗಾಗಿರಬಹುದೇ, ಎಂಬ ಪ್ರಶ್ನೆ ಹುಟ್ಟುತ್ತಿದೆ. ಹೈದರಾಬಾದ್ ಆಂದೋಲನದ ಆ ಸಂಘಿಗ್ಧ ದಿನಗಳಲ್ಲಿ ಶ್ರೀ ಮುನ್ಶಿಯವರ ಅದೃಷ್ಟವು ನಿಜಕ್ಕೂ ದಾರದಲ್ಲಿ ನೇತಾಡುತಿತ್ತು. ಹಿಂದೀ ಸೇನೆ ಹೈದರಾಬಾದ್ ನೆಲದೊಳಗೆ ಕಾಲಿಟ್ಟ ಕೂಡಲೇ ಹೈದರಾಬಾದ್ ನಗರದಲ್ಲಿದ್ದ ಭಾರತದ ರಾಯಭಾರಿ ಬಂಗಲೆಯನ್ನು ನಿಜಾಮ್ ಸೈನಿಕರು ಮುತ್ತಿಗೆ ಹಾಕಿ ಅಲ್ಲಿಯ ಪಹರೆಗಾರರ ಎದೆಗೆ ಪಿಸ್ತೂಲು ಹಿಡಿದು ಅವರನ್ನು ನಿಶ್ಶಸ್ತ್ರಗೊಳಿಸಿ, ಮುನ್ಶಿಯವರ ಖಾಸಗೀ ಕೋಣೆಯೊಳಗೆ ನುಗ್ಗಿ ಹೋಗಿ, ಅವರನ್ನು ಹೊರತಂದು ತಮ್ಮ ಕಾರು ಹತ್ತಿಸಿದ್ದರು. ನಿಜಾಮ್ ಸರಕಾರದ ಒಂದು ಬಂಗಲೆಯೊಳಗೆ ಅವರನ್ನು ಕೂಡಿಸಿಟ್ಟು, ಅವರು ಯಾರೊಡನಾದರೂ ಮಾತಾಡುವ ಮಾತುಂತಿರಲಿ,ಹೊರಗೆ ತನ್ನ ತೋಟದಲ್ಲಿ ಕೂಡಾ ಕಾಲಿಡದಂತೆ ನೋಡಲು ಕ್ರೂರ ಸರ್ಪಗಾವಲನ್ನಿಟ್ಟಿದ್ದರು. ಒಂದು ಬಾರಿ ಶ್ರೀ ಮುನ್ಶಿಗಳು ತನ್ನ ಬಂಗಲೆಯ ತೋಟಕ್ಕೆ ಬಂದಾಗ, ಕಾವಲುಗಾರ 'ಒಳಗೆ ನಡೆ" ಎಂದವರನ್ನು ಅಶ್ಲೀಲ ಮಾತುಗಳಿಂದ ಬೈದುದಲ್ಲದೆ ಅವರ ಎದೆಗೆ ಕೋವಿಯನ್ನೂ ಗುರಿಮಾಡಿ ಹಿಡಿದನಂತೆ. ಶ್ರೀ ಮುನ್ಶಿಗಳು ಹೆಜ್ಜೆ ಹಿಂದಿಡಲು ನಿರಾಕರಿಸುವ ಸಮಯಕ್ಕೆ ಸರಿಯಾಗಿ ನಿಜಾಮರ ಓರ್ವ ಅಧಿಕಾರಿಯು ಅಲ್ಲಿಗೆ ಬಂದು, ಆ ಕಾವಲುಗಾರನನ್ನು ಸಮಜಾಯಿಸಿದಿಂತಿದ್ದರೆ,ಎಲ್ಲವೂ ಕೈಮೀರಿ ಹೋಗುತಿತ್ತು. ಹೀಗೆ ಆ ದಿನ ಸಾಮಾನ್ಯ ಕೀಡಿಗಳಿಗಿಂತಲೂ ಕಳತೆಯ ಅಪಮಾನಕ್ಕೀಡಾಗಿದ್ದ ಮುನ್ಶಿಗಳಿಗೆ ಮರುದಿನವೇ ನಿಜಾಮರ ಶರಣು ಸೂಚನೆ ಸ್ವೀಕರಿಸುವ ಅಸಾಮಾನ್ಯ ಗೌರವ ದೊರೆತಿತ್ತು. ಎಷ್ಟೆಂದರೂ ಮನುಷ್ಯ ಜೀವಿ ತಾನೆ! ಅದರ ಹೃದಯವನ್ನು ಅನಿರೀಕ್ಷಿತವಾಗಿ ಒಮ್ಮೆ ಪಾತಾಳಕ್ಕಪ್ಪಳಿಸಿ, ಮರುಕ್ಷಣವೇ ಆಕಾಶಕ್ಕೆ ೧೦೫ ಡಿಗ್ರಿ ಇಷ್ಟು ಬನ್ನ ಬಡಿಸಿದರೆ ಅದರ ಪರಿಣಾಮವು ತೋರಿಬಾರದೆ ಹೋದೀತೆ? ಶ್ರೀ ಮುನ್ಶಿಗಳಿಗೆ ಜ್ವರತಾಗಲು ಇದೇ ಕಾರಣ-ಅಥವಾ ಇದೂ ಒಂದು ಕಾರಣವಾಗಿರಬಹುದು - ಎಂದು ಊಹಿಸದಿರುವುದು ಹೇಗೆ?

ಕಾಸಿಮ್ ರಜ್ವಿ

ಈ ಸಂದರ್ಭದಲ್ಲೂ ರಝಾಕಾರ್ ನಾಯಕ ಕಾಸಿಮ್ ರಜ್ವಿಯ ಸ್ಮರಣೆ ಬರುವುದು ಸ್ವಾಭಾವಿಕ. ಅವನಿಗೊದಗಿದ ಈ ಆಕಸ್ಮಿಕ ಅದೃಷ್ಟವು ಆ ಪಾಷಾಣ ಹೃದಯದಲ್ಲಿ ಹೇಗೆ ಪಡಿ ಮೂಡಿರಬಹುದು? ಎಂದು ಆ ಲೋಚಿಸುವವರಿರಬಹುದು ಎಷ್ಟೆಂದರೂ ಕಾಸಿಮ್ ರಜ್ವಿಯೂ ಶ್ರೀ ಕೆ. ಎಮ್. ಮುನ್ಶಿಗಳಂತೆ ಓರ್ವ ನಕೇಲ ಹೋರಾಟ ಸೇನಾನಿಯಲ್ಲ. ನಮ್ಮಲ್ಲಿದ್ದು 'ಆರ್. ಯಸ್. ಯಸ್.'ನಂತಹ ಜಾತೀಯ ಸಂಸ್ಥೆ ಸರಕಾರದ ಆಶ್ರಯ ಮತ್ತು ಶಸ್ತ್ರಾಸ್ತ್ರಗಳು ದೊರೆತರೆ ಹೇಗಾಗುತ್ತೋ, ಹಾಗೆಯೇ ರಜ್ವಿಯ ರಝಾಕಾರ್ ದಳ ಹೈದರಾಬಾದನ್ನು ಆಕ್ರಮಿಸಿಕೊಂಡಿದ್ದಿತೇ ಹೊರತು ಅನ್ಯಥಾ ಅಲ್ಲ. ನಿಸ್ಸಹಾಯಕರ ಕೊಲೆ, ಸುಲಿಗೆ, ದರೋಡೆಗಳ ದೆಸೆಯಿಂದಾಗಿ ಆದಕ್ಕೆ ದೊರೆತ ಭೀಕರ ರೂಪ-ಉಕ್ಷ್ಣವಧಿಯ ಸಂಖ್ಯಾಬಲವುಂಟೆಂದು ತೋರಿಸುವದಕ್ಕಾಗಿ 18 ವರುಷದ ಕೆಳಗಿನವರನ್ನೂ ಅಧಿಕ ಸಂಖ್ಯೆಯಲ್ಲಿ ಸೇರಿಸಿಕೊಂಡು ಕವಾಯಿತು ಮಾಡಿಸಿ ರಜ್ವಿ ಹೊಡಿದ್ದ ವಕೀಲೀವಾದ ಬಲ-ಇವಿಷ್ಟರಿಂದಲೇ ರಝಾಕಾರ್ ಪ್ರತಾಪ ಸರ್ವವ್ಯಾಪಿಯಾಗಿದ್ದಿತ್ತಲ್ಲದೆ ಬೇರಲ್ಲ. ಆದರೆ ನಾಯಕ ರಜ್ವಿಯಲ್ಲಿದ್ದುದೂ ಕೈಮಿನಲ್ ನಕೇಲಿ ಮನೋವೃತ್ತಿ ಹೊರತು ಸೇನಾನಿಯ ಶಕ್ತಿ ಸಂಘಟನಾಬಲವಲ್ಲ. ಶಿಸ್ತು ಸಂಘಟನಾಕರ್ತ ಸೇನಾನಿಯಾಗಿರದ ರಜ್ವಿ, ಕ್ರಮಬದ್ಧ ಸೇನೆಯಾಗಿರದ ರಝಾಕಾರರನ್ನು ಯದ್ಧಕ್ಕೆ ಮುಂದೊಡ್ಡಿ ಚಲ್ಲಾಪಿಲ್ಲಿಗೊಳಿಸಿ, ತಾನು ತನ್ನ ಕಾರ್ಯಾಲಯದಲ್ಲಿ ಕುಳಿತಲ್ಲಿಯೇ ಕೈದಿಯಾದ. ತನ್ನ ವಾದ ಬಲವೊಂದನ್ನೇ ನಂಬಿಕೊಂಡ ವಕೀಲನು, ಕೊನೆಗದು ಅಡಿಮೇಲಾದಾಗ, ಆ ಪರಾಭವ ಸ್ಥಲವನ್ನು ಅನುಭೋಗಿಸುವದನ್ನು ತನ್ನ ಕಕ್ಷಿಗಾರನ ಪಾಲಿಗೆ ಬಿಟ್ಟು ತಾನು ನೆಮ್ಮದಿಯಿಂದಿರುವ ಸಂಪ್ರದಾಯ.ಆದರೀ ಸುಯೋಗವು ರಜ್ವಿ ವಕೀಲನಿಗೆ ತಪ್ಪಿ ಹೋಗಿದೆ ಆತ ತನ್ನ ಕಕ್ಷಿಗಾರನಾಗಿ ಕಷ್ಟಕೊಂಡಿದ್ದ ನಿಜಾಮರನ್ನು ತಾನು ಪಾರಾಗಿ ತನ್ನೀ ವಕೀಲನನ್ನೇ ಬಲಿ ಕೊಟ್ಟುದು ಮಾತ್ರವಲ್ಲ; ಎಲ್ಲಾ ಪಾಪಗಳ ಹೊರೆಯನ್ನೂ ಇವನ ತಲೆಗೇನೇ ಹೇರಿ ಬೀಳ್ಕೊಟ್ಟರು. ರಜ್ವಿ ಬಡಾಯಿ ಹಾರಿಸುತಿದ್ದಂತೆ ತಾನು ಹೋಗಾಡಿ ಮಡಿಯಬಹುದಿತ್ತು.-ಅತ್ಮಪಶ್ಚಿ ಮಾಡಿಕೊಳ್ಳಬಹುದಿತ್ತು--ತಲೆ ತಪ್ಪಿಸಿಕೊಂಡು ಇನ್ನೂ ಬಹು ಸಂಖ್ಯೆಯಲ್ಲಿ ಸಂಸ್ಥಾನದಲ್ಲಿ ಉಳಿದುಕೊಂಡಿರುವ ರಝಾಕಾರರನ್ನು ಗುಪ್ತ ಪುಂಡಾಟಕೆಗಾಗಿ ಸಂಘಟಿಸಿ, ತಾನು ಕಲಿತಿದ್ದ ಏಕಮಾತ್ರ ಕಲೆಯನ್ನು ಪ್ರಯೋಗಿಸಬಹುದಿತ್ತು. ಆದರೆ ಅಜೇಯಾತಂಕವಿದಿರು ನಿಲ್ಲುವ ಎದೆಗಾರಿಕೆಗೂ,ಅಡ್ಡ ಹಾದಿಯಿಂದ ಸುಲಿಯುವ ಪುಂಡುಗಾರಿಕೆಗೂ ವ್ಯತ್ಯಾಸವಿದೆಯೊದ್ದರಿಂದ ಮೇಲಿನ ಕಾರ್ಯಕ್ಕೆಗತ್ಯವುಳ್ಳ ಧೈರ್ಯವಿಲ್ಲದೆ, ಎದೆ ಕಳಕೊಂಡೇ ರಜ್ವಿ ಕೈದಿಯಾದ ಮಿಕ್ಕವರಂತೆ ಅವನ ಹೃದಯ ತಲ್ಲಣಿಸಿರಬೇಕು, ಎನ್ನುವದಕ್ಕಿಂತಲೂ ಅವನ ಎದೆ ಪೂರ್ತಿ ಕಳೆದುಹೋಗಿರಬೇಕು ಎಂದು ಊಹಿಸಬಹುದು.

ನಿಜಾಮ್ ದಳದ ಶರಣಾರ್ಥಿ—

ಇಂತಹ ಅಕಸ್ಮಿಕ, ಭಯಾವಹ ಸನ್ನಿವೇಶಗಳಲ್ಲಿ ಹೈದಯ ಮತ್ತು ನರನಾಡಿಗಳನ್ನು ಕೆದಕಿಕೊಳ್ಳಬಾರದೆಂಬುದಕ್ಕಾಗಿಯೇ ಸೇನಾ ಶಿಕ್ಷಣ ಮತ್ತು ಸೇನಾ ಶಿಸ್ತು ಇದೆ. ಕ್ರಮಬದ್ಧ ಸೈನಿಕರು ಹಾಗೂ ಸೇನಾನಿಗಳು ತಮಗೊದಗುವ ಸೋಲು ಅಥವಾ ಗೆಲವಾವುದಕ್ಕೂ ಹೃದಯವನ್ನು ಮಾರಿಬಿಡದೆ ಯಂತ್ರಗರಂತೆ ಹೇಗೆ ವರ್ತಿಸುವರೆಂಬುದಕ್ಕೆ ಹೈದರಾಬಾದ್ ಸೇನೆಯು ಹಿಂದೀ ಸೇನೆಗೆ ಶರಣಾಗುವಾಗ ಸೋತ ಮತ್ತು ಗೆದ್ದ ಸೇನಾನಿಗಳಾದ ಜನರಲ್ ಎಲ್ ಎಂಡ್ರೂಸ್ ಮತ್ತು ಜನರಲ್ ಚೌಧರಿಯವರು ಆ ಕಾರ್ಯವನ್ನು ನಿರ್ವಹಿಸಿದ ಮರ್ಜಿಯನ್ನು ಉಲ್ಲೇಖಿಸಿಬಹುದು:- ಹೈದರಾಬಾದ್ ಸೇನಾನಿ ಎಲ್ ಎಂಡ್ರೂಸ್ ಮತ್ತು ಭಾರತದ ಸೇನಾನಿ ಚೌಧರಿ ಈ ಮೊದಲೇ ಪರಸ್ಪರ ಪರಿಚಸ್ಥರು; ಸಲುಗೆಯೆದ್ದವರೂ. ಈ ಮೊದಲು ಸೆಕುಂದರಾಬಾದಿನಲ್ಲಿ ಸೇನೆ ನಿಲ್ಲಿಸಿದ್ದಾಗಲೂ, ಯುದ್ಧೋತ್ತರ ಶಾಂತಿ ಕಾಲದಲ್ಲಿ ಎಲ್ ಎಂಡ್ರೂಸರ ಸೇನಾನಿ ಕೂಟದಲ್ಲಿದ್ದಾಗಲೂ ಚೌಧರಿಯವರಿಗೆ ತನ್ನೀ ಪ್ರತಿವಾದಿಯ ನಿಕಟ ಪರಿಚಯವಿದ್ದಿತು. ಆದರೂ ತಾ 18ರಲ್ಲಿ ಜನರಲ್ ಚೌಧರಿ ಜನರಲ್ ಎಲ್ ಎಂಡ್ರೂಸರನ್ನು ಸ್ವಾಧೀನಪಡಿಸಿಕೊಂಡ ರೀತಿ ಹೀಗೆ:—

ಸೆಪ್ಟೆಂಬರ್ ತಾ 18ನೇ ಅಪರಾಹ್ನ 4-30. ಝಾಹಿರಾಬಾದಿನಿಂದ ಸೆಕುಂದರಾಬಾದಿನ ಕಡೆಗೆ ಧಾವಿಸಿ ಬರುತಿದ್ದ ಸುದೀರ್ಘ ಟ್ರೇಂಕು ದಳವು ಮಧ್ಯ ಹಾದಿಯಲ್ಲಿ ಸಟಕ್ಕನೆ ನಿಂತಿತು. ಡಿವಿಜನಲ್ ಸೇನಾನಿ ಧ್ವಜ ಹಾರಾಡುತಿದ್ದ ಸೇನಾ ಮಹಾ ಬಂಡಿಯೊಂದು ಟ್ರೇಂಕುಗಳ ನಡುವಿನಿಂದ ವೇಗವಾಗಿ ಮುಂದೋಡಿ ಮುಂಭಾಗಕ್ಕೆ ಬಂದು ನಿಂತಿತು. ಇದಿರುಗಡೆಯಿಂದ ಸೇನಾಮಂಡಲದ ಅಲಂಕಾರ ರಹಿತ ಕಾರೊಂದು ಬಂದು ಈ ಬಂಡಿಗೆ ೩೦ ಗಜ ದೂರದಲ್ಲೇ ನಿಂತು, ಅದರಿಂದ ಎಲ್ ಎಂಡ್ರೂಸ್ ಕೆಳಗಿಳಿದರು. ಇತ್ತ ಬಂಡಿಯಿಂದ ಜನರಲ್ ಚೌಧರಿಯವರೂ ಕೆಳಗಿಳಿದು ಇಬ್ಬರು ಸೇನಾನಿಗಳೂ ಮುಖಾಮುಖಿಯಾಗಿ ನಡೆದು ಎರಡು ಗಜ ಅಂತರದಲ್ಲಿ ನಿಂತು ಸೇನಾ ಶಿಷ್ಟಾಚಾರಕ್ಕನುಸಾರವಾಗಿ ಸೆಲ್ಯೂಟ್ ಪ್ರತಿಸಿಕೊಂಡರು. 'ಹೈದರಾಬಾದ್ ಸೇನೆಯನ್ನು ಶರಣುಗೊಳಿಸಿದೆಂದು ನಾನು ನಿಮ್ಮನ್ನು ಕೇಳುತಿದ್ದೇನೆ' ಎಂದರು ಮೇಜರ್ ಜನರಲ್ ಚೌಧರಿ. 'ಹೈದರಾಬಾದ್ ಸೇನೆಯನ್ನು ನಾನು ನಿಮಗೆ ಶರಣಾಗೊಳಿಸಿದ್ದೇನೆ' ಎಂದು ಮೇಜರ್ ಜನರಲ್ ಎಂಡ್ರೂಸ್ ಉತ್ತರಿಸಿದರು. "ಇದು ನಿಶ್ಚರ್ತವಾದುದೆಂದು ನೀವು ಬಲ್ಲಿರೆಷ್ಟೆ?"-ಚೌಧರಿ. "ಹೌದು"-ಎಂಡ್ರೂಸ್. ಆ ಮೇಲೆ ತುಸು ಹೊತ್ತು ಸ್ತಬ್ಧ. ಈ ಮೌನವನ್ನು ಜನರಲ್ ಎಂಡ್ರೂಸರೇ ಭೇದಿಸಿ, ನಿತ್ಯದ ಸಲುಗೇ ಮಾತಿನಿಂದ "ಒಳ್ಳೇದು. ಮುಗೂ. ನಾವು ಇನ್ನೊಮ್ಮೆ ಒಟ್ಟಾಡೆವು. ಆದರೆ ಭಿನ್ನ ವಿದ್ಯಮಾನದಲ್ಲಿ" ಎಂದರು. "ಉದ್ಯೋಗವು ಉದ್ಯೋಗವೇ. ನನ್ನ ಸೇನೆಯು ಶ್ವತಃ ನಹಿಸಿಕೊಳ್ಳುವವರೆಗೆ ಕಾನೂನು ಮತ್ತು ವ್ಯವಸ್ಥೆಗೆ ನೀವು ಜವಾಬ್ದಾರರಾಗುವಿರಿ. ಈ ನಡುವೆ ದಾಖಲೀ ಲಿಪಿ ಮತ್ತಿತರ ವಿಷಯಗಳ ಕುರಿತು ನಾವು ವಿವರವಾಗಿ ಚರ್ಚಿಸೋಣ" ಎಂದರು ಚೌಧರಿ. ಅವರಿಬ್ಬರೂ ಜನರಲ್ ಚೌಧರಿಯವರ ಬಂಡಿಯತ್ತ ನಡೆದು ಒಟ್ಟಿಗೆ ಕುಳಿತುಕೊಂಡರು; ಆ ಮೋಟಾರು ಸೆಕುಂದರಾಬಾದಿಗೆ ಧಾವಿಸಿತು.

ದಿ ಎಗ್ರಿಕಲ್ಚರಲ್ ಎಂಡ್ ಇಂಡಸ್ಟ್ರಿಯಲ್
ಬೇಂಕ್ ಲಿಮಿಟೆಡ್

ಹೆಡ್ ಆಫೀಸು: ಕುಂದಾಪುರ, ದ. ಕ.

ಒಂದು ವರ್ಷ ಯಾ ಒಂದು ವರ್ಷಕ್ಕೆ ಮಿಕ್ಕಿದ ಮುದ್ದತ್ತಿನ ಠೇವುಗಳು ಅಂಗೀಕರಿಸಲ್ಪಡುವವು.

ಒಂದು ವರ್ಷಕ್ಕೆ ಸೇಕಡಾ 3/- ರೂಪಾಯಿ,

ಅತೀ ಕಡಿಮೆ ಮೊಬಲಗಿನಲ್ಲಿ ಸೇವಿಂಗ್ಸ್ ಖಾತೆಗಳು ತೆರೆಯಲ್ಪಟ್ಟು ಬಡ್ಡಿ ಸೇಕಡಾ 2/ ರೂಪಾಯಿಗಳಂತೆ ಕೊಡಲಾಗುವದು.

ಎಲ್ಲಾ ತರದ ಬೇಂಕು ವ್ಯವಹಾರ ನಡೆಯಿಸಲ್ಪಡುವದು.

ಹೆಚ್ಚಿನ ಮಾಹಿತಿ ಬಗ್ಗೆ ನಮ್ಮ ಹತ್ತಿರದ ಶಾಖೆಗೆ ಬರೆಯಿರಿ ತಿಳಿಯಿರಿ,

The Agricultural & Industrial Bank, Limited,
Head Office: Coondapoor, S. K.

ಅದೂ ಇದೂ ಒಂದೇ!

"ಗಾಂಧಿಜೀಯ ಸತ್ಯಾಹಿಂಸೆಗಳ ನಿಷ್ಠಾವಂತ ಅನುಯಾಯಿಗಳು—ಪ್ರಜಾಪ್ರಭುತ್ವದ ಪರಮ ಭಕ್ತರು— ಎಂದು ಹೇಳಿಕೊಳ್ಳುತ್ತಿರುವ ಕಾಂಗ್ರೆಸಿಗರು ಈಗ ಅಧಿಕಾರದಲ್ಲಿದ್ದು ಮಾಡುತ್ತಿರುವುದೇನು?" ಎಂಬ ಪ್ರಶ್ನೆ-ಕ್ರೋಧಾವೇಶದ ಸವಾಲು- ಕೆಲವರಿಂದ ಕೇಳಿ ಬರುತ್ತಿದೆ. ಈ ಮಟ್ಟಿಗೆ-ಕಾಂಗ್ರೆಸ್ ಸರಕಾರಗಳ ಕರೋರ ವರ್ತನೆಯನ್ನು ಟೀಕಿಸುವ ಮಟ್ಟಿಗೆ-"ಆರ್. ಯಸ್. ಯಸ್."ಸಂತಹ ಧರ್ಮವಾದಿಗಳೂ ಕಮ್ಯೂನಿಸ್ಟರಂತಹ ಉಗ್ರವಾದಿಗಳೂ ಏಕರಾಧದಲ್ಲಿದ್ದಾರೆ. "ಪ್ರಜಾ ಸ್ವಾತಂತ್ರ್ಯದ ಪ್ರವಾದಿಗಳನ್ನಿಸುವವರು; ಅದಕ್ಕಾಗಿ ಹೋರಾಡಿ ಒಂದು ಕಾಲದಲ್ಲಿ ಜೈಲುವಾಸ, ಕಷ್ಟ ನಷ್ಟಗಳನ್ನು ಅನುಭವಿಸಿದ್ದ ಕಾಂಗ್ರೆಸಿಗರು, ಈಗ ಕಮ್ಯೂನಿಸ್ಟರು ಮತ್ತು ಆರ್. ಯಸ್. ಯುಸ್. ಮುಂತಾದವರನ್ನು ತಮ್ಮನ್ನಾ ಕಾಲದಲ್ಲಿ ಬ್ರಿಟಿಷ್ ಅಧಿಕಾರಿಗಳು ಹೇಗೆ ಕಾಣುತಿದ್ದರೋ ಹಾಗೆಯೇ ಕಾಣುತಿದ್ದಾರಲ್ಲಾ!' ಎಂದು ಕಕ್ಕುನೊಮ್ಮೆ ಯಾರಿಗಾದರೂ ಹೊಳೆಯಬಹುದು. ಆದರೆ ವಸ್ತುಸ್ಥಿತಿಯನ್ನು ತುಸು ಆಳವಾಗಿ ವಿಚಾರಿಸಿ ನೋಡಿದರೆ ಕಾಂಗ್ರೆಸ್ ಸರಕಾರಗಳು ದೂರದೃಷ್ಟಿ ಮತ್ತು ನ್ಯಾಯನಿಷ್ಠುರತೆಯಿಂದ ಭಾರತವನ್ನು ರಕ್ಷಿಸಿಕೊಂಡವೆಂದು ಯಾರೇ ಆದರೂ ಸಮಾಧಾನದುಸಿರು ಬಿಡಬೇಕು.

ಯಾವ ದೇಶದಲ್ಲಿದ್ದರೂ ಕಮ್ಯೂನಿಸ್ಟರ ಕಾರ್ಯರಂಗವೆಂಬುದು ಇಡೀ ಜಗತ್ತು ಹೊರತು ಸ್ವರಾಷ್ಟ್ರವಲ್ಲ; ಅವರು ವರ್ಗ ಪ್ರೇಮಿಗಳೇ ಹೊರತು ರಾಷ್ಟ್ರ ಪ್ರೇಮಿಗಳಲ್ಲ. ಈ ಲೋಕವ್ಯಾಪೀ ವರ್ಗದ ಮುಖ್ಯ ಕೇಂದ್ರ ರಶ್ಯದ ಮೋಸ್ಕೋ ನಗರ; ಆದರೆ ಭಾರತ ಸಮೇತ ಇಡೀ ಜಗತ್ತಿನ ಕಮ್ಯೂನಿಸ್ಟರನ್ನು ಆಡಿಸುತ್ತಿರುವ ಸೋವಿಯೆಟ್ ರಶ್ಯವು ಈಗ ಸಂಪೂರ್ಣವಾಗಿ ಕಟ್ಟಕೊಂಡಿರುವದು ತನ್ನ ಹಿತ ಸಾಧನೆಯೊಂದನ್ನೇ ಹೊರತು ಲೋಕದ ಕೂಲಿಗಾರರ ಉದ್ಧಾರವನ್ನಲ್ಲ. ಅಂದ ಮೇಲೆ ಇಲ್ಲಿಯ ಕಮ್ಯೂನಿಸ್ಟರಿಂದಾಗುತ್ತಿರುವುದು ರಶ್ಯದ ಸ್ವಾರ್ಥಸಾಧನೆಯೇ ಹೊರತು ಭಾರತದ ಕಾರ್ಯವಲ್ಲ.

ರಶ್ಯದಂತೆಯೇ ಸ್ವರಾಷ್ಟ್ರದಲ್ಲಿ ಅಧುನಿಕ ಸ್ಥಿತಿಗತಿಗಳಿಗನುಗುಣವಾದ ಸಮಾನ ಕಾ ಸ್ವಾಪನೆಯಾಗಬೇಕೆಂಬುದು ಪ್ರಗತಿಶೀಲರೆಲ್ಲರಲ್ಲೂ ಇರುವ ಬಯಕೆ. ಆದರೆ ತಂತಮ್ಮ ಧೋರಣೆಗಳು ಲೋಕಾದರ್ಶಗಳೆಂದು ಹೇಳಿಕೊಂಡು ಸ್ವಾರ್ಥ ಸಾಧಿಸುತ್ತಿರುವ ಮಿಕ್ಕವರಂತೆಯೇ ತನ್ನ ಕಮ್ಯೂನಿಸಮ್ ಜಗತ್ತಿನದೆನ್ನುತ್ತಾ ಸ್ವರಾಷ್ಟ್ರಪ್ರೀತಿ ಸಾಧಿಸುತ್ತಿರುವ ರಶ್ಯದ ಕೈಗೊಂಬೆಗಳುಗಿ, ಅದರ ಕಾರ್ಯನೀತಿ ವೇರಿಸಿ ಕೊಡುವವರು ಈ ರಾಷ್ಟ್ರಕ್ಕೆ ಬೇಕಾಗಿಲ್ಲ ಇಲ್ಲಿಯ ಅಧಿಕಾರ ಬದಲಾವಣೆ, ಸ್ವಸಮಸ್ಯೆಗಳಾವುವನ್ನೂ ಗಣಿಸದೆ ಕಮ್ಯೂನಿಸ್ಟರು ವಹಿಸಿರುವ ಧೋರಣೆಗಳು, ಅವರು ನಡೆಸಿರುವ ಹಿಂಸಾತ್ಮಕ ಕಾರ್ಯಗಳು ಇದಕ್ಕೆ ನಿದರ್ಶನ ಪಾಕಿಸ್ತಾನ್ ನಿಷ್ಠೆಯವರು ಇಲ್ಲಿ ಇರುವುದರಲ್ಲಿ ನ್ಯಾಯವಿಲ್ಲ, ಎಂಬ ಮಾತನ್ನೇ ರಶ್ಯದ ಈ ಬಕಾಸುರನಿಗೂ ಅತಬಹುದು.

ಭಾರತ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ಕಮ್ಯೂನಿಸ್ಟ್ ಚಟುವಟಿಕೆಗಳನ್ನು ಕರಿಣ ಹಸ್ತದಿಂದ ದಮನಿಸುವುದಲ್ಲವಾಗಿದ್ದರೆ ನಮ್ಮನೆರೆಯ ಬರ್ಮಾ ಮುತ್ತು ಇಂಡೋನೇಶಿಯಗಳಲ್ಲಿ ಕಮ್ಯೂನಿಸ್ಟರೀಗ ಸರಕಾರವನ್ನೇ ಆಹುತಿಗೊಳ್ಳಲು ಹೇಗೆ ಮುಂದುವರಿದಿರುವರೋ ಹಾಗೆಯೇ ಇಲ್ಲಿಯೂ ಇಷ್ಟರೊಳಗೆ ಪ್ರಬಲಿಸುತಿದ್ದರು

ಆರ್. ಯಸ್. ಯಸ್. ನಂತಹ ಜಾತೀಯತಾ ದಳಗಳಿಗೆ ಬಟಷ್ಟಾರ ಹಾಕಿ ಒತ್ತಿಡದಿಬಿಡುತಿದ್ದರೆ ಭಾರತದಲ್ಲೆಏನಾಗುತ್ತೆಂಬುದಕ್ಕೆ ಜೀರೆ ನಿದರ್ಶನವೇ ಬೇಡ-ಹೈದರಾಬಾದಿನಲ್ಲಿ ರಝಾಕಾರರಿಂದ ಆದುದೇನೋ ಅದೇ ಆಗುತಿತ್ತು!

ನಿಜಕ್ಕೂ ಧ್ಯೇಯೋತ್ಥೋರಣೈರ್ವರ್ತನೆಗಳಲ್ಲಿ ರಝಾಕಾರರಿಗೂ ಆರ್. ಯ.ಸ್. ಯುಸ್.ಗೂ ಬಹಳ ಸಾಮ್ಯತೆಯಿದೆ. ವಂಶ ಪಾರಂಪರ್ಯವಾಗಿ ಮುಸ್ಲಿಂ ನಿಜಾಮರದಾಗಿದ್ದ ಅಧಿಕಾರವನ್ನು ಉಳಿಸಬೇಕು- ನಿಜಾಮ್ ರಾಜ್ಯವಿರಬೇಕೆಂಬುದೇ ರಝಾಕಾರರ ಧ್ಯೇಯ: ಅನಾದಿ ಕಾಲದಿಂದಲೂ ಹಿಂದುಗಳಧೀನಗಿರುವ ಭಾರತದಲ್ಲಿ ಹಿಂದೂ ರಾಜ್ಯವಿರಬೇಕೆಂಬುದೇ ಆರ್ ಯಸ್. ಯಸ್ ನ ಧ್ಯೇಯ.

ರಝಾಕಾರ್ ಸಂಸ್ಥೆಯಲ್ಲೂ ಅಧಿಕ ಸಂಖ್ಯಾಕರು ಆಪ್ರಾಯಸ್ಥರಿದ್ದು 'ಕವಾಯಹ' ಪ್ರದರ್ಶನಗಳಿಗೆ ಪಾತ್ರ ಬೀಳುತ್ತಿದ್ದರಲ್ಲದೆ, ಯುದ್ಧಕ್ಕೆ ನಿಲ್ಲಲಾರದೆ ಜೋರಾದರು; ಆರ್. ಯ ಸ್. ಯ ಸ್. ಸಂಸ್ಥೆಯಲ್ಲೂ ಅಧಿಕ ಸಂಖ್ಯೆಯಲ್ಲಿ ಶಾಲಾ ಮಕ್ಕಳೇ ಮುಂದ ಆಪ್ರಾಯಸ್ಥರು ಇದ್ದು ಅವರು ಕವಾಯತಿಗಲ್ಲದೆ ಬೇರಾವುದಕ್ಕೂ ಆಗುವಂತಿಲ್ಲ.

ಕಟ್ಟುಗ್ರ ಮುಸ್ಲಿಂ ಮನೋವೃತ್ತಿಯನ್ನು ನಿರ್ಮಿಸುವದು ಮತ್ತೀ ಮುಸ್ಲಿಂ ಮತಾಂಧತೆಯು ದೃಷ್ಟಿಯಲ್ಲಿ ಆತಂಕಕಾರಿಗಳೆಂದು ತೋರುವವುಗಳನ್ನು ನಿರ್ಮೂಲಿಸಲು ಸಂಘಟನೆಗೊಳ್ಳುವುದು ರಝಾಕಾರ್ ದಳದ ಗುರಿಯಾಗಿದ್ದರೆ, ಆದರಲ್ಲಿ "ಹಿಂದೂ ಮನೋವೃತ್ತಿ"ಯೆಂಬೊಂದು ಕಿಡ್ಡು ಪಡಿಯೊಂದಿಗೆ, ರಝಾಕಾರರ ಎಲ್ಲಾ ರೀತಿ ನೀತಿಗಳೂ ಆರ್. ಯಸ್. ಯಸ್.ಗೂ ಅಕ್ಷರಶಃ ಅನ್ವಯಿಸುತ್ತವೆ.

ಆದರೆ ಒಂದರಲ್ಲಿ ಮಾತ್ರ ವ್ಯತ್ಯಾಸ. ರಝಾಕಾರರಿಗೆ ಸ್ವೇಚ್ಛೆಯಿಂದಲೋ ಅನಿವಾರ್ಯವಾಗಿಯೋ ತಮ್ಮನ್ನು ಪೋಷಿಸಲು ನಿಜಾಮ್ ಸರಕಾರವಿದ್ದಿತು. ಆರ್. ಯಸ್. ಯುಸ್ ಮಾತ್ರ, ತಾವೊಂದು ಅಪಾಯನೆಂದು ಸರಕಾಲದಲ್ಲಿ ಗ್ರಹಿಸಿಕೊಂಡು, ತಮ್ಮನ್ನು ದಮನಿಸಿಟ್ಟ ಭಾರತ ಸರಕಾರಗಳ ಕೈಯಲ್ಲಿ ಅಲ್ಲೇ ಜಜ್ಜಿ ಹೋಯಿತು.

ತನ್ನ ಸ್ಥಾನ ಮಾನವುಳಿಸುವುದಕ್ಕಾಗಿ ಬಹು ಸಂಖ್ಯಾಕ ಹಿಂದುಗಳನ್ನು ಒಳಗಬೆಯಂದ ಪೆದರಿಸಿಡುವ ರಝಾಕಾರರು ಇರಲಿ ಎಂದು ನಿಜಾಮರಿಗೆ ತೋರಿದಂತೆ, ಪಾಕಿಸ್ತಾನ್ ಮನೋವೃತ್ತಿಯಿಂದಾಗಿ ಹಬ್ಬಿ ಹೋದ ಮುಸ್ಲಿಂ ಪುಂಡಾಟಿಕೆಯನ್ನು ಆಡಗಿಸಿ, ತನ್ನನ್ನು ಉಳಿಸಿಕೊಡುವ ಸಂರಕ್ಷಕರಾಗಿ ಆರ್. ಯಸ್. ಯುಸ್. ಇರಲಿ ಎಂದು ಭಾರತಸರಕಾರವೂ ಬಯಸುತಿದ್ದರೆ, ಈ ದಿನ ನಿಜಾಮರಿಗೊದಗಿದ ಅದೃಷ್ಟವೇ ಭಾರತ ಸರಕಾರಕ್ಕೂ ಒದಗುತಿತ್ತು.

ನಿಜಾಮರು ಇಂದು-ತನ್ನ ಪ್ರಜೆಗಳ ಅಪಾರ ಕಷ್ಟವನ್ನನುಭವಿಸಿದ ಮೇಲೆ ತಾನು ಬೊಗ್ಗಾಲೂರಿದ ಮೇಲೆ-ರಝಾಕಾರರ ಮೇಲೆ ಹಾಕಿದ ಬಂಧ್ಯಾರವನ್ನು, ಭಾರತ ಸರಕಾರವು ಇಂತಹ ಮುಗ್ಧಪ್ಪ ಪೊದಗುವ ಮೊದಲೇ ಆರ್. ಯಸ್. ಯುಸ್.ನ ಮೇಲೆ ಹಾಕಿದ್ದರಿಂದ ತಾನೆ ತಲೆಯೆತ್ತಿ ನಿಂತಿದೆ

ಕೇವಲ ಹಿಂದೀ ಸರಕಾರದ ದೂರದೃಷ್ಟಿಯಿಂದಾಗಿ ನಿಜಾಮರಿಗೊದಗಿದ ದುರ್ಗತಿ ಲವಕ್ಕೆ ತಪ್ಪಿ ಹೋದಂತೆಯೇ ರಝಾಕಾರರಿಗೀಗ ಒದಗಿರುವ ಭೀಕರಾವಸ್ಥೆ ತಮಗೂ ತಪ್ಪಿ ಹೋಯೆಂದು ಆರ್. ಯಸ್. ಯಸ್. ನಂಧವರು ತಿಳಿದಿರುವುದು ಉತ್ತಮ.

ಅಂದ ಮೇಲೆ, ಪ್ರಜಾಪ್ರಭುತ್ವದ ಹೆಸರಿನಿಂದ ಕಮ್ಯೂನಿಸ್ಟ್ ಆರ್. ಯುಸ್. ಯಸ್.ನಂತಹ ಅರಾಷ್ಟ್ರೀಯ ಅರಾಜಕತೆಗಳನ್ನು ಬೆಳೆಯಲು ಕಾಂಗ್ರೆಸ್ ಸರಕಾರಗಳು ಬಿಡಬೇಕೆತ್ತು, ಎನ್ನುವವರಾರು?

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊತೆಗಾಂತಿಕ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಆಥವಾ ಸಂಗ್ರಹ] ಇಲಾಖೆಯು,ನಮ್ಮ ಶಾಖೆಗಳಿರುವಲ್ಲಿ ರುಪಾಯಿಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಷಿಸಿದಂತಿರುವ ನಮ್ಮ ಶಾಖೆಗಳು ಮುಖ್ಯವಾದ ಆರ್ಥಿಯ ಕ್ಷೇತ್ರಗಳಲ್ಲಿ ತಮಿಳು ನಾಡಿನ ಅಕ್ಕ ಪಕ್ಕ ಮತ್ತು ನೆಲಗದಲೆಯ ಪ್ರದೇಶಗಳಲ್ಲಿ-ಮಲಬಾರು ಚಿಲ್ಲೆಯ ಕೆಂಗುಗಳ, ವೈನ್ಗಾಟ್ಟೆಗಳಿರುವಲ್ಲಿ- ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರುಪುಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ಕತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನನ್ನು ಕಲೆಕ್ಷನ್ಸ್ ಇಲಾಖೆಯ ಸವಲರತ್ತುಗಳು ಸುಲಭವಾಗಿ ನಮ್ಮವಿಶಿಸ್ಟ ಅನನ್ಯತೆಗಳಿಗೆ ಹೊಂದಿಸಿಕೊಳ್ಳಬಹುತ್ತವೆ. ಆದರಿಂದ ನಿಮಗೆ ಸಮಯಪ್ಪ, ಹಣವೂ ಉಳಿವುದು ಸಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರುಪುಮುಗಳ ಕಡೆಗೆ ಯಾವಾಗಲೂ ಸಾವಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು

The Canara Bank Limited.

ESTD: 1906

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ 1908)

ಆತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ೨ ಮೂರು ಸಂಸ್ಥೆಗಳಲ್ಲೊಂದು

ಸ್ವದೇಶಿ ಏಜಂಟರು

ಕೊಚ್ಚಿಕಾರ್ ಬದರ್ಸ್ ಲಿಮಿಟೆಡ್., ಉಡುಪಿ

ಇವರ ಶಾಖಾ ಏಜೆನ್ಸಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮುವತ್ತೆಂಟು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನನ್ನು ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾತಲಿಕ್ಕಾಗಲೀ, ಪ್ರತಿನಿಧ್ಯ ಪಡೆಯಲಿಕ್ಕಾಗಲೀ ದಯವಾಡಿ ನಮಗಾಗಲೀ ಆಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಎಣ್ಣೆ ಎಂಜಿನುಗಳು

ಕಬ್ಬನ್ನು ಹಿಸುಕುವ ಮೆಶಿನುಗಳು
ಸರ್ವಿಯಿಂದ ಕಲಸಮಾಡುವ
ಎಣ್ಣೆ ಮಿಲ್ಲುಗಳು
ತ್ವರ್ಯ ಬಟನಾಜೆಗೆ ತಯಾರಾಗಿವೆ.
ಗ್ರಾಹಕರು ಇಂದೇ ಬರೆಯಿರಿ:-

ಸುರೇಶ ಎಂಡ್ ಕೊ.,

ಮರಾರಾ ಗಲ್ಲಿ, ಹುಬ್ಬಳ್ಳಿ.

WANTED

One Higher Ele. Grade trained teacher on scale 25-1-30 and usual dearness allowance Apply very soon to:-

The Manager,
Baikady Ele. School,
Post Brahmavar, S K.

ಕೆಳದ ವಾರವನ್ನು 'ಮಾತುಗಾರಿಕೆಯು ಕಾಲ'ವೆನ್ನಬಹುದು; ಜಾಗತಿಕ ಸಂಘದ ಮಹಾಧಿವೇಶನದಿಂದಾರಂಭಿಸಿ, ಹೈದರಾಬಾದ್ ವಿಜಯದ ವರೆಗಿನ ಎಲ್ಲಾ ವಿಷಯಗಳೂ ಸ್ಪಷ್ಟೀಕರಣ-ನಿವೇದನೆ-ಹಿತಸೂಚನೆ--ವಾದವಿವಾದಗಳ ಮೂಲಕ ಮಥಿಸಲ್ಪಟ್ಟಿವೆ. ಕಳದ ದಿನಗಳು ಕಾರ್ಯವಾಹೀ ಪ್ರಾಮುಖ್ಯ ಹೇಳಿಕೆಗಳಿಗೆ ಪ್ರಸಿದ್ಧಿ ಪಡೆದಿವೆ.

ಇಂಡೋನೇಶಿಯದಲ್ಲಿ ಮುಂದೊತ್ತಿ ಹೋಗಿ, ಅಲ್ಲಿ ಮಾಡಿಯನ್ ಪ್ರಾಂತ್ಯದಲ್ಲಿ ತಮ್ಮ ಸರಕಾರ ಸ್ಥಾಪಿಸಿಕೊಂಡ ಕಮ್ಯೂನಿಸ್ಟರನ್ನು ಹೊಡೆದಟ್ಟಲು ರಿಪಬ್ಲಿಕನ್ ಸರಕಾರವು ಹಂಚಿಕೆ ಹಾಕಿ ಕಾರ್ಯಕ್ಕೆಳಿದಿದೆ. ಇದಕ್ಕಾಗಿ ಡಚ್ಚರ ಸಹಾಯವನ್ನೆದು ಸ್ವೀಕರಿಸಲು ತಯಾರಿಲ್ಲ. ಒಂದೆಡೆ ಇಂಡೋನೇಶಿಯದ ರಿಪಬ್ಲಿಕನ್ ಸರಕಾರವು ಕ್ರಮಶಃ ಗೆಲ್ಲುತ್ತಾ, ಹೋದಂತೆ ಇನ್ನೊಂದೆಡೆ ಕಮ್ಯೂನಿಸ್ಟರು ನಗರಗಳನ್ನು ಅನುಕ್ರಮವಾಗಿ ಹಿಡಿಯುತ್ತಾ ಹೋಗಿ, ಈಗ ಸರಕಾರೀ ಸೇನೆಯು ಕೈ ಮೇಲಾಗಿ ಅದು ಕಮ್ಯೂನಿಸ್ಟರನ್ನು ಹಿಂದಕ್ಕಟ್ಟಹತ್ತಿದೆ.

ಬರ್ಮದಲ್ಲಿಯೂ ಕಮ್ಯೂನಿಸ್ಟರ ಪ್ರಭಾವಕ್ಕೆ ಬಾಧೆ ಇಟ್ಟಿಲ್ಲ. ರಂಗೂನ್ ಮತ್ತು ಮಂಡಲೆಯ ಮಧ್ಯ ಸ್ಥಳ ಟೊಂಗೂ ವಿನಲ್ಲಿ ಕಮ್ಯೂನಿಸ್ಟರು ಠಿಕಾಣಿ ಕಾಳಗ ಕೊಟ್ಟಿದ್ದಾರೆ. ಬರ್ಮಾ ಸರಕಾರವು ಈ ಕಂಟಕ ನಿವಾರಣೆಗಾಗಿ ಹೊರಗಿನ ಸಹಾಯವಪೇಕ್ಷಿಸಬೇಕಾದೀತೆ? ಕಮ್ಯೂನಿಸ್ಟರಿಗೂ ಬೆಂಗಡೆಯಿಂದ ಸಹಾಯಗಳ ಬೆಂಬಲವೊದಗಲಾರದೇ? ಮುಂತಾದ ಪ್ರಶ್ನೆಗಳೇಳುತ್ತಿವೆ.

ಪೆಲಸ್ಟೈನಿನಲ್ಲಿ ಕೊಲೆಯಾದ ಕೌಂಟ್ ಬರ್ನಾಡೊಟ್ಟೆಯವರು ತನ್ನ ಅಂತ್ಯಾವಧಿಯಲ್ಲಿ ತಯಾರಿಸಿದ್ದ ಶಾಂತಿ ಸೂಚನೆಗಳನ್ನೀಗ ಸಂಯುಕ್ತ ರಾಷ್ಟ್ರ ಸಂಘವು ಪರ್ಯಾಲೋಚನೆಗೆತ್ತಿಕೊಂಡಿದೆ. ಇನ್ನೊಂದು ದೀರ್ಘಾವಧಿಯ ಸಮಸ್ಯೆ ಬರ್ಲಿನ್ ವಿವಾದವು ಕುರಿತು ಮೋಸ್ಕೋದಲ್ಲಿ ನಡೆದಿದ್ದ ಚತುರ್ರಾಷ್ಟ್ರೀಯ ಪ್ರತಿನಿಧಿಗಳ ಅತ್ಯುದ್ದ ಕಾಲದ ಸಮ್ಮೇಳನಗಳ ಫಲಿತಾಂಶವಾಗಿ ಈಗ ತೋರುತ್ತಿರುವುದೂ ಆ ಮೊದಲಿದ್ದ ಸ್ಥಿತಿಯೇ! ಬರ್ಲಿನ್ ಮತ್ತು ಪಾಶ್ಚಾತ್ಯ ರಾಷ್ಟ್ರಗಳ ಸ್ಪೇಕ್ಷಗಳೊಳಗಿನ ಎಲ್ಲಾ ಸಂಚಾರಾಧಿಕಾರವೂ ತನಗಿದ್ದು, ಚತುರ್ರಾಷ್ಟ್ರೀಯ ನಿಯಂತ್ರಣದಲ್ಲಿ ಏಕಮಾತ್ರ ಬರ್ಲಿನ್ ಕರೆನ್ಸಿಯನ್ನು ಜಾರಿಗೆ ತರುವ ಶರ್ತಕ್ಕೆ ಅಮೇರಿಕ, ಬ್ರಿಟನ್, ಫ್ರಾನ್ಸುಗಳು ಒಪ್ಪುವವಾದರೆ ಮಾತ್ರ ರಶ್ಯವು ಬರ್ಲಿನ್ ಒಪ್ಪಂದ ನಾಡಿಕೊಳ್ಳಲು ತಯಾರಿದೆ.

ರಾಷ್ಟ್ರ ಸಂಘದ ಮಹಾಸಭೆ

ಲೋಕದ 58 ರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡ ಸಂಯುಕ್ತ ರಾಷ್ಟ್ರ ಸಂಘದ ಜನರೀಲ್ ಅಧಿವೇಶನವು ಪ್ಯಾರಿಸಿನಲ್ಲಿ ಇದೇ ತಾ. 21ರಂದ ಪ್ರಾರಂಭವಾಗಿದೆ. ಮೂರು ವರುಷಗಳ ನೊದಲು ಸ್ಥಾಪಿತವಾಗಿರುವ ಈ ಲೋಕ ಸಂಘದ ಪ್ರಮುಖ್ಯ ಜಾಹೀರು ಅಧಿವೇಶನವೆಂದರೆ ಈ ಪ್ಯಾರಿಸ್ ಸಭೆಯೇ. ಅಧಿವೇಶನ ಕಾರ್ಯಕ್ರಮ ಪಟ್ಟಿಯಲ್ಲಿ ಪ್ರಪಂಚದ ಬೇರೆ ಬೇರೆ ಭಾಗಗಳಿಗೆ ಸಂಬಂಧಿಸಿದ 70 ವಿಷಯಗಳಿದ್ದು ಅವು ಚರ್ಚಿಸಲ್ಪಡಲಿವೆ. ಪ್ರಾರಂಭದಲ್ಲಿ ಅಧ್ಯಕ್ಷ ಚುನಾವಣೆ ಮತ್ತಿತರ ಸಮಿತಿಗಳ ಚುನಾವಣೆಗಳಾದುವು.

ಆ ಮೇಲೆ ಸಾಮಾನ್ಯ ಚರ್ಚೆಗಾರಂಭವಾದಾಗ ಅಮೇರಿಕದ ಗೃಹ ಕಾರ್ಯದರ್ಶಿ ಜೋರ್ಜ್ ಮಾರ್ಷಲರು "ಸಣ್ಣ ಅಲ್ಪ ಸಂಖ್ಯಾಕ ಸಂಗಡವೊಂದು ಎಡೆಬಿಡದೆ ಕಂಟಕಗಳನ್ನೊಡ್ಡುತ್ತಿದೆ" ಎಂದು, ಅಪ್ರತ್ಯಕ್ಷವಾಗಿ ರಶ್ಯದ ಪಕ್ಷಪವನ್ನು ಟೀಕಿಸಿ "ಮೂಲ ತತ್ವಗಳ ಸಂಬಂಧದಲ್ಲೂ ಸಮಜಾಯಿಸುವಿಕೆಗೆ ಹೋಗಲಾರೆವು" ಎಂದು ಒತ್ತಿ ಹೇಳಿದರು. ಪೋಲೆಂಡಿನ ವಿದೇಶ ಮಂತ್ರಿಯು ಪಾಶ್ಚಾತ್ಯ ರಾಷ್ಟ್ರಗಳ ಮೇಲೆ ಹ್ರತ್ಯುದ್ರೋಪ ಹಾಕಿ 'ಒಲಿರ್ನ್' ಮತ್ತು ಇಡೀ ಜರ್ಮನಿಯನ್ನೇ ಛಿದ್ರಗೊಳಿಸಲು ಅವು ಪ್ರಯತ್ನಿಸುತ್ತಿವೆ'ಎಂದರು. ಪಿಲಿಪ್ಪೈನ್ಸ್ ಮತ್ತು ಸಿರಿಯದ ಪ್ರತಿನಿಧಿಗಳೂ ಮಾತಾಡಿ, ಸಣ್ಣ ರಾಷ್ಟ್ರಗಳ ಹಿತರಕ್ಷಣೆಯ ದೃಷ್ಟಿಯಿಂದ ದೊಡ್ಡ ರಾಷ್ಟ್ರಗಳು ತಮ್ಮೊಳಗಿನ ಪರಸ್ಪರ ಅಪನಂಬಿಕೆಗಳನ್ನು ಬಿಡಬೇಕೆಂದು ವಿನಂತಿಸಿಕೊಂಡರು. ಭಾರತ ಪ್ರತಿನಿಧಿಗಳ ನಾಯಕಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಹಿಂದೀ ಸರಕಾರದ ಶಾಂತಿ ಪ್ರೇಮ ಮತ್ತು ಪ್ರಗತಿಶೀಲ ಧೋರಣೆಯು ಮಂದ ಟ್ಯಾಗುವಂತಹ ತನ್ನ ಭಾಷಣದಲ್ಲಿ ಲೋಕ ಶಾಂತಿಗೆ ಆಹ್ವಾನವಿತ್ತರು. "ನಿಶ್ಶಸ್ತ್ರೀಕರಣವಾಗಬೇಕು; ವಸಾಹತು ಕ್ರಮ ಬೇಗನೇ ಹೋಗಬೇಕು; ಪ್ರಮುಖ ಪಂಚ ರಾಷ್ಟ್ರಗಳೊಳಗೆ ಸೌಹಾರ್ದವಿಲ್ಲದಿರುವ ದುಸ್ಥಿತಿಯನ್ನು ಸಹಿಸಿ ಮತ್ತು, ನವನಾಗರಿಕತೆಯಿಂದ ನಿವಾರಿಸಿಕೊಳ್ಳಬೇಕು" ಎಂದು ವಿಜ್ಞಾಪಿಸುತ್ತಾ "ಲೋಕವು ಇಕ್ಕಡೆಯಾಗಿದ್ದಾರೆ ಭಾನೀ ಘರ್ಷಣೆ ಖಂಡಿತ ವೆಂದೂ, ತಾನು ಇಕ್ಕಡೆಗೂ ಸೇರಿದ್ದಿದ್ದರೇನೇ ಶಾಂತಿ ಸ್ಥಾಪನೆಗೆ ನೆರವಾಗಬಹುದಾಗುವದೆಂದೂ ಭಾರತದ ನಂಬಿಕೆ"ಯೆಂದು ಸ್ಪಷ್ಟ ಪಡಿಸಿದರು. ದಕ್ಷಿಣಾಫ್ರಿಕದಲ್ಲಿ ಭಾರತೀಯರ ಮೇಲೆ ಬಿದ್ದಿರುವ ವರ್ಣದ್ವೇಷವನ್ನು ಉದ್ದೇಶಿಸಿ, ಭಾರತವು ಇಂತಹ ಭಿನ್ನತೆಯನ್ನೆಂದಿಗೂ ಸಹಿಸದೆಂದು ಒತ್ತಿ ಹೇಳಿ 'ವರ್ಣ ದ್ವೇಷವೆಂಬ ಈ ಕೊಳೆತ ಹುಣ್ಣನ್ನು ಪ್ರಪಂಚದಿಂದಲೇ ಸಮೂಲನಾಶ ಮಾಡಲು ಗಭೀರ ಲಕ್ಷ್ಯ ಕೊಡಿರಿ' ಎಂದು ಜಾಗತಿಕ ಸಂಘವನ್ನು ಕೇಳಿಕೊಂಡರು. ಕಾಶ್ಮೀರ ಮತ್ತು ಹೈದರಾಬಾದ್ ಸಮಸ್ಯೆಗಳಲ್ಲಿ ಭಾರತ ಸರಕಾರವು ವಹಿಸಿದ ವರ್ತನೆಗಳನ್ನು ಸಮರ್ಥಿಸಿ, ದಳಿತ ರಾಷ್ಟ್ರಗಳೊಡನೆ ಸಹಾನುಭೂತಿ ಸೂಚಿಸಿ ಶ್ರೀಮತಿ ಪಂಡಿತರಿತ್ತ ಭಾಷಣವು ಸರ್ವರಿ ಶ್ಲಾಘನೆ ಪಡೆಯಿತು. ಜೈನಿದ ಪ್ರತಿನಿಧಿಗಳು ಮಾತಾಡಿ ಆಶ್ಯಾ ಮತ್ತು ಪೂರ್ವಪ್ರಾಚ್ಯ ರಾಷ್ಟ್ರಗಳಿಗೆ ರಾಷ್ಟ್ರ ಸಂಘದಲ್ಲಿ ಇನ್ನೂ ಸಾಕಷ್ಟು ಪ್ರಾತಿನಿಧ್ಯವಿಲ್ಲದಿರುವ ಕುರಿತು ದೂರಿದರು. ರಶ್ಯದ ಉಪ ವಿದೇಶ ಮಂತ್ರಿ ಎಮ್. ಎಂಡ್ರೋವಿಸ್ಕಿಯವರಿತ್ತ ಭಾಷಣವು ಅಮೇರಿಕಾಂಗ್ಲರ ಧೋರಣೆಯ ಮೇಲೆ ಬೀಸಿದ ಗದೆಯೆಂಬಂತೆ ಬಿಸಿ ಬಾಣಿಗಳಿಂದ ತುಂಬಿದ್ದಿತು. 'ಪಂಚ ಮಹಾರಾಷ್ಟ್ರಗಳು ತಮ್ಮ ನೆಲ, ಜಲ, ಆಕಾಶ ಸೇನೆಗಳನ್ನು 1/3ನೇ ಅಂಶದಷ್ಟು ತಗ್ಗಿಸಿಕೊಳ್ಳಬೇಕು; ಮತ್ತು ಆಟಂ ಉಪಕರಣಗಳೆಲ್ಲವನ್ನೂ ಪೂರ್ತಿ ನಿರ್ಮೂಲಿಸಿಕೊಳ್ಳಬೇಕು."ಎಂಬ ಸೂಚನೆ ಮುಂದಿಡುತ್ತಾ "ಅಮೇರಿಕ ಮತ್ತು ಬ್ರಿಟನುಗಳು ಬ್ರುಸೆಲ್ಸ್ ಒಪ್ಪಂದದ ಇತರ ರಾಷ್ಟ್ರಗಳ ಸಹಾಯ ಪಡೆದು ರಶ್ಯದ ವಿರುದ್ಧ ಯುದ್ಧಕ್ಕಾಗಿ ಸಾರ್ವಜನಿಕ ಭಾವನೆಯನ್ನು ಉದ್ರೇಕದಾಯೀ ರೀತಿಯಿಂದ ಅಣಿಗೊಳಿಸುತ್ತಿವೆ. ಸೋವಿಯೆಟ್ ರಶ್ಯ ಮತ್ತು ಹೊಸ ಪ್ರಜಾಸ್ವಭುತ್ವಗಳ ಮೇಲೆ ನಿರ್ಲಜ್ಜೆಯ ಸುಳ್ಳು ಪ್ರಚಾರಗಳು ನಡೆದಿವೆ. ಹೊಸ ಯುದ್ಧದ ಪ್ರೇರಕ ವಿದ್ಯಮಾನಗಳು ಆ ಕಡೆಯಲ್ಲಿ ಬೀಕಾದಷ್ಟು ನಡೆದಿವೆ. ಈ ಪರಿಸ್ಥಿತಿಯನ್ನು ಇರಗೊಳಿಸಲು ಸಾಧ್ಯವಿಲ್ಲ". ಎನ್ನುತ್ತಾ ವಿಶಿನ್ಸ್ಕಿಯವರು ಎಂಟ್ಯಾತ್ಯ ರಾಷ್ಟ್ರಗಳ ಯುದ್ಧ ತಯಾರೀ ನಿದರ್ಶನಗಳೆಂದು ಕೆಲವು ಘಟನೆಗಳನ್ನು ನಮೂದಿಸಿದರು ಆವರ ಈ ಉಜ್ವಲ ಭಾಷಣವು ಸಭೆಯ ಸ್ವಾಗತ ಪಡೆಯಿತ.

ಹೈದರಾಬಾದಿನಲ್ಲಿ ಸೈನಿಕಾಡಳಿತೆ

ಈ ಬಾರಿಯ ಜಾಹೀರು ಅಧಿವೇಶನದ ಮುಂದಿರುವ ಮುಖ್ಯ ವಿಷಯಗಳಲ್ಲಿ ದಕ್ಷಿಣಾಫ್ರಿಕದಲ್ಲಿ ಭಾರತೀಯರಿಗಾಗಿತ್ತಿರುವ ಅನಾಚಾರಗಳ ಸಂಬಂಧದ ಭಾರತ ಸರಕಾರದ ದೂರೂ ಒಂದು. ಇದರ ಪರ್ಯಾಲೋಚನೆಯು ಕೊನೆಯ ಭಾಗಕ್ಕಾಗಿ ಮುಂದರಿಸಿಡಲ್ಪಟ್ಟಿದೆ. ಸಂಯುಕ್ತ ರಾಷ್ಟ್ರ ಸಂಘವು ತನ್ನ ಧೋರಣೆ ಬದಲಾಯಿಸದಿದ್ದರೆ ಅದರ ಪ್ರಾತಿನಿಧ್ಯವನ್ನೇ ಕೈಬಿಸುವುದಾಗಿ ದಕ್ಷಿಣಾಫ್ರಿಕದ ಪ್ರತಿನಿಧಿಗಳು ಬೆದರಿಕೆ ಬೀರಿದ್ದಾರೆ.

ಹೈದರಾಬಾದ್ ಸೇನಾಡಳಿತೆ

ಐದು ದಿನಗಳೊಳಗೆ ರಝಾಕಾರ್ ದಳಗಳನ್ನು ಚಲ್ಲಾಪಿಲ್ಲಿಗೊಳಿಸಿ, ಸಂಸ್ಥಾನೀ ಸೇನೆಯು ಶರಣಾರ್ಥಿಯನ್ನು ಸ್ವೀಕರಿಸಿ, ಸೇನಾ ಸರಕಾರ ಸ್ಥಾಪಿಸಿಕೊಂಡ ಸೇನಾ ಗವರ್ನರ್ ಮೇಜರ್ ಜನರಲ್ ಚೌಧರಿಯವರು, ಇದಿರುನಿಲ್ಲಲಾರದೆ ಸಂಸ್ಥಾನದ ಸಂದು ಮೂಲೆಗಳಲ್ಲಿ ಅಡಗಿರುವ ರಝಾಕಾರ್ ಕಂಟಕವನ್ನು ನಿರ್ಮೂಲಿಸಿ ಬಿಡುವ ಕಲಸವನ್ನು ಭರದಿಂದ ನಡೆಸುತಿದ್ದಾರೆ. ಈ ನಡುವೆ ಹಿಂದೀ ಸರಕಾರದ ಸಂಸ್ಥಾನ ಖಾತೆಯ ಕಾರ್ಯದರ್ಶಿ ಶ್ರೀ ವಿ. ಪಿ. ಮೆನನರು ಹೈದರಾಬಾದಿಗೆ ಬಂದು ಚೌಧರಿ, ಹೈದರಾಬಾದ್ ಕಾಂಗ್ರೆಸ್ ಅಧ್ಯಕ್ಷೆ ಸ್ವಾಮೀ ರಮಾನಂದ ತೀರ್ಥ ಮುಂತಾದವರೊಡನೆ ಸಂಭಾಷಿಸಿ, ಆ ಮೇಲೆ ನಿಜಾಮರೊಡನೆ ಮಾತಾಡಿ, ಅವರ ಅಭಿಪ್ರಾಯಗಳನ್ನು ಭಾರತ ಸರಕಾರದ ಮಂತ್ರಿಮಂಡಲದ ಪಟಂದಿಸ್ಟೆದ್ದಾರೆ. ಹೈದರಾಬಾದಿನ ಭವಿಷ್ಯದ ಕುರಿತು ವಿವಿಧ ಸರಣಿಗಳು ಬರುತ್ತಿವೆಯಾದರೂ ಪ್ರಕೃತ ಸಂಸ್ಥಾನದಲ್ಲಿ ಕಾನೂನು ಮತ್ತು ವ್ಯವಸ್ಥೆಯನ್ನು ಪುನಸ್ಥಾಪಿಸಿ ಸುಭದ್ರಗೊಳಿಸಿಕೊಳ್ಳುವದೊಂದೇ ಸರಕಾರದ ಮುಖ್ಯ ಕರ್ತವ್ಯವೆಂದೂ, ಸಾಮಾನ್ಯ ಶಾಂತಸ್ಥಿತಿ ಸ್ಥಾಪನೆ ಮಾಡುವ ಪ್ರಥಮ ಹೆಜ್ಜೆಯನ್ನೂ ರಿಕೊಳ್ಳದೆ ಮುಂದಿನ ಹೆಜ್ಜೆಯಿಡುವಂತಿಲ್ಲವೆಂದೂ ಸರ್ದಾರ್ ಪರೇಲರು ಸ್ಪಷ್ಟ ಪಡಿಸಿದ್ದಾರೆ. ಇತ್ತ ಅಧ್ಯಕ್ಷ ಸ್ವಾಮೀ ರಮಾನಂದ ತೀರ್ಥ ಮತ್ತು ಕಾಂಗ್ರೆಸ್ ಕಾರ್ಯಾಚರಣಾ ಸಮಿತಿ ಸದಸ್ಯರು ನವಢಿಲ್ಲಿಗೆ ಹೋಗಿ, ಹೈದ

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಪಕ್ವ ಅನುಭವದ ಯೋಗ್ಯತೆಯಿದೆ.

ನಿರಂತರ ಠೇವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.

ಎಲ್ಲಾ ತರದ ಆಧುನಿಕ ಬ್ಯಾಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬ್ಯಾಂಕ್, ಲಿಮಿಟೆಡ್

ಹೆ. ಆ. ಮಂಗಳೂರು.

The Vijaya Bank Ltd.

H. O. MANGALORE, S. K.

Wanted one higher grade trained Woman teacher.

For further particulars

Apply to-

Sri H. S. Kudva,

Manager,

Mahaganapathi Girls School

22-9-48 Kadekar, S. K.

ಸ್ವತಂತ್ರ ನಿಜಾಮರಿಂದ ಸ್ಥಿತಿ ನಿವೇದನೆ

ರಾಬಾದಿನ ರಾಜಕೀಯ ಭವಿಷ್ಯ-ಸದ್ಯದ ವ್ಯವಸ್ಥಾವಧಿ ಮುಗಿದ ಮೇಲಿನ ನಡುಗಾಲ ಮಂತ್ರಿಮಂಡಲ–ಘಟನಾ ಸಮಿತಿ ರಚನೆ ಮುತಾದುವುಗಳ ಕುರಿತು ಗಾಢ ಪರ್ಯಾಲೋಚನೆ ನಡೆಸಿದ್ದಾರೆ. ನಿಜಾಮರ ಸ್ಥಾನಮಾನಗಳ ಕುರಿತೂ ವಿವಿಧ ರೀತಿಯ ಊಹಾಪೋಹಗಳಿದ್ದಿವೆ. ಇವೆಲ್ಲಾ ಭಾವೀ ರಚನೆಗಳ ಕುರಿತು ರಾಜಾಜಿ, ನೆಹರು, ಪಠೇಲ್, ಮೆನನ್, ರಮಾನಂದ ತೀರ್ಥ, ಜನರಲ್ ರಾಜೇಂದ್ರ ಸಿಂಹಜೀ ಮುಂತಾದವರೊಳಗೆ ಆಲೋಚನೆಗಳಾಗಿವೆ. ಇತ್ತ ಸರ್. ವಿಜಿಯಾ ಇ ಸ್ಥಾಯೆಲರಂತಹ ಮಧ್ಯಗಾಮೀ ಮುತ್ಸದ್ದಿಗಳೂ ಥಿಲ್ಲನೆ ಒಂದು ಈ ಎಷಯಗಳಲ್ಲಿ ತಲೆ ಹಾಕಹತ್ತಿದ್ದಾರೆ. ನಿಜಾಮರನ್ನೇ ತೆಗೆದು ಹಾಕಬೇಕೆಂಬ ಅಭಿಪ್ರಾಯವು ಅಲ್ಪ ಸಂಖ್ಯಾಕರ ಅಭಿಪ್ರಾಯವಾಗಿ ಮೂಲೆ ಸೇರಿದೆ. ಮಿಕ್ಕ ಸಂಸ್ಥಾನಗಳ ರಾಜರಂತೆ ಈ ನಿಜಾಮರೂ ಘಟನಾತ್ಮಕ ತಿರಸ್ಕಾರಿ ಉಳಿದುಕೊಂಡು ವರ್ಷಾಸನ ಪಡೆಯಿವದರಲ್ಲೇ ತಪ್ತಿ ಹೊಂದಬೇಕು; ಅಥವಾ ತನಗದು ಅಸಾಧ್ಯವಾದರೆ ತನ್ನ ಹಿರಿ ಪುತ್ರ, ಪ್ರಗತಿಶೀಲ ವಿಚಾರಿ ಬಿರಾಂ ರಾಜ ಕುವರರಿಗೆ ಆ ಸ್ಥಾನವನ್ನೊಪ್ಪಿಸಿ ತಾನು ನಿವೃತ್ತಿ ಹೊಂದಬೇಕು, ಎಂದೇ ಹೈದರಾಬಾದ್ ಕಾಂಗ್ರೆಸ್ ನಾಯಕರ ಅಭಿಮತ. ಇದಕ್ಕಿಂತ ಉಗ್ರವಾದ ಗಣನೀಯ ಅಭಿಪ್ರಾಯವು ಬೇರೆಲ್ಲಿಂದಲೂ ಮುಂಗ ಬಂದಿಲ್ಲ. ಶ್ರೀಮತಿ ಅರುಣ ಆಸಫ್‌ಅಲಿಯಂತಹ ಸಮತಾವಾದಿ ಪ್ರಮುಖರು ಹೈದರಾಬಾದ್ ಸಂಸ್ಥಾನದೊಂದಿಗೆ ನಿಜಾಮರನ್ನೂ ಬರ್ಖಾಸ್ತು ಪಡಿಸಬೇಕೆಂಬ ಅಭಿಪ್ರಾಯ ಸೂಚಿಸಿಯುವರಾದರೂ ಅದು ಮನ್ನಿಸಲ್ಪಡುವದು ಅಸಂಭವ. ಎಲ್ಲವೂ ಪೂರ್ಣ ವ್ಯವಸ್ಥೆಗೆ ಬರುವ ವರೆಗೆ ಸೇನಾಡಳಿತೆ–ಆಮೇಲೆ ಈ ನಿಜಾಮರ ಕೈಕೆಳಗೇನೇ ನಡುಗಾಲ ಮಂತ್ರಿ ಸಮಿತಿ ರಚನೆ-ಕೊನೆಗೆ ಜನಮತದಿಂದಾರಿಸಲ್ಪಡುವ ಘಟನಾ ಸಮಿತಿಯ ನಿರ್ಣಯದಂತೆ ನಿಜಾಮರ ಸ್ಥಾನ ಮಾನ ವಮ್ತು ಸಂಸ್ಥಾನದ ರಾಜ್ಯ ಭಾರ-ಎಂಬುದೇ ಬಹುತೇಕವಾಗಿ ನಿಶ್ಚಯ.ಹೈದರಾಬಾದಿನ ನಾಗರಿಕಾಡಳಿತೆಯ ಮುಖ್ಯಾಧಿಕಾರಿಯಾಗಿ ಹಿಂದೀ ಸರಕಾರದಿಂದ ನೇಮಿಸಲ್ಪಟ್ಟ ಶ್ರೀ ಡಿ. ಯಸ್. ಭಕ್ಲೆ ಮತ್ತು ಸಂಸ್ಥಾನದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲರಾಗಿ ನೇಮಕಗೊಂಡ ಶ್ರೀ ಎ. ವಿ. ವಾತ್ಕೊ ಅಧಿಕಾರ ನಹಿಸಿ ತಮ್ಮ ಕಾರ್ಯಭಾರ ನಿರ್ವಹಿಸಹತ್ತಿದ್ದಾರೆ. ಸದ್ಯ ಅಲ್ಲಿಯ ಸರಕಾರೀಯಂತ್ರ ವಿಧಾನದಲ್ಲಾವ ಬದಲಾವಣೆಯೂ ನಡೆದಿಲ್ಲ. ವ್ಯವಸ್ಥಾಪಾಲನೆಗ ಗತ್ಯವೆಂದು ತೋರದ ಕಾನೂನು ವ್ಯತ್ಯಾಸವೇನೂ ಆಗುವಂತಿಲ್ಲ. ಹಿಂದಿನಂತೆ ಉರ್ದೂವೇ ಆ ಲ್ಲಿಯ ಸರಕಾರಿ ಭಾಷೆಯಾಗಿದೆ; ಶುಕ್ರವಾರ ರಜಾದಿನವಾಗಿದ್ದು ರದಿತ್ಯವಾರ ಕೆಲಸದ ದಿನವಾಗಿದೆ. ಸೆಪ್ಟೆಂಬರ್ ೨೮ರೊಳಗೆ ಶಸ್ತ್ರ ವಿದ್ದವರೆಲ್ಲಾ ತಂದೊಪ್ಪಿಸಬೇಕೆಂಬ ಮಿಲಿಟರಿ ಗವರ್ನರರ ಆಜ್ಞೆಯು ಹೆಚ್ಚಿನಂಶ ಭಯಭಕ್ತಿಯಿಂದ ಪಾಲಿಸಲ್ಪಟ್ಟಿದೆಯಾದರೂ ಕೆಲವೆಡೆ ಶಸ್ತ್ರಗಳು ಬಚ್ಚಿಡಲ್ಪಟ್ಟಿರುವವೆಂದು ತಿಳಿದು ಬಂದುದರಿಂದ ಸೇನಾ ಗವರ್ನರ್ ಜಾಧಾರಿಯವರು ಸ್ವಪ್ನ ಎಚ್ಚರಿಕೆ ಕೊಟ್ಟಿದ್ದರು.“೨೮ನೇ ಅಪರಾಹ್ನ ೬ಘಂಟೆಯೊಳಗೆ ಎಲ್ಲಾ ಶಸ್ತ್ರಗಳನ್ನು ನಮಗೊಪ್ಪಿಸದಿದ್ದರೆ ಅನುಮಾನ ಕೋರಿದ ಕಡೆ ಮನೆ ಜಪ್ತಿ ನಡಿಸಲಾಗುವದು. ನಿಮ್ಮ ಮನೆ ಶೋಧನೆ ಮಾಡುವ ಮೂಲಕ, ನಿಮ್ಮ ಮಹಳೆಯರಿಗಡಚಣೆಗಳನ್ನೊಡ್ಡುವ ಅಥವಾ ನಿಮ್ಮ ಗೃಹ ಶಾಂತಿಯನ್ನು ಕೆಡಿಸುವ ಇಚ್ಛೆ ನನಗಿಲ್ಲ. ಆದರೆ ಅದು ನಿಮ್ಮ ವರ್ತನೆಯನ್ನೇ ಹೊಂದಿ ಕೊಂಡಿದೆ. ಕೆಲವು ಮನೆಗಳಲ್ಲಿ ಶಸ್ತ್ರ ಸಂಗ್ರಹವಾಗುತ್ತಿರುವ ಸುದ್ದಿ ನನಗೆ ಮುಟ್ಟಿದೆ. ಇಂತಹ ಕಡೆ ಜಡ್ತಿಯ ಹುಕುಂ ಕೊಡಲು ನಾನು ಹಿಂದೆ ಸುಂದೆ ನೋಡಲಾರೆ”-ಆದಿದ್ದರು ಆಡಗಿ ಕುಳಿತ ರಝಾಕಾರ್ ಗುಂಪುಗಳ ಚಟುವಟಿಕೆಗಳು ಅಲ್ಲಲ್ಲಿ ಕಂಡು ಬರುತ್ತಿವೆ. ಹೈದರಾಬಾದ್, ಸೆಕುಂದರಾಬಾದುಗಳಲ್ಲಿ ಹಿಂದೀಸೇನೆ ರಾಣ್ಯವ್ಯೂಹವಾಗಿ ರಝಾಕಾರರ ಗುಂಡು ಹಾರಿದ ವಾರ್ತೆಯು ದ್ದಂತೆಯೇ ತಾ. 22ರಲ್ಲಿ ಝಹೀರಾಬಾದ್ ಬಳಿಯ ರೈಲ್ವೆಜಂ ಮೇಲೆ ನಾಗರಿಕ ಪೋಷಾಕಿನ ರಝಾಕಾರರು ಧಾಳಿಮಾಡಲು ಪ್ರಯತ್ನಿಸಿದಾಗ ಹಿಂದೀ ಸೇನೆಯು ಅವರಲ್ಲಿ 30 ಮಂದಿಯನ್ನು ಕೊಂದು ಚದರಿಸಿದ ವಾರ್ತೆಯಿದೆ. ಗುಲ್ಬರ್ಗಾ ಜಿಲ್ಲೆಯಲ್ಲಿದ್ದ ಈ ಪುಂಡರ ಅವಶೇಷಗಳನ್ನು ನಿರ್ಮೂಲಿಸಿ, ಅಲ್ಲಿ ಹಿಂದೀ ಸೇನೆ ಪ್ರವೇಶಿಸಿದೆ. ಹೈಪ್ರಸೇನಾ ವಿಜಯಕ್ಕಾಗಿ ತನ್ನ ಸೈನಿಕರನ್ನು ಅಭಿನಂದಿಸುತ್ತಾ ಸೇನಾ ಗವರ್ನರ್ ಮೇಜರ್ ಜನರಲ್ ಜಾಧಾರಿಯವರಂದರು. “ನಮ್ಮ ಕೆಲಸವಿನ್ನೂ ಮುಗಿದಿಲ್ಲ. ಈ ಗ ಲೂ ರಝಾಕಾರರ ಹಾಗೂ ಪುಂಡರ ದೊಡ್ಡ ಗುಂಪುಗಳು ಇದ್ದು ಅವುಗಳೆಲ್ಲವನ್ನೂ ಸುತ್ತುಗಟ್ಟಿ ಹಿಡಿಯಲಿಕ್ಕಿದೆ. ಇದೇ ಮುಖ್ಯ ಸೇನಾ ಕಾರ್ಯವಾಗಬಹುದೆಂದು ನನ್ನ ಅಭಿಪ್ರಾಯ”ವೆಂದಿದ್ದಾರೆ. ಶಾಂತಿ ಮತ್ತು ವ್ಯವಸ್ಥಾ ಸ್ಥಾಪನೆಗೆ ತಾನು ಹೈದರಾಬಾದ್ ಸೇನೆ ಮತ್ತು ಪೋಲೀಸ್ ದಳಗಳ ಪೂರ್ಣೋಪಯೋಗ ಮಾಡಿಕೊಳ್ಳುವೆನೆನ್ನುತ್ತಾ ಜನರಲ್ ಜಾಧಾರಿಯವರು ಹಿಂದೀ ಸೇನೆಯ ಆದರ್ಶ ವರ್ತನೆಗಾಗಿ ಅಭಿನಂದಿಸುತ್ತಾ “ನಾವು ಗೆದ್ದು ಕೊಂಡ ಪ್ರದೇಶ ಸೇನಾ ವಿಜಯಕ್ಕಿಂತಲೂ ಇದೇ ನಮಗೆ ಹೆಚ್ಚಿನ ಹಿತ ಸಾಧಿಸಬಹುದು.” ಎಂದರು. ಜ ಚೌಧರಿ ತನ್ನ ಆಧ್ಯತೆ ವಮ್ತು ಅನುಕೂಲತೆ ಹಾಗೂ ಸಜೀವಿ ಮತ್ತು ನಿರ್ಜೀವಿ ಉಪಕರಣಗಳೆಲ್ಲವನ್ನೂ ಹೈದರಾಬಾದಿನ ಕಾನೂನಾಂಶಗಳನ್ನು ಝಾಡಿಸಿ ತೆಗೆಯುವ ಕಾರ್ಯಕ್ಕೆ ಹಚ್ಚಿದ್ದಾರೆ

ನಿಜಾಮರ ನಿವೇದನೆ

ಹೈದರಾಬಾದ್ ನ್ಯಾಯ ಪಾಲನೆಯ ಈ ಶುಭ ಸನ್ನಿವೇಶದಲ್ಲಿ ಮೂಡಿ ತೋರಿರುವ ದೃಶ್ಯಕಾವ್ಯವೆಂದರೆ ಪಾರ್ಶ್ವಾತ್ಯ ರಾಷ್ಟ್ರಗಳಲ್ಲಿ ವಿಶೇಷತಃ ಬ್ರಿಟನಿನಲ್ಲಿ ಹೈದರಾಬಾದ್ ಪೋಲೀಸ್ ಕಾರ್ಯಾಚರಣೆಯ ರೂಪ ಕೆಡಿಸಿ ತೋರಿಸುವ ಅಪಪ್ರಚಾರ ನಡೆದಿರುವದು. ಬ್ರಿಟಿಷ್ ಆಕಾಶವಾಣಿ ಮತ್ತು ಪತ್ರಿಕೆಗಳಂಥಾರಂಭಿಸಿ ಪೆಚ್ಚಿನ ಪಾರ್ಶ್ವಾತ್ಯ ರಾಷ್ಟ್ರಗಳ ಬಾಯಿಗಳಿಂದ “ಹೈದರಾಬಾದಿನ ಆಕ್ರಮಣ” “ಬಲಪ್ರಯೋಗ”ವೆಂಬಂತಹ ಅಭಿಪ್ರಾಯಗಳು ಹೊರ ಸೂಸಿವೆ. ನ್ಯಾಯದ ಮೂಲ ಶೋಧನೆಯ ಪ್ರಯಾಸವನ್ನಾರೂ ತೆಗೆದುಕೊಂಡಂತಿಲ್ಲ. ಹೊಸಾಧ್ಯಾಯಾರಂಭದ ಮೊದಲೇ ಲಾಯಿಕ್ ಅಲಿ ಮಂತ್ರಿಮಂಡಲದಿಂದ ರಚಿಸಲ್ಪಟ್ಟಿದ್ದ ನಿಜಾಮ್ ಪ್ರತಿನಿಧಿಗಳ ದೂರು ಭದ್ರತಾ ಕೌನ್ಸಿಲಿನಲ್ಲಿ ಸೆಪ್ಟಂಬರ್ ತಾ. 20ರಲ್ಲಿ ಚರ್ಚಿಗಿಡಲ್ಪಟ್ಟಾಗ ಇಲ್ಲಿ ನಿಜಾಮರು ಭಾರತಾಧೀನವಾಗಿದ್ದರು. ಆದರೂ ಆಲ್ಲಿಯ ಅವರ ಪ್ರತಿನಿಧಿಗಳನ್ನಿಸುವವರು ತಮಗೆ ಪ್ರತ್ಯಕ್ಷವೆ ನಿಜಾಮರಿಂದಾವ ಸೂಚನೆಯೂ ಬಂದಿಲ್ಲವೆಂದು ವಾದಿಸಿದ್ದರು. ಹಿಂದೀ ಸರಕಾರದ ಪ್ರತಿನಿಧಿ ಸರ್. ಎ. ರಾಮಸ್ವಾಮಿ ಮುದಲಿಯಾರರು, ಹೈದರಾಬಾದ್ ವಿದ್ಯಮಾನಗಳನ್ನು ಸ್ಪಷ್ಟವಾಗಿ ಕಾಣಲಾಗುವ ದೈಗನ್ನಡಿಯಂತಹ ಭಾಷಣವಿತ್ತಿದ್ದರು: “ಈ ದೂರು ಕೊಡುವ ಅಧಿಕಾರವೇ ನಿಜಾಮರಿಗಿಲ್ಲ; ನಿಜಾಮರನ್ನು ರಝಾಕಾರಂತಹ ಕಾಯಿದೇ ಭಂಜಕರ ಕೈಯಿಂದ ಬಿಡಿಸುವದಕ್ಕಾಗಿಯೇ ಹಿಂದೀ ಸೇನೆ ಹೈದರಾಬಾದ್ ಪ್ರವೇಶಿಸಿದ್ದು; ಸಿಕಂದರಾಬಾದಿನೊಳಗೆ ಅದು ಹೊಕ್ಕುದು ನಿಜಾಮರಬಳಹ್ವಾನ ಪಡೆದೇ. ಈ ಸಂಘದ ನಿಬಂಧನೆಯಲ್ಲಿ “ನಾವು ಜನರು” ಎಂದಿದೆಯಲ್ಲದೆ “ನಾವು, ಅರಸರು” ಎಂದೇನೂ ಬರೆದಿಲ್ಲ; ಆದರಂತೆ ಹೈದರಾಬಾದಿನ ಭವಿಷ್ಯ ನಿರ್ಣಯವನ್ನು ಹೈದರಾಬಾದಿನ ಜನರಿಗೇ ಬಿಡಲಾಗುವದು” ಎಂದು ಸರ್ ಮುದಲಿಯಾರರು ಒತ್ತಿ ಹೇಳಿದ್ದಲ್ಲದೆ, ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಈ ಕುರಿತು ಹಬ್ಬಿರುವ ‘ಭಯಾನಕ, ಅವಾಯಕಾರೀ ತಪ್ಪು ಭಾವ್ಯಾಯಗಳನ್ನು ಕರಿಣವಾಗಿ ಖಂಡಿಸಿದ್ದರು. ಅಂತೆಯೇ ಇಂಗ್ಲಾಂಡಿನಲ್ಲಿ ಭಾರತದ ಹೈಕಮಿಶನರಾಗಿರುವ ಶ್ರೀ ಕೃಷ್ಣ ಮೆನನ್ ಜಪಿಸುರಿದಲ್ಲಿ ಭಾಂತದ ರಾಯಭಾರಿಯಾಗಿರುವ ಶ್ರೀ ಬೆಸಗಲ್ ರಾಮರಾವ್ ಮುಂತಾದವರೂ ಆಯಾಯಾ ದೇಶಗಳ ಹೈದರಾಬಾದ್ ಸಂಬಂಧದ ದುರ ಭಿಪ್ರಾಯಗಳನ್ನು ಭೇದಿಸಿ ಸಮಗತಿ ಸ್ಥಿತ್ಯೀಕರಣ ಮಾಡಿರುವರು ಆದರೂ

[೭ನೇ ಪುಟ ನೋಡಿರಿ]

ಜನ ಜನವೂ ಓದತಕ್ಕ
ಜನತಾ ಸಾಹಿತ್ಯ!
ಮನೆ ಮನೆಯೂ ಇರತಕ್ಕ
ಮನೋರಂಜನ ಸಾಹಿತ್ಯ!
ಸ್ವರಾಜ್ಯ ವಿಜಯದ ಕಡೆಯನ್ನು ಎಲ್ಲರಿಗೂ ತಿಳಿಯುವಂತೆ
ಶ್ರೀ ಎಂ. ವಿ. ಹೆಗ್ಡೆಯವರು ಬರೆದ
ಸ್ವರಾಜ್ಯ ವಿಜಯ
ಆಟ್ಲಿ, ಕ್ರಿಪ್ಸ್, ಅಲೆಕ್ಸಾಂಡರ್, ವೆಫಿಕ್ ಲಾರೆನ್ಸ್, ಜನ್ನಾ, ನೆಹರು, ಪಠೇಲ್, ಗಾಂಧಿ, ಆಜಾದ್, ಕೃಪಲಾನಿ, ಜೈಸ್ಕರ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರಧಾರಿಗಳು.
ಓದಬಲ್ಲವರಂತೂ ಓದಿ ತಿಳಿಯತಕ್ಕ ಕತೆ.
ಓದಲಾರದವರೂ ಒದಿಸಿ ಕೇಳತಕ್ಕ ಕತೆ.
ಬೆಲೆ ಬರೇ ೦ ೬ ೦
ಹತ್ತಾಣೆ ಸ್ಟ್ಯಾಂಪು ಕಳಿಸಿದರೆ 1 ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.
ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ, ಅಥವಾ ನವಯುಗ ಪ್ರೆಸ್, ಉಡುಪಿ.
ಇಲ್ಲಿ ದೊರೆಯುತ್ತವೆ.

ಖುತುಸ್ರಾವ ನಿಂತಿತು
‘ಕುಮಾರ್’ ಬಿಲ್ಲೆಗಳನು ಉಪಯೋಗಿಸಿದರೆ ಹದಿವಪ್ಪ ಋತುಸ್ರಾವವಾಗುವುದು ಮತ್ತು ಓಟಿಗೆ ಬರುವುದು. ಈ ಔಷಧ ಸೇವನೆಯುಂಟಾಗುವ ತೀವ್ರ ಗುಣವೊಂದಾಬುಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾರಿಕ ಸ್ಪೆಶ್ಯಲ್ ರೂ.8/-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]
MIS- P. DEVEE, F. DS (N. J.)
Tollygunge CALCUTTA.
ಸ್ವಾಕಿಸ್ವರು: ಶಹಾಕಂಪೆನಿ, ಮಂಗಳೂರು

ಸ್ಪೆಶಲ್ ಟ್ರೇನು
ತಾ. ೬-೧೧-೧೯೪೮ ಕಾರ್ತಿಕ ಶುದ್ಧ ಪಂಚಮಿ. ಶ್ರೀ ಕಾಶಿ, ಗಯಾ, ಪ್ರಯಾಗ, ಹರಿದ್ವಾರ, ಅಯೋಧ್ಯೆ ಮುಂತಾದ ೭೦ ಮುಖ್ಯ ಕ್ಷೇತ್ರಗಳು ೫೦ ದಿ. ಗಿಟಿಕ ರೂ. ಶ್ರೀಜಗದ್ಗುರು ಕಾಂಚೀಶ್ವರಾಧ್ಯ ಮಹಾಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವಕ್ಕೆ. ವಿಶೇಷ ಮಾಹಿತಿ ಜಾಹೀರಾತಿಗಾಗಿ ಕೂಡಲೆ ಬರೆಯಿರಿ.
ಟ್ರಾಕ್ಟರ ರಿಂಟಿಗಳಿಂದ ಕರಿಕೆ ಹೊಲಕೆರ್ದಿ ಮಾಡಿ ಕೊಡುವೆವು.
ಶ್ರೀಗೌರೀಶಂಕರ ಕಂಪೆನಿ, (ಕೇಶವಾಪುರ ಹುಬ್ಬಳ್ಳಿ

The Canara Banking Corporation Limited.

Estd: 1906
(Incorporated in British India)
Head Office: **UDIPI**, S. India.

Capital Authorised	..	Rs. 25,00,000
Capital Issued & Subscribed	....	Rs. 20,00,000
Capital Paid up	....	.... Rs. 19,98,445
Reserves....	....	.... Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager

ನವಯುಗ
ಗುರುವಾರ, ಉಡುಪಿ, ೩೦-೯-'೪೮

ಗಾಂಧೀ ಜಯಂತಿ

ಪದ್ಧತಿಯಂತೆ 'ಗಾಂಧೀ ಜಯಂತಿ ವಾರ'ವು, ಅಥವಾ ಮಹಾತ್ಮಾಜೀ ಇದನ್ನು ಕರೆಯುತ್ತಿದ್ದಂತೆ 'ಚರಕಾ ಜಯಂತಿ ವಾರ'ವು ಇದೇ ಸೆಪ್ಟೆಂಬರ್ ತಾ 26ರಿಂದ ಒಕ್ಟೋಬರ್ ತಾ 2ರ ವರೆಗೆ ನಡೆಯುತ್ತಿದೆ. ಯಾವ ಒಬ್ಬ ಪುತ್ರನ ಜನನದಿಂದ ಭಾರತ ಭೂಮಿ ಕೃತಾರ್ಥವಾಯಿತೋ ಆ ಮಹಾತ್ಮಾ ಗಾಂಧಿ ಜನಿಸಿದ್ದ ದಿನ ಒಕ್ಟೋಬರ್ ತಾ 2, ಪಂಡಿತ ನೆಹರುಗಳು ನವಢಿಲ್ಲಿಯಲ್ಲಿ ನಿರಾತ್ರಿರಿಗಾಗಿ 'ಲಜಪತರೈ ಮುನ್ಸಿಸಲ್ ಮಾರ್ಕೆಟ್ಟನ್ನು' ತೆರೆಯುತ್ತಾ ಇದೇ ತಾ 25ರಲ್ಲಾಡಿದಂತೆ "ಗತ ಕಾಲದ ಭಾರತವು ತನ್ನ ಶ್ರೀಮಂತಿಕೆಯ ದೆಸೆಯಿಂದ ಕೇತ್ರಿದಾಯಕ ಸ್ಥಾನಗಳಸಿದ್ದರೆ, ಅಧುನಿಕ ಭಾರತವು ಗಾಂಧಿಜೀಯ ದೆಸೆಯಿಂದ ಅದಕ್ಕಿಂತಲೂ ಹೆಚ್ಚಿನ ಕೀರ್ತಿಯ ಸ್ಥಾನದಲ್ಲಿದೆ. ದೇಹ ಧಾರೀ ಗಾಂಧಿಜೀ ನಮ್ಮೊಡನೀಗ ಇರದಿದ್ದರೂ, ಅವರು ನಮಗಿತ್ತ ಅಳಿಲಕೆಂಬುದು ನಮ್ಮಿರಿಕ ಶಕ್ತಿಯಲ್ಲಿ ದೀವಿಗೆಯಾಗಿ ಸದಾಕಾಲ ನಮ್ಮನ್ನು ನಡೆಸಲಿದೆ". ಕಾಂಗ್ರೆಸ್ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು, ನೂಲುವ ಪ್ರದರ್ಶನ ಮೊದಲಾದವುಗಳ ಮೂಲಕ ಕಾರ್ಯರೂಪೀ ಚರಕಾ ಸಂದೇಶವನ್ನು ಈ ವಾರದಲ್ಲಿ ಹರಡಿಸಬೇಕೆನ್ನುತ್ತಾ "ಇನ್ನಷ್ಟು ಹೆಚ್ಚಿನ ಹುರುಪಿನಿಂದಲ್ಲವಾದರೆ ಈ ಮೊದಲು, ಗಾಂಧಿಜೀಯದ್ದಾಗ ಆಚರಿಸುತ್ತಿದ್ದ ರೀತಿಯಲ್ಲಾದರೂ ಈ ಬಾರಿಯ ಚರಕಾ ಜಯಂತಿ ಸಪ್ತಾಹವನ್ನು ಆಚರಿಸಿ" ಎಂದು ನಮ್ಮ ವಿನಂತಿ ಮಾಡಿಕೊಂಡಿದ್ದಾರೆ. ಗಾಂಧೀ ವಾರದಲ್ಲಿ 'ಗಾಂಧೀ ರಾಷ್ಟ್ರೀಯ ಸ್ಮಾರಕ ನಿಧಿ'ಗೆ ಹಣ ಸಂಗ್ರಹಿಸುವ ಕಾರ್ಯವನ್ನು ಭರದಿಂದ ಸಾಗಿಸಬೇಕೆಂಬ ನಿರ್ಧಾರವು ಮೊದಲೇ ಆಗಿದ್ದು, ದೇಶದೆಲ್ಲೆಲ್ಲಾ ಆ ಕೆಲಸ ನಡೆದಿದೆ.

ವ್ಯಕ್ತಿತಃ ಗಾಂಧಿಜೀಯ ಅರಂಭ ಸಂದೇಶವಿಲ್ಲದ-ಸೇಹಧಾರೀ ಗಾಂಧಿಜೀ ನಮ್ಮೊಡನಿರದ-ಗಾಂಧೀ ಸಪ್ತಾಹವು ನಮ್ಮ ಪಾಲಿಗೊದಗಿದುದು ಇದೇಮೊದಲು. ದಿವಂಗತ ಗಾಂಧಿಯವರ ಮೊದಲನೇ ಜನ್ಮದಿನಾಚರಣೆಯಿದು. ಅವರಿರುವಾಗ, ತಾನು ಜಾತಿ ಕೊಟ್ಟ ಹಾದಿಯಲ್ಲಿ ತನ್ನ ಪರಿವಾರದವರೆಗೆ ಬಂದಿದ್ದಾರೆ, ಎಂಬುದರ ಚಿಹ್ನೆಸಕವನ್ನು ಇಂತಹ ಸಂದರ್ಭಗಳಲ್ಲಿ ಮಾಡಿ ಕೊಡುತ್ತಿದ್ದರು; ಈ ಬಾರಿ ಅವರಿಲ್ಲ. ಗವರ್ನರ್ ಜನರಲ್ ರಾಜಾಜೀ ಉಪದೇಶದಂತೆ "ಅವರು ನಮ್ಮೊಡನಿದ್ದಾರೆಂದೇ ನೆನಸಿಕೊಂಡು ಈ ಸಂದರ್ಭದಲ್ಲಿ ಅವರೇನು ಹೇಳುತಿದ್ದರು?" ಎಂಬುದನ್ನು ಊಹಿಸಿಕೊಂಡರೆ, ನಾವು ಅವರೊಡನೆ ಕ್ಷಮೆಯಾಚಿಸಬೇಕಾದ ಸಂಗತಿಗಳು ಬಹಳವಿವೆಯೆನ್ನಬಹುದು. ಗಾಂಧಿಜೀಯ ಜೀವನ ಕಾಲದಲ್ಲೂ ಅವರ ಪೂಜೆಗೆ ನಾವು ಸದಾ ಸಿದ್ಧರಿದ್ದೆವು ಹೊರತು ಅವರು ಹಾಕಿಕೊಟ್ಟ ಹಾದಿಯನ್ನು ತುಳಿಯುವುದರಲ್ಲಿ ನಿಷ್ಠೆ ತೋರಿಸಿದುದಿಲ್ಲ; ಅವರ ಬಲಿದಾನಾನಂತರವಂತೂ ನಮ್ಮ ಮಾತು ಕೃತಿಗಳೊಳಗಿನ ಈ ವ್ಯತ್ಯಾಸವು ಬಹಳವಾಗಿ ಬೆಳೆದಿದೆ! ನಮ್ಮ ಗಾಂಧೀ ಅನುಯಾಯಿತ್ವದ ಅಂಶ ತೀರಾ ಕಡಿಮೆಯಾಗಿ, ಅಸ್ಥೇ ಪರಿಮಾಣದಲ್ಲಿ ಗಾಂಧೀ ಆರಾಧನಾ ಭಾಗ ಹೆಚ್ಚಿದೆ! ಬಲಿದಾನಿ ಮಹಾತ್ಮನ ಸತ್ಯಾಹಿಂಸೆಗಳನ್ನು ಸಂದರ್ಭಾನುಸಾರ ಸ್ಮರಿಸುವದರಲ್ಲಿ ಲೋಕದ ಇತರ ರಾಷ್ಟ್ರೀಯರೂ ನಮ್ಮ ಸಮಾನತೆಗೆ ಬಂದಿದ್ದಾರೆ. ಇಂದಿನ ಕಾಲ-ವಾತಾವರಣ-ವಿದ್ಯಮಾನಗಳ ಮೇಲಿಂದ ಭಾರತೀಯರು ಹೀಗಾಗದೆ ನಿರ್ವಹಿಸಿಲ್ಲವೆಂದರೇನೇ ಗಾಂಧೀ ಸ್ಮರಣೆಯ ದಿರಲ್ಲಿ ಅತ್ಯ ವಂಚನೆ ಮಾಡಿದ ಅಪರಾಧವು ಯೋಗ್ಯತೆಯಾದರೂ ಉಳಿದೀತು ಮಹಾತ್ಮರ ಉಚ್ಚಾದರ್ಶಗಳನ್ನು ಸಾಮಾನ್ಯರು ತಮ್ಮಿಂದ ಸಾಧ್ಯವಿದ್ದಸ್ಟೇ ಅನುಕರಿಸಬಲ್ಲರು. ಇದೇ ತಾ 25ರ ತನ್ನ ಭಾಷಣದಲ್ಲಿ ಪಂಡಿತ ನೆಹರುಗಳೇ ಒಪ್ಪಿಕೊಂಡಂತೆ "ಹೈದರಾಬಾದ್ ಕಾರ್ಯಾಚರಣೆಯಿಂದಾಗಿ ಭಾರತವು ಜಾಗತಿಕ ವಿಮರ್ಶೆಗೆ ಗುರಿಯಾಗಿದೆ. ನಾವು ಗಾಂಧಿಜೀಯ ತತ್ವಾನುಯಾಯಿಗಳಾಗಲಿಲ್ಲವೆಂಬ ನಿಂದೆ ಗೀಡಾಗಿದ್ದೇವೆ. ಇತರ ರಾಷ್ಟ್ರಗಳ ಜನರು ಗಾಂಧಿಜೀಯ ತತ್ವಗಳನ್ನು ಹೊಗಳುವದನ್ನು ಕಂಡು ನಮಗಾನಂದವಾಗುತ್ತಿದೆ. ನಮ್ಮ ದಾಬ್ಬಳ್ಯದ ದೆಸೆಯಿಂದಾಗಿ, ಗಾಂಧಿಜೀಯ ತತ್ವಾನುಕರಣೆ ಮಾಡಲು ನಮ್ಮಿಂದ ಸಾಧ್ಯವಾಗದೆ ಹೋಗುವದು ಸ್ವತಃಸಿದ್ಧ!" ಹೀಗಿದ್ದರೂ ನಿಜಕ್ಕೂ ಈ ಸಂದರ್ಭದಲ್ಲಿ ಮಹಾತ್ಮರು ಇನ್ನಷ್ಟು ದೊಡ್ಡ ಪ್ರಕಾಶವಾಗಿ ಕಾಣುತ್ತಿದ್ದಾರೆ. ಅವರು ಜನಿಸಿದ್ದುದು ಭಾರತದ ವಿಮೋಚನೆಗಾಗಿ-ಅವರು ಜೀವಿಸಿದ್ದುದು ಆ ವಿಮೋಚನಾ ಸಾಧನೆಗಾಗಿ-ಅವರು ಮಡಿದುದು ಕೂಡಾ ವಿಮೋಚನಾನಂತರದ ಭಾರತದ ಶಾಂತಿ ಸುರಕ್ಷಿತತೆಗಾಗಿಯೇ ಎಂಬುದೀಗ ವಿವಿಧ ರೀತಿಗಳಿಂದ ಸ್ಪಷ್ಟವಾಗಿದೆ.

ಇಂತಹ ಮಹಾತ್ಮನ ಜಯಂತಿಯು ಎಲ್ಲೆಡೆಯಲ್ಲೂ ಆಚರಿಸಲ್ಪಡಲಿ; ಜನರು ಈ ಅವಧಿಯಲ್ಲಿ ಗಾಂಧೀ ರಾಷ್ಟ್ರೀಯ ನಿಧಿಯನ್ನು ತುಂಬಿಸಿ ಕೊಡಲಿ, ಎಂಬುದೇ ರಾಷ್ಟ್ರೀಯ ಹಾರೈಕೆ.

ಪುನಃ ಕ್ರಮಪ್ರಕಾರ ಆಹಾರ ನಿಯಂತ್ರಣ

ಆಹಾರ ನಿಯಂತ್ರಣವನ್ನು ಪುನಃ ಅಂಶತಃ ಅನುಕ್ರಮವಾಗಿ ಜಾರಿ ಮಾಡುತ್ತಾ ಬಂದು 1947ನೇ ನವಂಬರಿನಲ್ಲಿ ಇದ್ದಂತಹ ಹೆಸರುಗಿ ಮತ್ತು ಧಾನ್ಯ ಸಂಗ್ರಹಾಧಿಕಾರಗಳೇ ಹೆಚ್ಚೆಂದರೆ 1949ನೇ ಒಕ್ಟೋಬರಿನಲ್ಲಿ ಇಂತಿಷ್ಟಾಗಬೇಕೆಂಬ ಗುರಿಯನ್ನು ಭಾರತ ಸರಕಾರವಿಟ್ಟುಕೊಂಡಿದೆ. 1949ನೇ ಜುಲಾಯಿಯಲ್ಲಿ ಧಾನ್ಯ ಸಂಗ್ರಹ ಮತ್ತು ಹಸುಗೆಯ ಪೂರ್ಣಾಕಾರವು ಪರ್ಯಾಲೋಚಿಸಲ್ಪಟ್ಟ 1950ರಲ್ಲಿ ಎಲ್ಲಿಡೆಯಲ್ಲೂ ಒಂದು ಸಮ ಮಟ್ಟು ಬರುವಂತಾಗುವದು. ಇದೇ ಸೆಪ್ಟೆಂಬರ್ ಮಧ್ಯ ಭಾರದಲ್ಲಿ ನವಢಿಲ್ಲಿಯಲ್ಲಿ ಕೇಂದ್ರ ಸರಕಾರದ ಪ್ರತ್ಯಯದಲ್ಲಿ ಜರಿದ ಸರ್ವ ಪ್ರಾಂತಿಕ ಪ್ರಧಾನ ಮಂತ್ರಿಗಳ ಸಮ್ಮೇಳನದಲ್ಲಿ ಆಹಾರ ಧಾನ್ಯಗಳ ಪುನರ್ನಿಯಂತ್ರಣವು ಸವಿಧರವಾಗಿ ಚರ್ಚಿಸಲ್ಪಟ್ಟು ಮೇಲಿನ ನಿರ್ಧಾರವಾಗಿದೆ.

ಆಹಾರ ಪ್ರಸರಣವನ್ನು ತಡೆಗಟ್ಟುವದಕ್ಕಾಗಿ ಹಾಗೂ ರಾಷ್ಟ್ರದ ಆರ್ಥಿಕ ಸ್ಥಿತಿ ಸುಧಾರಣೆಗಾಗಿಯೇ ಪುನಃ ನಿಯಂತ್ರಣ. ಈ ಗುರಿ ಸಾಧನೆಯಲ್ಲಿ ಹತ್ತಿ ಮತ್ತು ಅಂತೆಯೇ ನಿಯಂತ್ರಣವು ಪ್ರಥಮ ಹೆಜ್ಜೆಯಾದರೆ, ಆಹಾರ ನಿಯಂತ್ರಣವು ಎರಡನೇ ಹೆಜ್ಜೆ. ನೂರನೇ ಹೆಜ್ಜೆಯಾಗಿ ಇತರ ಕೆಲವು ಜೀವನಾವಶ್ಯ ಸಾಮಗ್ರಿಗಳ ನೇಲೂ ನಿಯಂತ್ರಣ ಮತ್ತಿತರ ವಿಧಾನೆಗಳು ಜಾರಿಯಾಗಲಿವೆ.

ಈ ಬಾರಿಯ ಆಹಾರ ನಿಯಂತ್ರಣವು ಅಂಶಾಂಶವಾಗಿ ಜಾರಿಗೆ ಬರುವಂತಹದಿದ್ದು, ಕೊಡಲೇ ಅರಂಭವಾದುದು ಬರುವ 1949 ನೇ ಒಕ್ಟೋಬರಿಗೆ ಪೂರ್ಣಗೊಳ್ಳುವದು. ಅಕ್ಕಿ, ಗೋಧಿ, ಜೋಳ, ಬಾರ್ಲಿ ಹುರುಳಿ ಇತ್ಯಾದಿ ದ್ವಿದಳ ಧಾನ್ಯಗಳು, ರಾಗಿ ಮೊದಲಾದ ಮುಖ್ಯ ಧಾನ್ಯಗಳ ಮೇಲೆ ನಿಯಂತ್ರಣವಾಗುವದು. ಉಳಿತಾಯದ ಕ್ಷೇತ್ರ-ಕೊರತೆಯ ಕ್ಷೇತ್ರ ಸ್ವಾವಲಂಬಿ ಕ್ಷೇತ್ರಗಳನ್ನು ವಿಂಗಡಿಸಿಟ್ಟು ಸರಕಾರೀ ಮೂಲಕ ಹೊರತು ಒಂದು ಪ್ರಾಂತ್ಯ ಅಥವಾ ಸಂಸ್ಥಾನದಿಂದ ಇನ್ನೊಂದಕ್ಕೆ ಧಾನ್ಯಾದಾಗದಂತೆ ಪ್ರತಿಬಂಧ ಬೀಳುವುದು. ಪ್ರಾಂತ್ಯದೊಳಗೂ ಈ ಧಾನ್ಯಗಳ ಮಹಾವಾಟುಗಳನ್ನು ನಿಯಂತ್ರಿಸುವ ಪೂರ್ಣಾಧಿಕಾರ ಸರಕಾರಕ್ಕಿದೆ. ಸರಕಾರೀ ನೇಮಿತ ಏಜನ್ಸಿಯು ಕೇಂದ್ರ ಸರಕಾರವು ಮುಂಜೂರು ಮಾಡಿದ ಧಾರಣೆಯಲ್ಲಿ, ಉಳಿತಾಯದ ಕ್ಷೇತ್ರಗಳ ಸಾಗುವಳ್ಳಿದಾರರಿಂದ ಸಂಗ್ರಹಿಸಿದ ಧಾನ್ಯವು ಕೇಂದ್ರ ಸರಕಾರವು ಹೊರಗಿನಿಂದ ತರಿಸಿಕೊಂಡ ಧಾನ್ಯಗಳೊಂದಿಗೆ ನಿಶ್ಚಿತ ಯೋಜನಾನುಸಾರ ಸರಕಾರದ ಮೂಲಕವೇ ಕೊರತೆಯುಳ್ಳ ಭಾಗಗಳಿಗೆ ನಿರತಣಿಗೊಳ್ಳುವುದು. ಆಹಾರ ಧಾನ್ಯಗಳ ಒಟ್ಟು ಸಂಗ್ರಹ ಮತ್ತು ವ್ಯಯಗಳ ಜಿಲ್ಲಾನೆಲನೆಗಳನ್ನು ತಿಳಿದುಕೊಳ್ಳುವದಕ್ಕಾಗಿ, ಅವುಗಳನ್ನು ಪಡಕೊಳ್ಳುವವರು, ಮಾರುವವರು ಹಾಗೂ ದಾಸ್ತಾನಿಡುವವರು ತಮ್ಮ ಲೆಕ್ಕ ಪತ್ರಗಳನ್ನು ಅವಧಿ ಪ್ರಕಾರ ವಂದಿ ಮಾಡುತ್ತಿರಬೇಕು. ಅತಿ ಸಂಗ್ರಹವಾಗದಂತೆ-ಸರಿಯಾಗಿ ವಿತರಣೆಗೊಳ್ಳುವಂತೆ-ಭರವಸೆ ಮೂಡುವಂತೆ, ರೇಶನಿಂಗ್ ಜಾರಿಗೆ ಬರುವುದು. ಉತ್ಪಾದಕರ ಧಾನ್ಯಗಳ ನಿಶ್ಚಿತ ಧಾರಣೆಯನ್ನೇರಿಸಲಾಗುವುದೆಂದೂ, ಅದೇ ಪರಿಮಾಣದಲ್ಲಿ ಪಡಕೊಳ್ಳುವವರಿಗೂ ಹೆಚ್ಚು ಕ್ರಯ ಬೀಳಲಿದೆಯೆಂದೂ ತಿಳಿದು ಬರುತ್ತದೆ. ಸಾಗುವಳ್ಳಿದಾರರಿಗಗತ್ಯವುಳ್ಳ ಕೆಲವು ಸಾಮಗ್ರಿಗಳನ್ನು ಸರಕಾರೀ ಏಜನ್ಸಿ ಮೂಲಕವೇ ನಿಶ್ಚಿತ ಬೆಲೆಗೆ ಮಾರುವ ವ್ಯವಸ್ಥೆಯಾಗಲಿದೆ.

ಈ ಬಾರಿಯ ಆಹಾರ ನಿಯಂತ್ರಣವು ಅಥವಾ ನಿವಾರಣೆಗಿಂತ ಹೆಚ್ಚಾಗಿ, ಅತಿ ಪ್ರಸರಣದ ನಿವಾರಣೆ ಮತ್ತು ಆರ್ಥಿಕ ಸ್ಥಿತಿ ಸುಧಾರಣೆಯ ದೃಷ್ಟಿಯಿಂದ ಜಾರಿಗೆ ಬಂದಿರುವಂತಹದು; ಅದೂ ಅನುಕ್ರಮವಾಗಿ. ಬರುವ ಜನವರಿಯ ಮೊದಲು ಈ ವಿಧಾನವನ್ನಾವರೀತಿಯಿಂದಲೂ ಮುಪ್ಪಾಸ್ ಸ್ಥಿತ್ಯಾದಿಯಲ್ಲಿ ಜಾರಿಗೆ ತರುವದಿಲ್ಲವೆಂದು ಪ್ರಧಾನಿ ಒಮ್ಮಂದಾರರಂದಿರುವದರಿಂದ ಈ ಮೊದಲು ನಿರೀಕ್ಷಿಸಲಾಗಿದ್ದಂತೆ ನವಾಬುದೂ ಈ ಬಾರಿಯ ಕಟಾವಿನ ಸಮಯ ಇಲ್ಲಿ ಜಾರಿಗೆ ಬರುವದು ಅಸಂಭವ; ಉಳಿತಾಯ ಧಾನ್ಯಗಳ ಸಂಗ್ರಹವು ಸಾಧಾ ರೀತಿಯಿಂದಲೇ ನಡೆಯಬಹುದು. ಯೋಜನೆಯು ನಿಶ್ಚಯ ಪ್ರಕಾರ ಸಾಗಿದರೆ ಮುಂದಿನ ವರುಷದ ಕಟಾವಿನ ವೇಳೆ ಕಾನೂನುಬದ್ಧ ಸಂಗ್ರಹ ಮತ್ತು ಪೂರ್ಣ ನಿಯಂತ್ರಣ ಜಾರಿಗೆ ಬರಬಹುದು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.
ಖಜಾಂಚಿ, ಖಾನ್‌ದಾನ್, ಜಮಿಂದಾರ, ಪೂಂಜಿ ಮೊದಲಾದ ಮೇಲ್ತರಗತಿಯ ಚಿತ್ರ ನಿರ್ಮಾತೃಗಳೇ ಪಂಚೋಲಿಯನರು.
ಇವರ
ಪಗದಂಡಿ (ಕಾಲುದಾರಿ)
ತಾರೀಕು **30-9-48**ರಿಂದ
ಅಯ್ಯರ್, ಗ್ಯಾನಿ, ಕಲಾವತಿ, ದುರ್ಗಾ ನೋಟೂ ಮೊದಲಾದವರು.
ಬರುವ ಚಿತ್ರಗಳು:—
ಮಾಬಾಪ್, ರಾಜಲಕ್ಷ್ಮಿ.

ಉಡುಪಿ

ಮುನಿಸಿಪಲ್ ಕೌನ್ಸಿಲು ಮಿಂಟಿಂಗು:-ಇದೇ ತಾ 25ರಲ್ಲು ಜಯರ್‌ಮೆನ್ ಶ್ರೀ ಪಿ. ಉಪೇಂದ್ರ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ವೃತ್ತಿ ತೆರಿಗೆಯ ಮೇರೆ ಸೇಕಡಾ 25ರಷ್ಟು ಟೇಕ್ಸ್ ವಸೂಲು ಮಾಡುವ ಕೌನ್ಸಿಲಿನ ನಿರ್ಧಾರಕ್ಕೆ ಸರಕಾರದ ಒಪ್ಪಿಗೆ ದೊರೆಯದಿದ್ದುದರಿಂದ ಈ ತನಕ ವಸೂಲು ಮಾಡಲಾದ ಹಣವನ್ನು ವಾಪಾಸು ಕೊಡಬೇಕೆಂದಾಯಿತು. ಪಾಕಿಸ್ತಾನ ಗವರ್ನರ್ ಜನರಲ್ ಮಿ। ಜಿನ್ನಾರವರ ನಿಧನದ ಬಗ್ಗೆ ಶೋಕ ಪ್ರದರ್ಶಿಸಲಾಯಿತು. ಹೈದರಾಬಾದು ಸಮಸ್ಯೆಯು ಬೇಗನೆ ಇತ್ಯರ್ಥವಾಗಲು ಕಾರಣರಾದ ಪಂಡಿತ ನೆಹರು, ಸರ್ದಾರ್ ಪಟೇಲ್ ಮೊದಲಾದವರನ್ನು ಅಭಿನಂದಿಸಲಾಯಿತು. ಹುದುಗಿಯರಿಗಾಗಿ ಮಿಡ್ಲ್ ಸ್ಕೂಲ್ ಒಂದನ್ನು ಸ್ಥಾಪಿಸುವರೆ ಇಲಾಖೆಯವರಿಗೆ ಮನಸ್ಸಿದ್ದರೂ ಹಣದ ಮುಗ್ಗಟ್ಟಿನಿಂದಾಗಿ ನಗರಸಭೆಯು ಆ ಯೋಜನೆಗೆ ಒಪ್ಪಿಗೆ ಕೊಡಲಿಲ್ಲ. ನವಂಬರ ತಿಂಗಳಲ್ಲಿ ಜಿ. ಕೆ. ಜಿಲ್ಲೆಗೆ ಬರಲಿರುವ ವಿದ್ಯಾನುಶ್ರಿಗಳ ಕೂಡಿ ಪತ್ರನ್ಯವಹಾರ ನಡೆಸುವರೆ ಜೆಯರ್ ಮೆನರಿಗೆ ಅಧಿಕಾರನೀಯಲಾಯಿತು

ಕಾಂಗ್ರೆಸ್ ಕಮಿಟಿ ಸಭೆಯು— ತಾ 25ರಲ್ಲು ಶ್ರೀ ಬಾಳ್ಕಟ್ಟಸೀಮಿ ಕೃಷ್ಣಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ





ಉಡುಪಿಯ ಸ್ವಾತಂತ್ರ್ಯ ದಿನಾಚರಣೆ ಸಮಿತಿಯವರು ಗಾಂಧಿ ಮೈದಾನಿನಲ್ಲಿ ಕಟ್ಟಿಸಿದ ಅಶೋಕ ಧ್ವಜ, ಈ ಚಿತ್ರದಲ್ಲಿ ಧ್ವಜದ ಕೆಳ ಭಾಗ ಮಾತ್ರ ಕಾಣುತ್ತಿದೆ. ಇದರ ಮೇಲೆ ಸುಮಾರು 50 ಅಡಿ ಎತ್ತರದ ಧ್ವಜ ಸ್ತಂಭವಿದೆ.

ಕೆಮಿಕಲ್ ಎಂಜಿನಿಯರಿಂಗನಲ್ಲಿ ಹೆಚ್ಚಿನ ವ್ಯಾಸಂಗಮಾಡಲು ತಾ 14-8-48ರಲ್ಲಿ ಅಮೆರಿಕಾ ದೇಶಕ್ಕೆ ತೆರಳಿದ ಶ್ರೀ ಬಿ. ವಿಠಲ ಸೆಟ್ಟರು.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ –ಶಾಲೆಗಳಿಗೆ—
ಟೀಕಾಗುವ ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಫಾರ್ಮುಗಳೂ, ಎ ಕೌಂಟ್ ಪುಸ್ತಕ, ಕುರಿಫಂದು ಪುಸ್ತಕಗಳೂ ಸೊರೆಯುತ್ತವೆ.

ನವಯುಗಪ್ರೆಸ್, ಉಡುಪಿ.

ಪ್ರಕಟಣೆ

ನಾನು ಬೊಂಬಾಯಿಯಲ್ಲಿದ್ದಾಗ ಅಲ್ಲಿಯ ಗುಜರಾಥಿ ಮತ್ತು ಮಾರವಾಡಿ ಜನರಿಗೆ ಕನ್ನಡದ ಜ್ಞಾನವಿಲ್ಲದಿದ್ದುದರಿಂದ ಅವರ ಸೌಕರ್ಯಕ್ಕಾಗಿ ನಾನು ಕೊಡುತ್ತಿದ್ದ ಬೇಂಕಿನ ಎಲ್ಲಾ ಚೆಕ್ಕು ನಗ್ಗೆರೆಗಳಿಗೆ M·N· Shetty ಎಂದು ಇಂಗ್ಲಿಷು ಹಾಕುತ್ತಿದ್ದೆನು. ಈಗ ನಾನು ಊರಿಗೆ ಬಂದಿದ್ದು ನನ್ನ ವಿಷ್ಯತಿನ ಕುರಿತು ಇಲ್ಲಿಯವರು ಆಕ್ಷೇಪಪತ್ರವಿದ್ದರಿಂದ ಇನ್ನುಮುಂದೆ ನಾನು ಬೋಳ ಮಂಜಯ್ಯ ಸೆಟ್ಟಿ ಎಂದು ಸಹಿ ಹಾಕುತ್ತೇನೆ ನನ್ನ ಎಲ್ಲಾ ಸಹಿವಾಟುಗಳಿಗೆ ಈ ಹೊಸ ಪಹಿ ಸಹಿ ಸಂಧಾನವಾಗತಕ್ಕದೆಂದು ಈ ಮೂಲಕ ಪ್ರಕಟಿಸಿದ್ದೇನೆ.

ಬೋಳಮಂಜಯ್ಯ ಸೆಟ್ಟಿ.
ಪಡುಬಿದ್ರಿ ತಾ 24-9-48

ಅಮೃತಾಂಜನ ತಲೆನೋವಿಗೆ, ಶೀತಕ್ಕೆ ನೇವನೆ, ಉರಿಕಾಕ್ಕಿಗೆ, ಕೀಟ ಹುಳು ಪೇಜನೆಗಳಿಗೂ ಎದೆನೋವು, ಭಾಯಗಳು ಬಾತು ಕೊಕ್ಕುವುದು, ಚೇಳು ವಿಷ ಮುಂತಾದ ಪೇಜ ಪಕ್ಷಪಾತ ಮೊದಲು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ.

REGD.

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿಯ ಕಾರ್ಯಕಲಾಪಗಳು– ಶ್ರೀಗಳಾದ ಪಿ. ಉಪೇಂದ್ರ ನಿವಾಸ ನಾಯರ್, ಡಾ। ಸುಂದರಾಮಯ್ಯ, ಬಾಳ್ಕಟ್ಟ ಬೀಡು ಕೃಷ್ಣಯ್ಯ ಹೆಗ್ಡೆ, ಕೆ. ನರಹರಿ ಪಾನು ತಾ' ಸೊಪೆಲಾದವರು ಇದೇ ತಾ 24ರಲ್ಲಿ ಪಡುಬಿದ್ರೆ ಕೇಂದ್ರದಲ್ಲಿ ಶ್ರೀ ಯು. ಎಸ್ ನಾಯ್ಕರ ಅಧ್ಯಕ್ಷತೆಯಲ್ಲೂ ತಾ 26ರಲ್ಲಿ ಕುಡೂರು ಸೆಂಟರಿನಲ್ಲಿ ಶ್ರೀ ಪಿ. ಹಿರಿಯಣ್ಣ ಸೆಟ್ಟರ ಅಧ್ಯಕ್ಷತೆಯಲ್ಲೂ, ಆದೇ ದಿನ ಹಿರಿಯಡ್ಕ ಕೇಂದ್ರದಲ್ಲಿ ಡಾ। ಚಂದಯ್ಯ ಹೆಗ್ಡೆರ ಅಧ್ಯಕ್ಷತೆಯಲ್ಲೂ ಮಹಾಜನ ಸಭೆಗಳನ್ನು ಏರಿಸಿ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ಹಣ ಕೂಡಿಸುವರೆ ಊರ್ ಸಮಿತಿಗಳನ್ನು ನೇಮಿಸಿದರು. ಸರ್ವರೂ ಹತ್ತು ದಿವಸಗಳ ಉತ್ಪತ್ತಿಯನ್ನು ಕೊಡಬೇಕಾಗಿ ವಿನಂತಿಸಿದರು. ಊರ ಸಮಿತಿಗಳ ಸಹಕಾರ ನಿವರ:-

ಪಡುಬಿದ್ರಿ:- ಶ್ರೀಗಳಾದ ಕೃಷ್ಣ ಮೂರ್ತಿ, ವೈ. ನಾರಾಯಣ ಭಟ್, ಮುದ್ದಣ್ಣ ಸೆಟ್ಟಿ, ದೊಡ್ಡಣ್ಣ ಸೆಟ್ಟಿ, ಶಾಂತಿರಾಜಯ್ಯ, ಡಾ। ಕುಮಾರನ್ ನಂಬಿಯಾರ್, ಪಿ. ರಂಗಮಾನ ಪ್ರಭು, ನಾರಾಯಣ ಸೆಟ್ಟಿ, ಪಟೇಲ್ ದೇವಪ್ಪ ಸೆಟ್ಟಿ, ನಿವಾಸ ಶೆಣೈ, ತೋಮಸ್ ಆಂದ್ರಾದೆ, ಬಿ. ಜನಾರ್ದನಯ್ಯ, ಎನ್. ನಾಗಪ್ಪ, ಗೋಪಾಲ ಹೆಗ್ಡೆ ಇವರುಗಳ ಮುಂದಿ ಹಣ ಸಂಗ್ರಹಿಸಲು ಅಧಿಕೃತ ಏಜಂಟ್ ಶ್ರೀ ಕರಿಯಣ್ಣ ಸೆಟ್ಟರೊಡನೆ ಸಹಕರಿಸುವುದು.

ಪೆಡೂರು:- ಅಧಿಕೃತ ಏಜಂಟ್ ಶ್ರೀ ಎ. ಕೃಷ್ಣಯ್ಯ ಹೆಗ್ಡೆರಿಗೆ ಸಹಾಯಕರಾಗಿ ಶ್ರೀಗಳಾದ ಸಿ. ಹಿರಿಯಣ್ಣ ಸೆಟ್ಟಿ, ನರಸಿಂಹ ಭಂಡಾರಿ, ಮಂಜುನಾಥ ಆಚಾರ್, ಡಾ। ಎನ್. ಪಿ. ಸೆಟ್ಟಿ, ಬಿ. ಭುಜಂಗ ಹೆಗ್ಡೆ, ಪಿ. ಪದ್ಮನಾಭ ಅಡಿಗ, ಬಿ. ವೆಂಕಪ್ಪ ಹೆಗ್ಡೆ, ಪಿ. ಶೇಷಗಿರಿ ಮಲ್ಯ, ಬಿ. ಸಂಜೀವ ಹೆಗ್ಡೆ -ಇವರು ನಿಧಿ ಸಂಗ್ರಹ ಕಾರ್ಯವನ್ನು ಮುಂದುವರಿಸುವುದು.

ಹಿರಿಯಡ್ಕ:- ಡಾ। ಚಂದಯ್ಯ ಹೆಗ್ಡೆರು ಅಧಿಕೃತ ಏಜಂಟರಾದ್ದು ಇವರೊಡನೆ ಸಹಕರಿಸಲು ಶ್ರೀಗಳಾದ ನರಸಿಂಹ ಶ್ಯಾನುಭೋಗ, ಪಟೇಲ್ ಸುಂದರ ಸೆಟ್ಟಿ, ಕೆ. ಅನಂತಯ್ಯ, ಬಿ. ನಾಗಪ್ಪ ಪೈ, ಕೆ. ಮಹಾಬಲ ಹೆಗ್ಡೆ, ಪಿ. ವೆಂಕಟ್ರಮಣ ಕಾಂಚತ್ತಾಯ, ಕೆ. ಎಲ್. ಆಚಾರ್ಯ, ಕೆ. ಜಗನ್ನಾಥ ಸೆಟ್ಟಿ, ಎಸ್ವನಾಥ ಹೆಗ್ಡೆ, ಎಮ್. ವಿಠಲ ಹೆಗ್ಡೆ, ವಿ. ಜಗನ್ನಾಥ ಹೆಗ್ಡೆ ಮತ್ತು ನಾರಾಯಣ ತಂತ್ರಿ.

ಕಲಾಮೃಂದ— ದ ಮಹಾಸಭೆಯು ದಿನ ೨೬ ಕ್ಕಳಿಸನೇಸಾಯಂಕಾಲಜರಗಿ ಈ ವರುಷದ ಕಾರ್ಯಕಾರಿ ಸಮಿತಿಯ ಅಧಿಕಾರಿಗಳ ಚುನಾವಣೆಯಾಯಿತು. ಶ್ರೀಗಳಾದ ಅಲೆವೂರು ಶ್ರೀ ರಮಣಾಚಾರ್ಯರು (ಅಧ್ಯಕ್ಷ) ಕೊಡೂರು ಶ್ರೀನಿವಾಸಭಟ್ಟರು (ಕಾರ್ಯದರ್ಶಿ) ಕೋಟಿ ಸದಾಶಿವ ಪತ್ರಾಳರು (ಕೋಶಾಧಿಕಾರಿ) ಪಿ. ರಾಮಾಂತಂತ್ರಿಗಳು (ಪತ್ರಿಕಾ ಸಂಪಾದಕ) ಯು ಜನಾರ್ದನಾಚಾರ್ಯರು (ಲೈಬ್ರೆರಿ ಅಧಿಕಾರಿ) ಪಡುವೆಟಿ ವೆಂಕಟಕೃಷ್ಣ ಉಪಾಧ್ಯಾಯರು (ಭಜನಾ ಕಾರ್ಯದರ್ಶಿ) ಆರಿಸಲ್ಪಟ್ಟರು. ವ್ಯಂದದ ಅಧ್ಯಕ್ಷ, ಕಾರ್ಯದರ್ಶಿಗಳಾಗಿದ್ದು ಅನವರತ ಪರಿಶ್ರಮಿಸಿದ್ದ ಶ್ರೀ. ಯಸ್. ಯಲ್. ಯನ್. ಭಟ್, ಶ್ರೀ. ಕೆ. ಅನಂತಪದ್ಮನಾಭ ಉಡುಪ, ಮತ್ತು ತರರನ್ನು ಅಭಿನಂದಿಸಲಾಯಿತು.

ಉಡುಪಿ ತಾಲೂಕಿನಲ್ಲಿ ಗ್ರಾಮಾಭಿವೃದ್ಧಿ ಸಂಘಗಳ ನಿರ್ಮಾಣ:— ಉಡುಪಿತಾಲೂಕು ರೂರಲ್ ವೆಲ್‌ಫೇರ್ ಆಫೀಸರಾದ ಶ್ರೀ ಎಮ್ ಕಾಂತಪ್ಪನವರು ಇದೇ 25ರಲ್ಲಿ [illegible] ಸಭೆಯೊಂದನ್ನು ಶ್ರೀ ವಿಷ್ಣುಮೂರ್ತಿ ಎಲಿಮೆಂಟರಿ ಶಾಲೆಯಲ್ಲಿ ಜರಗಿಸಿ ಗ್ರಾಮಾಭಿವೃದ್ಧಿ ಸಂಘಗಳೊಂದನ್ನು ಸ್ಥಾಪಿಸಿದರು. ತತ್ಸಂಬಂಧ ಕಾರ್ಯಕಾರಿ ಮಂಡಳಿಯ ರಚನೆಯಾಗಿ ವಯಸ್ಕರ ಶಿಕ್ಷಣ ಕೇಂದ್ರ ಮತ್ತು ಭಜನಾ ಸಂಘ ತೆರೆಯಲಾಯಿತು. ಇದೇರೀತಿಯಲ್ಲಿ ಬಾಂತಾರು (ಬ್ರಹ್ಮಾವರ) ಗ್ರಾಮಸ್ಥರ ಸಭೆಯು ತಾ 23ರಲ್ಲಿ ಡಾ। ಕೆ. ನಾರಾಯಣ ಶೈಗಳವರ ಅಧ್ಯಕ್ಷತೆಯಲ್ಲಿ ಜರಗಿ ಗ್ರಾಮಾಭಿವೃದ್ಧಿ ಸಂಘ ಸ್ಥಾಪನೆಯಾಯಿತು. ಪಡು ಮತ್ತು ಉಳಿಯಾರಗೋಳಿ [ಕಾವು] ಗ್ರಾಮಸ್ಥರ ಸಭೆಯು ತಾ 15ರಲ್ಲು ಜರಗಿ ಗ್ರಾಮಾಭಿವೃದ್ಧಿ ಸಂಘ ಸ್ಥಾಪಿತವಾಯಿತು.

Approved firm by the Govt. of Mysore Certified by the Agent of the Govt. of Cylone & Indian.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ಗದಾರರಿಗೆ –ಶಾಲೆಗಳಿಗೆ—
ಟೀಕಾಗುವ ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಫಾರ್ಮುಗಳೂ, ಎ ಕೌಂಟ್ ಪುಸ್ತಕ, ಕುರಿಫಂದು ಪುಸ್ತಕಗಳೂ ಸೊರೆಯುತ್ತವೆ.

ನವಯುಗಪ್ರೆಸ್, ಉಡುಪಿ.

ನೆನೆಪಿರಲಿ ಕೈಲಾಸ ಚಿಟ್ಟಿದ ಗಿಡ ನೂಲಿಕೆಯ (ರಬ್ಬಿಸ್ಟರ್ಡ್) ಒಂದು ಜೋಸ್ ವಿಸಥವನ್ನು ತಾ 18-10-48ನೆ ಶನಿವಾರ ಹುಣ್ಣಿಮೆ ದಿನ ಸೇವಿಸಿದರೆ ಗಂಡಹ ಅಸ್ತಮ-ಗೊರಬು ಬ್ರಸವು ಕಡಿಮೆಯಾಗುವುದು.

ಪತ್ರವ್ಯವಹಾರ ಇಂಗ್ಲಿಷಿನಲ್ಲಿ.

Bramhachari G. Das,
Shri Sidh Bramhacharya,
Sewa Ashram,
P, O· Chitrakot (U· P·)

ದಕ್ಷಿಣ ಕನ್ನಡ

"ಪೆರ್ಡೂರು–ತಾ ೫೧-೯-೪೮ರಲ್ಲಿ ಸಾಗಹುರಪ ಗುರುಸೇವಾ ಸಮಿತಿಯು ಪ್ರಚಾರಕ ಶ್ರೀ ಶಂಕರನಾರಾಯಣ ಕೊಡುಂಜರು ಸಾಮೂಹಿಕ ಪ್ರಾರ್ಥನೆಯು ಮಹತ್ವ, ಆವಶ್ಯಕತೆಯ ಕುರಿತು ಉಪನ್ಯಾಸವಿತ್ತು, ಸಾಮೂಹಿಕ ಪ್ರಾರ್ಥನೆಯುಮ್ನು ಮಾಡಿಸಿದರು.

ತಾ. ೫೨-೯-೪೮ರಲ್ಲಿ ಸ್ಥಳೀಯ ಮಿಶನ್ ಶಾಲಾ ಮಕ್ಕಳ ಹೆತ್ತವರ ಕೂಟವು ಶ್ರೀ. ಆನಂತ ಪದ್ಮನಾಭ ಬಾಲವೀರ ದಳದವರ ಶಿಬಿರಾಗ್ನಿಯೂ, ಉಡ್ಪಿ ರೇಂಜಿನ ಸೀನಿಯರ್ ಡಿಪ್ಯುಯವರಾದ ಶ್ರೀಮಾನ್ ವೈ. ಗೋಪಾಲ, ಬಿ. ಎ. ಎಲ್. ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಕಟಪಾಡಿ–ಬ್ರಹ್ಮಶ್ರೀ ಗುರುನಾರಾಯಣ ಸ್ವಾಮಿ ಸೇವಾಸಮಿತಿಯವರು ಶ್ರೀ ಗುರು ಜಯಂತಿಯನ್ನು ಇದೇ ತಾ 16ರಲ್ಲು ವಿಜೃಂಭಣೆಯಿಂದ ಆಚರಿಸಿದರು. ಈ ಸಂಬಂಧ ಮೆರವಣಿಗೆ, ಶ್ರೀ ದಾಮುಮಾಸ್ತರರಿಂದ ಗುರು ಚರಿತ್ರೆಯ ಭಾಷಣ, ಗುರುಪೂಜೆ, ಪ್ರಸಾದ ವಿತರಣೆ ಕಾರ್ಯಕ್ರಮಗಳಿದ್ದುವು. ಮರು ದಿನ ಶ್ರೀ ಶಾರದ್ಯೆಲ್ ಭೋಜರಾಯರಿಂದ ಸುರಿಕಥೆ ನಡೆಯಿತು. ಸಮಿತಿ ಕಾರ್ಯದರ್ಶಿಯರಾದ ಶ್ರೀ ವೆಂಕಪ್ಪ ಮಾಸ್ತರರು ಧನ್ಯವಾದಗಳನ್ನರ್ಪಿಸಿದರು.

ಬ್ರಹ್ಮಾವರ–ಕುಂಬ್ರಗೋಡು ಜೋರ್ಡನ್ ಎಲಿಮೆಂಟರಿ ಶಾಲೆಯು ಮಾರ್ಚು ಆದಾಯಕರ ಸ್ಥಿತಿಯಲ್ಲಿರುವುದೆಂದೂ ಸಂಬಂಧಪಟ್ಟವರು ಕೂಡಲೇ ಈ ಕಡೆಗೆ ನಿಗಾ ಕೊಡಬೇಕೆಂದೂ ಗ್ರಾಮಸ್ಥರೊಬ್ಬರು ಬರೆಯುತ್ತಾರೆ.

ಬಾಕ್ರೂರು–ಇಲ್ಲಿಯ ಟೋಕಲ್ ಫಂಡ್ ಧರ್ಮಾಸ್ಪತ್ರೆಯು ಕೆಲವೊಂದು ಲೋಪ ದೋಷಗಳಿಂದ ಬಡ ಜನರಿಗೆ ಸರಿಯಾದ ಪ್ರಯೋಜನವಾಗುತ್ತಿಲ್ಲವೆಂದು ಬಾತ್ಮಿದಾರರೊಬ್ಬರು ಬರೆಯುತ್ತಾರೆ.

ಕ್ರೈಸ್ತ ಯುವ ವ್ಯಕ್ತಿ ಸಂಘ

ಮುಂಬಯಿ–ಇವರು ತಾ 19-9-48ರಂದು ಪರೇಲ್ ಸುಪಾರಿಖಾನಿನಲ್ಲಿರುವ ಆರ್ ಎಮ್ ಭಟ್ಟ ಹೈಸ್ಕೂಲಿನಲ್ಲಿ "ಜಾಗೃತಿ ಅಥವಾ ನವಚೇತನ" ಎಂಬ ಸಾಮಾಜಿಕ ನಾಟಕವನ್ನು ಶ್ರೀ ಎಮ್. ಗೋಜೆರ್‌ರ ಅಧ್ಯಕ್ಷತೆಯಲ್ಲಿ ಅಭಿನಯಿಸಿದರು

ಸರ್ವೋದಯ ಸಾಹಿತ್ಯಮಾಲೆ, ಹುಬ್ಬಳ್ಳಿ–ಈ ಸಾಹಿತ್ಯಮಾಲೆಯು ಶ್ರೀ ಎಮ್. ಹರಿದಾಸಯ್ಯರ ಸಂಪಾದಕತ್ವದಲ್ಲಿ ಪ್ರಾರಂಭವಾಗಿ 'ಕ್ರಿಸ್‌ಮಸ್ ಕಾಣಿಕೆ' ಎಂಬ ಪ್ರಥಮ ಪುಷ್ಪವು ಇಪ್ಪರಲ್ಲಿ ಪ್ರಕಟವಾಗಿದೆ. ಈ ಸಾಹಿತ್ಯಮಾಲೆಗೆ ಎಲ್ಲರು ಸಹಾಯ ಮಾಡಬೇಕೆಂದು ಸಂಪಾದಕರ ವಿನಂತಿಯಿದೆ.

ಕರ್ನಾಟಕ ಸೇವಾ ಸಂಘ, ಮದ್ರಾಸು–ತೃತೀಯ ವಾರ್ಷಿಕಾಧಿವೇಶನದ ಸಂಪ್ರತಿಷ್ಠೆ ವರದಿ. ತಾ. 19-9-48ನೇ ಬೆಳಿಗ್ಗೆ ಸಂಘದ ಸದಸ್ಯರ ಬಹಿರಂಗಾಧಿವೇಶನವು ಅಧ್ಯಕ್ಷ ಶ್ರೀ ವಿ. ಎಸ್. ಕುದ್ವ, ಬಿ.ಇ ಇ. ಸಿ ಎಸ್ ಇವರ ನೇತೃತ್ವದಲ್ಲಿ ನಡೆಯಿತು, ಸಂಜೆ ಮದ್ರಾಸು ನಗರ ಸಭೆಯ ಅಧ್ಯಕ್ಷರಾ. ಯು. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸಂಘದ ತೃತೀಯ ವಾರ್ಷಿಕೋತ್ಸವವು ರಾಜಾಜಿ ಭವನದಲ್ಲಿ ಜರಗಿತು. ನಗರದಲ್ಲಿರುವ ಕನ್ನಡಿಗರು ಮೂಲೆಮೂಲೆಯಿಂದ ಬಂದು ಶಿಕ್ಕಿರಿದು ಸೇರಿದ್ದರು. ಸಾರ್ವಜನಿಕ ಪರದಿವಾಜನದ ಒಳಿಕ ಸ್ಪೆಸಿಜೆನ್ಸಿ ಕಾಲೇಜಿನ ಕನ್ನಡ ಪಂಡಿತರಾದ ಶ್ರೀ ಬಿ. ನಂಜುಂಡ ಸ್ವಾಮಿಯವರು ಕನ್ನಡದಲ್ಲಿ ಭಕ್ತಿ ಸಾಹಿತ್ಯ ಎಂಬ ವಿಷಯವಾಗಿ ಸುರಸವಾದ ಭಾಷಣವನ್ನು ಮಾಡಿದರು. ಬಳಿಕ ಮದ್ರಾಸು ಸರಕಾರದ ಆಪೇಕ್ಷೆಯಂತೆ ಸಂಘವು ಬಸು ಮೂಸ ಪದೆಯಲು ಅರ್ಜಿಯನ್ನು ತಿಳಿಸಿದ್ದು ಶಕ್ತಾಗ್ರಸ್ತ' ವಿಜ್ಞಾನದ ವಿಚಿತ್ರಗಳು' 'ಇಂದ್ರಜಾಲ' ನೀತಿಸಾರ' 'ಕವಿರಾಜ ಮಾರ್ಗ ವಿವೇಕ' ಮತ್ತು 'ನೀತಿ ರಾಮಾಯಣ' ಎಂಬ ಅರು ಪುಸ್ತಕಗಳ ಹೆಸರನ್ನು ಹಿಡಿ ಹೇಳಲಾಯಿತು. ಸಂಘವು ನಡೆಸಿದ ಭಾಷಣ, ಸಂಗೀತ, ಕವಿತಾಸ್ಪರ್ಧೆಗಳಲ್ಲಿ ಯಶಸ್ವಿಗಳಾದ ಬಾಲಕ ಬಾಲಕಿಯರಿಗೆ ಬಹುಮಾನ ವಿತರಣೆಯನ್ನು ಮಾಡಿದ ಬಳಿಕ, ಅಧ್ಯಕ್ಷರು ಸಂಘವು ಮದ್ರಾಸಿನ ಕನ್ನಡಿಗರಿಗೆ ಸಲ್ಲಿಸುತ್ತಿರುವ ಅಪಾರ ಸೇವೆಯನ್ನು ಕೊಂಡಾಡಿದರು 'ಸೇವಾ' ಎಂಬ ಕೈಬರಹದ ಪತ್ರಿಕೆಯ ವಾರ್ಷಿಕ ಸಂಚಿಕೆಯು ಆಚ್ಚು ಗಿರುವುದಕ್ಕಾಗಿ ಸಂತೋಷವನ್ನು ಸೂಚಿಸಿ, ಅದರ ಸೇವೆಯು ಇನ್ನೂ ಹೆಚ್ಚಾಗಲೆಂದು ಹರಸಿದರು.

ಸಂಗೀತ, ಛಾಯಾಚಿತ್ರ ಪ್ರದರ್ಶನ, ನಾಟ್ಯ ಮುಂತಾದ ವಿನೋದಾವಳಿಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ಕೃಷಿಕರಿಗೆ

ಉಡುಸಿ ತಾಲೂಕು ಏಲಾರ್ ಗ್ರಾಮದ ಸುಬ್ಬಣ್ಣ ಪ್ರಭುಗಳ ಮಗ ಶ್ರೀನಿವಾಸ ಪ್ರಭು ಈ ಮೂಲಕ ಸರ್ವಜನರಿಗೆ ತಿಳಿಸುವುದೇನೆಂದರೆ ನಾವು ಸಹೋದರರು ನಮ್ಮಿಳಗೆ ವಿಭಾಗಮಾಡಿಕೊಂಡು ತಾ 24-8 1947ರಲ್ಲು ಸದ್ರಿ ನಮ್ಮ ತಂದೆ ಕಾಯುಗಳ ಆಸ್ತಾರ್ಥ ಮಾತ್ರ ಕೆಲವು ಆಸ್ತಿಗಳನ್ನು ನಮ್ಮ ತಂದೆಯವರಾದ ಸುಬ್ಬಣ್ಣ ಪ್ರಭುಗಳ ತಾಬೆಯಲ್ಲಿರಗೂಡಿಸಿದ್ದೇವೆ ಸದ್ರಿ ಸುಬ್ಬಣ್ಣ ಪ್ರಭುಗಳಿಗೆ ಸಾಲಸಾಮಾದಲಿಕ್ಕಾಗಲೀ ಅವರ ಆಸ್ತಿ ಭೋಗದ ಆಸ್ತಿಗಳನ್ನು ಪರಾಧೀನಮಾಡಲಿಕ್ಕಾಗಲೀ ಅವರ ಹಸ್ತಿರುವುದಿಲ್ಲ ಅಲ್ಲದೆ ಮಾನ ಸರದ ಗಜಿಕೊಪ್ಪಾ ಇದುವರೆಗಿಲ್ಲ ಹಾಗೆ ಸಾಲ, ಪರಾಧೀನ ವಸ್ತೆರೆ ಮಾಡಿದರೆ ಅವುಗಳಿಗೆ ಸದ್ರಿಯವರ ಅನುಬೋಗಕ್ಕೆ ಬಿಟ್ಟುರುವ ಆಸ್ತಿಮೇಲೆ ಬ್ಯಾಂಡಿಂಗ್ ಆಗತಕ್ಕದ್ದಲ್ಲವೆಂಬ ಸಂಗತಿ ಎಲ್ಲರೂ ತಿಳಿದಿರತಕ್ಕದ್ದು. ಸದ್ರಿಯವರು ಈಗ ವಯೋವೃದ್ಧರಾಗಿರುವುದರಿಂದ ಅವರನ್ನು ಬೇರೆಯವರು ತಮ್ಮ ಮುಖೇನ ವಸ್ತೆರೆಗೆ ಬಳಪಡಿಸಿಕೊಂಡು ಯಾವ ವಿಕಾರ್ಡು ಮಾಡಿಸಿದರೂ ಅವು ಸಿಂಧುವಾಗತಕ್ಕದ್ದಲ್ಲ ಎಂತ ಸಹ ಜಾಹೀರು ತಿಳಿಸೋಣಾಗಿಯದೆ.

P L. Prabhu

ತಾ 28 9 48

ದಿ ಕಥೊಲಿಕ್ ಬ್ಯಾಂಕ್ ಲಿಮಿಟೆಡ್,

ಕಲ್ಯಾಣಪುರ.

ಈ ಕೆಳಗೆ ಹೆಸರು-ಕಾಣಿಸಿದ ಮಹನೀಯರು ನಮ್ಮ ಬೇಂಕಿನಲ್ಲಿ ಚಿನ್ನಾಭರಣಗಳ ಈದಿನ ಮೇಲೆ ಪಡೆದ ಸಾಲದ ಮೊಬಲಗನ್ನುಗಲೀ ಅವುಗಳ ಬಡ್ಡಿಯನ್ನುಗಲೀ ವಾಯಿದೆಗೆ ಸರಿಯಾಗಿ ಕೊಡದಿರುವುದರಿಂದ ಸದ್ರಿಯವರಿಗೆ ಕೃಮ ಪ್ರಕಾರ ರಿಜಿಸ್ಟ್ರೀ ನೋಟಿಸನ್ನು ಕಳುಹಿಸಿದಲ್ಲಿ ಸದ್ರಿ ಸಾಲದ ಅಸಲು, ಬಡ್ಡಿ, ವಗೈರೆ ವಸೂಲಾತ್ತನ್ನು ಕೊಡದ ಇನ್ನೂ ಜಾತಿ ಇಟ್ಟುಕೊಂಡಿರುವುದರಿಂದ ಸದ್ರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ —

ನೀವು ನಮ್ಮ ಬೇಂಕಿಗೆ ಸಲ್ಲಿ ಸಲಿಕ್ಕಿರುವ ಅಸಲು, ಬಡ್ಡಿ, ನೋಟಿಸುಗಳ ಬಾಬ್ತು ವಗೈರೆ ವಸೂಲಾತ್ತನ್ನು ಇದೇ ಆಕ್ಟೋಬರ್ 23 - 12 ಗಂಟೆ ಒಳಗೆ ನಮ್ಮ ಬೇಂಕಿಗೆ ಪಾವತಿ ಮಾಡದಿದ್ದಲ್ಲಿ ಆಕ್ಟೋಬರ್ ತಾ. 28 ಹಗಲು ಗಂಟೆ 2ಕ್ಕೆ ಯಾ ಇಲ್ಲಿಂದ ಮುಂದಕ್ಕೂ ಯಾವ ದಿನದಲ್ಲಿ ಬೇಂಕಿನ ವಾರದಲ್ಲಿ ಬಹಿರಂಗವಾಗಿ ಏಲಾ ಮಾಡಲಾದೀತು, ತಿಳಿದಿರಲಿ

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಅಸ್ಲು ಮೊಬಲಗು
21/652	ವಿಲಿಯಮ್ ಆಂಡ್ರಾದೆ, ಪಾಸ್ಕಲ್ ಆಂದ್ರಾದೆಯರ ಮಗ, ಕೆಮ್ಮಣ್ಣು.	50 0 0
21/840a	ಫಿಲಿಕ್ಸ್ ಕ್ರಾಸ್ತ, ಸಾಲ್ವಡೋರ್ ಕ್ರಾಸ್ತರ ಮಗ, ಮಣಿಪುರತೋಟ್ಟ, ಕಲ್ಯಾಣಪುರ.	50 0 0
21 1454	ಆಂಜಲೀಸ್ ಡಿಸಿಲ್ವ, ಸಾಲ್ವಡೋರ್ ಡಿ'ಸಿಲ್ವರ ಮಗ, ಬ್ರಹ್ಮಾವರ.	15 0 0
22,84	ಪೆಂಜಲಿಸ್ತಾ ಡಿಸಿಲ್ವ, ಸಾಲ್ವಡೋರ್ ಡಿ'ಸಿಲ್ವರ ಮಗ ಬ್ರಹ್ಮಾವರ.	8 0 0
22 310	ತೆರೆಸಾ ಜೋಬು, ಜೋಸೆಫ್ ಜೋಬರ ಪೆಂಡ್ತಿ. ಕಲ್ಯಾಣಪುರ	10 0 0

Kallanpur,
Date 25-9-48

ಫ್ರ Rebello.
Agent.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹರ್ಬಲ್ ಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನೆಲ್ಲೆಲ್ಲಾ ವಿಕಸ್ಮಕಾರಿಯಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರಯೋಗಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ಪನಸ್ಪತಿ ಗಿಡಮೂಲಿಕೆಗಳಿಂದಲೇ ವಾನ್ಹೋಕ್ತ ರೀತಿಯಿಂದ ಹೊಲ್ಲಾಂಡ ದೇಶದಲ್ಲಿ ಪ್ರಮುಖ ಕಾಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ಸಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ- ಮೂತ್ರಕೋಶ, ಬಹುಮೂತ್ರ, ಸೀಮೂತ್ರ, ಅನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್ಕಾರ್ಯಂತೆ ಪರ್ಯಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ವಾತ್ಕವಾಯು, ವಾತರೋಗ, ಪಕ್ಷವಾತ, ಗೂರಲು ಕೈಯಿ, ಮೇಹವ್ಯಾಧಿ,ಜೀರ್ಣ, ಮುಟ್ಟಿನ ಅತ್ಯಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ವೇದನೆಯು ಶಸ್ತ್ರಚಿಕಿತ್ಸೆ ಆಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕಿವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಗಿರಲಿ ಔಷಧಿ ನಿರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಪಾತ್ರಗುಣವಾಗುವದು. ಹಲ್ಲುನೋವು, ಮಕ್ಕಳ ಉಮ್ಮಟ್ಟಿನೋವು,ಕಿವಿಗಳ ಉಪದ್ರವ ಹೆಂಗಸರ ಮುಟ್ಟಿನಾಗುವ ಕಾಲದ ಅತ್ಯಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಸರಿಹಾರವಾಗುವವು. ಗಾಯ, ಸುಟ್ಟಗಾಯಗಳು,ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯ ಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಸೀಸೆ ½ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಸೀಸೆಗಳಿಗೆ ವಿ. ಪಿ ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಸ್ಸರ್ ಸೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಸ್ಸರ್‌ಗಳಿಗೆ ರೂ 42-0-0 ವಿ. ಪಿ ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲ 1ಕ್ಕೆ ರೂ 5-0-0 ವಿ. ಪಿ. ಬೇರೆ. ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ- 60-0-0 ವಿಪಿ ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18-ವಿ ಪಿ-ಪಾಟ್ಸ.

ಪ್ರಕಾಶನ ಪತ್ರ—ನಾನು ನಿನ್ನ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲಾ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಗಳನ್ನೂ ನಿನ್ನ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲಾ ಬೇಡುವಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯೆಂಬುದು ರಾಮನಾಥಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿನೆ ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

ಇಂತಿ ನಿಮ್ಮ ವಿಶ್ವಾಸಿ

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I Rly.



ಬಾಣಂತಿಯರ ಸಲುವಾಗಿಯೇ ದೇಶ ನುತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಮೂಲನ ತಯಾರಿಸಲ್ಪಟ್ಟ ಅಮೋಘ ವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ದಿವ್ಯೌಷಧ ತಯಾರಾಗಿ ಹತ್ತು ವರ್ಷಗಳು ಹೆಚ್ಚು ಕಡಿಮೆ ಆಗಿದಿವಸಗಳಿಗೆ ಬರುವವು. ಅಂದರೆ ಕೇವಲ ೯ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಕಾಗುವುವು ವಿಶೇಷ ವಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೬ ಕೊಡಿಯಾಲಬೈಲು, ದ.ಕ

ಸ್ಟಾಕಿಸ್ಟರು- ಡಾ| ಐ. ಕೆ. ಶಿವರಾಮ ಗಾಂವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅನೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಭೈವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಕ್ಷಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮಾನಿಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲಿ ಸಂಗ್ರಿ ಬರಪಲ್ಲಿ ರೋಗಕ್ಕೆ ಶಕ್ತಿಪಾದ ಔಷಧಿ ರವಾನಿಸಲಾಗುವುದು. (1)ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183; ಸುಖಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ಸ್ ಕೋಪ್ ಎದುರುಗಡೆ, ಪರೇಲ್.(3)ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಸಾಟಿಯಂಗಾ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ!

ನಮ್ಮಾನಸ, ಊಟ, ಉಪಹಾರ, ಬೈರಸ್, ಶಯನ ಇವಕ್ಕೆಲ್ಲ ಬಹತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೇ!

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara

ಎಲ್ಲ ತರದ ದಂತ ರೋಗಗಳನ್ನು, ನಟ್ಟಿಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಮಂಗಳೂರು ಭಾಷಾವಾರು ಪ್ರಾಂತರಚನಾ ಸಮಿತಿಗೆ ಮಂಗಳೂರು ಪೌರ ಸಭೆಯ ಮಾನವಿ

ಘಟನಾ ಸಮಿತಿಯಿಂದ ನೇಮಿಸಲ್ಪಟ್ಟ ಭಾಷಾವಾರು ಪ್ರಾಂತ ರಚನಾ ಸಮಿತಿಯನ್ನು ದಿನಾಂಕ ೧೭ರಂದು ಸ್ವಾಗತಿಸುತ್ತಾ ಮಂಗಳೂರು ಪೌರ ಸಭಾ ಸಮಿತಿಯು ಅವರಿಗೆ ತ್ತ ಪತ್ರದಲ್ಲಿ ಹೀಗೆ ಹೇಳಿದೆ-

ಭಾರತವನ್ನು ಭಾಷಾವಾರು ಪ್ರಾಂತಗಳಾಗಿ ಪುನರ್‌ರಚಿಸಬೇಕಾದ ವಿಚಾರವನ್ನು ಎಲ್ಲರೂ ಒಪ್ಪಿರುತ್ತಾರೆ. ಹಲವು ಭಾಷೆಗಳ ಪ್ರಾಂತದಲ್ಲಿ ಸೇರಿದ್ದ ನಾವು ಕರ್ನಾಟಕ ಪ್ರಾಂತವು ಕೂಡಲೇ ಆಗಬೇಕೆಂದು ಒತ್ತಾಯಿಸುವ ಸ್ಥಿತಿಗೆ ಬಂದಿದ್ದೇವೆ. ಒಂದೇ ಭಾಷೆ, ಒಂದೇ ಸಂಸ್ಕೃತಿಯಿದ್ದು ಒಂದೇ ಆಡಳಿತಕ್ಕೆ ಒಳಗಾಗಿದ್ದ ಭಾಗವಿಂದು ಹರಿದು ಪರಭಾಗಿ ಹೋಗಿದೆ. ಇವೆಲ್ಲವನ್ನು ಒಂದುಗೂಡಿಸಿ, ದ. ಕನ್ನಡವನ್ನೊಳಗೊಂಡ ಕರ್ನಾಟಕ ಪ್ರಾಂತ ನಾಗಲೇ ಬೇಕಾಗಿದೆ. ಈಗಾಗಲೇ ನಮ್ಮ ಜಿಲ್ಲೆಯು ಕಡೆಗಣಿಸಲ್ಪಟ್ಟು ಯಾವರೀತಿಯ ಅಭಿವೃದ್ಧಿಯನ್ನೂ ಹೊಂದಿಲ್ಲ. ನಮ್ಮ ಪ್ರಯಾಣದ ಸೌಕರ್ಯವು ಹೀನಸ್ಥಿತಿಯಲ್ಲಿದೆ. ನಮ್ಮ ನದಿಗಳಿಗೆ ಬೇಕಷ್ಟು ಸೇತುವೆಗಳಲ್ಲ. ನಮ್ಮ ರಸ್ತೆಗಳೆಲ್ಲ ಹಾಳು ಬಿದ್ದಿವೆ. ನಮ್ಮ ಮಕ್ಕಳಿಗೆ ಸಾಕಷ್ಟು ಶಿಕ್ಷಣದ ಸವಲತ್ತು ಸಿಗುವುದಿಲ್ಲ, ಒಟ್ಟಿನಲ್ಲಿ ಹೇಳುವುದಾದರೆ ನಮ್ಮ ತೆರಿಗೆಗೆ ತಕ್ಕಷ್ಟು ಪ್ರತಿಫಲ ಸರಕಾರದಿಂದೆ ಸಿಗುವುದಿಲ್ಲ, ಮದ್ರಾಸು ಸರಕಾರದ ಆಡಳಿತ ಭಾಷಾ ವಿಭಾಗದವರೊಡನೆ ನಮ್ಮನ್ನು ಹೋಲಿಸಿದಾಗ ಈ ವಿಷಯವು ತಿಳಿಯುವುದು.

ಆದ್ದರಿಂದ ದ. ಕನ್ನಡದ ಪೊಸದುರ್ಗ ಉಪ ತಾಲೂಕಿನ ದ, ಭಾಗದ ಹೊರತು ಉಳಿದೆಲ್ಲ ಭಾಗವನ್ನು ಕರ್ನಾಟಕಕ್ಕೇ ಸೇರಿಸಬೇಕೆಂಬ ಈ ನಗರ ನೆಂತು ಈ ಜಿಲ್ಲೆಯ ಜನತೆಯ ಅಭಿಲಾಷೆಯನ್ನು ತಮ್ಮ ಗಮನಕ್ಕೆ ಈ ಮೂಲಕ ತರಲು ಬಯಸುತ್ತೇವೆ. ಈ ಸಂದರ್ಭದಲ್ಲಿ ನಮ್ಮ ಜಿಲ್ಲೆಯು ಭಾಗಗಳು ತಮಗೆ ಸಿಗಬೇಕೆಂದು ನಮ್ಮ ಕೇರಳದ ಸ್ನೇಹಿತರು ಮಾಡುವ ಆಂದೋಲನದ ಕುರಿತು ನಮ್ಮ ಸ್ಪಷ್ಟವಾದ ವಿನೋದವನ್ನು ವ್ಯಕ್ತ ಗೊಳಿಸುವುದು ನಮ್ಮ ಕರ್ತವ್ಯವಾಗಿದೆ. ಈ ಜಿಲ್ಲೆಯಲ್ಲಿ ಹೆಚ್ಚಿನವರ ಮನೆಮಾತು ತುಳು ಎದರೂ ಕನ್ನಡವೆ ಇಲ್ಲಿನ ರಾಜಕೀಯ ಮತ್ತು ಶಿಕ್ಷಣದ ಭಾಷೆಯಾಗಿ ಪ್ರಾಚೀನ ಕಾಲದಿಂದಲೂ ರೂಢಿಯಲ್ಲಿದೆ. ತುಳು ಭಾಷೆಗೇ ಗ ಲಿಪಿಯಿಲ್ಲ, ಆದರಲ್ಲಿ ಸಾಹಿತ್ಯವೂ ಇಲ್ಲ, ಆದು ಕನ್ನಡವನ್ನೇ ಬಳಗೊಂಡ ಒಂದು ಆಡು ಮಾತಾಗಿದೆ. ಇಲ್ಲಿನ ತುಳುವರಿಗೂ ಕನ್ನಡಿಗರಿಗೂ ಯಾವ ರೀತಿಯ ಭೇದವೂ ಇಲ್ಲ. ತುಳುವರು ಕನ್ನಡ ಸಾಹಿತ್ಯಕ್ಕೆ ತುಂಬಾ ಸೇವೆ ಸಲ್ಲಿಸಿದ್ದಾರೆ. ಕರ್ನಾಟಕದ ವಿಜಯನಗರ ಅರಸರಲ್ಲಿ ತುಳುವ ವಂಶದವರೂ ಇದ್ದರು. ನಾವು ನಮ್ಮ ಮನೆಗಳಲ್ಲಿ ತುಳು ಮಾತನಾಡಿದರೂ ಕೊಂಕಣಿ ಮಾತನಾಡಿದರೂ ಕನ್ನಡಿಗರಾಗಿಯೇ ಇರಬೇಕೆಂಬುದು ನಮ್ಮ ಹಿರಬಯಕೆಯಾಗಿದೆ.

ಪ್ರಾದೇಶಿಕ ಭಾಷೆಯನ್ನು ಆಡಳಿತೆಯಲ್ಲೂ ಶಿಕ್ಷಣದಲ್ಲೂ ಉಪಯೋಗಿಸತೊಡಗಿದ್ದರಿಂದ ನಮಗೆ ಆದಳಿತೆಯ ಕಷ್ಟವುಂಟಾಗತೊಡಗಿದೆ ಆದ್ದರಿಂದ ಆದಷ್ಟು ಬೇಗನೆ ಕರ್ನಾಟಕ ಪ್ರಾಂತರಚನೆಯಾಗಬೇಕು. ದ. ಕನ್ನಡವನ್ನದು ಒಳಗೊಂಡಿರಬೇಕು. ಆದರಿಂದಾಗಿ ನಮ್ಮ ಒಕ್ಕೂಟ ಭಾರತವು ಸಂಪತ್ತಿನಲ್ಲೂ ಬಲದಲ್ಲೂ ಉನ್ನತಿ ಹೊಂದುವುದು.

ರಾಜಕೀಯ ಸಂತ್ರಸ್ತರಿಗೆ ಸಹಾಯ-ರಾಜಕೀಯ ಹೋರಾಟದಲ್ಲಿ ಭಾಗವಹಿಸಿ ಸಂಕಷ್ಟಕ್ಕೊಳಗಾದವರಿಗೆ ಸಹಾಯ ಮಾಡುವ ಉದ್ದೇಶದಿಂದ ಸರಕಾರದ ಯೋಜನೆಗನುಗುಣವಾಗಿ ಬಂದ ಅರ್ಜಿಗಳನ್ನು ಇದೇ ತಾ 20ರಲ್ಲು ತತ್ಸಂಬಂಧವಾದ ಕಮಿಟಿಯು ಚರ್ಚೆ ನಡೆಸಿತು. ಜುಲ್ಯಾ 31ರ ನಂತರ ಬಂದ ಸುಮಾರು 125 ಅರ್ಜಿಗಳನ್ನು ತಳ್ಳಿ ಹಾಕಲಾಯಿತು. ಸಾಧಾರಣ 400 ಅರ್ಜಿಗಳು ಕಮಿಟಿಯ ಪರಿಶೀಲನೆಗೆ ಒಳಗಾಗಿವೆ. ಜಿಲ್ಲೆಯಲ್ಲಿನ ಸರಕಾರಿ ಸ್ಥಳಗಳ ಸೂಚಿತಿಯು ಕಾಂಗ್ರೆಸ್ ಕಚೇರಿಯಲ್ಲಿ ಸಿಗುವಂತೆ ವ್ಯವಸ್ಥೆ ಮಾಡಲಾಗಿದೆ.

ಸಾಹಿತ್ಯ ಸಭೆಯು—ಗವರ್ನಮೆಂಟ್ ಟ್ರೈನಿಂಗ್ ಶಾಲೆಯಲ್ಲಿ ಇದೇ ತಾ 23ರಲ್ಲು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಕೆ. ರಾಧಾ, ಎಲ್. ರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕಾರ್ಯಕ್ರಮದಂತೆ ವಂದೇವಾಚನ, ಶ್ರೀ ಕೆ. ನಾರಾಯಣ ಆಳ್ವರ ಕವಿತಾವಾಚನ, ಶ್ರೀ ಎ ಶಂಕರ ಸೆಟ್ಟರ ಸಂಬಂಧವಾಚನ, ಶ್ರೀ ಕೆ. ವಾಮನ ಮಲ್ಯರ ಲೇಖನ ಮಂಡನೆ, ಶ್ರೀಮತಿ ಪರಮೇಶ್ವರಿಯವರ ಪುರಾಣ ವಾಚನ, ರಾಲಾ ಮುಖ್ಯೋಪಾಧ್ಯಾಪಕರ ಹಿತೋಕ್ತಿ ಭಾಷಣ, ಕಾರ್ಯದರ್ಶಿ ಶ್ರೀ ನಾರಾಯಣ ಆಳ್ವರ ಧನ್ಯವಾದಾರ್ಪಣೆಗಳಾಗಿ ಸಭಾಂಕ್ಯವಾಯಿತು.

ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ-ಎಲ್ಲಾ ವರ್ಗಗಳ ವಿದ್ಯಾರ್ಥಿನಿಯರು ಒಂದುನೂರು ರೂಪಾಯಿಗಳನ್ನು ಗಾಂಧಿ ಸ್ಮಾರಕ ನಿಧಿಗೆ ಕಾಣಿಕೆಸಲ್ಲಿಸಿದ್ದಾರೆ. ವಿದ್ಯಾರ್ಥಿನಿಯರ ಉತ್ಸಾಹಕರ ಮೇಲ್ಪಂಕ್ತಿಯು ಇತರರಿಗೆ ಅನುಕರಣೀಯವಿದೆ.

ಕೊಂಕಣಿ ನಾಟಕ ಸಭಾಭವನದ ಶಂಕುಸ್ಥಾಪನೆಯನ್ನು-ಇದೇ ತಾ 19ರಲ್ಲಾ ಕಾಪುವಿನ್ ಸಾವರಿಗಳ ಮುಖಂಡರಾದ ರೆ| ಫಾ| ರಿಜರ್ಡ್ ಅವರು ನೆರವೇರಿಸಿದರು. ಫಾ| ಫಿಲಿಪ್ ನೆರಿಯವರು ಕೊಂಕಣ ನಾಟಕ ಸಭೆಯ ಕಳೆದ ಏದುವರ್ಷಗಳ ಕಾರ್ಯಕಲಾಪಗಳನ್ನು ವಿವರಿಸಿದರು. ಮಿ| ಎಸ್ ಫೆರ್ನಾಂಡಿಸರು ಧನ್ಯವಾದಗಳನ್ನರ್ಪಿಸಿದರು.

ರೇಶನ್ ಕಾರ್ಡ್‌ಗಳೂ ಕಾರ್ಡ್‌ಗಳಿಗೆಹಚ್ಚುವಸ್ಟಿಕ್ಕುಗಳೂ ದೊರೆಯುತ್ತವೆ

ನವಯುಗ ಸ್ಟೋರ್ಸ್, ಉಡುಪಿ.

PUBLIC NOTICE

Notice is hereby given that the following policies of mine have been lost. Those that have secured the same may please return back to the undermentioned address The compliance will be highly appreciated.

Policy No 3,091,519 of Sun Life Assurance Company of Canada.

Policy No 633362 of the Oriental Government Security Life Assurance Co, Ltd,

P. S Thimmappa Shetty,
Ambalpadi, Udipi,

ಪ್ರಕಟನ.

ನನ್ನ ಬಾಬ್ತು ಸನ್ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿಯ ನಂಬ್ರ 3,091,519ನೆ ಪೊಲಿಸಿ ಮತ್ತು ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿಯ ನಂಬ್ರ 633362ನೆ ಪೊಲಿಸಿಗಳೆರಡು ಕಳೆದು ಹೋಗಿವೆ. ಪೊಲಿಸಿಗಳು ಸಿಕ್ಕಿದ ಮಹನೀಯರು ದಯಮಾಡಿ ನನ್ನ ವಿಳಾಸಕ್ಕೆ ಕಳುಹಿಸಿಕೊಟ್ಟರೆ ತುಂಬಾ ಉಪಕಾರವಾದೀತು.

ಪಿ. ಎಸ್. ತಿಮ್ಮಪ್ಪ ಶೆಟ್ಟಿ,
ಅಂಬಲಪಾಡಿ, ಉಡುಪಿ.

ಕೊಯಮುತ್ತೂರಿನಲ್ಲಿ

ಭಾಷಾವಾರು ಪ್ರಾಂತ ರಚನಾ ಸಮಿತಿಯ ಮುಂದೆ ಕನ್ನಡಿಗರ ಸಾಕ್ಷಿ

ದಿನಾಂಕ ೨೦ರಂದು ಕೊಯಮುತ್ತೂರಿನಲ್ಲಿ ಭಾಷಾವಾರು ಪ್ರಾಂತ ರಚನಾ ಸಮಿತಿಯು ಮುಂದೆ ನೀಲಗಿರಿ, ಕೊಯಮುತ್ತೂರು ಮತ್ತು ಸೇಲಂ ಜಿಲ್ಲೆಗಳ ಕನ್ನಡದ ಪ್ರತಿನಿಧಿಗಳ ಸಾಕ್ಷಿ ನಡೆಯಿತು.

ನೀಲಗಿರಿ ಜಿಲ್ಲೆಯ ಕನ್ನಡಿಗರ ಪರವಾಗಿ ಶ್ರೀಗಳಾದ ಕೆ. ಬೊಕ್ಕಯ ಗೌಂಡರ್, ಎಂ. ಎಲ್. ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಟಿ. ರಾಮ ಗೌಂಡರ್, ಧರ್ಮಲಿಂಗಮ್ (ಪತ್ರಿಕೋದ್ಯೋಗಿ) ಮತ್ತು ಎನ್. ಎಮ್. ಲಿಂಗಮ್ ಇವರು ಸಾಕ್ಷಿ ನುಡಿದರು. ಇವರೆಲ್ಲರೂ ತನ್ನ ಸಾಕ್ಷಿಯಲ್ಲಿ ನೀಲಗಿರಿಯಲ್ಲಿ ಕನ್ನಡಿಗರೇ ಬಹುಸಂಖ್ಯಾಕರಾಗಿರುವರೆಂದೂ ಆದುದರಿಂದ ಅದು ಕರ್ನಾಟಕ ಪ್ರಾಂತದಲ್ಲಿ ಸೇರಿಸಲ್ಪಡಬೇಕೆಂದೂ ಕೇಳಿಕೊಂಡಿರುವರು. ಇದು ಎಷ್ಟಕ್ಕೂ ಆಸಾಧ್ಯವಾದಲ್ಲಿ ನೀಲಗಿರಿಯ ಆಡಳಿತವನ್ನು ಕೇಂದ್ರ ಸರಕಾರದವರೇ ವಹಿಸಬೇಕೆಂದೂ ಸೂಚಿಸಿರುವರು. ನೀಲಗಿರಿಯನ್ನು ತಮಿಳುನಾಡಿಗೆ ಸೇರಿಸುವುದಕ್ಕೆ ಅಲ್ಲಿಯ ಬಹುಸಂಖ್ಯಾಕರಾದ ಕನ್ನಡಿಗರ ತೀವ್ರ ಪ್ರತಿಭಟನೆಯಿದೆಯೆಂದು ಇವರು ಬೃಹನ್ನಾಗಿ ಹೇಳಿರುವರಲ್ಲದೆ, ನೀಲಗಿರಿಯ ವಿಭಜನೆಯನ್ನು ತೀವ್ರವಾಗಿ ವಿರೋಧಿಸಿರುವರು. ನೀಲಗಿರಿಯ ಕನ್ನಡ ಜನತೆಯ ಪರವಾಗಿ ಇವರು ಸಮಿತಿಗೆ ಒಂದು ಮನವಿಯನ್ನು ಒಪ್ಪಿಸಿರುವರು.

ಸೇಲಂ ಜಿಲ್ಲೆಯ ಕನ್ನಡಿಗರ ಪರವಾಗಿ ಶ್ರೀಗಳಾದ ದಿ. ಎನ್. ಪ್ರಸನ್ನಯ್ಯ, ಹೊಸೂರು ವಿಕೇಂದ್ರೀಕರಣ ಸಂಘದ ಅಧ್ಯಕ್ಷ ಕೆ. ಎಸ್. ರಾಮಚಂದ್ರ ಶೆಟ್ಟಿ, ಕಾರ್ಯದರ್ಶಿ ರಂಗಸ್ವಾಮಿ ಶೆಟ್ಟಿ, ಕಲಸುಂಗಲಂ ವಿಕೇಂದ್ರೀಕರಣ ಸಂಘದ ಅಧ್ಯಕ್ಷ ಸಂಪಂಗಿ ರಾಮ ಶೆಟ್ಟಿ, ಕಾರ್ಯದರ್ಶಿ ವೆಂಕಟಾಚಾರ್ ಇವರ ಸಾಕ್ಷಿ ತೆಗೆದುಕೊಳ್ಳಲಾಯಿತು. ಇವರ ಸಾಕ್ಷ್ಯಾಸಾರ ಹೀಗಿದೆ—ಮೈಸೂರು ರಚಿತಪದ ಕರ್ನಾಟಕ ಪ್ರಾಂತ್ಯದಿಂದ ನಮಗೆ ಹೆಚ್ಚಿನ ಪ್ರಯೋಜನವಿಲ್ಲ. ಆದುದರಿಂದ ಮೈಸೂರು ಸಹಿತನಾದ ಕರ್ನಾಟಕ ಪ್ರಾಂತವಾಗದಿದ್ದರೆ ಕೊಯಮುತ್ತೂರು, ಅನಂತಪುರ, ಸೇಲಂ ಜಿಲ್ಲೆಗಳ ಕನ್ನಡ ಭಾಗಗಳ ಆಡಳಿತವನ್ನು ಕೇಂದ್ರ ಸರಕಾರವೇ ತೆಗೆದುಕೊಳ್ಳಬೇಕು. ಇದು ಸಾಧ್ಯವಿಲ್ಲದಿದ್ದರೆ ಈ ಮೂರು ಜಿಲ್ಲೆಗಳ ಕನ್ನಡ ಭಾಗಗಳನ್ನು ಒಂದುಗೂಡಿಸಿ ಒಂದು ಪ್ರತ್ಯೇಕ ಜಿಲ್ಲೆಯನ್ನಾಗಿ ಮಾಡಬೇಕು. ಆ ಮೇಲೆ ಮೈಸೂರು ಕರ್ನಾಟಕಮೊದನೆ ಲೀನವಾಗುವ ಸಂಭವದಲ್ಲಿ ಈ ಜಿಲ್ಲೆಯನ್ನು ಕರ್ನಾಟಕದೊಡನೆ ಲೀನಗೊಳಿಸಬಹುದು. ಮೈಸೂರು ಸಹಿತನಾಗಿಯೇ ಕರ್ನಾಟಕ ಪ್ರಾಂತವಾಗುವುದಿದ್ದರೆ ಸೇಲಂ ಜಿಲ್ಲೆಯ ಹೊಸೂರು ತಾಲೂಕು ಸಂಪೂರ್ಣ, ಧರ್ಮಪುರಿ ಮತ್ತು ಕೃಷ್ಣಾಗಿರಿ ತಾಲೂಕುಗಳ ಕನ್ನಡ ಭಾಗಗಳು ಕರ್ನಾಟಕದೊಡನೆಯೇ ಸೇರಬೇಕು.

ಇವರು ಸೇಲಂ ಜಿಲ್ಲೆಯ ಕನ್ನಡ ಭಾಗಗಳನ್ನು ತಮಿಳು ನಾಡಿಗೆ ಅಥವಾ ಆಂಧ್ರಕ್ಕೆ ಸೇರಿಸುವುದಕ್ಕೆ ತಮ್ಮ ತೀವ್ರ ವಿರೋಧವಿದೆ ಎಂದು ಹೇಳಿರುವರು.

ಕೊಳೈಗಾಲ ತಾಲೂಕಿನ ಪರವಾಗಿ ಸಾಕ್ಷಿ ನುಡಿದ ಶ್ರೀ ಅನಂತ ಪದ್ಮನಾಭ ರಾಯರು ಸೇಲಂ ಜಿಲ್ಲೆಯ ಪ್ರತಿನಿಧಿಗಳ ಅಭಿಪ್ರಾಯವನ್ನೇ ಸೂಚಿಸಿರುವರು. ಅವರು ಕೊಯಮುತ್ತೂರು ಜಿಲ್ಲೆಯ ಕೊಳೈಗಾಲ ತಾಲೂಕು ಸಂಪೂರ್ಣ ಮತ್ತು ಭವಾನಿ, ಗೋಪಿ ಚೆಟ್ಟಿ ತಾಲಯಂ, ಕೊಯಮುತ್ತೂರು ತಾಲೂಕುಗಳ ಕನ್ನಡ ಭಾಗಗಳು ಕರ್ನಾಟಕ ಪ್ರಾಂತದಲ್ಲೇ ಸೇರಬೇಕೆಂದು ಹೇಳಿರುವರು.

ಕೊನೆಯದಾಗಿ ಸಾಕ್ಷಿ ನುಡಿದ ಕೊಯಮುತ್ತೂರಿನ ಪಬ್ಲಿಕ್ ಪ್ರೊಸೆಕ್ಯೂಟರರಾದ ರಾವ್ ಬಹದೂರ್ ಕೆ. ನಂಜುಂಡಯ್ಯನವರು ಈ ರೀತಿಯಾಗಿ ಅಭಿಪ್ರಾಯಪಟ್ಟರುವರು—ರಾಜಕೀಯ ಗೊಂದಲದ ಈ ಕಾಲದಲ್ಲಿ ದೇಶದ ವಿಭಜನೆಯು ಕೆಲಸವು ಕಸ್ಯ ತರದ್ವಾಗಬಹುದು. ಆದರೆ ಆಂಧ್ರ ಪ್ರಾಂತ ರಚನೆಯಾಗುವುದಿದ್ದರೆ ಆದರೊಡನೆಯೇ ಕರ್ನಾಟಕ ಪ್ರಾಂತ ರಚನೆಯೂ ಆಗಬೇಕು ಈ ಕರ್ನಾಟಕ ಪ್ರಾಂತದಲ್ಲಿ ಕೊಯಮುತ್ತೂರು ಜಿಲ್ಲೆಯ ಕನ್ನಡ ಭಾಗಗಳೂ ಸೇರಿಸಲ್ಪಡಬೇಕು

ದಕ್ಷಿಣಕನ್ನಡ ಜಿಲ್ಲೆಯವರೆಗೆ ಪ್ರತ್ಯೇಕ ಪ್ರಾಂತ ರಚನೆಗೆ ಬೆಂಬಲ ಕೊಡುತ್ತಿದ್ದಾರೆಂಬುದು ಕೇಳಿದ ಪ್ರಶ್ನೆಗೆ ಉತ್ತರವಾಗಿ ಶ್ರೀ ನಂಜುಂಡಯ್ಯನವರು ಮದ್ರಾಸು ಪ್ರಾಂತದಲ್ಲಿ ಬ್ರಾ ಅಲ್ಲಿಯ ಜನರಿಗೆ ಯಾವ ಪ್ರಯೋಜನವೂ ಆಗಲಿಲ್ಲವೆಂದರು.

ಮೇಲಿನ ಸಾಕ್ಷಿದಾರರೆಲ್ಲರೂ ತಮಿಳುನಾಡು ಅಥವಾ ಆಂಧ್ರದೊಡನೆ ಸೇರುವುದನ್ನು ವಿರೋಧಿಸಿರುವರು.

(ಅ. ಕ ಸಂಘ, ಬೆಂಗಳೂರು.)

ಸೈಯದ್ ಅಬ್ದುಲ್ ಕರೀಮ್ ಸಾಹೇಬ್ ಬಹದೂರ್, ಬಿ. ಎ., ರೆವಿನ್ಯೂ ಡಿವಿಜನಲ್ ಆಫೀಸರರವರು, ಪುತ್ತೂರು

ಪ್ರಕಟಣೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ—

ದಕ್ಷಿಣಕನ್ನಡ ಜಿಲ್ಲಾ ಪುತ್ತೂರು ತಾಲೂಕು ಸುಬ್ರಹ್ಮಣ್ಯ ಗ್ರಾಮದ ಕುಲುಗುಂದದಲ್ಲಿ ವರ್ಷಂಪ್ರತಿ ಜರಗುವ ಜಾತ್ರೆಯು ತಾರೀಖು ೨೦ ಜನವರಿ ಸೋಮವಾರ ಸಂತೆಯು 1948ನೇ ಇಸವಿ ನವಂಬ್ರ ತಾ 16ರಿಂದ ನವಂಬ್ರ ತಾ 30ರ ತನಕ ಜರಗುವುದು. ಅಂದರೆ, ಸಂತೆಯು ಕಾರ್ತಿಕ್ಕೆ ಪೌರ್ಣಮಿ ದಿವಸ ಪ್ರಾರಂಭವಾಗಿ ಕಾರ್ತೀಕ ಅಮಾವಾಸ್ಯೆ ದಿವಸದ ಯಾ ಸುಬ್ರಹ್ಮಣ್ಯ ದೀಪೋತ್ಸವದ ಸರಿಯಂತ ಜರಗುವುದು.

ಸಂತೆಗೆ ತರಲ್ಪಡುವ ಪ್ರತಿಯೊಂದು ಜಾನುವಾರಿನ ಮೇಲೆ ತಲೆಯೊಂದರ ಎರಡಾಣೆಯ ಮೇರೆಗೆ ಫೀಸು ವಸೂಲು ಮಾಡಲಾದೀತು. ಸಂದರ್ಭ ಬಂದಿಗಲ್ಲಿ ಸದ್ರಿ ಫೀಸನ್ನು ಏರಿಸಲು ಬಹುದು ಯಾ ಅಧಿಕ ಫೀಸನ್ನು ವಸೂಲು ಮಾಡಲು ಬಹುದು.

ಪರಂತ್ತು, ರೆವಿನ್ಯೂ ಡಿವಿಜನಲ್ ಆಫೀಸರರು ಅನ್ಯಥಾ ಹೇಳಿದ್ದು ಕೋರಿದ ಯಾವತ್ತು ಜಾನುವಾರುಗಳನ್ನು ಸದ್ರಿ ಫೀಸುಗಳಿಂದ ಸಂಪೂರ್ಣ ಪರಿಹಾರ ಪಡಿಸಬಹುದು.

ಮೈಸೂರು ಪ್ರಾಂತ್ಯದಿಂದ ಜಾನುವಾರು ರಫ್ತು ಮಾಡುವವರ ಜ್ಯಾರಿಯಲ್ಲಿರುವ ನಿರ್ಬಂಧನೆಗಳಿಗೆ ಅನುಸಾರವಾಗಿ ಮೈಸೂರು ಪ್ರಾಂತೃಪ ಸಂಬಂಧಪಟ್ಟ ಜಿಲ್ಲಾ ಮೆಜೆಸ್ಟ್ರೇಟರರು ಕೊಡುವ ರಫ್ತಾರಿಗಳ ಮೂಲಕ ಪಾತ್ರರಿಸ್ತುಮಾಡುವರೆ ಸಾಧ್ಯಪಿರುತ್ತದೆ. ಆದ ಪ್ರಯುಕ್ತ ಜಾತ್ರೆ ವರ್ಷದಲ್ಲಿ ಜರಗುವ ಕುಲುಗುಂದ ಜಾನುವಾರು ಸಂತೆಗೆ ಮೈಸೂರು ಪ್ರಾಂತ್ಯದಿಂದ ಜಾನುವಾರುಗಳನ್ನು ತಂದು ಮಾರಾಟಮಾಡಲು ಆಪೇಕ್ಷಿಸುವ ವ್ಯಾಪಾರಿಗಳು ಮೈಸೂರು ಪ್ರಾಂತ್ಯದ ಸಂಬಂಧಪಟ್ಟ ಜಿಲ್ಲಾ ಮೆಜೆಸ್ಟ್ರೇಟರರಿಂದ ಅವಶ್ಯಕ್ಕುಳ್ಳ ರಫ್ತಾರಿಗಳನ್ನು ಮುಂಚಿತವಾಗಿಯೇ ಪಡೆಕೊಳ್ಳತಕ್ಕದ್ದು.

S. A. Kareem Saheb.
ರೆವಿನ್ಯೂ ಡಿವಿಜನಲ್ ಆಫೀಸರ
ಪುತ್ತೂರು ತಾ. 18-9-48

— ಮಕ್ಕಳನ್ನು ಹಡೆಯುವುದು ಸಾಕು —

ಆರಕ್ಕ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಸ್ತರ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನೆ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಿಶರೀರ, ಪ್ರದರರೋಗ್ಗ ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಕ್ಕಿ:—ಹರಿವೀನಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಷ್ಟ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪ ಫಕೀರಪ್ಪ ಡಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ವಿಜಯದಲ್ಲಿ:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕಮಿಸ್ಸ್, ಹೂವೇರಿ ಬ್ಯಾಂಕ್.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಥಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಗು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ತೂಲಿ, ಆರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕ-ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ಕುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುಕುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರಬ್ಬಾ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಕಿರೂ. ಪೋಷ್ಟ ಚಾರ್ಜ ೪ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಮಿಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ.

ಪೆರಿಗೆ ಆಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಪೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ಸಂಸಾ ವಿಕಾರಗಳುಂಟಾಗುತ್ತವೆ. ಕಸಬೀಳದೆ ಯಾ ಆದರ ಅಂತೆ ಉರಿದು ಜ್ವರ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರವನ ಯಾ ಸ್ರಾವ ನಿರೋಧ ಉಂಟಾಗುತ್ತದೆ ಇದರಿಂದ ಪ್ರಲಾಪಸ್ಥಾ, ಮೂರ್ಛೆರೋಗ, ಸ್ತನಗಳ ಜೀನ್ಸು, ಸಪ್ತಾನಾಸ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಪಲವು ವಿಕಾರಗಳು ತಲೆದೋರಲ್ತವೆ ವೈದ್ಯ, ಡಾಕ್ಟರ, ಸರ್ಜನರ ಪರಿಗೆ ಕರೆಸಿ ನೂರಾರು ರೂಪಾಯಿ ಸುರ್ಯಮಾಡಬೇಕಾಗುತ್ತದೆ. ಆ ಮೇಲೂ ದೈವೇಚ್ಛೆ ಎಂದು ಅಧೃಷ್ಟ ಪರೀಕ್ಷೆ!

ಆದರೆ ಭಾಣಂತಿತನದಲ್ಲಿ ನಾವಿಕಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧ ವಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ಇವುಗಳನ್ನ ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ಕಮ್ಮಿ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕಮನೀಯ ಕೇರಕಲಾಸ, ತಂಪು ಮೆದುಳು, ಶುಭ್ರ ನೇತ್ರಗಳನ್ನು ಹೊಂದಲು ಬಹು ಗುಣಯುಕ್ತ ಅನುಲಕೀ ತೈಲ ಯಾ ಹಿಮಸಾಗರ ತೈಲಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD)
Kunjal P. O. Brahmavar, S. K.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಕಾರ್ಕಳ ತಾಲೂಕು ಮಹಾತ್ಮಾ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ- ಈ ತನಕ ರುಪಾಯಿ 3200/-ರಷ್ಟು ವಸೂಲು ಆಗಿಯಾದೆ. ದಾನಿಗಳ ಹೆಸರನ್ನು ಯಥಾವ ಕಾರವಾಗಿ ಪ್ರಕಟಿಸಲಾಗುವುದು. ಕಾರ್ಕಳ ತಾಲೂಕಿನಲ್ಲಿ ಸದ್ರಿ ನಿಧಿಯನ್ನು ಸಂಗ್ರಹಿಸಲಿಕ್ಕೆ ಈ ಕೆಳಗಿನ ಮಹನೀಯರನ್ನು ಕಲೆಕ್ಟರರಾಗಿ ನೇಮಿಸಿ ಅಧಿಕೃತ ರಸೀದಿ ಪುಸ್ತಕಗಳನ್ನು ಅವರವರ ವಶಕೊಡಲಾಗಿದೆ. ದಾನದ ಏನೇಜುಗಳನ್ನು ಅವರ ಸಹಾಯಗಲೀ, ಯಾ ಸೆಕ್ರೆಟರಿಯ ಸಹಾಯಗಲೀ ಕೊಡಬಹುದು. 1 ಶ್ರೀ. ಕೆ. ವೆಂಕಟೇಶ ಪ್ರಭು, ಆಧ್ಯಕ್ಷ. 2 ಶ್ರೀ. ಕೆ. ಪಿ. ಮುಕುಂದ ಪ್ರಭು, ಜತೆ ಕಾರ್ಯದರ್ಶಿ. 3 ಶ್ರೀ. ಯಂ. ಯಸ್. ಅಧಿಕಾರಿ, ವಕೀಲರ್. 4 ಶ್ರೀ. ಬಿ. ನಾಸುದೇವ ರಾವ್, ವಕೀಲರ್. 5 ಶ್ರೀ ವಿ. ವಿ. ಶೆಟ್ಟಿ ಕಾರ್ಕಳ 6 ಶ್ರೀ ಪದ್ಮರಾಜ ಮಾರಯ್ 7 ಶ್ರೀ P. ಶ್ರೀಧರ ಹೆಗ್ಡೆ, ವೇಣೂರು 8 ಶ್ರೀ G. ಮಾಧವ ಸ್ಯೆ, ಮೂಡುಬಿದ್ರೆ. 9 ಶ್ರೀ M. ರಾಮಮೋಹನ ರೈ, ಪಾಂಡ್ಯ 10 ಶ್ರೀ B. ಕೇಶವ ಶಿನ, ಬೈಲೂರು.

ಕೆ. ಮಹಾಬಲ ಹೆಗ್ಡೆ. B. A. B. L. ಸೆಕ್ರಟರಿ ಮತ್ತು ಟ್ರಿಜರರ್ ಕಾರ್ಕಳ ತಾಲ್ಲು ಮಹಾತ್ಮಾಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ.

ಕಾರ್ಕಳ-ಸೋಯಿಲ್ ಸೆನಿಟೇಷನ್ ಅಭಿವೃದ್ಧಿ ಕಮಿಟಿ ಸಭೆಯು ತಾ 20ರಲ್ಲು ಇಲ್ಲಿಯ ಟೋರ್ಡ್ ಮೈನ್ ಎಲಿಮೆಂಟರಿ ಶಾಲೆಯಲ್ಲಿ ಪೂರ್ವಾಯತ ಟೋರ್ಡ್ ಪ್ರೆಸಿಡೆಂಟ್ ಶ್ರೀ ಡಿ. ವಿ. ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ತಾಲೂಕಿನಲ್ಲಿ ನಡೆದ 'ಸಿಪ್ಪಿಕ್ ಟ್ರೇಂಕ್' ನಿರ್ಮಾಣದ ಕಾರ್ಯಕ್ರಮವನ್ನು ಪರಿಶೀಲಿಸಿ ಪಬ್ಲಿಕ್ ಹೆಲ್ತ್ ಇಲಾಖೆಯ ಯವರ ಈ ಕಾರ್ಯವನ್ನು ಶ್ಲಾಘಿಸಲಾಯಿತು.

'ಸೀಪಲ್ಸ್ ಹೆಲ್ತ್' ಪತ್ರಿಕೆಯು ಜುಲ್ಯಾ ತಿಂಗಳ ಆಗ್ರಲೇಖನದಲ್ಲಿ ಆರೋಗ್ಯ ಖಾತೆಯವರು ಸಮಾಧಾನಕರ ಕೆಲಸ ಮಾಡಿರುತ್ತಾ ಅವರ ಕಾರ್ಯವನ್ನು ಟೀಕಿಸಿದುದಕ್ಕಾಗಿ ನಿಷೇಧ ಪ್ರದರ್ಶಿಸಲಾಯಿತು. ಸೂತ್ರವಲ್ಲದೆ ಆಂತಹ ಟೀಕೆಯು ಅಪ್ರಾಸಂಗಿಕವೆಂದು ಸೂಚಿಸಲಾಯಿತು. ಈ ಕಮಿಟಿಯ ಅಭಿಪ್ರಾಯವನ್ನು ಮದ್ರಾಸ ಸರಕಾರಕ್ಕೂ ಪೀಪಲ್ಸ್ ಹೆಲ್ತ್ ಸಂಪಾದಕರಿಗೂ, ಪಬ್ಲಿಕ್ ಹೆಲ್ತ್ ಇಲಾಖೆಯ ಪ್ರಮುಖ ಅಧಿಕಾರಿಗಳಿಗೂ ತಿಳಿಸುವರೆ ಅಧ್ಯಕ್ಷರಿಗೆ ಅಧಿಕಾರ ವೀಯಲಾಯಿತು.

ಬ್ರಹ್ಮಾವರ-ತಾ. 24-8-48ರಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿ ಪ್ರೆಸಿಡೆಂಟ್ ಶ್ರೀ ಪಾಲಗಾಳ ಲಕ್ಷ್ಮಿನಾರಾಯಣ ನಾಯ್ಕರವರು ಇಡ್ಲಿಗೆ ಬಂದು ಬಾರ್ಕೂರು ಸರ್ಕಲ್ ಕಾಂಗ್ರೆಸ್ ಕಮಿಟಿಯ ಹೊಸ ವರ್ಷದ ಕಾರ್ಯಕಾರಿ ಸಮಿತಿಯ ಚುನಾವಣೆ ನಡಿಸಿದ್ದಲ್ಲಿಯೂ ಕೆಳಗಿನ ಸದಸ್ಯರು ಆರಿಸಿ ಬಂದಿರುವರು.

(ಶೇಷಗಳಾದ) ಎಮ್. ಶ್ರೀನಿವಾಸಾಚಾರ್ಯರು [ಅಧ್ಯಕ್ಷ] 2 ಬಿ. ನೇಮಣ್ಣನಾಯಕ ಪಟ್ಟಗಾರ್ [ಉಪಾಧ್ಯಕ್ಷ] 3 ಕೆ. ಗೋವಿಂದರಾಯಪೈಗಳು [ಕೋಶಾಧಿಕಾರಿ] 4 ಪಿ. ವೈ- ರಾಮಣ್ ಗಂರುಳ್ಳಳ್ [ಪ್ರ. ಕಾರ್ಯದರ್ಶಿ] 5 ಪಿ. ಸಂಜೀವ ಪೈಗಳು [ಜತೆ ಕಾರ್ಯದರ್ಶಿ] 6 ಬಿ. ಎಮ್- ಶಾಮನವರು. 7 ಕೆ. ರಘುನಾಥ ಪ್ರಭುಗಳು, ಕುಂಜಾಲ್. 8 ಕೆ. ಅಂತಯ್ಯ ಹೆಗ್ಡೆರು, ಕೊಕ್ಕರ್ಣ. 9 ಬಿ. ಅಂತಯ್ಯ ಶೆಟ್ಟಿರು.

ಹೊಸ ಪುಸ್ತಕ

ಜಮೀನ್ದಾರ

ಧನಾಢ್ಯರ ದುರಹಂಕಾರ, ದುರ್ವ್ಯಯ ದುಸ್ಸಾಧನೆ ಮೊದಲಾದುವನ್ನು ಚಿತ್ರಿಸುವ

ಬಡವರ ಭೀಕರ ಪರಿಸ್ಥಿತಿಯ ಕನಿಕರಾವಸ್ಥೆಯನ್ನು ಹೃದ್ಯಾನಳವಾಗಿ ಪ್ರತಿಬಿಂಬಿಸುವ

ನವೀನ ಸಾಮಾಜಿಕ ಕಾದಂಬರಿ

ಜಮೀನ್ದಾರ

ಧನಿಕರನ್ನು ಬಡವರನ್ನು ಪ್ರತಿಯೊಬ್ಬರೂ ಓದತಕ್ಕ ಜನತಾ ಸಾಹಿತ್ಯ

164 ಪುಟಗಳು .... ಬೆಲೆ ರೂ. 1, 8 0

ಪ್ರತಿಗಳು ಸಿಗುವ ಸ್ಥಳಗಳು--1. ನವಭಾರತ ಮುದ್ರಣ ಭಂಡಾರ, ಉಡುಪಿ. 2. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 3. ಎಂ. ಎಸ್. ಮಯ್ಯ ಪುತ್ತೂರು. 4. ಶಿರಿಯರ ಪ್ರಪಂಚ, ಉಡುಪಿ.

'ಕೇಶ ಕಲಾ'

ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಧಾರ್ವಾಡ, ಬೆಳಗಾಂವ

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಸುಲಭವಾಗಿ ಇಂಗ್ಲಿಷ್ ಕಲಿಯಲು ಅತ್ಯನುಕೂಲವಾದ ಪುಸ್ತಕ

ವಿ. ಕೊರಡ್ಡಯ ಶ್ರೀನಿವಾಸರಾಯರ

ಸುಲಭದಲ್ಲಿ ಇಂಗ್ಲಿಷ್

(English Made Easy)

(ಇಂಗ್ಲಿಷ್ ಸ್ವಯಂಬೋಧಿನಿ)

ಬೆಲೆ ರೂ. 1—8—0; ಟಪ್ಪಾಲು ಖರ್ಚಾರಿ ರೂ 1—13—0

ಶ್ರೀ. ಯಸ್. ಜೆ. ಗಣಪತಿ ನಾರಾಯಣ ಪ್ರಭುಗಳಿಂದ ರಚಿತವಾದ

ಲೋಕವ್ಯವಹಾರ ಬೋಧಿನಿ-

ವ್ಯವಹಾರಜ್ಞಾನದರ್ಪಣ

ಅತ್ಯಂತ ಜನೋಪಯೋಗೀ ಪುಸ್ತಕ

ಬೆಲೆ ರೂ. 1—8—0, ಟಪ್ಪಾಲು ಖರ್ಚಾರಿ ರೂ. 1—13—0

ಪ್ರತಿಗಳು ಸಿಗುವ ಮುಖ್ಯ ಸ್ಥಳಗಳು:.

1. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 2. ನವಭಾರತ ಬುಕ್ ಡಿಪೋ, ಉಡುಪಿ 3. ಸ್ವತಂತ್ರ ಭಾರತ ಬುಕ್ ಕಂಪೆನಿ ಪೋರ್ಟ್, ಬೊಂಬಾಯಿ, 4. ಎಂ. ಎಸ್. ಮಯ್ಯ ಪುತ್ತೂರು 4. ನವಯುಗ ಪ್ರೆಸ್, ಉಡುಪಿ

ನೋಟೀಸು

ಉಡ್ಪಿ ಡಿ. ಮು. ಕೋರ್ಟ್‌ನಲ್ಲಿ.

S. C. No. 289/1948.

ಕೆ. ಮಹಾಬಲ ಹೆಗಡೆ-ವಾದಿ.

ಮತ್ತು

ರಾಗವೇಂದ್ರ ಸೆಟ್ಟಾರ್-ಬೈಕಾಡಿ ಗ್ರಾಮದಲ್ಲಿರುವವ-ಪ್ರತಿವಾದಿ.

ಪ್ರತಿವಾದಿಯು ಶ್ರೀ. ಬಿ. ನೀಲಪ್ಪ ಹೆಗಡೆ ಇವರಿಗೆ ತಾ. 24-8-1945ರಲ್ಲಿ ರು. 200ಕ್ಕೆ ಬರೆಕೊಟ್ಟ ದಿವಾಂಡು ನೋಟನ್ನು ಟ್ರಾನ್ಸ್‌ಫರ್ ಪತ್ರದ ಸಾಹಿತಿಗೆ ಆ. ಡಿ. ನೋಟು ಮೇರೆಗೆ, ಬಹಾ ಅಸಲು ಬಡ್ಡಿ ಹಣಗಳ ವಸೂಲಿ ಬಗ್ಗೆ ದಾಖಲ್ಮಾಡಿದ ಮೇರೆಗೆ ಪಾವೆಯು ತಾ. 8-10-1948ಕ್ಕೆ ತನ್ನಿಗೆ ಯಿಟ್ಟಿದೆ. ಆ ಕಾರಿಕು ಅಕ್ಷೇಪ ಯಿದ್ದೆ ಸದ್ರಿ ದಿವಸ 11 ಗಂಟೆಗೆ ಕೋರ್ಟಿಗೆ ಮುಂದೆ ಹಾಜ್ರಾಗಿ ಜ್ಞಾಪೀರು ಮಾಡಿಕೊಳ್ಳತಕ್ಕದ್ದು.

B. S Hegde.

ತಾ. 21-9-48. ವಾದಿ ಕರೆ ವಕೀಲ್.

ನೋಟೀಸು

ಕುಂದಾಪುರ ಡಿ. ಮು. ಕೋರ್ಟ್‌ನಲ್ಲಿ

S. C. 472/1948

ವಾದಿ. ನಾರಾಯಣ ಹೆಬ್ಬಾರ.

ಪ್ರತಿವಾದಿ. ಮಂಜ ಬವಲಾಡಿ ಮಾದು ಮನೆ ಮಾಚಿ ಹೆಂಗ್ಸಿನ ಮಗ, ಕುಂದಾಪುರ ತಾಲೂಕು ಬೀಜಾರುಗ್ರಾಮ.

ವಾದಿಯು ಪ್ರತಿವಾದಿಮೇಲೆ ಚಾಲಗೇಣಿ ಬಾಬ್ತು ಸರ್ವಜಿತು ಸಂಬಂಧ ಗೇಣಿಬಾಕಿ ಬಗ್ಗೆ ಸದ್ರಿ ದಾವಾಮಾಡಿರುವದ್ರಿಂದ ಈ ಕುರಿತು ನಿನ್ನವೇಸಾದ್ರು ಅಕ್ಷೇಪಣೆಇದ್ದಲ್ಲಿ ತಾ. 6-10-1948ನೇ ದಿನ್ನ ಹಗಲು 11 ಗಂಟೆಗೆ ಯೀ ಕೋರ್ಟುಮುಂದೆ ಹಾಜರಾಗಿ ಜಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನಿಸಲಾದೀತು. ಎಂಬಸಂಗ್ತಿ ಕೋರ್ಟುಯ್ಯಂ ಪ್ರಕಾರ ಯೀ ಮೂಲಕ ನಿನಗೆ ತಿಳಿಸೋಣವಾಗುತ್ತದೆ.

K. Raghunath Shenai

Pleader for the Plaintiff

Coondapoor 20—9—1948

ದಿ ಮೂಲ್ಕಿ ಬೇಂಕ್,

ಮೂಲ್ಕಿ

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿವೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ಸಹಿವಾಟುಗಳಿಂದ ಆವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.

Moolky, S. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಲ್ಲ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ಪಾತ್ರೆಗಳೂ ಸಾಮಾನುಗಳೂ ರಾಶಿ ರಾಶಿಯಾಗಿಯೂ ಡೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No M. 3618 ಎರಡಾಣೆ 7-10-1948

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4-8-0
೬ ತಿಂಗಳಿಗೆ ರೂ. 2-8-0
ಬಿಡಿ ಪ್ರತಿಗೆ ರೂ 0-1-6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯ ವಾರ ೬

NAVAYUGA WEEKLY, UDIPI, S. K.

FOUNDER: Hon'ble Mr. A. B SHETTY, Health Minister, Govt. of Madras

Vol. 29 No. 6

ಮದ್ರಾಸ್ ಮಹಿಳೆಯರು ಮಹಾರಾಣಿಯಿಂದ ಕಲಿಯಬೇಕಾದ 'ಫೇಶನ್'!

ಮದ್ರಾಸ್ ಗವರ್ನರರ ಸಹಧರ್ಮಿಣಿ ಭಾವನಗರದ ಮಹಾರಾಣಿಯ ಪರಿಚಯ.

"ರಶ್ಮಿ"ಯಿಂದ

ನಾನು ಆ ಕೋಣೆಯೊಳಗೆ ಪ್ರವೇಶಿಸಿ ಎ. ಡಿ. ಸಿ.ಯಿಂದ ನನ್ನ ಗುರುತಮಾಡಿಕೊಡಲೆ ಅವರೊಂದು ನಗೆಯ ಮೂಲಕ ನನ್ನನ್ನು ಆದರಮಾಡಿಕೊಂಡರು. ಗುಜರಾತಿ ಪದ್ಧತಿಯ ಲಾವಣ್ಯ ಮತ್ತು ಅಭಿರುಚಿಗನುಸಾರವಾಗಿ ಸಾದಾ ಬಿಳಿ ಜಾರ್ಜೆಟ್ ಸೀರೆಯನ್ನು ಉಟ್ಟಿದ್ದ ಆ ಸುಂದರಿ ಮಹಿಳೆಯೇ ಮಹಾರಾಣಿಯಾಗಿದ್ದರೂ. ಅವರು ಕೆಲವೇ ಆಭರಣಗಳನ್ನು ಧರಿಸಿದ್ದರು. ರೂಪರಚನೆ (make-up) ಮಾಡಿಕೊಂಡಿದ್ದೇ ಇಲ್ಲ. ನಾಜೂಕಿನ ಸಣ್ಣ ಕುಂಕುಮವೊಂದು ಅವರ ಹಣೆಗಂಟಿದ್ದುದು ನನ್ನ ದೃಷ್ಟಿಗೆ ಬಿತ್ತು. ಇದ್ದುದಿಷ್ಟೆ. ಆದರೂ ಅವರಲ್ಲೊಂದು ವೈಶಿಷ್ಟ್ಯ -ರಾಜರಕ್ತ ಸಹಜವಾದ ಗಂಭೀರ ಘನತೆ- ಒಡೆದು ತೋರುತಿತ್ತು.

ಎ. ಡಿ. ಸಿ. ಕೋಣೆಯಿಂದ ಹೊರಡುವಾಗ "ಇವರಿಗೆ ಹಿಂದಿ ಕೂಡಾ ಬರುತ್ತದೆ ಯುವರ್ ಹೈನೆಸ್" ಎಂದು ಚುಟುಕನ್ನಲ್ಲಿ ಸೂಚಿಸಿ ಹೋದ.

ನಾನೊಂದು ಸೆಕುಂದ ಕಾಲ ಶಂಕಿಸಿದೆ. ಆ ಮೇಲೊಂದು ಪ್ರೇರಣೆಗೊಂಡು ಪ್ರಸ್ತಾವಂಭಿಸಿದೆ "ತಾವು ಇಲ್ಲಿರುವುದಕ್ಕಾಗಿ ನಾವು ಅತ್ಯಾನಂದಗೊಂಡಿದ್ದೇವೆ ಯುವರ್ ಹೈನೆಸ್. ಮದ್ರಾಸ್ ತಮ್ಮನ್ನು ಹಾರ್ದಿಕವಾಗಿ ಸ್ವಾಗತಿಸುತ್ತದೆ". ನಾನಿಡನ್ನು ಹೇಳುತಿದ್ದಂತೆ ಅವರ ಕಣ್ಣುಗಳು ಪ್ರಕಾಶಗೊಂಡವು. ಅವರು ಹಿಂದಿಯಲ್ಲಿ ಉತ್ತರಕೊಟ್ಟರು: "ಧನ್ಯವಾದಗಳು. ನಾನು ಕೂಡಾ ಬಹಳೇ ಸುಖಿ. ನಾನಿಲ್ಲಿ ಬಹಳ ಜನರನ್ನು ಭೇಟಿಯಾಗಿದ್ದೇನೆ. ಅವರೆಲ್ಲರೂ ನನ್ನ ಮೇಲೆ ವಿಶೇಷ ದಯೆ ಮತ್ತು ಆತಿಥ್ಯವನ್ನು ತೋರಿಸಿದ್ದಾರೆ". ಈಗ ನನ್ನ ಪ್ರಶ್ನಾ ಮಾಲೆಯೊಂದಿಗೆ ಸಿದ್ಧಳಾದ ನಾನು ಕೇಳಿದೆ "ದಕ್ಷಿಣ ಭಾರತದ ಮಹಿಳೆಯರು ತಮಗೆ ಹೇಗೆ ಕಾಣುತ್ತಾರೆ?"

"ಅವರು ವಿಶೇಷ ಚುರುಕಾಗಿದ್ದಾರೆ; ಪಟ್ಟು ಸಾಕಷ್ಟು ಮುಂದುವರಿದವರು ಕೂಡಾ. ಆವರಲ್ಲಿ ಬಹಳ ಮಂದಿ ಉಚ್ಚ ಶಿಕ್ಷಣ ಪಡೆದವರೆಂಬುದನ್ನು ಕಂಡುಕೊಂಡೆ. ನನ್ನ ಸಮಯವಿಲ್ಲಿ ಕೆಲಸದಿಂದಲೇ ಹೋಗುವಂತಾಗುವದೆಂದು ನೀರೀಕ್ಷಿಸುತ್ತೇನೆ". ಎಂದರು ಆಕೆ ನಗುತ್ತಾ. ಆ ಮೇಲೆ ನಮ್ಮ ಸಂಭಾಷಣೆಯು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮುಂದುವರಿಯಿತು.

"ತಮ್ಮ ಸಂಸ್ಥಾನದಲ್ಲಿ ತಾವು ಬಹಳ ಸಾಮಾಜಿಕ ಚಟುವಟಿಕೆಗಳನ್ನು ನಡೆಸುತ್ತಿರುವಿರೆಂ?" ನಾನು ಪ್ರಶ್ನಿಸಿದೆ. "ಬಹಳವೇನೂ ಇಲ್ಲ ಸಂಸ್ಥಾನದ ನಿತ್ಯದ ಸಭೆ ಸಮಾರಂಭಗಳ ಹೊರತು ಹೆಚ್ಚಿಗಿಲ್ಲ ಡಾ. ಆವರಲ್ಲಿ ಬಹಳ ಮಂದಿ ಉಚ್ಚ ಶಿಕ್ಷಣ ಪಡೆದವರೆಂಬುದನ್ನು ಕಂಡುಕೊಂಡೆ. ನನ್ನ ಸಮಯವಿಲ್ಲಿ ಕೆಲಸದಿಂದಲೇ ಹೋಗುವಂತಾಗುವದೆಂದು ನೀರೀಕ್ಷಿಸುತ್ತೇನೆ". ಎಂದರು ಆಕೆ ನಗುತ್ತಾ. ಆ ಮೇಲೆ ನಮ್ಮ ಸಂಭಾಷಣೆಯು ಇಂಗ್ಲಿಷ್ ಮತ್ತು ಹಿಂದಿಯಲ್ಲಿ ಮುಂದುವರಿಯಿತು.

"ತಮ್ಮ ಸಂಸ್ಥಾನದಲ್ಲಿ ತಾವು ಬಹಳ ಸಾಮಾಜಿಕ ಚಟುವಟಿಕೆಗಳನ್ನು ನಡೆಸುತ್ತಿರುವಿರೆಂ?" ನಾನು ಪ್ರಶ್ನಿಸಿದೆ. "ಬಹಳವೇನೂ ಇಲ್ಲ ಸಂಸ್ಥಾನದ ನಿತ್ಯದ ಸಭೆ ಸಮಾರಂಭಗಳ ಹೊರತು ಹೆಚ್ಚಿಗಿಲ್ಲ ಆಲ್ಲಿಯ ಮಹಿಳಾ ಮಂದಿರದ ಮೂಲಕ ಕೆಲವು ಸಾಮಾಜಿಕ ಕಾರ್ಯಗಳಿಗೆ ನಾನು ನೆರವಾದುದಿದ್ದರೂ ನನ್ನ ಹೆಚ್ಚಿನ ಸಮಯವು ನನ್ನ ಮಕ್ಕಳೊಂದಿಗೇನೇ ಕೊಡಗಿತ್ತು" ಎಂದಂತಾಕೆ.

"ತಮಗೆ ಸಮಾಜ ಹಿತಸಾಧಕ ಕಾರ್ಯಗಳಲ್ಲಿ ಆಸಕ್ತಿಯಿದೆಯೆ?' ಎಂದು ಕೇಳಿ "ಲೇಡಿ ನ್ಯೇ ಇಲ್ಲಿರುವಾಗ ವಿಶೇಷ ಚುರುಕಿನಿಂದ ಕೆಲಸ ಮಾಡುತ್ತಿದ್ದರು" ಎಂದೆ. "ಹೌದಂತೆ ಅವರು ಇಲ್ಲಿ ಬಹಳೇ ಜನಪ್ರಿಯರಾಗಿದ್ದರೆಂದು ನಾನು ಕೇಳಿದ್ದೇನೆ." ಎಂದಪೇಕ್ಷಿಸಿದೆ. "ನಿಜಕ್ಕೂ ನನಗೆ ಸಾಮಾಜಿಕ ಹಿತ ಸಾಧನಾ ಕೆಲಸದಲ್ಲಿ ಭಾರೀ ಮನಸ್ಸಿದೆ. ಬಡವರ ಮತ್ತು ದಲಿತರ ಆರ್ಥಿಕ ಸಾಮಾಜಿಕ ಸಮಸ್ಯೆಗಳ ಸಂಬಂಧದಲ್ಲಿ ಸಹಾಯವೀಯಲು ನನ್ನಿಂದ ಸಾಧ್ಯವಿದ್ದಷ್ಟಾದರೂ ಮಾಡಬೇಕೆಂದೇ ನನ್ನ ಹಂಬಲ. ನಿರರ್ಥಕ ವಿನೋದ ವಿಹಾರಗಳಲ್ಲೇ ಸಮಯ ಹಾಳು ಮಾಡುವದಕ್ಕಿಂತ ಸಮಾಜ ಹಿತ ಸಾಧಕ ಚಟುವಟಿಕೆಗಳಲ್ಲಿ ಭಾಗವಹಿಸಲು ನಾನು ತಯಾರು" ಎಂದರು.

'ಹಾಗಾದರೆ ಕ್ಲಬ್ಬುಗಳನ್ನು ತಾವು ಮನ್ನಿಸುವುದಿಲ್ಲವೆ?'-ಎಂದೆ ನಾನು.

'ಕ್ಲಬ್ಬುಗಳು ಅಗತ್ಯವೇ. ಆದೊಂದು ಮಿತಿಯ ವರೆಗೆ ನಾನೂ ಅವುಗಳನ್ನು ಮನ್ನಿಸುವವಳಿದ್ದೇನೆ. ಆಪರಾಹ್ನಗಳಲ್ಲಿ ಆರೋಗ್ಯದಾಯೀ ಮನರಂಜನೆಗಳು ಮಹಿಳೆಯರಿಗೆ ಬೇಕು. ಆದರೆ ಕ್ಲಬ್ಬುಗಳು ತಮ್ಮ ಹಾಲಿನ ಆ ಸಣ್ಣ ವೃತ್ತಿಯಿಂದಾದರೂ ರಾಷ್ಟ್ರದ ಹಿತಸಾಧನೆಯ ಕೆಲವು ಸ್ಪರ್ಯೋಜನಕಾರೀ ಉದ್ದೇಶಗಳನ್ನೂ ಕಟ್ಟಿಕೊಂಡಿರಬೇಕು.' ಎಂದರು.

"ಇದು ನಿಜಕ್ಕೂ ಮದ್ರಾಸೀ ಮಹಿಳೆಯ ಪಾಲಿಗೊಂದು ಶುಭವಾರ್ತೆ. ಅವರೆಲ್ಲರೂ, ಒಂದಲ್ಲೊಂದು ರೀತಿಯ ವಿಶೇಷವಾಗಿ ಹೆಂಗಸರು ಮಕ್ಕಳ ಸಂಬಂಧದ ಕೆಲಸಗಳನ್ನು ನಾಡುವವರಲ್ಲಿ ಹೆಚ್ಚು ಕಡಿಮೆ ಆಸಕ್ತಿಯಿದ್ದವರೇ' ಎಂದು ನಾನು ಹಿಗ್ಗಿ ಹೇಳಿದೆ. ಈ ಉದ್ದೇಶವಿಟ್ಟುಕೊಂಡು ಒಂದು ಕ್ಲಬ್ಬನ್ನು ಸ್ಥಾಪಿಸಲು ತಾನು ಭಾವನಗರದಲ್ಲಿ ಪ್ರಯತ್ನಿಸಿದ್ದೆನೆಂದೂ ಅದರದಕ್ಕೆ ಕಿವಿಗೊಟ್ಟವರ ಸಂಖ್ಯೆ ತೀರಾ ಕಡಿಮೆಯಿದ್ದುದರಿಂದ ತಾನಾ ಯೋಜನೆಯನ್ನು ಬಿಡಬೇಕಾಯಿತೆಂದೂ ಹೆರ್ ಹೈನೆಸ್ ವಿವರಿಸಿದರು.

ಬಡತನ ನಿವಾರಣೆಗೆ ಉಳಿತಾಯವೊಂದೇ ಸುಲಭೋಪಾಯವಲ್ಲವೆ?

ಗಳಿಕೆಯ ಸ್ವಲ್ಪಾಂಶವನ್ನು ಉಳಿಸುತ್ತ ಬಂದರೆ ಕೆಲವೇ ವರ್ಷಗಳಲ್ಲಿ ಆದೇ ಒಂದು ಆಪದ್ಧನವ ಗಂಟಾಗುವುದಿಲ್ಲವೆ?

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಇವರು

ನಿಮ್ಮ ಉಳಿತಾಯದ ಸಮಸ್ಯೆಯನ್ನು ಸುಲಭವಾಗಿ ಬಿಡಿಸುವರು.
ನಿಮಗೂ ವಿವರಕ್ಕೂ ವಿಜನ್ಸಿ ನಿಯಮಗಳಿಗೂ ಬರೆಯಿರಿ.

The New Karnataka Provident Insurance Co, Ltd. Udipi. S K.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸು ನಂಬ್ರ 10, ಉಡುಪಿ.

ಮುಖ್ಯ ಕಾರ್ಯಾಲಯ:—ಧಾರವಾಡ,
THE UNITED KARNATAK INSURANCE COMPANY, LIMITED

'ತಾವು ಟೆನ್ನಿಸ್ ಆಡುವದಿದೆಯೇ? ತಮಗಾವುದಾದರೂ ವಿಶೇಷ ಆಟಾಭಿರುಚಿಯಿದೆಯೆ?" ನನ್ನ ಸವಾಲು. "ಈಗ ನಾನು ಯಾವ ಆಟವನ್ನೂ ಆಡುವದಿಲ್ಲ. ಆ ಅಭ್ಯಾಸವಿತ್ತು. ನನಗೆ ಗಾಯನದಲ್ಲೇ ಆಸಕ್ತಿ" ಅವರು ನಗುತ್ತಾ ಹೇಳಿದರು.

'ಯುವರ್ ಹೈನೆಸ್, ತಾವು ಹಾಡುತ್ತೀರಾ? ಅಥವಾ ಯಾವುದಾದರೂ ಬಾಜಾಸಲು ಗೊತ್ತಿದೆಯೆ?"

ಅವರು ಪೂರ್ವಸ್ಮರಣೆ ತಂದು ಕೊಂಡು ನಕ್ಕರು. ಹೇಳಿದರು: "ನಾನು ದಿಲ್‌ರುಬಾರ್ ಮತ್ತು ತಬ್ಲಾ ಬಾರಿಸುತ್ತಿದ್ದೆ".

"ತಬ್ಲಾ?" ನಾನು ಶಂಕಿಸುತ್ತಾ ಪ್ರಶ್ನಿಸಿದೆ. "ಹೌದು. ಓರ್ವ ಮಹಾರಾಣಿಯ ಪಾಲಿಗೆ ಇದು ಸ್ವಲ್ಪ ಹೆಚ್ಚಿಗೆ; ಅಲ್ಲವೆ?" ಎಂದಾಕೆ ನಗೆಯಾಡಿದರು. "ಆದರೆ ಅದು ನಮ್ಮ ಕುಟುಂಬದಲ್ಲಿದ್ದದ್ದೇ. ನನ್ನ ಹಿರಿಯ ಮಗನಿಗೆ ಸಂಗೀತವೆಂದರೆ ಪ್ರಾಣ. ಈಗ ಡೆಹರಾಡನ್ನಿನಲ್ಲಿರುವ ನನ್ನ ಇಬ್ಬರು ಮಕ್ಕಳಿಗೂ ತಬ್ಲಾ, ದಿಲ್‌ರುಬಾರ್ ಮತ್ತು ಸಿತಾರ್ ಬಾರಿಸುವದೆಂದರೆ ಇಷ್ಟ. ನನ್ನ ಹಿರಿಯ ಮಗನಿಗೆ ಚಿತ್ರಕಲೆ ಮತ್ತು ಡ್ರಾಯಿಂಗ್ ಕೂಡಾ ಗೊತ್ತಿದೆ. ಕಲೆಯ ಮೇಲೆ ಅತನಿಗೆ ವಿಶೇಷಾಸಕ್ತಿಯಿದೆ" ಎಂದರಾಕೆ ಮಾತೃಸಹಜ ಹೆಗ್ಗಳಿಕೆಯೊಡನೆ. ಅವರು ಮದ್ರಾಸಿಗೆ ಯಾವಾಗ ಬರುವರು ಎಂದು ಕೇಳಿದ್ದಕ್ಕೆ 'ದಶಂಬರಕ್ಕೆ ಬಂದಾರೆಂದು ನನ್ನ ಯೋಚನೆ' ಎಂದರು.

'ತಾವು ನನ್ನ ದಾಕ್ಷಿಣಾತ್ಯ ಸಂಗೀತವನ್ನೆಂದಾದರೂ ಕೇಳಿರುವಿರಾ?" ಎಂದು ನಾನು ವಿಚಾರಿಸಿದೆ. "ಓ ಯಸ್. ದಕ್ಷಿಣ ಭಾರತದ ನಿಮ್ಮ ಸುಪ್ರಸಿದ್ಧ ಗಾಯಕಿ ಎಮ್ ಯಸ್. ಸುಬ್ಬಲಕ್ಷ್ಮಿ ತನ್ನಹಿಂದೀ ಮತ್ತು ತಮಿಳು ಪದ್ಯಗಳನ್ನು ರೆಕಾರ್ಡಿಗೆ ಕೊಟ್ಟಿದ್ದರಲ್ಲವೆ? ನನ್ನ ಮಗ ಅವರ ಗಾಯನವನ್ನು ಬಹಳವಾಗಿ ಮೆಚ್ಚುತ್ತಾನೆ. ಆದರೆ ನಿಮ್ಮ ಹಾಡುಗಾರಿಕೆಯ ವಿಧಾನದ ಕುರಿತು ನನಗೆ ವಿಶೇಷ ಗೊತ್ತಿಲ್ಲ. ನಾನು ರೇಣುಕಾದೇವಿ ಮಾಡಿದ ನಿಮ್ಮ ಕೆಲವು ವಿಶಿಷ್ಟ ನೃತ್ಯಗಳನ್ನು ಊಟಿಯಲ್ಲಿ ನೋಡಿದ್ದೇನೆ. ಆಕೆ ನಮ್ಮೊಂದಿಗೇನೇ ಯೂರೋಪಿಗೆ ಸಂಚಾರಕ್ಕೆ ಬಂದಿದ್ದರೆಂದು ನನ್ನ ನೆನಪು" ಎಂದರು ಮಹಾರಾಣಿ.

'ತಾವು ಯೂರೋಪಿಗೂ ಹೋಗಿದ್ದಿರಾ?'

"ಹೌದು. ಅದು ಕೂಡಾ ಇತ್ತೀಚೆಗೆ" ಎನ್ನುವಾಗ ಅವರ ನಗೆಯು ಅತ್ಯಂತ ಮಧುರ ಮತ್ತು ಮನನೋಹಕವಿತ್ತು. ಆಕೆ ಸದಾ ಕಾಲ ಶುದ್ಧ ನಗು ಸೂಸುತ್ತಿದ್ದರು.

"ತಾವು ಈ ಮೊದಲು ದಕ್ಷಿಣ ಭಾರತಕ್ಕೆ ಬಂದಿದ್ದೀರಾ?"-ನನ್ನ ವಿಚಾರಣೆ.

"ಹೌದು. ನಾನು ಮಧುರೆ, ರಾಮೇಶ್ವರ, ಮತ್ತಿತರ ಕೆಲವು ಯಾತ್ರಾ ಸ್ಥಳಗಳಿಗೆ ಬಂದಿದ್ದೆ" ಎನ್ನುತ್ತಾ ಅವರು ನನ್ನನ್ನು ವಿಚಾರಿಸಿದರು. "ಇಲ್ಲಿಂದ ರಾಮಣ ಮಹರ್ಷಿಗಳ ಆಶ್ರಮಕ್ಕೆ ಎಷ್ಟು ದೂರವಿದೆ?". ಈ ಪ್ರಸಿದ್ಧ ಧಾರ್ಮಿಕ ನೆಲೆಯದ ಕಡೆಗೆ ಆಕೆಗಿದ್ದ ಆಸಕ್ತಿಯು ಮನಸ್ಸಿಗೆ ನಾಟಿದ ನಾನು "ಬಹಳ ಪವಿತ್ರ" ಎಂದು ಬಿಟ್ಟೆ. "ನನಗೆ ಯೋಗಿಕ ಸಂಸ್ಕೃತಿಯಲ್ಲಿ ಆಸಕ್ತಿ ಹೆಚ್ಚಿಗೆ; ನಾನು ತುಸು ಧಾರ್ಮಿಕ ಮನೋವೃತ್ತಿಯವಳು" ಎಂದರು ಪುನಃ ಆಕೆ.

"ಹಾಗಾದರೆ ತಾವು ತಮಗೆ ಹೇಳಿಸಿದ ಸ್ಥಳಕ್ಕೇನೇ ಬಂದಿರುವಿರಿ ಯುವರ್ ಹೈನೆಸ್. ದಕ್ಷಿಣ ಭಾರತವೆಂಬುದು ಎಲ್ಲೆಲ್ಲೂ ಸುಪ್ರಸಿದ್ಧ ಗುಡಿ ಮಂದಿರಗಳು, ಆಶ್ರಮಗಳು ಮತ್ತು ಯಾತ್ರಾ ಸ್ಥಳಗಳಿಂದ ತುಂಬಿ ಹೋಗಿದೆ" ಎಂದವಳೇ ನಾನು ಕೇಳಿದೆ: "ತಾವು ಪಾಂಡಿಚೇರಿಯಲ್ಲಿರುವ ಶ್ರೀ ಅರವಿಂದಾಶ್ರಮ ನೋಡಿರುವಿರಾ?" ಅದಕ್ಕವರು "ಇಲ್ಲ; ಈವರೆಗೂ ನೋಡಿಲ್ಲ. ಅದು ಕೂಡಾ ಇಲ್ಲಿಗೆ ಸಮೀಪ; ಅಲ್ಲವೇನು? ನಾನವರ ಹೆಚ್ಚಿನ ಪುಸ್ತಕಗಳನ್ನು ಓದಿದ್ದೇನೆ. ಅವೆಲ್ಲವೂ ನಿಜಕ್ಕೂ ಗಾಢ ವಿಚಾರಪ್ರಚೋದಕವಿವೆ. ರಾಮಕೃಷ್ಣ ಪರಮಹಂಸರ ಬೋಧನೆಗಳನ್ನು ನಾನು ವಿಶೇಷ ಮೆಚ್ಚುತ್ತೇನೆ. ನೀವು ಕನಯ್ಯಾಲಾಲ್ ಮುನ್ಶಿಗಳ ಕೃತಿಗಳನ್ನು ಓದಿರುವಿರಾ? ಅವು ವಿಶೇಷಾರ್ಥಕವಿವೆ" ಎಂದರು ನಾನಿಲ್ಲಿ ಸಿಕ್ಕಿಬಿದ್ದಂತಾಗಿ "ನಾನವರ ಯಾವ ಕೃತಿಯನ್ನೂ ಈತನಕ ಓದಿಲ್ಲ" ಎಂದೆ. "ತವಗಾಗಿ ಇಲ್ಲಿ ಒಂದು ಪೂಜೆಯ ಕೋಣೆ ಆಗಬೇಕಾಗಿದೆ" ಎಂದು ನಾನು ಸೂಚಿಸಿದಾಗ ಆಕೆ ಹೇಳಿದರು "ಹೌದು; ನಿಜಕ್ಕೂ! ನಾನಿಲ್ಲಿ ಮಾಡಲಿಕ್ಕಿರುವ ಬದಲಾವಣೆಯೆಂದರೆ ಅದೊಂದೇ. ಅದು ಸದ್ಯದಲ್ಲೇ ತಯಾರಾಗುವದು". ಆ ಮೇಲೆ "ಅದರಲ್ಲಿ; ಶೃಂಗೇರಿ ಮಠ ಇರುವದೆಲ್ಲಿ? ಶ್ರೀ ಶಂಕರಾಚಾರ್ಯಗಳು ನಮ್ಮ ಗುರು. ನಾನು ಅವರನ್ನು ಕೇವಲ ಒಂದು ಬಾರಿ ನೋಡಿದ್ದೇನೆ. ಅವರ ದರ್ಶನವನ್ನು ಮತ್ತೊಮ್ಮೆ ಪಡೆಯಬೇಕೆಂಬ ಆಶೆಯಿದೆ" ಎಂದಾಕೆ ಹೇಳುವಾಗ ಅವರ ಕಣ್ಣುಗಳಲ್ಲಿ ಸಹಜಾನಂದ ನಲಿಯುತ್ತಿತ್ತು.

"ಇವೆಲ್ಲಾ ಸ್ಥಳಗಳಿಗೆ ಹೋಗಲು ತಮಗೆ ಸಮಯದೊರೆತೀತೆಂದು ನಾನು ಅಶಿಸುತ್ತೇನೆ" ಎಂದೆ ನಾನು ವಿಚಾರಾತ್ಮಕವಾಗಿ. "ಇದನ್ನು ಹಿಮಗಾಲದಲ್ಲಿ ಕೈಗೊಳ್ಳಲು ನನಗೆ ಸಾಧ್ಯವಾದೀತೆಂದು ನನ್ನ ಆಶೆ" ಆಕೆಯೆಂದರು.

"ನನಗಿಲ್ಲಿ ಹಿಮಗಾಲವೆಂಬುದಿಲ್ಲ. ಆಗ ಇಲ್ಲಿ ಮಳೆ ಗಾಲ"-ನಾನು ಜ್ಞಾಪಕ ಕೊಟ್ಟೆ. "ಓ! ನನಗೆ ಮರೆತೇ ಹೋಗಿತ್ತು. ಅದು ಪ್ರಾಂತ. ಈಗ ಭಾವನಗರಕ್ಕಿಂತ ಇಲ್ಲಿ ಸೆಖೆ ಹೆಚ್ಚಿಗೆ. ಅದರಿ ನನಗೆ ಇದರ ಅನುಭವವಿದೆ. ಆಗಲಿ; ಮಳೆಗಾಲಾರಂಭಿಸುವ ಮೊದಲೇ ತಿರುಗಾಡಿ ಬಂದಾರಾಯಿತೆಂದು ನನ್ನ ನಿರೀಕ್ಷೆ" ಎಂದು ಕೊಂಡರಾಕೆ. ಈ ಮಾತು ನನಗೆ ಹೇಳಿದುದಕ್ಕಿಂತ ಹೆಚ್ಚಾಗಿ ಅವರು ತನಗೆ ತಾನೇ ಗೊಣಗಿಕೊಂಡಂತಿತ್ತು. ನನಗನ್ನಿಸಿತು: ನಿಜಕ್ಕೂ ಭಾವುಕತೆ, ದೈವಿಕತೆ, ನಿಷ್ಕೆಯನ್ನೊಳಗೊಂಡ-ಭಾರತದಲ್ಲಿ ಅನಾದಿಕಾಲದಿಂದಲೂ ಇದ್ದ ಆ ಸಂಪ್ರದಾಯ ಮತ್ತು ಸಂಸ್ಕಾರ ಬದ್ಧವಾದ-ಮೇಲ್ಮಟ್ಟದ ಭಾರತ ಮಹಿಳೆಯೆಂದರೆ ಇದೀಗ! ಆ ವಿಶಿಷ್ಟ ಪರ್ಜಿಯ ಪುರಾತನ ಕಾಲದ ರಜಪೂತ ರಾಣಿಯೆಂದರೆ ಇವಳೇಗ!

ಆಪಲೇ ಬಿಳಿ ಪೋಷಾಕಿನ ಎರಡು ಹೆಣ್ಮಿಗುಗಳು ಕೋಣೆಯೊಳಗೋಡಿ ಬಂದುನು. ಒಬ್ಬಳು ಹೆಂಸಾ; ಮತ್ತೊಬ್ಬಳು ಧಿಲಾರ್. ಮಹಾರಾಣಿಯ ಹಿರಿಯ ಹೆಣ್ಮಾಕ್ಕಳಿವು, ಎಂದು ಅವುಗಳ ಪರಿಚಯವು ನನಗೆ ಸಿಕ್ಕಿತು. ತುಸು ಕಪ್ಪು ಬಣ್ಣದ, ಆದರೆ ಅತ್ಯಂತ ಚುರುಕಿನ ಹೆಂಸನಿಗೆ ನರ್ತನದಲ್ಲಿ ಗಾಢಾಸಕ್ತಿಯಿದೆಯೆಂದು ಕೇಳಿ ತಿಳಿದೆ. ಚಿಕ್ಕವಳು ಶುಭ್ರ ವರ್ಣ, ಪುಷ್ಟಕಾಯದವಳಾದ್ದು ವಿಶೇಷ ಮೌನದವಳು ಮತ್ತು ನಾಚಿಕೆಯವಳು. ಇವರಿಗೆ ತಾನು ಮನೆಯಲ್ಲೇ ಶಿಕ್ಷಣ ಕೊಡುತ್ತಿದ್ದೇನೆಂದೂ ಗಣಿತದಲ್ಲಿ ಇವರಿಗೆ ಹೆಚ್ಚಿನ ಆಸಕ್ತಿಯಾದರೂ ತಾನು ಸ್ವತಃ ಸಂಸ್ಕೃತ ಮತ್ತು ಗುಜರಾತಿ ಗಳನ್ನು ಅವರಿಗೆ ಕಲಿಸುತಿದ್ದೇನೆಂದೂ ಮಹಾರಾಣಿ ಹೇಳಿದರು. "ತಾವು ಇವರೊಡನೆಯೇ ಬಹಳ ಸಮಯ ತೆಗೆಯುತ್ತೀರಾ?" ಎಂದು ನಾನು ವಿಚಾರಿಸಿದೆ. "ಹೌದು. ಹೀಗೆ ಮಾಡಲೊಲ್ಲದ ತಾಯಿ ಯಾರಿದ್ದಾಳೆ? ಈಗೇನೋ ನನಗೆ ಬಹಳ ಕೆಲಸಗಳಿರುವುದರಿಂದ ನನ್ನಾಕೆಯಿರುವಷ್ಟು ಸಮಯ ಇವರೊಂದಿಗಿರಲು ಆಗದಿರಬಹುದು. ಆದರೆ ಓರ್ವ ಭಾರತೀಯ ಮಹಿಳೆಗೆ ಎಲ್ಲಕ್ಕಿಂತ ಮೊದಲೆಂದರೆ ಅವಳ ಗಂಡ, ಅವಳ ಮಕ್ಕಳು, ಮತ್ತವಳ ಮನೆ; ಅವಳೆಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ ಹೀಗಲ್ಲವೇನು? ಕೊನೆಯ ಪಕ್ಷ ಅವರು ಹೀಗಿರಬೇಕು!" ಎಂದು ಆಕೆ ಒತ್ತಿ ಹೇಳಿದರು

"ಮತ್ತು ಅಡುಗೇ ಮನೆ ಕೂಡಾ" ನಾನು ವಿನೋದಕ್ಕಾಗಿ ಕೂಡಿಸಿ ಹೇಳಿದೆ. ಕೂಡಲೇ ಮಹಾರಾಣಿಯೆಂದರು. "ಹೌದು; ನಿಜಕ್ಕೂ. ಅಡುಗೆ ಮಾಡುವದರಲ್ಲೂ ನನಗೆ ಬಹಳ ಆಸಕ್ತಿಯಿದೆ. ಅದು ಸ್ವತಃ ಒಂದು ಕಲೆ; ಅಲ್ಲವೆನ್ನುವಿರಾ? ಹೆಂಸಳಿಗೆ ನಾನೀಗಲೇ ಅಡುಗೇ ಸಂಬಂಧದ ನೃತ್ಯಭಾವ ಪ್ರಕಾರಗಳನ್ನು ಕಲಿಸಲಾರಂಭಿಸಿದ್ದೇನೆ".

ಈ ಮಾತಿನಿಂದ ನಾನು ಅವಕ್ಕಾದೆ. "ನಾನು ಹೇಳಿದುದು ಕೇವಲ ವಿನೋದಕ್ಕಾಗಿ ಯುವರ್ ಹೈನೆಸ್. ತಪ್ಪುತಿದುಬಹಳ ವಿಶೇಷವಾದ ವರ್ತನೆ. ನವನಾಗರಿಕತೆಯಲ್ಲಿ ವಿಚಿತ್ರಮೀರಿ ಹೋಗಿರುವ ಆಧುನಿಕ ಮಹಿಳೆಯರನ್ನಿದು ಅಲೋಚನೆಗೀಡು ಮಾಡೀತೆಂದು ನಾನು ನಿರೀಕ್ಷಿಸುತ್ತೇನೆ. ತಾವು ಮನೆ ವಾರ್ತೆಯ ಕುರಿತು ಇನ್ನೂ ಅಸಕ್ತಿ ವಹಿಸುತ್ತೀರೆಂದು

ತುಂಬದ ಸಂಸ್ಕಾರದುತ್ತು ಸಂಪತ್ತು ತುಳುಕಾಡಿದಷ್ಟು ತುಂಬಿದುದು ತುಳುಕುವದಿಲ್ಲ. ನವನಾಗರಿಕತೆಯ ಮಿರುಗನ್ನಷ್ಟೇ ತಾಗಿಸಿಕೊಂಡ ಅರೆಪಕ್ವಬುದ್ಧಿಯ ಅಲ್ಪ ಸ್ವಾನಾಪನ್ನ ಆಧುನಿಕ ನುಹಿಳೆಯರು ಮದ್ರಾಸ್ ಗವರ್ನರರ ಸಹಧರ್ಮಿಣಿ —ಭಾವನಗರದ ರಜಪೂತರಾಣಿ—ಇವರಿಂದ ಕಲಿಯಬೇಕಾದ ಅಂಶಗಳಿವೆ ಅದಕ್ಕಾಗಿ 'The Mail' ನಲ್ಲಿ ಬಂದಿದ್ದ ಈ ಸಂಭಾಷಣೆಯನ್ನು ಇಲ್ಲಿ ಅನುವಾದಿಸಿ ಕೊಡಲಾಗಿದೆ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟ ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ | ವಸೂಲಿ ಅಥವಾ ಸಂಗ್ರಹ| ಇಲಾಖೆಯು,ನಮ್ಮ ಶಾಖೆಗಳಿರುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ. ಪೋಸಿಸಿದಂತಿರುವ ನಮ್ಮ ಶಾಖೆಗಳು ದಖ್ಖಣದ ಆರಬೆಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಅತ್ಯ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ—ಮಲಬಾರು ಜಿಲ್ಲೆಯ ತೆಂಗುಗಳ, ವೈವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ನಿರಾಕಿಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ಪಡಿಸಿಕೊಳ್ಳುವಲ್ಲಿ, ನಮ್ಮ ನಾಲ್ಕತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮವಿಶಿಷ್ಟ ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

The Canara Bank Limited.

ESTD: 1906

ಜನ ಜನವೂ ಓದತಕ್ಕ
ಜನತಾ ಸಾಹಿತ್ಯ!

ಮನೆ ಮನೆಯೂ ಇಂತಕ್ಕ
ಮನೋರಂಜನ ಸಾಹಿತ್ಯ!

ಸ್ವರಾಜ್ಯ ವಿಜಯದ ಕತೆಯನ್ನು ಎಲ್ಲರಿಗೂ ತಿಳಿಯುವಂತೆ

ಶ್ರೀ ಎಂ. ವಿ. ಹೆಗ್ಡೆಯವರು ಬರೆದ

ಸ್ವರಾಜ್ಯ ವಿಜಯ

ಅಟ್ಲಿ, ಕ್ರಿಪ್ಸ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜಿನ್ನಾ, ನೆಹರು, ವವೇಲ್, ಗಾಂಧಿ, ಅಜಾದ್, ರೈಪಲಾನಿ, ಜೈಪ್ರಕಾಶ್, ಮೌಂಟ್‌ಬ್ಯಾಟನ್ ಮೊದಲಾದವರೇ ಇದರ ಪಾತ್ರಧಾರ್ಗ.

ಓದಬಲ್ಲವರಿಂತೂ ಓದಿ ತಿಳಿಯತಕ್ಕ ಕತೆ.
ಓದಲಾರದವರೂ ಓದಿಸಿ ಕೇಳತಕ್ಕ ಕತೆ.

ಬೆಲೆ ಬರೇ 0 8 0

ಹತ್ತಾಣೆ ಸ್ಟ್ಯಾಂಪು ಕಳಿಸಿದರೆ 1 ಪ್ರತಿಯನ್ನು ಬುಕ್ ಪೋಸ್ಟ್ ಮಾಡಿ ಕಳಿಸಬಹುದು.

ಪ್ರತಿಗಳು **ನವಭಾರತ ಪುಸ್ತಕ ಭಂಡಾರ** ಉಡುಪಿ, ಅಥವಾ **ನವಯುಗ ಪ್ರೆಸ್**, ಉಡುಪಿ.

ಇಲ್ಲಿ ದೊರೆಯುತ್ತವೆ.

ಕೆಲಸ ಬಂದಾಗ ನೆನೆ, ಆದು ಇಲ್ಲಿ ಒಂದು 'ಫೇಶನ್' ಆಗಬಹುದೆಂದು ನನ್ನತಿಯಿದೆ" ಎಂದೆ. ಆವರು ಘಗುತ್ತಾ, "ಓ, ಬೇಡ! ಇಲ್ಲಿ ಯಾವುದಾದರೊಂದು 'ಫೇಶನ್'ನ ಮೇಲ್ಬಾಗ್ಗಿ ಹಾಕುವದು ನನಗೆ ಬೇಡವಾಗಿದೆ; ನಾನು ನನ್ನ ಅಭಿರುಚಿಗನ್ನ ಸ್ಟೈ ಹೇಳಿದೆ" ಎಂದರು.

ಅವರು ತನ್ನ ಬಯಾರ್ದ್ರ ಹೃದಯ, ಪರಳ ಮೋಹಕತೆಗಳಿಂದ ನನ್ನಲ್ಲಿ ಸಲುಗೆಯನ್ನುಹುಟ್ಟಿಸಿದ್ದರು; ನಾನು ಸ್ವಗೃಹದ ಲ್ಲಿಯೇ ಇದ್ದೇನೆಂಬ ಭಾವನೆಯನ್ನು ನನ್ನಲ್ಲಿ ಮೂಳೆಯಿಸಿದರು. ಬಹ್ಮಂಶ ರಾಜಮನೆತನದವರಲ್ಲೆಲ್ಲಾ ಇದ್ದೀ ಇರುವ ಅದೊಡ್ಡಿಸ್ಸನ ಮತ್ತು ಫೆನ ರೇಂಕಾರವಾವುದೂ ಅವರಲ್ಲಿರಲಿಲ್ಲ. ತಾನು ಅನುಗ್ರಹದಾತೆ ಇಲ್ಲವೇ ಆಶ್ರಯದಾತೆಯೆಂಬ ಲವಮಾತ್ರ ಭಾವನೆಯೂ ಇಲ್ಲದೆ, ನಿಷ್ಕಪಟವಂತರಿಗೆ ಮತ್ತು ಸಂಸಂಸ್ಕೃತರಿಗೆ ಮಾತ್ರ ಸಾಧ್ಯವಾಗುವ ರೀತಿಯಲ್ಲಿ ಸಸ್ನೇಹ್ರಿ ಮತ್ತು ಸಹೃದಯದಿಂದ ಓರ್ವ ಸ್ತ್ರೀ ಮತ್ತೋರ್ವ ಸ್ತ್ರೀಯೊಂದಿಗೆ ಮಾತಾಡುವಂತೆಯೇ ಅವರು ನನ್ನೊಡನೆ ಸಂಭಾಷಿಸಿದ್ದರು. ಅವರೊಡನಿರುವಾಗ, ನಾನಿದುವರೆಗೂ ಕಾಣದಿದ್ದ, ಆದರೆ ಬಹಳವಾಗಿ ಕೇಳಿದ್ದ ನಮ್ಮ ಕುಟುಂಬದೋರ್ವ ಹಳೇ ಸ್ನೇಹಿತೆಯೊಂದಿಗಿದ್ದೇನೆ ಎಂದು ನನಗೆ ಭಾಸವಾಗುತಿತ್ತು. ಯಾರೇ ಆದರೂ ತಂತಮ್ಮ ತೊಂದರೆಗಳನ್ನು ಇವರ ಮುಂದಿಡಬಹುದು. ಇವರ ಸಹಾನುಭೂತಿ ಮತ್ತು ಸಹಾಯ ಗಳಸಬಹುದು ಎಂದು ನನಗೆ ತೋರಿತು. ನನ್ನಲ್ಲಿ ನಂಬಿಕೆ ಮೂಳೆಯಿತು.

"ತಾಪ್ರಿ ಸಾಂಪ್ರದಾಯಿಕ ರೀವಿಗಳನ್ನೆಲ್ಲ ಬಿಟ್ಟವರು; ಬಹಳೇ ಸಲುಗೆಯವರು ಮತ್ತು ಸ್ಪಷ್ಟವಾದಿಗಳು ಯುವರ್ ಹೈನೆಸ್. ನಾನು ತವ್ಮಿಂದ ಇಂತಹ ಮೈತ್ರೀ ಸ್ವಾಗತವನ್ನು ನಿರೀಕ್ಷಿಸಿರಲಿಲ್ಲ" ಎಂದು ನಾನು ತುಸು ಲಜ್ಜಿಸುತ್ತಾ ಹೇಳಿದೆ. ಅವರು ಅರ್ಥ ಗ್ರಹಿಸಿಕೊಂಡು ನಕ್ಕರು. ಆ ಮೇಲೆ ಹೇಳಿದರು "ನಾವು ನಮ್ಮ ಸಂಸ್ಥಾನದಲ್ಲಿ ಕೂಡಾ ಥಂಡಾ ಆಗಿ ದೂರ ಕುಳಿತು ಕೊಂಡದ್ದಿಲ್ಲ. ಜನತೆಯೊಂದಿಗೆ ನಾವು ಅತ್ಯಂತ ಮೈತ್ರಿಯಿಂದಿದ್ದೆವು. ನಮಗೆ ಅವರ ಸೇವೆ ಮಾಡಬೇಕೆಂಬ ಆದೂ ಯಥಾರ್ಥವಾಗಿ ಮಾಡಬೇಕೆಂಬ ಬಯಕೆಯಿತ್ತು. ಈಗ ನಿಮ್ಮೆಲ್ಲರ ಸೇವೆ ಮಾಡಬೇಕೆಂದು ಹಿಸ್ ಹೈನೆಸರೂ ನಾನೂ ವಿಶೇಷಾತುರದಿಂದಿದ್ದೇವೆ ಎಂದು ನಾನು ಹೇಳಿದರೆ ನೀವು ನಂಬುತ್ತೀರೆಂದು ಆತಿಸುತ್ತೇನೆ. ಸಾಧ್ಯವಿದ್ದ ಎಲ್ಲಾ ಹಾದಿಗಳಿಂದಲೂ ನಿಮಗೆ ಸಹಾಯವಾಗಲು ನಾವು ನಮ್ಮ ಶಕ್ಯಯಿದ್ದಷ್ಟೆಲ್ಲಾ ಮಾಡುವೆವು ಎಂದು ನಮಗೆ ನಿನ್ನ ಆಶ್ವಾಸನೆಯಿದೆ" ಎಂದರು. "ನಿಮ್ಮಿಬ್ಬರನ್ನು ಪ್ರಾಂತ್ಯದ ಸ್ತಮುಖಾಧಿಪತಿಗಳಾಗಿ ಪಡೆದ ಮಹ್ಯಾಸು ವಿಶೇಷ ಭಾಗ್ಯ ಶಾಲಿ" ಎಂದು ನಾನು ಹೇಳಿದೆ. "ಇದು ನಿಮ್ಮ ವಿಶೇಷ ಕರುಣೆಯ ಮಾತು; ನಿಮ್ಮನ್ನಿರೀಕ್ಷಿಸಿನುಗುಣವಾದ ಯೋಗ್ಯತೆಯು ನಮ್ಮಲ್ಲಿ ತೋರಿಬಾರಲಿ ಎಂದಾತಿಗುತ್ತೇನೆ." ಎನ್ನುವಾಗ ಅವರ ಸ್ವರದಲ್ಲಿ ಅವೇಶದ ನಡುಕವಿತ್ತು. ತನ್ನೀ ಹೊಸ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಅವರು ಅತಿ ಹೆಚ್ಚಿನ ಗಭೀರತೆಯಿಂದ ಗ್ರಹಿಸಿರುವುದನ್ನು ನಾನು ನೋಡಿದೆ. ಆಮೇಲೆ ನಾವು ಮೇಲ್ಮಟ್ಟದ ರಾಜಕೀಯವನ್ನು ಎತ್ತಿ ಕೊಂಡೆವು. "ಕಾಡು ಬೇಟೆಗಳಲ್ಲಿ ತಾವು ತಮ್ಮ ಗಂಡನೊಂದಿಗೆ ಎಂದಾದರೂ ಹೋದುದಿದೆಯೇ?" ಎಂದು ನಾನು ಕೇಳಿದೆ. "ಕೇವಲ ಅವರ ಸಹವಾಸ ಸುಖಕ್ಕಾಗಿ ಕೆಲವೊಮ್ಮೆ ನಾನು ಹೋದುದಿದೆ. ಆದರೆ ಪ್ರಾಣಿಹತ್ಯೆಯಾಗುವದನ್ನು ನೋಡಲು ನನ್ನಿಂದ ಆಗುತ್ತಿರಲಿಲ್ಲ. ಈಗೀಗ ಹೆಚ್ಚಾಗಿ ನನ್ನವರೂ ಅದಕ್ಕೆ ಹೋಗುವದಿಲ್ಲ. ಸತ್ಯಸ್ಥಿತಿಯೆಂದರೆ ಕಳದ ನಾಲ್ಕು ವರುಷಗಳಿಂದ ನಾವು ಮಾಂಸ ತಿನ್ನುವದನ್ನೇ ಬಿಟ್ಟಿದ್ದೇವೆ". ಎಂದವರು ಸಂಗತಿ ನಿರೂಪಿಸಿದರು. "ಓ, ಹಾದೇ! ಹಿಸ್ ಹೈನೆಸರು ಪಾನ ನಿಷೇಧದ ಪ್ರಬಲ ಸಮರ್ಥರೆಂದೂ ನಾನು ಕೇಳಿದ್ದೇನೆ" ಎಂದು ನಾನೆಂದಾಗ, ಮಹಾರಾಣಿ ನುಡಿದರು "ನಾವು ಕಳದ 25 ವರುಷಗಳಿಂದಲೇ, ನಮ್ಮ ಮಾವನವರ ಕಾಲದಿಂದಲೂ, ನಮ್ಮ ಸಂಸ್ಥಾನದಲ್ಲಿ ಪಾನ ನಿಷೇಧವನ್ನು ಜಾರಿಯಲ್ಲಿಟ್ಟಿದ್ದೇವೆ. ಅಲ್ಲಿ ಇದು ಬಹಳ ಯಶಸ್ವಿಯಾಗಿದೆ"

"ತಾವು ಗಾಂಧಿಜೀಯನ್ನು ನೋಡಿರುವಿರಾ?" ನಾನು ಕೇಳಿದೆ.

"ಹೌದು; ನಾನು ಮದುವೆಯಾಗುವ ಮೊದಲು ಒಂದು ಸಲ ನೋಡಿದ್ದೆ. ಅವರು ಕಾಥಿಯಾವಾರದವರು, ನೋಡಿ!" ಎನ್ನುವಾಗ ಮಹಾರಾಣಿಯ ಕಣ್ಣುಗಳು ಹೆಗ್ಗಳಿಕೆಯ ಕಿರಣ ಸೂಸಿದುವು. "ಅವರು ಹೊರಟು ಹೋದುದು ಅತ್ಯಂತ ವ್ಯಸನದ ಸಂಗತಿ. ಅವರನ್ನು ಕಳಕೊಂಡ ನಾವು ಭಾಗ್ಯಹೀನರು" ಎಂದ ರಾಕೆ ಕುಗ್ಗಿದ ಸ್ವರದಿಂದ.

ಆ ಪ್ರಶಾಂತವಾದ ಗಾಳಿಭರಿತ ಕೋಣೆಯಲ್ಲಿ ನಾವು ಬಹುಹೊತ್ತಾಗಿ ಒಂದು ತಾಸು ಸಂಭಾಷಿಸಿದೆವು. ಅವರು ನನ್ನ ಚಟುವಟಿಕೆಗಳ ಕುರಿತು ಕುಶಲ ಪ್ರಶ್ನೆಗಳನ್ನು ಹಾಕಿದರು. ನಾನು ಹೊರಡಲೆದ್ದಾಗ ಅವರೂ ಎದ್ದು ನಿಂತು, ಹಾರ್ದಿಕ ನಗೆಯೊಂದಿಗೆ 'ನಮಸ್ತೆ' ಕೊಟ್ಟರು. "ಮದ್ರಾಸಿನ ಮಹಿಳೆಯರಿಗೆ ತಮ್ಮ ಸಂದೇಶ ಯುವರ್ ಹೈನೆಸ್?" ಎಂದು ಕೇಳಿದೆ. ಆವರದನ್ನೂ ಕೂಡಲೇ ಕೊಟ್ಟರು:—"ನಾನು ನಿಮ್ಮೆಲ್ಲರನ್ನೂ, ನಿಮ್ಮ ಪದ್ಧತಿ, ಕ್ರಮ ನಿಯಮ ಮತ್ತು ಚಟುವಟಿಕೆಗಳನ್ನು ಕಲಿತುಕೊಳ್ಳುವ ಆತುರದಿಂದಿದ್ದೇನೆ. ನಿಮ್ಮ ಹಿತ ಸಂಬಂಧಗಳ ಜತನ, ಸಂರಕ್ಷಣೆಗಳಲ್ಲಿ ನನ್ನಿಂದ ಸಾಧ್ಯವಿದ್ದಷ್ಟೂ ನಿಮ್ಮ ಸೇವೆ ಸಲ್ಲಿಸಬೇಕೆಂದೂ ನಿಮ್ಮ ಪೈಕಿ ನಾನೂ ಒಬ್ಬಾಕೆಯಾಗಿರಬೇಕೆಂದೂ ಬಯಸುತ್ತೇನೆ. ಈ ವಿಷ್ಟಿಗೆ ಹಿಸ್ ಹೈನೆಸರೂ ಸಂಪೂರ್ಣವಾಗಿ ನನ್ನೊಂದಿಗಿದ್ದಾರೆ"

"ತಮಗೆ ಧನ್ಯವಾದಗಳು" ಎಂದು ನಾನು ಹೆಜ್ಜೆ ಮುಂಚಿಟ್ಟೆ. ಅವರು ಅವಸರಸರದಿಂದ ಹೇಳಿದರು: 'ನಾನು ಯಾವುದೇ ಒಂದು ಸಂಪ್ರದಾಯಾಚರಣೆ ಮಾಡಿದೆನೆಂದು ದಯವಿಟ್ಟು ಯೋಚಿಸಿಕೊಳ್ಳಬೇಡಿ. ನಾನು ಸ್ವಭಾವತಃ ಶಾಂತ ಪ್ರಕೃತಿಯವಳು. ಆದರೆ ನಿಮ್ಮೆಲ್ಲರೊಂದಿಗೆ ಸ್ನೇಹಾಚಾರದಿಂದಿರಲು ಬಯಸುತ್ತೇನೆ; ಅಷ್ಟೇ. ನಿಮ್ಮನ್ನು ಇನ್ನೊಮ್ಮೆ ಕಾಣುವೆನೆಂದು ಆತಿಸುತ್ತೇನೆ".

ಹೊಸ ಪುಸ್ತಕ

ಜಮೀನ್ದಾರ

ಧನಾಢ್ಯರ ದುರಹಂಕಾರ, ದುರ್ವ್ಯಯ
ದುಸ್ಸಾಧನೆ ಮೊದಲಾದುವನ್ನು ಚಿತ್ರಿಸುವ

ಬಡವರ ಭೀಕರ ಪರಿಸ್ಥಿತಿಯ ಕನಿಕರಾವಹ್ಹೆಯನ್ನು ಹೃದ್ಯಾವಳವಾಗಿ ಪ್ರತಿಬಿಂಬಿಸುವ

ನವೀನ ಸಾಮಾಜಿಕ ಕಾದಂಬರಿ

ಜಮೀನ್ದಾರ

ಧನಿಕರೆನ್ನದೆ, ಬಡವರೆನ್ನದೆ ಪ್ರತಿಯೊಬ್ಬರೂ ಓದತಕ್ಕ ಜನತಾ ಸಾಹಿತ್ಯ

164 ಪುಟಗಳು .... ಬೆಲೆ ರೂ **1 8 0**

ಪ್ರತಿಗಳು ಸಿಗುವ ಸ್ಥಳಗಳು:—1. ನವಭಾರತ ಪುಸ್ತಕ ಭಂಡಾರ, ಉಡುಪಿ. 2. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು. 3. ಎಂ. ಎಸ್ ಮಯ್ಯ ಪುತ್ತೂರು. 4. ಕಿರಿಯರ ಪ್ರಪಂಚ, ಉಡುಪಿ.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಪಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್., ಉಡುಪಿ

ಇವರ ಶಾಖಾ ಏಜೆನ್ಸಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ಮುಂದುವರಿದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನವ್ಯ ನಮ್ಮ ಸೇವೆಯನ್ನು ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ಏಜೆಂಟರಾಗಲೀ, ಪ್ರತಿನಿಧಿಗಳಾಗಲೀ ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಋತುಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನು ಉಪಯೋಗಿಸಿದರೆ ಹದಿಹರೆಯದ ಋತುಸ್ರಾವವಾಗುವುದು ಜತೋಟಿಗೆ ಬರುವುದು, ಈ ವಿಷಯ ಸೇವನೆಯಿಂದ ತೀವ್ರ ಗುಣಹೊಂದಲಹುದು, ಯಾವ ಬಾಧೆಗಳೂ ಇಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ.8/- [ವಿ. ಪಿ. ಪಸ್ಟೇರಡಾತ ಪ್ರತ್ಯೇಕ]

Mrs. D. DEVEE, P. DS. (N. J.)
Tollygunge CALCUTTA.

ಸ್ಥಾನಿಕಸ್ಥರು: ಶಹಾಕಂಪನಿ, ಮಂಗಳೂರು

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S. no. 212/1948-

ಕೆ. ನರಸಿಂಪ ಶರ್ಮ—ವಾದಿ

ಅಕ್ಕು ಹೆಂಗ್ಸು ಕೂಡಾ—ಪ್ರತಿವಾದಿರು.

2ನೇ ಪ್ರತಿವಾದಿ-ಕೆ. ಸುಬ್ರಾಯ ಶರ್ಮ, ವ್ಯಾಸಾಂಬಯ್ಯನವರ ಮಗ, ಮೈಸೂರು ಸೈಜ್, ಬೆಂಗಳೂರು ಸಿಟಿ I-R-R-S-B-C Bengalore. 2- —ಇವರಿಗೆ.

1ನೇ ಪ್ರತಿವಾದಿಯು, ವಾದಿಯು ವೆ ನಿಂಮ ತಂದೆ ಮೃತ ವ್ಯಾಸಾಂಬಯ್ಯನಿಗೆ ರುಪಾಯ 350/ಕ್ಕೆ ತಾ 22-4-1932ರಲ್ಲು ರಜಿಸ್ಟ್ರಿಸಿತಿ ಬರಕೊಟ್ಟ ತೋದವು ದಸ್ತಾವೇಜಿನ ವಾಬ್ತು 1938 ಮುಸ್ಸಿ ಎಪ್ರಿಲು ಲಾಗ್ಯಾತಿನ 1948ನೇ ಮುಸ್ಸಿ ಎಪ್ರಿಲ್ ವರೇಗಿನ ಬಡ್ಡಿ ವಸೂಲು ಬಗ್ಗೆ ವಾದಿಯು ಮೇಲ್ಕಂಡ ಸಾವಾ ದಾಕ್ಕು ಮಾಡಿ ಆದು ನಿಂಮ ಹಾಜ್ರಾತಿ ಬಗ್ಗೆ ತಾ 20-10-48ಕ್ಕೆ ವ್ಯಾದಿಯಾಗಿರುತ್ತದೆ. ಸದ್ರಿ ಸಣಪಂನು ನಾದಿಗೆ ಕೂಡಿಸುವಲ್ಲಿ ನಿಮಗೇನಾದೂ ಆಕ್ಷೇಪವಿದ್ದಲ್ಲಿ ಮೇಲ್ಕಂಡ ಸಂಖ್ಯೆದ ಸದ್ರಿ ವ್ಯಾಜ ದಿನ ಬೆಳಗ್ಗೆ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಉತ್ತರವನ್ನಿಕೊಳ್ಳತಕ್ಕದ್ದೆಂತಲೂ ತಪ್ಪಿದರೆ ನಿಂಮನ್ನು ಸಿನ್ಬಿ ಮಾಡಿ ಸದ್ರಿ ದಾವೆಯು ಯತ್ಕಿಂಚಿತ್ತಾಗಿಯಾಗುವುದೇತಲೂ ಕೋರ್ಟು ಸ್ಯಂ ಪ್ರಕಾರ ನಿಮಗೆ ಈ ಸೂಚನೆ ತಿಳಿಸೋಣವಾಗ್ತದೆ.

N V. Kolathaya.
Vakil for Petitioner.
Futtur, Date 27-9-48.

ಸಂ. ರಾ. ಸಂಘದ ವಾದ ಪ್ರತಿವಾದ

ಕೆಳದ ವಾರದ ಜಾಗತಿಕ ಹಾಗೂ ಭಾರತೀಯ ರಂಗಗಳಲ್ಲಿ ಮಾತಿನ ಮಲ್ಲ ಯುದ್ಧಗಳೇ ನಡೆದಿರುವುದು ಕಂಡು ಬಂದಿದೆ. ಈ ವಾದ ವಿವಾದಗಳಾದರೋ ತ್ರಿಕಾಲ ಪ್ರಾಮುಖ್ಯತೆಯುಳ್ಳವುಗಳಿದ್ದುವು; ಪ್ರಪಂಚದಲ್ಲಿ ನಡೆದಿರುವ ಅಭಿಪ್ರಾಯ ಮಂಥನಗಳ ವಿವಿಧ ರೀತಿಯ ಸ್ವರ ಗಳಾಗಿದ್ದುವು. ಅವುಗಳಲ್ಲಿ ಹೈದರಾಬಾದ್ ವಿಮರ್ಶೆ-ವೆಲಸ್ಟೈನ್ ಕಾಳಗ-ಬರ್ಲಿನ್ ಘರ್ಷಣೆ-ದಕ್ಷಿಣಾಫ್ರಿಕದ ಹಿಂದೀಯರ ಸಂಕಷ್ಟ-ಶಸ್ತ್ರ ನಿರ್ಬಂಧದ ಪ್ರಶ್ನೆ-ಮುಂತಾದುವುಗಳಿಗೆ ಸಂಬಂಧಿಸಿದ ವಿವಾದಗಳು ಪ್ರಾಮುಖ್ಯದ್ದಿವೆ. ಇವೆಲ್ಲ ನ್ನೂ ಸಂಯುಕ್ತ ರಾಷ್ಟ್ರ ಸಂಘವನ್ನು ಮುತ್ತಿಗೆ ಹಾಕಿವೆ. ಲೋಕದ ಅ ಶಾಂ ತಿ ನಿವಾರಣೆಗಾಗಿ ಜನಿಸಿದ್ದ ಈ ಲೋಕ ಸಂಘವನ್ನೇ ಈಗ ಆ ಅಶಾಂತಿ ಸಹಸ್ರಗಳು ಅವರಿಸಿ ಕೊಂಡಂತಿದೆ! ಬೆಂಗೋಲ ಬಲವಿಲ್ಲದ ರಾಷ್ಟ್ರ ಸಂಘವನ್ನು ಇವು ಒಮ್ಮೆಗೇ ಮುರಿದು ಹಾಕಲಾರವಾದರೂ ಅಲ್ಲಿಯೇ ಕಾಗ್ಗಿಸಿ ಕಾಲಕ್ರಮೇಣ ನೆಲ ಹಿಡಿಸದೆ ಬಿಡಲಾರವು!

ತ್ರಿರಾಷ್ಟ್ರೀಯ ಘರ್ಷಣೆ

ಪ್ಯಾರಿಸಿನಲ್ಲಿ ನಡೆದಿರುವ ಸಂಯುಕ್ತ ರಾಷ್ಟ್ರ ಸಂಘದ ಮಹಾಧಿವೇಶನ ನುತ್ತದರ ಭದ್ರತಾ ಕೌನ್ಸಿಲ್ ಸಭಾ ಕಾರ್ಯಕ್ರಮಗಳು ವಿಶೇಷ ಗಮನಾರ್ಹ ವಿವೆ. ಅಲ್ಲಿಯ ವಿವಾದಗಳನ್ನು ಮುಖ್ಯ ಮೂರು ವಿಭಾಗ ಮಾಡಬಹುದು. ರಶ್ಯ ಮತ್ತು ಆಂಗ್ಲೋ-ಅಮೇರಿಕಾನರೊಳಗಿನ ಘರ್ಷಣೆ-ಭಾರತ ಮತ್ತು ಪಾಕಿಸ್ತಾನ ಗಳೊಳಗಿನ ವಿವಾದ-ದಕ್ಷಿಣಾಫ್ರಿಕ ಹಾಗೂ ಭಾರತ ವಿವಾದಗಳಂತಹ ಇತರ ಜಗಳಗಳು.

ಅಮೆರಿಕಾಂಗ್ಲರು ಮತ್ತು ಸೋವಿಯೆ ಟರೊಳಗಿನ ವಾದ ವೈಷಮ್ಯವು ಈ ಬಾರಿಯ ಪ್ಯಾರಿಸ್ ಕೂಟಗಳಲ್ಲಿ ನಿಜಕ್ಕೂ ಪರಮಾವಧಿಗೆ ಮುಟ್ಟಿದೆ. ಹಿಂದಿನ ವಾರ ಅಮೇರಿಕದ ಗೃಹ ಕಾರ್ಯದರ್ಶಿ ಜೋರ್ಜ್ ಮಾರ್ಶಲರು ಸಂಯುಕ್ತ ರಾಷ್ಟ್ರ ಸಂಘದ ಜಾಹೀರು ಸಭೆಯಲ್ಲಿ ರಶ್ಯವನ್ನು ಅಪ್ರತ್ಯಕ್ಷವಾಗಿ ಟೀಕಿಸುವ ಮೂಲಕ ತುಸು ಜಾಗರೂಕತೆಯಿಂದ ಮಾತಾಡಿದ್ದರು. ರಶ್ಯದ ಪ್ರತಿನಿಧಿ ಆಂಡ್ರೆಲ್ ವಿಶಿನ್ಸ್ಕಿಯವರು ಆಂಗ್ಲೋ-ಅಮೆರಿಕಾನರನ್ನು ಪ್ರತ್ಯಕ್ಷವಾಗಿ ಆರೋಪಿಸಿ ಉಗ್ರ ಭಾಷಣ ಮಾಡಿದ್ದರು. ಈ ವಾದ ಸರಣಿಗೆ ಬ್ರಿಟಿಷ್ ವಿದೇಶ ಮಂತ್ರಿ ಶ್ರಿ. ಬೆವಿನರು ಕೂಡಿಸಿದ ಗೊಣಸಂತೂ ಎಲ್ಲರನ್ನು ದೊಡ್ಡದು ಮತ್ತು ಮೊರಗಿನ ದಿದ್ದಿತು. ಆಂಗ್ಲೋ ಅಮೆರಿಕನ್ ಪಕ್ಷವು ರಶ್ಯದ ಮೇಲೆ ಸುಳ್ಳು ಅಪಪ್ರಚಾರಗಳನ್ನು ಮಾಡುತ್ತಿರುವದೆಂದೂ, ತಮ್ಮ ಮೇಲೆ ಯುದ್ಧದ ಮನೋವೃತ್ತಿಯನ್ನು ಲೋಕದಲ್ಲೆಲ್ಲಾ ಹಬ್ಬಿಸಿರುವದೆಂದೂ ಹೇಳಿದ ವಿಶಿನ್ಸ್ಕಿ ವಾದವನ್ನು 'ಬುದ್ಧಿಗೆಟ್ಟ ಮಾತು'ಎಂದು ಬೆವಿನರು ಛೀಕರಿಸಿದರು. 'ಲೋಕದ ಮೇಲೆ ಅಟಂ ಯುದ್ಧ ಜ್ವಾಲೆ ಸ್ಫೋಟಗೊಳ್ಳುತ್ತದಾದರೆ, ಅದರ ಜವಾಬ್ದಾರಿಯು ಸಂಪೂರ್ಣವಾಗಿ ರಶ್ಯವೊಂದರ ಮೇಲೆಯೇ" ಎಂದು ಹೇಳಿ, ರಶ್ಯವು ತನ್ನ ವಿಶ್ವೇಷಾಧಿಕಾರವನ್ನು ಉಪಯೋಗಿಸಿದ ರೀತಿಗಳನ್ನು ಖಂಡಿಸಿ, ನಿಶ್ಶಸ್ತ್ರೀಕರಣದ ಅದರ ವಾದಗಳು ವಿಶ್ವಸಾರ್ಹವಲ್ಲವೆಂದು ಟೀಕಿಸಿದರು. "ಶಾಂತಿ ಸಾಧನೋಪಕರಣವಾದ ಸಂಯುಕ್ತ ರಾಷ್ಟ್ರ ಸಂಘವು ತಿರುಕನ ಸ್ವಪ್ನದಲ್ಲಿರುವದಕ್ಕಿಂತ, ಕನ್ನ ಪಾಲಿನ ಸಂಕಷ್ಟಗಳನ್ನು ಈಗಲೇ ಅನುಭವಿಸುವದಂತ್ತಮ. ನಮ್ಮಾತೆಯಿದ್ದಂತೆ ಈ ಸಂಘವು ಜಗತ್ತನ್ನು ಕಾರ್ಯರಂಗವಾಗಿ ಮಾಡಿಕೊಳ್ಳಲಾಗದಿದ್ದರೆ ವಿಶಿಷ್ಟ ಕ್ಷೇತ್ರವನ್ನಷ್ಟೇ ಚುನಾಯಿಸಿಕೊಂಡು ಮಿಕ್ಕುವರನ್ನು ಬಿಟ್ಟೇ ಮುಂದೊತ್ತುವದು ವಾಸಿ" ಎಂದು ರಶ್ಯಕ್ಕೆ ಬಹಿಷ್ಕಾರದ ಹೆದರಿಕೆಯನ್ನೂ ಹಾಕಿದರು. ಸೋವಿಯೆಟ್ ಪಕ್ಷವನ್ನೊಳಿದ ವಾಶ್ಚಾತ್ಯ ರಾಷ್ಟ್ರೀಯರೆಲ್ಲರೂ ಬೆವಿನರ ಈ ಖಂಡ ತುಂಡ ಮಾತುಗಳಿಗೆ ವಿಶೇಷ ಮೆಚ್ಚಿ ಹೋಗಿದ್ದಾರೆ. ಇವರನ್ನೆನುಸರಿಸಿ ಬೆಲ್ಜಿಯಂದ ವಿದೇಶ ಮಂತ್ರಿಗಳೂ ಸೋವಿಯೆಟ್ ಪಕ್ಷವನ್ನು ಕಠೋರವಾಗಿ ಟೀಕಿಸಿದ್ದರು. ಇವರಿಬ್ಬರಿಗುತ್ತರವು ಆಸ್ಟ್ರೇ ಉಗ್ರ ಮಾತುಗಳೊಡನೆ ರಶ್ಯನ್ ಹಿಂಬಾಲಕರಾದ ಉಕ್ರೈನ್ ಮತ್ತು ಯುಗೊಸ್ಲೇವಿಯದ ವಿದೇಶ ಮಂತ್ರಿಗಳಿಂದ ಬಂದಿದೆ. ಆಟಂಕಕ್ಕೆಯು ನಿಯಂತ್ರಣ ಮತ್ತು ನಂಜ ಮಹಾ ರಾಷ್ಟ್ರಗಳು 1/3 ರಷ್ಟು ಶಸ್ತ್ರಾಸ್ತ್ರ ತಗ್ಗಿಸಬೇಕೆಂಬ ಸೂಚನೆ, ಇತ್ಯಾದಿಗಳ ಚರ್ಚೆಯೀಗ, ಸಂ. ರಾಷ್ಟ್ರ ಸಂಘದ "ರಾಜಕೀಯ ಸಮಿತಿ"ಯಲ್ಲಿ ನಡೆದಿದೆ.

ಬರ್ಲಿನಿನಲ್ಲಿ ರಶ್ಯವು ಅಂತರಾಷ್ಟ್ರೀಯ ಶಾಂತಿ ಮತ್ತು ಭದ್ರತೆಗಪಾಯಕರವಾದ ಪರಿಸ್ಥಿತಿಯನ್ನು ನಿರ್ಮಿಸಿದೆ, ಎಂದು ಆರೋಪಿಸಿ, ಈ ವಿವಾದವನ್ನು ಭದ್ರತಾ ಕೌನ್ಸಿಲು ತೀರ್ಮಾನಿಸಬೇಕೆಂದು ಅಮೇರಿಕ, ಇಂಗ್ಲಿಂಡು, ಫ್ರಾನ್ಸುಗಳ ಸೂಚನೆ ಹೋಗಿದೆ. ಭದ್ರತಾ ಕೌನ್ಸಿಲಿಗೆ ಈ ಅಧಿಕಾರವಿಲ್ಲವೆಂದು ರಶ್ಯದ ಆಕ್ಷೇಪವಿದೆ.

ಇತರ ವಿವಾದಗಳು

ಸಂಯುಕ್ತ ರಾಷ್ಟ್ರ ಸಂಘದ ಮಹಾ ಸಭೆಯ ಕಾರ್ಯಕ್ರಮಗಳಲ್ಲೊಂದಾದ ದಕ್ಷಿಣಾಫ್ರಿಕದಲ್ಲಿ ಭಾರತೀಯರನ್ನು ಭೇದ ದೃಷ್ಟಿಯಿಂದ ಕಾಣುವ ಪ್ರಶ್ನೆಯನ್ನು ಪರ್ಯಾಲೋಚಿಸುವ ಅಧಿಕಾರವೇ ಆ ಸಂಘಕ್ಕಿಲ್ಲವೆಂದೂ ಅದು ಕೇವಲ ದಕ್ಷಿಣಾಫ್ರಿಕದ ಮನೇವಾರ್ತೆಯ ವಿಷಯವೆಂದೂ ದ. ಆಫ್ರಿಕ ಯೂನಿಯನಿನ ಮಲಾನ್ ಸರಕಾರದ ಪ್ರತಿನಿಧಿ ಮಿ. ಎರ್ಸ್ಕಿಲೂವ್ ವಾದಿಸಿದ್ದರು. ಭಾರತದ ಪ್ರತಿನಿಧಿ ಶ್ರೀ ಬಿ. ನರಸಿಂಗರಾಯರು ಈ ಆಕ್ಷೇಪವು ಈ ಮೊದಲೇ ಮುಂದೆ ಬಂದಿದ್ದು ತೀರ್ಮಾನಿಸಲ್ಪಟ್ಟಿರುವುದೆಂದು ಅದನ್ನು ವಿರೋಧಿಸಿದ್ದರಿಂದ ಕಾರ್ಯಕ್ರಮ ಪಟ್ಟಿಯಲ್ಲಿ ಈ ಪ್ರಶ್ನೆಯನ್ನು ಇರಗೊಡಿಸುವ ನಿರ್ಧಾರವಾಯಿತು. ಅತ್ತ ದಕ್ಷಿಣಾಫ್ರಿಕದ ಪಾರ್ಲಿಮೆಂಟಿನಲ್ಲಿ ಬಾರೆತೇಯರ ಹಕ್ಕುನ್ನೆಲ್ಲಾ ಕಸಗೊಳ್ಳುವ 'ಅಶ್ಯಾನರ ಸಂಬಂಧದ ತಿದ್ದುಪಡಿ ಮಸೂದೆ"ಯು ವಾಚಿಸಲ್ಪಟ್ಟು ನುಂಜೂರಾಗುವದರಲ್ಲಿದೆ ಜಾಗತಿಕ ಸಂಘವು ತನ್ನ ಧೋರಣೆ ಬದಲಾಯಿಸದಿದ್ದರೆ ತಾನು ಕಠಿಣ ಕ್ರಮ ವಹಿಸಬೇಕಾಗುವದೆಂದು ಎಚ್ಚರಿಸಿ ದ. ಆಫ್ರಿಕ ಪ್ರಧಾನಿ ಮಲಾನರು ಆ ಸಂಘವನ್ನೇ ಬಹಿಷ್ಕರಿಸುವ ಬೆದರಿಕೆ ಬೀರಿದ್ದಾರೆ.

ಹೈದರಾಬಾದಿನ ಕುರಿತು ಪಾಕಿಸ್ತಾನದ ವಿದೇಶ ಮಂತ್ರಿ ಸರ್ ಝುಫರುಲ್ಲಾರು ರಾಷ್ಟ್ರ ಸಂಘದ ಜಾಹೀರು ಅಧಿವೇಶನದಲ್ಲಿ ಭಾರತ ಸರಕಾರದ ಧೋರಣೆಯನ್ನು ಟೀಕಿಸಿದ್ದಾರೆ. "ನನ್ನ ಸರಕಾರವು ಹೈದರಾಬಾದಿನ ಕುರಿತು ಅಚ್ಚೆಡುವಂತಹದೇನನ್ನೂ ಮಾಡಿಲ್ಲ ?" ವೆಂದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಗುತ್ತರವಾಗಿ 'ಹಾಗಿದ್ದರೆ ಅಲ್ಲಿ ಕರೋರ ಸುದ್ದಿ ನಿಯಂತ್ರಣ ಹಾಕಿರುವದೇಕೆ ?" ಎಂದು ಸರ್ ಝುಫರುಲ್ಲಾ ಕೇಳಿದ್ದರು. "ಹೈದರಾಬಾದಿನಲ್ಲಿ ಈ ಮೊದಲು ಅಘವಾ ಈಗ ಯಾವ ಸುದ್ದಿ ನಿಯಂತ್ರಣವನ್ನೂ ಹಾಕಿಲ್ಲ" ಎಂದು ಭಾರತ ಪ್ರತಿನಿಧಿ ಸರ್ ಏ. ರಾಮಸ್ವಾಮಿ ಮುದಲಿಯಾರರು ಅದನ್ನಲ್ಲಿ ಮುಂದಟ್ಟು ಪಡಿಸಿದರು. ಭದ್ರತಾ ಕೌನ್ಸಿಲಿಗೆ ಕೊಟ್ಟಿದ್ದ ತನ್ನ ದೂರನ್ನೂ, ಆ ಪ್ರತಿನಿಧಿಗಳನ್ನೂ ಹಿಂದೆಗೆದು ಕೊಂಡಿದ್ದೇನೆಂದು ಪ್ರತ್ಯಕ್ಷ ನಿಜಾಮರು ಬರೆದರೂ ಅರ್ಜೆಂಟೈನಾದ ಪ್ರತಿನಿಧಿ ಡಾ. ಜೋಸೆ ಆರ್ಕಯವರು, ಅದನ್ನು ನಂಬಬಾರದೆಂದು ವಾದಿಸಿ, ನಿಜಾಮರೀಗ ಯಾವ ಸ್ಥಿತಿಯಲ್ಲಿದ್ದು ಆ ಸೂಚನೆ ಕೊಟ್ಟರೆಂಬುದು ಗೊತ್ತಿಲ್ಲವೆಂದೂ, ನಿಜಾಮರು ಸ್ವತಃ ಇಲ್ಲಿ ಬಾರದೆ, ಅವರ ದಸ್ಯತ ನಿಲ್ಲಿ ಕಾಗದ ಅಥವಾ ತಂತಿಗಳಾವುದನ್ನೂ ನಂಬುವದಸಾಧ್ಯವೆಂದೂ ವಾದಿಸಿದರು. ಲಂಡನ್ ಬೇಂಕಿನಿಂದ ಅವಧಿಕೃತವಾಗಿ ಹೈದರಾಬಾದ್ ಹಣವನ್ನು ವರ್ಗಾಯಿಸಿದ, ಹೈದರಾಬಾದ್ ಪ್ರತಿನಿಧಿಗಳ ವರ್ತನೆಯ ನಿದರ್ಶನ ಕೊಟ್ಟು ಸರ್ ಮುದಲಿಯಾರರು "ಇಂಥವರ ಪ್ರಾತಿನಿಧ್ಯವನ್ನು ನಿಜಾಮರು ರದ್ದು ಪಡಿಸಿದುದರಲ್ಲಿ ಆಶ್ಚರ್ಯವೇನು?" ಎಂದರು. "ಈ ದೂರನ್ನು ಮುಂದಿಡಲಾಗುವ ಸ್ಥಾನದಲ್ಲಿ ನಿಜಾಮರಿದ್ದಾರೋ ಎಂಬುದನ್ನು ಆದಿಭಾಗದಲ್ಲೇ ಭದ್ರತಾ ಕೌನ್ಸಿಲು ನೋಡಬೇಕಿತ್ತಲ್ಲದೆ ಈಗ ಅಲ್ಲ" ಎಂದು ಮುಂತಾಗಿ ಸರ್. ಮುದಲಿಯಾರರು ಅತ್ಯಂತ ಪರಿಣಾಮಕರ ವಾದ ಹೂಡಿದರು. ಅದೊಂದು ನಿಬಂಧನಾನುಸಾರವಾಗಿ ಒಮ್ಮೆ ಬಂದ ದೂರನ್ನು ಹಾಗೆಯೇ ತೆಗೆದು ಹಾಕುವದು ಭದ್ರತಾ ಕೌನ್ಸಿಲಿಗೆ, ಸಾಧ್ಯವಾದರೂ, ಅದು ಕಾರ್ಯಕ್ರಮ ಪಟ್ಟಿಯಲ್ಲಿ ಅಕ್ಷರ ರೂಪ ದಿಂದಲೇ ಉಳಿದು ಅಲ್ಲೇ ಸವೆದು ಹೋಗಲಿವೆಯಲ್ಲದೆ ಬೇರೇನೂ ಆಗಲಾರದೆಂಬ ತಿಳಿದು ಬರುತ್ತದೆ.

ಅತ್ತ ಯುರೋಪು ರಾಷ್ಟ್ರಗಳ ರಕ್ಷಣೆಗೆ ಅಮೇರಿಕದ ಸೇನಾ ಸಹಾಯ ಕೊಡುವ ಯೋಜನೆಯು ಅಮೇರಿಕದ ಕಾಂಗ್ರೆಸಿನ ಮುಂದೆ ಬಂದಿದೆ. ಜಾವಾದಲ್ಲಿ ಮೇಲ್ವಾಯ್ದು ಬಂದ ಕಮ್ಯೂನಿಷ್ಟರಿಂದ ಅಲ್ಲಿಯ ರಿಪಬ್ಲಿಕ್ ಸರಕಾರದ ಸೇನೆಗಳು ಪೂರ್ವ ಭಾಗದ ಮುಖ್ಯ ನಗರ ಮೀಡಿಯಮನ್ನು ಮರಳಿ ಸ್ವಾಧೀನ ಪಡಿಸಿಕೊಂಡಿವೆ. ಬರ್ಮದಲ್ಲಿ ಕಮ್ಯೂನಿಸ್ಟ್-

For Banking Service
in Trade, Industry & Agriculture
approach
THE AGRICULTURAL & INDUSTRIAL BANK Ltd.,
(Established in 1934)
Head Office: **COONDAPOOR, S K**

Branches:

1	Ankola,	7	Gokarn,	13	Nagar.
2	Belgaum,	8	Haveri,	14	Shimoga,
3	Bhatkal,	9	Hubli,	15	Sirsi,
4	Coondapoor,	10	Karvar,	16	Somwarpet,
5	Dharwar,	11	Kumta,	17	Virajpet,
6	Gadag,	12	Mangalore,	18	Honavar.

19 384, M. Jaipuria House, Kalbadevi Road, BOMBAY, 2

Current, Savings bank, and Fixed deposits are accepted.

For Terms, apply to the nearest Branch.

Coondapoor,
29-9-1948.

K. Vittaldas Shenai.
Managing Director.

For Sale

A compund plot of 1 acre and 80 cents in Amblapadi of the Udipi Municipal area having a decent tiled house, two wells and cocanut, mango, jack and other fruit trees, fit for residential quarters is ready for sale. Those interested may please write to or approach in person to the undersigned for further particulars.

Santhan D'Souza,
R. C. Church,
Udipi, (S. K.)

ನೆಹರು ಸರ್ದಾರರ ಖಂಡತುಂಡ ಮಾತು.

ಸರಿಯಾರೀ ಸೇನಾ ಪೋರಾಟಗಳು ನಡೆದಿವೆಯಾದರೂ ಕಮ್ಯೂನಿಸ್ಟರನ್ನು ಹುಡುಕಿಟ್ಟಲಾಗಿಲ್ಲ. ಜೈನರಲ್ಲಿ ಕಮ್ಯೂನಿಸ್ಟ್ ಸೇನೆಗಳ ಕೈ ಮೇಲಾಗಹತ್ತಿ, ಪಂಡಾರದ ಪ್ರತಿ ಧಾಳಿಗಳು ಸಾರ್ಥಕವಾಗಿಲ್ಲ.

ಪಠೇಲರ ಧೀರ ವಾಣಿ

ಕಾಶ್ಮೀರ ಹೈದರಾಬಾದುಗಳ ಕುರಿತು ಭದ್ರತಾ ಕೌನ್ಸಿಲು ಹೂಡಿರುವ ತಲೆಹರಟೆಗಳು-"ನಮಗೆ ಯಾರ ಮೇಲೂ, ಆದರಲ್ಲೂ ವಿಶೇಷವಾಗಿ ಭಾರತದ ಮೇಲೆ ಆಕ್ರಮಣೇಚ್ಛೆಯಿಲ್ಲ. ಆದರೆ ನಮ್ಮ ಮೇಲೆ ಆಕ್ರಮಣ ನಡೆಸಿದರೆ ನಮ್ಮ ಸರ್ವ ಶಕ್ತಿಯಿಂದ, ಕೊನೆಯ ಮನುಷ್ಯನ ಕೊನೆಯ ರಕ್ತ ಬಿದ್ದರೂ ಹೋರಾಡುವೆವು" ಎಂದು ಸರ್ದಾರ್ ಪಠೇಲರು ಖಂಡತುಂಡ ಮಾತುಗಳನ್ನಾಡಿದ್ದಾರೆ. ಜಗತ್ತಿನ ಹಾಗೂ ಪಾಕಿಸ್ತಾನದ ಪ್ರಮುಖ ದಿಗ್ಗಾರರ ಕಣ್ಣಿಗಾನಮೂಲಕ ಅಂಜನ ಹಚ್ಚಿದ್ದಾರೆ; ಭಾರತದ ಸಡಿಲ್ದೇಶ ಮತ್ತು ಶಕ್ತಿಯ ಪರಿಚಯ ಮಾಡಿಕೊಟ್ಟು ಹಿಂದೀಯಲ್ಲಿ ನವಚೇತನ ಮತ್ತು ಲೋಕದ ನ್ಯಾಯ ಪಕ್ಷಪಾತಿಗಳಲ್ಲಿ ಭರವಸೆ ಮೂಡಿಸಿದ್ದಾರೆ.

ಇದೇ ತಾ. 1೦ಲ್ಲಿ ನವಢಿಲ್ಲಿಯ ಪಲಾಮ್ ವಿಮಾನ ನಿಲ್ದಾಣದಲ್ಲಿ ಭಾರತದ ವಿಮಾನ ಪಡೆಯ ಅಧಿಕಾರಿಗಳಿಗೂ ವೈಮಾನಿಕರಿಗೂ ಸರ್ದಾರ್ ಪಠೇಲರಿತ್ತ ಭಾಷಣ ಭಾ ಅಧುನಿಕ ಸ್ವತಂತ್ರ ಭಾರತವು ತನ್ನ ಸಿಪ್ಪೆಳಂಕ ಹಾಗೂ ನಿರ್ಭೀತ ಧೋರಣೆಯನ್ನು ನಾಲ್ದೆಸೆಗೂ ಸಾರಿದ ಡಂಗುರದಂತಿರುವುದರಿಂದ ಅದರ ಸಾರ ಇಲ್ಲಿದೆ.

"ನಾನೋರ್ವ ನಾಗರಿಕನೂ ಅಲ್ಲ; ರಾಜಕಾರಣಿಯೂ ಅಲ್ಲ. ಕರಿಣ ಹಾಗೂ ಸುದೀರ್ಘ ಹೋರಾಟಾನಂತರ ರಾಷ್ಟ್ರವನ್ನು ಗುಲಾಮಗಿರಿಯಿಂದ ಮುಕ್ತಾಯಗೊಳಿಸಿದ "ಭಾರತದ ಸಶಸ್ತ್ರ ಸೇನೆ"ಗೆ ಎಷ್ಟೋ ಕಾಲಕ್ಕೆ ಮೊದಲೇ ನೇರಿದವ. ನಮ್ಮ ಕಮಾಂಡರ್-ಇನ್-ಚೀಫ್ ಮಹಾತ್ಮಾ ಗಾಂಧಿಯವರು ನಮ್ಮನ್ನೆಗಲಿ ವರುಷವಿನ್ನು ಆಗಿಲ್ಲ" ಎನ್ನುತ್ತ ಗಾಂಧೀಜಿಯ ಸೇನಾನಿಶ್ಚ ಮತ್ತವರ ಹೋರಾಟ ಕೃಮಗಳನ್ನು ವರ್ಣಿಸಿ ಸರ್ದಾರರಂದರು. "ಪಂಚಾಯತ ರೀತ್ಯಾ ತೀರ್ಮಾನವೆಂಬ ತತ್ವವನ್ನು ಮುಂದೊಡ್ಡಿದವರು ಗಾಂಧೀಜಿ. ಅವರ ಈ ತತ್ವವೆ ಅಂಗೀಕರಿಸಲ್ಪಡುತಿದ್ದರೆ ಪ್ರಪಂಚದಲ್ಲಿ ತೊಂದರೆಯೆಂಬುದೇ ಇರುತಿರಲಿಲ್ಲ. ಆದರೀಗ ಸಂ. ರಾ. ಸಂಘದಲ್ಲಿ ನಡೆಯುತ್ತಿರುವುದೇನೆಂಬುದು ಎಲ್ಲರಿಗೂ ಗೊತ್ತಿದೆ ಪ್ರಪಂಚದ ಐತ್ಯಾಸ್ತಿಯವರು ಹಾಕಲು ಹೊರಟ ದೊಡ್ಡ ರಾಷ್ಟ್ರಗಳಿಗೆ ಸ್ವತಃ ತನ್ನೊಳಗಿನ ಭಿನ್ನಾಭಿಪ್ರಾಯಗಳನ್ನು ತೀರ್ಮಾನಿಸಿಕೊಳ್ಳಲಾಗಿಲ್ಲ. ಕಂತ ಮತ್ತು ಭಿನ್ನಮತಗಳನ್ನು ಸಂಘಡಿಸಿಕೊಳ್ಳಲಾಗದವರು ಶಾಂತಿಯ ಹಾಗೂ ಪ್ರಪಂಚಿಕ ಐಕ್ಯದ ತಳಕಟ್ಟು ಹಾಕುವದಾದರೂ ಹೇಗೆ? ತಮ್ಮನ್ನೇ ತಾವು ನೋಡಿಕೊಳ್ಳಲಾಗದವರಿಗೆ, ಪರಕೀಯರ ಕೆಲಸಗಳಲ್ಲಿ ಕೈ ಹಾಕುವ ಹಕ್ಕಿಲ್ಲ. ಕಾಶ್ಮೀರಕ್ಕಾಗಿ ನಾವೆಂತಹ ಬೆಲೆತೆತ್ತಿದ್ದೇವೆಎಂಬುದನ್ನು ನೀವು ಕಂಡಿರುವಿರಿ. ಆ ಜಗಳವನ್ನು ಬೇಗನೇ ಮುಕ್ತಾಯಗೊಳಿಸುವದಕ್ಕಾಗಿ ನಾವು ರಾಷ್ಟ್ರ ಸಂಘಕ್ಕೆ ಹೋದೆವು ಪಾಕಿಸ್ತಾನ್ ಸರಕಾರದಿಂದಲೂ, ಈ ದೇಶವನ್ನಂದೂ ನೋಡದ ಹಾಗೂ ಭಾರತ ಮತ್ತು ಪಾಕಿಸ್ತಾನ ಅಥವಾ ಕಾಶ್ಮೀರದ ಸಮಸ್ಯೆಗಳ ಸಂಗತಿಯನ್ನೆಂಬುದನ್ನೇ ಅರಿಯದ ಜನರಿಂದಲೂ ಆರು ತಿಂಗಳವರೆಗೆ ಲೋಕದಲ್ಲೆಲ್ಲಾ ನಮ್ಮ ಅಪಪ್ರಚಾರ ನಡೆಯಿತು. ಅವರು ನಮ್ಮ ವಾದದ ಸಂಪೂರ್ಣವಾಗಿ ನಮ್ಮನ್ನು ಕುರಿತು ಏನೂ ಒಂದೂ ಗೊತ್ತಿಲ್ಲದವರನ್ನೇ ಕೇಳ ಹತ್ತಿದರು. ಆರು ತಿಂಗಳುಗಳನ್ನು ಅವರು ಮಾತಿನಲ್ಲೇ ಕಳೆದರು. ಆ ನಂತರ ಒಂದು ಕಮಿಶನ್ನನ್ನು ಕಳುಹಿಸಿಕೊಟ್ಟರು. ಈ ಕಮಿಶನ್ನಿನವರು ಪಾಕಿಸ್ತಾನ್, ಕಾಶ್ಮೀರ ಮತ್ತು ಭಾರತಗಳಲ್ಲಿ ತಿರುಗಾಡಿದರು; ಸುದೀರ್ಘ ಮಾತುಕತೆ ನಡೆಸಿದರು. ಹೇಗೂ ಕೊನೆಗೆ 'ಗುಂದ ಹಾರಾಟ ನಿಲ್ಲಿಸಿ ವಾಪಸು ಚನೆಯೊಂದನ್ನೊಡ್ಡಿದರು. ನಾವಾ ಸೂಚನೆಯನ್ನು ಅಂಗೀಕರಿಸಿದೆವು; ಆದರೆ ಆ ಕಡೆಯವರೊಪ್ಪಲಿಲ್ಲ. ಇನ್ನು ನಾವದನ್ನು ಹೋರಾಡಿಯೇ ಮುಗಿಸಬೇಕೆಂದಾದರೆ, ರಾ. ಸಂ. ದಿಂದ ಏನೂ ನಡೆಯದೆಂದಾದರೆ, ಅದನ್ನು ಅಭದ್ರತಾ ಮಂಡಲ ಅಥವಾ ಶಾಂತಿ ಉಪದ್ರವಕಾರಿ ಎಂದು ಅರಿಯಬಹುದೇ ನಾನಿ. ತಾನು ಭದ್ರತಾ ಕೌನ್ಸಿಲಿಗೆ ಬರಬೇಕಿಲ್ಲವೆಂದು ನಿಜಾಮರಿಗೆ ಹೇಳುತ್ತಾರೆ. ಆದರೂ ತಾನದನ್ನು ಹಿಡಿದುಕೊಂಡಾಗಿದೆ ಎಂದು ಭದ್ರತಾ ಕೌನ್ಸಿಲು ಅನ್ನುತ್ತಿದೆ. ಅದು ಅಲ್ಲಿಯ ಭದ್ರತೆಯಂತೆಯೇ ಇಲ್ಲಿಯ ಭದ್ರತೆಯನ್ನೂ, ಸುತ್ತಾಮುತ್ತಾಲಿಕ ಲೋಕದ ಭದ್ರತೆಯನ್ನೇ ಕೆಡಿಸುತ್ತಿದೆ. ವಸ್ತುತಃ ಭದ್ರತಾ ಕೌನ್ಸಿಲಿಗೆ ಈ ವಿಷಯಗಳನ್ನು ತೀರ್ಮಾನಿಸುವದ ನಾಧ್ಯ ಮೆಂದಾದರೆ, ಅದನ್ನು ಅಭದ್ರತಾ ಮಂಡಲಿ ಎಂದು ಕರೆದರೇನೇ ಸಂಪೂರ್ಣ ಸರಿಯಾದೀತು. ಮತ್ತದಕ್ಕೆ ಹಿಡಿಸೀತು. ನಾವಾ ಮಹಾಸಭೆಯ ಸದಸ್ಯರಾಗಿರಬೇಕೆಂಬ ಸಲಹೆ ಎಷ್ಟು ಕಾಲ ಉಳಿದೀತು? ಅತೀ ಅಲ್ಪಾಂಶ ರಕ್ತ ಚೆಲ್ಲುವಂತಹ ಒಂದು ಆಜಂಡೆಯನ್ನು ನಾವು ಹೈದರಾಬಾದಿನಲ್ಲಿ ನಿರ್ವಹಿಸಿದ ದನ್ನು ನೀವು ಕಂಡಿರಿ. ಆದರೆ ಅದು ಸ್ಥಾಪನೆಯಾದಂದಿನಿಂದ ಇಂದಿನವರೆಗೂ ತಾನು ಕೈಹಾಕಿದ ಯಾವುದೇ ಸಮಸ್ಯೆಯನ್ನು ತೀರ್ಮಾನಿಸಲು ಈ ಭದ್ರತಾ ಮಂಡಲಿಯಿಂದ ಸಾಧ್ಯವಾಯಿತೆ? ಭದ್ರತಾ ಕೌನ್ಸಿಲಿಗೊಪ್ಪಿಸಲ್ಪಟ್ಟ ಯಾವ ಸ್ಯಸ್ಥೆಯನ್ನೇ ಆದರೂ-ನೆಲಸ್ಥೈರ್ಯ ಅಥವಾ ಇಂಡೋನೇಶಿಯಾ ಇಲ್ಲವೇ ಬೇರಾವುದೇ ಇರಲಿ-ತೀರ್ಮಾನಿಸಲು ಅಥವಾ ಶಾಂತಿ ಸ್ಥಾಪಿಸಲು ಅದರಿಂದಾಗಿಲ್ಲ"-ಎಂದರು. ತುಲನಾತ್ಮಕವಾಗಿ ಇದಕ್ಕಿಂತ ನಿರುಪದ್ರವಿಯಿದ್ದ ಹಿಂದಿನ 'ರಾಷ್ಟ್ರ ಕೂಟ'ದ ಅಧ್ಯಕ್ಷಪದವೇ ಇಂದಿನ 'ಸಂಯುಕ್ತ ರಾಷ್ಟ್ರ ಸಂಘ'ಕ್ಕೂ ಒದಗಬಹುದೇನೋ ಎನ್ನುತ್ತಾ, ಅದು ಸುಧಾರಿಸಿದ್ದರೆ ಲೋಕವನ್ನೊಂದು ಭೀಕರ ಪ್ರಳಯಕ್ಕೆ ತಳ್ಳಲಿದೆಯೆಂದು ಸರ್ದಾರರೆಚ್ಚರಿಸಿದರು. "ಮಹಾತ್ಮಾ ಗಾಂಧಿಯವರು ತನ್ನ ಪೀಠಿಕೆ ನಡೆಯಿಸಿದ್ದ ತತ್ವಗಳನ್ನೇ ಭದ್ರತಾ ಕೌನ್ಸಿಲು ಅಂಗೀಕರಿಸುತಿದ್ದರೆ ಲೋಕ ಸುಖಿಯಾಗುತಿತ್ತು; ಶಾಂತಿ ನೆಲೆ ನಿಲ್ಲುತಿತ್ತು. ಆದರೆ ತನ್ನ ಗುಲಾಮಗಿರಿಯ ಸುಧ್ಯದಲ್ಲಿ ಕೂಡಾ ಈ ರಾಷ್ಟ್ರ ಪಡೆದಿದ್ದ ಆ ಮಹಾ ನಾಯಕನಿಗೆ ನಾಲಿಗೆ ಸೇವೆಯನ್ನಷ್ಟೇ ನಾವು ಸಲ್ಲಿಸುತಿದ್ದೇವೆ. ಗುಲಾಮಗಿರಿಯಲ್ಲಿದ್ದುಕೊಂಡೇ ಭಾರತ ವಿಂತಹ ನಾಯಕರನ್ನು ಪಡೆಯಬಲ್ಲುದೆಂದ ಮೇಲೆ ಸ್ವತಂತ್ರ ಭಾರತವೀಗ ಇನ್ನೆಷ್ಟು ದೊಡ್ಡ ನಾಯಕರನ್ನೇಕೆ ನಿರ್ಮಿಸಬಾರದು?" ಎಂದು ಸರ್ದಾರರು ಅಭಿನವ ನವದಂಡ ಪ್ರಶ್ನೆಸ್ಸಿನಮಂಗಿಂತ ಹೆಚ್ಚಿಗೆ ತಾವೇ ಗಾಂಧಿಜೀಯನ್ನು ಅರಿತವರೆಂಬಂತೆವಿದೇಶೀಯರು ನಮ್ಮನ್ನು ಟೀಕಿಸುತ್ತಿರುವದನ್ನು ಹೀಗಳೆದರು. "ಇಡೀ ಲೋಕವೇ ಶಸ್ತ್ರ ತ್ಯಾಗ ಮಾಡಬೇಕೆಂದು ಮಹಾತ್ಮರು ಬಯಸಿರಬಹುದು. ಆದರೀಗ ಆಟಂ ಬೋಂಬಿನ ವಿಕಾಧಿಕಾರ ತನ್ನದೆಂದು ಒಂದು ರಾಷ್ಟ್ರವನ್ನುವಾಗ, ಅದರ ಗುಟ್ಟೆಲ್ಲಾ ತನ್ನೆಲ್ಲರಬೇಕೆಂದು ಮತ್ತೊಂದು ರಾಷ್ಟ್ರ ಕೇಳುತ್ತಿದೆ" ಎಂದು ಜುಚ್ಚುವಗೆಯನ್ನೆಬ್ಬಿಸಿದರು. "ನಾವು ಹೇಡಿಗಳಾಗಿರಬೇಕೆಂದು ಗಾಂಧೀಜೀ ನಮಗೆಂದೂ ಉಪದೇಶಿಸಿದ್ದಿಲ್ಲ. ರಾಷ್ಟ್ರವನ್ನು ಮರೆತು ಬಿಡಬೇಕೆಂದಾಗಲೀ ರಾಷ್ಟ್ರದ ಗೌರವ ಮತ್ತು ಸ್ವಾತಂತ್ರ್ಯ ರಕ್ಷಣೆ ಮಾಡ ಬೇಡಿರೆಂದಾಗಲೀ ಅವರೆಂದೂ ಬೋಧಿಸಿಲ್ಲ. ಆದ್ದರಿಂದ ಈ ಭೂಮಿಯ ರಕ್ಷಣೆಗೆ, ಅವಶ್ಯವುಳ್ಳ ಸಶಸ್ತ್ರ ಸೇನೆಗಳನ್ನು ಕಟ್ಟಿಕೊಳ್ಳದೆ ನಾವು ಹಿಂದೆ ಬೀಳಲಾರೆವು. ಆಕ್ರಮಣಕ್ಕಾಗಿ ಅಲ್ಲ; ರಾಷ್ಟ್ರದ ಗಡಿಗಳ ರಕ್ಷಣೆಗಾಗಿ ನಾವು ಸಾಕಷ್ಟು ಸಶಸ್ತ್ರ ಸೇನೆಗಳನ್ನು ಇಡಬೇಕಾಗಿದೆ. ಈ ರಾಷ್ಟ್ರವನ್ನು ಬಂಧನದಿಂದ ಬಿಡಿಸಿದ ಅನಾಹಾತ್ಮನು ಬರೆದಿಟ್ಟ ಅವಿನಾಶ ಮೃತ್ಯುಪತ್ರದ ಹಕ್ಕುದಾರರಾಗಲು ನಾವು ಉಯೋಗ್ಯರಲ್ಲವೆ" ಎಂದರು ಸರ್ದಾರ್. "ಭಾರತದ ಮಟ್ಟಿಗೆ ಇನ್ನೆಂದಿಗೂ ಆಂತರಿಕ ಗೊಂದಲದ ಭಯವಿಲ್ಲ. ಜಾತೀಯತೆಯ ಕೊನೆಯ ಭೂತವೂ ಹೂಳಲ್ಪಟ್ಟಿತು. ಈಗ ಹಿಂದೂ ಮುಸ್ಲಿಮರು ಪರಸ್ಪರ ಸರಿದೂಗಿಸಿಕೊಂಡು ಏಕಸ್ವರ ಹೊರಡಿಸುವವರೆಗೆ ಬಂದಿದ್ದಾರೆ. ಉಳಿದಿರುವುದೊಂದೇ ಕಾಶ್ಮೀರ. ಭದ್ರತಾ ಮಂಡಲಿಯು ನಮಗೆ ಏಕಲಾಟವೊದ್ದುವದನ್ನು ಬಿಡಲಿ-ಆಗ, ನಾವಾವ ರೀತಿ ಆತೀ ಕಡಿಮೆ ಅವಾಯದಿಂದ ಹೈದರಾಬಾದ್ ಕೆಲಸ ನಿರ್ವಹಿಸಿದೆವೋ ಅಂತೆಯೇ ಅತ್ಯಂತ ಕಡಿಮೆ ಅಪಾಯದೊಡನೆ ಕಾಶ್ಮೀರದ ಕಾರ್ಯವನ್ನೂ ಮುಗಿಸಿ ಬಿಡುವೆವು" ಎಂದು ಶಪಥ ಪೂರ್ವಕ ಹೇಳಿ ಪಾಕಿಸ್ತಾನವನ್ನು ಕುರಿತು ಮಾರ್ಮಿಕವಾಗಿ ನುಡಿದರು: "ಪಾಕಿಸ್ತಾನದಲ್ಲಿ, ನನ್ನು ಮಿತ್ರರು- ಉತ್ತರ ದಿಕ್ಕಿನ ನೆರೆಕರೆಯವರು ತಮ್ಮ 'ವೈರಿಗಳ' ಮಾತೆತ್ತುತಿದ್ದಾರೆ. ನಾನೆನ್ನುತ್ತೇನೆ-ನಿಮ್ಮ ವೈರಿಗಳು; ಅವರಾರೇ ಇರಲಿ, ಅವರು ನಿನ್ನೊಳಗಡೆಯಲ್ಲೇ ಕದ್ದಾರೆ ಹೊರಲಿ ನಮ್ಮ ನಡುವೆ ಇಲ್ಲ ನಾವು ಯಾರೊಬ್ಬರ ವೈರಿಗಳಾಗಲೂ ಇಚ್ಛಿಸುವದಿಲ್ಲ; ನಮಗಾರಿ ಮೇಲೂ ಮಿಥ್ಯಾವನೆ ಇಲ್ಲ. ಆದರೆ ನಾವು ಹೇಡಿಗಳಾಗಕೂಡದೆಂದು ನಮ್ಮ ನಾಯಕ ಹೇಳಿ

[ಎನೇ ಪುಟ ನೋಡಿರಿ]

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾವಿಮುಖ್ಯ ಕೇಂದ್ರಗಳಲ್ಲಿಯೂ, ಜೊಂಬಾಯಿ ಪಟ್ಟಣ ಮತ್ತು ಮಂಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಸಕ್ಷ್ಮ ಅನುಭವದ ಯೋಗ್ಯತೆಯಿದೆ.

ನಿರಮು ಠೇವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.

ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬೇಂಕ್, ಲಿಮಿಟೆಡ್

ಹೆ. ಆ. ಮಂಗಳೂರು.

The Vijaya Bank Ltd.

H. O. MANGALORE, S. K.

ಪಂಡಿತ ಜಾಠಾನಾಥರ

ವಿಕ್ರಮ

ಸ್ತ್ರೀಬಲ

ಬಾಲಬಲ

ಔಷಧಗಳು ಜೊರಯುತ್ತವೆ.

ನವಯುಗ ಪ್ರೆಸ್, ಉಡುಪಿ ದ ಕ.

The Canara Banking Corporation Limited.

Estd: 1906-
(Incorporated in British India)
Head Office: **UDIPI**, S. India.

Capital Authorised	..	Rs. 25,00,000
Capital Issued & Subscribed	..	Rs. 20,00,000
Capital Paid up	....	Rs. 19,98,445
Reserves ..	....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ನವಯುಗ

ಗುರುವಾರ, ಉಡುಪಿ, ೭-೧೦-'೪೬ಲ

ಪುನಃ ರೈತರಿಗೆ ಪೀಡೆ?

ಆಹಾರ ನಿಯಂತ್ರಣವನ್ನು ಅನುಕ್ರಮವಾಗಿ ಹುನಃ ಜಾರಿಗೆ ತರಬೇಕೆಂಬ ಹೊಸ ನಿರ್ಣಯಕ್ಕನುಸಾರವಾಗಿ ತವ್ಮ ಧಾನ್ಯಗಳನ್ನು ಒಪ್ಪಿಸುವಂತೆ ಸಾಗುವಳ್ಳೀದಾರರಿಗೆ ಆಜ್ಞೆಗಳು ಹೊರಡುವ ದರಲ್ಲಿವೆ, ಎಂದು ತಿಳಿಯುತ್ತೇವೆ. ಈ ತನಕ ಸ್ಪಷ್ಟ ವಿವರಗಳು ತಿಳಿದು ಬಂದಿಲ್ಲವಾದರೂ- ಮೆಟ್ಟಿಲು ಮೆಟ್ಟಲಾಗಿ ಸಂಪೂರ್ಣಗೊಳ್ಳಬೇಕಾದ ಈ ಕಾರ್ಯ ಆಹಾರ ನಿಯಂತ್ರಣಾನುಸಾರ ಅಂತಾಂಶವಾಗಿ ರೈತರಿಂದ ಪಡಕೊಳ್ಳಬಹುದಾದರೂ- ವಿಧಾನಗಳೆಲ್ಲವೂ ಬಹು ಮಟ್ಟಿಗೆ ಹಿಂದಿನ ವರುಷದವುಗಳೇ ಎಂಬುದರಿಂದ ಬಡ ಸಾಗುವಳ್ಳೀದಾರರು ನಿಜಕ್ಕೂ ಗಾಬರಿಗೊಂಡಿದ್ದಾರೆ. ಕಳದ ಬಾರಿಯ ಹೆಚ್ಚಿನ ಧಾನ್ಯೋತ್ಪತ್ತಿಯನ್ನು ಸ್ವಾಧೀನಪಡಿಸಿಕೊಂಡ ನಂತರ ಈ ಮಳೆಗಾಲದ ಕಷ್ಟದ ದಿನಗಳಲ್ಲೇ ಹಳ್ಳೀಜನಕ್ಕೆ ರಿದ್ದು ಮಾಡಲ್ಪಟ್ಟಿದ್ದಿತು. ನಡು ನೀರಿನಲ್ಲಿ ಕೈ ಬಿಟ್ಟಂತಾದ ಬಡ ಹಳ್ಳಿಗರು, ಈ ಅಕಾಲ ವಿಮೋಚನೆಯ ಎಲ್ಲಾ ಸಂಕಷ್ಟಗಳನ್ನೂ ಸಹಿಸಿಕೊಂಡುದು, ಇನ್ನೇ ಉಪದ್ರವದ ಪುನರವತಾರವಿಲ್ಲ ಎಂಬ ವಿಶ್ವಾಸದಿಂದಲೇ. ಆದರೀಗ ಬೆಳೆ ಕಟಾವಾಗಿ-ವಾಗಲೇ ಪುನಃ ಅದೇ ನಿರ್ಬಂಧ ನುಂದೆ ಬಂದಿದೆ. ಕಳದ ವರುಷದ ಕಟಾವಿನ ನಂತರ ಈ ವರುಷದ ಕಟಾವಿನ ವರೆಗಿನ ಅವಧಿಯಲ್ಲಿ ನಡೆದ ಈ ಆಟಗಳು- ಈ ನಿರುತ್ಸಾಹಗಳು, ಹಿಂಮ ಮುಂದು-ಬಡ ಬೇಸಾಯಗಾರನ ಪಾಲಿಗೆ ಹೇಗಾಗಿವೆ, ಎಂಬುದನ್ನೊನ್ನು ಎಲ್ಲರೂ ಯೋಚಿಸಿ ನೋಡಬೇಕು. ರೈತನೊಡನಿರುವಾಗ ಅದನ್ನು ಸೆಳಕೊಳ್ಳುವ ಕೈ ಪ್ರಬಲಾರಿಯೂ ಮುಂಬೆ ಬರುತ್ತದೆ; ಆತ ಬಾಲಿಯಾದಾಗ, ಅದೇ ಕೈ ಅವನನ್ನು ಅವನ ಪಾಲಿಗೆ ಬಿಟ್ಟು ಬಿಡುತ್ತದೆ, ಎಂಬುದೇ ಇದರ ತಾತ್ಪರ್ಯ! ಅನ್ನದಾತ ರೈತನೊಡನೆ ಇಂತಹ ಆಟವಾಡುವದು ಯಾವ ದೃಷ್ಟಿಯಿಂದಲೂ ಹಿತಕರವಲ್ಲ. ಆಹಾರ ನಿಯಂತ್ರಣವು ರಾಷ್ಟ್ರೀಯ ಧೋರಣೆಯಾಗಿ, ಅನಿವಾರ್ಯವಾಗಿ ಪುನಃ ಮುಂದೆ ಬಂದಿದೆ ಎಂಬುದನ್ನೆಲ್ಲರೂ ಬಲ್ಲರು. ಧಾನ್ಯೋತ್ಪಾದಕರ ಹಿತಸಾಧನೆಯ ಕಡೆಗೆ ನಿಶ್ಚೇತ ಲಕ್ಷ್ಯ ಕೊಡುವ ಆಶ್ವಾಸನೆಗಳು ಮದ್ರಾಸ್‌ಮಂತ್ರಿಗಳಿಂದ ಬಂದಿರುವುದೂ ನಿಜ. ಆದರೆ ಈ ಕುರಿತು ಈ ಮೊದಲೇ ಕೈ ಸುಡಿಸಿಕೊಂಡು ಅನುಭವವಿರುವ ದಕ್ಷಿಣ ಕನ್ನಡದ ರೈತರಂಥವರಿಗೆ 'ಇನ್ಫೊರ್ಮೇಶನ್ ರಿಕ್ವಿಸಿಶನ್' 'ಪುನಃ ಸ್ಟೋರುಗಳ ಆಶ್ರಯ' ಎನ್ನುವಾಗ ಸಹಜವಾಗಿ ನಡುಕವುಂಟಾಗುತ್ತಿದೆ. ರೈತರ ನಿಜವಾದ ಉತ್ಪನ್ನ- ಅವರು ತವ್ಮ ಜೀವನದ ಕುರಿತು ಹಾಕಿಕೊಳ್ಳುವ ತಂದಾನು- ಅವರ ಸಾಗುವಳ್ಳೀ ಶ್ರಮ; ನಿತ್ಯಜೀವನ ವಿಧಾನ -ಇವೆಲ್ಲವೂ ಅಧಿಕಾರಿಗಳು ಕಟ್ಟುವ ಅಂದಾಜು ಮತ್ತು ಅವರು ಕೈಕೊಳ್ಳುವ ಕಾರ್ಯಕ್ರಮಗಳಿಂದಿರಲ್ಲಿ ಅಡಿಮೇಲಾಗಿ ಹೋಗುತ್ತವೆ. "ಸಾಗುವಳ್ಳೀದಾರನ ಅವಶ್ಯತೆಗಳಿಗೆ ಸರ್ವಪ್ರಥಮ ಪ್ರಾಮುಖ್ಯತೆ ಕೊಟ್ಟು, ಆ ಮೇಲಿನ ಧಾನ್ಯ ಪೂರ್ತ ಸಂಗ್ರಹ"ವೆಂಬ ಮಂತ್ರಿಗಳ ಲಶ್ವಾಸನೆಗಳು ಕಾರ್ಯತಃ ಕಂಡು ಬರುವದಿಲ್ಲನೆಂಬುದು ಅನುಭವದ ಸಂಗತಿ. ಈ ಬಾರಿ ಎಷ್ಟಕ್ಕೂ ಹಾಗಾಗದಂತೆ ಸರಕಾರವು ಸರಿಯಾದ ಮುಂಜಾಗ್ರತೆ ವಹಿಸುವದೆಂದು ಆಶಿಸುತ್ತೇವೆ. ರೈತರ ಸಾಗುವಳ್ಳೀ ಮತ್ತು ಕುಟುಂಬ ವೆಚ್ಚ ಕ್ಕಾಗತ್ಯವುಳ್ಳ ಧಾನ್ಯಗಳನ್ನು ಅವನಲ್ಲೇ ಬಿಡುವದು-ಎರಡು ಮೂರು ಮೈಲು ದೂರದ ಡಿಪೋ ಹಾಗೂ ಸ್ಟೋರುಗಳಿಗೆ ಹೋಗಿ ಬರುವ ಸಮಯ ಹಾಗೂ ಶ್ರಮ ವ್ಯಯ ಆತನಿಗಾಗದಂತೆ; ತಾವು ಒಳ್ಳೇ ಆಕ್ಟಿಯನ್ನು ಕಡಿಮೆ ಬೆಲೆಗೆ ಕೊಟ್ಟು ಹೊನೆಗೆ ಹಾಳು ಆಕ್ಟಿಯನ್ನು ಹೆಚ್ಚು ಬೆಲೆಗೆ ತರುವ ಸಂಕಟಕ್ಕಾತ ಈಡಾಗದಂತೆ ನೋಡುವದು-ಮಿಕ್ಕ ಸಾಮಾಗ್ರಿಗಳ ಬೆಲೆಯೇರಿರುವ ಮಟ್ಟದಲ್ಲೇ ರೈತನ ಉತ್ಪತ್ತಿಗೂ ಯೋಗ್ಯ ಧಾರಣೆ ದೊರೆಯುವಂತೆ ಮಾಡುವದು, ಸಂಬಂಧಪಟ್ಟ ಅಧಿಕಾರಿಗಳ ಆದ್ಯ ಕರ್ತವ್ಯವೆಂಬುದನ್ನು ಮರೆಯಬಾರದು. ಸರಕಾರವು ತನ್ನ ನೌಕರರಿಗೀ ಕುರಿತು ಸ್ಪಷ್ಟ ಸೂಚನೆಗಳನ್ನು ಕೊಟ್ಟು, ಸರಿಯಾದ ಮೇಲ್ವ ನವಿ ನೋಡಬೇಕಾದುದಗತ್ಯ. ಆ ಸೂಚನೆಗಳನ್ನಾವುದೇ ರೀತಿಯಿಂದ ಯಾವ ನೌಕರನಾದರೂ ಉಲ್ಲಂಘಿಸಿದರೆ, ಅದನ್ನು ಮಿಕ್ಕ ನಿಯಂತ್ರಣಾಜ್ಞೆಗಳ ಉಲ್ಲಂಘನೆಯಂತೆಯೇ ಅಪರಾಧವಾಗಿ ಗಣಿಸಿ ಸರಕಾರವು ನ್ಯಾಯ ನಿಷ್ಕುರತೆಯಿಂದ ವರ್ತಿಸಿದ್ದಿದ್ದರೆ ಬಡಸಾಗುವಳ್ಳೀದಾರರಿದ್ದಲ್ಲಿ ನಿಜಕ್ಕೂ ಈ ಬಾರಿ ಹಾಹಾಕಾರವೇಳುವ ಸಂಭವವಿಬೆ. ರೈತಪಕ್ಷಪಾತಿ ಕಾಂಗ್ರೆಸ್ ಸರಕಾರದಿಂದ ನ್ಯಾಯದಾನವಾದೀತೆಂದು ಎಲ್ಲರೂ ಹಾರೈಸುತಿದ್ದಾರೆ.

ಇಡೀ ಮದ್ರಾಸ್ ಪ್ರಾಂತ್ಯದಲ್ಲಿ-

ಇದೇ ಒಕ್ಟೋಬರ್ ತಾ. 2ರಿಂದ ಪಾನ ನಿಷೇಧ ಜಾರಿಯಲ್ಲಿದೆ. 24 ಜಿಲ್ಲೆಗಳ ಮದ್ರಾಸ್ ಪ್ರಾಂತ್ಯವನ್ನು ಸರದಿಗೆಂಟು ಜಿಲ್ಲೆಗಳ ಪ್ರಕಾರ ಸೂರು ವರುಷಗಳಿಗೆಳಗೆ ಒಣಗಿಸುವ, ಕಾಂಗ್ರೆಸ್ ಮಂತ್ರಿ ಮಂಡಲದ ಯೋಜನೆಯು 1946ರಲ್ಲಿ ಆರಂಭಿಸಿ 1948ರಲ್ಲಿ ಪೂರ್ಣಗೊಂಡಿತು. ಈ ತ್ರೈವಾರ್ಷಿಕ ಯೋಜನೆಯಲ್ಲಿ ಕೊನೆಯ ಕಂತಾಗಿ ಉಳಿದಿದ್ದ ಮದ್ರಾಸ್ ನಗರ ಮತ್ತು ಚೆಂಗಲ್ಪೇಟ್, ದಕ್ಷಿಣ ಆರ್ಕಾಟು, ತಿರುನೆಲ್ವೇಲಿ, ರಾಮ್ನಾಡ್, ವಿಶಾಖಪಟ್ಟಣ, ಕೃಷ್ಣಾ, ಪೂರ್ವ ಗೋದಾವರಿ, ಪಶ್ಚಿಮ ಗೋದಾವರಿ, ಈ ಎಂಟು ಜಿಲ್ಲೆಗಳು ಇದೇ ತಾ. 2ರಲ್ಲಿ ಎಲ್ಲಾ ವಿಧದ ಆಮಲು ಪದಾರ್ಥಗಳನ್ನೂ ಒಹಿಸ್ಕರಿಸಿಕೊಂಡುವು. ತಂಬಿಯೂರ್ ಆಮಲು ಈ ದಿನ ಮದ್ರಾಸ್ ಪ್ರಾಂತ್ಯದಿಂದಲೇ ಗಡೀಪಾರು ಮಾಡಲ್ಪಟ್ಟಿದೆ; ಪಾನಭೀತಾಳ ಈ ಪ್ರಾಂತ್ಯದ ಸರಹದ್ದುಗಳೊಳಗೆ ನಿಲ್ಲುವ ಹಾಗೂ ಕಾಲಿಡುವ ಹೆಕ್ಕು ಕಳಕೊಂಡಿದ್ದಾನೆ. ಸುಮಾರು ೬ ಕೋಟಿ ಜನ ತುಂಬಿರುವ, ಒಂದು ಲಕ್ಷ ಚದರ ಮೈಲಿಗೂ ಮಿಕ್ಕಿ ವಿಸ್ತರಿಸಿರುವ ಈ ಕ್ಷೇತ್ರವು, ನೆನಪಿಗೆ ನಿಲುಕದಷ್ಟು ಪ್ರಾಚೀನ ಕಾಲ ನಿಂದಲೂ ತನಗಂಟಿಕೊಂಡಿದ್ದ ಒಂದು ರಾಹುವಿನಿಂದ ಈಗತಾನೇ ವಿಮೋಚನೆ ಪಡೆದಿದೆ. ಮದ್ರಾಸ್ ಪ್ರಾಂತ್ಯದ ಆತಿ ದೊಡ್ಡ ಹೆಗ್ಗಳಿಕೆಯೆಂದರೆ ಇದು. ಧಾರಾತ ದ ಪ್ರತಿಯೊಂದು ಪ್ರಾಂತ್ಯವೂ ಅನುಕ್ರಮವಾಗಿ ಹೆಜ್ಜೆಯಿಡುತ್ತಿರುವ ಈ ಗುರಿಯನ್ನು ಎಲ್ಲಕ್ಕಿಂತ ಮುಂದಾಗಿ ಮುಟ್ಟಿದ ಪ್ರಥಮ ಗೌರವ ಮದ್ರಾಸ್ ಪ್ರಾಂತ್ಯಕ್ಕೆ ದೊರೆತಿದೆ. ಹೀಗೆ ಒಣಗಿರುವ ಇಷ್ಟು ದೊಡ್ಡ ಕ್ಷೇತ್ರವೊಂದು ಈ ದಿನ ಇಡೀ ಪ್ರಪಂಚದ ಬೇರೆಲ್ಲಿಯೂ ಇಲ್ಲ. ಗಾಂಧಿಜೀ- ಪ್ರೇತಿಗು ಒಂದು ತತ್ವವು- ಎಲ್ಲಾ ಧರ್ಮಗಳು, ಮಾನಸಿಕ ದಾಸ್ಯಗಳಿಗೂ ದೈಹಿಕ ಬಿಡುಗಡೆಯು ಪಾಪವೆಂದು ಸಾರಿರುವ ದುಶ್ಚಟವೊಂದರ ನಿವಾರಣೆಯು-ಈ ಮೂಲಕ ಸಾಧಿಸಲ್ಪಟ್ಟಿದಕ್ಕಾಗಿ ಎಲ್ಲರೂ ಸಮಾಧಾನ ಪಡಬೇಕು; ಹೆಗ್ಗಳಿಕೆ ಪಡಬೇಕು.

ಕಷ್ಟ ನಷ್ಟಗಳಲ್ಲದೇನೇ ಯಾವ ಮಹತ್ಕಾರ್ಯವೂ ಸಾಧಿಸಲ್ಪಡುವಂತಿಲ್ಲ. ಪಾನ ನಿಷೇಧ ಕಾರ್ಯವೂ ಇದಕ್ಕತೀತವಾದ ವಾಗಿಲ್ಲ ಪ್ರಾಂತೀಕ ಸರಕಾರವು ಈ ಮೂಲಕ ತನ್ನ ಎರಡನೇ ಅತೀ ದೊಡ್ಡ ಆದಾಯದ ಬಾಗಿಲನ್ನೇ ಮುಚ್ಚಿ ಕೊಂಡಿಷ್ಟು- ಅದರ ಕೋಟ್ಯಂತರ ಉತ್ಪನ್ನ ಕ್ಕೆ ಸೊನ್ನೆಸುತ್ತಿತು. ಆದ್ದರಿಂದಲೇ ಸದ್ಯಕ್ಕ ಅತಿ ಪ್ರಸರಣ ಹಾಗೂ ಆರ್ಥಿಕ ಬಿಕ್ಕಟ್ಟುಗಳನ್ನು ಗಮನಿಸಿ ಈ ಯೋಜನೆಯನ್ನು ಒಂದು ವರುಷದ ಮಟ್ಟಿಗೆ ಮುಂಪುವರಿಸಿಡುವದುತ್ತಮವೆಂದು ಕೇಂದ್ರ ಸರಕಾರವು ಮದ್ರಾಸ್ ಸರಕಾರಕ್ಕೆ ಸೂಚಿಸಿದ್ದರೂ- ಇನ್ನಿದಕ್ಕಾಗಿ ಕೇಂದ್ರದ ಹಣ ಸಹಾಯವೇನೂ ದೊರೆಯದೆ ಮದ್ರಾಸ್ ಪ್ರಾಂತ್ಯವು ತನ್ನ ಕಾಲ ಮೇಲೆ ತಾನೇ ನಿಲ್ಲಬೇಕಾಗಿದೆಯಾದರೂ ಮದ್ರಾಸ್ ಸರಕಾರವು ಎತ್ತಿದ ಹೆಜ್ಜೆಯನ್ನು ಹಿಂದಿಡಲೊಪ್ಪದೆ ನಿಶ್ಚಯ ಪ್ರಕಾರ ಮುಂದೊತ್ತಿದೆ. ಇನ್ನೀ ನಷ್ಟವನ್ನು 'ಜನರಲ್ ಸೇಲ್ಸ್ ಟೇಕ್ಸ್' ಮತ್ತಿತರ ವಿಧಾನಗಳ ಮೂಲಕವೇ ಪ್ರಾಂತೀಕ ಸರಕಾರ ತುಂಬಿಸಿಕೊಳ್ಳಬೇಕಾಗಿದೆ. ಈ ಕೊಸ ಹೊರೆಯೂ ಜನತೆಯ ಮೇಲೆಯೇ ಹಂಚಿಬೀಳುವದು. ಪಾನ ನಿರ್ಬಂಧದಲ್ಲಿರುವ ಮುಖ್ಯ ಸಂಕಟವೆಂದು ಎಲ್ಲರೂ ನಿರೀಕ್ಷಿಸಿದ್ದ 'ಪಾನಾಭ್ಯಾಸಿಗಳ ಛಡಚೇತಿ'ಯು ಹೆಚ್ಚಿನವರ ನಿರೀಕ್ಷೆಯಷ್ಟು ಭೀಕರವಿದ್ದಲ್ಲವೆಂಬುದು ದಕ್ಷಿಣ ಕನ್ನಡದಂತಹ ಜಿಲ್ಲೆಗಳ ಒಂದು ವರುಷದ ಅನುಭವ. 'ಆಮಲು ಆ ಜನರನ್ನು ಹಿಡಿಸುಕೊಂಡಿದ್ದಿತು ಹೊರತು ಜನರು ಆಮಲನ್ನು ಹಿಡಿದುಕೊಂಡಿರಲಿಲ್ಲ; ಆದ್ದರಿಂದ ಅದನ್ನು ಬಿಡಿಸಿದ್ದಕ್ಕಾಗಿ ನಿರೀಕ್ಷಿಸಿದಷ್ಟು ಯೋಗದುಃಖದಿಂದ ಕೊರಗುವವರಿಲ್ಲ" ಎಂಬ ಪಾಠ ದೊರೆತಿದೆ. ಕಳ್ಳಾಟಿಕೆಗಳಾಗುತ್ತಿರಬಹುದು; ಅದಾಗದ ವಿಭಾಗವಾಪ್ರದಿದೆ? ಹೀಗಿದ್ದರೂ, ಇದರಿಂದ ಸರಕಾರಕ್ಕಾಗುವ ಹೆಣ ನಷ್ಟ ಮತ್ತು ಜನತೆಯ ಸ್ಥಿತಿಮತಿ ಸುಧಾರಣೆಯ ಲಾಭ,ಎಲ್ಲಾ ವಿಧದ ಪ್ರಲಾಪ ಮತ್ತು ಎಲ್ಲಾ ವಿಧದ ಪ್ರಗತಿ, ಇವುಗಳನ್ನು ತುಲನೆ ಮಾಡಿದರೆ ಪಾನ ನಿಷೇಧ ವೆಂಬುದು ಆಗಲೇ ಬೇಕಾದ ಕಾರ್ಯವೆಂಬುದು ಖಂಡಿತ; ಅದಿಂದು ಆಗಿದೆ. ಇದರ ಯಶಸ್ಸಿಗಾಗಿ ಎಲ್ಲಾ ವಿಧದ ಸಹಕಾರಗಳನ್ನು ನೀಡುವದು ಸರ್ವರ ಕರ್ತವ್ಯವೆನ್ನುತ್ತೇವೆ

ಧಾರವಾಡ ತಾಲೂಕಾ ಕಾಂಗ್ರೆಸ್ ಕಮಿಟಿಯ

ಕಾರ್ಯಕಾರೀ ಮಂಡಲದ ಸಭೆ

ಶ್ರೀ ಕಾರ್ತಕೋಟಿಯವರ ಅಧ್ಯಕ್ಷತೆಯಲ್ಲಿ ಸೇರಿ, ತಾಲೂಕಿನಲ್ಲಿಯ ಅನೇಕ ವಿಷಯಗಳ ಚರ್ಚೆಯಾಗಿ ಗೊತ್ತುವಳಿಗಳು ಪಾಸಾದವು. ಆರ್. ಎಸ್. ಎಸ್. ಸಂಸ್ಥೆಯು ಇತ್ತೀಚಿನ ಬಟ್ಟಬಯಲಕೆಯಬಗ್ಗೆ ಚರ್ಚೆಯಾಗಿ ಕೆಳಗಿನ ಗೊತ್ತುವಳಿ ಪಾಸಾಯಿತು

ಆರ್. ಎಸ್. ಎಸ್, ಸಂಸ್ಥೆಯು ಸದ್ಯಕ್ಕೆ ಅಕ್ರಮ ಕೂಟವಾಗಿ ಸ್ಥಾಪಿಸಿದ್ದು, ಅದರ ಮೇಲಿನ ನಿರ್ಬಂಧವನ್ನು ಹಿಂತೆಗೆಯುವದಕ್ಕಾಗಿ ಕೆಲವು ಪ್ರಯತ್ನಗಳು ನಡೆದಿದ್ದು ಈ ಕಮಿಟಿಯು ಗಮನಕ್ಕೆ ಬಂದಿದೆ. ಜಾತೀಯ ತೆಯ ನಿರ್ಮೂಲನವನ್ನು ದಿಟ್ಟವ ಈ ಸಂಸ್ಥೆಗೆ ಯಾವುದೇ ರೀತಿಯಿಂದ ಜನತೆಯು ಪ್ರತ್ಯಕ್ಷ ಅಥವಾ ಅಪ್ರತ್ಯಕ್ಷವಾಗಿ ಸಹಾಯ ಸಹಾನುಭೂತಿಯನ್ನು ನೀಡುವಜು ದೇಶಹಿತೈಷಿ ಸಾಗುವದೆಂಬ ತನ್ನ ಸ್ಪಷ್ಟ ಅಭಿಪ್ರಾಯವನ್ನು ಜನತೆಯನ್ನುಂದು ಈ ಕಮಿಟಿಯು ಇದಬಯಸುತ್ತಿದೆ.

ಮಾರಾಟಕ್ಕಿದೆ

ಉಡುಪಿ ಅಂಬ್ಲಪಾಡಿಯಲ್ಲಿ ಸುಮಾರು 1 ಎಕ್ರೆ 80 ಸೆಂಟ್ಸ್ ವಿಸ್ತೀರ್ಣವಿದ್ದು, ಹಂಚು ಛಾವಣಿಯ ಒಳ್ಳೇ ತರದ ಮನೆ, ಹಟ್ಟಿ, ಕೊಟ್ಟಿಗೆ, 2 ಬಾವಿ ಮತ್ತು ತೆಂಗು, ಮಾವು, ಹಲಸು, ಚಿಕ್ಕು ಮೊದಲಾದ ಮರಗಳ ತೋಟವಿರುವ ನಿತಾಲವಾದ ಕಂಪೌಂಡು ಮಾರಾಟಕ್ಕಿದೆ. ಖರೀದಿಸಿ ಉಳ್ಳವರು ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನವರಲ್ಲಿ ವಿಚಾರಿಸಬಹುದು.

ಸಂತಾನ ಡಿ'ಸೋಜ,
ಆರ್. ಸಿ. ಚರ್ಚ್, ಉಡುಪಿ.

(ಜನೇ ಮುಂದುವರಿದ)

ರುವ ಮಾತಿದೆ. "ಧೀರರಾಗಿ ಸಾಯಿರಿ" ಎಂದ ಅವರ ಪ್ರಾತಿಗೆ ನಾವು ಭಂಗವುಂಟು ಮಾಡಲಾರೆವು. ನಮ್ಮ ನೆಲದ ಪ್ರತಿಯೊಂದಿಂಚು ನೆಲವನ್ನೂ ನಾವು ರಕ್ಷಿಸಿಕೊಳ್ಳುವೆವು. ಆ ನಾಯಕನ ಮಹಾ ಮರಣ ಶಾಸನವನ್ನು ದಕ್ಕಿಸಿಕೊಳ್ಳುವೆವು". ಎನ್ನುತ್ತಾ ಇನ್ನು ಮುಂದೆ ರಾಷ್ಟ್ರದ ಆಂತರಿಕ ವ್ಯವಸ್ಥೆಗೆ ಪೋಲೀಸರೇ ಸಾಕೆಂದೂ ಸೈನಿಕರು ರಾಷ್ಟ್ರದ ಗಡಿ ರಕ್ಷಣೆಗೆ ಮಿಸಲೆಂದೂ ಸ್ಪಷ್ಟಪಡಿಸಿದರು. ಹೈದರಾಬಾದ್ ವ್ಯವಸ್ಥೆಯ ಕುರಿತು ವಿದೇಶಗಳಲ್ಲಿ ನಡೆದಿರುವ ಅಪಸ್ವರಾಂಗಳ ಮರ್ಮ ಖಂಡನೆ ಮಾಡಿದರು. ಹೈದರಾಬಾದ್ ಇನ್ನೂ ತಮ್ಮ ಹಕ್ಕಿನದೆಂಬಂತೆ, ತಾವಿಲ್ಲಿ ಆಳುತಿದ್ದವರೆಂಬುದನ್ನು ಇನ್ನೂ ಮರೆಯದೆ, ತಮಗಿಲ್ಲಿ ಸ್ಥಾನವಿಲ್ಲವೆಂಬುದನ್ನೂ ತಿಳಿಯದೆ ಇರುವ ಬ್ರಿಟನ್ನನ್ನು ಎಚ್ಚರಿಸುತ್ತಾ 'ಭಾರತದ ಕುರಿತು ಪಾರ್ಲಿಮೆಂಟು ಚರ್ಚಿಸುವದು ಇಲ್ಲಿಗೆ ಮುಗಿಯುವದೆಂದು ನಂಬುತ್ತೇನೆ. ಇಲ್ಲವಾದರೆ ಮುಲುಮೆಯಿಂದ ನವ್ಮನ್ನು ಸ್ನೇಹಾಚಾರ ಕೈಚಳಿಯುವವರು ನಮಗೆ ಸೇಡ. ನವ್ಮ ಮೈತ್ರಿಯ ಅಪೇಕ್ಷೆಯಿಲ್ಲದವರಿಂದ–ಅಗತ್ಯ ಬಿದ್ದರೆ ಇಡೀ ಲೋಕಕ್ಕಿದಿರಾಗಿದ್ದೂ ನಿಲ್ಲುವಷ್ಟು ಸ್ವಾಭಿಮಾನ ನಮಗಿದೆ" ಎಂದು ಒತ್ತಿ ಹೇಳಿದರು. ಯಾರಿಂದ 24 ಘಂಟೆ ತಡವಾಗುತ್ತಿದ್ದರೆ, ಕಾಶ್ಮೀರದ ಸರ್ವಸ್ವವೂ ಕೈ ಬಿಟ್ಟು ಹೋಗುತಿತ್ತೋ ಆ ಏಂಜೀ ವೈಮಾನಿಕರನ್ನು ಸುಕ್ಕ ಕಂಪೆನಿಂದ ಶ್ಲಾಘಿಸಿ, ಗಾಂಧಿಜೀ ಬಿರ್ಲಾ ಮಂದಿರದಲ್ಲಿ ದ್ದಾಗ ಮೇಲ್ಗಡೆಯಿಂದ ಕಾಶ್ಮೀರಕ್ಕೆ ಹಾರಾಡುತ್ತಿದ್ದ ವಿಮಾನಗಳನ್ನು ಕಂಡು ಹೆಗ್ಗಳಿಕೆ ಪಟ್ಟದ್ದರೆಂದರು. ಸೈನಿಕರೆಲ್ಲರೂ ಜಾತೀಯತಾ ಭಾವನೆಯ ಅಣು ಮಾತ್ರವೂ ಇಲ್ಲದೆ ರಾಷ್ಟ್ರ ರಕ್ಷಣೆಗೆ ಸದಾ ಸಿದ್ಧರಿರಬೇಕೆಂದರು.

ನೆಹರೂ ನಿವೇದನೆ

ತಾ. 1ರಲ್ಲಿ ಕಾಶ್ಮೀರದ ಶ್ರೀನಗರದ ಸಾರ್ವಜನಿಕ ಸಭೆಯಲ್ಲಿ ಭಾಷಣವೀಯುತ್ತಾ, ಪಂಡಿತಜೀ ಪಾಕಿಸ್ತಾನದ ಭವಿಷ್ಯವು ಶಾಂತವಾಗಿರಬೇಕಾದರೆ, ಅದು ತನ್ನ ಕಾಶ್ಮೀರದ ಕೆಲಪದಕುರಿತು ಜಾಗ್ರತೆಯಿಂದಿರಲಿ ಎಂದು ಎಚ್ಚರಿಸಿದರು. "ಕಾಸಿಟ್ಟ ಹೆಜ್ಜೆಯ ಕುರಿತು ಪಾಕಿಸ್ತಾನವೀಗ ತುಸು ಅತುರರಾಗ್ಯೋಳಗಾಗಿದೆ. ಆ ಪ್ರದೇಶಗಳನ್ನು ನಮಾಡಿದ ಮನುಷ್ಯನಾರೇ ಇದ್ದರೂ, ಅಂಥವನು ನಂತರ ಅದಕ್ಕಾಗಿ ಸದಾ ಚಿಂತಿಸಬೇಕಾಗಿದೆ. ಭಾರತಕ್ಕೆ ಪಾಕಿಸ್ತಾನದ ಮೇಲೆ ಆಕ್ರಮಣೇಚ್ಛೆಯಿಲ್ಲ. ಆದರೆ ಪಾಕಿಸ್ತಾನವು ನಿಜಕ್ಕೂ ಆಕ್ರಮಣಗಾರ. ಆದರ ದೊಡ್ಡ ಸೇನೆಗಳು ಜಮ್ಮು ಮತ್ತು ಕಾಶ್ಮೀರದಲ್ಲೀಗ ಹೋರಾಡುತ್ತಿವೆ. ತನ್ನ ಗಡಿ ರಕ್ಷಣೆಗಾಗಿ ಹೀಗೆ ಮಾಡಿದೆನೆಂಬ ವಾಕಿಸ್ತಾನ್ ವಾದ ಸುಳ್ಳು. ಭಾರತಕ್ಕೆ ಪಾಕಿಸ್ತಾನ್ ನುಗ್ಗುವ ಮನಸ್ಸಿದ್ದರೆ, ಅದು ಕಾಶ್ಮೀರದ ಗುಡ್ಡಗಾಡುಗಳ ಮೂಲಕವಲ್ಲ-ಪಂಜಾಬಿನ ಹೆಬ್ಬಾಗಿಲಿನಿಂದಲೇ ನುಗ್ಗುತಿತ್ತು. ಈಗಿನ ಭೀಕರಾಯ ಸೋಲ್ಜರಿನಿಗೆ ಸೊಕ್ಕು. ಭಾರತದೊಂದಿಗೆ ಸೇರಿರುವ ಕಾಶ್ಮೀರದ ಅಕ್ರಮಣವೆಂದರೆ ಪ್ರತ್ಯಕ್ಷ ಭಾರತಾಕ್ರಮಣ. ಆದ್ದರಿಂದ ಪಾಕಿಸ್ತಾನ್ ನುಗ್ಗುವ ಹಕ್ಕು ನಮಗೆ ಕಾನೂನು ಮತ್ತು ಸೇನಾ ವ್ಯಾಪ್ತಿಯಿಂದಿದ್ದರೂ ಕಲಹಕ್ಷೇತ್ರ ವಿಸ್ತರಿಸಬಾರದೆಂಬೊಂದೇ ಸದುದ್ದೇಶದಿಂದ ನಾವು ಪಾಕಿಸ್ತಾನದ ಕಡೆಗೆ ಕಣ್ಣು, ಕಾಲಿಕ್ಕಲಿಲ್ಲ. ಭಾರತದ ಸ್ಥಾನದಲ್ಲಿ ಬೇರಾವ ರಾಷ್ಟ್ರವಿರುತಿದ್ದರೂ ಇಂತಹ ತಾಳ್ಮೆ ಪ್ರದರ್ಶಿಸುತ್ತಿರಲಿಲ್ಲ" ಎಂದರು. ಧಾರ್ಷ್ಟ-ವಾಕಿಸ್ತಾನ್ ಸಮ್ಮಿಲನದ ಕುರಿತು ಪಂಡಿತಜೀ "ಭವಿಷ್ಯದಲ್ಲೆಂದಾದರೊಂದು ದಿನ ಪಾಕಿಸ್ತಾನ್ ಜನತೆಯು ಭಾರತ ಕೇಂದ್ರ ಸೇರಿವೆವೆಂದರೂ ನಾವು ಬೀಡವೆನ್ನುತ್ತೇನೆ. ಪಾಕಿಸ್ತಾನದಲ್ಲಿ ನಿರ್ಮಿಸಿರುವ ಹೊರೆಗಳನ್ನೂ ಸಮಸ್ಯೆಗಳನ್ನೂ ಹೊತ್ತುಕೊಳ್ಳಲು ನಾನು ತಯಾರಿಲ್ಲ"ವೆಂದರು. ಪಾಕಿಸ್ತಾನವನ್ನು ನುಗ್ಗುವ ಅಥವಾ ಕಾಶ್ಮೀರದಿಂದ ಅಲ್ಲಿಗೆ ಹರಿಯುವ ಹೊಳೆ ಮುಖಗಳನ್ನು ತಡೆದಿಡುವ ಇಚ್ಛೆ ತಮಗಿಲ್ಲವೆಂಬ ಆಶ್ವಾಸನೆ ಕೊಟ್ಟು ಇನ್ನೊಂದು ಹತ್ತು ಅಥವಾ ನೂರು ವರುಷಗಳಲ್ಲಾದರೂ ಕಾಶ್ಮೀರದಲ್ಲಿ ತಾವು ಗೆದ್ದೇವೆಂಬ ಆಶೆ ಪಾಕಿಸ್ತಾನಿಗರಲ್ಲದ್ದರೆ, ಅವರು ತಪ್ಪಿ ಬಿದ್ದಿದ್ದಾರೆ, ಎಂದರು. "ಜಾಗತಿಕ ಸಂಪತ್ತು ಎಷ್ಟೇ ದುರ್ಬಲವಿದ್ದರೂ, ಜಾಗತಿಕ ಶಾಂತಿಯ ಸಮ್ಮೇಳನಾರ್ಥಿಗಾಗಿ ನಾವು ಆಶ್ರಯಿಸಲಾಗುವ ಏಕಮಾತ್ರ ಸಂಸ್ಥೆಯೆಂದರೆ ಅದೇ" ಎಂದು ಪಂಡಿತ ನೆಹರುಗಳಂದಿದ್ದಾರೆ.

ನೆಹರುಗಳ ಲಂಡನ್ ಪಯಣ

ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರುಗಳು ಲಂಡನ್ನಿನಲ್ಲಿ ನೇರಲಿರುವ 'ಕಾಮನ್‌ವೆಲ್ತ್' ಪ್ರಧಾನ ಮಂತ್ರಿಗಳ ಸಮ್ಮೇಳನ'ಕ್ಕಾಗಿ ಇದೇ ತಾ. 40ರಲ್ಲಿ ದಿಲ್ಲಿಯಿಂದ ವಿಮಾನಹತ್ತಿ ಬೊಂಬಾಯಿಗೆ ಬಂದು, ಅಲ್ಲಿಂದ ಲಂಡನ್ನಿಗೆ ಹಾರಿದ್ದಾರೆ. ನೆಹರುಗಳೊಂದಿಗೆ ಸಿಂಪೆಳದ ಪ್ರಧಾನಮಂತ್ರಿಣಿ ಸೇನಾನಾಯಕೆಯೂ ಹೋಟಿದ್ದರು. ಪಾಕಿಸ್ತಾನ್ ಪ್ರಧಾನ ಮಂತ್ರಿ ಮಿ. ಲಿಯಾಖತ್ ಅಲೀಖಾನ್ ತಾ 7ರಲ್ಲಿ ಲಂಡನ್ನಿಗೆ ಪಯಣಿದ್ದಾರೆ.

ಲಂಡನ್ನಿನಲ್ಲಿ ನೇರಲಿರುವ ಈ ವಸಾಹತು ಪ್ರಧಾನಿ ಸಮ್ಮೇಳನವು ಪ್ರಾಮುಖ್ಯ ದ್ದಿದೆ. 'ಬ್ರಿಟಿಷ್ ಕಾಮನ್‌ವೆಲ್ತ್'ಎಂದು ಕರೆಯಲ್ಪಡುತ್ತಿರುವ ಈ ರಾಷ್ಟ್ರಗುಂಪಿನಲ್ಲಿ ಈ ಮೊದಲು ಬೆಳ ರಾಷ್ಟ್ರಗಳಷ್ಟೇ ಇದ್ದುವು; ಈಗ ಭಾರತ, ಪಾಕಿಸ್ತಾನ್, ಸಿಂಹಳಗಳಂತಹ ತರಹದ ರಾಷ್ಟ್ರಗಳು ಸೇರಿವೆ. ಈ ನರಿಗೂ ವಸಾಹತು ಸದಸ್ಯ ರಾಷ್ಟ್ರಗಳೊಳಗೆ ಬರೀಹ ನಿಕಟ ದೃಢ ಸಂಬಂಧವೇರ್ಪಟ್ಟಿರದೆ, ಒಪ್ಪಂದ ಮನೋವೃತ್ತಿಯನ್ನಾಧರಿಸಿದ ಸಡಿಲು ಧೋರಣೆ ಮಾತ್ರವಿದೆ. ಬ್ರಿಟಿಷ್ ಸಾಮ್ರಾಜ್ಯ ಬ್ರಿಟನ್ನು ಮತ್ತಿತರ ವಸಾಹತುಗಳೊಳಗಿನ ಮಾಧ್ಯಮವಾಗಿದ್ದಾರೆ. ಯುದ್ಧ ಸಮೇತ ಎಲ್ಲಾ ಸಂಪೂರ್ಣಾಧಿಕಾರಗಳು ವಸಾಹತು ರಾಷ್ಟ್ರಗಳಿವೆ. ಸದ್ಯದ ಲೋಕ ಬಿಕ್ಕಟ್ಟಿನ ಕಾಲದಲ್ಲಿ ಒಂದು ವಸಾಹತಿನವಂಗೆ, ಇನ್ನೊಂದು ವಸಾಹತಿನಲ್ಲಿ ನಾಗರಿಕ ಕಾರ ಕೊಡುವ, ಮತ್ತಿತರ ಸಂಬಂಧಗಳನ್ನು ರೂಪಿಸುವ ಕರಾರು ದಾಖಲೆಗಳಾಗುವ ನಿರೀಕ್ಷೆಯೂ ಈ ಬಾರಿಯ ಸಮ್ಮೇಳನದಲ್ಲಿ ಬರಬಹುದು. ಭಾರತದ ವಿಯೋಜಿತ ಘಟನೆಯಲ್ಲಿ "ರಿಪಬ್ಲಿಕ್" ರಾಷ್ಟ್ರವಾಗುವ ಗುರಿ ನಿರೂಪಿಸಲ್ಪಟ್ಟಿದೆ. ಹಾಗೆ ಜನತಾ ರಾಜ್ಯವಾಗುವಾಗ ಬ್ರಿಟಿಷ್ ರಾಜರ ಸಂಬಂಧ ಕಡಿಯಲೇ ಬೇಕಾದರೂ, ಇನ್ನೊಂದು ಲೋಕ ಯುದ್ಧದ ಅಪಾಯವಿದ್ದಿರುವ ಈ ಕಾಲದಲ್ಲಿ ತನ್ನ ರಕ್ಷಣೆಗೆ ಬೇಕಾಗುವ ಉಪಕರಣಗಳನ್ನು ಇನ್ನೂ ಕೆಲವು ವರುಷಗಳ ವರೆಗೆ ಹೊರ ದೇಶಗಳಿಂದಲೇ ತರಿಸಿಕೊಳ್ಳಬೇಕಾಗಿರುವ ಭಾರತವು ವಸಾಹತು ಸ್ನೇಹ ಸಂಬಂಧ ಬಿಟ್ಟು ಏಕಾಕಿ ದೂರ ಹೋಗುವದು ಅಪಾಯಕರ. ಇವೆಲ್ಲಾ ಯೋಚನೆ, ಸೂಚನೆಗಳು ಲಂಡನ್ ಸಮ್ಮೇಳನದಲ್ಲಿ ಮುಂದೆ ಬರಲಿವೆ. ನೆಹರೂಗಳು ನಾಲ್ಕು ವಾರ ಭಾರತದಲ್ಲಿ ಗೈರುಹಾಜರು! ವಿದೇಶ ಮಂತ್ರಿ ಖಾತೆ ಆ ಪರಿಗೆ ಶ್ರೀ ಎನ್. ಜಿ. ಅಯ್ಯಂಗಾರರ ಕೈಯಲ್ಲಿ.

ಶ್ರೀ ನರಿಮೆನ್

ಬೊಂಬಾಯಿಯ ಅಡ್ವಕೇಟ್ ಜನರಲ್ ಶ್ರೀ ನಾರಿಮನ್, ಬೇಕ್ ಬೇಧೀರ ಎಂದು ಹೆಸರು ಪಡೆದ ಕಾಂಗ್ರೆಸ್ ಧುರೀಣರಿದ್ದು ಹಲವು ವರುಷ ಅಜ್ಞಾತರಾಗಿದ್ದೆ, ಇತ್ತೀಚೆಗೆ ಪುನಃ ರಾಜಕೀಯ ಪ್ರವೇಶಿಸುವ ಅಲೆ ಪ್ರದರ್ಶಿಸಿದ್ದ ಶ್ರೀ. ಕೆ. ಎಫ್. ನರಿಮೆನರು ಇದೇ ತಾ. 5ರಲ್ಲಿ ದಿವಂಗತರಾದರೆಂದು ತಿಳಿದುಬಂದಿದೆ. ಪಾಕಿಸ್ತಾನದ ಸಿಂಧ್ ಗವರ್ನರ್ ಗುಲಾಮ್ ಹುಸ್ಸೇನ್ ಹಿದಯತುಲ್ಲರೂ ಇದೇ ತಾ 4ರಲ್ಲಿ ಕರಾಚಿಯಲ್ಲಿ ನಿಧನಗೊಂಡರು.

೧೬ನೇ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ ಬೆಳಗಾಮ—

ಈ ಸಮ್ಮೇಳನವು ಇದೇ ಅಕ್ಟೋಬರ್ ದಿನಾಂಕ ೨೫ ಮತ್ತು ೨೬ನೆ ಲಿಂಗರಾಜ ಕಾಲೇಜಿನಲ್ಲಿ ಜರಗಲಿದೆ. ವೈದ್ಯಗುರು ಡಾ. ಅಪಲಸೇಕರ ಇವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಸಮ್ಮೇಳನದ ಜತೆಗೆ ಔಷಧಿ ಪ್ರದರ್ಶನ ಮತ್ತು ಚಿಕಿತ್ಸಾ ಸಂಘಾಸಾ ಪರಿಷದ ಇವುಗಳು ನಡೆಯಲಿವೆ.

: ಬಂಧುವ ಸಲುವಾಗಿ ಈ ಕೆಳಗಿನ ವಿಷಯಗಳನ್ನು ಇಡಲಾಗಿದೆ.

೧ ಚಿಕಿತ್ಸೆಯಲ್ಲಿ ರಸರಾಸ್ತ್ರದಿಂದ ಆದ ಪ್ರಗತಿ; ೨ ಆಯುರ್ವೇದ ವೈದ್ಯಿಯಂಗ ಇಂಜೆಕ್ಷನ್‌ನ ವಿಚಾರ; ೩ ರೋಗ ನಿದಾನದಲ್ಲಿ ಆಧುನಿಕ ಉಪಕರಣಗಳ ಅವಶ್ಯಕತೆ ಇಬಂರಗಳನ್ನು ದಿನಾಂಕ ೩೦-೧೦-೪೮ರೊಳಗಾಗಿ ಕಳಿಸತಕ್ಕದ್ದು. ಸ್ವಾಲಬೇಕಾದವರು ತಾ. ೨೦-೧೦-೪೮ರೊಳಗಾಗಿ ರೂ 15 ಫೀ ಕಳಿಸಬೇಕು. ಸ್ವಾಗತ ಸದಸ್ಯ ಫೀ 10 ರೂಪಾಯಿಗಳು. ಪ್ರತಿನಿಧಿ ಫೀ 3 ರೂ ಇರಲಾಗಿದೆ.

ಊಟದ ಬರ್ಚನ್ನು ಬೇರೆ ಕೊಡಬೇಕಾಗುವದು.

ಪತ್ರವ್ಯವಹಾರದ ನಿಲಾಸ ಈ ಕೆಳಗಿನಂತಿದೆ.

ಕಾರ್ಯದರ್ಶಿ, ೧೬ನೇ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ, ೧೬೫೬ ರಾಮು ದೇವ ಬೀದಿ, ಬೆಳಗಾಮ—

ಉಡುಪಿ

ಗಾಂಧಿ ಜಯಂತಿ ಉಡುಪಿ ಟೌನ್ ಹೈಸ್ಕೂಲಿನ ಸ್ಕೌಟ್ಸ್ ಗೈಡ್ಸ್ ಶೋಭೆಯಲ್ಲಿ ಸರ್ವೀಸ್ ಲೀಗಿನ ವತಿಯಿಂದ ಟೌನ್ ಹೈಸ್ಕೂಲು ವಿದ್ಯಾರ್ಥಿಗಳು ಇದೇ ತಾ 2ರಬ್ಬಿ ಪೇಸಲ್ಸ್ ಹಾಲಿನಲ್ಲಿ ಗಾಂಧಿ ಜಯಂತಿಯನ್ನಾಚರಿಸಿದರು. ಶ್ರೀ ಕೆ. ಸಂಜೀವ ಭಟ್ಟರು ಅಧ್ಯಕ್ಷತೆ ವಹಿಸಿದ್ದರು. ಲೀಗಿನ ಅಧ್ಯಕ್ಷ ವಿ. ಜೆಗರಿಸಲ್ಪಟ್ಟರು ಸ್ವಾಗತ ಭಾಷಣವಿತ್ತರು. ವರದಿವಾಚನ್ನ ವಿದ್ಯಾರ್ಥಿಯೊಬ್ಬರ ಸ್ವನಿರ್ಮಿತ 'ಗಾಂಧಿಲಾವಣಿ' ಆಗಿ ಶ್ರೀಗಳಾದ ಎಸ್. ಕೃಷ್ಣ ಭಂಡಾರಿಗಳು ಮತ್ತು ಎ. ಎಸ್. ವಿ. ಹೆಗ್ಡೆಯವರು ಭಾಷಣಮಾಡಿದರು ಅಧ್ಯಕ್ಷರ ಸಮಯೋಚಿತ ಭಾಷಣವಾದೊಡನೆ ವಿವಿಧ ವಿನೋದಾವಳಿಗಳ ಪ್ರದರ್ಶನಗಳಾದುವು. ಲೀಗಿನ ಕಾರ್ಯದರ್ಶಿಯಾದ ಶ್ರೀ ಶ್ರೀಪತಿ ಉಪಾಧ್ಯರು ಧನ್ಯವಾದಗಳನ್ನರ್ಪಿಸಿದರು.

ಸರ್ಕಲ್ ಕಾಂಗ್ರೆಸ್ ಕಮಿಟಿ ವತಿಯಿಂದ ಕಾಂಗ್ರೆಸ್ ಕಚೇರಿಯಲ್ಲಿ ಪ್ರಭಾತಫೇರಿಯೊಡನೆ ಕಾರ್ಯಾರಂಭ. ಶ್ರೀ ಕೆ ನರಹರಿ ಕಂಪ್ತಿಯವರು ಧ್ವಜಾರೋಹಣ ಮಾಡಿದರು. ಸಂಜೆ ಸಾರ್ವಜನಿಕ ಸಭೆಯು ಗಾಂಧಿ ಮೈದಾನದಲ್ಲಿ ಡಾ। ಸುಂದರರಾಮ ಶೆಟ್ಟಿಗಾರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಸ್. ವಿ. ಹೆಗ್ಡೆಯವರು ಭಾಷಣಮಾಡಿದರು. ಶ್ರೀ ಪಯೋಧಿ ರಾಮಮಾಸ ಶೈಣೈ ಮತ್ತು ಪಾರ್ಟಿಯವರು ತಾಳಲಾವಣಿಯನ್ನು ಜುರುಬಾಗಿ ಹಾಡಿದರು. ಅಧ್ಯಕ್ಷರು ಖಾನಸೇವೆಗಾಗಿ ಅಭಿನಂದಿಸಿ, ಮಹಾತ್ಮಾ ಗಾಂಧಿಯವರ ಸ್ಮಾರಕ ಭಾಷಣವನ್ನಿತ್ತರು.

ಕಟಪಾಡಿ ತಾ 2ನ್ನ ಎಣಗುಡ್ಡೆ ಶ್ರೀ ದುರ್ಗಾ ಪರಮೇಶ್ವರಿ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕೃಷ್ಣ ಮಂಡಕಾಲರ ನೇತೃತ್ವದಲ್ಲಿ ಭಜನೆ ಮತ್ತು ಸೂತ್ರಯುಚ್ಚದ ಮೂಲಕ ಗಾಂಧೀ ಜಯಂತಿ ಆಚರಿಸಲ್ಪಟ್ಟಿತು. ಆಪರಾಷ್ಟ್ರ ಕಟಪಾಡಿ ಶ್ರೀ ಯಸ್. ವಿ. ಯಸ್. ಮಾಧ್ಯಮಿಕ ಶಾಲಾ ವಕ್ಕಾರದಲ್ಲಿ ಶ್ರೀ. ಪಿ. ಲಕ್ಷ್ಮೀನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆನೇರ ಭಜನೆ ನುತ್ತು ಕೆಲವರ ಭಾಷಣಗಳಾದುವು. ಗಾಂಧೀ ಶ್ರೀ ಕಳಿಯಿಗೆ ಪೂಜ ಸಂಗ್ರಹವಾಗಿ ಕ. ಸ. ಕಾಂಗ್ರೆಸ್ ಕಾರ್ಯದರ್ಶಿಯರ ಧನ್ಯವಾದಗಳಾದುವು.

ಸಹಕಾರಿ ಸಂಘಗಳಿಗೆ—
ಮುನ್ಸಿಫ್ ಕೋರ್ಟುಗಳಿಗೆ—
ವರ್ತಕದಾರರಿಗೆ—ಶಾಲೆಗಳಿಗೆ—

ಬೇಕಾಗುವ ರಿಜಿಸ್ಟ್ರಿಗಳು, ರಶೀದಿ ಪುಸ್ತಕಗಳು, ಫಾರ್ಮುಗಳೂ, ಎಕೌಂಟ್ ಪುಸ್ತಕ, ಕುರಿಫಂಡು ಪುಸ್ತಕಗಳೂ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನೇ
ಉಪಯೋಗಿಸಿರಿ.

ಮಂಗಳೂರು

ಮುನಿಸಿಪಲ್ ಕೌನ್ಸಿಲ್ ಸಿಬ್ಬಂದಿ—ಕಳದ ತಾ 25ರಲ್ಲಿ ಶ್ರೀ ಎಲ್. ಸಿ. ನಾಯಿಕರ ಅಧ್ಯಕ್ಷತೆಯಲ್ಲಿ ಜರಗಿತು. ಕಾನ್ಸಿಲಿನ ಆಡಳಿತ ಕುರಿತು ಕಲೆಕ್ಟರರ ವಿಮರ್ಶೆಯನ್ನು ರಿಕಾರ್ಡು ಮಾಡಲಾಯಿತು. ಕಲೆಕ್ಟರರು ನಗರದ ರಸ್ತೆಗಳ ಸ್ವೆರ್ವಜ್ಞಪು ತೃಪ್ತಿಕರವಾಗಿಲ್ಲ. ಶಿಕ್ಷಣ ವಿಚಾರದಲ್ಲಿ ಸೊನತೆಯೂ ಆಗಿಲ್ಲ. ಸೊಳ್ಳೆತಾಟ ಮತ್ತು ಆನೆ ಕಾಲು ರೋಗದ ಕಡೆಗೆ ಹೆಚ್ಚು ಗಮನ ಕೊಡಬೇಕು ಇತ್ಯಾದಿ ಸೂಚಿಸಿರುವರು. ರೈತ್ತ ನಿಲ್ವಾಣದಲ್ಲಿ ವಿದ್ಯುದ್ದೀಪಗಳ ಸೌಕರ್ಯಗಳನ್ನು ಒದಗಿಸುವಂತೆ ರೈತ್ತ ಅಧಿಕಾರಿಗಳ ಗಮನಕ್ಕೆ ತರಲಾಯಿತು. ನಗರದಲ್ಲಿ ರಾಶಿಗಳ ವಿಸ್ತರಣೆಕ್ಕಾಗಿ ಸರಕಾರದೊಡನೆ ಏನಸ್ಸು ಸಾವಿರ ರೂಪಾ ಪಡೆಯಬೇಕೆಂದು ಪ್ರಸ್ತಾಪಿಸಲಾಯಿತು. ಸಿಬ್ಬಂದಿ ನಗರದಲ್ಲಿ ಕೃಷಿ ಕೈಗಾರಿಕೆಯ ಒಂದು ಪ್ರದರ್ಶನ ಜರಗಿಸಬೇಕೆಂಬ ನಿರ್ಣಯಕ್ಕೆ ಒಂದು ಉಪ ಸಮಿತಿಯ ನೇಮಕವಾಯಿತು. ಭಾಷಾನ್ಯಯ ಪ್ರಾಂತರಚನಾ ಸಮಿತಿಗೆ ನಗರಸಭೆಯಿತ್ತ ಭಿನ್ನವತ್ತಳೆಯನ್ನು ಮಾನ್ಯ ಮಾಡಲಾಯಿತು.

'ಸ್ವತಂತ್ರ ಭಾರತದ ಆದರ್ಶ ನಾಗರಿಕ'—ಈ ವಿಷಯದ ಮೇಲೆ ಕಳದ ಆಗೋಸ್ತು ತಾ 15ರಲ್ಲು ಮಂಗಳೂರು ಥಿಯಾಸಫಿಕಲ್ ಸೊಸ್ಯಾಟಿಯ ಆಶ್ರಯದಲ್ಲಿ ನಡೆದ ಭಾಷಣ ಸ್ಪರ್ಧೆಯಲ್ಲಿ ಪೆರ್ಲ ಸತ್ಯನಾರಾಯಣ ಹ್ಯಾಸ್ಕೂಲಿನ ಶ್ರೀ ಎಮ್. ಶಂಕರನಾರಾಯಣ ಭಟ್ಟರಿಗೆ ಪ್ರಥಮ ಬಹುಮಾನವೂ ಅದೇ ಶಾಲೆಯ ಶ್ರೀ. ಕೆ ಬಿ. ಬಾಳೆಮಲೆ ಇವರಿಗೆ ದ್ವಿತೀಯ ಬಹುಮಾನವೂ ಸಿಕ್ಕಿರುವುದು.

ಕೆದ್ರಿ ಹೋಸ್ಪಟ್ಟಿಣಿನಲ್ಲಿ ಈಗ ತಂತೀ ಶಾಪೆ ತೆರೆಯಲ್ಪಟ್ಟಿರುವುದರಿಂದ ಜನರಿಗೆ ತುಂಬ ಅನುಕೂಲವಾಗಿವೆ.

ರಾಜಾರಾಮ ಮೋಹನ ರಾಯಿಯವರ ಪುಣ್ಯದಿನಾಚರಣೆಯು ಕಳದ ತಾ 26ರಲ್ಲು ಬ್ರಹ್ಮ ಸಮಾಜದ ಆಶ್ರಯದಲ್ಲಿ ನಡೆಯಿತು. ಸರಕಾರಿ ವಕೀಲ್ ಶ್ರೀ ಕೆ. ಎಸ್. ಹೆಗ್ಡೆಯವರು ಅಧ್ಯಕ್ಷತೆವಹಿಸಿದ್ದರು. ಪ್ರಾರ್ಥನೆಯಾದ ಬಳಿಕ ಶ್ರೀಮತಿಗಳಾದ ಶಾರದಾಬಾಯಿ ತಲ್ವಾರ್, ಇ. ಕೆ. ನಯನಾರಿಯವರೂ ಶ್ರೀಗಳಾದ ಎಸ್. ಪಿ. ಕಿಣಿ ಮತ್ತು ಕೆ. ಪ್ರಹ್ಲಾದ ಹೆಗ್ಡೆಯವರೂ ರಾಯರುಗಳ ಜೀವನಚರಿತ್ರೆಯನ್ನೆತ್ತಿ ಅವರ ಸಂದೇಶಗಳನ್ನು ವಿವರಿಸಿ ಭಾಷಣವಿತ್ತರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ರಾಯರುಗಳು ಭಾರತ ಪುನರುತ್ಥಾನದ ಪ್ರಥಮ ನಕ್ಷತ್ರವೆಂದೂ ಆ ಮೇಲೆ ನಮ್ಮ ನೇತಾ ಭಾವನೆ ಬೆಳೆದು ಬಂತೆಂದೂ ತಿಳಿಸಿದರು ಶ್ರೀ ಬಿ. ಶ್ರೀವೆಸಾ ಗರರು ಧನ್ಯವಾದಗಳನ್ನರ್ಪಿಸಿದರು. ಆನಿಬೆಸೆಂಟ್ ನಡೆದ ಪ್ರಾರ್ಥನಾ ಸಮಯದಲ್ಲಿ ಶ್ರೀ ಎಚ್. ನರಸಪ್ಪಯ್ಯನವರು ಕೇಂದ್ರ ಸರಕಾರಕ್ಕೂ ಹಿಂದೀ ಸೈನಿಕರಿಗೂ ಹೈದರಾಬಾದು ವಿಜಯಕ್ಕಾಗಿ ನಂದನೆಗಳನ್ನರ್ಪಿಸಿದರು.

ದ ಕ ಜಿಲ್ಲಾ ಗ್ರಾಮ ಸೇವಾ ಸಮಿತಿ—ಇದಕ್ಕೆ ಗೌರ್ನರ್ ಸರ್ಪದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಖಾದಿ ಉತ್ಪತ್ತಿ ಮತ್ತು ಮಾರಾಟ ಮಾಡುವರೆ ಅಖಿಲ ಭಾರತ ಚರಕಾ ಸಂಘದಿಂದ ಮನ್ನಣೆ ದೊರೆತಿದೆ

ವಾರ್ಷಿಕೋತ್ಸವ ಮತ್ತು ಪದವೀದಾನ ಸಮಾರಂಭ—ದ. ಕ. ಜಿಲ್ಲಾ ಹಿಂದುಸ್ತಾನಿ ಪ್ರಚಾರ ಸಮಿತಿಯ ವಾರ್ಷಿಕೋತ್ಸವ ಮತ್ತು ಪದವೀದಾನ ಸಮಾರಂಭವು ಕಳದ ತಾ 26ರಲ್ಲು ಶ್ರೀ ಕೆ. ಆರ್. ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿ ಕಾರ್ಯದರ್ಶಿ ಶ್ರೀ ಕೆ. ಆರ್. ನಂಜುಂಡಾ ಅವರ ಸ್ವಾಗತ ಭಾಷಣ, ಹಿಂದೀ ಪ್ರಚಾರಕ ಶ್ರೀ ಎನ್. ಎಸ್. ನಾಯಕರ ವರದಿ ವಾಚನಗಳಾದ ನಂತರ ಗವರ್ನಮೆಂಟ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಸ್. ಎ. ಹಾಶಿಮಿಯವರು ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಶಸ್ತಿಗಳನ್ನಿತ್ತರು.

ಭಾಷಾವಾರು ಪ್ರಾಂತ ರಚನೆಗೆ ಬೆಂಬಲ—ಮಂಗಳೂರು ಪ್ರಗತಿಶೀಲ ಲೇಖಕರ ಸಂಘ ಮತ್ತು ಪ್ರಕಾಶ ಕೂಟಿದವರ ಆಶ್ರಯದಲ್ಲಿ ಕಳದ ತಾ 20ರಲ್ಲು ಭಾಷಾವಾರು ಪ್ರಾಂತ ರಚನೆಯ ಪ್ರಶ್ನೆಯನ್ನು ಕುರಿತು ಚರ್ಚೆಸಾನವರೆ ಸಭೆಯೊಂದು ಶ್ರೀ ಎಸ್. ಮುಕುಂದರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಚರ್ಚೆಯಲ್ಲಿ ಶ್ರೀಗಳಾದ ಕಯ್ಯಾರ ಕಿಂಞಣ್ಣ ರೈ, ಯು. ಎಸ್. ಶ್ರೀನಿವಾಸ ಭಟ್, ಬಿ. ಶಂಕರ ಭಟ್, ಎಮ್. ಗೋಕರ್ಣ ಪೈ, ಮಂಜೇಶ್ವರ ಸಾಂತಯ್ಯ ಭಟ್ ಮೊದಲಾದವರು ಭಾಗ ವಹಿಸಿದ್ದರು. ಭಾಷಾನಾರು ಪ್ರಾಂತ ರಚನೆಯನ್ನು ಮುಂದರಿಸುವುದು ಶ್ರೇಯಸ್ಕರವಲ್ಲವೆಂದೇ ತೀರ್ಮಾನವಾಯಿತು.

ಜಿಲ್ಲಾ ಕಲೆಕ್ಟರರ ಪ್ರಕಟಣೆ—1947ನೆ ಇಸವಿಯ ಜೋನಸು ಯೋಜನೆ ಪ್ರಕಾರ ಕೊಟ್ಟ ಕೂಪನುಗಳನ್ನು ಕೆಲವು ರೈತರು ಇತರರಿಗೆ ಮಾರುತ್ತಾರೆಂದು ತಿಳಿದು ಬಂದಿದೆ. ಅಕ್ಕಿ ವಿತ್ತವನ್ನು ಸರಕಾರಕ್ಕೆ ಒಪ್ಪಿಸಿದವರು ಕೂಪನುಗಳಿಂದಮಿಗುವ ಗೊಬ್ಬರದಿಂದ ತಮ್ಮ ಸ್ವಂತ ಭೂಮಿಯನ್ನು ಇನ್ನಷ್ಟು ಫಲವತ್ತಾಗಿ ಮಾಡಬೇಕೆಂಬುದೇ ಸರಕಾರದವರು ಕೂಪನುಗಳನ್ನು ಕೊಡುವ ಉದ್ದೇಶವಾಗಿದೆ ರೈತರಿಗಾಗಿ ವಿಶೇಷವಾಗಿ ಟ್ಟದ್ದ ಈ ರಿಯಾಯಿತಿಯನ್ನು ದುರುಪಯೋಗಪಡಿಸುವರೆಂದು ಸರಕಾರದವರು ಯೋಚಿಸಿರಲಿಲ್ಲ ಈಗ ನಡೆಯುವ ಕಳ್ಳ ಸಂತೆಯ ವ್ಯಾಪಾರವು ಜೋನಸ್ ಯೋಜನೆಯ ನಮ್ಮಿಳ್ಳುದ್ದೇಶವನ್ನೆ ಭಂಗಪಡಿಸುವುದು. ಆದುದರಿಂದ ಎಲ್ಲರೂ ತಮ್ಮ ಕೂಪನುಗಳ ಬದಲಾಗಿ ಸಿಗುವ ಗೊಬ್ಬರವನ್ನು ಆದಷ್ಟು ಬೇಗನೆ ಪಡಕೊಂಡು ಅದರ ಸದುಪಯೋಗ ಮಾಡಬೇಕೆಂದು ಈ ಮೂಲಕ ಎಚ್ಚರಿಸಲಾಗಿದೆ. ಅಲ್ಲದೆ ಕಳ್ಳ ಸಂತೆಯಲ್ಲಿ ಕೂಪನುಗಳನ್ನು ಪಡಕೊಂಡಲ್ಲಿ ಅಂತಹ ಕೂಪನುಗಳ ಬದಲಾಗಿ ಗೊಬ್ಬರ ಕೊಡಲು ಸರಕಾರಿಸಲಾದೀತು ಎಂದು ಸಹ ಎಚ್ಚರಿಸಲಾಗಿದೆ.

ದ. ಕ. ಜಿಲ್ಲಾ ಒಟೊ ಮೋಟೈಲ್ ಕೆಲಸಗಾರರ ಸಂಘದ ವಿಶೇಷ ಸಭೆಯು ಕಳದ ತಾ 29ರಲ್ಲು ಶ್ರೀ ಎಸ್. ಎಸ್. ಸುವರ್ಣರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯದರ್ಶಿಯಾಗಿದ್ದ ಡಾ। ಸಂಜೀವ ನಾಥರು ತನ್ನ ಕಾರ್ಯದರ್ಶಿತ್ವಕ್ಕೆ ಕೊಟ್ಟ ರಾಜೀನಾಮೆಯನ್ನು ಸ್ವೀಕರಿಸಲಾಯಿತು. ಸಂಜೆಗೆ ಮೈದಾನದಲ್ಲಿ ಜರಗಿದ ಬಹಿರಂಗ ಸಭೆಯಲ್ಲಿ ಶ್ರೀಗಳಾದ ಕೆ. ಕೆ. ನಟ್ಟ, ಭಾಸ್ಕರ್ ರೈ, ಎಸ್. ಎಸ್. ಕಿಲ್ಲೆ ಮೊದಲಾದವರು ಕಾಲೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರು ತನ್ನ ಭಾಷಣದಲ್ಲಿ ಮೋಟಾರ್ ಕೆಲಸಗಾರರು ತಮ್ಮ ನಡತೆಯ ಕಡೆಗೂ ಹೆಚ್ಚಿನ ಗಮನವನೀಯಬೇಕೆಂದು ಸೂಚಿಸಿದರು

ಪ್ರಾಚೀದಯಾ ಸಂಘದ ಮಹಾಸಭೆಯು ಕಳದ ತಾ 28ರಲ್ಲು ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈವಾರ್ ಅವರ ಅಧ್ಯಕ್ಷತೆಯಲ್ಲಿ ಜರಗಿ ಚಾಲ್ತಿ ವರುಷದ ಕಾರ್ಯಕಾರೀ ಮಂಡಳಿಗೆ ಈ ಕೆಳಗಿನ ಮಹನೀಯರು ಆರಿಸಲ್ಪಟ್ಟರು ಶ್ರೀಗಳಾದ ಧರ್ಮಸ್ಥಳ ಮಂಜಯ್ಯ ಹೆಗ್ಡೆ, ಎಮ್. ಎಲ್. ಸಿ. (ಉಪಾಧ್ಯಕ್ಷ)! ಎವರ್. ಕೆ. ದೇವರಾಜ, ಗೌರವ ಕಾರ್ಯದರ್ಶಿ; ಬಿ. ಎಲ್. ಎನ್. ರೈ, ಗೌರವ ಸಹಾಯಕ ಕಾರ್ಯದರ್ಶಿ; ರಾವ್ ಸಾಹೇಬ್ ಪಿ. ಆರ್. ಆರ್. ಪೂಂಜ, ಗೌರವ ಕೋಶಾಧಿಕಾರಿ; ಡಾಕ್ಟರ್ ಎಚ್. ವಿ. ಆಡಪ, ಪಿ. ವಾಸುದೇವ ರಾವ್, ಶ್ರೀ ಶಶಿಧರಂಪ್, ಎಮ್. ಗೋಪಾಲಕೃಷ್ಣ, ಕೆ, ರಮೇಶರಾವ್, ಎಮ್ ವೆಂಕಟೇಶ ಪೈ, ಇತರ ಸದಸ್ಯರು.

ಬಿನ್ನವತ್ತಳೆ ಸಮರ್ಪಣೆ ಈಚೆಗೆ ಮಂಗಳೂರಲ್ಲಿ ಮೊಕ್ಕಾಂ ಮಾಡಿದ ಭಾಷಾನ್ಯಯ ಪ್ರಾಂತರಚನಾ ಸಮಿತಿಗೆ ಶ್ರೀ ಎಲ್. ಎಕ್ಸ್. ರೇಗೋ, ಬೊಂಬೆ ಪ್ರೆಸಿಡೆನ್ಸಿ ಎಸೋಸಿಯೇಶನಿನ ಜತೆ ಕಾರ್ಯದರ್ಶಿ, ಇವರು ಒಂದು ಬಿನ್ನವತ್ತಳೆಯನ್ನು ಸಮರ್ಪಿಸಿರುವರು.

ನೋಟೀಸು

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No. 27/1948.

ಶೇಖಿ ಸೆಡ್ತಿ, ಜಾಮು ಸೆಡ್ತಿರ ಮಗಳು—ಕಾರ್ಕಳ ತಾಲ್ಲು ಕಲ್ಲಮುಂಡ್ಕೂರು ಗ್ರಾಮದ ಶಿವಾಂಜ ನರಾಂಯಿಂಬಲ್ಲಿರುವವಳು. ..ಅರ್ಜಿದಾರಳು.

ಕಲ್ಲಮುಂಡ್ಕೂರು ಗ್ರಾಮದಲ್ಲಿ ಅರ್ಜಿದಾರಳ ಕುಟುಂಬದ ಮನೆಯಲ್ಲಿ ಕಳದ ತಾರೀಕು 10-6-1948ರಲ್ಲು ಮೃತಪಟ್ಟ ಅರ್ಜಿದಾರಳ ಮಗ K. ಶಿವಣ್ಣ ನೆಟ್ಟಿಗೆ, ಟೊಬಿಕೊ ಮೆನುಫೆಕ್ಚರರ್ಸ್ ಆಂಡಿಯಾ, ಲಿಮಿಟೆಡ್, ಬೊಂಬೆ ಮತ್ತು ಯಿಂಪಿರಿಯಲ್ ಬೇಂಕ್ ಆಫ್ ಯಿಂಡಿಯಾ, ಬಾದರ್ ಬ್ರೈಂಚ್, ಬೊಂಬೆ, ಯಿದರಿಂದ ಕೂಡಾ ಬರತಕ್ಕ ಅರ್ಜಿಯಿಂದ ತೋರುವ ಪೂರಗಳನ್ನು ವ್ಯವಲಾಡುವರೆ ತನಗೆ ವಾರೀಸು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾಳು ಅವಳ ಭಾಗದ ಕುಟುಂಬದ ಮನೇಜರಳಾಗಿ ಮೇಲ್ಕಂಡ ಕೋರ್ಟಿನಲ್ಲಿ ಕೊಟ್ಟ ಅರ್ಜಿಯು ತಾರೀಕು 25-10-1948ನೇ ವೇಳೆಗೆ 10 ಗಂಟೆಗೆ ಸರಿಯಾದ ಕೋರ್ಟು ಮುಂದೆ ತನ್ನ ಗೆಲುವುಪಡೆಯಲಿದೆಂದು ಈ ವಿಚಾರಣೆಯಲ್ಲಿ ಆಕ್ಷೇಪ ಉಳ್ಳವರು ಆವರವರ ಆಕ್ಷೇಪಗಳನ್ನು ಸದರಿ ತಾರೀಕಿನಲ್ಲು ಹಾಜ್ರಾಗಿ ಜ್ಞಾಪಿಸಲು ಮಾಡಿಕೊಳ್ಳಬಹುದಾಗಿ ಈ ಮೂಲಕ ತಿಳಿಯಪಡಿಸಲಾಗುತ್ತದೆ.

A. N. S. Achar
Pleader for Petitioner.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

S. C. 488/1948.

ವಾದಿ—ಜಾಜಿ ಮುರಿಸೋಜ.

ಪ್ರತಿವಾದಿ—ಲುವಿಸ ಸೋಜ.

ಕುಂದಾಪುರ ತಾಲ್ಲು ವಡೇರ ಹೋಬಳಿ ಗ್ರಾಮದಲ್ಲಿರುವ, ಇಂತ್ರು ಸೋಜರ ಮಗ ಲುವಿಸ ಸೋಜರಿಗೆ—

ನೀವು ವಾದಿಗೆ ಬರಕೊಟ್ಟ ದಿಮಾಂಡ ನೋಟಿನ ಅನ್ವಲು ಬಡ್ಡಿ ಖರ್ಚು ಕೂಡಿಂರುವಾಯಿ 86-10-0ನ್ನು ನಿಮ್ಮಿಂದ ಬರಮಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ದಾವೆಯು ತಕ್ಕೀಲು ಮಾಡಿದ ದಾವೆಯು ತಕ್ಕೀಲು ತಾರೀಕು 27-10-1948ನೇ ದಿವ್ಸ ತಕ್ಕೀಗೆ ನಿಶ್ಚಯ್ಯಿರುವದರಿಂದ ಆ ಕುರಿತು ನಿಮ್ಮ ಆಕ್ಷೇಪ ಯಿದ್ದಲ್ಲಿ ಕೋರ್ಟಿನವರು ತನ್ನ ದಿವಸ ಕರದಾಗ್ಗೆ 11 ಘಂಟೆಗೆ ಹಾಜರಾಗಿ ಜ್ಯಾಹೀರ್ಮಾಡಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಕರದು, ನಿಮ್ಮ ಗೈರ ಹಾಜರಿಯಲ್ಲಿ ವ್ಯಾಜ್ಯವು ಹೈಸಲು ಮಾಡೋಣಾನೀತೆಂದು ನೀವು ತಿಳಿಯತಕ್ಕದ್ದು.

ಕೋರ್ಟು ಹುಕುಂ ಪ್ರಕಾರ
K. Narayana Kamath.
ವಾದಿಯ ಎಡ್ವೊಕೇಟು.
ತಾ 4-10-1948, ಕುಂದಾಪುರ.



ಆವ್ಯಕಾಂಜನ
ಕಣ್ಣಿಗೆ ಹಿತ, ತಿರುವೇದನೆ, ಉರಿಯ ಶಮನಕ್ಕೆ, ಕುಡಿಹಾಕ್ಕಿ ವೇದನೆಗೂ ಎದೆನೋವು, ಧ್ವಾಯಗಳು ಬಾಹು ಕೊಳ್ಳುವರು, ಜೀರ್ಣ ಮುಂತಾದ ಕೀಲು ಪಿತ್ತಾಶಕ್ತಿ, ಮೊದಿನ ಮೊದಲಾದ ಎಲ್ಲ ರೋಗಗಳಿಗೂ

REGD.
ಆವ್ಯಕಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಕಮಿಳು ಚಿತ್ರಗಳಲ್ಲಿ ವಿನಾದರೊಂದು ವೈಶಿಷ್ಟ್ಯ ವಿದ್ದರೆ ಅದು ಇಲ್ಲಿರಲ್ಲಿ.

ಶಿಖಾಮಣಿ

ಎ. ಎಸ್. ಮಾಣಿ, ಕೃಷ್ಣವೇಣಿ, ಜಯಲಲಿತ.

ತಾರೀಕು 5-10-48ರಿಂದ

ಬರುವ ಚಿತ್ರ:
ಎಮ್. ಜಿ. ಹ್ಯೊದಕ್ಷಿಣ್ಣನವರ
"ರಾಜಲಲ್ಲಿ"
ಕಾನನದೇವಿ.

ಪ್ರಕಟಣೆ

ಕಟಪಾಡಿ ಶ್ರೀ ವೆಂಕಟ್ರಮಣ ದೇವರ ಸನ್ನಿಧಿಯಲ್ಲಿ—ಇದೇ ಆಶ್ವೀಜ ಶುದ್ಧ ಪಂಚಮಿ ಮಂಗಳವಾರ ಲಾಗಾಯ್ತು ಆಶ್ವೀಜ ಬಹುಳ ಬದಿಗೆ ಮಂಗಳವಾರ(ತಾ, 12-10-48ಕ್ಕೆ ಪ್ರಾರಂಭವಾಗಿ 19-10-48) ತನಕ ಏಳು ದಿನಗಳ ಆಹೋರಾತ್ರಿ ಭಜನಾ ಸಪ್ತಾಹವು ಶ್ರೀದೇವತಾನುಗ್ರಹದಿಂದಲೂ, ಇಷಪರಲ್ಲಿ ಸಾಧನಪಾವ ಈ ಮಹತ್ಕಾರ್ಯಕ್ಕೆ ತಾವು ಭಕ್ತಿಪೂರ್ವಕವಾಗಿ ಉದಾರಹಸ್ತದಿಂದ ಮಾಡಿದ ದ್ರವ್ಯ ಸಹಾಯದಿಂದಲೂ ಎಂದಿನಂತೆ ಸರ್ವನಿಯೋಗಗಳೊಂದಿಗೆ ಸಾಂಗವಾಗಿ ನೆರವೇರಲಿರುವುದು. ಈ ಮಹೋತ್ಸವಕ್ಕೆ ತಾವು ಅಗತ್ಯವಾಗಿ ಬಂದು ಶ್ರೀದೇವರ ಪ್ರಸಾದವನ್ನು ಸ್ವೀಕರಿಸಿ, ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ಶ್ರೀ ಭಜನೆ ಸಪ್ತಾಹ ಸಮಾರಂಭದಲ್ಲಿ ಶ್ರೀದೇವರ ಸನ್ನಿಧಿಯಲ್ಲಿ ನಡೆಸಬಹುದಾದ ಸದ್ವಿನಿಯೋಗಗಳ ವಿವರ:—ರಾತ್ರಿಕಾಲದ ಹೂವಿನ ಪೂಜೆ ಒಂದಕ್ಕೆ 10/- ಹೂವಿನ ಪೂಜೆಗೆ ರೂ. 5/ ; ದೀಪಾರಾಧನೆ ರೂ. 2/-; ವಿಟ್ಲಪಿಂಡಿ ರೂ. 0-8-0; ಕರ್ಪೂರಾರತಿ ರೂ. 0-2-3; ತುಳಸೀ ತಾರಾ ರೂ. 0-1-3; ಆಹೋರಾತ್ರಿಯ ಪೂರ್ಣನಿಯೋಗಕ್ಕೆ ರೂ 25/-.

ಸಾಂಗಾಳ ಅಣ್ಣಪ್ಪ ನಾಯಕ್
ಪ್ರಕೃತ ಆಡಳಿತೆದಾರ.

ಕಟಪಾಡಿ ತಾ 1—10—48

ನೋಟೀಸು

ಕಾಸ್ರಗೋಡ ಡಿ. ಮು. ಕೋರ್ಟಿನಲ್ಲಿ.

O. S. No. 278/1945

R. I. A. ಐ೦ 904/1948.

ದೇವರಕ್ಕೆ ಸಹಾ-ಅರ್ಜಿದಾರ್ರು. ನಾಡಿನು. ಮತ್ತು

ರಾಮಕ್ಕೆ ಸಹಾ-ರೆಸ್ಪಾಂಡೆಟ್ರು. ಪ್ರ. ರು.

ಸಿವಿ ವ್ಯವಹರಣೆಯ 7, 8, 9, 13ರಿಂದ 24ನೇ ರೆಸ್ಪಾಂಡೆಂಟ್ರಿಗೆ ತಿಳಿಸುವದೇನಂದ್ರೆ:-

7ನೇ ರೆ: ಸರಸ್ವತಿ, 8ನೇ ರೆ: ಕಮಲ, ದಯ್ಯಕ್ಕು ಹೆಂಗಿನ ಮಕ್ಕಳು. 9ನೇ ರೆ: ಗಂಗಾಧರ ಅಳ್ವ, 1ನೇ ರೆ: ರಾಮಕ್ಕ ಮಗ, 13ನೇ ರೆ: ಸೀತಾರಾಮ, 14ನೇ ರೆ: ರತ್ನಾಕರ, 15ನೇ ರೆ: ಪರಮೇಶ್ವರ, 16ನೇ ರೆ: ಸೀತಾರತ್ನ, 17ನೇ ರೆ: ಭಾಗೀಪಿ, 18ನೇ ರೆ: ಕೊರಗಪ್ಪ ಯಾನೆ ಶ್ರೀಧರ, 7ನೇ ರೆ: ಸರಸ್ವತಿ ಮಕ್ಕಳು. ಮ್ಯಾನೇಜ್ಮೆಂಟ್ ಗಾರ್ಡಿಯನ್ 7ನೇ ರೆ: ಸರಸ್ವತಿ. 19ನೇ ರೆ: ಜಯರಾಮ, 20ನೇ ರೆ: ಮುಂಡ್ಕಿಪ್ಪು, 21ನೇ ರೆ: ರವೀಂದ್ರನಾಥ, 22ನೇ ರೆ: ದಯ್ಯಕ್ಕು ಯಾನೆ ಪದ್ಮಾವತಿ, 23ನೇ ರೆ: ವಿಜಯ ಕುಮಾರ, 24ನೇ ರೆ: ಹೆಸರಿದದ ಗಂಡು ಮಗು. 8ನೇ ರೆ: ಕಮಲಳ ಮ್ಯಾನೇಜರ ಮಕ್ಕಳು. ಗಾಡೀಯನ್ ತ್ಯಾ 8ನೇ ರೆ: ಕಮಲ. 7, 13ರಿಂದ 18ನೇಯವರು ಪುತ್ತೂರು ತಾಲ್ಲೂ ಬೆಳ್ಳಾರೆ ಗ್ರಾಮ 9ನೇಯವನು ಬೆಳ್ತಂಗಡಿಯಲ್ಲಿ, 8. 19ರಿಂದ 24ನೇಯವರು ಪುತ್ತೂರು ತಾಲ್ಲೂ ಬಳ್ಳ ಪೂಡ್ಯೂರು ಗ್ರಾಮದಲ್ಲಿ ಸಹಾ ಇರುವವರು.

ಮೇಲ್ಕಂಡ ವ್ಯಾಜ್ಯದಲ್ಲಾದ ಪ್ರಿಲಿಮ್ಸರಿ ಡಿಕ್ರಿ ಪ್ರಕಾರ ಆಸ್ತಿ ಯೇಲಂಡಿಂದ ಅ೦ವಜು ವ್ಯಲುಪಡಿಯುವರೆ ಅರ್ಜಿದಾರ್ರ ಗುಜಕ್ಕೆ ಫೈನಲ ಡಿಕ್ರಿ ಕೊಡಿಸಬೇಕಾಗಿ ದಾಕ್ಲು ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 8-10-1948ಕ್ಕೆ ಇಟ್ಟುರುವದ್ರಿಂದ ಆ ದಿವ್ಸ ನೀವು ಹಾಜರಾಗದಿದ್ರೆ ಎಕ್ಸಪಾರ್ಟಿ ಮಾಡಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ಈ ಮೂಲ್ಕ ನೋಟೀಸು ಕೊಡಲಾಗಿಯಿದೆ.

(sd) **S. Laxman Rau.**

Vakil for Petitioners.

Kasaragod 3-10-48.

ಬೆಳ್ಳೆ—ಬೆಳ್ಳೆ ಇಗರ್ಜಿಯ ಸಹಾಯಕ ಗುರುಗಳಾಗಿದ್ದ ರೆ. ಫಾ. ಸ್ತೇಸಿಯನ್ ಡಿ ಸೋಜರಿಗೆ ಆನಾರೋಗ್ಯ ತೆಯಾಗಿ ಕೊಳಲ್‌ಗಿರಿಗೆ ವರ್ಗವಾದುದಕ್ಕಾಗಿ ಊರವರು ಬೀಳ್ಕರ ಗೊಂಡಿದ್ದಾರೆ. ಇವರು ಕೇವಲ 4 ತಿಂಗಳ ಮೊದಲು ಇಲ್ಲಿಗೆ ಬಂದವರಾದ್ದರೂ ಊರ ಜನತೆಯ ಚಿತ್ತಚಿಂತಕರಿದ್ದು ಜನಪ್ರೀತರಾದ್ದರು.

ಕಲ್ಯಾಣಪುರ:- ತಾ 2ರಲ್ಲಿ ಗಾಂಧೀ ಜಯಂತಿಯು ವಿಜೃಂಭಣೆಯಿಂದ ಜರಗಿತು. ಪ್ರಭಾತಫೇರಿಯಾದ ಮೇಲೆ ಶ್ರೀ ಪಡುಕುದ್ರು ಶ್ರೀನಿವಾಸರಾಯರಿಂದ ಧ್ವಜಾರೋಹಣವಾಯಿತು. ನೂಲುವ ಪ್ರದರ್ಶನ, ಗಾಂಧಿ ಸ್ಮಾರಕ ನಿಧಿ ಹಣಸಂಗ್ರಹ ಮೆರವಣಿಗೆ ಇತ್ಯಾದಿ ಕಾರ್ಯಕ್ರಮಗಳಾಗಿ ರೆ. ಫಾ. ಎ. ರೆಬೆಲ್ಲೋರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಶ್ರೀಗಳಾದ ಬಿ ಆಂತಯ್ಯ ಶೆಟ್ಟಿ, ಕೆ. ದತ್ತ ಭಟ್, ಯು. ಪೀಟರ್ ಲೂವಿಸ್, ಗಿಲ್ಬರ್ಟ್ ಸೋಜ, ಕೆ. ಶೇಷಗಿರಿ ಮೊದಲಾದವರ ಭಾಷಣಗಳಾದವು, ಗಾಂಧೀ ಸ್ಮಾರಕ ನಿಧಿಗೆ ರೂ 318 ಸಂಗ್ರಹವಾಗಿರುವುದು.

ಕುಂದಾಪುರ ಗಾಂಧೀ ಜಯಂತಿಯು ಇವೇ 2-10-48ರಲ್ಲು ಬಹು ವಿಜಂಭ್ರಣೆಯಿಂದ ಜರಗಿತು. ಪ್ರಭಾತಫೇರಿಯಾದಮೇಲೆ ಗಾಂಧೀ ಮೈದಾನದಲ್ಲಿ ಸ್ಥಳೀಯ ಸ. ಕಾಂ. ಕಮಿಟಿ ಅಧ್ಯಕ್ಷ ಶ್ರೀ ಎ. ಬಿ. ಎನ್. ಹೆಬ್ಬಾರರು ಧ್ವಜಾರೋಹಣವನ್ನು ನೂಡಿ, ಗಾಂಧೀಜೀಯು ಅನುಸ್ಥಾನದಲ್ಲಿ ಕಂದ ಉದಾತ್ತ ತತ್ವಿಗಳನ್ನು ವಿವರಿಸಿ, ಅವುಗಳು ಹೇಗೆ ನಮ್ಮ ರಾಷ್ಟ್ರಜೀವನದಲ್ಲಿ ಪ್ರತಿಬಿಂಬಿಸುತ್ತಿವೆ ಎಂಬುದು ವಿಷದವಾಗಿ ತಿಳಿಯಹೇಳಿದರು. ಸಾಯಂಕಾಲ ಪುರ ಮೆರವಣಿಗೆಯಾಗಿ ಗಾಂಧೀ ಮೈದಾನಿನಲ್ಲಿ ಶ್ರೀ ಎನ್. ಎಸ್. ಪರಮೇಶ್ವರಯ್ಯನವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯು ನೆರೆಯಿತು. ಈ ಸಂದರ್ಭದಲ್ಲಿ ಶ್ರೀಗಳಾದ, ಕೋಣ ಆಂಜಪ್ಪ ಕಾರಂತ, ಕೋಟ ಮಣ್ಣ ಶೆಟ್ಟಿ, ಜಗನ್ನಾಥ ಮತ್ತು ಯು ಕೃಷ್ಣ ರಾಯರು ಭಾಷಣವಿತ್ತರು ಅಧ್ಯಕ್ಷರು ಮಾತನಾಡಿದಬಳಿಕ, ಸ್ಥಳೀಯ ಕಾಂ. ಕಮಿಟಿಯ ಕಾರ್ಯದರ್ಶಿ ಶ್ರೀ ಎಮ್. ಎಮ್. ಹೆಗ್ಡೆಯವರು ಧನ್ಯವಾದವನ್ನರ್ಪಿಸಿದರು.

ಕೀರೆಗದ್ದೆ- ಕುಂದಾಪುರ ತಾಲೂಕು ಕೀರೆಗದ್ದೆ ಗ್ರಾಮದ ಬಡ ರೈತರು ಸಾವಂತ ಗುಡ್ಡೆಯಿಂದ ಕಟ್ಟಿಗೆ,ದರ್ಲೆ ಇತ್ಯಾದಿ ಹೊರೆ ತಂದು ವಾಣುವಾರಿಸಲು ಹೊರೆ ಇಳಿಸುತ್ತಿದ್ದ ಬಂದು ಬಂಡೆಕಲ್ಲಿನ ಕಟ್ಟೆಯು ಇತ್ತೀಚೆಗೆ ನಾಪಾರುಸ್ತಿಯಾಗಿ ಬಡ ರೈತರಿಗೆ ತುಂಬಾ ಕಷ್ಟಕ್ಕೀಡಾಗಿತ್ತೆಂದೂ ಇತ್ತೀಚೆಗೆ ಆದನ್ನು ಶ್ರೀ ರಾಮಚಂದ್ರ ಪ್ರಭು ಎಂಬವರು ತನ್ನ ಸ್ವಂತ ಖರ್ಚಿನಿಂದ ದುರುಸ್ತಿಪಡಿಸುತಿರುವಾಗ್ಗೆ ಗ್ರಾಮಾಧಿಕಾರಿಗಳು ಆತಂಕಿಸುತ್ತಿರುವರೆಂದೂ ಮೇಲಧಿಕಾರಿಗಳು ಈ ಕಡೆ ನಿಗಾ ಕೊಡಬೇಕೆಂದೂ ಬಡ ರೈತರ ಆರಿಕೆಯಾಗಿದೆ.

ಶಿವಪುರ- [ಕಾರ್ಕಳ] ಇಲ್ಲಿ ಮತ್ತು ಸುತ್ತಮುತ್ತಲಿನ ಹಳ್ಳಿಗಳಲ್ಲಿ ದಿನಪ್ರತಿ ಜಾನುವಾರುಗಳನ್ನು ಕೊಲ್ಲುತ್ತಿದ್ದ ಹೆಬ್ಬುಲಿಯನ್ನು ತಾ 30ಕ್ಕೆ ಕೊಲ್ಲಲಾಯಿತು.

ತೂಕ ಮತ್ತು ಅಳತೆ ಸಾಧನಗಳನ್ನು ಕಡ್ಡಾಯವಾಗಿ ಸೊದರು ಹಾಕಿಸುವಂತೆಯೇ ಚಿನ್ನಿ ಎಂಬೆ ಅಳತೆಮಾಡುವ 24 ಔನ್ಸ್ ಬಾಟ್ಲಿಗೂ ಈ ನಿರ್ಬಂದ ತರಬಾರದೇಕೆ? ಈ ಗೀಗ ಒಂದು ಬಾಟ್ಲಿಯೆಂದು 20 ಔನ್ಸ್ ಎಂಬ ಕೂಡಾ ದೊರಕುವುದಿಲ್ಲವಾಗಿ ಹಲ್ಲಿಯು ಕೆಲವು ಕಡೆಗಳಿಂದ ಜನರು ಕೂಗು ಕೇಳಿಬರುತ್ತಿದೆ

Puttur Division Mahali Prevention Co-operative Society Ltd, L. 367 Puttur, South Kanara

NOTICE

Is hereby given that a General Body Meeting of the Members of this Society will be held on 17-10-1948 Sunday at 1-30 P.M. in the Co-operative Buildings, Puttur. All members are requested to be present.

Puttur, 28-9-1948. } Sd. **B. Mangesha Rao** President

AGENDA

1. Deputy Registrar's audit certificate for the year 46 47.
2. Election of delegates to S. C. C. C. Bank, S. K. A. C. Msx, and Puttur Co-operative Stores Ltd.
3. Budget estimate for the year 48-49 and approval of the expenditure of 47-48.
4. Consideration of transfer of undisbursed dividend and kept in suspense liability to Reserve Fund as per recommendation of the Board Meeting Resolution 2 dated 28-9-1948.
5. Consideration of the following amendments to the bylaws of the Society as per Resolution 10 of the Board Meeting of 28-9-1948-
   Bylaw No. 18. Substitute "7" for "15" occuring in this bylaw.
   Bylaw No. 23. Delete the wordings after "in the Board of Directors"
   Bylaw No. 21. Read "3" for "5" occuring in this bylaw
   Bylaw No. 33 Substitute "15" for "25"
6. Any other subjects with the consent of the president

ಕೊರಡ್ಕಲ್ ಸ್ಮಾರಕ ನಿಧಿಗೆ

ಉದಾರ ಸಹಾಯ ಮಾಡಿರಿ.

ಜಗತ್ತಿನಲ್ಲಿ ಬ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ





ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನೆಲ್ಲೆಲ್ಲಾ ವಿಶಿಷ್ಟ ಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಸೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಬಿಷ್ಟ ವನಸ್ಪತಿ ಸಿದಮೂಲಿಕೆಗಳಿಂದಲೇ ವಾಸ್ತ್ರೀಕೃತೀಯಿಂದ ಹೊಲ್ಲಾಂಡ್ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿರ್ಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ- ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲಿಬೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈ ವು ವಿಶೇಷ್ಟಶಕ್ತಿಯುತೆ ಸ್ಪರ್ಶಕ್ತಿಯಾಗಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ಪಾತರೋಗ, ಪಕ್ಷವಾತ, ಗೂರಲು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಸಿಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ವೇದನೆಯು ಕಸ್ಪ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಕವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲವಿಂದ ಶಾಶ್ವತಗುಣವಾಗುವದು. ಹಲ್ಲುನೋವು, ಮಕ್ಕಳಹೊಟ್ಟೆನೋವು, ಕಿವಿಗಳ ಉಪದ್ರವ ಹೆಗಸಲು ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಚಾರ್ಜ್ ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸೂಲ್ ಶೀಸೆ 1ಕ್ಕೆ 3-8-0 ವಿ. ಪಿ. ಚಾರ್ಜ್. ಡಜನ್ ಕೆಪ್ಸೂಲ್‌ಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಗ್ರೈಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಚಾರ್ಜ್. ಒಂದುಡಜನ್ ಗ್ರೈಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18-ವಿ ಪಿ.ಮಾಫಿ.

ಪ್ರಕಾಶನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯಬ್ಬರ ಎಲ್ಲ ಹೇದಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯೋಗದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ನೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಸತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿದೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I. Rly.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

೪ ಔನ್ಸಿನ ಒಬ್ಬಿಲ್ಲಿಗಳು ಹೆಚ್ಚು ಕಡಿಮೆ ಅಂದಿನವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗೆ ಒಂದು ಬಾಣಂತಿನಕ್ಕೆ ಸಾಕಾಗುವಷ್ಟು ವಿಶೇಷ ಮಹಿಮೆ ಇದ್ದಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ ಕೊಡಿಯಾಲಬೈಲು, ಮ.ಕ

ಸ್ವಾಮಿಸ್ವರು- ಡಾ| ಐ. ಕೆ. ಶಿವರಾಮ ರಾವ್, ಕಂಚಿದೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಕೆಚ್ಚಿಸುವುದು. ಆಚಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಜೀವನಪ್ರಾಶ (ಬಂಗಾರ ಮಿಶ್ರಿತ.)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಪೀತ, ಉಬ್ಬಸ, ಪ್ಲಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮಾನಿಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ಸಮಾನಿಯ ಔಷಧಿಗಳೂ ದೊರೆಯುತ್ತವೆ. ಕ್ಯಾಲೆಂಡ್ರಿ ಬರದಲ್ಲಿ ರೋಗಕ್ಕೆ ತಕ್ಕಹಾಗೆ ಔಷಧಿ ಕೊಡಲಾಗುವುದು. (1) ಉಡುಪಿ ವಿಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ವಿಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ಸ್ ಜೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವೈಕ್ಕ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂದಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ನಮಸ್ತೆ ದೇವಿ ಮಾತಾರಾ

ಜಯಹಿಂದ ದಂತಮಂಜನ

ಜಯಹಿಂದ ದಂತಪುಂಜನ

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಎಲ್ಲ ತರದ ದಂತ ರೋಗಗಳನ್ನು, ನೆಟ್ಟಗೆ ಮಾಡಿ, ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ದಕ್ಷಿಣ ಕನ್ನಡ

ಕುರುಕಾಲು ತಾ 29-9-48ರಲ್ಲಿ ಕುಂಜಾರು ಗಿರಿಜಾ ಹಾಯರ್ ಎಲಿಮೆಂಟ್ರಿ ಶಾಲೆಯಲ್ಲಿ, ಡಿಸ್ಟ್ರಿ ಪಂಚ್ಯಾತ ಆಫೀಸರ್ ಶ್ರೀ ಟಿ. ಬಸಪ್ಪನವರ ಅಧ್ಯಕ್ಷತೆಯಲ್ಲಿ ಕುರುಕಾಲು ಗ್ರಾಮದ ಓವರಿಯ ಸಭೆ ಜರಗಿ- ಕುರುಕಾಲು ಗ್ರಾಮ ಪಂಚ್ಯಾತ ಬೋರ್ಡಿಗೆ ಗ್ರಾಮಾಭಿವೃದ್ಧಿ ಸಂಘದವರಿಂದ ಈ ಹಿಂದೆಯೇ ಆರಿಸಲ್ಪಟ್ಟ ಶ್ರೀಗಳಾದ ಕುರುಕಾಲು ಗಣಪಯ್ಯ ಸೆಟ್ಟಿ, ಕೆ. ವಾಸು ಸೆಟ್ಟಿ, ತಬುರ ಸೆಟ್ಟಿ, ಡಾಕ್ಟರ್. ಕೆ. ಶ್ರೀನಿವಾಸ ಭಟ್ಟ, ಕೆ. ನಾರಾಯಣ ಆಚಾರ್ಯ, ಕೆ. ರಾಮಕೃಷ್ಣ ಭಟ್ಟ, ಪುಜಾರಿ ನೋರೊಣ್ಣ, ಅನ್ನೆನ್ಸಪ್ರೇರ, ಸಂತಾನ್‌ಮಿ ಡ್ರೀಸ, ರುಕ್ಕ ಪೂಜಾರಿ, ಅಣ್ಣು (ಅದಿದ್ರಾವಿಡ) ಕೂಡಿ 11 ಮಂದಿ ಮಂಬರರನ್ನು ಸರ್ವ ಸಮ್ಮತದಿಂದ ಚುನಾಯಿಸಲಾಯ್ತು. ಪ್ರೆಸಿಡೆಂಟ್, ಸೈನ್. ಪ್ರೆಸಿಡೆಂಟ್ ಚುನಾವಣೆಯು ತಾ 7-10-48ಕ್ಕೆ ಜರಗಲಿದೆ.

ಪರಿಷತ್ತಿನ ಅಧ್ಯಕ್ಷರ ಪ. ಕ. ಜಿಲ್ಲಾ ಸಂಚಾರ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ. ತಿರುಮಲೆ ತಾತಾಚಾರ್ಯ ಶರ್ಮರೂ, ಕಾರ್ಯದರ್ಶಿ ಶ್ರೀ. ಎಲ್. ಎಸ್. ಶೇಷಗಿರಿ ರಾಯರೂ ಇದೇ ತಾ 8ರಿಂದ 15ರ ತನಕ ಜಿಲ್ಲಾ ಸಂಚಾರ ಮಾಡುವರು ತಾ 8ಕ್ಕೆ ಕುಂದಾಪುರ, 9, 10ಕ್ಕೆ ಉಡುಪಿ, 11ಕ್ಕೆ ಕಾರ್ಕಳ, 12ಕ್ಕೆ ಶಿವ. 13ಕ್ಕೆ ಮೂಡಬಿದರೆ, 14ಕ್ಕೆ ಸುರತ್ಕಲ್, 15ಕ್ಕೆ ಮಂಗಳೂರಲ್ಲಿ ಕಾರ್ಯಕ್ರಮಗಳು.

ಕಟಪಾಡಿ ಎಸ್. ವಿ. ಎಸ್. ಶಾಲಾ ಹಳೆ ವಿದ್ಯಾರ್ಥಿಗಳ ಸಂಘದ 1948-49ನೇ ವರ್ಷದ ವಾರ್ಷಿಕ ಮಹಾಸಭೆಯು ತಾ. 24-10-48ನೇ ಪೂರ್ವಾಹ್ನ 10 ಗಂಟೆಗೆ ಸದರಿ ಶಾಲಾ ವಠಾರದಲ್ಲಿ ಜರುಗುವುದಾಗಿಯೂ, ಅದಕ್ಕೆ ಸಂಘದ ಎಲ್ಲ ಸದಸ್ಯರು ಬರಬೇಕಾಗಿಯೂ, ಸಂಘದ ಅಧ್ಯಕ್ಷರಾದ ಡಾ. ಕೆ. ಜೆ. ಕಿನಿಯರು ಈ ಮೂಲಕ ತಿಳಿಸುತ್ತಾರೆ.

ಸುರತ್ಕಲ್ ಇ. ವಿ. ಶಾಲಾ ಹಳೇ ವಿದ್ಯಾರ್ಥಿಗಳ ಸಂಘದ ಮಹಾಸಭೆಯು ತಾ 12-10-48ನೇ ಬೆಳಿಗ್ಗೆ 10 ಗಂಟೆಗೆ ಜರಗಲಿರುವುದರಿಂದ ಸದ್ರಿ ಇ. ವಿ. ಶಾಲಾ ಮತ್ತು ವಿದ್ಯಾದಾಯಿನೀ ಹೈಸ್ಕೂಲಿನ ಎಲ್ಲಾ ಹಳೇ ವಿದ್ಯಾರ್ಥಿಗಳು ಬಂದು ಸಹಕರಿಸಬೇಕಾಗಿ ಅಪೇಕ್ಷಿಸೋಣಾಗುತ್ತದೆ.

ಹಿರಿಯಡ್ಕ ತಾ 3-10-48ರಲ್ಲಿ ಗುಡ್ಡೆ ಅಂಗಡಿಯಲ್ಲಿ ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿ ಸಂಗ್ರಹದಬಗ್ಗೆ ಕಣಜಾರು ಸೀತಪ್ಪ ಹೆಗ್ಡೇರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಸೇರಿ ಸದ್ರಿ ನಿಧಿ ಸಂಗ್ರಹದ ವಿಶೇಷತೆಯ ಕುರಿತು ಡಾ. ಬಿ. ಜಂದಯ್ಯ ಹೆಗ್ಡೇರು, ಶ್ರೀ ಮುಖ್ಯಾಡಿ ಕೃಷ್ಣಯ್ಯ ಸೆಟ್ಟಿ ಮತ್ತು ಶ್ರೀ. ಬಿ. ನಾಗಪ್ಪ ಪೈಗಳು, ನಿವೇದಿಸಿಕೊಳ್ಳಲಿದ ನಂತ್ರ ಸದ್ರಿ ಕಾರ್ಯವನ್ನು ನೆಂಪೇರಿಸುವ ಬಗ್ಗೆ ಒಂದು ಸಮಿತಿಯನ್ನು ನೇಮಿಸಲಾಯಿತು.

ಕುಂದಾಪುರ ಕರ್ನಾಟಕ ಸಂಘದ ನೇತೃತ್ವದಿಂದ ದಿನಾಂಕ ೮-೯-೧೯೪೮-ಳಿಲ್. ಈ ನೂರು ದಿನಗಳಲ್ಲಿ ವಸವರಾ ನಾಡಹಬ್ಬವು ಆಚರಿಸಲ್ಪಡುವುದು.

ಪೆರ್ಡೂರು 26-9-48ರಿಂದ 2-10-48ರ ವರೆಗೆ ಇಲ್ಲಿ ಚರಖಾ ಜಯಂತಿಯನ್ನು ಆಚರಿಸಲಾಯಿತು. 26-9-47ರಲ್ಲಿ ಹರಿಜನ ಕೇರಿ ಸಂದರ್ಶನೆಯೂ, ಬಾಕ್ಕ ಗುಡ್ಡೆಯಲ್ಲಿ ಶ್ರೀ ಲಕ್ಷ್ಮೀನಾರಾಯಣ ಬಲ್ಲಾಳರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೂ ನಡೆಯಿತು.

ಬ್ರಹ್ಮಾವರ ಇದೇ ತಾ 2ರಲ್ಲಾ ಗಾಂಧಿ ಜಯಂತಿಯು ಸರ್ವಲ್ ಕಾಂಗ್ರೆಸ್ ಕಮಿಟಿ ನೇತೃತ್ವದಲ್ಲಿ ಪ್ರಭಾತಫೇರಿ, ಧ್ವಜಾರೋಹಣ ಖಾದಿ ಮಾರಾಟ, ಸೂತ್ರಯಜ್ಞ, ನೆರವನೆಗೆ, ಶ್ರೀ ಕೆ. ಶಾಮನ ಪಡಿಯಾರರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಇತ್ಯಾದಿ ಕಾರ್ಯಕ್ರಮಗಳಿಂದ ಜರಗಿತು. ಶ್ರೀಗಳಾದ ಶಿವರಾಮ ಬಿಲ್ಲವ, ಪರಮೇಶ್ವರ ಉಡುಪ, ಕೊಬ್ಬಿ ಕಾರ್ ರಾಘಕೃಷ್ಣ ಪೈ, ಕೆ. ಸುರೇಂದ್ರನಾಥ ಕಾಮತ್, ಶ್ರೀಮತಿ ಕುಂದಾಪುರ ಕಮಲಾಬಾಯಿ ಮೊದಲಾದವರ ಭಾಷಣಗಳಿದ್ದವು.

ಪೆರ್ಡೂರಲದಲ್ಲಿ ದಸರಾ ಸಾಹಿತ್ಯೋತ್ಸವವು ಶ್ರೀ ಮಹಾಕೂಟದ ಆಶ್ರಯದಲ್ಲಿ ಪೆರ್ಡಾಲಾ ಎಲಿಮೆಂಟರಿ ಶಾಲಾ ಕಟ್ಟಡದಲ್ಲಿ ಇದೇ ತಾ 7ರಿಂದ 11ರ ವರೆಗೆ ಭಾಷಣ, ಸ್ಪರ್ಧೆ, ವಿವಿಧ ವಿನೋದಾವಳಿ ಮೊದಲಾದ ಕಾರ್ಯಕ್ರಮಗಳಿಂದ ಜರಗಲಿದೆ.

ಮೂಡಬಿದ್ರೆಯಲ್ಲಿ ದಸರಾ ಸಾಹಿತ್ಯೋತ್ಸವವು ಶ್ರೀ ಸರಸ್ವತಿ ಸೇವಾಸಂಘದ ಆಶ್ರಯದಲಿ ಇದೇ ತಾ 3ರಿಂದ ಪ್ರಾರಂಭವಾಗಿ ತಾ 12ರ ತನಕ ಭಾಷಣ, ಸ್ಪರ್ಧೆ ಇತ್ಯಾದಿ ಕಾರ್ಯಕ್ರಮಗಳಿಂದ ಜರಗುವುದು.

ಕುಂದಾಪುರದಲ್ಲಿ ಓಲೆಬಿಲ್ಲ ಸಂಘ ಸ್ಥಾಪನೆ ಇತ್ತೀಚೆಗೆ ಕುಂದಾಪುರ ಪಂಚಾಯತ ಬೋರ್ಡು ಆಫೀಸು ನಡುಬಾರದಲ್ಲಿ ಜರಗಿದ ಮಾಜಿ ಮೂರ್ತೆದಾರರ ಸಭೆಯಲ್ಲಿ ಶ್ರೀ ಗಳಾದ ಬೈಂದೂರು ಸುಬ್ಬಣ್ಣ ಸೆಟ್ಟಿ, ರವಾ ಸಾಹೆಸ್ ರವರು ಸಹಕಾರತತ್ವದ ಮೇಲೆ ಓಲೆಬೆಲ್ಲ ಸಂಘಸ್ಥಾಪನೆಯ ಕುರಿತು ಮಾತನಾಡಿದರು. ನಾಡಾ, ಬಸ್ರೂರು, ಕೋಟೇಶ್ವರ, ಈ ಮೂರು ಕೇಂದ್ರಗಳಲ್ಲಿ ಹನಿನ್ನೆಯು ಗ್ರಾಮಗಳ ಮಾಜಿ ಮೂರ್ತೆದಾರರ ಸೌಕರ್ಯಕ್ಕಾಗಿ ಓಲೆಬೆಲ್ಲ ತಯಾರಿಕೆಯ ಸಹಕಾರಿ ಸಂಘಗಳನ್ನು ಸ್ಥಾಪಿಸುವ ನಿರ್ಧಾರವಾಯಿತು. ಉಪ್ಪುಂದ, ಮರ್ವಂತೆ, ಕಂಬದಕೋಣೆ ಈ ಸೆಂಟರುಗಳಲ್ಲೂ ಸಂಘಸ್ಥಾಪಿಸುವ ಕುರಿತು ಯೋಜನೆಗಳಾಗುತ್ತಿವೆ.

ಬಿ ಮತ್ತು ಸಿ. ಕಾರ್ಡುದಾರರಿಗೂ ಕುಂದಾಪುರ ತಾಲೂಕಿನ ನಿರೀಕ್ಷಣ ಅಂಗಡಿಗಳಲ್ಲಿ ಅಕ್ಕಿ ಮೊರೆಯುವಂತಾಗಬೇಕೆಂದು ಜಿಲ್ಲಾ ಕಲೆಕ್ಟರರಿಗೆ ಶ್ರೀ ಬೈಂದೂರು ಸುಬ್ಬಣ್ಣ ಸೆಟ್ಟರು ಪತ್ರಮುಖೇನ ವಿನಂತಿ ಮಾಡಿರುವರು. ಬೆಳೆ ಕಟಾವಾಗಿ ಕೆಲವು ದಿವಸಗಳೆರುವಾಗಲೇ ಬಿ ಮತ್ತು ಸಿ ಕಾರ್ಡುಗಳನ್ನು ಹಂಚತೆಗೆದುದರಿಂದ ಬಡ ರೈತರು ಕಂಗೆಟ್ಟಿದ್ದಾರೆ.

ರೇಶನ್ ಕಾರ್ಡುಗಳೂ ಕಾರ್ಡುಗಳಿಗೆಹಚ್ಚುವಸ್ಟ್ಟಿಪ್ಪುಗಳೂ ದೊರೆಯುತ್ತವೆ

ನವಯುಗ ಪ್ರೆಸ್ ಉಡುಪಿ.

[೧೧ನೇ ಪುಟದಿಂದ]

ಅಲ್ಲಿಯ ಜನಸಾಮಾನ್ಯರ ಅಭಿಪ್ರಾಯವಾಗಿಲ್ಲ ಎಂಬುದನ್ನು ತಿಳಿಯದಿರಲು.

ವ್ಯಾಪಾರ ವ್ಯವಹಾರದ ದೃಷ್ಟಿಯಿಂದಲೂ ಆಡಳಿತೆಯ ದೃಷ್ಟಿಯಿಂದಲೂ ಈ ಪ್ರದೇಶದ ಜನರಿಗೆ ಕಲ್ಲಿಕೋಟೆಗಿಂತ ನುಂಗಳೂರೇ ಸಮೀಪವಾಗಿದೆ. ಈ ಪ್ರದೇಶದ ವ್ಯಾಪಾರ ವ್ಯವಹಾರಗಳ ಸಂಬಂಧ, ಆರ್ಥಿಕ ಸಂಬಂಧ ಮತ್ತು ಸ್ವತಂತ್ರಾನಂತರದ ಸಂಘಟನೆಗಳ ಸಂಬಂಧ ಮೊದಲಾದವುಗಳು ದಕ್ಷಿಣ ಕನ್ನಡ ಜಿಲ್ಲೆಯ ಬೇರೆಬೇರೆ ಭಾಗಗಳೊಡನೆ ಮುಖ್ಯವಾಗಿ ಮಂಗಳೂರಿನೊಡನಿವೆ.

ಮೇಲೆ ಹೇಳಿದ ಎಲ್ಲಾ ವಿಷಯಗಳಿಂದ ಕಾಸರಗೋಡು ತಾಲೂಕಿನ ಯಾವುದೇ ಭಾಗವನ್ನು ಭಾವಿ ಕೇರಳ ಪ್ರಾಂತದಲ್ಲಿ ಸೇರಿಸುವುದು ಸರಿಯಲ್ಲವೆಂದು ತಿಳಿಯದಿರಲು ಶುದ್ಧವಾದ ಭಾವನಾ ದೃಷ್ಟಿಯಿಂದ ನೋಡಿದವರ ನೀಲೇಶ್ವರ ಫಿರ್ಕ್‌ಪ್ರೊಪೊಸ್ಟ್ನ ಸ್ವತ್ತಿಗೆ ಅಧಿಕಾರ ಕೇರಳಕ್ಕಿದೆ. ಆದರೆ ಈ ತಾಲೂಕಿನ ಬಹು ಜನರು ದಕ್ಷಿಣದ ತಳ್ಳಿಗಳ ಜನರು ಕೂಡ, ಆರ್ಥಿಕ ಆಹಾರ ಪೂರೈಸುವ ವಿಷಯಗಳಲ್ಲಿ ಸ್ವಾಯುತ್ತವಾಗಿರಲಾಧ್ಯವಾದ ಮಲಬಾರಿನೊಡನೆ ಸೇರುವುದಕ್ಕಿಂತ ಕರ್ನಾಟಕಕ್ಕೆ ಸೇರುವುದರಿಂದಲೇ ಭವಿಷ್ಯತ್ತಿನ ಉಜ್ವಲವಿದೆ ಎಂಬುದನ್ನು ತಿಳಿದಿರುತ್ತಾರೆ.

ಕರ್ನಾಟಕಕ್ಕೆ ಸೇರುವುದರಿಂದಲೇ

ಕಾಸರಗೋಡಿನ ಜನತೆಯ ಭವಿತವ್ಯವು ಉಜ್ವಲವಾಗಿದೆ

(ಶ್ರೀ। ಬಿ. ಎಸ್, ಕಕ್ಕಿಲ್ಲಾಯ, ಕಾಸರಗೋಡು.)

ಭಾಷಾವಾರು ಪ್ರಾಂತ ರಚನಾ ಸಮಿತಿಯಿಂದ ನೇಮಿಸಲ್ಪಟ್ಟ ಭಾಷಾವಾರು ಪ್ರಾಂತ ರಚನಾ ಸಮಿತಿಯು ಮುಂಗಡಗೂರಿಗೆ ಬಂದಿದ್ದಾಗ ಕಾಸರಗೋಡು ತಾಲೂಕಿನ ಜನತೆಯ ಪರವಾಗಿ ಅವರಿಗೆ ಶ್ರೀ। ಬಿ. ಎಸ್. ಕಕ್ಕಿಲ್ಲಾಯರು ಒಂದು ಮನವಿಯನ್ನು ಒಪ್ಪಿಸಿರುವರು, ಅವರ ಮನವಿಯ ಸಾರ ಹೀಗಿದೆ:—

ಇಡೀ ಕಾಸರಗೋಡು ತಾಲೂಕನ್ನೇ ಕೆಗೆದುಕೊಂಡರೆ, ಹಲವು ಕಾಲದಿಂದ ಕರ್ನಾಟಕದ ಒಂದು ಭಾಗವಾಗಿಯೇ ಇದ್ದ ಆ ತಾಲೂಕಿನ ಜನತೆಯು ಇನ್ನೂ ಕರ್ನಾಟಕದಲ್ಲಿಯೇ ಉಳಿಯಬೇಕೆಂದು ಬಯಸಿರುವುದು ಅಭಿಪ್ರಾಯವಾಗಿದೆ. ಇಡೀ ತಾಲೂಕಿನ ೩,೪೨,೪೦೧ ಜನಸಂಖ್ಯೆಯಲ್ಲಿ ತುಳು ಮತ್ತು ಕನ್ನಡ ಮನೆ ಮಾತಾಗಿರುವ ೧,೬೨,೪೭೬ ಹಿಂದುಗಳು ಮತ್ತು ೯೫,೫೬೩ ಮುಸಲ್ಮಾನರು ಇಡೀ ಕಾಸರಗೋಡು ತಾಲೂಕೇ ಕರ್ನಾಟಕದಲ್ಲಿ ಸೇರಿಸಲ್ಪಡಬೇಕೆಂದು ಖಂಡಿತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿರುವರು.

ಕಾಸರಗೋಡು ತಾಲೂಕಿನ ಮುಸ್ಲಿಂ ಜನತೆ ಮಲೆಯಾಳ ಮಾತಾಡುವವರೆಂದು ತಿಳಿಸಿ, ಅಲ್ಲಿಯ ಜನಗಣತಿಯ ಪ್ರಕಾರ ಮಲೆಯಾಳಿಗಳು ಆ ತಾಲೂಕು ಕೇರಳಕ್ಕೆ ಸೇರಬೇಕೆಂದು ಹೇಳುತ್ತಿದ್ದಾರೆ. ಕಾಸರಗೋಡು ತಾಲೂಕಿನ ಅತಿ ದಕ್ಷಿಣದಲ್ಲಿ ಹೊಗತು ಉಳಿದ ಭಾಗಗಳಲ್ಲಿ ಮುಸುಲ್ಮಾನರು ಮಾತಾಡುವ ಭಾಷೆಯು ನಿಜವಾಗಿಯೂ ಮಲೆಯಾಳವಾಗಿರುವುದಿಲ್ಲ. ಅದು ಕನ್ನಡ, ತುಳು, ಮಲೆಯಾಳಗಳಿಂಗ ಕೂಡಿದ ಒಂದು ಮಿಶ್ರ ಭಾಷೆಯಾಗಿದೆ. ಈ ಭಾಗಗಳ ಮುಸುಲ್ಮಾನರು ತಮ್ಮ ಹೆಸರಿನ ಅಂತ್ಯದಲ್ಲಿ, ದಕ್ಷಿಣ ಕನ್ನಡ ಜಿಲ್ಲೆಯ ಇತರ ಭಾಗಗಳಲ್ಲಿರುವಂತೆಯೇ 'ಬ್ಯಾರಿ' ಎಂಬ ಪದ (ಕನ್ನಡ ಮೂಲವಾದ 'ವ್ಯಾಪಾರ' 'ವ್ಯಾಪಾರಿ' ಎಂಬುದರಿಂದ ಒಂದು ಪದ) ವನ್ನು ಉಪಯೋಗಿಸುತ್ತಾರೆ. ಈ ತಾಲೂಕಿನ ಅತಿ ದಕ್ಷಿಣದಲ್ಲಿ ಕೇರಳದಿಂದ ಬಂದು ವಾಸಕ್ಕೆ ತೊಡಗಿದ ಮುಸ್ಲಿಮರ ಹೊರತು ಉಳಿದ ಎಲ್ಲಾ ಮುಸ್ಲಿಮರು (ಬ್ಯಾರಿಗಳು) ಪುರುಷಮುಕ್ತತ್ವಯ ಸಂಪ್ರದಾಯವನ್ನು ಅನುಸರಿಸಿದ್ದಾರೆ. ಎಲ್ಲಾ ವಿಷಯಗಳಲ್ಲಿಯೂ ಶಾಫಾನ್ಯವಾದ ಮಹಮ್ಮದೀಯ ಸಂಪ್ರದಾಯವನ್ನು ಅನುಸರಿಸುವರು. ಕಾಸರಗೋಡು ತಾಲೂಕಿನ ಇಡೀ ಮುಸ್ಲಿಂ ಜನತೆಯು ಆ ತಾಲೂಕು ಕೇರಳದಲ್ಲಿ ಸೇರುವುದನ್ನು ತೀವ್ರವಾಗಿ ವಿರೋಧಿಸುತ್ತದೆ.

ಪುರಾತನ ಕಾಲದಿಂದಲೂ ಕಾಸರಗೋಡು ತಾಲೂಕು ತುಳುನಾಡು ಅಥವಾ ತುಳುವ ದೇಶದ ಒಂದು ಭಾಗವಾಗಿಯೇ ಇತ್ತು. ಈ ತಾಲೂಕು ಕೇರಳದ ಒಂದು ಭಾಗವಾಗಿದ್ದುದು ಚರಿತ್ರೆಯಲ್ಲಿ ಕಂಡುಬರುವುದಿಲ್ಲ. "ಕೇರಳೋತ್ಪತ್ತಿ" ಎಂಬ ಗ್ರಂಥದಲ್ಲಿ ಒಂದು ಕಡೆಯಲ್ಲಿ ಪ್ರಾಚೀನ ಕೇರಳವು ಕನ್ಯಾಕುಮಾರಿಯಿಂದ ಗೋಕರ್ಣದ ವರೆಗೆ ವಿಸ್ತರಿಸಿತ್ತೆಂದು ಹೇಳಲ್ಪಟ್ಟಿರೆ, ಆದೇ ಗ್ರಂಥದ ಇನ್ನೊಂದು ಭಾಗದಲ್ಲಿ ತುಳುವ ರಾಜ್ಯವು ಗೋಕರ್ಣದಿಂದ ದಕ್ಷಿಣದಿಂದ ಪೆರುಂಪುಲದ ವರೆಗೆ ಹರಡಿತ್ತೆಂದು ಹೇಳಲ್ಪಟ್ಟಿದೆ. ಆದೇ ಗ್ರಂಥದ ಇನ್ನೊಂದು ಭಾಗದಲ್ಲಿ ತುಳುವ ರಾಜ್ಯದ ದಕ್ಷಿಣದ ಗಡಿಯು ಕವಾಯಿಯ ದಕ್ಷಿಣಕ್ಕಿರುವ ಕಾಞಂಗೋಟು ನದಿಯಾಗಿತ್ತೆಂದು ಹೇಳಲ್ಪಟ್ಟಿದೆ. ಕಾಞಂಗೋಟು ಎಂದರೆ ಕಾಸರಗೋಡು ಎಂಬುದಕ್ಕೆ ಮಲೆಯಾಳದ ನಾಮಮಾತ್ರವಾಗಿರುತ್ತದೆ. ಕವಾಯಿಯ ದಕ್ಷಿಣಕ್ಕಿರುವ ನದಿಯೇ ಈಗ ದಕ್ಷಿಣ ಕನ್ನಡ ಮತ್ತು ಮಲಬಾರಿಗೆ ಇರುವ ಗಡಿಯಾಗಿರುತ್ತದೆ.

ಉತ್ತರದ ಮೂರು ಫಿರ್ಕಗಳು

ಕಾಸರಗೋಡು ತಾಲೂಕಿನ ೫ ಫಿರ್ಕಗಳಾಗಿ ವಿಭಾಗಿಸಲ್ಪಟ್ಟಿದೆ. ಉತ್ತರದ ಮಂಜೇಶ್ವರ, ಕುಂಬಳೆ ಮತ್ತು ಕಾಸರಗೋಡು ಫಿರ್ಕ ಸಂಪೂರ್ಣವಾಗಿ ಕನ್ನಡ ಮತ್ತು ತುಳು ಮನೆ ಮಾತಾಗಿರುವ ಪ್ರದೇಶಗಳಾಗಿವೆ. ಈ ಪ್ರದೇಶದಲ್ಲಿ ಅಡಳಿತೆಯ ಭಾಷೆ, ವ್ಯಾಪಾರ ವ್ಯವಹಾರದ ಭಾಷೆ ಮತ್ತು ಶಾಲೆಗಳಲ್ಲಿ ಮಾಧ್ಯಮವು ಕನ್ನಡವಾಗಿದೆ. ಈ ಪ್ರದೇಶದ ಜನರಿಗೆ ಕನ್ನಡ ಸಾಹಿತ್ಯದ ಅರಿವು ಮಾತ್ರವಿದೆ. ಕರ್ನಾಟಕದಲ್ಲಿಲ್ಲಾ ಮುಖ್ಯವಾಗಿರುವ ಯಕ್ಷಗಾನ ಕಲೆಯು ಈ ತಾಲೂಕಿನ ಕಾಸರಗೋಡು ಮತ್ತು ಕುಂಬಳೆ ಫಿರ್ಕಗಳಲ್ಲೇ ಹುಟ್ಟಿದುದು. ಅದರ ಬೆಳವಣಿಗೆಯೂ ಮುಖ್ಯವಾಗಿ ಈ ಫಿರ್ಕಗಳಲ್ಲೇ ಆಯಿತು.

ತಿರುವಾಂಕೂರಿನಲ್ಲಿ ಮಧ್ಯವರ್ತಿ ಸರಕಾರವು ಸ್ಥಾಪಿಸಲ್ಪಟ್ಟ ನಂತರ, ಕೇರಳ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ। ಕೇಳಪ್ಪನ್, ಮವ್ರಾಸು ಸರಕಾರದ ಮಂತ್ರಿಗಳಾದ ಮೊಹಮ್ಮದ್ ಮೇನೋನ್ ಮೊದಲಾದ ಐಕ್ಯ ಕೇರಳ ಚಳವಳದ ನಾಯಕರೇ ತಾವಿತ್ತ ಸಾರ್ವಜನಿಕ ಹೇಳಿಕೆಗಳಲ್ಲಿ ಕಾಸರಗೋಡು ತಾಲೂಕಿನ ಉತ್ತರಕ್ಕಿರುವ ಪ್ರದೇಶಗಳನ್ನು ಕೇರಳವು ಕೇಳುವುದಿಲ್ಲ ಎಂದು ಹೇಳಿರುವರು.

ಹೊಸದುರ್ಗ, ನೀಲೇಶ್ವರ ಫಿರ್ಕಗಳು

ದಕ್ಷಿಣಕ್ಕಿರುವ ಹೊಸದುರ್ಗ ಮತ್ತು ನೀಲೇಶ್ವರ ಫಿರ್ಕಗಳ ಪ್ರದೇಶದಲ್ಲಿ ದಕ್ಷಿಣಕ್ಕೆ ಹೋದಂತೆಯೇ ಮಲೆಯಾಳಿ ನೂತನವಾಡುವರ ಸಂಖ್ಯೆಯು ಹೆಚ್ಚಿದೆ. ಕೇರಳದಲ್ಲಿ ಜನಸಂಖ್ಯೆಯು ಹೆಚ್ಚಿ, ಆಲ್ಲಿಂದ ಜನರು ಬಂದು ಈ ಪ್ರದೇಶಗಳಲ್ಲಿ ವಾಸಕ್ಕೆ ತೊಡಗಿದುದೇ ಇದಕ್ಕೆ ಕಾರಣವಾಗಿದೆ

ಚಂದ್ರಗಿರಿ, ಹೊಸದುರ್ಗ, ಬೇಕಲ, ನೀಲೇಶ್ವರಗಳಲ್ಲಿ ಎಷ್ಟೋ ಪುರಾತನ ಚಾರಿತ್ರಿಕ ಕೋಟೆಗಳು, ಮತ್ತು ಈ ಕೋಟೆಗಳ ಸುತ್ತಮುತ್ತಲಲ್ಲಿ ಆಧಿಕವಾಗಿರುವ ಕನ್ನಡ ಜನತೆಯು ಕಳೆದ ೫೦೦ ವರ್ಷಗಳಿಂದ ಈ ಭಾಗಗಳಿಗೆ ಇತಿಹಾಸ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಕರ್ನಾಟಕದೊಡನಿದ್ದ ಸಂಬಂಧವನ್ನು ತೋರಿಸುತ್ತದೆ.

ಒಟ್ಟಿನಲ್ಲಿ ಹೇಳುವುದಾದರೆ ಈ ತಾಲೂಕಿನ ಜನರ ರೀತಿ, ನೀತಿ, ಭೂಕಂದಾಯದ ಕ್ರಮ ಆರ್ಥಿಕ ಸಂಘಟನೆ ಮೊದಲಾದುವುಗಳನ್ನು ಸರಿಯಾಗಿ ಪರಿಶೀಲಿಸಿದಲ್ಲಿ ಇವುಗಳೆಲ್ಲ ಮಲಬಾರಿನಲ್ಲಿರುವುದಕ್ಕಿಂತ ತೀರ ಭಿನ್ನವಾಗಿವೆ ಎಂಬುದು ತಿಳಿಯದೀತು.

ಈ ಪ್ರದೇಶದ ಮಲೆಯಾಳವನ್ನು ಮಾತಾಡುವ ಜನರಾದರೂ ತುಳು ಮತ್ತು ಕನ್ನಡವನ್ನು ಬಲ್ಲವರಾಗಿರುವರು. ಈ ಭಾಷೆಗಳೂ ಅಲ್ಲಿ ಬಳಕೆಯಲ್ಲಿವೆ. ೧೯೫೧ನೆಯ ಜನಗಣತಿಯ ಪ್ರಕಾರ ಈ ಪ್ರದೇಶದ, ೪೬,೪೮೮ ಜನರು ಕನ್ನಡ ಮತ್ತು ತುಳುವನ್ನು ಉಸಿರಾಡುವ ಉಸಿರಾಗಿಯೇ ಉಪಯೋಗಿಸುತ್ತಾರೆ. ೭೧,೦೦೮ ಜನರ ಮಾತೃ ಭಾಷೆಯು ತುಳು ಮತ್ತು ಕನ್ನಡವಾಗಿದೆ.

ಈ ಪ್ರದೇಶವನ್ನು ಕೇರಳಕ್ಕೆ ಸೇರಿಸುವುದಕ್ಕೆ ಇಲ್ಲಿಯ ಜನರ ವಿರೋಧವಿದೆ. ಈ ಪ್ರದೇಶದ ಅಂತಃಕರಣ ಪರಿಸ್ಥಿತಿಯನ್ನರಿತ ಯಾವ ನಾಪೊಬ್ಬ ಸ್ವಮಾನಕರಾದ ನಿರೀಕ್ಷಕನು ಕಾಸರಗೋಡನ್ನು ವಿಭಾಗಿಸಿ ಒಂದು ಭಾಗವನ್ನು ಕೇರಳದೊಡನೆ ವಿಲೀನಗೊಳಿಸಬೇಕೆಂಬುದು ವಿಶಾಲ ಕೇರಳದ ನಾಯಕರ ಪೂರ್ತುಗಳಿಗೆ ಬಲಿ ಬಿದ್ದ ಕುಖಾಲಿಯು ಹೃದಯಗಳ ಕೆಲವೇ ಜನರ ಅಭಿಪ್ರಾಯವಾಗಿದೆಯಲ್ಲದೆ

(೧೦ನೇ ಪುಟ ನೋಡಿರಿ.)

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಆಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರವೀಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಸ್ಟ್ ಚಾರ್ಜು ೧೫ ಆಣೆ.

ಸೂಲಕರು:—ಹಾಲಪ್ಪಾ ಭಕೇರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ವಿಜಂದರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕನಬರಾಜ, ಕೆಮಿಸ್ಟ್, ಹಾನಗಲ್ಲ ಬ್ಯಾಡಗಿ.

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ಕೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು, ಛಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಚ್ಚುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಭಾಶಯದಿಂದ ಗರ್ಭಕೋಶ ನಾಶವಾಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ನ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ನಂತರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು.- ಈ ಔಷಧವನ್ನು ಬೆಣ್ಣೆಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರುಬಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಕರೊ. ಪೋಸ್ಟ್ ಚಾರ್ಜು ೮ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಚಿತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ.

ಹೆರಿಗೆ ಅಂದರೆ ಪುನರ್ಜನ್ಮವೆಂಬ ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ಇನ್ನಾ ನಿಕಾರಗಳುಂಟಾಗುತ್ತವೆ. ಕಸದೀಳೆಬೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸ್ಥಿನ್ನ, ಮೂಲವಿರೋಧ, ಸ್ವನಗಳ ಬೀಗಂ, ನಿವ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ ವೈದ್ಯ, ಡಾಕ್ಟರು, ಸರ್ಜನರಿ ವರೆಗೆ ಕರೆಸಿ ನೂರಾರು ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಆ ಮೇಲೂ ದೈನೇಚ್ಛೆ ಎಂದು ಅಳ್ಳೆದೆ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ತಪ್ಪುಗದನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ಕಮ್ಮಿ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕಮನೀಯ ಕೇರಕಲಾಪ, ತಂಪು ಪೆದುಳು, ಶುದ್ಧ ನೇತ್ರಗಳನ್ನು ಹೊಂದಲು ಬಹು ಗುಣಯುಕ್ತ ಆವುಲಿಕೀ ತೈಲ ಯಾ ಹಿಮಸಾಗರ ತೈಲ್ಯಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಸಾದರ-ಸ್ವೀಕಾರ

ಗಾಂಧಿಜೀಯ ಜೀವನ ಕಾವ್ಯ ಗಳು:-ಲೇಖಕಿ ಶ್ರೀಮತಿ ಜಾನಕಿ, ಬೈಕಾಡಿ, ಬ್ರಾಹ್ಮಣರ (ಪ. ಕನ್ನಡ) 1/8 ಕ್ರೌನ್ ಸ್ಯಾಜನ 10 ಪುಟಗಳ ಚಿಕ್ಕ ಪುಸ್ತಕ. ಬೆಲೆ 0-1-9 ಮಹಾತ್ಮಾ ಗಾಂಧಿಯವರ ಜೀವನ ಮಹಾತ್ಮೆಯನ್ನು ಭಜನೆ ಹಾಡುಗಳ ಲ್ಲಿ ಎಲ್ಲರೂ ಓದಿ ಅರ್ಥಮಾಡಿಕೊಳ್ಳುವ ರೀತಿಯಲ್ಲಿ ಶ್ರೀಮತಿ ಜಾನಕಿಯವರು ಇದನ್ನು ರಚಿಸಿದ್ದಾರೆ ಪ್ರೌತ್ಸಾಹಿಸಕಕ್ಕ ಶ್ರೀ ಸಾಹಿತ್ಯ ಪ್ರತಿಗಳು ನವಯುಗ ಪ್ರೆಸ್ಸ್, ಉಡುಪಿ. ಇವರಲ್ಲಿ ದೊರೆಯುತ್ತವೆ.

ಹದಿನೆಂಟು ಪುರಾಣಗಳನ್ನು ಬರೆ ದವರು ಯಾರು?:- ಲೇಖಕರು ಶ್ರೀ ಜಿ. ಲಕ್ಷ್ಮಣ ದೇವ ವಿದ್ಯಾರ್ಥಿ, ವೈದಿಕ ಧರ್ಮ ಪ್ರಚಾರಕ ಮತ್ತು ಸದ್ಧರ್ಮ ಪ್ರಚಾರಕ ಗ್ರಂಥಮಾಲೆಯ ಸಂಪಾದಕ ಮಂಗಳೂರು. 1/8 ಕ್ರೌನ್ ಸ್ಯಾಜನ 16 ಪುಟಗಳು- ಬೆಲೆ 0-2-6.

ಹದಿನೆಂಟು ಪುರಾಣಗಳು ಬರೀ ಕಲ್ಪಿತ ಕಥೆಗಳಾಗಿದ್ದು ಮಾನವನ ಜೀವನದ ಅಭಿವೃದ್ಧಿಗೆ ಇವು ಘಾತುಕ ಸ್ವರೂಪದ್ದಾಗಿವೆ ಎಂಬುದನ್ನು ಈ ಚಿಕ್ಕ ಪುಸ್ತಕದಲ್ಲಿ ವಿವರಿಸಲಾಗಿದೆ. ಆಂಧಶ್ರದ್ಧೆಯನ್ನು ಹೋಗಲಾಡಿಸಲು ಇದು ಸ್ವಲ್ಪ ಸಹಾಯವಾಗಬಹುದು.

ಉಡುಪಿ ಶ್ರೀ ಕೃಷ್ಣಾಪುರ ಮಠದ ಗುರು ಪರಂಪರೆ (ಪೀಠಿಗೆ):-ಪ್ರಕಾಶಕರು ಶ್ರೀ ಕೆ. ರಾಜಗೋಪಾಲಾಚಾರ್ಯ, ಕರಂಬ್ಳಿ, ಉಡುಪಿ. 1/8 ಕ್ರೌನ್ ಆಕಾರದ 50 ಪುಟಗಳು.

ಉಡುಪಿಯ ಪ್ರಖ್ಯಾತ ಅಷ್ಟಮಠಗಳ ಲ್ಲೊಂದಾದ ಶ್ರೀ ಕೃಷ್ಣಾಪುರ ಮಠದ ಇತಿಹಾಸ, ಗುರುಪೀಠಿಗೆ ಮೊದಲಾದುವನ್ನು ಈ ಪುಸ್ತಕದಲ್ಲಿ ಸಚಿತ್ರವಾಗಿ ವಿವರಿಸಲಾಗಿದೆ. ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರಣ್ಯ ತೀರ್ಥ ಶ್ರೀ ಪಾದಂಗಳವರ ಪರ್ಯಾಯ ಕಾಲದಲ್ಲಿ ಪ್ರಕಟವಾಗುತ್ತಿದ್ದ ಶ್ರೀ ಕೃಷ್ಣ ಪರ್ಯಾಯ ಪ್ರಕಾಶಿನಿಯ ವಿಶೇಷ ಸಂಚಿಕೆ ಯಲ್ಲಿ ಬಂದಿದ್ದ ಕೆಲವು ಸಂದರ್ಭ ಲೇಖನ, ಕವಿತೆಗಳನ್ನೂ ಇದರಲ್ಲಿ ಸಂಗ್ರಹಿಸಲಾಗಿದೆ. ಅಂಚೆವೆಚ್ಚಕ್ಕಾಗಿ ಹಿಂದಾಣೆ ಟಿಕ್ಕಾಲು ಚೀಟನ್ನು ಪ್ರಕಾಶಕರಿಗೆ ಕಳುಹಿಸಿದ್ದಲ್ಲಿ ಉಚಿತವಾಗಿ ಈ ಪುಸ್ತಕವು ಕಳುಹಿಸಲ್ಪಡುವುದು.

ಕನ್ನಡ ಹಿಂದೀ ಸ್ವಯಂಬೋಧಿನಿ (ಭಾಗ ಒಂದು):—ಲೇಖಕರು ಅಬ್ದುಲ್ ಕಯ್ಯುಂಬಾನ್. ಪ್ರಕಾಶಕರು ಮುಸ್ಲಿಂ ಬುಕ್‌ಡಿಪೊ ನಂಬ್ರ 31 ಸ್ಯಾಮಾ ಕೆಟ್, ಬೆಂಗಳೂರು ಸಿಟಿ. 1/8 ಕ್ರೌನ್ ಆಕಾರದ 32 ಪುಟಗಳು ಬೆಲೆ 0-4-0

ಹಿಂದೀ ಭಾಷೆಯನ್ನು ಪ್ರಚಾರಪಡಿಸಲು ಕೆಲವು ಕನ್ನಡ ಬಾಲಬೋಧೆಗಳು ಬರೆಯಲ್ಪಟ್ಟಿದ್ದರೂ ಇದರಿಂದ ಹೆಚ್ಚಿನ ಉಪಯೋಗವಿಲ್ಲವೆಂದು ಭಾಷೆ ಕಲಿಯಲೆತ್ನಿಸುವವರಿಗೆ ಸುಲಭವಾಗುವಂತೆ ಈ ಸ್ವಯಂಬೋಧಿನಿಯು ಬರೆಯಲ್ಪಟ್ಟಿದೆ. ಇದು ಹಿಂದೀ ಕಲಿಯಬೇಕೆಂದಿರುವವರಿಗೆ ಉಪಯುಕ್ತವಾಗಬಹುದೆಂದು ಲೇಖಕರಿಗೆ ಭರವಸೆಇದೆ

ಹಿಂದುಸ್ತಾನಿ ಬಾಲಬೋಧೆ ಪುಸ್ತಕ ಹಿಂದುಸ್ತಾನಿ ಸ್ವಯಂಬೋಧಿನಿ ಲೇಖಕರು ಅಬ್ದುಲ್ ಕಯ್ಯುಂಬಾನ್, ಪ್ರಕಾಶಕರು-ಮುಸ್ಲಿಂ ಬುಕ್‌ಡಿಪೊ, ಬೆಂಗಳೂರು ಸಿಟಿ. ಮೊದಲನೆ ಪುಸ್ತಕದ ಬೆಲೆ 0-5-0 ಎರಡನೆ ಪುಸ್ತಕದ ಬೆಲೆ 0-8-0

ಹಿಂದೂ ಮುಸಲ್ಮಾನರ ಪರಸ್ಪರ ಹೊಕ್ಕು ಬಳಕೆಯಿಂದ ನಮ್ಮ ನಾಡಿನವರಿಗೂ ಅಲ್ಪ ಸ್ವಲ್ಪ ಹಿಂದೂಸ್ತಾನಿ ಪರಿಚಯವಿದ್ದರೂ ಅದನ್ನು ಅವರು ಹೆಚ್ಚುವೇಳೆ ತಪ್ಪಾಗಿ ಉಪಯೋಗಿಸುತ್ತಾರೆ. ಆದುದರಿಂದ ಹಿಂದೂಸ್ತಾನಿ ಕಲಿಯಬೇಕೆಂದಿರುವವರಿಗೆ ಅನುಕೂಲವಾಗುವಂತೆ ಈ ಪುಸ್ತಕಗಳನ್ನು ಹೊಸ ರೀತಿಯಲ್ಲಿ ಬಾಸರು ರಚಿಸಿರುತ್ತಾರೆ. ಹಿಂದುಸ್ತಾನಿ ಕಲಿಯಲೇಕ್ಕೆಸುವವರಿಗೆ ಉಪಯುಕ್ತ ಪುಸ್ತಕಗಳು.

ಚಂದಮಾಮ [ಮಕ್ಕಳ ಮಾಸಪತ್ರಿಕೆ]:— ಶ್ರೀ ಬಿ. ಎಸ್. ರೆಡ್ಡಿಯವರ ಸಂಪಾದಕತ್ವದಲ್ಲಿ ಮದ್ರಾಸಿನಿಂದ ಪ್ರಕಟವಾಗುತ್ತಿದೆ. ಪ್ರಕಾಶಕರು-'ಚಂದಮಾಮ' ಪಬ್ಲಿಕೇಷನ್ಸ್, ಪೋಸ್ಟ್ ಬಾಕ್ಸ್ ನಂ. 1686, ಮದ್ರಾಸು, ವಾರ್ಷಿಕ ಚಂದಾ ರೂ 3-0-0

ಮಕ್ಕಳ ಮನೋಗುಣಕ್ಕೆ ಯೋಗ್ಯವಾದ ಕತೆಗಳು ಬಣ್ಣದ ಚಿತ್ರ ಸಹಿತವಾಗಿ ಇದರಲ್ಲಿ ಪ್ರಕಟವಾಗುತ್ತಿವೆ. ಮಕ್ಕಳ ಪದ್ಯಗಳೂ ಸುಲಭತರದ ಹಾಗೂ ನಾನಾವಿಧದ ಒಗಟುಗಳೂ ಸಚಿತ್ರವಾಗಿ ಕೊಡಲ್ಪಡುತ್ತವೆ. ಅಕ್ಷರ ಮುದ್ರಿತ ಪತ್ರವಿದೆ. ಅಂತೂ ಅಂತರಂಗ ಬಹಿರಂಗಗಳಲ್ಲಿ ಪತ್ರಿಕೆಯು ಮಕ್ಕಳ ಮನ ಸೆಳೆಯುವಂತಿದೆ.

ಸೇವಾ ಮದ್ರಾಸಿನ ಕರ್ನಾಟಕ ಸೇವಾ ಸಂಘದವರು ಪ್ರಕಟಿಸಿದ ವಾರ್ಷಿಕ ಸಂಚಿಕೆ. ½ ಕ್ರೌನ್ ಆಕಾರದ 120 ಪುಟಗಳು. ಬೆಲೆ ರೂಪಾಯಿ ಎರಡು. ಪ್ರತಿಗಳು ಉಡುಪಿನ ನವಯುಗ ಪ್ರಸ್ಸಿನಲ್ಲಿ ದೊರೆಯುತ್ತವೆ.

ಗೊಬ್ಬರ ಲೇಖಕರು. ಶ್ರೀ ಪೀ. ಚ. ಹಿತ್ತಲಮನೆ, ಬಿ. ಎಸ್. ಸಿ(ಆಗ್ರಿ)[ಆನರ್ಸ್] ಪ್ರಕಾಶಕರು- ಶ್ರೀ ಕಲ್ಲೂರ ರಾಯನ ಗೌಡ ಪಾಟೀಲ್, ಜನತಾ ಸೇವಕ ಸನಾಜ, ಬೈಲ ಹೊಂಗಲ, ಬೆಲೆ ರೂಪಾಯಿ ಎರಡು.

ಭಾರತದ ರಾಜ್ಯಘಟನೆಯ ಕರಡು ಘಟನಾ ಸಮಿತಿಯ ಅಧ್ಯಕ್ಷ ಡಾ। ಬಾಬು ರಾಜೇಂದ್ರ ಪ್ರಸಾದರಿಂದ. ಅನುವಾದಕರು ಶ್ರೀಗಳಾದ ನಾಡಿಗೇರ ಶಿವರಾಮ್ ಮತ್ತು ವಂಕರ ವೆಂಕಟೇಶ ಪಾಟೀಲ್. ಪ್ರಕಾಶಕರು- ಕತಾರ್ ಮಿನಾರ್ ಪ್ರಕಾಶನ, ಧಾರವಾಡ. ಬೆಲೆ ರೂ 1-8-0

ಕ್ರಿಸ್ಮಸ್ ಕಾಣಿಕೆ ಮತ್ತು ಇತರ ಕಥೆಗಳು ಸಂಗ್ರಾಹಕರು ಶ್ರೀ ಎಮ್. ಥರಿದಾಸ ರಾವ್, ಪ್ರಕಾಶಕರು ಸರ್ವೋದಯ ಸಾಹಿತ್ಯಮಾಲಾ, ಹುಬ್ಬಳ್ಳಿ. ಬೆಲೆ ರೂ ನಾಯಿ ಒಂದು

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇವಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಧಾರ್ವಾಡ, ಬೆಳಗಾಂವ

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ಶೆಟ್ಟಿ.	0	3	0
ಸಂಶಯ ಪಿಶಾಚಿ	(ನಾಟಕ)	ಕೆ. ಕೆ. ಶೆಟ್ಟಿ.	0	8	0
ಕುಶಲವ	(,,)	,,	0	6	0
ವ್ಯಭಿಚಾರಿಣಿ ಯಾರು	(,,)	,,	1	0	0
ಹೆಂಡ್ತಿ ಗಂಡನಾದರೆ	(ಪ್ರಹಸನ)	,,	0	4	0
ಸನ್ಯಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಸಣ್ಣ ಕತೆಗಳು)	ಕೊಂಡ್ಕುಲ್	0	14	0
ಭಾರತೀಯ ಕತೆಗಳು	(,,)	,,	0	14	0
ಮೂರು ಸ್ವಪ್ನನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್. ಎಲ್. ಸುಬ್ರಹ್ಮಣ್ಯಂ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜ.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾಕಾಮಿನಿ	(ಕವಿತೆಗಳು)	ಎಸ್. ವೆಂಕಟರಾಜ	2	0	0
ಸಪ್ತಸಾಗರ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	4	0
ನಗೆನೋಟಗಳು	(ವಿನೋದ ಕತೆಗಳು)	ಕೆ. ವಿಟ್ಠಲ ಶೆಣೈ	0	14	0
ಅನ್ನದೇನರು ಮತ್ತು ಇತರ ಕತೆಗಳು		ಕಯ್ಯಾರ ಕಿಞ್ಞಣ್ಣ ರೈ	1	0	0
ವಿಷ್ಣುವಿನ ದಶಾವತಾರಗಳು		ಅರ್ಥಾತ್ ದಶಾವತಾರಗಳು (ವಿಡಂಬನೆ) ಎಂ. ವಿ. ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯಕ್ಷಗಾನ ನಾಟಕ)	,,	0	8	0
ಸ್ವಾತಂತ್ರ್ಯವೀರ ಸಾವರಕರರು	(ಜೀವನ ಚರಿತ್ರೆ)	ಇಂದಿರಾಬಾಯಿ	1	1	0
ಜೀವನಸಂಗ್ರಾಮ	(ನಾಟಕ)	ಪಿ. ಶೀನ ಶೆಟ್ಟಿ	1	8	0
ಜಮೀನ್ದಾರ	(ಕಾದಂಬರಿ)	ಹೊಸಮನೆ ಗುಡ್ಡಪ್ಪ	1	8	0

ಪ್ರತಿಗಳಿಗೆ:—

ನವಭಾರತ ಪುಸ್ತಕ ಭಂಡಾರ, ಉಡುಪಿ ನ. ಕ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Office P. K.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಂ ಆಗಿ ಯೂಚಿಲ್ಲರೆಯಾಗಿಯೂಮೊರೆಯುತ್ತವೆ.

ಕಲ್ಕಂಜೆ ವ್ಯಾಸರಾಜಾಯ್ಯ,
ರಥಬೀದಿ, ಉಡುಪಿ.

ಎಣ್ಣೆ ಎಂಜಿನುಗಳು

ಕಬ್ಬನ್ನು ಹಿಸುಕುವ ಎಂಜಿನುಗಳು
ಸರ್ತಿಯಿಂದ ಕೆಲಸಮಾಡುವ
ಎಣ್ಣೆ ಮಿಲ್ಲುಗಳು
ಸ್ಟಾಕ್ ಬಟವಾಡೆಗೆ ತಯಾರಾಗಿವೆ.
ಗ್ರಾಹಕರು ಇಂದೇ ಬರೆಯಿರಿ:-
ಸುರೇಶ ಎಂಡ್ ಕೊ.,
ಮರಾಠಾ ಗಲ್ಲಿ, ಹುಬ್ಬಳ್ಳಿ.

Regd. No. M. 3618 ಎರಡಾನೆ 14-10-1948

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ನಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. ೫-೪-೦
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯ ವಾರ ೭

NAVAYUGA WEEKLY, UDIPI, S. K.

FOUNDER: Hon'ble Mr. A. B SHETTY, Health Minister, Govt. of Madras.

Vol. 29 No. 7

ಹಾದಿಗೆ ಬಂದ ಹೈದರಾಬಾದ್!

ಹೈದರಾಬಾದ್ ನಿಜಾಮರು ಈಗ ಹೇಗಿದ್ದಾರೆಂಬುದು ಎಲ್ಲರಿಗೂ ಗೊತ್ತು; ಆದರೆ ಇವರ ಹೃದಯ ಹೇಗಿದೆ ಎಂಬುದರ ಗುಟ್ಟು ನಿಜಕ್ಕೂ ಸಂಪೂರ್ಣವಾಗಿ ಯಾರಿಗೂ ತಿಳಿದಿರಲಾರದು! ತಾನಾಗಿ ಬೆಳೆಸಿದ-ಅಥವಾ ನಿಜಾಮರು ಸ್ವತಃ ಹೇಳುತ್ತಿರುವಂತೆ ತನ್ನ ಕೈ ಮೀರಿ ಬೆಳೆದು ಬಂದ-ರಝಾಕಾರ್ ಪ್ರಭಾವದ ಕೋಟೆಯೊಳಗೆ ಕೈದಿಯಾಗಿದ್ದ ನಿಜಾಮರನ್ನೀಗ ಹಿಂದೀ ಸಂಕಾರದ ಸೇನೆ ಬಂಧನದಿಂದ ಬಿಡಿಸಿದೆ; ಅವರಿಂದ ನಿರ್ವಹಿಸಲಾಗಿದ್ದ ಕಾರ್ಯಗಳನ್ನು ಜನರಲ್ ಚೌಧರಿಯವರೀಗ ನಿರ್ವಹಿಸುತಿದ್ದಾರೆ; ನಿಜಾಮರ ಸಹಜ ಸ್ಥಾನವಾವುದೋ ಅದರಲ್ಲೇ ಅವರೀಗ ಇದ್ದಾರೆ; ಇಂದಿನ ಅವಸರದ ವ್ಯವಸ್ಥೆಯು ಯಾರಿಂದಾಗಲೇಕೋ ಮತ್ತು ಹೇಗಾಗಲೇಕೋ, ಅವರಿಂದಲೇ ಮತ್ತು ಹಾಗೆಯೇ ಆಗುತ್ತಿದೆ. ಅಂತೂ ನಿಜಾಮರೀಗ ಇರಬೇಕಾದ ಸ್ಥಿತಿಯಲ್ಲಿದ್ದಾರೆ. ಆದರೆ ಅವರ ಹೃದಯ? ಅದೂ ಇರಬೇಕಾದಂತೆಯೇ ಇದೆ ಎಂಬುದನ್ನವರು ತೋರಿಸಿಕೊಳ್ಳುತಿದ್ದಾರೆ. ಆದರೆ ಸ್ವಕಾರ್ಯ ಸಾಧನೆಗಾಗಿ ಅಕ್ಷಮ್ಯ ವಂಚನೆ ಮಾಡಿಕೊಳ್ಳುವುದರಲ್ಲಿ ನಿಜಾಮ್ ವಂಶ ಪರಂಪರೆಯು ಪ್ರಸಿದ್ಧವಾದುದು. ಔರಂಗಜೇಬನ ಮಾದರಿಯ ಕಪಟವು ತಲೆಯಿಂದ ತಲೆಗೆ ಇಳಿದುಬಂದ ಒಂದು ಕಿರೀಟ ಸರಣಿಯೆಂದರೆ ಹೈದರಾಬಾದ್ ನಿಜಾಮ್ ರಾಜ ವಂಶವೆನ್ನಬಹುದು. ಈಗಿನ ನಿಜಾಮರೂ ಅಕ್ಷರಶಃ ಆ ವಂಶಸ್ಥರೇ ಎಂಬ ಅನುಭವವು ಥಿಲ್ಲಿಯ ನಾಯಕರಿಗಿದ್ದಷ್ಟು ಬೇರೆಯವರಿಗಿರಲಾರದು. ಈ ನೆಲೆಯಲ್ಲಿನ ಪ್ರತಿಯೊಂದು ಬಾರಿಯ ಸಂಧಾನ ಮಾತುಕತೆಗಳಲ್ಲಿ ನಿಜಾಮರು ಹೇಗೆ ವರ್ತಿಸಿದ್ದರೆಂಬ ಸ್ವಂತಾನುಭವವೇ ಅವರ ಇಂದಿನ ಮಾತು ವರ್ತನೆಗಳನ್ನು ತಿಕ್ಕಿ ಪರೀಕ್ಷಿಸಲಾಗುವ ಒರೆಗಲ್ಲಾಗಿ ಸರ್ದಾರ್ ವಲ್ಲಭಾಯಿಗಳಂತಹ ಗಟ್ಟಿಮನಸ್ಸಿನವರ ಕೈಯಲ್ಲಿರುವುದರಿಂದ, ಇನ್ನಾವ ವಂಚನೆಗೂ ಅವಕಾಶವೊದಗಬಹುದು ನಂಬಬಹುದು. ಹೈದರಾಬಾದ್ ಬಿಕ್ಕಟ್ಟು ಮುಕ್ತಾಯದೊಂದಿಗೆ ಒಂದು ವಂಚನಾ ಪ್ರವಾಹದ ಬುಗ್ಗೆಯೂ ಒಣಗಿ ಹೋಯಿತು!

ನಿಜಾಮ್ ಪರಂಪರೆಯ ಹುಟ್ಟುಗುಣ,

ಆದಿ ಭಾಗದಲ್ಲಿ, ಹೈದರಾಬಾದಿನ ಸ್ಥಾಪಕ ನಿಜಾಮ ಆಸಫ್‌ಜಾ ಗಾದಿಯೇರಿದುದು ಆ ಕಾಲದಲ್ಲಿ. ಈ ಮೊದಲ ನಿಜಾಮನ ಸೇನಾ ಬಲ ಮತ್ತು ರಾಜಕೀಯ ಕುಯುಕ್ತಿಗಳಿದಿರಲ್ಲಿ, ಧೀರನ ರಾಟರ ಆಟ ನಡೆಯದೆ ಹೋಯಿತು. ಇಲ್ಲವಾದರೆ ಇಡೀ ಡೆಕ್ಕಾನನ್ನು ಅಗಲೇ ಮರಾಟಂಕ್ರ ಔರಂಗಜೇಬನ ವಿರುದ್ಧ ಮತ್ತೋರ್ವ ಮರಾಠೀ ರಾಜನನ್ನೇ ಎತ್ತಿಕಟ್ಟಿ ತನ್ನ ಸ್ವಾತಂತ್ರ್ಯವನ್ನು ಳಿಸಿಕೊಳ್ಳುತ್ತಿದ್ದ. ಆದರೂ ಒಂದು ಬಾರಿ ಪೂನೆಯ ಪೇಶ್ವೆ ಸಿಂದ ಸೆರೆ ಹಿಡಿಯಲ್ಪಟ್ಟಾಗ ಆಸಫ್‌ಜಾ ತನ್ನ ಸ್ವಾತಂತ್ರ್ಯಕ್ಕಾಗಿ ಕೊಟ್ಟ ಲಂಚವು ಪ್ರಪಂಚದ ಗಣ್ಯ ಫ್ರೌಜರಿಗಳಲ್ಲೊಂದು. ತನ್ನ ಸ್ವಾತಂತ್ರ್ಯಕ್ಕೆ ಸ್ರತಿಫಲವಾಗಿ ನಿಜಾಮನು ಪೇಶ್ವೆಯ ಹೆಸರಿಗೆ ಒರೆದು ಹಾಕಿದುದೆಂದರೆ ತನಗಾವ ಅಧಿಕಾರವೂ ಇರದ ಮಾಲ್ವಾದ ಥಿಲ್ಲಿ ಸ್ರಾಂತ್ಯವನ್ನು! ಸೋತಾಗಲೂ ಇಂತಹ ವಂಚನೆಯಿಂದ ಗೆದ್ದು, ಗೆದ್ದಾಗಲಂತೂ ಸಾಧ್ಯವಿದ್ದಷ್ಟೂ ಆಕ್ರಮಿಸಿಕೊಂಡು ಆಸಫ್‌ಜಾ ತನ್ನ ರಿಜ್ಯವನ್ನಾಗ ಸ್ಟ್ಟಿಮದಲ್ಲಿ ಪೂನಾದ ವರೆಗೂ ಪೂರ್ವದಲ್ಲಿ ಮಸಲಿಪಟ್ಟಾಮಿನ ವರೆಗೂ ವಿಸ್ತರಿಸಿದ್ದ-ಆಸಿವ್ ರಜ್ವಿ ನಿಜಾಮರಿಗೆ ಮರು ಸಂಪಾದಿಸಿಕೊಡುವೆನೆಂದು ಗೆರೆಯೆಳೆದು ಬಡಾಯು ಹಾರಿಸುತ್ತಿದ್ದುದು ಈ ಸ್ರೇತ್ರವನ್ನೇ

ಆಸಫ್‌ಜಾ ಸತ್ತೊಡನೆ, ಎರಡನೇ ನಿಜಾಮನಿಗೆ ಬ್ರಿಟಿಷರು ಗಾಳಿಯೂದಹಕ್ಕಿದರು. ಆಗ ಬ್ರಿಟಿಷರ ಹಕ್ಕಿನದಾಗಿದ್ದ ಮದ್ರಾಸನ್ನು ಫ್ರೆಂಚರು ಆಕ್ರಮಿಸಿಕೊಂಡು ನಿಂತಿದ್ದರು. ಬ್ರಿಟಿಷರಿಂದ ಪ್ರೇರಣೆಗೊಂಡ ನಿಜಾಮ, ಮದ್ರಾಸಿನಿಂದ ಫ್ರೆಂಚರನ್ನೋಡಿಸುವಂತೆ ತನ್ನ ಕೈಕೆಳಗಿನ ಅರ್ಕಾಟ್ ನವಾಬನನ್ನು ದೊಡ್ಡ ಸೇನೆಯೊಂದಿಗೆ ಕಳುಹಿಸಿದ. ಆದರೆ ಫ್ರೆಂಚ್ ಸೇನಾನಿ ಡೆ ಬುಸ್ಸಿಯ ಸಣ್ಣ ಸೇನೆಯೊಂದು ನವಾಬನ ಈಅತಿ ದೊಡ್ಡ ಸೇನೆಯನ್ನು ನಿರ್ನಾಮ ಮಾಡಿಬಿಟ್ಟಿತು. ನಿಜಾಮ ಗಾಬರಿಗೊಂಡ ಹೈದರಾಬಾದ್ ನಿಜಾಮ ಮತ್ತು ಅರ್ಕಾಟ್ ನವಾಬರಿಬ್ಬರೂ ತಮ್ಮ ರಕ್ಷಣೆಗಾಗಿ ಬ್ರಿಟನ್ನನ್ನಾಶ್ರಯಿಸಿದರು. ಅಂದಿನಿಂದಲೇ ಹೈದರಾಬಾದಿನಲ್ಲಿ ಬ್ರಿಟಿಷ್ ಮೇಲಧಿಕಾರಕ್ಕಾರಂಭ. ಅಂತ

The Fourth Actuarial VALUATION of the "**Popular**" has once again proved its sound and progressive position. The Valuation has disclosed a divisible SURPLUS of Rs. 48,421 and the Company has allotted a Reversionary BONUS of Rs. 4 per Rs. 1000 Sum Assured for **each** of th five years 1943-'47

A programe of wider organisation and expansion has been decided upon. Chief and Special Agencies on attractive terms are open in unrepresented areas: Appointments of Organisers will also be considered

THE
POPULAR INSURANCE COMPANY LTD.,
Head Office MANGALORE, South India
Estd 1929

Madras Branch : "VISRAM" Lalitnagar, Madras 4
Bombay Branch : "PROSPECT CHAMBERS" Hornby Road, Fort, Bombay

ಆಸಫ್‌ಜಾ ರಾಜಶಾಹಿ

ಬಂಗಾಳಾ ಸಮುದ್ರದಿಂದ ಯಾರಿಗುಂಗುಸ್ವನ್ನು ಮುಳುಗಿಸಬೇಕೆಂದು ಕಾಸಿಮ್ ರಜ್ವಿ ಸಂಕಲ್ಪಿಸಿದ್ದನೋ ಆ ನಿಜಾಮರ ವಂಶಮೂಲ 13ನೇ ಶತಮಾನದ ಮಿಸಿಕೊಂಡು ಹೈದರಾಬಾದ್ ಚರಿತ್ರೆ ಅಂದೇ ಪ್ರತ್ಯೇಕವಾಗಿ ಹೋಗುತಿತ್ತು. ವೈರಿಗಳನ್ನು ಭೇದಿಸಿ ಹಾಕುವದಕ್ಕೆಂತೂ ವೈರಿಗಳೊಳಗೆ ಭೇದ ಹುಟ್ಟಿಸಿ ಬಾಳುವದು ಹಿತಕರವೆಂಬ ತತ್ವವನ್ನು ಈ ನಿಜಾಮ ನಿಷ್ಠೆಯಿಂದ ಜಾರಿಗೆ ತಂದಿದ್ದ.

ವಿಮೆಮಾಡಲಿಕ್ಕೆ ಯಾ ಹ್ಯಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಸ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED

ಸ್ವಂತಸ್ಥಾನಿ, ನಿಜಾಮರ ಎಲ್ಲಾ ಅಧಿಕಾರಗಳನ್ನೂ ಕಸಗೊಳ್ಳುತ್ತಾ, ಅವುಗಳನ್ನು ಕ್ರಮವಾಗಿ ಅಲ್ಲಿಯ ತಮ್ಮ ರೆಸಿಡೆಂಟನ ಕೈಗೆ ಕೊಡುತ್ತಾ ಬ್ರಿಟಿಷರು ನಿಜಾಮನನ್ನು ಕೇವಲ ಕೀಟಧಾರಿ ಗೊಂಬೆಯಾಗಿ ಮಾಡಿಟ್ಟರು. 1800ರಲ್ಲಿ ಬ್ರಿಟಿಷ್ ಮತ್ತು ನಿಜಾಮರೊಳಗಾದ ಕರಾರಿನ ಮೂಲಕ ನಿಜಾಮರು ರಿಕಾರ್ಡು ನಿಜ ಬ್ರಿಟಿಷ್ ಗುಲಾಮರಾಗಿ ಮಾರ್ಪಟ್ಟರು. ಇದರ ಪರಿಣಾಮವಾಗಿ ಹೈದರಾಬಾದ್ ಜನತೆಯ ತಲೆಯ ಮೇಲೆ ಇಮ್ಮಡಿ ಭಾರಬಿದ್ದು, ಅವರು ಒಳಗಿಂದೊಳಗೆ ಕುದಿದು, ಅಕ್ಷರಶಿ ಅಲ್ಲಲ್ಲಿ ಜ್ವಲಿಸಲಿಕ್ಕಾರಂಭಿಸಿತು. ಅದರ ದಮನಕ್ಕಾಗಿ ನಿಜಾಮರಿಗೆ ಬ್ರಿಟಿಷ್ ಸೇನೆಯ ಸಹಾಯ ಬೇಕಾಯಿತು. ಹೈದರಾಬಾದಿನೊಳಗೆ ಬಿಳಿ ಸೇನೆ ರಾಜ್ಯ ಹೊಡೆಯಿತು ಬ್ರಿಟಿಷ್ ಅಧಿಕಾರದಂತೆಯೇ ಬ್ರಿಟಿಷ್ ಅಂಕಣವೂ ಬಿತ್ತು. ತನ್ನನ್ನು ಸುತ್ತುಗಟ್ಟಿ ಯಾವ ಸೇನೆ ನಿಲ್ಲುವುದೋ ಅದಕ್ಕಾಧೀನವಾಗಿ ಬಾಳುವ ನಿಜಾಮ್ ಮನೋವೃತ್ತಿಯ ಆದಿ ಇಲ್ಲಿ- ಅಂತ್ಯ ಕಾಸಿಮ್ ರಜ್ವಿಯ ರಝಾಕಾರ್ ಸೇನೆಯೊಂದಿಗೆ! ಆರ್ಥಿಕದೃಷ್ಟಿಯಲ್ಲೂ ನಿಜಾಮರ ಹೈದರಾಬಾದು ಅಗಲೂ ಇಂದಿನಂತೆಯೇ ದಿವಾಳಿಯಾಗಿತ್ತು. 1858ರಲ್ಲಿ ನಿಜಾಮರು ಭಾರತ ಸರಕಾರಕ್ಕೆ ಕೊಡಲು ಬಾಕಿಯಿದ್ದ ಸಾಲದ ಮೊತ್ತವೆಷ್ಟು ದೊಡ್ಡದಾಗಿತ್ತೆಂದರೆ, ಅದನ್ನು ಹೀಗೆಯೇ ಬಾಕಿಯಿಡುವ ವಿಶ್ವಾಸವಿಲ್ಲದೆ ಭದ್ರತೆಗಾಗಿ ಬೇರಾರನ್ನು ತಮಗೆ ಅಡವು ಕೊಡಬೇಕೆಂದು ಭಾರತ ಸರಕಾರ ನಿಜಾಮರನ್ನು ಕೇಳಿದ್ದಿತು. 1902ರಲ್ಲಿ ಆಗ ವೈಸರಾಯಿಯಾಗಿದ್ದ ಲೋರ್ಡ್ ಕರ್ಝನರು ನಿಜಾಮರ ಪ್ರಧಾನ ಮಂತ್ರಿಯಾಗಿದ್ದ ಸರ್ ಅಕ್ಬರ್ ಹೈದರಿಯವರನ್ನು ಒಲಿಸಿಕೊಂಡು, ಬೇರಾರ್ ಪ್ರಾಂತ್ಯವನ್ನು 25 ಲಕ್ಷ ರೂಪಾಯಿಗಳ ಸರಕಾರ ಗೇಣಿಗೆ ಒತ್ತೆಪಡೆಕೊಂಡರು ಕೊನೆಗೆ ಸರ್ ಅಕ್ಬರ್ ಹೈದರಿಗಳಿಗೆ " G. C. B. " ಬರುದು ದೊರೆತಾಗ 'Gave Curzon Berar' ಎಂದದಕ್ಕೆ ಕೊಟ್ಟಿದ ಅರ್ಥವು ಎಲ್ಲರ ಬಾಯಿಯಲ್ಲೂ ನಲಿದಾಡುತಿತ್ತು.

ನಿಜಾಮರ ದೊಡ್ಡ ದಗೆ!

ಅಖಿಲ ಭಾರತದ ಸ್ವಯಮಸ್ವಾತಂತ್ರ್ಯ ಯುದ್ಧವಾದ "ಸಿಪಾಯಿ ಹೋರಾಟ" ದಲ್ಲಿ ಆಗಿನ ನಿಜಾಮರು ಬ್ರಿಟಿಷ್ ಪಕ್ಷ ಹಿಡಿದಿದ್ದರು. ಆ ಸಮಯದಲ್ಲಿ ಮಲಬಾರಿನಲ್ಲಿದ್ದ ಬ್ರಿಟಿಷ್ ಅಧಿಕಾರಿ ಸರ್.ಸಿಡ್ನೆಲೋ ನವ ಥಿಲ್ಟಿಯಲ್ಲಿದ್ದ ತನ್ನವರಿಗೆ ಬಿಟ್ಟ ತಂತಿಯಲ್ಲಿ "ನಿಜಾಮರೊಬ್ಬರು ಹೋದರೆ ಎಲ್ಲವೂ ಹೋಗಿ ಬಿಡುವುದು" ಎಂದು ತಿಳಿಸಿದ್ದ. ಆಗ ಭಾರತದ ಎಲ್ಲೆಲ್ಲೂ ಬ್ರಿಟಿಷ್ ಅಧಿಕಾರವು ಕಂಪಿಸುತಿದ್ದಾಗ, ಅದಕ್ಕೆ ತದ್ವಿರುದ್ಧಂಭವಾದ ಈಲವೇ ಮುಂದಿ ಪ್ರಮುಖ ರಾಜ್ಯ ದ್ರೋಹಿಗಳಲ್ಲಿ ನಿಜಾಮರೊಬ್ಬರು. ಇವರಿಗೆ ಹೈದರಾಬಾದಿನ ಜನತೆಯು ಮಿಳ್ಳೆಯ ತಮ್ಮ ಸಹೋದರರಿಗಿಂತ ಹಿಂದಿರಲಿಲ್ಲ ರಾಜಧಾನಿ ಹೈದರಾಬಾದಿನಲ್ಲೇ ಹಸುರು ಧ್ವಜವೇರಿಸಲ್ಪಟ್ಟಿತು; ರಾಷ್ಟ್ರ ಪ್ರೇಮೋದ್ರೇಕಿ ಜನತೆ ಬ್ರಿಟಿಷ್ ರಾಯಭಾರಿ ಕಚೇರಿಯ ಮೇಲೆ ದಾಳಿಟ್ಟಿತು. ಅದನ್ನು ಬ್ರಿಟಿಷ್ ಸೈನಿಕರು ಬಗ್ಗು ಬಡಿದರಾದರೂ ಜನತೆಯ ಹುರುಪನ್ನು ತಗ್ಗಿಸಲಾರದೆ ಹೋಗಿದ್ದರು- ಈ ಸಂದರ್ಭದ ಒಂದು ಘಟನೆ ಉಲ್ಲೇಖ ಯೋಗ್ಯವಿದೆ. ಹೈದರಾಬಾದಿನ ಪ್ರಧಾನ ಮಂತ್ರಿ ಸಾಲಾರ್‌ಝುಂಗ್ ಮತ್ತು ಬ್ರಿಟಿಷ್ ರೆಸಿಡೆಂಟ್ ಕೈ ಕೈ ಹಿಡಿದುಕೊಂಡು ಅರಮನೆ ದರ್ಬಾರಿನಿಂದ ಹೊರ ಬಿದ್ದಾಗ, ಓರ್ವ ಅಫ್ಘಾನ್ ಕೋವಿಗಾರ ಬಿಳಿ ರೆಸಿಡೆಂಟನಿಗೆ ಗುಂಡು ಹಾರಿಸಿದ. ಗುಂಡು ಗುರಿ ತಪ್ಪಿತು. ಸಾಲಾರ್‌ಝುಂಗರ ನೈಗಾವಲುಗಾರ ಖಡ್ಗದಿಂದಾತನನ್ನು ಅಲ್ಲೇ ಕತ್ತರಿಸಿ ಹಾಕಿದ ಆಗಿನ ಜನತಾ ಭಾವನೆ ಹೀಗಾಗಿತ್ತು; ಆದರೆ ನಿಜಾಮ್ ಗದ್ದುಗೆಯೇರಿದ್ದ ಅಂದಿನವನೂ ಭಾರತದ ಹಿತ ಸಾಧನೆಗೀರೀತಿಯು ವಿರೋಧ ಭಾವನೆಯನ್ನೇ ಕಟ್ಟಿಕೊಂಡಿದ್ದ. ಇದೇ ಮನೋವೃತ್ತಿ- ಸ್ವಹಿತವೊಂದಕ್ಕಾಗಿ ಅಖಿಲ ಭಾರತದ ಹಾಗೂ ಸ್ವತಃ ತನ್ನ ಪ್ರಜೆಗಳ ಹಿತಕ್ಕೆ ದ್ರೋಹ ಮಾಡುವ ಬುದ್ಧಿ- ನಿಜಾಮ್ ಮಕುಟ ಹೊತ್ತ ಪ್ರತಿಯೊಂದು ತಲೆಯ ವೈಶಿಷ್ಟ್ಯವಾಗಿ ವಂಶಪಾರಂಪರ್ಯವಾಗಿ ಬಂದಿದ್ದಿತು.

ಸಾರ್ವಭೌಮಾಧಿಕಾರದ ಆಟ

ಆಡವಾಗಿ ಭಾರತ ಸರಕಾರಕ್ಕೆ ಹೋಗಿರುವ ಬೇರಾರಿನ ಮೇಲಿನ ಆಧಿಕಾರವನ್ನು ಮರಳಿ ಪಡೆಯಬೇಕೆಂಬ ಪ್ರಯತ್ನ ಈಗಿನ ನಿಜಾಮರಿಂದ ಹಿಂದೊಮ್ಮೆ ನಡೆದಿದ್ದಿತು ವ್ಯಕ್ತಿಗತ ಆಡಂಬರಗಳಲ್ಲಿ ಈ ಮೊದಲಿನ ಎಲ್ಲಾ ನಿಜಾಮರುಗಳಿಗಿಂತ ಲೂ ಹಿಂದಿದ್ದು 'ಅತಿ ಶ್ರೀಮಂತ, ಆದರೆ ಅತ್ಯಂತ ಜಿಪುಣ" ಎಂದು ಪರಿಚಿತರಾಗಿರುವ ಈಗಿನ ನಿಜಾಮರು- ನವಾಬ್ ಮಿರ್ ಉಸ್ಮಾನ್ ಅಲೀಖಾನ್ ಬಹದೂರರು- ಬೇರಾರಿನ ಹಕ್ಕನ್ನು ಮರಳಿ ಪಡೆಯುವ ಕುರಿತು 1925ರಲ್ಲಿ ಆಗ ವೈಸರಾಯಿಯಾಗಿದ್ದ ಲೋರ್ಡ್ ರೀಡಿಂಗರಿಗೆ ವಿಜ್ಞಾಪನೆಯೊಂದನ್ನು ಬರಕೊಂಡಿದ್ದರು. ಆ ಪತ್ರಕ್ಕೆ ಏಳು ತಿಂಗಳ ನಂತರ 1926ರಲ್ಲಿ ಲೋರ್ಡ್ ರೀಡಿಂಗರು ಕೊಟ್ಟದ್ದ ಉತ್ತರವನ್ನು, ಫೋರೀನ್ ಕಾರ್ಯಾಚರಣೆಗೆ ಮೊದಲು ಈಗಿನ ಗವರ್ನರ್ ಜನರಲ್ ರಾಜಾಜಿ ಬಲೆದಿದ್ದ ವಿನಂತಿಗಳೊಂದಿಗೆ ನಿಜಾಮರು ಹೋಲಿಸಿ ನೋಡುತಿದ್ದರೆ ತನಗೆ ಗೌರವ ಕೊಡುವವರಾರು, ಎಂಬುದನ್ನು ಅಂದೇ ಕಂಡುಕೊಳ್ಳುತಿದ್ದರು. "ಭಾರತದಲ್ಲಿ ಬ್ರಿಟಿಷ್ ಸಿಂಹಾಸನದ ಸಾರ್ವಭೌಮಾಧಿಕಾರವು ಅತ್ಯುನ್ನತವಾದುದು. ಆದುದರಿಂದ ಭಾರತದ ಯಾವನೇ ಒಬ್ಬ ರಾಜನಾದರೂ ಬ್ರಿಟಿಷ್ ಸರಕಾರದೊಡನೆ ಸಮಾನತೆಯಿಂದ ಸಂಧಾನ ಮಾತುಕತೆ ನಡಿಸುವ ಹಕ್ಕು ಕೇಳಲಾರ' ಎಂದು ನಿಜಾಮರ ಜ್ಞಾನೋದಯಕ್ಕೆ ಅಬಿಳಿ ವೈಸರಾಯಿಯು ಲೇಖನಿಯು ಶೂಲದಂತೆ ನಾಟಿದ್ದಿತು. ಬ್ರಿಟಿಷರ ಮೇಲಧಿಕಾರ ಮತ್ತು ನಿರಂಕುಶಾಧಿಕಾರವನ್ನು ಅನಿತ್ಯದಲ್ಲಿ ಒತ್ತಿ ಬರೆದು ಕೊನೆಯಲ್ಲಿ ಲೋರ್ಡ್ ರೀಡಿಂಗ್ ತಿಳಿಸಿದ್ದರು 'ಯುನೈಟೆಡ್ ಕಿಂಗ್ಡಮ್ ಸಾರ್ವಭೌಮತ್ವ'ವು ಹೈದರಾಬಾದ್ ರಾಜಧಾನಿಯ ಹೊರ ಭಾಗದಲ್ಲೇ ಇದ. ತೀರಾ ಪಶ್ಚಿಮದಲ್ಲಿರುವ ಜೌಳಾಬಾದಿನಲ್ಲಿರುವ, ಅಸಾಧ್ಯ ಕೋಟೆಯ ಕುರುಹು ಆ ಮಟ್ಟಿಗೆ ಪುರಾವೆಕ್ಕೇನೇ ಒಂದು ಅಶ್ವರ್ಯ. ಭಾರತದ ಮೂಲ ಶಿಲ್ಪಕಲೆಯ ದ್ಯೋತಕವಾಗಿ ಉಳಿದಿರುವ ಅಜಂತ ಮತ್ತು ಎಲ್ಲೋರಗಳಿರುವುದು ಹೈದರಾಬಾದಿನೊಳಗೆ. ಸಂಸ್ಥಾನದ ಎಲ್ಲೆಲ್ಲೂ ಬುದ್ಧ ನಾಗರಿಕತೆಯ ಶಿಲಾಕೃತಿಗಳು ಕಾಣ ಸಿಗುತ್ತಿವೆ. ಇಂತಹ ಸಂಸ್ಥಾನದ ಮುಸ್ಲಿಂ ರಾಜ-ನವಾಬ್ ಮಿರ್ ಉಸ್ಮಾನ್ ಅಲೀಖಾನ್ ಬಹದೂರ್-ದಿನಕ್ಕೆ 1000 ಪೌಂಡನ್ನು ಖಾಸಗಿ ವೆಚ್ಚವಾಗಿ ಪ್ರಜೆಗಳ ತೆಂಗೆಯಿಂದ ಪಡೆಯುತಿದ್ದಾನೆ ಸಂಸ್ಥಾನದ ಅತಿ ಹೆಚ್ಚಿನ ಅಸ್ತಿಗಳಿಗೆ, ಖಜಾರುಗಳಿಗೆ ಮತ್ತಿತರ ಕಟ್ಟಡ ಸೊತ್ತುಗಳಿಗೆ ಖಾಸಗೀ ಒಡೆಯನಾಗಿದ್ದು, ತನ್ನಸ್ವಂತ ಖಜಾನೆಯಲ್ಲಂತೂ ಯಾರಿಗೂ ಲೆಕ್ಕ ದೊರೆಯದಷ್ಟು ವಜ್ರ ವೈಢೂರ್ಯಗಳನ್ನು ತುಂಬಿಸಿಕೊಂಡಿರುವ ನಿಜಾಮರು ಲೋಕದಲ್ಲೇ ಅತಿ ದೊಡ್ಡ ಶ್ರೀಮಂತರೆಂದು ಹೆಸರಾಗಿದ್ದಾರೆ. ಮುಷ್ಕರ ಹಿಡಿಯುವ ಮಟ್ಟಿಗೆ ಇವರ ಪೂರ್ವಜರಾಗಿದ್ದ ಜುನಾಗಡದ ನವಾಬರು ತನ್ನ ಅರಮನೆಯಲ್ಲಿ 600 ನಾಯಿಗಳನ್ನು ಸಾಕಿಕ್ಕರೆ ಈ ಮೆಂದಿ ನಿಜಾಮ ತನ್ನ ಅಂತಃಪುರದಲ್ಲಿ ಕಡಿಮೆಯೆಂದರೂ 200 ಸುಂದರಿಯರನ್ನು ಕೂಡಿಸಿಟ್ಟಿದ್ದಾರಂತೆ. ಆದರೆ ಮಿತವ್ಯಯ ಕೈ ಅಲ್ಲ- ಸೂಜಿಗೆ ಮುದ್ದು ಕೊಡುವಂತಹ ಜಿಪುಣತ್ವಕ್ಕೆ-ಹೆಸರಾಗಿದ್ದಾರೆ.

ಇಂತಹ ಸಂಸ್ಥಾನ ಮತ್ತು ಇಂತಹ ನಿಜಾಮರ ನ್ಯಾಯಬದ್ಧ ಹಕ್ಕಿನ ಆದೃಷ್ಟವಾವುದೋ ಅದೀಗ ಒದಗಿದೆ!

ಜನ ಜನವೂ ಓದತಕ್ಕ
ಜನತಾ ಸಾಹಿತ್ಯ'
ಮನೆ ಮನೆಯೂ ಇರತಕ್ಕ
ಮನೋರಂಜನ ಸಾಹಿತ್ಯ.
ಸ್ವರಾಜ್ಯ ವಿಜಯದ ಕತೆಯನ್ನು ಎಲ್ಲರಿಗೂ ತಿಳಿಯುವಂತೆ
ಶ್ರೀ ಎಂ ವಿ. ಹೆಗ್ಡೆಯವರು ಬರೆದ
ಸ್ವರಾಜ್ಯ ವಿಜಯ
ಆಟ್ಲಿ, ಕ್ರಿಪ್ಸ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜಿನ್ನಾ, ನೆಹರು, ಪರಮ್, ಗಾಂಧಿ, ಅಜಾದ್, ಕೃಪಲಾನಿ, ಪ್ರಕಾಶ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರವರ್ಗ.
ಓದಬಲ್ಲವರಿಂತೂ ಓದಿ ತಿಳಿಯತಕ್ಕ ಕತೆ
ಓದಲಾರದವರೂ ಓದಿಸಿ ಕೇಳತಕ್ಕ ಕತೆ
ಬೆಲೆ ಬರೇ 0 8 0
ಹತ್ತಾಣೆ ಸ್ಟಾಂಪು ಕಳಿಸಿದರೆ 1 ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.
ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ, ಅಥವಾ ನವಯುಗ ಪ್ರೆಸ್, ಉಡುಪಿ.
ಇಲ್ಲಿ ದೊರೆಯುತ್ತವೆ.
ಎಲ್ಲ ತರದ
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್
ಉಡುಪಿ

ಹೈದರಾಬಾದಿನಲ್ಲೀಗ ನಡೆದಿರುವುದೇನು?

ಈಗ ಹೈದರಾಬಾದ್ ಸೇನಾಧಿಕಾರಿ ಜನರಲ್ ಚೌಧರಿ ಮತ್ತು ನಿಜಾಮರೂ ಳಗಿನ ಸಂಬಂಧ ಹೇಗಿದೆ ಎಂಬ ಕುರಿತು ವಿಶೇಷವಾಗಿ ವಿದೇಶಗಳಲ್ಲಿ ಅಪ ಪ್ರಚಾರ ನಡೆದಿದೆ; ಜೀತೀಯರೆಲ್ಲೂ ನಾನಾ ವಿಧದ ಊಹಾಪೋಹಗಳೆದ್ದಿವೆ. ಇಂದಿನ ಅವರಂತಾಧಿಕಾರಿ ಬರುವ ಮೊದಲು ನಿಜಾಮರ ಸ್ಥಿತಿ ಮತ್ತು ಮತಿಯೇ ಕುರಿತು ಇದ್ದಂಥಾ ಗುಟ್ಟು, ಈಗ ನಿಜಕ್ಕೂ ಇಲ್ಲ ನಿಜಾಮರಿಂದು ತನ್ನ ಮಟ್ಟಿಗೆ ಸ್ವಂತೇ ಚ್ಛೆಯಿಂದ ಎಲ್ಲಾ ಕಲಸಗಳನ್ನೂ ಮಾಡ ಬಲ್ಲ ಸ್ವತಂತ್ರರಿಂದ್ದಾರೆ. ಹೈದರಾಬಾದ್ ಮತ್ತು ನಿಜಾಮರ ಸ್ಥಿತಿಗತಿಗಳ ಚಿತ್ರ ಹೀಗಿದೆ -

ಸ್ವತಃ ನಿಜಾಮರಿಗೆ ಈ ಮೊದಲೆಷ್ಟು ಅಧಿಕಾರಗಳಿದ್ದುವೋ ಅವೆಲ್ಲವೂ ಈಗಲೂ ಇವೆ ಹೈದರಾಬಾದಿನ ಶಾಂತಿ ಮತ್ತು ಭದ್ರತೆಯ ಮಜಬೂತ್ತಾನೆಯ ಏಕ ಮಾತ್ರಾಧಿಕಾರವಿರುವ ಜನರಲ್ ಚೌಧರಿಯರು ತನ್ನೀ ಅಧಿಕಾರದ ಎಲ್ಲೆಯನ್ನು ಎಲ್ಲಿಯೂ ಮೀರಿ ಹೋಗಿಲ್ಲ ಹೈದರಾಬಾದಿನ ಸರಕಾರೀ ಕ್ರಮ ಮತ್ತಿತರ ನಿಧಾನಗಳನ್ನು ಒದಲಾಯಿಸುವ ಅಧಿಕಾರವು ಭಾವೀ ಘಟನಾ ಸಮಿತಿಗೆ ಹೊರತು ಇಂದಿನ ಸೇನಾ ಸರಕಾರಕ್ಕೆಲ್ಲ.

ಫಕ್ತಾರಿ ನವಾಬ್ ಅಥವಾ ಲಾಯಿಕ್ ಅಲಿ ಮಂತ್ರಿ ಮಂಡಲವಿದ್ದಾಗ ಹೇಗೆ ಸರಕಾರೀ ಪತ್ರಗಳು ನಿಜಾಮರ ದಸ್ಕತಿಗೆ ಕಳುಹಲ್ಪಡುತಿದ್ದುವೋ ಈಗಲೂ ಹಾಗಾಗಿಯೇ ಅವು ಹೋಗುತ್ತಿವೆ ಒಪ್ಪುವ ಅಥವಾ ಒಪ್ಪದಿರುವ ಅಧಿಕಾರ ನಿಜಾಮರಿಗಿದೆ; ಜೌಧರಿ ಆಡಳಿತೆ ಬಂದ ನಂತರವೇ ನಿಜಾಮರು ಒಂದು ಬಾರಿ ಇಂತಹ ಅಸಮ್ಮತಿ ತೋರಿಸಿದ್ದರು..

ನಿಜಾಮರ ಅರಮನೆ, ಜಧವಾ ವೈಯಕ್ತಿಕ ಜನರಲ್ ಚೌಧರಿಯವರ ಕಾವಲೇನೂ ಇಲ್ಲ ಸ್ವೇಚ್ಛೆಯಿಂದ ತಿರುಗಾಡುವ ಸ್ವಾತಂತ್ರ್ಯ ಅವರಿಗಿದೆ! ಇದೇ ತಾ 7ರಲ್ಲಿ ಕಾಸಿಗೆ 50 ವೈಲು ವೇಗದಿಂದ ನಿಜಾಮರ ಕಪ್ಪು ಕಾರು ಮನ್ಸೆದರ ಹಿಂದೆ, ಅವರ ಸ್ವಂತ ಮೈಗಾವಲುಗಾರ ಬಂಡಿ 'ಕೆಂಗ್ ಕೋತಿ ಅರವುನೆ' ಯಿಂದ ಪಂಚಮಹಾಲಕ್ಕೆ ಹಿಂದಿರುಗಿ ಸೈನಿಕರೂ ಇಲ್ಲದೇನೇ ಹೋಗಿ ಮಲಗಿದುದನ್ನು ಎಲ್ಲರೂ ಕಂಡಿದ್ದಾರೆ ತನ್ನ ದಿವಂಗತತಾಯಿಯ ಸ್ಮಾರಕವಾಗಿ ನಿಜಾಮರು ಕಟ್ಟಿಸಿದ ಕಟ್ಟಡವನ್ನು ಸಂದರ್ಶಿಸಲು ಆವಾಗ ಸರ್ತಿ ಬಿಡದೆ ಆಕ್ಷಣಕ್ಕೆ ಹೋಗಿ ಬರುತಿದ್ದಾರೆ ಹಿಂದೊಮ್ಮೆ ಹೀಗೆ ಹೋಗುತಿದ್ದಾಗ ಅವರ ಜೀವಾಪಹಾರಕ್ಕಾಗಿ ಬೋಂಬೆಕೆಯಲ್ಲಟ್ಟಿದ್ದುದರಿಂದ ಈಗ ಅವರು ಹೊರಟೊಡನೆಯೆ ಸಹಸ್ರ ಸಂಖ್ಯಾತರಗಳನ್ನೆಲ್ಲಾ ನಿಲ್ಲಿಸಿ, ರಸ್ತೇ ಬಂ ನೋಡಿಸ್ಟಿಟ್ಟ ಅವರ ಕಾರನ್ನು ವಾಯು ವೇಗದಿಂದ ಪಿಡಿಸಿಲಾಗುತ್ತಿದೆ

ಈ ನಿಜಾಮರು ಇಂದುವರೆಗೂ ಸತ್ರಿಕಾ ನಾಲರಿದಿರು ಕುಳಿತು 'ಹೇಳಿಕೆ' ಕೊಟ್ಟವರಲ್ಲ, 'ನಿಜಾಮರೀಗ ಸ್ವತಂತ್ರರಾಗಿಲ್ಲ' ಎಂದು ಅಸತ್ಯಾರೋಪ ಮಾಡುತ್ತಿರುವ ವಿದೇಶೀ ಪತ್ರಿಕೆಗಳ ಕೆಲವು ಬಾತ್ಮೀದಾರರು ನಿಜಾಮರನ್ನು ಸ್ವತಃ ಕಾಣಲಿಚ್ಛಿಸಿದರೂ ನಿಜಾಮರೊಪ್ಪಲಿಲ್ಲ ಸದ್ಯದ ಕಾಲ ಬದಲಾವಣೆಯನ್ನು ಗವನಿಸಿ, ಪದ್ಧತಿ ಬದಲಾಯಿಸಬೇಕೆಂದೂ ವಿದೇಶೀ ಪತ್ರಿಕಾವಾಲರಿಗೆ ಛೇಟಿಂಗಾಗಬೇಕೆಂದೂ ಜನರಲ್ ಚೌಧರಿಯವರೊಂದು ಬಾರಿ ವಿಜ್ಞಾಪಿಸಿಕೊಂಡರೂ ನಿಜಾಮರ ಜೀವಾವಧಿ ಮುಖಚೇಡಿತನವು ಅವರನ್ನು ತಡೆದಿಟ್ಟತು ಚೌಧರಿಯವರ ವಿನಂತಿಯನ್ನು ವಿನೋದ ಪೂರ್ವಕವಾಗಿ ಆದರೆ ಖಂಡ ತುಂಡವಾಗಿ ಧಿಕ್ಕರಿಸಿತ್ತು ನಿಜಾಮರಂದಿದ್ದರಿಂತೆ 'ಇಲ್ಲ, ಪತ್ರಿಕೆಗಳಿಗೆ ಬೇಡ ಅವರು ಪ್ರತಿಯೊಂದನ್ನೂ ತಪ್ಪಾಗಿ ಹಾಕಿ ಬಿಡುತ್ತಾರೆ; ಕೊನೆಗೆ ನಿನಂದನ್ನು ಅಲ್ಲಗಳೆಯಬೇಕಾಗಿ ಬರುತ್ತದೆ' ಪತ್ರಿಕೆಗಳ ಹೆದರಿಕೆ ನಿಜಾಮರಂತೆಯೇ ಜನರಲ್ ಚೌಧರಿಯವರಿಗೂ ಇತ್ತು- ಇದೇ ತಾ 8ರಲ್ಲಿ ಹೈದರಾಬಾದಿನಲ್ಲಿ ಅಧಿಕ ಸಂಖ್ಯೆಯ ಪತ್ರಿಕಾವಾಲರನ್ನು ಸುಸ್ವಾಗತಿಸುತ್ತ ಜನರಲ್ ಚೌಧರಿ ಹೇಳಿದ್ದರು: 'ಪತ್ರಿಕಾವಾಲರಿಗೆ ವಿಶೇಷ ಶಕ್ತಿಯಿರುವುದರಿಂದ ನಾನು ನಿಮಗೆ ಬಹಳ ಹೆದರುತ್ತೇನೆ. ಬೆರಳಿಣಿಕೆಯ ನೀವೇ ಲೋಕದ ಬಾಯಿಯಾಗಿದ್ದೀರಿ".

ಜನರಲ್ ಚೌಧರಿಯವರೀಗ ಹೈದರಾಬಾದಿನೊಳಗಿನ ರಝಾಕಾರರು ಮತ್ತಿತರ ಎಲ್ಲಾ ವಿಧದ ತಂಟೆಕೋರರನ್ನೂ ಹಿಡಿದು ಶಿಕ್ಷಿಸುವ ಕಾರ್ಯವನ್ನು ಭರದಿಂದ ನಡಾಸಿದ್ದಾರೆ ಎಲಾಡಿಗಳಿಗೆ ಕೇವಲ ಜೈಲು ವಾಸಕ್ಕಿಂತ ಹೆಚ್ಚಿನದಾದ ಕಠೋರ ಶಿಕ್ಷೆ ಕೊಡಲಾಗುವದೆಂದು ಅವರು ಜಾಹೀರು ಮಾಡಿದ್ದಾರೆ. ಕೇಡಿಗಳಿಗೆ ಸಾರ್ವಜನಿಕ ಸ್ಥಳದಲ್ಲೇ ಚಡಿಕೊಡಿಸುವ ಕ್ರಮವನ್ನು ಈ ಸೇನಾನಿ ಜಾರಿಗೆ ತಂದಿದ್ದಾರೆ ಅದಕ್ಕನುಸಾರವಾಗಿ ಕಳೆದ ವಾರ ಸೆಕುಂದರಾಬಾದಿನಲ್ಲಿ ಪೇಟೆ ಲುಟಾಯಿಸಿ ತಪ್ಪಿದ 10 ಬಚ್ಚಾಳಿಗರಿಗೆ ಬಹಿರಂಗವಾಗಿ ತಲಾ ಒಬ್ಬನಿಗೆ 21 ರಂತೆ ಚಡಿಗಳನ್ನು ಸೈನಿಕರಿಂದ ಕೊಡಿಸಿದರು ಇದರಿಂದ ಶಾಂತಿ ಪ್ರೇಮಿ ಸಾರ್ವಜನಿಕರ ಆತ್ಮ ತಣಿದಂತಾಗಿ, ಹೊರಗೋಡಿದ್ದವರು ಈಗ ಮರಳಿ ಬರಹತ್ತಿದ್ದಾರೆ.

ಶಸ್ತ್ರಾಸ್ತ್ರಗಳಿದ್ದವರೆಲ್ಲರೂ ಆವುಗಳನ್ನು ತಂದೊಪ್ಪಿಸಬೇಕೆಂಬ ಸೇನಾನಿ ಚೌಧರಿಯವರ ಆಜ್ಞೆಯು ಪೂರ್ಣಪಾಲನೆಯಾಗಿಲ್ಲವೆಂಬುದನ್ನು ಜನರಲ್ ಚೌಧರಿಯವರೇ ಒಪ್ಪುತ್ತಾರಾದರೂ ಆ ಕೆಲಸ ಸದ್ಯದಲ್ಲೇ ಪೂರ್ಣಗೊಳ್ಳುವದೆಂದು ಭರವಸೆಯಿಂದಿದ್ದಾರೆ. ಇದಕ್ಕಾಗಿ ಅವರು ಮಹಿಳೆಯರ ಮರ್ಯಾದೆಗಳಿಗೆ ವಿಶೇಷ ಲಕ್ಷ್ಯ ಕೊಟ್ಟು ಜನರಿಗೆ ತೊಂದರೆಯಾಗದಂತೆ ಕೆಲವು ಮನೆ ಜಪ್ತಿಗಳನ್ನೂ ನಡಿಸಿದ್ದಾರೆ. ಅಲ್ಲಿ ಕೋವಿ ಇತ್ಯಾದಿಗಳಿಗೆ ಕ್ರಮಬದ್ಧ ಲೈಸೆನ್ಸ್ ಸದ್ಧತಿ ಇರಲಿಲ್ಲ ಹೈದರಾಬಾದ್ ಪೋಲಿಸ್ ರಿಜಿಸ್ಟ್ರಿಯಲ್ಲಿ 12,000 ಲೈಸೆನ್ಸುಗಳು ಮಾತ್ರ ಕಾಣಿಸಿದ್ದರೆ, ಜನರಲ್ ಚೌಧರಿ ಲೆಕ್ಕಾಯಂತೆ 20,000 ಕೋವಿಗಳು ಇವರ ವತ್ತಿಲ್ಲೆ ಬಂದಿವೆ. ಕೊನೆಯ ದಿನಗಳಲ್ಲಿ ಹೈದರಾಬಾದಿನ ಹಳ್ಳಿಹಳ್ಳಿಗಳಲ್ಲೂ ಆಯುಧಗಳ ಸರಬರಾಯಿಯಾಗಿದ್ದಾದೇ ಇದಕ್ಕೆ ಕಾರಣ.

ಲಾಯಿಕ್ ಅಲಿ ಮಂತ್ರಿ ಮಂಡಲ ನೇಮಿಸಿದ್ದ ಹೈದರಾಬಾದಿನ ವಿದೇಶಗಳ ರಾಯಭಾರಿಗಳೆಲ್ಲರೂ ಈಗ ಡಿಸ್‌ಮಿಸ್ ಹೊಂದಿದ್ದಾರೆ. ನಿಜಾಮ್ ಸರಕಾರದ 'ವಿದೇಶ ಸಂಬಂಧ ಖಾತೆ'ಯೆಂಬುದೇ ಒಖಾನ್ಯಾಗಿ ಢಿಲ್ಲಿ, ಬಿರಾರ್, ಪಾಕಿಸ್ತಾನ್, ಲಂಡನ್ನುಗಳ ವಿಜಯಂಟ್ ಜನರಲರುಗಳ ಕಚೇರಿಗಳೂ ಇತರ ಕೆಲವು ಕಾರ್ಯಾಲಯಗಳೂ ಸಟಸಟ ಮುಚ್ಚಲ್ಪಟ್ಟವೆ. ನಿಜಾಮರ ಘಟನಾತ್ಮಕ ವಕೀಲನಾಗಿದ್ದುಕೊಂಡು ರುಸುಂ ಮತ್ತು ಹಯಣಭತ್ಯೆಗಳ ಮೂಲಕ ಲಕ್ಷಗಟ್ಟಲೆ ರೂಪಾಯಿಗಳನ್ನು ಹೊಡೆಯುತ್ತಿದ್ದ ಸರ್ ವಾಲ್ಟರ್ ಮೋಂಕ್ಟನ್‌ರ ವಕಾಲತು ಇನ್ನು ಅಗತ್ಯವಿಲ್ಲವೆಂದು ಲಂಡನ್ನಿನಲ್ಲಿರುವ ಅವರಿಗೆ ನೋಟೀಸು ಹೋಗಿದೆ. ಹೆಚ್ಚಾಗಿ ಉರ್ದು ಪತ್ರಿಕೆಗಳೇ ಆಗಿರುವ 25 ಪತ್ರಿಕೆಗಳಿಗೆ ತನ್ನ ಪ್ರಚಾರಕ್ಕಾಗಿ ನಿಜಾಮ್ ಸರಕಾರವು ಕೊಡುತ್ತಿದ್ದ ಹಣ ಸಹಾಯವನ್ನು ರದ್ದು ಪಡಿಸಲಾಗಿದೆ.

ಇತ್ತೀಚೆಗೆ ವಿಶೇಷ ಸಂಖ್ಯೆಯಲ್ಲಿ ಬೆಳೆದಿದ್ದ ಹೈದರಾಬಾದ್ ಸೈನಿಕರಲ್ಲಿ ಹೆಚ್ಚಿನಂಶವನ್ನು ವಜಾಮಡಿಸಿ, ಸಂಸ್ಥಾನದ ಸೇನೆಯನ್ನು 10 ಸಾವಿರಕ್ಕೆಳಸಲಾಗಿದೆ. ಹಲವು ವರುಷಗಳಿಂದ ಹೈದರಾಬಾದಿನಲ್ಲಿದ್ದುಕೊಂಡು, ಅಲ್ಲಿಯನ್ನೇ ಮದುವೆಯಾಗಿ ಹೈದರಾಬಾದ್ ನಾಗರಿಕರಾಗಿರುವ ಅರಬರನ್ನು ಇದು ಹೊಸತಾಗಿ ಬಂದಿದ್ದ ಅರಬ್ಬರ ಪರಾಣರು ಮುಂತಾದವರನ್ನೆಲ್ಲಾ ಅವರವರ ಊರಾಗಟ್ಟಿವ ವ್ಯವಸ್ಥೆ ನಡೆದಿದೆ.

ಅಂತೂ ಹೈದರಾಬಾದಿನ ಸ್ಥಿತಿಗತಿಗಳ ಕೊಳೆ ಭಾಗಗಳನ್ನೆಲ್ಲಾ ಜೌಧರಿಯವರು ಶುದ್ಧೀಕರಣಗೊಳಿಸುತ್ತಿದ್ದಾರೆ!

ಬಡತನ ನಿವಾರಣೆಗೆ ಉಳಿತಾಯವೊಂದೇ ಸುಲಭೋಪಾಯವಲ್ಲವೆ?

ಗಳಿಕೆಯ ಸ್ವಲ್ಪಾಂಶವನ್ನು ಉಳಿಸುತ್ತ ಬಂದರೆ ಕೆಲವೇ ವರ್ಷಗಳಲ್ಲಿ ಅದೇ ಒಂದು ಅಪಡ್ಡನದ ಗಂಟಾಗುವುದಿಲ್ಲವೆ?

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಇವರು

ನಿಮ್ಮ ಉಳಿತಾಯದ ಸಮಸ್ಯೆಯನ್ನು ಸುಲಭವಾಗಿ ಬಿಡಿಸುವರು

ವಿವರಕ್ಕೂ ಏಜನ್ಸಿ ನಿಯಮಗಳಿಗೂ ಬರೆಯಿರಿ

The New Karnataka Provident Insurance Co. Ltd. Udipi S K

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ. ೧೯೦೬

[ಜೊತೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಸ್ಥೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು ನಮ್ಮ ಪಾಟಿಗಾರರುಪಲ್ಲಿ ರವಿಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳಿಸಲ್ಪಟ್ಟಿದೆ ಪೋಣಿಸಿದರಿತಿರುವ ನಮ್ಮ ಪಾಟಿಗಳು ದಪ್ಪುಂದೆ ಆರಕಯ ಕ್ಷೇತ್ರಿಗಳಲ್ಲಿ-ತಮಿಳುನಾಡಿನ ಅಕ್ಕ ನುತ್ತು ನೆಲಗಡಲೆಯು ಪ್ರದೇಶಗಳಲ್ಲಿ ಮಲಬಾರು ಜಿಲ್ಲೆಯ ತೆಂಗುಗರ, ವೃಕ್ಷವಾಟಿಕೆಗೇರುಸಲ್ಲಿ ನುತ್ತು ನುಂಬಾಯಿ ಹಾಗೂ ಆದರ ಉಪನಗರಗಳಲ್ಲಿ ನಿಸ್ತರಿಸಿವೆ

ಬ್ಯಾಂಕುಗಳ ನುತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರವಿಮುಗಳನ್ನು ಪಹಿಸಿಕೊಳ್ಳುವಲ್ಲಿ, ನಮ್ಮ ನಾಲ್ಕನ್ನು ವರ್ಷಗಳ ಅನುಪವು ವ್ಯಕ್ತಿ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮವಿಸ್ಯ ಆವಶ್ಯಕತೆಗಳಿಗೆ ಒಂದಿಸಿಕೊಳ್ಳಬಲ್ಲವು ಆದರಿಂದ ನಿಮಗೆ ಸಮಯವೂ, ಹಣವೂ ಉಳಿವುದು ಏಕೆಂದರೆ ನಾವು ಪಹಿಸಿಕೆ ಬ್ಯುನ ಕಲೆಕ್ಷನ್ ರಸೀದುಗಳ ಕಿಸೆಗೆ ಯಾವಾಗಲೂ ಸಂಬಂಧಪಟ್ಟವರ ಕಿಳ್ಳ ಲಕ್ಷ್ಯ ಹೊರೆವುದು

The Canara Bank Limited.

ESTD. 1906

ಪಾರಿಸ್ ಅಧಿವೇಶನದಲ್ಲಿ ಬರ್ಲಿನ್ ವಿವಾದ.

ಲೋಕವನ್ನಿದಿರಿಸಿರುವ ಹಲವು ಪ್ರಮುಖ ಸಮಸ್ಯೆಗಳು ಈಗ ಪರಿಶೀಲನಾವಸ್ಥೆಯಲ್ಲಿದ್ದು, ಕೆಲದ ವಾರವು ಇವುಗಳ ಸಂಬಂಧದ ಕೂಟ, ಕೂಡಾಟಗಳ ಅವಧಿಯೆನ್ನಬಹುದು. ಪ್ಯಾರಿಸಿನಲ್ಲಿ ನೆರೆದಿರುವ ಸಂಯುಕ್ತ ರಾಷ್ಟ್ರ ಸಂಘದ ಮಹಾಧಿವೇಶನ ಮತ್ತದರ ವಿವಿಧ ಕಾರ್ಯಕಲಾಪಗಳು ಲೋಕ ಪ್ರಾಮುಖ್ಯವಿದ್ದರೆ, ಲಂಡನಿನಲ್ಲಿ ಆರಂಭಿಸಿರುವ ವಸಾಹತು ಪ್ರಧಾನಿಗಳ ಸಮ್ಮೇಲನವು ಲೋಕದೊಂದು ಮುಖ್ಯ ಭಾಗದ ವ್ಯವಸ್ಥೆ ನಿರೂಪಿಸುವಂತಹುದಿದೆ. ಈ ಅಭಿಪ್ರಾಯ ಮಂಥನಗಳಲ್ಲಿ-ಭವಿಷ್ಯ ನಿರ್ಮಾಪಕ ಭಾವಾಂದೋಲನಗಳಲ್ಲಿ-ಲೋಕ ಶಾಂತಿ ರಚನೆಯ ಅತುರಕ್ಕಿಂತ ಹೆಚ್ಚಾಗಿ ತಂತಮ್ಮ ಬಲವರ್ಧನೆಗಾಗಿ ಪಕ್ಷ ಪ್ರತಿಪಕ್ಷಗಳು ಅವೇಶಗೊಂಡಿರುವುದು ಎದ್ದು ತೋರುತ್ತಿದೆ. ನ್ಯಾಯ ಮತ್ತು ಶಾಂತಿ ಮಂತ್ರ ಪಠನೆಯು ಎಲ್ಲಾ ಕಡೆಗಳಿಂದಲೂ ಆಗುತ್ತಿದೆಯಾದರೂ, ಇದಕ್ಕಿಂತ ಬಿಗುಮಾನದ ಹೊಸ ಪ್ರಯತ್ನವನ್ನೇ ಆರಂಭಿಸುವದಕ್ಕಾಗಿ ಇದುವರೆಗಿನ ಇವೆಲ್ಲಾ ಪ್ರಯತ್ನ ಮತ್ತು ಸಭೆ ಸಮ್ಮೇಲನಗಳನ್ನೂ ಮುಳ್ಳಾಯ ಹಡಿಸಿಕೊಂಡಲ್ಲಿ ಲೋಕ ಶಾಂತಿ ಮತ್ತು ನ್ಯಾಯದ ಪಾಲನೆಗೆ ಸಾನುಕೂಲವಾದೀತೇ ಹೊರತು ಭಕ್ಕೆ ಬೀಳಲಾರದೆಂದು ವಿಶ್ವಾಸದಿಂದ ಹೇಳಬಹುದು. ಅಂತೂ ಈವರೆಗಿನ ಪ್ರಯತ್ನಗಳು ಸಮಾಧಾನಕರವಿಲ್ಲ.

ಜಾಗತಿಕ ಸಂಘದಲ್ಲಿ

ಬರ್ಲಿನಿನಲ್ಲಿ ರಶ್ಯವು ಹಾಕಿರುವ ದಿಗ್ಬಂಧನಗಳ ಸಂಬಂಧದ ದೂರನ್ನು ಅಮೇರಿಕ, ಇಂಗ್ಲ್ಯಾಂಡು, ಫ್ರಾನ್ಸುಗಳು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಕೌನ್ಸಿಲಿಗೊಪ್ಪಿಸಿದಾಗಲೇ, ಅದು ಕ್ರಮ ವಿಬುದ್ಧವೆಂದು ರಶ್ಯವು ಆಕ್ಷೇಪಿಸಿದ್ದಿತು. ಆದರೂ ಭದ್ರತಾಮಂಡಲಿಯು ಆ ದೂರನ್ನು ಅಂಗೀಕರಿಸಿಕೊಂಡಾಗ ರಶ್ಯವು ತಾನಾ ಚರ್ಚೆಯಲ್ಲಿ ಭಾಗವಹಿಸುವದಿಲ್ಲವೆಂದು ಧಿಕ್ಕರಿಸಿ, ರಶ್ಯ ಮತ್ತು ಉಕ್ರೈನ್ ಪ್ರತಿನಿಧಿಗಳು ಮಂಡಲಿ ಸಭೆಯಲ್ಲಿ ಹಾಜರಿದ್ದರೂ ಅನ್ಯಮನಸ್ಕರಾಗಿದ್ದರು. ಬ್ರಿಟಿಷ ಪ್ರತಿನಿಧಿಯು ಬರ್ಲಿನ್ ದಿಗ್ಬಂಧನ ಹಾಕಿದ ರಶ್ಯದ ಜುಲುಮೆಯನ್ನು ಉಗ್ರವಾಣಿಗಳಿಂದ ಖಂಡಿಸಿ "ಬರ್ಲಿನ್ ವಿವಾದವು ಯುದ್ಧವಾಗಿ ಮಾರ್ಪಡುವ ಬದಲಿಗೆ ಇದ್ದ ವಿಕಲ್ಪಮಾತ್ರ ವಿಧಾನವೆಂದರೆ ಈ ದೂರು" ಎಂದರು. ರಶ್ಯದೊಡನೆ ವ್ಯವಹಾರವೆಂದರೆ ಮಿಕ್ಕವರಂತಲ್ಲವೆಂದೂ ಬರ್ಲಿನ್ ವಿವಾದವು ಯುದ್ಧದಲ್ಲೇ ತೀರ್ಮಾನಹೊಂದಬೇಕಲ್ಲದೆ ಅನ್ಯಥಾ ಅಸಾಧ್ಯವೆಂದೂ ಅಮೇರಿಕ ಮತ್ತು ಬ್ರಿಟನಿನ ಮುತ್ಸದ್ದಿಗಳು ತಮ್ಮ ಜನತೆಗೂ ಎಚ್ಚರಿಕೆ ಕೊಡಹತ್ತಿದ್ದಾರೆ. ಅತ್ತ ಸಂ. ರಾ. ಸಂ. ಪರಿಶೀಲನೆಕ್ಕಾಗಿ ಪ್ಯಾರಿಸಿನಲ್ಲಿದ್ದ ಅಮೇರಿಕದ ಗೃಹ ಕಾರ್ಯದರ್ಶಿ ಜೋರ್ಜ್ ಮಾರ್ಶಲರನ್ನು ಅಧ್ಯಕ್ಷ ಟ್ರುಮೇನರು ಆಲೋಚನೆ ಕೇಳುವುದಕ್ಕಾಗಿ ಅವಸರದಿಂದ ವಾಷಿಂಗ್ಟನಿಗೆ ಕರೆಸಿಕೊಂಡಿದ್ದಾರೆ.

ಆಟಮ್ ಶಕ್ತಿಯ ನಿಯಂತ್ರಣದ ಕೂಟದಲ್ಲೂ ಅಂಗ್ಲೋ ಅಮೇರಿಕ ಮತ್ತು ರಶ್ಯ ಪಕ್ಷಗಳೊಳಗೆ ತೀವ್ರ ಭಿನ್ನಾಭಿಪ್ರಾಯಗಳೆದ್ದಿದ್ದು, ಅವುಗಳ ಸಂಧಾನಕಾರ್ಯದಲ್ಲಿ ಭಾರತದ ಪ್ರತಿನಿಧಿಗಳಿಗೆ ಅಗ್ರಸ್ಥಾನ ದೊರೆತಿದೆ. ಜಾಗತಿಕ ಸಂಘವು ನೇಮಿಸಿದ್ದ 'ಆಟಂ ಶಕ್ತಿ ಸಮಿತಿ'ಯಲ್ಲಿ ಪಾಶ್ಚಾತ್ಯ ರಾಷ್ಟ್ರಗಳ ಬಹುಮತವಿದ್ದು, ಪೌರ್ವಾತ್ಯ ರಾಷ್ಟ್ರಗಳು ಅಲ್ಪ ಸಂಖ್ಯಾಕರಾಗಿವೆ; ಆಟಂ ನಿಯಂತ್ರಣಗಳ ಕುರಿತು ಇವೆರಡು ತಂಡಿಗಳನ್ನು ಒಂದು ಗೂಡಿಸಬಲ್ಲ ಸಂಧಾನ ಸೂಚನೆ ತಯಾರಿಸಲು ಸಂಯುಕ್ತ ರಾಷ್ಟ್ರ ಸಂಘದ, ಆಂಗವಾದ ರಾಜಕೀಯ ಸಮಿತಿಯು ಪಂಚ ಮಹಾರಾಷ್ಟ್ರಗಳ ಸಮೇತ 11 ರಾಷ್ಟ್ರಗಳುಳ್ಳ ಒಂದು ಸಬ್ ಕಮಿಟಿಯನ್ನು ನೇಮಿಸಿದೆ. ಈ ಉಪ ಸಮಿತಿಗೆ ಭಾರತದ ಪ್ರತಿನಿಧಿ ಸರ್ ಬೆನಗಲ್ ನರಸಿಂಗರಾಯರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದು ಆಟಂ ಸಂಬಂಧದ ನ್ಯಾಯುಶ್ಯ ಕಾರ್ಯ ನಿರ್ವಹಿಸುವ ದೊಡ್ಡ ಹೊಣೆಯೇಗ ಅವರ ಮೇಲೆ ಬಿದ್ದಿದೆ ಉಪ ಸಮಿತಿಯ ಮುಂದೆ ವಿವಿಧ ಸೂಚನೆಗಳು ಬಂದಿವೆ. ಇತ್ತ ಪೆಲೆಸ್ತೈನಿನಲ್ಲಿ ಅರಬ-ಯೆಹೂದೀ ಕಾಳಗ ತೀವ್ರವಾಗಿದೆ. ಯೆಹೂದೀ ಸ್ಟೇತ್ರದ ಮೇಲೆ ಈಜಿಪ್ಟ್ ವಿಮಾನಗಳ ಧಾಳಿಯಾಗಿದೆ- ಅರಬರು ಪೆಲಸ್ತೈನ್ ವಿಭಜನೆಯನ್ನು ವಿರೋಧಿಸಿ, ನ್ಯಾಯಬದ್ಧ ತೀರ್ಮಾನವೊಂದನ್ನು ಮಾಡಬೇಕೆಂದು ಜಾಗತಿಕ ಸಂಘಕ್ಕೆ ಅತ್ಯಾಗ್ರಹದ ವಿಜ್ಞಾಪನೆ ಮಾಡಿಕೊಂಡಿದ್ದಾರೆ. ರಾಷ್ಟ್ರಕೂಟದ ಹೆಂಗಿಲ್ಲದೆ, ಅರಬರೊಂದಿಗೊಂದು ಸೌಹಾರ್ದತಾ ಸಂಧಾನನಮಾಡಿಕೊಳ್ಳಲು ತಾವು ತಯಾರೆಂದು ಯೆಹೂದಿಗಳ ಇನಾಯೆಲ್ ಸರಕಾರದ ವಕ್ತಾರರಂದಿದ್ದಾರೆ.

ಇಂಡೋನೇಶಿಯದ ಆಂತರಿಕ ಗಲಭೆ ತೀರ್ಮಾನಗೊಂಡಿಲ್ಲ; ಬರ್ಮದಲ್ಲಿ ಬಂಡಾಯಗಾರರೊಂದಿಗೆ ಸರಕಾರದ ಯುದ್ಧ ಸಾಗಿದೆ; ಚೈನದಲ್ಲಿಯೂ ಕಮ್ಯೂನಿಸ್ಟ್-ಸರಕಾರೀ ಸೇನೆಗಳೊಳಗಿನ ಹೋರಾಟ ಭೀಕರ ರೂಪದಲ್ಲಿದೆ.

ಲೋಕವೀಗ ಅಲ್ಲಲ್ಲಿ- ಆಯಕಟ್ಟಿನ ಸ್ಥಳಗಳಲ್ಲೇ- ಅಡಿಮೇಲಾಗುತ್ತಿದೆಯಾದರೂ ಎಲ್ಲವೂ ಒಂದೆಲ್ಲೊಂದು ದಿನ ಒಂದಲ್ಲೊಂದು ರೀತಿಯಿಂದ ತೀರ್ಮಾನಗೊಳ್ಳಬಹುದು; ಆಗದೆ ಹೋದರೆ ಕೊನೆಯದಾಗಿ ಅವುಗಳನ್ನು ಸ್ಥಳೀಯ ಕಂಟಕವನ್ನಿಸುವದಕ್ಕಿಂತ ಹೆಚ್ಚಿಗೆ ಬೆಳೆಯದಂತಾದರೂ ಪ್ರತಿಬಂಧಿಸಬಹುದು. ಏನೇ ಆಗದಿದ್ದರೂ ಲೋಕಶಾಂತಿಯ ಕುರಿತು ಹೆದರಿದಂತಿರಬಹುದು. ಆದರೆ ಬರ್ಲಿನ್ ವಿವಾದವು ಮಾತ್ರ ಈಗ ಕೊನೆಯ ನೆರೆಗೆ ಬಂದು ಮುಟ್ಟಿದೆ. ಹೋರಾಟ ವಿನಹ ಬೇರೆ ಗತಿಯಿಲ್ಲವೆಂಬ ಶಕುನಗಳಾಗ ಹತ್ತಿವೆ. ಪ್ಯಾರಿಸಿನಲ್ಲಿ ಭದ್ರತಾ ಕೌನ್ಸಿಲಿನ ಅಧ್ಯಕ್ಷರು ಆರೇ ಮಂದಿ ತಟಸ್ಥ ಸದಸ್ಯರನ್ನು ಕೂಡಿಕೊಂಡು ಹೇಗಾದರೂ ಈ ಮಹಾಪಾಯವನ್ನು ನಿವಾರಿಸಬೇಕೆಂದು ಪ್ರಯತ್ನಿಸುತಿದ್ದಾರೆ. ಇತ್ತ ಬರ್ಲಿನಿನ ಮೇಲೆ, ಪಾಶ್ಚಾತ್ಯ ರಾಷ್ಟ್ರಗಳ ನಿಷೇಧವನ್ನು ಕಡೆಗಣಿಸಿ ರಶ್ಯನ್ ವಿಮಾನಗಳು ಪ್ರದರ್ಶನ ನುತ್ತಾಟ ಕೆಗೆಯುತ್ತಿವೆ. ತಮ್ಮ ಕಾಳ್ಕೆಯನ್ನು ಭಂಗಿಸುವ ಆತಿರೇಕಗಳು ರಶ್ಯದಿಂದ ಈವರೆಗೆ ಬಹಳವಾಗಿವೆಯೆಂದೂ, ಅವುಗಳಲ್ಲಿ ಪ್ರತಿಯೊಂದೂ ಒಂದೊಂದು ಮಹಾ ಘರ್ಷಣೆಯನ್ನು ನಿರ್ಮಿಸುವಷ್ಟು ದೊಡ್ಡದಿದ್ದರೂ ತಾವು ಶಾಂತಿಯನ್ನಿಸಿಯಿಂದ ಸಹಿಸಿದೆವೆಂದೂ ಅಮೇರಿಕದ ಪ್ರತಿನಿಧಿಗಳ ವಾದವಿದೆ ಇನ್ನು ಸಹಿಸಲಾರೆನೆಂಬಂತೆ ಅವರು ನಡ್ದು ಹೊದೆದಿದ್ದಾರೆ ಬರ್ಲಿನಿನ ಇಂದಿನ ಜಗಳವು ಲೋಕಶಾಂತಿಯ ಸಾಧ್ಯತೆಯನ್ನು ಪರೀಕ್ಷಿಸಲಾಗುವ ಒರೆಗಲ್ಲಾಗಿ ನಿಂತಿದೆ.

ಲಂಡನಿನಲ್ಲಿ ನೆಹರು

ಇದೇ ತಾ. 12ನೇ ಸೋಮವಾರ ಲಂಡನಿನಲ್ಲಿ ಆರಂಭಿಸಿರುವ ವಸಾಹತು ಪ್ರಧಾನ ಮಂತ್ರಿಗಳ ಸಮ್ಮೇಲನಕ್ಕಾಗಿ ಭಾರತ ವಸಾಹತಿನ ಪ್ರಧಾನ ಮಂತ್ರಿ ಪಂಡಿತ ನೆಹರುಗಳು ತಾ. 5ನೇ ಅಪರಾಹ್ನ ದಿಲ್ಲಿಯಲ್ಲಿ ಜೊಂಬಾಯಿಗೆ ವಿಮಾನ ಹತ್ತಿದರು. ಅವರನ್ನು ಬೀಳ್ಕೊಡಲು ರಾಜಾಜಿ, ಪಟೇಲ್ ಮತ್ತಿತರ ಹಿರಿಯ ಮಂತ್ರಿಗಳೂ ಇತರಾಪ್ತ ಪ್ರಮುಖರೂ ವಿಮಾನ ನಿಲ್ದಾಣಕ್ಕೆ ಬಂದಿದ್ದರು. "ಜೈಪಿಂಡ್" ಎನ್ನುತ್ತಾ ವಿಮಾನ ಹತ್ತಿದ ಪಂಡಿತಜೀ ಜೊಂಬಾಯಿಯಲ್ಲಿಳಿದೂ ತನ್ನ ತಂಗಿ ಶ್ರೀಮತಿ ಕೃಷ್ಣಾ ಹತೀಸಿಂಗರ ಮನೆಯಲ್ಲಿ ಅಲ್ಪ ವಿರಾಮ ಪಡೆದರು. ಅಲ್ಲಿಂದ ಅಂದೇ ಮಧ್ಯರಾತ್ರಿ ನೆಹರುಗಳ ಕಾರು ವಿಮಾನ ನಿಲ್ದಾಣಕ್ಕೆ ಹೋಗುವಾಗ ರಸ್ತೆಯುದ್ದಕ್ಕೂ ಜನಸಂದಣಿ ನೆರೆದು ಜೈಕಾರ ಹಾಕಿತು. ನಿಲ್ದಾಣದಲ್ಲಿ ಬೊಂಬಾಯಿ ಪ್ರಧಾನಿ ಖೇರ್, ಗಡ್ಗಿಲ್ ಮತ್ತಿತರ ಮಂತ್ರಿಗಳೂ ನಾಯಕರೂ ನೆರೆದಿದ್ದರು. ತನ್ನ ಸಂದೇಶವಾಗಿ ತಾನು ರಾಷ್ಟ್ರಕ್ಕೆ ಹೇಳುವಂತಹದೇನೂ ಇಲ್ಲವೆಂದು ತಲೆಯಲ್ಲಾಡಿಸುತ್ತಾ ಪಂಡಿತರು ಲಂಡನಿನಗಾಗಿ ವಿಮಾನವೇರಿದ್ದರು. ಹಾನಿಯಲ್ಲಿ ಕೈರೋ ವಿಮಾನ ನಿಲ್ದಾಣದಲ್ಲಿ ಇಳಿಯುವಾಗ ಅವರನ್ನು ಬೀರುಗೊಳ್ಳಲು ಅರಬ್ ಲೀಗಿನ ಕಾರ್ಯದರ್ಶಿ ಅಝಾಮ್ ಪಾಶಾ, ಡಾ ಸಯ್ಯದ್ ಮಹಮ್ಮದ್ ಹುಸೇನ್ ಇದ್ದರು. ಅಲ್ಲಯೇ ನೆಹರು ಜೀ ಅವರು ವಾಶಾರೊಳಗೆ ಅರೆ ತಾಸು ಗುಪ್ತ ಸಂಧಾನಕೆ ನಡೆಯಿತು. ನವಂಬರ್ ಆದಿಭಾಗದಲ್ಲಿ ಲಂಡನಿನಿಂದ ಮರಳುವಾಗ ನೆಹರುಗಳು ಕೈರೋದಲ್ಲಿಳಿದು ಈ ಮಾತುಕತೆ

For Banking Service
in Trade, Industry & Agriculture
approach
THE AGRICULTURAL & INDUSTRIAL BANK Ltd.,
(Established in 1934)
Head Office: **COONDAPOOR, S K**

Branches:

1	Ankola,	7	Gokarn,	13	Nagar,
2	Belgaum,	8	Haveri,	14	Shimoga,
3	Bhatkal,	9	Hubli,	15	Sirsi,
4	Coondapoor,	10	Karvar,	16	Somwarpet,
5	Dharwar,	11	Kumta,	17	Virajpet,
6	Gadag,	12	Mangalore,	18	Honavar.

19 384, M. Jaipuria House, Kalbadevi Road, BOMBAY, 2.

Current, Savings bank, and Fixed deposits are accepted.

For Terms, apply to the nearest Branch.

Coondapoor,
29-9-1948.

K. Vittaldas Shenai,
Managing Director.

1 ರೂಪಾಯಿಗೆ 8 ಪುಸ್ತಕಗಳು

ಗಾಂಧಿಜಿಯ ಜೀವನ ಕಾವನಗಳು	0-2-0
ವೈಯಕ್ತಿಕ ಆರೋಗ್ಯ	0-2-0
ಆರಬಸ್ಥಾನ	0-2-0
ಆದರ್ಶ ಆರೋಗ್ಯ ಪಾಠ	0-2-0
ವೀರಭೂಮಿ	0-2-0
ಶಂಭುಕವಧೆ	0-2-0
ಚೀನ	0-2-0
ಸಿನೆಮಾ ಪದ್ಯಾವಳಿ	0-2-0

ಒಂದು ರೂಪಾಯಿ ಕಳುಹಿಸಿದವರಿಗೆ ಮೇಲಿನ ಪುಸ್ತಕಗಳನ್ನು ಪುಕ್ ಪೋಸ್ಟಿನಿಂದ ಕಳಿಸಲಾಗುವುದು. ಅಂಚೆ ವೆಚ್ಚ ಸಾಕು. ವಿ. ಪಿ. ಮೂಲಕ ರೂ. 1 5 0

ವಿಳಾಸ-
ನವಭಾರತ ಬುಕ್ ಡಿಪೊ, ಉಡುಪಿ

ಪಂಡಿತ ನೆಹರುಗಳಿಗೆ ——— ಲಂಡನ್ ಸನ್ಮಾನ

ಯನ್ನು ಮುಂದುವರಿಸುವರೆಂದು ತಿಳಿದು ಬಂದಿದೆ. ಪೆಲಸ್ಟೈನ್ ಕಲಹದ ಕುರಿತು ಶ್ರೀಮತಿ ಪಂಡಿತ್ ವಿಜಯಲಕ್ಷ್ಮಿ ಪಂಡಿತರೂ ಅಲ್ಲಿಗೆ ಬಂದು ತನ್ನ ಅಣ್ಣನನ್ನು ಸೇರಿಕೊಂಡಿದ್ದಾರೆ. ಸರ್. ಸ್ಟ್ಯಾಫರ್ಡ್ ಕ್ರಿಪ್ಸ್‌ರೂ ಅಲ್ಲಿಗೆ ಹೋಗಿ ನೆಹರುಗಳನ್ನು ಕಂಡಿದ್ದಾರೆ. ತಾ. 11ನೇ ಸೋಮವಾರದಿಂದ ವಸಾಹತು ಪ್ರಧಾನಿ ಸಮ್ಮೇಳನದ ಕಾರ್ಯಕಲಾಪಗಳು ಮಾತ್ರವಲ್ಲ ಇತರ ಸಭೆ, ಸತ್ಕಾರ, ಸಮಾರಂಭಗಳಲ್ಲಿ ಭಾಗ ವಹಿಸುವ ಅವಶ್ಯಕತೆ ಕಾರ್ಯಭಾರ ನೆಹರುಗಳ ಮೇಲಿದ ಸೋಮವಾರ ಬ್ರಿಟಿಷ್ ರಾಜರ ಭೇಟಿ- ಭಾರತ ಲೀಗು ಮತ್ತು ಬ್ರಿಟಿಷ್ ಹಿಂದೀಯರ ಸತ್ಕಾರ ಸಮಾರಂಭಗಳು-- ಬ್ರಿಟಿಷ್ ರಾಜರಿಂದ ಎಲ್ಲಾ ಪ್ರಧಾನಿಗಳಿಗೆ ಕೊಡಲ್ಪಡುವ ಔತಣ ಕೂಟ-- ಅದೇ ರೀತಿ ಬ್ರಿಟಿಷ್ ಪ್ರಧಾನಿ ಕೊಡುವ ಔತಣ-- ಹಿಂದೀ ವಿದ್ಯಾರ್ಥಿಗಳ ಸ್ವಾಗತ ಸಭೆ--ಪತ್ರಿತರ ಜೊತೆ ಸಂಘಸಂಸ್ಥೆಗಳ ಪರ ವಿವಿಧ ರೀತಿಯ ಏರ್ಪಾಡು-- ಇವೆಲ್ಲವುಗಳಿಂದ ಪಂಡಿತಜೀಗೆ ಲಂಡನ್ ಬಿಡುವ ವರೆಗೂ ಬಿಡುವೇ ಸಿಗುವುದಿಲ್ಲವೆಂದಂತಿದೆ. ಇನ್ನೇ ತಾ. 16 ಮತ್ತು 17ರಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಅಧಿವೇಶನವನ್ನು ಕಾಣಲು ಪ್ಯಾರಿಸಿಗೂ ಹೋಗಿ ಬರಲಿದ್ದಾರೆ.

ಒಂಭತ್ತು ವಸಾಹತುಗಳ ಏಳು ಮಂದಿ ಪ್ರಧಾನಿಗಳು ಮತ್ತು ಇಬ್ಬರು ಉಪ ಪ್ರಧಾನಿಗಳ ಕೂಡುವಿಕೆಯಿಂದ "ವಸಾಹತು ಪ್ರಧಾನಿ ಸಮ್ಮೇಳನ"ವು ಇದೇ ತಾ.11ರಿಂದ ಪ್ರಾರಂಭಿಸಿದೆ. ಇಡೀ ಲೋಕದ ಒಟ್ಟು ಜನತೆಯ ಶೇಖರಂಶ, 500,000,000 ಜನರಿರುವ ರಾಷ್ಟ್ರಗಳಿಗೆ ಸಂಬಂಧಿಸಿದ ಸಮ್ಮೇಳನವಿದು. ಈ ಸೈಕೆ ಸಮಾರು 400,000,000, ಕ್ಕೂ ಮಿಕ್ಕಿದ ಜನರು ಭಾರತ, ಪಾಕಿಸ್ತಾನ ಮತ್ತು ಸಿಲೋನುಗಳಲ್ಲೇ ಇದ್ದಾರೆ. ಈ ಮೂರು ವಸಾಹತುಗಳೂ ಹೊಸತಾಗಿ ಬ್ರಿಟಿಷ್ ವಸಾಹತು ಕೂಟದಲ್ಲಿ ಸೇರಿದವುಗಳಿಂದ ಈ ಬಾರಿಯ ವಸಾಹತು ಮಂತ್ರಿ ಸಮ್ಮೇಳನಕ್ಕೆ ವಿಶೇಷ ಪ್ರಾಮುಖ್ಯತೆ ಒದಿದೆ; ಅದರ ಹೆಚ್ಚಿನ ಲಕ್ಷ್ಯವು ಇವುಗಳ ಕಡೆಗೆನೇ ಇದೆ. ಯು.ಪ್ರಾಪಾಯದ ಚಿಹ್ನೆಯಿರುವ ಈ ಕಾಲದಲ್ಲಿ ವಸಾಹತುಗಳನ್ನು ಸುಭದ್ರ ಸೂಡಿಕಟ್ಟುವ ಮಹೋದ್ದೇಶವೇ ಈ ಸಮ್ಮೇಳನಕ್ಕೆ ಮೂಲ ಪ್ರೇರಣೆಯೆನ್ನಬಹುದು.

ತಾ. 9ರಲ್ಲಿ ಪಾಕಿಸ್ತಾನ ಪ್ರಧಾನಿ ಮಿ. ಲಿಯಾಖತ್‌ರು ಕರಾಚಿಯಿಂದ ಲಂಡನಿಗೆ ಹೊರಟು ಆ ರಾತ್ರಿ ರೈರೋದಲ್ಲಿ ನಿಂತು ಮರುದಿನ ಲಂಡನ್ ಮುಟ್ಟಿದ್ದಾರೆ. ಸಮ್ಮೇಳನ ಮುಗಿಯುವ ತನಕ ಲಿಯಾಖತ್‌ರು ಜರ್ಮನಿ, ಫ್ರಾನ್ಸ್, ಇಟಲಿ, ಗ್ರೀಸ್, ಟರ್ಕಿ ಮೊದಲಾದ ಯುರೋಪು ರಾಷ್ಟ್ರಗಳಲ್ಲಿ ಸಂಚರಿಸುವರೆಂದು ತಿಳಿದು ಬರುತ್ತದೆ.

ಲಂಡನಿನಲ್ಲಿ ಸ್ವಾಗತ ಸತ್ಕಾರ

ಪಂಡಿತ ನೆಹರುಗಳೇರಿದ್ದ "ಜಲಪೂತ ರಾಣಿ" ವಿಮಾನವು ತಾ. 5ನೇ ಮಧ್ಯರಾತ್ರಿ ಬೊಂಬಾಯಿಯಿಂದ ಹೊರಟುದು ಸ್ವಲ್ಪೋ ನಿಲ್ದಾಣದಲ್ಲಿಳಿದ್ದು ಅಲ್ಲಿಂದ ಹಾರಿದುದು ಜಿನೆವಾ ನಿಲ್ದಾಣದಲ್ಲಿ ಇಳಿದು, ಅಲ್ಲಿಂದೆದ್ದು, ತಾ. 6ನೇ ರಾತ್ರಿ ನಿಶ್ಚಿತ ಸಮಯಕ್ಕೆ ಲಂಡನ್ ವಿಮಾನ ನಿಲ್ದಾಣದಲ್ಲಿ ಇಳಿಯಿತು. ಅಲ್ಲಿ ಭಾರತದ ಹೈಕಮಿಷನರ್ ಶ್ರೀ. ಕೆ. ಕೃಷ್ಣ ಮೆನನ್, ಸಿಂಹಳದ ಹೈಕಮಿಶನರ್ ಸರ್ ಒಲಿವರ್ ಗೂನೆತಿಲ್ಲಿಕೆ, ಬ್ರಿಟಿಷ್ ಸರಕಾರದ ವಸಾಹತು ಸಂಬಂಧ ಖಾತೆಯ ಮಂತ್ರಿ ನೋವೆಲ್ ಬೇಕರ್ ಮುಂತಾದವರು ಈ ಪ್ರಧಾನಿ ದ್ವಯರ ಸ್ವಾಗತಕ್ಕೆ ಸಿದ್ಧರಿದ್ದರು. ಇಂಗ್ಲಾಂಡಿನಲ್ಲಿದ್ದ ಹಿಂದೀಯರು ನಿಲ್ದಾಣದಲ್ಲಿ ಜಮ್ಮಾಗಿದ್ದು ನೆಹರುಗಳಿಳಿದೊಡನೆ "ಜೈ ಹಿಂದ್!" "ಪಂಡಿತ ನೆಹರೂಕೇ ಜೈ!" ಘೋಷಗಳಿಂದ ತಮ್ಮ ಮಾತೃ ಭೂಮಿಯ ನೇತಾರನನ್ನು ಸ್ವಾಗತಿಸಿದರು. ಕೈ ಕೋದಲ್ಲಿ ಮಾಡಿದಂತೆಯೇ ಇಲ್ಲಿಯೂ ಪತ್ರಿಕಾವಾಲರ ಪ್ರಶ್ನೆಗಳನ್ನು ಚಟುಕು ಮಾರ್ಮಿಕ ಉತ್ತರಗಳಿಂದ ಮುಗಿಸಿ, ವಿಮಾನ ನಿಲ್ದಾಣವಲ್ಲಿಯೇ ಆಕಾಶವಾಣಿ ಮೂಲಕ ಪುಟ್ಟ ಇಂಗ್ಲಿಷ್ ಮತ್ತು ಹಿಂದೀ ಭಾಷಣವನ್ನು ಲಂಡನ್ ಭೇಟಿಗಾಗಿ ಆನಂದ ವ್ಯಕ್ತಪಡಿಸಿದರು. ಲೋಕ ಪ್ರಿಯ ಪಂಡಿತ ನೆಹರು ಭಾರತದ ಪ್ರಧಾನಿ ಮಂತ್ರಿಯಾಗಿ ಲಂಡನ್ ವಿಮಾನ ನಿಲ್ದಾಣದಲ್ಲಿ ಪ್ರಥಮ ಬಾರಿ ಕಾಲಿಟ್ಟಾದ ಆ ದೃಶ್ಯವು ವರ್ಣನಾತೀತವೆನ್ನಬೇಕು. ವಿಮಾನ ಬಿಡುವ ಸಗೆನೊಗದ ನೆಹರುಗಳಿಗೆಗೆ ಸಿನೆಮಾ ಯಂತ್ರಗಳ ಪ್ರಕಾಶವಾಹಿಗಳು ಬಿದ್ದು ಒಕ್ಕೋಬರನ ಆ ಕಾಳರಾತ್ರಿಗೂ ಪ್ರಭೆಯುತ್ಪಾದ್ಯವು. ಸ್ವಾಗತಿಸಲು ಬಂದವರ ಕೈ ಕುಲುಕಿ, ಅಲ್ಲಿಯ ಹಿಂದೀ ಮಿತ್ರರು ಸ್ವಾಗತಕ್ಕೆ ಜಮೆಯಾಗಿದ್ದಷ್ಟಿಕ್ಕಿ ಭವನದತ್ತ ಸಾಗಿದಾಗ ನಿಲ್ದಾಣ ಪೋಲಿಸರು ನೆಹರುಗಳಿಗೆ ಕಾವಲು ಸುತ್ತುಗಟ್ಟಿದ್ದರು. ತನ್ನ ಹಳೇ ಸ್ನೇಹಿತೆ ಮಿಸ್. ಅಗತಾ ಹೆರಿಸನ್‌ರ ಸಮ್ಮುಖಕ್ಕೆ ಹೋಗಿ "ಇವು ಜನೆವದ ಗುಲಾಬಿಗಳು" ಎನ್ನುತ್ತಾ ಹೂಗೊಂಚಲೊಂದನ್ನು ಅರ್ಪಿಸಿದರು. ಪತ್ರಿಕಾವಾಲರು ಮುತ್ತಿಗೆ ಹಾಕುವುದು, ನಿಗರೇಟು ಗಳನ್ನಿಟ್ಟಿದ್ದ ತನ್ನ ಕೋಟಿನ್ನಿಲ್ಲಿ, ಎಂದು ಪಂಡಿತಜೀ ಸುತ್ತಮುತ್ತ ನೋಡುತ್ತಿದ್ದರು. ಹಿಂದುಗಟ್ಟಿದ್ದ ಪತ್ರಿಕೋದ್ಯಮಿಗಳಲ್ಲಿ ಪ್ರತಿಯೊಬ್ಬನೂ ಮುಂಚಾಚಿದ್ದ ನಿಗರೇಟುಗಳ ಪೈಕಿ ಒಂದನ್ನು ತೆಗೆದುಕೊಳ್ಳುವಾಗ ನಗುತ್ತಾ "ನಾನು ಈ ಹೊತ್ತಿನಲ್ಲೇ ನನ್ನ ತೊಡುಗೆಯನ್ನು ಬಿಟ್ಟರಲಾರೆ" ಎಂದರು. 'ಭಾರತವು ವಸಾಹತು ಸಂಬಂಧ ಕಡಿದುಕೊಂಡು ನ್ಯಶ್ಯೇಕವಾಗುವುದೇ?' ಎಂದು ಪ್ರಶ್ನಿಸಲ್ಪಟ್ಟಾಗ ಪಂಡಿತಜೀ 'ಇದು ಹೌದು ಅಥವಾ ಇಲ್ಲ ಎಂದು ಫಕ್ಕನೇ ಹೇಳಿ ಬಿಡಲಾಗುವ ಪ್ರಶ್ನೆಯಲ್ಲ. ಈ ಕುರಿತು ಏನಾದರು ತಿಳಿಸುವ ಕಾಲವೆಂದರೆ ನಾಸಿಲ್ಲಿಂದ ಹೊರಡುವ ವೇಳೆಯಲ್ಲಿ ಹೊರತು, ಈಗ ತಾನೇ ಪ್ರವೇಶಿಸಿರುವ ಈ ಹೊತ್ತಿನಲ್ಲಿ ಭಾರತವು ಸಂಪೂರ್ಣ ಸ್ವತಂತ್ರ ಮತ್ತು ಸ್ವಸಾರ್ವಭೌಮಾಧಿಕಾರಿಯಾಗಿರಬೇಕೆಂದೂ ಆದೇ ಕಾಲದಲ್ಲಿ ಇಂಗ್ಲಾಂಡಿಗೆ ಸಮೀಪಬದ್ಧಾಗಿರಬೇಕೆಂದೂ ಬಯಸುತ್ತಿದೆ. ಅಂತೂ ಈ ವಿಷಯವು ಇನ್ನು ಕೆಲವೇ ತಿಂಗಳುಗಳಿಗೆ ಭಾರತದ ಘಟನಾ ಸಮಿತಿಯಿಂದ ನಿಶ್ಚೈಸಲ್ಪಡಲಿದೆ" ಎಂದರು. "ಹೈದರಾಬಾದಿನ ಲಂಡನ್ ಬ್ಯಾಂಕ್ ಹಣವು ಸಾಕಿಸ್ತಾನದವರಿಗೆ ವರ್ಗಾಯಿಸಲ್ಪಟ್ಟಿದ್ದ ವಿಷಾದಕ್ಕೆ ಸಂಬಂಧಿಸಿದ ಕಾಗದ ಪತ್ರಗಳನ್ನು ತಾವು ಬರೆಯಲಿಲ್ಲವೆಂದಿದ್ದೀರಿ ಎಂದು ಕುದ್ದಿಯಿದೆ; ಇದು ನಿಜವೆ?" ಎಂಬ ಪ್ರಶ್ನೆ ಬಂದಾಗ ಪಂಡಿತಜೀ ನಕ್ಕು ಸುಮ್ಮನಿದ್ದರು; "ಇದು ವಕೀಲರ ಕೆಲಸ. ಅದರಲ್ಲಿ ನಾನೇಕೆ ಬಿದ್ದಾಡುತ್ತೇನೆ" ನನ್ನ ಬಳಿಯಲ್ಲಿ ನಿಜಕ್ಕೂ ಒಂದೇ ಒಂದು ಕಾಗದವಿಲ್ಲ". ಭಾವಚಿತ್ರಗಳಿಗಾಗಿ ಕಾರು ಹತ್ತಿ ಅಲ್ಲಿಂದ 40 ಮಿನಿಟೋಟ ದೂರವಿರುವ ತನ್ನ ಹೊಟೇಲಿಗೆ ಹೋದರು; ಅಲ್ಲಿ ರಾತ್ರಿ ಮತ್ತು ಅತಿ ಮುಂಜಾನೆ ಶ್ರೀ. ಕೃಷ್ಣ ಮೆನನ್ ಹಾಗೂ ಸರ್. ಗಿರಿಜಾ ಶಂಕರರೊಂದಿಗೆ ವಿಶೇಷ ಹಯರ್ನಾಲೋಚನೆ ನಡೆಸಲಿದ್ದುದರಿಂದ ಲಂಡನಿನಲ್ಲಿ ನೆಹರುಗಳ ಮೊದಲನೇ ರಾತ್ರಿಯೆಂಬುದು ಅಲ್ಪಾವಧಿಯ ನಿದ್ರೆಯಿಂದಲೇ ಕಳೆದಿತ್ತು.

ಕೂಡಾಟ-ಕೂಟ

ಲಂಡನಿನ ತನ್ನ ಪ್ರಥಮ ಹಗಲಲ್ಲಿ- ಲಂಡನ್ ಮಾತುಕತೆಗಳ ಪೂರ್ವ ಪೀಠಿಕೆಯಾಗಿ-ಪಂಡಿತ ನೆಹರುಗಳು ಮಾಡಿದ ಮುಖ್ಯ ಕಾರ್ಯವೆಂದರೆ ಬ್ರಿಟಿಷ್ ಸ್ಪಧಾನ ಮಂತ್ರಿ ಮಿ. ಆಟ್ಲಿಯೊಂದಿಗೆ ಮೂರು ತಾಸುಗಳ ಗುಸ್ತು ಸಂಭಾಷಣೆ. ಈ ಮಾತುಕತೆಯು ಲಂಡನಿನ ಡೌನಿಂಗ್ ಸ್ಟ್ರೀಟ್ ನಂ. 10 ನಲ್ಲಿರುವ ಆಟ್ಲಿ ಅಧಿಕಾರೀ ನಿವಾಸದಲ್ಲಿ ಔತಣಾನಂತರ ನಡೆಯಿತು. ಎಲ್ಲಾ ವಸಾಹತು ಪ್ರಧಾನಿಗಳಿಗೆ ಬ್ರಿಟಿಷ್ ಪ್ರಧಾನಿ ಆಟ್ಲಿಗಳಿಯು ವ ಔತಣ ಸತ್ಕಾರವು ಬೇರೊಂದು ದಿನ ವಿಶೇಷವಾದರೂ ನೆಹರುಗಳೊಡನೆ ಖಾಸಗೀ ಸಯಾಲೋಚನೆ ನಡೆಸುವುದಕ್ಕಾಗಿಯೇ ಆಟ್ಲಿಗಳು ಅವರಿಗೀ ಖಾಸಗೀ ಔತಣವಿತ್ತಿದ್ದರು ತಾ. 7ನೇ ಗುರುವಾರದಿಂದ ಆದಿತ್ಯವಾರದ ವರೆಗೆ ಮೌಂಟ್‌ಬ್ಯಾಟನ್‌ರ ಅಧಿಕಾರಿಯಾಗಿ ಅವರ ಹಳ್ಳೇ ವಸತಿ "ಜ್ಯೋರ್ಡ್‌ಲೇಂಡ್ಸ್"ನಲ್ಲಿ ವಿಶ್ರಾಂತಿಸುವಿ. ಲಂಡನಿಗೆ ನಾಲು ಮೈಲು ದೂರ ಹೇಂಪ್‌ಶಯರ್‌ನ 'ನವಾಂಪ್ಯ'ವೆಂಬಲ್ಲಿ ಮರಸಂಪಣಿಗಳ ನಡುವೆ 900 ವರುಷಗಳಿಗೆ ಮೊದಲು ವಿಜಯೀ ರಾಜ ವಿಲ್ಲಿಯಮನಿಂದ ಕಟ್ಟಲ್ಪಟ್ಟಿದ್ದ 18ನೇ ಶತಮಾನದ ಭವ್ಯಮಂದಿರವದು; ಪ್ರಕೃತಿಯ ಹುಟ್ಟು ಸೌಂದರ್ಯದ ತವರು ನೆಲೆಯಂತೆನೆ ಕಂಡ ವರುಷ ಬಾಳ್ವೆಯಾದೊಡನೆ ಬ್ರಿಟನಿನ ರಾಜಪುತ್ರಿ ದಂಪತಿಗಳು ತಮ್ಮ 'ಹನಿಮೂನ್'ನ್ನು ಇಲ್ಲಿಯೇ ಕಳೆದಿದ್ದರು. ಮೌಂಟ್‌ಬ್ಯಾಟನ್ ದಂಪತಿಗಳು ತಮ್ಮೀ ಸರಮಾಪ್ತನನ್ನು ಆರಾಮ ಹಾಗೂ ಆತ್ಮೈಕ್ಯಕ್ಕಾಗಿ ಇಲ್ಲಿಗಾ

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಸರ್ವ ಅನುಭವದ ಯೋಗ್ಯತೆಯಿದೆ.

ನಿರಿಖು ಕೇವಣಾತಿಗಳಿಗೆ ಶುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.

ಎಲ್ಲಾ ತರದ ಆಧುನಿಕ ಬ್ಯಾಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುವುದು.

ದಿ ವಿಜಯ ಬೇಂಕ್, ಲಿಮಿಟೆಡ್

ಹೆ. ಆ. ಮಂಗಳೂರು.

THE VIJAYA BANK LTD.,

H. O. MANGALORE, S. K.

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

Capital Authorised	..	Rs. 25,00,000
Capital Issued & Subscribed	....	Rs. 20,00,000
Capital Paid up	....	.... Rs. 19,98,445
Reserves....	....	.... Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ಗುರುವಾರ, ಉಡುಪಿ, ೧೪-೧೦-'೪೭

ಸಂಸ್ಥಾನಗಳಲ್ಲಿ—

ಸ್ವರಾಜ್ಯಾನಂತರ ಭಾರತ ಸರಕಾರದ ಮುಖ್ಯ ಕಾರ್ಯಭಾರವಾಗಿದ್ದ 565 ಸಂಸ್ಥಾನಗಳ ಸಂಬಂಧದ ಸಮಸ್ಯೆಗಳೆಲ್ಲವೂ ಹೈದರಾಬಾದ್ ಕಂಟಕ ನಿವಾರಣೆಯೊಂದಿಗೆ ಮುಗಿದಿವೆ. ಹಿಂದೀ ಕೇಂದ್ರ ಮಂತ್ರಿವುದೇ ಒಂದು ಸಂಸ್ಥಾನದ ಜೋಡಣೆಯ ಪ್ರಶ್ನೆ ಇಲ್ಲ. ಕೇಂದ್ರದೊಂದಿಗೆ ಸೇರಿಕೊಂಡಂತೆಯೇ ಬಹುತೇಕವಾಗಿ ಎಲ್ಲಾ ಸಂಸ್ಥಾನಗಳಲ್ಲೂ ಒಂದಲ್ಲೊಂದು ರೀತಿಯ ಪ್ರಜಾ ಜವಾಬ್ದಾರೀ ಸರಕಾರವಿದೆ. ಈ ಸಂಸ್ಥಾನೀ ಪ್ರಜಾಧಿಕಾರಗಳ ಯೋಗ್ಯತೆಯನ್ನು ಈಗಲೇ ಪರೀಕ್ಷೆ ಸಲಿಸಿಯು ವುದು ಅವಸರವಾದೀತು. ಆದರೂ ಬೆಳೆಯ ಗುಣವನ್ನು ಮೊಳಕೆಯಲ್ಲೇ ಅರಿಯಲಾಗುತ್ತದೆ. ಹೆಗ್ಗಳಿಕೆಯಿಂದ ನೋಡಲಾಗುವ ಸಲ್ಲಕ್ಷಣವಾವುದೂ, ಈ ಆಟಿ ಭಾಗದ ಪರೀಕ್ಷೆಯಿಂದ ಕಂಡು ಬರುತ್ತಿಲ್ಲ ವೆಂದು ವಿಷಾದಪೂರ್ವಕ ಹೇಳಬೇಕಾಗುತ್ತದೆ. ಭಾರತದ ಎಲ್ಲಾ ಭಾಗದ ಜನತೆಯು ಪಾಲಿಗೂ ದೀರ್ಘಾವಧಿಯಿಂದಿದ್ದ ದಾಸ್ಯದ ದೆಸೆಯಿಂದಾಗಿ, ಅವರಲ್ಲಿ ಆಧಿಕಾರ ಪಡೆಯುವ ಆಶೆಯಿರುವಷ್ಟು ಅದನ್ನು ನಡೆಸುವ ಅನುಭವವಿಲ್ಲದಿರುವುದು ಸಹಜವೇ. ಅದರೂ ಭಾರತ ಕೇಂದ್ರಾಧಿಕಾರ ನಿರ್ವಹಿಸುವವರು ತಮ್ಮ ರಾಷ್ಟ್ರಬಂಧುಗಳ ಪೂರ್ಣ ವಿಶ್ವಾಸ ವಿಶ್ವಾಸ ಹೆಗ್ಗಳಿಕೆಗೂ, ಇಡೀ ಲೋಕದ ಗೌರವಾದರಗಳಿಗೂ ಪಾತ್ರರಾಗುವಂತೆ ಯಾವ ರೀತಿ ಹೊಣೆ ನಿರ್ವಹಿಸುತ್ತಿದ್ದಾರೆಂಬ ಮಾದರಿ ಕಣ್ಣು ಮುಂದಿದೆ. ವಿಶೇಷತಃ ಸಂಸ್ಥಾನಗಳ ಪ್ರಜಾ ಸರಕಾರಗಳು ಮತ್ತು ಪ್ರಜಾಪಕ್ಷಗಳು ಈ ಮೇಲ್ಪಂಕ್ತಿಗೆ ಎಷ್ಟೋ ದೂರದಲ್ಲಿವೆ ಎಂಬುದು ನಿಜಕ್ಕೂ ಖೇದಜನಕ. ಒಂದೆರಡು ನಿದರ್ಶನಗಳು ಉಲ್ಲೇಖ ಯೋಗ್ಯವಿವೆ.

ಸರ್ ಸಿ. ಪಿ. ಗಳ ದೆಸೆಯಿಂದ ಅದಿ ಭಾಗದಲ್ಲಿ ಹೈದರಾಬಾದ್ ಮುಸ್ಲಿಂರದ ಕಾಲಾಳದಪ್ಪನ್ನು ಪ್ರದರ್ಶಿಸಿದ್ದೆ ತಿರುವಾಂಕೂರು ಸಂಸ್ಥಾನದಲ್ಲಿ ಕಟ್ಟಕಡೆಗೆ ಪ್ರಜಾಪ್ರಭುತ್ವಕ್ಕೊಪ್ಪಿಗೆ ದೊರೆತು ಇದೇ ವರುಷದ ಮಾರ್ಚಿಯಲ್ಲಿ ತಿರುವಾಂಕೂರು ಕಾಂಗ್ರೆಸ್ ಅಧ್ಯಕ್ಷೆ ಪಟ್ಟಾವ.ತಾನು ಪಿಳ್ಳೈಯವರ ಮಧ್ಯಾವಧಿ ಮಂತ್ರಿ ಮಂಡಲದಲ್ಲಿ ರಚನೆಯಾಗಿದ್ದಿತು; ಆಗ ಮೂರೇ ಮಂತ್ರಿಗಳಿದ್ದು, ಕಳದ ಜುಲಾಯಿ ತಾ. 13 ರಲ್ಲಿ ಪುನಃ ಮೂರು ಮಂತ್ರಿಗಳು ಹೆಚ್ಚಿಗೆ ಸೇರಿದ್ದರು. ಈ ಪಣ್ಣುಬೀಜ ಮಂಡಲದ ಮೇಲೆ ಇದರ ಪಕ್ಷದ ಸಭೆಯಲ್ಲೇ ಅವಿಶ್ವಾಸ ಸೂಚನೆ ಬಂದುದರಿಂದ ಅದೀಗ ರಾಜೀನಾಮೆಯೊಪ್ಪಿಸಿದೆ. ಪ್ರಥಮತಃ ಕಾಂಗ್ರೆಸ್ ಅಧ್ಯಕ್ಷರೇ ಪ್ರಧಾನ ಮಂತ್ರಿಯಾಗಿರಕೂಡದೆಂಬ ಸೂಚನೆ ತಿರುವಾಂಕೂರು ಕಾಂಗ್ರೆಸ್ ಸಮಿತಿಯ ಮುಂದೆ ಬಂತು; ಅದಕ್ಕಾದ್ಧೀನರಾಗಿ ಶ್ರೀ. ತಾನು ಪಿಳ್ಳೈಯವರು ಕಾಂಗ್ರೆಸ್ ಅಧ್ಯಕ್ಷಸ್ಥಾನ ಬಿಟ್ಟೊಡನೆ, ಅಲ್ಲಿಯ ಶಾಸನಸಭೆಯ ಕಾಂಗ್ರೆಸ್ ಸದ್ಯದ ಮುಂದೆ ಇದರ 90 ಸದಸ್ಯರ ಪೈಕಿ 64 ಮಂದಿ ಸಹಿ ಹಾಕಿ "ದುರ್ಬಲ ಮತ್ತು ಕೊರತೆಯದಿರುವ ಈ ಮಂತ್ರಿ ಮಂಡಲದ ಮೇಲೆ ವಿಶ್ವಾಸವಿಲ್ಲ" ಎಂಬ ಸೂಚನೆ ಬಂತು. ತದನುಸಾರವಾಗಿ ತಾನು ಪಿಳ್ಳೈ ಸಮಿತಿ ರಾಜೀನಾಮೆಯೊಪ್ಪಿಸಿದೆ. ಇಲ್ಲಿ ನಾವು ಈ ಮಂತ್ರಿಮಂಡಲದ ಪತನದ ಕುರಿತು ವಿಮರ್ಶನೆಯಲ್ಲಿ ಇಲ್ಲ; ಆದರೆ ಸ್ವಾತಂತ್ರ್ಯ ಹೋರಾಟ ಕಾಲದ ಉಚ್ಚ ತತ್ವಗಳು ಇಂದಿನ ಅಧಿಕಾರ ಯುಗದಲ್ಲಿ ಹೇಗೆ ಪತನಗೊಳ್ಳುತ್ತಿವೆ, ಎಂಬುದಕ್ಕೆ ಇದೊಂದು ನಿದರ್ಶನ.

ಎರಡನೆಯ ದೃಷ್ಟಾಂತವಾಗಿ ಮೈಸೂರು ಸಂಸ್ಥಾನೀ ಕಾಂಗ್ರೆಸಿಗರ ಮನೆಜಗಳ್ತಿಯನ್ನು ಉಲ್ಲೇಖಿಸಬಹುದು. ಕರ್ನಾಟಕ ಪ್ರಾಂತ್ಯ ರಚನೆಯೆಂಬುದು ಎಷ್ಟೋ ವರುಷಗಳಿಗೆ ಮೊದಲೇ ಕಾಂಗ್ರೆಸಿನಿಂದ ಕೇವಲ ತತ್ವವಾಗಿ ಮಾತ್ರವಲ್ಲ, ವಿಧಾನವಾಗಿಯೂ ಅಂಗೀಕಾರ ಪಡೆದಿರುವ ವಿಷಯ. ಸರಕಾರೀ ಆಡಳಿತೆಯು ತನ್ನ ಕೈಯಲ್ಲಿರದೆ ಆಡಳಿತೆಯನ್ನು ಸೆಳೆಕೊಳ್ಳುವ ಪ್ರಯತ್ನ ಮಾತ್ರ ತನ್ನದಾಗಿದ್ದ ಆ ಕಾಲದಲ್ಲಿ ಕಾಂಗ್ರೆಸು ಕನ್ನಡ ಮಟ್ಟಿಗೆ ಭಾಷಾವಾರು ಕರ್ನಾಟಕದ ಗಡಿ ಮೇರೆ ಹಾಕಿಕೊಂಡಿದ್ದಿತು; ಮೈಸೂರನ್ನೊಳಗೊಂಡ ಅಖಿಲ ಕರ್ನಾಟಕವೇ ಈ ವರೆಗೂ ಕಾಂಗ್ರೆಸ್ ಕಾರ್ಯಕ್ಷೇತ್ರವಾದ ಕರ್ನಾಟಕ ಪ್ರಾಂತ್ಯವಾಗಿದೆ. ಇಂದು ಇತರ ಕರ್ನಾಟಕ ಭಾಗಗಳಲ್ಲೂ ಮೈಸೂರಿನಲ್ಲೂ ಅಧಿಕಾರ ನಿರ್ವಹಣೆ ಕಾರ್ಯದಲ್ಲಿರುವ ಕಾಂಗ್ರೆಸ್ಸು, ಅಂದು ತಾನು ನಡಿಸಿದ್ದು ದನ್ನೇ ಇಂದು ಮನ್ನಿಸಿಟ್ಟುಕೊಳ್ಳಲು ಬದ್ಧವಿದೆ. ಆದೆಂದರೆ ಆ ಕಾಲದಲ್ಲಿ ತನ್ನ ಕಾರ್ಯರಂಗವಾಗಿ ಕಾಂಗ್ರೆಸ್ ಗಡಿ ಮೇರೆ ಹಾಕಿಕೊಂಡಿದ್ದ ಮೈಸೂರನ್ನು ಒಳಗೊಂಡ ಅಖಿಲ ಕರ್ನಾಟಕವನ್ನು ಇಂದು ಅಧಿಕೃತ ಪ್ರಾಂತ್ಯವಾಗಿ ಮಾರ್ಪಡಿಸುವದೇ ಆದರೆ ಕರ್ನಾಟಕದಂತೆಯೇ ಇತರ ಭಾಷಾವಾರು ಪ್ರಾಂತ್ಯಗಳೂ ಜೊತೆಗೆ ಸಂಸ್ಥಾನಗಳಿಲ್ಲದೆ ಉಳಿಯಲಾರವು. ಹೊರಗೆ ಹೋದಲ್ಲೆಲ್ಲಾ 'ಏಕೀಕರಣ'ದ ಕೂಗು ಹಾಕುತ್ತಿರುವ ಮೈಸೂರಿನ ಸಾಹಿತಿಗಳಾದರೂ ತಮ್ಮ ಕಾಲಡಿಯನ್ನೇ ತಾವು ನೋಡಿಕೊಳ್ಳುವುದಿಲ್ಲವೇಕೋ ತಿಳಿಯದು. ಅಳುವ ಮಹಾನ್ಪ್ರಭುಗಳ ಕೃಪಾಭಿಕ್ಷದಡಿಬಿಟ್ಟು ಕದಲಲೊಪ್ಪದ ಹಳೇ ಮನೋವೃತ್ತಿಗೆ-- ಸಂಕುಚಿತ ಬುದ್ಧಿಗೆ-- ಸ್ವಾರ್ಥ ಸಾಧನೆಗಳಿಗೆ-- ವಿಶೇಷಾವಕಾಶಗಳನ್ನೂ ದಕ್ಕಿಸಿದಷ್ಟು ರಾಷ್ಟ್ರೀಯ ಭಾವನೆ, ಪ್ರಗತಿ ಸಾಧನೆಗನುಕೂಲವಾಗದಂತಿದ್ದರೆ ಯಾವ ನವರಚನೆಯೂ ಜನತೆಗೆ ಬೇಕಾಗದು.

ಗುಟ್ಟೆಂದರೆ 'ಕೆರೀಟ ಧಳಕ'ನ್ನೇ ತಮ್ಮ ಜೀವನದ ಬೆಳಕೆಂದು ವಂಶಪಾರಂಪರ್ಯವಾಗಿ ಭಾವಿಸುತ್ತಾ ಬಂದಿದ್ದ ಆಶ್ರಿತ ರಾಜ್ಯಗಳ ಜನರು ಸ್ವಾಭಾವಿಕವಾಗಿ ಭಾರತದ ಮಿಕ್ಕ ಕಡೆಗಳವರಷ್ಟು ಸ್ವಾತಂತ್ರ್ಯ ತ್ಯಾಗಶೀಲರಾಗಿಲ್ಲ ಅಲ್ಲ. ಅದಕ್ಕಾಗಿ ಅನ್ಯ ಭಾರತೀಯರಷ್ಟು ಕರ್ತೃತ್ವವಾಗಿ ಹೋರಾಡಿದವರೂ ಅಲ್ಲ, ಸಂಸ್ಥಾನಗಳ ಈಗಿನ ಪ್ರಜಾಧಿಕಾರಗಳಾದರೂ ಮುಖ್ಯವಾಗಿ ಕೇಂದ್ರ ಸಂಕಾರದ ಕೆಲಸವೇ; ಅದರಲ್ಲಿ ಪ್ರಜೆಗಳ ಹೋರಾಟದ ಪರಿಣಾಮಾಂಶ ಸ್ವಲ್ಪ ಮಾತ್ರ, ಆಯೌಪಲಬ್ಧಗಳಂದು ಬಹುತೇಕವಾಗಿ ಎಲ್ಲಾ ಸಂಸ್ಥಾನಗಳಲ್ಲೂ ಕಂಡು ಬರುತ್ತಿವೆ. ಆದ್ದರಿಂದ "ಕಾಲೋಚಿತವಾಗಿ ಬುದ್ಧಿ ಸುಧಾರಿಸಿಕೊಳ್ಳಿರಿ" ಎಂದೀ ಸಂದರ್ಭದಲ್ಲಿ ಸಂಸ್ಥಾನೀ ಪ್ರಜೆಗಳನ್ನೂ ಕೇಳಿಕೊಳ್ಳಬೇಕಾಗಿದೆ.

ಬೈಲೂರಿನಲ್ಲಿ 'ಗಾಂಧೀ ಕ್ಲಬ್'-

ಕಾರ್ಕಳ ಬೈಲೂರಿನ 'ಗಾಂಧೀ ಸ್ಮಾರಕ ಸಂಘ' ದ ವತಿಯಿಂದ 'ಗಾಂಧೀ ಕ್ಲಬ್' ಒಂದನ್ನು ತೆರೆಯುವ ಸಮಾರಂಭವು ತಾ 9-10-48 ನೇ ಆದಿತ್ಯವಾರ ಬೈಲೂರು ಶಾಲೆಯಲ್ಲಿ ಜರಗಿತು. ಶ್ರೀ ಬಿ. ಕೇಶವ ಕಿಣಿಯವರ ಸ್ವಾಗತ ಭಾಷಣವಾದ ಮೇಲೆ ಶ್ರೀ. ಜಾರ್ಕಳ ನಾಗಪ್ಪ ಹೆಗ್ಡೆಯವರು ಕ್ಲಬ್ಬಿನ ಉದ್ಘಾಟನಾ ಭಾಷಣವಿತ್ತರು. ಅಧ್ಯಕ್ಷರ ಭಾಷಣವಾಗಿ ಸಂಘದ ಕಾರ್ಯದರ್ಶಿ ಕೆ. ಯಲ್. ರಾಯರಿಂದ ಕಾಂಗ್ರೆಸ್ ಮಂತ್ರಿಗಳ ಸಂದೇಶ ವಾಚನ, ಕಾರ್ಯಪರಿಚಯ ಶ್ರೀ ಎಸ್. ಸಂಜೀವ ಶೆಟ್ಟಿರಿಂದ ವರದಿ ವಾಚನ ನಡೆದು, ಶ್ರೀಗಳಾದ ರಾಮಚಂದ್ರರಾವ್, ಪದ್ಮರಾಜ ಜೈನ, ಅನಂತಪ್ಪ ಕಿಣಿ, ಟಿ. ರಮೇಶ ಪೈ ಮೊದಲಾದವರ ಉಪನ್ಯಾಸಗಳಾದುವು. ಜಹಾ ಸತ್ಕಾರ, ಭಾವ ಚಿತ್ರಕಗಳಾಗಿ ಕಾಂಗ್ರೆಸ್ ಸ್ಥಯಂಸೇವಕರ ಮತ್ತು ಟೀಮು ಬಾಲಗದ ಊರ ಮೆರವಣಿಗೆಯು ಕ್ಲಬ್ ಕಾರ್ಯಾಲಯಕ್ಕೆ ಬಂತು. ಆ ಮೇಲೆ ಮೈದಾನದಲ್ಲಿ 'ಗಾಂಧೀ ಜಯಂತಿ' ಸಂಬಂಧದ ಸಾರ್ವಜನಿಕ ಸಭೆಯು ಶ್ರೀ. ಎಸ್. ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ, ಧ್ವಜವಂದನೆ, ಹರಿಜನ ಮಕ್ಕಳಿಗೆ ಉಡುಗೆ ದಾನ ನುತ್ತು ತಿಂಡಿ ವಿತರಣೆಗಳಾದುವು.

ಸ್ಪೆಷಲ್ ಟ್ರೇನು

ತಾ. ೬-೧೧-೪೭ಳಲ ಕಾರ್ತಿಕ ಶುದ್ಧ ಪಂಚಮಿ ದಿವಸ ಶ್ರೀ ಕಾಶಿ, ಗಯಾ, ಪ್ರಯಾಗ, ಹರಿದ್ವಾರ, ಅಯೋಧ್ಯೆ ಮುಂತಾದ ೫೦ ಮುಖ್ಯ ಕ್ಷೇತ್ರಗಳು ೩೦ ದಿ. ಗಿಂತ ರೂ. ಶ್ರೀಜಗದ್ಗುರು ಕಾಶೀವಿಶ್ವಾರಾಧ್ಯ ಮಹಾಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವಕ್ಕೆ ಹೊರಡುವದು. ನಮ್ಮ ಟ್ರಾವೆಲ್ಸ್‌ಗಳಂದ ಕರಕೇ ಹೊಲ ಕೂಡಲೇ ಕೇರ್ದಿ ಮಾಡಿಕೊಡುವೆವು. ವಿಶೇಷ ಮಾಹಿತಿ ಜಾಹಿರಾತಿಗಾಗಿ ಕೂಡಲೆ ಬರೆಯಿರಿ.

ಶ್ರೀಗೌರೀಶಂಕರ ಕಂಪೆನಿ, (ಕೇಶವಾಪುರ) ಹುಬ್ಬಳ್ಳಿ

ಯಾತ್ರಾ ಚಂತ್ರೆ ಪುಸ್ತಕಗಳು ನವ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ.

ಭಾರತವು ಸಂಬಂಧರಹಿತ ಸ್ವಾತಂತ್ರ್ಯವಪೇಕ್ಷಿಸುವದೆ?

ಇದೇ ತಾ 11ನೇ ಸೋಮವಾರ ಲಂಡನ್ನಿನಲ್ಲಿ ಆರಂಭಿಸಿರುವ 'ಬ್ರಿಟಿಷ್' ವಸಾಹತುಗಳ ಪ್ರಧಾನ ಮಂತ್ರಿಗಳ ಸಮ್ಮೇಲನದಲ್ಲಿ ಯಾವ ನಿರ್ಧಾರವಾಗಬಹುದೆಂಬುದನ್ನು ಸ್ಪಷ್ಟಂಚದ ಪ್ರತಿಯೊಂದು ರಾಷ್ಟ್ರವೂ ನಿರೀಕ್ಷಿಸುತ್ತಿದೆ. ಇಂಗ್ಲಾಂಡು, ಅಮೆರಿಕ ಮತ್ತು ಇತರ ಮಿತ್ರ ರಾಷ್ಟ್ರಗಳು ಒಂದು ಆಲೆಯಿಂದ, ರಶ್ಯ ಮತ್ತು ಪೂರ್ವದ ಪಕ್ಷಪಾತಿ ದೇಶಗಳು ಒಂದು ಅತಂ ದಿಂದ ಕಾಯುತ್ತಿವೆ.

ಭಾವೀ ಜೋರಾಟ ಸಿದ್ಧತೆಗಾಗಿ ಬ್ರಿಟನು ಅಮೇರಿಕಗಳು 'ಪಶ್ಚಿಮ ಯುರೋಪು ರಾಷ್ಟ್ರಗಳ ಗುಂಪನ್ನು' ಕಟ್ಟಿದಂತೆಯೇ ವಸಾಹತುಗಳನ್ನೂ ಒಡಕ್ಯಾಗಿ ಹಿಡಿದು ಕೊಳ್ಳಲು ಬ್ರಿಟಿಷ್ ಸರಕಾರ ಕೈಗೊಂಡಿರುವ ಹಂಚಿಕೆಯಿದು ಎಂದೀ ಸಮ್ಮೇಲನದ ಕುರಿತು ಲೋಕದ ಅರೋಪವು ಸಂದರ್ಭಾನುಸಾರ ಹೊರಬೀಳಬಹುದು. ಆದರೆ ಪಂಡಿತ ನೆಹರುಗಳಂಥವರಿಗೆ ಬ್ರಿಟಿಷ್ ರಾಜಕಾರಣದ ಗುಟ್ಟು ಸರಿಯಾಗಿ ತಿಳಿದಿರುವುದರಿಂದ ಭಾರತಕ್ಕೆ ಹಿತಕರವಲ್ಲದ ಯಾವುದೂ ಅಲ್ಲಿ ನಡೆಯಲಾರದೆಂದು ಸರ್ವರೂ ಭರವಸೆಯಿಂದಿರಬಹುದು.

ಸ್ವತಂತ್ರಭಾರತವು ಬ್ರಿಟನ್ ಪ್ರಧಾನವಾದ ವಸಾಹತು ರಾಷ್ಟ್ರಗಳಲ್ಲಗುಂಪಿನಲ್ಲಿರಲೊಪ್ಪುವುದೋ, ಅಥವಾ ಬ್ರಿಟಿಷ್ ಸಿಂಹಾಸನದ ಸಂಬಂಧದೆಳೆಯನ್ನೂ ಕಡಿದು ಕೊಂಡು, 'ರಿಪಬ್ಲಿಕ್' ಆಗಿ ದೂರ ನಿಲ್ಲುವುದೋ ಎಂಬ ಕುರಿತು ಪಂಡಿತ ನೆಹರುಗಳು ಲಂಡನ್ ಪ್ರವೇಶಿಸುವ ಹಿಂದು ಮುಂದಿನ ಕಾಲಗಳಲ್ಲಿ ಇಂಗ್ಲಾಂಡಿನಲ್ಲೆಲ್ಲಾ ತೀವ್ರ ವಿಚಾರ ಮಂಥನ ನಡೆದಿದೆ. ಆದರದನ್ನು ನಿರ್ಣಯಿಸುವ ಅಧಿಕಾರವು ಭಾರತದ ಘಟನಾ ಸಮಿತಿಯದಿದ್ದು, ಅದು ಇನ್ನು ಕೆಲವೇ ತಿಂಗಳುಗಳೊಳಗೆ ಆ ಸಂಬಂಧದ ನಿರ್ಣಯ ಮಾಡಲಿದೆ. ನೆಹರುಗಳೇ ನಂದರ್ಭದಲ್ಲಿ ಏನೂ ಮಾಡಲಾರರು. ಆದರೆ ಬಹು ಮಟ್ಟಿಗೆ, ಈ ಬಾರಿಯ ಲಂಡನ್ ಸಮ್ಮೇಲನದಲ್ಲಿ ನೆಹರುಗಳು ಪಡೆಯುವ ಅನುಭವವನ್ನು ಆಧರಿಸಿಯೇ ಘಟನಾ ಸಮಿತಿಯು ತನ್ನ ನಿರ್ಧಾರ ಮಾಡಲಿದೆ ಎಂಬುದು ಖಂಡಿತ.

"ಜನತೆಯ ಸಂಕಲ್ಪವನ್ನು ಆಧರಿಸುವ ಸ್ವತಂತ್ರ ಸಾರ್ವಭೌಮಾಧಿಕಾರ ರಿಪಬ್ಲಿಕ್‌ರಾಜ್ಯ'ವಾಗುವದನ್ನೇ ಹಿಂದೀ ಘಟನಾ ಸಮಿತಿಯು ತನ್ನ ಗುರಿಯಾಗಿ ನಿಗೂಢವಾಗಿಲ್ಲ ಲಿಖಿಸಿದೆ ಅಂತೆಯೇ 'ಬ್ರಿಟಿಷ್ ವಸಾಹತು' ಎಂದು ಕರೆಯಿಸಿಕೊಳ್ಳುವುದರಲ್ಲಿ ಭಾರತದ ನಾಯಕರಿಂದ ಹಿಡಿದು ಸಾಮಾನ್ಯನ ವರೆಗಿನ ಎಲ್ಲರೂ ಲಜ್ಜಿಸುತ್ತಿದ್ದಾರೆ.

ಆದರೆ ಕೇವಲ ಸ್ವಾಭಿಮಾನ ಅಥವಾ ಭಾವನೀಕ್ಷ್ಣತೆ ಮತ್ತು ವಸ್ತುಸ್ಥಿತಿಗಳೊಳಗೆ ಅಜಗಜಾಂತರವಿರುವಂಥಾ ಕಾಲವಿದು. ಭಾರತದ ಸ್ವಾತಂತ್ರ್ಯವು ಸಂಪೂರ್ಣವಾಗಿ ಇರಬೇಕಾದಂತೆಯೇ ಅದು ಸುರಕ್ಷಿತವಾಗಿ ಇರಬೇಕೆಂಬುದೂ ಮುಖ್ಯ 'ವಸಾಹತು' ಎಂಬ ಅಸ್ಪಯ ಬಿಲ್ಲೆ ಭಾರತಕ್ಕೆ ತಾಗಿದ್ದರೂ, ಒಳಾಡಳಿತ ಮತ್ತು ಶಾಂತಿ, ಸಂಧಾನ ಯುದ್ಧ ಸಂಬಂಧದ ಪೂರ್ಣಾಧಿಕಾರವು ಈಗಲೇ ಅದಕ್ಕಿದೆ. ವಸಾಹತಿನೊಳಗಿನ ಮಿಕ್ಕ ರಾಷ್ಟ್ರಗಳಿಗಿಂತ ಭಿನ್ನವಾಗಿ ತಮಗಿಬ್ಬಿ ತೋರಿದಾಗ, ಲೇಖನೀ ಗೆದೆಯೊಂದನ್ನೆಳೆದು ತಮ್ಮ ರಾಜ್ಯಭಾರ ವಿಧಾನವನ್ನು ಬೇಕಾದಂತೆ ಬದಲಾಯಿಸಿಕೊಳ್ಳಲಾಗುವ ಪೂರ್ಣಾಧಿಕಾರೀ ವಸಾಹತನ್ನೇ ಬ್ರಿಟನು 1947ನೇ ಆಗೋಸ್ತು 15 ರಲ್ಲಿ ಭಾರತ ಮತ್ತು ಪಾಕಿಸ್ತಾನಗಳಿಗೆ ಕೊಟ್ಟಿದ್ದಿತು. ಈಗ ಇಂಗ್ಲಾಂಡು ಈ ರಾಷ್ಟ್ರಗಳಿಂದ ನೈತ್ರಿ ಮೂಲಕ ವಿನಸ್ತಾಪದ ರೂಪ ಪಡೆಯ ಬಹುದಲ್ಲದೆ, ಅಧಿಕಾರಮೂರ್ವಕ ಯಾವುದನ್ನೂ ಪಡೆಯುವಂತಿಲ್ಲ.

ಆದರೆ ಸದ್ಯದ ಪ್ರಪಂಚಿಕ ಸ್ಥಿತಿಗತಿಗಳಲ್ಲಿ ಭಾರತ-ಬ್ರಿಟನುಗಳ ಸಮಾನ ಹಿತ ಕಾರ್ಯಗಳು ಬಹಳಿವುದರಿಂದ ಇವೆರಡು ರಾಷ್ಟ್ರಗಳು ಕೈ ಕೈ ಹಿಡಿದು ಸಹಕಾರದಿಂದಿರುವುದು ಇಕ್ಕಡೆಗೂ ಹಿತಕರವಿದೆ.

ಮೊದಲನೆಯದಾಗಿ ಹೊಸತಾಗಿ ಸ್ವಾತಂತ್ರ್ಯ ಪಡೆದ ಭಾರತದ ಜನ ಸಂಪತ್ತು ಮತ್ತು ಇನ್ನಿತರ ಅನುಕೂಲತೆಗಳು ಅಮಾಪವಿದ್ದರೂ ಸ್ವರಕ್ಷಣೆಗೆ ಮತ್ತು ಸ್ವಂತೋಪಯೋಗಕ್ಕೆ ಬೇಕಾಗುವಷ್ಟು ಶಸ್ತ್ರಾಸ್ತ್ರಗಳನ್ನಾಗಲೀ, ಇತರ ಸಾಮಾನ್ಯಗಳನ್ನಾಗಲೀ ತಯಾರಿಸಿ ಕೊಡುವ ಕಾರ್ಖಾನೆಗಳು ಈತನಕ ಇಲ್ಲಿಲ್ಲ. ಇನ್ನೂ ಹಲವು ವರುಷಗಳವರೆಗೆ ಅವುಗಳನ್ನು ಸ್ಥಾಪಿಸುವ ದೇಶಗಳಿಂದಲೇ ತರಿಸಿಕೊಳ್ಳಬೇಕಾದೀತು. ಆದ್ದರಿಂದ ಭಾರತಕ್ಕೀಗ ತನ್ನ ಮಟ್ಟಿಗೆ ತಾನೆಂದು ಒಂಟಿಯಾಗಿರಲು ಸಾಧ್ಯವಿಲ್ಲ.

ಎರಡನೆಯದಾಗಿ ಚೈನಾ, ಇಂಡೋನೇಶಿಯಗಳಲ್ಲಿ ಮಾತ್ರವಲ್ಲ, ನೆರೆಯ ಬರ್ಮಾದಲ್ಲೇ ಕಮ್ಯೂನಿಸ್ಟ್ ಪ್ರಭಾವ ವ್ಯಾಪಿಸಿದೆ; ಒಳಗಡೆ ಇಂದಿನ ರಾಜ್ಯಭಾರ ವಿಧಾನಗಳಿಗೆ ಬದ್ಧ ವಿರೋಧಿಗಳಾದ ಕಮ್ಯೂನಿಸ್ಟರು ಅಧಿಕ ಸಂಖ್ಯೆಯಲ್ಲಿದ್ದಾರೆ. ಇನ್ನೊಂದು ಬದಿಯ ನೇರಾವ್ಯ ಪಾಕಿಸ್ತಾನವು ಮುಸ್ಲಿಂ ರಾಷ್ಟ್ರಸಂಘ, ಆಫ್ರೋ ಬ್ರಿಟಿಷ್ ವಸಾಹತು ಗುಂಪನ್ನಾಗಲೀ ಧರಿಸದೆ ಎಂದೂ ವೈರಿಕವಾಗಿರದಿರುವ ದುರ್ಬಲವಿದೆ. ಹೀಗಾಗಿ, ಯಾವ ವಿಧದ ಲೋಕ ಘರ್ಷಣೆಯೆದ್ದರೂ ತನ್ನ ಎಡ ಬಲಗಳಲ್ಲಿ ವೈರಿಗಳ ಸುದೀರ್ಘ ಸಾಲೇ ನಿಲ್ಲಲಿರುವ ಭಾರತವು ಏಕಾಕಿಯಾಗಿರುವುದು ಅಪಾಯಕರ.

ಆದ್ದರಿಂದ ಪೂರ್ಣ ಸ್ವತಂತ್ರಗೊಂಡರೂ ಭಾರತವು ಪರ ರಾಷ್ಟ್ರಗಳೊಡನೆ ಮುಖ್ಯವಾಗಿ ಬ್ರಿಟನ್ನೊಡನೆ ನಿಕಟ ಸ್ನೇಹ ಸಂಬಂಧವಿಟ್ಟುಕೊಳ್ಳುವದು ಖಂಡಿತವೆನ್ನಬಹುದು.

ಆರೋಗ್ಯ ಮಂತ್ರಿ ಶ್ರೀ. ಎ ಬಿ. ಶೆಟ್ಟರು ತಾ 9ಕ್ಕೆ ಮಂಗಳೂರಿಗೆ ಬಂದಿದ್ದು ಮರುದಿನ ಕಾಸರಗೋಡು, ತಾ 13ರಲ್ಲಿ ಉಡುಪಿ, ಕುಂದಾಪುರಗಳಲ್ಲಿ ಸಂಚರಿಸಿ, ತಾ 14ಕ್ಕೆ ಮಂಗಳೂರಿಗೆ ಮರಳಿ ತಾ 15ಕ್ಕೆ ಮದ್ರಾಸಿಗೆ ಹಿಂತೆರಳುವರು.

ತಾರೀಕು 15-10-48ರಿಂದ

ರಾಜಕಮಲದೆಸೆ ಅಪ್ರತಿಮ ಕಲಾಕೃತಿ

'ಅಂಧೋಂಕಿ ದುನಿಯಾ'

ಲೀಲಾಚಟ್ನೀಸ್, ಮುನ್ನರ್, ಸುಲ್ತಾನಾ, ಮಹಿಪಾಲ್, ಮನಮೋಹನ್ ಕೃಷ್ಣ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಬರುವ ಚಿತ್ರ: ಸನ್‌ರೈಸ್

'ಮಾಬಾಸ್'

ನಾಜಿರ್, ವೀಣಾ, ಯಾಕೂಬ್.



Approved firm by the Govt. of Mysore Certified by the Agent of the Govt. of Cylone & Indian.

ಕುಂದಾಪುರ ಡಿ. ಮುನ್ಸಿ. ಕೋರ್ಟಿನಲ್ಲಿ

O. P. 56/1948

ಅರ್ಜಿದಾರಳು.. ಮೆಂಕಮ್ಮ ಯಾನೆ ನಾಗಮ್ಮ ಸೆಡ್ತಿ

ಎದ್ರಿ- ಇಲ್ಲ

ಉಪ್ಪಿತಾಲ್ಲ ಉಪ್ಪಾಡಿ ಭಂಡ್ಸಾಲೆ ವಡ್ಡರ್ಸೆ ರಾಮಯ್ಯ ಸೆಟ್ಟಿ ಮಗ ಕೃಷ್ಣಪ್ಪ ಸೆಟ್ಟಿ ವಿಧವೆ ಮೆಂಕಮ್ಮ ಯಾನೆ ನಾಗಮ್ಮ ಸೆಡ್ತಿಳು ಈ ಮೂಲಕ ತಿಳಿಯಪಡಿಸುವುದೇನೆಂದರೆ,

ಅರ್ಜಿದಾರಳ ಮೃತ ಗಂಡ U. B. ಕೃಷ್ಣಪ್ಪ ಸೆಟ್ಟಿ ಪಿರಿಯಂಟಿಲ್ ಗವರ್ನ್‌ಮೆಂಟು ಸೆಕ್ಯೂರಿಟಿ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್‌ನಲ್ಲಿ ನಂಬ್ರ 993186ಕ್ಕೆ ರೂ. 986-0-0ಕ್ಕೆ ಇನ್ಶೂರೆನ್ಸ್ ಮಾಡಿದ ಹಣವನ್ನು ಪಡಕೊಳ್ಳುವರೆ ವಾರಿಸ್ ಸರ್ಟಿಫಿಕೆಟು ಕೊಡಬೇಕೆಂತ ಅರ್ಜಿದಾರಳು ದಾಖಲ್ಮಾಡಿದ ಮೇಲಿನ ಅರ್ಜಿಯು ತಾ 29-10-48ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಾಗೆ ಇಟ್ಟರುಸ್ತದೆ. ಆ ಕುರಿತು ಏನಾದರೂ ಅಕ್ಷೇಪಣೆಗಳಿದ್ದರೆ ಸದ್ರಿ ತಾರೀಕಿಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ಎಂಬ ಸಂಗ್ತಿ ಈ ಮೂಲಕ ತಿಳಿಯಪಡ್ಸಿರುತ್ತದೆ.

N. S Parameshwariah

Advocate for Petr.

Date 7-10-48

Coondapoor.

THE VIJAYA BANK LTD., COONDAPUR.

ದಿ ವಿಜಯ ಬೇಂಕ್ ಲಿಮಿಟೆಡ್, ಕುಂದಾಪುರ.

ಏಲಂ ನೋಟೀಸು.

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಲ್ಲಿ ಚಿನ್ನಾಭರಣ ಈಡಿನ ಮೇಲೆ ಪಡೆದ ಸಾಲ ಹಾಗೂ ಆದರ ಮೇಲಣ ಬಡ್ಡಿಯನ್ನಾಗಲೀ ನಾವಿದೆಗೆ ಸರಿಯಾಗಿ ಕೊಡದೆ ಇರುವುದರಿಂದ ಅವರಿಗೆ ಕ್ರಮಪ್ರಕಾರ ರಿಜಿಸ್ಟ್ರಿ ನೋಟೀಸನ್ನು ಕಳುಹಿಸಿದ್ದಲ್ಲಿ ಕೂಡಾ ಕೊಡದೆ ಬಾಕಿ ಇಟ್ಟುಕೊಂಡಿರುವುದರಿಂದ ಸರಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ-

ನೀವು ಬೇಂಕಿಗೆ ಸಲ್ಲಿಸಲಿಕ್ಕಿರುವ ಆಸಲು ಬಡ್ಡಿ, ಈ ನೋಟೀಸಿನ ಖರ್ಚು ವೆಚ್ಚಗಳನ್ನು ಇದೇ ತಿಂಗಳ ತಾರೀಕು 21ನೇ ಗುರುವಾರದ ಒಳಗೆ ಬೇಂಕಿಗೆ ಜಾಸತಿ ಮಾಡದಿದ್ದಲ್ಲಿ ಇದೇ ತಿಂಗಳ ತಾರೀಕು 23ನೇ ಶನಿವಾರ ಹಗಲು ಗಂಟೆ 3-30ಕ್ಕೆ ಯಾ ಬೇಂಕಿಗೆ ಯುಕ್ತ ತೋರಿದ ದಿನ ಬೇಂಕಿನ ಆವರಣದಲ್ಲಿ ಬಹಿರಂಗವಾಗಿ ಏಲಂ ಮಾಡಲಾಡೀತು, ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಆಸಲು ಮೊಬಲಗು ಬಾಕಿ
J L 1138/40-7	ಚಾಂಬ್ರೆ ಶೆಟ್ಟಿ ಕೃಷ್ಣಮ್ಮ ಶೆಡ್ತಿಯವರ ಮಗ, ಮೊಳಕಳ್ಳಿ ಪದುಮನೆ, ಅಲೂರು ಗ್ರಾಮ, ಗಂಗೊಳ್ಳಿ	140-0-0

K. Narayana Shetty.

Agent.

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

Capital Authorised	..	Rs. 25,00,000
Capital Issued & Subscribed	....	Rs. 20,00,000
Capital Paid up	....	Rs. 19,98,445
Reserves....	....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.,
General Manager.

ನವಯುಗ

ಗುರುವಾರ, ಶಾಡುಸಿ, ೧೪-೧೦-'೪೬

ಸಂಸ್ಥಾನಗಳಲ್ಲಿ—

ಸ್ವರಾಜ್ಯಾನಂತರ ಭಾರತ ಸರಕಾರದ ಮುಖ್ಯ ಕಾರ್ಯಭಾರವಾಗಿದ್ದ 565 ಸಂಸ್ಥಾನಗಳ ಸಂಬಂಧದ ಸಮಸ್ಯೆಗಳೆಲ್ಲ ಪೂರ್ಣ ಹೈದರಾಬಾದ್ ಕಂಟಕ ನಿವಾರಣೆಯೊಂದಿಗೆ ಮುಗಿದಿವೆ. ಹಿಂದೀ ಕೇಂದ್ರ ಮಂತ್ರಿಮಂಡಲದ ಮೇಲೆ ಇದರ ಪಶ್ಚಾದ್ ಸಭೆಯಲ್ಲೇ ಅವಿಶ್ವಾಸ ಸೂಚನೆ ಬಂದುದರಿಂದ ಅದೀಗ ರಾಜೀನಾಮೆಯೊಪ್ಪಿಸಿದೆ. ಪ್ರಥಮತಃ ಕಾಂಗ್ರೆಸ್ ಅಧ್ಯಕ್ಷರೇ ಪ್ರಧಾನ ಮಂತ್ರಿಯಾಗಿರಕೂಡದೆಂಬ ಸೂಚನೆ ತಿರುವಾಂಕೂರು ಕಾಂಗ್ರೆಸ್ ಸಮಿತಿಯ ಮುಂದೆ ಬಂತು; ಅದರಭಿಪ್ರೇತರಾಗಿ ಶ್ರೀ. ತಾನು ಪಿಳ್ಳೆಯವರು ಕಾಂಗ್ರೆಸ್ ಅಧ್ಯಕ್ಷಸ್ಥಾನ ಬಿಟ್ಟೊಡನೆ, ಅಲ್ಲಿಯ ಶಾಸನಸಭೆಯ ಕಾಂಗ್ರೆಸ್ ಪಕ್ಷದ ಮುಂದೆ ಅದರ 90 ಸದಸ್ಯರ ಸೈ ಕಿ 64 ಮಂದಿ ಸಹಿ ಹಾಕಿ "ದುರ್ಬಲ ಮತ್ತು ಕೊರತೆಯಿರುವ ಈ ಮಂತ್ರಿ ಮಂಡಲದ ಮೇಲೆ ವಿಶ್ವಾಸವಿಲ್ಲ" ಎಂಬ ಸೂಚನೆ ಬಂತು. ತದನುಸಾರವಾಗಿ ತಾನು ಪಿಳ್ಳೆಸಮಿತಿ ರಾಜೀನಾಮೆಯೊಪ್ಪಿಸಿದೆ. ಇಲ್ಲಿ ನಾವು ಈಮಂತ್ರಿಮಂಡಲದ ಪತನದ ಕುರಿತು ವಿಮರ್ಶಿಸಲಿಳಿದಿಲ್ಲ; ಆದರೆ ಸ್ವಾತಂತ್ರ್ಯ ಹೋರಾಟ ಕಾಲದ ಉಜ್ವಲ ತತ್ವಗಳು ಇಂದಿನ ಅಧಿಕಾರ ಯುಗದಲ್ಲಿ ಹೇಗೆ ಪತನಗೊಳ್ಳುತ್ತಿವೆ, ಎಂಬುದಕ್ಕೆ ಇದೊಂದು ನಿದರ್ಶನ.

ಎರಡನೆಯ ದೃಷ್ಟಾಂತವಾಗಿ ಮೈಸೂರು ಸಂಸ್ಥಾನೀಕಾಂಗ್ರೆಸಿಗರ ಏಸೋನ್ಮೈತ್ರಿಯನ್ನು ಉಲ್ಲೇಖಿಸಬಹುದು. ಕರ್ನಾಟಕ ಪ್ರಾಂತ್ಯ ರಚನೆಯೆಂಬುದು ಎಷ್ಟೋ ವರುಷಗಳಿಗೆ ಮೊದಲೇ ಕಾಂಗ್ರೆಸಿನಿಂದ ಕೇವಲ ತತ್ವವಾಗಿ ಮಾತ್ರವಲ್ಲ, ವಿಧಾನ ಮಾಡಿಯೂ ಅಂಗೀಕಾರ ಪಡೆದಿರುವ ವಿಷಯ. ಸರಕಾರೀ ಆಡಳಿತೆಯು ತನ್ನ ಕೈಯಲ್ಲಿರದೆ ಆಡಳಿತೆಯನ್ನು ಸೆಳೆಕೊಳ್ಳುವ ಪ್ರಯತ್ನ ಮಾತ್ರ ತನ್ನದಾಗಿದ್ದ ಆ ಕಾಲದಲ್ಲಿ ಕಾಂಗ್ರೆಸು ತನ್ನ ಪಟ್ಟಿಗೆ ಭಾಷಾವಾರಾಗಿ ಕರ್ನಾಟಕದ ಗಡಿಮೇರೆ ಹಾಕಿಕೊಂಡಿದ್ದಿತು; ಮೈಸೂರನ್ನೊಳಗೊಂಡ ಅಖಿಲ ಕರ್ನಾಟಕವೇ ಈ ವರೆಗೂ ಕಾಂಗ್ರೆಸ್ ಕಾರ್ಯಕ್ಷೇತ್ರವಾದ ಕರ್ನಾಟಕ ಪ್ರಾಂತ್ಯವಾಗಿದೆ. ಇಂದು ಇದರ ಕರ್ನಾಟಕ ಭಾಗಗಳಲ್ಲೂ ಮೈಸೂರನ್ನಲ್ಲೂ ಅಧಿಕಾರ ನಿರ್ವಹಣೆ ಕಾರ್ಯದಲ್ಲಿರುವ ಕಾಂಗ್ರೆಸ್ಸು, ಅಂದು ತಾನು ಮಾಡಿದ್ದುದನ್ನೇ ಇಂದು ಪುನ್ನಿಸಿಟ್ಟುಕೊಳ್ಳಲು ಬದ್ಧವಿದೆ. ಆದೆಂದೆ ಆ ಕಾಲದಲ್ಲಿ ತನ್ನ ಕಾರ್ಯರಂಗವಾಗಿ ಕಾಂಗ್ರೆಸ್ ಗಡಿ ಮೇರೆ ಹಾಕಿಕೊಂಡಿದ್ದ ಮೈಸೂರನ್ನು ಒಳಗೊಂಡ ಅಖಿಲ ಕರ್ನಾಟಕವನ್ನು ಇಂದು ಅಧಿಕೃತ ಪ್ರಾಂತ್ಯವಾಗಿ ಮಾಡಿಕೊಳ್ಳುವುದೇ ಆದರೆ ಕರ್ನಾಟಕದಂತೆಯೇ ಇತರ ಭಾಷಾವಾರು ಪ್ರಾಂತ್ಯಗಳೂ ಹೊಸತಾಗಿ ನಿರ್ಮಾಣಗೊಳ್ಳಲಿವೆಯಾದ್ದರಿಂದಲೂ, ಆ ಅಧಿಕಾರವು ಕೇಂದ್ರದ್ದಿರುವುದರಿಂದಲೂ ಭಾಷಾವಾರು ಪ್ರಾಂತ್ಯಗಳ ರಚನೆಯು ಹೊಸತೇನು ಅಸಹಜವಾದ ಸಂಗತಿಯೂ ಅಲ್ಲ. ಪ್ರಾಂತ್ಯಗಳ ರಚನೆಯು ಹೊಸತೆನ್ನುವ ಘಟನಾಸಮಿತಿಯೇಗ ವಹಿಸಿದೆ. ಇಲ್ಲಿ ಅಡ್ಡಿ ಆತಂಕಗಳು ಬಂದಿಂತಿದ್ದರೆ ಬೇರೆಯವರಿಂದಲೇ ಬರಬೇಕೆ, ಹೊರತು ಮೈಸೂರಿನ ಅಥವಾ ಕರ್ನಾಟಕದ ಇತರ ಕಡೆಯ ಕಾಂಗ್ರೆಸಿಗರಿಂದವು ಬಂದಲ್ಲಿ ಅದು ಅತ್ಯದ್ಭೂತಹಕ್ಕೆ ಸಮಾನವಾಗಿರೂ ಮೈಸೂರು ಕಾಂಗ್ರೆಸ್ಸು ತನ್ನನ್ನು ಕರ್ನಾಟಕ ಪ್ರಾಂತೀಕ ಕಾಂಗ್ರೆಸ್ ಸಮಿತಿಯಿಂದ ಪ್ರತ್ಯೇಕಿಸಿ ಬೇರೆ ಸ್ವತಂತ್ರ ಕೊಡಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯನ್ನು ಕೇಳಿಕೊಂಡಿರುವುದೆಂದು ತಿಳಿದು ಬರುತ್ತಿದೆ. ಯಾವ ಉದ್ದೇಶದಿಂದ? ಮೈಸೂರು ಸಮೇತ ಅಖಿಲ ಕರ್ನಾಟಕವು ಏಕರೂಪೀ ಪ್ರತ್ಯೇಕ ಪ್ರಾಂತ್ಯವಾಗಬೇಕೆಂಬ ಕೆಲಸ ಒಂದೆಡೆ ನಡೆದಿರುವಾಗಲೇ ಇನ್ನೊಂದೆಡೆ ಈ ವರೆಗಿದ್ದ 'ಕಾಂಗ್ರೆಸ್ ಏಕತಾ'ವನ್ನೂ ಕೂಡಾ ವಿಭಾಗಿಸಿಕೊಳ್ಳಲು ಮೈಸೂರಿನವರು ಮುಂದೆ ಬಂದಿರುವುದರ ಗುಟ್ಟೇನು? ಭವಿಷ್ಯ, ಕರ್ನಾಟಕದಲ್ಲಿ ಮೈಸೂರಿನವರ ಸ್ಥಾನ ಮಾನಗಳ ಕುರಿತು ಮೈಸೂರಿನ ಮುಖ್ಯ ಇತರ ಕರ್ನಾಟಕದ ಮುಂದಾಳುಗಳೊಳಗೆ ಒಂದು ಒಪ್ಪಂದವಾದ ವಾತೆ ಕೇಳಿದ್ದಿವು. ಹಾಗಿದ್ದಲ್ಲಿ ಇವೆಂದು ಭಾಗಗಳವರೂ ಪರಸ್ಪರ ಹೊಂದಿಕೊಳ್ಳುವ ಕೆಲಸಗಳೇ ಒಂದೊಂದಾಗಿ ನಡೆಯಬೇಕಿದ್ದಿತು. ಬದಲಿಗೆ ಇದ್ದ ಜೋಡಣೆಗಳನ್ನೂ ಕಳಚಿ ಹಾಕಿಕೊಳ್ಳುವ ಪ್ರಯತ್ನ ಮೈಸೂರವರಿಂದ ಆಗುತ್ತಿರುವುದು ಹಿತಕರವಲ್ಲ. "ಭಾಷಾವಾರು ಪ್ರಾಂತ್ಯ ರಚನೆಯು ಸಂಕುಚಿತ ಪ್ರಾಂತ್ಯಾಭಿಮಾನ, ಸ್ವಾಭಿಮಾನಗಳಿಗವಕಾಶ ಕೊಟ್ಟು ಕೇಂದ್ರವನ್ನು ದುರ್ಬಲಗೊಳಿಸಬಹುದು; ವಿಶಾಲ ರಾಷ್ಟ್ರೀಯ ಭಾವನೆಗೆ ಭಂಗವೆಯೆದ್ದಬಹುದು" ಎಂಬ ಹೆಗರಿಕೆ ರಾಷ್ಟ್ರ ನಾಯಕರಲ್ಲೂ ಹಲವು ವಿಚಾರಗಳಲ್ಲೂ ಮೂಡಿ ಬೆಳೆಯುತ್ತಾ ಬಂದಿದೆ; ಪ್ರಾಂತ್ಯಗಳ ಪುನ್ರಚನಾ ಪ್ರಶ್ನೆಯು 10 ಅಥವಾ 15 ವರುಷಗಳ ಕಾಲ ಮುಂದೂ ಹಿಂದೆ ಬೀಳುವದು ಸಂಭವನೀಯವಾಗಿ ಕಾಣುತ್ತಿದೆ. ಅಂತಹ ಭೀತಿ ಗಾಧಾರವೇ ಇಲ್ಲವೆಂಬುದನ್ನು ಅಖಿಲ ಕರ್ನಾಟಕದವರೆಂಬುತದಿಂದ ತೋರಿಸಬೇಕಾಗಿದ್ದ ಈ ಸಂದರ್ಭದಲ್ಲೇ ಮೈಸೂರು ಕಾಂಗ್ರೆಸಿಗರು ಬೇರೆ ಬಿಡಾರದ ಆಸೆ ಪ್ರದರ್ಶಿಸಿಗುವುದು ಅತ್ಯಂತ ಕೋಚನೀಯ. ಹೊರಗೆ ಹೋದಲ್ಲೆಲ್ಲಾ 'ಏಕೀಕರಣ'ದ ಕೂಗು ಹಾಕುತ್ತಿರುವ ಮೈಸೂರಿನ ನಾಯಕರುಗಳಾದರೂ ತಮ್ಮ ಕಾಲಡಿಯಲ್ಲೇ ತಾವು ನೋಡಿಕೊಳ್ಳುವುದಿಲ್ಲವೇಕೋ ತಿಳಿಯದು. ಅಖಿಲ ಮಹಾಸ್ವಭುಗಳ ಕೃಪಾಭಕ್ತರಾದಿಬಟ್ಟ ಕದಲಲೊಪ್ಪದ ಜಳ್ಳೇ ಮನೋವೃತ್ತಿಗೆ-- ಸಂಕುಚಿತ ಬುದ್ಧಿಗೆ-- ಸ್ವಾರ್ಥ ಸಾಧನೆಗಳಿಗೆ-- ವಿಶೇಷಾವಕಾಶಗಳನ್ನೂ ದಗಿಸಿದಷ್ಟು ರಾಷ್ಟ್ರೀಯ ಭಾವನೆ, ಪ್ರಗತಿ ಸಾಧನೆಗಳಿಗನುಕೂಲವಾಗದಂತಿದ್ದರೆ ಯಾವ ನವವಿಚಿನೆಯೂ ಜನತೆಗೆ ಬೇಕಾಗದು.

ಗುಟ್ಟೆಂದರೆ 'ಕಿರೀಟ ಧರಕ'ನ್ನೇ ತಮ್ಮ ಜೀವನದ ಬೆಳಕೆಂದು ವಂಶಪಾರಂಪರ್ಯವಾಗಿ ಭಾವಿಸುತ್ತಾ ಬಂದಿದ್ದ ಅತ್ರಿತ ರಾಜ್ಯಗಳ ಜನರು ಸ್ವಾಭಾವಿಕವಾಗಿ ಭಾರತದ ಮಿಕ್ಕ ಕಡೆಗಳವರಷ್ಟು ಸ್ವಾತಂತ್ರ್ಯ ತ್ಯಾಗಶೀಲರಿಗಳೂ ಅಲ್ಲ. ಆದಕ್ಕಾಗಿ ಅನ್ಯ ಭಾರತೀಯರಷ್ಟು ಕಠೋರವಾಗಿ ಬೋರಾಡಿದವರೂ ಅಲ್ಲ. ಸಂಸ್ಥಾನಗಳ ಈಗಿನ ಪ್ರಜಾಧಿಕಾರಿಗಳಾದರೂ ಮುಖ್ಯವಾಗಿ ಕೇಂದ್ರ ಸರಕಾರದ ಕೆಲಸಗಳೇ; ಅದರಲ್ಲಿ ಪ್ರಜೆಗಳ ಹೋರಾಟದ ಪರಿಣಾಮಾಂಶ ಸ್ವಲ್ಪ ಮಾತ್ರ. ಆದ್ದಾರಿಲ್ಯಗಳಂದು ಬಹುತೇಕವಾಗಿ ಎಲ್ಲಾ ಸಂಸ್ಥಾನಗಳಲ್ಲೂ ಕಂಡು ಬರುತ್ತಿವೆ. ಅದ್ದರಿಂದ "ಚಾಲೋಚಿತವಾಗಿ ಬುದ್ಧಿ ಸುಧಾರಿಸಿ ಕೊಳ್ಳಿರಿ" ಎಂದೀ ಸಂದರ್ಭದಲ್ಲಿ ಸಂಸ್ಥಾನೀ ಪ್ರಜೆಗಳನ್ನೂ ಕೇಳಿಕೊಳ್ಳಬೇಕಾಗಿದೆ.

ಬೈಲೂರಿನಲ್ಲಿ 'ಗಾಂಧೀ ಕ್ಲಬ್'.

ಸೇರೆ ಬೈಲೂರಿನ 'ಗಾಂಧೀ ಸ್ಮಾರಕ ಸಂಘ'ದ ವತಿಯಿಂದ 'ಗಾಂಧೀ ಕ್ಲಬ್' ಒಂದನ್ನು ತೆರೆಯುವ ಸಮಾರಂಭವು ತಾ 9-10-46 ನೇ ಆದಿತ್ಯವಾರ ಬೈಲೂರು ಶಾಲೆಯಲ್ಲಿ ಡಾ ಮಾಧವ ಪೈಗಳ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಜಿ. ಕೇಶವ ಕಿಣಿಯವರ ಸ್ವಾಗತ ಭಾಷಣವಾದ ಮೇಲೆ ಶ್ರೀ. ಜಾರ್ಕಳ ನಾಗಪ್ಪ ಹೆಗ್ಡೆಯವರು ಕ್ಲಬ್ಬಿನ ಉದ್ಘಾಟನಾ ಭಾಷಣಕರ್ತರು. ಅಧ್ಯಕ್ಷರು ಭಾಷಣವಾಗಿ ಸಂಘದ ಅಧ್ಯಕ್ಷ ಡಾ ಎ. ಕೆ. ಯ [illegible] ರಾಮರಿಂದ ಆಕರ್ಷಕ ಮಂತ್ರಿಗಳ ಸಂ[illegible] ಪಾಣಿನ, ಕಾರ್ಯದರ್ಶಿ ಶ್ರೀ ಎನ್. ಸಂಜೀವ ಸೆಟ್ಟರಿಂದ ವಂದನಾರ್ಪಣೆ ನಡೆದು, ಶ್ರೀಗಳಾದ ರಾಮಚಂದ್ರ ನಾ, ಸದ್ಗರಾಜ ಜೈನ, ಅನಂತಪ್ಪ ಕಿಣಿ, ಗೋವಿಂದ ನೈ ಮೊದಲಾದವರ ಉಪನ್ಯಾಸಗಳಾದುವು. ಚಾಹಾ ಸತ್ಕಾರ, ಭಾವ ಚಿತ್ರಗಳನ್ನು ಕಾಂಗ್ರೆಸ್ ಸ್ವಯಂಸೇವಕರ ಮತ್ತು ಬೇದು ಪಾಲಾಗದೆ ಊರ ಮೆರವಣಿಗೆಯು ಕ್ಲಬ್ ಕಾರ್ಯಾಲಯಕ್ಕೆ ಬಂತು. ಆ ಮೇಲೆ ಮೈದಾನದಲ್ಲಿ 'ಗಾಂಧೀ ಜಯಂತಿ' ಸಂಬಂಧದ ಸಾರ್ವಜನಿಕ ಸಭೆಯು ಶ್ರೀ. ಎಸ್ ವಿ. ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿ, ಧ್ವಜವಂದನೆ, ಹರಿಜನ ಪಂಕ್ತಿಭೋಜನೆ ಮುಂತಾದ ಕಾರ್ಯಕ್ರಮಗಳು ನಡೆದುವು.

ಸ್ಪೆಷಲ್ ಟ್ರೇನು



ತಾ. ೬-೧೧-೪೬ಳಿ ಕಾರ್ತಿಕ ಶುದ್ಧ ಪಂಚಮಿ ದಿವಸ ಶ್ರೀ ಕಾಶಿ, ಗಯಾ, ಪ್ರಯಾಗ, ಹರಿದ್ವಾರ, ಅಯೋಧ್ಯೆ ಮುಂತಾದ ೫೦ ಮುಖ್ಯ ಕ್ಷೇತ್ರಗಳು ೩೦ ದಿ ೧೫೨ ರೂ. ಶ್ರೀಜಗದ್ಗುರು ಕಾಶೀವಿದ್ಯಾಧೀಶ ಮಹಾಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವಕ್ಕೆ ಹೊರಡುವದು. ನಮ್ಮ ಟ್ರಾವೆಲ್ಲರುಗಳಿಂದ ಕರಿಕೇ ಹೊಲ ಕೂಡಲೇ ಕೇರ್ದಿ ಮಾಡಿಕೊಡುವೆವು. ವಿಶೇಷ ಮಾಹಿತಿ ಚಾಹಿಸಿರಿ ತಿಳಿಸಲು ಬರೆಯಿರಿ.

ಶ್ರೀಗೌರೀಶಂಕರ ಕಂಪನಿ, (ಕೇಶವಾಪುರ) ಹುಬ್ಬಳ್ಳಿ

ಯಾತ್ರಾ ಚರಿತ್ರೆ ಪುಸ್ತಕಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ.

ಭಾರತವು ಸಂಬಂಧರಹಿತ ಸ್ವಾತಂತ್ರ್ಯವಪೇಕ್ಷಿಸುವದೆ?

ಜೈಪುರ ಕಾಂಗ್ರೆಸಿನ ಮತ್ತೊಂದು ಪ್ರಮುಖ ಆಕರ್ಷಣೆಯೆಂದರೆ ಅಧ್ಯಕ್ಷಸ್ಥಾನಕ್ಕಿರುವ ಸ್ಪರ್ಧೆ. ಇದೀಗ 55ನೇ ಅಧಿವೇಶನದಲ್ಲಿರುವ ಅಖಿಲ ಭಾರತ ಕಾಂಗ್ರೆಸಿನ ಅಧ್ಯಕ್ಷ ಸ್ಥಾನಕ್ಕಾಗಿ ಪೈಪೋಟಿಯಿದ್ದ ಸಂದರ್ಭಗಳು ಅತ್ಯಪರೂಪ. ಗಾಂಧೀ ಯುಗಾರಂಭವಾದ ಮೇಲಂತೂ ಇದಕ್ಕೆ ಮೊದಲು ಕೇವಲ ಒಂದೇ ಬಾರಿ ಅಂತಹ ಸ್ಪರ್ಧೆ ನಡೆದಿದ್ದಿತು. ತ್ರಿಪುರ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕಾಗಿ ನಡೆದ ಸುಭಾಸ್–ಪಟ್ಟಾಭಿ ಮೇಲಾಟ ಮೊದಲನೆಯದಾಗಿದ್ದರೆ ಜೈಪುರ ಕಾಂಗ್ರೆಸ್ ಅಧ್ಯಕ್ಷ ಪೀಠಕ್ಕಾಗಿ ಈಗ ನಡೆದಿರುವ ಥಂಡನ್–ಪಟ್ಟಾಭಿ ಸ್ಪರ್ಧೆ ಎರಡನೆಯದು. ಅಂತೂ ಗಾಂಧಿಜೀಯಿಂದ ಪವಜೀವ ಪಡೆದ ಕಾಂಗ್ರೆಸಿನ ಅಗ್ರಾಸ್ಯದಲ್ಲಿ ಸ್ಥಾನಕ್ಕಾಗಿ ಎರಡು ಬಾರಿ ಹೋರಾಟವೊಡ್ಡಿದ ಯಶಸ್ಸು ಡಾ. ಪಟ್ಟಾಭಿ ಸೀತಾರಾಮಯ್ಯನವರಿಗೆ ಸಲ್ಲುತ್ತದೆ. ಪ್ರಥಮ ಬಾರಿಯ ಸ್ಪರ್ಧೆಯಲ್ಲಿ ನೇತಾಜೀ ಸುಭಾಸ್ಚಂದ್ರಬೋಸರಿಗಿದಿರಾಗಿ ಗಾಂಧಿಜಿಯು ಅಶೀರ್ವಾದ ಮಾತ್ರವಲ್ಲ ಕಾಂ. ಅಗ್ರಗಣ್ಯರೆ ಬೆಂಬಲ ಪಡೆದು ಡಾ. ಪಟ್ಟಾಭಿಯವರು ನಿಂತಿದ್ದರೂ ದಕ್ಷಿಣ ಭಾರತದ ಪ್ರಾಂತಿಕ ಕಾಂಗ್ರೆಸ್ ಸಮಿತಿಗಳಿಂದ ಕೂಡಾ ಬಹುಮತಗಳನ್ನು ಪಡೆಯಲಾರದೆ ಸೋತಿದ್ದರು. ಈ ಬಾರಿಯ ಅವರ ಪ್ರತಿಸ್ಪರ್ಧಿ ಶ್ರೀ ಪುರುಷೋತ್ತಮದಾಸ ಥಂಡನ್‌ರು ಉಗ್ರಗಾಮೀ ನಾಯಕ; ಉಜ್ವಲವಾಗ್ಮಿ; ಖಂಡತುಂಡವಾದಿ. ನವಾಖಾಲೀ ಆಕ್ರಮಣಾನಂತರ ಕಾಂಗ್ರೆಸು ನ್ಯಾಯನಿಷ್ಠುರತೆಯಿಂದ ಕಾರ್ಯ ಮಾಡಬೇಕೆಂದು ದಾಕ್ಷಿಣ್ಯ ಅಥವಾ ಹೆಂಗಿಲ್ಲದೆ ಪ್ರೇರಿಸುತ್ತಾ ಬಂದ ಕಾಂಗ್ರೆಸಿಗರಲ್ಲಿ ಥಂಡನರು ಪ್ರಮುಖರೆನ್ನಬಹುದು. ಸಂಯುಕ್ತ ಪ್ರಾಂತಿಕ ಎಸೆಂಬ್ಲಿಯ ಅಧ್ಯಕ್ಷರಿವರು; ಜನಮನವನ್ನು ಎಷ್ಟೋ ಸಂದರ್ಭಗಳಲ್ಲಿ ಆಕರ್ಷಿಸಿಕೊಂಡವರು; ಅತ್ಯಂತ ಫಲವಾದಿ.

ಬಡತನ ನಿವಾರಣೆಗೆ ಉಳಿತಾಯವೊಂದೇ
ಸುಲಭೋಪಾಯವಲ್ಲವೆ?
ಗಳಿಕೆಯ ಸ್ವಲ್ಪಾಂಶವನ್ನು ಉಳಿಸುತ್ತ ಬಂದರೆ ಕೆಲವೇ ವರ್ಷಗಳಲ್ಲಿ ಅದೇ ಒಂದು ಆಪದ್ಧನದ ಗಂಟಾಗುವುದಿಲ್ಲವೆ?
ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಇವರು
ನಿಮ್ಮ ಉಳಿತಾಯದ ಸಮಸ್ಯೆಯನ್ನು ಸುಲಭವಾಗಿ ಬಿಡಿಸುವರು.
ವಿಮಾ ವಿವರಕ್ಕೂ ಏಜೆನ್ಸಿ ನಿಯಮಗಳಿಗೂ ಬರೆಯಿರಿ.
The New Karnataka Provident Insurance Co., Ltd. Udipi, S.K.

ವಿಮೆಮಾಡಲಿಕ್ಕೆ ಯಾ ಪ್ರಾತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.
ಸ್ಥಾನಿಕ ಕಾರ್ಯಾಲಯ:–ಧಾರವಾಡ,
THE UNITED KARNATAK INSURANCE COMPANY, LIMITED.

ಆದ್ದರಿಂದಲೇ, ಗಾಂಧಿಜೀ ಮತ್ತು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಲಹೆಯನ್ನಾಧರಿಸಿ ಸರ್ವಾನುಮತದಿಂದ ಅಧ್ಯಕ್ಷನನ್ನಾರಿಸಿಕೊಳ್ಳುವ ಕಾಂಗ್ರೆಸ್ ಸಂಪ್ರದಾಯವನ್ನು ಈ ಬಾರಿಯೂ ಊರ್ಜಿತಕ್ಕೆ ತರಬೇಕೆಂದು ಪ್ರಮುಖ ನಾಯಕರ ಆಶೆಯಿದ್ದರೂ ಫಲಿಸದೆ ಹೋಯಿತು. ಡಾ. ಪ್ರಫುಲ್ಲಚಂದ್ರಘೋಷ್, ಆಚಾರ್ಯ ಕೃಪಲಾನಿ, ಶ್ರೀ ಶಂಕರರಾವ್ ದೇವ್, ಡಾ. ಪಟ್ಟಾಭಿ ಸೀತಾರಾಮಯ್ಯ, ಶ್ರೀ ಪುರುಷೋತ್ತಮದಾಸ್ ಥಂಡನ್-ಈ ಐವರ ಹೆಸರುಗಳೂ ಈಬಾರಿಯ ಅಧ್ಯಕ್ಷ ಸ್ಥಾನಕ್ಕೆ ಸೂಚಿಸಲ್ಪಟ್ಟಿದ್ದುವು. ಶ್ರೀ ಥಂಡನ್‌ರೊಬ್ಬರನ್ನು ಉಳಿದು ಉಳಿದೆಲ್ಲಾ ನಾಮಧಾರಿಗಳೂ ತಮಗಿನ ಅಧ್ಯಕ್ಷ ಬಾಬ್ದು ರಾಜೇಂದ್ರ ಪ್ರಸಾದರೊಂದಿಗೆ ಸಡೆದ ಪರ್ಯಾಲೋಚನೆಯಲ್ಲಿ ಭಾಗಿಗಳಾಗಿ ಘೋಷ್, ಕೃಪಲಾನಿ, ದೇವ್ ತಮ್ಮ ಉಮೇದ್ವಾರಿಕೆಗಳನ್ನು ನಿಶ್ಚಿತ ದಿನ ಒಕ್ಟೋಬರ್ 15ರೊಳಗೆ ಹಿಂತೆಗೆದುಕೊಂಡರು. ಶ್ರೀ ಥಂಡನರೂ ಹಾಗೆಯೇ ಮಾಡಿ, ಡಾ. ಪಟ್ಟಾಭಿಯವರ ಜೀವಮಾನದೊಂದು ಆಶೆಯನ್ನೀಡೇರಿಸಿ ಕೊಡುವರೆಂಬ ನಿರೀಕ್ಷೆಯಿದ್ದರೂ ಆದು ಸಂಭ್ಯಾಗಿದೆ. ಈ ಸಂದರ್ಭದಲ್ಲಿ 'ಅತಿ ಜಾಣ; ಆದರೆ ಅಪ್ರಿಯ ಮನುಷ್ಯ' ಎಂದು ಡಾ! ಪಟ್ಟಾಭಿಯವರನ್ನು ಕನಿಕರ ದೃಷ್ಟಿಯಿಂದ ಕಾಣಬೇಕಾಗುತ್ತದೆ! ಡಾ! ಪಟ್ಟಾಭಿಗಳು ರಾಜಾಜಿಯಷ್ಟೇ ಹಿರಿಯ ಕಾಂಗ್ರೆಸ್ ಸ್ನಹಿತರು ಅವರಂತೆಯೇ ಬುದ್ಧಿವಂತ. ತ್ಯಾಗ, ಸ್ವಾತಂತ್ರ್ಯ ಸಾಧನಾ ಹೋರಾಟ, ಕಾರ್ಯನಿರ್ವಹಣ ಜಾಣ್ಮೆ ಇತ್ಯಾದಿಗಳ ಮೇಲಿಂದ ಕಾಂಗ್ರೆಸ್ ಅಧ್ಯಕ್ಷಸ್ಥಾನವು ಎಂದೋ ಡಾ! ಪಟ್ಟಾಭಿಗಳಿಗೆ ದೊರಕಬೇಕಿತ್ತು. ಆದರೆ ಅವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಸದಸ್ಯರಾಗಿದ್ದುದು ಕೂಡಾ ಅಲ್ಪಾವಧಿಗಳಲ್ಲಿ ಅಂತಹ ಒಂದು ದುರ್ಬುದ್ಧಿಯೋ ಮೌರ್ಖ್ಯವೋ ಡಾ! ಪಟ್ಟಾಭಿಯವರನ್ನು ಹಿಡಿದುಕೊಂಡಿದೆ! ಒಂದು ಕಾಲದಲ್ಲಿ. ಸುಭಾಷ್‌ಚಂದ್ರರಂತಹ ಸರ್ವಜನ ಪ್ರೀತ ನಾಯಕನಿಗಿದಿರಾಗಿ ಮಹಾತ್ಮಾಜೀ, ಪಟೇಲ್, ಪ್ರಸಾದ್, ಆಜಾದರಂಥವರು ಎತ್ತಿ ಕಟ್ಟಿದ್ದ ಹಿರಿಯ ಪ್ರಮುಖ ಪಟ್ಟಾಭಿಯಿದಿರಲ್ಲಿ ಥಂಡನರು ನಿಲ್ಲುವಂತಹದಲ್ಲ. ಆದರೂ ಚುನಾವಣೆಯ ಪರಿಣಾಮವು ಹೇಗಾಗುವದೆಂದು ಖಂಡಿತವಾಗಿ ಹೇಳುವದುಸಾಧ್ಯ. ನಾಯಕರಲ್ಲಿ ಎಂದೂ ಇದಲೇಬಾರದ ದುರ್ಗುಣವಾದ ಸಂಕುಚಿತಪ್ರಭಾವೋಗ್ರತೆಯು ಡಾ. ಪಟ್ಟಾಭಿಯಲ್ಲಿರುವದೇ ಇದಕ್ಕೆ ಕಾರಣವೆಂದೂಹಿಸಿದರೆ ತಪ್ಪಾಗದು.

ಫ್ರೆಂಚ್ ಭಾರತದ ಭವಿಷ್ಯ

ಭಾರತದೊಳಗಡೆ ಚಲ್ಲಾಪಿಲ್ಲಿ ಕಂಟಕಗಳಂತೆ ಹರಡಿದ್ದ ಏನೂರಕ್ಕೂ ಮಿಕ್ಕಿದ ಸಂಸ್ಥಾನಗಳ ಸಮಸ್ಯೆಯು ಹೈದರಾಬಾದ್ ಚಿಕಿತ್ಸೆಯೊಂದಿಗೆ ಮುಗಿದಿರುವ ಈ ಕಾಲದಲ್ಲಿ ಭಾರತದಲ್ಲಿ ಇನ್ನೂ ಉಳಿದಿರುವ ಪರಕೀಯ ರೋಗವೆಂದರೆ ಪಾಂಡಿಚೆರಿ, ಮಾಹೆ ಮುಂತಾದ ಫ್ರೆಂಚ್ ಪ್ರದೇಶಗಳು ಮತ್ತು ಗೋವೆಯಂತಹ ಪೋರ್ಚುಗೀಸ್ ಸ್ಥಳಗಳು. ಎರಡು ಶತಮಾನಗಳ ಮೊದಲು ಭಾರತೀಯ ರಾಜರುಗಳು ವರಸ್ಪರ ಕಾದಾಡಿಕೊಳ್ಳುತ್ತಿದ್ದ ಆ ಕಾಲದಲ್ಲಿ ಬ್ರಿಟಿಷರಿಗಿಂತ ಮುಸು ಮುಂದಾಗಿ ಭಾರತದ ಭಾಗಗಳನ್ನು ಆಕ್ರಮಿಸಿಕೊಳ್ಳ ಹತ್ತಿದ್ದವರು, ಮತ್ತು ಆದಿ ಭಾಗದಲ್ಲಿ ಬ್ರಿಟಿಷರಿಗಿಂತ ಹೆಚ್ಚಿನ ಸ್ಥಳಗಳನ್ನು ಇಲ್ಲಿ ಹಿಡಿದುಕೊಂಡಿದ್ದವರು ಪೋರ್ಚುಗೀಸರು ಮತ್ತು ಫ್ರೆಂಚರೇ. ಕಾಲಕ್ರಮೇಣ ಬಹು ಅಂಶ ಭಾರತವು ಬ್ರಿಟಿಷರ ವಶವಾಗುತ್ತಾ ಹೋಗಿ ಕೊನೆಗೆ ಎಲ್ಲವೂ ಇದ್ದಂತೆ ಥಂಡಾಗಟ್ಟಿದಾಗ ಪೋರ್ಚುಗೀಸರ ಮತ್ತು ಫ್ರೆಂಚರ ಪಾಲಿಗೆ ಕೆಲವು ಸ್ಥಳಗಳು ಮಾತ್ರ ಉಳಿದು ಹೋಗಿದುವು. ಇವೆಲ್ಲವೂ ಸಂದು ಮೂಲೆಗಳಲ್ಲಿರುವ ಸಣ್ಣ ಪುಟ್ಟ ತುಂಡುಗಳಾದ್ದರಿಂದ, ಮೂಲ ಭಾರತದಿಂದ ಬ್ರಿಟಿಷರನ್ನೋಡಿಸುವ ಕಡೆಗೆ ಬಿದ್ದಷ್ಟು ಲಕ್ಷ್ಯವೀ ಕಡೆಗೆ ಬಿದ್ದಿರಲಿಲ್ಲ. ಆದರೆ ಬ್ರಿಟಿಷರು ಇಲ್ಲಿಂದ ಕಾಲ್ತೆಗೆದ ಮೇಲೆ ಸಹಜವಾಗಿ ಈ ತುಂಡು ಭೂಮಿಗಳ ಪರಾಧೀನತೆಯು ಸ್ಮರಣೆ ಬಂತು; ಅಲ್ಲಿಯ ಜನರೂ ತಮ್ಮ ಸ್ವಾತಂತ್ರ್ಯಕ್ಕಾಗಿ ಚಳವಳಿಸ ಹತ್ತಿದರು. ಈ ಮಟ್ಟಿಗೆ ಗೋವೆಯಂತಹ ತಮ್ಮ ಸ್ವಧೀನಗಳ ಕುರಿತು ಪೋರ್ಚುಗೀಸರು ಪ್ರದರ್ಶಿಸುತ್ತಾ ಬಂದಿರುವ ಹರಮಾರಿತನಗಳನ್ನು ಫ್ರೆಂಚರು ಪ್ರದರ್ಶಿಸದೆ ಹುಸು ವಿನಯೀ ವರ್ತನೆ ತಳೆದಿದ್ದರೆನ್ನಬಹುದು. ಕಳೆದ ಜೂನ್ 29ರಲ್ಲಿ ಫ್ರೆಂಚ್ ಭಾರತ ಸರಕಾರ ಮತ್ತು ಭಾರತ ಸರಕಾರಗಳೊಳಗೆ ಒಂದು ಒಪ್ಪಂದವಾಗಿದ್ದು, ಆದರಲ್ಲಿ ಫ್ರೆಂಚ್ ಭೂಮಿಗಳ ಭವಿಷ್ಯವು ಅಲ್ಲಿಯ ಜನಮತದ ತೀರ್ಮಾನವನ್ನೇ ಹೊಂದಿಕೊಂಡಿರಬೇಕೆಂಬ ಉಲ್ಲೇಖವಿದೆ. ಈ ಜನಮತವನ್ನು ತಿಳಿಯುವಾಗುವಂತಹ ಚುನಾವಣೆಯು ಫ್ರೆಂಚ್ ಭಾರತ ಕ್ಷೇತ್ರಗಳಲ್ಲೆಲ್ಲಾ ಇದೇ ತಿಂಗಳ ತಾ. 24ಕ್ಕೆ ನಡೆಯಲಿದೆ.

ಫ್ರೆಂಚ್ ಭಾರತ ಚುನಾವಣೆ

ಇದೇ ಸೆಪ್ಟೆಂಬರ್ ತಾ. 24ಕ್ಕೆ ಫ್ರೆಂಚ್ ಭಾರತ ಕ್ಷೇತ್ರಗಳಲ್ಲಿ ಮುನ್ಸಿಪಲ್ ಚುನಾವಣೆ ನಡೆಯಲಿದ್ದು, ಈ ಚುನಾವಣೆಯಲ್ಲಿ ಭಾರತದೊಂದಿಗೆ ಸೇರಿಹೋಗಬೇಕೆಂಬ ಮತ್ತು ಸೇರಕೂಡದೆಂಬ ಪಕ್ಷಗಳು ಸ್ಪರ್ಧಿಸುತ್ತಿವೆ. ಇದರ ಪರಿಣಾಮದ ಮೇಲಿಂದ ಫ್ರೆಂಚ್ ಭಾರತದ ಜನಮತವನ್ನು ಅರಿಯಲಾಗುತ್ತದೆ. ಆದರೆ ಒಂದು ತಿಂಗಳ ನೋಟೀಸು ಕೊಡದೆ ಈ ಚುನಾವಣೆಯನ್ನು ಅವಸರದಿಂದ ನಡೆಸಿದ್ದಾರೆಂದೂ, ಫ್ರೆಂಚ್ ಸರಕಾರವು ಅಧಿಕಾರಿಗಳು ಭಾರತದೊಂದಿಗೆ ಸೇರಕೂಡದೆಂಬ ಪಕ್ಷವನ್ನು ಸರ್ವ ವಿಧಾನಗಳಿಂದಲೂ ಪ್ರತ್ಯಕ್ಷವಾಗಿ ಸಮರ್ಥಿಸುತಿದ್ದಾರೆಂದೂ ಭಾರತದೊಂದಿಗೆ ತಾದಾತ್ಮ್ಯ ಹೊಂದುವ ಚಳವಳಿಗಾರರಿಗೆ ಜೈಲುವಾಸ ಸಮೇತ ಎಲ್ಲಾ ವಿಧದ ಬೆದರಿಕೆಗಳನ್ನು ಹಾಕುತಿದ್ದಾರೆಂದೂ ಭಾರತ ಪಕ್ಷಪಾತಿಗಳ ದೂರಿದೆ. ಚುನಾವಣೆಯನ್ನು ಹಿಂದೆ ಹಾಕಿಸಬೇಕೆಂದು ಲಂಡನ್‌ನಿಲ್ಲಿರುವ ನೆಹರುಗಳಿಗೂ ಈ ಪಕ್ಷ ಪ್ರಮುಖರು ತಂತಿ ಹೋಗಿದೆ. ಆದರೂ ಭಾರತ ಪಕ್ಷಪಾತಿಗಳು ಪ್ರತಿಯೊಂದು ಸ್ಥಾನಕ್ಕೂ ಸ್ಪರ್ಧಿಸುತಿದ್ದಾರೆ. ಈ ಚುನಾವಣೆಯು ಸ್ವತಂತ್ರವಾಗಿ ಹಾಗೂ ನ್ಯಾಯ ಪ್ರಕಾರ ನಡೆಯುವುದೋ ಎಂಬುದನ್ನು ಪ್ರತ್ಯಕ್ಷ ಪರೀಕ್ಷಿಸುವುದಕ್ಕಾಗಿ ಫ್ರೆಂಚ್ ಸರಕಾರವು, ಫ್ರೆಂಚ್ ಭಾರತದ ರಾಜಕೀಯ ಸಲಹೆಗಾರ ಎಮ್. ಲಾಗೆ ನೀಯನ್ನು ಪಾಂಡಿಚೆರಿಗೆ ಕಳುಹಿದೆ. ಮುನ್ಸಿಪಲ್ ಚುನಾವಣೆಗಳು ಮುಗಿದೊಡನೆಯೇ ಸಾರ್ವತ್ರಿಕ ಜನಮತ ಸಂಗ್ರಹದ ವ್ಯವಸ್ಥೆಗಾಗಿ ಭಾರತ ಸರಕಾರ ದೊಡನೆ ಮಾತುಕತೆಗಳನ್ನು ನಡೆಸುವೆವೆಂದು ಎಮ್. ಲಾಗೆಯೇ ತಿಳಿಸಿದ್ದಾರೆ. ಲಂಡನ್ನಿನಿಂದ 'ಸಂಯುಕ್ತ ರಾಷ್ಟ್ರ ಸಂಘ'ದ ಅಧಿವೇಶನದ ಕಾರ್ಯ ಕಲಾಪಗಳನ್ನು ನೋಡಲು ವ್ಯಾರಿಸಿಗೆ ಹೋಗಿ ಬಂದ ಪಂಡಿತ ನೆಹರುಗಳು, ಅಲ್ಲಿ ಫ್ರೆಂಚ್ ಅಧಿಕಾರಿಗಳೊಂದಿಗೆ ಈ ವಿಷಯವನ್ನು ಪ್ರಸ್ತಾಪಿಸಿರಬೇಕೆಂದು ಊಹಿಸಲಾಗಿದೆ. ಅಂತೂ ಈವರಿಗಿನ ವಾತಾವರಣವನ್ನು ಅವಲೋಕಿಸುವಾಗ ಫ್ರೆಂಚ್ ಭಾರತ ಕ್ಷೇತ್ರಗಳ ಹಿಂದೀ ಐಕ್ಯ ಪ್ರೇಮಿಗಳ ಚುನಾವಣಾ ಕಾರ್ಯಕ್ಕೆ ವಿಶೇಷ ಕೊಂದನಿಗಳಿರುವುದು ಕಾಣುತ್ತಿರುವದರಿಂದ ಇದೇ ತಾ. 24ರ ಚುನಾವಣೆಯು ಆಶ್ಚರ್ಯದಾಯಕವಾಗಿಲ್ಲ; ಆದರೆ ಆ ಪ್ರಶ್ನೆಯು ಸಂಪೂರ್ಣವಾಗಿ ಈ ಚುನಾವಣಾ ಫಲಿತಾಂಶವನ್ನು ಹೊಂದಿಕೊಂಡಿಲ್ಲವಾದ್ದರಿಂದ ಪ್ರಯತ್ನಗಳನ್ನು ಸರಿಪಡಿಸುವ ಕಾರ್ಯಗಳಾಗಬಹುದು. ಪೋರ್ಚುಗೀಸರ ಗೋವೆಯಂತಹ ಪ್ರದೇಶಗಳ ಪ್ರಶ್ನೆಯನ್ನೂ ಇನ್ನು ಸಮೀಪಕ್ಕೆ ಬಂದಿಲ್ಲ!

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಸಗಾಂಕಿತ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು,ನಮ್ಮ ಶಾಖೆಗಳಿರುವಲ್ಲಿ ರುಜುಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಖಾತ್ರಿಗೊಳಿಸಲ್ಪಟ್ಟಿದೆ. ಸೇವೆಸಿದಂತಿರುವ ನಮ್ಮ ಶಾಖೆಗಳು ದಬ್ಬುಣದ ಆರಳೆಯ ಕ್ಷೇತ್ರಗಳಲ್ಲಿ-ತಮಿಳುನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಂಗಳೂರು ಜಿಲ್ಲೆಯ ತೆಂಗುಗಳ, ನೈಸರ್ಗಿಕ ಬಟ್ಟೆಗಳಿರುವಲ್ಲಿ. ಮತ್ತು ಮುಂಬಾಯಿ ಹಾಗೂ ಆದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ನಿರಾತಿಗಳ ಬಗ್ಗೆ ಕಲೆಕ್ಷನ್ ರುಜುಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ಕತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ನಿಶ್ಚಿತ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸಲಕರ್ತೃಗಳು ಸುಲಭವಾಗಿ ನಿಮ್ಮವಿಶ್ವ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬಲ್ಲರು. ಆವರಿಂದ ನಿಮಗೆ ಸಮಯವೂ, ಹಣವೂ ಉಳಿಯುವದು. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರುಜುಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

The Canara Bank Limited.

ESTD: 1906.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು.

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್., ಉಡುಪಿ

ಇವರ ಶಾಖಾ ಖರೀದಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ಮಂಗಳೂರು.

ಕಳೆದ ಮೂವತ್ತೈದು ವರುಷಗಳಿಂದ ವಿಮಾ-ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ಪಾಲಿಸಿಗಳ ಪಡೆಯಲಿಕ್ಕಾಗಲೀ ದಯಮಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನೇ ಉಪಯೋಗಿಸಿರಿ.

ಹೃಕಟನೆ

ಗೋಪೂಜೆ

ನಮ್ಮ ಪಂಚಾಂಗದಲ್ಲಿ ಈ ವರುಷ ಗೋಪೂಜೆಯು ಕಾರ್ತಿಕ ಶುಕ್ಲ ೧ ಮಂಗಳವಾರ (ತಾ. 2-11-48) ಎಂದು ತಪ್ಪಾಗಿ ಪ್ರಕಟವಾಗಿದೆ. ಇದು ಕೇವಲ ಮುಚ್ಚಾಡೋಷವಾಗಿದೆ. ಗೋಪೂಜೆಯನ್ನು ಆಶ್ವಯುಜ ಕೃಷ್ಣ ೩೦ ಸೋಮವಾರ (ತಾ. 1-11-48)ಕ್ಕೆ ಎಂದಾಗಬೇಕು. ಎಲ್ಲರೂ ಅದರಂತೆಯೇ ಆಚರಿಸಬೇಕಾಗಿ ಮಹಾಜನರ ಅವಗಾಹನೆಗೆ ಈ ಮೂಲಕ ಪ್ರಕಟಿಸಲಾಗಿದೆ.

ಇತಿ ಪಂಚಾಂಗಕರ್ತಾ

ಬ್ರಹ್ಮಶ್ರೀ ವಾಸುದೇವ ಭಟ್ಟ, ಕಟ್ಟುಪಟ್ಟು, ಹಾಲಾಡಿ.

ನಂದರಾಯನ ಬದುಕು!

ಹೈದರಾಬಾದಿನಲ್ಲಿದ್ದ ಲಾಯಕ್ ಅಲಿ ಮಂತ್ರಿಮಂಡಲವು ತನ್ನ ಅವಸಾನ ಕಾಲ ಸಮೀಪಿಸುತ್ತಿದೆನ್ನುವಾಗ ಹೈದರಾಬಾದ್ ಭಂಡಾರವನ್ನು ಪಂಚಕಜ್ಜಾಯದಂತೆ ಹಂಚಿದ್ದ ಸಂಗತಿಗಳೀಗ ಬೆಳಕಿಗೆ ಬರಹತ್ತಿವೆ. 1947ನೇ ಒಕ್ಟೋಬರಿನ ನಂತರ ಕರಾಚಿ ಮತ್ತು ಲಂಡನಿನ ಬೇರೆ ಕುಗಳಿಗೆ ಲಾಯಕ್ ಅಲಿ ಸರಕಾರ ಕಳುಹಿದ್ದ ಹೈದರಾಬಾದ್ ಹಣವೇ ಆರು ಕೋಟಿ ರೂಪಾಯಿಗಳಿಗೂ ವಿ.ಕ್ಕಿರುವದೆಂದು ತಿಳಿದುಬರುತ್ತದೆ. ಈ ನಿಧಿಗಳನ್ನು ಅನಧಿಕೃತವಾಗಿ ತೆಗೆಯದಂತಹ ನಿರ್ಬಂಧವೇನನ್ನೂ ಹಾಕದೆ ಹೈದರಾಬಾದ್ ಅರ್ಥಸಚಿವ ಮತ್ತು ಲಂಡನ್, ಕರಾಚಿಗಳ ಹೈದರಾಬಾದ್ ಏಜಂಟ್ ಜನರಲರ ಸ್ವೇಚ್ಛಾಧಿಕಾರಕ್ಕೆ ಬಿಡಲಾಗಿತ್ತು. ಲಂಡನಿಗೆ ಹೋದಹಣ ಸಮಾರು 3 ಮಿಲಿಯ ಸ್ಟರ್ಲಿಂಗುಗಳು. ಆ ವೈಕಿ ಅರಿವಾಸಿಯಷ್ಟು ಮೊತ್ತವು ಸಿಕ್ಕಿಬಿಟ್ಟಿ ಹಂಚಲ್ಪಟ್ಟು ವ್ಯಯವಾಗಿ ಹೋಗಿದೆ. ಪಾಕಿಸ್ತಾನದ ಒರ್ವ ಅಧಿಕಾರಿ ಸೋಹೆಯಾ ಎಂಬವನಿಗೆ 8,90,000 ಸಿಸ್ಟ್ಕಿಂಟಿನ ನಿಗೆ 1,00,000 ಗೊಂವೆಯನ್ನು ಕೊಂಡುಕೊಳ್ಳುವ ಸಂಚು ನಡೆಸುವ ಸಲುವಾಗಿ ಸರ್. ಅಲೆಕ್ಸಾಂಡರ್ ಫೋಗರ್ಸನಿಗೆ 10,000, ಪಾಕಿಸ್ತಾನದ ಅರ್ಥಮಂತ್ರಿ ಗುಲಾಮ್ ಮಹಮ್ಮದರಿಗೆ ಉದ್ದೇಶವೇನನ್ನೂ ಕಾಣಿಸದೆ 5,000, ರಾಷ್ಟ್ರಸಂಘಕ್ಕೆ ಹೋಗಿರುವ ಹೈದರಾಬಾದ್ ಪ್ರತಿನಿಧಿ ಮಂಡಲಿಯ ಸದಸ್ಯ ಮತ್ತು ಹೈದರಾಬಾದಿನ ವಿದೇಶ ಸಂಬಂಧಖಾತೆಯ ಕಾರ್ಯದರ್ಶಿ ಝಾಹೀರ ಅಹಮ್ಮದರಿಗೆ 4,50,000 ಪೌಂಡುಗಳು ಲಂಡನಿನಲ್ಲೇ ಹಂಚಲ್ಪಟ್ಟಿದ್ದವು. ಸುಮಾರು 3 ಕೋಟಿ ರೂಪಾಯಿಗಳು ಕರಾಚಿಗೆ ಕಳುಹಲ್ಪಟ್ಟಿದ್ದು, ಆವೆಲ್ಲಾ ಏನಾದುವೆಂಬ ಸರಿಯಾದ ವಿವರವು ಇನ್ನು ತಿಳಿದು ಬಂದಿಲ್ಲ. ಪ್ರತಿಯೊಂದರಲ್ಲೂ ರೂ. 25,000 ನಮೂದಿಸಿದ್ದ ಮೂರು ಅಫವಾನಾಲ್ಟು ಚಕ್ಕುಗಳನ್ನು ಪಾಕಿಸ್ತಾನದ ವಿದೇಶ ಮಂತ್ರಿ ಸರ್. ಝುಫರುಲ್ಲಾ ಖಾನರಿಗೆ ಕೊಡಲಾಗಿತ್ತು. ಕೆಲವು ಲಕ್ಷ ರೂಪಾಯಿಗಳನ್ನು ಕರಾಚಿಯಲ್ಲಿದ್ದ ಒರ್ವ ಹೈದರಾಬಾದ್ ವಿಜೆಂಟನ ಮೂಲಕ ಸಹಾಯಕ ಕಳ್ಳ ವ್ಯಾಪಾರಿ ಸಿಡ್ನೆಕಾಟನನಿಗೆ ಸಂದಾಯ ಮಾಡಿದ್ದುದು ತಿಳಿದು ಬಂದಿದೆ. ಇನ್ನು ಸ್ವೇಚ್ಛೆಯಂತೆ ಕೊಟ್ಟು, ಬಿಡುವ ಅಧಿಕಾರ ಸಮೇತ ಹೈದರಾಬಾದಿನ ವಿವಿಧ ಪ್ರತಾಧಿಗಾರಿಗಳ ವಶಕ್ಕೊಪ್ಪಿಸಿದ ದೊಡ್ಡ ನಿಧಿಗಳ ವೈಕಿ ಹೈದರಾಬಾದ್ ಪ್ರಧಾನ ಮಂತ್ರಿಯ ಕೈಯಲ್ಲಿ 50,000, ಪ್ರಚಾರ ಖಾತೆಯ ಕಾರ್ಯದರ್ಶಿಯ ಕೈಯಲ್ಲಿ 75,000 ಬಿಡಲಾಗಿತ್ತು. ನಿಜಾಮರ ಮಂತ್ರಿ ಶ್ರೀ ವೆಂಕಟರಾಯರಿಗೆ, ದಲಿತ ವರ್ಗ ಮತ್ತು ಹಳ್ಳೀ ವಲಯಗಳವರ ಮನವೊಲಿಸುವದೇ ಮುಂತಾದ ಕಾರ್ಯಗಳಿಗಾಗಿ 1,47,000 ರೂಪಾಯಿಗಳನ್ನು ಕೊಡಲಾಗಿತ್ತಲ್ಲವೆ, ಮತ್ತೊರ್ವ ಮಂತ್ರಿ ಅಬ್ದುಲ್ ರವೂಫರಿಗೆ ಉದ್ದೇಶವಾವುದನ್ನೂ ಕಾಣಿಸದೆ 25,000 ರೂ.ಗಳನ್ನು ಕೊಡಲಾಗಿತ್ತು. ಹೀಗೆ ಹಣ ಪಡೆದವರಲ್ಲಿ ವಿಶೇಷ ಬಾಕ್ಸ್ಕೀದಾರರಿಬ್ಬರಿದ್ದಾರೆ. ಲಂಡನಿನ ಬೇಂಕೊಂದರಲ್ಲಿದ್ದ ನಿಧಿಯಲ್ಲಿ 1,500,000 ಪೌಂಡುಗಳನ್ನು ಪಾಕಿಸ್ತಾನ್ ಹ್ಯಾಕಮಿಶನರರ ಹೆಸರಿಗೆ ವರ್ಗಾಯಿಸಿದ್ದುದು "ಟ್ರಸ್ಟ್" ಆಗಿ ಎಂದು ಈಗ ಕೂಚಿಗೆ ಮರಳಿರುವ ಹೈದರಾಬಾದಿನ ಮಾಜೀ ಅರ್ಥ ಸಚಿವ ನವಾಬ್ ವೇಯಿನ್ ಖಿಂಗ್‌ರಂದಿದ್ದಾರೆ.

ಅಂತೂ ಭಾರತ ಸೇನೆ ಒಳಗೆ ನುಗ್ಗಲು ಇನ್ನೂ ತಡ ಮಾಡುತಿದ್ದರೆ ಹೈದರಾಬಾದಿನ ಕಾಸಿಂರಜ್ವಿ ಮತ್ತು ಕಾಸಿನ ಗರ್ವಿಯ ಪ್ರತಾಪವೆಲ್ಲಿವರೆಗೇರುತಿತ್ತೋ ಹೇಳುವದಸಾಧ್ಯ!

ಜೋರ್ನಿಮೆನರ ನಿಧನ

ಬೊಂಬಾಯಿ ನಗರವು ವೀರ ನರಿಮೆನರನ್ನು ಕಳೆದುಕೊಂಡು ತಿಂಗಳಾಗುತ್ತದೆನ್ನುವಾಗಲೇ ಮತ್ತೊಬ್ಬ ಬಂಟನನ್ನು ಕಳಕೊಂಡಿದೆ ಹಿರಿಯ ಪಾರ್ಸಿ ಪ್ರಭಾವಿ ಪತ್ರಿಕೋದ್ಯಮಿ ಬಿ. ಜಿ. ಹೋರ್ನಿಮೆನರು ಇದೇ ತಾ. 16ರಲ್ಲಿ ಬೊಂಬಾಯಿಯ ಆಸ್ಪತ್ರೆಯೊಂದರಲ್ಲಿ ನಿಧನಗೊಂಡರು. ಬಂಧಿತ ಭಾರತದಲ್ಲಿ ದೆಳಕುಗಳಂತೆ ಮಿನುಗುತ್ತಿದ್ದ ಕೆಲವೇ ಬಿಳಿ ಮುಖಗಳಲ್ಲಿ ಬೆಂಜಾಮಿನ್ ಗಾಯಿ ಹೋರ್ನಿಮೆನರದೊಂದು. ಭಾರತದ ಸ್ವಾತಂತ್ರ್ಯ ಧ್ವನಿಯನ್ನು ಹರಿಹಿಡಿದು ಗಟ್ಟಿಯಾಗಿ ಹಾಗೂ ದೀರ್ಘಾವಧಿಯಿಂದೆಬ್ಬಿಸಿದ್ದವ್ಯಕ್ತಿಭಾವಂತ ಬ್ರಿಟಿಷರಲ್ಲಿ ಪತ್ರಿಕೋದ್ಯಮಿ ಹೋರ್ನಿಮೆನರಿಗೆ ಅಗ್ರಸ್ಥಾನ ಸಲ್ಲುತ್ತದೆ. ಇವರ ಜನನ ಇಂಗ್ಲಾಂಡಿನ ಎಸ್ಸೆಕ್ಸ್ ಎಂಬಲ್ಲಿ 1873ರಲ್ಲಿ. ಆದಿಭಾಗದಲ್ಲಿ ಬ್ರಿಟನಿನ ಕೆಲವು ಪತ್ರಿಕೆಗಳಲ್ಲಿ ಕೆಲಸ ಮಾಡಿ ಭಾರತಕ್ಕೆ ಬಂದಿದ್ದರು ಪ್ರಥಮತಃ ಕಲ್ಕತ್ತದ "ಸ್ಟೇಟ್ಸ್‌ಮೇನ್" ಪತ್ರಿಕೆಯ ಸಹಾಯಕ ಸಂಪಾದಕನಾಗಿ ಆರು ವರುಷದುಡಿದು ಅಲ್ಲಿಂದ ಬೊಂಬಾಯಿಗೆ ಬಂದು ಸರ್. ಫಿರೋಜ್‌ಷಾ ಮೆಹತಾರ ಸಹಕಾರದಿಂದ 'ಬೊಂಬೇ ಕ್ರಾನಿಕಲ್' ಪತ್ರಿಕೆಯನ್ನು 1913ರಲ್ಲಿ ಪ್ರಾರಂಭಿಸಿದರು; ಹಲವು ವರುಷಗಳ ವರೆಗೆ ಅವರೇ ಅದರ ಸಂಪಾದಕರಾಗಿದ್ದರು. ಬ್ರಿಟಿಷ್ ಸಾಮ್ರಾಜ್ಯಶಾಹಿಯ ಖಂಡನೆ ಮತ್ತು ಭಾರತ ಸ್ವಾತಂತ್ರ್ಯದ ಸಮರ್ಥನೆಯಲ್ಲಿ ಹೋರ್ನಿಮೆನರ ಲೇಖನಿಯನ್ನು ಸಂಗ ಹೋರ್ನಿಮೆನರು ಆರು ವರುಷ ಇಲ್ಲಿಂದ ದೂರವಾಗಿ ಬ್ರಿಟನಿನಲ್ಲಿರಬೇಕಾಯಿತು. ಅಲ್ಲಿಯೂ ಈ ಸರ್ವಾರ್ತಿ ಸ್ಫೋಟ ಜೀವಿ ಸುಮ್ಮನಿರದೆ ನುಗ್ಗಿನುಸಿಪಾಶ್ಚಯತ್ನಿಸಿ1929ರಲ್ಲಿ ತಡೆ ಬೇಲಿಯನ್ನು ಮುರಿದು ಸಿಂಹಳ ಮಾರ್ಗವಾಗಿ ಪುನಃ ಭಾರತಕ್ಕೆ ಬಂದು ಬಿಟ್ಟರು. ಅದೇ ವರುಷ ಬೊಂಬಾಯಿಯಲ್ಲಿ ಒಂದು ಹೊಸ ಪತ್ರಿಕೆ ಹೊರಡಿಸಿದರಾದರೂ ಪುನಃ "ಬೊಂಬೇ ಕ್ರಾನಿಕಲ್"ನ್ನೇ ಸೇರಿಕೊಂಡರು. ಕಟ್ಟಿಕಡೆಗೆ "ಬೊಂಬೇ ಸೆಂಟಿನಲ್" ಪತ್ರಿಕೆಯ ಸಂಪಾದಕರಾಗಿದ್ದು ಕೆಲವೇ ವರುಷಗಳ ಮೊದಲು ಪತ್ರಿಕೋದ್ಯಮದಿಂದ ನಿವೃತ್ತಿ ಹೊಂದಿದ್ದು ಮೊನ್ನೆ ತನ್ನ 75ನೇ ವಯಸ್ಸಿನಲ್ಲಿ ಇಹಯಾತ್ರೆ ಮುಗಿಸಿ ಕೊಂಡರು. ಅವರ ಪತ್ರಿಕಾವೃತ್ತಿಸಾಯವು 50 ವರುಷದ್ದಿದ್ದು ಇತ್ತೀಚೆಗೆ ತನ್ನೇ ಐದು ದರಮಾಸಗಳ ಅನುಭವವನ್ನು ಒಂದು ಗ್ರಂಥವಾಗಿ ಬರೆಯುವುದರಲ್ಲಿ ನಿರತರಿದ್ದರು. ಅವರ 40 ವರುಷಗಳು ಭಾರತೀಯ ಪತ್ರಿಕೋದ್ಯಮದಲ್ಲೇ 'ಜೀರ್ಣಿಸಿದ್ದುವು.

ತನ್ನ ಗುರಿ ಸಿದ್ಧಿಸಿದುದನ್ನು ಕಣ್ಣಾರೆ ಕಂಡ ಮೇಲೆಯೇ ಕಣ್ಮುಚ್ಚಿದವರಲ್ಲ ಹೋರ್ನಿಮೆನರೊಬ್ಬರು!

ರಹ್ಯದಲ್ಲೇ ಗುಲಾಮ ಪದ್ಧತಿ!

ವ್ಯಾರಿಸಿನಲ್ಲಿ ನೆರೆದಿರುವ ಸಂಯುಕ್ತ ರಾಷ್ಟ್ರ ಸಂಘದ ಜಾಹೀರು ಅಧಿವೇಶನ ಮತ್ತದರ ಸಮಿತಿ ಸಭೆಗಳಲ್ಲಿ ರಹ್ಯ ಮತ್ತು ಇಂಗ್ಲಾಂಡಿನ ಪ್ರತಿನಿಧಿಗಳೊಳಗೆ ನಡೆಯುತ್ತಿರುವ ವಾಗ್ಯುದ್ಧಗಳು ವಿಚಾರಣೀಯವಿವೆ. ಆ ವೈಕಿ ಸಾಮಾಜಿಕಸಮಿತಿಯಲ್ಲಿ ನಡೆದ ಒಂದು ವಾಗ್ವಾದವು "ಭಾರತದ ಕೆಲಸಗಾರರೆಲ್ಲಾ ಗುಲಾಮರಂತಿದ್ದಾರೆ; ಬದಲಿಗೆ ರಹ್ಯದ ಮಾದರಿಯನ್ನೇ ಇಲ್ಲಿ ಪ್ರತಿಷ್ಠಾಪಿಸಬೇಕು" ಎನ್ನುವ ಇಲ್ಲಿಯ ಕಾಮ್ರೆಡ್‌ಗಳ ಕಣ್ಣನ್ನು ತೆರೆಯಿಸುವಂತಹದಿದೆ. ಕೆಲಸಗಾರರ ಉದ್ಧಾರ ಮತ್ತು ಸರ್ವಸಮಾನತೆಯು ಅತ್ಯಾವಶ್ಯವಿದ್ದರೂ, ಅದಕ್ಕೊಂದು ಉಜ್ವಾದರ್ಶವಾಗಿ ತೋರಿಸಲಾಗುವಂತಹದು ಇಂಗು ಪ್ರಪಂಚದಲ್ಲೆಲ್ಲಿಯೂ ಇಲ್ಲವೆಂಬುದನ್ನಿದು ಮಂದಬ್ಬಿ ಮಾಡುತ್ತಿದೆ. ರಶ್ಯನ್ ಪ್ರತಿನಿಧಿ ಗಡ್ಡಧಾರಿ ಪ್ರೊಫೆಸರ್ ಅಂಡ್ರೋಯಿ ಪಾವ್ಲೋವರು ಸಂಯುಕ್ತ ರಾಷ್ಟ್ರ ಸಂಘದ ಸಾಮಾಜಿಕ ಸಮಿತಿಯಲ್ಲಿ ಮಾತಾಡುತ್ತಾ, ಬ್ರಿಟಿಷ್ ವಸಾಹತುಗಳ ಜನರು ಸೂರೆ ಸುಲಿಗೆಗೊಳಗಾಗಿ ಸಾಯುತಿದ್ದಾರೆ ಎಂದು ದೂರಿದ್ದರು. ಅದಕ್ಕುತ್ತರವಾಗಿ ಬ್ರಿಟಿಷ್ ವಿದೇಶ ಖಾತೆಯ ಉಪಕಾರ್ಯದರ್ಶಿ ಕ್ರಿಸ್ಟೋಫರ್ ಮಾಹ್ಯೂ ಸೇಳಿದರು. "ಚರಿತ್ರೆಯಲ್ಲೇ ಅಪದ್ಧವಾದ ಗುಲಾಮ ಪದ್ಧತಿಯೊಂದು ಸೋವಿಯೆಟ್ ರಶ್ಯದಲ್ಲಿ ಆಸ್ತಿತ್ವದಲ್ಲಿದೆ. ಅಲ್ಲಿಯ ಕಠೋರ ರಾಷ್ಟ್ರೀಯ ಭೋರಣೆಯಾಗಿಯೇ ಕೆಲಸಗಾರ ಸೇನೆಗಳ ಮೇಲೆ ಹೆಸಿವೆ ಮತ್ತು ಕೊರಗು ಹೇರಲ್ಪಟ್ಟಿದೆ. ಸರಕಾರೀ ವಿರುದ್ಧಾಪರಾಧಿಗಳೆಂಬ ಆಪಾದನೆಯ ಮೇಲೆ ಮಿಲಿಯಾವಧಿ ಜನರನ್ನಲ್ಲಿ ಆರೆ ಹೊಟ್ಟೆಯ ಅತ್ಯಂತ ಕಳತೆಯ ಜೀವನಕ್ಕೆ ತಳ್ಳಲಾಗಿದೆ. 500,0000 ದಿಂದ 15,000,000 ದೊಳಗಿನ ಜನರನ್ನು ಅಖಿಲ ರಶ್ಯದ ವಿವಿಧ ಶಿಬಿರಗಳಲ್ಲಿ ಒಲತಾಕಾರದಿಂದ ತುಂಬಿಸಿ ಒತ್ತಾಯದಿಂದ ದುಡಿಸಲಾಗುತ್ತಿದೆ. ಕಡಿಮೆಯೆಂದರೂ ರಶ್ಯದ ಜನತೆಯಲ್ಲಿ ಸೇಕಡಾ 2 1/2 ಯಷ್ಟು ಅಂಶ ಇಂತಹ ಗುಲಾಮರಾಗಿದ್ದಾರೆ. ಆದ್ದರಿಂದ ಆ ಸರಕಾರಕ್ಕೆ ಇನ್ನೊಬ್ಬರನ್ನು ಅಕ್ಷೇಪಿಸುವ ನೈತಿಕಾಧಿಕಾರವಿಲ್ಲ".

ಅಂತೂ, ಈ ದಿನ ಲೋಕದ ಪ್ರತಿಯೊಂದು ಪ್ರಮುಖ ರಾಷ್ಟ್ರಗಳವರೆಗೂ ಪರಕೀಯರನ್ನು ಅಕ್ಷೇಪಿಸುವ ಅಧಿಕಾರವಿದೆ ಹೊರತು ಅತ್ಯಸಮರ್ಥನ ಮಾಡಿಕೊಳ್ಳುವ ಅನುಕೂಲತೆ ಇಲ್ಲ!

ವಿವಿಧ ವಿಷಯ

ಸ್ಪೇಷಲ್ ಟ್ರೇನು



ತಾ. ೬-೧೧-೧೯೪೮ಳಲ ಕಾರ್ತಿಕ ಶುದ್ಧ ಪಂಚಮಿ ದಿವಸ ಶ್ರೀ ಕಾಶಿ, ಗಯಾ, ಪ್ರಯಾಗ, ಹರಿದ್ವಾರ, ಅಯೋಧ್ಯೆ ಮುಂತಾದ ೫೦ ಮುಖ್ಯ ಕ್ಷೇತ್ರಗಳು ೩೦ ದಿನಗಳಿಗೆ ರೂ. ಶ್ರೀಜಗದ್ಗುರು ಕಾಶೀವಿಶ್ವಾರಾಧ್ಯ ಮಹಾಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವಕ್ಕೆ ಹೊರಡುವದು. ನಮ್ಮ ಟ್ರಾವೆಲ್ಸ್‌ರುಗಳಿಂದ ಕಂಠೇ ಹೊಲ ಕೂಡಲೇ ಸೀರ್ದಿ ಮಾಡಿಕೊಳ್ಳುವುದು. ವಿಶೇಷ ಮಾಹಿತಿ ಜಾಹಿರಾತಿಗಾಗಿ ಕೂಡಲೆ ಬರೆಯಿರಿ.

ಶ್ರೀಗೌರೀಶಂಕರ ಕಂಪೆನಿ, (ಕೇಶವಾಪುರ) ಹುಬ್ಬಳ್ಳಿ

ಯಾತ್ರಾ ಚರಿತ್ರೆ ಪುಸ್ತಕಗಳು ನಮ್ಮಲ್ಲಿ ಮಾರಲಿಕ್ಕೆ ಸಿಗುತ್ತವೆ. ಬೆಲೆ ರೂ. 6-0-0

ಶ್ರೀ ಎಂ. ವಿ. ಹೆಗ್ಡೆಯವರು ಬರೆದ

ಸ್ವರಾಜ್ಯ ವಿಜಯ

ಆಟ್ಲಿ, ಕ್ರಿಪ್ಸ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜಿನ್ನಾ, ನೆಹರು, ಪಟೇಲ್, ಗಾಂಧಿ, ಆಜಾದ್, ಕೃಪಲಾನಿ, ಜೈಪ್ರಕಾಶ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರವರ್ಗ.

ಓದಬಲ್ಲವರಂತೂ ಓದಿ ತಿಳಿಯತಕ್ಕ ಕತೆ.

ಓದಲಾರದವರೂ ಓದಿಸಿ ಕೇಳತಕ್ಕ ಕತೆ.

ಬೆಲೆ ಬರೇ 0 8 0

ಹತ್ತಾಣೆ ಸ್ಟ್ಯಾಂಪು ಕಳಿಸಿದರೆ 1 ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.

ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ, ಅಥವಾ ನವಯುಗ ಪ್ರೆಸ್, ಉಡುಪಿ.

ಇಲ್ಲಿ ದೊರೆಯುತ್ತವೆ.

ಚೈನಾ, ಪೆಲಸ್ತೈನ್, ಬರ್ಲಿನ್ ವಾದ!

ಲೋಕವು ಕಳದ ವಾರವನ್ನೂ ಚರ್ಚಾ ಕೂಟಗಳಿಂದಲೇ ಕಳೆಯತೆನ್ನಬಹುದು. ಪ್ಯಾರಿಸಿನಲ್ಲಿ ನೆರೆದಿರುವ ಸಂಯುಕ್ತ ರಾಷ್ಟ್ರ ಸಂಘ ಮತ್ತದರ ಉಪಾಂಗ ಸಮಿತಿಗಳ ಕಾರ್ಯಲಾಪಗಳೂ, ಲಂಡನಿನಲ್ಲಿ ನೆರೆದಿರುವ ವಸಾಹತು ಪ್ರಧಾನ ಮಂತ್ರಿಗಳ ಸಮ್ಮೇಳನವೂ ಕಳದ ವಾರದ ಸ್ವಾರಸ್ಯಕರ ರಾಜಕೀಯ ಗಗನದ ಸೂರ್ಯ ಚಂದ್ರರಂತಿವೆ. ಲೋಕದ ಎಲ್ಲಾ ಪ್ರಾಮುಖ್ಯ ಆಗುಹೋಗುಗಳೂ ಇವೆರಡು ಪಾಶ್ಚಿಮಾತ್ಯ ರಾಜಧಾನಿಗಳಲ್ಲಿ-ಜಗತ್ಪ್ರಸಿದ್ಧ ಪ್ಯಾರಿಸ್ ಮತ್ತು ಲಂಡನ್ ನಗರಗಳಲ್ಲಿ-ಸುತ್ತುತ್ತಿವೆ.

ಲೋಕ ಘಟನೆಗಳು

ಅಮೇರಿಕದಲ್ಲಿ ಇದೇ ನವಂಬರಿಗೆ ನಡೆಯಲಿರುವ ಅಧ್ಯಕ್ಷ ಚುನಾವಣೆಯ ಪ್ರಬಲ ಪ್ರಚಾರ ಕಾರ್ಯಗಳು ನಡೆದಿವೆ. 16 ವರುಷಗಳಿಂದಲೂ ಅಮೇರಿಕದಲ್ಲಿ ಅಧ್ಯಕ್ಷಾಧಿಕಾರ ನಿರ್ವಹಿಸುತ್ತಿರುವ ಡೆಮೊಕ್ರೆಟಿಕ್ ಪಕ್ಷದ ಉಮೇದ್ವಾರಿಯಾಗಿ ಇಂದಿನ ಅಧ್ಯಕ್ಷ ಟ್ರುಮೆನ್ - ಹೊಸ ಪಕ್ಷ'ದ ಉಮೇದ್ವಾರಿ ಹೆನ್ರಿ ವೆಲ್ಲಾಸ್ ರಿಪಬ್ಲಿಕನ್ ಪಕ್ಷದ ಉಮೇದ್ವಾರಿ ದಿವೆ, ಇವರೊಳಗೆ ತೀವ್ರ ಸ್ಪರ್ಧೆನಡೆದಿದೆ. ಪ್ರತಿ ಸ್ಪರ್ಧಿಗಳ ಅಯೋಗ್ಯತೆಯನ್ನೂ ತಮ್ಮ ಯೋಗ್ಯತೆಯನ್ನೂ ಭೂತಗನ್ನಡಿಯಲ್ಲಿಟ್ಟು ತೋರಿಸುವ ಚಾತುರ್ಯಪೂರ್ಣ ಪ್ರಚಾರಗಳು ಪತ್ರಿಕೆಗಳಿಂದಲೂ ಆಗುತ್ತಿವೆ.

ಲೋಕವು ಇನ್ನೊಂದು ಯುದ್ಧದತ್ತ ಅತ್ಯವಸರದಿಂದ ಸಾಗುತ್ತಿರುವಂತೆ ತೋರುತ್ತಿರುವಾಗ, ಒಂದು ಪಕ್ಷದ ತೀರಾ ಸ್ವಾಗಿರುವ ಅಮೆರಿಕಾಧ್ಯಕ್ಷ ಟ್ರುಮೇನರು ಲೋಕ ಸ್ಥಿತಿಯು ಅಶಾದಾಯಕವಿದೆಯೆನ್ನುತ್ತಾ ರಕ್ಷಣಾ ವೆಚ್ಚವನ್ನು ವಿಶೇಷ ಹೆಚ್ಚಿಸದಿರುವದು ಶುಭ ಚಿಹ್ನೆಯಂತಿದೆ. ಆದರೆ ಅಮೆರಿಕದ ಸೇನಾ ವೆಚ್ಚದ ಸಂಮಾಣ ಮತ್ತದರ ಒಳಗುಟ್ಟುಗಳ ಸೂಕ್ಷ್ಮಪರಿಯವಾಗಿದೆ ಇವ್ಯರಿಂದಲೇ ಪಂಡಿತ ಭರವಸೆ ಸಡಲಾಗುವದಿಲ್ಲ. ಬರುವವರುಷದ ರಕ್ಷಣಾ ವೆಚ್ಚ. 14,400,000,000 ಡೋಲರುಗಳೆಂಬ ಅಂದಾಜು ಪಟ್ಟಿಯನ್ನು ಅಮೇರಿಕಾಧ್ಯಕ್ಷರು ಜಾಹೀರು ಮಾಡಿದ್ದಾರೆ. ಲೋಕ ಶಾಂತಿ ನೋಟೆ ಮತ್ತು ರಶ್ಯದ ಭೋರಣೆಯಲ್ಲಿ ತುಸು ಸಡಿಲಾಣತ್ತಿದೆಯೆಂದೂ, ಆದ್ದರಿಂದ ಕ್ರಮವಾಗಿ ತಮಾಗಿ ಶಾಂತಿ ಸ್ಥಾಪನೆಯಾಗುವದೆಂದು ತನಗೆ ನಂಬಿಕೆಯುದೆಯೆಂದೂ ಟ್ರುಮೇನರಿಂದಿದ್ದಾರೆ. ಅಮೆರಿಕದ ರಕ್ಷಣಾ ವ್ಯವಸ್ಥಾಧಿಕಾರಿಗಳು 28,000,000,000 ಡೋಲರುಗಳನ್ನು ಅಪೇಕ್ಷಿಸಿದ್ದರೂ ತಾನೇ ಆಶೆಯ ಬಲದಿಂದಲೇ ಅದನ್ನು ಇಷ್ಟು ತಗ್ಗಿಸಿದ್ದೇನೆನ್ನುತ್ತಾ ಅಮೆರಿಕಾಧ್ಯಕ್ಷರು, ಲೋಕ ಶಾಂತಿಯ ಭದ್ರತೆವರೆಬಿದ್ದೊಡನೆಯೇ ಅಮೇರಿಕದ ಸೇನಾ ವೆಚ್ಚವನ್ನು 5,000,000,000 ಅಥವಾ 7,000,000,000 ಡೋಲರುಗಳಿಗೆ ಇಳಿಸುವ ನಿರ್ಧಾರವನ್ನು ಸಾರಿದ್ದಾರೆ. ಪ್ರಚಲಿತ ವರುಷದಲ್ಲಿ 12,000,000,000 ಡೋಲರುಗಳು ಮಾತ್ರರಕ್ಷಣಾ ವೆಚ್ಚಕ್ಕೆಡಲ್ಪಟ್ಟಿರುವಾಗ ಮುಂದಿನ ವರುಷಕ್ಕೆಟ್ಟಿರುವ ಮೊತ್ತವು ಅದಕ್ಕಿಂತ ಹೆಚ್ಚಿನದೆಂಬುದನ್ನೂ ಅಮೇರಿಕದಲ್ಲಿ ಸೇನಾ ಸಂಘಟನಾ ಕಾರ್ಯಗಳು ನಡೆದಿರುವುದನ್ನೂ ಈ ಸಂದರ್ಭದಲ್ಲಿ ಮರೆಯಲಾಗುವದಿಲ್ಲ

ಆಶ್ಚಾದ ಫಾಲಿನ ದೀರ್ಘಾವಧಿಯ ಹಾಗೂ ಅತಿ ದೊಡ್ಡ ಘರ್ಷಣೆಯೆಂದರೆ ಚೈನಾದ ಅಂತರ್ಯುದ್ಧ. ಅದೀಗ ಅತಿ ರಜನಕ ಕಠೋರತೆಗೇರಿದೆ. ಚಿಯಾಂಗ್ ಕೈಶೇಕರ ರಾಷ್ಟ್ರೀಯ ಸರಕಾರದ ವಿರುದ್ಧ ಕಮ್ಯೂನಿಸ್ಟರು ಹೂಡಿರುವ ಈ ಯುದ್ಧವು ಚಿಯಾಂಗ್ ಸರಕಾರದ ಮರ್ಮ ಭೇದಿಸುವ ಮಟ್ಟಕ್ಕೆ ಬಂದಿದೆ. ಮಂಚೂರಿಯಾ ಕ್ಷೇತ್ರದಲ್ಲಿ ಚಿಯಾಂಗ್ ಸರಕಾರದ ಪ್ರಾಮುಖ್ಯ ಕೇಂದ್ರ ಚಿಂಚೂನನ್ನು ಬಹುತೇಕವಾಗಿ ಕೈವಶಪಡಿಸಿಕೊಂಡ ಕಮ್ಯೂನಿಸ್ಟ್ ಸೇನೆಗಳು, ಚಿಯಾಂಗರ ಕೊನೆಯ ಮುಖ್ಯ ನೆಲೆ ಜಿನ್ಸಿಯನ್ನು ಹಿಡಿದುಕೊಳ್ಳಲು ಸರ್ವ ಶಕ್ತಿಯಿಂದ ಮುಂದೊತ್ತಿದ್ದು, ಏನಾದರೊಂದು ಅಶ್ಚರ್ಯ ಸಂಭವಿಸದೆ ಹೋಗಿದ್ದರೆ ಅದಿಷ್ಟರಲ್ಲೇ ಕಮ್ಯೂನಿಸ್ಟರ ವಶವಾಗಿರಬೇಕು. ಹೀಗಾದಲ್ಲಿ ಸರಕಾರೀ ಸೇನೆಯ ಹೃದಯ ಪ್ರದೇಶವಾದ ಆಪಿಲ ಮಂಚೂರಿಯಾನೇ ಕಮ್ಯೂನಿಸ್ಟರ ಕರಗತವಾಗುವದು. ಉತ್ತರ ಚೈನದ ಮೇಲೆ ಧುಮುಕಲು ಕಮ್ಯೂನಿಸ್ಟರಿಗೊಂದು ನಿಲ್ದಾಣ ದೊರೆಯುವುದು. ಒಟ್ಟಿನ ಮೇಲೆ ಸೊದಲೇ ದುರ್ಬಲವಾಗಿರುವ ಚಿಯಾಂಗ್ ಸರಕಾರದ ಇದ್ದ ಅರ್ಧ ಬಲವೂ ಹೋದಂತಾಗುವದು. ಈ ಅಪಾಯವನ್ನೂಹಿಸಿ ಚಿಯಾಂಗರು ಸ್ವತಃ ಮಂಚೂರಿಯದ ಮುಕ್ಡೆನಿಗೆ ಬಂದು ಸೇನಾ ಚಾಲಕತ್ವ ವಹಿಸಿರುವರೆಂದು ತಿಳಿದು ಬಂದಿದೆ. ಶಾಂಟಂಗ್-ತಿಯಾಂಗ್ಯ-ಹೊನಾನ್ ಗಡಿ ವಲಯದಲ್ಲೂ ಕಮ್ಯುನಿಸ್ಟರು ಹೊಸ ಮಹಾ ಧಾಳಿಯನ್ನಾರಂಭಿಸಿ ರಾಷ್ಟ್ರೀಯ ಸರಕಾರದ ಆದ್ಯತ್ವವನ್ನು ಪರೀಕ್ಷೆಗೊಡ್ಡಿರುವರು.

ಜರ್ನರ್‌ಡೊಟ್ಟೆ ಸಿದ್ಧನದ ನಂತರ ಪೆಲಸ್ತೈನಿಗೆ ಹೋಗಿರುವ ಸಂ. ಜ. ಸಂಘದ ಸಂಧಾನ ಕಮಿಶನಿಗೂ ಅಲ್ಲಿಯ ಸ್ಥಿತಿಯನ್ನು ಹತೋಟಿಗೆ ತರಲಾಗಿಲ್ಲ. ಅರಬರು ವಿದೇಶಿ ರಾಯಭಾರಿ ಕಛೇರಿಗಳ ಮತ್ತು ರಾಷ್ಟ್ರ ಸಂಘದ ಪ್ರತಿನಿಧಿ ಕಚೇರಿಗಳ ಮೇಲೆ ಗುಂಡು ಹಾರಿಸುತಿದ್ದಾರೆಂದು ಈ ಕಮಿಶನು ಸಂಘದೊಡನೆ ದೂರಿಟ್ಟಿದೆ. ತಮ್ಮ ನೆಗೆಲ್ ಕ್ಷೇತ್ರಕ್ಕೆ ಸಂಬಂಧಿಸಿದ ಸಂಚಾರ ವಹಿವಾಟುಗಳಿಗೆ ಬಾಧಕವಿಲ್ಲವೆಂಬ ಗ್ಯಾರಂಟಿ ದೊರೆಯದೆ ಯಂದ್ಧ ನಿಲ್ಲಿಸಲಾರೆವೆಂದು ಯೆಹೂದಿಗಳು ರಾಷ್ಟ್ರ ಸಂಘವು ಮುಂದಿಟ್ಟ ಗುಂಡು ಹಾರಾಟ ಮುಕ್ತಾಯ ಸೂಚನೆಗೆ ನಕಾರ ಸೂಚಿಸಿದ್ದಾರೆ ದಿವಂಗತ ಜರ್ನರ್‌ಡೊಟ್ಟೆಯವರು ತಯಾರಿಸಿದ್ದ ಪೆಲಸ್ತೈನ್ ತೀರ್ಮಾನ ಸೂಚನೆಯನ್ನು ಸಂಯುಕ್ತ ರಾಷ್ಟ್ರ ಸಂಘವು ಪರ್ಯಾಲೋಚನೆಗಂಗೀಕರಿಸಿದೆಯೆಹೂದೀ 'ಕಠೋರ ದಳ'ವು ಪೆಲಸ್ತೈನ್ ಮಧ್ಯಸ್ಥಿಕೆಗೆ ಕಂಟಕವೆಂದು ಗ್ರೀಸಿನ ಮಧ್ಯಸ್ಥಗಾರ ಡಾ। ಕಾಲ್ಫ್‌ಬುಂಡ್ ಭದ್ರತಾ ಕೌನ್ಸಿಲಿನಲ್ಲಿ ದೂರಿದ್ದಾರೆ.

ಗ್ರೀಸಿನಲ್ಲಿ ಕಮ್ಯೂನಿಸ್ಟ್ ಮುಂದಾಳು ತ್ಸದಗೊರಿಲ್ಲಾ ಬಂಡಾಯವೆದ್ದಿದ್ದು ಆದನ್ನು ದಮನಿಸಲು ಅಮೇರಿಕವು ಗ್ರೀಕ್ ಸರಕಾರಕ್ಕೆ ನೆರವಿತ್ತಿದೆ ಆದರೂ ಅಲ್ಲಿಯ ಕೆಲಸವು ಸಾಷ್ಟು ತೀವ್ರವಾಗಿ ಆಗುತ್ತಿಲ್ಲವೆಂದು ಅಮೆರಿಕವು ಅತೃಪ್ತಿಗೊಂಡಿದೆ.

ಇಂಡೋನೇಶಿಯದ ಗೊಂದಲವೂ ಯಥಾಪ್ರಕಾರ ಸಾಗಿದೆ. ಇವೆಲ್ಲಾ ಪ್ರಶ್ನೆಗಳನ್ನೂ ಪ್ಯಾರಿಸಿನ ಭದ್ರತಾ ಕೌನ್ಸಿಲ್ ಸಭೆ ಪರ್ಯಾಲೋಚಿಸುತ್ತಿದೆ ಬರ್ಲಿನ್ ವಿವಾದದ ಕುರಿತು ನಡೆದ ತಟಸ್ಥ ರಾಷ್ಟ್ರಗಳ ಖಾಸಗೀ ಸಂಧಾನ ಪ್ರಯತ್ನ ಕೂಡಾ ಫಲಿಸಿಬೆ, ಈ ಪ್ರಶ್ನೆಯು ಅಲ್ಲಿಯೇ ವಿಶೇಷ ಕೊಳೆಯಹತ್ತಿದೆ. ಮೂರನೇ ಒಂದಂಶ ಶಸ್ತ್ರಗಳನ್ನು ತಗ್ಗಿಸಿಕೊಳ್ಳುವದಕ್ಕೂ ಆಟಂ ಬೋಂಬನ್ನು ಬಹಿಷ್ಕರಿಸುವದಕ್ಕೂ ಪಾಶ್ಚಾತ್ಯ ರಾಷ್ಟ್ರಗಳೊಪ್ಪಿದರೆ ತಾವು ತಮ್ಮ ಸೈನ್ಯ ಗುಟ್ಟನ್ನು ಬಹಿರಂಗಪಡಿಸಲು ತಯಾರೆಂದು ರಶ್ಯದ ವಾನ-ರಶ್ಯದ ಉದ್ದೇಶವು ಸಾಧುವಲ್ಲ, ಎಂದು ಪಾಶ್ಚಾತ್ಯ ರಾಷ್ಟ್ರಗಳ ಪ್ರತಿವಾದ-ನಡೆದಿದೆ.

ಲಂಡನಿನಲ್ಲಿ ನೆಹರು

'ಬ್ರಿಟಿಷ್ ಕಾಮನ್‌ವೆಲ್ತ್'ನ ನವವ ಸಾಹತುಗಳ ಪ್ರಧಾನಿ ಸಮ್ಮೇಲನಕ್ಕಾಗಿ ಲಂಡನಿಗೆ ಹೋಗಿರುವ ಭಾರತದ ಪ್ರಧಾನ ಮಂತ್ರಿ ನೆಹರುಗಳು ಅಲ್ಲಿಯ ಮುಖ್ಯಕರ್ಷಣವಾಗಿ ಜನಮತವನ್ನು ತನ್ನ ಸ್ಥಾನ ಮತ್ತು ವ್ಯಕ್ತಿತ್ವದ ಕಡೆಗೆ ಎಳೆದುಕೊಂಡಿದ್ದಾರೆ. ಲಂಡನಿಗೆ ಹೋದ ಮರು ದಿನವೇ ನಾಲ್ಕು ದಿನ ಲೋರ್ಡ್ ನಾರ್ಟಾಂಟ್ ಬೇಟನರ ಹಳ್ಳೀ ವಸತಿಗೆ ತೆರಳಿ, ಅಲ್ಲಿ ಗಲಭೆರಹಿತ ಏಕಾಂತತೆ, ಕುದುರೆ ಸವಾರಿ ಮೊದಲಾದ ವಿನೋದ, ಪ್ರಕೃತಿಜನ್ಯ ಶಾಂತಿ ಸಂಜೀವನ್ನು ಅನುಭವಿಸಿದ ಪಂಡಿತ ನೆಹರುಗಳು ತಾ 11ರಲ್ಲಾ ರಂಭವಾಗುವ ವಸಾಹತು ಮಾತುಕತೆಗಳಲ್ಲಿ ಹಾಜರಿರಲು ತಾ 10ನೇ ರಾತ್ರಿ ಲಂ

For Banking Service
in Trade, Industry & Agriculture
approach
THE AGRICULTURAL & INDUSTRIAL BANK Ltd.,
(Established in 1934)
Head Office: **COONDAPOOR, S K**

Branches:

1	Ankola,	7	Gokarn,	13	Nagar,
2	Belgaum,	8	Haveri,	14	Shimoga,
3	Bhatkal,	9	Hubli,	15	Sirsi,
4	Coondapoor,	10	Karvar,	16	somwarpet,
5	Dharwar,	11	Kumta,	17	Virajpet,
6	Gadag,	12	Mangalore,	18	Honavar.

19 384, M. Jaipuria House, Kalbadevi Road, BOMBAY, 2.

Current, Savings bank, and Fixed deposits are accepted.

For Terms, apply to the nearest Branch.

Coondapoor,
29-9-1948.

K. Vittaldas Shenai,
Managing Director.

'ಕೇಶ ಕಲಾ' ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ತಲೆಗೂದಲನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಧಾರವಾಡ, ಬೆಳಗಾಂವ

ವಸಾಹತು ಮಂತ್ರಿಗಳ ಲಂಡನ್ ಕೂಟ

ಚಿನಿಗೆ ಮರಳಿದ್ದರು. ಮರಳುವ ಮುನ್ನ ಮೌಂಟ್ ಬೇಟನ್ ದಂಪತಿಗಳು, ನೆಹರೂ ಅನುಜೆ ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್, ಬ್ರಿಟನಿನ ಪ್ರಜಾನಾಥಿಕಾರಿ ಸರ್. ಸ್ಯಾಫೋರ್ಡ್ ಕ್ರಿಪ್ಸ್, ಲಂಡನಿನ ಭಾರತ ಹೈಕಮಿಶನರ್ ಶ್ರೀ ಕೃಷ್ಣ ಮೆನನರ ಸಮೇತ, ಪಂಡಿತ ಜವಾಹರಲಾಲರಿಗೆ ಒಂದು ವಿದಾಯ ಕೂಟವನ್ನಿತ್ತಿದ್ದರು. ಒಂದೆರಡು ವರುಷಗಳಿಂದ ತನ್ನ ಪಾಲಿಗೆ ಸಂಪೂರ್ಣ ಅಸಾಧ್ಯವಾಗಿದ್ದ ವಿಶ್ರಾಂತಿಯನ್ನು ನಾಲ್ಕು ದಿನ ಅನುಭವಿಸಿದ ಪಂಡಿತಜೀ ಲಂಡನಿಗೆ ಮರಳುವಾಗ ಹೊಸ ರಕ್ತ ಪಡೆದವರಂತೆ ಉತ್ಸಾಹಿ ಹಾಗೂ ಸುಮುಗಳಾಗಿ ಕಂಡಿದ್ದರು. ಅದೇಯು, ಆ ಮೇಲಿನ ದಿನಗಳ ಅವಿಶ್ರಾಂತ ದುಡಿಮೆಗಾಗಿ ತನುಮನವನ್ನು ತಯಾರುಗೊಳಿಸಿಕೊಂಡ ವಿರಾಮ ಮಾತ್ರ. ತಾ. 11ನೇ ಸೋಮವಾರ ಮುಂಜಾನೆಯಿಂದ ಪಂಡಿತ ನೆಹರುಗಳು ನಿರ್ವಹಿಸಬೇಕಾಗಿದ್ದ ಕಾರ್ಯಕ್ರಮಗಳು ತಾನು ಬಡದೆ ಕಾದಿದ್ದುವು

ವಸಾಹತು ಸಮ್ಮೇಲನ

ಬ್ರಿಟನ್, ಕೆನಡಾ, ಆಸ್ಟ್ರೇಲಿಯಾ, ನ್ಯೂಜೀಲೇಂಡ್, ದಕ್ಷಿಣಾಫ್ರಿಕ, ಭಾರತ, ಪಾಕಿಸ್ತಾನ್, ಸಿಲೋನ್, ದಕ್ಷಿಣ ರೊಡೇಸ್-ಈ ಒಂಭತ್ತು ರಾಷ್ಟ್ರಗಳ ಪ್ರತಿನಿಧಿಗಳ ಚಾರಿತ್ರಾರ್ಹ ಸಮ್ಮೇಳನವು ಲಂಡನಿನ ಸರಕಾರೀ ನಿವಾಸ ನಂ. 10, ಡೌನಿಂಗ್ ಸ್ಟ್ರೀಟ್‌ನಲ್ಲಿ ತಾ 11ನೇ ಮುಂಜಾನೆಯಿಂದ ಆರಂಭಿಸಿದೆ. ಬ್ರಿಟನಿನ ಪ್ರಧಾನಿ ಆಟ್ಲೀ, ಕೆನಡಾದ ಪ್ರಧಾನಿ ಮೆಕೆಂಜೀಕಿಂಗ್ ಇವರು ಲಂಡನಿನಲ್ಲೇ ಕಾಣಿಲೆಯಿಂದ ಹಾಸಿಗೆ ಹಿಡಿದು ಗೈರು ಹಾಜರಿದ್ದುದರಿಂದ ಅವರ ಬದಲಿಗೆ ಮತ್ತೋರ್ವ ಮಂತ್ರಿ ನೋರ್ಮನ್ ರೋಬರ್ಟ್‌ಸನ್,ಆಸ್ಟ್ರೇಲಿಯದ ವಿದೇಶಮಂತ್ರಿ ಹರ್ಬರ್ಟ್ ಎವಾಟ್, ನ್ಯೂಜೀಲೇಂಡಿನ ಪ್ರಧಾನ ಮಂತ್ರಿ ಪೀಟರ್ ಫ್ರೇಝರ್, ದಕ್ಷಿಣಾಫ್ರಿಕದ ಪ್ರಧಾನಿ ಡಾ! ಮಲಾನರು ಬದಲಿಗೆ ಬೇರೊಬ್ಬ ಮಂತ್ರಿ ಎರಿಕ್ ಎಚ್. ಲುವೊ, ಭಾರತದ ಪ್ರಧಾನಿ ಪಂಡಿತ ನೆಹರು, ಪಾಕಿಸ್ತಾನ್ ಪ್ರಧಾನಿ ಲಿಯಾಖತ್ ಅಲೀಖಾನ್, ಸಿಲೋನಿನ ಪ್ರಧಾನಿ ಡೋನ್‌ಸ್ಟೆವೆನ್‌ಸೇನಾನಾಯಕೆ, ದಕ್ಷಿಣರೊಡೇಸ್ಯಿನ ಪ್ರಧಾನಿಸರ್.ಗೋಡ್‌ಫ್ರೆ ಹ್ಯೂಗ್ಸ್-ಇವರು ಸಮ್ಮೇಳನಭಾಗಿಗಳಾಗಿದ್ದರು. ಆರಂಭದಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿ ಕ್ಲೆಮೆಂಟ್ ಆಟ್ಲೀಯು ಸ್ವಾಗತ ಭಾಷಣವೀಯುತ್ತಾ ಈ ಸಮ್ಮೇಳನವೊಂದು 'ಕುಟುಂಬ ಕೂಟ'ವೆಂದೂ ಸದಸ್ಯರೆಲ್ಲಿಗೆ ಸಮಾನತೆಯ ಹಾಗೂ ಸ್ವತಂತ್ರ ವಿಚಾರ ವಿನಿಮಯಗಳಾಗುವವೆಂದೂ ತಿಳಿಸಿದರು. ತಾವು ಸವಿವರ ನಿರ್ಣಯಗಳನ್ನು ಮಂಜೂರು ಮಾಡಿಕೊಳ್ಳುವುದಕ್ಕಿಲ್ಲಿ ಸಮಯ ವ್ಯಯಿಸದೆ, ವರಸ್ಪರ ಅದಾಯ ಮತ್ತು ಹೂಡಿಕೆಯ ಪರಿಚಯ ಮಾಡಿಕೊಂಡು, ನಿಕಟ ಸಂಬಂಧ ನಿರ್ಮಿಸಿಕೊಳ್ಳಲಿದ್ದೇವೆ ಎಂದು ತಿಳಿಸಿ ಸರ್ವಸಮಾನತೆ ಗುರಿ ಸಾಧನೆಗಾಗಿ ಸಹಕರಿಸಿ ಕೊಳ್ಳುತ್ತಿರುವ ಸ್ವತಂತ್ರ, ಸಮಾನ ಸಾರ್ವಭೌಮಾಧಿಕಾರೀ ರಾಷ್ಟ್ರಗಳ ಈ ಕಾಮನ್‌ವೆಲ್ತ್‌ಬಂಧು ಈ ದಿನ ಲೋಕದೊಂದು ದೊಡ್ಡ ಸ್ಥಾಯೀ ಘಟನೆಯೆಂದರು. ಸಮ್ಮೇಲನಾರಂಭನ ಸೌಹಾರ್ದಮಯ ವಾತಾವರಣದಲ್ಲಿ ಪ್ರತಿಯೊಬ್ಬ ರಾಷ್ಟ್ರ ಪ್ರಮುಖನ ಭಾಷಣದೊಂದಿಗೆ ಸಾಗಮವಾಗಿ ಅಯಿತು. "ಭಾರತವು ಇತರ ವಸಾಹತು ರಾಷ್ಟ್ರಗಳೊಡನೆ ಸಹಕರಿಸುವ ಆತುರದಿಂದಿದೆ; ಯಾವ ರಾಷ್ಟ್ರದ ಸಮಸ್ಯೆಯೂ ಕಡೆಗಣಿಸಲ್ಪಡಬಾರದು" ಎಂಬ ಆಶ್ವಾಸನೆಯಿಂದ ಪಂಡಿತ ನೆಹರುಗಳು ಎಲ್ಲರಲ್ಲೂ ಭರವಸೆ ಹುಟ್ಟಿಸಿದರು. "ದಕ್ಷಿಣಾಫ್ರಿಕ ಮೆಟ್ಟಿತರ ವಸಾಹತು ರಾಷ್ಟ್ರಗಳೊಳಗಿರುವ ಪ್ರತ್ಯೇಕತೆಗಳ ಸಂಬಂಧದ ಪರ್ಯಾಲೋಚನೆ ವಂತ್ರು ತೀರ್ವಾನ ನಡೆಯಬಹುದೆಂದು ನಾನು ನಿರೀಕ್ಷಿಸುತ್ತೇನೆ". ಎಂದು ದಕ್ಷಿಣಾಫ್ರಿಕದ ಎರಿಕ್ ಲುವೋ ಹೇಳಿ, ತನ್ನ ರಾಷ್ಟ್ರದಲ್ಲಿರುವ ವರ್ಣದ್ವೇಷದ ಕುರಿತು ಬೇಸರಗೊಂಡಿದ್ದವರಲ್ಲಿ ಆಶೆಯನ್ನು ಚಿಗುರಿಸಿದರು. ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಅಲೀ ಖಾನರೂ ಇತರ ಬೇರೆ ಬೇರೆ ವಸಾಹತುಗಳೊಡನೆ ಸ್ವತಂತ್ರವಾಗಿ ಸಹಕರಿಸುವ ಮತ್ತು ನಿಕಟ ಸಂಬಂಧ ಕಟ್ಟಿಕೊಳ್ಳುವ ತಮ್ಮ ಬಯಕೆಯನ್ನು ಬಹಿರಂಗ ಪಡಿಸಿದರು. ಪ್ರತಿಯೊಂದು ರಾಷ್ಟ್ರವೂ ತನ್ನೊಬ್ಬನ ಚಿಂತನೆ ಮಾಡದೆ ಸರ್ವರ ಸಹಕಾರ ಯೋಜನೆ ಮಾಡಬೇಕು; ಕಾಮನ್‌ವೆಲ್ತ್ ಪ್ರಧಾನಿಗಳು ಆಗಾಗ ಭೇಟಿಯಾಗುತ್ತಿರಬೇಕು"-ಸಿಲೋನಿನ ಸೇನಾನಾಯಕೆ. "ಸಮ್ಮೇಳನದ ಪರಿಣಾಮವಾಗಿ ವಿಶೇಷ ಒಮ್ಮತ ವುಂಟಾಗಲಿ; ಅವರ ಸಶ್ಚಲ ವಸಾಹತು ರಾಷ್ಟ್ರಗಳಿಗೂ ಸಿಗುವಂತಾಗಲಿ"-ಆಸ್ಟ್ರೇಲಿಯದ ಹರ್ಬರ್ಟ್ ಎವಾಟ್, "ವಸಾಹತು ರಾಷ್ಟ್ರಗಳ ಪಾಲಿಗೆ ಪ್ರಮುಖ್ಯ ಸಮಸ್ಯೆಗಳವೆ; ಈ ಸಮ್ಮೇಳನವು ಅವುಗಳ ನಿರ್ಣಾಯಕತೆಯ ಮುಂದೊತ್ತಲಿ"-ನ್ಯೂಜೀಲೇಂಡಿನ ಫ್ರೆಟರ್ ಫ್ರೇಝರ್. ಬ್ರಿಟನಿನ ಅರ್ಥ ಮಂತ್ರಿ ಸರ್. ಸ್ಟಾಫೋರ್ಡ್ ಕ್ರಿಸ್ಸರು ಲೋಕದ ಹಾಗೂ ವಸಾಹತು ರಾಷ್ಟ್ರಗಳ ಆರ್ಥಿಕ ಸ್ಥಿತಿಯ ದಿಗ್ದರ್ಶನ ಮಾಡಿಕೊಟ್ಟರು. ಮರುದಿನದ ಸಮ್ಮೇಳನದಲ್ಲಿ ನಡೆದ ಮುಖ್ಯ ಚರ್ಚೆಯೆಂದರೆ ಪೂರ್ವ ಏಷ್ಯಾತ್ಯ ರಾಷ್ಟ್ರಗಳಲ್ಲಿ ಪ್ರಬಲಿಸುತ್ತಾ ಬರುತ್ತಿರುವ ಕಮ್ಯೂನಿಸ್ಟ್ ಗೊಂದಲದ ಕುರಿತೇ. ಬ್ರಿಟನು ವಿದೇಶ ಮಂತ್ರಿ ಬೆವಿನ್ರು ಆ ದಿನ ಪ್ರಾರಂಭ ಭಾಷಣವೀಯುತ್ತಾ ಕಮ್ಯೂನಿಸ್ಟ್ ರಾಹುಪೀಡಿತ ಪೂರ್ವಾತ್ಯ ರಾಷ್ಟ್ರ ನೆಲೆಗಳ ಚಿತ್ರವನ್ನು ಮುಂದಿಟ್ಟದೆಂದು ತಿಳಿದು ಬಂದಿದೆ. ಈ ತೊಂದರೆ ನಿವಾರಣೆಗಾಗಿ ವಿನಾಶಕ ವಿಧಾನಗಳನ್ನು ಅನುಕರಿಸುವ ಬದಲಿಗೆ ವಿಧಾಯಕ ರೀತಿಯಿಂದಲೇ ವ್ಯವಹರಿಸಬೇಕೆಂದು ಸಮ್ಮೇಳನದ ಅಭಿಪ್ರಾಯ ತೋರಿ ಬಂತು. ಮೂರನೇ ದಿನದ ಚರ್ಚೆಯು ವಸಾಹತು ರಾಷ್ಟ್ರಗಳೊಳಗಿನ ವ್ಯಾಪಾರ ವಹಿವಾಟುಗಳಿಗೆನೇ ಸಂಬಂಧಿಸಿದುದು. ಡೋಲರ್ ಅಭಾವ ನಿವಾರಣೆ-ರಾಷ್ಟ್ರಗಳೊಳಗೆ ದೀರ್ಘಾವಧಿ ವ್ಯಾಪಾರ ಸಂಬಂಧ ನಿರ್ಮಾಣ-ಪ್ರತಿಯೊಂದು ದೇಶಕ್ಕಿಗತ್ಯವುಳ್ಳ ಮೂಲ ವಸ್ತುಗಳ ಪೂರೈಕೆ, ಇತ್ಯಾದಿಗಳು ಆ ದಿನ ಪರ್ಯಾಲೋಚಿಸಲ್ಪಟ್ಟುವು. ಆ ಮೇಲೆ ಜಾಹೀರು ಸಮ್ಮೇಳನವು ತಾ. 18ನೇ ಸೋಮವಾರಕ್ಕೆ ಮುಂದುವರಿಸಲ್ಪಟ್ಟು, ಮಧ್ಯಾವಧಿಯಲ್ಲಿ ರಾಷ್ಟ್ರ ಪ್ರಮುಖರು ವ್ಯಕ್ತಿಗತವಾಗಿ ಹಾಗೂ ಗುಂಪಾಗಿ ಖಾಸಗೀ ಮಾತುಕತೆಗಳನ್ನು ನಡೆಸುವ ಅನುಕೂಲತೆಯೊದಗಿದೆ. ಆರ್ಥಿಕ, ಅಂತರಿಕ ದುಸ್ಥಿತಿ ಮತ್ತು ಇನ್ನೊಂದು ಯುದ್ಧದ ಉಪಾಯ ನಿರೀಕ್ಷೆಯಿರುವ ಈ ಕಾಲದಲ್ಲಿ ವಸಾಹತು ರಾಷ್ಟ್ರಗಳೊಳಗೆ ನಿಕಟ ಸಹಕಾರ, ಸೌಹಾರ್ದತೆ ಮತ್ತು ಸಂಬಂಧ ನಿರ್ಮಿಸಬೇಕೆಂಬ ಉದ್ದೇಶದಿಂದ ಕೂಡಿರುವ ಲಂಡನ್ ಸಮ್ಮೇಳನದಲ್ಲಿ ಜಾಹೀರು ಚರ್ಚೆಗಳಿಗಿಂತಲೂ ಮುಖಾಮುಖಿ ಮಾತುಕತೆಗಳಿಗೆ ವಿಶೇಷ ಪ್ರಾಮುಖ್ಯತೆ ದೊರೆತಿದೆ.

ನೆಹರು ಭೇಟಿಗಳು

ಲಂಡನ್ ನೆಹರುಗಳು ಜಿಲ್ಲೆಯ ಜನತೆಯ ಒಂದು ಆತಿ ದೊಡ್ಡ ಆಕರ್ಷಣವಾಗಿ ಬ್ದಾರಲ್ಲದೆ, ವಸಾಹತು ಸಂಬಂಧ ಕಡಿದು ಕೊಳ್ಳುವಷ್ಟು ಪ್ರಬಲ ಮತ್ತು ಸ್ವಾಭಿಮಾನಿಯಾಗಿರುವ ಭಾರತದಪ್ರಧಾನಿಯ ಮನಸ್ಸು ಹೇಗಿದೆ ಎಂಬ ಕಡೆಗೆ ಎಲ್ಲರ ಲಕ್ಷ್ಯವೂ ವಿಶೇಷ ಹರಿದಿರುವುದು ಕಂಡು ಬಂದಿದೆ. ತಾ. 11ರ ಸಮ್ಮೇಳನ ಮುಗಿದೊಡನೆ ಬ್ರಿಟಿಷ್ ರಾಜರ ಭೇಟಿ-ತಾ. 12ರಲ್ಲಿ ಲಂಡನಿನ ಕಿಂಗ್ಸ್ಲೇ ಭವನದ ಸಾರ್ವಜನಿಕ ಸಭೆಯಲ್ಲಿ ಭಾರತದ ಸ್ವಾತಂತ್ರ್ಯ ಚಳವಳಿ, ಗಾಂಧಿಜೀಯ ಅಮೋಘ ನಾಯಕತ್ವ ಇತ್ಯಾದಿಗಳ ಜ್ಞಾಪಕ ಕೊಟ್ಟು "ಭಾರತದ ಮಕ್ಕಳು ಬ್ರಿಟನಿನ ಜನತೆಯೊಳಗೆ ನಿಕಟ ಸಂಬಂಧವಿಂಟೇಕೆಂಬುದೇ ನನ್ನಿಚ್ಛೆ"ಯೆಂದು ಸ್ಪಷ್ಟಪಡಿಸಿ ಭಾಷಣ-ತಾ. 13ನೇ ರಾತ್ರಿ ಬಕ್ಕಿಂಗ್ಹಾಮ್ ಅರಮನೆಯಲ್ಲಿ ಬ್ರಿಟಿಷ್ ರಾಜದಂಪತಿಗಳು ಎಲ್ಲಾ ವಸಾಹತು ನಾಯಕರಿಗಿತ್ತ ಔತಣ ಕೂಟ-ಎಬ್ಬಿಟ್ಸನ್ಸ್ ಸ್ಟುಡಿಯೋ, ರೋಯಲ್ ಸೊಸೈಟಿ, ಲೈಬ್ರರ್ಸ್ ಮುಖ್ಯ ಕಾರ್ಯಾಲಯ ಮತ್ತು ರೋಗಪೀಡಿತ ಕೆನಡಾ ಪ್ರಧಾನಿ ಮೆಕೆಂಜಿ ಕಿಂಗ್ಸ್ರ ಆಪ್ತರ ಹಿಂದೀ ಚಳವಳಿ ನಾಯಕ ವೈ. ಎಮ್. ದಾಮ್ಲೂ ಮತ್ತು ಲಂಡನ್ ನ್ಯೂಸು ಹಾಗೂ ಹೇರ್ ಸ್ಟೇಟ್ಸಮರ ಭೇಟಿ-ಹೀಗೆ ವಿವಿಧ ಚಹಾ ಕೂಟ ಔತಣ ಕೂಟ ಇತ್ಯಾದಿಗಳಲ್ಲೇ ಪಂಡಿತ ನೆಹರುಗಳು ಸದಾ ನಿರತರಾಗಬೇಕಾಗಿತ್ತು. ತಾ. 14ರಲ್ಲಿ ಬ್ರಿಟಿಷ್ ಪ್ರಧಾನಿ ಆಟ್ಲಿಗಳು ಪಂಡಿತ ನೆಹರುಗಳೊಂದಿಗೆ ಎರಡನೇ ಬಾರಿ ನಡೆಸಿದ್ದ ಗುಪ್ತ ಸಂಭಾಷಣೆಯು ಬ್ರಿಟನ್-ಭಾರತ ನಡುವಿನ ಭವಿಷ್ಯ ಸಂಬಂಧದ ತಳಗಟ್ಟಿನಂತಿದ್ದು ಸರ್ವರ ಲಕ್ಷ್ಯವನ್ನೆಳೆದಿದೆ.

ಸಂಯುಕ್ತ ರಾಷ್ಟ್ರ ಸಂಘದ ಚಟುವಟಿಕೆಗಳು ನಡೆದಿರುವ ನ್ಯೂಯಾರ್ಕಿನಲ್ಲಿ ಪಂಡಿತ ನೆಹರುಗಳು ಎರಡು ದಿನವಿದು ಪಡೆದ ಸ್ವಾಗತ ಮತ್ತು ನಡೆಸಿದ ಸಂಭಾಷಣೆಗಳು ಅತ್ಯಾಕರ್ಷಣೀಯವಿದ್ದಂತೆಯೇ ಅತಿ ವ್ಯಾಮುಗ್ಧವೂ ಇದ್ದವು. ತಾ. 15ನೇ ಅಪರಾಹ್ನ ಲಂಡನಿನಿಂದ ತ

[ಬೇರೆ ಸುದ್ದಿ ನೋಡಿರಿ.]

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಪಕ್ವ ಅನುಭವದ ಯೋಗ್ಯತೆಯಿದೆ.

ನಿರಮು ತೀವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.

ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬೇಂಕ್, ಲಿಮಿಟೆಡ್

ಹೆ. ಆ. ಮಂಗಳೂರು.

THE VIJAYA BANK LTD.,

H. O. MANGALORE, S. K.



Approved firm by the Govt. of Mysore
Certified by the Agent of the Govt. of India & Indian.

The Canara Banking Corporation Limited.

Estd. 1906.

((Incorporated in British India)

Head Office: **UDIPI**, S. India.

Capital Authorised	....	Rs. 25,00,000
Capital Issued & Subscribed	....	Rs 20,00,000
Capital Paid up	....	Rs 19,98,445
Reserves....	....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.,
General Manager.

ನವಯುಗ

ಗುರುವಾರ, ಉಡುಪಿ, ೨೧-೧೦-'೪೮

ಪುನಃ ಆಹಾರ ನಿಯಂತ್ರಣ

ಪೂರ್ವ ನಿಶ್ಚಯನಂತೆ ಇಡೀ ಮದ್ರಾಸ್ ಪ್ರಾಂತ್ಯದಲ್ಲಿ ಆಹಾರ ಧಾನ್ಯ ನಿಯಂತ್ರಣವನ್ನು ಜಾರಿಗೆ ತರುವ ತನ್ನ ವಿಧಾನಗಳನ್ನು ಮದ್ರಾಸ್ ಸರಕಾರವು ಇದೇ ತಾ 17ರಲ್ಲಿ ಒಂದು ಪ್ರಕಟಣೆಯ ಮೂಲಕ ಸ್ಪಷ್ಟ ಪಡಿಸಿದೆ ಬರುವ ಎಪ್ರಿಲ್ ತಾ. 1 ರಿಂದ ಇಡೀ ಪ್ರಾಂತ್ಯದಲ್ಲಿ ಜಿಲ್ಲಾ ವ್ಯಾಪಿ ಹಂಚಿಗೆ ಮತ್ತು ಸಾರ್ವತ್ರಿಕ ಧಾನ್ಯ ಸಂಗ್ರಹಕ್ರಮ ಜಾರಿಯಲ್ಲಿದೆ. ದಕ್ಷಿಣ ಕನ್ನಡದಂತಹ ಸ್ಥಳಗಳಲ್ಲಿ ಈಗಿನಿಂದಲೆ ಅಕ್ಕಿ ಭತ್ತ ಸಂಗ್ರಹಾಜ್ಞೆ ಮತ್ತು ಕೆಲವೆಡೆ ಸಾಮಾನ್ಯ ರೀತಿಯ ಹಸುಗೆ ಬರುವದು. ಅಂತೂ ಧಾನ್ಯ ಸಂಗ್ರಹವು ಕಟ್ಟಾವಿನ ಕಾಲವನ್ನು ಹತ್ತಿರಿಸಿ ಈಗಿನಿಂದಲೇ ಜಾರಿಗೆ ಬಂಗಿದ್ದು, ಹಸುಗೇ ಪದ್ಧತಿಯನ್ವಯದ ಧಾನ್ಯ ವಿತರಣೆಯು ಕ್ರಮಶಃ ಮತ್ತು ಸ್ಥಳಾನುಗುಣವಾಗಿ ಅಸ್ತಿತ್ವಕ್ಕೆ ಒಂದು 1949ನೇ ಎಪ್ರಿಲ್ ತಾ. 1ಕ್ಕೆಎಲ್ಲವೂ ಪೂರ್ಣಾಕಾರ ಗೊಳ್ಳುವದು 1947ನೇ ನವಂಬರಿನಲ್ಲಿ ಯಾವ ಪರಿಸ್ಥಿತಿಯಿದ್ದಿತೋ ಅದೇ ಸ್ಥಿತಿ 1949ನೇ ಎಪ್ರಿಲ್ ಅರಂಭವಿಂದ ಪುನಃ ಬರಲಿದೆ. ನಿಯಂತ್ರಣ ಮತ್ತು ವಿನಿಯಂತ್ರಣ, ಎರಡರ ಪರಿಣಾಮಗಳನ್ನೂ ಅನುಭವಿಸಿರುವ ಮದ್ರಾಸ್ ಪ್ರಾಂತ್ಯದ ಜನತೆಯು ಆಹಾರವು ಪುನಃ ನಿಯಂತ್ರಣ ಕ್ಕೊಳಗಾಗಿದೆ. ಒಂದಂಕ ಮುಗಿಸಿ, ವಿಂಗಾಮಿ ಹರಡಿಯಿಳಿಸಿಕೊಂಡ ಆಹಾರ ನಿಯಂತ್ರಣ ನಾಟಕವು ಪುನಃ ಪ್ರಾರಂಭಿಸಿರುವಾಗ ಸಾಗುವಳ್ಳೀದಾರರು ಮತ್ತು ಬಡ ಜನತೆಯ ಪಾಲಿನ ಬುರಂತ ದೃಶ್ಯಗಳನ್ನು ಕಾಣಬೇಕಾಗುವದೆಂಬ ಆತುರವು ಸಹಜವಾಗಿ ಎದ್ದಿದೆ. ಗಾಂಧಿಜೀ ಕೊಟ್ಟ ಪ್ರೇರಣೆಯಂತೆ ಒಮ್ಮೆ ತೆಗೆದು ಹಾಕಿದ್ದ ಆಹಾರ ನಿಯಂತ್ರಣವನ್ನು, ಅರ್ಧಿಕೋದ್ಯಮ ತಜ್ಞರಿತ್ತ ಫಲಿತಗಳನುಸಾರವಾಗಿ ಪುನಃ ಜಾರಿಗೆ ತರಲು ಭಾರತ ಸರಕಾರವು ನಿರ್ಧರಿಸಿದೆ. ಕಳದ ಸೆಪ್ಟೆಂಬರ್ ಅಂತ್ಯ ಭಾಗದಲ್ಲಿ ನವಢಿಲ್ಲಿಯಲ್ಲಿ ಸೇರಿದ ಪ್ರಾಂತಿಕ ಪ್ರಧಾನ ಮಂತ್ರಿಗಳ ಸಮ್ಮೇಲನದ ಮುಂದೆ ಮರುನಿಯಂತ್ರಣ ಸಂಬಂಧದ ಸೂಚನೆಗಳನ್ನು ಕೇಂದ್ರ ಸರಕಾರವಿಟ್ಟಿದ್ದಿತು. ಅದಕ್ಕನುಸಾರವಾಗಿ ಮಿಕ್ಕ ಪ್ರಾಂತಿಕ ಸರಕಾರಗಳಂತೆ ಮದ್ರಾಸ್ ಸರಕಾರವೂ ಈ ಕೆಳಗಿನ ವಿಧಾನಗಳನ್ನು ಜಾರಿಗೆ ತರಲಿದೆ:

ಈಗಿನಿಂದ ಕಟಾವಾಗುವ ಭತ್ತಗಳನ್ನೆಲ್ಲಾ ಭರದಿಂದ ಸಂಗ್ರಹಿಸಿಕೊಳ್ಳುವ ಕ್ರಮವು ಅಯಾ ಸ್ಥಳಗಳಲ್ಲಿ ಬರಬೇಕು ಸಜ್ಜೆ ಮುಂತಾದುವುಗಳ ನೊದಲನೇ ಬೆಳೆಯು ಈ ಬಾರಿ ಹಾಳಾಗಿರುವುದರಿಂದ, ಒತ್ತಿನ ಸಂಸ್ಥಾನ ಮತ್ತಿತರ ಪ್ರಾಂತ್ಯಗಳೊಳಗೆ ಸಾಗುವ ಅವಕಾಶವಿಲ್ಲದಕಡೆಗಳಲ್ಲಿ ತಾ 15-11-48ರ ಮೊದಲು ಸವಣೆಗಳ (Millets) ಸಂಗ್ರಹಕ್ಕೆಳಿಸುಕೂಡದು. ಸಾರ್ವತ್ರಿಕ ಸಂಗ್ರಹನಿಯಂತ್ರಣಬಂದು, ಕೊರತೆಯಿರುವ ಜಿಲ್ಲೆಗಳಲ್ಲಿ ಹಾಗೆ ಸಂಗ್ರಹಿಸಿದನಂತರ ಯೋಗ್ಯಕಾಲನೋಡಿ ಸಾಮಾನ್ಯರೀತಿಯ ಹಸುಗೇ ಕ್ರಮವನ್ನು ಜಾರಿಗೆ ತರಲಾಗುವದು. ಹಳ್ಳೀ ವಲಯಗಳಲ್ಲಿ ರೇಶನಿಂಗ್ ಜಾರಿ ಮಾಡಲು ಸಮಯ ಹಿಡಿಯಬಹುದಾದ್ದರಿಂದ ಧಾನ್ಯ ಸಂಗ್ರಹ ನಿಯಂತ್ರಣ ಬಂದ ಕಡೆಗಳಲ್ಲಿ ಈಗ ಇರುವ "ರಿಲೀಫ್ ಸ್ಟೋರು"ಗಳೇ ಆತನಕ ಸಾಗುವಳ್ಳಿದಾರರಲ್ಲದವರಿಗೆ ಮತ್ತು ಸಾಕಷ್ಟು ಸಾಗುವಳ್ಳಿಯಿಲ್ಲದವರಿಗೆ ಆಹಾರ ಧಾನ್ಯ ಕೊಡುತ್ತಿರಬೇಕು. ಕೊರತೆಯಿರುವ ಭಾಗಗಳಲ್ಲಿ ಪ್ರಾಥಮಿಕ ಹಸುಗೆ ಬರುವ ವರೆಗೆ ರಕ್ಷಣಾ ಆಂಗಡಿಗಳು ಕೊಡುವ ಧಾನ್ಯದ ಪರಿಮಾಣವು ಹಸುಗೇ ಕ್ಷೇತ್ರಗಳಲ್ಲಿರುವ ಸ್ಟೇ ಇರತಕ್ಕದ್ದು. ಮೇಲಿನ ಸೂತ್ರಗಳಗನುಸಾರವಾಗಿ ತಿರುಚಿನಾಪಳ್ಳಿ, ದಕ್ಷಿಣ ಕನ್ನಡ ಮತ್ತು ತಿನ್ನವೆಲ್ಲಿ ಜಿಲ್ಲೆಗಳಲ್ಲೂ ದಕ್ಷಿಣಆರ್ಕಾಟು ಜಿಲ್ಲೆಯ ಆಕ್ಕಿಉಳಿತಾಯದ ತಾಲೂಕುಗಳ ಹೆರೆಂಬರಮ್ ಮತ್ತು ಮಧುರಾ ಜಿಲ್ಲೆಯ ಪೆರಿಯಾರ್ ಕ್ಷೇತ್ರದಲ್ಲೂ, ಈಗಲೇ ಅಕ್ಕಿ ಭತ್ತ ಸಂಗ್ರಹಾಜ್ಞೆ ಜಾರಿಯಲ್ಲಿದೆ ಈ ಭಾಗಗಳ ಮುನ್ಸಿಪಲ್ ಕ್ಷೇತ್ರಗಳಲ್ಲಿ ಬರುವ ನವಂಬರಾಂತ್ಯದ ಒಳಗೆ ಪ್ರಾಥಮಿಕ ರೇಶನಿಂಗ್ ಅನ್ನು ತ್ವರಿತಕ್ಕೆ ಬರುವುದು. ಉಳಿದ ಜಿಲ್ಲೆಗಳಲ್ಲಿ, ಅವುಗಳ ಮುಖ್ಯ ಬೆಳೆಯು ಕಟಾವಾದೊಡನೆ ಧಾನ್ಯ ಸಂಗ್ರಹ ನಿಯಂತ್ರಣ ಜಾರಿಯಾಗುವುದಲ್ಲದೆ, ಅದಕ್ಕನುಸರಿಸಿ ಮುನ್ಸಿಪಲ್ ಕ್ಷೇತ್ರಗಳಲ್ಲಿ ಪ್ರಾಥಮಿಕ ಹಸುಗೆ ಕ್ರಮ ಬರುವುದು. ಹೀಗೆ ಧಾನ್ಯಸಂಗ್ರಹವಾಗುವ ಎಲ್ಲಾ ಜಿಲ್ಲೆಗಳಲ್ಲೂ ಸಾರ್ವತ್ರಿಕ ಸಂಗ್ರಹವಾದ ಕೂಡಲೇ ಸಾದಾ ರೀತಿಯ ರೇಶನಿಂಗ್ ಜಾರಿಯಾಗುವದು. ಆ ವರೆಗೆ "ರಿಲೀಫ್ ಸ್ಟೋರು"ಗಳೇ ಸಾಗುವಳ್ಳೀದಾರರಲ್ಲದವರಿಗೆ ಧಾನ್ಯ ವಿತರಣೆ ಮಾಡಬೇಕು. ಎಲ್ಲಾ ಜಿಲ್ಲೆಗಳಲ್ಲೂ ಸಂಪೂರ್ಣ ಸಂಗ್ರಹ ಮತ್ತು ಸರ್ವ ವ್ಯಾಪೀ ಹಸುಗೆ ಜಾರಿಗ ಬಂದು, ಈ ಕಾರ್ಯಾನುಕ್ರಮಣಿಕೆ ಪೂರ್ಣಗೊಳ್ಳುವದು 1948ನೇ ಎಪ್ರಿಲ್ ತಾ. 1ರಲ್ಲಿ. ಹೀಗೆ ಸಂಗ್ರಹಿಸುವ ಧಾನ್ಯಗಳಿಗೆ, ಈ ಬಾರಿ ನೇಕಡಾ 25ರಷ್ಟು ಅಧಿಕ ಬೆಲೆ ಕೊಡಬೇಕೆಂಬ ಕೇಂದ್ರ ಸರಕಾರದ ಸೂಚನೆಯು ಮದ್ರಾಸ್ ಪ್ರಾಂತ್ಯದ ನುಟ್ಟಿಗೆ 1947ನೇ ದಶಂಬರದಲ್ಲಿ ಏರಿಸಿದ್ದ ಬೆಲೆಯಲ್ಲೇ ಪೂರೈಸಿದೆ. ಆದರೂ ಬೆಲೆಯೇರಿಸುವ ವಿಷಯವು ಸರಕಾರದ ಪರ್ಯಾಲೋಚನೆಯಲ್ಲಿದೆ. ಮೇಲ್ಸಡೆ ನಮೂದಿಸಿರುವ ಮದ್ರಾಸ್ ಸರಕಾರದ ಆಹಾರ ನಿಯಂತ್ರಣ ಘೋರ ನೆಯಲ್ಲಿ ಒಡೆದು ತೋರುತ್ತಿರುವ ದೋಷವೆಂದರೆ ಧಾನ್ಯೋತ್ಪಾದಕರಿಗೆ ಹೆಚ್ಚು ಬೆಲೆಕೊಡುವ ಪುಟ್ಟಿಗೆ ಅದು ಪಡುತ್ತಿರುವ ಶಂಕೆ. ಕಳದಬಾರಿಯ ನಿಯಂತ್ರಣ ರದ್ದತಿಯ ಪೂರ್ವದಲ್ಲಿ ಧಾನ್ಯಕ್ಕಿದ್ದ ಧಾರಣೆಯು ನೇಕಡಾ 25ಕ್ಕೆ ಮಿಕ್ಕಿದಂತೆ ಈ ಬಾರಿ ಬೆಲೆಯೇರಿಸಬೇಕೆಂದು ಕೇಂದ್ರ ಪ್ರಸರಕಾರವು ನಿರ್ದೇಶಿಸಿರುವುದಾದರೂ ಮದ್ರಾಸ್ ಸರಕಾರವು ಈ ಪರಿಮಾಣದ ಪ್ರಮಾಣವನ್ನು ತಾವು ಕಳದ ದಶಂಬರದಲ್ಲೇ ಹೆಚ್ಚಿಸಿದ್ದೆವೆಂಬ ಆತ್ಮ ಸಮಾಧಾನ ಪುದಶೇರಿಸಿದೆ. ಈ ಸಲ ಪುನಃ ಧಾರಣೆಯೇರಿಸುವ ಆಲೋಚನೆ ಮಾಡುತ್ತೇವೆಂದಲ್ಲದೆ ಸ್ಪಷ್ಟವಾಗಿ ಏನನ್ನೂ ಹೇಳದ ಮದ್ರಾಸ್ ಸಂಕಾರದ ಘೋರಣೆಯು ಸಾಗುವಳ್ಳೀದಾರರಲ್ಲಿ ನಿರಾತೆಯನ್ನುನಿರ್ಮಿಸಿದೆ. ಬೇಸಾಯಾವಶ್ಯಕ ಹಾಗೂ ನಿತ್ಯ ಜೀವನಾಧಾರಗಳಾದ ಎಲ್ಲಾ ಸಾಮಾಗ್ರಿಗಳ ಬೆಲೆಯೂ ಏರಿರುವ ಈ ಕಾಲದ ನ್ಯಾಯೋಚಿತ ಧಾರಣೆಯನ್ನಾದರೂ ರೈತರ ಉತ್ಪಾದನೆಗಳಗೀಯಲು ಸರಕಾರವು ಅನುಮಾನಿಸುತ್ತಿರುವುದೇಕೋ ಅರ್ಥವಾಗುವದಿಲ್ಲ. ಕೊನೆಯ ಪಕ್ಷ 1947ರ ದಶಂಬರದ ಅಕ್ಕೀ ಮೌಲ್ಯವನ್ನೇ ಮೂಲವೆಂದು ಗಣಿಸಿ, ಕೇಂದ್ರ ಸರಕಾರದ ಸೂಚನೆಯಂತೆ ಆದರ ಕಾಲಂತದಷ್ಟಾದರೂ ಬೆಲೆಯೇರಿಸದಿದ್ದರೆ, ಬೇಸಾಯಗಾರರ ನಿರಾತೆಯು ಹಲವು ತೋದರೆಗಳಿಗೆ ಹೇತುವಾಗದಿರದು. ಆಹಾರೋತ್ಪಾದಕ ರೈತರಲ್ಲೂ ಮಿಕ್ಕ ವರ್ಗದ ಕೆಲಸಗಾರರಂತೆ ತಮ್ಮ ನಷ್ಟ ಕಷ್ಟಗಳ ನಿವಾರಣೆಗಾಗಿ ಮುಷ್ಕರ ಹೂಡುವ ಅಧಿಕ್ಯಾಸವಿರುತಿದ್ದರೆ ಈ ಕಾಲದಲ್ಲಿ ಹೇಗಾಗುತಿತ್ತು? ಮಿಕ್ಕೆಲ್ಲಾ ವರ್ಗಕ್ಕೆಂತ ಹೆಚ್ಚಿನ ಕಷ್ಟನಷ್ಟಗಳನ್ನು ಅನುಭವಿಸಿದರೂ ಅದರ ನಿವಾರಣೆಗಾಗಿ ಬಾಕಿಯವರಂತೆ ಹಠಹಿಡಿಯದೆ ತಮ್ಮ ಕರ್ತವ್ಯವನ್ನು ದಕ್ಷತೆಯಿಂದ ನಿರ್ವಹಿಸುತ್ತಾ ಬಂದಿರುವ ರೈತರ ಸಹನೆಗೆ ತಾವು ಕೊಡುತ್ತಿರುವ ಬೆಲೆಯೇನು? ಸರ್ವ ಪ್ರಥಮ ಪ್ರಾಮುಖ್ಯತೆಯ ಸಾಗುವಳ್ಳೀದಾರರ ಪೇಲೆ ತಾವು ಹಾಕುವ ಒತ್ತಾಯದ ಕಾಲಂತದಷ್ಟು ಪ್ರೋತ್ಸಾಹವನ್ನಾದರೂ ಅವರಿಗೆ ಕೊಡುವರೆನೆ? ರೈತೋದ್ಧಾರಿ ಕಾಂಗ್ರೆಸಿನ ಹಾಗೂ 'ರೈತನೇ ರಾಷ್ಟ್ರದ ಜೀವಾಳ ಮತ್ತದರ ಅಧಿಕಾರದ ಹಕ್ಕುದಾರ' ಎಂದಿದ್ದ ಗಾಂಧಿಜೀಯ ಧ್ಯೇಯ ಧೋರಣೆಗಳ ಮಾತು ಹಾಗಿರಲಿ— ಆಹಾರಾಭಾವ ನಿವಾರಣೆಯ ದೃಷ್ಟಿಯಿಂದಾದರೂ ತಾವು ಬೇಸಾಯಗಾರರನ್ನು ತಕ್ಕವ್ಯ ಪ್ರೋತ್ಸಾಹಿಸಿರುವೆವೆ? ಮುಂತಾಗಿ ಮದ್ರಾಸ್ ಸರಕಾರವು ತನ್ನನ್ನು ತಾನೇ ಕೇಳಿಕೊಳ್ಳುವವಗತ್ಯವಿದೆ. ಹಿಂದಿನ ವರುಷಗಳಂತೆಯೇ ಧಾನ್ಯವೊಪ್ಪಿಸುವ ಅಜ್ಞಾಪಾಲನೆಯಲ್ಲೂ ಡಿಪೋ ಮತ್ತು ಸ್ಟೋರುಗಳ ಸಂಬಂಧ ನಿರ್ವಹಣದಲ್ಲೂ, ರೈತರನುಭವಿಸಬೇಕಾಗಿರುವ ಕಷ್ಟನಷ್ಟಗಳಂತೂ ಸ್ಪಷ್ಟೇಕವಿವೆ. ಸರಕಾರದ ಕಣ್ಮುಂದೆ ಇವೆಲ್ಲಾ ಸ್ಥಿತಿಗತಿಗಳ ಸ್ಪಷ್ಟ ಚಿತ್ರವಿಲ್ಲವೆಂಬುದೂ ರೈತರು ಈಗಲೂ ಹಿಂದಿನಷ್ಟೇ ಅಸಹ್ಯೆಗೀಡಾಗಿರುವರೆಂಬುದೂ ಖಂಡಿತ. ಇಂತಹ ಸಂದರ್ಭದಲ್ಲಿ ಪರಿಸ್ಥಿತಿಯ ಒತ್ತಡಕ್ಕೊಳಗಾದ ರೈತರ ರೋದನಗಳು ಅಲ್ಲಲ್ಲಿಂದ ಕೇಳಿ ಬರುತ್ತಿವೆಯಾದರೂ ದಕ್ಷಿಣಕನ್ನಡದಂತಹ ಜಿಲ್ಲೆಯಲ್ಲಿ ಎಕ ಸ್ವರ ಹೊರಡಿಸಬಲ್ಲ, ಒಕ್ಕಟ್ಟಿನ ಒಮ್ಮತದ ಕಾರ್ಯಮಾಡಬಲ್ಲ ರೈತರ ಸಂಘಟನೆಯಾವುದೂ ಇಲ್ಲದಿರುವುದು ಅತ್ಯಂತ ಶೋಚನೀಯ. ರೈತ ಪಕ್ಷವಾತೀ ಮುಂದಾಳುಗಳೂ ರಾಷ್ಟ್ರಪ್ರೇಮೀ ಕಾರ್ಯಕರ್ತರೂ ಈಗಲಾದರೂ ಅಂತಹ ನ್ಯಯತ್ನಕ್ಕಿಳಿಯಬಾರದೇಕೆ?

ಚಂದಾದಾರರಲ್ಲಿ ವಿನಂತಿ-

ನವಯುಗದ ಚಂದಾದಾರರು, ಹೆಚ್ಚಾಗಿ ಮುಂಬಾಯಿಯು ಚಂದಾದಾರರು ತಮ್ಮ ವಿಳಾಸ ಬದಲಾದೊಡನೆ ನಮಗೆ ಸಕಾಲದಲ್ಲಿ ತಿಳಿಸುವಂತೆಯೂ ಪತ್ರ ವ್ಯವಹಾರವಾದಮಾಗ ತಮ್ಮ ಚಂದಾನಂಬ್ರವನ್ನು ಅಗತ್ಯ ಸೂಚಿಸುವಂತೆಯೂ ಈಮೂಲಕ ಅಪೇಕ್ಷಿಸೋಣಾಗುತ್ತದೆ.

ಮೆನೇಜರ್.

ಶ್ರೀ. ಭಗವತೀ ನೃತ್ಯಕಲಾ ಮಂದಿರ ಮುಂಬಯಿ ತಾ12-10-48 ರಿಂದ ಶ್ರೀ ಭಗವತೀ ನೃತ್ಯ ಕಲಾಮಂದಿರದಲ್ಲಿ ಮಂದಿರದ ಸ್ಥಾಪಕರಾದ ಎ. ಅನಂತಪ್ಪಭಂಡಾರಿಯವರ ಇವರ ಅಧ್ಯಕ್ಷತೆಯಲ್ಲಿ ಶ್ರೀ. ವಾರಿಜಾ ದೇವಿಯು ಪೂಜೆಯೂ ದಸರಾ ಮಹೋತ್ಸವವೂ ಜಲಂಧರ ನಾಟಕದ ಪಾತ್ರಧಾರಿಯರೂ ಡಗೂಡಿ ಜರಗಿತು ಶ್ರೀ ಭಗವತೀ ನೃತ್ಯಕಲಾ ಮಂದಿರದ ಸಹಾಯಾರ್ಥವಾಗಿ ಜಲಂಧರ ಎಂಬ ಪೌರಾಣಿಕ ಕನ್ನಡ ನಾಟಕವು ಮುಂಬಯಿಯ ಕಲ್ಪನಾ ವಿಲಾಸ್ ಟಾಕೀಸಿನಲ್ಲಿ ರುವ ಭಾಗವಾಡಿ ಥಿಯೇಟರಿನಲ್ಲಿ ತಾ 29-10-48 ನೇ ಶುಕ್ರವಾರ ರಾತ್ರಿ ಗಂಟೆ 8-30 ಕ್ಕೆ ಆಭಿನಯಿಸುವರು

ಮಹಾತ್ಮಾ ಗಾಂಧಿಜೀ ಯವರ ಸ್ಮಾರಕ ನಿಧಿಗೆ ಕಾಣಿಕೆಯನ್ನೀಯಿರಿ.

[ಜನವರಿ ಪುಟದಿಂದ]

ನ್ನೆ ಖಾಸಗೀ ಸಜ್ಜಾ ವಿಮಾನವೇರಿ ರಂಡಿ ತಜೇ ಪ್ಯಾರಿಸಿಗೆ ಇಳಿಯುವ ಮೊದಲೇ "ಅತಿ ಪ್ರಾಮುಖ್ಯಕ್ಕೆ ಮನುಷ್ಯ" ನೊಬ್ಬ ಬರುತಿದ್ದಾನೆಂದು ಪ್ಯಾರಿಸಿನಲ್ಲೆಲ್ಲ ಸಂಚಲನವನ್ನು ಪ್ರಚಾರಿಸಿದ್ದಿತು. ವ್ಯಾರಿಸ್ ನಿರ್ಣಾಣದಲ್ಲಿ ಸ್ವಾಗತ ಸಮಿತಿಯ ಸದಸ್ಯರು, ಸೈನಿಕ, ರಕ್ಷಣಾ ಪೊಲೀಸರಿಗೂ ಭಾರತ ಸಂಸ್ಥಾನೀ ಮತ್ತಿತರ ವಿವಿಧ ರೀತಿಯ ಕಾರ್ಯಭಾರ ಹೊತ್ತಿರುವ ನೆವಾನೆಗರಿದ್ದ ಜಾಮ್ ಸಾಹೇಬ್, ಸರ್. ಎ ಆರ್. ಮುದಲಿಯಾರ್, ಜೆ. ಆರ್. ಡಿ. ತಾತಾ, ಡಿ. ಬಿ. ದೇಸಾಯಿ, ಸರ್. ರಾಘವ ಪಿಳ್ಳೈ, ಡಾ! ಪಿ. ಪಿ. ಪೈ, ಸಿ. ಯಸ್. ಜಾ, ಮತ್ತು ಅಮೊದಲೇ ಮಂಚಿದ್ದ ವಿಜಯ ಲಕ್ಷ್ಮಿ ಪಂಡಿತ್ ಮತ್ತವರ ಇಬ್ಬರು ಹೆಮ್ಮಕ್ಕಳು ಪಂಡಿತ ಜೀಗೆ ಸ್ವಾಗತಿಸಿಕೊಂಡ ಆ ಪ್ರೇಮಾದರಗಳ ನೈಜತ್ವ ಅಳವರ್ಣನೀಯವಿದ್ದಿತು. ನಿಜ ಸಂಪ್ರಸಿದ್ಧಿಯು ಅಲ್ಲಿ ಎಷ್ಟಿಸಿಂದರೆ, ಎಲ್ಲರಿಗೂ ನಗು ಮೊಗದ ಹಸ್ತಲಾಘವ ಕೊಡ.ತ್ತಾ ಪಂಡಿತರು ಕಾರು ಹತ್ತುತ್ತಿರುವಾಗ ಜನಸಂದಣಿಯಲ್ಲಿ ನುಗ್ಗಿ ಬಂದು " ಇದು ಯಾರು? " ಎಂದು ಕೇಳಿದ ಸಣ್ಣ ಹುಡುಗನೊಬ್ಬನಿಗೆ " ಲೋಕದ ದೊಡ್ಡ ಮನುಷ್ಯರಲೆಲ್ಲಬ್ಬ ಮೊನ್ಯಾರ್‌ಲೆ ಪಂಡಿತ ನೆಹರು " ಎಂದು ಫ್ರೆಂಚ್ ಕಾವಲುಗಾರನ ಬಾಯಿಯಿಂದ ಕೂಡಾ ಬಂದಿತ್ತು. ಆದೇ ದಿನ ರಾತ್ರಿ ಅಮೆರಿಕದ ಗೃಹ ಕಾರ್ಯದರ್ಶಿ ಜೋರ್ಜ್ ಮಾರ್ಶಲ್‌ರಂ ನೆಹರೂಗಳೊಡನೆ ಗುಪ್ತ ಸಂಭಾಷಣೆ ನಡೆಸಿದ್ದರು. ಮರು ದಿನ ಫ್ರಾನ್ಸಿನ ವಿದೇಶ ಮಂತ್ರಿ ರೋಬರ್ಟ್ ಶ್ಯುಮೇನರೊಂದಿಗೆ ದೀರ್ಘ ಗುಪ್ತ ಸಂಭಾಷಣೆ ನಡೆಯಿತಲ್ಲದೆ ಫ್ರಂಚ್ ಅಧ್ಯಕ್ಷ ವಿನ್ಸೆಂಟ್ ಔರಿಯಲರೊಂದಿಗೆ ಅರ್ಧ ತಾಸಿನ ಮಾತುಕತೆ ನಡೆಯಿತು. ತಾ 17ರಲ್ಲಿ ರಶ್ಯದ ರಾಯಭಾರಿ ಕಚೇರಿಯಲ್ಲಿ ಪಂಡಿತ ನೆಹರು ಮತ್ತು ರಶ್ಯದಉಸ ವಿದೇಶ ಮಂತ್ರಿ ಆಂಡ್ರೆಯ್ ವಿಶಿನ್ಸ್ಕಿಯವರೊಳಗೆ 105 ನಿಮಿಷಗಳ ವಿಚಾರ ವಿನಿಮಯ ಜರಗಿತು. ರಶ್ಯದಲ್ಲಿ ರಾಯಭಾರಿಯಾಗಿರುವ ಶ್ರೀಮತಿ ವಿಜಯಲಕ್ಷ್ಮಿಯವರೂ ಈ ಸಂಭಾಷಣೆಯಲ್ಲಿ ಭಾಗವಹಿಸಿದ್ದರು. ಆ ಮೇಲೆ ಭಾರತ ರಾಷ್ಟ್ರ ಸಂಘದ ಕಾರ್ಯದರ್ಶಿ ಮಿ. ಟ್ರಿಗ್ವೀ ಲೀ ಮತ್ತು ಶ್ರೀಮತಿ ರುನೆಲ್ವರೊಂದಿಗೆ ಔತಣ ನಡೆಸಿ ಆ ರಾತ್ರಿಯಲ್ಲೇ ಲಂಡನ್ನಿಗೆ ಪ್ರಯಾಣ ಬೆಳೆಸಿದ್ದಾರೆ. ಪಂಡಿತರು ಲಂಡನ್ ಸಮ್ಮೇಳನ ಮುಗಿಸಿ ಪ್ಯಾರಿಸಿಗೆ ಬಂದು ಈತಿಂಗಳಾಂತ್ಯದಾರವಿಡೀ ಪ್ಯಾರಿಸಿನಲ್ಲಿ ನಿಲ್ಲಲಿಯವರೆಂದೂ ಆ! ಸಂದರ್ಭದಲ್ಲಿ ನೆಹರುಗಳ ಭಾಷಣ ಕೇಳುವದಕ್ಕಾಗಿಯೇ ಸಂಯುಕ್ತ ರಾಷ್ಟ್ರ ಸಂಘದ ವಿಶೇಷ ಸಭೆ ಜರಗಲಿಬೆಯೆಂದೂ ನಿಶ್ಚಯವಾಗಿದೆ ಲೋಕ ಘಟನೆ ಮತ್ತು ಭವಿಷ್ಯದ ಕುರಿತು ಧಾರ ತವ ಅಭಿಪ್ರಾಯವನ್ನು ಪಂಡಿತ ನೆಹರು ಗಳು ಅಲ್ಲಿ ವಿವರಿಸಲಿದ್ದಾರೆ. ರಶ್ಯನ್ ಪ್ರತಿನಿಧಿಯೊಡನೆ ಪುನಃ ಮಾತುಕತೆ ನಡೆಸಲಿದ್ದಾರೆ. ನವಂಬರ್ 1ಕ್ಕೆ ಶ್ಯಾರಿಸಿನಿಂದ ಕೈರೋವಿಗೆ ಬಂದು ತಾ 5ರ ನಂತರ ಅಲ್ಲಿಂದ ಆ ದಿನ ಹೊರಟವರು ತಾ. 6ನೇ ಮುಂಜಾನೆ ಬೊಂಬಾಯಿಗೆ ಮುಟ್ಟಬಹುದೆಂದು. ನಿರೀಕ್ಷಿಸಲಾಗಿದೆ. " ಲೋಕ ಶಾಂತಿಯ ಆಸಾಕಿರಣ " " ಲೋಕದ ಅತಿ ದೊಡ್ಡ ವ್ಯಕ್ತಿಗಳಲ್ಲೊಬ್ಬ " "ಬರ್ಲಿನ್ ವಿವಾದ ಬಿಡಿಸಬಲ್ಲ ಯೋಗ್ಯ" ಮುಂತಾಗಿ ಲಂಡನ್ ಮತ್ತಿತರ ವಿದೇಶ ಪತ್ರಿಕೆಗಳಿಂದಲೂ ಪ್ರಶಂಸೆಯಿಂದಲೂ ಪಂಡಿತ ನೆಹರುಗಳಿಗೆ ಶಿಫಾರಸುಗಳು ದೊರೆತಿವೆ.

ಕುಂದಾಪುರ

ಕರ್ನಾಟಕ ಸಂಘದ ಆಶ್ರಯದಲ್ಲಿ ನಾಡಹಬ್ಬ ನವರಾತ್ರಿ ಸಂಘದ ವಾರ್ಷಿಕೋತ್ಸವ ನವು ಇದೇ ತಾ 8ರಿಂದ 10ರ ತನಕ ಜರಗಿತು. ಪ್ರಥಮದಿನದ ಸಮಾರಂಭವು ಶ್ರೀ ತಿರುಮಲೆ ತಾತಾಚಾರ್ಯ ಶರ್ಮರ ಅಧ್ಯಕ್ಷತೆಯಲ್ಲಿ ಜರಗಿ ಧ್ವಜಾರೋಹಣ, ಸ್ವಾಗತ ಭಾಷಣ, ಪರಿಚಯ ಭಾಷಣ, ಕೊಳಲುಗಾನ ಮೊದಲಾದ ಕಾರ್ಯಕ್ರಮಗಳಾದುವು. ಮರುದಿನ ಶ್ರೀ ಶರ್ಮರಿಗೆ ಊರ ಪ್ರಮುಖರ ಸನ್ಮಾನಕೂಟವೂ ಶ್ರೀ ಚಂದ್ರ ತೇಜರ ಅಡಿಗರ ಆತಿಥ್ಯಕೂಟವೂ ಜರಗಿತು. ಸಂಜೆ ಶ್ರೀಯುತ ಕೃಷ್ಣರಾಯ, ಶಾಲಾ ಇನ್ಸ್‌ಪೆಕ್ಟರ್, ಇವರ ಅಧ್ಯಕ್ಷತೆಯಲ್ಲಿ ಸಭೆಸೇರಿ ಪಂಡಿತ ನೀತಾರಾಮಾಚಾರ್ಯರ ಭಾಷಣ, ಗಾಜನ ಮತ್ತು ಭಾಗವತ ರಾಮಕೃಷ್ಣ ಜ್ಯೋತಿಷರ ಹಾಡುಗಾರಿಕೆಯಿಂದ ಯಕ್ಷಗಾನಾದಿ ಕಾರ್ಯಕ್ರಮಗಳಾದುವು. ಕೊನೆಯದಿನ ಸಂಘದ ಮಹಾಸಭೆಯು ಜರಗಿ ಹೊಸ ಕಾರ್ಯ ನಿರ್ವಾಹಕ ಮಂಡಳಿಯು ರಚನೆಯಾಯಿತು. ಶ್ರೀ ಘಾ ಕುಲಾಸರು ಅಧ್ಯಕ್ಷರಾಗಿಯೂ ಶ್ರೀ ಕೆ. ರಾಮಪ್ಪಯ್ಯನವರು ಉಪಾಧ್ಯಕ್ಷರಾಗಿಯೂ ಶ್ರೀ ಎಮ್. ಎನ್. ಹೆಗ್ಡೆಯವರು ಕೋಶಾಧಿಕಾರಿಗಳಾಗಿಯೂ ಶ್ರೀಗಳಾದ ಡಿ. ಸಿ. ಹೊಳ್ಳ ಮತ್ತು ಸಂಜೀವ ಬಸ್ರೂರ ಅವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಜಲ್ಲಾ ಆಹಾರ ಸಮಿತಿಯ ಸದಸ್ಯರಾದ ಶ್ರೀ ಬಿ. ಸುಬ್ಬಣ್ಣ ಶೆಟ್ಟರು ದಿನಾಂಕ 13ರಲ್ಲು ಮದ್ರಾಸು ಸರಕಾರದ ಆರೋಗ್ಯಖಾತೆಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿರನ್ನೂ ಕೊಯಮುತ್ತೂರು ಡಿವಿಜನಲ್ ಫುಡ್ ಕಂಟ್ರೋಲರನ್ನು ಕಂಡು ಕುಂದಾಪುರ ತಾಲೂಕಿನ ಲಿರಿಲಿಫ್ ಆಂಗಡಿಗಳಲ್ಲಿ ಕೊಡೋಣಾಗುವ ಅಕ್ಕಿಯ ಬಿತ್ತಿ 4 ಔನ್ಸ್‌ನ್ನು 6 ಔನ್ಸ್‌ಗೇರಿಸಲೆ ಸಚೇತಾಗಿಯೂ 2 ಔನ್ಸ್ ಗೋಧಿ ಪ್ರತ್ಯೇಕ ಕೊಡಬೇಕಾಗಿಯೂ ಸೂಚಿಸಿದರು. ಗೋಧಿ ಆಂಧನನ್ನು ನಿಶ್ಚಿತಪಡಿಸಲು ಕೂಡಲೇ ಒಪ್ಪಿಗೆಯನ್ನಿತ್ತ ಜಾಸ್ತಿ ಅಕ್ಕಿ ಕೊಡುವ ವಿಚಾರದಲ್ಲಿ ಬಂದುವಾರದೊಳಗಾಗಿ ತಕ್ಕ ನಿರ್ಣಯ ಮಾಡುವೆನೆಂದು ಕಂಟ್ರೋಲರರು ಆಶ್ವಾಸನೆಯಿತ್ತರು. ಈ ತಾಲೂಕಿನಲ್ಲಿ ಭತ್ತ ಅಕ್ಕಿ ಒಪ್ಪಿಸುವ ಅವಧಿಯನ್ನು 15 ದಿವಸಗಳಿಗೆ ಮುಂದರಿಸಬೇಕಾಗಿಯೂ ಜಲಮಾರ್ಗ ಮೂಲಕ ಅಕ್ಕಿ ಸ್ಥಳಾಂತರ ಹೊಂದುವುದನ್ನು ಪತ್ರಹಚ್ಚುವುದಕ್ಕಾಗಿ ಸ್ವೀಪ್ಸ್ ಲಾಂಚನ್ನೂ ತಕ್ಕ ಶಿಬಂಧಿಯನ್ನೂ ಇರಗೊಡಿಸಬೇಕಾಗಿಯೂ ಸೂಚಿಸಿದರು.

ಕುರುಕಾಲು ಶ್ರೀ ಮಧ್ವ ಜಯಂತ್ಯುತ್ಸವವು ಇದೇ ತಾ 12ರಲ್ಲು ಶ್ರೀ ಪಾದುಕಾಕ್ಷೇತ್ರ ಮಠದಲ್ಲಿ ಶ್ರೀ ಭಂಡಾರಕೇರಿ ಮಂಡಪ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಕೇಜವರ, ಶ್ರೀ ಕಾಣಿಯೂರು, ಶ್ರೀ ಅಧಮಾರು, ಶ್ರೀ ಫಲಿಮಾರು ಸ್ವಾಮಿಗಳವರೂ ಚಿತ್ಕೃಸಿದ್ದರು. ಶ್ರೀ ಮಧ್ವ ಸೇವಾಸಂಘದ ಉದ್ದೇಶಗಳ ಹಾಗೂ ಕುರುಕಾಲು ಗ್ರಾಮಾಭಿವೃದ್ಧಿ ಯೋಜನೆಯ ವಿಷಯಗಳಲ್ಲಿ ಶ್ರೀ ಗಳಾದಿ ಟಿ. ಅನಂತಕೃಷ್ಣಾಚಾರ್ಯ, ಕೆ. ನಾರಾಯಣಾಚಾರ್ಯ, ಕುರುಕಾಲು ಗಣಪಯ್ಯ ಶೆಟ್ಟಿ, ಯು. ನರಸಿಂಹಾಚಾರ್, ಶ್ರೀ ಶ್ರೀನಾಥದಾಸ್ ಮೊದಲಾದವರು ಭಾಷಣ ಮಾಡಿದರು.

ಪ್ರಕಟಣೆ

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ-

ಕಾರ್ಕಳ ತಾಲ್ಲೂ ನಿಡ್ಡೋಡಿ ಗ್ರಾಮದ ನ್ಯೂಂದಡಿಯಲ್ಲಿರುವ ಜಾರು ಶೆಟ್ರಿ ಸೊಸೆ ತಾನು ಶೆಟ್ಟಿ I ರಾಮಣ್ಣ ಶೆಟ್ಟಿ 1, ಮುತ್ತಯ್ಯ ಶೆಟ್ಟಿ1, ಸುಬ್ಬಯ್ಯ ಶೆಟ್ಟಿ 1, ಎಂಕು ಶೆಟ್ಟಿ1, ಕೂಡಾ 5 ಜನರು ಪ್ರಕಟಪಡಿಸುವದೇನೆಂದರೆ.

ಕಾರ್ಕಳ ತಾಲ್ಲೂ ನಿಡ್ಡೋಡಿ ಗ್ರಾಮದಲ್ಲಿರುವ ನಮ್ಮ ಕುಟುಂಬದ ಸ್ತ್ರೀರಾಸ್ತಿಗಳನ್ನು ಶಿವಪ್ಪ ಶೆಟ್ಟಿ ಕಾಲಜ ಮೊದಲೇ 3 ಪಾಲಾಗಿ ಮಾಡಿ ಈಗ ಸುಮಾರು 50 ವರುಷಗಳ ಮೇಲ್ಪಟ್ಟು ಬಾಯಿದಿರೆಯಾಗಿ ಆಸ್ತಿಯನ್ನು ಅನುಭವಿಸಿಕೊಂಡು ಬರುತ್ತಿರುವಲ್ಲಿ ನಮ್ಮ ಕುಟುಂಬದವರಾದ ಸದ್ರಿ ಶಿವಪ್ಪ ಶೆಟ್ಟಿ ಮುರಣದ ನಂತ್ರ ಜಾರು ಶೆಟ್ಟಿ ಭಾಗದವರಾದ ಇದೀ ಕುಟುಂಬದಲ್ಲಿ ಕೆಲವೇ ಮೆಂಬರ್‌ಗಳಿದ್ದ ಸಂಖ್ಯೆ ಕ್ಷೀಣ ಕುಟುಂಬಕ್ಕೆ ನೋಸ ಕೊಡುವ ಇರಾದೆಯಿಂದ ತನ್ನ ಹೆಂಡ್ತಿ ಮಕ್ಕಳ ಒಟ್ಟಿಗೆ ಬೇರೆ ಚೀಪ್ತಿಕೊಂಡು ಬರುತ್ತಾರೆ. ಕುಟುಂಬದ ಇದೀ ಆಸ್ತಿಯನ್ನು ಯಾ ಅವುಗಳ ಆಂಶವನ್ನು ತನ್ನ ಹೆಂಡ್ತಿ ಮಕ್ಕಳಿಗೆ (ಆಕ್ರಮ ಲಭ್ಯನಾಡುವ ಇರಾದೆಯಿಂದ ಆವುವನ್ನೆರೆ ಮಾಡಿ ಕುಟುಂಬದ ಆಸ್ತಿಗೆ ಸುಳ್ಳು ವ ಕಲ್ಪನಾ ಪಾಲದ ಜವಾಬುದಾರಿ ಹೊರಿಸುತ್ತಾರಾಗಿ ತಿಳಿದುಬರುತ್ತದೆ. ನಮ್ಮ ಕುಟುಂಬಕ್ಕೆ ಈ ವರೆಗೆ ಸಾಲ ಇರುವದಿಲ್ಲಾ. ಇನ್ನು ಸಾಲ ಮಾಡುವ ಗರ್ಜು ಕೂಡಾ ಇರುವದಿಲ್ಲಾ. ಸದ್ರಿ ಸಂಕು ಶೆಟ್ರಿ ಕುಯುಕ್ತಿಯಿಂದ ಕುಟುಂಬದ ಆಸ್ತಿಯ ಪಟ್ಟಿ ಹೊಂದಿರುವದಾದೂ ಸದ್ರಿಯವರಿಗೆ ಸಾಲ ಪನ್ನೆರೆ ಮಾಡುವ ಅಧಿಕಾರ ಇರುವದಿಲ್ಲಾ. ಒಂದು ವೇಳೆ ಕುಟುಂಬದ ಆಸ್ತಿಗೆ ಸಾಲದ ಜವಾಬುದಾರಿ ಏನಾದರೂ ಯೊರ್ವಿದುವಾದರೆ ಸದ್ರಿ ಸಾಲಕ್ಕೆ ಸದ್ರಿ ಸಂಕು ಶೆಟ್ಟಿ ಸ್ವತಹಾ ಜವಾಬುದಾರಿಯಾಗಬೇಕು ವಿನಹಾ ಕುಟುಂಬದ ಆಸ್ತಿಗೆ ಸಾಲದ ಏನೊಂದು ಜವಾಬದಾರಿ ಹಿಡಿಯತಕ್ಕದ್ದಲ್ಲ. ಸದ್ರಿ ಸಂಕು ಶೆಟ್ರಿಗೆ ಯಜಮಾನನಾಗಿ ಕುಟುಂಬವನ್ನು represent ಮಾಡುವ ಅಧಿಕಾರ ಕೂಡಾ ಇರುವದಿಲ್ಲ. ಆದ್ರಿಂದ ಕುಟುಂಬದ ಹರವಾಗಿ ಯಾರೊಬ್ಬನೂ ಸದ್ರಿ ಸಂಕು ಶೆಟ್ರಿ ಕೂತೆ ವ್ಯವಹಾರ ನಡಿಸಗೂಡದು. ನಡ್ತಿಷಲ್ಲಿ ಆದು ಕುಟುಂಬದ ಮೇಲೆ ಸಂಭವಲ್ಲ ಎಂಬ ಸಂಗ್ತಿಯನ್ನು ಈ ಮೂಲಕ ಸರ್ವ ಜನರಿಗೆ ತಿಳಿಸಿರುತ್ತದೆ.

× ಈ ಎಡ ಹೆಬ್ಬೆಟ್ಟಿನ ಗುರುತು
ತಾನು ಸೆಡ್ಡಿ ರುಜು.
× ಎಡ ಹೆಬ್ಬೆಟ್ಟಿನ ಗುರುತು
ರಾಮಣ್ಣ ಶೆಟ್ಟಿ ರುಜು.
× ಈ ಎಡ ಹೆಬ್ಬೆಟ್ಟಿನ ಗುರುತು
ಮುತ್ತಯ್ಯ ಶೆಟ್ಟಿ ರುಜು.
ಸುಬ್ಬಯ ಶೆಟ್ಟಿ ರುಜು.
× ಈ ಎಡ ಹೆಬ್ಬಟ್ಟಿನ ಗುರುತು
ಎಂಕು ಶೆಟ್ಟಿ ರುಜು.

ತಾ 18-10-1948.

Notice

ಪುತ್ತೂರು ಡಿ. ಮು. ಕೋರ್ಟ್‌ನಲ್ಲಿ.

R E. P. 220/1948 in os 128/47

ನಾರಾಯಣ ಶೆಟ್ಟಿ — ಅರ್ಜಿದಾರ.

ಯಾಸ್ಸರ ಭಟ್ಟ ಸಹಾ — ಎದ್ರಿರು.

ಸದ್ರಿ ಅನ್ನಜ್ಞಾಯಿ 1, 3, 5ನೇ ಎದ್ರಿರು ಕೇವು ಗ್ರಾಮದಲ್ಲಿರುವ ಆಪ್ಪಯ್ಯ ಯಾನೆ ಗಣಪತಿ ಭಟ್ರ ಮಗ ಈಶ್ವರ ಭಟ್ರ 1, ಸದ್ರಿ ಗ್ರಾಮದಲ್ಲಿರುವ ಮಂಜಿಣ ಬೈಮೊಗ ದೇವಣ ರೈ, ಕಾಸ್ರಗೋಡು ತಾಲ್ಲೂ ಮಿಜ್ಜೂಗೋಡು ಗ್ರಾಮದಲ್ಲಿರುವ ಮಾಂಕು ರೈ, ಕೂಡಾ 3 ಜನರೀಗೆ ಯಾ ಮೂಲಕ ತಿಳಿಸುವುದೇನೆಂದ್ರೆ:—

ಅರ್ಜಿದಾರನು ಮೇಲ್ಕಂಡ os. 128/47 ನೇ ದಿಕ್ರಿಯನ್ನು 1ನೇ ಎದ್ರಿಯಿಂದ ಪರಾಭಾವಿಗೆ ಪಡಿದ ಅರ್ಜಿದಾರನು ಸದ್ರಿ ಪರಾಭಾವಿ ಮಾಂಜೂರಾತಿ ಜಗ್ಗೆರೆ ಬಗ್ಗೆ ಮೇಲ್ಕಾಡ ಅವ್ವಜ್ಞಾಯಿಯು ತಾ 1-11-1948ಕ್ಕೆ ಯಿರುವುದರಿಂದ ಆದಕ್ಕೆ ಆಕ್ಷೇಪಣಗಳ್ರೆ ಸದ್ರಿ ದಿವ್ಸ 11 ಗಂಟೆಗೆ ಸರಿಯಾಗಿ ಯೀ ಕೋರ್ಟ್ ಮುಂದೆ ಹಾಜ್ರಾಗಿ ಉದಪಜ್ಞಿಕೊಳ್ಳತಕ್ಕದ್ದೆಂಗ್ ತಪ್ಪಿಸ್ರೆ ಏಂಪು ನೈಜ ...ಕಾರಿಯಿಂದ ತೀರ್ಮಾನಿಸಲಾದೀತು.

(Sd) **C. S. Shasthry.**
Vakil for Petitioner.
ಪುತ್ತೂರು, ತಾ. 4-10-48

ನೋಟೀಸು

ಪುತ್ತೂರು ಡಿ. ಮು ಕೋರ್ಟ್‌ನಲ್ಲಿ.

os 300/1948.

ರಾಮಕೃಷ್ಣ ರಬರಾಯ—ವಾದಿ.

ಬಡುವ ಬ್ಯಾನಿ, ಮೊದುಕುಂಞಿ ಬ್ಯಾರಿ ಮಗ, ಪುತ್ತೂರು ತಾಲ್ಲೂ ಪಟ್ರಮೆ ಗ್ರಾಮ, —ಪ್ರತಿವಾದಿ.

ಸದ್ರಿ ಪ್ರತಿವಾದಿಗೆ ಕೋರ್ಟುಹುಕುಂ ಪ್ರಕಾರ ಈ ಮೂಲ್ಕ ತಿಳಿಸುವದೇನೆಂದ್ರೆ:

ತಾ. 20-4-47ಲ್ಲು ವಾದಿಗೆ ಪ್ರತಿವಾದಿ ಬಾಲಗೇಣ ಚೀಟು ಕೂಡಾ ಬರಕೊಟ್ಟು, ವಾದಿ ಬಾಬ್ತು ಪ್ರತಿವಾದಿ ಅನುಭವ್ವಿವ ಅಸ್ತಿ ಸ್ವಾಧೀನನೆಗೂವ ಮುಂದಿನ ಅಸ್ತಿ ಮತ್ತು ಕಟ್ಟಡಗಳ ನಷ್ಟಕ್ಕೆ ಕೂಡಾ ರೂ. 364-4-3ಕ್ಕೆ ವಾದಿ ನಿಮ್ಮ ಮೇಲೆ ಮಾಡಿದ ಮೇಲಿನ ವ್ಯಾಜ್ಯ ತಾ. 29-10-48ಕ್ಕೆ ತನ್ನಿಗೆ ಬರುತ್ತಿರುತ್ತದೆ. ಆ ಕುರಿತು ನಿಮ್ಮ ಅಕ್ಷೇಪಣೆ ಇದ್ದರೆ ಸದ್ರಿ ವ್ಯಾಜೆ ದಿನ ಪೂರ್ವಾಹ್ನ ಗಂಟೆ 11ಕ್ಕೆ ನೀವು ಕೋರ್ಟು ಮುಂದೆ ಹಾಜ್ರಾಗಿ ಉದಪಜ್ಞಿದಿದ್ದೆ ಯುಕ್ತ ಕುಂದಂತೆ ತೀರ್ಮಾನಿಸಲಾದೀತು.

M. Sadashiva Rao.
Pleader for Plaintiff.
Puttur, 6-10-48



ನಡಿಯುತ್ತಿರುವ ಚಿತ್ರ
ರಾಜಕಮಲದನಂ

ಅಂದೋಂಕೇ— ದುನಿಯಾ

ಲೀಲಾಚಿಟ್ನೀಸ್, ಮುನ್ನೂರ್, ಸುಲ್ತಾನಾ, ಮಹಿಸಾಲ್, | ಮನಮೋಹನ್‌ಕೃಷ್ಣ.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ತಾರೀಕು 22-10-48ರಿಂದ

ಬರುವ ಚಿತ್ರ: ಸನ್‌ರೈಸ್‌ದವರ

'ಮೋಬಾನ್'

ನಾಡರ್, ವೀಣಾ, ಯಾಕುಬ್, ಜಗದೀಶ ಶೆಟ್ಟಿ.

ಮಂಗಳೂರು

ಮಂಗಳೂರಲ್ಲಿ ಶ್ರೀ ಎ. ಬಿ. ಶೆಟ್ಟರು

ಗಾಂಧಿ ಜಯಂತಿ ಇದೇ ತಾ 9ರಲ್ಲು ಕೇಂದ್ರ ಮೈದಾನದಲ್ಲಿ ಮಹಾಜನ ಸಭೆಯೊಂದು ಏರ್ಪಾಡು ಸರಕಾರದ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ ಕೆ. ಕೆ. ಶೆಟ್ಟಿ, ಕೆ. ಕೃಷ್ಣರಾವ್, ಕೆ. ಎಸ್. ಆಳ್ವ ಮೊದಲಾದವರು ಮಹಾತ್ಮಾಜೀಯವರ ಆದರ್ಶಜೀವನದ ಧ್ಯೇಯಗಳನ್ನೆತ್ತಿ ಮಾತನಾಡಿದರು. ಸರಳಾರಡೊಡನೆ ಸರ್ವವಿಧದಲ್ಲೂ ಸಹಕರಿಸಬೇಕಾದುದು ಜನತೆಯ ಕರ್ತವ್ಯವೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಿಳಿಸಿದರು. ನಗರ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಶ್ರೀ ಎಚ್. ಕೆ. ತಿಂಗಳಾಯರು ಸ್ವಾಗತವಾದಗಳನ್ನರ್ಪಿಸಿದರು.

ಗವರ್ನಮೆಂಟ್ ಕಾಲೇಜಿನಲ್ಲಿ

ತಾ 11ರಲ್ಲು ಮಾನ್ಯ ಮಂತ್ರಿಗಳು ಗಾಂಧಿಜೀಯವರ ಭಾವಚಿತ್ರ ಅನಾವರಣ ಮಾಡ್ತು ತ್ತಾ ಮಹಾತ್ಮರ ಮಹಾತ್ಮೆ ಎತ್ತಿನೆ ಎಂಬುದನ್ನು ಸ್ಪಷ್ಟಪಡಿಸಿದರು. ಪ್ರಿನ್ಸಿಪಾಲ್ ಶ್ರೀ ಎಮ್. ಡಿ. ಹಸೀಮಿಯವರು ಮಂತ್ರಿಗಳನ್ನೂ ಇತರ ಸದ್ಗೃಹಸ್ಥ, ಗೃಹಿಣಿಯರನ್ನೂ ಸುಸ್ವಾಗತೀಕರಿಸಿದರು. ಉಪಾಹಾರ ವಂದಾರ್ಪಣೆಯಾದನಂತರ ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ವರ್ಧಂತಿ ಸಮಾರಂಭದಲ್ಲಿ

ಸ್ಕೌಟ್ ಎಲೋಶಿಯಸ್ ಕಾಲೇಜಿನ ತಾ 12ರಲ್ಲು ಜರಗಿದ ವರ್ಧಂತಿಯುತ್ಸವದಲ್ಲಿ ಶ್ರೀ ಶೆಟ್ಟರು ಅಧ್ಯಕ್ಷತೆವಹಿಸಿದರು. ಕಾಲೇಜಿನ ರೆಕ್ಟರರಾದ ರೆ. ಫಾ. ಕೊಯಿಲೊರವರು ವಂದಿಯನ್ನೋದಿದಬಳಿಕ ಶ್ರೀಮತಿ ಜೆ. ಎ ಎಲ್. ತಿಜೈಯವರು ಬಹುಮಾನವಿತರಣೆ ಮಾಡಿದರು. ಕಾಲೇಜು ಸಂಸ್ಥಾಪಕರನ್ನು ವಂದಿಸಿ ಈ ಕಾಲೇಜನ್ನು ಹೊರಡುವ ಪದವೀಧರರು ದೇಶಸೇವಾ ನಿರತರಾಗಿ ಹಳ್ಳಿ ಪಳ್ಳಿಗಳಲ್ಲಿ ತಮ್ಮ ಸೇವೆ ಸಲ್ಲಿಸಲು ಬಹಳಅಗತ್ಯವಾಗಿರಬೇಕೆಂದು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೇಳಿದರು

ಪದವು ಉಪನಗರ ರಚನಾ ಸಹಕಾರಿ ಸಂಘದ

ಉತ್ಪತ್ತಿನೆಯನ್ನು ತಾ 11ರಲ್ಲು ಶ್ರೀ ಎ. ಪಿ ಶೆಟ್ಟರು ನೆರವೇರಿಸಿದರು. ಶ್ರೀ ಸಿ. ಜಿ. ಕಾರ್ಲ್ಸನ್ ರವರು ನಗರ ರಚನಾದೋಜನೆಯನ್ನು ವಿವರಿಸಿದರು ಮಂತ್ರಿಗಳು ಈ ಯೋಜನೆಯನ್ನು ಅಭಿನಂದಿಸಿದುದು ಮಾತ್ರವಲ್ಲದೆ ಮಂಗಳೂರ ಸಮೀಪದಲ್ಲೆ ಒಂದು ಆದರ್ಶ ನಗರ ನಿರ್ಮಾಣವಾಗುವುದು ಸಂತೋಷಕರವೆಂದರು.

ಆರ್. ಎಸ್. ಎಸ್. ರವರ ದಸ್ತಗಿರಿ

ಆರ್. ಎಸ್. ಎಸ್. ಚಟುವಟಿಕೆಯನ್ನು ಹುನಿಪ ಆರಂಭಿಸಿದ ಆರೋಪದ ಮೇಲೆ ಶ್ರೀಗಳಾದ ಮಂಗಳೂರು ಆನಂತ ಪೈ, ಯು. ಮೋಹನ ತೆಪ್ಪೆ, ಕಟೀಲು ನರಶಿಂಹ ಪೈ, ಮತ್ತು ಉಳ್ಳಾಲ ನರಶಿಂಹ ಮಲ್ಯರನ್ನು ತಾ 11ರಲ್ಲು ದಸ್ತಗಿರಿಮಾಡಿ ಪುದುದಿನ ಕಣ್ಣಾನೂರಿನ ಸೆಂಟ್ರಲ್ ಜೈಲಿಗೆ ಕೊಂಡುಹೋಗಲಾಗಿದೆ. ಮುಖ್ಯಪ್ರಾಣ ರಕ್ಷಿಯಲ್ಲಿಯ ಜಯಭೇರಿ ಕಾರ್ಯಾಲಯ ಮತ್ತು ಪೇಜ್ಜಿಗುಡ್ಡೆ ಸಮೂಹದ ಭಜರಂಗ ವ್ಯಾಯಾಮ ಶಾಲೆಯ ಝಂಡತಯಾಗಿ ಕಾಗದ ಪತ್ರಗಳು ಸಿಕ್ಕಿವೆಯೆಂಗಿ ಹೇಳಲಾಗಿದೆ.

ಜಿಲ್ಲೆಯಲ್ಲಿ 1306 ಪಾನ ನಿರೋಧ ಅಪರಾಧಗಳು

ದ. ಕ. ಜಿಲ್ಲಾ ಪಾನನಿರೋಧ ಸಲಹೆ ಕಮಿಟಿಯ ಸಭೆಯು ಈ ಚೆಗೆ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೃಪಾರಂ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಪಾನನಿರೋಧ ಅಧೀಕ್ಷಕರಾದ ಶ್ರೀ. ಪಿ. ದಾಮೋದರ ನಂಬಿಯಾರರು ಒಂದು ವರ್ಷದ ಪಾನನಿರೋಧ ಕಾರ್ಯದ ವರದಿಯನ್ನೊಪ್ಪಿಸಿದರು. 1306 ಅಪರಾಧಗಳು ಇಡೀ ಜಿಲ್ಲೆಯಲ್ಲಿ ಕಂಡುಹಿಡಿಯಲ್ಪಟ್ಟು ವಿಚಾರಿಸಲಾಗಿವೆ ಎಂದು ವರದಿಯಲ್ಲಿ ಹೇಳಲಾಗಿತ್ತು.

ಜಿಲ್ಲೆಯ ಗಡಿಯಲ್ಲಿ ಮೈಸೂರು ಸಂಸ್ಥಾನದಲ್ಲಿರುವಂತೆ ಕೊಡಗಿನಲ್ಲೂ ಐದು ಮೈಲುಗಳೆಲ್ಲಿ ಪಾನನಿರೋಧ ಮಾಡಬೇಕೆಂದು ಶ್ರೀ ಕೆ. ಸರ್ವೋತ್ತಮರಾಯರು ಕೊಟ್ಟ ಸೂಚನೆಯನ್ನು ಮನ್ನಿಸಲಾಯಿತು.

ಉಳಿತಾಯ ಅಕ್ಕಿ, ಭತ್ತ ಒಪ್ಪಿಸುವ ಅವಧಿ ಹೊಸದುರ್ಗ ಸಬ್ ತಾಲೂಕು

ಅಕ್ಕಿ ಮತ್ತು ಭತ್ತವನ್ನು ಒಪ್ಪಿಸುವ ಸಂಬ್ರದಾಯವಿರುವ ಪುತ್ತೂರು ಮತ್ತು ಕಾಸರಗೋಡು ತಾಲೂಕುಗಳ ಭಾಗಗಳಲ್ಲಿ ಉಳಿತಾಯ ಭತ್ತವನ್ನು ತಾ 31-10-48ರ ಮೊದಲು ದ. ಕ. ಜಿಲ್ಲಾ ಸೆಂಟ್ರಲ್ ಕೊಆಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್ ಲಿಮಿಟೆಡ್ ಈ ಸಂಸ್ಥೆಗೆ ಯಾ ಇದರ ಡಿಪೊಗಳಿಗೆ ಒಪ್ಪಿಸಬೇಕು ಅಕ್ಕಿಯಾದರೆ ಎಲ್ಲಾ ತಾಲೂಕುಗಳಲ್ಲಿಯೂ ಆಧಾರಂಶವನ್ನು ತಾ 15-11-48ರೊಳಗೂ ಉಳಿದ ಆಧಾರಾಂಶವನ್ನು ತಾ 15-12-48ರೊಳಗೂ ಸ್ಟೋರ್ಸಿಗೆ ಒಪ್ಪಿಸಬೇಕು. ಈ ಅವಧಿಯೊಳಗಾಗಿ ಒಪ್ಪಿಸದಿದ್ದಲ್ಲಿ ಭತ್ತ ಮುದಿಯೊಂದರ ಎಂಟಾಣೆಯಂತೆಯೂ ಅಕ್ಕಿ ಮುಡಿಯೊಂದರ ಒಂದು ರೂಪಾಯಿಯಂತೆಯೂ ಕಡಿಮೆಮಾಡಲಾಗುವುದು ಎಂದು ಜಿಲ್ಲಾ ಕಲೆಕ್ಟರರ ಸರ್ಕಾರಾರು ಹೊರಬಿದೆ.

ಮಣಿ ಕರ್ನಾಟಕ ನಿರ್ಮಾಣಕ್ಕೆ ಮೈಸೂರು ಜನತೆಯ ಬೆಂಬಲ

ಕನ್ನಡ ಮಾತನಾಡುವ ಎಲ್ಲಾ ಪ್ರದೇಶಗಳನ್ನೆಲ್ಲ ಒಂದುಗೂಡಿಸಿ ಮಹಾಕರ್ನಾಟಕ ಪ್ರಾಂತ ನಿರ್ಮಾಣ ಕಾರ್ಯಕ್ಕೆ ಮೈಸೂರು ಜನತೆಯ ಸಂಪೂರ್ಣ ಬೆಂಬಲವಿದೆಎಂದು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ತಿರುಮಲೆ ತಾತಾಚಾರ್ಯ ಶರ್ಮರು ಇದೇ ತಾ 15ರಲ್ಲು ಮಂಗಳೂರು ಆಲಿಯಳನ್ನಾಟಿಕ ವಿಕೇಂದ್ರೀಕರಣ ಸಂಘದ ಕಡೆಯಿಂದ ಆವರಿಗಿತ್ತ ಸತ್ಕಾರಕೂಟದಲ್ಲಿ ಸ್ಪಷ್ಟಪಡಿಸಿದರು.

ತದನಂತರ ಶ್ರೀ ಶರ್ಮರು ಕನ್ನಡ ಸಾಹಿತ್ಯ ಪರಿಷತ್ತಿನ್ಗೈಯೆಯೋರೆಗೆಗಳನ್ನು ವಿವರಿಸಿ ಜನಸಾಮಾನ್ಯರ ಬೆಂಬಲವೂ ಅತ್ಯಾವಶ್ಯಕವೆಂದರು ಶ್ರೀ ಜನರಾಜ ಹೆಗ್ಡೆಯವರು ಮಹಾಕರ್ನಾಟಕ ನಿರ್ಮಾಣ ಕಾರ್ಯದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಪ್ರಮುಖ ಭಾಗವನ್ನು ವಹಿಸಬೇಕೆಂದೂ ಆದಕ್ಕೆ ತಮ್ಮೆಲ್ಲರ ಬೆಂಬಲವಿದೆ ಎಂದೂ ಹೇಳಿದರು.

ಶ್ರೀ ಎನ್. ಎಸ್. ಕಿಲ್ಲೆಯವರ ಭಾಷಣಗಳು

ಇದೇ ತಾ 9ರಲ್ಲು ಮೂಡಬಿದ್ರೆ ಶ್ರೀ ಸರಸ್ವತಿ ಸೇವಾ ಸಂಘದ ಆಶ್ರಯದಲ್ಲಿ 'ಮಹಾರಥಿಕರ್ಣ,' ತಾ 11ರಲ್ಲು ಬಳ್ಳಾರಿಯ ಮುನಿಸಿಪಲ್ ಹೈಸ್ಕೂಲು ಸಭಾ ಸದನದಲ್ಲಿ ದಸರಾ ಕಮಿಟಿಯ ಆಶ್ರಯದಲ್ಲಿ 'ಮಹಾಭಾರತದ ಕರ್ಣ' ಮತ್ತು ದಿನ ಅಲ್ಲಿಯ ತಾರಾನಾಥ ವಿದ್ಯಾಪೀಠದಲ್ಲಿ 'ಆಯುರ್ವೇದ' ತಾ 13ರಲ್ಲು ಮುನಿಸಿಪಲ್ ಹೈಸ್ಕೂಲು ಸಭಾ ಸದನದಲ್ಲಿ ದ. ಕ. ಜಿಲ್ಲಾ ಕನ್ನಡ ಸಂಘದ ಆಶ್ರಯದಲ್ಲಿ 'ಭಗವಾನ್ ಶ್ರೀಕೃಷ್ಣ' ಎಂಬೀ ವಿಷಯಗಳನ್ನೆತ್ತಿ ಭಾಷಣ ವಿತ್ತರು.

ಶ್ರೀ ತಲಪಾಡಿ ದೊಡ್ಡಮನೆ ನಾರಾಯಣ್ಣ ರೈಗಳು

ಇದೇ ತಾ. 12ನೆ ಮಂಗಳವಾರ ಅವರ 64ನೆ ವಯಸ್ಸಿನಲ್ಲಿ ದೈವಾಧೀನರಾದರು ಮರಣ ಕಾಲದಲ್ಲಿ ಇವರಿಗೆ ಯಾವ ಕಾಯಿಲೆಯೂ ಇದ್ದಿಲ್ಲ ಇವರು ಪ್ರಸಿದ್ಧ ಮನೆತನಕ್ಕೆ ಸೇರಿದವರಾಗಿದ್ದು ಯಕ್ಷಗಾನದಲ್ಲಿ ಹಿಂದಿನ ಉತ್ತಮ ಅರ್ಥಧಾರಿಗಳಲ್ಲಿ ಒಬ್ಬರಾಗಿದ್ದು ಪುತ್ತೂರಲ್ಲಿ ನಡೆದ ಬಂಟರ ಸಭೆಯಲ್ಲಿ ಸುವರ್ಣಪದಕ ಸಹ ಪಡೆದಿದ್ದರು. ಸಜ್ಜನ, ಸತ್ಯಾವಂತರಾದ ಇವರ ಅಕ್ಕಲ್ಕೆ ಚಿರಶಾಂತಿಯುಂಟಾಗಲೆಂದು ಕೋರಿ ಇವರ ಮಕ್ಕಳು ಶ್ರೀಗಳಾದ ಬಾಡೂರು ಜಗನ್ನಾಥ ರೈ, ಶಾಂತಾರಾಮ ರೈ ಮತ್ತು ವಿಠಲ ರೈಗಳಗುಂಟಾದ ಶೋಕದಲ್ಲಿ ನಮ್ಮ ಸಹಾನುಭೂತಿಯನ್ನು ಸೂಚಿಸುವೆವು.

ಉಡುಪಿ

ವಯಸ್ಕರ ಶಿಕ್ಷಣ ತರಬೇತಿ ಶಾಲೆಯ ಉದ್ಘಾಟನಾ ಸಮಾರಂಭವನ್ನು

ಮಾನ್ಯ ಮಂತ್ರಿ ಶ್ರೀ ಎ ಬಿ. ಶೆಟ್ಟರು ಇದೇ ತಾ 14ರಲ್ಲು ಸಂಜೆ ಇಲ್ಲಿಯ ಸರಕಾರೀ ಟ್ರೈನಿಂಗ್ ಶಾಲಾ ವಠಾರದಲ್ಲಿ ನೆರವೇರಿಸುತ್ತಾ ಈ ಹೊಸ ಯೋಜನೆಯಿಂದ ನಿರಕ್ಷರ ತಾನಿವಾರಿಕೆಯಾಗಲು ಕುಂದಾ ಆಸ್ಪದವಿಲ್ಲವೆಂದೂ ಇದರ ಯಶಶ್ವಿಗಾಗಿ ಜನತೆಯೇ ಮುಂದಾಗಬೇಕೆಂದೂ ಸರಕಾರಕ್ಕೂ ಜನತೆಗೂ ಏನೂ ವೇಧವಿಲ್ಲವೆಂದೂ ಸೂಚಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎ. ಲಕ್ಷ್ಮಿನಾರಾಯಣ ರಾಯರು ವಹಿಸಿದ್ದರು. ವಯಸ್ಕರ ಶಿಕ್ಷಣ ಇಲಾಖಾ ಆಫೀಸರ್ ಶ್ರೀ ಎ. ಜಿ ಇಲ್ಲ ರೋಯಿಗಳು ಸ್ವಾಗತ ಭಾಷಣಮಾಡಿ ಈ ಹೊಸ ಯೋಜನೆಯ ಧ್ಯೇಯಗಳನ್ನು ವಿವರಿಸಿದರು. ಮುಖ್ಯೋಪಾಧ್ಯಾಯ ಶ್ರೀ ಟಿ. ಎಲ್. ರಾಯರು ಧನ್ಯವಾದಗಳನ್ನರ್ಪಿಸಿದರು.

ಮುನಿಸಿಪಲ್ ಕೌನ್ಸಿಲು ಮಿಟಿಂಗು

ಇದೇ ತಾ 16ರಲ್ಲು ಚೆಯರ್‌ಮನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗೆ ರೂಪಾಯಿ 251/-ಸೆಂಕ್ಷನ್ ಮಾಡಲಾಯಿತು. ಖುಲಿಸ್ಥಳಗಳ ಮೇಲೆ ಅತ್ಯಧಿಕ ತೆರಿಗೆಯನ್ನು ಇದೇ ತಾ 1ರಂದ ಹೊರಿಸಬೇಕಾಗಿ ಸೂಚಿಸಿದ ಸರಕಾರೀ ಪ್ರಕಟಣೆಯನ್ನು ಪರಿಶೀಲಿಸಲಾಯಿತು. ಉಡುಪಿ ಮುನಿಸಿಪಾಲಿಟಿಯ ಕ್ಷೇತ್ರದಲ್ಲಿ ಹೆಚ್ಚಿನ ಸ್ಥಳವು ವ್ಯವಸಾಯಿಕ ಮತ್ತು ಖಾಲಿ ಸ್ಥಳವಾಗಿರುವುದರಿಂದ ಸರಕಾರವು ಸೂಚಿಸಿದ ಎಕ್ರೆ ಒಂಬರ ರೂಪಾಯಿ 181-8-0ರ ತೆರಿಗೆ ದರವನ್ನು ತೆರಿಗೆದಾರರು ಕೊಡಲು ಅಸಮರ್ಥರು- ಆದುದರಿಂದ ಈ ಮುನಿಸಿಪಾಲಿಟಿ ಮಟ್ಟಿಗೆ ಸದ್ರಿ ಪ್ರಕಟಣೆಯನ್ನು ಅನ್ವಯಿಸಲಾರದು; ಒಂದುವೇಳೆ ಹಾಗೆ ಮಾಡುವುದು ಅನಾಧ್ಯವೆಂದಾದರೆ ಮೇಲೆ ಸೂಚಿಸಿದ ದರದಲ್ಲಿ ಶೇಕಡಾ 25 ರಷ್ಟು ವಿತ್ರ ವಸೂಲಿಮಾಡುವರೆ ಅನುಮತಿ ಕೊಡಬೇಕಾಗಿ ಸರಕಾರವನ್ನು ವಿನಂತಿಸಲಾಯಿತು.

ಸಂಸ್ಕೃತ ಕಾಲೇಜು ಕಟ್ಟಡ ನಿರ್ಮಾಣಕ್ಕೆ ಧನಸಾಹಯ ನೀಡಲು ವಿನಂತಿ:

ಉಡುಪಿ ಸಂಸ್ಕೃತ ಕಾಲೇಜು ಸ್ಥಾಪಕರ ಸಭೆಯು ತಾ 18ರಲ್ಲು ಶ್ರೀ ಸೋದೆಯವರದಲ್ಲಿ ಪರ್ಯಾಯ ಶ್ರೀ ಸೋದೆ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರಗಿತು. ಕಾಲೇಜು ಕಟ್ಟಡ ನಿರ್ಮಾಣದ ಈ ತನಕದ ಕಾರ್ಯವನ್ನೂ ಆ ಬಗ್ಗೆ ಜಮೆಯಾದ ಪಣವನ್ನೂ ಪರಿಶೀಲಿಸಲಾಯಿತು. ಕಟ್ಟಡವು ಪೂರ್ಣವಾಗಬೇಕಾದರೆ ಇನ್ನೂ ಒಂದುಲಕ್ಷ ರೂಪಾಯಿಗಳು ಬೇಕಾಗಿರುವುದರಿಂದ ಆ ಸ್ಟು ಏವಜನ್ನು ಸಂಗ್ರಹಿಸಲು ಕರ್ನಾಟಕ, ತ್ರಿವಾಂಕೂರು, ಕೊಚ್ಚಿ ಮೊದಲಾದ ಸ್ಥಳಗಳನ್ನು ಸಂದರ್ಶಿಸಿ ಆಸ್ಥಿಕ ಮಹಾಶಯರಿಂದ ಉದಾರ ಸಹಾಯಪಡೆಯಲು ಶ್ರೀ ಅಧಮಾರು ಮಠದ ಶ್ರೀ ವಿಭುದೇಶ ತೀರ್ಥ ಸ್ವಾಮಿಗಳವರಿಗೆ ಅಧಿಕಾರವೀಯಲಾಯಿತು ಶ್ರೀ ಸ್ವಾಮಿಗಳವರು ಸದ್ಯವೆ ಪ್ರವಾಸ ದಾರ್ಯಕ್ರಮ ಕೈಕೊಳ್ಳಲಿರುವರು ಮಹಾಜನರು ಉದಾರ ಹಸ್ತದಿಂದ ವಿದ್ಯಾಕಾರ್ಯಕ್ಕಾಗಿ ಧನ ಸಹಾಯವೀಯಬೇಕಾಗಿ ವಿನಂತಿ ಸಲಾಗಿದೆ

ಪರೀಕ್ಷಾ ಮಾತ್ರದಿಂದಲೇ ಅತ್ಯುತ್ತಮ

× × ×

ಅತ್ಯಲ್ಪ ಬೆಲೆಯ ನಾಜೂಕಿನ ಆಟದ ಬಗ್ಗೆಗಳು

× × ×

ದೀಪಾವಳಿ ಹಬ್ಬದ ವಿಶೇಷತೆಗಾಗಿ

× × ×

ಸಾದಾ, ಪ್ರಿಂಟ್ ಮಾಡಲ್ಪಟ್ಟ ಮತ್ತು ನಿಟ

ಡಿಪೋ ಮತ್ತು ಸಬ್‌ಏಜಂಟರು:

1. ಕೆ. ಪಿ ವಿ. ಶೆಟ್ಟಿ, ಮೆಸರ್ಸ್ ನಂಬಿ ಸನ್ಸ್ ಬಟ್ಟರ್ಸ್‌ಗೀ, ಚರ್ಚ್‌ರೋಡು, ಹಂಪನಕಟ್ಟೆ, ಮಂಗಳೂರು, ದ. ಕನ್ನಡ.
2. ೨, ತಂಬು-ಚೆಟ್ಟಿ ಸ್ಟ್ರೀಟ್, ಜಿ. ಟಿ ಮದ್ರಾಸು.
3. ಶಿವರಾಮ ನೇಟ್ಟಿ, ಮೈಸೂರು.
4. ಸೈಕಾರಿಕ್, ಬೆನಾರಿಸ್.

ಹೆಚ್ಚಿನ ವಿವರಗಳಿಗೆ ಬರೆಯಿರಿ:-

To

Southern India Rubber Industries

Opp: Rationing Office,
"G" Ward,
Worli Naka,
Bombay, 18.

ವಿ. ಸೂ, ಪ್ರತಿಯೊಂದು ಸ್ಥಳದಲ್ಲೂ ಕಮಿಷನ್ ದ್ವಾರಾ ಕೆಲಸಮಾಡತಕ್ಕ ಉತ್ಸಾಹೀ ವಿಜಂಟರು ಬೇಕಾಗಿದ್ದಾರೆ. ಸಹಾಯವಿಕೆ ಮತ್ತು ದುರ್ವಾಸನೆಯಿಲ್ಲದ ಪಾತ್ರೆ ಸ್ಟಾಲುಗಳು.

ಪ್ರಗತಿ ಮಂಡಳಿ ಕೊಲ್ಲೂರು ಪಶ್ಚಿಮ

ಕನ್ನಡಿಗರೂ, ಸಾಹಸಿ ತರುಣರೂ ಆಗಿದ್ದ, ವಾಸುದೇವ ಶಿವದೇವ ಕಟ್ಟೆರು, ತನ್ನ ವ್ಯಾಪಾರಕ್ಷೇತ್ರವಾದ ಪೂನಾದಲ್ಲಿ ಕೈಯರೋಗದಿಂದ ಅಕಾಲ ಮೃತ್ಯುವಿಗೊಳಗಾದುದರ ದುಃಖಸೂಚಕಾರ್ಥವಾಗಿ, ಪ್ರಗತಿ ಮಂಡಳದ ಆದೇಶಕ್ಕನುಸಾರವಾಗಿ, ಇಲ್ಲಿಯ ಕನ್ನಡ ಬಂಧುಗಳೆಲ್ಲಾ, ಹೊಟೆಲ್ಲು, ಅಂಗ್ಡಿ, ಸ್ಕೂಲ್ಸ್‌ಗಳನ್ನು, ತಾ 4-10-48 ಸೋಮವಾರ ಮುಚ್ಚಿದ್ದರು. ಆದೇದಿನ ಮಧ್ಯಾಹ್ನ ಪ್ರಗತಿ ಮಂಡಳದ ಆಫೀಸಿನಲ್ಲಿ ದುಃಖಸೂಚಕ ಸಭೆನೇರಿ ಮೃತರ ಆತ್ಮಕ್ಕೆ ಶಾಂತಿಯನ್ನು ಬಯಸಿಕಲ್ಲದೆ, ಪೂನಾದಲ್ಲಿರುವ ಅವರ ವ್ಯಥಿತ ಪತ್ನಿಯರಿಗೂ, ತಂಗಿಯವರಿಗೂ, ಅವರ ವೃದ್ಧ ಪಿತರಾದ ಮುಂಡ್ಕೂರು ಉಳೆಪಾಡಿ ಹೊಸಮನೆ ಶಿವಪ್ಪ ಶೆಟ್ಟರಿಗೂ ತಂತಿ ಕಳುಹಿಸಿ ಸಹತಾಪ ಸೂಚಿಸಲಾಯಿತು.

ಇಲ್ಲಿರುವ ಹೊರಗಿನ ಕನ್ನಡಿಗರ ಏರವಾಗಿ ಪ್ರ. ಮಂಡಳದ ವಿಶ್ವಮಂಡಳವೊಂದು ಮಾನ್ಯ ಆಹಾರಮಂತ್ರಿಯರಲ್ಲಿ ಹೋಗಿ ರೇಶನ್ ಬಗ್ಗೆ ವಿಚಾರ ವಿನಿಮಯಿಸಿಕ್ಕಾರಂಭಿಸಿರುತ್ತದೆ.

ಉಡುಪಿ ರೈತರ ಕೇಳಿಕೆಗಳು

ಉಡುಪಿಯಲ್ಲಿ ಮಾನ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರಿಗೆ ಕೃಷಿಕ, ಕಿಸಾನ್, ರೈತರ ಪರವಾಗಿ ವಿನ್ನವತ್ತಳಿ

ಇದೇ ತಾ 14-ಲ್ಲು ಮದ್ರಾಸು ಸರಕಾರದ ಆರೋಗ್ಯಖಾತೆಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಉಡುಪಿಗೆ ಚಿತ್ತೈಸಿದರು. ಉಡುಪಿತಾಲೂಕಿನ ಕೃಷಿಕ, ಕಿಸಾನ್, ರೈತರ ಪರವಾಗಿ ಒಂದು ಶಿಷ್ಟಮಂಡಲವು ಮಂತ್ರಿಗಳನ್ನು ಭೇಟಿಯಾಗಿ ಮೆಮೊರಾಂಡಮ್ ಒಂದನ್ನು ಏರ್ಪಿಸಿತು. ಶಿಷ್ಟಮಂಡಳಿಯಲ್ಲಿ ಶ್ರೀಗಳಾದ ಬಿ. ಕೃಷ್ಣಯ್ಯ ಹೆಗ್ಡೆ (ನಾಯಕ), ಬಿ. ವಾಸುದೇವ ರಾವ್, ಬಿ. ಹಿರಿಯಣ್ಣ ಹೆಗ್ಡೆ, ಕೆ. ರಾಜಗೋಪಾಲ ಹೆಬ್ಬಾರ್, ಕೆ. ಭೋಜರಾಜ ಸೆಟ್ಟಿ, ಕೆ. ಗುರುರಾಜ ರಾವ್, ಎಚ್. ಗೋಪಾಲಕೃಷ್ಣ ಪೈ ಮತ್ತು ಬಿ. ಶಿವಪ್ಪ ಹೆಗ್ಡೆ ಇವರಿಷ್ಟು ಮಂದಿ ಇದ್ದರು. ಭಿನ್ನವತ್ತಳೆಯ ವ್ಯಾಮುಖ್ಯಾಂಶಗಳುಹೀಗಿವೆ.

ರಿಕ್ವಿಜಿಶನ್-ಈ ಕುರಿತು ಮದ್ರಾಸು ಸರಕಾರದ ಆಹಾರ ನಿಯಂತ್ರಣ ಕಾನೂನಿನ ಶರತ್ತುಗಳಾನುಸಾರವಾಗಿ ರೈತರಿಗೆ ಬಿಡಬೇಕಾದಷ್ಟು ಅಕ್ಕಿಯನ್ನು ಬಿಡದೆ ಗೇಣಿ ಅಕ್ಕಿಯನ್ನು ಸಹ ಉಳಿತಾಯದ ಲೆಕ್ಕದಲ್ಲಿ ಸೇರಿಸಿ ರಿಕ್ವಿಜಿಶನ್ ಮಾಡುವದು ನ್ಯಾಯ ನೀತಿಗೆ ಸರಿಯಲ್ಲ. ಬಡ ರೈತರು ಗೇಣಿಯ ಅಕ್ಕಿಯನ್ನು ತಮ್ಮ ಸ್ವಂತ ಉಪಯೋಗಕ್ಕೆ ಇಟ್ಟುಕೊಂಡು ಬದರ ಬೆಲೆಯನ್ನು ಧನಿಗಳಿಗೆ ಒಪ್ಪಿಸುವುದು ಎಷ್ಟೋ ಸಮಯದಿಂದ ನಡೆದುಬಂದ ಪದ್ಧತಿಯಾಗಿದೆ. ಪರಿಸ್ಥಿತಿ ಹೀಗಿದ್ದಾಗ್ಗೂ ರಿಕ್ವಿಜಿಶನ್ ಅಧಿಕಾರಿಗಳು ಎಲ್ಲವನ್ನೂ ಉಳಿತಾಯವೆಂದು ಲೆಕ್ಕಿಸಿ ಸ್ಟೋರಿಗಳಿಗೆ ಒಪ್ಪಿಸಬೇಕೆಂದು ಕೊಡುವ ನೋಟೀಸುಗಳನ್ನು ಮನ್ನಿಸಿ ಅಕ್ಕಿ ಭತ್ತವನ್ನು ಒಪ್ಪಿಸಿರುವರು. ಕೊನೆಗೆ ಜಾಸ್ತಿ ಕ್ರಯದ ಕೇಳು ತರಗತಿಯು ಎರಡು ಪಾವಿಗೂ ಕಡಿಮೆಯಾಗದ ಹಾಗೆ ಅಕ್ಕಿಯನ್ನು ಒಪ್ಪಿಸಬೇಕೆಂಬ ಆಜ್ಞೆಯನ್ನು ಹೊರಡಿಸಿದ್ದರಿಂದ ಬಡ ರೈತರು ಗೇಣಿಯ ಅಕ್ಕಿಯನ್ನು ಸಹ ಒಪ್ಪಿಸಬೇಕಾಗಿ ಬಂದಿದೆ. ಇದರಿಂದ ಬಡ ರೈತರಿಗೆ ಬಹಳ ತೊಂದರೆಯಾಗಿದೆ. ಆದುದರಿಂದ ಈ ಕಾನೂನಿನ ಶರತ್ತುಗಳಿಗೆ ಸಡಿಲಿಕೆ ಮಾಡಿ ಬಡ ರೈತರಿಗೆ ಅನುಕೂಲವಾಗುವಂತೆ ಮಾಡಬೇಕಾಗಿದೆ. ಪೂರ್ಣ ಗೇಣಿ ಅಕ್ಕಿಯನ್ನು ಸ್ಟೋರುಗಳಿಗೆ ಒಪ್ಪಿಸಬೇಕೆಂಬ ನಿರ್ಬಂಧದಿಂದಾಗಿ ಬಡ ರೈತರಿಗೆ ಕಸ್ಟ ನಷ್ಟಗಳು ವಿಪರೀತ ಮಟ್ಟಕ್ಕೇರಿವೆ. ಇತರ ಜಿಲ್ಲೆಗಳಲ್ಲಿ ಗೇಣಿ ಅಕ್ಕಿಯನ್ನು ಉಳಿತಾಯದ ಲೆಕ್ಕಕ್ಕೆ ಜಮೆ ಮಾಡುತ್ತಾರೋ ಇಲ್ಲವೋ ಎಂಬುದು ಸ್ಪಷ್ಟವಾಗಿಲ್ಲ. ಹಾಗೆ ಮಾಡುವುದಿಲ್ಲವಾದರೆ ದಕ್ಷಿಣ ಕನ್ನಡ ಕನ್ನಡ ಜಿಲ್ಲೆಗೆ ಮಾತ್ರ ಅದನ್ನು ಅನ್ವಯಿಸುವ ಸಾರ್ಥಕತೆಯೇನೂ ತಿಳಿಯದಾಗಿದೆ.

ಪ್ರಥಮ ಬೆಳೆಯ ಸಂಪೂರ್ಣ ಗೇಣಿ ಅಕ್ಕಿಯನ್ನು ಈ ತಾಲೂಕಿನಲ್ಲಿ ಸ್ಟೋರುಗಳಿಗೊಪ್ಪಿಸಬೇಕೆಂದ ನಿಯಮವಿದೆಯೆಂದು ತಿಳಿದುಬಂದಿದೆ. ಆದರೆ ಮಂಗಳೂರು ಹಾಗೂ ಇತರ ತಾಲೂಕುಗಳಲ್ಲಿ ೨/೩ಂಶ ಮಾತ್ರ ಕೊಟ್ಟರೆ ಸಾಕೆಂದು ಊಹಿಸಲಾಗಿದೆ. ಪ್ರತಿತಾಲೂಕಿನ ಪರಿಸ್ಥಿತಿ ಒಂದೇ ರೀತಿಇರುತ್ತ ಉಡುಪಿ ತಾಲೂಕಿಗೆ ಮಾತ್ರ ಈ ಕುರಿತು ದ್ವೇಷ ಏಕೆಂಬುದು ತಿಳಿಯದಾಗಿದೆ. ಬತ್ತ ಒಪ್ಪಿಸುವ ಪ್ರಥಮ ಮತ್ತು ದ್ವಿತೀಯ ಕಂತುಗಳ ಅವಧಿಯನ್ನು ನವೆಂಬರ್ 15 ಮತ್ತು 30ನೆ ತಾರೀಖೆಯೇ ಅಕ್ಕಿಯ ಅವಧಿಯನ್ನು ಡಿಸೆಂಬರ್ 15 ಮತ್ತು ಜನವರಿ 15ಕ್ಕೂ ಮುಂದಕ್ಕೆ ಸಬೇಕು.

ಅಕ್ಕಿಭಾಗ್ಯ- ಈ ಜಿಲ್ಲೆಯಲ್ಲಿ ಬೆಳೆ ಕಟಾವು ಅಕ್ಟೋಬರ್ ತಿಂಗಳಲ್ಲಿ ವ್ಯಾಪಕವಾಗುವುದಾದರೂ ಇತರ ಜಿಲ್ಲೆಗಳಲ್ಲಿ ಪ್ರಾರಂಭವಾಗುವ ಕಾರಿಫ್ ಬೆಳೆಯ ಸಮಯದಲ್ಲಿಯೇ ಅಕ್ಕಿಭಾಗ್ಯವು ನಿರ್ಧಾರವಾಗುತ್ತಿದೆ ಎಂಬುದು ಗತವರುಷಗಳ ಅನುಭವದ ಮಾತಾಗಿದೆ. ಕಳದವರುಷ ಕ್ಲುಪ್ತಕಾಲದಲ್ಲಿ ಅಕ್ಕಿಯನ್ನು ಕೊಟ್ಟವರಿಗೆ ಮುಡಿಗೆ ರೂಪಾಯಿ 11-9-2 ಕೊಡೋಣವಾಗಿತ್ತು. ಅವಧಿದಾಟಿ ದರಂದ 6ನೆ ತಾರೀಕು ನಂತರವೂ ಕೊಟ್ಟವರಿಗೆ ಮುಡಿಗೆ ರೂಪಾಯಿ 12-2-0 ರಂತೆ ದೊರೆತಿತ್ತು. ಇದರಿಂದಾಗಿ ಕಾಲದಲ್ಲಿ ಅಕ್ಕಿ ಒಪ್ಪಿಸಿದವರಿಗೆ ನಷ್ಟವುಂಟಾಗಿತ್ತು. ಆದುದರಿಂದ ಈ ಜಿಲ್ಲೆಯವಟ್ಟಿಗೆ ಅಕ್ಟೋಬರ 1ನೆ ತಾರೀಕಿಗೆ ದರ ನಿಶ್ಚಯಿಸಬೇಕು. ಒಂದು ವೇಳೆ ಸರಕಾರವು ಅಕ್ಕಿ, ಭತ್ತದ ಬೆಲೆ ಈ ತನಕ ನಿಶ್ಚಯಿಸದಿದ್ದರೆ ಕಾಲದಲ್ಲಿ ಅಕ್ಕಿ, ಭತ್ತ ಒಪ್ಪಿಸಿದವರಿಗೆ ಸರಕಾರವು ನಿಶ್ಚಯಿಸಬಹುದಾದ ಬೆಲೆಯ ಚಾಸ್ತಿ ಅಂಶವನ್ನು ಕ್ರಮೇಣವಾದರೂ ಕೊಡಬೇಕು. ಇಂತಹ ಪ್ರೋತ್ಸಾಹ ದೊರೆತರೆ ಬಡ ರೈತರು ಜಾಸ್ತಿ ಆಹಾರ ಧಾನ್ಯಗಳನ್ನು ಬೆಳೆಸಲು ಅನುಕೂಲವಾಗುವುದು.

ರಿಕ್ವಿಜಿಶನ್ ಸ್ಥಳದಲ್ಲಿ ಕೊಡುವ ಅಕ್ಕಿಯ ದರವನ್ನು ಸರಕಾರವು ನಿಶ್ಚಯಿಸಿದ್ದಾಗ್ಗೂ ಬಡ ರೈತರು ತಮ್ಮ ನಿವಾಸದಿಂದ ಸಿ ಧಾರಣ ಏದು ವೈಲು ದೂರವಿರುವ ಸ್ಥಳಗಳಿಗೆ ಒಯ್ದು ಅಲ್ಲಿ ಒಪ್ಪಿಸಬೇಕಾಗಿದೆ ಇದರಿಂದಾಗಿ ನಷ್ಟವೇ ಉಂಟಾಗುತ್ತದೆಂದರೆ ಅತಿಶಯೋಕ್ತಿ ಆಗಲಾರದು. ಒಂದರ ವೈಲಿಗೆ ಒಂದಾಣೆಯಂತೆ ಜಾಸ್ತಿ ಸಾಗಿಲು ವಾರು ಸಿಕ್ಕಬೇಕು. ಅಕ್ಕಿ ಒಪ್ಪಿಸುವ ಡಿಪೋಗಳು ಜಾಸ್ತಿಯಾಗಬೇಕು. ಅಂತೆಯೇ ಗಿರಿಜನರಿಗೆ ವಸ್ತ್ರ ಮಾರಾಟದ ಅಂಗಡಿಗಳು ಪ್ರತಿಯೊಂದು ಗ್ರಾಮದಲ್ಲಿರಬೇಕಾಗಿದೆ.

ಅಕ್ಕಿಯ ಬೆಲೆಯು ಮುಡಿ ಒಂದರ ರೂಪಾ 12-2-0 ಇದ್ದು ಭತ್ತದ ಕ್ರಯ ಮುಡಿ ಒಂದರ ರೂಪಾಯಿ 5-6-0 ಮಾತ್ರ ಇರುವುದು ಸರಿಯಲ್ಲ. ಸಾಧಾರಣ 7 ಕಳಸಿಗೆ ಭತ್ತಕ್ಕೆ ಒಂದು ಮುಡಿ ಅಕ್ಕಿ ದೊರೆಯುತ್ತದೆ ಒಂದು ಮುಡಿ ಅಕ್ಕಿಯನ್ನು ಮಿಲ್ಲಿನಲ್ಲಿ ತಯಾರಿಸುವರೆ ಎಂಟಾಣೆಗಿಂತ ಜಾಸ್ತಿ ಖರ್ಚಾಗಲಿಕ್ಕಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಭತ್ತದ ಕ್ರಯವನ್ನು ಮುಡಿ ಒಂದರ ರೂಪಾಯಿ 5-13-0ಕ್ಕೆ ಏರಿಸಬೇಕಾಗಿದೆ.

ಕಾಲದಲ್ಲಿ ಒಪ್ಪಿಸದಿದ್ದವರಿಂದ ವಸೂಲಾದ ದಂಡನೆ ಹಣವನ್ನು ಅಯಾಯಾ ಗ್ರಾಮದ ಅಭಿವೃದ್ಧಿ ಕಾರ್ಯಕ್ರಮಗಳಿಗೇ ವಿನಿಯೋಗಿಸಬೇಕಾದುದು ನ್ಯಾಯ ನೀತಿಗೆ ಸರಿಯಾದದ್ದು ಏನಹಾ ಸರಕಾರದ ಜೊಕ್ಕಸಕ್ಕೆ ಜಮಾ ಮಾಡುವುದಲ್ಲ.

ರೈತರ ಹುಟ್ಟುವಳಿಯನ್ನು ಅಂಕಿತದಲ್ಲಿರಿಸಿಕೊಳ್ಳುವ ಸರಕಾರವು ಅವರಿಗೆ ಅತ್ಯಗತ್ಯ ಬೇಕಾಗುವ ರಸಾಯನಿಕ ಗೊಬ್ಬರ, ಸಾಮಗ್ರಿಗಳನ್ನು ಸಕಾಲದಲ್ಲಿ ಯೋಗ್ಯ ದರದಲ್ಲಿ ಸಿಕ್ಕುವಂತೆ ಯೋಗ್ಯ ವ್ಯವಸ್ಥೆ ಮಾಡಬೇಕಾಗಿದೆ.

ಸಿಮೆಂಟು-ಜನತೆಗೆ ಸರಾಗವಾಗಿ ಸೀದಾ ರೀತಿಯಲ್ಲಿ ಸಿಕ್ಕುವುದು ಕಷ್ಟಸಾಧ್ಯವಾಗಿದೆ. ಈ ತಾಲೂಕಿಗೆ ಹೆಚ್ಚು ಸಿಮೆಂಟು ಸೆಂಕ್ಷನ್ ಆಗಬೇಕಾಗಿದೆ. ಸುವ್ಯವಸ್ಥಿತ ವಿಜನ್ಸ್ಗಳ ಮೂಲಕ ಸರಾಗ ದೊರೆಯುವಂತೆ ಗಬೇಕಾಗಿದೆ.

ಕಮ್ಮುಕಿ ಸ್ಥಳಗಳನ್ನು- ರೈತರಿಗೆ ಅವರ ಸಾಗುವಳಿ ಸೌಕರ್ಯಗಳ ಸಲುವಾಗಿ ಈ ಮೊದಲು ಕೊಡುತ್ತ ಬಂದ ಸದ್ಭಕ್ತಿ. ಆದರೆ ಈಚೆಗೆ ಅಂತಹ ಸ್ಥಳಗಳ ಮೇಲೆ ತೀರ್ವೆ ಹೊರಿಸೋಣವಾಗುತ್ತದೆ. ಹಕ್ಕು ಎಚ್ಚರಗಳೂ ಮೆಲ್ಪಟ್ಟು ಕಾಮುಕಿ ಸ್ಥಳಗಳ ಜೀರೋದು ವಿಷಯದಲ್ಲಿರುವ ಪ್ರಶ್ನೆಬಂಧವನ್ನು ಕೂಡಲೇ ತೆಗೆಯಬೇಕಾಗಿದೆ.'

ಮಾನ್ಯ ಮಂತ್ರಿಗಳು ಸಾವಧಾನರಾಗಿ ಲಾಲಿಸಿ ಭಿನ್ನವತ್ತಳೆಯಲ್ಲಿ ಸೂಚಿಸಿದ ವಿಷಯಗಳು ಸಹಜವಾದುದೆಂದು ಜಿಜ್ಞಾಸುವಿತ್ತು ಈ ಕುರಿತು ತನ್ನ ಸಹಸಾಟೆ ಮಂತ್ರಿಗಳೊಡನೆ ತಿಳಿಸುವೆನೆಂದರು.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕೆಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ

ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮರ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ವಿಶೇಷ ಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ವಿಷಧ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ವಾನಪ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಕಾಸ್ಮೋಪಾಲಿಕ್ ರೀತಿಯಿಂದ ಹೊಲ್ಲಾಂಡ್ ದೇಶದಲ್ಲಿ ಪ್ರಮುಖ ಕಂಪನಿಯಿಂದ ತಯಾರಿಸಲ್ಪಟ್ಟಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ- ಮೂತ್ರಕೋಶ, ಬಹುಮೂತ್ರ-ಸೀಮೂತ್ರ, ಆನ್ಸಕೋಶ, ಕಲಿಬೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂದಲು ಕ್ಷಯ, ಮೇಘಮ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಣಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲಿನಗಳು ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾಗುವದಕ್ಕೆ ಸಾವಿರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವದರಲ್ಲಿ ಸಂದೇಹವೇನಿಲ್ಲ! ಕವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಧವಾ ನಾರಗಳ ಬಲಹೀನತೆಯಿಂದಲೇ ಆಗಿರಲಿ ಬಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳಹೊಟ್ಟೆನೋವು,ತಿಮಿಗ ಉಪದ್ರವ ಹೆಂಗಸರ ನುಪ್ಪಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು,ಗುಣ್ಣು ಇತ್ಯಾದಿಗಳಿಗೆ ಇದೊ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಿಗ ಶ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಷಿ 1ಕ್ಕೆ ರೂ. 2 8-0 ವಿ. ಪಿ ಬೇರೆ ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಟಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಪಲುಗಳಿಗೆ ರೂ.42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಬೇರೆ. ಒಂದುಡಜನ್ ಡ್ರಪರ್ ಬಾಟ್ಲಿಗಳಿಗೆ ರೂ. 60-0-0 ವಿ. ಪಿ ಸಹಿತ ವಾನಿಂಗ್ ಟಿಲ್ಲಿ ಆಯಿಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18. ವಿ ಪಿ.ಮಾಡಿ.

ಪ್ರಶಂಸನಾ ಪತ್ರ—ನಾನು ನಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಬೇಜಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯೆಂದೇ ಯೋಗಿಯಾದ ಆಯುರ್ವೇದಿಕ್ ವೈದ್ಯರಾದ ಸಿ. ಬೇಕಹರಿಮಣಿಯವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲೆಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ಬಾಹಾನು ರೋಡು, ಬಿ. ಎಂಡ್ ಸಿ ಐ. ರೈಲ್ವೆ.

The Eclipse Distributing Agency,
Dahanu Road, B B. & C. I. Rly.

ಬೊಂಬಾಯಿ ಸ್ವಾಕೆದ್ದರು:—ಅಕ್ಕನಾಲಾ ಲಿಮಿಟೆಡ್, 26, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2.

ಬಾಣಂತಿಯರ ಸಲುವಾಗಿಯೇ ನೇಕ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಮೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಧಾಗ್ಯಶಾಲಿಗಳಿಗೂ ಸುಲಭವಾಗಿರುವುದು.



ನವಜೀವಾತು ಎಂಬ
ಸೂತಿಕಾ ರಸಾಯನ

೪ ದಿವ್ಸನ ಬಾಣಿಗಳು ಹೆಚ್ಚು ಕಡಿಮೆ ಅಲಿವಿಸಗಳಿಗೆ ಬರುವವು. ಅಂದರೆ ಕೇವಲ ೪ ರೂಪ್ಯಾಗಳು ಒಂದು ಬಾಣಂತಿನಿಗೆ ಸಾಕಾಗುವುವು ವಿಶೇಷ ವಿವರಕ್ಕೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

ಸ್ವಾಮಿಸ್ವರು- ಡಾ| ಐ. ಕೆ ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲೆ ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಜ್ಯೋವನಪ್ರಾಶ (ಬಂಗಾರ ಮಿಶ್ರಿತ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಪೀನ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ಂ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಲಿಸಂಗ್ರಿ ಬರದಿಲ್ಲಿ ರೋಗಕ್ಕೆ ತಕ್ಕಷಾದ ಔಷಧಿ ರವಾನಿಸಬಹುದು. (1) ಉಡುಪಿ ವಿಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ವಿಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜೆ. ಐ. ಪಿ. ರೈಲ್ವೆ ನರ್ಸ್ ಹೋಮ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ನ್ಯಾನಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿರುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಎಲ್ಲ ತರಹ ದಂತ ರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಜನಮತ

ಪುನಃ ಆಹಾರ ಧಾನ್ಯಗಳ ಮೇಲೆ ಕಂಟ್ರೋಲ್

ಗಳಿಸಿದೇ ಇಸವಿಯಲ್ಲಿ ಯಾವ ರೀತಿಯಲ್ಲಿ ಪ್ರೊಕ್ಯೂರ್‌ಮೆಂಟ್ ಮತ್ತು ರೇಶನಿಂಗ್ ಇರುತ್ತಿತ್ತೊ ಅದೇ ಕ್ರಮದಿಂದ ಈಗ ಪುನಃ ಅವುಗಳು ಜಾರಿಗೆ ಬರಬೇಕೆಂದು ಸರಕಾರದವರು ನಿಶ್ಚಯಿಸಿರುವರು. ಪ್ರೊಕ್ಯೂರ್‌ಮೆಂಟ್ ಮತ್ತು ರೇಶನಿಂಗ್ ಕ್ರಮವು ಹೊಸಲಂತೆಯೇ ಎಂದಾದಮೇಲೆ ಅವುಗಳಿಂದ ವರ್ಗದಾರರಿಗೆ ಮತ್ತು ರೈತರಿಗೆ ಆಗತಕ್ಕ ತೊಂದರೆಗಳು ಕೂಡಾ ಮೊದಲಿನಂತೆಯೇ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪ್ರೊಕ್ಯೂರ್‌ಮೆಂಟ್ ಕ್ರಮವು ಕಳೆದ ವರ್ಷಕ್ಕಿಂತಲೂ ಕಠಿಣ ರೀತಿ; ರೇಶನ್ ಮೊದಲಲ್ಲ ಗಾ! ಪಾವು ಸಿಗುತ್ತಿದ್ದರೆ ಸುಮಂತೆ !! ಪಾವು ಯಾ ೧ ಪಾವು ಮಾತ್ರ!

ಈ ವರೆಗೆ ಪ್ರೊಕ್ಯೂರ್‌ಮೆಂಟ್ ರೂಲುಗಳಿಗೆ ಅನುಸರಿಸಿ ನಡೆಯಲು ಅಸಾಧ್ಯವಾದ ರೈತರಿಗೆ ಜುಲ್ಮಾನೆ ಮಾತ್ರ ಇತ್ತು. ಇನ್ನು ಮುಂದೆ ಅಂಥವರಿಗೆ ಕಠಿಣ ಸಜೆ ಎಂದು ಸರಕಾರದವರು ತಿಳಿಸಿರುತ್ತಾರೆ. ಹಾಗಾದರೆ ಇನ್ನು ಮುಂದೆ ಗದ್ದೆ ಸಾಗುವಳ್ಳಿ ಮಾಡುವವನು ಒಂದು ಕಾಲು ಜೈಲಿನ ಒಳಗೇನ ಮೊದಲಾಗಿ ಇಟ್ಟುಕೊಳ್ಳಬೇಕು. ಹಳ್ಳಿಗಳಲ್ಲಿ ಪರಸ್ಪರ ವಿರೋಧಿಗಳಿರುವುದು ಒಂದು ಸಾಮಾನ್ಯವಾದ ವಿಷಯ. ತನ್ನ ವಿರೋಧಿಯನ್ನು ಜೈಲಿಗೆ ಕಳುಹಿಸಬೇಕಾದರೆ ಇದೇ ಒಂದು ಸುಸಂದರ್ಭ. ಶ್ಯಾನುಭೋಗರನ್ನು ಯಾ ಸಪ್ಲೈ ಆಫೀಸರುಗಳನ್ನು ಸ್ವಾಧೀನಪಡಿಸಿಕೊಂಡಲ್ಲಿ ಆತ ಸುಲಭದಲ್ಲಿ ತಮ್ಮ ತಮ್ಮ ದ್ವೇಶಗಳನ್ನು ಸಾಧಿಸಿಕೊಳ್ಳಬಹುದು.

ಸರಕಾರದ ಹೇಳಿಕೆ ನೋಡಿದರೆ ಪ್ರೊಕ್ಯೂರುಮೆಂಟ್ ಮತ್ತು ರೇಶನಿಂಗ್ ಇನ್ನು ಕೆಲವು ಕಾಲ ಶಾಶ್ವತವಾಗಿ ನಿಲ್ಲುವುದು. ಆಂತೂ ನಮ್ಮ ಸಪ್ಲೈ ಆಫೀಸರುಗಳ ಬಯಕೆಯನ್ನು ಸರಕಾರದವರು ತೀರಿಸಿದರು. ಯುದ್ಧಕಾಲದಲ್ಲಿ ಎ. ಒ. ಜಿ. ಯಲ್ಲಿ ಜರ್ಚಿಸದೆ ಬರೆಗವರ್ನರರ ಅಡಿನಿಸ್ಟ್ರೇಶನ್ನಿಗಳಿಂದ ಕಾನೂನು ಮಾಡುವ ರೂಢಿಯನ್ನು ನಮ್ಮ "ಪ್ರಜಾ ಸರಕಾರದವರು" ಖಾಯಂ ಮಾಡಿರುತ್ತಾರೆ. ಈಗ ಪ್ರೊಕ್ಯೂರ್‌ಮೆಂಟ್ ಕಾನೂನು ಜಾರಿಗೆ ತರಬೇಕೆಂಬ ಆಭಿಲಾಷೆ ಸರಕಾರಕ್ಕೆ ಇದ್ದರೆ ಆ ಕಾನೂನನ್ನು ಒಂದು ಬಿಲ್ ಮೂಲಕ ಬಾಕಿ ಎಲ್ಲಾ ಕಾನೂನಿನಂತೆ ಎಸೆಂಬ್ಲಿಗಳಲ್ಲಿ ಜರ್ಚಿಸಿ ಕಾನೂನು ಮಾಡುವುದು ಯಪಕ್ತವಾಗಿತ್ತು. ಈಗ ಪುನಃಗವರ್ನರರ ಪ್ರೊಕ್ಯೂರ್‌ಮೆಂಟ್ ಆರ್ಡರ್ ಎಂದು ಹೊರಡಿಸಿದ್ದು ಸರಿಯಲ್ಲ. ಈ ಆರ್ಡರ್‌ಗಳಿಂದ ಸಪ್ಲೈ ಆಫೀಸರುಗಳು ತಮಗೆ ಕಾಸಿ ಬಂದ ಅರ್ಥ ಅನರ್ಥಗಳನ್ನು ಮಾಡಿ ರೈತರನ್ನು ಹಿಂಸಿಸಲು ಅತೀ ಸುಲಭವಾಗುತ್ತದೆ. ಉಳಿತಾಯವನ್ನು ಮಾತ್ರ ಪ್ರೊಕ್ಯೂರ್ ಮಾಡಬೇಕೆಂದು ಸರಕಾರದ ಘೋರಣೆ ಕಾಗದದಲ್ಲಿ. ಆದರೆ ಎಲ್ಲಾ ಉತ್ಪತ್ತಿಯನ್ನು ಯಾ ಉತ್ಪತ್ತಿಗಿಂತಲೂ ಹೆಚ್ಚು ಕೂಡಾ ಉಳಿತಾಯವೆಂದು ನಿರ್ಧರಿಸುವ ಹಕ್ಕು ಶ್ಯಾನುಭೋಗರಿಗೆ ಮತ್ತು ಸಪ್ಲೈ ಆಫೀಸರರಿಗೆ. ಶ್ಯಾನುಭೋಗರು ನಿರ್ಣಯಿಸಿದ ಉಳಿತಾಯದ ಸಂಖ್ಯೆಯು ರೆವೆನ್ಯೂ ಬೋರ್ಡಿಗಾಗಲೀ ಮಂತ್ರಿಗಳ ಪರಿಗಾಗಲಿ ಹೋದರೆ ಕೂಡಾ ರದ್ದಾಗುವುದಿಲ್ಲ. ಕೆಲವು ವೇಳೆ ತೆಂಗಿನತೋಟದಲ್ಲಿಕೂಡಾ ಅಕ್ಕಿ ಬೆಳೆಯುತ್ತಿದೆಂದು ಹುಕುಂ ಆಗಬಹುದೆ. ರೈತರಿಗೆ ಮತ್ತು ವರ್ಗದಾರರಿಗೆ ನ್ಯಾಯವಾಗಿ ಬೇಕಾದ ಅವಶ್ಯಕತೆಯನ್ನು ನಿರ್ಧರಿಸುವ ಯಾವ ವ್ಯವಸ್ಥೆಯೂ ಈಗಿನ ಕಾನೂನು ಮೇರೆಗೆ ಇರುವುದಿಲ್ಲ. ಈ ಸಂದರ್ಭದಲ್ಲಿ ಈ ಬಾಯಿಯಿಂದ ತಪ್ಪಿಸಿ ಜೀವ ಬದುಕಿಸಬೇಕಾದರೆ "ಸುಳ್ಳು, ಮೋಸ, ಕಳ್ಳ ಸಂತೆ ಮತ್ತು ಲಂಚ" ಇವೆಲ್ಲಾ ಅಗತ್ಯ ನ್ಯಾಯವಾದ ಉಳಿತಾಯವನ್ನು ಪ್ರೊಕ್ಯೂರ್ ಮಾಡಿದಲ್ಲಿ ಯಾರಿಗೂ ಆನ್ಯಾಯವಾಗಲಾರದು. ಆದರೆ ನ್ಯಾಯವಾದ ಉಳಿತಾಯವನ್ನು ಮಾತ್ರ ಸಂಗ್ರಹಿಸಿದಲ್ಲಿ "ಮೋಸ, ಸುಳ್ಳು, ಕಳ್ಳ ಸಂತೆ" ಇವುಗಳ ಅವಶ್ಯಕತೆ ರೈತರಿಗೆ ಇಲ್ಲ. ಆದರೆ ಇವುಗಳಿಗೆ ಅವಕಾಶವಿದ್ದರೆ ಮಾತ್ರ "ಲಂಚಕ್ಕೆ" ಸಂದರ್ಭವಿದೆ. ಎಂದಾದ ಮೇಲೆ ಪ್ರೊಕ್ಯೂರುಮೆಂಟ್ ಮತ್ತು ರೇಶನಿಂಗಿಂದಾಗಿ ಹಳ್ಳಿಯ ಜನರಿಗೆ "ಸುಳ್ಳು, ಮೋಸ, ಕಳ್ಳಸಂತೆ ಲಂಚ" ಇವುಗಳನ್ನು ಸರಕಾರವೇ ಅಭ್ಯಾಸ ಮಾಡಿಸಿದಂತಾಯಿತು. ಇದಕ್ಕಾಗಿ ಗಾಂಧಿಜಿಯವರು ಆಹಾರದ ಮೇಲಿನ ಕಂಟ್ರೋಲಿನಿಂದ 'ಸುಳ್ಳು, ಮೋಸ, ಕಳ್ಳಸಂತೆ' ಮೊದಲಾದವುಗಳನ್ನು ಅಭ್ಯಾಸ ಮಾಡಬೇಕಾದ ಕಾರಣ ಈ ಕಂಟ್ರೋಲನ್ನೆ ತೆಗೆಯಬೇಕೆಂದು ಚಟ ಹಿಡಿದುದರಿಂದ ಒಮ್ಮೆಗೆ ಕಂಟ್ರೋಲಿನ ಹೆಚ್ಚಿನಂಶ ತೆಗೆಯಲಾಯಿತು. ಇದರ ಪರಿಣಾಮವಾಗಿ ಎಷ್ಟೋ ಹೆಚ್ಚು ಗದ್ದೆಗಳಲ್ಲಿ ಈ ವರ್ಷ ಭತ್ತವನ್ನು ರೈತರು ಬೆಳೆಸಿರುವುದನ್ನು ನಾವು ನಮ್ಮ ಕಣ್ಣ ಮುಂದೆ ನೋಡುವ ವಿಚಾರ. ಆದರೆ ಗಾಂಧಿಜಿಯವರ ಜೊತೆಯಲ್ಲಿಯೇ ಆವರ ತತ್ವಗಳು ಕಣ್ಮರೆಯಾಯುವು. ನಮ್ಮ ಮುಂಬಾಳುಗಳು ಎನ್ನುವ ಜನರು ಗಾಂಧಿಜೀಯ ಹೆಸರು ಮಾತ್ರ ಹೇಳಿ ಜನರನ್ನು ವಂಚಿಸಿ ಓಟುಗಳನ್ನು ಕಿತ್ತುಕೊಳ್ಳುವರೆ ಉಪಯೋಗಿಸುತ್ತಾರೆ ವಿನಹ ಆವರ ತತ್ವಗಳನ್ನು ಒಂದನ್ನೂ ಜಾರಿಯಲ್ಲಿ ಇರಗೊಡುವುದಿಲ್ಲ. 'ಸುಳ್ಳು, ಮೋಸ, ಕಳ್ಳಸಂತೆ, ಲಂಚ' ಇವುಗಳು ಗಾಂಧಿಜಿಯವರ ತತ್ವಕ್ಕೆ ಸಂಪೂರ್ಣ ವಿರೋಧ. ಆದರೆ ಇಂದಿನ ಸ್ವರಾಜ್ಯದಲ್ಲಿ ಈ ನಾಲ್ಕು ಜತು ರೋಪಾಯಿಗಳನ್ನು ಅಭ್ಯಾಸಿಸದ ಮನುಷ್ಯನಿಗೆ ಪಟ್ಟಣ ಕನ್ನಡ ಜಿಲೆಯ ಹಳ್ಳಿಗಳಲ್ಲಿ ಜೀವಿಸಿಲು ಅಸಾಧ್ಯ.

ಜಿ. ಕೆ. ಗೋವಿಂದ ಭಟ್ಟರು.

ಖಚಿತಸ್ರಾವ ನಿಶ್ಚಿತ

'ಕುಮಾರಿ' ಪಿಲ್ಸ್‌ಗಳನ್ನು ಉಪಯೋಗಿಸಿದರೆ ಹದಿತಪ್ಪು ಖಚಿತಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕಪ್ರಯೋಜಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ.8/-[ವಿ. ಪಿ. ಹನ್ನೆರಡಾಣೆ ಪ್ರತ್ಯೇಕ]

Mrs D. DEVEE, F. DS. (N. J.)
Tollygunge CALCUTTA.

ಸ್ವಾಮಿಸ್ವರು: ಶಹಾಕಂಪನಿ, ಮಂಗಳೂರು

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಮ್ಯ ಆಗಿ ಯೂಜಿಲ್ಲರೆಯಾಗಿಯೂ ಮೊರೆಯುತ್ತವೆ.

ಕಲ್ಯಾಣಿ ವ್ಯಾಸಾಶ್ರಯ್,
ರಥಬೀದಿ, ಉಡುಪಿ.

ಕೊರಡ್ಕಲ್ ಸ್ಮಾರಕ ನಿಧಿಗೆ

ಉದಾರ ಸಹಾಯ ಮಾಡಿರಿ.

ದಕ್ಷಿಣ ಕನ್ನಡ

ಉಪ್ಪುಂದ ಇಲ್ಲಿಯ ಬೋರ್ಡು ಹಾಯಂ ಎಲಿಮೆಂಟರಿ ಶಾಲೆಯಲ್ಲಿ ತಾ 11-10-48ರಂದು ಶಾರದಾಪೂಜಾ ಸಮಾರಂಭ ಹಾಗೂ ಶಾಲಾ ಕಮಿಟಿಯವರು ಪ್ರೌಢ ಪ್ರಾಥಮಿಕ ಶಾಲೆಗೋಸ್ಕರ ಕಟ್ಟಿಸಿಕೊಟ್ಟ ನೂತನ ಸಾಗಾರ ಪ್ರವೇಶೋತ್ಸವ ಸಮಾರಂಭಗಳೆರಡೂ ಶ್ರೀ. ಕೆ. ಎನ್. ಕಾರಂತ ಶಿರೋಮಣಿಯವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತ್ತು. ಮಕ್ಕಳ ವಿನೋದಾವಳಿಗಳಲ್ಲಿ ಅನನೆಗಳ ಪ್ರದರ್ಶನ, ಲೇಜೀಮ್, ಕೋಲಾಟ ಕುಮ್ಮಿ, ಡೊಂಬಲ್ಸ್, ಗಾಯನ, ಕೃಷ್ಣ ಪೌತ್ಯ ನೋದಲಾದುವು ಪ್ರೇಕ್ಷಣೀಯವಾಗಿ ಜರಗಿದ ನೇಲೆ ಅಧ್ಯಕ್ಷರ ಕಾಲೋಚಿತವಾದ ಭಾಷಣವು ನಡೆಯಿತು. ಉಪಹಾರ, ಶಾಲಾ ಮುಖೋಪಾಧ್ಯಾಯರಿಂದ ಧನ್ಯವಾದಗಳಾದುವು.

ಹೆಡ್ಡೂರು ಶ್ರೀದೇವಸ್ಥಾನ ಶಾಲೆಯಲ್ಲಿ ವಿಜಯದಶಮಿದಿನ ಶಾರದಾಪೂಜೆಯು ಉದ್ಘಿಯ ಅಧ್ಯಾಪಕ ತರಬೇತಿ ಶಾಲೆಯ ಸಹಾಯಕರಾದ ಶ್ರೀ ಟಿ. ಲಕ್ಷ್ಮೀನಾರಾಯಣ ರಾವ್, ಬಿ. ಎ. ಎಲ್. ಟಿ. ಯವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಸಿ ಎಚ್. ಸೆಟ್ಟಿ ಮತ್ತು ಎ. ಪಿ ಕಲ್ಯಾಣಿಯವರು ವಿದ್ವತ್ ಹಾಗೂ ವಿಜಯದಶಮಿಯ ಮಹತ್ವ ಮತ್ತು ಸಾರ್ಥಕತೆಯ ಬಗ್ಗೆ ಮಾತಾಡಿದರು.

ಸುರತ್ಕಲ್ ತಾ 12-10-48ರಲ್ಲಿ ಇ. ವಿ. ಶಾಲಾ ಹಳೆ ವಿದ್ಯಾರ್ಥಿಗಳ ಸಂಘದ ಮಹಾಸಭೆಯು ಜರಗಿ, ಈ ಸಂಘವು ಇ. ವಿ. ಶಾಲಾ ಮತ್ತು ವಿದ್ಯಾದಾಯಿನೀ ಹೈಸ್ಕೂಲಿನ ಹಳೆ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನೊಳಗೊಂಡ "ವಿದ್ಯಾದಾಯಿನೀ ಹಳೇ ವಿದ್ಯಾರ್ಥಿಗಳ ಸಂಘ" ಎಂಬ ಹೆಸರಿನಿಂದ ಕಾರ್ಯ ಕಲಾಪಗಳನ್ನು ಜರಗಿಸುವಂತೆ ಹೊಸ ನಿಬಂಧನೆಗಳು ಮಂಜೂರುಮಾಡಲ್ಪಟ್ಟವು. ಆ ಹೊಸ ನಿಬಂಧನೆಗಳಿಗನುಸಾರವಾಗಿ ಸದಸ್ಯರನ್ನು ನೇರಿಸುವರೆ, ಒಂದು ತಾತ್ಕಾಲಿಕ ಸಮಿತಿಯನ್ನು ನಿಯಮಿಸಲಾಯಿತು. ಅದರಿಂದ ಸದ್ರಿ ಶಾಲೆಗಳ ಹಳೇ ವಿದ್ಯಾರ್ಥಿ ಬಂಧು ಭಗಿನಿಯರು ಎಲ್ಲರೂ, ತಮ್ಮ ನೂತನ ಸಂಸ್ಥೆಯ ಮೇಲಿನ ಅಭಿಮಾನದಿಂದ ಸಂಘದ ಸದಸ್ಯರಾಗಿ ಸೇರಿ ಸಹಕರಿಸಿ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಬೊಳ ಜ್ಞಾನೋದಯ ಪಾಠಶಾಲೆಯಲ್ಲಿ ತಾ 12ರಂದು ಶಾರದಾ ಪೂಜೆಯಾಗಿ ಶ್ರೀಯುತ ಮಂಜಯ್ಯ ಶೆಟ್ರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿ ಶಾಲಾಭಿವೃದ್ಧಿಯ ಕುರಿತು ಚರ್ಚಿಸಲಾಯಿತು. ಶ್ರೀಗಳಾದ ಅಣ್ಣಯ್ಯ ಶೆಟ್ಟಿ, ನೊದಲಾದವರು ಮಾತನಾಡಿದರು.

ಹೊಸಂಗಡಿ (ಕಾರ್ಕಳ) ಗ್ರಾಮಸಂಘದ ಸಭೆಯು ಡಾ। S. V. ಶೆಣೈಯವರ ಅಧ್ಯಕ್ಷತೆಯಲ್ಲಿ ತಾ 12ರಲ್ಲಿ ಜರಗಿತು. ಶಾರದಾಪೂಜೆ, ಶ್ರೀಗಳಾದ ಪಿ. ಕೆ. ಆನಂದ, ವಾಬುರಾಯ ಹೆಗ್ಡೆ, ಬಿ. ಜಿ. ಹೆಗ್ಡೆ ಮೊದಲಾದವರ ಭಾಷಣಗಳಾದುವು. ಅಂಗ್ಲಚಿಪ್ಪು ಕನ್ನಪ್ಪಯ ಮತ್ತು ಸಹೋದರರು ಧರ್ಮಾರ್ಥವಾಗಿ ಕೊಟ್ಟ ಸ್ಥಳದಲ್ಲಿ ಪಾಠಶಾಲಾಯ ಕಟ್ಟಿಸೋಣದ ಶಂಕುಸ್ಥಾಪನೆಯಾಗಿ ಸಭಾಂತ್ಯವಾಯಿತು.

ಸಾಲಿಗ್ರಾಮ ಕಾರ್ಕಡ ಶಾಲೆ ಹಳೆ ವಿದ್ಯಾರ್ಥಿ ಸಂಘದವರು ಶ್ರೀ ವಾಸುದೇವ ನಾಯರ ಅಧ್ಯಕ್ಷತೆಯಲ್ಲಿ ವಿಜಯದಶಮಿಯನ್ನು ಆಚರಿಸಿದರು ಶ್ರೀಗಳಾದ ಕೆ.ಆರ್. ಸಂದೆ, ಯ ನಿ. ಉಡುಪ, ಬಿ. ಸುಬ್ಬಣ್ಣ ಹೆಗ್ಡೆ ಮೊದಲಾದವರ ಭಾಷಣ, ವಿವಿಧ ಮನೋದಾವಳಿಗಳಾದುವು.

ವಿಟ್ಲ ಪುಣಚ ಪರಿಯಲ್ತಡ್ಕ ಶಾಲೆಯ ತಾ 16ರಲ್ಲಿ ಶಾರದಾಪೂಜೆಯೂ ಶ್ರೀ. ಕೇಲ್ ನಿ. ಯಾಸ್. ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಶಾಲಾ ಸಮಿತಿಯ ವಾರ್ಷಿಕ ಸಭೆಯೂ ವಿಜೃಂಭಣೆಯಿಂದ ಜರಗಿತು.

ಮಂದರ್ತಿ ಮಂದರ್ತಿ ಸಾರ್ವಜನಿಕ ಗ್ರಂಥಾಲಯದಲ್ಲಿ ಉಡುಪಿ ಕುಂದಾಪುರ ತಾಲೂಕುಗಳಲ್ಲಿಯೂ ಇತರ ಕಡೆಗಳಲ್ಲಿಯೂ ಇರುವ ಗೋವೆ ಮತಸ್ಥರ ಸಭೆಯೊಂದು ತಾ. 15-11-48ನೇ ಸೋಮವಾರ ಬೆಳಿಗ್ಗೆ 9 ಗಂಟೆಗೆ ಜರಗಲಿರುವುದೆಂದೂ ಆದಕ್ಕೆ ಸ್ವಜಾತಿ ಬಂಧುಗಳೆಲ್ಲರೂ ಬರಬೇಕೆಂದೂ ಎಂತಾ ದಿ ಗ್ರಾಮದ ಅರ್ತಾರಿನಲ್ಲಿರುವ ಶ್ರೀ. ಪೂಸ್ತರ್ ಬೆಳನಾಯಕರು ವಿನಂತಿಸುತ್ತಾರೆ.

ಪಾದೆಬೆಟ್ಟು ಈ ಗ್ರಾಮಸ್ಥರ ವಾಹನ ಸಭೆಯೊಂದು 6-10-48ನೇ ದಿನ ಸ್ಥಳೀಯ ಶ್ರೀ ಶಾರದಾಭವನ ಎಲಿಮೆಂಟರೀ ಶಾಲೆಯಲ್ಲಿ ಫಲಿಮಾರು ಡಾ। ಕುಮಾರನ್ ನಂಬಿಯಾರರ ಅಧ್ಯಕ್ಷತೆಯಲ್ಲಿ ಒಡಕಲ ವಿಜೃಂಭಣೆಯಿಂದ ನೆರವೇರಿತು. ಉಡುಪಿ ತಾಲ್ಲೂ ವೆಲ್ಫೇರ್ ಆಫೀಸರ ಶ್ರೀ. ಯಂ ಕಾಂತಪ್ಪನವರು ಗ್ರಾಮಸಂಘಗಳ ಮೂಲಕ ಗ್ರಾಮಗಳ ಅಭಿವೃದ್ಧಿಯು ಹೇಗಾಗುವುದೆಂದು ಭಾಷಣವಿತ್ತರು. ತರುವಾಯ ಶ್ರೀ ನಡಿಗುತ್ತು ನಾರಾಯಣಶೆಟ್ರು ಅಧ್ಯಕ್ಷರಾಗಿಯೂ ಗ್ರಾಮ ಸಂಘವೊಂದು ಸ್ಥಾಪಿಸಲ್ಪಟ್ಟಿತು. ಬಳಿಕ ಅಧ್ಯಕ್ಷರು ಗ್ರಾಮಸ್ಥರ ಸಂಘಟನೆಯ ಕುರಿತು ಭಾಷಣವಿತ್ತರು. ಅವರ ಇಂಗ್ಲಿಷ್ ಭಾಷಣವನ್ನು ಶ್ರೀ. ನೈ. ಕಾಶಪ್ಪ ಶೆಟ್ಟಿ ವಿದ್ವಾನ್ ಇವರು ಕನ್ನಡಿಸಿದರು. ಗ್ರಾಮಸಂಘದ ನಿರ್ಮಾಣಕ್ಕೆ ಶ್ರೀ ಪಾದೆಬೆಟ್ಟು ರಾಮರಾಯರು ಕೈಕೊಂಡ ಶ್ರಮವು ಸ್ತುತ್ಯವಾದುದು.

ಬೈಲೂರು ಗಾಂಧಿ ಕ್ಲಬ್ಬಿನಲ್ಲಿ ತಾ. 11-10-48ರಲ್ಲಿ ಗಾಂಧೀಭಾವಚಿತ್ರಅನಾವರಣ ಮಹೋತ್ಸವವು ಮೂನ್ಕೈ ಕೆ. ಆರ್. ಕಾಂಠಾರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ. ಬಿ. ಕೇ. ಶಿವ ಕಿಣಿಯರು ಸಂಘದ ಸೂಕ್ಷ್ಮ ಪರಿಚಯವನ್ನು ನೂಡಿಕೊಟ್ಟನಂತರ ಅಧ್ಯಕ್ಷರು ಗಾಂಧಿ ತತ್ವಗಳನ್ನು ನೆನಪಿಗೆ ತಂದುಕೊಟ್ಟು ಗಾಂಧಿ ಭಾವಚಿತ್ರವನ್ನು ಅನಾವರಣಮಾಡಿ ಗಾಂಧಿ ಕ್ಲಬ್ಬಿಗೆ ತ್ರೇಯಸ್ಸನ್ನು ಕೋರಿದರು. ಶ್ರೀಯುತ ಪಿ ಮಲ್ಯ ಎಸ್ಸ್-ಎಲ್.ಎ. ಮತ್ತು ಶ್ರೀ. ಜೆ-ನಾಗಣ್ಣ ಹೆಗ್ಡೆಯವರು ಮಾತನಾಡಿದ ಬಳಿಕ ಲಘು ಉಪಹಾರವಾಯಿತು.

REGD.

ಅಮೃತಾಂಜನ ಕಛೇರಿಯವರಿಗೆ, ಕಿರಿಕಿರಿ ವೇದನೆ, ಉಬ್ಬಸ ಕಾಣಿಸಿಕೊಳ್ಳಲು ಕೂಡಲೇ ಬೆಂಬಲಿಸಿ ಪತ್ರ ಬರೆಯಿರಿ.

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ಸಹಕಾರಿ ಸಂಘಗಳಿಗೆ—

ಮುನ್ಸಿಫ್ ಕೋರ್ಟುಗಳಿಗೆ—

ವರ್ಗದಾರರಿಗೆ—ಶಾಲೆಗಳಿಗೆ—

ಬೇಕಾಗುವ ರಿಜಿಸ್ತ್ರಿಗಳು, ರಶೀದಿ ಪುಸ್ತಕಗಳು, ಫಾರ್ಮುಗಳೂ, ಎಕೌಂಟ್ ಪುಸ್ತಕ್ಕೆ ಕುರಿಫಂಡು ಪುಸ್ತಕಗಳೂ ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

— ಮಕ್ಕಳನ್ನು ಹಡೆಯುವುದು ಸಾಕು —

ಅಕಸ್ಮ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರಕೃತಿಯಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೇಗು, ವ್ಯದರರೋಗ, ಜೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು:—ಡಾಲಪ್ಪಾ ಫಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ವಿಜಂದಿರು:—ಹುಬ್ಳಿ ಫಾರ್ಮಸಿ,—ಹುಬ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ಡಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ಸಂಜುಜೇಶ್ವರ ಮೂರ್ತಿ ಡಾವಣಗೇರಿ ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಶಮಲಬಾಸಿ, ಕೆಮಿಸ್ಟ್, ಹಾವೇರಿ ಡ್ಯಾಡಿಗಿ-

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಮೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಥಾಯಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣವಿಂದ ಜೀರು ಇಳಿದಿದ್ದರೆ, ಉಹುಳು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯ ವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟ್ಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಬೇಧಿ ಯಾಗದಿದ್ದರೆ, ನುಸ್ರ್ಯ ಉರಿಯುತ್ತಿದ್ದರೆ, ಈ ಎಲ್ಲಾ ಜೀನಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಜೇನುತುಪ್ಪದಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರುಬೇಳಿ, ಕೊಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜು ೮ ಆಣೆ

ವಿಜೆಂಟೆರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಜೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ಕೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸೀ, ಲಿಲ್ಲ . . ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮುಣ್ಣು ಸಾಲಾಗುತ್ತೆ

ಹೆರಿಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕೆಸವೀಳೆದೆ ಯಾ ಅದರ ಅಂಶ ಉರಿದು ಜ್ವರ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸ್ಸು, ಮೂರ್ಛೆ, ಸ್ತ್ರೈಣಗಳ ಬೇನ್ಗು, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ. ವೈದ್ಯ, ಡಾಕ್ಟರ, ಸರ್ಜನರಿಗೆ ಪರಿಸ್ಥಿತಿ ತೋರಿಸಿ ನೂರಾರು ರೂಪಾಯಿ ಖರ್ಚುಮಾಡಬೇಕಾಗುತ್ತದೆ. ಆ ಮೇಲೂ ದೈವೇಚ್ಛೆ ಎಂದು ಅಪ್ಪಿಪ್ಪ ಸರೀಕ್ಷೆ!

ಆದರೆ ಬಾಣಂತಿತನದಲ್ಲಿ ನಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ 'ಪ್ರಸೂತಾವೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ಇವುಗಳನ್ನು ಮುಂದಾಗಿ ತಂದಿಟ್ಟು, ಸಕಾಲದಲ್ಲಿ ಉಪಯೋಗಿಸಿದರೆ ಹಮ್ಮು ಗೃಹಲಕ್ಷ್ಮಿಯು ಆಪತ್ತು—ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕಮನೀಯ ಕೇಶಕಲಾಪ, ತಂಪು ಮಿದುಳು, ಶುಭ್ರ ನೇತ್ರಗಳನ್ನು ಹೊಂದಲು ಬಹು ಗುಣಯುಕ್ತ ಆಮಲಕೀ ತೈಲ ಯಾ ಹಿಮಸಾಗರ

ಕೈಲ್ಯಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,

Vaidya.

ದ. ಕ. ಜಿಲ್ಲಾ ಕೃಷಿಕರ ಪ್ರಗತಿಸಾಧನೆಗೆ ದಕ್ಷಿಣ ಕನ್ನಡಿಗರೇ ನೆರವಾಗಬೇಕು

ದೇಶದ ಬಡಜನರನ್ನು ಬದುಕು ಅಭಿವಾ ಸಾವುಗಳ ವಿಚಾರದಲ್ಲಿ ಪಟ್ಟಣವಾಸಿಗಳೇಕೆ ಗಮನಕೊಡದಾರದು? ಕೆಲವು ನಾಮಶೇಷ ದಂತೆ ಉಳಿದಿರುವ ತುಂಡರಸುಗಳುತೆ ಮೆರೆಯುವ ದೇಶೀಯರೇ ತಮ್ಮ ಸ್ವಾರ್ಥವಲ್ಲದೆ ಬೇರಾವುದಕ್ಕೂ ಗಮನಕೊಡದಿರುವಾಗ ರೈತರ ಏಳಿಗೆಗಾಗಿ ಇಂದು ಪಟ್ಟಣವಾಸಿಗಳಾದವರೇಕೆ ಗಮನಕೊಡಬಾರದು?

ಉದಾತ್ತಚರಿತರಾದ ಮಹಾತ್ಮರ ಮರಣದಿಂದ ಎಲ್ಲಿಗಿಂತಲೂ ಹೆಚ್ಚಿನ ಹಾನಿಯಾದುದು ಹಿಂದೀ ಕೃಷಿಕರಿಗೆ. ರೈತನೇ ಭಾರತದ ಅಧಿಪತಿ, ಯಜಮಾನ. ರೈತನು ಮುಖ್ಯ ಮಂತ್ರಿಯಾಗಬೇಕು. ನರಕಾರರ ದ್ವಾಗಬೇಕು. ಹೀಗೆ ಅದಲ್ಲಿ ಪಂಡಿತ ನೆಹರುರವರನ್ನು ಆ ರೈತ ಮುಖ್ಯ ಮಂತ್ರಿಯಾಗುವಂತೆ ಕೇಳಿಕೊಳ್ಳಲು ಸಿದ್ಧನಿರುವೆನೆಂದು ಕೂಡಾ ಹೇಳಿದ್ದರು ಅದು ದೈವವೇ ಅಗಿದ್ದ ಮಹಾತ್ಮರ ದೃಷ್ಟಿಯಲ್ಲಿ ಕೃಷಿಕನಿಗೆಂತಹ ಉದಾತ್ತ ಸ್ಥಾನ! ಕೃಷಿಕ ರಾಷ್ಟ್ರವಾದ ಭಾರತ ಭಾರತವು ಕೃಷಿಕರ ಉನ್ನತಿಯಾಗಿ ತನ್ನ ಕಾಲ ಮೇಲೆ ನಿಲ್ಲುವಂತಹ ಶಕ್ತಿಯುತವಾದರೇನೇ ಮುಂದೆ ಶಾಶ್ವತವಾದ ಕೀರ್ತಿಗಳಿಸಿ, ಇಡೀ ವಿಶ್ವದಲ್ಲಿ ಭಾರತ ಭಾರತವು ಪೂಜೆಗೆ ಪಾತ್ರವಾಗಬಹುದು.

ಈ ಜೀವ ಮತ್ತು ಜಗತ್ತಿನ ಭೋಗ ನಶ್ವರವಾದುದ್ದು. ಯಾರು ಪರೋಪಕಾರ ಪರಾಯಣರೋ ಅವರು ಚಿರಂಜೀವಿಗಳು; ಉಳಿದವರು ಬದುಕಿದ್ದೂ ಸತ್ತಂತೆಯೇ ಎಂದು ನಿವೇಕಾನಂದರ ಅಮೃತವಾಣಿ.

ಕೃಷಿಕನು ಇಂದು ಅವನ ಶೋಚನೀಯ ಸ್ಥಿತಿಯಿಂದ ಅವನ ಎದೆಯೊಡೆದು ಘಾಸಿಹೊಂದಿ ಕಾಡುತ್ತಿರುವ ಚಿಂತೆಯಿಂದ ಮನಸ್ಸು ಸದಾ ವ್ಯಸನಪೂರಿತನಾದ ಬಡತನಕ್ಕೆ ಬಗ್ಗಿ ಜಳ್ಳೆ ಗ್ರಾಮಗಳು ಬರಿದಾಗುವಂತೆ ಸಾಲುಸಾಲಾಗಿ ತಮ್ಮ ತಾಯಿನಾಡನ್ನು ಬಿಟ್ಟು ಅಕ್ಷೀಯರಾದ ಬಂಧು ಭಗಿನಿಯರನ್ನು ಬಿಟ್ಟು ಅನ್ನ ಬಟ್ಟೆಗಾಗಿ ತನ್ನನ್ನೂ ಹಸು ಮಕ್ಕಳನ್ನೂ ಕೂಡಿ ಪೇಟೆ ಪಟ್ಟಣಗಳನ್ನು ಸೇರಿ ಹೆಚ್ಚು ದುಡಿಮೆಗೆ ಅಲ್ಪ ಪ್ರತಿಫಲ ಪಡೆದು ತಾನು ತನ್ನ ಮನೆಯನ್ನೂ ನಾಡನ್ನೂ ನೋಡಿಕೊಂಡು ಬರುವ ಅದೊಂದು ಸೇವಾರೀತಿಯ ಕರುಣಾಸ್ಪದವಾದ ಜೀವನ ನಡಿಸುವ ದುಸ್ಥಿತಿಗೆ ಒಳಪಟ್ಟಿರುತ್ತಾನೆಂದು ದು ನಿರ್ವಿವಾದ.

ತನ್ನ ತಂದೆಯೇ ನ್ಯಾಯವಾಗಿ ತಾವು ಅನುಭವಿಸಲಿರಬೇಕಾದ ಬಾಪುವಿನ ನಂತರ ಅದ ಮಹಬದಲ್ಲಿ ಭಾಗಿಯಾಗಿ ಆ ಸೂತಕವನ್ನು ಆತ್ಯಂತ ನಿಷ್ಠೆಯಿಂದ ಆಚರಿಸಿ ಅವರ ಶುಂತು ಭಜಲ ವಿಶ್ವಾಸ ಭಕ್ತಿ ತೋರಿಸಿರುವ ಕೋಟ್ಯಾಂತರ ಭಾರತೀಯರಾದ ಭಾಪುತ್ರರು ಬಡತನದ ಕೂಪದಲ್ಲಿ ನರಳುತ್ತಿರುವ ಕೃಷಿಕನ ನೋವಿನ ಹೃದಯವನ್ನು ಮಹಾತ್ಮರು ಕಂಡಂತೆಯೇ...ವಿಭೂತಿ ಪುರುಷರು ಪಟ್ಟಣವಾಸಿಗಳಾದ ಕನ್ನಡಿಗರ ಉದಾರ ಹೃದಯವು ಅರಿಯುವಂತೆ ಮಾಡಲಿ ಎಂದು ಕೃಷಿಕನ ಆನಂದಿನದ ಪ್ರಾರ್ಥನೆಯು ಭಗವಂತನಲ್ಲಿ.

ಮುಖ್ಯವಾಗಿ ಪ್ರತೀ ಜನಾಂಗ ಮತ್ತು ಸ್ತ್ರೀಪುರುಷರಾದಿಯಾಗಿ ಪ್ರತಿಯೊಬ್ಬ ವ್ಯಕ್ತಿಯು ತನ್ನ ಮುಕ್ತಿಗಾಗಿ ಹಾನೇ ತ್ರಸಿಸಬೇಕು ಎಂಬಾಗ-ವರ್ಗ ಬಲಾತ್ಕಾರ್ಯಕ್ಕೆ ಒಂದು ಕಾಲವಿತ್ತು. ಇಂದು ಇತರರನ್ನು ತನ್ನಂತೆ ಕಾಣಬೇಕು. ನಾತ್ಸಲ್ಯದಿಂದ ಸಹೋದರ ಪ್ರೇಮದಿಂದ ಬಳಿಗೆ ಕರೆದು ಅಲಂಗಿಸಿಕೊಳ್ಳಿ, ಎಂದು ಕಾಲವೂ ಧರ್ಮವೂ ಒಂದಾಗಿ ಸಾರುತ್ತಿರುವುದು.

ಹಳ್ಳಿಗಳಲ್ಲಿ ನಡೆಯುವ ಅನ್ಯಾಯವನ್ನು ಒಕ್ಕಟ್ಟಿನಿಂದ ವಿರೋಧಿಸಿ ತಮ್ಮ ಸಂಘಟನೆಯ ಮೂಲಕ ಇಂದಿನ ಜನತಾ ಸರಕಾರದ ಅಧಿಕಾರ ಪ್ರಯೋಜನವನ್ನು ನೆಟ್ಟಗೆ ಪಡೆದು ತಮ್ಮ ಅಭ್ಯುದಯ ಸಾಧಿಸಿಕೊಳ್ಳಬೇಕಾದರೆ ಸಂಘಶಕ್ತಿ ಇದು ಈಗಿನ ದಿನದ ಒಂದು ದಿವ್ಯ ಶಕ್ತಿ. ಸಂಘಟಿತರಾಗದೆ ಯಾವ ಉದ್ದೇಶವೂ ಬೇಗನೆ ಸಾಧಿಸಲ್ಪಡದು. ಕಾನೂನಿನ ವಿರುದ್ಧ ಹಳ್ಳಿಗಳಲ್ಲಿ ಶರಾಬು ತಯಾರಿಸುವಿಕೆ, ಕಳ್ಳಸಂತೆಯಿಂದ ಬಂಡವಾಳ ಶಾಹಿಯಾಗಿ ದರ್ಪತೋರಿಸುವಿಕೆ- ಕೋಳಿ ಅಂಕ ಜೂಜು ಜುಗಾರಿಗಳಿಂದ ಆಗುವ ಅನಾಹುತ, ವೇದರೆ ಹೆಸರಲ್ಲಿ ತಮ್ಮ ಸ್ವಾರ್ಥಕ್ಕಾಗಿ ಕೊಯ್ಯ, ಕುರಿ, ಕೋಳಿ ಇತ್ಯಾದಿ ಪ್ರಾಣಿ ಬಲಿಯ ಮುಖ್ಯ ಪದ್ಧತಿ ಹಳ್ಳಿ ಗ್ರಾಮಗಳಲ್ಲಿ ಚಾ, ಕಾಫಿ ಹೋಟೆಲುಗಳು ಕಾನೂನು ಮೂಲಕ ತಡೆಯಲ್ಪಟ್ಟರೂ ಇಲ್ಲಿಗೆ ನುಸಿಯಲಿಲ್ಲ ಹಳ್ಳಿಗಳ ಉದ್ಧಾರ.

ರಾತ್ರಿ ಹಗಲು ಮಳೆ, ಬಸಿಲು ಗಮನಿಸದೆ ಬಿಳ್ಳ ಮಳ್ಳಿಂದಾಗಿ ಸ್ತ್ರೀಪುರುಷರಾದಿಯಾಗಿ ಹೊಲ ಗದ್ದೆಗಳಲ್ಲಿ ರೈತ ಕೂಲಿ, ರೈತ ಕೂಲಿಯಾಳುಗಳು ಧನಿಗಳ ಬೊಕ್ಕಸ ಭರ್ತಿಯಾಗಿದ್ದರಿಂದ ಊರನ್ನು ಬಿಟ್ಟು, ಕಾಡನ್ನು ಪ್ರವೇಶಮಾಡಿದ ಹಾಗೆ ಪ್ರತೀ ಮನೆಯಲ್ಲಿ ಒಬ್ಬಿಬ್ಬರನ್ನು ಬಿಟ್ಟು ಕೆಲವು ಹೆಂಗಸರಿಂದಲೇ ಹೊಲ ಗದ್ದೆಗಳ ಕೆಲಸ ನಡೆಯುವಂತೆ ಪರಸೇವೆಗಾಗಿ ಬಂದು...ಹೀಗೆಲ್ಲಾ ಬಡವನು ಅನ್ನತಪ್ಪು ರಕ್ತವೂ ಅರ್ಧವೂ ಮಿಶ್ರವಾಗಿ ಧನಿಬೊಕ್ಕಸ ತುಂಬಿ ಇದು ತನಕ ಪ್ರಿಟಿನಕ್ಕೆ ಸಾಗಿಹೋಗಿದ್ದರೂ ಮುಂದಿನ ಹೊಲಗಳಲ್ಲಿ ದುಡಿಯುವ ರೈತ ಕೂಲಿಯಾಳುಗಳ ಜೀವನದ ಸುಮಾರ್ಗಕ್ಕೆ ಪಟ್ಟಣವಾಸಿಗಳಾದವರೂ ನೆರವಾಗಬೇಕು.

ಪ್ರತಿ ಗ್ರಾಮ ಜಾವಡಿಗಳು (ರೈತರ) ಕೃಷಿಕನ ಸಂಘ ಶಾಖೆಯಾಗಿ ಮಾರ್ಪಡಿಸಿ ಕೃಷಿಕನು ನಿಜವಾದ ಕರ್ಮಯೋಗಿಯಾಗಿ ಆದೊಂದು ಆದ್ಯಾತ್ಮ ಜೀವನ ನಡೆಸುವ ಸುಮಾರ್ಗದ ದಾರಿ ಕಲ್ಪಿಸಿಕೊಟ್ಟು ಪ್ರತೀ ಮನೆ ಮನೆಗಳಲ್ಲಿ ಗೋಧನಗಳನ್ನು ಪೋಷಿಸುವ ಧರ್ಮ ಸಾಧನೆಗಳನ್ನು ತಮ್ಮ ಕೈಗೆ ತೆಗೆದು ಕೊಂಡು ತಮ್ಮ ನಾಡಿನ ಜನತಾ ಕಾರ್ಯಕಲಾಪಗಳನ್ನು-ಹಗಲೆಲ್ಲಾ ದುಡಿದು, ರಾತ್ರಿ ಶಾಲೆಗಳ ಅಧ್ಯಾಪಕರು, ವಿದ್ಯಾರ್ಥಿಗಳು, ಸಮಾಜ ಸಂಸ್ಥೆಯ ಕಾರ್ಯ ಕರ್ತರು, ತ್ಯಾಗಪೂರಿತ ಶಾಂತಿಮಂತ್ರದ ಕ್ರಾಂತಿಯಿಂದ ಶಾಂತಿ, ನ್ಯಾಯ, ಅಹಿಂಸೆ, ಧರ್ಮ ಕರ್ಮ, ದೈವಿಕಾಗಿಯಾಗಿ ನೂಡಿಕೊಂಡು, ದ. ಕ. ಜಿಲ್ಲಾ ಕೃಷಿಕರ ಯೋಗಕ್ಷೇಮಗಳಿಗಾಗಿ ನೆರವಾಗುವುದು. ಕೃಷಿಕರ ಆವನತಿ ಯೋಗಕ್ಷೇಮಗಳ ವಿಷಯ ಈ ರೀತಿಯಾಗಿ ಉದಾಹರಣೆಗಳನ್ನು ಎಷ್ಟೋ ಕೊಡಬಹುದು. ಅದರೆ ಅವನ್ನೆಲ್ಲಾ ಕೊಟ್ಟು ಲೇಖನದ ಆಕಾರವನ್ನು ಹೆಚ್ಚಿಸ ಬೇಕೆಂದು ಅಭಿಪ್ರಾಯ ನನಗಿಲ್ಲ. ನಾನು ವಿವೇಚನಾತ್ಮಕವಾದ ದೀರ್ಘಲೇಖನವನ್ನೇನೂ ಬರೆಯದೆ ಬರೀ ದಿಗ್ದರ್ಶನ ಮಾತ್ರ ಮಾಡಿದ್ದೇನೆ.

ಆರ್. ಕೆ. ಶೆಟ್ಟಿ,
ದ. ಕ. ಜಿಲ್ಲಾ ಕೃಷಿಕರ ಸಂಘ,
96 ಥೋರ್ ಬಜಾರ್ ರಸ್ತೆ,
ಕೋಟೆ-ಮುಂಬಯಿ.

ಜಾಹೀರು ನೋಟೀಸು

ಕಾರ್ಕಳ ತಾಲ್ಲೂ ಕಡ್ತಾಲ ಗ್ರಾಮದ ನಾಲ್ಕೂವಡಿ ಯಂಬಲ್ಲಿರುವ ಕುಮುಂಬ ಸೆಟ್ರ ಅಳಿಯ ನಾಗಪ್ಪ ಸೆಟ್ಟಿಯು ಈ ಮೂಲ್ಕ ತಿಳಿಯಪಡಿಸುವುದೇನೆಂದ್ರೆ —

ನಾನು ನಮ್ಮ ಕುಟುಂಬದ ಮೆನೇಜರ್ರ ವ. ಆಡಳ್ತೆದಾರನಾಗಿದ್ದು ಕುಟುಂಬದವರ ಕೂಡುವಿಕೆಯಿಂದ ಸಂಪಾದಿಸಿರುವ ಹಣವನ್ನು ಈ ಕೆಳಗೆ ತಪ್ಸೀಲು, ವ, ಹೆಸರು ಕಾಣ್ಸದೆ ವರೀಗೆ ಸಾಲವಾಗಿ ಕೊಟ್ಟದ್ದಾಗಿದೆ. ಸದ್ರಿ ಹಣದ ಮೇಲೆ ನನಗೆ, ವ, ನನ್ನ ಅಕ್ಕ ಮೈತಳಾದ ಗಿರಿಯಮ್ಮ ಶೆಡ್ತಿಯ ಮಕ್ಕಳು ಎಂದನೆ ಕಾಳಪ್ಪ ಸೆಟ್ಟಿ, 2ನೇ ಮಹಾಬಲ ಸೆಟ್ಟಿ, 3ನೇ ಶೀನ ಸೆಟ್ಟಿ ಮತ್ತು ನನ್ನ ಬಾವಾತಂಗಿ ಹುಬ್ಬಕ್ಕೆ ಶೆಡ್ತಿ ಯಿವಳ ಮಕ್ಕಳು 1ನೇ ಸಾಧು ಶೆಟ್ಟಿ, 2ನೇ ಅಚ್ಚುತ ವರ್ಗೀರವು ಮಾತ್ರ ಸಂಪೂರ್ಣ ಹಕ್ಕು ದಾರರಲ್ಲವೆ ಬೇರೆ ಯಾರಿಗೂ ಯಾವ ತರದ ಹಕ್ಕು ಬಾಧ್ಯತೆಗಳಿರುವುದಿಲ್ಲ.

ನಂಬ್ರ	ಹೆಸರು ವ ವಿಳಾಸ.	ರೂಪ್ಯಾ-
1	ಕಡ್ತಾಲು ಗ್ರಾಮದ ಶಿರಿಬೈಲು ತಮ್ಮಣ್ಣ ಹೆಗ್ಡೆ ವಗೈರರು ಡಿ. ಪತಿ ಬರಕೊಟ್ಟ ಶೋರಡವು ದಸ್ತಾವೇಜು. P. O- Perdoor S. K.	1400 0 0
2	ಕಡ್ತಾಲು ಗ್ರಾಮದ ಅಪ್ಪಾಜಿಬೆಟ್ಟು ಯಂಬಲ್ಲಿರುವ ನಾಲ್ಕೂರಿನ ನಾರ್ಣಾಯಿ ಶಾನುಭೋಗರ ಮಗ ಶಾಂತಾರಾಮರಾವ್. ಡಿ. ಪತಿ ಬರಕೊಟ್ಟ ಅಡವು ದಸ್ತಾವೇಜು. P. O. Perdoor.	1500 0 0
3	ಉಡುಪಿ ತಾಲೂಕು ಪೆರಡೂರು ಗ್ರಾಮದ ರಾಮ್ಯೆ ಹೆಗ್ಡೇರ ಮಗ ಹೊನ್ನಯ್ಯ ಹೆಗ್ಡೆ P. O. Perdoor S. K. ಡಿ. ಪತಿ ಬರಕೊಟ್ಟ ಅಡವು ದಸ್ತಾವೇಜು.	1000 0 0
4	ಪೆರಡೂರು ಗ್ರಾಮದ ಕ್ಷಬಾ ಪೇಟೆ ವಿಠ್ಠಲ ಮಲ್ಯರ ಮಗ ಜಗನ್ನಾಥ ಮಲ್ಯ. P. O. Perdoor S. K. ಕಂತು ಕರಾರು.	800 0 0
5	ಕಾರ್ಕಳ ವಿಜಯ ಬೇಂಕ್ ಲಿಮಿಟೆಡ್ ಯಿಲ್ಲಿ ಫಿಕ್ಸೆಡ್ ಡಿಪೋಜಿಟ್ಟಾಗಿ ಯಿಟ್ಟ ರೂಪ್ಯಾ, P- O- Karkal-	600 0 0
6	ಕಾರ್ಕಳ ತಾಲ್ಲೂ ಕುಕ್ಕುಜೆ ಗ್ರಾಮದ ಪಟೇಲ. I. Krishnaraja Ballal ಯಿವರಿಗೆ ರೂಪ್ಯಾ 800-0-0 ಕೊಟ್ಟ ಬಗ್ಗೆ ಸದ್ರಿಯವರು ಬರಕೊಟ್ಟ ಡಿಮೆಂಡ್ ಯಾನೆ ಪ್ರೊಮಿಸರಿ ನೋಟು. P- O- Perdoor-	800 0 0
7	ಕುಕ್ಕುಜೆ ಗ್ರಾಮದ ಅಡಿಮೂರು ಕಿಟ್ಟ ಹೆಗ್ಡೆ, ಚಂದ್ಕೆ ಹೆಗ್ಡೇರ ಮಗ. P. O. Perdoor ರೂಪ್ಯಾ 200-0-0ಕ್ಕೆ ಬರಕೊಟ್ಟ ಡಿ. ಪ್ರೊ. ನೋಟು.	200 0 0
8	ಕಾರ್ಕಳ ತಾಲ್ಲೂ ಯಳ್ಳಾರೆ ಗ್ರಾಮದ ದೇವಸ್ತಾನದ ಬಳಿಯಲ್ಲಿರುವ ವೆಂಕಟ್ರಮಣ ಮಂಜರ ಮಗ ವಾಸ್ತೇವ ಮಂಜ P.O. Perdoor ರೂಪ್ಯಾ 350-0-0ಕ್ಕೆ ಬರಕೊಟ್ಟ ಡಿಮೆಂಡ್ ಯಾನೆ ಪ್ರೊ ಮಿಸರಿ ನೋಟು.	350 0 0
9	ಯಳ್ಳಾರೆ ಗ್ರಾಮದ ಕನ್ನಡಿಕಂಬಳ ರಾಜಾಪುರ ವೆಂಕಟ್ರಮಣ ನ್ಯಾಳರ ಮಗ ಗ್ಯೋಂದ ನ್ಯಾಳ. P. O. Perdoor ರೂಪ್ಯಾ 150-0-0ಕ್ಕೆ ಬರಕೊಟ್ಟ ಡಿ. ಪ್ರೊ. ನೋಟು.	150 0 0
10	ಕಾರ್ಕಳ ವಕೀಲ್. N. M. Adyanthaya ಯಿವರ ಗುಮಾಸ್ತ ಗೋವಿಯವರು ರೂಪ್ಯಾ400-0-0ಕ್ಕೆ ಬರಕೊಟ್ಟ ಡಿ.ಪ್ರೊ. ನೋಟು	400 0 0
11	ಯಳ್ಳಾರೆ ಗ್ರಾಮದ ಮುಳ್ಳಾಡು ಹೊಸಮನೆ ಮುತ್ತಯ್ಯ ಸೆಟ್ಟಿ ಅಳಿಯ ಹೊಂಸಯ್ಯ ಸೆಟ್ಟಿ, ಡಿ. ಪ್ರೊ. ನೋಟು. P.O. Perdoor.	200 0 0

ಯೂ ಮೇಲೆ ತಪ್ಸೀಲು ಕಾಣ್ಸದ ಮೇರೆಗೆ ಲೃವೇಜು ನನಗೆ ವಸೂಲಾಗತಕ್ಕದ್ದು ಬಾಕಿಯಿರುತ್ತದೆ. ಯಿತ್ತೀಚೆಗೆ ನಾನು ಪೆಟ್ಟಿನ ಕ್ಯಾಲೆಯಲ್ಲಿರುವಲ್ಲಿ, ಮೇಲ್ಕಂಡ ಯಾವತ್ತು ದಸ್ತಾವೇಜುಗಳು ಮತ್ತು ಡಿ. ಪ್ರೊ. ನೋಟುಗಳು ಕ್ಕೆ ಕಾಗ್ದ ವಗೈರೆ ಯೆಲ್ಲಾ ರಿಕಾರ್ಡುಗಳನ್ನು ನನ್ನ ಮಗ, ವ, ಮುಳ್ಳಾಡು ಜೊನ್ಸಯ್ಯ ಸೆಟ್ರ ಅಳಿಯ ರಾಜು ಸೆಟ್ಟಿಯೆಂಬವನು ನನಗೆ ವ, ನನ್ನ ಮನೆಯದರೀಗೆ ಗೊತ್ತಿಲ್ಲದೆ ಮೋಸದಿಂದ ಹಸ್ತಗತಪಡಿಸಿಕೊಂಡು, ನನಗೆ ಮೇಲ್ಕಂಡವರಿಂದ ಬಾಕಿ ಲೃವೇಜನ್ನು ವಸೂಲುಮಾಡಿ ಸಂದಾಯಿಸಿಕೊಂಡು ದಿಂದಿದ್ದಾನಾಗಿ ನಾನು ತಿಳಿಯುತ್ತೇನೆ. ಆದ್ರಿಂದ ಅಂಥಾ ನೋಸ ಕೃತ್ಯದ ಸಲುವಿಕೆ ಗೇಲಿ ನಾನು ವ, ನನ್ನ ಪ್ರತಿನಿಧಿಗಳು ಬದ್ಧರಲ್ಲವೆಂಬ ಸಂಗ್ತಿ ಯೂ ಮೂಲ್ಕ ಶೃತ ಪಡಿಸಿರುತ್ತೇನೆ.

ಶಾ. 11—10—48. ನಾಗಪ್ಪ ಶೆಟ್ಟಿ ರುಜು.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲ್ಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಎಲ್ಲ ತರದ
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್
ಉಡುಪಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618

ಎರಡಾಣೆ

28-10-1948

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ಪಾರ್ಸಿಕ ಚಂದಾ ರೂ. 4-8-0
೬ ತಿಂಗಳಿಗೆ ರೂ. 2-8-0
ಬಿಡಿ ಪ್ರತಿಗೆ ರೂ 0-1-6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ವಿವರ
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯
ವಾರ ೯

NAVAYUGA WEEKLY, UDIPI, S. K.

FOUNDER: Hon'ble Mr. A. B SHETTY, Health Minister, Govt. of Madras.

Vol. 29
No. 9



ಜನಪ್ರಿಯ ನೆಹರು

ನಾಹತು ಪ್ರಧಾನಮಂತ್ರಿಗಳ ಸಮ್ಮೇಳನಕ್ಕಾಗಿ ಲಂಡನಿಗೆ ಹೋಗಿರುವ ಪಂಡಿತನೆಹರುಗಳು ಅಲ್ಲಿ ಅತ್ಯಂತ ಜನಪ್ರಿಯ ಮನುಷ್ಯನಾಗಿದ್ದಾರೆ. ಲೋಕದ ಯಾವ ಮೂಲೆಗೆ—ಯಾವ ವರ್ಗದ ಜನತೆಯ ನಡುವಿಗೆ—ಹೋದರೂ ಜನಮನ ಸೂರೆಗೊಳ್ಳುವ ವಿಶೇಷ ವ್ಯಕ್ತಿತ್ವವು ಪಂಡಿತನೆಹರುಗಳದ್ದು. ಈ ಮಟ್ಟಿಗೆ ಅವರನ್ನು ಸರಿಗಟ್ಟಬಲ್ಲವರು ಪ್ರಪಂಚದ ರಾಜಕಾರಣಿಗಳಲ್ಲೇ ಅಪೂರ್ವವೆನ್ನಬಹುದು.

ಮಹಾತ್ಮಾಜೀ ದುಂಡುಮೇಜು ಸಮ್ಮೇಳನಕ್ಕಾಗಿ ಲಂಡನಿಗೆ ಹೋಗಿದ್ದಾಗ ಅಲ್ಲಿನ ಹುಡುಗರಿಗೆ ಆಕರ್ಷಣೀಯರಾದಷ್ಟು ಪ್ರೌಢರಿಗಾಗಿರಲಿಲ್ಲ. ಗಾಂಧಿಜೀಯ ವಸ್ತ್ರಶೈಲಿಯು ಅಲ್ಲಿ ಗೌರವಾದರಗಳನ್ನು ಸಂಪಾದಿಸಿದ್ದರೂ ಅವರ ಸನ್ಯಾಸೀ ಜೀವನಕ್ರಮಗಳು ಲಂಡನಿಗರಿಗೆ ಅಪರಿಚಿತವಿದ್ದುವು; ವಿಲಕ್ಷಣವಾಗಿ ತೋರಿದ್ದುವು. ಆದರೆ ಪಂಡಿತನೆಹರುಗಳ ವ್ಯಕ್ತಿಗತ ವರ್ತನೆಗಳು ಚಿರಪರಿಚಿತವಿದ್ದು ಬ್ರಿಟಿಷ್ ಜನತೆಯು ಎಲ್ಲರಿಂದಲೂ ಅಪೇಕ್ಷಿಸುವ ಸಂಸ್ಕಾರಕೋಚ, ಸರಳತೆ, ಉದಾತ್ತತೆಯು ಅವುಗಳಲ್ಲಿದ್ದುದರಿಂದ ಅವರಿಗೆ ಪಂಡಿತಜೀ ಆತ್ಮೀಯರಾಗಿ ತೋರಿದ್ದರು.

ಗಾಂಧಿಜೀಯ ನಿಧನಾನಂತರ ಅವರ ತತ್ವಗಳ ಪಾಲನೆಗೆ ಪಂಡಿತ ಜವಾಹರಲಾಲರು ತನ್ನನ್ನು ತಾನು ಸಮರ್ಪಿಸಿಕೊಂಡಿರುವರಾದರೂ ವ್ಯಕ್ತಿಗತವಾದ ದೈನಂದಿನ ವರ್ತನೆಗಳಲ್ಲಿ .ಅವರೆಂದೂ ಮಹಾತ್ಮರನ್ನನುಕರಿಸಿದವರಲ್ಲ. ಉಡುಗೆ ತೊಡುಗೆ, ಆಹಾರ, ಅಭ್ಯಾಸಗಳ ಮಟ್ಟಿಗೆ ಗಾಂಧಿಜೀ ಹಾಕಿಕೊಂಡ ಬಿಗುವಾದ ನಿರ್ಬಂಧಗಳು ಪಂಡಿತಜೀಗೆ ಲಗಾಮಾಗಿಲ್ಲ.

ಲಂಡನಿನಲ್ಲಿ ನೆಹರುಗಳು ವೇಷ-ಆಭ್ಯಾಸಗಳಲ್ಲಿ ಬ್ರಿಟಿಷ್ ಪ್ರಮುಖ ನಾಗರಿಕರಲ್ಲೊಬ್ಬನೆಂಬಂತಿದ್ದರು. 'ಹಿಂದೀ ನಾಯಕ'ನೆಂದು ಅವರನ್ನು ವಿಂಗಡಿಸಿ ಗುರುತಿಸಲಾಗುವಂತಹದಾವುದೂ ಕೂಟ, ನೋಟಗಳಲ್ಲಿ ಪಂಡಿತನೆಹರುಗಳಲ್ಲಿರಲಿಲ್ಲ.

ಲಂಡನಿನಲ್ಲಿ ವಿಮಾನದಿಂದಿಳಿದೊಡನೆಯೇ ಅವರು ಹುಡುಕಿದುದು ತನ್ನ ಸಿಗರೇಟನ್ನು; ಲಂಡನಿಗರಿಂದ ಪ್ರಥಮತಃ ಅವರು ಪಡೆದುದು ಒಂದು ಸಿಗರೇಟನ್ನು. ಪಂಡಿತನೆಹರೂ ಸಿಗರೇಟ್ ಭಕ್ತರೆಂಬ ಸಂಗತಿ ಪೆಚ್ಚಿನ ಹಿಂದೀ ಜನರಿಗರಿಯದು.

ಲೋರ್ಡ್ ಮೌಂಟ್‌ಬೇಟನರ ಹಳ್ಳೀ ನಿವಾಸದಿಂದ ಹಿಡಿದು ಬ್ರಿಟಿಷ್ ಪ್ರಧಾನಿ ಮತ್ತು ಬ್ರಿಟಿಷ್ ರಾಜರವರೆಗಿನ ಪ್ರತಿಯೊಬ್ಬ ಪ್ರಮುಖನಲ್ಲೊಂಬಂತೆ ಪಂಡಿತ ನೆಹರುಗಳು ಪಡೆದಿದ್ದ ಔತಣ, ಸಲಹಾ ರಗಳಲ್ಲೆಲ್ಲಾ ನೆಹರುಗಳು ಸಸ್ಯಾಹಾರಿಗಳಾಗಿಯೇ ಇದ್ದರೆಂದು ಊಹಿಸಬಾರದು: ಸ್ವತಃ ಸಸ್ಯಾಹಾರಿಯಾಗಿರುವ ಸರ್. ಸ್ಟಾಫರ್ಡ್ ಕ್ರಿಪ್ಸರಿತ್ತ ಒಂದು ಔತಣದಲ್ಲಿ ಮಾತ್ರ ಪೂರ್ಣ ಹಿಂದೀ ಮರ್ಜಿಯ ಮಾಂಸರಹಿತ ತಿಂಡಿಗಳನ್ನು ತಯಾರಿಸಿದ್ದರೆಂಬ ವರ್ಣನೆ ಬಂದಿತ್ತು; ನಿಕ್ಕೆಲ್ಲಾ ತಡೆಗಳಲ್ಲೂ ತದ್ವಿರುದ್ಧ ರೀತಿಯ ತಿನಿಸುಗಳೇ ಇದ್ದುವೆಂದು ತಿಳಿದುಕೊಳ್ಳಲಡ್ಡಿಯಿಲ್ಲ.

ಉಚ್ಚ ಬ್ರಾಹ್ಮಣವಂಶಜರಾದ ಪಂಡಿತ ಜವಾಹರಲಾಲರು ಲೋರ್ಡ್ ವೇವೆಲರ ಕಾಲದಲ್ಲಿ ಗಡಿನಾಡು ಪ್ರಾಂತ್ಯ ಸಂಚಾರಕ್ಕೆ ಹೋಗಿದ್ದಲ್ಲಿ ಅಲ್ಲಿಯ ಫಕೀರರುಗಳಿಕ್ಕಿದ್ದ ಔತಣಕೂಟವೊಂಗರಲ್ಲಿ 'ಮಟನ್' ಹೊಡೆದಿದ್ದ ವಾರ್ತೆ ಆಗಲೇ ಪ್ರಕಟವಾಗಿದ್ದಿತು.

ಲೋರ್ಡ್ ಮೌಂಟ್‌ಬೇಟನ್, ಲೇಡಿ ಮೌಂಟ್‌ಬೇಟನ್, ಮತ್ತವರ ಪುತ್ರಿ ಸಮೇಲಾ ಮೌಂಟ್‌ಬೇಟನರಿಗೆ ಅವರು ತಿಲ್ಲಿಯಲ್ಲಿರುವಾಗ ತಮ್ಮ ಕ ಟುಂಬದ ನಾಲ್ಕನೇ ಸದಸ್ಯನೆಂಬಷ್ಟು ಪಂಡಿತ ಜವಾಹರಲಾಲರು ಆತ್ಮೀಯರಾಗಿ ಹೋಗಿದ್ದರು. ತಮ್ಮೀ ಹೃದಯಸಂಬಂಧ ಮತ್ತು ಒಂಟಿ ಜೀವ'ದ ಪಂಡಿತನೆಹರುಗಳ ಅವಿಶ್ರಾಂತ ಕಾರ್ಯ ಪರಿಶ್ರಮ, ಇವೆರಡಕ್ಕಪ್ಪುಗುಣವಾಗಿಯೇ ಲೋರ್ಡ್ ಮೌಂಟ್‌ಬೇಟನರು ನೆಹರುಗಳು ಲಂಡನಿಗೆ ಬಂದೊಡನೆ ನೂರಾರು ಹಳ್ಳೀನಿವಾಸದಲ್ಲಿ ಗದ್ದಲರಹಿತ ಏಕಾಂತ ಸ್ಥಳದಲ್ಲಿ ನಾಲ್ಕುದಿನ ವಿಶ್ರಾಂತಿಯನ್ನು ಅವರು ಅನುಭವಿಸುವ ಏರ್ಪಾಡು ಮಾಡಿದ್ದರು

ಮೌಂಟ್‌ಬೇಟನರನ್ನು ಫಿಲ್ಲಿಯಿಂದ ಲಂಡನಿಗೆ ಬೀಳ್ಕೊಡುವಷ್ಟರಲ್ಲಿ ಪ್ರಾಯಃ ಪ್ರಬುದ್ಧ ಪಮೇಲಾ ಮೌಂಟ್‌ಬೇಟನಳಿಗೆ ಪಂಡಿತಜೀ ಕೊಟ್ಟ ಬಲವಾದ ಚುಂಬನ ಈ ಬಾರಿ ಲಂಡನಿನಲ್ಲಿಳಿದ ರಾತ್ರಿ ಲೇಡಿ ಮೌಂಟ್‌ಬೇಟನರು ಮತ್ತು ಪಂಡಿತ ಜವಾಹರಲಾಲರಿಬ್ಬರೇ ಕಾರಿನಲ್ಲಿ ನೂರು ಮೈಲು ಹೋಗಿ ಮೌಂಟ್‌ಬೇಟನ್ ಹಳ್ಳೀ ಗೃಹದಲ್ಲಿ ಆ ರಾತ್ರಿ ಅವರಿಬ್ಬರೇ ಇದ್ದುದು—ಇವೆಲ್ಲವೂ ಬ್ರಿಟಿಷ್ ನಾಗರಿಕತೆಗೆ ಸಾರಾಸಾರವಾಗಿದ್ದರೂ ಹಿಂದೀ ಸಂಪ್ರದಾಯ ವಿರುದ್ಧವೆನ್ನಬಹುದು. ಬ್ರಿಟಿಷ್ ನಾಗರಿಕರೊಡನೆ ಇಷ್ಟೆಂದು ಸರಳವಾಗಿ, ಸಮರಸವಾಗಿ ವರ್ತಿಸಲು ನೆಹರುಗಳಿಂದಾದಷ್ಟು ಜೇರೊಬ್ಬ ಭಾರತ ನಾಯಕನಿಂದಾಗುವಂತಿಲ್ಲ.

ಆದ್ದರಿಂದಲೇ ಪಂಡಿತ ನೆಹರುಗಳಂದರೆ ತಮ್ಮಲ್ಲೊಬ್ಬನೆಂದು ಪಾಶ್ಚಾತ್ಯರು ತಿಳಿದುಕೊಳ್ಳುತ್ತಾರೆ; ಅಂತೆಯೇ ಅವರ ಹೃದಯವು ಸಂಪೂರ್ಣವಾಗಿ 'ಭಾರತೀಯ' ವಿರುವುದರಿಂದ ಅದರಲ್ಲೂ ಬಡ ಭಾರತೀಯ ಜನಸಾಮಾನ್ಯರ ಕಡೆಗೇನೇ ಪೂರ್ತಿಯಾಗಿ ಮಾಲಿಕೊಂಡಿರುವುದರಿಂದ ಹಾಗೂ ಭಾರತದಲ್ಲಿ ಭಾರತೀಯರೇ ಪೋಷಕರಿಂದವೇ ಅವರು ರಾಜಿಸುವದರಿಂದ ಪಂಡಿತಜೀ ಭಾರತೀಯರ ಹೃದಯಾಧಿದೇವತೆಯೂ ಆಗಿದ್ದಾರೆ.

ಹೀಗಾಗಿ ಪಂಡಿತನೆಹರುಗಳಂಥವರು ಪ್ರಧಾನಮಂತ್ರಿಯಾಗಿ ದೊರೆತುದು ಭಾರತದ ಭಾಗ್ಯವಾಗಿರುವಂತೆಯೇ, ಲಂಡನ್ ಸಮ್ಮೇಲನದಲ್ಲಿ—ಅಂತರ್ರಾಷ್ಟ್ರೀಯ ವ್ಯವಹಾರಗಳಲ್ಲಿ—ಭಾರತದ ಪ್ರತಿನಿಧಿಯಾಗಿ ಅವರು ಸಿಕ್ಕಿದುದೂ ಅಂತಹ ಒಂದು ಭಾಗ್ಯವೇ!

ಮಹಾತ್ಮಾ ಗಾಂಧಿಜೀ
ಸ್ಮಾರಕ ನಿಧಿಗೆ
ಕಾಣಿಕೆಯನ್ನೀಯಿರಿ.

ನಿಮೆನಾಡಲಿಕ್ಕೆ ಯಾ ಸ್ವಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಪೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ

ಪ್ರಧಾನ ಕಾರ್ಯಾಲಯಃ—ಧಾರವಾಡ,
THE UNITED KARNATAK INSURANCE COMPANY, LIMITED.

ನೆಹರು-ಲಿಯಾಖತ್ ಲಂಡನ್ ಮಾತುಕತೆ.

ಲಂಡನಿನಲ್ಲಿ ಭಾರತದ ಪ್ರಧಾನ ಮಂತ್ರಿ ಪಂಡಿತ ಜವಾಹರಲಾಲ ನೆಹರು ಮತ್ತು ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತ್ ಆಲೀಖಾನರು ಇದೇ ಒಕ್ಟೋಬರ್ ತಾ. 20ನೇ ರಾತ್ರಿಯಿಂದ ತಾ. 21ನೇ ರಾತ್ರಿಯ ವರೆಗಿನ 24 ತಾಸುಗಳೊಳಗೆ ಎರಡು ಬಾರಿ ಮುಖಾಮುಖಿ ಸಂಭಾಷಣೆ ಮಾಡಿಕೊಂಡರೆಂಬುದು ಗಣ್ಯ ವಿಷಯವಿದೆ ಪ್ರಥಮ ಕೂಟದಲ್ಲಿ ಬ್ರಿಟಿಷ್ ಪ್ರಧಾನ ಮಂತ್ರಿ ಮಿ. ಕ್ಲೆಮೆಂಟ್ ಆಟ್ಲಿಗಳೂ ದ್ವಿತೀಯ ಕೂಟದಲ್ಲಿ ಮಿ. ಆಟ್ಲಿಗಳೊಂದಿಗೆ ಬ್ರಿಟನಿನ ವಿದೇಶ ಕಾರ್ಯದರ್ಶಿ ಮಿ. ಅರ್ನೆಸ್ಟ್ ಬೆವಿನರೂ ಹಾಜರಿದ್ದರು ಈ ಚರ್ಚೆಯು ಅತ್ಯಂತ ಗುಟ್ಟಿನದಿದ್ದು, ಚರ್ಚಾಧಾಗಿಗಳು ಸೂಡಾ ತಮ್ಮ ಬಾಯಿ-ಕಿವಿಗಳೊಳಗಿನ ಸಂಗತಿಯಾಗಿ ಗುಪ್ತ ಮಾತುಕತೆನಡೆಸಿದ್ದರೇ ಹೊರತು ಬರಿಹ ಮೂಲಕ ಏನನ್ನೂ ಲಿಖಿಸಿಕೊಂಡಿದ್ದಿಲ್ಲ. ಭಾರತ-ಪಾಕಿಸ್ತಾನಗಳೊಳಗಿನ ಮುಖ್ಯ ವಿವಾದವಾಗಿರುವ ಕಾಶ್ಮೀರದ ತೀರ್ಮಾನವೇ ಅಲ್ಲಿ ಚರ್ಚಿಸಲ್ಪಟ್ಟಿರುವುದೆಂದು ತಿಳಿದು ಬಂದಿದೆ; ಅದನ್ನನುಸರಿಸಿ ಇನೆರಡು ವಿಷಾಹತಗಳೊಳಗಿನ ಇತರ ವಿವಾದಗಳೂ ಪರ್ಯಾಲೋಚಿಸಲ್ಪಟ್ಟಿರಬೇಕು ಆದರೂ ಈ ಸಮ್ಮೇಲನದ ಪರಿಣಾಮವಾಗಿ ಏನಾದರೊಂದು ತೀರ್ಮಾನ ಹೊರಬೀಳಬಹುದೆಂದು ಖಾತ್ರಿ ಭಗವಸೆ ಪಡುವುದಸಾಧ್ಯ

ಕಾಶ್ಮೀರ ತೊಡಕು

ಭಾರತ ಸರಕಾರದ ಸ್ಪಷ್ಟವಾಸಿದ್ಧ ಶಾಂತಿ ಪ್ರೇಮವೊಂದಲ್ಲವಾದರೆ ಕಾಶ್ಮೀರದ ಹೋರಾಟವಿಂದು ಬೇರೆ ರೂಪ ಕೈತಿರುಗುತಿದ್ದಿತು. ಆದಿ ಭಂಗದಲ್ಲಿ ತನ್ನ ಕೈಯ್ಯೇನೂ ಇದರಲ್ಲಿಲ್ಲವೆಂದು ವಂಚನೆಯ ಮಾತಾಡುತ್ತಿತ್ತು ಬಂದಿದ್ದ ಪಾಕಿಸ್ತಾನವು ಕೊನೆಯ ಭಾಗದಲ್ಲಿ ತನ್ನ ಸೇನೆಯು ಕಾಶ್ಮೀರದಲ್ಲಿ ಆಕ್ರಮಣಗಾರರೊಂದಿಗೆ ಸೇರಿಕೊಂಡು ಹೋರಾಡುತ್ತಿರುವುದೆಂದು ಒಪ್ಪಿಕೊಂಡಿದ್ದಿತು. ಭಾರತದೊಂದಿಗೆ ಸೇರಿರುವ ಕಾಶ್ಮೀರದೊಳಗೆ ಸೇನೆ ನುಗ್ಗಿಸುವುದೆಂದರೆ ಪ್ರತ್ಯಕ್ಷ ಭಾರತದೊಳಗೇನೇ ಧಾಳಿ ಮಾಡಿದಂತೆ ಆದ್ದರಿಂದ ಇದಕ್ಕೆ ಪ್ರತಿಯಾಗಿ ಭಾರತವು ಪಾಕಿಸ್ತಾನದ ಗಡಿಯೊಳಗೆ ನುಗ್ಗಿ ಹೋಗುತಿದ್ದರೆ, ಅದೇನೂ ನಿಯಮ ವಿರುದ್ಧವಾಗುತಿದ್ದಿಲ್ಲ. ಆದರೂ, ಯುದ್ಧರಂಗವನ್ನು ವಿಸ್ತರಿಸಿದ ಅತಿಕ್ರಮ ತಪ್ಪಿಸಿಂದಾಗಬಾರದು-ಕಾಶ್ಮೀರ ಪ್ರಶ್ನೆಯಲ್ಲಿ ಕೈಹಾಕಿ, ಸಮಿತಿಯೊಂದನ್ನು ಕಳುಹಿಸುವ ಸಂಯುಕ್ತ ರಾಷ್ಟ್ರ ಸಂಘವೇನು ಮಾಡುವದೆಂಬುದನ್ನು ನೋಡಿಕೊಳ್ಳಬೇಕು-ಎಂಬುದಕ್ಕಾಗಿ ಭಾರತ ಸರಕಾರವು ಕೈ ಹಿಂಡೆಳೆದು ಕೊಂಡಿದೆ. ಹೀಗಿದ್ದಿದರೂ ಪಾಕಿಸ್ತಾನ್ ಸರಕಾರವು ತಮ್ಮ ರಾಷ್ಟ್ರವೀಗ ಮುತ್ತಿಗೆಗೊಳಗಾಗಿದೆ, ಎಂಬಂತೆ ಒಂದೇ ಸವನೆ ಯುದ್ಧ ಸಿದ್ಧತೆ ನಡೆಸಿದೆ. ರೊಟ್ಟಿ ಮತ್ತು ಸ್ವಿಡ್ಡಿನ ಬದಲಿಗೆ ಕೋವಿ ಮತ್ತು ಗುಂಡುಗಳನ್ನು ಕೊಡುವದಕ್ಕೂ ನಾನು ಸಿದ್ಧನೇ; ಅಗತ್ಯ ಬಿದ್ದರೆ ಸ್ವತಃ ನಾನು ಮತ್ತು ನನ್ನ ಸಹೋದ್ಯೋಗಿಗಳು ಪ್ರತ್ಯಕ್ಷ ರಣರಂಗಕ್ಕೆ ಹೋಗಿ ನಮ್ಮ ರಕ್ತದ ಕೊನೆಯ ಹನಿಯನ್ನೂ ಚೆಲ್ಲಲಿದ್ದೇನೆ" ಎಂದು ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಆಲೀ ಖಾನರು ಹೇಳಿದ್ದಾರೆ. 'ಪಾಕಿಸ್ತಾನದ ಪ್ರತಿಯೊಬ್ಬ ತರುಣನೂ ಸ್ವದೇಶ ರಕ್ಷಣೆಗಾಗಿ ಸೋಲ್ಜರಾಗಬೇಕು' ಎಂದು ಪಾಕಿಸ್ತಾನ್ ಗವರ್ನರ್ ಜನರಲ್ ಶ್ರೀಜಾ ನಾಜಿಮುದ್ದೀನರು ಇತ್ತೀಚೆಗೆ ಆಗ್ರಹದಿಂದ ಕೇಳಿಕೊಂಡಿದ್ದಾರೆ. ಹೈದರಾಬಾದ್ ತೀರ್ಮಾನಾನಂತರ ಪಾಕಿಸ್ತಾನ್ ಸರಕಾರದ ಯುದ್ಧ ಸಿದ್ಧತೆಯ ರಭಸವೇರಿದೆಯಲ್ಲದೆ, ಪೂರ್ವ ಪಶ್ಚಿಮ ಪಾಕಿಸ್ತಾನಗಳಲ್ಲಿ ಹಿಂದುಗಳ ಮೇಲೆ ಅತ್ಯಾಚಾರಗಳಾಗಿ ಅವರು ಭಾರತಕ್ಕೋಡಿ ಬರುತ್ತಿರುವ ದುರ್ವಾರ್ತೆಗಳೂ ಇವೆ ಇವುಗಳ ಅರ್ಥವೇನು? ಇಂದು ತಾನು ನೂಡುತ್ತಿರುವ ಕಾರ್ಯಗಳು ಭಾರತ ಸರಕಾರದಿಂದ ತನಗಾಗುತಿದ್ದಲ್ಲಿ, ತಾನೇನು ಮಾಡುತ್ತಿದ್ದೆನೋ ಅದನ್ನೇ ಭಾರತ ಸರಕಾರವೀಗ ಮಾಡಬಹುದು, ಎಂಬ ಹೆದರಿಕೆ ಪಾಕಿಸ್ತಾನಕ್ಕೆ ಬಂದಿರಬೇಕು. ಹೈದರಾಬಾದು ಉದಾಹರಣೆಯಂತೆ ಕೇಂದ್ರ ಭಾರತವನ್ನು ಪೀಡಿಸುತ್ತಿದ್ದಷ್ಟು ಕಾಲ ತನ್ನ ಗೊಡವೆಗದು ಬರಲಾರದೆಂದೂ ಕೊನೆಯ ಅಂಕದಲ್ಲಿ ಹೈದರಾಬಾದು ಆರೇ ತಿಂಗಳು ತಡೆದು ನಿಂತಕ್ಷಿ, ತತ್ಪ್ರತಿ ಛಾಯೆಯು ಭಾರತದಲ್ಲಿಲ್ಲಾ ಹರಡಿ ತನ್ನ ಕಾರ್ಯಕ್ಕನುಕೂಲವಾಗುವದೆಂದೂ ಬಗೆದಿದ್ದ ಪಾಕಿಸ್ತಾನದ ಆಶೆಯು ಗಾಳೀ ಪಾಲಾದೊಡನೆ, ಅದು ದಿಗಿಲುಬಿದ್ದು ವಿಕಾರ ರೀತಿಯ ಯುದ್ಧ ಸ್ವರ ಹೊರಡಿಸಹತ್ತಿದೆ. ತಮ್ಮ ನೆರೆಮನೆಯವರ ಈ ಗದ್ದಲವನ್ನು ನಿಲ್ಲಿಸುವದಕ್ಕಾಗಿಯೇ "ಹೆದರಬೇಡಿ; ಅಂತಹದೇನನ್ನೂ ಮಾಡುವವರು ನಾವಲ್ಲ" ಎಂದು ನೆಹರು, ವಲ್ಲಭಾಯಿಗಳು ಸಮಜಾಯಿ ಸಿದರೂ ಪಾಕಿಸ್ತಾನೀ ಅಧೈರ್ಯ ನಿವಾರಣೆಗೊಂಡಿಲ್ಲ.

ಸಮ್ಮೇಲನ ಸಫಲವಾದೀತೆ?

ಕಳದ ವರುಷದ ನವಂಬರ್‌ನಲ್ಲಿ ಕಾಶ್ಮೀರವು ಭಾರತದೊಂದಿಗೆ ಜೋಡಣೆಗೊಂಡು, ಭಾರತದ ಸೇನೆ ಕಾಶ್ಮೀರಕ್ಕೆ ಕಾಲಿಟ್ಟ ಕೂಡಲೇ, ಪಾಕಿಸ್ತಾನದ ಕೈವಾಡವನ್ನಲ್ಲಿ ಕಂಡು ಪ್ರತ್ಯಕ್ಷ ಪಾಕಿಸ್ತಾನವನ್ನೇ ಹಾದಿಗೆ ತರಲು ಹಂಬೀ ನಾಯಕರು ಮುಂಬಾಗಿದ್ದರು; ಒಂದೇ ವಸಾಹತು ಕೂಟದ ಇಬ್ಬರು ಪದಸ್ಥರು ಹಾಗೆ ಘರ್ಷಿಸಿಕೊಳ್ಳುವ ಮೊದಲು ಪಾಲಿಸಬೇಕಾದ ಸಂಪ್ರದಾಯಕ್ಕನುಸಾರವಾಗಿ ಈ ಸಂಗತಿಯನ್ನು ಬ್ರಿಟಿಷ್ ಸರಕಾರದ ಆವಗಾಹನೆಗೆ ತಂದೊಡನೆಯೇ ಬ್ರಿಟಿಷ್ ಪ್ರಧಾನಿ ಆಟ್ಲಿಗಳು ಅವಸರದಿಂದ ಕೈಹಾಕಿ ಕಾಶ್ಮೀರ ಯುದ್ಧವು ಭಾರತ-ಪಾಕಿಸ್ತಾನ್ ಯುದ್ಧವಾಗಿ ವಿಸ್ತಾರಪಡದಂತೆ ತಡೆಗಟ್ಟಿದ್ದರೆಂಬ ಗುಟ್ಟು ಈಗ ಬಯಲೇಕವಾಗಿ ಹೆಚ್ಚಿನವರಿಗೆ ತಿಳಿದಿದೆ. ಭಾರತದ ಕೆದ್ದೊಟ್ಟೆಯೊಳಗಿನದಾದ ಹೈದರಾಬಾದಿನ ಪ್ರಶ್ನೆಯಲ್ಲಿ ಸಹಜವಾಗಿ ಹೊರಗಿನವರು ಕೈಹಾಕದಿದ್ದಂತೆ, ಭಾರತ-ಪುತ್ತು ಪಾಕಿಸ್ತಾನ್‌ಗಳೊಳಗಿನ ಯುದ್ಧದಲ್ಲಿ ಅವುಗಳ ಸಮಪಾಲ್ಗಿಯ ಇತರ ವಸಾಹತುಗಳು ಸುಮ್ಮಗಿರಲು ಸಾಧ್ಯವಿಲ್ಲ. ಭಾರತ ಸರಕಾರವು ಪಾಕಿಸ್ತಾನದ ಆಕ್ರಮಣಕ್ಕಾಗಿ ದೊಡ್ಡ ಪರಿಮಾಣದ ವ್ಯತಿಕ್ಯಯಾಚರಣೆಗೆ ಎಳಿದಿರಲು ಇದೂ ಒಂದು ಕಾರಣ ವಸಾಹತು ಪ್ರಧಾನಿಗಳ ಸಮ್ಮೇಳನಕ್ಕಾಗಿ ಬಂದಿದ್ದ ಪಂಡಿತ ನೆಹರುಗಳಿಗೊಮ್ಮೆ, ಮಿ. ಲಿಯಾಖತರಿಗೊಮ್ಮೆ ಪ್ರತ್ಯಪ್ರತ್ಯೇಕವಾಗಿ ಖಾಸಗೀ ಔತಣಕೊಟ್ಟು, ಇಬ್ಬರ ಅಭಿವ್ಯಾಯಗಳನ್ನೂ ಬೇರೆ ಬೇರೆಯಾಗಿ ಗ್ರಹಿಸಿಕೊಂಡು ಆ ಮೇಲೆ ಅವರಿಬ್ಬರನ್ನೂ ಒಟ್ಟು ಮಾಡಿ ಮಿ. ಆಟ್ಲಿಗಳು ಮಾತುಕತಿಸಿದರೂ ಈ ಕಾರಣದಿಂದಲೇ. ಅಸಂಭಾವನೆಗಳೆರಡರಲ್ಲೂ ತಾನು ಹಾಜರಿದ್ದು, ಆ ಪೈಕಿ ಒಂದರಲ್ಲಿ ಮಿ. ಬೆವಿನರನ್ನೂ ಕೂಡಿಕೊಂಡು ಬ್ರಿಟಿಷ್ ಪ್ರಧಾನಿಗಳು ಇವೆರಡು ರಾಷ್ಟ್ರಗಳೊಳಗೊಂದು ಸಂಧಾನ ನಿರ್ಮಿಸಿ ಹಾಕಲು ಶತಪ್ರಯತ್ನ ಮಾಡಿದ್ದರೆಂದು ಊಹಿಸಬಹುದು. ಆದರೂ ಈ ಮಾತುಕತೆಗಳು ವಿಜಯಗೊಂಡಾವೆ? ಪಾಕಿಸ್ತಾನ್ ಕೂಗು ಎದ್ದಂದಿನಿಂದ ಇಳ್ಳುಡೆಯ ನಾಯಕರನ್ನು ಒಂದುಗೂಡಿಸಲು ಈ ವರೆಗೆ ಇಂತಹ ಮಾತುಕತೆಗಳು ಬಹಳ ನಡೆದಿದ್ದುವು; ಯಾವುದೂ ಫಲಿಸಿದ್ದಿಲ್ಲ. ಗಾಂಧಿ-ಜಿನ್ನಾ ಮಾತುಕತೆ, ನೆಹರೂ-ಜಿನ್ನಾ ಸಂಭಾಷಣೆ, ಸಿಮ್ಲಾ ಸಮ್ಮೇಲನ, ದಿಲ್ಲಿ ಸಮ್ಮೇಳನ ಇವಲ್ಲವೂ ಸಫಲ ಕೊಟ್ಟುವಿಲ್ಲ. ಮಿ. ಕ್ಲೆಮೆಂಟ್ ಆಟ್ಲಿಗಳೇ 'ಮೇ ತಾ. 16ರ ವ್ಯಾಪಕತೆಯ ಪಂಗಡ ನಿರೂಪಣಾ ಬ್ರಿಟಿಷ್ ಯೋಜನೆ'ಯ ಕುರಿತು ಇವೆರಡು ಪಕ್ಷಗಳೊಳಗೆ ಏಕಮತ ನಿರ್ಮಿಸುವುದಕ್ಕಾಗಿ ಅಂದೊಮ್ಮೆ ನೆಹರು ಮತ್ತು ಜಿನ್ನಾರನ್ನು ಲಂಡನಿಗೆ ತರಿಸಿಕೊಂಡು ಮಾತಾಡಿದ್ದ ಪ್ರಥಮ ಪ್ರಯತ್ನವೂ ನಿಷ್ಫಲವಾಗಿದ್ದಿತು. ಈ ದ್ವಿತೀಯ ಪ್ರಯತ್ನ ಜಯಶೀಲವಾದೀತೆ? ಭಾರತದ ಅಗಾಧ ಶಕ್ತಿಯ ಅರಿವು ಪಾಕಿಸ್ತಾನ್ ನಾಯಕರಿಗೀಗ 'ಕಂಪಸ್ಪ್ಷ್ಟ' ದಂತಾಗಿದೆ. ಎಂಬುದು ನಿಸ್ಸಂದೇಹ. ವೈವಹಾರ್ಯವಾದ ಒಂದು ಸಂಧಾನಕ್ಕೆ ಬರುವುದರಲ್ಲಿ ಮಿ. ಲಿಯಾಖತರು ಜಿನ್ನಾರಿಗಿಂತಲೂ ಹೆಜ್ಜೆ ಮುಂದಿದ್ದವರು ಎಂಬುದಕ್ಕೆ ದೇಸಾಯಿ-ಲಿಯಾಖತ್ ಒಪ್ಪಂದವೇ ಸಾಕ್ಷಿ ನಿದರ್ಶನ. ದೇಶ ವಿಭಜನಾನಂತರ ಸಣ್ಣ ಪುಟ್ಟ ವಿಷಯಗಳಲ್ಲಿ ಭಂಗುತ-ಎಂದೇ ಪಾಕಿಸ್ತಾನ್ ಸರಕಾರಗಳು ಕೆಲವು ಒಪ್ಪಂದಗಳನ್ನು ಮಾಡಿಕೊಂಡಿವೆ. ಆದ್ದರಿಂದ ಲಂಡನ್ ಮಾತುಕತೆಯು ಫಲಿಸಲಾರದೆಂದು ನೂರಕ್ಕೆ ನೂರರಷ್ಟೂ ಹೇಳುವದಸಾಧ್ಯ ಆದರೆ ಶೇ. 75ರಷ್ಟು ನಿರಾಶೆಯೇ ಕಾಣುತ್ತಿದೆ!

ದೀಪಾವಳಿ ಸಂದೇಶ

"ಮಿತವ್ಯಯವು ಬಹು ದೊಡ್ಡ ಉತ್ಪನ್ನದ ಸಾಧನ
ವೆಂದು ತಿಳಿದುಕೊಳ್ಳದೆ ಜನರು ಕೆಡುವರು"

—ಸಿಸಿರೊ

ಪ್ರತಿಯೊಬ್ಬನೂ ಮಿತವ್ಯಯದ ಜೀವನಕ್ಕೆ
ತೊಡಗಿ, ಉಳಿತಾಯವನ್ನು ಹೆಚ್ಚಿಸುವ ಯೋ
ಜನೆ ಕೈತುಳ್ಳಬೇಕು. ಇದಕ್ಕಾಗಿ ನಿಮ್ಮೊ
ವನೆ ಸಹಕರಿಸಲು ನಾವು ಸದಾ ಸಿದ್ಧರಿದ್ದೇವೆ.

ದಿ ನ್ಯೂ ಕರ್ನಾಟಕ ಪ್ರೊವಿಡೆಂಟ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಉಡುಪಿ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣಗಾರಿಕೆ ಪರಿಮಿತಿಸಲ್ಪಟ್ಟ ಇಂಡಿಯಾಪಲ್ಲಿ ಸಾಹೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ನಸೂಲಿ ಆಫವಾ ಸಂಗ್ರಹ] ಇಲಾಖೆಯು ನಮ್ಮ ಶಾಖೆಗಳಿರುವಲ್ಲಿ ರುಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ಪಶ್ಚಿಮದ ಅರಬೆಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ, ವೈಕ್ಷಣಾಟಿಕೆಗಳಿರುವಲ್ಲಿ. ಮತ್ತು ಮುಂಬಾಯಿ ಹಾಗೂ ಆದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರುಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ಸಾಲ್ಪತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ನಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿತರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತು ಸುಲಭವಾಗಿ ನಿಮ್ಮವಿಶ್ವ ಆವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿವುದು. ಇಷ್ಟೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರುಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ತೀಕ್ಷ್ಣ ಲಕ್ಷ್ಯ ಹರಿವುದು.

The Canara Bank Limited.

ESTD: 1906

ಲಂಡನಿನ ವಸಾಹತು ಸಮ್ಮೇಳನ

ಅಕ್ಟೋಬರ್ ತಾ. 11ರಲ್ಲಿ ಲಂಡನಿನಲ್ಲಿ ಪ್ರಾರಂಭಿಸಿದ "ಬ್ರಿಟಿಷ್ ಕಾಮನ್‌ವೆಲ್ತ್" ರಾಷ್ಟ್ರಗಳ ಪ್ರಧಾನಿಗಳ ಸಮ್ಮೇಳನವು ತಾ. 22ರಲ್ಲಿ ಮುಗಿದಿದ್ದು ಆರಂಭಿಸುವಾಗ 'ಬ್ರಿಟಿಷ್ ಕಾಮನ್‌ವೆಲ್ತ್' ಆಗಿದ್ದುದು ಅಂತ್ಯಗೊಳ್ಳುವಾಗ ಬರೀ 'ಕಾಮನ್‌ವೆಲ್ತ್' ಆಗಿತ್ತಲ್ಲದೆ ಹೊಸ ರೀತಿ ನೀತಿಗಳನ್ನು ತರುವ ಹಲವು ಮುಖ್ಯ ನಿರ್ಧಾರಗಳನ್ನೂ ಅದು ಮಾಡಿದ್ದಿತು.

ಬ್ರಿಟನ್ನು ಮತ್ತು ಭಾರತ, ಪಾಕಿಸ್ತಾನ, ಸಿಲೋನ್, ಕೆನಡಾ, ನ್ಯೂಜೀಲೆಂಡ್, ದಕ್ಷಿಣಾಫ್ರಿಕ, ಆಸ್ಟ್ರೇಲಿಯ, ದಕ್ಷಿಣ ರೊಡೇಶಿಯಾ-ಈ ಒಂಭತ್ತು ರಾಷ್ಟ್ರಗಳ ಸಮ್ಮೇಳನವಿದು. ಅಯರ್ಲೆಂಡು ಬ್ರಿಟನಿನ ಇಂತಹ ವಸಾಹತುಗಳಲ್ಲೊಂದಾಗಿದ್ದರೂ ಈಗ ಅದು ಸಂಬಂಧ ಕಡಿದುಕೊಂಡು ಹೊರಗಿದೆ. ಬರ್ಮಕ್ಕೆ ಆದಿಭಾಗದಲ್ಲಿ ವಸಾಹತು ಸ್ಥಾನವಿದ್ದರೂ ಈಗ ಅದು ಪೂರ್ಣ ಸ್ವತಂತ್ರವಾಗಿರುವುದರಿಂದ ಬಂದಿಲ್ಲ ಎರಡು ವಾರ ನಡೆದ ಈ ಸಮ್ಮೇಳನದ ಅಧ್ಯಕ್ಷತೆಯನ್ನು ಬ್ರಿಟನಿನ ಪ್ರಧಾನ ಮಂತ್ರಿ ಮಿ ಕ್ಲೆಮೆಂಟ್ ಅಟ್ಲಿಗಳು ವಹಿಸಿದ್ದರು.

ಲೋಕದ ಒಂಭತ್ತು ರಾಷ್ಟ್ರಗಳು-ಈಗ ಸುಮಾರು 500ರಿಂದ 60 ಕೋಟಿಯ ವರೆಗಿರಬಹುದಾದ, ಲೋಕದ ಮೂರನೇ ಒಂದಂಶದಷ್ಟಾಗಿಬಹುದಾದ ಜನತೆಯ ಪ್ರತಿನಿಧಿಗಳು-ಸಮ್ಮೇಳನವಿದು ಈ ಪೈಕಿ ಅತಿಹೆಚ್ಚಿನ ಜನಸಂಖ್ಯೆಯುಳ್ಳ ಭಾರತ, ಪಾಕಿಸ್ತಾನ, ಸಿಲೋನುಗಳು ಹೊಸತಾಗಿ ಈ ವಸಾಹತು ರಾಷ್ಟ್ರಕೂಟದಲ್ಲಿ ಸೇರಿದವುಗಳು. ಆದ್ದರಿಂದ ಅಲ್ಲಿ ಈ ಮುಖ್ಯ ಹೊಸಬರ ಕಡೆಗೆ ಹೆಚ್ಚಿನ ಲಕ್ಷ್ಯವು ಕೊಡಲ್ಪಟ್ಟಿದ್ದಿತು.

ಲೋಕದ ಹೊಸ ವಿದ್ಯಮಾನಗಳಿಗನುಸರಣವಾಗಿ ಸಮಾನ ಸ್ಥಾನಮಾನಗಳಲ್ಲಿರುವ ಇವೆಲ್ಲಾ ರಾಷ್ಟ್ರಗಳಲ್ಲಿ ಐಕ್ಯತೆ ನಿರ್ಮಿಸಿ ಭಾವೀ ಸಂಭವಗಳನ್ನು ಒಮ್ಮತದಿಂದ ಇದಿರಿಸಲಾಗುವಂತೆಯೂ ಪರಸ್ಪರ ಸಹಕಾರದಿಂದ ತಂತಮ್ಮ ರಾಷ್ಟ್ರ ಹಿತಗಳನ್ನು ಸಾಧಿಸಿಕೊಳ್ಳುವಂತೆಯೂ ಮಾಡುವುದೇ ಈ ಸಮ್ಮೇಳನದ ಉದ್ದೇಶವಾಗಿದ್ದರಿಂದ ಆದೊಂದು ಮೈತ್ರೀ ಮಾತುಕತೆಯಾಗಿತ್ತು; ಠರಾವುಗಳನ್ನೋ ಒಪ್ಪಂದ ಕರಾರುಗಳನ್ನೋ ಮಾಡಿಕೊಳ್ಳುವ ನಿಯಮಬದ್ಧ ಸಮ್ಮೇಳನವಾಗಿರಲಿಲ್ಲ.

ಅದೇ ರೀತಿ ಲಂಡನ್, ಸಮ್ಮೇಳನದ ಕಾರ್ಯಕಲಾಪಗಳಾಗಿ ಪರಸ್ಪರ ವಿಷಯ ವಿಚಾರಣೆ ಮತ್ತು ಆಕ್ಷೇಪಣೆಯ ಸಂಬಂಧ ರಚನೆಗಳೇ ಇದ್ದುವು. ಇಂತಹ ಸೌಹಾರ್ದತಾ ನಿರ್ಮಾಣಕ್ಕೆರುವ ತೊಡಕುಗಳನ್ನು ನಿವಾರಿಸಿಕೊಳ್ಳುವ ಕಾರ್ಯಗಳೆಲ್ಲಾ ಅಲ್ಲಿ ಆಗಿದ್ದುವು. ಸಮ್ಮೇಳನ ಭಾಗಗಳೆಲ್ಲಾ ಸ್ವತಂತ್ರ ಸ್ವಾಧಿಕಾರೀ ರಾಷ್ಟ್ರಗಳ ಪ್ರತಿನಿಧಿಗಳದ್ದುದರಿಂದ ಆಯಾ ರಾಷ್ಟ್ರಕ್ಕೆ ಸಂಬಂಧಿಸಿದ ಯಾವುದೇ ಸ್ವಾಮುಖ್ಯ ನಿರ್ಧಾರವಾದರೂ ಆಯಾ ರಾಷ್ಟ್ರಗಳ ಪ್ರತಿನಿಧಿ ಸಭೆಗಳಲ್ಲೇ ಆಗಬೇಕಲ್ಲದೆ ಇಂತಹ ಕೂಟಗಳಲ್ಲಲ್ಲ ವೆಂಬುದು ಸ್ವತಃ ಸಿದ್ಧ.

ಹದಿನಾರನೇ ಲಂಡನಿನ ವಸಾಹತು ಸಮ್ಮೇಳನದಲ್ಲಾದ ಮುಖ್ಯ ನಿರ್ಣಯಗಳೆಂದರೆ 'ಬ್ರಿಟಿಷ್ ಕಾಮನ್‌ವೆಲ್ತ್' ಎಂದೀವರೆಗಿದ್ದ ಹೆಸರಿನ "ಬ್ರಿಟಿಷ್" ಪದವನ್ನು ತೊಡೆದು ಹಾಕಿ, ಒಟ್ಟೇ 'ಕಾಮನ್‌ವೆಲ್ತ್' ಮಾಡಿಟ್ಟುದು. ಈ ರಾಷ್ಟ್ರ ಕೂಟವು ಬ್ರಿಟಿಷರದೇನೂ ಆಗಿರದೆ ಸರಿಸಮಾನತೆಯ ರಾಷ್ಟ್ರಗಳ ಒಂದು ಕೂಟವೆಂದಾಗಬೇಕೆಂಬುದಕ್ಕಾಗಿಯೇ ಆ ಶಬ್ದಕ್ಕೆ ಕತ್ತರಿ ಪ್ರಯೋಗ. ಅಂತೆಯೇ ಈ ತನಕ ವಸಾಹತು ರಾಷ್ಟ್ರಗಳ ಪ್ರತಿನಿಧಿಗಳಾಗಿ ಲಂಡನಿನಲ್ಲಿರುವ 'ಹೈಕಮಿಶನರ್'ರ ಸ್ಥಾನವು ಇತರ ಸ್ವತಂತ್ರ ರಾಷ್ಟ್ರಗಳ 'ರಾಯಭಾರಿ'ಗಳ ಸ್ಥಾನಕ್ಕೆಂಕ ತುಸು ಕಡಿಮೆಯದಾಗಿತ್ತು. ಇನ್ನು ಮುಂದೆ ಹೈಕಮಿಶನರರ ಸ್ಥಾನವೂ ರಾಯಭಾರಿಗಳ ಸ್ಥಾನಕ್ಕೆಂಕ ತುಸು ಕಡಿಮೆಯದಾಗಿತ್ತು. ಇನ್ನು ಮುಂದೆ ಹೈಕಮಿಶನರರ ಸ್ಥಾನವೂ ರಾಯಭಾರಿಗಳ ಸ್ಥಾನಕ್ಕೆಂಕ ತುಸು ಕಡಿಮೆಯದಾಗಿತ್ತು. ಇನ್ನು ಮುಂದೆ ಹೈಕಮಿಶನರರ ಸ್ಥಾನವೂ ರಾಯಭಾರಿಗಳ ಸ್ಥಾನಕ್ಕೆಂಕ ತುಸು ಕಡಿಮೆಯದಾಗಿತ್ತು. ಇನ್ನು ಮುಂದೆ ಹೈಕಮಿಶನರರ ಸ್ಥಾನವೂ ರಾಯಭಾರಿಗಳ ಸ್ಥಾನಕ್ಕೆಂಕ ತುಸು ಕಡಿಮೆಯದಾಗಿತ್ತು.

ಭಾರತವು ತನ್ನ ಘಟನಾ ಸಭೆಯ ನಿರ್ಣಯಾನುಸಾರ ಸಮಾಜವಾದಿ ಸಿದ್ಧಾಂತಕ್ಕೆ ಅಂಟಿಕೊಳ್ಳದೆ 'ರಿಪಬ್ಲಿಕ್' ಆಗಿಯೇ 'ಕಾಮನ್‌ವೆಲ್ತ್' ಕೂಟದಲ್ಲಿ ಇರುವುದೆಂಬ ಅಭಿಪ್ರಾಯ ಒಲವಾಗಿದೆ. ಪಾಕಿಸ್ತಾನವು ಎಂದಿಗೂ ವಸಾಹತ ಸಂಬಂಧ ಕಡಿದುಕೊಳ್ಳಲಾರದ ಪರಿಸ್ಥಿತಿಯಲ್ಲಿರುವುದು ದಿಟವಾದರೂ, ಸಿಲೋನಿಗೆ ಈಗಿನ ಸ್ವತಂತ್ರ್ಯವೇ ವಿಶೇಷ ಪ್ರಯೋಜನವಿಲ್ಲದೆ ಹೋದ ಕಾರಣ ಅದಕ್ಕೆಲ್ಲ ಪಾಕಿಸ್ತಾನದಂತೆ ಸ್ವಾತಂತ್ರ್ಯವೇ ಅಪೇಕ್ಷಿತವಾಗಿರುವ ಬದಲಿಗೆ 'ಸಮಾನ ಮಂತ್ರಿಯಾಜ್ಯ'ವಾಗಿರುವ ಬದಲಿಗೆ 'ಸಮಾನ ರಂಜ್ಯ"ವಾಗಿ ಇರುವಂತಾಗಿದೆ.

ಈ ಮೊದಲೂ ವಸಾಹತುಗಳಿಗೆ ಸಂಪೂರ್ಣವಾಗಿ ಒಳಗಿನ ಮತ್ತು ಹೊರಗಿನ ವ್ಯವಹಾರಗಳಿದ್ದರೂ, ಈ ವಸಾಹತುಗಳೊಳಗಿನ ಕೇಂದ್ರಸ್ಥಂಭವಾಗಿ ಬ್ರಿಟಿಷ್ ರಾಜರಿದ್ದಾರೆ; ಈ ಜೋಡಣೆಯು ಒಪ್ಪಂದವೆಯು ಕೂಡಿತು ಲಂಡನಿನಲ್ಲಿ ಏನಾದರೂ ಮಾತುಕತೆ ನಡೆದ ವಾರ್ತೆಯಿಲ್ಲ; ಅದೊಂದನ್ನು ಕಡಿದು ಹಾಕುತಿದ್ದಲ್ಲಿ ಈ ವಸಾಹತು ರಾಷ್ಟ್ರಕೂಟವೂ ಸಂಯುಕ್ತ ರಾಷ್ಟ್ರ ಸಂಸ್ಥೆಯಂತೆಯೇ ಆಗುತಿತ್ತು.

ವಸಾಹತು ಸಮ್ಮೇಳನದಲ್ಲಿ ನಡೆದ ಇತರ ಪ್ರಮುಖ ಮುಖ್ಯ ಪರ್ಯಾಲೋಚನೆಗಳೆಂದರೆ-ರಾಷ್ಟ್ರಗಳ ಆರ್ಥಿಕ ಸ್ಥಿತಿ ಸುಧಾರಣೆಗಾಗಿ ಪರಸ್ಪರ ಸಹಕಾರ ಮಾರ್ಗಗಳು; ವ್ಯಾಪಾರ ವಹಿವಾಟುಗಳು; ಬ್ರಿಟನ್ನು ರಚಿಸಿಕೊಂಡಿದ್ದ ಪಶ್ಚಿಮ ಯುರೋಪು ರಾಷ್ಟ್ರಗುಂಪಿಗೂ ಈ ವಸಾಹತು ರಾಷ್ಟ್ರಗುಂಪಿಗೂ ಮೈತ್ರಿ ಸಂಬಂಧಗೊಡಿಸಿ; ಕೆಲವೆಡೆ ವ್ಯಾಪಿಸಿರುವ ಕಮ್ಯೂನಿಸ್ಟ್ ಪ್ರಭಾವಕ್ಕೆ ತಡೆ; ಸಂಯುಕ್ತ ರಾಷ್ಟ್ರಸಂಘದಲ್ಲಿ ಸಿಲೋನಿಗೆ ಪ್ರಾತಿನಿಧ್ಯ ದೊರಕಿಸಲು ನೆರವು, ಇತ್ಯಾದಿಗಳೇ. ಎರಡು ವಾರಗಳಲ್ಲಿ ನಡೆದ ಇವೆಲ್ಲಾ ಪರ್ಯಾಲೋಚನೆಗಳನ್ನು ನಮೂದಿಸಿ, ತಾ. 22ರ ಕೊನೆಯ ಅಧಿವೇಶನಾನಂತರ ಲಂಡನಿನಲ್ಲಿ ಒಂದು ಅಧಿಕೃತ ಪ್ರಕಟಣೆ ಹೊರಬಿದ್ದಿದೆ.

ಪಂಡಿತ ಜವಾಹರಲಾಲರು ತಾ. 23ರ ರಾತ್ರಿಯಲ್ಲಿ ವಿಮಾನ ಬೇಟನ್ ವಿಮಾನಗಳ ಜಲ್ಲಿನಿವಾಸ ಬ್ರೋಡ್ ವೇದಿಂದ ಹೊರಗಿ ವಿಶ್ರಾಂತ್ಯದ ವಿರಾಮವನ್ನು ಅನುಭವಿಸಿ, ಸೋಮವಾರ ಲಂಡನಿಗೆ ಮರಳಿದ್ದಾರೆ. ಪಂಡಿತಜೀ ಭಾರತದಿಂದ ಲಂಡನಿಗೆ ಹೋದೊಡನೆಯೇ ಇಲ್ಲಿ ಬಂಗಲೆಗೆ ಹೋಗಿ ಇಳ್ಳಿ ಪಡೆದಿದ್ದ ಆಯಾಸವನ್ನು ನೀಗಿಕೊಂಡಂತೆಯೇ ಲಂಡನಿನ ಚರ್ಚೆಮತ್ತು ಕೂಟಾಯಾಸಗಳನ್ನೂ ಅಲ್ಲಿಯೇ ನಿವಾರಿಸಿಕೊಳ್ಳಲಿದ್ದಾರೆ. ತಾ. 26ರಂದು ಪ್ಯಾರಿಸಿಗೆ ಹಾರಿ, ತಾ. 1ರ ವರೆಗೆ ಅಲ್ಲೇ ಇದ್ದು, ಆ ಮೇಲೆ ಕೈರೋ ವಿಗೆ ಹಾರಿ, ಅಲ್ಲಿ ಕೆಲವು ದಿನವಿದ್ದು ನವೆಂಬರ್ ಪ್ರಥಮ ವಾರ ಮಂಗಳೂರಿಗೆ ಬರುವರೆಂದು ತಿಳಿದು ಬಂದಿತ್ತದೆ.

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಸರ್ವ ಅನುಭವದ ಯೋಗ್ಯತೆಯಿದೆ.

ನಿರಮು ಕೇವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.

ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬೇಂಕ್, ಲಿಮಿಟೆಡ್

ಪೆ. ಅ ಮಂಗಳೂರು

THE VIJAYA BANK LTD.,

P. O MANGALORE, S. K.

ವಿಶೇಷ ಪ್ರಚಾರವಾದರೇನೇ
ಜಾಹೀರಾತು ಕೊಟ್ಟವರಿಗೆ ತೃಪ್ತಿ

ಅಂತಹ ನಿಶ್ಚಿತ ಪ್ರಚಾರಕ್ಕೆ
ಉತ್ತಮ ಸಾಧನವೆಂದರೆ

1949 ವಿರೋಧಿ ಸಂವತ್ಸರದ 1950

ಪಯ್ಯುಗ ಪಂಚಾಂಗ

ವಾಡಿಕೆಯಂತೆ ಸಕಾಲದಲ್ಲಿ ಪ್ರಕಟವಾಗಲಿವೆ.

ನಿಮ್ಮ ಜಾಹೀರಾತೊಂದನ್ನು ನವಯುಗ ಪಂಚಾಂಗದಲ್ಲಿ ಪ್ರಕಟಿಸಿ ವಿಶೇಷ ಪ್ರತಿಫಲ ಪಡೆಯಿರಿ.

ಸಾವಾನ್ಯ ಎಂನಿ. ಸಬ್ಜೆಕ್ಟ್ ಮಂತ್ರಿ

ಹೆಚ್ಚಿನ ವಿವರಕ್ಕೆ ಬರೆಯಿರಿ:

ಮೆನೇಜರ್, ನವಯುಗ ಪ್ರೆಸ್, ಉಡುಪಿ, ದ. ಕ.

ಋತುಸ್ರಾವ ನಿಂತಿತು

'ಕಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹಗತ್ತಲ್ಲು ಋತುಸ್ರಾವವಾಗುವುದು ಸತ್ಯತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಹಾತ್ರಿ ಗುಣವಾಗಿದೆ. ಬೆಲೆ: ರೂ. 3-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ. 8/-[ವಿ. ಪಿ. ಇನ್ನೆರಡಾಣೆ ಪ್ರತ್ಯೇಕ]

Mrs. P. DEVEE, F 198 (N. J.)
Tollygunge CALCUTTA

ಸ್ವಾತಿಶೆಟ್ಟಿರು: ಶಮಾಕಂಪೆನಿ, ಮಂಗಳೂರು

ಫ್ರೆಂಚ್ ಭಾರತದ ಚುನಾವಣಾಂದೋಲನ.

ವಿಶೇಷ ಆಕ್ಷೇಪ, ಗೊಂದಲ ಮತ್ತು ಅತುರಗಳನ್ನು ನಿರ್ಮಿಸಿ ಫ್ರೆಂಚ್ ಭಾರತದ ಮುನ್ಸಿಪಲ್ ಚುನಾವಣೆಗಳು ಒಕ್ಟೋಬರ್ ತಾ. 24ನೇ ಆದಿತ್ಯವಾರ ನಡೆದು ಹೋದುವು. ಫ್ರಾನ್ಸ್ ಸರಕಾರದ ಕೈಕೆಳಗಿನವಾಗಿ ಈಗಲೂ ಉಳಿದಿರುವ ಭಾರತದ ಭಾಗಗಳನ್ನು ಸರಾಧೀನತೆಯಲ್ಲಿ ಬಿಡಲು ಇಷ್ಟವಿಲ್ಲದೆ, ಅದರಿಂದ ಅ ಕುರಿತು ಅನಗತ್ಯ ಘರ್ಷಣೆ ಹೊಡುವ ಮನಸ್ಸು ಇಲ್ಲದೆ ಭಾರತ ಸರಕಾರವು ಫ್ರೆಂಚ್ ಸರಕಾರದೊಂದಿಗೆ ಈ ಕುರಿತು ಸದ್ಭಾವನೆಹಾರ ನಡೆಸಿದ್ದಿತು. ತತ್ಫಲಿತಾಮವಾಗಿ ಕಳದ ಜೂನ್ ತಾ. 8ರಲ್ಲಿ ಭಾರತ-ಫ್ರೆಂಚ್ ಸರಕಾರಗಳೊಳಗೊಂದು ಒಪ್ಪಂದವಾಗಿ ತ್ತು. ಪ್ರಥಮತಃ ಫ್ರೆಂಚ್ ಕ್ಷೇತ್ರಗಳಲ್ಲಿ ಮುನ್ಸಿಪಲ್ ಚುನಾವಣೆಗಳಾಗಬೇಕು; ಹಾಗೆ ಚುನಾಯಿಸಲ್ಪಡುವ ಮುನ್ಸಿಪಲ್ ಎಸೆಂಬ್ಲಿಯು ಫ್ರೆಂಚ್ ಭಾರತವು ಕೇಂದ್ರ ಭಾರತದೊಂದಿಗೆ ಸೇರಬೇಕೋ ಬೇಡವೋ ಎಂಬ ಕುರಿತು ಜನಮತ ಸಂಗ್ರಹಿಸಬೇಕು; ಈ ಜನಮತದಿಂದಾಗುವ ನಿರ್ಣಯವು ಮಾನ್ಯವಾಗಿ ಸೌಹಾರ್ದತೆಯಿಂದಲೇ ಆ ಮೇಲಿನ ವ್ಯವಸ್ಥೆಗಳಾಗಬೇಕು-- ಎಂಬುದೇ ಆ ಕರಾರಿನ ತಾತ್ಪರ್ಯ. ಅಂತೆಯೇ ಫ್ರೆಂಚ್ ಕ್ಷೇತ್ರ ನಾಲ್ಕರ ಪೈಕಿ ಮೂರರಲ್ಲಿ ಕಳದ ತಾ. 21ರಲ್ಲಿ ಮುನ್ಸಿಪಲ್ ಚುನಾವಣೆಗಳು ನಡೆದುವಾದರೂ ಫ್ರೆಂಚ್ ಸರಕಾರವು ಒಪ್ಪಂದಾನುಗುಣವಾದ ಸಾಜನ್ಯ, ಸೌಹಾರ್ದತೆ ಯಾವುದನ್ನೂ ಪ್ರದರ್ಶಿಸದಿದ್ದುದೇ ಮಾತ್ರವಲ್ಲ; ಹಲವು ವಿಧದ ವ್ಯತಿರಿಕ್ತ ಕಾರ್ಯಗಳನ್ನೂ ಮಾಡಿದೆ.

ಈ ಫ್ರೆಂಚ್ ವಸಾಹತುಗಳು

ಪಶ್ಚಿಮ ಕರಾವಳಿಯಲ್ಲಿ ಫ್ರಾನ್ಸಿನ ವಸಾಹತುಗಳಾಗಿವೆ- ಪಾಂಡಿಚೆರಿ, ಕರಯಿಕಲ್, ಮಾಹೆ, ಯೆಮಾನ್. ಇವುಗಳಿಗೆ ಒಬ್ಬ ಫ್ರೆಂಚ್ ಗವರ್ನರನಿದ್ದಾನೆ. [ಈಗಿನ ಗವರ್ನರ್ ಬಾರೋನ್-- ಅರು ಜನರುಳ್ಳ ಮಂತ್ರಿಮಂಡಲ ರಚಿಸಿಕೊಂಡಿದ್ದ. ಭಾರತ ಫ್ರೆಂಚ್-ಒಪ್ಪಂದಾನುಸಾರವಾಗಿ ಒಕ್ಟೋಬರ್ 10ರಲ್ಲಿ ಫ್ರೆಂಚ್ ವಸಾಹತುಗಳ ಮುನ್ಸಿಪಲ್ ಚುನಾವಣೆಯನ್ನು ನಡೆಸಲಾಗುವದೆಂದು ಸೆಪ್ಟೆಂಬರ್ 18ರಲ್ಲಿ ಫ್ರೆಂಚ್ ಗವರ್ನರನ ಜಾಹೀರುನಾಮೆ ಹೊರಟಾಗ ಕ್ರಮಬದ್ಧವಾದ ಒಂದು ತಿಂಗಳ ಅವಧಿಯನ್ನೂ ಕೊಡಲಿಲ್ಲವೆಂದು ಆ ಭಾಗಗಳ ಕೆಲವು ರಾಜಕೀಯ ಪಕ್ಷಗಳು ಬಲವಾಗಿ ಆಕ್ಷೇಪಿಸಿದ್ದುವು; ವಾತಾವರಣವು ಸ್ಫೋಟಕದ್ಧವಾಗಿತ್ತು. ಹೊರಗಿನವರ ಒತ್ತಡ ಮತ್ತು ಪತ್ರಿಕಾ ಪ್ರಚಾರಗಳು ನಡೆದಿವೆ ಎಂಬ ನೆವ ಹೇಳಿ ಈ ಚುನಾವಣೆಗಳನ್ನು ಅನಿಶ್ಚಿತಾವಧಿಗೆ ಮುಂದುನೂಕಿಸಲಾಗಿದೆ ಎಂದು ಫ್ರೆಂಚ್ ಭಾರತಸರಕಾರವು ತಾ. 19ರಲ್ಲಿ ಪ್ರಕಟಿಸಿತು. ಆದರೆ ಫ್ರೆಂಚ್ ಸರಕಾರ ಒಕ್ಟೋಬರ್ 31ರಲ್ಲೇ ಮತೆತ್ತಿಂದು ಜಾಹೀರು ನಾಮೆ ಹೊರಡಿಸಿ ಒಕ್ಟೋಬರ್ ತಾ. 24ಕ್ಕೆ ಚುನಾವಣೆ ನಡೆಸುವುದಾಗಿ ನಿರ್ಧರಿಸಿತು. ತಾ. 1ಕ್ಕಿಂತ ಭಿನ್ನವಾದ ಪರಿಸ್ಥಿತಿಯಾವುದೂ ತಾ. 8ರಲ್ಲಿರಲಿಲ್ಲ. ತನ್ನ ಮನಸ್ಸಿನ ವಿರುದ್ಧವೊಂದನ್ನಲ್ಲದೆ, ಭಾರತ ಸರಕಾರದೊಡನೆ ಮಾಡಿಕೊಂಡ ಒಪ್ಪಂದವನ್ನಾದರೂ ಗಣಿಸದೆ ಫ್ರೆಂಚ್ ಸರಕಾರವು ಈ ಚುನಾವಣೆಯ ದಿನ ಮತ್ತು ವಿಧಾನಗಳನ್ನು ನಿರ್ಣಯಿಸಿದೆ. ಮಾತ್ರವಲ್ಲ; ಭಾರತದೊಂದಿಗೆ ಸೇರಿಕೊಳ್ಳಕೂಡದೆಂಬ ಪಕ್ಷಗಳಿಗೆ ಫ್ರೆಂಚ್ ಆಡಳಿತೆಯ ಸರ್ವ ವಿಧದ ಬೆಂಬಲವಿದೆ; ಅಂತೆಯೇ ಭಾರತ ಪ್ರೇಮಿಗಳಿಗೆ ಮತದಾನ ಕ್ರಮಗಳಲ್ಲೂ ಇತರ ಕಾರ್ಯಗಳಲ್ಲೂ ಹಲವು ಅಡ್ಡಿ ಆತಂಕಗಳನ್ನೊಡ್ಡಿದೆ. ಈ ಸ್ಥಿತಿಗತಿಗಳನ್ನು ಗಮನಿಸಿ ಭಾರತ ಸರಕಾರವು ಫ್ರೆಂಚ್ ಸರಕಾರದೊಡನೆ ಎರಡು ವಿಜ್ಞಾಪನೆಗಳನ್ನು ಮಾಡಿಕೊಂಡಿದ್ದಿತು ಮೊದಲನೆಯದಾಗಿ ಶಾಂತ ಮತ್ತು ಕಾರ್ಯಯೋಗ್ಯ ವಾತಾವರಣದಲ್ಲಿ ಚುನಾವಣೆಯು ನ್ಯಾಯೋಚಿತವಾಗಿ ನಡೆಯಲಾಗುವಂತೆ ಈ ಚುನಾವಣೆಯನ್ನೇ ಮುಂದುವರಿಸಬೇಕೆಂದು ಅದು ಕೇಳಿಕೊಂಡಿತು. ಅವಿನಂತಿ ನಿರಾಕರಿಸಲ್ಪಟ್ಟಿದ್ದನೆ ಮತದಾನವನ್ನು ಅವಲೋಕಿಸುವರೆ ತಮ್ಮ ಜನರನ್ನು ಅಲ್ಲಿ ನೇಮಿಸುವ ಅನುಮತಿ ಕೇಳಿತು; ಇದನ್ನೂ 'ಘರ್ಷಣಾವಿರುದ್ಧ'ವೆಂದು ಫ್ರೆಂಚ್ ಸರಕಾರ ತಿರಸ್ಕರಿಸಿತು, ಇದಕ್ಕಾಗಿ ಭಾರತ ಸರಕಾರವು ಫ್ರೆಂಚ್ ಸರಕಾರಕ್ಕೆ ವ್ಯಸನ ಸೂಚಿಸಿದ್ದಿತು.

ಚುನಾವಣಾ ಘರ್ಷಣೆ

ಈ ರೀತಿ ಅವಸರ ಮತ್ತು ಅಕ್ರಮದ ಚುನಾವಣೆಗಿಳಿದರೂ ಭಾರತ ಕೂಟಾಸಕ್ತ ವಕ್ಷಗಳು ಚುನಾವಣೆಯಲ್ಲಿ ಭಾಗವಹಿಸುವ ನಿರ್ಧಾರವನ್ನುಗಟ್ಟಿ ಮಾಡಿದ್ದುವು; ಭರದಿಂದ ಕಾರ್ಯಕ್ಕಾರಂಭಿಸಿದ್ದುವು. ಆದರೂ ಫ್ರೆಂಚ್ ಆಡಳಿತೆಯ ಪಕ್ಷಪಾತಗಳು ಅಸಡ್ಡೆಗಳೂ ಜನತೆಗಸಹ್ಯವಾಗಿ ಚುನಾವಣೆಗೆ ಒಂದೆರಡು ದಿನವಿರುವಾಗ ಮಾಹೆಯಲ್ಲಿ ಗೊಂದಲವೆದ್ದಿತು; ಜನರು ಸರಕಾರೀ ಕಚೇರಿಗಳ ಮೇಲೆ ಧಾಳಿ ನಡೆಸಿ ರಿಕಾರ್ಡು ಇತ್ಯಾದಿಗಳನ್ನು ನಾಶ ಮಾಡಿಬಿಟ್ಟರು; ಈ ಗಲಭೆಗಂಜದಂತೆ ನಟಿಸುತ್ತಾ ಫ್ರೆಂಚ್ ಸರಕಾರವು ಮಾಹೆಯ ಚುನಾವಣೆಯನ್ನು ಅನಿಶ್ಚಿತಾವಧಿಗೆ ಮುಂದುವರಿಸಿದೆ. ಪಾಂಡಿಚೆರಿ, ಕರಯಿಕಲ್, ಯಾನಮ್-- ಈ ಮೂರು ಕಡೆಗಳಲ್ಲೂ ವಿಕ್ಷೇಪ ರೀತಿಯ ಆತುರಾವೇಗವೆದ್ದಿದ್ದರೂ ಚುನಾವಣೆಗಳನ್ನು ನಡೆಸಿದ್ದಿ. ಭಾರತದೊಂದಿಗೆ ಸೇರಿಕೊಳ್ಳಬೇಕೆಂಬ 'ಫ್ರೆಂಚ್ ಭಾರತ ಕಾಂಗ್ರೆಸ್'-ಸೇರಕೂಡದೆಂಬ ಫ್ರೆಂಚ್ ಭಾರತ 'ಸಮತಾವಾದಿ ಪಕ್ಷ'-- ಮತ್ತು ತೀರಾ ಕುಹಕಧೋರಣೆಯ ಕಮ್ಯೂನಿಸ್ಟ್ ಮತ್ತು ದ್ರಾವಿಡ ಸ್ವಾತಂತ್ರವಾದಿಗಳ ಅಹಿಕಹ್ಯಾಯದಂತಿರುವ 'ಪ್ರಗತಿಪರ ಪಕ್ಷ' ಇವು ಮೂರು ಆ ಚುನಾವಣೆಯಲ್ಲಿ ಸ್ಪರ್ಧಿಸಿಕೊಂಡ ಮುಖ್ಯ ಮೇಲಾಟಗಾರರು. ಮಾಹೆಯ ಗಲಭೆ ಯಾದೊಡನೆ ಫ್ರೆಂಚ್ ಮಹಾಯುದ್ಧ ನೌಕೆಯೊಂದು ಪಾಂಡಿಚೆರಿಗೆ ಬಂತು ಎಂಬ ವಾರ್ತೆಯಿಂದ ಮೊದಲೇ ಜಗ್ಗುಸ್ಫೋಗೊಂಡಿದ್ದ ಅಲ್ಲಿಯ ಜನತೆ - ದಿಗಿಲುಗೊಂಡಿದೆ. ಕ್ರಮಬದ್ಧವಲ್ಲದ ಚುನಾವಣೆ ನಡೆಸಲಿಳದ ವರ್ತನೆಯ ನಿಷೇಧಾರ್ಥವಾಗಿ ಫ್ರೆಂಚ್ ಭಾರತ ಸರಕಾರದ ಡಾ. ಜಗನ್ನಾಥ ಅಂದ್ರೆ, ಶ್ರೀ ಪದ್ಮನಾಭ ಕೌನ್ಸಿಲ್ ಮಾ, ಮತ್ತು ಲಕ್ಷ್ಮಣ ಸ್ವಾಮಿ ರೆಡ್ಡಿಯಾರ್ ಈ ತ್ರಿಮಂತ್ರಿಗಳು ರಾಜೀನಾಮೆ ಯಿತ್ತಿದ್ದಾರೆ; ಮುಂದಿನ ಎಸೆಂಬ್ಲಿ ಅಧಿವೇಶನದ ವರಗೆ ಮಂತ್ರಿತ್ವ ನಿರ್ವಹಿಸಬೇಕೆಂದು ಗವರ್ನರರು ಇವರನ್ನು ಕೇಳಿಕೊಂಡರೂ ಅವರೊಪ್ಪಲಿಲ್ಲ. ಫ್ರೆಂಚ್ "ಕ್ಯೂಪರ್"ಹಡಗದಿಂದ ಸೈನಿಕರಿಳಿದು ಜನತೆಯನ್ನು ಹೆದರಿಸುವ ಪಹರೆಗಿಡಲ್ಪಟ್ಟಿರೆ ಭಾರತ-ಫ್ರೆಂಚ್ ಸಂಬಂಧವು ಪೂರ್ತಿ ಕೆಡುವ ಸಂಭವವಿದೆ. ಮಾಹೆಯ ಜನರು ಆಲ್ಲಿಯ ಆಡಳಿತೆಯನ್ನು ಹಿಂದೀ ಸರಕಾರ ವಹಿಸಿಕೊಳ್ಳಬೇಕೆಂದು ಇಷ್ಟರಲ್ಲೇ ನೊರೆಯಿಟ್ಟಿದ್ದಾರೆ. ಎಲ್ಲಾ ಕಡೆಯ ಚುನಾವಣೆಗಳನ್ನೂ ನುಂಗಿಬರಿಸಿದರೆ ಮಾಹೆಯೊಂದರೆ ಚುನಾವಣೆಯನ್ನು ಮಾತ್ರ ಹಿಂದೆ ಹಾಕಿ, ಮುನ್ಸಿಪಲ್ ಎಸೆಂಬ್ಲಿಯು ಪೂರ್ಣಗೊಳ್ಳುವಂತೆ ಮಾಡಿ, ಆ ಮೂಲಕ ಜನಮತ ಸಂಗ್ರಹವನ್ನು ಏಪು ಅಥವಾ ಹೆತ್ತು ವರುಷಗಳಿಗೆ ಮುಂದೂಡಿ ಆ ಭಾಗಗಳನ್ನು ಅದಮ್ಮೆ ಸಮಯ ಹಿಡಿದುಕೊಳ್ಳುವ ದುರಭಿಲಾಷೆಯು ಫ್ರೆಂಚ್ ಸರಕಾರದ್ದೆಂದು ಬಾರತ ಸರಕಾರ ವೇಸರಗೊಂಡಿದೆ. ಚುನಾವಣೆಯ ಪರಿಣಾಮ ಮತ್ತು ಮುಂದಿನ ಅಗು ಹೋಗುಗಳ ಕುರಿತು ಅತುರದ ನಿರೀಕ್ಷೆಯೆದ್ದಿದೆ.

For Banking Service
in Trade, Industry & Agriculture
approach
THE AGRICULTURAL & INDUSTRIAL BANK Ltd,
(Established in 1934)
Head Office: **COONDAPOOR, S K**

Branches:

1	Ankola,	7	Gokarn,	13	Nagar,
2	Belgaum,	8	Haveri,	14	Shimoga,
3	Bhatkal,	9	Hubli,	15	Sirsi,
4	Coondapoor,	10	Karvar,	16	somwarpet,
5	Dharwar,	11	Kumta,	17	Virajpet,
6	Gadag,	12	Mangalore,	18	Honavar.

19 384, M. Jaipuria House, Kaibadevi Road, BOMBAY, 2-

Current, Savings bank, and Fixed deposits are accepted.

For Terms apply to the nearest Branch.

Coondapoor,
29-9-1948.

K. Vittaldas Shenai,
Managing Director.

ನೋಟೀಸು

ಉಡ್ರಿ ತಾಲೂಕು ಕುತ್ಯಾರು ಗ್ರಾಮದ ಕುಂಟಲಾಡಿ ಹಿತ್ಲು ಎಂಬಲ್ಲಿರ್ವ ಜುವಾಂ ಕಾಸ್ತಿಲೀನರ ಹೆಂಡ್ತಿ ಗೊರಸಿ ಸೋಜ ಬಾಯಿಯು ಈ ಮೂಲಕ ತಿಳಿಸುವುದೇನಂದ್ರೆ.

ನನಗೆ ಸದ್ರಿ ಜುವಾಂ ಕಾಸ್ತಿಲೀನರನ್ನು ಮದುವೆ ಆಗಿ ಈಗ ಸುಮಾರು 40 ವರುಷಗಳಾಗಿ ಕಳದ 6 ತಿಂಗಳ ತನಕ ನಾವು ನಂಹು ಮಕ್ಕಳು ಏಕ ಗೃಹಕೃತ್ಯದಲ್ಲಿದ್ದು ಸದ್ರಿ ಜುವಾಂ ಕಾಸ್ತಿಲೀನರೇಗ ಇತ್ತಿಲಾಗೆ ಒಂದು ಸಮಾನತೆಯ ಹುಚ್ಚು ಹಿಡಿದು, ಅಲ್ಲಲ್ಲಿ ತಿರುಗಾಡಿಕೊಂಡು ಇರುತ್ತಾರೆ. ಮತ್ತು ಇವರು ಈ ಸ್ಥಿತಿಯಲ್ಲಿರುವುದರಿಂದ ನಾನು ಮತ್ತು ನನ್ನ ಮಕ್ಕಳು ವಾಸವಾಗಿ ಅನುಭವಿಸಿ ಬರುವ ಸದ್ರಿಯವರ ಹಕ್ಕಿನ ಸದ್ರಿ ಕುಂಬಾಲ ಹಿತ್ಲು ಎಂಬ ಆಸ್ತಿಯನ್ನು ಅವರನ್ನು ಪುಸಲಾಯಿಸಿ ಕ್ರಯ ವಗ್ಗೆರೆ ಏನಾದ್ರು ಹೆಕ್ಕು ಸ್ಥಾಪಿಸುವರಾಗಿ ನಾನು ತಿಳಿಯುತ್ತೇನೆ. ಆದ್ದರಿಂದ ಅವರು ಹಾಗೆ ಕ್ರಯವರಿಸಿ ಕೊಡುವ ಎಷ್ಟನ್ನಾದರೂ ನಜರ್ ವಸಾಲು ಇರುವುದಿಲ್ಲ. ಆ ಪೈಕಿ ಗುತ್ತಿ ಸ್ಥಳ ನನ್ನ ತವ್ಮ ತೋಮುಸ್ ಸೋಜಬಗೆ ರೂಪ್ಯಾ 250-0-0 ಕೈ ಈಡು ಇದ್ದು ಆ ಸಾಲವನ್ನಲ್ಲದೆ ಬೇರೆ ಏನೂ ಸಾಲ ನನಗೆ ಇರುವುದಿಲ್ಲ. ಆದ್ದರಿಂದ ಸದ್ರಿ ಜುವಾಂ ಕಾಸ್ತಿಲೀನರಿಂದ ಈ ಸಂದರ್ಭದಲ್ಲಿ ಯಾರಾದರೂ ನೋಟು ವಗ್ಗೆರೆ ಬರಸಿಕೊಂಡು [illegible] ಸದ್ರಿ ಆಸ್ತಿಗಾಗಲೀ ಲಗಾಂ ಆಗಕೂಡದು. ಮತ್ತು ಕ್ರಯ, ಅಡವು ವಗ್ಗೆರೆ ಏನಾದರೂ ವಿಚಿಸ್ಟ್ರಿ ರಿಕಾರ್ಡು ಮಾಡಿದ್ರೆ ಸದ್ರಿ ಆಸ್ತಿಗೆ ಲಗಾವು ಆಗಕೂಡದು, ಯಾರಾದ್ರೂ ಅವರಿಂದ ಏನಾದ್ರು ರಿಕಾರ್ಡು ಕಲ್ಪಿಸಿಕೊಂಡರೆ ಆಸ್ತಿಗಾಗಲೀ ನನಗಾಗಲೀ ಲಗಾವು ಆಗಕೂಡದು ಅದು ಅಸಿಂಧು ಆಗಿರುತ್ತದೆ. ಅವರಿಗೆ ನಾನು ಮತ್ತು ಅವರಿಂದ ನನ್ನಲ್ಲಿ ಹುಟ್ಟಿದ ನಮ್ಮಳು ಕ್ರಾಯಸ್ಕ 1 ಗುಸ್ತೀನ್ ಕಾಸ್ತಲೀನ, 2 ಲಾದ್ರು ಕಾಸ್ತಲೀನ, 3 ಪೇದ್ರು ಕಾಸ್ತಲೀನ, 4 ಅಲಬರ್ಟ ಕಾಸ್ತಲೀನ, 5 (ಮೈನರ್) ರೀತಬಾಯಿ, 6 ಮಾಸೆಲ್, 7 ಆಬ್ರಾಸ್, ಇಂಗೆ ನಾವು ಕೂಡಾ 8 ಜನರು ವಾರಿಸ್‌ದಾರರಾಗಿದ್ದು ನಾವು ಸೇರದೆ ಮಾಡಿದ ಯಾವತ್ತು ರಿಕಾರ್ಡು ನನಗೆ ಆ ಸದ್ರಿ ಆಸ್ತಿಗೆ ಯಾವ ತರದಲ್ಲಿಯೂ ಲಗಾವು ಆಗಕೂಡದು. ಇದಕ್ಕೆ ವ್ಯತಿರಿಕ್ತವಾಗಿ ಯಾರಾದರೂ ಏನನ್ನಾದರೂ ಮಾಡಿದ ಯಾ ಮಾಡಿಸಿಕೊಂಡಲ್ಲಿ ಅವರು ಅದರ ಸಕಲ ಕೆಟ್ಟ ನಷ್ಟಕ್ಕೆ ಜವಾಬ್ದಾರಿಯಾಗುವರೆಂಬ ಸಂಗತಿ ಸರ್ವ ಜನರಿಗೆ ತಿಳಿಸೋಣಾಗಿ ರುತ್ತದೆ.

+ ಈ ಕುರಿತು ಮತ್ತು ಯೆಡ ಕೈ ಹೆಬ್ಬೆಟ್ಟು ಮುದ್ರೆ ಗೊರಸಿ ಸೋಜ ಬಾಯಿ ರುಜು.

ಕುಂದಾಪುರ, ತಾರೀಖು 22 ಒಕ್ಟೋಬರ್ 1948.

The Canara Banking Corporation Limited.

Estd· 1906·

(Incorporated in British India)

Head Office. **UDIPI**, S. India

Capital Authorised	..	Rs 25,00,000
Capital Issued & Subscribed	...	Rs 20,00,000
Capital Paid up	...	Rs 19,98,445
Reserves....	..	Rs 8,66,715

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.,
General Manager.

ಗುರುವಾರ, ಜುಡುಪಿ, ೩೦-೧೦-೫೧

ರಾಜ್ಯಾಂಗ ರಚನೆ

ಭಾರತದ ಘಟನಾ ಸಮಿತಿಯು ಇದೇ ನವಂಬರ್ ತಾ. 4ಕ್ಕೆ ಪ್ರಾರಂಭಿಸಿ ತನ್ನ ಮಾಲಿನ ಕಾರ್ಯವನ್ನು ಪೂರ್ಣಗೊಳಿಸಿಕೊಳ್ಳಲಿದೆ. ತತ್ಪರಿಣಾಮವಾಗಿ ಸ್ವತಂತ್ರ ಭಾರತದ ರಾಜ್ಯ ಘಟನೆಯ ನಿಜರೂಪವು ಸದ್ಯದಲ್ಲೇ ಮುಂದೆ ಬರುವದೆಂದು ನಿರೀಕ್ಷಿಸಬಹುದು. ಘಟನಾ ಸಮಿತಿಯಾರಂಭದಿಂದ ನವ ರಾಜ್ಯ ಶಾಸನ ತಯಾರಿ ಕಾರ್ಯವು ಅನುಕ್ರಮವಾಗಿ, ಅಂಶಾಂಶವಾಗಿ ನಡೆಯುತ್ತಾ ಬಂದಿದ್ದು ಅದರ ಕರಡು ಈ ಮೊದಲೇ ತಯಾರಾಗಿದ್ದಿತ; ಅದರಲ್ಲಿ ಪಾಲಿಯಿಟ್ಟಿರುವ ಅಂಶಗಳನ್ನು ತುಂಬಿಸಿ, ಅಗತ್ಯವುಳ್ಳ ಬದಲಾವಣೆಗಳೊಡನೆ ಕೊನೆಯ ಸ್ವರೂಪ ಕೊಟ್ಟು ಅನ್ತ್ಯ ತ್ವರಿಕೆ ತರುವದೊಂದೇ ಈಗ ಬಾಕಿಯಿರುವ ಕೆಲಸ. ಈ ಬಾರಿ ನೇರಲಿರುವ ಘಟನಾ ಸಮಿತಿಯು ಇದನ್ನು ನಿರ್ವಹಿಸಿಕೊಳ್ಳಲಿದೆ; ಆ ಮೇಲೆಯೇ ಸ್ವತಂತ್ರ ಭಾರತದ ಶಾಶ್ವತ ರಾಜ್ಯಾಂಗ ಶಾಸನ ಜಾರಿಯಲ್ಲಿ ಬಂದು, ಅದನ್ನಾಧರಿಸಿ ಚುನಾವಣೆಗಳು ನಡೆದು ನವೀನ ಪ್ರಾಂತಿಕ ಹಾಗೂ ಕೇಂದ್ರ ಶಾಸನ ಸಭೆಗಳು ಹುಟ್ಟಿ ಬರಬೇಕು.

ಈಗ ಭಾರತದ ಪ್ರಾಂತ್ಯಗಳಲ್ಲಿರುವುದು ಸ್ವಾತಂತ್ರ್ಯ ಪೂರ್ವದಲ್ಲಿ-- 1947 ನೇ ಆಗೋಸ್ತು 15ರ ಮೊದಲೇ-- ನಿರ್ಮಾಣಗೊಂಡಿದ್ದ ಶಾಸನ ಸಭೆಗಳು. ಕೇಂದ್ರ 'ಅಸೆಂಬ್ಲಿ'ಯೆಂಬುದು ನವ ಶಾಸನ ನಿರ್ಮಿಸತಕ್ಕ ಘಟನಾಸಮಿತಿಯು ಪ್ರಥಮತಃ ಶಾಸನದ ನಿರ್ವಹಣಕ್ಕೆಯಿಯು ವಾಗಿನ ಅದರ ಹೆಸರು. ಕೇಂದ್ರಾಧಿಕಾರ ನಿರ್ವಹಿಸುತ್ತಿರುವ ಮಂತ್ರಿಗಳಾದರೋ ಜನತೆಯ ವಿಶ್ವಾಸಾರ್ಹ ನಾಯಕರಷ್ಟೇ ಹೊರತು ನೇರಾಗಿ ಜನಮತದಿಂದಆರಿಸಲ್ಪಟ್ಟಿರುವ ಜನಪ್ರತಿನಿಧಿಗಳೇನೂ ಅಲ್ಲ. ಅಂತೂ ಭಾರತದ ಇಂದಿನ ಸ್ವತಂತ್ರ್ಯವು ತನ್ನದೇ ಆದ ಹೊಸ ಚೌಕಟ್ಟಿನಲ್ಲೇವರೆಗೆ ನಿಂತಿಲ್ಲ; ಅಂತಹದೊಂದು ನಿರ್ಮಾಣವಾಗುವ ವರೆಗೆ ಎಂದು ಹೇಳಿ ಚೌಕಟ್ಟಿನ ಮೇಲೆಯೇ ಈ ಹೊಸ ಅಧಿಕಾರವಿಡಲ್ಪಟ್ಟಿದೆ. ನವಂಬರ್ ತಾ. 4ಕ್ಕೆ ನೇರಲಿರುವ ಘಟನಾಸಮಿತಿಯಿಂದ ಆ ನವೀನ ಹೀರ ತಯಾರಾಗಲಿದೆ. ಸ್ವತಂತ್ರಭಾರತದ ಸ್ವತಂತ್ರ ರಾಜ್ಯಶಾಸನವು ಹಾಗೆ ತಯಾರಾಗಿ ಮುಂದೆಬರುವ ಗಳಿಲಿ ಭಾರತೀಯರಲ್ಲಿ ನವೀನ ಆತುರ, ಸುಖ ಮತ್ತು ಹೊಣೆಗಾರಿಕೆಯನ್ನು ಮೂಡಿಸುವ ಪ್ರಾವಣ್ಯಾಂಶಗಳು ಅದರಲ್ಲಿ ತೋರಿಬರಲಿವೆ ಎಂಬುದು ಖಂಡಿತ.

ಮೊದಲನೆಯ ಪ್ರಶ್ನೆ ಈಗ'ವಸಾಹತು ರಾಷ್ಟ್ರ'ವಾಗಿರುವ ಭಾರತವು ಆ ಸಂಬಂಧವನ್ನು ಕಡಿದುಕೊಂಡು ಪೂರ್ಣ ಸ್ವತಂತ್ರ ರಾಷ್ಟ್ರವಾಗುವದೇ? ಘಟನಾಸಮಿತಿಯು ಸರ್ವ ಪ್ರಥಮವಾಗಿ ತನ್ನ ಗುರಿ ನಿರೂಪಿಸಿಕೊಂಡಿರುವಂತೆ ಸಂಪೂರ್ಣ ಜನತಾಧಿಕಾರಿ (ರಿಪಬ್ಲಿಕ್) ರಾಷ್ಟ್ರವಾಗಿ ಮೂರ್ತಿಯುವುದೇ?-ಎಂಬುದು ಆ ಮೇಲೆ, ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳೊಳಗೆ ಅಧಿಕಾರಗಳು ಹೇಗೆ ಹೆಂಚಿ ಬೀಳುವವು-ಈಗಿನ ಗವರ್ನರರು, ಗವರ್ನರ್ ಜನರಲ್, ಮಂತ್ರಿ ಮಂಡಲ,ಶಾಸನ ಸಭೆಗಳು ನುತದಾರ ಕ್ಷೇತ್ರಗಳು, ಮತ್ತಿವುಗಳೊಳಗಿನ ಸಂಬಂಧಗಳೇ ಮುಂತಾದುವುಗಳ ಭಾವೀ ಬದಲಾವಣೆಗಳೇನು.-ಎಂಬುದನ್ನು ನೋಡಲಿಕ್ಕಿದೆ ಇವೆಲ್ಲವೂ ರಾಷ್ಟ್ರದ ಹಾಗೂ ಅಖಿಲ ಭಾರತೀಯರ ಭವಿಷ್ಯ ಮತ್ತು ಜೀವನ ವಿಧಾನಗಳನ್ನು ರೂಪಿಸುವಂತಹವಿರುವುದರಿಂದ ಅತ್ಯಂತ ಪ್ರಾಮುಖ್ಯವಿವ ರಾಷ್ಟ್ರದ ಈಬಾಳುವೇ ಸೂತ್ರಗಳನ್ನು ಹೆಣೆಯುವ ಮಗ ಆತುರ, ಜನೇಶ, ತೀಕ್ಷ್ಣ ಭಿನ್ನಾಭಿಪ್ರಾಯಗಳೇಳುವದು ಸಹಜವೇ. ಆದರೆ ಇಷ್ಟರಲ್ಲೇ ಕರಡು ಪ್ರತಿ ತಯಾರಾಗಿದೆ; ಆದರ ಕೊನೆಯ ರೂಪರೇಷೆ ರಾಷ್ಟ್ರ ನಾಯಕರ ಊಹಾ ದೃಷ್ಟಿಯ ಮುಂದಿದೆ. ಮಾತ್ರವಲ್ಲ; ಸ್ವರಾಜ್ಯ ಸ್ಥಾಪನಾ ದಿನದ ಪೂರ್ವೇಶ್ವರ ವಿದ್ಯಮಾನಗಳು ಭಾರತದ ಶಾಶ್ವತ ಶಾಸನ ವಿಧಾನವನ್ನು ನಿರ್ದೋಷವಾಗಿ ನಿರ್ಮಿಸಲಾಗುವಂತಹ ವಿಶೇಷಾನುಭವಗಳನ್ನು ರಚನಾಕರ್ತರಿಗೆ ಒದಗಿಸಿವೆ. ನೇರಲಾಗಿ ರಾಷ್ಟ್ರದ ಕದಡು ವಾತಾವರಣ ವೀಗ ಸಾಕಷ್ಟವಾಳಿಗೊಂಡು ಇಂತಹ ಮಹಾ ರಜನೆಗೆ ಅನುಕೂಲವಾಗಿದೆ. ಭಾರತ ದಂತಹ ಮಹಾ ರಾಷ್ಟ್ರದ ಗೊತ್ತುಗುರಿ ಮತ್ತು ಭವಿಷ್ಯ ನಿರ್ಮಿಸುವಾಗ ಅಂಜಿಕೆ ಮತ್ತ ಅನುಮಾನಗಳ ಅಂಶ ಮಾತ್ರವೂ ಉಳಿಯದಂತಾಗುವ ಮಟ್ಟಿಗೆ ಪಂಡಿತ ನೆಹರುಗಳ 'ಕಾಮನ್‌ವೆಲ್ತ್' ಸಮ್ಮೇಳನದ ಹೊಸಾನುಭವದ ಮೂಲಕ ದೊರೆತಿದೆ. ಇವೆಲ್ಲಾ ದೃಷ್ಟಿಯಿಂದಲೂ ಸ್ವತಂತ್ರ ಶಾಶ್ವತ ರಾಜ್ಯಾಂಗ ವಿಧಾನಗಳ ಈ ರೂಪ್ಪದ ವತನೆ, ಹಿರಿತನ ಮತ್ತು ಭವಿಷತ್ಕಾಲದಲ್ಲಿ ಅದರ ಪಾಲಿಗೆ ಮುಡಿವಾಗಿ ಇಡಲ್ಪಟ್ಟಿರುವ ಲೋಕ ನಾಯಕತ್ವಕ್ಕೆ ಪೂರಕವಾಗಿ ರೂಪುಗೊಳ್ಳುವವೆಂದು ನಿರೀಕ್ಷಿಸಬಹುದು. ದೇಗಾದರೂ ಮುಂದಿನದು ಜನತಾರಾಜ್ಯ-- ಜನತೆಯು ಹೊಣಗಾಗಿಯೆ--ಎ ಬುದನ್ನು ತಿಳಿದುಕೊಂಡು ಒಂದೀ ಜನಸಾಮಾನ್ಯರೂ ತಮ್ಮನ್ನು ತಾವರಿತುಕೊಳ್ಳಬೇಕಾದ ಕಾಲವಿದು.

ಅಖಿಲ ಭಾರತ ಕಾಂಗ್ರೆಸಿನ ಜೈಪುರ ಅಧಿವೇಶನದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಉಮೇದ್ವಾರಗಳಾದ ಡಾ. ಪಟ್ಟಾಭಿ ಸೀತಾರಾಮಯ್ಯ ಮತ್ತು ಶ್ರೀ ಪುರುಷೋತ್ತಮ ದಾಸ ಥಂಡನರ ಪೈಕಿ ಮೊದಲನೆಯವರು ಬಹುಮತ ಪಡೆದು ನೆಹರೂ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು ಅಧ್ಯಕ್ಷ ಸ್ಥಾನದ ಮತದಾರರು ಅ. ಭಾ. ಕಾಂ. ಸಮಿತಿ ಪ್ರತಿನಿಧಿಗಳಾದ ಪ್ರಾಂತಿಕ ಕಾಂಗ್ರೆಸ್ ಕಮಿಟಿಗಳ ಸದಸ್ಯರು ಪ್ರತಿಯೊಂದು ಪ್ರಾಂತಿಕ ಸಮಿತಿ ಸದಸ್ಯರ ಸಭೆಯು ಒಕ್ಟೋಬರ್ ತಾ. 24ರಲ್ಲಿ ಆಯಾಯಾ ಸ್ಥಳಗಳಲ್ಲಿ ನೆರೆದು ಇಬ್ಬರು ಉಮೇದ್ವಾರರಿಗೂ ಹೆಸರಿಗೆ ಮತದಾನ ನಡೆಯಿತು. ಇದುವರೆಗೆ ತಿಳಿದು ಬಂದ ಚುನಾವಣಾ ಫಲಿತಾಂಶಗಳು ಹೀಗಿವೆ:

ತಮಿಳುನಾಡು

ಡಾ। ಪಟ್ಟಾಭಿಗಳಿಗೆ 151 ಮತಗಳೂ ಶ್ರೀ ಥಂಡನರಿಗೆ 11 ಮತಗಳೂ ದೊರೆತವು; ಒಂದು ವೋಟು ಅಸಿಂಧುವಾಯಿತು. ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಸಮಿತಿಯ 253 ಸದಸ್ಯರ ಪೈಕಿ 196 ಮಂದಿ ಮಾತ್ರ ಮತದಾನ ಮಾಡಿದ್ದರು. ಪ್ರಧಾನ ಮಂತ್ರಿ ಶ್ರೀ ಟಿ. ಪಿ. ರಾಮಸ್ವಾಮಿ ರೆಡ್ಡಿಯಾರರು ಯಾರಿಗೂ ಮತಕೊಡಲಿಲ್ಲ.

ಆಂಧ್ರ

ಡಾ। ಪಟ್ಟಾಭಿಗಳಿಗೆ 1೮ ಮತಗಳೂ ಶ್ರೀ ಥಂಡನರಿಗೆ 30 ಮತಗಳೂ ದೊರೆತುವು. ನಾಲ್ಕು ವೋಟುಗಳು ಅಸಿಂಧುವಾದವು. ಆಂಧ್ರ ಪ್ರಾಂತಿಕ ಕಾಂಗ್ರೆಸ್ ಸಮಿತಿಯ 190 ಸದಸ್ಯರ ಪೈಕಿ 108 ಸದಸ್ಯರು ಮಾತ್ರ ಮತದಾನ ಮಾಡಿದ್ದರು.

ನಾಗಪುರ

ಡಾ। ಪಟ್ಟಾಭಿಗಳಿಗೆ 22, ಶ್ರೀ ಥಾಡನರಿಗೆ 1೫ ಮತಗಳು.

ಕಾಂಗ್ರೆಸ್ ಅಧ್ಯಕ್ಷ ಡಾ। ಪಟ್ಟಾಭಿ.

ಗುಜರಾತ್

ಶ್ರೀ. ಥಂಡನರಿಗೆ 93, ಡಾ। ಪಟ್ಟಾಭಿಗಳಿಗೆ 16 ಮತಗಳು.

ಒರಿಸ್ಸಾ

ಶ್ರೀ. ಥಂಡನರಿಗೆ 69, ಡಾ। ಪಟ್ಟಾಭಿಗಳಿಗೆ 9 ಮತಗಳು.

ಸಂಯುಕ್ತ ಪ್ರಾಂತ್ಯ

ಶ್ರೀ ಥಂಡನರಿಗೆ 322; ಡಾ। ಪಟ್ಟಾಭಿಗಳಿಗೆ 129 ಮತಗಳು. ಎರಡು ಮತಗಳು ಅಸಿಂಧುವಾಗಿವೆ. ಸಂಯುಕ್ತ ಪ್ರಾಂತಿಕ ಕಾಂಗ್ರೆಸ್ ಸಮಿತಿಯ 557 ಪ್ರತಿನಿಧಿ ಸದಸ್ಯರ ಪೈಕಿ 453 ಮಂದಿ ಮತದಾನ ಮಾಡಿದ್ದರು.

ಕೇರಳ

ಡಾ. ಪಟ್ಟಾಭಿಗಳಿಗೆ 79; ಶ್ರೀ ಥಂಡನರಿಗೆ 29.

ಕರ್ನಾಟಕ

ಶ್ರೀ ಥಂಡನರಿಗೆ 25; ಡಾ. ಪಟ್ಟಾಭಿಗಳಿಗೆ 23 ಮತಗಳು ಬಿದ್ದುವು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಸಮಿತಿಯ 79 ಪ್ರತಿನಿಧಿಗಳ ಪೈಕಿ 48 ಮಂದಿ ಮಾತ್ರ ಮತದಾನ ಮಾಡಿದ್ದರು.

ಮಹಾರಾಷ್ಟ್ರ

ಡಾ. ಪಟ್ಟಾಭಿಗಳಿಗೆ 78; ಶ್ರೀ ಥಂಡನರಿಗೆ ೨. ಈ ಪ್ರಾಂತಿಕ ಕಾಂಗ್ರೆಸ್ ಸಮಿತಿಯ ಒಟ್ಟು ಮತದಾರ ಸಂಖ್ಯೆ 182

ಬೊಂಬಾಯಿ

ಶ್ರೀ ಥಂಡನರಿಗೆ 34; ಡಾ। ಪಟ್ಟಾಭಿಗಳಿಗೆ ೨. ಸಿಂಧ ಪ್ರಾಂತಿಕ ಪ್ರತಿನಿಧಿಗಳಲ್ಲಿ ಶ್ರೀ ಥಂಡನರಿಗೆ 4, ಡಾ। ಪಟ್ಟಾಭಿಗಳಿಗೆ 1.

ದಿಲ್ಲಿ

ಡಾ। ಪಟ್ಟಾಭಿ 10, ಶ್ರೀ. ಥಂಡನ್ 6

ಪೂರ್ವ ಪಂಜಾಬ್

ಡಾ। ಪಟ್ಟಾಭಿ 69; ಶ್ರೀ ಥಂಡನ್ 20.

ದೀಪಾವಳಿ ಸಂದೇಶ

ಇದೇ ಬರುವ ದೀಪಾವಳಿಯು ಸರ್ವರಿಗೂ ಶುಭದಾಯಕವಾಗಲೆಂದು ಹಾರ್ದಿಕವಾಗಿ ಹಾರೈಸುತ್ತೇವೆ.

ಸ್ವಭಾತ ಟೀ
ಮತ್ತು ಕಾಫಿ (ಇಂಡಿಯಾ)
ಲಿಮಿಟೆಡ್,
ಕೊನೂರು, ಆರ್.ಎಸ್ (ನೀಲಗಿರಿ)

ಪಟ್ಟಾಭಿ–ಥಂಡನ್

ಜಯಾಪಜಯ

ಪೂ. ಪಂ ಸಂಸ್ಥಾನಗಳು

ಡಾ| ಪಟ್ಟಾಭಿ 27; ಶ್ರೀ. ಥಂಡನ್ 1.

ಬಿಹಾರ್

ಡಾ| ಪಟ್ಟಾಭಿ 182, ಶ್ರೀ. ಥಂಡನ್ 68. ಬಿಹಾರ್ ಪ್ರಾಂತಿಕ ಕಾಂಗ್ರೆಸ್ ಸಮಿತಿಯ 358 ಪ್ರತಿನಿಧಿ ಸದಸ್ಯರ ಪೈಕಿ 253 ಮಂದಿ ಮತದಾನ ಮಾಡಿದ್ದು 3 ಮತಗಳು ನಕಾರ ಪಡೆದುವು.

ಮಹಾಕೋಶಲ

ಶ್ರೀ ಥಂಡನ್ 48; ಡಾ| ಪಟ್ಟಾಭಿ 23.

ಬಿ.ಎ.ಆರ್

ಶ್ರೀ ಥಂಡನ್ 22; ಡಾ| ಪಟ್ಟಾಭಿ 5.

ಮಧ್ಯಭಾರತ

ಡಾ| ಪಟ್ಟಾಭಿ 52, ಶ್ರೀ ಥಂಡನ್ 15

ರಾಜಪುತಾನ

ಡಾ| ಪಟ್ಟಾಭಿ 70, ಶ್ರೀ ಥಂಡನ್ 41.

ಹಿಮಾಚಲ ಪ್ರದೇಶ

ಡಾ| ಪಟ್ಟಾಭಿ 6. ಶ್ರೀ ಥಂಡನ್ 0.

ಅಜ್ಮೀರ್ ಮೆರ್ವಾರಾ

ಡಾ| ಪಟ್ಟಾಭಿ 6, ಶ್ರೀ ಥಂಡನ್ 4.

ಬಂಗಾಳಾ

ಶ್ರೀ| ಥಂಡನ್ 181; ಡಾ| ಪಟ್ಟಾಭಿ 72.

ಆಸ್ಸಾಮ್

ಡಾ. ಪಟ್ಟಾಭಿ 23; ಶ್ರೀ ಥಂಡನ್ 14. ಆಸ್ಸಾಮ್ ಪ್ರಾಂತಿಕ ಕಾಂಗ್ರೆಸಿನ 74 ಸದಸ್ಯರ ಪೈಕಿ 37 ಮಂದಿ ಮಾತ್ರ ಮತದಾನ ಮಾಡಿದ್ದರು.

ವಿಂಧ್ಯ ಪ್ರದೇಶ ಕಾಂಗ್ರೆಸ್ ಸಮಿತಿಯೊಂದರ ಮತಗಳು ಯಾರಿಗೆಷ್ಟು ಎಂಬುದು ತಾ 25ರ ವರೆಗೆ ತಿಳಿದು ಬಂದಿರಲಿಲ್ಲವಾದರೂ ಆದಕ್ಕಿರುವ 69 ಮತಗಳೆಲ್ಲವೂ ಶ್ರೀ ಥಂಡನರಿಗೆ ಹೋದರೂ ಡಾ. ಪಟ್ಟಾಭಿಗಳೇ ಗೆದ್ದರು.

ಅಖಿಲ ಭಾರತದ ವಿವಿಧ ಪ್ರಾಂತಿಕ ಸಮಿತಿಗಳ ಅ. ಭಾ. ಕಾಂ. ಸಮಿತೀ ಪ್ರತಿನಿಧಿ ಸದಸ್ಯರ ಒಟ್ಟು ಸಂಖ್ಯೆ–ಅಧ್ಯಕ್ಷ ಚುನಾವಣೆಯ ಮತದಾರರ ಸೊತ್ತು- 2737. ಈ ಬಾರಿ ವಿವಿಧ ಸಂಸ್ಥಾನಗಳ ಕಾಂಗ್ರೆಸ್ ಸಮಿತಿಗಳು ಹೊಸತಾಗಿ ಸಂಘಟನೆಗೊಂಡಿರುವುದರಿಂದ ಅನುಗಣ ಪ್ರತಿನಿಧಿ ಸಂಖ್ಯೆ 600. ಈ ರೀತಿ ಜುಮ್ಲಾ 3337. ಇವೆಲ್ಲಕ್ಕೆ ವಿಂಧ್ಯ ಪ್ರದೇಶದ ಮತಗಳನ್ನು ಬಿಟ್ಟರೆ ಡಾ| ಪಟ್ಟಾಭಿಗಳಿಗೆ ಒಟ್ಟಿಗೆ ದೊರೆತ ಮತಗಳು 1226; ಶ್ರೀ. ಥಂಡನರಿಗೆ 1032 ಮಿಕ್ಕವರು ಗೈರು ಹಾಜರು; ಅಥವಾ ವೋಟು ವಜಾ. ತನ್ನ ಪ್ರತಿ ಸ್ಪರ್ಧಿಗಿಂತ 194 ಅಧಿಕ ಮತಗಳನ್ನು ಡಾ| ಪಟ್ಟಾಭಿಗಳು ಪಡೆದಿದ್ದರು. ವಿಜಯೀ ಪಟ್ಟಾಭಿಗಳು ತನ್ನ ಪ್ರಾಂತ್ಯವಾದ ಆಂಧ್ರ ಮತ್ತು ತಮಿಳುನಾಡು, ಕೇರಳ, ಬಿಹಾರ್, ರಾಜಪುತಾನೆ, ಹಿಮಾಚಲ ಪ್ರದೇಶ, ನಾಗಪುರ, ಢಿಲ್ಲಿ, ಅಜಮೀರ್, ಮಹಾರಾಷ್ಟ್ರ, ಪಂಜಾಬ್, ಮಧ್ಯಭಾರತ ಕಾಂಗ್ರೆಸ್ ಸಮಿತಿಗಳಿಂದ ಬಹುಮತಗಳನ್ನು ಪಡೆದಿದ್ದರು. ಪರಾಭವಿ ಶ್ರೀ. ಥಂಡನರು ತನ್ನ ಪ್ರಾಂತ್ಯವಾದ ಸಂಯುಕ್ತ ಪ್ರಾಂತ್ಯ ಮತ್ತು ಗುಜರಾತ್, ಮಹಾಕೋಶಲ, ಬಿ.ಎ.ಆರ್, ಒರಿಸ್ಸಾ ಬೊಂಬಾಯಿ, ಕರ್ನಾಟಕಗಳಿಂದ ಬಹುಮತಗಳನ್ನಿತ್ತಿದ್ದರು. ಕರ್ನಾಟಕದಲ್ಲಿ ಶ್ರೀ ಥಂಡನರಿಗೆ ಹೆಚ್ಚಿಗೆ ದೊರೆತಿದ್ದುದು ಎರಡೇ ಮತಗಳಾದ್ದರಿಂದ ಕರ್ನಾಟಕದ ದೃಷ್ಟಿಯಲ್ಲಿ ಬಹುತೇಕವಾಗಿ ಅವರಬ್ಬರೂ ಒಂದೇ. ಸಂಸ್ಥಾನೀ ಅಧ್ಯಕ್ಷನಾಗಿದ್ದ ಡಾ| ಪಟ್ಟಾಭಿಗಳಿಗೆ ಅವುಗಳ ಬಹುಸುತ ಸೊತ್ತಿತ್ತು.

ಅಧ್ಯಕ್ಷ ಡಾ| ಪಟ್ಟಾಭಿ

ಬಹುಶ್ರುತಿ ಡಾ| ಪಟ್ಟಾಭಿ ಮೇಧಾವಿ; ಕಾರ್ಯನಿಪುಣ; ಪ್ರತಿಭಾನ್ವಿತವಾಗ್ಮಿ ಮತ್ತು ಲೇಖಕ. ತನ್ನ 18ನೇ ವಯಸ್ಸಿನಿಂದ ನಿಷ್ಠಾವಂತ ಕಾಂಗ್ರೆಸ್ ಅನುಯಾಯಿಯೇ ಬೆಳೆಯುತ್ತಾ ಬಂದು ಈಗ 68ನೇ ವಯಸ್ಸಿನಲ್ಲಿ ಹಿರಿಯ ಕಾಂಗ್ರೆಸ್ ಪುಢಾರಿಯಾಗಿರುವವರು. ಸಹಕಾರಿ ಸಂಘ, ಏಮ್ಸ್, ಬ್ಯಾಂಕಿಂಗ್ ವ್ಯವಹಾರಗಳನ್ನೂ ನಡಿಸುತ್ತಿರುವ ಉದ್ದಿಮೇವಾಟ. 1880ರಲ್ಲಿ ಆಂಧ್ರದಲ್ಲಿ ಇವರ ಜನನ. ಬಿ.ಎ ವಿದ್ಯಾರ್ಥಿ ದೆಸೆಯಲ್ಲಿ ಯೇ ಕಾಂಗ್ರೆಸ್ ಸ್ವಯಂಸೇವಕನಾಗಿದ್ದು ಡಾಕ್ಟರೀ ಶಿಕ್ಷಣ ಕಾಲದಲ್ಲೂ ಅದೇ ಸೇವೆ ಮಾಡಿದ್ದರು. ಆ ಮೇಲೆ ಹಲವು ಬಾರಿ ಅಖಿಲ ಭಾರತ ಕಾಂಗ್ರೆಸ್ ಪ್ರತಿನಿಧಿಯಾಗಿದ್ದರೆಲ್ಲವೆ 1929ರಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸದಸ್ಯರಾದರು; ಮಧ್ಯವರ್ತಿಯ ನಂತರ ಅನುಕ್ರಮವಾಗಿ ಅದರ ಸದಸ್ಯರಾಗುತ್ತಾ ಬಂದಿದ್ದಾರೆ. 1906ರಿಂದ 1916ರ ವರೆಗೆ ಅಖಿಲ ಆಂಧ್ರದ ಅಧ್ಯಕ್ಷತೀಯ ನಾಯಕನಾಗಿ ರಾಜಸಿದವರು ಸಟ್ಟಾಭಿ. ಆಂಧ್ರ ಪ್ರಾಂತಿಕ ಸಮ್ಮೇಳನ, ಆಂಧ್ರ ಪ್ರಾಂತಿಕ ಸಹಕಾರೀ ಸಮ್ಮೇಳನ, ಮುತ್ತೈದ ಜಿಲ್ಲಾ ರಾಜಕೀಯ ಪ್ರಾಂತಿಕ ಸಮ್ಮೇಳನಗಳ ಅಧ್ಯಕ್ಷತೆಯನ್ನು ಅನೇಕ ಡಾ| ಪಟ್ಟಾಭಿಗಳಿಗೆ ದೊರಕಿದ್ದಿತು. ಆಂಧ್ರವ್ಯಾಪೀ ರಾಷ್ಟ್ರೀಯ ಶಿಕ್ಷಣ ಸಂಸ್ಥೆ 'ಆಂಧ್ರ ಜಾತೀಯ ಕಲಾ ಶಾಲಾ'ದ ಆಧಾರ ಸ್ತಂಭಗಳಲ್ಲಿ ಇವರೊಬ್ಬರಾಗಿದ್ದರು. ಅಖಿಲ ಭಾರತ ಚರಖಾಸಂಘದ ಆಂಧ್ರ ಶಾಖೆಯು 1929ರಿಂದ 1947ರ ವರೆಗೂ ಇವರ ಕೈಕೆಳಗಿತ್ತು. ಭಾರತೀಯ ಸಂಸ್ಥಾನಗಳ ಜನತಾಜಿಕವಳಿಯಲ್ಲಿ ಡಾ| ಪಟ್ಟಾಭಿಯವರು ಪ್ರಮುಖಾಸಕ್ತಿ ವಹಿಸುತ್ತಿ ಬಂದಿದ್ದು ಹಿಂದೀ ಸಂಸ್ಥಾನಿಕ ಪ್ರಜಾಪರಿಷತ್ತಿನ ಕಳ್ಯಕ್ಷರೂ ಆಗಿದ್ದರು. 1939ರಲ್ಲಿ ಸುಭಾಸ್ಚಂದ್ರ ಬೋಸರು ಗಿದಿರಾಗಿ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆಸ್ಪರ್ಧಿಸಿ ಸೋತಕ್ಷಣಗೀದ್ದರು. 1930ರಲ್ಲಿ ಉಪ್ಪಿನಸತ್ಯಾಗ್ರಹಕ್ಕಾಗಿ ಜೈಲು–1932 ಮತ್ತು 33ರ ಸ್ವಾತಂತ್ರ್ಯ ಚಳವಳಗಳಲ್ಲಿ ಎರಡು ಬಾರಿ–ಜೈಲುವಾಸವನುಭವಿಸಿದ್ದರಲ್ಲದೆ 1942ರ ಆಗೋಸ್ತಿನ ಕ್ವಿಟ್ ಇಂಡಿಯಾ ಚಳವಳದಲ್ಲಿ ಖಂಡಿಸಲ್ಪಟ್ಟವರು 1945ನೇ ಜೂನಿನಲ್ಲಿ ಬಿಡುಗಡೆಗೊಡಿದ್ದವರು. ಕಾಂಗ್ರೆಸಿನ ಸುವರ್ಣೋತ್ಸವ ಸಂಚಿಕೆಯ ಸಂಪಾದಕತ್ವ ಡಾ| ಪಟ್ಟಾಭಿಗಳದಾಗಿತ್ತು. 'ಜನ್ಮಭೂಮಿ' ಇಂಗ್ಲಿಷ್ ವಾರಪತ್ರಿಕೆಯನ್ನು 1919ರಿಂದ 1930ರ ವರೆಗೆ ತಾನು ಜೈಲು ಸೇರುವವರೆಗೂ ನಡೆಸಿದ್ದರು. 'ಆಂಧ್ರ ಇನ್ಶೂರೆನ್ಸ್ ಕಂಪೆನಿ' 'ಆಂಧ್ರ ಬೇಂಕ್' 'ಭಾರತ ಲಕ್ಷ್ಮೀ ಬೇಂಕ್' 'ಹಿಂದುಸ್ತಾನ್ ಮ್ಯೂಚುವಲ್ ಇನ್ಶೂರೆನ್ಸ್ ಕಂಪೆನಿ' ಮುಂತಾದ ಆರ್ಥಿಕ ಸಂಸ್ಥೆಗಳ ಸ್ಥಾಪನೆ ಮತ್ತು ಸಂಚಾಲಕತ್ವದಲ್ಲಿ ಡಾ. ಪಟ್ಟಾಭಿಗಳ ಸಾಲಿದೆ. ರಾಜಕೀಯ ಬಂಧನದೇ ಆರ್ಥಿಕ ಶ್ಲೇಷ್ಮಗಳೂ ಅಪ್ಯತೆ ಪ್ರದರ್ಶಿಸಿರುವ ಡಾ ಪಟ್ಟಾಭಿಗೇ ವ್ಯಕ್ತಿತ್ವದ ಆಳವೆಷ್ಟೆಂಬುದು ಅಧಿಕ ಸಂಖ್ಯೆಯ ಜನರಿಗರಿಯದ ಗೂಢ, ಅಂತೂ ಕಾಂಗ್ರೆಸ್ ಗಾದಿಯೇರುವ ಅವರ ದೀರ್ಘಕಾಲದ ಬಯಕೆ ಫಲಿಸಿತು.

ದೀಪಾವಳಿಗಾಗಿ ಸ್ಪೆಶಲ್

ಪುಣ್ಯಕಥೆ ನೋಡಿದರೇನೇ

ಪುಣ್ಯದಿನಗಳ ಪೂರ್ಣ ಫಲ.

ಅದಕ್ಕಾಗಿ ಪುರಾಣದ ಪವಿತ್ರ ಪುಣ್ಯ ಕಥೆ.

ತಾರೀಖು 30-11-48ರಿಂದ

"ತುಳಸೀ ವೃಂದಾ"

ಈಶ್ವರಲಾಲ್, ರಂಜನಾ, ಉಮಾಕಾಂತ್ ಮೊದಲಾದವರು.

ನೋಟಿನ್ ಇತ್ಯಾದಿ ಚಿಟ್ಟರಿಗಳನ್ನು ಚಾರ್ಜು ಮಾಡಿಸಲು ಅತ್ಯಾಧುನಿಕ ಉಪಕರಣ ಇದೀಗ ಬಂದಿದೆ:–

ಕೆಲವೇ ಘಂಟೆಗಳಲ್ಲಿ ಅತ್ಯುತ್ತಮ ಚಾರ್ಜು ಮಾಡಲು ಇದೀಗ ಸಾಧ್ಯವಿದೆ.

ನಿರ್ವಾಹಕರು:

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಪ್ರಕಟಣೆ

ಗೋಪೂಜೆ

ನವಮ್ಯ ಪಂಚಾಂಗದಲ್ಲಿ ಈ ವರುಷ ಗೋಪೂಜೆಯು ಕಾರ್ತಿಕ ಶುಕ್ಲ ೧ನೇ ಗುರುವಾರ (ತಾ. 2-11-48) ಎಂದು ತಪ್ಪಿಗಿ ಪ್ರಕಟವಾಗಿದೆ. ಇದು ಕೇವಲ ಮುದ್ರಾದೋಷವಾಗಿದೆ. ಗೋಪೂಜೆಯು ಅಶ್ವಯುಜ ಕೃಷ್ಣ ೩ರ ಸೋಮವಾರ (ತಾ. 1-11-48)ಕ್ಕೆ ಎಂದಾಗಬೇಕು. ಎಲ್ಲರೂ ಅದರಂತೆಯೇ ಆಚರಿಸಬೇಕಾಗಿ ಮಹಾಜನರ ಆವಗಾಹನೆಗೆ ಈ ಮೂಲಕ ಪ್ರಕಟಿಸಲಾಗಿದೆ.

ಇತಿ ಸಂಚಾಂಗಕರ್ತಾ

ಬ್ರಹ್ಮಶ್ರೀ ವಾಸುದೇವ ಭಟ್ಟ,
ತಟ್ಟುವಟ್ಟು, ಹುಲಾಡಿ.

ಉಡುಪಿ

ಸರ್ಕಲ್ ಕಾಂಗ್ರೆಸ್ ಕಮಿಟಿಯ ಅವಸರದ ಸಭೆಯು ಇದೇ ತಾ. 27ರಲ್ಲು ಪೂರ್ವಾಹ್ನ ಸರ್ಕಲ್ ಕಾಂಗ್ರೆಸ್ ಕಮಿಟಿ ಆಫೀಸಿನಲ್ಲಿ ಶ್ರೀ ಬಾಳ್ಳಟ್ಟಿ ಕೃಷ್ಣಯ್ಯ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿತು. ಉಡುಪಿ ರೇಶನಿಂಗ್ ಆಫೀಸನ್ನು ಪಟ್ಟಣದ ಕೇಂದ್ರದಲ್ಲಿ ಇರಗೊಡಿಸಬೇಕೆನ್ನುವ ಅವಲಕ್ಕಿ ಕೈಗಾರಿಕೆಯನ್ನು ಊರ್ಜಿತದಲ್ಲಿರಗೊಡಿಸಿ ಜನತೆ ಸೀದಾ ರೀತಿಯಲ್ಲಿ ದೊರಕಬೇಕೆನ್ನುವ ಸ್ಯೋರ್ಸು ಡಿಪೊಗಳು ಜಾಸ್ತಿ ಮಾಡಲ್ಪಟ್ಟು ಕೃಷಿಕರು ಅವರಿಸಿಸ್ಪವಿದ್ದ ಡಿಪೊಗಳಿಗೆ ಅಕ್ಕಿಯನ್ನು ಒಪ್ಪಿಸುವ ಸ್ವಾತಂತ್ರ್ಯನಿರಬೇಕೆನ್ನುವ, ಕೃಷಿಕರಿಗೆ ಆಯಾಯ ಪಂಚಾಯತ ಕ್ಷೇತ್ರದಲ್ಲಿ ನ್ಯಾಯಕ ಸಾಮಾಗ್ರಿಗಳು ಯೋಗ್ಯ ದರದಲ್ಲಿ ಸಕಾಲದಲ್ಲಿ ಸಿಗುವ ಏರ್ಪಾಡು ಆಗಬೇಕೆನ್ನುವ ನಿರ್ಣಯಗಳಾದುವು. ನಿಯಂತ್ರಣದ ಅನುಭವವು ಜನತೆಗೆ ಆಗುವಷ್ಟರಲ್ಲಿ ಪುನಹ ರೇಶನಿಂಗ್ ಜಾರಿಗೆ ತರುವುದರಿಂದ ಕಳ್ಳಸಂತೆ ಮತ್ತು ಲಂಚಗೂಳಿತನ ಜಾಸ್ತಿಯಾಗಲು ಅಸ್ಪದ ಪ್ರಜೆಯು ತ್ವದಾದುದರಿಂದ ನಿಯಂತ್ರಣವೇ ಇರಬೇಕೆಂದು ಒತ್ತಾಯ ಪಡಿಸುವ ನಿರ್ಣಯವೂ ಆಯಿತು ಆಹಾರ ಧಾನ್ಯಗಳ ಪಂಡಿತ ಬೆಲೆಯನ್ನು ನಿಶ್ಚಯಿಸಬೇಕೆನ್ನುವ ಮತ್ತು ಈಗ ಇರುವ ಅಕ್ಕಿಯ ಬೆಲೆಯನ್ನು ಸೇರಿಸದಾ25–ರಷ್ಟು ಜಾಸ್ತಿ ಮಾಡಬೇಕೆನ್ನುವ ಅರಾಜಾಯಿಸಿತು. ಸಿದ್ಧಾಮಂತ್ರಿಗಳು ಉಡುಪಿಗೆ ಬಂದಲ್ಲಿ ನವಂಬ್ರ 4ನೇ ರಂದು ಶ್ರೀ ಕೃಷ್ಣ ದೇವಸ್ಥಾನದಲ್ಲಿ ಹರಿಜನರಿಗೆ ಪ್ರವೇಶ ದೊರಕಿಸುವ ಏರ್ಪಾಡು ಸಹ ಮಾಡಬೇಕೆಂದಾಯಿತು.

ರೇಶನ್ ಆಫೀಸು ಕೇಂದ್ರ ಸ್ಥಳದಲ್ಲಾಗಲಿ–ರೇಶನಿಂಗ್ ಆಫೀಸನ್ನು ಚಿಟ್ಟಪ್ಪಾಡಿ ಬೀಡಿನ ಗುಡ್ಡೆ ಸ್ಥಾನಾನದ ಬಳಿಯ ಪೇಟೆಯ ಹೊರ ವಲಯದ ದೂರದ ಕಟ್ಟಡದಲ್ಲಿ ತೆರೆಯಲಾಗುವುದೆಂದು ತಿಳಿಯಬರುತ್ತದೆ. ಈ ಕಟ್ಟಡವನ್ನು ಬಿಲ್ಲಾ ಅಹಾರ ಸರಬರಾಯಿ ಅಧಿಕಾರಿಯು ಶಿಫಾರಸು ಮಾಡಿರುವರೆಂದೂ ವಾರ್ತೆ. ಸರ್ವಸಾಧಾರಣ ಜನರೂ ಮಕ್ಕಳೂ ಹೊಸ ಕಾರ್ಡುಗಳಿಗಾಗಲೀ ಯಾ ಕಾರ್ಡು ತಿದ್ದುಪಡಿಗಳಿಗಾಗಲೀ ರೇಶನಿಂಗ್ ಆಫೀಸಿಗೆ ಹೆಚ್ಚು ಸಂಖ್ಯೆಯಲ್ಲಿ ಹೋಗುವವರಿರುವುದರಿಂದ 'ರೇಶನಿಂಗ್ ಆಫೀಸನ್ನು ಕೇಂದ್ರಸ್ಥಳದಲ್ಲಿ ತೆರೆಯುವಂತೆ ಸಂಬಂಧಪಟ್ಟ ಅಧಿಕಾರಿಗಳು ಇನ್ನಾದರೂ ಸಿಗಾ ಕೊಡಬೇಡವೆ?

ಕೋಪರೇಟಿವ್ ಯೂನಿಯನ್ ಮಹಾಸಭೆಯು ತಾ 24 ರಲ್ಲು ಯೂನಿಯನ್ ಆಫೀಸಿನಲ್ಲಿ ಶ್ರೀ ಕೆ. ಜೆ. ಬಲ್ಲಾಳ್, ವಕೀಲ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಯೂನಿಯನ್ ಕಾರ್ಯ [illegible] ಪಿ. ಕಿ. ಆಚಾರ್ಯರು ಯೂನಿಯನ್ನಿನ ಗತ ವರುಷದ ಆಡಳಿತ ವರದಿಯನ್ನೋದಿದರು. ಚಾಲ್ತಿವರುಷದ ಬಜೆಟು ಮಂಜೂರಾದ ಬಳಿಕ ಆಡಳಿತ ನುಂಡಳಿಗೆ ಒಮ್ಮತದಿಂದ ಹಿಂದಿನವರೇ ಆರಿಸಲ್ಪಟ್ಟರು.

ಸಹಕಾರಿ ಸಂಘಗಳ ಮೂಲಕ ಮಿಲ್ ಬಟ್ಟೆ ವಿತರಣೆಯಾಗುವರೆ ಲ್ಯಾಸೆನ್ಸು ಪಡೆಯುವರೆ ಮತ್ತು ಉಪಸುಬಂಧನೆ ತಿನು ಪಡಿ ಮಾಡುವರೆ ಸಾಕಷ್ಟು ಸಮಯ ಬೇಕಾದುದರಿಂದ ಲ್ಯಾಸೆನ್ಸು ಪಡೆಯುವ ಅವಧಿಯನ್ನು ಇನ್ನೂ ಆರುತಿಂಗಳು ಮುಂದರಿಸಬೇಕೆನ್ನುವ, ಉಡುಪಿತಾಲೂಕಿನಲ್ಲಿ ಕಸಾಯಿಕ ಗೊಬ್ಬರ, ಹಿಂಡಿ ವಿತರಣೆಯಿಗೆ ಜಾಸ್ತಿ ಡಿಪೊಗಳಾಗಬೇಕೆನ್ನುವ ನಿರ್ಣಯಗಳಾದುವು.

ಸೀದಾ ಸಜ್ಜಿತಿ ನುದ್ರಾಸು ಸರಕಾರದ ರೇಶನಿಂಗ್ ಆಡಳಿತನ್ನಿಪ್ಪೂರ್ವಸಿದ್ಧತೆಯು ಉಡುಪಿ ಮುನಿಸಿಪಾಲಿಟಿಗೂ ಅನುಶಾಸನದ ವಲಯಗಳಿಗೂ ಇದೇ ತಾ 19 ರಿಂದ ಅನ್ವಯಿಸಲಾಗಿದೆಯೆಂದು ಸೀದಾಪಜ್ಜಿತ ಪೂರ್ವ ವಿಚಾರಣಾ ಸ್ಪೆಶಲ್ ಆಫೀಸರ್ ಶ್ರೀ ಜಿ. ಯು. ಪ್ರೇಮಿಯ, ಅವರು ಇದೇ ತಾ 24 ರಲ್ಲು ಹೊರಡಿಸಿದ ಪ್ರಕಟಣೆಯಾಲಕ ತಿಳಿಸಿರುತ್ತಾರೆ. ಮಹಾಜನರು ಇದನ್ನು ಗಮನಿಸಬೇಕಾಗಿದೆ.

ಪ. ಕ. ಸಮಾಚಾರ ಸಮಿತಿಯ ವಿಶೇಷ ಮಹಾಸಭೆಯೊಂದು ತಾ 31-10-48ನೇ ಆದಿತ್ಯವಾರ ಸಾಯಂ. ಗಂಟೆ 4ಕ್ಕೆ ರಾಮಕೃಷ್ಣ ವಿದ್ಯಾರ್ಥೀ ಭವನದಲ್ಲಿ ಜರಗಲಿರುವುದೆಂದೂ ಅದಕ್ಕೆ ಎಲ್ಲರೂ ಬರಬೇಕೆಂದೂ ಶ್ರೀ ಎ. ಎಸ್. ಮಹಾಬಲ ರೈಗಳು (Member in charge) ತಿಳಿಸುತ್ತಾರೆ.

ಮಂಗಳೂರು

ಜಿಲ್ಲಾ ವಾಣಿಜ್ಯ ಸಂಘವು ಕೇಂದ್ರ ಸರಕಾರದ ಕೈಗಾರಿಕೆ ಮಂತ್ರಿ ಶ್ರೀ ಶ್ಯಾಮ ಪ್ರಸಾದ ಮುಖರ್ಜಿಯವರಿಗೊಂದು ವಿನ್ನಪ ಪತ್ರಿಕೆಯನ್ನು ಕಳುಹಿಸಿರುತ್ತದೆ. ಆಗೋಸ್ತು 1ರ ನೊಪಲು ಬಂದ ಮಿಲ್ ಬಟ್ಟೆಗಳ ಮಾರಾಟದ ಅವಧಿಯನ್ನು ಆಕ್ಟೋಬರ್ 31ರ ತನಕ ಮುಂದರಿಸುವ ಅವಶ್ಯಕತೆಯನ್ನು ವಿವರಿಸಲಾಗಿದೆ. ಜಿಲ್ಲೆಯ 800 ಗ್ರಾಮಗಳಲ್ಲಿ 900 ವ್ಯಾಪಾರಿಗಳಿಗೊಡಿನಿರುವ 4 ಲಕ್ಷ ಯಾರ್ಡು ಮಿಲ್ ಬಟ್ಟೆಗಳ ನಿತರಣೆಯು ಈ ಅವ್ಯವಧಿಯಲ್ಲಾಗುವುದು ಕಷ್ಟಸಾಧ್ಯವೆಂದೂ ಅಕ್ಟೋಬರ್ 31ರ ಬಳಿಕ ಅದಕ್ಕೆ ಮುದ್ರೆಯೊತ್ತುವ ಕಾರ್ಯಕ್ಕೆ ಹೆಚ್ಚುಸಮಯ ಬೇಕಾಗುವುದೆಂದೂ ಅಕ್ಟೋಬರ್ 1ರ ನಂತರ ಈ ಜಿಲ್ಲೆಗಾಗಿ ರವಾನಿಸಿದ ಮಿಲ್ ಬಟ್ಟೆಗಳು ಇನ್ನೂ ಜಿಲ್ಲೆಯನ್ನು ಸೇರಿಲ್ಲವೆಂದೂ ಅವು ಬಂದಮುಟ್ಟಲು ಇನ್ನೂ ಎರಡು ತಿಂಗಳಾದರೂ ಬೇಕಾದೀತೆಂದೂ ವಿನ್ನವತ್ತಳೆಯಲ್ಲಿ ಸೂಚಿಸಲಾಗಿದೆ. ಆದುದರಿಂದ ಈ ಅವಧಿಯನ್ನು ಮುಂದುವರಿಸದಿದ್ದರೆ ಜಿಲ್ಲೆಯಲ್ಲಿ ಅನ್ಯಾಯವಾಗಿ ಬಟ್ಟೆಯ ಕೃತಿಮ ಉಂಟಾಗುವುದೆಂದು ಸದ ಸರಕಾರಕ್ಕೆ ತಿಳಿಸಲಾಗಿದೆ.

ದ. ಕ. ಪಂಡಿತ ಸಂಘ: ದ ಪಷ್ಠಾರ ವಧಿ ಸಭೆಯು ಇದೇ ತಾ 16ರಲ್ಲು ಬೆಸೆಂಟ್ ಮಂದಿರದಲ್ಲಿ ಶ್ರೀ ಸೇದಿಯಾಸ ಕೃಷ್ಣಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಕಾರ್ಯಾಲಯ ಸಮಿತಿಯ ರಚನೆಯು ಕೆಲವೊಂದು ತಿದ್ದುಪಡಿಗಳಿಂದ ಆಯಿತು.

ಮಂಗಳೂರು ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಇದೇ ತಾ 17ರಲ್ಲು ಜರಗಿದ ಸಾಹಿತ್ಯಸಭೆಯಲ್ಲಿ 'ಭಾಷಾ ಪ್ರಾಂತಗಳಿಂದ ಭಾರತ ಒಕ್ಕೂಟಕ್ಕೆ ಹಾನಿಯೇ'ಎಂಬ ವಿಷಯ ಚರ್ಚಿಸಲ್ಪಟ್ಟಿತು. ಚರ್ಚೆಯಲ್ಲಿ ಹನ್ನೊಂದುಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು. ನುತತೆಗೆಯಲಾಗಿ ಸಭೆಯು ಅಧಿಕಮತದಿಂದ ಭಾಷಾ ಪ್ರಾಂತರಚನೆಯಿಂದ ಭಾರತ ಒಕ್ಕೂಟಕ್ಕೆ ಹಾನಿಯಿಲ್ಲವೆಂಬ ನಿರ್ಣಯವಾಯಿತು. ಸಭೆಯ ಅಧ್ಯಕ್ಷತೆಯನ್ನು ಶ್ರೀ ಪಿ. ಕೆ. ನಾರಾಯಣರು ವಹಿಸಿದ್ದರು. ಶ್ರೀ ಬಿ. ಶಂಕರಭಟ್ಟರು ಕರ್ನಾಟಕ ಏಕೀಕರಣದ ವಿಚಾರವನ್ನು ತಿಳಿಸಿದರು.

ಪ್ರಬುದ್ಧ ಬಂದರ ಸಮಿತಿಯ ಶಿಫಾರಸು ಭಾರತ ಸರಕಾರದಿಂದ ನಿರ್ಯೋಜಿತವಾಗಿದ್ದ ಪಶ್ಚಿಮ ಕರಾವಳಿಯ ಪ್ರಬುದ್ಧ ಬಂದರ ನಿಷ್ಪತ್ತಿ ಸಂಬಂಧದ ಸಮಿತಿಯವರು, ಬೊಂಬಾಯಿಯ ದಕ್ಷಿಣಕ್ಕಿರುವ ಕಾರವಾರ, ಭಟ್ಕಳ, ಮಲ್ಪೆ ಎಂತು ಮಂಗಳೂರು ಬಂದರಗಳ ಸಮಾಗ್ರ 'ಸರ್ವೆ' ನಡೆಯುವುದು ಅವಶ್ಯವಿದೆಯೆಂದು ಶಿಫಾರಸು ಮಾಡಿರುವುದಾಗಿ ತಿಳಿದುಬರುತ್ತದೆ. ಈ ಸಂಬಂಧ ಭಾರತ ನೌಕಾಬಲದ 'ಎಚ್. ಎಮ್. ಐ. ಎಸ್. ಇನ್‌ವೆಸ್ಟಿಗೇಟರ್' ಎಂಬ ಹಡಗು ಈಚೆಗೆ ಈ ಕಡೆ ಬಂದು ಕೊಚ್ಚಿಗೆ ಹೊಗಿರುತ್ತದೆ.

ಮಂಗಳೂರು ನಗರಸಭೆಯು ಈಚೆಗೆ ಶ್ರೀ ಬಿ. ಗುಣಾಧರ ಬಾವರ ಅಧ್ಯಕ್ಷತೆಯಲ್ಲಿ ಜರಗಿತು. ನುಂಗಳೂರು ಆಗುಂಬೆ ರಸ್ತೆಯ ನಗರಸಭೆಯೊಳಗಿರುವ ರಸ್ತೆಯನ್ನು ಧೂಳುರಹಿತ ರಸ್ತೆಯನ್ನಾಗಿ ಮಾಡುವುದರ ವೆಚ್ಚವು ಸೇಕಡಾ 25 ರಷ್ಟನ್ನು ರೂಪ್ಯಾ 27,000/- ನಗರಸಭೆಯು ತೆರಬೇಕೆಂದು ನಿರ್ಣಯವಾಯಿತು. ಜಾವಟೆಗುಡ್ಡೆಯಲ್ಲಿ ನುಕ್ಕಳ ಆಟಕ್ಕಾಗಿ ಒಂದು ಹೊಯಿಗೆಕಲ ನಿರ್ಮಿಸಲು ರೂಪ್ಯಾ 1200/- ಮತ್ತು ವೆಚ್ಚ್ಸರ್ ಮಾರ್ಕೆಟಿನೊಳಗೊಂದು ಮೂತ್ರ ದೊಡ್ಡಿಯನ್ನು ಕಟ್ಟಲು ರೂಪ್ಯಾ 1600/- ಸಹ ಮಂಜೂರಾಯಿತು.

ಜಿಲ್ಲೆಯ ಸರಕಾರಿ ನೌಕರರಿಗೆ ಕನ್ನಡ ಭಾಷೆಯ ಪರಿಚಿಪ್ಪ ಜ್ಞಾನ ವಿರಬೇಕು: ದೇಶೀಯ ಭಾಷೆಗೆ ಪ್ರಾಧ್ಯಾನ್ಯತೆ ಸಿಗುವ ಈ ಕಾಲದಲ್ಲಿ ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸರ್ವಸಾಧಾರಣ ವರ್ಗವಾಗಿ ಬರುವ ಆಫೀಸರರಿಗೆ ಕನ್ನಡದ ಜ್ಞಾನವಿರುವುದಿಲ್ಲ. ಇಲ್ಲಿಗೆ ಬಂಜನಂತರ ಕನ್ನಡ ಅಕ್ಷರಾಭ್ಯಸ ಪ್ರಾರಂಭಿಸುವವರೂ ಇಲ್ಲವೆಂದಲ್ಲ. ಕನ್ನಡದ ಪರಿಚಿಪ್ಪ ಜ್ಞಾನವುಳ್ಳ ಅಧಿಕಾರಿಗಳು ನೇಮಿಸಲ್ಪಟ್ಟರೆ ಆಡಳಿತವು ಸುಗಮವಾಗಿ ಸಾಗುವುದು. ಬಡಜನರು ಹೆಚ್ಚಾಗಿ ಬರುವ ಮುನಿಸಿಪಾಲಿಟಿ ಆಸ್ಪತ್ರೆಗಳಲ್ಲಿ ಅವರಿಗುಂಟಾಗುವ ಕಷ್ಟ ಹೇಳತೀರದಾಗಿದೆ. ಮೇಲಧಿಕಾರಿಗಳು ಬಡಜನತೆಯ ದೃಷ್ಟಿಯಿಂದ ಸುಧಾರಣೆಯನ್ನೇಕೆ ಮಾಡದಿರಬಾರದು?

ನೋಟೀಸು

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ.

O. S. No. 608/1947.

ಇಸ್ಮಾಯಿಲ್ ಬ್ಯಾರಿ—ವಾದಿ.

ಮತ್ತು

ಅಬ್ದುಸ್. ಮಹಮ್ಮದ್ ಬ್ಯಾರಿ ಮಗ, ಕಾಸರಗೋಡು ತಾಲೂಕು ತಳ್ಕಿಕ್ಕರೆ ಗ್ರಾಮದ ಕೋಟಿಕುಲದಲ್ಲಿರುವವ. 2ನೇ ಪ್ರತಿವಾದಿ

ಸ್ಥಳೀಯಲ್ಲಂಡ ವ್ಯಾಜ್ಯದಲ್ಲಿ 2ನೇ ಪ್ರತಿವಾದಿಯು ನೋಟೀಸು ಕೋರ್ಟುಬೋರ್ಡಿಗೂ ಅತನ ಮನೆಗೂ ಅಂಟ್ಸ ಚ್ಯಾರಿ ಮಾಡುವರೆ ಹ್ಯುಂ ಆಗಿ ಸದ್ರಿ ವ್ಯಾಜ್ಯವು ತಾ 6-11-48ರ ಪ್ಲಾ ತನ್ಮಾಗೆ ಯಿಟ್ಟ್ ಸಂಗ್ತಿ ಈ ಮೂಲಕ ತಿಳಿಸೋಣಾಗಿಯುದೆ.

K. Ganesha Rao
ವಾದಿ ಕಡೆ ವಕೀಲ್

ಕಾಸರಗೋಡು, 24-10-48.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 310/1948

ರಾಮಗೌಡ ಕೂಡಾ—ವಾದಿರು.

ಕೊರಗಗೌಡ ಕೂಡಾ—ಪ್ರತಿವಾದಿರು

ಯೂ ದಾನೆಯ 1ನೇ ಪ್ರತಿವಾದಿ ಪುತ್ತೂರು ತಾಲ್ಲ್ಯಾ, ಕಬಕ ಗ್ರಾಮದ ಬೀರಾನಿನಲ್ಲಿರುವ ಮುದ್ದ ಗೌಡನ ಮಗ ಕೊರಗ ಗೌವ ರೀಗೆ.

ನಂಮುಮೇಲೆ ಕೂಡಾ ಮಾಡಿದ ಮೇಲಿನ ದಾವೆ, ತಾ 5-11-48ಕ್ಕೆ ನಂಮ ಹಾಜರಾತಿ ಬಗ್ಗೆ ವ್ಯಾದೆ ಆಗಿದೆ. ಆ ದಿವ್ಸ ನಂಮ ಸಾಧನೆಗಳಿದ್ದರೆ, ಮಾಡಿಕೊಳ್ಳತಕ್ಕದ್ದು. ಕಪ್ಪದ್ದಲ್ಲಿ ನಂಬ್ರ ಏಕಪಕ್ಷ ವಿಚಾರಣೆಯಿಂದ ತೀರ್ಮಾನಿಸಲಾದೀತೆಂಬ ಯೂ ಮೂಲಕ ತಿಳಿಸಿಯದೆ.

K. K. Shenai,
Vakil for Plffs.

22-10-48

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಅಗಿ

ಯೂಚೆಲ್ಲರಿಯುಗಿಯೂದೊರೆಯುತ್ತವೆ

ಕೆಳ್ಕಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ

ರೇಶನ್ ಕಾರ್ಡುಗಳೂ

ಕಾರ್ಡುಗಳಿಗೆಹಚ್ಚು ವಸ್ಟಿಪ್ಪುಗಳೂ

ದೊರೆಯುತ್ತವೆ

ನವಯುಗ ಪ್ರೆಸ್, ಉಡುಪಿ



ಅಮೃತಾಂಜನ ಲಿಮಿಟೆಡ್ ತಲೆನೋವನ್ನು ಕೂಡಲೇ ನಿವಾರಿಸಲು ಅಮೃತಾಂಜನ ಲೇಪನವನ್ನು ಹಣೆಗೆ ಹಚ್ಚಿರಿ. ಶೀತ, ಜ್ವರ, ಕೆಮ್ಮು, ಹಲ್ಲು ನೋವಿಗೆಲ್ಲಾ ಇದೊಂದೇ ಔಷಧಿ. ಕೀಲು ನೋವು, ಉಳುಕು, ಬಾವು, ಕೊಳೆತ ಹುಣ್ಣು, ಚೇಳು ಕಡಿತ ಮುಂತಾದ ಜಿಗೆ ಅಮೃತಾಂಜನ ಲೇಪನವನ್ನು ಮೊದಲಾದ ಎಲ್ಲ ಕಡೆಗಳಲ್ಲಿಯೂ ಸುಲಭ ಸಮೃತಾಂಜನ ಲಿಮಿಟೆಡ್ ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

REGD.

ಜಗತ್ತಿನಲ್ಲೆಲ್ಲಾ ಸುಮಾರು ನೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳಲ್ಲಿ ಪ್ರಸಿದ್ಧ ವೈದ್ಯರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ವಿಶೇಷವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ನಿಧಮೂಲಿಕೆಗಳಿಂದಲೇ ಶಾಸ್ತ್ರೋಕ್ತ ರೀತಿಯಿಂದ ಹೊಲ್ಲಾಂಡ್ ದೇಶದಲ್ಲಿ ಪ್ರಮುಖ ತಂತ್ರಜ್ಞನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೆಯಿಲ್ಲ. ಮೂತ್ರಕೋಶ, ಬಹುಮೂತ್ರ-ನೀಮೂತ್ರ, ಅನ್ನಕೋಶ, ಲಿಬಿಡಿಯೆ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿಮ್ಮಾರ್ಕ್ಕಿಯಂತೆ ಪ್ರತಿತಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂಡಲು ಕೈಯ, ಮೇಜವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಕಲ್ಲುಗಳು ಈ ತೈಲವನ್ನು ಸೇವಿಸುವುದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ಕಲ್ಲು ವಾದ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ಸೂರಾರು ಶಿಫಾರಸುಪತ್ರಗಳು ಲಂಡಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದರಲ್ಲಿ ಸಂದೇಹವೇನಿದೆ? ಕವಿನೋವೆ ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ ಚಿಂತೆಯಿಲ್ಲ. ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು ಹಲ್ಲುನೋವು, ಸುಕ್ಕ ಕಪೊಟ್ಟೆನೋವು, ಕಿವಿಗಳ ಉಪಶಮನವಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಸುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಮ್ಮಿತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 1-8-0 ವಿ. ಪಿ. ಚೇರ್ಜ್ ಸೇರಿಸಿ ರೂ. 30-0-0. ವಾನಿಂಗ್ ಟಿಲ್ಲಿ ಕಿಪ್ಪಲ್ ಶೀಸೆ 1ಕ್ಕೆ 3-8-0 ವಿ. ಪಿ. ಚೇರ್ಜ್. ರಜನ್ ಕಿಪ್ಪಲಿಗೆ ರೂ. 42-0-0 ವಿ. ಪಿ ಸಹಿತ ವಾನಿಂಗ್ ಟಿಲ್ಲಿ ಪ್ರೂಪರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಚೇರ್ಜ್. ಒಂಜುಡಜನ್ ಪ್ರೂಪರ್ ಬಾಟ್ಲಿಗಳಿಗೆ ರೂ. 60-0-0 ವಿಪಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18-ವಿ ಪಿ.ಮಾತ್ರ.

ಪ್ರಶಂಸನಾ ಪತ್ರ—ವಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ಏಳು ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಡಾರಿಸಿದ ರೋಗಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೀವನದಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮಸಂಜಿವಿ ನೈ ಎಂಬವರು ನಿ ಮೆಂಬರ್-ಮಾಣ್ಯಸಿಸರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಬಿ ಆಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B. B. & C. I Rly.

ಬೊಂಬಾಯಿ ಸ್ವಾಧಿಕಾರ್ಯರು:—ಅಚ್ಚನಾಲಾ ಲಿಮಿಟೆಡ್, ೨-೧, ಹಿಲ್ ಹನುಮಾನ್ ಲೇನ್, ಬೊಂಬಾಯಿ 2.



ಬಾಣಂತಿಯರ ಪರಮ ಬಂಧು
ವಾಗಿಯೂ ದೇಶ ಮತ್ತು ವಿದೇಶ ಪ್ರಸಿದ್ಧ
ಪ್ರಸೂತಿ ತಜ್ಞರಿಂದ ಪ್ರಶಂಸಿಸಲ್ಪಟ್ಟ
ನ್ನು ನಿರ್ಭೀತಿಯಿಂದ ತೆಗೆದು
ಬಿಸಲ್ಪಟ್ಟ ಅನೇಕ ಔಷ
ಧಾವಳಿ ಮಧ್ಯದಲ್ಲಿ ಅಗ್ರ
ರಸಾಯನ. ಅಲ್ಪ ಮೊ
ತ್ತದಿಂದ ಬಡವರಿಗೂ,
ಭಾಗ್ಯಶಾಲಿಗಳಿಗೂ ಸು
ಲಭವಾಗಿರುವುದು

ಈ ಔಷಧಿಯನ್ನು ಉಪಯೋಗಿಸಿದ ಅನೇಕ ಬಾಣಂತಿಯರಿಂದ ಬಂದಿರುವ ಅನೇಕ ಪ್ರಶಂಸಾಪತ್ರಗಳಲ್ಲಿ ಒಂದು ಬಾಣಂತಿಯನ್ನು ಸಾಕಾಗುವಷ್ಟು ಬಿಲ್ಲೆ ಮಾಡಿ ಬಿಡಿಗೆ ೪ ಆಣೆಗಳಿಗೆ ಬರುವಂತೆ ಬರೆದಿರುವ ಬೆಲೆಯನ್ನು ಬರೆದಿರುವುದಿಲ್ಲ.

ಎಂ.ವಿ. ಶಂಕರ್, ಆಯುರ್ವೇದ ಭೂಷಣ, ನಂ ೫ ಕೂರಿಯರ್ ಅಗ್ರಹಾರ, ಬೆಂಗಳೂರು, ಪ.ಶ

ಸ್ವಾಕಿಸ್ಥರು- ಡಾ| ಬಿ ಕೆ ಶಿವರಾಮರಾವ್, ಬಂಟ್ವಾಳ್ಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ಔ ಸ್ವಾಸ್ಥ್ಯವನ್ನೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಕೂಡಿ ಸೋರುವಿಕೆ, ಸೊಂಟನೋವು, ಕೈಕಾಲು ಬಿಡುವುದು, ಮಲಬದ್ಧತೆ, ಒಣ್ಣರ, ಇವುಗಳನ್ನೆಲ್ಲ ಸಮೂಲವಾಗಿ ಪರಿಹರಿಸಿ ಜೀರ್ಣಶಕ್ತಿಯನ್ನೂ ಕೆಟ್ಟ ಅವಯವಗಳ ದೌರ್ಬಲ್ಯವನ್ನು ಸಮೂಲವಾಗಿ ವೀರ್ಯವೃದ್ಧಿಯನ್ನೂ ಉಂಟು ಮಾಡುವುದು. ಬಾಟ್ಲಿ 1ಕ್ಕೆ ರೂ 3—8—0

ಕಸ್ತೂರಿ ಅಶ್ವಿನಿ ವಟಮೂಲ

ಇದು ಪ್ರಸವಾನಂತರ ಬಾಣಂತಿಯರ ಉದರಕ್ಕೆ ಅತ್ಯಂತ ಪ್ರಶಸ್ತವಾದ ಶಕ್ತಿವರ್ಧಕ. ಪ್ರಸವಾನಂತರ ಸವಸ್ಸು ಹೊಲಿಸಲ್ಪಟ್ಟ ಅಂಗಗಳನ್ನು ಬಲವಡಿಸಿ, ಗರ್ಭಶಕ್ತಿಯನ್ನು ಪುನಃ ತುಂಬಿಸುವುದು. ರಕ್ತ ಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಯೊಂದಿಷ್ಟು ಕೊಬ್ಬಿದೆ, ತೆಳ್ಳಗೆ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ಕ್ಕೆ ರೂ 1—1—0

ಜೈವನವಾಸವ (ಚ್ಯವನ ಪ್ರಾಶ)

ಇದು ಅತ್ಯಂತ ಶಕ್ತಿವರ್ಧಕ ರಸಾಯನ ಔಷಧಿ. ಕಫ, ಶೀತ, ಉಬ್ಬಸ, ಕ್ಷಯ ರೋಗ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಎಂಥಹ ಪಾಪು ಮೆಮಲಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡ್ 1ಕ್ಕೆ ರೂ. 5—೪—೦, ½ ಪೌಂ ೩—೦—೦

ಎಲ್ಲಾ ವಿಧದ ಆಯುರ್ವೇದೀಯ ಔಷಧಿಗಳು ದೊರಕುತ್ತವೆ

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ಸಂಖ್ಯೆ 10 ಮಂಗಳೂರು.

ಎಲ್ಲಾ ನವೀನತೆಯ ಔಷಧಗಳು ದೊರೆಯುವ ಏಕೈಕ ಸ್ಥಳ. ಬರೆದಲ್ಲಿ ತಿಳಿಗಡೆ ಉತ್ತರವಾದ ಔಷಧಿ ರವಾನಿಸಬಹುದು. (1) ಉಡುಪಿ ವಿಜಯಂಟ ಎ. - ನವಭಾರತ ಬುಕ್ ಡಿಪೊ, ಬೊಂಬಾಯಿ ವಿಜಯಂಟರು: -ಪ್ರೊಪ್ರೈಟರ್ಸ್, ಕೆಮಿಸ್ಟ್ಸ್, 183, ಸಾವಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ಸ್ ಜೋಡ್ ಸೆಂಟರ್, ಪರೇಲ್ 3) ಇಸರೇಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಉಡುಪಿಗೆ ಹೋಗಬೇಕು! ಅದರಲ್ಲಿ ಉಳಿದು ಊಟ ಮಾಡಬೇಕು!

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣ ಮಂದಿರಕ್ಕೆ ದೂರವಿಲ್ಲ!

ವ್ಯವಸ್ಥಿತವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿತ್ಯ ಸ್ನಾನ, ಊಟ, ಅಲ್ಪಾಹಾರ, ಫೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದು ಓಸೊಂದನ್ನು ಸೇವಿಸಿದರೆ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಆದರಣೀಯ, ತಂದಿತಿಸಸು, ಇವುಗಳ ಮಂತ್ರಿಯು ಬೇಕಾಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI S. Kanara.



ಎಲ್ಲ ತರದ ದಂತ ಧಾವಣಗಳನ್ನು, ಸೆಟ್ಟಿಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತವೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ದಕ್ಷಿಣ ಕನ್ನಡ

ಶಿರೂರು ಸ್ಥಳೀಯ ಜೋ. ಹಾ. ಎ. ಶಾಲೆಯಲ್ಲಿ ತಾ 9-10-48ಕ್ಕೆ ಗ್ರಾಮಾಭಿವೃದ್ಧಿ ಸಂಘದ ವತಿಯಿಂದ ಶ್ರೀ. ವಿನಾಯಕ ಕಾಮತ್ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರುಗಿ ದಾಲಾ ಪುಸ್ತಕಗಳ ಪಂಪ್ಯಾಟ ವಿವಿಧ ವಿನೋದಾವಳಿಗಳೂ ನಡೆದು ಗೆಲುವಿನ ಬಹುಮಾನ ಮಕ್ಕಳಿಗೆ ಸಂಜೆಯಾಯಿತು. ನೆರೆದ ಸಭಿಕರಿಗೆ ಸಂಘದ ಉದ್ದಿಶ್ಯವನ್ನು ವಿವರಿಸಲಾಯಿತು. ಆ ರಾತ್ರಿ ಉತ್ತಮ ಯಕ್ಷಗಾನ ಕಲಾಭಿಜ್ಞರ ಕೂಡುವಿಕೆಯಿಂದ 'ಸುಧನ್ವನ ಕಾಳಗ'ವೆಂಬ ತಾಳಮದ್ದಲೆ ಜರುಗಿತು.

ಬನ್ನಾಡಿ ಶ್ರೀ ಪರಮಹಂಸ ಪ್ರಾಥಮಿಕ ಪ್ರಾಥಮಿಕ ಶಾಲೆಯಲ್ಲಿ ವಾಡಿಕೆಯಂತೆ ನಡೆಯುತ್ತಿದ್ದ ಶ್ರೀ ಶಾರದಾಪೂಜಾ ಸಮಾರಂಭವು ಕಳೆದ ತಾ 11-10-1948ರಲ್ಲಿ ಶ್ರೀ ನರಸಿಂಹ ಸೆಟ್ಟಿ ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ವಿವಿಧ ವಿನೋದಾವಳಿಗಳು ಸ್ಪರ್ಧಕರ ಮನಸೆಳೆಯುವಂತಿದ್ದುವು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ಶಾಲೆಯು ಕ್ಷೇತ್ರದಲ್ಲಿಯೇ ಶ್ರೀಯುತ ವಿ. ಸುಬ್ರಹ್ಮಣ್ಯ ಹೆಗ್ಡೆಯವರ ಮುಂದಾಳತ್ವದಲ್ಲಿ ಒಂದು ಹೈಸ್ಕೂಲಾಗಿ ಮಾರ್ಪಡಲೆಂದು ಹರಸಿದರು.

ಪಣಂಬೂರು ತಾ 16-10-48ರಲ್ಲು ಗ್ರಾಮಸ್ವರಾಜ್ಯ ಸಭೆಯು, ಗಾಂಧಿ ಮೈದಾನದಲ್ಲಿ ಶ್ರೀ ಬಿ. ಕೆ. ವೆಂಕಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಅಂದು ಜನತಾ ಸೇವಾ ಸಂಘದವರು ಜನತೆಯಲ್ಲಿರುವ ಅಂಧವಿಶ್ವಾಸ, ದುಂದು ಗಾರಿಕೆ, ಮದ್ಯಪಾನ, ಕೋಳಿಜೂಜು, ಸಟ್ಟು ಆಡುವುದು ಇತ್ಯಾದಿಗಳಿಂದ ಸಮಾಜಕ್ಕೆ ಒದಗತಕ್ಕ ಹಾನಿಯನ್ನು ವಿವಿಧ ವಿನೋದಾವಳಿಗಳ ಮೂಲಕ ಅಡಿಹೋರಿಸಿದರು. ಸಭಿಕರಲ್ಲಿ ಜನಾಬ್ ಪಿ. ಖಾದರ್ ಸಾಹೇಬ್, ಶ್ರೀ. ಎ. ಪಿ. ಸುವರ್ಣ, ಶ್ರೀ. ಪಿ. ಪಡಿಯಪ್ಪ ದೇವಾಡಿಗ ಇವರು ಭಾಷಣಿಸಿದರು.

ಮುನಿಯಾಲು ಇಲ್ಲಿಯ ತರುಣರು ಸೇರಿ, ಹಿಂದಿ ರಾತ್ರಿ ಶಾಲೆಯನ್ನು ತೆರೆದಿದ್ದಾರೆ. ಇಲ್ಲಿ ವಯಸ್ಕರೆಲ್ಲ ಸೇರಿ, ಭಜನಾಕೂಟ, ವಾಚನಾಲಯ, ಇತ್ಯಾದಿ ಪ್ರಾರಂಭಿಸಿರುವರು.

ಪುತ್ತೂರು ಪ್ರೊಕ್ಯೂರ್‌ಮೆಂಟ್ ಕ್ರಮದಲ್ಲಿ ಆಗಬೇಕಾದ ತಿದ್ದುಪಡಿಗಳನ್ನು ಸರಕಾರದ ಗಮನಕ್ಕೆ ತರುವರೆ ತಾ 6-11-48ನೆ ಆದಿತ್ಯವಾರ ದಿನ ಅಸಾಧಾರಣ 2 ತಾಸಿಗೆ ಪುತ್ತೂರಲ್ಲಿ ಕೃಷಿಕರ ಮಹಾಸಭೆಯೊಂದು ಜರಗಲಿದೆ

ಪಡುಬಿದ್ರಿ ಸ್ಥಳೀಯ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಶ್ರೀ ಅಧಮಾರು ನರಹರಿ ಪತಿಗಳಾದ ಶ್ರೀ ವಿಭುದೇಶ ತೀರ್ಥ ಶ್ರೀ ಪಾದಂಗಳ ಅಧ್ಯಕ್ಷತೆಯಲ್ಲಿ ಶಾರದಾಮಹಾ ಜ್ಯೋತ್ಸವವು ಯಥಾ ಸಾಂಗವಾಗಿ ಜರಗಿತು.

ಕಟೀಲು ಶ್ರೀ ಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿಯ ದೇವತಾ ಮಂದಿರದಲ್ಲಿ ಹದಿನೈದನೇ ವಾರ್ಷಿಕೋತ್ಸವವು ಇದೇ ತಾ. 6-11-48ನೇ ಶನಿವಾರ ಆರಂಭ ಸಲ್ಲುತ್ತು ತಾ. 12-11-48ನೇ ಶುಕ್ರವಾರ ಮಧ್ಯಾಹ್ನ 12 ಗಂಟೆಯಿಂದ ಮರುದಿನ ಪೂರ್ವಾಹ್ನ 9 ಗಂಟೆಯ ತನಕ ಜರಗಲಿರುವ ಸಪ್ತಯಾಮದ ಶ್ರೀದೇವೀ ಸಪ್ತಾಹವು ಹೋತ್ಸವದೊಂದಿಗೆ ಅಂತ್ಯವಾಗುವುದು. ಈ ಮಹೋತ್ಸವಕ್ಕೆ ಸರ್ವರೂ ಸಂತ ಮಂಡಳಿ ಸಮೇತ [illegible] ಪಡಿಸಿ ಶ್ರೀ ದೇವಿಯ ಹಾಗು ಸಹಭಾಗಿಗಳಾಗಿ ಗಂಧತೀರ್ಥಾದಿ ಪ್ರಸಾದಗಳನ್ನು ಸ್ವೀಕರಿಸಿ, ಸದ್ಗುರು ಮತ್ತು ಶ್ರೀದೇವಿಯ ಅನುಗ್ರಹಕ್ಕೆ ಪಾತ್ರರಾಗುವಂತೆ ಹಾರೈಸಲಾಗಿದೆ.

Chitrakot Hill Herbs
For ASTAMA Cure

A most powerfull and highly effective world announced remedy which oures asthma radically in a single dose to be taken on 16-11-48 full moon night.

Apply in English to :-

SWAMI DARSHANA NANDA
AYURVEDASHRAM
P.O. CHITRAKOT U. P.

NOTICE

IN THE COURT OF THE DISTRICT MUNSIF OF KARKALA.

O. P. No. 33/1948.

1. Thulasi Bai, 2. Koraga Shenoi, 3. Sunitha Bai
4 Canapathi, 5. Subraya, Prema Bai, 7. Dathathreya, 8. Muktha Bai
Minors represented by their next-friend and father 2nd Petitioner
Petitioners.

And

Anasaya Bai. ....Respondent.

To the respondent and those who are concerned :-

Take notice that the petitioners have filed an application for the grant of a Succession Certificate in favour of 1st petitioner on behalf of the petitioners in the abovesaid court, empowering her to collect the debts mentioned in the petition as heir to her deceased son Damodar Shenoi and the said petition stands posted to 6-11-1948 for appearance of the respondent. If no objections are filed for the grant of the Certificate the same will be issued in favour of the 1st petitioner.

Karkala, 20-10-1948.

(Sd.) **K. V. Kamath,**
Advocate for Petitioners.

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ವರಾಜ್ಯ ನಡುವೆ ಸ್ಥಾಪಿತವಾಗಿ 5 ವರ್ಷಗಳಿಂದ ಡಿವಿಡೆಂಡುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಇವರ ಪ್ರಯೋಜನವನ್ನು ತಿಳಿಸುತ್ತಿರುವುದು.

The Moolky Bank Ltd.
Moolky, S. K.

ಎಲ್ಲ ತರದ
ಮುದ್ರಣ ಕೆಲಸಗಳಿಗೆ
ನವಯುಗ ಪ್ರೆಸ್
ಉಡುಪಿ

ಕಾರ್ಕಳ
ಮೂಡಬಿದ್ರೆಯ ಶ್ರೀ ಸರಸ್ವತಿ ಸೇವಾ ಸಂಘದಲ್ಲಿ ದಸರಾ ಸಾಹಿತ್ಯೋತ್ಸವ

ಕಳೆದ ವರ್ಷದಂತೆ ಈ ವರ್ಷವೂ ಮೂಡಬಿದ್ರೆಯ ಶ್ರೀ ಸರಸ್ವತೀ ಸೇವಾ ಸಂಘದ ನೇತೃತ್ವದಲ್ಲಿ ದಸರಾ ಸಾಹಿತ್ಯೋತ್ಸವವು ದಿನಾಂಕ ೭ರಿಂದ ೧೪ರ ವರೆಗೆ ೧೧ ದಿನಗಳಲ್ಲಿ ವಿಜೃಂಭಣೆಯಿಂದ ಜರಗಿತು.

ದಿನಾಂಕ ೭ರಂದು ಬೆಳಿಗ್ಗೆ ಸಂಘದ ಅಧ್ಯಕ್ಷ ಶ್ರೀ ಪಾಸುದೇವ ಪೈಗಳು ಭಾರತ ರಾಷ್ಟ್ರ ಧ್ವಜಾರೋಹಣ ಮಾಡುತ್ತಾ "ಈ ಧ್ವಜದಡಿಯಲ್ಲಿ ನಾವೆಲ್ಲ ಒಂದಾಗಿ ಬದುಕಿ ದೇಶ ಸೇವೆ ಮಾಡಬೇಕು" ಎಂದು ಹೇಳಿದರು. ಆ ಮೇಲೆ ಶಾರದಾ ಪ್ರತಿಷ್ಠೆಯ ಸಮಾರಂಭವು ಜರಗಿತು. ಗಂಟೆ ೧೦ಕ್ಕೆ ಪ್ರಬಂಧ ಸ್ಪರ್ಧೆಯೂ ೪ಂಜೆಳ ಗಂಟೆಗೆ ಭಾಷಣ ಸ್ಪರ್ಧೆಯೂ ಜರಗಿತು. ರಾತ್ರಿ ಯಕ್ಷಗಾನ ಕೂಟವೂ ಇತ್ತು.

ದಿನಾಂಕ ೮ರಂದು ಸಂಜೆ ಪ್ರಾರ್ಥನೆಯನ್ನೊಡನೆ ಕಾರ್ಯದರ್ಶಿ ಕೃಷ್ಣ ಗೋಪಾಲರು ಆತಿಥಿಗಳನ್ನೂ ಸಭಿಕರನ್ನೂ ಸ್ವಾಗತಿಸುತ್ತಾ 'ದಸರೆಯ ಕಾಲದಲ್ಲಿ ಎಲ್ಲೆಲ್ಲೂ ಸ್ಫೂರ್ತಿ ಉತ್ಸಾಹ ಉಕ್ಕಿರುವಾಗ ನಾವೂ ಉತ್ಸಾಹದಿಂದ ಕಾರ್ಯೋನ್ಮುಖರಾಗಬೇಕು' ಎಂದು ಹೇಳುತ್ತಾ ಜನರ ನೆರವನ್ನು ಕೋರಿದರು. ವಿದ್ವಾನ್ ಶ್ರೀ ರಾಮ ಮೊಳೆಯಾರರು 'ಸಾಹಿತ್ಯದ ಕಡೆಗೆ ನಮ್ಮ ನೋಟ' ಎಂಬ ವಿಚಾರದ ಕುರಿತು ಮಾತನಾಡುತ್ತಾ ಸಾಹಿತ್ಯ, ಸುಟ್ಟು ಬೆಳವಣಿಗೆಗಳನ್ನು ವಿವರಿಸಿದರು. 'ಸ್ವಾತಂತ್ರ್ಯ ಮತ್ತು ಸಾಹಿತ್ಯ' ಎಂಬ ವಿಷಯವಾಗಿ ಆ ಮೇಲೆ ಮಾತನಾಡಿದ ವಿದ್ವಾನ್ ಶ್ರೀ ಕಯ್ಯಾರ ಕಿಞ್ಞಣ್ಣ ರೈಗಳು 'ಸ್ವತಂತ್ರ ರಾಷ್ಟ್ರದ ಸಾಹಿತಿಯ ದೃಷ್ಟಿಯಲ್ಲಿ ರಾಷ್ಟ್ರಭಕ್ತಿಯಿರಬೇಕು. ಸಾಹಿತ್ಯದ ಋಜು ಮಾರ್ಗದಲ್ಲಿ ನಡೆವಾಗ ಎದುರಾಗುವ ಸುಪ್ತ ಶಕ್ತಿಗಳನ್ನು ತನ್ನ ಲೇಖನಿಯಿಂದ ಕತ್ತರಿಸಿ ಬಿಸುಟು ಮುಂದೆ ಸಾಗಬೇಕು. ಅಂತಹ ವಿದೇಗಾರಿಕೆ, ಜಾಣ್ಮೆ, ತಾಳ್ಮೆಗಳು ಅವನಲ್ಲಿರಬೇಕು' ಎಂದು ರಾಷ್ಟ್ರದ ಸ್ವಾತಂತ್ರ್ಯ, ಸಾಹಿತಿಯ ಸ್ವಾತಂತ್ರ್ಯ, ಸಾಹಿತ್ಯದ ಸ್ವಾತಂತ್ರ್ಯಗಳನ್ನು ವಿವರಿಸಿದರು. ಶ್ರೀ ತೆಕ್ಕಟ್ಟೆ ಬಾಬಣ್ಣ ಶ್ಯಾನುಭಾಗರು ತೊರವೆ ರಾಮಾಯಣದಿಂದ ವಿಭೀಷಣನ ನೀತಿಯ ಭಾಗವನ್ನು ವಾಚನ ಮಾಡಿದ ಮೇಲೆ ಇಲ್ಲಿನ ಜೈನ್ ಪ್ರೌಢಶಾಲೆಯ ವಿದ್ಯಾರ್ಥಿಗಳಿಂದ ವಿನೋದಾವಳಿಗಳಾದುವು.

ದಿನಾಂಕ ೯ರಂದು ಮೂಡಬಿದರೆಯ ಟೇಸಿಕ್ ಟ್ರೈನಿಂಗ್ ಶಾಲೆಯ ಮುಖ್ಯೋಪಾಧ್ಯಾಯ ಶ್ರೀ ಕೆ. ರಾಮಕೃಷ್ಣ ಶೆಟ್ಟಿಯವರು 'ಮೂಲ ಶಿಕ್ಷಣ'ದ ಕುರಿತು ಭಾಷಣಮಾಡಿದರು. ಬಳಿಕ ಶ್ರೀ ಎ. ರಾಮಣ್ಣ ಶೆಟ್ಟರು "ನುಡಿದ್ದನ್ನೂ ಅವನ ಕಾವ್ಯಗೂ" ಎಂಬ, ವಿದ್ವಾನ್ ಕೆ. ಕಾಂತ ರೈಗಳು ಕನ್ನಡ ಸಾಹಿತ್ಯದಲ್ಲಿ 'ಋಮಾರವ್ಯಾಸ' ಎಂಬ ಮಾತನಾಡಿದರು. ಶ್ರೀ ಎ. ರಾಮಣ್ಣ ಶೆಟ್ಟರ ಕಾವ್ಯವಾಚನವಾದ ಬಳಿಕ ಋಮಾಗೀ ಸರಸ್ವತೀ ಬಾಲಿಯವರಿಂದ ಕೀರ್ತನೆಯಾಯಿತು.

ದಿನಾಂಕ ೭ರಂದು ವಿದ್ವಾನ್ ಟಿ. ರಘುಚಂದ್ರ ಶೆಟ್ಟಿಯರು 'ಹಳೆಯ ಮತ್ತು ಹೊಸಗನ್ನಡ ಸಾಹಿತ್ಯ', ಶ್ರೀ ತಿರುಮಲೆ ಹನುಮಂತಾಚಾರ್ಯರು 'ಕಾಳಿದಾಸನೂ ರಾಕಾದ ತಲಪೂ', ವಿದ್ವಾನ್ ಕುಪ್ಪಣ್ಣಾಚಾರ್ಯರು 'ಕನ್ನಡ ಸಾಹಿತ್ಯಕ್ಕೆ ಜೈನರ ಕಾಣಿಕೆ' ಎಂಬ ವಿಚಾರಗಳ ಮೇಲೆ ಭಾಷಣಮಿತ್ತರು. ಆದು ರಾತ್ರಿ ಯಕ್ಷಗಾನ ನಾಟಕದ ಅಭಿನಯವಾಯಿತು.

ದಿನಾಂಕ ೧೦ರಂದು ಮಂಗಳೂರು ಸೈಂಟ್ ಎಲೋಸಿಯಸ್ ಕಾಲೇಜಿನ ಶ್ರೀ ಬಿ. ಭುಜಂಗರಾಯರು 'ಪ್ರಜಾ ಧರ್ಮ'ದ ಕುರಿತು ಭಾಷಣಮಿತ್ತರು. ಶ್ರೀ ಕೆ. ಕಾಂತ ರೈಗಳಿಂದ ಕವಿತಾವಾಚನವಾದ ಬಳಿಕ ಕುಮಾರಿ ವೀರವಿಯ ಭರತನಾಟ್ಯವಾಯಿತು.

ದಿನಾಂಕ ೧೧ರಂದು ನಮ್ಮ 'ಹಿಂದಿನ ಮತ್ತು ಮುಂದಿನ ಸಮಾಜ' ಎಂಬ ವಿಚಾರವಾಗಿ ಎಚ್. ನಾರಾಯಣರಾಯರು ಭಾಷಣ ಮಾಡಿದ ಮೇಲೆ ಸರಸ್ವತೀ ಪೂಜೆಯಾಗಿ ಪ್ರಸಾದ ಹಂಚಲಾಯಿತು.

ದಿನಾಂಕ ೧೨ರಂದು ಕೆ. ಸೂರ್ಯನಾರಾಯಣ ಆಡಿಗರು 'ನಮ್ಮ ಭಾಷಾ ಸಮಸ್ಯೆ' ಎಂಬ ವಿಚಾರವಾಗಿಯೂ ಶ್ರೀ ಎಸ್. ಎಸ್. ಕಿಲ್ಲೆಯವರು 'ಮಯೂರಶರ್ಮ ಕರ್ಣ' ಎಂಬ ವಿಚಾರವಾಗಿಯೂ ಭಾಷಣಮಿತ್ತರು. ಆದು 'ಮದುವೆಯ ಪರಿಪಾಟಿ' ಎಂಬ ನಾಟಕಾಭಿನಯವಿತ್ತು.

ದಿನಾಂಕ ೧೩ರಂದು ಶ್ರೀ ಬಿ. ಯು. ಇದಿನಬ್ಬರಿಂದ ಕಾವ್ಯವಾಚನವೂ, ಶ್ರೀ ಜಿ. ಪರಮೇಶ್ವರ ಭಟ್ಟರಿಂದ 'ಗದಾ ಯುದ್ಧದಲ್ಲಿ ಮಧ್ಯೋದ್ಧನನ ಪಾತ್ರ' ವನ್ನು ಶ್ರೀ ಅಪ್ಪಯ್ಯ ಬೀಳಗದ್ದಯವರಿಂದ 'ಆರ್ದ್ರ ಭಾರತೀಯ' ಎಂಬ ಭಾಷಣಗಳೂ ಆದುವು. ಆದು ರಾತ್ರಿ ಶ್ರೀ ಬಿ.ವಿ.ಬಾಳಿಗರು ತಮ್ಮ ಗಾಂಧೀ ಗೀತೆಗಳಿಂದ ಕೆಲವು ಗೀತಗಳನ್ನು ಹಾಡಿದರು.

ದಿನಾಂಕ ೧೪ರಂದು ಶ್ರೀ ಯಚ್. ಸುರೇಶ ಅವರು 'ಆಚಾರ ಸಂತ್ತು ವಿಚಾರ' ಎಂಬ ವಿಚಾರದಲ್ಲಿ ಭಾಷಣ ಮಾಡಿದ ಮೇಲೆ ಶ್ರೀ ಸೇತುರಾಮಾಚಾರ್ಯರಿಂದ ಹಾಡುಪಿಕೆ; ಶ್ರೀ ಯು ನರಸಿಂಹ ಶೇರಿಗಾರರ ವೇಣುಗಾನ ಮತ್ತು ಶ್ರೀ ಕೆ.ಪಿ. ಜಿನರಾಜರಾಜ್ಜಿಗಳ ತುಣ್ಣಾನದ ನಡೆಯಿತು. ದಿನಾಂಕ ೧೫ರಂದು ಪಂಗಳೂರಿನ ಸಿದ್ವಾನ್ ಪಿ. ಕೆ. ನಾರಾಯಣ ಅವರು 'ಕನ್ನಡ ಸಾಹಿತ್ಯಕ್ಕೆ ಮುಂಬಯಿಯ ಕಾಣಿಕೆ' ಎಂಬ ವಿಷಯವಾಗಿ ಭಾಷಣ ಮಾಡಿದ ಮೇಲೆ ಶ್ರೀ ವರ್ಧಮಾನ ರಾಸ್ತ್ರಿಗಳಿಂದ ಕಾವ್ಯವಾಚನವಾಯಿತು. ರಾತ್ರಿ ಯಕ್ಷಗಾನ ಬಯಲಾಟದ ಪ್ರದರ್ಶನವಾಯಿತು. ದಿನಾಂಕ ೧೬ರಂದು ಸಾಹಿತ್ಯ ಉತ್ಸವದ ಉಪಸಂಹಾರವು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಡಿ. ಟಿ. ಶಿರ್ಮಾ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷರು ಸ್ವಾರ್ಥಯಲ್ಲಿ ಗದ್ದಪರಿಗೆ ಬಯಸುವಾಗ ವಿಕರಣೆ ಮಾಡಿದ ಬಳಿಕ ಶ್ರೀ ಪಿ ಎಂ. ಮುತ್ತಣ್ಣನವರು ಕೊಡಗಿನ ಪರಿಚಯ ಮಾಡಿದರು. ಶ್ರೀ ಪಿ ಎಸ್. ರಾವ್ ಭಾಷ್ಯರು ಕನ್ನಡ ಸಾಹಿತ್ಯ ಸಾಧನ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಕನ್ನಡ ನಾಡಿನ ಸರ್ವತೋಮುಖವಾದ ಉನ್ನತಿಗೆ ಪ್ರತಿಯೊಬ್ಬರು ಪಡಿಯಬೇಕೆಂದೂ ಮಹಾ ಕರ್ನಾಟಕದ ನಿರ್ಮಾಣದಲ್ಲಿ ಎಲ್ಲರೂ ನೆರವಾಗಬೇಕೆಂದೂ ಕೋರಿದರು. ವಂದನೆ, ಮಂಗಳ ಗೀತೆಗಳೊಂದಿಗೆ ಸಮಾರಂಭವು ಕೊನೆಗೊಂಡಿತು.

ಶ್ರೀ ಎಂ ಪಿ ಹೆಗ್ಡೆಯವರು ಬರೆದ

ಸ್ವರಾಜ್ಯ ವಿಜಯ

ಯಕ್ಷಗಾನ ನಾಟಕ

ಪದ-ಅರ್ಥ ಸಹಿತ

ಬಟ್ಟೆ, ಕ್ರೆಪ್ಸ್, ಲೇಸ್ಸಾಂಡ್, ಸೆಫಿಲ್ ಲಾನೆಲ್ಸ್, ಜಿನ್ಸ್, ನೆಹರು, ಪಕೇಲ್, ಗಾಂಧಿ, ಜಿಜಾದ್, ಫ್ಲಾನಲ್, ಜೈ ಸ್ವರಾಜ್. ಮೌಂಟ್‌ಬೆಟನ್ ನೊದಲಾದವರೇ ಇದರ ಪಾತ್ರವರ್ಗ.

ಓದಬಲ್ಲವರಿಂದ ಓದಿ ತಿಳಿಯದವರಿಗೆ ಕತೆ. ಓದಲಾರದವರೂ ಓದಿಸಿ ಕೇಳಬಹುದಾದ

ಬೆಲೆ ಬರೀ ೦ ೩ ೦

ಹತ್ತಾಣೆ ಸ್ಟಾಂಪು ಕಳಿಸಿದರೆ 1 ಪ್ರತಿಯನ್ನು ಬಂಕ್‌ಪೋಸ್ಟ್ ವ್ಯವಹಾರದಲ್ಲಿ ಕಳಿಸಬಹುದು.

ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ, ಲಕ್ಷ್ಮಿ ನಾರಾಯಣ ಪ್ರೆಸ್, ಉಡುಪಿ

ಇಲ್ಲಿ ಪೂರೈಯುತ್ತಾರೆ.

— ಮಕ್ಕಳನ್ನು ಹಡೆಯುವುದು ಸಾಕು —

ಅತಿಶಯ ಸ್ತ್ರೀಯರಿಗೆ ರೋಗ ಗೃಹಸ್ಥ ಜೀವನ ಮಕ್ಕಳಿಗೆ

ಬರ್ಥ ಕಂಟ್ರೋಲ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಆಲ್ಲದೆ ಸ್ತ್ರೀಯರ ಬಿಳಿಕೇಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಬೆಲೆ:—ಹರಿವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು:—ಪಾಲಪ್ಪಾ ಭಕೇರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ.

ವಿಜಯದಲ್ಲಿ:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ ಡಾವಣಗೆರೆ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕಮಿಸ್ಸ, ಜಾವೂರಿ ಬ್ಯಾಡಗಿ.

ಗೊನೊರೀಯಾ ಪರಮಾರೋಗ ಉಳ್ಳ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಕರಾರದಿಂದ ಕೇವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವ್ ಶರೀರದ ಹೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಖಾಯವಾಗಿದ್ದರೆ, ..ಚಟ್ಟಿ ಬಿದ್ದಿದ್ದರೆ, ಉಸ್ಣದಿಂದ ಹೇರು ಇಳದಿದ್ದರೆ, ಉಡುಜು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ಸಡುಸೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕ್-ಟು ಗರ್ಭಿಣಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವ ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ನ್ಯಮಾಣ ಔಷಧ ಅರ್ಧಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ನೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ೪ನೆಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇನಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ನೀರದ್ದಲ್ಲಿ ಜೀನತ್ತಿನಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮಾರ, ಕುಂಬಳಕಾಯಿ, ಬೆಳ್ಳಗ್ಡೆ ಬಿಡಬೇಕು.

ಬಾಟ್ಲಿ ೦ಕ್ಕೆ ಕರೂ. ಪೋಸ್ಟ ಚಾರ್ಜ ೪ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರೆ-೦ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ವೀರಣಸಿದ್ಧಪ್ಪ ಪಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಯನ್ನೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ

ಹೆರಿಗೆ ಆದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ ಕಾರಣವಿಷ್ಟೆ. ಹರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಅತಿಸ್ಯಕವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸಡೇಳೆಗೆ ಯಾ ಅದರ ಆಂಶ ಉಳಿದು ವಿಷ ಬರುತ್ತದೆ, ನಂಜೇರುತ್ತದೆ. ಎಷ್ಟೇಕ್ತ ಸಾವ ಯಾ ಸಾವ ಸಮೀಪ ಉಂಟಾಗುತ್ತದೆ. ಇದರಿಂದ ಪ್ರಬಲಪಸ್ಸನ್ನು, ಮಲವಿರೋಧ, ಸ್ವಸನಗಳ ಬೇನೆ, ಸಿಪ್ರಾನಾಸ್ಸ, ವಾಂತಿ ಆಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ಕಟಿಟೋರುತ್ತವೆ ವೈದ್ಯ, ಡಾಕ್ಟರು ಸರ್ಜನರಿ ನರಿಗೆ ಕರೆಸಿ ನೂರಾರು ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಆ ಮೇಲೂ ಪೈಕೇಟ್ಟೆ ಎಂಬು ಅದೃಷ್ಟ ಪರೀಕ್ಷೆ!

ಆದರೆ ಬಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸವ ವರ ಪ್ರಸೂತಾಮೃತ'ದ ೧ ಬಾಟ್ಲೆ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ಇವುಗಳನ್ನು ಪಂಡಾಗಿ ತಂದಿಟ್ಟು, ಪಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯ ವಿಪತ್ತು-ವಿಪತ್ಕುಗಳಿಗೆ ಅಂಜಬೇಕಾಗಿಲ್ಲ.

ಕವಸೀಯ ಕಾರ್ಕಳದ, ತಂಪು ಮುಮಳು, ರುಚ್ಯ ಸೇತ್ರಗಳನ್ನು ಹೊಂದಲು ಬಯಸುವವರಿಗೆ ಆನುಲಕೇ ಕೈಲಿ ಯಾ ಹಿಮುಸಾಗರ ಕೈಲ್ಕಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

C. M. Kelu Nambiar,

Vaidya.

ಸ್ವೀಕಾರ-ವಿಮರ್ಶೆ

"ಭಾರತದ ರಾಜ್ಯ ಘಟನೆಯ ಕರಡು"—ಧಾರವಾಡದ ಇಕಿತಾಬ ಮಿನಾರ ಪ್ರಕಾಶನದ ಸಂಪಾದಕರಾದ ಶ್ರೀ ಶಂಕರ ಕುರ್ತಕೋಟಿಯವರು ಭಾರತದ ರಾಜ್ಯ ಘಟನೆಯ ಕರಡನ್ನು ಕನ್ನಡದಲ್ಲಿ ಪ್ರಕಟಿಸಿ ಈ ವಿಷಯದ ಅಭ್ಯಾಸ ಮಾಡಲಿಚ್ಛಿಸುವವರಿಗೆ ನೆರವಾಗಿದ್ದಾರೆ. ಈ ಕರಡು ಆಂಗ್ಲ ಭಾಷೆಯಲ್ಲಿ ಕೆಳದ ಫೇಬ್ರುವರಿ ತಿಂಗಳಲ್ಲಿ ಪ್ರಸಿದ್ಧವಾದಂದಿನಿಂದ ಜನತೆಯ ಎದುರಿಗಿದ್ದರೂ ಆ ಭಾಷೆ ಅರಿಯದವರಿಗೆ ಈ ವಿಷಯವನ್ನು ತಿಳಿಕೊಳ್ಳುವ ಅನುಕೂಲತೆ ಇರಲಿಲ್ಲ. ನಿಜವಾಗಿ ನೋಡಿದರೆ ಸರಕಾರದವರೇ ಈ ಕಾರ್ಯವನ್ನು ಕೈಕೊಳ್ಳಬೇಕಾಗಿದ್ದಿತು. ಆದರೆ ಕಾರಣಾಂತರಗಳಿಂದ ರಾಷ್ಟ್ರ ಭಾಷೆಯಾದ ಹಿಂದಿಯಲ್ಲಿಯೂ ಕೂಡ ಕರಡಿನ ಭಾಷಾಂತರ ಪ್ರಸಿದ್ಧವಾಗಲು ಸುಮಾರು ೬ ತಿಂಗಳುಗಳು ಹಿಡಿದನಂದ ಮೇಲೆ ಪ್ರಾಂತ ಭಾಷೆಗಳಲ್ಲಿ ಆದು ಸರಕಾರದಿಂದಾಗಲಿಲ್ಲವೆಂಬುದರಲ್ಲಾಶ್ಚರ್ಯವಿಲ್ಲ. ಆದ್ದರಿಂದ ಕಿತಾಬ ಮಿನಾರ ಪ್ರಕಾಶನದವರು ಇದನ್ನು ಕೈಕೊಂಡಿದ್ದು ನಿಜವಾಗಿಯು ಅಭಿನಂದನೀಯವು

(೨) ಕರಡಿನ ಅನುವಾದದಲ್ಲಿ ಕೆಲವು ಕ್ಲಿಷ್ಟ ಭಾಗಗಳನ್ನು ಬಿಟ್ಟರೆ ಉಳಿದ ವಿಷಯವು ಒಟ್ಟಿನಲ್ಲಿ ಸರಿಯಾಗಿದೆಂದು ಹೇಳಬಹುದು. ಸಂಪಾದಕರಾದ ಶ್ರೀ ಕುರ್ತಕೋಟಿಯವರು ಬರೆದ ಪ್ರಸ್ತಾವನೆಯು ಓದುಗರಿಗೆ ವಿಷಯವನ್ನು ಮಾರ್ಮಿಕವಾಗಿ ಅಭ್ಯಾಸ ಮಾಡಲು ಸಹಾಯಕವಾಗಿದೆ. ಘಟನಾ ಸಮಿತಿಯ ಕನ್ನಾಟಕ ಪ್ರತಿನಿಧಿಗಳಾದ ಶ್ರೀ ದಿವಾಕರ ರಂಗರಾಯರೇ ಇದಕ್ಕೆ ಮುನ್ನುಡಿ ಬರೆದಿದ್ದಾರೆ. ಆದ್ದರಿಂದ ಈ ಪ್ರಕಾಶನಕ್ಕೆ ಹೆಚ್ಚಿನ ಮಹತ್ವವಿದೆ. ಮುನ್ನುಡಿಯಲ್ಲಿ ಹೇಳಿದಂತೆ ಈ ಪುಸ್ತಕವು ಕೇವಲ ಕನ್ನಡ ಜನತ್ರ ಬಲ್ಲವರಿಗೆ ರಾಜ್ಯಘಟನೆಯಂಥ ಒಂದು ಮಹತ್ವದ ವಿಷಯ ಸರಿಯಾಗಿ ಅರ್ಥಮಾಡಿಕೊಳ್ಳಲು ಅವಕಾಶ ಕಲ್ಪಿಸಿ ಕೊಟ್ಟಿದೆ. ಇಂಥ ವಿಷಯಗಳನ್ನು ಓದುವವರೇ ನಮ್ಮಲ್ಲಿ ಕಡಿಮೆ. ಅವರಲ್ಲಿಯೂ ಇಂಥ ವಿಷಯದ ಪುಸ್ತಕಗಳನ್ನು ಕೊಂಡುಕೊಂಡು ಅಭ್ಯಾಸ ಮಾಡುವ ವರೆಂತೂ ಮತ್ತಷ್ಟು ಕಡಿಮೆ. ಇದು ಗೊತ್ತಿದ್ದರೂ ಕಿತಾಬ ಮಿನಾರದವರು ಕೇವಲ ಕನ್ನಡಿಗರ ಸೇವೆಯಂತೇ ಕೈಕೊಂಡು ಇದನ್ನು ಪ್ರಕಾಶಿಸುವರೇ ಹೊರತು ಪುತ್ರೇಷಣೆಯಲ್ಲ.

(೩) ಹಿಂದುಸ್ತಾನ ಬಿಟ್ಟು ಹೋಗುವಾಗ ಬ್ರಿಟಿಷರು ಆಪರೆ ಆಡಳಿತೆಯನ್ನು ಹಿಂದೀಯರಿಗೊಪ್ಪಿಸಿ ಹೋದರೆಂದು, ಸಾಮಾನ್ಯವಾಗಿ ಹೇಳಬಹುದು. ಆದರೆ ನಿಜವಾಗಿ ನೋಡಿದರೆ ಅಖಂಡ ಭಾರತದ ಜನಸಂಖೆಯಲ್ಲಿ ೪೨-೪೩ ಕೋಟಿ ಆದರೆ ಏದರಲ್ಲಿ ನಾಲ್ಕು ಪಾಲು ಭಾರತೀಯರ ಭವಿತವ್ಯ ರಚಿಸುವ ಹೊಣೆ ಕಾಂಗ್ರೆಸ್ಸಿಗೂ ೭-೮ ಕೋಟಿ ಆಂದರೆ ಇದರಲ್ಲಿ ಒಂದು ಪಾಲು ಜನರ ಆಗು ಹೋಗುಗಳನ್ನು ರೂಪಿಸುವ ಜನಾಬದ್ಧಾರಿಯನ್ನು ಮುಸ್ಲಿಮ್ ಲೀಗಿಗೂ ಒಪ್ಪಿಸಿ ಬ್ರಿಟಿಷರು ಹೋದರೆಂದು ಹೇಳುವದು ಯಥಾರ್ಥವಾದೀತು. ಹೀಗಿರುವದರಿಂದ ಒಕ್ಕೂಟ ಭಾರತದ ಭವಿಷ್ಯವೆಲ್ಲ ಕಾಂಗ್ರೆಸ್ಸಿನ್ನೇ ಕೂಡಿದೆ. ಆದನ್ನು ಕಾಂಗ್ರೆಸ್ಸು ಸಾಧ್ಯವಿದ್ದ ಎಲ್ಲ ಮಾರ್ಗಗಳಿಂದ ಜನ ಹಿತಕಾರಿಯಾಗಿ ನಿರ್ವಹಿಸುತ್ತಿದೆ. ಮುಂದಾದರೂ ನಿರ್ವಹಿಸುವಲ್ಲಿ ಸಂದೇಹವಿಲ್ಲ. ಆದಾಗ್ಯೂ ಕಾಂಗ್ರೆಸ್ಸಿನ ಸೂತ್ರಧಾರಿಗಳ ಗಮನಕ್ಕೆ ಕೆಲ ಮಾತುಗಳನ್ನು ತಾಲ ಕಾಲಕ್ಕೆ ತಂದು ಕೊಡುವದು ಅನಿವಾರ್ಯ ಮತ್ತು ಅವಶ್ಯವಿರುತ್ತದೆ.

(೪) ಕರಾಚಿ ಕಾಂಗ್ರೆಸ್ಸಿನಲ್ಲಿ ಪಾಸಾದ ಮೂಲಭೂತ ಹಕ್ಕುಗಳ ಪ್ರಸ್ತಾವನೆಯಲ್ಲಿ ಆಡಕವಾಡ ಹಲವು ತತ್ವಗಳು ಮತ್ತು ರಾಜ್ಯ ಘಟನೆಯ ಕರಡಿನಲ್ಲಿರುವ ಹಲವು ವಿಷಯಗಳು. ಇವುಗಳಲ್ಲಿ ಯಾವ ವ್ಯತ್ಯಾಸವಿಜೆ ಎಂಬದನ್ನು ಶ್ರೀ ಕುರ್ತಕೋಟಿಯವರು ಒಂದೆರಡು ಉದಾಹರಣೆಗಳಿಂದ ತೋರಿಸಿ ಕೊಟ್ಟಿರುವರು ಹೀಗೆ ಕಿತಾಬ ಮಿನಾರವನ್ನೇನಿದರೆ ಹೊಸ ಮತ್ತು ಹಳೇ ದಿಲ್ಲಿಗಳೆರಡನ್ನೂ ಹೇಗೆ ಏಕ ಕಾಲಕ್ಕೆ ಕಾಣಬಹುದೋ ಹಾಗೆಯೇ ಕಿತಾಬ ಮಿನಾರದ ಹೊಸ ಪ್ರಕಾಶನದ ಪ್ರಸ್ತಾವನೆಯಿಂದ ಕರಾಚಿಯಲ್ಲಿ ೧೯೫೦ರಲ್ಲಿ ಪ್ರಜ್ಞಿತವಾದ ತತ್ವಗಳು ಮತ್ತು ರಾಜ್ಯ ಘಟನೆಯ ಕರಡಿನಲ್ಲಿಯ ಕೆಲವು ವಿಷಯಗಳು ಇವುಗಳಲ್ಲಿರುವ ವ್ಯತ್ಯಾಸ ಕಂಡುಹಿಡಿಯಬಹುದು. ಆ ದೃಷ್ಟಿಯಿಂದ ಕಿತಾಬ ಮಿನಾರದ ಈ ಪ್ರಯತ್ನವು ಉಪಯುಕ್ತವಾಗಿದೆ. ಭಾಷಾಂತರದಲ್ಲಿ ಉಂಟಾದ ಕೆಲ ಕ್ಲಿಷ್ಟ ವಾಕ್ಯಗಳನ್ನೂ, ಅನುವಾದ ಮಾಡುವ ಕಾಲಕ್ಕೆ ಸಂಭವಿಸಿದ ಹಲವು ದೋಷಗಳನ್ನೂ ಮುಂದಿನ ಆವೃತ್ತಿಯಲ್ಲಿ ಸರಿಪಡಿಸಿದರೆ ಈ ಪುಸ್ತಕವು ಉಪಯೋಗ ವಿತೀಪವಾಗುವದು.

ರಮಾಕಾಂತ, ಗೋಳಿಕೇರಿ,
ಹುಬ್ಬಳ್ಳಿ.

ಬಳ್ಳಾರಿಯಲ್ಲಿ ಶ್ರೀ ಕಿಲ್ಲೆಯವರು

ಬಳ್ಳಾರಿ ನಾಡಹಬ್ಬ ಸಮಿತಿಯವರ ಆಹ್ವಾನದಂತೆ ಇಲ್ಲಿಗೆ ಆಗಮಿಸಿದ್ದ ಶ್ರೀಮಾನ್ ನಾರಾಯಣ ಕಿಲ್ಲೆಯವರು ನಾಡಹಬ್ಬದ ಕೊನೆಯ ದಿನದ ಭಾಷಣಕಾರರಾಗಿ "ಮಹಾಭಾರತದಲ್ಲಿ ಕರ್ಣ" ಎಂಬ ಕುರಿತು ಮಾತನಾಡಿದರು. ಬಳ್ಳಾರಿಯು ಕನ್ನಡದ ಪ್ರೇಮಿಗಳಷ್ಟೇ ಅಲ್ಲದೆ ಆಂಧ್ರ ಭಾಷಾ ಕೋವಿದರೂ ಅನೇಕರು ಬಂದಿದ್ದರು. ಎರಡು ಘಂಟೆಗಳ ಕಾಲ ಮಾಡಿದ ಇವರ ಭಾಷಣವನ್ನು ನೆರೆದ ಸಭಿಕರು ಕದಲದೆ ಸದ್ದಿಲ್ಲದೆ ಕಣ್ಣು, ಕಿವಿಗಳನ್ನೊಂದುಮಾಡಿ ಏಕಾಗ್ರತೆಯಿಂದ ಕೇಳುತ್ತಿದ್ದುದನ್ನು ನೋಡಿದರೆ ಅಖಂಡ ಸಭೆಯನ್ನು ಒಂದೇ ಕಾಲದಲ್ಲಿ ತನ್ನ ಕಡೆಗೆ ಎಳೆದುಕೊಂಡ ಇವರ ವಕ್ತೃತ್ವದ ವೈಶಿಷ್ಟ್ಯವು ಅರ್ಥವಾಗುತ್ತದೆ. ಸುರಾಪ್ಯವನ್ನು ನುಡಿಗಟ್ಟು, ಅಪ್ಸೇ ಅಲ್ಲ ಸತ್ಯ ತ್ಯಾಗ ಮತ್ತು ಸಾಹಸಗಳ ಮೂರ್ತಿಯೆಂಬ ರೂಪದಲ್ಲಿರುವ ಕರ್ಣನಿಗೆ ಹುಟ್ಟು, ಬೆಳವು, ಬಡುಕು, ಮತ್ತು ಸಾವುಗಳಲ್ಲಿ ಎಲ್ಲೆಡೆಯಲ್ಲಿಯೂ, ಎಲ್ಲಾ ಬಗೆಯಲ್ಲಿಯೂ, ಬಂದ ಪ್ರತಿಕೂಲ ಪರಿಸ್ಥಿತಿಗಳನ್ನು ವಿವರಿಸಿ ತನ್ನ ಧರ್ಮವನ್ನು ಆಪ್ರತಿಹತವಾಗಿ ಸಾಗಿಸಿ ಕೊನೆಗೂ ಅಮರನಾಗಿ ನಿಂತ ಭಾರತದ ಆಸಮಾನಾಯಕ ಕರ್ಣನ ಚಿತ್ರವನ್ನು ಎಲ್ಲರ ಕಣ್ಣಮುಂದೆ ಭವ್ಯವಾಗಿ ನಿಲ್ಲಿಸಿದ್ದಾರೆ.

ತಾ 13-10-48ನೇ ಬುಧವಾರ ಸಂಜೆ ಮುನಿಸಿಪಲ್ ಹೈಸ್ಕೂಲಿನ ವಶಾರದಲ್ಲಿ "ಸೌತ್ ಕೆನರಾ ಎಸೋಸಿಯೇಶನ್" (South Canara Association)ನವರ ಆಶ್ರಯದಲ್ಲಿ ನೆರೆದ ಬಹುದೊಡ್ಡ ಸಭೆಯಲ್ಲಿ "ಭಗವಾನ್ ಶ್ರೀ ಕೃಷ್ಣ" ಎಂಬ ಕುರಿತು ಶ್ರೀ ಕಿಲ್ಲೆಯವರು ಎರಡುವರೆಘಂಟೆ ಸಾಬಿಷವಾಗಿ ಮಾತಾಡಿದ್ದಾರೆ. ಶ್ರೀಕೃಷ್ಣನವಿಷಯದಲ್ಲಿ ಸಂಪ್ರದಾಯಬದ್ಧರಿಗೂ, ಸುಧಾರಕರಿಗೂ ಇರುವ ಅಭಿಪ್ರಾಯ ಭೇದಗಳನ್ನು ಸುಮನೋಜ್ಞವಾಗಿ ವಿವರಿಸಿದ್ದಾರೆ. ಸುಧಾರಕರು ಹೇಳುವ (ಜಾರ-ಚೋರ, ಕುಹಕ) ಆಪಾದನೆಗಳಿಗೆ ಪುರಾಣ, ಹಾಗೂ ಶಾಸ್ತ್ರಗಳ ಆಧಾರದಿಂದ ಸಮಾಧಾನವನ್ನು [illegible] ವಾಯಶೀಲರಿಗೆ ತಮ್ಮ ತೊಡಕು ಬಿಡಿಸುವ ದಕ್ಕಾಗಿ ಪುರಾಣಾಂತರಗಳಲ್ಲಿ ಅವಿತಿರುವ ಅನೇಕಾನೇಕ ಆಧಾರಗಳನ್ನು ಪ್ರಕಟವಾಗಿ ತೋರಿಸಿದ್ದಾರೆ. ಕೃಷ್ಣನು ಅವತಾರಿಯಲ್ಲ-ಪೂರ್ಣನು ಎಂಬುದನ್ನು ಸಮಂಜಸವಾಗಿ ತೋರಿಸಿಕೊಟ್ಟಿದ್ದಾರೆ. ಇತರ ಭಾಷಣಗಳನ್ನು ಕೇಳಿದ ಇಲ್ಲಿಯ ಕನ್ನಡ ಆಂಧ್ರರಲ್ಲಿ ಕರ್ನಾಟಕದ ಮಹಾಭಾರತ, ಭಾಗವತಗಳನ್ನೇ ಆಧಾರವಾಗಿಟ್ಟು ಪೂರ್ವಯೋಗವಾಗಿ, ಹಾಗೂ ಸಹೇತುಕವಾಗಿ ಮತ್ತು ಸುಬೋಧವಾಗಿ ವಿವರಿಸಿದ ರೀತಿಯು ಹೊಸ ಮಾದರಿಯಾಗಿ ಎಲ್ಲರ ಮೆಚ್ಚುಗೆಯನ್ನು ಪಡೆದಿದೆ. ಈ ರೀತಿಯ ಸಹಜ ಕನ್ನಡದ ಪ್ರತಿಷ್ಠಾಪನೆ ಪ್ರಚಾರವು ಕನ್ನಡದ ಗಡಿಸೀಮೆಯಾದ ಬಳ್ಳಾರಿಯ ಪ್ರಾಂತದಲ್ಲಿ ಬಹಳ ಅಪೇಕ್ಷಣೀಯವಾಗಿರುತ್ತದೆ.

'ಕ್ಷೇಶ ಕಲಾ' ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್., ಬೆಟ್ಟು.	0	3	0
ಸಂಶಯ ಪಿಶಾಚಿ	(ನಾಟಕ)	ಕ. ಕೆ. ಶೆಟ್ಟಿ.	0	8	0
ಕುಶಲವ	(,,)	,,	0	6	0
ವ್ಯಭಿಚಾರಿಣಿ ಯಾರು	(,,)	,,	1	0	0
ಹೆಂಡ್ತಿ ಗಂಡನಾದರೆ	(ಪ್ರಹಸನ)	,,	0	4	0
ಸನ್ಯಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಸಣ್ಣ ಕತೆಗಳು)	ಕೊಡಪ್ಪಳ್ಳಿ	0	14	0
ಭಾರತೀಯ ಕತೆಗಳು	(,,)	,,	0	14	0
ಮೂರು ಪ್ರಹಸನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್. ಎಲ್. ಸುಬ್ರಹ್ಮಣ್ಯಂ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜ.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾಕಾಮಿನಿ	(ಕವಿತೆಗಳು)	ಎಸ್. ವೆಂಕಟರಾಜ	2	0	0
ಸಪ್ತಸಾಗರ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಪರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	4	0
ನಗೆನೋಟಗಳು	(ವಿನೋದ ಕತೆಗಳು)	ಕೆ. ವಿಟ್ಠಲ ಶೆಣೈ	0	14	0
ಅನ್ನದೇವರು ಮತ್ತು ಇತರ ಕತೆಗಳು		ಕಯ್ಯಾರ ಕಿಞ್ಞಣ್ಣ ರೈ	1	0	0
ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು		(ವಿಡಂಬನೆ) ಎಂ. ವಿ ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯಕ್ಷಗಾನ ನಾಟಕ)	,,	0	8	0
ಸ್ವಾತಂತ್ರ್ಯವೀರ ಸಾವರಕರರು	(ಜೀವನ ಚರಿತ್ರೆ)	ಇಂದಿರಾಬಾಯಿ	1	4	0
ಜೀವನಸಂಗ್ರಾಮ	(ನಾಟಕ)	ಪಿ. ತೀನ ಶೆಟ್ಟಿ	1	8	0
ಜವಿನ್ದಾರ	(ಕಾದಂಬರಿ)	ಹೊನಮಸನ ಗುಡ್ಡಪ್ಪ	1	8	0

ಪ್ರತಿಗಳಿಗೆ:—

ನವಭಾರತ ಪುಸ್ತಕ ಭಂಡಾರ, ಉಡುಪಿ ಸ. ಕ.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'
ಕಾಸರಗೋಡು

ಇವರ ತಯಾರಿಕೆಗಳನ್ನೇ ಉಪಯೋಗಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI. S. INDIA.

Regd. No M. 3693 ಎರಡಾಣೆ 4-11-1948

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4-8-0
೬ ತಿಂಗಳಿಗೆ ರೂ. 2-8-0
ಪ್ರತಿ ಪ್ರತಿಗೆ ರೂ 0-1-6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಪ್ರತಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯ | NAVAYUGA WEEKLY, UDIPI, S. K. | Vol. 29
ವಾರ ೧೦ | FOUNDER: Hon'ble Mr. A. B SHETTY, Health Minister, Govt. of Madras. | No. 10

ಡಾ। ಪಟ್ಟಾಭಿ ಅಧ್ಯಕ್ಷತೆ

ಡಾ। ಪಟ್ಟಾಭಿ ಸೀತಾರಾಮಯ್ಯನವರು ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟುದರಿಂದ ವಿಜಾರಿಸತಕ್ಕ ಅಂಶಗಳೆಷ್ಟೆ.

ಅಖಿಲಭಾರತದ ವಿವಿಧ ಕಾಂಗ್ರೆಸ್ ಸಮಿತಿಗಳಿಂದ ಡಾ। ಪಟ್ಟಾಭಿಗಳಿಗೆ ದೊರೆತ ಮತಗಳು 1199; ಅವರ ಪ್ರತಿಸ್ಪರ್ಧಿ ಶ್ರೀ ಪುರುಷೋತ್ತಮದಾಸ ಠಂಡನರಿಗೆ ದೊರೆತ ಮತಗಳು 1051. ಹೀಗಾಗಿ ಪಟ್ಟಾಭಿಗಳು ಗೆದ್ದುದು ಕೇವಲ 114 ಬಹುಮತಗಳಿಂದ. ಕಾಂಗ್ರೆಸಿನ ಹಿರಿಯ ಕಾರ್ಯಕರ್ತರಲ್ಲೊಬ್ಬ – ದೀರ್ಘಾನುಭವಿಯಿಂದ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯ--9 ವರುಷಗಳ ಮೊದಲೇ ಶ್ರೀ ಸುಭಾಷ್‌ಚಂದ್ರ ಬೋಸರಿಗಿದಿರಾಗಿ ಗಾಂಧೀಜೀ ಸಮೇತ ಎಲ್ಲಾ ಕಾಂಗ್ರೆಸ್ ನಾಯಕರಿಂದ ಆ ಸ್ಥಾನಕ್ಕೆ ಶಿಫಾರಸು ಪಡೆದಿದ್ದು ಈ ಬಾರಿಯೂ ಈಗಿನ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರ ಸಮರ್ಥನೆಗಳಿದ್ದ ಜನ--ಡಾ। ಪಟ್ಟಾಭಿಗಳಿದಿರಲ್ಲಿ ಈ ತನಕ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಸದಸ್ಯನೇ ಆಗಿರದ ಶ್ರೀ ಠಂಡನರು ಇಷ್ಟು ಹೆಚ್ಚಿನ ಮತಗಳಿಸಿಕೊಂಡುದೇ ವಿಶೇಷ ಹೊರತು ಅವರು ಸೋತುದರಲ್ಲಿ ಆಶ್ಚರ್ಯವಿಲ್ಲ.

ನಾಯಕನಾಗತಕ್ಕವನಲ್ಲಿ ಕ್ಷಮೆ, ದಮೆ, ಔದಾರ್ಯ, ಶುದ್ಧ ಹೃದಯ, ಸಾರ್ವಜನಿಕ ಸಲುಗೆಯಿರಬೇಕಾದುದು ಜಾತುರ್ಯ, ಕಾರ್ಯಶಕ್ತಿ, ಆಜ್ಞೆಯಿರಬೇಕಾದಷ್ಟೇ ಅಗತ್ಯವೆಂಬುದಕ್ಕೆ ಡಾ। ಪಟ್ಟಾಭಿಗಳ ಜನಪ್ರಿಯತೆಯ ಮಂದಗಾಮಿತ್ವವೊಂದು ನಿದರ್ಶನ.

ಕಾಂಗ್ರೆಸ್ ಅಧ್ಯಕ್ಷನನ್ನು ವೋಟಿನಿಂದಾರಿಸಲಾಗುವ ಕ್ರಮ ನಿಯಮಗಳು ಕಾಂಗ್ರೆಸ್ ನಿಬಂಧನೆಯಲ್ಲಿದ್ದರೂ ಆ ಅಗ್ರಪೂಜೆಯೆಂಬುದು 'ಕಾಂಗ್ರೆಸಿಗೆ ದೀರ್ಘಾವಧಿಯ ಸೇವೆ ಸಲ್ಲಿಸಿರುವ ಹಿರಿಯ'ರಿಗೆ ಕೊಡುವ ಅತ್ಯುಚ್ಚ ಗೌರವವಾಗಿರುವುದರಿಂದ ಆದು ಸರ್ವಸಮ್ಮತಿಯಿಂದಾಗುವ ಕ್ರಮವೇ ಬಳಕೆಯಲ್ಲಿದ್ದಿತು.

ಸತ್ಯಸ್ಥಿತಿಯೆಂದರೆ ಕಳದ ಮೂವತ್ತು ವರುಷಗಳಲ್ಲಿ ಮಹಾತ್ಮಾಗಾಂಧಿಯವರಿಂದ ನಾಮಕರಣ ಸಡೆದವರೇ ಕಾಂಗ್ರೆಸ್ ಅಧ್ಯಕ್ಷರಾಗುತ್ತಾ ಬಂದಿದ್ದರು. ಇದಕ್ಕೆ ಅಪವಾದವೆಂದರೆ 1939ರಲ್ಲಿ ನಡೆದಿದ್ದ ಪಟ್ಟಾಭಿ-ಸುಭಾಸ್ ಸ್ಪರ್ಧೆ. ಆ ದಿ ಆದು ಒಂದು ವಿಶೇಷ ಘಟನೆಯಾಗಿ ನಡೆದು ಹೋಗಿದ್ದಿತು ಹೊರತು ಆದು ಸಂಪ್ರದಾಯವಾದೀತೆಂಬ ಊಹೆಗವಕಾಶ ಕೊಟ್ಟರಲಿಲ್ಲ

ಗಾಂಧಿಜೀ ಮಡಿದ ಮರು ವರುಷವೇ ಪಟ್ಟಾಭಿ-ಠಂಡನರಂಥವರು ಸ್ಪರ್ಧಿಸಿ ಕೊಂಡುದನ್ನು ಕಾಣುವಾಗ ಗಾಂಧಿಜೀಯೊಂದಿಗೆ ಕಾಂಗ್ರೆಸಿನ 'ಏಕಾಗ್ರತಾ ಸಿಯಮ'ವೂ ಹೊರಟು ಹೋಯಿತೇ ಎಂಬ ಸಂದೇಹ ಬರುತ್ತದೆ. ಮಾತ್ರವಲ್ಲ; ಕಾಂಗ್ರೆಸ್ ಸಂಸ್ಥೆಯೊಳಗಿನ ಭಿನ್ನ ಭಿನ್ನ ಭಿಪ್ರಾಯಗಳನ್ನು ಈತನಕ ಒಂದೇ ಸೂಡಿಯಾಗಿ ಬಿಗಿದಿಟ್ಟ ಕಟ್ಟು ಕಡಿದು ಹೋಯಿತೇ ಎಂದೊಂದು ಜಾಗರೂಕತೆ ಮೂಡುತ್ತಿದೆ.

ಬೋಸ್-- ಪಟ್ಟಾಭಿ ಸ್ಪರ್ಧೆಯಲ್ಲಿ ಕಾಂಗ್ರೆಸಿನೊಳಗಿನ ಎಡ--ಬಲ ಪಕ್ಷಗಳೊಳಗಿನ ಘರ್ಷಣೆಯಿದ್ದಿತು ಹೊರತು ಅದಕ್ಕಿಂತ ಕಡಿಮೆಯ ಸಂಕುಚಿತ ತತ್ವವಾವುದೂ ಮುಂದೆಬಂದಿರಲಿಲ್ಲ. ಅಭಿಪ್ರಾಯ ಸ್ವಾತಂತ್ರ್ಯಕ್ಕವಿರಲೇಬೇಕಾದ ಪ್ರಜಾಸತ್ತಾತ್ಮಕ ಕಾಂಗ್ರೆಸಿನಲ್ಲಿ ಇಂತಹ ಆರೋಗ್ಯಾಯ ಮಂಥನ ನಡೆದುದಕ್ಕಾಗಿ ಯಾರೂ ಪಶ್ಚಾತ್ತಾಪಪಟ್ಟರಲಿಲ್ಲ. ಆದರೆ ಪಟ್ಟಾಭಿ-ಠಂಡನ್ ಸ್ಪರ್ಧೆಯಲ್ಲಿ ಪ್ರಾಂತೀಯತಾ ಭಾವನೆ, ತಂತಮ್ಮ ಶಾಲಡಿಗೆ ಳಿದುಕೊಳ್ಳುವ ದುರಭಿಮಾನ ಕೆಲವಂ (ಮಿ ತಿಮ್ಮೀ ರೆ ದೆ)ನಾದರೂ ತೋ ಬಂದದ್ದು ಸಜ್ಜನ್ಯವಲ್ಲ.

ಇನ್ನು ಪಟ್ಟಾಭಿ ಅವಧಿಯ ಮುಂದಿನ ಒಂದು ವರುಷದ ಸಂಭವಗಳೇನು, ಯಾವ ವಿಧದ ಸಮಜಾಯಿಸುವಿಕೆ ಅಧಿನಾ ವಿಳಂಬವನ್ನಾದರೂ ಸಹಿಸದ ಉತ್ಸಾಹಿ ಗಾಂಧಿಗಳ ನಾಯಕ ಡಾ.ಪಟ್ಟಾಭಿ. ಕಾಂಗ್ರೆಸ್ ಸಂಸ್ಥೆಯು ಭಾಷಾನುಗುಣ ಪ್ರಾಂತ್ಯರಚನೆಯನ್ನು ಎಂದೋ ಒಪ್ಪಿಕೊಂಡಿದ್ದು ತನ್ನ ಮಟ್ಟಿಗೆ ವ್ಯವಹಾರ ರಂಗಕ್ಕೂ ಆದನ್ನು ಳಿಸಿಕೊಂಡಿರುವುದರಿಂದ ಡಾ। ಪಟ್ಟಾಭಿಗಳು ಆ ಕುರಿತೆಂತಹ ಛಲತೊಟ್ಟರೂ ಅದು ಕ್ರಮವಿರುದ್ಧವಾಗುವಂತಿಲ್ಲ. ಆದರೆ ಭಾರತ ಕೇಂದ್ರಾಧಿಕಾರಿಗಳಿಗೆ ಭಾಷಾವಾರು ಪ್ರಾಂತ್ಯರಚನೆಯನ್ನು ಕೆಲವು ವರುಷಗಳ ಪರ್ಯಂತವಾದರೂ ಹಿಂದೆ ಹಾಕಬೇಕೆಂಬ ಆಲೆಯಿದೆಯೆಂಬುದು ಖಂಡಿತ.

'ಭಾಷಾನುಗುಣ ಪ್ರಾಂತ್ಯರಚನೆಯು ಸಂಕುಚಿತ ಪ್ರಾಂತ್ಯಾಭಿಮಾನದ ಬೆಳವಣಿಗೆಗೆ ಅನುಕೂಲವೆಯೊದಗಿಸಿ ಕೇಂದ್ರವನ್ನು ದುರ್ಬಲಗೊಳಿಸಬಹುದು' ಎಂಬ ಭೀತಿಯೇ ಭಾರತಸರಕಾರದ ಸೂತ್ರಧಾರಿಗಳನ್ನು ಸಂಶಯಗೀಡು ಮಾಡಿದೆ. ಡಾ. ಪಟ್ಟಾಭಿಗಳ ನೇತೃತ್ವದಲ್ಲಿ ನ್ಯಸ್ಥಿತ ಕಾಂಗ್ರೆಸ್ ಸಂಘಟನೆಯೇ ಈ ಅನವೇಕ್ಷಿತ ಪ್ರಾಂತ್ಯಾಭಿಮಾನವನ್ನುತಮ್ಮ ಇದಿರಿಗೊಡ್ಡಬಹುದೋ ಎಂದವರೀಗ ನಿರೀಕ್ಷಿಸುತ್ತಿರಬಹುದು.

ಕೇಂದ್ರ ಹಾಗೂ ಪ್ರಾಂತೀಯ ಸರಕಾರಗಳ ಕೆಲಸಗಳ ಮೇಲ್ವಿಚಾರಣೆ ನಡೆಸಲಾಗುವಂತೆ ಕಾಂಗ್ರೆಸನ್ನು ಪುನರ್ಘಟಿಸಿ ಕೊಳ್ಳುವದು ಹೇಗೆಂಬುದೇ ಮುಂದಿನ ದಿನಗಳಲ್ಲಿ ಕಾಂಗ್ರೆಸಿನ ಮುಂದಿರುವ ಸಮಸ್ಯೆ. ಶಾಸನ ಸಭೆಗಳಲ್ಲಿರುವ ಕಾಂಗ್ರೆಸ್ ಪಕ್ಷಗಳಿಗೆ ನಿರ್ದೇಶಕತ್ವವೆಷ್ಟು, ಸಲಹೆ ಕೊಡುವ ಕೌಂಟಿಂಬಿಕ ಹಿರಿಯನಾಗಿ ಕಾಂಗ್ರೆಸ್ ಇರಬೇಕು"-ಎಂದು ತಾನು ಅಧ್ಯಕ್ಷನಾಗಿ ಆರಿಸಲ್ಪಟ್ಟೊಡನೆ ಡಾ। ಪಟ್ಟಾಭಿಗಳಂದಿದ್ದಾರೆ. ಕೇಂದ್ರ ಸರಕಾರೀ ನಾಯಕರ ವರ್ತನೆಗಳಿಂದಾಗಿ ಕಾಂಗ್ರೆಸಿನ ಅಂತಹ ಸ್ಥಾನ ಕಳೆದುಹೋಗಿದೆ ಎಂದೇ ಹಿಂದಿನ ಅಧ್ಯಕ್ಷ ಆಚಾರ್ಯ ಕೃಪಲಾನಿಗಳು ರಾಜೀನಾಮೆಯೊಪ್ಪಿಸಿದ್ದರು. ಅಂತಹ ಸಂದರ್ಭಗಳಲ್ಲಿ ರಾಜಿಕೂಡದೆ, ಹಠಹಿಡಿದು ಸಾಧನೆಗೆ ನಿಲ್ಲುವ ಅಧ್ಯಕ್ಷರು ಡಾ। ಪಟ್ಟಾಭಿಗಳೆಂಬುದನ್ನು ಈ ಸಂದರ್ಭದಲ್ಲಿ ಮರೆಯಬಾರದು.

ಕಾಂಗ್ರೆಸ್ ಅಧ್ಯಕ್ಷ ಮತ್ತವರೇ ರಚಿಸಿಕೊಳ್ಳುವ ಕಾರ್ಯಕಾರೀ ಸಮಿತಿಯು ಅಭಿಪ್ರಾಯ ಹೇಗಾದರೂ ಅ. ಭಾ. ಕಾ. ಸಮಿತಿ ಮತ್ತು ಇಡೀ ಕಾಂಗ್ರೆಸ್ ಸಂಸ್ಥೆಗೆ ನೆಹರು, ವಲ್ಲಭಭಾಯಿಗಳ ಮಾತೇ ಶಾಸನದಂತಿರುವುದರಿಂದಲೂ, ಎಂತಹ ಸಂದರ್ಭದಲ್ಲಾದರೂ ದೇಶದ ಏಕತೆ ಸಾಧನೆಯೊಂದೇ ಎಲ್ಲರ ಮುಖ್ಯ ಗುರಿಯಾಗಿರುವುದರಿಂದಲೂ ಗಣ್ಯ ಪ್ರಮಾದವಾವುದೂ ನಡೆಯಲಾರದೆಂದು ಭರವಸೆ ಪಡಬಹುದು.

ನಿಮ್ಮ ಆಯ್ಕೆ

'ಪ್ರಭಾತ್'

ಚಹಾ ಮತ್ತು ಕಾಫಿ

ಆರಿಸಿದ

ನೀಲಗಿರಿ ಚಹಾ ಮತ್ತು ಕಾಫಿ

Blended & Packed by:-

PRABHAT
TEA & COFFEE (INDIA Ltd.)
COONOOR R. S. (Niligiris)

ನಿಮ್ಮೂಮಾಡಲಿಕ್ಕೆ ಯಾ ಹ್ಯಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಸ್ಥಳೀಯ ಕಾರ್ಯಾಲಯಗಳು—ಧಾರವಾಡ,
THE UNITED KARNATAK INSURANCE COMPANY, LIMITED.

ಪ್ರಾಯ 74ರ ಸರ್ದಾರ್!



ಸರ್ದಾರ್ ವಲ್ಲಭಾಯಿ ಪಟೇಲರು ಇದೇ ತಾ 31-10-48ರಲ್ಲಿ 74ನೇ ಪ್ರಾಯಕ್ಕೆ ಬಂದಿದ್ದಾರೆ. ಪ್ರಾಯದೊಂದಿಗೆ ಪಂಥ ಪರಾಕ್ರಮ ಮತ್ತು ಪ್ರಭಾವ ಬೆಳೆಯುತ್ತಾ ಬಂದ ಅಪೂರ್ವನಾಯಕರಲ್ಲಿ ಸರ್ದಾರರು ಒಬ್ಬರು. ಹಲವು ಸಂಕಟ ಮತ್ತು ಸಮಸ್ಯೆಗಳಿದಿಂಗಿರುವ ಭಾರತವು ಇವೆಲ್ಲವನ್ನೂ ಕಡೆಹಾಯಲೆಲ್ಲನೆಂಬ ಭರವಸೆಯಿಂದಿರುವದು ಈ 74ರ ಸರ್ದಾರನೊಬ್ಬ ಇದ್ದಾನೆಂಬುದರಿಂದಲೇ!

ಶ್ರೀ ವಲ್ಲಭಾಯಿ ಜವೇರಿಭಾಯಿ ಪಟೇಲರು ಗುಜರಾತಿನವರು; 1875ನೇ ಒಕ್ಟೋಬರ್ 31ರಲ್ಲಿ ಗುಜರಾತಿನ ನಡಿಯಾದ ತಾಲೂಕಿನ ಕರಮಸಾದದಲ್ಲಿ ಇವರ ಜನನ. ವಲ್ಲಭಾಯಿಗಳ ತಂದೆ ಜವೇರಿಭಾಯಿ ದೂಡ್ಡ ರೈತ; ದ್ವಿಪ್ರತಿ ವಲ್ಲಭಾಯಿ ಎರಡನೇ ಸ್ವಾತಂತ್ರ್ಯ ಸಂಗ್ರಾಮದ ಆದ್ಯಂತವೂ ವೀರ ಸದಾನಾನಾಗಿದ್ದರೆಂಈ ಮೂಲಪ್ರಸಿ ಜವೇರಿಭಾಯಿಯೂ ಪ್ರಥಮ ಸ್ವಾತಂತ್ರ್ಯ ಸಂಗ್ರಾಮವಾದ ಸಿಪಾಯಿ ದಂಗೆಯಲ್ಲಿ ಭಾಗವಹಿಸಿದವರು. ಏದು ಗಂಡು, ಒಂದು ಹೆಣ್ಣನ್ನು ಸಡದಿದ್ದವರಿಗೆ ಜವೇರಿಭಾಯಿ. ಆ ಪಂಜಪಾಂಡವರ ವೈಕಿ, ಹಿಂದೆ ಕೇಂದ್ರ ಎಸೆಂಬ್ಲಿ ಅಧ್ಯಕ್ಷರಾಗಿದ್ದ ಸ್ಥಾನದಿಂದಲೂ ಬ್ರಿಟಿಷ್ ಸರಕಾರಕ್ಕೆ ಎದೆನೋವನ್ನು ಒಡ್ಡಿದ್ದ ನಿರಕ್ಷರಭಾಯಿ ಮತ್ತೀ ವಲ್ಲಭಾಯಿ ಭೀಮಾಜರ್ಜನರಂತೆ ಕಾಣುತ್ತಾರೆ; ವಿಕ್ಯವರು ಅಂತಿಷ್ಟ ಪ್ರಸಿದ್ಧರಲ್ಲ. ಹಿರಿಯ ಸಹೋದರ ಸಾಮಾನ್ಯಕೀತಿಯಿಂದ ಕೊಲೆಯಾಗಿದ್ದನೆಂಬ ಸ್ಮರಣೆ ಬರುತ್ತಿದೆ ಪ್ರಥಮತಃ ವಕೀಲಿ ಪರೀಕ್ಷೆಕೊಟ್ಟು ಗೋಧ್ರಾ ಎಂಬಲ್ಲಿ ವಕೀಲಿವೃತ್ತಿ ನಡೆಯಿಸಿ, ಆ ಮೇಲೆ ವಲ್ಲಭಾಯಿಗಳು ಇಂಗ್ಲಾಂಡಿನಲ್ಲಿ ಬ್ಯಾರಿಸ್ಟರ್ ಪರೀಕ್ಷೆಯನ್ನೂ ಕೊಟ್ಟಿದ್ದರು. ಆವರು ಕ್ರಿ ವಿನಲ್‌ನಲ್ಲಿ ಪ್ರಸಿದ್ಧ ವಕೀಲ. ಶುದ್ಧ ಬ್ರಿಟಿಷ್ ಉಡುಗೆ ತೊಡುಗೆ ಮತ್ತು ಮೆಜೆಸ್ಟಿಯ ಬ್ಯಾರಿಸ್ಟರ್ ವಲ್ಲಭಾಯಿಗಳಿಗೆ ಅದಿಭಾಗದಲ್ಲಿ ಅಹಿಂಸಾವಾದಿ ಗಾಂಧಿಜೀಯಂದರೆ ಚರ್ಚಿಲ್ಲರಷ್ಟೇ ಜಿಗುಪ್ಸೆ; ರಾಜಕೀಯ ಘಕೇರಿ ಗಾಂಧಿಯವರ ಸಹಪಂಗ್ತಿಯಲ್ಲಿ ಮಂಡಿಸುವದು ಕೂಡಾ ಅವಮಾನಕರವೆಂಬಷ್ಟು ಜಂಭವಿತ್ತು. ಆದರೆ ನಿಜ ಮಾನುಷತ್ವವಿದ್ದ ಯಾವ ಹೃದಯದ ಬಾಗಿಲು ಎಷ್ಟೇ ಭದ್ರವಿದ್ದರೂ ಅದನ್ನು ತಟ್ಟಿತಟ್ಟಿ ತೆರೆಯಿಸಿ ಒಳಗೆ ಪ್ರವೇಶಿಸುವ ಚೇತನ ಗಾಂಧಿಜೀಯ ಉಪದೇಶಗಳಿಗಿತ್ತು; ಅದಕ್ಕೆ ವಲ್ಲಭಾಯಿ ಹೃದಯ ಹೊರತಾಗಲಿಲ್ಲ ಮಹಾತ್ಮರ ಆತಿದೊಡ್ಡ ವಿಜಯಗಳಲ್ಲೊಂದು ಎನ್ನಲಾಗುವಂತೆ ಅವರು ವಲ್ಲಭಾಯಿ ಹೃದಯವನ್ನೂ ಗೆದ್ದುಕೊಂಡರು. 1919-20ರ ಸ್ವಾತಂತ್ರ್ಯ ಸಂಗ್ರಾಮದಾರಂಭದಲ್ಲೇ ವಲ್ಲಭಾಯಿ ಪಟೇಲರು ಮಹಾತ್ಮಾ ಗಾಂಧಿಯವರ ನಿಷ್ಠಾವಂತ ಅನುಯಾಯಿಯಾಗಿದ್ದರು; ವಕೀಲೀ ಬಿಟ್ಟು ರಾಷ್ಟ್ರಯೋಧ್ಯಕ್ಕೆ ಪಟಿಸಿದ್ದರು.

ಬಹುಮುಖೀ ಹೋರಾಟ

ಆ ಮೇಲೆ ಸರ್ದಾರರ ಜೀವನವು ದಿನಕ್ಕೊಂದು ರಾಷ್ಟ್ರೀಯ ಕಾರ್ಯಕ್ಷೇಲ ಬಿಡುವ ಕಲ್ಪನೈಕ್ಷನಾಗಿ-ಯಾವ ಕೊಡಲಿಯೂ ತಾಗದ ಕಬ್ಬಿಣವ ಕಂಭದಂತೆ ಯೂ-ಬೆಳೆಯುತ್ತಾ ಬಂದಿದೆ. 1919ರಲ್ಲಿ ಕೈರೋ ಸತ್ಯಾಗ್ರಹ, 1922ರಲ್ಲಿ ಬೋರ್ಸಾದ ಸತ್ಯಾಗ್ರಹ, 1923ರಲ್ಲಿ ನಾಗಪುರ ಸತ್ಯಾಗ್ರಹ,-ಇತ್ಯಾದಿಗಳ ಮೂಲಕ ಹೆಜ್ಜೆ ಹೆಜ್ಜೆಗೂ ಪರಕೀಯರೊಡಳತೆಯಿದಿರು ಅಗ್ರಹ ಮಾರ್ಚಿಯಾದರು. 1928ರಿಂದ 28ರ ವರೆಗೆ ಅಹಮ್ಮದಾಬಾದ್ ನಗರದ ಸಭಾಧ್ಯಕ್ಷನಾಗಿದ್ದು ಅದನ್ನೊಂದು ಮಾದರೀ ನಗರವಾಗಿ ನೂಡಲು ಪ್ರಯತ್ನಿಸುವ ಮೂಲಕ ಅಲ್ಲಿಯೂ ತನ್ನ ವಿಶೇಷ ವ್ಯಕ್ತಿತ್ವವನ್ನು ತೋರಿಸಿದ್ದರು. ಆ ಹೊರತು ಶಾಸನಸಭೆ ಅಧವಾ ಬೇರಾವುದೇ ಸರಕಾರೀ ಕಾಯಿದೇ ಮಂದಿರದೊಳಗೆ ಅವರು ಕಾಲಿಟ್ಟವರಲ್ಲ. ಜನತಾಂಗವೊಂದೇ ಆ ಕಾಲದಲ್ಲಿ ಅವರಿಗೊಗ್ಗುತಿದ್ದ ಕ್ಷೇತ್ರ. 1926ರ ಗುಜರಾತಿನ ನೆರೆಪೀಡಿತರಿಗೆ ಗ್ರಾಮಗ್ರಾಮ ತಿರುಗಿ ರೈತರನ್ನು ಕಪ್ಪಪ್ರವಾಹದಿಂದೆತ್ತಿದಡಕ್ಕೆ ತಿರುವ ಕಾರ್ಯ ಪಟೇಲರಿಂದಾಯಿತು. ಈ ನೆರೆಯೇ 1929ರಲ್ಲಿ ಅವರಿಂದ ಯಿದ್ಧಕರೆ ಹೊರಡಿಸಿತು. ಸಾಗುವಳ್ಳಿನೆರೆಸೀರ ಪಾಲಾಗಿದ್ದರೂ ಆ ವೇಗಾನೀರನ್ನೇ ಕೃಷ್ಣಾರ್ಪಣವೆಂದು ಭಾವಿಸಿ ತಾನು ತಯಾರಿಸಲೆಂದು ಸರಕಾರ. ಯಾವ ಸಂಧಾನವೂ ನಡೆಯಲಾರದೆಂದಾದೆಂಡಿನ ಬಾರ್ಡೋಲಿ ತಾಲೂಕಿನಲ್ಲಿ ವಲ್ಲಭಾಯಿಗಳು ತೀರ್ವೆ ನಿರಾಕರಣ ಚಳವಳಿಹೂಡಿದರು. ಆ ಚಳವಳದಲ್ಲಿ ಎಂತಹ ಸಂಘಟನೆ ಮತ್ತು ಶಕ್ತಿಯನ್ನು ನಿರ್ಮಿಸಿದ್ದರೆಂದರೆ ತೀರ್ವೆ ಹಣಕ್ಕಾಗಿ ಏಲಮಿಗೆ ಬಿದ್ದ ಆಸ್ತಿಗಳನ್ನು ಪಹಿಸಿಕೊಳ್ಳುವವರೆಂತೂ ಇರಲಿಲ್ಲ--ಒಮ್ಮೆ ನೆರೆಯೇ ತುಂಬಿದ್ದ ಆ ತಾಲೂಕಿನಲ್ಲಿ ಆಸ್ತಿಹಿಡಿಯಲುಬಂದ ಅಧಿಕಾರಿಗಳಿಗೆ ತಟಕು ನೀರು ಕೂಡಾ ಸಿಗುತ್ತಿರಲಿಲ್ಲ. ಸರಕಾರವು ಸೋತು ರಾಜೀ ತೀರ್ವಾನಕ್ಕೊಪ್ಪಿದಮೇಲೆಯೇ ಬಾರ್ಡೋಲಿ ಸತ್ಯಾಗ್ರಹವಿಂತಿತ್ತು. ಪಟೇಲರು 'ಬಾರ್ಡೋಲಿ ನೀರ್'ರಾದರು. 'ಸರ್ದಾರ್'ಪಟೇಲ್' ನಾಮಕರಣವು ಆಗಲೇ ತನ್ನ ಶಿಷ್ಯನಿಗೆ ಗುರು ಮಹಾತ್ಮರಿಂದಾದುದು.

ರಾಷ್ಟ್ರ ನಾಯಕ

ಕಾಂಗ್ರೆಸಿನ ಪ್ರತಿಯೊಂದು ಸ್ವಾತಂತ್ರ್ಯ ಯುದ್ಧದಲ್ಲೂ ಪ್ರಮುಖ ಸೇನಾನಿಗಳಲ್ಲೊಬ್ಬರಾಗಿ-ದೃಢತೆ ಮತ್ತು ತೀಕ್ಷ್ಣತೆಯ ಮಟ್ಟಿಗೆ ಆದ್ವಿತೀಯ ಯುದ್ಧ ನಾಯಕನಾಗಿ-ಪಟೇಲರು ರಾಷ್ಟ್ರವನ್ನು ಮುನ್ನಡೆಯಿಸಿಕೊಂಡು ಬಂದಿದ್ದಾರೆ. 1934ರ ಕರಾಚಿ ಕಾಂಗ್ರೆಸಿನ ಅಧ್ಯಕ್ಷ ಸ್ಥಾನವು ಇವರಿಗೆ ದೊರೆತಿದ್ದಿತ. ಶಾಸನ ಸಭೆಗಳಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮಾರ್ಗದರ್ಶನ ಕೊಡುವ 'ಪಾರ್ಲಿಮೆಂಟರೀ ಸಮಿತಿ' ಇವರದ್ದೇ ಆಗಿತ್ತು. ಸ್ವಾತಂತ್ರ್ಯಾನಂತರ ಸಂಪುಟ ರಾಷ್ಟ್ರದ ಬಂಧನ ಬಿಡುಗಡೆಯಾಗುವ ವರೆಗಿನ ಇವರ ಆಯುಷ್ಯದ ಹೆಚ್ಚಿನಂಶ ಬಂಧನದಲ್ಲೇ ಕಳೆದಿದ್ದಿತು. ವಲ್ಲಭಾಯಿ ಉಕ್ಕಿನ ಮನುಷ್ಯ; ಅಭೇದ್ಯ ಹೃದಯ.. ಚುರುಕು ತಲೆ, ಸ್ಪಷ್ಟ ನಿಲುಗಳ ಮನುಷ್ಯ ಭೀತಿ, ಸಂಧಿಗ್ಧತೆ, ಸಂದೇಹ, ಶಂಕೆ-ತಾಪತಾಪಗಳಾವುದೂ ಸರ್ದಾರರ ನಿಘಂಟುವಿನಲ್ಲೇ ಇಲ್ಲ. ಅವರು ಆಡಿದಂತೆ ಮಾಡುವವರು, ಮಾಡಿದಾಗುವವನ್ನು ಮಾತ್ರ ಆಡುವವರು ರಾಷ್ಟ್ರದ ಸೂತ್ರಧಾರಿಗಳ ಗುಂಪಿನಲ್ಲಿ ಸರ್ದಾರರಿರುವ ವರೆಗೆ ಯಾವ ಭ್ರಮಾದನ್ನೂ ಆಗಲಾರದು; ಆಪತ್ತಿನ, ಆಜಗರೂಕತೆಗೆ ಹಾಗೂ ಬಯಲಾಟೆಯ ಸೆಸೆಯಿಂದ ಕೆಲಸ ಕೆಟ್ಟೆಲ್ಲಾ ಎಂದು ಪಶ್ಚಾತ್ತಾಪಪಡುವಂತಹದೇನೂ ಆಗದು-ಎಂದು ಖಂಡಿತ ಭರವಸೆಯಿಡಬಹುದು.

ಉಳುಕುಬೀಳದ ಕೈಬಾಯಿ!

ಸ್ವತಂತ್ರಭಾರತದ ಜೋಕಟ್ಟನೊಳಗಡೆಯಲ್ಲೇ ಅಶ್ರಿತರಾಜರ ಕೆರೀಟಗಳನ್ನು ಕೆತ್ತಿಸಿಕೊಳ್ಳಬೇಕಾದರೆ ಯಾವುದಕ್ಕೆ ಏನುಬೇಕೋ ಅದನ್ನು ಕೊಡುವ ವಿದ್ಯೆ ಸರ್ದಾರರಿಗೆ ಗೊತ್ತಿತ್ತು; ದಯೆಮತ್ತು ದಂಡ ಎರಡನ್ನೂ ತೋರಿಸಿ-ಕೊಚ್ಚಿ, ಮೈಸೂರುಗಳಂಥವರ ಬೆನ್ನ ಮೇಲೆ ಕೈಯಾಡಿಸಿದೆಂತೆಯೇ ಜುನಾಗಾಡ್, ಹೈದರಾಬಾದುಗಳಂಥವರ ಎದೆ ಹೊಟ್ಟೆಯಮೇಲೆ ಮುಷ್ಠಿಯಾಡಿಸಿ---ಸಂಸ್ಥಾನಗಳನ್ನು ಸಮಗ್ರ ಭಾರತದೊಂದಿಗೆ ಸೇರಿಸಿ ಕಟ್ಟಿದ ಭೂನೊಗ ಸರ್ದಾರ್ ಪಟೇಲ್! 'ಹೀಗಾಗುತ್ತದೆ!' ಎಂದು ಸರ್ದಾರರೊಮ್ಮೆ ಹೇಳಿ, ಆದನ್ನು ಮಾಡಲೆದ್ದರೆಂದರೆ ಆದು ಕಾರ್ಯರೂಪದೆದ್ದು ಪ್ರತಿಫ್ಟಸಿಸಿಯೇ ಬಿಡುತ್ತದೆ. ನೆಹರುಗಳ ಭಾವುಕತೆಯಿಂದ-ಅಜಾದರ ಬುದ್ಧಿ ಭಾರದಿಂದ-ರಾಜೇಂದ್ರ ಪ್ರಸಾದ್‌ರ ಸೌಜನ್ಯದಿಂದ-ಈ ಜಾಣಜಯ ಆತಿ ಜಾಣ್ಮೆಯಿಂದ-ಒಂದು ರಾಷ್ಟ್ರೀಯ ಕೆಲಸವು ಇದರ ಜೋಕಟ್ಟನಲ್ಲಿ ಆಜೆ ಈಜೆಗೋರೆಯಾಗುವ ಸಂಭವವಿರಬಹುದು; ಆದರೆ ಅದನ್ನು ಅಲ್ಲಿಯೇ 'ಗಜ್ಜಾ'ಸ್ಲಿಸಲು ಕಾರ್ಯಶಕ್ತಿಯೇ ಕಾರ್ಯವೆಸ್ಕಂತಿರುವ ಸರ್ದಾರರ ಕೈಯಿದೆ. ಭಾರತಶ್ಕಿಂತಕ್ಕೆ ಬಗುವಿನ ಜನ-ಉಕ್ಕಿನಮನುಷ್ಯ-ಸರ್ದಾರ-ಉಪಪ್ರಧಾನಿ ನುತ್ತು ಗೃಹ ಹಾಗೂ ಸಂಸ್ಥಾನಾಬೆಯ ಮಂತ್ರಿಯಿದ್ದಾನೆ; ಭಯವಿಲ್ಲ. ಈಗ 74ನೇ ವರುಷಕ್ಕೆ ಬಂದಿರುವ ಸರ್ದಾರರು ಚಿರಾಯುವಾಗಲಿ!

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟಿ ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು,ನಮ್ಮ ಶಾಖೆಗಳಿರುವಲ್ಲಿ ರಬಿಮುಗಳ ಪಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳ್ಪಟ್ಟಿದೆ. ಪೋನೆಸಿಜದಂತಿರುವ ನಮ್ಮ ಶಾಖೆಗಳು ದಪ್ಪಿಣದ ಆರಳೆಯ ಕ್ಷೇತ್ರಗಳಲ್ಲಿ-ತಮಿಳುನಾಡಿನ ಆಕ್ಕಿ ಮತ್ತು ನಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ, ವೃಕ್ಷನಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಬಿಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸತಿರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಗು ಕನಲತ್ತುಗಳು ಸುಲಭವಾಗಿ ನಮ್ಮವಿಶಿಷ್ಟ ಅವಶ್ಯಕತೆಗಳಿಗೆ ಜೊಂದಿಸಿಕೊಳ್ಳಬರುತ್ತದೆ. ಅದರಿಂದ ನಿಮಗೆ ಸಮಯವೂ, ಹಣವೂ ಉಳಿವುದು. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಬಿಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶಿಕ್ಷಣ ಲಕ್ಷ್ಯ ಜೊರೆಯುವುದು

The Canara Bank Limited.

ESTD: 1906.

ವಿವಿಧ ಪಾತ್ರೆಗಳು



ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಂ ಆಗಿ ಯೂಚಿಲ್ಲರೆಯಾಗಿಯೂದೊರೆಯುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ರೇಶನ್ ಕಾರ್ಡುಗಳೂ

ಕಾರ್ಡುಗಳಿಗೆಹಚ್ಚುವಪ್ಲಿಪ್ಪುಗಳೂ

ದೊರೆಯುತ್ತವೆ

ನವಯುಗ ಪ್ರೆಸ್, ಉಡುಪಿ.

ಬ್ರಿಟನ್ ಅಮೆರಿಕಗಳ ಮೇಲೆ ಸ್ಟಾಲಿನರ ವಾಗ್ಬಾಣ!

'ಬ್ರಿಟಿಷ್ ಅಮೆರಿಕನರು ಆಕ್ರಮಣಶೀಲರು' 'ಸಮರ ಪ್ರಚೋದಕರ ಮುಖಂಡ ಚರ್ಚಿಲ್'

ಆಧುನಿಕ ಸ್ಥಿತಿಗತಿಗಳು ಜಾಪ್ರಗತಕರಲ್ಲಿ ಎಂತಹ ವೇದನೆಯನ್ನು ನಿರ್ಮಿಸಿವೆ ಎಂಬುದಕ್ಕೂ, ಏನಿಲ್ಲೆಂದರೂ ಪ್ರಪಂಚವು ಯಾವ ರೀತಿ ಹೊಸ ಹಾದಿ ಹಿಡಿದಿದೆ ಎಂಬುದಕ್ಕೂ ಕಳದ ವಾರದ ಮೂರು ಪ್ರಾಮುಖ್ಯ ವಾಗ್ಧೂಲಗಳನ್ನು ನಿದರ್ಶನವಾಗಿ ಉಲ್ಲೇಖಿಸಬಹುದು. ಲೋಕದ ಇಂದಿನ ರಾಜಕೀಯ ರಂಗದ ಕೃಕೋನವೆಂಬಂತಿವೆ ಈ ಮೂರು ಹೇಳಿಕೆಗಳು; ಜಗತ್ತಿನ 'ಬಿಗು ಮನುಷ್ಯರು' ಮೂವರ ಈ ಮೂರು ವಿಧದ ವಾಗ್ಬಾಣಗಳು. ಒಂದು ಸ್ಟಾಲಿನರಿಂದ-ಮತ್ತೊಂದು ಚರ್ಚಿಲ್ಲಿಂದ

ದ-ಮೂರನೆಯದು ವಕ್ಷಿಣಾಯಿಗಳಿಂದ. ಮೂವರೂ ಲೋಕ ನಕಾಶೆಗೆ ಬಳಯಲಾಗುವ ಒಂದೊಂದು ರಾಜಕೀಯ ಬಣ್ಣದ ಒಂದೊಂಬ್ಬಕುಂಚಗಳೇ. ಅದ್ದರಿಂದ ಅವರ ಅಭಿಪ್ರಾಯಗಳು ವಿಚಾರಣೀಯವೇ.

ಸ್ಟಾಲಿನ್ ವಾಗ್ಬಾಣ

ನೋವಿಯೆಟ್ ರಶ್ಯದ ನಾಯಕ--ಪ್ರಧಾನ ಮಂತ್ರಿ-ಜೋಸೆಫ್ ಸ್ಟಾಲಿನರು ಕಾರ್ಯಮೂಲಶಕ್ತಿಯೇ ಮನಸ್ಸನ್ನು ಹೊರಗೆಡಹುವ ಮೂಕ ಮೂರ್ತಿಯೆಂದು ಜಗತ್ತು ತಿಳಿದಿರುವವರು. ಒಂದು ರಾಷ್ಟ್ರದ ಅಧಿಪತಿಯಾಗಿದ್ದು ಅತಿಕಡಿಮೆ ಮಾತಿನಿಂದಲೇ ಎಷ್ಟೋ ಸಮಸ್ಯೆಗಳನ್ನೂ ನಿರ್ವಹಿಸಬಲ್ಲರು. ರಾಜಕಾರಣಿಗಳಲ್ಲಿ ಸ್ಟಾಲಿನರನ್ನು ಸರಿಗಟ್ಟುವವರೂ ಬಹುಶಃ ವಿರಳಾತ್ಮಿಯಲ್ಲೇ ದೊರೆಯಬಲ್ಲರು. ಅವರು ಎಂದಾದರೂ ಬಾಯಿಬಿಡುವದೆಂದರೆ ಅದೂ ಒಂದುಕಾರ್ಯ--ಅನಿವಾರ್ಯ-ಎಂದು ನಿಶ್ಚಿತವಾಗಿ ಮಾತ್ರ-ಇದೇ ಒಕ್ಟೋಬರ್ ೨೮ರಲ್ಲಿ ತನ್ನ 69ನೇ ಜನ್ಮದಿನದ ಸಂದರ್ಭದಲ್ಲಿ ರಶ್ಯದ ಕಮ್ಯುನಿಸ್ಟ್ ಪಕ್ಷದ ಬಾಯಿಯಾಗಿರುವ 'ಪ್ರಾವ್ದಾ' ಪತ್ರಿಕೆಯ ಪ್ರತಿನಿಧಿಗೆ ಭೇಟಿಕೊಡುತ್ತಾ ಸ್ಟಾಲಿನರು ತನ್ನ ಹೃದಯವನ್ನು ಬಚ್ಚಿಟ್ಟಿದ್ದಾರೆ; ಅಥವಾ ತನ್ನ ಇದಿರುವಾದಿಗಳನ್ನು ಹುಚ್ಚೆದ್ದಾರೆ. ಕಳದ ಮೇ ತಿಂಗಳಲ್ಲಿ ಅಮೆರಿಕದ ಪತ್ರಿಕೆಲ್ಲಾವರ ಬಹಿರಂಗ ಪತ್ರಕ್ಕೆ ಉತ್ತರ ಕೊಟ್ಟ ನೇಲೆ ಸ್ಟಾಲಿನರು ಸಾರ್ವಜನಿಕ ಹೇಳಿಕೆ ಕೊಟ್ಟುದು ಇದೇ. ಬ್ರಿಟಿಷ್ ಅನೇರಿಕಗಳಲ್ಲಿ ಅವೇಶವನ್ನೆಬ್ಬಿಸಿರುವ ಅವರ ಮಾತುಗಳ ಸಾರ ಹೀಗಿದೆ: "ಇತ್ತೀಚೆಗೆ ತಾನೇ ನಡೆದಿದ್ದ ಯುದ್ಧದ ಭೀಕರತೆಯು ಜನತೆಯ ಮನಸ್ಸಿನಲ್ಲಿ ಅಚ್ಚಳಿಯದುಳಿದಿದೆಯಲ್ಲವೆ. ಶಾಂತಿಗನುಕೂಲವಿರುವ ಸಮಾಜ ಶಕ್ತಿಗಳು ಎಷ್ಟು ಪ್ರಬಲವಿರುವವೆಂದರೆ ಆಕ್ರಮಣಕ್ಕೆದ್ದಿರುವ ಚರ್ಚಿಲ್ ವಿದ್ಯಾರ್ಥಿಗಳಿಗೆ ಅವುಗಳನ್ನು ಗೆಲ್ಲುವದಾಗಲೀ, ಒಂದು ಹೊಸ ಯುದ್ಧದಕಡೆಗೆ ಅವುಗಳ ಮುಖವಿರುಗಿಸುವದಾಗಲೀ ಸಾಧ್ಯವಾಗದು. ಭದ್ರತಾ ಕೌನ್ಸಿಲಿನಲ್ಲಿ ಬರ್ಲಿನ್ ಪ್ರಶ್ನೆಯಕುರಿತು ಅಂಗ್ಲೋ ಅಮೆರಿಕನರು ಹೂಡಿದ ವಾದ ಮತ್ತು ನಡೆಸಿದ ಚರ್ಚೆಗಳನ್ನು ಅಂಗ್ಲೋ ಅಮೆರಿಕಾನರ ಮತ್ತು ಫ್ರೆಂಚ್ ಆಡಳಿತೇ ಮಂಡಲದವರ ಆಕ್ರಮಣೇಚ್ಛೆಯ ಸ್ಪಷ್ಟ ಚಿಹ್ನೆಯೆಂದು ನಾನು ತಿಳಿಯುತ್ತೇನೆ. ಕಳದ ಆಗೋಸ್ತು 30ರಲ್ಲಿ ಮೋಸ್ಕೋದಲ್ಲಿ ಬರ್ಲಿನ್ ಸಂಬಧದ ಒಂದು ಒಪ್ಪಂದವು ರಶ್ಯಾ ಮತ್ತು ಅಮೇರಿಕ, ಬ್ರಿಟನ್ ಫ್ರಾನ್ಸ್ ಪ್ರತಿನಿಧಿಗಳೊಳಗಾಗಿತ್ತು. ಅದರಲ್ಲಿ ಬರ್ಲಿನಿನ ಮೇಲಿನ ನಿರ್ಬಂಧಗಳನ್ನು ತೆಗೆಯುವ ಹಾಗೂ ಇಡೀ ಬರ್ಲಿನಿನಲ್ಲಿ ಸೋವಿಯೆಟ್-ಪ್ರೇರಿತ ಜರ್ಮನ್ ಮಾರ್ಕನ್ನೆ ಏಕಮಾತ್ರ ಕರೆನ್ಸಿಯಾಗಿ ಉಪಯೋಗಿಸುವ ನಿರ್ಧಾರವಾಗಿತ್ತು. ಇದರಿಂದ ಯಾರ ಪ್ರತಿಷ್ಠೆಗೂ ಧಕ್ಕೆಯುಂಟಿಲ್ಲ ಎಲ್ಲಾ ಕಡೆಗಳವರ ಹಿತ ಮತ್ತು ಭಾವೀ ಸಹಕಾರದ ಸಾಧ್ಯತೆಯು ತುಂಬಿತ್ತು. ಆದರೆ ಅಂಗ್ಲೋ-ಅಮೆರಿಕ ಸರಕಾರಗಳು ತಮ್ಮ ಆ ರಾಯಭಾರಿಗಳನ್ನು ರದ್ದುಪಡಿಸಿ ಆ ಒಪ್ಪಂದವು ಅಸಿಂಧುವೆಂದು ಸಾರಿದವು. ಆವರದನ್ನು ಮುರಿದ ಹಾಕಿ ಅಂಗ್ಲೋ ಅಮೇರಿಕನರಿಗೆ ಖಾತ್ರಿ ಬಹುಮತವಿರುವ ಭದ್ರತಾಕೌನ್ಸಿಲಿಗೆ ಬರ್ಲಿನ್ ಪ್ರಶ್ನೆಯನ್ನೊಯ್ದರು. ಇತ್ತೀಚೆಗೆ ಪ್ಯಾರಿನಲ್ಲಿ ಭದ್ರತಾಕೌನ್ಸಿಲಿನ ಆಧ್ಯಕ್ಷ ಅರ್ಜೆಂಟಿನಾದ ಡಾ| ಬ್ರಮುಗ್ಲಿಯರು ಸಂಬಂಧಪಟ್ಟ ಇತರ ರಾಷ್ಟ್ರಗಳ ವರವಾಗಿ ನನ್ನು ವಿಶಿಸ್ಸಿಸಿಯವರೊಡನೆ



ಮಾತಾಡಿ ಬರ್ಲಿನಿನ ಕುರಿತು ಅನಧಿಕೃತ ಒಪ್ಪಂದವೊಂದರ ಕರಡು ತಯಾರಿಸಿದ್ದರೂ ಬ್ರಿಟನ್ ಮತ್ತು ಅಮೆರಿಕಗಳು ಅದನ್ನೂ ಅಸಿಂಧುಗೊಳಿಸಿದುವು. ಆಕ್ರಮಣ ಧೋರಣೆಯನ್ನು ಉದ್ರೇಕಿಸುವ ಅಮೇರಿಕ ಮತ್ತು ಬ್ರಿಟನುಗಳವರು ರಶ್ಯದೊಡನೆ ಒಪ್ಪಂದ ಅಥವಾ ಸಹಕಾರ ಗಳಿಸುವ ಮನಸ್ಸಿನವರಂತಿಲ್ಲ. ಒಪ್ಪಂದ ಅಥವಾ ಸಹಕಾರ ಬೇಕಾಗಿರದಿದ್ದರೂ ಆ ಪರ ಆಪವಾದವನ್ನು ರಶ್ಯದ ಮೇಲೆ ಹಾಕಿ ರಶ್ಯದೊಡನೆ ಸಹಕಾರವೆಂಬುದೇ ಅಸಾಧ್ಯವೆಂಬುದನ್ನು ಪ್ರದರ್ಶಿಸಲಾಗುವಂತೆ ಅವರು ಒಪ್ಪಂದ ಮತ್ತು ಸಹಕಾರದ ಮಾತುಗಳನ್ನಾಡುತ್ತಿದ್ದಾರೆ. ಇನ್ನೊಂದು ಹೊಸ ಯುದ್ಧವನ್ನು ತಂದುಡಾಕಬೇಕೆಂದು ಒಬ್ಬಾಡುತ್ತಿರುವ ಈಯುದ್ಧಹಂಚಿಕೆಮಾಲಯು ರಶ್ಯದೊಡನೆ ಸಹಕಾರ ಅಥವಾ ಒಪ್ಪಂದವೆಂದರೆ ಎಲ್ಲಕ್ಕಿಂತ ಹೆಚ್ಚಿಗೆ ಹೆದರುತ್ತಾರೆ. ಕಾರಣವೆಂದರೆ ರಶ್ಯದ ಒಪ್ಪಂದ ಧೋರಣೆಯೂ ಯುದ್ಧಾಪೇಕ್ಷೆಗಳ ಸಪ್ಪನವನ್ನು ತಗ್ಗಿಸಿ, ಈ ಏಷಣೀಯರ ಆಕ್ರಮಣಧೋರಣೆಯ ಉದ್ರೇಶಭಂಗಮಾಡಲಿದೆಯಾದ್ದರಿಂದಲೇ. ಈ ಕಾರಣಗಳಿಂದಾಗಿ ಅವರು ಒನ್ನೆಆದ ಒಪ್ಪಂದಗಳನ್ನು ಮುರಿದುಹಾಕುತ್ತಾರೆ-ಅಂತಹ ಒಪ್ಪಂದವಾಡಿಕೊಂಡ ತನ್ನ ರಾಯಭಾರಿಗಳನ್ನೇ ಅಲ್ಲಗಳೆಯುತ್ತಾರೆ-ಎಲ್ಲಿ ತಮಗೆ ಬಹುಮತವಿದೆಯೋ, ಮತ್ತೆಲ್ಲಿ ಕಾವು ಯಾವುದನ್ನೇ ಆದರೂ ರುಜುಮಾಡಬಲ್ಲರೋ ಆ ಭದ್ರತಾಕೌನ್ಸಿಲಿಗೆ ಸಂಯುಕ್ತರಾಷ್ಟ್ರಸಂಘದ ನಿಯಮುಗಳನ್ನು ಕೂಡಾ ಮುರಿದು ಆ ಪ್ರಶ್ನೆಯನ್ನು ರವಾನಿಸುತ್ತಾರೆ. ಇವೆಲ್ಲಾ ಕೃತ್ಯಗಳು ರಶ್ಯದೊಡನೆ ಸಹಕಾರ ಅಸಾಧ್ಯನೆಂಬುದನ್ನು ಪ್ರದರ್ಶಿಸುವುದಕ್ಕಾಗಿ; ಇನ್ನೊಂದು ಯುದ್ಧ ಅಗತ್ಯ ಎಂಬುದನ್ನು ತೋರಿಸಿ, ಹೊಸ ಯುದ್ಧ ಸೆಟ್ಟೇರಿಸಿಗಸ್ಯವುಳ್ಳ ವಾತಾವರಣ ನಿರ್ಮಿಸುವುದಕ್ಕಾಗಿ. ಅಮೇರಿಕ ಮತ್ತು ಇಂಗ್ಲಾಂಡುಗಳ ಸದ್ಯದ ನಾಯಕರ ಧೋರಣೆಯೆಂದರೆ ಆಕ್ರಮಣಶೀಲತೆ ಮತ್ತು ಹೊಸ ಯುದ್ಧ ನಿರ್ಮಾಪಕ ಧೋರಣೆ.

ದಿ ದೀಪಕ ಜನರಲ್
ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಧಾನ ಕಾರ್ಯಾಲಯ:
8/10, ಟಿಮರಿಂಡ್ ಲೇನ್, ಫೋರ್ಟ್, ಮುಂಬಯಿ. ನಂಬ್ರ 1.

ಲೈಫ್ ಬೆಂಕಿ ನೌಕಾ ಗಂಡಾಂತರ
ಮೋಟಾರ್ ಮುತ್ತಿತರ
ವಿಮಾ ಪಡೆಯಲಾಗುವುದು

ತೆತ್ತ ಪಾಲು ಭಂಡವಳ ರೂಪಾಯಿ.8,53,625.
ಮೂಲಗಳ ಮೊತ್ತ ರೂ. 20,00,000 ಕ್ಕೂ ಜಾಸ್ತಿ.

ಆರ್. ಸಿ. ಗೋಡಿಯವಾಲಾ,
ಮೆನೇಜಿಂಗ್ ಡೈರೆಕ್ಟರ್.

ದಕ್ಷಿಣ ಮತ್ತು ಉತ್ತರ ಕನ್ನಡಗಳ ವ್ಯವಸ್ಥಾಮ್ಯ ಏಜಂಟರು:
ಮೆಸರ್ಸ್ ಅಮಿನ್ ಬ್ರದರ್ಸ್,
ಕಟಪಾಡಿ, ಉಡುಪಿ ತಾಲೂಕು, ದ. ಕನ್ನಡ.

ಹಿಂದುಸ್ಥಾನದಲ್ಲೆಲ್ಲಾ ಶಾಖೆಗಳಿವೆ.
THE
DEEPAK GENERAL INSURANCE COMPANY, Ltd.,

ಚರ್ಚಿಲ್ಲರ ಉರಿಗೆ ಸರ್ದಾರರ ಶಮನ!

'೩೦೦೦೦ ಬ್ರಿಟಿಷ್ ಸೋಲ್ಜರರಿಂದ ಭಾರತವನ್ನು ಹಿಡಿದಿಟ್ಟುಕೊಳ್ಳಬಹುದಿತ್ತು, —ಚರ್ಚಿಲ್

'೩೦೦೦೦ ಅಲ್ಲ, ೩೦೦೦೦೦ ಬ್ರಿಟಿಷ್ ಸೋಲ್ಜರರಿಂದಲೂ ಆದಾಗದು. ಈ ಕಾಲ ಬೇರೆ' -ಪಟೇಲ್

ರಣೆ. ಆದರೆ ಇದೆಲ್ಲವೂ ಯುದ್ಧ ಸಂಚುಗಾರರ ಹೇಯಚಿತನದೊಂದಿಗೆ ಮುಗಿಯಲಿದೆ. ಚರ್ಚಿಲ್--ಒಂದು ಹೊಸ ಯುದ್ಧದ ಹಂಚಿಕೆವಾಲರ ಮುಖ್ಯಸ್ಥ--ತನ್ನ ರಾಷ್ಟ್ರದ ಹಾಗೂ ಇಡೀಜಗತ್ತಿನ ಪ್ರಜಾಸತ್ತಾತ್ಮಕ ಶಕ್ತಿಗಳ ವಿಶ್ವಾಸದಿಂದ ದೂರವಾಗುವುದರಲ್ಲಿ ಇಷ್ಟರಲ್ಲೇ ವಿಜಯಿಯಾಗಿದ್ದಾರೆ. ಇದೇ ಅದೃಷ್ಟವು ಮಿಕ್ಕೆಲ್ಲಾ ಯುದ್ಧಸಂಚುಗಾರರನ್ನೂ ಕಾದಿದೆ".

ಚರ್ಚಿಲ್ಲರ ನಂಜುಮಾತು

ಸ್ಟಾಲಿನರು ಅಲ್ಲಿ ಹೇಳಿಕೆ ಕೊಡುತ್ತಿದ್ದಾಗಲೇ ಆ ಹೇಳಿಕೆಯಲ್ಲಿ ಬಂದತನ್ನ ಸ್ವಭಾವಚಿತ್ರವನ್ನು ಪ್ರತ್ಯಕ್ಷ ಚರ್ಚಿಲ್ಲರೇ ಇಲ್ಲಿ ಪಾರ್ಲಿಮೆಂಟಿನಲ್ಲಿ ಪ್ರದರ್ಶಿಸುತಿದ್ದುದು ಕಾಲಕರ್ಮ ಸಂಯೋಗವೆನ್ನಬೇಕು! ಒಕ್ಟೋಬರ್ ತಾ 28ರಲ್ಲಿ ಬ್ರಿಟನಿನ ಕಾಮನ್ಸ್‌ಸಭೆಯಲ್ಲಿ ಅಖ್ರಾಗತಕಳನಾಯಕ ಚರ್ಚಿಲ್ಲರು ತನ್ನ ಸ್ವಭಾವಸಿದ್ಧ ಆರ್ಭಟ ಕೊಡುತ್ತಾ ತನ್ನ ಜೀವಾಳವಾದ ಭಾರತ ದ್ವೇಷ ಮತ್ತು ಬ್ರಿಟನ್ ಸಾಮ್ರಾಜ್ಯ ಶಾಹೀನಿಷ್ಠೆಯನ್ನು ಮತ್ತೊಮ್ಮೆ ಪ್ರದರ್ಶಿಸಿದರು. 'ಕ್ರಾಸ್ಲಿನ ಲೋರ್ಡ್ ಪ್ರೆಸಿಡೆಂಟ್' ಮಿ. ಹರ್ಬರ್ಟ್ ಮೊರಿಸನ್‌ರು ಸರಕಾರದ ಪರವಾಗಿ ಚರ್ಚಿಲ್ಲರಿಗೆ ಕೊಟ್ಟ ಸವಿನಯಕ ಉತ್ತರದಲ್ಲಿ "ಚರ್ಚಿಲ್ಲರದು ಬೇಜವಾಬ್ದಾರಿಯ, ಕಂಟಿಪೋಲಿತನದ ಮತ್ತು ದೊಡ್ಡ ಪರಿಮಾಣದ ಮಾನಿಯನ್ನು ಶಂದೊಡ್ಡುವಂತಹ ಮಾತುಗಳು. ವರುಷಗಳು ಕಳೆದಂತೆ ಅವುಗಳೊಂದಿಗೆ ಮುಂಬೆ ಹೋಗಲು ಸಾಧ್ಯವಾಗದ ಜನ ಚರ್ಚಿಲ್. ವಸಾಹತು ಸಮಸ್ಯೆಗಳನ್ನು ಬಿಡಿಸುವ ಉದ್ದಿಮೆಯು 19ನೇ ಶತಮಾನಾಂತ್ಯದಲ್ಲಿದ್ದಂತೆ 1948ನೇ ಇಸವಿಯಲ್ಲಿಲ್ಲ ಎಂಬುದೇ ಅವರಿಗೆ ತಿಳಿಯದು:-" ಎಂದು ಯೋಗ್ಯ ಸಂಭಾವನೆಯನ್ನು ಕೊಟ್ಟಿದ್ದಾರೆ. ಚರ್ಚಿಲ್ಲರು ಕಾರಿದ ವಿಷ ಬಿಂದುಗಳು:- 'ಭಾರತವು ಬ್ರಿಟಿಷ್ ಸಿಂಹಾಸನದೊಂದಿಗೆ ಒಂದು ಜೋಡಣೆಯ ಗೊಣಸನ್ನು ಉಳಿಸಿಕೊಳ್ಳದಿದ್ದರೆ, ಅದರ ಯಾವುದೇ ಭಾಗದ ಮೇಲೆ ಪರಕೀಯ ಧಾಳಿ ನಡೆದಲ್ಲಿ ಬ್ರಿಟನು ಸ್ವಂತ ಜವಾಬ್ದಾರಿಯಿಂದ ಅದರ ರಕ್ಷಣೆಗೆ ಹೋಗಕೂಡದು. ಭಾರತಕ್ಕೆ ಒಂದೋ ಬ್ರಿಟಿಷ್ ಸಿಂಹಾಸನದೊಡನೆ ಸಂಬಂಧ, ಇಲ್ಲವೇ ಬ್ರಿಟಿಷ್ ಕಾಮನ್‌ವೆಲ್ತಿನೊಳಗೇನೇ ಇರಿಸಿಕೆ, ಅಥವಾ ನಮ್ಮ ಸ್ವಂತ ರಕ್ಷಣೆಗಾಗಿ ನಾವು ಇತರ ರಾಷ್ಟ್ರಗಳೊಂದಿಗೆ ಮಾಡಿಕೊಳ್ಳುವಂತಹ ಸಂಬಂಧಗಳು ಅಥವಾ ಕರಾರುಗಳು-ಇದಾವುದೂ ಇಲ್ಲದಿದ್ದರೆ, ಸಂಯುಕ್ತ ರಾಷ್ಟ್ರ ಸಂಘದ ಕಡೆಗಿನ ನಮ್ಮ ಕರ್ತವ್ಯವಾಗಿ ನಮ್ಮ ಮೇಲೆ ಬೀಳದಂತಹ ಯಾವ ರೀತಿಯ ಭಾರತ ರಕ್ಷಣೆಯನ್ನೂ ನಾವು ವಹಿಸಿಕೊಳ್ಳಕೂಡದು. ಅಂತಹ ಸಂದರ್ಭಗಳಲ್ಲಿ ಸ್ವತಂತ್ರ ಜನರಾಗಿ ನಾವು ಗೆದ್ದುಕೊಂಡಿರಲಾಗುವಂತೆ ಯುರೋಪಿನ ಹಾಗೂ ನಮ್ಮ ಸ್ವಂತ ರಾಷ್ಟ್ರದ ಹೊಣೆಗಾರಿಕೆಗಳನ್ನೇ ನಾವು ನೋಡಿಕೊಳ್ಳಬೇಕಲ್ಲದೆ, ಪರಿಣಾಮಕಾರಿಯಾಗಿ ನಮ್ಮಕಾರ್ಯ ಮಾಡಲಾಗದ ವಿದೇಶೀಯರ ಸಂಬಂಧದ ಜವಾಬ್ದಾರಿಯನ್ನು ನಾವು ಕೊರಬಾರದು, ಚಿಹ್ನಾತ್ಮಕ, ಘಟನಾತ್ಮಕ ಸಂಬಂಧ ಕೂಡಾ ಇಲ್ಲದ, ನಮ್ಮ ಹಾಗಿಗೆ ಕಕ್ಕಸ್ಪತಿಫಲ ಕೊಡದವರ ಭಾರವನ್ನು ನಮ್ಮ ಜನತೆಯ ಮೇಲೆ ಅವರ ಶಕ್ತಿಗೆ ಮಿಕ್ಕಿದ ಪ್ರಮಾಣವನ್ನೂ, ಅವರು ಹೊರಲಾರದಷ್ಟನ್ನೂ, ಹೇರಬೇಕೇಕೆ? ಪೆಲಸ್ಟೈನಿನಲ್ಲಿಗೆ ವೃಥಾ ಕೊಳೆಯುತ್ತಿರುವ ನಮ್ಮ 30000 ಅಥವಾ 40000 ಸೋಲ್ಜರರನ್ನು ಭಾರತದಲ್ಲಿ ನಿಲ್ಲಿಸಬಹುದಿತ್ತು. ಈ ಮೂಲಕ ನಿಜಕ್ಕೂ ಸಕಕ್ತವಾದ ಹಾಗೂ ಪರಿಣಾಮಕಾರಿಯಾದ ಹಿಂದೀ ಆಡಳಿತೆಯೊಂದನ್ನು ರಚಿಸಿ ಅಗತ್ಯವುಳ್ಳ ಅಧಿಕಾರಗಳನ್ನು ಅದಕ್ಕೆ ವರ್ಗಾಯಿಸುವ ವರೆಗೂ ಭಾರತದ ಶಾಂತಿ ಮತ್ತು ವ್ಯವಸ್ಥೆಯನ್ನು ಕಾಪಾಡಬಹುದಿತ್ತು. ಬ್ರಿಟಿಷ್ ನಿರ್ದೇಶ

ದೀಪಾವಳೀ ಶುಭಾಶಯ

ಸರ್ವರಿಗೂ
ಸುಖ
ಸಮೃದ್ಧಿ
ಸಮಾಧಾನ
ಉಂಟಾಗಲಿ

ನವಯುಗ ಎಂಟರ್‌ಪ್ರೈಸಸ್ ಲಿಮಿಟೆಡ್ನ
ನವಯುಗ ಪೈಪ್ಸ್, ಉಡುಪಿ.

ದಕ್ಷಿಣ ಕನ್ನಡ ಡಿಸ್ಟ್ರಿಕ್ಟ್ ಕೋರ್ಟಿನಲ್ಲಿ
O. P. ನಂಬ್ರ 171/1948
N. ಸೀತಮ್ಮ ಹೆಗ್ಗಡ್ತಿ ... ಅರ್ಜಿದಾರರು.
Advocate Sri B. B Shetty.
ಮತ್ತು
1 ತಿರುಮಲೆ ಯಾನೆ ನಿಟ್ಟಣ್ಣ ಶೆಟ್ಟಿ, ಸೀತಾರಾಮ ಶೆಟ್ಟಿ ಜೆಂಡ್ತಿ, ಮಂಗ್ಳೂರು ತಾಲ್ಲೂ ಎಳಂಜೆ ಗ್ರಾಮಸಲ್ಲಿರುವವರು.
2 ಮಹಾಬಲ ಶೆಟ್ಟಿ-ಕುಂಞಣ್ಣ ಶೆಟ್ಟಿ ತಮ್ಮ, ಮಂಗ್ಳೂರು ತಾಲ್ಲೂ ಬಜಪೆ ಗ್ರಾಮದ ಗಂಡಬೆಟ್ಟು ಮನೆಯಲ್ಲಿರುವವ.
3 ಮೈಂದಪ್ಪ ಶೆಟ್ಟಿ, 4 ತಿಮ್ಮಪ್ಪ ಶೆಟ್ಟಿ-ಕುಂಞಣ್ಣ ಶೆಟ್ಟಿ ಆಳಿಯಂದಿರು. ಇವರು ಮೂಲ್ಕಿ ಪೋಲಿಸು ಸ್ಟೇಷನಿನ F. I. No. 31/48 ನೊಳಪಟ್ಟಿನ ಬಾಬ್ತು ಮಂಗ್ಳೂರು ಸಬ್ ಜೈಲಿನಲ್ಲಿ ರಿಮಾಂಡಿನಲ್ಲಿರುತ್ತಾರೆ. ರೆಸ್ಪಾಂಡೆಂಟ್ಸ್.

ಅರ್ಜಿದಾರಳು ಈ ಮೂಲಕ ಜಾಹೀರು ಮಾಡಿಕೊಳ್ಳುವುದೇನಂದ್ರೆ-

ಮೇಲಿನ ಅರ್ಜಿಯಲ್ಲಿ ಕಾನ್ಸೆದ ಪ್ರಕಾರ ಮಂಗ್ಳೂರು ತಾಲೂಕು ಬಜಪೆ ಗ್ರಾಮದ ಗಂಡಬೆಟ್ಟು ಎಂಬಲ್ಲಿರುವ ಕುಂಞಣ್ಣ ಶೆಟ್ಟಿ ಎಂಬವರು ಮೃತಪಟ್ಟಿರುವುದರಿಂದ ಅತನ ಹೆಂಡ್ತಿ ಮತ್ತು ನ್ಯಾಯವಾಗಿ ಹಕ್ಕುದಾರಳಾದ ನನಗೆ ಅವರ ಬಾಬ್ತು ಬೊಂಬಾಯಿ ಕ್ರೆಸೆಂಟ್ (Cresent) ಇನ್ಸುರೆನ್ಸ್ ಕಂಪೆನಿಯ ನಂಬ್ರ 19210ನೇ ಪೊಲಿಸಿ ಪ್ರಕಾರ ನಿಕ್ಕತಕ್ಕ ಅವೆಜು ರೂಪಾಯಿ 3,000 ತನಗೆ ನಿಕ್ಕತಕ್ಕ ಜೀವೆಜು ಕೊಡಿಸಬೇಕೆಂದು ಪಗ್ಗೆರೆ ಕಾಣ್ಸಿ, ಸದ್ರಿ ಅರ್ಜಿದಾರಳು ದಕ್ಷಿಣ ಕನ್ನಡ ಜಿಲ್ಲಾ ಜಡ್ಜರ ಕೋರ್ಟಿನಲ್ಲಿ ಮೇಲ್ಕಾಣ್ಸಿದ ಅರ್ಜಿದಾರಳು ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕೆಂದು ಅರ್ಜಿಕೊಟ್ಟಿರುವುದರಿಂದ ಸದ್ರಿ ಅರ್ಜಿಯನ್ನು ಇದೇಯಿನ್ನಿ ದಶಂಬ್ರ ತಾ. 7ಕ್ಕೆ (7-12-48)ಕ್ಕೆ ತಪ್ಪಿಗೆಯಿಟ್ಟಿರುವುದರಿಂದ ಸದ್ರಿ ಅರ್ಜಿಯ ಕುರಿತು ಯಾರಾದರೂ ಅಕ್ಷೇಪಿಸುವವರು ತಮ್ಮ ಅಕ್ಷೇಪಣೆಗಳನ್ನು ಸದ್ರಿ ತಾರೀಕಿಗೆ ಕೋರ್ಟಿಗೆ ಕುದ್ದಾಗಿಯಾ ವಕೀಲ್ ದ್ವಾರ ಮೂಲಕ ಹಾಜ್ರಾಗಿ ಅಕ್ಷೇಪಿಸತಕ್ಕದ್ದು. ಇಲ್ಲವಾದ್ದೆ ಸದ್ರಿ ಅರ್ಜಿಯನ್ನು ಏಕಪಕ್ಷವಾಗಿ ತೀರ್ಮಾನಿಸಲಾಗುವುದು. ತಿಂದಿರತಕ್ಕದ್ದು.

B. B. Shetty,
Advocate for Petr.
Mangalore, Date 29-10-48.

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಸಕ್ವ ಅನುಭವದ ಯೋಗ್ಯತೆಯಿದೆ.

ನಿರಮು ಶೇವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.
ಎಲ್ಲಾ ತರದ ಆಧುನಿಕ ಬ್ಯಾಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬೇಂಕ್, ಲಿಮಿಟೆಡ್
ಹೆ. ಆ. ಮಂಗಳೂರು.
THE VIJAYA BANK LTD.,
H. O. MANGALORE, S. K.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲ್ಯಾಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ಗಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:-

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್., ಉಡುಪಿ.

ಇವರ ಶಾಖಾ ಖುಚೇರಿಗಳು:-
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೆಂದ್ರಮ್, ಕಲ್ಲಿಕೋಟೆ ಮತ್ತು ಲಾಂಗರೂಜ.

ಕಳೆದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲಿ, ವ್ಯಾಪಿನಿಧ್ಯ ಸಡೆಯಲಿಕ್ಕಾಗಲೀ ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ಕತ್ವ ಮತ್ತು ಹತೋಟಿಯು ಇಸ್ಕೊಂದು ಅವಸರದಲ್ಲಿ ಅಕಸ್ಮಿಕವಾಗಿ ಜಾರಿ ಹೋದುದರಿಂದ ಭಾರತದ ಲಕ್ಷಾಂತರ ಮಿಲಿಯ ಜನತೆಯ ಭವಿಷ್ಯವು--ಈಗ ಭಾರಗೊಂಡು ನೇತಾಡುತ್ತಿದೆ. ಸಂಜಾ ಬೊಂದರಲ್ಲೇ ಸುಮಾರು 40 ಸಾವಿರ ಸ್ತ್ರೀ ಪುರುಷರು ಕೊಲೆಯಾದ ಆತಿ ಹೇಯ ದುರಂತ ನಡೆದುಹೋಯಿತು. ಹೀಗಿದ್ದರೂ ಯಾವುದರ ಭೀಕರ ಹಾಗೂ ನಿಶಟ ಹೊಣೆಯು ಅಧಿಕಾರದಲ್ಲಿರುವ ಈ ಸಭೆಯ ಬಹುಸಂಖ್ಯಾಕರ ಮತ್ತು ಮಂತ್ರಿಗಳ ತಲೆಯ ಮೇಲಿರುವುದೋ ಆ ಭಯಂಕರ ಅನಾಹುತಗಳನ್ನು ಬ್ರಿಟಿಷ್ ವಾರ್ಲಿಮೆಂಟಿಗರೀತಿ ನಿರಾಪಕ್ಷತೆಯಿಂದ, ಥಂಡಾ ಮನಸ್ಸಿನಿಂದ ಮತ್ತು ಮಾನವಿದ ನೆನಸಿನಿಂದ ನೋಡುಶ್ಕಾ ನಿಲ್ಲಲು ಸಾಧ್ಯವಾಗಿದೆ ಎಂಬುದು ವಿಲಕ್ಷಣವೇ ಸರಿ. ಬ್ರಿಟಿಷ್ ರಾಜ್ಯದಲ್ಲಿ-ಸಾಮ್ರಾಜ್ಯ ಸಿಂಹಾಸನದ ಕೈಳಗೆ-ಮತ್ತು ಹೌಸ್ ಓಫ್ ಕಾಮನ್ಸ್‌ನ ಸಯೋಗ್ಯ, ಸದಾ ಜಾಗ್ರತಿಯ, ಮಾನವೀಯ ಮೇಲ್ವಿಚಾರಣೆಯಡಿಯಲ್ಲಿ ಆ ನಿಸ್ಸಹಾಯಕ ಭಾರತೀಯ ಜನತೆಯು ಶಾಂತಿ ಮತ್ತು ಸುರಕ್ಷಿತತೆಯನ್ನು ಅನುಭವಿಸಿಕೊಂಡಿದ್ದ ಆ ದೀರ್ಘಾವಧಿಯಲ್ಲಿ ಇಂದಿನ ಅನಾಹುತ

[ಸಂಪೂರ್ಣ ಸುದ್ದಿ ನೋಡಿರಿ]

The Canara Banking Corporation Limited.
Estd: 1906.
(Incorporated in British India)
Head Office: **UDIPI**, S. India.

Capital Authorised	....	Rs. 25,00,000
Capital Issued & Subscribed	....	Rs. 20,00,000
Capital Paid up	....	Rs. 19,98,445
Reserves....	....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.,
General Manager.



ಮದ್ರಾಸ್, ಶುಕ್ರವಾರ, ೪-೧೧-'೪೮

ಜಮೀನ್ದಾರೀ ರದ್ದತಿ

ಕಳೆದ ವಾರ ಮದ್ರಾಸ್ ಲೆಜಿಸ್ಲೇಟಿವ್ ಎಸೆಂಬ್ಲಿಯಲ್ಲಿ 'ಜಮೀನ್ದಾರಿಗಳ ಬರ್ಖಾಸ್ತು ವ ಸೂದೆ' ಮಂಜೂರಾಗಿದೆ. ಜಮೀನ್ದಾರೀ ಹಾಗೂ ಇನಾಮ್ದಾರೀ ಪದ್ಧತಿಗಳನ್ನು ರದ್ದು ಗೊಳಿಸುವ ಮಸೂದೆಗೆ 1937ರಲ್ಲಿ ಕಾಂಗ್ರೆಸ್ಸು ಅಧಿಕಾರಕ್ಕೆ ಬಂದಾಗಲೇ ಪೀಠಿಕೆ ಹಾಕಲ್ಪಟ್ಟಿದ್ದಿತು. 1946 ರಲ್ಲಿ ಪುನಃ ಕಾಂಗ್ರೆಸ್ ಸರಕಾರ ಸ್ಥಾಪನೆ ಗೊಂಡಾಗ ಆಗಿನ ರೆವಿನ್ಯೂ ಮಂತ್ರಿ ಶ್ರೀ. ಕಾರಂತರಿಂದ ಅದರ ಪೂರ್ವರಂಗ ಶಯಾರಾಗಿದ್ದಿತು. ಹೀಗೆ ಮುಂದೂರಿ ಸರಕಾರವು ಈ ಮಸೂದೆಗೆ ಸ್ವಷ್ಟಾಕಾರ ಕೊಟ್ಟು ಮುಂಬೆ ತಂದ ನಂತರ ಈ ವರೆಗೆ ಜಮೀನ್ದಾರ್, ಇನಾಮ್ದಾರ್ ಮತ್ತವರ ಸಹಾಯಕರಿಂದ ವಿವಿಧ ರೀತಿಯ ಆಡ್ಡಿ ಆಪೇಕ್ಷೆಗಳು ಬಂದು-ಕಾಂಗ್ರೆಸ್ ಪಕ್ಷದ ಸ್ಯರಿಂದಲೂ ಭಿನ್ನ ಭಿನ್ನಾಭಿಪ್ರಾಯಗಳು ಮುಂದಿಡಲ್ಪಟ್ಟು-ಕಾಂಗ್ರೆಸ್ ಹ್ಯಾಕಮಾಂಡಿನ ಪರಿಗೆ ಸಂಬಂಧಪಟ್ಟಂತೆ ನೂರು ಹೊಗಿ, ಅವರೂ ಅಪರಲ್ಲಿ ಕೈ ಹಾಕಿ ಜಮೀನ್ದಾರೀ ಹಾಗೂ ಇನಾಮ್ದಾರೀ ಬರ್ಖಾಸ್ತು ಮಸೂದೆ ಅಕ್ಷರಾಕ್ಷರ ವಿಮರ್ಶೆಗೊಳಗಾಗಬೇಕಾಯಿತು. ಅಂತೂ ಕೊನೆಗೆ ಇದೇ ಒಕ್ಟೋಬರ್ ತಾ 27ರಲ್ಲಿ ಮದ್ರಾಸ್ ಎಸೆಂಬ್ಲಿಯಲ್ಲಿ ಆದಂ ತೃತೀಯ ವಾಚನ ನಡೆದು ಮುಗಿದಿದೆ. ಬ್ರಿಟಿಷ್ ಆಡಳಿತೆಯ ಅವಿಭಾಗದಿಂದೀ ವರೆಗೂ ಅಸ್ತಿತ್ವ ದಲ್ಲಿದ್ದ ಒಂದು ಪದ್ಧತಿಯನ್ನೇ ಕಿತ್ತೊಗೆಯುವಾಗ ಇಂತಹ ಅಂಶೋಲನ ಮತ್ತು ಸೂಕ್ಷ್ಮ ಪರಿಶೀಲನೆ ನಡೆಯಬೇಕಾದುದು ಸಹಜವೇ. ಶಾಸನ ಸಭೆಯಲ್ಲಿ ಈ ಮಸೂದೆಗೆ 500ಕ್ಕೂ ಮಿಕ್ಕಿದ ತಿದ್ದುಪಡಿ ಸೂಚನೆಗಳು ಬಂದಿದ್ದುವು. ತಮ್ಮ ಅಧಿಕಾರ ಸ್ಥಾಪನೆಯ ಕಾಲದಲ್ಲಿ ಕೇವಲ ಸಂಗ್ರಹ ಮತ್ತು ವ್ಯವಸ್ಥೆಗನುಕೂಲವಾಗುವಂತೆ ಭಾರತದ ಇತರ ಪ್ರಾಂತ್ಯಗಳಂತೆಯೇ ಮದ್ರಾಸಿನ ತಮಿಳುನಾಡು ಮತ್ತು ಅಂಧ್ರ ದೇಶಗಳಲ್ಲಿ ಬ್ರಿಟಿಷರು ಸ್ಥಾಪಿಸಿಟ್ಟ "ಜಮೀನ್ದಾರು" ರೈತ್ವಾರಿಕ್ಷೇತ್ರವಾದ ದಕ್ಷಿಣಕನ್ನಡದ ವರ್ಗದಾರರಂತಲ್ಲ. ಇವರಿಗಿಂತ ಅವರು ದೊಡ್ಡ ಸಂಗ್ರಹಕಾರರು; ಆದರೆ ಆದಾಯ ಸೀಗೆ ಪಡೆಯುವ ಭಾಗಗಳ ನೆಲಿನ ಅವರ ಒಡೆತನವು ವರ್ಗದಾರರ ಮೂಲಕತ್ವದಷ್ಟು ಸದೃಢವಾದುದಲ್ಲ. ಅವರೇನೋ ಶಾಸ್ತ್ರ ಭ್ರಷ್ಟಮಾಲಕರೆಂದೇ ಸಾಧಿಸಿದ್ದರೂ ಸರಕಾರವವರನ್ನು ಕೇವಲ ಗೇಣಿ ಸಂಗ್ರಹಾಧಿಕಾರಿಗಳೆಂದು ಕಟ್ಟಿಕೊಂಡಿದೆ. ಹೀಗಿದ್ದರೂ ಚಿರಕಾಲದಿಂದ ಅವರದಾಗಿದ್ದ ಅಧಿಕಾರವನ್ನು ಪಡಕೊಳ್ಳುವಾಗ ಕೊಡಬೇಕಾದ ಪರಿಹಾರದ ಕುರಿತೇ ಮುಖ್ಯ ವಿವಾದವೆದ್ದಿತ್ತು. ಕಾಂಗ್ರೆಸ್ ಅಧಿನಾಯಕರು ಈ ಸಂಬಂಧದಲ್ಲಿ ರೈಹಾಕೆ ಮದ್ರಾಸ್ ಸರಕಾರವು ಪ್ರಥಮತೆ ಅಂದಾಜು ಮಾಡಿದ್ದ ಪರಿಹಾರ ಮೊತ್ತವನ್ನು ಕೆಲವಂಶ ಹೆಚ್ಚಿಸಿ ಕೊಡುವಂತೆ ಮಾಡಿದ ರೆನ್ನಬಹುದು. ಆದೊಂದು ಪರಿಮಿತಿಯಂತೆ ಈಗ ಆಸ್ಯಾಯಿಸಿದ ಸಣ್ಣ ಇನಾಮ್ದಾರರಿಗೆ ಅವರ ಆಸ್ಯಿಯ ಪೂರ್ಣ ಮೌಲ್ಯವನ್ನೇ ಪರಿಹಾರವಾಗಿ ಕೊಡಬೇಕೆಂಬ ಬಾಧ್ಯಕ ಮಾಡ್ ಫಿರ್ಯೇಶವನ್ನೂ ಸರಿಸಿದಲ್ಲಿ ಅವೆಚ್ಚದ ಭಾರಸಹ್ಯವಾದೀತೆಂದೇ ಮದ್ರಾಸ್ ಸರಕಾರವು ಅಂತಹ 1936 ಇನಾಮ್ದಾರರನ್ನು ಈ ಶಾಸನದಿಂದ ಹೊರತು ಪಡಿಸಿದೆ. ಈ ಜಮೀನ್ದಾರೀ ಹಕ್ಕನ್ನು ಕಸಗೊಂಡು ಅದಕ್ಕೆ ಪ್ರತಿಯಾಗಿ ಕೊಡುವ ಪರಿಹಾರದ ಮೌಲ್ಯವು 12½ ಕೋಟಿ ರೂ ಪಾಯಿಗಳಿಗಿಂತ ಮೀರಬೇಕೆಂಬ ಸರಕಾರದ ನಿರ್ಧಾರ. ಸುಮಾರು 100 ಲಕ್ಷ ಎಕ್ರೆ ಸಾಗುವಳ್ಳೀ ಭೂಮಿಗೆ ಈ ಶಾಸನವು ಅನ್ವಯವಾಗುವುದರಿಂದ ಅದಕ್ಕೆ ತೆರುವ ಈ ಪರಿಹಾರಾಂಶ ಕಡಿಮೆಯಾಯಿತೆಂಬ ಆಕ್ಷೇಪಗಳು ಬಂದಿವೆ. ಅದಲ್ಲೂ ದೊಡ್ಡ ಜಮೀನ್ದಾರರುಗಳಿಗೆ ದೊರೆಯುವ ಪರಿಹಾರ ಫಲಕ್ಕಿಂತ, ಸಣ್ಣ ವರ್ಗದವರಿಗೆ ದೊರೆಯುವ ಅಂಶವು ತುಲನಾತ್ಮಕವಾಗಿ ಕಡಿವೆ ಯೆಂಬ ದೂರಿದೆ. ಅಂತೂ ಮಸೂದೆಯು ಆಗೋಪಾಂಗಗಳ ಕುರಿತು ಭಿನ್ನಾಭಿಪ್ರಾಯಗಳಿರಬಹುದಾದರೂ ಈ ಹೊಸ ಅವತಾರವು ಕಾಲೋಚಿತವಾದು ದೆಂಬುದನ್ನೂ, ಅದನ್ನು ಆಡ್ಡಿ ಆಪೇಕ್ಷೆಗಳ ಬಿರುಗಾಳಿಯು ನಡುವೆ ಸಾಕಷ್ಟು ದೃಢತೆಯಿಂದ ದಡ ಸೇರಿಸಿದ ಈಗಿನ ರೆವಿನ್ಯೂ ಮಂತ್ರಿ ಶ್ರೀ ಕಲಾ ವೆಂಕಟರಾಯ ಅವರೂ ಮದ್ರಾಸ್ ಸರಕಾರದ ಸಾಕಷ್ಟು ಅಭಿನಂದನೀಯರೆಂಬುದನ್ನೂ ಒಪ್ಪಲೇಬೇಕು. ಮದ್ರಾಸ್ ಪ್ರಾಂತ್ಯದ ಎಲ್ಲಾ ಕ್ಷೇತ್ರಗಳೂ ತಮ್ಮ ಪಂಗ್ತಿಗೆ ಬಂದುವೆಂಬ ಸಮಾಧಾನತಾಸುಖಕ್ಕಿಂತ ಕೆಚ್ಚಿನದಾವುದೂ ದಕ್ಷಿಣ ಕನ್ನಡದಂತಹ ರೈತ್ವಾರೀ ಪ್ರದೇಶಗಳಿಗೆ ಈ ಸುಧಾರಣೆಯಿಂದ ಹೊರೆಯಲ್ಲ. ಆದರೆ ರೆವಿನ್ಯೂ ಮಂತ್ರಿಗಳೇ ಹೇಳಿರುವಂತೆ, ಜಮೀನ್ದಾರೀ-ಇನಾಮ್ದಾರೀ ಕ್ಷೇತ್ರಗಳನ್ನು ಈಗಿನ ರೈತ್ವಾರಿಕ್ಷೇತ್ರಗಳಾಗಿ ಮಾರ್ಪಡಿಸಿದ ಮಾತ್ರಕ್ಕೆ ಸರಕಾರದ ಕೆಲಸ ಪೂರ್ಣವಾದಂತಲ್ಲ, ಅರಂಭವಾದಂತೆ. ಇಷ್ಟು ಇಡೀ ವ್ಯಾಂಕ್ಯದಲ್ಲಿ ಏಕರೂಪೀ ಏಕ ಮುಖೀ ರೈತ್ವಾರೀ ಸುಧಾರಣೆಗಳನ್ನತರಲಾಗುವ ಪೂರ್ವರಂಗ ಈ ಮೂಲಕ ತಯಾರಾಗಿದೆ. ಬಡ ರೈತರು-ತಮ್ಮ ಸಾಗುವಳ್ಳೀ ಭೂಮಿಯು ಒಡೆತನ ತಮ್ಮದಾಗಿರದ ದಿನೆಯಿಂದ ಹಲವು ಕಷ್ಟ ನಷ್ಟಗಳಿಗೀಡಾಗಿರುವ ಚಾಲಗೇಡೇ ವಕ್ಕಲು ಗಳು-ಅಂತಹ ಸುಧಾರಣೆಯನ್ನು ಅತ್ಯುರದಿಂದ ಕಾಯುತಿದ್ದಾರೆ. ಸರಕಾರವು, ಸಾಗುವಳ್ಳೀ ಜಮೀನಿನ ಸುಧಾರಣೆಯ ಪೂರ್ವಾರ್ಧ ವಾದ 'ಜಮೀನ್ದಾರೀ ಬರ್ಖಾಸ್ತ್' ನ್ನು ನೆರವೇರಿಸಿಕೊಂಡಷ್ಟಕ್ಕೂಕಲೂ ತೀವ್ರಗತಿಯಿಂದ ಆದು ಉತ್ತರಾರ್ಧ ರೈತ್ವಾರೀ ಸುಧಾರಣೆಯನ್ನೂ ಕ್ಷಿಪ್ರದಲ್ಲೇ ಮಾಡುವದೆಂದು ನಿರೀಕ್ಷಿಸುತ್ತೇವೆ.

ರೈತರ ಸಾಲ ರಿಯಾಯತಿ—

ತಿದ್ದುಪಡಿ ಮಸೂದೆಯು ಕಳದ ತಾ. 29ರ ಮದ್ರಾಸ್ ಎಸೆಂಬ್ಲಿಸಭೆಯಲ್ಲಿ ಮಂಜೂರಾಗಿದೆ ರಾಜಾಜೀ ಸರಕಾರದ ಕಾಲದಲ್ಲಾಗಿದ್ದ 'ಸಾಗುವಳ್ಳೀದಾರರ ಸಾಲ ರಿಯಾಯತಿ' ಮಸೂದೆಯ ಸ್ಫೂರ್ತಿ ಜನಗಳು ಇನ್ನಷ್ಟು ಹೆಚ್ಚಿನವರಿಗೆ ದೊರೆಯುವಂತೆ ಅದರ 'ಸಾಗುವಳ್ಳೀದಾರ' ಪದದ ಅರ್ಥವನ್ನು ವ್ಯಾಖ್ಯಾನಗೊಳಿಸಿದುದು-ಒತ್ತೆಯಿಡಲ್ಪಟ್ಟ ಆಸ್ತಿಗಳನ್ನು ಕಡವು ಪಡೆದವರು, ೮೦ ಎಂಟು ಸ್ವಾಧೀನಕ್ಕಿಟ್ಟುಕೊಂಡಿದ್ದಲ್ಲಿ ಅಂತಹ ಆಸ್ತಿಗಳ ಸಾಲವಿಲ್ಲವೂ ಸಂದಾಯವಾದಂತಾಗಿ ಆ ಆಸ್ತಿಗಳನ್ನು ಬಿಟ್ಟು ಕೊಡಬೇಕೆಂಬುದು-ಈ ತಿದ್ದುಪಡಿಯಲ್ಲವೆ. ನ್ಯಾಯಾಕಾಂಕ್ಷಿಗಳ ಸ್ವಾಗತಾರ್ಹವಾದ ಸುಧಾರಣೆಯಿದು. ಆದರೆ ಸೋಗ್ಯಾದಿ ಆಸ್ತಿಗಳ ಇಂತಹ ಬಿಡುಗಡೆಯು ದಕ್ಷಿಣಕನ್ನಡ ಜಿಲ್ಲೆ ಮತ್ತು ಮಲಬಾರು ಜಿಲ್ಲೆಯ ಚಿಂಕ್ಲುಲ್, ಕೊಟ್ಟಾಯಮ್, ಕುಯಂಬತ್ತೂರು ವೈನಾಡು ತಾಲೂಕುಗಳ ಮಟ್ಟಿಗಲ್ಲ. ಈ ಪಕ್ಷಪಾತ ಸಲ್ಲವೆಂದೂ ದಕ್ಷಿಣ ಕನ್ನಡವನ್ನೂ ಈ ತಿದ್ದುಪಡಿಯೊಗೆ ಸೇರಿಸಿಕೊಳ್ಳಬೇಕೆಂದೂ ಇಲ್ಲಿಯ ಕಾಂಗ್ರೆಸ್ ಹಾಗೂ ರೈತ ಪ್ರತಿನಿಧಿಗಳ ಬೇಡಿಕೆ ಹೋಗಿದ್ದಿತು; 'ಇಂತಹ ಉಪಕಾರಕ್ಕೆ ಬಾಹಿರಂಗಲು ನಾವು ಮಾಡಿರುವ ಪಾಪವೇನು?" ಎಂದು ದಕ್ಷಿಣ ಕನ್ನಡದ ಸಣ್ಣ ವರ್ಗದಾರರು-ದಿನನಿತ್ಯಕ್ಕೆ ಸಾಕ್ಕು ಸಾಲದು ಎಂಬಷ್ಟೇ ಆಸ್ತಿಯುಳ್ಳ ಸಾಗುವಳ್ಳೀದಾರರು – ಸಂತಾಪಗೊಂಡು ಪ್ರತಿಸ್ಪಂದಿಸಿದ್ದಾರೆ. ಈ ದೂರುಗಳು ಮದ್ರಾಸ್ ಮಂತ್ರಿಗಳ ಕಿವಿಗೇನೂ ನುಟ್ಟಿಲ್ಲವೆಂದಲ್ಲ. ಆದರೂ ಮದ್ರಾಸಿನ ಬೇ ಸಾಯ ಮಂತ್ರಿ ಶ್ರೀ ಕ. ಮಾಧವ ನೇನನರು ಎಸೆಂಬ್ಲಿಯಲ್ಲಿ ಈ ಕುರಿತು ಕೊಟ್ಟರುವ ಸಮಾಧಾನ:-"ದಕ್ಷಿಣಕನ್ನಡ ಜಿಲ್ಲೆ ಮತ್ತು ಮಲಬಾರಿನ ಕೆಲವು ಭಾಗಗಳನ್ನು ಈ ವಿಧಾನಕ್ಕೆ ಹೊಂದಿಸಿಕೊಡಲು ಕೆಲವು ವಿಮರ್ಶೆಗಳೇನೋ ಎದ್ದಿವೆ. ಆದರೆ ಆ ಭಾಗಗಳ "ಕನಾಮ್" ಭೋಗ್ಯಾದಿಯ ವಿಲಕ್ಷಣ ರೀತಿ ಮತ್ತು ಸಾರಿಸ್ವಾರಿಕೆ ಸಂಬಂಧದ ಸ್ಥಳೀಯ ಶಾಸನದ ಕೆಲವು ಆಗುಹೋಗುಗಳ ಮೇಲಿಂದ ಅವುಗಳನ್ನು ಹೊರತು ಪಡಿಸಿದುದೇ ನ್ಯಾಯವನ್ನಿಸಿದೆ. ಒಟ್ಟಿನ ನೋಲೆ ಹೀಗೆ ಹೊರ ಪಡಿಸಿದುದು ಒಕ್ಕಲುಗಳಿಗೆ ಅನುಕೂಲ ಹೊರತು ವರ್ಗದಾರರಿಗಲ್ಲ". ಸರಕಾರದ ಮಾತಿನ ರೂಪದಿಂದ ಹೋರಿಬರುವ ಈ ಕಾರಣಗಳು ನಿರಾಧಾರವಾಗಿರಲಾರವು. ಆದರೆ ದಕ್ಷಿಣಕನ್ನಡದ ಪ್ರತ್ಯಕ್ಷಾನುಭವದಿಂದ ಹೇಳುವದಾದರೆ, ತಮ್ಮ ಜೀವನ ನಿರ್ವಹಣ ಆಥವಾ ಕುಟುಂಬಿಕ ಆಗುಹೋಗುಗಳ ಸಂಬಂಧದ ಅನಿವಾರ್ಯ ಅಡಚಣೆಗಳ ನಿವಾರಣೆಗಾಗಿ ತುಂಡು ವರ್ಗದಾರೀ ರೈತರು ತಮ್ಮ ಹೊಲ ಗದ್ದೆಗಳನ್ನು ಅಡವಾಗಿ ಪರಾಧೀನ ಪಡಿಸುವುದೇ ಹೆಚ್ಚಿಗೆ. ಹೀಗೆ ಸೋಗು ನೆಲ ಕಂಡಿದ ರೈತರನ್ನು ಮೇಲಕ್ಕೆತ್ತುವ ಕೈಯ್ಯಾಗಬೇಕೆಂಬುದೇ 'ಸಾಲನಿವಾರಣಾ ಮಸೂದೆ'ಯ ಮೂಲೋದ್ದೇಶ. ಸರಕಾರದ ಈ ಉದ್ದೇಶ-ದಕ್ಷಿಣ ಕನ್ನಡದಲ್ಲಿ ತಮ್ಮ ಭೂಮಿಗಳನ್ನು ಒತ್ತೆಹಾಕಿದ್ದು ಬಹು ಸಂಖ್ಯಾಕರ ನಿಜಸ್ಥಿತಿ-ಮತ್ತೀಗ ತಮಗೇ ರಿಯಾಯತಿ ಇಲ್ಲವೆಂದಾದೊಡನೆ ಅತಿರೇಕ ಸಂತಾಪಕ್ಕೀಡಾಗಿರುವ ವರ್ಗ-ಇವುಗಳಿಂದಿರು ಬೇಸಾಯ ಮಂತ್ರಿಗಳ ಮಾತು ಒಂದು ಬೇರೆಯೇ ಜಗತ್ತಿನ ಚಿತ್ರವಾಗಿ ಕಾಣಿಸುತ್ತಿದೆ! ಸರಕಾರವು ಈ ಜಿಲ್ಲೆ ಮತ್ತು ಮಲಬಾರಿನ ಭಾಗಗಳನ್ನು ಹೊರತು ಪಡಿಸಿರುವುದೆ? ಸ್ಥಳೀಯ ಅಧಿಕಾರಿಗಳ ಮೂಲಕ ಆಸ್ತಿ ಅಡವಿಗೆ ಹಾಕಿದವರ ಮತ್ತು ಪಡೆದವರ ಸಂಬಂಧದ ದಾಖಲೆಗೆ ಳೆಲ್ಲವುಗಳ ಪರಿಶೀಲನೆ ನಡೆಸಲು ಸರಕಾರಕ್ಕೆ ಸಾಧ್ಯವಿದೆ. ಇಲ್ಲಿಯ ಅಡವು ಕ್ರಯ ಮತ್ತು ವಾರೀಸುಕುನುಗಳು ಈ ಬಾರಿ ಅತ್ತ ಬಂದರೂ, ಸಾಲ ಪೀಡಿತ ರೈತರ ಉದ್ಧಾರವೇ ಮೂಲೋದ್ದೇಶವಾಗಿರುವ ಆ ಶಾಸನದ ಸಾಫಲ್ಯತೆಗಾಗಿ ಪ್ರತ್ಯೇಕ ತಿದ್ದುಪಡಿ ಆಥವಾ ಬೇರೆ ಕ್ರಮವನ್ನು ಇನ್ನಾದರೂ ಸರಕಾರವು ತರಬಾರದೇಕೆ?

ಪ್ರಕಟಣೆ

ಉಡ್ಪಿ ಮುನ್ಸಿಪಾಲಿಟಿ ಮತ್ತು ರೇಶನಿಗೆ ಸಂಬಂಧಪಟ್ಟ ಗ್ರಾಮಗಳಲ್ಲಿ ಇರುವ ಎಲ್ಲಾ ಮನೆಗಳಿಗೂ, ಹೊಟೆಲು ಮತ್ತು ತಿಂಡಿ ತಿನಿಸುಗಳನ್ನು ಮಾರುವ ಅಂಗಡಿಗಳಿಗೂ ರೇಶನು ಕೊಡುವುದರ ಬಾಬ್ತು ಕಸ್ಟಮ್ ವಿಚಾರಣೆಯ ಕುರಿತು ಫಾರ್ಮುಗಳನ್ನು ಆಯಾಯ ವಾರ್ಡಿನ ಎನ್ಯುಮರೇಟರು ತಾ. 2-11-48ರಿಂದ ತಾ. 6-11-48ರ ಒಳಗೆ ರೇಶನಿಂಗ್ ಆಫೀಸರರಿಗೆ ಕಳುಹಿಸುವ ಪ್ರಕಾರ ಸದ್ರಿ ವಿಚಾರಣೆಯ ಫಾರ್ಮನ್ನು ತಾ. 7-11-48ರಲ್ಲು ಬರೆಯದೆ ಬಾಕಿ ಇರುವ ಯಾವತ್ತೂ ಮನೆಯವರು ಮತ್ತು ಹೋಟೆಲಿನವರು ಪ ತಿಂಡಿ ತಿನಿಸುಗಳ ಅಂಗಡಿಯವರು ಯಾರಾದರೂ ಇದ್ದರೆ ಅವರು ಕೂಡಲೆ ಸದ್ರಿ ಫಾರ್ಮುಗಳನ್ನು ಉಡ್ಪಿ ರೇಶನಿಂಗ್ ಆಫೀಸಿನವ ಪದವು ಉತ್ತರಿಸಿ ಉಡ್ಪಿ ರೇಶನಿಂಗ್ ಆಫೀಸಿನಲ್ಲಿ ಸಾಕ್ಷ್ಯ ಮಾಡತಕ್ಕದ್ದೆಂದೂ ಇಲ್ಲವಾದರೆ ರೇಶನ್ ದೊರಕುವುದಿಲ್ಲವೆಂದೂ ಉಡ್ಪಿ ಸ್ಪೆಶಲ್ ಆಫೀಸರರು ತಿಳಿಸುತ್ತಾರೆ.

[೪ನೇ ಪುಟದಿಂದ]

ಅಥವಾ ಇದರ ಇಪ್ಪತ್ತನೇ ಒಂದಂಶ ದಷ್ಟಾಗುವ ಬೇರಿವುನಾದರೂ ನಡೆಯಬಲ್ಲದೆಂಬುದಕ್ಕಾಗಿ ನಾವು ಕೃತಜ್ಞತೆಯಿಂದಿರಬೇಕು. (ಈ ಮಾತು ಕೇಳಿದೊಡನೆಯೇ ಸರಕಾರಿ ನಕ್ಷಗಳವರ ಜೊಬ್ಬೆಗಳೆದ್ದುವು. 'ಅಮೃತಸರ?' 'ಟೋರಿ ಸರಕಾರದ ಜವಾಬ್ದಾರಿಯಾಗಿದ್ದ ಬರಗಾಲ ಕ್ಕೆನೆನ್ನುವರಿ ?" ಎಂಬ ಸವಾಲುಗಳು ವಾಲ್ಯಾಯ್ತು ಬಂದುವ್ರೆ. ಚರ್ಚಿಲ್ಲರು ಮರು ಸೂತಾಡಿದರು:-) ನಾನೀಗ ರಕ್ತ ದೋಕುಳಿಯ ಹಿಂಸೆಯ ಮಾತಾಡುತ್ತಿದ್ದೇನೆ; ಬರಗಾಲದ ಕುರಿತಲ್ಲ. ಬರಗಾಲ-ಇನ್ನು ಮುಂದಿನ ಕಾಲದಲ್ಲಿ ಅದಿಂತಹ ಏನಾಗುವುದೋ ಹೇಳುವುದಸಾಧ್ಯ. ಬ್ರಿಟಿಷ್ ರಾಜ್ಯವಿರುವಾಗ ಭಾರತದ ಜನ ಸಂಖ್ಯೆ ಐವತ್ತೇ ವರುಷಗಳಲ್ಲಿ ನೂರು ಮಿಲಿಯ ನಿರಿದ್ದಿತು. ಹಸಿವೆ ಪೀಡೆಯು ಅಪ್ಪಗತಿಗೆ ಅಜ್ಜ ಬಂದುದೇನೂ ಕಾಣುವದಿಲ್ಲ. ಈ ಫ್ಯೂನೆವೊಂದು ಮುಕ್ತಾಯವೂ ಅಲ್ಲ; ಮುಕ್ತಾಯದ ಆರಂಭ ಕೂಡಾ ಅಲ್ಲ. ಆಕ್ರಮಣ, ದಬ್ಬಾಳಿಕೆ, ಮತ್ತು ಅನಾಜಕತೆಯು ಯಾವ ರೂಪದಿಂದ ಬಂದರೂ ಅದರ ವಿರುದ್ಧ ನಾವು ನಮ್ಮ ವರ್ಚಸ್ಸನ್ನು ಉಪಯೋಗಿಸಬೇಕು. ಸಂಯುಕ್ತ ರಾಷ್ಟ್ರ ಸಂಘ ನಿಬಂಧನೆಗಳ ತತ್ವಗಳನ್ನು ನಾವು ಅನುಕರಿಸಬೇಕು; ಮಹಾತ್ಮಾ ಮೂಲಕ ನಮ್ಮ ಅನುಯಾಯೀ ಭಾರತ ಪ್ರಜೆಗಳ ಈಗ ತೇಲಾಡುತ್ತಿರುವ ಅಸಾಧ್ಯ ತೆರೆಗಳಲ್ಲಿಯೂ ನಾವು ಚುಕ್ಕಾಣಿ ಯಿಂಗಿಸಿ ಗುರಿಯತ್ತ ಸಾಗಲು ಸಮರ್ಥರಿರಬೇಕು. ಈ ಕಾರಣ ಮತ್ತು ತತ್ವಗಳ ಮೇಲಿಂದಲೇ ನಾನು, ಯಾವ ಮತಸಂಗ್ರಹವೂ ಇಲ್ಲದೆ ಹಿಂಸಾತ್ಮಕವಾಗಿ, ಸ್ವಚ್ಛಾವರ್ತನೆಯಿಂದ ಹೈದರಾಬಾದನ್ನು ಕಬಳಿಸಿಕೊಂಡುದನ್ನು ನಿಷೇಧಿಸಿದ್ದೆ ಮತ್ತು ಖಂಡಿಸಿದ್ದೆನಲ್ಲದೆ ಹಿಂದು ಅಥವಾ ಮುಸ್ಲಿಂ ಎಂಬುದನ್ನು ಅಧರಿಸಿಕೊಂಡಲ್ಲ. ಅಂತೆಯೇ ಕಾಶ್ಮೀರದ ಮುಸ್ಲಿಂ ಜನತೆಯನ್ನು ಅವರ ಇಚ್ಛೆಗೆ ವಿರುದ್ಧವಾಗಿ ಹಿಂದೂ ಆಡಳಿತೆಯೊಳಗೆ ಸೇರಿಸಿಕೊಳ್ಳಲು ಈಗ ನಡೆಯುತ್ತಿರುವ ಪ್ರಯತ್ನಗಳನ್ನೂ ನಾನು ಖಂಡಿಸುತ್ತೇನೆ."

ಆ ಮೇಲೆ ಚರ್ಚಿಲ್ಲರು "ಬ್ರಿಟಿಷ್ ಕಾಮನ್‌ವೆಲ್ತ್" ಎಂಬ ಹೆಸರಿನ "ಬ್ರಿಟಿಷ್" ಪದವನ್ನು ತೊಡೆದು ಹಾಕಿದುದನ್ನು ಕಂಡೋಕ್ತಿಯಾಗಿ ಖಂಡಿಸಿ ಅದನ್ನು ಉಚ್ಚ ತೆಗೆಯಲು ತನ್ನ ಪಕ್ಷವೆಂದೂ ಬಿಡಲಾರದೆಂದೂ ಕ್ರಿಮ, ನಿಯಮ ಮತ್ತು ವಸ್ತುಸ್ಥಿತಿಗೆ ವಿರುದ್ಧವೆಂದೂ ಟೀಕಿಸಿದರು. "ತಮಗೆ ಇಷ್ಟ ತೋರಿದರೆ, ಯಾವ ಹಂಗನ್ನೂ ಕಟ್ಟಿಕೊಳ್ಳದೆ, ತಾವು ಪಡೆಯುವ ಸ್ವಯೋಜನಕ್ಕೆ ಪ್ರತಿಯಾಗಿ ಯಾವುದೇ ಚಿಹ್ನಾತ್ಮಕ ಅಥವಾ ಭಾವನಾತ್ಮಕ ಪ್ರತಿಫಲಗಳನ್ನು ಕೂಡಾ ಕೊಡದೆ ಮಿ. ಕೂಸ್ಟೆಲೋ (ಐರ್ಲೆಂಡಿನ ಪ್ರಧಾನಿ) ಮತ್ತು ಪಂಡಿತ ನೆಹರುಗಳು ನಮ್ಮ ಸಹಕಾರದ ಎಲ್ಲಾ ಲಾಭಗಳನ್ನೂ ಕೊಡಿಯುವದರಲ್ಲಿ ಪೂರ್ಣ ಭಾಗಿಗಳಾಗುವಂತೆ ಮಾಡುವದಕ್ಕಾಗಿಯೇ ಈ ಬದಲಾವಣೆಯನ್ನು ಸೂಚಿಸಲಾಗಿದೆ" ಎಂದು ಅರಿ ಮಾತನ್ನಾಡಿದರು.

ಸರ್ದಾರರ ಬುದ್ಧಿವಾದ

ಬ್ರಿಟಿಷ್ ಸಾಮ್ರಾಜ್ಯಾಹಂಭವಿ ಮಿ. ಚರ್ಚಿಲ್ಲರಿಗೆ 'ಯುದ್ಧೋತ್ತೇಜಕರ ಗೊಗ್' ಎಂಬ ಬಿರುದು ರಶ್ಮದ ಉಕ್ಕಿನ ಮನುಷ್ಯನಿಂದ ಸಿಕ್ಕಿದರೆ ಭಾರತದ ಉಕ್ಕಿನ ಮನುಷ್ಯನಿಂದ ಒದ್ದಿವಾದ ದೊರೆತಿದೆ. ಬಕ್ಕೌಬಾದ್ ತಾ. 29ರಲ್ಲಿ ಜೊಂಬಾಯಿಯ ಪತ್ರಿಕಾ ಸಂಘದವರಿಕ್ಕೆ ಸ್ವಾಗತ ಕೂಟದಲ್ಲಿ ಭಾಷಣವೀಯುತ್ತಾ ಸರ್ದಾರ್ ಪಟೇಲರು ಚರ್ಚಿಲ್ಲರ ಉನ್ಮಾದ ವಾಡೆಗಳ ಉರಿಗೆ ತಣ್ಣೀರು ಹೊಯ್ದಿದ್ದಾರೆ. ಸರ್ದಾರರಂದರು; "30,000 ಬ್ರಿಟಿಷ್ ನೋಲ್ಜರರ ಮಾತುಹಾಗಿರಲಿ: 300,000 ಬ್ರಿಟಿಷ್ ನೋಲ್ಜರರಿಂದಾದರೂ ಭಾರತವನ್ನು ಆಥವಾ ಪೂರ್ವವನ್ನು ಆಳುವದಾಗದ ಮಾತು. ಲೋಕವೀಗ ಬಹಳವಾಗಿ ಬದಲಾಯಿಸಿದೆ ಎಂಬುದು ಕೂಡಾ ಚರ್ಚಿಲ್ಲರ ಮನಸ್ಸಿಗೆ ನೋಗಿಲ್ಲವೇ? ದೊಡ್ಡ ಮನುಷ್ಯರಿಂದಾಗಿರುವ ಕೆಲಸಗಳನ್ನು ಹಾಳು ಮಾಡಲು ಚರ್ಚಿಲ್ಲರು ಪ್ರಯತ್ನಿಸದಿರಲಿ. ಈ ದಿನದ ಜಗತ್ತು, ಬೇರೆಯೇ ಲೋಕ ಯುದ್ಧವನ್ನು ಜಯಿಸಿದ ಆ ಮನುಷ್ಯ, ತಾನು ಯುದ್ಧಾವಧಿಯಲ್ಲಿ ಗಳಿಸಿಕೊಂಡಿದ್ದ ಭೂತಿ ಮತ್ತು ಸ್ಥಾನಗಳನ್ನೀಗ ತಗ್ಗಿಸಿ ಕೊಳ್ಳುತ್ತಿರುವುದನ್ನು ಕಾಣುವಾಗ ಮರುಕ ಹುಟ್ಟುತ್ತಿದೆ ಅವರ ಈ ಸ್ಥಿತಿಗಾಗಿ ಕರುಣೆ ಮತ್ತು ಪರಾನುಭೂತಿಯ ಹೊರತು ಬೇರೇನನ್ನೂ ಪ್ರದರ್ಶಿಸಲಿಕ್ಕಿಲ್ಲ. ಪ್ರಜಾಸತ್ತೆಯು ಬಾಳುವದು ಸಾಧ್ಯವೆಂಬುದನ್ನು ಮಿ. ಚರ್ಚಿಲ್ಲರು ತೋರಿಸಿಕೊಟ್ಟವರು. ಅಂತಹ ಮನುಷ್ಯನೇ ಈಗ ಅದೇ ಪ್ರಜಾಸತ್ತೆಯು ಇಡೀ ಲೋಕದಲ್ಲೇ ನಿರ್ನಾಮವಾಗುವದನ್ನು ನೋಡಲಿಚ್ಛಿಸುತ್ತಿದ್ದಾರೆ. ಯುದ್ಧ ವೇನೋ ಜಯ ಹೊಂದಿತು. ಆದರೆ ಈ ದಿನ ಯುರೋಪು ಹೇಗಿದೆ, ಪೂರ್ವ ಹೇಗಿದೆ, ಎಂಬುದನ್ನು ನೀವು ನೋಡುತ್ತಿದ್ದೀರಿ. ಯುದ್ಧದ ಪರಿಣಾಮವು ಎಲ್ಲೆಲ್ಲೂ ಎದ್ದು ಕಾಣಿಸುತ್ತಿದೆ. ಈಗಲೂ ಹಸಿವು ಪೀಡೆ, ಅದಕ್ಕೂ ಕಳತೆಯ ಸ್ಥಿತಿ ವ್ಯಾಪಿಸಿಕೊಂಡಿದೆ. ಈಗಲೂ ಬತ್ತಲೆ ಸ್ಥಿತಿ, ಅದಕ್ಕೂ ಕಳತೆಯದು ನೆಲೆ ನಿಂತಿದೆ. ಯುರೋಪಿನ ಸ್ಥಿತಿಗತಿಗಳು ಯುದ್ಧ ಪೂರ್ವದ ಸ್ಥಿತಿಗಿಂತ ಏನೂ ಉತ್ತಮವಾಗಿಲ್ಲವೆಂಬುದನ್ನು ನಾನು ಯುರೋಪಿನಿಂದ ಮರಳಿದವರ ಬಾಯಿಯಿಂದ ಕೇಳಿದ್ದೇನೆ. ಇಂಗ್ಲಾಂಡು ಸುಸಂಘಟಿತ ಹಾಗೂ ಒಳ್ಳೇ ಕಿಸ್ತುಬದ್ಧ ರಾಷ್ಟ್ರ. ಅದರೂ ಅಲ್ಲಿಯ ಜೀವನವು ಮೊದಲಿನಷ್ಟು ಸುಗಮವಾಗಿಲ್ಲ. ನಾವು ಎಂಡಡ ಜಾಗತಿಕ ಯುದ್ಧಗಳನ್ನು ಕಡೆಹಾಯ್ದಿರಬಹುದು. ಆದರೆ ಲೋಕವು ಮೂರನೇ ಯುದ್ಧದಿಂದಲೂ ಮೇಲೆ ಬಿದ್ದೀತೆಂದು ಹೇಳಲು ಯಾರಿಗೂ ಸಾಧ್ಯವಿಲ್ಲ. ಆದ್ದರಿಂದಲೇ ಲೋಕ ರಕ್ಷಣೆಗೆ ಅಹಿಂಸೆ ಮತ್ತು ಸತ್ಯವೇ ಗತಿಯೆಂದು ಅಂದು ನಮ್ಮ ಮಹಾನಾಯಕ ಕಲಿಸಿದ್ದರು. ಅಹಿಂಸಾತ್ಮಕವಾಗಿ ಪರ್ತಿಸಲು ಈಗ ಕೂಡಾ ಕಡಮೆಯಾಗಿತೆಂದಿಲ್ಲ. ಕೊನೆಯ ಪಕ್ಷ, ನಾವು ಭಾರತದಲ್ಲಿರುವವರಾದರೂ ಆ ವಿಧಾನಗಳನ್ನೇ ಭಾವಿಸಿಕೊಳ್ಳೋಣ.

× × ×

ಮೇಲಿನ ಮೂರು ವಾದಗಳಲ್ಲಿ ಇಡೀ ಜಗತ್ತಿನ ಶ್ರೀಮುಖೀ ಧೋರಣೆ ಬಿಂಬಿಸಿದೆ. ಎನ್ನಬಹುದು. ಯುದ್ಧ ಕಾಲದಲ್ಲಿ ಮುಂಜಾವಿನ ಹುಂಜಸ್ವರವಂತಿದ್ದ ಚರ್ಚಿಲ್ಲರ ನಾದವು ಅಧುನಿಕ ಜಗತ್ತಿಗೆ ಹಳೇ ಗೂಬೆಯ ಅಪಸ್ವರವಾಗಿ ಮಾರ್ಪಟ್ಟಿದೆ. ಸಾಮ್ರಾಜ್ಯಶಾಹಿ ಮತ್ತು ಖಂಡ ವಾಳಶಾಹಿಗಳು ಅಧುನಿಕತೆಯ-ಶಾಯುಕ್ತಿಯ-ಪ್ರೇಮಾಕಿನ ಬಲದಿಂದ ಈಗ ತುಸು ಮನೋಹರವಾದ ಹೃದಯನ್ನ ಕೊಡ ಹೆತ್ತಿದುದನ್ನು ಖಂಡ ಸ್ವಾಲಿನರೂ ಅವುಗಳದಿರು ಅದೇ ಆಟ ಆಡುತ್ತಿದ್ದಾರೆ; ಹೊಸ ಪ್ರಜಾಪ್ರಭುತ್ವವು ನಿಜಕ್ಕೂ ಶುದ್ಧ ಮನಸ್ಸಿನಿಂದ ಇವುಗಳ ನಡುವಿನಲ್ಲೆದ್ದಿದೆ ಎಂಬುದರ ದೃಷ್ಟಾಂತ ಸರ್ದಾರ್ ಪಟೇಲ್. ಈ ಪೈಕಿ ಯಾವುದು ಗೆಲ್ಲುವದು? ಲೋಕ ಕ್ಷೇಮಕ್ಕಾಗಿ ಮೂರನೆಯದೇ ಗೆಲ್ಲಬೇಕು!

ಮುಂಬಾಯಿ

ಕನ್ನಡ ಸಂಗೀತ ನಾಟಕ ಸಭಾ:- ಇವರು ದಿ. ಗ್ರೇಂಟರ್‌ನೇಶನಲ್ ಟ್ರೈಪರ್ಟಿಂಗ್ ಇನ್ವೆಸ್ಟ್‌ಮೆಂಟ್ಸ್‌ಮುಂಬಯಿ ಇದರ ಸಹಾಯಾರ್ಥವಾಗಿ ಶ್ರೀ ಕೆ. ಕೆ. ತೆಟ್ಟಿಯವರಿಂದ ಬರೆಯಲ್ಪಟ್ಟ ಇನ್ನ ಭಾಷಾರಿಣಿಯೂರಿಗೆ' ಎಂಬ ಆತ್ಮತ್ಯಮಾನವಾದ ಸಾಮಾಜಿಕ ಕನ್ನಡ ನಾಟಕವನ್ನು ಪರೇಲಿನಲ್ಲಿರುವ ಪಾಮೋದರ್ ಥಾಕರ್ಸಿ ಹೋಲಿನಲ್ಲಿ ಶೀಘ್ರದಲ್ಲಿಯೇ ಅಭಿನಯಿಸಲಿರುವರು.

ವಿದ್ಯಾದಾಯಿನಿ ಸಭೆಯ 27ನೇ ವರ್ಧಂತಿಯುತ್ಸವವು :- ಇದೇ ತಾ. 7ನೇ ಆನಿತ್ಯವಾರ ಅಪರಾಹ್ನ 2-30ಕ್ಕೆ ಕ್ವೀನ್ಸ್ ರೋಡಿನಲ್ಲಿರುವ ಸುಂದರಬಾಯಿ ಹಾಲ್‌ನಲ್ಲಿ ಕಲ್ಯಾಣ ಮುಂಬಯಿ ಮಹಾನಗರಪಾಲಿಕೆಯ ಮಾಜಿ ಚೇರ್‌ಮೆನ್ ಶ್ರೀ ಆನಂದರಾವ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಜರಗಲಿದು ವುದೆಂದು ಸಭೆಯ ಗೌ. ಕಾರ್ಯದರ್ಶಿಯರು ತಿಳಿಸುತ್ತಾರೆ.

ಉತ್ತರ ಮುಂಬಯಿ ಹೋಟೇಲು ಕಾರ್ಮಿಕರ ಸಂಘದ ಮಹಾಸಭೆಯು ತಾ. 16-11-48ನೇ ಮಂಗಳವಾರ ರಾತ್ರಿ ಘಂಟೆ 8-30ಕ್ಕೆ ಪರೇಲ್, ಪೊಯಿಬಾವಡಿಯಲ್ಲಿಯ ಪಾಮೋದರ ನಾಥನಿ ಸ್ಮಾರಕ ಮಂದಿರದ ಅಧ್ಯಕ್ಷತೆಯಲ್ಲಿ ಜರಗಲಿದು ವುದು.

ಅಸಧ್ಯನ

ಪ್ರಾಯು ಏರಿದಾಗ-ಸಂಪಾದನೆ ಇಳಿದಾಗ-ಆಪದ್ಧನವೊಂದೇ ನೆರವಾಗಬಲ್ಲುದು.

ಆಪದ್ಧನವನ್ನು ಕೂಡಿಸಬೇಕೆಂದಿರುವವರಿಗೆ ನಾವು ನೆರವಾಗುವೆವು.

ದಿ ನ್ಯೂ ಕರ್ನಾಟಕ

ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಕರ್ನಾಟಕದ ಏಕಮಾತ್ರ ಪ್ರೊವಿಡೆಂಟ್ ವಿಮಾಸಂಸ್ಥೆ- ಒಡವರ ಕಾಮಧೇನು.

ವಿವರಕ್ಕೆ ಮತ್ತು ವಿಜಸ್ಸಿಗೆ ಬರೆಯಿರಿ-

The New Karnataka Provident Insurance Company Ltd, UDIPI.

For Banking Service in Trade, Industry & Agriculture

approach

THE AGRICULTURAL & INDUSTRIAL BANK Ltd.,

(Established in 1934)

Head Office: **COONDAPOOR, S K**

Branches:

1	Ankola,	7	Gokarn,	13	Nagar,
2	Belgaum,	8	Haveri,	14	Shimoga,
3	Bhatkal,	9	Hubli,	15	Sirsi,
4	Coondapoor,	10	Karvar,	16	Somwarpet,
5	Dharwar,	11	Kumta,	17	Virajpet,
6	Gadag,	12	Mangalore,	18	Honavar.

19 384, M. Jaipuria House, Kalbadevi Road, BOMBAY, 2.

Current, Savings bank, and Fixed deposits are accepted.

For Terms apply to the nearest Branch.

Coondapoor, 29-9-1948.

K. Vittaldas Shenai, Managing Director.

ಸುಲಭದಲ್ಲಿ ಇಂಗ್ಲಿಷ್

ಇಂಗ್ಲಿಷ್ ಸ್ವಯಂಬೋಧಿನಿ.

ಬೆಲೆ ರೂ ೧ ೦ ೯

ಪುಸ್ತಕ ವ್ಯಾಪಾರಿಗಳಲ್ಲಿ ಸಿಗುತ್ತದೆ.



Approved firm by the Govt. of Mysore
Certified by the Agent of the Govt. of Cylone & Indian.

ಉಡುಪಿ

ಮುನಿಸಿಪಲ್ ಕೌನ್ಸಿಲು ಮೀಟಿಂಗು ಈ ಕಳೆದ ತಾ. 29ರಲ್ಲು ಚೆಯರ್‌ಮೆನ್ ಶ್ರೀ ಪಿ. ಅನೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಭಾಷಾವಾರು ಪ್ರಾಂತರಚನಾ ಸಮಿತಿಯ ಪ್ರಶ್ನಾವಳಿಗಳನ್ನು ವಿಮರ್ಶಿಸಿ ಕರ್ನಾಟಕ ಪ್ರಾಂತರಚನೆಯು ಕೂಡಲೇ ಆಗತಕ್ಕದ್ದೆಂದು ಕೌನ್ಸಿಲಿನ ಅಭಿಪ್ರಾಯವಾಯಿತು.

ವಿದಾಯ ಸತ್ಕಾರ ಸ್ಥಳೀಯ ಬೋರ್ಡು ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ವಿ. ಗಣೇಶ ಸುಂದರರಾಯರು ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗಲಿರುವ ಸಂದರ್ಭ ಅವರಿಗೆ ಶಾಲಾಮುಖೇನ ಅಧ್ಯಾಪಕ ವೃಂದದವರು ವಿದಾಯ ಸತ್ಕಾರಕೂಟವನ್ನೇರ್ಪಡಿಸಿದ್ದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಆರ್. ಫೆರ್ನಾಂಡೀಸರು ಅಧ್ಯಕ್ಷತೆ ವಹಿಸಿದ್ದು ಶ್ರೀಗಳಾದ ಬಿ. ಎ. ಸಾಮಕ್, ಕೆ. ನಿ. ಕಿಣ್ಯೆ, ಕೆ. ಎ. ದೇವದಾಸ್, ಪಿ ಕೆ. ಆಚಾರ್, ಮೊದಲಾದವರು ಶ್ರೀ ರಾಯರು ವಿದ್ಯಾಸಂಸ್ಥೆಗೆ ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ನೂತನಾವಾಸಿದರು ಶ್ರೀ ರಾಯರಿಗೆ ಬೆಳ್ಳಿಯ ಪಾರಿತೋಷಗಳು ಕೊಡಲಾದುವು.

ಸೆಪ್ಟಿಮೆಂಟರಿ ಎಸ್. ಎಸ್. ಎಲ್. ಸಿ ಪರೀಕ್ಷೆ ಈ ಕೇಂದ್ರದಲ್ಲಿ ಕನ್ನಡ ಮಾಧ್ಯಮ'ವೆಸರಿಗೆ ಕೂಡಾ "ಸಿಬ್ಬಂಕಿ ಶೇಷ ಶಾಸ್ತ್ರ"ದಲ್ಲಿ ಇಂಗ್ಲಿಷ್ ಪ್ರಶ್ನಾಪತ್ರಗಳೇ ದೊರಕಿದುದರಿಂದ ಎಲ್ಲರೂ ಸತಾಪರಾಗಿರುತ್ತಾರೆ. ಪರೀಕ್ಷಾರ್ಥಿಗಳು ಇದನ್ನು ಗಮನಿಸುವರಾಗಿ ಮಹಜರ್ ಯಲೊಬ್ಬರು ಬರೆಯುವ ಸ್ಥಾನ.

ರಾಷ್ಟ್ರಭಾಷಾ ಶಿಕ್ಷಣ ಶಿಬಿರದಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರಾಥಮಿಕ, ಮಾಧ್ಯಮಿಕ ಮತ್ತು ರಾಷ್ಟ್ರಭಾಷಾ ಪರಿಣತಿಯತನಕ ಧರ್ಮಾರ್ಥ ಶಿಕ್ಷಣ ವೀಯಲಾಗುವುದು. ಈ ಸದುಪಯೋಗವನ್ನು ಪಡೆಯುವವರು ರೂಪ್ಯಾ। ಶುಟ್ಟು ಶಿಬಿರದ ಸದಸ್ಯರಾಗಬೇಕು. ಬಸ್ ಓಡ್ಯಾಟವಿರುವ ಸೆಂಟರುಗಳಲ್ಲಿ 'ಶಿಬಿರ'ದ ರಾಖೆಗಳನ್ನು ಸಹ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನೇ ಕ್ಷಿಸುವವರು ಶ್ರೀ ಮಹಾಬಲ ನಾಯಕ್, ಕಾರ್ಯದರ್ಶಿ, ರಾ. ಶಿ. ಶಿಬಿರ, ಚಿತ್ತರಂಜನ ಭವನ, ಉಡುಪಿ. ಇವರಿಗೆ ಬರೆಕೊಳ್ಳಬಹುದು.

"ವುಡ್‌ಲೇಂಡ್ಸ್, ಉಡುಪಿ":— ಎಂಬ ನೂತನ ಊಟ್ಟು ವಸತಿ, ಮತ್ತು ಉಪಹಾರ ಗೃಹವು ಉಡುಪಿಯ ಅತ್ಯಂತ ಕೇಂದ್ರ ಸ್ಥಳದಲ್ಲಿ ಸಮೀಪ ವೈಭವದೊಡನೆ ಪ್ರಾರಂಭವಾಗಲಿದೆ ಎಂಬುದನ್ನು ಕೇಳಿ ನಮ್ಮ ಮಿತ್ರರಲ್ಲಿ ಕೆಲವರು ನಮ್ಮನ್ನು ಇನ್ನಷ್ಟು ಹುರಿಯೆಂಬಿಸಿ ಆಭಿವಂದಿಸಿರುವುದಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳೆಂದು ಶ್ರೀ ಆರ್. ಆರ್. ಕುಂಜೂರರವರು ತಿಳಿಸುತ್ತಾರೆ.

ಹನುಮಾನ ಕೆಲವು ದಿವಸಗಳಲ್ಲಿ ವಿಪರೀತ ಕೆಮೆಯಿದ್ದು ದೀಪಾವಳಿ ಕಾಲದಲ್ಲಿ ಬಂದೆರಗಿದ ಮಳೆ ದಿದ್ದಿರುವುದು.

ಕಲಾನ್ಮಂದಿರ ವಾರ್ಷಿಕೋತ್ಸವವು ಕಳೆದ ತಾ. 23 ಮತ್ತು 24ರಲ್ಲು ಎಸ್. ಪಿ. ಟಿ. ಎಸ್. ಎಲಿಮೆಂಟರಿ ಶಾಲೆಯಲ್ಲಿ ಜರಗಿತು. ಮೊದಲಿನದಿನ ಅಧ್ಯಕ್ಷತೆಯನ್ನು ಕ್ರಿಶ್ಚಿಯನ್ ಹೈಸ್ಕೂಲು ಮುಖ್ಯೋಪಾಧ್ಯಾಯ ಶ್ರೀ ಎ. ಎಸ್. ಕಾರಂರು ವಹಿಸಿದ್ದು ಶ್ರೀಗಳಾದ ಟಿ. ಎಲ್. ರಾವ್ ಶ್ರೀ ಕಂಠ ಐತ್ಯರ್ ಮೊದಲಾದವರ ಭಾಷಣಗಳಾದುವು. ಮರುದಿನದ ಸಭೆಗೆ ಶಾಲಾ ಡಿಪ್ಯುಟಿ ಇನ್ಸ್‌ಪೆಕ್ಟರ್ ಶ್ರೀ ಸೈ. ಗೋಪಾಲ ನವರು ಅಗ್ರಪೀಠವನ್ನಲಂಕರಿಸಿದ್ದರು. ಶ್ರೀ ಗಳಾದ ಪಿ. ಗೋಪಾಲಕೃಷ್ಣ ಭಟ್, ಎಚ್. ಭೀಮರಾವ್ ಮೊದಲಾದವರು ಭಾಷಣವಿತ್ತರು. ಎರಡು ದಿವಸಗಳಲ್ಲೂ ಕಾವ್ಯವಾಚನ ನಡೆದಿತ್ತು. ಲೇಖನ ನುತ್ತು ಭಾಷಣ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಕೊನೆಯ ದಿವಸ ಬಹುಮಾನ ವಿತರಣೆಯಾಯಿತು. ಕೊನೆಯ ರಾತ್ರಿ ಯಕ್ಷಗಾನ ಕಾಲಕ್ಷೇಪವಿತ್ತು.

ಮುನಿಯೂಲು :— ಹಿ. ದಿ ವಯಸ್ಕರ ಶಾಲೆಯಲ್ಲಿ ತಾ. 28-10-48ರಲ್ಲಿ ಶ್ರೀ ಬಿ ಆರ್. ಹೆಗ್ಡೆ, ಎಮ್. ಎ. ಯಲ್. ಟಿ.ಇವರ ಅಧ್ಯಕ್ಷತೆಯಲ್ಲಿ ಸಭೆ ನೆರೆತು. ಶ್ರೀಗಳಾದ ಚಂದ್ರಶೇಖರ ಶೆಟ್ಟಿ, ಕೃಷ್ಣ ಪೈ, ಶಿವಣ್ಣ ಆಚಲ್, ನರಸಿಂಹ ನ್ಯಾಕ, ವೆಂಕಟೇಶ ಭಟ್, ವಿಠ್ಠಲ ಶೆಣೈ, ವಿಠ್ಠಲ ಶೆಣೈ, ಅಂತಪ್ಪ ನ್ಯಾಕ, ಇವರೆಲ್ಲಾ ಭಾಷಣವಿತ್ತರು. ಕಡೆಗೆ ಶ್ರೀ ಡಾಕ್ಟರ್ ಯು. ಕೃಷ್ಣ ಇವರು ವಿದ್ಯಾರ್ಥಿಗಳ ಕಾರ್ಯಕ್ರಮಗಳನ್ನು ಪ್ರಶಂಸಿಸಿ, ಭಾಷಣವಿತ್ತರು. ತರುವಾಯ ಅಧ್ಯಕ್ಷರ ಭಾಷಣವಾಗಿ ಹಿಂದಿ ಅಧ್ಯಾಪಕ ಶ್ರೀಪಿ. ಬಿ. ಪೂಜಾರಿಯವರು ಅವರಿಗೆ ಧನ್ಯವಾದವರ್ಪಿಸಿ "ವಂದೇ ಮಾತರಂ"ನೊಂದಿಗೆ ಸಭೆ ಮುಕ್ತಾಯವಾಯಿತು.

ನಡಿಯುವ ಚಿತ್ರ:-

ನಿನ್ನ ಜೀವನದಲ್ಲಿ ನೀನು ಇನ್ನೊಬ್ಬನಿಗೆ ಒಳ್ಳೆಯದೆನ್ನಿಸಿದರೆ ಅಂದೇ ನೀನು ನಿನ್ನ ಚಿತೆಯನ್ನೇರ್ಪಡಿಸಿಕೊಂಡಂತೆ ಎಂದೊಬ್ಬನು ಹೇಳುವಾಗ ಅದೇನೆಂದು ನಾವಾದರೂ ನೋಡಲೇಬೇಕು

ಸಿಲ್ವರ್ ಸಿಲ್ವ್‌ನ್ಸನವರ **"ಭಲಾಯಿ"**

ಪೃಥ್ವಿರಾಜ್, ಸಿತಾರಾ, ಕುಮಾರ್, ಗೋಪ್.

ಶ್ರೀ ರಾಮಕೃಷ್ಣ ಥಿಯೇಟರ್ಸ್ ಲಿಮಿಟೆಡ್, ಉಡ್ಡಿ.

ಬರುವ ಚಿತ್ರ:

ಉತ್ತರ ಅಭಿಮನ್ಯು

ಶಾಂತಾ ಆಪ್ಟೆ, ಅಶೋಕ್‌ಕುಮಾರ್.

ವಿಶೇಷ ಪ್ರಚಾರವಾದರೇನೇ
ಜಾಹೀರಾತು ಕೊಟ್ಟವರಿಗೆ ತೃಪ್ತಿ.

ಅಂತಹ ಸಶ್ಚಿತ ಪ್ರಚಾರಕ್ಕೆ
ಉತ್ತಮ ಸಾಧನವೆಂದರೆ

1949 ವಿರೋಧಿ ಸಂವತ್ಸರದ 1950

ನವಯುಗ ಪಂಚಾಂಗ

ವಾಡಿಕೆಯಂತೆ ಸಕಾಲದಲ್ಲಿ ಪ್ರಕಟವಾಗಲಿದೆ.

ನಿಮ್ಮ ಜಾಹೀರಾತೊಂದನ್ನು ನವಯುಗ ಪಂಚಾಂಗದಲ್ಲಿ ಪ್ರಕಟಿಸಿ
ವಿಶೇಷ ಪ್ರತಿಫಲ ಪಡೆಯಿರಿ.

ಸಾಮಾನ್ಯ ಒಂದು ಪುಟಕ್ಕೆ ರೂ. 20 ಮಾತ್ರ.

ಹೆಚ್ಚಿನ ವಿವರಕ್ಕೆ ಬರೆಯಿರಿ:-

ಮೆನೇಜರ್, **ನವಯುಗ ಪ್ರೆಸ್**, ಉಡುಪಿ, ದ. ಕ.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಕಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನನ್ನ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನೆಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ನಿಮಿಷಾರ್ಧದಲ್ಲಿ ಪೀಡಿತ ಅವಯವಗಳಿಗೆ ಹೊಸ ಜೀವನವನ್ನೀಯುವುದು. ಇದು ಸಹಜವಾಗಿಯೂ ಪ್ರಕೃತಿ ಸಿದ್ಧವಾಗಿಯೂ ಇರುವ ಔಷಧಿಗಳಿಂದಲೇ ತಯಾರಿಸಲ್ಪಟ್ಟಿರುವುದರಿಂದ ಇದು ಸಾರ್ವತ್ರಿಕವಾಗಿ ಎಲ್ಲಾ ಪ್ರಾಣಿಗಳಿಗೂ ಸಮಾನವಾಗಿ ಉಪಯೋಗಿಸಲ್ಪಡುವುದು.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ವಿರಾಮ, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ನೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಕಂಡಿತನಸು, ಇವುಗಳ ರುಚಿಯುಟ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಲಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

ಈ ಔಷಧಿಯ ಉಪಯೋಗದಿಂದ ಹೆಚ್ಚು ಕಡಿಮೆ ಅಪಾಯಗಳಿಗೆ ಬಲಿಯಾಗುವ ಅಂದರೆ ತೀವ್ರ ರೂಪದ ರೋಗಗಳು ಒಂದು ಬಾಣಂತಿಯನ್ನೆ ಸಾಕಾಗುವಷ್ಟು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ಮಂಗಳೂರು.

ಸ್ವಾಕಿಸ್ಕರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜೆಬೆಟ್ಟು, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಹ್ಜುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ಕ್ಕೆ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕು ಅಮೋಘವಾದ ಶಕ್ತಿವರ್ಧಕ. ಪ್ರಸವವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ಕ್ಕೆ ರೂ. 1—12—0.

ಬೃಹನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ಕ್ಕೆ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮೂಹೆಯ ಔಷಧಿಗಳು ದೊರೆಯುತ್ತವೆ.

— ಎಂ. ಣಗಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ಸಮೂಹೆಯ ಔಷಧಗಳು ದೊರೆಯುತ್ತವೆ. ಇಲ್ಲಿ ಸಿಗ್ಗಿ ಬರದಿದ್ದಲ್ಲಿ ರೋಗಗಳ, ತಕ್ಕಹಾಗೆ ಔಷಧಿ ಏರ್ಪಾಡಿಸಲಾಗುವುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.



ಎಲ್ಲ ತರದ ದಂತ ರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂ

ಮಂಗಳೂರು

ದ. ಕ. ಜನಸೇವಾ ಸಂಘ, ಮಂಗಳೂರು—ಉದ್ದೇಶಗಳು—1. ಜನಸಾಮಾನ್ಯರಿಗೆ ಅನ್ವಯಿಸುವ ಕಾಂಗ್ರೆಸಿನ ರಚನಾತ್ಮಕ ಕಾರ್ಯಕ್ರಮಗಳನ್ನು (Constructive programme) ಸಾಧ್ಯತೆಶ್ಯವಾಗಿ ಸಾಧಿಸುವದು. ಅವರ ಹಳ್ಳಿಬಾಧ್ಯತೆಗಳ ಕುರಿತು ಪ್ರಜಾಂತ ಕಾರ್ಯ ಸಾಕ್ಷರತಾ ಪ್ರಚಾರ ಕಾರ್ಯ, ಕಾಲೋಚಿತ ಕಾನೂನಿನ ಕಾಯಿದೆಗಳ ಸರಿಯಾದ ತಿಳುವಳಿಕೆಯ ಪ್ರಚಾರ, ಜನಜಾಗೃತಿಯನ್ನುಂಟುಮಾಡಿ ಸಂಘಟನಾ ಕಾರ್ಯ, ಜಾತಿಬೇಧಗಳನ್ನು ನಿವಾರಿಸಿ ಸೋದರತೆ ಮತ್ತು ಸಮಾನತೆಗಳ ಬಲವರ್ಧನೆ, ನಿರುದ್ಯೋಗ ನಿವಾರಣೆಗೆ ಶಕ್ತ ವ್ಯವಸ್ಥೆ, ಮುಂದುಗಾಲಿಕೆಗಳ ನಿವಾರಣೆ, ಗ್ರಾಮದಲ್ಲಿ ಜನತೆಗೆ ಸುಲಭದಲ್ಲಿ ವೈದ್ಯಕೀಯ ಸಹಾಯ, ರೈತರಿಗೆ ಬೇಕಾದ ಸರ್ವಸಲಹ ಸೌಲಭ್ಯಗಳನ್ನು ಒದಗಿಸುವುದು

2. ಅಧಿಕಾರಗಳು- ನೋಂದಿನ ಉದ್ದೇಶಗಳಿಗಾಗಿ ಸಂಸ್ಥೆಯ ಹೆಸರಲ್ಲಿ ಚರಸ್ಥಿರ ಸೊತ್ತುಗಳನ್ನು ಭೋಗವಾಳವನ್ನೂ ಸಂಗ್ರಹಿಸಿ ಅವುಗಳ ಆಡಳಿತೆ ನೋಡುವುದು.

ಸ್ಥಾಯಿಭರಿತರಾದ ಸ್ತ್ರೀ ಪುರುಷರೆಲ್ಲಾ ಈ ಸಂಘಕ್ಕೆ ಮೆಂಬರರಾಗಬಹುದು ಸಂಘಕ್ಕೆ ಏಕಕಾಲದಲ್ಲಿ ಐನೂರು ರೂಪಾಯಿಕ್ಕೆ ಕೊಡುವವರು ಸ್ಥಾಪಕರು. ರೂ. 250-ಕೊಡುವವರು ಪೋಷಕ, ರೂ. 100. ಕೊಡುವವರು ಪ್ರೋತ್ಸಾಹಕರು, ರೂ. 50. ಕೊಡುವವರು ಸಾಮಾನ್ಯ ಸದಸ್ಯರೆಂದು ಕರೆಯಿಸಲ್ಪಡುವರು.

3. ಕಾರ್ಯನಿರ್ವಾಹಕ ಮಂಡಳಿ-ಸಂಘದ ಸದಸ್ಯರಿಂದ ಚುನಾಯಿಸಲ್ಪಟ್ಟ 15ರಿಂದ 25ರ ವರೆಗೆ ಸದಸ್ಯರಿರುವ ಕಾರ್ಯನಿರ್ವಾಹಕ ಮಂಡಳಿಯು ಇರತಕ್ಕದ್ದು. ಹೆಚ್ಚಿನ ಮಾಹಿತಿಯನ್ನು ಆಪೇಕ್ಷಿಸುವವರು ದ. ಕ. ಜನಸೇವಾ ಸಂಘ, ಮಂಗಳೂರು, ಆವರಿಂದ ಪತ್ರವ್ಯವಹಾರ ಮಾಡಬಹುದು.

ದ ಕ. ಜನಸೇವಾ ಸಂಘ :- ತಾ. 31-10-48 ರಲ್ಲಿ ದ. ಕ. ಸಮಾಚಾರ ಸಮಿತಿಯ ವಿಶೇಷ ಸಭೆ ಸೇರಿ, ಸಮಿತಿ ಹೆಸರನ್ನು ಜನಸೇವಾ ಸಂಘವೆಂದು ಮಾರ್ಪಡಿಸಲಾಯಿತು. ಎಂಟು ಜನ ಕಮಿಟಿಯವರು ರಚಿಸಿದ ಘಟನಾವಳಿಯನ್ನು (Constitution) ಅಂಗೀಕರಿಸಲಾಯಿತು. 30 ಜನರ ಕಾರ್ಯನಿರ್ವಾಹಕ ಮಂಡಳಿಯನ್ನು ನೇಮಿಸಿ ಆದಕ್ಕೆ ಶ್ರೀ ಪಿ. ಎಸ್. ಭಾಸ್ಕರ ರೈಗಳನ್ನು ಕನ್ವೀನರಂಗಿಯೂ ಶ್ರೀ ಎಸ್. ಸುಬ್ರಹ್ಮಣ್ಯರನ್ನು ಅಧ್ಯಕ್ಷರನ್ನಾಗಿಯೂ ಆರಿಸಲಾಯಿತು.

ವಿದ್ಯಾಮಂತ್ರಿ :-ಶ್ರೀ ಟಿ. ಎಸ್. ಅವಿನಾಶಲಿಂಗಂ ಚೆಟ್ಟಿಯಾರರು ತಾರೀಖು 2ಕ್ಕೆ ಮಂಗಳೂರಿಗೆ ಬಂದು ತಾ. 3ರಲ್ಲಿ ಬೆಳಿಗ್ಗೆ ಬಿಸೆಂಟ್ ರಾಷ್ಟ್ರೀಯ ಬಾಲಿಕಾ ಪ್ರೌಢಶಾಲೆಯ ಹೊಸ ವಿಸ್ತರಣದ ಕಟ್ಟಡದ ಅಸ್ತಿವಾರ ಹಾಕಿ, ಮಧ್ಯಾಹ್ನ ಜಿಲ್ಲಾ ಉಪಾಧ್ಯಾಯರ ಗಿಲ್ಡಿನ ಸಭೆಯಲ್ಲಿ ಭಾಗವಹಿಸಿ, ಸಾಯಂಕಾಲ ಸ್ಟೆಂಟ್ ಆಗ್ನೇಸ್ ಕಾಲೇಜಿನ ಬಹುಮಾನ ವಿತರಣಾ ಸಮಾರಂಭದಲ್ಲಿ ಅಧ್ಯಕ್ಷತೆ ವಹಿಸಿ, ತಾ. 4ನೇ ಬೆಳಿಗ್ಗೆ ಹೂಡಿದಿಬ್ಬೆ ಬೇಸಿಕ್ ಟ್ರೈನಿಂಗ್ ಶಾಲೆಯನ್ನು ಸಂದರ್ಶಿಸಿ ಅಲ್ಲಿಂದ ಉಚ್ಚಿಲ ಹೊಸ ಹೈಸ್ಕೂಲ್ ಕಟ್ಟಡದ ಅಸ್ತಿವಾರ ಹಾಕುವರೆಂದು ತಿಳಿದು ಬಂದಿತ್ತು.

ಸ್ಕೌರಿಗೆ ಭತ್ತ ಒಪ್ಪಿಸುವ ಅವಧಿ ಯನ್ನು ಹತ್ತು ದಿನ ಮುಂದುಪರಿಸಲಾಗಿದೆ. ಹೊಸದುರ್ಗ ಮತ್ತು ಇತರ ಕಡೆಗಳಲ್ಲಿ ಒಂದೇ ಕಂತಿನಲ್ಲಿ ಬತ್ತ ಒಪ್ಪಿಸುವ ಅವಧಿ ತಾ. 31-10 48ಕ್ಕೆ ಇತ್ತು.

ಪ್ರಕಟಣೆ

ಕಾನರಗೋಡು ತಾಲೂಕಿನ ಕೆಲವು ಭೂಮ್ಯಾಲಿಕರ ಕೋವಿ ಲ್ಯಾಸೆನ್ಸುಗಳನ್ನು ಇಲ್ಲಿಯ ಜಿಲ್ಲಾ ಮೆಜಿಸ್ಟ್ರೇಟರು ಇತ್ತೀಚಿಗೆ ರದ್ದುಮಾಡಿದ ವಿಷಯ ಮದ್ರಾಸು ಸರಕಾರಕ್ಕೆ ನಾನು ಬರಕೊಂಡಲ್ಲಿ ಅಂತಹವರಲ್ಲಿ ಕೆಲವರು ಕೊಟ್ಟ ಅರ್ಜಿಗಳನ್ನು ಜಿಲ್ಲಾ ಮೆಜಿಸ್ಟ್ರೇಟರು ಪುನಹ ತಪ್ಪು ಮಾಡುತ್ತಿರುವುದಾಗಿ ತಿಳಿಯುತ್ತೇನೆ. ಆದ ಕಾರಣ ಲ್ಯಾಸೆನ್ಸು ರದ್ದು ಹೊಂದಿದ ಭೂಮ್ಯಾಲಿಕರು ಸುನಹ ಜಿಲ್ಲಾ ಮೆಜಿಸ್ಟ್ರೇಟರಿಗೆ ಅರ್ಜಿ ಕೊಟ್ಟಲ್ಲಿ ಅವುಗಳನ್ನು ನಿವಂತಿಸುವುದಾಗಿ ಸರಕಾರದಿಂದ ತಿಳಿಯುತ್ತೇನೆ. ಅರ್ಜಿ ಮಾಡುವವರು ದಯಮಾಡಿ ಅವರ ನಿಳಾಸ, ಅವರು ಕೊಡುವ ತೀರ್ವೆ ವರ್ಗೆಯ ತಪಶೀಲುಗಳನ್ನು ಕಾಣಿಸಿ ನನಗೂ ಕೂಡಾ ಒಂದು ಪೋಸ್ಟು ಕಾರ್ಡ್ ಬರಕೊಳ್ಳಬೇಕಾಗಿ ಅಪೇಕ್ಷಿಸುತ್ತೇನೆ

ಕೋಟಿ ರಾಮಯ್ಯಪ್ಪ ಕಾರಂತ,
ಮದ್ರಾಸು ಎಸೆಂಬ್ಲಿ ಸದಸ್ಯ-
ಮಂಗಳೂರು, 1-11-48.

ಮಹಾತ್ಮಾ ಗಾಂಧಿಜೀ ಸ್ಮಾರಕ ನಿಧಿಗೆ ಕಾಣಿಕೆಯನ್ನೀಯಿರಿ.

ಎಂ. ವಿ. ಹೆಗ್ಡೆಯವರು ಬರೆದ

ಸ್ವರಾಜ್ಯ ವಿಜಯ

ಯಕ್ಷಗಾನ ನಾಟಕ.

ಪದ-ಅರ್ಥಸಹಿತ

ಅಟ್ಲಿ, ಕ್ರಿಪ್ಸ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜಿನ್ನಾ, ನೆಹರು, ಸರ್ದಾರ್, ಗಾಂಧಿ, ಅಜಾದ್, ಕೃಪಲಾನಿ, ಜೈ ಪ್ರಕಾಶ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರವರ್ಗ.

ಓದಬಲ್ಲವರಂತೂ ಓದಿ ತಿಳಿಯತಕ್ಕ ಕತೆ. ಓದಲಾರದವರೂ ಓದಿಸಿ ಕೇಳತಕ್ಕ ಗತೆ.

ಬೆಲೆ ಬರೀ 0 8 0

ತಕ್ಷಣಕ್ಕೆ ಸ್ಟಾಂಪು ಕಳಿಸಿದರೆ 1 ಪ್ರತಿಯನ್ನು ಖುರ್ಚೋಸ್ಟ್ ಮಾಡಿ ಕಳಿಸಬಹುದು.

ಪ್ರತಿಗಳು **ನವಭಾರತ ಪುಸ್ತಕ ಭಂಡಾರ ಉಡುಪಿ, ಅಥವಾ ನವ ಯುಗ ಪ್ರೆಸ್, ಉಡುಪಿ.**

ಇಲ್ಲಿ ದೊರೆಯುತ್ತವೆ.

ಈ ಅನುತಾಂಜನ ಚರ್ಮರೋಗ, ತಲೆಹೇನು, ಉಗುರು, ಕಜ್ಜಿ, ಕೀವುಹುಣ್ಣು ಮೊದಲಾದವುಗಳಿಗೆ ಚಾಮಾನಂತೆ ಕೆಲಸ ಮಾಡುತ್ತದೆ. ಹೇಳು ವಷ್ಟು ಮುಂಚಾತಿ ಕೊಡಿ ಪತ್ರಾಚಾರ ಮಾಡಿದ ಪೊವಾನಂ ಎಲ್ಲಾ ವಿವರಗಳನ್ನೂ ಕಳಿಸಲಾಗುವುದು.

REGD. ಕಳಪು ಹುಣ್ಣುಗಳಿಗೆ ಮುಖ್ಯ ಸಹಾಯಕ ಔಷಧಿ

ಅನುತಾಂಜನ ಲಿಮಿಟೆಡ್

ಮಹಾರಾಷ್ಟ್ರ.

ಬೊಂಬಾಯಿ ಮತ್ತು ಕಳ್ಳಿಕ್ಕೆ.

ಸ್ವೀಕಾರ-ವಿಮರ್ಶೆ

ಸಂಜೀವನ :-ಮುಂಬಯಿ ಸರಕಾರ ಪ್ರಸಿದ್ಧ ಶಾಖಾ ಕಚೇರಿಯ ಕಡೆಯಿಂದ ಪ್ರಕಟವಾಗುವ ಜಾನ ಪ್ರತಿಬಂಧ ಸಮಿತಿಯ 1/4 ಕ್ರೌನ್ ಆಕಾರದ ಮಾಸಿಕ ಮುದ್ರಣ. ವಾರ್ಷಿಕ ಚಂದಾ ರೂಪಾಯಿ 3-೭ಪಿ ಸಂಚಿಕೆ 0-4-0. ನಮ್ಮ ದೈ ಸೇರಿದ ಆಕ್ಟೋಬರ ಸಂಚಿಕೆಯಲ್ಲಿ ಮಹಾತ್ಮಾಗಾಂಧಿಯವರು ಬ್ರಹ್ಮ ದೇಶದ ಕ್ರೈಸ್ತ ಸ್ತ್ರೀಮಿತ ಜಾನ ಸಂಘದಿಯವರು 1929ರಲ್ಲಿ ಮಾಡಿದ ಶಕ್ತಣಕ್ಕಿಂತ ಮೊದಲು ರಾ ಸನ ಎಂಬ ಭಾಷಣದ ಸಾರಾಂಶವು ಶ್ರೀಗಳಾದ ಎಸ್. ಕಾಮತ್, ಚಿಂತಾಮಣಿ, ಎಸ್. ಎಸ್. ಾಯಕ, ಸುಧಾಕರ, ನರಂಗ, ಪ್ರೊಫೆಸರ್ ಕೆ. ಆರ್. ಮಹಿಷಿ, ಡಾ. ಕುಮಾರಿ ಟಿನೇ ನ, ಶ್ರೀಮತಿಗಳಾದ ಮುಂಡ್ಕೂರ, ಸರೋ ಜನಿ ನಾಯುಡು ಮೊದಲಾದವರ ಲೇಖನ, ಕಥೆ, ಕವನಗಳೂ ಇದ್ದು ಸಂಚಿಕೆಯು ಉತ್ತಮವಾಗಿ ಸಂಪಾದಿಸಲ್ಪಟ್ಟಿದೆ ಎನ್ನ ಬಹುದು. ಮುಂಬಯಿ ಸರಕಾರದವರು ಕೇವಲ ಪ್ರಚಾರಕ್ಕಾಗಿ ಪ್ರಕಟಿಸುತ್ತಿರುವ ಈ ಪತ್ರಿಕೆಯು ಬೆಲೆಯನ್ನು ಆರ್ಧದಷ್ಟಾದರೂ ಇಳಿಸಿ ಅದು ಎಲ್ಲೆಲ್ಲಿಯು ಪ್ರಚಾರ ವಾಗುವಂತೆ ಮಾಡುವುದು ಉಕ್ತವೆನ್ನ ಬಹುದು.

ಸೇವಾ :-ಮದ್ರಾಸಿನ ಕರ್ನಾಟಕ ಸೇ ವಾ ಸಂಘದವರು ಪ್ರಕಟಿಸಿದ ವಾರ್ಷಿಕ ಸಂಚಿಕೆ. ಕ್ರೌನ್ 1/4 ಸೈಜಿನ 120 ಪುಟಗಳು. ಬೆಲೆ ರೂಪಾಯಿ ಎರಡು

ಮದ್ರಾಸಿನಲ್ಲಿರುವ ಅನೇಕ ಕನ್ನಡಿಗರಿಗೆ ಸಹಾಯಕವಾಗಲೆಂದು ಸಂಘದವರು ಪ್ರಕಟಿಸಿದ ಈ ಪತ್ರಿಕೆಯು ಒಂದು ವರ್ಷದ ಮೊದಲೇ ಜನ್ಮ ತಾಳಿತ್ತು. ಹಲವರ ಪ್ರೋತ್ಸಾಹದಿಂದ ಈ ವಾರ್ಷಿಕ ಸಂಚಿಕೆಯು ಅಚ್ಚಾಗಿ ಹೊರಗೆ ಬಂದಿದೆ. ಹಿಂದುಗರ ಭಿನ್ನ ಭಿನ್ನ ಅಭಿರುಚಿಗಳಿಗೆ ಸರಿಹೋಗುವಂತೆ ಕಥೆ, ಕವನ, ವಿನೋದ, ಹರಟೆಗಳನ್ನು ಈ ಸಂಚಿಕೆಯಲ್ಲಿ ಸಂಗ್ರಹಿಸಿ ಕೊಡಲು ಪ್ರಯತ್ನಿಸಲಾಗಿದೆ. ಶ್ರೀ ಕೆ. ಆರ್. ಶಾಂತ, ಶ್ರೀ ಎ. ಬಿ. ಸೆಟ್ಟಿ, ಶ್ರೀ ಎಚ್. ಶಿವರಾಮ ರೆಡ್ಡಿ, ಇವರು ಈ ಸಂಚಿಕೆಗೆ ಸಂದೇಶಗಳನ್ನಿತ್ತು ಹರಸಿದ್ದಾರೆ. ಶ್ರೀಗಳಾದ ಎಮ್. ಮರಿಯಪ್ಪ ಭಟ್ಟ, ಕೊ. ಚನ್ನ ಬಸಪ್ಪ, ಎಸ್. ವೆಂಕಟ್ರಾಜ್ ನವಗಿರಿನಂದ, ಎಲ್ ಬೀಟಿ, ಗೋರೂರ ರಾಮಸ್ವಾಮಿ ಐಯಂಗಾರ್, ಕರ. ಭಾ. ಜೋತಿ, ದೇವುಮು, ಜೆ. ಸಿ. ರಾಜರತ್ನಂ, ಮೊದಲಾದ ಪ್ರಸಿದ್ಧ ಲೇಖಕರ ಲೇಖನಗಳಿಂದ ಕೂಡಿರುವ ಸಂಚಿಕೆಯು ವಾಚನೀಯವಾಗಿದೆಯಾದರೂ ಬೆಲೆಯು ಹೆಚ್ಚಾಯಿತೆಂದು ಸೂಚಿಸದಿರಲಾರೆವು.

ಸಂಯುಕ್ತ ಭಾರತ :-ಬೆಂಗಳೂರು ನಗರದಿಂದ ಹೊರಡುತ್ತಿರುವ ದಿನ ಪತ್ರಿಕೆ. ಡೆಮ್ಮಿ 1/2 ಆಕಾರದ ಎರಡು ಪುಟಿಗಳು. ದಿಡಿಪ್ರತಿಗೆ ಆರು ನೈ. ಆದಷ್ಟು ಸುದ್ದಿಗಳನ್ನು ಸಂಗ್ರಹಿಸಿ ಕೊಡಲಾಗುತ್ತಿದೆ.

ಕರ್ಮವೀರ ದೀಪಾವಳಿ ಸಂಚಿಕೆ 1948 ಸಂಪಾದಕರು ಶ್ರೀ ಹ. ರಾ. ಪುರೋಹಿತ- ಸಂಸ್ಥಾಪಕ-ನಿರ್ದೇಶಕರು, ಶ್ರೀ ರಂಗನಾಥ ದಿವಾಕರ. ಬೆಲೆ 0-12-0 ಡೆಮ್ಮಿ ½ ಆಕಾರದ 92 ಪುಟಿಗಳು.

ಭರತ ವರ್ಷದ ಹಿರಿಯ ಹಬ್ಬವಾದ ದೀಪಾವಳಿಯ ಶುಭ ಮುಹೂರ್ತದಲ್ಲಿ ಹುಬ್ಬಳ್ಳಿಯ ಜನಪ್ರಿಯವಾದ ಕರ್ಮವೀರ ವಾರ ಪತ್ರಿಕೆಯು ಈ ವಿಶೇಷ ಸಂಚಿಕೆಯನ್ನು ವಿಶಿಷ್ಟ ರೀತಿಯಲ್ಲಿ ಹೊರಡಿಸುವುದು ಆತ್ಮಶ್ಲಾಘನವಾದುದೇ.

"ಪ್ರಾಚೀನ ಕಾಲದಿಂದಲೂ ಜ್ಞಾನಕ್ಕೆ, ವಿವೇಕಕ್ಕೆ ವಿದ್ಯೆಗೆ ದೀಪವನ್ನು ಸಂಕೇತವಾಗಿ ಬಿಟ್ಟುಕೊಳ್ಳುವುದು ರೂಢಿಯಾಗಿ ಬಂದಿದೆ. ಜ್ಞಾನದಂತೆ ದೀಪವೂ ಕೊಟ್ಟು ಕಡಿಮೆಯಾಗದ ಸಂಪತ್ತು. ಒಂದು ದೀಪ ಇನ್ನೊಂದನ್ನು ಹೊತ್ತಿಸುತ್ತದೆ. ಹಾಗು ಕಳೆಗುಂದುವುದಿಲ್ಲ. ಅನ್ಯಸ್ಪರ್ಶದಿಂದ ಅದು ಅಕ್ಷಯ್ಯ. ಜ್ಞಾನವೂ ವಾಸನೆಯಿಂದ ರಿಕ್ತವಾಗಿಸಿ ಹೊಸಹೊಸ ಜ್ಞಾನಿಗಳನ್ನು ಉಂಟುಮಾಡುತ್ತದೆ. ಕರ್ಮವೀರವಾದರೂ ಹಲವಾರು ವರ್ಷಗಳಿಂದ ಈ ಜ್ಞಾನದೀಪ ಸಮಾರಾಧನೆಯನ್ನು ಎಡೆಬಿಡದೆ ನಡೆಸುತ್ತಾ ಬಂದಿದ್ದಾನೆ. ಅಂದು ಅವನು ಕೊಡುತ್ತಿರುವುದು ಹೊಸತೊಂಬು ದೀಪ. ಏಳಿಸ್ಸವಾದ ಹಣತೆಯಲ್ಲಿ ಹೊತ್ತಿಸಿದ ಹೆತ್ತು ಉಜ್ವಲವಾದ ದೀಪ. ಈ ದೀಪದಿಂದಲೂ ಬುದ್ಧಿಯ ಬತ್ತಿಯಲ್ಲಿ ಇಚ್ಛಾ ತೈಲವೊಂದಿದ್ದರೆ ಬೇಕಾದವರು ಬೆಳಕನ್ನು ಹೊತ್ತಿಸಿಕೊಳ್ಳಬಹುದು." ಎಂಬ ಸಂಪಾದಕರ ನುಡಿಯನ್ನು ನಾವು ಸಮರ್ಥಿಸುತ್ತೇವೆ.

ಈ ಸಂಚಿಕೆಯಲ್ಲಿ ಹಲವು ರುಚಿಗಳಿಗೆ ಹಲವು ಕುತೂಹಲಗಳಿಗೆ, ಹಲಬಗೆಯ ಜ್ಞಾನ ತೃಷ್ಣೆಗಳಿಗೆ ಸಾಮಗ್ರಿಯನ್ನೊದಗಿಸುವ ಪ್ರಯತ್ನವಾಗಿದೆ. ಶ್ರೀಗಳಾದ ಅಂದಿಕಾತನಯದತ್ತ, ಬಿ. ಎಚ್. ಶ್ರೀಧರ, ಡಿ. ಪ. ಕರಮಕರ, ರಂಗನಾಥ ದಿವಾಕರ, ಶಂಭಾ ಜೋಶಿ, ಗೋಕಾಕ, ಪು. ತಿ. ನರಸಿಂಹಾಚಾರ್, ಕೋಟ ಶಿವರಾಮಕಾರಂತ, ಶ್ರೀರಂಗ, ನಾ. ಕಸ್ತೂರಿ, ಮಂಜೇಶ್ವರ ಗೋವಿಂದ ಪೈ, ರಂ. ಶ್ರೀ ಮುಗಳಿ, ಸ. ಸ. ಮಾಳವಾಡ, ಕೆ. ಎಸ್. ನರಸಿಂಹರ, ಜೆ. ಸಿ. ರಾಜರತ್ನಂ ಮೊದಲಾದವರ ವಿವಿಧ ಬರೆಹಗಳಿಂದಲೂ, ವ್ಯಂಗ್ಯ ಚಿತ್ರ, ವರ್ಣ ಚಿತ್ರಗಳಿಂದಲೂ ಅಂತರಂಗ ಬಹಿರಂಗಗಳೆರಡೂ ಕಣ್ಮನ ಸೆಳೆಯುತ್ತಿವೆ. ಪ್ರತಿಯೊಬ್ಬರೂ ಒದಬೇಕ್ಕ ಸರ್ವಾಂಗ ಸುಂದರ ವಿಶೇಷ ಸಂಚಿಕೆಯಿದು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. No. 342/1948

M. ಬೆಳಿಯಪ್ಪ ಗೌಡ -ವಾದಿ

M. ಕುರಾಲಪ್ಪ ಗೌಡ, ಮುಂಡೋಡಿ ತಿಂಮಪ್ಪ ಗೌಡರ ಮಗ, ಪುತ್ತೂರು ತಾಲೂಕು ವೇಷಜಳ್ಳ ಗ್ರಾಮ. -ಪ್ರತಿವಾದಿ.

ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ,

ವಾದಿಯು ನಿಮ್ಮ ಮೇಲೆ ನೀವು ಸದ್ರಿ ಯವರಿಗೆ ಬರೆಕೊಟ್ಟ ರೂ. 1500ರ ದಿ. ಸ್ಟೇ. ನೋಟಿನ ಅಸ್ಸಲು ಲಡ್ಡಿ ಅ್ಯವಜು ವಸೂಲಿ ಬಗ್ಗೆ ಮಾಡಿದ ಮೇಲ್ಕಂಡ ದಾವೆಯು ತಾ. 22-11-48ಕ್ಕೆ ಇಟ್ಟಿರುವುದರಿಂದ ಆವಕ್ಕೆ ನಿಮ್ಮದೇನಾದರೂ ಅಕ್ಷೇಪಣೆಗಳಿದ್ದಲ್ಲಿ ಸದ್ರಿ ದಿವ್ಸ ಬೆಳಿಗ್ಗೆ 11ಗಂಟೆಗೆ ಸರಿಯಾಗಿ ಸ್ವತಹ ಯಾ ವಕೀಲರ ದ್ವಾರಾ ಹಾಜರಾಗಿ ಉದಿಹರಿಸಿಕೊಳ್ಳತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಪ್ರಕಾರ)

(Sd) **C. S. Shastry,**
Vakil for Plff.

ಪುತ್ತೂರು, 28-10-48

ದಿ ಮ್ಯೂಕ್ಲಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 5 ವರ್ಷಗಳಿಂದ ಡಿವೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ತಮ್ಮ ಸ್ವಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K

— ಮಕ್ಕಳನ್ನು ಹಡೆಯುವುದು ಸಾಕು —

ಆರಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟುಗುತ್ತಾರೆ. ಅಲ್ಲದೆ ಸ್ತ್ರೀಯರ ದಿಳಿಕೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಸ್ತ್ರೀದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರವೀವಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0. ಪೋಸ್ಟ ಚಾರ್ಜು ೧೫ ಆಣೆ.

ಮೂಲಕರು:—ಹಾಲಪ್ಪಾ ಹಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ವಿವರಂತರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ.-

ಹಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಂಡೇಶ್ವರ ಮಾರ್ಕಿ ಡಾವಣಗೇರಿ

ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕವಿಸ್ಸ, ಹಾವೇರಿ ಬ್ಯಾಡಗಿ.

ಗೊನೋರಿಯಾ ಹರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂಬಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಳಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಕೂಲಿ, ಅರ್ಧಾಂಗ ವಾಯು ನಡುನೋಯ ವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕ-ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಜೀನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಸುದರ್ಶನ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧನನ್ನು ಬೆಣ್ಣೆಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹೆಸರುಬೇಳೆ, ಕುಂಬಳಕಾಯಿ, ಒಳ್ಳೆನ್ನೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜು ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಂಡೇಶ್ವರ ವರ್ಕಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮೂಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ. ಹೆರಿಗೆ ಆದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುತ್ತಾರೆ. ಆದರೆ ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಅಕಸ್ಮಿಕವಾಗಿ ಸಂಭವಿಸುವ ಸೆಕಾರಗಳುಂಟಾಗುತ್ತವೆ. ಕಸದೀಳಿಕೆ ಯಾ ಆದರ ಅಂಶ ಉಳಿದು ಜ್ವರ ಬರುತ್ತವೆ, ನಂಜೇರುತ್ತವೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತವೆ. ಇವೆಲ್ಲಾ ಪ್ರಾಣಘಾತಕವೂ, ಪೆಲುವಿನೋಪದ್ರವಗಳ ಬೀಗುವ ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ ವೈದ್ಯ, ಡಾಕ್ಟರ, ಸರ್ಜನರಿ ವರೆಗೆ ಅರೆ ನೂರಾರು ರೂಪ್ಯಾ ವಿಚಾರಮಾಡಬೇಕಾಗುತ್ತದೆ. ಆ ಮೇಲೂ ವೈನೇಚ್ಛೆ ಎಂಬ ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧ ಪಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ಗುಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯ ೭ ಆಪತ್ತು—ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕವಿಸಮಯ ಕೇಶಕಲಾ-, ತಂಪು ಮೆದುಳು, ಶುಭ್ರ ನೇತ್ರಗಳನ್ನು ಹೊಂದಲು ಬಹು ಗುಣಯುಕ್ತ ಆಮಲಕೀ ತೈಲ ಯಾ ಹಿಮಸಾಗರ ತೈಲ್ಯಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.)
Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ದ. ಕ ಜಿಲ್ಲಾ ಆಯುರ್ವೇದ ವೈದ್ಯ ಪರಿಷತ್ತು, ಬ್ರಹ್ಮಾವರ

ಈ ವೈದ್ಯ ಪರಿಷತ್ತಿನ ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀ ಪಿ ವೈ. ರಾಮಸ್ ಗುದುಕ್ಕಳರು ಒಂದು ಸ್ವಕಟನೆಯನ್ನು ಹೊರಡಿಸಿರುವರು. ಅದರ ಮುಖ್ಯಾಂಶ ಹೀಗಿದೆ :-

ದ ಕ ಜಿಲ್ಲಾ ಆಯುರ್ವೇದ ವೈದ್ಯ ಪರಿಷತ್ತು ಇದೇ ನವಂಬರ ತಾ. 26, 27 ಮತ್ತು 28ರಲ್ಲಿ ಬ್ರಹ್ಮಾವರದಲ್ಲಿ ವೈಸೂರಿನ ಆಯುರ್ವೇದ ವಿದ್ವಾನ್ ಶ್ರೀ ಎನ್. ಎಸ್. ಸುಬ್ರಹ್ಮಣ್ಯ ಶಾಸ್ತ್ರಿಯವರ ಆಧ್ಯಕ್ಷತೆಯಲ್ಲಿ ಜರಗುವುದು. ಜಿಲ್ಲೆಯ ಎಲ್ಲಾ ವೈದ್ಯರೂ ಸ್ವಾಗತ ಸಮಿತಿಯ ಸದಸ್ಯರಾಗಿ ಸೇರಿ ಪರಿಷತ್ತನ್ನು ಯಶಸ್ವಿಯನ್ನಾಗಿ ಮಾಡಬೇಕಾಗಿ ವಿನಂತಿಸಲಾಗಿದೆ.

ಪರಿಷತ್ತಿನ ಸಮಯ ನಿರ್ದೇಶಗಳು, ವನಸ್ಪತಿಗಳು, ವೈದ್ಯಕೀಯ ಗ್ರಂಥಗಳ, ಪತ್ರಿಕೆಗಳ ಮತ್ತು ಪ್ರಾಚೀನ ಕಾಲದ ವೈದ್ಯಕೀಯ ರಸ್ತ್ರಗಳನ್ನು ಪ್ರದರ್ಶಿಸುವ ವ್ಯವಸ್ಥೆ ಮಾಡಲಾಗಿದೆ ಸಿದ್ಧೌಷಧ ವಿಭಾಗದಲ್ಲಿ, ಆಯಾ ಔಷಧಿಯ ಹೆಸರು, ಅಧಾರ ಗ್ರಂಥದ ಶ್ಲೋಕ, ಅದರಲ್ಲಿರುವ ಪ್ರಧಾನ ಪ್ರಯೋಜನ ಇವಿಷ್ಟು ವಿಷಯಗಳ ನಾಮಫಲಕ ಯುಕ್ತ ಪಾಟಲುಗಳನ್ನು ಪ್ರದರ್ಶಿಸಲಾಗುವುದು. ವನಸ್ಪತಿ ವಿಭಾಗದಲ್ಲಿ ಅದಷ್ಟು ಅತ್ಯಪೂರ್ವ ಮತ್ತು ಕಷ್ಟಸಾಧ್ಯವಾದ ನಿಜ ಮೂಲಿಕೆಗಳನ್ನೇ ಕಳುಹಿಸಬೇಕು ಆಯುರ್ವೇದಕ್ಕೆ ಸಂಬಂಧಪಟ್ಟ ಕಾರ್ಯಾಲೇಖ ಗರಿಗಳಲ್ಲಿ ಬರೆಯಲ್ಪಟ್ಟ ಗ್ರಂಥಗಳನ್ನು ಕಳುಹಿಸಬಯಸುವ ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸುವವರು ರುಜುವನ್ನು ಕೊಡಬೇಕಾಗುವುದು

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಪರಿಷತ್ತಿನಲ್ಲಿ ಮಂಡಿಸಲಿರುವ ನಿರ್ಣಯಗಳನ್ನು ಪಿಡುವ ಪ್ರಬಂಧಗಳನ್ನು (ವಿಷಮ ಜ್ವರ, ರಾಜಯಕ್ಷ್ಮ, ಪಾಂಡು ರೋಗ, ಸನ್ಯಾಸ-ಇವಿಷ್ಟು ವಿಷಯಗಳು) ಸ್ವಾಗತ ಕವಿಟಯ ಕಾರ್ಯಾಲಯಕ್ಕೆ ಇದೇ ತಿಂಗಳ ತಾ 11 ರೊಳಗಾಗಿ ತಲ್ಪಿಸುವ ಸುವ್ಯವಸ್ಥೆ ಮಾಡಬೇಕು. ಪರಿಷತ್ತಿನಲ್ಲಿ ಪ್ರದರ್ಶಿತವಾದ ಉತ್ತಮ ವಸ್ತುಗಳಿಗೆ ಪ್ರಶಸ್ತಿ ಪತ್ರ ಹಾಗೂ ಬಹುಮಾನಗಳು ಕೊಡಲಾಗುವುದು.

ಹೆಚ್ಚಿನ ಮಾಹಿತಿಗಳನ್ನು ಬೇಕ್ಷಿಸುವವರು ಸ್ವಾಗತ ಸಮಿತಿಗೆ ಬರೆದು ತಿಳಿಯಬಹುದು.

ಧರ್ಮಸ್ಥಳ:-ಶ್ರೀ ಧರ್ಮಸ್ಥಳ ದೀಪೋತ್ಸವವು ಎಂದಿನಂತೆ ಇದೇ ನವಂಬ್ರ ತಾ. 26ರಿಂದ 30ರ ವರೆಗೆ ಜರಗುವುದು ತಾ. 29-30ರಲ್ಲಿ ಜರಗುವ ಸಾಹಿತ್ಯ ಮತ್ತು ಧರ್ಮ ಸಮ್ಮೇಲನಗಳಲ್ಲಿ ಊರು ಪರ ಊರುಗಳ ಘನ ವಿದ್ವಾಂಸರ ಸರಸ ಭಾಷಣಗಳು ಏರ್ಪಡಿರುವುದರಿಂದ ರಸಿಕರೂ, ಭಕ್ತಾದಿಗಳೂ ಭಾಗಿಗಳಾಗಬೇಕಾಗಿ ವಿನಂತಿ'

ಮಣಿಪುರ :-ತಾ. 24-10-48 ರಲ್ಲಿ ಮಾನ್ಯ ಮಿಲಿಟರಿ ಸಾಲಿನ್ಸ್-ಎಂಬ ಲಿಸ್ಸ್-ಇವರ ಆಧ್ಯಕ್ಷತೆಯಲ್ಲಿ ಇಲ್ಲಿಯ ಜೋರ್ಡಾ ಎಲಿಮೆಂಟರಿ ಶಾಲೆಯ ಪ್ರಧಾನ ಆಧ್ಯಾಪಕರಾಗಿದ್ದು ಈಗ ವರ್ಗವಾಗಿರುವ ಶ್ರೀ ಬಿ. ತಿಮ್ಮಯ್ಯ ಕೇರಿಗಾರರಿಗೆ ಇಲ್ಲಿಯ ಹತ್ತರವರ ಸಂಘದವರು ಸನ್ಮಾನ ಸಮಾರಂಭವನ್ನು ಜರಗಿಸಿದರು.

ಶ್ರೀಗಳಾದ ಯು. ಬಿ. ಗೋಪಾಲ ಕೃಷ್ಣಯ್ಯ, ಮೂಥಿಪ ಭಟ್, ಉ. ನಾರಾಯಣ ರಾವ್ ಇವರು ಶ್ರೀಯುತರ ಗುಣಕಥನ ನನ್ನು ಮಾಡಿದರು. ಶ್ರೀ ಕೇರಿಗಾರರು ಆದಶ್ಯತ್ತರವಿತ್ತು ಜನರ ಬೆಂಬಲಕ್ಕಾಗಿ ಆಭಾರ ಸೂಚಿಸಿದರು.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನೇ ಉಪಯೋಗಿಸಿರಿ.

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ಶೆಟ್ಟಿ.	0	3	0
ಸಂಶಯ ಪಿಶಾಚಿ	(ನಾಟಕ)	ಕ. ಕ. ಶೆಟ್ಟಿ.	0	8	0
ಕುಶಲವ	(,,)	,,	0	6	0
ವೈಭಿಚಾರಿಣಿ ಯಾರು	(,,)	,,	1	0	0
ಹೆಂಡ್ತಿ ಗಂಡನಾದರೆ	(ಪ್ರಹಸನ)	,,	0	4	0
ಪುರುಷವಧು	,,	,,	0	4	0
ಸನ್ಯಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಸಣ್ಣ ಕತೆಗಳು)	ಕೊರಡ್ಕಲ್	0	14	0
ಭಾರತೀಯ ಕತೆಗಳು	(,,)	,,	0	14	0
ಮೂರು ಪ್ರಹಸನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್. ಎಲ್. ಸುಬ್ರಹ್ಮಣ್ಯಂ	0	14	0
ಸೇವಾಷಧ	(ನಾಟಕ)	,,	0	8	0
ಭೂತಕತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಚ್. ವೆಂಕಟರಾವ.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾಕಾಮಿನಿ	(ಕವಿತೆಗಳು)	ಎಸ್. ವೆಂಕಟರಾಜ	2	0	0
ಸತ್ವ ಸಾಗರ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	4	0
ನಗೆನೋಟಗಳು	(ವಿನೋದ ಕತೆಗಳು)	ಕೆ. ಎಟ್ಟೆಲ ಶೆಣೈ	0	14	0
ಅನ್ನದೇವರು ಮತ್ತು ಇತರ ಕತೆಗಳು	ಕಯ್ಯಾರ ಕಿಞ್ಞಣ್ಣ ರೈ		1	0	0
ವಿಷ್ಣುವಿನ ದಶ ಪರಾಧಗಳು ಅರ್ಥಾತ್ ದಶಾವತಾರಗಳು	(ವಿಡಂಬನೆ)	ಎಂ. ವಿ.-ಹೆಗ್ಡೆ	0	12	0
ಸ್ವರಾಜ್ಯವಿಜಯಃ	(ಯಕ್ಷಗಾನ ನಾಟಕ)	,,	0	8	0
ಸ್ವಾತಂತ್ರ್ಯವೀರ ಸಾವರಕರರು	(ಜೀವನ ಚರಿತ್ರೆ)	ಬಾಬಿರಾವ್ ಪಾಯಿ	1	4	0
ಜೀವನಸಂಗ್ರಾಮ	(ನಾಟಕ)	ಪಿ. ಶೇಷಶೆಟ್ಟಿ	1	8	0
ಜಮೀನ್ದಾರ	(ಕಾದಂಬರಿ)	ಜೊಸಮನೆ ಗುಡ್ಡಪ್ಪ	1	8	0

ಪ್ರತಿಗಳಿಗೆ:—

ನವಭಾರತ ಪುಸ್ತಕ ಭಂಡಾರ, ಉಡುಪಿ ಸ. ಕ.

ನೋಟಿಸ್

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ :-

ಎಲ್ಲೂರು ಗ್ರಾಮದಲ್ಲಿರುವ ಬಿಕ್ಕಿನ್ನ ಗುತ್ತು ಅಣ್ಣಯ್ಯ ಯಾನೆ ವೆಂಕಟಾಚಲಯ್ಯ ನವರ ವಿಧವೆ ಕಮಲಮ್ಮನು ಮುನ್ನೂರು ರೂಪಾಯಿಗಳ ಮಟ್ಟಿಗೆ ಮೋಸದ ಕೃತಕದ ಸಾಲವನ್ನು ಕಲ್ಪಿಸಿಕೊಂಡು ತಾರೀಕು 28-8-1917ರಲ್ಲಿ ಆನಂತಯ್ಯನವರಿಗೆ ನಮ್ಮ ಕುಟುಂಬದ ಆಸ್ತಿಯನ್ನು ಭೋಗ್ಯಾನ್ವಿ ಮಾಡಿ ಕೊಟ್ಟಿದ್ದಲ್ಲದೆ ನಮ್ಮ ಹಕ್ಕಿಗೆ ಮೋಸ ಕೊಡಬೇಕೆಂಬ ಯಿರಾಧೆಯಿಂದ ಇನ್ನೂ ಕೃತಕದ ಸಾಲಗಳನ್ನು ಮಾಡುವ ಅಭಿಪ್ರಾಯದಲ್ಲಿದ್ದಾತೆಂತಲೂ ಅಂತಾ ಮೋಸದ ಸಾಲಗಳನ್ನು ಕಲ್ಪಿಸಿಕೊಂಡು ಆಸ್ತಿ ಪರಾಧೀನ ಮಾಡುವ ಅಭಿಪ್ರಾಯದಲ್ಲಿದ್ದಾತೆಂತಲೂ ತಿಳಿದು ಬರುತ್ತದೆ. ಸದರಿ ಆಸ್ತಿಯ ಮೇಲೆ ಬೈಂಡಿಂಗ್ ಆಗತಕ್ಕ ಸಾಲ ಈವರಗೆ ಸದರಿ ಕಮಲಮ್ಮನು ಮಾಡಿದ್ದಿಲ್ಲಾ. ಇನ್ನು ಸದರಿಯವಳಿಗೆ ಯಾರಾದರೂ ಸಾಲ ಕೊಟ್ಟರೆ ಆ ಅವಳಿಂದ ಆಸ್ತಿ ಪರಾಧೀನ ಮಾಡಿಕೊಂಡರೆ ಅದು ಸದರಿ ಆಸ್ತಿಗೆ ಅವಳ ಗಂಡನ Estateನ ಮೇಲೆ ಬೈಂಡಿಂಗ್ ಆಗಲಿಕ್ಕಿಲ್ಲವೆಂಬ ಸಂಗ್ತಿ ಎಲ್ಲರು ತಿಳಿದಿರಲಿ. ತಾರೀಕು 28-10-1948.

ಯಿಂತಿ ಉಡ್ಪಿ ತಾಲ್ಲೂ ಯೆಲ್ಲೂರು ಗ್ರಾಮದಲ್ಲಿರುವ ಕೊಟ್ಟಾರಿ ಸುಬ್ರಾಯ ಭಟ್ಟರ ಮಗ ಶ್ರೀನಿವಾಸ ಭಟ್ಟ, ಇವರ ಮಗಂದ್ಯರು ವೆಂಕಟ್ರಾವ್, ಗೋಪಾಲಕೃಷ್ಣ ಭಟ್ಟ, ಕೂಡಾ 3 ಜನರು ತಿಳಿಯಪಡಿಸಿದ್ದಾರೆ.

(ಸಹಿ) ವೆಂಕಟರಾವ್.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O S. 487/48

ಮಹಾಬಲೇಶ್ವರ ಉಡುಪ – ವಾದಿ
ಸುಬ್ಬು ಹೆಂಗ್ಸು ಸಹಾ – ಪ್ರತಿವಾದಿ

ವಾದಿ ಕಡೆಯಿಂದ ಈ ಮೂಲಕ ತಿಳಿಯಪಡಿಸುವದೇನೆಂದ್ರೆ.

3- ನಾಗಪ್ಪ ಕೇರೆಗಾರ – ಜೋಗಯ್ಯನವರ ಮಂಜಯ್ಯ ಶೇರೆಗಾರರ ಮಗ, ಕುಂದಾಪುರ ಕಸಬು.

ವಾದಿಗೆ ಪ್ರತಿವಾದಿಂದ ಬರತಕ್ಕ ಮೂಲಗೇಣಿ ಗೇಜಿ ರೂ. 22-11-2ಕ್ಕೂ ಸ್ಥಳ ಸ್ವಾಧೀನತೆಗೆ ಮಾಡಿದ ದಾವೆಯು ತಾ. 15-11 48ಕ್ಕೆ ಅಪೈರೆ ತಪ್ಪಿಗೆ ಯಿಡೋಗಾಗಿರುವೆ. ಆ ಕಾರಣ ನಿಮಗೆ ತಿಳಿಸಿದ್ದೇನಂದರೆ ಉದಾಪರಣೆಯಿನ್ನ್ರೆ ಸದ್ರಿ ನಿಮಿಸ ಬೆ.ಲು 11 ಗಂಟೆಗೆ ಸ್ವತಹಾ ನ ವಕೀಲರ ದ್ವಾರಾ ಕೋರ್ಟು ಮುಂದೆ ಹಾಜ್ರಾಗಿ ಜಬಾಬ್ದಾರಿ ಮಾಡಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮ ಗೈರು ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿ ನಾದಿ ಕಡೆಯಿಂದ ಈ ಮೂಲಕ ತಿಳಿಯಪಡ್ಸಿದೆ.

(Sd.) G. Sanjiva Rao,
Pleader for Plff

Kundapur, Date 26-10-48.

ಮೂತ್ರಸ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಪದತಪ್ಪಿ ಮೂತ್ರಸ್ರಾವವಾಗುವುದು ಈ ಔಷಧ ಸೇವನೆಯಿಂದ ತೀವ್ರ ಗೊಣಹೊಂದಬಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಪ್ರಾತ್ರಿ ಗುಣವಾಗಿದೆ. ಬೆಲೆ ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ.8/-[ವಿ. ಪಿ. ಹಸ್ಸೆರಡಾಜೆ ಪ್ರತ್ಯೇಕ]

MRS. P. DEVEE, P. DS (N. J.)
Tollygunge CALCUTTA

ಸ್ವಾಮಿಸ್ವರು: ಶಹಾಕಂಪೆನಿ, ಮಂಗಳೂರು

Printed, Published by K. H. Shetty at the Navayuga Press Udipi, S. India.

Regd. No. M. 3918 ಏರಡಾಣೆ 11-11-1948

ಅಂತರಂಗ
ಕೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4-8-0
ಆರು ತಿಂಗಳಿಗೆ ರೂ. 2-8-0
ಬಿಡಿ ಪ್ರತಿಗೆ ರೂ 0-1-6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವ ಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ. 5-0-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯
ವಾರ ೧೧

NAVAYUGA WEEKLY, UDIPI, S. K.

FOUNDER: Hon'ble Mr. A. B SHETTY, Health Minister, Govt. of Madras.

Vol. 29
No. 11

ಪುನಃ ಟ್ರುಮೆನ್.

ಅಮೆರಿಕದ ಮುಂದಿನ ನಾಲ್ಕು ವರುಷಗಳ ವರೆಗಿನ ಅಧ್ಯಕ್ಷರಾಗಿ ಈಗಿನ್ನೆಅಧ್ಯಕ್ಷ ಹೆನ್ರಿ ಯುಸ್. ಟ್ರುಮೆನರು ಪುನಃ ಆರಿಸಲ್ಪಟ್ಟಿದ್ದಾರೆ. ಇದೇ ನವಂಬರ್ ತಾ 2ರಲ್ಲಿ ನಡೆದ ಅಮೆರಿಕದ ಅಧ್ಯಕ್ಷ ಚುನಾವಣೆಯು ಪರಿಣಾಮವು ಕಟ್ಟಿನವರ ನಿರೀಕ್ಷೆಗೆ ವಿರುದ್ಧವಾಯಿತು; ಮುಂದಿನ ಚತುರ್ವರುಷಗಳಿಗೆ ಅಧ್ಯಕ್ಷ ಟ್ರುಮೆನರೇ ಕಾಯಂ ಆದರು ಸೆನೆಟ್ ಮತ್ತು ಪ್ರಜಾಪ್ರತಿನಿಧಿ ಸಭೆಯಲ್ಲೂ ಟ್ರುಮೆನರ ಡೆಮೊಕ್ರೆಟ್ಕ್ ಪಕ್ಷಕ್ಕೇನೇ ಬಹುಮತ ದೊರೆತಿದೆ. ಪ್ರಜಾಪ್ರತಿನಿಧಿ ಸಭೆ (ಕಾಂಗ್ರೆಸ್) ಯಲ್ಲಿ 1946ರಿಂದ ಟ್ರುಮೇನ್ ಪ್ರತಿಸ್ಪರ್ಧಿ ಗವರ್ನರ ದಿವೆಯವರ ರಿಪಬ್ಲಿಕ್ ಪಕ್ಷಕ್ಕೆಗೇನೇ ಬಹುಮತವಿದ್ದರೂ ಈ ಬಾರಿಯ ಚುನಾವಣೆಯು ಆ ಪ್ರತಿಕೂಲ ಸ್ಥಿತಿಯನ್ನೂ ನಿವಾರಿಸಿದೆ. ಅಧ್ಯಕ್ಷ ಟ್ರುಮೇನರಿಗೆ ಸ್ಪಷ್ಟ ವಿಜಯ ದೊರಕಿಸಿಕೊಟ್ಟಿದೆ. ಈಬಾರಿ ನ್ಯೂಯೋರ್ಕಿನ ಗವರ್ನರ್ ದಿವೆಯವರೇ ಅಧ್ಯಕ್ಷರಾಗಿ ಆರಿಸಲ್ಪಡುವರೆಂಬ ಖಂಡಿತ ಭವಸೆ ಚುನಾವಣಾ ದಿನದ ವರೆಗೂ ಅಮೆರಿಕದಲ್ಲೆಲ್ಲಾ ವ್ಯಾಪಿಸಿದ್ದಿತು; ಟ್ರುಮೇನ್ ವಿಜಯವು ಎಲ್ಲರನ್ನೂ ಆಶ್ಚರ್ಯಕ್ಕೀಡುಮಾಡಿದೆ.

ಪ್ರತಿಸ್ಪರ್ಧಿಗಳು

ಈ ಚುನಾವಣೆಯಲ್ಲಿ ಸ್ಪರ್ಧಿಸಿಕೊಂಡವರು–ಅಧ್ಯಕ್ಷ ರುಸನೆಲ್ಟರ ಸಂತರ ಆ ಗಾದಿಯಲ್ಲಿದ್ದು ಅದೇ ಧೋರಣೆಯನ್ನು ಅನುಕರಿಸಿಕೊಂಡು ಬಂದಿದ್ದ ಅಧ್ಯಕ್ಷ ಟ್ರುಮೇನ್, ಡೆಮೊಕ್ರೆಟಿಕ್ ಪಕ್ಷದ ಉಮೇದ್ವಾರ; ಇವರ ಮುಖ್ಯ ಇದಿರಾಳಿ ಚುನಾವಣಾ ಫಲಿತಾಂಶ ಹೊರಬೀಳುವ ವರೆಗೂ ಪೂರ್ಣ ವಿಜಯ ವಿಶ್ವಾಸ ಕಟ್ಟಿಕೊಟ್ಟಿದ್ದ ಜನ-ರಿಪಬ್ಲಿಕನ್ ಪಕ್ಷದ ಉಮೇದ್ವಾರ ಗವರ್ನರ್ ಧೋಮಸ್ ದಿವೆ ಇವೆರಡು ಪಕ್ಷಗಳ ಧೋರಣೆ ಮತ್ತು ಕಾರ್ಯಕ್ರಮಗಳು ಒಂದರೊಡನೊಂದು ನೇರ ಎದುರುಬದುರಾಗಿದ್ದವು. ಧಾರಣೆ ನಿಯಂತ್ರಣ ಬೇಕೆಂದು ಟ್ರುಮೇನರಂದರೆನಿಯಂತ್ರಣ ವು ಸ್ವಗತಿಗೆ ತಡೆಯೆಂದು ದಿವೆಯ ಮತ; ಲೋಕ ಶಾಂತಿಗಾಗಿ ತಮ್ಮ ಪಕ್ಷಪಾತಿ ಇತರ ರಾಷ್ಟ್ರಗಳನ್ನು ಕೂಡಿಕೊಳ್ಳುವ ಹಂಚಿಕೆಯತ್ತ ಟ್ರುಮೇನರ ಲಕ್ಷ್ಯವಿದ್ದರೆ, ಸ್ವತಃ ಅಮೆರಿಕವನ್ನೇ ಬಲಪಡಿಸಿಕೊಳ್ಳುವುದಕ್ಕೇನೆ ಹೆಚ್ಚಿನ ಲಕ್ಷ್ಯ ಗವರ್ನರ್ ದಿವೆಯವರದಾಗಿತ್ತು. ರಾಷ್ಟ್ರದೊಳಗಿನ ಆ ಪ್ರಾಗತಿಕರ ಕಡೆಗೆ ಟ್ರುಮೇನರ ವಿರೋಧ ಹೆಚ್ಚಿಗಿದ್ದಂತೆ ಕಮ್ಯೂನಿಸ್ಟರ ಮೇಲೆ ದಿವೆಯವರ ಕಣ್ಣು ವಿಶೇಷವಿದ್ದು ಜನವರಿ 20ರ ನಂತರ ಸರಕಾರದೊಳಗೆ ಕಮ್ಯೂನಿಸ್ಟರೆಂಬವರಿರಲೇಕೂಡದೆಂಬ ಹಠ ದಿಂದಿದ್ದರು. ಮೊರನೆಯ ಉಮೇದ್ವಾರಿಯೆಂದರೆ ಪ್ರೋಗ್ರೆಸ್ಸಿವಪಕ್ಷದ ಹೆನ್ರಿವೆಲ್ಲಸ್. ಇವರು ಟ್ರುಮೇನರ ಡೆಮೊಕ್ರೆಟಿಕ್ ಪಕ್ಷದಿಂದ ಸಿಡಿದು ಹೊಸ ಪಕ್ಷವನ್ನು ಕಟ್ಟಿದ್ದ ಹೊಸಬ; ಉದಾತ್ತ ತತ್ವಗಳನ್ನು ಸಾರುತ್ತಿದ್ದವರು; ರಶ್ಯದ ಕಡೆಗೆ ತುಸು ಹೆಚ್ಚಿನ ಬಿರಾಯ್ ಧೋರಣೆ ವಹಿಸಿದ್ದವರು. ನಾಲ್ಕನೇ ಉಮೇದ್ವಾರಿ ಗವರ್ನರ್ ಥರ್ಮೋಂಡ್ 'ಡಿಕ್ಸಿಯಾಕ್ರೆಟ್' ಪಕ್ಷೀಯ. ನೀಗ್ರೋಗಳಿಗೆ ನಾಗರಿಕ ಹಕ್ಕುಗಳನ್ನು ದಾನ ಮಾಡಿದ ಟ್ರುಮೇನ್ ಧೋರಣೆಯ ವಿರೋಧವೇ ಇವರ ಮುಖ್ಯ ಧ್ಯೇಯ. ಈ ನಾಲ್ವರು ಉಮೇದ್ವಾರಿಗಳ ಪೈಕಿ ಟ್ರುಮೇನರಿಗೆ 22, 562, 089; ದಿವೆಯವರಿಗೆ 20, 705, 212; ಹೆನ್ರಿವೆಲ್ಲಾಸರಿಗೆ -, 059, 878; ಥರ್ಮೋಂಡರಿಗೆ 910, 657 ಮತಗಳು ದೊರೆತವು. ಸೆನೆಟ್ ಸಭೆಯಲ್ಲಿ ಟ್ರುಮೇನ್ ಪಕ್ಷಕ್ಕೆ 54, ದಿವೆ ಪಕ್ಷಕ್ಕೆ 42 ಸ್ಥಾನಗಳು ದೊರಕಿವೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಟ್ರುಮೇನ್ ಪಕ್ಷಕ್ಕೆ 264 ಸ್ಥಾನಗಳು ಸಿಕ್ಕುವಾಗ ದಿವೆ ಪಕ್ಷಕ್ಕೆ 168 ಹೋಗಿವೆ. ಅಮೇರಿಕದ 28 ಸಂಸ್ಥಾನಗಳು ಟ್ರುಮೇನರಿಗೆ ಬಹುಮತ ಕೊಟ್ಟರುವಾಗ 16 ಸಂಸ್ಥಾನಗಳಲ್ಲಿ ದಿವೆ ಹೆಚ್ಚಿನ ಮತ ಪಡೆದಿದ್ದಾರೆ. ನೀಗ್ರೋನೈಲ ಥರ್ಮೋಂಡರಿಗೆ'ನೀಗ್ರೋ ದಹೆನ ಪ್ರಸಿದ್ಧಿ'ಯ ಒಂದೆರಡು ಕ್ಷೇತ್ರಗಳಲ್ಲಿ ಬಹುಮತ ದೊರೆತಿದೆ. ಟ್ರುಮೇನರ ಬಲ ಗೈಯಂತಿರುವ ಮಿ. ಬಾರ್ಕ್ಲೆ ಉಪಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ. ಹಾಗೂ ಅಧ್ಯಕ್ಷ ಟ್ರುಮೇನರು ಆಶ್ಚರ್ಯಕರ ಹಾಗೂ ಸುದೃಢ ವಿಜಯ ಗಳಿಸಿ ಇನ್ನೂ ನಾಲ್ಕು ವರುಷಗಳಿಗೆ ಅಮೆರಿಕದ ಸೂತ್ರಧಾರ ನಾಯಕನಾಗಿ ಉಳಿದರು.

ಅಧ್ಯಕ್ಷ ಟ್ರುಮೆನ್

ಸೋತ ದಿವೆ 46 ವರುಷದವರಾದರೆ ಗೆದ್ದ ಟ್ರುಮೇನ್ ಅದರ ಯದ್ವಾತದ್ವಾ ಅಂಕೆ 64ನೇ ವ್ಯಾಯದಲ್ಲಿರುವವರು. ಇವರು ಓರ್ವ ಸಾಮಾನ್ಯ ಬೇಸಾಯಗಾರನ ಮಗ. ಕನ್ಸಾಸ್ ನಗರದಲ್ಲಿ ಸ್ಥಳೀಯ ಪತ್ರಿಕೆಗಳನ್ನು ಮಾರುವ ಬೀದಿ ಹುಡುಗನಾಗಿ ತನ್ನ ಉದ್ಯೋಗ ಪ್ರಾರಂಭಿಸಿದವರು. ಪತ್ರಿಕಾವಾರ್ತೆಯ ದಾಹವಾಶಯದ ಕಾಸೇಲನೆರು ಸ್ವತಃ ದುಡಿದು ಹಿಡಿದ ನೊದಲ ಹಣ. ಆ ಮೇಲೆ ಒಂದು ಕಂಪೆನಿಯ ಕ್ಲಾರ್ಕನಾದರು; ಕೊನೆಗೆ ರೈಲು ರಸ್ತೆಯ ಸಮಯ ಸೂಚಕನಾಗಿ ಕೆಲಸ ಮಾಡಿದ್ದರು. ಪರ್ಯಾಯ ಪ್ರಕಾರ ಬಟ್ಟೆವಾಡೆ ಉಗ್ರಾಣದ ಕೆಲಸ ಮತ್ತು ಹಳೇ ಅಂಗಡಿಯೊಂದರಲ್ಲಿ ಕೆಟ್ಟಕೇ ಧೂಳು ಝಾಡಿಸುವ ವೃತ್ತಿ, ಇತ್ಯಾದಿಗಳನ್ನು ಮಾಡಿಯೂ ಇವರು ದಿನ ತೆಗೆದಿದ್ದರು. ಪ್ರಥಮ ಲೋಕ ಯುದ್ಧದಲ್ಲಿ ಬಹಶಃ ಸಾಮಾನ್ಯ ಸೈನಿಕನಾಗಿ ಕೆಲಸ ಮಾಡಿದ ಮೇಲೆ ತಾನೇ ಒಂದು ವ್ಯಾಪಾರವಾರಂಭಿಸಿದರಾದರೂ ಯುದ್ಧೋತ್ತರ ಸಂಸ್ಥಿತಿಯಿಂದಾಗಿ4000 ಪೌಂಡು ನಷ್ಟಕ್ಕೀಡಾಗಬೇಕಾಯಿತು. ಸ್ಥಳೀಯ ರಾಜಕೀಯದಲ್ಲಿ ಭಾಗ ವಹಿಸುತ್ತಾ ಬಂದು ತನ್ನ ವಿಶೇಷಜ್ಞಾನಕ್ಕೆ ಮತ್ತು ಕಾರ್ಯಜಾಣ್ಮೆಯಿಂದ ಪ್ರಥಮತಃ ಅತಿ ಪ್ರಯಾಸದಿಂದಲೇ ಸೆನೆಟಗಾರನಲ್ಪಟ್ಟಿದ್ದರು. ಅಲ್ಲಿ ಅವರ ಯೋಗ್ಯತೆ ವಿಶೇಷ ಬೆಳಕಿಗೆ ಬಿತ್ತು; ಕೊನೆಯ ಅವಧಿಯಲ್ಲಿ ಅಧ್ಯಕ್ಷ ರುಸನೆಲ್ಟರೊಡನೆ ಉಪಾಧ್ಯಕ್ಷನಾಗಿ ಇವರು ದುಡಿದರು ಎರಡನೇಜಾಗತಿಕ ಯುದ್ಧದಲ್ಲಿ ಅಮೆರಿಕದ ಯುದ್ಧಪ್ರಯತ್ನಗಳ ನಿಯಂಘಟನೆಗಾಗಿ ಇವರ ಅಧ್ಯಕ್ಷತೆಯಲ್ಲಿ ರಜನೆಗೊಂಡ'ಟ್ರುಮೇನ್ ಸಮಿತಿ'ಯು ತನ್ನ ವಿಚಕ್ಷಣತೆಯಿಂದ ಸುಮಾರು 200,000,000 ಪೌಂಡುಗಳನ್ನು ಅಮೆರಿಕಕ್ಕೆ ಉದಾಯ ಮಾಡಿ ಕೊಟ್ಟಿದ್ದಿ

(ಇನೇ ಪುಟ ನೋಡಿರಿ)

ಅಪದ್ಧನ

ಪ್ರಾಯು ನಿರಿದಾಗ–ಸಂಪಾದನೆ ಇಳಿದಾಗ–ಆಪದ್ಧನವೊಂದೇ ನೆರವಾಗಬಲ್ಲುದು.

ಆಪದ್ಧನವನ್ನು ಕೂಡಿಸಬೇಕೆಂದಿರುವವರಿಗೆ ನಾವು ನೆರವಾಗುವೆವು.

ದಿ ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಕರ್ನಾಟಕದ ಏಕಮಾತ್ರ ಪ್ರೊವಿಡೆಂಟ್ ವಿಮಾಸಂಸ್ಥೆ-- ಬಡವರ ಕಾಮಧೇನು.

ನಿಮ್ಮ ಆಯ್ಕೆ

'ಪ್ರಭಾತ್'
ಚಹಾ ಮತ್ತು ಕಾಫಿ
ಆರಿಸಿದ
ನೀಲಗಿರಿ ಚಹಾ ಮತ್ತು ಕಾಫಿ

Blended & Packed by:-
PRABHAT
TEA & COFFEE (INDIA) Ltd.
COONOOR R. S. (Nilgiris)

ವಿಮೆಮಾಡಲಿಕ್ಕೆ ಯಾ ಪ್ರತಿನಿಧಿ ಮಹಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬೆಗ್ಗೆ ಬರೆಯರಿ—
ಪೋಸ್ಟು ಬಾಕ್ಸು ನಂಬ್ರ 10, ಉಡುಪಿ
ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

(೧೦ನೇ ಪುಟದಿಂದ)

ತು. ಅಧ್ಯಕ್ಷ ರುಸವೆಲ್ಟ್‌ರ ಮರಣಾನಂತರ ಟ್ರುಮೇನರೇ ಅಧ್ಯಕ್ಷರಾದರು. ಈ ಬಾರಿಯ ಅವರ ನಾಮಪ್ರತಿಸ್ಪರ್ಧಿ ಗವರ್ನರ್ ದಿವೆಯವರು ರುಸವೆಲ್ಟ್ ಮತ್ತು ಟ್ರುಮೆಸ್‌ರೊಡನೆ ಮೂರು ಬಾರಿ ಹೋರಾಡಿ ಸೋತಂತಾಯಿತು! ಈ ತನಕ ಹದಿನಾರು ವರುಷಗಳಿಂದ ಅಮೆರಿಕದಲ್ಲಿ ಆಡಳಿತೆ ನಡೆಸಿದ ಡೆಮೊಕ್ರೆಟಿಕ್ (ಪ್ರಜಾಸ್ವಭುತ್ವವಾದಿ) ಪಕ್ಷವು ಇನ್ನೂ ನಾಲ್ಕು ವರುಷ ಅದನ್ನು ಕೈ ಬಿಡದಂತಾಗಿದೆ. ರುಸವೆಲ್ಟರ ಮನಮೋಹಕತೆ ಮತ್ತು ಪ್ರಭಾವ, ದಿವೆ ಹಾಗೂ ವೆಲ್ಲಾಸರ ಆಕರ್ಷಣವಾವುದೂ ಇಲ್ಲದ, ಆದರೆ ತೂಕ ಮತ್ತು ಬಿಗುತನವಿರುವ ಮನುಷ್ಯ ಟ್ರುಮೇನ್. ಚ.ನಾವಕಾ ಪೂರ್ವ ಎಂಟು ವಾರಗಳಲ್ಲಿ ಮಿಕ್ಕ ಉಮೇದ್ವಾರಿಗಳಂಕ್ಕೆ 300,000 ವೈಲು ಸಂಚರಿಸಿ 400 ಭಾಷಣಗಳನ್ನಿತ್ತು, ದೊಡ್ಡ ರೀತಿಯ ಚುನಾವಣಾ ವ್ಯವಸ್ಥೆಗಳನ್ನೆಲ್ಲಾ ನಿರ್ವಹಿಸಿ ಗೆದ್ದು ಬಂದ ಟ್ರುಮೇನರಿಗೆ, ರಾಜಧಾನಿ ವಾಷಿಂಗ್ಟನಿನಲ್ಲಿ ಅರ್ಧ ಮಿಲಿಯ ಜನರ ಪ್ರಚಂಡ ಸ್ವಾಗತ ದೊರೆಯಿತು. ಡೆಮೊಕ್ರೆಟರ್ ಪಕ್ಷವೇ ಎಡ-ಬಲವಾಗಿ ಒಡೆದು ಹೋಗಿ ಅಲ್ಲಿಪರಾಭವನಿರಾಶೆ ಕವಿದಿದ್ದಾಗ-ದಿವೆಯವರಿಗೆ ಖಂಡಿತ ವಿಜಯವೆಂದು ಬಹುತೇಕವಾಗಿ ಜನರಿಕದ ಎಲ್ಲಾ ಪತ್ರಿಕೆಗಳೂ ಪರೀಕ್ಷಾರ್ಥ ಜನಾವಣಾ ಫಲಿತಾಂಶಗಳೂ ಆಧ್ಯಪ್ಷ ಚುನಾವಣೆಯ ಮೊದಲೇ ಭವಿಷ್ಯ ಹೇಳಿದ್ದಾಗ-ಅಮೆರಿಕದ ಜನತೆ ಪುನ: ಟ್ರುಮೇನರನ್ನೇ ಆರಿಸಿದ್ದನ್ನು ಕಂಡು "ಈ ಮನುಷ್ಯನಲ್ಲೇನೋ ಇದೆ" ಎಂದು ಪ್ರತ್ಯೇಕ ರೀತಿಯಿಂದಲೇ ಟ್ರುಮೇನರನ್ನು ಕಾಣಬೇಕಾಗಿ ಬಂದಿದೆ. ಅಮೆರಿಕದ ಇದುವರೆಗಿನ ಧೋರಣೆಯೇ ಇನ್ನೂ ಮುಂದುವರಿಯುವುದು-ಯಾವ ಅಡ್ಡಿ, ಆತಂಕ, ಉಳುಕು, ಬದಲಾವಣೆಯೂ ಇಲ್ಲದೆ ಜಾಗತಿಕ ರಂಗದಲ್ಲಿ ಅಮೇರಿಕದ ಯಂತ್ರ ಯಥಾಪ್ರಕಾರ ಜಾಲಾಗುವದು-ಎಂದು ಬ್ರಿಟನ್ ಪತ್ರಿತರ ರಾಷ್ಟ್ರಗಳು ಸಮಾಧಾನಗೊಂಡಿವೆ. ರಶ್ಯದ ಅಧಿಕೃತ ಅಭಿಪ್ರಾಯ ಹೊರ ಬಿದ್ದಿಲ್ಲವಾದರೂ ದಿವೆಯೇ ಗೆಲ್ಲುವನೆಂದಿದ್ದಾಗ, ಅವನಿಗಿಂತ ವಾಸಿಯೆನ್ನುವುದಾದ ಟ್ರುಮೇನ್ ಬಂದುದು ತಮ್ಮ ವಿಜಯವೆಂದೇ ಕಮ್ಯುನಿಸ್ಟರು ತೃಪ್ತಿಗೊಂಡಿದ್ದಾರೆ. "ನನ್ನ ತಲೆಯ ಮೇಲೆ ಬೀಳಿದ್ದ ದೊಡ್ಡ ಹೊರೆ ಜಾರಿ ಹೋಯಿತು" ಎಂದು ಗವರ್ನರ್ ದಿವೆ ಕೂಡಾ ನಗೆ ಚೆಲ್ಲಿದ್ದಾರೆ. ಎಲ್ಲರ ಪಾಲಿನ ಆತುರ-ಒಂದು ನಿರೀಕ್ಷೆ-ಈ ಮೂಲಕ ಮುಗಿಯಿತು.

ಖಂಡಿತುಸ್ರಾವ ನಿಂತಿತು

ಕುಮಾರಿ ಪಿಲ್ಲೆಗಳನ್ನು ಉಪಯೋಗಿಸಿದರೆ ಹದಿತಪ್ಪಿ ಋತುಸ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣವೊಂದಲ ಹುದು, ಯಾವ ಬಾಧಕಳೂಯಿಲ್ಲ ಸಾವಿರಾರು ಮಂದಿಗೆ ಪಾತ್ರಿ ಗುಣವಾಗಿದೆ. ಬೆಲೆ; ರೂ. 3/-; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ.೭/- [ಸಿ. ಓ. ಹಸ್ಸೆರಡಾಚೆ ಪ್ರತ್ಯೇಕ]

Mrs. P. DEVEE, F DS (N. J.)
Tollygunge CALCUTTA
ಸ್ವಾಕಿಸ್ತಾನ: ಶಕಾಕಂಪೆನಿ, ಮಂಗಳೂರು

ಈ ಸಂಪ್ರದಾಯ-

ಜಿತಿಗ್ತನ ಜೀವನ ನಾಟಕದಲ್ಲಿ ಸಂಪ್ರದಾಯ, ಸ್ಥಾನಮಾನ, ವ್ಯಕ್ತಿ ಗೌರವ ಇತ್ಯಾದಿಗಳು ವಹಿಸಿರುವ ಪಾತ್ರವೇನೂ ಸಣ್ಣದಲ್ಲ. ಸಂಕುಚಿತ ಕ್ಷೇತ್ರಗಳ ಗಡಿ ಮೀರಿ ಮುಂದೊತ್ತಿದ ಮಹಾ ವ್ಯಕ್ತಿಗಳು ಮಾತ್ರವೇ ಸರ್ವಮಾನ್ಯರೆನ್ನಿಸುತ್ತಾರೆ; ಜನತೆಯ ಹಾರ್ದಿಕಗೌರವಕ್ಕೆ ಪಾತ್ರರಾಗುತ್ತಾರೆ. ಮಿಕ್ಕವರು ಎಷ್ಟೇ ಉನ್ನತವಾದ ಹಾಗೂ ಘನವಾದ ಸ್ಥಾನಾಪನ್ನರಾಗಿದ್ದರೂ ಆಧುನಿಕ ಜಗತ್ತಿನ ಜನತಾ ಹೃದಯದಲ್ಲಿ ಪ್ರತಿಷ್ಠೆ ಹೊಂದಲಾರರು. ಜನತೆಯಾದರೂ ಸರಿಯೇ; ಬರಿಯ ಸಂಪ್ರದಾಯ ಅಥವಾ ಸ್ಥಾನಮಾನಗಳನ್ನು ಕಣ್ಮುಚ್ಚಿ ಅಂಧಾಭಿಮಾನ ಮನೋವೃತ್ತಿಯಿಂದ ದೂರವಾಗದೆ ಪ್ರಗತಿಶೀಲ ಜನಾಂಗವನ್ನಿಸದು. ಈ ನಿಜಾಂಶಕ್ಕನುಗುಣವಾದ ಕೆಲವು ನಿದರ್ಶನಗಳು ಇಲ್ಲಿವೆ-

ಪಾಕಿಸ್ತಾನ್
ಗವರ್ನರ್ ಜನರಲ್

ಮಿ. ಜಿನ್ನರ ನಿಧನಕ್ಕೆ ಮೊದಲೇ ಅವರ ನಂತರ ಗವರ್ನರ್ ಜನರಲ್ ಹುದ್ದೆ ಯಾರಿಗೆ ಹೋಗಬಹುದೆಂಬ ಆತುರ ಮತ್ತು ಕುರಿತು ಅಪ್ರತ್ಯಕ್ಷ ಸ್ಪರ್ಧೆ ಪಾಕಿಸ್ತಾನದಲ್ಲಿ ಎದ್ದುದಿದೆ. ಅದಕ್ಕೆ ಸ್ವತಿಯೋಚಿತ ಉಮೇದ್ವಾರಿಗಳು ಕೆಲವರಿದ್ದರೆಂಬುದು ಖಂಡಿತ. ಈ ಕುರಿತು ವೈಮನಸ್ಸಿಗೆಡೆಯಾಗದಂತೆ ಮಿ. ಜಿನ್ನರ ಅತಿಪ್ರೀತಿಯ ತಂಗಿ ಮಿಸ್. ಫಾತಿಮಾ ಜಿನ್ನಾ ಆ ಹುದ್ದೆಗೇರಬಹುದೆಂಬ ಸುದ್ದಿ ಕೂಡಾ ಹಬ್ಬಿದ್ದಿತ್ತು. ಆದರೆ ಕೊನೆಗೆ ನೇಮಕಗೊಂಡುದು ಪೂರ್ವ ಪಾಕಿಸ್ತಾನದ-ಪೂರ್ವ ಬಂಗಾಳದ-ಖ್ವಾಜಾ ನಾಜಿಮುದ್ದೀನರು. ಇದು ಹಲವರಲ್ಲಿ ಆಶ್ಚರ್ಯವನ್ನು ಉಂಟು ಮಾಡಿದ್ದಿತು. ಪಾಕಿಸ್ತಾನದ ಗವರ್ನರ್ ಜನರಲ್ ಹುದ್ದೆಯನ್ನು ಅಲಿಸಿದ್ದವರಲ್ಲಿ ಹೆಚ್ಚಿನವರು ಅದರ ಮೂಲಭಾಗವಾಗಿರುವ ಹಾಗೂ ರಾಜಧಾನಿಯಿರುವ ಪಶ್ಚಿಮ ಪಾಕಿಸ್ತಾನದವರೇ; ಈ ಭಾಗಕ್ಕಿಂತ ನೂರಾರು ಮೈಲು ದೂರದಲ್ಲಿ ಪ್ರತ್ಯೇಕ ತುಂಡಾಗಿ ಉಳಿದಿರುವ ಪೂರ್ವ ಪಾಕಿಸ್ತಾನ್ ಬಂಗಾಳವು ತನ್ನ ಸ್ಥಾನಮಾನಗಳ ಕುರಿತು ಬೇಸರ ಕಟ್ಟಿಕೊಂಡಿದ್ದಿತು ಹೊರತು ಗವರ್ನರ್ ಜನರಲ್ ಹುದ್ದೆಯ ಕುರಿತು ವಿಶೇಷಾಸಕ್ತಿ ವಹಿಸಿರಲಿಲ್ಲ. ಇವರಂತು ವಿಧದ ಒಳ ರೋಗಗಳಿಗೂ ಒಂದೇ ಚಿಕಿತ್ಸೆಯೆಂಬಂತೆ ಪೂರ್ವ ಬಂಗಾಳದ ಪ್ರಧಾನ ಮಂತ್ರಿಯಾಗಿದ್ದ, ನಿಜಕ್ಕೂ ಪಾಕಿಸ್ತಾನದ ಸಮರ್ಥ ನಾಯಕರಲ್ಲೊಬ್ಬನೆನಿಸಿರುವ ಖ್ವಾಜಾನಾಜಿಮುದ್ದೀನರನ್ನೇ ಪಾಕಿಸ್ತಾನ್ ಸರಕಾರವು ಆ ಸ್ಥಾನಕ್ಕೆ ನೇಮಕ ಮಾಡಿಸಿಕೊಂಡಿತು. ಈ ನೇಮಕವು ತಾತ್ಕಾಲಿಕವೆಂಬುದರಿಂದ ಈಗ ಕೂಡಾ ಆ ಸ್ಥಾನಕ್ಕಾಗಿ ಬಾಯಿ ನೀರೂರಿಸುವವರಿದ್ದಾರೆ. ಅವರಲ್ಲೊಬ್ಬರು ಭಾರತ ಕೇಂದ್ರದೊಂದಿಗೆ ಜೋಡಣೆಗೊಂಡಿರುವ ಭೋಪಾಲದ ನವಾಬರೆಂದು ತಿಳಿದುಬರುತ್ತದೆ. ಇವರ ನೇಮಕದ ಕುರಿತು ಮೊನ್ನೆ ಪಾನೇ ಹುಟ್ಟಿಕೊಂಡ ಸುದ್ದಿಯೊಂದರ ನಿರಾಕರಣೆಗಾಗಿ ಪಾಕಿಸ್ತಾನದ ಪ್ರಧಾನ ಮಂತ್ರಿ ಮಿ. ಲಿಯಾಖತರು ಒಂದು ಹೇಳಿಕೆ ಕೊಡಬೇಕಾಯಿತು. "ಈಗಿನ ಗವರ್ನರ್ ಜನರಲರು ಅಖಿಲ ಪಾಕಿಸ್ತಾನದ ಗೌರವಾದರಗಳಿಗೆ ಪಾತ್ರರಿರುವಾಗ ಆ ಸ್ಥಾನದ ಪ್ರಶ್ನೆಯೇ ಈಗ ಏಳುವಂತಿಲ್ಲ" ಎಂದು ತಿಳಿಸಬೇಕಾಯಿತು. ಮುಸ್ಲಿಂ ಪಂಥವೊಂದರ ಜಗದ್ಗುರುವಾಗಿದ್ದು ಸ್ವಧರ್ಮಾತೀತರಿರುವ ಸರ್. ಆಗಾಖಾನರನ್ನೆ ಗವರ್ನರ್ ಜನರಲರಾಗುವಂತೆ ಆದಿಭಾಗದಲ್ಲಿ ಆಹ್ವಾನಿಸಿದರೂ ಆಗ ಸ್ವಿಸರ್ಲೆಂಡಿನಲ್ಲಿ ಕಾಸಿಲೆಯಿದ್ದ ಆಗಾಖಾನರು ಅದನ್ನು ನಿರಾಕರಿಸಿದ್ದರು. ಇನ್ನಿದನ್ನು ಅವರೂ ಬೇಡವೆನ್ನುವದಿಲ್ಲವೇನೋ! ಜನ ವಿಶ್ವಾಸಗಳಿಸುವ ಪ್ರಯತ್ನವಿಲ್ಲದೇನೇ ಅಗ್ರಪೀಠಕ್ಕೇರಲಾಗುತ್ತದಾದರೆ ಮನಸ್ಸು ಮಾಡದವರಾರು?

ಶ್ರೀವ್ಯಕಾಶರ ಸೊತ್ತು ಕಳವು

ಸಾಮಾನ್ಯರ ಮಾತಂತಿರಲಿ-ಕಳ್ಳಕಾಕರಲ್ಲೂ "ದೊಡ್ಡ ಮನುಷ್ಯರ" ಮೇಲೆ ಗೌರವವೆಂಬುದಿದ್ದೇ ಇದೆ. ಪಾಕಿಸ್ತಾನದಲ್ಲಿ ಭಾರತ ಸರಕಾರದ ಹ್ಯಾಕಮಿಶನರ್ ಆಗಿರುವ ಶ್ರೀ ಶ್ರೀಪ್ರಕಾಶರು ೪ಳದ ಒಕ್ಟೋಬರ್ 15ರಲ್ಲಿ ಕಲ್ಕುತ್ತಾದಿಂದ ಕಾಶಿಗೆ ಪ್ರಯಾಣ ಮಾಡುತ್ತಿದ್ದಾಗ ರೈಲಿನಲ್ಲಿ ಅವರ ಕೆಲವು ಸಾಮಾನ್ಯಗ್ರಿಗಳಿಗೆ ಯಾರೋ ಕೈ ಕೊಟ್ಟಿದ್ದರು. ಅವರ ಶರ್ವಾನಿ, ದುಡ್ಡಿನ ಚೀಲ ಮತ್ತು ಕೆಲವು ರಿಕಾರ್ಡುಗಳು ಜಾಣೆಯಾಗಿದ್ದು ಈ ವರೆಗೂ ಸತ್ತೆಯಾಗಿರಲಿಲ್ಲ. ಈಗ ಅವುಗಳನ್ನು ಜಾರಿಸಿದವರಿಂದ ಒಂದು ಕೌತುಕದಾಯಿ ಪತ್ರ ಶ್ರೀ ಶ್ರೀಪ್ರಕಾಶರಿಗೆ ಬಂದಿದೆ. "ನಮಗೆ ನಾವು ಸೂರೆ ಮಾಡುವ ಜನ ಅಷ್ಟು ದೊಡ್ಡ ಮಹಾನುಭಾವರೆಂಬುದಾಗಲೀ ಆ ರಿಕಾರ್ಡುಗಳು ಅಷ್ಟೊಂದು ಅಮೂಲ್ಯವಾದ ಸಾರ್ವಜನಿಕ ದಾಖಲೆಗಳೆಂಬುದಾಗಲೀ ತಿಳಿದಿರಲಿಲ್ಲ" ವೆನ್ನುತ್ತಾ ತಮ್ಮಿಂದ ಪ್ರಮಾದವಶಾತ್ ನಡೆದು ಹೋದ ಅಪರಾಧಕ್ಕಾಗಿ ಪಶ್ಚಾತ್ತಾಪ ಸೂಚಿಸಿ, ತಾವು ಕದ್ದ ಸಾಮಾನುಗಳೆಲ್ಲವನ್ನೂ ಇಂತಹ ಸ್ಥಳದಲ್ಲಿ ಇಟ್ಟು ಬಿಡುತ್ತೇವೆ, ಕೊಂಡು ಹೋಗಬಹುದೆಂದು ಆ ಪತ್ರದಲ್ಲಿ ಬರೆಯಲಾಗಿದೆಯಂತೆ. ಇದೊಂದು ತುಸು ವಿಚಿತ್ರ ಕಥೆ. ಭಾರತದ ಹ್ಯಾಕಮಿಶನರನ ಪಶದಲ್ಲಿರುವ ದಾಖಲೆಗಳಲ್ಲಿ ಪಾಕಿಸ್ತಾನ್ ಸಂಬಂಧದ ಸಂಗತಿಯೇನಾದರೂ ಇರಬಹುದೇ ಎಂಬುದರ ಶೋಧನೆಗಾಗಿ ಈ ಕಳ್ಳತನ ನಡೆದಿರಬಹುದೇ? ಅಥವಾ ಭಾರತೀಯ ಕಳ್ಳರು ಹಣ ಸಂಪಾದನೆಗಾಗಿ ವರ್ಚಸ್ಸಿಲ್ಲದೆ ಒಮ್ಮೆ ಹೀಗೆ ಮಾಡಿದರೂ ಕೊನೆಗೆ ಆವಂಶ್ನು ದೇಶಭಕ್ತನಾದ ಬಿಡಲಿಲ್ಲವೆ?

ರಾಜರು ಮುರಿದ ಸಂಪ್ರದಾಯ

ಇಂಗ್ಲಾಂಡಿನ ರಾಣೀ ಎಲಿಸಬೆತ್ ಒಂದು ಜನನವಾಗುವ ವೇಳೆ ಆಸ್ಪತೆಯ ಗೃಹಕಾರ್ಯದರ್ಶಿ ಸ್ಥಾನಾಪನ್ನ ಮಂತ್ರಿಯು ಹಾಜರಿರಬೇಕೆಂಬ ಸಂಪ್ರದಾಯವು ಸುಮಾರು 100 ವರುಷಗಳಿಂದ ನಡೆದುಕೊಂಡು ಬಂದಿತ್ತು. ಈ ಬಾರಿ ಜೋರ್ಜ್ ಅರಸರು ಆ ಸಂಪ್ರದಾಯವನ್ನು ವೆಂಕಡಿಸಿದ್ದಾರೆ. ರಾಜಕುಮಾರಿ ಎಲಿಜಬೆತಳು ಇದೇ ನವೆಂಬರ್ ತಾ. 14ರಲ್ಲಿ ಪ್ರಸವಿಸಬಹುದೆಂದು ನಿರೀಕ್ಷೆಯಿದೆ. ಆ ಸಮಯದಲ್ಲಿ ಬ್ರಿಟನಿನ ಕಾರ್ಯದರ್ಶಿ ಜೇಮ್ಸ್ ಚಟರ್ ಎಡೆ, ಇವರು ಬಕ್ಕಿಂಗ್ಹಾಮ್ ಅರಮನೆಯಲ್ಲಿ ಹಾಜರಿರುವಂತೆ ಕರೆಯುವಂತಿಲ್ಲವೆಂದು ಬ್ರಿಟನಿನ ರಾಜರು ಇದೇ ತಾ 5ರಲ್ಲಿ ಪ್ರಕಟಣೆ ಹೊರಡಿಸಿದ್ದಾರೆ. "ರಾಣೀ ವಾಸದ ಪ್ರಸವದ ವೇಳೆ ಸಿಂಹಾಸನದೊರ್ವ ಮಂತ್ರಿ ಹಾಜರಿರಬೇಕೆಂಬುದು ಲಿಸಿಬದ್ಧ ನಿಯಮವೂ ಅಲ್ಲ; ಶಾಸನಾನ್ವಯ ಅವಶ್ಯವೂ ಅಲ್ಲ. ಕೇವಲ ಪರಂಪರಾಗತವಾಗಿ ನಡೆದು ಕೊಂಡು ಬಂದ ಒಂದು ಸಂಪ್ರದಾಯ. ಕಾನೂನನ್ನು ಆಧರಿಸದ ಇಂತಹ ಒಂದು ಆಚರಣೆಯನ್ನು ಇನ್ನೂ ಊರ್ಜಿತದಲ್ಲಿಡುವುದು ಅನಗತ್ಯವೆಂದು ರಾಜರ

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಣೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ಸ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು, ನಮ್ಮ ಶಾಖೆಗಳಿರುವಲ್ಲಿ ರವಿವಾರಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುಸೂತ್ರವ್ಯವಸ್ಥೆಗೊಳ್ಪಟ್ಟಿದೆ. ಪೋಟೊಸಿದಂತಿರುವ ನಮ್ಮ ಶಾಖೆಗಳು ದಖ್ಖಣದ ಅರಬ್ಬಿಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ, ವೃಕ್ಷವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ನಿರಾಕಿಗಳ ಬಗ್ಗೆ ಕಲೆಕ್ಷನ್ ರವಿವಾರಗಳನ್ನು ವಹಿಸಿಕೊಳ್ಳುವುದಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಶಿಷ್ಟ ಸೇವೆಯ ವ್ಯವಸ್ಥೆಯನ್ನು ರೂಪಿಸಿಕೊಂಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾದ ಪ್ರಮುಖವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತವೆ. ಆದರಿಂದ ನಿಮಗೆ ಸನುಯವೂ, ಹಣವೂ ಉಳಿಯುವುದು. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರವಿವಾರಗಳ ಕಚೆಗೆ ಯಾವಾಗಲೂ ಸಂಬಂಧಪಟ್ಟವರ ತೀಕ್ಷ್ಣ ಲಕ್ಷ್ಯ ದೊರೆಯುವುದು.

The Canara Bank Limited.

ESTD: 1906

-ಸಂಭಾವನೆಗಳು

ಭಾವನೆಯಿದೆ" ಎಂದು ಆ ಹೇಳಿಕೆಯಲ್ಲಿದೆ.

ಬೊಡ್ಡಮರ ಹುಟ್ಟುಸಾವುಗಳಿಗೆ

ಸ್ಮಾರಕಗಳು, ಸಮಾರಂಭಗಳು ಜರಗುವ ವಾಡಿಕೆ ಲೋಕದಲ್ಲೆಲ್ಲಾ ಇದೆ; ಈ ಮಟ್ಟಿಗೆ ಭಾರತವು ಮಿಕ್ಕೆಲ್ಲಾ ರಾಷ್ಟ್ರುಗಳನ್ನೂ ಮೀರಿಸಿದೆ ಎನ್ನಬಹುದು 'ತಿಲಕ ಸ್ವರಾಜ್ಯ ನಿಧಿ' "ಕಸ್ತೂರಿಭಾ ಸ್ಮಾರಕನಿಧಿ" 'ಗಾಂಧಿರಾಷ್ಟ್ರೀಯ ನಿಧಿ' ಇತ್ಯಾದಿ ಇತ್ಯಾದಿಗಳೆಷ್ಟೋ ಆಗಿವೆ; ಆಗುತ್ತಾ ಇವೆ. 'ಜಯಂತಿ' ಆಚರಣೆಗಳೂ ಆಗಣಿತ. ಬೊಂಬಾಯಿ ಹಾಗೂ ಗುಜರಾತಿನ ಮುಕುಟರಹಿತ ರಾಜ ಸರ್ದಾರ್ ವಲ್ಲಭಾಯಿಗಳ 74ನೇ ಜನ್ಮದಿನವೂ ದಿವಾಳಿ ಹುಬ್ಬೂ ಈ ಬಾರಿ ಒಟ್ಟೊಟ್ಟಿಗೆ ಬಂದಿದ್ದುವು. ಸರ್ದಾರ್ ಪಠೇಲರು ಈಶಭೂಮಿಗೆಯನ್ನು ಬೊಂಬಾಯಿಯಲ್ಲೇ ತಳೆದಿದ್ದರು. ಈ ಸಂದರ್ಭದಲ್ಲಿ ಸರ್ದಾರರು ಮುಗಿಸಿದ 73 ವರ್ಷಗಳಿಗಾಗಿ 730 ತೊಲೆ ಮತ್ತು ಹಾಗೆಯೇ ಮುಂದೊತ್ತಲೆಂಬ ಸೂಚನೆಯಾಗಿ ಮತ್ತೊಂದು ಕೆಂಪು ಲೋಹಕ್ಕೆ ಒಟ್ಟಿಗೆ 731 ತೊಲೆ ಭಂಗಾರದ ಸುವಾರು 1 ಲಕ್ಷ ರೂ. ಬೆಲೆಬಾಳುವ ರಾಷ್ಟ್ರೀಯ ಚಿಹ್ನೆ ಅಶೋಕ ಸ್ತಂಭವನ್ನು ಮಾಡಿ ಸರ್ದಾರರಿಗೆ ಅರ್ಪಿಸಬೇಕೆಂದು ಬೊಂಬಾಯಿ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ನಿರ್ಧರಿಸಿದ್ದಿತು. ಆ ಮೇಲೆ ಸರ್ದಾರರ ಇದುವರೆಗಿನ ಆಯುಷ್ಮಾನದ 73 ವರುಷಗಳ ದ್ಯೋತಕವಾಗಿ 73 ಸಡುಕಟ್ಟುಗಳುಳ್ಳ ಭಂಗಾರದ 'ರಾಜದಂಡ'ವನ್ನು ಅವರಿಗರ್ಪಿಸುವ ಸಿದ್ಧತೆ ನಡೆಯಹತ್ತಿತು. ಅದರ ಕೊನೆಗೆ ಆ ಕುರಿತು ಹೆಚ್ಚಿನ ಸುದ್ದಿಯಾವುದೂ ಬಂದಿಲ್ಲ. ಅಂತಹ ಸಂಭಾವನೆ ಬೇಡವೆಂದು ಸರ್ದಾರರೇ ತಿಳಿಸಿರಬಹುದು. ಅಹಮ್ಮದಾಬಾದಿನಲ್ಲಿ ಸರ್ದಾರರ ದೊಡ್ಡ ಕಂಚಿನ ವಿಗ್ರಹವನ್ನಿಡುವ ಮತ್ತೊಂದನ್ನು ಪಂಡಿತ ನೆಹರುಗಳಿಂದ ಉದ್ಘಾಟಿಸುವ ಪ್ರಯತ್ನವೂ ನಡೆದಿದೆ. ಅಹಮ್ಮದಾಬಾದಿನ ಗಣಿ ಮಾಲಿಕರು ರೂ 75000ನ್ನು ಜನ್ಮದಿನದ ಕಾಣಿಕೆಯಾಗಿ ಬೊಂಬಾಯಿಯಲ್ಲಿ ಸರ್ದಾರರಿಗೊಪ್ಪಿಸಿದ್ದರು; ಸರ್ದಾರರದನ್ನು ಗುಜರಾತಿನ ಬರಗಾಲ ನಿವಾರಣಾ ಕಾರ್ಯಕ್ಕೆ ಉಪಯೋಗಿಸಲು ಗುಜರಾತ್ ಕಾಂಗ್ರೆಸ್ ಸಮಿತಿಗೆ ಕೊಟ್ಟಿದ್ದಾರೆ. ಅಂತೂ ದೊಡ್ಡ ಮನುಷ್ಯರಿಗೆ ಭಂಗಾರ, ವಜ್ರಗಳ ಮೂಲಕ ಸಂಭಾವಿಸುವ ಉತ್ಸಾಹವೆಲ್ಲೆಲ್ಲೂ ಇದ್ದದ್ದೇ. ಮೊನ್ನೆ ವ್ಯಾರಿಸಿನ ಸಂಯುಕ್ತ ರಾಷ್ಟ್ರ ಸಂಘದ ಆಡಳಿತೇತರ ಸಂಘಟನೆಯ ಸಭಾಂಗಣದಲ್ಲಿ ಸನ್ಮಾನ್ಯ ಭಾಷಣಗಾರ ಆಫ್ರಿಕ ಪಂಡಿತ ನೆಹರುಗಳನ್ನು ಕುಳ್ಳಿರಿಸಿದುದು ಭಂಗಾರದ ಕುರ್ಚಿಯಲ್ಲಿ. ಪೋಷಾ ಪಂಗಡಿಗರ ಧರ್ಮಗುರು ಸರ್.ಆಗಾಖಾನರ ವಜ್ರೋತ್ಸವದಲ್ಲಿ ಅವ್ಯಾಹತಕಾಯನ್ನು ವಜ್ರಗಳೊಂದಿಗೆ 'ತುಲಾಭಾರ' ಮಾಡಿಸಿದುದು ನೆನಪಿರಬಹುದು. ಅಂತೂ—ದೊಡ್ಡವರಾಗಿ ಹೋದ ಮೇಲೆ ಮತ್ತವರಿಗೆ ದೊಡ್ಡ ದೊಡ್ಡ ಸಂಭಾವನೆಗಳೇ; ಬಡತನಕ್ಕಳಿದ ಮೇಲೆ ಭಾರೀ ಭಾರೀ ಭವನೆಗಳೇ.

ಭೋಪಾಲದ ನವಾಬರ ಅಸಹಕಾರ?

ತನ್ನ ಅಭಿಮಾನ ಪತ್ರ ಸ್ಥಾನಗಾಂಭವಗಳನ್ನು ಬಿಡಲು ಎಷ್ಟು ಪ್ರಯಾಸವಾಗುತ್ತದೆಂಬುದಕ್ಕೆ ಭೋಪಾಲದ ನವಾಬರೇ ಒಂದು ನಿದರ್ಶನ. ಮುಸ್ಲಿಂ ಮಹಾಸಭಾ ತಲೆಗಳ ಪೈಕಿ ಅಸಾಧ್ಯ ಕುಯುಕ್ತಿಗಳನ್ನು ತುಂಬಿಸಿಕೊಂಡ ತಲೆಯೆಂದು ಭೋಪಾಲದ ನವಾಬರು ಪ್ರಸಿದ್ಧರಾಗಿದ್ದಾರೆ. ಪಾಕಿಸ್ತಾನ್ ಸ್ಥಾಪನೆಯ ಮೊದಲೇ ಮುಸ್ಲಿಂ ಲೀಗಿಗೆ ಅವರ ಸರ್ವ ವಿಧದ ಸಹಾಯ ಸಲ್ಲುತಿತ್ತೆಂದು ವಾರ್ತೆಯಿದ್ದರೂ ಇತ್ತ ಕಾಂಗ್ರೆಸ್ ನಾಯಕರೊಂದಿಗೂ ಅವರು ಸ್ನೇಹಾಚಾರವನ್ನು ಕಟ್ಟಿಕೊಂಡೇ ಇದ್ದರು. ತನ್ನ ಬೇಳೆ ಬೇಯದೆಂದು ಮೊದಲೇ ಊಹಿಸಿ,ಜುನಾಗಾಡ್, ಹೈದರಾಬಾದಿನವರಂತೆ ಮೂಡದೆ ಅವರು ಕೂಡಲೇ ಭಾರತ ಕೇಂದ್ರದೊಂದಿಗೆ ಜೋಡಣೆಗೊಂಡಿದ್ದರು. ಆದರೆ ಆ ಕಡೆಯ ಪ್ರಯತ್ನ ಈ ವರೆಗೂ ಭಾರತ ಘಟನಾ ಸಮಿತಿಗವರು ತನ್ನ ಪ್ರತಿನಿಧಿಯನ್ನು ಆರಿಸಿಲ್ಲ. ಆ ಪ್ರತಿನಿಧಿಯನ್ನು ಆರಿಸುವ ವಿಶೇಷ ಹಕ್ಕನ್ನು ಹಿಂದೀ ಸರಕಾರವು-ಅದೇಕೋ-ಭೋಪಾಲದ ನವಾಬರಿಗೇನೇ ಕೊಟ್ಟಿದೆ. ಈಗ ನವಢಿಲ್ಲಿಯಲ್ಲಿ ನಡೆದಿರುವ ಘಟನಾ ಸಮಿತಿಯಲ್ಲಿ ಪಾಜರಿರದ ಪ್ರತಿನಿಧಿಗಳೆಂದರೆ ಹೈದರಾಬಾದ್-ಕಾಶ್ಮೀರ-ಭೋಪಾಲ ಈ ಮೂರೇ ಸಂಸ್ಥಾನಗಳವರು. ಹೈದರಾಬಾದಿನ ವ್ಯವಸ್ಥೆಯಿನ್ನೂ ಆಗಿಲ್ಲವಾದ್ದರಿಂದ ಅದರ ಹಕ್ಕಿನ 16 ಪ್ರತಿನಿಧಿಗಳಾರಿಸಲ್ಪಟ್ಟಿಲ್ಲ; ಕಾಶ್ಮೀರದಲ್ಲಿ ಯುದ್ಧ ನಡೆದಿರುವುದರಿಂದ ಅಲ್ಲಿಯ 4 ಪ್ರತಿನಿಧಿಗಳೂ ಈ ತನಕ ಆರಿಸಲ್ಪಟ್ಟಿಲ್ಲ; ಭೋಪಾಲದ ವಿಷಯಕ್ಕೆ ಇಂತಹದೇನೂ ಇಲ್ಲವಾದರೂ, ಘಟನಾ ಸಮಿತಿಯು ಪತ್ರ ಮೇಲಿಂದ ಮೇಲೆ ಹೋದರೂ ಭೋಪಾಲದ ನವಾಬರು ಇನ್ನೂ ತನ್ನ ಕಡೆಯ ಏರ್ಪಡಿಸಿಕೊಂಡಿಲ್ಲ. ಈ ಮೊದಲು ಹಲವು ಬಾರಿ ಸಿಂಹಾಸನತ್ಯಾಗದ ಬೆದರಿಕೆ ಹಾಕಿರುವ ಭೋಪಾಲದ ನವಾಬರು ಈ ಕುರಿತು ಒತ್ತಾಯಿಸಿದರೂ ಹಾಗೆಯೇ ರಾಜಿಕೊಡಲು ತಯಾರಾಗುವರೆಂಬ ಊಹೆಯಿದೆ. ಈಗ ದಿಲ್ಲಿಯಲ್ಲಿ ಘಟನಾ ಸಮಿತಿ ಸಭೆ ಸೇರಿದೆ; ಭೋಪಾಲದ ನವಾಬರು ಅದರ ಗೊಡವೆಯೇ ಇಲ್ಲದೆ ಮುಖ್ಯ ಯಾತ್ರೆಗೆ ಹೋಗಿದ್ದಾರೆ. ಅವರು ಯಾತ್ರೆಯಿಂದ ಮರಳಿದೊಡನೆ ಭಾರತ ಸರಕಾರವು ಈ ಪ್ರಸ್ತಾವವನ್ನು ಪುನಃ ಅವರೊಡನೆ ಎತ್ತಬೇಕಾಗಿ ಒಂದಿದೆ. ಎಷ್ಟೆಂದರೂ ಮುಸ್ಲಿಂ ನವಾಬರ ಸ್ವಾಭಿಮಾನ ಸಣ್ಣದೆ?

ಅಮೃತಾಂಜನ ಕಲಿವೇದನೆ, ತಿರುಪೇದನೆ, ಜ್ವರ, ಕೀಲುನೋವು, ಹುಣ್ಣು, ಹಲ್ಲು ನೋವುಗಳಿಗೂ ಎದೆನೋವು, ಭಾಯಿಗಳು ಬಾತು ಕೆತ್ತುವುದು, ಜೇಳ ವಿಷ ಮುಂತಾದ ಬೇನೆ ಸಕ್ಷಣಾತ್ ಮೊದಿಸಿ ಪೊರಬಾರದೆ ಎಲ್ಲಾ ರೋಗಗಳಿಗೂ ಸಿದ್ಧ

REGD. ಕಫ,ಹುಳುಕತ್ತಿ ಮತ್ತು ಸಣ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ

Notice

Quotations are invited for supply of two new looms with all accesseries one for the Board Hr. Ele. School Mani in Puthur Taluk and one for Brahmavar in Udipi Taluk. Quotations should reach the Special Officer, Dt. Board, South Kanara on 20-11-1948 and should be superscribed "Quotations for supply of looms". As the looms are to be supplied at the respective schools, the quotations should include the conveyance charges and any charges which may be required to fit the loom in the schools to which they are proposed to be supplied.

(Sd.) **M. Sunder Row,**
For Special Officer.

S. K. Dt. Board Office.
Mangalore, Date 2-11-48

ವಿವಿಧ ಪಾತ್ರೆಗಳು

ಯಾವಶ್ಯ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನ್ಯಗಳೂ ರಿಪೇರಿ ಆಗಿ ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಪಾರಾಯರ್,
ರಥಬೀದಿ, ಉಡುಪಿ.

The Jai Hind Trading Company. (Canara) Limited,

Bunder - MANGALORE - S. India

ಜೈಹಿಂದ್ ಟ್ರೇಡಿಂಗ್ ಕಂಪೆನಿ (ಕೆನರಾ) ಲಿಮಿಟೆಡ್.

ಬಂದರು, ಮಂಗಳೂರು.

ದಕ್ಷಿಣ ಕನ್ನಡದ ಹಲವು ಭೂಮಾಲಿಕರು ಒಂದಾಗಿ, ಸ್ಥಾಪಿಸಿರುವ ಈ ಕಂಪೆನಿಯು 1946ನೇ ದಶಂಬ್ರದಿಂದ ಒತೆ 30 ತಿಂಗಳಲ್ಲಿ ಮಂಗ್ಳೂರು ಬಂದರದಲ್ಲಿ ವ್ಯವಹಾರವಾಡಿ ಹೆಳ್ಳಿಯ ಕೃಷಿ ಉತ್ಪತ್ತಿಗಳ ಉತ್ತಮ ವಿಕ್ರಿತದ ಉದ್ಯಮವನ್ನು ಕೈಕೊಂಡು ಪಾಲುದಾರರಿಗೆ ರೇಕಡಾ 5ರ ಡಿವಿಡೆಂಡ್ ಘೋಷಿಸಿತು.

ಅಡಿಕೆ, ಯಾಲಕ್ಕಿ, ಕಾಳುಮೆಣಸು, ಇತರ ಕಾಡುಉತ್ಪತ್ತಿಗಳ ದಲಾಲಿ ವಿಕ್ರಿತದ ಅತ್ಯುತ್ತಮ ವ್ಯವಸ್ಥೆಯಿದೆ.

ಕಂಪೆನಿಯು ಕೆಲವು ಪಾಲುಗಳ ಮೂಲ ಪವೇಜಿಗೆ ಸಾರ್ವಜನಿಕರಿಗೆ ದೊರಕುವುದು.

ಕೆ. ಸಂಜೀವ ಶೆಟ್ಟಿ,
ಮೇನೇಜಿಂಗ್ ಏಜಂಟ್ಸ್.

'ಕೇಶ ಕಲಾ'

ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವುದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ರೇಶನ್ ಕಾರ್ಡುಗಳೂ

ಕಾರ್ಡುಗಳಿಗೆದಚ್ಚುವಸ್ಲಿಪ್ಪುಗಳೂ

ದೊರೆಯುತ್ತವೆ

ವನಯುಗ ಪ್ರೆಸ್, ಉಡುಪಿ.

ಚೈನಾದಲ್ಲಿ ಕಮ್ಯುನಿಸ್ಟರ ಪ್ರಚಂಡ ವಿಜಯ!

ಕಳೆದ ದಿನಗಳ ಜಾಗತಿಕ ರಾಜಕೀಯದಲ್ಲಿ ಎದ್ದು ತೋರುವ ವ್ಯಾಮುಖ್ಯ ಘಟನೆಗಳೆಂದರೆ ಚೈನಾದಲ್ಲಿ ಕಮ್ಯೂನಿಸ್ಟ್ ಸೇನೆಗಳ ಸ್ಪಷ್ಟಂಶ ವಿಜಯ; ಅಮೆರಿಕದ ಅಧ್ಯಕ್ಷೆ ಚುನಾವಣೆಯಲ್ಲಿ ಇಂದಿನ ಟ್ರುಮೇನರು ಪುನಃ ಸಂಪಾದಿಸಿಕೊಂಡ ಆಶ್ಚರ್ಯಕರ ವಿಜಯ. ಸಂಯುಕ್ತ ರಾಷ್ಟ್ರ ಸಂಘದ ವಾದವಿವಾದಗಳು, ವಿಚಾರಮಂಥನಗಳಂತೂ ಯಥಾಪ್ರಕಾರ ನಡೆದಿವೆ. ಭೂಪಟದಲ್ಲಿ ಅಲ್ಲಲ್ಲಿ ಬಿದ್ದಿರುವ ಕೆಲವು ಕೆಂಪು ಚಲೆಗಳು ಇನ್ನೂ ಉಜ್ಜಿ ಹೋಗಿಲ್ಲ.

ಭಾರತದ ಮಟ್ಟಿಗೆ ಅದರ ವಿದೇಶಮಂತ್ರಿ ಮತ್ತು ಗೃಹಮಂತ್ರಿಗಳು ತಂತಮ್ಮ ಸ್ಥಾನದ ಘನತೆಯನ್ನು ಹೆಚ್ಚಿಸುವ ಚಿರಸ್ಮರಣೀಯ ಪ್ರವಾಸಗಳನ್ನು ಮಾಡಿದುದೇ ಕಳೆದ ದಿನಗಳ ಗಣನೀಯ ಘಟನೆಗಳಿನ್ನು ಬಹುದು. ಪಂಡಿತ ನೆಹರುಗಳು ಲಂಡನ್, ಪ್ಯಾರಿಸುಗಳಲ್ಲಿ ತಿರುಗಾಡಿ, ಸಂಯುಕ್ತ ರಾಷ್ಟ್ರಸಂಘದ ಸಭೆಯಲ್ಲಿ ಅನನ್ಯ ಗೌರವವನ್ನು ಕೂಡಾ ಪಡೆದು ಭಾರತ ಸರಕಾರದ ಪಂದೇಶ ಸಂಬಂಧಧೋರಣೆಗಳು ಇಡೀ ಪ್ರಪಂಚಕ್ಕೆ ಮಾದರಿಯಾಗುವಂತಹವೆಂಬ ಘೋಷವು ಮಾರ್ದನಿಸುವಂತೆ ಮಾಡಿದರು; ಸರ್ದಾರ್ ಪಟೇಲರು ಬೊಂಬಾಯಿ, ನಾಗಪುರಗಳಲ್ಲಿ ತಿರುಗಾಡಿ ಭಾರತ ಸರಕಾರದ ಗೃಹಸಮಸ್ಯೆಗಳನ್ನೂ ಅವುಗಳ ಪರಿಹಾರೋಪಾಯಗಳನ್ನೂ ಖಂಡತುಂಡ ವಾಣಿಗಳಲ್ಲಿ ಘೋಷಿಸಿ ರಾಷ್ಟ್ರವನ್ನು ಎಂತಹ ಉಚ್ಚ ಶಕ್ತ್ಯಾನುಸರಣಿ ಮಾಡುತ್ತಿದೆ-- ಮತ್ತೆದರೆ ಪಾರ್ಥಿಕ ಹಾಗೂ ನೈತಿಕ ಶಕ್ತಿ ಎಷ್ಟು ಅಪಾರವಿದೆ-- ಎಂಬುದು ಎಲ್ಲರಿಗೂ ಮಂದಟ್ಟಾಗುವಂತೆ ಮಾಡಿದರು. ಅಂತೂ ಎಲ್ಲಾ ಸನ್ನಿವೇಶಗಳಲ್ಲೂ ಉದಾತ್ತವಾಗಿಯೇ ಇದ್ದ ಭಾರತದ ವಿದೇಶಸಂಬಂಧ ವ್ಯವಸ್ಥೆ ಮತ್ತು ಅನ್ಯರಿಂದ ಕಡೆ ಹಾಯುವದಸಾಧ್ಯವೆಂಬಷ್ಟು ಕಗ್ಗಂಟುಗಳಿಂದ ತುಂಬಿದ್ದ ಭಾರತದ ಗೃಹ ವ್ಯವಸ್ಥೆ-- ಇವೆರಡನ್ನೂ ಈಗ ಬಹುಮಟ್ಟಿಗೆ ಸುಗಮ ಮತ್ತು ಸುದೃಢಗೊಳಿಸಿಕೊಂಡಿರುವ ವಿದೇಶ ಮಂತ್ರಿ ಮತ್ತು ಗೃಹ ಮಂತ್ರಿ-ಪ್ರಧಾನಿ ಮತ್ತು ಉಪ ಪ್ರಧಾನಿ-ಇಬ್ಬರೂ ಹಿಂದಿನ ವಾರದಲ್ಲಿ ಆ ಕುರಿತು ಸ್ಪಷ್ಟೀಕರಣ ಮಾಡಿ ತಮ್ಮ ಹಿರಿಮೆಯನ್ನು ಜಗಜ್ಜಾಹೀರುಗೊಳಿಸಿದರೆನ್ನಬಹುದು.

ಒಟ್ಟಿನ ಮೇಲೆ ಕಳೆದ ವಾರದ ಜಾಗತಿಕ ರಂಗದಲ್ಲಿ ಒಂದೆರಡು ಘರ್ಷಣೆಗಳು ಭಯಂಕರಾಕಾರಕ್ಕೆ ತಿರುಗಿದ್ದರೂ ಹೆಚ್ಚಿನಂಶ ವ್ಯವಹಾರಸಾಧ್ಯತೆಯೇ ಎದ್ದು ಕೋರಿದೆ.

ಅಮೆರಿಕ-ರಶ್ಯಾ ವಿವಾದ

ಪ್ಯಾರಿಸಿನಲ್ಲಿ ನೆರೆದಿರುವ ಜಾಗತಿಕ ಸಂಘದ ವಿವಿಧ ಸಮಿತಿಗಳ ಚರ್ಚೆಗಳಲ್ಲಿಯೂ ಬೇರೆ ಕ್ಷೇತ್ರಗಳಲ್ಲೂ ಮುಖ್ಯವಾಗಿರುವ ರಶ್ಯಾ ಮತ್ತು ಅಮೆರಿಕಾಂಗ್ಲರ ವಿವಾದಗಳ ರೂಪ ಬಹುತೇಕವಾಗಿ ಹಿಂದಿನದೇ. ಸಂಯುಕ್ತರಾಷ್ಟ್ರ ಸಂಘದ ಮಹಾಸಭೆಯಲ್ಲಿ ಆಟಂ ಶಕ್ತಿಯ ನಿಯಂತ್ರಣ ಸಂಬಂಧದ ಪಾಶ್ಚಾತ್ಯ ರಾಷ್ಟ್ರಗಳ ಸೂಚನೆಯೇ ಮಂಜೂರಾಯಿತು. ಆಟಂ ಆಯುಧಗಳನ್ನು ಬಹಿಷ್ಕರಿಸಬೇಕು ಮತ್ತು ಇದ್ದ ಸಂಗ್ರಹಗಳನ್ನು ನಿರ್ಮೂಲಿಸಬೇಕು-- ಆಟಂ ಶಕ್ತಿಯ ಮೇಲೆ ಪರಿಣಾಮಕಾರೀ ಅಂತರ್ರಾಷ್ಟ್ರೀಯ ಹತೋಟಿ ಕಂಬೇಕು-- ಎಂಬ ರಶ್ಯದ ಸೂಚನೆಯೂ, ಪಾಶ್ಚಾತ್ಯ ರಾಷ್ಟ್ರಗಳ ಸೂಚನೆಯ ಸಾರಮಾತ್ರವನ್ನು ಒಪ್ಪಿಕೊಂಡು 'ಆಟಂ ಶಕ್ತಿ ಕಮಿಶನ್' ಕೂಡಲೇ ಆ ಸಂಬಂಧದ ಒಂದು ಸಂಧಾನ ಸೂತ್ರತಯಾರಿಸುವಂತದನ್ನು ಕೇಳಿಕೊಳ್ಳಬೇಕೆಂಬ ಭಾರತದ ಮಧ್ಯವರ್ತೀ ಸೂಚನೆಯೂ ಬಿದ್ದು ಹೋಗಿ, ಆಟಂ ಶಕ್ತಿಯನ್ನು ಸಂಪೂರ್ಣವಾಗಿ ಅಂತರ್ರಾಷ್ಟ್ರೀಯ ಅಧಿಕಾರಕ್ಕೊಳಪಡಿಸಬೇಕು-- ಪಂಚ ಮಹಾ ರಾಷ್ಟ್ರಗಳು ಮತ್ತು ಕೆನಡವು ಸೇರಿ ಆ ಸಂಬಂಧದ ಒಂದು ಕರಾರು ತಯಾರಿಗೆ ಪ್ರಯತ್ನಿಸಬೇಕು-ಎಂಬ ಪಾಶ್ಚಾತ್ಯ ರಾಷ್ಟ್ರೀಯ ಸೂಚನೆಯೇ ಪ್ರಬಲ ಬಹುಮತದಿಂದ ಮಂಜೂರಾಗಿದೆ. ಆಟಂ ಆಣ್ವಾಹುತದ ಕುರಿತು ರಶ್ಯ ಮತ್ತು ಅಮೇರಿಕ ಗಳೊಳಗಿನ ಭಿನ್ನಾಭಿಪ್ರಾಯಗಳ ನೊನೆ ಮುರಿದು ಅವುಗಳನ್ನೊಂದು ಗೂಡಿಸಬೇಕೆಂದು ಭಾರತದ ಪ್ರತಿನಿಧಿಗಳು ಮಾಡಿದ್ದ ವಿಶೇಷ ಪ್ರಯತ್ನಗಳು ವಿಫಲವಾಗಿದ್ದುವು.

ಗ್ರೀಸನ್ನು ನಿರ್ಬಂಧವಾಗಿ ಮಾಡಿಕೊಂಡು ಸೋವಿಯೆಟ್ ರಶ್ಯದ ಮೇಲೆ ಆಕ್ರಮಣ ಕಾರ್ಯವನ್ನು ಅಮೆರಿಕ ನಡೆಸುತ್ತಿದೆ ಎಂದು ಸಂ. ರಾ. ಸಂಘದ ರಾಜಕೀಯ ಸಮಿತಿಯಲ್ಲಿ ರಶ್ಯದ ಪ್ರತಿನಿಧಿ ದೂರಿದರೆ "ಸ್ವತಂತ್ರ ಜನತೆಯನ್ನು ಒಂದು ಹೊಸ ಭೀತಿಯೀಗ ಅವರಿಸಿಕೊಂಡಿರುವುದರಿಂದ ನಾವು ನಿಶ್ಶಸ್ತ್ರೀಕರಣವನ್ನು ಮುಂದೊತ್ತಲಿಲ್ಲ. ಜರ್ಮನಿ ಜಪಾನುಗಳ ಸಂಭವವು ಸ್ವತಂತ್ರ ಜನಾಂಗಗಳ ಭಯನಿವಾರಣೆಮಾಡೀತೆಂಬ ನಮ್ಮ ಆಶೆ ಫಲಿಸಲಿಲ್ಲ. 'ವಿಶೇಷ ಮತಾಧಿಕಾರ'ದ ದೆಸೆಯಿಂದಲೂ ಸೇನಾ ಬಲವಿಲ್ಲದ್ದರಿಂದಲೂ ಭದ್ರತಾಮಂಡಲಿಗೆ ಈ ಭಯ ನಿವಾರಿಸುವದಸಾಧ್ಯವಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಅಮೆರಿಕವನ್ನು ಅತ್ಯಂತ ಬಲಶಾಲಿಯಾಗಿ ಇಡುವದೇ ನಮ್ಮ ಇಚ್ಛೆ" ಎಂದು ಅಮೇರಿಕದ ಪ್ರತಿನಿಧಿ ಸಂ. ರಾ. ಸಂಘದಲ್ಲಿ ಜಾಹೀರು ಮಾಡಿದ್ದರು.

ರಶ್ಯದ ಬಲ ವರ್ಧಿಸುತ್ತಿದೆ!

ರಶ್ಯದ ವಿದೇಶ ಸಂಬಂಧ ಮಂತ್ರಿ ಮೊಲಟವರು ಇದೇ ತಾ 6ರಲ್ಲಿ ಮೋಸ್ಕೋ ನಗರದಲ್ಲಿ 1917ನೇ ಕ್ರಾಂತಿಯ ವರ್ಧಂತ್ಯುತ್ಸವದ ಸಂದರ್ಭದಲ್ಲಿ ರಶ್ಯದ ಸ್ಥಿತಿಗತಿಗಳ ಸಿಂಹಾವಲೋಕನ ಮಾಡುತ್ತಾ 'ಅದಿದ ಮಾತುಗಳು ವಿಚಾರಣೀಯವಿನಿ: "ಕಮ್ಯೂನಿಸವನ್ನು ಬೆಳೆಸುತ್ತಾ ಹೋಗುವುದರಲ್ಲಿ ಸೋವಿಯೆಟ್ ಜನತೆಯು ದಿನದಿನವೂ ವಿಜಯ ಗಳಿಸುತ್ತಿದೆ. ಸೋವಿಯೆಟ್ ಯೂನಿಯನಿನ ಮಹಾಬಲ ವರ್ಧಿಸುತ್ತಾ ಬಂದಿದೆ. ಸೋವಿಯೆಟ್ ರಾಷ್ಟ್ರಕೇಂದ್ರದ ಜನತೆಯ ಮೈತ್ರಿ ಬೆಳೆಯುತ್ತಿದೆ. ದ್ವಿತೀಯಲೋಕ ಯುದ್ಧದ ನಂತರ ಪೋಲೆಂಡ್, ರುಮೇನಿಯ, ಬಲ್ಗೇರಿಯಾ; ಅಲ್ಬೇನಿಯ, ಯುಗೊಸ್ಲೋವಿಯ, ಜಂಗೇರಿ ಮುಂತಾದ ರಾಷ್ಟ್ರಗಳು ಭಂಡವಾಳಶಾಹೀಬಲೆಯಿಂದ ಪಾರಾಗಿ ಬಂದುವು. ವಸಾಹತುಗಳ ಜನತೆಯ ಸ್ವಾತಂತ್ರ್ಯ ಚಳವಳಿ ಬೆಳೆಯುತ್ತಿದೆ; ಎಲ್ಲಕ್ಕಿದಿರಾಗಿ ಸ್ವಾತಂತ್ರ್ಯ ಚಳವಳಿ ಬೆಳೆದು ಬಂದಿದೆ. ಶಾಂತಿ ಮತ್ತು ಪ್ರಜಾಸತ್ತೆಯ ನೇತಾನೆಂಬಂತೆ ಸೋವಿಯೆಟ್ ಯೂನಿಯನಿನ ಅಂತರ್ರಾಷ್ಟ್ರೀಯ ಘನತೆ ಹೆಚ್ಚುತ್ತಿದೆ. ನಮ್ಮಯುದ್ಧೋತ್ತರ ಪಂಚವಾರ್ಷಿಕ ಯೋಜನೆಯ ಮೂರನೇ ಸರದಿಯಾದ 1947ರಲ್ಲೇ ನಾವು 1940ರ ಮಟ್ಟಕ್ಕೇರಿದ್ದೇವೆ. ಕೆಲಸಗಾರ ವರ್ಗದ ಸ್ಥಿತಿ ಸುಧಾರಣೆಯ ವಿಸ್ತಾರ ಯೋಜನೆ ನಡೆದಿದೆ. ಆದರೆ ಪಾಶ್ಚಾತ್ಯರಾಷ್ಟ್ರಗಳ ಸ್ಥಿತಿಗತಿ ಇದಕ್ಕೆಂಥ ಭಿನ್ನವಿದೆ. ಯುದ್ಧ ಕಾಲದಲ್ಲಿ ಅಗಾಧ ವ್ಯಾಪಾರ ನಡೆಸಿದ್ದ ಅಮೆರಿಕದಲ್ಲೀಗ ಕೆಲಸಗಾರರ ಸಂಬಳದ ಪರಿಮಾಣವು ಸಾಮಾನುಗಳ ಧಾರಣೆಗಿಂತ ಹಿಂದೆ ಬಿದ್ದು ಸ್ಥಿತಿ ಸಂಕಟಕರವಾಗಿದೆ. ಅಲ್ಲಿ 2 ಮಿಲಿಯ ನಿರುದ್ಯೋಗಿಗಳಿದ್ದಾರೆಂದು ಅಧಿಕೃತ ಅಂಕೆ; ಆದರೆ ಅಲ್ಪಾವಧಿ ಉದ್ಯೋಗದವರನ್ನು ಬಿಟ್ಟರೂ ಅಲ್ಲಿಯ ಪೂರ್ಣ ನಿರುದ್ಯೋಗಿಗಳ ಸಂಖ್ಯೆಯೇ ಕಡಿಮೆಯೆಂದರೂ ಆದರ ಮೂಮ್ಮಡಿಯಾಗಿರಬೇಕು. ಫ್ಯಾಸ್ಟ್ರಿಸಂ ಕೆಲಸಗಾರರ ವೇತನವು ಯುದ್ಧ ಪೂರ್ವದಲ್ಲಿದ್ದುದರ ಸರಿ ಅರ್ಧಕ್ಕೆ ಕುಸಿದಿದೆ. ಆದರೆ ಈ ವರ್ಷದ ಪ್ರಥಮಾರ್ಧದಲ್ಲಿ ಅಲ್ಲಿಯ ಭಂಡವಾಳಗಾರರ ಲಾಭವು ಇಡೀ ರಾಷ್ಟ್ರದ ಉತ್ಪನ್ನದ ಸರಿ. 43 ಪ್ರತಿಶತ; ಇದು ಎಲ್ಲಾ ಕೆಲಸಗಾರರ ಮತ್ತು ಆಫೀಸರರ ಸಂಬಳದ ಒಟ್ಟು ಮೊತ್ತಕ್ಕಿಂತ ಎಷ್ಟೋ ಹೆಚ್ಚಿಗೆ. ಕಳೆದ ವರುಷದಲ್ಲಿ ರಶ್ಯದಲ್ಲಿ ಜ್ಯಾರಿಗೆ ಬಂದ ಕರೆನ್ಸಿ ಸುಧಾರಣೆ, ರೇಶನ್ ರದ್ದತಿ, ಧಾರಣೆಗಳ ಇಳಿತ ಇತ್ಯಾದಿಗಳಿಂದ ದುಡಿಮೇವಾರರ ಮತ್ತು ಬಾದ್ಧಿಕ ಕೆಲಸಗಾರರ ನಿಜವಾದ ಸಂಬಳವು ಅದರ ಹಿಂದಿನ ವರುಷದ ದರ್ಜಾರಿಗೂ ಮಿಕ್ಕಿದ್ದಿತು. ನಮ್ಮೀ ರಾಷ್ಟ್ರದಲ್ಲಿ ಎಲ್ಲರೂ ಕೆಲಸಗಾರರೇ. ನಮ್ಮಲ್ಲಿ ಅಲಸಿಗರಿಲ್ಲ; ಅಂತಹ ಯಾರೊಬ್ಬನನ್ನೂ ನಾವಿಟ್ಟುಕೊಳ್ಳಲಾರೆವು. ನಾವೀಕಾರ್ಯದಲ್ಲಿ ಪ್ರಜಾಸತ್ತಾತ್ಮಕವಾಗಿ ವರ್ತಿಸಿಲ್ಲ ಎಂದು ಕೆಲವರನ್ನುತ್ತಾರೆ. ಆದರೆ ನಾವು ಸ್ನೇಹಾಚಾರದ, ಸಮಾನರೂಪೀ ರಾಷ್ಟ್ರೀಯತಾ ಯೂನಿಯನ್ ಆಗಿದ್ದೇವೆ. ಮತ್ತು ಸಬಲ ಹಾಗೂ ಅಜೇಯ ಸೇನೆ ನಮಗಿದೆ". ಎಂದು ಮೊಲಟವರು ಕಮ್ಯೂನಿ

For Banking Service
in Trade, Industry & Agriculture
approach
THE AGRICULTURAL & INDUSTRIAL BANK Ltd.,
(Established in 1934)
Head Office: **COONDAPOOR, S K.**

Branches:

1	Ankola,	7	Gokarn,	13	Nagar,
2	Belgaum,	8	Haveri,	14	Shimoga,
3	Bhatkal,	9	Hubli,	15	Sirsi,
4	Coondapoor,	10	Karvar,	16	Somwarpet,
5	Dharwar,	11	Kumta,	17	Virajpet,
6	Gadag,	12	Mangalore,	18	Honavar.

19 384, M. Jaipuria House, Kalbadevi Road, BOMBAY, 2.

Current, Savings bank, and Fixed deposits are accepted.

For Terms, apply to the nearest Branch.

Coondapoor, 29-9-1948.

K. Vittaldas Shenai, Managing Director.

ಶ್ರೀ ಎಂ. ವಿ. ಹೆಗ್ಡೆಯವರು ಬರೆದ

ಸ್ವರಾಜ್ಯ ವಿಜಯ

ಯಕ್ಷಗಾನ ನಾಟಕ.

ಪದ-ಅರ್ಥಸಹಿತ

ಅಟ್ಲೀ, ಕ್ರೈಸ್ಲರ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜಿನ್ನಾ, ನೆಹರು, ಪಟೇಲ್, ಗಾಂಧಿ, ಅಜಾದ್, ಕೃಪಲಾನಿ, ಜೈಪ್ರಕಾಶ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರಧಾರಿಗಳು.

ಓದಬಲ್ಲವರಂತೂ ಓದಿ ತಿಳಿಯತಕ್ಕ ಕತೆ. ಓದಲಾರದವರೂ ಓದಿಸಿ ಕೇಳತಕ್ಕ ಕತೆ.

ಬೆಲೆ ಬರೀ 0 8 0

ಪೋಸ್ಟೇಜ್ ಸ್ಟಾಂಪು ಕಳಿಸಿದರೆ 1 ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.

ಪ್ರತಿಗಳು **ನವಭಾರತ ಪುಸ್ತಕ ಭಂಡಾರ ಉಡುಪಿ,** ಅಥವಾ **ನವಯುಗ ಪ್ರೆಸ್, ಉಡುಪಿ.**

ಇಲ್ಲಿ ಸಿಗುತ್ತವೆ.

ಪ್ರಧಾನಿ ನೆಹರುಗಳ ಪ್ರವಾಸ ದಿಗ್ವಿಜಯ

ಸ್ವ ರಕ್ಷಿತ ಸ್ಥಿತಿಗತಿಗಳನ್ನು ಪಾಶ್ಚಾತ್ಯ ರಾಷ್ಟ್ರಗಳೊಡನೆ ಹೋಲಿಸಿ ತೋರಿಸಿದ್ದಾರೆ; ತಮ್ಮನ್ನು ವಕ್ರದೃಷ್ಟಿಯಿಂದ ನೋಡುವವರನ್ನು ಹಂಗಿಸಿ ಮಾತನಾಡಿದ್ದಾರೆ. ಜರ್ಮನಿಯಲ್ಲಿ ಆಂಗ್ಲೋ ಅಮೆರಿಕನರು ತಮ್ಮ ಕ್ಷೇತ್ರಗಳಲ್ಲಿ ಹಿಂದಿನ ನಾಜೀ ನಾಯಕರುಗಳಿಗೆ ಮೊದಲಿನ ಸ್ಥಾನಗಳನ್ನು ಕೊಟ್ಟಿರುವುದನ್ನೂ ಜರ್ಮನಿ ಜಪಾನುಗಳೆರಡಲ್ಲೂ ಮಾಜೀ ಅಪ್ರಾಗತಿಕ ದುಃಶಕ್ತಿಗಳ ಪುನರುಜ್ಜೀವನಕ್ಕೆ ಅವಕಾಶ ಕೊಟ್ಟಿರುವುದನ್ನೂ ಟೀಕಿಸಿ ಮೊಲೆಟವರು ಯುದ್ಧೋತ್ತರ ವಿವಾದಗಳ ಅರೋಪಗಳನ್ನು ಅಂಗ್ಲೋ ಅಮೆರಿಕನರ ಮೇಲೆ ಹೊರಿಸಿದರು. ಟ್ರುಮೇನ್ ಚುನಾವಣಾ ವಿಜಯದ ಕುರಿತು ರಕ್ಷಿತ ವಿದೇಶ ಮಂತ್ರಿಯೆಂದರು: "ಜನತೆಯು ಸೋವಿಯೆಟ್ ವಿರೋಧಪ್ರಚಾರಗಳ ಮೂರ್ಖ ಪ್ರಕರಣವಾಗಿರುವ ಕಾಲ ಕಳೆಯಿತು. ಅಪ್ರಾಗತಿಕತೆಯ ಮತ್ತು ವಿಶೇಷ ಆಕ್ರಮಣಶೀಲತೆಯನ್ನು ಜಾಹೀರಾಗಿ ಪ್ರದರ್ಶಿಸುವ ಕ್ರಾಯಾನುವಾಯಿಗಳಿಗಿಲ್ಲದಿದ್ದಂಪಬ್ಲಿಕನ್ ಪಕ್ಷ ಮತ್ತು ದಿವೆಯವರಿಗಾದ ಪರಾಭವವು ಅಮೇರಿಕದ ಜನತೆಯಲ್ಲಿಬಹುಸಂಖ್ಯಾಕರು ಆ ಕಾರ್ಯಕ್ರಮಗಳನ್ನು ಧಿಕ್ಕರಿಸುತ್ತಿರುವುದರ ನಿದರ್ಶನವೆ".

ವಸಾಹತುಗಳು-ಗ್ರೀಸ್-ಯುಗೊಸ್ಲೊವಿಯಾ- ಇಂಡೋನೇಶಿಯಾಗಳು ಧನ್ಯಳಿನ್ನ ರೀತಿಯ ಸಮಸ್ಯೆಗಳಲ್ಲಿ ಸಿಕ್ಕಿಕೊಂಡಿದ್ದು ಇನ್ನೂ ಪಡ ಕಾಣದಿವೆ.

ಚೈನದ ಅದೃಷ್ಟವೇನು?

ಚೈನದಲ್ಲಂತೂ ಕಳದೆ ವಾರದಲ್ಲಿ ಚಿಯಾಂಗ್ ಸರಕಾರಿ ಸೇನೆಗಳನ್ನು ಬಗ್ಗು ಬಡಿದು ಕಮ್ಯೂನಿಸ್ಟ್ ಸೇನೆಯು ದೊರಕಿಸಿಕೊಂಡ ವಿಜಯ ಮತ್ತು ಸ್ವಾಧೀನಪಡಿಸಿಕೊಂಡ ಸ್ಥಳಗಳ ಮೇಲಿಂದ ಚೈನದ ಭವಿಷ್ಯದಿದರಲ್ಲಿ ದೊಡ್ಡ ಪ್ರಶ್ನಾರ್ಥಕ ಚಿಹ್ನೆ ಮೂಡಿಸಿಂತಿದೆ. ನೋನ್ನೆ ತಾನೇ ಕಂಪು ಸೇನೆ ಕೆರಳಿದ ಸಮುದ್ರದಂತೆ ಮೇಲ್ಬಾಯ್ದು ಬಂದಾಗ, ಸ್ವತಃ ಚಿಯಾಂಗ್ ಕೈ ಶೇಕರೇ ಆತ್ಮ ಧೈರ್ಯ ಸರಕಾರೀ ಸೇನಾ ಕಟ್ಟಪ್ಪು ಬಿಗುಗೊಳಿಸಲು ಪ್ರಯತ್ನಿಸಿದರೂ ನಿಷ್ಫಲವಾಗಿ ಮಂಚೂರಿಯವು ಕಮ್ಯೂನಿಸ್ಟರ ಬಗಲೊಳಗಾಯಿತು; ಇದರಿಂದ ಉತ್ತರ ಚೈನವಿಡೀ ಕಮ್ಯೂನಿಸ್ಟ್ ನಿಲ್ದಾಣವಾಗಿ ಮಾರ್ಪಟ್ಟಿದೆ. ಈಗ ಚಿಯಾಂಗ್ ಸರಕಾರದ ರಾಜಧಾನಿ ನಾನ್ಕಿಂಗಿನ ಮೇಲೂ ಚೈನಾ ನಡುವಲಯದ ಮೇಲೂ ದೃಷ್ಟಿಯಿಡುತ್ತಾ ಕಮ್ಯೂನಿಸ್ಟ್ ಸೇನೆಗಳು ಕಾಲಿಡಹತ್ತಿವೆ. ಮಂಚೂರಿಯಾ ಕಡೆಯಿಂದ ಮುಂದೊತ್ತಿದ ಕೆಂಪು ಸೇನೆಯೀಗ ನಾನ್ಕಿಂಗಿಗೆ 110 ಮೈಲು ದೂರದ ಪೆಂಗೂ ನಗರ ಹತಿಯಲು ಧಾವಿಸಿ ಬರುತ್ತಿದ್ದು ಚಿಯಾಂಗರು ಅದರ ಆಶೆಯನ್ನು ಇಷ್ಟರಲ್ಲೇ ಬಿಟ್ಟಂತಿದೆ. ತನ್ನ ಸೇನೆಗಳನ್ನೆಲ್ಲಾ ಹಿಂದೆಳೆದುಕೊಂಡು ಯಾಂಗ್ಟ್ಸೇ ಹೊಳೆಯೊಳಗಡೆ ಮಧ್ಯ ಚೈನಾವನ್ನಷ್ಟೇ ಗಟ್ಟಿ ಹಿಡಿದು ನಿಲ್ಲುವ ಆಡಚಣೆಯ ವ್ಯವಸ್ಥೆಗೆ-ನೆರೆಯೇರಿ ಬರುತ್ತಿರುವಾಗ ಮುಖವನ್ನಾದರೂ ಮೇಲೆತ್ತಿ ಹಿಡಿಯಬೇಕೆನ್ನುವಂಥಾ ವ್ಯಾಣಾವಧಿ ಪ್ರಯತ್ನಕ್ಕೆ-ಚಿಯಾಂಗ್ ಕೈ ಶೇಕರೀಗ ತೊಡಗಿದ್ದಾರೆ! ಉತ್ತರ ಕಡೆಯಿಂದ ಇಂತಹ ಅಪಾಯ ಬಾಯ್ದೆರೆದು ಬರುತ್ತಿರುವಾಗಲೇ ಪೂರ್ವದೆಸೆಯಿಂದ ನಾನ್ಕಿಂಗ್ ನಗರವಿರುವ ಕಿಯಾಂಗ್ಸು ಪ್ರಾಂತ್ಯದ ಗಡಿ ನುಗ್ಗಿ ಕಮ್ಯೂನಿಸ್ಟ್ ಸೇನೆಗಳು ಮುಂದೊತ್ತಿ ಬರಹತ್ತಿವೆ. ಚಿಯಾಂಗರು ಸಹಾಯಕ್ಕಾಗಿ ಅಮೆರಿಕಕ್ಕೆ ಮೊರೆಯಿಟ್ಟಿದ್ದಾರೆಂದು ತಿಳಿದು ಬರುತ್ತದೆ. ಆದರೆ ಅಮೆರಿಕ ಸರಕಾರವು ಆಪಾಯಕರ ಕ್ಷೇತ್ರಗಳಂದ ಹೊರಟು ಬರುವಂತೆ ತನ್ನ ಸೈಜೆಗಳನ್ನು ಎಚ್ಚರಿಸಿದೆ. ಮಂಚೂರಿಯ ಪತನವಾದೊಡನೆ ಚಿಯಾಂಗ್ ಸರಕಾರದ ಪ್ರಧಾನ ಮಂತ್ರಿ ವೋಂಗ್ವೆನ್ ಹಾವೋ, ಮುತ್ಸದ್ದರನ್ನು ಅನುಸರಿಸಿ ಇಡೀ ಮಂತ್ರಿ ಮಂಡಲದ ರಾಜೀನಾಮೆ ಅಧ್ಯಕ್ಷ ಚಿಯಾಂಗರಿಗೆ ಬಂದಿತ್ತು. ಆದರೆ ಬೇರೆ ಗತಿ ತೋರದ ಚಿಯಾಂಗರು ವಿಜ್ಞಾಪಿಸಿಕೊಂಡುದರಿಂದ ಸ್ಯಧಾನ ಮಂತ್ರಿಗಳು ರಾಜೀನಾಮೆ ಹಿಂದೆಗೆದುಕೊಂಡರೂ ಚಿಯಾಂಗ್ ಸರಕಾರದ ನುಂತ್ರಿಗಳಲ್ಲಿ-ಅಧಿಕಾರಿಗಳಲ್ಲಿ-ಜನತೆಯಲ್ಲೆಲ್ಲಾ ನಿರಾಶೆಯೇ ಕವಿದಿದೆ. ಕಮ್ಯೂನಿಸ್ಟರ ಇಂದಿನ ಕತ್ಸರೀ ಧಾಳಿಯಲ್ಲಿ ಚಿಯಾಂಗ್ ಸರಕಾರ ಕಡಿದು ಹೋಗದುಳಿಯಬಹುದೆ? ಕಾರ್ಯವಿಸ್ತಂಲ್ಲೇ ಕೈ ಮೀರಿ ಹೋಗಿದೆ ಎಂದೂಹಿಸಿ ಅಮೆರಿಕವೂ ಚೀನಾ ಸರಕಾರಕ್ಕೆ ಹೆಚ್ಚಿನ ಸಹಾಯ ಕೊಡಲಾರದೇ? ಕೊಟ್ಟೇತೆ? ಕೊಟ್ಟರೆ ಚೈನನೇ ರಶ್ಯಾ-ಅಮೆರಿಕ ಯುದ್ಧ ರಂಗವಾಗಬಹುದೆ? ಇತ್ಯಾದಿ ಪ್ರಶ್ನೆಗಳೆದ್ದಿವೆ.

ನೆಹರೂ ದಿಗ್ವಿಜಯ

ಲಂಡನಿನ ವಸಾಹತು ಪ್ರಧಾನಿಗಳ ಸಮ್ಮೇಳನಕ್ಕಾಗಿ ಒಂದು ತಿಂಗಳ ಮೊದಲು ಹೋಗಿದ್ದ ಭಾರತ ಪ್ರಧಾನಿ ಪಂಡಿತ ನೆಹರುಗಳು ಲಂಡನ್ನಿನಿಂದ ಪ್ಯಾರಿಸಿಗೆ, ಅಮೇಲೆ ಕೈರೋವಿಗೆ ಬಂದಿದ್ದು, ಅಲ್ಲಿಂದ ವಿಮಾನ ಹತ್ತಿದವರು ಇದೇ ತಾ. 6ನೇ ಪ್ರಾತಃಕಾಲ 1-50 ತಾಸಿಗೆ ಬೊಂಬಾಯಿ ನಿಲ್ದಾಣದಲ್ಲಿಳಿದರು; ಪ್ರಾತಃಕಾಲ 8 ತಾಸಿಗೆ ಪುನಃ ವಿಮಾನ ಹತ್ತಿದವರು ಮಧ್ಯಾಹ್ನವೇ ನವದಿಲ್ಲಿಯಲ್ಲಿ ಕಾಲೂರಿ ಯಥಾ ಪ್ರಕಾರ ಕಾರ್ಯ ಪ್ರವೃತ್ತರಾಗಿದ್ದಾರೆ. ತಾರೀಕು 7ರಲ್ಲಿ ಫೆಟನಾ ಸಮಿತಿಯ ಕಾಂಗ್ರೆಸ್ ಪಕ್ಷೀಯ ವಿಶೇಷ ಸಭೆಯು ಡಾ. ಪಟ್ಟಾಭಿಗಳ ಅಧ್ಯಕ್ಷತೆಯಲ್ಲಿ ಸೇರಿ, ಪಂಡಿತಜೀಯ ಲಂಡನ್ ಅನುಭವಗಳ ಭಾಷಣವನ್ನಾಲಿಸಿದೆ; ತಾರೀರಲ್ಲಿ ಫೆಟನಾ ಸಮಿತಿಯಲ್ಲೂ ಪಂಡಿತರು ತನ್ನ ಪ್ರವಾಸಾನುಭವಗಳನ್ನು ವಿವರಿಸಿದ್ದಾರೆ. ಪ್ರಧಾನಿ ಪಂಡಿತ ನೆಹರುಗಳು ತನ್ನೀ ಏಕಮಾಸ ಪ್ರವಾಸದಿಂದ ಅಂತರ್ರಾಷ್ಟ್ರೀಯ ರಂಗದಲ್ಲಿ ಭಾರತದ ಫೆನತೆಯನ್ನು ಒಂದಂತಸ್ತು ಮೇಲಕ್ಕೇರಿಸಿದರೆನ್ನಬಹುದು. ಲಂಡನಿನ ವಸಾಹತು ಸಮ್ಮೇಳನದಲ್ಲಿ ಪ್ರಧಾನ ಮಾನುಷ್ಯ-ಆತ್ಯಾಕರ್ಷಣೀಯ ವ್ಯಕ್ತಿ-ಆಗಿದ್ದವರು ಪಂಡಿತಜೀಯೇ. ಲಂಡನ್, ಪ್ಯಾರಿಸ್ ಮತ್ತು ಕೈರೋದಲ್ಲಿ ಪ್ರಪಂಚದ ಗಣ್ಯ ರಾಷ್ಟ್ರಗಳ ಹಲವು ಸೂತ್ರಧಾರಿಗಳೊಡನೆ ಮುಖಾಮುಖಿ ಸಂಧಾನಗಳೆ ಮತ್ತು ಸ್ನೇಹಾಚಾರ, ವಿಚಾರ ವಿನಿಮಯಗಳು ಪಂಡಿತಜೀಗಾಗಿದ್ದುವು. ಇಂದಿನ ಪ್ರಾಪಂಚಿಕಾಂದೋಲನದ ವಿವಿಧ ಮೂಲಗಳನ್ನು ವಮಟ್ಟಿ ಪರೀಕ್ಷಿಸುವ ಸುಸಂದರ್ಭ ಪಂಡಿತ ಜವಾಹರಲಾಲರಿಗೆ ದೊರೆತಿದ್ದಿತು. "ಸದ್ಯಕ್ಕಿಯುದ್ಧದ ಭಯವಿಲ್ಲ" ಎಂದವರು ಮೂಡಿದ ಕೋಧ-ಆಸ್ಯವ ಪ್ರಾಮುಖ್ಯತೆಯನ್ನು ಯುರೋಪಿಯನರಿಗೆ ಮನಗಾಣಿಸಿದರೀತಿ-ಜಾಗತಿಕ ಸಂಘದ ಮೂಲಕ ಇಡೀ ಜಗತ್ತಿಗೆ ಅವರು ಕೊಟ್ಟ ಗಾಂಧೀಶಕ್ತ್ಯ ಪಾಠ-ಲೋಕ ಮನ್ನಣೆಗಳಿಸಿವೆ. ನೆಹರುಗಳು ಹೋದಲ್ಲೆಲ್ಲಾ ಸರ್ವ ಪ್ರಧಮ ಮನ್ನಣೆಗಳಿಸಿ ನಿಶ್ಕೈಲ್ಲರನ್ನೂ ನಿಶ್ಕೈಲ್ಲವನ್ನೂ ಆನಂದಾಶ್ಚರ್ಯಕರ ರೀತಿಯಿಂದ ತನ್ನ ಅನುಯಾಯಿಗಳನ್ನಾಗಿ ಪರ್ಮಾರ್ಪಿಸಿದ್ದರು.

ರಾಷ್ಟ್ರ ಸಂಘದಲ್ಲಿ ಭಾಷಣ

ಜಗತ್ತಿನ ಮಹಾಮನುಷ್ಯರಲ್ಲೊಬ್ಬ, ಪಂಡಿತ ನೆಹರು, ಲಂಡನ್ನಿನಿಂದ ಭಾರತಕ್ಕೆ ಮರಳುವಾಗ ಕೆಲವು ದಿನ ಪ್ಯಾರಿಸಿನ ಬಳಿರುವ ಸಂದರ್ಭವನ್ನು ಕಳಕೊಳ್ಳದೆ, ಅವರ ಭಾಷಣಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದ ವಿಶೇಷ ಮಹಾಸಭೆ ಕರೆಯುವ ಆತುರವು ಆ ಸಂಸ್ಥೆಯ ಸೂತ್ರಧಾರಿಗಳಲ್ಲಿತ್ತು. ಆದರೂ ನವಂಬರ್ ೫ಕ್ಕೇನೇ ಪ್ಯಾರಿಸ್ ಬಿಡುವ ಪೂರ್ವ ನಿಶ್ಚಯ ಪಂಡಿತರದಿದ್ದುದರಿಂದಲೂ, ಕಾರ್ಯಾವಸರಗಳ ದೆಸೆಯಿಂದ ಆ ಮೊದಲು ಸಂದರ್ಭ ಸಾಧಿಸಿಕೊಳ್ಳಲಾಗದಿದ್ದುದರಿಂದಲೂ ಜಾಗತಿಕ ಸಂಘಕ್ಕೆ ನೆಹರೂ ಭಾಷಣದ ಸುಯೋಗವು ಒಮ್ಮೆತಪ್ಪಿಹೋಯಿತೆಂದಾದಾಗ್ಯೂ, ಈ ನಷ್ಟವನ್ನು ಸಹಿಸುವದು ಕಾಲಕ್ಕೇನೇ ಅನಾಭ್ಯವಾಯಿತು! ಹವಾಮಾನ ಕೆಟ್ಟು ಪಂಡಿತಜೀಯ ಪ್ರಯಾಣ ಒಂದು ದಿನ ಹಿಂದೆ ಬಿತ್ತು. ಕೂಡಲೇ ರಾಷ್ಟ್ರ ಸಂಘದ ಅಧ್ಯಕ್ಷ ಡಾ. ಎವಾಟ್ಟರು ಅದೇ ದಿನ ನೆಹರೂ ಭಾಷಣಕ್ಕಾಗಿ ಸಂಯುಕ್ತ ರಾಷ್ಟ್ರ ಸಂಘದ ವಿಶೇಷ ಮಹಾಸಭೆ ಕರೆದರು; ಯಾವ ಪೂರ್ವ ತಯಾರಿಗೂ ಅವಕಾಶವಿಲ್ಲದಿದ್ದರೂ ಪಂಡಿತಜೀ ಅದ್ಭುತ ಅಘೋಷ್ಠ ಭಾಷಣವಿತ್ತರು. ಅಮೆರಿಕಾಧ್ಯಕ್ಷ ಟ್ರುಮಾನರೆಯ ಆತುರೋದ್ಗೀರ್ಣ-ಜಾಗತಿಕ ಸಂಘದ ಕಾರ್ಯ ಕಲಾಪಗಳು-ಸಂಘದ ಸದಸ್ಯ ಅಥವಾ ಒಂದು ರಾಷ್ಟ್ರದ ಘಟನಾತ್ಮಕ ಅಧಿನಾಯಕರೂ ಆಗಿರದ ವ್ಯಕ್ತಿಗಳನ್ನು ಮಂತ್ರಿಯೊಬ್ಬನನ್ನು ಹೀಗೆ ಗೌರವಿಸುವದು ಆ ಸಂಘದ ಚರಿತ್ರೆಯಲ್ಲಿಲ್ಲವಲ್ಲಾ ಎಂಬ ಶಂಕೆ- ಇದಾವುದನ್ನೂ ಗಣಿಸದೆ ನವಂಬರ್ ತಾ. ೆರಲ್ಲಿ ಲೋಕ ಸಂಘೆ ನೆಹರೂ ಭಾಷಣವನ್ನಾಲಿಸಿತು. ಅಧ್ಯಕ್ಷ ಪೀಠದ ಬಳಿ ಸುವರ್ಣಾಸನದಲ್ಲಿ ಕುಳಿತಿದ್ದ ಪಂಡಿತಜೀಯ ಕಡೆಗೇನೇ ಎಲ್ಲಾ ರಾಷ್ಟ್ರ ಸ್ರಮುಖರಿಂದ ತುಂಬಿದ್ದ ಆ ಸಭೆಯು ತದೇಕಚಿತ್ತದಿಂದಿದ್ದುದು-ನೆಹರುಗಳ ಆಗಮನ ನಿರ್ಗಮನಗಳ ವೇಳೆ ಆದ ಕರತಾಡನಗಳು-ಮೈಗಾವಲಾಗಿ ಸಂಘದ ಕಾರ್ಯದರ್ಶಿ ಅವರನ್ನು ನಡೆಯಿಸಿದುದು- ಭಾಷಣಾನಂತರ ಅದನ್ನಾಲಿಸಿದ ಎಲ್ಲಾ ಪ್ರೇಕ್ಷಕರಿಂದಲೂ ದೊರೆತ ಮುಕ್ತಕಂದ ಶ್ಲಾಘನೆಗಳು-ಸುವರ್ಣಾಸನದಂತೆಯೇ ಜಗತ್ತಿನ ಹೃದಯ ಪೀಠದಲ್ಲೂ ನೆಹರುಗಳಿದ್ದಾರೆ ಎಂಬುದರ ದ್ಯೋತಕಗಳು. ಗಾಂಧೀಜೀಯ ನೀತಿ ಸೂತ್ರಗಳಿಂದಲೇ ಜಗತ್ತು ತನ್ನ ಇಂದಿನ ಸಂಕಟಗಳಿಂದ ಪಾರಾಗಬೇಕಲ್ಲದೆ ಅನ್ಯಥಾ ಅಸಾಧ್ಯವೆಂಬುದನ್ನು ಪಂಡಿತಜೀ ಅಲ್ಲಿಯ ತನ್ನ ಭಾಷಣದಲ್ಲಿ ಒತ್ತಿ ಹೇಳಿದ್ದರು. "ಏನೇ ಬಂದರೂ ಪಾಪಕ್ಕೆ ಶಲೆ ಬಾಗಲಾರದೆವು, ಮತ್ತು ಮುಂದಿನ ಹೊಣೆಗಾರಿಕೆಯು ಎಂತಹದಿದ್ದರೂ ಹೆದರಲಾರೆವು ಎಂಬ ನಿರ್ಧಾರ ನವ್ಮದಿದ್ದುದರಿಂದಲೇ ಭಾರತಕ್ಕೆ ಸ್ವಾತಂತ್ರ್ಯ ಗೆದ್ದಿತು. ತನ್ನ ಇಡೀ ಜೀವನ ಮತ್ತು ಜೀವಿತನೆಗಳ ಮೂಲಕ ಗಾಂಧೀಜೀ ನಮಗೆ ಕಲಿಸಿದ್ದ ಪಾಠವದು. ಭಾರತದ ಈ ಸ್ವಾತಂತ್ರ್ಯ ತತ್ವಗಳನ್ನೇ ಲೋಕದ ಇಂದಿನ ತೊಂದರೆಗಳ ನಿವಾರಣೆಗಾಗಿ ಉಪಯೋಗಿಸಿಕೊಳ್ಳಬೇಕು."

(ಎಲೇ ಮುಟ್ಟ ನೋಡಿರಿ)

ಸೇವೆ ನುತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮದಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಪಕ್ವ ಅನುಭವದ ಯೋಗ್ಯತೆಯಿದೆ.

ವಿರಮು ಜೀವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.
ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬೇಂಕ್, ಲಿಮಿಟೆಡ್
ಹೆ. ಆ. ಮಂಗಳೂರು.

THE VIJAYA BANK LTD.,
H. O. MANGALORE, S. K.

The Canara Banking Corporation Limited.

Estd: 1906.

(Incorporated in British India)

Head Office: **UDIPI**, S. India.

Capital Authorised	....	Rs. 25,00,000
Capital Issued & Subscribed	....	Rs. 20,00,000
Capital Paid up	....	Rs. 19,98,445
Reserves....	....	Rs. 8,66,715

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.

ನವಯುಗ

ಗುರುವಾರ, ಉದಯಾಸ್ತ, ೧೧-೧೧-'೪೬

ಮುಂದೆ ಹೇಗೆ?

ಸ್ವತಂತ್ರ ಭಾರತದ ಶಾಶ್ವತ ರಾಜ್ಯಾಂಗ ವಿಧಾನಗಳ ಕರಡು ಪ್ರತಿಗೆ ಕೊನೆಯ ಸ್ವಸ್ಥಾಕಾರ ಕೊಡಲು ಹಾಗೂ ಅದನ್ನು ಅಂಗೀಕರಿಸಿಕೊಳ್ಳಲು ಘಟನಾ ಸಮಿತಿಯ ಸಭೆಯು ಇದೇ ತಾ 4 ರಲ್ಲಿ ನವಢಿಲ್ಲಿಯಲ್ಲಿ ಆರಂಭಿಸಿದ್ದು ಪ್ರಾಮುಖ್ಯ ಚರ್ಚೆಗಳು ನಡೆದಿವೆ. ಕಳದ ವರುಷಗಳ ಸಭೆಗಳಲ್ಲೇ ಘಟನಾ ಸಮಿತಿಯು ತಯಾರಿಸಿದ್ದ 'ಸಂಯುಕ್ತ ಕೇಂದ್ರಾಧಿಕಾರ ಶಾಸನಾಂಗ ಸಮಿತಿ' 'ಸಂಯುಕ್ತ ಶಾಸನಾಂಗ ಸಮಿತಿ' 'ಅಲ್ಪ ಸಂಖ್ಯಾಕರು, ಗುಡ್ಡಗಾಡುಗಳವರ ಸಂಬಂಧಿತ ಸಲಹೆಗಾರ ಸಮಿತಿ' ಇತ್ಯಾದಿಗಳ ವರದಿಗಳು ಬಂದಿದ್ದು, ಇವೆಲ್ಲವುಗಳನ್ನಾಧರಿಸಿ ಅಖಿಲಭಾರತದ ರಾಜ್ಯಾಂಗ ವಿಧಾನಗಳನ್ನು ತಯಾರಿಸಲು 'ಕರಡು ತಯಾರಿಸಮಿತಿ' ಯೊಂದನ್ನು 1947ನೇ ಆಗೋಸ್ಟಿನಲ್ಲಿ ಘಟನಾಸಮಿತಿ ರಚಿಸಿದ್ದಿತು. ಈ ಸಮಿತಿಯು ತಯಾರಿಸಿದ ಅಖಿಲಭಾರತ ರಾಜ್ಯಾಂಗ ವಿಧಾನಗಳ ನಕಲು ಪ್ರತಿಯು ಕಳದೆಂಟು ತಿಂಗಳುಗಳಂದ ಸಾರ್ವಜನಿಕರ ಮುಂದಿದ್ದು, ಆ ಕುರಿತು ಸಾಕಷ್ಟು ವಿಚಾರ ವಿಮರ್ಶೆಗಳು ನಡೆದಿವೆ. ಕೊನೆಯ ಅಧಿಕಾರಾಂಗೀಕಾರಗಳಿಗಾಗಿ ಘಟನಾಸಮಿತಿಯೀಗ ಈ ಕರಡನ್ನು ಚರ್ಚೆಗೆತ್ತಿಕೊಂಡಿದೆ. 'ಸ್ವತಂತ್ರ ಸಾರ್ವಭೌಮ ಗಣರಾಜ್ಯ ರಿಪಬ್ಲಿಕ್' ಆಗಿರಬೇಕೆಂಬ ಗುರಿಯಿರುವ ರಾಜ್ಯಶಾಸನವೊಂದರ ಎಲ್ಲಾ ಅಂಗೋಪಾಂಗಗಳೂ ಅದರನುಗುಣವಾಗಿಯೇ ಇರಬೇಕು-ರಾಷ್ಟ್ರವು ಜನತೆಗಾಗಿ, ಜನತೆಯಿಂದಾಗಿ ಇರುವಂತೆ ಮಾಡಬೇಕಾದುದೇನೇನೋ ಅವೆಲ್ಲವೂ ಆದರಲ್ಲಿ ಅಡಕವಾಗಿರಬೇಕು-ಎಂಬುದು ನಿರ್ವಿವಾದ. ಈ ದೃಷ್ಟಿಯಿಂದ ಈಗಿನ ನಕಾತೆಯ ಅಂಗಾಕಾರಗಳನ್ನು ಸವಿವರವಾಗಿ ವಿಮರ್ಶಿಸಲು ಇಲ್ಲಿ ಅವಕಾಶವಿಲ್ಲ; ಅಂತಹ ಸಮೂಲಾಗ್ರ ಪರಿಶೀಲನೆಯೀಗ ಘಟನಾ ಸಮಿತಿಯಲ್ಲಿ ನಡೆಯುತ್ತಿದೆ. ನೇಲ್ಮೈಯ ನೋಟ ಮಾತ್ರಕ್ಕೇನೇ ಒಡೆದು ಕಾಣುತ್ತಿರುವ ವಿಷಯವೆಂದರೆ ಭಾವೀ ಭಾರತದ ಕೇಂದ್ರಾಧಿಕಾರವು ಇನ್ನಷ್ಟು ಹೆಚ್ಚುವಷ್ಟು ಎಂಬುದು. ರಾಷ್ಟ್ರದ ವಿಶಾಲವನ್ನು ಉಳಿಸಿ, ಯಾವ ಭಾಗವೂ ಹಿಂದೆ ಬೀಳದಂತೆ ಸಮಾನ ಪ್ರಗತಿಯನ್ನು ಸಾಧಿಸಲನುಕೂಲವಾಗುವಂತೆ, ಅಖಿಲ ರಾಷ್ಟ್ರ ಪ್ರಾಮುಖ್ಯತೆಯ 91 ವಿಷಯಗಳ ಅಧಿಕಾರವು ಕೇಂದ್ರಸರಕಾರದ್ದೆಂದು ಈಗಿರುವ ಸಂವಿಧಾನದಲ್ಲಿ ನಿರೂಪಿಸಲಾಗಿದೆ. ಪಾಕಿಸ್ತಾನ ರಚನೆಯ ಪೂರ್ವದಲ್ಲಿ ಬ್ರಿಟಿಷರು ಮುಂದಿಟ್ಟಿದ್ದ ಯೋಜನೆಗಳಲ್ಲಿ ಕೇಂದ್ರ ಕೈ ಮಾಡಿರು ವಿಭಾಗಗಳ ಅಧಿಕಾರ ಮಾತ್ರ ನಿರೂಪಿಸಲ್ಪಟ್ಟಿದ್ದಿತು; ಅಸಾಮಾನ್ಯ ಹಾಗೂ ಯುದ್ಧಾವಸರದ ದಿನಗಳಲ್ಲಿ ಹೊರತು ಶಾಂತಿಮಾನ್ಯ ಕಾಲಗಳಲ್ಲಿ ಪ್ರಾಂತ್ಯಾಧಿಕಾರ ವಿನಹ ಕೇಂದ್ರಾಧಿಕಾರವೊಂದಿರುವುದರ ಗೊಡವೆಯೇ ಜನತೆಗಿರದಂತೆ ಮಾಡುವ ಯೋಜನೆಗಳೇ ಆ ಕಾಲದಲ್ಲಿ ಮುಂದೆ ಬಂದಿದ್ದುವು. ಆದರೆ ದೇಶ ವಿಭಜನೆಯಾಗಿ, ಯಾವ ನಿರ್ಬಂಧವೂ ಇಲ್ಲದೆ ಸ್ವೇಚ್ಛೆಯಿಂದ ರಾಜ್ಯಾಂಗ ರಚನೆಯ ಅವಕಾಶವು ದೊರೆತೊಡನೆ ಭಾರತದ ಘಟನಾ ಸಮಿತಿಯು ಮುಖ್ಯಾಧಿಕಾರ ಸಂದ್ಯಧಿಕೇಂದ್ರವನ್ನು ರಚಿಸಿಕೊಳ್ಳಲು ಮುಂದಾಯಿತು. ಕೆಲವು ಪ್ರಾಂತ್ಯಾಭಿಮಾನಿಗಳಿಗೆ ಈ ವ್ಯವಸ್ಥೆ ರುಚಿಸುವಂತಿಲ್ಲ. ಆದರೆ ದೇಶದ ಸ್ಥಿತಿಗತಿ, ಜನತೆಯ ಮನೋಮಟ್ಟ ಮತ್ತು ಪ್ರಾಂತ್ಯಗಳ ಆಡಳಿತಾನುಭವ, ಇತ್ಯಾದಿಗಳ ಮೇಲಿಂದ ಭಾರತವೊಂದು ಪ್ರಗತಿಶೀಲ ಜನತಾ ರಾಷ್ಟ್ರವಾಗಿ ರೂಪಿಸಬೇಕಾದರೆ ಸುದೃಢ ಹಾಗೂ ಸರ್ವಾಧಿಕಾರೀ ಕೇಂದ್ರ ಸರಕಾರವಿರಬೇಕಾದುದೇ ಅಗತ್ಯವೆನ್ನಿಸಿ ಬೇಕಾಗುತ್ತದೆ. ಸರಕಾರ ರಚನೆಯ ಹೊಣೆಯು ಪ್ರಾಯಸ್ಥರಾದ ಪ್ರಜೆಗಳೆಲ್ಲರದಾಗಿರುವಾಗ, ಕೆಲವು ಮುಖ್ಯಾಧಿಕಾರಗಳು ತಮ್ಮ ವರ್ಚಸ್ಸಿನ ಮೇರೆಯಾದ ಪ್ರಾಂತ್ಯದ ಆವರಣ ಬಿಟ್ಟು ದೂರ ಹೋಗುವಷಲ್ಲಾ, ಎಂಬ ಸಪ್ಪಟ್ಟತ್ತಾನವಿರುವವರ ವಿನಹ ಬೇರಾರೂ ಸುದೃಢ ಕೇಂದ್ರರಚನೆಯನ್ನು ಆಕ್ಷೇಪಿಸಲಾರರು. ಈಗಿನ ಅನುಭವದ ಒರೆಗಲ್ಲಿನಲ್ಲಿ ಪರೀಕ್ಷಿಸುವುದಾದರೆ, ಭಾರತದ ಯಾವ ಮೂಲೆಯ ಸ್ವಜೆಗಾದರೂ ಇಂದಿನ ಕೇಂದ್ರಾಧಿಕಾರದ ನೇರೆ "ನನ್ನ ಸರಕಾರ"ವೆಂಬ ಅಭಿಮಾನವಿರುವಷ್ಟು ಸ್ಥಳೀಯ ಸರಕಾರದ ಮೇಲಿಲ್ಲವೆಂಬುದು ಸ್ಪಷ್ಟವಿದೆ. ಭಾರತ ರಾಜ್ಯವಿರುವ ವರೆಗೂ ನೆಹರು, ವಲ್ಲಭಾಯಿಗಳಂಥವರು ಇರುವ ವರೆಲ್ಲವೇನೋ ನಿಜ; ಆದರೆ ಅಖಿಲ ಭಾರತದ ಪ್ರಾಮುಖ್ಯ ಕಾರ್ಯಭಾರ ಹೊಣೆ ನಿರ್ವಹಣದ ಅವಶ್ಯಕತೆಯೇ, ಈ ಮಟ್ಟಿಗಾದರೂ ನೆಹರು ವಲ್ಲಭಾಯಿಗಳ ಯೋಗ್ಯತೆಯವರನ್ನೇ ಎಂದೆಂದಿಗೂ ನಿರ್ಮಿಸತ್ತಾ ಹೋಗಲು ಬದ್ಧವಿವೆ. ಬದಲಿಗೆ ದುರ್ಬಲ ಕೇಂದ್ರವಿದ್ದು, ಹೆಚ್ಚಿನ ಹೊಣೆ ಪ್ರಾಂತ್ಯಗಳದ್ದೇ ಆಗಿದ್ದರೆ ಪ್ರಾಂತ್ಯಾವಶ್ಯಕತೆಯು ಪ್ರಾಂತ್ಯಾಭಿಮಾನವಾಗಿನನ್ನೇ-ಪ್ರಾಂತ್ಯಾಭಿಮಾನೀ ನಾಯಕರನ್ನೇ-ನಿರ್ಮಿಸುತ್ತಾ ಹೋಗಬಹುದು. ಆ ಸೆಳೆತದಿಂದ ಸಂದರ್ಭವಶಾತ್ ಕೇಂದ್ರದ ಸಚಿವರು ಸೂತ್ರಗಳೂ ಕಡಿದು ಹೋಗಿ ರಾಷ್ಟ್ರವು ಛಿದ್ರವಾಗದೆನ್ನಲು ಸಾಧ್ಯವಿಲ್ಲ. ಎರಡನೆಯದಾಗಿ ಈಗ 'ಕಾಮನ್‌ವೆಲ್ತ್' ಎಂಬ ಭಾರತವು ಮುಂದೆ ಪೂರ್ಣ ಸ್ವತಂತ್ರ 'ರಿಪಬ್ಲಿಕ್' ಆಗುವಡೋ ಇಲ್ಲವೋ ಎಂಬ ಕುರಿತಿದ್ದ ಅನುಮಾನವನ್ನು ಆ ಸಂಬಂಧದ ಅನುಭವ ಸಂಪಾದನೆಗಾಗಿಯೇ ಲಂಡನ್ನಿಗೆ ಹೋಗಿ ಮರಳಿ ಬಂದಿರುವ ಪಂಡಿತ ನೆಹರುಗಳು ಇದೇ ತಾ 8ರ ಘಟನಾ ಸಮಿತಿ ಸಭೆಯಲ್ಲಿ ನಿವಾರಿಸಿದ್ದಾರೆ. 'ನಾವೀ ಕುರಿತು ರಾಷ್ಟ್ರದ ಆಥವಾ ಈಗಿನ ಸರಕಾರದ ಪರವಾಗಿ ಲಂಡನ್ನಿನಲ್ಲಿ ಯಾವ ವಾಗ್ದಾನವನ್ನೂ ಮಾಡಿಲ್ಲ; ಅದು ಸಂಪೂರ್ಣವಾಗಿ ಘಟನಾ ಸಮಿತಿಯ ಹೊಣೆಗಾರಿಕೆಯೆಂದು ಅವರಿಗೆ ಸ್ಪಷ್ಟಪಡಿಸಿದ್ದೇನೆ. ಇವೆನ್ನು ಹೇಳಿ, ಬ್ರಿಟನ್ನೊಡನೆ, ಪಾಕಿಸ್ತಾನಗಳೊಡನೆ ಮತ್ತೆಲ್ಲ ರೊಡನೆ ವೈತ್ರಿಯಿಂದಿರುವುದೇ ಭಾರತದ ಧೋರಣೆಯೆಂದು-ನಾವು ಕೇಳುತ್ತಾ ಬಂದಿರುವುದನ್ನೇ-ಅಲ್ಲಿಯೂ-ಹೇಳಿದ್ದೇನೆ. "ಗುರಿ ನಿರೂಪಣಾ ಶರಾವು" ಮಂಜೂರಾಗಿ ಎರಡು ವರುಷಗಳು ಕಳೆದಿವೆ; ಹಲವು ಪ್ರಮುಖ್ಯ ಘಟನೆಗಳು ಈ ನಡುವೆ ನಡೆದಿವೆ ಎಲ್ಲವನ್ನೂ ಪರ್ಯಾಲೋಚಿಸಿ ನಿರ್ಧಾರಕ್ಕೆ ಬರುವ ಹೊಣೆ ಘಟನಾ ಸಮಿತಿಯದು" ಎಂದಿದ್ದಾರೆ. ಇನ್ನು ಳಿದುದು ಕರ್ನಾಟಕದಂತಹ ಭಾಗಗಳವರ ಅತುರದ ವಿಷಯವಾಗಿರುವ ಭಾಷಾವಾರು ಪ್ರಾಂತ್ಯರಚನೆಯ ಕುರಿತೇನು? ಎಂಬ ಪ್ರಶ್ನೆ. ಈ ಕುರಿತು ವಲ್ಲಭಾಯಿ, ನೆಹರು ಅಂಥವರಾಡುತ್ತಿರುವ ಮಾತುಗಳು--ಕಾಲೀಗಲೂ ಅಭಿಪ್ರಾಯ ಸಂಗ್ರಹ ಮತ್ತು ಪರಿಶೀಲನೆಯಲ್ಲೇ ಇದ್ದರೂ 'ಭಾಷಾವಾರು ಪ್ರಾಂತ್ಯರಚನಾ ಸಂಬಂಧದ ಕಮಿಶನು ಇಷ್ಟರಲ್ಲೇ ಹೊರಬೀಳಲಿರುವ ಅಭಿಪ್ರಾಯಗಳು- ಸದ್ಯಕ್ಕೆ ಕ್ಷಪ್ರಶ್ನೆ ಹಿಂದೊಡಲ್ಪಡುವದು ಖಂಡಿತ ವೆಂಬ ಭಾವನೆ ಮೊಳೆಯಿಸಿವೆ. ಸರ್ದಾರ್ ವಲ್ಲಭಾಯಿಗಳಂತೂ ಭಾಷಾನ್ವಯ ಪ್ರಾಂತ್ಯರಚನೆಯ ಆತುರವನ್ನು ತನ್ನ ನಾಗಪುರ ಭಾಷಣದಲ್ಲಿ "ಅವಿವೇಕ-ಅಜ್ಞಾನ" ಎಂದು ಕರೆದು "ಕೆಲವರು ಕೇಳುತ್ತಿದ್ದಾರೆಂಬೊಂದೇ ಕಾರಣಕ್ಕಾಗಿ ಅವರಿಗೆ ಬೇಕಾದಂಥ ಪ್ರಾಂತ್ಯಗಳನ್ನು ಕಟ್ಟಿ ಇತರ ತಕ್ಕವರು ನಾವೆಂದೆ ನಿಷ್ಕರಿಸಿರಾ?" ಎಂದು ಗದರಿಸಿದ್ದಾರೆ; ಭಾಷಾವಾರು ಪ್ರಾಂತ್ಯರಚನೆಯು ಬೇಡಿಕೆಯು ಮೇಲೆ-ಆಯಾ ಭಾಗಗಳ ಜನತೆಯು ತನ್ನ ಅಭಿವೃದ್ಧಿಗನುಕೂಲವೆಂದು-ಸರಕಾರಣವಾಗಿಟ್ಟಿರುವ ಒಂದು ಆಗ್ರಹದ ವಿಜ್ಞಾಪನೆಯ ಮೇಲೆ- ಆಗಲೇ ಬೇಕಾಗಿರುವ ವಿಷಯವಿದು ತಡವಿಲ್ಲದೆ' ಆಗುವದು ವಾಸಿ' ಎಂದು ಗಾಂಧೀಜಿ ಆತೀರ್ವದಿಸಿದ್ದ ಒಂದು ಪುನರ್ಪತನೆಯ ಮೇಲೆ- ಸರ್ದಾರ್ ವಲ್ಲಭಾಯಿಗಳಂತಹ ನಾಯಕರಿಗೆ ರಾಷ್ಟ್ರಹಿತಕರವಾದ ಕೆಲವುದುರ್ಭಿಮಾನಗಳ ಕಡೆಗಿದ್ದಷ್ಟೇ ವಕ್ರದೃಷ್ಟಿಯಿರಲು ಕಾರಣವೇನೇನೋ ತಿಳಿಯದು. 'ರಾಷ್ಟ್ರವ್ಯಾಪಾರ' ಪ್ರಾಂತೀಕ ಗಡಿಮೇರೆಗಳಲ್ಲದೆ ನಡೆಯದು. ಅಂತಹ ಅವರಣವು ಭಾಷೆ, ಸಂಸ್ಕೃತಿ ಮತ್ತು ಆಡಳಿತೆಯ ಅನುಕೂಲ ಸೌಲಭ್ಯಾನುಗುಣವಾಗಿರುವಂತೆ ತಿದ್ದಿಹಾಕಿ-ಎಂಬು ಕೇಳುವುದರಲ್ಲಿ ಅಂತಹ ಅಪರಾಧವೇನೂ ಇಲ್ಲ. ಕಾಂಗ್ರೆಸ್ ಸಂಸ್ಥೆ ಅಂಗೀಕರಿಸಿಕೊಂಡಿರುವ ವಿಧಾನವಿದು. ಈ ನವರಚನೆಯಿಂದಾಗಿ ಸಂತುಷ್ಟ ಪ್ರಾಂತ್ಯಾಭಿಮಾನ ಮತ್ತು ಪ್ರಾಂತೀಕ ಹಿತ ಸಾಧನೆ ಬೆಳೆದು ಅದು ರಾಷ್ಟ್ರೀಯತಾ ಭಾವನೆ ಮತ್ತು ರಾಷ್ಟ್ರಹಿತ ಕಾರ್ಯಗಳನ್ನು ಹಿಂದಿ ಹಾಕಬಹುದೆಂದು ಹೆದರುವದರ್ಥವಿಲ್ಲ; ಭಾಷಾವಾರು ಪ್ರಾಂತ್ಯರಚನೆಗಾಗಿ ಈಗ್ಗೆಆಗ್ರಹಪಡುತ್ತಿರುವವರಲ್ಲಿ ಹೆಚ್ಚಿನವರು ರಾಷ್ಟ್ರದಸ್ವಾತಂತ್ರ್ಯಹೋರಾಟಗಳಲ್ಲಿ ಭಾಗವಹಿಸಿದ್ದ ದೇಶ ಭಕ್ತರೇ. ಮೇಲಾಗಿ ಈಗ ಕೊನೆಯ ತಯಾರೀ ಪರಿಶೀಲನೆಯಲ್ಲಿರುವ ರಾಜ್ಯಶಾಸನದಂತೆ ಎಲ್ಲಾ ಭಾಗಗಳವರಲ್ಲೂ ಅಖಂಡ ರಾಷ್ಟ್ರೀಯತಾ ದೃಷ್ಟಿಯಿರಬೇಕಾದುದು ಅನಿವಾರ್ಯವಾಗುವಂತಹ ವಿಸ್ತಾರಾಧಿಕಾರವು ಕೇಂದ್ರದ್ದಾಗುತ್ತದೆ. ಪಂಡಿತ ನೆಹರುಗಳು ಇದೇ ತಾ 8ರ ಘಟನಾ ಸಮಿತಿ ಭಾಷಣದಲ್ಲಂದ ಈ ಕೆಳಗಿನ ಮಾತುಗಳನ್ನು ಯಾರೂ ಅಲ್ಲವೆನ್ನಲಾರರು: "ಜನತೆಯ ಸಂಸ್ಕೃತಿ, ಭೂಸಂಬಂಧವತ್ತು ಆರ್ಥಿಕ ಸ್ಥಿತಿಗತಿಗಳಿಗೂ ಅವರ ಬಯಕೆಗಳಿಗೂ ಹೊಂದಿಕೆಯಾಗುವಂತೆ ಇಂದಿನ ಪ್ರಾಂತ್ಯಗಳ ಸ್ಥಾನದಲ್ಲಿ ಹೊಸ ರಚನೆಯು ಮಾಡಲು ಯೊಂದು ಬರಬೇಕಾದುದು ಅನಿವಾರ್ಯವೆಂದು ನನಗೆ ತೋರುತ್ತಿದೆ, ಮತ್ತು ದು ದೀರ್ಘ ಕಾಲದಿಂದಲೂ ತೋರಿ ಬಂದಿದ್ದೇ. ನಾವೆಷ್ಟೋ ಕಾಲದಿಂದಲೂ ಇದನ್ನೊಪ್ಪಿಕೊಂಡಿದ್ದೇವೆ. 'ಭಾಷಾವಾರು ಪ್ರಾಂತ್ಯಗಳು' ಎಂದದನ್ನು ಬೇಳುವುದು ಸರಿಯೆಂದು ನನಗೆ ಕಾಣುವದಿಲ್ಲ. ಭಾಷೆಯು ವಿಚಾರಾರ್ಹ ಮುಖ್ಯ ವಿಷಯವೆಂಬುದು ನಿಸ್ಸಂಶೆಹವಾದರೂ ಅದಕ್ಕಿಂತಲೂ ಮುಖ್ಯವಾಗಿ ಕೆಲವೊಮ್ಮೆ ಯೋಚಿಸಬೇಕಾಗಿ ಬರುವ ಇತರ ವಿಷಯಗಳಿವೆ. ಒಂದು ವಿಧಾನವನ್ನು ಮುಂದು ಹಾಕಿ ಆದಕ್ಕೆ ಹೊಸರೂಪ ಕೊಡುವ ಮೊದಲೊಮ್ಮೆ ಈಗಿನದರ ಇಡೀ ಚಿತ್ರವನ್ನು ನೀವು ನಿಮ್ಮ ಕಣ್ಮುಂದೆ ತಂದು ಕೊಳ್ಳಬೇಕು, ಅದು ಥಂಡಾ ಹಾಗೂ ಶಾಂತ ವಾತಾವರಣದಲ್ಲಿ, ಮತ್ತದಕ್ಕೆ ಸಂಬಂಧಿಸಿದ ವಿಷಯಗಳ ಪಾಂಡಿತ್ಯಪೂರ್ಣ ಚರ್ಚೆಯ ನಂತರ ವೇ ತೀರ್ಮಾನಿಸಬೇಕಾದ ಮಹಾ ಪ್ರಶ್ನೆ". ನಿಜ; ಪಂಡಿತರೀಯ ಈ ಅಭಿಪ್ರಾಯದಂತೆಯೇ ಭಾಷಾವಾರು ಪ್ರಾಂತ್ಯರಚನಾ ಸಂಬಂಧಿತ ಪರಿಶೀಲನೆಗಳಾಗಿವೆ; ಆಗುತ್ತಿವೆ; ಈ ನಿರ್ಮಾಣಕ್ಕಾಗಿ ತಾವಶ್ಯಕ್ಕಿಸುವ ಶಾಂತವಾತಾವರಣವು ಈಗಿಲ್ಲವೆಂದು ನಾಯಕರು ಅವಧಿ ಕೇಳಿದರೂ ವಿಚಾರಿಗಳಾರೂ ಅದಕ್ಕಾಗಿ ಮುಷ್ಕರ ಹೂಡಲಾರರು. ಆದರೆ ಈ ಬೇರೂ 'ಮರಭೂಮಾನ' 'ಅಪಾಯ' 'ರಾಷ್ಟ್ರಘಾತಕ' ವೆಂದು ಭಾವಿಸದೆ, ವಿರೋಧ ಅಥವಾ ಅಸಡ್ಡೆ ತೋರಿಸದೆ, ರಾಷ್ಟ್ರ ನಾಯಕರೇ ಈ ಕಾರ್ಯದಲ್ಲಿ ಯಥಾ ಯೋಗ್ಯ ಅಸಕ್ತಿ ವಹಿಸಲೆಬೇಕೆಂದು ಭಾಷಾವಾರು ಭಾಗಗಳವರು ಒತ್ತಾಯಿಸುವುದು ತಪ್ಪೆ?

ಗೋಡ್ಸೆ ಒಪ್ಪಿದ!

'ಮಹಾತ್ಮಾ ಗಾಂಧಿಯವರ ಮೇಲೆ ನಾನೇ ಗುಂಡು ಹಾರಿಸಿದೆ. ನನ್ನ ಮೇಲೆ ನೀವಾವ ದಯೆಯನ್ನೂ ಇಡಬೇಕೆಂದು ನಾನಿಚ್ಛಿಸುವದಿಲ್ಲ; ನನಗಾಗಿ ಯಾರೂ ದಯೆಯಾಚಕತೆ ಮಾಡಕೂಡದೆಂದೂ ನನ್ನಿಚ್ಛೆಯಿದೆ. ಗಾಂಧೀಹತ್ಯೆ ಮತ್ತು ರಾಜಕೀಯಕ್ಕಾಗಿಯೇ ಸರಕಾರವನ್ನು ಹಿಡಿದು ಕೊಂಡಿದ್ದು ಪಾಕಿಸ್ತಾನ್ ಸ್ಥಾಪನೆಗೂ ಮಿಲಿಯಾಧಿ ಹಿಂದುಗಳ ಅನಾಹುತಗಳಿಗೂ ಕಾರಣವಾಯಿತು. ಅವರು 'ಪಾಕಿಸ್ತಾನ್ ರಾಷ್ಟ್ರ ಜನಕ"ನಾದರು, ಈ ಕಾರಣಕ್ಕಾಗಿ ಭಾರತಮಾತೆಯ ನಿಜ ಪುತ್ರನ ಕರ್ತವ್ಯ ದೃಷ್ಟಿಯಿಂದ ನಾನವರನ್ನು ತೀರಿಸಿದೆ"-ಎಂದು ನಾಥೂರಾಮ್ ವಿನಾಯಕ ಗೋಡ್ಸೆ ಗಾಂಧೀ ಕೊಲೆಯ ಎಲ್ಲಾ ಹೊಣೆಯನ್ನೂ ತಾನೊಬ್ಬನೇ ವಹಿಸಿಕೊಂಡು ಕೆಂಪು ಕೋಟೆ ಕೋರ್ಟಿಗೆ ಬರಹ ಪೀಠವಾಗ್ಮೂಲವೊಪ್ಪಿದ್ದಾನೆ.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 287/1948

ನಾದಿ ಆನಂಕ್ತಯ್ಯ ಕನಂಕ, ವಡಿಯನ
ನುನೆ ಶೆಶಯ್ಯ ಕನಾಂತರ ಮಗ, ಕುಂದಾಪು
ತಾಲ್ಲೂ ಹಳ್ಳಿಹೊಳೆ ಗ್ರಾಮದಲ್ಲಿರುವವ.
ಹಿತ. Post- Shankernaraina.

ಪ್ರತಿವಾದಿ ಅಡಿಗೆ ಕೃಷ್ಣಪ್ಪ ಯಾನೆ ಕೃಷ್ಣ
ಸ್ವಾರ್ಯಕಯ್ಯಾಣ ಶೆಶ ಬ್ಯಾರಿ ಮಗ ಬಾರವಾ
ಜಿಲ್ಲಾ ಹಾನಗಲ್ಲು ತಾಲ್ಲೂ ಮೇಲಗುದ್ದಿ
ರಸಸ್ಥನ ಮನೆಯಲ್ಲಿರುವವನ್ನ, ರಹಿತ,
Post Hangal.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವದೇ
ನಂದ್ರೆ.

ಸದ್ರಿ ವಾದಿಯು ಸದ್ರಿ ಪ್ರತಿವಾದಿ ಮೇಲೆ
ೀನಬಾಕಿ ೧ರು. 176-9-0ಕ್ಕೆ ಮೇಲ್ಕಂಡ
ೋರ್ಟಿನಲ್ಲಿ ದಾಕಲುಮಾಡಿದ ದಾವೆಯು
ಾ.22-11-1948ಕ್ಕೆ ತನ್ನಿಗೆ ಇಹೋಣಾಗಿರು
ತ್ತದೆ. ಅತಿಶಯ ವಿನಾದರೂ ಅಕ್ಷೇಪಣೆಯಿದ್ದ
ಸದ್ರಿ ದಿನ್ನ ಪೂರ್ವಾಹ್ನ ಗಂಟೆ 11ಕ್ಕೆ ಮೇ
ಲ್ಕಂಡ ಕೋರ್ಟಿನಲ್ಲಿ ಹಾಜರಾಗಿ ಜಾಹಿರು
ಮಾಡತಕ್ಕದ್ದು. ತಪ್ಪಿದ್ರೆ ನಿಮ್ಮನ್ನು ಎಕ್ಸಪಾ
ರ್ಟಿಮಾಡಿ ನಿಮ್ಮ ಗೈರಹಾಜ್ರಿಯಲ್ಲಿ ಸದ್ರಿ
ಾವೆಯನ್ನು ತೀರ್ಮಾನಿಸೋಣಾದೀತೆಂತ
ಈ ಮೂಲ್ಕ ತಿಳುಹಿಸಿರುತ್ತದೆ.

Sd) **M. Mahabala Hebbar**
Advocate for Plaintiff

ಾ 4-11-1948 ಮೊಕ್ಕಾಂ ಕುಂದಾಪುರ

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S. 163/1948

ಬೈಪದವ್ಯುಭೀಮ ಭಟ್ಟ-ವಾದಿ.

ಲಕ್ಷ್ಮೀನಾರಾಯಣ ಭಟ್ಟ ಕೂಡಾ. ಪ್ರ. ರು.
4 ಪದ್ಮನಾಭ ಭಟ್ಟ, 5 ತಿಂಮಂಣ ಭಟ್ಟ,
ಕುಪಲಿಂಗ ಭಟ್ಟ ಮಗಂದಿರು. ಕೊಡಗು
ತಿಲ್ಲಾ ಕ್ಕೊನಾಡು ಗ್ರಾಮದ ಕಲ್ಲುಳಿ ಎಂ
ಬಲ್ಲಿ.

ಯೆನಿಗೆ ಯೂ ಮೂಲಕ ತಿಳಿಬುವಡಿ
ರುನದೇನಂದ್ರೆ.

ವಾದಿಯು ನಿಂಮ ಮೇಲೆ ಕೂಡಾ ಹೂ
ಡಿದ ಮೇಲ್ಕಂಡ ವ್ಯಾಜ್ಯವು ತಾ. 16-11-48
ಕ್ಕೆ ಯಿಟ್ಟಿರುವುದರಿಂದ ಅದಕ್ಕೆ ನಿಂಮಂದೇ
ವಾದರೂ ಆಕ್ಷೇಪಗಳಿದ್ರೆ ಸದ್ರಿ ದಿವ್ಸ ಮಜಿಸ್ಟ್ರಾ
ರು ಕೋರ್ಟಮುಂದೆ ಹಾಜ್ರಾಗಿ ಉದಿಹರ
ಿಸಿಕೊಳ್ಳತಕ್ಕದ್ದು. ತಪ್ಪುದ್ರೆ ನಿಂಮ ಗೈರು
ಹಾಜರಿಯಿಂದ ತೀರ್ಮಾನಿಸಲಾದೀತು.

ಕೋರ್ಟು ಹ್ಕುಂ ಪ್ರಕಾರ.

(Sd) **C. S. Shastry**
Vakil for Plff.

ಪುತ್ತೂರು ತಾ. 5-11-48

ನೋಟೀಸು

ಕಾಸ್ರಗೋಡು ಡಿ. ಮು. ಕೋರ್ಟಿನಲ್ಲಿ

ಕ್ರಮನಂಬ್ರ 250/1948

ಕೊರಗಪ್ಪ ಬಂಟ, ಬಂಬ್ರಾಣ ಸಂಕಪ್ಪ
ಬಂಟರ ಅಳಿಯ, ಕಾಸ್ರಗೋಡು ತಾಲೂಕು
ಕೂಡ್ಲು ಗ್ರಾಮಸ್ತ -ವಾದಿ

ಸಿ. ಬಾಸ್ಕರ ರಾವ್, ಚಂಡಾವರ ರಾಮ
ನಾಯರ ಮಗ, ಕಾಸ್ರಗೋಡು ಗ್ರಾಮ, ಯಿ
ನರೊಳಗೆ -ಪ್ರತಿವಾದಿ

ಸದ್ರಿ ವಾದಿಯು ಯೂ ನಮೂಲ್ಕ ತಿಳಿಯ
ಪಡ್ಸುವದೇನಂದ್ರೆ.

ಪ್ರತಿವಾದಿಯು ವಾನಿಗೆ ಬರಕೊಟ್ಟ ಪ್ರೋ-
ನೋಟಿನ ಅಸಲು ಬಡ್ಡಿ ಅಬೆಜು ರೂಪ್ಯಾ
317-8-6ನ್ನು ಬರಮಾಡಿಕೊಳ್ಳುವರೆ ದಾ
ಖ್ಲು ಮಾಡಿದ ಮೇಲ್ಕಂಡ ವ್ಯಾಜ್ಯವು ತಾ.
18-11-48ಕ್ಕೆ ಅಪೈರ ತನ್ನಿಗೆ ಯಿಟ್ಟಿರುತ್ತ
ದೆ. ಆ ದಿವ್ಸ ಪ್ರತಿವಾದಿಯು ಹಾಜ್ರಾಗಿ ಉ
ದಹರಿಸುವರೆ ತಪ್ಪಿದ್ರೆ ಆತನ ಗೈರಹಾಜ್ರು
ಯಿಂದ ತೀರ್ಮಾನಪಡಿಸಲಾದೀತು ಯಂಬ
ಿಂಗ್ತಿ ಯೂ ಮೂಲ್ಕ ತಿಳ್ಸುವಡಾಗಿಯದೆ.

B. Amrita Rao,
Vakil for plaintiff.

ಕಾಸ್ರಗೋಡು ತಾ. 5-11-48

ಉಡುಪಿ ಉಡುಪಿಗೆ ಸರ್ಕಾರೀ ಕೋರ್ಟಿನ ಅವಶ್ಯಕತೆ

ಇದೇ ತಾ 8ರಲ್ಲು ನೇರಿದ ಉಡುಪಿ ಬಾರ್ ಎಸೋಸಿಯೇಶನಿನ ಸಭೆಯಲ್ಲಿ ಉಡುಪಿಗೊಂದು ಸರ್ಕಾರೀ ಕೋರ್ಟನ್ನು ಸ್ಥಾಪಿಸುವ ಕುರಿತು ಪದ್ಯಾಸು ಸರಕಾರದ ಕೋರ್ಟುಗಳಿಗೆ ಮನವಿಯನ್ನು ಕಳುಹಿಸಬೇಕೆಂದು ನಿರ್ಣಯವಾಗಿದೆ. ಮನವಿಯ ಸಾರಾಂಶವು ಹೀಗಿದೆ "ಪ್ರಕೃತ ಜಿಲ್ಲೆಗೆ ಎರಡು ಸರ್ಕೋರ್ಟುಗಳು ಮಂಗಳೂರಲ್ಲಿ ಇವೆ. ಸಿವಿಲ್ ಮತ್ತು ಕ್ರಿಮಿನಲ್ ಜ್ಯೂರಿಸ್ಡಿಕ್ಷಿಯಂದ ಎರಡು ಕೋರ್ಟುಗಳು ಅವಶ್ಯಕ. ಆದರೆ ಎರಡೂ ಕೋರ್ಟುಗಳು ಮಂಗಳೂರಲ್ಲೇ ಇರುವುದರಿಂದ ಕುಂದಾಪುರ, ಉಡುಪಿ ತಾಲೂಕಿನವರಿಗೆ ತಾಲೂಕಿನವರಿಗೆ ಕಷ್ಟನಷ್ಟವಾಗುತ್ತಿದೆ. 1500 ಚದರ ಮೈಲು ವಿಸ್ತೀರ್ಣವಿರುವ ಕುಂದಾಪುರ ಡಿವಿಜನಿನಲ್ಲಿ 325 ಗ್ರಾಮಗಳಿದ್ದು ಸಾಧಾರಣ 6½ ಲಕ್ಷ ಜನಸಂಖ್ಯೆಯಿದೆ. ವ್ಯಾಜ್ಯಗಳ ಸಲುವಾಗಿ ಮಂಗಳೂರಿಗೆ ಹೋಗಬೇಕಾದರೆ ಅನೇಕ ಹೊಳೆಗಳನ್ನು ದಾಟಿ ಹೋಗಬೇಕಾಗುವುದಲ್ಲದೆ ದುಂಗೂರಲ್ಲಿ ಉಳಕೊಳ್ಳಲು ತಂಬಾ ಕಷ್ಟವುಂಟಾಗುವುದು. ಮಾತ್ರವಲ್ಲದೆ ಕೆಳ ಕೋರ್ಟಿನ ತೀರ್ಪಿನಕುರಿತು ವಿವರವಾದ ಅನುಭವವನ್ನು ಮಂಗಳೂರು ವಕೀಲರಿಗೆ ಕೊಡಲು ಆಗತ್ಯವಿದ್ದಾಗಲೂ ಮಂಗಳೂರಲ್ಲಿಯೇ ನಿಲ್ಲಲು ಸಾಧ್ಯವಾಗದೆ ಊರಿಗೆ ತಿರುಗಿ ಕೆಲಸಗಳಿಂದಾಗಿ ಎಷ್ಟೊ ಅಪ್ಪೀಲುಗಳು ಅವಗಣನವಾಗಿವೆ. ಕುಂದಾಪುರ ಡಿವಿಜನಿನಲ್ಲಿ ಒಂದು ಸರ್ಕೋರ್ಟು ಇದ್ದರೆ ಜನತೆಯ ಕಷ್ಟ ನಷ್ಟಗಳು ತುಂಬಾ ಕಡಿಮೆಯಾಗುವುವು. ಅದೂ ಅಲ್ಲದೆ ಆಳಿಯಸಂತಾನ ಸುಧಾರಣಾ ಮಸೂದೆಯು ಜಾರಿಗೆ ಬರುವಾಗ್ಗೆ ಆ ಕಟ್ಟಳ್ಳಾಚರಿಸುವವರು ಬಹು ಮಂದಿ ಸರ್ಕೋರ್ಟಿಗೆ ಹೋಗಬೇಕಾಗುವುದು. ಈ ದೃಷ್ಟಿಯಿಂದಲೂ ಕೂಡಾ ಈ ವಿವಿಜನಿನಲ್ಲಿ ಸರ್ಕೋರ್ಟು ಸ್ಥಾಪಿಸಲ್ಪಟ್ಟರೆ ಕೋರ್ಟಿಗೆ ಸಾಕಷ್ಟು ಕೆಲಸ ದೊರೆತು ಈ ವಿವಿಜನಿನ ಜನತೆಗೂ ತುಂಬಾ ಉಪಕಾರ ಮಾಡಿದಂತಾಗುವುದು. ಈ ಎಲ್ಲಾ ದೃಷ್ಟಿಯಿಂದ ಕುಂದಾಪುರ ವಿವಿಜನಿಗೊಂದು ಸರ್ಕೋರ್ಟು ಅವಶ್ಯವೆಂಬುದರಲ್ಲಿ ಏನೂ ಸಂಶಯವಿಲ್ಲ. ವಿವಿಜನಿನ ಸುಧ್ಯವರ್ತಿಸ್ಥಳವಾದ ಉಡುಪಿಯು ದಿನೇದಿನೇ ಆಧಿವ್ಯದ್ದಿ ಹೊಂದುತ್ತಲಿರುವ ಕೇಂದ್ರವಾದುದರಿಂದ ಉಡುಪಿಯಲ್ಲಿ ಸರ್ಕೋರ್ಟನ್ನು ಸ್ಥಾಪಿಸುವುದು ನ್ಯಾಯವಾಗಿದೆ. ಈ ರೀತಿಯಾದರೆ ಈ ವಿವಿಜನಿನ ಜನತೆಗೆ ಸರಕಾರವು ನ್ಯಾಯವಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟಂತಾಗುವುದು.

ನೂರಾಟಕ್ಕಿದೆ

ಉತ್ತಮ ಜಾಲೂಷ್ಟಿತಿಯಲ್ಲಿರುವ ಮತ್ತು ಎಳು ಸೀಟಿನ ಟೇರ್ಸ್ ಮಾಡಲು ಅನುಕೂಲವಿರುವ 42ನೇ ಮೊಡೆಲ್ ಬೆವರ್‌ಲೆಟ್ ಸ್ಟೇಶನ್ ವ್ಯಾಗನ್ (Wagon) ಒಂದು ವೂರಾಟಕ್ಕಿದೆ. ಖಾಯಿಂ ಉಳ್ಳವರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ಹೆಚ್ಚಿನ ಮಾಹಿತಿಗಾಗಿ ಪತ್ರವ್ಯವಹಾರ ಮಾಡುವುದು.

"X" C/o ನವಯುಗ, ಉಡುಪಿ.

ಧಾರ್ಮಿಕ

ಕಳದಮಂಗಳವಾರ ಸ್ಥಳೀಯ ಟೋರ್ಡ್ ಹ್ಯಾಸ್ಕೂಲಲ್ಲಿ ಅದೇ ಶಾಲೆಯ ಹಳೆಯ ನಿದ್ಯಾರ್ಥಿಗಳಾದ ಶ್ರೀ ಸಿ. ಶ್ರೀನಿವಾಸ ಕಾಮತ್, ಬ್ಯಾಲಿಸ್ ಆಫೀಸರ್ ಅವರು ತಮ್ಮ ಪರದೇಶ ಸಂಚಾರ ಹಾಗೂ ವಿಮಾನ ಯುದ್ಧದ ಅನುಭವಗಳ ಕುರಿತು ವಿದ್ಯಾರ್ಥಿಗಳಿಗೆ ಚಲೋ ಭಾಷಣವಿತ್ತರು.

ಆಗಮನ

ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನ ಪ್ರೆಸಿಡೆಂಟರಾದ ಶ್ರೀ ಟಿ.ಸ್ವಾಮಿ ಶಿಲ್ಪಿಯವರು ಇತ್ತೀಚೆಗೆ ಉಡುಪಿಗೆ ಆಗಮಿಸಿ ಸ್ಥಳೀಯ ಮಠಗಳನ್ನು ಸಂದರ್ಶಿಸಿದರು. ಹೊಸಸ್ಥೀಮು, ಹೊಸ ಅಧಿಕಾರಿಗಳ ನೇಮಕ, ಸಂಬಳದಲ್ಲಿ ಬಡ್ತಿ ಮೊದಲಾದ ಯೋಜನೆಗಳಾಗುತ್ತಿವೆಯಂತೆ.

ಜುಗಾರಾಟಿದವರಿಗೆ ಜುಲ್ಮಾನೆ

ಕಾರ್ಕಳತಾಲೂಕು ವಾರಂಗ ಪೈನಮಠದಲ್ಲಿ ಕಳದ ಜನವರಿ ತಾ 26ರಲ್ಲು ಜುಗಾರಾಟವಾಡುತ್ತಿದ್ದ 14 ಮಂದಿಯನ್ನು ಮಾಡಬ್ಬಿನ್ ಸರ್ಕಲ್ ಇನ್ಸ್‌ಪೆಕ್ಟರರಾದ ಶ್ರೀ ಪಿ. ಶಿವನವರು ದಸ್ತಗಿರಿಮಾಡಿ ಅಟಕ್ಕೆ ಸಂಬಂಧಪಟ್ಟ ರೂಪ್ಯಾ 6443. ವಜ್ರದ ಬೆಂಡೋಲೆ ಮತ್ತು ಇತರ ಬಿನ್ನಾಭರಣಗಳನ್ನು ವಶಮಾಡಿಕೊಂಡಿದ್ದರು. ಈ ಕುರಿತು ವಿಚಾರಣೆಯು ಈಚೆಗೆ ಕುಂದಾಪುರ ಸರ್ಕಲ್ ಕೋರ್ಟಿನಲ್ಲಿ ನಡೆದು 11 ಮಂದಿಗೆ ತಲಾ ಒಂದರಿಂದ ಒಂದುನೂರು ರೂಪಾಯಿಯಂತೆ ಪಂಡ ವಿಧಿಸಲಾಯಿತು. ಮಜದ ನೆನೇಜರ್ ಶ್ರೀ ನಾಗರಾಜ ಅತಿಕಾರಿ ಮತ್ತು ಅವರ ಇಬ್ಬರು ನೌಕರರನ್ನು ಬಿಟ್ಟುಬಿಡಲಾಯಿತು. ಪೋಲೀಸರು ಸ್ವಾಧೀನಪಡಿಸಿಕೊಂಡ ಹಣವನ್ನು ಸರಕಾರಕ್ಕೆ ಜಪ್ತುಮಾಡಲಾಯಿತು. ಸರಕಾರೀ ಕಡೆಯಿಂದ ಅಸಿಸ್ಟಾಂಟ್ ಪಬ್ಲಿಕ್ ಪ್ರೊಸಿಕ್ಯೂಟರ್ ಶ್ರೀ ವಿ ಕೆ ಸಟ್ಟರೂ ತಪ್ಪಿತಸ್ಥರ ಕಡೆಯಿಂದ ಶ್ರೀಗಳಾದ ಬಿ. ಎಸ್. ಹೆಗ್ಡೆ, ಕೆ. ಎಸ್. ಸಟ್ಟಿಯವರೂ ವಕಾಲತ್ತು ನಡೆಸಿದರು.

ಅವಲಕ್ಕಿ ಹಿಡಿಯಲಾಯಿತು-

ಬುಧವಾರ ಸಂತೆಗೆ ನೂರಾಟಕ್ಕೆ ಬಂದಿದ್ದ ನೂರಾರು ಗೋಣಿ ಅವಲಕ್ಕಿಯನ್ನು ಸಂಬಂಧಪಟ್ಟ ಅಧಿಕಾರಿಗಳು ಹಿಡಿದು ಕೋಪರೇಟಿವ್ ಸ್ಟೋರಿಗೊಪ್ಪಿಸಿದರು.



Approved firm by the Govt. of Mysore
Certified by the Agent of the Govt. o
Cylone & Indian.

ಬೈಲೂರು, ಕಾಂಗ್ರೆಸ್ ಸೇವಾದಳ

ಕದ-ದ್ವಿತೀಯ ವಾರ್ಷಿಕೋತ್ಸವವು ಜಿಲ್ಲಾ ಕಲೆಕ್ಟರ್ ಶ್ರೀ ಯಸ್. ಆರ್. ಕೈವಾರರ ಅಧ್ಯಕ್ಷತೆಯಲ್ಲಿ ತಾ 18-11-48ನೇ ಗುರುವಾರ ಬೈಲೂರಿನಲ್ಲಿ ಜರಗಲಿದೆ. ಶ್ರೀಗಳಾದ ಕೆ. ಕೆ. ಸಟ್ಟಿ, ಎಸ್. ಯಸ್. ಕಿಲ್ಲೆ ಮುಂತಾದವರ ಭಾಷಣಗಳೂ, ಡ್ರಿಲ್, ನಾಟಕ, ಲಾಜಣಿ, ನೃತ್ಯ ಮುಂತಾದ ಪ್ರದರ್ಶನಗಳೂ ಇವೆ.

[ಜನೇ ಪುಟದಿಂದ]

ಎಂದು ಒತ್ತಿ ಹೇಳಿದರು. "ನೀವು ಹೊತ್ತಿರುವ ಭಾರ ದೊಡ್ಡದು. ನಿಮ್ಮ ಗುರಿ ಉಚ್ಚ ಮತ್ತು ಸ್ಪಷ್ಟ. ಆದರೆ ಅದನ್ನು ಮುಟ್ಟುವುದಕ್ಕಾಗಿ ವಹಿಸಿರುವ ನಿಮ್ಮ ಕ್ರಮ ವಿಧಾನೆಗಳೂ ಆಷ್ಟೇ ಉತ್ತಮ ಮತ್ತು ಸ್ಪಷ್ಟವಿವೆಯೇ? ಒಂದು ಗುರಿಯಂತೆಯೇ ಅದನ್ನು ಸಂಪಾದಿಸಿಕೊಳ್ಳುವ ಕ್ರಮಗಳೂ ಉತ್ತಮವೇ ಇರಬೇಕೆಂಬುದನ್ನು ನಮಗೆ ನಮ್ಮ ಮಹಾನಾಯಕ ಕಲಿಸಿದ್ದ. ಲೋಕದ ಸಮಸ್ಯೆಗೆ ಕೆಂದರೆ ಮುಖ್ಯತಃ ಯುರೋಪಿನ ಸಮಸ್ಯೆಗಳೆಂದೇ ಭಾವಿಸಿಕೊಳ್ಳಬೇಡಿ. ಆಶ್ಯದ ವಿಶಾಲ ಕ್ಷೇತ್ರಗಳವೆ. ಗತಕಾಲಗಳಲ್ಲಿ ಲೋಕದ ಆಗುಹೋಗುಗಳಲ್ಲಿ ಅವು ವಿಶೇಷ ಭಾಗ ವಹಿಸದರಬಹುದು. ಆದರೀಗ ಅವು ಎಚ್ಚತ್ತಿವೆ. ಜನರು ಚೈತನ್ಯಶಾಲಿಗಳಾಗಿದ್ದಾರೆ. ಈ ದಿನದ ಪ್ರಾಪಂಚಿಕ ಘಟನೆಗಳಲ್ಲಿ ಅಸ್ಯಾವೂ ಗಣ್ಯವಿದೆ. ಇಂತೆ ಅದು ಇನ್ನೂ ಹೆಚ್ಚಿಗೆ ಗಣಿಸಲ್ಪಡುಬಹುದು" ಎನ್ನುತ್ತಾ ಪಂಡಿತಜೀ ದಕ್ಷಣಾಫ್ರಿಕ ಮತ್ತಿತರ ಕಡೆಗಳಲ್ಲಿರುವ ವರ್ಣ ದ್ವೇಷವನ್ನು ತೀಕ್ಷ್ಣವಾಗಿ ಟೀಕಿಸಿದರು. ಭಾರತವು ಎಂದಿಗೂ 'ಅನ್ಯಾಯಕ್ಕೆ ಬಾಗದು; ಅನ್ಯಾಯಕ್ಕೆ ಹೋಗದು' ಎಂದು ಕಂಠೋಕ್ತವಾಗಿ ಹೇಳಿದರು. 48 ರಾಷ್ಟ್ರಗಳ ಸ್ವತಂತ್ರ ನಿಧಿಗಳಿದ್ದ ಆ ಸಭೆಯು ಪಂಡಿತ ನೆಹರುಗಳ ಭಾಷಣವನ್ನು ತದೇಕಚಿತ್ತದಿಂದಾಲಿಸಿತು; ಆಗ ಅದು ಉರ್ಧರ ಅಕ್ಷರಶಃ ಕೊಂಡಾಡಲ್ಪಡುತ್ತಿದೆ.

ಕಾಸರಗೋಡು ಡಿ. ಮು. ಕೋರ್ಟಿನಲ್ಲಿ

O. S. No. 188/1947

ಉಚ್ಚೂರೆ ಅಮ್ಮ ಕೂಡಾ—ವಾದಿರು

ಮತ್ತು

ಕುಂಞಂಬು ನಾಯರ ಕೂಡಾ-ಪ್ರತಿವಾದಿರು

ಇವರೊಳಗೆ

ತಂಬೀಕು 4-11-1948

ಸಸ್ಟ್ಮೆಂಟಿಲ್ ೭ನೇ ಪ್ರತಿವಾದಿ ಕುಂಞಿ
ಸ್ಪ ನ್ಯಾರ್, ಕಂಞ ನಾಯರ ಅಳಿಯ. ಬೇಡ
ಡ್ಡ ಗ್ರಾಮದ ಸಾಡಕಲ್ಲು ಎಂಬಲ್ಲಿರುವವ.

ಮೇಲ್ಕಂಡ ವ್ಯಾಜ್ಯವನ್ನು ವಾದಿರು ಅವರ ಕುಟುಂಬದ ಆಸ್ತಿಗಳನ್ನು ಹಿಶೆಮಾಡಿ ನಿಂಗ ದ್ದಿ ದಿಸ್ಸಿಕೊಳ್ಳುವ ಬಗ್ಗೆ ದಾಖ್ಲುಮಾಡಿ ತಾ. 17-11-48ಕ್ಕೆ ಇಟ್ಟಿರುವದ್ರಿಂದ ಆ ಕುರಿತು ಆಕ್ಷೇಪವುಳ್ಳವರು ಆ ದಿವ್ಸ ದಗಲು ಗಂಟೆ 11ಕ್ಕೆ ಹಾಜ್ರಾಗಿ ವ್ಯವಹರಿಸತಕ್ಕದ್ದು. ತಪ್ಪಿದರೆ ಎಕ್ಸಪಾರ್ಟಿಮಾಡಿ ತೀರ್ಮಾನಿಸಲಾದೀತು ಎಂಬಸಂಗ್ತಿ ಈ ಮೂಲ್ಕ ತಿಳಿಸೋಣಾಗಿಯದೆ.

K. Kamalaksha Kamath
Advocate for Plaintiffs

ಕಾಸರಗೋಡು 4-11-1948

ತಾರೀಕು 11-11-1948 ರಿಂದ

ಪ್ರಭಾತದನರ

'ಗೋಪಾಲಕೃಷ್ಣ'

ಕಾಂತಾ ಆಪ್ಟೆ, ರಾಮು ಮುರಾಕೆ, ಗಣಪತ್ ರಾವ್.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಬರುವ ಚಿತ್ರ:

'ನಾರದ ನಾರದಿ'

ಸೂರಿಬಾಬು, ಲಕ್ಷ್ಮಿರಾಜಂ.

ಮಂಗಳೂರು

ಜಿಲ್ಲಾ ಆಹಾರ ಸಮಿತಿಯ ಸಭೆ

ಯು ಇಂದೇ ತಾ 4ರಲ್ಲು ಜಿಲ್ಲಾ ಕಲೆಕ್ಟರರ ಗೈರು ಹಾಜರಿಯಲ್ಲಿ ನಿಲ್ಲಾ ಸರಬರಾಯಿ ಅಧೀಕರ್ ಶ್ರೀ ಎಮ್. ಭವಾನಿಶಂಕರ ರಾಯರ ಅಧ್ಯಕ್ಷತೆಯಲ್ಲಿ ಕಲೆಕ್ಟರರ ಕಛೇರಿಯಲ್ಲಿ ಜರಗಿತು. ಅಧ್ಯಕ್ಷರು ಅಕ್ಕಿ ಭತ್ತಗಳ ಸ್ವಾಕು ಆಪಾರದ ಪರಿಸ್ಥಿತಿ, ಪ್ರೊಕ್ಯೂರ್‌ಮೆಂಟ್, ಗ್ರಾಮಾಂತರಗಳಲ್ಲಿ ರೇಶನ್ ಪದ್ಧತಿಯನ್ನು ತರುಗಿ ಪ್ರವೇಶಗೊಳಿಸಲು ಕೈಕೊಂಡ ಉಸಾಯಗಳಕುರಿತು ವಿವರಿಸಿದರು.

ಅವಶ್ಯಕ್ಯ ನೋಡಿನ ನಿರ್ಬಂಧ ತೆಗೆಯ ಬೇಕೆಂಬ ಸೂಚನೆ ಬಿದ್ದುಹೋಯಿತು ಹೆಚ್ಚು ಆಹಾರ ಬೆಳೆಸಲು ಇನ್ನಷ್ಟು ಪಂಪುಗಳನ್ನು ಸ್ಕೂಕ್ರೂಡ್ ಎಣ್ಣೆ ಯಂತ್ರಗಳನ್ನೂ ಒದಗಿಸಲು ಪ್ರಯತ್ನಿಸಬೇಕೆಂದಾಯಿತು. ಈ ಸಮಿತಿಯ ಸದಸ್ಯರಿಗೆ ಪ್ರಯಾಣ ಭತ್ತೆ ಕೊಡಿಸ ಬೇಕೆಂಬುದರ ಕುರಿತು ಸರಕಾರಕ್ಕೆ ಬರೆಯುವ ಆಲೋಚನೆ ಮಾಡಲಾಯಿತು.

ಗ್ರಾಮಾಂತರಗಳ ರೇಶನ್ ವ್ಯವ

ಸ್ಥೆ ಗ್ರಾಮಾಂತರಗಳಲ್ಲಿ ರೇಶನ್ ಕಾರ್ಡುಗಳ ವಿಚಾರಕ್ಕೆ, ಜನರ ಗಣನೆ ಇತ್ಯಾದಿ ಕಾರ್ಯಗಳ ಬಗ್ಗೆ ಚರ್ಚೆಯು ಆರು ತಾಲೂಕುಗಳಿಗೆ ನಿರ್ಬಂಧ ತೆಗೆಗಳಾಂತ್ಯವಾದವರೆಗೆ ಮಂಗಳೂರಿನ ಹಂಗಾಮಿ ತಹಶಿಲ್ದಾರರಾಗಿದ್ದ ಶ್ರೀ ಕೆ. ಲಿಂಗಪ್ಪಯ್ಯನವರು ಸ್ಪೆಶಲ್ ತಹಶಿಲ್ದಾರರಾಗಿ ನೇಮಕಗೊಂಡಿರುವರು. ಇವರ ಕೆಲಸಕ್ಕೆ ತಾಲೂಕಿಗೊಬ್ಬರಂತೆ ಆರುಮಂದಿ ಸ್ಪೆಶಲ್ ರೆವಿನ್ಯೂ ಇನ್ಸ್‌ಪೆಕ್ಟರರು, ಹೊಸದುಗ್ಗ ತಾಲೂಕಿಗೆ ಪ್ರತ್ಯೇಕ ಒಬ್ಬ ಸ್ಪೆಶಲ್ ರೆವಿನ್ಯೂ ಇನ್ಸ್‌ಪೆಕ್ಟರರು ನೇಮಕವೂ ಆಗಿದೆ.

ಅಕಾಸ್ತೀಯ ರೇಶನಿಂಗ್ ಪದ್ಧತಿಯು ಜಾರಿಗೆಬರುವ ಸಮಯು ಕಾಸರಗೋಡು ತಾಲೂಕು, 5-12-48ರಿಂದ; ಪುತ್ತೂರು, ಮಂಗಳೂರು ತಾಲೂಕುಗಳು ತಾ. 12-12-48ರಿಂದ; ಉಡುಪಿ, ಕಾರ್ಕಳ ತಾಲೂಕುಗಳು ತಾ 19-12-48ರಿಂದ; ಕುಂದಾಪುರತಾಲೂಕು ತಾ. 26-12-48ರಿಂದ.

ಅಜೆಕಾರು ತಾ. 6-11-48ರಲ್ಲು ಜರಗಿದ ಕೇಂದ್ರ ಆಧ್ಯಾಪಕರ ಸಭೆಯಲ್ಲಿ ಬೈಲೂರಿನ ಶ್ರೀ. ಸೋನ್ಸರು "ಜೀನು ನೊಣ" ಸಾಕುವಿಕೆಯ ಕುರಿತು ಆಗತ್ಯವಿರುವ ಸಾಧನಗಳ ಪ್ರದರ್ಶನದ ಮೂಲಕ ಭಾಷಣವನ್ನು ತ್ತರು

ಸಂಕಲಕರಿಯ ತಾ. 6-11-48ರಲ್ಲು ಸಂಕಲಕರಿಯ ಎಲಿಮೆಂಟರಿ ಶಾಲಾ ಮಕ್ಕಳ ಹೆತ್ತವರ ಸಭೆಯು ಶಿವೊಗ್ಗ ಕೇಂದ್ರದ ಜಿಲ್ಲೆಗಳ ಎಗ್ರಿಕಲ್ಚರಲ್ ಸುಪರ್‌ವೈಜರ್ ಕೆ. ದೇಜು ತೆಟ್ಟಿ, ಬಿ. ಎ. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಕ್ಕಳ ವಿವಿಧ ವಿನೋದಾವಳಿಗಳಿದ್ದುವು. ಕಸ್ತೂರಿಬಾ ಮತ್ತು ಮುಂಡೂರು ಯಕ್ಷಗಾನ ಸಂಘಗಳ ಸಮ್ಮಿಳನದಿಂದ "ಕೃಷ್ಣ ಸಂಧಾನ" ಪ್ರಸಂಗವು ಯಶಸ್ವಿಯಾಗಿ ಅಭಿನಯಿಸಲಾಯಿತು.

ಬೊಂದಾಯಿ

ಶ್ರೀ ಭಗವತೀ ನೃತ್ಯಕಲಾ ಮಂದಿರ ಇವರು ತಾ 29-10-48ರಲ್ಲಿ ಭಾಂಗ ನಾಡಿ ಥಿಯೇಟರಿನಲ್ಲಿ 'ಜಲಂಧರ' ಎಂಬ ಪೌರಾಣಿಕ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು. ಉತ್ತಮ ಪಾತ್ರಧಾರಿಗಳಿಗೆ ಪಾರಿತೋಷಕಗಳನ್ನೀಯಲಾಯಿತು.

ಮುಂಬಯಿ ಅಲಿತಕಲಾ ಕನ್ನಡ ಟೆಕ ನಾಟಕ ಸಭಾ

ಇವರು ಶ್ರೀ ಮೋಳಾರ ಸುಂದರ ನ್ಯಾಕರಿಂದ ಬರೆಯಲ್ಪಟ್ಟ "ಕಳಿಯುಂಗ" ಎಂಬ ಸಾಮಾಜಿಕ ಕನ್ನಡ ನಾಟಕವನ್ನು ತಾ 31-12-48ನೇ ಶುಕ್ರವಾರ ರಾತ್ರಿ ಘಂಟೆ 8ಕ್ಕೆ ಕಲ್ಬಾದೇವಿ ರೋಡಿನಲ್ಲಿರುವ ಭಾಂಗನಾಡಿ ಥಿಯೇಟರಿನಲ್ಲಿ ಅಭಿನಯಿಸುವರು.

ನೋಟಿಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. E. P. 253/1948

R. E. A. 591/1948

ವಾದಿ– ಶ್ರೀ ವ್ಯಾಸ ರಘುಪತಿ ದೇವರು, ಕಾಶಿಮಠ.

ಮತ್ತು

ಪ್ರತಿವಾದಿರು– ತುಳಸಿ ಯಾನೆ ಲಕ್ಷ್ಮಿ ಅಮ್ಮ ಕೂಡಾ.

7ನೇ ಪ್ರತಿವಾದಿ– ಶಂಕರನಾರಾಯಣ ನ್ಯಾಕ, ರಾಮಕೃಷ್ಣ ನ್ಯಾಕರ ಮಗ, ಕೆನರಾ ಬೇಂಕ್ ಕ್ವಾರ್ಟ್ರ್ಸ Light House Hill, Mangalore.

ಸದ್ರಿ ಅಮ್ಜಾಜ್ಞಾರಿಯಲ್ಲಿ ಯೇಲಂ ಆಗತ ಕ್ಕ ಆಸ್ತಿಗೆ ಕೋರ್ಟಿನವರು ಎಣ್ಣದ ಅಂದಾಜು ಕ್ರಯು ಕಡಿಮನುಾಡಬೇಕಾಗಿ ವಾದಿಯು ಅರ್ಜಿಕೊಟ್ಟರುವುದರಿಂದ ಆ ಕುರಿತು ನಿನ್ನ ದೇನಾದರೂ ಆಕ್ಷೇಪ ಇದ್ದಲ್ಲಿ ಕಾರಣ ಕು 15-11-1948ನೇ ದಿವಸ ಹಗಲು 11 ಗಂಟೆಗೆ ಸದರಿ ಕೋರ್ಟುಮುಂದೆ ಹಾಜ್ರು ಆಗಿ ಜ್ಞಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಯೇಕಪಕ್ಷವಾಗಿ ತೀರ್ಮಾನ ಮಾಡಲಾದೀತು ಎಂಬಸಂಗ್ತಿ ಕೋರ್ಟು ಹುಕ್ಕುಂಪ್ರಕಾರ ಯೀ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenai
Pleader for Piff
Coondapoor 2-11-1948

WANTED.

Applications are invited for the posts of teachers in Elementary schools under the South Kanara District Board from Kannada, Urdu and Malayalam trained teachers of secondary-grade and higher elementary grade and from muslim candidates knowing Urdu who have passed the VIII standard or III Form. The applicants should be above 17 years of age and the applications should be accompanied by a treasury or money order receipt for annas four only being the application fee. Applications should contain the following information:- 1 Name of the applicant, 2. Father's name, 3. Community, 4. Date of birth, 5. Educational qualifications and the number and date of certificates, 6. Previous experience as teacher and 7. the languages or language in which he or she is competent to teach.

S. K. Dt. Beard Office, Mangalore, Date 2-11-48

(Sd) *M. Sunder Row,*
For Special Officer

ಪ್ರಕಟಣೆ

ಕಾರ್ಕಳ ಡಿ ಮು. ಕೋರ್ಟಿನಲ್ಲಿ.

O. P. No. 40/1948.

1 ಚಮಿನಿ ಪೂಜಾರ್ತಿ, ಅಮ್ಮು ಪೂಜಾರ್ತಿ ಮಗಳು 2 ಚಂದು ಪೂಜಾರಿ, 3 ನರಸಿ ಪೂಜಾರ್ತಿ, 4 ತೋಮ ಪೂಜಾರಿ, 1ನೆಯವಳ ಮಕ್ಕಳು. ಉಡ್ಪಿ ತಾಲ್ಲ್ಯ ಪಿಲಾರು ಗ್ರಾಮದ ಉಸೀಲೊಟ್ಟು ಎಂಬಲ್ಲಿರುತ್ತಾರೆ

—ಅರ್ಜಿದಾರರು.

ಮತ್ತು

ಸುಂದರ ಪೂಜಾರ್ತಿ-ಅಪ್ಪಣ್ಣ ಪೂಜಾರಿ ಮಗಳು. ಸದ್ರಿ ತಾಲ್ಲ್ಯ ನಂದಿಕೂರು ಗ್ರಾಮದ ಆಡಿವೆ ಪರಂತೋಟ ಎಂಬಲ್ಲಿರುತ್ತಾರೆ

—ಎದ್ರಿಯು.

1ನೆ ಅರ್ಜಿದಾರ್ತಿ ನುಗ, ಮಿಕ್ಕ ಅರ್ಜಿದಾರರ ಸಹೋದರರ ಪ ಎದ್ರಿಯ ಗಂಡ ಮೃತ ಮುದ್ದು ಸುವರ್ಣರಿಗೆ ಬಹಾ ಆಯೇಜು ವ್ಯಕ್ತಿಗೆ 1ನೆ ಅರ್ಜಿದಾರರಿಗೆ ಮಾರಿಸ ಸರ್ಟಿಫಿಕೇಟು ಕೊಡ ಹೇಳಿ ಅರ್ಜಿದಾರರು ಕೊಟ್ಟ ಸದ್ರಿ ಅರ್ಜಿಯು ತಾರೀಕು 1-12-1948ಕ್ಕೆ ತಸ್ಥಿಗಿಟ್ಟಿದೆ. ಆಕ್ಷೇಪವುಳ್ಳವರು ತಾ 1-12-48 ನೆ ದಿನ ಬೆಳಿಗ್ಗೆ 11 ಗಂಟೆಗೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹಾ ಯಾ ವಕೀಲರ ವ್ಯಾರಾ ಹಾಜ್ರಾಗಿ ಉದಪರಿಸತಕ್ಕದ್ದು, ತಪ್ಪಿದ್ದಲ್ಲಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಅರ್ಜಿಯು ತೀರ್ಮಾನಿಸಲಾದೀತು.

By order of the Court

N. Mohandas Adyanthaya
Advocate.

Karkala, 4-11-1948.

ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕೆಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲಿ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ





ನಮ್ಮ ವಾನಿಂಗ್ ಟಿಲ್ಲಿ ಆರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಆಕ್ಷಗತ್ಯವಾಗಿದ್ದು. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿದರೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ವಾಸ್ತ್ರೋಕ್ತ ರೀತಿಯಿಂದ ಹೊಸ್ತಾಂಡ ದೇಶದಲ್ಲಿ ಸ್ವಮುಖ ಕಂಪನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯಾ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಹುಮೂತ್ರ,-ಸೀಮೂತ್ರ, ಅನ್ನಕೋಶ, ಕಲಿಬಿಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೌರವು ಕ್ಷಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಆಕ್ರಮಣಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣ ಪಾಷ ಬೇನೆಯು ಶಸ್ತ್ರಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧ' ಎಂದು ಕರೆಯುವದರಲ್ಲಿ ಸಂದೇಹವೇನಿದೆ? ಶಿವನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು ಹಲ್ಲುನೋವು, ಮಕ್ಕಳ ಕಿವಿಹುಳ್ಳಿನೋವು, ಕಿವಿಗಳ ಉಲಿದ್ರವ ಹೆಗಸರ ಮುಟ್ಟಾಗುವ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಕೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು– ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ. ಸಹಿತ ರೂ. 30.0.0. ವಾನಿಂಗ್ ಟಿಲ್ಲಿ ಕೆಪ್ಸುಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸುಲ್‌ಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಬರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ, ಬೇರೆ. ಒಂಮಡಜನ್ ಡ್ರಪ್ಸರ್ ಬಾಟ್ಲಿಗಳಿಗೆ ರೂ. 60-0-0 ವಿಪಿ. ಪಿ. ಸಹಿತ ವಾನಿಂಗ್-ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18-ವಿ.ಪಿ-ಮಾಫು.

ಪ್ರೇಶಂಸನಾ ಪತ್ರ–ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೩೪ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನು, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಬೇಡಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಯೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ವೆಂಕಟೇಷಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ.
ದಾಹಾನು ರೋಡು, ಬಿ. ಎಂಡ್ ಸಿ ಐ. ರೈಲ್ವೆ.

The Eclipse Distributing Agency.
Dahanu Road, B. B. & C. I. Rly.

ಬೊಂಬಾಯಿ ಸ್ಥಾಕೆಸ್ಟರು:—ಲಕ್ಷ್ಮಣಾಲಾ ಲಿಮಿಟೆಡ್, 25, ಓಲ್ಡ್ ಹನುಮಾನ್ ಲೇನ್, ಬೊಂಬಾಯಿ 2.

ಆರ್. ಎಸ್. ಎಸ್. ನಿರ್ನಾಮವಾಗಬೇಕು.

ಆರ್. ಎಸ್. ಎಸ್. ಎಂಬ ಒಂದು ಸಂಸ್ಥೆ ಈಚೆಗೆ ಹುಟ್ಟಿಕೊಂಡಿದ್ದು ದೇಶದ ಯುವಕರ ಮನಸ್ಸನ್ನು ಕದಡುತ್ತಾ ಬರುವ ಅಪಾಯಕಾರೀ ಚಟುವಟಿಕೆಯಲ್ಲಿ ಮಗ್ನವಾದ ಅಂಶ, ವಿವೇಕ ಮತ್ತು ವಿಚಾರ ಶೀಲರಾದ ಎಲ್ಲ ರಾಷ್ಟ್ರ ಪ್ರೇಮಿಗಳ ವಿಮರ್ಶೆಗೆ ಅರ್ಹವಾಗಿದೆ. 'ಪುರಾತನವಾದ ನಮ್ಮ ಧರ್ಮ-ಸಂಸ್ಕೃತಿಗಳ ಪುನರುತ್ಥಾಪನೆಗೂ ರಾಷ್ಟ್ರದ ಭದ್ರತೆಗೂ ನಾವು ಶುದ್ಧ ಮನಸ್ಸಿನಿಂದ ಸಂಘಟನೆಯನ್ನು ಮಾಡುತ್ತೇನೆ' ಎಂದು ಅದರ ಅನುಯಾಯಿ ಇಂದು ಬಾಯಿವಾಚಮಾಡಿದ ಒಂದು ವಾದದ ಧಾಟಿಯನ್ನು ನಮ್ಮ ಮುಂದೆ ಇಟ್ಟು, ತನ್ನ ಸಂಘಾಟನಗಿರಿಯನ್ನು ತೋರಿಸುವ ಪರಿಪಾಟಿ ಇದೆ. ಇಂಥ ಒಂದು ಸಂಸ್ಥೆ ಅಗತ್ಯವಿದೆ-ಅಗತ್ಯವಿಲ್ಲ ಎಂದು ಈಚೆಗೆ ಸಣ್ಣದೊಂದು ವಾದವೂ ಇದೆ. ಈ ಸಂದರ್ಭದಲ್ಲಿ ವಿಚಾರಶೀಲನ ಕರ್ತವ್ಯವೇನು ? ಎಂಬ ಪ್ರಶ್ನೆಗೆ ಬಹಳ ಮಹತ್ವವಿದೆ.

ತರ್ಕದ ತಲೆತಿರುಕತನ

ಮೊದಲು ಆ ಸಂಸ್ಥೆಯ ನಾಯಕನೆನಿಸುವವ ಹೇಳುವ ಮಾತುಗಳನ್ನೆ ಸ್ವಲ್ಪ ಹಿಂಜಿ ನೋಡುವ. 'ನಮ್ಮ ದೇಶವನ್ನು ಸರ ಚಕ್ರದಿಂದ ಸಂರಕ್ಷಿಸಲು ರಾಷ್ಟ್ರದ ಯುವಕರನ್ನು ಸಿದ್ಧ ಪಡಿಸಬೇಕು" ಎಂದು ಹೇಳಲಾಗುತ್ತಿದೆ? ಈ ವಿಚಾರ ಸರಕಾರಕ್ಕೆ ಸೇರಿದ್ದು. ಸರಕಾರದ ಮೇಲೆ ವಿಶ್ವಾಸವಿಲ್ಲದ ಹಂಗಡದವರು ಮಾತ್ರ ಈ ಮಾತಿಗೆ ಒಪ್ಪಿಯಾರು. ಪದ್ಯ ನಮ್ಮ ದೇ ಸರಕಾರನಿರುವಾಗ ನಾವು ಕವಾಯಿತು ಮಾಡುವ ಅಗತ್ಯವೆ ಉಳಿದಿಲ್ಲ-'ನಮ್ಮ ಕವಾಯಿತು ಸರಕಾರದ ಸಹಾಯಕ್ಕೆ" ಎಂದರೂ ಆ ಮಾತಿಗೆ ಬೆಲೆಯಿಲ್ಲ. ಏಕೆಂದರೆ ಹಾಗೆ ಹೇಳುವವರ ಮನಸ್ಸು ಶುದ್ಧವಾಗಿದ್ದರೆ ಅಂಥವರು ಹೋಂ ಗಾರ್ಡ್ಸಿಗೆ ಸೇರಬಹುದು. ಎಂತಲೆ ದೇಶರಕ್ಷಣೆಗಿಂತ ಭಿನ್ನವಾದ ಒಂದು ಒಳ ಉದ್ದೇಶ ಇದ ಬೈದೆ ಎಂದು ಊಹಿಸಬಹುದು. ಆ ಉದ್ದೇಶ ಯಾವುದು ?

ನಮ್ಮ ಧರ್ಮದ ರಕ್ಷಣೆಗೆ ಸಂಘಟನೆ ಎಂಬ ಇನ್ನೊಂದು ಅಸಂಬದ್ಧ ಪ್ರಲಾಪವನ್ನು ಪೇಳಲಾಗುತ್ತದೆ- ಸಹಸ್ರ ಸಹಸ್ರ ವರ್ಷಗಳಿಂದ ಈ ಧರ್ಮ ಯಾವ ಸಂಸ್ಥೆಯ ಸಹಾಯವಿಲ್ಲದೆ ಬದುಕಿದೆ. ಎಷ್ಟೋ ಯುದ್ಧಗಳಾದುವು; ಎಷ್ಟೋ ರಾಜರು ಆಳಿ ಹೋದರು. ಎಷ್ಟೋ ಸರ್ವನಾಶಗಳಾದವು. ಆದರೆ ನಮ್ಮ ಧರ್ಮ ಇನ್ನೂ ತೇಜಸ್ವಿಯಾಗಿ ಬದುಕಿದೆ. ಏಕೆಂದರೆ ನಮ್ಮ ಧರ್ಮದ ಒಳತಿರುಳು ಅಷ್ಟು ಬಲಿಷ್ಠವಾಗಿದೆ. ಈ ದೇಶದಲ್ಲಿ ಹುಟ್ಟಿದ ಎಲ್ಲವನ ಹೃದಯದಲ್ಲಿಯೂ ಈ ದೇಶ ಈ ಧರ್ಮ ಈ ಸಂಸ್ಕೃತಿಯ ವಿಚಾರದಲ್ಲಿ ಬಹಳವಾದ ಶ್ರದ್ಧೆಯಿದೆ. ಈ ರಕ್ತಗತ ಸಂಸ್ಕಾರದ ಬಲದಿಂದಲೆ ಇದು ಹಿಂದೆಯೂ ಉಳಿಯಿತು. ಇನ್ನೂ ಉಳಿಯುತ್ತದೆ. ನಮ್ಮ ಧರ್ಮ ರಕ್ಷಣೆಗೆ ಸಾಂಘಿಕ ಶಕ್ತಿಯ ಅವಶ್ಯಕ್ತೆಯಿರಬಾರದು. ಅದು ವೈಯಕ್ತಿಕ ನಿಷ್ಠೆ. ವೈಯಕ್ತಿಕ ಕರ್ತವ್ಯ ಅದರ ಹೆಸರಿನಿಂದ ಜನರನ್ನು ವಂಚಿಸಿ ಕೂಟ ರಚಿಸಬಹುದು. ಆದರೆ ಅಂಥ ಕೂಟದಲ್ಲಿ ಸತ್ವದ ಬೆಳಕು ಹ್ರಾಸವಾಗಿ ತಮದ ಭೀಕಾರ ಎದ್ದು ತೋರಬಹುದು. ಧರ್ಮ ರಕ್ಷಣೆಗೆ ಸೈನಿಕ ಬಲವನ್ನು ಹಾರಯಿಸುವವನಿಗೆ ತನ್ನ ಧರ್ಮದ ತೇಜದಲ್ಲಿ ಸ್ಥಿರವಾದ ನಂಬಿಕೆಯಿಲ್ಲವೆಂದು ಅರ್ಥ. ವಿಧರ್ಮೀಯರು ಕತ್ತಿಯ ಬಲದಿಂದ ಧರ್ಮ ಪ್ರಚಾರ ಮಾಡಿದಾಗ ಎಂಬ ಶುಷ್ಕ ಆದರ್ಶದಿಂದ ತಾನೂ ಅಂಥ ತಾಮಸ ಮಾರ್ಗಕ್ಕೆ ಒಲಿದನು ಎಂದು ಅರ್ಥ. ಯಾವನಿಗೆ ಬಲಾಪೇಕ್ಷೆಯಿಲ್ಲದೆ ತನ್ನ ಧರ್ಮ ಬದುಕಲಾರದು ಎಂಬ ಅನುಮಾನವಿದೆಯೋ ಅಂಥವನು ಧಾರ್ಮಿಕರ ಸೋಗಿನಲ್ಲಿರುವ ನಾಸ್ತಿಕನೆ ಸರಿ ! ನಮ್ಮ ಧರ್ಮ ಬಹಳ ಘನವಾದ ಧರ್ಮ. ವಿಶ್ವದ ಎಲ್ಲ ರಹಸ್ಯಗಳ ವಿವೇಚನೆ ಅದರಲ್ಲಿ ಇದೆ. ನಮ್ಮ ಧರ್ಮದೃಷ್ಟಾರರ ಕಿಳಿವಿನ ಸೀಮೆ ಬ್ರಹ್ಮದ ಬೆಳಕಿನ ವರೆಗೆ ಪರಿಡಿತ್ತು. ಈ ಪುರಾತನವಾದ ಬ್ರಹ್ಮಿಕತ್ವದ ಬೆಳಕು ದಶ್ಯಬೀಕಾದರೆ ಕೆಲವಿಲ್ಲದ ಮನಸ್ಸು ಬೇಕು. ರಾಗ ದ್ವೇಷಗಳ ಸೊಂಕಿರದ ಸಾಧನೆಬೇಕು. ವಿಶ್ವ ಸೋದರ್ಯದ ಧ್ಯಾನಬೇಕು. ಲೋಕಾನುಭೂತಿ ಯಿರಬೇಕು. ಸಂತತವಾದ ಅಧ್ಯಾಯ ಬೇಕು. ಈ ಶ್ರೇಷ್ಠ ಜ್ಞಾನದ ಅಧಿಕಾರಿ ಸಹನೆಯ ಮೂರ್ತಿಯಾಗಿರಬೇಕು. ಸ್ವಾಮೀ ರಾಮಕೃಷ್ಣ ಪರಮಹಂಸ, ಮಹಾತ್ಮಾ ಗಾಂಧಿ, ಮುಂತಾದವರು ಅಂಥ ಅಧಿಕಾರಿಗಳು. ಸರ್ ಸರ್ವಪಲ್ಲಿ ರಾಧಾಕೃಷ್ಣನ್‌ರಂಥವರು ಅಂತಹ ಜ್ಞಾನಿಗಳು. ಇಂಥವರಿಂದ ಈ ಧರ್ಮ ಉಳಿದೀತು-ಬೆಳಗೀತು. ನಾವು ದೇಶಕಟ್ಟುತ್ತೇನೆ-ನಾವು ಧರ್ಮ ಉಳಿಸುತ್ತೇನೆ. ಎಂದು ಕೆರುಚಿ,ವವರ ಕವಾಯಿತು, ಆ ರಾಷ್ಟ್ರೀಯ ಚಟುವಟಿಕೆಗಳಿಗೆ ಉತ್ತೇಜನ ಮಾದೀತಾಗಿ ಸಂಸ್ಕೃತಿಗೆ ಪೋಷಕವಾಗಲಾರದು ಎಂತಲೆ ಇವರ ಸಂಘಟನೆಯ ಉದ್ದೇಶ ಧರ್ಮ-ಸಂಸ್ಕೃತಿಗಳ ರಕ್ಷಣೆಗಿಂತ ಭಿನ್ನವಿದೆಯೆಂದು ಊಹಿಸಬಹುದು. ಯಾವುದು ಆ ಉದ್ದೇಶ ?

ನಮ್ಮನ್ನು ನಾವು ಶುದ್ಧೀಕರಿಸಲು ಈ ಸಂಘಟನೆ ಎನ್ನಲಾಗುತ್ತದೆ. ಆತ್ಮ ಶುದ್ಧಿಯ ದಾರಿ ಲಾಟೆ ತಿರುಗಿಸುವುದರಲ್ಲಿಲ್ಲ! ಹಾಗಾದರೆ ಇದರ ಉದ್ದೇಶ ಬೇರೆನು ?

ಇದರ ನಾಯಕ ಗೋಲ್ವಾಲಕರ್ ತನ್ನ ಸಂಘದ ಧ್ಯೇಯ ಧೋರಣೆಗಳನ್ನು ಮೋಡಿಯಿಂದ ಹೇಳಿದ್ದರೂ ಯಾವ ತರ್ಕವಾದಕ್ಕೂ ಹೊಂದಿಕೆಯಾಗದ ಆ ವಾಗ್ಜೋರಣೆ ಆ ವ್ಯಕ್ತಿಯ ನಿಲುಮೆಯ ಪಾರಿಶುದ್ಧತ್ವವನ್ನೆ ಪ್ರಶ್ನಿಗೀಡುಮಾಡುತ್ತದೆ!

ಆ ಉದ್ದೇಶವೇನಿದ್ದೀತು ?

ಈ ಗೂಢ ಊಹಾತೀತವೇನಲ್ಲ. ಸಂಘದ ಮೂಲ ಉದ್ದೇಶ ರಹಸ್ಯವಾಚಿಯೆ ಇದೆ. ಈಗ ಹೇಳಲಾಗುತ್ತಿರುವ ಮಾದವೆಲ್ಲ ತೋರಿಕೆಯವು. ದೇಶವನ್ನು ಅಧುನಿಕ ವಿಚಾರಶೀಲಸಂಪನ್ನತೆಯಿಂದ ಪರಾವೃತ್ತಗೊಳಿಸಿ ಧರ್ಮಾಂಧತೆಯ ಕಡೆಗೆ ತಿರುಗುವ ದುರುದ್ದೇಶವೆ ಅದರ ಪ್ರಧಾನ ಉದ್ದೇಶ. ಧರ್ಮಪ್ರೀತಿ ಬೇರೆ-ಧರ್ಮಾಂಧತೆ ಬೇರೆ- ಮೊದಲಿನದು ಆತ್ಮ. ಆದರೆ ಹೆಸರಿನಿಂದ ಎರಡನೆಯದು ಬಂದರೆ ಅದು ಅಪಾಯಕಾರಿ. ಧರ್ಮಾಂಧತೆಯ ಪ್ರಚಾರದಿಂದ ವಿಚಾರ ಶಕ್ತಿ ನಶ್ವವಾಗುತ್ತದೆ. ಯಾವ ದೇಶದ ವಿಚಾರಶಕ್ತಿ ನಶ್ವವಾಗುತ್ತದೆಯೋ ಆದೇಶದ ಜನರು ಕುರಿಮಂದೆಯಂತಾಗುತ್ತಾರೆ. ಆಗ ಡಾಂಭಿಕರೂ ಶ್ರೀಮಂತರೂ ಜನರ ಸುಲಿಗೆಯನ್ನು ನಿರಾತಂಕವಾಗಿ ಸಾಗಿಸಬಹುದಾಗಿದೆ. ಇದೇ ಸ್ವಾರ್ಥವೃಕ್ಷ ಕೆಲವು ಕಾಣಸಂತೆ ಕದೀಮರೂ ಅರಾಷ್ಟ್ರೀಯರೂ ಅತಿ ಧರ್ಮಾಂಧತೆಯ ಪ್ರಚಾರಕ್ಕಾಗಿ ಕೊಡಗಿ ರಾಷ್ಟ್ರದ ಎಳಿಗೆಯ ಹಾದಿಯಲ್ಲಿ ಬುದ್ಧಿಪೂರ್ವಕವಾಗಿ ಬಂದೆಗಲ್ಲನ್ನೊಡ್ಡಿದಾರೆ.

ಕಾಂಗ್ರೆಸು ಅಥವಾ ಸಾಮ್ಯವಾದೀ ಪಂಥದ ಜನರು ಸರಕಾರದ ಸೂತ್ರವನ್ನು ವಹಿಸಿರುವಷ್ಟು ದಿನ ನಮ್ಮ ಸ್ವಾರ್ಥಕ್ಕೆ ಏಡೆಯಿಲ್ಲವೆಂದು ಹೆದರಿದ ಈ ದುರ್ವ್ಯಕ್ತರು ಧರ್ಮದ ಬಲೆ ಬೀಸಿ ದೇಶವನ್ನು ತಮ್ಮ ನರಕಕ್ಕೆ ಎಳೆಯಬಯಸಿದಾರೆ. ಸಂಘಟನೆಯ ಒಳತಿರುಳು ಸತ್ಯಾಂತರ ಸ್ಥಾಪನೆ. ಇದಕ್ಕಾಗಿ ಈ ನಾಜೀ ಧೋರಣೆ. ದೇಶದ ಯುವಕನೆಂದದ್ದಲ್ಲಿ ರಾಷ್ಟ್ರನಾಯಕರ ವಿಚಾರದಲ್ಲಿಯೂ ರಾಷ್ಟ್ರಸಭೆಯ ವಿಚಾರದಲ್ಲಿಯೂ ವೈರ ಭಾವನೆಯನ್ನು ಕೆರಳಿಸಿ ಮುಸ್ಲಿಂ-ಕ್ರೈಸ್ತಿಯನ್-ಮುಂತಾದ ವ್ಯತಿರಿಕ್ತವರ ವಿಚಾರ ದ್ವೇಷವನ್ನು ಪ್ರಚಾರಮಾಡುವುದೆ ಇದರ ಉದ್ದೇಶ. ನಮ್ಮ ಉದ್ದೇಶ ಹಾಗೇನಿಲ್ಲವೆಂದೆನ್ನುವವರಿಗೆ ಪಂಜಾಬ ಮೊದಲಾದ ದಂಗೆಗಳಲ್ಲಿ ಆರ್. ಎಸ್. ಎಸ್.ದವರು ಪ್ರಮುಖ ಪಾತ್ರ ವಹಿಸಿದ ಸಂಗತಿಯನ್ನು ತೋರಿಸಿ ಅವರ ಬಾಯಿಗಟ್ಟಿಸಬಹುದು.

ಆರ್ಥಿಕ ಯೋಜನೆ ಮುಖ್ಯ.

ನಮ್ಮ ದೇಶಕ್ಕೆ ಒಳ್ಳೆಯ ಶೀಲ- ಧರ್ಮಪ್ರಿಯ ಮನೋವೃತ್ತಿ- ರಾಷ್ಟ್ರನಿಷ್ಠೆ ಬೇಕಾದರೆ- ಜನರನ್ನು ಸಂಘಟಿಸುವುದೊಂದೇ ಅದಕ್ಕೆ ಮಾರ್ಗವಲ್ಲ; ಅಥವಾ ಜನ್ನರು ತನ್ನ ಅನುಯಾಯಿಗಳನ್ನು ಮಾಡಿದಂತೆ ಧರ್ಮಾಂಧರನ್ನಾಗಿ ಮಾಡುವುದೂ ಅಲ್ಲ! ಒಂದು ಒಳ್ಳೆಯ ಆರ್ಥಿಕ ಯೋಜನೆಯಿದ್ದು ದೇಶದ ಜನದ ಜೀವನ ನಯವಾಗಿರುವಂತೆ ಮಾಡಿದಿದೆ ಜನರಿಗೆ ಸಾಧುತರಿತೆಯೂ ಉದಾರಗುಣವೂ ಧರ್ಮಪ್ರಿಯತೆಯೂ ಮಂಗಲಧಾವನೆಗಳೂ ತಾನೆ ಉಂಟಾಗುತ್ತದೆ.ಯಾವ ಸಂಸ್ಥೆ ಈ ಪ್ರಧಾನ ಸಮಸ್ಯೆಯನ್ನು ಅಲಕ್ಷಿಸಿ ಇತರ ಗೌಣ ವಿಷಯಕ್ಕೆ ಪ್ರಾಧಾನ್ಯ ಕೊಡುತ್ತದೋ ಆ ಸಂಸ್ಥೆಯ ಉದ್ದೇಶ ವಸ್ತುತಃ ದೇಶಕ್ಕೆ ಅಶುಭವಾದದ್ದು. ಪದ್ಯಕ್ಕೆ ನಮ್ಮ ದೇಶದಲ್ಲಿ ಕಾಂಗ್ರೆಸ್ ಅಥವಾ ಸಾಮ್ಯವಾದೀ ಪಂಥ ಇವೆರಡು ಸಂಸ್ಥೆಗಳ ವಶ ಇಂಥ ಯಶಸ್ವೀ ಆರ್ಥಿಕ ಯೋಜನೆಗಳಿವೆ. ನಾಳೆ ನನ್ನ ದೇಶದ ಭವಿಷ್ಯ ಈ ಸಂಸ್ಥೆಗಳಿಂದ ಒಳ್ಳೆಯದಾದೀತೇ ಹೊರತು ಯಾವ ಶಭಭಾವನೆಯೂ ಇಲ್ಲದ ಈ ಆರ್. ಎಸ್. ಎಸ್. ಎಂಬ ಪೈತ್ಯರ ದಂಡಿನಿಂದಲ್ಲ !

ವಿಷಮ ಪ್ರಚಾರ

ದೇಶವನ್ನು ನಾಶತ್ವ ಸಂಕಷ್ಟಕ್ಕೆ ಈಡು ಮಾಡಿದ ಈ ಸಂಸ್ಥೆಯನ್ನು ಸರಕಾರ ನ್ಯಾಯಬಾಹಿರ ಮಾಡಿದೆ. ಆದರೂ ಅದರ ಅನುಯಾಯಿಗಳು ವೇಗದಿಂದ ತಮ್ಮ ಕಾರ್ಯವನ್ನು ಅಶ್ರಮವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ನಮ್ಮ ಜಿಲ್ಲೆಯ ಹಳ್ಳಿಯ ಮನೆಯೊಂದರ ಸ್ವಾಮೀಜಿಯವರೊಬ್ಬರಿಂದ ಒಂದು ಶಿಥಿಲಸುಶಕ್ತ ತೆಗೆದು ಕೊಂಡೂ ಪ್ರಚಾರ ಮಾಡಲಾಗುತ್ತದೆ. ಆ ಸ್ವಾಮಿಗಳು ನೇದಾಂತದ ಕೆಲವು ಗ್ರಂಥಗಳನ್ನು ಅಧ್ಯಯನ ಮಾಡಿದ ಸಾಧುಶೀಲರು. ಪ್ರಪಂಚದ ವಿಶೇಷ ಅನುಭವ ಮಾಡಿಕೊಳ್ಳಲು ಅವರ ಪಾತಿವ್ರತ್ಯವಜನಗಳ ನಡುವೆ ಅವಕಾಶವಿಲ್ಲ. ಅಂಥ ಏನೂ ತಿಳುವಳಿಕೆ ಸಾಲದವರಿಂದ ತಿಥಾರನು ಪತ್ರ ಪಡೆದು ಜನ ವಂಚನೆ ಮಾಡುವುದು ಸುಲಭ. ಆದರೆ ಪ್ರಯೋಜನವೇನು? "ಸರಕಾರದಿಂದ ಆಕ್ರಮಣವೆಂದು ಸಾರಿದ ಒಂದು ಕೆಟ್ಟ ಸಂಸ್ಥೆಯನ್ನು ಗುಣಾವಗುಣಗಳ ವಿಮರ್ಶೆ ಮಾಡದೆ ಮೆಚ್ಚಿದ್ದು ರಾಜದ್ರೋಹ" ಎಂದು ಇನ್ನೊಬ್ಬ ಹೋಗಿ ಹೇಳಿದರೆ ಆ ಸ್ವಾಮಿಗಳು ಇದರ ವಿರುದ್ಧ ಹೇಳಿಕೆ ಕೊಡುವುದು ಅಸಂಭವನೇನಲ್ಲ! ಹೀಗೆ ಹೆಬೆದಿಂದ-ನಾಮ ಮಾರ್ಗದಿಂದ-ವಿಷ ಪ್ರಚಾರದಿಂದ ಬಲಸಂವರ್ಧನೆಗೆ ಆರಂಭವಾಗಿದೆ.

ಇದು ಕೊನೆಗೊಳ್ಳಲಿ

ದೇಶದ್ರೋಹಿಗಳ ಹುಟ್ಟಿಗೆ ಕಾರಣವಾಗಬಹುದಾದ-ಆರಾಜಕೀಯ ಅರಾಷ್ಟ್ರೀಯ ವರಿಸ್ಥಿತಿಗೆ ಪ್ರೋತ್ಸಾಹಕವಾಗಬಹುದಾದ ಇಂಥ ಪ್ರತಿಗಾಮಿ ತಂಡವನ್ನು ಬೆಳೆಯಗೊಡುವುದು ಪ್ರವರ್ಧಮಾನ ರಾಷ್ಟ್ರಕ್ಕೆ ಬಹಳ ಅಪಾಯಕಾರಿಯಾಗಿದೆ. ಯಾವ ಒಳ್ಳೆಯದನ್ನೂ ಮಾಡಲಾರದ-ಯಾವ ಅಪಾಯಕ್ಕೂ ಎದೆಗೊಡುವ ಧೈರ್ಯ ಕಾರಣಗಳಿಲ್ಲದ ಈ ಧರ್ಮಾಂಧಭೀರುಗಳ ಪಾತಕದಿಂದ ದೇಶ ಇದುವರೆಗೆ ಕಷ್ಟಪಟ್ಟದ್ದೆ ಸಾಕು. ಕೇವಲ ಸಾಂಸ್ಕೃತಿಕ ಚಟುವಟಿಕೆಗೆ ಎಂದು ಇವರನ್ನು ಬೆಳೆಯಗೊಡುವುದಾದರೆ ಮಹಮ್ಮದೀಯ ಬಂಧುಗಳ—ಕ್ರೈಸ್ತಿಯನ್ ಸೋದರರ—ಇಂಥದೇ 'ಗಾರ್ಡ್ಸ್' ಗಳ ಬೆಳವಣಿಗೆಗೂ ಅವಕಾಶ ಕೊಡಬೇಕಾದೀತು. ಮತ್ತು ಈ ಮೂರೂ 'ರಾಷ್ಟ್ರೀಯ ಸ್ವಯಂಸೇವಕ ಸಂಘ'ದ ಕುಸ್ತಿಯಿಂದ ದೇಶವನ್ನೂ ಜನತಾಂಗವನ್ನೂ ರಸಾತಲಕ್ಕೆ ತಳ್ಳಬೇಕಾದೀತು. ಈ ಅನಿಷ್ಟ ಸಂಭವವನ್ನು ಯಾವ ವಿವೇಕಯಾದರೂ ಸಹಿಸಿಯಾನೆ? ಯಾವ ರಾಷ್ಟ್ರ ಪ್ರೇಮಿಯಾದರೂ ಸಹಿಸಿಯಾನೆ ? ಸಹಿಸಲಾರ ನಾದರೆ ಈ ದುಸ್ಸಹ ಶಕ್ತಿಯ ದವಡೆಯಿಂದ ಈ ಅನಂತಕ ಅಸಹಸ್ಯಾದಿಂದ ಜನತೆಯನ್ನೂ ದೇಶವನ್ನೂ ನಮ್ಮ ಧರ್ಮ ಸಂಸ್ಕೃತಿಗಳನ್ನೂ ಉಳಿಸಬೇಕಾಗಿದೆ. ಎಂತಲೆ ಪ್ರತಿಯೊಬ್ಬ ಧಾರಾಳಿಯನು ಈ ಪ್ರತಿಗಾಮೀ ಧರ್ಮಾಂಧ ಸಂಸ್ಥೆಯನ್ನು ಸರ್ವಾತ್ಮನಾ ಬೆಳೆಯಗೊಡದಂತೆ ಯತ್ನಿಸಬೇಕು. ಇದರ ಮೇಲಿನ ನಿರ್ಬಂಧವನ್ನು ಇನ್ನಷ್ಟು ಬಿಗಿಗೊಳಿಸಿ-ಈ ಸಂಸ್ಥೆಯ ಅನುಯಾಯಿಗಳೆನಿಸುವವರು ನಡೆಸುತ್ತಿರುವ ಅಕ್ರಮ ಚಟುವಟಿಕೆಗಳನ್ನೇ ನಿಲ್ಲಿಸುವಂತೆ ಸರಕಾರವನ್ನು ಒತ್ತಾಯಿಸಬೇಕು. ಇದು ಎಲ್ಲ ಪ್ರಗತಿಗಾಮಿಗಳ ಆಸೆಯೂ ಆಗಿದೆ. ಈ ರಾಷ್ಟ್ರಘಾತಕ ಸಂಸ್ಥೆಯ ಅಳಿವು ಬೇಗ ಆಗಲಿ !

"ಶೂಲಪಾಣಿ"

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ್** ರೋಗ ಗೃಹಸ್ತ ಪೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೇಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರವೀಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ವೋಸ್ಟ ಚಾರ್ಜು ೧೫ ಆಣೆ.

ಪೂರಾಯರು:—ಹಾಲಪ್ಪಾ ಭಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಳಿ ಫಾರ್ಮಸಿ,—ಹುಬ್ಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ—

ಜಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಸ್ವರ ಮೂರ್ತಿ ಡಾವಣಗೇರಿ

ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕವಲಭಾನ, ಕೆಮಿಸ್ಟ, ಡಾವಣಗೇರಿ ಬ್ರಾಂಡಿಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹೆಳೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಜು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಳಾಲು ಕೂಲಿ, ಅರ್ಧಾಂಗ ವಾಯು ನಡುನೋಯು:ವದು ಸ್ತ್ರೀಯರ ಬಿಳಿಕಂಪು ಸೆರೆಗು ಹೋಗುತ್ತಿದ್ದರೆ, ತೊಲಿಕಾಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಸ್ವರ್ಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ೪ ದಿವಸದ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪತ್ಯ: ಹೆಸರುಬಾರ, ಕೊಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಕರೂ. ಪೋಸ್ಟ ಚಾರ್ಜ ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:—ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಸ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲಾ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಯರಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ

ಹೆರಿಗೆ ಆಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಆನಂತರ ಸ್ತ್ರೀಯರಿಗೆ ಅಸ್ವಸ್ಥವಾಗಿ ನಾನಾ ವಿಕಾರಗಳುಂಟಾಗುತ್ತವೆ. ಕಸಬೀಳದೆ ಯಾ ಆದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸ್ಥಾನ, ಮೂರ್ಛೆರೋಧ, ಸ್ವಸನಗಳ ಜೀರ್ಣ, ನಿದ್ರಾನಾಶ, ವಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೇರಡು ಯಾ ಹಲವು ವಿಕಾರಗಳು ಕಲಹೋರುತ್ತವೆ ವೈದ್ಯ, ಡಾಕ್ಟರ, ಸರ್ಜನರ ವರೆಗೆ ಕರೆಸಿ ನೂರಾರು ರೂಪ್ಯಾ ಖರ್ಚುಮಾಡಬೇಕಾಗುತ್ತದೆ. ಆ ಮೇಲೂ ಜೀವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಸ್ಪರ್ಧಿದ್ವಾದ '**ಪ್ರಸೂತಾಮೃತ**'ದ ೧ ಬಾಟ್ಲಿ ಮತ್ತು ೧ ಡಜನು '**ಪ್ರಸೂತ ಕಲ್ಯಾಣ ವಟಿ**' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯ ಆಪತ್ತು—ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕಮನೀಯ ಕೇಶಕಲಾಪ, ತಂಪು ಮೆದುಳು, ಶುಭ್ರ ನೇತ್ರಗಳನ್ನು ಹೊಂದಲು ಬಹು ಗುಣಯುಕ್ತ **ಆವುಲಕೀ ತೈಲ** ಯಾ **ಹೆನ್ನಾಸಾಗರ** ತೈಲಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya.

ಬೆಳೆ ಹೆಚ್ಚಬೆ ಬೆಲೆ ತಗ್ಗದು.

ಮದ್ರಾಸು ಸರ್ಕಾರದ ಮಾನ್ಯ ಆಹಾರ ಮಂತ್ರಿಗಳಿಗೆ ಕುಂದಾಪುರ ತಾಲೂಕು ಕೊಲ್ಲೂರು ಗ್ರಾಮಸ್ಥರು ಬರಕೊಂಡ ಮನವಿಯ ಸಾರಾಂಶ.

'ಆಹಾರ ನಿಯಂತ್ರಣ ಪುನರ್ರಚನೆಯು ಸಾಗುವಳ್ಳಿದಾರರಲ್ಲಿ ಖೇದವನ್ನುಂಟುಮಾಡಿಯದೆ' ಎಂಬುದನ್ನು ತಾವು ಪರಿಶೀಲಿಸಿರುವುದೇ ನಮ್ಮ ಭಾಗ್ಯ.

ಅರ್ಥ ಶಾಸ್ತ್ರಜ್ಞರ ತರ್ಕ ಕುತರ್ಕಗಳೆಸ್ಟಿದ್ದರೂ, ನನ್ನ ದೇಶದ ಆರ್ಥಿಕ ದುಸ್ಥಿತಿಯ ಮೂಲವನ್ನು ಅರಿತು, ತಕ್ಕುದಾದ ಪರಿಹಾರವನ್ನುಹೇಳಬಲ್ಲವರು ಗಾಂಧೀಜೀ ಒಬ್ಬರೇ. ನಿಯಂತ್ರಣಗಳು ಹೋಗಲೇ ಬೇಕೆಂಬ ಅವರ ಉಪದೇಶವು ಶಾಸ್ತ್ರೀಯವೂ, ಸರ್ವಸಮ್ಮತವೂ, ಪೂರ್ಣ ಫಲಕಾರಿಯೂ ಆಗಿತ್ತು.

ಆದರೆ ಪೂಜ್ಯ ಬಾಪೂಜಿಯವರ ಆಗಲಿಕೆಯ ನಂತರ, ಮೂಕಪ್ರಾಣಿಗಳಂತಿರುವ, ಹಿಂದುಸ್ಥಾನದ ಪಿಲ್ಲಾಂತರ ಹಳ್ಳಿಗಳ ಸಾವು ನೋವುಗಳನ್ನು ಮುಂದೊತ್ತಿ ಸಾರಬಲ್ಲ ಇನ್ನೊಬ್ಬ ವ್ಯಕ್ತಿಯನ್ನು ನಾವು ಇನ್ನೂ ಹುಡುಕಬೇಕಾಗಿದೆ. ಹಳ್ಳಿಗರು ದಿಕ್ಕು ದೇಶಗಳಲ್ಲೆಲ್ಲಾ ಚೆದರಿರುವ ಕಾರಣ ಪಟ್ಟಣವಾಸಿಗಳಂತೆ ಒಗ್ಗಟ್ಟಾಗಿ ತಮ್ಮ ಕೊರತೆಗಳನ್ನು ಪ್ರತ್ಯಕ್ಷ ಪ್ರದರ್ಶಿಸಲು ಅಸಮರ್ಥರಾಗಿರುತ್ತಾರೆ. ಪ್ರಾಯಶಃ ನೌಕರಶಾಹಿ ಪಟ್ಟಣಿಗರ ಸಂಘಟಿತ ಪ್ರದರ್ಶನ ಶಕ್ತಿಯ ಪರಿಣಾಮವಾಗಿಯೇ, ಕೇಂದ್ರ ಸರ್ಕಾರವು, ಗಾಂಧೀಜೀಯ ಸಲಹೆ ಕೇಳಿಗೆ ಮುಂದಿಟ್ಟ ಹೆಜ್ಜೆಯನ್ನು, ಹಿಂತೆಗೆದಂತೆ ಕಾಣುವುದು.

ಪಂಕ್ತಿಪ್ರಾರ್ಥವಾಗಿ 9 ತಿಂಗಳುಗಳತನಕ ನಿಯಂತ್ರಣಗಳನ್ನು ರದ್ದುಪಡಿಸಿರುವುದಾದರೂ ಆಹಾರದ ಬೆಲೆಯು ತಗ್ಗಲಿಲ್ಲ ಎಂಬುದೇ ನಿಯಂತ್ರಣ ಪುನರ್ರಚನೆಗೆ ಕಾರಣವೆಂದು ನಮಗೆ ಕೇಳಿಬರುತ್ತಿದೆ. ಆದರೆ ನಮ್ಮ ಜಿಲ್ಲೆಯಲ್ಲಿ 1947ನೆ ಇಸ್ವಿಯ ಬೆಳೆಯನ್ನು ಪೂರ್ಣ ರಿಕ್ವಿಸಿಶನ್ ಮಾಡಿದ ಬಳಿಕ, ನಿಯಂತ್ರಣವನ್ನು ಹೇಗೆಮುಹಾಕಿ, 1948ನೆ ಇಸ್ವಿಯ ಬೆಳೆಯು ವಿಕ್ರಯಕ್ಕೆ ಬರುವ ಮೊದಲೆ, ನಿಯಂತ್ರಣವನ್ನು ಪುನಃ ಜಾರಿಗೆ ತಂದರೆ, ಬೆಲೆ ತಗ್ಗಲು ಕಾರಣವೇ ಇರಲಾರದು.

ಸರ್ವತ್ರ ನಿಯಂತ್ರಣಗಳನ್ನು ರದ್ದುಗೊಳಿಸಬೇಕೆಂದು ವಾದಿಸುವ ಉದ್ದೇಶ ನಮಗಿಲ್ಲ. ಆದರೂ, ಬೆಳೆಯ ಹೆಚ್ಚಿದೇನೆ ಬೆಲೆಯು ಕಡಿಮೆಯಾಗಬಲ್ಲುದು. ಎಂದು ಮಾತ್ರ ನಾವಿಲ್ಲಿ ನಿವೇದಿಸಬೇಕಾಗಿದೆ. ಕೊಲ್ಲೂರು ಒಂದು ಗ್ರಾಮವಷ್ಟೆ ಕುರಿತು ಮಾತ್ರ ಹೇಳುವುದಾದರೆ, 1947ನೆ ಇಸ್ವಿಯ ಅಂತ್ಯದಲ್ಲಿ, ನಿಯಂತ್ರಣಗಳನ್ನು ರದ್ದುಪಡಿಸಿದುದಿಂದ ಬಂಜರು ಇದ್ದ ಭೂಮಿಗಳ ಪೈಕಿ ಸುಮಾರು 10 ಎಕ್ರೆ ಗದ್ದೆಗಳು ಪೆಚ್ಚಗೆ ಸಾಗುವಳಿ ಮಾಡಲ್ಪಟ್ಟಿವೆ. ಅಲ್ಲದೆ 10 ಎಕ್ರೆ ಮಟ್ಟಿಗೆ ಸುಗ್ಗಿ ಸಾಗುವಳ್ಳಿಮಾಡುವ ವಿಪರ್ಷದಿ ಕೂಡಾ ಮಾಡಲಾಗಿತ್ತು ಆದರೇನು! ಕಂಟ್ರೋಲ್ ಧೃನಿ ಕೇಳಿಬೊಡನೆ, ಸಂಬಂಧಪಟ್ಟ ಬಿಳ್ಳ ಪುಟ್ಟ ಅಧಿಕಾರರ ಸಂಚಾರ ಗೋಚರವಾದೊಡನೆ, ಸಾಗುವಳ್ಳಿ ಮಾಡಲು ಒಪ್ಪಿದ ಪಕ್ಷಗಳು ತಟಸ್ಥರಾಗಿರುವುದಲ್ಲದೆ, ಭತ್ತ ಕ್ಕೆ ಹೋಗುವ ಯೋಜನೆಯನ್ನು ಗಟ್ಟಿಮಾಡಿರುವರು.

ಈ ಗ್ರಾಮದ ಸಾಗುವಳ್ಳಿ ಪರಿಸ್ಥಿತಿಯನ್ನು ತಿಳಿಯುವರೆ ಕೆಳಗಿನ ಅಂಕೆ ಸಂಖ್ಯೆಗಳು ಪ್ರಯೋಜನವಾಗಬಹುದು:—

ಇಸ್ವಿ	ಜನಸಂಖ್ಯೆ ಗ್ರಾಮದ ಪ್ರಸ್ತುತ	ರಿಜಿಸ್ಟರ್ಡ್ ಕಾರ್ಡು ಪಡೆದವರ	ನಂಜ	ಬಾಗಾಯ್ತು	ಪೆಂಜ	ಅನಾಧಿಕ	ಸಾಗುವಳ್ಳಿ ಪ್ರಸ್ತುತ	ಬಂಜರು ಪಟ್ಟಾಕ್ಕೆ	ಬಂಜರು ಸರ್ಕಾರಕ್ಕೆ ರಾಜಿನಾಮೆ
1938	21200	22700	460	40	150	850	160	100	200
1947	,,	,,	,,	,,	,,	,,	60	200	200
1948	,,	,,	,,	,,	,,	,,	70	190	200

ಮೇಲಿನ ಸಂಖ್ಯೆಗಳ ಪ್ರಕಾರ ಸುಮಾರು 300ರಿಂದ 400 ಎಕ್ರೆಗಳ ವರೆಗಿನ ನಂಜರು ಭೂಮಿಯು ಬಂಜರು ಇರುವುದೆಂದು ಕಾಣಬಹುದು. ಮಲೇರಿಯಾ ಜ್ವರ ಮತ್ತು ಕಾಡುಪ್ರಾಣಿಗಳ ಹಾವಳಿಯನ್ನು ಸಹಿಸಿಕೊಂಡು ಸಾಗುವಳ್ಳಿ ಮಾಡುವವರಿಗೆ, ಸಿಕ್ಕುವ ಉತ್ಪತ್ತಿಯು ಅತಿ ಅಲ್ಪವಾಗಿದುವುದರಿಂದ ಲೇ ಭೂಮಿಯು ಬಂಜರು ಬೀಳಲು ಕಾರಣವಾಗಿದೆ. ಆದ್ದರಿಂದ ಈ ಊರ ಜನಸಂಖ್ಯೆಯು ಕಳದ 10 ವರ್ಷಗಳಿಂದ ೧೦ರಿಂದ 300ಕ್ಕೆ ಇರಿದಿದೆ. ಈಗಲೂ ಇಲ್ಲಿ ಒಂದೂ ಒನರೂ ಲಂಭದಾಯಕ ವೃತ್ತಿಗಳಿಗಾಗಿ ಪೇಟೆಗಳಿಗೆ ಸಾಗುತ್ತಿದ್ದಾರೆ.

ಸ್ವಾಭಾವಿಕವಾಗಿ ಸಾಗುವಳ್ಳಿಗೆ ಸಾಕಷ್ಟು ಉತ್ತೇಜನವಿಲ್ಲದ ಈ ಪ್ರದೇಶಗಳಲ್ಲಿ ಆಹಾರ ರಿಕ್ವಿಸಿಶನ್ ಪದ್ಧತಿಯನ್ನು ಜಾರಿಗೆ ತಂದರೆ, ಹೆಚ್ಚು ಆಹಾರ ಬೆಳೆಯಬೇಕೆಂಬ ಉದ್ದೇಶವು ನಿಷ್ಫಲವಾಗುವುದೆಂಬುದು ಯಾವ ಅವಿಶಾಸಿಗೂ ಮುಂದಬ್ಬಾಗದಿಂದು.

ಆದ್ದರಿಂದ ಕೊಲ್ಲೂರು ಗ್ರಾಮ ಮತ್ತು ಅದೇ ಸ್ಥಿತಿಗತಿಯಲ್ಲಿರುವ ಈ ಜಿಲ್ಲೆಯ ಬೇರೆ ಗ್ರಾಮಗಳನ್ನು ನಿಯಂತ್ರಣ ಕ್ರಮ, ಯಾ ರಿಕ್ವಿಸಿಶನ್ ಕ್ರಮಗಳಿಂದ ವಿನಾಯಿತಿ ಪಡಿಸಬೇಕಾಗಿ ಆಗ್ರಹಪೂರ್ವಕ ಬೇಡಿಕೊಳ್ಳುತ್ತೇವೆ. ಆ ಪ್ರಕಾರ ಗುಡ್ಡಗಾಡು ಪ್ರಾಂತಗಳ ಹಳ್ಳಿಗಳನ್ನು ವಿನಾಯಿತಿಪಡಿಸಿದಲ್ಲಿ ಆ ಪ್ರಾಂತದ ಜನರು ಉತ್ಸಾಹದಿಂದ ಹೆಚ್ಚು ಬೆಳೆಯುವಂತಾಗುವುದಲ್ಲದೆ, ಒಡನೆನ್ನಿಸಿಕೊಳ್ಳುವ ಸಾವಿರಾರು ಸೇರಿ ಕೂಲಿ ಜನರು ಕೂಡಾ ಹಳ್ಳಿಗೆ ಮರಳಿಬಂದು ಹಾಸ್ತಿ ಬೆಳೆ ಬೆಳೆಯುವಂತಾಗುವುದು.

ನಮ್ಮ ಸರ್ಕಾರವು ಕಂಟ್ರೋಲ್ ಕ್ರಮವನೇ ಸ್ತುತ್ಯವಾದ್ದೆಂಬ ವಿಶ್ವಾಸವುಳ್ಳದ್ದಾಗಿರುವುದಾದರೆ, ಅದೇ ಕಂಟ್ರೋಲ್ ತತ್ವವನ್ನು ವೃತ್ತಿಕಾರರಿಗೂ ಅನ್ವಯಿಸುವಂತೆ ವೃದ್ಧಿಸಿ, ಅವಶ್ಯಕತೆಯಂದಲ್ಲಿ ಕೂಲಿಯಾಳುಗಳನ್ನು ಖಡ್ಡಾಯವಾಗಿ ಸಾಗುವಳ್ಳಿಗೆ ಹಚ್ಚಿ, ಬಂಜರು ಬಿದ್ದಿರುವ ಹಲವು ಸಹಸ್ರ ಎಕ್ರೆ ಭೂಮಿಯನ್ನು ಸೈವಸಾಯ ಪಡಿಸಬೇಕು.

ಸುಲಭದಲ್ಲಿ ಇಂಗ್ಲಿಷ್

ಇಂಗ್ಲಿಷ್ ಸ್ವಯಂಬೋಧಿನಿ.

ಬೆಲೆ ರೂ. 1 8 0

ಪುಸ್ತಕ ವ್ಯಾಪಾರಿಗಳಲ್ಲಿ ಸಿಗುತ್ತದೆ

ಮಂಗಳೂರು ಸ. ಕ.

ಉಗಿಬಂಡಿ ಸಮಯ: ಈ ತಿಂಗಳ ೬ರಿಂದ ತಾರೀಕಿನಿಂದ ಮಂಗಳೂರಿನಿಂದ ಹೊರಡುವ ಮತ್ತು ಮಂಗಳೂರನ್ನು ಸೇರುವ ಬಂಡಿಗಳ ಸಮಯದಲ್ಲಿ ಕೆಲವು ಬದಲಾವಣೆಗಳಾಗಿವೆ. ಬೆಳಗ್ಗಿನ ಎಕ್ಸ್‌ಪ್ರೆಸ್ [ಮೈಲ್] ಬಂಡಿಯು ಮಂಗಳೂರಿನಿಂದ 7-10 ಗಂಟೆಗೆ ಹೊರಡುವುದು; 7 ಗಂಟೆಗೆ ಮಂಗಳೂರನ್ನು ಸೇರುವುದು. ಮಂಗಳೂರು-ಪಸ್ಸಾನೂರು ಪ್ಯಾಸೆಂಜರ್ ಬಂಡಿಯು ಬೆಳಗ್ಗೆ 8-55ಕ್ಕೆ ಮಂಗಳೂರನ್ನು ಸೇರಿ ಸಂಜೆ 5-58ಕ್ಕೆ ಇಲ್ಲಿಂದ ಹೊರಡುವುದು.

ಜೋಲಾರಪೇಟೆ-ಮಂಗಳೂರು ಪ್ಯಾಸೆಂಜರ್ ಬಂಡಿಯು ಬೆಳಿಗ್ಗೆ 9.40ಕ್ಕೆ ಮಂಗಳೂರಿನಿಂದ ಹೊರಟು 4.40ಕ್ಕೆ ಮಂಗಳೂರನ್ನು ಸೇರುವುದು. ಕಲ್ಲಿಕೋಟೆ ಮಂಗಳೂರು ಪ್ಯಾಸೆಂಜರ್ ಬಂಡಿಯು ಮಧ್ಯಾಹ್ನ 1.45ಕ್ಕೆ ಮಂಗಳೂರನ್ನು ಸೇರಿ 2.40ಕ್ಕೆ ಮಂಗಳೂರಿನಿಂದ ಹೊರಡುವುದು.

ಟಿಸೆಂಟ್ ಬಾಲಿಕಾ ಪಾಠಶಾಲೆಯ ಹಳೆ ವಿದ್ಯಾರ್ಥಿ ಸಂಘ, ವಸಂತ ಪ್ರೇಮಿ ಮಂಡಳಿಯ ವಾರ್ಷಿಕ ಮಹಾಸಭೆಯು ಕಳೆದ ತಾ. 31ರಲ್ಲು ಜರಗಿತು. ಸರದಾರ ವಲ್ಲಭಭಾಯಿ ಪಟೇಲರ ಹುಟ್ಟುಹಬ್ಬದ ಸಲುವಾಗಿ ಅವರನ್ನು ಅಭಿವಂದಿಸಿ ಅವರಿಗೆ ಆಯುರಾರೋಗ್ಯವನ್ನು ಭಗವಂತನು ಅನುಗ್ರಹಿಸಲೆಂದು ಪ್ರಾರ್ಥಿಸುವ ಸಂಘದ ಸದಸ್ಯೆ ಶ್ರೀ ಆಮ್ಮೆಂಬಳ ಶ್ರೀನಿವಾಸ ಪೈ ಮತ್ತು ಸದಸ್ಯೆ ಶ್ರೀಮತಿ ವಿಶಾಲಾಕ್ಷಿಯವರ ಸಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯಗಳಾಯಿತು.

ದ. ಕ. ಒಟೊಮೊಬೈಲ್ ಕೆಲಸ ಗಾರರ ಯೂನಿಯನ್ನಿನ ನಿಕಾರ್ಯಕಾರೀ ಸಮಿತಿಯು ಕಳೆದ ತಾ. 31ರಲ್ಲು ಜರಗಿತು. ಸರಕಾರದ ಎನಾರ್ಡನ್ನು ಕಂಧಾನ ಮೂಲಕ ಪಡೆಯಿಸಿ ಕೊಳ್ಳುವರೆ ಶ್ರೀಗಳಾದ ಎಸ್. ಎನ್. ಸುವರ್ಣ, ಕೆ. ಕಿಟ್ಟಿ, ಎನ್. ಎಸ್. ಕಿಲ್ಲೆ, ಬಿ. ಎಸ್. ಭಾಸ್ಕರ ರೈ, ಯು. ರಾಮಪ್ಪನವರಿರುವ ಉಪ ಸಮಿತಿಯ ನೇಮಕವಾಯಿತು.

ಅಕ್ಕಿ ಭತ್ತ ಸ್ಟೋರುಗಳಿಗೆ ಒಪ್ಪಿಸುವ ಅವಧಿ

ಭತ್ತ-ಹೊಸದುರ್ಗ ಸಬ್ ತಾಲೂಕು ಮತ್ತು ಜಿಲ್ಲೆಯ ಇತರ ತಾಲೂಕುಗಳಿಗೆ ಭತ್ತ ಒಪ್ಪಿಸುವ ಕೇಂದ್ರಗಳು ಬಂದೇ ಕಂತಿನಿಂದ ತಾ. 15-11-48 ರೊಳಗೆ ಒಪ್ಪಿಸುವುದು

ಅಕ್ಕಿ-ನವಂಬರ 15, ನವಂಬರ 30 ಮತ್ತು ಮತ್ತು 15-12-48ರೊಳಗೆ 3 ಕಂತುಗಳಲ್ಲಿ ಸಲ್ಲಿಸುವುದು.

ಈ ಅವಧಿಯೊಳಗಾಗಿ ಒಪ್ಪಿಸದಿದ್ದರೆ ಭತ್ತ ಮುಡಿಯಲ್ಲಿ ಎಂಟಾಣೆಯಂತೆಯೂ ಅಕ್ಕಿ ಮುಡಿಯ ಕ್ರಯದಲ್ಲಿ ಒಂದು ರೂಪಾಯಿಯಂತೆಯೂ ಕಡಿಮೆ ಕೊಡಲಾಗುವುದು.

ಹಿರಿಯಡ್ಕ ಆರ್ಯಸಮಾಜದಲ್ಲಿ ಮಹರ್ಷಿ ದಯಾನಂದರ ನಿರ್ಯಾಣೋತ್ಸವವು ಕಳೆದ ತಾ 31ರಲ್ಲಿ ಶ್ರೀ K. ನುಬಾಬಲ ಹೆಗ್ಡೇರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀಗಳಾದ M. ಗೋವಿಂದ ಕಿಟ್ಟಿ, B. L. ಸೆಲ್ಲಿ, B. ಮಹಾಬಲ ಶೆಟ್ಟಿ, H. K. ಅನಂತಯ್ಯ ಮೊದಲಾದವರು ದೀಪಾವಳಿಯ ಮಹತ್ವ, ಮಹರ್ಷಿ ದಯಾನಂದರ ವ್ಯಕ್ತಿತ್ವ, ಪ್ರೌಢ ಆರ್ಯಸಮಾಜದ ಪ್ರಗತಿ-ಮೊದಲಾದ ವಿಷಯಗಳ ಕುರಿತು ಕಾಲೋಚಿತ ಭಾಷಣವಿತ್ತರು.

ಚಿತ್ರಬೈಲು ಇಲ್ಲಿಯ ಶ್ರೀ ಬ್ರಹ್ಮಲಿಂಗೇಶ್ವರ ದೇವಸ್ಥಾನದಲ್ಲಿ ಎಂದಿನಂತೆ ಶ್ರೀ ಪಿ. ಅನಂತರಾಯ ಭಟ್ಟ, ಜ್ಯೋತಿಷಿ, ಅವರ ಕೆಟ್ಟುದಲ್ಲಿ ಜರಗುತ್ತಾ ಬಂದಿರುವ ದೀಪೋತ್ಸವವು ಈ ಜನವರಿ ಇದೇ ತಾ 18ಕ್ಕೆ ಜರಗುವುದು.

ಪಾದೆಬೆಟ್ಟು ಸ್ಥಳೀಯ ಗ್ರಾಮೋದ್ಧಾರ ಸಂಘದ ನೇತೃತ್ವದಲ್ಲಿ ಸರದಾರ ವಲ್ಲಭಭಾಯಿಯವರ ಜನ್ಮದಿನಾಚರಣೆಯು ಶ್ರೀ ಶಾರದಾಭವನ ಎಲಿಮೆಂಟರಿ ಶಾಲೆಯಲ್ಲಿ ಕಳೆದ ತಾ 31ರಲ್ಲು ಶ್ರೀ. ಕೆ. ಶ್ರೀನಿವಾಸ ಶೆಣೈಯವರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀ ಕೆ. ಕರಿಯಣ್ಣ ಸೆಟ್ಟರು ಪುಷ್ಪಾರ್ಚನೆ ಮಾಡಿದರು. ಶ್ರೀ ವೈ. ಕೆ ಸೆಟ್ಟಿ, ವಿದ್ವಾನ್ ಅವರ ಭಾಷಣದಾನಂತರ ಅಧ್ಯಕ್ಷರು ಕಾಲೋಚಿತ ಮಾತುಗಳಾಡುವು. ಸಂಘದ ಅಧ್ಯಕ್ಷ ಶ್ರೀ ನಡಿಗುತ್ತು ನಾರಾಯಣ ಸೆಟ್ಟರ ಧನ್ಯವಾದಾರ್ಪಣೆಯಾದೊಡನೆ ರಾಷ್ಟ್ರಗೀತೆ ಹಾಡಲಾಯಿತು.

ವಿಜಯಪುರದಲ್ಲಿ ಧನ್ವಂತರೀ ಮಹೋತ್ಸವವು ದೀಪಾವಳಿ ಹಬ್ಬದ ವೇಳೆ ಶ್ರೀ ಸ್ವಾಮಿರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ಜರಗಿತು. ಅತಿಥಿಗಳಾಗಿ ಆಗಮಿಸಿದ್ದ ವೈದ್ಯಗುರು ಎಸ್. ಕರ್ ಭಟ್ಟರು ಆಯುರ್ವೇದ ವೈದ್ಯದ ಮಹತ್ವದ ಕುರಿತು ಉಪಾಪರಚೆಯಿತ್ತು ಯುಕ್ತಿಯುಕ್ತವಾಗಿ ಮಾತನಾಡಿದರು. ಅಧ್ಯಕ್ಷರು ತನ್ನ ಉಪಸಂಹಾರ ಭಾಷಣದಲ್ಲಿ ಅಯುರ್ವೇದದ ಅದ್ಭುತ ವೈಶಿಷ್ಟ್ಯವನ್ನು ವಿವರಿಸಿ ಅದರ ಸ್ಥಿರತೆಗಾಗಿ ಸರ್ವರೂ ದುಡಿಯಬೇಕೆಂದರು. ಬಳಿಕ ವೈದ್ಯ ಕುಲಶೇಖರಯ್ಯನವರು ನೆರೆದವರೆಲ್ಲರಿಗೂ ಧನ್ಯವಾದಗಳನ್ನರ್ಪಿಸಿದರು.

ಪಂಡಿತ ತಾರಾನಾಥರ

ವಿಕ್ರಮ

ಸ್ಟ್ರೇಬಲ

ಬಾಲಬಲ

ಔಷಧಗಳು ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ. ನ.ಕ

ನೋಟೀಸು

ನವಯುಗದ ತಾರೀಕು 21-10-1948ರ ಸಂಚಿಕೆಯಲ್ಲಿ ಕಾರ್ಕಳ ತಾಲ್ಲ್ಯ ಕಡ್ತಲ ಗ್ರಾಮದ್ದೇ ಸಾಲ್ಯವಡಿಯಂಬಲ್ಲಿರುವ ಕುಂಞಿ ಶೆಟ್ಟಿ ಆಳಿಯ ನಾಗಪ್ಪ ಶೆಟ್ಟಿ ಹೆಸ್ರಲ್ಲಿ ಪ್ರಕಟಿಸಲಾದ ಜಾಹೀರು ನೋಟೀಸಿಗೆ ಉತ್ತರವಾಗಿ ಕಾರ್ಕಳ ತಾಲ್ಲ್ಯ ಬೆಳ್ಳಾರೆ ಗ್ರಾಮದ ಸುಬ್ಬಯ್ಯಡ ಎಂಬಲ್ಲಿರುವ ಹೊನ್ನಯ್ಯ ಶೆಟ್ಟಿ ಆಳಿಯ ವ ಸದ್ರಿ ನಾಗಪ್ಪ ಶೆಟ್ಟಿ ಮಗ ನಾಜ ಶೆಟ್ಟಿ ಆದ ನಾನು ಈ ಮೂಲಕ ತಿಳಿಯುವಸೇನಂದ್ರೆ,

ಸದ್ರಿ ನೋಟೀಸಿನಲ್ಲಿ ಕಾಣಿಸಿದಂತೆ ಸದ್ರಿ ನಾಗಪ್ಪ ಶೆಟ್ಟಿ ಬಾಬ್ತು ಆಧ್ರಲ್ಲಿ ಕಾಣ್ಸೆದ ಸ್ಥಿರ ವಿಕಾರ್ಡುಗಳನ್ನಾಗಲೀ ಅಥವಾ ಬೇ ಯಾವ ವಿಕಾರ್ಡುಗಳನ್ನಾಗಲೀ ನಾನು ಸ್ವಾಗತಮಾಡಿಕೊಂಡಿದ್ದಿಲ್ಲ. ಮತ್ತು ಆ ವಿಕಾರ್ಡುಗಳ ಪ್ರಕಾರ ಬಹಾ ಆ್ಯಜೇಜನ್ನು ನಾನು ಪಡೆಲುಮಾಡಲಿಕ್ಕೆ ಪ್ರಯತ್ನಮಾಡಿದ್ದಿಲ್ಲ. ಸದ್ರಿ ಆಧ್ರಲ್ಲಿ ಕಾಣ್ಸಿದ ಯಾವ ಮೋಸದ ಕೃತ್ಯಗಳನ್ನು ನಡಸಿದ್ದಿಲ್ಲ. ಸದ್ರಿ ನೋಟೀಸು ಆಲದ್ದೆದ್ದು. ಮತ್ತು ಹೆಚ್ಚಿನ ಕಾಣಿಕೆ ಯಲ್ಲಿರುವ ನನ್ನ ತಂದೆ ಸದ್ರಿ ನಾಗಪ್ಪ ಶೆಟ್ಟಿ ಸರಲ್ಲಿ ಅವರ ಆಳಿಯ ಕಾಳಪ್ಪ ಶೆಟ್ಟಿ ಕಿಶ್ಟಿಲ ಹೆಬ್ಬಾಗಿಲು ಬೆಮರ್ಯ ಶೆಟ್ಟಿ ದುರ್ಗಾಧನೆಯಿಂದ ನನ್ನ ತಂದೆಯವರ ಅವನ ಕಾಲದಲ್ಲಿ ನಾನು ಅವರನ್ನು ನೋಡಂತೆ ಮತ್ತು ಅವರಿಂದ ನಾನು ಯೇನಾ ಸಾಯುಹೊಂದುವರೆಗೆ ಸಂದರ್ಭಸಿಕ್ಕಿದಂತೆ ಸದ್ರಿ ನಾಗಪ್ಪ ಶೆಟ್ಟಿ ಸೊತ್ತುಗಳು ಅವರ ಜೀವಿತಕ್ಕಲ್ಲ ಅವರ ಕುಟುಂಬಾರ್ಥದ್ದು ಎಂಬ ವ್ಯವಸ್ಥಾಧನೆಗೆ ಅನುಕೂಲವಾಗುವಂತೆ ಸ್ವಂತ ದುರುದ್ದೇಶಗಳಿಂದ ಪ್ರಕಟಿಸಿದ್ದಾಗಿ ಬೇಕು. ಸದ್ರಿ ನೋಟೀಸು ನನಗೆ ಯಾವ ರೀತಿಯಿಂದಲೂ ಬಾಧಿಸಕ್ಕದ್ದಲ್ಲ.

M Raju Shetty

4-11-1948

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಬ್ರಾಹ್ಮಣ, ಊಟ, ಉಪಜಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.



ಬಾಣಂತಿಯರು ಸಲು ವಾಗಿಯೇ ದೇಶ ಮತ್ತು ಸ್ವಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅವೇಕ್ಷ ವಾವ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾಮೃತ ಎಂಬ ಸೂತಿಕಾ ರಸಾಯನ

ಲಭ್ಯವಿರುವ ಸ್ಥಳಗಳಿಗೆ ಬರೆಯಿರಿ. ಅಂಥಲ್ಲಿ ಕೇವಲ ಕೆಲವು ಪೊಟ್ಟಣಗಳು ಇರುವುದರಿಂದ ಸಂಪೂರ್ಣ ವಿವರಗಳಿಗೆ ಇಲ್ಲಿಗೆ ಬರೆಯಿರಿ

ಎಂ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೮ ಕೊಡಿಯಾಲಬೈಲು, ಮಂಗಳೂರು.

ಸ್ಥಾಪಕರು- ಹಾ| ಬಿ. ಕೆ. ಶಿವರಾಮ ರಾವ್, ಲಾಯರ್, ಉಡುಪಿ.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳ್ಳಜ್ವರ, ಇವುಗಳೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಶ್ರೀಮಾನಂಪರ ಬಾಣಂತಿಯರು ಉಪಯೋಗಿಸತಕ್ಕ ಅತ್ಯೋಪಯುಕ್ತ ಶಕ್ತಿವರ್ಧಕ. ಸ್ತನಸಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಗಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಗಾತುವು ಅಧಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಜ್ವೇವಸಪ್ತಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಕೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತ ವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ.

— ಏಂ. ಣಗಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥವೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ ಇಲ್ಲಿಂದ ಬಾಡಿಕೆ ರೋಗಕ್ಕೆ ತಕ್ಕುವಾದ ಔಷಧ ರವಾನಿಸಲ್ಪಡುವುದು (1) ಉಡುಪಿ ವಿಜಯಲಕ್ಷ್ಮಿ ಬುಕ್ ಡಿಪೊ, ಬೊಂಬಾಯಿ ವಿಜಯಲಕ್ಷ್ಮಿ—ಫ್ರೈಯಲ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎಮರುಗದೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ನೂಮುಂಗಾ.



ಎಲ್ಲ ತರದ ಪಿತ್ತ ರೋಗ ಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಮಂಗಳೂರಲ್ಲಿ ನಮ್ಮ ವಿದ್ಯಾ ಮಂತ್ರಿಗಳು

ಮದ್ರಾಸು ಸರಕಾರದ ವಿದ್ಯಾ ಮಂತ್ರಿಗಳಾದ ಶ್ರೀ ಟಿ. ಎಸ್. ಅವಿನಾಶಲಿಂಗಂ ಚೆಟ್ಟಿಯಾರರು ಇದೇ ತಾ 2ರಲ್ಲು ಸಂಜೆಗೆ ರೈಲುಬಂಡಿಯಲ್ಲಿ ಮಂಗಳೂರಿಗೆ ಆಗಮಿಸಿದರು. ರೈಲ್ವೆಸ್ಟೇಶನ್‌ನಲ್ಲಿ ಜಿಲ್ಲಾ ಕಲೆಕ್ಟರ್ ಶ್ರೀ ಎಸ್. ಆರ್. ಕೈವಾರ್ ಮತ್ತಿತರ ವಿದ್ಯಾಧಿಕಾರಿಗಳೂ, ಇತರರೂ ಅವರನ್ನು ಸ್ವಾಗತೀಕರಿಸಿದರು. ಸ್ಕೌಟುದಳದವರು ಗಾರವ ರಕ್ಷಣೆಯಿತ್ತರು. ರಾತ್ರಿ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿಯೆ ಭೋಜನ ಸಮಾರಂಭದಲ್ಲಿ ಹಾಜರಾದರು.

ಮರುದಿನ ಬೆಳಿಗ್ಗೆ ಉಡುಪಿ ಮುನಿಸಿಪಲ್ ಚೆಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರಿಗೂ ಮಂಗಳೂರು ಮುನಿಸಿಪಲ್ ಬೀಚರ್ಸ್ ಯೂನಿಯನ್ ಅಧ್ಯಕ್ಷ ಶ್ರೀ. ವೆಂಕಟೇಶ ಬಾಳಿಗರಿಗೂ ಕಾಂಗ್ರೆಸ್ ಅಧಿಕಾರಿಗಳಿಗೂ ಮಂತ್ರಿಗಳು ಭೇಟಿ ಲಾಭವನ್ನಿತ್ತರು.

ಬೆಳಿಗ್ಗೆ ಒಂಭತ್ತು ತಾಸಿನ ನಂತರ ಶ್ರೀ ಚೆಟ್ಟಿಯಾರರು ಮಂಗಳೂರಿನ ಥಿಯೋಸಫಿಕಲ್ ಸಮಾಜದವರ ವಿಶುವಿಹಾರವನ್ನು ಸಂದರ್ಶಿಸಿ ಅಲ್ಲಿಯ ಚಟುವಟಿಕೆಗಳನ್ನು ಕಂಡರು. ಬಳಿಕ ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ನಡಾಡಿದರು. ಇದಾದನಂತರ ಜರುಗಿದ ಸಭೆಯಲ್ಲಿ ಮಂತ್ರಿಗಳು ಮಾತನಾಡುತ್ತಾ ಶಿಕ್ಷಣ ಸುಧಾರಣೆಯ ಧ್ಯೇಯಗಳನ್ನು ವಿವರಿಸಿದರು. ಸ್ತ್ರೀಯರು ಭಾವೀ ಜನಾಂಗವನ್ನು ರಕ್ಷಿಸುವ ತಾಯಂದಿರು ಆಗುವಂತೆ ಶಿಕ್ಷಣವೀಯಬೇಕಾಗಿದೆ ಎಂದು ಹೇಳಿ ಅಂತಹ ಸುದಿನಗಳು ಬರುವಾಗ ಎಲ್ಲರೂ ಸಜ್ಜಕರಿಸಬೇಕೆಂದು ವಿನಂತಿಸಿದರು. ತದನಂತರ ಕೆನರಾ ಹೈಸ್ಕೂಲು, ಸರಕಾರಿ ಹೆಣ್ಮಕ್ಕಳ ಶಾಲೆಗಳನ್ನು ಸಂದರ್ಶಿಸಿದರು.

ಸುಧಾರ್ಯ ಮೂರು ತಾಸಿಗೆ ಜರಗಿದ ಅಧ್ಯಾಪಕರ ಸಭೆಯಲ್ಲಿ ಭಾಗವಹಿಸಿ ಶಿಕ್ಷಣದ ಹೊಸ ಸುಧಾರಣೆಯ ಧ್ಯೇಯಗಳನ್ನು ವಿವರಿಸುತ್ತಾ ಹೀಗೆಂದರು. (1) ಶಾಲೆ ಬಿಟ್ಟೊಡನೆ ವಿದ್ಯಾರ್ಥಿಗೆ ಜೀವನ ಸಾಗಿಸುವ ದಾರಿ ಗೊತ್ತಾಗಬೇಕು, ತಕ್ಕ ಕೆಲಸ ಅವನಿಗೆ ದೊರೆಯಬೇಕು. ಅದಕ್ಕಾಗಿಯೇ ಹೈಸ್ಕೂಲಿನಲ್ಲಿ ವಿಭಜನೆಯ ಯೋಜನೆ ತಂದಿರುವುದು. (2) ಸತ್ಪ್ರಜೆಯಾದವನು ತಾನಿರುವ ಸಮಾಜ, ಅದರ ಸಂಸ್ಕೃತಿ, ಪರಂಪರೆ, ಸಮಾಜಕ್ಕೆ ತಾನು ಸಲ್ಲಿಸುವ ಸೇವೆ ಇತ್ಯಾದಿಗಳನ್ನು ತಿಳಿದಿರಬೇಕು; ಅದಕ್ಕಾಗಿಯೇ ಸಾಮಾಜಿಕ ಶಿಕ್ಷಣವನ್ನು ಯೋಜನೆಯಲ್ಲಿ ಸೇರಿಸಿದ್ದಾಗಿದೆ. ಚರಿತ್ರೆ, ಭೂಗೋಳ, ವಿಜ್ಞಾನಗಳನ್ನು, ಸಾಮಾಜಿಕ ದೃಷ್ಟಿಯಿಂದರಿತು, ಮೆಟ್ರಿಕ್ ಸ್ಥಾಪಿಸಲು ವಿದ್ಯಾರ್ಥಿಯಾಗಬೇಕು. (3) ಪ್ರಜೆಯಾದವನು ತನ್ನನಾಗರಿಕ ಹಕ್ಕುಬಾಧ್ಯತೆಗಳನ್ನು ತಿಳಿದಿರಬೇಕು. ಮುಂದಿನ ಪ್ರಜೆ ಪ್ರಾಯಸ್ಥ ಮತದಾನ ಹಕ್ಕುಳ್ಳವನು, ಅವನ್ನು ಅವನು ತಿಳಿಯುವುದಕ್ಕಾಗಿಯೇ ಇಂದಿನ ಈ ಯೋಜನೆಯಲ್ಲಿ ನಾಗರಿಕ ಶಿಕ್ಷಣವನ್ನು ಸೇರಿಸಲಾಗಿದೆ (4) ಇಂದಿನ ವಿದ್ಯಾಭ್ಯಾಸದಿಂದಾಗಿ ನಮ್ಮ ಹೆಣ್ಮಕ್ಕಳೆಲ್ಲಾ ಪುರುಷರಾಗಿದ್ದಾರೆ. ಅವರಿಗೆ ಮನೆವಾರ್ತೆ ವಿಚಾರಗಳು ಗೊತ್ತಿಲ್ಲ; ಅಲನೆಪಾಲನೆಗಳ ಅರಿವಿಲ್ಲ, ಆದುದರಿಂದ ಆದರ್ಶ ಮಾತೆಯರನ್ನಾಗಿ ಮಾಡಲು ಸ್ತ್ರೀ ಶಿಕ್ಷಣದ ಸುಧಾರಣೆಯಾಗಬೇಕಾಗಿದೆ ಎಂದರು.

ಕಾಲೇಜುಗಳ ಸಂದರ್ಶನ ನಂತರ ಮಂತ್ರಿಗಳು ಎಲೋಸಿಯಸ್ ಕಾಲೇಜಿನ ವಿದ್ಯಾರ್ಥಿಗಳ ಸಭೆಯಲ್ಲಿ ಅವರು ತಮ್ಮನೆಲೆಯನ್ನು ಯಾವ ರೀತಿಯಲ್ಲಿತ್ತಿದ್ದಬೇಕೆಂದು ತಿಳಿಸಿದರು. ಬಳಿಕ ಗವರ್ನಮೆಂಟ್ ಕಾಲೇಜಿಗೆ ಭೇಟಿಯಿತ್ತು ಅಲ್ಲಿಂದ ಸೈಂಟ್ ಆಗ್ನೆಸ್ ಕಾಲೇಜಿನ ವಧೂವಂತಿ ಸಮಾರಂಭದ ಅಗ್ರ ಪೀಠವನ್ನಲಂಕರಿಸಿ ಪಾರಿತೋಷಿಕ ವಿತರಣೆ ಮಾಡಿದರು. ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರು ವಿಶೇಷತಃ ಕ್ರೈಸ್ತಮಾದ್ರಿಗಳು ಸಲ್ಲಿಸುವ ಸೇವೆಯನ್ನು ಕೊಂಡಾಡಿ ಭಾವೀ ಶಿಕ್ಷಣ ಸುಧಾರಣಾಯೋಜನೆಯ ಕುರಿತು ಸಹ ಮಾತನಾಡಿದರು. ರಾತ್ರಿ ಬೆಸೆಂಟ್ ಬಾಲಿಕಾ ಪಾಠಶಾಲೆಯಲ್ಲಿ ಶಂಕುಸ್ಥಾಪನೆಯ ಸಲುವಾಗಿ ಏರ್ಪಡಿಸಲಾಗಿದ್ದ ಬಿತಣದಲ್ಲಿ ಸಹಭಾಗಿಗಳಾದರು.

ಮೂಡಬಿದ್ರೆ—ಉಜಿರೆ. ಶಿಕ್ಷಣ ಮಂತ್ರಿಗಳು ತಾ 4ರಲ್ಲು ಬೆಳಿಗ್ಗೆ ಮೂಡಬಿದ್ರೆಗೆ ಹೋಗಿ ಅಲ್ಲಿಯ ಮೂಲ ತರಬೇತಿ ಶಾಲೆಯನ್ನು ಸಂದರ್ಶಿಸಿ ಅಲ್ಲಿಂದ ಉಜ್ರೆಗೆ ಹೋಗಿ ಕರ್ನಾಟಕ ವಿದ್ಯಾಲಯ ಹೈಸ್ಕೂಲಿನ ಹೊಸ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡಿದರು. ಹೈಸ್ಕೂಲಲ್ಲಿ ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರ ತೈಲಚಿತ್ರ ಅನಾವರಣವನ್ನು ಮಾನ್ಯ ಮಂತ್ರಿಗಳು ನೆರವೇರಿಸಿ ಸಂಜೆ ಬಂಟ್ವಾಳಕ್ಕಾಗಿ ಮಂಗಳೂರಿಗೆ ಬಂದರು.

ಸಾರ್ವಜನಿಕ ಸಭೆ ಕೇಂದ್ರಮೈದಾನದಲ್ಲಿ ಜರಗಿದ ಸಾರ್ವಜನಿಕ ಸಭೆಯಲ್ಲಿ ಮಾನ್ಯ ಚೆಟ್ಟಿಯಾರರು ಇಂದಿನ ದೇಶಭಕ್ತಿಯ ಕುರಿತು ಮಾತನಾಡಿದರು. ಅಲ್ಲದೆ ಪಂಡ್ಯಪಾನ ನಿರೋಧದಿಂದಾಗಿ ಸರಕಾರಕ್ಕೆ ನಷ್ಟವಾದರೂ ಅದರಿಂದ ಬಡಜನತೆಗಾಗುವ ಲಾಭದ ಕುರಿತು ವಿವರಿಸಿದರು.

ಇಂದಿನ ಸರಕಾರದ ಧೋರಣೆಯನ್ನು ತಿಳಿಸುತ್ತಾ ಮಂತ್ರಿಗಳು ಹೀಗೆಂದರು

"ನನ್ನ ಧೋರಣೆಯು ಪ್ರಾಗತಿಕ ಸಮುತಾವಾದವೇ ಆಗಿದೆ. ಆ ಸಮಾಜ ನಿರ್ಮಾಣಕ್ಕಾಗಿ ಬೇಕಾದ ಸುಧಾರಣೆಗಳನ್ನು ಒಂದೊಂದಾಗಿ ಮಾಡುವೆವು. ಜನಿಸ್ಸಾರೀ ನಿರ್ಮೂಲನವನ್ನು ನಮ್ಮ ಈ ಮುನ್ನಡೆಯ ಮೊದಲ ಹೆಜ್ಜೆಯಾಗಿದೆ. ಇನ್ನುಳಿದವು ಒಂದೊಂದಾಗಿ ಬರಲಿವೆ. ಇದರಿಂದ ನನ್ನು ಎಲ್ಲ ಸಮುಸ್ಯೆಗಳು ಬಗೆಹರಿದಿಲ್ಲ. ದೇಶದ ಜನರಿಗೆಲ್ಲ ಅನ್ನವಸ್ತ್ರಗಳನ್ನೊದಗಿಸುವ ಮೂಲಕಾರ್ಯವೇ ಆಗಿಲ್ಲವೆಂದು ನೀವು ಹೇಳಬಹುದು. ಈ ವಿಚಾರವಾಗಿ ನಿಮಗೆ ಕೆಲವೊಂದು ನಿಜ ಸಂಗತಿಗಳನ್ನು ಹೇಳಬೇಕಾಗಿದೆ. ನಮಗೆ ಅಕ್ಕಿಬರುತ್ತಿದ್ದುದು ಬರ್ಮದಿಂದ. ಬರ್ಮದ ಅಕ್ಕಿಯಿಂದಲೇ ನಾವು ಉಣ್ಣುತ್ತಿದ್ದುದು. ಇಲ್ಲಿನ ಅಂತರಿಕ ಯುದ್ಧದಿಂದಾಗಿ ಫಲವತ್ತಾದ ಬಯಲಿಂದು ಬಂಜರಾಗಿದೆ. ಹೊರಗಿನಿಂದ ಬರುವ ಅಕ್ಕಿ ಹೀಗೆ ನಿಂತೊಡನೆ ನಮ್ಮಲ್ಲಿನ ಕೆಲವು ಕಾರಣಗಳು ಅಕ್ಕಿಉತ್ಪತ್ತಿಯನ್ನು ಕಡಿಮೆಮಾಡಿದೆವು. ತಂಜಾವೂರಿನ ಒಕ್ಕಲಿಗರು ಬೆಳೆ ಬೆಳೆಯಿಸಲು ನಿರಾಕರಿಸಿದರು. ಪರಿಣಾಮವಾಗಿ ಬೇಕಷ್ಟು ಬೆಳೆ ಬೆಳೆಯಿಸಲಿಲ್ಲ. ಸ್ವರಾಜ್ಯ ಸಿಕ್ಕಿದೊಡನೆ ನಾವು ಕೆಲಸ ಮಾಡುವುದನ್ನು ಬಿಟ್ಟುಬಿಟ್ಟೆವು. ಕರ್ತವ್ಯ ಭ್ರಷ್ಟರಾದೆವು. ಸರಕಾರಕ್ಕೆ ಈ ಜಳವಳಿಗಾರರನ್ನು ಎದುರಿಸಬೇಕಾಯಿತು. ಎಲ್ಲೆಡೆಗಳಲ್ಲೂ ಮುಷ್ಕರ ತಲೆದೋರಿತು. ಇವರಿಂದ ಉತ್ಪತ್ತಿ ಕಡಿಮೆಯಾಗಿ ಈ ಸ್ಥಿತಿಯೊದಗಿತು ಈ ಮಾತು ಬಟ್ಟೆಗೂ ಅನ್ವಯಿಸುತ್ತದೆ. ಪರದೇಯರ ಆಳಿಕೆಯ ಕಾಲದ ಹೋರಾಟೆ ಸಮಯದಲ್ಲಿ ಲಾಥಿ ಪೆಟ್ಟು ತಿನ್ನುವುದು ಜೈಲಿಗೆ ಹೋಗುವುದು ದೇಶಭಕ್ತಿಯಾಗಿತ್ತು. ಇಂದಿನ ದೇಶಭಕ್ತಿ ಉತ್ಪಾದನೆಗೆ ಸಹಕರಿಸುವುದು. ಆದಷ್ಟು ಉತ್ಪತ್ತಿ ಮಾಡಿ ಕಡಿಮೆ ವೆಚ್ಚ ಮಾಡುವವರೇ ಇಂದಿನ ದೇಶಭಕ್ತರು. ಇಂದು ಪುನಃ ರೇಶನ್ ಜ್ಞಾರಿಯಾದದ್ದೇಕೆಂದು ತಾವು ತಿಳಿಯಬೇಕು. ನಿಯಂತ್ರಣವಿಲ್ಲದಾಗ ಸರಿಯಷ್ಟರಮಾತ್ರ ಉಣ್ಣಾತ್ಪಿದ್ದವರು ಬಡವರು ಹಸಿವೆಯಿಂದ ಬಳಲುತ್ತಿದ್ದರು, ಬಡವರಿಗೆ ಉಣಿಸು ಕೊಡುವುದೇ ಈ ನಿಯಂತ್ರಣದ ಉದ್ದೇಶ. ಈ ನಿಯಂತ್ರಣವನ್ನೇ ಉಪಯೋಗಿಸಿಕೊಂಡು ಮಡ್ಡಿ ಮಾಡುವ ದ್ರೋಹಿಗಳೂ ನಮ್ಮಲ್ಲಿದ್ದಾರೆ. ಅವನ್ನು ಹೋಗಲಾಡಿಸುವ ಹೊಣೆ ಎಲ್ಲರನ್ನೂ ಹೊಂದಿಕೊಂಡಿದೆ. ಸರಕಾರವು ವಿಜಾರಿಸುವ ಕಾಲದಲ್ಲಿ ಬಂಧ್ಯು, ಸ್ವಾ[illegible] ಲಂಚಬೋರರನ್ನು ಲಾಭಬಡಕನನ್ನು ತೋರಿಸಿ ಕೊಡಬೇಕು. ನೀವು ಹೀಗೆ ಮಾಡಿದರೆ ಮಾತ್ರ ಈ ಲಂಚಬೋರರನ್ನು ನೋಡೀತು. ಇಂದು ನಮ್ಮ ಖಾತೆಗಳಲ್ಲಿ ದಕ್ಷತೆಯಿಂದ ಕೆಲಸ ಮಾಡುವವರನ್ನು ಜನತೆ ಹೊಗಳುವುದಿಲ್ಲ. ಲಂಚಬೋರ [illegible] ನ್ನೇ ಒಳ್ಳೆ ಅಧಿಕಾರಿ ಎನ್ನುತ್ತಿದೆ. ಹೀಗಾಗಿ ಬಾರದು. ನನಗೆ ಸರಿಯಾದ ನೈತಿಕ ಬಲವಿದ್ದು ನಾವದನ್ನು ಇವಿಸಿಬೇಕು. ಸ್ವಾತಂತ್ರ್ಯ ಕ್ಕಾಗಿ ಯಾವ ತ್ಯಾಗಕ್ಕೂ ಸಿದ್ಧರಾಗಿಬೇಕೆಂದು" ಎಂದು ಹೇಳಿ ಜಗತ್ತಿನ ರಾಷ್ಟ್ರಗಳಲ್ಲಿ ಭಾರತವು ನಾಯಕರತ್ನವಾಗುವಂತೆ ಪ್ರತಿಯೊಬ್ಬನೂ ತನ್ನ ಕರ್ತವ್ಯ ಮಾಡಬೇಕೆಂದರು.

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ಶೆಟ್ಟಿ.	0	3	0
ಸಂಶಯ ಪಿಶಾಚಿ	(ನಾಟಕ)	ಕೆ. ಕ. ಶೆಟ್ಟಿ.	0	8	0
ಕುಶಲವ	(,,)	,,	0	6	0
ವೃಭಿಚಾರಿಣಿ ಯಾರು	(,,)	,,	1	0	0
ಹೆಂಡ್ತಿ ಗಂಡನಾದರೆ	(ಪ್ರಹಸನ)	,,	0	4	0
ಪುರುಷವಧು	,,	,,	0	4	0
ಪನ್ನಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವಧ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಸಣ್ಣ ಕತೆಗಳು)	ಕೊರಡ್ಕಲ್	0	14	0
ಭೂತೀಯ ಕತೆಗಳು	(,,)	,,	0	14	0
ಮೂರು ವ್ಯಹಸನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್. ಎಲ್. ಸುಬ್ರಹ್ಮಣ್ಯಂ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜ.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾಕಾಮಿನಿ	(ಕವಿತೆಗಳು)	ಎಸ್. ವೆಂಕಟರಾಜ	2	0	0
ಸಪ್ತಸಾಗರ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	4	0
ನಗೆನೋಟಗಳು	(ವಿನೋದ ಕತೆಗಳು)	ಕೆ. ವಿಟ್ಠಲ ಶೆಣೈ	0	14	0
ಅನ್ನದೇವರು ಮತ್ತು ಇತರ ಕತೆಗಳು		ಕಯ್ಯಾರ ಕಿಞ್ಞಣ್ಣ ರೈ	1	0	0
ವಿಷ್ಣುವಿನ ದಶಾವತಾರಗಳು ಅಥವಾ ದಶಾವತಾರಗಳು		(ವಿಡಂಬನೆ) ಎಂ. ವಿ. ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯಕ್ಷಗಾನ ನಾಟಕ)	,,	0	8	0
ಸ್ವಾತಂತ್ರ್ಯವೀರ ಸಾವರ್ಕರರು	(ಜೀವನ ಚರಿತ್ರೆ)	ಇಂದಿರಾಬಾಯಿ	1	4	0
ಜೀವನಸಂಗ್ರಾಮ	(ನಾಟಕ)	ಪಿ. ಶೀನ ಶೆಟ್ಟಿ	1	8	0
ಜಮೀನ್ದಾರ	(ಕಾದಂಬರಿ)	ಹೊಸಮನೆ ಗುಡ್ಡಪ್ಪ	1	8	0

ಪ್ರತಿಗಳಿಗೆ:— ನವಭಾರತ ಪುಸ್ತಕ ಭಂಡಾರ, ಉಡುಪಿ ನ. ಕ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 64 ವರ್ಷಗಳಿಂದ ಡಿಪೋಜಿಟುಗಳಿಗೆ ಉಚ್ಚಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ಬರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಆವರ ಶ್ರೇಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನೇ ಉಪಯೋಗಿಸಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3018 ಏರಡಾಣೆ 18-11-1948

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
ಟಿ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯ ವಾರ ೧೨

NAVAYUGA WEEKLY, UDIPI, S. K.

FOUNDER: Hon'ble Mr. A. B SHETTY, Health Minister, Govt. of Madras.

Vol. 29 No. 12

ಸ್ವಾತಂತ್ರ್ಯಾನಂತರ ಭಾರತದಲ್ಲಿ ಸ್ವಂತ ಅಭಿಮಾನ ಹಾಗೂ ಅಭಿಲಾಷೆಗಳು ವಿಶೇಷ ರೀತಿಯಿಂದ ನಮ್ಮಲ್ಲಿ ಬಂದಿವೆ ಈ ಪೈಕಿ ಕೆಲವು ಸಹಜವಾದವುಗಳು; ನ್ಯಾಯದ ಎಲ್ಲೆ ಮೀರದವುಗಳು. ಇನ್ನು ಕೆಲವು ಅಸ್ವಾಭಾವಿಕ ಮತ್ತು ಅಪಾಯಕರವಿವೆ. ಈ ಕಾಲದ ಇಂತಹ ಬಯಕೆಗಳಲ್ಲಿ ಪ್ರತ್ಯೇಕ ಪ್ರಾಂತ್ಯದ ಬೇಡಿಕೆಗಳು ಅತಿ ಮುಖ್ಯವಿವೆ. ಇವುಗಳಲ್ಲೂ ಸಂಸ್ಕೃತಿ, ಭಾಷೆ, ಆರ್ಥಿಕಸ್ಥಿತಿ, ಭೌಗೋಲಿಕ ಸಂಬಂಧ ಮುಂತಾದುವುಗಳನುಗುಣವಾದ ಭಾಷಾವಾರು ಪ್ರಾಂತ್ಯ ರಚನೆಯಂತಹ ಸದ್ವಿಚಾರಜನ್ಯ ಬೇಡಿಕೆಗಳು ಕೆಲವಿದ್ದರೆ, ಕೇವಲ ಜಾತಿ ಮತಗಳನ್ನುಧರಿಸಿ ಪ್ರತ್ಯೇಕತೆಯನ್ನು ಯಾಚಿಸುವ ದುರ್ವಿಕಾರಜನ್ಯ ಗೊಂದಲಗಳೂ ಇವೆ. ಈ ಕಾಲದಲ್ಲಿ ಇವೆಲ್ಲವೂ ಮಿತ್ರವಾಗಿತೋರಿ, ಒಂದೇ ನರ್ಗದವುಗಳಂತೆ ಕಾಣಿಸಿ, ರಾಷ್ಟ್ರನಾಯಕರಲ್ಲಿ ತಲೆನೋವನ್ನು ನಿರ್ಮಿಸಿವೆ. ಜಾತೀವಾರು ಪ್ರತ್ಯೇಕತಾ ಯಾಚನೆಗೊಂದಿಗೆ ಸೇರಿತೋರುವ ಭಾಷಾವಾರು ಪ್ರತ್ಯೇಕತಾ ಬೇಡಿಕೆಗಳೂ ಕಳೆನೊಂದಿಗಿದ್ದ ಕಾವಲುಗಾರನಿಗೆ ದೊರೆಯತಕ್ಕ ಸಂಭಾವನೆಗೇನೇ ಈಡಾದಂತಿದೆ! ಇವುಗಳ ಗೊಂದಲ ನಿವಾರಣೆಗಾಗಿ ಎಲ್ಲವನ್ನೂ ಹಿಂದೆ ದೂಡಿ ಬಿಡೋಣ ವೆಂದೇ ರಾಷ್ಟ್ರನಾಯಕರೀಗ ಮನಸ್ಸು ಮಾಡಿದ್ದಾರೆ!

ಈ ಸಂದರ್ಭದಲ್ಲಿ ವಿಚಾರದೃಷ್ಟಿಯಿಂದ ನೋಡುವಾಗ ನೆಹರು, ವಲ್ಲಭಭಾಯಿ, ಪ್ರಸಾದ್, ರಾಜಾಜಿಯಂತಹ ಅಖಿಲ ಭಾರತದ ಸನಾತನ ಗೌರವಾದರಗಳಿಗೆ ಪಾತ್ರರಾದ ಕೆಲವೇ ಮಂದಿ ನಾಯಕರಲ್ಲಿ ದಿರುತಿದ್ದರೆ, ಭಾರತದೊಳಗಡೆಯಲ್ಲಿ ತಾಂ ಡವವಾಡುತ್ತಿರುವ "ಬೆಕ್ಕಿನ ಬಿಡಾರ"ಗಳನ್ನು ಕಟ್ಟಿಹಾಕುವ ಮನೋವೃತ್ತಿ ನಿಜಕ್ಕೂ ಗೆಲ್ಲುತಿತ್ತೆಂದು ಕಾಣುತ್ತದೆ! ಅದ್ದರಿಂದ, ರಾಷ್ಟ್ರೀಯತೆಯನ್ನುಳಿಸಾಡುವದಕ್ಕಾಗಿ ಧುರೀಣರು ಮಾಡುವ ಕಾರ್ಯಗಳು, ಆಡುವ ಮಾತುಗಳು ತಮ್ಮ ನ್ಯಾಯೋಚಿತ ಬೇಡಿಕೆಗಳನ್ನು ತುಸು ಹಿಂದೆ ಹಾಕುವಂತಹವಿದ್ದರೂ ಕೂಡಾ ಕನ್ನಡಿಗ, ಆಂಧ್ರರಂಥವರು ಆ ಕುರಿತು ಶಕ್ಯವಿದ್ದಷ್ಟು ಸಹನೆ ವಹಿಸಬೇಕಾದುದು ಅಗತ್ಯ.

ಈ ಉಚಿತಾನುಚಿತ ಬೇಡಿಕೆಗಳ ಸ್ವರೂಪಗಳನ್ನು ಒಮ್ಮೆ ನೋಡೋಣ:-

ಆಂಧ್ರ, ಕರ್ನಾಟಕ, ಕೇರಳ ಮಹಾರಾಷ್ಟ್ರಗಳನ್ನು ಪ್ರತ್ಯೇಕ ಪ್ರಾಂತ್ಯಗಳಾಗಿ ಕಡೆದು ತೆಗೆಯಬೇಕು; ಅವುಗಳಿಂದಿಗೆ ಉಳಿವ ಗುಜರಾತ್, ತಮಿಳು ಪ್ರಾಂತ್ಯಗಳ ಸಮೇತ ಈಗ ಮದ್ರಾಸ್, ಬೊಂಬಾಯಿ, ಮಧ್ಯಪ್ರಾಂತ್ಯ- ಈ ಮೂರೇ ಪ್ರಾಂತ್ಯವಿರುವ ಬದಲಿಗೆ ಆ ಆರು ಪ್ರಾಂತ್ಯಗಳಾಗಬೇಕು, ಎಂಬುವು ಎಂಬೋ ನಿರ್ಧಾರವಾಗಿರುವ ವಿಷಯ. ಕಾಂಗ್ರೆಸ್ ಪ್ರಾಂತ್ಯಗಳಾಗಿ ಕಾಂಗ್ರೆಸಿನ ಕಾರ್ಯಕ್ರಮಗಳ ಮಟ್ಟಿಗೆ ಈ ಆರು ಪ್ರಾಂತಿಕ ಗಡಿಗಳು ಹಲವು ವರುಷಗಳಿಂದ ಅಸ್ತಿತ್ವದಲ್ಲಿವೆ. ಮಹಾತ್ಮಾ ಗಾಂಧಿಯವರು ಸಾಯುವ ಕೆಲವೇ ಸಮಯಕ್ಕೆ ಮೊದಲು ಈ 'ಪ್ರಾಂತ್ಯ ರಚನೆಗಳು ಅದಷ್ಟು ಬೇಗನೇ ಆಗ್ಗವದು ಸಾಸಿ'ಎಂದು ಹರಸಿದ್ದರು. ಮದ್ರಾಸ್ ನಗರದ ಮಟ್ಟಿಗೆ ಆಂಧ್ರ-ತಮಿಳ ವಾದ, ಬೊಂಬಾಯಿ ನಗರದ ಕುರಿತು ಗುಜರಾತ್-ಮರಾಟರ ವಾದ, ಮತ್ತು ಕೆಲವು ಸರಹದ್ದು ವಿವಾದಗಳನ್ನು ಬಿಟ್ಟರೆ, ಭಾಷಾವಾರು ಪ್ರಾಂತ್ಯ ರಚನೆಗಳ ಮಟ್ಟಿಗೆ ಜೀರಾವ ಗಣ್ಯ ನೈಪಯ್ಯವೂ ಇಲ್ಲ. ಇವೆಲ್ಲವೂ ಈ ದಿಲ್ಲಂತೂ ಈ ಚಳವಳವು ಅವಸಾನದ ಒದ್ದಾಟದಲ್ಲಿದೆ!

ಪ್ರತ್ಯೇಕ ಪ್ರಾಂತ್ಯರಚನೆ— ಉಚಿತಾನುಚಿತ ಬೇಡಿಕೆಗಳು

ಇಂತಹದ್ದು ಮತ್ತೊಂದು, ಪೂರ್ವ ಪಂಜಾಬಿನಲ್ಲಿ "ಸಿಖ್ ಪ್ರಾಂತ್ಯ" ರಚಿಸಬೇಕೆಂಬ ಬೇಡಿಕೆ. ಮುಸ್ಲಿಮರ 'ಪಾಕಿಸ್ತಾನ'ದಂತೆಯೇ "ಸಿಖ್‌ಸ್ಥಾನ"ವನ್ನೂ ಆದಿಯಿಂದಲೂ ಬಯಸಿದ್ದ ಮಹಾಂಧ ಸಿಖ್ಖರಿದ್ದಾರೆ. ರಾಷ್ಟ್ರ ವಿಭಜನೆಯ ಕಾಲದಲ್ಲಿ 'ಸಿಖ್ ಸ್ಥಾನ'ಕ್ಕಾಗುವುದು ಅನುಕೂಲ ಕಾಂಗ್ರೆಸೋಲೀಗೋ?ಎಂಬ ತೂಕ ನಡೆದುದೂ ಇದೆ. ಆದರೆ ರಾಷ್ಟ್ರ ವಿಭಜನೆಯಾಗಿ ಮುಖ್ಯತಃ ಸಿಖ್ಖರ ಕಾರಣಗಳಿಗಾಗಿಯೇ ಪಂಜಾಬಿನಲ್ಲಿ ಮಹಾ ಜಾತೀಯ ಗೊಂದಲ ನಡೆದ ಮೇಲೆ, ಪಾಕಿಸ್ತಾನ್ ಪಂಜಾಬಿನಲ್ಲಿ ಸಿಖ್ಖರಾರೂ ಉಳಿಯದೆ ಮುಸ್ಲಿಂ ಗಾಳಿ ಕೂಡಾ ಅವರಂಗಸಹ್ಯವಾಯಿತಲ್ಲವೆ, ತಮಗೆ ಪ್ರತ್ಯೇಕ ಸ್ಥಾನ ಯಾಚಿಸುವುದು ಅತಿ ಹೇಯ ಮತ್ತು ಅಪಾಯಕರವೆಂದು ಅವರಿಗೇನೇ ಹೊಳೆಯಿತು. ಆದರೀಗ ಪೂರ್ವ ಪಂಜಾಬಿನ ಕೆಲವು ಸಿಖ್ಖರು 'ಸಿಖ್ ಪ್ರಾಂತ್ಯ' ರಚನೆಯ ಬೇಡಿಕೆಯನ್ನು ಮುಂದಿಟ್ಟಿದ್ದು, ಆ ಪ್ರಶ್ನೆ ಪಂಜಾಬಿನ ಸರಕಾರದೊಳಗೂ ನ್ಯಾಯಾಧಿಕರಣದಲ್ಲಿ ನಿವೇದಿಸಿದಂತಿದೆ; ನವದೆಹಲಿಯ ನಾಯಕರ ಲಕ್ಷ್ಯವನ್ನೂ ಎಳೆದಿದೆ. ಆ 'ಸಿಖ್ ವಿಚಾರವಂತ ಸಿಖ್ಖರು ಮತ್ತು ಬಹು ಸಂಖ್ಯಾಕ ಸಿಖ್ ಜನರು ಈ ಪ್ರತ್ಯೇಕತಾ ಧಾನನೆಗೆ ಬದ್ಧವಿರೋಧವಿದ್ದಾರೆ. ಜನರೆಲ್ ಮೋಹನಸಿಂಗ್, ಜಾತೇದಾರ್ ಉದ್ಯಾನ್‌ಸಿಂಗ್ ನಾಗೋಕೆ, ಪಟಿಯಾಲಾ ಮಹಾರಾಜರ ಅಧ್ಯಕ್ಷತೆಯಲ್ಲಿರುವ ಸಿಖ್ಖರ 'ಪಾಂಥಿಕ್ ದರ್ಬಾರ್' ಲಂಡನ್ ಸಿಖ್ಖರು ಈ ಪ್ರತ್ಯೇಕತಾ ಬೇಡಿಕೆಯನ್ನು ಅನ್ಯಾಯ, ಅಪಾಯಕರ, ಅಶ್ಲೀಲವೆಂದು ಸೈಹ್ಯ ವಾಣಿಗಳಿಂದ ಖಂಡಿಸಿದ್ದಾರೆ.

ಇಂತಹ ಪರಿಸ್ಥಿತಿಯಲ್ಲಿ ಭಾರತ ನಾಯಕರು ವಿಶಾಲ ಬುದ್ಧಿ ಮತ್ತು ವಿಶೇಷ ಜಾಗರೂಕತೆಯಿಂದ ಕೆಲಸ ಮಾಡುತ್ತಿರುವುದು ತಪ್ಪೆ?

ನಿಮ್ಮ ಆಯ್ಕೆ
ಪ್ರ ಭಾ ತ
ಚಾ ಮತ್ತು ಕಾಫಿ
ಅರಿಸಿದ
ನೀಲಗಿರಿ ಚಾ ಮತ್ತು ಕಾಫಿ
Blended & Packed by:-
PRABHAT
TEA & COFFEE (INDIA) Ltd.
COONOOR R. S. (Niligiris)

ವಿಮೆಮಾಡಲಿಕ್ಕೆ ಯಾ ಕ್ಲಾತಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಕಛೇರಿ ಸಲಹೆಗಳಿಗೆ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ಟೋಜೋ ಮತ್ತಿತರರಿಗೆ ಘಾತೀ ತೀರ್ಮಾನ!

ಅವರು ನಿರಪರಾಧಿಗಳೆಂದು ಹಿಂದೀ ಜಡ್ಜರ ಮತ.

ಜೆಪಾನನ್ನು ಯುದ್ಧಕ್ಕೆಳೆಸಿದ್ದ, ಆಗಿನ ಮುಖ್ಯ ಮಂತ್ರಿ ಜನರಲ್ ಹಿಡೆಕಿ ಟೋಜೋನನ್ನು ಘಾತಿಗೆ ಕೊಟ್ಟು ಕೊಲ್ಲ ಬೇಕೆಂದು ಜಾಪಾನ್ ಯುದ್ಧಾಪರಾಧಿಗಳ ವಿಚಾರಣೆಗಾಗಿ ನೇಮಿಸಿದ್ದ ಅಂತರ್‌ರಾಷ್ಟ್ರೀಯ ನ್ಯಾಯಾಧೀಶ ಮಂಡಲಿಯು ಇದೇ ತಾ. 12ರಲ್ಲಿ ತೀರ್ಮಾನಿಸಿದೆ. ಟೋಜೋ ಸಮೇತ ಜಾಪಾನಿನ 25 ಮಂದಿ ನಾಯಕರು ಈ ವಿಚಾರಣೆಗೊಳಗಾಗಿದ್ದು, ಅವರಲ್ಲಿ ಟೋಜೋ ಸಮೇತ 7 ಮಂದಿಗೆ ಘಾತಿ, 16 ಮಂದಿಗೆ ಜೀವಾವಧಿ ಸಜೆ, ಒಬ್ಬನಿಗೆ 20 ವರುಷ ಮತ್ತೊಬ್ಬನಿಗೆ 7 ವರುಷ ಸಜೆಗಳಾಗಿವೆ. ಮೂರು ಮಂದಿ ಆರೋಪಿಗಳು ಕಾಣೆಯಾಗಿದ್ದರೂ ಅವರ ಗೈರುಹಾಜರಿಯಲ್ಲೇ ತೀರ್ಮಾನ ವಾಯಿತು. ಜಾಪಾನಿನ ಅಪರಾಧಗಳ ಮುಖ್ಯ ಹೊಣೆಗಾರ ಜನರಲ್ ಟೋಜೋ ಎಂದು ಅಂತರ್‌ರಾಷ್ಟ್ರೀಯ ಕೋರ್ಟು ಶಿಕ್ಷೆ ವಿಧಿಸಿದ ಈ ಖಟ್ಲೆಯ ಆರೋಪಿಗಳೆಂದರೆ ಯುದ್ಧ ಕಾಲದ ಜಾಪಾನಿನ ಪ್ರಧಾನ ಮಂತ್ರಿಗಳು-ಸೇನಾಧಿಪತಿಗಳು-ವಿದೇಶ ಮಂತ್ರಿಗಳು-ರಾಯಭಾರಿಗಳು-ಮತ್ತಿತರ ಖಾತೆಗಳ ಶಿರಸ್ಸಾಗಿದ್ದ ಜಾಪಾನಿನ ಆಗಿನ ಪ್ರಮುಖ ಮಂಡಳಿ. ವಾಸ್ತವ ಯ 49ರಿಂದ 81ರ ವರೆಗಿನವರು ಇದರಲ್ಲಿದ್ದಾರೆ.

11 ಮಂದಿ ಜಡ್ಜರಿದ್ದ ಈ 'ಅಂತರ್‌ರಾಷ್ಟ್ರೀಯ ಸೇನಾ ಕೋರ್ಟ್'ನ ಅಧ್ಯಕ್ಷರು ಸರ್. ವಿಲ್ಲಿಯಮ್ ವೆಬ್ಬ್ ಆಸ್ಟ್ರೇಲಿಯದವರು. ಸರ್. ಪೆಟ್ಟ್ರಿಕ್ ಹೆನ್ರಿ ಎಂಬ ಇನ್ನೊಬ್ಬ ನ್ಯೂಜಿಲೆಂಡಿನ ಜಡ್ಜರು ಕೂಡ ಅಧ್ಯಕ್ಷರ ಸ್ಥಾನವನ್ನು ಅಲಂಕರಿಸಿದ್ದರು. ಜಡ್ಜ್

ಹೈದರಾಬಾದಿನಲ್ಲಿ ಸುಸ್ಥಿತಿ ಸ್ಥಾಪನೆ

ಸೇನಾ ಗವರ್ನರ್ ಮೇಜರ್ ಜನರಲ್ ಚೌಧರಿಯವರು ಹೆಚ್ಚಿನವರ ನಿರೀಕ್ಷೆಯು ದ್ದಕ್ಕಿಂತ ಕ್ಷಿಪ್ರದಲ್ಲೇ ಹೈದರಾಬಾದಿನಲ್ಲಿ ಶಾಂತಿ ಮತ್ತು ವ್ಯವಸ್ಥೆಯನ್ನು ಸ್ಥಾಪಿಸಲು ಶಕ್ತರಾಗಿದ್ದಾರೆ. ರಝಾಕಾರರ ನಿರ್ನಾಮ-ಶಸ್ತ್ರ ಆಯುಧಗಳ ಸಂಗ್ರಹ-ಜನ ಪ್ರತಿನಿಧಿ ಸರಕಾರ ರಚನೆಗೆ ಪ್ರೇತ್ಸಾಹ ಯಾಂ, ಇತ್ಯಾದಿ ಎಲ್ಲಾ ಕಾರ್ಯಗಳನ್ನೂ ಅವರು ಅತ್ಯಂತ ನಾಜೂಕಿನಿಂದ ಮಾಡಿದ್ದಾರೆ. ಭಯ, ಗೊಂದಲ, ಅನಾಡಾರಿಗಳ ಬೀಡಾಗಿದ್ದ ಹೈದರಾಬಾದಿನ ಸ್ಥಿತಿಯನ್ನು 'ಅನ್ಯಾಯಕ್ಕೆ ಸೂಜಿ ಮೊನೆಯಷ್ಟು ಅವಕಾಶವಿಲ್ಲ-ನ್ಯಾಯಕ್ಕೆ ಸಾಸಿವೇ ಕಾಳಿನ ತಡೆಯೂ ಇಲ್ಲ' ಎಂದು ಹೇಳಲಾಗುವಂತೆ ಸುಸ್ಥಿರವಾದ ಹಾಗೂ ಪೂರ್ಣ ಬಾಳಿಕೆಯ ಭವಿಷ್ಯಕ್ಕೆ ತಂದಿದ್ದಾರೆ. ಜನರಲ್ ಚೌಧರಿಗಳು ಹೈದರಾಬಾದಿನ ವಿವಿಧ ಭಾಗಗಳಲ್ಲಿ ತಿರುಗಾಡಿ, ಪರಿಸ್ಥಿತಿಯನ್ನು ಪ್ರತ್ಯಕ್ಷ ಕಾಣುತ್ತಿದ್ದಾರೆ. ಹೋದಲ್ಲೆಲ್ಲಾ ಹಿಂದೂ ಮುಸ್ಲಿಂ ಕ್ರೈಸ್ತರೆನ್ನದೆ ಹೈದರಾಬಾದಿಗೆಲ್ಲರೂ ಹಾರ್ದಿಕ ಪ್ರೇಮಾದರಗಳಿಂದ ಅವರನ್ನು ಸ್ವಾಗತಿಸಿದ್ದಾರೆ.

ಮುಂದಿನ ವ್ಯವಸ್ಥೆಯೇನು?

ಪ್ರಕೃತ ಹೈದರಾಬಾದಿನ ನಿತ್ಯ ಜೀವನ ರಂಗದಲ್ಲಿ ವಿಕ್ಷ ಕಡೆಗಳಿಂದಲೂ ಚಿಟ್ಟಿನ ಗೊಂದಲಗಳಾವುವೂ ಇಲ್ಲವೆನ್ನಬಹುದು. ಕಾಂಗ್ರೆಸಿಗರೇ ಮೊದಲಾದವರಿಗೆ ತಿವಿತಗಳಂತಹವು ಅಲ್ಲೊಂದು ಇಲ್ಲೊಂದು ಮೆನ್ಸೆಯ ವರೆಗೂ ನಡೆದಿದ್ದಿತು. ಈಗ ಹೈದರಾಬಾದಿನ ರಝಾಕಾರರು ಸಮೂಲವಾಗಿ ನಾಶವಾಗಿದ್ದಾರೆ. ಅಲ್ಲಿ ಮೊದಲಿದ್ದ ಭಯಾವಹ ವಾತಾವರಣ ಇಗ ಬಹುತೇಕವಾಗಿ ಪೂರ್ಣ ತಿಳಿಯಾಗಿದೆ. ಹಿಂದೆ, ಒಹು ಸಂಖ್ಯಾಕರ ಮನೋಗತಿಗೆ ವಿರುದ್ಧ ಹೋಗಿದ್ದ ಕೆಲವು ಮಾತ್ರ ಈಗ ತುಸು ಭುಸುಗುಡುತಿರಂತಿದ್ದಾರಾದರೂ ವ್ಯವಸ್ಥಾಪಾಲನೆಗಾಗಿ ಹೊಂತು ಪ್ರತೀಕಾರಭಾವನೆಯಿಂದ ಅವ್ಹೀಗ ಏನೂ ನಡೆಯುತ್ತಿಲ್ಲ ಈಗ ಶಾಶ್ವತ ರಾಜ್ಯಭಾರ ವ್ಯವಸ್ಥೆಯ ಕಾರ್ಯಕ್ರಮಗಳು ಅಸ್ತಿತ್ವಕ್ಕೆ ಬರಬೇಕಾಗಿದೆ. ಜನಮತಸಂಗ್ರಹ ಘಟನಾ ಸಮಿತಿಯೇ ಹೈದರಾಬಾದಿನ ಶಾಶ್ವತ ರಾಜ್ಯ ವ್ಯವಸ್ಥೆಯನ್ನು ತರಬೇಕಾಗಿದೆ. ಅದಕ್ಕಾಗಿ ಚುನಾವಣಾ ಕಮಿಶನರು ನೇಮಕವಾಗಿದ್ದು ಇಸ್ಪರಲ್ಲೇ ಪ್ರಾಯಶ್ಚಿತ್ತರೆಲ್ಲರ ಮತ ಪಟ್ಟಿಗಳು ತಯಾರಾಗಿವೆ. ಈ ಮತದಾರರಿಂದಾರಿಸಲ್ಪಡುವ ಸದಸ್ಯರಿಂದ ಘಟನಾ ಸಮಿತಿ ರೂಪುಗೊಳ್ಳುವುದು. ಈ ನಡುವೆ 'ಇನ್ನು ತಮ್ಮ ಅವಶ್ಯಕತೆಯಿಲ್ಲ' ಎಂದು ತೋರಿ ಬಂದೊಡನೆ ಜನರಲ್ ಚೌಧರಿಯವರ ಸೇನಾ ಆಡಳಿತೆ ಒಮ್ಮಾಸ್ಸಾಗಿ ಜನಪ್ರಮುಖ ತಾತ್ಕಾಲಿಕ ಸರಕಾರ ರಚನೆಗೊಳ್ಳಬಹುದು. ಸರ್ದಾರ್ ಪಟೇಲರು ಜೊಂಬಾಯಿಗೆ ಒಂದಿವ್ವಾಗ ಜನರಲ್ ಚೌಧರಿ, ಕಾಂಗ್ರೆಸ್ ಅಧ್ಯಕ್ಷ ಸ್ವಾಮೀ ರಮಾನಂದ ತೀರ್ಥ, ನಿಜಾಮ್ ಕುನರ, ಮಂತ್ರಿತರು ಮುಮ್ಮಲ್ಲರೆಲ್ಲರೂ ಅವರೂಡನೆ ಹೈದರಾಬಾದಿನ ಭಾವೀ ವ್ಯವಸ್ಥೆಯ ಕುರಿತು ಪರಾಮರ್ಶೆಯನ್ನು ನಡೆಸಿದ್ದರು. ಅವರ ಪ್ರತಿಫಲವೆನ್ನಬಹುದೋ ಏನೋ-ಹಿಂದೂ ಮುಸ್ಲಿಂ ಸಮ ಜಾತಿಪ್ರಾತಿನಿಧ್ಯವನ್ನಾಧರಿಸಿ ಘಟನಾ ಸಮಿತಿ ರಚಿಸಲ್ಪಡುವುದೆಂದು ನಿಜಾಮರು ಇತ್ತೀಚೆಗೆ ಹೊರಡಿಸಿದ್ದ ಜಾಹೀರ್‌ನಾಮೆಯು ರದ್ದಾಗಿ, ಅಂತಹ ಶರತ್ತುಗಳಾವುದೂ ಇಲ್ಲದೆ, ಪ್ರಾಯಶ್ಚಿತ್ತರೆಲ್ಲರ ಮತದಾನದಿಂದ ಘಟನಾ ಸಮಿತಿ ನಿರ್ಮಾಣವಾಗುವ ಪ್ರಕಟಣೆ ಹೊರಡುವುದೆಂದು ತಿಳಿದು ಬರುತ್ತದೆ. ಗೊಂದಲ ನಿರ್ಮಾಣಕ್ಕಾಗಿ ಹರ ವ್ಯಾಮೋಹಗಳಿಂದ ಸಹಸ್ರ ಸಂಖ್ಯೆಯಲ್ಲಿ ಒಂದು ಹೈದರಾಬಾದಿನೆಂಗೆ ತುಂಬಿ ಹೋಗಿರುವ ವರಾನ್ನ ಪಂಕ್ತಿಮಿಗಳಿಗೆ ಈ ಮತಾಧಿಕಾರವಿಲ್ಲ. ನಿಜಾಮರ ಅಲಹೆಗಾರ ಸರ ವಿ.ಪಿ. ಮೆನನ್‌ರವರಿಗೆ ಇನ್ನೆಲ್ಲಿ ಸ್ಥಾನವಿಲ್ಲ. ಆಂಧ್ರರು, ಮರಾಠರು ಮತ್ತು ಕನ್ನಡಿಗರೇ ಇರುವ ಹೈದರಾಬಾದ್ ಸಂಸ್ಥಾನವನ್ನೇ ಬರ್ಖಾಸ್ತು ಪಡಿಸಿ ಅದನ್ನು ಭಾಷಾವಾರು ಸಂಸ್ಥಾನಗಳಿಗೆ ಸೇರಿಸಿದ ಪ್ರಾಂತ್ಯಗಳೊಳಗೆ ಹಂಚಿ ಹಾಕಬೇಕೆಂಬ ಹಂಬಲವೂ ಪ್ರಕೃತ ಮಾನ್ಯವಾಗುವಂತಿಲ್ಲ. ಇದೇ ತಾ 12ರಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿಕೆ ಕೊಡುತ್ತಾ ಪ್ರಧಾನ ಮಂತ್ರಿ ಪಂಡಿತ ನೆಹರುಗಳು: "ಈ ಸಂದರ್ಭದಲ್ಲಿ ಹೈದರಾಬಾದನ್ನು ಭಾಷಾವಾರಾಗಿ ಛಿದ್ರಗೊಳಿಸುವ ಪ್ರಯತ್ನವು ಅಪಾಯಕಾರಿ. ದಕ್ಷಿಣ ಭಾರತದ ಸ್ಥಿರತೆಗಳನ್ನೇ ಅಡಿಮೇಲು ಮಾಡಿ ಹಾಕೀತು." ಅಂದಿದ್ದಾರೆ. ಪ್ರಾಯೋಗಿಕ ಸಂಘದಲ್ಲಿ "ಹೈದರಾಬಾದ್ ಪ್ರಶ್ನೆ"ಯೆಂಬುದಾವುದೂ ಈಗ ಜೀವಕ್ಕಿಲ್ಲ. ಕಳೆದ ನವಂಬರ್‌ನಲ್ಲಿ ನಿಜಾಮರೊಡನೆ ಆಗಿದ್ದ ಒಂದು ವರುಷ ಅವಧಿಯ ಪುಟಲಿತ ಒಪ್ಪಂದದ ಪ್ರಾಯಿದೆ ಇದೇ ನವಂಬರ್ 30ಕ್ಕೆ ಮುಗಿಯಲಿದ್ದು, ಆ ಮೇಲೆ ಅದರ ಒಡಲಿಗೆ ಈಗಿನ ಸ್ಥಿತಿಗತಿಗಳಿಗನುಗುಣವಾದ ನವವ್ಯವಸ್ಥೆಬರಬಹುದು. ಇಸ್ಟೆಲ್ಲಾ ಅಬ್ಬರಿಕ ಪಾರ್ಸಾಟಗಳು-ಮಹತ್ಕಾರ್ಯಗಳು-ಹೈದರಾಬಾದಿನಲ್ಲಿ ಜರಗಿರುವುದಾವಾದರೂ ಸಮೃದಲ್ಲೇ ಹೊರಬೀಳಲಿರುವ ಅದರ ಆಯವ್ಯಯ ಪಟ್ಟಿಯು ಅಶ ಜನಕವಾಗಿರುವಂತಹ ಮಿತ ವ್ಯಯದಲ್ಲೇ ಎಲ್ಲವೂ ನಡೆದಿದ್ದಿತು ರಝಾಕಾರ್ ಕೈದಿಯಾಗಿದ್ದ ನಿಜಾಮರ ಅಡಳಿತೆಯಲ್ಲಿ ಇದ್ದ ದುಂದುವೆಚ್ಚಗಳಿಲ್ಲಾ ಈಗ ಕಡಿತ ಬಿದ್ದಿದೆ. ಹೈದರಾಬಾದ್ ಸಂಸ್ಥಾನಿಕ ಸೇನಾ ನೆಚ್ಚಕ್ಕೆ ಬಿದ್ದ ಕಕ್ಕರಿಯೊಂದೆಂದಲೇ 2 ಕೋಟಿ ರೂಪಾಯಿಗಳಿಗೂ ಮಿಕ್ಕಿ ಉಳಿದಿವೆ. ಬುದ್ಧಿವಂತ ನಿಜಾಮರು ಸೇನಾ ಗವರ್ನರ್ ಚೌಧರಿಯವರೊಡನೆ ಸಲುಗೆಯ ನಿಕಟ ಸ್ನೇಹ-ಬಾಂಧವ್ಯವನ್ನು ಕೆಲಸುತ್ತಿದ್ದಾರೆ "ನನ್ನ ಪ್ರೀತಿಯ ಸ್ನೇಹಿತರಾ!" ಎಂದೇ ಚೌಧರಿಯವರನ್ನು ಕರೆಯುವಷ್ಟಕ್ಕೆ ಅವರಿಗೆಲ್ಲಿಲ್ಲಾ ನಿಜಾಮರು ಕರೆಯುವ ನಮೂನೆ!

ಅಂತೂ ಒಂದು ಕಾಲದಲ್ಲಿ, ಮತಾಂಧತೆಯ ಪರಮಾವಧಿಯನ್ನು ಪ್ರದರ್ಶಿಸಿದ್ದ ಹೈದರಾಬಾದಿಗೂ ಬುದ್ಧಿ ಬಂದಿದ್ದುದು-ಅಂತಹ ಭಾವನೆಯ ಕಾಲವೀಗ ಸಂಪೂರ್ಣವಾಗಿ ಕಳೆದು ಹೋಗಿದೆ, ಎಂಬುದನ್ನು ಎಲ್ಲರಿಗೂ ಮಂದಟ್ಟು ಪಡಿಸುವ ಪಾಠವಾಗಬೇಕೆಂದೇ ದಕ್ಕಾಗಿಯೇ, ಎಂಬಂತೆ ಈಗ ಅಲ್ಲಿಯ ಸ್ಥಿತಿಗತಿಗಳು ಮಿಂಚುವೇಗದಿಂದ ಮಾರ್ಪಟ್ಟಿವೆ. ಭಾರತದ ಅವಾಸಹನೆಯ ಪರಿಣಾಮವಾಗಿ 'ಹೈದರಾಬಾದ್' ಕಂಟಕ' ಆವಿನಗಳಲ್ಲಿ ಅಷ್ಟು ಉದ್ದ ಬೆಳೆದಿದ್ದರೆ, ಭಾರತದ ಅಗಾಧ ಶಕ್ತಿಯ ಪರಿಣಾಮವಾಗಿ ಎಲ್ಲರ ನಿರೀಕ್ಷೆಗಳನ್ನೂ ಹಿಂದೆ ಹಾಕುವಷ್ಟು ಕ್ಷಿಪ್ರದಲ್ಲೇ ಅದರ ನಿರ್ವಾಣವಾಗಿ ಹೋಯಿತು. ಈ ಗ ಕಳ್ಳರ್ಯಕಗಳ ರೀತಿಯಿಂದ ಅಲ್ಲಿಯ ಕೊಳೆಯೂ ತೊಳೆದು ಹೋಗಿದೆ; ಮುಂದೆ ಶಾಶ್ವತ ರಾಜ್ಯಭಾರ ವ್ಯವಸ್ಥೆಯನ್ನು ನಿರ್ಮಿಸಿ ಕೊಳ್ಳುವದರಲ್ಲಿ ಇದೇ ಮಾದರಿಯ ಶಕ್ತಿ ಸಹನೆಗಳನ್ನು ಪ್ರದರ್ಶಿಸುವ ಜೊತೆಯು ಹೈದರಾಬಾದ್ ಜನತೆಯನ್ನೇ ಕಾದಿದೆ.

ದಿ ಮೂಲ್ಕಿ ಬ್ಯಾಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 64 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬ್ಯಾಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ,
'ಮಹಾಜನ'
ಕಾಸರಗೋಡು
ಇವರ ತಯಾರಿಕೆಗಳನ್ನೇ ಉಪಯೋಗಿಸಿರಿ.

THE BOMBAY LIFE ASSURANCE COMPANY, LTD.
ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್
(ಸ್ಥಾಪನೆ: 1908)
ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು
ಪ್ರಧಾನ ನಿಜಾಟರು:
ಕೊಚ್ಚಿಕ್ಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.
ಇವರ ಶಾಖಾ ಏಜೆನ್ಸಿಗಳು.
ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮತ್ತೂರು, ತಿರುವನಂತಪುರಂ, ಕಲ್ಲಿಕೋಟೆ ಮತ್ತು ಮಂಗಳೂರು.
ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸಕ್ರಿಯ ಪಾಲ್ಗೊಂಡಿದವರಾದ ನಾವು ಜನಾಂಗದ ಶ್ರೇಯೋಭಿವೃದ್ಧಿಯ ಕಡೆಗೆ ನಮ್ಮ ನಮ್ಮ ಸೇವೆಯನ್ನು ವಿಸ್ತರಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.
ವಿಮಾ ಮಾಡಲಿಕ್ಕಾಗಲೀ, ಸ್ಥಿತಿಸ್ಥಿತಿ ಪಡೆಯಲಿಕ್ಕಾಗಲೀ ದಯವಾಡಿ ನಮ್ಮ ಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

ವಿಮೋಚನಾ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹದಿಮೂರು ಬಿಡುಗಡೆಯಾಗುವುದು ಹತೋಟಿಗೆ ಬರುವುದು, ಈ ವಿಷಧ ಸೇವನೆಯಿಂದ ತೀವ್ರ ಗುಣವೊಂದಿದುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಪಾತ್ರಿ ಗುಣವಾಗಿದೆ. ಬೆಲೆ: ರೂ. 3/-; ಸ್ಪೆಶಲ್ ರೂ. 5-; ಅಧಿಕಾಧಿಕ ಸ್ಪೆಶಲ್ ರೂ.೬/-[ವಿ. ಪ ಹನ್ನೆರಡಾಣೆ ಪ್ರತ್ಯೇಕ]
Mrs P. DEVEE, P. O. (N. J.)
Tollygunge CALCUTTA
ಸ್ವಾಕಿಸ್ವರು: ಕಣಾಕಂಸಿ, ಮಂಗಳೂರು

ಶ್ರೀ ಎಂ ವಿ ಹೆಗ್ಡೆಯವರು ಬರೆದ
ಸ್ವರಾಜ್ಯ ವಿಜಯ
ಯಕ್ಷಗಾನ ನಾಟಕ.
ಪದ್ಯ-ಅರ್ಥ-ಸಹಿತ
ಅಟ್ಲೀ, ಕ್ರಿಪ್ಸ್, ಅಲೆಕ್ಸಾಂಡರ್, ಪೆಥಿಕ್ ಲಾರೆನ್ಸ್, ಜಿನ್ನಾ, ನೆಹರು, ಪಟೇಲ್, ಗಾಂಧಿ, ಆಜಾದ್, ಶ್ಯಾಮಪ್ರಸಾದ್, ಜೈಪ್ರಕಾಶ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರಧಾರಿಗಳು.
ಓದಬಲ್ಲವರಿಂತೂ ಓದಿ ತಿಳಿಯಬಹುದು, ಓದಲಾರದವರೂ ಓದಿಸಿ ಕೇಳಬಹುದು.
ಬೆಲೆ ಬರೇ 0 3 0
ಹತ್ತಾಣೆ ಸ್ಟಾಂಪು ಕಳುಹಿದರೆ 1 ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.
ಪ್ರತಿಗಳು ಸದಭಾರತ ಪುಸ್ತಕ ಭಂಡಾರ ಉಡುಪಿ, ಅಥವಾ ನವಯುಗ ಪ್ರೆಸ್, ಉಡುಪಿ.
ಇಲಿ ದೊರೆಯುವ ಜಾ.

ಲೋಕಶಾಂತಿ ದ್ರೋಹಿ ಆಗುಹೋಗುಗಳು.

ಕೆಳದ ವಾರ ಲೋಕದ ರಾಜಕೀಯ ರಂಗದ ಕದಡು ಏನೊಂದೂ ತಿಳಿಗೊಂಡಿಲ್ಲ. ಒದಲಿಗೆ ಕಲ್ಮಷ ಹೊಸ ಪೆಚ್ಚಿದಂತಿದೆ. ಭಾರತದಲ್ಲಿನವ ರಾಜ್ಯ ಶಾಸನ ಸಂಬಂಧದ ಪರ್ಯಾಲೋಚನೆಗಳೇ ಹಿಂದಿನ ದಿನಗಳ ಮುಖ್ಯ ವಿಷಯಯೆನ್ನಬಹುದು.

ಲೋಕವೆಂದೂ ಸ್ತಬ್ಧವಾಗಿದ್ದುದಿಲ್ಲ; ಇರಲು ಸಾಧ್ಯವೂ ಇಲ್ಲ. ಆದರೆ ಶಾಂತಿ ಪೂರ್ಣ ಮತ್ತು ಶಾಂತಿ ನಿರ್ಮಾಣ ಚಟುವಟಿಕೆಗಳು ಗೊಂದಲಮಯ ಮತ್ತು ಗೊಂದಲದಾಯೀ ಆಂದೋಲನಗಳನ್ನು ಹಿಂದೆ ಹಾಕಿದ್ದ ದಿನಗಳು ಕಳೆದರೆಡೂ ಲೋಕ ಯುದ್ಧಗಳ ಹಿಂದಿನ ಕಾಲಗಳಲ್ಲಾದರೂ ಇದ್ದುವೆನ್ನಬಹುದು; ಆದರೆ ಕಳೆದ ಮನ್ವಾಯುದ್ಧದ ನಂತರವಂತೂ ಶಾಂತಿಯ ಹೆಸರಿನಿಂದ ಅಶಾಂತಿಯ ತಾಂಡವವೇ ನಡೆದಿದೆ. ಇತ್ತೀಚೆಗಿನ ಕೆಲವುವಾರಗಳಲ್ಲಿ ಈ ಸ್ಥಿತಿ ಹಿಂದೆ ಬರಲಾರದು-ಮುಂದೆ ಹೋಗಲಾರದು ಎಂಬಂತಿದೆ. ಪ್ರಾಪಂಚಿಕ ಸ್ಥಿತಿಯಲ್ಲಿ ಏನೋ ಒಂದು ಮಹತ್ತಾದ ಶೂನ್ಯತೆಯಿದೆ ಎಂಬುದು ಇದರಿಂದ ಸ್ಪಷ್ಟವಾಗಿದ್ದ. ಮಾನವ ಜನಾಂಗದ ಬಹು ಸಂಖ್ಯಾಕ ಸಾಮಾನ್ಯರ ಹಿತಸಾಧನೆಯೇ ಯಥಾರ್ಥ ಆ ಕಾಂಕ್ಷೆ ಅಥವಾ ಅವರ ವಿಜ್ಞಾನವಿಂದ, ಒಂಬಲ್ಲೊಂದು ವಿಧದ ಸ್ವಾರ್ಥಿಗಳ ಕೈಯಲ್ಲೇ ಲೋಕದಮುಖ್ಯ ಸೂತ್ರಗಳಿರುವುದೇ ಆ ಕೊರತೆ ಎಂದೂ ಹೇಸಿದರೆ ತಪ್ಪಾದೀತೆ?

ಚೈನಾದ ಸಮರ

ಕಳೆದ ಎಂದೆರಡು ವಾರಗಳಲ್ಲಿ ಇಡೀ ಪ್ರಪಂಚದ ಲಕ್ಷ್ಯವನ್ನು ವಿಶೇಷ ರೀತಿಯಿಂದಾಕರ್ಷಿಸಿದವಷ್ಟು ಬೆಳೆದಿದ್ದುದೆಂದರೆ ಚೈನಾದ ಕಮ್ಯೂನಿಸ್ಟ್ ಧಾಳಿ. ಮಂಚೂರಿಯವನ್ನು ಸ್ವಾಹಾ ಮಾಡಿ, ಸರಕಾರದ ರಾಜಧಾನಿ ನಾನ್ಕಿಂಗಿನ ಕಡೆಗೆ ಕಮ್ಯೂನಿಸ್ಟ್ ಸೇನೆಗಳು ಬರುಗಾಳಿ ವೇಗದಿಂದ ಧಾವಿಸಿದ್ದುವು. ನಾನ್ಕಿಂಗಿಗೆ 200 ಮೈಲು ಉತ್ತರದಲ್ಲಿದ್ದು ರಾಜಧಾನಿಯ ಹೆಬ್ಬಾಗಿಲಾಗಿರುವ ಶ್ಯುವೋ ನಗರವನ್ನು ಹಿಡಿದುಕೊಳ್ಳಲು 1 ಲಕ್ಷಕ್ಕೂ ಮಿಕ್ಕಿದ ಕಮ್ಯೂನಿಸ್ಟ್ ಸೇನೆಗಳು ಮೂರು ದಿಕ್ಕುಗಳಿಂದ ಮುಂದೊತ್ತಿದ್ದುವು. ಚಿಯಾಂಗ್-ಕೈ-ಶೇಕರ ಸರಕಾರೀ ಸೇನೆಗಳು ಅತ್ಯಧಿಕ ಸಂಖ್ಯೆಯಲ್ಲಿ ಈ ಪ್ರತಿಭಟನೆಗಣಿಯಾಗಿದ್ದು ಶ್ಯುವೋದಿದಿರಿನ ಮಹಾ ಕಾಲುವೇ ದಡದಲ್ಲಿ ಕಠಿಣ ಯುದ್ಧ ನಡೆದು ಕಮ್ಯೂನಿಸ್ಟ್ ಸೇನೆಗಳು ಪ್ರಚಂಡ ಅಪಜಯಕ್ಕೀಡಾದುವೆಂದು ತಿಳಿದು ಬಂದಿದೆ. ಸುಮಾರು 37,000 ಕಮ್ಯೂನಿಸ್ಟ್ ಸೈನಿಕರು ಸಾವು ನೋವುಗಳಿಗೀಡಾಗಿ ಉಳಿದವರು ಚಲ್ಲಾಪಿಲ್ಲಿಯಾಗಿ ಹಿಮ್ಮೆಟ್ಟಿ ನಾನ್ಕಿಂಗಿನ ಅಪಾಯವೊನ್ನೆಗೆ ನಿವಾರಣೆಯಾದುದರಿಂದ ಸರಕಾರೀ ವಕ್ಷದಲ್ಲಿ ಭರವಸೆ ಮತ್ತು ನವಚೇತನ ಪ್ರವಹಿಸಿತ್ತಿದೆ. ಆದರೆ ಚೈನಾದ ಯುದ್ಧ ನೆಂಬುದು ಆಗಾಗ ಇಂತಹ ಏರು ತಗ್ಗುಗಳನ್ನುನಿರ್ಮಿಸುವಂತಹದಾದ್ದರಿಂದ ಇವುಗಳಿಂದ ಯುದ್ಧದ ಪರಿಣಾಮವನ್ನು ಊಹಿಸಲಾಗುವದಿಲ್ಲ.

ಜಾಗತಿಕ ಸಂಘದಲ್ಲಿ

ಪ್ಯಾರಿಸಿನಲ್ಲಿ ಸಂಯುಕ್ತ ರಾಷ್ಟ್ರ ಸಂಘದ ಟ್ರಸ್ಟೀಷಿಪ್ ಕಮಿಶನಿನ ಮುಂಬೆನೊದಲು ಹಿಟ್ಲರನ ವಕವಿದ್ದು ಈಗ ಟ್ರಸ್ಟಿಯಾಡಳಿತೆಯಲ್ಲಿರುವ ನೈಋತ್ಯಾಫ್ರಿಕವನ್ನು ದಕ್ಷಿಣಾಫ್ರಿಕದೊಂದಿಗೆ ಸೇರಿಸಿಬಿಡಬೇಕೆಂದು ದಕ್ಷಿಣಾಫ್ರಿಕ ಸರಕಾರದ ಪರವಾಗಿ ಬಂದಿದ್ದ ಸೂಚನೆಯನ್ನು ಭಾರತದ ಸದಸ್ಯೆ ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ವಿರೋಧಿಸಿದ್ದಾರೆ. ಅದಕ್ಕಾಗಿ ಆಫ್ರಿಕದ ಮಲಾನ್ ಸರಕಾರದ ಸದಸ್ಯರ ನಂಜು ಮಾತುಗಳನ್ನು ಶ್ರೀಮತಿಯವರು ಕೇಳಬೇಕಾಗಿ ಬಂತು. ನೈಋತ್ಯಾಫ್ರಿಕ ಸಂಬಂಧದ ಸೂಚನೆ-ಪ್ರತಿಸೂಚನೆ-ತರ್ಕ-ವಿತರ್ಕಗಳು ಸಂಯುಕ್ತ ರಾ. ಸಂಘದ ಸಮಿತಿಯಲ್ಲಾಗುತ್ತಿವೆ.

'ಆಟಂಬೋಂಬಿಗೆ ಬಹಿಷ್ಕಾರ ಹಾಕಬೇಕು. ಪಂಚ ಮಹಾ ರಾಷ್ಟ್ರಗಳು ಒಂದು ವರ್ಷದೊಳಗೆ ತಮ್ಮ ಸೇನೆಗಳನ್ನು ನೂರೆನ್ನೇ ಒಂದಂಶದಷ್ಟು ತಗ್ಗಿಸಿಕೊಳ್ಳಬೇಕು" ಎಂದು ಸಂಯುಕ್ತ ರಾಷ್ಟ್ರ ಸಂಘದ ರಾಜಕೀಯ ಸಮಿತಿಯಲ್ಲಿ ರಶ್ಯವು ತಂದಿದ್ದ ಸೂಚನೆಯು ಬಹುಮತ ದೊರೆಯದೆ ಬಿದ್ದು ಹೋಯಿತು.

ಎಷ್ಟೋ ಕಾಲದಿಂದ ಪರಮಾವಧಿ ಘರ್ಷಣೆಯಲ್ಲಿರುವ ಬರ್ಲಿನ್ ಸಮಸ್ಯೆಯ ಕಡೆಗೆ ಸಂಯುಕ್ತ ರಾಷ್ಟ್ರಕೂಟದ ವಿಶೇಷ ಲಕ್ಷ್ಯವೀಗ ಬಿದ್ದಿದೆ. ಸಂಘದ ಅಸ್ಪೆಲಿಯನ್ ಅಧ್ಯಕ್ಷ ಡಾ! ಹೆರ್ಬರ್ಟ್ ಎವಾಟ್ ಮತ್ತು ಪ್ರಮುಖ ಕಾರ್ಯದರ್ಶಿ ಟ್ರಿಗ್ವಿ ಲೀ ಇವರು ಜತೆಯಾಗಿ ಸ್ಟಾಲಿನ್ ಅಟ್ಲಿ, ಟ್ರುಮೇನ್ ಮತ್ತು ಫ್ರೆಂಚ್ ಪ್ರಧಾನಿ ಕ್ವೆಯಿಲ್ಲಿಯವರಿಗೆ ಒಂದು ವಿಜ್ಞಾಪನಾ ಪತ್ರ ಕಳುಹಿಸಿ ಬರ್ಲಿನ್ ಸಮಸ್ಯೆಯನ್ನು ನಿವಾರಿಸಬೇಕೆಂದೂ, ಅದು ಶಾಂತಿಗಪಾಯವಿದ್ದು ಸಂಯುಕ್ತ ರಾಷ್ಟ್ರ ಸಂಘದ ಕಾರ್ಯವನ್ನೇ ಕೆಡಿಸುತ್ತಿದೆಯೆಂದೂ ಎಚ್ಚರಿಕೆಯಿಂದ ಕೇಳಿಕೊಂಡಿದ್ದಾರೆ. ಅದಕ್ಕಾಗಿ ರಾಷ್ಟ್ರ ಸಂಘದ ವಿಶೇಷ ಮಹಾ ಸಭೆಯು ಸದ್ಯದಲ್ಲೇ ಜರಗಲಿದೆಯೆಂದು ತಿಳಿದು ಬರುತ್ತದೆ.

ಪಶ್ಚಿಮ ಜರ್ಮನಿಯ ರ್ಹೂರ್ ಪ್ರದೇಶದಲ್ಲಿದ್ದ ಇದ್ದಲು, ಕಬ್ಬಿಣ, ಉಕ್ಕು ಮುಂತಾದುವುಗಳ ಅತಿ ದೊಡ್ಡ ಹಾಗೂ ರಾಷ್ಟ್ರಾವಶ್ಯ ಉದ್ದಿಮೆಗಳು ನಾಜೀ ಪರಾಭವದ ನಂತರ ಇಂಗ್ಲೆಂಡು ಅಮೆರಿಕನರ ಪಾಲಿನವಾಗಿದ್ದವು. ಈಗ ಅಲ್ಲಿಯ ಆಂಗ್ಲೋ-ಅಮೆರಿಕಾಧಿಕಾರಿಗಳು ಆವೆಲ್ಲವನ್ನೂ ಜರ್ಮನರಿಗೇನೇ ಪುನಃ ಕೊಡುವ ನಿರ್ಧಾರವನ್ನು ಜಾಹೀರು ಮಾಡಿದ್ದಾರೆ. ಇದಕ್ಕೆ ಫ್ರಾನ್ಸು ಮತ್ತು ಪೋಲೆಂಡು ಸರಕಾರಗಳು ವಿರೋಧ ಸೂಚಿಸಿವೆ.

ಇತ್ತ ಬರ್ಲಿನ್ ನಗರ ವಲಯದಲ್ಲಿ ರಶ್ಯ ಮತ್ತು ಆಂಗ್ಲೋ ಅಮೆರಿಕಗಳೊಳಗಿನ ಸ್ಪರ್ಧೆ ಒಂದಲ್ಲೊಂದು ರೂಪದಿಂದ ನಡೆದೇ ಇದೆ. ಬರ್ಲಿನ್ ಸರಹದ್ದುಗಳ ಮೇಲೆ ಹಾರಾಡುವ ಪರಕೀಯ ವಿಮಾನಗಳನ್ನು ಈವು ಜಾಲುಮೆಯಿಂದ ಇಳಿಸುವೆವೆಂದು ರಶ್ಯವು ಬೆದರಿಕೆ ಹಾಕಿ, ಆ ಪ್ರಕಾರ ಒಂದೆರಡು ಬಾರಿ ಮಾಡಿದೆ. ಬ್ರಿಟಿಷ್ ಚಿಹ್ನೆಯಿರುವ ವಿಮಾನಗಳಿಗೇನಾದರೂ ಹಾಗೆ ಮಾಡಿದರೆ ತಾವಾ ಕಠಿಣ ಕಠಿಣ ಯೋಜನೆ ಮಾಡಬೇಕಾಗುವದೆಂದು ಬ್ರಿಟಿಷ್ ಸರಕಾರವು ರಶ್ಯಕ್ಕೆ ಎಚ್ಚರಿಕೆ ಕೊಟ್ಟಿದೆ.

ಇತರ ವಿವಾದಗಳು

ಇಂಡೋನೇಶಿಯದ ವಿವಾದ ಮತ್ತು ಇತರ ಜಗಳಗಳು ಇನ್ನೂ ತೀರ್ಮಾನವಾಗದಿದ್ದು ಡಚ್ ಸರಕಾರವು ಹೊಸ ಮಾತುಕತೆಗಳನ್ನು ನಡೆಸುವ ಸೂಚನೆಯಿತ್ತಿದೆ.

ಗ್ರೀಸಿನ ಅಂತರ್ಯುದ್ಧವು ಯಥಾ ಪ್ರಕಾರ ಸಾಗಿದ್ದು, ಅಲ್ಲಿಯ ಸಮ್ಮಿಶ್ರ ಮಂತ್ರಿ ಮಂಡಲಿಯ ಪ್ರಧಾನ ಮಂತ್ರಿ ಪೆವೀಸ್ಟೋಕ್ಲೀಸ್ ತನ್ನ ಸ್ಥಾನಕ್ಕೆ ರಾಜೀನಾಮೆಯಿತ್ತಿದ್ದಾರೆ. ಈಗ ರಾಜಭಕ್ತ ಪಕ್ಷದ ಟ್ಸಾಲ್ಡಾರಿಸ್ಸರು ಹೊಸ ಸರಕಾರ ರಚನೆಗೆ ಮುಂದಾಗಿದ್ದಾರೆ.

ಫ್ರಾನ್ಸಿನಲ್ಲಿ ಇತ್ತೀಚೆಗಾದ ಕಾನ್ಸಿಲ್ ಚುನಾವಣೆಗಳಲ್ಲಿ ಡೀಗೋಲೆ ಪಕ್ಷಕ್ಕಾದ ವಿಜಯದ ಪರಿಣಾಮವಾಗಿ ಫ್ರಾನ್ಸ್ ಮಂತ್ರಿ ಮಂಡಲದಲ್ಲಿ ಪುನಃ ಬಿಕ್ಕಟ್ಟಿದ್ದಿದೆ.

ಪೆಲಸ್ಟೈನಿನ ಕಾಳಗವು ಹಾಗೆಯೇ ಇದ್ದು ದಕ್ಷಿಣ ಪೆಲಸ್ಟೈನಿನಲ್ಲಿ ಯೆಹೂದಿಗಳು ಆಕ್ರಮಣ ಹೋರಾಟ ಹೂಡಿದ್ದಾರೆ. ಒಂದೆಡೆಯ ಹೋರಾಟವನ್ನು ನಿರೀಕ್ಷಿಸುತ್ತಿದ್ದ ರಾಷ್ಟ್ರ ಸಂಘದ ಇಬ್ಬರು ನಿರೀಕ್ಷಕರನ್ನು ಯೆಹೂದೀ ಪೋಲೀಸರು ದಸ್ತಗಿರಮಾಡಿ ಬೇರೆಡೆಗೊಯ್ದುಬಿಟ್ಟರು. ಝಿಯೋನ್ ಸರಕಾರವು ಯೆಹೂದಿಗಳಿಗೆ ಸಹಾಯ ಕೊಡುವದನ್ನು ಝಿಯೊನಿಸ್ಟ್ಗಳೇಕೆಯದ ಓರ್ವ ಮಂತ್ರಿ ಬಹಿರಂಗವಾಗಿ ಒಪ್ಪಿದ್ದಾರೆ. ಅದಬರು ಝಿಯೋನ್ ಸರಕಾರಕ್ಕೆ ನಿಷೇಧ ಸೂಚನೆ ಕೊಟ್ಟಿದ್ದಾರೆ.

ಭಾರತದ ಘಟನೆ

ಭಾರತ ಸರಕಾರದ ಕಾನೂನು ಮಂತ್ರಿ ಡಾ. ಅಂಬೇಡ್ಕರರ ಅಧ್ಯಕ್ಷತೆಯಲ್ಲಿ ಘಟನಾ ಸಮಿತಿಯು ನೇಮಿಸಿದ್ದ 'ರಾಜ್ಯಾಂಗ ಶಾಸನ ಕರಡು ತಯಾರೀ ಸಮಿತಿ'ಯು ಒಪ್ಪಿಸಿದ್ದ ನಕಲನ್ನು ಚರ್ಚೆಗೆತ್ತಿಕೊಳ್ಳುವ ಸೂಚನೆಯ ಸಂಬಂಧವಾಗಿ ಇದೇ ತಾ. ೧೦ರಿಂದ 9ರವರೆಗಿನ ಐದು ದಿನಗಳ ವರೆಗೆ ಘಟನಾ ಸಮಿತಿಯಲ್ಲಿ ಭಾಷಣಗಳ ಸುರಿ ಸುಳಿಗಳಾದುವು. ಈ ಸುದೀರ್ಘ ದಿನಗಳ ಕಾರ್ಯಕಲಾಪವು ರಾಜ್ಯ ಘಟನೆಗೆ ಪೂರ್ಣಾಕಾರ ಕೊಡಲಾಗಿ ಕೊನೆಯು ಮಂಜೂರಾತಿ ... ಹಕ್ಕಾರ್ಯದ ಪೀಠಿಕೆ ಮಾತ್ರ. ಕೇಂದ್ರ ಮತ್ತು ಪ್ರಾಂತೀಕಾಧಿಕಾರಗಳು--ಆರ್ಥಿಕ ವ್ಯವಸ್ಥೆ-ಅಲ್ಪ ಸಂಖ್ಯಾಕರಿಗೆ ಸ್ಥಾನ ಕಾದಿಡುವ ಕ್ರಮ-ಮಂತ್ರಿಮಂಡಲಿ ಮತ್ತು ಗವರ್ನರ್ರ ಸ್ಥಾನ ನಿರ್ದೇಶ-ಮತ್ತಿತರ ಆಂಗ್ಲೋಪಾಂಗಗಳ ಸ್ಥೂಲ ಪರಿಚಯಅಷ್ಟೇ ಈ ಬಾರಿಯ ಭಾಷಣಗಳಲ್ಲಾಗಿದ್ದುವು. 60ಕ್ಕೂ ಮಿಕ್ಕಿದ ಸದಸ್ಯರು ಭಾಷಣಗಳನ್ನಿತ್ತು ವಿವಿಧಾಭಿಪ್ರಾಯಗಳನ್ನು ಮಂಡಿಸಿದ್ದರು. ಇದೇ ತಾ 9ರಲ್ಲಿ ಈ ಪುಸ್ತಾವನೆಯನ್ನು ಮುಗಿಸಿಕೊಂಡ ಘಟನಾ ಸಮಿತಿಯು ಅದರ ಕಲಮುವಾರು ಸವಿಸ್ತಾರ ಚರ್ಚೆಗಳಿಗಾಗಿ ಇದೇ ತಾ 15ಕ್ಕೆ ಪುನಃ ಪ್ರಾರಂಭಿಸಿದೆ. ದಶಂಬರ್ 9ರೊಳಗೆ ರಾಜ್ಯಾಂಗ ರಚನಾ ಸಂಬಂಧದ ಕೆಲಸವನ್ನು ಪೂರೈಸಬೇಕೆಂದು ಘಟನಾ ಸಮಿತಿ ಅಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ನಿರೀಕ್ಷೆ. ಅವರೆ ಮೂಲಘಟನೆಯ ವಿವಿಧಾಂಗಗಳಿಗೆ 3000ಕ್ಕೂ ಮಿಕ್ಕಿದ ತಿದ್ದುಪಡಿ ಸೂಚನೆಗಳು ಬಂದಿದ್ದು ಇವೆಲ್ಲವುಗಳನ್ನು ಆ ಅವಧಿಯೊಳಗೆ ಇತ್ಯರ್ಥಿಸುವುದು ಅಸಾಧ್ಯವೇ ಸರಿ.

For Banking Service
in Trade, Industry & Agriculture
approach
THE AGRICULTURAL & INDUSTRIAL BANK Ltd.,
(Established in 1934)
Head Office: **COONDAPOOR, S K**

Branches:

1	Ankola,	7	Gokarn,	13	Nagar,
2	Belgaum,	8	Haveri,	14	Shimoga,
3	Bhatkal,	9	Hubli,	15	Sirsi,
4	Koondapoor,	10	Karvar,	16	Somwarpet,
5	Dharwar,	11	Kumta,	17	Virajpet,
6	Gadag,	12	Mangalore,	18	Honavar.

19 384, M. Jaipuria House, Kalbadevi Road, BOMBAY, 2.

Current, Savings bank, and Fixed deposits are accepted.

For Terms, apply to the nearest Branch.

Coondapoor, 29-9-1948.

K. Vittaldas Shenai,
Managing Director.

ಭಾರತದ ರಾಜ್ಯಶಾಸನ ನಿರ್ಮಾಪಕ ಚರ್ಚೆ.

ನೆಹರೂ ನಿರ್ದೇಶ

ಭಾರತವು 'ಕಾಮನ್ ವೆಲ್ತ್'ನೊಳಗೆ ಇರುವುದೋ ಅದರ ಸಂಬಂಧ ಕಡಿದು ಕೊಳ್ಳುವುದೋ ಎಂಬ ಪ್ರಶ್ನೆಯು ಸಂಬಂಧವಾಗಿ ಪಂಡಿತ ನೆಹರುಗಳು ಕಳೆದ ವಾರದ ಫೆಟನಾ ಸಮಿತಿ ಸಭೆಯಲ್ಲಿ ತನ್ನ ಲಂಡನ್ ಅನುಭವದ ಆಧಾರದಿಂದ ಸ್ಪಷ್ಟ ದಿಗ್ದರ್ಶನ ಮಾಡಿಕೊಟ್ಟಿದ್ದರು. 'ನಾವು ಅಗಾಗ ಹೇಳುತ್ತಾ ಬಂದಿರುವಂತೆ ಎಲ್ಲಾ ರಾಷ್ಟ್ರಗಳೊಡನೆ, ಕಾಮನ್‌ವೆಲ್ತಿನೊಡನೆ, ಇಂಗ್ಲಾಂಡಿನೊಡನೆ ಮೈತ್ರಿಯನ್ನಪೇಕ್ಷಿಸುವೆವಂಬ ಮಾತನ್ನೇ ನಾನು ಅಲ್ಲಿಯೂ ಹೇಳಿದ್ದಿದೆ ಹೊರತು ಬೇರಾವದೇ ವಿಷಯದಲ್ಲಿ ಎಲ್ಲಿಯೂ ಯಾವ ಒಪ್ಪಿಗೆಯನ್ನೂ ಕೊಟ್ಟು ಬಂದುದಿಲ್ಲ. ಭಾರತ ಮತ್ತು ಕಾಮನ್‌ವೆಲ್ತ್ ಸಂಬಂಧದ ನಿರ್ಧಾರ ಮಾಡತಕ್ಕ ಪೂರ್ಣಾಧಿಕಾರ ಫೆಟನಾ ಸಮಿತಿಯದೇ. ಆದು ತನ್ನ ಉದ್ದೇಶ ನಿರೂಪಣೆಯಲ್ಲಿ 'ಸ್ವತಂತ್ರ ಪರಮಾಧಿಜನತಾ ರಾಜ್ಯ'ವನ್ನೇ ಗುರಿಯಾಗಿ ಇಟ್ಟುಕೊಂಡಿದೆ. ಅದಕ್ಕೆ ಚ್ಯುತಿಬಾರದಂತೆ, ಈ ಮಧ್ಯಾವಧಿಯ ಪ್ರಾಮುಖ್ಯ ಬದಲಾವಣೆಗಳನ್ನು ಗಮನಿಸಿ, ಇತ್ಯೆಗೂ ಸಮಾನ ಹಿತಕರವಾಗುವಂತಹ ಸಂಬಂಧವಿಟ್ಟುಕೊಳ್ಳುವ ವಿಧಾನವನ್ನು ಫೆಟನಾ ಸಮಿತಿ ಅಂಗೀಕರಿಸಬಹುದು" ಎಂದು ಅವರು ತನ್ನ ಅಭಿಪ್ರಾಯವನ್ನು ವಿಶದೀಕರಿಸಿದ್ದರು. ಇದೇ ಅಭಿಪ್ರಾಯವನ್ನು, ತಾ 12ರಲ್ಲಿ-ತಾನು ಲಂಡನ್ನಿನಿಂದ ಮರಳಿದ ನೇಲೆ ಇದೀಗ ಪ್ರಥಮ ಬಾರಿ ಭೇಟಿಯಾದಾಗ ತ್ರಿಕಾ ಪ್ರತಿನಿಧಿಗಳ ಸಭೆಯಲ್ಲಿ ಪಂಡಿತ ನೆಹರು ಮತ್ತಷ್ಟು ಸ್ಪಷ್ಟೀಕರಿಸಿದ್ದಾರೆ:"ಚಾರಿತ್ರಿಕ ಕಾರ್ಯ ಪರಂಪರೆಗಳಿಂದಾಗಿ ಭಾರತವು ಸಂಪೂರ್ಣವಾಗಿ ಸ್ವತಂತ್ರ ಪರಮಾಧಿಕಾರೀ ಜನತಾ ರಾಜ್ಯವೇ ಆಗಲಿನಿ. ಆದ್ದರಿಂದ 'ಕಾಮನ್‌ವೆಲ್ತ್' ಸಂಬಂಧದ ಪ್ರಶ್ನೆಯು ಒಂದು ಮಿತಿಯೊಳಗಿನದು. ಈ ಕಾಲದಲ್ಲಾನ ಸ್ಥಿತಿಯಿದೆಯೋ ಇಂತಹ ಪ್ರಪಂಚದಲ್ಲಿ ಸಂಬಂಧಗಳನ್ನೂ ಜೋಡಣೆಗಳನ್ನೂ ಕಡಿದು ಹಾಕಿಕೊಂಡು ತಾನೇ ತಾನಾಗಿರುವದು ಅಪೇಕ್ಷಣೀಯವಲ್ಲ. ಸಂಯುಕ್ತ ರಾಷ್ಟ್ರ ಸಂಘದ ಸಂಬಂಧಗಳಲ್ಲದೆ ಕಾಮನ್‌ವೆಲ್ತ್-ರಾಷ್ಟ್ರಗಳೊಳಗೆ ಮುಂದುವರಿಯುತ್ತಲೇ ಬಂದಿರುವ ಸಂಬಂಧಗಳು ಪ್ರತ್ಯೇಕವಿನಿ. ಇವುಗಳಲ್ಲಿ ಅನುಕೂಲತೆ ಮತ್ತು ಪ್ರತಿಕೂಲತೆಗಳೆರಡೂ ಇವೆ. ಅದನ್ನೆ, ನಮ್ಮೀ ಹೊಸ ಹಾದಿಯ ದೃಷ್ಟಿಯಿಂದ ನೋಡಲ್ಬಟ್ಟಲ್ಲಿ ಸಂಬಂಧಪಟ್ಟ ಎಲ್ಲರಿಗೂ ಪರಸ್ಪರ ಹಿತಗಳನ್ನೆಸ್ಟೇ ದೊರಕಿಸಬಲ್ಲ ಒಂದು ಸಂಬಂಧವಿದು" ಎಂದು ನೆಹರುಗಳಂದಿದ್ದಾರೆ. ಭಾರತಕ್ಕೆ ಸಂಬಂಧಿಸಿದ ಮಿಕ್ಕ ವಿಷಯಗಳ ಕುರಿತು ಪಂಡಿತ ನೆಹರುಗಳು ಹೊರಗೆಡಹಿರುವ ಅಭಿಪ್ರಾಯ ಹೀಗೆ :-

'ಭಾರತದಲ್ಲಿರುವ ಫ್ರೆಂಚ್ ವಸ್ತು ಪೋರ್ಚುಗೀಸ್ ಭಾಗಗಳಿಗೆ ಭಾರತದೊಂದಿಗೆ ಲೀನಗೊಳ್ಳುವ ಏಕಮಾತ್ರ ಭವಿಷ್ಯ ವಿದೆ; ಆದರೆ ಫ್ರೆಂಚ್ ರಿಪಬ್ಲಿಕ್‌ನೊಡನೆ ಈ ಕುರಿತು ಫೆಡರೇಶನ್‌ಗೇಳುವದಾಗಲೀ, ಸದ್ಯ ತನ್ನ ಒಡಜಣಿಗಳಲ್ಲೇ ಮುಳುಗಿರುವ ಫ್ರಾನ್ಸನ್ನು ಉಪದ್ರವಿಸುವದಾಗಲೀ ನಮ್ಮ ಉದ್ದೇಶವಲ್ಲ. ಇದೇ ಮಾತು ಪೋರ್ಚುಗೀಸರಿಗೂ ಅನ್ವಯಿಸುತ್ತದೆ. ಆದರೆ ಇವೆರಡರ ಆಧೀನದ ಭಾರತ ಸ್ಥಳಗಳು ತಕ್ಕ ಕಾಲದಲ್ಲಿ ಭಾರತದೊಂದಿಗೆ ಸೇರಿಕೊಳ್ಳಲುಬದ್ಧವಿವೆ-ಈಗ ಸಂಯುಕ್ತ ರಾಷ್ಟ್ರ ಸಂಘದಲ್ಲಿರುವ ದಕ್ಷಿಣಾಫ್ರಿಕದ ಹಿಂದೀಯರ ಸಂಕಷ್ಟಗಳ ಸ್ಪರ್ಶೆಯ ಕುರಿತು ಭಾರತವು ಇಷ್ಟೊಂದು ಆಸಕ್ತಿ ವಹಿಸಿರುವದು ವರ್ಣ ದ್ವೇಷವನ್ನು ನಿರ್ಮೂಲಿಸಬೇಕೆಂಬುದಕ್ಕಾಗಿ-ಹೃದಯಬಾಧೆಯನ್ನು ಭಾಷಾವಾರಾಗಿ ವಿಜೃಂಭಿಸುವಂತಿಲ್ಲ-ಸದ್ಯ ಭಾರತ ಮತ್ತು ಪಾಕಿಸ್ತಾನಗಳೊಳಗಿನ ಘೋರಕಲಿಯೆಂತಹದ್ದಾದರೂ ಕೊನೆಗೆ ಇವೆರಡೂ ಪರಸ್ಪರ ಸಹಕಾರ ಮತ್ತು ನಿಕಟ ಸಂಬಂಧವಿಟ್ಟುಕೊಳ್ಳುವಂತಾಗುವುದು' ಎಂದನಿನಲ್ಲಿ ತನ್ನ ಖಾಸಗೀ ಸಂಭಾಷಣೆಗಳ ಕುರಿತ ನೆಹರು ಹೇಳಿದರು-"ಇಂಗ್ಲಾಂಡಿನಲ್ಲಿದ್ದಷ್ಟು ವಾಗ ಎರಡು ಬಾರಿ ಔತಣ ಕೂಟಗಳಲ್ಲಿ ಮಾತ್ರೊಂದು ಬಾರಿ ಸನ್ಮಾನ ಸಂಭ್ರಮದಲ್ಲಿ, ಹೀಗೆ ಮೂರು ಸಲ ನನಗೆ ಚರ್ಚಿಲ್ಲರ ಭೇಟಿಯಾಗಿತ್ತು. ಆಗ ನಾವು ಮಾತಾಡಿಕೊಂಡುದು ತೀರಾ ಸ್ವಲ್ಪ- ಹೀದು ಸಲ ಮಾತ್ರ ಕುಸು ಉದ್ದ ಸಂಭಾಷಿಸಿದೆವು; ಆದರೆ ಹೆಚ್ಚಾಗಿ ಗತ ಕಾಲದ ವಿಷಯಗಳನ್ನೇ ಮಾತಾಡಿದ್ದೆವಲ್ಲದೆ ಭವಿಷತ್ಕಾಲದವುಗಳನ್ನಲ್ಲ. ಒಂದು ಪ್ರಶ್ನೆ ಅವರು ನನಗೆ ಕೇಳಿದುದೆಂದರೆ 'ನಿಮ್ಮಲ್ಲಿಯ ಭೂಪದ್ಧತಿಯ ಕುರಿತು ನೀವೇನು ಮಾಡತಿದ್ದೀರಿ' ಎಂಬುದೇ. ಜಮೀನ್ದಾರೀ ಪದ್ಧತಿಯನ್ನು ಬರ್ಖಾಸ್ತು ಪಡಿಸಿ, ಪರಿಹಾರ ಕೊಟ್ಟು ಭೂಮ್ಯುತ್ಪತ್ತಿಯನ್ನು ಮುಕ್ತಾಯಗೊಳಿಸುತಿದ್ದೇನೆ, ಎಂದು ನಾನು ಕೇಳಿದಾಗ ಚರ್ಚಿಲ್ 'ಭಾರತದ ಒಳ್ಳೆಯತನ ನದ್ದತಿಯಲ್ಲಿ ದೋಷವಿದೆ ಎಂದು ನಾನು ಬಗೆದಿದ್ದೆನೆಂಬ ದೂ, ಕೆಲಕಾಲಕ್ಕೆ ಮೊದಲೇ ನಾನು ಸ್ವಕಟ ಅಂತಹ ಕಾರ್ಯಕ್ಕೆ ಕೈ ಹಾಕಿದ್ದೆ ಎಂಬುದೂ ನಿಮಗೆ ಗೊತ್ತಿರಬಹುದೆ ಚೀರೆ ಕೆಲವು ಸಂಗತಿಗಳು ನಡೆದು ತಡವಾಯಿತು....." ಎಂದೆಲ್ಲಾ ಮಾತಾಡಿದ್ದರು. ರಶ್ಯದ ವಿದೇಶ ಮಂತ್ರಿ ವಿಶಿನ್ಸ್ಕಿಯೊಂದಿಗೆ ಮೂರು ಬಾರಿ ದೀರ್ಘ ಸಂಭಾಷಣೆ ನಡೆಸಿದ್ದೆ. ಸಿದ್ಧವಿದ ಸಮಸ್ಯೆಗಳನ್ನಷ್ಟೇ ಅಲ್ಲ, ಇಡೀ ಜಗತ್ತಿನ ವಿಷಯವಾಗಿಯೂ ನಾವು ಕೂಲಂಕಷವಾಗಿ ಒಳ್ಳೇ ಆಕರ್ಷಣೀಯ ಚರ್ಚೆ ನಡೆಸಿದ್ದೆವು. ಈ ಮಾತುಕತೆಗಳು ವೈಶ್ವಿ ಪೂರ್ಣವಾಗಿದ್ದುವೆಂದಲ್ಲದೆ ಈಗ ಹೆಚ್ಚೆಗೇನೂ ಹೇಳಲಿಕ್ಕಿಲ್ಲ ವಿಶಿಸ್ಸ್ಕಿಯು ಮೊನ್ನೆಯ ವಿಶೇಷ ಬಿಡುಸು ಮಾತುಗಳನ್ನಾಡುತ್ತಾರಿದರೂ ಗಮ್ಮತಿನ ಊಟ ಮಾಡಿದ ಮೇಲೆ ನಾಕಷ್ಟು ಮೆತ್ತಗಾಗಿ ಬಿಡುತ್ತಾರೆ" ಎಂದು ಪಂಡಿತಜೀ ವಿನೋದವಾಡಿದರು.

ಸ್ವಾಂತಿಕ ಪುನರ್ರಚನೆ

ಪ್ರಕೃತ ನಿರ್ಮಾಣದಲ್ಲಿರುವ 'ಭಾರತ ಫೆಟನ' ಯಲ್ಲಿ ಭಾಷಾವಾರು ಪ್ರಾಂತ್ಯಗಳೆಂತೂ ಮೂಡಿ ಬರುವಂತಿಲ್ಲ; ಮುಂದೆ ಒಹುಕಾಲದ ವರೆಗೆ ಜಿಲ್ಲೆಗಳ ನಿರ್ಮಾಣವಾಗದು; ಎಂಬ ನಿರ್ಣಯ ಹುಟ್ಟಿಸುವ ತೀಕ್ಷ್ಣ ಮಾತುಗಳು ನೆಹರು, ವಲ್ಲಭಾಯಿ ಗಳಂಥವರ ಬಾಯಿಯಿಂದೀಗ ಮೇಲಿಂದ ಮೇಲೆ ಬರಹತ್ತಿವೆ. ಹೈದರಾಬಾದನ್ನು ಭಾಷಾವಾರಾಗಿ ವಿಂಗಡಿಸುವಂತಿಲ್ಲವೆನ್ನುತ್ತಾ ಸತ್ಕ್ರಿಯಾಪ್ರಸ್ತಾವಿಗಳ ಮುಂದೆ ಪಂಡಿತ ನೆಹರುಗಳಂದರು: 'ಭಾರತದಲ್ಲಿ ವಿಶೇಷ ಕ್ರಮಬದ್ಧವಾಗಿ ಪ್ರಾಂತ್ಯಗಳನ್ನು ಪುನರ್ರಚಿಸುವ ಯೋಚನೆಯನ್ನು ಕಾಲಾನಂತರ ನಾವು ಮಾಡಬಹುದು. ಆದರದು ಬಹು ದೂರದ ಭವಿಷತ್ಕಾಲದಲ್ಲಿ. ಹಾಗೆ ವಿಭಾಗಿಸುವ ಯಾವುದೇ ಆಲೋಚನೆಯನ್ನು ಈ ಕಾಲದಲ್ಲಿ ಮಾಡಿದ್ದಾದರೆ, ಆದರಿಂದೇಳುವ ಗಡಿಬಿಡಿ ಮತ್ತು ಅರಾಜಕತೆಯಿಂತಹದಾಗಬಹುದೆಂದರೆ ಆವು ಇಡೀ ದಕ್ಷಿಣ ಭಾರತವನ್ನೇ ಸಂಪೂರ್ಣ ಅಡಿಮೇಲು ಮಾಡಿ ಬಿಡಬಹುದು!'-ಈ ನಾನು ತು ಕೇಳಿ 'ನೆಹರುಗಳು ಕೂಡಾ ಇಂತಹ ಅಸಂಬದ್ಧವಾಡುವದೆ!' ಎಂದು ಪಕ್ಷಿಣ ಭಾರತೀಯರು ಪೇಚಾಡ್ಕೊಳ್ಳುತ್ತಿರಬಹುದು. ಬೇರೆ ಕೆಲವರೂ ಫೆಡರೇಷನ್‌ಗಾಗಿ ರಂಭಿಸಿದ್ದಾರೆ. ಅಂತರಾಳದಲ್ಲಿ ಗುಜರಾತಿನ ಹಿತವೊಂದನ್ನೇ ಹುರುಗಿಸಿಕೊಂಡ ಶ್ರೀ. ಕೆ. ಎಮ್. ಮುನ್ಷಿಗಳ ಕೆಲವು ಉರಿವಾತುಗಳು ಸಂಬಂಧಪಟ್ಟವರ ಮೈಯುರಿಸುವಂತಹವಿವೆ: "ಭಾಷಾವಾದವನ್ನು ಹಿಟ್ಲರ್‌ಶಾಹಿ, ಫೆಸಿಸಮ್ ಮತ್ತು ವರ್ಣವಾದದಂತೆಯೇ ಗಣಿಸಿ ವಿರೋಧಿಸಿ ಹೋರಾಡದೆ ಬಿಟ್ಟರೆ, ಅದು ಭಾರತವು ಹೊಸತಾಗಿ ಸಂಪಾದಿಸಿಕೊಂಡ ಸ್ವಾತಂತ್ರ್ಯಕ್ಕೊಂದು ಕಂಟಕವಾಗಿ ಪರಿಣಮಿಸಲಿದೆ" ಎಂದು ಮುನ್ಸಿಗಳಂದಿದ್ದಾರೆ. ಇಂತಹ ಪ್ರಲಾಪಗಳಲ್ಲೇ ಭಾರತ ಸ್ವಾತಂತ್ರ್ಯದ ಅವನಯ ಬೀಜವಿದೆ ಹೊರತು ಭಾಷಾನ್ವಯ ಪ್ರಾಂತ್ಯ ರಚನೆಯಲ್ಲಿಲ್ಲವೆಂಬುದು ಖಂಡಿತ!

ಮುಂದಿನ ಸುಖ ಸೌಳರ್ಯಕ್ಕಾಗಿ
ಇಂದೇ ಮುಂಜಾಗ್ರತೆ ವಹಿಸುವುದು

ಜಾಣತನವಲ್ಲವೆ?

ಕಡಿಮೆ ಉತ್ಪತ್ತಿಇದ್ದು, ಸ್ವಲ್ಪ ಸ್ವಲ್ಪವನ್ನಾದರೂ ಉಳಿಸಬೇಕೆನ್ನುವವರಿಗೆ ಅತ್ಯನುಕೂಲವಾದ ಜನತಾ ವಿಮಾಸಂಸ್ಥೆ

ದಿ ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ವಿವರವಿವರಕ್ಕೆ ವಿಜಿಸ್ಟ್ರಿಮೂಹಿತಿಗೂ ಬರೆಯಿರಿ.

ಪಂಡಿತ ತಾರಾಸುಂದರ
ವಿಕ್ರಮ
ಸ್ತ್ರೀಬಲ
ಬಾಲಬಲ

ಔಷಧಗಳು ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ. ದ. ಕ.

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಟೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಸರಿಸಸ್ಸ ಅನುಭವದ ಯೋಗ್ಯತೆಯಿದೆ.

ನಿರಖು ಠೇವಣಾತಿಗಳಿಗೆ ಶುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.
ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬೇಂಕ್, ಲಿಮಿಟೆಡ್
ಹೆ. ಆ. ಮಂಗಳೂರು
THE VIJAYA BANK LTD.,
H. O. MANGALORE. S. K.

Approved firm by the Govt. of Mysore
Certified by the Agent of the Govt. of Ceylon & India.

The Canara Banking Corporation Limited.

Estd. 1906
(Incorporated in British India)
Head Office: **UDIPI**, S. India.

Capital Authorised	....	Rs. 52,00,000
Capital Issued & Subscribed	....	Rs 20,00,000
Capital Paid up	....	Rs. 19,98,445
Reserves....	....	Rs. 8,66,751

BANKING BUSINESS OF EVERY DESCRIPTION TRANSACTED

V. R. Kamath, B.A., LL.B.,
General Manager.



ಗುರುವಾರ, ಆಡಿಷಿ, ೧೫-೧೧-೧೯೪೮

ಆರ್. ಯಸ್. ಯಸ್.

ಹಿಂದೂವಾದಿ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮೇಲೆ ಭಾರತ ಸರ ಕಾರವು ಬಹಿಷ್ಕಾರ ಹಾಕಿ ಇಂದಿಗೆ ಒಂ ಭತ್ತು ತಿಂಗಳುಗಳು ಕಳೆದಿವೆ. ಆ ದರ ಹಾಲಕ ಶ್ರೀ ಗೋಳವಲ್ಕರರೊಡನೆ ಸಂ ಘದ ಬಾವೀ ಧೋರಣೆಯ ಕುರಿತ. ಭಾರ ತದ ಗೃಹ ಮಂತ್ರಿಗಳು ನವಥಿಲ್ಲಯಲ್ಲಿ ಸ್ವಲ: ಮಾತುಕತೆ ನಡೆಸಿದುದರ ಪರಿಣಾ ಮವಾಗಿ, ಈ ಸಂಘದ ಮೇಲಿನ ಬಹಿ ಷ್ಕಾರವು ಯಥಾ ಪ್ರಕಾರ ಮುಂದುವರಿ ಯಬೇಕೆಂದೇ ಭಾರತ ಸರಕಾರದ ನಿರ್ಧಾ ರವು ಇದೇ ತಾ. 14ರಲ್ಲಿ ಪ್ರಕಟವಾಗಿದೆ. ರಾ. ಸ್ವ. ಸಂಘದಂತಹ ಮತ ಭ್ರಾಂತ-ಸೇನಾ ಮರ್ಜಿಯ-ಸಾಮ್ರಗಾಮೀ ಸಂಸ್ಥೆ ಯ ಮೇಲಿನ ಬಹಿಷ್ಕಾರ ಜ್ಞೆ ಯು ಇದ್ದಂತಿರಬೇಕಾಗಿ ಬಂದುದು ಸ್ವತ: ಅದರ ಕರ್ಮಫಲ! ಈ ಸಂಘದವರ ಯಾವ ಧ್ಯೇಯ ಧೋರಣೆಗಳು ರಾಷ್ಟ್ರ ಘಾತಕವೆಂದು ಹೆದರಿ ಒಂಭತ್ತು ತಿಂಗಳ ಮೊದಲು ಸರಕಾರವು ಬಹಿಷ್ಕಾರ ಹಾಕಿ ದ್ದಿತೋ, ಅವೆಲ್ಲವೂ ಇಂದು ಕೂಡಾ ಹಾ ಗೆಯೇ ಇವೆ. ಸಂಘದವರು ಎಂತಹ ಮಿ ರುಗುಳ್ಳ ವಾದ ಹೂಡಿದರೂ, ಕಾನೂನಿನ ಭಾರದಡಿಯಲ್ಲಿ ಜಜ್ಜಿ ಹೋದ ಅಂಶಗಳ ನ್ನು ಬಟ್ಟಲ್ಕೆ ಅನಾ ವಿ.ಕ್ಕ ಚಟುವಟಿಕೆಗ ಳಾ ಗಿ ಪ್ರ ರೀತಿಯಿಂದ ದೇಶದಲ್ಲಿ ಲ್ಲಿ ನ ಡೆದಿವೆ ಎಂಬುದಕ್ಕೆ ನಾವಿ ಷ್ಟು ಹುರಾವೆಗ ಳು ದೊರೆಯುತ್ತಿವೆ. ನಿಜಕ್ಕೂ ಇಂತಹ ಗುಪ್ತ ಚಟುವಟಿಕೆಗಳನ್ನು ಈ ಕಾಲದಲ್ಲಿ ನಿರ್ಮೂಲಿಸಬೇಕಾದುದು, ಒಂಭತ್ತು ತಿಂಗಳಮೊದಲು ನಿರ್ಬಂಧಿಸಿಬೇಕಾಗಿ ಬಂ ದಿದ್ದುದಕ್ಕಿಂತಲೂ ಹೆಚ್ಚಿನ ಅಗತ್ಯ ದ್ದೆಂಬುದು ಖಂಡಿತ. "ಹಿಂದೂ ಸಂ ಸ್ಕೃತಿ" ಅಥವಾ "ಹಿಂದೂತ್ವ"ದ ರಕ್ಷಣೆ ಗಾಗಿ ಆರ್. ಯಸ್. ಯಸ್. ನಂತಹ ಆಡ್ಡ ಹಾದಿಯ ಸಂಸ್ಥೆಯ ಅವಶ್ಯಕತೆ ಆ ಗಲೂ ಇರಲಿಲ್ಲ; ಈಗಲೂ ಇಲ್ಲ. ಜಾತೀ ಯ ಗಲಭೆಗಳಿಂದ ಇಡೀ ರಾಷ್ಟ್ರದ ವಾತಾವರಣವು ಪ್ರಕ್ಷುಬ್ಧವಾಗಿದ್ದ ಆ ಕಾಲದಲ್ಲಿ, ಕೇವಲ ಹಿಂದುಗಳ ರಕ್ಷಣೆಗಾ ಗಿ ಈ ಸಂಸ್ಥೆಯಂತಹ ಸಂಘಟಿತ ದಳ ವೊಂದಿರಬೇಕೆಂದು ಅತಿರೇಕವಾದಿ ಹಿಂದು ಗಳಾದರೂ ಆಗ ಅನ್ನಿಸಿದ್ದಿರಬಹುದು. ಇಂದು ಅಂಥವರು ಕೂಡಾ ಈ ಸಂಘವ ನ್ನು ಅಳಿಸುವ ಪರಿಸ್ಥಿತಿ ರಾಷ್ಟ್ರದಲ್ಲಿಲ್ಲ. ಆದರೂ ಸಂಘಚಾಲಕ ಶ್ರೀ ಗೋಳ್ವಾಲ್ಕರ್ ಮತ್ತವರ ಅನುಯಾಯಿಗಳಿಗೆ ಮಾತ್ರ ಇನ್ನೂ ಇದು ಬೇಕಾಗಿದೆ! ಆರು ತಿಂಗಳ ಬಂಧನವಾಸ ಮುಗಿಸಿ ಬಿಡುಗಡೆ ಗೊಂಡ ಶ್ರೀ ಗೋಳ್ವಾಲ್ಕರರನ್ನು ನಾಗ ಪುರ ನಗರ ಬಿಡದ ನಿರ್ಬಂಧ ಹಾಕಿ ಮಧ್ಯ ಪ್ರಾಂತ್ಯದ ಸರಕಾರವು ಸ್ಥಳ ಹಿಡಿ ಸಿ ಇಟ್ಟುಕೊಂಡಿದ್ದಿತು ಅಲ್ಲಿಂದಲೇ, ತ ನ್ನ ಸಂಘದ ಗತಿಯನ್ನು ರಾಷ್ಟ್ರಹಿತ ಕ್ಕೆ ಧಕ್ಕೆ ಕೊಡದ ರೀತಿಯಲ್ಲಿ ಸುಧಾರಿಸಿ ಕೊಳ್ಳುವ, ಮತ್ತದಕ್ಕಾಗಿ ಭಾರತದ ಗೃ ಹ ಸಚಿವರೊಡನೆ ಸಂಧಾಪಿಸುವ ಬಯಕೆ ಯನ್ನು ಶ್ರೀ ಗೋಳ್ವಾಲ್ಕರರು ತೋಡಿ ಕೊಂಡ.ದರಿಂದ ಮಧ್ಯ ಪ್ರಾಂತ್ಯದ ಸರ ಕಾರವನ್ನು ಕೇಳಿಕೊಂಡು ಗೃಹಸಚಿವರು ಅವರನ್ನು ಥಿಲ್ಲಿಗಾಮಂತ್ರಿಸಿ ಮಾತಾಡಿ ದ್ದರು. ಅಲ್ಲಿ ತನ್ನ ಅನುಯಾಯಿಗಳ ಅಭಿಮತ ಕೇಳಲಿಕ್ಕೆಂದು ಸವಯ ತೆಗೆದ ವೀಲೆ ಶ್ರೀ ಗೋಳ್ವಾಲ್ಕರರು 'ಯಾವುದ ಕ್ಕೂ ಮುಂದಾಗಿ ಸಂಘದ ಮೇಲಿನ ಬಹಿ ಷ್ಕಾರ ತೆಗೆಯಬೇಕು' ಎಂಬ ಶರ್ತವನ್ನು ಮುಂದಿಟ್ಟರು. ಈ ಸಂಘದ ಗೂಢಚಟು ವಟಿಕೆಗಳ ಕಹಿ ಅನುಭವ ಪಡೆಯುತ್ತಿರು ವ ಪ್ರಾಂತಿಕ ಸರಕಾರಗಳು ಬಹಿಷ್ಕಾರ ರದ್ದತಿಗೆ ಬದ್ಧ ವಿರೋಧ ಸೂಚಿಸಿದುದರ ಲ್ಲಿ ಆಶ್ಚರ್ಯವೇನೂ ಇಲ್ಲ. ಆದ್ದರಿಂದ 'ನಿರ್ಬಂಧವನ್ನು ತೆಗೆಯುವದಿಲ್ಲ. ನೀವು ಕೂಡಲೇ ನಾಗಪುರಕ್ಕೆ ಹೊರಡತಕ್ಕದ್ದು' ಎಂದು ಹಿಂದೀ ಸರಕಾರವು ಶ್ರೀ ಗೋಳ್ವ ಳ್ಕರರನ್ನು ಆಜ್ಞಾಪಿಸುವುದು ಅನಿವಾರ್ಯ ವಾಯಿತು. ಇವೆಲ್ಲಾ ವಿದ್ಯಮಾನಗಳಿಂದ ಆರ್. ಯಸ್. ಯಸ್. ಅವರಿಯ ನಿರ್ಮೂ ಣಕ್ಕಾಗಿಯೇ ಇದೆ ಎಂಬುದು ಸ್ಪಷ್ಟವಲ್ಲ ವೆ ? ಈ ಸಂಸ್ಥೆಗೂ ಗಾಂಧಿಜೀಯ ಕೊ ಲೆಗೂ ಪ್ರತ್ಯಕ್ಷ ಸಂಬಂಧವಿಲ್ಲದಿರಬಹು ದು. ಅಂತೆಯೇ ಸಂಘದ ಮೇಲಿನ ಬಹಿ ಷ್ಕಾರಕ್ಕಾದರೂ ಆ ಕೊಲೆಯೊಂದೇ ಕಾ ರಣವಲ್ಲ. ಹಿಂದೂ ಮಹಾಸಭೆಯ ನಾಯಕನೇ ಗಾಂಧೀಜೀ ಕೊಲೆಯ ಖ ಟ್ಲೆಯಲ್ಲಿ ಆರೋಪಿಯಾಗಿದ್ದರೂ ಆ ಸಂ ಬಂಧವಾಗಿ ಹಿಂದೂ ಮಹಾ ಸ ಭೆ ಯ ಮೇಲೆ ಬಹಿಷ್ಕಾರವನ್ನೇನೂ ಬೀಳದಿರುವುದ ರಿಂದಲೇ 'ಅದು ಪ್ರತ್ಯೇಕ ವಿಷಯ' ವೆಂಬುದನ್ನು ತಿಳಿಯಬಹುದು. ಜಾತಿ, ಮತ, ಧರ್ಮಗಳ ಸ್ವಯಂ ಸೇನಾ ಮರ್ಜಿಯ ದಳಗಳನ್ನು ರದ್ದುಗೊಳಿಸುವುದು 'ಪ್ರಾಪಂಚಿಕ ನೀತಿ'ಯನ್ನಾ ಧರಿಸಿರುವ ರಾಷ್ಟ್ರಕ್ಕೆ ಅವಾಯಕರವೆಂಬುದರಿಂದಲೇ ಆರ್. ಯಸ್. ಯಸ್. ನಿರ್ಬಂಧಿಸಲ್ಪಟ್ಟಿ ತು. ಇದೇ ಮಾದರಿಯ ಮುಸ್ಲಿಂ ದಳಗ ಳಂಥವುಗಳು ಇದೇ ಆದೃಷ್ಟಕ್ಕೊಳಗಾಗಿ,

ನಿನ್ನೆ ದಿನ ದೆಹಲಿಯಲ್ಲಿ ಪಂಡಿತ ನೆಹರುಗಳಿಗೆ 59 ವರ್ಷ ತುಂಬಿ 60 ಹೊಕ್ಕಿದೆ. ತಿಳಿವಳಿಕೆಸ್ಪಿನ ಮಟ್ಟಿಗೆ ಅರೇ ಮಾನಸಗಳ ಹಾಲ ಹಸಿಳಿ ನಪೋತ್ಸಾಹದಲ್ಲಿ ಇಪ್ಪತ್ತರ ಎಳೇ ತರು ಣ-ಅನುಭವದಿಂದ ನೂರರ ಹಣ್ಣು ಮು ದುಕ-ಭಾರತ ನಾಯಕ ನೆಹರು ಇಂದು 60 ವರುಷದವರು.

ಮಿಕೋಟಿಯಷ್ಟಾದರೂ ಇರಬಹು ದಾದ ಭಾರತೀಯರ ಹೃದಯವೆಲ್ಲವುಗಳ ನ್ನೇಲಾ ಒಮ್ಮೆಗೇ ಬೇಕು ಬೇಕು ಜೆಲ್ಲುವ ಉಶ ಕರಣವೊಂದಿರುತ್ತಿದ್ದರೆ, ಆ ವು ಗಳೆಲ್ಲ ಮಿ ಕೈಲ್ಲಕ್ಕೆಂತ ಮುಂ ಭಾಗದಲ್ಲಿ

ಪೂರ್ತಿ ನಿರ್ನಾಮಗೊಂಡು ದೇಶದಲ್ಲಿ ಗ ಲಭೆ ನಿವಾರಣೆಯಾಗಿರುವ ಈ ಕಾಲದಲ್ಲಿ ಯೂ ಆರ್. ಯಸ್. ಯಸ್ ತನ್ನ ಹೆಡೆ ಯೆತ್ತಲು ಪ್ರಯತ್ನಿಸುತ್ತಿರುವುದು ಯಾ ಕಾಗಿ? ಸರಕಾರ-ಅಥವಾ ಜನತೆ-ಯಾವು ದೇ ಮತದ ಜನ-ಯಾವುದಾದರೊಂದು ನ್ಯಾಯ ಬದ್ಧ ಆವಶ್ಯಕತೆ-ಇವುಗಳಲ್ಲಾವು ದಕ್ಕೂ ವೈದವಾಗಿರುವಾಗ, ತಾನು ನೆವ ವಾಗಿ ಹೇಳುತ್ತಿದ್ದ ಕಾರಣಗಳೆಲ್ಲವೂ ಈ ಗ ಮಾಯವಾಗಿರುವಾಗ, ಆರ್. ಯಸ್. ಯಸ್. ಇನ್ನೂ ಬದುಕಲು ಸ್ರಯತ್ನಿಸು ವುದು ನಿಜಕ್ಕೂ ಗಾಬ್ರೀಯತೆಯನ್ನು ಕೊ ಲ್ಲುವದಕ್ಕಾಗಿಯೇ ! ಆದ್ದರಿಂದ ಈ ಕಾ ಲದಲ್ಲಿ ಆದು ಮತ್ತಷ್ಟು ಭೀಕರ-ಇನ್ನಷ್ಟು ಅಪಾಯಕರ- ಎಂಬುದನ್ನು ಲಕ್ಷ್ಯದಲ್ಲಿಡ ಬೇಕು. ಸರಕಾರವು ಅದರ ಮೇಲೆ ಬಹಿ ಷ್ಕಾರವನ್ನಷ್ಟೇ ಹೇರಿ ತೃಪ್ತಿಗೊಳ್ಳದೆ ಕರಿ ಣ ರೀತಿಯಿಂದ ಅದರ ಮೂಲೋತ್ಪಾಟ ನೆ ಮಾಡಬೇಕು. ಈ ಭೀಕರ ಆಂಟು ಸೋಗದ ಬಾಜ್ಞೆ ಯಾವ ರೀತಿಯಿಂದಾದ ರೂ ಎಲ್ಲಯಾದರೂ ತೋರಿ ಬಂದೊಡನೆ ಕೂಡಲೇ ನಿವಾರಿಸಿಕೊಳ್ಳಲು ಜನತೆ ಸ್ವತ: ಮುಂದಾಗಬೇಕು; ಹೀಗಾಗದೇ ಹೋದುದು ರಾಷ್ಟ್ರದ ಇರಸ್ತ್ರಿಕ ಹಾಗೂ ಪ್ರಗತಿಗೆ ಅತ್ಯಗತ್ಯ.

ಪಂಡಿತಜೀಯು ಮೂರ್ತಿಯಿರುವುದ ನ್ನು ಕಾಣಬಹುದಿತ್ತು. ನೆಹರುಗಳು ತನ್ನ ಧ್ಯೇಯ ಧೋರಣೆ, ಕಾರ್ಯಕಲಾಪ ಗಳ ಮಥಾಸ್ಪತಿಗಳನ್ನು ಮಾತ್ರವಲ್ಲ-ತ ನ್ನ ಹೃದಭಾವ, ಉದುಗಿ ತೊಡ ಗೆಗಳ ಪಡಿಯಚ್ಚನ್ನು ಕೂಡಾ ಹಿಂದೀ ಜನ ಸಾಮಾನ್ಯರ ಹೃದಯದಲ್ಲಿ ಒತ್ತಿದ್ದಾರೆ. ಇಂದು ಪ್ರಗತಿಶೀಲ ಭಾರತೀಯರೆಲ್ಲರ ವಿಶ್ವಾಸ ಮತ್ತು ಅಭಿಯ ಆಧಾರ ಪಂಡಿತ ಜವಾಹರಲಾಲರೇ. ರಾಷ್ಟ್ರದ ಸ್ವಾತಂ ತ್ರ್ಯ ಹೋರಾಟಗಳ ಕಾಲಗಳಲ್ಲಿ ಅವ ರೊಬ್ಬ ಪ್ರಮುಖ ಸೇನಾನಿ ಮತ್ತು ವಿಜ ಯ ಭಾವಸೆಯ ಒಂದು ನವಚೇತನವಾಗಿ ಯೂ ಇದ್ದರು; ಸ್ವಾತಂತ್ರ್ಯೋತ್ತರ ಕ ಷ್ಟ ನಿಷ್ಠುರ, ಜಾತಿ ದ್ವೇಷಗಳ ಗೊಂದಲ ಕಾಲದಲ್ಲಿ, ಆ ಸಂಕಟ ನಿವಾರಕ [illegible] ತೋರಿದವರು ನೆಹರುಗಳೇ; ಎಲ್ಲಾ ತತಮಾನಗಳ ಗುಣಾವಗುಣಗಳನ್ನು ಈ ಗ ತಾನೇ ಮಗಿಸಿಕೊಂಡ ಭಾರತವು ಲೋಕದ ಸ್ವಸ್ಥಾಯಿ ರಾಷ್ಟ್ರಸಂಸ್ಥೆಯ ಲ್ಲಿ ಸಮಾನತೆಯಿಂದ ಬಲೆಯೆತ್ತ್ವವುದಾ ವಾಗಲೋ ಎಂಬ ಶಂಕೆ ಸಹಜವಾಗಿರು ವ ಈ ಕಾಲದಲ್ಲಿ ಶಾಸ್ತ್ರೀನಾಡ್ಡರಿಂದ ಆ ಸ್ಥಾನವಮಾನವೀಗಲೇ ಎಂದು ಸಿದ್ಧ ಮಾ ಡಿರುವವರೂ ಪಂಡಿತ ಜವಾಹರಲಾಲರೇ. ನೆಹರೂ ಕೆಲಸಗಳೇ ಭಾರತಕೃತ್ಯಗಳು-ನೆಹರೂವಾಣಿಯೇ ಭಾರತದ ಸ್ವರ-ಎಂ ದಾಗಿದೆ. ಹೀಗಾಗದ್ದರಿಂದಲೇ ಭಾರತವು ಸುಸಂಘಟಿತ, ಸಶಕ್ತ, ಘನರಾಷ್ಟ್ರವೆನಿ ಸಿ ಲೋಕಕ್ಕೆ ತೋರಿದ್ದು; ಹೀಗಾದ್ದರಿಂ ದಲೇ ಲೋಕದ ಯಕಶ್ಚಿಲ್ಲೊಬ್ಬ ಮತ್ತು ಸ್ವಹಂಚಿದ ಅತ್ಯುಚ್ಚೆ ನಾಗರಿಕನೂ ನವ ಪಂಡಿತ ನೆಹರುಗಳಿಗೆ ದೊರೆತಿದೆ.

60 ನೇ ಜನ್ಮದಿನದಲ್ಲಿ

ಜನ್ಮೋತ್ಸವಾಭಿನಂದನೆಗಳನ್ನು ಪಂಡಿ ತ ಜವಾಹರಲಾಲರು ಮೆಚ್ಚುವವರಲ್ಲ. ಆ ದ್ದರಿಂದ ಅದನ್ನು ಕಡೆಗಣಿಸಿ ಬಿಟ್ಟು ಮ ನೆಯಲ್ಲಿ ಶಾಂತಿಯುದಾ ದಿನವನ್ನು ದೂ

ಡಬೇಕೆಂದು ಪಂಡಿತ ನೆಹರುಗಳ ಸಂಕಲ್ಪವಿತ್ತು. ಆದರೆ ಅವರ 60ನೇ ಜನ್ಮದಿನದಲ್ಲಿ ಅವರ ವಿಸಯು ಜಯಂತೀ ಉತ್ಸವ ಸಡೆಯುವವರಿಂದ ತುಂಬಿ ಹೋಗಿತ್ತು. ಆ ದಿನ ಪ್ರಥಮತಃ ಭೇಟಿಗೆ ಬಂದವರು ಉಪ ಪ್ರಧಾನ ಮಂತ್ರಿ ಸರ್ದಾರ್ ವಲ್ಲಭಾಯಿಗಳು; ಅವರನ್ನನ ನಂತರ ಇತರ ಎ ತರುತ್ತಿವೆ ಈ ಜನ್ಮದಿನಗಳು. ನಾನೀ ಗ ಮುದುಕನಾಗುತ್ತಿದ್ದೇನೆ ಎಂಬುದನ್ನಾ ಗಲೀ, ನನ್ನ ನಿಜ ವ್ಯಾಯಕ್ಕಿಂತಲೂ ಒಂದು ವರ್ಷ ಹೆಚ್ಚಿಸಿ ಹೇಳುವದನ್ನಾಗ ಲೀ, ಕೇಳಲು ನನಗಿಸ್ಟವಿಲ್ಲ".

ಘಟನಾ ಸಮಿತಿ ಭವನದಲ್ಲಿ

ತನ್ನ ಜನ್ಮದಿನೋತ್ಸವಗಳಲ್ಲಿ ಭಾಗ ಮಿಕ್ಕಿ ಬಾಳಿ ಬಂದಿದೆ. ನಾನೀ ಸಂ ಬಂಧಕ್ಕೆ ಅಪಾರ ಬೆಲೆ ಕಟ್ಟಿದ್ದೇನೆ. ಸ ರ್ದಾರ್ ಪಟೇಲರ ಪ್ರೇಮ ಮ ಪ್ತು ಸಲಹೆಯಲ್ಲವಾಗಿದ್ದರೆ ನನ್ನಿಂದ ಈ ರಾಜ್ಯಭಾರ ನಿರ್ವಹಣೆ ಅಸಾಧ್ಯವಾಗು ತಿತ್ತು." ಆ ಸಭೆಯಲ್ಲಿ ಎಲ್ಲರ ಹೃದಯ ವನ್ನೂ ತುಂಬಿಸಿಕೊಟ್ಟ ಒಂದು ದೃಶ್ಯ ಬುದಿದೆಯೆ?"ಎಂಬ ಯೋಚನೆ ಮೂಡು ತ್ತದೆ. ಆದರೂ ರಾಷ್ಟ್ರಹಿತಸಾಧನೆಯಲ್ಲಿ ಪಂಡಿತಜೀ ತನ್ನನ್ನು ತಾನು ಮರೆತಿದ್ದಾ ರೆ. ಕ್ಷಣಕ್ಷಣವೂ ದೇಶಕ್ಕೆ ಪ್ರಯೋಜನ ವಾಗಬಲ್ಲಂಥಾ ಕಾರ್ಯನಿರತರಾಗಿದ್ದಾರೆ. ಇದು ಭಾರತದ ಭಾಗ್ಯಗಳ ಪೈಕಿ ಗಣ್ಯ ಮಾದುದು. ನೆಹರು ಚಿರಾಯುವಾಗಲಿ.

ಅರುವತ್ತನೇ ಪ್ರಾಯಕ್ಕೆ ಬಂದ ನೆಹರು.

ಒನ್ಸ ಮಂತ್ರಿಗಳು, ಘಟನಾ ಸಮಿತಿ ಸದಸ್ಯರು, ಕಾಂಗ್ರೆಸ್ ಕಾರ್ಯಕರ್ತರು, ವಿವಿಧ ಖಾತೆಗಳ ಅಧಿಕಾರಿಗಳು, ಸಂಘ ಸಂಸ್ಥೆಗಳವರು ಬರಹತ್ತಿದರು. ಸಿಹಿ ತಿಂಡಿಗಳನ್ನು, ಹಾರ ತುರಾಯಿಗಳನ್ನು, ಪುಸ್ತಕ ಇತ್ಯಾದಿ ಕಾಣಿಕೆಗಳನ್ನು ಪಂಡಿತಜಿಗೆ ಅರ್ಪಿಸಿ ಹೋದರು. ಬಹುತೇಕ ರಾಗಿ ಎಲ್ಲಾ ವಿದೇಶೀ ರಾಯಭಾರಿಗಳಂದಲೂ ಪಂಡಿತಜೀಗೆ ಜನ್ಮದಿನದ ಅಭಿ ವಂದನೆಗಳು ಬಂದಿವೆ. ರಷ್ಯದ ರಾಯಕ ನಾರ್ಶಲ್ ಸ್ಟಾಲಿನರು ಪದ್ಧತಿಯಂತೆ ತನ್ನ ಪ್ರತಿನಿಧಿಗಳ ಮುಖಾಂತರ ಸಂದೇ ಶ ರವಾನಿಸುವ ಬದಲಿಗೆ ನೇರಾಗಿ ಪಂಡಿ ತ ನೆಹರುಗಳಿಗೇನೇ ಅಭಿವಂದನೆ ಕಳುಹಿ ಸಿದ್ದಾರೆ. ಗವರ್ನರ್ ಜನರಲ್ ರಾಜಾಜಿ ಅತಿಶುಂದರ ಪುಷ್ಪಗುಚ್ಚವೊಂದನ್ನೂ ನಿವಾಸವನ್ನೂ ನಿವ್ಮಕಾರ್ಯಗಳನ್ನೂ ದೇವರು ಹರಸಬೇಕೆಂಬುದಕ್ಕಾಗಿ ನಾನೀದಿನ ಸಹ ಸ್ರನಾಮಪಠನೆಮಾಡಿದ್ದೇನೆ"ಎಂಬಸಂದೇ ಶವನ್ನೂ ತನ್ನ ಸೇವಾಕಾರ್ಯದರ್ಶಿಯ ಹ ಸ್ತ ಕೊಟ್ಟುಕಳುಹಿದ್ದರು. ನೆಹರೂ ಮ ನೆಯ ಮುಂದೆ ನೆರೆದಿದ್ದ ಗುಂಪಿನ ಪಡು ವೆ ಅಶನಿಗೆ ಮುಂದೆ ಹೋಗಲಾಗಲಿಲ್ಲ. ಆಗ ಪಂಡಿತ ನೆಹರೂಗಳು ಕೋಣೆಯಿಂದ ಹೊರಬಂದು ತಾನೇ ಹೋಗಿ ಗವರ್ನರ್ ಜನರಲರ ಉಡುಗೊರೆಗಳನ್ನು ಪಡಕೊಂ ಡರು. ಆ ದಿನದ ಉಡುಗೊರೆಗಳ ಪೈಕಿ ಎತ್ತಿ ಹೇಳತಕ್ಕವುಗಳೆಂದರೆ ಕೆಲವು ಸ ಣ್ಣ ಹುಡುಗಿಯರೊಸ್ಪಿಸಿದ ಬಣ್ಣ ಬಣ್ಣ ದ 'ಪಗ್ಗೆ'ಗಳು. ವಿಮಾನ ಪಡೆಯು ನಾಜೀ ಯೋಧನೊಬ್ಬ, 68 ವರ ಷದವ್ಯಂದು ಹಳೇ ಕೋವಿಯನ್ನು ಅದರ ನೆಟ್ಟಿಗೆ ಸಮೇತ ಕಾಣಿಕೆಯಾಡುತ್ತ "ನೀವು ನಮ್ಮನ್ನಾಳುತ್ತಿರುವವರು. ಆದ್ದರಿಂ ನಾನೀಗ ಯೋಗ್ಯ ಉಡುಗೊರೆಯನ್ನೇ ಕೊಡುತಿದ್ದೇನೆ". ಎಂದ ."ನಾನು ಕೋ ವಿ ಉಪಯೋಗಿಸುವುದನ್ನು ಬಿಟ್ಟು ಇಂದಿ ಗೆ ಮೂವತ್ತು ವರುಷಗಳಾದುವು" ಎನ್ನು ತ್ತಾ ಪಂಡಿತಜೀ ಅದನ್ನು ಸ್ವೀಕರಿಸಿಕೊಂ ಡರು. ಮನೆಗೆ ಬಂದಿದ್ದವರನ್ನೆಲ್ಲಾ ವಿನೋ ದವಾಣಿಗಳಿಂದ ಬೀಳ್ಕೊಂಡು ತನ್ನ ಮೊ ಮ್ಮಗನೊಂದಿಗೆ ಪಂಡಿತಜೀ ಹೂತೋಟ ಕ್ಕೆ ಜೋಗಿ ಅಲ್ಲಿ ಆಡುತ್ತಿದ್ದ 400 ಮ ಕ್ಕಳೊಂದಿಗೆ ಸೇರಿಕೊಂಡರು. ಅಲ್ಲಿಗೆ ಮ ಣಗಟ್ಟಲೆ ಮಿಠಾಯಿಗಳನ್ನು ತಂದಿ ಮಕ್ಕಳ ಗೆ ಹಂಚಿದರು. ಜನ್ಮದಿನದ ಸರಸ ಸಂ ಘಾಷಣೆಗಳ ನಡುವೆ ಪಂಡಿತಜೀ ಹೇ ಳಿದ್ದರು: "ನನಗೀಗ ಅರವತ್ತು ವರುಷ 59 ವರುಷ ಮಾತ್ರ. ನಾನು ಅದಿ ಭಾಗ ದಲ್ಲಿ ಕಳೆದಿದ್ದ ಸುಖದ ದಿನಗಳ ನೆನಪನ್ನು ಪಸಸಜಾರದೆಂದೇ ನೆಹರುಗಳ ಸಂಕಲ್ಪ ವಿದ್ದರೂ ಘಟನಾ ಸಮಿತಿಯ ಕಾಂ ಗ್ರೆಸ್ ಪಕ್ಷೀಯರು ಆ ದಿನ ಅಪರಾಹ್ನ ಘಟನಾ ಸಮಿತಿ ಭವನದಲ್ಲಿ ವಿಶೇಷವಾಗಿ ಏರ್ಪಡಿಸಿದ್ದ ಚಹಾ ಸತ್ಕಾರ ಕೂಟವೊಂದರಲ್ಲಿ ಪಂಡಿತಜೀ ಹಾಜರಿದ್ದರು. ಆ ದಿನ ಗುಂಟಾನೂರಿನಲ್ಲಿ ಜನ್ಮದಿನಾಚರಣೆ ಯ ಸಿಖ್ ಸಭೆ ಮತ್ತು ಢಿಲ್ಲಿಯಲ್ಲಿಯೂ ಕಾಶ್ಮೀರೀ ಜನರಿತ್ತ ಸತ್ಕಾರ ಕೂಟದಲ್ಲಿಯೂ ನೆಹರುಗಳು ಭಾಷಣವಿತ್ತಿದ್ದರು. ಘಟನಾ ಸಮಿತಿ ಭವನದ ಸಭೆಯಲ್ಲಿ ಸ ರ್ದಾರ್ ಪಟೇಲರು ನೆಹರುಗಳಿಗೆ ಚಿರಾ ಯುಷ್ಯ ಕೋರುತ್ತಾ ಹೇಳಿದರು: "ನಮ ಹಾತ್ಮಾ ಗಾಂಧಿಯವರು ತನ್ನ ರಂಜಕೇ ಯ ವಾರಿಸ್ದಾರನಾಗಿ ಪಂಡಿತ ಜವಾಹಿರ ಲಾಲರನ್ನು ಚುನಾಯಿಸಿಟ್ಟಿದ್ದರು; ಯೋ ಗ್ಯ ಜನವೇ ಆರಿಸಲ್ಪಟ್ಟಿದಕ್ಕೆ ಕಾರಣ ವಾಗಿ ಕೃತಜ್ಞತಾಭಾವ ತುಂಬಿ ಬರುತ್ತಿ ದೆ ಪಂಡಿತ ನೆಹರುಗಳು ಗಾಂಧಿಜೀ ಹಾಕಿಟ್ಟಿರುವ ತತ್ವಗಳ ಹಾದಿಯಲ್ಲೇ ಯ ಥಾರ್ಥತೆಯಿಂದ ಮುಂದೊತ್ತುತಿದ್ದಾರ ಲ್ಲದೆ. ಜಗತ್ತಿನ ರಾಷ್ಟ್ರಗಳ ಭಾ ವನಾರಂಗದಲ್ಲಿ ಭಾರತದ ಮಟ್ಟವು. ಮೇಲಿನದಾಗುವಂತೆ ಎತ್ತುತಿದ್ದಾರೆ. ಪಂಡಿತ ನೆಹರು ಮತ್ತು ನಾನು ಅಣ್ಣತಮ್ಮಂದಿರಂತೆ ನಡಕೊಳ್ಳುತಿದ್ದೇವೆ. ನಾವಿ ಬ್ಬರೂ ಕಳದ ಮುವ್ವತ್ತು ವರುಷಗಳಿಂದಲೂ ಒಡನಾಟದಲ್ಲಿರುವವರು." ಪ್ರಧಾ ನ ಮಂತ್ರಿ ಪಂಡಿತಜೀ ಉತ್ತರ ಕೊಡು ತ್ತಾ ಹೇಳಿದರು. "ಅಹಿಂಸಾತ್ಮಕ ಹೋ ರಾಟ ವಿಧಾನಗಳಲ್ಲವಾಗಿದ್ದರೆ ಕುಲವೃ ವಿಲಿಯ ಜನರು ತಮ್ಮ ಸ್ವಾತಂತ್ರಕೊಡ ಬೇಕಾಗುತಿತ್ತು. ಬೇರಾವುದೇ ವಿಧದ ಚ ಳವಳಇದ್ದ ವಿಸ್ತಾರಕ್ಕೆ ಹಬ್ಬುತ್ತಿರಲಿಲ್ಲ. ಮತ್ತು, ಸುಲಭದಲ್ಲೇ ಧ್ವಂಸಮಾಡಲ್ಪ ಡುತಿತ್ತು. ನನ್ನ ಮತ್ತು ಸರ್ದಾರ್‌ಪಟೇಲ ರ ಸಂಬಂಧವು ಮೂರು ದಶಮಾನಗಳಿಗೂ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಪಿ.

ಕಾರ್ಕಳ 16-11-1948 ರಿಂದ

ಜಗನ್ಮೋಹಿನಿಯವರ

"ನಾರದ ನಾರದಿ"

ಸೂರಿಬಾಬು, ಲಕ್ಷ್ಮಿ, ರಾಜಂ.

ಬರುವ ಚಿತ್ರ:

ರಣಜಿತಸಿನವರ

"ಮೂರ್ತಿ"

ಕುರಿತದ್ದು—ನೋಡಿಲಾಲ್.

ಎರಡು ಭಾಷಣಗಳು

ತನ್ನ 60ನೇ ಜನ್ಮದಿನದಲ್ಲಿ ಒನ್ಸರ ಮತ್ತು ಕಾರ್ಯಕರ್ತರ ಎರಡು ಸಭೆಗಳಲ್ಲಿ ಪಂಡಿತಜೀ ಭಾಷಣವಿತ್ತಿದ್ದರು. ಒನ್ಸ ಸ ಭೆಯಲ್ಲಿ ಮಾತಾಡುತ್ತಾ ನೆಹರುಗ ಳಂದರು: "ಲೋಕದ ಇತರ ರಾಜ್ಯಗಳ ವೇಲೆ ವಿಶೇಷ ಪರಿಣಾಮ ಬೀರಲಾಗುವ ಸ್ಥಾನದಲ್ಲಿ, ಇನ್ನೊಂದು ಲೋಕ ಯುದ್ಧದ ಸಾಧ್ಯತೆ ಯನ್ನ ತಗ್ಗಿಸಬಲ್ಲ ಸ್ಥಿತಿಯಲ್ಲಿ ಕೂಡಾ, ಭಾರತವೀದಿನ ಇದೆ. ಆದರೆ, ಹೀಗಾಗಬೇ ಕಾದರೆ, ಭಾರತವು ಸ್ವತಃ ತನ್ನನ್ನು ಸಂ ಕುಚಿತ ಬುದ್ಧಿಯ ವ್ಯಾಸಿಸಿ ಹಿಡಿದುಕೊ ಳ್ಳದಂತೆ, ತನ್ನ ತೊಕಪೆಲ್ಲಾ ಗಾಳಿಪಟ ವಾಗದಂತೆ ನೋಡಿಕೊಳ್ಳಬೇಕಾಗಿದೆ" ಢಿಲ್ಲಿಯಲ್ಲಿರುವ ಕಾಶ್ಮೀರೀ ಜನರಿ ತ್ತ ಸತ್ಕಾರ ಕೂಟದಲ್ಲಿ ಭಾಷಣವಿಯು ತ್ತಾ ಹೇಳಿದರು. "ಶೇಖ್ ಅಬ್ದುಲ್ಲಾ ರಂತೆ ಕಾಶ್ಮೀರ ಯುದ್ಧವು ಭಿನ್ನ ಭಾವನೆ ಗಳೊಳಗಿನ ಸಮರ ಪಾಕಿಸ್ತಾನವು ಆ ಸ್ತಿವಾರವಾಗಿರುವ ದ್ವಿರಾಷ್ಟ್ರ ತತ್ವವನ್ನು ಹೋರಾಡಿ ಪಡಕ್ಕಾಗಿಯೇ ಹಿಂದೀ ಸೈನ್ಯ ಗಳು ಕಾಶ್ಮೀರಕ್ಕೆ ಹೋಗಿವೆ. ವಿಷಾ ಕ್ಕಾಗಿ ಗಾಂಧಿಯವರು ಯುದ್ಧದಲ್ಲಿ ನಂಬಿ ಕೆಯಿದ್ದವರಲ್ಲ ಆದರೆ ಕಾಶ್ಮೀರದ ರಕ್ಷಣೆ ಗೆ ಹಿಂದೀ ಸೇನೆಯನ್ನು ಕಳುಹುವುದು ಭಾರತ ಸರಕಾರದ ತಪ್ಪು ಕಲಸವೆಂದು ಅವರೆಂದೂ ಹೇಳಿದ್ದಿಲ್ಲ. ಭಾರತ ಚೇಂ ಕಾಶ್ಮೀರ ಬೇರೆ ಎನ್ನುವದು ತಪ್ಪು. ಕಾ ಶ್ಮೀರವೇ ಭಾರತ; ಭಾರತವೇ ಕಾಶ್ಮೀರ"

ಕುಂದಾಪುರ ತಾ. 14-11-48ರಂದು ನೆಹರೂ ಜಯಂತಿಯು ಆತೀ ವಿಜೃಂಭಣೆ ಯಿಂದ ಆಚರಿಸಲ್ಪಟ್ಟಿತು. ಶ್ರೀ ಎ.ಸಿ.ಎನ್. ಹೆಬ್ಬಾರರಿಂದ ಧ್ವಜಾರೋಹಣವಾಯಿತು ಸಾಯಂಕಾಲ ಶ್ರೀ ಎಸ್. ಎಸ್. ಪಂಡೇಶ್ವರ ಯ್ಯನವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆ ಯಲ್ಲಿ ಶ್ರೀಗಳಾವ ಎ ಎಸ್. ಸ್ವಟ್ಟಿ, ಎಂ. ಎಂ. ಹೆಗ್ಡೆ, ಎಚ್. ಬಿ ಸ್ವಟ್ಟಿ, ನುತ್ತು ಕೆ. ಎ. ಕಾರಂತರ ಭಾಷಣಗಳಾದುವು.

ಕಾರ್ಕಳ ಡಿ. ಮು ಕೋರ್ಟಿನಲ್ಲಿ

S. C. No. 320/1948

ಗೋಪಾಲ ಆಚಾರ್ಯ-ವಾದಿ

ಗೋಪಾಲ ಶೆಟ್ಟಿ-ಪ್ರತಿವಾದಿ.

ಪ್ರತಿವಾದಿ-ಗೋಪಾಲ ಶೆಟ್ಟಿ-ತ್ತಾ ಸ್ಟಟ್ಟಿ ಆಳಿಯ-ಮಂಗಳೂರು ತಾಲ್ಲೂಕೆಮ್ಮಾಲಿಗೆ ಮನೆ ಕೋಡು ಎಂಬಲ್ಲಿರುವವ- ಇವರಿಗೆ.

ವಾದಿಗೆ ಪ್ರತಿವಾದಿಯು ಬರಕೊಟ್ಟ ದಿ. ಮಾಡಿ ನೋಟಿನ ಲ್ಸಲು ಬಡ್ಡಿ ದಮ್ಮಿಯಾ 118 0-0 ಸಂತ್ರದ ಬಡ್ಡಿ, ಕೋರ್ಟು ಖರ್ಚು ನಗೈತೆ ಬರಮಾದಿಕೊಳ್ಳುವರೆ ವಾದಿಯು ಕೂಡಿನ ಸಕ್ರಿ ವಾನೆಯು ತನ್ನಬಗ್ಗೆ ತಾವೇ ಕು 1-12 1948ಕ್ಕೆ ಇಟ್ಟ ದಿನದಂದ ಅಲ್ಲೇ ಪಡಿಲಿ ಸಕ್ರಿ ದಿನ್ನ ಬೆಳಿಗ್ಗೆ 10 ಗಂಟೆಗೆ ನೀಲ್ಕೆಂಡ ಕೋರ್ಟುಮುಂದೆ ಹಾಜರಾಗಿ ಜಾಬ್ತೀರುವಾಡಿಕೊಳ್ಳತಕ್ಕದ್ದು- ತಪ್ಪಿದ್ದಲ್ಲಿ ತಿಪ್ಪಾ ಮಾಡೋಣಾದೀತು

P. Ramachandra Rao

ವಾದಿಯ ಕಡೆ ವಕೀಲ.

ಕಾರ್ಕಳ ತಾ 14-11-1948



ದಿವಂಗತ ವಾಸುದೇವ ಶಿವದೇವ ಕೆಟ್ಟೂರು

ಬಿಜಾಪುರ ಜಿಲ್ಲೆಯ ಒಂದು ಪ್ರಸಿದ್ಧ ಶ್ರೀಮತ ಕುಟುಂಬದಲ್ಲಿ ಹುಟ್ಟಿ, ಬೊಂಬಾಯಿ, ಪೂನಾ, ಗುಜರಾತಿಗಳಲ್ಲಿ ಸಗಣಗಳಲ್ಲಿ, ತನ್ನ ಮೇಧಾವಿತನ, ಕಾರ್ಯಕುಶಲತೆ, ಎಂದೂ ಕುಗ್ಗದ ಎದೆಗಾರಿಕೆಗಳಿಂದ ಎಂಥಾ ವ್ಯಾಪಾರಿಗಳಿಂದಲೂ, ಧುರೀಣರಿಂದಲೂ ಗೌರವ ಪೂರ್ವಕವಾಗಿ ಅನ್ನಿಸಿಕೊಂಡು, ಜೀವನದ ಸುಖ ದುಃಖಗಳನ್ನೂ ಸಾವಿನ ಸರ್ವಸ್ವವನ್ನೂ ಅನುಭವಿಸಿ, ತನ್ನ 47ನೇ ವಯಸ್ಸಿನಲ್ಲಿ ತಾ. 30-9-48ರಲ್ಲಿ ಪೂನಾದಲ್ಲಿ ಕ್ಷಯ ರೋಗದಿಂದ ದಿವಂಗತರಾದರು ಪರಸ್ಪರಾತ್ಮಗಳಲ್ಲಿರುವ ಕನ್ನಡಿಗರಿಗೆ ವಾಸು ಶೆಟ್ಟಿ ಕಳಶದವರೆಂದು ಚೆಲುವು ನಲುವು, ಹಣ-ಗುಣ, ಶಿಸ್ತು-ಸಾಹಸ, ಶಿಕ್ಷೆ ರಕ್ಷೆ, ಭಯ ಭಕ್ತಿ ಈ ಎಲ್ಲ ಗುಣಗಳು ಸಮತೂಕವಾಗಿ ಎರಕಗೊಂಡಿದ್ದು "ಸುಂದರ ಪುರುಷ ಶೆಟ್ಟಿರಪ್ಪ" ಎಂಬುದು, ಗುಜರಾತಿ, ಬೊಂಬಾಯಿ, ಪೂನಾ, ದಕ್ಷಿಣಕನ್ನಡ ಇತ್ಯಾದಿ ಪ್ರಾಂತ್ಯಗಳ ನಮಗೆಲ್ಲ ಅನುಭವಸಿದ್ಧವಾದದ್ದು! ಲಕ್ಷಗಟ್ಟಲೆಯಲ್ಲಿ ಗಳಿಸಿ, ಅದನ್ನು ನೀಲಾಂಜೆ ವಿನಿಯೋಗಿಸಿ, ಊರು ಪರವೂರುಗಳಲ್ಲಿ ಮೋಹದೆ ಮುದ್ದಾಗಿ, ವಿರೋಧ ನಿಂತವನಿಗೆ ಮಹಾಮೇರುವಾಗಿ, ಬಡವರ ಬಂಧುವಾಗಿ, ಸಮರ್ಥ ಮಾರ್ಗದರ್ಶಕರಾಗಿ ತೀರ್ಥಗಳಿಸಿದ ಶೆಟ್ಟರ ಅಕಾಲ ಮರಣದಿಂದ ಸಮಾಜಕ್ಕೇ ಪಾಸಿಯಾಗದ ಅಘಾತವಾಗಿದೆ ಶ್ರೀ ಜಗತ್ತಿಯು ಈ ಆತ್ಮಕ್ಕೆ ಶಾಂತಿಯೀಯಲಿ

ಪ್ರಗತಿ ಮಂಡಳ, ಕೊಲ್ಲಾಪುರ

ಮುಂಡರ್ತಿ ಗೋವಿ ಮತಸ್ಥರ ಸುಧಾರಣಾ ಸಂಘದ ಪ್ರಮುಖ ಸಭೆಯು ತಾ 15-11-48ರಂದು ಮಂಡರ್ತಿ ಎಲಿಮೆಂಟರಿ ಸ್ಕೂಲಿನಲ್ಲಿ ಶ್ರೀ ಬನ್ನಾಡಿ ಸುಬ್ಬಣ್ಣ ಹೆಗ್ಡೇರ ಅಸ್ಯಕ್ಷತೆಯಲ್ಲಿ ಜರಗಿ ಹಲವರ ಭಾಷಣಗಳಾದುವು ಗೋವಿ ಮತಸ್ಥರಲ್ಲಿ ಸುಧಾರಣೆಯು ಆಗತ್ಯವೆಂಬ ಆಭಿಪ್ರಾಯವು ಸ್ಪಷ್ಟವಾದುದ್ದರೂ ಕೊನೆಯ ನಿರ್ಧಾರವನ್ನು ಮುಂದಿನ ಸಭೆಯಲ್ಲಿ ಮಾಡಬೇಕೆಂದಾಯಿತು ಮುಂದಿನ ಸಭೆಯಲ್ಲಿ ವಂಡಾಂತನಲ್ಲಿ ಜರಗಬೇಕೆಂದಾಯಿತು ಅಧ್ಯಕ್ಷರ ಭಾಷಣ, ಶ್ರೀ ಬಿ ಗೋಪಾಲರಾಯರಿಂದ ಧನ್ಯವಾದಗಳಾಗಿ ಸಭಾಕಾರ್ಯವಾಯಿತು

ಕಟಪಾಡಿ ಬ್ರಹ್ಮಶ್ರೀ ನಾರಾಯಣ ಗುರುಸ್ವಾಮಿ ಸೇವಾ ಸಮಿತಿಯು 15ನೇ ವಾರ್ಷಿಕೋತ್ಸವವು ತಾ 6-11-48ರಿಂದ 13-11-48ರ ವರೆಗೆ ಬಹು ವಿಜೃಂಭಣೆಯಿಂದ ಜರಗಿತು ಅಂತ್ಯ ದಿನದಲ್ಲಿ ಉಡುಪಿ ಸಬ್ ರಿಜಿಸ್ಟ್ರಾರ್, N. ಕಾಳಪ್ಪ ಇತನ್ನವರ ಅಧ್ಯಕ್ಷತೆಯಲ್ಲಿ ಸಭೆ ಜರಗಿತು ಸಮಾಜದ ಏಳಿಗೆಯ ಕುರಿತು, ಅಧ್ಯಕ್ಷರು ಹಲವು ಹಿತ ಸೂಚನೆಗಳನ್ನು ಕೊಟ್ಟನಂತರ, ಧನ್ಯವಾದಗಳನ್ನರ್ಪಿಸಿ ಪ್ರಸಾದ ಸ್ವೀಕಾರದೊಡನೆ, ಸಭಾಕಾರ್ಯವಾಯಿತು

ಉಡುಪಿ ಮುನ್ಸೀಫ್ ಕೋರ್ಟಿನಲ್ಲಿ

O P 38/1948

ಮುತ್ಕಕ್ಕ ಸೆಟ್ಟಿ, ಬಿಡುಗು ಸೆಟ್ಟರ ಮಗಳು ಉಳಿಯತ್ತೂರಗೋಳಿಗ್ರಾಮ

ಅರ್ಜಿದಾರಳು

ಮತ್ತು

1 ಘಮಣಿಗ ಭಾರತಿ, 2 ಗೋಪಾಲ ಸೆಟ್ಟಿ ಅರ್ಜಿದಾರಳ ಮಕ್ಕಳು 96/98 Bora Bazar 2nd Flour, Bombay

ಎದ್ರಿರು

ಅರ್ಜಿದಾರಳ ಸುಗಣ ವಯೆದ್ರಿರ ಸಹೋದರ ವಿವರವನು ಒಂದು ಯಂಬವನು ತಾರಿಕು 23-5-1948ರಲ್ಲಿ ಬೊಂಬಾಯಿಯಲ್ಲಿ ಮೃತಪಟ್ಟಿರುವುದರಿಂದ ಸದರಿಯವನಿಗೆ, ಬೊಂಬೆ ಫೇನಸ್ ಲ್ಯಾಪ್ ಯಿನ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಯವರಿಂದ ಪೊಲಿಸಿ ನಂಬ್ರ 524ರ ಪ್ರಕಾರ ಬರತಕ್ಕ ರೂಪಾಯಿ 1930-2-0 ಪ್ರಸಲುಮಾಡುವ ಹಾಗೆ ತನಗೆ ಪಾರ್ಸಿ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರಳು ದಾಕಲು ಮಾಡಿದ ಮೇಲ್ಕಂಡ ಅರ್ಜಿಯು ತಾರಿಕು 23-11-1948ಕ್ಕೆ ತನ್ನಿಗೆ ಯಿಟ್ಟಿರುತ್ತದೆ ಆಕ್ಷೇಪಣೆಯಿದ್ದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಯೇ ಕೋರ್ಟಿಗೆಯಾಂದೆ ಜ್ಞಾಪೇರಾಗಿ ತೂರಿಕೊಳ್ಳಕ್ಕು

K. L. Aithal.
Vakil for Petitioner
ತಾ 16-11-1948 ಉಡುಪಿ

ಉಡುಪಿ

ಉಡುಪಿ ರೇಶನ್ ಕಾರ್ಡುಗಳು

ಇದೇ ತಾ 18 ಮತ್ತು 19ರಲ್ಲಿ ಉಡುಪಿ ರೇಶನ್ ಕ್ಷೇತ್ರದಲ್ಲಿ ಪಂಚಲ್ಪಡುವುವು. ಕಾರ್ಡು ಜೊತೆಗೆ ಹೋದಲ್ಲಿ ರೇಶನಿಂಗ್ ಆಫೀಸಿನಿಂದ ಇದೇ ತಾ 21ರಲ್ಲಿ ಪಡೆಕೊಳ್ಳಬೇಕು. ಯಾವುದಾದರೊಂದು ಸಮಾಪಡೆ ಸ್ಟೋರಿನಲ್ಲಿ ಕಾರ್ಡನ್ನು ರಿಜಿಸ್ಟ್ರಿ ಮಾಡಬೇಕೆಂದು ಶ್ರೀ ರೇಶನಿಂಗ್ ನಿರೀಕ್ಷಣಾ ಸ್ಪೆಶಲ್ ಆಫೀಸರರು ತಿಳಿಸುತ್ತಾರೆ

ಶ್ರೀ ಕೊರಡ್ಕಲ್ ಸ್ಮಾರಕ ಸಮಿತಿಯ ಸಭೆಯ —ಇದೇ ತಾ 11ರಲ್ಲು ಡಾ! ಸುಂದರರಾಮು ಪೈಗಳ ಅಧ್ಯಕ್ಷತೆಯಲ್ಲಿ ಜರಗಿ ಶ್ರೀ ಪಿ ವೆಂಕಟಕೃಷ್ಣರಾಯರನ್ನು ಸಮಿತಿಗೆ ಸದಸ್ಯರನ್ನಾಗಿ ಸೇರಿಸಲಾಯಿತು. ಸ್ಮಾರಕ ಗ್ರಂಥ ಪ್ರಕಾರನ, ಫೈಲ ಚಿತ್ರ ಜನಾವರಣ ಇವನ್ನು ತ್ವರೆಯಿಂದ ಮಾಡಬೇಕೆಂದು ನಿರ್ಧರಿಸಲಾಯಿತು

ಕಲಾನೈಂದಿಂದ ಮಾಜಿ ಕಾರ್ಯದರ್ಶಿಗಳಾದ ಶ್ರೀ ಕೊಡಕ್ಕೂರು ಆನಂತಪದ್ಮನಾಭ ಉಡುಪರು ತನ್ನ ಸಹೋದ್ಯೋಗಿಗಳಿಗೆ ತಾ 14ರಲ್ಲು ಶ್ರೀ ಎಸ್. ವಿ ಪೆಡ್ಗೆಯವರ ಅಧ್ಯಕ್ಷತೆಯಲ್ಲಿ ಒಂದು ಸತ್ಕಾರವನ್ನಿತ್ತರು ಮರುದಿನ ಕಲಾವ್ಯಾಜದವರು ಶ್ರೀ ಉಡುಪರಿಗೊಂದು ಸತ್ಕಾರವನ್ನು ಶ್ರೀ ಬನ್ನಂಜೆ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಕೊಟ್ಟು ಗೌರವಿಸಿದರು ಪರಸ್ಪರ ಮೈತ್ರೀ ಭಾವಸೂಚಕ ಈ ಕೂಟಗಳಲ್ಲಿ ಫಲಾಹಾರ ಮತ್ತು ಬಲವಾದ ಭಾಷಣಗಳಿದ್ದುವು ತಾ 16ರಲ್ಲಿ ಶ್ರೀ ಬೇಲೂರು ಕೇಶವದಾಸರ ನಿಧನಕ್ಕಾಗಿ ದುಃಖ ಸೂಚಕ ಸಭೆಯನ್ನು ಕಲಾವ್ಯಾಜದವು ಜರಗಿಸಿತು;

ಹವಾಮಾನವೂರು ನಾಲ್ಕು ದಿವಸಗಳಿಂದ ಹಿಮಗಾಳಿ ಬೀಸುತ್ತಲಿದೆ. ಆಗಾಗ್ಗೆ ಮಳೆಯೂ ಬರುತ್ತಲಿದೆ ಹಗಲು ವಿಪರೀತ ಸೆಕೆಯೂ ಇದೆ

ಧೂಮಕೇತುವನ್ನು ಉಡುಪಿಯಲ್ಲಿ ಕಳೆದ ಶನಿವಾರ ಬೆಳಿಗಿನ ಸಮಯ ಅನೇಕರು ನೋಡಿದುತ್ತಾರೆ

ರೇಶನಿಂಗ್ ಆಫೀಸನ್ನು ಕೇಂದ್ರಸ್ಥಳದಲ್ಲಿ ಇರಗೊಡಿಸಬೇಕೆಂದು ಸ್ಥಳೀಯ ಕಾಂಗ್ರೆಸ್ ಕಮಿಟಿ ಮತ್ತು ಬಾರ್ ಎಸೋಸಿಯೇಶನ ಸೂಚನೆಗಳನ್ನು ಮನ್ನಿಸಿ ಹಾಗೆಯೇ ಮಾಡಲಾಗುವುದೆಂದು ಜಿಲ್ಲಾ ರೇಶನಿಂಗ್ ಆಫೀಸರರು ತಿಳಿಸಿರುವರಾಗಿ ವರ್ತಮಾನ.

ಲಕ್ಷದೀಪೋತ್ಸವ ಶ್ರೀ ಕೃಷ್ಣ ದೇವಾಲಯದಲ್ಲಿ ಎಂದಿನಂತೆ ಕಾರ್ತಿಕ ಮಾಸದ ಲಕ್ಷದೀಪೋತ್ಸವವು ಇದೇ ತಾ 13ರಿಂದ 16ರ ತನಕ ಜರಗಿತು.

ಆಕ್ಕಿ ಭತ್ತ ಒಪ್ಪಿಸುವ ಅವಧಿ ಮುಂದರಿಯಿತು ಕುಂದಾಪುರ ತಾಲೂಕು ಕಾರ್ಯಕ್ಷ ತಾಲೂಕಿನ ಅಜೆಕಾರು ಫಿರ್ಕಾ ಪ್ರತ್ತೂರು ತಾಲೂಕಿನ ಸುಳ್ಯ ಮತ್ತು ಕೊಕ್ಕರ್ಣೆ ಫಿರ್ಕಾಗಳು, ಉಡುಪಿ ತಾಲೂಕಿನ ಕೋಟಾ ಫಿರ್ಕಾ ಈ ಕೇಂದ್ರಗಳಿಂದ ಸ್ಟೋರಿಗೆ ಭತ್ತ ಒಪ್ಪಿಸುವ ಅವಧಿಯನ್ನು ತಾ 30-11-48ರ ತನಕ ಮುಂದರಿಸಲಾಗಿದೆ ಆಕ್ಕಿ ಪ್ರಥಮ ಕಂತಿನ (½ ಅಂಶ) ವ್ಯಾದೆಯನ್ನು ತಾ 23-11-48ರ ತನಕವೂ ಮುಂದುವರಿಸಲಾಗಿದೆ ಎಂದು ಬೆಲ್ಲಾ ಕಲೆಕ್ಟರರ ತಾ 15-11-47ರ ಪ್ರಕಟಣೆ ಹೊರಟಿದೆ. [ವ್ಯಾದೆಯ ಮುಂದುವರಿಕೆಯನ್ನು ಕೊನೆಯ ಗಳಿಗೆಯಲ್ಲಿ ಪ್ರಕಟಿಸುವುದರಿಂದ ಇದರ ಪ್ರಯೋಜನವನ್ನು ಹೆಚ್ಚಿನ ರೈತರು ಪಡೆಯುವಂತಾಗಿದೆ —ಸಂ.]

ನೋಟೀಸು

ಉಡುಪಿ ರೇಶನ್ ನಿಸ್ತೀರ್ಣವಿಚಾರಣೆಯ ಪ್ರತಿಯೊಬ್ಬ ಮನುಷ್ಯನು ಯಾ ಸಂಸ್ಥೆಯ ಸ್ಟಾಲಿಕನು ತನ್ನ ಸ್ವತ ವಿಚಾರಣೆಯ ಬಗ್ಗೆ ವಿಚಾರಿಸಲಾಗಿರುವುದಾಗಿ ತಾ 11-11-48 ಕ್ಕೆ ಆಕ್ಷೇಪ ಬಕ್ಕ ವಿಷಯ ರೇಶನ್ ಕಾರ್ಡಗಳನ್ನು ದಾಸ್ತಾನಾಗಿ ಇಟ್ಟುಕೊಂಡಿರುವಲ್ಲಿ ಸಬ್ರಿ ಪದಾರ್ಥಗಳಲ್ಲಿ ಎಸ್ಸನ್ನಾಪ್ಸೊ ಉಡ್ಪಿ ರೇಶನಿಂಗ್ ಆಫೀಸರವರ ಬರಹ ಮೂಲಕದ ಅನುಮತಿ ಶಿವ್ಯಾ ಅದನ್ನು ದಾಸ್ತಾನಿಟ್ಟಿರುವ ಸ್ಥಳದಿಂದ ತೆಗೆಯಾವವಾಗಲೀ, ವೇರೆಯವರಿಗೆ ವರಾಚಾರೆ ಮಾಡುವ ದಾಗಲೀ ಮಾಡಕೂಡದಾಗಿ ತಿಳಿಸಲ್ಪಡುತ್ತದೆ.

I U. Premia
Spl. Officer for Pre-Rationing Enquires Udipi

ಕೊರಡ್ಕಲ್ ಸ್ಮಾರಕ ನಿಧಿಗೆ

ಉದಾರ [illegible] ಸಮರ್ಪಿಸಿ.


ಒದು ಕಾಲಚಿತ್ರವನ್ನು ಬರಿಯಿಸಿ ನಿಂತಿದೆ
SERIES No 1
ಅದೇ ರೀತಿ
ಭಾರತವೂ
ಭಾರತದ ೩೦ ವರ್ಷಗಳ ವಿಸ್ಮರ್ಕಾಲದ ಚರಿತ್ರೆಗೆಯಿಂದ ಇಂದು ಅದು ತುಲಿಸಿನ ಅದರ ಮಹತ್ವಾದ ಸಂಸ್ಥಿತಿಯು ಅದರ ಪ್ರಶ್ನೆಯನ್ನು ಜಗತ್ತಿನ ಇತರ ಮೇಲಿನ ಸಂಬಂಧಗಳನ್ನು ನಿರ್ದಿಷ್ಟವಾದ ಸಮಸ್ಯೆಗಳ ಸ್ಥಿರತ್ವದ ಲಕ್ಷಣಗಳನ್ನು ಪಾಠಿಸಿ
ಪಾಠಿಗಳಿಗೆ ಸಂಗತವಾಗಿ ಸಿಕ್ಕ ಕೊಡಿಸಿ ನಿಮ್ಮ ಭಾವೀ ಏಳಿಗೆಯನ್ನು ಸಲ್ಲಿಸಿ ಇದೆಯಿಂದಿಸಿದಂತೆ ನಿರ್ಲಕ್ಷ್ಯಮಾಡಿ ಆಮಂತ್ರಿಸುವೆವು
ಆಗ್ರದಲ್ಲಿರುವ ತಾಜ್‌ಮಹಲ್‌ನಿಂದ ಶ್ರೀ ಕೆ ಲಾಲ್ ಗಿರಿಜಾಬಾಯಿ ಅವನ ಪ್ರೀತಿಯ ಹೆಂಡತಿಗಾಗಿ ಮಮ್ತಾಜ್ ಮಹಲ್ ಸ್ಮಾರಕಾರ್ಥವಾಗಿ ಕಟ್ಟಿಸಿದ್ದ ಅವನ ಶಿಲ್ಪ ಕಲಾಪ್ರಜ್ಞೆ ಪಾಸ್ಟ್ ಕೈನ ನಷ್ಟ ಅದರ ಅಂದವನ್ನು ಪಾಲಿಸಲಿಲ್ಲ ಮೆಹರ್‌ಬಾನ್ ಪಬ್ಲಿಷರ್ಸ್
ಶಾವಿಗೆಗು ಹಿಂದೂಸ್ತಾನ ಪೂರ್ತಿ ಆಗಿ ಸಿಗೋಕೆ ಇನ್ನು ಮೂರು—ನಾಲ್ಕು ವಾರ ಆಗುತ್ತೆ—ಇನ್ನಿಗೆ ಎಲ್ಲಾ ಬಾಗಿಲುಗಳಿ
BIT Kanara 88

1 ರೂ ಕಾಯಿಗೆ 8 ಪುಸ್ತಕಗಳು

ಗಾಂಧಿಜಿಯ ಜೀವನ ಕಾವ್ಯಗಳು	0-2-0
ವೈಯಕ್ತಿಕ ಆರೋಗ್ಯ	0-2-0
ಆರಬಸ್ಯಾನ	0-2-0
ಆದರ್ಶ ಆರೋಗ್ಯ ಪಾಠ	0-2-0
ನೀರಭೂಮಿ	0-2-0
ಕಂಠುಕಪಥ	0-2-0
ಚೀನ	0-2-0
ಸಿನೆಮಾ ಪದ್ಯಾವಳಿ	0-4-0

ಒಂದು ರೂಪಾಯಿ ಕಳುಹಿಸುವವರಿಗೆ ಮೇಲಿನ ಪುಸ್ತಕಗಳನ್ನು ಬುಕ್ ಪೋಸ್ಟಿನಿಂದ ಕಳಿಸಲಾಗುವುದು ಆಗಾ ಬೇಕಾದ ಮಾಳಿ. ವಿ. ಪಿ. ಮೂಲಕ ರೂ 1-5-0

ವಿಳಾಸ-

ನವಭಾರತ ಬುಕ್ ಡಿಪೋ, ಉಡುಪಿ

ಮಂಗಳೂರು

ಜೂನಿಯರ್ಸ್ ಫೈನಲ್: ಶಾಲಾ ಜೂನಿಯರ್ಸ್ ಕ್ರಿಕೆಟ್ ಟೀಮುಗಳೊಳಗಣ ಕೂನೆಯ ಪಂದ್ಯಾಟ ಕೆನರಾ ಹೈಸ್ಕೂಲ್ [ಅರ್ನಾ ಶಾಲೆ] ಮತ್ತು ವಿಲಾಗ್ರಿಸ್ ಹೈ ಸ್ಕೂಲುಗಳೊಳಗೆ ಜರಗಿದಾಗ ಕೆನರಾ ಹೈ ಸ್ಕೂಲಿನವರು ಜಯ ಪಡೆದರು.

ಕೂರೊ ನೇಶನ್ ಪಂದ್ಯಾಟ: ಕೊರೊನೇಶನ್ ಕ್ರಿಕೆಟ್ ಪಂದ್ಯಾಟದ ಮೊದಲನೇ ಮ್ಯಾಚು ಎಂ. ಸಿ. ಸಿ. ಮತ್ತು ನಾಯರ್ಸ್ ಇಲೆವೆನ್ ಈ ಎರಡು ಟೀಮುಗಳೊಳಗೆ ನಡೆದಾಗ ಎಂ. ಸಿ. ಸಿ. ಯವರು ಗೆದ್ದರು. ಎಂ. ಸಿ. ಸಿ. ಕಡೆಯ ಶ್ರೀಮಾನ್ ನೆಂಕಪ್ಪ ರೈ ಇವರು ಎರಡನೆಯ ಇನ್ನಿಂಗ್ಸ್ ದಲ್ಲಿ ಸೆಂಚುರಿ ಗಳಿಸಿರುವರು.

ವೆಸ್ಟ್ ಕೋಸ್ಟ್ ಯುನಿವರ್ಸಿಟಿ ಮ್ಯಾಚ್: ಇದರ ಎರಡನೇ ಮ್ಯಾಚು ಸೈಂಟ್ ಎಲೋಸಿಯಸ್ ಕಾಲೇಜ್ ಮತ್ತು ತಲ್ಲಚೇರಿ ಕಾಲೇಜುಗಳೊಳಗೆ ನಡೆದಾಗ ಸೈಂಟ್ ಎಲೋಸಿಯಸ್ ಕಾಲೇಜಿನವರು ಗೆದ್ದು ಫೈನಲ್ ಪಂದ್ಯಾಟಕ್ಕೆ ಅರ್ಹರಾದರು.

ಬಂಧನ: ಪಣಂಬೂರಿನ ಶ್ರೀ ಪಿ ರಾಜುಮಾಧವ ರಾವ್ (ಆರ್. ಎಸ್. ಎಸ್.) ಎಂಬಾತನನ್ನು ಈಚೆಗೆ ದಸ್ತರಿಗಿಮಾಡಿದ್ದು ಜಾಮೀನು ಮೇಲೆ ಬಿಡಲು ಅಜೀಕ್ಷಿಸಿದು ದೂ ನಿರಾಕರಿಸಲ್ಪಟ್ಟಿತೆಂದು ತಿಳಿದುಬರುತ್ತದೆ.

ಸ್ಪೆಶಲ್ ಸಿಬಂಧಿ: ರೇವಜ್ ಜನಗಣನೆ ಜನರಿಗೆ ಕಾರ್ಡಿನ ನಿರ್ದಾರ ಇತ್ಯಾದಿಗಳ ಬಗ್ಗೆ ಶ್ರೀ ಕೆ ಲಿಂಗಪ್ಪಯ್ಯ ಆವರು ಸ್ಪೆಶಲ್ ತಹಶೀಲ್ದಾರರಾಗಿಯೂ ಆವರ ಕೈಕೆಳಗೆ ೬ ತಾಲೂಕುಗಳಿಗೆ 6 ಮಂದಿ ಸ್ಪೆಶಲ್ ರೆವಿನ್ಯೂ ಇನ್ಸ್‌ಪೆಕ್ಟರರು ಮತ್ತು ಹೊಸದುರ್ಗ ಸಬ್ ತಾಲೂಕಿಗೆ ಪ್ರತ್ಯೇಕ ಒಬ್ಬ ರೆವಿನ್ಯೂ ಇನ್ಸ್‌ಪೆಕ್ಟರ್ ಕೂಡಾ ನೇಮಕಹೊಂದಿರುವರು ಜಿಲ್ಲೆಯಲ್ಲಿ ಹಿಂದನಜ್ಞೇ ರೇಶನ್ ಅಂಗಡಿಗಳನ್ನು ಸ್ಥಾಪಿಸಲಾಗುವುದೆಂದೂ ತಿಳಿದು ಬರುತ್ತದೆ.

ನಿಧನ: ಕರ್ನಾಟಕದ ಉಭಯ ಭಾಷಾ ನಿಸ್ಸಾರದಲ್ಲೂ ಸುಪ್ರಸಿದ್ಧ ಕೀರ್ತನಕಾರರೂ ಆಗಿದ್ದ ಶ್ರೀ ಬೇಲೂರು ಕೇಶವ ದಾಸರು ಈಚೆಗೆ ವೃದ್ಧಾಪ್ಯದ ದೆಸೆಯಿಂದ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಬಟ್ಟೆ ಲೈಸೆನ್ಸುಗಳು: ಈ ವರೆಗೆ ನಮ್ಮ ಜಿಲ್ಲೆಯಲ್ಲಿ ಸುಮಾರು 300 ಮಂದಿಗೆ ಚಿಲ್ಲರೆ ಬಟ್ಟೆ ಸೂಂಟಿದ ಲೈಸೆನ್ಸ್ ದೊರಕಿರುವುದು [ಮೊದಲು ಈ ಸಂಖ್ಯೆ ಸುಮಾರು ೧೫೦ ಇತ್ತು] ಇದಲ್ಲದೆ ಸುಮಾರು ೭೪ ಸಹಕಾರಿ ಸೂಸೈಟಿಗಳಿಗೂ ಈ ಲೈಸೆನ್ಸ್ ಕೊಡಲಾಗಿದೆ ರಜಂ ಬಟ್ಟೆ ವ್ಯಾಪಾರದ ಲೈಸೆನ್ಸುಗಳು ಈ ಜಿಲ್ಲೆಗೆ ಸುಮಾರು ೧೬೦೦೦ ಕೊಡಲಿರುವರೆಂದು ತಿಳಿದುಬರುತ್ತದೆ

ಜಿಲ್ಲೆಯ ಆಹಾರ ಪರಿಸ್ಥಿತಿ-ಸರ ಕಾರಕ್ಕೆ ವಿಷ್ಣಮಂಡಲ- ದಕ್ಷಿಣಕನ್ನಡ ಜಿಲ್ಲೆಯ ಆಹಾರ ಸಂಗ್ರಹ ಮತ್ತು ವಿತರಣೆಯ ಆಡಳಿತೆಯಲ್ಲಿರುವ ಕುಂದು ಕೊರತೆಗಳನ್ನು ಸರಕಾರದ ಗಮನಕ್ಕೆ ತಂದು, ಜಿಲ್ಲೆಯ ಆಹಾರದ ಬಿಕ್ಕಟ್ಟನ್ನು ಹೋಗಲಾಡಿಸುವಂತಹ ಕಾರ್ಯಕ್ರಮಗಳಿರುವ ಮನವಿಯೊಂದನ್ನು ಸರಕಾರದ ಮುಂದಿಡುವ ಕುರಿತು ಸಮ್ಮಿಲನ್ ಕಾಂಗ್ರೆಸ್ ಕಛೇರಿಯಲ್ಲಿ ತಾ ೧೧ರಂದು ಒಂದು ಸಭೆ ಜರಗಿತು ಶ್ರೀಗಳಾದ ಕೆ. ಆರ್. ಕಾರಂತ, ಕೆ. ಕೆ. ಶೆಟ್ಟಿ; ರಾ. ಬ. ಎಂ. ಗಿರಿಯಪ್ಪ, ಜಿ. ಕೆ. ಗೋವಿಂದ ಭಟ್ಟ, ಎನ್. ಎಸ್. ಕಿಲ್ಲೆ ಮುಂತಾದವರು ಜಿಲ್ಲೆಯಲ್ಲಿ ಜನರಿಗುಂಟಾದ ಕಷ್ಟದ ಸ್ಥಿತಿಗಳನ್ನು ವಿವರಿಸಿದರು

೧. ಹೊಸದುರ್ಗ ಉಪ ತಾಲೂಕನ್ನು ಮಲಬಾರಿನ ರೀತಿಯಲ್ಲಿ ಸರಿಗನೆಸಿ ಜಿಲ್ಲೆಯ ಉಳಿದ ಭಾಗದಲ್ಲಿನ ನಿಯಂತ್ರಣವನ್ನು ತೆಗೆಯಬೇಕು. ಆದರೆ ಬೆಲೆಯನ್ನು ನಿರ್ಧರಿಸಿ ಆ ಕ್ಕೆಯನ್ನು ಅತ್ತಿತ್ತ ಚಲಿಸದಂತೆ ಮಾಡಬೇಕು ಅಕ್ಕಿಯನ್ನು ಮಾರುವವರು ಸರಕಾರಕ್ಕೆ ಕೊಡಕು ಬೇರೆ ಯಾರಿಗೂ ಮಾರಬಾರದು. ೨. ಸರಕಾರವು ಈ ಸೂಚನೆಯನ್ನು ಮಾನ್ಯ ಮಾಡದಿದ್ದಲ್ಲಿ ಈಗ ಇರುವ ಸಂಗ್ರಹ ಮತ್ತು ವಿತರಣೆಯಲ್ಲಿ ಕೆಳಗಿನ ಬದಲಾವಣೆಗಳಾಗಬೇಕು (೧) ಅಕ್ಕಿಯ ಬೆಲೆ ಮಂಡಿಗೆ ೧೫ ರೂ. ಎಂದಿರಬೇಕು, ಅಕ್ಕಿಯನ್ನು ಸ್ಟೋರಿಗೊಯ್ದು ಹಾಕಿದ್ದಕ್ಕೆ ಗಾದಿ ಆಥವಾ ತಲೆ ಹೊರೆ ಬಾಡಿಗೆ ಕೊಡಬೇಕು. ಚಾಲಗೇನೆ ಒಕ್ಕಲುಗಳಿಗೂ ಮಜೂರದಿಗೂ ॥ ಸೇರು ಅಕ್ಕಿ ಕೊಡಬೇಕು ಎಂದು ನುಂಡಾದ ವಿಷಯಗಳಲ್ಲದೆ ಸರಕಾರಿ ಸ್ಟೋರುಗಳಲ್ಲಾಗುವ ಅನ್ಯಾಯ ಇತ್ಯಾದಿಗಳನ್ನೂ ರೈತರಿಗೆ ಕೊಡುವ ನೋಟೀಸು ಇತ್ಯಾದಿಗಳಲ್ಲಿ ಆಗ ಬೇಕಾದ ಸುಧಾರಣೆಗಳನ್ನೂ ಮನವಿಯಲ್ಲಿ ಸೂಚಿಸಲಾಗಿದೆ

ಬೆಂಗಳೂರು

ಹೃಬಂಧ ಸ್ಪರ್ಧೆ ದಿವಂಗತ ಶ್ರೀ ಬೇ ಸಮ್ಮ ಭಾಸ್ಕರರಾಯರ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪ್ರೋತ್ಸಾಹದ ಒಂದು ವಿಶಾಲ ನಿಧಿಯಿಂದ ಈ ವರುಷ (1948) ಒಂದು ಪ್ರಬಂಧ ಸ್ಪರ್ಧೆ ನಡೆಯಲಿರುವುದು. ಪ್ರಬಂಧ ಸ್ವತಂತ್ರವಾಗಿರಬೇಕು. ಇದುವರೆಗೆ ಅಚ್ಚಾಗಿರಬಾರದು. ಪ್ರಬಂಧ ಸ್ಕೂಲ್‌ಸಕ್ಕಾರ್ ಆತಾರದ 20 ಪುಟಗಳ ಪರಿಮಿತಿಯಲ್ಲಿರಬೇಕು ವರಂಬರ 7ನೇ ತಾರೀಕಿನೊಳಗಾಗಿ ಪ್ರಬಂಧ ಪರಿಷತ್ತಿನ ಕಛೇರಿಗೆ ತಲ್ಪಬೇಕು. ಹೆಚ್ಚಿನ ಮಾಹಿತಿಯನ್ನು ಗೌರವ ಕಾರ್ಯದರ್ಶಿ, ಪ್ರಬಂಧ ಪರಿಷತ್ ಕಛೇರಿ, ಬೆಂಗಳೂರು, ಆವರಿಂದ ಪಡೆಯಬಹುದು.

ಇಮ್ಮಡಿಯಾದ ತಲೆನೋವು, ಬೆನ್ನು ನೋವಿನಿಂದ ಕಳವಳ, ಕೀಲು ನೋವಿನಿಂದ ಕಷ್ಟ, ಹಲ್ಲು ನೋವಿನಿಂದ ಬೇಸರ ಇವೆಲ್ಲಕ್ಕೂ ಒಂದೇ ಔಷಧ ಸ್ಥಾಮಗಳು ಬಾಮು ಕೊಳ್ಳುವುದು, ಹೇಳಿ

ವಿಷಮುಂತಾದ ಜೀವ ಜಂತು ಮಾಡಿದ ಕಚ್ಚಿದ ಗಾಯಕ್ಕೆ ಮೊದಲು ಹಚ್ಚಿ ಬಳಿಕ ಎಲ್ಲಾ ರೋಗಗಳಿಗೂ

REGD. ಪೇಟೆಂಟ್ ಮಾಡಿದ ಸಕ್ಕರೆ ಮತ್ತು ಸಣ್ಣ ಸಣ್ಣ ಮಿಶ್ರಣಗಳಿಂದ ಮಾಡಿದ ಮೆಡಿಸಿನ್ ಎಲ್ಲಾ ಕಡೆಗಳಲ್ಲಿ ಎಲ್ಲಾ ಕಾಲದಲ್ಲಿ ಉಪಯೋಗಿಸಬಹುದು

ಅಮೃತಾಂಜನ ಲಿಮಿಟೆಡ್

ಪುಷರಾಜು.

ದೊಂಬಾಯಿ ಮತ್ತು ಕಲ್ಕತ್ತ.

ವಿವಿಧ ಪಾತ್ರೆಗಳು



ಯಾವತ್ತೂ ವಿಧವಿಧ ಬೆಲ್ಲ, ತಾಮ್ರ, ಹಿತ್ತಾಳೆ, ಕಂಚು ನೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಜಂ ಅಗಿ ಯೂಜಿಲ್ಲರೆಯಾಗಿಯೂಮೊರೆಯುತ್ತವೆ.

ಕಲ್ಯಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ನೋಟೀಸು

ಪುತ್ತೂರು ಡಿ. ಮೀ. ಕೋರ್ಟಿನಲ್ಲಿ

O. S. No. 356/1948

Rev. Fr. R. C. ಲೂವಿಸ್ ಗೋವಿಯಸ್. -ವಾದಿ.

ಭೂಪಾ ಶಂಕರ ಪ್ರಭು, ಪಾಸ ಪ್ರಭುಗಳ ಮಗ, ಮೂಡ ಕಸಬಾ, ಹಾಲಿ C/o L. K. Prabhu, Trishuleshwar Temple Road, Conductor, City Bus Service, Mangalore, S. K. -ಪ್ರತಿವಾದಿ.

ಪ್ರತಿವಾದಿಯು ವಾದಿಯಿಂದ ಬಾಡಿಗೆಟೀಟು ಬರಕೊಟ್ಟು ವಹಿಸಿಕೊಂಡ ದಾವಾ ಕಟ್ಟಡ ನಗ್ಗೆರೆ ಆಸ್ತಿ ಸರ್ವಾದಿಯನ್ನು ಸ್ವಾಧೀನತೆಗೂ, ವಿಗ್ರೆಗೂ ಕೂಡಾ ವಾದಿಯು ಮಾಡಿದ ಮೇಲಿನ ದಾವೆಯಲ್ಲಿ ಕೈಕೊಂಡ ನೋಟೀಸಿನ ತನ್ನ ವ್ಯಾಜೆ ತಾ. 3-11-1948 ಕ್ಕೆ ಇಟ್ಟಿರುತ್ತದೆ. ಆದ್ರಿಂದ ಪ್ರತಿವಾದಿಯು ಆ ವ್ಯಾಜೆಗೆ ಈ ಕೋರ್ಟು ಮುಂದೆ II ಘಂಟೆಗೆ ತಪ್ಪದೆ ಪಾಜ್ರಾಗಿ ಬರಹ ಮೂಲಕ ತನ್ನ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪಿದರೆ ನಿಮ್ಮನ್ನು ಕಿನಾಯಿ ಎಂತ ನೂಡಿ ಈ ದಾವೆಯನ್ನು ಮುಂದಿನ ತನ್ನಿಯಿಂದ ಏಕಪಕ್ಷಾನಿ ಸೋಗಾಗುತ್ತದೆ. ಎಂತ ಈ ಕೋರ್ಟಿನವರ R-i A-1348/1948 ನೇ ಆರ್ಜಯ ಮತಕಂ ಪ್ರಕಾರ ಈ ನೋಟೀಸು ಮಾಡಿಸಿಯಾದೆ.

B Ramachandra Rao, M.A.B.L.
Pleader for plaintiff

ತಾ 11-11-48 ಪುತ್ತೂರು, S. K.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪರಿ ಇಗಿಸಲ್ಪಟ್ಟು ಜಗತ್ತಿನಲ್ಲೆಲ್ಲಾ ವಿಶಿಷ್ಟಪ್ರಕಾರವಾಗಿ ಸರ್ವರೋಗಗಳ ಬಗ್ಗೆ "ದೇವಾನುಮೋದಿತ" ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಶುದ್ಧ ವನಸ್ಪತಿ ಗಿಡಮೂಲಿಕೆಗಳಿಂದಲೇ ಶಾಸ್ತ್ರೀಕೃತರೀತಿಯಿಂದ ಹೊಲ್ಲಾಂಡ್ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಿದ್ದಾಗಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಅತ್ತುಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬಸುವಮೂತ್ರ,-ನೀಮೂತ್ರ, ಅನ್ನಕೋಶ, ಕಲಿಬಿಯಂ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂರಲು ಕೈಯ, ಮೇಹವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪೀಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಸುಮೂತ್ರಕೋಶದಲ್ಲಿನ ತೀಕ್ಷ್ಣವಾದ ಬೇನೆಯು ಶಸ್ತ್ರ ಚಿಕಿತ್ಸೆ ಇಲ್ಲದೇನೆ ನಿರ್ನಾಮವಾದುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ "ದೇವಾನುಮೋದಿತ ಔಷಧಿ" ಎಂದು ಕರೆಯುವದೆಂದರೆ ಸಂದೇಹವೇನಿದೆ? ಕವಿನೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ. ಚಿಂತೆಯಲ್ಲಿ, ಈ ವಾನಿಂಗ್ ಟಿಲ್ಲಿ ತೈಲದಿಂದ ಪಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳಹೊಟ್ಟೆನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಆಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು ಗಾಯ, ಸುಟ್ಟಗಾಯಗಳು, ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಇರುತ್ತದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2 8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ ಸಹಿತ ರೂ. 30 0-0. ವಾನಿಂಗ್ ಟಿಲ್ಲಿ ಕೆಪ್ಸುಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸುಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಸರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ, ಬೇರೆ. ಒಂದುಡಜನ್ ಡ್ರಸರ್ ಬಾಟ್ಲಿಗಳಿಗೆ ರೂ. 60 0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-3-0 ಡಜನ್ ಶೀಸೆಗಳಿಗೆ ರೂ. 18-ವಿ ಪಿ-ಮಾಫ್.

ಪ್ರೇಕಂಸನಾ ಪತ್ರ—ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೩೪ ವರ್ಷಗಳಿಂದ ಸರ್ವ ನಿಗದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ಬಿಟ್ಟಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೀವಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯಾಗಿದೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ನೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B & C. I Rly.

ಬೊಂಬಾಯಿ ಸ್ವಾಕೆತ್ಯರು:—ಲಕ್ಕವಾಲಾ ಲಿಮಿಟೆಡ್, 25, ಲ್ಲೋ ಹನುಮಾನ್ ಲೇನ್, ಬೊಂಬಾಯಿ 2

ಎಲ್ಲ ತರದ ದಂತ ರೋಗಗಳನ್ನು, ನೆಟ್ಟಗೆ ಮಾಡಿ ಹಲ್ಲುಗಳನ್ನು ಗಟ್ಟಿ ಹಾಗು ಶುಭ್ರ ಮಾಡುತ್ತದೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಬೈವನಪ್ರಾಶ (ಬಂಗಾರ ಮಿಶ್ರಿತ,)

ಇದು ಆತ್ಯಂತ ಶಕ್ತಿವರ್ಧಕ ರಸಾಯನ, ಕೆನ್ನು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ಬೊರೆಯುತ್ತವೆ

— ಎಂ. ಬಿ. ಗೌಡಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಸಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲೆ ಸಂಗ್ತಿ ಬರದಲ್ಲಿ ರೋಗಕ್ಕೆ ಕಕ್ಕಶವಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು.—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಫೊಲ್ಕರ್ ಸ್ಟೋರ್ಸ್, ಕೆಮಿಸ್ಟ್ 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್‌ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.



ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರೆ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಜೀವಿಸಿ ತಯಾರಿಸಲ್ಪಟ್ಟ ಅಮೋಘ ವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ಈ ಔಷಧಿಯ ತಯಾರಿಕೆಯಲ್ಲಿ ಅನುಭವವುಳ್ಳ ಪ್ರಸಿದ್ಧ ವೈದ್ಯರುಗಳು ಬಹುಶ್ರಮ ವಹಿಸಿ ಅಂದರೆ ಕೇವಲ ೯ ರೂಪಾಯಿಗಳು ಒಂದು ಬಾಣಂತಿತನಕ್ಕೆ ಸಾಲುವುದಷ್ಟೆ ವಿಶೇಷ ವಿವರಕ್ಕೆ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

ಸ್ಥಾಪಕರು— ಡಾ| ಬಿ. ಕೆ. ಶಿವರಾಮ ರಾವ್, ಶಂಕಿಬೆಟ್ಟು, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ತಿಂಡಿತಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಬೈಂದೂರು ಕುಂದಾಪುರ ತಾಲೂಕಿನ ಸೇರಂಜಾಲ ಗ್ರಾಮದಲ್ಲಿ ಇದೇ ತಾ 1ರಲ್ಲು ಹೇರಂಜಾಲ ಮತ್ತು ಆಸುಪಾಸಿನ ಗ್ರಾಮಗಳ ಕೃಷಿಕರ ಸಭೆಯು ಶ್ರೀ ಯಡಕಂಬ ಕೃಷ್ಣ ಹೆಬ್ಬಾರರ ಅಧ್ಯಕ್ಷತೆಯಲ್ಲಿ ಜರಗಿತು. ರಿಕ್ವಿಜಿಶನ್ ಮತ್ತು ನಿಯಂತ್ರಣ ಧೋರಣೆಗಳಿಂದಾಗಿ ಕೃಷಿಕರಿಗೆ ಉಂಟಾದ ಅಡಚಣೆ, ತೊಡಕು ತೊಂದರೆಗಳನ್ನು ಪರಿಶೀಲಿಸಲಾಯಿತು. ಸರಕಾರವು ಈಗ ಕೊಡುವ ಧಿಡಿಯಕ್ಕೆ ಒಪ್ಪತ್ತಿನ ಊಟಕ್ಕೂ ಸಾಲದಾದುದರಿಂದ ಕೃಷಿಕರ ಶಕ್ತಿ ತುಂಡುತ್ತಾ ಬರುವುದು ಮೊತ್ತವಲ್ಲದೆ ಜಾಸ್ತಿ ಉತ್ಪತ್ತಿಯನ್ನು ಮಾಡಲು ಅಸಾಧ್ಯವೆನಿಸುವುದು. ಏನೋ ಅಲ್ಪ ಸ್ವಲ್ಪ ಬೆಳೆಸಿದುದನ್ನು ಸರಕಾರವು ಸ್ವಾಧೀನ ಪಡಿಸಿಕೊಂಡು ಕೊನೆಗೆ ರಿಲೀಫ್ ಅಂಗಡಿಗಳ ಮೂಲಕ ಕೃಷಿಕರಿಗೆ ಕೊಡುವ ರೇಶನು ಕಾಯಕಸ್ಪವಾಗುವ ಕೃಷಿಕರಿಗೆ ಪ್ರಯೋಜನವಿಲ್ಲದಂತಾಗಿದೆ. ಸರಕಾರಕ್ಕೆ ಕೃಷಿಕ ವರ್ಗದ ಹಿತಾಕಾಂಕ್ಷೆಯಿರುವುದಾದರೆ ರಿಕ್ವಿಜಿಶನ್ ಪದ್ಧತಿಯನ್ನು ತೆಗೆದುಹಾಕಿ ನಿಯಂತ್ರಣವನ್ನು ಮಾತ್ರ ಇಟ್ಟು, ಕಾಫಿ ಬೀಜ ಸಂಗ್ರಹದಂತೆಯೇ ಅಕ್ಕಿಯನ್ನು ಸಂಗ್ರಹಿಸಿ ಕೃಷಿಕರಿಗೆ ವಿತರಣೆಯಾಗುವಂತಾಗಬೇಕು ಇತ್ಯಾದಿ ವಿಷಯಗಳಮೇಲೆ ಚರ್ಚೆ ನಡೆಯಿತು.

ಸುಬ್ರಹ್ಮಣ್ಯ-ಪುತ್ತೂರು ತಾಲ್ಲೂಮ ಮಹತೋಭ್ಯಾರ ಉತ್ಸವಕ್ಕೆ ಶ್ರೀ ಸುಬ್ರಹ್ಮಣ್ಯ ಕ್ಷೇತ್ರದಲ್ಲಿ ಪೂರ್ವ ಶಿಷ್ಟ ಸಂಪ್ರದಾಯ ಪ್ರಕಾರ ಯಿವೇ ಬರುವ ಸರ್ವಧಾರಿ ಸಂವತ್ಸರದ ಕಾರ್ತಿಕ ಬ. ೧೪ ಯು ರ ವಿವಾರ ತಾರೀಕು 28-11-48ರಂದ ಉತ್ಸವವು ಪ್ರಾರಂಭವಾಗಿ ಕಾರ್ತಿಕ ಬ. ೪೦ ಯು ಮಂಗಳವಾರ ತಾ. 30-11-48ರಲ್ಲು ಲಕ್ಷ ದೀಪೋತ್ಸವ ಮಹಾರಥೋತ್ಸವ ಮಾರ್ಗಶಿರ ಶುದ್ಧ ೩ ಯು ಶುಕ್ರವಾರ ತಾ. 3-12-48ರಲ್ಲು ಮಯೂರ ಪಾಷಹೋತ್ಸವ. ಮಾ। ಶು। ೪ ಯು ಶನಿವಾರ ತಾ 4-12-48ರಲ್ಲು ಹೂವಿನ ತೇರು ಉತ್ಸವ. ಮಾ। ಶು। ೫ ಯು ರವಿವಾರ ತಾ 5-12-48ರಲ್ಲಿ ಪಂಚಮಿ ರಥೋತ್ಸವ. ಮಾ। ಶು। ೬ ಯು ಸೋಮವಾರ ತಾ 6-12-48ರಲ್ಲಿ ಚಂಪಾ ಷಷ್ಠಿ ಮಹಾರಥೋತ್ಸವ, ಮಾ। ಶು। ೭ ಯು ಮಂಗಳವಾರ ತಾ 7-12-48ರಲ್ಲು ಅವಭೃತೋತ್ಸವವೇ ಮೊದಲಾದ ಮಹೋತ್ಸವಗಳು ಶ್ರೀ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ಜರಗುವುದು.

ಮುನಿಯಾಲು- 12-11-48ನೇ ದಿನ ಹಿಂದಿ ವಯಸ್ಕರ ಶಾಲಾ ವಿದ್ಯಾರ್ಥಿಗಳ ವಿವಿಧ ವಿನೋದಾವಳಿಗಳ ಪ್ರದರ್ಶನವು ಡಾ. ಯು. ಕೃಷ್ಣ ಇವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ವಿದ್ಯಾರ್ಥಿಗಳ ಚಟುವಟಿಕೆಗಳನ್ನೂ, ಹಿಂದೀ ಅಧ್ಯಾಪಕರ ಹುರುಪನ್ನೂ ಪ್ರಶಂಸಿಸಿ ದೀರ್ಘ ಭಾಷಣವಿತ್ತರು.

ಪಾದೆಬೆಟ್ಟು- ಶ್ರೀ ಶಾರದಾ ಭವನದ ಎಲಿಮೆಂಟರೀ ಶಾಲಾ ಹೊಸ ಕಟ್ಟಡದ ಶಂಕುಸ್ಥಾಪನಾ ಸಮಾರಂಭವು 7-11-48ನೇ ದಿನ ಉಡ್ಪಿ ರೇಂಜ್ ಡಿ. ಎ. ರಾವ ಶ್ರೀ. ಪೈ. ಗೋಪಾಲರವರ ಅಧ್ಯಕ್ಷತೆಯಲ್ಲಿ ಜರಗಿತು. ಅಧ್ಯಕ್ಷರು ವಿದ್ಯಾಲಯ ಶಿಕ್ಷಣದ ಕುರಿತು ಮಾತನಾಡಿದ ಮೇಲೆ ಉಪಾಹಾರದೊಂದಿಗೆ ಸಭಾಂತ್ಯವಾಯಿತು.

ಸುಲಭದಲ್ಲಿ ಇಂಗ್ಲಿಷ್

ಇಂಗ್ಲಿಷ್ ಸ್ವಯಂಬೋಧಿನಿ.

ಬೆಲೆ ರೂ. 1 8 0

ಪುಸ್ತಕ ವ್ಯಾಪಾರಿಗಳಲ್ಲಿ ಸಿಗುತ್ತದೆ

ಪೊಪ್ಯುಲರ್ ಇನ್ಶೂರೆನ್ಸ್ ಕಂಪೆನಿ, ಲಿಮಿಟೆಡ್. ಮಂಗಳೂರು— ಇದರ ನಾಲ್ಕನೆ ಮಲ್ಯವೇತನ ವರದಿಯು ನಮ್ಮ ಹಸ್ತಗತವಾಗಿದೆ. ಈ ವರದಿಯ ಕುರಿತು ಕೆಲವು ಮಾತುಗಳನ್ನು ಜೀಳಲು ತುಂಬಾ ಸಂತೋಷಪಡುತ್ತೇವೆ.

ಈ ಕಂಪೆನಿಯ ಮರಣ ಸಂಖ್ಯೆ, ಖರ್ಚು, ಬಡ್ಡಿ ಇತ್ಯಾದಿಗಳ ವಿಮರ್ಶೆಯನ್ನು, ಎಕ್ಕುವರಿಗಳಾದ ಶ್ರೀ ಡಿ. ಶೇಷು ಅಯ್ಯರರು ಬಲೋರೀತಿಯಿಂದ ಮಾಡಿರುವರಲ್ಲದೆ ಮುಂದಿನ ಆಶಾಕ್ಷಿತ ವಿಚಾರಗಳಿಗೆ ಧಾರಾಳ ಅನುಕೂಲಗಳನ್ನು ಮಾಸಲಿಟ್ಟಿರುವರೆಂದು ವರದಿಯಿಂದ ಭಾಸವಾಗುತ್ತದೆ. ಇಷ್ಟು ಸೂಕ್ಷ್ಮರೀತಿಯಪರಿಶೋಧನೆಗೆ ಒಳಗಾಗಿಯೂ, ಮಲ್ಯೋವೇತನ ವರದಿ ರೂಪಾಯಿ 48,421 ರ ಉಳಿತಾಯವನ್ನು ತೋರಿರುವುದೂ ಪಾಲಿಸಿದಾರರಿಗೆ ರೂಪಾಯಿ ಒಂದು ಸಾವಿರದ ವಿಮೆಗೆ ವರ್ಷಕ್ಕೆ ರೂ. 40 ರಿವರ್ಸರಿ ಬೋನಸ್ಸು' ಮತ್ತು ಪಾಲುದಾರರಿಗೆ ಸೇಕಡಾ 6½ರ ಏಕತ್ರ ಕೂಡಿಸಿದ ದಿವಿಡೆಂಟ್ ಕೊಡುವಂತೆ ಅವಕಾಶವುಂಟಾದದ್ದೂ ಅಭಿನಂದನೀಯ ಹಾಗೂ ಎತ್ತಿಹೇಳತಕ್ಕುದಾಗಿದೆ.

ಮರಣ ಸಂಖ್ಯೆ ನಿರೀಕ್ಷಿತ ಕಳಹದಿಗಿಂತ ಬಹಳ ಕಡಿಮೆಯಾಗಿದೆ; ಸಂಸ್ಥೆಯು ಧಾರಾಳವಾಗಿ ವಿನಿಯೋಗಿಸಿದ 'ಸರಕಾರಿ ಭದ್ರತಾ ಪತ್ರ'ಗಳ ಮೇಲಿನ ಹಣದ ಬಡ್ಡಿಯದರ 1946ನೆ ಇಸವಿಯಲ್ಲಿನ ಅವುಗಳ ರೂಪಾಂತರದಿಂದ ಕೊಂಚ ಇಳಿಯುವಂತಾದರೂ, ಈಗಿನ ಎಂಕಿಯ ಬಡ್ಡಿ ದರದ ಹೆಚ್ಚಳ ದೃಷ್ಟಿಯಿಂದ, ಮಲ್ಯೋನ್ನತನ ವರದಿಯಲ್ಲಿ ಕೊಂಚ ಹೆಚ್ಚಿನ ಬಡ್ಡಿದರವನ್ನೆಸಗುವುದೇ ನ್ಯಾಯವಾಗಿತ್ತು. ಆದರೆ ಈ ವಿಷಯದಲ್ಲಿ ತಾನು ಬಹಳ ಮುಂಜಾಗ್ರತೆಯನ್ನೇ ವಹಿಸಿದ್ದೇನೆ ಎಂದು ಎಕ್ಕುವರಿ ತನ್ನ ವರದಿಯಲ್ಲಿ ಸ್ಪಷ್ಟವಾಗಿ ಸೂಚಿಸಿರುವರಲ್ಲದೆ ಖರ್ಚಿನ ದಾಖಲಾತಿಯು 36 ½%ರಂದ- ಜೀವನದ ನೆಟ್ಟಪ್ಪರು ತ್ತಿದ್ದರೂ- 13½%ರಷ್ಟಕ್ಕೂ ಕಂಪೆನಿ ತಗ್ಗಿಸಿರುವುದೆಂದು, ಅವರು ಮೆಚ್ಚಿರುವುದೂ ಗಣನೀಯ ಸಂಗತಿಗಳು.

ಭಾರತದ ವಿವಿಧ ಕಂಪೆನಿಗಳ ಕಾರ್ಯಭಾರಗಳು, ಮುಖ್ಯವಾಗಿ ಎರಡು ಅಘಾತಗಳಿಂದ ತಗ್ಗಿದ ಉತ್ಪತ್ತಿ, ಏರಿದ ತೆರಿಗೆಗಳಿಂದ ಬಹುಮಟ್ಟಿಗೆ ಕೈಕಟ್ಟಿಹೋಗಿವೆಯಾದರೂ, ತೆರಿಗೆ ಏರಿಕೆಯಿಂದ ಈ ಸಂಸ್ಥೆಗಳಿಗೆ ಬಲವಾದ ಏಟು ಬೀಳುತ್ತಿದೆಯಾದರೂ, ಎಕ್ಕುವರಿ ತಮ್ಮ ವರದಿಯಲ್ಲಿ ಬರೆ[illegible] ಯಭಾಗವು, ಈ ಸಂಸ್ಥೆಯ ಸ್ಥಿರಬಾಧ ಮುನ್ನಡೆ, 'ನಾಯಕಳವಂಡಳಿಯ ಕಾರ್ಯದಕ್ಷತೆ' ಮೊದಲಾದುವಕ್ಕೆ ಕೈಗನ್ನಡಿಯಂತಿದೆ. ಳಳದ ಐದು ವರ್ಷಗಳಲ್ಲಿ ಈ ಕಂಪೆನಿಯು ತನ್ನ ಕಾರ್ಯಭಾಗವನ್ನು ಅತ್ಯಂತ ಜಾಗರೂಕತೆಯಿಂದ, ಬಹು ವಿವೇಕತ್ವಯನಿಂದ ನಡೆಸಿಕೊಂದು ಬಂದಿರುವುದಕ್ಕಾಗಿ, ಈ ಆಡಳಿತ ಮಂಡಳಿಯು ಸರ್ವಸ್ಪಕಾರದಿಂದಲೂ ಯತ್ನತ್ತೂ ಅಭಿನಂದನೆಗಳಿಗೆ ಪಾತ್ರವಾಗಿದೆ ಇದೇ ಕಾರ್ಯರೀತಿಯನ್ನೇ ಮುಂದೆಯೂ ಅನುಸರಿಸಿದ್ದಲ್ಲಿ ಕಂಪೆನಿಗೊಂದು ಉಜ್ವಲ ಭವಿಷ್ಯವನ್ನೇ ನಿರೀಕ್ಷಿಸಲಾಗಿದೆ. ಇಷ್ಟೊಂದು ಉತ್ಕೃಷ್ಟ ಆಡಳಿತದ ಸಂಸ್ಥೆಯೊಡನೆ ತಾವು ಸಂಬಂಧವಿಟ್ಟುಕೊಂಡಿರುವುದಕ್ಕಾಗಿ ಪೊಲಿಸಿದಾರರಿಗೂ ಪಾಲುಗಾರರಿಗೂ ಉತ್ತಮ ಸಂಸ್ಥೆಯೇ ಉಂಟಾಗುವುದು ಎಂದು ಎಕ್ಕುವರಿ ಉಲ್ಲೇಖಿಸಿದುದನ್ನುನಾವು ಪುಷ್ಟೀಕರಿಸುತ್ತೇವೆ.

ಈ ಸಂಸ್ಥೆಯ ಮೆನೇಜಿಂಗ್ ಡೈರೆಕ್ಟರ್ ರೂ ಹಲವು ಸಂಸ್ಥೆಗಳ ಸ್ಥಾಪಕರೂ, ವ್ಯವಹಾರದಕ್ಷರೂ ಆದಶ್ರೀ ಬಿ. ವಿಠಲ ರಾಯರ ನೇತೃತ್ವದಲ್ಲಿ ಕಂಪೆನಿಯು ಸರ್ವರೀತಿಗಳಿಂದಲೂ ಜನತಾ ಜನಾರ್ಧನನ ಸೇವೆಮಾಡಿ ಸಮಾಧಿವೃದ್ಧಿ ಹೊಂದಲೆಂದೂ ಇನತೆಯು ಕೂಡಾತಮ್ಮ ನೆರವನ್ನೀಯಲೆಂದೂ ಬಯಸುತ್ತೇವೆ.

ಪುತ್ತೂರಲ್ಲಿ ಕೃಷಿಜಗ ಪರಿಷತ್ತು
ಪುನರ್ನಿಯಂತ್ರಣಕ್ಕೆ ವಿರೋಧ

ಪುತ್ತೂರು ತಿವಿಜನಿನ ಕೃಷಿಕರ ಪರಿಷತ್ತೊಂದು ತಾರೀಕು ೪ರಂದು ಪುತ್ತೂರಿನಲ್ಲಿ ಶ್ರೀ। ಎಸ್. ಎಸ್. ಭಿಡೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಸಾವಿರಾರು ಕೃಷಿಕರು ಮತ್ತು ರೈತರು ಈ ಸಭೆಗೆ ಆಗಮಿಸಿದ್ದರು. ವಿಶೇಷ ಆಮಂತ್ರಣದ ಮೇರೆಗೆ ಆಗಮಿಸಿದ್ದ ಮದ್ರಾಸಿನ ಶಾಸನ ಸಭಾಸದಸ್ಯರಾದ ಶ್ರೀ। ಕೆ. ಆರ್. ಶಾರಂತರು ಪರಿಷತ್ತನ್ನು ಉದ್ಘಾಟಿಸಿದರು.

ರೈತನ ವ-ನೆಯ ಖರ್ಚು ಮತ್ತು ಕೃಷಿಗೆ ಬೇಕಾದ ವೆಚ್ಚವನ್ನು ಲೆಕ್ಕಿಸದೆ, ಆವನು ಗೇ ಜಕೊಡತಕ್ಕ ಎಲ್ಲ ಧಾನ್ಯಗಳನ್ನು ಕಡ್ಡಾಯವಾಗಿ ಪ್ರೊಕ್ಯೂರ್ ಮಾಡಿ, ಆ ಮೇಲೆ ಅವನಿಗೆ ಬೇಕಾಗುವ ಪಡಿಯನ್ನು ಹಸುಗೆ ಅಂಗಡಿಗಳಿಂದ ಹಚ್ಚು ಬೆಲೆಕೊಟ್ಟುಕೊಂಡು ಕೊಳ್ಳುವಂತೆ ಮಾಡುವ ಸರಕಾರನ ಘೋರ ಕೆಯು ಸರಿಯಲ್ಲ. ಇದರಿಂದ ಆಹಾರಧಾನ್ಯಗಳ ಉತ್ಪಾದನೆಗೂ ತೊಂದರೆಯಾಗಿ- ಎಂದು ಶ್ರೀ ಕಾರಂತರು ತಮ್ಮ ಭಾಷಣದಲ್ಲಿ ಹೇಳಿದರು. ಅವರು ಮತ್ತೂ ಹೇಳಿದ್ದೇನೆಂದರೆ- ಪ್ರೊಕ್ಯೂರ್‌ಮೆಂಟ್ ನೋಟೀಸು ಕೊಡುವಾಗ ನಿಜವಾದ ಉಳಿತಾಯವನ್ನು ಲೆಕ್ಕಿಸದೆ ಅಧಿಕಾರಿಗಳ ಸ್ವೇಚ್ಛಾನುಸಾರವಾಗಿ ಕೊಡಲಾಗುತ್ತದೆ. ಇದಕ್ಕೆ ಕೃಷಿಕರದೇನಾದರೂ ವಿರೋಧವಿದ್ದರೆ ಅದರ ಕುರಿತು ವಿಚಾರಣೆ ನಡೆಸಲು ಇಂದಿನ ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಸರಿಯಾದ ವ್ಯವಸ್ಥೆಯಿರುವುದಿಲ್ಲ. ಕೃಷಿಕನ ಮನೆ ಖರ್ಚಿಗೆ ಹಾಗೂ ಕೃಷಿ ಕಾರ್ಯಕ್ಕೆ ಸಾಕಷ್ಟು ಧಾನ್ಯಗಳನ್ನು ಬಿಡಲಾಗುವುದಿಲ್ಲ- ಶ್ರೀ। ಕಾರಂತರು ಮದ್ರಾಸು ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಚರ್ಚಿಸುವರೆ ಜಿಲ್ಲೆಯ ಆಹಾರ ಆಡಳಿತೆಯ ವಿಷಯವಾಗಿ ತಾವೊಂದು ಗೊತ್ತುವಳಿಯನ್ನು ಸೂಚಿಸಿರುವೆವೆಂದೂ ಅದರ ಪಕ್ಷದ ಸಭೆಯು ಪ್ರಧಾನ ಮಂತ್ರಿಗಳಿಂದ ಕರೆಯಲ್ಪಡಲೇ ಇಲ್ಲವೆಂದೂ ತಿಳಿಸಿದರು.

ಆ ಮೇಲೆ ಕಡ್ಡಾಯದ ಪ್ರೊಕ್ಯೂರ್‌ಮೆಂಟ್ ಮತ್ತು ಹಸಿರಗೆ ಸಬ್ಜಿತಿಜು ಕುರಿತು ಚರ್ಚೆ ನಡೆಯಿತು. ಶ್ರೀಗಳಾದ ದೇವಪ್ಪ ಕಟ್ಟೆ, ಕೆ. ಜಿ. ರಾಮಣ್ಣ ಕಟ್ಟೆ, ತಿರುವತೇಶ್ವರ ಭಟ್ಟ, ಮೊದಲಾದವರು ಇಂದಿನ ಪ್ರೊಕ್ಯೂರ್‌ಮೆಂಟ್ ಮತ್ತು ರೇಶನಿಂಗ್ ಕ್ರಮವು ಲುಂಚ, ಕಳ್ಳಸಂತೆ ಮೊದಲಾದವುಗಳಿಗೆ ಎಡೆಕೊಡುವುದೆಂದೂ ಅಲ್ಲದೆ ಇದರಿಂದ ಉತ್ಪಾದನೆಗೂ ಧಕ್ಕೆ ಬರುವುದೆಂದೂ ಹೇಳಿದರು. ಅವರು ಆಹಾರ ಧಾನ್ಯಗಳ ನಿಯಂತ್ರಣವನ್ನು ರದ್ದುಗೊಳಿಸಬೇಕೆಂದು ವಾದಿಸಿದರು. ಈ ಪರಿಷತ್ತಿನಲ್ಲಿ ಭಾಗವಹಿಸಬಾರದೆಂದು ಸ್ಥಾನಿಕ ಅಧಿಕಾರಿಗಳು ಜನರಿಗೆ ಬೆದರಿಕೆ ಹಾಕಿದುದನ್ನು ನಿವೇದಿಸಿ ಶ್ರೀ। ಕೆ. ಎನ್. ಮಲ್ಯರು ಒಂದು ಗೊತ್ತುವಳಿಯನ್ನು ಮಂಡಿಸಿದರು. ಸಾರ್ವಜನಿಕ ಸಭೆಗಳನ್ನು ಕರೆದು ತಮ್ಮ ಸಂಕಷ್ಟಗಳನ್ನು ವ್ಯಕ್ತಪಡಿಸುವುದು ಜನರ ಜನ್ಮಸಿದ್ಧ ಹಕ್ಕು. ಹಿಂದೆ ಸರಕಾರಿ ಅಡಳಿತೆ ನಡೆಯುತ್ತಿರುವಾಗಲೂ ಅಧಿಕಾರಿಗಳು ಈ ರೀತಿ ವರ್ತಿಸುತ್ತಿರಲಿಲ್ಲ- ಎಂದು ಶ್ರೀ। ಮಲ್ಯರು ಹೇಳಿದರು. ಶ್ರೀ। ಎಂ. ಸದಾಶಿವ ರಾಯರು ಗೊತ್ತುವಳಿಯನ್ನು ಅನುಮೋದಿಸಿದರು.

ಶ್ರೀ। ಜಿ. ಕೆ. ಗೋವಿಂದ ಭಟ್ಟರು ಪ್ರೊಕ್ಯೂರ್‌ಮೆಂಟ್ ಮತ್ತು ದೂರಲ್ ರೇಶನಿಂಗನ್ನು ಕಿತ್ತುಪಡಿಸಬೇಕೆಂದು ಕೇಳುವ, ಇಲ್ಲವಾದರೆ ಇಂದಿನ ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ರೈತರಿಗಾಗುವ ಕಷ್ಟಗಳನ್ನು ಕೊನೆಗಾಣಿಸಬೇಕೆಂದು ಸೂಚನೆಯ ಒಂದು ಗೊತ್ತುವಳಿಯನ್ನು ಮಂಡಿಸಿದರು. ಶ್ರೀ। ಗೋವಿಂದ ಭಟ್ಟರ ಗೊತ್ತುವಳಿಯಲ್ಲಿ ತಾ ಕೆಳಗಿನ ವಿಷಯಗಳು ಸೂಚಿಸಲ್ಪಟ್ಟಿವೆ-

೧ನೆಯದಾಗಿ ಪ್ರತಿ ಎಕ್ರೆಗೆ 7 ಮಂಡಿ ಅಕ್ಕಿ ಇಟ್ಟುಕೊಳ್ಳುವಂತಾಗಬೇಕು. ಜಿಲ್ಲಾ ಕಲೆಕ್ಟರರು ಜಿಲ್ಲೆಯ ಶಾಸನ ಸಭಾಸದಸ್ಯರೊಡನೆ ಆಲೋಚಿಸಿ ಜನರ ಮನವಿಗಳನ್ನು ವಿಚಾರಿಸುವ ಬಗ್ಗೆ ನ್ಯಾಯಾಲಯಗಳನ್ನು ಪ್ರತಿ ಫಿರ್ಕದಲ್ಲಿಯೂ ಸ್ಥಾಪಿಸಬೇಕು. ದೂರಲ್ ಪ್ರದೇಶಗಳಲ್ಲಿ ರೈತನಿಗಾಗಲಿ, ಫಸಲಿಗಾಗಲಿ ಪ್ರತಿಯೊಬ್ಬನಿಗೆ ದಿನ ಒಂದರ ಒಂದು ರಾತಲು ಅಕ್ಕಿಯಂತೆ ದೊರಕಬೇಕು. ಪ್ರತಿ ಹಳ್ಳಿಯಲ್ಲಿಯೂ ರೇಶನ್ ಕಾರ್ಡುಗಳನ್ನು ಕೊಡುವ ವ್ಯವಸ್ಥೆ ಮಾಡಬೇಕು. ಸ್ಕೋರಿಗಾಗಿಗೆ ಭತ್ತ ಒಪ್ಪಿಸುವ ಸಮಯವನ್ನು ಮುಂದೆವರಿಸಬೇಕು.

ಶ್ರೀ। ಗೋವಿಂದ ಭಟ್ಟರ ಗೊತ್ತುವಳಿಯನ್ನು ಶ್ರೀ। ಸಿ. ಎಸ್. ಶಾಸ್ತ್ರಿಗಳು ಅನುಮೋದಿಸಿದರು ಗೊತ್ತುವಳಿಯು ಅವಿರೋಧವಾಗಿ ಸ್ವೀಕೃತವಾಯಿತು. ಇನ್ನೂ ಒಂದೆರಡು ಗೊತ್ತುವಳಿಗಳು ಸ್ವೀಕೃತವಾದ ಮೇಲೆ ಸಭೆಯು ಅಂತ್ಯವಾಯಿತು.

'ಕೇಶ ಕಲಾ' ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುಳು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾವ

ರೇಶನ್ ಕಾರ್ಡುಗಳೂ ಕಾರ್ಡುಗಳಿಗೆಹಚ್ಚುವಸ್ಟಿಕ್ಕುಗಳೂ

ದೊರೆಯುತ್ತವೆ

ವಸಯುಗ ಪ್ರೆಸ್, ಉಡುಪಿ.

— ಮುಕ್ಕಳನ್ನು ಹಡೆಯುವುದು ಸಾಕು —

ಅರಕ್ತ ಕ್ಷಯರೋಗಿ **ಬರ್ಥ ಕಂಟ್ರೋಲ** ರೋಗ ಗ್ರಸ್ತ ಕೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಳಿಕ್ಕಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ಕಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಂಮ್ಮತ್ತು:—ಹೆರವೀಜಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಂಮ್ಮತ್ತು ರೂಪಾಯಿ ೨—೦—೦. ಪೋಸ್ಟ ಚಾರ್ಜು ೧೫ ಆಣೆ.

ಪೂಲಕರು:—ಹಾಲಪ್ಪಾ ಫಕೀರಪ್ಪಾ ಹಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಸಿಟಿ.

ಏಜಂಟರು:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ ಬಾಗಲಕೋಟಿ ಧಾರವಾಡ ವಿಜಾಪುರ—ಹಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ನಿಜಾಪುರ ನಂಜುಡೇಸ್ವರ ಮೂರ್ತಿ ಹಾವಣಗೇರಿ ಹಾವಣಗೇರಿ:—ಹಾವಣಗೇರಿ ಪ್ರೆಸ್ಸ್ ಆರ್ ಎಲ್ ಕಟಗಿಯವರು, ಕೆಮಿಸ್ಟ, ಜುವೇರಿ ಬ್ಯಾಂಡಿಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಛಾಯವಾಗಿದ್ದರೆ,....ಜಪ್ಪೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಪು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೂಲಿಕಾಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮಾಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಮಾರ, ಕೊಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ಒಂಕ್ಕೆ ೫ರೂ. ಪೋಸ್ಟ ಚಾರ್ಜು ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಸ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲೀಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಹಾವಣಗೇರಿ,
ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮುಣ್ಣು ಪಾಲಾಗುತ್ತೆ

ಹೆರಿಗೆ ಆದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಂಜಾ ವಿಕಾರಗಳುಂಟಾಗುತ್ತವೆ. ಕೆಸದೀಳಿದೆ ಯಾ ಅದರ ಅಂಶ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ ವಿಷದೋಷ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸನ್ನಿ, ಸೆಲವಿರೋಧ, ಪ್ಲವನಗಳ ಬೀಗು, ನಿಸ್ರಾಣಾಸ, ವಾಂತಿ, ಆಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ತಲೆದೋರುತ್ತವೆ. ವೈದ್ಯ, ಡಾಕ್ಟರ, ಸರ್ಜನರ ಸರೆಗೆ ಕರೆಸಿ ನೂರಾರು ರೂಪ್ಯಾ ಖರ್ಚುಮಾಡಬೇಕಾಗುತ್ತದೆ. ಆ ಮೇಲೂ ಬೈವೇಟ್ಟ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ಸಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ಇಮ್ಮೆ ಗೃಹಲಕ್ಷ್ಮಿಯು ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕನುನೀಯ ಕೇ- ಕಲಾಪ, ತಂಪು ಮೆದುಳು, ಕುಭ್ರ ನೇತ್ರಗಳನ್ನು ಕೊಂಡಲು ಬಹು ಗುಣಯುಕ್ತ ಆದುಲಕೇ ಕೈಲ ಯಾ ಹಿಮಸಾಗರ ತೈಲಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.)
Kunjal P. O. Brahmavar, S. K.

Nambiar's
ARYA VAIDYA SALA
UDIPI
Ideal House for Ayurvedic Treatment.
T. N. Kelu Nambiar,
Vaidya

ಸರಕಾರದ ಆಹಾರಧಾನ್ಯಗಳ ಕಂಟ್ರೋಲ್ ಧೋರಣೆಯೂ ಜನತೆಯ ಕರ್ತವ್ಯವೂ

ಬರೆದವರು:—ಶ್ರೀ ಬೈಕಾಡಿ ವಾಸುದೇವರಾವ್, ಎಡ್ವೋಕೇಟ್ ಮತ್ತು
ಕಾರ್ಯದರ್ಶಿ ಸರ್ಕಲ್ ಕಾಂಗ್ರೆಸ್ ಸಮಿತಿ, ಕಾರ್ಕಳ.

ಆಹಾರ ಧಾನ್ಯಗಳ ಮೇಲೆ ಪುನಹ ಕಂಟ್ರೋಲ್ ತಂದಿರುವುದರಿಂದ ಜನತೆಯಲ್ಲಿ ಹಲವು ತಪ್ಪು ಅಭಿಪ್ರಾಯಗಳು ತಲೆಎತ್ತಿವೆ ಸ್ವಾರ್ಥದೃಷ್ಟಿಯಿಂದ ಟೀಕಿಸುವವರ ಅಭಿಪ್ರಾಯವನ್ನು ಅಲ್ಲಗಳೆಯುವುದೇ ಲೇಸು ಯಾಕಂದ್ರೆ ಅಂಥವರನ್ನು ಸಮಾಧಾನಗೊಳಿಸುವುದು ಕಷ್ಟಸಾಧ್ಯ. ಸಹಜವಾದ ಪರಿಸ್ಥಿತಿಯನ್ನು ಅರಿಯದೆ ಹಲವರು ಕಂಟ್ರೋಲ್ ಧೋರಣೆಯನ್ನು ದೂರುತ್ತಿರುವರು. ಬ್ರಿಟಿಷರ ಆಳ್ವಿಕೆಯಲ್ಲಿ ಊಟದ ಅನ್ನಕ್ಕೂ ತೊಡುವ ಬಟ್ಟೆಗೂ ಕೊರತೆಯಿದ್ದಿಲ್ಲ. ಕಾಂಗ್ರೆಸ್ ಸರಕಾರ ಬಂದಂದಿನಿಂದ ಇವೆರಡಕ್ಕೂ ಕೊರತೆ ಬಂದಿದೆ. ಆದುದರಿಂದ ಕಾಂಗ್ರೆಸ್ ಸರಕಾರಕ್ಕಿಂತ ಬ್ರಿಟಿಷರ ಆಳ್ವಿಕೆಯೇ ಲೇಸು ನನ್ನು ಊರಿನಲ್ಲಿ ನಾವು ಬೆಳೆಸಿದ ಆಕ್ಕಿಯನ್ನು ನಮಗೆ ಇಷ್ಟವಿದ್ದಂತೆ ಇಚ್ಛಾನುಸಾರ ಉಪಯೋಗಿಸಲಿಕ್ಕೆ ನನ್ನನ್ನು ಬಿಡದೆ ನಾವು ಬೆಳೆಸಿದ ಆಕ್ಕಿಯನ್ನು ಬೇರೆ ಕಡೆಗಳಿಗೆ ಒಯ್ಯುವುದರಲ್ಲಿ ಅರ್ಥವಿದೆಯೇ, ನ್ಯಾಯವಿದೆಯೇ?ಎಂಬುದಾಗಿ ಪರ್ಯೆರೆ ಅನೇಕರು ಸರಕಾರವನ್ನು ದೂರುತ್ತಿರುವರು. ಇದು ಸಹಜವಾಗಿಯೂ ತಪ್ಪು ಅಭಿಪ್ರಾಯವು ಇದನ್ನು ಜನತೆಯಿಂದ ಹೋಗಲಾಡಿಸಿ ನಿಜಸ್ಥಿತಿಯನ್ನು ಪಸರಿಸುವುದು ಅತೀ ಆಗತ್ಯ

ಈ ರೀತಿ ಟೀಕಿಸುವವರಿಗೆ ಇಡೀ ಭೂಲೋಕದಲ್ಲಿ ಹಲವು ಕಡೆಗಳಲ್ಲಿ ಆಹಾರ ಧಾನ್ಯಗಳ ಕ್ಷಾಮವಿದ್ದು ಅಲ್ಲಿಯ ಜನರು ಬಳಲುತ್ತಿರುವ ವಿಷಯ ಗೊತ್ತಿಲ್ಲವೇನೋ ಅಂತೆಯೇ ಇಡೀ ಹಿಂದೂಸ್ಥಾನದಲ್ಲಿ ಕೂಡ ಆಗತ್ಯವಿರುವಷ್ಟು ಆಹಾರಧಾನ್ಯಗಳ ಉತ್ಪತ್ತಿಯು ಇರದ ಕಡಿಮೆ ಬೀಳುತ್ತದೆಂಬ ಸಂಗತಿಯಾಗ್ಲೀ, ಹಿಂದುಸ್ಥಾನದಲ್ಲಿ ಜನಸಂಖ್ಯೆಯು ಪ್ರತಿವರ್ಷವೂ ಏರುತ್ತಾ ಹೋಗುವುದಾದರೂ ಆಹಾರ ಧಾನ್ಯಗಳ ಉತ್ಪತ್ತಿಯು ಅವಕ್ಕನುಗುಣವಾಗಿ ಏರಲಿಲ್ಲವೆಂಬ ಸಂಗತಿಯಾಗ್ಲೀ ಜನತೆಗೆ ಇನ್ನೂ ತಿಳಿದಿಲ್ಲ. ಉತ್ಪತ್ತಿಯು ಕಡಿಮೆಯಾಗಿ ಬರ್ಜಾ ಜಾಸ್ತಿಯಾಗಿರುವಾಗ ಇಡೀ ಹಿಂದೂಸ್ಥಾನದ ಜನರನ್ನು ಪೋಷಿಸುವ ಜವಾಬ್ದಾರಿಯು ಸರಕಾರದ್ದೇ ಆಗಿರುತ್ತದೆ. ಈ ಜವಾಬ್ದಾರಿಯನ್ನು ಕಾಂಗ್ರೆಸ್ ಸರಕಾರವು ಎಳ್ಳಷ್ಟೂ ಅಲ್ಲಗಳೆಯದೆ ಬಹು ಮುತುವರ್ಜಿಯಿಂದ ವರ್ತಿಸುತ್ತಿದೆ. ಹಿಂದೂಸ್ಥಾನದಲ್ಲಿ ಕಡಿಮೆ ಬೀಳುವ ಆಹಾರ ಧಾನ್ಯಗಳನ್ನೂ ಕೋಟಿಳಟ್ಟಳೆ ರೂಪಾಯಿಗಳನ್ನೂ ವೆಚ್ಚಮಾಡಿ ಕೇಂದ್ರಸರಕಾರವು ಪರದೇಶಗಳಿಂದ ಅದಷ್ಟು ಹೆಚ್ಚು ರವಿಸುತ್ತಲಿದೆ. ಅದರ ಆಹಾರ ಧಾನ್ಯಗಳ ಉತ್ಪತ್ತಿಯು ಇಡೀ ಭೂಲೋಕದಲ್ಲಿಯೇ ಕಡಿಮೆಯಾಗಿದ್ದು ಹಿಂದೂಸ್ಥಾನಕ್ಕೆ ಬೇಕಾಗುವಷ್ಟು ಆಹಾರ ಧಾನ್ಯಗಳು ಪರದೇಶಗಳಲ್ಲಿಯೂ ಸಿಗುವುದಿಲ್ಲ. ಪರಿಸ್ಥಿತಿಯು ಹೀಗಿರುವಾಗ ಹಿಂದೂಸ್ಥಾನದಲ್ಲಿ ಬೆಳೆದ ಆಹಾರ ಧಾನ್ಯಗಳನ್ನೂ ಆದ ಸ್ಥಳ ಜಾಗ್ರತೆಯಿಂದ ಶೇಖರಿಸಿ ಅವಶ್ಯಗಳಿಂದ ಲೂ, ಮತ್ತು ಪರದೇಶಗಳಿಂದ ಸಿಕ್ಕಿಸಿದ್ದು ಆಹಾರ ಧಾನ್ಯಗಳನ್ನೂ ತರಿಸಿ ಅವಶ್ಯಗಳಿಂದ ಸಮಾ ಇಡೀ ಹಿಂದೂಸ್ಥಾನದ ಜನತೆಗೆ ವಿತ ಪ್ರಮಾಣದಲ್ಲಿ ಪಂಚುವ ವ್ಯವಸ್ಥೆಯನ್ನೂ ಸರಕಾರವು ಕೈಕೊಂಡಿದೆ ಈ ರೀತಿ ನಿಸ್ಪ ಲಂತೆ ಹಾಗೂ ನಿಷ್ಪಕ್ಷಪಾತ ದೃಷ್ಟಿಯಿಂದ ವರ್ತಿಸುತ್ತಿರುವ ಜನತೆಗಾಗಿ ಹಗಲು ರಾತ್ರಿ ದುಡಿಯುತ್ತಿರುವ ಸರಕಾರವನ್ನು ದೂರುವುದು ನ್ಯಾಯವೇ? ಅಪಾರಧಾನ್ಯಗಳ ಮಟ್ಟಿಗೆ ಸ್ವಯಂಪೂರ್ಣ (Surplus) ಆಗಿರುವ ಒಂದು ಊರಿನ ಜನರು ಬೆಳೆಸಿದ ಆಹಾರ ಧಾನ್ಯಗಳನ್ನು ಎಲ್ಲವನ್ನೂ ತಾವೇ ಹೊಟ್ಟೆ ತುಂಬಾ ಉಂಡು ಆ ಊರಿನ ನೆರೆಕರೆಯಾದ ಸ್ವಯಂಪೂರ್ಣವಲ್ಲದ(deficit)ಪುತ್ತೊರು ಊರಿನ ಜನರು ಹೊಟ್ಟೆಗಿಲ್ಲದೆ ಸಾಯುತ್ತಿರುವುದನ್ನು ಆ ಸ್ವಯಂಪೂರ್ಣ ಊರಿನವರು ನೋಡಿ ಕಹಿಯಾಗಿರಲೇ? ಆಥವಾ ಕೊರತೆಯಿರುವ ಜನರ ಸಹಾಯಕ್ಕೆ ನೈತಿಕವಾಗಿ ಕೈಜೋಡಿಸುವುದೇ? ಈ ರೀತಿ ವರ್ತಿಸುವುದು ಸಮಾಜ ಧರ್ಮವೂ ಮಾನವ ಧರ್ಮವೂ ಆಗಿದೆಯಲ್ಲವೆ? ಸ್ವಯಂಪೂರ್ಣ ಊರಿನ ರೈತರ ಲಾಭದಲೋಭಕ್ಕಾಗಿ ಆಹಾರ ಧಾನ್ಯಗಳ ಬೆಲೆಯನ್ನು ನಿಯಂತ್ರಣಮಾಡಬಾರದೆಂದು ಅಗ್ರಜರಾಡುವುದು ಸಮಾಜ ದ್ರೋಹವಾಗದೆ? ಇಂಥ ಸಮಾಜ ದ್ರೋಹಿಕರವಾದ, ನ್ಯಾಯ ಬಾಹಿರವಾದ, ಸಮಾನತೆ ಧರ್ಮಕ್ಕೆ ವಿರೋಧವಾದ ಅಗ್ರಹ ಆಕಾಂಕ್ಷೆಗಳನ್ನು ಅಂತಿಕ ಲೋಸುಗ ಆಹಾರ ಧಾನ್ಯಗಳ ಉತ್ಪಾದನೆ ಹಾಗೂ ವಿತರಣೆ ಮೇಲೆ ಕಂಟ್ರೋಲ್ ಹಾಕಿದ ಸರಕಾರವನ್ನು ದೂರುವವರು, ಈ ಕುರಿತು ಜ್ಞಾನಿಗೆ ತಂದಿರುವ ನಿಯಮಗಳನ್ನೂ ಮನಸ್ಸಿಯಾಗಿ ಮುರಿಯಲೆತ್ನಿಸುವವರು ಸಮಾಜ ದ್ರೋಹಿಗಳು ಎಂದರೆ ತಪ್ಪಾಗಲಾರದು

ಈ ಎಲ್ಲ ಕಾರಣಗಳಿಂದ ಈಗಿನ ಕಠಿಣ ಪರಿಸ್ಥಿತಿಯಲ್ಲಿ ಆಹಾರ ಧಾನ್ಯಗಳ ಮೇಲೆ ಕಂಟ್ರೋಲ್ ಆಕ್ಯಗತ್ಯ. ಇದು ಸಮಾಜ ಹಿತಕ್ಕಾಗಿಯೇ ಮಹಿಸಿದ ಧೋರಣೆಯಾಗಿರುತ್ತದೆ. ಇದಕ್ಕಾಗಿ ನಮ್ಮವರೇ ಆದ ಜನತೆಯು ಸಹಿಸಿದ ಸಲುವಾಗಿ, ಭಾರತಮಾತೆಗಾಗಿ ತನ್ನು, ಮನ, ಧನವನ್ನೂ ಅರ್ಪಿಸಿ ತಮ್ಮ ಜೀವನವನ್ನೂ ಸವೆದು ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನೂಗಳಿಸಿದ ಮಹಾವ್ಯಕ್ತಿಗಳಿಂದನ ದಿಸಿಲ್ಪಡುವ ನಮ್ಮದೇ ಆದ ಸರಕಾರವನ್ನು ಟೀಕಿಸುವುದೂ, ಹಳಿಯುವುದೂ ನ್ಯಾಯವಲ್ಲ. ಸಮಾಜಕ್ಕೆ ಹಿತವೂ ಅಲ್ಲ. ಈಗಿನ ನಮ್ಮ ಕಾಂಗ್ರೆಸ್ ಸರಕಾರವು ಜನತೆಯು ನಿಶ್ಚಲವಾದ ಭರವಸೆ ಹಾಗೂ ಹೃತ್ಪೂರ್ವಕ ಬೆಂಬಲವನ್ನು ಪಡೆಯುವುದಕ್ಕಾಗಿ ತಂದಂಥ ಆರ್ಥಿಕ ಉಳಿದ್ದಾಗಿರುತ್ತದೆ. ಆದುದರಿಂದ ಆಹಾರ ಧಾನ್ಯಗಳ ಕುರಿತು ಈಗಿನ ನಮ್ಮ ಸರಕಾರವು ಜ್ಞಾನಿಗೆ ತಂದಿರುವ ನಿಯಮಗಳನ್ನೂ ಜ್ಞಾನಿಗೆ ತರಲಿರುವ ಸಕಲ ನಿಯಮಗಳನ್ನೂ ಜನತೆಯು ಅಕ್ಷರಶಃ ಮನ್ನಿಸಿ ಅವುಗಳಿಗನುಸಾರವಾಗಿ ನಡಕೊಳ್ಳಬೇಕು. ಅಂಥಾ ನಿಯಮಗಳಿಂದ ಯಾವ ತರದಲ್ಲೂ ತಪ್ಪಿಸಲಿಕ್ಕೆ ಪ್ರಯತ್ನಿಸಬಾರದು. ರೇಷ್ಟಿಜಿಶನ್ ಮೂಲಕ ಧೋಣಾದ ಆಕ್ಕಿ ಯಾ ಭತ್ತ ಇನ್ನನ್ನು ಮನಸ್ಸಿಯಾಗಿ ಸ್ವೀಕರಿಸಿ ಡಿಲಿವರಿ ಕೊಡದೆ ಬಚ್ಚಿಟ್ಟುಕೊಳ್ಳಬಾರದು- ಆಕ್ಕಿ ಯಾ ಭತ್ತ ಕಳ್ಳ ಸಂತೆಗೆ ಹೋಗಗೊಡಬಾರದು. ಸಾಗುವಳ್ಳಿ ಇಲ್ಲದ ರೈತರು ತಮ್ಮ ಪಕ್ಕದ್ಗಳಿಂದ ಆಕ್ಕಿಯನ್ನು ಪಡೆಯುವ ಹಾಗೆ ಪರ್ಮಿಟು ಪಡಕೊಳ್ಳುವಾಗ ಸರಕಾರವು ನಿರ್ಣಯಿಸಿದ ರೇಷನ್ ಮೊತ್ತಕ್ಕಿಂತ ಜಾಸ್ತಿ ಆಕ್ಕಿಯನ್ನೂ ಪಡಕೊಳ್ಳುವ ಹಾಗೆ ಪ್ರಯತ್ನಿಸಬಾರದು. ಆಹಾರ ಧಾನ್ಯಗಳು ತುಟ್ಟಿ ಇರುವ ಈ ಕಾಲದಲ್ಲಿ ದೊಡ್ಡದೊಡ್ಡ ಸಮಾರಂಭಗಳನ್ನೂ ಸಮಾರಂಭಗಳನ್ನೂ ವಿಸರ್ಜಿಸಿ ಆಹಾರ ಧಾನ್ಯಗಳನ್ನು ವ್ಯರ್ಥಗೊಳಿಸಬಾರದು ಆಹಾರ ಧಾನ್ಯಗಳ ನಿಯಂತ್ರಣ ನಿಯಮಗಳನ್ನು ಉಲ್ಲಂಘಿಸುವವರಿಗೆ ಯಾವ ರೀತಿಯಿಂದಲೂ ಸಹಾಯ ಕೊಡಬಾರದು. ಮಾತ್ರವಲ್ಲ ಅಂಥವರ ಹೆಸರನ್ನು ವಿದರ್ಕ್ಷಿಣ್ಯವಾಗಿ ಅಧಿಕಾರಿಗಳ ಗಮನಕ್ಕೆ ತಂದು ಅವರೊಡನೆ ಸಹಕರಿಸಬೇಕು. ನಿಯಂತ್ರಣ ನಿಯಮಗಳನ್ನು ಜ್ಞಾರಿ ಮಾಡುವುದಕ್ಕಾಗಿ ನೇಮಿಸಲ್ಪಟ್ಟ ಅಧಿಕಾರಿಗಳು ಅಂಡಕ್ಕೆ ಕೈ ನೀಡುವಂತೆ ಜನತೆಯು ಆಸ್ಪದ ಕೊಡಬಾರದು. ಲಂಚಗೂಳಿತನದಲ್ಲಿ ಮುಗ್ನರಾಗಿರುವ ಅಧಿಕಾರಿಗಳನ್ನು ಬಯಲಿಗೆಳೆಯುವುದರಲ್ಲಿ ಸ್ವಲ್ಪವೂ ಹಿಂಜರಿಯಬಾರದು. ಮತ್ತು ಆಹಾರ ಧಾನ್ಯಗಳನ್ನು ಅದಷ್ಟು ಮಂಡ್ಯೆಗೆ ಹೆಚ್ಚುಹೆಚ್ಚಾಗಿ ಬೆಳೆಸಲು ಪ್ರಯತ್ನಿಸಬೇಕು. ಈ ಕುರಿತು ಸರಕಾರವು ಕೈಕೊಳ್ಳುವ ಸಕಲ ಯೋಜನೆಗಳಲ್ಲಿ ಜನತೆಯು ಹೃತ್ಪೂರ್ವಕ ಬೆಂಬಲವನ್ನಿತ್ತು ಅವುಗಳಲ್ಲಿ ಸಫಲವಾಗುವಂತೆ ವರ್ತಿಸಬೇಕು. ಸಾಗುವಳ್ಳಿ ಕುರಿತು ಮೂಡಿಯಲ್ಲಿರುವ ಹಳೇ ಸಂಪ್ರದಾಯ ಕ್ರಮಗಳನ್ನು ಬದ್ಲಾಯಿಸಿ ಈಗಿನ ಅಧುನಿಕ ರೀತಿಯ ಸಾಗುವಳ್ಳಿ ಕ್ರಮಗಳನ್ನು ಅದಷ್ಟು ಮಟ್ಟಿಗೆ ಅನುಸರಿಸುವ ಪ್ರಯತ್ನ ಪಡಬೇಕು. ಇವುಗಳೆಲ್ಲ ಜನತೆಯ ಸ್ವಾಮುಖ್ಯ ಕರ್ತವ್ಯಹಾಗೂ ಜವಾಬ್ದಾರಿಯಾಗಿರುತ್ತವೆ. ಜನತೆಯು ಈ ರೀತಿ ವರ್ತಿಸಿ ನಡಕೊಂಡರೆ ನಮ್ಮ ಸರಕಾರ ದ ಬಲವು ಹೆಚ್ಚುತ್ತಾ ಹೋಗಿ ಸಮಾಜದಲ್ಲಿ ಬೇಗನೆ ಶಾಂತಿ ಸ್ಥಾಪನೆಯೂ, ಆರ್ಥಿಕ ನಿಶ್ಚಿತತ್ವವೂ, ಸ್ವಯಂಪೂರ್ಣ ಪರಿಸ್ಥಿತಿಯೂ ಉಂಟಾಗಿ ಸಮಾಜವು ಉದ್ಧಾರವಾಗುವುದರಲ್ಲಿ ಸಂದೇಹವೇ ಇಲ್ಲ.

ದ. ಕ. ಜಿಲ್ಲೆಯಲ್ಲಿ ಆಹಾರ ಧಾನ್ಯಗಳ ಕುರಿತು ಕಂಟ್ರೋಲ್ ಜ್ಞಾರಿಯಲ್ಲಿದ್ದ ಮುಂಚಿನ ವರ್ಷಗಳಲ್ಲಿ ಆಹಾರ ಧಾನ್ಯಗಳ ಉತ್ಪಾದನೆ ಮತ್ತು ವಿತರಣೆ ಕುರಿತು ಅಧಿಕಾರಿಗಳು ಕೈಕೊಂಡ ಕಾರ್ಯಕ್ರಮಗಳಲ್ಲಿ ಕೆಲವು ಕುಂದು ಕೊರತೆಗಳ್ ಇದ್ದ ಪರಿಣಾಮವಾಗಿ ಕಂಟ್ರೋಲ್ ಧೋರಣೆಯಲ್ಲಿ ಜನತೆಯಲ್ಲಿ ಒಂದು ರೀತಿಯ ಅವಿಶ್ವಾಸ ಬೆಳೆಯುವುದಕ್ಕೆ ಆಸ್ಪದವಿತ್ತು. ಅಂಥ ಕುಂದುಕೊರತೆಗಳು ಈ ಸಾರಿ ಕೂಡ ತಲೆದೋರದಂತೆ ಅಧಿಕಾರಿಗಳು ಕಕ್ಕ ಜಾಗ್ರತೆಯನ್ನು, ತೆಗೆದುಕೊಳ್ಳುವುದು ಅತೀ ಅವಶ್ಯವಿದೆ. ಅಲ್ಲದೆ ನಿಯಂತ್ರಣ ಕ್ರಮಗಳಲ್ಲಿ ಆಗಾಗ ಬದ್ಲಾವಣೆಗಳನ್ನು ಮಾಡುತ್ತಿರುವುದು ಯುಕ್ತವಷ್ಟೆ. ಈ ಕುರಿತು ಸರಕಾರದ ಆನಿಶ್ಚಿತ ಧೋರಣೆಯೇ ಈ ಮುಂಬರುವ ಜನತೆಯಲ್ಲಿ ತಾತ್ಪಾರ್ಯ ಉಂಟಾಗಲು ಕಾರಣವಾಗಿರುತ್ತದೆ. ಇಂಥ ಪ್ರಸಂಗವು ಈ ಸಾರಿ ಕೂಡ ಬಿದಗದಂತೆ ಸರಕಾರವು ಮತ್ತು ಅಧಿಕಾರಿಗಳು ತಕ್ಕ ವ್ಯವಸ್ಥೆಯನ್ನು ಮಾಡುವರೆಂದು ನಂಬೋಣ. ಜನತೆಯು ತನ್ನ ಕರ್ತವ್ಯ ಪರಿಪಾಲನೆ ಮಾಡಿದುದಾದರೆ ಸರಕಾರದ ಹಾಗೂ ಅಧಿಕಾರಿಗಳ ವರ್ತನೆಯಲ್ಲಿ ಕಂಡುಬರುವ ಕುಂದುಕೊರತೆಗಳು ತನ್ನಷ್ಟಕ್ಕೆ ಮಾಯವಾಗುವುದರಲ್ಲಿ ಸಂದೇಹವಿಲ್ಲ.

ಆದುದರಿಂದ ಜನತೆಯೂ ಸರಕಾರವೂ ತಮ್ಮತಮ್ಮ ಕರ್ತವ್ಯ ಪರಿಪಾಲನೆ ಮಾಡಿ ಸಮಾಜ ಸುಖವನ್ನು ವೃದ್ಧಿಸಲೆಂದು ಪ್ರಾರ್ಥನೆ.

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ಶೆಟ್ಟಿ.	0	3	0
ಸಂಶಯ ಪಿಶಾಚಿ	(ನಾಟಕ)	ಕೆ. ಕ. ಶೆಟ್ಟಿ.	0	8	0
ಕುಶಲವ	(,,)	,,	0	6	0
ವೈಭಿಚಾರಿಣಿ ಯಾರು	(,,)	,,	1	0	0
ಹೆಂಡ್ತಿ ನಂಡನಾದರೆ	(ಪ್ರಹಸನ)	,,	0	4	0
ಪುರುಷವಧು	,,	,,	0	4	0
ಸನ್ಯಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಕಣ್ಣ ಕತೆಗಳು)	ಕೊರಡ್ಕಲ್	0	14	0
ಧಾರಿತೀಯ ಕತೆಗಳು	(,,)	,,	0	11	0
ಮೂರು ಪ್ರಹಸನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ.	(ಕತೆಗಳು)	ಎಸ್. ಎಲ್. ಸುಬ್ರಹ್ಮಣ್ಯಂ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಪ್ರಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜ.	0	8	0
ಅಕಾಶಗಂಗೆ	(ಕತೆಗಳು)	,,	1	12	0
ಕವಿತಾಕಾಮಿನಿ	(ಕವಿತೆಗಳು)	ಎಸ್ ವೆಂಕಟರಾಜ	2	0	0
ಸವ್ಯಸಾಗರ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	4	0
ನಗೆನೋಟಗಳು	(ವಿನೋದ ಕತೆಗಳು)	ಕೆ. ವಿಟ್ಠಲ ಶೆಣೈ	0	14	0
ಅನ್ನದೇವರು ಮತ್ತು ಇತರ ಕತೆಗಳು		ಕಯ್ಯಾರ ಕಿಞ್ಞಣ್ಣ ರೈ	1	0	0
ವಿಷ್ಣುವಿನ ದಶಾವತಾರಗಳು ಅರ್ಥಾತ್ ದಶಾವತಾರಗಳು		(ವಿಡಂಬನೆ) ಎಂ. ವಿ. ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯಕ್ಷಗಾನ ನಾಟಕ)	,,	0	8	0
ಸ್ವಾತಂತ್ರ್ಯವೀರ ಸಾವರಕರರು	(ಜೀವನ ಚರಿತ್ರೆ)	ಇಂದಿರಾಬಾಯಿ	1	4	0
ಜೀವನಸಂಗ್ರಾಮ	(ನಾಟಕ)	ಪಿ. ಕೆ.ನ ಶೆಟ್ಟಿ	1	8	0
ಜಮೀನ್ದಾರ	(ಕಾದಂಬರಿ)	ಹೊಸಮನೆ ಗುಡ್ಡಪ್ಪ	1	8	0

ಪ್ರತಿಗಳಿಗೆ:— ನವಭಾರತ ಪುಸ್ತಕ ಭಂಡಾರ, ಉಡುಪಿ ಸ. ಕ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618 ಎರಡಾಪೆ 25-11-1943

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
೬ ತಿಂಗಳಿಗೆ ರೂ. 2 8 0
ಬಿಡಿ ಪ್ರತಿಗೆ ರೂ 0 1 6
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯
ವಾರ ೧೩

NAVAYUGA WEEKLY, UDIPI, S. K.

FOUNDER: Hon'ble Mr. A. B SHETTY, Health Minister, Govt of Madras.

Vol 29
No. 13

ತಪ್ಪು ನಿರೀಕ್ಷೆಗಳು

'ಅಂದಾಜು ತಪ್ಪಿಹೋಯಿತು'–ಎಂದು ಹೇಳುವ ಸಂದರ್ಭಗಳು ಎಂಥವರ ಜೀವನದಲ್ಲಾದರೂ ತಪ್ಪಿದ್ದಲ್ಲ; ಎಷ್ಟೇ 'ಪಾತ್ರಿ' ಸಂತತಿಗಳಾದರೂ ಹಾಗಾಗುವದಿದೆ. ಪ್ರಾಪಂಚಿಕ ವಿದ್ಯಮಾನಗಳು–ಭಾವೀ ಸಂಭವನಗಳು–ಎಷ್ಟೇ ದೊಡ್ಡದಾದ ಶಕ್ತಿ ಆಸ್ಥಾನ ಊಹೆಯ ಹತೋಟಿಯೊಳಗಿರುವವುಗಳಲ್ಲ; ಅವುಗಳಿಗೆ ಸಂಪೂರ್ಣವಾಗಿ ಎಟುಕುವಂಥವುಗಳೂ ಒಲ್ಲ. ಇದಕ್ಕೆ ನಿದರ್ಶನವಾಗಿ ಕೆಲವು ಘಟನೆಗಳನ್ನಿಲ್ಲಿ ಜ್ಞಾಪಿಸಬಹುದು

೦೦೦ ೧ ೦೦೦

ನ್ಯೂಗಲೂ ಅಮೇರಿಕ ತುಂಬಾ ಚರ್ಚೆ ನಡೆದಿರುವ ಇತ್ತೀಚೆಗಿನ ಅಧ್ಯಕ್ಷ ಚುನಾವಣೆಯ ಫಲಿತಾಂಶವು 'ಅಂದಾಜು ತಪ್ಪುವಿಕೆ'ಗೆ ಒಂದು ಜೀವಂತ ಹಾಗೂ ಬಹಿರಂಗ ನಿದರ್ಶನ. ಚುನಾವಣೆಯ ಮೊದಲು ಅಧ್ಯಕ್ಷ ಟ್ರುಮೇನರು ಮನಃ ಅರಿಸಲ್ಪಡಬಹುದೆಂಬ ಆಶೆ ಮೊಳೆಯಿಸಿದ ಬ್ಯಾಂಕ್ಗೀದಾರರಾರೂ ಅಮೆರಿಕದ ಅಷ್ಟೂದೊಡ್ಡ ಪತ್ರಿಕಾ ಪ್ರಪಂಚದಲ್ಲಿ ಇರಲಿಲ್ಲ ಇಂತಹ ಮಹಾ ಚುನಾವಣೆಯ ಮೊದಲೇ, ಗಾಳಿಯೆತ್ತ ಬೀಸುತ್ತಿದೆ ಎಂಬುದನ್ನು ಕಂಡು ಕೊಳ್ಳಲಾಗುವ ಕೆಲವು ಪರೀಕ್ಷಾ ಕ್ರಮಗಳು ಅಮೆರಿಕದಲ್ಲಿವೆ. ಇವೆಲ್ಲಾ ಪರೀಕ್ಷೆಗಳ ಫಲಿತಾಂಶಗಳೂ ಟ್ರುಮೇನ್ ಸೋಲು, ದಿವೆಯು ವಿಜಯವನ್ನೇ ತೋರಿಸಿಕೊಟ್ಟಿದ್ದುವು. ಚುನಾವಣಾ ಸಭೆಗಳಲ್ಲಿ ಹಾಜರಿದ್ದ ಅಮೆರಿಕದ ಎಲ್ಲಾ ಬ್ಯಾಂಕ್ಗೀದಾರರೂ –ಎಂದೂ ಸುಳ್ಳು ರಾಜಕೀಯ ಭವಿಷ್ಯವನ್ನಾಡಿದವರಲ್ಲವೆಂಬ ಕೀರ್ತಿ ಗಳಿಸಿದ್ದ ಲೇ ಖಕರೂ–ಟ್ರುಮೇನರೀ ಬಾರಿ ಸೂಕ್ಷ್ಮಭವಪಟ್ಟಟ್ಟಿದ್ದೆಂದು ಭವಿಷ್ಯವಾಡಿದ್ದರ, ಅತ್ಯಾಶ್ಚರ್ಯವೆಂದರೆ ಅಮಿಲ ಅಮೆರಿಕದ ಮಂದಿಗಾರ ಪ್ರಜ್ಞಾಚಿದಲ್ಲೇ ಈ ಕುರಿತು ಒಮ್ಮತವಿದ್ದುದು. ಇದರ ಪರಿಣಾಮವಾಗಿ ದಿವೆ ಪಕ್ಷೀಯರಲ್ಲಿ ತಮ್ಮ ವಿಜಯದ ಕುರಿತು ಎಳ್ಳಷ್ಟು ಅನುಮಾನವಿರಲಿಲ್ಲ. ಟ್ರುಮೇನರ ಚುನಾವಣಾ ಕಲಸುಗಾರರ ಮನಸ್ಸಿನಲ್ಲಿ ಕೂಡಾ ಫಲಿತಾಂಶ ಕೇಳಿ ಬರುವ ವರೆಗೂ ನಿರಾತಂಕೆಯ ಕಾಮೋದವೇ ಕವಿದುಕೊಂಡಿತ್ತು. ಈ ರೀತಿ ಅಮೆರಿಕದ ಎಲ್ಲಾ ಪ್ರಜಾರ ಸಾಧನಗಳಾ –ವ್ಯಪಟುತೆಯಿಂದಲ್ಲ, ಸಕ್ಯಾರಾಧನಾ ದೃಷ್ಟಿಯಿಂದ–ಟ್ರುಮೇನರಿಗೆ ಸಂಪೂರ್ಣ ಪ್ರತಿಕೂಲವಿದ್ದ ಇದೊಂದೇ ಕಾರಣದಿಂದಾದರೂ ಟ್ರುಮೇನರು ಸೋಲಬೇಕಿತ್ತು ಆದರೆ ಮತಗಳನ್ನು ಲೆಕ್ಕಿಸುವಾಗ ಅಧ್ಯಕ್ಷ ಟ್ರುಮೇನರಿಗೆ ಪ್ರಚಂಡ ವಿಜಯ ದೊರೆತುದನ್ನು ಕಂಡು ಇಡೀ ಅಮೆರಿಕದಲ್ಲಿ ಆಶ್ಚರ್ಯಕ್ಕೊಡಗಾದವರೆಂದರೆ ಟ್ರುಮೇನರೂಬ್ಬರೇ ಎಂದು ಬಳಿದು ಬಂದಿದೆ. ಈ ಚುನಾವಣೆಯಲ್ಲಿ ಜನ ಮನೋಗತಿ ಎತ್ತಹರಿದಿದೆ ಎಂಬ ಗುಟ್ಟನ್ನು ಮೊದಲಿನಿಂದಲೂ ಕಂಡುಕೊಂಡಿದ್ದವರೆಂದರೆ ಒಬ್ಬ ಟ್ರುಮೇನರು ಮಾತ್ರ. ದಿವೆ ಪಕ್ಷೀಯರ ಬಹುಮತವಿದ್ದ ಕಾಂಗ್ರೆಸಿನ ಕಾರ್ಯಕಲಾಪಗಳಲ್ಲಿ ಅನುರಿಕನರಿಗೆ ವಿಶೇಷ ಅತೃಪ್ತಿಯಿದ್ದುದನ್ನು ಲಕ್ಷಿಸಿ, ಟ್ರುಮೇನರು ತನ್ನ ಚುನಾವಣಾ ಪ್ರಚಾರದಲ್ಲಿ ಮುಖ್ಯವಾಗಿ ಆ ಕಾಂಗ್ರೆಸ್ಸನ್ನೇ ಮುಂಡಿಸಿತ್ತಾ ಹೋದುದು ಚುನಾವಣಾ ಸಭೆಗಳಲ್ಲಿ ದಿವೆಯವರ ಭಾಷಣಕ್ಕಿಂತ, ಟ್ರುಮೇನರ ಭಾಷಣ ಕೇಳುವದಕ್ಕೇನೇ ಜೆಚ್ಚು ಜನ ಕೂಡುತ್ತಿದ್ದುದು ಈ ವಿಷಮ ಕಾರಣಗಳೇ ಮೇಲೂ ಬಹಿಷ್ಕಾರ ಬೀಳಬೇಕೆಂಬ ಬೇಡಿಕೆ ಅಮೆರಿಕದಲ್ಲಿ ಎದ್ದಿದೆ ಅಮೆರಿಕದ ಪತ್ರಿಕೋದ್ಯಮಿಗಳ ಘನತೆಯು ಆಲ್ಲಿಯ ಜನತಾದೃಷ್ಟಿಯಿಂದ ಒಮ್ಮೆಯೇ ಹಗ್ಗಾಹೋಗಿದೆ.

'ರಾಮಬಾಣ'ಕೂಡ ಗುರಿತಪ್ಪುವದಿದೆ!

೦೦೦ ೦ ೦೦೦

ಇದೇ ರೀತಿ ಬ್ರಿಟನಿನ ಎಲ್ಲಾ ಪತ್ರಿಕೆಗಳೂ ಏಕಕಂಠದಿಂದ ಊಡಿದ್ದ ಭವಿಷ್ಯವೊಂದು ಮೊನ್ನೆ ಕಾನೇ ಸುಳ್ಳಾಗಿದ್ದಿತು. ಅದೆಂದರೆ ಫೈದರಾಬಾದಿನ ಮೇಲೆ ಹಿಂದೀ ಸರಕಾರವು ಉಗ್ರ ಕಾರ್ಯಕ್ರಮ ಕೈಕೊಂಡರೆ ಭಾರತದ ಆದ್ಯಂತ್ಯವೂ ಮಹಾ ಜಾತೀಯ ಗೊಂದಲಗಳೆದ್ದು, ಅದು ದೀರ್ಘಾವಧಿ ಉಳಿದುಕೊಳ್ಳಲಿದೆ, ಎಂಬುದೇ. ಈ ವಿಷಯಲಾಸೆಯು ಟಾಯರ್ ಆಲಿ ಸರಕಾರಕ್ಕೆ, ರಜ್ಯೇ ಪಾಳಯಕ್ಕೆ, ಸಾತಿ ಸ್ಯಾನ್ ಸರಕಾರಕ್ಕಿದ್ದಂತೆಯೇ, ಇದರ ಪೆದಂತೆಯು ಪ್ರತ್ಯಕ್ಷ ನೆಹರೂ ಸರಕಾರಕ್ಕೂ ಇದ್ದಿತು. ಟಾಯರ್ ಆಲಿ ಸರಕಾರದ ದುರ್ವೃತ್ತಗಳಿಗೆ ಮೂಲಾಧಾರವೇ ಈ ನಿರೀಕ್ಷೆಯಿಂದರೂ ಸರಿಯೇ. ಫೈದರಾಬಾದಿನ ಮೇಲೆ ಕಾರ್ಯಾಚರಣೆ ಕೈಕೊಳ್ಳಲು ಭಾರತ ಸರಕಾರವು ಆ

ನಿಮ್ಮ ಆಯ್ಕೆ
ಪ್ರ ಭಾ ತ
ಚಾ ಮತ್ತು ಕಾಫಿ
ಅರಿಸಿದ
ನೀಲಗಿರಿ ಚಾ ಮತ್ತು ಕಾಫಿ
Blended & Packed by:-
PRABHAT
TEA & COFFEE (INDIA) Ltd.
COONOOR R. S. (Nilgiris)

ಮುಂದಿನ ಸುಖ ಸೌಕರ್ಯಕ್ಕಾಗಿ
ಇಂದೇ ಮುಂಜಾಗ್ರತೆ ವಹಿಸುವುದು

ಜಾಣತನವಲ್ಲವೆ?

ಕಡಿಮೆ ಉತ್ಪತ್ತಿಇದ್ದು, ಸ್ವಲ್ಪ ಜೆಲ್ಲವನ್ನಾದರೂ ಉಳಿಸಬೇಕೆನ್ನುವವರಿಗೆ ಅತ್ಯನುಕೂಲವಾದ ಜನತಾ ವಿಮಾನವನ್ನೆ

ದಿ ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ
ಲಿಮಿಟೆಡ್.

ಏಜೆಂಟರಿಗೆ ಉತ್ತಮ ಕಮೀಷನ್ ಕೊಡಲಾಗುವುದು.

ಜನಮನೆಗಳಿಗೆ ಯಾ ಪ್ರಾಣಿಗಳಿಗೆ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿಗೆ ಬಗ್ಗೆ ಬರೆಯಿರಿ—
ಪೋಸ್ಟ್ ಬಾಕ್ಸ್ ನಂಬ್ರ ೨೦, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ನ್ನೊಂದು ತಡಮಾಡಲು ಇದೂ ಒಂದು ಮುಖ್ಯಕಾರಣ.ಬ್ರಿಟಿಷ್ ಪತ್ರಿಕೆಗಳಂತೂ ಒಕ್ಕೊರಲಿನಿಂದ ಇಂತಹಆಪಾಯದ ಕೂಗುಪ್ರಾರಂಭಿಸಿದ್ದುವಲ್ಲದೆ, ಬ್ರಿಟಿಷ್ ವಿದೇಶ ಮಂತ್ರಿ ಬೆವಿನರು ಈ ಕುರಿತು ಬಾಯಿಬಿಟ್ಟು ಎಚ್ಚರಿಕೆಕೊಟ್ಟಿದ್ದರು. ಹೈದರಾಬಾದಿನ ಮೇಲೆ ಪೋಲಿಸ್ ಕ್ರಿಯಾರಂಭಿಸುವಾಗ ದೇಶದ ಮೂಲೆಮೂಲೆಗಳಲ್ಲೂ ಒಲವಾದಪೋಲಿಸ್ ಬಂದೋಬಸ್ತನ್ನಿಟ್ಟುದೆ.- ಅತ್ತ ಕ್ರಿಯಾರಂಭವಾದೊಡನೆಯೇ ಅವ ಸಂರಾಧಿಕಾರಗಳನ್ನೆಲ್ಲಾ ತನ್ನ ಕೈಗೆ ತೆಗೆದುಕೊಳ್ಳುವ ವಿಶೇಷ ಶಾಸನಗಳನ್ನು ಗವರ್ನರ್ ಜನರಲ್ ಹೊರಡಿಸಿದುದು-- ಪಂಡಿತ ನೆಹರುಗಳು ಆಗಲೇ ಬೊಂಬಾಯಿಗೆ ಬಂದು ಜನತೆಯನ್ನು ಉಪದೇಶಿಸಲು ನಿಂತುದು– ಇವೆಲ್ಲವೂ ಅಂತಹ ಅಪಾಯ ನಿರೀಕ್ಷೆಯಿಂದಲೇ. ಆದರೆ ಇದಕ್ಕಾಗಿ ಹೈದರಾಬಾದಿನ ಹೊರಗೆ ಎಲ್ಲಿಯೂ ಒಂದೇ ಒಂದು ತಟಕು ರಕ್ತ ಬೀಳದಿದ್ದುದನ್ನು ಕಂಡಾ ನಿಜಕ್ಕೂ ಆಶ್ಚರ್ಯಗೊಳ್ಳದವರಿಲ್ಲ. ಬಯಕೆ ಆಶಯಾ ಭಯದಿಂದ ಎಲ್ಲರೂ ನಿರೀಕ್ಷಿಸಿದ್ದುದನ್ನು ಜನತೆ ಸುಳ್ಳುಮಾಡಿದ ಮತ್ತೊಂದುನಿದರ್ಶನವೆಂದರೆ ಇದು.

ಉಪದೇಶಕರು ಕಲಿಸಿಕೊಡುವ ಮೊದಲೇ ಕೆಲವು ಪಾಠಗಳನ್ನು ವಿದ್ಯಾರ್ಥಿಗಳು ಸ್ವಂತಾನುಭವದಿಂದ ಬಲ್ಲವರಿರುತ್ತಾರೆ!

o o o o o o o

"ನಾನು ಮಹಾನೇರುವಿನಂತಹ ತಪ್ಪು ಮಾಡಿದೆ" ಎಂದು ಹೇಳುವ ಸಂದರ್ಭಗಳು ಸ್ವತಃ ಗಾಂಧಿಜೀಗೇನೇ ತನ್ನ ಜೀವನಕಾಲದಲ್ಲಿ ಬಂದಿದ್ದುವು. ಜನತೆಯು ಪ್ರಶ್ನಾತೀತ ವಿಧೇಯತೆಯ ದೆಸೆಯಿಂದ ಎಂದೂ ತಪ್ಪುಗಳನ್ನೆಸಗದ ಪ್ರಮಾದಗಳು ಮಹಾತ್ಮರಿಂದಾದುದಿವೆ. ಆದರ ತಿಳುವಳಿಕೆ ಬಂದಾಗ, ಗಾಂಧಿಜೀ ಸ್ವತಃ ಅನುಭವಗಳನ್ನೊಪ್ಪಿಕೊಂಡು ಆ ಮೂಲಕ ತನ್ನ ಮಹಾತ್ಮೆಯ ಪ್ರಭಾವವನ್ನು ಇನ್ನೂ ಹೆಚ್ಚಾಗಿ ಜನತಾ ಹೃದಯದೊಳಕ್ಕೆ ಹೊಗಿಸಿದ್ದರಲ್ಲದೆ, ತಪ್ಪು ಗಾರರಾಗಿ ಕಾಣಿಸಿಕೊಂಡುದಿಲ್ಲ. 1937 ರ ಕಾಂಗ್ರೆಸ್ ಅಧ್ಯಕ್ಷಸ್ಥಾನಕ್ಕೆ 'ರಾಷ್ಟ್ರ ಗೌರವ" ಸುಭಾಸ್ಚಂದ್ರ ಬೋಸ್ ಮತ್ತು ಡಾ। ಪಟ್ಟಾಭಿ ಸೀತಾರಾಮಯ್ಯನವರೊಳಗೆ ನಡೆದ ಸ್ಪರ್ಧೆಯನ್ನೀ ಸಂದರ್ಭದಲ್ಲಿ ಜ್ಞಾಪಿಸಬಹುದು. ಆ ಮೇಲಾಟದಲ್ಲಿ ಗಾಂಧಿಜೀಯ ಅಭಿಪ್ರಾಯದಂತೆ ಉಮೇದ್ವಾರಿಯಾಗಿದ್ದ ಡಾ। ಪಟ್ಟಾಭಿಗಳಿಗೇನೇ ಮಹಾತ್ಮರ ಅತೀರ್ವಾದವಿದ್ದರೂ ಚುನಾವಣೆ ನಡೆದು ಮುಗಿಯುವ ವರೆಗೂ ಗಾಂಧಿಜೀ ಬಹಿರಂಗವಾಗಿ ತನ್ನ ಅಭಿಪ್ರಾಯವನ್ನು ಹೊರಗೆಡಹಿರಲಿಲ್ಲ. ಪಂಡಿತ ನೆಹರುಗಳೊಬ್ಬರನ್ನು ಉಳಿದು ಮಿಕ್ಕೆಲ್ಲಾ ಅನ್ಯಗಣ್ಯ ಕಾಂಗ್ರೆಸ್ ಧುರೀಣರು ಡಾ। ಪಟ್ಟಾಭಿಪುವರನ್ನೇ ಸಮರ್ಥಿಸಬೇಕೆಂಬ ಒಂದು ವಿಜ್ಞಾಪನೆಯ ಮೂಲಕ ರಾಷ್ಟ್ರಕ್ಕೆ ಕರೆಯಿತ್ತಿದ್ದರು. ಇಷ್ಟರಿಂದ ರೆಲಸವಾಗುವದೆಂದು ನಿರೀಕ್ಷಿಸಿದ್ದ ಮಹಾತ್ಮರ ಅಂದಾಜು ತಪ್ಪಿಹೋಗಿ ಶ್ರೀ. ಸುಭಾಸರು ಬಹುಮತದಿಂದ ಆರಿಸಲ್ಪಟ್ಟೊಡನೆ "ಈ ಸೋಲು ನನ್ನದು" ಎಂದು ಗಾಂಧಿಜೀಯ ಸಂತಾಪ ಸೂಚನೆ ಬಂತು. ಕೂಡಲೇ ರಾಷ್ಟ್ರದ ಮನಸ್ಸು ಬದಲಾಯಿತು. ಆರಿಸಲ್ಪಟ್ಟ ಸುಭಾಸರಿಂದಾದರೂ ಅಧ್ಯಕ್ಷಸ್ಥಾನವನ್ನು ಅನುಭೋಗಿಸಲಾಗದ ಪರಿಸ್ಥಿತಿ ನಿರ್ಮಾಣಗೊಂಡು ಅವರು ರಾಜೀನಾಮೆ ಕೊಡಬೇಕಾಯಿತು. ಆ ಸಂಬಂಧವಾಗಿ ಆ ಮೇಲೆ ಎದ್ದ ಕೆಲವು ದುರ್ಘಟನೆಗಳನ್ನು ಸಕಾಲದಲ್ಲಿ ತನ್ನ ಅಭಿಮತ ಪ್ರಕಟಿಸುವ ಮೂಲಕ ಗಾಂಧಿಜೀಗೆ ನಿವಾರಿಸಲು ಸಾಧ್ಯವಿದ್ದಿತು. ಆದರೆ ಚುನಾವಣೆಯ ಫಲಿತಾಂಶ ಜಾಗಾದೀತೆಂತು ಅವರು ನಿರೀಕ್ಷಿಸಿರಲಿಲ್ಲ; ಡಾ। ಪಟ್ಟಾಭಿಗಳ ಬಹಿರಂಗ ಸಮರ್ಥನೆಗೆ ಮುಂದಾಗಿದ್ದ ಇತರ ನಾಯಕರು ಕೂಡಾ ಊಹಿಸಿರಲಿಲ್ಲ.

ಸ್ಥಿತಿಗತಿಗಳು ಎಂತಹ ವಜ್ರಮುಷ್ಟಿಯೊಳಗಿಂದಲೂ ನುಸುಳಿಕೊಳ್ಳಬಲ್ಲುವು!

o o o o o o o

ಕೊರಿಯದ ಲೋಕ ಮಹಾಯುದ್ಧದಲ್ಲಿ ಹಿಟ್ಲರನು ಅಂದಾಜು ತಪ್ಪಿದುದೊಂದೇ ಆತನ ಹತನಕ್ಕೆ ಕಾರಣವಾಯಿತೆಂಬುದು ಚಿರಸ್ಮರ್ಹ ವಿಷಯ. ಆದೊಂದು ತಪ್ಪು ಆಳತೆಯ ದೆಸೆಯಿಂದಲೇ ನಾಜೀ ಜರ್ಮನಿ ಮತ್ತದನ್ನನುಸರಿಸಿ ಸಾಮ್ರಾಜ್ಯಶಾಹಿ ಜಪಾನು ಸೋತು, ಲೋಕ ಇಂದಿನ ಸ್ಥಿತಿಯಲ್ಲಿ ಉಳಿದುಕೊಂಡಿತು. ಆದೆಂದರೆ ರಶ್ಯದ ಯುದ್ಧಶಕ್ತಿಯ ಕುರಿತು ಹಿಟ್ಲರನು ಕಟ್ಟಿದ ತಪ್ಪು ಅಂದಾಜು. ಯುದ್ಧದ ಆದಿಘಾಗದಲ್ಲಿ ರಶ್ಯದೊಡನೆ ಜರ್ಮನಿಯು ಅನಾಕ್ರಮಣ ಒಪ್ಪಂದದಲ್ಲಿದ್ದ ಕಾಲದಲ್ಲೇ ರಶ್ಯವು ನೆರೆಯ ಫಿನ್ಲೆಂಡಿನ ಮೇಲೆ ಯುದ್ಧ ಸಾರಿದ್ದಿತು. ಆಗ ಬಹಿರಂಗ ವೈರಿಯಾಗಿದ್ದರೂ ಅಂತರ್ಯದಲ್ಲಿ ತನ್ನ ನಂಬಿ ಗೆಯೇ ವೈರಿಯೆಂದು ರಶ್ಯವನ್ನು ಭಾವಿಸಿದ್ದ ಜರ್ಮನಿಯು ರಶ್ಯದ ಸೇನಾಶಕ್ತಿಯ ಗುಟ್ಟನ್ನರಿತುಕೊಳ್ಳುವ ಸಂದರ್ಭವೇ ಚಿತನಕ ದೊರೆಯದಿದ್ದುದರಿಂದ ಫಿನ್ಲೆಂಡಿನ ಆದರ ಯುದ್ಧವನ್ನು ಕ್ಷತೂಹಲದಿಂದ ಪರೀಕ್ಷಿಸುತ್ತಾ ನಿಂತಿತು. ಈ ಗುಟ್ಟನ್ನರಿತೇ ಅಸಾಧ್ಯ ತಂತ್ರಿ ಸ್ಟಾಲಿನರು ಫಿನ್ಲೆಂಡಿನ ಯುದ್ಧದಲ್ಲಿ ಉದ್ದೇಶಪೂರ್ವಕ ಹಳೇ ಶಸ್ತ್ರೋಪಕರಣಗಳನ್ನು ಉಪಯೋಗಿಸಿ, ಬೇಕೆಂದೇ ಅಲ್ಲಿ ಕಾಲಹರಣ ಮಾಡಹತ್ತಿದರು. ಫಿನ್ಲೆಂಡಿನಂತಹ ನೆರೆಯ ಸಣ್ಣ ರಾಷ್ಟ್ರದ ಮೇಲೆ ರಶ್ಯವು ಅಷ್ಟು ದೀರ್ಘಾವಧಿ ಯುದ್ಧಮಾಡಬೇಕಾಗಿ ಬಂದುದನ್ನು ಕಂಡ ನಾಜಿಗಳು ರಶ್ಯದ ಯೋಗ್ಯತೆಯ ಗುಟ್ಟು ತಮಗೆ ಪೂರೆಯಿತೆಂದು ಸಮಾಧಾನಗೊಂಡ ಮೇಲೆಯೇ ಈ ಹೋರಾಟದಲ್ಲಿ ಮಧ್ಯಸ್ಥಿಕೆ ವಹಿಸಿ ತೀರ್ಮಾನ ಮಾಡಿಸಿದರು. ಯುರೋಪಿನ ಅಕ್ರಮಣ ಮುಗಿದೊಡನೆಯೇ ಇದೇ ಅಂದಾಜನ್ನಾಧರಿಸಿ ಹಿಟ್ಲರನು ನಿಕಾಏಕಿ ರಶ್ಯದ ಮೇಲೆ ಬಿದ್ದನೆಂದೂ, ಸ್ಟಾಲಿನ್‌ಗ್ರಾಡಿನ ಹೋರಾಟದಲ್ಲಿ ಅವನ ಅಂದಾಜೆಲ್ಲವೂ ಪೂರ್ತಿ ಮಣ್ಣಾ ಪಾಲಾಗಿ, ಅದರೊಂದಿಗೆ ಅವನ ಮತ್ತು ಅವನಿನ್ನೆ ಕೊಂದಿಕೊಂಡೇ ಇದ್ದ ಜಪಾನಿನ ಹಂಚಿಕೆಗಳೆಲ್ಲವೂ ಅಡಿ ಮೇಲಾಗಿ ಆ ಬಕ್ಕ ಸೋತು ಹೋಯಿತೆಂದೂ ಮರ್ಮಜ್ಞರು ಅಭಿಮತವಿದೆ. ಈಗ ಕೂಡಾ ರಶ್ಯದ ಸೇನಾ ಗುಟ್ಟಾವುದೂ ಆಂಗ್ಲೋ ಅಮೆರಿಕನರಿಗೆ ದೊರೆತಿಲ್ಲ; ಅದರ ಸಹ್ಯಾಂಶಗಳನ್ನು ಮಂಡಿಡಬೇಕೆಂದು ಸಂಯುಕ್ತ ರಾಷ್ಟ್ರ ಸಂಘದ ಮುಂದೆ ಅಮೆರಿಕಾಂಗ್ಲರ ಸೂಚನೆ ಕೂಡಾ ಬಂದುದಿದೆ.

ಮುಖ್ಯವಾಗಿ ಆಟಂ ಬೋಂಬು ಸಂಗ್ರಹದ ಮಟ್ಟಿಗೆ ಯಾರು ಹೇಗಿದ್ದಾರೆ ಎಂಬ ಸಂಗತಿ ಪರಸ್ಪರ ಅವರಿಗೆ ಅಥವಾ ಸ್ವಪಂಚಕ್ಕೆ ಗುಟ್ಟಾಗಿಯೇ ಇದೆ. ಹಿಟ್ಲರ್, ಮುಸಲನಿಗಳ ಪಂಗ್ತಿಯಲ್ಲಿ ಮೂರನೆಯವನಾಗಿದ್ದು, ಅಂದಿನಿಂದಿದು ವರೆಗೂ ಅವರ ಧ್ಯೇಯ, ಧೋರಣೆ, ರೀತಿನೀತಿಗಳನ್ನನುಕರಿಸುತ್ತಾ ಬಂದವನಾದರೂ ಕಳದ ಯುದ್ಧದಲ್ಲಿ ಸೋರದೆ ತಾಟಸ್ಥ್ಯ ನಿಂತ ದೆಸೆಯಿಂದ ಈ ವರೆಗೂ ಸ್ಪೆಯಿನಿನ ನಾಯಕನಾಗಿಯೇ ಉಳಿದಿರುವ ಜನರಲ್ ಫ್ರಾಂಕೋ ಹೇಳುತಿದ್ದಾನೆ:- "ಬ್ರಿಟನ್ನು ಅಡ್ಡ ಬಾರದಿರುತಿದ್ದರೆ ಅಮೆರಿಕ ಮತ್ತು ಸ್ಪೆಯಿನುಗಳೊಳಗೆ ಎಂದೋ ಒಂದು ಒಪ್ಪಂದವಾಗುತಿತ್ತು. ಯುದ್ಧಾನಂತರ ಪಾಶ್ಚಾತ್ಯ ರಾಷ್ಟ್ರಗಳು ಸ್ಪೆಯಿನನ್ನು ಬಹಳ ಕೆಟ್ಟ ರೀತಿಯಿಂದ ನೋಡುತ್ತಾ ಬಂದಿವೆ. ಇನ್ನಾದರೂ ಈ ಸ್ಥಿತಿ ನಿವಾರಣೆಗೊಂಡು ಒಡಂಬಡಿಕೆಯಾಗುವದೆಂದು ಆಶಿಸುತ್ತೇನೆ." ರಶ್ಯಾ ಮತ್ತು ಅಮೆರಿಕಾಂಗ್ಲರೊಳಗೆದ್ದಿರುವ ಇಂದಿನ ವೈಷಮ್ಯದ ದೆಸೆಯಿಂದ ಫ್ರಾಂಕೋನ ಈ ಆಶಯಕ್ಕೆ ಸಫಲವಾಗಬಹುದು. ಹೀಗಿದ್ದರೂ ಫ್ರಾಂಕೋ ರಶ್ಯದ ಯುದ್ಧಶಕ್ತಿಯ ಕುರಿತು ಈ ಸಂದರ್ಭದಲ್ಲಿ ಹೇಳಿರುವ ಮಾತು, ಹಿಟ್ಲರನನ್ನು ಜ್ಞಾಪಕಕ್ಕೆ ತರುವಂತಹದಿದೆ:-'ರಶ್ಯದ ಶಕ್ತಿಯ ಕುರಿತು ಅಮೆರಿಕವು ಮಿತಿ ಮೀರಿದ ಅಂದಾಜು ಕಟ್ಟಿದೆ. ನಮಗೆ ಬೊರೆತಿರುವ ಸುದ್ದಿಯ ಪ್ರಕಾರ ರಶ್ಯದ ಆಣತಿ ಬಲ, ಗನ್ನು ಮತ್ತು ಟೇಂಕುಗಳು ಉತ್ತ ಮವಿವೆ. ಆದರೆ ಕಾಲ್ಬಲದ ಮನೋಬಲ ಬಹಳ ತಗ್ಗಿಗಳಿದಿದೆ'.

ತಮ್ಮ ಆಲೆಯಾಗಿರುವುದೇ ವಸ್ತುಸ್ಥಿತಿಯಾಗಿಯೂ ಇದೆ, ಎಂಬ ನಂಬಿಕೆಯೇ ಈವರೆಗಿನ ಅನಾಹುತಗಳಿಗೆಲ್ಲ ಕಾರಣ!

ದಿ ಮೂಲ್ಕಿ ಬೇಂಕ್, ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 64 ವರ್ಷಗಳಿಂದ ಡಿವೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S. K.

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'

ಕಾಸರಗೋಡು

ಇವರ ತಯಾರಿಕೆಗಳನ್ನೇ ಉಪಯೋಗಿಸಿರಿ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಸೊಸೆಗಾರಿಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ವಸೂಲಿ ಅಥವಾ ಸಂಗ್ರಹ] ಇಲಾಖೆಯು,ನಮ್ಮ ಶಾಖೆಗಳಿರುವಲ್ಲಿ ರಬಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳ್ಪಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ಪಶ್ಚಿಮದ ಅರಬೆಯ ಪ್ರೇತ್ರಗಳಲ್ಲಿ-ತಿಳಿಯು ನಾಡಿನ ಆಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗಿನಗಳ, ವೃಕ್ಷವಾಟಿಕೆಗಳಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಬಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ನಿಶಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿರುವಂತೆ ನೋಡಿಕೊಂಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಮ್ಮವಿಶ್ವ ಅನಶ್ಯಕತೆಗಳಿಗೆ ಸೊಂದಿಸಿಕೊಳ್ಳಬಲ್ಲುತ್ತವೆ. ಆದರಿಂದ ನಮಗೆ ಸಮಯವೂ, ಹಣವೂ ಉಳಿವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಬಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ್ಯ ದೊರೆವುದು.

The Canara Bank Limited.

ESTD: 1906.

ಮಹಾತ್ಮಾ ಗಾಂಧಿಜೀ ಸ್ಮಾರಕ ನಿಧಿಗೆ ಕಾಣಿಕೆಯನ್ನೀಯಿರಿ.

ಶ್ರೀ ಎಂ. ವಿ ಹೆಗ್ಡೆಯವರು ಬರೆದ

ಸ್ವರಾಜ್ಯ ವಿಜಯ

ಯಕ್ಷಗಾನ ನಾಟಕ.

ಪದ-ಅರ್ಥಸಹಿತ

ಆಟ್ಲೆ, ಕೈಪ್ಸ್, ಜಲೆಕ್ಸಾಂಡರ್, ಪೆರಿಕ್ಲಾರೆನ್ಸ್, ಜಿನ್ನಾ, ನೆಹರು, ಪಠೇಲ್, ಗಾಂಧಿ, ಆಜಾದ್, ಕೃಪಲಾನಿ, ಜೈಪ್ರಕಾಶ್, ಮೌಂಟ್‌ಬೆಟನ್ ಮೊದಲಾದವರೇ ಇದರ ಪಾತ್ರಿವರ್ಗ.

ಓದಬಲ್ಲವರಂತೂ ಓದಿ ತಿಳಿಯತಕ್ಕ ಕತೆ.
ಓದಲಾರದವರೂ ಓದಿಸಿ ಕೇಳತಕ್ಕ ಕತೆ.

ಬೆಲೆ ಬರೇ 0 8 0

ಹತ್ತಾಣೆ ಸ್ಟ್ಯಾಂಪು ಕಳಿಸಿದರೆ 1 ಪ್ರತಿಯನ್ನು ಬುಕ್‌ಪೋಸ್ಟ್ ಮಾಡಿ ಕಳಿಸಬಹುದು.

ಪ್ರತಿಗಳು ನವಭಾರತ ಪುಸ್ತಕ ಭಂಡಾರ ಉಡುಪಿ, ಅಥವಾ ನವಯುಗ ಪ್ರೆಸ್, ಉಡುಪಿ.

ಇಲ್ಲಿ ದೊರೆಯುತ್ತವೆ.

ಸಾವರ್ಕರರ ಕಣ್ಣೀರು

ಗಾಂಧೀ ಕೊಲೆಯ ಮೊತ್ತದ್ದಾವಯ ಲ್ಲಿ 7ನೇ ಆರೋಪಿಯಾಗಿರುವ, ಹಿಂದಿನ ಅರು ವರ್ಷ ಏಕಪ್ರಕಾರ ಹಿಂದೂ ಮಹಾಸಭೆಯ ಅಧ್ಯಕ್ಷನಾಗಿದ್ದು ಮಹಾಸಭೆಯ ಅನನ್ಯ ನಾಯಕನನ್ನಿಸಿರುವ, 65 ವರುಷ ಪ್ರಾಯದ ಶ್ರೀ. ವಿನಾಯಕ ದಾಮೋದರ ಸಾವರ್ಕರರು ಇದೇ ತಾ. 20 ರಲ್ಲಿ ನವಢಿಲ್ಲಿಯ ತೆಂಬು ಕೋರ್ಟಿಯಲ್ಲಿ ಜಡ್ಜ ಶ್ರೀ. ಆತ್ಮಚರಣ್ ಪ್ಲೈಶ್ಯಲ್ ಕೋರ್ಟಿನ ಮುಂದೆ ತನ್ನ ವಾಗ್ಮೂಲವನ್ನು ಸ್ವಿತ್ಯಥ. 57 ಪುಟಗಳಲ್ಲಿ ಒತ್ತೊತ್ತಾಗಿ 'ಟೈಪ್' ಮಾಡಿದ್ದ ವಾಗ್ಮೂಲವನ್ನೋದಲು ಶ್ರೀ. ಸಾವರ್ಕರರಿಗೆ 2½ ಘಂಟೆ ಬಿಡಿಯಿತು. 'ನನ್ನ ಮೇಲೆ ಆಪಾದಿಸಲ್ಪಟ್ಟಿರುವ ಇಡೀ ಪ್ರೊಸಿಕ್ಯೂಶನ್ ಕತೆಯು ಕೇವಲ ಎರಡು ವಾಕ್ಯಗಳ ಮೇಲೆ ನಿಂತಿದೆ. ಶಾನು ಪೋಲೀಸರ ಬಾಯಿಗೆ ಬೀಳದೆ ಉಳಿದು ಕೊಳ್ಳಬೇಕೆಂಬ ಉದ್ದೇಶದಿಂದ ಮಾಫಿ ಸಾಕ್ಷಿಯಾಗಿ ಮಾರ್ಪಟ್ಟ ಬಡ್ಗೆಯು ತನ್ನ ಉದ್ದೇಶ ಸಾಧನೆಗೆ ಬೇಕಾಗುವಂತೆ ಜೋಡಿಸಿದ್ದ ವಾಗ್ಮೂಲದಲ್ಲಿ ನನ್ನ ಸಂಬಂಧದ ಎರಡು ಮಾತುಗಳು ಮಾತ್ರ ಬಂದಿವೆ. ಮೊದಲನೆಯದರಲ್ಲಿ, ಗಾಂಧಿ, ನೆಹರು ಮತ್ತು ಸುಹ್ರವರ್ದಿಗಳನ್ನು ಮುಗಿಸಿ ಬಿಡಬೇಕೆಂದು ನಾನು ಆಪ್ಟೆಗೆ ಹೇಳಿದ್ದೆನೆಂದು ಆಪ್ಟೆ ತನಗೆ ಹೇಳಿದನೆಂದು ಬಡ್ಗೆ ಹೇಳಿದ್ದ. ಎರಡನೆಯದರಲ್ಲಿ, 'ವಿಜಯಿಗಳಾಗಿ ಮರಳಿ ಬನ್ನಿರಿ" ಎಂದು ನಾನು ಗೋಡ್ಸೆ ಮತ್ತು ಆಪ್ಟೆಗೆ ಹೇಳುವುದನ್ನು ತಾನು ಕೇಳಿದ್ದೆನೆಂದು ಬಡ್ಗೆ ಹೇಳಿದ್ದ. ಇವುಗಳಲ್ಲಿ ಒಂದನೆಯದು ಕೇಳಿ ತಿಳಿದ ಗಾಳಿ ಮಾತಾಗಿದ್ದರೆ ಎರಡನೆಯದು ಕಲ್ಪನೆ ಮಾತ್ರ. ಆ ಪಾದಿತ ಕೊಲೆಯ ಒಳಸಂಚಿನಲ್ಲಿ ನನಗೆ ಸಂಬಂಧ, ಅಥವಾ ಪರಿಚಯವಿತ್ತೆಂಬುದಕ್ಕಾವ ಪ್ರತ್ಯಕ್ಷ ರುಜುವಾತೂ ದೊರೆತಿಲ್ಲ. ನನ್ನ ವಶದಲ್ಲಿ ಅಥವಾ ಅಧಿಕಾರದಲ್ಲಿ ಯಾವುದೇ ವಿಧದ ಶಸ್ತ್ರಾಸ್ತ್ರಕರಣಗಳಿದ್ದ ಸಾಕ್ಷ್ಯವೂ ಇಲ್ಲ. ಪ್ರೊಸಿಕ್ಯೂಶನ್ ವಶವಿರುವ ನನ್ನ ಸುಮಾರು 10 ವರುಷಗಳ ಅವಧಿಯ ಸುಮಾರು 10000 ಪತ್ರಗಳಲ್ಲಿ ನನ್ನ ಮೇಲಿನ ಆಪಾದನೆಗಾಧಾರವಾಗುವ ಒಂದೇ ಒಂದು ಶಬ್ದ ಕೂಡಾ ಇಲ್ಲ. ನನ್ನ ಮೇಲಿನ ಎಲ್ಲಾ ಆಪಾದನೆಯು ಮಾಫಿ ಸಾಕ್ಷಿದು ಮಾಡುವುದಾಲ್ಕು ಮಾತುಗಳಲ್ಲಿ!– ಆ ದೂ ಬಾಯಿಯಿಂದ ಕಿವಿಗೆ ಬಿದ್ದು ಯಾವುದೇ ಹೊಂದಿಕೆ ಅಥವಾ ಸಂಬಿಕೆಗೇನೂ ಸಾಕಾಗದ ವಾಕ್ಯಗಳಲ್ಲೇ!–ಮುಗಿದು ಹೋಗಿದೆ. ಮಹಾತ್ಮಾ ಗಾಂಧಿ ಮತ್ತು ನೆಹರು ಗಳ ಮೇಲೆ ಅವರ ದೇಶ ಭಕ್ತಿ, ಮತ್ತು ತ್ಯಾಗಗಳಿಗಾಗಿ ನನಗೆ ವಿಶೇಷ ಗೌರವಾದರಗಳಿದ್ದುವೆಂಬುದಕ್ಕೂ ನನ್ನ ಮೊಳಗೆ ಕಾತ್ಕಿಕ ಭಿನ್ನಾಭಿಪ್ರಾಯಗಳಿದ್ದರೂ ವ್ಯಕ್ತಿಶಃ ಗಾಂಧೀಜಿಯ ಮೇಲೆ ನನಗಾವ ದ್ವೇಷಾಸೂಯೆಯೂ ಇರಲಿಲ್ಲವೆಂಬುದಕ್ಕೂ, ನಮ್ಮಿಬ್ಬರೊಳಗೆ ಖಾಸಗೀ ಸೌಹಾರ್ದತೆ ಮತ್ತು ಹೃದಯ ಸಂಬಂಧಗಳಿದ್ದುವೆಂಬುದಕ್ಕೂ ಸಾಕ್ಷ್ಯವಾಗಿ ನಾನು ಆಗಾಗ ಕೊಟ್ಟಿದ್ದ ಪತ್ರಿಕಾ ಹೇಳಿಕೆಗಳನ್ನೆ'–ಎಂಬುದೇ ಶ್ರೀ ಸಾವರ್ಕರರ ವಾಗ್ಮೂಲ ಸಾರ. ತನ್ನ ಜೀವನ ದೇಶ ಸೇವೆ, ಹಿಂದೂ ಮಹಾಸಭೆಯ ಧೋರಣೆ, ಗಾಂಧಿಜೀ ಬಂಧಿಯಾದ ಉಪವಾಸಕಾಲಕ್ಕಿತ ಬಿಡುಗಡೆಗೊಂಡ ಹಾಗೂ ಅವರ ಜಯಂತೀ ಸಂದರ್ಭಗಳಲ್ಲೆಲ್ಲಾ ತಾನು ಆಪರ ಕುರಿತು ಸೂಚಿಸಿದ್ದ ಸದಭಿಪ್ರಾಯ ಮತ್ತು ಸರಕಾರದ ಮೇಲಿನ ಕೊಯೋಪ್ಯಾಗ್ಗಿರಗಳು, ಸ್ವರಾಜ್ಯಾನಂತರ ಕೇಂದ್ರ ಸರಕಾರ ದೈತಾನು ಬೆಂಬಲವಾಗಿದ್ದುದು, ಇತ್ಯಾದಿ ಗಳೆಲ್ಲವೂ ಸವಿವರವಾಗಿ ಸಾವರ್ಕರ್ ವಾಗ್ಮೂಲದಲ್ಲಿ ಬಂದಿದ್ದುವು. "ರಾಷ್ಟ್ರದ ರಾಜಕೀಯ ಸ್ವಾತಂತ್ರ್ಯ ಹೋರಾಟದಲ್ಲಿ ನಾನೂ ಓರ್ವ ಸೋಲ್ಜರನಾಗಿ ಹೋರಾಡಿದವನು. ಆದಕ್ಕಾಗಿ ನನ್ನ ಸಲವಾರು ಸಣ್ಣಪುಟ್ಟ ಜಖಮುಗಳಾದುವು: ದೇವಿಸನ ಏವರು ಅಪುಯಾಯಿಗಳು ದಸ್ತಗಿರಿಯಾದರು. ಅಧ್ಯಕ್ಷರು ಕೆಲವು ನಿಮಿಷ ಸಭೆಯ ಕಾರ್ಯ ಕಲಾಪಗಳನ್ನೇ ನಿಲ್ಲಿಸಬೇಕಾಗಿ ಬಂತು.

ಧೂಮಕೇತು ಏನಂತೆ?

ಕಳೆದ ವಾರದ ಕೆಲವು ದಿನಗಳಲ್ಲಿ, ನವೆಂಬರ್ ೧೫ರ ವರೆಗಿನ ಮೂರು ನಾಲ್ಕು ದಿನ ಆಕಾಶ ಪುಟಾಣಿ ಸುಮಾರು ೫ ಘಂಟೆ ಹೊತ್ತಿಗೆ ಉತ್ತರದ ಆಗ್ನೇಯ ಮೂಲೆಯಲ್ಲಿ ಧೂಮಕೇತುವನ್ನು ಕಂಡವರು ಹಲವರಿದ್ದಾರೆ. ಭಾರತದ ವಿವಿಧ ಭಾಗಗಳಲ್ಲೂ (ದಕ್ಷಿಣ ತನ್ನಡ ಸಮೇತ) ಲೋಕದ ಬೇರೆ ಬೇರೆ ಪ್ರದೇಶಗಳಲ್ಲೂ ಈ ಧೂ

ವಿಶೇಷ ಸಂಗತಿಗಳು

ಮಕೇತು ಕಾಣಿಸಿಕೊಂಡಿತ್ತಂತೆ. ಈ ಗ್ರಹವು ಚಲನದಿಂದ ಭೂಮಿಯ ವರೆಗೆ 28 ಡಿಗ್ರಿಗಳಷ್ಟು ಉದ್ದವಿತ್ತೆಂದೂ, ಅದರ ತಲೆಯು ನಮ್ಮೀ ಭೂಮಿಗೆ ಸುಮಾರು 93,000,000 ಮೈಲುಗಳಷ್ಟು ದೂರವಿತ್ತೆಂದೂ ಬಲ್ಲವರು ಅಂದಾಜು ಕಟ್ಟಿದ್ದಾರೆ. ಮೇಲ್ಗಡೆಗೆ ಅಂದರೆ ಪಶ್ಚಿಮಕ್ಕೆ ಚಾಚಿದ್ದ ಅದರ ಬಾಲವು 45,000,000 ಮೈಲುಗಳಷ್ಟು ಉದ್ದವಾಗಬಹುದಂತೆ. ಈ ಗ್ರಹವು ಸೂರ್ಯನಿಗೆ ಸೈಬುತ್ಯಾಭಿಮುಖವಾಗಿ ಚಲಿಸುತ್ತಿರ್ತಂತೆ. ಆದರೆ ಆಕರ್ಷಕ್ಕಿಂತಲೂ ಅದು ನಿರ್ಮಿಸಲಿರುವ ಭವಿಷ್ಯದ ಕುರಿತು ಕೇಳಿ ಬಂದಿರುವ ಕತೆಗಳು ಅದ್ಭುತವಿವೆ. ಅದಾವ ಗೇಣಿಗಳಲ್ಲಿ ಕಾಣಿಸಿದಯೋ ಆ ರಾಷ್ಟ್ರಗಳಿಗೆ ಅವಾಯವಿದೆ, ಎಂದು ಜ್ಯಾಯಶಃ ಅದು ಕಂಡುಬಾರದ ರಾಷ್ಟ್ರದವರು ಭವಿಷ್ಯ ಹೇಳಿದ್ದಾರೆ. ಭಾರತದ ಜೋತಿಷಿಗಳು ಕೆಲವರು, ಭಾರತ-ಪಾಕಿಸ್ತಾನ್ ಯುದ್ಧ ನಡೆದು ಪಾಕಿಸ್ತಾನವು ಸೋಲುತ್ತದೆಂಬುದೇ ಆ ಧೂಮಕೇತುವಿನ ಶಕುನ ಫಲವೆಂದು ಅದರ ಹಲಬಾಲಗಳತ್ತ ಕೈ ತೋರಿಸಿ ಭವಿಷ್ಯ ವಾಣಿದ್ದಾರೆ. ಭಾರತವಿರುವ ಗಗನ ದೆಸೆಯಲ್ಲೇ ಈ ಗ್ರಹವೂ ಮೂಡಿರುವುದರಿಂದ ಮಾತಿನೊಳಗೆ ಗೂಢಗೆ ಸೇರಿಕೊಂಡಂತೆ ಭಾರತದ ಭಾಗ್ಯೋದಯದಲ್ಲಿ ಧೂಮಕೇತು ಮೂಡಿತೆಂದು ಪಾಕಿಸ್ತಾನ್ ಜೋತಿಷಿಗಳು ಭವಿಷ್ಯ ಹೇಳುತ್ತಿದ್ದಾರೇನೋ! ರಹಸ್ಯದವರಿಗೆ ಭವಿಷ್ಯದಲ್ಲಿ ವಿಶ್ವಾಸವಿದ್ದರೆ, ತಮ್ಮ ಪತ್ರಿಕೆಯಲ್ಲಿರುವ ಚಿಹ್ನೆಯಾದ ಸುತ್ತಿಗೆಯಾಕಾರದ ಗ್ರಹವು ಆಕಾಶದಲ್ಲೇ ಕಾಣಿಸಿಕೊಂಡ ನೀಲೆ, ನಮ್ಮ ಧ್ವಜವನ್ನು ಇಡೀ ಲೋಕದ ಗಗನದ ಮೇಲೇರಲಿದೆ ಎಂದವರು ಹಾರಾಡ ಬಹುದು!

ಎಲಿಜಬೆತ್ ಕುಮರ

ಇಂಗ್ಲಾಂಡಿನ ರಾಜಕುಮರಿ-ಮುಂದೆ ಸಿಂಹಾಸನವೇರುವ ಹಕ್ಕುದಾರಳಾದ ಪ್ರಿನ್ಸೆಸ್ ಆಫ್ ಎಡಿನ್‌ಬರ್ಗ್ ಇದೇ ತಾ. 14ರಲ್ಲಿ ಒಂದು ಮಗುವನ್ನು ಪ್ರಸವಿಸಿದ್ದಾಳೆ. ಈಗಿನ ರಾಜರ ನಂತರ ಈ ತಾಯಿ ನುತ್ತು ಈ ಮಗುವೇ ಆನುಕ್ರಮವಾಗಿ ಬ್ರಿಟಿಷ್ ರಾಜದಂಡಕ್ಕೆ ಕೈ, ಮುಕುಟಕ್ಕೆ ತಲೆ ಕೊಡಬೇಕಾದವಳು. ಆದ್ದರಿಂದ ಸಿಂಹಾಸನದ ಬಾಧ್ಯಸ್ಥ ಮಗು ಹುಟ್ಟಿದ ಸಂಭ್ರಮವು ಇಡೀ ಲೋಕದಲ್ಲೇ ವಿಶೇಷವಾಗಿ ಇಂಗ್ಲಾಂಡಿನಲ್ಲಿ-ನಡೆದಿದೆ. ಭಾರತದ ಗವರ್ನರ್ ಜನರಲರೂ ಶುಭ ಸಂದೇಶ ಕಳುಹಿಸಿದ್ದರಲ್ಲದೆ ಇಲ್ಲಿಯ ನಾನೆಗಳಿಂದಲೂ ತೋಪುಗಳು ಹಾರಿದ್ದುವು; ಧ್ವಜವೇರಿದ್ದಿತು. ಒಂದು ವಿಶೇಷವೆಂದರೆ ನೆಹರೂ ಜನ್ಮದಿನದಲ್ಲೇ ಈ ಮಗು ಜನಿಸಿದುದು; ಮತ್ತೊಂದು ವಿಶೇಷವೆಂದರೆ ಈ ಮಗು ಹುಟ್ಟಿದ ಮುಹೂರ್ತ ದಿನಗಳಲ್ಲೇ ಹಲವು ರಾಷ್ಟ್ರಗಳಲ್ಲಿ ಧೂಮಕೇತುವೂ ತೋರಿಬಂದುದು. ಸಿಂಹಾಸನಾಧಿಕಾರೀ ಶಿಶುವಿನ ಪ್ರಸವದ ವೇಳೆ ಸರಕಾರದ ಗೃಹಮಂತ್ರಿಯು ಸೂಲಗಿತ್ತಿಯಂತೆ ಅಲ್ಲೇ ಹಾಜರಿರಬೇಕೆಂದು, 1688ರಿಂದ ಇಂಗ್ಲಾಂಡಿನಲ್ಲಿದ್ದ ಸಂಪ್ರದಾಯವನ್ನು ಈ ಬಾರಿ ಅರಸರು ಮುರಿದು ಹಾಕಿದ್ದಾರೆ. ಈ ಪದ್ಧತಿ ಜಾರಿಗೆ ಬರಲು ಕಾರಣ— ಆಗ ಬ್ರಿಟನ್ನನ್ನಾಳುತ್ತಿದ್ದ IIನೇ ಚೇರ್ಮ್ಸ್ ಸ್ಟ್ಯಾಯಸಂದವನಿಗೂ ರೋಗಿಷ್ಠನೂ ಆಗದ್ದನಂತೆ. ಆ ಮೊದಲು ಅವನ ಎರಡನೇ ಹೆಂಡತಿಯಲ್ಲಿ ಹುಟ್ಟಿದ್ದ ಶಿಶುಗಳೆಲ್ಲವೂ ಕೂಡಲೇ ಸತ್ತು ಹೋಗಿದ್ದುವು. ಕೊನೆಯ ಆರು ವರುಷಗಳಲ್ಲಆತನಿಗೆ ಮಗುವೇ ಹುಟ್ಟಿದೆ, ಅವನ ದುರ್ಬಲ ಪ್ರಕೃತಿಯೇ ಇದಕ್ಕೆ ಕಾರಣವೆಂದು ಎಲ್ಲರೂ ನಿರ್ಧರಿಸಿದ್ದಾಗ 1688ರಲ್ಲಿ ಅವನಿಗೊಂದು ಗಂಡು ಮಗು ಹುಟ್ಟಿತು. ಯಾರೋ ಮಗುವನ್ನು ಗುಟ್ಟಿನಲ್ಲಿ ಪಾತ್ರೆಯೊಂದರಲ್ಲಿಟ್ಟು ಕಂದು ರಾಣಿಯ ಸಕ್ಕದಲ್ಲಿ ಮಲಗಿಸಿದರೆಂದೇ ಜೇಮ್ಸ್‌ನ ವೈರಿಗಳು ಸ್ಪಚಾರ ಮಾಡಹತ್ತಿದರು. ಈ ಆರೋಪ ನಿರಾಧಾರವಾದುದೆಂದು ಕೊನೆಗೆ ತಿಳಿದು ಬಂದರೂ, ಇಂತಹ ಪ್ರಸವದ ವೇಳೆ ಸರಕಾರೀ ಮಂತ್ರಿ ಹಾಜರಿರಬೇಕೆಂಬ ಕಟ್ಟಳೆ ಆಗಲೇ ಜಾರಿಗೆ ಬಂತೆ..

ಸುಲಭದಲ್ಲಿ ಇಂಗ್ಲಿಷ್

ಇಂಗ್ಲಿಷ್ ಕಲಿಯಲು ಅತ್ಯುಪಯುಕ್ತವಾದ

ಇಂಗ್ಲಿಷ್ ಸ್ವಯಂಬೋಧಿನಿ

ಬೆಲೆ ರೂ ೧ ೮ ೦

ಪುಸ್ತಕ ಸಿಗುವ ಸ್ಥಳ: ನವಭಾರತ ಬುಕ್ ಡಿಪೊ, ಉಡುಪಿ.



Approved firm by the Govt. of Mysore
Certified by the Agent of the Govt of Cylone & India.

ಪಾಕಿಸ್ತಾನವನ್ನು ಸಮಜಾಯಿಸಲು ಸಾಧ್ಯವೆ ?

ಮುಸ್ಲಿಂ ಲೀಗಿನ, ಅಭಿಲಾಷೆ, ಆಗ್ರಹ, ಅತ್ಯಾಚಾರಗಳನ್ನು ಪಾಕಿಸ್ತಾನ್ ನಿರ್ಮಾಣವಾದರೂ ಮುಕ್ತಾಯಗೊಳಿಸಿ ರಾಷ್ಟ್ರದ ಉದ್ಧಾರ ಕಾರ್ಯಕ್ಕೆ ಸರ್ವ ಲಕ್ಷ್ಯವನ್ನು ಹರಿಸಲಾಗುವ ಸಂದರ್ಭವು ಈ ಮೂಲಕ ನಿರ್ಮಾಣಗೊಳ್ಳಬಹುದೆಂಬ ಬಯಕೆಯಿಂದ ಸುಲಭದಲ್ಲೇ ಆಗಿಹೋದ ದೇಶವಿಭಜನೆಯ ಪರಿಣಾಮವು ಹೇಗಾಯಿತು? ಎಂಬುದರ ಈ ಕಡೆಗೊಮ್ಮೆ ಅನಿವಾರ್ಯವಾಗಿ ಲಕ್ಷ್ಯ ಹರಿಸಬೇಕಾದ ಸಂದರ್ಭವಿದು. ಎಲ್ಲವನ್ನೂ ಅಮೂಲಾಗ್ರವಾಗಿ ಪರಿಶೀಲಿಸುವಾಗ ಆ ಬಯಕೆ ನಿರರ್ಥಕವಾಯಿತೆಂದು ಒಪ್ಪಲೇ ಬೇಕಾಗುತ್ತದೆ. ವಿಭಜನೋತ್ತರ ಜಾತೀಯ ಗೊಂದಲಗಳನ್ನು ಅಮೃತಮಂಥನದಾದಿ ಭಾಗದ ವಿಷೋದ್ಭವವೆಂದು ಭಾವಿಸಿಕೊಳ್ಳಬಹುದು; ಭಾರತವು ಪ್ರಾಪಂಚಿಕ ನೀತಿಯನ್ನಾಧರಿಸಿರುವಾಗ 'ಮುಸ್ಲಿಂ ರಾಷ್ಟ್ರ'ವಾಗುವ ಗುರಿಯನ್ನಿಟ್ಟುಕೊಂಡು, ಅದಕ್ಕನುಗುಣವಾಗಿ ಕಾಯಿದೇಕೀರ ಹಾಗೂ ಬೇಕಾಯಿದೆಕೀರ ವರ್ತನೆಗಳೆಲ್ಲವನ್ನೂ ಕೈಕೊಂಡಿರುವ ಪಾಕಿಸ್ತಾನ್ ನಿರ್ಮಾಣದಿಂದ ಕಾಲಂಶ ರಾಷ್ಟ್ರದ ಜನತೆಯನ್ನೇ 18ನೇ ಶತಮಾನಕ್ಕೆ ಹಿಂದೂಡಿದಂತಾದುದನ್ನು ಕೂಡಾ "ಅದು ಅವರ ಹೊನೆಗಾರಿಕೆ; ಅವರ ಕರ್ಮಫಲ" ಎಂದು ಕಡೆಗಣಿಸಬಹುದು; ಆದರೆ ಈಗ ಮತ್ತು ಇನ್ನು ಮುಂದಕ್ಕಾದರೂ ಅವರನ್ನು ಅವರ ಪಾಲಿಗೆ ಬಿಟ್ಟು ಭಾರತದ ಜನತೆ ತಮ್ಮ ಪಾಲಿನ ಕರ್ತವ್ಯಗಳನ್ನು ಮಾಡುತ್ತಾ ಹೋಗಬಹುದೆಂದರೆ ಅದಕ್ಕಾದರೂ ಎಡೆಯಿದೆಯೆ? ಪೂರ್ವಬಂಗಾಳದಿಂದ ಹಿಂದುಗಳನ್ನೋಡಿಸಹತ್ತಿರುವ ಮತ್ತು ಕಾಶ್ಮೀರದಲ್ಲಿ ಅಕ್ರಮ ಪ್ರವೇಶ ಕೈಕೊಂಡಿರುವ ಪಾಕಿಸ್ತಾನವು ಭಾರತದಿರು ಸಡ್ಡು ಹೊಡೆಯುತ್ತಿರುವುದಷ್ಟೇ ಅಲ್ಲ; ಬಾರತದ ಮೈಮೇಲೇನೇ ಕೈಹಾಕಿನೆ! ಹ್ಹಾಗಾದರೆ ಮುಂದೇನು?

ಪೂರ್ವ ಬಂಗಾಳದಿಂದ

ಜೀವಭೀತ ಹಿಂದುಗಳು ಸಹಸ್ರ ಸಂಖ್ಯೆಯಿಂದ ಪಶ್ಚಿಮ ಬಂಗಾಳಕ್ಕೋಡಿ ಬರುತಿದ್ದಾರೆ. ಪಾಕಿಸ್ತಾನದ ಪಂಜಾಬು, ಗಡಿನಾಡು ಪ್ರಾಂತ್ಯಗಳಲ್ಲಿದ್ದ ಮುಸ್ಲಿಮೇತರರೆಲ್ಲರೂ ಆದಿ ಭಾಗದಲ್ಲೇ ಅಲ್ಲಿಂದ ಬಿಡಾರ ಕಿತ್ತಿದ್ದರು. ಸಿಂಧ್, ಬಲೂಚಿಸ್ತಾನಗಳವರು ಆ ನೇಲೆ ಓಡಿಬರಹತ್ತಿದರು. ಮೂಲ ಪಾಕಿಸ್ತಾನದ ಪ್ರತ್ಯಕ್ಷ ಸಂಬಂಧವಿಲ್ಲದೆ ದೂರವುಳಿದಿರುವ ತುಂಡು ಪಾಕಿಸ್ತಾನ ಪೂರ್ವ ಬಂಗಾಳವು ಈಗ ತಾನೇ ತನ್ನಲ್ಲಿರುವ ಹಿಂದುಗಳನ್ನು ಓಡಿಸಹತ್ತಿದೆ. ಪಂಜಾಬು ಗಲಭೆಗಳ ವೇಳೆ ಪಾಕಿಸ್ತಾನದಿಂದ ಹಿಂದೂ ಸಿಖ್ಖರೋಡಿ ಬಂದಂತೆಯೇ ಭಾರತದಿಂದ ಪಟಾಸ್ಲಿಮರೂ ಪಾಕಿಸ್ತಾನಕ್ಕೆ ಹೋಗಿ, ತಕ್ಕಡಿ ಸರಿ ನಿಂತಿದ್ದಿತು. ಆದರೀ ಬಾರಿ ಭಾರತವು ಶಾಂತಿ ಮತ್ತು ಸುವ್ಯವಸ್ಥೆಯನ್ನು ಸ್ಥಾಪಿಸಿಕೊಂಡು, ಇಲ್ಲಿರುವ ಮುಸ್ಲಿಮರಲ್ಲಿ ಖಂಡಿತ ಭರವಸೆಯನ್ನೂ ರಾಷ್ಟ್ರೀಯ ಭಾವನೆಯನ್ನೂ ತುಂಬಿಸಿ, ಎಲ್ಲವನ್ನೂ ಭದ್ರಪಡಿಸಿರುವ ಸಂದರ್ಭವನ್ನು ನೋಡಿಯೇ ಪೂರ್ವ ಬಂಗಾಳವು ಹಿಂದುಗಳನ್ನು ವಿಸರ್ಜಿಸಿಕೊಳ್ಳಹತ್ತಿದೆ. ಇದರ ಪರಿಣಾಮವೆಂದರೆ ಅಲ್ಲಿಂದ ಲಕ್ಷ ಸಂಖ್ಯೆಯಲ್ಲಿ ಓಡಿಬರುತ್ತಿರುವ ಹಿಂದುಗಳಿಗೆ ಸ್ವತಿಯಾಗಿ ಆಷ್ಟು ಮುಸಲ್ಮಾನರನ್ನು ಇಲ್ಲಿಂದ ಅಲ್ಲಿಗೋಡಿಸೋಣವೆಂದರೆ, ಅದು ಭಾರತ ಸರಕಾರದ ಮೂಲ ತತ್ವಕ್ಕೇನೇ ವಿರೋಧ; ಪಾಕಿಸ್ತಾನ್ ರಚನೆಯಲ್ಲಿ ಅ ಭಾಗಗಳವರಿಗಿಂತಲೂ ಹೆಚ್ಚಿನ ಆತುರ ಪ್ರದರ್ಶಿಸಿದ್ದ ಇಲ್ಲಿಯ ಮುಸಲ್ಮಾನರಿಗೆ ತಮ್ಮ ಸಂವಾದನೆಯ ಆ ಭೂಮಿಗೇನೇ ತಾವು ಹೋಗುವದೆಂದರೆ ಹಳ್ಳಕ್ಕೆಳೆಯುವದೆಂಬಷ್ಟು ಜಿಗುಪ್ಸೆಯಿದೆ. ಅವರಿಗೆ ತಮ್ಮ ಸ್ವಂತ ಆಡುಗೆಯೇ ತಮ್ಮ ಭೋಜನಕ್ಕಾಗದ ವಿಷವಾಗಿ ಕಾಣುತ್ತಿದೆ! ಹೀಗಾಗಿ ಅಲ್ಲಿತಲೆಮಾರುಗಳಿಂದ ತಮ್ಮದಾಗಿದ್ದ ಆಸ್ತಿಪಾಸ್ತಿಗಳನ್ನೆಲ್ಲಾ ಬಿಟ್ಟು ಇಷ್ಟಿಗೋಡಿ ಬರುತ್ತಿರುವ ಲಕ್ಷಾವಧಿ ಹಿಂದುಗಳಿಗೆ ಇಲ್ಲಿ ಜೀವನ ವ್ಯವಸ್ಥೆ ಮಾಡಿ ಹಾಕುವ ವಿಶೇಷ ಭಾರ ಭಾರತ ಸರಕಾರದ ಮೇಲೆ ಬಿದ್ದಿದೆ. ಪೂರ್ವ ಬಂಗಾಳದಲ್ಲಿ ಒಟ್ಟು ಸಂಖ್ಯೆಯಲ್ಲಿ ರಷ್ಟು, ಸುಮಾರು 12 ಮಿಲಿಯ ಹಿಂದುಗಳಿದ್ದರು. ಆ ಪೈಕಿ 20 ಲಕ್ಷಕ್ಕೂ ಮಿಕ್ಕಿದವರು ಇಷ್ಟರಲ್ಲೇ ಪಶ್ಚಿಮ ಬಂಗಾಳಕ್ಕೋಡಿ ಬಂದಿದ್ದಾರೆಲ್ಲದೆ, ಈಗಲೂ ಥಾರವಾಹಿಯಾಗಿ ಬರುತಿದ್ದಾರೆ. ಇವರ ಭಾರದಿಂದ ಪಶ್ಚಿಮ ಬಂಗಾಳವೇ ಕುಸಿದು ಹೋಗಿದೆ. "ಪೂರ್ವ ಬಂಗಾಳದಲ್ಲಿ ಹಿಂದುಗಳ ಜೀವನವು ಅಸಹ್ಯವಾಗುವಂತೆ ಮಾಡಿರುವುದೂ ಅಲ್ಲಿಯ ಆರ್ಥಿಕ ದುಸ್ಥಿತಿಯೂ ಇದಕ್ಕೆ ಕಾರಣ" ಎಂದು ಪಂಡಿತ ನೆಹರುಗಳು ಪಾಕಿಸ್ತಾನದಲ್ಲಿ ಭಾರತದ ಹ್ಯಾಕಮಿಶನರ್ ಆಗಿರುವ ಶ್ರೀ ಶ್ರೀಪ್ರಕಾಶರಿಗೆ ಪಾಕಿಸ್ತಾನ್ ಸರಕಾರ ದೊಡನೆ ಈ ಕುರಿತು ಮಾತಾಡಲು ನಿರ್ದೇಶಿಸಿದ್ದಾರೆ. "ಪೂರ್ವ ಬಂಗಾಳದಿಂದ ಹಿಂದುಗಳನ್ನೋಡಿಸುವುದೇ ಪಾಕಿಸ್ತಾನದ ಕೆಲಸವೆಂದಾದರೆ, ಹಾಗೆ ಓಡಿ ಬರುವ ವರಿಗಗತ್ಯವುಳ್ಳ ಭೂಮಿಗಳನ್ನೂ ನಮಗೆ ಬಿಟ್ಟುಕೊಡಲು ಅದು ಬದ್ಧವಿದೆ" ಎಂದು ಸರ್ದಾರ್ ಪಟೇಲರಂಡಿದುದಕ್ಕೆ ವಿಪರೀತಾರ್ಥ ಕಟ್ಟಿ ಅಕ್ರಮಣೇಚ್ಛೆಯನ್ನು ಆದರಲ್ಲಿ ತುರುಕಿಸಿ ಪಾಕಿಸ್ತಾನ್ ನಾಯಕರು ಬೆದರಿಸಹತ್ತಿದ್ದಾರೆ. ಭಾರತದವರ ಆಪಪ್ರಚಾರಕ್ಕೆ ಪುರುಳಿಲ್ಲ ಹಿಂದುಗಳು ಓಡುತಿದ್ದಾರಲ್ಲದೆ ತಮ್ಮಲ್ಲಿ ಆವರಿಗಿನವ ಅನ್ಯಾಯವೂ ಆಗಿಲ್ಲವೆಂದೂ, ಭಾರತ ನಾಯಕರು ಈ ಕುರಿತು ಬೇಜವಾಬ್ದಾರಿಯ ಮಾತುಗಳನ್ನಾಡುತಿದ್ದಾರೆಂದೂ ಪೂರ್ವ ಬಂಗಾಳದ ಪ್ರಧಾನ ಮಂತ್ರಿ ಮಿ. ನೂರುಲ್ ಅಮೀನರ ಅಸಂಬದ್ಧ ಸ್ಪರಲಾಪ, ತಮ್ಮೀ ಮಾತಿನ ಪ್ರತಿಕ್ರಿಯೆಯೆಬ್ಬಿಸಿಯೊಡದೂರೂ ಭಾರತದಲ್ಲೂ ಎದ್ದು ಬಿಟ್ಟಿರೆ ಆ ಭಾರವು ತಮಗೆ ಹೊರಲಾರದಷ್ಟಾದೀತೆಂಬ ಗುಟ್ಟನ್ನರಿತಿರುವ ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಅಲಿಖಾನರು ಪೂರ್ವ ಬಂಗಾಳಕ್ಕೆ ಬಂದು "ಅಲ್ಪಸಂಖ್ಯಾಕರನ್ನು ಹಕ್ಕು ಮತ್ತು ನ್ಯಾಯೋಚಿತವಾಗಿ ಮಾತ್ರವಲ್ಲ; ವಿಶೇಷ ಔದಾರ್ಯದಿಂದ ಕಾಣಬೇಕು" ಎಂದು ಜೋಧಿಸುತಿದ್ದಾರೆ. ಸದ್ಯದಲ್ಲೇ ಭಾರತ--ಪಾಕಿಸ್ತಾನಗಳ ಜತೆ ಜನ್ಮೈಕ್ಯ ನವು ಜರಗಲಿರುವುದರಿಂದ ಅಲ್ಲಿ ಈ ಪ್ರಶ್ನೆ ತೀರ್ಮಾನ ಹೊಂದಬಹುದೆಂಬ ಒಂದು ಆಶೆಯಿದೆ.

ಕಾಶ್ಮೀರದಲ್ಲಿ—

ಪೂರ್ವ ಬಂಗಾಳದಲ್ಲಿ ಪಾಕಿಸ್ತಾನವು ಆಡುತ್ತಿರುವ ಚೆಲ್ಲಾಟವನ್ನು ಹೇಗಾದರೂ ತೀರ್ಮಾನಿಸಬಹುದು ಅಥವಾ ಸಹಿಸಿಕೊಳ್ಳಬಹುದು ಎಂಬ ಆಶೆಯಿದ್ದರೂ ಕಾಶ್ಮೀರದಲ್ಲಿ ಆದು ಆಡುತ್ತಿರುವ ರಕ್ತದೋಕುಳಿಯನ್ನು ಖಂಡತೀತಿಯಿಂದ ನಿಲ್ಲಿಸುವ ಉಪಾಯವೇ ಇಲ್ಲ. ಶಕ್ತಿಪ್ರಯೋಗವೊಂದರ ಹೊರತು ಅಲ್ಲಿ ತೀರ್ಮಾನ ತರಲಿಲ್ಲ ಬೇರಾವ ಸಾಧನವೂ ಈಗ ಉಳಿದಿಲ್ಲ. ಭದ್ರತಾ ಕೌನ್ಸಿಲ್ ಸಮಿತಿಯ ವ. ಧ್ಯಸ್ಥಿಕೆ, ಲಂಡನ್ನಿನಲ್ಲಿ ನೆಹರೂ ಲಿಯಾಖತರಂತ್ರನ್ನು ಕೂಡಿಸಿ ಬ್ರಿಟಿಷ್ ಪ್ರಧಾನಿ ಆಟ್ಲಿಗಳು ಮಾಡಿದ ಪಂಚಾಯತಿಕೆ, ಇವೆಲ್ಲವೂ ನಿಷ್ಫಲವಾಗಿ ಕಾಶ್ಮೀರನ ಪ್ರಶ್ನೆಯ ಕುರಿತು ಭಾರತ-ಪಾಕಿಸ್ತಾನಗಳು ಪೂರ್ವ-ಪಶ್ಚಿಮದಷ್ಟು ದೂರ ಇವೆ ಎಂಬುದು ಖಚಿತವಾಗಿದೆ. "ಹಿಂದುಗಳ ಬಹುಮತವಿರುವ ಜುನಾಗಾಡಿನಲ್ಲಿ, ಹೈದರಾಬಾದಿನಲ್ಲಿ ಜನಮತ ಸಂಗ್ರಹಕ್ಕೆ ಆಕಾಶವಿಸುತ್ತಿರುವ ಭಾರತ ಸರಕಾರವು ಮುಸ್ಲಿಂ ಬಹುಮತವಿರುವ ಕಾಶ್ಮೀರದಲ್ಲಿ ಅಂತಹ ಕಾರ್ಯ ಕೈಕೊಳ್ಳಲು ಹೆದರುತ್ತಿದೆ" ಎಂಬಂತಹ ಅಪಪ್ರಚಾರಗಳು ಇಂಗ್ಲಾಂಡು ತುಂಬಾ ಪಡೆದಿರುವುದು ಶೋಚನೀಯ. ಇಲ್ಲಿಯ ನಿಜಸ್ಥಿತಿಯ ಪರಿಚಯವಿರುವ ಮಿ. ಹೊರೆಸ್ ಅಲೆಕ್ಸಾಂಡರರಂಥವರು ಇಂತಹ ಹುಸಿ ಕಲ್ಪನೆಗಳನ್ನು ಖಂಡಿಸಿ ಭಾರತವು ಅಲ್ಲಿಯೂ ಜನಮತ ಸಂಗ್ರಹಿಸಲು ತಯಾರಿದೆ ಎಂದು ಪಂಡಿತ ನೆಹರುಗಳ ಮಾತುಗಳನ್ನು ಉದಾಹರಿಸಿ ಹೇಳಿದ್ದಾರೆ. ಈ ಕುರಿತು ಕಾಶ್ಮೀರದ ಉಪಪ್ರಧಾನ ಮಂತ್ರಿ-ಕಾಶ್ಮೀರದ ಉಕ್ಕಿನ ಮನುಷ್ಯ-ಗುಲಾಮ್ ಮಹಮ್ಮದ್ ಭಕ್ಷಿಗಳು ಕೊಟ್ಟ ಉತ್ತರವೂ ಹಿಂದೀ ಮುಸ್ಲಿಮರಿಗೆ ಅವರು ಮಾಡಿದ ಉಪದೇಶವೂ ಮನನೀಯವಿವೆ. "13 ತಿಂಗಳ ಬರ್ಬರ ಹೋರಾಟ ಹೊಡಿದ ನಂತರ ಕಾಶ್ಮೀರವನ್ನು ಹಿಡಿದುಕೊಳ್ಳಲು ತಮ್ಮಿಂದಾಗುವಂತಿಲ್ಲ ವೆಂಬುದು ಪಾಕಿಸ್ತಾನ್ ನಾಯಕರಿಗೀಗ ಮಂದಟ್ಟಾಗಿರಬಹುದೆ. ಪಾಕಿಸ್ತಾನದೊಳಗೆ ಬೆಳೆಯುತ್ತಿರುವ ವಿರೋಧವನ್ನು ಶಮನಿಸುವದಕ್ಕಾಗಿಯೂ ಕಾಶ್ಮೀರದಲ್ಲಿ ತಾವೇ ಮಾಡಿ ಹಾಕಿರುವ ಕೆಸರು ಕಾಂಡದಿಂದ ಹೇಗಾದರೂ ಪಾರಾಗಬೇಕೆಂಬುದಕ್ಕಾಗಿಯೂ ಈಗ ಅವರು ಜನಮತ ಸಂಗ್ರಹದ ಮಾತಾಡುತಿದ್ದಾರೆ. ಜನಮತ ಸಂಗ್ರಹವೆಂದರೇನೆಂಬುದಷ್ಟರಿತಿರುವ ನಾವು ಅದಕ್ಕೆ ಹೆದರುವುದಿಲ್ಲ. ಅದರ ಕುರಿತು ಯಾವ ಹುಸಿಯಾಸೆಯನ್ನೂ ಕಟ್ಟಿಕೊಳ್ಳದಷ್ಟು ವಿಸಿಅನುಭವ ಪಾಕಿಸ್ತಾನಿಗಳಿಗೂ ಇದೆ. ಆದರೆ ತಮ್ಮೊಳಗಿನ ಜಿಜ್ಞೆಯ ಪ್ರಬಲ ವಿರೋಧವನ್ನು ಶಮನಿಸುವದಕ್ಕಾಗಿ ಈಗ ಈ ನೆವನ! ಭಾರತದ ಮುಸ್ಲಿಮರೇ, ಈ ಭೂಮಿ ಹೇಗಿರತಕ್ಕದ್ದೋ ಹಾಗಿರುವಂತೆ ಮಾಡುವ ಮಹತ್ಕಾರ್ಯದಲ್ಲಿ ದೊಡ್ಡ ಪಾಲುಗಾರಿಕೆ ನಿಮ್ಮ ಮೇಲಿದೆ. ಪಾಕಿಸ್ತಾನಕ್ಕೆ ಹೊರಟು ಹೋಗಲು ನಿರಾಕರಿಸುವ ಮೂಲಕ ಭಾರತದ ಬೇಲಿರುವ ನಿಮ್ಮ ಪ್ರೇಮವನ್ನು ನೀವು ಸಾಕಷ್ಟು ಪ್ರದರ್ಶಿಸಿರುವಿರಿ. ನೀವು, ಓರ್ವ ಹಿಂದು ಅಥವಾ ಓರ್ವ ಸಿಖ್ಖನಂತೆ ಭಾರತಕ್ಕೆ ಆನನ್ಯ ವಿಧೇಯತೆಯಿಂದಿರುವವರೂಲರ ನಿಮ್ಮ ಕುರಿತು ಕೆಲವರ ಮನಸ್ಸಿನಲ್ಲೇಗಲೂ ಇರಬಹುದಾದ ಎಲ್ಲಾ ಸಂದೇಹಗಳನ್ನೂ ನಿವಾರಿಸಬೇಕು. ಪಂಡಿತ ನೆಹರು ಅಥವಾ ಸರ್ದಾರ್ ಪಟೇಲರಿಗೆ ಇಲ್ಲಿ ಬಾಳುವ ಹಕ್ಕು ಎಷ್ಟಿದೆಯೋ ಅಷ್ಟೇ ಹಕ್ಕು ನಿಮಗೂ ಇದೆ. ನಿಮ್ಮಲ್ಲಿ ಯಾರಿಂದಾದರೂ ಇನ್ನೂ ಈ ಮಟ್ಟಿಗೆ ಏನಾದರೂ ಶಂಕೆಯಿರುವುದಾದರೆ, ಅಂಥವರು ನಿಮ್ಮ ಸಮಾಜದ ಸತ್ಕೀರ್ತಿಯನ್ನು ಮಣ್ಣು ಪಾಲು ಮಾಡುವ ಬದಲಿಗೆ ಇಲ್ಲಿಂದ ಕೂಡಲೇ ಹೊರಟು ಹೋಗುವದು ವಾಸಿ".

ಕಾಶ್ಮೀರ ರಣರಂಗದಲ್ಲಿ ಹಿಂದೀ ಸೇನೆಯು ಝೋಝಿಲಾದಲ್ಲಿ ಮಹತ್ತಾದ ನವಧಾಳಿ ಹೂಡಿ ಡ್ರಾಸ್ ಕ್ಷೇತ್ರವನ್ನು ವಶಪಡಿಸಿಕೊಂಡಿದೆ. ಪಾಕಿಸ್ತಾನವು ಇನ್ನು ಕೆಲವೇ ದಿನಗಳೊಳಗೆ ಭಾರತದ ಮೇಲೆ ಪ್ರತೀಕಾರಾತ್ಮಕ ಯುದ್ಧ ಹೂಡಬೇಕಾಗುವದೆಂದು ಪಾಕಿಸ್ತಾನ್ ಸರಕಾರದ ಓರ್ವ ವಕ್ತಾರನೆಂದಿದ್ದಾನೆ. ಸಾಲ ಪಡೆಕೊಂಡವನೇ ವ್ಯಾಜ್ಯಕ್ಕೂ ಕೊಡೆಯುವಂತಿರುವ ಪಾಕಿಸ್ತಾನದ ಈ ಧೈರ್ಯವನ್ನು ಭಾರತವು ಸಹಿಸಿಕೊಂಡಿರುವುದು ಹೇಗೆ?

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮುಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಪಕ್ವ ಅನುಭವದ ಯೋಗ್ಯತೆಯಿದೆ.

ನಿರಖು ದೇವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿವೆ.

ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬೇಂಕ್, ಲಿಮಿಟೆಡ್

ಹೆ. ಆ. ಮಂಗಳೂರು.

THE VIJAYA BANK LTD.,

H. O. MANGALORE, S. K.

The Canara Banking Corporation Limited.

Estd: 1906.
(Incorporated in British India)
Head Office: **UDIPI**, S. India.

Capital Authorised	...	Rs. 52,00,000
Capital Issued & Subscribed	....	Rs. 20,00,000
Capital Paid up	....	Rs. 19,98,445
Reserves....	....	Rs. 8,66,751

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.,
General Manager.

ಗುರುವಾರ, ಉಡುಪಿ, ೨೫-೧೧-'೪೮

ಅರಿವೇ ನಿಯಂತ್ರಣ

ಅತಿ ಪ್ರಸರಣವನ್ನು ತಡೆಗಟ್ಟುವದ ಕ್ಕಾಗಿ ಧಾರಣೆಗಳ ಮಟ್ಟವನ್ನು ತಗ್ಗಿಸ ಬೇಕೆಂಬ ಉದ್ದೇಶದಿಂದ ಅನ್ನ-ಬಟ್ಟೆ ಎಡೂ ಈಗ ಸ್ವತಃ ನಿಯಂತ್ರಣಕ್ಕೊಳ ಗಾಗಿವೆ. ಯುದ್ಧಾವಧಿಯಲ್ಲಿದ್ದ ನಿಯಂ ತ್ರಣಗಳು ಮಧ್ಯಾವಧಿಯಲ್ಲೊಮ್ಮೆ ಕಳ ಚಿ ಹೋಗಿ, ಈಗ ಮತ್ತೆರ್ಮೆ ಬಂದಿರು ವ ಅದೃಷ್ಟವು ಜನತೆಯ ಆಹಾರ ಮತ್ತು ಅರಿವೆಗೆ ವಿಶೆ ಪ್ರಕಾರ ತಂದಿಟ್ಟಿರುವುದೇನೋ ನಿಜ. ಆದರೆ ಇವೆರಡರ ಸರಿಣಾಮ ಎಂಬ ಸಾಮಾನ್ಯ ಕಷ್ಟಗಳಲ್ಲಾ ಅಂತಹ ಸಮಾ ನತೆಯಿಲ್ಲ. ಜವುಳಿ ವ್ಯಾಪಾರಿಗಳನ್ನು ಸಾಮಾನ್ಯ ರೈತರ ದರ್ಜೆಯಲ್ಲಿಡಲಾಗು ವದಿಲ್ಲ; ಗಾಂಧಿಜೀಯ ತತ್ವದಂತೆ ಮನೆ ಮನೆ ನೂಲು ಮಾಡಿ ವಸ್ತ್ರ ತಯಾರಿ ಸುವ ಕ್ರಮವೇ ಇಂದು ನಮ್ಮಲ್ಲಿರುತಿದ್ದರೆ ಆ ವರ್ಗವನ್ನು ರೈತರೊಡನೆ ಹೋಲಿಸ ಬಹುದಿತ್ತು. ನಿರಂತರ ವಸ್ತ್ರಗಳನ್ನು ತಯಾರಿಸಿಕೊಂಡು ವ್ಯಾಪಾರ ಮಾಡುವ ಮೂಲಕ ನಿರಂತರಗಳಿಗೂ ನಿರಾತಂಕಗಳಿಗೂ ಪ್ರಥಮಸ್ಥಾನಗಾರರಾಗಿರುವವರು "ಜಮೀ ನ್ದಾರ್" ಸಮಾನರು ಹೊರತು ಸಾಗು ವಳ್ಳಿದಾರರಂತಲ್ಲ. ಆಹಾರದ ಮಟ್ಟಿಗೆ ಅಕ್ಕಿ ರೊಪ್ಪೆಗಳಿದ್ದಂತೆ ಅರಿವೆಯ ಮ ಟ್ಟಿಗೆ ಜವಳಿ ವ್ಯಾಪಾರಿಗಳು. ಪೇಟೆ ಸ್ಟ್ರೀಣಗಳ ವರ್ತನೆಯನ್ನು ಬಿಟ್ಟರೆ ಹಳ್ಳಿ ಯ ಜನತೆಯಲ್ಲಿ ಅತ್ಯಧಿಕ ಸಂಖ್ಯಾಕರು ಪ್ರತ್ಯಕ್ಷ ಸಾಗುವಳ್ಳಿದಾರರು ಅಥವಾ ಒಂದಲ್ಲೊಂದು ರೀತಿಯ ಸಾಗುವಳ್ಳಿ ಸಂಬಂಧದ ಜೀವನ ನಡೆಸುವವರೇ. ಆದ್ದರಿಂದ ಆಹಾರ ಧಾನ್ಯಗಳ ನಿಯಂತ್ರ ಣದ ಕುರಿತು ಎಲ್ಲಕ್ಕಿಂತ ನೋವಲು ಲ ಕ್ಕಿಸಬೇಕಾದುದೆಂದರೆ, ರಾಷ್ಟ್ರದ ಜೀ ವನವಾಗಿರುವ ಮತ್ತು ಜನತೆಯಲ್ಲಿ ಬಹುಸಂಖ್ಯಾಕ ಹಾಗೂ ಅತಿ ಮುಖ್ಯ ವರ್ಗವಾಗಿರುವ ರೈತರ ಹಿತವನ್ನೇ. ಸಾಗು ವಳಿಯೇ ಜೀವನ ಸರ್ವಸ್ವವಾಗಿರುವ ಈ ವರ್ಗದವರ ಸಮಾನ ಸ್ಥಾನವು ಬೆಲ್ಲದಲೇ ಸಿಹಿಯ ಲಾಭಹೊಡೆಯುವಂತಹ ಯಾವ ವ್ಯಾಪಾರೀ ವರ್ಗಕ್ಕೂ ಸೊರೆಯುವಂತಹ ಸ್ಥಿ ತಿ ಸರಕಾರವು ಮನಸ್ಸು ಮಾಡಿದರೆ ಮಾತ್ರ ಧಾನ್ಯಗಳ ವಿತರಣಾಧಿಕಾರವನ್ನು ಸಾಗುವಳಿಗಾರರಿಗೊಪ್ಪಿಸಿದಂತೆಯೇ ಅರಿವೆ ವಿತರಣಾಧಿಕಾರವನ್ನು ತಾನೇ ನಿರ್ವಹಿಸ ಬಹುದಾಗಿತ್ತು. ಜಾಗಾದಲ್ಲಿ ವ್ಯವಸ್ಥಾ ಯಿಯಾದ ಜನ ಹಾಗೂ ಅದಕ್ಕೆ ಸರಿ ಣಾಮವು ಇಂದಿಗಿಂತ ಪೂರ್ಣ ಭಿನ್ನ ವಾಗಿರುತಿತ್ತು. ಆದರೆ ಆಹಾರೋತ್ಪಾದನಾ ಕಾರ್ಯವನ್ನು ಸರಕಾರ ವಹಿಸಿಕೊಳ್ಳ ಬಲ್ಲುದೆಯೇ ಈ ಸಂಬಂಧವಾಗಿ ಈಗ ಅಪೇಕ್ಷಿ ಸಲ್ಪಟ್ಟಿರುವ ಎಲ್ಲಾ ಸುಧಾರಣೆಗಳೂ ಸಾ ಗುವಳ್ಳಿದಾರರನ್ನು ಬಲಪಡಿಸುವ ಗುರಿ ಯುಳ್ಳವುಗಳೇ ಹೊರತು ಬರ್ಖಾಸ್ತ್ ಪಡಿಸುವಂತಹವಲ್ಲ. ವಸ್ತುಸ್ಥಿತಿ ಹೀಗಿದ್ದರೂ ಆಹಾರ ನಿಯಂತ್ರಣದಲ್ಲರುವ ಕಾರಿ ಣ್ಯತೆಯಾಗಲೀ ದೃಢತೆಗಾಗಲೀ ಅರಿವೇ ನಿಯಂತ್ರಣದಲ್ಲಿ ಕಂಡುಬಾದಿರುವುದು ಶೋಚನೀಯ. ಭಾರತ ಸರಕಾರವು ಆ ಹಾರ ಪುನರ್ನಿಯಂತ್ರಣಕ್ಕೆ ಮೊದಲೇ ಅರಿವೇ ಪುನರ್ನಿಯಂತ್ರಣವನ್ನು ಜಾರಿ ದ್ದಿತು. ಆದರೆವರೆಗೂ ಅದು ಜಾಲ್ತಿಗೆ ಬಾರದೆ ಅರಿವೆಗಳ ಬೆಲೆಯೇರುತ್ತಾ ಹೋಗಿರುವ ಕಹಿಯನ್ನು ಸಾರ್ವಜನಿಕ ರು ಉಣ್ಣುತ್ತಾ ಹೋಗಬೇಕಾಗಿ ಬಂದಿದೆ. ನಿಯಂತ್ರಣ ಘೋಷಿಸಿದಾಗ ಅಂತೆ ವ್ಯಾ ಪಾರಿಗಳೆಲ್ಲರೂ ತಮ್ಮಲ್ಲಿರುವ ದಾಸ್ತಾನು ಗಳನ್ನು ಎರಡು ತಿಂಗಳೊಳಗೆ ಮಾರಿ ಮು ಗಿಸಬೇಕೆಂದೂ ಈ ಅವಧಿಯ ಮಾರು ದಿನದಿಂದ ಎಲ್ಲವನ್ನೂ ನಿಶ್ಚಿತ ಧಾರಣೆಗೇ ನೇ ಮಾರಾಟಕ್ಕಿದ್ದಂದೂ ಆಜ್ಞೆಯಾಗಿತ್ತು. ಕಳೆದ ಒಕ್ಟೋಬರಿಂತ್ಯಕ್ಕೆ ಆ ಅವಧಿ ಮುಗಿದುದರಿಂದ ಈಗ ನಿಶ್ಚಿತ ಧಾರಣೆ ಯಲ್ಲಿ ಅರಿವೆ ದೊರೆಯಬೇಕಾಗಿದ್ದ ಕಾಲ. ಆದರೆ ವ್ಯಾಪಾರಿಗಳ ಅಗ್ರಹದ ಬೇಡಿಕೆ ಯನ್ನು ಮನ್ನಿಸಿ, ಒಕ್ಟೋಬರಿಂತ್ಯದಲ್ಲಿ ಆ ವಾಯಿದೆಯನ್ನು ಭಾರತ ಸರಕಾರವು ಮತ್ತೊಂದು ತಿಂಗಳಿಗೆ ಮುಂದುವರಿಸಿದು ದರಿಂದ ನಿಯಮಿತ ಬೆಲೆಯಲ್ಲಿ ಅದನೆ ಪ ಡೆಯುವ ಸುಯೋಗವು ಸಾರ್ವಜನಿಕರಿಗೆ ಈ ತಿಂಗಳಾಂತ್ಯದ ವರೆಗೂ ತಪ್ಪಲಿದೆಯೆಂದಾ ಗಿದೆ; ಧಾರಣೆಯೇನೊ ವಿ.ವಿ.ವಿ.ರಿ ವಿರಿದೆ. ಪುನಃ ಅವಧಿ ಮುಂದುವರಿಸಿಕೊಳ್ಳುವ ಪ್ರ ಯತ್ನಗಳೂ ನಡೆದಿವೆ. ಹೀಗಾಗಿ ಅನ್ನ ಬಟ್ಟೆಗಳ ನಿಯಂತ್ರಣಗಳ ಈ ಭಿನ್ನತೆಯ ದೆಸೆಯಿಂದ, ಜೀವಧಾರಣೆಗಗತ್ಯವುಳ್ಳ ಇ ವೆರಡರ ಮಟ್ಟಿಗೂ ಬಹು ಸಂಖ್ಯಾಕ ಸಾರ್ವಜನಿಕರು ಕಷ್ಟನಷ್ಟಗಳಿಗೀಡಾಗಿ ದ್ದಾರೆ. ಇನ್ನಾದರೂ ದಾಸ್ತಾನು ಅರಿವೆ ಗಳ ಮಾರಾಟಕ್ಕೆ 1948ನೇ ನವೆಂಬರ್ 30ರ ನಂತರವಾಧಿ ಮುಂದುವರಿಸುವಂತಿ ಲ್ಲವೆಂಬ ತನ್ನ ಮಾತನ್ನು ಭಾರತಸರಕಾರ ವು ಪಾಲಿಸುವದೆಂದೂ, ರೈತರ ಉತ್ಪತ್ತಿ ಗಳನ್ನು ಹಿಡಿಸುಕೊಳ್ಳುವಷ್ಟು ಸುಲಭ ವಿರದ ಅರಿವೇ ನಿಯಂತ್ರಣ ಕ್ರಮವು ನಿಯ ಮಗಳ ಕಡೆಗೆ, ಅಧಿಕಾರಿಗಳು ಅದಕ್ಕೆ ತಕ್ಕಂತೆ ವಿಶೇಷಲಕ್ಷ್ಯ ಕೊಟ್ಟು ಯಾವ ಲೋಪದೋಷಗಳಿಗೂ ಎಡೆಯಿರದಂತೆ ಆವನ್ನು ಜಾರಿಯಲ್ಲಿಡುವರೆಂದೂ ನಂಬು ತ್ತೇನೆ.

ಇವರೂ ಹೀಗನ್ನುತ್ತಾರೆ!

"ತಾವು ನಿರೀಕ್ಷಿಸಿದ್ದಷ್ಟು ಪ್ರಶ್ನಗತಿ ಯಲ್ಲಿ ಐ ಕೆನ್ನಾನದ ಅರ್ಥಕಾಭಿವೃದ್ಧಿ ಯಾಗಲಿಲ್ಲವೆಂಬ ಕಾರಣದಿಂದ ಜನರಲ್ಲಿ ಬಹಳ ಮಂದಿಗೆ ಅತೃಪ್ತಿಯಿದೆ ಎಂಬುದ ನ್ನು ನಾನು ಬಲ್ಲೆ. ಆದರೆ ಅರ್ಥಿಕ ಸುಧಾರಣೆಯಾಗಲು ಸಮಯ ಹೋಗು ತ್ತದೆ; ಅಷ್ಟರ ವರೆಗೆ ನಾನು ಕಾಯಲು ತಯಾರಿದ್ದೇನೆ. ಬೇರಾವುದು ಹೇಗಿದ್ದರೂ ರಕ್ಷಣಾ ವ್ಯವಸ್ಥೆಗಳನ್ನು ಅತ್ಯಂತ ರಭಸದಿಂದ ಮುಂದೊತ್ತಲೇ ಬೇಕು. ನಾವು ಹಸಿವೆಯಿಂದ ಒಂದು ದಿನ ಕಳೆಯಬಲ್ಲೆವು; ಆದರೆ ಗುಲಾಮ ರಾಗಿ ಒಂದೇ ಒಂದು ನಿಮಿಷವು ಕೂಡಾ ಇರಲಾರೆವು" ಪಾಕಿಸ್ತಾನ್ ಪ್ರಧಾನಿ ಮಿ. ಲಿಯಾಖತ್ ಅಲೀಖಾನ್ ಇದೇ ತಾ.19 ರಲ್ಲಿ ಡಾಕ್ಕಾದಲ್ಲಿ ಕೊಟ್ಟ ಭಾಷಣದಲ್ಲಿ.

"ಕಾಶ್ಮೀರದ ಜಮ್ಮು ಕ್ಷೇತ್ರ ಮತ್ತು ನೈವತ್ಯ ವಲಯದಲ್ಲಿ ಭಾರತವು ಧಾಳಿ ಯನ್ನಾರಂಭಿಸಿದೆ. ತಾವು ಅಕ್ರಮಣ ಕಾರ್ಯ ಕೈಕೊಳ್ಳುವದಿಲ್ಲವೆಂದು ಪಾಕಿ ಸ್ತಾನಕ್ಕಿತ್ತಿದ್ದ ಹಮ್ಮು ಬಾಗ್ದಾನವನ್ನು ಅವರು ಮುರಿದುಕೊಂಡಿದ್ದಾರೆ. ಕಳೆದ ಐದು ತಿಂಗಳುಗಳಿಂದ ಭಾರತವು ತನ್ನ ಎರಡು ಸೇನಾ ದಳಗಳನ್ನು ಕಾಶ್ಮೀರಕ್ಕೆ ಕಳುಹಿಸಿ, ಹೀಗಾಗಿ ಕಾಶ್ಮೀರದ ಪರಿ ಸ್ಥಿತಿಯನ್ನು ಸರಿಗೊಳಿಸುವದಕ್ಕಾಗಿ ಇ ನ್ನು ಕೆಲವೇ ದಿನಗಳೊಳಗೆ ಹತ್ತು ಸೇನಾ ಹೆಂಚಿಕೆಗಳನ್ನು ಪಾಕಿಸ್ತಾನವು ಕೈಗೊಳ್ಳ ಬೇಕಾಗಿ ಬಂದಿದೆ"-ಇದೇ ತಾ. 20ರಲ್ಲಿ ಕರಾಚಿಯಲ್ಲಿ ಪಾಕಿಸ್ತಾನ್ ಸರಕಾರೀ ವಕ್ತಾರನೊಬ್ಬನ ಮಾತು.

"ಹುಡುಗರು ಮತ್ತು ಹುಡುಗಿಯರು ತಾವು ಬಾಳ್ವೆಯ ಹೇಗೆ ನಿರ್ವಹಿಸಬೇಕೆಂಬು ದನ್ನು ಕಲಿತುಕೊಳ್ಳಲಿ. ನಾವಾ ಸಂ ಬಂಧವಾಗಿ ಜಾಗರೂಕತೆ ವಹಿಸಬೇಕಾ ದುದಗತ್ಯವಾದರೂ ಸಹ ಶಿಕ್ಷಣ ಕ್ರಮವು ಅತ್ಯುತ್ತಮ. ಈಗಿನದಕ್ಕಿಂತ ಇಷ್ಟು ಹೆ ಚ್ಚಾಗಿ ಪುರುಷರೂ ಸ್ತ್ರೀಯರೂ ಭೇಟಿ ಯಾಗ ಬೇಕಿಲ್ಲ. ಬೇರೆಯಾಗಿ ಇರು ವುದು ಹಿತಕರವಲ್ಲ. ಶಾಲಾ ಕಾಲೇಜು ಗಳಲ್ಲಿ ಮಾತ್ರವಲ್ಲ, ಸಾರ್ವಜನಿಕ ಸಮ್ಮೇಳ ನಕ್ಕೆಡೆಯುಳ್ಳ ಎಲ್ಲಾ ಸ್ಥಳಗಳಲ್ಲೂ ನಾ ವು ಪರಸ್ಪರ ಒಟ್ಟಾಗುತ್ತಿರಬೇಕು ನಾವು ಒಬ್ಬರಿಗೊಬ್ಬರು ದೂರವಿದ್ದಷ್ಟಾದಂತೆ ರಿಂದಲೇ ಕಷ್ಟಗಳನ್ನು ಹೆಚ್ಚಿಸಿಕೊಳ್ಳು ತ್ತಿದ್ದೇವೆ"-ಶಿಮ್ಲಾದ ಮುಸ್ಲಿಂ ಲೀಗ್ ಕಾಲೇ ಜನ್ನು ಉದ್ಘಾಟಿಸುವಾಗ ಗವರ್ನರ್ ಜನ ರಲ್ ರಾಜಾಜಿ ಹೇಳಿದುದು.

"ಪಾಕಿಸ್ತಾನವು 'ಇಸ್ಲಾಮಿಕ್ ರಾಜ್ಯ' ವಾಗಿರುವುದೆಂಬುದರಿಂದ, ಮುಸ್ಲಿಮೇತರ ರೂಲೇ ಅಲ್ಪಸಂಖ್ಯಾಕರೆಂಬ ವಿಧದ ಭೀತಿ ಸಂದೇಹಗಳನ್ನು ಕಟ್ಟಿಕೊಳ್ಳುವ ಬದಲಿಗೆ, ಲೋಕದ ಎಲ್ಲಾ ಮುಸ್ಲಿಮೇತರರ ಹಿತ ಸಂಬಂಧಗಳಿಗೂ ಅದು ಇನ್ನಷ್ಟು ಹೆಚ್ಚಿನ ಆಕ್ಷಾಸನೆ ಮತ್ತು ಭದ್ರತೆಯು ನ್ನೀಯುವಂತಹದಾಗುವದೆಂಬ ನಂಬಿಕೆ ಯಿಡಬೇಕು"-ಡಾಕ್ಕಾದಲ್ಲಿ ಇದೇ ತಾ. 20ರ ಭಾಷಣದಲ್ಲಿ ಮಿ. ಲಿಯಾಖತ್ ಅಲೀಖಾನ್.

"ಹಿಂದುಗಳ ಕುರಿತು ಯಾವ ಸಂದೇ ಹವನ್ನೂ ಕಟ್ಟಿಕೊಳ್ಳಬೇಡಿ. ಪರಿಸ್ಥಿತಿ ನೋಡುವಿರಾದರೆ ಹಿಂದುಗಳು ಇಡೀ ಲೋಕದಲ್ಲೇ ಅತಿ ಹೆಚ್ಚಿನ ವ್ಯೇಮಾದರ ಗಳ ಮನುಷ್ಯರೆಂಬುದನ್ನು ನೀವು ಕಂಡು ಕೊಳ್ಳದಿರಲಾರಿರಿ. ಬ್ರಿಟಿಷ್ ಕರಭಾಯಿ ಯೀಗ ಜಾರಿದೆ ಎಂಬುದೂ ನೀವು ಸ್ವತಂ ತ್ರ ಭಾರತದ ಪ್ರಜೆಗಳಾಗಿರುವಿರೆಂಬುದೂ ಲಕ್ಷ್ಯದಲ್ಲಿರಲಿ. ಈಗಲಾದರೂ ಒಳ್ಳೆ ನಂಬಿಗಸ್ಥರನ್ನಿಸಿ, ಸತ್ಕಾರ್ಯಗಳನ್ನು ಮಾಡಿ ತೋರಿಸಿ, ನೀವು ನಿಮ್ಮ ಹಿಂದಿನ ತಪ್ಪುಗಳನ್ನು ಸರಿಪಡಿಸಬೇಕು. ಬಾಪ್ಪು ಪಿತ ಮಹಾತ್ಮ ಮಹಾತ್ಮನ ಸತ್ಯಾಹಿಂ ಸೆಗಳನ್ನು ಅನುಸರಿಸಬೇಕು. ಹಿಂದೂ ಮುಸ್ಲಿಮರನ್ನು ವಿಂಗಡಿಸಿ ಹಾಕಿದ್ದ ಮುಖ್ಯ ಕಾರಣಗಳಲ್ಲಿ ಒಂದಾದ ಪ್ರತ್ಯೇಕ ನಾತಿದಾನ ಕ್ರಮಕ್ಕೆ ಮುಂದಿನ ಘಟನೆ ಯಲ್ಲಿ ವಿದಾಯವೀಯಲಾಗದೆ ಇನ್ನೂ ಮುಸ್ಲಿಮರು ಹಿಂದುಗಳನ್ನೂ ಹಿಂದುಗಳು ಮುಸ್ಲಿಮರನ್ನೂ ಹೊಂದಿಕೊಂಡೇ ಇರ ಬೇಕಾಗುತ್ತದೆ"-ಬಿಹಾರಿನ ಮಂತ್ರಿ ಡಾ. ಸಯ್ಯದ್ ಮಹಮ್ಮದರು ಮುಸ್ಲಿಮರಿಗಿತ್ತ ಉಪದೇಶ.

"ಅಮೆರಿಕವು ಪ್ರತ್ಯಕ್ಷ ಹಾಗೂ ಬೇ ಕಾದಷ್ಟು ಸೇನಾ ಸಹಾಯವನ್ನೂ, ಅರ್ಥಿಕ ಸ್ಥಿತಿಯನ್ನು ವ್ಯವಸ್ಥೆಗೊಳಿಸಲು ಸಾಲವನ್ನೂ ಕೊಡದಿದ್ದರೆ ಚೈನವು ಕ ಮ್ಯೂನಿಸ್ಟರ ಕೈಯೊಳಗಾದಿ"-ಚೈನಾ ದ ಅಧ್ಯಕ್ಷ ಚಿಯಾಂಗ್ ಕೈಶೇಕರ ಮೊರೆ.

"ಚೈನದ ಪರಿಸ್ಥಿತಿ ಭೀಕರವಾಗಿದೆ. ಇತ್ತೀಚೆಗಿನ ನಿಂಬೆಗಳಿರಿಲ್ಲಾ ಕಮ್ಯೂನಿಸ್ಟ್ ವಿರುದ್ಧ ಹೋರಾಟವನ್ನು ನೋನೆಯ. ವರೆಗೂ ಮುಂದೊಯ್ಯಬೇಕೆಂದು. ಬೇಸೀ ಸರಕಾರ ನಿರ್ಧರಿಸಿದೆ. ಕಮ್ಯೂ ನಿಸ್ಟರನ್ನು ತಡೆಗಟ್ಟಬೇಕಾದರೆ ಅಮೆರಿಕ ದ ಹೆಚ್ಚಿನ ಸಹಾಯ ಕೂಡಲೇ ಬೇಕಿ ಯ ಬೇಕು. ಚೈನವು ಪತನಗೊಂಡರೆ ಅವಿಲ ಆಸ್ಯಾವೇ ಕೈ ಬಿಡುವುದು; ಲೋ ಕ ಶಾಂತಿಗೆ ಯುರೋಪಿಗಿಂತ ಆಸ್ಯಾ ವೆಷ್ಟಕ್ಕೂ ಕಡಿಮೆಯದಲ್ಲ"-ಇದೇ ತಾ. 21ರಲ್ಲಿ ಅಮೆರಿಕದ ಜನತೆಗೆ ಆ ಕಾ ಶ ವಾ ಣಿ ಕರೆ ಕೊಟ್ಟ ಮೇಡಮ್ ಚಿಯಾಂಗ್.

ಎಲ್ಲ ತರದ ದಂತ ರೋಗ ಗಳನ್ನು, ಹಲ್ಲಿಗೆ ಮಾಡಿ ಹಲ್ಲುಗಳನ್ನು ಹಾಗೂ ಹಲ್ಲು ಮಾಡುತ್ತೆನೆ.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಕಾರ್ಯಾಲಯ

ಹೀಗಿದೆ ಪ್ರಪಂಚ ಸ್ಥಿತಿ

ಚೈನಾದಲ್ಲಿ ಚಿ-ಯೋ ನಗರದ ಮೇಲಿನ ಕಮ್ಯೂನಿಸ್ಟ್ ಮುತ್ತಿಗೆಯನ್ನು ಪಡಿಗಟ್ಟ ರಾಜಧಾನಿ ನಾನ್ಕಿಂಗಿನ ಮೇಲಿನ ಆಪಾಯವನ್ನು ನಿವಾರಿಸಿದೆವೆಂದು ಚಿಯಾಂಗ್ ಸರಕಾರದ ಹೇಳಿಕೆಯಿರುವುದಾದರೂ ನಿಜಕ್ಕೂ ಚಿಯಾಂಗ್ ಸರಕಾರದ ಅಸ್ತಿತ್ವವೀಗಲೇ ಅಲುಗಾಡುತ್ತಿದೆ. ಕಮ್ಯೂನಿಸ್ಟರು ಮುಂದೊತ್ತುತ್ತಾ ಬಂದಂತೆ ಸರಕಾರೀ ಸೇನೆಗಳಾ ಅಧಿಕಾರಿಗಳೂ ಅವರ ಪಕ್ಷಕ್ಕೆ ಸೇರಿಕೊಳ್ಳತೊಡಗಿದ್ದಾರೆ. ಆ ಯಕಟ್ಟಿನ ಸ್ಥಳಗಳೆಲ್ಲಾ ಒಂದೊಂದಾಗಿ, ಮೊದಲಿಗಿಂತ ತೀರಾ ಅನಾಯಾಸದಲ್ಲಿ ಕಮ್ಯೂನಿಸ್ಟರ ಹಕ್ಕುಗತವಾಗುತ್ತಾ ಬಂದಿವೆ. ಈಗ ಚಿಯಾಂಗರ ರಾಷ್ಟ್ರೀಯ ಸರಕಾರಕ್ಕುಳಿದಿರುವ ಏಕಮಾತ್ರ ಆಶೆಯೆಂದರೆ ಅಮೆರಿಕದ ಸಹಾಯ. ಪೂರ್ವಗಡೆಯಲ್ಲಿ ರಕ್ತಪಾತ ವಿರುದ್ಧ ನಿಲ್ವಾಣವಾಗಿ ಜಪಾನನನ್ನು ಸಜ್ಜುಗೊಳಿಸಿ ತ್ರಿರೂಪ ಅಮೆರಿಕವು ಆ ನಿರ್ವಾಣದ ಭದ್ರತೆಗೆ ಚೈನವು ಅತ್ಯವಶ್ಯ ಎಂದರಿತು, ಅಲ್ಲಿನಿಷ್ಟರಲ್ಲೇ ಹೋರಳ ಸರಕಾರವು ಮಾಡಿದ್ದಿತು. ಅವುಗಳಲ್ಲಿ ಕೆಲವು ಕಮ್ಯೂನಿಸ್ಟರ ಕೈಸೇರಿದ್ದರೆ ಉಳಿದುನ್ನೆಲ್ಲವೂ ನಿರರ್ಥಕವಾಗಿವೆ. ಅಪ್ರಾಗತಿಕ ಚಿಯಾಂಗ್ ಕೈಶೇಕರ ರೀತಿ ನೀತಿಗಳ ಕುರಿತು ಅಮೇರಿಕದ ಒಳಾತ್ಮಪ್ತಿ ಪ್ರಬಲ ವಿದ್ದರೂ ಚೈನವು ಕಮ್ಯೂನಿಸ್ಟ್ ಅಗಿ ಮಾರ್ಪಟ್ಟಲ್ಲಿ ಸೂರ್ವದೆಸೆಯ ತನ್ನೆಲ್ಲಾ ಹಂಬಿಕೆಗಳಿಗೂ ಕುದಿನೀರುಬೀಳುವದೆಂಬ ಪಶ್ಚಾತ್ತಾಪದಿಂದ ಆದು ಕುದಿಯುತ್ತಿದೆ. ಚಿಯಾಂಗರು ಟ್ರುಮೇನರೊಡನೆ ಆಟಂಬೋಂಬು ಕೇಳಿರುವರೆಂಬ ಸುದ್ದಿ ಕೂಡಾ ಇದೆ. ಚೈನದಲ್ಲಿ ಗಾಳಿಯತ್ತ ಬೀಸುತ್ತಿದೆ ಎಂಬುದನ್ನು ಕಂಡುಕೊಂಡ ಬ್ರಿಟಿಷರು, ತಮ್ಮ ವ್ಯಾಪಾರವನ್ನು ಉಳಿಸಿಕೊಳ್ಳುವದಕ್ಕಾಗಿ ಕಮ್ಯೂನಿಸ್ಟ್ ಸರಕಾರಕ್ಕೆ ಒಪ್ಪಿಗೆ ಕೊಡುವದೆಂಬ ವಾರ್ತೆಯಿತ್ತು. ಅಮೆರಿಕಾಧ್ಯಕ್ಷ ಟ್ರುಮೇನರು, ಚೈನಾ ಸಂಬಂಧವಾಗಿ ತಾವು ಮುಂದಾವ ಧೋರಣೆ ವಹಿಸಬೇಕು ಎಂಬ ಕುರಿತು ಗಾಢ ಚಿಂತನೆಗೆ ತೊಡಗಿದ್ದಾರೆ.

ಬರ್ಲಿನ್ ಬಿಕ್ಕಟ್ಟು ಯಥಾಸ್ಥಿತಿಯಲ್ಲಿದೆ. ಭದ್ರತಾ ಕೌನ್ಸಿಲಿನ ಅಧ್ಯಕ್ಷರು ಕೊನೆಯ ಪ್ರಯತ್ನವಾಗಿ ಹೃಶ್ಚಾಮಾಲಿಕೆಯೊಂದನ್ನು ರಶ್ಯಾ ಮತ್ತು ಆಂಗ್ಲೋ ಅಮೆರಿಕಾ ನರಿಗೆ ಕಳುಹಿಕೊಟ್ಟಿದ್ದರು. ರಶ್ಯವದಕ್ಕೆ ಕಳುಹಿಸಿರುವ ಉತ್ತರವು ಅಶಾದಾಯಕ ವಿದೆಯೆಂದೂ ಪಾಶ್ಚಾತ್ಯ ರಾಷ್ಟ್ರಗಳಿಂದ ಉತ್ತರ ಬಂದ ಮೇಲೆ ಪುನಃ ಪ್ರಯತ್ನ ನಡೆಯಲಿವುದೆಂದೂ ಸೇಕಡಾ 50ರಷ್ಟೀಗ ಆತೆ ಮೂಡಿದೆಯೆಂದೂ ತಿಳಿದು ಬರುತ್ತದೆ.

ದಕ್ಷಿಣಾಫ್ರಿಕದ ಮಲಾನ್ ಸರಕಾರವು ಹಿಂದೀಯರ ಮೇಲೆ ಹೇರಿರುವ ವರ್ಣದ್ವೇಷಪೂರಿತ ನಿರ್ಬಂಧ-ನೈಯತ್ಯಾಫ್ರಿಕದ ಆಡಳಿತೆಯನ್ನು ತನಗೆ ಬಿಟ್ಟುಕೊಡಬೇಕೆಂಬ ಮಲಾನ್ ಸರಕಾರದ ಬೇಡಿಕೆ-ಇವು ಗಳ ಕುರಿತು ಜಾಗತಿಕ ಸಂಘದಲ್ಲಿ ತೀವ್ರ ವಾದವಿವಾದಗಳು ನಡೆದು ಆ ಸಂಸ್ಥೆಯಿಂದಲೇ ಹೊರಬೀಳುವ ಬೆದರಿಕೆಯನ್ನು ಮಲಾನರು ಹಾಕಿದ್ದರು. ದಕ್ಷಿಣಾಫ್ರಿಕದ ಮಾಜೀ ಪ್ರಧಾನ ಮಂತ್ರಿಜನರಲ್ ಸ್ಮಟ್ಸರೂ ಮಲಾನ್ ಧೋರಣೆಯನ್ನು ಖಂಡಿಸಿದ್ದಾರೆ ಈ ಒಣ ಠೇಂಕಾರೀ ಮಲಾನ್ ಸರಕಾರ ಪತನದತ್ತ ಸಾಗಿದೆ, ಎಂದು ವಿಜ್ಞಾರಿಗಳ ಮತವಿದೆ.

ಭಾರತದ ಘಟನಾ ಸಮಿತಿಯು ಶಾಶ್ವತ ರಾಜ್ಯಾಂಗ ಶಾಸನವನ್ನು ಕಲಮುವಾರಾಗಿ ಚರ್ಚಿಸುತ್ತಿದೆ ಈ ನಡುವೆ ಸದ್ಯದ ಆವಶ್ಯಕತೆಗಳ ನೇಲಿಂದ 1935ನೇ ಭಾರತ ಶಾಸನಕ್ಕೆ ತಿದ್ದುಪಡಿ ಮಸಡದೆಯೊಂದು ಈ ವಾರದಲ್ಲಿ ಸರ್ದಾರ್ ಪಟೇರಿಂದ ಘಟನಾ ಸಮಿತಿಯ ಮುಂದೆ ಬರಲಿರುವದೆಂದು ತಿಳಿದು ಬಂದಿದೆ. ಸ್ವಯಲಿತ ಭಾರತ ಶಾಸನವನ್ನು ಭಾರತ ಶಾಸನ ಸಭೆಗಳೇ ಬದಲಾಯಿಸಲಿಕಿಯುವುದು ಚರಿತ್ರೆಯಲ್ಲಿ ಇದೇ ಮೊದಲು. ಉದ್ದಿಮೇವಿವಾದಗಳ ಪಂಚಾಯಿತೀರ್ಮಾನಗಳ ವಿರುದ್ಧ ಅಪ್ಪೀಲುಗಳನ್ನು ಸ್ವೀಕರಿಸುವ ನ್ಯಾಯಾಧೀಶ ಮಂಡಲಿಯೊಂದರ ರಚನೆ-ಅವಧಿ ಮುಗಿಯುವ ಮದ್ರಾಸ್, ಬೋಂಬಾಯಿ, ಬಿಹಾರ್ ಕೌನ್ಸಿಲುಗಳಿಗೆ ಭಾವೀಶಾಸನ ಜಾರಿಯಲ್ಲಿ ಬರುವವರೆಗೆ ಜೀವದಾನ ಮಾಡುವ ಅಧಿಕಾರವನ್ನು ಗವರ್ನರರಿಗೀಯುವದು-ಹೊಸತಾಗಿ ಮಿಲನಗೊಂಡ ಸಂಸ್ಥಾನಗಳ ಸ್ಥಾನ ನಿರ್ಣಯ ಮತ್ತು ಆಹಾರ ಸಾಮಗ್ರಿ, ಪೆಟ್ರೋಲು, ಹತ್ತಿ, ಉಣ್ಣೆ, ಇದ್ದಲು, ಕಬ್ಬಿಣ, ಉಕ್ಕು ಮುಂತಾದ ಮುಖ್ಯ ಸಾಮಗ್ರಿಗಳ ಅಧಿಕಾರವನ್ನು ಕೇಂದ್ರ ಸರಕಾರಕ್ಕೆ ವಹಿಸಿಕೊಡುವದು-ಮುಂತಾದ ತಿದ್ದುಪಡಿಗಳು ಈ ಸೂಚನೆಯಲ್ಲಿವೆಯೆಂದು ಊಹಿಸಲಾಗಿದೆ.

ಉಡುಪಿ

ರೇಶನಿಂಗ್- ಉಡುಪಿ ನಗರ ಕ್ಷೇತ್ರದಲ್ಲಿ ಇದೇ ತಾ 21ರಿಂದ ಕಾರ್ಯರೂಪದಲ್ಲಿ ಬಂದಿದೆ. ಪಟ್ಟಣದ ಅದೊಂದು ಮೂಲೆಯಲ್ಲಿ ರೇಶನಿಂಗ್ ಆಫೀಸು ಇದ್ದು ಕಾರ್ಡು ಪಡೆಯಲು ಬಂದಿದ್ದ ಜನರ ಗುಂಪನ್ನು ನೋಡುವಾಗ ರೈತ್ವ ನಿರ್ವಾಣದ ನೆನಪಾಗುತ್ತಿತ್ತಂದೂ ಆಫೀಸು ತಿಂಬಂದಿಯವರು ತ್ಯಾವು ಜನತಾ ಸೇವಕರೆಂಬ ದೃಷ್ಟಿಯಿಂದ ವರ್ತಿಸದಿರುವರೆಂದೂ ಒಂದು ಬಾತ್ಮಿ.

ಮುನಿಸಿಪಲ್ ನಿಂಟಿಂಗು- ಇದೇ ತಾ 22ರಲ್ಲು ಸರ್ಜಿ ಚಿಯರ್‌ಮೆನ್ ಶ್ರೀ ಸಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. ಹಾಲಿ ಸ್ಥಳಗಳ ಮೇಲೆ ತೆಂಬೇಕಾದ ತೆರಿಗೆಯನ್ನು ಕಡಿನೆ ಮಾಡಲು ಸಾಧ್ಯವಿಲ್ಲವೆಂದು ಸೂಚಿಸಿದ ಸರಕಾರಿ ಆರ್ಡರನ್ನು ರಿಕಾರ್ಡು ಮಾಡಲಾಯಿತು. ಎಜಂಡದಲ್ಲಿ ಪ್ರಾಮುಖ್ಯ ವಿಷಯಗಳಿರವಿದ್ದುದರಿಂದಲೋ ಏನೋ, ಮೆಂಬರ್‌ಹಾಜರಿಯು ವಿರಳ (Thin) ವಾಗಿತ್ತು.

ಪ್ರಾರಂಭ-ಶ್ರೀ. ಎ. ಎಸ್. ವಿಟ್ಟಲ ಶೆಟ್ಟರ ಯುನೈಟೆಡ್ ಇಂಡಿಯಾ ಬಿಲ್ಡಿಂಗ್ ಬ್ಯಾಂಕ್‌ರೋಡ ಕಾರ್ಯಾಲಯದ ಆರಂಭವು ತಾ 21ರಲ್ಲಿ ಡಾ। ಪಿ. ಆರ್. ನಾಯ್ಕರ ಅಧ್ಯಕ್ಷತೆಯಲ್ಲಿ ಡಾ। ಸುಂದರರಾಮ ಪೈ, ಡಾ। ಕುಂ ಇಂಬು ನಾಯಕ್, ಡಾ। ವಿ. ಆರ್, ಕೊರಡ್ಡಲ್, ಶ್ರೀ ಬಿ. ರಾಮಕೃಷ್ಣಾಚಾರ್ ಮೊದಲಾದವರ ಶ್ರೇಯೋಭಾಷಣದೊಂದಿಗೆ ರೋಯಲ್ ಮಹಲಿನಲ್ಲಿ ನಡೆಯಿತು.

ಆನಸ್ಸು ಮಳೆ-ಈಗಲೂ ಆಗಾಗ್ಗೆ ವಿರಳ ... ಬೀಳುತ್ತಿದೆ. ಕಳೆದ ವಾರದಲ್ಲಿ ನಿತ್ಯಿಲ್ಲದಂಥ ವಿಶೇಷವಾಗಿತ್ತು, ಆಕಾಶವು ಸದಾ ಮೋಡ ಕವಿದಿರುತ್ತದೆ.

ದಿವಂಗತ ವಕೀಲ್

ಶ್ರೀ. ಟಿ. ಗಣಪಯ್ಯ ಶೆಟ್ಟರು

ಇಲ್ಲಿಯ ಪ್ರಸಿದ್ಧ ವಕೀಲರಲ್ಲೊಬ್ಬರೂ ಜನಪ್ರೀತರೂ ಆಗಿದ್ದ ಶ್ರೀ. ಟಿ. ಗಣಪಯ್ಯ ಶೆಟ್ಟರು ಇದೇ ತಾ 20 11-48ನೇ ಶನಿವಾರ ಮುಂಜಾನೆ ಉಡುಪಿಯ ತನ್ನ ನಿವಾಸದಲ್ಲಿ ಹೃದಯಸ್ತಂಭನಗೊಂದು ವಿಧಿವಶರಾದರೆನ್ನಲು ಅತ್ಯಂತ ವಿಷಾದಿಸುತ್ತೇವೆ. ಶ್ರೀ ಶೆಟ್ಟರು ತನ್ನ ಉದ್ದಿನಯಲ್ಲಿ ನಿಪುಣರಾಗಿದ್ದರು; ಮರ್ಮಜ್ಞರಾಗಿ ವಾಗ್ಮಿತ್ವ ಸಂಪನ್ನರಾಗಿದ್ದರು; ಧೈರ್ಯ ಸ್ಥೈರ್ಯಶಾಲಿ ಮತ್ತು ಸಾಹಸಿಯಾಗಿದ್ದರು. ಸದಾ ಹಸನ್ಮುಖಿಯಾಗಿರುವ ಸಲುಗೆಯ ಮಧುರ ಮಾತುಕತೆಗಳಿಂದ ಜನಸಾಮಾನ್ಯರೊಡನೆ ಬೆರೆತು ವರ್ತಿಸುತ್ತಿದ್ದ ಅವರ ಬೆಲವಿನ ಮನೋವೃತ್ತಿ-ಸತ್ಕರ್ತೋದ್ಯೋಗ ಸಾಧನೆಗಳೂ ಅಪಾರ ಎಡೆಗಾಲಿಕೆ, ಮೊದಲಾದ ಗುಣಗಳಿಂದ ಶ್ರೀ. ಟಿ ಗಣಪಯ್ಯ ಶೆಟ್ಟರು ಜನರ ಪ್ರೀತ್ಯಾದರ, ಗೌರವಗಳಿಗೆ ಪಾತ್ರರಾಗಿದ್ದರು. ಆಪೂರ್ಣ ವಯಸ್ಸಿನಲ್ಲಿ ಶ್ರೀಯುತರ ಇಹ ಯಾತ್ರೆ ಮುಗಿದುದು ದುಃಖಕರ ಹೋಚನೀಯ. ಆ ಜೀವಕ್ಕೆ ಶಾಂತಿಯನ್ನು ಕೋರುತ್ತೇವೆ; ಅವರ ಬಂಧು ಮಿತ್ರ ಸಂತಾಪದಲ್ಲಿ ನಾವೂ ಸಮಭಾಗಿಗಳಾಗಿದ್ದೇವೆ.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

O. S. No 356/1948.

Rev-Fr R.C. ಲೂವಿಸ್‌ಗೋವಿಯಸ್. —ಪಾದಿ.

ಭವಾನಿ ಶಂಕರ ಪ್ರಭು-ಪಾನಪ್ರಭುಗಳ ಮಗ-ಮಾಣಿ ಈಸಬಾ-ಹಾಲಿ C/o L. K. Prabhu. Trishuleshwar Temple Road Conductor, City Bus Service Mangalore, S. K.—ಪ್ರತಿವಾದಿ.

ಪ್ರತಿವಾದಿಯು ನಾದಿಯಿಂದ ಬಾಡಿಗೆ ಟೀಟು ಬರಕೂಟ್ಟು ವ್ಯವಹಿಕೊಂಡ ದಾವಾ ಕಟ್ಟಡ ವಸ್ತುವಿಗೆ ಅಸ್ತಿ ಸರ್ವಾದಿಯನ್ನು ಸ್ವಾಧೀನನೆಗೂ ಮಿಗ್ತೆಗೂ ಕೂಡಾ ವಾದಿಯು ಮಾಡಿದ ಮೇಲಿನ ದಾವೆಯಲ್ಲಿ ಕೈಪೇತು ನೋಟೀಸಿನ ತಪ್ಪಿ ವ್ಯಾದೆ ತಾ 3-12-1948ಕ್ಕೆ ತನ್ನಿಗೆ ಇಟ್ಟಿರುತ್ತದೆ. ಆದ್ರಿಂದ ಪ್ರತಿವಾದಿಯು ಆ ವ್ಯಾದೆಗೆ ಈ ಕೋರ್ಟ ಮುಂದೆ 11 ಘಂಟಿಗೆ ತಪ್ಪದೆ ಹಾಜ್ರಾಗಿ ಬರಹ ಮೂಲಕ ತನ್ನ ಆಕ್ಷೇಪಗಳೇನಾದರೂ ಹೇಳುವದಿದ್ದರೆ ಹೇಳಿಕೊಳ್ಳತಕ್ಕದ್ದು. ಇದಕ್ಕೆ ತಪ್ಪದೆ ನಿಮ್ಮನ್ನು ಶಿವಾಯಿ ಎಂತ ಮಾಡಿ ಈ ದಾವೆಯನ್ನು ಮುಂದಿನ ತೀರ್ಮಾನ ಸೋಣಾಗುತ್ತದೆ. ಎಂತ ಈ ಕೋರ್ಟಿನವರ R. I. A. 1348/1948ನೇ ಆರ್ಡರ್ಯ ಕುಕುಂ ಸ್ವಕಾರ ಈ ನೋಟೀಸು ನೂಡಿಸಿಯದೆ.

B. Ramachandra Rao, M.A.,B L. Pleader for Plaintiff.

ತಾರೀಕು 11-11-1948, ಪುತ್ತೂರು, S. K.

For Banking Service in Trade, Industry & Agriculture

approach

THE AGRICULTURAL & INDUSTRIAL BANK Ltd,

(Established in 1934)

Head Office: **COONDAPOOR, S K**

Branches:

1	Ankola,	7	Gokarn,	13	Nagar,
2	Belgaum,	8	Haveri,	14	Shimoga,
3	Bhatkal,	9	Hubli,	15	Sirsi,
4	Koondapoor,	10	Karvar,	16	Somwarpet,
5	Dharwar,	11	Kumta,	17	Vitajpet,
6	Gadag,	12	Mangalore,	18	Honavar.

19 384, M. Jaipuria House, Kalbadevi Road, BOMBAY, 2.

Current, Savings bank, and Fixed deposits are accepted

For Terms, apply to the nearest Branch.

Coondapoor, 29-9-1948.

K. Vittaldas Shenai, Managing Director.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ನಡಿಯುವ ಚಿತ್ರ

ಇದೊಂದು ಪೂರ್ಣಾಭೂತ. ಬಂದಾಗಲೇ ಮುಂದಾಗಿ ಬಂದು ಟೀಟಿನ ಬಂದೋಬಸ್ತು ಮಾಡಿದರೆ ಅಂದವಾಗಿ ಕುಳಿತುಕೊಂಡು ನೋಡಬಹುದು. ಇಲ್ಲವಾದರೆ ಪುಷ್ಕಳವಾದ ಸಂಕಲ್ಪನೆಯಲ್ಲೇ ಹೋದೀತು. ಚಿತ್ರವು ಅದ್ಭುತ ಕರುಣಾ ಚಿತ್ರ. ನೋಟವು ನಿಟ್ಟುಸಿರು ಬಿಡುವ ನರ ನ್ಯುಗಳ ಹೋರಾಟದ ಆಟ. ಕಥೆಯು ಕಾಡಿನ ಕುಸಕಗಳ ಕಲ್ಪನೆಯನ್ನೇಳಿಸಿ, 17ರಲಂಗಳ ಸೀರಿಯಲ್ ಚಿತ್ರವು ಒಂದೇಕಲ ತೋರಿಸಲ್ಪಡುವುದು. ಮೈಸ್ಸಾನ್ನವೆಂದು ಹೊಟ್ಟೆತಂಬ ಉಂಡು, ಸ್ವಲ್ಪ ಕಸ್ಸಾವಾರಿ ನೆಂಟರಿಸ್ಟರನ್ನು ನೂಡಲು ಸಾನ್ಯವೇ, ಅಂತೆಯೇ ಇಂದು ನಿಮಗೆ ಮೈಸ್ಸಾನ್ನ ಭೋಜನ.

(ಕೊಲೊಂಬಿಯಾದವರ ಸೀರಿಯಲ್ ಚಿತ್ರ.)

ಪ್ಲೇಂಟರ್ಸ್

ಟೋಮ್ ಟೈಲರ್, ಜೆನ್ನಿ ಬೇಟ್ಸ್, ಇವರಿಂದಿಗೆ

ನುರಿತ ನಾಯಿಯೊಂದು ಅರಿತ ಮಂಗವೊಂದು

ಬರಪ ಚಿತ್ರ:- ಫೆಮಸ್‌ನವರ "ನರ್ಗಿಸ್" ರಿಹರ್ಸಲ್, ನರ್ಗಿಸ್.

ನೋಟಿಸು

ಉಡುಪಿ ತಾಲೂಕು ಕಳ್ತೂರು ಗ್ರಾಮದ ಕುಕ್ಕುಂದಬೆಲ್ಲಿರುವ, ನೋಂಟಿ ಕುಂಬಾರಿಯು ಮಕ್ಕಳ ಸೈಕಿ ಹಿರೇಯವನಾದ ಜಲ್ಲು ಕುಂದಾರನು ಈ ಮೂಲಕ ಸರ್ವ ಜನರೀಗೆ ತಿಳಿಯಪಡಿಸುವುದೇನೆಂದರೆ: --

ನನ್ನ ತಾಯಿಗೆ ನಾನು ಮತ್ತು ಗಂಗು, ಬಿನ್ನಮ್ಮ, ಬೊಮ್ಮು ಪೋನು ಮತ್ತು ಗಿರಿಯನ್ನು ಎಂಬ 5 ಜನ ಹೆಣ್ಣು ಮಕ್ಕಳು ಕೂಡಾ ಈ ರೀತಿ 6 ಜನರು ಮಕ್ಕಳಾಗಿದ್ದು ಆಳಿಯ ಸಂಕಾನ ಕಟ್ಟು ಆಚರಿಸುವ ಒಂದೇ ಅವಿಭಕ್ತ ಕುಟುಂಬದ ಮೆಂಬರರಾಗಿರುತ್ತೇವೆ. ನಮ್ಮ ಕುಟುಂಬದಲ್ಲಿ ನನ್ನ ತಾಯಿಯು ಯೆಜಮಾನ್ತಿಯಾಗಿಯೂ, ಪಟ್ಟಾದಾರಳಾಗಿಯೂ ಯಿರುವುದಾದರೂ, ಸದ್ರಿಯವಳೀಗೆ ಯೀಗ 85 ವರುಷ ಪ್ರಾಯ ಮಿಕ್ಕಿರುವುದರಿಂದ, ನನ್ನ ಕುಟುಂಬದ ಯಾವತ್ತೂ ಆಡಳಿತೆಗಳನ್ನು ನಾನು ಚಲ್ಯಾಯುತ್ತೇನೆ. ಹೀಗಿರುತ್ತಾ, ಪ್ರಾಯಸ್ಥಳಾದ ನನ್ನ ತಾಯಿಯನ್ನು ದುರ್ಭೋದಿಸಿ, ನನ್ನ ಕುಟುಂಬವನ್ನು ಹಾಳು ಮಾಡುವ ಯಿರಾದೆಯಿಂದಲೂ, ತಮ್ಮಗಳ ಸ್ವಾರ್ಥವನ್ನು ವೃದ್ಧಿಪಡಿಸುವರಿಯೂ, ನನ್ನ ಕುಟುಂಬದವರನ್ನು ಮೋಡೆ ಹೆಸರು ಕಾಣ್ಸುವವರ ಪೈಕಿ ಕೆಲವರು ಯೇನೂ ಪ್ರತಿಫಲ ಕೊಡದೆ ವಪಡಿಯದೆ ವ ಕುಟುಂಬಕ್ಕೆ ಯೇನೂ ಪ್ರಯೋಜನವಿಲ್ಲದೆ, ನಮ್ಮ ತಾಯಿಯಿಂದ ಕೆಲವು ನೋಟುಗಳನ್ನೂ, ದಸ್ತಾವೇಜುಗಳನ್ನೂ ಸೃಷ್ಟಿಸುವ ವರಿದ್ದಾರಾಗಿ ನಾನು ಖಂಡಿತವಾಗಿ ತಿಳಿದುಬರುತ್ತೇನೆ. ಆದ್ದರಿಂದ ಸದ್ರಿ ನನ್ನ ತಾಯಿಯ ಬಾಬ್ತು ಸದ್ರಿಯವಳಿಂದ ಬರೆಸಿಕೊಳ್ಳಬಹುದಾದ ಯಾವತ್ತೂ ದಾಖ್ಲೆಗಳು, ದಸ್ತಾವೇಜುಗಳು ಕೂಡಾ ನನ್ನ ಸಾಕ್ಷಿ ವಿನಹಾ ಬರೆಸಿಕೊಂಡಲ್ಲಿ, ಸದ್ರಿಯವುಗಳು ನನ್ನ ಕುಟುಂಬದ ಮೇಲಾಗಲೀ ನನ್ನ ತಾಯಿಯ ಮೇಲಾಗಲೀ ನಿಂಧಾಗತಕ್ಕವುಗಳಲ್ಲ ಎಂಬದನ್ನು ಈ ಮೂಲಕ ತಿಳಿಸೋಣಾಗುತ್ತದೆ.

ಈ ಎಡೆ ಕೈ ಹೆಬ್ಬೆಟ್ಟಿನ ಗುರ್ತು ಸದ್ರಿ ಜಲ್ಲು ಕುಂಬಾರನ ರುಜು ಆಗಿರುತ್ತದೆ.

ಕಳ್ತೂರು, 19-11-48.

ಮಂಗಳೂರು

ಜಿಲ್ಲಾ ಕಾಂಗ್ರೆಸ್ ಕಮಿಟಿಯ ಮಹಾಸಭೆಯು--ಇದೇ ತಾ 14ರಲ್ಲು ಶ್ರೀ ಪಿ. ಲಕ್ಷ್ಮಿನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು ಶ್ರೀಗಳಾದ ಎನ್. ಎಸ್. ಕಿಲ್ಲೆ ಮತ್ತು ಎನ್. ಟಿ. ಸುವರ್ಣರು ಬಂಟ್ವಾಳ ಮತ್ತು ಮೂಲ್ಕಿ ಕೇಂದ್ರಗಳಿಂದ ಅನುಕ್ರಮವಾಗಿ ಜಿಲ್ಲಾ ಕಾಂಗ್ರೆಸ್ ಕಮಿಟಿಗೆ ಚುನಾಯಿಸಲ್ಪಟ್ಟಿರುವರೆಂದು ಸಭಾರಂಭದಲ್ಲಿ ಅಧ್ಯಕ್ಷರು ಸಭಿಕರ ಅವಗಾಹನೆಗೆ ತಂದರು. ತದನಂತರ ಗತ ವರುಷದ ಕಾರ್ಯಕಲಾಪಗಳ ವರದಿಯನ್ನು ಸಭೆಯ ನುಮತಿ ಪಡೆದಾಗಿ, ಕೆಲವು ಘಟನಾತ್ಮಕ ಅಕ್ಷೇಪಗಳ ಹೊರತು ಒಮ್ಮತದಿಂದ ಮಂಜೂರು ಮಾಡಲ್ಪಟ್ಟಿತು.

ಮರುದಿನ ಸಭೆಯು ಹಂಪನಕಟ್ಟೆಯ ಹೊಸ ಕಾರ್ಯಾಲಯದಲ್ಲಿ ಪುನ: ಕೂಡಿ ಮುಂದಿನ ವರುಷದ ಅದಾಯ ವೆಚ್ಚದ ಅಂದಾಜುಪಟ್ಟಿಯನ್ನು ಸಿದ್ಧಗೊಳಿಸಲಾಯಿತು. ನಾಲ್ಕು ಆಣೆ ಸದಸ್ಯತ್ವವು ಇನ್ನು, ಮುಂದೆ ಇಲ್ಲದಿರುವುದರಿಂದ ಸಾರ್ವಜನಿಕರಿಂದ ಸಹಾಯ ದನಿಗಾಗಿ ರೂಪಾಯಿ 5000-ಸಂಗ್ರಹಿಸಬೇಕೆಂದಾಯಿತು. ಶ್ರೀಗಳಾದ ಕೆ ಆರ್ ಕಾರಂತ್, ಜಿ. ಕೆ. ಗೋವಿಂದ ಭಟ್ ಮೊದಲಾದವರು ಜಿಲ್ಲೆಯ ಆಹಾರ ಸಮಸ್ಯೆಯ ಕುರಿತು ತಯಾರಿಸಿದ ಮನವಿಯನ್ನು ಓದಿ ಕೆಲವೊಂದು ಬದಲಾವಣೆಗಳನ್ನು ನೂಡಿ ನುಂಜೂರು ಮಾಡಲಾಯಿತು. ಸಂಜೆ ಸಭೆಯು ಪುನಃ ಸೇರಿ ಜಿಲ್ಲೆಯಲ್ಲಿ ಕೃಷಿಕರ, ಮಜೂರರ, ಸೇವಾದಳದ ಸಂಘಟನೆಗಳ ಕುರಿತು ಚರ್ಚೆ ನಡೆದು ತಕ್ಕ ಕಾರ್ಯಕ್ರಮಗಳನ್ನು ತಯಾರಿಸಲಾಯಿತು.

ಪಂಡಿತ ನೆಹರುಗಳ ಜನ್ಮದಿನೋತ್ಸವವು--ತಾ 14ರಲ್ಲಿ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಆಶ್ರಯದಲ್ಲಿ ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿ ಹಲ ಕೆಲವರ ಭಾಷಣಗಳಾದುವು. ಬಿ ಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿಯೂ ಪಂಡಿತ ಜವಾಹರಲಾಲರ ಜನ್ಮದಿನೋತ್ಸವವು ಶ್ರೀ ಮಟ್ಟಿಮಲೆ ಶಂಕರನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು.

ಗಾಂದಿ ನಿಧಿಗೆ--ಮಂಗಳೂರು ನಗರ ಸಭೆಯು ರೂಪ್ಯಾ 2500- ಕೊಡಬೇಕೆಂದು ಬಹುಮತದಿಂದ ನಿರ್ಧರಿಸಿತು

ಬ ಕ. ಜಿಲ್ಲೆಯಲ್ಲಿ ನುದ್ರಾಸು ಮಂತ್ರಿಯರು

ನುದ್ರಾಸು ಸರಕಾರದ ಕೈಗಾರಿಕೆ ಖಾತೆ ಹಾಗೂ ಸಜ್ಜರ ಖಾತೆಗಳ ಮಂತ್ರಿ ಮಾನ್ಯ ಶ್ರೀ ಎಚ್ ಸೀತಾರಾಮ ರೆಡ್ಡಿಯವರು ಇದೇ ತಾ 14ನೆ ಸಾಯಂಕಾಲ ಮಂಗಳೂರಿಗೆ ಆಗಮಿಸಿದರು. ಅಂದೇ ದಕ್ಷಿಣ ಕನ್ನಡ ಬಿ ಟೊಮೊಬ್ಯಿಲ್ ಕೆಲಸಗಾರರ ಸಂಘದ ಕಛೇರಿಗೆ ಹೋಗಿ ಪಂಡಿತ ಜವಾಹರಲಾಲ ನೆಹರೂರವರ ಭಾವಚಿತ್ರ ಅನಾವರಣ ಮಾಡಿದರು. ಮರುದಿನ ಮಂಗಳೂರು ಬಂದರ, ಕರ್ನಾಟಕ ಪೊಲಿಟೆಕ್ನಿಕ್, ಸೈಂಟ್ ಜೊಸೆಫ್ ಎಸಾಯಲವರ್ ಕೈಗಾರಿಕೆ ಶಾಲೆ, ಕಾಮನ್‌ವೆಲ್ತ್ ಹೊಸಿಯರಿ ಕಾರ್ಖಾನೆಗಳನ್ನು ಸಂದರ್ಶಿಸಿದರು. ಬಳಿಕ ಹಂಪನಕಟ್ಟೆಯಲ್ಲಿ ನಗರ ಕಾಂಗ್ರೆಸ್ ಕಮಿಟಿಯ ಹೊಸ ಕಛೇರಿಯನ್ನು ತೆರೆದು ಅಲ್ಲಿ ಮಹಾತ್ಮಾಜಿ ಮತ್ತು ಪಂಡಿತ ನಹರೂರವರ ಭಾವ ಚಿತ್ರಗಳ ಅನಾವರಣ ಮಾಡಿದರು. ಮಧ್ಯಾಹ್ನ ಶ್ರೀ ಪಿ. ಎಸ್. ಕುಡ್ವರ ಔತಣ ಆತಿಥ್ಯವನ್ನು ಸ್ವೀಕರಿಸಿದರು ಕೆನರಾ ಚೇಂಬರ್ಸ್ ಆಫ್ ಕೊಮರ್ಸ್ ಮತ್ತು ಮೋಟರು ಕೆಲಸಗಾರರ ಭಿನ್ನ ನತ್ತಳಿಗಳನ್ನು ಮಂತ್ರಿಗಳು ಪಡೆದರು. ಮ್ಯಾಲಕ, ಕೆಲಸಗಾರರ ವಿವಾದದ ವಿಷಯ ನ್ನು ಕೂಡಲೇ ಕಾರ್ಯರೂಪಕ್ಕೆ ತರಬೇಕೆಂದು ಮೋಟಾರ್ ಮ್ಯಾಲಕರನ್ನು ಎಚ್ಚರಿಸಿದರು. ಸಂಜೆ ಶ್ರೀ ರೆಡ್ಡಿಯವರು ವೆಸ್ಟರ್ನ್ ಇಂಡಿಯಾ ಹಂಚು ತಯಾರಿಸುವವರ ಸಂಘದ ಪಾರ್ಷಿಕೋತ್ಸವದ ಆಧ್ಯಕ್ಷತೆ ವಹಿಸಿ ಈ ಗಿನ ಯುಗದಲ್ಲಿ ಭಂಡವಲಗಾರರಷ್ಟೇ ಮುಖ್ಯರಿಗೂ ಪ್ರಾಧಾನ್ಯತೆ ಇದೆಯೆಂದು ಹೇಳಿ ಇಬ್ಬರೂ ಕೈಗಾರಿಕೆಯ ಸಮಾನ ಪಾಲುಗಾರರೆಂಬುದನ್ನು ಮರೆಯದೆ ವರ್ತಿಸಿದರೆ ಈ ದೇಶದ ಕೈಗಾರಿಕೆಗಳ ಅಭಿವೃದ್ಧಿ ಬೇಗನೆ ಆಗುವುದೆಂದರು. ರಾತ್ರಿ ಜಪ್ಪಿನಲ್ಲಿ ನಿರ್ಮಾಣ ಸಲಾಗಿದ್ದ ಪಶಾವಕಾರ ಆಟವನ್ನು ನೋಡಿ ನಾಲ್ಕು ಮಾತುಗಳನ್ನಾಡಿದರು. ಈ ಸಂದರ್ಭದಲ್ಲಿ ಶ್ರೀ ಎಸ್. ಎಸ್. ಕಲ್ಲೆಯವರು ಭಾಷಣವಿತ್ತರು. ಮರುದಿನ ಬೆಳಿಗ್ಗೆ ಮಾದ್ರಾಸಿಗೆ ತೆರಳಿದರು. ಇದೇ ದಿನ ಸಂಜೆ ಕೈಗಾರಿಕಾಭಿವೃದ್ಧಿ ಖಾತೆಯ ಹಾಗೂ ಮಧ್ಯ ನಿರೋಧ ಖಾತೆಯ ಮಂತ್ರಿ ಡಾಕ್ಟರ್ ಎಸ್. ಗುರುಸಾದಮಂ ಆವರು ಕುಂಬಳೆ ಕೈರ್ಪಾವನ್ನು ಸಂದರ್ಶಿಸಿದರು. ಆಗ ಅಲ್ಲಿಯ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಆಮೃತಕೈ ಜ್ಞರಾಯರು ಒಂದು ಮಾನಪತ್ರವನ್ನರ್ಪಿಸಿದರು. ಮಂತ್ರಿಗಳು ಉತ್ತರವೀಯುತ್ತಾ ಎಲ್ಲಾ ಕೇಳಿಕೆಗಳ ಮೊದಲು ಆನ್ನ ಬಟ್ಟೆಮತ್ತು ಉಳಕೊಳ್ಳಲು ಮನೆಗಳು ಇವು ಮೂಲ ಅವಶ್ಯಕತೆಗಳೆಂದರು.

ಉಡ್ಪಿ ಡಿ ಮು. ಕೋರ್ಟಿನಲ್ಲಿ

O. P. No. 38/1948

ಮುತ್ತಕ್ಕ ಸೆಟ್ಟಿ, ಬಿಡುಗು ಸೆಟ್ಟಿಯ ಮಗಳು, ಉಳಿಯಾರಗೋಳಿಗ್ರಾಮ

--ಅರ್ಜಿದಾರಳು,

ಮತ್ತು

1 ಭುಜಂಗ ಭಾರತಿ, 2 ಗೋಪಾಲ ಸೆಟ್ಟಿ, ಅರ್ಜಿದಾರಳ ಮಕ್ಕಳು 96/98 Bora Bazar, 2nd Floor, Bombay.

ಅರ್ಜಿದಾರಳ ಮಗನ ಮೆಲ್ಕಿರ ಸರ್ಜೋದರ ಶಿವರಾಮ ಚಂದು ಯಂಬನನು ತಾರೀಕು 23-5-1948ರಲ್ಲಿ ಬೊಂಬಾಯಿಯಲ್ಲಿ ಮೃತಪಟ್ಟಿರುವುದರಿಂದ ಸದ್ರಿಯವರಿಗೆ, ಬೊಂಬೆ ಫೀಮಸ್ ಟ್ಯಾಕ್ಸ್ ಯಸ್ಸೂರೆನ್ಸ್ ಕಂಪೆನಿ ಲಿಮಿಟೆಡ್, ಇದರಿಂದ ಪೊಲಿಸಿ ನಂಬ್ರ 524ರ ಸ್ಕಕಾರ ಬರತಕ್ಕ ರೂಪಾಯಿ 1930-2-0 ವ್ಸಲು ನೂಡುವ ಹಾಗೆ ತನಗೆ ವಾರ್ಸಿ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರಳು ಪಾಕ್ಷ್ಯ ಮಾಡಿದ ಮೇಲ್ಕಂಡ ಅರ್ಜಿಯು ತಾರೀಕು 27.12.1948ಕ್ಕೆ ತನ್ನಿಗೆ ಯಿಟ್ಟಿರುತ್ತದೆ. ಆಕ್ಷೇಪಣೆಯಿದ್ದರೆ ಸದರಿ ತಾರೀಕಿನ ಬೆಳಿಗ್ಗೆ 10 ಗಂಟೆಗೆ ಈ ಕೋರ್ಟು ಮುಂದೆ ಜ್ಞಾಪಿಸಲು ಕೊಳ್ಳಕ್ಕದ್ದು.

K L. Aithal,
Vakil for Petitioner.

ತಾ. 24-11-1948. ಉಡ್ಪಿ.



ಜಗತ್ತಿನೆಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್

ದೇವಾನುಮೋದಿತ ಔಷಧ



ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಆತ್ಯಗತ್ಯವಾಗಿದೆ ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿನೆಲ್ಲೆಲ್ಲಾ ಏಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ' ಔಷಧಿ ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಪೀಡಿಸುವ ವಿವಿಧ ವ್ಯಾಧಿಗಳ ಬಲ್ಲಿ ಸ್ವವಶಗಿಸಿ ಅವುಗಳ ಮೂಲವನ್ನೇ ಕಿತ್ತು ಜಡುವಂತೆ ಕುದ್ದು ವನಸ್ಪತಿ ನಿಷ್ಣಮೂಲಿಕೆಗಳಿಂದಲೇ ಉತ್ಪತ್ತಿಕ್ತ ರೀತಿಯಿಂದ ಹೊಲ್ಲಂಡ ದೇಶದಲ್ಲಿ ಪ್ರಮುಖ ಕಂಪೆನಿಯಿಂದ ತಯಾರಿಸಲ್ಪಡುತ್ತಿದೆ. ವಿಷಮಜ್ವರ, ಪಿತ್ತಜ್ವರ, ನಿಮೋನಿಯ, ಶೀತಜ್ವರ ಮತ್ತು ನುಳೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಬೇರೊಂದಿಲ್ಲ. ಮೂತ್ರಕೋಶ, ಬದುಮೂತ್ರ-ನೀ ಮೂತ್ರ, ಆನ್ನಕೋಶ, ಕಲಿಜಿಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರತಿಕ್ರಿಸಿ, ಈ ರೋಗಗಳ ಮೂಲವನ್ನೇ ಕಿತ್ತು ಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂದಲು ಕ್ಷಯ, ಮೇಪವ್ಯಾಧಿ, ಅಜೀರ್ಣ, ಮುಟ್ಟಿನ ಅಕ್ರಮಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪಿಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ಏರು ಏರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ವೇನೆಯು ಶಸ್ತ್ರ ಚಿಕಿತ್ಸೆ ಅಥವಾ ಮಾಡದೆಲೆ ನಿರ್ನಾಮವಾಗುವುದಕ್ಕೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಘೆರಯುವುದರಲ್ಲಿ ಸಂದೇಹವೇನಿದೆ! ಕಫವೋವು ನೆಗಡಿಯಿಂದಲೇ ಆಗಿರಲಿ, ಜ್ವರದಿಂದಲೇ ಆಥವಾ ನರಗಳ ಬಲಹೀನತೆಯಿಂದಲೇ ಆಗಿರಲಿ-ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲವಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳಹುಟ್ಟಿನೋವು, ಕಿವಿಗಳ ಉಪದ್ರವ ಹೆಂಗಸರ ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆ ನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟಗಾಯಗಳು ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗ ಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು-- ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2-8-0 ವಿ. ಪಿ. ಬೇರೆ. ಡಜನ್ ಶೀಸೆಗಳಿಗೆ ವಿ. ಪಿ ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸೂಲ್ ಶೀಸೆ 1ಕ್ಕೆ 3-8-0 ವಿ. ಪಿ. ಬೇರೆ. ಡಜನ್ ಕೆಪ್ಸೂಲುಗಳಿಗೆ ರೂ 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಪ್ರಪರ್ ಬಾಟ್ಲು 1ಕ್ಕೆ ರೂ. 5-0-0 ವಿ ಪಿ. ಬೇರೆ ಒಂದುಡಜನ್ ಪ್ರಪರ್ ಬಾಟ್ಲುಗಳಿಗೆ ರೂ. 60-0-0 ವಿಪಿ. ಪಿ ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಶೀಸೆ 1ಕ್ಕೆ ರೂ 1-8-0 ಡಜನ್ ಶೀಸೆಗಳಿಗೆ ರೂ. 18-ವಿ ಪಿ.ಮಾಫ್.

ಪ್ರೈಶಂಸನಾ ಪತ್ರ--ನಾನು ನಿಮ್ಮ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ಆಳ ವರ್ಷಗಳಿಂದ ನರ್ವ ವಿಧದ ವ್ಯಾಧಿಗಳಿಗೆ ಕೊಟ್ಟು ನೋಡುತ್ತಾ ಬಂದಿದ್ದೇನೆ. ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿದ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಸ್ವಕಿಯೊಬ್ಬರ ಎಲ್ಲ ಚೀಟಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯೆಂದೇ ಹೇಳಬಹುದು. ಇಂಥ ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿವೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿವೆ.

--ದಿ ಎಕ್ಲಿಪ್ಸ್ ಡಿಸ್ಟಿಬ್ಯೂಟಿಂಗ್ ಸಜೆನ್ಸಿ,
ದಾಹನು ರೋಡು, ಬಿ. ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I Rly.

ಬೊಂಬಾಯಿ ಸ್ವಾಕೆಸ್ಟರು:--ಲಕ್ಷ್ಮಾಲಾ ಲಿಮಿಟೆಡ್, 25, ಹಿಲ್ಟ್ ಹನುಮಾನ್ ಲೇನ್, ಬೊಂಬಾಯಿ 2.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಪೋಷಣೆಸ್ಯ ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ದೃಷ್ಟಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮಸ್ತ ಔಷಧಿಗಳು ದೊರೆಯುತ್ತವೆ.

-- ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆಯುತ್ತವೆ. ಕ್ಯಾಶ್ ಕೊಟ್ಟು ಖರೀದಿ ಮಾಡಿದಲ್ಲಿ ಕಡಿಮೆಗೆ ಕೊಡಲಾಗುವುದು. ಔಷಧಿ ರವಾನಿಸಬಹುದು. (1) ಉಡುಪಿ ವಿಜಯ ಟಿರು:—ನವಭಾರತ ಬುಕ್ ಡಿಪೊ, ಜೊಂಬಾಯಿ ವಿಜಯ ಟಿರು:—ಪೂರ್ಣಿಲಾಲ್ ಸ್ಯೂರ್ಸ್, ಕಮಿಸ್ಟ್ 183, ಸುಕಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋಪ್ ಎದುರುಗಡೆ, ಪರೇಲ್, (3) ಜನರಲ್ ಸ್ಟೋರ್ಸ್, ಕಮಿಸ್ಟ್ಸ್, ಜಿ. ಐ. ಪಿ. ಪೂಟಂಗಾ.

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

ಸ್ವತಂತ್ರ ಜೀವನೋಪಾಯ	(ಪ್ರಹಸನ)	ಕೆ. ಎಚ್. ಶೆಟ್ಟಿ.	0	3	0
ಸಂಶಯ ಪಿಶಾಚಿ	(ನಾಟಕ)	ಕೆ. ಕೆ. ಶೆಟ್ಟಿ.	0	8	0
ಕುಶಲವ	(,,)	,,	0	6	0
ವ್ಯಭಿಚಾರಿಣಿ ಯಾರು	(,,)	,,	1	0	0
ಹೆಂಡ್ತಿ ಗಂಡನಾದರೆ	(ಪ್ರಹಸನ)	,,	0	4	0
ಪುರುಷವಧು	,,	,,	0	4	0
ಸನ್ಯಾಸಿಯ ಸೋಗಿನಲ್ಲಿ	(ಕಾದಂಬರಿ)	,,	0	8	0
ದೇಶಭಕ್ತ	(ನಾಟಕ)	,,	1	4	0
ಪ್ರೇಮವಿಜಯ	(,,)	,,	1	0	0
ನಾಡ ಕತೆಗಳು	(ಕಥಾಸಂಕಲನ)	ವಿವಿಧ ಕತೆಗಾರರು	0	3	0
ಮಧುವನ	(,,)	,,	3	0	0
ಕಾವ್ಯ ಸಾಮ್ರಾಜ್ಯ	(ಕವಿತಾಸಂಕಲನ)	ವಿವಿಧ ಕವಿಗಳು	1	4	0
ನಂದಾದೀಪ	(ಸಣ್ಣ ಕತೆಗಳು)	ಕೊರಡ್ಕಲ್	0	14	0
ಭಾವತೀರ್ಥ	(,,)	,,	0	14	0
ಮೂರು ಪ್ರಹಸನಗಳು	(ಪ್ರಹಸನಗಳು)	,,	0	14	0
ನಾರೀ ಹೃದಯ	(ಕತೆಗಳು)	ಎಸ್. ಎಲ್. ಸುಬ್ರಹ್ಮಣ್ಯಂ	0	14	0
ಸೇವಾಪಥ	(ನಾಟಕ)	,,	0	8	0
ಭಾರತದಲ್ಲಿ ಜಾತಿಭೇದ	(ಸ್ವಬಂಧ)	,,	1	0	0
ರಂಗಭೂಮಿ	(ನಾಟಕ)	ಎಸ್. ವೆಂಕಟರಾಜ.	0	8	0
ಆಕಾಶಗಂಗೆ	(ಕತೆಗಳು)	,,	1	12	0
ಕವಿತಾಕಾಮಿನಿ	(ಕವಿತೆಗಳು)	ಎಸ್. ವೆಂಕಟರಾಜ	2	0	0
ಸತ್ಯಸಾಗರ	(ಕತೆಗಳು)	,,	0	12	0
ಪ್ರಕಾಶ	(ನಾಟಕ)	ಸರಸ್ವತಿ ಬಾಯಿ ರಾಜವಾಡೆ	2	4	0
ಕದಂಬ	(ಕತೆಗಳು)	,,	1	4	0
ನಗೆನೋಟಗಳು	(ವಿನೋದ ಕತೆಗಳು)	ಕೆ. ವಿಟ್ಠಲ ಶೆಣೈ	0	14	0
ಅನ್ನದೇವರು ಮತ್ತು ಇತರ ಕತೆಗಳು		ಕಯ್ಯಾರ ಕಿಞ್ಞಣ್ಣ ರೈ	1	0	0
ವಿಷ್ಣುವಿನ ದಶಾವತಾರಗಳು	(ಪದ್ಯಬಂಧ)	ಎಂ. ವಿ. ಹೆಗ್ಡೆ	0	12	0
ಸ್ವರಾಜ್ಯವಿಜಯ	(ಯಕ್ಷಗಾನ ನಾಟಕ)	,,	0	8	0
ಸ್ವಾತಂತ್ರ್ಯವೀರ ಸಾವರ್ಕರರು	(ಜೀವನ ಚರಿತ್ರೆ)	ಇಂದಿರಾಬಾಯಿ	1	4	0
ಜೀವನಸಂಗ್ರಾಮ	(ನಾಟಕ)	ಪಿ. ಶೇಷ ಶೆಟ್ಟಿ	1	8	0
ಜವಿನ್ಸಾರ	(ಕಾದಂಬರಿ)	ಹೊಸಮನೆ ಗುಡ್ಡಪ್ಪ	1	8	0

ಪ್ರತಿಗಳಿಗೆ:— ನವಭಾರತ ಪುಸ್ತಕ ಭಂಡಾರ, ಉಡುಪಿ ದ. ಕ.

ಕಾರ್ಕಳ. ಪಶ್ಚಿಮ ಕರಾವಳಿ ಸಿಟ್ಟೊ ಕ್ರಿಕೆಟ್ ಪಂದ್ಯಾಟ — ಇದೇ ತಾ 16ರಲ್ಲು ಶ್ರೀ ಬಿ. ಬಿ. ಶೆಟ್ಟಿ, ಎಡ್ವಕೇಟ್, ಅವರ ಅಧ್ಯಕ್ಷತೆಯಲ್ಲಿ ಕಾರ್ಕಳ ಕ್ರಿಕೆಟ್ ಕ್ಲಬ್ ಕಮಿಟಿಯ ಸಭೆಯು ಜರಗಿತು. ದಶಂಬರ ತಿಂಗಳಲ್ಲಿ ಪಶ್ಚಿಮ ಕರಾವಳಿ ಸಿಟ್ಟೊ ಕ್ರಿಕೆಟ್ ಸ್ಪರ್ಧೆಯನ್ನು ಜರಗಿಸ ಬೇಕಾಗಿ ನಿರ್ಣಯವಾಯಿತು. ಈ ಪಂದ್ಯಾಟ ನಲ್ಲಿ ಕ್ರಿಕೆಟ್ ಕ್ಲಬ್ಬುಗಳೂ ಪಾಸಿಗೀ ಟೀಮುಗಳೂ ಪ್ರವೇಶ ಹಾಕಲು ರೂಪಾಯಿ ಎಂಟರಂತೆ ಕೊಟ್ಟು ಭಾಗವಹಿಸಬಹುದು. ಉಮೇದ್ವಾರಿ ಟೀಮುಗಳು ತಮ್ಮ ಅರ್ಜಿಗಳನ್ನು ಇದೇ ತಾ 30ರೊಳಗಾಗಿ ಕಳುಹಿಸ ಬೇಕು. ರೂಪಾಯಿ 150/- ಬೆಲೆಯ ರೋಲಿಂಗ್ ಸಿಟ್ಟೊ ಕಪ್ಪು ಹಾಗೂ ಇತರ ಬೆಳ್ಳಿಯ ಪದಕಗಳನ್ನು ಗೆದ್ದವರಿಗೆ ಬಹುಮಾನವಾಗಿ ಕೊಡಲಾಗುವುದು.

ಎರ್ಮಾಳು—ತಾ 11-12-48ನೆ ಶನಿವಾರ ರಾತ್ರಿ ಎರ್ಮಾಳಿನ ಬೋರ್ಡು ಶಾಲಾ ವಠಾರದಲ್ಲಿ ಗಾಂಧಿಜೀಯವರ ಸ್ಮಾರಕ ನಿಧಿ ಸಂಗ್ರಹದ ಸಲುವಾಗಿ ಉಡುಪಿಯ ಯಕ್ಷಗಾನ ಕಲಾ ಮಂಡಲದವರು ಯಕ್ಷಗಾನ ಕೂಟವೊಂದನ್ನು ಜರಗಿಸಲಿರುವರು. ಮಹಾಜನರು ಯಕ್ಷ ಸಹಾಯವನ್ನಿತ್ತು ಪ್ರೋತ್ಸಾಹಿಸಬೇಕಾಗಿ ವಿನಂತಿಯಿದೆ.

ಬ್ರಹ್ಮಾವರ—ದಲ್ಲಿ ಜಿಲ್ಲಾ ಆಯುರ್ವೇದ ಪರಿಷತ್ತು ಇದೇ ತಾ 26ರಿಂದ 28ರ ತನಕ ಶ್ರೀ ಎಸ್. ಎಸ್. ಸುಬ್ರಹ್ಮಣ್ಯ ಶಾಸ್ತ್ರಿ (ನ್ಯೂಸೂರು) ಅವರ ಅಧ್ಯಕ್ಷತೆಯಲ್ಲಿ ಜರಗುವುದು. ಶ್ರೀ ಕೆ. ಅರ್. ಕಾರಂತ್, ಎಮ್. ಎಲ್. ಎ. ಅವರು ಪರಿಷತ್ತಿನ, ಶ್ರೀ ಎಮ್. ವಿ. ಶಾಸ್ತ್ರಿಗಳವರು ಪ್ರದರ್ಶನದ ಉದ್ಘಾಟನೆಯನ್ನು ನೆರವೇರಿಸಲಿರುವರು. ಐದಾರು ತಿಂಗಳುಗಳ ಪೂರ್ವ ಸಿದ್ಧತೆಯಿಂದ ಉತ್ಸಾಹಿ ಸ್ವಾಗತ ಸಮಿತಿಯ ನೇತೃತ್ವದಲ್ಲಿ ಜರಗಲಿರುವ ಈ ಪರಿಷತ್ತು ಯಶಸ್ವಿಯಾಗಲೆಂದು ಹಾರೈಕೆ.

ನಿಡ್ಡೋಡಿ—ಇಲ್ಲಿಯ ಪ್ರಮುಖ ಗ್ರಾಮ ಸೇವಾ ವ್ಯಕ್ತಿಗಳೂ ಸಂಘಾಯತ ಬೋರ್ಡು ಪ್ರೆಸಿಡೆಂಟರೂ, ಸತ್ಯನಾರಾಯಣ ಶಾಲೆಯ ಆಡಳಿತಗಾರರೂ, ಆಗಿದ್ದ ಶ್ರೀ ನಿಡ್ಡೋಡಿ ಭಾವನಾಲಾಯಣ ಸೆಟ್ಟರು ಇದೇ ತಾ 11ರಲ್ಲು ಅಕಸ್ಮಿಕವಾಗಿ ದೈವಾಧೀನರಾದರು. ಇವರ ಆತ್ಮಕ್ಕೆ ಭಗವಂತನು ಚಿರ ಶಾಂತಿಯನ್ನಿತ್ತಾನೆಯಲಿ.

ಅಮೃತಾಂಜನ ಲಿಮಿಟೆಡ್ ಮದರಾಸು. ಜೊಂಬಾಯಿ ಮತ್ತು ಕಲ್ಕತ್ತ.

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಸೊಬಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಜನಮತ

ಆಹಾರ ನಿಯಂತ್ರಣದ ಪರಿಣಾಮ

ಮಹಾತ್ಮಾ ಗಾಂಧಿಯವರ ಅಭಿಪ್ರಾಯದಂತೆ ತೆಗೆದು ಹಾಕಿದ್ದ ನಿಯಂತ್ರಣವನ್ನು ಪುನಃ ಹೇರಿ ಬೇಸಾಯದ ಕಸಬನ್ನೇ ನಿಯಂತ್ರಿಸಿದಂತಾಯಿತು. ಲಕ್ಷಾಂತರ ರೂಪಾಯಿ ಪಡ್ಡು ಮಾಡಿ "ಆಹಾರ ಧಾನ್ಯ ಬೆಳೆಸಿರಿ" ಎಂದರೆ ಬೆಳೆಯಾಸ್ತಿ ಯಾಗಲಾರದು. ಒಕ್ಕಲಿಗನು ಬೆಳೆಸಿದ ಉತ್ಪತ್ತಿಗೆ ಸರಿಯಾದ ಪ್ರತಿಫಲ ಸಿಕ್ಕಿದರೆ ಮಾತ್ರ ಜಾಸ್ತಿ ಬೆಳೆಸಬಹುದು. ಈಗಾಗಲೇ ಹಳ್ಳಿಯಲ್ಲಿ ಬೇಸಾಯದ ಬಗ್ಗೆ ತುಂಬಾ ಅನಾದರ ಉಂಟಾಗಿದೆ. ಮುಂದಿನ ಸುಗ್ಗಿ, ಕೊಳಕ್ಕೆ ಬೆಳೆಯು ಕಸ್ಟಪಟ್ಟು ಬೆಳೆಸುವ ಬೆಳೆಯಾದ್ದರಿಂದ ಒಕ್ಕಲಿಗನು ಉದಾಸೀನನಾಗಿದ್ದಾನೆ. ಅಕ್ಕಿಗಿಂತ ಉದ್ದು, ಹೆಸರು, ಮೆಣಸು, ಶುಂಠಿ, ಬೆಲ್ಲ ಇತ್ಯಾದಿಗಳಿಗೆ ವಿಪರೀತ ಬೆಲೆಯು ಇರುವುದರಿಂದ ಅವನ್ನು ಬೆಳೆಸುವುದು ಎಷ್ಟೊ ಉತ್ತಮ ಎಂಬ ಅಭಿಪ್ರಾಯವಾಗಿದೆ. ಈ ಬೆಳೆಗೆ ಹೆಚ್ಚಿನ ಸ್ವಯಾಸವೂ, ಖರ್ಚೂ ಯಿಲ್ಲ. ನಿಯಂತ್ರಣದ ಕಾನೂನಿನ ಕಠೋರತೆಯನ್ನು ಅಧಿಕಾರಿಗಳು ವಿಪರೀತವಾಗಿ ವರ್ತಿಸಿ, ಒಕ್ಕಲಿಗನನ್ನು ಭಯಗೊಳಿಸುವುದುಂಟು. ಸ್ಪೋರಿನ ವಿಜಂಟರುಗಳು ಮುಂಡಿ ತೂಕ ಭರ್ತಿಯಿದ್ದರೂ ಲಾಭಬಾಸೆಯಿಂದ ಸರಾಸರಿ ಕುಂದ್ಲು ಪಾಕುಮಾಡ್ತಾನೆ. ಆ ಮೇಲೆ ಅಕ್ಕಿ ಬರೀ ದಿಯ ಬಗ್ಗೆ ಚಿಕ್ಕ, ಚಿಕ್ಕ ವಟಾಯಿಸುವ ಬಗ್ಗೆ ಊರ ಮುಖ್ಯ ಪಟ್ಟಣಕ್ಕೆ ಹೋಗಿ ಒಬ್ಬನ ವಿಜರ್ಜು, ಗಾಡಿ ಬಾಡಿಗೆ, ಅಕ್ಕಿ ತೂಕದ ಬಗ್ಗೆ ಎರಡು ಮೂರು ದಿನ ಕಾಯಿವುದು, ಈ ವೆಚ್ಚವನ್ನೆಲ್ಲಾ ನೋಡುವಾಗ ಒಕ್ಕಲಿಗನಿಗೆ ಸಿಕ್ಕುವುದು ಮುಡಿಗೆ ಸುಮಾರು 9-8-0 ರೂಪಾಯಿಯೆ ಆಗಿದೆ. ಒಕ್ಕಲಿಗನಿಗೆ ಬೇಕಾಗುವ ಸಾಮಾನಿಗೆ ಈಗಲೂ ವಿಪರೀತ ಕ್ರಯ ಕೊಟ್ಟೇ ತೀರಬೇಕು. ಹಳ್ಳಿಯೇ ದೇಶೋನ್ನತಿಯ ಮೂಲವೆಂದ ಮೇಲೆ ಹಳ್ಳಿಯವರ ಮತವನ್ನು ಕೇಳಿಕೊಳ್ಳದೆ, ಪೇಟೆ, ಪಟ್ಟಣ ಜನರ ಅಭಿಪ್ರಾಯದಂತೆ ನಿಯಂತ್ರಣ ಹೇರಿ ಒಕ್ಕಲಿಗನಿಗೆ ಸರಕಾರವು ಅನ್ಯಾಯಮಾಡಿದೆ. [illegible] ಪಾಲು ಜನಸಂಖ್ಯೆಯಿರುವುದು ಹಳ್ಳಿಯಲ್ಲಿ. ದೊಡ್ಡ ದೊಡ್ಡ ಮಂತ್ರಿಗಳು ಪೇಟೆ ಪಟ್ಟಣಗಳಲ್ಲಿ ಸಂಚಾರ ಮಾಡಿ ಅಭಿಪ್ರಾಯ ಕೇಳುವುದು ವ್ಯಾಪಾರಸ್ಥರಲ್ಲಿ ಮತ್ತು ಉದ್ದಿಮೆದಾರರಲ್ಲಿ. ಹೀಗಾದರೆ ಜನತೆಯ ಉದ್ಧಾರವಾಗುವುದೇ? ಕಾಂಗ್ರೆಸ್ ಸರಕಾರದ ಮೇಲೆ ಈಗಾಗಲೇ ಹಳ್ಳಿಯ ಜನತೆಗೆ ವಿಶ್ವಾಸವು ಕಡಿಮೆಯಾಗುತ್ತಾ ಬಂದಿದೆ. ಈ ಕಾರಣದಿಂದಲೇ ಮಹಾತ್ಮ ಗಾಂಧಿಯವರು ಸರ್ವಥಾ ಒಬ್ಬ ರಹಿತನು ಕೇಂದ್ರ ಸರಕಾರದ ಮುಖ್ಯ ಮಂತ್ರಿಯಾಗಿದ್ದು, ಈಗಿನ ಮುಖ್ಯ ಮಂತ್ರಿಗಳು ಅತನ ಸೇವ್ಯರಾಗಬೇಕೆಂದು ತನ್ನ ಭಾಷಣದಲ್ಲಿ ಹೇಳಿರುವುದು.

-ಬೋಳ್ಳ ಕೃಷ್ಣ ಶೆಟ್ಟಿ.

1949ನೇ ಇಸವಿಯ ತರಹವಾರು

ಡೈರಿಗಳು

ದೊರೆಯುತ್ತವೆ.

(1) ನವಭಾರತ ಬುಕ್ ಡಿಪೊ, ಉಡುಪಿ
(2) ನವಯುಗ ಪ್ರೆಸ್, ಉಡುಪಿ

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವಿಸ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಶೇಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪತ್ಯ:—ಹರಿವೀಜಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೬—೦—೦. ಪೋಷ್ಟ ಚಾರ್ಜು ೧೫ ಆಣೆ.

ಮಾಲಕರು:—ಹಾಲಪ್ಪಾ ಹಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ-

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗವಗ್ಗ ಬಾಗಲಕೋಟೆ ಧಾರವಾಡ ವಿಜಾಪುರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೇರಿ

ಡಾವಣಗೇರಿ:—ಡಾವಣಗೇರಿ ಪ್ರೆಸ್ಸ್ ಆರ್ ಎಲ್ ಕಮಲಾಪುರ, ಕೆಮಿಸ್ಟ್, ಹಾವೇರಿ ಬ್ಯಾಡಗಿ

ಗೊನೋರಿಯೊ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರವ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಕಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಕೊಲಿಕ ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಜರ್ಥಕೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ನೆಡಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಚೀಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸಿಖಾರ, ಕುಂಬಳಕಾಯಿ, ಒಳೈಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೪ ಆಣೆ

ಏಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೇರಿ ಪ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೇರಿ.

ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಜ್ಜು ಹಾಲಾಗುತ್ತೆ

ಹೆರಿಗೆ ಆಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಬೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಅಳಿಸ್ಕಿಕವಾಗಿ ಸೂನಾ ವಿಕಾರಗಳುಂಟಾಗುತ್ತವೆ. ಕಸಬೀಳದೆ ಯಾ ಅವರ ಉಳಿದು ಜ್ವರ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇದರಿಂದ ಪ್ರಲಾಪಸಿನ್ನು, ಮೂಲನಿರೋಧ, ಸ್ತನಗಳ ಬೀಗು, ನಿಸ್ರಾಣಾಶ, ಪಾಂಡು, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಗಳು ಕಜಬೋರತ್ತವೆ ವೈದ್ಯ, ಡಾಕ್ಟರ, ಸರ್ಜನರೆ ಬರೆಸಿ ನೂರಾರು ರೂಪ್ಯಾ ಖರ್ಚು ಮಾಡಬೇಕಾಗುತ್ತದೆ. ಆ ಯೋಲೂ ದೈವೇಚ್ಛೆ ಎಂದು ಅದೃಷ್ಟ ಪರೀಕ್ಷೆ!

ಆದರೆ ಬಾಣಂತಿತನದಲ್ಲಿ ನಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧ ವಾದ 'ಪ್ರಸೂತಾಮೃತ'ವ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ಪಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ತಮ್ಮ ಗೃಹಲಕ್ಷ್ಮಿಯ ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ.

ಕವಿಪ್ರತೀಯ ಕೇಶಕಲಾಪ, ತಂಪು ಮೆಮಳು, ಶುಭ್ರ ನೇತ್ರಗಳನ್ನು ಪೊಂದಲು ಬಹು ಗುಣಯುಕ್ತ ಆಮಲಕೀ ತೈಲ ಯಾ ಹಿಮಸಾಗರ ತೈಲಗಳಲ್ಲೊಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಬೈಲೂರು ಕಾಂಗ್ರೆಸ್ ಸೇವಾದಳ

ದ ದ್ವಿತೀಯ ವಾರ್ಷಿಕೋತ್ಸವವು ತಾ 18-11 48ನೇ ಆದಿತ್ಯವಾರ ಡಿ. ಕೆ. ಜಿಲ್ಲಾ ಕಾಲ್ಕ್ಯೂ ಶ್ರೀ ಯಸ್. ಆರ್. ಕೃಷ್ಣಾಎಂ-ಎ, ಬಿ. ಎ ಯಸ್, ಇವರ ಅಧ್ಯಕ್ಷತೆಯಲ್ಲಿ ಉತ್ಸಾಹದಿಂದಾಚರಿಸಲ್ಪಟ್ಟಿತು. ಶ್ರೀ. ಬಿ. ಕೇಶವ ಕಿಣಯವರ ಸ್ವಾಗತ ಭಾಷಣವಾದ ಮೇಲೆ ಸೇವಾ ದಳದ ಕಾರ್ಯದರ್ಶಿಯವರು ನಂದಿವಾಚನ ಮಾಡಿದರು. ಸೇವಾ ದಳದವರ ಕವಾಯತು ಪ್ರದರ್ಶನಗಳಾದುವು. ರಾಜಕೀಯ ಲಾವಣಿಗಾರ ಶ್ರೀ. ಬಿ. ರಾಮದಾಸಾಚಾರ್ಯ ನುತ್ತು ಪಾರ್ಟಿಯವರು 'ಸ್ವರಾಜ್ಯತುಳು ಲಾವಣಿ' ಹಾಡಿದರು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಕೆ ಕೆ. ಸೆಟ್ಟರು ಪಳ್ಳಿಗಲ್ಲಿ ಹಬ್ಬರುವ ಅಂಧಶ್ರದ್ಧೆ, ನಿಜಾರರಾಜ್ಯ ವಿಧೇಯತೆ ಮತ್ತು ಅವಶ್ಯಕತೆಗಳನ್ನು ನಿದರ್ಶನ ಕೊಟ್ಟು ವರ್ಣಿಸಿ, ಈ ದುಃಖಿತ ನಿವಾರಣೆಗೆ ಸೇವಾ ದಳದವರೂ ಊರಜನತೆಯೂ ಪ್ರಯತ್ನಿಸಬೇಕೆಂದರು. ಶ್ರೀ. ಎಸ್. ಯಸ್ ಕಲ್ಲೆಯವರು ಸ್ವಾತಂತ್ರ್ಯ ಸಂಪಾದನೆ, ಸ್ವತಂತ್ರ ಭಾರತದ ಇಂದಿನ ಸ್ಥಾನ, ಇತ್ಯಾದಿಗಳ ಸೆನಪನ್ನು ಮಾಡಿಕೊಟ್ಟು, ಸ್ವತಂತ್ರ ಭಾರತದಲ್ಲಿ ಶ್ರಮಿಯೂಬ್ಬನ ಕರ್ತವ್ಯವೇನೆಂಬುದನ್ನು ತಿಳಿಸಿ ಭಾಷಣವನ್ನಿತ್ತರು. ಶ್ರೀ ಕೃಷ್ಣಾರವರು ತನ್ನ ಅಧ್ಯಕ್ಷ ಭಾಷಣದಲ್ಲಿ, "ಈ ನೊಡಲು, ನಮ್ಮ ದೊರನ್ನು ಜೀರಲು ಬ್ರಿಟಿಷರಿದ್ದರು; ಈಗ ನಮ್ಮವರೇ ಆದ ಸರಕಾರವಿದೆ; ಜನರು ತಮ್ಮ ಹೊಣೆಗಾರಿಕೆಗಳನ್ನರಿತು ಪರ್ತಿಸಬೇಕು" ಎಂದು ಸೂಚಿಸಿ, ಇಂತಹ ಸಮಾರಂಭಗಳ ಆವಶ್ಯಕತೆಯ ಕುರಿತು ಅಭಿಪ್ರಾಯ ಪಟ್ಟರು. ಶ್ರೀ. ಎಸ್. ಯಸ್ ಕಲ್ಲೆಯವರು ಸ್ವಾತಂತ್ರ್ಯ ಸಂಪಾದನೆ, ಸ್ವತಂತ್ರ ಭಾರತದ ಇಂದಿನ ಸ್ಥಾನ, ಇತ್ಯಾದಿಗಳ ಸೆನಪನ್ನು ಮಾಡಿಕೊಟ್ಟು, ಸ್ವತಂತ್ರ ಭಾರತದಲ್ಲಿ ಶ್ರಮಿಯೂಬ್ಬನ ಕರ್ತವ್ಯವೇನೆಂಬುದನ್ನು ತಿಳಿಸಿ ಭಾಷಣವನ್ನಿತ್ತರು. ಶ್ರೀ ಕೃಷ್ಣಾರವರು ತನ್ನ ಅಧ್ಯಕ್ಷ ಭಾಷಣದಲ್ಲಿ, "ಈ ನೊಡಲು, ನಮ್ಮ ದೊರನ್ನು ಜೀರಲು ಬ್ರಿಟಿಷರಿದ್ದರು; ಈಗ ನಮ್ಮವರೇ ಆದ ಸರಕಾರವಿದೆ; ಜನರು ತಮ್ಮ ಹೊಣೆಗಾರಿಕೆಗಳನ್ನರಿತು ಪರ್ತಿಸಬೇಕು" ಎಂದು ಸೂಚಿಸಿ, ಇಂತಹ ಸಮಾರಂಭಗಳ ಆವಶ್ಯಕತೆಯ ಕುರಿತು ಅಭಿಪ್ರಾಯ ಪಟ್ಟರು. ಶ್ರೀ. ಬಿ. ಕೇಶವ ಕಿಣಯವರು ಸ್ವಾಗತ ಭಾಷಣವಾದ ಮೇಲೆ ಸೇವಾ ದಳದವರ ಕಾರ್ಯದರ್ಶಿಯವರು ನಂದಿವಾಚನ ಮಾಡಿದರು. ಸೇವಾ ದಳದವರ ಕವಾಯತು ಪ್ರದರ್ಶನಗಳಾದುವು. ರಾಜಕೀಯ ಲಾವಣಿಗಾರ ಶ್ರೀ. ಬಿ. ರಾಮದಾಸಾಚಾರ್ಯ ನುತ್ತು ಪಾರ್ಟಿಯವರು 'ಸ್ವರಾಜ್ಯತುಳು ಲಾವಣಿ' ಹಾಡಿದರು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಕೆ ಕೆ. ಸೆಟ್ಟರು ಪಳ್ಳಿಗಲ್ಲಿ ಹಬ್ಬರುವ ಅಂಧಶ್ರದ್ಧೆ, ನಿಜಾರರಾಜ್ಯ ವಿಧೇಯತೆ ಮತ್ತು ಅವಶ್ಯಕತೆಗಳನ್ನು ನಿದರ್ಶನ ಕೊಟ್ಟು ವರ್ಣಿಸಿ, ಈ ದುಃಖಿತ ನಿವಾರಣೆಗೆ ಸೇವಾ ದಳದವರೂ ಊರಜನತೆಯೂ ಪ್ರಯತ್ನಿಸಬೇಕೆಂದರು. ಶ್ರೀ. ಎಸ್. ಯಸ್ ಕಲ್ಲೆಯವರು ಸ್ವಾತಂತ್ರ್ಯ ಸಂಪಾದನೆ, ಸ್ವತಂತ್ರ ಭಾರತದ ಇಂದಿನ ಸ್ಥಾನ, ಇತ್ಯಾದಿಗಳ ಸೆನಪನ್ನು ಮಾಡಿಕೊಟ್ಟು, ಸ್ವತಂತ್ರ ಭಾರತದಲ್ಲಿ ಶ್ರಮಿಯೂಬ್ಬನ ಕರ್ತವ್ಯವೇನೆಂಬುದನ್ನು ತಿಳಿಸಿ ಭಾಷಣವನ್ನಿತ್ತರು. ಶ್ರೀ ಕೃಷ್ಣಾರವರು ತನ್ನ ಅಧ್ಯಕ್ಷ ಭಾಷಣದಲ್ಲಿ, "ಈ ನೊಡಲು, ನಮ್ಮ ದೊರನ್ನು ಜೀರಲು ಬ್ರಿಟಿಷರಿದ್ದರು; ಈಗ ನಮ್ಮವರೇ ಆದ ಸರಕಾರವಿದೆ; ಜನರು ತಮ್ಮ ಹೊಣೆಗಾರಿಕೆಗಳನ್ನರಿತು ಪರ್ತಿಸಬೇಕು" ಎಂದು ಸೂಚಿಸಿ, ಇಂತಹ ಸಮಾರಂಭಗಳ ಆವಶ್ಯಕತೆಯ ಕುರಿತು ಅಭಿಪ್ರಾಯ ಪಟ್ಟರು. ಶ್ರೀ. ಬಿ. ಕೇಶವ ಕಿಣಯವರು ಸ್ವಾಗತ ಭಾಷಣವಾದ ಮೇಲೆ ಸೇವಾ ದಳದವರ ಕಾರ್ಯದರ್ಶಿಯವರು ನಂದಿವಾಚನ ಮಾಡಿದರು. ಸೇವಾ ದಳದವರ ಕವಾಯತು ಪ್ರದರ್ಶನಗಳಾದುವು. ರಾಜಕೀಯ ಲಾವಣಿಗಾರ ಶ್ರೀ. ಬಿ. ರಾಮದಾಸಾಚಾರ್ಯ ನುತ್ತು ಪಾರ್ಟಿಯವರು 'ಸ್ವರಾಜ್ಯತುಳು ಲಾವಣಿ' ಹಾಡಿದರು. ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಕೆ ಕೆ. ಸೆಟ್ಟರು ಪಳ್ಳಿಗಲ್ಲಿ ಹಬ್ಬರುವ ಅಂಧಶ್ರದ್ಧೆ, ನಿಜಾರರಾಜ್ಯ ವಿಧೇಯತೆ ಮತ್ತು ಅವಶ್ಯಕತೆಗಳನ್ನು ನಿದರ್ಶನ ಕೊಟ್ಟು ವರ್ಣಿಸಿ, ಈ ದುಃಖಿತ ನಿವಾರಣೆಗೆ ಸೇವಾ ದಳದವರೂ ಊರಜನತೆಯೂ ಪ್ರಯತ್ನಿಸಬೇಕೆಂದರು. ಶ್ರೀ. ಎಸ್. ಯಸ್ ಕಲ್ಲೆಯವರು ಸ್ವಾತಂತ್ರ್ಯ ಸಂಪಾದನೆ, ಸ್ವತಂತ್ರ ಭಾರತದ ಇಂದಿನ ಸ್ಥಾನ, ಇತ್ಯಾದಿಗಳ ಸೆನಪನ್ನು ಮಾಡಿಕೊಟ್ಟು, ಸ್ವತಂತ್ರ ಭಾರತದಲ್ಲಿ ಶ್ರಮಿಯೂಬ್ಬನ ಕರ್ತವ್ಯವೇನೆಂಬುದನ್ನು ತಿಳಿಸಿ ಭಾಷಣವನ್ನಿತ್ತರು. ಶ್ರೀ ಕೃಷ್ಣಾರವರು ತನ್ನ ಅಧ್ಯಕ್ಷ ಭಾಷಣದಲ್ಲಿ, "ಈ ನೊಡಲು, ನಮ್ಮ ದೊರನ್ನು ಜೀರಲು ಬ್ರಿಟಿಷರಿದ್ದರು; ಈಗ ನಮ್ಮವರೇ ಆದ ಸರಕಾರವಿದೆ; ಜನರು ತಮ್ಮ ಹೊಣೆಗಾರಿಕೆಗಳನ್ನರಿತು ಪರ್ತಿಸಬೇಕು" ಎಂದು ಸೂಚಿಸಿ, ಇಂತಹ ಸಮಾರಂಭಗಳ ಆವಶ್ಯಕತೆಯ ಕುರಿತು ಅಭಿಪ್ರಾಯ ಪಟ್ಟರು.

ಪ್ರಕಟಣೆ

ಪಡುಬಿದ್ರಿ ಕಂಬಳದ ಆಮಂತ್ರಣ

ನರ್ಷಂಪ್ರತಿ ಜರಗತಕ್ಕ ಉಡುಪಿ ತಾಲೂಕು ಪಡುಬಿದ್ರಿ ಕಂಬಳವನ್ನು ಈ ವರುಷ ಇದೇ ಬರುವ ತಾರೀಕು 9 12-1948ನೇ ಗುರುವಾರ ದಿವಸ ಜರಗಿಸಬೇಕಾಗಿಯೂ ಹೆಚ್ಚಿನ ಏತೆ ಒಟ್ಟಿದೆ ಕೋಣಗಳನ್ನುಬರಮಾ ದಿಸಬೇಕಾಗಿಯೂ ನಿಶ್ಚೈಸಿದ್ದೇನೆ ಮಹಾಜನರ ಉತ್ಸಾಹಜನದೆ ನಲುವಾಗಿ ನಿಲು ಕೋಲು ನಿಶಾನಿಗೆ ಸೀರು ಹಾಸಿ ಹಲಗೆಯಲ್ಲಿ ಪ್ರಥಮ ಬಂದ ಕೋಣಗಳಿಗೂ ಹಗ್ಗದಲ್ಲಿ ಪ್ರಥಮ ಬಂದು ಜಯಶೀಲವಾದ ಕೋಣಗಳಿಗೂ ಎರಡು ಸುವರ್ಣ ಪದಕಗಳನ್ನೂ ಬಹುಮಾನ ಕೊಡುವುದಾಗಿಯೂ ಅಲಂಕರಿಸಿದ್ದೇವೆ. ಆದ ಪ್ರಯುಕ್ತ ಮಹಾರಯರಿಕ್ಕಿ ದೂ ತಮ್ಮ ಯಾ ಬಂಧುಮಿತ್ರರ ಒಸಿದ ಕೋಣಗಳ ಸಮೇತ ದಯಮಾಡಿ ಬಂದು ನಮ್ಮಿ ಕಂಬಳವನ್ನು ಯಶಸ್ವಿಗೊಳಿಸಬೇಕಾಗಿ ಆವೇಕ್ಷಿಸುವ, ತನ್ನು ಆನುಮತಿಸಿಲಾಸಿ.

ಬೋಳ ಮಂಜಯ್ಯ ಶೆಟ್ಟಿ.

ಬಾರಕೂರು-ತಾ. 20-11 48ರಲ್ಲಿ ಆದಿದ್ರಾವಿಡರ ಮಹಾಸಭೆಯೊಂದು ಲಬಾರ್ ಶಾಲೆಯಲ್ಲಿ ಜರಗಿತಮ್ಮು ಅಭಿವೃದ್ಧಿಯ ಮತ್ತು ಸುಧಾರಣೆಯ ಕುರಿತು ಚರ್ಚಿಸಲಾಯಿತು.

ಕಟಪಾಡಿ-ಕಲ್ಲವು ವರುಷಗಳಿಂದ ಸತತ ಕುಬಾದಿ ಪಂಚಾಯತ್ ಕೋರ್ಟಿನ ಅಧ್ಯಕ್ಷರಾಗಿದ್ದು ಇದೇ ತಾ. 20ರಲ್ಲು ರಾಜಿನಾಮಕೊಟ್ಟ ಶ್ರೀ ಕುರ್ಕಾಲು ಗಣಪಯ್ಯ ಸೆಟ್ಟಿರನ್ನು ಸತ್ಕರಿಸುವರೆ ಅವೇ ದಿನ ಸಂಜೆ ಶ್ರೀ ಪಿ. ದಯಾನಂದ ನಾಯ್ಕರ ಅಧ್ಯಕ್ಷತೆಯಲ್ಲಿ ಒಂದು ಚಹಾ ಸತ್ಕಾರಕೂಟ ನಡೆಯಿತು. ಶ್ರೀಗಳಾದ ಪಿ ರಾಮದಾಸ ನಾಯಕ್, ಪಿ. ಲಕ್ಷ್ಮೀನಾರಾಯಣ ನಾಯಕ್, ಕೆ. ವಾಸುದೇವ ಕಾಮತ್, ಬಿ. ನಾರಾಯಣ ಹೆಗ್ಡೆ, ಬಾಕಿ ಕೆ ಕೆ ಕಿಣಿ, ವೈ. ನಂದ್ಯಪ್ಪ ಹೆಗ್ಡೆ ಮೊದಲಾದವರು ಶ್ರೀ ಸೆಟ್ಟರ ಗುಣಗಾನ ಮಾಡಿ ಮಾತನಾಡಿದರು ಶ್ರೀ ಸೆಟ್ಟರು ಉತ್ತರಿಸುತ್ತ ತನಗೆ ಸದಾ ನೆರವಾಗಿದ್ದು ಇಲ್ಲಿಯ ಯಶಸ್ಸಿಗೆ ಕಾರಣರಾದ ಸದ್ರಿ ಕೋರ್ಟಿನ ಮೆಂಬರ್ ಶ್ರೀ ಸುಬ್ರಾಯ ಬ್ಯಾನುಭಾಗರನ್ನು ಪ್ರಶಂಸಿಸಿ ಮಾತನಾಡಿದರು. ಆಧ್ಯಕ್ಷರ ಮುಕ್ತಾಯ ಭಾಷಣ, ಗ್ರೂಪ್ ಫೋಟೊ, ಧನ್ಯವಾದಾರ್ಪಣೆಗಳಿಂದ ಚಹಾಸತ್ಕಾರ ಕೂಟ ಕೊನೆಗೊಂಡಿತು.

ಧಾರವಾಡ

ಭಾರತೀಯ ನೃತ್ಯಕಲಾ ಕೇಂದ್ರವು ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಈ ಕೇಂದ್ರದ ಪರವಾಗಿ ನೃತ್ಯ, ಸಂಗೀತ, ನಾಟ್ಯಕಲೆಗಳ ಸಂಶೋಧನೆ, ಅಭ್ಯಾಸ ಹಾಗೂ ಪ್ರಚಾರ ಮಾಡುವುದಕ್ಕಾಗಿ ಧಾರವಾಡದಲ್ಲಿ ವಿದ್ಯಾ ಪೀಠ ಪೊಂದನ್ನು ಸ್ಥಾಪಿಸಿ ಈ ಕಲೆಗಳಲ್ಲಿ ಅಭ್ಯಾಸ ಮಾಡ ಬಯಸುವವರಿಗೆ ಎಲ್ಲ ಬಗೆಯ ಶಿಕ್ಷಣ ಸೌಕರ್ಯ ಒದಗಿಸಿ ಕೊಡುವುದು ಇತ್ಯಾದಿ ಕಾರ್ಯ ಯೋಜನೆಗಳಿವೆ. ಇವನ್ನು ರೂಪುಗೊಳಿಸಿ ಕಾರ್ಯರೂಪಕ್ಕೆ ತರಲು ಕಲಾಭಿಮಾನಿಗಳು ಉದಾರ ಕೊಡುಗೆಗಳ ಮೂಲಕ ಧನ ಸಹಾಯ ನೀಡಬೇಕಾಗಿ ವ್ಯವಸ್ಥಾಪಕ ಸುಂದಳಿಯ ವಿನಂತಿಯಿದೆ.

ಬಾರ್ಕೂರು ಬಿಲ್ಲವರ ಚಾರಿಟಿ ಸಂಸ್ಥೆ, ಮುಂಬಯಿ-ಇದರ ವಾರ್ಷಿಕ ತ್ರೊಂದನೆ ವಾರ್ಷಿಕ ಮಹಾ ಸಭೆಯು ಇದೇ ತಾ 28ರಲ್ಲು ಸಂಘದ ಕಾರ್ಯಾಲಯ (ಆಲಿ ಚೇಂಬರ್ಸ್, ಎರಡನೆ ಮಾಳಿಗೆ, ಮೆಡೋಸ್ ರಸ್ತೆ, ಕೋಟೆ)ದಲ್ಲಿ ಜರಗುವುದು.

ಮೊಗವೀರ ವ್ಯವಸ್ಥಾಪಕ ಮಂಡಳಿ-ಈ ಸಮಿತಿಯು ಕಳೆದ ಸುಮಾರು ಅರ್ಧ ಶತಮಾನದಿಂದ ಮೊಗವೀರ ಸಮಾಜದ ಸರ್ವತೋಮುಖವಾದ ಅಭಿವೃದ್ಧಿಗೆ ದುಡಿಯುತ್ತಿರುವುದಷ್ಟೆ. ದಕ್ಷಿಣಕನ್ನಡಜಿಲ್ಲೆ ಸಮಾಜದ ಪ್ರಗತಿಯು ಇನ್ನೂ ಸಮಾಧಾನಕರ... ಗಿಲ್ಲವಾದುದರಿಂದ ಮಂಡಳಿಯು ಬೊಂಬಾಯಿಯಲ್ಲಿ ಮಾಡಿದಂತೆಯೇ ಇಲ್ಲಿಯೂ ಸಮಾಜ ಸೇವೆ ಮಾಡಬೇಕೆಂದು ನಿರ್ಧರಿಸಿಯಿದೆ. ಈ ಸಲುವಾಗಿ ಮಂಡಳಿಯ ಪ್ರತಿನಿಧಿಯಾಗಿ ಶ್ರೀ ಕಾಪು ರಾಮಯ್ಯ ಮೊಗವೀರ ಈ ಜಿಲ್ಲೆಯಲ್ಲಿ ಪ್ರವಾಸ ಮಾಡಿ ಸಮಾಜದ ಹತ್ತು ಸಮಸ್ಯೆಗಳನ್ನು ಶ್ರೀ ಮಂಡಳಿಯ ಕಾರ್ಯವು ಯಶಸ್ವಿಯಾಗುವಂತೆ ಶಕ್ತಿ ಮೀರಿ ಸಹಕರಿಸಬೇಕೆಂದು ಮಂಡಳಿಯು ಬಿನ್ನವಿಸಿಕೊಳ್ಳುತ್ತದೆ. ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಯಸ್. ಸಿ. ಸದುಬಿದ್ರಿಯವರ ನನ್ನು ವಿನಂತಿಸುವೆ.

ಯುತಸ್ತ್ರಾವ ನಿಂತಿತು

'ಕುಮಾರಿ' ಬಿಲ್ಲೆಗಳನ್ನು ಉಪಯೋಗಿಸಿದರೆ ಹೆಡತಪ್ಪಿ ಯುತಸ್ತ್ರಾವವಾಗುವುದು ಹತೋಟಿಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂ ಇಲ್ಲ ಸಾವಿರಾರು ಮಂದಿಗೆ ಪಾತ್ರಿ ಗುಣವಾಗಿದೆ. ಬೆಲೆ: ರೂ 3; ಸ್ಪೆಶ್ಯಲ್ ರೂ. 5-; ಅಧಿಕಾಧಿಕ ಸ್ಪೆಶ್ಯಲ್ ರೂ. [ಪಿ. ಪಿ. ಹನ್ನೆರಡಾಣೆ ಪ್ರತ್ಯೇಕ]

MRS P. DEVEE, P DS (N. J)
Tollygunge CALCUTTA.
ಸ್ವಾಕಿಸ್ವರು: ಶಾಕಾಂಬೆಸಿ, ಮಂಗಳೂರು

ಮದ್ರಾಸು ಸರಕಾರವು ಜನಃ ಆಹಾರ ಧಾನ್ಯಗಳ ತೀವ್ರ ಸಂಗ್ರಹ ಜಾಸನವನ್ನು ತಾ 5-10-48ರಿಂದ ದಕ್ಷಿಣ ಕನ್ನಡವೇ ಮೊದಲಾದ ಕೆಲವು ಜಿಲ್ಲೆಗಳಲ್ಲಿ ಜಾರಿಗೆ ತಂದಿರುತ್ತದೆ. ಬೆಳೆ ಕಟಾವಿನ ಕಾಲವನ್ನಾಧರಿಸಿ ಅಕ್ಕಿ ಭತ್ತವನ್ನು ಈಗಿನಿಂದೆಲೇ ಸರಕಾರದವರಿಂದ ನೇಮಿಸಿದ ಆಯಾಯ ಡಿಪೋಗಳಿಗೆ ಒಪ್ಪಿಸಬೇಕೆಂದು ಎಲ್ಲಾ ಸಾಗ್ವಳಿದಾರರಿಗೆ ಆಜ್ಞೆಯು ಹೊರಟು ಎರಡನೇ ಬೆಳೆಯ ಸುಗ್ಗಿ ಬೇಸಾಯದ ಗಲಾಟೆಯಿಂದಲೂ ಅಕಾಲದಲ್ಲಿ ಆಗಾಗ್ಗೆ ಸುರಿಯುತ್ತಿರುವ ನುಳೆಯ ದೆಕೆಯಿಂದಲೂ ಮೊದಲೇ ಕಷ್ಟಕ್ಕೀಡಾಗಿ ಬಳಲಿ ಬೆಂಡಾದ ರೈತರನ್ನು ಹಣಸಿ ಹೆಚ್ಚಿನಂಶ ಭತ್ತವನ್ನು ಸದ್ರಿ ಡಿಪೋಗಳಲ್ಲಿ ತುಂಬಿಸುವ ಕೆಲಸವು ಕೆಲವು ಕಡೆಗಳಲ್ಲಿ ಇಪ್ಪರಲ್ಲಿ ಮುಗಿಯುವ ಒಡನೆಯೆ ಡಿಪೋನಿಗೆ ಹಾಕಿ ಬೇಸಾಯಗಾರರಲ್ಲಿ ಉಳಿಯುವ ಬಾಕಿ ಭತ್ತಕ್ಕೆ ಕೂಡಾ ಅಧಿಕಾರಿಗಳಿಂದ ಅನರ್ಥಕಾರಕವಾದ ಆ (ಸರ್‌ಪ್ಲಸ್) ನೋಟೀಸು ಸಹಾ ಹೊರಟು ಕೃಷಿಕರಿಗೆ ಕೆಲವು ಕಡೆಗಳಲ್ಲಿ ಜ್ವಾರಿಯಾಗಿರುತ್ತದೆ. ಉಳಿತಾಯವೆಂದು ಪರಿಗಣಿಸಲ್ಪಟ್ಟು ಬಡ ರೈತರಲ್ಲಿ ಏನೂ ಬಾಕಿ ಇಡದೆ ಎಲ್ಲಾ ಭತ್ತವನ್ನು ಸಂಗ್ರಹಿಸಿದ ನಂತ್ರ ಹಸುಗೆ ಪದ್ಧತಿಯು ಕ್ರಮಪ್ರಕಾರ ಅಸ್ತಿತ್ವಕ್ಕೆ ಬಂದು ನಮ್ಮಲ್ಲಿಂದ ಸಂಗ್ರಹಿಸಿದ ಅಕ್ಕಿ ಭತ್ತಗಳನ್ನು ಬೇರೆ ಕಡೆಗೆ ಸಾಗಿಸಿ ನಮಗೆ ತಿಂದು ಅಭ್ಯಾಸವಿಲ್ಲದ ಪರಪ್ರಾಂತದ ಅಂದ ಅಕ್ಕಿ ಭತ್ತವೊಂದಿಗೆ ಇತರ ಧಾನ್ಯಗಳನ್ನು ಅವರು ನಿಶ್ಚಯಿಸಿದ ರೇಷನ್ ಪ್ರಕಾರ ನಮಗೆ ಹಂಚಿ ಒಂದಷ್ಟ್ಟನ್ನಿಲ್ಲಾ ಅನುಭವಿಸಿ ತಮ್ಮ ಕಷ್ಟದ ಕೆಲ್ಲದಲ್ಲಿ ನಿರಕರಾಗಿ ಸುಮ್ಮನಿರುವ ನಿಸ್ಸಹಾಯಕರಾದ ಬಡ ಬೇಸಾಯಗಾರರನ್ನು ನಿರ್ಬಲರನ್ನಾಗಿರಿಸುವುದು ನಮ್ಮನ್ಯಾಯವ ಈಗಿನ ಜನಪ್ರಿಯರಿಂದೆಣಿಸಿದ ಪ್ರಜಾ ಸರಕಾರದ ಧ್ಯೇಯವೇ?

ಸಾಗ್ವಳಿದಾರರ ಕೂಗು

ಆಹಾರೋತ್ಪಾದಕರಾದ ನಾವು ರೇಷನ್ ಪ್ರಕಾರ ಅವರು ಹಂಚಿದ್ದನ್ನುಂಡು ಮಿಕ್ಕ ಎಲ್ಲಾ ಕೆಲಸಗಳಿಂದಲೂ, ಕಷ್ಟಕರವಾದ ಕೃಷಿಯ ಕೆಲಸವನ್ನು ಮಾಡಲಿಕ್ಕೆ ಇನ್ನು ಮುಂದೆ ನಮಗೆ ರಕ್ತ ಸಾಲುವುದೇ? ಬೇರೆ ಯಾವ ವೃತ್ತಿಯನ್ನೂ ಈ ವರೆಗೆ ಮಾಡಿ ಅಭ್ಯಾಸವಿಲ್ಲದ ನಾವು ಅರೆ ಹೊಟ್ಟೆಯಿಂದ ಮಾಡಿದ ಸಾಗ್ವಳಿಯು ನಮಗೆ ಪೂರ್ಣ ಫಲಕ್ಕೆ ಸಿಕ್ಕುವೆದೇ? ಮುಂದಿನಂತೆ ಪ್ರತಿಯೊಂದು ಮನೆಯಲ್ಲಿ ಇರುವ ಜನರ ಲೆಕ್ಕ ಮಾಡಿ ಎರಡು ವರ್ಷಕ್ಕೆ ಮೇಲ್ಪಟ್ಟವರಿಗೆ ಕಾರ್ಡನ್ನು ಕೊಟ್ಟು ಆ ಕಾರ್ಡಿನಲ್ಲಿರುವ ಗಣನೆಯಂತೆ ಧಾನ್ಯ ವಿತರಿಸಿ ಮಾಡಿದಲ್ಲಿ ಪಲ್ಕೆಯಲ್ಲಿ ಬೇರೇನೂ ಕಾಫಿ ಫಲಹಾರಕ್ಕನುಕೂಲವಿಲ್ಲದ ನಮ್ಮಲ್ಲಿಗೆ ಹಸಿದು ಬಂದ ಆತಿಥಿಗಳನ್ನು ಇನ್ನು ಮುಂದೆ ತಿರಸ್ಕಾರ ಮಾಡುವುದೇ? ಒಂದು ಕುಟುಂಬದಲ್ಲಿ ಹೆಚ್ಚು ಜನರಿದ್ದು ಅವಿಭಕ್ತರಾಗಿ ಅವರ ಜೀವನಕ್ಕೆ ಹೆಚ್ಚು ಗದ್ದೆಗಳನ್ನು ಬೇಸಾಯ ಮಾಡಬೇಕಾಗಿರುವುದರಿಂದ ಬಾಲ, ವೃದ್ಧ, ಹೆಮ್ಮಕ್ಕಳಿಂದ ಕೂಡಿದ ಎಲ್ಲರಿಂದಲೂ ಕೆಲ್ಸ ಮಾಡಲಿಕ್ಕೆ ಸಾಧ್ಯವಿಲ್ಲದೆ ಆವರ ಸಹಾಯಕ್ಕೆ ಬೇಸಾಯದಲ್ಲಿ ನಿತ್ಯಪೂರ ದುಡಿದುಕೊಂಡು ಬರುವ ಪಾರಾತನದಲ್ಲೇ ಇದ್ದ ಆ ಬಡ ಕೂಲಿಗಾರರಿಗೆ ಹಳ್ಳಿಯ ಸಂಪ್ರದಾಯದಂತೆ ಅಕ್ಕಿ ಭತ್ತ ಕೊಡುವುದಲ್ಲದೆ ಊಟಕ್ಕೆ ಹೋಟೇಲುಗಳೇನೂ ಇಲ್ಲದ ಹಳ್ಳಿಯಲ್ಲಿ ಅವರಿಗೆ ದುಡ್ಡು ಕೊಟ್ಟರೆ ಅವರು ಅದನ್ನು ಹಿಡಿದುಕೊಂಡು ದೂರದಲ್ಲಿರುವ ರೇಷನ್ ಅಂಗಡಿಗೆ ಹೋದರೆ ಸಮಯಕ್ಕೆ ಸರಿಯಾಗಿ ರೇಷನ್ ಸಿಕ್ಕಬಹುದೇ? ತಮ್ಮ ಕೆಲಸವನ್ನು ಬಿಟ್ಟು ಸದಾ ರೇಷನ್ ಕೊಡುವ ಅಧಿಕಾರಿಗಳ ಸಮಯವನ್ನು ಕಾಯುಕೊಳ್ಳಲು ಅವರಿಗೆ ಅನುಕೂಲ ಉಂಟೇ? ಈ ಮೊದಲು ರೇಷನ್ ಕಾರ್ಡು ಕೊಡುವ ಅಧಿಕಾರಿಗಳು ಕ್ಲಪ್ತ ಸಮಯಕ್ಕೆ ಸರಿಯಾಗಿ ಕಾರ್ಡನ್ನು ಕೊಡದೆಯೂ ಸದ್ರಿ ರೇಷನ್ ಅಂಗಡಿಗಳಲ್ಲಿ ಪ್ರತಿವಾರದಲ್ಲಿಯೂ ಕಾರ್ಡಿಗೆ ಸರಿಯಾಗಿ ಆಹಾರ ಧಾನ್ಯಗಳನ್ನು ವಿತರಣೆ ಮಾಡದೆಯೂ ಬಡವರನ್ನು ಕೆಲವು ಕಡೆಗಳಲ್ಲಿ ಕಷ್ಟಕ್ಕೆ ಗುರಿಪಡಿಸಿ, ಉಪವಾಸ ಹಾಕುವುದನ್ನು ತಿಳಿದು ಮೇಲಧಿಕಾರಿಗಳು ಸರಿಯಾಗಿ ವಿಚಾರಿಸಿ ಅದಕ್ಕೆ ತಕ್ಕ ಕ್ರಮವನ್ನು ಕೈಕೊಂಡಿದ್ದುಂಟೆ? ಎಂತಾದರೂ ಸಾಗ್ವಳಿದಾರರಿಂದ ಬೇಸಾಯದ ವಿಚಾರಕ್ಕೆ ಸಹಾ ಇಡದೆ ಎಲ್ಲವನ್ನೂ ಒತ್ತಾಯದಿಂದ ಡಿಪೋವಿಗೆ ತುಂಬಿಸಿದ ಅಪಾರ ಧಾನ್ಯಗಳು ಕೆಲವು ಕಡೆಯಲ್ಲಿ ದುರುಪಯೋಗವಾಗಿಲ್ಲವೆ? ಇವೆನ್ನು ನಮ್ಮ ಜನತಾ ಸರಕಾರವು ಗಮನಕ್ಕೆ ತೆಗೆದುಕೊಂಡಿರುವುದೇ? ಬೇಸಾಯಕ್ಕವಶ್ಯ ಹಾಗೂ ನಿತ್ಯ ಜೀವನಕ್ಕುಪಯುಕ್ತವಾದ ಎಲ್ಲಾ ಸಾಮಾನುಗಳ ಬೆಲೆಯು ಕೆಲವು ವರ್ಷಗಳಿಂದೀಚೆಗೆ ಐದಾರು ಪಟ್ಟು ಹೆಚ್ಚಿರುವಾಗ ಸದ್ರಿ ಸಾಮಾನುಗಳಿಗೆ ಪ್ರತಿಯಾಗಿ ಬೇರೆ ಯಾವುದರಿಂದಲೂ ಕೊಡಲಿಕ್ಕೆ ಸಾಧ್ಯವಿಲ್ಲದೆ ತಾನು ಕಷ್ಟಪಟ್ಟು ಬೆಳೆಸಿದ ಅಕ್ಕಿ ಭತ್ತದ ಮಾರಾಟದಿಂದ ತನಗವಶ್ಯಕ ಸಾಮಾನುಗಳನ್ನು ಕೊಂಡುಕೊಳ್ಳಲು ಸರಕಾರದವರು ನಿರ್ಬಂಧಿಸಿ ನಿರ್ಬಂಧದಲ್ಲಿಟ್ಟಿರುವ ಅಕ್ಕಿ ಭತ್ತದ ಬೆಲೆಯು ಈಗಿನ ಕಾಲಕ್ಕೆ ಆದು ಅರ್ಧಕ್ಕರ್ಧವಾದರೂ ಸಾಕಾಗಿರುವುದೇ? ಉತ್ಪಾದಕರಾದ ನಾವು ಕಾಯಕಷ್ಟದಿಂದ ದುಡಿದು ಸಂಪಾದಿಸಿದುದನ್ನು ಯೋಗ್ಯವಾದ ಬೆಲೆಗೆ ಸಾರಾಟ ಮಾಡಿ ನಮ್ಮ ಆರ್ಥಿಕ ದುಸ್ಥಿತಿಯನ್ನು ಸುಧಾರಿಸಿಕೊಂಡಲ್ಲಿ ಆದು ಕೂಡಾ ನ್ಯಾಯ ವಿರುದ್ಧವಾಗುವುದೇ? ಬೇಸಾಯದ ಬಗ್ಗೆ ಜಾಸುವಾರು ವ ಬೇರೆ ಉಪಕರಣಗಳಿಗೆ ಬೇಕಾದ ಬಡ್ಡಿ ಕಳೆದು ತೀರ್ವ ಗೇಣಿ ಸುದಾಯ ಮಾಡಿದ ನಂತ್ರ ಸಾಗ್ವಳಿದಾರನ ಊಟ ಮತ್ತು ಇತರ ಖರ್ಚಿಗೆ ಬಾಕಿ ಎಸ್ಟಾದರೂ ಉಳಿಯಲಿಕ್ಕಿಲ್ಲವೆಂದು ಅಕ್ಕಸಿ ಮಾಡಿದವನಿಗೆ ಯಾ ಮಾಡಿಸಿದವನಿಗೆ ಹೊತ್ತ ಅನುಭವವಲ್ಲದೆ ಬೇರೆಯವರಿಗೆ ಆದು ತಿಳಿದಿರುವುದೇ? ಪೇಟೆ ಪಟ್ಟಣದಲ್ಲಿದ್ದುಕೊಂಡು ಕಾಯಕಷ್ಟವಲ್ಲದ ಸುಲಭ ರೀತಿಯ ವೃತ್ತಿಯಲ್ಲಿರುವ ಕೆಲವರ ಉಪಯೋಗಾರ್ಥವಾಗಿ ಬದ ಬೇಸಾಯಗಾರರು ಡಣಿದು ದುಡಿದ ಅಕ್ಕಿ ಭತ್ತದ ಬೆಲೆಯನ್ನು ತಗ್ಗಿಸಿ ನಿರ್ಬಂಧದಲ್ಲಿಟ್ಟರೆ ಇನ್ನು ಮುಂದೆ ಸಾಗ್ವಳಿ ಜಮೀನುಗಳ ಹಂಗಿಲ್ಲದ ರೈತರು ವ ಕೂಲಿ ಕೆಲ್ಸದವರು ತಾವು ಬೇಸಾಯಕ್ಕೆ ವಹಿಸಿಕೊಂಡ ಗದ್ದೆಗಳನ್ನು ಹೃಯಲ್ಲೇ ಬಿಟ್ಟು ಲಾಭಕರವಾದ ಸುಲಭ ರೀತಿಯ ಬೇರೆ ಕೆಲಸಗಳನ್ನು ಪುಡುಕಿಕೊಂಡು ಹೋದರೆ ಸದ್ರಿ ಬೇಸಾಯವನ್ನು ಕ್ಲಪ್ತ ಕಾಲಕ್ಕೆ ಸರಿಯಾಗಿ ಮಾಡುವವರಿಲ್ಲದೆ ಅಕ್ಕಿ ಭತ್ತ ಸರಿಯಾಗಿ ಬೆಳೆಯದೆ ಎಲ್ಲಾ ಕಡೆಗಳಲ್ಲಿಯೂ ಭಯಂಕರವಾದ ಕ್ಷಾಮಕ್ಕೆಡೆಯಾಗುವುದೆಂಬುದನ್ನು ಪ್ರಜಾ ರಕ್ಷಕರಾದ ಸರಕಾರದವರು ತಮ್ಮ ನಿರೀಕ್ಷಣೆಗೆ ತೆಗೆದುಕೊಂಡಿರುವರೇ? ಮಿಕ್ಕ ವರ್ಗದ ಕೆಲಸಗಾರರಂತೆ ನಮ್ಮ ಕಷ್ಟ ನಷ್ಟಕ್ಕಾಗಿ ಮುಷ್ಕರ ಹಿಡಿಯುವ ಅಭ್ಯಾಸವು ನಮಗಿರುತಿದ್ದರೆ ಈ ಕಾಲದಲ್ಲಿ ಏನಾಗುತಿತ್ತು? ಎಲ್ಲಾ ಕಷ್ಟ ನಷ್ಟವನ್ನು ಸೈರಿಸಿಗೆ ತಂದು ಸುಮ್ಮನೆ ಕಾಲಚಕ್ರದ ಮಹಿಮೆಗೆ ಬೆರಗಾಗಿ ತಲೆದೂಗುವ ಬಡ ರೈತರಿಗೆ ಇನ್ನು ಮುಂದೆಯೂ ಪದೇಪದೇ ಉಪಪ್ರವನ್ನಿತ್ತರೆ ಕಾಲಾನುಭಾಗದಲ್ಲಿ ಕೃಷಿಕರಾದ ನಮ್ಮ ನಾಮಾವಶೇಷವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ರಾಷ್ಟ್ರಜನಕನೂ ಬಡವರ ಬಂಧುವೂ ಆಗಿದ್ದ ಮಹಾತ್ಮಾಜಿಯವರಂದೇ ನಮ್ಮ ರಾಷ್ಟ್ರ ಜೀವಾಳದಂತಿರುವ ಬಡ ರೈತರನ್ನು ಸಾಲಿನಿಂದುಜ್ಜೀವಿಸಿದರೆ, ಅವರ ರಕ್ತವನ್ನು ಹೀರಿ ನಿರ್ಬಲರನ್ನಾಗಿ ಮಾಡಿದರೆ ನಮ್ಮ ದೇಶವೇ ಮಹಾಕ್ಷಾಮಕ್ಕೆ ಈಡಾಗುವುದೆಂದು ತನ್ನ ಸರ್ವಜ್ಞತೆಯನ್ನು ವ್ಯಕ್ತ ಮಾಡಿ ಈ ಮೊದಲಿನ ನಿಯಂತ್ರಣವನ್ನು ತೆಗೆದು ಹಾಕಿಸಿದ್ದರು. ರಾಜಕೀಯ ಮುತ್ಸದ್ದಿಯೂ ಉದಾತ್ತ ಚರಿತ್ರನೂ ಆದ ಗಾಂಧೀಜಿಯ ನಿರೀಕ್ಷಣೆಯಂತೆ ಆ ನಿಯಂತ್ರಣದಿಂದ ಹುರುಪಿದ್ದ ಬೇಸಾಯಗಾರರು ಮನಸ್ಸಿದುಡಿದ ಫಲವು ಈ ವರುಷದ ಬೆಳೆಯಿಂದಲೇ ತಿಳಿಯಬಹುದು. ಇನ್ನು ಮುಂದಾದರೂ ಆಹಾರದ ವಿಷಯದಲ್ಲಿ ನ ನಾಡು ಸಾವಲಂಬಿಗಳಾಗಬೇಕಾದರೆ ಸಾಗ್ವಳಿದಾರ..... ಆಪಾಯಕರವಾದ ಪ್ರೊಕ್ಯೂರುಮೆಂಟನ್ನು ತೆಗೆದುಹಾಕಬೇಕು. ಅದು ಕತ್ತಾಲಕ್ಕೆ ಸಾಗ್ಯನಿಲ್ಲದಿದ್ದರೆ ಈಗಿನ ವಾತಾವರಣಕ್ಕನುಕೂಲವಾಗಿ ಬೇಸಾಯಗಾರರಿಗೆ ತಕ್ಕ ಸೌಕರ್ಯವನ್ನು ಸರಕಾರದವರು ಒದಗಿಸಿ ಕೊಡಬೇಕು. ಇಲ್ಲದಿದ್ದರೆ ಎಲ್ಲಾ ವರ್ಗದ ಕೆಲಸಗಾರರು ಬಡವ ಬಲ್ಲಿದರೆನ್ನದೆ ಹಳ್ಳಿಗೆ ಬಂದು ಬೇಸಾಯದ ಹೊತ್ತು ಕಡ್ಡಾಯವಾಗಿ ಸರ್ವರೂ ಹೊಲ ಗದ್ದೆಗಳಲ್ಲಿ ಮಡಿಯಬೇಕು. ಆದು ನಿನಹ ನಮ್ಮ ಬದತನವೆಂದಿಗೂ ತೀಗಲಾರದು. ಈ ವಿಶಯದಲ್ಲಿ ನಮ್ಮ ಜನಪ್ರಿಯ ಪ್ರತಿನಿಧಿಗಳು ಬಡ ರೈತರ ಈಗಿನ ಕಷ್ಟದ ನಿಜಸ್ಥಿತಿಯನ್ನರಿತು ನಮ್ಮ ಪರವಾಗಿ ಶಾಸನ ಸಭೆಗಳಲ್ಲಿ ವಾದಿಸಿ ಇನ್ನಾದರೂ ನಮಗೆ ಸುಖವನ್ನು ಸಾಧಿಸಿ ಕೊಡಲಾರರೇ?

-ಇತಿ ಸಾಗುವಳ್ಳಿದಾರರಲ್ಲೊಬ್ಬ.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವುದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಫಾರ್ಮಸಿ, ಬೆಳಗಾಂವ

ನವಜೀವಾತು ಎಂಬ ಸೂತಿಕಾ ರಸಾಯನ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಭೈಸಿ ತಯಾರಿಸಲ್ಪಟ್ಟ ಅಮೋಘ ವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೪ ಡಿಸ್ಪೂನ ತಿಂಡಿಯಲ್ಲಿಗೆ ಹೆಚ್ಚು ಕಡಿಮೆ ಅರಿವಿನಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯ್ಗಳು ಒಂಭು ಬಾಣಂತಿಕನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ಪ.ಕ.

ಸ್ಟಾಕಿಸ್ಟರು- ಡಾ| ವಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಿಮ್ಮ ಸ್ನಾನ, ಊಟ, ಉಪಹಾರ, ಬೈಸಿಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರವರ್ಗ!

ಮೇಲಾಗಿ ಉಗುಸು ಬ್ರಾಹ್ಮಣರ ಅಡಿಗೆ, ಕಿಂಡಿನಸು, ಇವುಗಳ ರುಚಿಶುಚಿ ಹೇಳಬೇಕೆ?

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

ಕೊರಡ್ಕಲ್ ಸ್ಮಾರಕ ನಿಧಿಗೆ ಉದಾರ ಸಹಾಯ ಮಾಡಿರಿ.

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618 ಎರಡಾನೆ 2-12-1948

ಅಂತರಂಗ
ಹೊಸ ಮಾದರಿಯ
ವಾರ ಪತ್ರಿಕೆ
ವಾರ್ಷಿಕ ಚಂದಾ ರೂ. 4 8 0
ಆ ತಿಂಗಳಿಗೆ ರೂ. 2 8 0
ಪ್ರತಿ ಪ್ರತಿಗೆ ರೂ 0 1 5
ಜಾಹೀರಾತಿಗೆ ಉತ್ತಮ
ಸಾಧನ ವಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ

NAVAYUGA WEEKLY, UDIPI, S. K.

FOUNDER: Hon'ble Mr. A. R SHETTY, Health Minister, Govt. of Madras.

ನವಯುಗ
ಚಂದಾ ವಿವರ:
(ಮುಂಗಡ)
ವರ್ಷಕ್ಕೆ ರೂ 5-4-0
6 ತಿಂಗಳಿಗೆ ರೂ. 2-12-0
ಪ್ರತಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯
ವಾರ ೧೪

Vol. 29
No. 14

ಈ ಶಕುನಗಳು- ? ? ?

ಶ್ರೀಪಾಯಕರ, ಅಸ್ವಾಭಾವಿಕ ಹಾಗೂ ಅತ್ಯಪೂರ್ವವಾದ ಪ್ರಕೃತಿಜನ್ಯ ಅಥವಾ ಮನುಷ್ಯ ನಿರ್ಮಿತ ಘಟನೆಗಳು ತೋರಿ ಬಂದಾಗ ಇವಾವುದೋ ಭಾವೀ ಅನಾಹುತದ ಸೂಚನೆಗಳೆಂದು ನಂಬುವುದನ್ನೂ 'ಕುರುಡು ಬುದ್ಧಿ'ಯೆನ್ನಲಾಗುವುದಿಲ್ಲ. ಪ್ರಕೃತಿಯ ಅಥವಾ ಮನುಷ್ಯನ ಸ್ವಭಾವವು ಅಸಾಮಾನ್ಯ ರೀತಿಯಲ್ಲಿ ಕದಡಿದರೆ ಅದರ ಪರಿಣಾಮವಾಗಲೇಬೇಕು. ಅಸಾಮಾನ್ಯಸ್ಥಿತಿಗತಿಗಳ ನಿರ್ಮಾಣಕ್ಕೆವಿಶೇಷ ಕಾರಣವಿರಬೇಕಾದಂತೆಯೇ ಅದರ ಪರಿಣಾಮ ಕೂಡಾ ಇದಕ್ಕನುಗುಣವಾದ ತುದಿಯಣಗಿಯೇ ಇದ್ದೀತು. ಈ ದೃಷ್ಟಿಯಿಂದ ನೋಡುವಾಗ ಇತ್ತೀಚೆಗೆ ತೋರಿ ಬಂದಿರುವ ಪ್ರಕೃತಿಯ ಹಾಗೂ ಮಾನವ ಸ್ವಭಾವಜನ್ಯ ದುಶ್ಶಕುನಗಳ ಪರಿಣಾಮ ಹೇಗಾದೀತು? ಲೌಕಿಕ ಮನೋಮಟ್ಟದಿಂದಲೇ ಗಂಭೀರಾಸಕ್ತಿವಹಿಸಿ ವಿಚಾರಿಸಬೇಕಾದ ಸಂಗತಿಗಳಿವೆ :-

ನವೆಂಬರ್ ತಾ. 9ರಿಂದ 15ರ ವರೆಗೆ ಲೋಕದ ವಿವಿಧ ದೇಶಗಳವರಿಗೆ 'ಥೂಮ ಕೇತು' ಕಾಣಿಸಿಕೊಂಡಿತ್ತು. ಭಾರತೀಯರು ಈ ಉಗ್ರಾವತಾರವನ್ನು ಸರಿಯಾಗಿ ನೋಡಿದ್ದಾರೆ. ಮಿಕ್ಕ ಭವಿಷ್ಯಗಳ

ನಿಮ್ಮ ಆಯ್ಕೆ
ಪ್ರ ಭಾ ತ
ಚಾ ಮತ್ತು ಕಾಫಿ
ಅರಿಸಿದ
ನೀಲಗಿರಿ ಚಾ ಮತ್ತು ಕಾಫಿ
Blended & Packed by:-
PRABHAT
TEA & COFFEE (INDIA) Ltd.
COONOOR R. S. (Nilgiris)

ಮಾತಂತಿರಲಿ-ಇಂತಹ ಗ್ರಹಗಳಿಗೂ ಭೂಮಿಗೂ ಸಂಬಂಧವಿದೆ ಎಂಬುದರ ಮೇಲಿಂದ ಇದರ ಪರಿಣಾಮವೆಂತಹದಾಗಬಹುದು?

ನವಂಬರ್ ತಾ. 22ರಲ್ಲಿ ಬೊಂಬಾಯಿಗೆ ಬಡಿದ ಬಿರುಗಾಳಿಯಷ್ಟು ಭೀಕರವಾದುದು ಭಾರತದ ಉದ್ದಿನೇ ಪೈರಿಯದಂತಿರುವ ಆ ನಗರದ ಇಡೀ ಚರಿತ್ರೆಯಲ್ಲೇ ಬೇರೊಂದಿಲ್ಲ. ಬೊಂಬಾಯಿಯಲ್ಲಿದ್ದ ಕಾಲ ಪುರುಷನ ಆ ಬಿಸುಸುಯ್ಲು ಆವಲಿ ಭಾರತದ ಕರ್ಣರಂಧ್ರಕ್ಕೆ ಬಲವಾಗಿ ಬಡಿದಿದೆ. ಹಾಗೆ ಹೀಗಾಯಿತು? ಗಾಳಿಯೆತ್ತ ಬೀಸುತ್ತಿದೆ ಎಂಬುದರ ಸೂಚನೆ ಇದಾಗಿರಬಹುದೆ?

ಸುಮಾರು 650 ಜನ 100 ಜನು ವಾರುಗಳನ್ನು ತುಂಬಿಸಿಕೊಂಡು ಗಂಗಾ ನದಿ ದಾಟುತಿದ್ದ ಯಸ್. ಯಸ್. ನಾರಾಯಣಿ ಎಂಬ ಕಡವಿನ ಹಡಗೊಂದು ವಾಟ್ಸೂದಲ್ಲಿ ನವಂಬರ್ ತಾ. 19ರಲ್ಲಿ ಮುಳುಗಿ ಹೋಯಿತ. ಸತ್ತ ಜನ ಮತ್ತು ಜಾನುವಾರುಗಳ ಸರಿಯಾದ ಸಂಖ್ಯೆ ದೊರೆತಿಲ್ಲ. ದಡಸೇರುವ ಅತುರದಿಂದ ಪ್ರಯಾಣಿಕರೆಲ್ಲಾ ಒಂದೇ ಬದಿಗೆ ಸರಿದು ದರಿಂದಲೇ ಆ ಬೋಟು ಕಳಚಿಬಿತ್ತೆಂಬ ಕಾರಣ ಕೇಳಿ ಬರುತ್ತಿದೆ. ಹಾದಿನ್ನೋಣ. ಸತ್ಯದ ಗಂಡಾಂತರಗಳಂದ ಪಕ್ಕನೇ ದಡ ಸೇರಿ ಬಿಡಬೇಕೆಂದು ಕಮ್ಯೂನಿಸ್ಟ್ ಮತ್ತಿತರ ಉಗ್ರವಾದಿಗಳಂತೆ ದಡ ಬಡಿಸಿದರೆ ಭಾರತದ ರಾಜಕೀಯ ಹಡಗಕ್ಕೂ ಇದೇ ಗತಿಯೆಂಬ ಶಕುನವೇ ಇದು? ಕಳದ ಮಹಾಯುದ್ಧಾರಂಭಕ್ಕೆ ಸ್ವಲ್ಪವೇ ಕಾಲವಿರುವಾಗ ಬ್ರಿಟನಿನ ಒಂದು "ಸಬ್ ಮೆರೀನ್" ಮೂಗು ಅಡಿಗೆ ಹಾಕಿ ಮುಳುಗಿ ಹತ್ತಿ ಅದರೊಳಗಿದ್ದವರು ಉಸಿರುಕಟ್ಟಿ ಸಾಯುವುದರಲ್ಲಿದ್ದಾಗಲೇ ಆ ಸಂಗತಿಯು ಇತ್ತ ಲೋಕಕ್ಕೆ ಗೊತ್ತಾಗಿದ್ದರೂ ಅವರನ್ನು ಬದುಕಿಸಲು ಯಾರಿಂದಲೂ ಆಗದೆ ಹೋದ ಆ ಮಹಾ ಶಕುನವೀಗ ನೆನಪಾಗುತ್ತಿದೆ!

ಥೂಮಕೇತು ತೋರಿಬಂದಾಗಲೇ ಬ್ರಿಟನಿನ ಸಿಂಹಾಸನದ ಹಕ್ಕುದಾರ ತಿರುಪಟ್ಟದ ವಾರ್ತೆ ಕೇಳಿ ಬಂದುದು-ಆದರ ಬೆನ್ನಲ್ಲೇ ಬೊಂಬಾಯಿ ಬಿರುಗಾಳಿಯು ಮತ್ತು ಬ್ರಿಟನಿನ ರಾಜರ ಅನಾರೋಗ್ಯದ

ಹೀಗೆಲ್ಲಾ ಪ್ರಕೃತಿಜನ್ಯ ಹಾಗೂ ಅನಿವಾರ್ಯ ದುರಂತಗಳು ನಡೆದಿರುವಾಗಲೇ ಭಾರತ-ಪಾಕಿಸ್ತಾನಗಳೊಳಗಿನ ಸಂಬಂಧದಲ್ಲೂ ಭಯಾನಕ ದುಶ್ಶಕುನಗಳು ತೋರಿಬರುತ್ತಿವೆ. ಈತನಕ ಬೆಂಗಡೆಯು ತಿವಿತವನ್ನಷ್ಟೇ ನಡೆಸುತಿದ್ದ ಪಾಕಿಸ್ತಾನವು ಈಗ ಕಾಶ್ಮೀರದ ಸಂಬಂಧವಾಗಿ ಭಾರತದವಿರುದ್ಧ ಮುಖಾಮುಖಿ ನಿಂತು ಮಲ್ಲಯುದ್ಧಕ್ಕೆ ತೊಡೆ ತಟ್ಟಿ ಕರೆದಿದೆ; ಭಾರತವೂ ಅದಕ್ಕೆ ಪ್ರತಿಯಾಗಿ ತೊಡೆ ಚಪ್ಪರಿಸಿಕೊಂಡಿದೆ. ಹಾಗಾದರೆ ನಾಳೆ!

ಕಾಶ್ಮೀರದ ಅಖಿಲ ಪ್ರಧಾನಿ ಮಿ. ಭಟ್ಟಿಗಳಂತೆ, ಸ್ವದೇಶೀ ಜನತೆಯ ಮನಸ್ಸನ್ನು ಒಳಗಿನ ಅವ್ಯವಸ್ಥೆ, ಆರ್ಥಿಕ ಮತ್ತು ವಿರೋಧಗಳಿಂದೆಯಿಂದ ಬೇರೆ ದಿಕ್ಕಿಗೆಳೆಯುವದಕ್ಕಾಗಿ ಕಾಶ್ಮೀರದ ನೆವವನ್ನು ಪಾಪಾಪಾಂಡಿ ಹೋರಾಟವಾಗಿ ಬೆಳೆಸುವ ಯೋಚನೆ ಪಾಕಿಸ್ತಾನಕ್ಕಿರಬಹುದು. ಆದರೆ ಆದರ ಪರಿಣಾಮ?

ಇದು ವರೆಗೆ ಹಿಂದುಗಣ್ಣಿರಿಸಿಕೊಂಡಿದ್ದ ಪಾಕಿಸ್ತಾನದ ವಿಶ್ವಾಮಿತ್ರ ವೈರ್ಯ ಪೂರ್ವ ಒಂಗಾಳವೂ ಈಗ ಹಿಂದುಗಳನ್ನೆಣ್ಣಿಡಿಸುತ್ತಿದೆ. ಭಾರತವು ಆದನ್ನು ಮರು ಸಂದಾಯಿಸುವ ಮನಸ್ಸು ಮಾಡಿದರೆ?

ತನ್ನೊಳಗಿನ ಜಾತೀಯ ಗೊಂದಲಗಳನ್ನು ನಿರ್ಮೂಲಿಸಿಕೊಂಡು, ಬಂಡಿ ಭದ್ರತೆಗಳನ್ನು ಸ್ಥಾಪಿಸಿ, ಘಟನಾ ತಯಾರಿ ಕಾರ್ಯವನ್ನೂ ಪೂರ್ಣಗೊಳಿಸಿಕೊಳ್ಳುವುದರಲ್ಲಿರುವ ಭಾರತವು ತನ್ನ ಮುಂದಿನ ಮುಖ್ಯ ಕಾರ್ಯವಾಗಿ ಪಾಕಿಸ್ತಾನ್ ಕಂಟಕ ನಿವಾರಣೆಯನ್ನೇ ಕೈಕೊಳ್ಳಲಾಗುವ ಸಂದರ್ಭವನ್ನು ಸ್ವತಃ ಪಾಕಿಸ್ತಾನವೇ ಒದಗಿಸಿ ಕೊಡುತ್ತಿದಾದರೆ ಆ ಸಂದರ್ಭೋಚಿತ ಕಾರ್ಯಕ್ಕೆ ಹೆಗ್ಗಳಿಕೆಯಂಥ ಕೈಹಾಕೀತು. ಹಾಗಾದರೆ?

ಇಂತೂ ಇವೆಲ್ಲಾ ಶಕುನಗಳೂ 'ಯಾವುದೂ ಇದ್ದಂತಿರಲಾರದು' ಎಂಬುದರ ಸೂಚನೆಗಳಾಗಿವೆ. ಅಂದ ಹಾಗೆ ಜನರೂ ಇದ್ದಂತಿರಲಾರದು!

ನಿಮ್ಮಿನ್ನಾಡಲಿಕ್ಕೆ ಯಾ ಪ್ರತಿನಿಧ್ಯ ವಹಿಸಲಿಕ್ಕೆ
ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,
ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.
ಶಾಖಾ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED

ಆಟಂ ಬೋಂಬಿನಿಂದ ಯುದ್ಧ ಗೆಲ್ಲಲಾದೀತೆ?

ದ್ದಿದ, 'ಆಟಂ ಯುಗ'; ವಿಜ್ಞಾನ ವೀಕ್ಷಣಕ ಮುಟ್ಟಿರುವ ಈಚೀಗೆರೆಯೇ ಆಟಂ ಆಟಂ ಬೋಂಬಿನ ಕುರಿತು ಹಲವು ಅದ್ಭುತ ಕಲ್ಪನೆಗಳನ್ನು ನಾವಿಂದು ಕೇಳುತಿದ್ದೇವೆ. ಸಾದಾ ಬೋಂಬು, ಸೆಬ್ ಮೆರೀನ್, ಮೈನ್, ವಿಷವಾಯು ಮುಂತಾದುವುಗಳ ಸಾಮೂಹಿಕ ಪ್ರಯೋಗದ ಪರಿಣಾಮಗಳನ್ನು ಪ್ರತ್ಯಕ್ಷ ತಿಳಿಯುವವರಿಗೆ ಅವುಗಳ ಕುರಿತೂ ಅದ್ಭುತ ಕಲ್ಪನಾ ಕಥೆಗಳಿದ್ದುವು ಆದರೆ ಇವೆಲ್ಲವೂ ನೀರೀಕ್ಷಿಸಿದ್ದಷ್ಟು ಹೆಚ್ಚಿನವಲ್ಲ ಎಂಬುದನ್ನು ಲೋಕವಿಂದು ಅನುಭವದಿಂದ ತಿಳಿದಿದೆ. ಆಟಂ ಬೋಂಬು ನಿಜಕ್ಕೂ ಒಂದು ಅದ್ಭುತವೇ. ಮಿಕ್ಕವುಗಳು ನಮ್ಮ ಸುರಾಣ ಕಥೆಗಳ ವಾಯು ಅಸ್ತ್ರ, ಸರ್ಪಾಸ್ತ್ರ, ಬ್ರಹ್ಮಾಸ್ತ್ರಗಳಾಗಿದ್ದರೆ ಆಟಂ ಬೊಂಬು ಪ್ರಳಯ ರುದ್ರನ ಹಣೆಗಣ್ಣ ಕಿಡಿ! ಆದರೂ ಅದರ ಕುರಿತು ಇಂದು ಜನಸಾಮಾನ್ಯರು ಊಹಿಸಿರುವಂತಹ ಅದ್ಭುತ ಶಕ್ತಿ ಸ್ವತಃ ಅದಕ್ಕಿಲ್ಲ. ಹುಚ್ಚಿನವರ ನಂಬಿಕೆಯಂತೆ ಮಿಕ್ಕೆಲ್ಲಾ ಸಾಧನೋಪಕರಣಗಳನ್ನೂ ಅನುಕೂಲತೆಗಳನ್ನೂ ಏಕಾಕಿಯಾಗಿ ಹುಸಿಗೊಳಿಸಿ ರಾಷ್ಟ್ರ ರಾಷ್ಟ್ರಗಳನ್ನೇ ತಿಂಡಿಮೇಲು ಮಾಡಿ ಹಾಕುವ ಶಕ್ತಿ ಆಟಂ ಬೋಂಬಿಗಿಲ್ಲ. ಈ ಕುರಿತು ಇಂಗ್ಲೆಂಡಿನ ಪ್ರೊಫೆಸರ್ ಪಿ. ಎಮ್. ಯಸ್. ಬ್ಲ್ಯಾಕೆಟ್ ಇವರು 'ಆಟಂ ಶಕ್ತಿಜನ್ಯ ಸೇನಾ ಮತ್ತು ರಾಜಕೀಯ ಅಸು ಹೋಗುಗಳು' ಎಂಬ ಪುಸ್ತಕದಲ್ಲಿ ಕೆಲವು ಮನನೀಯ ವಿಚಾರಗಳನ್ನು ಬರೆದಿದ್ದಾರೆ.

ಪ್ರೊಫೆಸರ್ ಬ್ಲ್ಯಾಕೆಟ್

ಆಟಂ ಶಕ್ತಿಯ ಗುಟ್ಟನ್ನರಿತ ಪ್ರಸಂಬದ ಕೆಲವೇ ವಂದಿ ತಜ್ಞರಲ್ಲಿ ಬ್ರಿಟಿಷ್ ಪ್ರೊಫೆಸರ್ ಬ್ಲ್ಯಾಕೆಟ್ ಒಬ್ಬರು. ಭೌತಿಕ ವಿಜ್ಞಾನ ತಜ್ಞತೆಗಾಗಿ ಈ ಬಾರಿಯ ನೋಬೆಲ್ ಬಹುಮಾನವನ್ನು ಪಡೆದವರಿವರು. ಇದೇ ವರುಷದಾದಿ ಭಾಗದಲ್ಲಿ ಬರ್ಮಿಸ್ತುಗೊಂಡ ಬ್ರಿಟಿಷ್ ಸರಕಾರೀ 'ಆಟಂ ಶಕ್ತಿ ಸಲಹೆಗಾರ ಸಮಿತಿಯ' ಸದಸ್ಯರಾಗಿ 1945ರಿಂದ ಕೊನೆಯ ವರೆಗೂ ಕೆಲಸ ಮಾಡಿದವರು. ಆದರೆ ಆ ಸಮಿತಿಯ ಬಹುಸಂಖ್ಯಾಕ ಸದ್ಯಸ್ಯರಿಗೂ ಬ್ಲ್ಯಾಕೆಟ್‌ರಿಗೂ ಭಿನ್ನಾಭಿಪ್ರಾಯಗಳಿದ್ದುವಂತೆ. ತನ್ನ ಜೀವನವನ್ನು ನಾವಿಕೋದ್ಯಮದಲ್ಲಿ ಆರಂಭಿಸಿ, 1919ರಲ್ಲಿ ಆದನ್ನು ಬಿಟ್ಟು ರುತ್‌ಫೋರ್ಡರ ಕೈಕೆಳಗೆ ಭೌತಿಕ ವಿಜ್ಞಾನಾಭ್ಯಾಸಕ್ಕೆ ತೊಡಗಿದ್ದ ಪ್ರೊಫೆಸರ್ ಬ್ಲ್ಯಾಕೆಟ್ 1939ರಿಂದ 1945ರ ವರೆಗೂ ಯುದ್ಧ ಕಾರ್ಯೋದ್ಯಮ ಮಾಡಿದ್ದರು. ಆಧುನಿಕ ಯುದ್ಧ ಸಂಚಾಲಕರು ವೈರಿ ರಾಷ್ಟ್ರಗಳ ವಿಜ್ಞಾನಿಕನ್ನೇ ತಮ್ಮ ನಂಬ್ಕಿ 1ನೇ ವೈರಿಗಳಾಗಿ ಗಣಿಸುವುದು ಸಹಜ. ಅದೇ ರೀತಿ 1940ರಲ್ಲಿ ಇಂಗ್ಲಾಂಡನ್ನು ಆಕ್ರಮಿಸಿ ಕೊಳ್ಳುವ ಸರ್ವ ಹಂಚಿಕೆಯನ್ನೂ ನಾಜಿಗಳು ನಿರ್ಮಿಸಿದ್ದಾಗ, ತಾವು ಕೂಡಲೇ ದಸ್ತಗಿರಿ ಮಾಡಬೇಕಾದ ಬ್ರಿಟಿಷ್ ವೈಜ್ಞಾನಿಕರ ಹೆಸರು ಪಟ್ಟಿಯೊಂದನ್ನೂ ತಯಾರಿಸಿ ಕೊಂಡಿದ್ದರು. ಆ ಪಟ್ಟಿಯಲ್ಲಿ ಪ್ರೊಫೆಸರ್ ಬ್ಲ್ಯಾಕೆಟರ ಹೆಸರಿದ್ದಿತು. ಇಂತಹ ಮರ್ಮಜ್ಞನ ಅಭಿಪ್ರಾಯಕ್ಕೆ ಬೆಲೆ ಕೊಡಲೇಬೇಕಾದುದರಿಂದ 'ಆಟಂ ಶಕ್ತಿ ಜನ್ಯ ಸೇನಾ ಮತ್ತು ರಾಜಕೀಯ ಫಲಶ್ರುತಿ' ಎಂಬ ತನ್ನ ಗ್ರಂಥದಲ್ಲಿ ಅವರು ಬಿಚ್ಚಿರುವ ಕೆಲವು ಗುಟ್ಟುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

ಸಾಮಾನ್ಯ ಬೋಂಬು ಮತ್ತು ಆಟಂ ಬೋಂಬು.

ಕಳದ ಮಹಾ ಯುದ್ಧದಲ್ಲಿ ಬ್ರಿಟಿಷ್ ಮತ್ತು ಅಮೆರಿಕನ್ ವಿಮಾನಗಳು ಜರ್ಮನಿಯ ಮೇಲೆ ಒಟ್ಟಿಗೆ 1,350,000 ಟನ್ನು ಬೋಂಬುಗಳನ್ನು ಒಗೆದಿದ್ದುವು. ಶತ್ರುವಿನಾಮವಾಗಿ 8 ಲಕ್ಷದಿಂದ 5 ಲಕ್ಷದ ವರೆಗೆ ಜನರು ಸತ್ತಿದ್ದರು. ಆದರೆ ಈ ಧಾಳಿಯ ಪರಿಣಾಮವಾಗಿ ಜರ್ಮನಿಯ ಕಾರ್ಖಾನೋದ್ಯಮಗಳೇನೂ ನಿಂತು ಹೋದುದಿಲ್ಲ. ನಿದರ್ಶನಕ್ಕಾಗಿ ಈ ಉಗ್ರ ಧಾಳಿಯ ಇನವಿಗಳಾದ 1943 ಮತ್ತು 1944ರಲ್ಲಿ ಮೊದಲಿನ ವರುಷ 12100 ಟ್ಯಾಂಕುಗಳು ಜರ್ಮನಿಯಲ್ಲಿ ತಯಾರಾಗಿದ್ದರೆ ಎರಡನೇ ವರುಷ 19000 ಟ್ಯಾಂಕುಗಳು ನಿರ್ಮಾಣಗೊಂಡಿದ್ದುವು. ಬೋಂಬು ಹಾಕಿ ಒಂದು ರಾಷ್ಟ್ರದ ಚಲನವಲನಗಳನ್ನು ಸ್ತಬ್ಧಗೊಳಿಸುವದಸಾಧ್ಯವೆಂಬುದಕ್ಕೆ ಇನ್ನಷ್ಟು ಸ್ಪಷ್ಟವಾದ ನಿದರ್ಶನ-ಜರ್ಮನಿಯು ಸೇತಾಗಿನ ಕೊನೆಯ ತಿಂಗಳುಗಳಲ್ಲಿ ಕೂಡಾ 1942ರ ಪರಿಮಾಣಕ್ಕಿಂತ ಹೆಚ್ಚಾಗಿಯೇ ಆದರ ಕಾರ್ಖಾನೆ ಕೆಲಸಗಳು ನಡೆದಿದ್ದುವು- ಇಂತಹ 2,000 ಟನ್ ಸಾಮಾನ್ಯ ಬೋಂಬುಗಳು ಎಷ್ಟು ಜನ ಮತ್ತು ಕಟ್ಟಡಗಳನ್ನು ನಾಶ ಮಾಡಬಲ್ಲುವೋ ಅಷ್ಟೇ ನಾಶವನ್ನು ಒಂದು ಆಟಂ ಬೋಂಬು ಮಾಡಬಲ್ಲುದು. ಆಟಂ ಬೋಂಬಿನ ಶಕ್ತಿ ಅಷ್ಟಿದ್ದೆ; ಅಷ್ಟೇ ಇದೆ. ಈ ಅಳತೆಯ ಪ್ರಕಾರ ಕಳದ ಮಹಾ ಯುದ್ಧದಲ್ಲಿ ಜರ್ಮನಿಯ ಮೇಲೆ ಬಿದ್ದ ಒಟ್ಟು ಬೋಂಬುಗಳು 670 ಆಟಂ ಬೋಂಬುಗಳೆಂದು ಗಣಿಕೆಯಹುದು. "ಭಾರತದಂತಹ ರಾಷ್ಟ್ರಕ್ಕೆ ಹತ್ತು ಆಟಂ ಬೋಂಬು ಬಿದ್ದರೆ ಸಾಕು." ಎನ್ನುವವರು, ಜರ್ಮನಿಯಂತಹ ರಾಷ್ಟ್ರದ ಮೇಲೆ 670 ಆಟಂ ಬೋಂಬುಗಳನ್ನು ಹಾಕಿದರೂ ಅದರಿಂದಲೇ ಯುದ್ಧ ಗೆಲ್ಲಲಾಗಲಿಲ್ಲ ಎಂಬುದನ್ನು ಅರಿಯಬಹುದು. ಆಟಂ ಬೋಂಬಿನಲ್ಲಿ ಕೆಲವು ಸುಧಾರಣೆಗಳಾದರೆ ಈ ಅಳತೆಗೆ 400 ಆಟಂ ಬೋಂಬು ಒಂದೀತೆಂಬುದೂ ಮರ್ಮಜ್ಞರಿಗೆ ಮೇಲೆ ಮಾತ್ರ ಪ್ರಯೋಗಿಸಿದಲ್ಲಿ ಅದರ ಪರಿಣಾಮವು ಇನ್ನಷ್ಟು ಭೀಕರವಾದೀತೆಂಬುದೂ ನಿಜ. ಆದರೆ ಇವೆಲ್ಲಕ್ಕೂ ತಕ್ಕ ಸ್ಪಷ್ಟಭಟನೆಗಳೂ ಇವೆ. ಆದ್ದರಿಂದ ಅದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸಲಾಗುವದಿಲ್ಲ.

ಮುಖ್ಯ ಶತ್ರುರಾಷ್ಟ್ರಗಳು

ರಶ್ಯ ಮತ್ತು ಅಮೇರಿಕ ದೇಶಗಳು ಆಟಂ ಬೋಂಬು ಧಾಳಿಯ ಅನಾಹುತವನ್ನು ಜರ್ಮನಿಯಷ್ಟು ಅನುಭವಿಸುವ ಸ್ಥಿತಿಯಲ್ಲಿಲ್ಲ. ಹೇಗೆಂದರೆ ಅವುಗಳ ಕಾರ್ಖಾನೋದ್ಯಮಗಳು ವಿಸ್ತಾರಕ್ಕೆ ಹರಡಿಕೊಂಡಿವೆಯಾದ್ದರಿಂದ ಅವುಗಳ ಕೇಂದ್ರ ಸ್ಥಳವನ್ನು ಪುಡಿಗುಟ್ಟುವೆನೆಂದರಾಗುವದಿಲ್ಲ. ಇವೆರಡು ರಾಷ್ಟ್ರಗಳ ನಗರಗಳನ್ನು ಪೂರ್ತಿಪಡಿಸುವದು ಕೂಡಾ ಸುಲಭ ಮೇಲಾಗಿ ಈ ರಾಷ್ಟ್ರಗಳ ನಗರಗಳ ಮೇಲೆ ಬೋಂಬೊಗೆಯಲು ಹೋಗುವ ವಿಮಾನಗಳು ನೂರಾರು ಮೈಲು ಹಾರಾಡಿಕೊಂಡು ಹೋಗಬೇಕು; ಹಾದಿಯಲ್ಲಿ ಹೆಜ್ಜೆ ಹೆಜ್ಜೆಗೆ ಎಂಬಂತೆ ಅವುಗಳನ್ನು ತಡೆಕಟ್ಟುವ ವಿಧಾನಗಳು ಇದ್ದೇ ಇರುತ್ತವೆ. ಆದ್ದರಿಂದ ರಶ್ಯ ಮತ್ತು ಅಮೆರಿಕವನ್ನು ಆಟಂ ಬೋಂಬಿನಿಂದ ಗೆಲ್ಲಬಹುದೆಂಬ ಧೈರ್ಯ ನಿರರ್ಥಕ. ಅದೇ ಮಟ್ಟಿಗೆ ಇಂಗ್ಲಾಂಡು ನಿಜಕ್ಕೂ ದುರ್ಬೈವಿ ಅಲ್ಲಿ ಜನದೊತ್ತಡ ಜಾಸ್ತಿ; ಅದು ನೀಲಿ ಆಕಾಶ ಧಾಳಿ ನಡೆಸಲು ಅಡಜಣೆ ಕಡಿವೆ. ಒಂದು ರಾಷ್ಟ್ರದ ಬಲವನ್ನು ಧ್ವಂಸ ಮಾಡಿದ ಚಿನ್ನಶ್ಲೇಷದನ್ನು ಹಿಡಿದುಕೊಳ್ಳುವ ಮೂಲಕ ಯುದ್ಧ ಗೆಲ್ಲಬೇಕು; ಅಮೆರಿಕದ ಮೇಲೆ ರಶ್ಯವು ಆಟಂ ಬೋಂಬು ಹಾಕಿದರೂ ಅದನ್ನನುಸರಿಸಿ ಮೇಲೇರಿ ಹೋಗಬೇರಾದರೆ ವಿಶಾಲ ಸಮುದ್ರವನ್ನು ದಾಟಲಿಕ್ಕಿದೆ; ಅಂತಹ ಅನುಕೂಲತೆ ಈತನಕ ಇಲ್ಲ. ಒಂದು ಆಟಂ ಬೋಂಬು ನಾಲ್ಕು ಟನ್ನು ಭಾರ ವಿರುವಾಗ, ಅದನ್ನು ಅಂಗೀ ಕಿಸೆಯಲ್ಲಿಟ್ಟುಕೊಂಡು ಹೋಗಿ ಬೇರಾದಲ್ಲಿ ಚೆಲ್ಲಿ ಬರಲಾಗುವದಿಲ್ಲ. ಆದ್ದರಿಂದ ಇಂತಹ ಯಾವ ಪ್ರಯೋಗವೂ ಅಸಾಧ್ಯ.

ಕಣ್ಮರೆಯಲಿ!

"ಆಟಂ ಬೋಂಬಿನಿಂದ ಗಣ್ಯನನ್ನು ಒಂದೇ ಒಂದು ವಾರದೊಳಗೆ ಅಳಿಸಿ ಬಿಡಬಹುದು" ಎಂಬ ಭ್ರಮೆಯು ಅಮೆರಿಕದ ಹಲವು ಲೇಖಕರಿಗಿದೆ. ಆದರೆ ಅಲ್ಲಿಯ ತಜ್ಞರಿಗಿದು ಹಗಲ್ಗನಸೆಂಬ ಗುಟ್ಟು ಗೊತ್ತಿರುವುದರಿಂದಲೇ ಅಮೆರಿಕವು ಆಟಂ ಶಕ್ತಿಯ ಮೇಲೆ ಅಧಿಕ ವಿಶ್ವಾಸವಿಡದೆ ಅಹುತೀ ಕ್ಷೇತ್ರಗಳಾಗಿ ದುರ್ಬೈವೀ ಪಟ್ಟಿಯ ಯುರೋಪು ರಾಷ್ಟ್ರಗಳನ್ನು ತಮ್ಮ ಮಿತ್ರ ರಾಷ್ಟ್ರಗಳನ್ನಾಗಿ ಸಂಘಟಿಸಿಕೊಳ್ಳುವ ಪ್ರಯತ್ನ ನಡೆಸಿದೆ. ಇಂಥ ಸಂದರ್ಭದಲ್ಲಿ ದೂರ ದೃಷ್ಟಿಯಿಂದ ಬ್ರಿಟನು ವಹಿಸಬೇಕಾದ ಧೋರಣೆಯೆಂದರೆ ತಾನು ಸಶಸ್ತ್ರ ತಯಾರಿದ್ದುಕೊಂಡೇ ಪೂರ್ಣ ತಾಟಸ್ಥ್ಯ ವಹಿಸಿ ನಿಲ್ಲುವದು. ಆ ಕಡೆಯ ರಶ್ಯ, ಈ ಕಡೆಯ ಅಮೆರಿಕ, ಇವುಗಳಲ್ಲಾವುದೂ ತನ್ನನ್ನು ತಮ್ಮ ನಿಲ್ದಾಣವಾಗಿ ಮಾಡಿಕೊಳ್ಳದಂತೆ ಇಂಗ್ಲಾಂಡು ಪ್ರತಿಭಟಿಸುತ್ತಾ ನಿಂತು ಬಿಟ್ಟಲ್ಲಿ ಅದು ನಿಜಕ್ಕೂ ಗೆಲ್ಲಬಹುದು. ಆದರೆ ದುರ್ದೈವವಶಾತ್ ಬ್ರಿಟನು ಇಪ್ಪರಲ್ಲೇ ಅಮೆರಿಕದ ನಿಲ್ದಾಣವಾಗಿದೆ. ಆಟಂ ಶಕ್ತಿಯನ್ನು ಇಂತಹ ಧ್ವಂಸ ಕಾರ್ಯಕ್ಕೆ ಹಚ್ಚುವ ಬದಲಿಗೆ ಉದ್ಯೋಗಾಭಿವೃದ್ಧಿಗೆ ಉಪಯೋಗಿಸುವಂತಾದರೆ ಮಾತ್ರ ಲೋಕ ಕಲ್ಯಾಣ ಮತ್ತು ಎಲ್ಲ!

ಯ ಸಾಧನೆಯಾದೀತು. ಅಮೆರಿಕ, ಇಂಗ್ಲಾಂಡು ಮತ್ತಿತರ ರಾಷ್ಟ್ರಗಳಿಗಿಂತ ಊ ಭಾರತ, ಚೈನಾ, ಇತ್ಯಾದಿಯಪ ರಾಷ್ಟ್ರಗಳ ಉದ್ದಿಮೇಪ್ರಗತಿ ಸಾಧನೆಗೆ ಆಟಂಶಕ್ತಿಯ ಅನಿವಾರ್ಯತೆ ಹೆಚ್ಚಿಗಿದೆ ಎಂದು ಪ್ರೊಫೆಸರ್ ಬ್ಲ್ಯಾಕೆಟ್ ಆಧಾರಕೊಟ್ಟು ಸೂಚಿಸಿದ್ದಾರೆ.

ದಿ ಕೆನರಾ ಬ್ಯಾಂಕ್, ಲಿಮಿಟೆಡ್.

ಸ್ಥಾಪಿತ: ೧೯೦೬

[ಹೊಸಗಾರಿಕೆ ಪರಿನಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ

ನನ್ನ ಕಲೆಕ್ಷನ್ [ವಸೂಲಿ ಆಥವಾ ಸಂಗ್ರಹ] ಇಲಾಖೆಯು ನನ್ನ ವ್ಯವಹಾರಗಳಲ್ಲಿ ರಸಮಯಗಳ ಸಹಾಯವನ್ನು ಶೀಘ್ರತೆಯಿಂದ ಮಾಡುವಂತೆ ಸುವ್ಯವಸ್ಥೆಗೊಳ್ಪಟ್ಟಿದೆ- ಪೋನಸಿದಂತಿರುವ ನಮ್ಮ ಶಾಖೆಗಳು ದಖ್ಖಣದ ಅಂಚೆಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಅಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರಿನ ಜಿಲ್ಲೆಯ ಕೆಂಗಂಗಳ, ವೈಶ್ಯವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ಗಿರಾಕಿಗಳ ಬಗ್ಗೆ ಕಲೆಕ್ಷನ್ ರಹಸ್ಯಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಶ್ರೇಷ್ಠ ಮತ್ತು ವಿಚಕ್ಷಣ ಸೇವೆಯ ವ್ಯವಸ್ಥೆಯನ್ನು ರೂಪಿಸಿಕರುವಂತೆ ಮಾಡಿದೆ.

ನನ್ನ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿತಾಯವು. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಹಸ್ಯಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ವೀಕ್ಷಣ ಲಕ್ಷ್ಯ ದೊರೆವುದು.

The Canara Bank Limited.

ESTD: 1906.

ಮುಂದಿನ ಸುಖ ಸೌಕರ್ಯಕ್ಕಾಗಿ ಇಂದೇ ನಮ್ಮ ರಾಜಾಗ್ರಹಕ್ಕೆ ವಹಿಸುವುದು

ಜಾಣತನವಲ್ಲವೆ?

ಕಡಿಮೆ ಉತ್ಪತ್ತಿಇದ್ದು, ಸ್ವಲ್ಪ ಸ್ವಲ್ಪವಾ ಸ್ಥಾದರೂ ಉಳಿಸಬೇಕೆನ್ನುವವರಿಗೆ ಅತ್ಯನುಕೂಲವಾದ ಜನತಾ ವಿಮಾಸಂಸ್ಥೆ

ದಿ ನ್ಯೂ ಕರ್ನಾಟಕ

ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ವಿಮಾವಿವರಕ್ಕೆ ವಿಜಸ್ಸಮೀಪಂತಿಗೂ ಬರೆಯಿರಿ

ಗಾಂಧಿಜಿ-ನೆಹರು-ವಲಭಾಯಿ ಇವರೊಳಗಿನ ಸಂಬಂಧ.

ಭಾರತೀಯ ಜನ್ಮ ಸಾಮ್ರಾಜ್ಯದ ಒಂದು ದೊಡ್ಡ ದೋಷವೆಂದರೆ ವಿಶಾಲ ಹಾಗೂ ನಿರ್ವಿಕಾರ ಬುದ್ಧಿಯಿಂದ ವಿಷಯ ಪರಿಶೀಲನೆ ನಡಿಸಲು ತಿಳಿಯದಿರುವುದೇ. ಭಾರತವನ್ನೇ ತನ್ನ ಮಾತೃಭೂಮಿಯಾಗಿ ಗಣಿಸಿ, ಯಾವ ಒಬ್ಬ ಮಹಿಳೆಯೂ ಈ ದೇಶಕ್ಕೆ ಸೂಡಿರದಷ್ಟು ಹಿಚ್ಚಿನ ಸೇವೆ ಸಲ್ಲಿಸಿದ್ದ ಶ್ರೀಮತಿ ಅನಿಬೆಸೆಂಟ್ ರೊಡನೆ ಸೆಣಿದ್ದ ಸಲುಗೆಯ ಬಲದಿಂದ ಈಗ ಪಾಕಿಸ್ತಾನದಲ್ಲಿ ಹಿಂದೀ ಹ್ಯಾ ಕಮಿಕನರ್ ಆಗಿರುವ ಶ್ರೀ ಶ್ರೀಪ್ರಕಾಶರು ಒಮ್ಮೆ ಕೇಳಿದ್ದರು: "ಬಿಸೆಂಟರೇ, ನೀವು 40 ವರುಷಗಳಿಂದ ಈ ರಾಷ್ಟ್ರದ ಸೇವೆ ಮಾಡಿರುವಿರಿ. ಹಿಂದೀಯರ ಕುರಿತು ನಿಮ್ಮ ಅಭಿಪ್ರಾಯವೇನು?" ಬಿಸೆಂಟರು ಈ ಪ್ರಶ್ನೆಯಿಂದ ಜಾರಿಕೊಳ್ಳಲು ನೋಡಿದರೂ ಶ್ರೀ ಪ್ರಕಾಶರು ಬಿಡದಿದ್ದುದರಿಂದ ಕೊನೆಗೆ ಹೇಳಿದರಂತೆ: "ಹೇಳುವದಕ್ಕೆ ಪಂಕಿಸುತ್ತೀನೆ ಪ್ರಕಾಶ್-ಆದರೆ ನೀವು ಸಾಕಷ್ಟು ವಿಶಾಲ ಬುದ್ಧಿಯವರಲ್ಲ" ಈ ಮಾತನ್ನು ಅಲ್ಲಗಳೆಯಲು ಗುಂಧ್ಯವೆ? ನಿದರ್ಶನಕ್ಕಾಗಿ ಈಗ ನಮ್ಮ ಜನರ ತಲೆಯಲ್ಲಿ ಸುಳಿದಾಡುತ್ತಿರುವ ವಿಹಾರಗಳ ಸ್ವರೂಪವನ್ನೇ ನೋಡೋಣ. ಯಾವುದಾದರೊಂದರಲ್ಲಿ ತಿರುಳಿಷ್ಟು ಎಂಬುದನ್ನು ನೋಡುವುದಕ್ಕಿಂತಲೂ ಆದರಲ್ಲಿರುವ ಪೋಳುಗಳಿಷ್ಟು ಎಂದು ಲೆಕ್ಕಿಸುವುದರಲ್ಲೇ ಅನಸ್ಥೆ ಹೆಚ್ಚಗ! ನಿದರ್ಶನಕ್ಕಾಗಿ ಈಗ ಹಲವರಿಂದ ಒಳಗಿಂದೊಗೆ ಪ್ರಚಾರಾಂವಾಗುತ್ತಿರುವ 'ನೆಹರು-ವಲ್ಲಭಾಯಿ ವಿರೋಧ'ದ ಕಲ್ಪನಾಕಥೆಗಳಿವೆ.

ನೆಹರು–ವಲ್ಲಭಾಯಿ

ನಿಜಕ್ಕೂ ಸ್ವತಂತ್ರ ಭಾರತದ ರಾಜಕೀಯ ರಥವು ಕಣಿವೆ, ಕಲ್ಲುಗಳ ಹಾದಿಯಲ್ಲಿ ಮುಗ್ಗರಿಸದೆ ಮುಂದೆ ಒಂದಿರುವುದು ನೆಹರು-ವಲ್ಲಭಾಯಿ ಜತೆಯು ಆ ರಥದ ನೊಗಕ್ಕೆ ಹೆಗಲು ಕೊಟ್ಟಿಳೆದು ತಂದುದರಿಂದಲೇ; ಇವರೊಳಗೂ 'ಜತೆಯೆತ್ತಿಗೆ ಹಾಯುವ ಬುದ್ಧಿಯಿದೆ' ಎನ್ನುವ ಜಾಣ ಬುದ್ಧಿಯ ಪ್ರಚಾರಗಳಾಗಿವೆ. ಈ ಕುರಿತು ಅಪತ್ಯ, ಅರ್ಧಸತ್ಯ ಕಥೆಗಳೆಷ್ಟೋ ಬಾಯಿಯಂದ ಕಿವಿವರೆಗಿನ ಬೀದಿಯಲ್ಲಿ ಸುಳಿದಾಡಿಕೊಂಡಿವೆ. ನೆಹರೂ ಮತ್ತು ವಲ್ಲಭಾಯಿಗಳಮತೀಂಭಿನ್ನವಾದ ವ್ಯಕ್ತಿತ್ವಗಳೆಂಬುದು ನಿಜ. ಆದರೆ ಇಂದಿನ ಭಾರತಕ್ಕೆ ಇವೆರಡೂ ಮತ್ಯಾವುಗಳ ಜತೆಗಾರಿಕೆಯೂ ಅತ್ಯಗತ್ಯವೆಂಬುದನ್ನು ರಾಷ್ಟ್ರವಂಚಿದೆ; ಮಿಕ್ಕೆಲ್ಲಂಗಿಂತ ಹೆಚ್ಚಾಗಿ ನೆಹರೂ ವಲ್ಲಭಾಯಿಗಳೇ ಇದನ್ನು ಮನಗಂಡಿದ್ದಾರೆ. ನವೋದಿತ ಸ್ವತಂತ್ರದ ನವ ಭಾರತದ ನಿಶಾಲ ಧೋರಣೆ ಮತ್ತು ಘನತೆ ಹಾಗೂ ಒಗ್ಗಟ್ಟನ್ನು ಸ್ಪಷ್ಟಪಡಿಸಲು ನೆಹರುಗಳಂತಹ ತಿಳಿವಿನ್ನಿನ, ಲೋಕೋನ್ನತ ನಾಗರಿಕ ಬೇಕಾಗಿರುವಂತೆಯೇ, ಸ್ವತಂತ್ರ್ಯದಾದಿ ಭಾಗದ ತಡೆ ತೆಡಕುಗಳನ್ನು ನಿವಾರಿಸಿ, ಕಲಿತನದಿಂದ ಕಾರ್ಯ ಜೋಡಿಸಿ ಮಾಡಬಲ್ಲ ವಲ್ಲಭಾಯಿಗಳಂತಹ ಉಕ್ಕಿನ ಮನುಷ್ಯನೂ ಬೇಕೇ ಬೇಕು; ಸ್ವಸಾಮರ್ಥ್ಯಂಕ ಮನಗಿದು, ಆರ್ಥಿಕ ಸಾಮಾಜಿಕ ನವ ರಚನೆಯ ಹೊಸ ಅಂಕ ಪ್ರಾರಂಭಿಸುವಾಗ ರಾಷ್ಟ್ರಪ್ರತಿ ಸರ್ದಾರರಂತಹ ಬಿಗಿ ಮುಷ್ಟಿಯವರನ್ನು ಉದುರಿಸಿಕೊಂಡೇ ಮುಂದೊತ್ತಬೇಕಾಗಿ ಬರಬಹುದು; ಆದರೀ ದಿಸೆ ಸರ್ದಾರರಲ್ಲದೆ ನಡೆಯದು. ಹೀಗಾಗಿ ನೆಹರು–ಸರ್ದಾರರಿಬ್ಬರೂ ರಾಷ್ಟ್ರಕ್ಕೆಗಿ ಅತ್ಯಗತ್ಯವಾಗಿ ಬೇಕು; ಮಾತ್ಸರ್ಯವಲ್ಲ, ಇಂದಿನ ಭಾರತದ ಅತಿ ದೊಡ್ಡ ಭಾಗ್ಯವೆಂದರೆ ಇವೆರಡು ಕೈಗಳು ಜತೆಯಾಗಿ ಅದನ್ನಾ ಧರಿಸಿರುವುದೇ. ಈ ರೀತಿ ದೇಶಕ್ಕೆ ಅವರಿಬ್ಬರೂ ಅನಿವಾರ್ಯವಿರುವಂತೆಯೇ ನೆಹರೂ ಯೋಗ್ಯತೆಗೆ ಸರ್ದಾರರ ಶಕ್ತಿಯ ಬಲ-ಸರ್ದಾರರ ಶಕ್ತಿಗೆ ನೆಹರೂ ಬೆಂಬಲ ಅನಿವಾರ್ಯ. ಇದನ್ನು ಅವರಿಬ್ಬರೂ ಜಿನ್ನಾಗಿ ಬಲ್ಲರು; ಅನರಿಬ್ಬರೂ ಹಲವು ಸಂದರ್ಭಗಳಲ್ಲಿ ಹೃದಯ ಬಿಚ್ಚಿ ಆಸೂಗತಿಯನ್ನು ಆಡಿಯೂ ತೋರಿಸಿದ್ದಾರೆ. 'ಸರ್ದಾರರ ಸಲಹೆ ಮತ್ತು ಪ್ರೇಮವಿಲ್ಲದಿರುತಿದ್ದರೆ ರಾಷ್ಟ್ರಪ್ರವನ್ನೀ ರೀತಿ ನಡೆಸಲು ನನ್ನಿಂದಾಗುತ್ತಿರಲಿಲ್ಲ" ಎಂದು ಪಂಡಿತ ನೆಹರುಗಳ ತನ್ನ ಜಯಂತೀ ದಿನ ಹೇಳಿದ್ದರು. ಮೊನ್ನೆ ಕಾಶಿ ಹಿಂದೂ ವಿಶ್ವವಿದ್ಯಾಲಯದ ಪದವೀ ದಾನ ಸಮಾರಂಭದಲ್ಲಿ ಮತ್ತು ಸಂಯುಕ್ತ ಪ್ರಾಂತೀಯ ಕಾಂಗ್ರೆಸ್ ಕೆಲಸಗಾರರ ಸಭೆಯಲ್ಲಿ ಸರ್ದಾರ್ ಪಟೇಲರಂಡಿದ ಈ ಕೆಳಗಿನ ಮಾತುಗಳನ್ನು ಹುಳುಕು ಪ್ರೇಮಿಗಳೆಲ್ಲರೂ ನೆನಪಿನಲ್ಲಿಡುವದು ವಾಸಿ:-

ಸರ್ದಾರರ ನಿವೇದನೆ

"ಯಾರ ಸಂಯಮ ಮತ್ತು ತಪಸ್ಸು ನಮಗೀ ಸ್ವಾತಂತ್ರ್ಯದುಡುಗೊರೆಯನ್ನು ರಂದಿತೋ ಆ ಗಾಂಧೀಜಿಯ ಕರಿಯನ್ನು ಶಿರಸಾವಹಿಸಿದ ಮಿಲಿಯಾವಧಿ ಜನರಂತೆಯೇ ನಾನೂ ಅವರ ಒಬ್ಬ ವಿಧೇಯ ಸೋಲ್ಜರ ಮಾತ್ರ ಹೊರತು ಬೇರೇನೂ ಅಲ್ಲ. ಅವರ ಅಂಧಾನು ಯಾಯಿಯೆಂದು ಪ್ರತಿಯೊಬ್ಬನೂ ನನ್ನನ್ನು ಕರೆಯುತಿದ್ದ ಕಾಲವೊಂದಿತ್ತು, ಆದರೆ ನನ್ನೀ ಅಸೂಯಾಯಿತ್ವಕ್ಕೆ ನಮ್ಮಿಬ್ಬರಿಗಿನ ಸಂಕಲ್ಪಸಾಮ್ಯತೆಯೇ ಕಾರಣವೆಂದು ನವಗಿಬ್ಬರಿಗೂ ತಿಳಿದಿತ್ತು. ಭಾರತ ಸ್ವಾತಂತ್ರ್ಯದ ಆ ದೊಡ್ಡ ಪ್ರಶ್ನೆ ಮುಂದೆ ಬಂದಾಗ ನಮ್ಮೊಳಗೆ ಭಿನ್ನಾಭಿಪ್ರಾಯ ಮೂಡಿತು. ಕೂಡಲೇ ಸ್ವಾತಂತ್ರ್ಯ ಕೈಗೆತ್ತಿಕೊಳ್ಳಬೇಕು; ಅದಕ್ಕಾಗಿ ದೇಶ ವಿಭಜನೆಗೊಪ್ಪಬೇಕು ಎಂಬ ಸಂಕಲ್ಪವನ್ನು ನಾನು ಮಾಡಿದ್ದೆ; ವಿಶೇಷ ರೀತಿಯಲ್ಲಿ ಆಕ್ಷಶೋಧನೆ ಮಾಡಿ, ಅತಿ ಹೆಚ್ಚಿನ ಯೋಚನೆಯೊಡನೆ ನಾನೀ ನಿರ್ಧಾರಕ್ಕೆ ಬರಲು ಕಾರಣವಿಷ್ಟೆ:- ರಾಷ್ಟ್ರ ವಿಭಜನೆಗೆ ನಾವು ಒಪ್ಪದೆ ಹೋದರೆ ಭಾರತವು ಹತ್ತು ಹಲವು ತುಂಡುಗಳಾಗಿ ಸಂಪೂರ್ಣ ಹಾಳಾಗಿ ಹೋಗಲಿದೆ. ನಾವು ಅನಾಹುತದ ಕಡೆಗೆ ಧಾವಿಸುತಿದ್ದೇವೆ ಎಂಬ ಭೀತಿ ಅದುವರೆಗಿನ ಒಂದು ವರುಷ ಅಧಿಕಾರ ಚಾಲನ ಮಾಡಿದ ಅನುಭವದಿಂದ ನನಗೆ ಬಡಿದಿತ್ತು. ಒಂದೇ ಪಾಕಿಸ್ತಾನವಲ್ಲ, ಹಲವು ಪಾಕಿಸ್ತಾನಗಳಾಗಬಹುದು; ಪ್ರತಿಯೊಂದು ಅಭಿಪ್ರಸಿನಲ್ಲೂ ಕೋಣೆ ಪಾಕಿಸ್ತಾನಗಳು ನಿರ್ಮಾಣಗೊಳ್ಳಬಹುದು ಎಂಬ ದಿಗಿಲು ನನ್ನಲ್ಲಿ ಉಂಟಾಗಿತ್ತು. ನನ್ನೀ ನಿರ್ಧಾರವನ್ನು ಗಾಂಧೀಜಿ ಸಮ್ಮತಿಸಲಿಲ್ಲ. ಜೈದಯದೊರೆಗಲ್ಲಲ್ಲಿ ತಿಳಿಸಿ ಪರೀಕ್ಷಿಸುವಾಗ ನಿಮ್ಮೀ ನಿರ್ಧಾರವೇ ಸರಿಯೆಂದು ನಿಮಗೆ ಖಚಿತವಿರುವುದಾದರೆ ನೀವು ಅದೇ ರೀತಿ ಮುಂದೊತ್ತಬೇಕೆಂದೇ ಗಾಂಧೀಜೀ ನನಗಂದರು. ಗಾಂಧೀಜೀ ತಮ್ಮವಾರಿಷ್ಕಾರನಾಗಿ ನೇಮಿಸಿದ್ದ ನಮ್ಮ ನಾಯಕರು ಇಲ್ಲಿ ನನ್ನ ಪಕ್ಷಕ್ಕಿದ್ದರು. ನಮ್ಮನ್ನು ಗಾಂಧೀಜಿ ವಿರೋಧಿಸಲೂ ಇಲ್ಲ. ನಮ್ಮ ನಿರ್ಧಾರಕ್ಕೆ ತನ್ನ ಒಪ್ಪಿಗೆಯನ್ನೂ ಕೊಡಲಿಲ್ಲ. ಹೃದಯದ ಮಹಾ ಮಲ್ಲಯುದ್ಧಾನಂತರವೇ ನಾವಾ ನಿರ್ಧಾರ ಮಾಡಿದ್ದಾದರೂ ಈ ದಿನ ಕೂಡಾ ನಾನದಕ್ಕಾಗಿ ಪಶ್ಚಾತ್ತಾಪ ಪಡುವದಿಲ್ಲ. ಒಂದು ಜೀವಂತ ಅಂಗವನ್ನು ಕತ್ತರಿಸಿ ಕೆಗೆಯುವಾಗ ಸ್ವಾಭಾವಿಕವಿರುವ ಸಾಕಷ್ಟು ರಕ್ತಸ್ರಾವವಾಯಿತೆಂಬುದೇನೋ ನಿಜ. ನಾವು ಕೆಲವು ತಪ್ಪುಗಳನ್ನು ಮಾಡಿರುವೆವೆಂಬುದರಲ್ಲಿ ಸಂಶಯವಿಲ್ಲ. ನಾವು ಲೋಕದಿದಿರು ಲಜ್ಜಪಡಬೇಕಾದ ಪ್ರಮಾದಗಳನ್ನು ಮಾಡಿದ್ದೇವೆ. ಆ ತಪ್ಪುಗಳ ಪ್ರತ್ಯಕ್ಷ ಪರಿಣಾಮವೇ ಗಾಂಧೀಜಿಯ ಕೊಲೆ. ನನ್ನಮ್ಮನೇ ಆದ, ತಪ್ಪು ಹುಡಿ ಹಿಡಿದೋರ್ವ ಯುವಕನು ಈ ಕೆಲಸ ಮಾಡಿಬಿಟ್ಟನೆಂಬುದನ್ನು ನಾವೆಂದೂ ಮರೆಯುವಂತಿಲ್ಲ. ಆ ಮಟ್ಟಿಗೆ ನನ್ನನ್ನು ನಾವು ಎಂದಿಗೂ ಕ್ಷಮಿಸಿಕೊಳ್ಳುವಂತಿಲ್ಲ. ಪರಲೋಕಕ್ಕೆ ನಾವಿಬ್ಬರೂ ಜತೆ ಪ್ರಯಾಣ ಕೈಕೊಳ್ಳಬೇಕೆಂಬುದೇ ಗಾಂಧೀಜೀ ಮತ್ತು ನನ್ನೊಳಗಾಗಿದ್ದ ನಿರ್ಧಾರ. ನಾನಾ ದುರಂತದಿಂದ ಪೂರ್ಣ ಪರವಶನಾಗಿ ಆ ಒಪ್ಪಂದ ದಂತಾಗಲು ತೀರಾ ಸಮೀಪಿಸಿದ್ದೆ. ಆದರೆ ಇನ್ನೂ ಕೆಲವು ವರುಷ ನಿಮ್ಮ ಸೇನೆಯನ್ನು ಮಾಡಲಾಗುವಂತೆ ಗಾಂಧಿಜಿ ನನ್ನನ್ನು ತಡೆದು ನಿಲ್ಲಿಸಿ. ಹೋದ ದೆಂದಂತೆ ಹೋಗಿತ್ತಿದೆ. ನೆಹರುಗಳ ನಾಯಕತ್ವವನ್ನು ಜನ ಸರಿಸಿರಿ. ಈ ದಿನ ಪಂಡಿತ ನೆಹರುಗಳು ಸರಕಾರದಿಂದ ಹೊರ ಬಿದ್ದರೆ ಏನಾದೀತೆಂಬುದನ್ನು ಬಲ್ಲಿರಾ? ಚಂದ್ರಗ್ರಹಣವಾದೀತು. ಲೋಕಕ್ಕೆ ಬೆಳದಿಂಗಳನ್ನು ಚೆಲ್ಲಬೇಕು ಈ ಚಂದ್ರ ಪೊರತು ಅವನೆಂದಿಗೆ ಆಕಾಶದಲ್ಲಿ ಮಿನುಗುತ್ತಿರುವ ಮಿಕ್ಕ ಅಲ್ಪ ನಕ್ಷತ್ರಗಳಲ್ಲಿ"

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಠಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ನಮ್ಮ ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ನೌಕರರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣರ ಅಡಿಗೆ, ಕಿಂದಿಕಿನಸು, ಇವುಗಳ ರುಚಿಯಂತೂ ಹೇಳಬೇಕೇ!

ಪ್ರೊಪ್ರೈಟರ್:— ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ. 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಸ್ಥಳಾನ ವಿಜಯಪುರ:-

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಶಾಖಾ ಖಚೇರಿಗಳು:-

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್, ಕಲ್ಲಿಕೋಟೆ ಮತ್ತು ನುಂಗಳಿವು.

ಕಳದ ಮುವತ್ತೈದು ವರುಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ ನಾವು ಜನಾಂಗದ ಪ್ರೇಯೋಭಿವೃದ್ಧಿಗೂ ಕಡೆಗೆ ನಮ್ಮ ನಮ್ಮ ಸೇವೆಯನ್ನು ಸಲ್ಲಿಸಿರುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯ ಮಾತು.

ವಿಮಾ ಮಾಡಲಿಕ್ಕಾಗಲೀ, ವ್ಯಾಪಕವಿಶ್ವ ಪಡೆಯಲಿಕ್ಕಾಗಲೀ ದಯವಾಡಿ ನಮಗೆ ಆಗಾಗ ನಮ್ಮ ಶಾಖೆಗಳಿಗಾಗಲೀ ಬರೆಯಿರಿ.

'ಹಾ! ಪಾಕಿಸ್ತಾನವು ಮೇಲೆ ಬಿದ್ದು ಹೊಡೆದೀತು!'

— ರುಘಫರುಲ್ಲಾ

ಇತ್ತೀಚೆಗೆ ಕಾಶ್ಮೀರ ರಣರಂಗದಲ್ಲಿ ಹಿಂದೀ ಸೈನಿಕರ ಕೈ ಮೇಲಾಗುತ್ತಿದೆ. ಆ ಖುಷಿಯ ಸೇನಾ ಸಂಖ್ಯೆಯನ್ನು ಹೆಚ್ಚಿಸಿ, ದೊಡ್ಡ ಪರಿಮಾಣದ ಧಾಳಿಗಳನ್ನು ಹೂಡಿ 'ಒಬ್ಬನೇ ಒಬ್ಬ ಧಾಳಿಗಾರನನ್ನೂ ಕಾಶ್ಮೀರದಲ್ಲಿರಗೊಡಬಾರದು' ಎಂಬ ತನ್ನ ಶಪಥವನ್ನ ಪೂರೈಸಿಕೊಳ್ಳಲು ಭಾರತ ಸರಕಾರವೀಗ ದೃಢ ನಿಶ್ಚಯಗಳನ್ನಿಡಹಿತ್ತಿದೆ. ಅತ್ತ ಕಾಶ್ಮೀರದಲ್ಲಿ ಸಂಧಾನ ಸಾಧನೆಗಾಗಿ ನೇಮಕಗೊಂಡಿದ್ದು, ಇಲ್ಲಿಗೆ ಬಂದು ಹಲವು ತಿಂಗಳುಗಳ ವರೆಶೀಲನೆ, ಪರ್ಯಾಲೋಚನೆ ನಡೆಸಿ ಯು.ಎನ್.ಓ.ಗೆ ಮಂಡಿಸಿದ್ದ 'ಕಾಶ್ಮೀರ ಸಮಿತಿ'ಯು ತನ್ನ ತಾತ್ಕಾಲಿಕ ವರದಿಯನ್ನು ವ್ಯಾಸಿನಲ್ಲಿ ಭದ್ರತಾ ಸಮಿತಿಗೊಪ್ಪಿಸಿದೆ. ಆ ವರದಿಯಲ್ಲಿ ಯಾವ ರಾಜೀ ಸೂತ್ರವೂ ಇಲ್ಲ; ಭದ್ರತಾ ಕೌನ್ಸಿಲು ಕೈಕೊಳ್ಳಬೇಕಾದ ಕಾರ್ಯ ಸೂಚನೆ ಯಾವುದೂ ಇಲ್ಲ. ಬದಲಿಗೆ ತಾವು, ಭಾರತಕ್ಕೆ ಕಾಲಿಡುವಾಗ ಇದ್ದ ಪರಿಸ್ಥಿತಿಗಿಂತ ತೀರಾ ಭಿನ್ನವಾದ ಪರಿಸ್ಥಿತಿಯು ಪಾಕಿಸ್ತಾನದ ಕೃಮಬದ್ಧ ಸೇನೆಗಳ ಕಾಶ್ಮೀರ ಪ್ರವೇಶದಿಂದಾಗಿ, ತಾವು ಹೊರಡುವ ಕಾಲದಲ್ಲಷ್ಟೆಂದು ಆವರ 11 ಪುಟಗಳ ವರದಿಯಲ್ಲಿದ್ದಿತು; ಮತ್ತು ಇಕ್ಕುಡೆಗಳವ ಕೊಡನೆ ಶಾಂತ ಪರ್ಯಾಲೋಚನೆ ನಡೆ ಸಲನುಕೂಲವಾಗುವಂತೆಯೂ ಸಂಧಾನ ಸಾಧ್ಯತೆಯು ಯಾವ ಅಂತವನ್ನೂ ಬಿಡಿಸಿ ಪರಿಶೀಲಿಸಲಾಗುವಂತೆಯೂ ಎರಡೂ ಕಡೆಯವರು ಕೂಡಲೇ ಯುದ್ಧ ನಿಲ್ಲಿಸ ಬೇಕಾದುದಗತ್ಯವೆಂಬ ಸೂಚನೆಯಿತ್ತು.

ಪಾಕಿಸ್ತಾನದ ಧುರವೀಳ್ಯ

ಈನಡುವೆ ಪಾಕಿಸ್ತಾನದ ವಿದೇಶ ಮಂತ್ರಿ ಮತ್ತವರ ಪ್ರತಿನಿಧಿಯಾಗಿ ವ್ಯಾಸಿನಿಗೆ ಹೋಗಿರುವ ಸರ್ ಮಹಮ್ಮದ್ ಝಫರುಲ್ಲಾ ಖಾನರು ಭದ್ರತಾ ಕೌನ್ಸಿಲಿಗೆ ಒಂದು ಪತ್ರವೊಪ್ಪಿಸಿ, ಕಾಶ್ಮೀರದ ಯುದ್ಧಕ್ಕಾಗಿ ಪಾಕಿಸ್ತಾನವು ಭಾರತದ ನೇರೇ ಹೋಗಬೇಕಾಗುವದೆಂಬ ಬೆದರಿಕೆ ಬೀರಿದ್ದರು. 'ಪಶ್ಚಿಮ ಕಾಶ್ಮೀರವನ್ನು ಸ್ವಾಧೀನ ಪಡಿಸಿಕೊಳ್ಳುವದಕ್ಕಾಗಿ ಹಿಂದೀ ಸೇನೆಯೀಗ ಸಾರ್ವತ್ರಿಕ ಧಾಳಿಯನ್ನು ಹೂಡಿದೆ. ಭದ್ರತಾ ಕೌನ್ಸಿಲು ಅವನ್ನ ಕೂಡಲೇ ನಿಲ್ಲಿಸಬೇಕು ಮಾಡದಿದ್ದರೆ, ಪೂಂಚ್ ಮತ್ತು ಮಿರ್ಪುರ ಜಿಲ್ಲೆಗಳನ್ನು ಹಿಂದೀ ಸೇನೆ ವಶಪಡಿಸಿಕೊಳ್ಳದಂತೆ ಮಾಡುವದಕ್ಕಾಗಿ ಪಾಕಿಸ್ತಾನವು ಇದುವರೆಗಿನ ತನ್ನ ಮೃದು ಧೋರಣೆ ಬದಲಾಯಿಸಿ, ತನ್ನಲ್ಲಿದ್ದ ಎಲ್ಲಾ ಸಾಧನೆಗಳ ಮೂಲಕ ಪ್ರತಿಧಾಳಿ ಕೈಕೊಳ್ಳದೆನಿರ್ವಾಹವೇ ಇಲ್ಲವೆಂಬುದನ್ನು ಪಾಕಿಸ್ತಾನ ಸರಕಾರವು ಭದ್ರತಾ ಕೌನ್ಸಿಲಿಗೆ ಸರ್ವ ಶಕ್ತಿಯಿಂದ ಒತ್ತಿ ಹೇಳುತ್ತದೆ. ಇದರ ಪರಿಣಾಮವಾಗಿ ಪಾಕಿಸ್ತಾನದ ಕೃಮಬದ್ಧ ಸೇನೆ ಮತ್ತು ಭಾರತದ ಕೃಮಬದ್ಧ ಸೇನೆಗಳೊಳಗೆ ಅತಿ ಹೆಚ್ಚಿನ ರಕ್ತಪಾತದ ಭೀಕರ ಯುದ್ಧ ನಡೆಯುವದಂತೂ ನಿಶ್ಚಿತಾರ್ಯ. ಪಾಕಿಸ್ತಾನವೀಪರಿಯೊಂದನ್ನು ತಪ್ಪಿಸಲು ನೋಡಿತು. ಈಗಲಂತೂ ಆ ಪತ್ರದ ಹೋರಾಟವು ವಿಶೇಷ ವಿಸ್ತಾರಗೊಳ್ಳುವ ಸಂಭವವೆದ್ದಿದೆ. ಕಾಶ್ಮೀರ ಸಮಿತಿಯು ಇಲ್ಲದಿರುವ ಕಾಲದಲ್ಲಿ ಆದರ ಸಂಧಾನ ಕಾರ್ಯಕ್ಕೆ ಭಂಗವೊದ್ದಬಾರದೆಂದು ಪಾಕಿಸ್ತಾನವು ಘರ್ಷಣೆಯನ್ನು ನಿಯಂತ್ರಿಸುವ ಕಡೆಮೆ ಮಾಡಿದ್ದಿತು. ತದ್ವಿರುದ್ಧವಾಗಿ ಭಾರತವು ಕಾಶ್ಮೀರದ ಕುರಿತು ಸೇನಾ ಮೂಲಕವೇ ಒಂದು ತೀರ್ಮಾನ ಹೊಂದಬೇಕೆಂದು ದೃಢ ನಿರ್ಧಾರ ಮಾಡಿದಂತಿದೆ. ಇತ್ತೀಚೆಗೆ ಜಮ್ಮು ಪ್ರೇತ್ರಕ್ಕೆ ಹೆಚ್ಚಿನ ಹಿಂದೀ ಸೇನೆಗಳು ಬಂದಿವೆ ಈಗ ಕಾಶ್ಮೀರವನ್ನು ಸೇನಾ ವಿಜಯದಿಂದಲೇ ಗೆದ್ದು ಕೊಳ್ಳುವ ಉದ್ದೇಶದಿಂದ ಹಿಂದೀ ಸೇನೆಯು ಮುಖ್ಯ ಧಾಳಿಯನ್ನಾರಂಭಿಸಿದೆ. ಈ ತನಕ ಅಜಾದ್ ಕಾಶ್ಮೀರ ಸರಕಾರವು, ಪಾಕಿಸ್ತಾನ್ ಸರಕಾರದ ಅತೀ ಕಡಿಮೆಮಿತಿಯ ಸೇನಾ ಬೆಂಬಲ ಪಡೆದು ರಕ್ಷಣಾ ಹೋರಾಟವನ್ನು ಮಾತ್ರ ಕೊಡುತ್ತಿದೆ. ಪಾಕಿಸ್ತಾನದ ವಿಮಾನಗಳೇನೂ ಗಣ್ಯ ಸಂಖ್ಯೆಯಲ್ಲಿಯುದ್ಧ ಬಾಂಗಿಗಳಾಗಿರಲಿಲ್ಲ ಹಿಂದೀ ಸೇನೆಯು ಈಗಿನ ವಿಹಾ ಧಾಳಿಯನ್ನು ನಿಲ್ಲಿಸದಿದ್ದರೆ ಪಾಕಿಸ್ತಾನವು ತನ್ನ ಸರ್ವ ಶಕ್ತಿಯನ್ನು ಮುಂದೊಡ್ಡಿ ಪೂರ್ಣ ರೂಪದ ಪ್ರತಿ ಧಾಳಿಯನ್ನಾರಂಭಿಸಬೇಕಾಗುವದು"-ಎಂಬುದೇ ಪಾಕಿಸ್ತಾನದ ಸರಪಾಗಿ ಸರ್. ಝಫರುಲ್ಲಾ ಭದ್ರತಾ ಕೌನ್ಸಿಲಿಗೆ ಕೊಟ್ಟಿರುವ ದೂರಿನ ಸಾರ.

ತಿರುಳಿಲ್ಲದ ಅಬ್ಬರ!

ಪಾಕಿಸ್ತಾನದ ಈಯುದ್ಧ ಘೋರ್ಜನೆಯನ್ನು "ಬಣಬಡಾಯಿ" ಎಂದು ಭಾರತಸರಕಾರದ ಅಧಿನಾಯಕರು ಹೀಗಳೆದಿದ್ದಾರೆ. ಮೊದಲನೆಯದಾಗಿ ಕಾಶ್ಮೀರ ಯುದ್ಧ ನಿರ್ಮಿಸಿ, ಅಲ್ಲಿಗೆ ತಾನು ಸೇನೆ ಕಳುಹಿರುವುದನ್ನು ಕೂಡಾ ಒಪ್ಪಿರುವ ಪಾಕಿಸ್ತಾನ ಕೈ ಅಲ್ಲಿಯ ಭಾರತ ಸರಕಾರದ ಸೇನಾ ಹೆಚ್ಚಳಕ್ಕಾಗಿ ದೂರುದ ಹಕ್ಕಿಲ್ಲ. ಎರಡನೆಯದಾಗಿ ಸದ್ಯದ ಧಳಿಗಾಲದ ಆಡಚಣೆಗಳಿಂದಾಗಿ ಹಿಂದೀ ಸೇನೆಯು ಅಲ್ಲಿ "ಮಹಾ ಧಾಳಿ" ಯಾವುದನ್ನೂ ಆರಂಭಿಸಲ್ಲ; ಮೂರನೆಯದಾಗಿ ತನ್ನ ಕರ್ವ ಫಲದಿಂದೆದ್ದಿರುವ ಕಳವಳ ಶಮನಕ್ಕಾಗಿ ಪಾಕಿಸ್ತಾನ ಇಂತಹ ಆರ್ಭಟ ಕೊಟ್ಟ ಮಾತ್ರಕ್ಕೆ ಅದಕ್ಕಾಗಿ ಕಾಶ್ಮೀರದ ಇಂಚು ನೆಲದಿಂದಾದರೂ ಹಿಂದೆಗೆಯುವ ಪ್ರಶ್ನೆಯಿಲ್ಲ-ಎಂಬುದೇ ಭಾರತ ಸರಕಾರದ ಸ್ಪಷ್ಟಾಭಿಮತ ಭಾರತವು ಹೊರಗಿನವರ ಇಂತಹ ಬೆದರಿಕೆಗಳಿಗೆಂದಿಗೂ ತಲೆ ಬಾಗದೆಂದು ಸರ್ದಾರ್ ಪಟೇಲರು ತನ್ನ ಬೆ ನಾರಸ್ ಭಾಷಣದಲ್ಲಿ ಸ್ಪಷ್ಟಪಡಿಸಿದ್ದಾರೆ. "ಕಮ್ಮಿದೆಲ್ಲವುಗಳೊಂದಿಗೆ ಅವರು ನಮ್ಮೊಡನೆ ಸೇರಿಕೊಳ್ಳುವ ನಿರ್ಧಾರ ಮಾಡುತ್ತಾರಾದರೆ ನಾವು ಕಾಶ್ಮೀರವನ್ನು ಮತ್ತವರ ಜನತೆಯನ್ನು ಎಂದಿಗೂ ಕೈಬಿಡುವ ಪಂತಿಲ್ಲವೆಂಬ ಒಂದು ಸಂಗತಿಯನ್ನು ಸ್ಪಷ್ಟಮಾಡಿದ್ದೇನೆ. ನಾವು ಹೆಚ್ಚಿನ ಸೇನೆಗಳನ್ನು ಕಳುಹಿದ್ದೇವೆಂದೂ, ತಮ್ಮನ್ನು ಹೊರಗೆ ಹಾಕಲು ನೋಡುತಿದ್ದೇವೆಂದೂ ಪಾಕಿಸ್ತಾನದ ವಿದೇಶ ಮಂತ್ರಿಗಳೀಗ ಗೊಣಗುತ್ತಿದ್ದಾರೆ. ಹಾಗೆಯಲ್ಲ, ನಾವು ಹಿಂದಿಗಿಯ ದಿದ್ದಲ್ಲಿ ತಾವೂ ತನ್ನ ಸೇನೆಗೆ ಹೆಚ್ಚಿಗೆ ಹೆಚ್ಚಿನ ಬೆಂಬಲ ಕಳುಹಿಸುತ್ತೇನೆಂದೂ ವಿಮಾನ ಬಲವನ್ನು ಉಪಯೋಗಿಸುತ್ತೇನೆಂದೂ ಹೆದರಿಸಹತ್ತಿದ್ದಾರೆ. ನಾವು ಇಂತಹ ಬೆದರಿಕೆಗಳಿಗೆ ಸೊಪ್ಪು ಹಾಕುವಂತಿಲ್ಲ' ಎಂದಿದ್ದಾರೆ ಸರ್ದಾರ್ ಪಟೇಲ್.

ಭದ್ರತಾ ಕೌನ್ಸಿಲಿನಲ್ಲಿ

ಆತ್ತ ಭದ್ರತಾ ಕೌನ್ಸಿಲು ಕಾಶ್ಮೀರ ಸಮಿತಿಯ ವರದಿಯ ಉಭಯಪ್ರಯೋಗಗಳನ್ನು ಸಮರ್ಥಿಸಿ, ಶಾಂತಿ ಸ್ಥಾಪನಾ ಪ್ರಯತ್ನ ಕೈವಶೀ ಮಾಡಿಕೊಡಲು ಭಾರತ ಮತ್ತು ಪಾಕಿಸ್ತಾನಗಳು ಹೋರಾಟ ನಿಲ್ಲಿಸಬೇಕೆಂದೂ ಸದ್ಯದ ಶಾಂತಿತಾ ಯತ್ನಕ್ಕೆ ಭಂಗವೊದ್ದುವಂತಹದೇನನ್ನೂ ಮಾಡಬಾರದೆಂದೂ ಇಕ್ಕಡೆಯವರನ್ನೂ ವಿಜ್ಞಾಪಿಸಿಕೊಂಡಿದೆ ಭದ್ರತಾ ಕೌನ್ಸಿಲಿನಲ್ಲಿ ಸರ್. ಝಫರುಲ್ಲಾರ ವಾದಕ್ಕೆ ಹೆಚ್ಚಿನ ಬೆಲೆ ಬರಲಿಲ್ಲ. ಈ ಕಾಶ್ಮೀರದ ಕಣ್ಣುಮುಚ್ಚಾಲೆಯ ಜಗತ್ತಿಲ್ಲೇ ಪಾಕಿಸ್ತಾನವು ಯಷ್ಟಿಸಿದ ಮತ್ತೊಂದೂ ಆಟದಿಂದಲೂ ವಿಶೇಷ ಪ್ರಯೋಜನವಾಗಲಿಲ್ಲ. "ಹಿಂದೀ ಸೇನೆ ಆಕ್ರಮಿಸಿಕೊಂಡಿಂದಿನಿಂದ ಹೈದರಾಬಾದ ಸಂಸ್ಥಾನದ ಪರಿಸ್ಥಿತಿ ಕೆಡುತ್ತಾ ಹೋಗಿದೆ" ಎಂಬ ನೆವನದಿಂದ ಮೂಲೆ ಪಾಲಾಗಿದ್ದ ಹೈದರಾಬಾದ್ ಪ್ರಶ್ನೆಯನ್ನು ಭದ್ರತಾ ಕೌನ್ಸಿಲಿನ ಕಾರ್ಯಕ್ರಮ ಪಟ್ಟಿಯಲ್ಲಿ ಸೇರಿಸಲು ಸರ್. ಝಫರುಲ್ಲಾ ಸಮರ್ಥರಾಗಿದ್ದರು. ಈ ಪ್ರಶ್ನೆಯು ಎತ್ತಲ್ಪಟ್ಟೊಡನೆಯೇ ಕಾಶ್ಮೀರದ ಸಂಬಂಧವಾಗಿ ಸರ್ ಝಫರುಲ್ಲರಿಗೆ ಉತ್ತರ ಕೊಡುತ್ತಾ ಅಲ್ಲೇ ಇದ್ದ ಭಾರತ ಪ್ರತಿನಿಧಿ ಸರ್. ಗಿರಿಜಾ ಶಂಕರ ಬಾಜ್‌ಪಾಯವರು ಹೊರಗೆ ನಡೆದು ಬಿಟ್ಟರು; ಈ ಪ್ರಶ್ನೆಯನ್ನು ಚರ್ಚಿಸಲಿಕ್ಕೇನೇ ಭಾರತವು ತಯಾರಿಲ್ಲವೆಂಬುದರ ಸೂಚನೆಯಾಗಿ! ಹೈದರಾಬಾದ್ ಪ್ರಶ್ನೆಯ ಪರ್ಯಾಲೋಚನೆಗೇನೇ ಹಿಂದೀ ಸರಕಾರ ಸಿದ್ಧವಿಲ್ಲವೆಂಬುದನ್ನು ತಿಳಿಸುವ ಪತ್ರವನ್ನು ಶ್ರೀಮತಿ ವಿಜಯಲಕ್ಷ್ಮಿಯವರು ಅಧ್ಯಕ್ಷರಿಗೆ ಬರೆದಿದ್ದರೂ, ಆದು ಸ್ಪಷ್ಟವಾಗುವದಿಲ್ಲ ಎಂದು ಅಧ್ಯಕ್ಷರು ಹೇಳಿದಾಗ ಅಲ್ಲೇ ಇದ್ದ ಶ್ರೀಮತಿಯವರು ಅಧ್ಯಕ್ಷರಿದ್ದಲ್ಲಿಗೆ ಹೋಗಿ ಸ್ಪಷ್ಟವಾಗಿ ಹೇಳಿ ಬಂದರು. ಆ ಮೇಲೆ ಮುಂದಿನ ಉಪಾಯ ಹೊಳೆಯದೆ, ಇನ್ನೊಂದು ದಿವಸಕ್ಕೆಂದು ಆ ಸಮಸ್ಯೆಯನ್ನೇ ಭದ್ರತಾ ಕೌನ್ಸಿಲು ನುಂಡೆ ಹಾಕಿತು. ರಜ್ವೀ ಖೈದರಾಬಾದ್ ಎಂಬ ಶವದ ನಾಲಿಗೆಯಿಂದಲೂ ಮಾತು ಹೊರಡಿಸಲಾಗುವ ಇಂದ್ರಜಾಲವನ್ನು ಆಡುವ ಚೆಟ್ಟಿ ಪಾಕಿಸ್ತಾನದ್ದು!

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮುಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಪಕ್ವ ಅನುಭವದ ಯೋಗ್ಯತೆಯಿದೆ.

ನಿರಖು ರೇವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.

ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬೇಂಕ್, ಲಿಮಿಟೆಡ್

ಹೆ. ಆ. ಮಂಗಳೂರು.

THE VIJAYA BANK LTD.,

H. O. MANGALORE, S. K.

ಯಕ್ಷಗಾನ ಕಲಾಮಂಡಲ, ಉಡುಪಿ.

(ರಿಜಿಸ್ಟರ್ಡ್)

ಮಹಾತ್ಮಾ ಗಾಂಧೀಜೀ ಸ್ಮಾರಕನಿಧಿಯ ಸಹಾಯಾರ್ಥವಾಗಿ

ಇದೇ ಶಾ. 11-12-1948ನೇ ಶನಿವಾರ ರಾತ್ರೆ ಘಂಟೆ 9ಕ್ಕೆ ಎಮ್ಮಾಳ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲೆಯ ವಠಾರದಲ್ಲಿ ಯಕ್ಷಗಾನ (ತಾಳಮದ್ದಳೆ) ಪ್ರೋಂದನ್ನು ಸಂಘದ ಸದಸ್ಯರೂ ಸುಪ್ರಸಿದ್ಧ ಪಾತ್ರವರ್ಗದವರೂ ಆದ ಈ ಕೆಳಗೆ ಹೆಸರು ಕಾಣಿಸಿದ ಅರ್ಥಧಾರಿಗಳ ಸಹಕಾರದಿಂದ ಜರುಗಿಸಲಿದೆ. ಕಲಾಭಿಮಾನಿಗಳಾದ ಮಹಾಜನರೆಲ್ಲರೂ ಉದಾರ ದ್ರವ್ಯಸಹಾಯ ಸಹಕಾರಗಳಿಂದ ಪ್ರೋತ್ಸಾಹಿಸಬೇಕಾಗಿ ಅಭ್ಯರ್ಥಿಸುತ್ತೇವೆ ಎಲ್ಲರಿಗೂ ಸ್ವಾಗತ.

ಪ್ರಸಂಗ.—

ಶ್ರೀ ಕೃಷ್ಣಸಂಧಾನ ಉತ್ತರಭಾಗ ಕರ್ಣಪರ್ವ ಪೂರ್ವಭಾಗ. ವಾಲಿವಧೆ.

ಭಾಗವತರು:—

ಶ್ರೀಗಳಾದ ಕೆ. ನಾರಾಯಣ ಸೆಟ್ರು, ಮರುಮಾಂತ ಬಾಸ್ಕ ಸೆಪರು.

ಮೃದಂಗವಾದಕರು:—

ಶ್ರೀಗಳೀಸ ಮಟ್ಟು ಗೋವರ್ಧನರಾಯರು, ಮಟ್ಟು ಸುಬ್ರಾಯರು.

ಪಾತ್ರವರ್ಗದವರು:—

ಶ್ರೀಗಳಾದ ಕುಂದಾಪುರ ಅಣ್ಣಪ್ಪ ಕಾರಂತರು, ಮಲ್ಪೆ ಶಂಕರನಾರಾಯಣ ಸಾವಂಗರು; ಕೆ. ಪಿರಾಮಕೃಷ್ಣ ತಂತ್ರಿಗಳು; ಪಿ. ಕಾಡಿಪ್ಪಯ್ಯನವರು, K-O- L- B- T; ಶಿವಶೆಟ್ಟರ ಶ್ರೀನಿವಾಸ ಶಾಂಡಿಲ್ಯರು; ಎಸ್. ಗಣಪಯ್ಯ ಸೆಟ್ರು; ಕೆ. ಸುಬ್ಬರಾಯರು; ಎ. ವಿರಿಯಣ್ಣ ಸೆಟ್ರು; ಪಂಡ್ಯಟಿಟ್ಟು ಸೀನ ಸೆಟ್ರು; ಬಿ. ವೀರಭದ್ರ ನಾಯಕರು; ಪೊಲ್ಕಿ ದೇವಪ್ಪ ಸೆಟ್ರು; ಪಾದೆಟಿಟ್ಟು ಕೊಸನ ಸೆಟ್ರು ಮುಂತಾದವರು ಸಹಭಾಗವಹಿಸಲಿರುವರು.

The Canara Banking Corporation Limited.

Estd: 1906

(Incorporated in British India)

Head Office: **UDIPI**, S. India.

Capital Authorised	...	Rs. 5,00,000
Capital Issued & Subscribed	....	Rs. 20,00,000
Capital Paid up	....	.... Rs. 19,98,445
Reserves....	....	... Rs. 8,66,751

BANKING BUSINESS OF EVERY DESCRIPTION TRANSACTED

V. R. Kamath, B.A.,LL.B.,
General Manager.

ಭಾನುವಾರ, ಉಡುಪಿ, ೨-೧೨-'೪೮

ಜನತಾ ಜವಾಬ್ದಾರಿ

ಸ್ವಾಧೀನ ಸ್ಥಾಪನೆಯಾಗಿ ಹದಿನೈದು ವರ್ಷಗಳು ಕಳೆದಿವೆ; ಈ ಅವಧಿಯಲ್ಲಿ ರಾಷ್ಟ್ರವು ಸಾಧಿಸಿಕೊಂಡಿರುವುದನ್ನು ಕಂಡು ಸಮಾಧಾನ ಪಡಬಹುದೋ ನಿಜ. ಆದರೆ ಹಾಗೆ ಗೆದ್ದ ಕೋಟಿ ಸ್ವರಾಜ್ಯ ಸ್ಥಾಪನೆಯ ದಿನದಿಂದ ಇದ್ದ ಗೊಂದಲಗಳನ್ನು ಮಾತ್ರ; ಸ್ವರಾಜ್ಯದ ನಿಜ ಫಲಗಳನ್ನು ಅನುಭೋಗಿಸಲು ಸಮ್ಮಿಂದಿರುವವರೆಗೂ ಆಗಲ್ಲವೆಂಬುದನ್ನು ಒಪ್ಪಬೇಕು. ಜಾತೀಯ ಗಲಭೆಗಳು ಎಳಲೇ ಬೇಕೆಂದಿರಲಿಲ್ಲ; ಪೈದರಾಬಾದ್ ಘರ್ಷಣೆಯು ಸ್ವಾತಂತ್ರ್ಯದ ಒಂದು ಅಂಗವೇನೂ ಆಲ್ಲ; ಕಾಶ್ಮೀರದ ಕಳಗವೂ ಹಾಗೇನೆ-ಇವೆಲ್ಲವನ್ನೂ ಸ್ವತಃ ನಿರ್ಮಿಸಿಕೊಳ್ಳುವ ಕಾರ್ಯವು ಸ್ವತಂತ್ರ ಭಾರತದ್ದಾಗಿರಲಿಲ್ಲ. ಅವು ಅನಿವಾರ್ಯವಾಗಿ ನಿರ್ಮಾಣಗೊಂಡುವು; ಇವುಗಳನ್ನು ನಿವಾರಿಸಿಕೊಳ್ಳುವ ಕೆಲಸವೂ ಭಾರತದ ಪಾಲಿಗೆ ಅನಿವಾರ್ಯವಾಯಿತು. ಆ ಕಾರ್ಯದಲ್ಲಿ ರಾಷ್ಟ್ರವಿಡಿದ ಬಹಳ ಮಟ್ಟಿಗೆ ಗೆದ್ದು ಬಂದಿದೆ ಎಂಬುದಷ್ಟೇ ಇಲ್ಲಿ ಹೆಗ್ಗಳಿಕೆಯ ವಿಷಯ. ಆದರೆ ಸ್ವರಾಜ್ಯದ 'ಮುಂದಿನ' ಯಾನ ತೊಡಕುಗಳನ್ನು ನಾವು ಇವಿರಿಗೆದ್ದೆ (ಪೂರ್ಣ ವಿಜಯವಿನ್ನೂ ದೊರೆತಿಲ್ಲ) ನೆನ್ನೋಣ. ಆದರೆ ಸ್ವರಾಜ್ಯವನ್ನೇ ಜಯಶೀಲವಾಗಿ ನ್ಯಯೋಗಕ್ಕೆ ಹಚ್ಚಲು ಇದುವರೆಗೆ ನಮ್ಮಿಂದಾಗಿದೆಯೆ? ನಮ್ಮ ಜನ ತಲೆ ಬಡಿದುಕೊಳ್ಳಬೇಕು-ಆಗ ಅದನ್ನು ನಿವ್ವಳಿಸುವ ಕೆಲಸದಲ್ಲೇ ತಲ್ಲೀನವಾಗಿ, ಕೆಳಗೆ ಸಂತೆಯವರ ಹಾಗೂ ಭಾವಕಾಗರ ಕಡೆಗೆ ದೃಷ್ಟಿ ಹರಿಯಲು ಅವಕಾಶನಿರದ ಸ್ವಂತ ಸರ್ಕಾರವೇ ಬೇ-ಎಂಬ ಗಳಿಗಾಗಿ ಭಾರತದ ಜನತೆಯು ಈ ಸ್ವಾತಂತ್ರ್ಯವನ್ನು ಅಪೇಕ್ಷಿಸಿರಲಿಲ್ಲ. ಜನಸಾಮಾನ್ಯರ ಜೀವನಾವಶ್ಯಕತೆಗಳನ್ನು ಪೂರೈಸಿಕೊಟ್ಟು, ---ಕೆ ನ್ಯಾಯೋಪಸದ ಹಾಗೂ ಸಂಸ್ಕಾರದ ಮಟ್ಟವನ್ನು ಮೇಲೇರಿಸಬೇಕೆಂಬುದಕ್ಕಾಗಿ ಸ್ವಾತಂತ್ರ್ಯವು ಕೆಯಾಚಿಸಲ್ಪಟ್ಟಿದ್ದಿಶ್ಯ; ಅದಕ್ಕಾಗಿಯೇ ಸ್ವಾತಂತ್ರ್ಯ ಹೋರಾಟಗಳು ನಡೆದಿದ್ದು ಳ್ಳೆ. ಈ ಗುರಿ ಸಾಧಿಸಲ್ಪಟ್ಟಿದೆಯೆ? ಇನ್ನು ವರೆಗೆ ಇಲ್ಲ.ಅನಿವಾರ್ಯವಾದ ಹೊಸಪತ್ತುಗಳೆದ್ದು ಅವು ಜನತಾ ದ್ರೋಹಿಗಳನ್ನು ಇದುವರೆಗುಳಿಸಿ ಕೊಡುವ ಕೋಟಿಗಳಾಗಿ-ನಿಜವಾದ ಗುರಿಯನ್ನು ಮರೆಮಾಚುವ ಪರದೆಗಳಾಗಿ-ನಿಂತುವು. ಈಗ ಈ ತಜ್ಞೆಗಳು ಬಹಳ ಮಟ್ಟಿಗೆ ಮನಯಾಗಿವೆ; ಇನ್ನಿಂತಹ ವಂಚನೆಗವಕಾಶ ವಿರಕೂಡದು. ಹಾಗಾಗಬೇಕಾದರೆ ಜನ ಸಾಮಾನ್ಯರು ತಮ್ಮನ್ನು ತಾವರಿತು ಕೊಳ್ಳಬೇಕಾದುದು ಎಲ್ಲಕ್ಕಿಂತ ಮುಖ್ಯ. ಇಂದು ತಾವೆದ್ದೇವೆ, ಕೋಗಿದ್ದೇವೆ, ಎಂಬ ಸ್ಪಷ್ಟ ತಿಳುವಳಿಕೆ ಜನತೆಗಿರಬೇಕು. ಪ್ರತ್ಯೇಕ ರಾಷ್ಟ್ರದ ರಕ್ಷಣೆಯ ಸಂಬಂಧದಲ್ಲಿ ಉಳಿದಿರುವ-ಮತ್ತೀಗ ಬೆಳೆದಿರುವ ವಿಕಮಾತ್ರ ಪ್ರಶ್ನೆಯೆಂದರೆ ಕಾಶ್ಮೀರದ ಕಾಳಗವೊಂದೇ "ನನ್ನ ಜನರ ಹೊಟ್ಟೆಯನ್ನು ಖಾಲಿಯಿಟ್ಟಾದರೂ ಅವರ ಕೈಯ ಕೋವಿಯನ್ನು ತುಂಬಿಸಿಕೊಡುವು" ದೇ ನನ್ನ ಪ್ರಥಮ ಕರ್ತವ್ಯವೆನ್ನುವ ಪಾಕಿಸ್ತಾನವಿರುವ ಸಂದರ್ಭ ಬಂದರೆ ಹೊಟ್ಟೆ ಮತ್ತು ಸೊಂಟ ಎರಡನ್ನೂ ಬಿಗಿದು ನಿಶ್ಚಿಲು ಭಾರತೀಯರು ತಯಾರಿರಬೇಕೋ ನಿಜ.ಆದರೆ ಭಾರತದ ರಕ್ಷಣಾ ಮಂತ್ರಿ ಸರ್ದಾರ್ ಬಲದೇವ ಸಿಂಗರು ನವೆಂಬರ್ ತಾ. 28ರಲ್ಲಿ ಜುಲುಂದಾರಿನಲ್ಲಿ ಹೇಳಿದಂತೆ '50,000 ಪಠಾಣರು ಹೊಸಕಾಗಿ ಕಾಶ್ಮೀರದ ಮೇಲೆ ಬೀಳಲು ತಯಾರಾದ್ದಾರೆ ಎಂದು ಪಾಕಿಸ್ತಾನ್ ಸರ್ಕಾರವು ವಕ್ತಾರನನ್ನತ್ತಾನೆ; ಅವರನ್ನು ಹಿಂದಟ್ಟಲು ಸಾಕಗುವಷ್ಟು ಜನರು ನಮ್ಮ ಗುರುದಾಸ್ಪುರ, ಅಮೃತಸರ ಮತ್ತು ಫಿರೋಝ್‌ಪುರ- ಈ ಮೂರೇ ಜಿಲ್ಲೆಗಳಲ್ಲಿದ್ದಾರೆ. ಪಾಕಿಸ್ತಾನಿಗಿಲ್ಲರೂ ನಮ್ಮ ಮೇಲೆ ಬೀಳುವಷ್ಟರೊಳಗೆ ಅವರನ್ನು ಬಡಿದೋಡಿಸಲಿಗುನಷ್ಟು ಜನ ನಮ್ಮ ಸೈನ್ಯ ಪಂಜಾಬ್ ಒಂದರಲ್ಲೇ ಇದ್ದಾರೆ-ಅಂದ ಮೇಲೆ ಕಾಶ್ಮೀರ ಕಾಳಗವೆಷ್ಟೇ ಬೆಳೆದರೂ ಕಾಶ್ಮೀರ ಭಾರತದ ಸರ್ವರಕ್ಷಣೆ ಮತ್ತು ಸಂಪೂರ್ಣ ಲಕ್ಷ್ಯವನ್ನೆಳೆಯುವ ಯೋಗ್ಯತೆಯು ಆದೆಸ್ಟೆ ಬರಲಾರದು. ಆರ್ ಎಸ್. ಎಸ್., ಕಮ್ಯೂನಿಸ್ಟ್ ಮನೋವೃತ್ತಿಗಳ- ಅಖಿಲ ಭಾರತದ ಶೈಲ್ಪೇಕೆಲಸಗಾರ ಮಸ್ಯರು ಸಿದ್ಧಿಸಿಗಳು- ವಿಸ್ತೀರ್ಣಹಿಂದ ಯಾತನೆಗಳು ಭಾರತದ ಅಧಿಕ ಸಂಖ್ಯಾತ ಜನತೆಗೆ ಸಂಬಂಧಿಸಿದವುಗಳಲ್ಲ. ಅಂದಮೇಲೆ ಎಲ್ಲಾದಿದ್ದೆ ಈ ಸ್ವಾತಂತ್ರ್ಯದ ಸಮಪಯೋಗವನ್ನು ಸಾಡಿಕೊಳ್ಳಲು ಅಧಿಕ ಸಂಖ್ಯಾತ ಜನತೆಯು ತನ್ನ ಪಾಲಿನ ಕರ್ತವ್ಯವನ್ನು ಮಾಡಬೇಡವೆ? ಭ್ರಷ್ಟಾಚಾರ ಭಾಯಿಪಕ್ಷಪಾತ ಸಾಧನೆಯೇ ಅವರ ಪಾಲಿನ ಶಾಶ್ವತ ರೂಪೀ ಕಾರ್ಯಗಳಾಗಿದ್ದರೆ, ಇವಾರ ವಿರುದ್ಧ ಜನತೆಯ ಸಿವಾರಣೆಯತ್ನಗಳನ್ನೂ ಮಾಡುವ ತಾತ್ಕಾಲಿಕ ಕಾರ್ಯಧಾರಗಳೂ ಬೇಕು. ಇವುಗಳಿಗಾಗಿ ಘಟನಾ ಸಮಿತಿಯ ಬ್ಲೀಗ ತಯಾರಾಗುತ್ತಿರುವ ನವರಾಜ್ಯ ರಾಸನ, ಮಹತ್ವವನ್ನಾಧರಿಸಿ ಇನ್ನು ಒಂದೆರಡು ವರುಷಗಳೊಳಗಾಗಲಿರುವ ಮೊದಲ ಚುನಾವಣೆಗಳಲ್ಲಿ ಜನಸಾಮಾನ್ಯರ ಹಿತಸಂಬಂಧಿಗಳೇ ಸರಿಯಾಗಿ ಪ್ರತಿನಿಧಿಸಲ್ಪಡುವಂತೆ ಜನಸಾಮಾನ್ಯರೇ ನೋಡಬೇಕು; ಆಂತರ್ಯವೇ ಅನ್ನವಸ್ತ್ರಗಳ ಸಂಬಂಧವಾಗಿ ಸರಕಾರವು ಕೈಕೊಂಡಿರುವ ವಿಧಾನಗಳು ಸರಿಹಾದಿಯಲ್ಲಿ ಹೋಗುವಂತೆ ಜನತೆಯೇ ಮಾಡಬೇಕು. ಆಂತೂ ಸ್ವತಂತ್ರ ಭಾರತವು ಜನತಾರಾಜ್ಯವಾಗಿ ನಾಮಾತ್ರ ಜನತಿಕವನ್ನೆಲ್ಲದೆ ಇಷ್ಟ ರಲ್ಲೇ ಅತಿರೇಕ ಮೇಲ್ಮೆಗಳಸಿರುವ ವರ್ಗ, ಪಕ್ಷಪಂಗಡಗಳಿಗಿನ್ನೂ ಹೆಚ್ಚಿನ ಲಾಭ ಒದಗಿಸದಂತೆ ನವಾತ ವದಕ್ಕಾಗಿ ಜನಸಾಮಾನ್ಯರು ಇಂದಿನಿಂದಲೇ ರಾಷ್ಟ್ರದ ಪ್ರತಿಯೊಂದು ಅಗತ್ಯೋನ್ನಗಳಲ್ಲೂ ಆಸಕ್ತಿ ವಹಿಸಬೇಕು ಅದಕ್ಕಗತ್ಯವಿರುವ ಅನುಭವ, ಆರ್ಯಾಧ್ಯೋದಣೆ ಶಕ್ತಿಸಾಹಸ, ಸಂಸ್ಕಾರಗಳನ್ನು ಜನತೆಯಲ್ಲಿ ತಂದಿಸುವದು ಜನತಾ ಸೇವಕರ ಕೆಲಸ. ಕಾಂಗ್ರೆಸ್ ಕಾರ್ಯಕರ್ತರು, ಕ್ಷೀಣಿಸುತ್ತಿರುವ ರಕ್ಷಣೆ ಮತ್ತು ಪ್ರಗತಿಯ ಸಾರಿತು ಆಸಕ್ತಾರಿರುವ ಇತರರು ಇಂತಹ ಜನಜಾಗ್ರತಿಗಳಿಯಬೇಕಾದ ರೀಲು ಇದಲ್ಲವೆ? ಈ ಕಾರ್ಯವನ್ನು ಕಾಣುವ ಸುಯೋಗ ನನಗಿರುತ್ತಿದ್ದರೆ ಕಮ್ಯೂನಿಸ್ಟ್ ಪಾಳೆಗಳು, ಮತ್ತು ಪ್ರಗತಿಯ ಭೀತಿ, ಜಾತೀಯತಾ ಭಾವನೆಯ ಅಂಧಕಾರ- ಇವುಗಳನ್ನು ಪೂರ್ಣವಾಗಿ ಎದೆಯೆದ್ದಿಲೆ ಆದ್ದರಿಂದ, ಮುಂದಾಗಿ ಪ್ರಗತಿ ಸಾಧಕರು ತಮ್ಮೊಳಗೆ ಸಂಘಟಿತರಾಗಿ ಆಮೇಲೆ ಜನತಾ ಸಂಘಟನೆಗಾಗಿ ರಂಗಕ್ಕಿಳಿಯಬೇಕೆಂದು ನಿರೀಕ್ಷಿಸುತ್ತೇನೆ.

ಅಕ್ಕೀ ಭತ್ತಸನ್ನು ಮಾಯಿದೆಯೊಳಗೆ ಹಾಕದವರಿಗೆ ದಂಡನೆಯೆ?

ಅಕ್ಕಿ ಭತ್ತಗಳ ರಕ್ಷಿಜೆನ್ ಸುತ್ತು ನಿಯಂತ್ರಣಗಳಿಂದ ಧಾನ್ಯೋತ್ಪಾದಕ ರೈತರು ಹಲವು ವಿಧದ ಕಷ್ಟ ನಷ್ಟಗಳಿಗೀಡಾಗಿರುವುದು ಸರ್ವವಿದಿತ ವಿಷಯ. ಈಗ ತಾನೇ ಹಳ್ಳಿಗಳಲ್ಲಿ ಈ ಸಂಬಂಧದ ಜೋಸ ರೋದನಗಳಿಂದು ಎದ್ದಿದೆ. ಆದುದರು ಕೇವಲ ನ್ಯಾಯ ಮತ್ತು ನಿಸ್ಪಕ್ಷಪಾತತೆಗೆ ಸಂಬಂಧಿಸಿದುದು ಹೊರತು, ರೈತರು ಉಚಿತ ಸ್ವಾರ್ಥದ ಬಾಯಿಕೂಡಾ ಅದರಲ್ಲಿಲ್ಲ. ಸರಕಾರದ ಯಾವ ವರ್ತನೆಯಿಂದಾಗಿ ಈ ದೂರು ದೂಷಣೆಗಳೆದ್ದಿವೆಯೋ, ಆ ವರ್ತನೆಯು ಕೇವಲ ತಾತ್ಕಾಲಿಕವಾದುದಂಥೂ, ಅದನ್ನು ಸರಕಾರವು ತನ್ನಾಗಿ ತಿದ್ದಿಕೊಳ್ಳಲು ಬದ್ಧವಾಗಿದೆಯೆಂಬುದೂ ನಂಬಲು ಕಾರಣವಿದೆ. ಇಲ್ಲವಾದರೆ ಆಲಿಯದ ಮಹಾತ್ಮರಿಗೆ ಕಾಣಿಕೆ ಕೊಟ್ಟಾದರೂ ಒಲಿಸಬೇಕು; ಸ್ವತಃ ಒಲಿದವರು ಬತ್ತಿಟ್ಟಾಗಿ ದ್ಯಾರಲ್ಲಾ!" ಎಂಬರ್ಥದ ಹಳ್ಳೀ ಗಾದೆಯಂತೆಯೇ ಸರಕಾರ ವರ್ತಿಸುತ್ತದೆನ್ನಬೇಕು. ನಿಜಕ್ಕೂ ಈ ವಿಧಾನವು ಅತ್ಯಂತ ವಿಲಕ್ಷಣವಾಗಿ ಕಾಣುತ್ತಿದೆ; ಕುಬೋಧ್ಯಕ್ಕಾಸ್ಪದವೆಯುತ್ತಿದೆ. ಸಂಗತಿಯಿಷ್ಟೆ: ಧಾನ್ಯೋತ್ಪಾದಕರಿಗೆ ಬಾಧ್ಯವಿದ್ದ ರಿಕ್ವಿಜೆಶನ್ ನೋಟೀಸಿನಲ್ಲಿ ಭತ್ತವಾದರೆ ತಾ 30-10-48ರೊಳಗೆ ಅಕ್ಕಿಯಾದರೆ ತಾಲೂಂಬನನ್ನು ತಾ 15-11-48 ರೊಳಗೆ ಒಪ್ಪಿಸಬೇಕೆಂದಿತ್ತು. ಹಸಿ ಬತ್ತವನ್ನು ಅಕ್ಕಿ ಮಾಡುವವರೆಗಿನ ಹೊಂದರೆಗಳನ್ನು ಈ ವರುಷ ಈ ಅವಧಿಯಲ್ಲೇ ದಕ್ಷಿಣ ಕನ್ನಡದಲ್ಲಿ ಬಂದಿದ್ದ ಮಳೆಯು ಮುಮ್ಮಡಿ ಹೆಚ್ಚಿಸಿದ್ದರೂ ಇವೆಲ್ಲವುದರೊಳಗೆ ಅಕ್ಕಿಯನ್ನಾಡಿ ಜಾಕಬೇಕೆಂದೂ, ಆ ಮೂಲಕ ಸರಕಾರದ ಆಹಾರ ಧೋರಣೆಗೆ ನೆರವಾಗಿ ಶಿಸ್ತುಬದ್ಧ ಪ್ರಜೆಗಳೆನಿಸಬೇಕೆಂದೂ ಆತುರಿಸಿ, ವಾಯಿದೆಯು ಗಡಿಯೊಳಗೇನೇ ಅಕ್ಕಿಯೊಪ್ಪಿಸಿದವರಿಗೆ ಮುಂದಿಗೆ ರೂ. 11-14-0ರಂತೆ ಧಾರಣೆ ಹಾಕಿದ್ದರು. ಆದರೆ ತಾ. 21-11-48ರ ನಂತರ-ಅಂದರೆ ಸರಕಾರಾದ ನಿಶ್ಚಿತಾವಧಿ ಮೀರಿ-ಅಕ್ಕಿಯೊಪ್ಪಿಸಿದವರಿಗೆ ಮುಂದಿಗೆ ರೂ. 14-7-3ರಂತೆ ಬೆಲೆ ಹಾಕಿದ್ದಾರೆ. ಹಾಗಾದರೆ ವಾಯಿದೆಯೊಳಗೆ ಅಕ್ಕಿ ಮಾಡಿಹಾಕಿದುದೇ ತಪ್ಪಾಯಿತೆ? ಆ ತಪ್ಪಿಗಾಗಿ ಆಂತಹ ತಪ್ಪಿತಸ್ಥ ರೈತರು ಮುಡಿಯೊಂದಕ್ಕೆ ರೂ. 2-9-3ರಂತೆ ದಂಡ ತೆರಕಕ್ಕದ್ದೆಂದು ಸರಕಾರದ ಅಭಿಪ್ರಾಯವೆ? ಶಿಸ್ತುಪಾಲನೆ ಮಾಡಿದ ರೈತರನ್ನೇ ಶಿಕ್ಷಿಸುವ ಈ ವಿಧಾನವನ್ನು ಒಂದು ಸರಕಾರವೇ ಅಂಗೀಕರಿಸಾವದೆಂದು ನಂಬುವ ಮಹಾಂತರಿಲ್ಲ. ಊಹಿಸುವದಕ್ಕಾದರೂ ಸಾಧ್ಯವೆ? ಅದರ ಕಳದಿದರಿಪಡಿಸಿದ ಇಂತಹ ಒಂದು ಕೆಟ್ಟ ಅನುಭವವು ರೈತರ ಸ್ಮೃತಿಪಟಲದಿಂದ ಇನ್ನೂ ಅಳಿಸಿದೋಗಿಲ್ಲವಾದ್ದರಿಂದ ಈ ಬಾರಿಯೂ ಹಾಗಾದೀತೇ ಎಂದು ಹೆಚ್ಚನವರು ದಿಗಿಲುಗೊಂಡಿದ್ದಾರೆ. 1947ರಲ್ಲಿ ದೆಂಬರ್ 7ನೇ ತಾರೀಕಿನೊಳಗೆ ಅಕ್ಕಿಯನ್ನಪ್ಪಿಸಿದವರಿಗೆ ಮುಂಡಿಗೆ ರೂ. 11-9-4ರಂತೆ ಬೆಲೆ ದೊರೆತಿದ್ದರೆ ಅನಂತರ ಒಪ್ಪಿಸಿದವರಿಗೆ ಮುಂಡಿಯೊಂದಕ್ಕೆ ರೂ 12-2-0 ದೊರೆದಿದ್ದಿತು. ಹೀಗೆ ಮುಂದಾಗಿ ಅಕ್ಕಿ ಕೊಟ್ಟವರಿಗೆ ಕಡಮಾಡಿಕೊಟ್ಟವರಿಂದ ಮುಂಡಿಯೊಂದರ 0-8-ಸ್ಪೈ ಕಡಿಮೆ ಮೌರೆತಿದ್ದಿತು ಕಳದ ವರುಷದಲ್ಲಾಗಿದ್ದ ಅಭಿಗಿದವನ್ನೇನೇ ಗುದ್ದುವಂಬ ಪೂರ್ವರಿಯ ಈಪ್ಪಮಾದವು ಆ ಮೇಲೀಚರಿಗೂ ತಿದ್ದಲ್ಪಟ್ಟಿಲ್ಲ. ಈ ಬಾರಿಯೂ ವಾಯಿದೆಯೊಳಗೆ ಹಾಕಿದವನ ಮುಡಿಯು ರೂ 11-14-0 ಮಾತ್ರಕಡೆಯು ಪಪ್ಪು ತಾತ್ಕಾಲಿದ್ದು; ಪಾಯಿದೆ ಮೀರಿ ಹಾಕಿದವನ ಮುಡಿ ರೂ 14-7-3 ಕೊಡುವಪ್ಪು ಅಮೂಲ್ಯದ್ದೆಂಬ ಪೀತಿಯೇ ಶಾಶ್ವತವಾಗಿರಂಬೋದರೆಂತಾದೀತೆಂಬ ಪ್ರಶ್ನೆಯನ್ನೇನೇ ಅಕ್ಕಿ ಭತ್ತವೊಪ್ಪಿಸಿದ ರೈತರೆಂದರೆ ಸರಕಾರಕ್ಕೆಷ್ಟು ತಾತ್ಸಾರವೆನೆಂಬುದಕ್ಕೆ ಮತ್ತೂ ಒಂದು ನಿದರ್ಶನವಿದೆ ಈ ವರುಷ ಒಕ್ಟೋಬರ್ 30ರಿಂದ ನವಂಬರ್ 15ರ ವರೆಗೆ ಡಿಪ್ಪೋಗಳಿಗೆ ಧಾನ್ಯವೊಪ್ಪಿಸಿದ್ದ ರೈತರಲ್ಲಿ ಹೆಚ್ಚಿನವರಿಗೆ ಇನ್ನೂ ಅಧಿಕಾರಿಗಳಿಂದ ಮೌಲ್ಯ ಬೊರೆತಿಲ್ಲವೆಂದು ತಿಳಿದುಬರುತ್ತಿದೆ. ತಮ್ಮ ಆಪತ್ಕಾಗಾದೀತೆಂಬ ಅಲೆಯಿಂದ ಅವಸರವಸರವಾಗಿ ಅಕ್ಕಿ ತಯಾರಿಸಿಹಾಕಿದ್ದ ಧಾನ್ಯೋತ್ಪಾದಕರನ್ನು ಇಸ್ತು ದೀರ್ಘಕಾಲ ವಧಿ ಕಾಯುವಂತೆ ಮಾಡಿದುದು ಸರಿಯೆ? ಅರ್ಥಾಭಾವ ಎಂಬ ಪೆಯಪಟ್ಟುಗೆ ತಮಗೆ ಸರಕಾರದಲ್ಲಿ ಸೆರವುವವರೆಗೆ ಸರಕಾರದಲ್ಲಿ ಹಣ ಸಂದಾಯಮಾಡುವಷ್ಟು ಕರ್ತವ್ಯ ನಿಷ್ಠೆಯವರು ಸರಕಾರೀ ಅಧಿಕಾರಿಗಳಲ್ಲಿರುವು ದು ಬೇಡವೆ? ಇವೆಲ್ಲಾ ಸಂಗತಿಗಳು ಒಡವರಿದ ಹಾಗೂ ಸೆಯೆಮನಸಿಧೀಯರಾದ ಸಾಗುವಳ್ಳೀದಾರರ ಮನಸ್ಸಿನ ಮೇಲೆ ಎಂತಹ ದುಷ್ಪರಿಣಾಮವಾದೀತೆಂಬುದನ್ನು ಸರಕಾರವು ಅಗತ್ಯವಾಗಿ ಊಹಿಸಬೇಕು. ಸರಕಾರೀ ಯೋಜನೆ ಮತ್ತು ಅಧಿಕಾರಿಗಳ ಮನಸ್ಸಿನಲ್ಲಿ ಏನೇ ಇದ್ದರೂ ಆಹಾರೋತ್ಪಾದಕರಲ್ಲಿ ಇಂತಹ ಸಂತಸ, ಸಂವೇಷಗಳೇಳದ ರೀತಿಯಲ್ಲಿ ಅಮಲುವಪ್ಪಗಳನ್ನು, ಪಾಡುಬಪ್ಪಗಳನ್ನು ಅಧಿಕಾರಿಗಳು ಸಕಾಲದಲ್ಲೇ ಆಡಬೇಕು; ಮಾಡಬೇಕು. ಆದ್ದರಿಂದ ಸರಕಾರವು ವಿಶೇಷ ರೈತರಿಗಾಗಿರುವ ಈ ಸ್ಪರ್ಧಾವಕ ಮಂಜಸೆಗಳು ಳಿಗೆ ಕೂಡಲೇ ಲಕ್ಷ್ಯಕೊಟ್ಟು ತಪಸ್ಥಳಿಯೊಳಗೆ ಧಾನ್ಯ ಪೂರೈಸಿದ ರೈತನು ಪೆಟ್ಟಿನ ಸಂಧಾನಸಿಗರ್ಷರೇ ಹೊರತು ಸಸ್ಯಹೊಂದಲು ಎಂಧಿರಲ್ಲ ಮೇಲು ಸಂತಸಕ್ಕರ್ಹವಾಗುವಂತೆ ಮಾಡಲೂ, ಅವರೆಲ್ಲರಿಗೂ ಉಳಿದೇ ಇರುವಯೊಂದಕ್ಕೆ ರೂ 14-7-3 ರಂತೆ ದೊರೆಯುವಂತೆಯೂ ಸರ್ವರೂ ಸಿರೀಕ್ಷಿಸುತ್ತಿದ್ದಾರೆ.

ವಾರ್ತೆ-

ಸ್ಟೆಟಿನಾ ಸಮಿತಿ ಸಭೆಯಲ್ಲಿ ಭಾರತದ ಹೊಸ ರಾಜ್ಯಾಂಗ ಶಾಸನವು ಸವಿವರವಾಗಿ ಚರ್ಚಿಸಲ್ಪಡುತ್ತಿದೆ. ಭಾರತವು ಸರ್ವ ಸ್ವತಂತ್ರ ಜನತಾ ರಾಜ್ಯವಾಗಿಯೇ ಇರಬೇಕು-ಆದರೆ ಕಾಮನ್‌ವೆಲ್ತ್ ಸಂಬಂಧ ಕಡಿದುಕೊಳ್ಳಬಾರದು-ಇವೇರಡಕ್ಕೂ ಸಂಬೀಳುವಂತೆ, ಪೂರ್ಣ ಸ್ವತಂತ್ರ ಭಾರತದ ಪ್ರಾಗೂ ವಸಾಹತಿನ, ಇಬ್ಬಗೆಯ ನಾಗರಿಕ ಹಕ್ಕಿನ ಹೊಸ ವಿಧಾನ ತರಬೇಕು, ಎಂದು ಪಂಡಿತ ನೆಹರುಗಳ ಸೂಚಿಸಿರುವರೆಂದು ತಿಳಿದುಬರುತ್ತದೆ. ಅಸ್ಪರ್ಶತೆಯನ್ನು ನಿರ್ಮೂಲಿಸಬೇಕು; ಅದು ಯಾವ ವಿಧಾನಗಳಲ್ಲೂ ತೋರಬರುವದು ಶಾಸನವಿರೋಧ] ತಕ್ಕೀರು' ಎಂಬ ಹೊಸಭಾಗವೂ ಘಟನೆಗೆ ಸೇರಿದೆ.

ಎಪ್ರಿಲಿನಿಂದ I2 ಔನ್ಸ್ ಹಸುಗೆ

ಮದ್ರಾಸ್ ಪ್ರಾಂತ್ಯದಲ್ಲಿ 1949ನೇ ಎಪ್ರಿಲ್ ಆರಂಭದಿಂದ ತಲಾ 12 ಔನ್ಸ್ ಆಹಾರ ಧಾನ್ಯಗಳ ರೇಶನ್ ಕೊಡಬೇಕೆಂದು ಸರಕಾರವು ನಿರ್ಧರಿಸಿದೆಯೆಂದೂ, ಈ 12 ಔನ್ಸ್‌ನು ಅಕ್ಕಿಯೇ ಆಗಿರಲಾರದೆಂದೂ,ಮದ್ರಾಸಿನ ಆಹಾರಮಂತ್ರಿ ಡಾ. ಯಸ್. ಯಸ್. ರಾಜನರು ನವಂಬರ್ ತಾ. 27ರಲ್ಲಿ ಕೌನ್ಸಿಲಿನಲ್ಲಂದಿದ್ದಾರೆ.

ಅಳಿಯ ಸಂತಾನ ಮಸೂದೆ

ದಕ್ಷಿಣ ಕನ್ನಡ ಜಿಲ್ಲೆಯ ಅಳಿಯ ಸಂತಾನ ಕಟ್ಟನ್ನು ಆಚರಿಸುವವರಿಗೆ ಸಂಬಂಧಿಸಿದ 'ಮದ್ರಾಸ್ ಅಳಿಯಸಂತಾನ ಮಸೂದೆಯು' 'ಸಿಲೆಕ್ಟ್ ಕಮಿಟಿ'ಯ ವರದಿಯಲ್ಲಿದ್ದಂತೆಯೇ ನವಂಬರ್ ತಾ 26ರಲ್ಲಿ ಮದ್ರಾಸ್ ಕೌನ್ಸಿಲಿನಲ್ಲಿ ಯಾವ ಚರ್ಚೆಯೂ ಇಲ್ಲದೆ ಸಂಬೂರಾಗಿದೆ. ಇನ್ನದು ಎಸೆಂಬ್ಲಿಯಲ್ಲಿ ಪಾಸಾಗಲಿದೆ. ಮಸೂದೆಯ ಕೂನೆಯ ಆಕಾರದ ಸಂಪೂರ್ಣವಿವರ ಈ ಘನಕ ತಿಳಿದುಬಂದಿಲ್ಲ.

ಪ್ರಕಟಣೆ

ಕಾರ್ಕಳ ತಾಲೂಕು ಪಳ್ಳಿ ಗ್ರಾಮದಲ್ಲಿರುವ ಅಡಪಾಡಿ ಕೋರ್ಗು ಪ್ರಭುಗಳ ಮಗ ನಾರಾಯಣ ಪ್ರಭು ಆದ ನಾನು ಈ ಮುಂಜೆ 'ನಾರಾಯಣ ನಾಯ್ಕ' ಎಂದು ದಸ್ಕತು ಮಾಡಿದ್ದುಂಟು. ಇನ್ನು ಮುಂದೆ 'ನಾರಾಯಣ ಪ್ರಭು' ಎಂತ ನಾನು ದಸ್ಕತು ಹಾಕುತ್ತೇನೆ- ಎಂತ ಈ ಮೂಲಕ ಪ್ರಕಟಿಸಿದ್ದೇನೆ.

ನಾರಾಯಣ ಪ್ರಭು,
ಪಳ್ಳಿ, ತಾ. 25-11-48

ಬೇಕಾಗಿದ್ದಾರೆ

ಅನುಭವಿಕರಾದ ಪ್ರಿಂಟರು, ಕಂಪೋಜಿಟರು, ಬ್ಯಾಲಂಡರಿಂಗ್‌ಗೂ ತೃಪ್ತಿಕರ ತಲಬಿಗೆ ಒಡನೆ ಕಲಸ ಮಾಡಲು ಬೇಕಾಗಿದ್ದಾರೆ. ಅಪೇಕ್ಷಿಸುವವರು ಕೆಳಗಿನ ವಿಳಾಸಕ್ಕೆ ಒಡನೆ ಬರೆಯದು ಅಥವಾ ಭೇಟಿಯಾಗುವುದು.

ವೀಣಾ ಪ್ರಿಂಟರ್ಸ್ & ಪಬ್ಲಿಷರ್ಸ್,
ಲಿಮಿಟೆಡ್, ಶಿವಮೊಗ್ಗ, ದ. ಕ.

2-12-48ರಿಂದ

ಬಹುಕಾಲದಿಂದ ನಿರೀಕ್ಷಿಸುತ್ತಿದ್ದ ಚಿತ್ರ ಇಂದಿನ ದಿನ ಬಂದೇ ಬಂತು-

ಮನೋಹರ ಸಂಗೀತ

ಮೆಹಬೂಬರ ಚಿತ್ರ

'ಅನುಮೋಲ್ ಘಡಿ'

ನೂರಜಹಾನ್, ಸೂರಯ್ಯ, ಸುರೇಂದ್ರ, ಜಹೀರ್‌ರಾಜಾ.

ದಿಗ್ದರ್ಶನ: ಮೆಹಬೂಬ್ ಸಂಗೀತ ದಿಗ್ದರ್ಶನ: ನೌಶದ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡ್ಡಿ.

ಬರುವ ಚಿತ್ರ: 'ಬಜ್ಲೂ ಂಕಾ ಬೇಲ್'
ಆಗಾ.

34,000 ರೂ. ಬಹುಮಾನಗಳನ್ನು ಪಡೆಯಿರಿ.

ಶಿವಮೊಗ್ಗ ನ್ಯಾಷನಲ್ ಹೈಸ್ಕೂಲ್ ಕಟ್ಟಡ ಮತ್ತು ಆಡಳಿತ ನಿಧಿ ಸಂಗ್ರಹ ಲಾಟರಿ.

[ಈ ನಿಧಿ ಸಂಗ್ರಹ ನಡೆಸಲು ಮೈಸೂರು ಸರ್ಕಾರದ ಅನುಮತಿ ಪಡೆಯಲಾಗಿದೆ.]

ಒಂದು ಟಿಕೆಟ್ಟಿಗೆ ರೂ 1 0 0 ಮಾತ್ರ — **580 ವಿವಿಧ ಬಹುಮಾನಗಳು**

1. ಈಗಾಗಲೇ **70,000** ಟಿಕೆಟ್‌ಗಳು ಮಾರ್ಜಾಗಿರುತ್ತವೆ.
2. ನಮ್ಮ ಸಮಿತಿ ನಿರೀಕ್ಷಿಸಿರುವ ಹಣ ರೂ. 1 ಲಕ್ಷ ಮಾತ್ರ ಉಳಿದಿರುವ ಟಿಕೆಟ್‌ಗಳನ್ನು ಮಾರಾಟಕ್ಕೆ ವಿಶೇಷ ಅವಕಾಶ ಪದಗಿಸಿದೆ
3. ಆಲ್ಬರಿ ಡ್ರಾಯಿಂಗ್ ಶಿವಮೊಗ್ಗ ಜಿಲ್ಲಾ ಮ್ಯಾಜಿಸ್ಟ್ರೇಟರವರ ಅಧ್ಯಕ್ಷತೆಯ ಬಹಿರಂಗ ಸಭೆಯಲ್ಲಿ ತೆಗೆಯಲಾಗುವುದು. ಯಾವ ಅನುಮಾನಕ್ಕೂ ಆಸ್ಪದವಿಲ್ಲ.
4. ಒಂದು ಟಿಕೆಟ್ಟಿಗೆ 1-0-0 ರೂ. 11 ಟಿಕೆಟ್‌ಗಳ ಪುಸ್ತಕಕ್ಕೆ ರೂ. 10-0-0 ಮಾತ್ರ. ಪೋಸ್ಟೇಜ್ 0-2-0 ಕಳುಹಿಸುವುದು. ವಿಳಾಸ ತಿಳಿಯುವಂತೆ ವಿವರವಾಗಿ ಬರೆಯುವುದು.
5. ಡ್ರಾಯಿಂಗ್ ಆದನಂತರ ಫಲಿತಾಂಶವನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು- ಪ್ರೈಜ್ ಲೀಸ್ಟ್ ಬೇಕಾದಲ್ಲಿ 0-2-0 ಕಳುಹಿಸುವುದು.
6. ಈ ಸಮಯದಲ್ಲಿ ಹೊಸದಾಗಿ ಏಜಂಟರನ್ನು ನೇಮಿಸಲು ಸಾಧ್ಯವಿಲ್ಲ. ಈಗ ಉಳಿದಿರುವ ಟಿಕೆಟ್‌ಗಳನ್ನು ನಮ್ಮ ಆಫೀಸಿನಲ್ಲಿ ನೂರಾಟಕ್ಕೆ ಇರೀಕರೆ **30-12-48**ರ ವರಿಗೆ ನಿರೀಕ್ಷಿಸಿದೆ.
7. ಬೇಕಾದವರು ಮಾನಾಯರ್ದರು ಪೋಸ್ಟಲ್ ಆರ್ಡರು ಮುಖೇನ ಹಣ ಕಳುಹಿಸುವುದು.
8. ಬಹುಮಾನ ಬಂದರಂತೂ ಸರಿಯೆ. ಇಲ್ಲವೇ ನಿಷ್ಕಾಮಾನಕ್ಕೆ ನಮ್ಮ ನೆರವು-

ಲಕ್ಷ್ಮೀ ಕಟಾಕ್ಷ! ಎಂತೋ! ಏನೋ! ಯಾರು ಬಲ್ಲವರು?

ಅನುಮಾನವೇಕೆ. ಸ್ವಲ್ಪ ಟಿಕೇಟುಗಳು ಉಳಿದಿವೆ. ಕಾಲ ಮಿಂಚೀತು.

ಇತರ ವಿವರಗಳನ್ನು ಟಿಕೆಟ್ ನೊಡನೆ

ಈ ವಿಳಾಸಕ್ಕೆ ಬರೆಯಿರಿ.

Detail of Prizes :

1st	prize	one of	Rs	10,000
2nd	,,	,, of	,,	5,000
3rd	,,	,, of	,,	2,000
4th	Three prizes	of	,,	1,000 each
5th	Four ,,	of	,,	500 ,,
6th	Ten ,,	of	,,	250 ,,
7th	Twenty ,,	of	,,	100 ,,
8th	Forty ,,	of	,,	50 ,,
9th	Eighty ,,	of	,,	25 ,,
10th	200 ,,	of	,,	10 ,,
11th	200 ,,	of	,,	5 ,,

20 Prizes of One YERAWADA CHARKA Rs I2—8—0 each; Rs. 250

ಹೆಚ್. ಎಸ್. ರುದ್ರಪ್ಪ, (ಪ್ರೆಸಿಡೆಂಟ್)
ಎಸ್. ಆರ್. ನಾಗಪ್ಪ ಶೆಟ್ಟಿ, (ಕಾರ್ಯದರ್ಶಿ)
Secretary,

The National High School Building & Working fund Lottery, Shimoga

---

ವಿವಿಧ ಪಾತ್ರೆಗಳು

ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದುವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಿಯಾಯಿತಿಯಾಗಿ ಯೂಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ದಿವಂಗತ ಶ್ರೀ ಬಡಗಬೆಟ್ಟು ಗೋವಿಂದ ಹೆಗ್ಡೆಯರು

ದ. ಕ. ಜಿಲ್ಲೆಯ ಪ್ರಸಿದ್ಧ ಮನೆತನಗಳಲ್ಲೊಂದಾದ ಬಡಗಬೆಟ್ಟು ಮನೆಯ ಶ್ರೀ ಗೋವಿಂದ ಹೆಗ್ಡೆಯವರು ಇದೇ ತಾ. 1-12-48ನೇ ಬುಧವಾರ ಪೂರ್ವಾಹ್ನ 10 ಘಂಟೆಗೆ ತನ್ನ ಆತ್ಯಾಡಿ ಮನೆಯಲ್ಲಿ ವಿಧಿವಶರಾದರೆನ್ನಲು ವಿಷಾದಿಸುತ್ತೇವೆ; ದೊಡ್ಡ ವಗದಾರ್‌ರಲ್ಲಿ ಅಪೂರ್ವವಾದ ಸಬಲತ್ವ, ಸಾಧಾರಣ ಸೌಮ್ಯ ಸ್ವಭಾವಗಳು ಶ್ರೀಮಾನ್ ಹೆಗ್ಡೆಯವರಲ್ಲಿದ್ದುವು. ಅವರು ನಿಷ್ಠಾವಂತ ಕಾಂಗ್ರೆಸಿಗರಿದ್ದು, ಖಾದಿಯ ಉತ್ಪನ್ನ ಸಾಧಂದಿನಿಂದ ತನ್ನ ಅವಸಾನದವರೆಗೂ ಖಾದೀಧಾರಿಗಳಿದ್ದರು; ಬೆಳ್ಳಾಂವ್ ಕಾಂಗ್ರೆಸಿಗೆ ಹೋಗಿದ್ದರಲ್ಲದೆ, ಕಾಂಗ್ರೆಸಿನ ಹಲವು ಕಾರ್ಯಕಲಾಪಗಳಿಗೆ ಶ್ರೀಮಾನ್ ಹೆಗ್ಡೆಯವರ ಸಹಾಯ, ಸಹಕಾರ, ಪ್ರೇರಣೆಗಳಿದ್ದುವು. ನಿರಾಡಂಬರಿ, ನಿಗರ್ವಿ, ದಯಾರ್ದ್ರ ಹೃದಯಿ ಹಾಗೂ ಉದ್ಯಮವೀರಲಂದಿದ್ದು ಜ್ಞಾನವೃದ್ಧನ ನ್ನಿಸಿದಂತೆಯೇ ವಯೋವೃದ್ಧನ್ನಿಸಿಯೂ ತನ್ನ 81ನೇ ವಯಸ್ಸಿನಲ್ಲಿ ಇಹ ಬಾಳಿಕೆ ಮುಗಿಸಿಕೊಂಡರು. ಹೆಗ್ಡೆಯವರಿಗೆ ನಾಲ್ವರು ಗಂಡು, ಇಬ್ಬರು ಹೆಣ್ಣು ಮಕ್ಕಳಿದ್ದು, ಆ ಸೈಕೆ ಹಿರಿಯನೇ ಉಡುಪಿ ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ ಬಾಳ್ಳಟ್ಟ ಬೀಡು ಕೃಷ್ಣಯ್ಯ ಹೆಗ್ಡೆಯವರು. ವ್ಯಕ್ತಿಯ ಆತ್ಮಕ್ಕೆ ಶಾಂತಿಯನ್ನು ಕೋರಿ,ಅವರ ಮಕ್ಕಳು ಹಾಗೂ ಬಂಧುಮಿತ್ರರೊಂದಿಗೆ ಸಹ ಸಂತಾಪ ಸೂಚಿಸುತ್ತೇವೆ.

ನೋಟೀಸು

ಉಡ್ಡಿ ತಾಲ್ಲೂಕು ಕಳ್ಳೂರು ಗ್ರಾಮದ ಕುಳುಂಜಪಲ್ಕರುವ ಮೋಂಟ ಕುಂಬಾರ್ತಿಯ ಮಕ್ಕಳು ಚಿನ್ನಮ್ಮ, ಗಿರಿಯನ್ನು ಕೂಡಾ 2 ಜನರು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವದೇನೆಂದರೆ:—

ತಾ. 25-11-1948ನೇ ನನಯುಗದ ಸಂಚಿಕೆಯಲ್ಲಿ ನಮ್ಮ ಅಣ್ಣ ಚಲ್ಲುಣ್ಣು ಕುಂಬಾರನು ಒಂದು ನೋಟೀಸನ್ನು ಪ್ರಕಟಿಸಿರುತ್ತಾನೆ- ಸದ್ರಿ ಪ್ರಕಟಣೆಯಲ್ಲಿ ಕಾಣಿಸಿದಂತೆ ಸದ್ರಿ ನಮ್ಮ ಅಣ್ಣನು ನಮ್ಮ ಕವರಿನ ಯಾವತ್ತೂ ಆಡಳಿತ್ಯಗಳನ್ನೂ ಚಲ್ಲಾಸಿಕೊಂಡು ಬರುತ್ತಾನೆ ಎಂಬುದು ತೀರಾ ಸುಳ್ಳು- ನಮ್ಮ ಕವರಿನ, 6 ಮೆಂಬರ್ಸ್ ಇರುವ ಕುಟುಂಬದಲ್ಲಿ ಈಗ ಸುಮಾರು 5 ವರುಷಗಳ ಹಿಂದೆ ಬಾಯಿದಾರೆ ಪಾಲು ಆಗಿ ಅವರವರ ಹಿಸೆಗೆ ಬಂದ ಆಸ್ತಿಯನ್ನು ಆ ಯಾಯ ಮೆಂಬರರು ಪ್ರತ್ಯೇಕ ಪ್ರತ್ಯೇಕವಾಗಿ ಸ್ವಾಧೀನಗಾರರಾಗಿ ಅನುಭವಿಸಿಕೊಂಡು ಬರುತ್ತಾರೆ 6 ಮೆಂಬರ್ಸು ಕೂಡಾ ನಮ್ಮ ತಾಯಿ ಮೋಂಟಗೆ ಸಾಲಿಯಾನ್ 4 ಮುಡಿ ತೊಳ್ಳುವ ಒಕ್ಕಿ ತೆರತಕ್ಕದ್ದಾಗಿದ್ದು ಈ ಪ್ರಕಾರ ನಮ್ಮಿಂದ ಕಳದ ಸರ್ವಜಿತು ಸಂವತ್ಸರದ ಆಂತ್ಯದ ವರೆಗೆ ಸಲಲಿಕ್ಕಿರುವ ಆಕ್ಕಿಯನ್ನು ನಾವು ನಮ್ಮ ತಾಯಿಗೆ ಕೊಟ್ಟಿರುತ್ತೇವೆ. ನಮ್ಮ ಸದ್ರಿ ಅಣ್ಣ ಚಲ್ಲುವು ಕಾಯಂ ಆಗಿ ತನ್ನ ಹೆಂಡ್ತಿ ಮನೆಯಲ್ಲಿ ನಾಸ್ತವಿಸಿಕೊಂಡು ಬರುತ್ತಾನೆ- ಕೆಲವು ದಿವಸಗಳ ಹಿಂದೆ ಸದ್ರಿ ಚಲ್ಲುವು ನಮ್ಮ ಸೈಕಿನೇಯವಳ ವಟ್ಟಿಗೆ ಇದ್ದ ನಮ್ಮ ತಾಯಿಗೆ ಬೆ ಭೂರ್ಯಧನೆ ಕೊಟ್ಟು ಅವಳನ್ನು ಪುಸಲ್ಯಾಯಿ ಈಗ ಅವಳು ನಮ್ಮ ಅಕ್ಕ ಗಂಗಮ್ಮನ ವಟ್ಟಿಗೆ ವಾಸ್ತವಿಸಿಕೊಂಡು ಬರುತ್ತಾಳೆ. ಸದ್ರಿ ಚಲ್ಲುವು ನಮ್ಮ ತಾಯಿಗೆ ಇನ್ನೊಮ್ಮೆ ಬೆ ಭೂರ್ಯಧನೆ ಕೊಟ್ಟು ಸದ್ರಿಯವಳಿಂದ ಬೇಕಾದ ದಸ್ತಾವೇಜುಗಳನ್ನು ಬರ್ಯಾಸಿಕೊಳ್ಳಲಿಕ್ಕೆ ಸಾಕು. ನಮ್ಮ ಕವರಿಗೆ ಏಜ್ಮಾನ್ಯದ ಜಮೀನು ಸಾಲವಿರುವುದಿಲ್ಲ. ವ ಸಾಲ ಮಾಡುವ ಗರ್ಜಿಯೂ ಇರುವುದಿಲ್ಲ. ಆದುದರಿಂದ ನಮ್ಮ ತಾಯಿಯು ಬರಕೊಡಬಹುದಾದ ಯಾವತ್ತು ಪತ್ರಿಕೆ ದಸ್ತಾವೇಜು ವಗೈರೆಗಳು ನಮ್ಮ ಕವರನ್ನು ಬದ್ದೀಕರಿಸತಕ್ಕವುಗಳಲ್ಲ- ವ-ಅವುಗಳು ನಿರ್ಧಾಗತಕ್ಕವುಗಳಲ್ಲ ನಮ್ಮ ತಾಯಿಯು ಮೂಲಕ ಆಕ್ಷ್ಮ ಲಾಭ ಹೊಂದಿಸಿ ತೆಟ್ಟ ವಿರಾಧೆಯಿಂದ ಸದ್ರಿ ಚಲ್ಲುವು ಮೇಲ್ಕಂಡ ನೋಟೀಸನ್ನು ಹೊರಡಿಸಿದ್ದಾಗಿರುತ್ತದೆ.

III ಯೂ ಮೂರುಗೆರೆ ಮತ್ತು ಯೂಎಡಕೈ ಹೆಬ್ಬೆಟ್ಟಿನ ಗುರುತು ಚಿನ್ನಮ್ಮನ ದಾಖಲು.
III ಈಮೂರು ಗೆರೆ ಮತ್ತು ಯೂ ಎಡಕೈ ಹೆಬ್ಬೆಟ್ಟಿನ ಗುರುತು ಗಿರಿಯಂಮನ ದಾಖಲು.
ಕಳ್ಳೂರು, 30-11-1948.

ಮಂಗಳೂರು

ಸಾರತ್ವ ಶಿಕ್ಷಣ ಶಿಬಿರವು ಮಂಗಳೂರಲ್ಲಿ ಕಳೆದ ತಾ 15ರಲ್ಲಿ ಸ್ವಾರಂಭವಾಗಿದ್ದು ಅವಕ್ಕೆ ಸಂಬಂಧಿಸಿದ ಪ್ರದರ್ಶನವೂ ದು ಕಳದ ತಾ 21ರಲ್ಲಿ ಸಂಜೆ ಶ್ರೀ ಬಿ. ಗಂಗಾಧರ ರಾವ್ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಎಚ್. ಸಂಜೀವಯ್ಯರ ಸ್ವಾಗತ ಭಾಷಣ; ಶ್ರೀ ಕೆ. ಸಂಜೀವ ಸೆಟ್ಟರಿಂದ ಶಿಬಿರದ ಬಗ್ಗೆ ಸಿಕ್ಕಿದ ಅನುಭವದ ಪರಿಚಯಗಳಾದ ನಂತರ ಆಟ, ಪಾಠ, ಗೀತ, ಕುಣಿತಗಳ ಪ್ರದರ್ಶನವಾಯಿತು. ಇವುಗಳ ಪರಿಚಯ, ಸಂಕೇತ, ಪ್ರಯೋಜನಗಳನ್ನು ಶ್ರೀ ಕೆ. ವಿಠಲ ಶೆಣೈಯವರು ವಿವರಿಸಿದರು.

ಸತ್ಯಾರ್ಥಕೂಟ ಸಾರತ್ವ ಶಿಕ್ಷಣ ಶಿಬಿರದ ಆಚಾರ್ಯರಾಗಿ ಬಂದಿದ್ದ ಶ್ರೀ ಟಿ. ವಿ. ನೀಲಕಂಠಂ ಇವರನ್ನು ಇಲ್ಲಿಯ ಹಿಂದೂಸಾನ ಸ್ಕೌಟು ಸಂಘದವರು ಕಳದ ತಾ22ರಲ್ಲಿ ಸತ್ಕರಿಸಿದರು. ಇದೇ ಸಂದರ್ಭದಲ್ಲಿ ಇತ್ತೀಚೆಗೆ ನಡೆದ ಸ್ಕೌಟರ ತರಬೇತಿಗಾಗಿ ಆಯೋಗೆ ಸರ್ಟಿಫಿಕೇಟು ಪಾಂಜಲಾಯಿತು. ತಾ 24 ರಲ್ಲು ಜಿಲ್ಲಾ ಅಧ್ಯಾಪಕ ಸಂಘವು ಶಿಬಿರದ ಆಚಾರ್ಯರನ್ನೂ ಸ್ವಾತಕರನ್ನೂ ಸತ್ಕರಿಸಿತು. ಈ ಕೂಟಕ್ಕೆ ವಿದ್ಯಾಖಾತೆಯ ಜಾಯಿಕ್ಟರ್ ಶ್ರೀ ಡಿ. ಸದಾಶಿವ ರೆಡ್ಡಿಯವರು ಬಂದಿದ್ದರು.

ದುಃಖ ವಾರ್ತೆ—ಮಂಗಳೂರಿನ ಸೈಂಟ್ ಎಲೋಶಿಯಸ್ ಕಾಲೇಜಿನಲ್ಲಿ ಸಾಧಾರಣ 33 ವರುಷಗಳ ವರೆಗೆ ಗಣಿತ ಪ್ರಧಾನಾಧ್ಯಾಪಕರಾಗಿದ್ದು 1946ರಲ್ಲು ಕೆಲಸದಿಂದ ನಿವೃತ್ತರಾಗಿದ್ದ ಶ್ರೀ ಎಸ್. ರಾಮಚಂದ್ರ ಅಯ್ಯರವರು ಕಳದ ತಾ 20ರೆಲ್ಲು ತಮ್ಮ 60 ನೆ ವಯಸ್ಸಿನಲ್ಲಿ ಪರಲೋಕವಾಸಿಗಳಾದರೆಂಬು ತಿಳಿಸಲು ವಿಷಾದಿಸುತ್ತೇವೆ. ಈ ವಾರ್ತೆ ಕಾಲೇಜಿಗೆ ತಿಳಿದೊಡನೆ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಪ್ರಿನ್ಸಿಪಾಲರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಮೃತರ ಗುಣಗಾನ ಮಾಡಿ ಅವರ ಆತ್ಮಕ್ಕೆ ಚಿರ ಶಾಂತಿಯನ್ನು ಕೋರಿದುಃಖಸೂಚಕ ನಿರ್ಣಯವನ್ನು ಮಾಡಿದರು.

ಮನೆ ಜಪ್ತಿ—ಪೋಲೀಸರ ಸಹಿತ ಈಟೆ ಸೈಪಲ್ ಡ್ಯೂಟಿ ಪೋಲೀಸು ಇನ್ಸ್‌ಪೆಕ್ಟರ್ ಜಾ ನೀರಾ ಮೈದಿನ್ ಮತ್ತು ಸಬ ಇನ್ಸ್‌ಪೆಕ್ಟರ್ ಶ್ರೀ ಎಚ್. ನಾಗಪ್ಪ ಇವರು ಮಾರ್ಕೆಟ್ ರೋಡಿನ ಶ್ರೀಗಳಾದ ಸಮಾರಾಮ ಸಾಯ್ಯ, ಗೋಪಾಲಕೃಷ್ಣ ದೇವಸ್ಥಾನ ರಸ್ತೆಯ ಪಿ. ಜಿ. ಕಾಮತ್, ಮರಿಗಿ ಮಠದ ಉಮಾನಾಥ ಪಾಲ್, ಕದ್ರಿ ಕೆ. ಎಸ್. ಆಡಿಗ, ಅಜಬುದ್ದೀನ್ ರಸ್ತೆಯ ನಿವೃತ್ತ ನಾಥ ಶೆಣೈ ಇವರ ಮನೆ ಜಪ್ತಿ ಮಾಡಿ ಆರ್ ಎಸ್- ಎಸ್. ಮುಂದಾಳುಗಳಾದ ಗೋಪ್ಯಾಲ್ಕರ್ ಮೊದಲಾದವರ ಚಿತ್ರ, ಲಿಖಿತ ಪತ್ರಗಳನ್ನು ಕೊಂಡುಹೋದರು

ಕಟ್ಟಪಾಡಿ—ಭುವನೇಂದ್ರ ಪ್ರೌಢಶಿಕ್ಷಣ ಸಂಸ್ಥೆಯ ಆಧ್ಯಕ್ಷರಾಗಿದ್ದ ದಿವಂಗತ ಪಾರಿಗಳ ಕೇರಳ ನಾಯ್ಕರ ತೈಲಚಿತ್ರ ಅನಾವರಣ ಸಮಾರಂಭವು ಸಂಸ್ಥೆಯ ಕಾರ್ಯಾಲಯದಲ್ಲಿ ತಾ 6-12-48ನೇ ಸಂಜೆ 4-30ಕ್ಕೆ ಡಾ: ಸುಂದರರಾಮ ಶೈಗಳ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಉಡುಪಿ

ಕಲಾಪ್ರದರ್ಶನ—ವಿಶ್ವಮಂಗಳ ತಾ. 24-11-48ನೇ ಆಪರಾಹ್ನ ನಾಗಪುರದ ಗುರುದೇವ ಸೇವಾ ಮಂದಿರದ ಶ್ರೀ ಶಂಕರ ನಾರಾಯಣ ಕೊಡಂಚರ ಅಧ್ಯಕ್ಷತೆಯಲ್ಲಿ ಹಿಂದು ಸಭೆ ಸೇರಿ 'ಅಧ್ಯಾತ್ಮ ವಿಚಾರ'ದ ಕುರಿತು ಆಧ್ಯಕ್ಷರ ಹಿಂದೀ ಕವಿತಾ ಪಾಚನ ಮತ್ತು ಭಾಷಣ ನಡೆಯಿತು.

ಋತುಸ್ರಾವ ನಿಂತಿತು

'ಕುಮಾರಿ' ಪಿಲ್ಲೆಗಳನ್ನು ಉಪಯೋಗಿಸಿದರೆ ಪದಚಪ್ಪ ಋತುಸ್ರಾವವಾಗುವುದು ಹೊಟ್ಟೆಗೆ ಬರುವುದು, ಈ ಔಷಧ ಸೇವನೆಯಿಂದ ತೀವ್ರ ಗುಣಹೊಂದಬಹುದು, ಯಾವ ಬಾಧಕವೂಯಿಲ್ಲ ಸಾವಿರಾರು ಮಂದಿಗೆ ಖಾತ್ರಿ ಗುಣವಾಗಿದೆ. ಬೆಲೆ; ರೂ. 3-; ಸ್ಪೆಶಲ್ ರೂ. 5-; ಅಧಿಕಾರಿಕ ಸ್ಪೆಶಲ್ ರೂ. 6- [ವಿ. ಪಿ. ಪಸ್ಟೇರಡಾಣೆ ಪ್ರತ್ಯೇಕ]

Mrs. P. DEVEE, F. DS. (N. J.)
Tollygunge CALCUTTA.
ಸ್ವಾತಿಕಸ್ಥರು: ಕಾಂಕಂಪಿ, ಮಂಗಳೂರು

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾನುಸ್ಥರ ನಡುವೆ ಸ್ಥಾಪಿತವಾಗಿ 64 ವರ್ಷಗಳಿಂದ ಡಿವೆಂಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.
Moolky, S K

ಎಲ್ಲಾ ತರದ ಶಾಸ್ತ್ರೀಯ ಆಯುರ್ವೇದ ಔಷಧಗಳಿಗೆ

'ಮಹಾಜನ'
ಕಾಸರಗೋಡು

ಇವರ ತಯಾರಿಕೆಗಳನ್ನೇ ಉಪಯೋಗಿಸಿರಿ.

For Banking Service
in Trade, Industry & Agriculture
approach
THE AGRICULTURAL & INDUSTRIAL BANK Ltd,
(Established in 1934)
Head Office: **COONDAPOOR, S K**

Branches:

1	Ankola,	7	Gokarn,	13	Nagar,
2	Belgaum,	8	Haveri,	14	Shimoga,
3	Bhatkal,	9	Hubli,	15	Sirsi,
4	Koondapoor,	10	Karvar,	16	Somwarpet,
5	Dharwar,	11	Kumta,	17	Virajpet,
6	Gadag,	12	Mangalore,	18	Honavar.

19 384, M. Jaipuria House, Kalbadevi Road, BOMBAY, 2.

Current Savings bank, and Fixed deposits are accepted.

For Terms apply to the nearest Branch.

Coondapoor, 29-9-1948.

K. Vittaldas Shenai,
Managing Director.

ಅನ್ಯಾಕಾಂಜನ
ಕಲಿಪಣೆ, ಕಿವಿ ವೇದನೆ, ಉರಿಕಣ್ಣು, ಭುಜ ಹುಬ್ಬು ವೇದನೆಗಳಿಗೂ ಎದೆನೋವು, ಭಾಯಿಗಳು ಬಾಕಿ ಕೊಳ್ಳುವಾಗ ಬೀಳುವ ವಿಷ ಮುಂತಾದ ಬೇನೆ ಸಕ್ಕಬಾಕ್ಕ ಮೊದಲು ಮೊದಲಾದ ಎಲ್ಲ ರೋಗಗಳಿಗೂ ಸಹ ಸಮಸ್ತ ಸಕ್ಕುಟ್ಟೆ

REGD.

ಅಮೃತಾಂಜನ ಲಿಮಿಟೆಡ್
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.



ಜಗತ್ತಿನಲ್ಲೆಲ್ಲಾ ಸುಮಾರು ಮೂರು ಶತಮಾನಕ್ಕಿಂತಲೂ ಹೆಚ್ಚಾಗಿ ಮಾನವರ ಜೀವನದ ಸುಖ ಶಾಂತಿಗಳ ಮೂಲ ಕಾರಣವಾದ

ವಾನಿಂಗ್ ಟಿಲ್ಲಿ ಆಯಿಲ್
ದೇವಾನುಮೋದಿತ ಔಷಧ



1915ನೇ ಡ್ರಗ್ ಆಕ್ಟ್ ಪ್ರಮಾಣ ನಮ್ಮ ವಾನಿಂಗ್ ಟಿಲ್ಲಿ ಆಯಿಲ್ ಇಂಡಿಯಾ ಸರಕಾರದ ಸೆಂಟ್ರಲ್ ಡ್ರಗ್ ಲೆಬರೊಟರಿಯಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿದೆ.

ನಮ್ಮ ವಾನಿಂಗ್ ಟಿಲ್ಲಿ ಹಾರ್ಲೆಮ್ ತೈಲವನ್ನು ಪ್ರತಿ ಮನೆ ಮನೆಗಳಲ್ಲಿಯೂ ಇಟ್ಟುಕೊಳ್ಳುವುದು ಅತ್ಯಗತ್ಯವಾಗಿ. ಈ ತೈಲವು ಸರ್ವದೇಶಗಳ ಪ್ರಸಿದ್ಧ ಡಾಕ್ಟರುಗಳಿಂದಲೂ ಜಗತ್ತಿನ ಪ್ರಮುಖರಿಂದಲೂ ಉಪಯೋಗಿಸಲ್ಪಟ್ಟು ಜಗತ್ತಿದಲ್ಲೆಲ್ಲಾ ಸಕಪ್ರಕಾರವಾಗಿ ಸರ್ವರೋಗಗಳ ಬಗ್ಗೆ 'ದೇವಾನುಮೋದಿತ ಔಷಧಿ' ಎಂದು ಕರೆಯಲ್ಪಡುತ್ತಿದೆ. ವಾನಿಂಗ್ ಟಿಲ್ಲಿ ತೈಲವು ಮಾನವ ಜೀವನವನ್ನು ಸೀಡಿಸುವ ವಿವಿಧ ವ್ಯಾಧಿಗಳಲ್ಲಿ ಪ್ರವರ್ತಿಸಿ ಅವುಗಳ ಮೂಲವನ್ನೇ ಕಿತ್ತು ಬಿಡುವಂತೆ ಪ್ರಕೃತಿ ನಿಘಂಟುವಿನಲ್ಲೇ ಔಷಧೀಯ ಸೌಲ್ಯಾಂಶಗಳಿಂದ ಸಂಪನ್ನವಾಗಿದೆ. ವಿಷಮಜ್ವರ, ಪಿತ್ತಜ್ವರ, ನಿರೋಸಿನು, ಶೀತಜ್ವರ ಮತ್ತು ಮಲೇರಿಯ ಜ್ವರ ನಿವಾರಣೆ ಬಗ್ಗೆ ವಾನಿಂಗ್ ಟಿಲ್ಲಿ ತೈಲಕ್ಕಿಂತ ಉತ್ತಮ ಔಷಧವು ಜೀರೋನೆಂದಿಲ್ಲ. ಮೂತ್ರಕೋಶ, ಬಯಗುಮೂತ್ರ, ಸೀಮೂತ್ರ, ಆನ್ನಕೋಶ, ಕಲಿಜೆಯ ರೋಗಗಳಲ್ಲಿ ವಾನಿಂಗ್ ಟಿಲ್ಲಿ ತೈಲವು ವಿದ್ಯುತ್‌ಶಕ್ತಿಯಂತೆ ಪ್ರವರ್ತಿಸಿ, ಈ ರೋಗಗಳ ಮೂಲವನ್ನೇ ಕಿತ್ತುಹಾಕುವುದು. ಪಾರ್ಶ್ವವಾಯು, ವಾತರೋಗ, ಪಕ್ಷವಾತ, ಗೂಲಬ ಕೈಯ, ಮೇಣುನ್ಯಾಧಿ, ಅರ್ಜುನ, ಸುಟ್ಟುಗಾಯಗಳಿಗೆ ವಾನಿಂಗ್ ಟಿಲ್ಲಿ ತೈಲವು ಗ್ಯಾರಂಟಿ ಚಿಕಿತ್ಸೆಯಾಗಿದೆ. ಮೂತ್ರಕೋಶದಲ್ಲಿ ಪಿಡಿಸುವ ಕಲ್ಲುಗಳು ಈ ತೈಲವನ್ನು ಸೇವಿಸುವದರಿಂದಲೇ ನೀರು ನೀರಾಗಿ ಮೂತ್ರಕೋಶದಲ್ಲಿನ ತೀಕ್ಷ್ಣವಾದ ವೇದನೆಯು ಕಿಸ್ತಚಿಕಿತ್ಸೆ ಇಲ್ಲದೇನೆ ನಿರ್ಮಾಮವಾಗುವುದಲ್ಲದೆ ನೂರಾರು ಶಿಫಾರಸುಪತ್ರಗಳು ಬಂದಿರುವಾಗ ಈ ನಮ್ಮ ವಾನಿಂಗ್ ಟಿಲ್ಲಿ ತೈಲವನ್ನೇ 'ದೇವಾನುಮೋದಿತ ಔಷಧಿ' ಎಂದು ಕರೆಯುವುದೆಂದರೆ ಅತಿಶಯೋಕ್ತಿ ಆಗಲಾರದು. ಸೆನೆಡಿಯಂದಲೇ ಆಸ್ಟ್ರೇಲಿ, ಜ್ವರ ಬಂದಲೇ ಆಥವಾ ನರಗಳ ಬಲಸೀನತೆಯಿಂದಲೇ ಆಗಿರಲಿ-ಚಿಂತೆಯಿಲ್ಲ, ಈ ವಾನಿಂಗ್ ಟಿಲ್ಲಿ ತೈಲದಿಂದ ಖಾತ್ರಿಗುಣವಾಗುವದು. ಹಲ್ಲುನೋವು, ಮಕ್ಕಳಪೊಟ್ಟೆನೋವು, ಕಿವಿಗಳ ಉಪಟ್ರವ ಹೀಗೆಸರು ಮುಟ್ಟಾಗುವ ಕಾಲದ ಅಕ್ರಮಗಳು, ಹೊಟ್ಟೆನೋವು ಇತ್ಯಾದಿ ರೋಗಗಳು ಈ ತೈಲದ ಸೇವನೆಯಿಂದ ಪರಿಹಾರವಾಗುವವು. ಗಾಯ, ಸುಟ್ಟುಗಾಯಗಳು,ಹುಣ್ಣು ಇತ್ಯಾದಿಗಳಿಗೆ ಇದರ ಬಾಹ್ಯಸೇವನೆಯೇ ಸಾಕಾಗಿದೆ. ಉಪಯೋಗಕ್ರಮ ಪ್ರತಿಯೊಂದು ಬಾಟ್ಲಿಯೊಳಗೆ ಸುತ್ತಿದೆ. ಕಿಮ್ಮತ್ತು— ವಾನಿಂಗ್ ಟಿಲ್ಲಿ ಆಯಿಲ್ ಶೀಸೆ 1ಕ್ಕೆ ರೂ. 2 8-0 ವಿ. ಪಿ. ಚೇರ್. ಡಜನ್ ಶೀಸೆಗಳಿಗೆ ವಿ ಪಿ ಸಹಿತ ರೂ. 30-0-0. ವಾನಿಂಗ್ ಟಿಲ್ಲಿ ಕೆಪ್ಸುಲ್ ಶೀಸೆ 1ಕ್ಕೆ 3-8-0 ವಿ. ಪಿ. ಚೇರ್. ಡಜನ್ ಕೆಪ್ಸುಲುಗಳಿಗೆ ರೂ. 42-0-0 ವಿ. ಪಿ. ಸಹಿತ ವಾನಿಂಗ್ ಟಿಲ್ಲಿ ಡ್ರಪ್ಸರ್ ಬಾಟ್ಲಿ 1ಕ್ಕೆ ರೂ. 5-0-0 ವಿ. ಪಿ. ಚೇರ್. ಒಂದು ಡಜನ್ ಡ್ರಪ್ಸರ್ ಬಾಟ್ಲಿಗಳಿಗೆ ರೂ. 60-0-0 ವಿಪಿ. ಪಿ ಸಹಿತ ವಾನಿಂಗ್ ಟಿಲ್ಲಿ ಆಯಿಂಟ್‌ಮೆಂಟ್ ಸೀಸೆ 1ಕ್ಕೆ ರೂ 1-8-0 ಡಜನ್ ಸೀಸೆಗಳಿಗೆ ರೂ. 18-ವಿ ಪಿ-ನ್ಯೂ-ಪಿ.

ಪ್ರತಿಕಂಸನಾ ಪತ್ರ—ನಾನು ನಿನ್ನ ವಾನಿಂಗ್ ಟಿಲ್ಲಿ ಆಯಿಲನ್ನು ಕಳೆದ ೨೦ ವರ್ಷಗಳಿಂದ ಸರ್ವ ವಿಧದ ವ್ಯಾಧಿಗಳಿಗೆ ಕೊಟ್ಟು, ನೋಡುತ್ತಾ ಬಂದಿದ್ದೇನೆ ಎಲ್ಲ ವಿಧದ ಕಠಿಣ ರೋಗಗಳನ್ನೂ, ಗುಣವಾಗಲಾರದೆಂದು ವೈದ್ಯರು ವಿಚಾರಿಸಿ ರೋಗಿಗಳನ್ನೂ ನಿಮ್ಮ ವಾನಿಂಗ್ ಟಿಲ್ಲಿ ಆಯಿಲ್‌ನಿಂದ ನಾನು ಗುಣಪಡಿಸಿದ್ದೇನೆ. ಈ ತೈಲವು ಪ್ರತಿಯೊಬ್ಬರ ಎಲ್ಲ ಜೀವಿನಲ್ಲಿಟ್ಟುಕೊಳ್ಳಬೇಕಾದ ಸಂಜೀವಿನಿಯೆಂದು ರಾಮನಾಡಿನ ಆಯುರ್ವೇದಿಕ್ ವೈದ್ಯರಾದ ಪಿ. ಪೆಂಕಟರಮಣಯ್ಯನವರು ಬರೆಯುತ್ತಾರೆ.

ಇಂಥ ನೂರಾರು ಶಿಫಾರಸು ಪತ್ರಗಳು ನಮ್ಮಲ್ಲಿಗೆ. ಇಂಥ ಪತ್ರಗಳಲ್ಲಿ ಕೆಲವು ಸೀಸೆಯೊಂದಿಗೆ ಸುತ್ತಿದೆ.

—ದಿ ಎಕ್ಲಿಪ್ಸ್ ಡಿಸ್ಟ್ರಿಬ್ಯೂಟಿಂಗ್ ಏಜನ್ಸಿ,
ದಾಹಾನು ರೋಡು, ಬಿ ಎಂಡ್ ಸಿ. ಐ. ರೈಲ್ವೆ.

The Eclipse Distributing Agency,
Dahanu Road, B B. & C. I Rly.

ಬೊಂಬಾಯಿ ಸ್ಥಾಕಿಸ್ಥರು:—ಲಕ್ಷ್ಮಾವಾಲಾ ಲಿಮಿಟೆಡ್, 25, ಪಿಲ್ಲ್ ಹನುಮಾನ್ ಲೇನ್, ಬೊಂಬಾಯಿ 2.

ಹತ್ಯಡ್ಕದಲ್ಲಿ ಗೋಸಪ್ತಾಹ ಸಮ್ಮೇಳನವು–ಇದೇ ತಾ 20ನೇ 8ರತನಕ ಹವನ, ಪೂಜಾ, ಕೀರ್ತನ, ಹರಿಕಥಾ, ಭಾಷಣಾದಿ ಕಾರ್ಯಕ್ರಮಗಳಿಂದ ಮೊಸ ರೋಟದ ಶ್ರೀ ಸಿದ್ಧಿ ವಿನಾಯಕ ದೇವಸ್ಥಾನದ ವಠಾರದಲ್ಲಿ ಶ್ರೀ ಬಿ. ಎಸ್. ಸುಬ್ರಹ್ಮಣ್ಯ ಜೋಯಿಸರ ಅಧ್ಯಕ್ಷತೆಯಲ್ಲಿ ಜರಗಲಿರುವುದು. ಮಹಾ ಜನರು ಈ ಕಾರ್ಯದಲ್ಲಿ ನೆರವಾಗಬೇಕಾಗಿ ಸಪ್ತಾಹ ಸಮಿತಿಯ ಕಾರ್ಯದರ್ಶಿ ಶ್ರೀ ಎಸ್. ಕಾಶಿನಾಥ ಭಟ್ಟರ ವಿನಂತಿಯಿದೆ.

ಪಾರ್ಕಳ—ತಾ 26-11-48ರಲ್ಲಿ ಬಡಗಬೆಟ್ಟು, ಹಿರೇಬೆಟ್ಟು, ಆತ್ರಾಡಿ ಮತ್ತು ಹೆರ್ಗಾ ಗ್ರಾಮಗಳ ಆಸಲಕ್ಕಿ, ಕೆಲಸಗಾರ ಮತ್ತು ಸಾಗುವಳ್ಳೀ ರೈತರ ಸಭೆಯು ಮದ್ರಾಸ್ ನ್ಯಾಯಸ್ಥಾಯಕ ಸಭಾ ಸದಸ್ಯರಾದ ಜನಾಬ್ ಯಚ್. ಯಸ್. ಮುಸ್ಲೇನ್ ಸಾಹೇಬರವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಹಾಳಾಡಿ ರಮಾನಾಥ ಶೆಟ್ಟಿ, ಬಿ. ಎ. ಬಿ. ಎಲ್; ಎಡ್ವಕೇಟ್ ರವರು ಅಧ್ಯಕ್ಷರನ್ನು ಸ್ವಾಗತಿಸಿದ ನಂತರ ಜಿಲ್ಲಾ ಕಾಂಗ್ರೆಸ್ ಕಮಿಟಿ ಸಭಸ್ಯ ಶ್ರೀ ಬಡಗಬೆಟ್ಟು ಸದಾಶಿವ ಹೆಗ್ಡೇರು ಅಧ್ಯಕ್ಷರ ಪರಿಚಯವನ್ನು ಮಾಡಿಕೊಟ್ಟರು ಶ್ರೀ ಮುದ್ರಾಡಿ ಕೃಷ್ಣಯ್ಯ ಶೆಟ್ರು ಆಸ್ಥಾಕ್ಷರಿಗೆ ಒಪ್ಪಿಸಿದ ಗ್ರಾಮಸ್ಥರ ಮನವಿಯನ್ನು ಓದಿ ಹೇಳಿದರು. ಅಧ್ಯಕ್ಷರು ಮನವಿಗೆ ಉತ್ತರಿಸುತ್ತಾ ಇಂದು ಹಿಂದುಸ್ಥಾನದಲ್ಲಿ ಮಾತ್ರವಲ್ಲ ಇಡೀ ಜಗತ್ತಿನಲ್ಲೇ ಆಹಾರ ಅಭಾವದ ಸಮಸ್ಯೆಯು ತಲೆದೋರಿರುತ್ತಿದೆ. ಮಹಾತ್ಮರು ಏಯಂತ್ರಣವನ್ನು ಕಿತ್ತೊಗೆಯಬೇಕೆಂದು ಹೇಳಿದ್ದರೂ ಆನಿವಾರ್ಯವಾಗಿ ನಿಯಂತ್ರಣವನ್ನು ಬಳಕೆಯಲ್ಲಿ ತರಬೇಕಾಯಿತು. ಗಾಂಧೀಜಿಯವರು ಜೀವಂತರಾಗಿರುತ್ತಿದ್ದರೆ ಈ ವಿಷಯ ಅವರಿಂದ ನಾವು ಯೋಗ್ಯ ಸಲಹೆಯನ್ನು ಪಡೆಯಬಹುದಾಗಿದ್ದಿತು. ಅದು ಹ್ಯಾಗೂ ಇರಲಿ, ನಮ್ಮ ಪಕ್ಷ ಅವನ್ನು 'ಅವಲಕ್ಕಿ'ಯ ಮನೆ ಎಂದರೂ ತಪ್ಪಾಗಲಾರದು. ನೀವು ಮನವಿಯಲ್ಲಿ ಕೇಳಿಕೊಂಡಿರುವಂತೆ ರೇಷನ್ ಕ್ರಮಬದ್ಧ ಪಡಿತರದ ಅಕ್ಕಿಯ ಬಾಗವನ್ನು ಹೆಚ್ಚಿಸುವ ಹಾಗೂ ನೂಕಾಟವಾಡುವ ಸ್ಥಿತಿಯನ್ನು ಪರಿಹರಿಸುವ ಹಾಗೂ ಸಾಗುವಳಿಗೆ ಅಕ್ಕಿ ಬೆಳೆಗಾರರಿಗೆಳಲ್ಲೊಂದಾದ ಆವಲಕ್ಕಿ ಸ್ಥಿತಿಯು ಊರ್ಜಿತದಲ್ಲಿದ್ದು ಬಡಜನರ ಸ್ವತಂತ್ರ ಉದ್ಯೋಗಕ್ಕೂ ಅನುಕೂಲವಾದಂತಾಗಿ ನೂರಾರು ಕುಟುಂಬಗಳ ಜೀವನಕ್ಕೆ ಸಹಾಯವಾಗುವುದಲ್ಲದೆ ನಗರ ನಿವಾಸಿಗಳಿಗೂ ಅನಲಕ್ಕಿಯು ಸರಾಗವಾಗಿ ಸಿಗಲು ಅನುಕೂಲವಾಗುವುದು ಎಂದು ಆಶ್ವಾಸನೆಯಿತ್ತರು. ಆಪರಾಹ್ನ ಬಳಿಕ ರೈತನ ಗೇಣಿ, ಅಕ್ಕಿ, ಎಲ್ಲವನ್ನೂ ರಿಕ್ವಿಜಿಶನ್ ಮಾಡಿದುದರಿಂದ ಪರಿಣಾಮವಾಗಿ ಕಳೆದ ವರ್ಷ ಲಕ್ಷ್ಯಗಟ್ಟಲೆ B. ಕಾರ್ಡುಗಳು ಸಾಗುವಳ್ಳೀದಾರರಿಗೆ ಕೊಡಲ್ಪಟ್ಟಿರುವ ವಿಷಯವನ್ನೂ ಜಿ. ಕ. ಜಿಲ್ಲೆಯ ಸಂಗ್ರಹ ಡಿಪೋಗಳಿಂದ ರೈತರು ಅಕ್ಕಿ ಭತ್ತಗಳನ್ನು ಒಪ್ಪಿಸುವಾಗ ಇಂಟಾಗುತ್ತಿರುವ ನಸ್ಟಕಷ್ಟಗಳ ಸಂಗತಿಯನ್ನೂ ಸಾನು ಈ ಮೊದಲೇ ಮನವರಿಕೆ ಮಾಡಿರುವೆನಾಗಿಯೂ ಅದಕಾರಣ ರೈತನ ಸ್ಯಾಯವಾದ ಉಳಿತಾದುವನ್ನೇರಿಕ್ವಿಜಿಶನ್ ಮಾಡುವ ವಿಷಯದಲ್ಲಿಯೂ, ಸಂಗ್ರಹ ಡಿಪೋಗಳನ್ನು ಕಮಿಸನಿನ ಆಧಾರದಮೇಲೆ ಗ್ರಾಮಕ್ಕೊಂದರಂತೆ ಹೆಚ್ಚಿಸಿ ತನಗನುಕೂಲವಿರುವ ಡಿಪೋಗಿಗೆ ರೈತನು ಅಕ್ಕಿ ಭತ್ತಗಳನ್ನು ಒಪ್ಪಿಸುವ ವಿಷಯದಲ್ಲಿಯೂ, ಆವಲಕ್ಕಿ ಕೆಲಸಗಾರರ ವಿಷಯದಲ್ಲಿಯೂ ಸಬಂಧಪಟ್ಟ ಆಧಿಕಾರಿಗಳೊಡನೆ ವಿಚಾರ ವಿನಿಮಯಮಾಡಿ ತನ್ನಿಂದ ಸಾಧ್ಯವಿದ್ದಷ್ಟರ ಮಟ್ಟಿಗೆ ಸಹಾಯವನ್ನು ಮಾಡುವುದಾಗಿ ತಿಳಿಸಿದರು ಡಾ. ಯಸ್. ಭಣಾಪಾರಂಕರ ಹೆಗ್ಡೇರ ಧನ್ಯವಾದ ಸಮರ್ಪಣೆಯೊಂದಿಗೆ ಸಭೆಯು ಮುಕ್ತಾಯವಾಯಿತು.

ಬ್ರಹ್ಮಾವರದಲ್ಲಿ

ದ. ಕ. ಜಿಲ್ಲಾ ಆಯುರ್ವೇದ ವೈದ್ಯ ಪರಿಷತ್ತು–ನವಂಬರ ತಾ 26ರಂದ 28ರ ತನಕ ಶ್ರೀ ಎನ್. ಎಸ್., ಸುಬ್ರಹ್ಮಣ್ಯ ಶಾಸ್ತ್ರಿ, ಆಯುರ್ವೇದ ವಿದ್ವಾನ್‌ಮೈಸೂರು, ಅವರ ಅಧ್ಯಕ್ಷತೆಯಲ್ಲಿ ಜರಗಿತು. ಪ್ರಥಮ ದಿನ ಸಭಾರಂಭವಾದೊಡನೆ ಪ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷರಾದ ಶ್ರೀ. ಸಿ. ಲಕ್ಷ್ಮೀನಾರಾಯಣ ನಾಯ್ಕರು ರಾಷ್ಟ್ರ ಮತ್ತು ಧನ್ವಂತರಿ ಧ್ವಜಗಳ ಅರೋಹಣ ಮಾಡಿದರು. ಬಳಿಕ ಮಂತ್ರಾಸು ಸರಕಾರದ ಮಾಜಿ ರೆವಿನ್ಯೂ ಮಂತ್ರಿಗಳಾದ ಶ್ರೀ ಕೆ. ಅ ಕಾರಂತರು ನೆರೆಪತ್ತಿನ ಉದ್ಘಾಟನಾ ಸಮಾರಂಭವನ್ನು ನೆರವೇರಿಸಿದರು. ಅಪರಾಹ್ನ ಶಾಲಾ ಬಾಲಕಿಯರಿಂದ ಸ್ವಾಗತ ಗೀತೆ ಹಾಡಲ್ಪಟ್ಟ ನಂತರ ಶ್ರೀ ಟಿ. ಗೋಪಾಲಕೃಷ್ಣ ಸ್ವಾಗತ ಭಾಷಣ ಮಾಡಿದರು. ಆಮೇಲೆ ಸಭಾಧ್ಯಕ್ಷರ ಶ್ರೀ ಶಾಸ್ತ್ರಿಗಳ ಭಾಷಣ ಓದಲಾಯಿತು. ಶ್ರೀ ಬಿ. ವಿ. ಮಾಧವರಾಯರು ಪರಿಷತ್ತಿಗೆ ಕಳುಹಿಸಲ್ಪಟ್ಟಿದ್ದ ಸಂದೇಶಗಳನ್ನು ಓದಿದರು. ನಂತರ ಪರಿಷತ್ತಿನ ಅಂಗವಾದ ಪಸ್ತು ಪ್ರದರ್ಶನವನ್ನು ಆಯುರ್ವೇದ ಭೂಷಣ ಶ್ರೀ ಎಸ್. ವಿ. ಶಾಸ್ತ್ರಿಗಳು ತೆರೆಯುತ್ತಾ ತಮ್ಮ ಭಾಷಣವನ್ನೆಸಗಿದರು. ರಾತ್ರಿ ನಿಷಯ ನಿಯಾಮಕ ಸಭೆ ಜರಗಿತು.

ಮರುದಿನ ಬೆಳಿಗ್ಗೆ ತದ್ವಿದ್ಯಾಸಂಭಾಷಾ ವಿಷತ್ತು ಆಯುರ್ವೇದ ವಿದ್ವಾನ್ ಶ್ರೀ ಎಜ್. ಟಿ. ರಾಮಚಂದ್ರಾಣಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು. ಮಧ್ಯಾಹ್ನ ಜರಗಿದ ಪ್ರತ್ಯಕ್ಷಣ ಸಂಭಾಷಾ ಪರಿಷತ್ತಿನ ಅಧ್ಯಕ್ಷತೆಯನ್ನು ಸಾರಾಜ್ ವೈದ್ಯ ರಂಗನಾರಾಯಣ ಭಟ್ಟರೂ ಕಾಮಾರ ಭೃತ್ಯ ಸಂಭಾಷಾ ಪರಿಷತ್ತಿನ ಅಧ್ಯಕ್ಷತೆಯನ್ನು ಡಾ. ಎಸ್. ಗೋಪಾಲಕೃಷ್ಣರಾಯರೂ ವಹಿಸಿ ತಮ್ಮ ಕಾರ್ಯವನ್ನು ಪೂರೈಸಿದರು. ವೈದ್ಯರು ಸ್ವಾನುಸಾರ ಯಾಚಾರ್ಯರು ಕಾಲೋಚಿತ ಭಾಷಣವಿತ್ತರು.

ಕೊನೆಯ ದಿನ ಬೆಳಿಗ್ಗೆ ಡಾ. ಎಸ್. ಎ. ಶರ್ಮರ ಅಧ್ಯಕ್ಷತೆಯಲ್ಲಿ ಪ್ರಕೃತಿ ಚಿಕಿತ್ಸಾ ಸಂಭಾಷಾ ಪರಿಷತ್ತು ಜರಗಿತು. ಆಪರಾಹ್ನ ಜರಗಿದ ದರ್ಶನ ಸಂಭಾಷಾ ಪರಿಷತ್ ಸಮಾರಂಭದ ನಾಯಕತ್ವವನ್ನು ಭಂಡಾರಿಕೇರಿ ಮಠದ ಶ್ರೀ ನಿಷ್ಕಾಮಾನಂದತೀರ್ಥ ಶ್ರೀ ಪಾದಂಗಳವರು ವಹಿಸಿದ್ದರು. ನಂತರ ಕೂಡಿದ ಮಹಾ ಅಧಿವೇಶನದಲ್ಲಿ ಹಲವಾರು ನಿರ್ಣಯಗಳಾದುವು, ಮಹಾತ್ಮಾಜಿ, ಪಂಡಿತ ಕಾರಾನಾಥ್, ಪಂಡಿತ್ ಟಿ. ಕೃಷ್ಣಾಂಬಿಯಾರ್ ಮೊದಲಾದವರ ನಿಧನದ ಬಗ್ಗೆ ಮೂರು ಸೂಚನೆಗಳಾಯಿತು. ಆ ಸಂದರ್ಭಿಸ್ಥಗಳ ನೀಲಿರುವ ಸಾನಸಿರೋಧ ಕಾಸೂಸಿನ ಶರ್ತಗಳನ್ನು ಹಿಂತೆಗೆಯಬೇಕೆಂದು ಮದ್ರಾಸು ಸರಕಾರನನ್ನು ಒತ್ತಾಯಿಸುವ, ರಿಜಿಸ್ಟರ್ಡ್ ವೈದ್ಯರಲ್ಲಿ ಸರಕಾರವು ಮಾಡಿರುವ ತಾರತಮ್ಯ ತೆಗೆಯಬೇಕೆನ್ನುವ, ಗಿಡಮೂಲಿಕೆಗಳ ದರ್ಶನಾಲಯವೊಂದನ್ನು ಸ್ಥಾಪಿಸುವರೆ 250 ಎಕ್ರೆ ಸ್ಥಳ ಸಿಗಬೇಕೆನ್ನುವ, ದ. ಕ. ಜಿಲ್ಲಾ ಆಯುರ್ವೇದ ವೈದ್ಯ ಮಂಡಲಕ್ಕೆ ಎಲ್ಲಾ ತರಗತಿಯ ವೈದ್ಯರನ್ನೂ ಸದಸ್ಯರನ್ನಾಗಿ ಪಡೆದುಕೊಳ್ಳಬೇಕೆಂದು ವಿನಂತಿಸುವ, ಪ್ರತಿ ತಾಲೂಕಿನಿಂದ ಮೂರಂತೆ ಪ್ರತಿನಿಧಿಗಳನ್ನು ಆರಿಸಿ ಜಿಲ್ಲಾ ಮಂಡಳಕ್ಕೆ ಕಳುಹಿಸಿ ಜಿಲ್ಲಾ ಮಂಡಳದ ಬುದ್ಧಿಯಾನಾಗಬೇಕೆನ್ನುವ ಇತ್ಯಾದಿ ನಿರ್ಣಯಗಳಾದುವು.

ಆಧ್ಯಕ್ಷರ ಮುಕ್ತಾಯ ಭಾಷಣವಾದ ಬಳಿಕ ವೈದ್ಯ ಶ್ರೀ ಧಾನುನಾ ಗುರುಗಳು ಅವರು ಎಲ್ಲರಿಗೂ ಧನ್ಯವಾದಗಳನ್ನರ್ಪಿಸಿದರು.

ಕಾಸ್ರಗೋಡು ಡಿ. ಮು. ಕೋರ್ಟಿನಲ್ಲಿ

R. E. P. No. 314/1948

M. ಕುಂಞಾಮು, ಪಾದಿ. ಅರ್ಜಿದಾರ

ಮತ್ತು

೫. ಅಬ್ದುಲ್ಲ ಕುಂಞ, ಮುಂಮುಂಞ ಬ್ಯಾರಿ ಮಗ, ಕಾಸರಗೋಡು ತಾಲ್ಲೂ ಚಂಗಳಗ್ರಾಮದಲ್ಲಿರುವಾ, ಪ್ರತಿವಾದಿ. ೧೪.

ಸದ್ರಿ ಅಮ್ಮಜ್ಜಾರಿಯಲ್ಲಿ ನ್ಯಾಯಾಸ್ಥಿಗಳು ಯೇಲಂ ಬಗ್ಗೆ ಆಪೇಕ್ಷಿಸಿ ವಾಕ್ಸು ಮಾಡಿದ ಯೇಲಂ ಇಸ್ತಿಹ್ಕಾರು ಮಂಜೂರು ಪಡಿಸುವದೆ ತಾ 14-12-1948ಕ್ಕೆ ತಪ್ಪಸಿಟ್ಟಿರುವ ಸಂಗ್ತಿ ತಿಳಿಸೋಣಾಗಿಯಿದೆ.

(Sd) **P. Ahmad,**
Advocate for Petitioner

ಕಾಸ್ರಗೋಡು ತಾ. 24-11-1948

The Vijaya Bank Ltd., Byndoor.

ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಬೈಂದೂರು

ನೋಟೀಸು

ಈ ಕೆಳಗೆ ಹೆಸರು ಕಾಣಿಸಿದ ಮನಸ್ಸೀಯರು ನಮ್ಮ ಬ್ಯಾಂಕಿನಿಂದ ಪಡೆದ ಸಾಲ ಪನ್ನು ರಿಜಿಸ್ಟ್ರಿ ನೋಟೀಸು ಕೊಟ್ಟರೂ ಅಸ್ಲು ಯಾ ಬಡ್ಡಿ ಯಾವುದನ್ನೂ ಈ ತನಕವೂ ಬೇಂಕಿಗೆ ಕೊಡದಿರುವುದರಿಂದಲೂ ಮತ್ತು ಕೆಳಗೆ ಕಾಣಿಸಿ ಹೆಸರಿನ ಪೈಕಿ 1, 2 ಮತ್ತು 3ನೇ ಆಸಾಮಿಗಳು ಮೃತರು ಪಟ್ಟಿದ್ದರಾಗಿಯೂ, 4, 5 ಮತ್ತು 6ನೇ ಆಸಾಮಿಗಳು ಊರಿನಲ್ಲಿ ಇಲ್ಲದಿರುವುದರಿಂದಲೂ ರಿಜಿಸ್ಟ್ರಿ ನೋಟೀಸುಗಳು ಪಾಪಸು ಬಂದಿರುವುದರಿಂದ ಸದರಿಯವರು ಈತನಕ್ಕಿಟ್ಟಿರುವ ಪವ್ಯಾಧಿಗಳನ್ನ ತಾ. 11-12-48ನೇ ಶನಿವಾರ ಮಧ್ಯಾಹ್ನ 12ಗಂಟೆಗೆ ಆಥವಾ ಬ್ಯಾಂಕಿಗೆ ಯುಕ್ತ ರೋರುವ ಇತರ ದಿವಸಗಳಲ್ಲಿ ಪುನಃ ನೋಟೀಸು ಕೊಡದೇನೇ ಬಹಿರಂಗವಾಗಿ ಏಲಂ ನಾಡಲಾಗುವುದು. ತಿಳಿದಿರುವುದು.

ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು
79 / 44-6	ಕೆಂಚಯ್ಯನ ಮಹಾಬಲ ಶೇರೆಗಾರ, ಕೃಷ್ಣಯ್ಯ ಶೇರೆಗಾರ ಮಗ, ಪಡುವರಿ ಗ್ರಾಮ, ಪೋಸ್ಟು ಬೈಂದೂರು.	12 0 0
446 / 45-6	Do	15 0 0
149 / 46-7	ಸುರ್‌ಕುಂದ ಹೊಸಮನೆ ನಂತ್ಯಯ್ಯ ಶೆಟ್ಟಿ, ಸುಬ್ಬಯ್ಯ ಶೆಟ್ರ ಅಳಿಯ, ಬೈಂದೂರು ಗ್ರಾಮ, ಪೋಸ್ಟು ಬೈಂದೂರು	6 0 0
354 / 46-7	ಒಂಕೇಶ್ವರ ಹೊಸಾಡುಮನೆ ನಾರಾಯಣ, ಮಹಾಬಲ ಶೇರೆಗಾರರ ಮಗ, ಬೈಂದೂರು	20 0 0
591 / 46-7	ನೋಹನ್ ಮಹಾಬಲೇರ್ ಬಡ್‌ಕರ್, Step S/o ಮಹಾಬಲೇರ ಬಡ್‌ಕರ್, ಬೈಂದೂರು ಕಸಬಾದಲ್ಲಿ ವಾಸ್ತವ್ಯ, ಪೋಸ್ಟು ಬೈಂದೂರು	10 0 0
372 / 47-8	ನಾಕಟ್ಟಿ ಸುಬ್ಬ, ಗೋವಿಂದನ ಮಗ, ಬೈಂದೂರು	5 0 0

Office of the Bank,
27-11-48

H. Rajeeva Shetty,
Agent.

ಸುಲಭದಲ್ಲಿ ಇಂಗ್ಲಿಷ್

ಇಂಗ್ಲಿಷ್ ಕಲಿಯಲು ಅತ್ಯುಪಯುಕ್ತವಾದ

ಇಂಗ್ಲಿಷ್ ಸ್ವಯಂಬೋಧಿನಿ

ಬೆಲೆ ರೂ. 1 8 0

ಪುಸ್ತಕ ಸಿಗುವ ಸ್ಥಳ: ನವಭಾರತ ಬುಕ್ ಡಿಪೊ, ಉಡುಪಿ.

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾನಸ್ಥೈ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಜೆಟ್ಟಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸಶಕ್ಕ ಅನೋಷಧಿವಾದ ಶಕ್ತಿವರ್ಧಕ. ಪ್ರಸವವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದನ್ನು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಚ್ಯವನಪ್ರಾಶ (ಬಂಗಾರ ಮಿಶ್ರಿತ.)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧವಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮೆದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ರಾಘವಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳು ದೊರೆಯುತ್ತವೆ. ಕ್ಷಾಲೆ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕಹಾಗೆ ಔಷಧಿ ರವಾನಿಸಬಹುದು. (1) ಉಡುಪಿ ವಿಜಯಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ವಿಜಯಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್, 183, ಸುಪಾರಿಬಾಗ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್‌ಶೋಪ್ ಎದುರುಗಡೆ, ಪರೇಲ್. (3) ಜನರಲ್ ಸ್ಟೋರ್ಸ್, ಕೆಮಿಸ್ಟ್, ಜಿ. ಐ. ಪಿ. ಮಾಟುಂಗಾ.

— ಮಕ್ಕಳನ್ನು ಹಡೆಯುವುದು ಸಾಕು —

ಆಶಕ್ತ ಸ್ತ್ರೀಯರಿಗೆ **ಬರ್ಥ್ ಕಂಟ್ರೋಲ್** ರೋಗ ಗೃಹಸ್ಥ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಗುವಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಆಲ್ಲದೆ ಸ್ತ್ರೀಯರ ಬಳಕೆದಾರು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳುದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಕಿಮ್ಮತ್ತು:—ಹೆರವೀವಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦. ಪೋಸ್ಟ ಚಾರ್ಜು ೧೫ ಆಣೆ.

ಮಾಲಕರು:—ಜಾಲಪ್ಪ ಭಕೀರಪ್ಪಾ ಡಾವಣಗೇರಿ

ಆಯುರ್ವೇದ ಔಷಧಾಲಯ ಗದಗ-ಸಿಟಿ-

ವಿಜಯಪುರ:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ ವಿಜಾಪುರ— ಬಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ ವಿಜಾಪುರ ನಂಜುಡೇಶ್ವರ ಮೂರ್ತಿ ಡಾವಣಗೆರಿ ಡಾವಣಗೆರಿ:—ಡಾವಣಗೆರಿ ಫ್ರೆಸ್ಸ್ ಆರ್ ಎಲ್ ಶಮಲಭಾಷಾ, ಕೆಮಿಸ್ಟ್, ಹಾವೇರಿ ಬ್ಯಾಡಗಿ

ಗೊನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಭೋತರಕ್ಕೆ ಹಳದೀ ಡಾಗು ಕತ್ತುತ್ತಿದ್ದರೆ, ಶರೀರದಿಂದ ಬಾನ್ಸ. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟಿ, ಬಿದ್ದಿದ್ದರೆ, ಉಷ್ಣದಿಂದ ಜೀರು ಇಳಿದಿದ್ದರೆ, ಉಡುಡು ಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಶೆಂಪು ಸೆರಗು ಹೋಗುತ್ತಿದ್ದರೆ, ಹೂಲಿಕುಟ್ಟು ಗರ್ಭಿಯಿಂದ ಗರ್ಭಕೋಶ ನಾತಹೊಂದಿದ್ದರೆ, ಸರಿಯಾಗಿ ಭೇದಿ ಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಷಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆ ಗಾಲದಲ್ಲಿ ಜೇನತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಪಾಲ, ಟೊಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ಕಿರೂ. ಪೋಸ್ಟ ಚಾರ್ಜ ೮ ಆಣೆ

ವಿಜೆಂಟರು:—ಗದಗ:—ಗದಗ ಫಾರ್ಮಸಿ, ಹುಬ್ಬಳ್ಳಿ:—ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:-ಬಾಗಲಕೋಟೆ ಫಾರ್ಮಸಿ, ಧಾರವಾಡ:-ಧಾರವಾಡ ಫಾರ್ಮಸಿ, ಡಾವಣಗೇರಿ: ಡಾವಣಗೆರಿ ಫ್ರೆಸ್. ನಂಜುಡೇಶ್ವರ ಮೂರ್ತಿ ಡಾವಣಗೆರಿ.

ಸಕ್ರಿಯ ವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ.

ಆಯುರ್ವೇದ ಔಷಧಾಲಯ ಗದಗ

ಸ್ತ್ರೀ, ಅಲ್ಲ - - ಗೃಹಲಕ್ಷ್ಮಿ!

ಗೃಹಲಕ್ಷ್ಮಿಗೆ ಆಪತ್ತು ಒದಗಿದರೆ ಸಂಸಾರವು ಮಣ್ಣು ಪಾಲಾಗುತ್ತೆ

ಹೆರಿಗೆ ಅಂದರೆ ಪುನರ್ಜನ್ಮವೆಂದು ಸ್ತ್ರೀಯರೆನ್ನುವುದಿದೆ. ಕಾರಣವಿಷ್ಟೆ. ಹೆರಿಗೆ ಕಾಲದಲ್ಲಿ ಯಾ ಅನಂತರ ಸ್ತ್ರೀಯರಿಗೆ ಆಕಸ್ಮಿಕವಾಗಿ ನಂನಾ ವಿಕಾರಗಳುಂಟಾಗುತ್ತವೆ. ಕೆಲವೇಳೆದೆ ಆರಿಕ ಉಂಟಾದರೆ ಜ್ವರ ಬರುತ್ತದೆ, ನಂಜೇರುತ್ತದೆ. ವಿಪರೀತ ಸ್ರಾವ ಯಾ ಸ್ರಾವ ನಿರೋಧ ಉಂಟಾಗುತ್ತದೆ. ಇವರಿಂದ ಪ್ರಾಣಾಪಸ್ಸು, ಮೆಲವಿಸೋಧ, ಸ್ವಸನಗಳ ಬೀಗ್ಸು, ನಿದ್ರಾನಾಶ, ಪಾಂತಿ, ಅಗ್ನಿಮಾಂದ್ಯ ಇತ್ಯಾದಿ ಒಂದೆರಡು ಯಾ ಹಲವು ವಿಕಾರಂಗಳು ತಲಯೋದುತ್ತವೆ ಪೈದ್ಯ, ಡಾಕ್ಟರ್, ಸರ್ಜನರಿಗೆ ವರೆಗೆ ಕರೆಸಿ ನೂರಾರು ರೂಪ್ಯಾ ಖರ್ಚು ಮಾಡಬೇಕಾಗುತ್ತದೆ ಆ ಮೇಲೂ ದೈವೇಚ್ಛೆ ಎಂದು ಅಧೃಷ್ಟ ಪರೀಕ್ಷೆ!

ಆದರೆ ಬಣಂತಿತನದಲ್ಲಿ ನಾವಿರಾರು ಸ್ತ್ರೀಯರ ಪ್ರಾಣ ಉಳಿಸಿದ ಪ್ರಸಿದ್ಧವಾದ 'ಪ್ರಸೂತಾಮೃತ'ದ ೧ ಬಾಟ್ಲಿ ಮತ್ತು ೧ ಡಜನು 'ಪ್ರಸೂತ ಕಲ್ಯಾಣ ವಟಿ' ಇವುಗಳನ್ನು ಮುಂದಾಗಿ ತಂದಿಟ್ಟು ಸಕಾಲದಲ್ಲಿ ಉಪಯೋಗಿಸಿದರೆ ಕಷ್ಟ ಗೃಹಲಕ್ಷ್ಮಿಯ ಆಪತ್ತು-ವಿಪತ್ತುಗಳಿಗೆ ಅಂಜಬೇಕಾಗಿಲ್ಲ

ಕಮನೀಯ ಕೇತಕಿವಾಸ, ತಂಪು ನೆದುಳು, ಶುಭ್ರ ನೇತ್ರಗಳನ್ನು ಜೊಂದಲು ಬಹು ಗುಣಯುಕ್ತ ಆಮಲಕೀ ತೈಲ ಯಾ ಹಿಮಸಾಗರ ತೈಲ್ಕಗಳಲ್ಲೂಂದನ್ನು ಉಪಯೋಗಿಸಿರಿ.

Swadeshi Oushadhi Bhandara, (REGD.)

Kunjal P. O. Brahmavar, S. K.

Nambiar's

ARYA VAIDYA SALA

UDIPI

Ideal House for Ayurvedic Treatment.

T. N. Kelu Nambiar,
Vaidya

ಜನಮತ

ಕೃಷಿಕ ನಿವೇದನೆ

"ಕೃಷಿಕನೆಂದರೆ ದೇಶದ ಅನ್ನದಾತ, ನಮ್ಮ ದೇಶದ ಬೆಂಗೋಲು; ಕೃಷಿಕರ ಉದ್ಧಾರವಾಗದೆ ಭಾರತದ ಉದ್ಧಾರವಿಲ್ಲ" ಎಂಬ ಸೊಲ್ಲು ಇಂದು ಎಲ್ಲಾ ಮುಖಂಡರ ಬಾಯಿಯಿಂದಲೂ ಹೊರಡುತ್ತಿದೆ. ಆದರೆ ಆ ಬಗ್ಗೆ ಆಸಕ್ತಿ ವಹಿಸಿ ಕೆಲಸ ಮಾಡುವವರು ತೀರಾ ವಿರಳ ಪ್ರಕೃತ ನಮ್ಮ ಜಿಲ್ಲಾಕನ್ನಡ ಜಿಲ್ಲಾ ಕೃಷಿಕರ ಆದರಲ್ಲೂ ಬಾಲಗೇಣಿ ವಕ್ಕಲುಗಳ ಸ್ಥಿತಿಯಂತೂ ವಿದೇಶೀ ಆಳಿಕೆಯ ಕಾಲಕ್ಕಿಂತಲೂ ಕೆಳಮಟ್ಟಕ್ಕಿಳಿದಿದೆ ಎಂದರೆ, ತಪ್ಪು ಅರ್ಥಗ್ರಹಿಸುವವರಿಲ್ಲ ಪುದು. ಆದರೆ ಇವರ ಸತ್ಕೃತ್ವವನ್ನು ತಿಳಿಯಬಯಸುವವರು, ಇತ್ತೀಚೆಗೆ ಕೋರ್ಟಿನಲ್ಲಿ ಅಸ್ತಿ ಸ್ವಾಧೀನತೆಗೆ ಬಾಲಬಾದ ವ್ಯಾಜ್ಯಗಳ ಸಂಖ್ಯೆಯನ್ನೂ, ಎಡವು ವರುಷಗಳ ಹಿಂದಿನ ಪುತ್ತು ಇಂದಿನ ಗೇಣಿ ಸಂಖ್ಯೆಯನ್ನೂ ಪರಿಶೀಲಿಸಿದರೆ ಗೊತ್ತಾಗುವುದು. ನಮ್ಮ ದೇಶಕ್ಕೆ ಸ್ವಾತಂತ್ರ್ಯ ದೊರೆತು 15 ಮಾಸಗಳು ಕಳೆದು ಹೋದರೂ ಇಲ್ಲಿಯ ಬಾಲಗೇಣಿ ವಕ್ಕಲುಗಳು ಮಾತ್ರ ಇನ್ನೂ 18ನೇ ಶತಮಾನದ ಗುಲಾಮರಂತೆ, ನರಕ ಯಾತನೆಯನ್ನು ಅನುಭವಿಸುತ್ತಿದ್ದಾರೆ ಎಂಬ ಸಂಗತಿ ವಕ್ಕಲುಗಳಿಂದ ಬರಾಯಿಸಿಕೊಳ್ಳುವ ಎದುರ್ನಾದಿ ಫೋಮಿನ ವಕ್ಕಲಿಕೆಯನ್ನು ಸಂಶೋಧಿಸಿದರೆ ಸ್ಪಷ್ಟವಾಗುವುದು ಇತ್ತೀಚೆಗಂತೂ ಕಾಂಗ್ರೆಸ್ ಸರಕಾರದವರು ವಕ್ಕಲು ಹಿತಮಸೂದೆ ತರುವುದಾಗಿ ಬಹಳ ಮುಂದಾಗಿ ತಿಳಿಸಿದ್ದರಿಂದ ಗೇಣಿ ಸಂಖ್ಯೆಯು ಒಂದೇ ಸವನೆ ಏರತೊಡಗಿದೆ. ಕೆಲವರ ಗೇಣಿಯಂತೂ ಇನ್ನೂತ್ತಿ ಸಂಖ್ಯೆಗೂ ಮುಟ್ಟಿದೆ. ಧನ ಜೇಳುವ ಗೇಣಿ ಕೊಡಲು ಸಾಧ್ಯವಿಲ್ಲವೆಂದರೆ 3 ಪರ್ಷದ ಗೇಣಿ ಬಾಕಿ, ಆಸ್ತಿ ಸ್ವಾಧೀನತೆಗೆ ಸಮೇತ ರಿಟಿಸ್ಸಿ ನೋಟೀಸು! ಕ್ರಮವಾಗಿ ಗೇಣಿಸಲಾಯಿಸುವವಕ್ಕಲುಗಳಿಗೂ ರಶೀದಿ ಕೊಡುವ ಅಭ್ಯಾಸವು ಪ್ರಾಣ್ಯತ್ಯಾದ ಪೆಜ್ಜು ಮಂದಿ ಧನಿಗಳಿಗೆ ಇಲ್ಲವೆಂಬುದು ಜನಸಿದ್ಧ ಸಂಗತಿ! ಇನ್ನು ಕೆಲಮಂದಿ ಸಭ್ಯರೆನ್ನಿಸಿಕೊಂಡ ಧನಿಗಳು ಗೇಣಿ ಸಂಖ್ಯೆಯನ್ನು ನಮೂದಿಸದ ಬಾಲಿ ಫೋರ್ಮಿಗೆ ದಸ್ತತು ಮಾಡಿಸುವುದೂ, ಬರಹ ಇಲ್ಲದವರಿಂದ ಗೇಣಿಚೀಟು ಎಂದು ಸೊದಿಬಚೀಟಿಗೆ ಕೈ ಮೊಹರು ಬಿತ್ತಿಸಿಕೊಳ್ಳುವುದೂ ಅಪರೂಪದ ಸಂಗತಿಯಲ್ಲ. ವಕ್ಕಲಾದವನು ಧನಿಯ ಮಾತಿಗೆ ಸ್ವತಃ ದಿಡಿದರೆ ಅವನ ಗತಿ ತೀರಿತು! ಬೇಸಾಯ ಬಿಡಬೇಕು. ಕೋರ್ಟಿಗೆ ಹೋದರಂತೂ ಬಡ ಕೃಷಿಕನ ಅವಸ್ಥೆ ತೀರಿದಂತೆಯೇ ಸರಿ. ಕೆಲವು ಕಡೆ ಧನಿಗಳಿಗಂತೂ ಕೋರ್ಟಿಗೆ ಹೋಗುವ ಅವಶ್ಯಕತೆಯೂ ಇಲ್ಲ, ಅವರೇ ನ್ಯಾಯಾಧೀಶರು! ರಾಮ ರಾಜ್ಯದ ಬದಲಾಗಿ ರಾವಣ ರಾಜ್ಯ! ಕೋರ್ಟಿಗೆ ಹೋದರೂ ಧನಿ ಜನ ಸಂಖ್ಯೆಸಿಂದ ಕೂಡಿದ ಧನವೊಡನೆ ಬಡರಾಯ ವಕ್ಕಲು ಜೋರಾಡುವುದಾದರೂ ಹೇಗೆ? ಇದಕ್ಕೆಲ್ಲ ಸರಿಹಾರ ಮಾರ್ಗವೆಂದರೆ ಧನಿಯು ಜೇಳುವ ಯಾವತ್ತು ವಿಷಯಗಳಿಗೂ ಒಪ್ಪಿ ಶರಣು ಹೋಗುವುದು. ತನ್ನ 'ಗುಮಿಯಲ್ಲಿ ಕೃತ ಮಾತಕೂಡದೆಂಬ ಧನಿಯ ಸೊಲ್ಲಿಗೂ, 'ಅಧಿಕ ಬೆಳೆ ಬೆಳೆಯಸಿರಿ' ಎಂಬ ಸರಕಾರದ ಗುಲ್ಲಿನ ಘೋಷಣೆಗೂ ಎಲ್ಲಿಯ ಹೊಂದಿಕೆ? ರಾಷ್ಟ್ರ ಭಾತುಕತ್ವವಾದ ಈ ತರದ ಕಾಯಿದೆಯು ಸ್ವತಂತ್ರ ಭಾರತದಲ್ಲಿ ಇನ್ನೂ ತಲೆ ಎತ್ತಿ ನಿಂತಿರುವುದೆಂದರೆ, ದೇಶಾಭಿಮಾನಿಗಳಿಗೆ ಅಡಿಪು ಪೈಸನದ ಸಂಗತಿ! ಮೇಲಿನ ಯಾವತ್ತು ನಿಜ ಸಂಗತಿಗಳ ಬಗ್ಗೆ ನಮ್ಮ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರಿಗೂ, ನ್ಯಾಯಾಧಿಪಂಯಕ ಸಭಾಸದರಿಗೂ, ಮಂತ್ರಿಮಂಡಲದವರಿಗೂ ಚೆನ್ನಾಗಿ ತಿಳಿದಿದ್ದರೂ ಕೂಡಾ, ಅವಾವ ಕಾರಣದಿಂದಲೋ ನ್ಯಾಯಬದ್ಧವಾದ ವಕ್ಕಲು ಹಿತಮಸೂದೆಯನ್ನು ತೀವ್ರವೇ ಜಾರಿಗೆ ತರುವ ಅವಶ್ಯಕತೆಯನ್ನು ಮನಗಾಣಲಿಲ್ಲ. ಪರಿಸ್ಥಿತಿಯು ಇನ್ನೂ ಸ್ವಲ್ಪ ಸಮಯ ಹೀಗೆಯೇ ನುಂದರಿದರೆ, ಬಡ ಕೃಷಿಕನ ಸಹನೆಯು ಬರಿದಾಗಿ, ಕಾಂಗ್ರೆಸಿನ ಮೇಲಿರುವ ವಿಶ್ವಾಸವು ನಿಶ್ಚಯವಾಗಿಯೂ ತಪ್ಪಿ ಹೋಗುವುದು. ಆಲ್ಲದೆ ಇದರಿಂದ ಸಂಬಂಧಪಟ್ಟವರು ಈ ಬಗ್ಗೆ ತೀವ್ರವೇ ಕಾರ್ಯ ಕೈಕೊಂಡು ಬಡ ರೈತರ ನ್ಯಾಯಬದ್ಧ ಬೇಡಿಕೆಯನ್ನು ಈಡೇರಿಸುವಂತೆ ನೋಡುವರೆ?

—ಮರ್ಕೆ ಗೋವಿಂದ ಪೈಟ್ಟಿ

ಪ್ರಕಟಣೆ

ಜಾನುವಾರು ಜಾತ್ರೆ!

ಈ ಜಿಲ್ಲೆಯ ಸೈತರ ಅನುಕೂಲದ ಬಗ್ಗೆ ಹೆಪ್ರಿ ಸೀತಾನದಿ ಮಂಗಳೂರು ರಸ್ತೆಯು ಆಗುಂಬಿ ರಸ್ತೆಗೆ ಕೂಡುವಲ್ಲಿ ಅಂದರೆ ಸೋಮೇಶ್ವರ ಘಾಟಿಯ ಬುಡದಿಂದ ಮೂರು ಮೈಲು ಕೆಳಗೆ ಸೀತಾನದಿ ಎಂಬಲ್ಲಿ ಜಾನುವಾರು ಜಾತ್ರೆಯು ವರ್ಷಂಪ್ರತಿ ಜರಗುವಂತೆ ಶಾಲೇಕಾರು 12-12 48ರಿಂದ 28-12-48ರ ವರೆಗೆ ಜರಗುವುದು.

ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರೆಯುವಂತೆ ಎಲ್ಲಾ ಏರ್ಪಾಡುಗಳನ್ನೂ ಕ್ರಮದಂತೆ ಮಾಡಲಾಗುವುದು. ಜಾತ್ರೆಯ ಸ್ಥಳವು ಸೀತಾನದಿ ಹೊಳೆಯಿಂದ 2 ಫರ್ಲಾಂಗುಗಳಷ್ಟು ಕೆಳಗಿದ್ದು ಪತ್ತಿರವಿರುವ ರಿಜರ್ವ್‌ಕಾಡಿನಲ್ಲಿ ತುಂಬಾ ಹುಲ್ಲುಗಾವಲು ಇದೆ. ಜಾತ್ರೆಗೆ ಬರುವ ಜಾನುವಾರುಗಳಲ್ಲಿ ಅತ್ಯಂತ ಉತ್ಕೃಷ್ಟವೆಂದು ನಿರ್ಣಯಿಸಲಾಗುವ ಜಾನುವಾರುಗಳ ಬಗ್ಗೆ ಇನಾಮುಗಳನ್ನು ಕೊಡುವ ಏರ್ಪಾಡು ಮಾಡಲಾಗಿಯಿದೆ.

ಮೈಸೂರು, ದಕ್ಷಿಣ ಕನ್ನಡ ಮತ್ತು ಇತರ ಎಲ್ಲಾ ಪ್ರಾಂತ್ಯಗಳಿಂದಲೂ ಸರ್ವರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸಬೇಕಾಗಿ ನಮ್ಮ ಅಪೇಕ್ಷೆಯಾಗಿರುತ್ತದೆ.

ಸ್ಥಳೀಯ ಜಿಲ್ಲಾ ಮೆಜಿಸ್ಟ್ರೇಟರವರ ಸರ್ಮಿಟು ಮುಂತಾದವನ್ನು ಪಡೆದು ವ್ಯಾಪಾರಸ್ಥರು ಮೈಸೂರು ಸೈಟಿನಿಂದ ಜಾನುವಾರುಗಳನ್ನು ಇಲ್ಲಿಗೆ ತರಬಹುದು ಎಂಬ ವಿಶೇಷ ಸೂಚನೆಯನ್ನು ಎಲ್ಲರೂ ಜ್ಞಾಪಕವಿಡುವುದು.

ಜಾತ್ರೆಯ ಸಮಯ ಈ ಕೆಳಗಣ ವಿನೋದಾವಳಿಗಳೂ, ಭಾಷಣ ಪ್ರದರ್ಶನಗಳೂ ಇವೆ. 1 ಮಾಯಾಲಾಂದ್ರ ಪ್ರದರ್ಶನಗಳು ಮತ್ತು ಭಾಷಣಗಳು. 2. ವ್ಯವಸಾಯ ಇಲಾಖೆಯ ಅಧಿಕಾರಿಂದ ನಮ್ಮ ಜಿಲ್ಲೆಯ ವ್ಯವಸಾಯ ಉತ್ಪತ್ತಿಯ ಉನ್ನತಿಯ ಬಗ್ಗೆ ಆಗತ್ಯವಿರುವ ಕಲಹೆಗಳನ್ನು ಸೂಚಿಸಿ ಭಾಷಣ ಮತ್ತು ಪ್ರದರ್ಶನಗಳು.3 ಜಾನುವಾರು ಇಲಾಖೆಯವರಿಂದ ಜಾನುವಾರುಗಳನ್ನು ಯೋಗ್ಯರೀತಿಯಲ್ಲಿ ಸಾಕಲು ಬೇಕಾಗುವ ಕಲಹೆಗಳನ್ನು ಸೂಚಿಸಿ ಭಾಷಣ ಮತ್ತು ಪ್ರದರ್ಶನಗಳು. 4 ವಿದ್ಯಾ ಇಲಾಖೆಯವರ ಭಾಷಣ ಮತ್ತು ಪ್ರದರ್ಶನ.

Rao Saheb Charles S. John
Revenue Divisional Officer.

Chitrakot Hill Herbs

For ASTAMA Cure

A most powerfull and highly effective world announced remedy which cures asthma radically in a single dose to be taken on 16-12-48 full moon night.

Apply in English to :-

SWAMI DARSHANA NANDA
AYURVEDASHRAM
P.O. CHITRAKOT U. P.

ಆಹಾರ ನಿಯಂತ್ರಣ ಮತ್ತು ಸೀದಾ

ಆಹಾರ ನಿಯಂತ್ರಣ ಮತ್ತು ಸೀದಾವನ್ನು ಮಹಾತ್ಮಾಜಿಯವರ ಉಪದೇಶದಂತೆ ಪೂರ್ಣ ತೆಗೆದುಬೇಕೇ ಹಿಂದುಸ್ಥಾನಕ್ಕೆ ಶಾಂತಿಯಿದೆ. ಮಹಾತ್ಮರ ಉಪದೇಶವನ್ನು ಆಚರಣೆಗೆ ತಂದರೆ ಇನ್ನೂ ಕಂಟ್ರೋಲ್ ಮತ್ತು ರೇಶನ್‌ಗಳನ್ನು ನಮ್ಮು ದೇಶದಲ್ಲಿ ಪ್ರವಹಾರಕ್ಕೆ ತಂದರೆ ನಾವು ಮತ್ತು ನಮ್ಮ ಸರಕಾರವು ಬೆಟ್ಟಿನ ಕಷ್ಟ ನಷ್ಟಗಳನ್ನು ಅನುಭವಿಸುವ ಸಂದರ್ಭವು ನಿಶ್ಚಯವಾಗಿ ಬರುತ್ತದೆ.

ನಿಯಂತ್ರಣ ಮೆತ್ತು ಸೀದಾ, ಇವುಗಳಿಂದ ಬಂದ ದುರಂತಗಳು–

ನಿಯಂತ್ರಣವನ್ನು ಹಾಕಿದೊಡನೆಯೇ ಜನರ ಮನಸ್ಸಿಗೆ ಆಹಾರಧಾನ್ಯಗಳನ್ನು ಅಡಗಿಸಿಡುವ ಸ್ವಾರ್ಥ ಬುದ್ಧಿಯು ಉತ್ಪನ್ನವಾಯಿತು. ಇದರಿಂದಾಗಿ ದೇಶದಲ್ಲಿ ಆಹಾರವಸ್ತುಗಳೇ ಸಿಗಲು ಕಷ್ಟವಾಯಿತು. ಆಗ ಸರಕಾರದವರು ಸೀದಾ ಪದ್ಧತಿಯನ್ನು ಆರಂಭಿಸಲ್ಪಟ್ಟಿ ಕರಬೇಕಾಯ್ತು. ಸೀದಾ ಮಾಡಿದೊಡನೆಯೇ ಜನರಿಗೆ ಬೇಕಾದಷ್ಟು ಹಂಚಲು ಆಕ್ಕಿಯ ಸಂಗ್ರಹ ಸಿಗದೇ ಸೀದಾವನ್ನು ಕಡಿಮೆಮಾಡಿ ಕೊಡಬೇಕಾಯಿತು. ಜನರಿಗೆ ಅರ್ಧ ಹೊಟ್ಟೆ ತುಂಬಿಸಿ ಅಭ್ಯಾಸವಿಲ್ಲದುದರಿಂದ ಜನರು ಗುಟ್ಟಿನಿಂದ ಸರಕಾರದ ಕಾಯಿದೆ ಉಲ್ಲಂಘಿಸಿ ಧಾನ್ಯ ಸಂಗ್ರಾಹಕರಿಂದ ಅಧಿಕ ಬೆಲೆಗೆ ಕಳ್ಳಸಂತೆಯಿಂದ ಆಕ್ಕಿಯನ್ನು ಖರೆಯಬೇಕಾಯಿತು. ಕೆಲವರು ತಮ್ಮ ಹೊಟ್ಟೆಗಸಿನಿಗಾಗಿ ದಿನಸಕ್ಕೆ ನಾಲ್ಕು ಯಾ ಆರುಸಲ ಕಾಫಿ ಕ್ಲಬ್ಬುಗಳಿಗೆ ಹೊಕ್ಕಿ ಹೋಟೆಲು ಮ್ಹಾಲೀಕರ ಕಿಸೆ ಕಟ್ಟಿಗೆಯನ್ನು ತುಂಬಿಸುವ ಕಾಲ ಬಂತು. ಬಜಾರ್‌ನಲ್ಲಿ ಸಿಕ್ಕಿದ ಅಲ್ಲಸಲ್ಲದ ಜೀರ್ಣವಾಗದ ಆಹಾರವನ್ನು ತಿಂದು ಹೊಟ್ಟೆ ತುಂಬಿಸಲು ಆರಂಭಿಸಿದರು. ಕಾಫಿ ಕ್ಲಬ್ಬುಗಳ ಆಹಾರದಿಂದ ಕ್ಷಯ ಮೊದಲಾದ ಸಾಂಕ್ರಾಮಿಕ ರೋಗಗಳು ಜನರಲ್ಲಿ ಪಬ್ಬಲು ಆರಂಭವಾಯ್ತು. ಕೊಳಕು ಆಹಾರಗಳಿಂದ ಮನುಷ್ಯನ ಆರೋಗ್ಯವೇ ಕೆಟ್ಟಿತು. ರೈತರು ಸರಕಾರದವರ ಬಲಾತ್ಕಾರಕ್ಕೆ ಆಕ್ಕಿಯನ್ನು ಕೊಡಬೇಕಾದ್ದರಿಂದ ಆಕ್ಕಿಯನ್ನು ಬೊಕ್ಕೆ ಟನಾಗಿಯೂ ನಿರ್ಮಲವಾಗಿಯೂ ಇಡುವ ಶ್ರದ್ಧೆಯನ್ನು ಬಿಟ್ಟುಬಿಟ್ಟರು. ಸರಕಾರಿ ಉದ್ಯೋಗಸ್ತರಿಗೆ ಜನರ ಮೇಲೆ ಅಧಿಕಾರ ನಡೆಸುವ ಸಂದರ್ಭ ಒದಗಿಬಂದಿದ್ದರಿಂದ ಲಾಭ ಬಡಿಕ ಜನರು ತಮ್ಮ ಲಾಭಕ್ಕಾಗಿ ಅಧಿಕಾರಿಗಳಿಗೆ ಲಂಚವನ್ನು ಕೊಡಲು ಆರಂಭಿಸಿದರು. ಇದರಿಂದ ಸರಕಾರದ ಸಣ್ಣ ನೌಕರನಿಂದ ಆರಂಭಿಸಿ ಅತಿದೊಡ್ಡ ನೌಕರರ ವರೆಗಿನ ಎಲ್ಲರ ಮನಸ್ಸು ದಿನೇದಿನೇ ಸ್ವಾರ್ಥದಡಕ್ಕೆಡೆಗೆ ತಿರುಗಿ ಈಗ ಸಂಪೂರ್ಣ ಸ್ವಾರ್ಥಿಗಳಾಗಿರುವರು. ಅದರಲ್ಲಿಯೂ ನಮ್ಮ ಮಲೆನಾಡು ಪ್ರಾಂತ್ಯದಲ್ಲಿ ಬಡಜನರ ಗೋಳೇ ಸರಕಾರಿ ನೌಕರರಿಗೆ ತಿಳಿಯದು.

ಕೂಲಿಗಾರರು ಅರ್ಧ ಹೊಟ್ಟೆಯಲ್ಲಿ ಕೆಲಸಮಾಡಲಾಗದೆ ದಿನಕ್ಕೆ ನಾಲ್ಕು ಯಾ ಆರು ಸಲ ಚಾ ಕ್ಲಬ್ಬುಗಳಿಗೆ ಹೋಗಿ ತಮ್ಮ ಹಸಿವನ್ನು ತಣಿಸಬೇಕಾಯಿತು. ಇದರಿಂದಾಗಿ ಖರ್ಚು ದುಬಾರಿಯಾಯಿತು. ಖರ್ಚು ಹೆಚ್ಚಾದುದರಿಂದ ಕೂಲಿಕಾರರು ತಮ್ಮ ಯಜಮಾನನೊಂದಿಗೆ ಹೆಚ್ಚಿನ ಸಂಬಳಕ್ಕಾಗಿ ಜಗಳಾಡಬೇಕಾಯಿತು. ಇದರಿಂದ ಊರೆಲ್ಲಾ ಮುಸ್ಸಂಜೆಗಳು ಆರಂಭವಾದುವು. ಈ ಮುಸ್ಸಂಜೆಗಳಿಂದಾಗಿ ಮನುಷ್ಯನ ಪ್ರತಿಯೊಂದು ಜೀವನದ ಸೊತ್ತುಗಳಿಗೆ ಬೆಲೆಯೇರಿತು. ಜನರ ದೈನಿಕ ಸಂಖ್ಯೆ ಒಂದಕ್ಕೆ ಹತ್ತು ಜಾಲಿಸ್ಸು ಏರಿತು. ಸೀದಾ ಮತ್ತು ನಿಯಂತ್ರಣ ಬರುವಮೊದಲು ಈ ಅನರ್ಥಗಳು ತೀರಾ ವಿರಳವಾಗಿತ್ತು.

ಆಹಾರ, ನೂಲು, ಪೆಟ್ರೋಲು ನಗ್ಗೆರೆ ನಿಯಂತ್ರಣದಿಂದ ಕಾಫಿ ಕ್ಲಬ್ಬುಗಾರರೂ, ಜಮೀನುದಾರರೂ, ನೆಯಿಗೆಗಾರರೂ (Master Weavers) ಲೋಲಿ ನ್ಲೂಲಿಕರೂ, ಮೊದಲಾದವರು ಅತಿಶಯವಾದ ಹಣವನ್ನು ಗಳಿಸಿದರು. ಅವರಿಗೆ ಹಣವೂ ಕೈಕೆಂತೆ ಆಗಿ ಅತಿ ಪ್ರಸಾರಕ್ಕೆ ಕಾರಣವಾಯಿತು. ಲಾಭವೂ ಸಮಾನವಾಗಿ ಎಲ್ಲರಿಗೂ ಹಂಚಿಸಿಗುತ್ತಿದ್ದರೆ ಈ ಅತಿಶ್ರಸಾರವೂ ಬರುತ್ತಿರಲಿಲ್ಲ.

ರೈತರಿಗೆ ಒದಗುವ ಕಷ್ಟ ನಷ್ಟಗಳು

ರೈತರಿಗೆ ನ್ಯಾಯವಾದ ಬೆಲೆ ಸಿಗದಿದ್ದುದರಿಂದ ಆಡಿಕೆ, ಕಬ್ಬು, ಗೆಣಸು, ಇತ್ಯಾದಿಗಳಿಗೆ ಬೆಲೆ ಜಾಸ್ತಿ ಸಿಗುವುದರಿಂದ ಆಕ್ಕಿಯನ್ನು ಬೆಳೆಸಲು ಉತ್ಸಾಹ ಕಮ್ಮಿಯಾಗಿ ಆಕ್ಕಿಯ ಉತ್ಪತ್ತಿಯು ಕಮ್ಮಿಯಾಗುತ್ತಾ ಬಂತು. ಇದು ಸರಕಾರದ ಹೆಚ್ಚು ಬೆಳೆ ಬೆಳೆಸುವ (Grow more food) ಯೋಜನೆಗೆ ಕಲ್ಲು ಹಾಕಿದಂತಾಯಿತು. ರೈತನು ಶ್ರಯಾಸಪಟ್ಟು ನ್ಯಾಯವಾದ ಆಳತೆಯಿಂದ ಜಾಸ್ತಿ ತಂದು ರಿಸೈನ್ ಡಿಪೋಗಳಿಗೆ ಕೊಟ್ಟರೂ ಡಿಪೋ ಏಜಂಟರು ಆಳತೆ ಕಮ್ಮಿಎಂದು ರೈತರೀಗೆ ಉಪದ್ರವಕೊಟ್ಟು, ತೊಂದರೆಪಡಿಸುವುದರಿಂದ ಬೆಳೆಯನ್ನು ಬೆಳೆಸಲು ಉತ್ಸಾಹವೂ ಮತ್ತಷ್ಟು ಕಮ್ಮಿಯಾಗುತ್ತಾ ಬಂತು.

ರೇಷನ್ ಅಂಗಡಿಗಳಲ್ಲಿ ಆಗುವ ನಷ್ಟ

ಸರಕಾರದ ಈಗಿನ ರಿಯಾಯಿತಿಯನ್ನು ಇಲ್ಲಿಯ ಸಾಲಗಾರರು ಉಪಯೋಗಿಸಿಕೊಳ್ಳುವದಾದರೆ, ಹಣದ ಸಂಪಾದೆಗಳಲ್ಲಿ ಸ್ಪರ್ಧಿಸುವ ಇನ್ನೊಬ್ಬ ಪ್ರಬಲ ಭಂಡವಾಳಶಾಹಿಗೆ ಪುನಃ ಒಂದು ಆರ್ಬಾರವನ್ನೋ ಅಥವಾ ಕೃಯ ಸಾಧನವನ್ನೋ ಮಾಡಿ ತಮ್ಮ ಭೂಸ್ವಾತಂತ್ರ್ಯವನ್ನು ಕಳಕೊಳ್ಳಬೇಕೇ ಹೊರತು ಆರ್ಥಿಕವಾಗಿ ತಮ್ಮ ಕೃಷಿ ಕ್ಷೇತ್ರದ ಸ್ವಾಧೀನವಾಗಲಾಗುವುದು ಕೇವಲ ಸ್ವಪ್ನದ ಮಾತು. ಏವಂಚ ಇಲ್ಲಿಯ ಸಾಲರಿಯಾಯಿತಿ ಮಸೂದೆಯಲ್ಲಿ ತಿದ್ದುಪಡಿಯಾದ್ದೆಂದರೆ, ಸಾಮಾನ್ಯ ಭಂಡವಾಳಶಾಹಿಗಳಿಂದ ಪ್ರಬಲ ಭಂಡವಾಳಶಾಹಿಗಳಿಗೆ ಬಡ ಕೃಷಿಕರ ಭೂಮಿಯನ್ನು ವರ್ಗಾಯಿಸಿದ್ದಂತಾರ್ಥ. ಇಷ್ಟನ್ನು ಪರಿಶೀಲಿಸಿದರೆ ನಮ್ಮ ಕರ್ತವ್ಯವ ಅರಿವು ನಮಗಾಗದಿರದು ಅದರೇನು, ಕರ್ತವ್ಯದ ಅರಿವಿನಿಂದ ಕಾರ್ಯ ಸಾಧನೆಯಾಗದು. ಕಾರ್ಯ ಸಾಧನೆಗೆ ಸಂಘಟನೆ ಬೇಕು. ಅಂತಹ ಸಂಘಟನೆ ನಮ್ಮ ಸಾಲಗಾರರಲ್ಲಿ ಉದಯಿಸಿದರೆ ಮಾತ್ರ ಕೃತಕೃತ್ಯರಾಗಬಹುದು.

ಬಿ. ಶ್ರೀನಿವಾಸ ರಾವ್,
ಆಯುರ್ವೇದಿಕ್ ಪ್ರೈಕ್ಟಿಕಲ್ಸರ್
ಕೋಟೆಕಾರು,

ಧಾತುಪುಷ್ಟಿ ಲೇಹ

ಇದುಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾನಸ್ಕೈ, ಶರೀರದ ಉಷ್ಣತೆ, ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಜ್ಜುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹೆಸಿವನ್ನು, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕು ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಒಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲೆ ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಜ್ಯವನಪ್ರಾಶ (ಬಂಗಾರ ಮಿಶ್ರಿತ,)

ಇದು ಅತ್ಯಂತ ಶಕ್ತಿವರ್ಧಕ ರಸಾಯನ, ಕೆಮ್ಮು, ಶೀತ, ಉಬ್ಬಸ, ಶ್ವಾಸಕೋಶ ಸಂಬಂಧನಾದ ರೋಗಗಳಿಗೆ ದಿವ್ಯ ಔಷಧಿ. ಶಾರೀರಿಕ ಮತ್ತು ಮಿದುಳಿನ ಶಕ್ತಿಯನ್ನು ಹೆಚ್ಚಿಸಿ ರಕ್ತವೃದ್ಧಿಯನ್ನು ಉಂಟುಮಾಡುವುದು.

ಪೌಂಡು 1ರ ರೂ. 5—8—0; ½ ಪೌಂಡು ರೂ. 3—0—0.

ಎಲ್ಲಾ ಸಮಸ್ತ ಔಷಧಿಗಳು ದೊರೆಯುತ್ತವೆ.

— ಎಂ. ಗಿರಿಗಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ್ ಫಿಜಿಸಿಯನ್ಸ್, ಕಠಿಣೀರಿ ಪಂಬ್ಬ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಗಳೂ ದೊರೆತ್ತವೆ ಕ್ಯಾಲೆಂಡರ್ ಬಂದಿದ್ದಿ ಕೇಳಿರಿ, ತಕ್ಕಷ್ಟಾದ ಔಷಧಿ ರವಾನಿಸಬಹುದು. (1) ಉಡುಪಿ ಏಜಂಟರು:—ನವಭಾರತ ಬುಕ್ ಡಿಪೊ, ಬೊಂಬಾಯಿ ಏಜಂಟರು:—ಪೊಪ್ಯುಲರ್ ಸ್ಟೋರ್ಸ್, ಕೆಮಿಸ್ಟ್ಸ್ 183, ಮಾಣಿಬಾಜಾರ್ ರೋಡ್ ಜಿ. ಐ. ಪಿ. ರೈಲ್ವೆ ವರ್ಕ್ ಶೋರ್ ಎದುರುಗಡೆ, ಪರೇಲ್ (3) ಜನರಲ್ ಸ್ಟೋರ್ಸ್, ಕೆಮಿಸ್ಟ್ಸ್, ಜಿ. ಐ. ಪಿ. ಮಾಟುಂಗಾ.

ಕಿರಿಯರ ಸ್ವಪಂಚದ
32ನೆಯ ಪ್ರಕಟಣೆ

ಜಲೊನ್ದಾರ

ಇಂದಿಗೆ ತಕ್ಕ ನವೀನ ಸಾಮಾಜಿಕ

ಕಾದಂಬರಿ

ಸುಪ್ರಸಿದ್ಧ ಹಿಂದೀ ಲೇಖಕರಾದ

ಪ್ರೊಫೆಸರ್ ಇಂದ್ರರವರ ಕಾದಂಬರಿಯ ಕನ್ನಡ ಅನುವಾದ. ಅನುವಾದಕರು **ವಿದ್ವಾನ್ ಹೊಸಮನೆ ಗುಡ್ಡಪ್ಪ** ನವರು.

ಈಗಿನ ಜನತೆಗೆ ಬೇಕಾದ

ಜನತಾ ಸಾಹಿತ್ಯ.

165 ಪುಟಗಳ ದೊಡ್ಡ ಪುಸ್ತಕ.

ಬೆಲೆ ರೂ. 1 8 0

ಪ್ರತಿಗಳು ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನವಭಾರತ ಬುಕ್ ಡಿಪೊ, ಉಡುಪಿ, ಇವರಿಗೆ ಬರೆದು ತರಿಸಿಕೊಳ್ಳಿರಿ.

ರೈತ ಸ್ವಾತಂತ್ರ್ಯದ ಉದಯ
ಅನೀತಿಗಳ ಅಪಜಯ

ಲೇಖಕರು: ಶ್ರೀ ಯಮ್. ಡಿ'ಸೋಜ, ಬೆಳ್ಳೆ

ಮನುಷ್ಯನ ನೊತ್ತಮೊದಲಿನ ಸುಧಾರಣೆಯೆಂದರೆ ಅವನು ಕೃಷಿಯ ಉತ್ಪಮವನ್ನು ಕೈಗೊಂಡುದು. ಆಹಾರವನ್ನು ಹುಡುಕುತಿನ್ನುವುದಕ್ಕಿಂತ ಅದನ್ನು ಒಂದು ನಿಯಮಿತ ಸ್ಥಳದಲ್ಲಿ ಉಂಟುಮಾಡಿ ಅದನ್ನು ಉಪಯೋಗಿಸಕಲಿತುದೇ ನಾಗರಿಕತೆಯಲ್ಲಿ ಅವನ ಪ್ರಥಮ ಹೆಜ್ಜೆ. ಹೀಗೆ ಮನುಷ್ಯನು ಒಂದು ಸ್ಥಳದಲ್ಲಿ ನೆಲೆನಿಂತ ತರುವಾಯವೇ ಮನೆ, ಊರು, ಪೇಟೆ, ನಗರಗಳು ಉದ್ಭವಿಸಿದುವು.

ಮನುಷ್ಯನ ಕೃಷಿ ಸಮಸ್ಯೆಯನ್ನು ಸುಲಭದಲ್ಲಿ ಬಿಡಿಸಲೂ ಅವನ ಇತರ ಸೌಕರ್ಯಗಳನ್ನು ಸಾಧಿಸಲೂ ಕೈಗಾರಿಕೆಯು ತದನಂತರ ಉಂಟಾಯ್ತು. ಮೊದಲು ವಸ್ತ್ರ, ಮನೆ, ಆಯುಧ, ಉಪಕರಣಗಳ ವಿಧಾನದಿಂದ ಕೈಕೆಲಸವು ಮುಂದೆಬಂತು. ಅದು ಬೆಳೆದು ಬೆಳೆದು ಇಂದು ಕೃಷಿ ಒಂದು ವಿಧದ್ದಾದರೆ, ಅದು ನೂರಾರು ವಿಧಗಳಾಗಿ ಪರ್ಯವಸ್ಥಿತ್ತು.

ಒಂದು ದೇಶವು ಪ್ರಬಲ ರಾಷ್ಟ್ರವಾಗಬೇಕಾದರೆ ಸ್ವಾವಲಂಬನವು ಅಗತ್ಯ. ಕೃಷಿ ಕೈಗಾರಿಕೆಗಳೆರಡೂ ಉತ್ತಮಸ್ಥಿತಿಯಲ್ಲಿದ್ದಲ್ಲಿ ರಾಷ್ಟ್ರವು ಆಧುನಿಕ ರಾಷ್ಟ್ರನಾಗಿ ಮೆಂದೀತು; ಆರ್ಥಿಕ ಸ್ವಾವಲಂಬನವು ನೆಲೆಗೊಂಡೀತು. ನಮ್ಮ ದೇಶವು ಕೃಷಿಕರ ದೇಶವಾಗಿದೆ. ಇಲ್ಲಿ ಕೈಗಾರಿಕೆಯು ಇನ್ನೂ ಎಳೇ ವಯಸ್ಸಿನಲ್ಲಿದೆ ಅದುದರಿಂದ ಕೈಗಾರಿಕೆಯನ್ನು ಉದ್ಧರಿಸಬೇಕೇನೋ ನಿಜ. ಹೀಗೆ ನಮ್ಮೀ ದೇಶವು ಕೃಷಿಕರ ಕ್ಷೇತ್ರವಾಗಿದ್ದರೂ ನಾವು ಆಹಾರದ ಮಟ್ಟಿಗೂ ನಮ್ಮ ಕಾಲ ಮೇಲಿಲ್ಲ. ಇದರಿಂದ ಕೈಗಾರಿಕೆಯ ಏಳ್ಗೆಯೊಟ್ಟಿಗೆಯೇ ಕೃಷಿಯ ಮೇಲ್ಮೆಯೂ ಆಗಬೇಕು.

ಈ ಸಂಬಂಧವಾಗಿ ಆಚರಣೆಯಲ್ಲಿರುವ ಕೆಲವು ಪದ್ಧತಿಗಳು ಮನುಷ್ಯನನ್ನು ಮೇಲೆತ್ತಲ್ಕೆ ತಡೆಯುವಾಗಿರೆ ಕೆಲವು ಅವನನ್ನು ನೆಲಕ್ಕೆ ಅಪ್ಪಳಿಸುವುವು ಅದಕ್ಕೆ ನಿದರ್ಶನವಾಗಿದೆ ನಮ್ಮ ಸಾಗುವಳಿ ಪದ್ಧತಿ. ಇದು ರೈತರನ್ನು ತಲೆ ಎತ್ತದಂತೆ ಮಾಡಿರುವುದಿಲ್ಲವೇ?

ಈ ಕುರಿತು ದಯಮಾಡಿ ಚಾಲಗೇಣಿ ರೈತನೊಬ್ಬನನ್ನು ಪ್ರಶ್ನಿಸಿರಿ. ಅವನು ಫಕ್ಕನೆ ನಿಮಗುತ್ತರವೀಯಲಾರ. ಯಾಕೆಂದರೆ ಅವನಿಗೆ ಉಂಟೊಂದು ಹೆದರಿಕೆ. ಆ ಹೆದರಿಕೆ ಧನಿಯದು.

ಒಂದು ಉದಾಹರಣೆ --ನಮ್ಮ ರೈತ ಒಂಧಾ ಒಬ್ಬನಿಗೆ ೩೬ ಕೊಯಿಲು [ಎರಡು ಎಕ್ರೆ ಸ್ವಲ್ಪ ಜಾಸ್ತಿ] ಚಾಲಗೇಣಿ ಜಮೀನಿದೆ ಬಯಲುತರ ಗದ್ದೆಯದು. ನೆರೆಬಾಂದಲ್ಲಿ ಆತನ ಒಂದನೇ ದೆಳೆಯ ಸರಾಸರಿ ಉತ್ಪತ್ತಿ ೩೬ ಮುಡಿ. ಗೇಣಿ ೨೬ ಮುಡಿ! ಈ ರೀತಿಯಾದಲ್ಲಿ ಆತನ ಅಯವನ್ನು ನೋಡಿರಿ. ಮಜೂರಿಯೂದೆರೂ ಇದೆಯೆ? ಇದಲ್ಲದೆ ಧನಿಯಾದಿಬ್ಬ ಕೆಲಸ, ಪೊರೆ, ಇನ್ನೇನಾದರೂ ಕಾಣಿಕೆ, ತೀರ್ವಯಾಗಬೇಕಾದಲ್ಲಿ ಅವನು ಬೊಂಬಾಯಿಯಲ್ಲಿರುವ ತನ್ನ ಹಿರಿ ಮಗನನ್ನು ನೋಡಬೇಕು. ಇನ್ನು ಅನ್ಯಾಯಗಳ ಉದಾಹರಣೆಗಳನ್ನು ಕೊಡುವುದಾದರೆ ಅವನ್ನೆಲ್ಲಾ ಬರೆಯಲು ಹಲವು ಪುಸ್ತಕಗಳು ಬೇಕಾಗುವುವು. ಅಬೆಲ್ಲವೂ ನಮ್ಮ ಸರಕಾರಕ್ಕೆ ತಿಳಿದಿರುವುದೇ!

ಇಂದು ಸರಕಾರವು ರೈತಪ್ರತಿನಿಧಿಯಾಗಿದೆ ರೈತರು ಸರಕಾರದಿಂದ ಹಲವು ರಿಯಾಯಿತಿಗಳನ್ನು ನಿರೀಕ್ಷಿಸುತ್ತಾರೆ. ಅವೆಲ್ಲ ವಿಷಯಗಳ ವಿವರಲು ರೈತನಿಗೆ ಸ್ವಾತಂತ್ರ್ಯ ಬೇಡವೇ? ನೆನಪಿರಲಿ ಎಂದಂತೆ. ಈ ವೇದಿಕೆಯಲ್ಲಿ ಪ್ರತಿಯೊಬ್ಬನಿಗೂ ಸಮಾನ ಹಕ್ಕಿದೆ. ಅವನ್ನು ದೊರಕಿಸಿಕೊಡುವ ಜವಾಬ್ದಾರಿ ಸರಕಾರದ್ದಾಗಿದೆ. ಆದ್ದರಿಂದ ರೈತ ಸ್ವಾತಂತ್ರ್ಯವು ಅತೀ ಬೇಗನೇ ಬಿಡಿಸಬೇಕಾದ ಸಮಸ್ಯೆಯಾಗಿದೆ.

ಇದೆಸ್ಥಿತ ಕೆಲವು ಬಂಡವಾಳಿಗರು ಇಂದು ರೈತ ಪ್ರತಿನಿಧಿಗಳೆಂದು, ರೈತ ಹಿತ ಬಂಧುಗಳೆಂದು, ರೈತರೆಂದು (ಗದ್ದೆ ಉಳಲಿಕ್ಕೆ ಗೊತ್ತಿಲ್ಲ ಅನರಿಗೆ!) ಹಲವು ಬೇಷಗಳನ್ನು ಬರೆದು ಪ್ರಚಾರಮಾಡುತ್ತಾರೆ ಅವೆಲ್ಲವೂ ರೈತನ ಸ್ವಾತಂತ್ರ್ಯವನ್ನು ಬಯಸುವವಿಲ್ಲ. ನಿಜರೈತನು ಇಂದು ನಿಯಂತ್ರಣವನ್ನೇ ವಿರೋಧಿಸುವದಲ್ಲ. ಹೇಗಾದರೂ ಮಾಡಿ ತಮ್ಮನ್ನು ಸರಕಾರವು ಧನಿಕರಿಂದ ಬಿಡಿಸಲಿ ಎಂದು ಅವನು ನಿರೀಕ್ಷಿಸುತ್ತಾನೆ. ತೀರ್ವಯನ್ನು ಇಮ್ಮಡಿಯಾದರೂ ನಾವು ಕೊಡುವೆವು; ನಮ್ಮನ್ನೊನ್ನೆ ಬದುಕಿಸಿ ಎಂದು ಅವನು ಅಶಿಸುತ್ತಾನೆ.

ಧನಿಕರನ್ನು ನಾಶಮಾಡಿ ಅವರ ಜಮೀನುಗಳನ್ನು ನಮಗೆ ಹಂಚಿ ಎಂದು ನಾವು ಬಯಸುವದಿಲ್ಲ. ನಾವೇಕ್ಷಿಸುವುದು ನಮ್ಮನ್ನು ಆವರಿಂದ ಬಿಡಿಸಿರೆಂದು. ನಮ್ಮ ಸ್ವಾತಂತ್ರ್ಯಕ್ಕಾಗಿ ಕನಿಷ್ಠಪಕ್ಷ ಮೂಲಗೇಣಿಯ ರೂಪವಾದರೂ ದೊರಕಲಿ; ನಾವು ಮಾರಣಾಂತ ಸರಕಾರವನ್ನು ಸಮರ್ಥಿಸುವೆವು- ಇದೇ ನಮ್ಮ ಸ್ವಾತಂತ್ರ್ಯ!

ಹಾಗಾದರೆ ರೈತನು ಮೈಮುರಿದು ದುಡಿಯುವನು. ಹಳ್ಳಿಗಳೆಲ್ಲಾ ಜಿಟಿಯಾದ ಮನೆಗಳು ತಲೆಎತ್ತುವುವು. ಹೊಲಗಳಲ್ಲಿ ಹೊಸಕೆರೆ ಬಾವಿಗಳೂ ಉಂಟಾಗುವುವು. ಗೆದ್ದೆಯ ಬದಿಗಳಲ್ಲಿ ಹಸುರಾದ ಹೊಸ ಗದ್ದೆಗಳು ತೋರುವುವು, ಫಲವೃಕ್ಷಗಳೂ ಸಾಲು ಮರಗಳೂ ಮನೆಗಳನ್ನುತ್ತ ಕಾಣಿಸಿಕೊಳ್ಳುವುವು. ಸರಕಾರವು ಇಂದಿನ ದುಷ್ಪದ್ಧತಿಯಿಂದ ರೈತನನ್ನು ಬಿಡಿಸಿದ ತರುವಾಯ ಕಾಣಸಿಗುವ ಕೆಲವು ದೃಶ್ಯಗಳಿವು.

'ಕೇಶ ಕಲಾ'
ಹೇರ್ ಆಯಿಲ್

ಈ ಎಣ್ಣೆಯು ;ಕೂದಲು ಉದುರುವುದನ್ನು ನಿಲ್ಲಿಸುವದು. ಮತ್ತು ಕೂದಲು ಬಾರದೆ ಇದ್ದರೆ ಅವುಗಳ ಬೇರುಗಳಿಗೆ ಪೋಷಣೆ ಕೊಟ್ಟು ಅವುಗಳನ್ನು ಬೆಳೆಯಿಸುವುದು. ಇದಲ್ಲದೆ ಮೆದುಳನ್ನು ಶಾಂತವಾಗಿರಿಸಿ ಕೂದಲುಗಳನ್ನು ಮಿದುವು ಮಾಡಿ ಹೊಳಪನ್ನುಂಟುಮಾಡುವುದು.

ಕರ್ನಾಟಕ ಆಯುರ್ವೇದ ವಿದ್ಯಾಪೀಠ ಧಾರ್ಮಿಕ, ಬೆಳಗಾಂವ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಮಿಸಿ ತಯಾರಿಸಲ್ಪಟ್ಟ ಅಮೋಘ ವಾಜ ಮಧುರದ್ರವ್ಯ ರಸಾಯನ. ಅಲ್ಪಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾಮೃ ಎಂಬ ಸೂತಿಕಾ ರಸಾಯನ

ಈ ಔಷಧವನ್ನು ಬಳಸುವುದರಿಂದ ಹೆಚ್ಚು ಕೆಲಸಕ್ಕೆ ಅಂದರೆ ಕೇವಲ ೨ ರೂಪಾಯಿಗಳ ಒಂದು ಬಾಣಂತಿಯನ್ನು ಸಾಕಾಗುವಷ್ಟು ವಿಶೇಷ ಮಾತ್ರೆಗಳನ್ನು ಖರೀದಿಸಿ ಈ ಔಷಧವನ್ನು ಉಪಯೋಗಿಸಿದರೆ ಸಾಕು.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ಮ. ಕ.

ಸ್ವಾಮಿಕರು- ಡಾ| ಬಿ. ಕೆ. ಶಿವರಾಮ ರಾವ್, ಕುಂಜಿಬೆಟ್ಟು, ಉಡುಪಿ.

ಉಡುಪಿಗೆ ಹೋಗಬೇಕು! ಆದರೆ ಉಳಿದುಕೊಳ್ಳುವುದೆಲ್ಲಿ?

ರಾಯಲ್ ಮಹಾಲಿನಲ್ಲಿ

ಬಸ್ ಸ್ಟೇಂಡಿಗೆ ಅತಿ ಸಮೀಪ! ಕೃಷ್ಣಮಂದಿರಕ್ಕೆ ದೂರವಿಲ್ಲ!

ವ್ಯಾಪಾರವ್ಯವಹಾರ ವಿಹಾರಸ್ಥಳಗಳಿಗೆಲ್ಲ ಕೇಂದ್ರ!

ಸಿಹಿ ನೀರು ಸ್ನಾನ, ಊಟ, ಉಪಹಾರ, ಬೈರಕ್, ಶಯನ ಇವಕ್ಕೆಲ್ಲ ಉತ್ತಮ ವ್ಯವಸ್ಥೆ.

ಕರೆದರೆ ಓಗೊಡುವ ಸೌಕರ ವರ್ಗ!

ಮೇಲಾಗಿ ಉಡುಪಿ ಬ್ರಾಹ್ಮಣ ಅಡಿಗೆ, ತಿಂಡಿತಿನಸು, ಒಪ್ಪಿಗೆಯ ಬಾಬುಬು ಬೇಳಬೇಕೆ?

ಪ್ರೊಪ್ರೈಟರ್:—ಕೆ. ವೆಂಕಟ್ರಮಣ ಭಟ್.

For up-to-date Lodging & Boarding

ROYAL MAHAL,

UDIPI, S. Kanara.

Notice

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ವ್ಯಾಜ್ಯ 407/1948

S. ಗೋಪಾಲ ಭಟ್ಟ—ವಾದಿ

ಮತ್ತು

K. ತಿಮ್ಮಪ್ಪ ಶೆಟ್ಟಿ—ಪ್ರತಿವಾದಿ

ಇವರೊಳಗೆ

ಕೆ. ತಿಮ್ಮಪ್ಪ ಶೆಟ್ಟಿ, ವಡ್ಡಾಡಿ ಮುತ್ತಯ್ಯ ಶೆಟ್ಟಿ ಮಗ, ಉಡುಪಿ ತಾಲೂಕು ಕಡೆಕಾರು ಗ್ರಾಮದವನಲ್ಲಿರುವವ—ಪ್ರತಿವಾದಿ

ಸದ್ರಿ ವ್ಯಾಜ್ಯದ ಪ್ರತಿವಾದಿಗೆ ಈ ಮೂಲಕ ತಿಳಿಪಡಿಸುವುದೇನೆಂದರೆ-

ಪ್ರತಿವಾದಿಯು ಅನಂತಕೃಷ್ಣ ಭಟ್ಟರಿಗೆ ತಾ 10-10-1945 ರಲ್ಲು ರೂ 500-0-0 ಕ್ಕೆ ಬರೆಕೊಟ್ಟ ಡಿಮಾಂಡ್ ನೋಟಿನ ಅಸ್ಸಲು ಬಾಡ್ಡಿಯನ್ನು ವಸೂಲು ಮಾಡುವ ಹಕ್ಕನ್ನು ತಾ 13-12-1947 ರಲ್ಲು ಟ್ರಾನ್ಸ್ಫರ್ ಪಡೆದ ವಾದಿಯು ವಾಪಸುಮಾಡಿದ ಮೇಲ್ಕಂಡ ವ್ಯಾಜ್ಯವು ತಾ. 27-12-1948ಕ್ಕೆ ಇಡೋಣಾಗಿಯಿದೆ. ಪ್ರತಿವಾದಿಯು ಸದ್ರಿ ತಾರೀಕಿಗೆ ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜರಾಗದಿದ್ದ ಪಕ್ಷದಲ್ಲಿ ವ್ಯಾಜ್ಯವನ್ನು ಪ್ರತಿವಾದಿಯ ಗೈರುಹಾಜರಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾದೀತು

(By order of the Court)

K. Varadaraya Pai
Advocate for Plaintiff

Udipi Dated 9-12-1948

Notice

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. P. 61/1948

ಅರ್ಜಿದಾರರು: ಶ್ರೀ ಜೀವಿಜಮ್ಮ, ನಾಗಪ್ಪ ಶ್ಯಾನುಭೋಗರ ವಿಧವೆ, ತೆಕ್ಕಟ್ಟೆ ಗ್ರಾಮ, ಎದ್ರಿ. ಇಲ್ಲಾ—

ಯೀ ಮೂಲಕ ಸರ್ವಜನರಿಗೂ ತಿಳಿಯಪಡಿಸುವುದೇನೆಂದ್ರೆ:

ಅರ್ಜಿದಾರಳ ಮಗ ತೆಕ್ಕಟ್ಟೆ ಭಗವಂತ ಶ್ಯಾನುಭೋಗನು ತಾರೀಕು 8-8-1948 ರಲ್ಲು ಬನಾರಸ್ ಹಿಂದೂಯುನಿವರ್ಸಿಟಿಯಲ್ಲಿ ವಿದ್ಯಾರ್ಥಿಯಾಗಿ ಪ್ರವೇಶ ಪಟ್ಟರುವನೆಂತಲೂ ಆತಗೆ "ದಿ ಕೆನರಾ ಮ್ಯೂಚುವಲ್ ಎಶ್ಯೂರೆನ್ಸ್ Ltd" ಇನ್ಶೂರೆನ್ಸ್ ಕಂಪೆನಿ ಬಾಬ್ತು ಪೊಲಿಸಿ ನಂಬ್ರ 9795ನೇ ಪೊಲಿಸಿ ಬಾಬ್ತು ನಿಕ್ಕತಕ್ಕ ರೂಪ್ಯಾ 1020-12-0 ನ್ನು ಪಡೆಯಲಿಕ್ಕೆ ತಾನೊಬ್ಬನೇ ಹಕ್ಕುದಾರಳೆಂತಲೂ, ಸದ್ರಿ ಹಣ ಪಡೆಯುವರೆ ತನಗೆ ನಿಕ್ಕತಸ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ಸದರಿ ಅರ್ಜಿ ಕೊಟ್ಟರುವದರಿಂದ ಯೀ ಕುರಿತು ಯಾರದ್ದಾದ್ರು ಆಕ್ಷೇಪಇದ್ದಲ್ಲಿ ತಾರೀಕು 21-12-1948ನೇ ದಿವಸ ಹಗಲು 11 ಗಂಟೆಗೆ ಯೀ ಕೋರ್ಟಿನಲ್ಲಿ ಹಾಜರಾಗಿ ಜ್ಞಾಪೇರ್ಪಾಡಿಕೊಳ್ಳಕ್ಕದ್ದು. ತಪ್ಪಿದಲ್ಲಿ ಮುಂದಿನ ಹುಕ್ಕುಂ ನಾಡಲಾದೀತು ಎಂಬಸಂದ್ದಿ ಕೋರ್ಟು ಹುಕ್ಕುಂ ಪ್ರಕಾರ ಯೀ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenai
Pleader for Petitioner

Coondapoor ತಾ. 1-12-1948

EDITED, PRINTED & PUBLISHED BY K. H. SHETTY AT THE NAVAYUGA PRESS UDIPI, S. INDIA.

Regd. No. M. 3618 ಎರಡಾಣೆ 23-12-1948

ಅಂತರಂಗ
ಪೊಸ ಮಾದರಿಯ
ವಾರ ಪತ್ರಿಕೆ

ಜಾಹೀರಾತಿಗೆ ಉತ್ತಮ
ಸಾಧನ ನಿವರಕ್ಕೆ
ಮೆನೇಜರ್,
ಅಂತರಂಗ, ಉಡುಪಿ.

ನವಯುಗ

ನವಯುಗ
ಚಂದಾ ನಿವರ:
(ನುಂಗಡ)
ವರ್ಷಕ್ಕೆ ರೂ. 5-4-0
6 ತಿಂಗಳಿಗೆ ರೂ. 2-12-0
ಬಿಡಿ ಪ್ರತಿ ರೂ. 0-2-0
6 ತಿಂಗಳಿಗಿಂತ ಕಡಿಮೆ
ಚಂದಾ ಸ್ವೀಕರಿಸುವುದಿಲ್ಲ.
ಮೆನೇಜರ್,
ನವಯುಗ ಉಡುಪಿ.

ವರ್ಷ ೨೯
ವಾರ ೧೭

NAVAYUGA WEEKLY, UDIPI, S. K.
FOUNDER: Hon'ble Mr. A. B SHETTY, Health Minister, Govt. of Madras.

Vol. 29
No. 17

ದಾರ್ ವರದೀ ಖಂಡನೆ

ರಾಷ್ಟ್ರೀಯತೆಯು ಸುಭದ್ರವಾಗುವ ರೆಗೆ ಮತ್ತು ಸುಸ್ಥಾನಗಳ ಭವಿಷ್ಯವು ಇ ನ್ನೂ ಸ್ಪಷ್ಟತೀರ್ಮಾನಹೊಂದುವ ವರೆಗೆ ಪ್ರಾಂತಿಕ ಪುನರ್ರಚನೆಯಾಗಕೂಡದು. ಆ ಕಾಲ ಬಂದಾಗ ಪ್ರಜಲಿತ ಪ್ರಾಂತ್ಯಗಳಲ್ಲಿ ಕೆಲವನ್ನು ಸುಧಾರಿಸಿ ಪುನರ್ರಚಿಸ ಒಕುದಾದರೂ ಅಂತಹ ರಚನೆ ಕೂಡಾ ಆಡಳಿತೆಯ ಅನುಕೂಲತೆಯನ್ನಾಧರಿಸಿ ಇರಬೇಕೇ ಹೊರತು ಭಾಷಾವಾರಾಗಿ ಇರತಕ್ಕದ್ದಲ್ಲ" ಎಂದು ತೀರ್ಮಾನಿಸಿ ಮಾಡಿರುವ 'ಭಾಷಾವಾರು ಪ್ರಾಂತ್ಯಗಳ ಸಮಿತಿ'ಯ ವರದಿಯ ಕುರಿತು ಸಂಬಂಧಪಟ್ಟ ಭಾಷಾ ಕ್ಷೇತ್ರಗಳವರು ತೀವ್ರ ಅತೃಪ್ತಿ ಮತ್ತು ಅಸಮಾಧಾನಗೊಂಡಿದ್ದಾರೆ; ವಿರೋಧ, ನಿಷೇಧಗಳು ಮುಂತೆ ಬರಹತ್ತಿವೆ. ಕೆಲವು ಮಾದರಿಗಳು ಇಲ್ಲಿವೆ:—

"ಭಾಷಾವಾರು ಪ್ರಾಂತ್ಯಗಳ ಸಮಿತಿಯ ವರದಿಯು, ಅ ಹಳೇ ಕಥೆ 'ನವತ ಪ್ರಭವ-ಇಲಿಯ ಜನನ'ವೆಂಬುದರ ಸಾಕ್ಷಾತ್ ನಿದರ್ಶನ. ಅದರ ಕುರಿತು ಸೊಲ್ಲೆತ್ತಿ ಲಾಗದಷ್ಟೂ ಅದು ಹಾಸ್ಯಾಸ್ಪದವಿದೆ. ಮಹಾರಾಷ್ಟ್ರ, ಕರ್ನಾಟಕ ಮತ್ತು ಮುಖ್ಯವಾಗಿ ಆಂಧ್ರದಲ್ಲಿ ಇದರ ಪ್ರತಿಕ್ರಿಯೆಗಳನ್ನು ಅಸಕ್ತಿಯಿಂದ ಕಾದು ನೋಡಲಿಕ್ಕಿದೆ"-ಮಾಜೀ ಫೆಡರಲ್ ಕೋರ್ಟ್ ಜಡ್ಜ್ ಡಾ। ಎಂ. ಆರ್. ಜಯಕರ್.

"ಇಲ್ಲಿ ಕೂಡಲೇ ಭಾಷಾವಾರಾಗಿ ಪ್ರಾಂತ್ಯ ರಚನೆಯಾಗಬೇಕೆಂದು ಈ ಸಮಿತಿ ಶಿಫಾರಸು ಮಾಡುವುದೆಂದು ಮದ್ರಾಸಿಗರಾದ ನಾವು ನಿರೀಕ್ಷಿಸಿದ್ದೆವು. ಆದರೆ ಸಮಿತಿಯು ಭಾಷಾನ್ವಯ ಪ್ರಾಂತ್ಯ ರಚನೆಯನ್ನು ಬದಿಗೆ ತಳ್ಳಿದುದರಿಂದ ನನಗೆ ಅತೀವ ನಿರಾಶೆಯೆನಿಸಿದೆ. ನಿರೆಯ, ಮಲೆಯಾಳ ಸಂಸ್ಥಾನಗಳು ಸೇರಿದ್ದರೆ ಕೇರಳ ಪ್ರಾಂತ್ಯ ರಚನೆಯಾಗಿ ಒಕ್ಕಟ್ಟಿನ ಸಂಸ್ಥೆಯೊಳಗೆ ಒಕ್ಕಟ್ಟಿಗೆ ಬರಲು ಸಾಧ್ಯವಾಗುತ್ತಿತ್ತು. ಆಂಧ್ರ ಪ್ರಾಂತ್ಯ ರಚನೆಯಾಗಬೇಕೆಂಬುದು ನ್ಯಾಯಬದ್ಧ ಬೇಡಿಕೆಯಾಗಿದ್ದು, ಆದರೆ ರಾಷ್ಟ್ರೀಯ ಏಕ್ಯತೆಯನ್ನು ಕೇಂದ್ರೀಕರಿಸಲಿದೆ ಹೊರತು ಭದ್ರೀಕರಿಸುವಂತಿಲ್ಲ. ಸ್ವಂತ ಭಾವನೆಯಲ್ಲೇ ಪ್ರೈಕ್ಷಣಿಕ, ಸಾಂಸ್ಕೃತಿಕ ಹಾಗೂ ರಾಜಕೀಯವನ್ನು ಹೊಂದಿಕೊಡುವಂತಿದ್ದರೇ ನೆ ಹೊಸತಾಗಿ ಹುಟ್ಟಿರುವ ಸ್ವಾತಂತ್ರ್ಯಕ್ಕೆ ಬೆಲೆಯಿದೆ. ಭಾಷಾವಾರು ಪ್ರಾಂತ್ಯ ರಚನೆಯಾದ ವಿನಹ ನರ್ಮದಾ ಹೊರೆಯಿಂದಾಚೆಯ ಜನರಿಗೆ ಹೀಗಾಗಲು ಸಾಧ್ಯವೇ ಇಲ್ಲ. ಸಮಿತಿಯ ವರದಿ ಪ್ರಕಟಣೆ ಮಾತ್ರದಿಂದ, ಭಾಷಾವಾರು ಪ್ರಾಂತ್ಯ ರಚನೆಯೇ ಮುಖ್ಯ ಸ್ಪರ್ಧೆಯಾಗಿರುವ ಮಿಲಿಯಾವಧಿ ಜನರು ಎದೆ ಕಳಕೊಳ್ಳಬಾರದೆಂದೂ, ಕೊನೆಯ ತೀರ್ಮಾನಾಧಿಕಾರವು ಘಟನಾ ಸಮಿತಿಯದ್ದೆಂದು ತಿಳಿದಿರಬೇಕೆಂದೂ ನಾನು ಕೇಳಿಕೊಳ್ಳಬೇಕಾಗಿದೆ. ಈ ವರೆಗೂ ಕಾಂಗ್ರೆಸು ಭಾಷಾವಾರು ಪ್ರಾಂತ್ಯಗಳನ್ನೊಪ್ಪಿಕೊಂಡಿದ್ದು ಆ ತ್ಯದ ಕುರಿತು ಹೇಳಲಿಕ್ಕಾಗುವದಿಲ್ಲವಾದರೂ ತಮಿಳು ಮತ್ತು ಆಂಧ್ರ ಪ್ರಾಂತ್ಯಗಳು ಅರ್ಥಿಕಾಭಾವದವುಗಳಾಗುವದಿಲ್ಲವೆಂದು ಮದ್ರಾಸ್ ಸರಕಾರಿ ತನ್ನ ಅಭಿಪ್ರಾಯವನ್ನು ತಿಳಿಸಿದ್ದಿತು. ಈ ಕುರಿತು ಸಮಿತಿ ಪಟ್ಟುರುವ ಅಭಿಪ್ರಾಯ ಸರಿಯಲ್ಲ"-ಮದ್ರಾಸಿನ ಸಾರ್ವಜನಿಕ ಕಾಮಗಾರಿ ಮಂತ್ರಿ ಶ್ರೀ ಎಮ್. ಭಕ್ತವತ್ಸಲಮ್.

'ಕೂಡಲೇ ಆಂಧ್ರ ಪ್ರಾಂತ್ಯ ರಚನೆಯಾಗಬೇಕೆಂದು ನಾವಿಸುತ್ತಾ ಬಂದಿರುವ ಈ ಪ್ರಾಂತ್ಯದ ದೊಡ್ಡ ಭಾಗದ ಜನತೆಗೆ ಭಾಷಾವಾರು ಪ್ರಾಂತ್ಯಗಳ ಸಮಿತಿಯ ವರದಿಯಿಂದ ಅತ್ಯಾಶ್ಚರ್ಯ ಮತ್ತು ಅತಿ ದೊಡ್ಡ ನಿರಾಶೆಯಾಗಿದೆ'-ಮದ್ರಾಸಿನ ಅರ್ಥಮಂತ್ರಿ ಶ್ರೀ ಟಿ ಗೋಪಾಲರೆಡ್ಡಿ.

'ಮದ್ರಾಸ್ ಪ್ರಾಂತ್ಯವನ್ನು ಭಾಷಾವಾರಾಗಿ ವಿಂಗಡಿಸಿ ಹಾಕುವ ತತ್ವಕ್ಕೆ ಮದ್ರಾಸ್ ಸರಕಾರವು ಕಟ್ಟು ಬಿದ್ದಿದೆ. ಮಲಬಾರಿನ ಒಂದು ತಾಲೂಕೆನಸ್ಟೇ ದೊಡ್ಡದಿರುವ ಕೊಚ್ಚಿ ಮತ್ತು ಕೂರ್ಗು, ಇಂಗೂ ಮಲಬಾರಿನಸ್ಟೇ ದೊಡ್ಡದಿರುವ ತಿರುವಾಂಕೂರು, ತಮ್ಮ ಸ್ವಂತ ಆಡಳಿತೆಯಲ್ಲಿರಬಲ್ಲುವಾದರೆ ಮಲಬಾರನ್ನೊಂದು ಪ್ರತ್ಯೇಕ ಪ್ರಾಂತ್ಯವಾಗಿ ಮಾಡಬಾರದೇಕೆಂದು ತಿಳಿಯದು"-ಮದ್ರಾಸಿನ ವ್ಯವಸಾಯ ಮಂತ್ರಿ ಶ್ರೀ ಕೆ. ವಾಸುದೇವ ಮೆನನ್.

"ಎಂದೋ ನಿವಾರಿಸಲ್ಪಟ್ಟಿರಬೇಕಾದ ಭಾಷಾವಾರು ಪ್ರಾಂತ್ಯ ರಚನೆಯು ಒಕ್ಕಟ್ಟನ್ನು ಸೀಳ ಮಾಡುವುದೆಂಬ ಮನೋವೈಕ್ಲಿಯನ್ನೆ ಆಧರಿಸಿ ಮುಂದೆಬಂದ ಭಾಷಾವಾರು ಪ್ರಾಂತ್ಯಗಳ ಸಮಿತಿಯ ವರದಿಯು ತೀರಾ ನಿರಾಶಾದಾಯಿಯಾಗಿದೆ. ಭಿನ್ನ ರೂಪಗಳೊಳಗೆ ಒಕ್ಕಟ್ಟಿಂಬುದೇ ಪ್ರಕೃತಿಯ ಮೂಲ ಸ್ವಭಾವ. ಭಾರತದ ಸ್ವಾತಂತ್ರ್ಯಕ್ಕೆ ಬೆಲೆಯಿದೆ. ಭಾಷಾವಾರು ಪ್ರಾಂತ್ಯ ರಚನೆಯಾದ ವಿನಹ ನರ್ಮದಾ ಹೊರೆಯಿಂದಾಚೆಯ ಜನರಿಗೆ ಹೀಗಾಗಲು ಸಾಧ್ಯವೇ ಇಲ್ಲ. ಸಮಿತಿಯ ವರದಿ ಪ್ರಕಟಣೆ ಮಾತ್ರದಿಂದ, ಭಾಷಾವಾರು ಪ್ರಾಂತ್ಯ ರಚನೆಯೇ ಮುಖ್ಯ ಸ್ಪರ್ಧೆಯಾಗಿರುವ ಮಿಲಿಯಾವಧಿ ಜನರು ಎದೆ ಕಳಕೊಳ್ಳಬಾರದೆಂದೂ, ಕೊನೆಯ ತೀರ್ಮಾನಾಧಿಕಾರವು ಘಟನಾ ಸಮಿತಿಯದ್ದೆಂದು ತಿಳಿದಿರಬೇಕೆಂದೂ ನಾನು ಕೇಳಿಕೊಳ್ಳಬೇಕಾಗಿದೆ. ಈ ವರೆಗೂ ಕಾಂಗ್ರೆಸು ಭಾಷಾವಾರು ಪ್ರಾಂತ್ಯಗಳನ್ನೊಪ್ಪಿಕೊಂಡಿದ್ದು ಆ ತ್ಯದ ಕುರಿತು ಹೇಳಲಿಕ್ಕಾಗುವದಿಲ್ಲವಾದರೂ ತಮಿಳು ಮತ್ತು ಆಂಧ್ರ ಪ್ರಾಂತ್ಯಗಳು ಅರ್ಥಿಕಾಭಾವದವುಗಳಾಗುವದಿಲ್ಲವೆಂದು ಮದ್ರಾಸ್ ಸರಕಾರಿ ತನ್ನ ಅಭಿಪ್ರಾಯವನ್ನು ತಿಳಿಸಿದ್ದಿತು. ಈ ಕುರಿತು ಸಮಿತಿ ಪಟ್ಟುರುವ ಅಭಿಪ್ರಾಯ ಸರಿಯಲ್ಲ"-ಮದ್ರಾಸಿನ ಸಾರ್ವಜನಿಕ ಕಾಮಗಾರಿ ಮಂತ್ರಿ ಶ್ರೀ ಎಮ್. ಭಕ್ತವತ್ಸಲಮ್.

'ಕೂಡಲೇ ಆಂಧ್ರ ಪ್ರಾಂತ್ಯ ರಚನೆಯಾಗಬೇಕೆಂದು ನಾವಿಸುತ್ತಾ ಬಂದಿರುವ ಈ ಪ್ರಾಂತ್ಯದ ದೊಡ್ಡ ಭಾಗದ ಜನತೆಗೆ ಭಾಷಾವಾರು ಪ್ರಾಂತ್ಯಗಳ ಸಮಿತಿಯ ವರದಿಯಿಂದ ಅತ್ಯಾಶ್ಚರ್ಯ ಮತ್ತು ಅತಿ ದೊಡ್ಡ ನಿರಾಶೆಯಾಗಿದೆ'-ಮದ್ರಾಸಿನ ಅರ್ಥಮಂತ್ರಿ ಶ್ರೀ ಟಿ ಗೋಪಾಲರೆಡ್ಡಿ.

'ಮದ್ರಾಸ್ ಪ್ರಾಂತ್ಯವನ್ನು ಭಾಷಾವಾರಾಗಿ ವಿಂಗಡಿಸಿ ಹಾಕುವ ತತ್ವಕ್ಕೆ ಮದ್ರಾಸ್ ಸರಕಾರವು ಕಟ್ಟು ಬಿದ್ದಿದೆ. ಮಲಬಾರಿನ ಒಂದು ತಾಲೂಕೆನಸ್ಟೇ ದೊಡ್ಡದಿರುವ ಕೊಚ್ಚಿ ಮತ್ತು ಕೂರ್ಗು, ಇಂಗೂ ಮಲಬಾರಿನಸ್ಟೇ ದೊಡ್ಡದಿರುವ ತಿರುವಾಂಕೂರು, ತಮ್ಮ ಸ್ವಂತ ಆಡಳಿತೆಯಲ್ಲಿರಬಲ್ಲುವಾದರೆ ಮಲಬಾರನ್ನೊಂದು ಪ್ರತ್ಯೇಕ ಪ್ರಾಂತ್ಯವಾಗಿ ಮಾಡಬಾರದೇಕೆಂದು ತಿಳಿಯದು"-ಮದ್ರಾಸಿನ ವ್ಯವಸಾಯ ಮಂತ್ರಿ ಶ್ರೀ ಕೆ. ವಾಸುದೇವ ಮೆನನ್.

"ಎಂದೋ ನಿವಾರಿಸಲ್ಪಟ್ಟಿರಬೇಕಾದ ಭಾಷಾವಾರು ಪ್ರಾಂತ್ಯ ರಚನೆಯು ಒಕ್ಕಟ್ಟನ್ನು ಸೀಳ ಮಾಡುವುದೆಂಬ ಮನೋವೈಕ್ಲಿಯನ್ನೆ ಆಧರಿಸಿ ಮುಂದೆಬಂದ ಭಾಷಾವಾರು ಪ್ರಾಂತ್ಯಗಳ ಸಮಿತಿಯ ವರದಿಯು ತೀರಾ ನಿರಾಶಾದಾಯಿಯಾಗಿದೆ. ಭಿನ್ನ ರೂಪಗಳೊಳಗೆ ಒಕ್ಕಟ್ಟಿಂಬುದೇ ಪ್ರಕೃತಿಯ ಮೂಲ ಸ್ವಭಾವ. ಭಾರತದ ಸ್ವಾತಂತ್ರ್ಯಕ್ಕೆ ಬೆಲೆಯಿದೆ. ಭಾಷಾವಾರು ಪ್ರಾಂತ್ಯ ರಚನೆಯಾದ ವಿನಹ ನರ್ಮದಾ ಹೊರೆಯಿಂದಾಚೆಯ ಜನರಿಗೆ ಹೀಗಾಗಲು ಸಾಧ್ಯವೇ ಇಲ್ಲ. ಸಮಿತಿಯ ವರದಿ ಪ್ರಕಟಣೆ ಮಾತ್ರದಿಂದ, ಭಾಷಾವಾರು ಪ್ರಾಂತ್ಯ ರಚನೆಯೇ ಮುಖ್ಯ ಸ್ಪರ್ಧೆಯಾಗಿರುವ ಮಿಲಿಯಾವಧಿ ಜನರು ಎದೆ ಕಳಕೊಳ್ಳಬಾರದೆಂದೂ, ಕೊನೆಯ ತೀರ್ಮಾನಾಧಿಕಾರವು ಘಟನಾ ಸಮಿತಿಯದ್ದೆಂದು ತಿಳಿದಿರಬೇಕೆಂದೂ ನಾನು ಕೇಳಿಕೊಳ್ಳಬೇಕಾಗಿದೆ. ಈ ವರೆಗೂ ಕಾಂಗ್ರೆಸು ಭಾಷಾವಾರು ಪ್ರಾಂತ್ಯಗಳನ್ನೊಪ್ಪಿಕೊಂಡಿದ್ದು ಆ

ನಿಮ್ಮ ಆಯ್ಕೆ
ಪ್ರಭಾತ
ಚಾ ಮತ್ತು ಕಾಫಿ
ಆರಿಸಿದ
ನೀಲಗಿರಿ ಚಾ ಮತ್ತು ಕಾಫಿ
Blended & Packed by:-
PRABHAT
TEA & COFFEE (INDIA) Ltd.
COONOOR R. S (Nilgiris)

ಮುಂದಿನ ಸುಖ ಸೌಕರ್ಯಕ್ಕಾಗಿ
ಇಂದೇ ನುಂಜಾಗ್ರತೆ ವಹಿಸುವುದು

ಜಾಣತನವಲ್ಲವೆ?

ಕಡಿಮೆ ಉತ್ಪತ್ತಿಇದ್ದು, ಸ್ವಲ್ಪ ಸ್ವಲ್ಪವನ್ನಾದರೂ ಉಳಿಸಬೇಕೆನ್ನುವವರಿಗೆ ಅನುಕೂಲವಾದ ಜನತಾ ನಿಮಾಸಂಸ್ಥೆ

ದಿ ನ್ಯೂ ಕರ್ನಾಟಕ
ಪ್ರೊವಿಡೆಂಟ್ ಇನ್ಶೂರೆನ್ಸ್ ಕಂಪೆನಿ
ಲಿಮಿಟೆಡ್.

ಏನಾನಿವಕ್ಕೆ ಏಜೆನ್ಸಿಮಾಡುತಿಗೂ
ಒಳೆಮಂ.

ವಿಮೆಮಾಡಲಿಕ್ಕೆ ಯಾ ಕ್ಲಾಮಿನಿಧ್ಯ ವಹಿಸಲಿಕ್ಕೆ

ದಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಚ್ಚಿನ ಸವಲತ್ತಿನ ಬಗ್ಗೆ ಬರೆಯಿರಿ—
ಪೋಸ್ಟು ಬಾಕ್ಸ್ ನಂಬ್ರ 10, ಉಡುಪಿ.

ಪ್ರಧಾನ ಕಾರ್ಯಾಲಯ:-ಧಾರವಾಡ,
THE UNITED KARNATAK INSURANCE COMPANY, LIMITED.

ತತ್ವವನ್ನದು ಬದಲಾಯಿಸಿಕೊಳ್ಳುವ ವರೆಗೂ ಆ ತತ್ವವಿದ್ದೇ ಇದೆ"ಕಾಂಗ್ರೆಸ್ ಕಾರ್ಯದರ್ಶಿ ಶ್ರೀ. ಶಂಕರರಾವ್ ದೇವ್.

"ಅನಂತೇಶ ರಚನಾತ್ಮಕ ಅಂಶವೂ ಅದರಲ್ಲಿಲ್ಲವಾದರೂ ಒಟ್ಟಿನ ಮೇಲೆ ಭಾಷಾವಾರು ಪ್ರಾಂತ್ಯಸಮಿತಿಯ ಕೊನೆಯ ತೀರ್ಮಾನಗಳನ್ನು ಸಮರ್ಥಿಸಬೇಕೆಂಬ ಅಭಿಪ್ರಾಯಕ್ಕೆ ನಾನು ಬಂದಿದ್ದೇನೆ. ಆ ಸಮಿತಿಯ ಎಲ್ಲರೂ ಹಿಂದೀ ಭಾಷೆಯವರೇ ಆದ್ದರಿಂದ ಅದರ ರಚನೆಯೇ ಸುಖಕರವಾದ್ದಲ್ಲ. ಈ ಸಮಿತೀ ವರದಿಯ ಹಿನ್ನೆಲೆಯಾವುದೆಂಬುದನ್ನು ತಿಳಿದುಕೊಂಡು ಆಂಧ್ರದವರು ತಾಳ್ಮೆ ವಹಿಸಬೇಕು. ತಮಿಳರು ಮತ್ತು ಆಂಧ್ರರ ಸಮಸ್ಯೆಯಲ್ಲಿ ಕಿರುಕುಳಗಳಿದ್ದರೂ ಅದು ನಾಕಷ್ಟು ಸುಗಮವಾದ ಸಮಸ್ಯೆ. ಆದರೆ ನಿಜವಾದ ಹೆದರಿಕೆಯೆಂದರೆ ಸಿಖ್ಖರದ್ದು ಮತ್ತು ಮಹಾರಾಷ್ಟ್ರೀಯರದು. ತಮಿಳರಿಗೂ ಆಂಧ್ರರಿಗೂ ಅವರ ಪ್ರಾಂತ್ಯಗಳನ್ನು ಈ ದಿನವೇ ಕೊಟ್ಟು ಸಿಖ್ಖರ್ ಸ್ಥಾನವನ್ನು ನಿರಾಕರಿಸಿದರೆ ಅಲ್ಲಿ ಸ್ಫೋಟವಾಗಲಿದೆ--ಆದರೂ ಅಭದ್ರವಿರುವ ಪಾಕಿಸ್ತಾನದ ಗಡಿಗಳಲ್ಲೇ--ಆಂಧ್ರ ಯುನಿವರ್ಸಿಟಿಯ ವೈಸ್‌ಚಾನ್ಸೆಲರ್ ಡಾ। ಸಿ ಆರ್. ರೆಡ್ಡಿ.

"ಭಾಷಾವಾರು ಪ್ರಾಂತ್ಯಗಳಿಗಾಗಿ 30 ವರುಷಗಳಿಂದಿರುವ ಚಳವಳವನ್ನು ಇದೊಂದು ಸಮಿತಿಯು ಏಕಾಏಕಿ ತಳ್ಳಿ ಬಿಡಬಲ್ಲುದಾದರೆ ಅದು ಭಾರತಕ್ಕೊಂದು ದುರಂತಾನುಭವವಾಗುವದು. ತೆಲುಗರು ಮತ್ತು ಕನ್ನಡಿಗರು 1911ರಿಂದಲೂ ಆಂಧ್ರ ಮತ್ತು ಕರ್ನಾಟಕ ಪ್ರಾಂತ್ಯಗಳಿಗಾಗಿ ಕಾತರರಿಯುತ್ತಾ ಬಂದಿದ್ದರು. ರಾಷ್ಟ್ರೀಯ ಜೀವನದಲ್ಲಿ ಈ ಚಳವಳಗಳನ್ನು ಅವರು ಅಮಾನತುಪಡಿಸಿದ್ದರಲ್ಲದೆ, ಸಹಕರಿಸುತಿದ್ದರೆ ತಮ್ಮ ಬಯಕೆ ಕೈಗೂಡುವಂತಿದ್ದ ಸೈಮನ್ ಕಮಿಶನನ್ನು ಕೂಡಾ ಬಹಿಷ್ಕರಿಸಿದ್ದರು. ಇಂಥವರ 30 ವರುಷಗಳ ಈ ಬೇಡಿಕೆಯನ್ನು ಇಂಗ್ಲಿಷ್ ಅಥವಾ ಹಿಂದೀ ಬಾರದ ಪ್ರಾಯಸ್ಥರಿಗೆಲ್ಲಾ ಮತದಾನಾಧಿಕಾರ ಬರುವ ಈ ಕಾಲದಲ್ಲಿ ಒಂದೆ ಹಾಕುವದು ಬಹಳ ಅನ್ಯಾಯ."--ಆಂಧ್ರ ನಾಯಕ ಪ್ರೊ. ಎನ್. ಜಿ. ರಂಗ.

"ಭಾಷಾವಾರು ಪ್ರಾಂತ್ಯರಚನಾ ಪ್ರಶ್ನೆಯನ್ನು ಈ ಸಮಿತಿಯು ನಿರ್ವಹಿಸಿದ ಬಗೆಗಾಗಿ ನಿರಾಶೆ ಮತ್ತು ಅಸಮ್ಮತಿಯನ್ನು ಸೂಚಿಸುತ್ತೇವೆ."- ತಮಿಳುನಾಡು ನಾಯಕರಾದ ರಾಮಂರಾಜ ನಾದರ್, ಯಸ್. ವೆಂಕಟರಮಣ್, ಭಕ್ತವತ್ಸಲಮ್, ಡಾ। ಸುಬ್ಬರಾಯನ್.

"ದಾರ್ ಸಮಿತಿಯ ವರದಿಯು ಕರ್ನಾಟಕದಲ್ಲಿ ತೀವ್ರ ನಿಷೇಧ ಭಾವನೆಯನ್ನೆಬ್ಬಿಸಿದೆ. ಭಾಷಾವಾರು ಪ್ರಾಂತ್ಯ ರಚನೆಗೆನುಕೂಲವಾಗಿ ಕಾಂಗ್ರೆಸು ತನ್ನ ನಿರ್ಧಾರವನ್ನು ಬದಲಾಯಿಸದಿದ್ದರೆ, ದಕ್ಷಿಣ ಭಾರತಕ್ಕೆ, ವಿಶೇಷತಃ ಕರ್ನಾಟಕ ಮತ್ತು ಆಂಧ್ರಕ್ಕೆ ಕಾಂಗ್ರೆಸಿನ ಮೇಲಿನ ಎಲ್ಲಾ ವಿಶ್ವಾಸವೂ ಹೋಗಿಬಿಡುವುದು-" ಕರ್ನಾಟಕ ನಾಯಕರಾದ ಶ್ರೀ ಕೆ. ಬಿ. ಜಿನರಾಜ ಹೆಗ್ಡೆ, ಪ್ರೀ. ಕೆ. ಆರ್. ಕಾಕಂತ.

ಜೈಪುರದಲ್ಲಿ—

ಜೈಪುರದಲ್ಲಿ ಇದೇ ತಾ. 18, 19ರಲ್ಲಿ 55ನೇ ಕಾಂಗ್ರೆಸ್ ಮಹಾಧಿವೇಶನವು ವಿಶೇಷ ಉತ್ಸಾಹ ಮತ್ತು ಸಂಭ್ರಮಗಳಿಂದ ನಡೆದಿದೆ. ಅಧ್ಯಕ್ಷ ಮೆರವಣಿಗೆ, ಸರ್ವೋದಯ ಪ್ರದರ್ಶನ ಮತ್ತು ಅ. ಭಾ. ಕಾಂಗ್ರೆಸ್ ಸಮಿತಿಯೇ ವಿಷಯ ನಿಯಾಮಕ ಸಮಿತಿಯಾಗಿ ನಡೆಸಿದ ಕಾರ್ಯಕಲಾಪಗಳು, ಇವು ತಾ. 14 ರಿಂದಲೇ ಜೈಪುರದಲ್ಲಿ ಆರಂಭಿಸಿದ್ದು ಇದೇ ದಶಂಬರ್ ತಾ.14ನೇ ಮಂಗಳವಾರದಿಂದ ತಾ. 19ನೇ ಆದಿತ್ಯವಾರದ ವರೆಗಿನ ಆರು ದಿನಗಳು ಕಾಂಗ್ರೆಸ್ ಅಧಿವೇಶನ ದಿನಗಳಾಗಿದ್ದುವು; ಅಖಿಲಭಾರತದ ಲಕ್ಷಣವನ್ನೆ ಕೆದುಕೊಂಡು ಅದಕ್ಕೆ ಪ್ರತಿಯಾಗಿ ಅಖಿಲ ಭಾರತಕ್ಕೆ ಮಾರ್ಗದರ್ಶನ ಮಾಡುವ ರಾಜಕೀಯ 'ಕೊಡಕೊಂಡ'ದ ದಿನಗಳಾಗಿದ್ದುವು.

63 ವರುಷಗಳ ಪೂರ್ವದಲ್ಲಿ ಜನಿಸಿದ್ದ ಕಾಂಗ್ರೆಸು ಗಾಂಧಿಜೀಯ ನಾಯಕತ್ವ ಬರುವ ವರೆಗೂ ತನ್ನ ಸುಖ ಕಷ್ಟಗಳನ್ನು ವಿದೇಶೀ ಆಳರಸರೊಡನೆ ನಿವೇದಿಸಿಕೊಳ್ಳುವ ಕೆಲಸವನ್ನಷ್ಟೆ ಮಾಡುತ್ತಿದ್ದು, 1920ರಿಂದ ಮಹಾತ್ಮಾ ಗಾಂಧಿಯವರ ಮುಂದಾಳುತ್ವದಲ್ಲಿ ಸ್ವಾತಂತ್ರ್ಯ ಹೋರಾಟದ ಸಂಸ್ಥೆಯಾಗಿ ಮಾರ್ಪಟ್ಟು, ಆ ರೂಪದಲ್ಲೇ ಕ್ರಮಶಃ ಬೆಳೆಯುತ್ತಾ ಬಂದು, 1916ನೇ ನವಂಬರಿನಲ್ಲಿ ಆಚಾರ್ಯ ಕೃಪಲಾನಿಗಳ ಅಧ್ಯಕ್ಷತೆಯಲ್ಲಿ ವೀರಹನಲ್ಲಿ 54ನೇ ಅಧಿವೇಶನ ಸೇರುವ ವರೆಗೂ ಹಾಗೇನೇ ಇದ್ದಿತು. ಜೈಪುರದಲ್ಲಿ 55ನೇ ಅಧಿವೇಶನವೇ ತನ್ನ ಮೂಲ ಗುರಿ ಸಿದ್ಧಿಸಿಕೊಂಡ ಪ್ರಥಮ ಸಭೆ. ಅಂತೆಯೇ ತನ್ನಲ್ಲಿ ಜೀವ ಬರಿಸಿದ ಗಾಂಧಿಜೀಯನ್ನು ಕಳೆದುಕೊಂಡ ನಂತರ ಸೇರುವ ಮೊದಲ ಸಭೆಯೂ ಇದೇ. ಅದೇ ರೀತಿ, ಕಾಂಗ್ರೆಸಿನ ಇಡೀ ಚರಿತ್ರೆಯಲ್ಲೇ ಅದು ಒಂದು ಆಶ್ರಿತ ರಾಜ್ಯದಲ್ಲಿ ಸೇರಿದುದೆಂದರೆ ಈಗ ಕಾಶೀ ಜೈಪುರದಲ್ಲಿ.

ಈ ಮೊದಲು 'ಕಾಂಗ್ರೆಸ್ ಸಂಸ್ಥೆ'ಯಿಂದೇ ರಾಷ್ಟ್ರೀಯ ರಂಗವಾಗಿದ್ದಿತು. ಅದರ ಧ್ಯೇಯ, ಸ್ಥೈರ್ಯ, ತ್ಯಾಗ, ಸೇವೆಗಳೇ ರಾಷ್ಟ್ರೀಯ ಭಾವನೆ, ಹೆಗ್ಗಳಿಕೆ, ಆತ್ಮವಿಶ್ವಾಸ, ಪ್ರೇರಣೆಗಳನ್ನು ನಿರ್ಮಿಸುತಿದ್ದುವು. ನೆಹರು, ವಲ್ಲಭಾಯಿ, ಪ್ರಸಾದ್, ಅಜಾದರಂಥವರ ಏಕಮಾತ್ರ ಕಾರ್ಯರಂಗವೇ ಆದಾಗಿದ್ದಿತು. ಆದರೀಗ ಕಾಂಗ್ರೆಸ್ ಸಂಸ್ಥೆ 'ಸಂಸ್ಥೆ'ಯಾಗಿ ಮಾತ್ರವಲ್ಲ; 'ಸರಕಾರ'ವಾಗಿಯೂ ಕಾರ್ಯ ನಡೆಸುತ್ತಿದೆ. ನೆಹರು, ವಲ್ಲಭಾಯಿ ಗಳಂಥವರು ಹೆಚ್ಚಿನಂಶ ಸರಕಾರೀ ರಂಗದಲ್ಲಿ ದ್ದಾರೆ. ಅಧಿಕಾರ ಸಾಧನೆಯು ಕಾಂಗ್ರೆಸ್ ಅಧಿಕಾರ ಚಾಲನೆಯು ಕಾಂಗ್ರೆಸ್ ಆಗಿ ಮಾರ್ಪಟ್ಟಿದೆ. ಹೀಗಾದ ಮೇಲೆ ಸೇರಿದ ಪ್ರಥಮ ಜಾಹೀರು ಅಧಿವೇಶನವೇ ಜೈಪುರದ್ದು. ಆದ್ದರಿಂದ ಅದರಲ್ಲೊಂದು ನವೀನತೆ ಮತ್ತು ವ್ಯಾಮುಖ್ಯತೆಯಿದೆ

ಮೆರವಣಿಗೆ-ಪ್ರದರ್ಶನ

ಗಾಂಧಿಜೀ ತತ್ವನಿಷ್ಠೆಯ ಕೀರ್ತಿವಂತ ಆಚಾರ್ಯ ವಿನೋಬಾ ಭಾವೆಯವರು ಜೈಪುರದ ಕಾಂಗ್ರೆಸ್ ಸಭಾಂಗಣ 'ಗಾಂಧೀ ನಗರ'ದಲ್ಲಿ ತಾ 14ರಲ್ಲಿ 'ಸರ್ವೋದಯ ಪ್ರದರ್ಶನ'ವನ್ನು ಉದ್ಘಾಟಿಸಿದರು. ಅದೇ ಅಧಿವೇಶನೋತ್ಸವಗಳ ಆದಿ. ಗಾಂಧಿಜೀ ಚಿಲ್ಲರಿಯ ಪ್ರಕಾಶದ ಮೇಲಿಂದ ರಾಷ್ಟ್ರದ ಲ್ಲೆಂತಹ ಬೆಳಕು ಬೀಳಬೇಕೆಂಬುದನ್ನು ವಿವರಿಸಿ ಇಂದು ಕಾಂಗ್ರೆಸಿಗರಲ್ಲಿ ಹಬ್ಬಿರುವ ಅಧಿಕಾರ ಲಾಲಸೆಯ ನಿವಾರಣೆಯು ಅವಶ್ಯಕತೆಯನ್ನು ಆಚಾರ್ಯರು ಕ್ಲಿಷ್ಟವಿತ್ತು ಹೇಳಿದರು. ಸ್ವಾಪಡಿತೆ, ಸ್ವಾಯತ್ತತೆ ಹಾಗೂ ಸ್ವಜ್ಞಾನ ಮತ್ತು ಪ್ರತಿಯೊಂದು ಗ್ರಾಮವೂ ಸ್ವಾವಲಂಬನೆಯಲ್ಲಿರಬೇಕೆಂಬುದೇ ಸ್ವರಾಜ್ಯದ ನಿಜಾರ್ಥ"ವೆಂದರು. ಶ್ರೀ ಶಂಕರದಾಸ್ ಜಾಜುಗಳು ಪ್ರದರ್ಶನ ಸಮಿತಿಯ ಅಧ್ಯಕ್ಷರಾಗಿದ್ದು ಪಾಪಿ, ವಿವಿಧ ರೀತಿಯ ಗ್ರಾಮ ಕೈಗಾರಿಕೆಗಳು, ವ್ಯಾಂತಿಕ ಸರಕಾರಗಳಿಗೆ ಮೀಸಲಿಟ್ಟ ವಿಭಾಗಗಳು ಈ ಪ್ರದರ್ಶನದಲ್ಲಿದ್ದುವು. ಗಾಂಧಿಜೀಯ ಜೀವನದ ಮುಖ್ಯ ಘಟನೆಗಳನ್ನು ತೋರಿಸುವ ಹಾಗೂ ಗಾಂಧಿಜೀ ಉಪಯೋಗಿಸುತ್ತಿದ್ದ ಕೆಲವು ಸಾಮಾನ್ಯಗಳನ್ನಿಟ್ಟ 'ಬಾಪು ಭವನ'ವು ಅಲ್ಲಿದ್ದು

ಅಧ್ಯಕ್ಷ ಡಾ। ಪಟ್ಟಾಭಿ

ಅದರ ಬಳಿಯಲ್ಲೇ ಸದಾ ಸೂತ್ರ ಯಜ್ಞದ ಏರ್ಪಾಟಿದ್ದಿತ್ತು. ರಾಷ್ಟ್ರನಾಯಕರೂ ಇಲ್ಲಿ ಕುಳಿತು ನೂಲು ತೆಗೆದಿದ್ದರು.

ಅಧ್ಯಕ್ಷ ಮೆರವಣಿಗೆ

ಅತ್ಯಾಕರ್ಷಣೀಯ ಹಾಗೂ ಚಿರಸ್ಮರಣಾರ್ಹ ದೃಶ್ಯವೆಂದರೆ ಅಧ್ಯಕ್ಷರನ್ನು ಬರಮಾಡಿಕೊಳ್ಳುವ ಮೆರವಣಿಗೆ. ನವಭಿಲ್ಲಿಯಲ್ಲಿ, ಜೈಪುರ ಕಾಂಗ್ರೆಸಿನ ಮುಂಬರುವ ಸೂಚನೆಗಳನ್ನು ತಯಾರಿಸುವ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯಲ್ಲಿ ಭಾಗವಹಿಸಿ ಅಧ್ಯಕ್ಷ ಡಾ। ಪಟ್ಟಾಭಿ ಸೀತಾರಾಮಯ್ಯನವರು ತಾ 15ನೇ ಮುಂಜಾನೆ ಸ್ಪೆಶಲ್ ಟ್ರೈನಿನಲ್ಲಿ ನವಭಿಲ್ಲಿಯಿಂದ ಜೈಪುರಕ್ಕೆ ಹೊರಟರು. ಕೈಲ್ಯವರ್ಣ ರಾಷ್ಟ್ರೀಯ ಧ್ವಜ ಮತ್ತು ನಿರಾನೆಗಳಿಂದ ಅಲಂಕೃತ ಗಾಡಿ ನಿಲ್ದಾಣ ಬಿಡುವಾಗ "ಮಹಾತ್ಮಾ ಗಾಂಧಿಕೀ ಜೈ" "ಡಾ ಪಟ್ಟಾಭಿ ಸೀತಾರಾಮಯ್ಯ ಝಿಂದಾಬಾದ್" ಜಯ ಘೋಷಣೆಗಳಾದವು. ಹಾರಿಯುದ್ದಕ್ಕೂ ಸಂಭ್ರಮದ ಸ್ವಾಗತಗಳಾದುವು. ಮಧ್ಯಾಹ್ನ 2 ಘಂಟೆಗೆ ಅಧ್ಯಕ್ಷರು ಜೈಪುರ ಮುಟ್ಟಿದರು. ಜಾಂದಾಪೋಲ್ ಗೇಟಿನ ಹೊರಗಿನ ದೇವಾಲಯದಲ್ಲಿಳಿದ ಅವರನ್ನು ಕರದೊಯ್ಯಲು ಅಲ್ಲಿಂದ ಕಾಂಗ್ರೆಸ್ ಸಭಾಸ್ಥಳ ಗಾಂಧಿನಗರದ ವರೆಗಿನ ನಾಲ್ಕು ಮೈಲುದ್ದಕ್ಕೆ ನಡೆದ ಮೆರವಣಿಗೆಯು ಅತ್ಯಂತ ಗಂಭೀರ ಹಾಗೂ ಆಕರ್ಷಣೀಯವಿದ್ದಿತು. ರಮಣೀಯವಾಗಿ ಸಿಂಗರಿಸಲ್ಪಟ್ಟಿದ್ದ ನಾಲ್ಕು ಚುಕ್ಕಾಯಿತ ಎತ್ತುಗಳಿಂದ ಎಳೆಯಲ್ಪಡುವ ಬೆಳ್ಳಿ ರಥದಲ್ಲಿ ಕಾಂಗ್ರೆಸ್ ಅಧ್ಯಕ್ಷರು ಕುಳಿತಿದ್ದರು. ಹಿಂದಿನ ಅಧಿವೇಶನ ನಡೆದ, ಅಲ್ಲಿಗೆ 250 ಮೈಲು ದೂರದ ನೀರತಿನಿಂದ ಕಾಂಗ್ರೆಸ್ ಆಖಂಡ ಜ್ಯೋತಿ (ನಂದಾದೀವಿಗೆ)ಯನ್ನು 22 ದಿನಗಳಲ್ಲಿ ಕಾಲ್ನಡಿಗೆಯಲ್ಲೇ ತರಲಾಗಿದ್ದು, ಅದು ಹಿಂದಿನ ದಿನ ಜೈಪುರ ಸೇರಿದ್ದುದು ಅಧ್ಯಕ್ಷ ರಥದ ಮುಂಭಾಗದಲ್ಲಿ ಜ್ವಲಿಸುತ್ತಿತ್ತು. ರಥದ ಮುಂಭಾಗ ಮತ್ತು ಅಕ್ಕಪಕ್ಕಗಳಲ್ಲಿ ಅಶ್ವಾರೋಹೀಸ್ವಯಂಸೇವಕರು ಅಧ್ಯಕ್ಷರ ಮೈಗಾವಲು ಸವಾರಿ ನಡೆಸಿದ್ದರು. ಮೆರವ

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

[ಹೊಡೆಗಾಂಕೆ ಪರಿಮಿತಿಸಲ್ಪಟ್ಟು ಇಂಡಿಯಾದಲ್ಲಿ ಸಾಂಘೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ.

ನಮ್ಮ ಕಲೆಕ್ಷನ್ [ಸಂಗ್ರಹ] ಇಲಾಖೆಯು,ನಮ್ಮ ಶಾಖೆಗಳುವಲ್ಲಿ ರವಿಮುಗಳ ವಸೂಲಿಯನ್ನು ಶ್ರದ್ಧಾಪೂರ್ವಕವಾಗಿ ಮಾಡುವಂತೆ ಹುಟ್ಟುವಸ್ತೆನೊಲ್ಲಟ್ಟಿದೆ. ಪೋಣಿಸಿದಂತಿರುವ ನಮ್ಮ ಶಾಖೆಗಳು ದಕ್ಷಿಣದ ಅರಬೆಯ ಕ್ಷೇತ್ರಗಳಲ್ಲಿ-ತಮಿಳು ನಾಡಿನ ಅಕ್ಕ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ-ಮಲಬಾರು ಜಿಲ್ಲೆಯ ತೆಂಗುಗಳ, ವೈಕ್ಷವಾಟಿಕೆಗಳಿರುವಲ್ಲಿ.. ಮತ್ತು ಮುಂಬಾಯಿ ಹಾಗೂ ಅದರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ವೈಯಕ್ತಿಕವಾಗಿ ನಿರಾಕಿಗಳ ಬಗ್ಗೆ ಕಲೆಕ್ಷನ್ ರವಿಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ಕತ್ತು ವರ್ಷಗಳ ಅನುಭವವು ಸ್ಪಿಸ್ ಮತ್ತು ಚಟ್ಟಣ ಸೇವೆಯ ನವಸ್ಥೆಯನ್ನು ರೂಪಿಸಿರುವಂತೆ ಮಾಡಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತದೆ. ಆದರಿಂದ ನಿಮಗೆ ಸಮಯವೂ, ಹಣವೂ ಉಳಿವುದು.. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರವಿಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ಶೀಘ್ರ ಲಕ್ಷ ದೊರೆವುದು.

The Canara Bank Limited.

ESTD: 1906.

55ನೆ ಕಾಂಗ್ರೆಸ್—

❀ಪ್ರಚಂಡ ಉತ್ಸಾಹ

❀ಪ್ರಾಮುಖ್ಯನಿರ್ಧಾರ

❀ಪ್ರಮುಖರಹಿತೋಕ್ತಿ

ಚೆಗೆಯು ಅಗ್ರಭಾಗದಲ್ಲಿ ಸ್ವಯಂಸೇವಕರ ದಳನಾಯಕನಿದ್ದು ಅವನನ್ನು ಅನುಸರಿಸಿ 25 ಸೈಕಲ್ ಸವಾರರು, ಅವರ ಹಿಂದೆ 9 ಬೇಂಡುಪಾರ್ಟಿಯವರು, ತದನುಸಾರವಾಗಿ 1000 ಕಾಂಗ್ರೆಸ್ ಸ್ವಯಂಸೇವಕರು ಬರುತಿದ್ದರು. ಎರಡು ಗೊಡ್ಡ ಅಲಂಕೃತ ಆನೆಗಳು ಎರಡು ರಾಷ್ಟ್ರ ಧ್ವಜಗಳನ್ನೆತ್ತಿ ಹಿಡಿದು ನಡೆದ ನೋಟವು ಆ ಮೆರವಣಿಗೆಯ ವೈಭವವನ್ನು ಹೆಚ್ಚಿಸಿದ್ದಿತು. ಸ್ತ್ರೀ ಸುರಪಾಣಿ ಬಾಲಕರು ಸಹನ್ಯಸೆಂಸ್ಯೆಯಲ್ಲಿ ಬಸ್ಸು, ಮಾಡು, ಮರ, ಅಂಗಡಿಗಳಲ್ಲಿ ಕೂಡಾ ನಿಂತು ನೋಡುತ್ತಿದ್ದ ಈ ವರ್ಣನಾತೀತ ಸೊಬಗಿನ ಪ್ರಚಂಡ ಮೆರವಣಿಗೆಯು ಜೈಪುರದ ಪ್ರಮುಖ ಬೀದಿಗಳಲ್ಲಿ ಸುತ್ತಾಡಿ ನಗರದ ಹೆಬ್ಬಾಗಿಲ ಮ್ಯೂಸಿಯಮ್ ಬಳಿ ಬರುವಾಗ, ಎರಡೂವರೆ ಘಂಟೆ ದಾಟಿತು. [ಕೊನೆಗೆ ಅಲ್ಲೇ ಕಾಂಗ್ರೆ. ಅಧ್ಯಕ್ಷರಿಗೆ ನಗರದ ಮೂಸಾ ಪತ್ರಾರ್ಪಣೆ ಜರಾಯಿತು.

ಧ್ವಜಾರೋಹಣ

ತಾ. 16ನೇ ಮಂಜಾನೆ ಅಧ್ಯಕ್ಷ ಪಟ್ಟಾಭಿಗಳ ಹಸ್ತದಿಂದ ನಡೆದ ಧ್ವಜಾರೋಹಣ ಸಮಾರಂಭವು ಜೈಪುರ ಅಧಿವೇಶನದ ಮತ್ತೊಂದು ಘನ ಗಂಭೀರ ಘಟನೆ. ಈ ಧ್ವಜ ವಂದನಾ ಸಮಾರಂಭಕ್ಕೆ 50000ಕ್ಕೂ ಮಿಕ್ಕಿದ ಜನ ಕೂಡಿದ್ದರು; 2000 ಸ್ತ್ರೀ ಸ್ವಯಂಸೇವಿಕೆಯರ ಸಮೇತ 8000 ಸ್ವಯಂಸೇವಕರು ತೀವ್ರ ನಡೆಯಿಂದ ಕೊಟ್ಟ ವಂದನೆಯನ್ನು ಡಾ| ಪಟ್ಟಾಭಿ ಸ್ವೀಕರಿಸಿದರು. ಗಾಂಧೀ ನಗರದ ಧ್ವಜ ಚೌಕದಲ್ಲಿ ಹೊ ಮುಚ್ಚಿದ ಕಟ್ಟೆಯ ಮೇಲೆ 5ಗ ಅಡಿ ಎತ್ತರದ ಸ್ಕಂಭದಲ್ಲಿ ಧ್ವಜವನ್ನೆರಸಿ, ಬೇಂಡು ರಾಷ್ಟ್ರಗೀತೆಗಳನ್ನು ಹಾಡಿದ ಮೇಲೆ ಡಾ| ಪಟ್ಟಾಭಿಗಳಂದರು: "ಈ ಧ್ವಜದ ನೀಲವಸ್ತ್ರದ ಕಟ್ಟಿನ ಕಣ್ಣು ಬೀಳದಂತೆ ರಕ್ಷಣೆ ಮಾಡಿರಿ; ಈ ಕೈವಣಿಗೆಯ ಸಕ್ಕರೆಯ ಮತ್ತು ರುದ್ಧತೆಯನ್ನು ಕಾಪಾಡಿಕೊಳ್ಳಿರಿ. 19 ವರುಷಗಳಿಗೆ ನೆಹರು ರವರ ತೀರದಲ್ಲಿ ಈ ಧ್ವಜ ನೀರೋಧಂದಿನಿಂದ ಸ್ವಾತಂತ್ರ್ಯಸಮರದ ಸಹಸ್ರಾರು ಹಿಂದೀ ಯೋಧರು ಇದಕ್ಕಾಗಿ ತಮ್ಮ ಪ್ರಾಣವನ್ನು ಕೊಟ್ಟಿದ್ದಾರೆ. ಈ ಧ್ವಜದಡಿಯಲ್ಲಿ 'ಆತ್ಮಬಲಿದಾನದೊಂದು ಸಂಪ್ರದಾಯವು ಅಸ್ತಿತ್ವಕ್ಕೆ ಬಂದಿದೆ. ಈ ಧ್ವಜವು ತಗ್ಗಿಗಳಿಯುವಂತಾದ ಒಂದೇ ಒಂದು ನಿದರ್ಶನ ಕೂಡಾ ಇದರ ಚರಿತ್ರೆಯಲ್ಲಿಲ್ಲ. ವಿದೇಶೀ ಧೊರೆಗಳ ಜಬ್ಬಾಳಿಕೆಗಿದಿರಾಗಿ ಇದು ನೀತಿದ್ದಿತು. ಸಶಕ್ತ ಬ್ರಿಟಿಷ್ ಸಾಮ್ರಾಜ್ಯಶಾಹಿಗೆ ಇದು ಯುದ್ಧಾಹ್ವಾನ ಕೊಟ್ಟಿದ್ದಿತು; ಹಾಗೂ ಕಟ್ಟಕಡೆಗೆ ರಾಷ್ಟ್ರವನ್ನು ವಿಜಯದ ಗುರಿಗಿದು ಮುಟ್ಟಿಸಿತು. ನಾವು ನಮ್ಮ ಹುತಾತ್ಮರನ್ನೆಂದಿಗೂ ಮರೆಯಲಾರೆವು; ಈ ಧ್ವಜದ ಗೌರವ ರಕ್ಷಣೆಗಾಗಿಯೂ ಇದನ್ನು ವಿಜಯ ಧ್ವಜವಾಗಿ ಮಾಡುವದಕ್ಕಾಗಿಯೂ ಸಹಸ್ರಾವಧಿ ಜನರಿಂದಾಗಿರುವ ತ್ಯಾಗವನ್ನು ನಾನೆಂದಿಗೂ ಮರೆಯಲಾರೆವು. ಅವರ ರಕ್ತದಿಂದ ತೊಳೆಯಲ್ಪಟ್ಟು ಇದು ಪರಿಶುದ್ಧವಿದೆ. ಮಾತೃಭೂಮಿಯನ್ನು ರಕ್ಷಿಸುವವು ನಾಕ್ಕು ಪರಕೀಯರು ಹುಲ್ಲಡದಂತೆ ನೋಡುವೆವು ಎಂದು ಅವರ ಹೆಸರು ಹೇಳಿ ನಾವು ಪ್ರತಿಜ್ಞೆ ಮಾಡುವಾ. ಶಾಂತಿ ಮತ್ತು ಅಭಿವೃದ್ಧಿಯೇ ನಮ್ಮ ಧ್ಯೇಯ. ಯಾವುದೇ ಪರಾಕ್ರಮದ ಮೇಲೆ ಯಾವ ದುರಾಕಾಂಕ್ಷೆಯನ್ನೂ ಕಟ್ಟಿಕೊಳ್ಳದೆ ಲೋಕ ಶಾಂತಿ ಮತ್ತು ಅಭಿವೃದ್ಧಿಗಾಗಿ ನಾವು ಒದ್ದಾಡಿದೆವು".

ಜೈಪುರ ಕಾಂಗ್ರೆಸ್ ಮಿಸಿದ ದಿನವೇ ಅಲ್ಲಿ ಗಾಂಧಿಜೀಯ ದೇಹ ನಿರ್ವಾಣದ ವಾರ್ತೆಯ ಸ್ಫೋಟನೆಯ ಅನಾವರಣವನ್ನೂ ಅಧ್ಯಕ್ಷ ಪಟ್ಟಾಭಿ ನಡೆಸಿದ್ದರು.

ವಿಷಯನಿಯಾಮಕ ಸಮಿತಿ

ತಾ 16ರಿಂದ ಕಾಂಗ್ರೆಸ್ ಅಧಿವೇಶನದ ವಿಷಯನಿಯಾಮಕ ಸಮಿತಿಯ ಸಭೆಗಳಾರಂಭ. ಸುಮಾರು 60 ಲಕ್ಷ ಪ್ರಾಥಮಿಕ ಸದಸ್ಯರಿದ್ದು ಆ ಪೈಕಿ ಕಾಂಗ್ರೆಸು ಜಾಹೀರು ಅಧಿವೇಶನದ ಪ್ರತಿನಿಧಿಗಳ ಸಂಖ್ಯೆ 3,000 ಕ್ಕೂ ಮಿಕ್ಕಿರುವಾಗ ತರಾಪುಗಳ ಸಂಯುಕ್ತ ಪರಿಷತ್ತಿನ ತಂತಹ ಜಾಹೀರು ಅಧಿವೇಶನದಲ್ಲಿ ನಡೆಯದೆ, ಹೆಚ್ಚೆನಂಶ ಒತ್ತುಗಳಿಗೆ ಸಮ್ಮತಿ ಕೂ ಚನೆಯಷ್ಟೇ ದೊರೆಯುವಂತೆ ಸಂಶ್ರದಾಯ. ವಿಷಯ ನಿಯಾಮಕ ಸಮಿತಿಯೇ ನಿಜಕ್ಕೂ ಎಲ್ಲವುಗಳನ್ನೂ ಸರಿಯಾಗಿ ಪರಿಶೀಲಿಸಿನಿರ್ಣಯಸಮಿತಿಯಾಗಿರುವುದಾಗಿದೆ. ಪ್ರಸಕ್ತ ಸಭೆಯು ತಿರುವನಂತಪುರದ ಇತ್ತಿಯ ಜರ್ಜಿ ಮತ್ತು ತೀವ್ರವಾದಿಗಳೇ ಮುಖ್ಯ ತಿರುಳು ತಾ. 16ನೇ ಆಪರಾಹ್ನ ಸಾಲಂಕೃತ ವಿಷಯನಿಯಾಮಕ ಸಭಾಭವನದಲ್ಲಿ ಅ ಭಾ. ಕಾಂ ಸಮಿತಿಸಭೆ ಪ್ರಾರಂಭಿಸಿತು. ಪ್ರಧಾನಿತಾಧ್ಯಕ್ಷ ಬಾಬು ರಾಜೇಂದ್ರ ಪ್ರಸಾದರು ಆನಾರೋಗ್ಯಕ್ಕೀಡಾಗಿ ವಾರ್ಧಾದಲ್ಲಿ ಚಿಕಿತ್ಸೆ ಹೊಂದುತಿದ್ದುದರಿಂದ, ಮಾಜೀ ಅಧ್ಯಕ್ಷರುಗಳ ಪೈಕಿ ಹಿರಿಯನಾದ ಸರ್ದಾರ್ ವಲ್ಲಭಾಯಿ ಪಟೇಲರು ಅಧಿಪ್ರಾಗದ ಅಧ್ಯಕ್ಷತೆ ವಹಿಸಿದ್ದರು. ಗತವರುಷದ ವರದಿ ಪರಿಶೀಲನೆ ಮುಂತಾದ ವುಗಳಾದ ಮೇಲೆ ಆ ಸಭೆಯೇ ವಿಷಯನಿಯಾಮಕ ಸಮಿತಿಯಾಯಿತು. ಸರ್ದಾರರು ಡಾ. ಪಟ್ಟಾಭಿಗಳನ್ನು ಅಧ್ಯಕ್ಷತೆ ವಹಿಸಲು ಕೇಳಿಕೊಳ್ಳುತ್ತಾ ಅವರ ಸೇವಾಪೂರ್ಣಾಖಿಲಿಗಳ ನೆನಪನ್ನು ಮಾಡಿಕೊಟ್ಟರು. ಡಾ. ಪಟ್ಟಾಭಿಗಳು ಸ್ವಾತಂತ್ರ್ಯ ಹೋರಾಟಗಳಲ್ಲಿ ಬಹಳಾಗಲೂ ಶತ್ರುತಾಡಿಯಲ್ಲಿದ್ದರೆಂದೂ, ಈ ಅಧಿನೇತೃತ್ವವು ಒಂದು ಸಂಸ್ಥೆಯದಲ್ಲಿ ನೇರುತ್ತಿರುವುದಕ್ಕಾಗಿ ತಾನು ಕೃತಜ್ಞನೆಂದೂ ಪಟ್ಟಾಭಿಯವರು ಸಂವಿಧಾನಿಕ ಪ್ರಜೆಗಳ ಹಕ್ಕು ಬಾಧ್ಯತೆಗಳಿಗಾಗಿ ಹೋರಾಡಿದವರೆಂದೂ ಶ್ಲಾಘಿಸಿದರು. ಸಭೋತ್ಸಾಹದ ನಡುವೆ ಡಾ. ಪಟ್ಟಾಭಿ ಅಗ್ರಾಸನಕ್ಕೇರಿ, ಈ ಸ್ಥಾನಕ್ಕೆ ತನ್ನನ್ನಾರಿಸಿದ ಜನತೆಯನ್ನು ಅಭಿನಂದಿಸಿ ತನ್ನ ನುಹತ್ಕಾದ ಕಾರ್ಯನಿರ್ವಹಣದಲ್ಲಿ ಕಾಂಗ್ರೆಸಿಗರು ಸರ್ವ ವಿಧದ ಸಹಕಾರವನ್ನು ಈಯಲಿ ಎಂದು ಬಯಸಿದರು. ನಿವೃತ್ತಾಧ್ಯಕ್ಷ ಬಾಬೂರಾಜೇಂದ್ರ ಪ್ರಸಾದರ ಕಾರ್ಯಗಳನ್ನು ಕೊಂಡಾಡಿದರು. ಆ ಮೇಲೆ ನಿರ್ಣಯಗಳಿಗಾರಂಭ. ಪ್ರಥಮತಃ "ಮಹಾತ್ಮಾ ಗಾಂಧಿಯವರ ಕೊಲೆಗಾಗಿ ಆತ್ಯಗಾಧ ದುಃಖ ಮತ್ತು ಲಜ್ಜೆ" ಪ್ರದರ್ಶನ; ರಾಷ್ಟ್ರದ ಸ್ವಾತಂತ್ರ್ಯ ಹೋರಾಟಗಳಲ್ಲಿ ವ್ಯಾಣಾರ್ಪಣೆ ಮಾಡಿದವರೆಲ್ಲರಿಗೂ ಗೌರವ ವಂದನೆ; ಜಿನ್ನಾ, ನವಾಬ್, ಹೋರ್ಮಿಮೆನರ ನಿಧನಕ್ಕಾಗಿ ಮೂಚನೆಗಳಾದುವು. [ನಂತರ ಕಾರ್ಯವಾಹೀ ನಿರ್ಣಯಗಳಾರಂಭಿಸಿದುವು.

ಕಾಂಗ್ರೆಸ್ ಉದ್ದೇಶಗಳು

ಕಾಂಗ್ರೆಸಿನ ನವೀನ ಗುರಿ ನಿರೂಪಣೆ ಮಾಡುವ 'ಸಂದೇಶ'ವನ್ನು ಕಾರ್ಯದರ್ಶಿ ಶ್ರೀ ಶಂಕರ ರಾವ್‌ದೇವ್‌ರೋ ಮುಂದಿಟ್ಟರು. 'ಕಾಂಗ್ರೆಸು ದೀರ್ಘಾವಧಿಯಿಂದ ಹೋರಾಡಿದ್ದ ಗುರಿಸಿದ್ದಿರೂ ಸ್ವಾತಂತ್ರ್ಯದ ಮಿರುಗು ಗೂಸುವ ಬದರಿಗೆ ದುಃಖ ಮತ್ತು ದುರಂತಗಳೇ ಒದಗಿವೆ. ಗಾಂಧಿಜೀಯ ನಾಯಕತ್ವದಲ್ಲಿ ಅಹಿಂಸೆಯ ಮುಖಾಲಕ ರಾಜಕೀಯ ಸ್ವಾತಂತ್ರ್ಯ ದೊರಕಿಸಿಕೊಂಡ ಮೇಲೆ ಕಾಂಗ್ರೆಸಿಗ ಸಾಮಾಜಿಕ ಮತ್ತು ಆರ್ಥಿಕ ಸ್ವಾತಂತ್ರ್ಯಗಳಿಗಾಗಿ ಹೋರಾಡಬೇಕಾಗಿದೆ. ಇದಕ್ಕೆ ನವೀನ ಹಾಗೂ ಸುಸ್ಪಷ್ಟ ಕಾರ್ಯ ಧೋರಣೆಯೂ, ರಚನಾತ್ಮಕ ರೀತಿಯಿಂದ ಮಾತೃಭೂಮಿಯ ಸೇವೆಗಾಗಿ ಪ್ರತಿಜ್ಞಾಬದ್ಧ ಸೈನ್ಯೆಯಂಬೇಕಾದುದೂ ಅಗತ್ಯ. ಅದ್ದರಿಂದ ಈ ಸಂದೇಶದ ಪ್ರಕಾಶದ ಮೇಲಿಂದ ಸದ್ಯದ ರಾಷ್ಟ್ರೀಯ ಸಂಕಷ್ಟಗಳನ್ನು ಕಾಂಗ್ರೆಸಿಗರು ಇದಿರಿಸಿ ಭಾರತವು ತನ್ನ ಸ್ವಾತಂತ್ರ್ಯರೂಪಸದಲ್ಲೂ ನೈತಿಕವಾಗಿಯೂ ಹುಷ್ಕಿಗೊಳ್ಳುವಂತೆ ಮಾಡಿ ಕಾಂಗ್ರೆಸಿನ ಜನ್ಮ ಧ್ಯೇಯವನ್ನು ಸಾರ್ಥಕಗೊಳಿಸಬೇಕು' ಎಂದು ಆ ಸಂದೇಶವು ಕಾಂಗ್ರೆಸಿಗರಿಗೆ ತಿಳಿಯಿತ್ತಿದ್ದಿತು. ವರ್ಗರಹಿತ ಸಮಾಜ ರಚನೆಯ, ಒಂದು ಸಾಮಾರೀತಿಯ ಆರಂಭವಾಗಿಯಾ ಅಗತ್ಯವುಳ್ಳ ವಾತಾವರಣ ನಿರ್ಮಾಣ ಕ್ಕಾಗಿಯೂ ಗವರ್ನರ್ ಜನರಲರ ಸಂಬಳದಲ್ಲಿ ಕಡಿತವನ್ನು ಮಾಡಬೇಕಲ್ಲದೆ, ಅವರ ಆ ದೊಡ್ಡ ನಿವಾಸವನ್ನು ಮಹಿಳೆಯರು ಮತ್ತು ಮಕ್ಕಳ ನಿರಂತ್ರಿತ ನಿಲಯವಾಗಿ ಮಾರ್ಪಡಿಸಬೇಕು' ಎಂಬ ತಿದ್ದುಪಡಿ ಸೂಚನೆಯೊಂದಿಗೆ ಡಾ| ಜೈತ್ ರಾಮ್ ಗಿದ್ವಾನಿಗಳು ತಂದಾಗ, ಅರ್ಧಚಂದ್ರ ಪ್ರಯೋಗದ ಪ್ರಥಮ ಸಂದರ್ಭವು ಅಧ್ಯಕ್ಷ ಪಟ್ಟಾಭಿಗಳಿಗೆ ದೊರಕಿತು. ಅನಂತರದನ್ನು ನಿಯಮಬಾಹ್ಯಗೊಳಿಸಿ, ಆ ಉದಾತ್ತ ಪಂಡಿತ ನೆಹರುಗಳು ಮಾತಾಡಲಿದ್ದಾರೆ ಎಂದರು. ವ್ಯಾಪಕ ಮತ್ತು ಧಾರ್ಮಿಕ ದುಃಖನಾನ ನಿರ್ಗಮಿಸಿ

For Banking Service
in Trade, Industry & Agriculture
approach
THE AGRICULTURAL & INDUSTRIAL BANK Ltd,
(Established in 1934)
Head Office: **COONDAPOOR, S. K.**

Branches:

1	Ankola,	7	Gokarn,	13	Nagar,
2	Belgaum,	8	Haveri,	14	Shimoga,
3	Bhatka,	9	Hubli,	15	Sirsi,
4	Koondapoor,	10	Karvar,	16	Somwarpet,
5	Dharwar,	11	Kumta,	17	Virajpet,
6	Gadag,	12	Mangelore,	18	Honavar.

19 384, M. Jaipuria House, Kalbadevi Road, BOMBAY. 2.

Current, Savings bank, and Fixed deposits are accepted.

For Terms apply to the nearest Branch.

Coondapoor, 29-9-1948.

K. Vittaldas Shenai, Managing Director.

ಲಿವರ್ ಮತ್ತು ಸ್ಪ್ಲೀನ್
ದೊಡ್ಡದಾಗಿ ನರಳುವಿಕೆಕ್ಕೆ?
"ಸ್ಪೆನೊ ಲಿವರ್ ಕ್ಯೂರ್"
ಉಪಯೋಗಿಸಿರಿ. ಮಂತ್ರವಿಯಾ ಲಾಭ ಹೊಂದಿ ವಿಮಾಬಲಗಲು ಅತ್ಯುತ್ತಮ ಔಷಧಾಲಯಗಳಲ್ಲಿ ಮತ್ತು ಎಳೆ ಮಕ್ಕಳ ಲಿವರ್ ರೋಗಗಳಿಗೆ ವಿಶೇಷ ಗುಣಕಾರಿ.
ದಿ ಸುಧಾ ಫಾರ್ಮಸ್ಯೂಟಿಕಲ್ ವರ್ಕ್ಸ್
ಸುಧಾನಗರ ಸಂಸ್ಥಾನದ ನಿವೇದನ
ಅಧಿಕಾರಿಗಳು...

ಮೈಸೂರ್ ಯುನೈಟೆಡ್ ಇಂಡಿಯಾ ಬ್ಯೂಸಿನೆಸ್ ಬ್ಯೂರೋ,
ಕೋಯಿಲ್ ಮಹಾಲ್, ಬೆಂಗಳೂರು
(ಪೆನ್ಷನ್ ಭಾರತ)

ಜೈಪುರದ ಅಧಿವೇಶನದಲ್ಲಿ
ಇವರ ಮೂರು ಠಾಸನನವಾಯಿತು.

ಬೇಕು ಎಂದು ವಿಮರ್ಶಿಸಿದ್ದಾರೆ. ಸಮಾಜವಾದಿ ರಿಪಬ್ಲಿಕ್ ಸ್ಥಾಪನೆಯಾಗಬೇಕೆಂದು ಅನ್ಸಾರ್ ಹರ್ವಾನಿ-ಭಿನ್ನಭೇದ ಬಿಟ್ಟು ಗಾಂಧೀ ಅನುಯಾಯಿಗಳಾಗಬೇಕೆಂದು ಬಾಬು ಭಾಯಿ ಪಟೇಲ್-ನಿಮ್ಮಿಂದ ಬೇರ್ಪಟ್ಟ ಖಾನ್ ಸಹೋದರರು ಮತ್ತು ಪೂರ್ವ ಬಂಗಾಳದ ಕ್ರಾಂತಿಕಾರರಂಥವರು ಉಳ್ಳೀ ಖವಿಬೇಕೆಂದು ಅಬ್ದುಲ್ ಘನಿ ಮತ್ತು ಮಾತಂ ಶ್ರೀಪ್ರಕಾಶ್, ಓಂ ಪ್ರಕಾಶ್, ಕನ್ವಾಲ್ ಮೊದಲಾದವರ ಉಪಸೂಚನೆಗಳೂ ಬಾಷಣಗಳೂ ಲಭ್ಯವು. ಆ ಮೇಲೆ ಪಂಡಿತ ನೆಹರುಗಳ ಅನೋಘ ಭಾಷಣವಾಯಿತು. ಮುಂದಿನ ಅಧ್ಯಕ್ಷರ ಸಂಬಳವಾಗಿ ನಿರ್ಣಯವಾದ, ಆದಾಯ ತೆರಿಗೆ ರಹಿತ ರೂ. 5,500ನ್ನು ಗವರ್ನರ್ ಜನರಲರ ಸಂಬಳವಾಗಿ ಹಿಂದಿನ ದಿನವೇ ಮಂತ್ರಿಮಂಡಲ ನಿರ್ಧರಿಸಿರುವುದನ್ನು ತಿಳಿಸಿ, ಈಸಂಬಂಧದ ಟೀಕೆಗಳನ್ನೂ ರಾಜಾಜಿಯ ಸರಳ ಜೀವನ ಮತ್ತು ಗವರ್ನರ್ ಜನರಲ್ ಬಂಗಲೆಯ ಉಪಯೋಗ ವಿಧಾನವನ್ನೂ ನೆಹರೂ ವಿವರಿಸಿದರು. ಅನ್ಯ ರಾಷ್ಟ್ರ ಪಾಕಿಸ್ತಾನದೊಳಗಿರುವ ಗಡಿನಾಡಿನ ಅಬ್ದುಲ್ ಗಫರ್‌ಖಾನ್ ಮತ್ತಿತರ ದೇಶಭಕ್ತರ ಬಂಧನದ ಕುರಿತು ತಮಗೆ ಪ್ರೇಕ್ಷಾ ತ್ರಾಧಿಕಾರವಿಲ್ಲವಾದರೂ ಅವರನ್ನು ಕಾಂಗ್ರೆಸ್ ಎಂದೂ ಮರೆಯಲಾರದೆಂದರು. ಆರ್. ಯಸ್. ಯಸ್. ನಂತಹ ಜಾತೀಯತಾವಾದಿಗಳನ್ನು ದೃಷ್ಟಿಸಧದಲ್ಲಿಟ್ಟು ಕೊಂಡು 'ಭಾರತವು ನಿಜವಾದ ಅರ್ಥದಲ್ಲಿ ಒಳಗಡೆಯಿಂದ ಹೊರತ' ಹೊರಗಿನ ದಲ್ಲ ನನಗೆ ಪಾಕಿಸ್ತಾನದ ಭಯವಿಲ್ಲ. ಭಾರತವನ್ನು ಗತಕಾಲಗಳಲ್ಲಿ ಪತನಗೊಳಿಸಿದ್ದ ಸಂಕುಚಿತ ಬುದ್ಧಿಯೇ ಇಂದಿನ ತರುಣರಲ್ಲಿ ಕಬ್ಬಿಲುನದಕ್ಕಾಗಿ ಅಳುತ್ತೇನೆ' ಎಂದರು. ಆ ಮೇಲೆ ಸರ್ದಾರ್ ಪಟೇಲರು ಆರ್. ಯಸ್. ಯಸ್. ಗೊಂದಲಗಳನ್ನು ತೀಕ್ಷ್ಣವಾಗಿ ಖಂಡಿಸಿ ಅವರ ನಾಯಕನೊಡನೆ ತಾನು ನಡೆಸಿದ್ದ ಸಂಭಾಷಣೆಯ ಕುರಿತು ತಿಳಿಸಿ, ಭಾರತವು ಲೌಕಿಕವಾದೀ ರಾಷ್ಟ್ರವೆಂದೂ ಹೇಳಿ ಸಭಾ ಜಯಕಾರ ಪಡೆದರಲ್ಲದೆ, ಅಲ್ಪಬುದ್ಧಿಯ ಟೀಕೆಗಳನ್ನು ನಿಷೇಧಿಸಿದರು. ಉಸ ಸೂಚನೆಗಳಲ್ಲವೂ ಹಿಂದೆಗೆಯಲ್ಪಟ್ಟು ಮೂಲ ಸೂಚನೆ ಸರ್ವಾನುಮತದಿಂದ ಮಂಜೂರಾಯಿತು.

ಭಾರತದ ವಿದೇಶಧೋರಣೆ

'ಗತ ವರುಷಗಳಲ್ಲಿ ಕಾಂಗ್ರೆಸ್ ಅನುಕರಿಸಿಕೊಂಡು ಬಂದಿದ್ದ ತತ್ವಗಳನ್ನಾಧರಿಸಿಯೇ ಭಾರತದ ವಿದೇಶ ಸಂಬಂಧ ಧೋರಣೆಯಿರಬೇಕು. ಸಂಯುಕ್ತ ರಾಷ್ಟ್ರಸಂಘದ ಘೋಷಣಾಪತ್ರಿಕೆಯ ತತ್ವಗಳಿಗೆ ಕಾಂಗ್ರೆಸು ಪೂರ್ಣ ಕಟ್ಟುಬೀಳಬೇಕು' ಎಂಬ ಎರಡನೇ ನಿರ್ಣಯವನ್ನು ಶ್ರೀ ಶಂಕರ ರಾವ್ ದೇವೋ ತಂದು ಮತ್ತೋರ್ವ ಕಾರ್ಯದರ್ಶಿ ಶ್ರೀ ಜುಗಲು ಕಿಶೋರರು ಅನುಮೋದಿಸಿದರು. ಸಮಾನ ರಾಷ್ಟ್ರಗಳೊಡನೆ ಮಾತ್ರ ಸಹಕರಿಸಬೇಕು-- ಮೂರನೇ ಯುದ್ಧದಲ್ಲಿ ಭಾರತವು ತಟಸ್ಥ ವಹಿಸಬೇಕು-- ಸಂಯುಕ್ತ ರಾಷ್ಟ್ರಸಂಘದಲ್ಲಿರುವ ಇತ್ಯಂಡಗಳ ಖಂಡನೆ ಮತ್ತು ತಟಸ್ಥ- ವಹಿಸುವ ಸಂಬಂಧದ ಆಂಶವನ್ನು ತೊಡೆದು ಹಾಕಬೇಕು-- ಇತ್ಯಾದಿ ಉಪಸೂಚನೆಗಳೂ, ವಿರೋಧಗಳೂ, ವಿವಿಧಾಭಿಪ್ರಾಯಗಳೂ ಜಗನ್ನಾಥ ರಾವ್, ಮಹೇಶದತ್, ವಿಶ್ರ, ಮೋಹನ್ ಸಿಂಗ್, ಅಲ್ಲೂರಿ ಶಾಸ್ತ್ರಿ, ಮಹಾದೇವ್ ಶಾಸ್ತ್ರಿ, ಖನ್ನಾ, ಜಂಜಾರಿಯಾ, ವಿಶ್ವನಾಥನ್, ಫೆನೆರಿಯಾ, ಶಿನಿ ನ್‌ಲಾಲ್. ಸಕ್ಸೇನಾ, ನಾತುಲಾಲ್ ಜೈನ್ ಸೇಠ್ ಗೋವಿಂದ ದಾಸ್ ಮೊದಲಾದವರಿಂದ ಬಂದುವು. ಪಂಡಿತ ಪಂತರು ಮೂಲ ಸೂಚನೆಯನ್ನು ಸಮರ್ಥಿಸಿದರು. ಪಂಡಿತ ನೆಹರುಗಳು ಅನೋಘ ಭಾಷಣವಿತ್ತು, ಭಾರತವು ಸರ್ವ ರೀತಿಯಿಂದಲೂ ಪೂರ್ಣ ಸ್ವತಂತ್ರವಿರಬೇಕೆಂದೂ ಅವರೀಕಾಲದಲ್ಲಿ ಸಂಬಂಧರಹಿತ ವಿಕಾಂತವಾಸ ಅಪಾಯಕರವೆಂದೂ ಮಂದಟ್ಟುಪಡಿಸಿ, ಭಾವೀ ಯುದ್ಧದಲ್ಲಲ್ಲದೆ ಭಾಗವಹಿಸದೆಂದು ವಿಶ್ವಾಸನೆಯಿತ್ತು ಚಾರಿತ್ರಿಕರಂಗದಲ್ಲಿ ಸರ್ವ ಸ್ವತಂತ್ರ ಮತ್ತು ಪೂರ್ಣ ನ್ಯಾಯ ಪ್ರಜ್ಞಾವತಿ ಭಾರತದ ಅಮೂಲ್ಯ ಸ್ಥಾನದ ಚಿತ್ರ ಬಿಡಿಸಿ ತೋರಿಸಿದರು. ಪ್ರಚಂಡ ಬಹುಮತದಿಂದ ಮೂಲ ಸೂಚನೆ ಮಂಜೂರಾಯಿತು. ಆಂತೂ ನೆಹರು ವಲ್ಲಭಾಯಿ, ಮತ್ತವರ ಮಂತ್ರಿಮಂಡಲದ ಮೇಲೆ ಪೂರ್ಣ ವಿಶ್ವಾಸ ಹಾಗೂ ಅವರ ಮಾತುಕತೆಗಳಿಗೆ ಸಂಪೂರ್ಣ ಸಮ್ಮತಿಯನ್ನು ಕಾಂಗ್ರೆಸ್ ಸಮಿತಿ ಪ್ರದರ್ಶಿಸಿತು.

ಭಾರತದ ರಾಜಧಾನಿಯನ್ನು ಢಿಲ್ಲಿಯಿಂದ ಬೇರೆ ಯೋಗ್ಯ ಸ್ಥಳಕ್ಕೊಯ್ಯುವ ತನ್ನ ಸ್ವಂತ ಯೋಜನೆಯನ್ನು ಸರ್ದಾರ್ ಪರೇಲರು ಮುಂದಿಟ್ಟರು ಆದರೆ ಯಾವ ಗವರ್ನ್‌ಮೆಂಟ್ ಎಲ್ಲಿಗೆ ಎಂಬುದನ್ನೀಗ ಹೇಳಲು ಸಾಧ್ಯವಿಲ್ಲವೆಂದರು.

ಇತರ ನಿರ್ಣಯಗಳು

ತರ 17ರ ವಿಷಯನಿಯಾಮಕ ಸಮಿತಿ ಸಭೆಯಲ್ಲಿ ಎಂಟು ರೆಸಲ್ಯೂಷನ್‌ಗಳು ಪಾಸಾದುವು. ಅಕ್ರಿತ ರಾಜ್ಯಗಳ ಸಂಬಂಧದ ಕಾಂಗ್ರೆಸ್ ಮೂಲ ರೆಸಲ್ಯೂಷನಿಗೆ ಸಂಸ್ಥಾನಗಳನ್ನೇ ಬರ್ಖಾಸ್ತುಗೊಳಿಸಬೇಕು-- ಕೂಡಲೇ ಜನತಾ ರಾಜ್ಯ ಭಾರವನ್ನು ಅವುಗಳಲ್ಲಿ ಸ್ಥಾಪಿಸಬೇಕು-- ಮುಂತಾದ ಹಲವು ಉಪ ಸೂಚನೆಗಳು ಬಂದಿದ್ದರೂ ಸರ್ದಾರ್ ಪರೇಲರು ಸಂಸ್ಥಾನಗಳನ್ನು ಹಾದಿಗೆ ತಂದ ವಿಧಾನವನ್ನು ಮಾರ್ಮಿಕವಾಗಿ ಹಾಗೂ ನುಂದಟ್ಟಾಗುವಂತೆ ಚಿತ್ರಿಸಿ, ಅವಸರದ ಕಾರ್ಯದಿಂದ ಅಪಾಯವಿರುವುದನ್ನು ವರ್ಣಿಸಿ ಸರ್ವ ಶಕ್ತಿಶಾಲಿಯನ್ನೇ ಯ ಭಾಷಣವಿತ್ತ ಮೇಲೆ ಎಲ್ಲಾ ಉಪ ಸೂಚನೆಗಳೂ ಹಿಂತೆಗೆಯಲ್ಪಟ್ಟು ಮೂಲ ಠರಾವು ಪಾಸಾಯಿತು.

ಜೈಪುರ ಕಾಂಗ್ರೆಸಿನ ನಿರ್ಧಾರಾಂದೋಲನ.

'ದೇಶ ವಿಭಜನೆಯಿಂದ ಹಾನಿಗೊಳಗಾದವರ' ಸಂಬಂಧದ ನಿರ್ಣಯದ ಕುರಿತು ಮಾತಾಡುತ್ತಾ, ಸರ್ದಾರ್ ಪರೇಲರು ಪೂರ್ವ ಬಂಗಾಳದಿಂದ ಓಡಿ ಬರುತ್ತಿರುವ ಹಿಂದುಗಳ ಕುರಿತು ಸ್ಪಷ್ಟ ಮಾತಾಡಿ, "ನಾವು ಸೂಚಿಸಿದ್ದಕ್ಕಿಂತ ಭಿನ್ನ ಯೋಜನೆ ಯಾವುದಾದರೂ ನಾಕಿಸ್ತಾನ ದ್ದಿದ್ದರೆ ಅದು ಕೂಡಲೇ ತಿಳಿಸಬೇಕು. ಈ ಸಮಸ್ಯೆಯನ್ನು ಬಿಡಿಸುವ ಕೆಲಸ ನಾಕಿಸ್ತಾನದ್ದು; ಉದಸ್ಸನ್ನು ಮಾಡಿದ ಹೊಂದರೆ ಭಾರತವು ಕೈಕಟ್ಟಿ ಕುಳಿತುಕೊಳ್ಳುವಂತಿಲ್ಲ" ಎಂದು ಎಚ್ಚರಿಸಿದರು. ನಿರಾಶ್ರಿತರ ಕುರಿತು ಸರಕಾರವು ಸಾಕಷ್ಟು ವ್ಯವಸ್ಥೆ ಮಾಡುತ್ತಿಲ್ಲವೆಂಬ ಡಾ! ಜೈಕರ್ ರಾವ್ ಗಿಡ್ವಾನಿಯವರ ಮತ್ತು ನಿರಾಶ್ರಿತ ಮುಸ್ಲಿಮರಿಗೆನ್ನೂ ಆಶ್ರಯ ದೊರೆಯದಿರುವಾಗ ಭಾರತವು 'ಲೌಕಿಕರಾಧಾರಿತ ರಾಷ್ಟ್ರ' ವನ್ನೆಸುವದು ಹೇಗೆ, ಎಂಬ ಅಬ್ದುಲ್ ಘನಿಯವರ ವಿರೋಧಗಳಿಂದ ಉರಿದು ಬಿದ್ದ ಸರ್ದಾರರು ಇಬ್ಬರಿಗೂ ಖಂಡತುಂಡ ಮಾತುಗಳಿಂದ ಸಮರ್ಪಕ ಉತ್ತರ ಕೊಟ್ಟರು ಮೂಲ ಸೂಚನೆ ಮಂಜೂರಾಯಿತು.

ಭಾರತದ ಆರ್ಥಿಕ ಬಿಕ್ಕಟ್ಟನ್ನು ಬಿಡಿಸುವ-ಕೂಲಿಗಾರರಿಗೆ ಕರೆಯೀಯುವ-ಅಧಿಕೋತ್ಪತ್ತಿಗಾಗಿ ಕೇಳಿಕೊಳ್ಳುವ-ಮುಂತಾದ ನಿರ್ಣಯಗಳೂ ಆದುವು.

ಭಾಷಾವಾರು ಪ್ರಾಂತ್ಯದ ಪ್ರಶ್ನೆ

ಕನ್ನಡಿಗರೇ ನೊದಲಾದ ದಕ್ಷಿಣಭಾರತೀಯರ ಪಾಲಿನ ದೀರ್ಘಾವಧಿಯ ಅತಿ ರದ ಪ್ರಶ್ನೆಯಾದ ಭಾಷಾನ್ವಯ ಪ್ರಾಂತ್ಯಗಳ ರಚನೆ ಮತ್ತಾ ಸಂಬಂಧದ ಠರಾವು ಸಮಿತಿಯ ಪರದಿಯ ಸಂಬಂಧದ ಸೂಚನೆಯು ತಾ 18ರ ಕಾಂಗ್ರೆಸ್ ವಿಷಯನಿಯಾಮಕ ಸಮಿತಿಸಭೆಯ ಮುಂದೆ ಬಂತು 'ಕಾಂಗ್ರೆಸು ಈ ಮೊದಲು ಮಾಡಿರುವ ನಿರ್ಧಾರ ಮತ್ತು ಪ್ರಚಲಿತ ಸ್ಥಿತಿಯ ಮೇಲಿಂದ ಭಾಷಾವಾರು ಪ್ರಾಂತ್ಯ ರಚನೆಯ ಪ್ರಶ್ನೆಯನ್ನು ಪರೀಕ್ಷಿಸಿ ಮೂರು ತಿಂಗಳುಗಳೊಳಗೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿಗೆ ವರದಿಯನ್ನೊಪ್ಪಿಸುವಂತೆ ಆಧ್ಯಕ್ಷರು ಸಮಿತಿಯನ್ನು ಪಟ್ಟಾಭಿ ಸೀತಾರಾಮಯ್ಯ, ಪಂಡಿತ ಜವಾಹರಲಾಲ ನೆಹರು, ಸರ್ದಾರ್ ವಲ್ಲಭಾಯಿ ಪಟೇಲ್-ಈ ಮೂವರ ಒಂದು ಉಪ ಸಮಿತಿಯನ್ನು ನೇಮಿಸುತ್ತದೆ" ಎಂಬ ನಿರ್ಣಯವನ್ನು ಪಂಡಿತ ಗೋವಿಂದ ವಲ್ಲಭ ಪಂತರು ಮುಂತಂದು ಯಾವ ಚರ್ಚೆಯೂ ಇಲ್ಲದೆ ಸರ್ವಾನುಮತದಿಂದ ಮಂಜೂರಾಯಿತು 'ದಾರ್ ಸಮಿತಿಯ ವರದಿಯ ಮೇರ್ಮಾಸಗಳಲ್ಲಿ ಸಮೂಹವಿಸಲ್ಪಟ್ಟಿರುವ ಸ್ವತಂತ್ರ್ಯಜನ್ಯ ಸಮಸ್ಯೆಗಳನ್ನು ಕಾಂಗ್ರೆಸು ದೀರ್ಘವಧಿಯಿಂದ ಒಪ್ಪಿಕೊಂಡು ಬಂದಿರುವ ಹಾಗೂ ಸಂಬಂಧಪಟ್ಟ ಭಾಗಗಳವರ ಮನಸ್ಸಿನಲ್ಲಿ ಸಾಕಷ್ಟು ಸಮಯದಿಂದ ಬಲವಾಗಿ ಬೇರು ಬಿಟ್ಟಿರುವ ಭಾಷಾನ್ವಯ ಪ್ರಾಂತ್ಯ ರಚನೆಯ ಅನಿರ್ಯತೆಗಳೊಡನೆ ತೂಗಿ ನೋಡಿ ಅಭಿಪ್ರಾಯ ಕೊಡುವವಕ್ಕಾಗಿಯೇ ಈ ಸಮಿತಿ ರಚನೆಗೊಂಡಿದೆ ಅದಕ್ಕೆ ದೊರೆತಿರುವ ಮೂರು ಮಾಸಗಳ ಅವಧಿಯ ಮೊದಲೇ ದಾರ್ ಸಮಿತಿಯ ವಂದಿ ಘಟನಾ ಸಮಿತಿಯಲ್ಲಿ ಪರ್ಯಾಲೋಚನೆಗೆ ಬಾರದೇ! ವ್ಯಾಪಕ ಪನರ್ರಚನೆಗೆ ವಿರೋಧ ಪ್ರದರ್ಶಿಸಿರುವ ಉಳಿದಿಬ್ಬರು ಸದಸ್ಯರಿಂದ ನೆಹರು, ವಲ್ಲಭಾಯಿಗಳಿಗೂ ವ್ಯಾಪಕ ರಚನಾ ಚಳವಳಿಗಾರ ಡಾ! ಪಟ್ಟಾಭಿಗಳಿಗೂ ಅಭಿಪ್ರಾಯ ಭಿನ್ನತೆ ಬರಲಾರದೆ! ಎಂಬ ಪ್ರಶ್ನೆಗೆ ಳೇಳುತ್ತವಾದರೂ ಎಲ್ಲವೂ ಸಖ್ಯತೆಗೊಳ್ಳಬಹುದೆಂಬ ಆಶೆಗೆಡೆಯಿದೆ.

ಕಾಂಗ್ರೆಸಿಗರ ನಡತೇ ನಿಯಮ

ವಿಷಯನಿಯಾಮಕ ಸಮಿತಿಯಲ್ಲಿ ಒಂದು ರೀತಿಯ ಭಾವೋದ್ವೇಗವನ್ನು ಎಬ್ಬಿಸಿದ ನಿರ್ಣಯವೆಂದರೆ 'ಕಾಂಗ್ರೆಸಿಗರ ನಡತಾ ನಿಯಮ.' ಕಾಂಗ್ರೆಸಿಗರಲ್ಲರಬೇ

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ
ಜಿಲ್ಲೆಯ ಕ್ಯಾನುಮ್ಖ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ನವಿಕೇರಿಯಲ್ಲಿಯೂ ನಮ್ಮ ಕಾಖೆಗಳಿವೆ.
೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಸಕ್ವ ಅನುಭವದ ಯೋಗ್ಯತೆಯಿದೆ.
ನಿರಮು ತೇವಹಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.
ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.
ದಿ ವಿಜಯ ಬೇಂಕ್ ಲಿಮಿಟೆಡ್
ಹೆ. ಆ. ಮಂಗಳೂರು.
THE VIJAYA BANK LTD.,
H. O. MANGALORE, S. K.

ಕಾದ 'ಸಾರ್ವಜನಿಕ ವರ್ತನೆಯ ಮಟ್ಟ' ವನ್ನು ನಿರೂಪಿಸುವ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ತಯಾರಿಸಿದ್ದ ನಿರ್ಣಯವನ್ನು ಶ್ರೀ.ಶಂಕರರಾವ್‌ದೇವ್‌ರೋ ವಿಷಯ-ನಿಯಾಮಕ ಸಮಿತಿಯ ಮುಂದಿಟ್ಟರು. ಈ ಕುರಿತು ರೋಹಿಣೀ ಕರ್ವಾರ್ ಚೌಧ್ರಾ, ಮಹೇಶದತ್ತ ಮಿಶ್ರ, ಭನ್ಸಿಲಾಲ್, ಸುಬ್ಬರಾವ್, ಜ್ವಾಲಾಪ್ರಸಾದ್, ಬಿ. ಯನ್. ಶರ್ಮ, ರಾಮೇಶ್ವರ ಪ್ರಸಾದ್, ಅಬ್ದುಲ್ ಘೌನಿ ಮೊದಲಾದವರ ತಿದ್ದುಪಡಿ ಸೂಚನೆಗಳಿದ್ದುವು; 'ಕಾಂಗ್ರೆಸಿಗರು ಅಧಿಕಾರ ಲಾಲಸೆಯಿಂದ ಸರಕಾರದ ಧೋರಣದಿಂದ ಕಾರ್ಯಕರ್ತರ ಪಗಳಲ್ಲೂ ಕೈಹಾಕುವ ಅಧಿಕಪ್ರಸಂಗ ನಡೆಸಿದ್ದಾರೆ'—'ಕಾಂಗ್ರೆಸ್ ಸರಕಾರಿಗಳು ಕಾಂಗ್ರೆಸ್ ಸಮಿತಿಗಳನ್ನು ಅಲಕ್ಷ್ಯಿಸಿ ಸ್ವೇಚ್ಛೆಯಿಂದ ವರ್ತಿಸುತ್ತಿವೆ'—'ಸ್ವಾತಂತ್ರ್ಯ ಹೋರಾಟಗಳಲ್ಲಿ ಕಷ್ಟನಷ್ಟ ವನುಭವಿಸಿದ ಕಾಂಗ್ರೆಸಿಗರೆಲ್ಲರೂ ಈಗ ಹೇಳಿ-ನಿಂದೆ ಅಪವಾದಗಳಿಗೆ ಗುರಿಯಾಗಿ ತ್ತೇವೆ. ಅದು ರದ್ದಾಗಬಿದ್ದರೆ ನಾವು ಅಧಿಕಾರಕ್ಕೆ ಬಂದ ಕೂಡಲೇ ಅದನ್ನು ರದ್ದು ಪಡಿಸಿಕೊಳ್ಳಲು ಹಲವು ಸದಸ್ಯರು, ಈ 18ನೇ ವಂಜಾನೆ ೭ರೆಯಲ್ಪಟ್ಟ ವಿಶೇಷ ಸಭೆಯಲ್ಲಿ ಆಕ್ಷೇಪಿಸಿದರು. ಆದರೆ ನೆಹರು ಪಲ್ಲಭಾಯಿಗಳು ತಮ್ಮ ನಿರ್ಧಾರದಿಂದ ಅಂಗುಲ ಮಾತ್ರ ಕದಲಲಿಕ್ಕೂ ಒಪ್ಪಲಿಲ್ಲ. ಮೊದಲ ದಿನದ ನಿರ್ಣಯವನ್ನು ಪುನರಾಲೋಚನೆಗೆತ್ತಿಕೊಳ್ಳಬೇಕೆಂದೂ, ಆ ಮೇಲೆ ತಿದ್ದುಪಡಿ ಭಾಗವನ್ನು ರದ್ದುಮಾಡಬೇಕೆಂದೂ ಪಂಡಿತ ನೆಹರುಗಳು ಅನಿಶ್ಚಯಮವಾಗಿ ಸೂಚನೆ ತಂದು ಕೈಗೊಳ್ಳಬೇಕೆಂದೂ ಕೋರಿದಾಗಲೇಗಲಿಂದ ಕೆಲವರು ನುತಗಳನ್ನಾಡಿದ್ದರು; ಸರ್ದಾರ್ ಪಟೇಲರೂ ತೀಕ್ಷ್ಣ ನಾಗ್ಬಾಣಗಳನ್ನ ಹೊಡೆದಿದ್ದರು, ಪಂಡಿತ ಪಂತರು ನೆಹರೂ ಪಲ್ಲಭಾಯಿಗಳ ಮನಸ್ಸನ್ನು ಕೆಡಿಸದೆ ರಕ್ಷಿಸಿಕೊಳ್ಳಲೆಂದು ಸಭೆಯನ್ನು ಅಗ್ರಹಿಸಿದ್ದರು. ಹಿಂದಿನ ದಿನ ಮೂಡಿದ್ದ ವಿಘ್ನಾರವನ್ನು ಮಾರನೆಯದಿನವೇ ಪುನರಾಲೋಚಿಸುವ ಕರೆತು ಸಭೆಯ ಕಲವರಲ್ಲಿ ತೀವ್ರ ಅತೃಪ್ತಿ ಕಂಡುಬಂತಲ್ಲದೆ ಅದು ಮತಕ್ಕೆ ಬಿದ್ದಾಗ 116 ಅನುಕೂಲ, 76 ಪ್ರತಿಕೂಲ ಮತಗಳು ದೊರೆತವು. ನಡುನಡುವೆ ಸವಾಲುಗಳು, ಗೊಣಗಾಟಗಳು ಕೇಳಬಂದುವು. ಮುಂಚಿನ ದಿನ ನಡೆದ ಟೀಕಗಳ ಕುರಿತು ಪಂಡಿತ ನೆಹರುಗಳು 'ಒಂದಪ್ಪ ಬುದ್ಧಿಗಟ್ಟಿ ಮಾತುಗಳು' ಎಂದು ಹೇಳಿದೊಡನೆ ಸಭೆಯಲ್ಲಿ "ಆ ಮಾತು ಹಿಂದೆಗೆಯಿರಿ" ಎಂಬ ಕೆಲವರ ಆಕ್ರೋಶದ ಕೂಗಿದ್ದಿತು. ನೆಹರು, ಪಲ್ಲಭಾಯಿಗಳ ಕಟ್ಟುಗ್ರ ಫಲವನ್ನು ಕಂಡು ಸಭೆಯು "ಕಾಲಸನ ಸಭೆಗಳಲ್ಲಿರತಕ್ಕ ಸ್ವಾತಂತ್ರ್ಯ ವಿಶೇಷತಃ ಮಂತ್ರಿಮಂಡಲಗಳಲ್ಲಿರುವ...." ಎಂಬ ಭಾಗವನ್ನು ಉಚ್ಚಿ ತೆಗೆಯಬೇಕೆಂದೂ ನಾಯಕದ್ವಯರು ಅಂತಹ ಹೊಸ ಹಿಡಿಯಬಾರದೆಂದೂ ಹಲವರು ತಮ್ಮ ಜೇನರ ಸೂಚಿಸಿದ್ದಾರೆ

ಜಾಹೀರು ಅಧಿವೇಶನ

ಸ್ವತಂತ್ರ ಭಾರತದ ಪ್ರಥಮ ಕಾಂಗ್ರೆಸ್ ಮಹಾಧಿವೇಶನವೆಂದು-೨೦ನೇ ರಾಷ್ಟ್ರ ಸಭೆಯು-ಜೈಪುರದ ಗಾಂಧಿ ನಗರದಲ್ಲಿ ಜ. 19ನೇ ಆಪರಾಹ್ನ ೩-೪೫ಕ್ಕೆ ಆರಂಭಿಸಿತು. ಅದರ ಪ್ರಚಂಡತೆ, ವೈಭವ, ಗಾಂಭೀರ್ಯ ಮತ್ತು ಅಕರ್ಷಣ ವರ್ಣನಾತೀತವೆನ್ನ. ಗಾಂಧೀ ನಗರದ ೨ ಮಹಾದ್ವಾರಗಳಿಂದಲೂ ಜಂಜ ಮುಂಜಾನೆಯಿಂದ ಪಂಚನುಬೀ ಪ್ರವಾಹವಾಗಿ ಜನತೆಂಡ ಸಭಾಂಗಣದೊಳಗೆ ನುಗ್ಗುತ್ತಿತ್ತು. ಅಧಿವೇಶನಾರಂಭಿಸುವಾಗ 2 ಲಕ್ಷಕ್ಕೂ ಮಿಕ್ಕಿದ ಜನರನ್ನು ಟಂಬಿತೊಂಡ ಗಾಂಧೀ ನಗರವು ಜನ ಕಿಂಧಿಯಾಗಿ ಕಾಣುತ್ತಿತ್ತು. ಒಳಗೆ ಸ್ವಯಂಸೇವಕಲಂಗದ ಸಹಸ್ರಾರು ಹಳ್ಳಿಜನರು ಜನ. ಸಾಮಾನ್ಯತಾರ ಧರಿಸಿ, ಮುಂಭಾಗದಲ್ಲಿ ತಲೆಯೆತ್ತಿ ನಿಂತಿದ್ದ ಮೋತಿ ದೋಂಗ್ರಿ ಗುಡ್ಡಗಳನ್ನೇರಿ ಅಧ್ಯಕ್ಷ ಸೀತಾರಮ್ಮ ಮೊ ಗಾಂಧಿ ಕುಳಿತು ಎತ್ತರದಿಂದ ಆ ಸಭೆಯ ಕಡೆಗೆ ಗೃಧ್ರನೋಟ ಬೀರುತ್ತಿದ್ದರು. ಸುತ್ತಲೂ ರಮಣೀಯ ಗುಡ್ಡ ತಪ್ಪಲುಗಳ ರಾಜಿಸುತ್ತಿದ್ದು ಮೇಲ್ಗಡೆ ನೀಲಾಕಾಶವನ್ನೇ ಛಪ್ಪರವಾಗಿ ಅರಳಿಸಿದಂತಿದ್ದ ಗಾಂಧೀ ನಗರದ ಅಂಗಣದಲ್ಲಿ ಬಗೆಬಗೆಯ, ಬಣ್ಣ ಬಣ್ಣದ ಪೋಷಾಕುಗಳ, ಸ್ತ್ರೀಪುರುಷ ಸಮುದಾಯವು ರಂಜಿಸುತ್ತಿತ್ತು. ಒಟ್ಟಿ ವಿಶೇಷಾಕರ್ಷಣೀಯವಾಗಿ ತೋರುತ್ತಿದ್ದುದೆಂದರೆ, ರಜಪೂತಾನ ಸಂಸ್ಥಾನಗಳ ಕಳ್ಳಿಜನತೆಯ ಗಣ್ಯಭಾಗವಾದ ಭಿಲ್ಲರು ಸಹಸ್ರ ಸಂಖ್ಯೆಯಲ್ಲಿ ವಿವಿಧ ವರ್ಣಗಳ ತಮ್ಮ ಪೋಷಾಕಿನಿಂದ ಮಂದಿಸಿದ್ದದು. ಹಸುರು ಮತ್ತು



ಜೈಪುರ ಅಧಿವೇಶನವು ಇವರು ಜುಳ್ಳಾಣಿ ಹಾತಿದತ್ತ ಹೋಯಿತು.

ಕೇಸರೀ ಬಣ್ಣದ ಪೇಠಗಳನ್ನುಟ್ಟು ಸಮಶೀತೋಷ್ಣ ಸ್ವಪರ್ಶಸುಖ್ಯಿದ್ದ ದೇಶ ಸೇವಕಿಯೆಯರ ದಕಳಿ ಆ ಸಭಾಸ್ಥಳವ ಸ್ವಯಂತೆಯೇ ಸಭಾಶೃಂಗಾರನನ್ನೂ ನೂಡಿದ್ದಿತು. ದೊಡ್ಡ ಸಂಖ್ಯೆಯ ಸ್ವಯಂ ಸೇವಕರಂತೆ ಸಜ್ಜಾ ಸಂರಕ್ಷಕರಾಗಿ ಗುಮ್ಮ ನಡೆಸಿದ್ದರು. ಕಾಸು 2-30 ಕ್ಕೆ ಸಂಯೋಗಿ ಅಧ್ಯಕ್ಷರ ಪೆರವಣಿಗೆ ಬಂತು. ಮುಂದಾಗಿ ಮಾಜೀ ಅಧ್ಯಕ್ಷರುಗಳು, ಅವರನ್ನನುಸರಿಸಿ ಕಾಂಗ್ರೆಸ್ ಕಾರ್ಯಕಾರೀ ಸದಸ್ಯರು, ಅವರ ಹಿಂದೆ ಗಣ ಸಂಖ್ಯೆಯ ದೇಶ ಸೇವಕಿ ಮತ್ತು ಸೇವಕರ ನಡುವೆ ಅಧ್ಯಕ್ಷ ಪಟ್ಟಾಭಿಗಳು ಸ್ವಾಗತವಾಚಗಳನ್ನಾಲಿಸುತ್ತ, ಸಭಾಂಗಣ ಪ್ರವೇಶಿಸಿ ಅಧ್ಯಕ್ಷ ನಿಲ್ದಾಣಕ್ಕೇರುವಾಗ ಇಡೀ ಸಭೆಯು ಉಬ್ಬಿ ಎದ್ದ ರಭಿಯಂತೆ ಪ್ರಚಂಡ ಜಯಕಾರ ನಿನಾದವೆಬ್ಬಿಸಿತು. ಡಾ। ಪಟ್ಟಾಭಿ ಕೈ ಜೋಡಿಸಿ ಮರು ವಂದನೆ ಸಲ್ಲಿಸಿದರು. ಆ ಮೇಲೆ 'ವಂದೇ ಮಾತರಂ' ಘಾಡುವಾಗ ಎಲ್ಲರು ನೆಲವೇ ಬಿದುರಂಡಿ ಒಮ್ಮೆಗೇ ಮೇಲೇರಿತೋ ಎನ್ನುವಂತೆ ಇಡೀ ಸಭೆಯು ಭಕ್ತಿಯಿಂದದ್ದು ನಿಂತ ದೃಶ್ಯವು ನೈ ಸುಂದರವಾಗಿತ್ತು. ಸ್ವಾಗತಾಧ್ಯಕ್ಷ ಶ್ರೀ ಗೋಕುಲ ಭಾಯಿ ಭಟ್ಟರ ಸ್ವಾಗತ ಭಾಷಣವಾದ ಮೇಲೆ ದೇಶ ವಿದೇಶ ಗಣ್ಯರ ಶುಭ ಸಂದೇಶಗಳನ್ನು ಕಾರ್ಯದರ್ಶಿ ಶ್ರೀ ಜುಗಲು ಕಿಶೋರರು ಓದಿ ಹೇಳಿದರು. ಆ ಮೇಲೆ ಡಾ। ಪಟ್ಟಾಭಿ ತನ್ನ ಅಧ್ಯಕ್ಷ ಭಾಷಣವಿತ್ತರು.

ಸರೋಜಿನಿ, ಕಮ್ಲಾ, ಆಸಫ್ ಅಲಿ, ಸಕ್ಸೇನಾ, ಜಿನ್ಹೆ,- ಈ ಐವರು ಗವರ್ನರುಗಳು, ಕೇಂದ್ರ ಮತ್ತು ಪ್ರಾಂತೀಕ ಸರಕಾರಗಳ ಹಾಗೂ ಸಂಸ್ಥಾನಗಳ ಹಲವು ಮಂತ್ರಿಗಳು, ಸ್ವಾಗತ ಸಮಿತಿ ಮತ್ತು ಕಾಂಗ್ರೆಸ್ ಕಾರ್ಯಕಾರೀ ಸದಸ್ಯರು ಹಾಗೂ ಅ. ಭಾ. ಕಾಂ. ಸಮಿತಿಯ ಕೆಲವು ಪ್ರಮುಖ ಮೆಂಬರ್ರೇ ಮೊದಲಾದವರು ಸುಮಾರು 2000 ಜನ ಪಿಸಿದ್ದ ಅಧ್ಯಕ್ಷ ಪೀಠದಲ್ಲಿ ಸೇರಿದ್ದರು. ಈ ಶ್ರೇಷ್ಠ ನಾಯಕ ಲೋಕ ಉಬ್ಬಲ್ಲಿ ಅಲ್ಲಿಗೇ ರಮಾಗ ಸಭೆಯು ಜಯಕಾರವೆಬ್ಬಿಸಿತು. ಗಣ್ಯ ಗೈರುಹಾಜರಿಗಳೆಂದರೆ ರಾಜೇಂದ್ರ ಪ್ರಸಾದ್ ಮತ್ತು ರಾಜಾಜಿ.

(ಒಳ ಪುಟ ನೋಡಿರಿ)

ಡಾ। ಪಟ್ಟಾಭಿಯವರ ಅಧ್ಯಕ್ಷ ಭಾಷಣ.

ಸಂಕ್ಷಿಪ್ತ

ದ್ವಾರಜ್ಞೆ ಅವನ್ನು ಕೇಳುವವರಿಲ್ಲವಾಗಿಬಿ— ಇತ್ಯಾದಿ ಭಿನ್ನರೂಪೀ ಟೀಕೆಗಳಾಗಿನ್ನುದ್ದವು "ಎಲ್ಲಾ ಕಾಂಗ್ರೆಸಿಗರೂ ಸಾರ್ವಜನಿಕರಿಗೆ ಆದರ್ಶವಾಗಿ ಮೇಲ್ಪಂಕ್ತಿಯಾಗಿರುವಂತೆ ತಮ್ಮ ಸಾರ್ವಜನಿಕ ಗುಣನಡತೆಗಳನ್ನು ಮೇಲ್ಮಟ್ಟದಲ್ಲಿ ಇಟ್ಟುಕೊಳ್ಳಬೇಕು" ಎಂಬ ಮೂಲ ಸೂಚನೆಗೆ "ಎಲ್ಲಾ ಕಾಂಗ್ರೆಸಿಗರು, ಕೇಂದ್ರ ಮತ್ತು ಪ್ರಾಂತೀಕ ಶಾಸನ ಸಭೆಗಳ ಸದಸ್ಯರೂ, ಅದರಲ್ಲೂ ಮುಖ್ಯವಾಗಿ ಮಂತ್ರಿಮಂಡಲಗಳ ಸದಸ್ಯರೂ....." ಎಂಬ ತಿದ್ದುಪಡಿ ಸೂಚನೆಯನ್ನು ಶ್ರೀ ನೀಹರೇಚಂದ್ರ ಮಿಶ್ರರು ಸೂಚಿಸಿದಾಗ, ಅದನ್ನಂಗೀಕರಿಸಿಕೊಳ್ಳಲು ಶ್ರೀ ಶಂಕರರಾವ್‌ದೇವ್‌ರೋ ಸಿದ್ಧರಾಗಿರಲಿಲ್ಲವೆಂದು ಅದು ಪ್ರಾಟಿಗೆ ಬಿತ್ತು. ಶ್ರೀ ಮಿಶ್ರರ ಉಪಸೂಚನೆಗೆ 107 ಅನುಕೂಲ ಮತ್ತು 52 ಪ್ರತಿಕೂಲ ಮತ ದೊರೆತು ಅದು ಸಭೆಯ ಅಂಗೀಕಾರ ಪಡೆಯಿತು. ಈ ಚರ್ಚೆಯ ಮೇಲೆ ನೆಹರು, ಪಲ್ಲಭಾಯಿಗೂ ಗೈರು ಹಾಜರಿ ಸ್ಪಷ್ಟ ಅವರಾಗ ಪ್ರದರ್ಶನ ನೋಡಲು ಹೋಗಿದ್ದರು.

ತಿದ್ದುಪಡಿ ರದ್ದಾಯಿತು!

(ಮುಂಬೈತಃ ಮಂತ್ರಿಮಂಡಲದವರು ಮೇಲ್ಮಟ್ಟದ ನಡತೆ ಪ್ರದರ್ಶಿಸಬೇಕು' ಎಂಬ ಮೇಲಿನ ಸೂಚನೆಯು ಪಂಡಿತ ನೆಹರು ಮತ್ತು ಸರ್ದಾರ್ ಪಟೇಲರ ಅಭಿಮಾನವನ್ನು ಕಣಕಲ್ಲು. ಆದು ಉಪಭಾಗ ರದ್ದಾಗಬೇಕು. ಆ ವಿಷಯಕ ನವ್ಯ ಮೇಲೆ ಕಾಂಗ್ರೆಸ್ ಸಮಿತಿಯ ಅಖಂಡ ವಿಶ್ವಾಸ ಪ್ರದರ್ಶಿಸಲ್ಪಡಬೇಕು. ನಾವೀಗ ಮೇಲ್ಮಟ್ಟದ ವರ್ತನೆಯಲ್ಲಿಲ್ಲವೆಂಬ ಅರ್ಥ ಹುಟ್ಟುವಂತೆ ಆ ಸೂಚನೆಯು ಧ್ವನಿಸುತ್ತಿರುವುದರಿಂದ ಅದು ತಮ್ಮ ಮೇಲಿನ ಅವಿಶ್ವಾಸ ಸೂಚನೆಯೆಂದೇ ಭಾವಿಸಿಕೊಳ್ಳು

For Protection and Service

THE CRESCENT INSURANCE Co., Ltd.

11 O. BOMBAY] [Estd 1919

ಪೂರ್ಣತೆಯಾದ ಜೀವನಮೆಗೊಳಿಸಲು

ದಿ ಕ್ರೆಸೆಂಟ್ ಇನ್ಶೂರೆನ್ಸ್

ಕಂಪೆನಿ ಲಿಮಿಟೆಡ್.

ಹೆಡ್ ಆಫೀಸು: ಮುಂಬಯಿ] [ಸ್ಥಾಪನೆ. 1919

ಕೆ. ಪಿ ಭವಾನಿ ಶಂಕರ ಕೆಟ್ಟಿ ಪಿ ಎನ್ ಸುಂದರರಾಮ ಕೆಟ್ಟಿ

ಬ್ರಾಂಚ್ ಮೆನೇಜರ್, ಮಂಗಳೂರು. ಮೆನೇಜಿಂಗ್ ಏಜೆಂಟರ್.

The Canara Banking Corporation Limited.

Estd 1906.
(Incorporated in British India)
Head Office: **UDIPI**, S. India.

Capital Authorised ...	Rs. 25,00,000
Capital Issued & Subscribed	Rs. 20,00,000
Capital Paid up	Rs. 19,98,445
Reserves....	Rs. 8,66,751

BANKING BUSINESS OF EVERY DESCRIPTION TRANSACTED

V. R. Kamath, B.A., LL.B.
General Manager.

ಗುರುವಾರ, ಉಡುಪಿ, ೩೩-೧೨-೪೮

ಲೋಕ ಸ್ಥಿತಿ

ಭಾರತವು ತನ್ನನ್ನು ಆಕ್ರಮಿಸಿಕೊಳ್ಳಲು ಹೊಂಚುಹಾಕುತ್ತಿರುವ ಪಾಕಿಸ್ತಾನದ ಹೆದರಿಕೆಯು ನಿರಾಧಾರವಾದುದೆನ್ನುತ್ತಾ ಪಂಡಿತ ನೆಹರುಗಳು ಕಾಂಗ್ರೆಸ್ ಅಧಿವೇಶನದಲ್ಲಿ ಕೇಳಿದ ಲೋಕದ ಯಾವ ಸನ್ನಿವೇಶವೂ ಯುದ್ಧ ಮಾಡಲಕ್ಕೆ ಪರಿಹಾರವಾಗುವಂತಿಲ್ಲ; ಕಳೆದೆರಡು ಯುದ್ಧಗಳಿಂದ ಅಂತಹದ್ದನಾದರೂ ಆದುದಿದೆಯೆ?' ಎಂಬ ಸ್ಪೂರ್ತಿಯನ್ನು ಇಂದು ಪ್ರಪಂಚದ ಎಲ್ಲಾ ರಾಷ್ಟ್ರಗಳ ಪ್ರಮುಖರೂ ತಮಗೆ ತಾವೇ ಕೇಳಿಕೊಳ್ಳಬೇಕಾಗಿದೆ. ನಿಜಕ್ಕೂ ಕಳೆದ ಮಹಾಯುದ್ಧಾನಂತರ, ಇನ್ನೊಂದು ಮಹಾಘರ್ಷಣೆಗೆ ಹಿನ್ನೆಲೆಯಾಗಬಹುದಂತಹ ಸ್ಥಿತಿಯೇ ಲೋಕ ರಂಗದಲ್ಲಿ ದೆಸೆದೆಸೆಗಳು ಯುದ್ಧವನ್ನೇ ನಿವಾರಿಸುವ ಅಲೆಯೆಳೆಯಿಸುವ ವಾತಾವರಣ ನಿರ್ಮಾಣಗೊಂಡಿಲ್ಲ. 'ಯುದ್ಧವು ಯುದ್ಧವನ್ನೇ ಹೊರತು ಶಾಂತಿಯನ್ನು ಹೆರಲಾರದು' ಎಂಬುದಕ್ಕೆ ಬೇರೆ ಸಾಕ್ಷ್ಯ ಬೇಡ. ಕಳೆದ ಮಹಾಯುದ್ಧಕ್ಕೆ ಎಷ್ಟು ಬಲವಾದ ಕಾರಣಗಳಿದ್ದುವೋ, ಅಷ್ಟು ದೊಡ್ಡ ಹೇತುಗಳು ಈಗಲೂ ಇವೆ. ಸಂದು ಹೋದ ಸಮರವನ್ನು ಒಂದು ಕಡೆ ನಿಲ್ಲಾಣವಾಗಿ ಇಟ್ಟುಕೊಂಡು ಅದರ ಹಿಂದೆ-ಮುಂದನ್ನು ಅವಲೋಕಿಸುವದಾದರೆ, ಆ ನಿಲ್ಲಾಣ ಗುರಿಯನ್ನು ಬಂದು ಸೇರಿದ್ದ ದೈತ್ಯ ಸೂಯೆ, ಮೇಲಾಟಗಳೆಲ್ಲವೂ ಅಲ್ಲಿ ಮರಿಯಿಟ್ಟು ಸಕುಟುಂಬವಾಗಿ ಮುಂದೆ ಹೊರಟಿರುವಂತೆ ಕಾಣುತ್ತಿವೆ; ಇನ್ನು ಇವು ಯಾವ ಗುರಿಯನ್ನು ಸೇರಲಿರುವವೋ-ಅದೆಂತಹ ಪ್ರಳಯಕುಂಡವೋ-ಊಹಿಸುವದಸಾಧ್ಯ.

ಆದರಲ್ಲೂ ಅಸ್ಯಾಖಂಡವಿಂದು ಅಗ್ನಿ ಪರೀಕ್ಷೆಗೊಳಗಾಗಿದೆ. ಕಳೆದ ಮಹಾ ಯುದ್ಧದಲ್ಲಿ ಯುರೋಪಿನಲ್ಲಿ ಹರಿದಷ್ಟು ರಕ್ತ, ಇಲ್ಲಿ ಹರಿದಿಲ್ಲವಾದ್ದರಿಂದ, ಅಂದು ಕಡಿಮೆ ಬಿದ್ದ ಅಂಶವನ್ನು ಆಸ್ಯಾದ ರಾಷ್ಟ್ರಗಳು ಭರ್ತಿಮಾಡಿಕೊಳ್ಳುವ ಕಾಲವೀಗ ಬಂದಂತಿದೆ. ಜೈನದಲ್ಲೀಗ ಜೀವಾವ ಆಲೆಯನ್ನೂ ಕಟ್ಟಲಕ್ಕಾದ ಕೊನೆಯ ವರೆಗೆ ಹೋರಾಡುವ ಪಂಥವೊಂದಕ್ಕೇನೇ ಕಟ್ಟುಬಿದ್ದು ಚಿಯಾಂಗ್ ಕೈಶೇಕರು ಅವಸಾನ ಕಾಲದ ಒಂದಾ"ಬಲ್ಲಿದ್ದಾರೆ. ಅಲ್ಲಿ ತಾವು ಹುಟ್ಟಿರುವ ಭೂಮಿಯಾಳದ ಮೇಲೆ ಆಸೆಯಿಟ್ಟಿದ್ದವನ್ನು ಜೈನದ ಇಂದಿನ ಸರಕಾರದ ಮೇಲೆ ಅಂಗ್ಲೋ ಅಮೆರಿಕಾನರಿಗೆ ಮಮತೆಯಿಲ್ಲವೆಂಬುದಕ್ಕೆ 'ಕಮ್ಯೂನಿಸ್ಟರೊಡನೆ ಸಂಧಾನ ಮಾಡಿಕೊಳ್ಳುವೆ' ನೂಚನೆಯು ಅಮೇರಿಕದಿಂದ ಬಿಯಾಂಗನಿಗೆ ದೊರೆತಿರುವ ಸಿದರ್ಶನವೊಂದೇ ಸಾಕು. ಜೈನದ ಪ್ರಕೃತಿ ಲಕ್ಷಣವೆನ್ನಲಾಗುವಷ್ಟು ದೀರ್ಘಾವಧಿಯಿಂದಲೂ ಅಲ್ಲಿ ಬೆಳೆದು ಬಂದಿರುವ ಅಂತಃಕಲಹ-ಚಿಯಾಂಗ್-ಕೈ-ಶೇಕ್ ಸರಕಾರದ ಅಪಾರ್ಥಿತ ಭೋರಣೆ ಮತ್ತು ದೌರ್ಬಲ್ಯ-ಈ ವೇಕ ಮತ್ತು ಬ್ರಿಟನು ಅಲ್ಲಿ ಆಡುತ್ತಾ ಬಂದಿರುವ ಆಟಗಳು-ಇವೆಲ್ಲವನ್ನು ನೋಡುವಾಗ ಚೆತನ್ಯನ್ನು ಮನ್ವಿಸಿದವರನ್ನು ಮಿಲಿಯಗಟ್ಟಲೆ ಬಲಿಕೊಟ್ಟ ಮಾವೋ ಜೆಡಾಂಗ್ ಕಮ್ಯೂನಿಸ್ಟರು ಜೈನದ ಸಾರ್ವಭೌಮರಾಗಿ ಮೆರೆಯುವ ಕಾಲ ಬಹಳ ದೂರವಿಲ್ಲವೆಂದೆನಿಸುತ್ತದೆ. ಅಲ್ಲಿ ಅಮೆರಿಕನರು ಹಾಕಿರುವ ಬಂಡವಾಳ ಮತ್ತು ಅವರಿಗಿರುವ ಪ್ರಭಾವ ಕಮ್ಯೂನಿಸ್ಟರ ಪ್ರಗತಿಗೆ ತಡೆಯಾಗಿ ನಿಲ್ಲುವವೇ ಈ ಕಾಲದ ಪಾಶ್ಚಾತ್ಯ ವೈಶಿಷ್ಟ್ಯವಾಗಿ ಕಾಣುತ್ತಿದೆ. ಇಂತಹ ನುನೋವೃತ್ತಿಯ ತ್ಯಾಗವಾಗದೆ, ಬೇರಾವ ಯಾವ ವಿಧದ ತ್ಯಾಗವೂ ಲೋಕ ಶಾಂತಿಯನ್ನು ಸಾಧಿಸಲಾರದೆಂಬುದು ಸ್ಪಷ್ಟವಿದೆ. ಪ್ರತಿಕ್ರಿಯೆ ಮತ್ತು ಪ್ರತೀಕಾರವೆಂಬುದು ಪ್ರಕೃತಿಸ್ವಭಾವ. ಆಲಾಂತರಗಳಿಂದ ಆಶ್ಯಾ ರಾಷ್ಟ್ರಗಳ ಮೇಲೆ ನೇರಳಧಿಕಾರ ನಡೆಸಿದ್ದ ಯುರೋಪು ರಾಷ್ಟ್ರಗಳು, ಕಾಲಾಂತರದಲ್ಲಿ ಅವರಿಗೆ ಅನಿವಾರ್ಯವಾಗಿ ಕೊಡಲೇಬೇಕಾಗಿದ್ದ ಋಣವನ್ನು ಇನ್ನಷ್ಟು ಕಾಲ ಅನುಭವಿಸುವಂತಾದರೆ ಅದೇನೂ ಅಸ್ವಾಭಾವಿಕವಾಗದು. ಅದರೆ ಕಾಲ ಚಕ್ರದ ಉರುಳುವಿಕೆಯಲ್ಲಿ ಈ ನೇರ್ಚಾಗ-ಕೆಳಭಾಗಗಳ ಬದಲಾವಣೆಯಾಗುತ್ತಾ, ಹೋದರೆ ಸಮಾನತೆಯೆಂಬುದಿರದು; ಲೋಕ ಶಾಂತಿ ಸಾಧ್ಯವಾಗದು. ಅದಕ್ಕಾಗಿಯೇ ಗತ ಕಾಲದ ಕಪ್ಪುಭೋಗಿಗಳು ತಮ್ಮ ಕಹಿ ಅನುಭವವನ್ನು ಮರೆತು ಬಿಡುವಾಗ, ಅನ್ಯಾಯಿಗಳೂ ತಮ್ಮ ತಪ್ಪನ್ನು ತಿದ್ದಿಕೊಳ್ಳಬೇಕು ಎಂಬುದು ಇಂದಿನ ಕಾಲ ಧರ್ಮವಾಗಿದೆ. ಆದರೆ ಯುರೋಪುರಾಷ್ಟ್ರಗಳಲ್ಲಿ ಇನ್ನೂ ಈ ಧಾರ್ಮಿಕ ಮನೋವೃತ್ತಿ, ಸಾಕಷ್ಟು ಪ್ರಬಲವಿಲ್ಲವೆಂಬುದಕ್ಕೆ ಡಚ್ಚರ ಇಂಡೋನೇಶಿಯಾಕ್ರಮಣವೊಂದು ಸಾಕ್ಷಿಯಾಗಿದೆ. ಅಂದವೇಲೆ ಹಿಂದೆ ಮಾಡಿದ್ದನ್ನು ಮುಂದಕ್ಕುಚ್ಚಿಸುವ ಕಾಲ ಧರ್ಮಕ್ಕೆ ಅಂತಿಮ ರಾಷ್ಟ್ರಗಳು ಒಳಗಾಗಲಿ ಬದ್ಧವಿವೆ, ಎಂದು ನಿರೀಕ್ಷಿಸಬೇಕಾಗಿದೆ.

ಜೈಪುರದ ನಿರೂಪ

ಜನತೆಗೆ ಸುಪರಿಚಿತವಿರುವ--ಜನತೆಯು ಅವುಗಳ ಪರಿಚಯವನ್ನಷ್ಟೇ ಇಲ್ಲ; ಅವನ್ನು ತನ್ನ ಮೈಗಳನ್ನಾಗಿ ಮಾಡಿಕೊಂಡುದರಿಂದಲೇ ರಾಷ್ಟ್ರವು ಇಂದಿನ ಸ್ಥಾನ ಕ್ಕೇರುವಂತಾಗಿರುವ—ಕಾಂಗ್ರೆಸಿನ ಧ್ವಜ, ಘೋಷಣೆ ಮತ್ತು ಹಾಡಿಯನ್ನು ಮತ್ತಷ್ಟು ಸ್ಪಷ್ಟೀಕರಿಸಿ ಸುಸ್ಪಷ್ಟೀಕರಿಸಿ ತೋರಿಸುವುದಕ್ಕಿಂತ ಹೆಚ್ಚಿನ ದಾವುದೂ ಜೈಪುರದ ರಾಷ್ಟ್ರ ಸಭಾಧಿವೇಶನದಲ್ಲಾಗಿಲ್ಲ; ಆಗಬೇಕಾದುದೂ ಹೆಚ್ಚಿನ ವಿರಲಿಲ್ಲ ಸ್ವತಂತ್ರಗಳಿಗೆ ಸೆಳೆತಕ್ಕೆ ಸಿಕ್ಕಿ ಅಲ್ಲಿ ರ್ಜಾರಿ ಹೋದಂತಾಗಿದ್ದ ಕಾಂಗ್ರೆಸ್ ತತ್ವಗಳನ್ನು ಇರಬೇಕಾದ ಸ್ಥಾನದಲ್ಲೆಲ್ಲೆಲ್ಲು ತೋರಿಸಿ, ಅವುಗಳನ್ನು ಹಾಗೆಯೇ ಉಳಿಸಿಕೊಂಡು ಹೋಗುವಂತೆ ಜೈಪುರಾಧಿವೇಶನವು ಕಾಂಗ್ರೆಸಿಗರಿಗೆ ಆಹ್ವಾನವಿತ್ತಿದೆ. ನಾವು ಕಳೆದ ವಾರದ ಸಂಚಿಕೆಯಲ್ಲಿ ಬೀಸಿದ್ದ ಕಾಂಗ್ರೆಸಿಗರ ಇಂದಿನ ಮನೋಮಟ್ಟವನ್ನು ಕಡೆಗೆ ರಾಷ್ಟ್ರಸಭೆಯು ವಿಶೇಷ ಲಕ್ಷ್ಯ ಕೊಟ್ಟು "ಕಾಂಗ್ರೆಸಿಗರು ಸಾರ್ವಜನಿಕ ರಿಗೆ ಮಾದರಿಯಾಗುವಂತೆ, ಮಾರ್ಗದರ್ಶಕರಾಗುವಂತೆ ವರ್ತಿಸಬೇಕು" ಎಂಬ ಒಂದು ನಿರ್ಣಯವನ್ನೇ ಅದು ಮಾಡಬೇಕಾಗಿ ಬಂದುದರ ಕಡೆಗೆ ಎಲ್ಲಾ ಕಾಂಗ್ರೆಸಿಗರೂ ಗಮನವಿಡಲಿ;- ಹಾಗೆ ಮಾಡಿದರೆ ಈ ವರೆಗೂ ನ್ಯಾಯ ಪ್ರಕಾರ ತಮ್ಮದಾಗಿರುವ ಕಾಲವನ್ನು ಇನ್ನು ಮುಂದಕ್ಕೂ ಅವರು ಶಾಶ್ವತವಾಗಿ ಉಳಿಸಿಕೊಳ್ಳಬಲ್ಲರು; ಇಲ್ಲವಾದರೆ ಅದರ ಅವಧಿ ಮುಗಿಯುತ್ತಾ ಬಂತೆಂದು ತಿಳಿದುರಲಿ- ಇಷ್ಟನ್ನೇ ಈಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಅಕ್ಕಿ ಒಪ್ಪಿಸುವ ಅವಧಿ ಪ್ರಥಮ ಬೆಳೆಯ ಎಲ್ಲಾ ಮಿಗಿತೆಯ ಅಕ್ಕಿಯನ್ನು ಒಪ್ಪಿಸುವ ಅವಧಿಯನ್ನು ತಾ 31-12-48ರ ವರೆಗೆ ಮುಂದುವರಿಸಲ್ಪಟ್ಟಿರುವುದಾಗಿ ಜಿಲ್ಲಾ ಕಲೆಕ್ಟರರು ಪ್ರಕಟಿಸಿದ್ದಾರೆ.

ಕೃಷಿಯಿಟ್ಟು ನಿಲ್ಲಿಸಲ್ಪಟ್ಟಿದೆ- ಅನ್ನ ಮನೆ ಮಾರಾಟ ಮಾಡುವವರು ತಾವು ತೆಗೆದುಕೊಂಡ ಜಾಗೂ ಮಾರಾಟವಾಗುವ ಗಜ ವಿವರಗಳನ್ನೂ, ಕೃಷಿಯಮಾಡಿಕೊಳ್ಳುವವರುತಮ್ಮ ಹೆಸರು ಸಾದಿಯ ವಿವರಗಳನ್ನೂ ಕಾಣಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಅರ್ಜಿಮಾಡಿಕೊಂಡು ಅವರಿಂದ ಅನುಮತಿಪತ್ರವು ಬೇಕಾಗಿರುವುದರಿಂದ ತತ್ಕಾಲ ರಿಜಿಸ್ಟ್ರಿ ಆಫೀಸಿನಲ್ಲಿ ಕೃಷಿಯಟ್ಟುಗಳ ರಿಜಿಸ್ಟ್ರಿಯು ಬಂದಾಗಿದೆ ಎಂದು ತಿಳಿದುಬರುತ್ತದೆ. ಆದರ ವಿವರವು ಬೇಗನೆ ಪ್ರಕಟಗೊಳ್ಳಲಿ



'ಜಾತೀಯತೆಯನ್ನು ತಲೆಯೆತ್ತ ಬಿಡುವಂತಿಲ್ಲ'

(ಸಸೇ ಪುಟದಿಂದ)

ಅಧ್ಯಕ್ಷ ಗಾದಿಯ ಮೇಲ್ಪಡೆಯಲ್ಲಿ, ನಗುಮೊಗದಿಂದ ಕೈ ಜೋಡಿಸಿ ನಿಂತ ಗಾಂಧೀಜಿಯ ದೇಹ ಪರಿಮಾಣದ ಭಾವಚಿತ್ರವು ಇಡೀ ಸಭೆಯ ಗೌರವಗಳನ್ನಾರ್ಜಿಸಿಕೊಂಡು, ಜಯ-ಘೋಷಗಳ ಗಾಂಧೀಜೀ ಈ ಬಾರಿ ಇಲ್ಲದಿದ್ದರೂ ಸ್ಫೂರ್ತಿರೂಪೀ ಗಾಂಧೀಜೀ ಸೈರು ಹಾಜರಾಗಲೊಪ್ಪದೆ ಸಭೆಯನ್ನು ಮಾಡಿದ್ದಾರಿಯಲ್ಲಿ ನಡೆಸಲು ನಿಂತಿದ್ದಾರೆಂಬಂತೆ ಕಾಣುತಿತ್ತು. ಈ ಮುಖ್ಯ ಭಾವ ಚಿತ್ರದ ಆಕ್ಷಪಕ್ಕಗಳಲ್ಲಿ 'ಮಾಡಿರಿ ಇಲ್ಲವೇ ಮಡಿಯಿರಿ' ಸಂದೇಶ ಸಾರುತ್ತಾ ಹೋದ ನವಖಾಲೀ ಗಾಂಧಿಜಿಯ ಇತರ ಚಿತ್ರಗಳಿದ್ದುವು.

ಅಧ್ಯಕ್ಷ ಭಾಷಣ

ಡಾ. ಪಟ್ಟಾಭಿಗಳ 55ನೇ ರಾಷ್ಟ್ರೀಯ ಸ್ಥಾನದ ಭಾಷಣವು ರಾಷ್ಟ್ರದ ಸರ್ವ ಪ್ರಶ್ನೆಗಳ ಕಡೆಗೂ ಬೆಳಕನ್ನು ಬೆಲ್ಲಿದ್ದಿತು; ಕಾಂಗ್ರೆಸಿನ ಮುಂದಿನ ಹಾದಿಯನ್ನು ನಿರ್ದೇಶಿಸಿದ್ದಿತು; ಸ್ಥಾನ ಯೋಗ್ಯ ಘನತೆ ಮತ್ತು ತಿರುಳುಗಳಿಂದ ಕೂಡಿದ್ದಿತು."ಭಾರತದ ಪುನರುತ್ಥಾನ ವನ್ನು ಸಾರ್ಥಕಗೊಳಿಸಿ ರಾಮರಾಜ್ಯ ಸ್ಥಾಪನೆ ಮಾಡಬೇಕು." ಎಂಬುದೇ ಆ ಭಾಷಣದ ಜೀವಾಳ. "ರೋಕಥ್ಠಾನೇ ಏವರಿ ಅವರಿಗೆ ಅಕವಾದ ವಿಧಾನಗಳಿಂದ ನಾವು ಮೊರಕೆ ಹಾಕಿಕೊಂಡಿರುವ ಸ್ವಾತಂತ್ರ್ಯಕ್ಕೆನಷ್ಟಗಾಣುವಂತಾಗಿ ನಮ್ಮನ್ನು ನಾವು ಸಂಘಟಿಸಿಕೊಳ್ಳಬೇಕಾದುದೇ ಈಗಿನ ಕರ್ತವ್ಯ. ಕಾಂಗ್ರೆಸು ಕಳೆದ 63 ವರುಷಗಳಿಂದ ದುಡಿದುದರ ಪ್ರತಿಫಲವೇ ಇಂದಿನ ಸರಕಾರ. ಂಬ್ರದ ಸ್ವಭಾವ ಬದಲಾವಣೆಗೆ ಹೊಂದಿಕೆ ಯಾಗುವಂತೆ, ಕಾಲೋಚಿತ ಅವಶ್ಯಕತೆಗಳನ್ನು ದೂರದೃಷ್ಟಿಯಿಂದ ನೋಡಿ, ಸರಿಯಾದ ...ಯಂದು ಪೂರೈಸಿಕೊಳ್ಳುವ ಕತುರರು ನಾವಾಗಬೇಕು" ಎಂಬ ಬುದ್ಧಿವಾದದೊಡನೆ ರಾಷ್ಟ್ರವನ್ನೆದಿರಿಸಿರುವ ಸರ್ವ ಸಮಸ್ಯೆಗಳ ವಿವರ್ಶೆಯನ್ನೂ ನಡೆಸಿ ಸ್ಥಿರ ಕಟ್ಟಾಭಿ. ಕಾಂಗ್ರೆಸಿಗೀಗ 'ಒಂದು ಕ್ಷೆ'ದಸ್ಥಾನ ದೊರೆತಿರುವ ಕುರಿತು ಡಾ. ಟ್ಟಾಭಿ ಮಾರ್ಮಿಕವಾಗಿ ನುಡಿದರು: ಂದೆಡೆ ತಮ್ಮ ಸ್ವಿಪ್ರಾವರ್ಯತೆಗಳ ಚಿತ್ರ ಾದರಲ್ಲೇ ತಲ್ಲಿನ, ತೂಕ್ಷ್ಣವಿಚಾರಗ ಲ್ಲವನ್ನೂ ಮೈತ್ರಿಸುವ ಅತಿಸ್ಪೃತ ಜನಸಾ ನ್ಯರು,ಮತ್ತೊಂದೆಡೆ ಈಗ ಅಧಿಕಾರ ಳುಟ ಹೊತ್ತಿದ್ದುತಮ್ಮಲ್ಲಿ ಮಿತಿಯೋ ತೆಯಿರುವ ತಮ್ಮ ಪರಂಪರಾಗತ ಗಣ ಲ ಹಾಗೂ ತಮ್ಮನ್ನು ದಂಗುಬಡಿಸು ರುವ ವರ್ತಮಾನ ಕಾಲ ಮತ್ತು ಅನಿಶ್ಚಿತ ವಿರುವ ಭವಿಷತ್ಕಾಲಗಳನ್ನು ಗಡಿಸಬೇಕಾದ ನ-ವ್ಯ ಸ್ಥ ಈ ಇತ್ಯಾದಿಗಳಿಂದ ನ ವಿನ ತಕ್ಕಡಿಯನ್ನು ಕಾಂಗ್ರೆಸ್ ಹಿಡಿದಿ ದ್ದುವಿಂದ ಮಂತ್ರಿಗಳ ದೃಢಕೆ ಮತ್ತು ನತೆಯ ಅನಸರಗಳ ಮಧ್ಯೆ, ಸರಕಾರದ ಯಮಬದ್ಧ ಕಾರ್ಯ ಮತ್ತು ಜನತೆಯ ಲಂತಿಕಾರಿ ಸ್ಫೂರ್ತಿಗಳ ನಡುವೆ ತಕ್ಕ ಯನ್ನು ಸರಿಮಟ್ಟದಲ್ಲಿ ಹಿಡಿದಿರಬೇಕಾದ ಕೆ ಕಾಂಗ್ರೆಸ್". ಭಾಷಣವಾರು ಸ್ಯಾಂ ರಜನಾ ಚಳವಳಿ ನಾಯಕರಾಗಿದ್ದ ಡಾ॥ ಪಟ್ಟಾಭಿಗಳು ಈಗ ಆ ಪ್ರಶ್ನೆಗೂ ಸಮರ್ಥವಿರುವ ಅಧ್ಯಕ್ಷವನ್ನು ಗಣಿಸಿ ತನ್ನ ಅಧ್ಯಕ್ಷತೆ ಭಾಷಣದಲ್ಲುಂದಿದ್ದರು."ಘಟನಾ ಸಮಿತಿ ಮತ್ತು ಸರಕಾರವನ್ನು ಈಗ ಇದಿರಿಸಿರುವ ಸಂಕಷ್ಟಗಳೇನೋ ಬಹಳ ಮತ್ತು ವಿವಿಧ ರೀತಿಯವುಗಳಿರಬಹುದಾದರೂ, ಸಮಾಲೋಚನೆ, ಸಹಾನ-ಭೂತಿ ಮತ್ತು ಧೈರ್ಯದ ಪರಿಣಾಮವಾಗಿ, ಈ ನ್ಯಾಯಬದ್ಧ ಚಳವಳದ ಬೇಡಿಕೆಯನ್ನು ವಸ್ತಿಸುವ ವಿಧಾನಗಳನ್ನು ನಾವು ಕೂಡಲೇ ಕಂಡುಕೊಳ್ಳುವೆವೆಂಬುದು ನಿಸ್ಸಂಶಯ. ಈ ಭಾಷ-ವಾರು ಪ್ರಾಂತ್ಯಗಳ ಚಳವಳವನು ನಾವಿಂತೊಡೆಗಳಂತೆ ಈಗಾನೇ ಹುಟ್ಟಿ ಎಬ್ಬುದಾಗಿರದೆ 33 ವರುಷಗಳಿಗೂ ಮಿಕ್ಕಿ ಬೆಳೆದುಬಂದುದಿದೆ. ಅದರ ಮನೋಗತಿ ಸಂಪೂರ್ಣವಾಗಿ ರಾಷ್ಟ್ರೀಯ; ಅದರ ರೀತಿ ನಡತೆ ರಚನಾತ್ಮಕ; ಅದರ ಬೇಡಿಕೆಗಳು ಪ್ರಜಾಸತ್ತಾತ್ಮಕ."

ಕಾಂಗ್ರೆಸ್ ನಿರ್ಣಯಗಳು

ಅಧ್ಯಕ್ಷ ಭಾಷಣಾನಂತರ ರಾಷ್ಟ್ರಪಿತ ಗಾಂಧೀಜೀ ಹಾಗೂ ಇತರ ದಿವಂಗತ ನಾಯಕರ್ತ ಸಂಬಂಧದ ದುಃಖ ಸೂಚಕ ನಿರ್ಣಯಗಳಾದುವು ಆಮೇಲೆ ಮೂಲ ರಾ ವು "ಸಂದೇಶಗಳು". ನೆಹರುಗಳಂದ ಬಂತು. ಪಂಡಿತಜೀ ತನ್ನ ಭಾಷಣದಲ್ಲಿ ಪಾಶಸ್ತ್ಯನದ ಕುರಿತು ಸ್ಪಷ್ಟವಾಗಿ ಹೇಳಿದರು : "ಭಾರತದ ಸಂಬಂಧವಾಗಿ ವಾಕಿಸ್ತಾನವು ಕಟ್ಟಿಕೊಂಡಿರುವ ಹೆದರಿಕೆ ನಿರಾಧಾರವಾದುದು. ಪಾಕಿಸ್ತಾನವನ್ನಾಕ್ರಮಿಸಿ ಕೊಳ್ಳುವ ಇಚ್ಛೆ ಭಾರತಕ್ಕಿಲ್ಲ. ಇಂದಿನ ಲೋಕ ಸಮಸ್ಯೆಗಳಲ್ಲಾವುದೂ ಯುದ್ಧದಿಂದ ತೀರ್ಮಾನವಾಗುವಂತಿಲ್ಲ ಕಳೆದೆರಡು ಯುದ್ಧಗಳು ಏನನ್ನಾದರೂ ತೀರ್ಮಾನಿಸಿದುದಿದೆಯೆ ? ಪಾಕಿಸ್ತಾನವಾದುದೇ ನಮ್ಮೊಳಗಿನ ಒಡಂಬಡಿಕೆಯಿಂದ; ನಾವಾಗಿ ಒಪ್ಪಂದದ ಪಾಲುಗಾರರಿದ್ದೇವೆ. ಭಾರತದೊಡನೆ ಸೇರಿಕೊಳ್ಳುವೆವೆಂದು ಪಾಕಿಸ್ತಾನವೊಂದೊಮ್ಮೆಗೆ ನಮ್ಮನ್ನು ಪ್ರಾರ್ಥಿಸಿಕೊಂಡೂ ಆಗ ನಾನು ಅವರಿಗೆ ಹೇಳುವದಿಷ್ಟೆ: "ಇದು ನಿಮ್ಮ ಅನುಗ್ರಹ. ಆದರೆ ನಾವು ಪುನರ್ಮಿಲನಗೊಳ್ಳದಿರುವುದೇ ಉತ್ತಮ". ಪುನರ್ಮಿಲನವು ಭಾರತದ ಹಿತ ಸಂಬಂಧಗಳಿಗೆ ಹಾನಿಕರವಿದೆ. ಇಲ್ಲಿ ಹಬ್ಬಿಸಿರುವ ವಿಷದ ಕೆಲವಂತ ಈಗಲೂ ಜನತೆಯ ಪೆದುಳನ್ನು ವ್ಯಾಪಿಸಿಕೊಂಡಿದೆ. ಅದು ಸಂಪೂರ್ಣ ನಿವಾರಣೆಯಾಗದಿದ್ದರೆ ಈವುನರ್ಮಿಲನದಿಂದಾಗಿ ಅಹಳೇ ಸಮಸ್ಯೆಗಳು ಮತ್ತು ಸಂಕಷ್ಟಗಳೇ ಪುನಃ ತಲೆಯೆತ್ತಲಿವೆ." ಕಾಂಗ್ರೆಸಿನ ಭಾವೀ ಧೋರಣೆಗಳ ಕಡೆಗೆ ಸ್ಪಷ್ಟ ಪ್ರಕಾಶ ಚೆಲ್ಲಿ, ರಾಷ್ಟ್ರದ ಮತ್ತು ಲೋಕದ ವಿವಿಧ ಪ್ರಶ್ನೆಗಳನ್ನು ಸ್ಪಷ್ಟಪಿಸಿ ಆರ್. ಯ್ಸ್. ಯಸ್. ಸೊಂದಲಗಾರರನ್ನು ಉದ್ದೇಶಿಸಿ ಪಂಡಿತ ನೆಹರುಗಳು ಎಚ್ಚರಿಕೆ ಕೊಟ್ಟರು: "ಈಗ ಕೂಡಾ ರಾಷ್ಟ್ರದಲ್ಲಿ ಹುಚ್ಚಾಟಗಳೆಷ್ಟೋ ಉಳಿದಿವೆ. ಸತ್ಯಾರ್ಗ್ರಹ ಸಾಧನೆಗೆ ಮಾತ್ರ ಸತ್ಯಾಗ್ರಹ; ದುರುದ್ದೇಶ ಪ್ರಚೋದಿತ ದುಷ್ಟ ಚಳವಳವೊಂದನ್ನು ಸತ್ಯಾಗ್ರಹವೆನ್ನಲಾಗುವದಿಲ್ಲ. ಭಯಾವಹ ಗುಪ್ತ ಪದ್ಧತಿಯನ್ನನುಸರಿಸಿದ ಆರ್. ಯಸ್. ಯಸ್. ನ್ಯಾಯವನ್ನು ಇನ್ನೊಮ್ಮೆ ಜಾತೀಯತೆಯಲ್ಲಿ ಎಷ್ಟಕ್ಕೂ ನಡುವಂತಿಲ್ಲವೆಂಬ ನಾನವರಿಗೆ ಎಚ್ಚರಿಕೆ ಕೊಡುತ್ತೇನೆ." ಪಂಡಿತ ನೆಹರು ಗಳ ಸೂಚನೆಯನ್ನು ಅನುಮೋದಿಸುತ್ತಾ ಮೌಲಾನಾ ಆಜಾದರು ಗಾಂಧೀಜಿಯ ಪವಿತ್ರ ಸ್ಮರಣೆ ಮಾಡಿದರು. ಪಂಡಿತ ಪಂತರ ವಿಶ್ಲೇಷಣವಾಗಿ ಸೂಚನೆ ಮಂಜೂರಾಯಿತು.

ಜೈಪುರ ಕಾಂಗ್ರೆಸಿನ ನಿರ್ದೇಶಗಳು

ವಿಷಯನಿಯಾಮಕ ಸಮಿತಿಯ ಎಲ್ಲಾ ನಿರ್ಧಾರಗಳೂ ಪ್ರಮುಖರ ಮನನೀಯ ಹಾಗೂ ಮಾರ್ಗದರ್ಶಿ ಭಾಷಣಗಳೊಡನೆ ತಾ 18 ಮತ್ತು 19ರ ಕಾಂಗ್ರೆಸ್ ಜಾಹೀರು ಅಧಿವೇಶನದಲ್ಲಿ ಮಂಜೂರಾದುವು. ಕೊನೆಯ ದಿನವೇ 12 ರೂಪುಗಳು ನಿಶ್ಚಿತಾವಧಿಯೊಳಗೆ ನಿರ್ಧಾರಗಳಾಗಿ ಮೂರ್ತಗೊಳ್ಳುವು. ದಕ್ಷಿಣಾಫ್ರಿಕದ ಹಿಂದೀಯರ ಸಂಕಷ್ಟ--ಇಂಡೋನೇಶಿಯದ ಸ್ವಾತಂತ್ರ್ಯ ಹೋರಾಟ--ಸಂಸ್ಥಾನಗಳ ಸಮ್ಮಿಲನ-ನಿರಾಶ್ರಿತರ ಜೀವನವ್ಯವಸ್ಥೆ--ಜಾತೀಯತೆಯ ನಿರ್ಮೂಲನ-ಆರ್ಥಿಕ ಅಭಿವೃದ್ಧಿ--ಗಾಂಧೀ ಸ್ಮಾರಕನಿಧಿ--ಕಾಂಗ್ರೆಸಿಗರ ಗುಣನಡತೆ--ಇತ್ಯಾದಿಗಳಿಗೆ ಸಂಬಂಧಿಸಿದ ನಿರ್ಣಯಗಳಾದವು.

ಅಧಿವೇಶನಮುಕ್ತಾಯ

ಜೈಪುರ ಅಧಿವೇಶನದ ಎರಡು ಕಣ್ಣುಗಳಾಗಿ, ಎರಡು ಬಾಹುಗಳಾಗಿ, ಕಾಂಗ್ರೆಸ್ ರಥದ ಎರಡು ಅಶ್ವಗಳಾಗಿ ಅಥವಾ ಜೈಪುರ ಗಗನದ ಸೂರ್ಯ ಚಂದ್ರರಾಗಿ ಇದ್ದ ವರೆಂದರೆ ಸಹಜವಾಗಿ ನೆಹರು ಪರೀಕ್ಷರು. ಇಂಡೋನೇಶಿಯದಲ್ಲಿ ಡಚ್ಚರು ಮಾಡುತ್ತಿರುವ ಅಕ್ರಮಗಳನ್ನು ಖಂಡಿಸಿ "ನಾನಿದನ್ನು ಸ್ವಚ್ಛಪ್ರೇಕ್ಷಕರಾಗಿ ನೋಡುತ್ತಾ ಕುಳಿತುಕೊಳ್ಳಲಾರೆನ್ನ" ಎಂದು ನೆಹರುಗಳು ಕೊಟ್ಟ ಎಚ್ಚರಿಕೆಯು ಬಿಸಿ, ಭಾರತ-ಪಾಕಿಸ್ತಾನಗಳೊಳಗೆ ಬಕ್ರೀಜಿಗೆ ನಡೆದ ಸಮ್ಮೇಲನದ ಸತ್ಫಲಗಳ ಕುರಿತು ಆವರು ಸೂಸಿದ ಆಶಾಕಿರಣ, ಜಾತೀಯತಾ ಬುಡ ಕತ್ತರಿಸುವ ಅವರ ಮಾತಿನ ಹರಿತ, ಸಭಿಕರು ಮನಸ್ಸಿನಲ್ಲಿ ಅಚ್ಚಳಿಯದುಳಿಯುವಂತಹವೆ. ಅಂತೆಯೇ ಪಾಕಿಸ್ತಾನಕ್ಕೆ ಭರ್ದಾರರು ಕೊಟ್ಟ ಎಚ್ಚರಿಕೆ, ಸಂಸ್ಥಾನಗಳ ಸಂಬಂಧಮಾಗಿ ಅವರು ಆಡಿದಅಕ್ಷರರೆ: ಭಾರವಿರುವ ಮಾತುಗಳು, ಎಲ್ಲಾ ಹೃದಯಗಳಲ್ಲೂ ತಮ್ಮಕ್ಕ ಶಾಶ್ವತ ಮುದ್ರೆಯೊತ್ತುವಂತಹವು. "ನಾನೂ ಒಂದು ಕಾಲದ ಕಾನೂನುಭಂಜಕ. ತನಗದರ ಗುಟ್ಟು ಗೊತ್ತಿದೆ ಪರಕೀಯ ಶಾಸನ ಮುರಿಯುವುದರಲ್ಲಿ ಹೆಗ್ಗಳಿಕೆಯಿಲ್ಲ. ನ್ನ ನನಗೆ ನನ್ನ ಸ್ವಂತ ಬಂಧುಗಳನ್ನೂ ಜೈಲಿಗಟ್ಟುವುದರಲ್ಲಿ ಯಾವ ಆನಂದವೂ ಆಗುತ್ತಿಲ್ಲ. ಆದರೆ ರಾಷ್ಟ್ರಯ ರಕ್ಷಣೆಗಾಗಿ ನನ್ನ ಸ್ವಂತ ಮಗನೊಡನೆ ಜೋರಾಗಿ ಬೇಕಾಗಿ ಬಂದರೂ ನಾನದನ್ನು ಮಾಡದೆ ಬಿಡಲಾರೆ" ಎಂದ ಸರ್ದಾರರ ವಾತು ಆರ್. ಯಸ್. ಯಸ್. ಮೆದುಳ ನೊಗಕ್ಕೆ ಸ್ಪಷ್ಟಿಸುತ್ತು, ತೆಗೆಯುವಂತಹದಿದೆ. ಅಧಿವೇಶನಾಂತ್ಯದಲ್ಲಿ ಪಂಡಿತ ನೆಹರು ಮತ್ತು ತನ್ನ ಸಮಾರೋಪ ಮಾತುಗಳಂದ ಅಧ್ಯಕ್ಷರು ಸ್ವಾತಂತ್ರ್ಯದ ಜವಾಬ್ದಾರಿಯನ್ನರಿತುಕೊಂಡು ಅದರ ಅಲ್ಪಾಂಶವೂ ಅನಾವ್ಯಯವಾಗದಂತೆ ಸರ್ವ ವಿಧದಿಂದಲೂ ಸದುಪಯೋಗಿಸಿಕೊಳ್ಳಬೇಕೆಂದು ರಾಷ್ಟ್ರದೊಡನೆ ಮಾಡಿಕೊಂಡ ವಿಜ್ಞಾಪನೆಯು ಸರ್ವ ಭಾರತೀಯರ ಸದಾ ಸ್ಮರಣೆಗರ್ಹವಿದೆ.

ಕೆಲವು ಘಟನೆಗಳು

ಕಾಂಗ್ರೆಸ್ ಜರ್ಜೆರಗಳಲ್ಲಿ ಬಿಸಿಯನ್ನು ನಿರ್ಮಿಸಿದ್ದ ಏಕಮಾತ್ರ ವಿಷಯವೆಂದರೆ 'ಕಾಂಗ್ರೆಸಿಗರ ಸಾರ್ವಜನಿಕ ನಡತೆ'ಯ ಮಟ್ಟ ನಿರೂಪಣೆ. ಈಕುರಿತು ಎರಡು ದಿನ ವಿಷಯನಿಯಾಮಕ ಸಮಿತಿಯಲ್ಲಾದ ಅಡಿಮೇಲುಜಾಹೀರು ಅಧಿವೇಶನದಲ್ಲಿರಲಿಲ್ಲ.

ತಾ 18ನೇ ಮುಂಜಾನೆ ವಿಷಯನಿಯಾಮಕ ಸಮಿತಿ ಸಭೆ ನೇರಲಿದ್ದಾಗ 'ಗುಪ್ತಿ' ಧರಿಸಿಕೊಂಡ ಒಬ್ಬನನ್ನು ಕಾಂಗ್ರೆಸ್ ಸ್ವಯಂಸೇವಕರು ಹಿಡಿದು ಪೋಲೀಸರ ವಶಕ್ಕೊಪ್ಪಿಸಿದ್ದರು. ಆತ ವೇದಿಕೆಯ ಹಿಂಬದಿ ದ್ವಾರದಲ್ಲಿ ಕಾಯುತಿದ್ದನಂತೆ. ಯಾರನ್ನೊ?

ಮೊದಲ ದಿನ ವಿಷಯನಿಯಾಮಕ ಸಮಿತಿ ಸಭೆಗೆ ಬಂದ ಸಮಾರು 100ಕ್ಕೂ ಮಿಕ್ಕಿದ ಪತ್ರಿಕಾಪ್ರತಿನಿಧಿಗಳು ಜಲ್ಲಿ ತಮ್ಮ ಜಾಲಿಗಾಗಿದ್ದ ಅಸೌಕರ್ಯ ಮತ್ತು ಸ್ಥಳದ ಬಿಕ್ಕಟ್ಟಿನ್ನು ನಿವೇದಿಸಿ ಸಭಾತ್ಯಾಗ ಮಾಡಿದ್ದರು. ಸ್ವಾಗತಾಧ್ಯಕ್ಷರು ಮಾರನೇ ದಿನ ತಾನದನ್ನು ಸರಿಪಡಿಸುವೆನೆಂದು ಆಶ್ವಾಸನೆ ಕೊಟ್ಟರಲ್ಲದೆ ಅಧ್ಯಕ್ಷ ಸಟ್ಟಾಭಿಗಳು ಈ ಪ್ರಮಾದಕ್ಕಾಗಿ ಪಶ್ಚಾತ್ತಪ ಸೂಚಿಸಿದರು.

ತಾ. 18ನೇ ಮುಂಜಾನೆಯ ವಿಷಯ ನಿಯಾಮಕ ಸಮಿತಿ ಸಭೆ ಮುಗಿಯುವ ಹೊತ್ತಿಗೆ ಒಂದು ವಾರ್ತಾ ವಿನೋದ ನಡೆಯಿತ್ತು. ಪೂರ್ವ ನಿಶ್ಚಯದಂತೆ ಕಾಂಗ್ರೆಸ್ ಜಾಹೀರು ಅಧಿವೇಶನವು ವಿಷಯನಿಯಾಮಕ ಸಭೆ ಮುಗಿಯೊಡನೆ ಮುಂಜಾನೆಯೇ ನಡೆಯಬೇಕಿದ್ದಿತು. ಆದರೆ ಅಧಿವೇಶನವು ಅಪರಾಹ್ನ 2½ ತಾಸಿಗೆ ಸೇರುವದೆಂಬ ಸುದ್ದಿ ಜಲ್ಲಿ ಸರ್ವತ್ರ ಬೇಗೋ ಏನೋ ಹುಟ್ಟಿಕೊಂಡಿತ್ತು. ತ್ತಿಗ ಲಿಬಿಲಿಯಿಂದ ಕ್ರೋಧಗೊಂಡ ನೆಹರು ಗಳು ವಿಷಯ ನಿಯಾಮಕ ಸಭಾಂತ್ಯದಲ್ಲಿ 'ಮೈಕ್'ನ ಮುಂದೆ ಬಂದು "ಈ ಅಸಂಬದ್ಧ ವಾರ್ತೆಗೆ ಏನರ್ಥ? ನಿಶ್ಚಿತ ಕಾರ್ಯಕ್ರಮವನ್ನು ಬದಲಾಯಿಸಿದುದು ಯಾವಾಗ?" ಎಂದು ಹೇಳಿದವರೇ ಅಧ್ಯಕ್ಷರ ಮುಖ ನೋಡಿದರು. "ನನಗೆ ಇದೊಂದೂ ತಿಳಿಯದು" ಎಂದು ಅಧ್ಯಕ್ಷ ಸಟ್ಟಾಭಿಗಳಂದಾಗ 'ತೀರ್ಮಾನವಾಧಿಕಾರಿ' ಅಧ್ಯಕ್ಷರು. ಸಭೆ ಈಗಲೇ ಸೇರುವದು. ನಾವೆಲ್ಲಿಂದ ನೆಟ್ಟಗೆ ಮಯಾಧಿನೇತನ ಕೈ ಸಾಗೋಣ"ಎಂದು ನೆಹರುಗಳಂದರು. ಕೂಡಲೇ ಅಧ್ಯಕ್ಷರು. "ನಾವು ಸುದ್ದಿ ಏನೋದವೊಂದಕ್ಕೆ ಒಲಿಯಿವ್ವಂತೆ ತೋರುತ್ತದೆ. ಹಲವು ಪ್ರತಿನಿಧಿಗಳೀಗಾಗ ತಿರುಗಾಟಕ್ಕೆ ಹೊಗಿದ್ದಾರೆ. ನನ್ನ ಪತ್ನಿ ಕೂಡಾ ಹೋಗಿದ್ದಾಳೆ. ನಾವು ಅಪರಾಹ್ನ ಬಿಕ್ಕಗೇನೇ ಅಧಿವೇಶನ ಸೇರುವಾ" ಎಂದು ತೀರ್ಮಾನಿಸಿದರು.

ಜೈಪುರ ಅಧಿವೇಶನ ಜಯಪ್ರದವೆಯಾಯಿತು.

ಉಡುಪಿ

ಬಿಲ್ಲರೆ ಧಾನ್ಯಗಳ ಅಂಗಡಿಯ ಬಗ್ಗೆ ಲ್ಯಾಸೆನ್ಸು ಪಡೆಯಬಿಲ್ಲವೆಂದು ಉಡುಪಿ ಮುನಿಸಿಪಾಲಿಟಿ ಕಚೇಯಿಂದ ಶ್ರೀ ಕೆ. ಮೊಡ್ಡಗಿರಿ ಕ್ಯಾನಭಟ್ಟರ ಮೇಲೆ ಸ್ಥಳೀಯ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟ್‌ರ ಕೋರ್ಟಿನಲ್ಲಿ ಹೂಡಲಾದ ವ್ಯಾಜ್ಯದಲ್ಲಿ ಶ್ರೀ ಕ್ಯಾನಭಟ್ಟರಿಗೆ ಗುಣವಾಯಿತು. ಮುನಿಸಿಪಾಲಿಟೀಸ್ ಆಕ್ಟಿನ ನಂಬ್ರ 249 ಮತ್ತು 328ನೆ ಸೆಕ್ಷನುಗಳಲ್ಲಿಯ ಕರ್ತವ್ಯಗಳನ್ನು ಮುನಿಸಿಪಾಲಿಟಿಯು ಪಾಲಿಸದಿದ್ದುದೇ ಕಾರಣ.

ನಗರ ಸಭೆಯು ತಾ 11ರಲ್ಲಿ ಚೇಯರ್‌ಮೆನ್ ಶ್ರೀ ಪಿ. ಉಪೇಂದ್ರ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಜರಗಿತು. 1948-49ನೆ ವರ್ಷದ ತಿದ್ದಿದ ಮತ್ತು 1949-50ನೆ ಆದಾಯ ವೆಚ್ಚದ ಬಜೆಟು ಕೆಲವುಂದು ತಿಮ್ಮಪಡಿಗಳಿಂದ ಆಂಗೀಕೃತವಾಯಿತು. ಮುನಿಸಿಪಲ್ ಆಫೀಸು ಕಟ್ಟಡದ ಪಂಚಾಂಗ ಕಟ್ಟಿನ್ನು ಏಂದೋ ಹಾಕಿದ್ದರೂ ಕಟ್ಟಡ ನಿರ್ಮಾಣದ ಪ್ರಶ್ನೆಗೆ ಹೆಚ್ಚಿನ ಪ್ರಾಶಸ್ತ್ಯ ಕೊಟ್ಟಂತೆ ತೋರಿಬರುವುದಿಲ್ಲ.

ಕಠಿಣ ಶಿಕ್ಷೆ ಹುಬ್ಬಳ್ಳಿ ಸೆಟ್ಟಿ ಏಂಬವರಿಗೆ ಅಂಗ ಊನ ಮಾಡಿದ ಆರೋಪಕ್ಕೊಳಗಾದ ಸೋಮಯ್ಯ ನೆಟ್ಟಿಗೆ ಒಂದು ವರ್ಷ, ಅತನ ತಮ್ಮ ನಿಜನ ಸೆಟ್ಟಿಗೆ ಆರು ತಿಂಗಳ ಕಠಿಣ ಶಿಕ್ಷೆಯನ್ನು ಎಡಿಶನಲ್ ಫಸ್ಟ್‌ಕ್ಲಾಸ್ ಮೆಜಿಸ್ಟ್ರೇಟರು ತಾ 9ರಲ್ಲಿ ವಿಧಿಸಿದರು. ಸರಕಾರಿ ಕಡೆಯಿಂದ ಶ್ರೀ ಪಿ. ಕೆ ಸೆಟ್ಟಿ, ಆಸಾಮಿಗಳ ಪಕ್ಷದಲ್ಲಿ ಕಾನ್ಸ್ಟೇಬಲ್‌ಗಳಾದ ಅರೋಪಿಗಳ ಪತಿಯಿಂದ ಶ್ರೀಗಳಾದ ಪಿ. ಎಸ್. ಹೆಗ್ಡೆ ಮತ್ತು ಕೆ. ಎಲ್. ಇತಾಳರೂ ವಕಾಲತ್ತು ವಹಿಸಿದರು.

ಶ್ರೀರಾಮ ಭಜನೆಯು ಕಾಡಬಿಟ್ಟು ಅರಿಜನ ಕೊಲನಿಯಲ್ಲಿ ಶ್ರೀ ಸುಬ್ಬಸನವರೆ ಸಂಚಾಲಕತ್ವದಲ್ಲಿ ಜನ್ಮವೆತ್ತಿದ ಮಹಾತ್ಮಾ ಗಾಂಧಿಜಿ ಸ್ಮಾರಕ ಭಜನಾಮಂದಿರದಲ್ಲಿ ತಾ 5ರಲ್ಲಿ ಶ್ರೀ ಕೆ. ಜಗನ್ನಾಥ ಕಾಮತರ ಆಧ್ಯಕ್ಷತೆಯಲ್ಲಿ ಸಾಂಗವಾಗಿ ಜರಗಿತು. ಪ್ರತಿವಾರದಲ್ಲೂ ಶ್ರೀ ರಾಮಭಜನೆಯ ಕಾರ್ಯಕ್ರಮವಿದೆ.

ಕ್ಷಮಾಪಣೆ:— ಉಡುಪಿ ಸರಕಾರಿ ತರಬೇತಿ ಶಾಲೆಯ ಹೋದರ್ ದಳಪತಿಯು ತಾರೀಖು 19-12-1948ರಲ್ಲಿ ಬಳ್ಳಂಪಳ್ಳಿ ಗ್ರಾಮಕ್ಕೆ ಸ್ವಯಾಸಕ್ಕೆ ಹೋಗಿ ಅಲ್ಲಿಯ ಊರ ಮಹನೀಯರುಗಳಿಂದ ಉಚಿತ ಸತ್ಕಾರಗಳನ್ನು ಪಡೆದು, ಸಂಜೆ 6-30ರಿಂದ 10 ಗಂಟೆಯವರೆಗೆ ತಿಜಿಂಗ್ಲಿಯನ್ನು ಪೂರೈಸಿ, ರಾತ್ರೆ ಹಿಂದಿರುಗಿದರು.

ಜನರಲ್ ಟೋಜೋ ಮತ್ತವನ 21 ಮಂದಿ ಅನುಯಾಯಿಗಳನ್ನು ಯುದ್ಧ ಕ್ರೋಪಿಗಳಾಗಿ ಮಾಡಿ 11 ರಾಷ್ಟ್ರಗಳ ಜಡ್ಜರಿದ್ದ ನ್ಯಾಯಾಧೀಶ ಮಂಡಲಿಯೊಂದು ಟೋಕಿಯೋದಲ್ಲಿ 100 ದಿವಸಗಳ ವಿಚಾರಣೆ ನಡೆಸಿ ಟೋಜೋ ಸಮೇತ ಏಳು ಮಂದಿಗೆ ಪಾತಕ ಶಿಕ್ಷೆಯಿಕ್ಕಿತು. ಮಂದಿಗೆ ೨ ವರುಷಗಳಿಂದ ಜೀವಾವಧಿವರೆಗಿನ ಶಿಕ್ಷೆಗಳನ್ನು ವಿಧಿಸಿದ್ದುವು. 11 ಮಂದಿ ಜಡ್ಜರಲ್ಲಿ ಒಬ್ಬರಾದ ಹಿಂದಿ ಜಡ್ಜರು ಅವರೆಲ್ಲರೂ ನಿರಪರಾಧಗಳೆಂದು ತನ್ನ ತೀರ್ಪಿತ್ತಿದ್ದರು; ಈ ವಿಷಯ ಬಿರುಗಾಳಿ ಲೋಕಕ್ಕೆ ಬಡಿದು ಭಾವಾಂದೋಲನವೆಬ್ಬಿಸಿದ್ದಿತು. ಜಾಪೀ ಶಿಕ್ಷೆ ವಿಧಿಸಲ್ಪಟ್ಟವರಲ್ಲಿ ಇಬ್ಬರು ಮಾತ್ರ ಅಮೇರಿಕದ "ಸುಪ್ರೀಮ್ ಕೋರ್ಟಿ"ಗೆ ಅಪ್ಪೀಲು ಅರ್ಜಿ ಬರಕೊಂಡಿದ್ದರು. ಆ ಅರ್ಜಿಯು ತೀರ್ಪಾಗುವ ವರೆಗೆ ಅವಾದಿತರಾರನ್ನೂ ಪಾತಕಿಗೆ ಕೊಡಬಾರದೆಂದು ಜಾಪಾನಿನಲ್ಲಿ ಮಿತ್ರ ರಾಷ್ಟ್ರೀಯ ಮೇಲಧಿಕಾರಿಯಾಗಿರುವ ಜನರಲ್ ಡೊ ಗ್ಲಾಸ್ ಮೇಕಾರ್ಥರರು ತಡೆದಿಟ್ಟಿದ್ದರು. ಆದರೆ ತಾ. 20ರಲ್ಲಿ ವಿವಿಧ ರಾಷ್ಟ್ರಗಳ ನ್ಯಾಯಾಧೀಶ ಮಂಡಲಿ ಕೊಟ್ಟ ತೀರ್ಪಿನ ಸಂಬಂಧದ ಅಪ್ಪೀಲು ಸ್ವೀಕರಿಸುವ ಅಧಿಕಾರ ತನಗಿಲ್ಲವೆಂದು ಅಮೇರಿಕದ ಸುಪ್ರೀಮ್ ಕೋರ್ಟು ತೀರ್ಮಾನಿಸಿದ ಮೇಲೆ ಜಾಪಾನಿನ ಆ ಏಳು ಮಂದಿಯ ಪ್ರಾಣ ಪ್ರಳಯವ ಹಾದಿ ಮತ್ತಿರಲಿಲ್ಲ. ಆ ಮೇಲೆ 48 ತಾಸುಗಳೊಳಗೆ ಅವರೆಲ್ಲರನ್ನೂ ಗಲ್ಲಿಗೇರಿಸಲಾಗುವದೆಂಬ ನಿರೀಕ್ಷೆಯೆ ಹೊರಡಿಸಲಾಯಿತು. ಮೊದಲೇ ತೀರ್ಮಾನಿಸಿದ್ದ ತೆ. ಲೋಕದ ಉದಾರಿಗಳಿಗೆ ಹೊರತು, ಸ್ವತಃ ಆ ಏಳು ಮಂದಿಗೂ ತಾವು ಬದುಕಿ ಉಳಿಯಬೇಕೆಂಬ ಮನಸ್ಸಿರಲಿಲ್ಲ ಜನರಲ್ ಟೋಜೋನಂತೂ ಜೀವನದ ವಿಜಯಸ್ತಂಭನೆಂಬಂತೆ ಘಾತ ಕಂಭದ ತ್ತಲೇ ನೋಡಿದ್ದ. ಅದಕ್ಕಾಗಿ ಆ ಏಳು ಮಂದಿಯೂ ಶುದ್ಧ ಬೌದ್ಧರಾಗಿದ್ದರು. ಅವರು ಬಂಧನಕ್ಕೊಳಗಾದ ಬೀಳ್ಕೊಡುಬ್ಬ ಭಿಕ್ಷು ನೋಬುಕಟ್ಸು ಕನಾಯಾಮಾ ಎಂಬವರು ಜೈಲಿಗೆ ಹೋಗಿ ಅವರಿಗೆ ಬೌದ್ಧ ದೀಕ್ಷೆ ಕೊಟ್ಟು, ದಿನಂಪ್ರತಿ ಹೋಗಿ ಬುದ್ಧನ ಉಪದೇಶಗಳನ್ನು ಪರಿಸುವ ಪರಂಪರೆಯಿಟ್ಟುಕೊಂಡಿದ್ದರು. ಪಾತಕ ಶಿಕ್ಷೆ ವಿಧಿಸಲ್ಪಟ್ಟ ಮೇಲಂತೂ ಸಾವು ಪೀಠಿಕೆ ಹಾಕಲ್ಪಟ್ಟ ಈ ಏಳು ಮಂದಿಯೂ ಬೌದ್ಧ ಸಪ್ತರ್ಷಿಗಳಾಗಿಯೆ ಮಾರ್ಪಟ್ಟಿದ್ದರು. ಭಿಕ್ಷುವು ಅಧಿಕಾರಿಗಳ ಹೊತ್ತು ಅವರೊಡನೆಯೇ ಇರುತ್ತಿದ್ದ. ಪಾತಕಿಗರಲಿದ್ದ ಕೆಲವೇ ತಾಸುಗಳ ಮೊದಲು ಜೈಲುಕೋಣೆಯಲ್ಲೇ ವಿಷ ತಿಂದು ಸತ್ತು ತನ್ನ ಪಾಲಿನ ಹಗ್ಗವನ್ನು ನಿರರ್ಥಕಗೊಳಿಸಿದ್ದ ಗೋರಿಂಗನ ನೆನಪು ಮಿತ್ರ ರಾಷ್ಟ್ರೀಯರಿಗಿದ್ದುದರಿಂದ ಇವರ ಮೇಲೆ ಅತ್ಯಂತ ಬಿಗುವಾದ ಕಾವಲಿತ್ತು. ಇವರಿಗೆ ಪಾತಕ ಶಿಕ್ಷೆ ವಿಧಿಸಲ್ಪಟ್ಟುದು ನವಂಬರ್ 12ರಲ್ಲಿ. ಇವ್ಯರು ಸುಗಮವೋ ಜೈಲಿನಲ್ಲಿ. ಆ ದಿನದಿಂದ ಅವರನ್ನು ಏಂಗಡಿಸಿ ಒಬ್ಬೊಬ್ಬನನ್ನೆ ಒಂದೊಂದು ಕೋಣೆಯಲ್ಲಿ ಇಟ್ಟಿದ್ದರು. ಅಂದಿನಿಂದ ಸೆಕುಂದ ಬಿಡದೆ ಅವರನ್ನು ಕಾಯುತ್ತಿದ್ದವರ ಮತ್ತು ಪರೀಕ್ಷಿಸುತ್ತಿದ್ದವರ ಒಟ್ಟು ಸಂಖ್ಯೆಯು ಒಬ್ಬನಿಗೆ ನೂರು ಮಂದಿಯಷ್ಟಾಗಬಹುದು. ಬ್ರಿಟಿಷ್ ಸೈನ್ಯದ ಕೋರ್ಪರಲನ ಕೈಕೆಳಗೆ ಎಂಟು ಮಂದಿ ಪಹರೇಗಾರರು ಸದಾ ಅಣಿಯಾಗಿದ್ದರು. ಅದೇ ರೀತಿ ಸೇನಾ ಡಾಕ್ಟರರು, ಮನಃಪರೀಕ್ಷಕ ಪಹರೆಯವರು ಅವಿರಾಮವಾಗಿ ಜಾಗರಿದ್ದರು. ಇಬ್ಬರು ಕೈದಿಗಳಿಗೆ ಒಬ್ಬನಂತೆ ಪಹರೆಗಾರ ನಿಲ್ಲುವ ಪದ್ಧತಿ ಸಾಗಿಹೋಯ್ತು. ನಿಂತಿರಬೇಕು; ಕೂತಿರಬಾರದು. ಪ್ರತಿ ಗಳಿಗೆಯಲ್ಲಿ ಮತ್ತೊಬ್ಬ ಪಹರೆಗಾರ ಭದ್ರವಾಗಿ ಮುಚ್ಚಿದ್ದ ಆ ಕೈದಿ ಕೋಣೆಗಳ ಬಾಗಿಲ ಭಂಗದಲ್ಲಿ ತಿರುಗುತ್ತಾ ಇರಬೇಕು. ಈ ನಿಯಮವು ಪ್ರತಿ ಹದಿನೈದು ನಿಮಿಷಗಳಿಗೂ ಒಮ್ಮೆ

ಆ ಏಳು ಮಂದಿಯ ಸಂಬಂಧಿಕರನ್ನು ಕೂಡಾ ಆತ ಪಡೆದಿರಲಿಲ್ಲ. ಆವನ ಪತ್ನಿಯಂತೂ ತನ್ನ ಗಂಡನ ಜೀವನದಂತೆಯೇ ಮರಣವೂ ಸಾರ್ಥಕವಾಯಿತೆಂಬ ಸಮಾಧಾನ ಪಡೆದಿರಬೇಕು. ಈ ಸಂಬಂಧದ ಜಾಪಾನರ ಕೋಳವು ಹೆಗ್ಗಳಿಕೆಯಾಗಿ ಮಾರ್ಪಡುವಂತೆ ತಾನೇ ಮಾದರಿಯಾಗಿದ್ದಳು; ಜಾಪಾನೀ ಮಹಿಳೆಯ ಮನೋಮಟ್ಟದ ಕಡೆಗೆ ಪ್ರಪಂಚವೇ ಗೌರವ ದೃಷ್ಟಿ ಬೀರುವಂತೆ ಮಾಡಿದ್ದಳು ಅಂತೂ ತವ್ಯನ್ನು ಪಾತಕಿಗೆ ಕೊಡಿಸಿದವರು ಕಟ್ಟಗಲಿಬಲಿಯ ಅಣುಮಾತ್ರ ಅವಿಗ್ನಕ್ಕೂ ಬಗಾಗದೆ ಆ ಏಳು ಮಂದಿಯೂ ನಿರ್ವಿಕಾರ ರಚಿತ್ತದಿಂದ ನಿಷ್ಟಂತೆಯಿಂದ ತಾ. 23ನೇ ರಾತ್ರಿ ಪಾತಕ ಕಂಭಕ್ಕೇರಿ ಪ್ರಾಣ ಬಿಟ್ಟರು!

ಆ ಏಳು ಮಂದಿ

ಜನರಲ್ ಹಿದೆಕಿ ಟೋಜೋನ ಹೆಸರು ಲೋಕ ಪ್ರಸಿದ್ಧ. ಜಪಾನಿನಲ್ಲಿಂತೂ ದೀರ್ಘಾವಧಿಯಿಂದಲೂ ಇದ. ಮನೆಮಾತಾಗಿತ್ತು; ಗೌರವಪದವಿ ಪಡೆದುಬಿತ್ತು. 1911ನೇ ಒಕ್ಟೋಬರಿನಲ್ಲಿ ಈತ ಜಪಾನ್ಸಾಮ್ರಾಜ್ಞನ ಮಂತ್ರಿಸ್ಥಾನಕ್ಕೆ ಬಂದ; ಆಗ ಜರ್ಮನಿ, ಇಟೆಲಿಗಳೊಡನೆ ಬ್ರಿಟನ್, ಅಮೇರಿಕ ಮಿತ್ರರಿ ಮಿತ್ರ ರಾಷ್ಟ್ರಗಳ ಯುದ್ಧ ನಡದಿದ್ದಿತ ಜಪಾನು ತಮಗಿದಿರು ಬೀಳುವದೆಂಬ ಸೂಚನೆಯಲ್ಲಿ ಮಿತ್ರ ರಾಷ್ಟ್ರಗಳದ್ದವು. ತಾನು ಅಧಿಕಾರಕ್ಕೆ ಬಂದು ಎರಡು ತಿಂಗಳಾಗುತ್ತಿದೆನ್ನುವಾಗಲೇ ಟೋಜೋ 'ಪರ್ಲ್ ಹಾರ್ಬರ್' ಹೊದೆತ ಕೊಟ್ಟ, ಜಪಾನನ್ನು ಯುದ್ಧಕ್ಕೆಳಿಸಿದ. ಕೊನೆಗೂ ಯುದ್ಧದಲ್ಲಿ ಸೋತು ಜಪಾನು ತನ್ನ ಸರ್ವಸ್ವವನ್ನೂ ಕಳಕೊಂಡ ಮೇಲೆ ಜನರಲ್ ಟೋಜೋ ತನ್ನ ಕೋಣೆಯಲ್ಲೇ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದ; ಕರಾಳ ವಿಷ ನುಂಗಿದ್ದ! ಆದರೆ ಜೀವನನ್ನು ಹಾಗೆ ಸಾಯಲು ಬಿಡದೆ ಹೀಗೆ ಸಾಯಿಸಿದರು. ಸಾಯನಾಗಿ ಅವನ ವಯ್ಯ 64.

ಉಳಿದ ಆರು ಮಂದಿಯೂ ಮಿತ್ರ ರಾಷ್ಟ್ರೀಯರ ಸಪ್ತೈರಿಗಳೇ; ಯುದ್ಧ ಸ್ಪತಾಪಿ ಜಾಪಾನಿನ ಪ್ರಮುಖ ಸೂತ್ರ ಧಾರಿಗಳಾಗಿದ್ದವರೇ. 70 ವರುಷ ವಯ್ಯದ ಜಪಾನ್ ಗಟ್ಟಿಮನುಷ್ಯ ಕೋಕಿ ಹಿರೊಟ.—1937ರ ನಾನ್ಕಿಂಗ್ ಅತ್ಯಾಚಾರದ ವೇಳೆ ಮಧ್ಯ ಚೈನದಲ್ಲಿ ಸೇನಾಸಿಯಾಗಿ ಜಾಪಾನ್ ಸೇನೆಯನ್ನು ನಡೆಸಿದ್ದ 70 ವರುಷ ವಯಸ್ಸಿನ ಇವನ ಮಟ್ಟುಸಿಯ,—ತನ್ನ ತಾರುಣ್ಯದಲ್ಲೇ 'ಮಂಚೂರಿಯಾ ಭಯಂಕರ'ನೆನ್ನಿಸಿ, 1940ರಿಂದ 43ರ ವರೆಗೆ ಜಾಪಾನಿನ ಸುಪ್ರೀಮ್ ಕೌನ್ಸಿಲ್ ಸದಸ್ಯನಾಗಿಯೂ 1944-45ರಲ್ಲಿ ಸಿಂಗಾಪುರದಲ್ಲಿ ಜಾಪಾನಿನ 7ನೇ ಸೇನೆಯ ನಾಯಕನಾಗಿದೂ ಇದ್ದ ವಯ್ಯ 65ರ ಕೆಂಜಿ ಡೊಯಿಹಾರಾ,—1944ರಲ್ಲಿ ಬರ್ಮದಲ್ಲಿ ಜಾಪಾನ್ ಸರ್ವ ಸೇನಾನಿಯಾಗಿದ್ದ 60 ವರುಷದ ಹಯಟೊರೊ ಕಿಮುರ,—1945ರಲ್ಲಿ ಸಿಂಗಾಪುರದ ಜಾಪಾನ್ 7ನೇ ಸೇನೆಯ ಸೇನಾನಿತ್ವ ವಹಿಸಿದ್ದ ವಯಸ್ಸು 66ರ ಎಳೆತಿರೋ ಇಟಗಾಕಿ,—ಫಿಲಿಪ್ಪಾಯಿನ್ಸಿನಲ್ಲಿ ಈ ಮೊದಲೇ ಮರಣ ದಂಡನೆಗೊಳಗಾಗಿದ್ದ ಜನರಲ್ ಯಮಶಿಟಾನ ಮಂಡಳೇ ನಾಯಕನಾಗಿದ್ದ ಒಕಿರಾ ಮ್ಯೂಟೆ. ಈ ಆರು ಜನ ಟೋಜೋನೊಂದಿಗೆ ಸಾವಿಕ್ಕೆ ಕಂಠವೊಡ್ಡಿದರು.

ಅವರು ಬೌದ್ಧರು

ಜಾಪಾನು ಮುಖ್ಯತಃ ಬುದ್ಧ ಮತಾನುಯಾಯಿ ರಾಷ್ಟ್ರ. ಅಮೆರಿಕ ಮೊದಲಾದ ಪಾಶ್ಚಾತ್ಯ ಮತಾನುಯಾಯಿಗಳು ಯುದ್ಧೋಪಿನಲ್ಲಿ ರಕ್ತದೋಕುಳಿಯಾಡಿದ್ದಂತೆಯೇ ಅಹಿಂಸಾಗುರು ಬುದ್ಧನ ಈ ಅನುಯಾಯಿಗಳೂ ಅನ್ಯಾದಲ್ಲಿ ರಕ್ತ ಪ್ರವಾಹ ಹಂಚಿದ್ದರೂ ಮರಣಕಾಲದಲ್ಲಿ ಮೇಲಿನ

ದಿ ಕೆನರಾ ಬ್ಯಾಂಕ್, ಲಿಮಿಟೆಡ್

ಸ್ಥಾಪಿತ: ೧೯೦೬

[ಹೊಡೆಗಾಂಕೆ ಪರಿಮಿತಿಕಲ್ಪಟ್ಟು ಇದಿಯಾದಲ್ಲಿ ಸಾಂಸೀಕರಿಸಿದ್ದು]

ಸಂಗ್ರಹ (ಕಲೆಕ್ಷನ್)- ಸೇವೆ

ನಮ್ಮ ಕಲೆಕ್ಷನ್ [ವಸೂಲಿ ಆಥವಾ ಸಂಗ್ರಹ] ಇಲಾಖೆಯು, ನಮ್ಮ ಶಾಖೆಗಳುವಲ್ಲಿ ರಖಮುಗಳ ವಸೂಲಿಯನ್ನು ಕ್ಷಿಪ್ರತೆಯಿಂದ ಮಾಡುವಂತೆ ಸುನ್ಮನಸ್ಕೆಗೊಳ್ಪಟ್ಟಿದೆ. ಕೋಣಸಿದಂತಿರುವ ನಮ್ಮ ಶಾಖೆಗಳು ದಬ್ಬಣದ ಆರಂಭೆಯ ಕ್ಷೇತ್ರಗಳಲ್ಲಿ—ತಮಿಳು ನಾಡಿನ ಆಕ್ಕಿ ಮತ್ತು ನೆಲಗಡಲೆಯ ಪ್ರದೇಶಗಳಲ್ಲಿ—ಮಲಬಾರು ಜಿಲ್ಲೆಯ ತೆಂಗುಗಳ, ವೃಕ್ಷವಾಟಿಕೆಗಳಿರುವಲ್ಲಿ- ಮತ್ತು ಮುಂಬಾಯಿ ಹಾಗೂ ಅಪರ ಉಪನಗರಗಳಲ್ಲಿ ವಿಸ್ತರಿಸಿವೆ.

ಬ್ಯಾಂಕುಗಳ ಮತ್ತು ನೈಯಕ್ತಿಕವಾಗಿ ಗಣಕಗಳ ಬಗ್ಗೆ ಕಲೆಕ್ಷನ್ ರಖಮುಗಳನ್ನು ವಹಿಸಿಕೊಳ್ಳುವಲ್ಲಿ, ನಮ್ಮ ನಾಲ್ವತ್ತು ವರ್ಷಗಳ ಅನುಭವವು ಕ್ಷಿಪ್ರ ಮತ್ತು ವಿಚಕ್ಷಣ ಸೇವೆಯ ಖಚಿತ್ಯವನ್ನು ರೂಪಿಸಿತರುವಂತೆ ನಾವಾಗಿದೆ.

ನಮ್ಮ ಕಲೆಕ್ಷನ್ ಇಲಾಖೆಯ ಸವಲತ್ತುಗಳು ಸುಲಭವಾಗಿ ನಿಮ್ಮವಿಶಿಷ್ಟ ಅವಶ್ಯಕತೆಗಳಿಗೆ ಹೊಂದಿಸಿಕೊಳ್ಳಬರುತ್ತವೆ. ಆದರಿಂದ ನಿಮಗೆ ಸವಲಯವೂ, ಹಣವೂ ಉಳಿಯುವುದು. ಏಕೆಂದರೆ ನಾವು ವಹಿಸಿಕೊಳ್ಳುವ ಕಲೆಕ್ಷನ್ ರಖಮುಗಳ ಕಡೆಗೆ ಯಾವಾಗಲೂ ಸಂಬಂಧಪಟ್ಟವರ ತೀಕ್ಷ್ಣ ಲಕ್ಷ ಹೊರಿಯುದು.

he Canara Bank Limited.

ESTD: 1906.

ಮುಂದಿನ ಸುಖ ಸೌಕರ್ಯಕ್ಕೆ

ಇಂದೇ ಮುಂಜಾಗ್ರತೆ ವಹಿಸುವುದೇ

ಜಾಣತನವಲ್ಲವೆ!

ಕಡಿಮೆ ಉತ್ಪತ್ತಿಇದ್ದು, ಸ್ವಲ್ಪ ಸ್ವಲ್ಪ ಸ್ವಾದರೂ ಉಳಿಸಬೇಕೆನ್ನುವವರಿಗೆ ತ್ಯನುಕೂಲವಾದ ಜನತಾ ವಿಮಾಸೆ

ದಿ ನ್ಯೂ ಕರ್ನಾಟಕ

ಪ್ರೊವಿಡೆಂಟ್ ಇನ್ಶೂರೆನ್ಸ್ ಕಂ

ಲಿಮಿಟೆಡ್.

ನಿಮಾವಿನರಕ್ಕೆ ವಿಜಸ್ಸಾಮಾನ್ಯ ಬರೆಯಿರಿ.

ಪಾತಿಗೆ ಕೊಟ್ಟು ಮುಗಿಸಿದರು!

ಕೊಲ್ಲುವವರಲ್ಲಿದ್ದ ಆವೇಗ ಸಾಯುವವರಿಗಿರಲಿಲ್ಲ!

ಲು ಒದಲಾಗುತ್ತಿತ್ತು. ಪ್ರತಿ ಕಾಲು ಗಂಟೆಗೊಮ್ಮೆ ಕೊರ್ಪರಲ್ ಸ್ವತಃ ಬಂದು ತನಖಿ ನಡಿಸಿ ಹೋಗುತ್ತಿದ್ದ. ಕಂಡಯೇ ಕಾವಲಿಗಿಟ್ಟಿದ್ದ ಡಾಕ್ಟರರು ಕೂಡ ಪ್ರತಿ ೫ ಮಿನಿಟಿಗೆಪ್ಪತಿಯೊಬ್ಬ ಕೈದಿ ಯ ಒಳಪ್ಪುರಾಣಿಗಳನ್ನೂ ಪರೀಕ್ಷಿಸಿಹೋಗುತ್ತಿದ್ದರು. ಸಾವು ಪೀರಿಸಿದ್ದ ನವೆಂಬರ ೨೭ರಿಂದ ಫಾಶೀ ಹಗ್ಗಕ್ಕೇರಿದ ದಶಂಬರ್ ೨೭ ವರೆಗೂ ಈ ಕ್ರಮವು ಕ್ಷಣವಿರಾಮವೂ ಇಲ್ಲದೆ ಜಾರಿಯಲ್ಲಿತ್ತು. ದಶಂಬರ್ ೨೭ನೇ ಕಾರ್ಯಕ್ಷಿನಿಂದ ಈ ಜಂತ್ರಾರ್ಪ ಕೈದಿಗಳನ್ನು ದಿನಕ್ಕೆರಡು ಬಾರಿಯಂತೆ ಅವರ ಸಂಬಂಧಿಕರು ನೋಡಿ ಹೋಗುವ ಏರ್ಪಾಡು ಮೊದಲೇ ಮಾಡಿರಿತ್ತಿದ್ದರು. ಆದರೆ ಗೋರಿಂದ ಕಾಯಿಕ' ಪುನರಾವರ್ತನೆಗೊಳ್ಳದಂತೆ ಅಂತಿಮ ಸಂದರ್ಭಗಳಲ್ಲಿ ಅತಿರೇಕ ಜಾಗರೂಕತೆ ವಹಿಸಿದ್ದರು. ಇಂತಹ ಕಟ್ಟಿಣ ಸಂದರ್ಭದಲ್ಲಿ ಜಗದೊಳಗಿದ್ದ ಆ ಏಳು ಮಂದಿಯ ಕೃಪಯ ಮಾತ್ರ ಆಗ ನಿಜಕ್ಕೂ ಹೊವಿ ಎಂದೆನಿಸಿತ್ತು; ಆವರು ಈ ಅವಧಿಯಲ್ಲಿ ನಿಜಕ್ಕೂ ಜಿಗುಪ್ಸೆ, ಸಿಟ್ಟು ಅಥವಾ ಯಾವುದೇ ಒಡವೆ ಆವೇಗ ಪ್ರದರ್ಶಿಸಿದ್ದ ಏಕ ಮಾತ್ರ ನಿದರ್ಶನವೂ ಪಹರೆಯವರಿಗೆ ದೊರೆಯಲಿಲ್ಲ; ಆವರು ಅತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸಿದ್ದಂತೂ ಇಲ್ಲ; ಇಂತಹ ಯೋಚನೆ ಆವರ ತಲೆಯಲ್ಲಿ ಸೊಸಿ ಲಕ್ಷಣ ಕೂಡಾ ಎಂದೂ ಕಂಡು ಬರಲಿಲ್ಲ.

ಮಾಶಿಗೇರಿದ ದೃಶ್ಯ

ಟೋಕಿಯೋ ಬಳಿಯ ಸುಗಾಮೋ ಸೆರೆಮನೆಯಲ್ಲಿ ಜನರಲ್ ಟೋಜೋ ಸಮೇತ ಏಳು ಮಂದಿ ಜಪಾನ್ ಯುದ್ಧ ನಾಯಕರನ್ನು ತಾ.23ನೇ ಮಧ್ಯರಾತ್ರಿ ತಾ. ೨೪ ಕಳೆದು ಒಂದು ಮಿನಿಟುಗಳಾವಾಗ ಫಾಶಿಗೆ ಕೊಡವರೆಂದು ಸ್ಪಷ್ಟವಾಗಿ ತಿಳಿದಿದ್ದವರು ಆ ಕಾರ್ಯಕ್ಕೆ ಸಂಬಂಧಿಸಿದ ಕೆಲವರು ಮಾತ್ರ. ಮೇಕರ್ಥರ್ ಸೇನಾಕಚೇರಿಯು ಈ ಕುರಿತಾದ ಗುಟ್ಟನ್ನು ಎಲ್ಲಿಯೂ ಲವ ಮಾತ್ರವೂ ಹೊರಹೊಮ್ಮದಂತೆ ಜಾಗರೂಕತೆ ವಹಿಸಿದ್ದಿತು. ಇವರ ಫಾಶೀ ನಡೆದುದನ್ನು ಕಂಡ ಸಾಕ್ಷಿದಾರರಾಗಿ ಅಳಿಯಲು ಜಪಾನಿನ ವಿಶ್ವಸಂಸ್ಥೆಯ ಬೌನ್ಸಿಲ್ ಸದಸ್ಯರು ಆ ಹೊತ್ತಿನಲ್ಲಿ ಸುಗಾಮೋ ಜೈಲಿನಲ್ಲಿ ಹಾಜರಿರುವಂತೆ ಜನರಲ್ ಮೆಕರ್ಥರ್‌ರವರು ಕೇಳಿಕೊಂಡಿದ್ದರು ಆವರಾರೂ ಸುಪಂಚಿತವಿರುವ ತಮ್ಮ ಸ್ವಂತ ಕಾರಿನಲ್ಲಿ ಹೋಗದೆ ಮಾಕೆ ಜಾಲೇಪಿತ ಸೇನಾ ಕಾರುಗಳಲ್ಲಿ ಹೋಗಬೇಕೆಂದು ಮೇಕರ್ಥರರು ತಿಳಿಸಿದ್ದಂತೆ ಮೇಕರ್ಥರ್ ವಿಲಿಯಮ್ ಸೆಹಾರ್ಲ್ಸ್, ಸೈದ ಜನರಲ್ ಪೆರೆವಾಂಕೊ, ಬ್ರಿಟಿಷ್ ಕಾಮನ್‌ವೆಲ್ತಿನ ಪೆಟ್ರಿಕ್ ಶಾ, ಚೈನದ ಜನರಲ್ ಶಾಂಗ್‌ಶೆನ್ ಇಷ್ಟಾರಿಬ್ಬರು ಒಂದು ಮಾಕೆಗಾರಿನಲ್ಲಿ ಕುಳಿತು ಮಧ್ಯರಾತ್ರಿಗೆ ೨ ಮಿನಿಟಿರ ವಾಗ ಸುಗಾಮೋ ಜೈಲಿನ್ನ ಹೊಕ್ಕುದಸ್ಮೂಅಲ್ಲಿ ಮುಕ್ತಯ ಕೈನನ್ನು ಪ್ರತ್ಯಕ್ಷ ನೋಡಿ ಘಂಟೆ 1-10ಕ್ಕೆ ಅಲ್ಲಿಂದ ಹೊರಟೆ ಹೋದುದನ್ನೂ ಹೊರಗಿದ್ದವರು ನೋಡಿದ್ದರು ಆ ರಾತ್ರಿ ಆಕಾಶವಾಣಿಯಲ್ಲಿ ಇಂಥಾವ ಚಿಹ್ನೆಯೂ ಗೋಚರಿಸಿರಲಿಲ್ಲ ಆಕಾಶವಾಣಿ ನಿಲ್ದಾಣದಲ್ಲಿ ವರದಿಗಾರರು 20 ತಾಸುಗಳಿಂದಲೂ ಯಾವಾಗಲೋ ಏನೋ ಎಂದು ಈ ವಿಶೇಷ ವಾರ್ತೆಗಾಗಿ ಕಾಯುತ್ತಿದ್ದರು; ಅನೇಕರಿಷ್ಟ ಸುಪ್ರೀಮ್ ಕೋರ್ಟಿನ ತೀರ್ಪು ಕೇಳಿ ಬಂದಂದಿನಿಂದ ಈ ವಾರ್ತೆಗಾಗಿ ಕಿವಿಯಿರಿಸಿ ಕೊಂಡಿದ್ದವರು ಬಹಳಮಂದಿ ಆದರೆ ಎಲ್ಲವೂ ಮುಗಿಯುವವರೆಗೆ ಹೊರಗಿನವರಾರಿಗೂ ಯಾವ ಸ್ಪಷ್ಟ ಸುದ್ದಿಯೂ ದೊರೆತಿರಲಿಲ್ಲ. ಆ ರಾತ್ರಿ ಜೈಲಿಗೆ ಹೋದ ಬುದ್ಧಭಿಕ್ಷು ನೋಬುಕಟ್ಸು ಹನಾಯಾಮಾ ಹೊರಗೆ ಬಾರದೆ ಅಲ್ಲಿಯೇ ತಪಶ್ಚೆ ಕುಳಿತಂತಿದ್ದುದರಿಂದ 'ಇಂದೇ ಫಾಶಿಗೆ ಕೊಡುವರೆಂಬುದು ಕಾಣುತ್ತಿದೆ' ಎಂಬೊಂದು ಲಘು ಸುದ್ದಿಯನ್ನ ಜಪಾನಿನ ಕೆಫೆ ಮಾಲಕನೊಬ್ಬನ ಕಿವಿಯಲ್ಲಿ ಬಿಚ್ಚಿದ್ದ; ಅದೊಂದೇ ಗಾಳಿ ಸುದ್ದಿಯಾಗಿ ಹರಡಿತ್ತು ಹೊರತು ಹೆಚ್ಚಿನದೇನೂ ಸುಳಿವಾಡಿದ್ದಿಲ್ಲ. ಜೈಲಿನೆತ್ತ ದೃಷ್ಟಿಯಿಟ್ಟಿದ್ದವರಿಗೂ ಯಾವ ಸೊಸ ಚಲನವಲನವೂ ಗೋಚರಿಸದೆ ಅದು ಎಂದಿನಂತೆ ಶುಭ್ರ ಬೀಕರತೆಯನ್ನಷ್ಟೇ ಬೀರುತಿತ್ತು.

ಅತ್ತ ಸುಗಾಮೋ ಜೈಲಿನೊಳಗೆ ಏಳು ಘನ ಜೀವಗಳನ್ನು-5ರಿಂದ 70 ವರುಷದ ವರೆಗೆ ಬಾಳಿದ್ದು ಲೋಕದ ಚರಿತ್ರೆಗೊಂದು ಮಹಾ ಅಧ್ಯಾಯವನ್ನೇ ಸೇರಿಸಿಬಿಟ್ಟ ಸಪ್ತ ಜೀವನಗಳನ್ನು-ಕೆಲವೇ ಮಿನಿಟುಗಳೊಳಗೆ ಮುಗಿಸಿ ಬಿಡುವ ಕಾರ್ಯ ಪೀರಿಕೆಯು ಅತ್ಯಂತ ಗಂಭೀರವಾಗಿ ನಡೆದಿತ್ತು. ತಾ. 22ನೇ ಮಧ್ಯರಾತ್ರಿ ಕಳೆದ ಒಂದು ಮಿನಿಟುಗಳಾವಾಗ ಅವರನ್ನು ಕಂಭದ ಹಗ್ಗಕ್ಕೇರಿಸಲಾಗುವುದೆಂಬ ಸೂಚನೆಯು ತಾ. 21ರಲ್ಲಿ ಇಬ್ಬರಿಬ್ಬರಾಗಿ ಅವರು ಜೈಲಾಧೀಕ್ಷರನ ಆಫೀಸಿಗೆ ಹೋದಲ್ಲಿಯೇ ತಿಳಿಸಲಾಯಿತು. ಆಗ ಆವರು ಅಪೇಕ್ಷಿಸಿದ ತಮ್ಮ ಜೀವನದ ಕೊನೆಯ ಬಯಕೆಯೆಂದರೆ ಬುದ್ಧ ಭಿಕ್ಷು ವಿನೂದನೆ ಒಂದು ತಾಸು ಇಲ್ಲ ತಮ್ಮನ್ನು ಬಿಡಬೇಕೆಂಬುದೇ; ಸಾಯುವವರು ಈ ಅಂತಿಮ ಬಯಕೆ ಸಂಡಾಯುವಾಯಿತು. ತನಗೆ ಪದ್ಧತಿಯಂತೆ ಇಮೆರಿಕೆಯ ಸೇನಾ ಪಹರೆಯೊಟ್ಟಿಗೆ ಕೊಡುವ ಬದಲಿಗೆ ಕೊನೆಯ ದಿನದಲ್ಲಿ ಜಪಾನೀ ಊಟ ಕೊಡಬೇಕೆಂಬ ಒಂದೇ ಒಂದು ಖಾಸಗೀ ಬೇಡಿಕೆಯು ಜನರಲ್ ಟೋಜೋನಿಂದ ಬಂತು-ಪ್ರಾಣ ಬಿಡುವಾಗ ತನ್ನ ಅತ್ಯಂತೆಯೇ ಅನ್ನ ಕೋಶದಲ್ಲೂ ಜಾಪಾನಿತ್ವವೇ ಇರಬೇಕೆಂದು ಬಯಸಿದನೇನೋ! ಅವನಿಚ್ಛಿಸಿದ ಊಟವೊರೆಯಿತು. ತಮ್ಮ ಜೀವನದ ಕೊನೆಯ ತಾಸನ್ನು ತಂತಮ್ಮ ಕುಟುಂಬಿಕರು ಹಾಗೂ ಸಂಬಂಧಿಕರಿಗೆ ವಿದಾಯ ಪತ್ರ ಬರೆಯುವದರಲ್ಲೂ ತಾವು ಕಮ್ಮೆಗಳಿಗೆ ಒಬ್ಬರನ್ನೊಬ್ಬರು ಬೀಳ್ಕೊಳ್ಳುವುದರಲ್ಲೂ ಕಳೆದರು. ಬುದ್ಧ ಭಿಕ್ಷು ಹನಯಾಮಾ, ಅದಕ್ಕಾಗಿಯೇ ಕಟ್ಟಿದ್ದ ಜೈಲು ಪ್ರಾರ್ಥನಾ ಕೋಣೆಯಲ್ಲಿ ಕೊನೆಗಾಲದ ಬೌದ್ಧ ಪ್ರಾರ್ಥನಾ ವಿಧಿ ನಡೆಸಿದ.

ನೆಮ್ಮದಿಯಿಂದ ಪ್ರಾಣಬಿಟ್ಟರು

ಏಳು ಮಂದಿಯನ್ನು ಎರಡು ಪಂಗಡ ಮಾಡಿ ಸರದಿ ಪ್ರಕಾರ ಫಾಶಿಗೇರಿಸಿದ್ದರು. ಪ್ರಥಮ ಕಂತಾಗಿ ಟೋಜೋ, ಡೊಯಿಹಾರಾ, ಮಟ್ಸುಯಿ, ಮ್ಯೂಟೊ ಈ ನಾಲ್ವರು; ದ್ವಿತೀಯ ಕಂತಾಗಿ ಇಟಗಾಕಿ, ಹಿರೊಟ, ಕಿಮುರಾ—ಈ ಮೂವರು. ನಿಶ್ಚಿತ ಸಮಯಕ್ಕೆ 20 ಮಿನಿಟು ಮುಂಚಿತವಾಗಿ ಮೊದಲಿನ ನಾಲ್ವರನ್ನು ಆವರ ಆವರ ಕೋಣೆಗಳಿಂದ ಹೊರಗೆ ಕರೆ ಮುಸುಕು ಬಿಚ್ಚು; ಕೊರಳಿಗೆ ಹಗ್ಗದ ಪೊನಿಕ್ಕಿಕೊಂಡಿತು; ಕಾಲಡಿಯ ಹಲಗೆ ಜಾರಿತು- ಇವಿಷ್ಟೂ 90 ಸೆಕೆಂಡುಗಳೊಳಗೆ! ಇದೇ ರೀತಿ ಏಳು ಮಂದಿಯೂ ಮುಕ್ತಾಯಗೊಂಡರು. ಮೊದಲಿನ ನಾಲ್ವರಿಗೆ ಮಧ್ಯರಾತ್ರಿ ಕಳೆದು 10½ ನಿಟುಗುವಾಗ ಟೋಜೋನ-7½ ಮಿನಿಟು ಗುವಾಗ ದೇಹಿಯಾಂತ-11½ ಮಿನಿಟಿನಲ್ಲಿ ಎಷ್ಟಾಟ-13 ಮಿನಿಟುಗಳಲ್ಲಿ ಮಟ್ಸುಯಿಯ-ಪ್ರಾಣ ಪಕ್ಷಿ ಹಾರಿಹೋಗಿತ್ತು. ಉಳಿದ ಮೂವರು ಪ್ರಜ್ಞೋತ್ಪನ್ನವಾದ ಅವಧಿಯೂ ಬಹಳ ಹೊತ್ತಿಗೆ ಈ ಆಂತರದೊಳಗೆನೇ ಇತ್ತು. ಅಂತೂ ತಿಂ

THE BOMBAY LIFE ASSURANCE COMPANY, LTD.

ದಿ ಬೊಂಬೆ ಲೈಫ್ ಎಶ್ಯೂರೆನ್ಸ್ ಕೊ. ಲಿಮಿಟೆಡ್

(ಸ್ಥಾಪನೆ. 1908)

ಅತ್ಯಲ್ಪ ಖರ್ಚಿನಿಂದ ಅತ್ಯಧಿಕ ಲಾಭವನ್ನೀಯುವ
ಅಗ್ರಗಣ್ಯ ವಿಮಾ ಸಂಸ್ಥೆಗಳಲ್ಲೊಂದು

ಪ್ರಧಾನ ಏಜಂಟರು:

ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್, ಉಡುಪಿ.

ಇವರ ಶಾಖಾ ಏಜೆಂಟಗಳು.

ಬೊಂಬಾಯಿ, ಮದ್ರಾಸು, ಬೆಂಗಳೂರು, ಕೊಯಮುತ್ತೂರು, ತ್ರಿವೇಂದ್ರಮ್,
ಕಲ್ಲಿಕೋಟೆ ಮತ್ತು ಮಂಗಳೂರು

ಕಳೆದ ಮೂವತ್ತೆಂಟು ವರ್ಷಗಳಿಂದ ವಿಮಾ ಕ್ಷೇತ್ರದಲ್ಲಿ ಸತತ ದುಡಿದವರಾದ
ನಾವು ಜನತೆಗೆ ಪ್ರೀತಿಯಿಂದಲೂ ಶ್ರದ್ಧೆಯಿಂದಲೂ ನಮ್ಮ ಸೇವೆಯನ್ನು
ಸಲ್ಲಿಸುತ್ತೇವೆಂಬುದೇ ನಮ್ಮ ಹೆಗ್ಗಳಿಕೆಯು ಮಾತು.

ವಿಮಾ ಮಾಡಲಿಚ್ಛಿಸುವವರಿಗೆ, ಪ್ರತಿನಿಧಿಗಳ ಪಡೆಯ ಲಿಚ್ಛಿಸುವವರಿಗೆ
ದಯವಾಡಿ ನಮಗಾಗಲೀ ಅಥವಾ ನಮ್ಮ ಶಾಖೆಗಳಿಗಾಗಲೀ ಒರೆಯಿರಿ.

"ಯುದ್ಧಕ್ಕಾಹುತಿಯಾದವರ ಮಿಲಿಯಾವಧಿ ಕುಟುಂಬಗಳ ದುಃಖದಿದಿರಲ್ಲಿ ನನಗಾದುದೇನೂ ಗಣ್ಯವಲ್ಲ. ನನ್ನವರು ಇಷ್ಟೊಂದು ಸಿಶ್ಚಿಂತೆಯಿಂದ ಸತ್ತುದಕ್ಕಾಗಿ ಸಂತೋಷಿಸುತ್ತೇನೆ"

—ವಿಘವೆಯಾದೊಡನೆ ಶ್ರೀಮತಿ ಟೋಜೊ

23 ಹುಡಿಯುವ ಮಧ್ಯ ರಾತ್ರಿಯ ಮೊದಲನೇ ನಿಮಿಷದಿಂದಾರಂಭಿಸಿ, 35 ನಿಮಿಷಗಳ ವರೆಗಿನ ಕಾಲವು ಮಾಜೀ ಸ್ವತಂತ್ರ ಜಪಾನ್ ಗಗನದ ಸಪ್ತ ತಾರೆಗಳೂ ಅಸ್ತಮಿಸಿ ಆ ಭಾಗದಲ್ಲಿ ಪೂರ್ತಿ ಕತ್ತಲೆ ಕವಿದ ಚಿರಸ್ಮರಣೀಯ ಕಪ್ಪು ಮುಹೂರ್ತ; ಅಥವಾ ಹಿಂದಿನ ಸ್ವತಂತ್ರ ಜಪಾನ್ ಭೂಮಿಯನ್ನು ಹೊತ್ತಿದ್ದ ಮಹಾ ಶೇಷನ ಏಳು ಹೆಡೆಗಳು ಕತ್ತರಿಸಿ ಬಿದ್ದ ವಿಶೇಷ ಕಾಲ! ಆ ಮೇಲೆ ಜೈಲು ಡಾಕ್ಟರ ರೊಮ್ಮೆ ಆ ದೇಹಗಳನ್ನು ಪರೀಕ್ಷಿಸಿದರು; ಸಾಲದುದಕ್ಕೆ ಮೇಲ್ದರ್ಜೆಯ ಡಾಕ್ಟರರಿಗೆ ಕರೆಹೋಗಿ ಅವರು ಬಂದು ನೋಡಿ ಪ್ರಾಣಹೋಗಿದೆ ಎಂದರು. ತಾಸು 1½ಆಗುವಾಗ ನೆಂಪಿನ್‌ಗನ್ ಹಿಡಿದುಕೊಂಡ ಇಬ್ಬರು ಅಮೇರಿಕನ್ ಸೇನಾ ಪೋಲಿಸರು ಜೈಲು ಗೇಟಿಗೆ ಬಂದು ಹಹರೆಗೆ ನಿಂತರು. 2ಘಂಟೆ ಯಾಗುತ್ತಿದ್ದೆನ್ನುವಾಗ ಜೆನ್ಶಿಸ್ ಮುಚ್ಚಿದ್ದ ಎರಡು ದೊಡ್ಡ ಸೇನಾಲೋರಿಗಳೂ, ಅವುಗಳ ಜತೆಯಲ್ಲಿಗಾಗಿ ಶಸ್ತ್ರಧಾರೀ ನಿಲಿಟರಿ ಪೋಲೀಸರನ್ನು ತುಂಬಿಕೊಂಡಿದ್ದ ದೊಡ್ಡದೊಂದು ಪೋಟೋರೋ ಸಗಾನೋ ಜೈಲಿನಿಂದ ಹೊರಹೊರಟ್ಟಿರುವುದು ತೋರಿಬಂತು; ಆ ಲೋರಿಗಳಲ್ಲಿದ್ದಿರಬೇಕು ಏಳು ಶವಗಳು. ಅವು ಗೇಟು ದಾಟಿ ಹೊರಗೆ ಬಂದೊಡನೆ ಅಲ್ಲಿ ಕಾಯುತ್ತಾ ನಿಂತಿದ್ದ ಜಪಾನೀ ಫೋಟೋಗ್ರಾಫರರು ಛಾಯಚಿತ್ರವೆತ್ತಲು ಒಮ್ಮೆಗೇ ಮುನ್ನುಗ್ಗಿದರು. ಬಂಡಿಗಳು ಗೇಟನ್ನು ಹಾದು ಬಹುತ್ವವನ್ನು ನಾಗಲೇ ಇದಿರಿಗೆ ನಿಂತಿದ್ದ ಇಬ್ಬರು ಜಪಾನೀ ಬಾತ್ಮೀದಾರರನ್ನು ಕೂಡಲೇ ದಸ್ತಗಿರಿ ಮಾಡಲಾಯಿತು. ಅವು ನೇರವಾಗಿ ಯೊಕೊಹಾಮಾ ಸ್ಮಶಾನಕ್ಕೆ ಹೋದುವೆಂದೂ ಅಲ್ಲಿ ಅಮೇರಿಕನ್ ಸೈನಿಕರಿಂದ ಏಳು ಶವಗಳ ದಹನ ಸಂಸ್ಕಾರ ಪೂರ್ಣ ನಡೆದು ಅವರೇ ಏಳು ಕರಡಿಗೆಗಳಲ್ಲಿ ಬೂದಿಯನ್ನು ತುಂಬಿಸಿ ತಂದು ಗುಟ್ಟಾಗಿ ಇಟ್ಟಿದ್ದವರೆಂದೂ ತಿಳಿದು ಬರುತ್ತದೆ. ತಾ. 23ನೇ ಬೆಳಿಗ್ಗೆ ಜಪಾನ್ ಎದ್ದುದೇ ಮೊದಲಾಗಿ ಈ ಸುದ್ದಿ ಕೇಳುವದಕ್ಕಾಗಿ!

ದುಃಖದ ಬದಲು ಘನಸ್ಥಿತಿ!

ಟೋಜೋನನ್ನು ಗಲ್ಲಕ್ಕೇರಿಸುವ ಕೆಲವೇ ತಾಸುಗಳ ಮೊದಲು ಶ್ರೀಮತಿ ಟೋಜೋ ತನ್ನ ಗಂಡನಿಗೆ ಬರೆದಿದ್ದ ಕೊನೆಯ ಪತ್ರವು ಜಪಾನ್ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಈ ಲೋಕದಲ್ಲಿ ಇನ್ನು ಬೇಳುವದನ್ನು ಸಂಪೂರ್ಣವಾಗಿ ಅಸಡ್ಡೆ ಮಾಡಿ ತನ್ನನಾಥನಾಜೆಸ್ಟ್ಯಂದು ಸುದೃಢ ಮನಸ್ಸಿನಲ್ಲಿದ್ದಾರೆಂಬುದನ್ನು ಕೇಳಿ ತನಗಾಗಿರುವ ಅನಂಜನವನ್ನು ಆ ಧೀರ ಮಹಿಳೆ ಆ ಕಾಗದದಲ್ಲಿ ವರ್ಣಿಸಿದ್ದಳು. ಎಂತಹ ಕಠಿಣ ಕಾಲದಲ್ಲಾದರೂ ತಾವಿಬ್ಬರೂ ಎಷ್ಟೊಂದು ಸುಖಿಯಾದ ಜತೆ ಜೀವನ ನಡಸಿದ್ದೆವೆಂಬುದನ್ನೂ ಆ ಗೃಹಿಣಿ ಹೃದ್ಯವಾಗಿ ವರ್ಣಿಸಿದ್ದಳು. ಆ ಪತ್ರವನ್ನು ಮೂಲಕ ಮೋಡಿಕೊಂಡಿದ್ದಳು. ಜನರಲ್ ಟೋಜೋ ವಧಾಗೃಹಪ್ರವೇಶ ಸಾಗುವ ಮುನ್ನ ಲೋಕಕ್ಕೊಂದು ವಿದಾಯ ಸಂದೇಶವನ್ನೂ ಒಂದು ಸೊಲ್ಲನ ಕವಿತೆಯೊಂದನ್ನೂ ಬರೆದು ತನ್ನ ಉಪದೇಶಕ ಬುದ್ಧ ಭಿಕ್ಷುವಿನ ಕೈಗೆ ಕೊಟ್ಟು ಹೋಗಿದ್ದ. ಲೋಕದ ಸುವಿಜ್ಞಾನಿಗಳೆಲ್ಲರೂ ಆ ದ್ಯೆದ ಜನತೆಯೊಡನೆ ಸಹಾನುಭೂತಿಯಿಟ್ಟುಕೊಳ್ಳಲಿ; ವತ್ತನರನ್ನು ಸರಿಯಾಗಿ ಎಳೆದುಕೊಳ್ಳಲು ಪ್ರಯತ್ನಿಸಲಿ ಎಂದೇ ನನ್ನ ತುತ್ತತುದಿ ಕಾಲದ ವಿನಂತಿ.

ಜಾವಾನೀ ಸೇನೆ ಮತ್ತು ನೌಕಾ ಬಲದ ತೀರಾ ಕೆಲವೇ ಮಂದಿ ಮಾತ್ರ ಯುದ್ಧದ ಅತಿಕ್ರಮಗಳಿಗೆ ಹೊಣೆಗಾರರು. ಜಾಪಾನೀ ಜನರೇನೂ ಕ್ರೂರಿಗಳಲ್ಲ. ಯುದ್ಧಕಾಲಹತಿಯಾದ ಜಪಾನಿಗಳ ಕುಟುಂಬಕ್ಕೆರೊಡನೆ ಲೋಕವು ಸಹಾನುಭೂತಿಯಿಂದ ವರ್ತಿಸಲಿ, ಎಂದು ಕೇಳಿಕೊಳ್ಳುತ್ತೇನೆ. ಬೇರಾರನ್ನೂ ಎಳೆಯಲಾಗದಂತೆ ಯುದ್ಧದ ಎಲ್ಲಾ ಜವಾಬ್ದಾರಿಯನ್ನೂ ನನ್ನೊಬ್ಬನಿಂದಲೇ ಹೊರಲಾಗಲಿಲ್ಲವೆಂಬುದಕ್ಕಾಗಿ ದುಃಖಿಸುತ್ತೇನೆ. ಚಕ್ರವರ್ತಿಗಳು ನಿರಪರಾಧಿಗಳಾದುದಕ್ಕಾಗಿ ಸಂತೋಷಿಸುತ್ತೇನೆ" ಎಂಬುದೇ– ಆ ವೇಲಿನ ಒಂದೇ ತಾಸಿನೊಳಗೆ ಈ ಲೋಕ ಬಿಡಲಿದ್ದ ಜೀವವು ತನ್ನ ಕೈಗೆ ಕೊನೆಯ ಕೆಲಸ ಕೊಟ್ಟು ಬರೆದಿಟ್ಟು ಹೋಗಿದ್ದ ವಾಕ್ಯಗಳು. ಅದರೊಂದಿಗೆ ಆತ ಬರೆದು ಕೊಟ್ಟ ನಿಡಾಯ ಕವಿತೆಯ ಭಾವಾರ್ಥ ಹೀಗಿದೆ :—"ಬುದ್ಧ ವಾಸಿಸುತಿರುವ ಲೋಕವನು ಸೇರಲಿಕೆ, ಎದ್ದೆನಿಗೆ, ಮರಿಯ ಸರ್ವಕಳೆಗಳು ಹತ್ತಲಿಹೆ ಎಲ್ಲರಿಗೂ ವಿದಾಯ ವಂದನೆ! ನನಗೇನೂ? ನಾನು ಬದ್ಧನ ಮಡಿಲು ಸೇರ್ದು ಸುಖಿ, ನೆನಸಿ ನೆನ್ನನು ನಾಳೆಯಿಂದ ಎನಿತಾದರೂ ಗೊಣಗುವವರಿಲ್ಲ!. ತನ್ನ ಪಾಲಿನ ಕೆಲಸ ಮುಗಿಸಿ 'ನಾಡ್ದನ' ಹೇಳುತ್ತಾ, ಸ್ವಗೃಹಕ್ಕೆ ತೆರಳುವ ಕೂಲಿಯಂತೆ--ತನ್ನ ಭಿಕ್ಷೆ ಬಸಕೊಂಡು ಹಾಡುತ್ತಾ ಹಾದಿ ಹಿಡಿದ ಭಿಕ್ಷುಕನಂತೆ-ಜನರಲ್ ಟೋಜೋ ಹಾಡುತ್ತಾ ಹೋಗಿಬಿಟ್ಟ!

ತಾ. 23ನೇ ಮುಂಜಾನೆ ಸುದ್ದಿ ಮುಟ್ಟಿದೊಡನೆ ಮನೆಯ, ಒಂದು ಗೋಡೆ ತುಂಬಿದ್ದ ಸರ್ವಸೇನಾನಿಯ ಸಮವಸ್ತ್ರ ಧರಿಸಿ, ಎದೆತುಂಬಾ ಮೆಡಲುಗಳನ್ನು ತೊಟ್ಟುನಿಂತಿದ್ದ ಜನರಲ್ ಟೋಜೋನ ದೈಹಾಕೃತಿಯ ಭಾವಚಿತ್ರದಿದಿರು ನಿಂತು ಆವನ ಸಹಧರ್ಮಿಣಿ 'ನಿನ್ನ ತಂದೆ ನಿಜಕ್ಕೂ ಸತ್ಪುರುಷರೆಂದು ಭಾವಿಸಬೇಡಿ" ಎಂದು ತನ್ನ ಮಕ್ಕಳನ್ನು ಸಂತೈಸುತ್ತಿರುವುದನ್ನು ಸಂದರ್ಶನಕ್ಕಾಗಿ ಹೋದ ಬಾತ್ಮೀದಾರರು ಕಂಡಿದ್ದರು. ಅಂತೂ ಲೋಕದ ಚರಿತ್ರೆಯಲ್ಲಿ ಒಂದು ಮಹಾಧ್ಯಾಯದ ಪುಟ ತುಂಬಿತು!

ಜನರಲ್ ಮೇಕರ್ಥರರ ವಿನಂತಿಯಂತೆ ತಾ.25ರಲ್ಲಿ ಜಾಪಾನಿನ ಇಗರ್ಜಿಗಳು ಹಾಗೂ ಬುದ್ಧ ದೇವಾಲಯಗಳಲ್ಲೆಲ್ಲಾ ಶಾಂತಿಗಾಗಿ ಪ್ರಾರ್ಥನೆ ನಡೆಯಿತು; ನಿಜಕ್ಕೂ ಲೋಕದಲ್ಲಿ ಬದುಕಿ ಉಳಿದುವವರ ಒತ್ಯಶಾಂತಿಗಾಗಿ!

ಜಾವಾದ ಮೇಲೆ ಡಚ್ಚರ ಆಕ್ರಮಣ!

ಇಡೀ ಪ್ರಪಂಚದಲ್ಲೀಗ ವಿಶೇಷ ಬಿಸಿಯೇರಿರುವ ಭಾಗವೆಂದರೆ ಆಸ್ಯಾ. ಇಂಡೋನೇಶಿಯನಲ್ಲಿ ಡಚ್ಚರು ನಡೆಸುತ್ತಿರುವ ಆಕ್ರಮಣ ಯುದ್ಧ-ಜೈನಾಬಲ್ಲಿ ನಡೆದಿರುವ ಅದೃಷ್ಟ ಸೈನ್ಯಾಪಕ ಅಂತರ್ಯುದ್ಧ–ಇವೇ ಈಗಿನ ದಿನಗಳ ಲೋಕಪ್ರಾಮುಖ್ಯ ಘಟನೆಗಳು.

ಪೆಲಸ್ತೈನಿನಲ್ಲಿ, ಕೆಲಕಾಲದಿಂದ ಸ್ಪರ್ಧವಿದ್ದ ಕೆಲವು ರಣರಂಗಗಳೂ ಕಳದವಾರ ಪುನಃ ಸ್ಪೋಟಗೊಂಡಿದ್ದುವು. ಆದರೂ ಇಶ್ಯಾಡೆಯವರ ಪವಿತ್ರ ನಗರ ಜೆರುಸಲೇಮಿನಲ್ಲಿ ಕ್ರಿಸ್‌ಮಸ್ ದಿನಗಳ ಶಾಂತತೆ ಕಂಡು ಬರುತ್ತಿದೆ.

ಬರ್ಲಿನಿನಲ್ಲಿ ರಶ್ಯ ಮತ್ತು ಇಂಗ್ಲಾಂಡು, ಅಮೆರಿಕ, ಫ್ರಾನ್ಸುಗಳೊಳಗಿದ್ದಕಟ್ಟು ವೈಷಮ್ಯವು ಮತ್ತೂ ಬೆಳೆದರೆ ಎಂತಹ ಅನಾಹುತವೂ ಸಂಭವಿಸಬಹುದೆಂದಿದ್ದ ನಿರೀಕ್ಷೆಯಂತಾಗಿಲ್ಲ. ಜಿಲ್ಲೆಯ ವಿಚಾದವು ನೆನೆಗುದಿಗೆ ಬಿದ್ದು ನೊದಲಿನ ತೀಕ್ಷ್ಣತೆಯನ್ನು ಸಮ್ಯಕ್ಕೊಮ್ಮೆ ಕಳಕೊಂಡಿದೆ. ಬರ್ಲಿನಿನ ತಮ್ಮ ಭಾಗಗಳ ಮಟ್ಟಿಗೆ ಅಮೆರಿಕ ಬ್ರಿಟನ್, ಫ್ರಾನ್ಸುಗಳು ಜತೆಯಾಗಿ ಸೇನಾ ಸರಕಾರವೊಂದನ್ನು ಸ್ಥಾಪಿಸಿಕೊಂಡು, ಮನಸ್ಸಿದ್ದರೆ ರಶ್ಯವೂ ತಮ್ಮಲ್ಲಿ ಸೇರಿಕೊಳ್ಳಲಿ ಎಂದಿದ್ದಾರೆ.

ಜೈನದಲ್ಲಿ ಕಮ್ಯೂನಿಸ್ಟ್ ಸೇನೆಯು ಸದಾ ಕಾಲಕ್ಕೂ ಮೇಲ್ಗೈಯ್ಯಾಗುವಷ್ಟು ಬಲಶಾಲಿಯಿದೆ ಹೊರತು ಅದೇನೂ ಸಂದರ್ಭವಶಾತ್ ಕೆಲವು ವಿಜಯ ಗಳಿಸಿದುದಲ್ಲ. ಆದರ ಮುನ್ನುಡೆಯು ಕಾಲ್ಪ, ವಿದ್ಯುವಾನಗಳಿಗನುಸರಿಸಿ ಒಂದೇ ಸಮನೆ ನಡೆದಿದೆ. ಸನ್‌ಫೋ ಪ್ರಧಾನ ಮಂತ್ರಿಯಾಗಿ ಜೈನದಲ್ಲಿ ಹೊಸತಾಗಿ ನೇಮಕಗೊಂಡ ಚಿಯಾಂಗರ ಮಂತ್ರಿ ಮಂಡಲವು, ಸಂಧಾನಾನುಕೂಲ ಮನೋವೃತ್ತಿಯನ್ನು ಪ್ರದರ್ಶಿಸಿ, ಅದರೆ ತಾವದ ಕೈ ಮುಂಬಾಗುವಂತಿಲ್ಲವೆಂದೂ ಮೂರನೆಯವರಾವ ರಶ್ಯ, ಅಮೆರಿಕ, ಅಥವಾ ಬ್ರಿಟನುಗಳಿಂದಲೇ ಆ ಸೂಚನೆ ಮುಂದೆ ಬರಬೇಕೆಂದೂ ಅಭಿಪ್ರಾಯ ವ್ಯಕ್ತ ಮಾಡಿದೆ. ಕಮ್ಯೂನಿಸ್ಟರೊಡನೆ ಸಂಧಾನ ಮಾಡಿಕೊಳ್ಳಬೇಕೆಂದು ಅನೇಕರವು ಚಿಯಾಂಗರ ಮೇಲೆ ಹಾಕಿದ ಒತ್ತಾಯದ ಪ್ರತಿಫಲವಿದೆಂದು ಊಹಿಸಬಹುದು. ರಣರಂಗದಲ್ಲಂತೂ ತಾವು ಯೋಜಿಸಿದ ಕಡೆ ಕಮ್ಯೂನಿಸ್ಟರು ಮಂದೊತ್ತಲು ಶಕ್ಯರಾದ್ದಾಗ, ರಾಜಧಾನಿ ನಾನ್ಕಿಂಗಿನ ಮೇಲ್ಗಡೆಯ ಪೆಂಗ್ಪು ರಣರಂಗವು ಒಮ್ಮೆ ವಿಶೇಷ ಜ್ವಲಿಸಿ ಈಗ ತಣ್ಣಗಾದಂತಿದೆ; ಆದರೆ ಕಮ್ಯೂನಿಸ್ಟ್ ಸೇನೆಗಳು ತಮ್ಮ ಯುದ್ಧಗತಿಯನ್ನು ಬದಲಾಯಿಸಿ ಸರಕಾರೀ ಸೇನೆ ತೆಂಕು ದಿಕ್ಕಿಗೆ ಹಿಂದೆಗೆಯುವದನ್ನು ತಡೆಗಟ್ಟಲ್ಲ ಉತ್ತರ ಹುಪೇವಲಯದಲ್ಲಿ ಮಾತ್ರ ಧಾಳ ಹೂಡುವ ಸಿದ್ಧತೆ ನಡೆಸಿರುವುದೇ ಇದಕ್ಕೆ ಕಾರಣವೆಂದು ನಂಬಲಾಗಿದೆ. ಆ ಂತೂ ಕಮ್ಯೂನಿಸ್ಟ್ ಸೇನೆಗಳು ಯಾವ ದಿಕ್ಕಿನಿಂದ, ಹೇಗೆ ಮತ್ತು ಯಾವಾಗ ಇಡೀ ಜೈನವನ್ನು ಕಬಳಿಸಿಕೊಳ್ಳುವನೆಂಬುದನ್ನು-ಅಥವಾ ಆ ಮೇರಿಂಗ್ಲಂ ಮಧ್ಯಸ್ಥಿಕೆ ಮಾತು ಯಾವಾಗ ಹೊಂದುವದೆಂಬುದನ್ನು- ಹೊರತು ಬೇರೇನನ್ನೂ ಜೈಸವಲ್ಲಿ ಹೇಳಲಾಗುವದಿಲ್ಲ.

ಜಾವಾದ ಆಕ್ರಮಣ

ಇಂಡೋನೇಶಿಯದಲ್ಲಿ ಹೊಲ್ಲೆಂಡಿನ ಡಚ್ ಸರಕಾರವು ಈಗ ನಡೆಸುತ್ತಿರುವ ಕ್ರೌಮಣ ಯುದ್ಧವು ಅಖಿಲ ಆಸ್ಯಾದ ಭಿಮಾನವನ್ನೇ ತಿವಿದು ಕೆರಳಿಬಿಟ್ಟಿದೆ. ಪ್ರಪಂಚದ ನ್ಯಾಯವಾದಿಗಳನ್ನೂ ರೇಗಿದೆ. ಭದ್ರತಾ ಕೌನ್ಸಿಲಿನಿಂದ ನೇಮಕಗೊಂಡಿದ್ದ 'ಸುಸಮಿತಿ'ಯವರು ಅಲ್ಲಿದ್ದು ಪ್ರಧಾನ್ಯ ಸಮಜಾಯಿಸುವಿಕೆಗಳು ನಡೆಯುತ್ತಿದ್ದರೂತೆಯೇ ಇಂಡೋನೇಶಿಯದ ರಿಪ್ಲಿಕನ್ ನವಕಾರವನ್ನು ಒಂದೇ ಸವನೆ ಬಗ್ಗು ಬಡೆಯಲು ಸೇನಾಬಲದಲ್ಲಿ ಮೆಲ್ಗೈಯ್ಯಾಗಿರುವ ಡಚ್ಚರು ಆಕ್ರಮಣ ಯುದ್ಧ ಹೂಡಿ ಅಲ್ಲಿಯ ಪ್ರಜಾಧಿಪತ್ಯ ಸರಕಾರವನ್ನು ಬಂದರ ಮತ್ತು ಆಯಕಟ್ಟಿನ ನಗರಗಳನ್ನು ವಶಪಡಿಸಿಕೊಳ್ಳುತ್ತಾ ನಾಧಾವಿಸುತ್ತಿದ್ದಾರೆ. ಪಲಿಸ್ತೈನ ಸರಕಾರದ ಅಧ್ಯಕ್ಷ ಡಾ. ಸೋಯಿಕರ್ನೋ, ಉಪ್ರಧಾನ ಸರ್ವ ಸೇನಾನಿ ಸುದಿರ್ಮನ್ ನಾಯಕತ್ವದ ಸೈನ್ಯವನ್ನೆಲ್ಲಾ ದಸ್ತಗಿರಿ ಮಾಡಿ, ಸಂಧಾನ ವ್ಯವಹಾರಕ್ಕೆ ಬಂದಿದ್ದ ರಿಪಬ್ಲಿಕನ್ ಪ್ರತಿನಿಧಿಗಳನ್ನೂ ದಿಗ್ಬಂಧನದಲ್ಲಿಟ್ಟು ಡಚ್ ಸರಕಾರವು ಆಕ್ರಮಣ ತಾಂಡವನವನ್ನೇ ನಡೆಸಿದೆ. ಈ ಕುರಿತು ಭಾರತದ ಪ್ರಧಾನಮಂತ್ರಿ ಪಂಡಿತ ನೆಹರುಗಳು ಜೈಪುರದಲ್ಲೇ ಖಂಡತುಂಡ ಎಚ್ಚರಿಕೆ ಕೊಟ್ಟಿದ್ದರಲ್ಲದೆ ಭಾರತ ಸರಕಾರವು ತನ್ನ ಸಾಧ್ಯವಿರುವ ಪ್ರತಿಕಾರವನ್ನೆಲ್ಲಾ ಡಚ್ ಸರಕಾರಕ್ಕೆ ಮಾಡಿ ಬುದ್ಧಿ ಕಲಿಸಬೇಕೆಂದು ಬಗೆದಿದೆ. ಅಂತೆಯೇ ಬರ್ಮಾ ಸರಕಾರವೂ ಡಚ್ ಅತ್ಯಾಚಾರದ ಕುರಿತು ವಿಶೇಷ ಕೆರಳಿದೆ. "ಆಸ್ಯಾ ರಾಷ್ಟ್ರಗಳನ್ನು ಈ ಅತ್ಯಾಚಾರದ ವಿರುದ್ಧವಾಗಿ

[ಹಿನೇ ಪುಟ ನೋಡಿರಿ.]

ಸೇವೆ ಮತ್ತು ಭದ್ರತೆಯೇ ನಮ್ಮ ಗುರಿ

ಜಿಲ್ಲೆಯ ಪ್ರಾಮುಖ್ಯ ಕೇಂದ್ರಗಳಲ್ಲಿಯೂ, ಬೊಂಬಾಯಿ ಪಟ್ಟಣ ಮತ್ತು ಮಡಿಕೇರಿಯಲ್ಲಿಯೂ ನಮ್ಮ ಶಾಖೆಗಳಿವೆ.

೧೭ ವರ್ಷಗಳ ವಿಶ್ವಾಸಾರ್ಹ ಸೇವೆ ಮತ್ತು ಪರಿಸಕ್ವ ಅನುಭವದ ಯೋಗ್ಯತೆಯಿದೆ.

ನಿರಮು ಠೇವಣಾತಿಗಳಿಗೆ ಸುಭದ್ರತೆಯೊಂದಿಗೆ ಒಳ್ಳೆಯ ಬಡ್ಡಿ ದರವಿದೆ.

ಎಲ್ಲಾ ತರದ ಆಧುನಿಕ ಬೇಂಕಿಂಗ್ ವ್ಯವಹಾರಗಳು ದಕ್ಷತೆಯಿಂದ ನಿರ್ವಹಿಸಲ್ಪಡುತ್ತವೆ.

ದಿ ವಿಜಯ ಬೇಂಕ್ ಲಿಮಿಟೆಡ್

ಪೆ. ಆ. ಮಂಗಳೂರು.

THE VIJAYA BANK LTD.,

H. O. MANGALORE, S. K.

(ಎನೇ ಪುಟದಿಂದ)

ಒಂದುಗೂಡಿಸುವ ಆಸ್ಯಾ ರಾಷ್ಟ್ರಗಳ ಒಂದು ಸಮ್ಮೇಲನ ಕರೆವ ನಿರ್ದೇಶಕತ್ವ ವನ್ನು ಭಾರತವು ವಹಿಸಬೇಕು." ಎಂದು ಬರ್ಮದ ಪ್ರಧಾನಿ ಥಾಕಿನ್ ನ್ಯೂ ಭಾರತದ ಪ್ರಧಾನಿಗಳನ್ನು ಕೇಳಿಕೊಂಡಿದ್ದಾರೆ. ಪಾಕಿಸ್ತಾನ ಮತ್ತು ಸಿಂಹಳ ಸರಕಾರಗಳೂ ಭಾರತ, ಬರ್ಮ ಸರಕಾರಗಳ ಹಾದಿ ಹಿಡಿದು ಡಿಡಿಟ್ ಅಕ್ರಮ ನಿವಾರಿಸಲು ಸಾಧ್ಯವಿದ್ದುದನ್ನೆಲ್ಲಾ ಮಾಡಲು ತಯಾರಾಗಿವೆ. ಡಿಡಿಟ್ ವಿಮಾನಗಳು ಭಾರತದೊಳಗೆ ಇರಲೂ ಹೋಗಲೂ ಕೂಡದೆಂದು ಭಾರತ ಸರಕಾರವು ಬಹಿಷ್ಕಾರ ಹಾಕಿದೆ; ಅದನ್ನನುಸರಿಸಿ ಪಾಕಿಸ್ತಾನವೂ ಅದೇ ತಡೆ ಹಾಕಿದೆ. ಡಿಡಿಟ್ ನಾನೆಗಳು ತಪ್ಪಿ ಬಂದರೆ ಕೆಳಕ್ಕೆ ಬಂದು ಹೋಗಕೂಡದೆಂದು ಸಿಲೋನ್ ಸರಕಾರ ನಿಷೇಧಿಸಿದೆ. ಮಾರ್ಷಲ್ ಯೋಜನೆ ಪ್ರಕಾರ ಜಾವಾ ಭಾಗಕ್ಕಾಗಿ ಡಚ್ಚರಿಗೆ ಕೊಡಲು ವಿ.ಸಲಿದ್ದ ಸಹಾಯ ಸಿನ್ನು ಅಮೆರಿಕವು ಅಮಾನತು ಗೊಳಿಸಿದೆ. ಈ ರೀತಿ ಅಕ್ರಮಣ ಬುದ್ಧಿಯ ಡಚ್ಚರಿಗೆ ಆಸ್ಯಾದ ತೀವ್ರ ಪ್ರತೀಕಾರ ಮತ್ತು ಲೋಕದ ನ್ಯಾಯವಾದಿ ರಾಷ್ಟ್ರ ಗಳ ಧಿಕ್ಕಾರವೆದ್ದಿವೆಯಾಗಿದ್ದಾರೆ.

ಡಚ್ ಆಕ್ರಮಣವನ್ನು ನಿಲ್ಲಿಸಬೇಕೆಂಬ ದೂರನ್ನು ಇಂಡೋನೇಶಿಯವು ಭದ್ರತಾ ಕೌನ್ಸಿಲಿನಲ್ಲಿ ಕೊಟ್ಟಿದ್ದು ಇಂಡೋನೇಶಿಯಾದಲ್ಲಿ ಇಕ್ಕಡೆಯವರೂ ಕೂಡಲೇ ಗುಂಡು ಹಾರಾಟ ನಿಲ್ಲಿಸಬೇಕೆಂದೂ ಡಚ್ಚರು ಹಾ. ಸೊಯೇಕರ್ನೋ ಮತ್ತಿತರ ರಿಪಬ್ಲಿಕನ್ ನಾಯಕರನ್ನು ಬಿಡಬೇಕೆಂದೂ ಕೌನ್ಸಿಲರಾಯಿಸಿ ಅಲ್ಲಿರುವ ತನ್ನ ಸಮಿತಿಯವರ ಮೂಲಕ ಇಕ್ಕಡೆಗೂ ಆ ನೋಟೀಸುಗಳನ್ನು ಮುಟ್ಟಿಸಿದೆ. "1940ರಲ್ಲಿ ಹಿಟ್ಲರನು ಹೊಲ್ಲೆಂಡಿನ ಮೇಲೆ ನಡೆಸಿದ್ದ ಆಕ್ರಮಣಕ್ಕಿಂತಲೂ ಇದು ಕಳಪೆಯಿದು" ಎಂಬಂತಹ ಟೀಕೆಗಳು ಹೊಲ್ಲೆಂಡಿನ ಮೇಲೆ ಭದ್ರತಾ ಕೌನ್ಸಿಲಿನಲ್ಲಾದುವು. ಭದ್ರತಾ ಕೌನ್ಸಿಲಿನ ಸಂಯುಮಿತಿಯವರು ಜಾವಾ ಸೀಮಾರಾಟ ಕ್ಷೇತ್ರಕ್ಕೆ ಬಿಟ್ಟು ಹೋಗಿ ಬೇರೆಂದು ಡಚ್ ಸೇನಾನಿಗಳಿಗೆ ಕೊಟ್ಟ ಸೂಚನೆಯನ್ನು ಆ ಸಮಿತಿಯವರು ಆ ಮೊದಲೇ ಧಿಕ್ಕರಿಸಿದ್ದರು. ಲೋಕವೆ ತ ಮತ್ತು ಆಸ್ಯಾದ ಬಿಸಿ ಹತಾಗೂ ಭದ್ರತಾ ಕೌನ್ಸಿಲಿನ ಸ್ಪಷ್ಟ ನಿರ್ಣಯದಿಂದ ಹೊಲ್ಲೆಂಡ್ ಸರಕಾರವು ಹೆದರಿದಂತಿದೆ. ರಿಪಬ್ಲಿಕನ್ ನಾಯಕರಾ ಇಪ್ಪರಲ್ಲೇ ಬಿಡುಗಡೆ ಕೊಂದಿರುವರೆಂಬ ವಾರ್ತೆಯಿದೆ. ಭಾರತದ ಪ್ರಯತ್ನಕಾರ್ಯದಲ್ಲಿ 'ಆಸ್ಯವು ಆಸ್ಯಾವರಿಗೆ' ಎಂಬ ವೀರ ಘೋಷಣೆಯೊಡನೆ ಕೊಸರತಾಗಿ ಸ್ವಾತಂತ್ರ್ಯಗೊಂಡ ಭಾರತ, ಪಾಕಿಸ್ತಾನ್, ಬರ್ಮ, ಸಿಂಹಳಗಳು ಮಾನವಾತ್ಮಕ ಸಾಮ್ರಾಜ್ಯಶಾಹಿಯಿಂದ ಬಿಡಿಸಿಕ್ಕಿವೆ ಲಕ್ಷಣಗಳಿವೆ.

ಕನ್ನಿತ ಹಾರಾನಾಕ್ಷರ

ಸ್ತ್ರೀಬಲ
ಬಾಲಬಲ

ಔಷಧಗಳು ದೊರೆಯುತ್ತವೆ.
ನವಯುಗ ಫಾರ್ಮಸಿ, ಉಡುಪಿ



ಈ ವಾರವು ಖಾಸಗಿಯಾಗಿ ಹೈದರಾಬಾದ್ ಮತ್ತು ಮೈಸೂರು ಸಂಸ್ಥಾನಗಳ ವರ, ಸಾಮಾನ್ಯವಾಗಿ ಸರ್ವ ದಕ್ಷಿಣ ಭಾರತೀಯರ ಪಾಲಿಗೆ 'ನೆಹರೂ ವಾರ'ವಾಗಿ ತ್ತೆನ್ನಬಹುದು. ಭಾರತದ ಪ್ರಧಾನಿ ಪಂಡಿತ ಜವಾಹರಲಾಲರು ದಶಂಬರ್ ತಾ 24ನೇ ಮಧ್ಯಾಹ್ನದಿಂದ ತಾ. 26ನೇ ಮಧ್ಯಾಹ್ನದ ವರೆಗೆ ಹೈದರಾಬಾದಿನಲ್ಲಿ–ತಾ 26ನೇ ಅಪರಾಹ್ನದಿಂದ ತಾ. 29ರ ವರೆಗೆ ಬೆಂಗಳೂರು ಮೈಸೂರುಗಳಲ್ಲಿ ಇದ್ದರು. ಇವೆರಡು ಕಡೆಗಳ ಲಕ್ಷಾವಧಿ ಜನತೆಗೆ ಪ್ರತ್ಯಕ್ಷವೆ ಉಪದೇಶ ಮತ್ತು ದರ್ಶನವಿತ್ತಿದ್ದರಲ್ಲದೆ, ಆ ಮೂಲಕ ಅಖಿಲ ರಾಷ್ಟ್ರದ ಜನತೆಗೂ ಮಾರ್ಗದರ್ಶನೀ ಬೋಧೆ ಕೊಟ್ಟಿದ್ದರು.

ಹೈದರಾಬಾದಿನಲ್ಲಿ

ಬುಧವಾರ ರಾತ್ರಿ ಮುಂಜಾನೆ ಸಮೀಪಿಸುವ ವರೆಗೂ ತನ್ನ ಆಫೀಸು ಕಾರ್ಯ ಮಾಡಿದ್ದ ಪಂಡಿತ ಜವಾಹರಲಾಲರು ತಾ 24ನೇ ಮುಂಜಾನೆ 8 ಘಂಟೆಗೆ ನವಢಿಲ್ಲಿಯಲ್ಲಿ ಹೈದರಾಬಾದಿಗಾಗಿ ವಿಮಾನ ಹತ್ತಿದರು. ಮಧ್ಯಾಹ್ನ 12-30ಕ್ಕೆ ಸರಿಯಾಗಿ ಹೈದರಾಬಾದ್ ವಿಮಾನ ನಿಲ್ದಾಣದಲ್ಲಿಳಿದಿದ್ದರು. ರಾತ್ರಿ ನಿದ್ರೆಯಿಲ್ಲದ ಪಂಡಿತಜೀ ಆಕಾಶದುದ್ದಕ್ಕೂ ನಿದ್ರೆ ತೆಗೆದಿದ್ದರು. ಹೈದರಾಬಾದ್ ನಿಲ್ದಾಣದಲ್ಲಿ ಪಂಡಿತಜೀಯನ್ನು ಕಾದಿದ್ದ ಸ್ವಾಗತ ಸಂಭ್ರಮವು ವರ್ಣನಾತೀತ. ಪಂಡಿತರು ಹಲವು ವರುಷಗಳ ಮೊದಲೊಮ್ಮೆ ಹೈದರಾಬಾದಿಗೆ ಭೇಟಿ ಕೊಟ್ಟಿದ್ದರೂ, ಪ್ರಧಾನ ಮಂತ್ರಿಯಾಗಿ, ಅಲ್ಲಿಗೆ ಇಂದೀದು ಮತ್ತಲ್ಲಿ ಸಾರ್ವಜನಿಕ ಭೇಟಿ ಮತ್ತು ಭಾಷಣ ಕೊಟ್ಟುದು ಇದೇ ಮೊದಲು. ಆದ್ದರಿಂದ ನೆಹರೂ ಭೇಟಿಗಾಗಿ ಹೈದರಾಬಾದ್ ಜನತೆ ಸಟ್ಟಿದ್ದ ಉತ್ಸಾಹವು ಅಷ್ಟಿಷ್ಟಲ್ಲ. ಅವರಿಗೆ ಕೊಟ್ಟಕ್ಕು ಸಂಭ್ರಮದ ಹಾಗೂ ಪ್ರಚಂಡ ಸ್ವಾಗತವನ್ನು ಹೈದರಾಬಾದು ತನ್ನ ಚರಿತ್ರೆಯಲ್ಲೇ ಬೇರಾರಿಗೂ ಕೊಟ್ಟಿದ್ದಿಲ್ಲ. ನೆಹರೂ ದರ್ಶನಕ್ಕಾಗಿ ಅಂದು ಅತಿ ಮುಂಜಾನೆಯಿಂದಲೇ ಜನವೆಯಾಗ ಹತ್ತಿ ವಿಮಾನ ನಿಲ್ದಾಣದ ಸುತ್ತಮುತ್ತ ನೋಟವೋಡವರೆಗೂ ತುಂಬಿದ್ದ ಜನ ಸಂದಣಿಯು ಪಂಡಿತಜೀಯ ವಿಮಾನವು ಕಳವೂರುವಾಗ ಪ್ರಚಂಡ ಜಯಘೋಷ ವೆಬ್ಬಿಸಿ ವಿಮಾನ ಘುಂಕಾರವೇ ಕೇಳಿ ಬಾರದಂತೆ ಮಾಡಿದ್ದಿತು. ನಿಲ್ದಾಣದಲ್ಲಿ ಸೇನಾ ಗವರ್ನರ್ ಮೇಜರ್ ಜನರಲ್ ಚೌಧರಿಯವರು ಪ್ರಧಾನ ಮಂತ್ರಿಯನ್ನು ಸ್ವಾಗತಿಸಿ, ಅಲ್ಲಿ ಹಾಜರಿದ್ದ ಬಿಂಬಿನ ರಾಜ ಕುವರ, ಸ್ವಾಮೀ ರಮಾನಂದ ತೀರ್ಥ ಮತ್ತು ನಕ್ಸಾತೀತ ಸ್ವಾಗತ ಸಮಿತಿ ಸದಸ್ಯರ ಪರಿಚಯವನ್ನು ಪಂಡಿತ ಜೀಗೆ ಮಾಡಿಕೊಟ್ಟರು. ಅಲ್ಲಿ ಈ ಹಾಜರಾತಿ ನಡೆದಿದ್ದಾಗ ಹೊರಾವರಣದ ಜನ ಸಂದಣಿಗೆ ಪಂಡಿತಜೀಯನ್ನೆಕಾಣುವ ಅವಕಾಶ ತಡೆಯಲಾಗದೆ ಅವರು ನುಗ್ಗಿನುಸುಳುವ ಭಯಕ್ಕೆಎಲ್ಲಾ ಕಾರ್ಯಕ್ರಮವೂ ಅಡಿಮೇಲಾಗುವುದರಲ್ಲಿತ್ತು. ಆದರೆ ಪೊಲೀಸರೇ ಸೈನಿಕರು ಅತ್ಯಂತ ಪ್ರಯಾಸದಿಂದ ಜನ ಸಮುದ್ರದ ಆ ಉಬ್ಬರವನ್ನು ತಡೆದು ಅವರಣದಿಂದ ದೂರನಿಲ್ಲಿಸಿದರು. ಅಲ್ಲಿಂದ ಚೌಧರಿ ಮತ್ತವರ ಮಂಡಲಿಯೊಡನೆ ಮಾಡು ತೆರೆದ ಕಾರಿನಲ್ಲಿ ಕೈಜೋಡಿಸಿ ನೆಟ್ಟಗೆ ನಿಂತುಕೊಂಡು ದಾರಿಯುದ್ದಕ್ಕೂ ಇರುವೇ ಸಾಲುಗಳಂತೆ ಎಡೆಬಿಡದೆ ನಿಂತ ಜೈಕಾರವೆಬ್ಬಿಸುತ್ತಿದ್ದ ಜನಸಂದಣಿಗೆ ವಂದಿಸುತ್ತಾ ಪಂಡಿತಜೀ ಬೋಲಾರಂ ಮಿನ ರೆಸಿಡೆನ್ಸಿ ಭವನ ಮುಟ್ಟಿದರು. ಅಲ್ಲಿ ಅನಂತಾಧ್ಯಕ್ಷ ಸಮೇತ ಸ್ವಾಮಿ ರಮಾನಂದತೀರ್ಥರ ಹೈದರಾಬಾದ್‌ಮೂಲ ಕಾಂಗ್ರೆಸಿನಪ್ರಮುಖರೊಡನೆಯೂ ಇತ್ತೀಚೆಗೆ ಆದರಿಂದ ಬಿಡಿದು ಪ್ರತ್ಯೇಕಾಂಗ್ರೆಸ್ ರಚಿಸಿಕೊಂಡಿರುವ ಶ್ರೀ ಜನಾರ್ದನ ರಾವ್ ದೇಸಾಯಿ ಮತ್ತವರ ಅನುಯಾಯಿ ನಾಯಕರೊನೆಯೂ ಮಾತಾಡಿ ಕಾಂಗ್ರೆಸ್ ಒಕ್ಕಟ್ಟನ ಕುರಿತು ಸದುಪದೇಶ ಕೊಟ್ಟರು. ಆ ಮೇಲೆ ಅಲ್ಲಿಗೆ 15 ಮೈಲು ದೂರದ 'ಶಾ ಮಂಜಿಲ್'ನಲ್ಲಿ ವಿಶ್ರಮಿಸಲಾಗಿದ್ದ ಗಾರ್ಡನ್ ಪಾರ್ಟಿಗೆ ಪ್ರಯಾಣ. ಅವರ ಈ ಪ್ರಯಾಣ ರಸ್ತೆಯು ಬೋಲಾರಮ್, ಸೆಕುಂದರಾಬಾದ್, ಹೈದರಾಬಾದ್ ಮತ್ತು ಬೇಗಂಪೇಟೆಯ ಮುಖ್ಯ ರಸ್ತೆಗಳಾಗಿದ್ದುದರಿಂದ ಅವೆಲ್ಲವೂ ಜನಸಂದಣಿಯ ಒತ್ತಡದಿಂದ ತುಂಬಿ ಹೋಗಿ ಎಲ್ಲೆಲ್ಲೂ ತಲೆಗಳೇ ಕಾಣಿಸುತ್ತಿದ್ದುವು. ನೆಹರೂ ಜಯಘೋಷಗಳೇ ಕೇಳಿಸುತ್ತಿದ್ದುವು. ರಾತ್ರಿ ಬೋಲಾರಮಿಗೆ ಮರಳಿದಮೇಲೆ ಹೈದರಾಬಾದಿನ ಹಿಂದೂ ಮುಸ್ಲಿಂ ಸಮಾಜಗಳ ಪ್ರಮುಖರಿಗೆ ಭೇಟಿಕೊಟ್ಟು ಹಾಲಾಹವಾಲಗಳನ್ನು ಕೇಳಿದರು.

ನಿಜಾಮರಿಗೆ ಭೇಟಿ

ತಾ. 25ನೇ ಮುಂಜಾನೆ ನಿಜಾಮರಿಗೆ ಸಹೃದಯಸೂಚಕ ಭೇಟಿ ಕೊಟ್ಟುಬರಲು ಪಂಡಿತಜೀ ಸುತ್ತು ಬಾಧಿಯಾಗಿ ಅಂಮನೆಗೆ ಹೋಟಾಗ, ಅಲ್ಲಿಯು ಎಲ್ಲಾ ರಸ್ತೆಗಳೂ ಕಣಕಿ ಮನುಷ್ಯರೂಪಕ್ಕೆ ಮಾರ್ಪಟ್ಟರುವವೇನೋ ಎಂಬಂತೆ ಎಲ್ಲೆಲ್ಲೂ ಜನತೆಂದವೇ ಹೊರತು ರಸ್ತೆ ಕಾಣದಂತಾಗಿತ್ತು; ವರಾಂಡ, ಮಾಳಿಗೆ, ಅಟ್ಟಿಗೆಗಳು ನೂಡುಗಳೆಲ್ಲೆಲ್ಲಾ ಜನವು ನಿಂತು ನೋಡುತ್ತಿದ್ದರು. ನೆಹರುಗಳನ್ನು ಕಂಡೊಡನೆ ಏಳುತಿದ್ದ ಜಯಕಾರಗಳು ಶಂಧಿಘೋಷವನ್ನೆ ನಿಗಿಸುತ್ತಿದ್ದುವು. ನೆಹರೂಗಳಾದರೋ ಕಾರಿನಲ್ಲಿ ಕೈಜೋಡಿಸಿಕೊಂಡೆ ನಿಂತಿದ್ದರು. ರಸ್ತೆಯುದ್ದಕ್ಕೂ ಸೇನೆ, ಪೋಲಿಸ್ ಮತ್ತು ಬಳಿ ಟೋಪಿ ಸ್ವಯಂಸೇವಕರ ವ್ಯವಸ್ಥೆಯಿದ್ದರೂ ಕೆಲವೆಡೆಗಳಲ್ಲಿ ಜನಸಂದಣಿಯಿಂದ ಪಂಡಿತಜೀಯ ಕಾರಿಗೆ ಚಲಿಸಲಿಕ್ಕಾಗುತ್ತಿರಲಿಲ್ಲ. ಆದರೆ ಅರವತ್ತನೆಯ ಮುಂಜಾವ ಮತ್ತು ಸುತ್ತಲೂ ತುಸು ದೂರದಲ್ಲೇ ಸೈನಿಕರು ಮತ್ತು ಪೋಲೀಸರು ಬೇಲಿಯಾಗಿ ನಿಂತು, ಜನತೆಂದವನ್ನು ಆ ಗಡಿ ನಾಟಿ ಬಾ

[ಎನೇ ಪುಟ ನೋಡಿರಿ]

THE CRESCENT INSURANCE CO., LTD.
(Estd- 1919)
Head Office:- **Bombay**, Branch at:- **Mangalore**.
Offers every convenience for Life Assurance
"**Will your earnings continue after death ?**"
"**Yes, if you insure them**"
"By means of life Assurance you can continue your income after retirement, or for the benefit of your dependents after your death".
"In case of death the Bank pays what you have saved, the Assurance company pays what you had hoped to save"
The safest and best life office of long standing fame.
Best terms for agents offered
K. P. Bhavanishanker Shetty,
Branch Manager
The Crescent Insurance Co., Ltd.
Jayant Building, Maidan Road.
MANGALORE.
M. Sunderram Shetty,
Managing Director

The Canara Banking Corporation Limited.

Estd: 1906.
(Incorporated in British India)
Head Office: **UDIPI**, S. India.

Capital Authorised .... Rs. 25,00,000
Capital Issued & Subscribed .... Rs. 20,00,000
Capital Paid up .... Rs. 19,98,445
Reserves.... .... Rs. 8,66,751

BANKING BUSINESS OF EVERY DESCRIPTION TRANSACTED

V. R. Kamath, B.A., LL.B.
General Manager.

ಗುರುವಾರ, ಜನವರಿ, ೩೦-೧೨-೧೯೪೯

1949

1948 ನಾಳೆ ಮುಗಿದು, ನಾಡಿದ್ದು 1949ನೇ ಇಸವಿ ಪ್ರಾರಂಭ. ಒಂದು ಸಂಖ್ಯೆಯಿಂದ ಮತ್ತೊಂದು ಸಂಖ್ಯೆಗೆ—ಒಂದು ಮೆಟ್ಟಿಲಿಂದ ಮತ್ತೊಂದು ಮೆಟ್ಟಿಲಿಗೆ—ಮನಸಿನ ಜನಾಂಗವು ಏರುವ ಅವಧಿಯಿದು. ಒಂದು ಪಟ್ಟಿಯ ಹಾಳೆ ಒಂದೊಂದಾಗಿ ಹರಿಯುತ್ತಾ, ಹೋಗಿ ಈಗ ಆ ಪಟ್ಟಿಯೇ ಹರಿದು ಹೋಗುತ್ತಿದೆ; ಹೊಸ ಪಟ್ಟಿ ಬರುತ್ತಿದೆ. ಲೋಕದ ಆಯುಷ್ಯದಲ್ಲಿ ಒಂದು ವರುಷ ಜೀರ್ಣವಾಗಿ ಹೋಯಿತು; ಹೊಸದೊಂದಕ್ಕೆ ಜಾಗ ಬಾಯಿ ಹಾಕಬೇಕಾಗಿ ಬಂದಿದೆ. ಕಾಲದ ಈ ಮುಕ್ಕಾಯ-ಆರಂಭವೆಂಬುದು ತುದಿ ಮೊದಲಿನ ತಿಳುವಳಿಕೆ ಕೊಡದೆ ಎಂದೆಂದಿಗೂ ಇದ್ದದ್ದೇ. ಆದರೆ ಕಾಲಚಕ್ರವುರುಳುಕ್ಕಾ ಇದೆ—ಸಮಯವೋಡುತ್ತಿದೆ—ಎಬ ನೆನಪನ್ನು ಕೊಡುವುದೇ ಈ ಅವಧೀಗಡಿಯ ಮುಖ್ಯ ಕೆಲಸ. ಈಗಲಾದರೂ ನಮಗೆ ಹಿಂದು ಮುಂದಿನ ಯೋಚನೆ ಬರಬೇಕಾದುದು ಸಹಜ

1948ನ್ನು ನಾವು ಮುಗಿಸಿಕೊಂಡೆವು; ಅವರೆ ಇಡೀ ಒಂದು ವರುಷವನ್ನು ವ್ಯಯಿಸಿದ ನಾವು ಅಜಕ್ಕನುಗುಣವಾಗುವ ಫಲವನ್ನು ಸಂಪಾದಿಸಿಕೊಂಡಿರುವೆವೆ? ಅಂತಹ ಸಮಾಧಾನವು ಇಡೀ ಆಗಿ ಜಗತ್ತಿಗೆ, ಪ್ರತ್ಯೇಕವಾಗಿ ಹೆಚ್ಚಿನ ರಾಷ್ಟ್ರಗಳ ವತ್ತು ಹೆಚ್ಚಿನವರ ಪಾಲಿಗೆ ಇಲ್ಲವೆನ್ನಬಹುದು. ಯುದ್ಧಭೀತಿಯಿಂತ ಶಾಂತಿ ಮತ್ತು ಭದ್ರತೆ ಸ್ಥಾಪನೆಯಾಗಬೇಕೆಂದು ಕಳೆದ ಮಹಾ ಯುದ್ಧಾನಂತರ ದಿನೇ ದಿನೇ ಲೋಕ ಚಡಪಡಿಸುತ್ತಾ ಬಂದಿದೆ. ಆದರೆ ಆದು ಸ್ಥಾಪನೆಯಾಗಿಸಿ ಆಗಿಯೇ ತೀರುವದೆಂಬ ಸ್ಪಷ್ಟ ಭರವಸೆಯನ್ನಾದರೂ 1948 ಕೊಟ್ಟು ಹೋಗಿಲ್ಲ. ಹೆಚ್ಚಿನವರ ಸುಖ ಸಾಧಿಸುವ-ಸರ್ವ ಸಮಾನತೆಯ—ದಾರಿದ್ರ್ಯ, ಅಭಾವಗಳಿಗೆ ಜೀವಿಂದ-ನವೀನ ಸಾಮಾಜಿಕ, ಆರ್ಥಿಕ ವ್ಯವಸ್ಥೆ ಒರಬೇಕೆಂದು ಪ್ರಪಂಚೆ ತುಂಬಾ ಎದಿಸಿದಂದಲೂ ಇದ್ದ ಆಶಯ 1948ರಲ್ಲಿ ಸ್ಪಷ್ಟಕ್ಕೂ ಪ್ರಬಲಿಸಿದ್ದಿತು. ಅಂತಹ ವ್ಯವಸ್ಥೆ ಬಂದು 'ಏಕ ಜಗತ್ತು-ಲೋಕ ಸರಕಾರ'ದ ಗುರಿ ಮುಟ್ಟುವುದಾಗಲೇ ಇಂದಿನ ಸ್ವಾರ್ಥ, ನೈಜತ್ಯ, ಮೇಲಾಟಗಳು ಮುಂಕ್ಕಾಯವಾಗಬಹುದೇನೊ! ಈ ತನಕ ರಾಷ್ಟ್ರೀಯ ಸ್ವಾರ್ಥ, ಸಾಮ್ರಾಜ್ಯದ ಮತ್ತು ದುರ್ವ್ಯಾಪಾರದ ದುರಭಿಲಾಷೆ, ಜನಾಂಗ ವೈಷಮ್ಯ ಡಿನ್ಮೆ-ಇತ್ಯಾದಿಗಳ ತಾಂಡವ ನೀ ನಡೆದಿದೆ. ಒರ್ಲಿನ್, ಜೈನ್ಸಾಪೆಲಸ್ತೈನ್, ಇಂಡೋನೇಶಿಯಾಗಳನ್ನು ನೋಡಿದರೆ ಸಾಕು! ಯುರೋಪಿನ ಕನ್ನಡಕದಲ್ಲಿ ಅಸ್ಯಾದ ಛಾಯೆ.-ಧನಿಕ ವರ್ಗದ ಕೆಲವಡಿ ಜನಸಾಮಾನ್ಯರ ಸ್ಥಿತಿ-ಹೇಗೆ ತೋರುತ್ತಿದೆ ಎಂಬುದನ್ನು ! ಅರಿತುಕೊಂಡರೆ ಸಾಕು.

ನಮ್ಮ ದೇಶದ ಸ್ಥಿತಿಯಂತೂ ಭಾಂತೇಯರಿಲ್ಲರ ನಿತ್ಯಜೀವನದಲ್ಲೇಸೇರಿ ಹೋಗಿದೆ; ಆದು ಇಂದಿನ ಅನುಭವವಾಗಿ ನಿಂತಿದೆ-ಇಸವಿ ಒದಲಾವಣಾ ದಿನಗಳ ಸ್ಮರಣೆ ಮಾತ್ರವಾಗಿ ಇಲ್ಲ. ಈ ಮುಹೂರ್ತವನ್ನು ಹಿಂದು-ಮುಂದಿನ ನಾರ ಗೃಹಿಸಿಕೊಂಡು ನಮ್ಮನ್ನು ನಾವು ಅರಿತುಕೊಳ್ಳುವ ಸ್ವಧ್ಯಾನಕ್ಕೆ ಬೀಸಲಿಡುವದು ವಾಸಿ. "ನಮಗೆ ಕೆಲಸ ಗೊತ್ತಿದೆ; ತಪ್ಪನ್ನು ಸಿದ್ದಿಕೊಳ್ಳಲು, ಸುಧಾರಿಸಿಕೊಳ್ಳಲು ತಿಳಿದಿದೆ" ಎಂಬ ಸಮಾಧಾನವು ಕಳೆದ ಒಂದು ವರುಷದ ವಿಮರ್ಶೆಯಿಂದ ನೊಳೆಯುತ್ತಿದೆ. ಆದರೆ ಮುಖ್ಯವಾಗಿ ಆಗಬೇಕಾದುದು ಇನ್ನೂ ಆಗಿಲ್ಲ-ಇಂದಿನ ಸ್ವಾತಂತ್ರ್ಯ ಮತ್ತು ನಮ್ಮೆಲ್ಲಾ ಶಕ್ತಿ ಯೋಗ್ಯತೆಗಳ ನಿಜವಾದ ಗುರಿ ಯಾವುದೋ ಆದಿನ್ನೂ ಸಿದ್ಧಿಸಿಲ್ಲ-ಎಂಬುದನ್ನು ತಿಳಿದಿರಬೇಕು; ನಾವೀಗ ಪ್ರಯೋಜಿಸುತ್ತಿರುವ ವರುಷದಲ್ಲಿ ಅದನ್ನು ಸಾಧಿಸುವೆವೆಂಬುದೇ ನಮ್ಮ ಹೊಸ ವರುಷದ ಶಪಥವಾಗಬೇಕು. ತಾತ್ಕಾಲಿಕ ಗೊಂದಲಗಳ ನಿವಾರಣೆಯ ಕಡೆಗೇನೇ ಸರ್ವ ಲಕ್ಷ್ಯವನ್ನೂ ಕೊಡುವ ಅವಧಿ 1948ರೊಂದಿಗೆ ಮುಗಿದಿದೆ—ಜನತೆಯ ಆರ್ಥಿಕ, ಸಾಮಾಜಿಕ ಸ್ಥಿತಿ ಸುಧಾರಿಸಿ ಸಮಾನತೆಯ ನ್ನು ಮತ್ತು ಪ್ರಗತಿಯನ್ನು ಸಾಧಿಸುವ ಕಾಲ 1949 ರೊಡನೆ ಆರಂಭಿಸಿದೆ- ಎಂದು ತಿಳಿದು ಎಲ್ಲರೂ ಹೊಸ ವರುಷದಲ್ಲಿ ಹೊಸ ಮಟ್ಟು ಕ್ಕೇರಬೇಕು. ಪಂಡಿತ ನೆಹರುಗಳು ಹೈದರಾಬಾದ್ ಭಾಷಣದಲ್ಲಿ ಹೇಳಿದ ಈ ಕಳಕಿನ ಮಾತುಗಳೇ ಅಖಿಲ ಭಾರತೀಯರ ಹೊಸ ವರುಷದ ಮೂಲ ಮಂತ್ರವಾಗಲಿ ಎನ್ನುತ್ತೇವೆ: "ಬಹು ಕಷ್ಟದಿಂದ ಗಳಿಸಿರುವ ಸ್ವಾತಂತ್ರ್ಯದ ನಿಜ ಫಲವನ್ನು ಜಾತಿ, ಮತ, ವರ್ಗ, ಸ್ಥಾನ ಭೇದವಾವುದೂ ಇಲ್ಲದೆ ಪ್ರತಿಯೊಬ್ಬನೂ ಸಮಾನವಾಗಿ ಅನುಭೋಗಿಸುವಂತೆ ಮಾಡಲು ಸರ್ವ ಶಕ್ತಿಯಿಂದ ಪ್ರಯತ್ನಿಸುವೆನೆಂಬ ಹೊಸ ಪ್ರತಿಜ್ಞೆ, ಹೊಸ ನಿರ್ಧಾರದೊಂದಿಗೆ ಪ್ರತಿಯೊಬ್ಬನೂ ಈ ಹೊಸ ವರುಷವನ್ನು ಆರಂಭಿಸಲಿ".

ನೆಹರು ಸಂಚಾರ

[ಹಿನೇ ಪುಟದಿಂದ]

ರದಂತೆ ನೂಡಿದ್ದರು. ನೆಹರು ಮತ್ತವರ ಸಂಗಡ ಹಾಗೂ ಕೆಲವೇ ಮಂದಿ ಅಧ್ಯರಲ್ಲದೆ ಅಲ್ಲಿಂದ ಮುಂದೆ ಬೇರಾರೂ ಹೋಗಿರಲಿಲ್ಲ. ನಿಜಾಮರ ಅರಮನೆಯಾದರೋ ತೀರಾ ಸಾದಾ ರೀತಿಯದು; ಅವರಣ ಗೋಡೆಗಳೊಳಗೆ ತಲೆಮರಸಿಕೊಂಡಂತಿದು ನಿಂತಿದೆ. ಪಂಡಿತಜೀಯನ್ನು ಹೈದರಾಬಾದಿಗೆ ಸ್ವತಃ ಆಮಂತ್ರಿಸಿದ್ದ ನಿಜಾಮರು ಈ ಮಹಾಮಾನ್ಯ ಅತಿಥಿಯ ಆಗಮನವನ್ನು ಕಾಯುತ್ತಿದ್ದು ಮುಖ್ಯ ಭವನದ ದ್ವಾರದಲ್ಲೇ ಅವರನ್ನಿದಿರುಗೊಂಡರು. ಅಲ್ಲಿ ಪರಸ್ಪರ ವಂದನೆಗಳಾದ ನೋಲೆ ಪಂಡಿತಜೀ ಮತ್ತು ನಿಜಾಮರಿಬ್ಬರೇ ಒಳಗೆ ಹೋಗಿ 45 ನಿಮಿಷಗಳ ವರೆಗೆ ಮಾತುಕತೆ ನಡೆಸಿದರು. ಸಂಭಾಷಣೆ ಗುಟ್ಟಿನದಿತ್ತು. ಇಬ್ಬರೂ ಒಟ್ಟಿಗೆ ಭಾವಚಿತ್ರವೆತ್ತಲು ಬಿಟ್ಟರು. ಜತೆಯಲ್ಲೇ ಅವಮಾನಿಯಾಂದ ಹೊರಗೆ ಬಂಮೊಡನೆ ಪಂಡಿತಜೀ ನಿಜಾಮರಿಗೆ 'ಗುಡ್‌ಬಾಯ್' ಎನ್ನುತ್ತಾ ಕಾರು ಹತ್ತಿ ತನ್ನ ನಿವಾಸಕ್ಕೆ ಹೊಂಟರು. ಅವರು ಮರಳಿದ ಬಸ್ಸೆ ಬೇರೆಯಾಗಿತ್ತು. ಪಾರಿಯಲ್ಲಿ ಸಂಸ್ಥಾನೀ ಕಾಂಗ್ರೆಸಿನ ಮುಖ್ಯ ಕರ್ತೃಗಳೊಳಹೊಕ್ಕು ಸ್ವಾಮಿ ರಾಮಾನಂದ ತೀರ್ಥರೊಡನೆ ಕಟ್ಟೋಣವನ್ನು ಸುತ್ತಾಡಿ ಕಂಡು, ಅಲ್ಲಿಯೇ ಲಘು ಪಹಾರ ಸ್ವೀಕರಿಸಿದರು. ಅಲ್ಲಿಂದ ಚಾರ್ ಮಿನಾರ್ ವಲಯದತ್ತ ಅಧಿಕ ಸಂಖ್ಯೆಯ ಮುಸ್ಲಿಮರಿಂದ ನಿಬಿಡ್ಡ ಜನಸಂದಣಿಯ ರಸ್ತೆಯುದ್ದವನ್ನೂ ಪಂಡಿತಜೀ ಹಾದು ಹೋಗುವಾಗಿನ ದೃಶ್ಯವು ಬೇರೆ ಎಲ್ಲಿಯೂ ಇರದಷ್ಟು ಹೃದಯಸ್ಪರ್ಶಿಯಿದ್ದಿತು. ದಾರಿಯಲ್ಲಿ ಮುಸ್ಲಿಮರು ಮತ್ತು ಹಿಂದುಗಳು ಕೈಕೈ ಹಿಡಿದುನಿಂತು ನೆಹರುಗಳ ಕಾರು ತಮ್ಮನ್ನು ಹಾದು ಹೋಗುವಾಗ ಮೌನವಾಗಿ ತಲೆತಗ್ಗಿಸುತ್ತಿದ್ದರು. ಕೆಲವೆಡೆ ನೆಹರುಗಳ ನೋಲೆ ಪುಷ್ಪವೃಷ್ಟಿಯಾಗಿತ್ತು. ಇನ್ನೊಂದೆಡೆ ಕಡೆಗಳಲ್ಲಿ ನೆಹರೂ ಕುಳಿತ ಕಾರು ನಿಧಾನವಾಗಿ ಬರುತ್ತಿದ್ದಾಗ ಮುದುಡಿ ಹೋದಂತಿದ್ದ ಕೆಲವು ವೃದ್ಧ ಮುಸ್ಲಿಮರು ಅದಕ್ಕೆದುರಾಗಿ ಹೆಜ್ಜೆಯಿಟ್ಟು ಸವಿನಯವಾಮೊಡನೆಯೇ ನೆಹರುಗಳನ್ನು ಅತೀರ್ಸದಿಸಲು ತಮ್ಮ ಎರಡೂ ಕೈಗಳನ್ನು ಮೇಲಕ್ಕೆತ್ತಿದರು; ಪಂಡಿತಜೀ ಕೈಬೋಡಿಸಿಕೊಂಡದ್ದು ನಿಂತು ಕಲಿಬಾಗಿ ಅವರ ಅಶೀರ್ವಾದವನ್ನು ಅಂಗೀಕರಿಸಿಕೊಂಡರು. ಚಾರ್ ಮಿನಾರಿನಲ್ಲಿ ಮುದಿ ಮುಸ್ಲಿಂ ಗುಂಪೊಂದರ ವಂದನಾಭಿನಂದನೆಗಳನ್ನು ಪಡೆಯಲು ನೆಹರುಗಳ ಕಾರು ಒಂದು ಮಿನಿಟು ನಿಲ್ಲಬೇಕಾಯಿತು ಅಲ್ಲಿಂದ ಅಂತೆಯೇ ಬೋಲಾರಂ ಮಿನ ನಿವಾಸ ಪ್ರವೇಶ. ನೆಹರೂ ಭೇಟಿಯನ್ನು ಸಂದಾಯಿಸಲು ನಿಜಾಮರು ತನ್ನ ಬೀವಮಾನದಲ್ಲೇ ಕೈಹಿಡೀಗ ಪೊದಲ ಬಾರಿ ಬೋಲಾರಂ ಮಿನ ರೆಸಿಡೆನ್ಸಿ ಗೃಹಕ್ಕೆ ಅಂದು ಅಪರಾಹ್ನ ಬಂದು ಹೋದರು.

ಸಾರ್ವಜನಿಕ ಸಭೆ

ಡಿ. 25ನೇ ಆಪರಾಹ್ನ ಹೈದರಾಬಾದಿನ ಘಾಟೆ ವೈದಾನಿನಲ್ಲಿ ಸುಮಾರು ಮೂರು ಲಕ್ಷ ಜನ ನೆರೆದಿದ್ದ ಸಭೆಯಲ್ಲಿ ಪಂಡಿತ ನೆಹರುಗಳತ್ತ ಸಾರ್ವಜನಿಕ ಭಾಷಣವು ಚಿರಸ್ಮರಣೀಯವಾದುದು. ಪಂಡಿತಜೀ ಸ್ವಚ್ಛ ಉರ್ದು ಭಾಷೆಯಲ್ಲಿ ಆಸ್ಖಲಿತವಾಗಿ 70 ನಿಮಿಷಗಳ ವರೆಗೆ ಮಾಡಿದ ಅಮೂಲ್ಯ ಉಪದೇಶಗಳನ್ನು ವೈದಾನು ಮುಟ್ಟಿ ಮಾಡು ಮರಗಳಲ್ಲೂ ಕುಳಿತಿದ್ದ ಜನಸಮೂಹ ಎಳ್ಳು ಬಿದ್ದರೂ ಸದ್ದುಗುವಷ್ಟು ಮೌನದಿಂದ ಆಲಿಸಿದ್ದಿತು. ಆರಂಭದಲ್ಲಿ ಗವರ್ನರ್ ಜಾಥರಿಯವರು ಪಂಡಿತಜೀಯನ್ನು ಭಾಷಣಕ್ಕೆ ಆಹ್ವಾನಿಸುತ್ತಾ, ಹೈದರಾಬಾದ್ ನಿರಾಶ್ರಿತರ ರಕ್ಷಣೆ ಮತ್ತು ವ್ಯವಸ್ಥೆಗಾಗಿ ಭಾರತದ ಪ್ರಧಾನಿಗಳು ತನ್ನ ನಿಧಿಯಿಂದ ರೂ. 50000ವನ್ನು ಕೊಡುವರೆಂಬುದನ್ನು ತಿಳಿಸಿದರು; ಮತ್ತು ಭಾಷಣಾಂತ್ಯದಲ್ಲಿ ಪಂಡಿತಜೀಗೆ ಧನ್ಯವಾದವರ್ಪಿಸಿದರು:- "ಅವಶ್ಯತೆಗೆ ಮಿಕ್ಕಿ ಒಂದೇ ದಿನವಾದರೂ ಹೈದರಾಬಾದಿನಲ್ಲಿ ಸೇನಾಸರಕಾರವಿರುವಂತಿಲ್ಲ. ಜನಪ್ರತಿನಿಧಿ ಸರಕಾರ ಬರಲೇ ಬೇಕು. ಆದರೆ ಪ್ರಚಲಿತ ಕಂಟಕಗಳು ಪೂರ್ತಿ ನಿವಾರಣೆಗೊಂಡು ನಿತ್ಯ ಸ್ಥಿರ ಸ್ಥಾಪನೆಯಾಗದೆ ಶಾಶ್ವತ ವ್ಯವಸ್ಥೆಗೆ ಕೈ ಹಾಕಲು ಸಾಧ್ಯವಿಲ್ಲವಾದ್ದರಿಂದ ಆ ಒಂದು ಲಾನಣೆ ಬರುವ ದಿನ ಹೇಳಲು ಸಾಧ್ಯವಿಲ್ಲ. ಏನೇ ಆದರೂ ಕಮ್ಯೂನಿಸ್ಟ್ ಸಂಘರ್ಷದ ಹಿಂಸೆಯನ್ನೂ ತಮ್ಮ ದುರಾಂಡೋಲನಕ್ಕೂ 'ಸಕ್ಕಾರ್ಯಗ್ರಹ' ಎಂಬ ಘೋಷಣೆ ಹೆಸರಿಟ್ಟಿರುವ ಆರ್. ಯಸ್. ಯಸ್. ನಂಥವರ ಮತಾಂಧ ಗೊಂದಲವನ್ನೂ ಸರಕಾರ ನಿರ್ಮೂಲಿಸದೆ ಬಿಡುವಂತಿಲ್ಲ. ಆದರೆ ರೈತರ ಮತ್ತು ಮಜೂರರ ಆರ್ಥಿಕ ಸ್ಥಿತಿ ಸುಧಾರಿಸಿ, ಅವರು ಕಮ್ಯೂನಿಸ್ಟರಂಥವರ ಬಲೆಯೊಳಗೆ ಸುಲಭದಲ್ಲಿ ಬೀಳದಂತೆ ಮಾಡಲು ಜನತೆ ಸಹಕರಿಸಬೇಕು" ಎಂದು ಪಂಡಿತಜೀ ಅಲ್ಲಿ ಕೊಟ್ಟ ಭಾಷಣದ ಸಾರ.

ಅಂದು ರಾತ್ರಿ ಮೌಲ್ವಿ ಅಬುಲ ಸಾನ್ ಸಯ್ಯದ್ ಅಲಿಯವರ ನಿವಾಸ್ಥಳದಲ್ಲಿ ಹೈದರಾಬಾದ್ ಮುಸ್ಲಿಮರ ಸಾಮಾನ್ಯ ಶಿಷ್ಟಮಂಡಲಿಯೊಂದು ಪಂಡಿತಜೀಯನ್ನು ಕಂಡು ತಮ್ಮ ಸಂಕಷ್ಟಗಳನ್ನು ನಿವೇದಿಸಿಕೊಂಡಿತು. ಭಾರತ ಸರಕಾರ ಹೈದರಾಬಾದ್ ಕಾರ್ಯ ಮತ್ತು ಸ್ಥಳೀಯ ಸರಕಾರವನ್ನ ಕೆಲಸಗಳಿಗೆ ಅವರು ಸೂಚನೆ ಸೂಚಿಸಿದ್ದರಲ್ಲದೆ, ಹೈದರಾಬಾದ್ ಮೇತ ಅಖಿಲ ಭಾರತವು ಲೌಕಿಕವಾ ರಾಷ್ಟ್ರವಾಗಿರಬೇಕೆಂಬುದಕ್ಕೂ ಪೂರ್ಣ ಸಮ್ಮತಿ ಸೂಚಿಸಿದ್ದರು. ಭಾರತ ಸಾಕಾರ ಅಶ್ವಾಸನೆಗಳ ನೆಲೆಲೆ ಸಂಪೂರ್ಣ ರವಸೆ ವ್ಯಕ್ತಪಡಿಸಿ, ಹೈದರಾಬಾದ್ ಕಾರಾದಲ್ಲಿ ಮುಸ್ಲಿಮರಿಗೆ ಇದುವರೆ ಹೆಚ್ಚಿನ ಸ್ಥಾನಗಳಾವುವೂ ತಮಗೆ ಬೇಕಾಗಿಲ್ಲವೆಂದೂ ಅಜಿ ಸಂಸ್ಥೆ ತಯಾಗಿ ಸರಕಾರವು ತಮಗೆ ದ್ಯೋಗ ದೊರಕಿಸಿಕೊಡಬೇಕೆಂದೂ ಳಿದ್ದರು. ಪೋಲೀಸ್ ಕ್ರಿಯಾನಂತರ ಸಮಾಜದ್ರೋಹೀ ಜನರಿಂದ ಮನೆ ದು ತಳಿಕೊಂಡಿರುವ ನಿರಾಶ್ರಿತ ವರಿಗೆ ಕೂಡಲೇ ರಕ್ಷಣೆಯೀಯಬೆ

'ಭಾಷಾವಾರು ಪ್ರಾಂತ್ಯ ರಚನೆ ನ್ಯಾಯದ್ದಿರಬಹುದು; ಸಂದರ್ಭ ಇದಲ್ಲ'

— ನೆಹರು

'ಜಾತೀಯತೆಯನ್ನು ನಿರ್ಮೂಲಿಸಿರಿ'

ಜಾತೀಯತೆಯನ್ನು ಸಮೂಲ ನಾಶ ಮಾಡಬೇಕೆಂದು ಅಗ್ರಹದಿಂದ ಕೇಳಿ ಕೊಳ್ಳುತ್ತಾ ಪಂಡಿತ ನೆಹರುಗಳಂದರು: "ಈ ಜಾತೀಯತೆಯೆಂಬುದು ಭಾರತದಲ್ಲಿ ನರಕವನ್ನೇ ನಿರ್ಮಿಸಿದ್ದಿತು. ಅದೀ ದಿನ ಜಾತಿಗಿದಿರು ಜಾತಿಯನ್ನು ಎತ್ತಿಕಟ್ಟುವ ವಿಷವನ್ನೇ ತುಂಬಿಕೊಂಡಿದೆ. ಅದು ದೇಶವನ್ನು ತುಂಡರಿಸುವಂತೆ ಮಾಡಿತು. ಒಂದು ಜಾತಿಯು ಇದಕ್ಕೆ ಬಲಿಬಿದ್ದರೆ ಮತ್ತೊಂದು ಜಾತಿಯು ಪ್ರತೀಕಾರಕ್ಕೆದ್ದಿತು. ಇದು ಅಂತ್ಯವಿಲ್ಲದ ಸುತ್ತು. ನಾವಿದನ್ನು ಹೋರಾಡಿ ನಿರ್ಮೂಲಿಸಬೇಕೆಂದು ನಿಶ್ಚಯಿಸಿದ್ದೇವೆ ಸಾಮಾನ್ಯ ಕಾಲಗಳಲ್ಲಿ ಅವು ತಮ್ಮಷ್ಟಕ್ಕೆ ತಾವೇ ಸರಿಯಾಗಿ ಕೊಳ್ಳಲಿಂದು ಜನರಿಂತಹ ದುರ್ಭಾವನೆಗಳನ್ನು ಕಡೆಗಣಿಸಿ ಬಿಡುತ್ತಿದ್ದರಿ ಇಂತಹ ಸಂದರ್ಭಗಳಲ್ಲಿ ಸಂಕಾರಗಳಾದರೋ ಮಿತಿಮೀರಿ ಪಕ್ಷ ಕೈ ಹೊಗಿಸುವದು ಹಿತಕರವಾಗುವದಿಲ್ಲ. ಏಕೆಂದರೆ ಬಿಕ್ಕಟ್ಟಿನ ಕಾಲಗಳಲ್ಲಿ ದುಶ್ಶಕ್ತಿಗಳನ್ನು ಅಣುಬಡಿದೆ ನಿರ್ಮೂಲಿಸದಿದ್ದರೆ ಅವು ಅವಕಾಶವೊದ್ದಬಲ್ಲವಾದ್ದರಿಂದ ಸರಕಾರವು ಜನರ ಪ್ರಾಸಗೀ ವರ್ತನೆಗಳಲ್ಲೂ ಕೈಹಾಕಲೇಬೇಕಾಗುತ್ತದೆ. ಆದ್ದರಿಂದ ನಾವೀಗ ಇನ್ನೆಪ್ಪಕ್ಕೂ ಜಾತೀಯತೆಯನ್ನು ಸಹಿಸಬಾರದೆಂದು ನಿರ್ಧರಿಸಿದ್ದೇವೆ. 'ಜಾತೀಯ' ಹೆಸರು ಬಿದ್ದವುಗಳನ್ನು ಮಾತ್ರ ನಾವು ನೋಡಿಕೊಳ್ಳುವೆವೆಂದು ಇದರ ಅರ್ಥವಲ್ಲ. ನೂರಕ್ಕೆ ನೂರರಷ್ಟೂ ಜಾತೀಯತೆಯೇ ತುಂಬಿರುವ ಪ್ರತಿಕೆಲವುಜಳವಳಗಳೂ ರಾಷ್ಟ್ರೀಯತೆಯ ಸೋಗು ಹಾಕಿಕೊಳ್ಳುವದಿದೆ. ಭಾರತವನ್ನು ಅನಾಹುತದತ್ತ ಕೊಂಡೊಯ್ಯುತ್ತಿದ್ದ, ದೇಶವನ್ನು ಭೀಕರವಾಗಿ ಇಬ್ಭಾಗಿಸಿ ಹಾಕಿದ ಅದೊಂದು ವರ್ಗವು ಕರಾಳ ಯಾಗೂ ಅತಿ ಕರೋರಿ ಜಾತೀಯತೆಯನ್ನು ನಾವು ನೋಡಿದೆವು; ಅದರ ಪ್ರತಿಕ್ರಿಯೆಯಾಗಿ ಹಿಂದುಗಳಲ್ಲಿ ಮತ್ತು ಸಿಖ್ಖರಲ್ಲಿ ಎದ್ದಂತಹ ತತ್ಪ್ರತಿರೂಪಿ ಜಾತೀಯತೆಯನ್ನು ನಾವು ನೋಡಿದ್ದೇವೆ; ಅದು ಹಿಂದೂ ಮಹಾಸಭೆಯಲ್ಲಿ ಕಾಣಿಸುತ್ತಿದೆ; ಇಂದಿನ ಭಾರತ ಸರಕಾರಕ್ಕೆ ಯು ದ್ಧಾಹ್ವಾನ ಕೊಟ್ಟರುವ ಅರ್. ಯಸ್. ಯಸ್. ನಲ್ಲಿ ತೋರಿಬರುತ್ತಿದೆ. ನನ್ನ ಮಟ್ಟಿಗೆ ಮತ್ತು ಭಾರತ ಸರಕಾರದ ಮಟ್ಟಿಗೆ ನಾನು ಒಕ್ಕಿಒತ್ತಿ ಹೇಳುತ್ತೇನೆ.—ನಾವು ಯಾವುದೇ ರೀತಿಯ ಜಾತೀಯತೆ, ಪಾಲುಗಾರ ಭಾವನೆ, ಮತ್ತು ಚಿಲ್ಲರ ವಿಕೆಯನ್ನು ಎಪ್ಪಕ್ಕೂ 'ಸಹಿಸುವಂತಿಲ್ಲ".

ಹೈದರಾಬಾದ್ ಭಾಷಣದಲ್ಲಿ "ಭಾಷಾವಾರು ಪ್ರಾಂತ್ಯಗಳ ರಚನೆಯ ಬೇಡಿಕೆಗಳಂತಹವು ನ್ಯಾಯವೆಂಬಹುದು. ಆದರೆ ಈ ಕುರಿತು ಒತ್ತಾಯ ಹಾಕುವ ಸುಸಂದರ್ಭ ಇದಲ್ಲ" ಎಂದಿದ್ದ ಪಂಡಿತಜೀ ಬೆಂಗಳೂರಿನ ತನ್ನ ಭಾಷಣದಲ್ಲಿ ಅದನ್ನೇ ಸ್ಪಷ್ಟೀಕರಿಸಿದರು.

ಕಲಾ ಮಹೋತ್ಸವ—ತಾ. 26—12-'48ನೇ ಆದಿತ್ಯವಾರ ಸಾಯಂಕಾಲ ಸುಮಾರು 6ರಿಂದ 9ರ ತನಕ ಮಂಗಳೂರು ಬಿ.ಇ.ಯಂ. ಹೈಸ್ಕೂಲಿನ ನೂತನ ನಿರ್ಮಿತ ಭವ್ಯ ಕಲಾ ಮಂಟಪದಲ್ಲಿ ದ. ಕ. ಜಿಲ್ಲಾ ಕಾಂಗ್ರೆಸ್ ಕಮಿಟಿಯು ಸಜ್ಜುಯಾರ್ಥವಾಗಿ ಆಪಾರ್ಥ ಕಲಾ ಮಹೋತ್ಸವವೊಂದನ್ನು ಏರ್ಪಡಿಸಲಾಗಿತ್ತು. ಆನೇಕ ಮಹಿಳೆಯರೂ ಮಹಿಳೆಯರೂ ನೆರೆದು ಬಂದು ಪ್ರೋತ್ಸಾಹಿಸಿದ್ದರು.ಆರಂಭದಲ್ಲಿ ರಾಷ್ಟ್ರಗೀತೆಗಳನ್ನು ಯು. ಯಸ್. ಅಡ್ಯರಾಯ, ಪಿ. ಯಸ್. ಸಿ. (ಎಡಿಸ್) ಇವರು ರಾಷ್ಟ್ರೀಯ ರೀತಿಯಲ್ಲಿ ಸುಮಧುರವಾಗಿ 'ವಂದೇ ಮಾತರಂ' ಗೀತೆಯನ್ನು ಹಾಡಿದರು.

ಮಂಡ್ಯಾಸಿನ 'ಪ್ರಭಾತ್ ಲೇಡೀಸ್' ಪ್ರೊಪ್ರೈಟರ್ ಶ್ರೀ ಕೃಷ್ಣ ಭಟ್ಟ ಪುತ್ರ ಸಾಧಾರಣ 10 ವರ್ಷ ವಯಸ್ಸಿನ ಕುಮಾರ ಶ್ರೀ ಮಾನ್ 'ನಟರಾಜ', ಮಯೂರ' ಮತ್ತು 'ಕಾಳಿಂದಿ ಪಾರ್ಥ' ಮತ್ತು ಸದ್ಯಯವರ ಪುತ್ರಿ ಸಾಧಾರಣ 12 ವರ್ಷ ವಯಸ್ಸಿನ ಕುಮಾರಿ ಶ್ರೀಮತಿ 'ದೇವಯಾನಿ ಲಸ್ಯ', 'ಸ್ವರಜೆತ್' ಮತ್ತು 'ಗೋಪಿಕಾ ಸ್ತ್ರೀಗಳೆಂಬ ನರ್ತನಗಳನ್ನು ಅತ್ಯಂತ ಶ್ರೇಷ್ಠಗೀಯವಾಗಿ ಪ್ರದರ್ಶಿಸಿದರು. ಜೊತೆಯಲ್ಲಿ, ಮಂಗಳೂರಿನ ಶ್ರೀ. ಕೃಷ್ಣ ಭವನದ ಮ್ಯಾನೆಜರಾದ ಶ್ರೀ. ಪೆಳಕಟ್ಟೆ ಮಂಜ ಭಟ್ಟ ಪುತ್ರ ಶ್ರೀ ಪುಟ್ಟಣ್ಣ ಭಟ್ಟ, ಶಿವ ಸ್ವತ್ವವನ್ನು ಚೆಲೋಯಾಗಿ ಮಾಡಿದರು. ಈ ಸಂದರ್ಭದಲ್ಲಿ ಒನ್ನೆರೆಯ ಹಾಡನ್ನು ಶ್ರೀ.ಮಂಗೇಶರಾಯರು ಒಳ್ಳೆಯ ರೀತಿಯಿಂದ ಹಾಡಿದರು.

'ಕೇರಳ ಕಲಾ ಮಂಡಲ'ದಲ್ಲಿ ಆಳ್ವಾಸ್ ಹೊಂದಿ, ಹಿಂದೂಸ್ಥಾನದಲ್ಲೆಲ್ಲಾ ಸಂಚರಿಸಿ, ನೃತ್ಯಕಲಾ ನಿಪುಣತೆಯಲ್ಲಿ ಪ್ರಖ್ಯಾತಿಪಟ್ಟ ಶ್ರೀ. ರಾಜನಯ್ಯರ್ ಎಂಬವರು 'ಗೋಪಿಕಾ ವಸ್ತ್ರಾಪಹರಣ', 'ಹಾವಾಡಿಗ' ಮತ್ತು 'ಚೇಡನ ನರ್ತನ'ವೆಂಬ ನರ್ತನಗಳನ್ನು ಅಲ್ಲಲ್ಲಿ ಮಚ್ಚು ಮಾಡುವಂತೆ ಅತೀಸಾಧಾರಣವಾಗಿ ಪ್ರದರ್ಶಿಸಿದರು.

ಪ್ರದರ್ಶನ ಎಡೆಗಳಲ್ಲಿ ಮಂಗ್ಳೂರಿನವರೇ ಆದ ರೇಡಿಯೋ ಸಿಂಗರ್ ಶ್ರೀ. ಜಿ. ಯು ಗಿ. ಸೀತಾರಾಮ ಕುಮಾರ್ ಇವರು ಹಿಂದೂಸ್ಥಾನಿಯಲ್ಲಿ ಮತ್ತು ಕನ್ನಡದಲ್ಲಿ ಸುಪ್ರಸನ್ನ ಹಾಡುಗಳನ್ನು ಹಾಡಿದರು. ಸುಸ್ವರ ನವರಾಜ, ಸೈಸೂರು ಆಸ್ಥಾನ ವಿದ್ವಾನ್ ಶ್ರೀ ತಕ್ಕಪ್ಪನವರ ಹಾಗೂ ವಾಲ್ಟರ್ ಮಣಿ ಅಯ್ಯರ್ ಇವರ್ಕಿಸ್ಯರಾಗಿರುವ ಶ್ರೀ ಯಸ್ಸ್. ವಿ. ಮೂರ್ತಿಯವರ ಹೃದಯಂಗಮವಾದ ವೈದೂರಿಗನವಾದನವು ಎಲ್ಲರ ಮೆಚ್ಚುಗೆಯನ್ನು ಸಪಡೆದಿತ್ತು. ಮಂಗ್ಳೂರು 'ಹಂಸರಾಜ ಥಿಯೇಟರ್ಸ್'ನ ಶ್ರೀ ಕೇಶವ ಕಣ್ಣಯ್ಯರವರ ಫಿಡ್ಲ್ ವಾದನವು ಉತ್ತಮ ತರವಾಗಿ ಮನೋಜ್ಞವಾಗಿತ್ತು.

ಕೊನೆಗೆ ಶ್ರೀ ಹಂಸರಾಜ ಥಿಯೇಟರ್ಸಿನ ಶ್ರೀ ಆರ್. ಯಸ್. ಕೊರ್ಯ ಸುತ್ತು ಸಾರ್ವಯವರು ದಿವಂಗತ ಯು. ಯಸ್. ಕಾಮತ್ ವಿರಚಿತ 'ಪುನರ್ಜನ್ಮ' ಪ್ರಹಸನವನ್ನು ಯಶಸ್ವಿಯಾಗಿ ಅಭಿನಯಿಸಿದರು. ಜಿಲ್ಲಾ ಕಾಂಗ್ರೆಸ್ ಕಮಿಟಿಯ ಕಾರ್ಯಾಗಿ ಶ್ರೀ ಯುನ್ ಯಸ್ ಶಿಲ್ಲಯವರು ಧನ್ಯವಾದ ಸಮರ್ಪಣೆಯನ್ನು ಮಾಡಿದ ಮೇಲೆ ಎಲ್ಲರಿಗೂ ಮನಃ ಹಾಡಿನೊಂದಿಗೆ ಕಲಾ ಮಹೋತ್ಸವವು ಸಮಾಪ್ತಿಯಾಯಿತು. ಈ ಬಗೆಯ ಕಲಾ ಮಹೋತ್ಸವವು ಇನ್ನೊಂದು ಯಶಸ್ವಿಯಾಗಿ ನಮಂಗ್ಳೂರಿನಲ್ಲಿ ನಡಿಗಿದುಮು ಇದು ಸೊದಲನೆಯ ಸಲವೆನ್ನಬಹುದು.

ಬುದೇ ಅವರ ಮುಖ್ಯ ಬೇಡಿಕೆಯಾಗಿತ್ತು. ಪಂಡಿತಜೀ ಅವೆಲ್ಲವನ್ನೂ ಅತ್ಯಂತ ಕರಾರುವಾಕಿಯಿಂದ ಅಲಿಸಿ, ಉಭಯ ಕೊಟ್ಟರು. ರಾತ್ರಿ ರೆಡಿಯೋ ದಲ್ಲಿ ಆಕಾಶವಾಣಿ ಭಾಷಣ ಕೊಡುತ್ತಾ ಹಳೇ ಹಕ್ಕುಬಾಧ್ಯತೆಗಳೆಲ್ಲವೂ ಸಮೂಲ ನಾಶವಾಗಬೇಕೆಂದರು. ತಾ. 26ನೇ ಪೂರ್ವಾಹ್ನ ನೆಹರುಗಳಿಗೆ 'ಡಾಕ್ಟರ್ ಟಿನ್ ಲಾ' ಬಿರುದು ದಾನ ಮಾಡುವದ ಕ್ಕಾಗಿಯೇ ಹೈದರಾಬಾದ್ ಉಸ್ಮಾನಿಯಾ ವಿಶ್ವವಿದ್ಯಾಲಯದ ವಿಶೇಷ ಪದವೀ ದಾನ ಸಮಾರಂಭ ಸೇರಿತು. ಅಲ್ಲಿ ವಿದ್ಯಾರ್ಥಿಗಳನ್ನು ಉದ್ದೇಶಿಸುತ್ತಾ ಇಂದಿನ ಮತ್ತು ನಾಳೆಯ ಸ್ವತಂತ್ರ ಭಾರತದ ಚಿತ್ರವನ್ನು ಅವರ ಮುಂದಿಟ್ಟು, ಅದರಲ್ಲಿ ಎಲ್ಲರಿಗೂ ಸಮಾನ ಸಂದರ್ಭ ಸುಯೋಗಗಳಿವೆಯೆಂದರು. ಯುವಕರ್ಯುತ್ಸಾಹಾತೋದದಿಂದ ಎದೆಯುಬ್ಬಿಸಿ ಮುನ್ನುಗ್ಗಿ ಬೇಕೆಂದೂ ಹುರಿದುಂಬಿಸಿದರು. ಭಾಷಾ ಸ್ಪರ್ಧೆಗಳನ್ನು ಪ್ರಸ್ತುಪಿಸಿ ಹಿಂದುಸ್ಥಾನಿಯೇ ಮಾಧ್ಯಮವಾಗಿರಬೇಕೆಂದರು. ಅಂದು ಮಧ್ಯಾಹ್ನ 12 ಘಂಟೆಗೆ ಹಾದಿಯುದ್ದಕ್ಕೂ ಜನತೆಯು ವಂದನೆ ಸ್ವೀಕರಿಸುತ್ತಾ ವಿಮಾನ ನಿಲ್ದಾಣಕ್ಕೆ ಬಂದು, ಬೀಳ್ಕೊಳ್ಳಲು ಬಂದ ಪ್ರಮುಖರನ್ನು ಸಂಭಾವಿಸಿ ವಿಮಾನದ ಮೆಟ್ಟಿಲಿನಲ್ಲೆಸ್ಸಾಂದು ಕ್ಷಣ ನಗುತ್ತಾ ನಿಂತು, ಪ್ರಚಂಡ ಜನಸಂದಣಿಯ ಜಯಕಾರಗಳಿದಿಂದ ವಿದಾಯವಂದನೆ ಸಲ್ಲಿಸಿ ತಾನು 1ಕ್ಕೆ ಸರಿಯಾಗಿ ಬೆಂಗಳೂರಿಗಾಗಿ ವಿಮಾನ ಹತ್ತಿದರು.

ಬೆಂಗಳೂರಿನಲ್ಲಿ—

ಅಪರಾಹ್ನ 3 ತಾಸಿಗೆ ಪಂಡಿತಜೀಯು ವಿಮಾನವು ಬೆಂಗಳೂರಿನ ಹಿಂದುಸ್ತಾನ್ ನಿಲ್ದಾಣದಲ್ಲಿ ತಲುಪುತಿತು. ಅಲ್ಲಿಯೂ ಹೈದರಾಬಾದ್ ನಿಲ್ದಾಣದಂತಹ ಅಪೂರ್ವ ಸ್ವಾಗತನೇ ನೆಹರುಗಳನ್ನು ಕಾಯುತಿತ್ತು. ಪಂಡಿತಜೀ ವಿಮಾನದಿಂದ ತಲೆ ಹೊರಹಾಕುವಾಗ ಅಸುಖಾಸಿನಲ್ಲೆಲ್ಲಾ ಮುಸುಕೆನಂತೆ ಮುಚ್ಚಿ ಹೋಗಿದ್ದ ಪ್ರಚಂಡ ಜನಸಂದಣಿಯು ಭೈಘೋಷವು 'ಘೋಷ್'ಎಂದು ವಾರ್ದಾಸಿತು. ನೆಹರುಗಳು ಕಾಲಿಟ್ಟವರೆ ಕ್ಷಣಾಹೊತ್ತು ಕೈಜೋಡಿಸಿಕೊಂಡು ನಿಂತು ನಗುಮೋದಿಂದ ವಂದನೆ ಸಲ್ಲಿಸಿದರು. ದಿವಾನ ಸರ್. ಎ. ರಾಮಸ್ವಾಮಿ ಮುದಲಿಯಾರ್ ಸ್ವಾತಂತ್ರ್ಯ ಮಂತ್ರಿಗಳು ಹಾಗೂ ಅಧಿಕಾರಿ ಪ್ರಮುಖರು ಸ್ವಾಗತಕ್ಕೆ ಹಾಜರಿದ್ದರು. ಸೈನಿಕರ ಗೌವ ವಂದನೆಯಾಯಿತು. ಸರ್ ಮುದಲಿಯಾರರು ನೆಹರುಗಳಿಗೆ ಎಲ್ಲರ ಪರಿಚಯ ಮಾಡಿಸಿದರು. ಅಲ್ಲಿಂದ ರೆಸಿಡೆನ್ಸಿ ಭವನಕ್ಕೆ ಆರು ಮೈಲು ದೂರ. ಇಷ್ಟು ಉದ್ದದ ರಸ್ತೆಯಲ್ಲೆಲ್ಲಾ ಜನಸಂದಣಿ ಇಕ್ಕಿಡೆಗಳಲ್ಲೂ ತುಂಬಿದ್ದು, ನೆಹರುಗಳು ತೆರೆದ ಕಾರಿನಲ್ಲಿ ಕೈಜೋಡಿಸಿಕೊಂಡೇ ಬರುತಿದ್ದಾಗ ಪ್ರಚಂಡ ಜಯಕಾರಗಳನ್ನೆಬ್ಬಿಸುತಿತ್ತು. ರೆಸಿಡೆನ್ಸಿ ಭವನದಲ್ಲಿ, ಆ ಮೊದಲೇ ಅಲ್ಲಿಗೆ ಬಂದಿದ್ದ ಭಾರತ ಸರಕಾರದ ಮತ್ತೊಬ್ಬ ಮಂತ್ರಿ ಶ್ರೀ.ದಿವಾಕರರೂ, ಸರ್.ಮುದಲಿಯಾರ್, ಪ್ರಧಾನ ಮಂತ್ರಿ ಕೆ. ಸಿ. ರೆಡ್ಡಿ ಗಳೂ ಪಂಡಿತಜೀಯ ಜತೆಗಿದ್ದರು. ಅಪರಾಹ್ನ ಬೆಂಗಳೂರು ಅರಮನೆಯ ಟೆನ್ನಿಸ್ ಕ್ಷೇತ್ರದಲ್ಲಿ ದಿವಾನ್ ಸರ್. ರಾಮಸ್ವಾಮಿ ಮುದಲಿಯಾರರು ಭಾರತದ ಪ್ರಧಾನ ಮಂತ್ರಿಗಾಗಿ ಏರ್ಪಡಿಸಿದ್ದ 'ಗಾರ್ಡನ್ ಪಾರ್ಟಿ'ಯು ಅತಿ ಸಾಜೂಕಿನದಿತ್ತು.

ಸಾರ್ವಜನಿಕ ಸಭೆ

